ಶ್ರೀ

ಶ್ರೀರಾಮಚಂದ್ರ ಪರಬ್ರಹ್ಮಣೇನಮಃ

ಕರ್ಣಾಟಕ ಟೀಕಾ, ತಾತ್ಪರ್ಯ, ವ್ಯಾಖ್ಯಾನ ಷಟ್ಕ ಸಮೇತವಾದ

ಶ್ರೀಮದ್ವಾಲ್ಮೀಕಿ ರಾಮಾಯಣ

ಸುಂದರಕಾಂಡ

ಸಂಪಾದಕರು

ಮೋಟಗಾನಹಳ್ಳಿ ವೇ॥ ಬ್ರಂ॥ ಸುಬ್ರಹ್ಮಣ್ಯಶಾಸ್ತ್ರಿಗಳು

ಮುದ್ರಾಪಕರು ಮತ್ತು ಪ್ರಕಾಶಕರು

ವಾಜಪೇಯಂ ಗೋವಿಂದಯ್ಯನವರು

ಶ್ರೀ ವೆಂಕಟಾದ್ರಿ ಮುದ್ರಾಕ್ಷರಶಾಲಾಧ್ಯಕ್ಷರು

ಬೆಂಗಳೂರು ಸಿಟಿ.

1936

ವಿಷಯಾನುಕ್ರಮಣಿಕೆ

ಸಂಪೂರ್ಣಂ

ಂಗಳಂ ಕೋಸಲೇಂದ್ರಾಯ ಮಹನೀಯ ಗುಣಾಬ್ಧಯೇ।
್ರವರ್ತಿತನೂಜಾಯ ಸಾರ್ವಭೌಮಾಯ ಮಂಗಳಂ ॥೬॥
ದವೇದಾಂತವೇದ್ಯಾಯ ಮೇಘಶ್ಯಾಮಲಮೂರ್ತಯೇ।
ಸಾಂಮೋಹನರೂಪಾಯ ಪುಣ್ಯಶ್ಲೋಕಾಯಮಂಗಳಂ॥
್ವಾಮಿತ್ರಾಂತರಂಗಾಯ ಮಿಥಿಲಾನಗರೀಪತೇಃ ।
ಗ್ಯಾನಾಂ ಪರಿಪಾಕಾಯ ಭವ್ಯರೂಪಾಯ ಮಂಗಳಂ॥೮॥
ೃಭಕ್ತಾಯ ಸತತಂ ಭ್ರಾತೃಭಿಸ್ಸಹಸೀತಯಾ ।
ದಿತಾಽಖಿಲಲೋಕಾಯ ರಾಮಭದ್ರಾಯ ಮಂಗಳಂ॥೯॥
ಕ್ತ ಸಾಕೇತವಾಸಾಯ ಚಿತ್ರಕೂಟ ವಿಹಾರಿಣೇ ।
ನ್ಯಾಯ ಸರ್ವಯಮಿನಾಂ ಧೀರೋದಾತ್ತಾಯಮಂಗಳಂ॥
ಮಿತ್ರಿಣಾಚಜಾನಕ್ಯಾ ಚಾಪಬಾಣಾಸಿಧಾರಿಣೇ ।
ಸೇವ್ಯಾಯ ಸದಾಭಕ್ತ್ಯಾ ಸ್ವಾಮಿನೇ ಮಮ ಮಂಗಳಂ॥
ಡಕಾರಣ್ಯ ವಾಸಾಯ ಖಂಡಿತಾಽಮರಶತ್ರವೇ ।
ಧ್ರರಾಜಾಯ ಭಕ್ತಾಯ ಮುಕ್ತಿದಾಯಾಽಸ್ತು ಮಂಗಳಂ॥
ದರಂ ಶಬರೀದತ್ತ ಫಲಮೂಲಾಭಿಲಾಷಿಣೇ ।
ಲಭ್ಯ ಪರಿಪೂರ್ಣಾಯ ಸತ್ತ್ವೋದ್ರಿಕ್ತಾಯ ಮಂಗಳಂ॥
ುಮತ್ಸಮವೇತಾಯ ಹರೀಶಾಭೀಷ್ಟದಾಯಿನೇ ।
ಲೀಪ್ರಮಥನಾಯಾಸ್ತು ಮಹಾಧೀರಾಯ ಮಂಗಳಂ ॥
ೀಮತೇ ರಘುವೀರಾಯ ಸೇತೂಲ್ಲಂಘಿತಸಿಂಧವೇ ।
ರಾಕ್ಷಸರಾಜಾಯ ರಣಧೀರಾಯ ಮಂಗಳಂ ॥೧೫॥
ಾದ್ಯ ನಗರೀಂ ದಿವ್ಯಾಮಭಿಷಿಕ್ತಾಯ ಸೀತಯಾ ।
ಕಾಧಿರಾಜರಾಜಾಯ ರಾಮಭದ್ರಾಯ ಮಂಗಳಂ ॥೧೬॥
ಂಗಳಾಶಾಸನ ಪರೈರ್ಮದಾಚಾರ್ಯಪುರೋಗಮೈಃ ।
ರ್ವೈಶ್ಚ ಪೂರ್ವೈರಾಚಾರ್ಯೈ ಸ್ಸತ್ಕೃತಾ ಯಾಽಸ್ತು
ಮಂಗಳಂ ॥೧೭॥
ಯೇನ ವಾಚಾ ಮನಸೇಂದ್ರಿಯೈರ್ವಾ ।
ಾತ್ಮನಾವಾ ಪ್ರಕೃತೇಸ್ಸ್ವಭಾವಾತ್ ॥
ರೋಮಿಯದ್ಯತ್ಸಕಲಂ ಪರಸ್ಮೈ ।
ರಾಯಣಾಯೇತಿ ಸಮರ್ಪಯಾಮಿ ॥೧೮॥

ುಂದರಕಾಂಡ ಸಪ್ತಸರ್ಗೀಪಠನಪ್ರಕಾರಃ

ಾರ್ವತ್ಯುವಾಚ: —
ಂಸುಂದರಕಾಂಡಸ್ಯ ಸಪ್ತಸರ್ಗೀಂ ಪಠೇನ್ನರಃ ।
ಾನಂ ತಸ್ಯ ಮೇ ಬ್ರೂಹಿ ಕೃತಾರ್ಥಾಸ್ಯಾಮಹಂ
ಪ್ರಭೋ! ॥
ಮಹೇಶ್ವರಃ:—
ರ್ಗ ಫಲಕಾಮೇನ ವಿಪದುತ್ತರಣೇಪ್ಸುನಾ ।
ಮತ್ಸುಂದರಕಾಂಡಸ್ಯ ಪಾಠಃ ಕಾರ್ಯೋವಿಜಾನತಾ ॥೨॥

ಶಾಂತಿಕರ್ಮಣಿಸರ್ವತ್ರ ತಥಾದುಸ್ಸ್ವಪ್ನದರ್ಶನೇ ।
ಗ್ರಹಪೀಡಾಸುಚೋಗ್ರಾಸು ರೋಗೇಷು ವಿಷಮೇಷುಚ ॥೩॥
ಅರಣ್ಯೇಪ್ರಾಂತರೇವಾಪಿ ಶಸ್ತ್ರಚೋರಾಗ್ನಿಪೀಡನೇ ।
ಸರ್ವಾಸ್ವಾಪತ್ಸುಘೋರಾಸು ನೈತಸ್ಮಾತ್ತಾರಕಂ ಪರಂ ॥೪॥
ಶ್ರೀಮತ್ಸುಂದರಕಾಂಡಸ್ಯ ಸಪ್ತಸರ್ಗ್ಯಭಿಪಾಠತಃ ।
ಮಹಾರಾಜ್ಯಾದಿಸಂಪತ್ತಿರ್ಲಭ್ಯತೇದುರ್ಲಭಾಪಿವಾ ॥೫॥
ಆಯುಷ್ಕಾಮೋಲಭೇತಾಯುರ್ಧನಕಾಮೋಧನಾನ್ಯಪಿ ।
ಶ್ರೀಕಾಮಃ ಶ್ರಿಯಮಾಪ್ನೋತಿ ಕ್ಷಿತಿಕಾಮಸ್ತಥಾಕ್ಷಿತಿಂ ॥೬॥
ವಿದ್ಯಾಕಾಮ ಸ್ತಥಾವಿದ್ಯಾಂ ಸ್ತ್ರೀಕಾಮಶ್ಚೇತ್ತಥಾ ಸ್ತ್ರಿಯಂ।
ಆರೋಗ್ಯಕಾಮಸ್ತ್ವಾರೋಗ್ಯಂ ಸಪ್ತಸರ್ಗ್ಯಭಿಪಾಠನಾತ್ ॥
ಯದಾಯದಾಹಿ ರಾಮಸ್ಯ ವೃತ್ತಂಪಿಪಠಿಷೇದ್ಬುಧಃ ।
ತದಾತದಾತು ಧರ್ಮಾತ್ಮೇತ್ಯೇತನ್ಮೂಲಮನುಂ ಜಪೇತ್ ॥
ಶ್ರೀರಾಮಚರಣಾಂಭೋಜ ದ್ವಂದ್ವಂ ಧ್ಯಾಯನ್ ಪ್ರಸನ್ನಧೀಃ।
ಸಕೃದೇವೇತಿ ಚರಮ ಶ್ಲೋಕಂಚ ಶುಭದಂ ಜಪೇತ್ ॥೯॥
ಅನಯೋರ್ಮಂತ್ರಯೋಃಕೋನು ಮಾಹಾತ್ಮ್ಯಂವೇತ್ತಿ
ವಲ್ಲಭೇ! ।
ಅನ್ಯತ್ರ ಜಾನಕೀನಾಥಾ ದನ್ಯತ್ರಚ ಹನೂಮತಃ ॥೧೦॥
ಶುಭೇಹ್ನಿ ಶುಭನಕ್ಷತ್ರೇ ಸಂಕಲ್ಪೋಪಕ್ರಮೇದ್ಬುಧಃ ।
ಪಾಠಂ ಸುಂದರಕಾಂಡಸ್ಯ ಸಪ್ತಸರ್ಗ್ಯಾ ಯಥಾವಿಧಿ ॥೧೧॥
ಸಪ್ತಸರ್ಗೀಮನುದಿನಂ ಪಠೇನ್ನಿಯಮಪೂರ್ವಕಂ ।
ಪೌನಃಪುನ್ಯೇನ ತಂಕಾಂಡಂ ಯಾವತ್ಕಾಂಡಸ್ಸಮಾಪ್ಯತೇ ॥
ಅನ್ಯೂನಾತಿರಿಕ್ತಂತು ಕಾಂಡಾಂತೇ ಸಪ್ತಸರ್ಗಕಾಃ ।
ಸಮಾಪ್ಯಂತೇ ಯದಾದೇವಿ! ತದಾವಿಪ್ರಾಂಶ್ಚಭೋಜ
ಯೇತ್ ॥
ಸರ್ಗಸಂಖ್ಯೈರ್ದಿನೈಸ್ತತ್ತು ಪೂರ್ಯತೇನಾನ್ಯಥಾಪ್ರಿಯೇ! ।
ಏಕಂ ಪಾರಾಯಣಂಹ್ಯೇತ ತ್ಸಪ್ತಸರ್ಗ್ಯಾಶುಚಿವ್ರತೇ! ॥೧೪॥
ಸಪ್ತಕೃತ್ವಃ ಪಠೇದೇವಂ ತನ್ಮಹಾಸಪ್ತಸರ್ಗಕಂ ।
ಭೋಜಯೇದ್ಬ್ರಾಹ್ಮಣಾನಂತೇ ನಿಯಮಾತ್ಸಪ್ತ
ಸಂಖ್ಯಕಾನ್ ॥
ಏವಂ ಪಠನ್ಪಾಠಯನ್ವಾ ದುರ್ಗಾಣ್ಯತಿತರೇದಸೌ ।
ಲಭಂತೇಽಭೀಪ್ಸಿತಾನ್ಕಾಮಾನ್ ಸರ್ವಾನೇವ ನಸಂಶಯಃ ॥
ಪಾಠನೇಪ್ರತಿಪಾಠಂತು ಸಪ್ತನಿಷ್ಕೀತು ದಕ್ಷಿಣಾ ।
ವಾಚಕಾಯ ಪ್ರದೇಯಾ ಸ್ಯಾದ್ವಸ್ತ್ರಮಾಲ್ಯಾನುಲೇಪನೈಃ ॥
ಮಹತ್ಯಾಂ ಸಪ್ತಸರ್ಗ್ಯಾಂತು ಸಮಾಪ್ತಾಯಾಮನು
ಕ್ರಮಾತ್ ।
ಸುವರ್ಣಾನ್ ಸರ್ಗಸಂಖ್ಯಾಕಾನ್ ದದ್ಯಾದಾವೃತ್ತ್ಯದಕ್ಷಿಣಾಂ ॥
ಇತ್ಯೇತತ್ಕಥಿತಂ ದೇವಿ!ಯತ್ಪೃಷ್ಟೋಹಮಿಹತ್ವಯಾ ।
ಧ್ರಿಯತಾಂ ಹೃದಯೇಸಾಧು ಕಿಮನ್ಯಚ್ಛ್ರೋತುಮಿಚ್ಛಸಿ ॥

ಇತಿ ಶ್ರೀ ಪಾರಾಶರ್ಯೇ ಉಪಪುರಾಣೇ ಸಪ್ತಸರ್ಗೀ ಪಠನಪಾಠನವಿಧಾನಪ್ರತಿಪಾದಕಶ್ಲೋಕಾಃ

ಮನೋಜವಂ ಮಾರುತ ತುಲ್ಯವೇಗಂ ।
ಜಿತೇಂದ್ರಿಯಂ ಬುದ್ಧಿಮತಾಂವರಿಷ್ಠಂ ॥
ವಾತಾತ್ಮಜಂ ವಾನರಯೂಥಮುಖ್ಯಂ ।
ಶ್ರೀರಾಮದೂತಂ ಶಿರಸಾ ನಮಾಮಿ ॥೪॥
ಉಲ್ಲಂಘ್ಯ ಸಿಂಧೋಃ ಸ್ಸಲಿಲಂ ಸಲೀಲಂ ।
ಯಶ್ಶೋಕವಹ್ನಿಂ ಜನಕಾತ್ಮಜಾಯಾಃ ॥
ಆದಾಯ ತೇನೈವ ದದಾಹ ಲಂಕಾಂ ।
ನಮಾಮಿ ತಂ ಪ್ರಾಂಜಲಿರಾಂಜನೇಯಂ ॥೫॥
ಆಂಜನೇಯಮತಿಪಾಟಲಾನನಂ ।
ಕಾಂಚನಾದ್ರಿ ಕಮನೀಯ ವಿಗ್ರಹಂ ॥
ಪಾರಿಜಾತ ತರುಮೂಲವಾಸಿನಂ ।
ಭಾವಯಾಮಿ ಪವಮಾನ ನಂದನಂ ॥೬॥
ಯತ್ರ ಯತ್ರ ರಘುನಾಥ ಕೀರ್ತನಂ ।
ತತ್ರತತ್ರ ಕೃತಮಸ್ತಕಾಂಜಲಿಂ ॥
ಬಾಷ್ಪವಾರಿ ಪರಿಪೂರ್ಣ ಲೋಚನಂ ।
ಮಾರುತಿಂ ನಮತ ರಾಕ್ಷಸಾಂತಕಂ ॥೭॥

ರಾಮಾಯಣ ಪ್ರಾರ್ಥನಾ

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ ।
ವೇದಃಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ ॥೧॥
ಚರಿತಂ ರಘುನಾಥಸ್ಯ ಶತಕೋಟಿ ಪ್ರವಿಸ್ತರಂ ।
ಏಕೈಕ ಮಕ್ಷರಂ ಪ್ರೋಕ್ತಂ ಮಹಾಪಾತಕ ನಾಶನಂ ॥೨॥
ಶೃಣ್ವನ್ ರಾಮಾಯಣಂ ಭಕ್ತ್ಯಾ ಯಃ ಪಾದಂ ಪದಮೇವ ವಾ ।
ಸಯಾತಿ ಬ್ರಹ್ಮಣಃ ಸ್ಥಾನಂ ಬ್ರಹ್ಮಣಾ ಪೂಜ್ಯತೇ ಸದಾ ॥೩॥
ವಾಲ್ಮೀಕಿ ಗಿರಿಸಂಭೂತಾ ರಾಮಸಾಗರ ಗಾಮಿನೀ ।
ಪುನಾತಿ ಭುವನಂ ಪುಣ್ಯಾ ರಾಮಾಯಣ ಮಹಾನದೀ ॥೪॥
ಶ್ಲೋಕಸಾರಸಮಾಕೀರ್ಣಂ ಸರ್ಗಕಲ್ಲೋಲಸಂಕುಲಂ ।
ಕಾಂಡಗ್ರಾಹ ಮಹಾಮೀನಂ ವಂದೇ ರಾಮಾಯಣಾರ್ಣವಂ ॥೫॥
ಯಃಕರ್ಣಾಂಜಲಿ ಸಂಪುಟೈ ರಹರಹಸ್ಸಮ್ಯಕ್ಪಿಬತ್ಯಾದರಾ ।
ದ್ವಾಲ್ಮೀಕೇರ್ವದನಾರವಿಂದ ಗಳಿತಂ ರಾಮಾಯಣಾಖ್ಯಂ ಮಧು ॥
ಜನ್ಮವ್ಯಾಧಿ ಜರಾವಿಪತ್ತಿ ಮರಣೈ ರತ್ಯಂತ ಸೋಪದ್ರವಂ ।
ಸಂಸಾರಂ ಸವಿಹಾಯ ಗಚ್ಛತಿ ಪುಮಾನ್ವಿಷ್ಣೋಃಪದಂ ಶಾಶ್ವತಂ ॥೬॥
ತದುಪಗತಸಮಾಸ ಸಂಧಿಯೋಗಂ ।
ಸಮಮಧುರೋಪನತಾರ್ಥ ವಾಕ್ಯಬದ್ಧಂ ॥
ರಘುವರಚರಿತಂ ಮುನಿಪ್ರಣೀತಂ ।
ದಶಶಿರಸಶ್ಚ ವಧಂ ನಿಶಾಮಯಧ್ವಂ ॥೭॥

ಶ್ರೀರಾಮ ಪ್ರಾರ್ಥನಾ

ಶ್ರೀರಾಘವಂ ದಶರಥಾತ್ಮಜ ಮಪ್ರಮೇಯಂ ।
ಸೀತಾಪತಿಂ ರಘುಕುಲಾನ್ವಯ ರತ್ನದೀಪಂ ॥
ಆಜಾನುಬಾಹುಮರವಿಂದ ದಳಾಯತಾಕ್ಷಂ ।
ರಾಮಂ ನಿಶಾಚರ ವಿನಾಶಕರಂ ನಮಾಮಿ ॥೧॥
ವೈದೇಹೀಸಹಿತಂ ಸುರದ್ರುಮತಲೇ ಹೈಮೇ ಮಹಾಮಂಡಪೇ
ಮಧ್ಯೇ ಪುಷ್ಪಕಮಾಸನೇ ಮಣಿಮಯೇ ವೀರಾಸನೇ ಸುಸ್ಥಿತಂ
ಅಗ್ರೇವಾಚಯತಿ ಪ್ರಭಂಜನಸುತೇ ತತ್ತ್ವಂ ಮುನಿಭ್ಯಃಪರಂ
ವ್ಯಾಖ್ಯಾಂತಂ ಭರತಾದಿಭಿಃಪರಿವೃತಂ ರಾಮಂ ಭಜೇ ಶ್ಯಾಮಲಂ ॥೨

ತತೋ ಯಥಾಶಕ್ತಿ ಶ್ರೀ ಶೋಶೋಪರಿ
ಭಗವದಾರಾಧನಂ ಕಾರ್ಯಂ

ಅಥ "ಧರ್ಮಾತ್ಮಾ ಸತ್ಯಸಂಧಶ್ಚ ರಾಮೋ ದಾಶರಥಿರ್ಯದಿ
ಪೌರುಷೇಚಾಪ್ರತಿದ್ವಂದ್ವಶ್ಶರೈನಂ ಜಹಿರಾವಣಿಂ ॥
ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಂ ।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಂ ॥ "

ಇತಿ ಶ್ಲೋಕದ್ವಯಂ ಪಠಿತ್ವಾ "ಶ್ರೀ ರಘುನಂದನ
ಪರಬ್ರಹ್ಮಣೇನಮಃ" ಇತ್ಯುಕ್ತ್ವಾ
ಪಾರಾಯಣ ಮಾರಭೇತ

ಪಾರಾಯಣ ಸಮಾಪನೇ ಅನುಸಂಧೇಯ [illegible]
ಶ್ಲೋಕ ಕ್ರಮಃ

ಏವಮೇತತ್ಪುರಾವೃತ್ತ ಮಾಖ್ಯಾನಂ [illegible]
ಪ್ರವ್ಯಾಹರತ ವಿಸ್ರಬ್ಧಂ ಬಲಂ ವಿಷ್ [illegible]
ಲಾಭಸ್ತೇಷಾಂ ಜಯಸ್ತೇಷಾಂ ಕು [illegible]
ಯೇಷಾಮಿಂದೀವರಶ್ಯಾಮೋಹೃದ [illegible]
ಕಾಲೇ ವರ್ಷತು ಪರ್ಜನ್ಯಃ ಪೃಥಿವೀ [illegible]
ದೇಶೋಽಯಂ ಕ್ಷೋಭರಹಿತೋ ಬ್ರಾ [illegible]

ಕಾವೇರೀ ವರ್ಧತಾಂ ಕಾಲೇ ಕಾಲೇ [illegible]
ಶ್ರೀರಂಗನಾಥೋ ಜಯತು ಶ್ರೀರಂಗ ಶ್ರೀ [illegible]
ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ ।
ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ ॥
ಗೋ ಬ್ರಾಹ್ಮಣೇಭ್ಯ ಶ್ಶುಭಮಸ್ತು ನಿತ್ಯಂ ।
ಲೋಕಾಸ್ಸಮಸ್ತಾ ಸ್ಸುಖಿನೋ ಭವಂತು ॥೫॥

ಸಂಪೂರ್ಣಂ

ವಿಷಯಾನುಕ್ರಮಣಿಕೆ

ಶ್ರೀ ರಾಮಾಯನಮಃ

ಶ್ರೀ ರಾಮಾಯಣ ಪಾರಾಯಣೋಪಕ್ರಮಃ

...ರ್ತವಮಾಧ್ಯಾದೀನಾಂ ಶ್ರೀ ರಾಮಾಯಣೋಪಕ್ರಮೇ ಅನುಸಂಧೇಯ ಶ್ಲೋಕಕ್ರಮಃ

...ತ್ರಾ ಶ್ರೀ ಮಹಾ ಗಣಪತಿ ಪ್ರಾರ್ಥನಾ

...ಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ ।
...ವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥
...ನನಪದ್ಮಾರ್ಕಂ ಗಜಾನನ ಮಹರ್ನಿಶಂ ।
...ದಂ ತಂ ಭಕ್ತಾನಾಮೇಕದಂತ ಮುಪಾಸ್ಮಹೇ ॥
...ಕಾದ್ಯಾಸ್ಸು ಮನಸಸ್ಸರ್ವಾರ್ಥಾನಾಮುಪಕ್ರಮೇ ।
...ರತ್ವಾ ಕೃತಕೃತ್ಯಾಸ್ಸ್ಯುಸ್ತಂ ನಮಾಮಿ ಗಜಾನನಂ ॥

ಸರಸ್ವತೀ ಪ್ರಾರ್ಥನಾ

...ಾ ಶಾರದಾಂಭೋಜವದನಾವದನಾಂಬುಜೇ ।
...ದಾ ಸರ್ವದಾಽಸ್ಮಾಕಂ ಸನ್ನಿಧಿಸ್ಸನ್ನಿಧಿಂ ಕ್ರಿಯಾತ್ ॥
... ಕುಂದೇಂದು ತುಷಾರಹಾರಧವಳಾ ಯಾ ಶುಭ್ರ
ವಸ್ತ್ರಾವೃತಾ ।
...ವೀಣಾವರದಂಡಮಂಡಿತಕರಾ ಯಾಶ್ವೇತಪದ್ಮಾಸನಾ ।
... ಬ್ರಹ್ಮಾಚ್ಯುತ ಶಂಕರಪ್ರಭೃತಿಭಿರ್ದೇವೈಸ್ಸದಾ
ಪೂಜಿತಾ ।
...ವನ್ಮಾಂ ಪಾತು ಸರಸ್ವತೀ ಭಗವತೀ ನಿಶ್ಶೇಷಜಾಡ್ಯಾಪಹಾ ॥
...ರ್ಯಯುಕ್ತಾ ಚತುರ್ಭಿಸ್ಸ್ಫಟಿಕಮಣಿಮಯೀಮಕ್ಷ
ಮಾಲಾಂ ದಧಾನಾ ।
...ನೈಕೇನ ಪದ್ಮಂ ಸಿತಮಪಿಚ ಶುಕಂ ಪುಸ್ತಕಂ
ಚಾಪರೇಣ ।
...ಸಾಕುಂದೇಂದು ಶಂಖಸ್ಫಟಿಕಮಣಿನಿಭಾ ಭಾಸಮಾನಾಽ
ಸಮಾನಾ ।
...ಮೇ ವಾಗ್ದೇವತೇಯಂ ನಿವಸತು ವದನೇ ಸರ್ವದಾ
ಸುಪ್ರಸನ್ನಾ ॥

ವಾಲ್ಮೀಕಿ ಧ್ಯಾನಂ

...ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ ।
...ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ॥
...ವಾಲ್ಮೀಕೇರ್ಮುನಿಸಿಂಹಸ್ಯ ಕವಿತಾವನಚಾರಿಣಃ ।
...ಶೃಣ್ವನ್ ...ನಾದಂ ಕೋ ನ ಯಾತಿ ಪರಾಂ ಗತಿಂ ॥

ಯಃ ಪಿಬನ್ ಸತತಂ ರಾಮಚರಿತಾಮೃತ ಸಾಗರಂ ।
ಅತೃಪ್ತಸ್ತಂ ಮುನಿಂ ವಂದೇ ಪ್ರಾಚೇತಸಮಕಲ್ಮಷಂ ॥

ಆಂಜನೇಯ ಪ್ರಾರ್ಥನಾ

ಗೋಷ್ಪದೀಕೃತವಾರಾಶಿಂ ಮಶಕೀಕೃತ ರಾಕ್ಷಸಂ ।
ರಾಮಾಯಣ ಮಹಾಮಾಲಾ ರತ್ನಂ ವಂದೇಽನಿಲಾತ್ಮಜಂ ॥
ಅಂಜನಾನಂದನಂ ವೀರಂ ಜಾನಕೀ ಶೋಕನಾಶನಂ ।
ಕಪೀಶ ಮಕ್ಷಹಂತಾರಂ ವಂದೇ ಲಂಕಾಭಯಂಕರಂ ॥
ಆಮಿಷೀಕೃತಮಾರ್ತಾಂಡಂ ಗೋಷ್ಪದೀಕೃತಸಾಗರಂ ।
ತೃಣೀಕೃತದಶಗ್ರೀವಮಾಂಜನೇಯಂ ನಮಾಮ್ಯಹಂ ॥
ಉಲ್ಲಂಘ್ಯ ಸಿಂಧೋಸ್ಸಲಿಲಂ ಸಲೀಲಂ ಯಶ್ಶೋಕವಹ್ನಿಂ
ಜನಕಾತ್ಮಜಾಯಾಃ ।
ಆದಾಯ ತೇನೈವ ದದಾಹ ಲಂಕಾಂ ನಮಾಮಿ ತಂ
ಪ್ರಾಂಜಲಿರಾಂಜನೇಯಂ ॥
ಆಂಜನೇಯಮತಿಪಾಟಲಾನನಂ ಕಾಂಚನಾದ್ರಿ ಕಮನೀಯ
ವಿಗ್ರಹಂ ।
ಪಾರಿಜಾತತರುಮೂಲವಾಸಿನಂ ಭಾವಯಾಮಿ ಪವಮಾನ
ನಂದನಂ ॥
ಯತ್ರಯತ್ರ ರಘುನಾಥಕೀರ್ತನಂ ತತ್ರತತ್ರ ಕೃತಮಸ್ತ
ಕಾಂಜಲಿಂ ।
ಬಾಷ್ಪವಾರಿ ಪರಿಪೂರ್ಣಲೋಚನಂ ಮಾರುತಿಂ ನಮತ
ರಾಕ್ಷಸಾಂತಕಂ ॥
ಮನೋಜವಂ ಮಾರುತತುಲ್ಯವೇಗಂ ಜಿತೇಂದ್ರಿಯಂ
ಬುದ್ಧಿಮತಾಂ ವರಿಷ್ಠಂ ।
ವಾತಾತ್ಮಜಂ ವಾನರಯೂಥಮುಖ್ಯಂ ಶ್ರೀರಾಮದೂತಂ
ಶಿರಸಾ ನಮಾಮಿ ॥

ಶ್ರೀಮದ್ರಾಮಾಯಣ ಪ್ರಾರ್ಥನಾ

ವಾಲ್ಮೀಕಿ ಸ್ಮೃತಿಮಂದರೇಣ ಮಥಿತಸ್ಸೀತಾರಮಾಸಂಭವ ।
ಸ್ಸುಗ್ರೀವಾಮರಭೂರುಹೋಽಂಗದಗಜಸ್ಸೌಮಿತ್ರಿ
ಚಂದ್ರೋದಯಃ ।

ಚಿತ್ರಗಳ ಅನುಕ್ರಮಣಿಕೆ

ಸಂಖ್ಯೆ

ಶ್ರೀ

ಹನುಮತ್ಪಂಚರತ್ನಂ

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಶ್ರೀಮಚ್ಛಂಕರ
ಭಗವತ್ಪಾದಾಚಾರ್ಯ ವಿರಚಿತಂ

ವೀತಾಖಿಲ ವಿಷಯೇಚ್ಛಂ
ಜಾತಾನಂದಾಶ್ರು ಪುಲಕಮತ್ಯಚ್ಛಂ ॥
ಸೀತಾಪತಿ ದೂತಾದ್ಯಂ
ವಾತಾತ್ಮಜಮದ್ಯ ಭಾವಯೇ ಹೃದ್ಯಂ ॥
ತರುಣಾರುಣ ಮುಖಕಮಲಂ
ಕರುಣಾರಸ ಪೂರಪೂರಿತಾಪಾಂಗಂ ॥
ಸಂಜೀವನಮಾಶಾಸೇ
ಮಂಜುಲಮಹಿಮಾನ ಮಂಜನಾಭಾಗ್ಯಂ ॥
ಶಂಬರವೈರಿಶರಾತಿಗ
ಮಂಬುಜದಲವಿಪುಲ ಲೋಚನೋದಾರಂ ॥
ಕಂಬುಗಲಮನಿಲದಿಷ್ಟಂ
ಬಿಂಬಜ್ವಲತೋಷ್ಠಮೇಕಮವಲಂಬೇ ॥
ದೂರೀಕೃತ ಸೀತಾರ್ತಿಃ
ಪ್ರಕಟೀಕೃತ ರಾಮವೈಭವಸ್ಫೂರ್ತಿಃ ॥
ದಾರಿತ ದಶಮುಖ ಕೀರ್ತಿಃ
ಪುರತೋ ಮಮ ಭಾತು ಹನುಮತೋ ಕೀರ್ತಿಃ ॥
ವಾನರನಿಕರಾಧ್ಯಕ್ಷಂ
ದಾನವಕುಲ ಕುಮುದರವಿಕರ ಸದೃಕ್ಷಂ ॥
ದೀನಜನಾವನದೀಕ್ಷಂ
ಪವನತಪಃ ಪಾಕಪುಂಜಮದ್ರಾಕ್ಷಂ ॥
ಏತತ್ಪವನಸುತಸ್ಯ
ಸ್ತೋತ್ರಂ ಯಃ ಪಠತಿ ಪಂಚರತ್ನಾಖ್ಯಂ ॥
ಚಿರಮಿಹ ನಿಖಿಲಾನ್ ಭೋಗಾನ್
ಭುಂಕ್ತ್ವಾ ಶ್ರೀರಾಮಭಕ್ತಿ ಭಾಗ್ಭವತಿ ॥

ಶ್ರೀಃ

ಸುಂದರಕಾಂಡ

(ನಾಮಸಾರ್ಥಕ್ಯ)

ಶ್ರೀಮದ್ವಾಲ್ಮೀಕಿ ರಾಮಾಯಣದಲ್ಲಿ ಪ್ರತಿಯೊಂದು ಕಾಂಡವೂ ಆ ಆ ಕಾಂಡಗಳಲ್ಲಿ ಪ್ರತಿ
ಪಾದಿತವಾಗಿರುವ ವಿಷಯವನ್ನವಲಂಬಿಸಿ, **ಬಾಲ, ಅಯೋಧ್ಯಾ, ಅರಣ್ಯ, ಕಿಷ್ಕಿಂಧೆ** ಗಳೆಂಬ
ಹೆಸರುಗಳನ್ನು ಪಡೆದಿವೆ. ಈ ವಿಷಯವನ್ನು ಲಂಬಿಸಿ ಬರೆಯಬೇಕಾದ ಅವಶ್ಯಕತೆಯಿಲ್ಲ. ಪ್ರಕೃತ,
"ಹನುಮಂತನು ಸಮುದ್ರವನ್ನು ದಾಟಿ, ಲಂಕಾನಗರವನ್ನು ಪ್ರವೇಶಿಸಿ, ಸೀತಾದೇವಿಯನ್ನು ಕಂಡು,
ಆಕೆಗೆ ರಾಮೋದಂತವನ್ನರುಹಿ, ಆಕೆಯ ಶೋಕವನ್ನು ತೊಲಗಿಸಿ, ಆ ಬಳಿಕ ತನ್ನ ಅತುಳಶಕ್ತಿ
ಯನ್ನು ಪ್ರದರ್ಶಿಸಿ, ಅಸುರಮರ್ದನ—ಲಂಕಾದಹನವೇ ಮೊದಲಾದ ಅದ್ಭುತ ಕಾರ್ಯಗಳನ್ನೆಸಗಿ,
ಪುನಃ ಶ್ರೀರಾಮನ ಸನ್ನಿಧಿಗೈತಂದು ಸೀತಾದೇವಿಯ ಚೂಡಾಮಣಿಯನ್ನಾತನಿಗೊಪ್ಪಿಸಿ ಆತನ ದುಃಖ
ವನ್ನೂ ಕಳೆದು ಸನ್ಮಾನಿತನಾದನು." ಎಂಬ ವಿಷಯವನ್ನು ನಿರೂಪಿಸಿರುವ ಈ ಕಾಂಡಕ್ಕೆ **ಸುಂದರ
ಕಾಂಡ** ಎಂದು ಹೆಸರಿಟ್ಟಿರುವುದೇಕೆ? ಎಂಬ ವಿಷಯದಲ್ಲಿ ಯಾರಿಗಾದರೂ ಸಂದೇಹ ಬರಬಹುದು.

ಈ ಕಾಂಡವಲ್ಲಿ ಹೆಚ್ಚಾಗಿ ಹನುಮಂತನ ವಿಜಯವನ್ನೇ ವರ್ಣಿಸಿರುವುದರಿಂದ ಅನೇಕರು
ಇದಕ್ಕೆ ಈ ಹೆಸರು ಬಂದಿದೆಯೆಂದು ಆಶಂಕಿಸುತ್ತಾರೆ. ಅಲ್ಲದೆ ಆಗಸ್ತ್ಯ ಸಂಹಿತೆಯಲ್ಲಿಯೂ,
ಬ್ರಹ್ಮಾಂಡ ಪುರಾಣದಲ್ಲಿಯೂ ಕಾಣುವ,

ಹನುಮದ್ವಿಜಯಂ ಕಾಂಡಂ ಯಃ ಪಾರಾಯಣಮಾಚರೇತ್ ।
ವಿಧಿನಾ ಸರ್ವಸಿದ್ಧಿಂ ಚ ಪ್ರಾಪ್ನೋತಿ ಚ ನಸಂಶಯಃ ॥ (ಆಗಸ್ತ್ಯಸಂಹಿತೆ)
ಶ್ರುತ್ವಾತು ಪಂಚಮಂ ಕಾಂಡಂ ಹನೂಮದ್ವಿಜಯಾಂಕಿತಂ ।
ಆಂಜನೇಯಪ್ರಸಾದೇನ ಬ್ರಹ್ಮಲೋಕಂ ಸ ಗಚ್ಛತಿ ॥ (ಬ್ರಹ್ಮಾಂಡ)

ಎಂಬ ಶ್ಲೋಕಗಳಿಂದ ಈ ಕಾಂಡಕ್ಕೆ ಹನುಮದ್ವಿಜಯ ಕಾಂಡವೆಂದೇ ನಾಮಾಂಕಿತವೆಂದು
ತಿದುಬರುತ್ತದೆ. ಅಲ್ಲದೆ ಎಲ್ಲ ರಾಮಾಯಣಗಳಲ್ಲಿಯೂ ಈ ಕಾಂಡವೇ ಬೀಜಕಾಂಡವೆಂದೂ, ಸಕಲ
ತ್ವಪ್ರತಿಪಾದಕವೆಂದೂ, ವಾಚಕರ ಮನವನ್ನಾಕರ್ಷಿಸುವ ವಿಷಯಸಾಮಗ್ರಿಯುಳ್ಳದೆಂದೂ, ವಿದ್ವ
ನರು ಅಭಿಪ್ರಾಯಪಡುತ್ತಾರೆ. ಅಗಸ್ತ್ಯಸಂಹಿತೆಯಲ್ಲಿನ,

ಬೀಜಕಾಂಡಮಿದಂ ಪ್ರೋಕ್ತಂ ಸರ್ವರಾಮಾಯಣೇಷ್ವಪಿ ।
ತಸ್ಮಾತ್ಪಾರಾಯಣಂ ಕೃತ್ವಾ ಧನ್ಯಾ ಭವಥ ತತ್ವತಃ ॥

ಎಂಬ ಶ್ಲೋಕದಿಂದಲೂ ಈ ಕಾಂಡವು ಬೀಜಕಾಂಡವೆಂಬ ವಿಷಯವು ಉಪವರ್ಣಿತವಾ
ವುದು.

ಹೀಗೆ ಇದು ಹನುಮದ್ವಿಜಯಕಾಂಡವೆಂದೂ, ರಾಮಾಯಣಕ್ಕೆ ಬೀಜಕಾಂಡವೆಂದೂ
ಸ್ಥವಾಗಿರುವಲ್ಲ ಇದಕ್ಕೆ ವಾಲ್ಮೀಕಿ ಮಹರ್ಷಿಯು **ಸುಂದರಕಾಂಡ**ವೆಂದು ಹೆಸರಿಟ್ಟಿರುವುದೇಕೆ
ವದನ್ನು ಪರಿಶೀಲಿಸಿ ನೋಡಿದರೆ ಇದಕ್ಕೆ ಮುಖ್ಯವಾಗಿ ಮೂರು ಕಾರಣಗಳು ಕಂಡುಬರುತ್ತವೆ.

೧. ಆದಿಕವಿಯು ಶ್ರೀ ಸೀತಾರಾಮಾಂಜನೇಯರೆಂಬ ಮೂವರು ಸುಂದರಮೂರ್ತಿಗಳ ವಿಚಾರವನ್ನೇ ಈ ಕಾಂಡದಲ್ಲಿ ವಿಶೇಷವಾಗಿ ಪ್ರಶಂಸಿಸಿರುವನು.

೨. ಸೌಂದರ್ಯಾತಿಶಯದಿಂದ ಪರಿಶೋಭಿಸುವ ಮೇಲೆ ಹೇಳಿದ ಸೀತಾರಾಮಾಂಜನೇಯರು ಮೂವರೂ ಅತಿಶಯವಾದ ಆನಂದವನ್ನನುಭವಿಸಿದ ವೃತ್ತಾಂತವು ಈ ಕಾಂಡದಲ್ಲಿ ಅಡಗಿರುವಂತೆ ಮತ್ತಾವ ಕಾಂಡದಲ್ಲಿಯೂ ಅಡಗಿರುವುದಿಲ್ಲ.

೩. ಈ ಕಾಂಡದಲ್ಲಿ ಅಲ್ಲಲ್ಲಿ ಕಂಡುಬರುವ ಸುಂದರ ಮತ್ತು ಅದರ ಪರ್ಯಾಯ ಶಬ್ದಗಳಾದ ರುಚಿರ, ಕಾಂತ, ಮನೋಹರಾದಿ ಶಬ್ದಗಳ ವಿವೇಚನೆಯಿಂದಲೂ, ಸುಂದರಮೂರ್ತಿಯಾದ ಹನುಮಂತನು ದಿವ್ಯ ಸುಂದರಮೂರ್ತಿಗಳಾದ ಸೀತಾರಾಮರ ಧ್ಯಾನವನ್ನು ಮಾಡಿರುವುದರ ವಿವೇಚನೆಯಿಂದಲೂ, ರಾಮಾಯಣ ಮಹಾಮಾಲಾರತ್ನವಾದ ಆತನ ಭಕ್ತಿಜ್ಞಾನವೈರಾಗ್ಯಗಳ, ಶೌರ್ಯಸ್ಥೈರ್ಯಪರಾಕ್ರಮಗಳ, ಸರ್ವಾತಿಶಯವಾದ ಜಿತೇಂದ್ರಿಯತೆಯ ವರ್ಣನೆಯೇ ಈ ಕಾಂಡದಲ್ಲಿ ತುಂಬಿತುಳುಕುತ್ತಿರುವುದರ ವಿವೇಚನೆಯಿಂದಲೂ ಈ ಕಾಂಡಕ್ಕೆ ಈ ಹೆಸರು ಬಂದಿರುವುದಾಗಿ ಊಹಿಸಬಹುದು.

ಕೆಲವರು ಈ ಕಾಂಡದಲ್ಲಿ ಸರ್ವಲೋಕಮನೋಹರವಾದ ಲಂಕಾನಗರದ ಸೌಂದರ್ಯವನ್ನು ವರ್ಣಿಸಿರುವುದರಿಂದ ಈ ಹೆಸರು ಬಂದಿರಬಹುದೆಂದು ಹೇಳುತ್ತಾರೆ. ಕೆಲವರು ದೂತಧರ್ಮವನ್ನೂ ಪತಿವ್ರತಾಧರ್ಮವನ್ನೂ ಈ ಕಾಂಡದಲ್ಲಿ ಹೆಚ್ಚಾಗಿ ಹೇಳಿರುವುದರಿಂದ ಇದು ಸುಂದರಕಾಂಡವಾಗಿರುವುದೆಂದು ಊಹಿಸುತ್ತಾರೆ.

ಮುಖ್ಯವಾಗಿ **ರಾಮಸ್ಯ ದಯಿತಾಭಾರ್ಯಾ ನಿತ್ಯಂ ಪ್ರಾಣಸಮಾಹಿತಾ—ಸರ್ವಲಕ್ಷಣಸಂಪನ್ನಾ—ನಾರೀಣಾಮುತ್ತಮಾವಧೂಃ—ದೇವಮಾಯೇವ ನಿರ್ಮಿತಾ—ಲೋಕಕಾಂತಾ—ವರವರ್ಣಿನೀ—ಚಾರುಸರ್ವಾಂಗೀ—ರುಚಿರಪ್ರಭಾ** ಮೊದಲಾದ ವಿಶೇಷಣಗಳಿಗೆ ಪತಿವ್ರತಾಶಿರೋಮಣಿಯಾದ ಸೀತಾದೇವಿಯೂ, **ಕಮಲಪತ್ರಾಕ್ಷಃ—ಸರ್ವಸತ್ವಮನೋಹರಃ—ರೂಪದಾಕ್ಷಿಣ್ಯಸಂಪನ್ನಃ—ಸರ್ವಲಕ್ಷಣಸಂಯುತಃ—ಮಹಾಭಾಗಃ—ದಿವ್ಯಮಂಗಳವಿಗ್ರಹಃ—ರೂಪವಾನ್** ಎಂಬಿವೇ ಮೊದಲಾದ ವಿಶೇಷಣಗಳಿಗೆ ಧೀರೋದಾತ್ತ ರಾಮನೂ, **ಸಚಾರುನಾನಾವಿಧರೂಪಧಾರೀ — ಶ್ರೀಮಾನ್ — ಕಾಮರೂಪಧೃತ್—ಮಹಾಬಾಹುಃ — ಮಹಾತೇಜಾಃ** ಮೊದಲಾದ ವಿಶೇಷಣಗಳಿಗೆ ಆಂಜನೇಯನೂ, ಹೀಗೆ ಈ ಮೂವರೂ **ಅಸೇಚನಕ** ಮೂರ್ತಿಗಳಾಗಿರುವುದರಿಂದಲೂ ಈ ಕಾಂಡದಲ್ಲಿ ಇವರ ವಿಚಾರವೇ ವಿಶೇಷವಾಗಿ ವರ್ಣಿತವಾಗಿರುವುದರಿಂದಲೂ ನವರಸಗರ್ಭಿತವಾಗಿರುವುದರಿಂದಲೂ ಧರ್ಮಸ್ವರೂಪವನ್ನು ವಿವರಿಸುವುದರಿಂದಲೂ **ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋಜನಃ** ಎಂಬ ಭಗವದುಕ್ತಿಯಂತೆ ಶ್ರೀ ಸೀತಾರಾಮಾಂಜನೇಯರು ತಾವು ಆಚರಿಸಿ, ಸಮಸ್ತರೂ ಅದರಂತೆಯೇ ಆಚರಿಸಿ ಕೃತಾರ್ಥರಾಗಲು **ಆದರ್ಶ ಧರ್ಮಗಳನ್ನು** ನಿರೂಪಿಸಿರುವುದರಿಂದಲೂ ಈ ಕಾಂಡಕ್ಕೆ **ಸುಂದರಕಾಂಡವೆಂದು** ನಾಮಾಂಕಿತವಾಗಿರುವುದು.

ಓಂ

ಶ್ರೀರಾಮಚಂದ್ರ ಪರಬ್ರಹ್ಮಣೇನಮಃ

ಶ್ರೀಮದ್ರಾಮಾಯಣೇ

ಸುಂದರಕಾಂಡೇ ಪ್ರಥಮಸರ್ಗ ಪ್ರಾರಂಭಃ

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಂ ।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿ ಕೋಕಿಲಂ ॥

ತತೋ ರಾವಣನೀತಾಯಾ ಸ್ಸೀತಾಯಾ ಶ್ಶತ್ರುಕರ್ಶನಃ ।

—: ಅವತಾರಿಕೆ :—

ಆಂಜನಾ ನಂದನಂ ವೀರಂ ಜಾನಕೀ ಶೋಕ ನಾಶನಂ ।
ಕಪೀಶ ಮಕ್ಷಹಂತಾರಂ ವಂದೇ ಲಂಕಾ ಭಯಂಕರಂ ॥

ಆದಿಕವಿಯಾದ ವಾಲ್ಮೀಕಿ ಮುನಿಪುಂಗವನು, ಹಿಂದಿನ ಕಿಷ್ಕಿಂಧಾಕಾಂಡದಲ್ಲಿ ಶ್ರೀರಾಮ ದ್ರನಲ್ಲಿರುವ ಪರತ್ವಾಸಾಧಾರಣವಾದ ಸಮಸ್ತ ಕಲ್ಯಾಣಗುಣಾಕರತ್ವವನ್ನು ಹೇಳಿ, ಈ ಂದರಕಾಂಡದಲ್ಲಿ, **ಬ್ರಹ್ಮಾಸ್ವಯಂಭೂ ಶ್ಚತುರಾನನೋವಾ, ರುದ್ರಸ್ತ್ರಿಣೇತ್ರ ಸ್ತ್ರಿಪುರಾಂತ ೀವಾ । ಇಂದ್ರೋ ಮಹೇಂದ್ರ ಸ್ಸುರನಾಯಕೋವಾ, ತ್ರಾತುಂ ನ ಶಕ್ತಾ ಯುಧಿ ರಾಮ ತ್ಯಂ ॥** ಎಂಬಿವೇ ಮೊದಲಾದ ವಾಕ್ಯಗಳಿಂದ ಆತನಲ್ಲಿರುವ ಸರ್ವಸಂಹರ್ತೃತ್ವವನ್ನು ನಿರೂಪಿಸು ನೆ. ಅಲ್ಲದೆ, ಹಿಂದಿನ ಕಾಂಡದಲ್ಲಿ ಸರ್ವಪ್ರಕಾರದಿಂದಲೂ ಮಿತ್ರಸಂರಕ್ಷಣೆಯನ್ನು ಮಾಡಲೇ ಕೆಂಬ ಧರ್ಮಸೂಕ್ಷ್ಮವನ್ನು ಪ್ರತಿಪಾದಿಸಿ, ಈ ಕಾಂಡದಲ್ಲಿ ದೂತನೂ, ಪತಿವ್ರತೆಯೂ ಹೀಗೆಯೇ ದುಕೊಳ್ಳಬೇಕೆಂಬ ವಿಷಯವನ್ನು ನಿರೂಪಿಸುವನು. ಅಥವಾ ಹಿಂದಿನ ಕಾಂಡದಲ್ಲಿ ಸಮಸ್ತರನ್ನೂ ರಕ್ಷಿಸಲು ಪ್ರವೃತ್ತನಾದ ವಿಷ್ಣುವಿಗೆ, ಆಚಾರ್ಯರೂಪ ಪುರುಷಾಕಾರ ಲಾಭವನ್ನು ಹೇಳಿ, ಈಗ ಾರ್ಯನ ಕರ್ತವ್ಯವನ್ನು ಹೇಳುವನು. ಹೀಗೆ ಹೇಳುವುದಕ್ಕೆ ಮೊದಲು ಆಚಾರ್ಯನೆಸಗುವ, ರ್ಹನಾದ ಶಿಷ್ಯನ ಅನ್ವೇಷಣವನ್ನೇ ಮೊದಲನೆಯ ಸರ್ಗದಲ್ಲ ಉಪಪಾದಿಸುವವನಾಗಿ **ತತಃ** ದು ಗ್ರಂಥವನ್ನುಪಕ್ರಮಿಸುವನು. (ಗೋವಿಂದರಾಜರು)

ಹಿಂದಿನ ಕಾಂಡದಲ್ಲಿ ಶ್ರೀರಾಮದೂತನಾದ ಆಂಜನೇಯನು, **ಜಗಾಮ ಲಂಕಾಂ ನಸಾ ಮನಸ್ವೀ** ಕೇವಲ ಮನಸ್ಸಿನಿಂದ ಲಂಕೆಗೆ ಹೊರಟನೆಂದು ಹೇಳಿ, ಈ ಕಾಂಡದಲ್ಲಿ ಶರೀರ ದಲೂ ಪ್ರಯಾಣ ಮಾಡಲಪೇಕ್ಷಿಸಿದನೆಂಬ ವಿಷಯವನ್ನು ಹೇಳಲು, ಆದಿಕವಿಯು ತತಃ ಎಂಬು ಗ್ರಂಥವನ್ನುಪಕ್ರಮಿಸಿರುವನು. (ಮಹೇಶ್ವರತೀರ್ಥರು+ರಾಮಾನುಜರು)

ಇಯೇಷ ಪದಮನ್ವೇಷ್ಟುಂ ಚಾರಣಾಚರಿತೇ ಪಥಿ¶ ॥೧॥ ದುಷ್ಕರಂ ನಿಷ್ಪ್ರತಿದ್ವಂದ್ವಂ
ಚಿಕೀರ್ಷನ್ಕರ್ಮ ವಾನರಃ । ಸಮುದಗ್ರಶಿರೋಗ್ರೀವೋ ಗವಾಂಪತಿರಿವಾಬಭೌ ॥೨॥

ತತಃ - ಜಾಂಬವಂತನು ಪ್ರೋತ್ಸಾಹಿಸಿದ ಬಳಿಕ, ಶತ್ರುಕರ್ಶನಃ - ವಿರೋಧಿಗಳನ್ನು ನಾಶಗೊಳಿಸುವ ಹನುಮಂತನು, ರಾವ....ರಾಃ - ರಾವಣಾಸುರನಿಂದ ಕದ್ದೊಯ್ಯಲ್ಪಟ್ಟ, ಸೀತಾಯಾಃ - ಸೀತಾದೇವಿಯ, ಪದಂ - ಸ್ಥಾನವನ್ನು, ಅನ್ವೇಷ್ಟುಂ - ಹುಡುಕಲೋಸುಗ, ಚಾರ....ತೇ - ದೇವಗಾಯಕರಿಂದ ಎಲ್ಲೆಡೆಯಲ್ಲಿಯೂ ಸಂಚರಿಸಲ್ಪಟ್ಟ, ಪಥಿ - ಮಾರ್ಗದಲ್ಲಿ, (ಗಂತುಂ - ಹೋಗುವುದಕ್ಕೆ,) ಇಯೇಷ - ಬಯಸಿದನು. ॥೧॥ ದುಷ್ಕರಂ - ಇತರರಾರಿಂದಲೂ ಮಾಡಲಾಗದ, ಕರ್ಮ - ಸಮುದ್ರೋಲ್ಲಂಘನ ಕಾರ್ಯವನ್ನು, ನಿಷ್ಪ್ರತಿದ್ವಂದ್ವಂ - ನಿರ್ವಿಘ್ನವಾಗಿ, ಚಿಕೀರ್ಷನ್ - ಮಾಡಬಯಸಿದ, ವಾನರಃ - ಹನುಮಂತನು, ಸಮು....ವಃ - ಮೇಲಕ್ಕೆತ್ತಿದ ತಲೆಯೂ ಕೊರಳೂ ಉಳ್ಳವನಾಗಿ, ಗವಾಂಪತಿರಿವ-ವೃಷಭದಂತೆ, ಆಬಭೌ-ಪ್ರಕಾಶಿಸಿದನು. ॥ ೨ ॥ ಮಹಾಬಲಃ - ಬಹು ಬಲಿಷ್ಠನಾದ,

---

ಆ ಬಳಿಕ ಶತ್ರುಮರ್ದನನಾದ ಹನುಮಂತನು, ರಾವಣನಪಹರಿಸಿಟ್ಟಿದ್ದ ಸೀತಾದೇವಿಯಿರುವ ಸ್ಥಳವನ್ನು ಹುಡುಕಲೋಸುಗ ದೇವತೆಗಳು ಸಂಚಾರ ಮಾಡುವ ಆಕಾಶಮಾರ್ಗದಲ್ಲಿ ಹೊರಡಲಪೇಕ್ಷಿಸಿದನು. ॥ ೧ ॥ ಇತರರಾರಿಂದಲೂ ಮಾಡಲಶಕ್ಯವಾದ ಸಮುದ್ರೋಲಂಘನ ಕಾರ್ಯವನ್ನು ಮಾಡಬಯಸಿದ ಆ ಮಾರುತಿಯು, ಶಿರಸ್ಸನ್ನೂ, ಹೆಗ್ಗತ್ತಿಗೆಯನ್ನೂ ಮೇಲಕ್ಕೆತ್ತಿ ಗಗನಮಂಡಲವನ್ನೀಕ್ಷಿಸುತ್ತಾ ವೃಷಭರಾಜನಂತೆ ಪ್ರಕಾಶಿಸುತ್ತಿದ್ದನು. ॥ ೨ ॥ ಮಹಾ ಬಲಿಷ್ಠನೂ, ಧೀರನೂ ಆದ ಆತನು ಪಚ್ಚೆಯ ಬಣ್ಣದಿಂದ ಕೂಡಿ

¶ ಈ ಶ್ಲೋಕದಲ್ಲಿನ ವಿಶೇಷಾರ್ಥಗಳು:—"ಆಂಜನೇಯನು ಆಕಾಶದಲ್ಲಿಯೂ ಸಂಚರಿಸಿ ಹುಡುಕುವ ಸಾಮರ್ಥ್ಯವುಳ್ಳವನು. ಆತನ ಬುದ್ಧಿ ಚಾತುರ್ಯವು ಅತಿಶಯವಾದುದು" ಎಂಬುದನ್ನು ತಿಳಿಸಲು "ಚಾರಣಾ ಚರಿತೇ ಪಥಿ ಅನ್ವೇಷ್ಟುಂ" ಎಂಬ ಪದಗಳು ನಿವೇಶಿತವಾಗಿರುವುವು. ಇದರಿಂದ ಶಿಷ್ಯಾನ್ವೇಷಣತತ್ಪರನಾದ ಗುರುವಿನ ಸ್ವರೂಪವು ನಿರೂಪಿತವಾಗುವುದು.

"ತತಃ" ಮುದ್ರಾಪ್ರದಾನಪೂರ್ವಕವಾಗಿ ಭಗವಂತನ ಅನುಜ್ಞೆಯನ್ನು ಪಡೆದ ಬಳಿಕ, "ಶತ್ರುಕರ್ಶನಃ" "ಗುಶಬ್ದಸ್ತ್ವಂಧಕಾರಸ್ಯಾದ್ರುಶಬ್ದಸ್ತನ್ನಿರೋಧಕಃ । ಅಂಧಕಾರನಿರೋಧಿತ್ವಾದ್ಗುರುರಿತ್ಯಭಿಧೀಯತೇ" ಎಂಬಂತೆ ಅಜ್ಞಾನವನ್ನು ಹೋಗಲಾಡಿಸಬಲ್ಲ ಗುರುವು "ಚಾರಣಾ ಚರಿತೇ ಪಥಿ" (ಚಾರಯಂತಿ ಆಚಾರಯಂತಿ ಧರ್ಮಾನಿತಿ ಚಾರಣಾಃ । ಪೂರ್ವಾಚಾರ್ಯಾಃ । ತೈಃ ಆಚರಿತೇ ಪಥಿ) ಧರ್ಮಾನುಷ್ಠಾತೃಗಳಾದ ಪೂರ್ವಾಚಾರ್ಯರ ಮಾರ್ಗವನ್ನನುಸರಿಸಿ, (ಮಹಾಜನಾ ಯೇನಗತ ಸ್ಸಪಂಥಾಃ—ಎಂಬಂತೆ ಹಿಂದಿನ ಧರ್ಮಾಚಾರ್ಯರು ನಡೆಯುತ್ತಿದ್ದ ಮಾರ್ಗವನ್ನೇ ಅನುಸರಿಸಿ) ರಾವಣಸೀತಾಯಾಃ (ರಾವಯತಿ ಅಸತ್ಪ್ರಲಾಪಾನ್ಕಾರಯತೀತಿ ರಾವಣಃ । ಅವಿವೇಕಃ । ತೇನ ಸೀತಾಯಾಃ ಸ್ವವಶಂ ಪ್ರಾಪಿತಾಯಾಃ) ಅವಿವೇಕವು ತನ್ನ ವಶವಾಗಿಸಿಕೊಂಡ, "ಸೀತಾಯಾಃ"— ಅನಾದಿಯಿಂದಲೂ ಭಗವಂತನಿಗೆ ಪರತಂತ್ರನಾದ ಚೇತನನಿರುವ (ಇಲ್ಲಿ ಸೀತಾ ಶಬ್ದದಿಂದ ಅಯೋನಿಜತ್ವವೂ, ಸ್ತ್ರೀಲಿಂಗದಿಂದ ಪಾರತಂತ್ರ್ಯವೂ ಹೇಳಲ್ಪಡುವುದರಿಂದ "ಸ್ತ್ರೀ ಪ್ರಾಯ ಮಿತರತ್ಸರ್ವಂ" ಎಂಬ ತತ್ವವು ಪ್ರತಿಪಾದಿತವಾಗುತ್ತದೆ.) "ಪದಂ" ಸಂಸಾರಮಂಡಲವನ್ನು, ಅಥವಾ ಸಾತ್ವಿಕ ಸಂಭಾಷಣಾದಿ ಚಿಹ್ನೆಯನ್ನು, (ವಿಷ್ಣೋಃ ಕಟಾಕ್ಷಶ್ಚಾದ್ವೇಷ ಆಭಿಮುಖ್ಯಂಚ ಸಾತ್ವಿಕೈಃ । ಸಂಭಾಷಣಂ ಷಡೇತಾನಿ ಹ್ಯಾಚಾರ್ಯ ಪ್ರಾಪ್ತಿಹೇತವಃ) ಅಥವಾ, ವ್ಯವಸಾಯವನ್ನು, (ಯಾವ ಚೇತನನು ಭಗವಂತನನ್ನು ಹೊಂದುವುದರಲ್ಲಿ ಉದ್ಯೋಗಪರನಾಗಿರುವನೆಂಬುದನ್ನು) "ಅನ್ವೇಷ್ಟುಂ ಇಯೇಷ" ಹುಡುಕಲು ಬಯಸಿದನು.

ಈ ಶ್ಲೋಕದಲ್ಲಿನ "ರಾವಣಸೀತಾಯಾಃ" ಎಂಬ ಪದದಲ್ಲಿರುವ ವಕಾರವು ಗಾಯತ್ರಿಯ ಹನ್ನೆರಡನೆಯ ಅಕ್ಷರವು. (ಗೋ+ಮು)

ಅಥ ವೈಡೂರ್ಯವರ್ಣೇಷು ಶಾದ್ವಲೇಷು ಮಹಾಬಲಃ । ಧೀರಸ್ಸಲಿಲಕಲ್ಪೇಷು ವಿಚಚಾರ ಯಥಾಸುಖಮ್ ॥ ೩ ॥ ದ್ವಿಜಾನ್ವಿತ್ರಾಸಯನ್ ಧೀಮಾನುರಸಾ ಪಾದಪಾನ್ ಹರನ್ । ಮೃಗಾಂಶ್ಚ ಸುಬಹೂನ್ನಿಘ್ನನ್ ಪ್ರವೃದ್ಧ ಇವ ಕೇಸರೀ ॥ ೪ ॥ ನೀಲಲೋಹಿತಮಾಂಜಿಷ್ಠಪತ್ರವರ್ಣೈಸ್ಸಿತಾಸಿತೈಃ । ಸ್ವಭಾವ¶ವಿಹಿತೈಶ್ಚಿತ್ರೈರ್ಧಾತುಭಿಸ್ಸಮಲಂಕೃತಮ್ ॥ ೫ ॥ ಕಾಮರೂಪಿಭಿರಾವಿಷ್ಟಮಭೀಕ್ಷ್ಣಂ ಸಪರಿಚ್ಛದೈಃ । ಯಕ್ಷಕಿನ್ನರಗಂಧರ್ವೈರ್ದೇವಕಲ್ಪೈಶ್ಚ ಪನ್ನಗೈಃ ॥ ೬ ॥ ಸ ತಸ್ಯ ಗಿರಿವರ್ಯಸ್ಯ ತಲೇ ನಾಗವರಾಯುತೇ । ತಿಷ್ಠನ್ಕಪಿವರಸ್ತತ್ರ ಹ್ರದೇ ನಾಗ ಇವಾಬಭೌ ॥ ೭ ॥ ಸ

ಧೀರಃ - ಪಂಡಿತನಾದ ಹನುಮಂತನು, ಅಥ - ಅನಂತರದಲ್ಲಿ, ವೈಡೂ....ಷು - ಪಚ್ಚೆಮಣಿಗಳ ಬಣ್ಣವುಳ್ಳದಾಗಿಯೂ, ಸಲಿ....ಷು - ನೀರಿನಂತೆ ತಣ್ಣಗಿರುವ, ಶಾದ್ವಲೇಷು - ಗರಿಕೆಯುಳ್ಳ ಪ್ರದೇಶಗಳಲ್ಲಿ, ಯಥಾಸುಖಂ - ಲೀಲೆಯಿಂದ, ವಿಚಚಾರ - ಸಂಚರಿಸಿದನು. ॥ ೩ ॥ ಧೀಮಾನ್ - ಬುದ್ಧಿಶಾಲಿಯಾದ ಹನುಮಂತನು, ಪ್ರವೃದ್ಧಃ - ವಿಜೃಂಭಿಸಿರುವ, ಕೇಸರೀವ - ಸಿಂಹದಂತೆ, ದ್ವಿಜಾನ್ - ಪಕ್ಷಿಗಳನ್ನು, ವಿತ್ರಾಸಯನ್ - ಹೆದರಿಸುತ್ತಲೂ, ಉರಸಾ - ಎದೆಯಿಂದ, ಪಾದಪಾನ್ - ವೃಕ್ಷಗಳನ್ನು, ಹರನ್ - ಮುರಿಯುತ್ತಲೂ, ಸುಬಹೂನ್ಮೃಗಾನ್ - ಲೆಕ್ಕವಿಲ್ಲದಷ್ಟು ಮೃಗಗಳನ್ನು, ನಿಘ್ನಂಶ್ಚ - ಕೊಲ್ಲುತ್ತಲೂ, ವಿಚಚಾರ - ಸಂಚರಿಸುತ್ತಿದ್ದನು. ॥ ೪ ॥ ಯತ್ - ಯಾವ ಪ್ರದೇಶವು, ನೀಲ....ರ್ಣೈಃ - ಕಪ್ಪು, ಕೆಂಪು, ಪಾಟಲ, ಎಲೆಹಸುರು ಬಣ್ಣಗಳುಳ್ಳದಾಗಿಯೂ, ಸಿತಾಸಿತೈಃ - ಬೂದುವರ್ಣವುಳ್ಳದಾಗಿಯೂ, ಸ್ವಭಾ....ತೈಃ - ಸ್ವಾಭಾವಿಕವಾದ, ಚಿತ್ರೈಃ - ನಾನಾಬಣ್ಣಗಳುಳ್ಳ, ಧಾತುಭಿಃ - ಮಣಿಶಿಲೆಗಳಿಂದಲೂ, ಅಲಂಕೃತಂ - ಅಲಂಕರಿಸಲ್ಪಟ್ಟಿದ್ದೋ, ಕಾಮರೂಪಿಭಿಃ - ಕಾಮರೂಪಿಗಳಾದ, ಸಪರಿಚ್ಛದೈಃ - ಅಲಂಕಾರಯುಕ್ತರಾದ, ಯಕ್ಷ....ರ್ವೈಃ - ಯಕ್ಷ, ಕಿನ್ನರ, ಗಂಧರ್ವರಿಂದಲೂ, ದೇವಕಲ್ಪೈಃ - ದೇವಸಮಾನರಾದ, ಪನ್ನಗೈಶ್ಚ - ಪನ್ನಗರಿಂದಲೂ, ಆವಿಷ್ಟಂ - ವ್ಯಾಪ್ತವಾಗಿರುವುದೋ, ನಾಗ....ತೇ - ಗಜಶ್ರೇಷ್ಠಗಳಿಂದ ತುಂಬಿರುವುದೋ, ತಸ್ಯಗಿರಿವರ್ಯಸ್ಯ - ಆ ಮಹೇಂದ್ರಪರ್ವತದ, ತತ್ರತಲೇ - ಆ ಪ್ರದೇಶದಲ್ಲಿ, ತಿಷ್ಠನ್ - ನಿಂತಿರುವ, ಕಪಿವರಃ - ಕಪಿಶ್ರೇಷ್ಠ

ಶೀತಳ ಜಲದಂತೆ ತಣ್ಣಗಿರುವ ಆ ಮಹೇಂದ್ರಪರ್ವತದ ಕೋಮಲವಾದ ಶಾದ್ವಲಪ್ರದೇಶಗಳಲ್ಲಿ ಲಂಘನಕಾರ್ಯಕ್ಕುಚಿತವಾದ ಎದೆಯುಬ್ಬಿಸಿದ ಮೃಗರಾಜನಂತೆ ಸಂಚರಿಸುತ್ತಿದ್ದನು. ಪಕ್ಷಿಗಳನ್ನು ಹೆದರಿಸುತ್ತಲೂ, ಉರಸ್ಥಳದಿಂದ ವೃಕ್ಷಗಳನ್ನು ಮುರಿಯುತ್ತಲೂ, ಮೃಗಗಳನ್ನು ಕೊಲ್ಲುತ್ತಲೂ ಸಂಚರಿಸುತ್ತಿದ್ದ ಆ ಮಾರುತಿಯು, ವಿಜೃಂಭಿಸಿರುವ ಸಿಂಹದಂತೆ ಶೋಭಿಸುತ್ತಿದ್ದನು. ॥ ೧-೪ ॥ ಯಾವುದು ಕಪ್ಪು, ಕೆಂಪು, ಪಾಟಲ, ಹಸರು, ಬೂದು ಮೊದಲಾದ ಚಿತ್ರವರ್ಣಗಳ ಧಾತುವಿಶೇಷಗಳಿಂದ ಅಲಂಕೃತವಾಗಿ ಕಂಗೊಳಿಸುತ್ತಿದ್ದಿತೋ, ಯಾವುದು ಕಾಮರೂಪಿಗಳಾಗಿಯೂ, ಭೋಗೋಪಯುಕ್ತವಾದ ಚಂದನ ಕುಸುಮ ತಾಂಬೂಲ ಭೂಷಣಾದಿಗಳಿಂದ ಕೂಡಿದವರಾಗಿಯೂ ಇರುವ ಯಕ್ಷ ಕಿನ್ನರ ಗಂಧರ್ವಾದಿ ದೇವಜಾತೀಯರಿಂದಲೂ, ದೇವಸಮಾನರಾದ ಪನ್ನಗರಿಂದಲೂ, ಅನೇಕ ಮದಗಜಗಳಿಂದಲೂ ಕೂಡಿದ್ದಿತೋ, ಆ ಮಹೇಂದ್ರಪರ್ವತ ಪ್ರದೇಶದಲ್ಲಿ ನಿಂತಿದ್ದ

¶ "ಸಿದ್ಧೈರ್ವಿಮಲೈಃ" ತಿ. ಪಾ.

ಸೂರ್ಯಾಯ ಮಹೇಂದ್ರಾಯ ಪವನಾಯ ಸ್ವಯಂಭುವೇ । ಭೂತೇಭ್ಯಶ್ಚಾಂಜಲಿಂ ಕೃತ್ವಾ ಚಕಾರ ಗಮನೇ ಮತಿಂ ॥ ೮ ॥ * ಅಂಜಲಿಂ ಪ್ರಾಙ್ಮುಖಃ ಕುರ್ವನ್ ಪವನಾಯಾಽತ್ಮಯೋನಯೇ । ತತೋಽಭಿವವೃಧೇ ಗಂತುಂ ದಕ್ಷಿಣೋ ದಕ್ಷಿಣಾಂ ದಿಶಂ ॥ ೯ ॥ ಪ್ಲವಂಗಪ್ರವರೈರ್ದೃಷ್ಟಃ ಪ್ಲವನೇ ಕೃತನಿಶ್ಚಯಃ । ವವೃಧೇ ರಾಮವೃದ್ಧ್ಯರ್ಥಂ ಸಮುದ್ರ ಇವ ಪರ್ವಸು ॥ ೧೦ ॥ ನಿಷ್ಪ್ರಮಾಣಶರೀರಸ್ಸನ್ ಲಿಲಂಘ

ನಾದ ಆಂಜನೇಯನು, ಹ್ರದೇ - ಮಡುವಿನಲ್ಲಿರುವ, ನಾಗಇವ - ಆನೆಯಂತೆ, ಬಭೌ - ಪ್ರಕಾಶಿಸಿದನು. ॥ ೫-೭ ॥ ಸಃ - ಆ ಮಾರುತಿಯು, ಸೂರ್ಯಾಯ - ಸೂರ್ಯನಿಗೂ, ಮಹೇಂದ್ರಾಯ - ದೇವೇಂದ್ರನಿಗೂ, ಪವನಾಯ - ವಾಯುವಿಗೂ, ಸ್ವಯಂಭುವೇ - ಬ್ರಹ್ಮನಿಗೂ, ಭೂತೇಭ್ಯಃ - ದೇವಯೋನಿ ವಿಶೇಷಗಳಿಗೂ, ಅಂಜಲಿಂಕೃತ್ವಾ - ನಮಸ್ಕರಿಸಿ, ಗಮನೇ - ಪ್ರಯಾಣದಲ್ಲಿ, ಮತಿಂ ಚಕಾರ - ಮನಸ್ಸು ಮಾಡಿದನು. ॥ ೮ ॥ ದಕ್ಷಿಣಃ - ಸಮರ್ಥನಾದ ಹನುಮಂತನು, ಪ್ರಾಙ್ಮುಖಃ - ಪೂರ್ವಾಭಿಮುಖನಾಗಿ, ಆತ್ಮಯೋನಯೇ - ತನ್ನ ಜನ್ಮಕ್ಕೆ ಕಾರಣವಾದ, ಪವನಾಯ - ವಾಯುವಿಗೆ, ಅಂಜಲಿಂ - ನಮಸ್ಕಾರವನ್ನು, ಕುರ್ವನ್ - ಮಾಡುವವನಾಗಿ, ತತಃ - ಅನಂತರದಲ್ಲಿ, ದಕ್ಷಿಣಾಂದಿಶಂ - ದಕ್ಷಿಣದಿಕ್ಕನ್ನು ಕುರಿತು, ಗಂತುಂ - ಹೋಗಲು, ವವೃಧೇ - ಬೆಳೆದನು. ॥ ೯ ॥ ಪ್ಲವಂ....ರೈಃ - ಕಪಿಶ್ರೇಷ್ಠರಾದ ಅಂಗದಾದಿಗಳಿಂದ, ದೃಷ್ಟಃ-ನೋಡಲ್ಪಡುತ್ತಿರುವ ಆಂಜನೇಯನು, ರಾಮ....ರ್ಥಂ-ಶ್ರೀರಾಮನ ಪ್ರಯೋಜನಕ್ಕಾಗಿ, ಪ್ಲವನೇ-ಸಮುದ್ರೋಲ್ಲಂಘನದಲ್ಲಿ, ಕೃತನಿಶ್ಚಯಃ - ನಿಶ್ಚಯವುಳ್ಳವನಾಗಿ, ಪರ್ವಸು - ಪೂರ್ಣಿಮಾ ರಾತ್ರಿಗಳಲ್ಲಿ, ಸಮುದ್ರಇವ - ಕಡಲಿನಂತೆ, ವವೃಧೇ - ವೃದ್ಧಿಯೈದಿದನು. ॥ ೧೦ ॥ ಬಲವಾನ್ - ಬಲಿಷ್ಠನಾದ, ಸಃ - ಆ ಹನುಮಂತನು, ಅರ್ಣವಂ - ಸಮುದ್ರವನ್ನು, ಲಿಲಂಘಯಿಷುಃ - ದಾಟಲಿಚ್ಛಿಸಿ, ನಿಷ್ಪ್ರ....ಸ್ಸನ್ - ಪ್ರಮಾಣಕ್ಕೆ ನಿಲುಕದ ದೇಹವುಳ್ಳವನಾಗಿ,

---

ಆ ಕಪಿಶ್ರೇಷ್ಠನು ಮಡುವಿನಲ್ಲಿರುವ ಮದಗಜದಂತೆ ಶೋಭಿಸುತ್ತಿದ್ದನು. ॥೫-೭॥ ಆ ಸಮಯದಲ್ಲಿ ಇಷ್ಟದೇವತಾ ನಮಸ್ಕಾರಪೂರ್ವಕವಾಗಿ ಸಮುದ್ರೋಲ್ಲಂಘನವನ್ನು ಮಾಡಲಪೇಕ್ಷಿಸಿದ ಮಹಾ ಸಮರ್ಥನಾದ ಆ ವಾನರವೀರನು ಸೂರ್ಯನಿಗೂ, ಮಹೇಂದ್ರನಿಗೂ, ವಾಯುವಿಗೂ, ಬ್ರಹ್ಮನಿಗೂ, ಇತರ ದೇವತೆಗಳಿಗೂ ನಮಸ್ಕರಿಸಿ, ಆ ಬಳಿಕ ಪೂರ್ವಾಭಿಮುಖವಾಗಿ ನಿಂತು ತನ್ನ ತಂದೆಯಾದ ವಾಯುದೇವನಿಗೆ ಪ್ರತ್ಯೇಕವಾಗಿ ಕೈಮುಗಿದು ದಕ್ಷಿಣದಿಕ್ಕನ್ನು ಕುರಿತು ಪ್ರಯಾಣಮಾಡಲು ತನ್ನ ದೇಹವನ್ನು ಬೆಳೆಸಿದನು. ಕಪಿವೀರರೆಲ್ಲರೂ ನೋಡುತ್ತಿರಲು ಲಂಘನಕಾರ್ಯದಲ್ಲಿ ಕೃತನಿಶ್ಚಯನಾದ ಆ ಹನುಮಂತನು ಶ್ರೀರಾಮನ ಕಾರ್ಯಸಿದ್ಧಿಗಾಗಿ ಪರ್ವಕಾಲಗಳಲ್ಲಿನ ಸಮುದ್ರದಂತೆ ಮೇಲೆ ಮೇಲೆ ವರ್ಧಿಸುತ್ತಿದ್ದನು. ॥ ೮-೧೦ ॥ ಹೀಗೆ ತನ್ನ ದೇಹವನ್ನು ಪ್ರಮಾಣಕ್ಕೆ ನಿಲುಕದಂತೆ ಅದ್ಭುತವಾಗಿ ಬೆಳೆಸಿಕೊಂಡು ಭುಜಗ

---

* ಇಲ್ಲಿ "ಅಂಜಲಿಂ ಪ್ರಾಙ್ಮುಖಃ ಕುರ್ವನ್" ಎಂಬ ಪಾಠವು ಸಾಧುವಲ್ಲವು. ಪೂರ್ವಾಭಿಮುಖನಾಗಿ ನಿಂತು ದಕ್ಷಿಣಾಭಿಮುಖನಾಗಿ ಪ್ರಯಾಣ ಮಾಡುವುದು ಅಸಂಭವ. ಅಲ್ಲದೆ ಪೂರ್ವಾಭಿಮುಖನಾಗಿ ನಿಂತು ದೇವತೆಗಳಿಗೆ ಮಣಿವುದು, ದಕ್ಷಿಣಾಭಿಮುಖನಾಗಿ ಪ್ರಯಾಣ ಮಾಡುವುದು, ಈ ಎರಡೂ ಏಕಕಾಲದಲ್ಲಿ ಅಸಂಭವವಾದುದರಿಂದ, ಪೂರ್ವಾಭಿಮುಖನಾಗಿ ನಿಂತು ತನ್ನ ತಂದೆಯಾದ ವಾಯುದೇವನಿಗೆ ಮಣಿದು, ಆ ಬಳಿಕ ದಕ್ಷಿಣಾಭಿಮುಖನಾಗಿ ಪ್ರಯಾಣವನ್ನು ಮಾಡಿದನೆಂದೇ ಅರ್ಥ ಮಾಡಬೇಕು. (ಗೋವಿಂದರಾಜರು)

ಯಿಷುರರ್ಣವಂ । § ಪ್ರಗೃಹ್ಯ ಬಲವಾನ್ಬಾಹೂ ಸಲಂಕಾಭಿಮುಖಸ್ಥಿತಃ । ಬಾಹುಭ್ಯಾಂ ಪೀಡಯಾಮಾಸ ಚರಣಾಭ್ಯಾಂಚ ಪರ್ವತಂ ॥ ೧೧ ॥ ಸಚಚಾಲಾಽಚಲ ಶ್ಚಾಪಿ ಮುಹೂರ್ತಂ ಕಪಿಪೀಡಿತಃ । ತರೂಣಾಂ ಪುಷ್ಪಿತಾಗ್ರಾಣಾಂ ಸರ್ವಂ ಪುಷ್ಪಮಶಾತಯತ್ ॥ ೧೨ ॥ § ತೇನ ಪಾದಪಮುಕ್ತೇನ ಪುಷ್ಪೌಘೇಣ ಸುಗಂಧಿನಾ । ಸರ್ವತಸ್ಸಂವೃತಶ್ಶೈಲೋ ಬಭೌ ಪುಷ್ಪಮಯೋ ಯಥಾ ॥ ೧೩ ॥ ತೇನಚೋತ್ತಮವೀರ್ಯೇಣ ಪೀಡ್ಯಮಾನಸ್ಸಪರ್ವತಃ । ಸಲಿಲಂ ಸಂಪ್ರಸುಸ್ರಾವ ‡ ಮದಂ ಮತ್ತ ಇವ ದ್ವಿಪಃ ॥ ೧೪ ॥ ಪೀಡ್ಯಮಾನಸ್ತು ಬಲಿನಾ ಮಹೇಂದ್ರಸ್ತೇನ ಪರ್ವತಃ । ರೀತೀರ್ನಿರ್ವರ್ತಯಾಮಾಸ ಕಾಂಚನಾಂಜನರಾಜತೀಃ ॥ ೧೫ ॥ * ಮುಮೋಚ ಚ ಶಿಲಾ

ಬಾಹೂ - ಭುಜಗಳನ್ನು, ಪ್ರಗೃಹ್ಯ - ಸಂಗ್ರಹಿಸಿ, ಲಂಕಾ....ತಃ - ಲಂಕಾಪಟ್ಟಣಕ್ಕೆ ಎದುರಾಗಿ, ಬಾಹುಭ್ಯಾಂ - ಭುಜಗಳಿಂದಲೂ, ಚರಣಾಭ್ಯಾಂಚ - ಪಾದಗಳಿಂದಲೂ, ಪರ್ವತಂ - ಆ ಬೆಟ್ಟವನ್ನು, ಪೀಡಯಾಮಾಸ - ಔಕಿದನು. ॥ ೧೧ ॥ ಕಪಿಪೀಡಿತಃ - ಹನುಮಂತನಿಂದ ಪೀಡಿತವಾದ, ಸಃ - ಆ, ಅಚಲಶ್ಚಾಪಿ-ಪರ್ವತವೂ, ಮುಹೂರ್ತಂ-ಸ್ವಲ್ಪಹೊತ್ತು, ಚಚಾಲ-ಚಲಿಸಿತು, ಪುಷ್ಪಿತಾಗ್ರಾಣಾಂ-ಹೂ ಬಿಟ್ಟರೆಂಬೆಗಳುಳ್ಳ, ತರೂಣಾಂ - ವೃಕ್ಷಗಳ, ಸರ್ವಂಪುಷ್ಪಂ-ಹೂಗಳೆಲ್ಲವೂ, ಅಶಾತಯತ್-ಉದಿರಿಹೋದವು. ॥ ೧೨ ॥ ಪಾದ....ನ - ಮರಗಳಿಂದ ಉದಿರಿದ, ಸುಗಂಧಿನಾ - ಸುವಾಸನೆಯುಳ್ಳ, ಪುಷ್ಪೌಘೇಣ - ಪುಷ್ಪಸಮೂಹದಿಂದ, ಸರ್ವತಃ - ಎಲ್ಲೆಡೆಯಲ್ಲಿಯೂ, ಸಂವೃತಃ - ವ್ಯಾಪ್ತವಾದ, ಶೈಲಃ - ಪರ್ವತವು, ಪುಷ್ಪಮಯೋಯಥಾ - ಪುಷ್ಪಮಯವಾದಂತೆ, ಬಭೌ - ಪ್ರಕಾಶಿಸಿತು. ॥ ೧೩ ॥ ಉತ್ತ....ಣ - ಉತ್ತಮ ಸಾಮರ್ಥ್ಯವುಳ್ಳ, ತೇನ - ಆ ಮಾರುತಿಯಿಂದ, ಪೀಡ್ಯಮಾನಃ - ಬಾಧಿಸಲ್ಪಟ್ಟ, ಸಪರ್ವತಃ - ಆ ಬೆಟ್ಟವು, ಮತ್ತಃ - ಮದವೇರಿದ, ದ್ವಿಪಃ - ಆನೆಯು, ಮದಮಿವ-ಮದೋದಕವನ್ನು ಎಂತೋ ಅಂತು, ಸಲಿಲಂ - ನೀರನ್ನು, ಸಂಪ್ರಸುಸ್ರಾವ - ವಿಶೇಷವಾಗಿ ಸುರಿಸಿತು. ॥೧೪॥ ತೇನಬಲಿನಾ - ಆ ಬಲಿಷ್ಠನಿಂದ, ಪೀಡ್ಯಮಾನಃ - ಪೀಡಿಸಲ್ಪಟ್ಟ, ಮಹೇಂದ್ರಪರ್ವತಃ - ಮಹೇಂದ್ರಪರ್ವತವು, ಕಾಂಚ....ತೀಃ - ಚಿನ್ನ, ಬೆಳ್ಳಿ, ಕಬ್ಬಿಣಗಳ ಸಂಬಂಧಗಳಾದ ಧಾರೆಗಳನ್ನು, ನಿರ್ವ....ಸ - ಹೊರಪಡಿಸಿತು ॥೧೫॥ ಶೈಲಃ - ಬೆಟ್ಟವು, ಸಮನಶ್ಶಿಲಾಃ - ಮಣಿಶಿಲೆಗಳೊಡಗೂಡಿದ, ವಿಶಾಲಾಃ -

---

ಳಿಂದಲೂ, ಚರಣಗಳಿಂದಲೂ ಆ ಪರ್ವತವನ್ನು ಬಲವಾಗಿ ಔಕಿದನು. ಆ ಕೂಡಲೇ ಚಲಿಸಲಸಾಧ್ಯವಾದ ಆ ಮಹೇಂದ್ರಪರ್ವತವು ಒಂದು ಮುಹೂರ್ತಕಾಲ ನಡುಗಿಬಿಟ್ಟಿತು. ಆ ಸಮಯದಲ್ಲಿ ಅಲ್ಲಿನ ವೃಕ್ಷಗಳಲ್ಲಿದ್ದ ಪುಷ್ಪಗಳೆಲ್ಲವೂ ಕೆಳಕ್ಕುದುರಿ ಆ ಪರ್ವತಪ್ರಾಂತವೆಲ್ಲವನ್ನೂ ಕವಿಯಲು ಅದೊಂದು ಪುಷ್ಪಪರ್ವತದಂತೆಯೇ ಶೋಭಿಸುತ್ತಿದ್ದಿತು. ಆ ಕಪಿವೀರನಿಂದ ಪೀಡಿತವಾದ ಆ ಪರ್ವತವು ಮಾವಟಿಗನ ಅಂಕುಶದ ತಿವಿತದಿಂದ ಮದೋದಕವನ್ನು ಸುರಿಸುವ ಮದಗಜದಂತೆ ಜಲಪ್ರವಾಹವನ್ನು ಸ್ರವಿಸುತ್ತಿದ್ದಿತು. ॥ ೧೧–೧೪ ॥ ಇಷ್ಟೆಯಲ್ಲದೆ ಆ ಪರ್ವತವು ಅಲ್ಲಲ್ಲಿ ಬಿರುಕುಬಿಟ್ಟು ಚಿನ್ನ, ಬೆಳ್ಳಿ, ನೀಲಮಣಿಗಳ ರೇಖೆಗಳನ್ನು ಪ್ರಕಾಶಗೊಳಿಸುತ್ತಿದ್ದಿತು. ಕಾಳೀ, ಕರಾಳೀ, ವಿಸ್ಫುಲಿಂಗಿನೀ, ಧೂಮ್ರವರ್ಣಾ,

---

§ ಇದು ಅಧಿಕ ಪಾಠ. § ಈ ಶ್ಲೋಕವು ತಿ. ಮ. ಕ. ಪಾಠಗಳಲ್ಲಿ ಅಧಿಕ.

‡ "ಮದ" ತಿ. ಪಾ. * ಈ ಶ್ಲೋಕವು ಗೋ. ತಿ. ಪಾಠದಲ್ಲಿ ಅಧಿಕ.

ಶ್ಶೈಲೋ ವಿಶಾಲಾ ಸ್ಸಮನಶ್ಶಿಲಾಃ । ಮಧ್ಯಮೇನಾರ್ಚಿಷಾ ಜುಷ್ಟೋ ಧೂಮ ರಾಜೀರಿವಾನಲಃ ॥ ೧೬ ॥ ¶ ಗಿರಿಣಾ ಪೀಡ್ಯಮಾನೇನ ಪೀಡ್ಯಮಾನಾನಿ ಸರ್ವತಃ । ಗುಹಾವಿಷ್ಟಾನಿ ಭೂತಾನಿ ವಿನೇದು ರ್ವಿಕೃತೈ ಸ್ಸ್ವರೈಃ ॥ ೧೭ ॥ ಸಮಹಾಸತ್ವಸನ್ನಾದ ಶ್ಶೈಲಪೀಡಾನಿಮಿತ್ತಜಃ । ಪೃಥಿವೀಂ ಪೂರಯಾಮಾಸ ದಿಶಶ್ಚೋಪವನಾನಿಚ ॥೧೮॥ ಶಿರೋಭಿಃ ಪೃಥುಲೈ ಸ್ಸರ್ಪಾಃ ವ್ಯಕ್ತಸ್ವಸ್ತಿಕಲಕ್ಷಣೈಃ । ವಮಂತಃ ಪಾವಕಂ ಘೋರಂ ದದಂಶು ರ್ದಶನೈ ಶ್ಶಿಲಾಃ ॥ ೧೯ ॥ ತಾಸ್ತದಾ ಸವಿಷೈ ರ್ದಷ್ಟಾಃ ಕುಪಿತೈ ಸ್ತೈರ್ಮಹಾ ಶಿಲಾಃ । ಜಜ್ವಲುಃ ಪಾವಕೋದ್ದೀಪ್ತಾ ಬಿಭಿದುಶ್ಚ ಸಹಸ್ರಧಾ ॥ ೨೦ ॥ ಯಾನಿ

ವಿಸ್ತಾರವಾದ, ಶಿಲಾಃ - ಪಾಷಾಣಗಳನ್ನು, ಮಧ್ಯ....ಷಾ - ಕಾಳೀ, ಕರಾಳೀ, ವಿಸ್ಫುಲಿಂಗಿನೀ, ಧೂಮ್ರವರ್ಣಾ, ವಿಶ್ವರುಚಿ, ಲೋಹಿತಾ, ಮನೋಜವಾ, ಎಂಬ ಏಳು ಜ್ವಾಲೆಗಳಲ್ಲಿ ಮಧ್ಯಮವಾದ ಧೂಮ್ರವೆಂಬ ಜ್ವಾಲೆಯಿಂದ, ಜುಷ್ಟಃ - ಕೂಡಿರುವ, ಅನಲಃ - ಅಗ್ನಿಯು, ಧೂಮರಾಜೀರಿವ - ಹೊಗೆಯ ಬಂತಿಯನ್ನೋಪಾದಿಯಲ್ಲಿ, ಮುಮೋಚಚ - ಬಿಡುತ್ತಲಿದ್ದಿತು. ॥ ೧೬ ॥ ಪೀಡ್ಯಮಾನೇನ - ಬಾಧಿತವಾದ, ಗಿರಿಣಾ - ಬೆಟ್ಟದಿಂದ, ಸರ್ವತಃ - ಎಲ್ಲೆಡೆಯಲ್ಲಿಯೂ, ಪೀಡ್ಯಮಾನಾನಿ - ಬಾಧಿಸಲ್ಪಟ್ಟ, ಗುಹಾವಿಷ್ಟಾನಿ - ಗುಹೆಯಲ್ಲಿರುವ, ಭೂತಾನಿ - ಜಂತುಗಳು, ವಿಕೃತೈಃ - ವಿಕಾರಗಳಾದ, ಸ್ವರೈಃ - ಧ್ವನಿಗಳಿಂದ, ವಿನೇದುಃ - ಕೂಗಿದುವು. ॥ ೧೭ ॥ ಶೈಲ....ಜಃ - ಪರ್ವತದ ಬಾಧೆಯ ನಿಮಿತ್ತದಿಂದ ಹುಟ್ಟಿದ, ಸಃ - ಆ, ಮಹಾ....ದಃ - ದೊಡ್ಡ ದೊಡ್ಡ ಪ್ರಾಣಿಗಳ ಧ್ವನಿಯು, ಪೃಥಿವೀಂ - ಭೂಮಿ ಯನ್ನೂ, ದಿಶಃ - ದಿಕ್ಕುಗಳನ್ನೂ, ಉಪವನಾನಿಚ - ಉದ್ಯಾನವನಗಳನ್ನೂ, ಪೂರಯಾಮಾಸ - ತುಂಬಿಸಿತು. ॥ ೧೮ ॥ ವ್ಯಕ್ತ....ಣೈಃ-ಸ್ಪಷ್ಟವಾದ ಸ್ವಸ್ತಿಕವೆಂಬ ಹೆಡೆಯ ಗುರ್ತುಗಳುಳ್ಳ, ಪೃಥುಲೈಃ- ವಿಸ್ತಾರಗಳಾದ, ಶಿರೋಭಿಃ - ಹೆಡೆಗಳಿಂದ, ಸರ್ಪಾಃ - ಹಾವುಗಳು, ಘೋರಂ - ಭಯಂಕರವಾದ, ಪಾವಕಂ - ವಿಷಾಗ್ನಿಯನ್ನು, ವಮಂತಃ - ಕಾರುವ, ದಶನೈಃ - ಹಲ್ಲುಗಳಿಂದ, ಶಿಲಾಃ - ಶಿಲೆಗಳನ್ನು, ದದಂಶುಃ-ಕಚ್ಚಿದವು. ॥ ೧೯ ॥ ತದಾ - ಆ ಕಾಲದಲ್ಲಿ, ಸವಿಷೈಃ-ವಿಷದಿಂದ ಕೂಡಿರುವ, ಕುಪಿತೈಃ - ಕನಲಿದ, ತೈಃ - ಆ ಸರ್ಪಗಳಿಂದ, ದಷ್ಟಾಃ - ಕಚ್ಚಲ್ಪಟ್ಟ, ತಾಃ - ಆ, ಮಹಾಶಿಲಾಃ - ದೊಡ್ಡ ಬಂಡೆಗಳು, ಪಾವಕೋದ್ದೀಪ್ತಾಃ - ವಿಷಾಗ್ನಿಯಿಂದ ಉರಿಯುತ್ತ, ಜಜ್ವಲುಃ - ಪ್ರಕಾಶಿಸಿದವು, ಸಹಸ್ರಧಾ - ಸಾವಿರಾರು ಹೋಳುಗಳಾಗಿ, ಬಿಭಿದುಶ್ಚ - ಸೀಳಿಹೋದವು. ॥ ೨೦ ॥ ಯಾನಿ....ನಿ -

---

ವಿಶ್ವರುಚೀ, ಲೋಹಿತಾ, ಮನೋಜವಾ ಎಂಬ ಸಪ್ತಜ್ವಾಲೆಗಳೊಡಗೂಡಿದ ಅಗ್ನಿಯಿಂದ ಧೂಮರಾಜಿಯು ಹೊರಹೊರಡುವಂತೆ ಆ ಪರ್ವತದಿಂದ ನುಣಿಶಿಲೆಗಳು ಹೊರಹೊರಟವು. ಗಿರಿಗಹ್ವರಗಳಲ್ಲಿ ವಾಸಮಾಡಿಕೊಂಡಿದ್ದ ಪ್ರಾಣಿಗಳೆಲ್ಲವೂ ಪರ್ವತದೊಡನೆ ತಾವೂ ಪೀಡಿತ ಗಳಾಗಿ ಬಹು ದೈನ್ಯದಿಂದ ವಿಕಾರವಾಗಿ ಕೂಗಲಾರಂಭಿಸಿದವು. ಆ ಕೂಗು ಆ ಪರ್ವತ ಪ್ರಾಂತವನ್ನೂ, ಅಲ್ಲಿರುವ ವನೋಪವನಗಳನ್ನೂ, ದಿಕ್ಕುದಿಕ್ಕುಗಳನ್ನೂ ತುಂಬಿಸಿತು. ಆ ಪರ್ವತದಲ್ಲಿದ್ದ ಮಹಾ ಸರ್ಪಗಳು ಸ್ಪಷ್ಟವಾದ ಸ್ವಸ್ತಿಕವೆಂಬ ಹೆಡೆಯ ಗುರುತುಗಳುಳ್ಳ ದೊಡ್ಡದೊಡ್ಡ ಮುಖಗಳಿಂದ ಭಯಂಕರವಾದ ವಿಷಾಗ್ನಿಯನ್ನು ಕಕ್ಕುತ್ತ, ಸಮೀಪದಲ್ಲಿದ್ದ ಬಂಡೆಗಳನ್ನು ತಮ್ಮ ಹಲ್ಲುಗಳಿಂದ ಕಡಿಯುತ್ತಿದ್ದವು. ಸರ್ಪದಷ್ಟವಾದ ಆ ಬಂಡೆಗಳು ವಿಷಾಗ್ನಿ ಯಿಂದ ಸುಟ್ಟು ಉರಿಯುತ್ತ ಸಾವಿರಾರು ಹೋಳುಗಳಾಗಿ ಸಿಡಿದುಹೋದವು. ॥ ೧೫-೨೦ ॥

¶ "ಹರಿಣಾ" ತಿ. ರಾ. ಪಾ.

ಚೌಷಧಜಾಲಾನಿ ತಸ್ಮಿನ್ಜಾತಾನಿ ಪರ್ವತೇ । ವಿಷಘ್ನಾನ್ಯಪಿ ನಾಗಾನಾಂ ನಶೇಕು ಶ್ಶಮಿತುಂ ವಿಷಂ ॥೨೧॥ ⚘ ಅಪರೇತು ಮಹಾಕಾಯಾ ವಮಂತೋಽಗ್ನಿಂ ಸ್ವತೇಜಸಾ। ಕಂದರೇಭ್ಯೋ ವಿನಿಷ್ಪೇತುಃ ಕಪಿಪಾದ ನಿಪೀಡಿತಾಃ ॥ ೨೨ ॥ ಗಿರೇರಾಕ್ರಮ್ಯಮಾಣಸ್ಯ ತರವಸ್ತರುಣಾಂಕುರಾಃ । ಮುಮುಚುಃ ಪುಷ್ಪವರ್ಷಾಣಿ ಮಧೂನಿ ಸುರಭೀಣಿಚ ॥ ೨೩ ॥ ಗೈರಿಕಾಂಜನಸಂಘುಷ್ಟಾ ಹರಿತಾಲಸಮಾವೃತಾಃ । ವ್ಯದೀರ್ಯಂತ ಗಿರೇಸ್ತಸ್ಯ ಶಿಲಾಸ್ತಾ ಸ್ಸಮನಶ್ಶಿಲಾಃ ॥೨೪॥ ಸಚಂದನ ರಸಸ್ತತ್ರ ಚಿತ್ರಕಾನನ ಸಾನುಭಿಃ। ಕ್ಷಿಪ್ತಶ್ಶಿಖಿನಿಭೈರ್ದೀಪ್ತೈರ್ದೀಪ್ತ ಗೈರಿಕ ಧಾತುಭಿಃ ॥ ೨೫ ॥ ಭಿದ್ಯತೇಽಯಂ ಗಿರಿ

ಯಾವ ಮೂಲಿಕಾ ಸಮೂಹಗಳು, ತಸ್ಮಿನ್ಪರ್ವತೇ - ಆ ಪರ್ವತದಲ್ಲಿ, ಜಾತಾನಿ - ಹುಟ್ಟಿರುವುವೋ, ತಾನಿ - ಅವು, ವಿಷಘ್ನಾನ್ಯಪಿ - ವಿಷಹರಗಳಾದರೂ, ನಾಗಾನಾಂ ಹಾವುಗಳ, ವಿಷಂ - ವಿಷವನ್ನು, ಶಮಿತುಂ - ಶಾಂತಿ ಹೊಂದಿಸುವುದಕ್ಕೆ, ನಶೇಕುಃ - ಸಮರ್ಥಗಳಾಗಲಿಲ್ಲ. ॥ ೨೧ ॥ ಮಹಾಕಾಯಾಃ - ದೊಡ್ಡ ದೇಹಗಳುಳ್ಳ, ಅಪರೇತು - ಇತರ ಸರ್ಪಗಳಾದರೆ, ಕಪಿ....ತಾಃ - ಹನುಮಂತನ ಕಾಲುಗಳಿಂದ ತೊಕಲ್ಪಟ್ಟವುಗಳಾಗಿ, ಅಗ್ನಿಂ - ವಿಷಾಗ್ನಿಯನ್ನು, ವಮಂತಃ - ಕಕ್ಕುತ್ತ, ಸ್ವತೇಜಸಾ - ತಮ್ಮ ಶಕ್ತಿಯಿಂದ, ಕಂದರೇಭ್ಯಃ - ಗುಹೆಗಳಿಂದ, ವಿನಿಷ್ಪೇತುಃ - ಹೊರಬಿದ್ದವು. ॥ ೨೨ ॥ ಆಕ್ರಮ್ಯಮಾಣಸ್ಯ - ಆಕ್ರಮಿಸಲ್ಪಡುವ, ಗಿರೇಃ - ಬೆಟ್ಟದ, ತರುಣಾಂಕುರಾಃ - ಎಳೆಚಿಗುರುಗಳುಳ್ಳ, ತರವಃ - ವೃಕ್ಷಗಳು, ಪುಷ್ಪವರ್ಷಾಣಿ - ಪುಷ್ಪವೃಷ್ಟಿಗಳನ್ನು, ಸುರಭೀಣಿ - ಪರಿಮಳಯುಕ್ತಗಳಾದ, ಮಧೂನಿಚ - ಜೇನುಗಳನ್ನೂ, ಮುಮುಚುಃ - ಬಿಟ್ಟವು. ॥ ೨೩ ॥ ಗೈರಿ....ಷ್ಟಾಃ - ಕಾವಿಗಲ್ಲುಗಳಿಂದಲೂ, ಕಪ್ಪಾದ ಧಾತುವಿಶೇಷಗಳಿಂದಲೂ ಒರೆಯಲ್ಪಟ್ಟ, ಹರಿ....ತಾಃ - ಹರಿದಳದಿಂದ ಎಲ್ಲೆಡೆಯಲ್ಲಿಯೂ ವ್ಯಾಪ್ತನಾದ, ಸಮನಶ್ಶಿಲಾಃ - ಮಣಿಶಿಲೆಗಳೊಡಗೂಡಿದ, ತಸ್ಯಗಿರೇಃ - ಆ ಪರ್ವತದ, ಶಿಲಾಃ - ಕಲ್ಲುಗಳು, ವ್ಯದೀರ್ಯಂತ - ಬಿರಿದುಹೋದವು. ॥ ೨೪ ॥ ತತ್ರ - ಆ ಪರ್ವತದಲ್ಲಿ, ಸಚಂದನರಸಃ - ಚಂದನವೃಕ್ಷಗಳಿಂದೊಡಗೂಡಿದರಸವು, ದೀಪ್ತ....ಭಿಃ - ಪ್ರಕಾಶಮಾನವಾದ ಮಣಿಶಿಲೆಗಳುಳ್ಳ, ದೀಪ್ತೈಃ - ಜಾಜ್ವಲ್ಯಮಾನಗಳಾದ, ಶಿಖಿನಿಭೈಃ - ಅಗ್ನಿಗೆ ಸಮಾನಗಳಾದ, ಚಿತ್ರ....ಭಿಃ - ಆಶ್ಚರ್ಯಕರಗಳಾದ ವನಗಳುಳ್ಳ ಬೆಟ್ಟದ ಸಮಭೂಮಿಗಳಿಂದ, ಕ್ಷಿಪ್ತಃ - ಕುದಿಸಲ್ಪಟ್ಟಿತು. ॥ ೨೫ ॥ ಅಯಂಗಿರಿಃ - ಈ ಪರ್ವತವು, ಭೂತೈಸ್ಸಹ - ಪೃಥಿವ್ಯಾದಿ ಭೂತಗಳಿಂದ ಕೂಡಿ, ಭಿದ್ಯತೇ -

---

ಅಲ್ಲಿ ಬೆಳೆದಿದ್ದ ಮೂಲಿಕೆಗಳು ವಿಷಪರಿಹಾರಕಗಳಾದರೂ ಆ ಮಹಾ ಸರ್ಪಗಳ ವಿಷವನ್ನು ಪರಿಹರಿಸಲು ಅಸಮರ್ಥಗಳಾದವು. ॥೨೧॥ ಮತ್ತೆ ಕೆಲವು ದೊಡ್ಡ ದೇಹಗಳುಳ್ಳ ಸರ್ಪಗಳು ಆ ಹನುಮಂತನ ಕಾಲಿನ ತುಳಿತವನ್ನು ಸಹಿಸಲಾರದೆ ವಿಷದ ಉರಿಯನ್ನುಗುಳುತ್ತ ಆ ಪರ್ವತದ ಗುಹೆಗಳಿಂದ ಮೇಲಕ್ಕೆ ಹಾರಿದವು. ಆ ಕಪಿಸತ್ತಮನು ಆ ಪರ್ವತವನ್ನಾಕ್ರಮಿಸಿದೊಡನೆಯೇ ಅಲ್ಲಿದ್ದ ಕೆಂದಳಿರನ್ನೊಳಗೊಂಡ ವೃಕ್ಷಗಳು ಹೂಗಳನ್ನೂ, ಮಧುರಸವನ್ನೂ ಸುರಿಸಿದವು. ಬೆಂಕಿಯಂತೆ ಪ್ರಜ್ವಲಿಸುತ್ತಿರುವ ಗೈರಿಕಾದಿಧಾತುಗಳ ಕಾವಿಗೆ ಶ್ರೀಗಂಧವೃಕ್ಷಗಳ ರಸವು ಕುದ್ದು ಮೇಲಕ್ಕೆ ಹಾರುತ್ತಿದ್ದಿತು. ॥ ೨೨–೨೫ ॥ ಅಲ್ಲಿ ವಾಸಮಾಡಿಕೊಂಡಿದ್ದ ತಪೋಧನರಾದ ಋಷಿಗಳು, ಪೃಥಿವ್ಯಾದಿ ಪಂಚಭೂತಗಳೊಡಗೂಡಿ ಭೇದಿಸಿಹೋಗುವು

⚘ ೨೨-೨೩-೨೪-೨೫ ಈ ಶ್ಲೋಕಗಳು ಗೋ. ತಿ. ಮು. ಪಾಠಗಳಲ್ಲಿ ಅಧಿಕ.

ಭೂತೈರಿತಿ ಮತ್ವಾ ತಪಸ್ವಿನಃ । ತ್ರಸ್ತಾ ವಿದ್ಯಾಧರಾಸ್ತಸ್ಮಾದುತ್ಪೇತುಃ ಸ್ತ್ರೀಗಣೈಸ್ಸಹ ॥ ೨೬ ॥ ಪಾನಭೂಮಿಗತಂ ಹಿತ್ವಾ ಹೈಮಮಾಸವಭಾಜನಂ । ಪಾತ್ರಾಣಿಚ ಮಹಾರ್ಹಾಣಿ ಕರಕಾಂಶ್ಚ ಹಿರಣ್ಮಯಾನ್ ॥ ೨೭ ॥ ಲೇಹ್ಯಾನುಚ್ಚಾವಚಾನ್ಭಕ್ಷ್ಯಾನ್ ಮಾಂಸಾನಿ ವಿವಿಧಾನಿಚ । ಆರ್ಷಭಾಣಿಚ ಚರ್ಮಾಣಿ ಖಡ್ಗಾಂಶ್ಚ ಕನಕತ್ಸರೂನ್ ॥ ೨೮ ॥ ಕೃತಕಂಠಗುಣಾಃ ಕ್ಷೀಬಾ ರಕ್ತಮಾಲ್ಯಾನುಲೇಪನಾಃ । ರಕ್ತಾಕ್ಷಾಃ ಪುಷ್ಕರಾಕ್ಷಾಶ್ಚ ಗಗನಂ ಪ್ರತಿಪೇದಿರೇ ॥ ೨೯ ॥ ಹಾರನೂಪುರಕೇಯೂರಪಾರಿಹಾರ್ಯಧ

ಭೇದಿಸಲ್ಪಡುವುದು, ಇತಿ - ಎಂದು, ತಪಸ್ವಿನಃ - ಋಷಿಗಳು, ವಿದ್ಯಾಧರಾಃ - ವಿದ್ಯಾಧರರೂ, ಮತ್ವಾ- ತಿಳಿದು, ತ್ರಸ್ತಾಃ - ಭಯಪಟ್ಟು, ಸ್ತ್ರೀಗಣೈಸ್ಸಹ - ತಮ್ಮ ಸ್ತ್ರೀ ಸಮೂಹಗಳೊಡನೆ, ತಸ್ಮಾತ್ - ಆ ಪರ್ವತದಿಂದ, ಉತ್ಪೇತುಃ - ಮೇಲಕ್ಕೆ ಹಾರಿದರು. ॥ ೨೬ ॥ ಪಾನ....ತಂ - ಕುಡಿಯುವ ಸ್ಥಳದಲ್ಲಿರುವ, ಹೈಮಂ - ಸುವರ್ಣಮಯವಾದ, ಆಸವಭಾಜನಂ - ಮದ್ಯದ ಪಾತ್ರೆಯನ್ನು, ಮಹಾರ್ಹಾಣಿ - ಶ್ರೇಷ್ಠಗಳಾದ, ಪಾತ್ರಾಣಿಚ - ಊಟದ ಪಾತ್ರೆಗಳನ್ನೂ, ಹಿರಣ್ಮಯಾನ್ - ಚಿನ್ನದ ವಿಕಾರಗಳಾದ, ಕರಕಾಂಶ್ಚ - ಹೂಜಿಗಳನ್ನೂ, ಲೇಹ್ಯಾನ್ - ನಂಜಿಕೊಳ್ಳುವ ಪದಾರ್ಥಗಳನ್ನೂ, ಉಚ್ಚಾವಚಾನ್ - ಉತ್ತಮಗಳಾದ, ಭಕ್ಷ್ಯಾನ್ - ಭಕ್ಷ್ಯಗಳನ್ನೂ, ವಿವಿಧಾನಿ - ಅನೇಕ ಬಗೆಗಳಾದ, ಮಾಂಸಾನಿಚ - ಮಾಂಸಗಳನ್ನೂ, ಆರ್ಷಭಾಣಿ - ವೃಷಭಚರ್ಮದಿಂದ ಮಾಡಿದ, ಚರ್ಮಾಣಿಚ - ತೊಗಲುಗಳನ್ನೂ, (ಖೇಡ್ಯಗಳನ್ನು) ಕನಕತ್ಸರೂನ್ - ಚಿನ್ನದ ಹಿಡಿಗಳುಳ್ಳ, ಖಡ್ಗಾಂಶ್ಚ - ಕತ್ತಿಗಳನ್ನೂ, ಹಿತ್ವಾ - ಬಿಟ್ಟು, ಕೃತ...ಣಾಃ - ಮಾಡಲ್ಪಟ್ಟ ಕಂಠಮಾಲಿಕೆಗಳುಳ್ಳ, ಕ್ಷೀಬಾಃ - ಮತ್ತರಾದುದರಿಂದ, ರಕ್ತಾಕ್ಷಾಃ - ಕೆಂಪಾದ ಕಣ್ಣುಗಳುಳ್ಳ, ಪುಷ್ಕರಾಕ್ಷಾಶ್ಚ - ಸ್ವಭಾವತಃ ಕಮಲಾಕ್ಷರಾದ, ರಕ್ತ....ನಾಃ - ಕೆಂಪಾದ ಮಾಲಿಕೆಯು ಲೇಪನವೂ ಉಳ್ಳವರಾಗಿ, ಗಗನಂ - ಆಕಾಶವನ್ನು, ಪ್ರತಿಪೇದಿರೇ - ಹೊಂದಿದರು. ॥ ೨೭-೨೯ ॥ ಹಾರ....ರಾಃ - ಕಂಠಸರಗಳನ್ನೂ ಕಾಲಂದುಗೆಗಳನ್ನೂ ಬಾಜೀಬಂದುಗಳನ್ನೂ, ಕೈಕಡಗಗಳನ್ನೂ ಧರಿಸಿದ್ದ, ಸ್ತ್ರಿಯಃ - ಹೆಂಗಸರು, ರಮಣೈಸ್ಸಹ - ತಮ್ಮ ನಲ್ಲರೊಡನೆ, ವಿಸ್ಮಿತಾಃ - ಆಶ್ಚರ್ಯದಿಂದ, ಸಸ್ಮಿತಾಃ - ಮುಗುಳುನಗೆಯುಳ್ಳವರಾಗಿ, ಆಕಾಶೇ - ಅಂತ

ದೆಂದರಿತು, ಮೇಲಕ್ಕೆ ಹಾರಿಹೋದರು. ಅಲ್ಲದೆ ಅಲ್ಲಿಯೇ ವಾಸಮಾಡುತ್ತಿದ್ದ ವಿದ್ಯಾಧರರೂ ಹೆದರಿದವರಾಗಿ ತಂತಮ್ಮ ಸ್ತ್ರೀಯರೊಡಗೂಡಿ, ತಾವು ಪಾನಮಾಡುತ್ತಿದ್ದ ಚಿನ್ನದ ಪಾತ್ರೆಗಳನ್ನೂ, ಅಮೂಲ್ಯವಾದ ಇತರ ಪಾತ್ರೆಗಳನ್ನೂ, ಸುವರ್ಣಮಯವಾದ ಭೋಜನ ಪಾತ್ರೆಗಳನ್ನೂ, ಶ್ರೇಷ್ಠವಾದ ಲೇಹ್ಯಗಳನ್ನೂ, ಭಕ್ಷ್ಯಗಳನ್ನೂ, ವಿಧವಿಧವಾದ ಮಾಂಸಗಳನ್ನೂ, ಎತ್ತಿನ ಚರ್ಮದಿಂದ ಮಾಡಿದ ಖೇಡ್ಯಗಳನ್ನೂ, ಭಂಗಾರದ ಹಿಡಿಗಳುಳ್ಳ ಕತ್ತಿಗಳನ್ನೂ ಸಹ ಅಲ್ಲಿಯೇ ತೊರೆದು ಆಕಾಶಕ್ಕೆ ಹಾರಿದರು. ॥ ೨೬—೨೭ ॥ ಪುಷ್ಪಹಾರಗಳನ್ನು ಧರಿಸಿರುವವರೂ, ಮದಪಾನಮತ್ತರೂ, ಕೆಂಪು ಗಂಧವನ್ನು ಲೇಪಿಸಿಕೊಂಡು, ಕೆಂಪು ಹೂಗಳ ಹಾರಗಳನ್ನು ಧರಿಸಿ, ಮದ್ಯಪಾನ ವಶದಿಂದ ಕೆಂಪಡರಿದ ಕಣ್ಣುಗಳುಳ್ಳ ವಿದ್ಯಾಧರ ಸ್ತ್ರೀಯರು ಸ್ವರ್ಣಮಾಲಿಕೆಗಳನ್ನು, ಕಾಲಂದುಗೆಗಳನ್ನೂ, ಬಾಜಿಬಂದುಗಳನ್ನೂ ಧರಿಸಿರುವವರಾಗಿಯೇ ಆಕಾಶಕ್ಕೆ ಹಾರಿ ತಂತಮ್ಮ ಪ್ರಾಣಕಾಂತರೊಡಗೂಡಿ ಮುಗುಳುನಗೆ ನಗುತ್ತ ಅತ್ಯಾಶ್ಚರ್ಯಭರಿತರಾಗಿ ನೋಡುತ್ತ ನಿಂತರು. ಹೀಗೆ ಗಗನಕ್ಕೆ ಹಾರಿದ ಆ ವಿದ್ಯಾಧರರು

ಧರಾಃ ಸ್ತ್ರಿಯಃ । ವಿಸ್ಮಿತಾಸ್ಸಸ್ಮಿತಾಸ್ತಸ್ಥುರಾಕಾಶೇ ರಮಣ್ಯೈಸ್ಸಹ ||೪೦|| § ದರ್ಶಯಂತೋ ಮಹಾವಿದ್ಯಾಂ ವಿದ್ಯಾಧರಮಹರ್ಷಯಃ । ವಿಸ್ಮಿತಾಸ್ತಸ್ಥುರಾಕಾಶೇ ವೀಕ್ಷಾಂಚಕ್ರುಶ್ಚ ಪರ್ವತಂ || ೪೧ || ಶುಶ್ರುವುಶ್ಚ ತದಾ ಶಬ್ದಮೃಷೀಣಾಂ ಭಾವಿತಾತ್ಮನಾಂ । ಚಾರಣಾನಾಂಚ ಸಿದ್ಧಾನಾಂ ಸ್ಥಿತಾನಾಂ ವಿಮಲೇಂಬರೇ || ೪೨ || "ಏಷ ಪರ್ವತಸಂಕಾಶೋ ಹನೂಮಾನ್ಮಾರುತಾತ್ಮಜಃ । ತಿತೀರ್ಷತಿ ಮಹಾವೇಗಸ್ಸಮುದ್ರಂ ಮಕರಾಲಯಂ || ೪೩ || ರಾಮಾರ್ಥಂ ವಾನರಾರ್ಥಂಚ ಚಿಕೀರ್ಷನ್ಕರ್ಮ ದುಷ್ಕರಂ । ಸಮುದ್ರಸ್ಯ ಪರಂ ಪಾರಂ ದುಷ್ಪ್ರಾಪಂ ಪ್ರಾಪ್ತುಮಿಚ್ಛತಿ"

ರಿಕ್ಷದಲ್ಲಿ, ತಸ್ಥುಃ - ನಿಂತಿದ್ದರು. || ೪೦ || ಮಹಾವಿದ್ಯಾಂ - ಅಣಿಮಾದ್ಯಷ್ಟಸಿದ್ಧಿಗಳನ್ನು, ದರ್ಶಯಂತಃ - ತೋರುತ್ತಿರುವ, ವಿದ್ಯಾ....ಯಃ - ವಿದ್ಯಾಧರಶ್ರೇಷ್ಠರು, ವಿಸ್ಮಿತಾಃ - ಆಶ್ಚರ್ಯಯುಕ್ತರಾಗಿ, ಆಕಾಶೇ - ಅಂತರಿಕ್ಷದಲ್ಲಿ, ತಸ್ಥುಃ - ನಿಂತರು, ಪರ್ವತಂಚ - ಬೆಟ್ಟವನ್ನೂ, ವೀಕ್ಷಾಂಚಕ್ರುಃ - ನೋಡಿದರು. || ೪೧ || ತದಾ - ಆ ಕಾಲದಲ್ಲಿ, ವಿಮಲೇ - ನಿರ್ಮಲವಾದ, ಅಂಬರೇ - ಅಂತರಿಕ್ಷದಲ್ಲಿ, ಸ್ಥಿತಾನಾಂ - ನಿಂತಿರುವ, ಭಾವಿತಾತ್ಮನಾಂ - ಆತ್ಮಜ್ಞಾನಿಗಳಾದ, ಋಷೀಣಾಂ - ಋಷಿಗಳ, ಚಾರಣಾನಾಂ - ದೇವಗಾಯಕರ, ಸಿದ್ಧಾನಾಂ - ಸಿದ್ಧಪುರುಷರ, ಶಬ್ದಂ - ಶಬ್ದವನ್ನು, ಶುಶ್ರುವುಃ - ಕೇಳಿದರು. || ೪೨ || ಪರ್ವ....ಶಃ - ಪರ್ವತಸಮಾನನಾದ, ಮಾರುತಾತ್ಮಜಃ - ವಾಯುಪುತ್ರನಾದ, ಏಷಹನುಮಾನ್ - ಈ ಹನುಮಂತನು, ಮಹಾವೇಗಂ - ಅಧಿಕವಾದ ವೇಗವುಳ್ಳವನಾಗಿ, ಮಕರಾಲಯಂ - ಜಲಚರಗಳಿಗೆ ವಾಸಸ್ಥಾನವಾದ, ಸಮುದ್ರಂ - ಕಡಲನ್ನು, ತಿತೀರ್ಷತಿ - ದಾಟಸಲಪೇಕ್ಷಿಸುತ್ತಾನೆ. || ೪೩ || ರಾಮಾರ್ಥಂ - ರಾಮನಿಗೋಸ್ಕರವೂ, ವಾನರಾರ್ಥಂಚ - ವಾನರರಿಗೋಸ್ಕರವೂ, ದುಷ್ಕರಂ - ಮಾಡಲಶಕ್ಯವಾದ, ಕರ್ಮ - ಕಾರ್ಯವನ್ನು, ಚಿಕೀರ್ಷನ್ - ಮಾಡಬಯಸಿದವನಾಗಿ, ದುಷ್ಪ್ರಾಪಂ - ಹೊಂದಲಶಕ್ಯವಾದ, ಸಮುದ್ರಸ್ಯ - ಕಡಲಿನ, ಪರಂಪಾರಂ - ಆಚಿನ ದಡವನ್ನು, ಪ್ರಾಪ್ತುಂ - ಹೊಂದಲು, ಇಚ್ಛತಿ - ಅಪೇಕ್ಷಿಸುತ್ತಾನೆ. || ೪೪ || ಇತಿ - ಈ ಪ್ರಕಾರವಾಗಿ, ವಿದ್ಯಾಧರಾಃ - ವಿದ್ಯಾಧರರು, ಮಹಾತ್ಮನಾಂ-ಮಹಾತ್ಮರಾದ, ತೇಷಾಂ - ಆ ಸಿದ್ಧರ್ಷಿಗಳ, ವಾಚಃ -

---

ತಂತಮ್ಮ ಸ್ತ್ರೀಯರೊಡನೆ ಮಹರ್ಷಿಗಳಂತೆ ಅಣಿಮಾದಿ ಸಿದ್ಧಿಗಳನ್ನು ತೋರುತ್ತಿದ್ದರು. ಆಗಲವರು ನಿರ್ಮಲವಾದ ಗಗನಮಂಡಲದಲ್ಲಿ ನಿಂತು ಧ್ಯಾನತತ್ಪರರಾಗಿದ್ದ ಋಷಿಗಳೂ, ಸಿದ್ಧಚಾರಣರೂ ದಿವ್ಯದೃಷ್ಟಿಯಿಂದೆಲ್ಲವನ್ನೂ ತಿಳಿದು, "ಆಶ್ಚರ್ಯ! ಆಶ್ಚರ್ಯ! ಪರ್ವತಸದೃಶನೂ ವಾಯುಪುತ್ರನೂ ಆದ ಈ ಆಂಜನೇಯನು, ಅಪಾರವಾದ ತನ್ನ ವೇಗದಿಂದ ಮಕರಾಲಯವಾದ ಈ ಸಮುದ್ರವನ್ನು ದಾಟಲಪೇಕ್ಷಿಸುತ್ತಿರುವನು. ಶ್ರೀರಾಮನಿಗೋಸುಗವೂ, ವಾನರಾಧಿಪತಿಯಾದ ಸುಗ್ರೀವನಿಗೋಸುಗವೂ ಇತರರಾರಿಂದಲೂ ಮಾಡಲಸಾಧ್ಯವಾದ ಈ ಮಹಾ ಕಾರ್ಯವನ್ನು ನಿರ್ವಹಿಸಲಪೇಕ್ಷಿಸಿ, ಹೊಂದಲು ದುಸ್ಸಾಧ್ಯವಾದ ಈ ಸಮುದ್ರದ ದಕ್ಷಿಣತೀರವನ್ನು ಸೇರಲು ಬಯಸುತ್ತಿರುವನು" ಎಂಬುದಾಗಿ ಮಾತನಾಡಿಕೊಳ್ಳುತ್ತಿದ್ದುದನ್ನು ಕೇಳಿದರು. ||೩೮–೪೪ || ಆ ಮಾತುಗಳನ್ನು ಕೇಳಿ ಅವರೆಲ್ಲರೂ ಬಹುಮಾನಪುರಸ್ಸರ

---

§ ೪೧-೪೨-೪೩ ಈ ಶ್ಲೋಕಗಳು ಗೋ. ರಾ. ಪಾ. ದಲ್ಲಿ ಅಧಿಕ.

॥ ೩೪ ॥ ಇತಿ ವಿದ್ಯಾಧರಾ ವಾಚ ಶ್ಶ್ರುತ್ವಾ ತೇಷಾಂ ಮಹಾತ್ಮನಾಂ । ಬಹುಮಾನೇನ ತೇ ಸರ್ವೇ ಹನೂಮಂತಂ ಪ್ರಪೇದಿರೇ ॥ ೩೫ ॥ § ತಮಪ್ರಮೇಯಂ ದದೃಶುಃ ಪರ್ವತೇ ವಾನರರ್ಷಭಂ ॥ ೩೬ ॥ ದುಧುವೇಚ ಸರೋಮಾಣಿ ಚಕಂಪೇ ಚಾಚಲೋಪಮಃ । ನನಾದ ಸುಮಹಾನಾದಂ ಸುಮಹಾನಿವ ತೋಯದಃ ॥ ೩೭ ॥ ಆನುಪೂರ್ವೇಣ ವೃತ್ತಂಚ ಲಾಂಗೂಲಂ ರೋಮಭಿಶ್ಚಿತಂ । ಉತ್ಪತಿಷ್ಯನ್ವಿಚಿಕ್ಷೇಪ ಪಕ್ಷಿರಾಜ ಇವೋರಗಂ ॥ ೩೮ ॥ ತಸ್ಯ ಲಾಂಗೂಲಮಾವಿದ್ಧಮತಿವೇಗಸ್ಯ ಪೃಷ್ಠತಃ । ದದೃಶೇ ಗರುಡೇನೇವ ಹ್ರಿಯಮಾಣೋ ಮಹೋರಗಃ ॥ ೩೯ ॥ ಬಾಹೂ ಸಂಸ್ತಂಭಯಾಮಾಸ ಮಹಾಪರಿಘಸನ್ನಿಭೌ । ಸಸಾದಚ ಕಪಿಃ ಕಟ್ಯಾಂ ಚರಣೌ ಸಂಚುಕೋ

ವಾಕ್ಯಗಳನ್ನು, ಶ್ರುತ್ವಾ - ಕೇಳಿ, ತೇಸರ್ವೇ - ಅವರೆಲ್ಲರೂ, ಬಹುಮಾನೇನ - ಮರ್ಯಾದೆಯಿಂದ, ಹನೂಮಂತಂ - ಆಂಜನೇಯನನ್ನು, ಪ್ರಪೇದಿರೇ - ಹೊಂದಿದರು. ॥ ೩೫ ॥ ಅಪ್ರಮೇಯಂ - ಕುಗ್ಗದ ಸಾಮರ್ಥ್ಯವುಳ್ಳ, ವಾನರರ್ಷಭಂ - ವಾನರಶ್ರೇಷ್ಠನಾದ, ತಂ - ಆ ಹನುಮಂತನನ್ನು, ಪರ್ವತೇ- ಮಹೇಂದ್ರಪರ್ವತದಲ್ಲಿ, ದದೃಶುಃ - ಕಂಡರು. ॥ ೩೬ ॥ ಅಚಲೋಪಮಃ - ಪರ್ವತಕ್ಕೆ ಸಮಾನನಾದ, ಸಃ - ಆ ಮಾರುತಿಯು, ರೋಮಾಣಿ - ರೋಮಗಳನ್ನು, ದುಧುವೇಚ - ಕೊಡಹಿದನು, ಚಕಂಪೇಚ - ತಾನೂ ಕದಲಿದನು, ಸುಮಹಾನ್ - ಬಹು ದೊಡ್ಡದಾದ, ತೋಯದಇವ - ಮೇಘದಂತೆ, ಸುಮಹಾನಾದಂ - ಬಲು ದೊಡ್ಡ ಧ್ವನಿಯನ್ನು, ನನಾದ - ಮಾಡಿದನು. ॥ ೩೭ ॥ ಸಃ - ಆ ಮಾರುತಿಯು, ಆನುಪೂರ್ವೇಣ - ಕ್ರಮವಾಗಿ, ವೃತ್ತಂ - ಗುಂಡಗಿರುವ, ರೋಮಭಿಃ - ರೋಮಗಳಿಂದ, ಚಿತಂ - ತುಂಬಿದ, ಲಾಂಗೂಲಂಚ - ಬಾಲವನ್ನು, ಉರಗಂ - ಸರ್ಪವನ್ನು, ಪಕ್ಷಿರಾಜ ಇವ - ಗರುಡನಂತೆ, ಉತ್ಪತಿಷ್ಯನ್ - ಮೇಲಕ್ಕೆ ಹಾರುವವನಾಗಿ, ವಿಚಿಕ್ಷೇಪ - ಅಪ್ಪಳಿಸಿದನು. ॥೩೮॥ ಆವಿದ್ಧಂ - ಹೊಡೆಯಲ್ಪಟ್ಟ, ಲಾಂಗೂಲಂ - ಬಾಲವು, ಅತಿವೇಗಸ್ಯ - ಬಹಳ ವೇಗವುಳ್ಳ, ತಸ್ಯ - ಆ ಆಂಜನೇಯನ, ಪೃಷ್ಠತಃ - ಹಿಂಭಾಗದಲ್ಲಿ, ಗರುಡೇನ - ಗರುಡನಿಂದ, ಹ್ರಿಯಮಾಣಃ - ಕೊಂಡು ಹೋಗಲ್ಪಡುತ್ತಿರುವ, ಮಹೋರಗಇವ - ಮಹಾ ಸರ್ಪದಂತೆ, ದದೃಶೇ - ಕಾಣಿಸಿತು. ॥ ೩೯ ॥ ಕಪಿಃ - ವಾನರನಾದ ಆಂಜನೇಯನು, ಮಹಾ....ಭೌ - ದೊಡ್ಡ ಪರಿಘಾಯುಧಕ್ಕೆ ಸಮಾನಗಳಾದ, ಬಾಹೂ - ಭುಜಗಳನ್ನು, ಸಂಸ್ತಂಭಯಾಮಾಸ - ಸ್ತಂಭಿಸಿದನು, ಸಸಾದಚ - ಲಾಘವವನ್ನೂ ಹೊಂದಿದನು, ಕಟ್ಯಾಂ - ಸೊಂಟದಲ್ಲಿ, ಚರಣೌ - ಪಾದಗಳನ್ನು, ಸಂಚುಕೋಚಚ - ಸಂಕೋಚ

ವಾಗಿ ಆ ಕಪಿವೀರನ ಬಳಿಗೈದಿ ಕುಂದುಕುಂದಿಲ್ಲದ ಅತುಲಶಕ್ತಿಸಂಪನ್ನನಾದ ಆತನನ್ನು ಎವೆಯಿಕ್ಕದೆ ನೋಡುತ್ತಿದ್ದರು. ಆ ಸಮಯದಲ್ಲಿ ಪರ್ವತೋಪಮನಾದ ಕಪಿವೀರನು ರೋಮಗಳನ್ನೂ, ತನ್ನ ಶರೀರವನ್ನೂ ನಡುಗಿಸಿ ದೊಡ್ಡ ಮುಗಿಲಿನಂತೆ ಘೋರ ನಾದ ಮಾಡಿದನು. ರೋಮಗಳಿಂದ ನಿಬಿಡಿತವಾಗಿ ಗುಂಡಗಿರುವ ತನ್ನ ಲಾಂಗೂಲವನ್ನು, ಪಕ್ಷಿರಾಜನಾದ ಗರುತ್ಮಂತನು ಸರ್ಪವನ್ನು ಒದರಿ ನೆಲಕ್ಕೊಗೆಯುವಂತೆ ಬಲವಾಗಿ ಒದರಿದನು. ॥೩೫—೩೮॥ ಮಹಾ ವೇಗವಂತನಾದ ಆತನು ಪಾರ್ಶ್ವಭಾಗದಲ್ಲಿ ಒದರಿದ ಬಾಲವು ಗರುಡನೊಯ್ಯುತ್ತಿರುವ ಮಹಾ ಸರ್ಪದಂತೆ ಕಾಣುತ್ತಿದ್ದಿತು. ಆ ಮಹಾ ಕಪಿಯು ಸಮುದ್ರವನ್ನು ದಾಟಲುದ್ಯುಕ್ತನಾಗಿ ದೊಡ್ಡದೊಡ್ಡ ಅಗಳಿಗಳಂತಿರುವ ತನ್ನ ಬಾಹುಗಳನ್ನು ಸ್ತಂಭಿಸಿ

---

§ ಈ ಪಾದವು ಗೋ. ರಾ. ಮ. ತಿ. ಪುಸ್ತಕಗಳಲ್ಲಿ ಕಾಣುವುದಿಲ್ಲ.

ಚಚ ‖೪೦‖ ಸಂಹೃತ್ಯಚ ಭುಜೌ ಶ್ರೀಮಾನ್ ತಥೈವಚ ಶಿರೋಧರಾಂ । ತೇಜಸ್ಸತ್ವಂ ತಥಾ ವೀರ್ಯಮಾವಿವೇಶ ಸ ವೀರ್ಯವಾನ್ ‖ ೪೧ ‖ ಮಾರ್ಗಮಾಲೋಕಯನ್ ದೂರಾದೂರ್ಧ್ವಂ ಪ್ರಣಿಹಿತೇಕ್ಷಣಃ । ರುರೋಧ ಹೃದಯೇ ಪ್ರಾಣಾನಾಕಾಶ ಮವಲೋಕಯನ್ ‖ ೪೨ ‖ ಪದ್ಭ್ಯಾಂ ದೃಢಮವಸ್ಥಾನಂ ಕೃತ್ವಾ ಸ ಕಪಿಕುಂಜರಃ । ನಿಕುಂಚ್ಯ ಕರ್ಣೌ ಹನುಮಾನುತ್ಪತಿಷ್ಯನ್ಮಹಾಬಲಃ । ವಾನರಾನ್ವಾನರಶ್ರೇಷ್ಠ ಇದಂ ವಚನಮಬ್ರವೀತ್ ‖ ೪೩ ‖ “ ಯಥಾ ರಾಘವನಿರ್ಮುಕ್ತ ಶ್ಶರಶ್ಶ್ವಸನವಿಕ್ರಮಃ । ಗಚ್ಛೇತ್ತದ್ವದ್ಗಮಿಷ್ಯಾಮಿ ಲಂಕಾಂ ರಾವಣಪಾಲಿತಾಂ ‖ ೪೪ ‖ ನಹಿ ದ್ರಕ್ಷ್ಯಾಮಿ

ಗೊಳಿಸಿದನು. ‖ ೪೦ ‖ ಶ್ರೀಮಾನ್ - ತೇಜಸ್ವಿಯಾದ, ವೀರ್ಯವಾನ್ - ಪರಾಕ್ರಮಿಯಾದ, ಸಃ - ಆ ಹನುಮಂತನು, ಭುಜೌ - ಭುಜಗಳನ್ನು, ತಥೈವ - ಹಾಗೆಯೇ, ಶಿರೋಧರಾಂಚ - ಕೊರಳನ್ನೂ, ಸಂಹೃತ್ಯ - ಕುಗ್ಗಿಸಿಕೊಂಡು, ತಥಾ - ಅಂತೆಯೇ, ತೇಜಃ - ಪರಾಭಿಭವಸಾಮರ್ಥ್ಯವನ್ನೂ, ಸತ್ವಂ- ಬಲವನ್ನೂ, ವೀರ್ಯಂ - ಪರಾಕ್ರಮವನ್ನೂ, ಆವಿವೇಶ - ಹೊಂದಿದನು. ‖ ೪೧ ‖ ದೂರಾತ್ - ದೂರದಿಂದ, ಮಾರ್ಗಂ - ದಾರಿಯನ್ನು, ಆಲೋಕಯನ್ - ನೋಡುತ್ತ, ಊರ್ಧ್ವಂ - ಮೇಲೆ, ಪ್ರಣಿಹಿತೇಕ್ಷಣಃ - ಇಡಲ್ಪಟ್ಟ ದೃಷ್ಟಿಯುಳ್ಳವನಾಗಿ, ಆಕಾಶಂ - ಅಂತರಿಕ್ಷವನ್ನು, ಅವಲೋಕಯನ್- ನೋಡುತ್ತ, ಹೃದಯೇ - ಹೃದಯದಲ್ಲಿ, ಪ್ರಾಣಾನ್ - ಉಚ್ಛ್ವಾಸನಿಶ್ವಾಸಗಳನ್ನು, ರುರೋಧ - ತಡೆದನು. ‖ ೪೨ ‖ ಮಹಾಬಲಃ - ಮಹಾ ಬಲಿಷ್ಠನಾದ, ಕಪಿಕುಂಜರಃ - ಕಪಿಶ್ರೇಷ್ಠನಾದ, ಸಃ ಹನುಮಾನ್ - ಆ ಆಂಜನೇಯನು, ಪದ್ಭ್ಯಾಂ - ಪಾದಗಳಿಂದ, ದೃಢಂ - ಘಟ್ಟಿಯಾಗಿ, ಅವಸ್ಥಾನಂ- ಇರುವಿಕೆಯನ್ನು, ಕೃತ್ವಾ - ಮಾಡಿ, ಕರ್ಣೌ - ಕಿವಿಗಳನ್ನು, ನಿಕುಂಚ್ಯ - ಕೊಂಕಿಸಿಕೊಂಡು, ಉತ್ಪತಿಷ್ಯನ್ - ಹಾರಲು ಬಯಸಿದವನಾಗಿ, ವಾನರಶ್ರೇಷ್ಠಃ - ವಾನರಶ್ರೇಷ್ಠನಾದ ಆಂಜನೇಯನು, ವಾನರಾನ್ - ಅಂಗದಾದಿ ಕಪಿಗಳನ್ನು ಕುರಿತು, ಇದಂ - ಈ, ವಚನಂ - ಮಾತನ್ನು, ಅಬ್ರವೀತ್ - ನುಡಿದನು. ‖ ೪೩ ‖ ರಾಘ....ಕ್ತಃ - ರಾಮನಿಂದ ಬಿಡಲ್ಪಟ್ಟ, ಶರಃ - ಬಾಣವು, ಶ್ವಸ....ಮಃ - ವಾಯುವೇಗವುಳ್ಳದಾಗಿ, ಯಥಾ - ಯಾವ ರೀತಿ, ಗಚ್ಛೇತ್ - ಹೋಗುವುದೋ, ತದ್ವತ್ - ಆದೇ ರೀತಿಯಲ್ಲಿ, ರಾವ....ತಾಂ - ರಾವಣನಿಂದ ರಕ್ಷಿಸಲ್ಪಟ್ಟ, ಲಂಕಾಂ - ಲಂಕಾಪಟ್ಟಣ ವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು. ‖ ೪೪ ‖ ಲಂಕಾಯಾಂ - ಲಂಕಾಪಟ್ಟಣದಲ್ಲಿ, ಜನ

ಉಸಿರನ್ನು ಬಲವಾಗಿ ಬಿಗಿಹಿಡಿದು, ನಡುವನ್ನು ಸಣ್ಣದಾಗಿಸಿ, ಕಾಲುಗಳನ್ನು ಮುಡುಕಿ ಕೊಂಡು, ಭುಜಗಳನ್ನೂ, ಕಂಠವನ್ನೂ ಸಂಕೋಚಗೊಳಿಸಿ, ತೇಜಸ್ಸನ್ನೂ, ಶತ್ರುಗಳನ್ನೆದುರಿ ಸುವ ಅತುಲಶಕ್ತಿಯನ್ನೂ, ಮಹತ್ಕಾರ್ಯವನ್ನು ಮಾಡಲು ತಕ್ಕುದಾದ ವೀರ್ಯವನ್ನೂ ಅವಲಂಬಿಸಿದನು. ಆ ಬಳಿಕ ತಾನು ಲಂಘಿಸಬೇಕಾದ ಮಾರ್ಗವನ್ನು ದೂರದಿಂದಲೇ ನೋಡುತ್ತ, ಮುಗಿಲಿನಕಡೆ ದೃಷ್ಟಿಯಿಟ್ಟು ಶ್ವಾಸವನ್ನು ಬಿಗಿಹಿಡಿದನು. ಹೀಗೆ ಉಚ್ಛ್ವಾಸ ನಿಶ್ವಾಸಗಳನ್ನು ಬಿಗಿಹಿಡಿದು ತನ್ನ ಬಲದಿಂದಲೇ ಕಾಲುಗಳನ್ನು ದೃಢವಾಗಿ ಊರಿ, ಕಿವಿ ಗಳನ್ನು ಕೊಂಕಿಸಿಕೊಂಡು ಹಾರಿಹೋಗುವವನಾಗಿ ಅಂಗದಾದಿ ವಾನರಯೂಥಪತಿಗಳನ್ನು ಕುರಿತು ಆ ಹನುಮಂತನು ಹೀಗೆ ಹೇಳಿದನು. ‖ ೩೯—೪೩ ‖ “ಎಲೈ ವಾನರಶ್ರೇಷ್ಠರೇ! ಶ್ರೀರಾಮಮೂರ್ತಿಯ ಬಾಣವು ವಾಯುವೇಗದಂತೆ ಮಹಾ ವೇಗವುಳ್ಳದಾಗಿ ಹೋಗ ತಕ್ಕುದು. ಅಂತೆಯೇ ನಾನು ಎಲ್ಲಿಯೂ ನಿಲ್ಲದೆ ರಾವಣಪಾಲಿತವಾದ ಲಂಕಾನಗರಕ್ಕೆ

ಯದಿ ತಾಂ ಲಂಕಾಯಾಂ ಜನಕಾತ್ಮಜಾಂ । ಅನೇನೈವಹಿ ವೇಗೇನ ಗಮಿಷ್ಯಾಮಿ ಸುರಾಲಯಂ ॥ ೪೫ ॥ ಯದಿ ವಾ ತ್ರಿದಿವೇ ಸೀತಾಂ ನದ್ರಕ್ಷ್ಯಾಮ್ಯಕೃತಶ್ರಮಃ । ಬದ್ಧ್ವಾ ರಾಕ್ಷಸ ರಾಜಾನ ಮಾನಯಿಷ್ಯಾಮಿ ರಾವಣಂ ॥ ೪೬ ॥ ಸರ್ವಥಾ ಕೃತ ಕಾರ್ಯೋಽಹ ಮೇಷ್ಯಾಮಿ ಸಹಸೀತಯಾ । ಆನಯಿಷ್ಯಾಮಿ ವಾ ಲಂಕಾಂ ಸಮು ತ್ಪಾಟ್ಯ ಸರಾವಣಾಂ" ॥ ೪೭ ॥ ಏವಮುಕ್ತ್ವಾತು ಹನುಮಾನ್ ವಾನರಾನ್ವಾನರೋ ತ್ತಮಃ । ಉತ್ಪಪಾತಾಽಥ ವೇಗೇನ ವೇಗವಾನವಿಚಾರಯನ್ ॥ ೪೮ ॥ ಸುಪರ್ಣ ಮಿವ ಚಾತ್ಮಾನಂ ಮೇನೇ ಸ ಕಪಿಕುಂಜರಃ । ಸಮುತ್ಪತತಿ ತಸ್ಮಿಂಸ್ತು ವೇಗಾತ್ತೇ ನಗರೋಹಿಣಃ । ಸಂಹೃತ್ಯ ವಿಟಪಾನ್ ಸರ್ವಾನ್ ಸಮುತ್ಪೇತು ಸ್ಸಮಂತತಃ ॥ ೪೯ ॥

ಕಾತ್ಮಜಾಂ - ಜನಕರಾಯನ ಪುತ್ರಿಯಾದ, ತಾಂ - ಆ ಸೀತಾದೇವಿಯನ್ನು, ನಹಿದ್ರಕ್ಷ್ಯಾಮಿಯದಿ- ನೋಡದಿದ್ದರೆ, ಅನೇನವೇಗೇನೈವ - ಇದೇ ವೇಗದಿಂದಲೇ, ಸುರಾಲಯಂ - ಸ್ವರ್ಗವನ್ನು ಕುರಿತು, ಗಮಿಷ್ಯಾಮಿಹಿ - ಹೋಗುವೆನು. ॥ ೪೫ ॥ ತ್ರಿದಿವೇವಾ - ಸ್ವರ್ಗದಲ್ಲಿಯೂ, ಸೀತಾಂ - ಸೀತೆಯನ್ನು, ನದ್ರಕ್ಷ್ಯಾಮಿಯದಿ - ಕಾಣದೇಹೋದರೆ, ಅಕೃತಶ್ರಮಃ - ಶ್ರಮೆಯಿಲ್ಲದೆಯೇ, ರಾಕ್ಷಸರಾಜಾನಂ - ರಕ್ಕಸರೊಡೆಯನಾದ ರಾವಣಾಸುರನನ್ನು, ಬಧ್ವಾ - ಕಟ್ಟಿ, ಆನಯಿಷ್ಯಾಮಿ - ಕೊಂಡುಬರುವೆನು. ॥ ೪೬ ॥ ಸರ್ವಥಾ - ಹೇಗಾದರೂ, ಅಹಂ - ನಾನು, ಕೃತಕಾರ್ಯಃ - ಮಾಡಲ್ಪಟ್ಟ ಕೆಲಸವುಳ್ಳವ ನಾಗಿ, ಸೀತಯಾಸಹ - ಸೀತೆಯೊಡನೆ, ಏಷ್ಯಾಮಿ - ಬರುವೆನು, ಸರಾವಣಾಂ - ರಾವಣನೊಡ ಗೂಡಿದ, ಲಂಕಾಂವಾ - ಲಂಕಾಪಟ್ಟಣವನ್ನಾದರೂ, ಉತ್ಪಾಟ್ಯ - ಪೆಳಗಿಸಿ, ಆನಯಿಷ್ಯಾಮಿ - ತರು ವೆನು. ॥ ೪೭ ॥ ಅಥ - ಅನಂತರದಲ್ಲಿ, ವಾನರೋತ್ತಮಃ - ಕಪಿಶ್ರೇಷ್ಠನಾದ, ಹನುಮಾಂಸ್ತು - ಹನುಮಂತನಾದರೆ, ವಾನರಾನ್ - ಕಪಿಗಳನ್ನು ಕುರಿತು, ಏವಂ - ಈ ಪ್ರಕಾರವಾಗಿ, ಉಕ್ತ್ವಾ-ಹೇಳಿ, ವೇಗವಾನ್ - ವೇಗವುಳ್ಳವನಾದುದರಿಂದಲೇ, ಅವಿಚಾರಯನ್ - ಏನನ್ನೂ ಯೋಚಿಸದೆ, ಉತ್ಪಪಾತ - ಹಾರಿದನು. ॥ ೪೮ ॥ ಕಪಿಕುಂಜರಃ - ವಾನರಶ್ರೇಷ್ಠನಾದ, ಸಃ - ಆ ಆಂಜನೇಯನು, ಆತ್ಮಾನಂ - ತನ್ನನ್ನು, ಸುಪರ್ಣಮಿವ - ಗರುಡನೋಪಾದಿಯಲ್ಲಿ, ಮೇನೇ - ತಿಳಿದನು, ತಸ್ಮಿನ್ - ಆ ಮಾರುತಿಯು, ಸಮುತ್ಪತತಿ - ಹಾರುತ್ತಿರಲು, ನಗರೋಹಿಣಸ್ತು - ಆ ಪರ್ವತದಲ್ಲಿ ಬೆಳೆದ ವೃಕ್ಷಗಳು, ವೇಗಾತ್ - ಆತನ ವೇಗದಿಂದ, ಸರ್ವಾನ್ - ಸಮಸ್ತಗಳಾದ, ವಿಟಪಾನ್ - ರೆಂಬೆಗಳನ್ನು, ಸಂಹೃತ್ಯ - ಮುದುಡಿ ಕೊಂಡು, ಸಮಂತತಃ - ಎಲ್ಲೆಡೆಯಲ್ಲಿಯೂ, ಸಮುತ್ಪೇತುಃ - ಹಾರಿದವು. ॥ ೪೯ ॥ ಸಃ - ಆ ಮಾರು

ಹೋಗುತ್ತೇನೆ. ಆ ಲಂಕೆಯಲ್ಲಿ ಜನಕರಾಜ ಕುಮಾರಿಯಾದ ಸೀತೆಯನ್ನು ಕಾಣದಿದ್ದಲ್ಲಿ ನಾನು ಆ ಕೂಡಲೆ ಅದೇ ವೇಗದಿಂದ ಅಮರಾವತಿಗೆ ಹೋಗುತ್ತೇನೆ. ಇಷ್ಟಾದರೂ ಸೀತೆ ಯನ್ನು ಕಾಣದಿದ್ದರೆ ರಾಕ್ಷಸರಾಜನಾದ ಆ ರಾವಣನನ್ನು ಲೀಲಾಜಾಲವಾಗಿ ಬಂಧಿಸಿ ಹಿಡಿದು ತರುತ್ತೇನೆ. ಎಲೈ ವಾನರರೇ! ನೀವು ಈ ವಿಷಯದಲ್ಲಿ ಯೋಚಿಸಬೇಡಿರಿ. ಏನೇ ಆಗಲಿ ನಾನು ಕೈಹಿಡಿದ ಕಾರ್ಯವನ್ನು ಸಾಧಿಸಿ ಸೀತೆಯೊಡನೆ ಬಂದೇ ಬರುವೆನು. ಅಥವಾ ರಾವಣಸಹಿತ ವಾದ ಆ ಲಂಕೆಯನ್ನೇ ಬುಡಸಹಿತ ಕಿತ್ತು ತರುತ್ತೇನೆ."॥೪೪–೪೭॥ ಮಹಾ ವೀರನಾದ ಆಂಜ ನೇಯನು ಹೀಗೆ ನುಡಿಯುತ್ತ ಸ್ವಲ್ಪವೂ ಸಂದೇಹಪಡದೆ ಆಕಾಶಕ್ಕೆ ಹಾರಿದನು. ಆಗಲಾತನು ತಾನು, ವೇಗದಲ್ಲಿ ಗರುಡನಿಗೆ ಸಮಾನನೆಂದು ತಿಳಿದನು. ಆ ಮಹಾತ್ಮನು ಮಹಾ ವೇಗ ದಿಂದ ಆಕಾಶಕ್ಕೆ ಹಾರಿದಾಗ ಆ ಮಹೇಂದ್ರಪರ್ವತದಲ್ಲಿನ ವೃಕ್ಷಗಳು ರೆಂಬೆಗಳೆಲ್ಲವನ್ನೂ



—: ಸಮುದ್ರೋಲ್ಲಂಘನ :—

" ಉತ್ಪಪಾತಾಽಥ ವೇಗೇನ ವೇಗವಾನವಿಚಾರಯನ್ "

ಪುಟ ೧೮

ಸಮುತ್ಪತ್ಯಕೋಽಯುಷ್ಟಿ ¶ ಮತ್ತಕೋಕಾನ್ ಪಾದಪಾನ್ ಪುಷ್ಪಶಾಲಿನಃ । ಉದ್ವಹನ್ನೂರುವೇಗೇನ ಜಗಾಮ ವಿಮಲೇಽಂಬರೇ ॥ ೫೦ ॥ ಊರುವೇಗೋದ್ಧತಾ ವೃಕ್ಷಾ ಮುಹೂರ್ತಂ ಕಪಿಮನ್ವಯುಃ । ಪ್ರಸ್ಥಿತಂ ದೀರ್ಘಮಧ್ವಾನಂ ಸ್ವಬಂಧುಮಿವ ಬಾಂಧವಾಃ ॥ ೫೧ ॥ ತಮೂರುವೇಗೋನ್ಮಥಿತಾಸ್ಸಾಲಾಶ್ಚಾನ್ಯೇ ನಗೋತ್ತಮಾಃ । ಅನುಜಗ್ಮುರ್ಹನೂಮಂತಂ ಸೈನ್ಯಾ ಇವ ಮಹೀಪತಿಂ ॥ ೫೨ ॥ ಸುಪುಷ್ಪಿತಾಗ್ರೈರ್ಬಹುಭಿಃ ಪಾದಪೈರನ್ವಿತಃ ಕಪಿಃ । ಹನುಮಾನ್ಪರ್ವತಾಕಾರೋ ಬಭೂವಾಽದ್ಭುತದರ್ಶನಃ ॥ ೫೩ ॥ ಸಾರವಂತೋಽಥ ಯೇ ವೃಕ್ಷಾ ನ್ಯಮಜ್ಜನ್ ಲವಣಾಂಭಸಿ । ♆ ಭಯಾದಿವ ಮಹೇಂ

ತಿಯು, ಪುಷ್ಪಶಾಲಿನಃ - ಹುವ್ವುಗಳಿಂದ ತುಂಬಿದ, ಮತ್ತ....ಕಾನ್ - ಮದಿಸಿರುವ ಕೀಚುಬಾಲದ ಹಕ್ಕಿಗಳುಳ್ಳ, ಪಾದಪಾನ್ - ವೃಕ್ಷಗಳನ್ನು, ಊರುವೇಗೇನ - ತೊಡೆಗಳ ವೇಗದಿಂದ, ಉದ್ವಹನ್ - ಹೊತ್ತು, ವಿಮಲೇ - ನಿರ್ಮಲವಾದ, ಅಂಬರೇ - ಆಕಾಶದಲ್ಲಿ, ಜಗಾಮ - ಹೊರಟನು. ‖ ೫೦ ‖ ಊರು....ತಾಃ - ತೊಡೆಗಳ ವೇಗದಿಂದ ಕೊಡಹಲ್ಪಟ್ಟ, ವೃಕ್ಷಾಃ - ವೃಕ್ಷಗಳು, ದೀರ್ಘಂ - ದೂರವಾದ, ಅಧ್ವಾನಂ - ಮಾರ್ಗವನ್ನು, ಪ್ರಸ್ಥಿತಂ - ಹೊರಟ, ಸ್ವಬಂಧುಂ - ನೆಂಟನನ್ನು, ಬಾಂಧವಾ ಇವ - ಬಂಧುಗಳ ಹಾಗೆ, ಕಪಿಂ - ವಾನರನನ್ನು, ಮುಹೂರ್ತಂ - ಮುಹೂರ್ತಕಾಲ, ಅನ್ವಯುಃ - ಅನುಸರಿಸಿ ಬಂದವು. ‖ ೫೧ ‖ ಊರು....ತಾಃ - ತೊಡೆಯ ವೇಗದಿಂದ ಉರುಳಿಸಲ್ಪಟ್ಟ, ಸಾಲಾಃ - ಮದ್ದೀಮರಗಳು, ಅನ್ಯೇ - ಇತರಗಳಾದ, ನಗೋತ್ತಮಾಶ್ಚ - ವೃಕ್ಷಶ್ರೇಷ್ಠಗಳೂ ಕೂಡಾ, ಮಹೀಪತಿಂ - ರಾಜನನ್ನು, ಸೈನ್ಯಾ ಇವ - ಸೈನಿಕರಂತೆ, ತಂಹನುಮಂತಂ - ಆ ಹನುಮಂತನನ್ನು, ಅನುಜಗ್ಮುಃ - ಅನುಸರಿಸಿ ಹೋದವು. ‖ ೫೨ ‖ ಸುಪುಷ್ಪಿತಾಗ್ರೈಃ - ಚೆನ್ನಾಗಿ ಹೂ ಬಿಟ್ಟಿರುವ ಕೊನೆಗಳುಳ್ಳ, ಬಹುಭಿಃ - ಅನೇಕಗಳಾದ, ಪಾದಪೈಃ - ವೃಕ್ಷಗಳಿಂದ, ಅನ್ವಿತಃ - ಕೂಡಿರುವ, ಪರ್ವತಾಕಾರಃ - ಪರ್ವತದಂತೆ ಆಕಾರವುಳ್ಳ, ಕಪಿಃ - ವಾನರನಾದ, ಹನೂಮಾನ್ - ಹನುಮಂತನು, ಅದ್ಭುತದರ್ಶನಃ - ಆಶ್ಚರ್ಯಕರವಾದ ನೋಟವುಳ್ಳವನು, ಬಭೂವ - ಆದನು. ‖ ೫೩ ‖ ಅಥ-ಅನಂತರದಲ್ಲಿ, ಯೇವೃಕ್ಷಾಃ - ಯಾವ ವೃಕ್ಷಗಳು, ಸಾರವಂತಃ - ಸ್ಥಿರಾಂಶವುಳ್ಳವುಗಳೋ, ತೇ - ಅವುಗಳು,

---

ಮೊಗಚಿಕೊಂಡು ಆತನೊಡನೆಯೇ ಹಾರಿಹೋಗುತ್ತಿದ್ದವು. ಆಗಲಾ ಹನುಮಂತನು ಮದಿಸಿರುವ ಕೀಚುಬಾಲದ ಹಕ್ಕಿಗಳಿಂದ ಕೂಡಿದ ಆ ಗಿರಿತರುಗಳೆಲ್ಲವನ್ನೂ, ತನ್ನ ಊರುವೇಗದಿಂದ ಸೆಳೆಯುತ್ತ ನಿರ್ಮಲವಾದ ಗಗನಮಾರ್ಗದಲ್ಲಿ ಹೊರಟನು. ಹೀಗೆ ಆತನ ಊರುವೇಗದಿಂದ ಸೆಳೆಯಲಾದ ವೃಕ್ಷಗಳು ಆತನ ಸುತ್ತಲೂ ಒಂದು ಮುಹೂರ್ತಕಾಲ ಹಿಂಬಾಲಿಸಿ ಹೋಗುತ್ತಿರಲು, ದೂರದೇಶವನ್ನು ಕುರಿತು ಪ್ರಯಾಣ ಬೆಳೆಸಿರುವವರನ್ನು ಬಂಧುಗಳು ಸುತ್ತುವರೆದು ಹಿಂಬಾಲಿಸಿ ಹೋಗುವಂತೆ ತೋರುತ್ತಿದ್ದವು; ಊರುವೇಗದಿಂದುರುಳಿಸಲಾದ ಮದ್ದೀಮರಗಳೂ, ಇತರ ವೃಕ್ಷಶ್ರೇಷ್ಠಗಳೂ ಆತನನ್ನನುಸರಿಸಿ ಹೋಗುತ್ತಿರಲು, ಸೈನಿಕರು ತಮ್ಮ ರಾಜನನ್ನನುಸರಿಸಿ ಹೋಗುತ್ತಿರುವಂತಿದ್ದವು. ‖ ೪೮—೫೨ ‖ ಪುಷ್ಪಿಸಿರುವ ತುದಿಗಳುಳ್ಳ ಅನೇಕ ವೃಕ್ಷಗಳಿಂದ ಸುತ್ತುವರೆದು ಹಾರುತ್ತಿದ್ದ ಆ ಹನುಮಂತನು ಪರ್ವತದಂತೆ ಪರಮಾಶ್ಚರ್ಯಕರವಾಗಿ ಕಾಣುತ್ತಿದನು. ಆತನನ್ನನುಸರಿಸಿ ಬರುತ್ತಿದ್ದ ಕೆಲವು

¶ "ಬಕಾನ್" ತಿ. ಪಾ. ♆ ಈ ಪಾದವೂ ಮುಂದಿನ ಪಾದವೂ ತಿ. ರಾ. ಪಾ. ದಲ್ಲ ಅಧಿಕ.

ದ್ರಸ್ಯ ಪರ್ವತಾ ವರುಣಾಲಯೇ ॥ ೫೪ ॥ ಸ ನಾನಾಕುಸುಮೈಃ ಕೀರ್ಣಃ ಕಪಿಸ್ಸಾಂಕುರಕೋರಕೈಃ । ಶುಶುಭೇ ಮೇಘಸಂಕಾಶಃ ಖದ್ಯೋತೈರಿವ ಪರ್ವತಃ ॥ ೫೫ ॥ ವಿಮುಕ್ತಾಸ್ತಸ್ಯ ವೇಗೇನ ಮುಕ್ತ್ವಾ ಪುಷ್ಪಾಣಿ ತೇ ದ್ರುಮಾಃ । ಅವಶೀರ್ಯಂತ ಸಲಿಲೇ ನಿವೃತ್ತಾ ಸ್ಸುಹೃದೋ ಯಥಾ ॥ ೫೬ ॥ ಲಘುತ್ವೇನೋಪಪನ್ನಂ ತದ್ವಿಚಿತ್ರಂ ಸಾಗರೇಽಪತತ್ । ದ್ರುಮಾಣಾಂ ವಿವಿಧಂ ಪುಷ್ಪಂ ಕಪಿವಾಯುಸಮೀರಿತಂ ॥೫೭॥ * ತಾರಾಶತಮಿವಾಕಾಶಂ ಪ್ರಬಭೌಚ ಮಹಾರ್ಣವಃ ॥ ೫೮ ॥ ಪುಷ್ಪೌಘೇಣಾ

ಲವಣಾಂಭಸಿ - ಲವಣಸಮುದ್ರದಲ್ಲಿ, ಮಹೇಂದ್ರಸ್ಯ - ದೇವೇಂದ್ರನ, ಭಯಾತ್ - ಭಯದಿಂದ, ವರುಣಾಲಯೇ - ಕಡಲಿನಲ್ಲಿ, ಪರ್ವತಾಇವ - ಬೆಟ್ಟಗಳ ಹಾಗೆ, ನ್ಯಮಜ್ಜ - ಮುಳುಗಿದವು. ॥೫೪॥ ಮೇಘಸಂಕಾಶಃ - ಮೇಘಸಮಾನನಾದ, ಸಕಪಿಃ - ಆ ಆಂಜನೇಯನು, ಸಾಂಕು....ಕೈಃ - ಚಿಗುರುಗಳಿಂದಲೂ, ಮೊಗ್ಗುಗಳಿಂದಲೂ, ನಾನಾಕುಸುಮೈಃ - ಅನೇಕವಿಧ ಪುಷ್ಪಗಳಿಂದ, ಕೀರ್ಣಃ - ವ್ಯಾಪ್ತನಾಗಿದ್ದುದರಿಂದ, (ರಾತ್ರೌ - ರಾತ್ರಿಯ ಕಾಲದಲ್ಲಿ,) ಖದ್ಯೋತೈಃ - ಮಿಣುಕು ಹುಳುಗಳಿಂದ, ಪರ್ವತ ಇವ - ಬೆಟ್ಟದ ಹಾಗೆ, ಶುಶುಭೇ - ಪ್ರಕಾಶಿಸಿದನು. ॥ ೫೫ ॥ ತಸ್ಯ - ಆ ಆಂಜನೇಯನ, ವೇಗೇನ - ವೇಗದಿಂದ, ವಿಮುಕ್ತಾಃ - ಬಿಡಲ್ಪಟ್ಟ, ತೇದ್ರುಮಾಃ - ಆ ವೃಕ್ಷಗಳು, ಪುಷ್ಪಾಣಿ - ಹುವ್ವುಗಳನ್ನು, ಮುಕ್ತ್ವಾ - ಬಿಟ್ಟು, ಯಥಾ - ಯಾವ ಪ್ರಕಾರವಾಗಿ, ಸುಹೃದಃ - ಸ್ನೇಹಿತರು, ನಿವೃತ್ತಾಃ - ಹಿಂತಿರುಗುವರೋ, ತಥಾ - ಆ ಪ್ರಕಾರವಾಗಿ, ಸಲಿಲೇ - ಉದಕದಲ್ಲಿ, ಅವಶೀರ್ಯಂತ - ಸೀಳಿಬಿದ್ದವು. ॥೫೬॥ ಕಪಿ....ತಂ - ವಾನರನ ವೇಗದಿಂದ ಹುಟ್ಟಿದ ವಾಯುವಿನಿಂದ, ಸಮೀರಿತಂ - ಸೆಳೆಯಲ್ಪಟ್ಟ, ವಿವಿಧಂ - ಅನೇಕ ವಿಧಗಳಾದ, ದ್ರುಮಾಣಾಂ - ವೃಕ್ಷಗಳ, ತತ್ ಪುಷ್ಪಂ - ಆ ಹುವ್ವು, ಲಘುತ್ವೇನ- ಲಾಘವದಿಂದ, ಉಪಪನ್ನಂ - ಕೂಡಿರುವುದಾಗಿ, ವಿಚಿತ್ರಂ - ಆಶ್ಚರ್ಯಕರವಾಗಿ, ಸಾಗರೇ-ಸಮುದ್ರದಲ್ಲಿ, ಅಪತತ್ - ಬಿದ್ದುಹೋಯಿತು. ॥ ೫೭ ॥ ಸಃ - ಅಂತಹ ಪುಷ್ಪಗಳುಳ್ಳ, ಮಹಾರ್ಣವಃ - ಸಮುದ್ರವು, ತಾರಾಶತಂ - ಅನೇಕ ನಕ್ಷತ್ರಗಳುಳ್ಳ, ಆಕಾಶಮಿವ - ಅಂತರಿಕ್ಷದಂತೆ, ಪ್ರಬಭೌ -

ವೃಕ್ಷಗಳು, ದೇವೇಂದ್ರನ ಭಯದಿಂದ ಪರ್ವತಗಳು ಸಮುದ್ರದಲ್ಲಡಗಿದಂತೆ, ಸಮುದ್ರಕ್ಕೆ ಬಿದ್ದು ಮುಳುಗಿಹೋದವು. ಗಗನದಲ್ಲಿ ಸಂಚರಿಸುವ ಮುಗಿಲಿನಂತಿದ್ದ ಆ ಮಾರುತಿಯು ಆ ಸಮಯದಲ್ಲಿ ಕೆಂದಳಿರುಗಳಿಂದಲೂ, ಮೊಗ್ಗುಗಳಿಂದಲೂ, ಹೂಗಳಿಂದಲೂ ವ್ಯಾಪ್ತನಾಗಿ ರಾತ್ರಿಯಕಾಲದಲ್ಲಿ ಮಿಣುಕು ಹುಳುಗಳಿಂದ ಕೂಡಿ ಪ್ರಕಾಶಿಸುವ ಪರ್ವತದಂತೆ ಶೋಭಿಸುತ್ತಿದ್ದನು. ಅಲ್ಲದೆ ಆ ಮಾರುತಿಯ ವೇಗವನ್ನನುಸರಿಸಿ ಇತರ ವೃಕ್ಷಗಳೂ ಸ್ವಲ್ಪ ದೂರ ಹೋದಬಳಿಕ ಆತನ ವೇಗವನ್ನನುಸರಿಸಲಾರದೆ, ಸ್ನೇಹಿತನಾದವನು ಪಯಣಿಸಿರಲು, ಆತನ ಸ್ನೇಹಿತರು ನದಿಯು ಅಡ್ಡಲಾಗುವವರೆಗೂ ಆತನ್ನನುಸರಿಸಿ ಹಿಂತಿರುಗುವಂತೆ ಹಿಂತಿರುಗಿ ಸಮುದ್ರದಲ್ಲಿ ಬಿದ್ದುಹೋದವು. ಆ ಮಹಾ ಕಪಿಯ ಲಂಘನ ವೇಗದಿಂದುಂಟಾದ ವಾಯುವಿನಿಂದೊಯ್ಯಲಾದ ವಿವಿಧ ವೃಕ್ಷಗಳ ಪುಷ್ಪಗಳು ಬಹು ಹಗುರವಾಗಿದ್ದುದರಿಂದ ಆತನನ್ನು ಬಹುದೂರ ಅನುಸರಿಸಿ ಹೋಗಿ ನೋಡುವವರಿಗೆ ಪರಮಾಶ್ಚರ್ಯವನ್ನುಂಟುಮಾಡುತ್ತ ಸಮುದ್ರದಲ್ಲಿ ಬೀಳುತ್ತಿದ್ದವು. ಆ ಪುಷ್ಪಗಳಿಂದಲಂಕೃತವಾದ ಸಮುದ್ರವು ನಕ್ಷತ್ರಗಳಿಂದ

* ಈ ಪಾದವು ಗೋ. ಪಾ. ದಲ್ಲಿ ಅಧಿಕ.

§ ನುಬದ್ಧೇನ ನಾನಾವರ್ಣೇನ ವಾನರಃ । ಬಭೌ ಮೇಘ ‡ ಇವಾಽಕಾಶೇ ವಿದ್ಯುದ್ಗಣ ವಿಭೂಷಿತಃ ॥ ೫೯ ॥ ತಸ್ಯ ವೇಗಸಮುದ್ಧೂತೈಃ ಪುಷ್ಪೈ ಸ್ತೋಯಮದೃಶ್ಯತ । ತಾರಾಭಿ ರಭಿರಾಮಾಭಿ ರುದಿತಾಭಿ ರಿವಾಂಬರಂ ॥೬೦॥ * ಪ್ರಚಕರ್ಷ ಮಹಾಮೇಘಂ ಸಪುರೋವಾತ ವಿದ್ಯುತಂ । ಪ್ರಬಲಃ ಕೇಟರಾಜಸ್ಯ ವಾಯು ರ್ವೇಗೇನ ನಿಸ್ಸೃತಃ ॥೬೧॥ ಸಮಮಾಸೀ ತ್ತದಾ ರೂಪಂ ಸಾಗರಸ್ಯಾಂಽಬರಸ್ಯಚ । ಸಮುತ್ಪತಿತಮೇಘಸ್ಯ ಸಮುದ್ಧೂತ ಜಲಸ್ಯಚ ॥ ೬೨ ॥ ತಸ್ಯಾಂಽಬರಗತೌ ಬಾಹೂ ದದೃಶಾತೇ ಪ್ರಸಾ

ಪ್ರಕಾಶಿಸಿತು. ॥ ೫೮ ॥ ಅನುಬದ್ಧೇನ - ಕಟ್ಟಲ್ಪಟ್ಟ, ನಾನಾವರ್ಣೇನ - ಅನೇಕ ಬಣ್ಣಗಳುಳ್ಳ, ಪುಷ್ಪೌಘೇಣ - ಪುಷ್ಪಸಮೂಹದಿಂದ ಯುಕ್ತನಾದ, ವಾನರಃ - ಕಪಿಯು, ಆಕಾಶೇ - ಅಂತರಿಕ್ಷ ದಲ್ಲಿ, ವಿದ್ಯು....ತಃ - ಮಿಂಚುಗಳ ಸಮೂಹದಿಂದ ಅಲಂಕರಿಸಲ್ಪಟ್ಟ, ಮೇಘಇವ - ಮೇಘದಂತೆ, ಬಭೌ - ಪ್ರಕಾಶಿಸಿದನು. ॥ ೫೯ ॥ ತಸ್ಯ - ಆ ಆಂಜನೇಯನ, ವೇಗ....ತೈಃ - ವೇಗದಿಂದ, ಸಮುದ್ಧೂತೈಃ - ಕೊಡಹಲ್ಪಟ್ಟ, ಪುಷ್ಪೈಃ - ಹುವ್ವುಗಳಿಂದ ಕೂಡಿದ, ತೋಯಂ - ಉದಕವು, ಉದಿತಾಭಿಃ - ಹುಟ್ಟಿದ, ಅಭಿರಾಮಾಭಿಃ - ಮನೋಹರಗಳಾದ, ತಾರಾಭಿಃ - ನಕ್ಷತ್ರಗಳಿಂದ, ಅಂಬರಮಿವ - ಗಗನದಂತೆ, ಅದೃಶ್ಯತ - ಕಾಣಿಸಿತು. ॥ ೬೦ ॥ ಪ್ರಬಲಃ - ಅತಿಶಯವಾದ, ಕೇಟರಾಜಸ್ಯ - ವಾನರಶ್ರೇಷ್ಠನ, ವೇಗೇನ - ವೇಗದಿಂದ, ನಿಸ್ಸೃತಃ - ಹೊರಟುಬಂದ, ವಾಯುಃ - ವಾಯುವು, ಸಪು....ತಂ - ಪೂರ್ವದಿಕ್ಕಿನ ಗಾಳಿಯಿಂದಲೂ, ಮಿಂಚುಗಳಿಂದಲೂ ಕೂಡಿರುವ, ಮಹಾಮೇಘಂ - ದೊಡ್ಡ ಮೇಘಗಳನ್ನು, ಪ್ರಚಕರ್ಷ - ಸೆಳೆಯಿತು. ॥ ೬೧ ॥ ತದಾ - ಆಗ, ಸಮು....ಸ್ಯ - ಹಾರಿಸಲ್ಪಟ್ಟ ಮೇಘಗಳುಳ್ಳ, ಅಂಬರಸ್ಯ - ಅಂತರಿಕ್ಷದ, ಸಮು ...ಸ್ಯ - ಮೇಲಕ್ಕೆ ಚಿಮ್ಮಿದ ನೀರುಳ್ಳ, ಸಮುದ್ರಸ್ಯ - ಸಮುದ್ರದ, ರೂಪಂ - ರೂಪವೂಕೂಡ, ಸಮಂ - ಸಮ ವಾಗಿ, ಆಸೀತ್ - ಆಯಿತು. ॥ ೬೨ ॥ ಪ್ರಸಾರಿತೌ - ಚಾಚಿದ, ಅಂಬರಗತೌ - ಅಂತರಿಕ್ಷವನ್ನು

ಶೋಭಿತವಾದ ಆಕಾಶದಂತೆ ಕಂಗೊಳಿಸುತ್ತಿದ್ದಿತು. ॥೫೩–೫೮॥ ಅಲ್ಲದೆ ಅನೇಕ ಬಣ್ಣಗಳುಳ್ಳ ಆ ಹೂಗಳು ಮೇಲಕ್ಕೆ ಹಾರಿ ಹನುಮಂತನಮೇಲೆ ಬೀಳುತ್ತಿದ್ದವು. ಆ ಹುವ್ವುಗಳಿಂದಲಂಕೃತ ನಾದಆತನು ಮಿಂಚುಗಳಿಂದಲಂಕೃತವಾದ ಮೋಡದಂತೆಕಾಣುತ್ತಿದ್ದನು. ಆ ಕಪಿವೀರನ ವೇಗ ದಿಂದ ಮೇಲೆ ಚಿಮ್ಮಿದ ಪುಷ್ಪಗಳಿಂದ ಕೂಡಿದ ಆ ಸಮುದ್ರೋದಕವು ಆಗತಾನೇ ಉದಿಸಿದ ಮನೋಹರವಾದ ನಕ್ಷತ್ರಗಳಿಂದ ಕೂಡಿದ ಆಕಾಶದಂತೆಕಾಣುತ್ತಿದ್ದಿತು. ॥೫೯–೬೦॥ ಮಹಾ ಬಲಿಷ್ಠನಾದ ಆ ಕಪಿರಾಜನ ವೇಗದಿಂದುಂಟಾದ ವಾಯುವು ಪೂರ್ವದಿಕ್ಕಿನ ಗಾಳಿಯಿಂದಲೂ, ಮಿಂಚುಗಳಿಂದಲೂ ಕೂಡಿರುವ ಮೇಘಗಳನ್ನು ಸೆಳೆಯಿತು. ಹೀಗೆ ಚಲಿಸಲಾದ ಮೇಘ ಗಳುಳ್ಳ ಆಕಾಶವೂ, ಕದಡಿದ ನೀರುಳ್ಳ, ಸಮುದ್ರವೂ ಒಂದೇ ರೂಪದಿಂದ ಕಂಗೊಳಿಸು ತ್ತಿದ್ದಿತು. ॥೬೧–೬೨॥ ಗಗನಮಾರ್ಗದಲ್ಲಿ ಹಾರುತ್ತಿದ್ದ ಆ ಕಪಿವೀರನು ಚಾಚಿದ್ದ ಕೈಗಳು ಪರ್ವತಶಿಖರಗಳಿಂದ ಹೊರಟುಬಂದ ಐದು ಹೆಡೆಗಳ ಹಾವುಗಳಂತೆ ಕಾಣುತ್ತಿದ್ದವು. ಆತನು

---

§ "ಸುಗಂಧೇನ" ಗೋ. ತಿ. ಪಾ. ‡ "ಇವೋರ್ಧ್ವಸ್ಮೈ" ತಿ. ಪಾ.

* ಈ ಎರಡು ಶ್ಲೋಕಗಳೂ ತಿ. ಗೋ. ರಾ. ಪಾ. ದಲ್ಲಿ ಅಧಿಕ.

ರಿತೌ । ಪರ್ವತಾಗ್ರಾದ್ವಿನಿಷ್ಕ್ರಾಂತೌ ಪಂಚಾಸ್ಯಾವಿವ ಪನ್ನಗೌ ॥ ೬೩ ॥ ಪಿಬನ್ನಿವ ಬಭೌ ಶ್ರೀಮಾನ್ ಸೋರ್ಮಿಜಾಲಂ ಮಹಾರ್ಣವಂ । ಪಿಪಾಸುರಿವ ಚಾಕಾಶಂ ದದೃಶೇ ಸ ಮಹಾಕಪಿಃ ॥ ೬೪ ॥ ತಸ್ಯ ವಿದ್ಯುತ್ಪ್ರಭಾಕಾರೇ ವಾಯುಮಾರ್ಗಾನು ಸಾರಿಣಃ । ನಯನೇ ಸಂಪ್ರಕಾಶೇತೇ ಪರ್ವತಸ್ಥಾವಿವಾನಲೌ ॥೬೫॥ ಪಿಂಗೇ ಪಿಂಗಾಕ್ಷ ಮುಖ್ಯಸ್ಯ ಬೃಹತೀ ಪರಿಮಂಡಲೇ । ಚಕ್ಷುಷೀ ಸಂಪ್ರಕಾಶೇತೇ ಚಂದ್ರಸೂರ್ಯಾ ವಿವೋದಿತೌ ॥ ೬೬ ॥ ಮುಖಂ ನಾಸಿಕಯಾ ತಸ್ಯ ತಾಮ್ರಯಾ ತಾಮ್ರಮಾಬಭೌ । ಸಂಧ್ಯಯಾ ಸಮಭಿಸ್ಪೃಷ್ಟಂ ಯಥಾ ¶ ತತ್ಸೂರ್ಯಮಂಡಲಂ ॥ ೬೭ ॥ ಲಾಂಗೂ

ಹೊಂದಿದ, ತಸ್ಯ - ಆ ಆಂಜನೇಯನ, ಬಾಹೂ - ತೋಳುಗಳು, ಪರ್ವತಾಗ್ರಾತ್ - ಪರ್ವತಶಿಖರ ದಿಂದ, ವಿನಿಷ್ಕ್ರಾಂತೌ - ಹೊರಗೆಬಂದ, ಪಂಚಾಸ್ಯೌ - ಐದು ಮುಖಗಳುಳ್ಳ, ಪನ್ನಗಾವಿವ - ಸರ್ಪ ಗಳಂತೆ, ದದೃಶಾತೇ - ಕಾಣುತ್ತಿದ್ದವು. ॥ ೬೩ ॥ ಸಮಹಾಕಪಿಃ - ಆ ಆಂಜನೇಯನು, ಸೋರ್ಮಿ ಜಾಲಂ - ತೆರೆಗಳ ಸಮೂಹದಿಂದ ಕೂಡಿದ, ಮಹಾರ್ಣವಂ - ಮಹಾ ಸಮುದ್ರವನ್ನು, ಪಿಬನ್ನಿವ - ಪಾನಮಾಡುವವನಂತೆ, ಬಭೌ - ಹೊಳೆಯುತ್ತಿದ್ದನು, ಕಿಂಚ - ಅಲ್ಲದೆ, ಆಕಾಶಂ - ಅಂತರಿಕ್ಷವನ್ನು, ಪಿಪಾಸುರಿವ - ಬಾಯಾರಿದವನು ನೀರನ್ನು ಬಯಸಿದಂತೆ, ದದೃಶೇ - ಕಾಣಿಸಿದನು. ॥ ೬೪ ॥ ವಾಯು....ಣಃ - ಗಗನಮಾರ್ಗವನ್ನು ಅನುಸರಿಸಿರುವ, ತಸ್ಯ - ಆ ಆಂಜನೇಯನ, ವಿದ್ಯು....ರೇ - ಮಿಂಚುಗಳ ಕಾಂತಿಯಂತೆ ಹೊಳೆಯುವ, ನಯನೇ - ಕಣ್ಣುಗಳು, ಪರ್ವತಸ್ಥೌ - ಪರ್ವತದಲ್ಲಿರುವ, ಅನಲಾವಿವ - ಬೆಂಕಿಗಳಹಾಗೆ, ಸಂಪ್ರಕಾಶೇತೇ - ಹೊಳೆಯುತ್ತಿದ್ದವು. ॥ ೬೫ ॥ ಪರಿಮಂಡಲೇ - ಗುಂಡಾಗಿರುವ, ಬೃಹತೀ - ದೊಡ್ಡವುಗಳಾದ, ಪಿಂಗೇ - ಪಿಂಗಳವರ್ಣಗಳಾದ, ಪಿಂಗಾ....ಸ್ಯ - ವಾನರಶ್ರೇಷ್ಠನಾದ ಆಂಜನೇಯನ, ಚಕ್ಷುಷೀ-ನೇತ್ರಗಳು, ಉದಿತೌ-ಉದಿಸಿದ, ಚಂದಸೂರ್ಯಾವಿವ - ಚಂದ್ರಸೂರ್ಯರಂತೆ, ಸಂಪ್ರಕಾಶೇತೇ - ಹೊಳೆಯುತ್ತಿದ್ದವು. ॥ ೬೬ ॥ ತಾಮ್ರಯಾ - ಕೆಂಪಾದ, ನಾಸಿಕಯಾ - ಮೂಗಿನಿಂದ, ಯುಕ್ತಂ - ಕೂಡಿರುವ, ತಸ್ಯ - ಆ ಆಂಜನೇಯನ, ತಾಮ್ರಂ - ತಾಮ್ರವರ್ಣವಾದ, ಮುಖಂ - ಮುಖವು, ಸಂಧ್ಯಯಾ - ಸಂಧ್ಯಾರಾಗದಿಂದ, ಸಮಭಿಸ್ಪೃಷ್ಟಂ - ವ್ಯಾಪ್ತವಾಗಿರುವ, ಸೂರ್ಯಮಂಡಲಂಯಥಾ - ಸೂರ್ಯಮಂಡಲದಂತೆ, ಅಬಭೌ - ಪ್ರಕಾಶಿಸಿತು.

ಸಮುದ್ರ ಜಲಕ್ಕೆ ಸಮೀಪವಾಗಿ ಹಾರುತ್ತಿರುವಾಗ ಸಮುದ್ರ ಜಲವನ್ನೆಲ್ಲ ಪಾನಮಾಡು ವನೋ ಎಂಬಂತೆಯೂ, ಆಕಾಶಕ್ಕೆ ಸಮೀಪದಲ್ಲಿ ಹಾರುತ್ತಿರಲು ಅದನ್ನೇ ನುಂಗಿ ಬಿಡು ವನೋ ಎಂಬಂತೆಯೂ ಕಾಣುತ್ತಿದ್ದನು. ಗಗನಮಾರ್ಗದಲ್ಲಿ ಸಂಚರಿಸುತ್ತಿರುವ ಆತನ ಪ್ರಕಾಶಮಾನವಾದ ಕಣ್ಣುಗಳು, ಪರ್ವತದ ಎರಡೂ ಕಡೆಗಳಲ್ಲಿ ಉರಿಯುತ್ತಿರುವ ಬೆಂಕಿ ಯಂತೆ ಕಾಣುತ್ತಿದ್ದವು. ಅಲ್ಲದೆ ಹಳದಿಬಣ್ಣವುಳ್ಳುವಾಗಿ ದೊಡ್ಡವಾಗಿಯೂ, ಗುಂಡಾಗಿಯೂ ಇರುವ ಆತನ ಕಣ್ಣುಗಳು ಒಮ್ಮೆಲೇ ಉದಿಸಿದ ಚಂದ್ರಸೂರ್ಯರಂತೆ ಪ್ರಕಾಶಿಸುತ್ತಿದ್ದವು. ಕೆಂಪಾದ ಮೂಗಿನಿಂದ ಕೂಡಿದ ಆತನ ಮುಖವು ಸಂಜೆಯ ಕೆಂಬಾರದಿಂದ ಕೂಡಿದ ಸೂರ್ಯಮಂಡಲದಂತೆ ಶೋಭಿಸುತ್ತಿದ್ದಿತು. ॥ ೬೩–೬೭ ॥ ಗಗನದಲ್ಲಿ ಹಾರುತ್ತಿರುವ

¶ "ಸ್ಯಾತ್" ತಿ. ಪಾ.

ಲಂಚ ಸಮಾವಿದ್ಧಂ ಪ್ಲವಮಾನಸ್ಯ ಶೋಭತೇ । ಅಂಬರೇ ವಾಯುಪುತ್ರಸ್ಯ ಶಕ್ರಧ್ವಜಇವೋಚ್ಛ್ರಿತಃ ॥ ೬೮ ॥ ಲಾಂಗೂಲಚಕ್ರೇಣ ಮಹಾನ್ ಶುಕ್ಲದಂಷ್ಟ್ರೋಽನಿಲಾತ್ಮಜಃ । ವ್ಯರೋಚತ ಮಹಾಪ್ರಾಜ್ಞಃ ಪರಿವೇಷೀವ ಭಾಸ್ಕರಃ ॥೬೯॥ ಸ್ಫಿಗ್ದೇಶೇನಾಭಿತಾಮ್ರೇಣ ರರಾಜ ಸಮಹಾಕಪಿಃ । ಮಹತಾ ದಾರಿತೇನೇವ ಗಿರಿರ್ಗೈರಿಕಧಾತುನಾ ॥ ೭೦ ॥ ತಸ್ಯ ವಾನರಸಿಂಹಸ್ಯ ಪ್ಲವಮಾನಸ್ಯ ಸಾಗರಂ । ಕಕ್ಷಾಂತರಗತೋ ವಾಯುರ್ಜೀಮೂತಇವ ಗರ್ಜತಿ ॥ ೭೧ ॥ ಖೇ ಯಥಾ ನಿಪತಂತ್ಯುಲ್ಕಾ ಹ್ಯುತ್ತರಾಂತಾ ದ್ವಿನಿಸ್ಸೃತಾ । ದೃಶ್ಯತೇ ಸಾನುಬಂಧಾಚ ತಥಾ ಸ ಕಪಿಕುಂಜರಃ ॥೭೨॥

॥೬೭॥ ಪ್ಲವಮಾನಸ್ಯ - ಹಾರುತ್ತಿರುವ, ವಾಯುಪುತ್ರಸ್ಯ – ಆಂಜನೇಯನ, ಸಮಾವಿದ್ಧಂ - ಉನ್ನತಗೊಳಿಸಲಾದ, ಲಾಂಗೂಲಂಚ-ಬಾಲವು, ಅಂಬರೇ-ಅಂತರಿಕ್ಷದಲ್ಲಿ, ಉಚ್ಛ್ರಿತಃ-ಮೇಲಕ್ಕೆತ್ತಲ್ಪಟ್ಟ, ಶಕ್ರಧ್ವಜಇವ - ಇಂದ್ರಧ್ವಜದಂತೆ, ಶೋಭತೇ - ಪ್ರಕಾಶಿಸಿತು. ॥೬೮॥ ಲಾಂಗೂ....ಣ - ಬಾಲದ ಚಕ್ರದಿಂದ, ಯುಕ್ತಃ - ಕೂಡಿರುವ, ಶುಕ್ಲದಂಷ್ಟ್ರಃ - ಬಿಳುಪಾದ ಕೋರೆಗಳುಳ್ಳ, ಮಹಾನ್-ಮಹಾತ್ಮನಾದ, ಮಹಾಪ್ರಜ್ಞಃ - ಬಹು ತಿಳಿವಳಿಕೆಯುಳ್ಳ, ಅನಿಲಾತ್ಮಜಃ - ವಾಯುಪುತ್ರನಾದ ಆಂಜನೇಯನು, ಪರಿವೇಷೀ - ಪರಿವೇಷವುಳ್ಳ, ಭಾಸ್ಕರಇವ - ಸೂರ್ಯನಂತೆ, ವ್ಯರೋಚತ - ಹೊಳೆಯುತ್ತಿದ್ದನು. ॥೬೯॥ ಸಮಹಾಕಪಿಃ - ಆ ಹನುಮಂತನು. ಅಭಿತಾಮ್ರೇಣ - ಎಲ್ಲೆಡೆಯಲ್ಲಿಯೂ ಕೆಂಪಾದ, ಸ್ಫಿಗ್ದೇಶೇನ - ಬಾಲದ ಬುಡದಿಂದ, ದಾರಿತೇನ - ಸೀಳಿದ, ಮಹತಾ - ಮಹತ್ತರವಾದ, ಗೈರಿಕಧಾತುನಾ - ಮಣಿಶಿಲೆಗಳಿಂದ, ಉಪಲಕ್ಷಿತಾ - ಕೂಡಿರುವ, ಗಿರಿರಿವ - ಬೆಟ್ಟದಂತೆ, ರರಾಜ - ಶೋಭಿಸಿದನು. ॥ ೭೦ ॥ ಸಾಗರಂ - ಸಮುದ್ರವನ್ನು, ಪ್ಲವಮಾನಸ್ಯ - ಹಾರುತ್ತಿರುವ, ವಾನರಸಿಂಹಸ್ಯ - ವಾನರಶ್ರೇಷ್ಠನಾದ, ತಸ್ಯ - ಆ ಆಂಜನೇಯನ, ಕಕ್ಷಾಂ....ತಃ - ಕಂಕುಳಿನ ಮಧ್ಯಪ್ರದೇಶವನ್ನು ಹೊಂದಿದ, ವಾಯುವು, ಜೀಮೂತಇವ - ಮೇಘದಂತೆ, ಗರ್ಜತಿ - ಗರ್ಜನೆ ಮಾಡಿತಿತ್ತು. ॥೭೧॥ ಸಾನುಬಂಧಾ - ಪುಚ್ಛದಿಂದೊಡಗೂಡಿದ, ಉತ್ತರಾಂತಾತ್ - ಉತ್ತರದಿಕ್ಕಿನ ತುದಿಯಿಂದ, ವಿನಿಸ್ಸೃತಾ - ಹೊರಟುಬಂದು, ನಿಪತಂತೀ - ಬೀಳುತ್ತಿರುವ, ಉಲ್ಕಾ - ಕೊಳ್ಳಿಯು, ಖೇ - ಅಂತರಿಕ್ಷದಲ್ಲಿ, ಯಥಾ - ಯಾವರೀತಿ, ದೃಶ್ಯತೇ - ಕಾಣುತ್ತದೆಯೋ, ತಥಾ - ಆ ರೀತಿ, ಕಪಿಕುಂಜರಃ - ಕಪಿಶ್ರೇಷ್ಠನಾದ, ಸಚ - ಆ ಆಂಜನೇಯನೂ, ದೃಶ್ಯತೇಹಿ - ಕಾಣಲ್ಪಟ್ಟನಷ್ಟೆ. ॥೭೨॥ ಪತ....ಶಃ - ಹೋಗುತ್ತಿರುವ ಸೂರ್ಯನಿಗೆ ಸದೃಶನಾದ, ವ್ಯಾಯತಃ - ದೀರ್ಘಾಕಾರನಾದ, ಕಪಿಃ -

---

ಸಮಯದಲ್ಲಿ ಮೇಲಕ್ಕೆತ್ತಿದ್ದ ಆತನ ಬಾಲವು ಎತ್ತಿಹಿಡಿದ ಇಂದ್ರಧ್ವಜದಂತೆ ಕಂಗೊಳಿಸುತ್ತಿದ್ದಿತು. ಬೆಳ್ಳನೆಯ ಕೋರೆಹಲ್ಲುಗಳುಳ್ಳ ಆ ಮಾರುತಿಯು, ತನ್ನ ಬಾಲವು ಮೇಲ್ಭಾಗದಲ್ಲಿ ಚಕ್ರಾಕಾರವಾಗಿ ಸುತ್ತಿಕೊಂಡಿರಲು, ಪರಿವೇಷದಿಂದ ಕೂಡಿದ ಸೂರ್ಯನಂತೆ ಕಾಣುತ್ತಿದ್ದನು. ॥ ೬೮–೭೦ ॥ ಆ ಕಪಿಶ್ರೇಷ್ಠನ ಕಂಕುಳಿಂದ ಹೊರಡುತ್ತಿದ್ದ ಗಾಳಿಯು ಮೇಘದಂತೆ ಗರ್ಜಿಸುತ್ತಿದ್ದಿತು. ಬಾಲದಿಂದ ಕೂಡಿ ಉತ್ತರದಿಕ್ಕಿನಿಂದ ಹಾರಿ ಬರುತ್ತಿರುವ ಆತನು, ಬಾಲಚುಕ್ಕೆಯಂತೆ ಕಾಣುತ್ತ ಲಂಕಾನಗರಕ್ಕೆ ಉತ್ಪಾತವನ್ನು ಸೂಚಿಸುತ್ತಿದ್ದನು. ಹೀಗೆ ಆಕಾಶದಲ್ಲಿ ಹಾರುತ್ತಿರುವ, ಸೂರ್ಯಸಮಾನತೇಜಸ್ಕನಾದ ಆ ಮಾರುತಿಯು ನಡುಪಟ್ಟಿಯಿಂದ ಕೂಡಿದ ಮದ್ದಾನೆಯಂತೆ ಕಾಣುತ್ತಿದ್ದನು. ಮೇಲ್ಭಾಗದಲ್ಲಿ ಕಾಣುವ ದೀರ್ಘದೇಹದಿಂದಲೂ, ಸಮುದ್ರೋದಕದಲ್ಲಿ ಕಾಣುವ ಆ ದೇಹದ ಪ್ರತಿಬಿಂಬದಿಂದಲೂ, ಏಕಾ

ಪತತ್ಪತಂಗಸಂಕಾಶೋ ವ್ಯಾಯತ ಶ್ಶುಶುಭೇ ಕಪಿಃ । ಪ್ರವೃದ್ಧಇವ ಮಾತಂಗಃ ಕಕ್ಷ್ಯಯಾ ಬಧ್ಯಮಾನಯಾ ॥ ೭೩ ॥ ಉಪರಿಷ್ಟಾಚ್ಛರೀರೇಣ ಛಾಯಯಾಚಾಽವ ಗಾಢಯಾ । ಸಾಗರೇ ಮಾರುತಾವಿಷ್ಟಾ ನೌರಿವಾಸೀತ್ತದಾ ಕಪಿಃ ॥ ೭೪ ॥ ಯಂ ಯಂ ದೇಶಂ ಸಮುದ್ರಸ್ಯ ಜಗಾಮ ಸ ಮಹಾಕಪಿಃ । ಸ § ಸ ತಸ್ಯೋರುವೇಗೇನ ಸೋನ್ಮಾದಇವ ಲಕ್ಷ್ಯತೇ ॥ ೭೫ ॥ ಸಾಗರಸ್ಯೋರ್ಮಿಜಾಲಾನಾಮುರಸಾ ಶೈಲವ ರ್ಷ್ಮಣಾಂ । ಅಭಿಘ್ನಂಸ್ತು ಮಹಾವೇಗಃ ಪುಪ್ಲುವೇ ಸ ಮಹಾಕಪಿಃ ॥ ೭೬ ॥ ಕಪಿ ವಾತಶ್ಚ ಬಲವಾನ್ ಮೇಘವಾತಶ್ಚ ನಿಸ್ಸೃತಃ । ಸಾಗರಂ ಭೀಮನಿರ್ಘೋಷಂ ಕಂಪ ಯಾಮಾಸತುರ್ಭೃಶಂ ॥೭೭॥ ವಿಕರ್ಷನ್ನೂರ್ಮಿಜಾಲಾನಿ ಬೃಹಂತಿ ಲವಣಾಂಭಸಿ ।

ವಾನರನು, ಬಧ್ಯಮಾನಯಾ-ಕಟ್ಟಿರುವ, ಕಕ್ಷ್ಯಯಾ-ನಡುಕಟ್ಟಿನಿಂದ, ಪ್ರವೃದ್ಧಃ-ವೃದ್ಧಿಯನ್ನೈದಿದ, ಮಾತಂಗಇವ - ಆನೆಯಂತೆ, ಶುಶುಭೇ - ಪ್ರಕಾಶಿಸಿದನು. ॥ ೭೩ ॥ ತದಾ - ಆ ಕಾಲದಲ್ಲಿ, ಕಪಿಃ - ಆಂಜನೇಯನು, ಉಪರಿಷ್ಟಾತ್ - ಮೇಲ್ಭಾಗದಲ್ಲಿರುವ, ಶರೀರೇಣ - ದೇಹದಿಂದಲೂ, ಅವಗಾಢಯಾ-ನೀರಿನಲ್ಲಿಳಿದಿರುವ, ಛಾಯಯಾಚ - ನೆರಳಿನಿಂದಲೂ (ಏಕಾಕಾರವಾಗಿ), ಸಾಗರೇ - ಸಮುದ್ರದಲ್ಲಿ, ಮಾರುತಾವಿಷ್ಟಾ - ವಾಯುವಿನಿಂದ ಪ್ರೇರೇಪಿಸಲ್ಪಟ್ಟ, ನೌರಿವ - ಹಡಗಿನಂತೆ, ಆಸೀತ್ - ಆಯಿತು. ॥ ೭೪ ॥ ಮಹಾಕಪಿಃ - ಮಹಾ ವಾನರನಾದ, ಸಃ - ಆ ಆಂಜನೇಯನು, ಸಮುದ್ರಸ್ಯ - ಕಡಲಿನ, ಯಂಯಂದೇಶಂ - ಯಾವಯಾವ ಪ್ರದೇಶವನ್ನು ಕುರಿತು, ಜಗಾಮ - ಹೋಗುತ್ತಿದ್ದನೋ, ಸಸಃ - ಆ ಆ ಸ್ಥಳವು, ತಸ್ಯ - ಆ ಹನುಮಂತನ, ಊರುವೇಗೇನ - ಊರುವೇಗದಿಂದ, ಸೋನ್ಮಾದಇವ - ಅಪಸ್ಮಾರದಂತೆ, ಲಕ್ಷ್ಯತೇ - ಕಾಣಲ್ಪಡುತ್ತಿದ್ದಿತು. ॥ ೭೫ ॥ ಮಹಾವೇಗಃ - ಮಹಾ ವೇಗವುಳ್ಳ, ಸಮಹಾಕಪಿಃ - ಆ ಆಂಜನೇಯನು, ಶೈಲವರ್ಷ್ಮಣಾಂ - ಪರ್ವತದ ಪ್ರಮಾಣವುಳ್ಳ, ಸಾಗರಸ್ಯ - ಸಮುದ್ರದ, ಊರ್ಮಿಜಾಲಾನಾಂ - ತೆರೆಗಳ ಗುಂಪುಗಳನ್ನು, ಉರಸಾ - ವಕ್ಷಸ್ಥಳದಿಂದ, ಅಭಿಘ್ನನ್-ಹೊಡಿಯುತ್ತಿರುವನಾಗಿ, ಪುಪ್ಲುವೇ - ಹಾರಿದನು. ॥೭೬॥ ಬಲವಾನ್-ಬಲವತ್ತರವಾದ, ಕಪಿವಾತಶ್ಚ-ವಾನರವೇಗದಿಂದ ಹುಟ್ಟಿದ, ವಾತಶ್ಚ-ವಾಯುವು, ನಿಸ್ಸೃತಃ-ಹೊರಟುಬರುತ್ತಿರುವ, ಮೇಘವಾತಶ್ಚ-ಮೇಘವಾಯುವೂ, ಭೀಮನಿರ್ಘೋಷಂ-ಭಯಂಕರವಾದ ಗರ್ಜನೆಯುಳ್ಳ, ಸಾಗರಂ-ಸಮುದ್ರವನ್ನು, ಭೃಶಂ - ಅತ್ಯಂತವಾಗಿ, ಕಂಪಯಾಮಾಸತುಃ - ನಡಗುವಂತೆ ಮಾಡಿದವು. ॥೭೭॥ ಕಪಿಶಾರ್ದೂಲಃ-

---

ಕಾರದಿಂದ ಕಾಣುತ್ತಿದ್ದ ಆ ಕಪಿಶ್ರೇಷ್ಠನು ಸಮುದ್ರದಲ್ಲಿ ಗಾಳಿಯಿಂದ ಸೆಳೆಯಲಾಗುವ ಹಡಗಿನಂತೆ ಶೋಭಿಸುತ್ತಿದ್ದನು. ಆತನು ಸಮುದ್ರದ ಯಾವ ಯಾವ ಪ್ರದೇಶದಲ್ಲಿ ಸಂಚರಿಸುತ್ತಿದ್ದನೋ ಆ ಆ ಪ್ರದೇಶಗಳಲೆಲ್ಲವೂ ಆತನ ಊರುವೇಗದಿಂದುಂಟಾದ ವಾತವೇಗದಿಂದ ಭ್ರಮಿಸಿ ಅಪಸ್ಮಾರಾವಸ್ಥೆಯನ್ನು ಹೊಂದಿದಂತೆ ಕಾಣುತ್ತಿದ್ದಿತು. ಹೀಗೆ ಮಹಾ ವೇಗ ಶಾಲಿಯೂ, ಮಹಾತ್ಮನೂ ಆದ ಆ ಕಪಿವೀರನು ತನ್ನೆದೆಯಿಂದ ಸಾಗರದ ತರಂಗಗಳನ್ನು ಔಕುತ್ತ ಹಾರುತ್ತಿದ್ದನು. ॥ ೭೧–೭೬ ॥ ಆತನ ಗಮನವೇಗದಿಂದುಂಟಾದ ಗಾಳಿಯೂ, ಮೇಘಗಳ ಚಲನೆಯಿಂದುಂಟಾದ ಗಾಳಿಯೂ ಒಂದುಗೂಡಿ ಮಹಾ ಭಯಂಕರ ಧ್ವನಿಯುಂಟಾಗುವಂತೆ ಆ ಸಮುದ್ರೋದಕವನ್ನು ಉಲ್ಲೋಲ ಕಲ್ಲೋಲ ಮಾಡಿದವು. ಆ ಕಪಿ

---

§ "ತುತಸ್ಯಾಂಗ" ಇ. ಪಾ.

ಪುಪ್ಲುವೇ ಕಪಿಶಾರ್ದೂಲೋ ವಿಕಿರನ್ನಿವ ರೋದಸೀ ॥೭೮॥ ಮೇರುಮಂದರಸಂಕಾಶಾ ನುತ್ಥಿತಾನ್ ಸ ಮಹಾರ್ಣವೇ । ಅತಿಕ್ರಾಮನ್ಮಹಾವೇಗ ಸ್ತರಂಗಾನ್ ಗಣಯನ್ನಿವ ॥ ೭೯ ॥ ತಸ್ಯ ವೇಗಸಮುದ್ಧೂಷ್ಟಂ ಜಲಂ ಸಜಲದಂ ಯಥಾ । ಅಂಬರಸ್ಥಂ ವಿಬ ಭ್ರಾಜ ಶಾರದಾಭ್ರಮಿವಾತತಂ ॥ ೮೦ ॥ ತಿಮಿನಕ್ರಝಷಾಃ ಕೂರ್ಮಾ ದೃಶ್ಯಂತೇ ವಿವೃತಾಸ್ತದಾ । ವಸ್ತ್ರಾಪಕರ್ಷಣೇನೇವ ಶರೀರಾಣಿ ಶರೀರಿಣಾಂ ॥ ೮೧ ॥ § ಪ್ಲವ ಮಾನಂ ಸಮೀಕ್ಷ್ಯಾಥ ಭುಜಂಗಾ ಸ್ಸಾಗರಾಲಯಾಃ । ವ್ಯೋಮ್ನಿ ತಂ ಕಪಿ

ವಾನರಶ್ರೇಷ್ಠನಾದ ಆಂಜನೇಯನು, ಲವಣಾಂಭಸಿ - ಲವಣಸಮುದ್ರದಲ್ಲಿ, ಬೃಹಂತಿ - ದೊಡ್ಡದಾದ, ಊರ್ಮಿಜಾಲಾನಿ-ತರಂಗಸಮೂಹಗಳನ್ನು, ವಿಕರ್ಷನ್-ಸೆಳೆಯುವವನಾಗಿ, ರೋದಸೀ-ಭೂಮ್ಯಂತರಿಕ್ಷ ಗಳಲ್ಲಿ, ವಿಕಿರನ್ನಿವ - ಎರಚುವವನಂತೆ, ಪುಪ್ಲುವೇ - ಹಾರಿದನು. ॥೭೮॥ ಸಃ - ಆ ವಾಯುಪುತ್ರನು, ಮೇರು....ಶಾನ್-ಮೇರುಪರ್ವತಕ್ಕೂ, ಮಂದರಪರ್ವತಕ್ಕೂ ಸಮಾನಗಳಾದ, ಮಹಾರ್ಣವೇ-ಮಹಾ ಸಮುದ್ರದಲ್ಲಿ, ಉತ್ಥಿತಾನ್ - ಹುಟ್ಟಿದ, ತರಂಗಾನ್ - ತೆರೆಗಳನ್ನು, ಗಣಯನ್ನಿವ - ಎಣಿಸುವವನಂತೆ, ಮಹಾವೇಗಃ - ಬಹು ವೇಗವುಳ್ಳವನಾಗಿ, ಅತಿಕ್ರಾಮತ್ - ಅತಿಕ್ರಮಿಸಿಹೋದನು. ॥ ೭೯ ॥ ತದಾ - ಆ ಕಾಲದಲ್ಲಿ, ತಸ್ಯ - ಆ ಆಂಜನೇಯನ, ವೇ....ಗಸ್ಟಂ - ವೇಗದಿಂದ ಹಾರಿಸಲ್ಪಟ್ಟುದಾದುದ ರಿಂದಲೆ, ಅಂಬರಸ್ಥಂ - ಅಂತರಿಕ್ಷದಲ್ಲಿರುವ, ಸಜಲದಂ - ಮೇಘದಿಂದೊಡಗೂಡಿದ, ಜಲಂ - ಉದಕವು, ಆತತಂ - ವಿಸ್ತಾರವಾದ, ಶಾರದಾಭ್ರಮಿವ - ಶರತ್ಕಾಲದ ಮೇಘದಂತೆ, ವಿಬಭ್ರಾಜ - ಪ್ರಕಾಶಿಸಿತು. ॥ ೮೦ ॥ ತದಾ - ಆ ಸಮಯದಲ್ಲಿ, ತಿಮಿ....ಷಾಃ - ಉದ್ಭವಾದ ಮೀನುಗಳು, ಮೊಸಳೆ ಗಳೂ, ಮೀನುಗಳೂ, ಕೂರ್ಮಾಃ - ಆಮೆಗಳೂ, ವಸ್ತ್ರಾ....ನ - ಬಟ್ಟೆಗಳು ಸೆಳೆಯುವದ ರಿಂದ, ಶರೀರಿಣಾಂ - ದೇಹಿಗಳ, ಶರೀರಾಣೀವ - ಅವಯವಗಳಂತೆ, ವಿವೃತಾಃ - ಸ್ಪಷ್ಟವಾಗಿ, ದೃಶ್ಯಂತೇ - ಕಾಣಲ್ಪಡುತ್ತಿದ್ದವು. ॥೮೧॥ ಅಥ - ಅನಂತರದಲ್ಲಿ, ಸಾಗರಾಲಯಾಃ - ಸಮುದ್ರವೇ ವಾಸಸ್ಥಾನವಾಗಿವುಳ್ಳ, ಭುಜಂಗಾಃ - ಹಾವುಗಳು, ವ್ಯೋಮ್ನಿ - ಅಂತರಿಕ್ಷದಲ್ಲಿ, ಪ್ಲವಮಾನಂ - ಹಾರುತ್ತಿರುವ, ಕಪಿಶಾರ್ದೂಲಂ - ಕಪಿಶ್ರೇಷ್ಠನಾದ, ತಂ - ಆ ಹನುಮಂತನನ್ನು, ಸಮೀಕ್ಷ್ಯ -

---

ಸಾರ್ವಭೌಮನು ಆ ಲವಣಸಮುದ್ರದಲ್ಲಿ ಮಹೋನ್ನತಗಳಾಗಿರುವ ತರಂಗ ಸಮೂಹ ಗಳನ್ನು ಸೆಳೆದು ಭೂಮ್ಯಂತರಿಕ್ಷಗಳಿಗೆಲ್ಲಾ ಚಿಮ್ಮುತ್ತ ಹೊರಟನು. ಮಹಾ ವೇಗಶಾಲಿ ಯಾದ ಆತನು ವಿಸ್ತಾರವಾದ ಆ ಸಮುದ್ರದಲ್ಲಿ ಮೇರುಮಂದರ ಪರ್ವತಗಳಿಗೆ ಸಮಾನ ಗಳಾಗಿರುವ ಅಲೆಗಳನ್ನು ಒಂದೊಂದಾಗಿ ಲೆಕ್ಕಮಾಡುವವನಂತೆ ಅವುಗಳೆಲ್ಲವನ್ನೂ ಅತಿ ಕ್ರಮಿಸಿ ಹೋಗುತ್ತಿದ್ದನು. ಆತನ ಊರುವೇಗದಿಂದ ಹಾರಿದ ಜಲವು ಮೇಘಮಂಡಲದ ವರೆಗೂ ವ್ಯಾಪಿಸಿ ವಿಶಾಲಾಕಾಶದಲ್ಲಿ ಶರತ್ಕಾಲದ ಮೇಘದಂತೆ ಶೋಭಿಸುತ್ತಿದ್ದಿತು. ಆ ಸಮಯದಲ್ಲಿ ತಿಮಿತಿಮಿಂಗಿಲಗಳೇ ಮೊದಲಾದ ದೊಡ್ಡದೊಡ್ಡ ಜಲಜಂತುಗಳು, ವಸ್ತ್ರಾಪ ಕರ್ಷಣದಿಂದ ವ್ಯಕ್ತವಾದ ಮನುಷ್ಯರ ಅವಯವಗಳಂತೆ ಕಾಣುತ್ತಿದ್ದವು. ॥ ೭೭–೮೧ ॥ ಸಮುದ್ರದಲ್ಲಿ ವಾಸಮಾಡಿಕೊಂಡಿದ್ದ ಮಹಾ ಸರ್ಪಗಳೆಲ್ಲವೂ ಗಗನದಲ್ಲಿ ಹಾರುತ್ತಿದ್ದ ಆ ಹನುಮಂತನನ್ನು ಗರುಡನೆಂದು ಭಾವಿಸಿದವು. ಆ ಸಮಯದಲ್ಲಿ, ಆ ಕಪಿಶ್ರೇಷ್ಠನ

---

§ "ಕ್ರಮಮಾಣಂ" ತಿ. ಪಾ.

ಶಾರ್ದೂಲಂ ಸುಪರ್ಣ ಇತಿ ಮೇನಿರೇ ॥೮೨॥ ¶ ದಶಯೋಜನವಿಸ್ತೀರ್ಣಾ ತ್ರಿಂಶದ್ಯೋಜನಮಾಯತಾ । ಛಾಯಾ ವಾನರಸಿಂಹಸ್ಯ ಜಲೇ ಚಾರುತರಾ ಭವತ್ ॥ ೮೩ ॥ ಶ್ವೇತಾಭ್ರಘನರಾಜೀವ ವಾಯುಪುತ್ರಾನುಗಾಮಿನೀ । ತಸ್ಯ ಸಾ ಶುಶುಭೇ ಛಾಯಾ ವಿತತಾ ಲವಣಾಂಭಸಿ ॥ ೮೪ ॥ ಶುಶುಭೇ ಸಮಹಾತೇಜಾ ಮಹಾಕಾಯೋ ಮಹಾಕಪಿಃ । ವಾಯುಮಾರ್ಗೇ ನಿರಾಲಂಬೇ ಪಕ್ಷವಾನಿವ ಪರ್ವತಃ ॥೮೫॥ ಯೇನಾಽಸೌ ಯಾತಿ ಬಲವಾನ್ ವೇಗೇನ ಕಪಿಕುಂಜರಃ । ತೇನ ಮಾರ್ಗೇಣ ಸಹಸಾ ದ್ರೋಣೀಕೃತ

ನೋಡಿ, ಸುಪರ್ಣ ಇತಿ - ಗರುಡನೆಂದು, ಮೇನಿರೇ - ತಿಳಿದವು. ॥ ೮೨ ॥ ದಶ....ರ್ಣಾ - ಹತ್ತುಗಾವುದ ಅಗಲವುಳ್ಳ, ತ್ರಿಂಶದ್ಯೋಜನಂ - ಮೂವತ್ತುಗಾವುದ, ಆಯತಾ - ದೀರ್ಘವಾದ, ವಾನರಸಿಂಹಸ್ಯ-ಕಪಿಶ್ರೇಷ್ಠನಾದ ಹನುಮಂತನ, ಛಾಯಾ-ನೆರಳು, ಜಲೇ-ನೀರಿನಲ್ಲಿ, ಚಾರುತರಾ-ಅತ್ಯಂತ ರಮಣೀಯವಾದುದಾಗಿ, ಅಭವತ್-ಆಯಿತು. ॥೮೩॥ ಲವಣಾಂಭಸಿ-ಲವಣಸಮುದ್ರದಲ್ಲಿ, ವಿತತಾ - ವಿಸ್ತಾರವಾದ, ತಸ್ಯ - ಆ ಆಂಜನೇಯನ, ಸಾ - ಆ, ಛಾಯಾ - ನೆರಳು, ವಾಯು....ನೀ-ಹನುಮಂತನನ್ನು ಅನುಸರಿಸಿ ಹೋಗುತ್ತ, ಶ್ವೇತಾ....ವ - ನಿರ್ಮಲವಾದ ಮೇಘಗಳ ಸಾಂದ್ರವಾದ ಪಂಙ್ತಿಯಂತೆ, ಶುಶುಭೇ - ಪ್ರಕಾಶಿಸಿತು. ॥ ೮೪ ॥ ಮಹಾತೇಜಾಃ - ಮಹಾ ತೇಜಸ್ಸುಳ್ಳ, ಮಹಾಕಾಯಃ - ದೊಡ್ಡಶರೀರವುಳ್ಳ, ಸಮಹಾಕಪಿಃ - ಆ ಆಂಜನೇಯನು, ನಿರಾಲಂಬೇ - ಆಲಂಬವಿಲ್ಲದಿರುವ, ವಾಯುಮಾರ್ಗೇ - ಆಕಾಶಮಾರ್ಗದಲ್ಲಿ, ಪಕ್ಷವಾನ್ - ರೆಕ್ಕೆಗಳುಳ್ಳ, ಪರ್ವತಇವ-ಬೆಟ್ಟದಂತೆ, ಶುಶುಭೇ - ಪ್ರಕಾಶಿಸಿದನು. ॥೮೫॥ ಬಲವಾನ್ - ಬಲವಂತನಾದ, ಕಪಿಕುಂಜರಃ - ಕಪಿಶ್ರೇಷ್ಠನಾದ, ಅಸೌ - ಈ ಆಂಜನೇಯನು, ವೇಗೇನ - ವೇಗದಿಂದ, ಯೇನ - ಯಾವ ಮಾರ್ಗದಿಂದ, ಯಾತಿ - ಹೋಗುತ್ತಾನೆಯೋ, ತೇನಮಾರ್ಗೇಣ - ಆ ದಾರಿಯಿಂದ, ಅರ್ಣವಃ - ಸಮುದ್ರವು, ಸಹಸಾ - ಜಾಗ್ರತೆಯಾಗಿ, ದ್ರೋಣೀಕೃತಇವ - ದೋಣಿಯಹಾಗೆ, ಆಬಭೌ - ಪ್ರಕಾಶಿಸಿತು. ॥ ೮೬ ॥

ನೆರಳು ಹತ್ತುಯೋಜನದಗಲವೂ, ಮೂವತ್ತುಯೋಜನದುದ್ದವೂ ಆಗಿ ಸಮುದ್ರದಮೇಲೆ ಬಹು ಸುಂದರವಾಗಿ ಕಾಣುತ್ತಿದ್ದಿತು. ಆತನನ್ನನುಸರಿಸಿ ಸಮುದ್ರದಲ್ಲಿ ವ್ಯಾಪಿಸಿದ್ದ ಆ ನೆರಳು ನಿರ್ಮಲವಾದ ಮೇಘಮಾಲೆಯಂತೆ ಕಂಗೊಳಿಸುತ್ತಿದ್ದಿತು. ಹೀಗೆ ನಿರಾಧಾರವಾದ ಆಕಾಶಮಾರ್ಗದಲ್ಲಿ ಹೋಗುತ್ತಿರುವವನೂ, ಮಹಾ ಪರಾಕ್ರಮವಂತನೂ, ಮಹಾ ಕಾಯನೂ ಆದ ಆ ಕಪಿನಾಥನು ರೆಕ್ಕೆಗಳೊಡಗೂಡಿದ ದೊಡ್ಡ ಪರ್ವತದಂತೆ ಕಾಣುತ್ತಿದ್ದನು. ಮಹಾ ಬಲಶಾಲಿಯಾದ ಆತನು ಆಕಾಶದಲ್ಲಿ ಹಾರಿಹೋಗುತ್ತಿದ್ದ ಪ್ರದೇಶಗಳಲ್ಲೆಲ್ಲಾ, ಅಲ್ಲಲ್ಲಿ ಸಮುದ್ರವೂ ಒಂದು ಉದ್ದವಾದ ದೋಣಿಯಂತೆ ಕಾಣುತ್ತಿದ್ದಿತು.

¶ ಇಲ್ಲಿ "ಛಾಯಾ" ಶಬ್ದಕ್ಕೆ ನೆರಳೆಂದೇ ಅರ್ಥಮಾಡಬೇಕು, ಪ್ರತಿಬಿಂಬವೆಂದು ಅರ್ಥಮಾಡಲಾಗದು, ಪ್ರತಿಬಿಂಬವು ಬಿಂಬಕ್ಕೆ ಸಮಾನವಾಗಿರುತ್ತದೆಯಷ್ಟೆ. ಬಿಂಬಭೂತನಾದ ಆಂಜನೇಯನ ಪ್ರಮಾಣವು ಅಷ್ಟಿದ್ದಿತೆಂದರೆ ಆತನು ಮೂರೇ ಅಡಿಗಳಿಂದ ಲಂಕೆಯನ್ನು ಮುಟ್ಟುತ್ತಿದ್ದನು. ಆದುದರಿಂದ ಇದು ಅಸಂಭವ. ಇದರಿಂದ ಮುಂದೆ ಬರುವ ಮೈನಾಕ ಸಂವಾದ, ಸುರಸಾ ಸಂವಾದಗಳಿಗೆ ವೈಯರ್ಥ್ಯ ಬರುತ್ತದೆ. ಇಲ್ಲಿ ಹನುಮಂತನು ಸಮುದ್ರಲಂಘನ ಮಾಡಿದುದು ಪ್ರಾತಃಕಾಲವಾದುದರಿಂದ ಆತನ ನೆರಳು ಆತನಿಗಿಂತಲೂ ಹೆಚ್ಚು ಪ್ರಮಾಣವುಳ್ಳದಾಗಿದ್ದಿತೆಂಬ ವಿಷಯವು ಗ್ರಾಹ್ಯವು. (ಗೋ)

ಇವಾರ್ಣವಃ ||೮೬|| ಆಪಾತೇ ಪಕ್ಷಿಸಂಘಾನಾಂ ಪಕ್ಷಿರಾಜಇವ ವ್ರಜನ್ । ಹನೂಮಾನ್ ಮೇಘಜಾಲಾನಿ ಪ್ರಕರ್ಷನ್ಮಾರುತೋ ಯಥಾ || ೮೭ || ಪಾಂಡುರಾರುಣವರ್ಣಾನಿ ನೀಲಮಾಂಜಿಷ್ಠಕಾನಿಚ । ಕಪಿನಾಕೃಷ್ಯಮಾಣಾನಿ ಮಹಾಭ್ರಾಣಿ ಚಕಾಶಿರೇ || ೮೮ || ಪ್ರವಿಶನ್ನಭ್ರಜಾಲಾನಿ ನಿಷ್ಪತಂಶ್ಚ ಪುನಃ ಪುನಃ । ಪ್ರಚ್ಛನ್ನಶ್ಚ ಪ್ರಕಾಶಶ್ಚ ಚಂದ್ರಮಾ ಇವ ಲಕ್ಷ್ಯತೇ || ೮೯ || ಪ್ಲವಮಾನಂತು ತಂ ದೃಷ್ಟ್ವಾ ಪ್ಲವಂಗಂ ತ್ವರಿತಂ ತದಾ । ವವರ್ಷುಃ ಪುಷ್ಪವರ್ಷಾಣಿ ದೇವಗಂಧರ್ವದಾನವಾಃ || ೯೦ || ತತಾಪ ನಹಿ ತಂ ಸೂರ್ಯಃ ಪ್ಲವಂತಂ ವಾನರೋತ್ತಮಂ । ಸಿಷೇವೇಚ ತದಾ ವಾಯೂ ರಾಮ

ಪಕ್ಷಿಸಂಘಾನಾಂ - ಪಕ್ಷಿಸಮೂಹಗಳ, ಆಪಾತೇ - ಮಾರ್ಗದಲ್ಲಿ, ಪಕ್ಷಿರಾಜಇವ - ಗರುಡನಂತೆ, ವ್ರಜನ್ - ಹೋಗುತ್ತಿರುವ, ಹನೂಮಾನ್ - ಆಂಜನೇಯನು, ಮಾರುತೋಯಥಾ - ವಾಯುವಿನಂತೆ, ಮೇಘಜಾಲಾನಿ - ಮೇಘಸಮೂಹಗಳನ್ನು, ಪ್ರಕರ್ಷನ್ - ಸೆಳೆಯುತ್ತಿರುವವನು, (ಆಸೀತ್ - ಆದನು.) || ೮೭ || ಪಾಂಡು....ನಿ - ಬಿಳುಪು, ಕೆಂಪು ಬಣ್ಣಗಳುಳ್ಳ, ನೀಲ....ನಿ - ಕಪ್ಪು, ಹಸುರು ಬಣ್ಣಗಳುಳ್ಳ, ಕಪಿನಾ-ಆಂಜನೇಯನಿಂದ, ಆಕೃಷ್ಯಮಾಣಾನಿ-ಸೆಳೆಯಲ್ಪಡುತ್ತಿರುವ, ಮಹಾಭ್ರಾಣಿ-ದೊಡ್ಡ ಮೋಡಗಳು, ಚಕಾಶಿರೇ - ಪ್ರಕಾಶಿಸಿದವು. ||೮೮|| ಅಭ್ರಜಾಲಾನಿ - ಮೇಘಸಮೂಹಗಳನ್ನು, ಪ್ರವಿಶನ್ - ಪ್ರವೇಶಿಸುತ್ತಿರುವವನಾಗಿ, ಪುನಃಪುನಃ - ಬಾರಿಬಾರಿಗೂ, ನಿಷ್ಪತಂಶ್ಚ - ಹೊರಗೂ ಬರುತ್ತಿರುವ, (ಆಂಜನೇಯನು) ಪ್ರಚ್ಛನ್ನಶ್ಚ - ಮರೆಯಾಗಿಯೂ, ಪ್ರಕಾಶಶ್ಚ - ಕಾಣುತ್ತಲೂ ಇರುವ, ಚಂದ್ರಮಾಇವ - ಚಂದ್ರನಂತೆ, ಲಕ್ಷ್ಯತೇ - ಕಾಣಲ್ಪಟ್ಟನು. || ೮೯ || ಕಿಂತು - ಅಲ್ಲದೆ, ತದಾ - ಆ ಕಾಲದಲ್ಲಿ, ದೇವ....ವಾಃ - ದೇವ ಗಂಧರ್ವ ರಾಕ್ಷಸರು, ತ್ವರಿತಂ - ಜಾಗ್ರತೆಯಾಗಿ, ಪ್ಲವಮಾನಂ-ಹಾರುತ್ತಿರುವ, ತಂಪ್ಲವಗಂ - ಆ ಆಂಜನೇಯನನ್ನು, ದೃಷ್ಟ್ವಾ - ನೋಡಿ, ಪುಷ್ಪವರ್ಷಾಣಿ - ಹೂ ಮಳೆಗಳನ್ನು, ವವರ್ಷುಃ - ಸುರಿಸಿದರು. || ೯೦ || ತದಾ - ಆ ಸಮಯದಲ್ಲಿ, ಸೂರ್ಯಃ - ಸೂರ್ಯನು, ಪ್ಲವಂತಂ - ಹಾರುತ್ತಿರುವ, ಹಿತಂ - ರಾಮನಿಗೆ ಹಿತನಾದ, ತಂವಾನರೋತ್ತಮಂ - ಆ ವಾನರಶ್ರೇಷ್ಠನನ್ನು, ನತತಾಪ - ತಪಿಸಲಿಲ್ಲ, ವಾಯುಶ್ಚ - ವಾಯುವೂ, ರಾಮ....ಯೇ -

---

||೮೭-೮೬|| ಅಂತರಿಕ್ಷದಲ್ಲಿ ಪಕ್ಷಿರಾಜನಂತೆ ಹಾರುತ್ತಿರುವ ಆತನು ವಾಯುವಿನಂತೆ ಮೇಘಸಮೂಹಗಳನ್ನು ಸೆಳೆಯುತ್ತಿದ್ದನು. ಹೀಗೆ ಸೆಳೆಯಲಾದ ಆ ಮೇಘಸಮೂಹಗಳು, ಬಿಳುಪು, ಕೆಂಪು, ನೀಲಿ, ಹಳದಿ ಬಣ್ಣಗಳಿಂದ ಪ್ರಕಾಶಿಸುತ್ತಿದ್ದವು. ಕೆಲವುವೇಳೆ ಮೇಘಗಳಿಂದ ಆಚ್ಛಾದಿತನಾಗುತ್ತಲೂ, ಕೆಲವುವೇಳೆ ಪ್ರಕಾಶವಾಗಿ ಕಾಣುತ್ತಲೂ ಇದ್ದುದರಿಂದ, ಆ ಕಪಿವೀರನು ಮೇಘಾವೃತನೂ, ಮೇಘರಹಿತನೂ ಆದ ಚಂದ್ರಮನಂತೆ ಕಂಗೊಳಿಸುತ್ತಿದ್ದನು. ಈ ರೀತಿ ಮಹಾ ವೇಗದಿಂದ ಸಮುದ್ರೋಲ್ಲಂಘನ ಮಾಡುತ್ತಿದ್ದ ಆತನನ್ನು ನೋಡಿ, ದೇವ ದಾನವ ಗಂಧರ್ವರೆಲ್ಲರೂ ಆನಂದಭರಿತರಾಗಿ ಪುಷ್ಪವೃಷ್ಟಿಯನ್ನು ಸುರಿಸಿದರು. ಸೀತಾನ್ವೇಷಣಕ್ಕಾಗಿಯೂ, ಶ್ರೀರಾಮನ ಕಾರ್ಯಕ್ಕಾಗಿಯೂ ಸಮುದ್ರವನ್ನು ದಾಟುತ್ತಿರುವ ಆತನನ್ನು ನೋಡಿ ಸೂರ್ಯನೂ ಸಹ ಆತನಿಗೆ ಮೇಲನ್ನುಂಟುಮಾಡುವವನಾಗಿ ತೀಕ್ಷ್ಣವಾಗಿ ತಪಿಸಲಿಲ್ಲವು. ವಾಯುದೇವನೂ ಸಹ ರಾಮಕಾರ್ಯಾರ್ಥಿಯಾಗಿ ಲಂಕಾನಗರಕ್ಕೆ ಹೋಗುತ್ತಿರುವ ತನ್ನ ಕುಮಾರನಾದ ಆಂಜನೇಯನ ಶ್ರಮವನ್ನು ಹೋಗಲಾಡಿಸಲೋಸುಗ ಹಿತವಾಗಿ

ಕಾರ್ಯಾರ್ಥಸಿದ್ಧಯೇ ॥ ೯೧ ॥ ಋಷಯಸ್ತುಷ್ಟುವುಶ್ಚೈನಂ ಪ್ಲವಮಾನಂ ವಿಹಾಯಸಾ । ಜಗುಶ್ಚ ದೇವಗಂಧರ್ವಾಃ ಪ್ರಶಂಸಂತೋ ‡ ಮಹೌಜಸಂ ॥ ೯೨ ॥ ನಾಗಾಶ್ಚ ತುಷ್ಟುವುರ್ಯಕ್ಷಾ ರಕ್ಷಾಂಸಿ * ವಿಬುಧಾಃ ಖಗಾಃ । ಪ್ರೇಕ್ಷ್ಯ ಸರ್ವೇ ಕಪಿವರಂ ಸಹಸಾ ವಿಗತಕ್ಲಮಂ ॥ ೯೩ ॥ ತಸ್ಮಿನ್ ಪ್ಲವಗಶಾರ್ದೂಲೇ ಪ್ಲವಮಾನೇ ಹನೂಮತಿ । ಇಕ್ಷ್ವಾಕುಕುಲಮಾನಾರ್ಥೀ ಚಿಂತಯಾಮಾಸ ಸಾಗರಃ ॥ ೯೪ ॥ "ಸಾಹಾಯ್ಯಂ ವಾನರೇಂದ್ರಸ್ಯ ಯದಿ ನಾಹಂ ಹನೂಮತಃ । ಕರಿಷ್ಯಾಮಿ ಭವಿಷ್ಯಾಮಿ ಸರ್ವವಾಚ್ಯೋ ವಿವಕ್ಷತಾಂ ॥ ೯೫ ॥ ಅಹಮಿಕ್ಷ್ವಾಕುನಾಥೇನ ¶ ಸಗರೇಣ

ರಾಮಕಾರ್ಯದ ಸಿದ್ಧಿಗೋಸ್ಕರ, ಸಿಷೇವೇ - ಸೇವಿಸಿದನು, ಋಷಯಶ್ಚ - ಮುನಿಗಳೂ, ವಿಹಾಯಸಾ - ಅಂತರಿಕ್ಷದಲ್ಲಿ, ಪ್ಲವಮಾನಂ - ಹಾರುತ್ತಿರುವ, ಏನಂ - ಈತನನ್ನು, ತುಷ್ಟುವುಃ - ಸ್ತೋತ್ರಮಾಡಿದರು. ॥೯೧-೯೨॥ ದೇವ....ಶ್ಚ ದೇವಗಾಯಕರೂಸಹ, ಮಹೌಜಸಂ-ಮಹತ್ತರವಾದ ತೇಜಸ್ಸುಳ್ಳ ಆಂಜನೇಯನನ್ನು, ಪ್ರಶಂಸಂತಃ-ಸ್ತೋತ್ರಮಾಡುವವರಾಗಿ, ಜಗುಃ-ಗಾನಮಾಡಿದರು. ನಾಗಾಃ - ಸರ್ಪಗಳು, ಯಕ್ಷಾಃ - ಸರ್ಪಗಳು, ರಕ್ಷಾಂಸಿ - ರಕ್ಕಸರು, ವಿಬುಧಾಃ - ದೇವತೆಗಳು, ಖಗಾಶ್ಚ - ಹಕ್ಕಿಗಳೂ ಸಹ, ತುಷ್ಟುವುಃ - ಸ್ತುತಿಸಿದವು, ಸರ್ವೇ - ಸಮಸ್ತರೂ, ಸಹಸಾ - ಜಾಗ್ರತೆಯಾಗಿ, ವಿಗತಕ್ಲಮಂ - ಕಳೆದ ಬಳಲಿಕೆಯುಳ್ಳ, ಕಪಿವರಂ - ಕಪಿಶ್ರೇಷ್ಠನನ್ನು, ಪ್ರೇಕ್ಷ್ಯ - ನೋಡಿ, ತುಷ್ಟುವುಃ - ಸ್ತುತಿಸಿದರು. ॥ ೯೩ ॥ ಪ್ಲವ....ಲೇ - ವಾನರಶ್ರೇಷ್ಠನಾದ, ತಸ್ಮಿನ್‌ಹನೂಮತಿ - ಆ ಹನುಮಂತನು, ಪ್ಲವಮಾನೇ - ಹಾರುತ್ತಿರಲು, ಸಾಗರಃ - ಸಮುದ್ರನು, ಇಕ್ಷ್ವಾ....ರ್ಥೀ - ಇಕ್ಷ್ವಾಕುರಾಯನ ವಂಶದಿಂದ ಬಹುಮಾನವನ್ನು ಯಾಚಿಸುವವನಾಗಿ, ಚಿಂತಯಾಮಾಸ-ಆಲೋಚಿಸಿದನು. ॥ ೯೪ ॥ ವಾನರೇಂದ್ರಸ್ಯ - ವಾನರವರನಾದ, ಹನೂಮತಃ - ಹನುಮಂತನಿಗೆ, ಸಾಹಾಯ್ಯಂ - ಸಹಾಯವನ್ನು, ನಕರಿಷ್ಯಾಮಿಯದಿ-ಮಾಡದಿದ್ದರೆ, ವಿವಕ್ಷತಾಂ-ಆಡಿಕೊಳ್ಳುವವರಿಗೆ, ಸರ್ವವಾಚ್ಯಃ-ಸರ್ವನಿಂದಾವಿಷಯನು, ಭವಿಷ್ಯಾಮಿ - ಆಗುವೆನು. ॥೯೫॥ ಅಹಂ - ನಾನು, ಇಕ್ಷ್ವಾಕುನಾಥೇನ - ಇಕ್ಷ್ವಾಕುವಂಶದರಸನಾದ, ಸಗರೇಣ-ಸಗರಚಕ್ರವರ್ತಿಯಿಂದ, ವಿವರ್ಧಿತಃ-ವೃದ್ಧಿಗೊಳಿಸಲ್ಪಟ್ಟೆನು,

---

ಬೀಸುತ್ತ ಆತನನ್ನು ಸೇವಿಸುತ್ತಿದ್ದನು. ಋಷಿಗಳೆಲ್ಲರೂ ಗಗನಮಾರ್ಗದಲ್ಲಿ ಹೋಗುತ್ತಿದ್ದ ಆತನನ್ನು ಹೊಗಳಿ ಸಂತೋಷಗೊಳಿಸುತ್ತಿದ್ದರು. ದೇವಗಂಧರ್ವರೂ ಮಹಾ ತೇಜಸ್ವಿಯಾದ ಆತನ ಗುಣಗಾನವನ್ನು ಮಾಡಿದರು. ನಾಗರೂ, ಯಕ್ಷರೂ, ರಕ್ಷಸ್ಸುಗಳೂ, ಇತರ ದೇವತೆಗಳೂ, ಪಕ್ಷಿಗಳೂ ಸಹ, ಯಾವ ಆಯಾಸವೂ ಇಲ್ಲದೆ ಸಮುದ್ರವನ್ನು ದಾಟುತ್ತಿರುವ ಆತನನ್ನು ನೋಡಿ ಒಮ್ಮನದಿಂದ ಸ್ತುತಿಸಿದರು. ॥ ೮೭–೯೩ ॥ ವಾನರೋತ್ತಮನಾದ ಆ ಹನುಮಂತನು ಈ ರೀತಿ ಗಗನದಲ್ಲಿ ಹಾರುತ್ತಿರಲು, ಸಮುದ್ರರಾಜನು ತನಗೆ ಜನ್ಮವನ್ನಿತ್ತ ಇಕ್ಷ್ವಾಕು ಕುಲವನ್ನು ಸನ್ಮಾನಿಸಲೋಸುಗ, ಆ ಕುಲದ ಅಭಿವೃದ್ಧಿಯನ್ನು ಬಯಸಿ ಹೀಗೆ ಚಿಂತಿಸಿದನು. "ಈಗ ನಾನು ವಾನರಶ್ರೇಷ್ಠನಾದ ಈ ಹನುಮಂತನಿಗೆ ಸಹಾಯ ಮಾಡದಿದ್ದಲ್ಲಿ ಲೋಕದಲ್ಲಿ ಎಲ್ಲರ ಬಾಯಿಗೂ ಬಿದ್ದು ಅಪಕೀರ್ತಿಗೀಡಾಗುವೆನು. ಪೂರ್ವದಲ್ಲಿ

---

‡ "ವನೌಕಸಂ" ತಿ. ಪಾ. * "ವಿವಿಧಾನಿಚ" ತಿ. ಪಾ.

¶ "ಸಾಗರೇಣ" ಎಂದು ಪಾಠಾಂತರ. ಭಗೀರಥನಿಂದ ಎಂದು ಅರ್ಥ.

ವಿವರ್ಧಿತಃ । ಇಕ್ಷ್ವಾಕುಸಚಿವಶ್ಚಾಽಯಂ ❀ ನಾವಸೀದಿತುಮರ್ಹತಿ ॥ ೯೬ ॥ ತಥಾ ಮಯಾ ವಿಧಾತವ್ಯಂ ವಿಶ್ರಮೇತ ಯಥಾಕಪಿಃ । ಶೇಷಂಚ ಮಯಿ ವಿಶ್ರಾಂತ ಸ್ಸುಖೇ ನಾತಿಪತಿಷ್ಯತಿ" ॥ ೯೭ ॥ ಇತಿ ಕೃತ್ವಾ ಮತಿಂ ಸಾಧ್ವೀಂ ಸಮುದ್ರ ಶ್ಛನ್ನಮಂಭಸಿ । ಹಿರಣ್ಯನಾಭಂ ಮೈನಾಕ ಮುವಾಚ ಗಿರಿಸತ್ತಮಂ ॥೯೮॥ "ತ್ವಮಿಹಾಸುರಸಂಘಾನಾಂ ಪಾತಾಳತಲವಾಸಿನಾಂ । ದೇವರಾಜ್ಞಾ ಗಿರಿಶ್ರೇಷ್ಠ! ಪರಿಘ ಸ್ಸನ್ನಿವೇಶಿತಃ ॥ ೯೯ ॥ ತ್ವಮೇಷಾಂ ಜಾತವೀರ್ಯಾಣಾಂ ಪುನರೇವೋತ್ಪತಿಷ್ಯತಾಂ । ಪಾತಾಳಸ್ಯಾಽಪ್ರಮೇ

ಇಕ್ಷ್ವಾಕುಸಚಿವಃ - ಇಕ್ಷ್ವಾಕುವಂಶಸ್ಥನಾದ ಶ್ರೀರಾಮನಿಗೆ ಮಂತ್ರಿಯಾದ, ಅಯಂಚ - ಈ ಹನುಮಂತನು, ಅವಸೀದಿತುಂ - ಆಯಾಸಹೊಂದಲು, ನಾರ್ಹತಿ - ಯೋಗ್ಯನಲ್ಲ. ॥ ೯೬ ॥ ಕಪಿಃ - ಆಂಜನೇಯನು, ಯಥಾ - ಹೇಗೆ, ವಿಶ್ರಮೇತ - ವಿಶ್ರಮಿಸುವನೋ, ಮಯಿ - ನನ್ನಲ್ಲಿ, ವಿಶ್ರಾಂತಃ - ವಿಶ್ರಮಿಸಿಕೊಂಡು, ಸುಖೇನ - ಸುಖದಿಂದ, ಶೇಷಂ - ಮಿಕ್ಕ ದಾರಿಯನು, ಅತಿಪತಿಷ್ಯತಿ - ಅತಿಕ್ರಮಿಸಿ ಹೋಗುವನೋ, ತಥಾ - ಹಾಗೆ, ಮಯಾ - ನನ್ನಿಂದಾ, ವಿಧಾತವ್ಯಂ - ಮಾಡತಕ್ಕುದು. ॥೯೭॥ ಸಮುದ್ರಃ - ಸಮುದ್ರನು, ಇತಿ - ಹೀಗೆ, ಸಾಧ್ವೀಂ - ಒಳ್ಳೆಯ, ಮತಿಂ - ಬುದ್ಧಿಯನ್ನು, ಕೃತ್ವಾ - ಮಾಡಿ, ಅಂಭಸಿ - ನೀರಿನಲ್ಲಿ, ಛನ್ನಂ - ಮುಳುಗಿರುವ, ಹಿರಣ್ಯನಾಭಂ - ಸುವರ್ಣ ಮಯವಾದ, ಗಿರಿಸತ್ತಮಂ - ಪರ್ವತಶ್ರೇಷ್ಠವಾದ, ಮೈನಾಕಂ - ಮೈನಾಕನನ್ನು ಕುರಿತು, ಉವಾಚ - ಹೇಳಿದನು. ॥ ೯೮ ॥ ಹೇ ಗಿರಿಶ್ರೇಷ್ಠ - ಎಲೈ ಪರ್ವತೋತ್ತಮನೇ, ತ್ವಂ - ನೀನು, ಪಾತಾ....ನಾಂ-ಪಾತಾಳದಲ್ಲಿ ವಾಸಮಾಡಿಕೊಂಡಿರುವ, ಅಸುರಸಂಘಾನಾಂ-ರಾಕ್ಷಸಸಮೂಹಗಳಿಗೆ, ದೇವರಾಜ್ಞಾ - ದೇವೇಂದ್ರನಿಂದ, ಪರಿಘಃ - ಅಗಳೀಮರವಾಗಿ, ಸನ್ನಿವೇಶಿತಃ - ಇರಿಸಲ್ಪಟ್ಟಿರುವೆ. ॥ ೯೯ ॥ ತ್ವಂ-ನೀನು, ಜಾತವೀರ್ಯಾಣಾಂ-ಜನಿಸಿದ ಪರಾಭಿಭವಸಾಮರ್ಥ್ಯವುಳ್ಳ, ಪುನಃ-ಮತ್ತೂ, ಉತ್ಪತಿಷ್ಯತಾಂ - ಹಾರಿಬರುತ್ತಿರುವ, ಏಷಾಮೇವ - ಈ ರಾಕ್ಷಸರಿಗಾಗಿಯೇ, ಅಪ್ರಮೇಯಸ್ಯ - ಅಪರಮಿತವಾದ, ಪಾತಾಳಸ್ಯ - ಪಾತಾಳಲೋಕದ, ದ್ವಾರಂ - ಬಾಗಿಲನ್ನು, ಆವೃತ್ಯ - ತಡೆದು,

---

ನಾನು ಇಕ್ಷ್ವಾಕು ಕುಲದೊಡೆಯನಾದ ಸಗರಚಕ್ರವರ್ತಿಯಿಂದ ವೃದ್ಧಿಯೊಂದಿದೆನು. ಈ ಕಪಿಸತ್ತಮನಾದರೋ ಆ ಕುಲದಲ್ಲಿಯೇ ಜನಿಸಿರುವ ಶ್ರೀರಾಮನ ಮಂತ್ರಿಯು; ಆತನ ಕಾರ್ಯಕ್ಕಾಗಿಯೇ ಶ್ರಮಿಸುತ್ತಿರುವನು; ಆದುದರಿಂದ ಈತನು ಯಾವ ವಿಧ ದಲ್ಲಿಯೂ ಆಯಾಸ ಹೊಂದಬಾರದು. ಈ ಮಹಾತ್ಮನು ಯಾವ ವಿಧದಿಂದಲಾದರೂ ನನ್ನ ಉಪಚಾರದಿಂದ ಸ್ವಲ್ಪಹೊತ್ತು ವಿಶ್ರಮಿಸಿಕೊಂಡು ಆ ಬಳಿಕ ಉಳಿದ ಮಾರ್ಗವನ್ನು ನಿರಾಯಾಸವಾಗಿ ಕಳೆಯುವಂತೆ ಮಾಡಬೇಕು." ಹೀಗೆ ಯೋಚಿಸಿದ ಆ ಸಮುದ್ರರಾಜನು ತನ್ನಲ್ಲಿ ಅಡಗಿರುವ ಸುವರ್ಣ ಶಿಖರಗಳುಳ್ಳ ಮೈನಾಕನೆಂಬ ಪರ್ವತೋತ್ತಮನನ್ನು ಕುರಿತು. ॥ ೯೪–೯೮ ॥ "ಎಲೈ ಪರ್ವತಶ್ರೇಷ್ಠನಾದ ಮೈನಾಕನೇ! ಹಿಂದೆ ದೇವೇಂದ್ರನು ಪಾತಾಳ ಲೋಕದಲ್ಲಿ ವಾಸಮಾಡಿಕೊಂಡಿರುವ ಆಸುರ ಸಮೂಹಗಳು ಮೇಲಕ್ಕೆ ಬಾರದಂತೆ ನಿನ್ನನ್ನು ಆ ಲೋಕದ ಬಾಗಲಿಗೆ ಅಡ್ಡವಾಗಿರಿಸಿದನು. ಹಿಂದೊಮ್ಮೆ ಆ ಅಸುರರು ಬಹಳವಾಗಿ ಪರಾಕ್ರಮಿಸಿ ಮೇಲಕ್ಕೆ ಬರಲು ಪ್ರಯತ್ನಿಸಿದಾಗ ನೀನು ಅಪಾರವಾದ ಆ ಪಾತಾಳದ

❀ "ತನ್ನಾರ್ಹತ್ಯವಸೀದಿತುಂ" ತಿ. ಪಾ.

ಯಸ್ಯ ದ್ವಾರಮಾವೃತ್ಯ ತಿಷ್ಠಸಿ ॥೧೦೦॥ ತಿರ್ಯಗೂರ್ಧ್ವಮಧಶ್ಚೈವ ಶಕ್ತಿಸ್ತೇ ಶೈಲ! ವರ್ಧಿತುಂ । ತಸ್ಮಾತ್ಸಂಚೋದಯಾಮಿ ತ್ವಾಮುತ್ತಿಷ್ಠ ಗಿರಿಸತ್ತಮ! ॥೧೦೧॥ ಸ ಏಷ ಕಪಿಶಾರ್ದೂಲಸ್ತ್ವಾಮುಪರ್ಯೇತಿ ವೀರ್ಯವಾನ್ । ಹನೂಮಾನ್ ರಾಮಕಾರ್ಯಾರ್ಥಂ ಭೀಮಕರ್ಮಾ ಖಮಾಪ್ಲುತಃ ॥೧೦೨॥ $ ತಸ್ಯ ಸಾಹ್ಯಂ ಮಯಾ ಕಾರ್ಯಮಿಕ್ಷ್ವಾಕುಕುಲವರ್ತಿನಃ । ಮಮ ಹೀಕ್ಷ್ವಾಕವಃ ಪೂಜ್ಯಾಃ ಪರಂ ಪೂಜ್ಯತಮಾಸ್ತವ ॥೧೦೩॥ ಕುರು ಸಾಚಿವ್ಯಮಸ್ಮಾಕಂ ನ ನಃ ಕಾರ್ಯಮತಿಕ್ರಮೇತ್ ।

ತಿಷ್ಠಸಿ-ಇರುವೆ. ॥೧೦೦॥ ಹೇ ಶೈಲ-ಎಲೈ ಮೈನಾಕನೇ, ತೇ-ನಿನಗೆ, ತಿರ್ಯಕ್-ಅಡ್ಡವಾಗಿಯೂ, ಊರ್ಧ್ವಂ - ಮೇಲಕ್ಕೂ, ಅಧಶ್ಚ-ಕೆಳಕ್ಕೂ, ವರ್ಧಿತುಂ - ಬೆಳೆಯಲು, ಶಕ್ತಿಃ-ಶಕ್ತಿಯು, (ಅಸ್ತಿ-ಇರುವದು), ತಸ್ಮಾತ್-ಆದುದರಿಂದ, ಹೇ ಗಿರಿಸತ್ತಮ-ಎಲೈ ಪರ್ವತಶ್ರೇಷ್ಠನೇ, ತ್ವಾಂ-ನಿನ್ನನ್ನು, ಸಂಚೋದಯಾಮಿ - ಪ್ರೇರೇಪಿಸುವೆನು, ಉತ್ತಿಷ್ಠ - ಮೇಲಕ್ಕೇಳು. ॥೧೦೧॥ ವೀರ್ಯವಾನ್ - ಪರಾಕ್ರಮಶಾಲಿಯಾದ, ಕಪಿಶಾರ್ದೂಲಃ - ವಾನರಶ್ರೇಷ್ಠನಾದ, ಸಏಷಹನುಮಾನ್ - ಆ ಈ ಆಂಜನೇಯನು, ರಾಮಕಾರ್ಯಾರ್ಥಂ - ಶ್ರೀರಾಮನ ಕಾರ್ಯಸಿದ್ಧಿಗಾಗಿ, ಭೀಮಕರ್ಮಾ - ಭಯಂಕರವಾದ, ಕೆಲಸವುಳ್ಳವನಾಗಿ, ಖಂ - ಅಂತರಿಕ್ಷವನ್ನು ಕುರಿತು, ಆಪ್ಲುತಃ - ಹಾರಿ, ತ್ವಾಮುಪರಿ - ನಿನ್ನಮೇಲೆ, ಏತಿ - ಹೋಗುತ್ತಲಿದ್ದಾನೆ. ॥೧೦೨॥ ಇಕ್ಷ್ವಾ....ನಃ - ಇಕ್ಷ್ವಾಕುರಾಯನ ವಂಶಸ್ಥನಾದ ರಾಮನಲ್ಲಿ ಸೇವೆಮಾಡಿಕೊಂಡಿರುವ, ಅಸ್ಯ - ಈ ಆಂಜನೇಯನಿಗೆ, ಸಾಹ್ಯಂ - ಸಹಾಯವು, ಮಯಾ - ನನ್ನಿಂದ, ಕಾರ್ಯಂ - ಮಾಡತಕ್ಕದು, ಇಕ್ಷ್ವಾಕವಃ - ಇಕ್ಷ್ವಾಕುವಂಶದ ಅರಸರು, ಮಮ - ನನಗೆ, ಪೂಜ್ಯಾಹಿ - ಪೂಜ್ಯರಷ್ಟೆ, ತವ - ನಿನಗೂ, ಪರಂ - ಅಧಿಕವಾಗಿ, ಪೂಜ್ಯತಮಾಃ - ವಿಶೇಷ ಪೂಜನೀಯರು. ॥೧೦೩॥ ನಃ - ನಮ್ಮ, ಕಾರ್ಯಂ - ಅತಿಥಿಸೇವಾರೂಪಕಾರ್ಯವು, ನಾತಿಕ್ರಮೇತ್ - ಅತಿಕ್ರಮಿಸಿ ಹೋಗದಂತೆ, ಅಸ್ಮಾಕಂ - ನಮಗೆ, ಸಾಚಿವ್ಯಂ - ಸಹಾಯವನ್ನು, ಕುರು - ಮಾಡು, ಕರ್ತವ್ಯಂ - ಮಾಡತಕ್ಕ, ಕಾರ್ಯಂ - ಕೆಲಸವು,

---

ಬಾಗಿಲನ್ನು ಬಲವಾಗಿ ಮುಚ್ಚಿ ಅವರನ್ನು ಬಾರನಂತೆ ಅಡ್ಡಗಿಸಿದೆ. ಅಂದಿನಿಂದ ನೀನು ಹಾಗೆಯೇ ನಿಂತಿರುವೆ. ಎಲೈ ಮೈನಾಕನೇ! ಅಡ್ಡಲಾಗಿಯೂ ಮೇಲಕ್ಕೂ, ಕೆಳಕ್ಕೂ ವರ್ಧಿಸಲು ನಿನಗೆ ಶಕ್ತಿಯಿರುವುದರಿಂದ ನಿನ್ನನ್ನು ಒಂದು ಕಾರ್ಯಕ್ಕೋಸುಗ ಪ್ರೇರೇಪಿಸುತ್ತಿರುವೆನು. ಎಲೈ ಗಿರಿಸತ್ತಮನೇ! ಮೇಲಕ್ಕೇಳು; ಇದೋ! ಮಹಾ ಪರಾಕ್ರಮಶಾಲಿಯಾಗಿ ಇಕ್ಷ್ವಾಕುವಂಶಜನಾದ ಶ್ರೀರಾಮನಿಗೋಸುಗ ಅಸಾಧ್ಯವಾದ ಕಾರ್ಯವನ್ನು ಮಾಡಬಯಸಿರುವ ವಾನರೋತ್ತಮನಾದ ಹನುಮಂತನು ನಿನ್ನ ಮೇಲ್ಭಾಗದ ಅಂತರಿಕ್ಷಮಾರ್ಗದಲ್ಲಿ ಹಾರಿಹೋಗುತ್ತಿರುವನು. ॥೯೯—೧೦೨॥ ಇಕ್ಷ್ವಾಕುರಾಯನ ವಂಶದಲ್ಲಿ ಜನಿಸಿದ ಶ್ರೀರಾಮಮೂರ್ತಿಯ ಸೇವೆಯಲ್ಲಿರುವ ಈ ವಾಯುಪುತ್ರನಿಗೆ ಸಹಾಯ ಮಾಡುವುದು ನನ್ನ ಕರ್ತವ್ಯವು. ಅಯ್ಯಾ ಪರ್ವತೋತ್ತಮನೇ! ಇಕ್ಷ್ವಾಕುವಂಶದವರು ನನಗೆ ಪೂಜ್ಯರಾದುದರಿಂದ ನಿನಗೂ ಪರಮ ಪೂಜ್ಯರಾಗಿರುವರು. ಈಗ ನಾನು ಮಾಡಬೇಕೆಂದಿರುವ ಅತಿಥಿ ಸತ್ಕಾರ ಕಾರ್ಯವು ಮೀರಿಹೋಗದಂತೆ ನೀನು ಸಹಾಯಮಾಡಬೇಕು. ಅನು

$ ಇಲ್ಲಿಂದ ನಾಲ್ಕು ಶ್ಲೋಕಗಳು ಗೋ. ಪಾ. ದಲ್ಲಿ ಅಧಿಕ.

ಕರ್ತವ್ಯಮಕೃತಂ ಕಾರ್ಯಂ ಸತಾಂ ಮನ್ಯುಮುದೀರಯೇತ್ ॥ ೧೦೪ ॥ ಸಲಿಲಾ ದೂರ್ಧ್ವಮುತ್ತಿಷ್ಠ! ತಿಷ್ಠತ್ವೇಷ ಕಪಿಸ್ತ್ವಯಿ । ಅಸ್ಮಾಕಮತಿಥಿಶ್ಚೈವ ಪೂಜ್ಯಶ್ಚ ಪ್ಲವತಾಂವರಃ ॥ ೧೦೫ ॥ ಚಾಮೀಕರಮಹಾನಾಭ! ದೇವಗಂಧರ್ವಸೇವಿತ! । ಹನೂಮಾಂಸ್ತ್ವಯಿ ವಿಶ್ರಾಂತಸ್ತತಶ್ಶೇಷಂ ಗಮಿಷ್ಯತಿ ॥ ೧೦೬ ॥ ಕಾಕುತ್ಸ್ಥಸ್ಯಾಽ ನೃಶಂಸ್ಯಂಚ ಮೈಥಿಲ್ಯಾಶ್ಚ ವಿವಾಸನಂ। ಶ್ರಮಂಚ ಪ್ಲವಗೇಂದ್ರಸ್ಯ ಸಮೀಕ್ಷ್ಯೋತ್ಥಾತು ಮರ್ಹಸಿ" ॥ ೧೦೭ ॥ ಹಿರಣ್ಯ§ನಾಭೋ ಮೈನಾಕೋ ನಿಶಮ್ಯ ಲವಣಾಂಭಸಃ ।

ಅಕೃತಂ - ಮಾಡಲ್ಪಡದಿದ್ದರೆ, ಸತಾಂ - ಸತ್ಪುರುಷರಿಗೆ, ಮನ್ಯುಂ - ಕೋಪವನ್ನು, ಉದೀರಯೇತ್- ಹುಟ್ಟಿಸೀತು. ॥ ೧೦೪ ॥ ಸಲಿಲಾತ್ - ನೀರಿನಿಂದ, ಊರ್ಧ್ವಂ - ಮೇಲಕ್ಕೆ, ಉತ್ತಿಷ್ಠ - ಏಳು, ಏಷಕಪಿಃ - ಈ ಆಂಜನೇಯನು, ತ್ವಯಿ - ನಿನ್ನಲ್ಲಿ, ತಿಷ್ಠತು - ಕುಳಿತುಕೊಳ್ಳಲಿ, ಪ್ಲವತಾಂ - ವಾನರರಲ್ಲಿ, ವರಃ - ಶ್ರೇಷ್ಠನಾದ ಆಂಜನೇಯನು, ಅಸ್ಮಾಕಂ - ನಮಗೆ, ಅತಿಥಿಶ್ಚ-ಅಭ್ಯಾಗತನೂ, ಪೂಜ್ಯಶ್ಚೈವ - ಪೂಜ್ಯನೂ ಅಹುದು. ॥೧೦೫॥ ಹೇ ದೇ....ತ - ದೇವತೆಗಳಿಂದಲೂ, ದೇವಗಾಯಕ ರಿಂದಲೂ ಸೇವಿಸಲ್ಪಡುವನೇ, ಚಾಮೀ....ಭ - ಸುವರ್ಣಮಯವಾದ ಮಹಾ ಶೃಂಗಗಳುಳ್ಳವನೇ, ಹನೂಮಾನ್ - ಹನುಮಂತನು, ತ್ವಯಿ - ನಿನ್ನಲ್ಲಿ, ವಿಶ್ರಾಂತಃ - ವಿಶ್ರಮಿಸಿಕೊಂಡು, ತತಃ - ಅನಂತರದಲ್ಲಿ, ಶೇಷಂ - ಮಿಕ್ಕ ದಾರಿಯನ್ನು ಕುರಿತು, ಗಮಿಷ್ಯತಿ - ಹೊಗುತ್ತಾನೆ. ॥ ೧೦೬ ॥ ಕಾಕುತ್ಸ್ಥಸ್ಯ - ಶ್ರೀರಾಮನ, ಅನೃಶಂಸ್ಯಂ - ಕೃತಜ್ಞತೆಯನ್ನೂ, ಮೈಥಿಲ್ಯಾಃ - ಸೀತಾದೇವಿಯ, ವಿವಾಸನಂಚ - ಪ್ರವಾಸವನ್ನೂ, ಪ್ಲವಗೇಂದ್ರಸ್ಯ - ವಾನರಶ್ರೇಷ್ಠನಾದ ಆಂಜನೇಯನ, ಶ್ರಮಂಚ - ಪ್ರಯಾಸವನ್ನೂ, ಸಮೀಕ್ಷ್ಯ - ನೋಡಿ, ಉತ್ಥಾತುಂ - ಮೇಲಕ್ಕೇಳುವದಕ್ಕೆ, ಅರ್ಹಸಿ - ಯೋಗ್ಯನಾಗು. ॥ ೧೦೭ ॥ ಹಿರಣ್ಯನಾಭಃ - ಸುವರ್ಣಶಿಖರಗಳುಳ್ಳ, ಮೈನಾಕಃ - ಮೈನಾಕನು, ಲವಣಾಂಭಸಃ - ಲವಣಸಮುದ್ರದ, (ವಚನಂ - ಮಾತನ್ನು), ನಿಶಮ್ಯ - ಕೇಳಿ,

---

ಷ್ಠೇಯ ಕಾರ್ಯವು ಮೀರಿಹೋದರೆ ಅದು ಸತ್ಪುರುಷರ ಮನಸ್ಸಿನಲ್ಲಿ ಕೋಪವನ್ನು ಹುಟ್ಟಿಸುತ್ತದೆ. ಆದುದರಿಂದ ನೀರನ್ನು ಬಿಟ್ಟು ಮೇಲಕ್ಕೇಳು. ಈ ವಾನರಶ್ರೇಷ್ಠನು ನಿನ್ನಲ್ಲಿ ವಿಶ್ರಮಿಸಿಕೊಳ್ಳಲಿ. ಈತನು ನಮಗೆ ಅತಿಥಿಯಾಗಿ ಪೂಜ್ಯನಾಗಿರುವನು. ದೇವತೆಗಳಿಂದಲೂ, ದೇವಗಾಯಕರಿಂದಲೂ ಸೇವಿತನಾಗಿ ಸುವರ್ಣಮಯವಾದ ಶಿಖರಗಳುಳ್ಳ ಎಲೈ ಮೈನಾಕನೇ! ವಾನರೋತ್ತಮನಾದ ಈ ಹನುಮಂತನು ನಿನ್ನಲ್ಲಿ ತನ್ನ ಆಯಾಸವನ್ನು ಕಳೆದು ಕೊಂಡು ಆ ಬಳಿಕ ಮಿಕ್ಕ ದಾರಿಯನ್ನು ಕಳೆಯಲಿ. ಎಲೈ ಮೈನಾಕನೇ! ಕಕುತ್ಸ್ಥವಂಶೋ ದ್ಭವನಾದ ಶ್ರೀರಾಮನ ಸತ್ಯಸಂಧತೆಯನ್ನೂ, ಭರ್ತನನ್ನೂ, ಬಂಧುಗಳನ್ನೂ ತೊರೆದು ವಿದೇಶದಲ್ಲಿ ದುಃಖಕ್ಕೀಡಾಗಿರುವ ಸೀತಾದೇವಿಯ ಸ್ಥಿತಿಯನ್ನೂ, ಕಪಿಸತ್ತಮನಾದ ಈ ಮಾರುತಿಯ ಲಂಘನಶ್ರಮವನ್ನೂ ತಿಳಿದು ನೀರಿನಿಂದ ಮೇಲಕ್ಕೆದ್ದು ಆತನನ್ನು ಆದರಿಸು" ಎಂದು ಹೇಳಿದನು. ॥ ೧೦೩–೧೦೭ ॥ ಈ ಮಾತುಗಳನ್ನು ಕೇಳಿ, ದೊಡ್ಡದೊಡ್ಡ ವೃಕ್ಷಗ ಳಿಂದಲೂ, ಲತೆಗಳಿಂದಲೂ ಒಪ್ಪುತ್ತ ಸುವರ್ಣಶಿಖರಗಳಿಂದ ಶೋಭಿತನಾದ ಆ ಮೈನಾ

---

§ "ಗರ್ಭೋ" ತಿ. ಪಾ.

ಉತ್ಪಪಾತ ಜಲಾತ್ತೂರ್ಣಂ ಮಹಾದ್ರುಮಲತಾ ‡ ಯುತಃ ॥ ೧೦೮ ॥ ಸಸಾಗರ ಜಲಂ ಭಿತ್ವಾ ಬಭೂವಾಭ್ಯುತ್ಥಿತಸ್ತದಾ । ಯಥಾಜಲಧರಂ ಭಿತ್ವಾ ದೀಪ್ತರಶ್ಮಿರ್ದಿವಾಕರಃ ॥ ೧೦೯ ॥ ಸ ಮಹಾತ್ಮಾ ಮುಹೂರ್ತೇನ ಪರ್ವತಸ್ಸಲಿಲಾವೃತಃ । ದರ್ಶಯಾಮಾಸ ಶೃಂಗಾಣಿ ಸಾಗರೇಣ ನಿಯೋಜಿತಃ ॥ ೧೧೦ ॥ ಶಾತಕುಂಭಮಯೈಶ್ಶೃಂಗೈಸ್ಸಕಿನ್ನರಮಹೋರಗೈಃ । ಆದಿತ್ಯೋದಯಸಂಕಾಶೈರಾಲಿಖದ್ಭಿರಿವಾಂಬರಂ ॥೧೧೧॥ ತಸ್ಯ ಜಾಂಬೂನದಮಯೈಶ್ಶೃಂಗೈಃ ಸಮುತ್ಥಿತೈಃ । ಆಕಾಶಂ ಶಸ್ತ್ರಸಂಕಾಶಮಭವತ್ಕಾಂಚನಪ್ರಭಂ ॥ ೧೧೨ ॥ ಜಾತರೂಪಮಯೈಶ್ಶೃಂಗೈರ್ಭ್ರಾಜಮಾನೈ

ಮಹಾ....ತಃ - ಮಹೋನ್ನತಗಳಾದ ವೃಕ್ಷಗಳಿಂದಲೂ, ಬಳ್ಳಿಗಳಿಂದಲೂ ಕೂಡಿದವನಾಗಿ, ಜಲಾತ್ - ನೀರಿನಿಂದ, ತೂರ್ಣಂ - ಜಾಗ್ರತೆಯಾಗಿ, ಉತ್ಪಪಾತ - ಮೇಲಕ್ಕೆದ್ದನು. ॥ ೧೦೮ ॥ ತದಾ - ಆ ಕಾಲದಲ್ಲಿ, ಸಾಗರಜಲಂ-ಸಮುದ್ರೋದಕವನ್ನು, ಭಿತ್ವಾ-ಭೇದಿಸಿ, ಅಭ್ಯುತ್ಥಿತಃ-ಮೇಲಕ್ಕೆದ್ದ, ಸಃ - ಆ ಮೈನಾಕನು, ಜಲಧರಂ - ಮೇಘವನ್ನು, ಭಿತ್ವಾ - ಭೇದಿಸಿ, ದೀಪ್ತರಶ್ಮಿಃ - ಹೊಳೆಯುತ್ತಿರುವ ಕಿರಣಗಳುಳ್ಳ, ದಿವಾಕರೋಯಥಾ - ಸೂರ್ಯನಹಾಗೆ, ಬಭೂವ - ಬೆಳಗಿದನು. ॥ ೧೦೯ ॥ ಸಾಗರೇಣ - ಸಮುದ್ರನಿಂದ, ನಿಯೋಜಿತಃ - ಪ್ರೇರೇಪಿತನಾಗಿ, ಮುಹೂರ್ತೇನ - ಸ್ವಲ್ಪಕಾಲದಲ್ಲಿಯೇ, ಮಹಾತ್ಮಾ - ಮಹಾಕಾರವುಳ್ಳ, ಸಕಿ....ಗೈಃ - ಕಿನ್ನರಿಂದಲೂ, ಮಹಾ ಸರ್ಪಗಳಿಂದಲೂ ಕೂಡಿರುವ, ಆದಿ....ಶೈಃ - ಸೂರ್ಯನ ಆವಿರ್ಭಾವಕ್ಕೆ ಸಮಾನಗಳಾದ, ಅಂಬರಂ - ಅಂತರಿಕ್ಷವನ್ನು, ಆಲಿಖದ್ಭಿರಿವ - ಒರೆಯುತ್ತಿವೆಯೋ ಎಂಬಂತಿರುವ, ಶಾತ....ಯೈಃ - ಸುವರ್ಣಮಯವಾದ, ಶೃಂಗೈಃ- ಶಿಖರಗಳಿಂದ, ಉಪಲಕ್ಷಿತಃ - ಕೂಡಿರುವ, ಸಪರ್ವತಃ - ಆ ಮೈನಾಕನು, ಸಲಿಲಾವೃತಃ - ನೀರಿನಿಂದ ಸುತ್ತಿವರೆದವನಾಗಿ, ಶೃಂಗಾಣಿ - ಶಿಖರಗಳನ್ನು, ದರ್ಶಯಾಮಾಸ - ತೋರಿದನು. ॥೧೧೦-೧೧೧॥ ಸಮುತ್ಥಿತೈಃ - ಹುಟ್ಟಿದ, ತಸ್ಯ....ದೈಃ - ಪುಟಪಾಕಶೋಧಿತವಾದ ಭಂಗಾರದ, ಪರ್ವತಸ್ಯ - ಪರ್ವತದ, ಶೃಂಗೈಃ - ಶಿಖರಗಳಿಂದ, ಶಸ್ತ್ರಸಂಕಾಶಂ - ಕತ್ತಿಗೆಸಮಾನವಾದ, ಆಕಾಶಂ- ಗಗನವು, ಕಾಂಚನಪ್ರಭಂ-ಚಿನ್ನದ ಕಾಂತಿಯುಳ್ಳದು, ಅಭವತ್-ಆಯಿತು. ॥೧೧೨॥ ಗಿರಿಸತ್ತಮಃ- ಪರ್ವತಶ್ರೇಷ್ಠನಾದ, ಸಃ - ಆ ಮೈನಾಕನು, ಭ್ರಾಜಮಾನೈಃ-ಪ್ರಕಾಶಮಾನಗಳಾದ, ಸ್ವಯಂಪ್ರಭೈಃ - ತಾನಾಗಿಯೇ ಥಳಥಳಿಸುತ್ತಿರುವ, ಜಾತ....ಯೈಃ-ಸುವರ್ಣವಿಕಾರಗಳಾದ, ಶೃಂಗೈಃ-ಶೃಂಗಗಳಿಂದ,

---

ಕನು ಮೇಘಗಳ ಮರೆಯಿಂದ ಭೇದಿಸಿಕೊಂಡು ಬಂದ ಸೂರ್ಯನಂತೆ ಬೆಳಗುತ್ತ ನೀರಿನಿಂದ ಮೇಲಕ್ಕೆದ್ದುಬಂದನು. ಆ ಸಮಯದಲ್ಲಿ ಸಮುದ್ರರಾಜನಿಂದ ಪ್ರೇರೇಪಿತನಾದ ಆ ಮೈನಾಕನು ಒಂದು ಮುಹೂರ್ತಕಾಲದಲ್ಲಿಯೇ ಮಹದಾಕಾರವನ್ನು ತಾಳಿದನು. ಕಿನ್ನರರಿಂದಲೂ, ಪನ್ನಗರಿಂದಲೂ ಕೂಡಿ ಸೂರ್ಯೋದಯದ ಕಾಂತಿಗೆ ಸಮಾನವಾಗಿ ಅಂತರಿಕ್ಷವನ್ನುಲ್ಲೇಖಿಸುವನೋ ಎಂಬಂತಿರುವ ಸುವರ್ಣ ಶಿಖರಗಳಿಂದ ಕೂಡಿದ ಆ ಮೈನಾಕನು ಬಹುವಾಗಿ ಕಂಗೊಳಿಸುತ್ತಿದ್ದನು. ॥೧೦೮–೧೧೧॥ ಆ ಸಮಯದಲ್ಲಿ ಕಪ್ಪುಬಣ್ಣದ ಅಂತರಿಕ್ಷವು ಆ ಮೈನಾಕಪರ್ವತದ ಪುಟಪಾಕಶೋಧಿತವಾದ ಸ್ವರ್ಣಶಿಖರಗಳ ಕಾಂತಿಯಿಂದ ಹಳದಿಯ ಬಣ್ಣವನ್ನು ತಾಳಿತು. ಸ್ವತಸ್ಸಿದ್ಧವಾಗಿ ಪ್ರಕಾಶಿಸುತ್ತಿರುವ ಶಿಖರಗಳಿಂದ ಕೂಡಿದ

---

‡ "ವೃತಃ" ತಿ. ಪಾ.

ಸ್ಸ್ವಯಂ ಪ್ರಭೈಃ । ಆದಿತ್ಯೋದಯ ಸಂಕಾಶೈ ಸ್ಸೋಽಭವ ದ್ಗಿರಿಸತ್ತಮಃ ॥ ೧೧೩ ॥ ತಮುತ್ಥಿತ ಮಸಂಗೇನ ಹನೂಮಾ ನಗ್ರತಸ್ಸ್ಥಿತಂ । ಮಧ್ಯೇ ಲವಣತೋಯಸ್ಯ ವಿಘ್ನೋಽಯಮಿತಿ ನಿಶ್ಚಿತಃ ॥ ೧೧೪ ॥ ಸತಮುಚ್ಛ್ರಿತ ಮತ್ಯರ್ಥಂ ಮಹಾವೇಗೋ ಮಹಾಕಪಿಃ । ಉರಸಾ ಪಾತಯಾಮಾಸ ಜೀಮೂತಮಿವ ಮಾರುತಃ ॥ ೧೧೫ ॥ ಸತದಾ ಪಾತಿತಸ್ತೇನ ಕಪಿನಾ ಪರ್ವತೋತ್ತಮಃ । ಬುದ್ಧ್ವಾ ತಸ್ಯ ಕಪೇ ರ್ವೇಗಂ ಜಹರ್ಷಚ ನನಂದಚ ॥ ೧೧೬ ॥ ತಮಾಕಾಶಗತಂ ವೀರ ಮಾಕಾಶೇ ಸಮುಪಸ್ಥಿತಃ । ಪ್ರೀತೋ ಹೃಷ್ಟಮನಾ ವಾಕ್ಯ ಮಬ್ರವೀ ತ್ಪರ್ವತಃ ಕಪಿಂ । ಮಾನುಷಂ ಧಾರಯ್ರ್ಯ

ಆದಿ....ಶಃ - ನೂರುಸೂರ್ಯರ ಕಾಂತಿಯುಳ್ಳವನು, ಅಭವತ್ - ಆದದು. ||೧೧೩|| ಹೂನಮಾ‌ - ಹನುಮಂತನು, ಅಸಂಗೇನ - ಇದ್ದಕ್ಕಿದ್ದಂತೆಯೇ, ಲವಣತೋಯಸ್ಯ - ಲವಣಸಮುದ್ರದ, ಮಧ್ಯೇ- ನಡುವೆ, ಉತ್ಥಿತಂ - ಎದ್ದು, ಅಗ್ರತಃ - ಮುಂಭಾಗದಲ್ಲಿ, ಸ್ಥಿತಂ - ನಿಂತಿರುವ, ತಂ - ಆ ಪರ್ವತ ವನ್ನು, (ದೃಷ್ಟ್ವಾ - ನೋಡಿ), ಅಯಂ - ಇದು, ವಿಘ್ನಇತಿ - ತಡೆಯೆಂದು, ನಿಶ್ಚಿತಃ - ನಿಶ್ಚಯಿಸಿದನು. ||೧೧೪|| ಮಹಾವೇಗಃ - ಮಹಾವೇಗವುಳ್ಳ, ಸಮಹಾಕಪಿಃ - ಆ ಆಂಜನೇಯನು, ಅತ್ಯರ್ಥಂ - ಬಹಳವಾಗಿ, ಉಚ್ಛ್ರಿತಂ - ಉನ್ನತವಾದ, ತಂ - ಆ ಬೆಟ್ಟವನ್ನು, ಜೀಮೂತಂ - ಮೇಘವನ್ನು, ಮಾರುತಇವ - ವಾಯುವಿನಂತೆ, ಉರಸಾ - ಎದೆಯಿಂದ, ಪಾತಯಾಮಾಸ - ಕೆಡವಿದನು. ||೧೧೫|| ತದಾ - ಆ ಸಮಯದಲ್ಲಿ, ತೇನಕಪಿನಾ - ಆ ಆಂಜನೇಯನಿಂದ, ಪಾತಿತಃ - ಕೆಡುಹಲ್ಪಟ್ಟ, ಸಪ....ಮಃ - ಆ ಪರ್ವತಶ್ರೇಷ್ಠನು, ತಸ್ಯಕಪೇಃ - ಆ ಆಂಜನೇಯನ, ವೇಗಂ - ವೇಗವನ್ನು, ಬುದ್ಧ್ವಾ-ತಿಳದು, ಜಹರ್ಷಚ-ಮಾನಸಿಕ ಸಂತೋಷವನ್ನು ಹೊಂದಿದನು, ನನಂದಚ- ಕಾಯಿಕ ಸಂತೋಷವನ್ನೂ ಹೊಂದಿದನು. ||೧೧೬|| ಆಕಾಶಗತಂ - ಅಂತರಿಕ್ಷದಲ್ಲಿ ಹೋಗುತ್ತಿರುವ, ವೀರಂ-ವೀರನಾದ, ತಂಕಪಿಂ-ಆ ಆಂಜನೇಯನನ್ನು ಕುರಿತು, ಆಕಾಶೇ-ಗಗನದಲ್ಲಿ, ಸಮುಪಸ್ಥಿತಃ- ಸಮೀಪವರ್ತಿಯಾಗಿರುವ, ಪ್ರೀತಃ - ಪ್ರೀತಿಸೂಚಕವ್ಯಾಪಾರವುಳ್ಳ, ಹೃಷ್ಟಮನಾಃ - ಸಂತೋಷ ಯುಕ್ತವಾದ ಮನವುಳ್ಳ, ಪರ್ವತಃ - ಮೈನಾಕನು, ಮಾನುಷಂ - ಮನುಷ್ಯಸಂಬಂಧವಾದ, ರೂಪಂ- ರೂಪವನ್ನು, ಧಾರಯ್ರ್ಯ - ಧರಿಸಿ, ಆತ್ಮನಃ - ತನ್ನ, ಶಿಖರೇ - ಶಿಖರದಲ್ಲಿ, ಸ್ಥಿತಃ - ನಿಂತವನಾಗಿ,

ಮೈನಾಕನು ಸಹಸ್ರಾದಿತ್ಯರ ಕಾಂತಿಯನ್ನೊಳಗೊಂಡು ವಿರಾಜಿಸುತ್ತಿದ್ದನು. ಹೀಗೆ ಅಕಸ್ಮಾತ್ತಾಗಿ ಆ ಲವಣಸಮುದ್ರ ಮಧ್ಯದಲ್ಲಿ ಮೇಲಕ್ಕೆದ್ದು ತನ್ನಿದಿರಾಗಿ ನಿಂತಿರುವ ಆ ಪರ್ವತವನ್ನು ಕಂಡು ಗಗನದಲ್ಲಿ ಸಂಚರಿಸಿ ಬರುತ್ತಿದ್ದ ಆಂಜನೇಯನು ಅದು ತನ್ನ ಗಮನಕ್ಕೆ ವಿಘ್ನವೆಂದು ನಿಶ್ಚಯಿಸಿದನು. ॥ ೧೧೧-೧೧೪ ॥ ಆಗ ಮಹಾ ವೇಗಶೀಲನಾದ ಆತನು ಮಹೋನ್ನತಾಕಾರದಿಂದ ತನ್ನ ಮುಂಗಡೆ ನಿಂತಿದ್ದ ಆ ಪರ್ವತೋತ್ತಮನನ್ನು ತನ್ನೆದೆಯಿಂದ, ಗಾಳಿಯು ಮೇಘಗಳನ್ನು ಅತ್ತಿತ್ತ ಹಾರಿಸುವಂತೆ ಕೆಡಹಿದನು. ಆಗ ಮೈನಾಕನು ಮಾರುತಿಯ ವೇಗಾತಿಶಯವನ್ನು ಕಂಡು ತನ್ನ ಸಂತೋಷವನ್ನು ಪ್ರಕಟ ಗೊಳಿಸಿದುದಲ್ಲದೆ, ಅಂತಸ್ಸಂತೋಷವನ್ನೂ ಹೊಂದಿದನು. ಆ ಬಳಿಕ ಆಕಾಶದಲ್ಲಿ ಹೋಗು ತ್ತಿರುವ ಆ ಕಪಿವೀರನನ್ನು ಕಂಡು, ಗಗನದವರೆಗೂ ವ್ಯಾಪಿಸಿದ್ದ ಆ ಮೈನಾಕನು ಸಂತು ಷ್ಟಾಂತರಂಗನಾಗಿ ಮಾನುಷ ರೂಪವನ್ನು ಧರಿಸಿ ತನ್ನ ಶಿಖರದಮೇಲೆ ನಿಂತು ಆತನನ್ನು

ರೂಪ ಮಾತ್ಮನಶ್ಶಿಖರೇ ಸ್ಥಿತಃ ॥ ೧೧೭ ॥ " ದುಷ್ಕರಂ ಕೃತವಾನ್ಕರ್ಮ ತ್ವಮಿದಂ ವಾನರೋತ್ತಮ ! । ನಿಪತ್ಯ ಮಮ ಶೃಂಗೇಷು ವಿಶ್ರಮಸ್ವ ಯಥಾಸುಖಂ ॥ ೧೧೮ ॥ ರಾಘವಸ್ಯ ಕುಲೇ ಜಾತೈ ರುದಧಿಃ ಪರಿವರ್ಧಿತಃ । ಸ ತ್ವಾಂ ರಾಮ ಹಿತೇ ಯುಕ್ತಂ ಪ್ರತ್ಯರ್ಚಯತಿ ಸಾಗರಃ ॥೧೧೯॥ ಕೃತೇಚ ಪ್ರತಿಕರ್ತವ್ಯ ಮೇಷ ಧರ್ಮಸ್ಸನಾತನಃ । ಸೋಽಯಂ ತತ್ಪ್ರತಿಕಾರಾರ್ಥೀ ತ್ವತ್ತ ಸ್ಸಮ್ಮಾನಮರ್ಹತಿ ॥ ೧೨೦ ॥ ತಿಷ್ಠ ತ್ವಂ ಕಪಿಶಾರ್ದೂಲ ! ಮಯಿ ವಿಶ್ರಮ್ಯ ಗಮ್ಯತಾಂ । ತ್ವನ್ನಿಮಿತ್ತ ಮನೇನಾಽಹಂ ಬಹುಮಾನಾ ತ್ಪ್ರಚೋದಿತಃ । " ಯೋಜನಾನಾಂ ಶತಂಚಾಪಿ ಕಪಿರೇಷ ಸಮಾಪ್ಲುತಃ ।

ವಾಕ್ಯಂ - ವಚನವನ್ನು, ಅಬ್ರವೀತ್ - ಹೇಳಿದನು. ॥ ೧೧೭ ॥ ಹೇ ವಾನರೋತ್ತಮ - ಎಲೈ ವಾನರ ಶ್ರೇಷ್ಠನೇ, ತ್ವಂ - ನೀನು, ದುಷ್ಕರಂ - ಮಾಡಲಶಕ್ಯವಾದ, ಇದಂಕರ್ಮ - ಈ ಕಾರ್ಯವನ್ನು, ಕೃತವಾ್ - ಮಾಡಿದವನಾದೆ, ಮಮ - ನನ್ನ, ಶೃಂಗೇಷು - ಶಿಖರಗಳಲ್ಲಿ, ನಿಪತ್ಯ - ಇಳಿದು, ಯಥಾಸುಖಂ - ಸುಖವಾಗಿ, ವಿಶ್ರಮಸ್ವ - ವಿಶ್ರಮಿಸಿಕೊ. ॥ ೧೧೮ ॥ ಉದಧಿಃ - ಸಮುದ್ರನು, ರಾಘವಸ್ಯ - ರಘುರಾಮನ, ಕುಲೇ - ವಂಶದಲ್ಲಿ, ಜಾತೈಃ - ಹುಟ್ಟಿದವರಿಂದ, ಪರಿವರ್ಧಿತಃ - ವೃದ್ಧಿಗೊಳಿಸಲಟ್ಟನು, ಸಸಾಗರಃ - ಆ ಸಮುದ್ರನು, ರಾಮಹಿತೇ - ಶ್ರೀರಾಮನ ಹಿತಕಾರ್ಯದಲ್ಲಿ, ಯುಕ್ತಂ - ಉದ್ಯುಕ್ತನಾದ, ತ್ವಾಂ - ನಿನ್ನನ್ನು, ಪ್ರತ್ಯರ್ಚಯತಿ - ಪ್ರತಿಪೂಜಿಸುತ್ತಾನೆ. ॥೧೧೯॥ ಕೃತೇಚ - ಉಪಕಾರ ಮಾಡಲ್ಪಡಲಾಗಿ, ಪ್ರತಿಕರ್ತವ್ಯಂ - ಪ್ರತ್ಯುಪಕಾರ ಮಾಡತಕ್ಕುದು, ಏಷಃ - ಇದು, ಸನಾತನಃ - ಅನಾದಿಯಾದ, ಧರ್ಮಃ - ಧರ್ಮವು, ಸೋಽಯಂ - ಅಂತಹ ಈ ಸಮುದ್ರನು, ತತ್ಪ್ರ....ರ್ಥೀ - ಆ ಉಪಕೃತಿಗೆ ಪ್ರತ್ಯುಪಕಾರವನ್ನು ಯಾಚಿಸುವವನಾಗಿ, ತ್ವತ್ತಃ - ನಿನ್ನ ದೆಶೆಯಿಂದ, ಸಮ್ಮಾನಂ - ಬಹುಮತಿಯನ್ನು, ಪ್ರಾಪ್ತುಂ - ಹೊಂದುವದಕ್ಕೆ, ಅರ್ಹತಿ - ಯೋಗ್ಯನಾಗುವನು. ॥೧೨೦॥ ಏಷಕಪಿಃ - ಈ ವಾನರನು, ಯೋಜನಾನಾಂ - ಗಾವುದಗಳ, ಶತಂಚಾಪಿ - ನೂರನ್ನೂಕೂಡ, ಸಮಾಪ್ಲುತಃ - ಹಾರಲಪೇಕ್ಷಿಸಿರುವನು, ತವ - ನಿನ್ನ, ಸಾನುಷು - ಜರಿಗಳಲ್ಲಿ, ವಿಶ್ರಾಂತಃ - ವಿಶ್ರಮಿಸಿಕೊಂಡವನಾಗಿ, ಶೇಷಂ - ಮಿಕ್ಕದಾರಿಯನ್ನು, ಪ್ರಕ್ರಮತಾಂ - ಅತಿಕ್ರಮಿಸಲಿ, ಇತಿ - ಹೀಗೆಂದು, ತ್ವನ್ನಿಮಿತ್ತಂ - ನಿನಗೋಸ್ಕರವೇ, ಅನೇನ - ಈ ಸಮುದ್ರನಿಂದ, ಅಹಂ -

---

ಕುರಿತು, ॥೧೧೫–೧೧೭॥ "ಎಲೈ ವಾನರೋತ್ತಮನೇ ! ನೀನು ಇತರರಾರಿಂದಲೂ ಸಾಧ್ಯವಾಗದ ಈ ಸಮುದ್ರೋಲ್ಲಂಘನ ಕಾರ್ಯವನ್ನು ಮಾಡಿರುವೆ. ಈಗ ನೀನು ನನ್ನ ಶಿಖರಗಳಲ್ಲಿಳಿದು ಯಥಾಸುಖವಾಗಿ ವಿಶ್ರಮಿಸಿಕೊ. ಎಲೈ ಕಪಿಶ್ರೇಷ್ಠನೇ ! ಶ್ರೀರಾಮನ ವಂಶಜರಿಂದ ಈ ಸಮುದ್ರರಾಜನು ವೃದ್ಧಿಗೊಳಿಸಲ್ಪಟ್ಟನು. ಈತನು ಶ್ರೀರಾಮನಿಗೆ ಹಿತವನ್ನುಂಟು ಮಾಡಲೋಸುಗ ಆತನ ಸಚಿವನಾದ ನಿನ್ನನ್ನು ಸತ್ಕರಿಸಲಪೇಕ್ಷಿಸುವನು. ಲೋಕದಲ್ಲಿ, ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವುದು ಸನಾತನ ಧರ್ಮವಾಗಿದೆ. ಆದುದರಿಂದ ಈ ಸಮುದ್ರನು ಹಿಂದೆ ತಾನು ಪಡೆದ ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡುವವನಾಗಿ ನಿನ್ನನ್ನು ಸತ್ಕರಿಸುವುದರ ಮೂಲಕ ಮನ್ನಣೆಯನ್ನು ಪಡೆಯಲಪೇಕ್ಷಿಸುತ್ತಿರುವನು. ॥೧೧೮–೧೨೦॥ ಈತನು, "ಅಯ್ಯಾ ಪರ್ವತನೇ ! ಈ ಕಪಿಸತ್ತಮನು ನೂರು ಯೋಜನಗಳ ವಿಸ್ತಾರವುಳ್ಳ ಸಮುದ್ರವನ್ನು ದಾಟಬಯಸಿರುವನು. ಇಂತಹನು ನಿನ್ನ ತಪ್ಪಲುಗಳಲ್ಲಿ ವಿಶ್ರಮಿಸಿಕೊಂಡು ಉಳಿದ ಮಾರ್ಗವನ್ನು ಅತಿಕ್ರಮಿಸಲಿ" ಎಂದು ನಿನಗೋಸ್ಕರವಾಗಿ

ತವ ಸಾನುಷು ವಿಶ್ರಾಂತಶ್ಶೇಷಂ ಪ್ರಕ್ರಮತಾ" ಮಿತಿ ॥ ೧೨೧ ॥ ತದಿದಂ ಗಂಧವತ್ಸ್ವಾದು ಕಂದಮೂಲಫಲಂ ಬಹು । ತದಾಸ್ವಾದ್ಯ ಹರಿಶ್ರೇಷ್ಠ! ವಿಶ್ರಾಂತೋ*ನುಗಮಿಷ್ಯಸಿ ॥ ೧೨೨ ॥ ಅಸ್ಮಾಕಮಪಿ ಸಂಬಂಧಃ ಕಪಿಮುಖ್ಯ! ತ್ವಯಾಸ್ತಿ ವೈ । ಪ್ರಖ್ಯಾತಸ್ತ್ರಿಷುಲೋಕೇಷು ಮಹಾಗುಣಪರಿಗ್ರಹಃ ॥ ೧೨೩ ॥ ವೇಗವಂತಃ ಪ್ಲವಂತೋ ಯೇ ಪ್ಲವಗಾ ಮಾರುತಾತ್ಮಜ! । ತೇಷಾಂ ಮುಖ್ಯತಮಂ ಮನ್ಯೇ ತ್ವಾಮಹಂ ಕಪಿಕುಂಜರ! ॥೧೨೪॥ ಅತಿಥಿಃ ಕಿಲ ಪೂಜಾರ್ಹಃ ಪ್ರಾಕೃತೋಽಪಿ ವಿಜಾನತಾ । ಧರ್ಮಂ

ನಾನು, ಬಹುಮಾನಾತ್ - ಬಹುಮತಿಯಿಂದ, ಪ್ರಚೋದಿತಃ - ಕಳುಹಿಸಲ್ಪಟ್ಟೆನು, ಹೇ ಕಪಿಶಾರ್ದೂಲ - ಎಲೈ ವಾನರಶ್ರೇಷ್ಠನೇ, ತ್ವಂ - ನೀನು, ಮಯಿ - ನನ್ನಲ್ಲಿ, ತಿಷ್ಠ - ನಿಲ್ಲು, ವಿಶ್ರಮ್ಯ - ವಿಶ್ರಮಿಸಿಕೊಂಡು, ಗಮ್ಯತಾಂ - ಹೋಗಲ್ಪಡಲಿ. ॥ ೧೨೧ ॥ ತತ್ - ಆಕಾರಣದಿಂದ, ಹೇ ಹರಿಶ್ರೇಷ್ಠ - ಎಲೈ ವಾನರಶ್ರೇಷ್ಠನೇ, ಬಹು - ಅನೇಕವಾದ, ಗಂಧವತ್ - ಗಂಧವುಳ್ಳ, ಸ್ವಾದು-ರುಚಿಕರವಾದ, ತತ್ - ಪ್ರಸಿದ್ಧವಾದ, ಕಂದ....ಲಂ - ಕಂದಮೂಲಫಲಗಳನ್ನು, ಆಸ್ವಾದ್ಯ - ಭಕ್ಷಿಸಿ, ವಿಶ್ರಾಂತಃ-ಸುಖಿತನಾಗಿ, ಅನುಗಮಿಷ್ಯಸಿ-ಮುಂದಕ್ಕೆಹೋಗು. ॥೧೨೨॥ ಹೇ ಕಪಿಮುಖ್ಯ-ಎಲೈ ವಾನರಶ್ರೇಷ್ಠನೇ, ತ್ವಯಾಸಹ-ನಿನ್ನೊಡನೆ, ಅಸ್ಮಾಕಮಪಿ-ನಮಗೂಕೂಡ, ತ್ರಿಷುಲೋಕೇಷು-ಮೂರುಲೋಕಗಳಲ್ಲಿಯೂ, ಪ್ರಖ್ಯಾತಃ - ಪ್ರಸಿದ್ಧವಾದ, ಮಹಾ....ಗ್ರಹಃ - ವಾಯುವಿನಿಂದ ಸ್ವೀಕಾರವುಳ್ಳ (ಗೋ) ಸತ್ಪುರುಷರಿಂದ ಸ್ವೀಕರಿಸಲ್ಪಟ್ಟ, ಸಂಬಂಧಃ - ಸಂಬಂಧವು, ಅಸ್ತಿವೈ - ಇರುವುದಷ್ಟೆ. ॥೧೨೩॥ ಹೇ ಮಾರುತಾತ್ಮಜ - ಓ ವಾಯುಪುತ್ರನೇ, ವೇಗವಂತಃ - ವೇಗವುಳ್ಳ, ಪ್ಲವಂತಃ - ಹಾರುತ್ತಿರುವ, ಪ್ಲವಗಾಃ - ವಾನರರು, ಯೇ - ಯಾರೋ, ಹೇ ಕಪಿಕುಂಜರ - ಎಲೈ ವಾನರಶ್ರೇಷ್ಠನೇ, ಅಹಂ - ನಾನು, ತೇಷಾಂ - ಆ ವಾನರರೊಳಗೆ, ತ್ವಾಂ - ನಿನ್ನನ್ನು, ಮುಖ್ಯತಮಂ-ಮುಖ್ಯತಮನನ್ನಾಗಿ, ಮನ್ಯೇ-ತಿಳಿದಿರುವೆನು. ॥೧೨೪॥ ಧರ್ಮಂ-ಧರ್ಮವನ್ನು, ಜಿಜ್ಞಾಸಮಾನೇನ-ವಿವೇಚಿಸುವ, ವಿಜಾನತಾ-ತಿಳಿವಳಿಕೆಯುಳ್ಳ ಪುರುಷನಿಂದ, ಅತಿಥಿಃ-ಅಭ್ಯಾಗತನು, ಪ್ರಾಕೃತೋಽಪಿ-ಪಾಮರನಾದರೂ, ಪೂಜಾರ್ಹಃಕಿಲ - ಪೂಜಿಸುವದಕ್ಕೆ ಯೋಗ್ಯನಷ್ಟೆ (ಎಂದ ಬಳಿಕ), ತ್ವಾದೃಶಃ -

---

ನನ್ನನ್ನು ಪ್ರೇರೇಪಿಸಿ ಕಳುಹಿಸಿರುವನು. ಆದುದರಿಂದೆಲೈ ಮಾರುತಿಯೇ! ನೀನು ಸ್ವಲ್ಪ ಹೊತ್ತು ನಿಂತು ನನ್ನಲ್ಲಿ ವಿಶ್ರಮಿಸಿಕೊಂಡು ದಯಮಾಡು. ಇದೋ! ನನ್ನಲ್ಲಿ ಸುಗಂಧಭರಿತವೂ, ಮಧುರವೂ ಆದ ಅನೇಕ ಕಂದಮೂಲ ಫಲಾದಿಗಳಿರುವವು. ಅವನ್ನು ಸ್ವೀಕರಿಸಿ, ವಿಶ್ರಮಿಸಿಕೊಂಡು ಮುಂದಕ್ಕೆ ದಯಮಾಡು. ಇದೂ ಅಲ್ಲದೆ ನಮಗೂ ನಿಮಗೂ ಸತ್ಕಾರ, ಸತ್ಕಾರ್ಯಸಂಬಂಧವೂ ಉಂಟು; ಮೈತ್ರಿಯೂ ಇರುವುದು. ನೀನು ಮೂರು ಲೋಕಗಳಲ್ಲಿಯೂ ಮಹಾತ್ಮರಾದವರಿಗೆ ಪರಿಗ್ರಾಹ್ಯನಾಗಿ ಪ್ರಸಿದ್ಧಿಯನ್ನೈದಿರುವೆ. ಅದರಿಂದ ನನಗೂ ಪೂಜ್ಯನಾಗಿರುವೆ. ॥೧೨೧–೧೨೩॥ ಎಲೈ ಮಾರುತಿಯೇ! ನೀನು ಮಹಾ ವೇಗಶಾಲಿಗಳಾಗಿ ಹಾರುವ ವಾನರರಲ್ಲಿ ಶ್ರೇಷ್ಠನಾದವನೆಂದೆಣಿಸುತ್ತೇನೆ. ಎಲೈ ಕಪಿಸತ್ತಮನೇ! ಅತಿಥಿಯಾದವನು ಪಾಮರನಾದಾಗ್ಗೂ, ಧರ್ಮವನ್ನರಿತವನು ಆತನನ್ನು ಸತ್ಕರಿಸಲೇಬೇಕು. ನೀನಾದರೋ ಮಹಾತ್ಮನು; ದೇವಶ್ರೇಷ್ಠನೂ, ಮಹಾತ್ಮನೂ ಆದ ವಾಯುದೇವನ ಪುತ್ರನು;

---

* "ಅಥ" ತಿ. ಪಾ.

ಜಿಜ್ಞಾಸಮಾನೇನ ಕಿಂಪುನ ¶ ಸ್ತ್ವಾದೃಶೋ ಮಹಾನ್ ॥೧೨೫॥ ತ್ವಂಹಿ ದೇವವರಿಷ್ಠಸ್ಯ ಮಾರುತಸ್ಯ ಮಹಾತ್ಮನಃ । ಪುತ್ರಸ್ತಸ್ಯೈವ ವೇಗೇನ ಸದೃಶಃ ಕಪಿಕುಂಜರ! ॥೧೨೬॥ ಪೂಜಿತೇ ತ್ವಯಿ ಧರ್ಮಜ್ಞ! ಪೂಜಾಂ ಪ್ರಾಪ್ನೋತಿ ಮಾರುತಃ । ತಸ್ಮಾತ್ತ್ವಂ ಪೂಜನೀಯೋ ಮೇ ಶೃಣು ಚಾಽಪ್ಯತ್ರ ಕಾರಣಂ ॥ ೧೨೭ ॥ ಪೂರ್ವಂ ಕೃತಯುಗೇ ತಾತ! ಪರ್ವತಾಃ ಪಕ್ಷಿಣೋಽಭವನ್ । ತೇಹಿ ಜಗ್ಮುರ್ದಿಶಸ್ಸರ್ವಾ ಗರುಡಾಽನಿಲ ವೇಗಿನಃ ॥೧೨೮॥ ತತಸ್ತೇಷು ಪ್ರಯಾತೇಷು ದೇವಸಂಘಾ ಸ್ಸಹರ್ಷಿಭಿಃ । ಭೂತಾನಿ ಚ ಭಯಂ ಜಗ್ಮುಸ್ತೇಷಾಂ ಪತನಶಂಕಯಾ ॥ ೧೨೯ ॥ ತತಃ ಕ್ರುದ್ಧ ಸ್ಸಹಸ್ರಾಕ್ಷಃ

ನಿನ್ನಂತಹ, ಮಹಾನ್ - ಮಹಾತ್ಮನು, ಕಿಂಪುನಃ - ಏನು ಹೇಳತಕ್ಕುದು. ॥೧೨೫॥ ಹೇ ಕಪಿಕುಂಜರ-ಎಲೈ ವಾನರಶ್ರೇಷ್ಠನೇ, ತ್ವಂ - ನೀನು, ದೇವವರಿಷ್ಠಸ್ಯ - ದೇವತೆಗಳಲ್ಲಿ ಶ್ರೇಷ್ಠನಾದ, ಮಹಾತ್ಮನಃ-ಮಹಾತ್ಮನಾದ, ಮಾರುತಸ್ಯ - ವಾಯುವಿಗೆ, ಪುತ್ರೋಹಿ - ಮಗನಷ್ಟೆ, ವೇಗೇನ - ಜವದಿಂದಲೂ, ತಸ್ಯ - ಆ ವಾಯುವಿಗೆ, ಸದೃಶಏವ - ಸಮಾನನೇಸರಿ. ॥೧೨೬॥ ಹೇ ಧರ್ಮಜ್ಞ - ಎಲೈ ಧರ್ಮವನ್ನು ಬಲ್ಲವನೇ, ತ್ವಯಿ - ನೀನು, ಪೂಜಿತೇ - ಪೂಜಿಸಲ್ಪಟ್ಟವನಾಗಲು, ಮಾರುತಃ - ನಿನ್ನ ತಂದೆಯಾದ ವಾಯುವು, ಪೂಜಾಂ - ಪೂಜೆಯನ್ನು, ಪ್ರಾಪ್ನೋತಿ - ಹೊಂದುತ್ತಾನೆ, ತಸ್ಮಾತ್ - ಆ ಕಾರಣದಿಂದ, ಮೇ - ನನಗೆ, ತ್ವಂ - ನೀನು, ಪೂಜನೀಯಃ - ಪೂಜನೀಯನು, ಅಪಿಚ - ಇಷ್ಟು ಮಾತ್ರವಲ್ಲ, ಅತ್ರ - ಈ ವಿಷಯದಲ್ಲಿ, ಕಾರಣಮಪಿ - ಕಾರಣವನ್ನೂ, ಶೃಣು - ಕೇಳು. ॥ ೧೨೭ ॥ ಹೇ ತಾತ - ಎಲೈ ತಂದೆಯೆ, ಪೂರ್ವಂ - ಮೊದಲು, ಕೃತಯುಗೇ - ಕೃತಯುಗದಲ್ಲಿ, ಪರ್ವತಾಃ - ಬೆಟ್ಟಗಳು, ಪಕ್ಷಿಣಃ-ರೆಕ್ಕೆಗಳುಳ್ಳವುಗಳು, ಅಭವನ್-ಆಗಿದ್ದವು, ತೇ-ಆ ಪರ್ವತಗಳು, ಗರು....ನಃ-ಗರುಡ ವಾಯುಗಳಿಗೆ ಸಮಾನವಾದ ವೇಗವುಳ್ಳವುಗಳಾಗಿ, ಸರ್ವಾಃ - ಸಮಸ್ತವಾದ, ದಿಶಃ - ದಿಕ್ಕುಗಳನ್ನೂ ಕುರಿತು, ಜಗ್ಮುಃ-ಹೊರಟವು. ॥೧೨೮॥ ತತಃ - ಅನಂತರದಲ್ಲಿ, ತೇಷು-ಆ ಬೆಟ್ಟಗಳು, ಪ್ರಯಾತೇಷು - ಪ್ರಯಾಣಮಾಡುತ್ತಿರಲು, ದೇವಸಂಘಾಃ - ದೇವಸಮೂಹಗಳು, ಋಷಿಭಿಸ್ಸಹ - ಋಷಿಗಳೊಡನೆ, ಭೂತಾನಿಚ - ಭೂತಗಳೂ ಸಹ, ತೇಷಾಂ - ಆ ಪರ್ವತಗಳ, ಪತನಶಂಕಯಾ - ಮೇಲೆ ಬೀಳುವುದೆಂಬ ಸಂದೇಹದಿಂದ, ಭಯಂ - ಭೀತಿಯನ್ನು, ಜಗ್ಮುಃ - ಹೊಂದಿದರು. ॥೧೨೯॥

ವೇಗದಲ್ಲಿಯೂ ಆತನಿಗೆ ಸಮಾನನಾದವನು; ಇಂತಹ ನಿನ್ನನ್ನು ಸತ್ಕರಿಸಲೇ ಬೇಕೆಂಬುದರಲ್ಲಿ ಹೇಳುವುದೇನಿದೆ? ಎಲೈ ಕಪಿಕುಂಜರನೇ! ಮಹಾ ಧರ್ಮಿಷ್ಠನಾದ ನಿನ್ನನ್ನು ಪೂಜಿಸಿದರೆ ನಿಮ್ಮ ತಂದೆಯಾದ ವಾಯುದೇವನು ಪೂಜಿತನಾದಂತೆಯೇ ಸರಿ. ಆದುದರಿಂದ ನೀನು ನನಗೆ ಪರಮಪೂಜ್ಯನಾಗಿರುವೆ. ಇದಕ್ಕೆ ಒಂದು ಕಾರಣವೂ ಉಂಟು; ಕೇಳು. ಹಿಂದೆ ಕೃತಯುಗದಲ್ಲಿ ಪರ್ವತಗಳೆಲ್ಲಕ್ಕೂ ರೆಕ್ಕೆಗಳಿದ್ದುವು. ಅವು ಗರುಡಾನಿಲರಂತೆ ಬಹು ವೇಗವಾಗಿ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಿದ್ದುವು. ॥೧೨೪–೧೨೮॥ ಹೀಗೆ ಆ ಪರ್ವತಗಳೆಲ್ಲವೂ ಸಂಚರಿಸುತ್ತಿದ್ದುದನ್ನು ನೋಡಿ ಇವು ಯಾವ ಪ್ರದೇಶದಲ್ಲಿ ಬೀಳುತ್ತವೆಯೋ, ಯಾವ ಅನರ್ಥವುಂಟಾಗುತ್ತದೆಯೋ ಎಂಬುದಾಗಿ ದೇವತಾಸಮೂಹಗಳೂ, ಸಮಸ್ತ ಭೂತಗಳೂ, ಋಷಿಗಣಗಳೂ ಭಯವನ್ನು ಹೊಂದಿದವು. ಹೀಗೆ ಎಲ್ಲರೂ ಭಯ

¶ "ಯಾದೃಶೋಭವಾನ್" ತಿ. ಪಾ.

ಪರ್ವತಾನಾಂ ಶತಕ್ರತುಃ । ಪಕ್ಷಾಂಶ್ಚಿಚ್ಛೇದ ವಜ್ರೇಣ ತತ್ರ ತತ್ರ ಸಹಸ್ರಶಃ ॥೧೩೦॥ ಸ ಮಾಮುಪಾಗತಃ ಕ್ರುದ್ಧೋ ವಜ್ರಮುದ್ಯಮ್ಯ ದೇವರಾಟ್ । ತತೋಽಹಂ ಸಹಸಾ ಕ್ಷಿಪ್ತಃ ಶ್ವಸನೇನ ಮಹಾತ್ಮನಾ ॥ ೧೩೧ ॥ ಅಸ್ಮಿಁ ಲವಣತೋಯೇಚ ಪ್ರಕ್ಷಿಪ್ತಃ ಪ್ಲವಗೋತ್ತಮ ! ಗುಪ್ತಪಕ್ಷಸಮಗ್ರಶ್ಚ ತವಪಿತ್ರಾಽಭಿರಕ್ಷಿತಃ ॥೧೩೨॥ ತತೋಽಹಂ ಮಾನಯಾಮಿ ತ್ವಾಂ ಮಾನ್ಯೋಹಿ ಮಮ ಮಾರುತಃ । ತ್ವಯಾ * ಮೇ ಹ್ಯೇಷ ಸಂಬಂಧಃ ಕಪಿಮುಖ್ಯ ಮಹಾಗುಣಃ ॥ ೧೩೩ ॥ ಅಸ್ಮಿನ್ನೇವಂ ಗತೇ ಕಾರ್ಯೇ

ತತಃ - ಅನಂತರದಲ್ಲಿ, ಕ್ರುದ್ಧಃ - ಕೋಪಿಷ್ಠನಾದ, ಶತಕ್ರತುಃ - ನೂರು ಯಜ್ಞಗಳನ್ನು ಮಾಡಿದ, ಸಹಸ್ರಾಕ್ಷಃ - ದೇವೇಂದ್ರನು, ಪರ್ವತಾನಾಂ - ಬೆಟ್ಟಗಳ, ಪಕ್ಷಾನ್ - ರೆಕ್ಕೆಗಳನ್ನು, ವಜ್ರೇಣ - ವಜ್ರಾಯುಧದಿಂದ, ತತ್ರತತ್ರ-ಅಲ್ಲಲ್ಲಿಯೆ, ಸಹಸ್ರಶಃ-ಸಹಸ್ರವಿಧವಾಗಿ, ಚಿಚ್ಛೇದ-ಕತ್ತರಿಸಿದನು. ॥ ೧೩೦ ॥ ಸದೇವರಾಟ್-ಆ ದೇವೇಂದ್ರನು, ಕ್ರುದ್ಧಃ-ಕೋಪಗೊಂಡು, ವಜ್ರಂ-ವಜ್ರಾಯುಧವನ್ನು, ಉದ್ಯಮ್ಯ - ಎತ್ತಿ, ಮಾಂ - ನನ್ನನ್ನು, ಉಪಾಗತಃ - ಅಟ್ಟಿಬಂದನು, ತತಃ - ಅನಂತರದಲ್ಲಿ, ಅಹಂ - ನಾನು, ಮಹಾತ್ಮನಾ - ಮಹಾತ್ಮನಾದ, ಶ್ವಸನೇನ - ವಾಯುವಿನಿಂದ, ಸಹಸಾ - ಜಾಗ್ರತೆಯಾಗಿ, ಕ್ಷಿಪ್ತಃ - ಹಾರಿಸಲ್ಪಟ್ಟೆನು. ॥೧೩೧॥ ಅಸ್ಮಿಁಲವಣತೋಯೇಚ - ಈ ಲವಣಸಮುದ್ರದಲ್ಲಿಯೂ, ತವಪಿತ್ರಾ - ನಿನ್ನ ತಂದೆಯಿಂದ, ಪ್ರಕ್ಷಿಪ್ತಃ - ಇಡಲ್ಪಟ್ಟವನಾಗಿ, ಗುಪ್ತ....ಶ್ಚ - ರಕ್ಷಿಸಲ್ಪಟ್ಟ ಎಲ್ಲರೆಕ್ಕೆಗಳೂ ಉಳ್ಳವನಾಗಿಯೂ, ಅಭಿರಕ್ಷಿತಃ - ರಕ್ಷಿಸಲ್ಪಟ್ಟೆನು. ॥ ೧೩೨ ॥ ಹಿ - ಯಾವ ಕಾರಣದಿಂದ, ಮಮ - ನನಗೆ, ಮಾರುತಃ - ವಾಯುವು, ಮಾನ್ಯಃ - ಪೂಜ್ಯನೋ, ತತಃ - ಆಕ್ಕಾರಣದಿಂದ, ಅಹಂ - ನಾನು, ತ್ವಾಂ - ನಿನ್ನನ್ನೂ, ಪೂಜಯಾಮಿ - ಮರ್ಯಾದಿಸುತ್ತೇನೆ, ಹೇ ಕಪಿಮುಖ್ಯ - ಎಲೈ ಕಪಿಶ್ರೇಷ್ಠನೇ, ತ್ವಯಾ - ನಿನ್ನೊಡನೆ, ಮೇ - ನನಗೆ, ಏಷಸಂಬಂಧಃ - ಈ ನೆಂಟತನವು, ಮಹಾಗುಣೋಹಿ - ತುಂಬಾ ಪ್ರಯೋಜನಕರವಾದುದಷ್ಟೆ. ॥ ೧೩೩ ॥ ಹೇ ಮಹಾಕಪೇ - ಎಲೈ ವಾನರಶ್ರೇಷ್ಠನೇ, ಅಸ್ಮಿನ್ಕಾರ್ಯೇ - ಈ ಕೆಲಸವು, ಏವಂಗತೇಸತಿ - ಹೀಗಿರಲು, ಪ್ರೀತಮನಾಃ - ಸಂತೋಷಯುಕ್ತವಾದ ಮನವುಳ್ಳ, ತ್ವಂ - ನೀನು, ಸಾಗರಸ್ಯ-

ಗೊಂಡಿರಲು, ಶತಕ್ರತುವೂ, ಸಹಸ್ರಾಕ್ಷನೂ ಆದ ದೇವರಾಜನು ಮಹಾ ಕೋಪೋದ್ದೀಪಿತನಾಗಿ ತನ್ನ ವಜ್ರಾಯುಧದಿಂದ ಆ ಪರ್ವತಗಳ ರೆಕ್ಕೆಗಳನ್ನಲ್ಲಲ್ಲಿಯೇ ಕತ್ತರಿಸಿಹಾಕಿದನು. ॥೧೨೯–೧೩೦॥ ಎಲೈ ಕಪಿಶ್ರೇಷ್ಠನೇ! ಆ ಬಳಿಕ ದೇವೇಂದ್ರನು ನನ್ನ ರೆಕ್ಕೆಗಳನ್ನೂ ಕತ್ತರಿಸಲು ವಜ್ರಾಯುಧವನ್ನೆತ್ತಿಕೊಂಡು ಮಹಾ ಕೋಪದಿಂದೈತರಲು, ಮಹಾತ್ಮನಾದ ವಾಯುದೇವನು ಬಹು ಜಾಗ್ರತೆಯಾಗಿ ನನ್ನನ್ನು ಹಾರಿಸಿ ಈ ಸಮುದ್ರದಲ್ಲಿ ಕೆಡವಿ ಸಂರಕ್ಷಿಸಿದನು. ಆದರಿಂದ ನಾನು ಈ ನನ್ನ ರೆಕ್ಕೆಗಳೊಡನೆ ಉಳಿದುಕೊಂಡೆನು. ಅಂದಿನಿಂದ ನಾನು ಈ ಲವಣ ಸಮುದ್ರದಲ್ಲಿ ಸುಖವಾಗಿ ವಾಸಮಾಡಿಕೊಂಡಿದ್ದೇನೆ. ಎಲೈ ಕಪಿಸತ್ತಮನೇ! ಈ ಕಾರಣದಿಂದ ನಿನ್ನ ತಂದೆಯಾದ ವಾಯುದೇವನು ನನಗೆ ಪರಮಪೂಜ್ಯನಾಗಿರುವನು. ನೀನು ಆತನ ಮಗನಾದುದರಿಂದ ನಾನು ನಿನ್ನನ್ನು ಪೂಜಿಸುತ್ತಿರುವೆನು. ಎಲೈ ಕಪಿಶ್ರೇಷ್ಠನೇ! ಇದೇ ನನಗೂ, ನಿನಗೂ ಇರುವ ದೊಡ್ಡ ಸಂಬಂಧವು. ನಮ್ಮಿಬ್ಬರ ಸಂಬಂಧವಿಂತಿರಲು,

* "ಮಯ್ಯೇಷ" ತಿ. ಪಾ.

ಸಾಗರಸ್ಯ ಮಮೈವಚ । ಪ್ರೀತಿಂ ಪ್ರೀತಮನಾಃ ಕರ್ತುಂ ತ್ವಮರ್ಹಸಿ ಮಹಾ $ ಕಪೇ! ॥ ೧೩೪ ॥ ಶ್ರಮಂ ಮೋಕ್ಷಯ ಪೂಜಾಂಚ ಗೃಹಾಣ ಕಪಿಸತ್ತಮ! । ಪ್ರೀತಿಂಚ ಬಹುಮನ್ಯಸ್ವ ಪ್ರೀತೋಽಸ್ಮಿ ತವದರ್ಶನಾತ್ " ॥ ೧೩೫ ॥ ಏವಮುಕ್ತಃ ಕಪಿಶ್ರೇಷ್ಠಸ್ತಂ ನಗೋತ್ತಮಮಬ್ರವೀತ್ ॥೧೩೬॥ "ಪ್ರೀತೋಽಸ್ಮಿ ಕೃತಮಾತಿಥ್ಯಂ ಮನ್ಯುರೇಷೋಽಪನೀಯತಾಂ । ತ್ವರತೇ ಕಾರ್ಯಕಾಲೋ ಮೇ ಅಹಶ್ಚಾಪ್ಯತಿವರ್ತತೇ । ಪ್ರತಿಜ್ಞಾಚ ಮಯಾ ದತ್ತಾ ನಸ್ಥಾತವ್ಯಮಿಹಾಂತರೇ" ॥ ೧೩೭ ॥

ಸಮುದ್ರಕ್ಕೂ, ಮಮೈವಚ - ನನಗೂ, ಪ್ರೀತಿಂ - ಸಂತೋಷವನ್ನುಂಟುಮಾಡಲು, ಅರ್ಹಸಿ - ಸಮರ್ಥನಾಗಿರುವೆ. ॥ ೧೩೪ ॥ ಹೇ ಕಪಿಸತ್ತಮ-ಎಲೈ ವಾನರಶ್ರೇಷ್ಠನೇ, ಶ್ರಮಂ-ಆಯಾಸವನ್ನು, ಮೋಕ್ಷಯ-ಹೋಗಲಾಡಿಸಿಕೋ, ಪೂಜಾಂಚ-ನನ್ನ ಪೂಜೆಯನ್ನೂ ಕೂಡಾ, ಗೃಹಾಣ-ಸ್ವೀಕರಿಸು, ಪ್ರೀತಿಂಚ - ವಿಶ್ವಾಸವನ್ನೂ ಬಹುಮನ್ಯಸ್ವ - ಸನ್ಮಾನಿಸು, ತವ - ನಿನ್ನ, ದರ್ಶನಾತ್ - ನೋಡುವಿಕೆಯಿಂದ, ಪ್ರೀತಃ - ಸಂತೋಷಪಟ್ಟವನು, ಅಸ್ಮಿ - ಆಗಿದ್ದೇನೆ. ॥೧೩೫॥ ಏವಂ - ಈ ರೀತಿಯಾಗಿ, ಉಕ್ತಃ - ಹೇಳಲ್ಪಟ್ಟ, ಕಪಿಶ್ರೇಷ್ಠಃ - ವಾನರಶ್ರೇಷ್ಠನು, ತನ್ನಗೋತ್ತಮಂ - ಆ ಪರ್ವತೋತ್ತಮನನ್ನು ಕುರಿತು, ಅಬ್ರವೀತ್ - ಹೇಳಿದನು, ಆತಿಥ್ಯಂ - ಅತಿಥಿಸತ್ಕಾರವು, ಕೃತಂ - ಮಾಡಲ್ಪಟ್ಟಿತು, ಪ್ರೀತಃ-ಸಂತುಷ್ಟನು, ಅಸ್ಮಿ-ಆದೆನು, ಏಷಮನ್ಯುಃ-ಈ ಕೋಪವು, ಅಪನೀಯತಾಂ-ಹೋಗಲಾಡಿಸಲ್ಪಡಲಿ. ॥ ೧೩೬ ॥ ಕಾರ್ಯಕಾಲಃ - ಲಂಕಾಪ್ರವೇಶಕಾಲದ ಸಮಯವು, ತ್ವರತೇ - ತ್ವರೆಗೊಳಿಸುತ್ತಿದೆ, ಮೇ - ನನಗೆ, ಅಹಶ್ಚಾಪಿ - ಹಗಲೂಕೂಡಾ, ಅತಿವರ್ತತೇ - ಅತಿಕ್ರಮಿಸುವದು, ಪ್ರತಿಜ್ಞಾಚ - ಭಾಷೆಯೂಸಹ, ಮಯಾ - ನನ್ನಿಂದ, ದತ್ತಾ - ಕೊಡಲ್ಪಟ್ಟದೆ, ಇಹಾಂತರೇ - ಈ ಸಮುದ್ರಮಧ್ಯದಲ್ಲಿ, ನಸ್ಥಾತವ್ಯಂ - ನಿಲ್ಲಕೂಡದು. ॥ ೧೩೭ ॥ ವೀರ್ಯವಾನ್ - ಸಾಮರ್ಥ್ಯವುಳ್ಳ,

ನೀನೀಗ ನನ್ನ ಸತ್ಕಾರವನ್ನು ಪಡೆದುದಾದರೆ ನನಗೂ, ಈ ಸಮುದ್ರರಾಜನಿಗೂ ಸಂತೋಷವನ್ನುಂಟು ಮಾಡಿದಂತಾಗುವುದು. ಎಲೈ ಕಪಿಶ್ರೇಷ್ಠನೇ! ನೀನು ಸ್ವಲ್ಪಕಾಲ ನನ್ನ ಶಿಖರಗಳಲ್ಲಿ ತಂಗಿ ಆಯಾಸವನ್ನು ಪರಿಹರಿಸಿಕೊಂಡು, ನನ್ನ ಸತ್ಕಾರವನ್ನು ಸ್ವೀಕರಿಸಿ ನಮ್ಮಿರ್ವರನ್ನೂ ಸಂತೋಷಗೊಳಿಸು. ಎಲೈ ಮಹಾ ಕಪಿಯೇ! ನಿನ್ನ ದರ್ಶನದಿಂದ ನನಗೆ ಎಣೆಯಿಲ್ಲದಷ್ಟು ಆನಂದವಾಗಿರುವುದು" ಎಂದು ಹೇಳಿದನು. ॥ ೧೩೧–೧೩೫ ॥ ಆಗ ಮಹಾತ್ಮನಾದ ಆ ಹನುಮಂತನು, ಆ ಮೈನಾಕನನ್ನು ಕುರಿತು, "ಎಲೈ ಮೈನಾಕನೇ! ನಿನ್ನ ದರ್ಶನದಿಂದಲೇ ನಾನು ಸತ್ಕೃತನಾಗಿರುವೆನು. ಅತಿಥಿ ಸತ್ಕಾರವೂ ಮಾಡಿದಂತಾಯಿತು. ಇಷ್ಟು ಪ್ರಾರ್ಥಿಸಿದರೂ ನನ್ನ ಸತ್ಕಾರವನ್ನು ಈತನು ಸ್ವೀಕರಿಸದೆ ನಿರಾಕರಿಸಿದನೆಂದು ನನ್ನಲ್ಲಿ ಆಗ್ರಹಗೊಳ್ಳಬೇಡ. ನನ್ನ ಕಾರ್ಯಕ್ಕೆ ಕಾಲವು ಮೀರುತ್ತಿರುವುದು. ದಿನವೂ ಸಹ ಕಳೆಯುತ್ತಿರುವುದು. ಇಂದೇ ಸಮುದ್ರವನ್ನು ಲಂಘಿಸಿ ಸೀತಾದೇವಿಯನ್ನು ನೋಡಿಯೇ ನೋಡುವೆನೆಂದು ಕಪಿಯೂಥಪತಿಗಳ ಮುಂದೆ ಪ್ರತಿಜ್ಞೆ ಮಾಡಿರುವೆನಾದುದರಿಂದ ನಾನು ಎಲ್ಲಿಯೂ ನಿಲ್ಲಲಾಗದು" ಎಂದು ಹೇಳಿದನು. ಆ ಬಳಿಕ ಕಪಿಶ್ರೇಷ್ಠನಾದ ಆ ಹನುಮಂತನು

$ "ಮತೇ" ತಿ. ಪಾ.

ಇತ್ಯುಕ್ತ್ವಾ ಪಾಣಿನಾ ಶೈಲಮಾಲಭ್ಯ ಹರಿಪುಂಗವಃ । ಜಗಾಮಾಕಾಶಮಾವಿಶ್ಯ ವೀರ್ಯವಾನ್ಪ್ರಹಸನ್ನಿವ ॥೧೩೮॥ ಸಪರ್ವತ ಸಮುದ್ರಾಭ್ಯಾಂ ಬಹುಮಾನಾದವೇಕ್ಷಿತಃ । ಪೂಜಿತಶ್ಚೋಪಪನ್ನಾಭಿ ರಾಶೀರ್ಭಿ § ರನಿಲಾತ್ಮಜಃ ॥ ೧೩೯ ॥ ಅಥೋರ್ಧ್ವಂ ದೂರಮುತ್ಪತ್ಯ ಹಿತ್ವಾ ಶೈಲಮಹಾರ್ಣವೌ । ಪಿತುಃ ಪಂಥಾನ ‡ ಮಾಸ್ಥಾಯ ಜಗಾಮ ವಿಮಲೇಂಽಬರೇ ॥೧೪೦॥ ತತಶ್ಚೋರ್ಧ್ವಗತಿಂ ಪ್ರಾಪ್ಯ ಗಿರಿಂ ತಮವಲೋಕಯನ್ । ವಾಯುಸೂನುರ್ನಿರಾಲಂಬೇ ಜಗಾಮ * ವಿಮಲೇಂಽಬರೇ ॥೧೪೧॥ ತದ್ದ್ವಿತೀಯಂ ಹನುಮತೋ ದೃಷ್ಟ್ವಾ ಕರ್ಮ ಸುದುಷ್ಕರಂ । ಪ್ರಶಶಂಸು ಸ್ಸುರಾಸ್ಸರ್ವೇ ಸಿದ್ಧಾಶ್ಚ

ಹರಿಪುಂಗವಃ - ವಾನರಶ್ರೇಷ್ಠನು, ಇತಿ - ಹೀಗೆ, ಉಕ್ತ್ವಾ - ಹೇಳಿ, ಪಾಣಿನಾ - ಹಸ್ತದಿಂದ, ಶೈಲಂ - ಪರ್ವತವನ್ನು, ಆಲಭ್ಯ - ಸ್ಪರ್ಶಿಸಿ, ಪ್ರಹಸನ್ನಿವ - ಕಿರುನಗೆಯುಳ್ಳವನಾಗಿ, ಆಕಾಶಂ - ಅಂತರಿಕ್ಷವನ್ನು, ಆವಿಶ್ಯ-ಹೊಕ್ಕು, ಜಗಾಮ-ಹೊರಟನು. ॥ ೧೩೮ ॥ ಅಥ-ಅನಂತರದಲ್ಲಿ, ಸಅನಿಲಾತ್ಮಜಃ - ಆ ವಾಯುಪುತ್ರನು, ಪರ್ವ....ಭ್ಯಾಂ - ಆ ಪರ್ವತಸಮುದ್ರಗಳಿಂದ, ಬಹುಮಾನಾತ್ - ಮರ್ಯಾದೆಯಿಂದ, ಅವೇಕ್ಷಿತಃ - ಕಾಣಲ್ಪಟ್ಟವನಾಗಿ, ಉಪಪನ್ನಾಭಿಃ - ರಾಮಕಾರ್ಯಸಿದ್ಧಿಗೆ ಉಚಿತವಾದ, ಆಶೀರ್ಭಿಶ್ಚ - ಆಶೀರ್ವಾದಗಳಿಂದಲೂ, ಪೂಜಿತಃ - ಪೂಜಿಸಲ್ಪಟ್ಟವನಾದನು. ॥೧೩೯॥ ಶೈಲ....ವೌ - ಪರ್ವತಸಮುದ್ರಗಳನ್ನು, ಹಿತ್ವಾ - ಬಿಟ್ಟು, ಊರ್ಧ್ವಂ - ಮೇಲ್ಭಾಗದಲ್ಲಿ, ದೂರಂ - ದೂರವಾಗಿ, ಉತ್ಪತ್ಯ ಹಾರಿಹೋಗಿ, ಪಿತುಃ - ತಂದೆಯಾದ ವಾಯುವಿನ, ಪಂಥಾನಂ - ದಾರಿಯನ್ನು, ಆಸ್ಥಾಯ - ಹೊಂದಿ, ವಿಮಲೇ - ನಿರ್ಮಲವಾದ, ಅಂಬರೇ - ಆಕಾಶದಲ್ಲಿ, ಜಗಾಮ - ಹೊರಟನು. ॥೧೪೦॥ ವಾಯುಸೂನುಃ-ವಾಯುಪುತ್ರನು, ಭೂಯಃ-ಮರಳಿಯೂ, ಊರ್ಧ್ವಗತಿಂಚ-ಊರ್ಧ್ವಗಮನವನ್ನೂಕೂಡಾ, ಪ್ರಾಪ್ಯ - ಹೊಂದಿ, ತಂಗಿರಿಂ - ಆ ಬೆಟ್ಟವನ್ನು, ಅವಲೋಕಯನ್ - ನೋಡುತ್ತಿರುವನಾಗಿ, ನಿರಾಲಂಬೇ - ನಿರಾಧಾರವಾದ, ವಿಮಲೇ - ನಿರ್ಮಲವಾದ, ಅಂಬರೇ - ಅಂತರಿಕ್ಷದಲ್ಲಿ, ಜಗಾಮ - ಹೊರಟನು. ॥೧೪೧॥ ಸರ್ವೇ - ಸಮಸ್ತರಾದ, ಸುರಾಃ - ದೇವತೆಗಳು, ಪರಮರ್ಷಯಃ - ಋಷಿಶ್ರೇಷ್ಠರು, ಸಿದ್ಧಾಶ್ಚ - ಸಿದ್ಧರೂ ಸಹ, ಸುದುಷ್ಕರಂ - ಮಾಡಲಶಕ್ಯವಾದ, ದ್ವಿತೀಯಂ - ಎರಡನೆಯದಾದ, ಹನೂಮತಃ - ಹನುಮಂತನ, ತತ್ - ಆ ಪರ್ವತಜಯರೂಪವಾದ,

---

ಆ ಪರ್ವತವನ್ನು ತನ್ನ ಕೈಯಿಂದ ಸವರಿ ಪ್ರಸನ್ನ ಮುಖನಾಗಿ ಗಗನಮಾರ್ಗವನ್ನು ಪ್ರವೇಶಿಸಿ ಹೊರಟನು. ॥ ೧೩೭–೧೩೮ ॥ ಹೀಗೆ ಆ ಕಪಿವೀರನು ಮೈನಾಕನಿಂದಲೂ, ಸಮುದ್ರರಾಜನಿಂದಲೂ ಗೌರವಿಸಲ್ಪಟ್ಟು ಉಚಿತೋಪಚಾರಗಳಿಂದಲೂ, ಆಶೀರ್ವಚನಗಳಿಂದಲೂ ಸತ್ಕೃತನಾಗಿ ಬಹುದೂರ ಮೇಲಕ್ಕೆ ಹಾರಿ ಆ ಶೈಲಮಹಾರ್ಣವಗಳನ್ನು ಕಳೆದು ವಾಯುಮಾರ್ಗವನ್ನು ಹಿಡಿದು ಆಕಾಶದಲ್ಲಿ ಹೊರಟನು. ಇಷ್ಟೆಯಲ್ಲದೆ ವಾಯುಪುತ್ರನಾದ ಆ ಹನುಮಂತನು ಆಲಂಬರಹಿತವಾದ ಆಕಾಶದಲ್ಲಿ ಮತ್ತೂ ಮೇಲಕ್ಕೆ ಹಾರಿ ಆ ಪರ್ವತವನ್ನು ನೋಡುತ್ತ ಮುಂದುಮುಂದಕ್ಕೆ ಹೋಗುತ್ತಿದ್ದನು. ಈ ರೀತಿ ಎರಡನೆಯ ಸಲವೂ ಅತ್ಯಸಾಧ್ಯವಾದ ಕಾರ್ಯವನ್ನೆಸಗಿದ ಆ ಕಪಿವೀರನ ಸಾಹಸ ಪರಾಕ್ರಮಗಳನ್ನು ನೋಡಿ ಸಮಸ್ತ ದೇವತೆಗಳೂ, ಸಿದ್ಧರೂ, ಋಷಿಸತ್ತಮರೂ ಅತನನ್ನು ಬಹಳವಾಗಿ ಕೊಂಡಾಡಿದರು. ಆಗ ಮೈನಾ

---

§ "ಅಭಿನಂದಿತಃ" ತಿ. ರಾ. ಕ. ಪಾ. ‡ "ಆಸಾದ್ಯ" ತಿ. ಪಾ. * "ಕಪಿಕುಂಜರಃ" ತಿ. ಪಾ.

ಪರಮರ್ಷಯಃ ||೧೪೨|| ದೇವತಾಶ್ಚಾಭವನ್ ಹೃಷ್ಟಾಸ್ತತ್ರಸ್ಥಾಸ್ತಸ್ಯ ಕರ್ಮಣಾ | ಕಾಂಚನಸ್ಯ ಸುನಾಭಸ್ಯ ಸಹಸ್ರಾಕ್ಷಶ್ಚ ವಾಸವಃ ||೧೪೩|| ಉವಾಚ ವಚನಂ ಧೀಮಾನ್ ಪರಿತೋಷಾತ್ಸಗದ್ಗದಂ | ಸುನಾಭಂ ಪರ್ವತಶ್ರೇಷ್ಠಂ ಸ್ವಯಮೇವ ಶಚೀಪತಿಃ ||೧೪೪|| "ಹಿರಣ್ಯನಾಭ! ಶೈಲೇಂದ್ರ! ಪರಿತುಷ್ಟೋಽಸ್ಮಿ ತೇ ಭೃಶಂ | ಅಭಯಂ ತೇ ಪ್ರಯಚ್ಛಾಮಿ ತಿಷ್ಠ ಸೌಮ್ಯ! ಯಥಾಸುಖಂ ||೧೪೫|| ಸಾಹ್ಯಂ ಕೃತಂ ತೇ ಸುಮಹದ್ವಿಕ್ರಾಂತಸ್ಯ ಹನೂಮತಃ | ಕ್ರಮತೋ ಯೋಜನಶತಂ ನಿರ್ಭಯಸ್ಯ ಭಯೇ ಸತಿ ||೧೪೬|| ರಾಮಸ್ಯೈಷ¶ ಹಿ ದೌತ್ಯೇನ ಯಾತಿ ದಾಶರಥೇ

ಕರ್ಮ - ಕಾರ್ಯವನ್ನು, ದೃಷ್ಟ್ವಾ - ಕಂಡು, ಪ್ರಶಶಂಸುಃ - ಸ್ತುತಿಸಿದರು. ||೧೪೨|| ಕಾಂಚನಸ್ಯ - ಸುವರ್ಣಮಯವಾದ, ಸುನಾಭಸ್ಯ - ಮಹಾ ಶಿಖರಗಳುಳ್ಳ, ತಸ್ಯ - ಆ ಮೈನಾಕನ, ಕರ್ಮಣಾ - ಹನುಮಂತನಿಗೆ ಸಹಾಯ ಮಾಡಿದುದರಿಂದ, ತತ್ರಸ್ಥಾಃ-ಅಲ್ಲಿರುವ, ದೇವತಾಶ್ಚ - ದೇವತೆಗಳೂ ಸಹ, ಹೃಷ್ಟಾಃ - ಸಂತೋಷಪಟ್ಟವರು, ಅಭವನ್ - ಆದರು, ಸಹಸ್ರಾಕ್ಷಃ - ಸಹಸ್ರ ನೇತ್ರಗಳುಳ್ಳ, ವಾಸವಃ- ದೇವೇಂದ್ರನೂಕೂಡ, ಹೃಷ್ಟಃ - ಸಂತುಷ್ಟಾಂತರಂಗನು, ಅಭವತ್ - ಆದನು. ||೧೪೩|| ಧೀಮಾನ್ - ಪಂಡಿತನಾದ, ಶಚೀಪತಿಃ - ಶಚೀಪತಿಯಾದ ಇಂದ್ರನು, ಸ್ವಯಮೇವ - ತಾನಾಗಿಯೇ, ಸುನಾಭಂ- ಮಹಾಶೃಂಗಗಳುಳ್ಳ, ಪರ್ವತಶ್ರೇಷ್ಠಂ-ಪರ್ವತಶ್ರೇಷ್ಠನನ್ನು ಕುರಿತು, ಪರಿತೋಷಾತ್-ಸಂತೋಷದಿಂದ, ಸಗದ್ಗದಂ - ಗದ್ಗದ ಧ್ವನಿಯೊಡಗೂಡಿದವನಾಗಿ, ವಚನಂ - ವಾಕ್ಯವನ್ನು, ಉವಾಚ - ಹೇಳಿದನು. ||೧೪೪|| ಹೇ ಹಿರಣ್ಯನಾಭ - ಎಲೈ ಸುವರ್ಣಶೃಂಗಗಳುಳ್ಳವನೇ, ಹೇ ಶೈಲೇಂದ್ರ - ಎಲೈ ಪರ್ವತ ಶ್ರೇಷ್ಠನೇ, ತೇ - ನಿನ್ನಲ್ಲಿ, ಭೃಶಂ - ಬಹಳವಾಗಿ, ಪರಿತುಷ್ಟಃ - ಸಂತೋಷಪಟ್ಟವನು, ಅಸ್ಮಿ - ಆಗಿದ್ದೇನೆ, ತೇ - ನಿನಗೆ, ಅಭಯಂ - ಭಯರಾಹಿತ್ಯವನ್ನು, ಪ್ರಯಚ್ಛಾಮಿ - ಕೊಡುವೆನು, ಹೇ ಸೌಮ್ಯ - ಎಲೈ ಕೋಪವಿಲ್ಲದವನೇ, ಯಥಾಸುಖಂ - ಸುಖವಾಗಿ, ತಿಷ್ಠ - ನಿಲ್ಲು. ||೧೪೫|| ತೇ - ನಿನಗೆ, ಭಯೇಸತ್ಯಪಿ - ಭಯವಿದ್ದರೂ, ನಿರ್ಭಯಸ್ಯ - ಭೀತಿಯಿಲ್ಲದೆ, ಯೋಜನಶತಂ - ನೂರುಗಾವುದಗಳನ್ನು, ಕ್ರಮತಃ - ಹಾರುತ್ತಲಿರುವ, ವಿಕ್ರಾಂತಸ್ಯ - ಶೂರನಾದ, ಹನೂಮತಃ - ಆಂಜನೇಯನಿಗೆ, ಮಹತ್ - ದೊಡ್ಡದಾದ, ಸಾಹ್ಯಂ - ಸಹಾಯವು, ಕೃತಂ - ಮಾಡಲ್ಪಟ್ಟಿತು.

ಕನು ಆ ಹನುಮಂತನಿಗೆ ಮಾಡಿದ ಸತ್ಕಾರವನ್ನು ನೋಡುತ್ತಿದ್ದ ದೇವತೆಗಳೆಲ್ಲರೂ ಪರಮಾನಂದಿತರಾದರು. ||೧೪೨–೧೪೩|| ಶಚೀಪತಿಯಾದ ದೇವೇಂದ್ರನೂ ಸಹ ಆ ಪರ್ವತ ಶ್ರೇಷ್ಠನ ಕಾರ್ಯಕ್ಕೆ ಮೆಚ್ಚಿ, ಸಂತೋಷಾಧಿಕ್ಯದಿಂದ ಗದ್ಗದಸ್ವರಭರಿತನಾಗಿ ಆತನನ್ನು ಕುರಿತು, "ಸುವರ್ಣಶಿಖರಗಳಿಂದೊಪ್ಪುತ್ತಿರುವ ಎಲೈ ಮೈನಾಕನೇ! ನಾನು ನಿನ್ನಲ್ಲಿ ಸುಪ್ರ ಸನ್ನನಾಗಿರುವೆನು. ಇದೋ, ನಿನಗೆ ಅಭಯವಿತ್ತಿರುವೆನು ; ಸುಖವಾಗಿರು. ಎಲೈ ಪರ್ವತ ರಾಜನೇ! ನೀನು ಮಾಡಿರುವ ಈ ಸತ್ಕಾರವು ಪ್ರಶಂಸನೀಯವಾದುದು. ನನ್ನಿಂದ ನಿನಗೆ ಬಹಳವಾದ ಹೆದರಿಕೆಯಿದ್ದಿತು. ಆದರೂ ನೀನು ಧೈರ್ಯಗೊಂಡು, ನೂರುಯೋಜನ ಗಳ ವಿಸ್ತೀರ್ಣವಾದ ಈ ಸಮುದ್ರವನ್ನು ದಾಟುತ್ತಿರುವ ಈ ಹನುಮಂತನಿಗೆ ಸಹಾಯ ಮಾಡಿದೆ. ಇದರಿಂದ ನನಗೆ ಬಹಳ ಸಂತೋಷವಾಗಿರುವುದು. ಎಲೈ ಮೈನಾಕನೇ! ಈ

¶ "ಹಿತಾರ್ಥ್ಯೈವ" ತಿ. ಪಾ.

ಹರಿಃ । ಸತ್ಕ್ರಿಯಾಂ ಕುರ್ವತಾ ೪ ಶಕ್ತ್ಯಾ ತೋಷಿತೋಽಸ್ಮಿ ದೃಢಂ ತ್ವಯಾ ”
॥೧೪೭॥ ತತಃ ಪ್ರಹರ್ಷಮಗಮದ್ವಿಪುಲಂ ಪರ್ವತೋತ್ತಮಃ । ದೇವತಾನಾಂ
ಪತಿಂ ದೃಷ್ಟ್ವಾ ಪರಿತುಷ್ಟಂ ಶತಕ್ರತುಂ ॥೧೪೮॥ ¶ ಸವೈ ದತ್ತವರಶ್ಶೈಲೋ ಬಭೂ
ವಾಽವಸ್ಥಿತಸ್ತದಾ । ಹನುಮಾಂಶ್ಚ ಮುಹೂರ್ತೇನ ವ್ಯತಿಚಕ್ರಾಮ ಸಾಗರಂ ॥೧೪೯॥
§ ತಂ ಪ್ರಯಾಂತಂ ಸಮುದ್ವೀಕ್ಷ್ಯ ಹ್ಯಾಕಾಶೇ ಮಾರುತಾತ್ಮಜಂ । ತತೋ ದೇವಾ
ಸ್ಸಗಂಧರ್ವಾ ಸ್ಸಿದ್ಧಾಶ್ಚ ಪರಮರ್ಷಯಃ । ಅಬ್ರುವ ನ್ಸೂರ್ಯಸಂಕಾಶಾಂ ಸುರಸಾಂ

॥೧೪೬॥ ಏಷಹರಿಃ - ಈ ವಾನರನು, ದಾಶರಥೇಃ - ದಶರಥಪುತ್ರನಾದ, ರಾಮಸ್ಯ - ಶ್ರೀರಾಮನಿಗೆ, ದೂತ್ಯೇನ - ದೂತಭಾವದಿಂದ, ಯಾತಿಹಿ - ಹೋಗುತಲಿದ್ದಾನೆಯಷ್ಟೆ, ತಸ್ಯ - ಆ ಆಂಜನೇಯನಿಗೆ, ಸತ್ಕ್ರಿಯಾಂ - ಅತಿಥಿಸತ್ಕಾರವನ್ನು, ಕುರ್ವತಾ - ಮಾಡಿದ, ತ್ವಯಾ - ನಿನ್ನಿಂದ, ತೋಷಿತಃ - ಸಂತೋಷಗೊಳಿಸಲ್ಪಟ್ಟವನು, ಅಸ್ಮಿ-ಆದೆನು, ದೃಢಂ-ನಿಶ್ಚಯವು. ॥ ೧೪೭ ॥ ತತಃ-ಅನಂತರದಲ್ಲಿ, ಪರ್ವತೋತ್ತಮಃ - ಪರ್ವತಶ್ರೇಷ್ಠನು, ದೇವತಾನಾಂ - ದೇವತೆಗಳಿಗೆ, ಪತಿಂ - ಸಾರ್ವಭೌಮನಾದ, ಪರಿತುಷ್ಟಂ - ಸಂತೋಷಗೊಂಡ, ಶತಕ್ರತುಂ - ದೇವೇಂದ್ರನನ್ನು, ದೃಷ್ಟ್ವಾ - ನೋಡಿ, ವಿಪುಲಂ - ಬಹಳವಾದ, ಪ್ರಹರ್ಷಂ - ಸಂತೋಷವನ್ನು, ಅಗಮತ್ - ಹೊಂದಿದನು. ॥ ೧೪೮ ॥ ತದಾ - ಆ ಸಮಯದಲ್ಲಿ, ದತ್ತವರಃ-ಕೊಡಲ್ಪಟ್ಟ ವರವುಳ್ಳ, ಸಶೈಲೋವೈ-ಆ ಪರ್ವತವೂಕೂಡಾ, ಅವಸ್ಥಿತಃ - ನಿಂತಿರುವಂತಹದು, ಬಭೂವ - ಆಯಿತು, ಹನೂಮಾಂಶ್ಚ - ಹನುಮಂತನೂ ಸಹ, ಮುಹೂರ್ತೇನ-ಸ್ವಲ್ಪಹೊತ್ತಿನಲ್ಲಿಯೇ, ಸಾಗರಂ - ಸಮುದ್ರಪ್ರದೇಶವನ್ನು, ವ್ಯತಿಚಕ್ರಾಮ - ಅತಿಕ್ರಮಿಸಿಹೋದನು. ॥೧೪೯॥ ತತಃ - ಅನಂತರದಲ್ಲಿ, ಸಗಂಧರ್ವಾಃ - ದೇವಗಾಯಕರೊಡಗೂಡಿದ, ದೇವಾಃ-ದೇವತೆಗಳು, ಪರಮರ್ಷಯಃ - ಋಷಿಶ್ರೇಷ್ಠರೂ, ಸಿದ್ಧಾಶ್ಚ - ಸಿದ್ಧರೂ, ಆಕಾಶೇ - ಅಂತರಿಕ್ಷದಲ್ಲಿ, ಪ್ರಯಾಂತಂ-ಹೋಗುತ್ತಿರುವ, ತಂಮಾರುತಾತ್ಮಜಂ - ಆ ವಾಯುನಂದನನನ್ನು, ಸಮುದ್ವೀಕ್ಷ್ಯ - ನೋಡಿ, ಸೂರ್ಯಸಂಕಾಶಾಂ-ಸೂರ್ಯನಂತೆ ಕಾಂತಿಯುಳ್ಳ, ನಾಗಮಾತರಂ-ಸರ್ಪಜನನಿಯಾದ, ಸುರಸಾಂ-

ಮಹಾ ಕಪಿಯು ದಶರಥರಾಯನ ಮಗನಾದ ಶ್ರೀರಾಮಮೂರ್ತಿಯ ದೂತನಾಗಿ ಈ ಸಮುದ್ರೋಲ್ಲಂಘನ ಕಾರ್ಯವನ್ನೆಸಗುತ್ತಿರುವನು. ಇಂತಹನನ್ನು ಸತ್ಕರಿಸಿರುವ ನಿನ್ನಲ್ಲಿ ನಾನು ನಿಜವಾಗಿಯೂ ಪ್ರೀತನಾಗಿರುವೆನು ” ಎಂದು ಹೇಳಿದನು. ॥೧೪೪—೧೪೭॥ ದೇವೇಂದ್ರನೀರೀತಿ ಸಂತೋಷದಿಂದ ನುಡಿದ ಮಾತುಗಳನ್ನು ಕೇಳಿದ ಮೈನಾಕನು ತನಗಿದ್ದ ಭಯವನ್ನು ತೊರೆದು ಸ್ವಸ್ಥಚಿತ್ತನಾದನು. ಅತ್ತ ಮಾರುತಿಯು ಒಂದು ಮುಹೂರ್ತಕಾಲದಲ್ಲಿಯೇ ಸಾಗರವನ್ನತಿಕ್ರಮಿಸಿ ಹೋಗುತ್ತಿದ್ದನು. ಆ ಸಮಯದಲ್ಲಿ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಋಷಿಸತ್ತಮರೂ ಆತನನ್ನು ಕಂಡು ಆತನ ಬಲವೆಷ್ಟಿರಬಹುದೆಂದು ಪರೀಕ್ಷಿಸಲೋಸುಗ, ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳವಳೂ, ನಾಗಮಾತೆಯೂ ಆದ ಸುರಸೆ

೪ “ ತಸ್ಯ ” ರಾ. ಪಾ.

¶ ಮುಂದೆ ಹನುಮಂತನು ಹಿಂತಿರುಗಿ ಬರುವಾಗಲೂ ಮೈನಾಕನನ್ನು ಸ್ಪರ್ಶಿಸಿ ಬಂದುದಾಗಿ ಹೇಳಿರುವುದರಿಂದ ಅದುವರೆಗೂ ಆ ಪರ್ವತವು ಅಲ್ಲಿಯೇ ನಿಂತಿದ್ದಿತೆಂದು ಗ್ರಹಿಸಬೇಕು. (ಗೋ)

§ ಈ ಪಾದವು ತಿ. ರಾ. ಪಾ. ಗಳಲ್ಲಿ ಅಧಿಕ.

ನಾಗಮಾತರಂ ॥ ೧೫೦ ॥ "ಅಯಂ ವಾತಾತ್ಮಜಶ್ಶ್ರೀಮಾ‌ನ್ ಪ್ಲವತೇ ಸಾಗರೋಪರಿ । ಹನೂಮಾನ್ನಾಮ ತಸ್ಯ ತ್ವಂ ಮುಹೂರ್ತಂ ವಿಘ್ನಮಾಚರ ॥೧೫೧॥ ರಾಕ್ಷಸಂ ರೂಪಮಾಸ್ಥಾಯ ಸುಘೋರಂ ಪರ್ವತೋಪಮಂ । ದಂಷ್ಟ್ರಾಕರಾಳಂ ಪಿಂಗಾಕ್ಷಂ ವಕ್ತ್ರಂ ಕೃತ್ವಾ ನಭ § ಸ್ಸಮಂ ॥ ೧೫೨ ॥ ಬಲಮಿಚ್ಛಾಮಹೇ ಜ್ಞಾತುಂ ಭೂಯಶ್ಚಾಸ್ಯ ಪರಾಕ್ರಮಂ । ತ್ವಾಂ ವಿಜೇಷ್ಯತ್ಯುಪಾಯೇನ ವಿಷಾದಂ ವಾ ಗಮಿಷ್ಯತಿ" ॥ ೧೫೩ ॥ ಏವಮುಕ್ತಾತು ಸಾ ದೇವೀ ದೈವತೈರಭಿಸತ್ಕೃತಾ । ಸಮುದ್ರಮಧ್ಯೇ ಸುರಸಾ ಬಿಭ್ರತೀ ರಾಕ್ಷಸಂ ವಪುಃ ॥ ೧೫೪ ॥ ವಿಕೃತಂ ಚ ವಿರೂಪಂ ಚ ಸರ್ವಸ್ಯ ಚ ಭಯಾ

ಸುರಸಾದೇವಿಯನ್ನು ಕುರಿತು, ಅಬ್ರುವ‌ನ್ - ಹೇಳಿದರು. ॥೧೫೦॥ ಶ್ರೀಮಾ‌ನ್ - ತೇಜಸ್ವಿಯಾದ, ಹನೂಮಾನ್ನಾಮ - ಹನುಮಂತನೆಂದು ಪ್ರಸಿದ್ಧನಾದ, ಅಯಂವಾತಾತ್ಮಜಃ - ಈ ವಾಯುಪುತ್ರನು, ಸಾಗರೋಪರಿ-ಸಮುದ್ರದಮೇಲೆ, ಪ್ಲವತೇ-ಲಂಘಿಸುತ್ತಿರುವನು, ತ್ವಂ-ನೀನು, ಪರ್ವತೋಪಮಂ-ಪರ್ವತಸಮಾನವಾದ, ಸುಘೋರಂ - ಭಯಂಕರವಾದ, ಪಿಂಗಾಕ್ಷಂ - ಹಸುರಾಗಿರುವ ನೇತ್ರಗಳುಳ್ಳ, ನಭಸ್ಸಮಂ - ಅಂತರಿಕ್ಷಸಮವಾದ, ವಕ್ತ್ರಂ - ಮುಖವನ್ನು, ಕೃತ್ವಾ - ಮಾಡಿಕೊಂಡು, ತಸ್ಯ - ಆತನಿಗೆ, ಮುಹೂರ್ತಂ - ಸ್ವಲ್ಪಕಾಲ, ವಿಘ್ನಂ - ತಡೆಯನ್ನು. ಆಚರ - ಆಚರಿಸು. ॥೧೫೧-೧೫೨॥ ಭೂಯಃ - ಮರಳಿಯೂ, ಅಸ್ಯ - ಈತನ, ಬಲಂ - ಶಕ್ತಿಯನ್ನೂ, ಪರಾಕ್ರಮಂಚ - ಪರಾಭಿಭವ ಸಾಮರ್ಥ್ಯವನ್ನೂ, ಜ್ಞಾತುಂ - ತಿಳಿಯಲು, ಇಚ್ಛಾಮಹೇ - ಅಪೇಕ್ಷಿಸುವೆವು, ತ್ವಾಂ - ನಿನ್ನನ್ನು, ಉಪಾಯೇನ - ಉಪಾಯದಿಂದ, ವಿಜೇಷ್ಯತಿ - ಜಯಿಸುವನೋ, ವಿಷಾದಂವಾ - ದುಃಖವನ್ನಾದರೂ, ಗಮಿಷ್ಯತಿ - ಹೊಂದುವನೋ. ॥೧೫೩॥ ದೈವತೈಃ - ದೇವತೆಗಳಿಂದ, ಅಭಿಸತ್ಕೃತಾ - ಸತ್ಕರಿಸಲ್ಪಟ್ಟ, ಸಾಸುರಸಾದೇವೀ-ಆ ಸುರಸೆಯು, ಏವಂ-ಈ ರೀತಿಯಾಗಿ, ಉಕ್ತಾ-ಹೇಳಲ್ಪಟ್ಟ, ಸಮುದ್ರಮಧ್ಯೇ-ಕಡಲಿನನಡುವೆ, ವಿಕೃತಂಚ - ವಿಕಾರವಾಗಿಯೂ, ವಿರೂಪಂಚ - ವಿಕಾರರೂಪುಳ್ಳುದಾಗಿಯೂ, ಸರ್ವಸ್ಯ - ಎಲ್ಲರಿಗೂ, ಭಯಾವಹಂಚ - ಭಯವನ್ನುಂಟುಮಾಡುವುದಾಗಿಯೂ ಇರುವ, ರಾಕ್ಷಸಂ - ರಾಕ್ಷಸಸಂಬಂಧವಾದ, ವಪುಃ - ಶರೀರವನ್ನು, ಬಿಭ್ರತೀ - ಧರಿಸಿ, ಪ್ಲವಮಾನಂ - ಹಾರುತ್ತಿರುವ,

---

ಯೆಂಬವಳನ್ನು ಕುರಿತು, "ಎಲೌ ಸುರಸೆಯೇ! ಇದೋ ನೋಡು ; ವಾಯುದೇವನಿಗೆ ಪುತ್ರನಾದ ಈತನು ಸಮುದ್ರದಮೇಲೆ ಹಾರುತ್ತಿರುವನು. ಈತನ ಹೆಸರು ಹನುಮಂತನು. ನೀನೀಗಲೇ ಪರ್ವತಸಮಾನವಾಗಿ, ಭಯಂಕರವಾದ ಕೋರೆಹಲ್ಲುಗಳು, ಕೆಂಗಣ್ಣುಗಳು, ಗಗನವನ್ನು ಮುಟ್ಟುತ್ತಿರುವ ಬಾಯಿ ಇವುಗಳಿಂದ ಕೂಡಿದ ಮಹಾ ಘೋರ ರಾಕ್ಷಸಿಯ ರೂಪವನ್ನು ಧರಿಸಿ ಒಂದು ಮುಹೂರ್ತಕಾಲ ಮಾತ್ರ ಈತನಿಗೆ ವಿಘ್ನವನ್ನಾಚರಿಸು. ನಾವು ಈತನ ಬಲವನ್ನೂ, ಮುಂದೆ ಈತನು ಮಾಡುವ ಸಾಹಸ ಕಾರ್ಯವನ್ನೂ ನೋಡಬೇಕೆಂದಿರುವೆವು. ಈ ಕಪಿವೀರನು ನಿನ್ನನ್ನು ಉಪಾಯದಿಂದಲಾದರೂ ಗೆಲ್ಲುತ್ತಾನೆ. ಇಲ್ಲವೆ ತನ್ನ ಕಾರ್ಯಕ್ಕೆ ವಿಘ್ನ ಬಂದುದಕ್ಕಾಗಿ ವಿಷಾದವನ್ನಾದರೂ ಹೊಂದುತ್ತಾನೆ" ಎಂದು ಹೇಳಿದರು. ॥ ೧೪೮–೧೫೪ ॥ ಹೀಗೆ ದೇವತೆಗಳೆಲ್ಲರೂ ಮನ್ನಿಸಿ ಕಳುಹಲು ಆ ಸುರಸೆಯು ಆ ಸಮುದ್ರಮಧ್ಯದಲ್ಲಿ ಭಯಂಕರವೂ, ವಿಕಾರವೂ ಆದ ರಾಕ್ಷಸ ಸ್ತ್ರೀರೂಪವನ್ನು

---

§ "ಸ್ಪೃಶಂ" ತಿ. ಪಾ.

ವಹಂ । ಪ್ಲವಮಾನಂ ಹನೂಮಂತ ಮಾವೃತ್ಯೇದ ಮುವಾಚಹ ॥ ೧೫೫ ॥ " ಮಮ ಭಕ್ಷಃ ಪ್ರದಿಷ್ಟಸ್ತ್ವ ಮೀಶ್ವರೈ ರ್ವಾನರರ್ಷಭ! । ಅಹಂ ತ್ವಾಂ ಭಕ್ಷಯಿಷ್ಯಾಮಿ ಪ್ರವಿಶೇದಂ ಮಮಾಽನನಂ " ॥ ೧೫೬ ॥ ‡ ಏವಮುಕ್ತ ಸ್ಸುರಸಯಾ ಪ್ರಾಂಜಲಿ ರ್ವಾನರರ್ಷಭಃ । ಪ್ರಹೃಷ್ಟವದನ ಶ್ಶ್ರೀಮಾ ನ್ಸುರಸಾಂ ವಾಕ್ಯ ಮಬ್ರವೀತ್ ॥ ೧೫೭ ॥ " ರಾಮೋ ದಾಶರಥಿ ರ್ನಾಮ ಪ್ರವಿಷ್ಟೋ ದಂಡಕಾವನಂ । ಲಕ್ಷ್ಮಣೇನ ಸಹಭ್ರಾತ್ರಾ ವೈದೇಹ್ಯಾಚಾಪಿ ಭಾರ್ಯಯಾ ॥೧೫೮॥ * ಅನ್ಯಕಾರ್ಯವಿಷಕ್ತಸ್ಯ ಬದ್ಧ ವೈರಸ್ಯ ರಾಕ್ಷಸೈಃ । ತಸ್ಯ ಸೀತಾ ಹೃತಾ ಭಾರ್ಯಾ ರಾವಣೇನ ಯಶಸ್ವಿನೀ ॥ ೧೫೯ ॥

ಹನೂಮಂತಂ - ಆಂಜನೇಯನನ್ನು, ಆವೃತ್ಯ - ತಡೆದು, ಇದಂ - ಈ ಮಾತನ್ನು, ಉವಾಚ - ಹೇಳಿದಳು. ॥೧೫೪-೧೫೫॥ ಹೇ ವಾನರರ್ಷಭ - ಎಲೈ ವಾನರಶ್ರೇಷ್ಠನೇ, ತ್ವಂ - ನೀನು, ಈಶ್ವರೈಃ - ದೇವತೆಗಳಿಂದ, ಮಮ - ನನಗೆ, ಭಕ್ಷಃ - ಭಕ್ಷ್ಯವಾಗಿ, ಪ್ರದಿಷ್ಟಃ - ತೋರಿಸಲ್ಪಟ್ಟಿರುವೆ, ಅಹಂ - ನಾನು, ತ್ವಾಂ - ನಿನ್ನನ್ನು, ಭಕ್ಷಯಿಷ್ಯಾಮಿ - ತಿನ್ನುವೆನು, ಇದಂ - ಈ ಕಾಣುತ್ತಿರುವ, ಮಮ - ನನ್ನ, ಆನನಂ - ಬಾಯಿಯನ್ನು, ಪ್ರವಿಶ - ಪ್ರವೇಶಿಸು. ॥ ೧೫೬ ॥ ಏವಂ - ಈ ಪ್ರಕಾರವಾಗಿ, ಸುರಸಯಾ - ಸುರಸೆಯಿಂದ, ಉಕ್ತಃ - ಹೇಳಲ್ಪಟ್ಟ, ಪ್ರಹೃ....ನಃ - ಸಂತೋಷಯುಕ್ತವಾದ ಮುಖವುಳ್ಳ, ಶ್ರೀಮಾ - ಸಂಪದ್ಯುಕ್ತನಾದ, ವಾನರರ್ಷಭಃ - ಹನುಮಂತನು, ಪ್ರಾಂಜಲಿಃ - ಆಂಜಲಿಬದ್ಧನಾಗಿ, ಇದಂ - ಈ, ವಚನಂ - ಮಾತನ್ನು, ಅಬ್ರವೀತ್ - ಹೇಳಿದನು. ॥ ೧೫೭ ॥ ರಾಮೋನಾಮ-ಶ್ರೀರಾಮನೆಂದು ಪ್ರಸಿದ್ಧನಾದ, ದಾಶರಥಿಃ-ದಶರಥಪುತ್ರನು, ಭ್ರಾತ್ರಾ-ತಮ್ಮನಾದ, ಲಕ್ಷ್ಮಣೇನ - ಲಕ್ಷ್ಮಣನೊಡನೆ, ಭಾರ್ಯಯಾ - ಪತ್ನಿಯಾದ, ವೈದೇಹ್ಯಾಚಾಪಿಸಹ - ಸೀತಾದೇವಿ ಯೊಡನೆಯೂ, ದಂಡಕಾವನಂ - ದಂಡಕಾರಣ್ಯವನ್ನು, ಪ್ರವಿಷ್ಟಃ - ಪ್ರವೇಶಿಸಿದನು. ॥ ೧೫೮ ॥ ಅನ್ಯ....ಸ್ಯ - ಮತ್ತೊಂದಾದ ಮಾಯಾಮೃಗವಧಕಾರ್ಯದಲ್ಲಿ ಆಸಕ್ತನಾದ, ರಾಕ್ಷಸೈಃ - ರಾಕ್ಷಸ ರೊಡನೆ, ಬದ್ಧವೈರಸ್ಯ-ಉಂಟಾದ ದ್ವೇಷವುಳ್ಳ, ತಸ್ಯ-ಆ ಶ್ರೀರಾಮನ, ಭಾರ್ಯಾ-ಹೆಂಡತಿಯಾದ, ಯಶಸ್ವಿನೀ - ಕೀರ್ತಿವಂತಳಾದ, ಸೀತಾ - ಸೀತಾದೇವಿಯು, ರಾವಣೇನ - ರಾವಣಾಸುರನಿಂದ, ಹೃತಾ-

ತಾಳಿ, ಗಗನದಲ್ಲಿ ಹಾರುತ್ತಿರುವ ಹನುಮಂತನನ್ನು ತಡೆದು ಆತನನ್ನು ಕುರಿತು, "ಎಲೈ ಕಪಿಶ್ರೇಷ್ಠನೇ! ಲೋಕನಿಯಾಮಕರಾದ ದೇವತೆಗಳು ನಿನ್ನನ್ನು ನನಗೆ ಆಹಾರವನ್ನಾಗಿ ದೊರಕಿಸಿರುವರು. ಜಾಗ್ರತೆಯಾಗಿ ನನ್ನ ಮುಖವನ್ನು ಪ್ರವೇಶಿಸು ; ಭಕ್ಷಿಸಿ ಬಿಡುವೆನು " ಎಂದು ಹೇಳಿದಳು. ಆಗಲಾ ವಾನರವೀರನು ಕೈಜೋಡಿಸಿಕೊಂಡು ಮುಗುಳುನಗೆಯಿಂದ ಆ ರಾಕ್ಷಸಿಯನ್ನು ಕುರಿತು, "ಎಲೌ ಸ್ತ್ರೀಯೇ ! ದಶರಥರಾಜಕುಮಾರನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡನೆಯೂ, ಭಾರ್ಯೆಯಾದ ವೈದೇಹಿಯೊಡನೆಯೂ ದಂಡಕಾರಣ್ಯಕ್ಕೆ ಬಂದನು. ॥೧೫೫–೧೫೮॥ ಅಲ್ಲಿ ಶೂರ್ಪನಖಿಯ ಕಿವಿಮೂಗುಗಳನ್ನು ಕೊಯ್ಯಿಸಿ ಅವಳನ್ನು ವಿರೂಪಗೊಳಿಸಿದುದರಿಂದ ಶ್ರೀರಾಮನಿಗೂ, ರಾಕ್ಷಸರಿಗೂ ವೈರವುಂಟಾಯಿತು. ಆಮೇಲೆ ರಾಕ್ಷಸರಿಗೆಲ್ಲಾ ಧೊರೆಯಾದ ರಾವಣನು, ಮಹಾ ತೇಜಸ್ವಿನಿಯೂ ಆತನ ಭಾರ್ಯೆಯೂ ಆದ ಸೀತಾ

‡ ವರವಿಷ ಪುರಾದತ್ತೋ ಮಮ ಧಾತ್ರೇತಿ ಸತ್ವರಾ ।
ವ್ಯಾದಾಯ ವಕ್ತ್ರಂ ವಿಪುಲಂ ಸ್ಥಿತಾ ಸಾ ಮಾರುತೇಃ ಪುರಃ ॥ ತಿ. ಪಾ. * " ಅಸ್ಯ " ತಿ. ರಾ. ಪಾ.

ತಸ್ಯಾಸ್ಸಕಾಶಂ ದೂತೋಽಹಂ ಗಮಿಷ್ಯೇ ರಾಮಶಾಸನಾತ್ । ಕರ್ತುಮರ್ಹಸಿ ರಾಮಸ್ಯ ಸಾಹ್ಯಂ ವಿಷಯವಾಸಿನಿ! ‖೧೬೦‖ ಅಥವಾ ಮೈಥಿಲೀಂ ದೃಷ್ಟ್ವಾ ರಾಮಂಚಾಕ್ಲಿಷ್ಟಕಾರಿಣಂ । ಆಗಮಿಷ್ಯಾಮಿ ತೇ ವಕ್ತ್ರಂ ಸತ್ಯಂ ಪ್ರತಿಶೃಣೋಮಿ ತೇ" ‖೧೬೧‖ ಏವಮುಕ್ತಾ ಹನುಮತಾ ಸುರಸಾ ಕಾಮರೂಪಿಣೀ । ಅಬ್ರವೀ "ನ್ನಾತಿವರ್ತೇನ್ಮಾಂ ಕಶ್ಚಿದೇಷ ವರೋ ಮಮ" ‖೧೬೨‖ ¶ ತಂ ಪ್ರಯಾಂತಂ ಸಮುದ್ವೀಕ್ಷ್ಯ ಸುರಸಾ ವಾಕ್ಯಮಬ್ರವೀತ್ । ಬಲಂ ಜಿಜ್ಞಾಸಮಾನಾ ವೈ ನಾಗ

ಅಪಹರಿಸಲ್ಪಟ್ಟಳು. ‖೧೫೯‖ ಅಹಂ - ನಾನು, ರಾಮಾ....ತ್ - ರಾಮಾಜ್ಞೆಯಿಂದ, ದೂತಃ - ದೂತನಾಗಿ, ತಸ್ಯಾಃ-ಆ ಸೀತಾದೇವಿಯ, ಸಕಾಶಂ-ಸಮೀಪವನ್ನು ಕುರಿತು, ಗಮಿಷ್ಯೇ-ಹೋಗುವೆನು. ಹೇ ವಿ....ನಿ - ಎಲೈ ಶ್ರೀರಾಮನ ದೇಶದಲ್ಲಿ ವಾಸಿಸುವಳೇ, ರಾಮಸ್ಯ - ಶ್ರೀರಾಮನಿಗೆ, ಸಾಹ್ಯಂ - ಸಹಾಯವನ್ನು, ಕರ್ತುಂ - ಮಾಡಲು, ಅರ್ಹಸಿ - ಯೋಗ್ಯಳಾಗು. ‖೧೬೦‖ ಅಥವಾ, ಮೈಥಿಲೀಂ - ಸೀತಾದೇವಿಯನ್ನು, ಅಕ್ಲಿ....ಣಂ-ಕ್ಲೇಶವಿಲ್ಲದೆ ಕಾರ್ಯವನ್ನು ಮಾಡುವ, ರಾಮಂಚ-ಶ್ರೀರಾಮನನ್ನೂ, ದೃಷ್ಟ್ವಾ - ನೋಡಿ, ತೇ - ನಿನ್ನ, ವಕ್ತ್ರಂ - ಮುಖವನ್ನು ಕುರಿತು, ಆಗಮಿಷ್ಯಾಮಿ - ಬರುವೆನು, ತೇ - ನಿನಗೆ, ಸತ್ಯಂ - ಯಥಾರ್ಥವಾಗಿ, ಪ್ರತಿಶೃಣೋಮಿ - ಶಪಥಮಾಡುತ್ತೇನೆ. ‖೧೬೧‖ ಏವಂ - ಈ ಪ್ರಕಾರವಾಗಿ, ಹನುಮತಾ - ಹನುಮಂತನಿಂದ, ಉಕ್ತಾ - ಹೇಳಲ್ಪಟ್ಟ, ಕಾಮರೂಪಿಣೀ - ಕಾಮರೂಪಳಾದ, ಸುರಸಾ-ಸುರಸಾದೇವಿಯು, (ಮಾಂ-ನನ್ನನ್ನು), ಕಶ್ಚಿತ್-ಯಾವನೊಬ್ಬನೂ, ನಾತಿವರ್ತೇತ - ಅತಿಕ್ರಮಿಸಲಾರನು, ಏಷಃ - ಇದು, ಮಮ - ನನಗೆ, ವರಃ - ವರವು, ಇತಿ - ಎಂದು, ಅಬ್ರವೀತ್ - ಹೇಳಿದಳು. ‖೧೬೨‖ ಪ್ರಯಾಂತಂ - ಮುಂಬರಿಯುತ್ತಿರುವ, ತಂ - ಆ ಆಂಜನೇಯನನ್ನು, ಸಮುದ್ವೀಕ್ಷ್ಯ - ಚನ್ನಾಗಿ ನೋಡಿ, ಹನೂಮತಃ - ಹನುಮಂತನ, ಬಲಂ-ಶಕ್ತಿಯನ್ನು,

---

ದೇವಿಯನ್ನು ಅಪಹರಿಸಿದನು. ಎಲೌ ಸ್ತ್ರೀಯೇ! ಈಗ ನಾನು ಆ ರಘುನಾಥನ ಅಪ್ಪಣೆಯಿಂದ ಆತನ ದೂತನಾಗಿ ಆ ದೇವಿಯ ಬಳಿಗೈದುತ್ತಿರುವೆನು. ನೀನು ಆತನ ದೇಶದಲ್ಲಿ ವಾಸಮಾಡುತ್ತಿರುವೆಯಾದುದರಿಂದ ಆತನಿಗೆ ಸಹಾಯ ಮಾಡಬೇಕು. ಇದು ನಿನಗೆ ಧರ್ಮವಾಗಿರುವದು. ಅಥವಾ ನೀನು ನನ್ನನ್ನು ನುಂಗಲೇಬೇಕೆಂದಿದ್ದರೆ ಸ್ವಲ್ಪ ತಾಳಿಕೊ. ನಾನು ಶ್ರೀರಾಮಪತ್ನಿಯಾದ ಜಾನಕಿಯನ್ನು ನೋಡಿ, ಆಕೆಯ ವೃತ್ತಾಂತವನ್ನು ಶ್ರೀರಾಮನಿಗೆ ತಿಳುಹಿಸಿ ಆ ಬಳಿಕ ನಿನ್ನೆಡೆಗೆ ಬರುವೆನು. ಈ ಮಾತು ಸತ್ಯವಾದುದು. ಪ್ರತಿಜ್ಞೆಮಾಡಿ ಹೇಳುತ್ತಿರುವೆನು" ಎಂದು ಹೇಳಿದನು. ‖೧೫೯—೧೬೧‖ ಹನುಮಂತನೀರೀತಿ ನುಡಿಯಲು ಕಾಮರೂಪಿಣಿಯಾದ ಸುರಸೆಯು ಆತನನ್ನು ಕುರಿತು, "ಅಯ್ಯಾ ಕಪಿಶ್ರೇಷ್ಠನೇ! ಯಾರೇ ಆಗಲಿ ನನ್ನನ್ನತಿಕ್ರಮಿಸಿ ಹೋಗಲಾರರೆಂದು ತಿಳಿ. ಹೀಗೆ ನನಗೊಂದು ವರವಿರುವುದು" ಎಂದು ಹೇಳಿ, ಆ ಮಾರುತಿಯ ಬಲವನ್ನರಿಯಲಪೇಕ್ಷಿಸಿ ಗಗನಮಾರ್ಗದಲ್ಲಿ ಹೋಗುತ್ತಿದ್ದ

¶ ಇಲ್ಲಿ "ತಂ ಪ್ರಯಾಂತಂ" ಎಂಬ ಶ್ಲೋಕದಿಂದ ಹಿಡಿದು "ಶತಯೋಜನಮಾಯತಂ" ಎಂಬ ಶ್ಲೋಕದ ವರೆಗೂ ಪ್ರಕ್ಷಿಪ್ತವು. ಸಮುದ್ರವೇ ಶತಯೋಜನ ವಿಸ್ತೀರ್ಣವಾದುದರಿಂದ ಆಂಜನೇಯನು ತೊಂಬತ್ತುಯೋಜನಗಳೂ, ಸುರಸೆಯು ನೂರುಯೋಜನಗಳೂ ಬೆಳೆದಿದ್ದುದೇ ನಿಜವಾಗಿದ್ದರೆ ಲಂಕಾಪುರವಾಸಿಗಳೆಲ್ಲರೂ ಈ ಅದ್ಭುತವನ್ನು ನೋಡಿಯೇ ಇರಬೇಕೆಂಬ ಅನುಮಾನವು ಬರುತ್ತದೆಯಾದುದರಿಂದ ಈ ಶ್ಲೋಕಗಳು ಇಲ್ಲಿ ಕೂಡುವುದಿಲ್ಲ. (ಗೋ+ತಿ+ಮ+ಕ)

ಮಾತಾ ಹನೂಮತಃ । "ಪ್ರವಿಶ್ಯ ವದನಂ ಮೇಽದ್ಯ ಗಂತವ್ಯಂ ವಾನರೋತ್ತಮ! । ವರ ಏಷ ಪುರಾದತ್ತೋ ಮಮ ಧಾತ್ರೇ" ತಿ ಸತ್ವರಾ । ವ್ಯಾದಾಯ ವಕ್ತ್ರಂ ವಿಪುಲಂ ಸ್ಥಿತಾ ಸಾ ಮಾರುತೇಃ ಪುರಃ ॥೧೬೫॥ ಏವಮುಕ್ತ ಸ್ಸುರಸಯಾ ಕ್ರುದ್ಧೋ ವಾನರಪುಂಗವಃ । ಅಬ್ರವೀ "ತ್ಕುರು ತೇ ವಕ್ತ್ರಂ ಯೇನ ಮಾಂ ವಿಷಹಿಷ್ಯಸೇ" ॥೧೬೬॥ ಇತ್ಯುಕ್ತ್ವಾ ಸುರಸಾಂ ಕ್ರುದ್ಧೋ ದಶಯೋಜನಮಾಯತಃ । ದಶಯೋಜನವಿಸ್ತಾರೋ ಬಭೂವ ಹನುಮಾಂ ಸ್ತದಾ ॥೧೬೭॥ * ತಂ ದೃಷ್ಟ್ವಾ ಮೇಘಸಂಕಾಶಂ ದಶ

ಜಿಜ್ಞಾಸಮಾನಾ - ತಿಳಿಯಲಿಚ್ಛೆಯುಳ್ಳ, ನಾಗಮಾತಾ - ಸುರಸಾದೇವಿಯು, ಹೇ ವಾನರೋತ್ತಮ - ಎಲೈ ವಾನರಶ್ರೇಷ್ಠನೇ, ಅದ್ಯವೈ - ಈಗಲೇ, ಮೇ - ನನ್ನ, ವದನಂ - ಮುಖವನ್ನು, ಪ್ರವಿಶ್ಯ - ಪ್ರವೇಶಿಸಿ, ಗಂತವ್ಯಂ - ಹೋಗತಕ್ಕುದು, ಇತಿ - ಎಂದು, ವಾಕ್ಯಂ - ವಚನವನ್ನು, ಅಬ್ರವೀತ್ - ಹೇಳಿದಳು. ॥೧೬೩-೧೬೪॥ ಪುರಾ - ಪೂರ್ವದಲ್ಲಿ, ಏಷವರಃ - ಈ ವರವು, ಮಮ - ನನಗೆ, ಧಾತ್ರಾ- ಬ್ರಹ್ಮನಿಂದ, ದತ್ತಃ - ಕೊಡಲ್ಪಟ್ಟಿತು, ಇತಿ - ಎಂದು, (ಉಕ್ತ್ವಾ - ಹೇಳಿ,) ಸತ್ವರಾ - ಜಾಗ್ರತೆಯಾಗಿ, ಸಾ - ಸುರಸೆಯು, ವಿಪುಲಂ - ವಿಸ್ತಾರವಾದ, ವಕ್ತ್ರಂ - ಮುಖವನ್ನು, ವ್ಯಾದಾಯ - ತೆರದು, ಮಾರುತೇಃ - ವಾಯುಪುತ್ರನಾದ ಆಂಜನೇಯನ, ಪುರಃ - ಮುಂದೆ, ಸ್ಥಿತಾ - ನಿಂತಳು. ॥೧೬೫॥ ಏವಂ - ಈ ಪ್ರಕಾರವಾಗಿ, ಸುರಸಯಾ - ಸುರಸಾದೇವಿಯಿಂದ, ಉಕ್ತಃ - ಹೇಳಲ್ಪಟ್ಟ, ವಾನರಪುಂಗವಃ - ವಾನರಶ್ರೇಷ್ಠನು, ಕೃದ್ಧಃ - ಕೋಪಿಷ್ಠನಾಗಿ, ಯೇನ - ಯಾವ ಮುಖದಿಂದ, ಮಾಂ - ನನ್ನನ್ನು, ವಿಷಹಿಷ್ಯಸೇ - ತಡೆಯುವೆಯೋ, (ತತ್ - ಅಂತಹ,) ವಕ್ತ್ರಂ - ಮುಖವನ್ನು, ಕುರು - ಮಾಡು, (ಇತಿ - ಎಂದು,) ಅಬ್ರವೀತ್ - ಹೇಳಿದನು. ॥೧೬೬॥ ಇತಿ - ಈ ಪ್ರಕಾರವಾಗಿ, ಸುರಸಾಂ - ಸುರಸೆಯನ್ನು ಕುರಿತು, ಉಕ್ತ್ವಾ - ಹೇಳಿ, ಕೃದ್ಧಃ - ಕೋಪಿಷ್ಠನಾದ, ಹನುಮಾನ್ - ಆಂಜನೇಯನು, ತದಾ - ಆ ಕಾಲದಲ್ಲಿ, ದಶಯೋಜನಂ - ಹತ್ತುಗಾವುದ ವ್ಯಾಪಿಸಿರುವ, ಆಯತಃ - ದೀರ್ಘವುಳ್ಳವನೂ, ದಶ....ತಃ - ಹತ್ತುಯೋಜನಗಳ ಆಗಲವುಳ್ಳವನೂ, ಬಭೂವ - ಆದನು. ॥೧೬೭॥ ಮೇಘಸಂಕಾಶಂ - ಮೇಘಸದೃಶನಾದ, ದಶಯೋಜನಮಾಯತಂ - ಹತ್ತುಯೋಜನಗಳಲ್ಲಿ ವ್ಯಾಪಿಸಿದ ದೀರ್ಘಾಕಾರವುಳ್ಳ, ತಂ - ಆ ಆಂಜನೇಯನನ್ನು, ದೃಷ್ಟ್ವಾ - ನೋಡಿ, ಸುರಸಾಚ - ಸುರಸಾ

ಆತನನ್ನು ಕುರಿತು ಪುನಃ, "ಎಲೈ ವಾನರವೀರನೇ! ಈಗ ನೀನು ನನ್ನ ಮುಖವನ್ನು ಹೊಕ್ಕು ಹೋಗಬೇಕು. ನನಗೆದುರಾದ ಯಾವನಾದರೂ ಸರಿಯೆ, ನನ್ನ ಮುಖವನ್ನು ಪ್ರವೇಶಿಸಿ ಹೋಗಬೇಕೇ ಹೊರ್ತು ಹಾಗೆಯೆ ಹೋಗಕೂಡದು. ಪೂರ್ವದಲ್ಲಿ ಬ್ರಹ್ಮದೇವನು ನನಗೀ ವರವನ್ನು ಅನುಗ್ರಹಿಸಿರುವನು" ಎಂದು ಹೇಳಿ ತನ್ನ ಮುಖಕುಹರವನ್ನು ವಿಸ್ತಾರವಾಗಿ ತೆರದು ಆತನೆದುರಿಗೆ ನಿಂತಳು. ॥೧೬೨—೧೬೫॥ ಆಗಲಾ ಸುರಸೆಯ ಮಾತುಗಳನ್ನು ಕೇಳಿ ಬಹಳವಾಗಿ ಕೋಪಗೊಂಡ ಆ ಮಾರುತಿಯು, "ಎಲೌ ಸುರಸೆಯೇ! ನನ್ನ ಶರೀರವನ್ನು ನುಂಗುವುದಕ್ಕೆ ತಕ್ಕಂತೆ ನಿನ್ನಬಾಯಿಯನ್ನು ವಿಸ್ತಾರಗೊಳಿಸು" ಎಂದು ಹೇಳಿ ಹತ್ತುಯೋಜನದಗಲವೂ, ಉದ್ದವೂ ಆದ ಶರೀರವುಳ್ಳವನಾಗಿ ಬೆಳೆದನು. ಹೀಗೆ ಮುಗಿಲಿಗೆ ಸಮಾನನಾಗಿ ಬೆಳೆದ ಆ ಮಾರುತಿಯನ್ನುನೋಡಿ ಸುರಸೆಯು ತನ್ನ ಬಾಯಿಯನ್ನು ಇಪ್ಪತ್ತುಯೋಜನ

---

* ಈ ಪಾದವು ರಾ. ಸಾ. ದಲ್ಲಿ ಅಧಿಕ.

ಯೋಜನಮಾಯತಂ । ಚಕಾರ ಸುರಸಾ ಚಾಽಸ್ಯಂ ವಿಂಶದ್ಯೋಜನಮಾಯತಂ ॥೧೬೮॥ ಹನೂಮಾಂಸ್ತು ತತಃ ಕ್ರುದ್ಧಸ್ತ್ರಿಂಶದ್ಯೋಜನಮಾಯತಃ । ಚಕಾರ ಸುರಸಾ ವಕ್ತ್ರಂ ಚತ್ವಾರಿಂಶತ್ತಥೋಚ್ಛ್ರಿತಂ ॥೧೬೯॥ ಬಭೂವ ಹನುಮಾನ್ವೀರಃ ಪಂಚಾಶದ್ಯೋಜನೋಚ್ಛ್ರಿತಃ । ಚಕಾರ ಸುರಸಾ ವಕ್ತ್ರಂ ಷಷ್ಟಿಯೋಜನಮಾಯತಂ ॥೧೭೦॥ ತಥೈವ ಹನುಮಾನ್ವೀರಸ್ಸಪ್ತತೀಯೋಜನೋಚ್ಛ್ರಿತಃ । ಚಕಾರ ಸುರಸಾ ವಕ್ತ್ರಮಶೀತೀ ಯೋಜನಾಯತಂ ॥೧೭೧॥ ಹನುಮಾನಚಲಪ್ರಖ್ಯೋನವತೀ ಯೋಜನೋಚ್ಛ್ರಿತಃ । ಚಕಾರ ಸುರಸಾ ವಕ್ತ್ರಂ ಶತಯೋಜನಮಾಯತಂ ॥೧೭೨॥ ‡ ತದ್ದೃಷ್ಟ್ವಾ ವ್ಯಾದಿತಂ ತ್ವಾಸ್ಯಂ ವಾಯುಪುತ್ರಸ್ಸುಬುದ್ಧಿಮಾನ್ । § ದೀರ್ಘಜಿಹ್ವಂ ಸುರಸಯಾಸುಘೋರಂ ನರಕೋಪಮಂ ॥೧೭೩॥ ಸ ಸಂಕ್ಷಿಪ್ಯಾತ್ಮನಃ ಕಾಯಂ ಬಭೂವಾಂಽಗುಷ್ಠಮಾತ್ರಕಃ । ಸೋಽಭಿಪತ್ಯಾಽಽಶು ತದ್ವಕ್ತ್ರಂ ನಿಷ್ಪತ್ಯಚ

ದೇವಿಯು, ಆಸ್ಯಂ-ಮುಖವನ್ನು, ವಿಂಶದ್ಯೋಜನಮಾಯತಂ-ಇಪ್ಪತ್ತುಯೋಜನ ದೈರ್ಘ್ಯವುಳ್ಳದಾಗಿ, ಚಕಾರ-ಮಾಡಿದಳು. ¶ ॥೧೬೮-೧೭೨॥ ಸುಬುದ್ಧಿಮಾನ್ - ಮಹಾ ಬುದ್ಧಿಶಾಲಿಯಾದ, ವಾಯುಪುತ್ರಃ-ಹನುಮಂತನು, ಸುರಸಯಾ - ಸುರಸೆಯಿಂದ, ವ್ಯಾದಿತಂ - ತೆರೆಯಲ್ಪಟ್ಟ, ದೀರ್ಘಜಿಹ್ವಂ - ಉದ್ದವಾದ ನಾಲಿಗೆಯಿಂದ, ಸುಘೋರಂ - ಮಹಾ ಭಯಂಕರವಾದ, ನರಕೋಪಮಂ - ನರಕಕ್ಕೆ ಸದೃಶವಾದ, ತದಾಸ್ಯಂ - ಆ ಬಾಯಿಯನ್ನು, ದೃಷ್ಟ್ವಾ - ನೋಡಿ, ಆತ್ಮನಃ - ತನ್ನ, ಕಾಯಂ - ದೇಹವನ್ನು, ಸುಸಂಕ್ಷಿಪ್ಯ - ಚನ್ನಾಗಿ ಅಣಗಿಸಿ, ಅಂಗುಷ್ಠಮಾತ್ರಕಃ - ಹೆಬ್ಬೆಟ್ಟಿನಮಾತ್ರ ಪರಿಮಿತಿಯುಳ್ಳವನು, ಬಭೂವ - ಆದನು. ॥೧೭೩॥ ಮಹಾಜವಃ - ಮಹಾ ವೇಗವುಳ್ಳ, ಶ್ರೀಮಾನ್ - ವಿಜಯಸಂಪದ್ಯುಕ್ತನಾದ, ಸಃ - ಆ ಆಂಜನೇಯನು, ಆಶು - ಜಾಗ್ರತೆಯಾಗಿ, ತದ್ವಕ್ತ್ರಂ -

ಗಳಷ್ಟು ವಿಸ್ತಾರಗೊಳಿಸಿದಳು. ಹನುಮಂತನದನ್ನು ನೋಡಿ ಕೋಪಗೊಂಡು ಮೂವತ್ತು ಯೋಜನಗಳಷ್ಟು ಬೆಳೆದನು. ಸುರಸೆಯು ನಲವತ್ತುಯೋಜನಗಳಷ್ಟು ತನ್ನ ಬಾಯಿಯನ್ನು ದೊಡ್ಡದು ಮಾಡಿದಳು. ಆಗಲಾ ವಾನರವೀರನು ಐವತ್ತುಯೋಜನಗಳಷ್ಟು ಬೆಳೆದನು. ಸುರಸೆಯು ಅರವತ್ತುಯೋಜನಗಳಷ್ಟು ತನ್ನ ಬಾಯಿಯನ್ನು ವೃದ್ಧಿಗೊಳಿಸಿದಳು. ಮಾರುತಿಯು ಎಪ್ಪತ್ತುಯೋಜನಗಳಷ್ಟು ಬೆಳೆದನು. ಸುರಸೆಯು ತನ್ನ ಬಾಯಿಯನ್ನು ಎಂಭತ್ತುಯೋಜನಗಳಷ್ಟು ದೊಡ್ಡದು ಮಾಡಿದಳು. ಆಗ ಆಂಜನೇಯನು ತೊಂಬತ್ತುಯೋಜನಗಳಷ್ಟುಬೆಳೆದನು. ಕೂಡಲೇ ಸುರಸೆಯ ಮುಖವು ನೂರುಯೋಜನದಗಲವಾಯಿತು. ಆ ಬಳಿಕ ಮಹಾ ಚತುರನಾದ ಹನುಮಂತನು, ಸುರಸೆಯು ವಿಸ್ತರಿಸಿದ, ಉದ್ದವಾದ ನಾಲಿಗೆಯುಳ್ಳ, ಭಯಂಕರ ನರಕಕ್ಕೆ ಸಮಾನವಾದ ಆ ಮುಖವನ್ನು ಕಂಡು ತನ್ನ ಶರೀರವನ್ನು ಸಂಕ್ಷೇಪಿಸಿ ಹೆಬ್ಬೆಟ್ಟಿನಗಾತ್ರವಾದನು. ॥೧೬೬-೧೭೩॥ ಮಹಾ ವೇಗಶಾಲಿಯಾದ ಆ ವಾಯುಪುತ್ರನು ಆ ಕೂಡಲೇ ಸುರಸೆಯ ಆ ಮುಖವನ್ನು ಹೊಕ್ಕು, ಪುನಃ ಜಾಗ್ರತೆಯಾಗಿ ಹೊರಕ್ಕೆ ಬಂದು

‡ ಈ ಶ್ಲೋಕವು ರಾ. ಪಾಠದಲ್ಲಿಲ್ಲ. § ಈ ಪಾದವು ಗೋ. ಪಾ. ದಲ್ಲಿ ಅಧಿಕ.

¶ ೧೬೯ರಿಂದ ೧೭೨ರವರೆಗಣ ಈ ಶ್ಲೋಕಗಳಿಗೆ ಅರ್ಥವು ಸುಕರವಾಗಿರುವುದರಿಂದ ಪ್ರತಿಪದಾರ್ಥವನ್ನು ಕೊಟ್ಟಿಲ್ಲ.

‡ ಮಹಾಜವಃ ||೧೭೪|| ಅಂತರಿಕ್ಷೇ ಸ್ಥಿತಃ ಶ್ರೀಮಾನ್ ಇದಂ ವಚನಮಬ್ರವೀತ್ | "ಪ್ರವಿಷ್ಟೋಽಸ್ಮಿ ಹಿ ತೇ ವಕ್ತ್ರಂ ¶ ದಾಕ್ಷಾಯಣಿ! ನಮೋಽಸ್ತು ತೇ | ಗಮಿಷ್ಯೇ ಯತ್ರ ವೈದೇಹೀ ಸತ್ಯಶ್ಚಾಽಸ್ತು ವರಸ್ತವ" ||೧೭೫|| ತಂ ದೃಷ್ಟ್ವಾ ವದನಾನ್ಮುಕ್ತಂ ಚಂದ್ರಂ ರಾಹುಮುಖಾದಿವ | ಅಬ್ರವೀತ್ಸುರಸಾ ದೇವೀ ಸ್ವೇನ ರೂಪೇಣ ವಾನರಂ ||೧೭೬|| "ಅರ್ಥಸಿದ್ಧ್ಯೈ ಹರಿಶ್ರೇಷ್ಠ! ಗಚ್ಛ ಸೌಮ್ಯ! ಯಥಾಸುಖಂ | ಸಮಾನಯಸ್ವ ವೈದೇಹೀಂ ರಾಘವೇಣ ಮಹಾತ್ಮನಾ" ||೧೭೭|| ತತ್ತೃತೀಯಂ ಹನು

ಆಕೆಯ ಮುಖದಲ್ಲಿ, ಅಭಿಪತ್ಯ - ಬಿದ್ದು, ನಿಷ್ಪತ್ಯ - ಹಾರಿ, ಅಂತರಿಕ್ಷೇ - ಆಕಾಶದಲ್ಲಿ, ಸ್ಥಿತಃ - ನಿಂತವನಾಗಿ, ಇದಂವಚನಂ- ಈ ಮಾತನ್ನು, ಅಬ್ರವೀತ್-ಹೇಳಿದನು. ||೧೭೪|| ಹೇ ದಾಕ್ಷಾಯಣಿ - ಎಲೈ ದಕ್ಷಬ್ರಹ್ಮನ ಮಗಳೇ, ತೇ - ನಿನ್ನ, ವಕ್ತ್ರಂ - ಬಾಯಿಯನ್ನು, ಪ್ರವಿಷ್ಟಃ - ಪ್ರವೇಶಿಸಿದವನು, ಅಸ್ಮಿಹಿ - ಆದನಷ್ಟೆ, ತೇ - ನಿನಗೆ, ನಮಃ - ನಮಸ್ಕಾರವು, ಅಸ್ತು - ಆಗಲಿ, ತವ - ನಿನ್ನ, ವರಶ್ಚ- ವರವೂ, ಸತ್ಯಃ - ನಿಶ್ಚಯವು, ಆಸೀತ್ - ಆಯಿತು, ವೈದೇಹೀ - ಸೀತಾದೇವಿಯು, ಯತ್ರ - ಎಲ್ಲಿ, (ಸ್ಥಿತಾ - ಇರುವಳೋ, ತತ್ರ - ಅಲ್ಲಿ,) ಗಮಿಷ್ಯೇ - ಹೋಗುವೆನು. ||೧೭೫|| ಸುರಸಾದೇವೀ - ಸುರಸಾದೇವಿಯೂ, ರಾಹುಮುಖಾತ್ - ರಾಹುವಿನ ಮುಖದಿಂದ, ಚಂದ್ರಮಿವ - ಚಂದ್ರನಂತೆ, ವದನಾತ್ - ತನ್ನ ಬಾಯಿಯಿಂದ, ಮುಕ್ತಂ - ಬಿಡಲ್ಪಟ್ಟ, ತಂವಾನರಂ - ಆ ಕಪಿಯನ್ನು, ದೃಷ್ಟ್ವಾ - ಕಂಡು, ಸ್ವೇನರೂಪೇಣ - ತನ್ನ ನಿಜರೂಪದಿಂದ, ಅಬ್ರವೀತ್ - ಹೇಳಿದಳು. ||೧೭೬|| ಹೇ ಹರಿಶ್ರೇಷ್ಠ - ಎಲೈ ವಾನರವರನೇ, ಹೇ ಸೌಮ್ಯ - ಓ ಸೌಮ್ಯನೇ, ಅರ್ಥಸಿದ್ಧ್ಯೈ - ಕಾರ್ಯ ಸಾಧನೆಗಾಗಿ, ಯಥಾಸುಖಂ - ಸುಖವಾಗಿ, ಗಚ್ಛ - ಹೋಗು, ವೈದೇಹೀಂ - ಸೀತೆಯನ್ನು, ಮಹಾತ್ಮನಾ - ಮಹಾತ್ಮನಾದ, ರಾಘವೇಣ - ಶ್ರೀರಾಮನೊಡನೆ, ಸಮಾನಯಸ್ವ - ಸೇರಿಸು. ||೧೭೭|| ಸುದುಷ್ಕರಂ - ಇತರರು ಮಾಡಲಶಕ್ಯವಾದ, ತೃತೀಯ್ಯಂ - ಮೂರನೆಯದಾದ, ಹನುಮತಃ - ಆಂಜ

ಅಂತರಿಕ್ಷದಲ್ಲಿ ನಿಂತು ಆಕೆಯನ್ನು ಕುರಿತು, "ಎಲೌ ದಕ್ಷಬ್ರಹ್ಮಪುತ್ರಿಯಾದ ಸುರಸಾದೇವಿಯೇ! ಇಗೋ, ನಾನು ನಿನ್ನ ಮುಖವನ್ನು ಹೊಕ್ಕು ಹೊರಕ್ಕೆ ಬಂದಿರುವೆನು. ನಿನ್ನ ವರವು ಸಫಲವಾಯಿತಷ್ಟೆ! ಇದೋ ನಿನಗೆ ನಮಸ್ಕಾರವು. ಇನ್ನು ನಾನು ಶ್ರೀರಾಮಪತ್ನಿಯಾದ ಸೀತೆಯಿರುವೆಡೆಗೆ ಹೋಗುವೆನು" ಎಂದು ಹೇಳಿದನು. ಹೀಗೆ ರಾಹು ಮುಕ್ತನಾದ ಚಂದ್ರನಂತೆ, ತನ್ನ ಮುಖದಿಂದ ಹೊರಕ್ಕೆ ಬಂದು ಗಗನದಲ್ಲಿ ನಿಂತಿರುವ ಆ ಹನುಮಂತನನ್ನು ನೋಡಿ ಸುರಸೆಯು ತನ್ನ ನಿಜರೂಪವನ್ನು ತಾಳಿ, "ಎಲೈ ಕಪಿಶ್ರೇಷ್ಠನಾದ ಹನುಮಂತನೇ! ಯಥಾಸುಖವಾಗಿ ಹೋಗಿಬಾ; ನಿನಗೆ ಕಾರ್ಯಸಿದ್ಧಿಯಾಗಲಿ. ಸೀತಾದೇವಿಯನ್ನು, ಮಹಾತ್ಮನಾದ ಶ್ರೀರಾಮಮೂರ್ತಿಯೊಡಗೂಡಿಸು" ಎಂದು ಹೇಳಿದಳು. ||೧೭೪–೧೭೭|| ಹೀಗೆ ಮೂರನೆಯುಸಲವೂ ಅತ್ಯದ್ಭುತ ಕಾರ್ಯವನ್ನು ಮಾಡಿದ ಆ ಹನುಮಂತನನ್ನು ನೋಡಿ

---

‡ "ಮಹಾಬಲಃ" ತಿ. ಪಾ.

¶ ಇಲ್ಲಿ ಹನುಮಂತನಿಗೆ ಆ ಸುರಸೆಯು ದಾಕ್ಷಾಯಣಿ (ದಕ್ಷಪುತ್ರಿ) ಯೆಂದು ತಿಳಿದ ಬಗೆ ಹೇಗೆಂಬ ಶಂಕೆಯುಂಟಾಗುತ್ತದೆ. ಆದರಿಂದ ಸುರಸೆಯು ತನ್ನ ವೃತ್ತಾಂತವನ್ನು ಹೇಳಿದಾಗ ಈ ವಿಷಯವನ್ನೂ ಹೇಳಿರಬೇಕೆಂದು ಊಹಿಸಬೇಕು.

ಮತೋ ದೃಷ್ಟ್ವಾ ಕರ್ಮ ಸುದುಷ್ಕರಂ । "ಸಾಧು! ಸಾಧ್ವಿ"ತಿ ಭೂತಾನಿ ಪ್ರಶಶಂಸು ಸ್ತದಾ ಹರಿಂ ॥೧೭೮॥ ಸ ಸಾಗರಮನಾಧೃಷ್ಯ ಮಭ್ಯೇತ್ಯ ವರುಣಾಲಯಂ । ಜಗಾಮಾ ಕಾಶಮಾವಿಶ್ಯ ವೇಗೇನ ಗರುಡೋಪಮಃ ॥೧೭೯॥ ಸೇವಿತೇ ವಾರಿಧಾರಾಭಿಃ ಪತಗೈಶ್ಚ ನಿಷೇವಿತೇ । ಚರಿತೇ ಕೈಶಿಕಾಚಾರ್ಯೈ ರೈರಾವತನಿಷೇವಿತೇ ॥೧೮೦॥ ಸಿಂಹ ಕುಂಜರ ಶಾರ್ದೂಲ ಪತಗೋರಗ ವಾಹನೈಃ । ವಿಮಾನೈ ಸ್ಸಂಪತದ್ಭಿಶ್ಚ ವಿಮಲೈ ಸ್ಸಮಲಂಕೃತೇ ॥೧೮೧॥ ವಜ್ರಾಶನಿ ಸಮಾಘಾತೈಃ ಪಾವಕೈ ರುಪ ಶೋಭಿತೇ । ಕೃತಪುಣ್ಯೈ ರ್ಮಹಾಭಾಗೈ ಸ್ಸ್ವರ್ಗಜಿದ್ಭಿ ರಲಂಕೃತೇ ॥೧೮೨॥ ವಹತಾ

ನೇಯನ, ತತ್ಕರ್ಮ - ಆ ಕಾರ್ಯವನ್ನು, ದೃಷ್ಟ್ವಾ - ನೋಡಿ, ತದಾ - ಆಗ, ಭೂತಾನಿ - ಭೂತಗಳು, ಸಾಧುಸಾಧ್ವಿತಿ - ಭಲೆ ಭಲೆ ಎಂದು, ಹರಿಂ - ಹನುಮಂತನನ್ನು, ಪ್ರಶಶಂಸುಃ - ಸ್ತುತಿಸಿದವು. ॥೧೭೮॥ ಗರುಡೋಪಮಃ - ಗರುಡನಿಗೆ ಸಮಾನನಾದ, ಸಃ - ಆ ವಾನರನು, ವರುಣಾಲಯಂ-ವರುಣನಿಗೆ ಆವಾಸಸ್ಥಾನವಾದ, ಅನಾಧೃಷ್ಯಂ-ತಿರಸ್ಕರಿಸಲಶಕ್ಯವಾದ, ಸಾಗರಮಭಿ - ಸಮುದ್ರಕ್ಕೆ ಅಭಿಮುಖವಾಗಿ, ಏತ್ಯ - ಬಂದು, ಆಕಾಶಂ - ಅಂತರಿಕ್ಷವನ್ನು, ಆವಿಶ್ಯ - ಹೊಕ್ಕು, ವೇಗೇನ- ವೇಗದಿಂದ, ಜಗಾಮ - ಹೊರಟನು. ॥೧೭೯॥ ಮಾರುತಿಃ - ವಾಯುಪುತ್ರನು, ವಾರಿಧಾರಾಭಿಃ - ಜಲಧಾರೆಗಳಿಂದ, ಸೇವಿತೇ - ಸೇವಿಸಲ್ಪಟ್ಟ, ಪತಗೈಶ್ಚ - ಹಕ್ಕಿಗಳಿಂದಲೂ, ನಿಷೇವಿತೇ - ಸೇವಿಸಲ್ಪಟ್ಟ, ಕೈಶಿಕಾಚಾರ್ಯೈಃ - ನರ್ತನಾದಿಗಳಿಗೆ ಉಪದೇಶಕರ್ತರಾದ ತುಂಬುರಾದಿಗಳಿಂದ, ಚರಿತೇ - ಸಂಚರಿಸಲ್ಪಟ್ಟ, ಐರಾ....ತೇ - ನೆಟ್ಟಗಿರುವ ಮತ್ತು ಉದ್ದವಾದ ಇಂದ್ರ ಧನುಸ್ಸಿನಿಂದ, ನಿಷೇವಿತೇ - ವ್ಯಾಪಿಸಲ್ಪಟ್ಟ, ಸಿಂಹ....ನೈಃ - ಸಿಂಹಗಳು, ಆನೆಗಳು, ಹುಲಿಗಳು, ಹಕ್ಕಿಗಳು, ಹಾವುಗಳು, ಇವೇ ವಾಹನಗಳಾಗಿರುವ, ಸಂಪತದ್ಭಿಃ-ಬರುತ್ತಿರುವ, ವಿಮಲೈಃ - ನಿರ್ಮಲಗಳಾದ, ವಿಮಾನೈಃ-ದೇವರಥಗಳಿಂದ, ಸಮಲಂಕೃತೇ - ಚನ್ನಾಗಿ ಅಲಂಕರಿಸಲ್ಪಟ್ಟ, ವಜ್ರಾ....ತೈಃ - ಇಂದ್ರನ ಆಯುಧಕ್ಕೂ, ಸಿಡಿಲಿಗೂ ಸದೃಶವಾದ ಪ್ರಹಾರವುಳ್ಳ, ಪಾವಕೈಃ - ಅಗ್ನಿಗಳಿಂದ, ಉಪಶೋಭಿತೇ - ಪ್ರಕಾಶಿತವಾದ, ಕೃತಪುಣ್ಯೈಃ - ಮಾಡಲ್ಪಟ್ಟ ಪುಣ್ಯವುಳ್ಳ, ಮಹಾಭಾಗೈಃ - ಮಹಾತ್ಮರಾದ, ಸ್ವರ್ಗಜಿದ್ಭಿಃ - ದೇವತೆ

ಸಮಸ್ತ ಭೂತಗಳೂ, "ಭಲೇ! ಭಲೇ!" ಎಂದು ಹೊಗಳಿದವು. ಆ ಬಳಿಕ ಗರುತ್ಮಂತನಿಗೆ ಸಮಾನನಾದ ಆ ಹನುಮಂತನು ಅಪ್ರಧೃಷ್ಯವೂ, ವರುಣನ ವಾಸಸ್ಥಾನವೂ ಆದ ಆ ಸಮುದ್ರದ ಮೇಲೆ ಆಕಾಶಮಾರ್ಗದಲ್ಲಿ ಹೋಗುತ್ತಿದ್ದನು. ಆತನು ಹೋಗುತ್ತಿದ್ದ ಆ ಗಗನ ಮಾರ್ಗವು ಮೇಘಮುಕ್ತಗಳಾದ ವಾರಿಧಾರೆಗಳಿಂದೊಪ್ಪುತ್ತಿರುವುದೂ,ನಿರಂತರವೂ ಪಕ್ಷಿಗಳ ಸಂಚಾರದಿಂದ ತುಂಬಿರುವುದೂ, ನೃತ್ಯದಲ್ಲಿಯೂ, ಗಾಯನದಲ್ಲಿಯೂ ವಿಶಾರದರಾಗಿರುವ ವಿದ್ಯಾಧರರಿಂದ ನಿಬಿಡಿತವಾಗಿರುವುದೂ, ದೇವೇಂದ್ರನ ವಾಹನವಾದ ಐರಾವತ ಸಮಾನಗಳಾದ ಗಜಶ್ರೇಷ್ಠಗಳು ಸಂಚರಿಸುವ ಮಾರ್ಗವಾಗಿರುವುದೂ, ಸಿಂಹ, ಗಜ, ವ್ಯಾಘ್ರ, ಪಕ್ಷಿ, ಸರ್ಪ ಇವುಗಳ ಆಕಾರಗಳಿಂದೊಪ್ಪುತ್ತಿರುವ ವಿವಧ ವಿಮಾನಗಳ ಸಂಚಾರದಿಂದಲಂಕೃತವಾಗಿರುವುದೂ, ವಜ್ರಾಯುಧಕ್ಕೂ, ಸಿಡಿಲಿಗೂ ಸಮಾನವಾದ ಹೊಡತಗಳಂತೆ ಪ್ರಜ್ವಲಿಸುತ್ತಿರುವ ಅಗ್ನಿಗಳಿಂದ ಪ್ರಕಾಶಿಸುತ್ತಿರುವುದೂ ಆಗಿದ್ದಿತು. ಇಷ್ಟೆಯಲ್ಲದೆ, ಪುಣ್ಯಾತ್ಮರಾಗಿ ಸ್ವರ್ಗವನ್ನು ಜಯಿಸಿರುವ ಮಹಾ ಭಾಗ್ಯವಂತರಾದ ಯಾಜ್ಞಿಕರಿಂದಲೂ, ಹವಿರ್ಭಾಗಗಳನ್ನು

ಹವ್ಯಮತ್ಯರ್ಥಂ ಸೇವಿತೇ ಚಿತ್ರಭಾನುನಾ । ಗ್ರಹನಕ್ಷತ್ರ ಚಂದ್ರಾರ್ಕ ತಾರಾಗಣ ವಿಭೂಷಿತೇ ॥ ೧೮೩ ॥ ಮಹರ್ಷಿಗಣ ಗಂಧರ್ವ ನಾಗ ಯಕ್ಷ ಸಮಾಕುಲೇ । ವಿವಿಕ್ತೇ ವಿಮಲೇ ವಿಶ್ವೇ ವಿಶ್ವಾವಸು ನಿಷೇವಿತೇ ॥ ೧೮೪ ॥ ದೇವರಾಜ ಗಜಾಕ್ರಾಂತೇ ಚಂದ್ರ ಸೂರ್ಯಪಥೇ ಶಿವೇ । ವಿತಾನೇ ಜೀವಲೋಕಸ್ಯ ವಿತತೇ ಬ್ರಹ್ಮನಿರ್ಮಿತೇ । ಬಹುಶಸ್ಸೇವಿತೇ ವೀರೈ ರ್ವಿದ್ಯಾಧರಗಣೈರ್ವರೈಃ ॥ ೧೮೫ ॥ ಜಗಾಮ ವಾಯು ಮಾರ್ಗೇತು ಗರುತ್ಮಾನಿವ ಮಾರುತಿಃ । * ಪ್ರದೃಶ್ಯಮಾನ ಸ್ಸರ್ವತ್ರ ಹನುಮಾ ನ್ಮಾರುತಾತ್ಮಜಃ ॥ ೧೮೬ ॥ ಭೇಜೇಽಂಬರಂ ನಿರಾಲಂಬಂ ಲಂಬಪಕ್ಷ ಇವಾದ್ರಿರಾಟ್ ।

ಗಳಿಂದ, ಅಲಂಕೃತೇ - ಅಲಂಕರಿಸಲ್ಪಟ್ಟ, ಹವ್ಯಂ - ಹವಿಸ್ಸನ್ನು, ಅತ್ಯರ್ಥಂ - ಬಹಳವಾಗಿ, ವಹತಾ - ಕೊಂಡುಹೋಗುತ್ತಿರುವ, ಚಿತ್ರಭಾನುನಾ-ಯಜ್ಞೇಶ್ವರನಿಂದ, ಸೇವಿತೇ-ಸಂಚರಿಸಲ್ಪಟ್ಟ, ಗ್ರಹ....ತೇ- ಗ್ರಹರೂಪಗಳಾದ ನಕ್ಷತ್ರಗಳಿಂದಲೂ, ಚಂದ್ರಸೂರ್ಯರಿಂದಲೂ, ಅಶ್ವಿನ್ಯಾದಿ ನಕ್ಷತ್ರಗಳ ಸಮೂಹ ದಿಂದಲೂ ಅಲಂಕರಿಸಲ್ಪಟ್ಟ, ಮಹ....ಲೇ - ಋಷಿಶ್ರೇಷ್ಠರ ಸಮೂಹದಿಂದಲೂ, ದೇವಗಾಯಕ ರಿಂದಲೂ, ಸರ್ಪಗಳಿಂದಲೂ, ಯಕ್ಷರಿಂದಲೂ ವ್ಯಾಪ್ತವಾದ, ವಿವಿಕ್ತೇ - ವಿಜನವಾದ, ವಿಮಲೇ- ನಿರ್ಮಲವಾದ, ವಿಶ್ವೇ - ಜಗದ್ವ್ಯಾಪಕವಾದ, ವಿಶ್ವಾ....ತೇ - ಗಂಧರ್ವರಾಜನಿಂದ ಸೇವಿ ಸಲ್ಪಡುವ, ದೇವ....ತೇ - ಐರಾವತಭಿನ್ನವಾದ ದಿಗ್ಗಜಗಳಿಂದ ವ್ಯಾಪ್ತವಾದ, ಚಂದ್ರ....ಥೇ - ಚಂದ್ರನಿಗೂ, ಸೂರ್ಯನಿಗೂ ಮಾರ್ಗವಾದ, ಶುಭೇ - ಮಂಗಳಕರವಾದ, ಜೀವಲೋಕಸ್ಯ - ಭೂ ಲೋಕಕ್ಕೆ, ವಿತಾನೇ - ಮೇಲ್ಭಾಗದಲ್ಲಿ ಕಟ್ಟಿರುವ ಚಿತ್ರದ ಪಟ್ಟೆಯಂತಿರುವ, ವಿತತೇ - ವಿಸ್ತಾರ ವಾದ, ಬ್ರಹ್ಮನಿರ್ಮಿತೇ - ಬ್ರಹ್ಮನಿಂದ ಸೃಜಿಸಲ್ಪಟ್ಟ, ವೀರೈಃ-ಪರಾಕ್ರಮಿಗಳಾದ, ವರೈಃ - ಉತ್ಕೃಷ್ಟ ಗಳಾದ, ವಿದ್ಯಾಧರಗಣೈಃ - ದೇವಯೋನಿವಿಶೇಷಗಳ ಸಮುದಾಯಗಳಿಂದ, ಬಹುಶಃ - ಅನೇಕ ಬಗೆ ಯಾಗಿ, ಸೇವಿತೇ - ಸೇವಿಸಲ್ಪಟ್ಟ, ವಾಯುಮಾರ್ಗೇ - ಅಂತರಿಕ್ಷ ಮಾರ್ಗದಲ್ಲಿ, ಗರುತ್ಮಾನ್ - ಗರುಡ ನಂತೆ, ಜಗಾಮ - ಹೊರಟನು. ॥ ೧೮೦-೧೮೬ ॥ ಸರ್ವತ್ರ - ಎಲ್ಲೆಡೆಯಲ್ಲಿಯೂ, ಪ್ರದೃಶ್ಯಮಾನಃ -

---

ಆ ಆ ದೇವತೆಗಳಿಗಾಗಿ ಕೊಂಡುಹೋಗುತ್ತಿರುವ ಯಜ್ಞಪುರುಷನಿಂದಲೂ, ಅಂಗಾರಕಾದಿ ಗ್ರಹ ಗಳಿಂದಲೂ, ಸೂರ್ಯಚಂದ್ರರಿಂದಲೂ, ನಕ್ಷತ್ರರೂಪವನ್ನು ಹೊಂದಿ ರಾರಾಜಿಸುತ್ತಿರುವ ಪುಣ್ಯವಂತರ ಸಮೂಹದಿಂದಲೂ, ಮಹರ್ಷಿಗಳ ಸಮೂಹದಿಂದಲೂ, ನಾಗ, ಗಂಧರ್ವ, ಯಕ್ಷಾದಿ ದೇವಗಣಗಳಿಂದಲೂ, ಸಾಂದ್ರವಾಗಿ ಜಗತ್ತನ್ನೇ ವ್ಯಾಪಿಸಿ ವಿಶ್ವಾವಸುವೇ ಮೊದ ಲಾದ ದೇವಗಂಧರ್ವರಿಂದ ಸೇವಿತವಾಗಿ ಅತಿ ಮನೋಹರವಾಗಿದ್ದಿತು. ಅಷ್ಟದಿಗ್ಗಜಗಳ ಸಂಚಾರದಿಂದ ಶೋಭಿತವಾಗಿ, ಸೂರ್ಯಚಂದ್ರರ ಸಂಚಾರಮಾರ್ಗವಾಗಿದ್ದ ಆ ಗಗನವು ಬ್ರಹ್ಮನಿರ್ಮಿತವಾದ ಈ ಪ್ರಪಂಚಕ್ಕೆ ಮೇಲ್ಕಟ್ಟಿನಂತೆ ಬೆಳಗುತ್ತ, ರಣಧೀರರಿಂದಲೂ, ವಿದ್ಯಾಧರಗಣಗಳಿಂದಲೂ ಸೇವಿತವಾಗಿದ್ದಿತು. ವಾಯುಪುತ್ರನಾದ ಹನುಮಂತನು ಗರುಡನಿಗೆ ಸಮಾನವಾದ ವೇಗದಿಂದ ಆ ಗಗನಮಾರ್ಗದಲ್ಲಿ ಹೊರಟನು. ॥ ೧೭೭–೧೮೬ ॥

---

* ಹನುಮಾನ್ಮೇಘಜಾಲಾನಿ ಪ್ರಾಕರ್ಷನ್ಮಾರುತೋ ಯಥಾ । ಕಾಲಾಗುರು ಸವರ್ಣಾನಿ ರಕ್ತಪೀತ ಸಿತಾನಿಚ ॥ ಕಪಿನಾಕೃಷ್ಯಮಾಣಾನಿ ಮಹಾಭ್ರಾಣಿ ಚಕಾಶಿರೇ । ಪ್ರವಿಶನ್ನ ಭ್ರಜಾಲಾನಿ ನಿಷ್ಪತಂಶ್ಚ ಪುನಃ ಪುನಃ ॥ ಪ್ರಾವೃಷೀಂದುರಿವಾಭಾತಿ ನಿಷ್ಪತನ್ಪ್ರವಿಶಂ ಸ್ತದಾ ॥ ಈ ಶ್ಲೋಕಗಳು ತಿ. ಪಾಠದಲ್ಲಿವೆ.

ಪ್ಲವಮಾನಂ ತು ತಂ ದೃಷ್ಟ್ವಾ ಸಿಂಹಿಕಾ ನಾಮ ರಾಕ್ಷಸೀ ॥ ೧೮೭ ॥ ಮನಸಾ ಚಿಂತಯಾಮಾಸ ಪ್ರವೃದ್ಧಾ ಕಾಮರೂಪಿಣೀ । "ಅದ್ಯ ದೀರ್ಘಸ್ಯ ಕಾಲಸ್ಯ ಭವಿಷ್ಯಾಮ್ಯಹಮಾಶಿತಾ ॥ ೧೮೮ ॥ ಇದಂ ಹಿ ಮೇ ಮಹತ್ಸತ್ತ್ವಂ ಚಿರಸ್ಯ ವಶಮಾಗತಂ" । ಇತಿ ಸಂಚಿಂತ್ಯ ಮನಸಾ ಛಾಯಾಮಸ್ಯ ಸಮಾಕ್ಷಿಪತ್ ॥ ೧೮೯ ॥ ಛಾಯಾಯಾಂ ಸಂಗೃಹೀತಾಯಾಂ ಚಿಂತಯಾಮಾಸ ವಾನರಃ । "ಸಮಾಕ್ಷಿಪ್ತೋಽಸ್ಮಿ ಸಹಸಾ ಪಂಗೂಕೃತ ಪರಾಕ್ರಮಃ ॥ ೧೯೦ ॥ ಪ್ರತಿಲೋಮೇನ ವಾತೇನ ಮಹಾನೌರಿವ ಸಾಗರೇ" । ತಿರ್ಯಗೂರ್ಧ್ವಮಧಶ್ಚೈವ ವೀಕ್ಷಮಾಣಸ್ತತಃ ಕಪಿಃ ॥ ೧೯೧ ॥

ಕಾಣುವ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾ್ - ಹನುಮಂತನು, ಲಂಬಪಕ್ಷಃ - ಜೋಲಾಡುತ್ತಿರುವ, ಪಕ್ಷಃ - ರೆಕ್ಕೆಗಳುಳ್ಳ, ಅದ್ರಿರಾಡಿವ - ಬೆಟ್ಟದಂತೆ, ನಿರಾಲಂಬಂ - ನಿರಾಧಾರವಾದ, ಅಂಬರಂ-ಅಂತರಿಕ್ಷವನ್ನು, ಭೇಜೇ-ಹೊಂದಿದನು. ॥ ೧೮೭ ॥ ಪ್ರವೃದ್ಧಾ-ಮುದುಕಿಯಾದ, ಕಾಮರೂಪಿಣೀ - ಕಾಮರೂಪಿಣಿಯಾದ, ಸಿಂಹಿಕಾನಾಮ - ಸಿಂಹಿಕೆಯೆಂದು ಪ್ರಸಿದ್ಧಳಾದ, ರಾಕ್ಷಸೀ-ರಾಕ್ಷಸಸ್ತ್ರೀಯು, ಪ್ಲವಮಾನಂ - ಹಾರುತ್ತಿರುವ, ತಂ - ಆತನನ್ನು, ದೃಷ್ಟ್ವಾ - ಕಂಡು, ಮನಸಾ-ಮನದಿಂದ, ಚಿಂತಯಾಮಾಸ - ಯೋಚಿಸಿದಳು. ॥೧೮೮॥ ದೀರ್ಘಸ್ಯಕಾಲಸ್ಯ - ಬಹಳಕಾಲಕ್ಕೆ, ಅಹಂ - ನಾನು, ಅದ್ಯ - ಈಗ, ಆಶಿತಾ - ಭುಜಿಸಿದವಳು, ಭವಿಷ್ಯಾಮಿ - ಆಗುವೆನು, ಹಿ - ಯಾವ ಕಾರಣದಿಂದ, ಇದಂ - ಈ, ಮಹತ್ಸತ್ವಂ - ಮಹಾ ಪ್ರಾಣಿಯು, ಚಿರಸ್ಯ - ಬಹುಕಾಲಕ್ಕೆ, ವಶಂ - ಸ್ವಾಧೀನವಾಗಿ, ಆಗತಂ - ಬಂದಿತು. ॥ ೧೮೯ ॥ ಇತಿ - ಹೀಗೆ, ಮನಸಾ - ಮನಸ್ಸಿನಿಂದ, ಸಂಚಿಂತ್ಯ - ಯೋಚಿಸಿ, ಅಸ್ಯ - ಈತನ, ಛಾಯಾಂ - ನೆರಳನ್ನು, ಸಮಾಕ್ಷಿಪತ್ - ಗ್ರಹಿಸಿದಳು, ಛಾಯಾಯಾಂ - ನೆರಳು, ಗೃಹ್ಯಮಾಣಾಯಾಂ - ಗ್ರಹಿಸಿದುದಾಗಲು, ವಾನರಃ - ಕಪಿಯು, ಚಿಂತಯಾಮಾಸ - ಯೋಚಿಸಿದನು. ॥ ೧೯೦ ॥ ಸಾಗರೇ - ಸಮುದ್ರದಲ್ಲಿ, ಪ್ರತಿಲೋಮೇನ - ಪ್ರತಿಕೂಲವಾದ, ವಾತೇನ-ಗಾಳಿಯಿಂದ, ಮಹಾನೌರಿವ- ದೊಡ್ಡಹಡಗಿನಂತೆ, ಸಹಸಾ-ಜಾಗ್ರತೆಯಾಗಿ, ಸಮಾಕ್ಷಿಪ್ತಃ - ಹಿಡಿಯಲ್ಪಟ್ಟವನಾದ್ದರಿಂದಲೇ, ಪಂಗೂ....ಮಃ - ಕುಂಟನಹಾಗೆ ಮಾಡಲ್ಪಟ್ಟ

ವಾಯುನಂದನನಾದ ಆ ಹನುಮಂತನು ಗಗನಮಂಡಲದ ಎಲ್ಲೆಡೆಗಳಲ್ಲಿಯೂ ಕಾಣುತ್ತ ರೆಕ್ಕೆಗಳೊಡಗೂಡಿದ ಪರ್ವತರಾಜನಂತೊಪ್ಪುತ್ತಿದ್ದನು. ಆತನೀರೀತಿ ಮಹಾ ವೇಗದಿಂದ ಮುಂಬರಿಯುತ್ತಿರಲು ಆ ಮಹಾ ಸಮುದ್ರದಲ್ಲಿ ವಾಸಮಾಡಿಕೊಂಡು ಕೇವಲ ಛಾಯಾಗ್ರಹಣದಿಂದಲೇ ಜೀವಿಸುತ್ತಲಿದ್ದ ಸಿಂಹಿಕೆಯೆಂಬ ಕಾಮರೂಪಿಣಿಯಾದ ಒಬ್ಬ ರಾಕ್ಷಸಿಯು ಆತನನ್ನು ಕಂಡಳು. ಆಗಲವಳು, "ಆಹಾ! ನಾನು ಬಹುಕಾಲದಿಂದಲೂ ಆಹಾರವಿಲ್ಲದೆ ಹಸಿದಿದ್ದೆನು. ಬಹುಕಾಲದಮೇಲೆ ನನಗೀ ಮಹಾ ಸತ್ವವು ಆಹಾರವಾಗಿ ದೊರಕಿತು. ಈಗ ನಾನಿದನ್ನು ಯಥಾಸುಖವಾಗಿ ಭುಜಿಸುವೆನು" ಎಂದು ಯೋಚಿಸಿ ಸಮುದ್ರದಮೇಲೆ ಸಂಚರಿಸುತ್ತಿದ್ದ ಆ ಹನುಮಂತನ ಛಾಯೆಯುನ್ನು ಆಕರ್ಷಿಸಿದಳು. ಹೀಗೆ ತನ್ನ ಛಾಯೆಯು ಸೆಳೆಯಲಾದುದನ್ನು ಕಂಡು ಆ ವಾನರವೀರನು ತನ್ನಲ್ಲಿ ತಾನು, "ಸಾಗರದಲ್ಲಿ ಎದುರುಗಾಳಿಯಿಂದ ಹಡಗು ತೊಂದರೆಗೊಳಗಾದಂತೆ ಈಗ ನಾನು ನನ್ನ ಛಾಯಾಗ್ರಹಣದ ಮೂಲಕ ತೊಂದರೆಗೊಳಗಾಗಿರುವೆನು. ಈಗ ನನ್ನ ಪರಾಕ್ರಮವೆಲ್ಲವೂ ಉಡುಗಿ

ದದರ್ಶ ಸಮಹತ್ ಸತ್ವಮುತ್ಥಿತಂ ಲವಣಾಂಭಸಿ । ತದ್ದೃಷ್ಟ್ವಾ ಚಿಂತಯಾಮಾಸ ಮಾರುತಿ ರ್ವಿಕೃತಾನನಂ ॥೧೯೨॥ ಕಪಿರಾಜೇನ "ಕಥಿತಂ ಸತ್ವಮದ್ಭುತ ದರ್ಶನಂ । ಛಾಯಾಗ್ರಾಹಿ ಮಹಾವೀರ್ಯಂ ತದಿದಂ ನಾಽತ್ರ ಸಂಶಯಃ" ॥ ೧೯೩ ॥ ಸತಾಂ ಬುದ್ಧ್ವಾರ್ಥತತ್ವೇನ ಸಿಂಹಿಕಾಂ ಮತಿಮಾನ್ಕಪಿಃ । ವ್ಯವರ್ಧತ ಮಹಾಕಾಯಃ ಪ್ರಾವೃಷೀವ ವಲಾಹಕಃ ॥ ೧೯೪ ॥ ತಸ್ಯ ಸಾ ಕಾಯಮುದ್ವೀಕ್ಷ್ಯ ವರ್ಧಮಾನಂ ಮಹಾಕಪೇಃ । ವಕ್ತ್ರಂ ಪ್ರಸಾರಯಾಮಾಸ ಪಾತಾಳಾಂ ¶ ತರಸನ್ನಿಭಂ ॥ ೧೯೫ ॥

ಸಾಮರ್ಥ್ಯವುಳ್ಳವನು, ಅಸ್ಮಿ-ಆದೆನು. ॥ ೧೯೧ ॥ ತತಃ-ಅನಂತರದಲ್ಲಿ, ತಿರ್ಯಕ್-ಅಡ್ಡಲಾಗಿಯೂ, ಊರ್ಧ್ವಂ – ಮೇಲ್ಭಾಗದಲ್ಲಿಯೂ, ಅಧಶ್ಚ – ಕೆಳಗಡೆಯೂ, ವೀಕ್ಷ್ಯಮಾಣಃ - ನೋಡುತ್ತಿರುವ, ಸಕಪಿಃ - ಆ ವಾನರನು, ಲವಣಾಂಭಸಿ - ಲವಣಸಮುದ್ರದಲ್ಲಿ, ಉತ್ಥಿತಂ - ಎದ್ದುನಿಂತಿರುವ, ಮಹತ್ಸತ್ವಂ-ಮಹಾ ಜಂತುವನ್ನು, ದದರ್ಶ-ನೋಡಿದನು. ॥ ೧೯೨ ॥ ಮಾರುತಿಃ-ಪವನನಂದನನು, ವಿಕೃತಾನನಂ - ವಿಕಾರವಾದ ಮುಖವುಳ್ಳ, ತತ್ - ಅದನ್ನು, ದೃಷ್ಟ್ವಾ - ನೋಡಿ, ಚಿಂತಯಾಮಾಸ-ಯೋಚಿಸಿದನು, ಅದ್ಭು....ನಂ - ಆಶ್ಚರ್ಯಕರವಾದ ದೃಷ್ಟಿಯುಳ್ಳ, ಮಹಾವೀರ್ಯಂ - ಮಹಾ ಶಕ್ತಿಯುಳ್ಳ, ಛಾಯಾಗ್ರಾಹಿ - ನೆರಳನ್ನು ಹಿಡಿಯುವ, ಯತ್ಸತ್ವಂ - ಯಾವ ಜಂತುವು, ಕಪಿರಾಜೇನ - ಸುಗ್ರೀವನಿಂದ, ಕಥಿತಂ - ಹೇಳಲ್ಪಟ್ಟಿತೋ, ತದಿದಂ - ಅದೇ ಇದು, ಅತ್ರ - ಈ ವಿಷಯದಲ್ಲಿ, ಸಂಶಯಃ - ಸಂದೇಹವು, ನ - ಇಲ್ಲ. ॥ ೧೯೩ ॥ ಮತಿಮಾನ್ - ಬುದ್ಧಿಶಾಲಿಯಾದ, ಸಕಪಿಃ - ಆ ವಾನರನು, ಅರ್ಥತತ್ವೇನ - ವಸ್ತುಸ್ವರೂಪದಿಂದ, ತಾಂ - ಆ ವ್ಯಕ್ತಿಯನ್ನು, ಸಿಂಹಿಕಾಂ - ಸಿಂಹಿಕೆಯೆಂದು, ಮತ್ವಾ - ತಿಳಿದು, ಪ್ರಾವೃಷಿ - ವರ್ಷಾಕಾಲದಲ್ಲಿ, ವಲಾಹಕಇವ - ಮೇಘದಂತೆ, ಮಹಾಕಾಯಃ - ದೊಡ್ಡ ಶರೀರವುಳ್ಳವನಾಗಿ, ವ್ಯವರ್ಧತ - ವೃದ್ಧಿಯನ್ನೈದಿದನು. ॥ ೧೯೪ ॥ ಸಾ - ಆ ಛಾಯಾಗ್ರಾಹಿಣಿಯೂ, ವರ್ಧಮಾನಂ-ಬೆಳೆಯುತ್ತಿರುವ, ತಸ್ಯಮಹಾಕಪೇಃ-ಆ ಆಂಜನೇಯನ, ಕಾಯಂ - ದೇಹವನ್ನು, ಉದ್ವೀಕ್ಷ್ಯ - ಕಂಡು, ಪಾತಾ....ಭಂ - ಪಾತಾಳಲೋಕದ ಬಾಗಿಲಿಗೆ ಸದೃಶವಾದ, ವಕ್ತ್ರಂ - ಬಾಯಿಯನ್ನು, ಪ್ರಸಾ....ಸ - ವಿಸ್ತರಿಸಿದಳು. ॥ ೧೯೫ ॥ ಘನರಾಜೀವ -

ಹೋಯಿತು" ಎಂದು ಚಿಂತಿಸಿದನು. ॥೧೮೬–೧೯೧॥ ಬಳಿಕ ಆ ಕಪಿಸತ್ತಮನು ಅಕ್ಕಪಕ್ಕಗಳಲ್ಲಿಯೂ, ಮೇಲ್ಭಾಗ ಕೆಳಭಾಗಗಳಲ್ಲಿಯೂ ದೃಷ್ಟಿಸಿ ನೋಡಿ ಆ ಸಮುದ್ರದಲ್ಲಿ ಎದ್ದು ನಿಂತಿರುವ ಛಾಯಾಗ್ರಾಹಿಣಿಯಾದ ಮಹಾ ಪ್ರಾಣಿಯೊಂದನ್ನು ಕಂಡನು. ಮಹಾ ಬುದ್ಧಿಶಾಲಿಯಾದ ಆ ಹನುಮಂತನು, "ಹಿಂದೆ ಕಪಿರಾಜನಾದ ಸುಗ್ರೀವನು ಈ ಸಮುದ್ರದಲ್ಲಿ ಛಾಯಾಗ್ರಹಣದಿಂದ ಜೀವಿಸುವ ಮಹಾ ಬಲಿಷ್ಠವೂ, ಅದ್ಭುತವೂ ಆದ ಪ್ರಾಣಿಯಿರುವುದೆಂದು ಹೇಳಿದ್ದನು. ಈಗ ಕಾಣುತ್ತಿರುವ ಈ ಸತ್ವವು ಅದೇ ಎಂಬುದರಲ್ಲಿ ಸಂಶಯವಿಲ್ಲವು" ಎಂದು ಯಥಾರ್ಥವಾಗಿ ತಿಳಿದು ವರ್ಷಾಕಾಲದ ಮೇಘದಂತೆ ತನ್ನ ಶರೀರವನ್ನು ವೃದ್ಧಿಗೊಳಿಸಿದನು. ಆಗ ಸಿಂಹಿಕೆಯು ಆ ಮಹಾ ಕಪಿಯ ವೃದ್ಧಿಗೊಂಡ ದೇಹವನ್ನು ನೋಡಿ, ಪಾತಾಳ ದ್ವಾರಕ್ಕೆ ಸಮಾನವಾದ ತನ್ನಬಾಯಿಯನ್ನು ತೆರೆದು ಮೇಘಮಂಡಲದಂತೆ ಗರ್ಜಿಸುತ್ತ ಅವನನ್ನಟ್ಟಿಕೊಂಡು ಹೋದಳು. ಮಹಾ ಬುದ್ಧಿಶಾಲಿಯಾದ ಆ ಕಪಿಸತ್ತಮನು

¶ "ಅಂಬರ" ತಿ. ಪಾ.

ಘನರಾಜೀವ ಗರ್ಜಂತೀ ವಾನರಂ ಸಮಭಿದ್ರವತ್ । ಸ ದದರ್ಶ ತತಸ್ತಸ್ಯಾ ವಿವೃತಂ ಸುಮಹನ್ಮುಖಂ । ಕಾಯಮಾತ್ರಂ ಚ ಮೇಧಾವೀ ಮರ್ಮಾಣಿಚ ಮಹಾಕಪಿಃ ॥ ೧೯೭ ॥ ಸ ತಸ್ಯಾ ವಿವೃತೇ ವಕ್ತ್ರೇ ವಜ್ರಸಂಹನನಃ ಕಪಿಃ । ಸಂಕ್ಷಿಪ್ಯ ಮುಹು ರಾತ್ಮಾನಂ ನಿಷ್ಪಪಾತ ಮಹಾಬಲಃ ॥ ೧೯೮ ॥ ಆಸ್ಯೇ ತಸ್ಯಾ ನಿಮಜ್ಜಂತಂ ದದೃಶು ಸ್ಸಿದ್ಧಚಾರಣಾಃ । ಗ್ರಸ್ಯಮಾನಂ ಯಥಾ ಚಂದ್ರಂ ಪೂರ್ಣಂ ಪರ್ವಣಿ ರಾಹುಣಾ ॥ ೧೯೯ ॥ ತತಸ್ತಸ್ಯಾ ನಖೈಸ್ತೀಕ್ಷ್ಣೈ ರ್ಮರ್ಮಾಣ್ಯುತ್ಕೃತ್ಯ ವಾನರಃ । ಉತ್ಪಪಾತಾಽಥ ವೇಗೇನ ಮನಸ್ಸಂಪಾತವಿಕ್ರಮಃ ॥ ೨೦೦ ॥ ತಾಂತು ದೃಷ್ಟ್ಯಾಚ

ಮೇಘಪಜ್‌ತ್ತಯಂತೆ, ಗರ್ಜಂತೀ-ಗರ್ಜಿಸುವವಳಾಗಿ, ವಾನರಂ-ಕಪಿಯನ್ನು ಕುರಿತು, ಸಮಭಿದ್ರವತ್-ಅಟ್ಟಿಬಂದಳು. ॥ ೧೯೬ ॥ ತತಃ - ಅನಂತರವಲ್ಲಿ, ಮೇಧಾವೀ - ಬುದ್ಧಿವಂತನಾದ, ಸಮಹಾಕಪಿಃ - ಆ ಮಹಾ ವಾನರನು, ವಿವೃತಂ - ವಿಸ್ತರಗೊಳಿಸಿದ, ಸುಮಹತ್ - ದೊಡ್ಡದಾದ, ತಸ್ಯಾಃ - ಆ ಸಿಂಹಿಕೆಯ, ಮುಖಂ-ಬಾಯಿಯನ್ನೂ, ಕಾಯಮಾತ್ರಂಚ-ಶರೀರದ ಪ್ರಮಾಣವನ್ನೂ, ಮರ್ಮಾಣಿಚ-ಪ್ರಾಣಸ್ಥಾನಗಳನ್ನೂ ಕೂಡ, ದದರ್ಶ - ಕಂಡನು. ॥೧೯೭॥ ವಜ್ರ....ನಃ - ವಜ್ರದಂತಿರುವ ಶರೀರ ವುಳ್ಳ, ಮಹಾಬಲಃ - ಮಹಾ ಶಕ್ತಿಯುಳ್ಳ, ಸಕಪಿಃ - ಆ ವಾನರನು, ಮುಹುಃ - ಮರಳಿಯೂ, ಆತ್ಮಾನಂ - ತನ್ನನ್ನು, ಸಂಕ್ಷಿಪ್ಯ - ಕಿರಿದು ಮಾಡಿಕೊಂಡು, ವಿವೃತೇ - ವಿಸ್ತಾರವಾದ, ತಸ್ಯಾಃ - ಆ ಸಿಂಹಿಕೆಯ, ವಕ್ತ್ರೇ - ಬಾಯಿಯಲ್ಲಿ, ನಿಷ್ಪಪಾತ - ಬಿದ್ದನು. ॥ ೧೯೮ ॥ ಸಿದ್ಧಚಾರಣಾಃ - ಸಿದ್ಧಚಾರಣರು, ತಸ್ಯಾಃ - ಆ ಸಿಂಹಿಕೆಯ, ಆಸ್ಯೇ - ಮುಖದಲ್ಲಿ, ಪರ್ವಣಿ - ಹುಣ್ಣಿಮೆಯಲ್ಲಿ, ರಾಹುಣಾ - ರಾಹುವಿನಿಂದ, ಗ್ರಸ್ಯಮಾನಂ - ನುಂಗಲ್ಪಡುತ್ತಿರುವ, ಪೂರ್ಣಚಂದ್ರಂಯಥಾ - ಪೂರ್ಣಚಂದ್ರನಂತೆ, ನಿಮಜ್ಜಂತಂ - ಮುಳುಗುತ್ತಿರುವ ಆಂಜನೇಯನನ್ನು, ದದೃಶುಃ - ಕಂಡರು. ॥೧೯೯॥ ಅಥ - ಅನಂತರದಲ್ಲಿ, ವಾನರಃ - ಕಪಿಯು, ಮನ....ಮಃ - ಮನೋಗಮನಕ್ಕೆ ಸಮಾನಗತಿಯುಳ್ಳವನಾಗಿ, ತೀಕ್ಷ್ಣೈಃ - ಕ್ರೂರಗಳಾದ, ನಖೈಃ - ಉಗುರುಗಳಿಂದ, ತಸ್ಯಾಃ - ಆ ಸಿಂಹಿಕೆಯ, ಮರ್ಮಾಣಿ - ಮರ್ಮಸ್ಥಾನಗಳನ್ನು, ಉತ್ಕೃತ್ಯ - ಕತ್ತರಿಸಿ, ತತಃ - ಆ ಮುಖದಿಂದ, ವೇಗೇನ - ವೇಗದಿಂದ, ಉತ್ಪಪಾತ - ಹಾರಿಬಂದನು. ॥ ೨೦೦ ॥ ಕಪಿಪ್ರವರಃ - ವಾನರಶ್ರೇಷ್ಠನಾದ, ಸಃ - ಆ ಆಂಜನೇಯನು, ಆತ್ಮವಾನ್ - ಪ್ರಯತ್ನವುಳ್ಳವನಾಗಿ, ದೃಷ್ಟ್ಯಾಚ - ಸೂಕ್ಷ್ಮದರ್ಶನದಿಂದಲೂ, ಧೃತ್ಯಾಚ - ಧೈರ್ಯದಿಂದಲೂ, ದಾಕ್ಷಿಣ್ಯೇನಚ - ಕೌಶಲದಿಂದಲೂ, ತಾಂತು - ಆ ಸಿಂಹಿಕೆಯನ್ನು,

---

ದೊಡ್ಡದಾಗಿ ತೆರೆದಿರುವ ಆ ಸಿಂಹಿಕೆಯ ಮುಖವನ್ನು ನೋಡಿ ಅದು ತನ್ನ ಶರೀರವು ಹಿಡಿಸುವಷ್ಟು ವಿಶಾಲವಾದುದೆಂದು ಅರಿತುಕೊಂಡು ಆ ರಾಕ್ಷಸಿಯ ಜೀವಸ್ಥಾನಗಳೆಲ್ಲವನ್ನು ತಿಳಿದನು. ॥ ೧೯೨–೧೯೭ ॥ ಆ ಬಳಿಕ ವಜ್ರಕಾಯನೂ, ಮಹಾ ಬಲಪರಾಕ್ರಮಶಾಲಿಯೂ ಆದ ಆ ಮಾರುತಿಯು ಅಡಿಗಡಿಗೂ ತನ್ನ ದೇಹವನ್ನು ಕುಗ್ಗಿಸಿಕೊಂಡು ಆ ರಾಕ್ಷಸಿಯ ಮುಖವನ್ನು ಹೊಕ್ಕನು. ಹೀಗೆ ಸಿಂಹಿಕೆಯ ಮುಖವನ್ನು ಹೊಗುತ್ತ ರಾಹುಗ್ರಹದಿಂದ ನುಂಗಲ್ಪಡುತ್ತಿರುವ ಚಂದ್ರನಂತೆ ತೋರುತ್ತಿದ್ದ ಆ ಕಪಿವೀರನನ್ನು ನೋಡಿ ಸಿದ್ಧಚಾರಣರೆಲ್ಲರೂ ಚಿಂತಾಕ್ರಾಂತರಾದರು. ಆಮೇಲೆ ಹನುಮಂತನು ಮನೋವೇಗವುಳ್ಳವನಾಗಿ ಮೊನಚಾದ ತನ್ನ ಉಗುರುಗಳಿಂದ ಆ ಸಿಂಹಿಕೆಯ ಮರ್ಮಸ್ಥಾನಗಳನ್ನು ಸಿಗಿದು ಅದೇ ವೇಗದಿಂದಲೇ ಗಗನಕ್ಕೆ ಹಾರಿದನು. ಆಗಲಾ ಸಿಂಹಿಕೆಯು ಹನುಮಂತನಿಂದ ಸೀಳಿದ ಹೃದಯವುಳ್ಳವಳಾಗಿ

ಧೃತ್ಯಾಚ ದಾಕ್ಷಿಣ್ಯೇನ ನಿಪಾತ್ಯಚ । ಸಕಪಿಪ್ರವರೋ ವೇಗಾದ್ವವೃಧೇ ಪುನರಾತ್ಮವಾನ್ ॥ ೨೦೧ ॥ ಹೃತಹೃತ್ಸಾ ಹನುಮತಾ ಪಪಾತ ವಿಧುರಾಂಭಸಿ । ಸ್ವಯಂಭುವೈವ ಹನುಮಾನ್ ಸೃಷ್ಟಸ್ತಸ್ಯಾ ನಿಪಾತನೇ ॥೨೦೨॥ ತಾಂ ಹತಾಂ ವಾನರೇಣಾಶು ಪತಿತಾಂ ವೀಕ್ಷ್ಯ ಸಿಂಹಿಕಾಂ । ಭೂತಾನ್ಯಾಕಾಶಚಾರೀಣಿ ತಮೂಚುಃ ಪ್ಲವಗೋತ್ತಮಂ ॥ ೨೦೩ ॥ "ಭೀಮಮದ್ಯ ಕೃತಂ ಕರ್ಮ ಮಹತ್ಸತ್ವಂ ತ್ವಯಾ ಹತಂ । ಸಾಧಯಾರ್ಥ ಮಭಿಪ್ರೇತ ಮರಿಷ್ಟಂ ಪ್ಲವತಾಂವರ! । ಯಸ್ಯತ್ವೇತಾನಿ ಚತ್ವಾರಿ ವಾನರೇಂದ್ರ! ಯಥಾ ತವ । ಧೃತಿರ್ದೃಷ್ಟಿರ್ಮತಿರ್ದಾಕ್ಷ್ಯಂ ಸ್ವಕರ್ಮಸು ನಸೀದತಿ"

ನಿಪಾತ್ಯ - ಕೆಡವಿ, ವೇಗಾತ್ - ಜಾಗ್ರತೆಯಾಗಿ, ವವೃಧೇ - ಬೆಳದನು. ॥ ೨೦೧ ॥ ಹನುಮತಾ - ಹನುಮಂತನಿಂದ, ಹೃತಹೃತ್-ಸೀಳಿದ ಎದೆಯುಳ್ಳ, ಸಾ-ಆ ಸಿಂಹಿಕೆಯು, ವಿಧುರಾ-ದುಃಖಿತಳಾಗಿ, ಅಂಭಸಿ - ನೀರಿನಲ್ಲಿ, ಪಪಾತ - ಬಿದ್ದಳು. ॥ ೨೦೨ ॥ ಹನೂಮಾನ್ - ಹನುಮಂತನು, ತಸ್ಯಾಃ - ಆ ಸಿಂಹಿಕೆಯ, ನಿಪಾತನೇ - ಕೊಲ್ಲುವ ವಿಷಯದಲ್ಲಿ, ಸ್ವಯಂಭುವೈವ - ಬ್ರಹ್ಮನಿಂದಲೇ, ಸೃಷ್ಟಃ - ಸೃಜಿಸಲ್ಪಟ್ಟನು, ಆಕಾ....ಣಿ - ಅಂತರಿಕ್ಷಚಾರಿಗಳಾದ, ಭೂತಾನಿ - ಭೂತಗಳು, ವಾನರೇಣ - ಕಪಿಯಿಂದ, ಹತಾಂ - ಮಡಿದು, ಆಶು - ಜಾಗ್ರತೆಯಾಗಿ, ಪತಿತಾಂ - ಬಿದ್ದ, ತಾಂಸಿಂಹಿಕಾಂ - ಆ ಛಾಯಾಗ್ರಾಹಿಣಿಯನ್ನು, ವೀಕ್ಷ್ಯ - ಕಂಡು, ತಂಪ್ಲವಗೋತ್ತಮಂ - ಆ ವಾನರರನ್ನು ಕುರಿತು, ಊಚುಃ - ಹೇಳಿದವು. ॥ ೨೦೩ ॥ ಹೇ ವಾನರೇಂದ್ರ - ಓ ವಾನರಶ್ರೇಷ್ಠನೇ, ಯಾಧೃತಿಃ - ಯಾವ ಧೈರ್ಯವೂ, ಯಾದೃಷ್ಟಿಃ - ಯಾವ ಸೂಕ್ಷ್ಮ ದರ್ಶನವು, ಯಾಮತಿಃ - ಯಾವ ಬುದ್ಧಿಯು, ಯದ್ದಾಕ್ಷ್ಯಂ - ಯಾವ ಸಾಮರ್ಥ್ಯವು, ಸ್ವಕರ್ಮಸು - ತನ್ನ ಕಾರ್ಯಗಳಲ್ಲಿ, ನಸೀದತಿ - ಕುಗ್ಗುವುದಿಲ್ಲವೋ, ಏತಾನಿಚತ್ವಾರಿ - ಈ ನಾಲ್ಕೂ ಗುಣಗಳು, ತವಯಥಾ - ನಿನ್ನಂತೆ, ಯಸ್ಯತು - ಯಾವ ಸಿಂಹಿಕಾರೂಪವಾದ ಜಂತುವಿಗೆ, ಸಂತಿ - ಇವೆಯೋ, ತತ್ - ಅಂಥ, ಮಹತ್ - ದೊಡ್ಡದಾದ, ಸತ್ವಂ - ಜಂತುವು, ತ್ವಯಾ - ನಿನ್ನಿಂದ, ಹತಂ - ಮಡಿಯಿತು, ಅದ್ಯ - ಈಗ, ಭೀಮಂ - ಭಯಂಕರವಾದ, ಕರ್ಮ - ಕೆಲಸವು, ಕೃತಂ - ಮಾಡಲ್ಪಟ್ಟಿತು, ಹೇ ಪ್ಲವತಾಂವರ - ಎಲೈ ವಾನರೋತ್ತಮನೇ, ಅಭಿಪ್ರೇತಂ - ಇಷ್ಟವಾದ, ಅರ್ಥಂ - ಸೀತಾದರ್ಶನರೂಪಕಾರ್ಯವನ್ನು, ಅರಿಷ್ಟಂ - ನಿರ್ವಿಘ್ನವಾಗಿ, ಸಾಧಯ - ಸಾಧಿಸು. ॥ ೨೦೪ ॥ ಪ್ರತಿ....ನಃ - ಹೊಂದಿದ ಸುರಸಾ ಸಿಂಹಿಕೆಯರ

ಪ್ರಜ್ಞೆ ತಪ್ಪಿ ನೀರಿನಲ್ಲಿ ಬಿದ್ದಳು. ॥೧೯೬—೨೦೨॥ ಮಹಾತ್ಮನಾದ ಆಂಜನೇಯನು ತನ್ನ ಬುದ್ಧಿಬಲದಿಂದಲೂ, ಧೈರ್ಯದಿಂದಲೂ, ಶಕ್ತಿಸಾಮರ್ಥ್ಯಗಳಿಂದಲೂ ಆ ರಾಕ್ಷಸಿಯನ್ನು ಕೆಡುಹಿ ಮರಳಿಯೂ ಬಹುಬೇಗನೆ ವೃದ್ಧಿಗೊಂಡನು. ಹೀಗೆ ಸಾಕ್ಷಾದ್ಬ್ರಹ್ಮನಿಂದಲೇ ಆ ಸಿಂಹಿಕೆಯ ವಧೆಗೋಸುಗವಾಗಿ ಸೃಜಿಸಲ್ಪಟ್ಟವನಂತಿದ್ದ ಆ ಹನುಮಂತನಿಂದ ಬಹುಬೇಗನೆ ಮಡಿದು ಕೆಳಕ್ಕುರುಳಿದ ಆ ರಾಕ್ಷಸಿಯನ್ನು ಕಂಡು ಗಗನಸಂಚಾರಿಗಳಾದ ಸಮಸ್ತ ಭೂತಗಳೂ ಆ ಕಪಿವೀರನನ್ನು ಕುರಿತು, "ಓ ಮಾರುತಿಯೇ! ನಿನ್ನಂತೆಯೇ ಕುಗ್ಗದ ಧೈರ್ಯ, ಸೂಕ್ಷ್ಮದೃಷ್ಟಿ, ತತ್ವನಿಶ್ಚಯಶಕ್ತಿ, ಅತುಳಸಾಮರ್ಥ್ಯ ಇವುಗಳನ್ನೊಳಗೊಂಡಿರುವ ಈ ಮಹಾ ಭೂತವನ್ನು ನಿಮಿಷಮಾತ್ರದಲ್ಲಿ ಸಂಹರಿಸಿದೆ. ಕೇಳುವವರಿಗೂ ಮಹಾ ಭಯಂಕರವಾದ ಕಾರ್ಯವನ್ನೇ ಮಾಡಿದೆ. ಎಲೈ ವಾನರೋತ್ತಮನೇ! ಇನ್ನು ನೀನು ಬಯಸಿರುವ ಕಾರ್ಯವನ್ನು ಸಾಧಿಸು. ನಿನಗೆ ಮಂಗಳವಾಗಲಿ" ಎಂದು ಕೊಂಡಾಡಿದವು.

|| ೨೦೪ || ಸ ತೈಸ್ಸಂಭಾವಿತಃ ಪೂಜ್ಯೈಃ ಪ್ರತಿಪನ್ನಪ್ರಯೋಜನಃ । ಜಗಾಮಾಕಾಶ
ಮಾವಿಶ್ಯ ಪನ್ನಗಾಶನವತ್ಕಪಿಃ || ೨೦೫ || ಪ್ರಾಪ್ತಭೂಯಿಷ್ಠಪಾರಸ್ತು ಸರ್ವತಃ
ಪ್ರತಿಲೋಕಯನ್ । ಯೋಜನಾನಾಂ ಶತಸ್ಯಾಂತೇ ವನರಾಜಿಂ ದದರ್ಶ ಸಃ || ೨೦೬ ||
ದದರ್ಶಚ ಪತನ್ನೇವ ವಿವಿಧದ್ರುಮಭೂಷಿತಂ । ದ್ವೀಪಂ ಶಾಖಾಮೃಗಶ್ರೇಷ್ಠೋ
ಮಲಯೋಪವನಾನಿಚ || ೨೦೭ || ಸಾಗರಂ ಸಾಗರಾನೂಪಂ ಸಾಗರಾನೂಪಜಾನ್
ದ್ರುಮಾನ್ । ಸಾಗರಸ್ಯಚ ಪತ್ನೀನಾಂ ಮುಖಾನ್ಯಪಿ ವಿಲೋಕಯನ್ || ೨೦೮ ||
ಸ ಮಹಾಮೇಘಸಂಕಾಶಂ ಸಮೀಕ್ಷ್ಯಾತ್ಮಾನಮಾತ್ಮವಾನ್ । ನಿರುಂಧಂತಮಿವಾಕಾಶಂ
ಚಕಾರ ಮತಿಮಾನ್ಮತಿಂ || ೨೦೯ || ಕಾಯವೃದ್ಧಿಂ ಪ್ರವೇಗಂಚ ಮಮ ದೃಷ್ಟ್ವೈವ

ವಿಜಯವೆಂಬ ಪ್ರಯೋಜನಗಳುಳ್ಳ, ಪೂಜ್ಯಃ - ಪೂಜಾರ್ಹನಾದ, ಸಕಪಿಃ - ಆ ಆಂಜನೇಯನು, ತೈಃ - ಆ ಭೂತಗಳಿಂದ, ಸಂಭಾವಿತಃ - ಪೂಜಿತನಾಗಿ, ಆಕಾಶಂ - ಅಂತರಿಕ್ಷವನ್ನು, ಆವಿಶ್ಯ - ಹೊಕ್ಕು, ಪನ್ನ....ತ್ - ಗರುಡನಂತೆ, ಜಗಾಮ - ಹೊರಟನು. ||೨೦೫|| ಪ್ರಾಪ್ತ....ರಃ - ಪಡದಂತೆ ಭಾವಿಸಲ್ಪಟ್ಟ ವಿಸ್ತಾರವಾದ ದಕ್ಷಿಣತೀರವುಳ್ಳ, ಸತು-ಆ ಮಾರುತಿಯು, ಸರ್ವತಃ-ಎಲ್ಲೆಡೆಯಲ್ಲಿಯೂ, ಪ್ರತಿಲೋಕಯನ್ - ನೋಡುತ್ತಿರುವವನಾಗಿ, ಶತಸ್ಯಯೋಜನಾನಾಂ - ನೂರುಯೋಜನಗಳ, ಅಂತೇ-ತುದಿಯಲ್ಲಿ, ವನರಾಜಿಂ - ವನಪಙ್ಕ್ತಿಯನ್ನು, ದದರ್ಶ - ಕಂಡನು. ||೨೦೬|| ಶಾಖಾಮೃಗಶ್ರೇಷ್ಠಃ-ವಾನರವರನು, ಪತನ್ನೇವ - ಹೋಗುತ್ತಿರುವನಾಗಿಯೇ, ವಿವಿ....ತಂ - ನಾನಾಬಗೆಯ ವೃಕ್ಷಗಳಿಂದ ಲಂಕೃತವಾದ, ದ್ವೀಪಂಚ-ಲಂಕಾದ್ವೀಪವನ್ನು, ಮಲ....ಚ-ಮಲಯಪರ್ವತದ ಉದ್ಯಾನವನಗಳನ್ನೂ, ದದರ್ಶ - ನೋಡಿದನು. ||೨೦೭|| ಆತ್ಮವಾನ್ - ಧೈರ್ಯಶಾಲಿಯಾದ, ಮತಿಮಾನ್ - ಬುದ್ಧಿವಂತನಾದ, ಸಃ - ಆ ಆಂಜನೇಯನು, ಸಾಗರಂ - ಸಮುದ್ರವನ್ನು, ಸಾಗರಾನೂಪಂ - ಆಳವಾಗಿ ನೀರುಳ್ಳ ಸಮುದ್ರಪ್ರದೇಶವನ್ನು, ಸಾಗ....ಜಾನ್ - ಜಲಪ್ರಾಯವಾದ ಭೂಮಿಯಲ್ಲಿ ಹುಟ್ಟಿದ, ದ್ರುಮಾನ್ - ವೃಕ್ಷಗಳನ್ನೂ, ಸಾಗರಸ್ಯ-ಸಮುದ್ರನ, ಪತ್ನೀನಾಂ-ಹೆಂಡತಿಯರಾದ ಮಹಾ ನದಿಗಳ, ಮುಖಾನ್ಯಪಿ-ಮುಖಸ್ಥಾನಗಳನ್ನೂ ಕೂಡ, ವಿಲೋಕಯನ್ - ನೋಡುತ್ತಿರುವನಾಗಿ, ಮಹಾ....ಶಂ - ದೊಡ್ಡ ಮುಗಿಲಿಗೆ ಸಮಾನವಾಗಿ, ಆಕಾಶಂ - ಅಂತರಿಕ್ಷವನ್ನು, ನಿರುಂಧತಮಿವ - ತಡೆಮಾಡುವಂತಿರುವ, ಆತ್ಮಾನಂ-ತನ್ನ ಶರೀರವನ್ನು, ಸಮೀಕ್ಷ್ಯ-ನೋಡಿ, ಮತಿಂ-ಬುದ್ಧಿಯನ್ನು, ಚಕಾರ-ಮಾಡಿದನು.

ಈ ರೀತಿ ಸಮಸ್ತ ಭೂತಗಳಿಂದಲೂ ಗೌರವಿತನಾದ ಆ ಮಾರುತಿಯು ಗರುತ್ಮಂತನಂತೆ ಆಕಾಶಮಾರ್ಗವನ್ನು ಸೇರಿ ಮುಂಬರಿಯುತ್ತ ನೂರುಯೋಜನ ವಿಸ್ತಾರವುಳ್ಳ ಆ ಲವಣ ಸಮುದ್ರದ ಆಚಿನ ದಡದಲ್ಲಿ ದೊಡ್ಡ ವನರಾಜಿಯೊಂದನ್ನು ಕಂಡನು. || ೨೦೫–೨೦೬ || ಮುಂದುಮುಂದಕ್ಕೆ ಹೋಗುತ್ತ ವಿವಿಧ ವೃಕ್ಷಗಳಿಂದಲಂಕೃತವಾದ ಲಂಕಾದ್ವೀಪವನ್ನೂ, ಮಲಯಪರ್ವತದಲ್ಲಿರುವ ಉಪವನಗಳನ್ನೂ ಕಂಡನು. ಆಗ ಮಹಾ ಬುದ್ಧಿವಂತನೂ, ಧೈರ್ಯವಂತನೂ ಆದ ಹನುಮಂತನು ಆ ಸಮುದ್ರದ ಆಚಿನ ದಡವನ್ನು ಸೇರಿ ಅಲ್ಲಿ ಬೆಳೆದಿರುವ ಸಮಸ್ತ ವೃಕ್ಷಗಳನ್ನೂ, ಸಾಗರರಾಜನ ಪತ್ನಿಯರಂತೊಪ್ಪುತ್ತಿರುವ ನದಿಗಳ ಮುಖಗಳನ್ನೂ ಕಂಡಬಳಿಕ ದೊಡ್ಡ ಮೇಘದಂತಿರುವುದೂ, ಆಕಾಶವನ್ನೇ ಅಡ್ಡಗಿಸುವಂತಿರುವುದೂ ಆದ ತನ್ನ ದೇಹವನ್ನು ನೋಡಿಕೊಂಡು, "ಮಹೋನ್ನತಾಕಾರದಿಂದಿರುವ ನನ್ನದೇಹವನ್ನೂ, ನನ್ನ ವೇಗವನ್ನೂ ನೋಡಿದೊಡನೆಯೇ ಇಲ್ಲಿರುವ ರಾಕ್ಷಸರೆಲ್ಲರೂ ಪರಮಾಶ್ಚರ್ಯದಿಂದ ಗೊಂದಲವನ್ನೆಬ್ಬಿಸಬಹುದು" ಎಂದು ಯೋಚಿಸಿ ಪರ್ವತಕ್ಕೆ ಸಮಾನವಾದ ಆ ತನ್ನ ದೇಹ

ರಾಕ್ಷಸಾಃ । ಮಯಿ ಕೌತೂಹಲಂ ಕುರ್ಯು''ರಿತಿ ಮೇನೇ ಮಹಾ * ಕಪಿಃ ||೨೧೦||
ತತಶ್ಶರೀರಂ ಸಂಕ್ಷಿಪ್ಯ ತನ್ಮಹೀಧರಸನ್ನಿಭಂ । ಪುನಃ ಪ್ರಕೃತಿಮಾಪೇದೇ ವೀತಮೋಹ
ಇವಾತ್ಮನಃ ||೨೧೧|| ತದ್ರೂಪಮತಿಸಂಕ್ಷಿಪ್ಯ ಹನುಮಾನ್ಪ್ರಕೃತೌ ಸ್ಥಿತಃ ।
ತ್ರೀನ್ಕ್ರಮಾನಿವ ವಿಕ್ರಮ್ಯ ಬಲಿವೀರ್ಯಹರೋ ಹರಿಃ ||೨೧೨|| ಸಚಾರು ನಾನಾವಿಧ
ರೂಪಧಾರೀ ಪರಂ ಸಮಾಸಾದ್ಯ ಸಮುದ್ರತೀರಂ । ಪರೈರಶಕ್ಯಃ ಪ್ರತಿಪನ್ನರೂಪ
ಸ್ಸಮೀಕ್ಷಿತಾತ್ಮಾ ಸಮವೇಕ್ಷಿತಾರ್ಥಃ ||೨೧೩|| ತತಸ್ಸಲಂಬಸ್ಯ ಗಿರೇಸ್ಸಮೃದ್ಧೇ
ವಿಚಿತ್ರಕೂಟೇ ನಿಪಪಾತ ಕೂಟೇ । ಸಕೇತಕೋದ್ದಾಲಕನಾಳಿಕೇರೇ ಮಹಾದ್ರಿಕೂಟ

||೨೦೯|| ರಾಕ್ಷಸಾಃ - ರಕ್ಕಸರು, ಮಮ - ನನ್ನ, ಕಾಯವೃದ್ಧಿಂ - ದೇಹೌನ್ನತ್ಯವನ್ನು, ಪ್ರವೇಗಂಚ-ಬಹಳವಾದ ವೇಗವನ್ನೂ, ದೃಷ್ಟ್ವೈವ - ನೋಡುತಲೇ, ಮಯಿ - ನನ್ನಲ್ಲಿ, ಕೌತೂಹಲಂ - ಕುತೂಹಲವನ್ನು, ಕುರ್ಯುಃ - ಮಾಡಿಯಾರು, ಇತಿ - ಎಂದು, ಮಹಾಕಪಿಃ - ಆಂಜನೇಯನು, ಮೇನೇ-ತಿಳದನು. || ೨೧೦ || ತತಃ - ಅನಂತರ, ಮಹೀ....ಭಂ - ಪರ್ವತಸದೃಶವಾದ, ತಚ್ಛರೀರಂ - ಆ ದೇಹವನ್ನು, ಸಂಕ್ಷಿಪ್ಯ - ಕಿರಿದುಮಾಡಿ, ವೀತಮೋಹಃ - ಹೋಗಲಾಡಿಸಲ್ಪಟ್ಟ ಅಜ್ಞಾನವುಳ್ಳ, ಆತ್ಮವಾನಿವ - ಬ್ರಹ್ಮಜ್ಞಾನಿಯಂತೆ, ಪುನಃ - ಮತ್ತೂ, ಪ್ರಕೃತಿಂ - ನಿಜಸ್ವಭಾವವನ್ನು, ಆಪೇದೇ-ಹೊಂದಿದನು. || ೨೧೧ || ಹನೂಮಾ್ - ಹನುಮಂತನು, ತದ್ರೂಪಂ - ಆ ಪರ್ವತಾಕಾರನನ್ನು, ಅತಿಸಂಕ್ಷಿಪ್ಯ - ಸಂಕೋಚಗೊಳಿಸಿ, ತ್ರೀ್ಕ್ರಮಾ್ - ಮೂರು ಹೆಜ್ಜೆಗಳನ್ನು, ವಿಕ್ರಮ್ಯ - ನಡೆದು, ಬಲಿವೀರ್ಯಹರಃ - ಬಲಿಚಕ್ರವರ್ತಿಯ ಶಕ್ತಿಯನ್ನು ಅಪಹರಿಸಿದ, ಹರಿರಿವ - ವಿಷ್ಣುವಿನಂತೆ, ಪ್ರಕೃತೌ - ನಿಜಸ್ವಭಾವದಲ್ಲಿ, ಸ್ಥಿತಃ - ನಿಂತನು. || ೨೧೨ || ಚಾರು....ರೀ - ಮನೋಹರವಾದ ಸ್ಥೂಲಸೂಕ್ಷ್ಮಾದಿ ನಾನಾರೂಪಗಳನ್ನು ಧರಿಸುವ ಶಕ್ತಿಯುಳ್ಳ, ಪರೈಃ - ಶತ್ರುಗಳಿಂದ, ಅಶಕ್ಯಃ - ತಿರಸ್ಕರಿಸಲಶಕ್ಯನಾದ, ಸಃ - ಆ ಆಂಜನೇಯನು, ಪರಂಸಮುದ್ರತೀರಂ - ಆಚಿನಸಮುದ್ರದ ದಡವನ್ನು, ಆಸಾದ್ಯ - ಹೊಂದಿ, ಸಮೀಕ್ಷಿತಾತ್ಮಾ - ನೋಡಲ್ಪಟ್ಟ ಶರೀರವುಳ್ಳವನಾದ್ದರಿಂದಲೇ, ಸಮವೇಕ್ಷಿತಾರ್ಥಃ - ಆಲೋಚಿಸಲ್ಪಟ್ಟ ಕಾರ್ಯವುಳ್ಳವನಾಗಿ, ಪ್ರತಿ....ಪಃ - ಹೊಂದಬೇಕೆಂದು ಬಯಸಿದ ಮಾರ್ಜಾಲರೂಪವುಳ್ಳವನು, ಅಭೂತ್ - ಆದನು. || ೨೧೩ || ತತಃ - ಅನಂತರದಲ್ಲಿ, ಮಹಾ....ಮಃ - ದೊಡ್ಡಪರ್ವತ ಶಿಖರಕ್ಕೆ ಸಮಾನವಾದ, ಮಹಾತ್ಮಾ - ಮಹಾನುಭಾವನಾದ, ಸಃ - ಆ ಆಂಜನೇಯನು, ಸಕೇ....ರೇ - ತಾಳೇಗಿಡಗಳಿಂದಲೂ, ಚಳ್ಳೇಗಿಡಗಳಿಂದಲೂ, ತೆಂಗಿನಗಿಡ

ವನ್ನು, ಶರೀರಿಯಾದ ಜೀವನು ಅಜ್ಞಾನವನ್ನು ತೊರೆದು ಪರಬ್ರಹ್ಮ ಸ್ವರೂಪವನ್ನು ಹೊಂದಿದಂತೆ ಸಂಕ್ಷೇಪಗೊಳಿಸಿ ಸಮುದ್ರಲಂಘನಕ್ಕಿಂತ ಮೊದಲಿದ್ದ ರೂಪವನ್ನೇ ತಾಳಿದನು; ಅಲ್ಲದೆ ಆ ಕಪಿಶ್ರೇಷ್ಠನು ತನ್ನ ಶರೀರವನ್ನು ಕಿರಿದುಮಾಡಿ, ಮೂರಡಿಗಳ ಭೂಮಿಯನ್ನು ಬೇಡಿ ತ್ರಿವಿಕ್ರಮಾವತಾರದಿಂದ ಬಲಿಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದ ವಾಮನಾವತಾರಿಯಾದ ವಿಷ್ಣುಮೂರ್ತಿಯಂತೆ ತನ್ನ ಸ್ವಾಭಾವಿಕವಾದ ರೂಪವನ್ನು ತಾಳಿದನು. ||೧೦೭–೨೧೨|| ಹೀಗೆ ಆ ಆ ಕಾಲಕ್ಕನುಗುಣವಾದ ಸ್ಥೂಲಸೂಕ್ಷ್ಮಾದಿ ಸುಂದರ ರೂಪಗಳನ್ನು ತಾಳಬಲ್ಲವನೂ, ಸಿಂಹಿಕೆಯೇ ಮೊದಲಾದವರಿಂದ ಕುಗ್ಗಿಸಲಸದಳವಾದ ಶಕ್ತಿಸಾಮರ್ಥ್ಯಗಳುಳ್ಳವನೂ ಆದ ಆ ಹನುಮಂತನು, ಸಮುದ್ರದ ಆಚಿನ ದಡವನ್ನು ಸೇರಿ

---

* "ಮತಿಃ" ತಿ. ಪಾ.

ಪ್ರತಿಮೋ ಮಹಾತ್ಮಾ ॥ ೨೧೪ ॥ ತತಸ್ತು ಸಂಪ್ರಾಪ್ಯ ಸಮುದ್ರತೀರಂ ಸಮೀಕ್ಷ್ಯ ಲಂಕಾಂ ಗಿರಿವರ್ಯಮೂರ್ಧ್ನಿ । ಕಪಿಸ್ತು ತಸ್ಮಿನ್ನಿಪಪಾತ ಪರ್ವತೇ ವಿಧೂಯ ರೂಪಂ ವ್ಯಥಯನ್ ಮೃಗದ್ವಿಜಾನ್ ॥ ೨೧೫ ॥

ಸಸಾಗರಂ ದಾನವಪನ್ನಗಾಯುತಂ
ಬಲೇನ ವಿಕ್ರಮ್ಯ ಮಹೋರ್ಮಿಮಾಲಿನಂ ।
ನಿಪತ್ಯ ತೀರೇಚ ಮಹೋದಧೇಸ್ತದಾ
ದದರ್ಶ ಲಂಕಾ ಮಮರಾವತೀಮಿವ ॥ ೨೧೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪ್ರಥಮಸ್ಸರ್ಗಃ

ಗಳಿಂದಲೂ ಕೂಡಿರುವ, ವಿಚಿತ್ರಕೂಟೇ - ಆಶ್ಚರ್ಯಕರವಾದ ಶೃಂಗಗಳುಳ್ಳ, ಲಂಬಸ್ಯ-ಲಂಬವೆಂದು ಹೆಸರುಳ್ಳ, (ಗೋ) - ನೇತಾಡುವಂತಿರುವ, ಗಿರೇ - ಪರ್ವತದ, ಸಮೃದ್ಧೇ - ಎತ್ತರವಾದ, ಕೂಟೇ - ಶೃಂಗದಲ್ಲಿ, ನಿಪಾತ - ಇಳಿದನು. ॥ ೨೧೪ ॥ ತತಸ್ತು - ಅನಂತರದಲ್ಲಿ, ಕಪಿಃ - ಆಂಜನೇಯನು, ಸಮುದ್ರತೀರಂ - ಕಡಲಿನ ದಡವನ್ನು, ಸಂಪ್ರಾಪ್ಯ - ಹೊಂದಿ, ಗಿರಿವರ್ಯಮೂರ್ಧ್ನಿ - ತ್ರಿಕೂಟ ಪರ್ವತದ ಶಿಖರದಲ್ಲಿರುವ, ಲಂಕಾಂ - ಲಂಕಾಪಟ್ಟಣವನ್ನು, ಸಮೀಕ್ಷ್ಯ - ಕಂಡು, ರೂಪಂ - ಪೂರ್ವ ರೂಪವನ್ನು, ವಿಧೂಯ - ಕೊಡವಿ, ಮೃಗದ್ವಿಜಾನ್ - ಮೃಗಪಕ್ಷಿಗಳನ್ನು, ವ್ಯಥಯನ್ - ವ್ಯಥೆಪಡಿಸುತ್ತ, ತಸ್ಮಿನ್ಪರ್ವತೇ - ಅದೇ ಪರ್ವತದಲ್ಲಿ, ನಿಪಪಾತ - ಧುಮುಕಿದನು. ॥ ೧೧೫ ॥ ತದಾ- ಆ ಕಾಲದಲ್ಲಿ, ಸಃ-ಆ ಹನುಮಂತನು, ದಾನ....ತಂ-ರಾಕ್ಷಸರಿಂದಲೂ, ಹಾವುಗಳಿಂದಲೂ ಕೂಡಿರುವ, ಮಹೋ....ನಂ - ದೊಡ್ಡ ತೆರೆಗಳೇ ಮಾಲಿಕೆಯಾಗಿರುವ, ಸಾಗರಂ - ಸಮುದ್ರವನ್ನು, ಬಲೇನ - ಸಾಮರ್ಥ್ಯದಿಂದ, ವಿಕ್ರಮ್ಯ - ಆಕ್ರಮಿಸಿ, ಮಹೋದಧೇಃ - ಸಮುದ್ರದ, ತೀರೇ - ದಡದಲ್ಲಿ, ನಿಪತ್ಯ-ಇಳಿದು, ಅಮರಾವತೀಮಿವ-ಇಂದ್ರನ ಪಟ್ಟಣದಂತಿರುವ, ಲಂಕಾಂಚ-ಲಂಕಾಪಟ್ಟಣವನ್ನು ಕೂಡ, ದದರ್ಶ - ಕಂಡನು. ॥ ೨೧೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪ್ರಥಮಸ್ಸರ್ಗಃ.

ಪ್ರಮಾಣಾತೀತವಾದ ತನ್ನ ಶರೀರವನ್ನು ನೋಡಿಕೊಂಡು, ಮುಂದಣ ಕಾರ್ಯವನ್ನು ಚನ್ನಾಗಿ ಆಲೋಚಿಸಿ ನಿಜರೂಪವನ್ನು ತಾಳಿದ ಬಳಿಕ, ಮಹಾ ಧೀರನಾದ ಆತನು ಸಕಲೈಶ್ವರ್ಯಗಳಿಂದ ವೃದ್ಧಿಗೊಂಡಿರುವುದೂ, ವಿಚಿತ್ರ ಶಿಖರಗಳುಳ್ಳದಾಗಿ ಕೇದಿಗೆಯ ಗುಂಪುಗಳಿಂದಲೂ, ಉದ್ದಾಲಕ ವೃಕ್ಷಸಮೂಹಗಳಿಂದಲೂ, ತೆಂಗಿನ ತೋಪುಗಳಿಂದಲೂ ಒಪ್ಪುತ್ತಿರುವುದೂ ಆದ ಲಂಬಾಚಲದ ಶಿಖರದಲ್ಲಿ ಧುಮುಕಿದನು. ಹೀಗೆ ಆ ಕಪಿಶ್ರೇಷ್ಠನು ಸಮುದ್ರತೀರವನ್ನು ಹೊಂದಿ ತ್ರಿಕೂಟಪರ್ವತದ ಮೇಲಿರುವ ಲಂಕಾಪಟ್ಟಣವನ್ನು ಕಂಡು ಆ ಪರ್ವತ ಪ್ರಾಂತದಲ್ಲಿರುವ ಮೃಗಪಕ್ಷಿಗಳನ್ನು ಭಯಗೊಳಿಸುತ್ತ ಕೆಳಕ್ಕಿಳಿದನು. ಆ ಕಪಿವೀರನು ಈ ಪ್ರಕಾರವಾಗಿ ದಾನವರಿಂದಲೂ, ಪನ್ನಗರಿಂದಲೂ ಕೂಡಿ, ದೊಡ್ಡದೊಡ್ಡ ತರಂಗ ಸಮೂಹಗಳಿಂದೊಪ್ಪುತ್ತಿರುವ ಸಮುದ್ರವನ್ನು ಅತುಳಪರಾಕ್ರಮದಿಂದ ದಾಟಿ, ಆಚಿನ ದಡವನ್ನು ಸೇರಿ ದೇವೇಂದ್ರನ ಅಮರಾವತಿಯಂತಿರುವ ಆ ಲಂಕಾಪಟ್ಟಣವನ್ನು ಕಂಡನು.॥೨೧೪–೨೧೬॥

ಇಂತಿದು ಹನುಮತ್ಕೃತ ಸಮುದ್ರೋಲ್ಲಂಘನ ವೃತ್ತಾಂತನಿರೂಪಣವೆಂಬ
ಮೊದಲನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ದ್ವಿತೀಯಸ್ಸರ್ಗಃ

ಸ ಸಾಗರಮನಾಧೃಷ್ಯ ಮತಿಕ್ರಮ್ಯ ಮಹಾಬಲಃ । $ ತ್ರಿಕೂಟಶಿಖರೇ ಲಂಕಾಂ ¶ ಸ್ಥಿತಾಂ ಸ್ವಸ್ಥೋ ದದರ್ಶಹ ॥೧॥ ತತಃ ಪಾದಪಮುಕ್ತೇನ ಪುಷ್ಪವರ್ಷೇಣ ವೀರ್ಯವಾನ್ । ಅಭಿವೃಷ್ಟ ಸ್ಥಿತ ಸ್ತತ್ರ ಬಭೌ ಪುಷ್ಪಮಯೋ ☤ ಯಥಾ ॥೨॥ ಯೋಜನಾನಾಂ ಶತಂ ಶ್ರೀಮಾಂ ಸ್ತೀರ್ತ್ವಾಪ್ಯುತ್ತಮ ವಿಕ್ರಮಃ । ಅನಿಶ್ಶ್ವಸ ನ್ಕಪಿಸ್ತತ್ರ ನಗ್ಲಾನಿ ಮಧಿಗಚ್ಛತಿ ॥ ೩ ॥ ಶತಾನ್ಯಹಂ ಯೋಜನಾನಾಂ ಕ್ರಮೇಯಂ ಸುಬಹೂ

ಮಹಾಬಲಃ - ಮಹಾ ಸತ್ವವುಳ್ಳ, ಸಃ - ಆ ಹನುಮಂತನು, ಅನಾಧೃಷ್ಯಂ - ತಿರಸ್ಕರಿಸಲ ಶಕ್ಯವಾದ, ಸಾಗರಂ - ಸಮುದ್ರವನ್ನು, ಅತಿಕ್ರಮ್ಯ - ಅತಿಕ್ರಮಿಸಿ, ಸ್ವಸ್ಥಃ - ಸಮಾಧಾನಚಿತ್ತನಾಗಿ, ತ್ರಿಕೂಟಶಿಖರೇ - ತ್ರಿಕೂಟಪರ್ವತದ ಶಿಖರದಲ್ಲಿ, ಸ್ಥಿತಾಂ - ಇರುವ, ಲಂಕಾಂ - ಲಂಕಾಪಟ್ಟಣವನ್ನು, ದದರ್ಶಹ - ಕಂಡನು. ॥೧॥ ತತಃ - ಆ ಬಳಿಕ, ತತ್ರ - ಆ ತ್ರಿಕೂಟಪರ್ವತದಲ್ಲಿ, ಸ್ಥಿತಃ - ನಿಂತಿರುವ, ವೀರ್ಯವಾನ್ - ಪರಾಕ್ರಮಿಯಾದ ಆಂಜನೇಯನು, ಪಾದ....ನ - ವೃಕ್ಷಗಳಿಂದ ಬಿಡಲ್ಪಟ್ಟ, ಪುಷ್ಪವರ್ಷೇಣ - ಪುಷ್ಪವೃಷ್ಟಿಯಿಂದ, ಅಭಿವೃಷ್ಟಃ - ವರ್ಷಿಸಲ್ಪಟ್ಟವನಾಗಿ, ಪುಷ್ಪಮಯೋಯಥಾ - ಪುಷ್ಪವಿಕಾರವಾದ ಕಪಿಯೋಪಾದಿಯಲ್ಲಿ, ಬಭೌ - ಪ್ರಕಾಶಿಸಿದನು. ॥ ೨ ॥ ಶ್ರೀಮಾನ್ - ತೇಜೋವಂತನಾದ, ಉತ್ತ....ಮಃ - ಶ್ರೇಷ್ಠವಾದ ಸಾಮರ್ಥ್ಯವುಳ್ಳ, ಕಪಿಃ - ಆಂಜನೇಯನು, ಯೋಜನಾನಾಂ - ಗಾವುದಗಳ, ಶತಂ - ನೂರನ್ನು, ತೀರ್ತ್ವಾಪಿ - ದಾಟಿದರೂ, ತತ್ರ - ಆ ಸಮುದ್ರ ಲಂಘನವಿಷಯದಲ್ಲಿ, ಅನಿಶ್ವಸನ್ - ಶ್ರಮದಿಂದುಂಟಾದ ಉಸಿರನ್ನು ಬಿಡದೆ, ಗ್ಲಾನಿಂ - ಬಳಲಿಕೆಯನ್ನು, ನಾದಿಗಚ್ಛತಿ - ಹೊಂದಲಿಲ್ಲವು ॥ ೩ ॥ ಅಹಂ - ನಾನು, ಸುಬಹೂನಿ - ಅನೇಕಗಳಾದ, ಯೋಜನಾನಾಂ - ಗಾವುದಗಳ, ಶತಾನ್ಯಪಿ - ನೂರುಗಳನ್ನೂ ಕೂಡ, ಕ್ರಮೇಯಂ - ಹಾರುವೆನು, ಶತಯೋಜನಂ - ನೂರುಗಾವುದಗಳಾಗಿ, ಸಂಖ್ಯಾತಂ - ಎಣಿಸಲ್ಪಟ್ಟ, ಸಾಗರಸ್ಯ -

---

ಸತ್ವಸಂಪನ್ನನಾದ ಹನುಮಂತನು ಎದುರಿಸಲಸಾಧ್ಯವಾದ ಕಡಲನ್ನು ದಾಟಿ, ಪರ್ವತತಟದಲ್ಲಿ ನಿಂತು ಸ್ವಸ್ಥಮಾನಸಚಿತ್ತನಾಗಿ, ತ್ರಿಕೂಟಪರ್ವತದ ಶಿಖರದಮೇಲಿರುವ ಲಂಕಾಪಟ್ಟಣವನ್ನು ನೋಡಿದನು. ಆ ಪರ್ವತದಲ್ಲಿರುವ ವೃಕ್ಷಗಳಿಂದುದಿರಿದ ಪುಷ್ಪಗಳಿಂದ ಆವೃತನಾದ ಆತನು, ಪುಷ್ಪಮಯ ವಾನರನಂತೆ ತೋರುತ್ತಿದ್ದನು. ಮಹೋನ್ನತ ಪರಾಕ್ರಮಿಯೂ, ಶ್ರೀಮಂತನೂ ಆದ ಆತನು ನೂರುಯೋಜನಗಳ ದೂರದ ಸಮುದ್ರವನ್ನು ದಾಟಿದ್ದರೂ ಸ್ವಲ್ಪವಾದರೂ ಆಯಾಸವನ್ನು ಹೊಂದದೆ, ಕಡೆಗೆ ನಿಟ್ಟುಸಿರನ್ನೂ ಬಿಡದೆ, “ ನಾನು ಅನೇಕ ನೂರುಯೋಜನಗಳನ್ನಾದರೂ ದಾಟಬಲ್ಲ ಸಮರ್ಥನು. ಎಂದಮೇಲೆ ಈ ನೂರುಯೋಜನಗಳ ಪರಿಮಿತಿಯುಳ್ಳ ಈ ಸಾಗರಾಂತವು ನನಗೆಷ್ಟರಮಟ್ಟಿನದು”

$ ತ್ರಿಕೂಟಾಚಲಕ್ಕೆ ಲಂಬಾಚಲವೆಂದೂ ಹೆಸರುಂಟು. ¶ “ ಸ್ಥಿತಃ ” ಕ. ಪಾ. ☤ “ ಹರಿಃ ” ತಿ. ರಾ. ಪಾ.

ನ್ಯಪಿ । ಕಿಂಪುನಸ್ಸಾಗರಸ್ಯಾಂತಂ ಸಂಖ್ಯಾತಂ ಶತಯೋಜನಂ ॥ ೪ ॥ ಸತು ವೀರ್ಯವತಾಂ ಶ್ರೇಷ್ಠಃ ಪ್ಲವತಾಮಪಿ ಚೋತ್ತಮಃ । ಜಗಾಮ ವೇಗವಾನ್ ಲಂಕಾಂ ಲಂಘಯಿತ್ವಾ ಮಹೋದಧಿಂ ॥ ೫ ॥ ಶಾದ್ವಲಾನಿ ಚ ನೀಲಾನಿ ಗಂಧವಂತಿ ವನಾನಿಚ । \$ ಗಂಡವಂತಿಚ ಮಧ್ಯೇನ ಜಗಾಮ ನಗವಂತಿಚ ॥ ೬ ॥ ಶೈಲಾಂಶ್ಚ ತರುಸಂಛನ್ನಾನ್ ವನರಾಜೀಶ್ಚ ಪುಷ್ಪಿತಾಃ । ಅಭಿಚಕ್ರಾಮ ತೇಜಸ್ವೀ ಹನುಮಾನ್ ಪ್ಲವಗರ್ಷಭಃ ॥೭॥ ಸತಸ್ಮಿನ್ನಚಲೇ ತಿಷ್ಠನ್ ವನಾನ್ಯುಪವನಾನಿಚ । ಸನಗಾಗ್ರೇ § ಚ ತಾಂ ಲಂಕಾಂ ದದರ್ಶ ಪವನಾತ್ಮಜಃ ॥೮॥ ಸರಳಾನ್ಕರ್ಣಿಕಾರಾಂಶ್ಚ ಖರ್ಜೂರಾಂಶ್ಚ ಸುಪುಷ್ಪಿತಾನ್ ।

ಸಮುದ್ರದ, ಅಂತಂ - ತುದಿಯನ್ನು, ಕಿಂಪುನಃ - ಏನು ಹೇಳತಕ್ಕದು, ಇತ್ಯಮನ್ಯತ - ಎಂದು ತಿಳಿದನು. ॥೪॥ ವೀರ್ಯವತಾಂ - ಪರಾಕ್ರಮಿಗಳಲ್ಲಿ, ಶ್ರೇಷ್ಠಃ - ಉತ್ಕೃಷ್ಟನಾದ, ಪ್ಲವತಾಮಪಿ - ವಾನರರಲ್ಲಿಯೂ, ಉತ್ತಮಃ - ಅಧಿಕನಾದ, ಸತು - ಆ ಆಂಜನೇಯನಾದರೆ, ಮಹೋದಧಿಂ - ಸಮುದ್ರವನ್ನು, ಲಂಘಯಿತ್ವಾ - ದಾಟಿ, ವೇಗವಾನ್ - ವೇಗವುಳ್ಳವನಾಗಿ, ಲಂಕಾಂ - ಲಂಕಾಪಟ್ಟಣವನ್ನು ಕುರಿತು, ಜಗಾಮ - ಹೊರಟನು. ॥ ೫ ॥ ನೀಲಾನಿ - ಕಪ್ಪಾದ, ಶಾದ್ವಲಾನಿ - ಪೈರುಗಳುಳ್ಳ ಪ್ರದೇಶಗಳನ್ನು, ಗಂಧವಂತಿ-ಪರಿಮಳಯುಕ್ತವಾದ, ಗಂಡವಂತಿ-ದೊಡ್ಡಕಲ್ಲುಗಳುಳ್ಳ, ನಗವಂತಿ-ವೃಕ್ಷಗಳುಳ್ಳ, ವನಾನಿಚ-ವನಗಳನ್ನೂ ಸಹ, (ಪಶ್ಯನ್-ನೋಡುತ್ತಿರುವವನಾಗಿ), ಮಧ್ಯೇನ-ವನಮಧ್ಯಮಾರ್ಗದಿಂದ, ಜಗಾಮ - ಹೊರಟನು. ॥ ೬ ॥ ಪ್ಲವಗರ್ಷಭಃ - ವಾನರಶ್ರೇಷ್ಠನಾದ, ತೇಜಸ್ವೀ - ತೇಜೋವಂತನಾದ, ಹನುಮಾನ್ - ಹನುಮಂತನು, ತರುಸಂಛನ್ನಾನ್ - ವೃಕ್ಷಗಳಿಂದ ಮುಚ್ಚಿದ, ಶೈಲಾಂಶ್ಚ - ಬೆಟ್ಟಗಳನ್ನೂ, ಪುಷ್ಪಿತಾಃ - ಹುವ್ವುಗಳುಳ್ಳ, ವನರಾಜೀಶ್ಚ - ವನಪಙ್ಕ್ತಿಗಳನ್ನೂಸಹ, ಅಭಿಚಕ್ರಾಮ - ಅತಿಕ್ರಮಿಸಿಹೋದನು. ॥ ೭ ॥ ಪವನಾತ್ಮಜಃ - ವಾಯುಪುತ್ರನಾದ, ಸಃ - ಆ ಹನುಮಂತನು, ಸನಗಾಗ್ರೇ - ಶೃಂಗಗಳಿಂದ ಕೂಡಿರುವ, ತಸ್ಮಿನ್ನಚಲೇ - ಆ ಪರ್ವತದಲ್ಲಿ, ತಿಷ್ಠನ್ - ನಿಂತಿರುವವನಾಗಿ, ವನಾನಿ - ಕಾಡುಗಳನ್ನೂ, ಉಪವನಾನಿಚ - ಉದ್ಯಾನಗಳನ್ನೂ, ತಾಂಲಂಕಾಂಚ - ಆ ಲಂಕಾಪಟ್ಟಣವನ್ನೂಸಹ, ದದರ್ಶ - ಕಂಡನು. ॥ ೮ ॥ ಕಪಿಕುಂಜರಃ - ವಾನರಶ್ರೇಷ್ಠನು, ಸರಳಾನ್ - ದೇವದಾರು, ಕರ್ಣಿಕಾರಾಂಶ್ಚ - ಬೆಟ್ಟದ ತಾವರೆ, ಸುಪುಷ್ಪಿತಾನ್ - ಹೂವೊಳೆತ, ಖರ್ಜೂರಾಂಶ್ಚ - ಖರ್ಜೂರದ ಗಿಡಗಳು, ಪ್ರಿಯಾಳಾನ್ - ಮೊರಟೇ

ಎಂದು ಯೋಚಿಸಿದನು. ಮಹಾವೀರನೂ, ಕಪಿಶ್ರೇಷ್ಠನೂ ಆದ ಆತನು ಆ ಪರ್ವತಮಾರ್ಗದಲ್ಲಿರುವ ಪೈರುಪಚ್ಚೆಯ ಭೂಮಿಗಳನ್ನೂ, ಸುಗಂಧವನ್ನು ಸೂಸುತ್ತಿರುವ ವನಗಳನ್ನೂ, ಜೇನುಬಂಡೆಗಳನ್ನೂ, ವೃಕ್ಷಗಳುಳ್ಳ ವನಗಳನ್ನೂ ನೋಡುತ್ತಮುಂದಕ್ಕೆಹೊರಟನು. ॥ ೧-೬ ॥ ಅಲ್ಲದೆ ಮಹಾ ತೇಜಸ್ವಿಯೂ ವಾನರಶ್ರೇಷ್ಠನೂ ಆದ ಆತನು ವೃಕ್ಷಗಳಿಂದ ಮರೆಯಾಗಿರುವ ಬೆಟ್ಟಗಳನ್ನೂ, ಪುಷ್ಪಿತಗಳಾದ ವನಪಙ್ಕ್ತಿಗಳನ್ನೂ ಅತಿಕ್ರಮಿಸಿ ಶಿಖರಗಳಿಂದ ರಾರಾಜಿಸುವ ಆ ತ್ರಿಕೂಟಪರ್ವತದಲ್ಲಿ ನಿಂತು ಲಂಕಾಪಟ್ಟಣವನ್ನೂ, ಅದರ ವನೋಪವನಗಳನ್ನೂ ಕಂಡನು. ಆ ವನಗಳು ಬಹು ರಮಣೀಯವಾಗಿದ್ದವು. ದೇವದಾರು, ಕರ್ಣಿಕಾರ, ಚನ್ನಾಗಿ ಹೂವೊಳೆತ ಖರ್ಜೂರ, ನಿಂಬೆ, ಗಿರಿಮಲ್ಲಿಗೆ,

---

\$ "ಮಧುಮಂತಿ" ತಿ. ಪಾ. § "ಸ್ಥಿತಃ" ತಿ. ಪಾ.

ಪ್ರಿಯಾಳಾನ್ಮುಚುಳಿಂದಾಂಶ್ಚ ಕುಟಜಾನ್ಕೇತಕಾನಪಿ ॥ ೯ ॥ ಪ್ರಿಯಂಗೂನ್ಗಂಧಪೂರ್ಣಾಂಶ್ಚ ನೀಪಾನ್ಸಪ್ತಚ್ಛದಾಂಸ್ತಥಾ । ಅಸನಾನ್ಕೋವಿದಾರಾಂಶ್ಚ ಕರವೀರಾಂಶ್ಚ ಪುಷ್ಪಿತಾನ್ ॥ ೧೦ ॥ ಪುಷ್ಪಭಾರನಿಬದ್ಧಾಂಶ್ಚ ತಥಾ ಮುಕುಳಿತಾನಪಿ । ಪಾದಪಾನ್ವಿಹಗಾಕೀರ್ಣಾನ್ ಪವನಾಧೂತಮಸ್ತಕಾನ್ ॥ ೧೧ ॥ ಹಂಸಕಾರಂಡವಾಕೀರ್ಣಾ ವಾಪೀಃ ಪದ್ಮೋತ್ಪಲಾಯುತಾಃ । ಆಕ್ರೀಡಾನ್ವಿವಿಧಾನ್ರಮ್ಯಾನ್ ವಿವಿಧಾಂಶ್ಚ ಜಲಾಶಯಾನ್ ॥೧೨॥ ಸಂತತಾನ್ವಿವಿಧೈರ್ವೃಕ್ಷೈಸ್ಸರ್ವರ್ತುಫಲಪುಷ್ಪಿತೈಃ । ಉದ್ಯಾನಾನಿಚ ರಮ್ಯಾಣಿ ದದರ್ಶ ಕಪಿಕುಂಜರಃ ॥ ೧೩ ॥ ಸಮಾಸಾದ್ಯಚ ಲಕ್ಷ್ಮೀವಾನ್ ಲಂಕಾಂ

ಗಿಡಗಳು, ಮುಚುಳಿಂದಾಂಶ್ಚ - ನಿಂಬೇಗಿಡಗಳು, ಕುಟಜಾನ್ - ಗಿರಿಮಲ್ಲಿಗೆ ಗಿಡಗಳು, ಕೇತಕಾನಪಿ - ತಾಳೇಗಿಡಗಳು, ಗಂಧಪೂರ್ಣಾನ್ - ಗಂಧದಿಂದ ತುಂಬಿರುವ, ಪ್ರಿಯಂಗೂನ್ - ಪ್ರೇಂಖಣದ ಗಿಡಗಳು, ನೀಪಾನ್ - ಕದಂಬವೃಕ್ಷಗಳು, ಸಪ್ತಚ್ಛದಾನ್ - ಏಳೆಲೇ ಬಾಳೆಯ ಗಿಡಗಳು ಇವುಗಳನ್ನೂ, ತಥಾ - ಹಾಗೆಯೇ, ಅಸನಾನ್ - ಬಂದುಗೆಗಿಡಗಳನ್ನೂ, ಪುಷ್ಪಿತಾನ್ - ಪುಷ್ಪಿಸಿದ, ಕರವೀರಾಂಶ್ಚ - ಕಣಿಗಲುಗಿಡಗಳನ್ನೂ, ಪುಷ್ಪ....ದ್ಧಾನ್ - ಹುವ್ವುಗಳ ಹೊರೆಯಿಂದ ಕಟ್ಟಲ್ಪಟ್ಟ, ತಥಾ - ಹಾಗೆಯೇ, ಮುಕುಳಿತಾನ್ - ಮೊಗ್ಗೊಡೆದ, ವಿಹ....ರ್ಣಾನ್ - ಹಕ್ಕಿಗಳಿಂದ ವ್ಯಾಪ್ತವಾದ, ಪವ....ತಾನ್ - ಗಾಳಿಯಿಂದ ಕೊಡಹಲ್ಪಟ್ಟ ತುದಿಗಳುಳ್ಳ, ಪಾದಪಾನಪಿ - ವೃಕ್ಷಗಳನ್ನೂ, ಹಂಸ....ರ್ಣಾಃ - ಹಂಸಪಕ್ಷಿಗಳಿಂದಲೂ, ನೀರುಕೋಳಿಯೇ ಮೊದಲಾದ ಜಲಪಕ್ಷಿಗಳಿಂದಲೂ ವ್ಯಾಪ್ತವಾದ, ಪದ್ಮೋತ್ಪಲಾಯುತಾಃ - ತಾವರೆಗಳಿಂದಲೂ, ನೈದಿಲೆಗಳಿಂದಲೂ ಎಲ್ಲೆಡೆಯಲ್ಲಿಯೂ ತುಂಬಿರುವ, ವಾಪೀಃ - ಕಲ್ಲುಕಟ್ಟಿದ ಭಾವಿಗಳನ್ನೂ, ವಿವಿಧಾನ್-ಅನೇಕ ವಿಧಗಳಾದ, ರಮ್ಯಾನ್ ಮನೋಹರಗಳಾದ, ಆಕ್ರೀಡಾನ್ - ಕ್ರೀಡಾಸ್ಥಾನಗಳನ್ನು, ವಿವಿಧೈಃ - ನಾನಾಬಗೆಗಳಾದ, ಸರ್ವ....ತೈಃ - ಎಲ್ಲ ಋತುಗಳಲ್ಲಿಯೂ ಹಣ್ಣುಗಳೂ, ಹುವ್ವುಗಳೂ ಸಹ ಉಳ್ಳ, ವೃಕ್ಷೈಃ - ಗಿಡಗಳಿಂದ, ಸಂತತಾನ್ - ಕೂಡಿರುವ, ವಿವಿಧಾನ್ - ಅನೇಕ ವಿಧಗಳಾದ, ಜಲಾಶಯಾನ್ - ಸರೋವರಗಳನ್ನೂ, ರಮ್ಯಾಣಿ - ಮನೋಜ್ಞಗಳಾದ, ಉದ್ಯಾನಾನಿಚ - ಕ್ರೀಡಾವನಗಳನ್ನೂ ಸಹ, ದದರ್ಶ - ನೋಡಿದನು. ॥ ೯-೧೩ ॥ ಲಕ್ಷ್ಮೀವಾನ್ - ವಿಜಯಕಾಂತಿಯುಳ್ಳ ಹನುಮಂತನು, ಸಪದ್ಮಾಭಿಃ - ಕಮಲಗಳಿಂದೊಡಗೂಡಿದ, ಪರಿಘಾಭಿಃ - ಅಗಳ್ತೆಗಳಿಂದ, ಅಲಂಕೃತಾಂ - ಶೃಂಗಾರಮಾಡಲ್ಪಟ್ಟ, ರಾವಣಪಾಲಿತಾಂ - ರಾವಣ

ತಾಳೆ, ಸುಗಂಧಪೂರ್ಣವಾದ ಪ್ರೇಂಖಣ, ಕದಂಬ, ಏಳೆಲೆಬಾಳೆ, ಬಂದುಗೆ, ಹೂನೊಳೆತ ಕಣಿಗಲು ಮೊದಲಾದ ಗಿಡಮರಗಳಿಂದಲೂ, ಹೂಗಳ ಭಾರದಿಂದ ಬಗ್ಗಿರುವುದೂ, ಮೊಗ್ಗೊಡೆದು ಹಕ್ಕಿಗಳಿಂದ ತುಂಬಿ ಗಾಳಿಯಿಂದ ತೂಗಾಡುತ್ತಿರುವ ರೆಂಬೆಗಳ ತುದಿಗಳಿಂದ ಶೋಭಿಸುತ್ತಿರುವುದೂ ಆದ ವೃಕ್ಷಗಳಿಂದಲೂ, ಹಂಸ, ಕಾರಂಡವಗಳೇ ಮೊದಲಾದ ಬಣ್ಣಬಣ್ಣದ ನೀರುಹಕ್ಕಿಗಳಿಂದ ತುಂಬಿ, ತಾವರೆಗಳಿಂದಲೂ, ಕನ್ನೈದಿಲೆಗಳಿಂದಲೂ ನಿಬಿಡಿತವಾದ ಕಲ್ಲುಕಟ್ಟಿದ ಭಾವಿಗಳಿಂದಲೂ, ಮನೋಹರವಾದ ವಿವಿಧ ಕ್ರೀಡಾಸ್ಥಾನಗಳಿಂದಲೂ, ಎಲ್ಲ ಋತುಗಳಲ್ಲಿಯೂ ಫಲಪುಷ್ಪಗಳಿಂದ ತುಂಬಿರುವ ಬಗೆಬಗೆಯ ವೃಕ್ಷಗಳಿಂದಲೂ, ಅನೇಕ ಬಗೆಯ ಜಲಾಶಯಗಳಿಂದಲೂ ಕೂಡಿ ಮನವನ್ನಾಕರ್ಷಿಸುವ ಆ ಲಂಕಾಪಟ್ಟಣದ ಕ್ರೀಡಾವನಗಳು ಬಹು ರಮಣೀಯವಾಗಿದ್ದವು. ॥ ೭-೧೩ ॥ ಮಹಾ ಕಾಂತಿಮಂತನಾದ ಹನುಮಂತನು ರಾವಣಾಸುರನಿಂದ ಪರಿಪಾಲಿತವಾಗಿರುವ ಆ ಪಟ್ಟಣವನ್ನು ನೋಡಿ, ಅವರ

ರಾವಣಪಾಲಿತಾಂ । ಪರಿಘಾಭಿ ಸ್ಸಪದ್ಮಾಭಿ ಸ್ಸೋತ್ಪಲಾಭಿ ರಲಂಕೃತಾಂ ॥ ೧೪ ॥ ಸೀತಾಪಹರಣಾರ್ಥೇನ ರಾವಣೇನ ಸುರಕ್ಷಿತಾಂ । ಸಮಂತಾ ದ್ವಿಚರದ್ಭಿಶ್ಚ ರಾಕ್ಷಸೈ ರುಗ್ರಧನ್ವಿಭಿಃ ॥ ೧೫ ॥ ಕಾಂಚನೇನಾವೃತಾಂ ರಮ್ಯಾಂ ಪ್ರಾಕಾರೇಣ ಮಹಾಪುರೀಂ । ಗೃಹೈಶ್ಚ ‡ ಗ್ರಹಸಂಕಾಶೈಃ ಶಾರದಾಂಬುದಸನ್ನಿಭೈಃ ॥೧೬॥ ಪಾಂಡುರಾಭಿಃ ಪ್ರತೋಳೀಭಿ ರುಚ್ಚಾಭಿ ರಭಿಸಂವೃತಾಂ । ಅಟ್ಟಾಲಕ ಶತಾಕೀರ್ಣಾಂ ಪತಾಕಾಧ್ವಜ * ಮಾಲಿನೀಂ ॥ ೧೭ ॥ ತೋರಣೈಃ ಕಾಂಚನೈ ರ್ದಿವ್ಯೈ ರ್ಲತಾಪಙ್ತಿ ವಿಚಿತ್ರಿತೈಃ । ದದರ್ಶ ಹನುಮಾ೯ ಲಂಕಾಂ ¶ ದಿವಿ ದೇವಪುರೀಮಿವ ॥ ೧೮ ॥ ಗಿರಿಮೂರ್ಧ್ನಿ

ನಿಂದ ರಕ್ಷಿಸಲ್ಪಟ್ಟ, ಲಂಕಾಂ - ಲಂಕಾಪಟ್ಟಣದ ಸಮೀಪವನ್ನು, ಆಸಾದ್ಯ - ಹೊಂದಿ, ಸೀತಾ....ನ- ಜಾನಕಿಯ ಅಪಹರಿಸುವಿಕೆಯೇ ಪ್ರಯೋಜನವಾಗುಳ್ಳ, ರಾವಣೇನ-ರಾವಣನಿಂದಲೂ, ಉಗ್ರಧನ್ವಿಭಿಃ- ಭಯಂಕರಗಳಾದ ಬಿಲ್ಲುಗಳುಳ್ಳ, ಸಮಂತಾತ್ - ಎಲ್ಲೆಡೆಯಲ್ಲಿಯೂ, ವಿಚರದ್ಭಿಃ - ಸಂಚರಿಸುತ್ತಿರುವ, ರಾಕ್ಷಸೈಶ್ಚ - ಅಸುರರಿಂದಲೂ, ಕಾಂಚನೇನ - ಸುವರ್ಣಮಯವಾದ, ಪ್ರಾಕಾರೇಣ - ಕೋಟೆಯಿಂದ, ಆವೃತಾಂ - ಸುತ್ತುವರೆದ, ರಮ್ಯಾಂ - ಮನೋಹರವಾದ, ಮಹಾಪುರೀ - ದೊಡ್ಡ ಪಟ್ಟಣವಾದ, ಶಾರ....ಭೈಃ - ಶರತ್ಕಾಲದ ಮೇಘಕ್ಕೆ ಸದೃಶಗಳಾದ, ಗ್ರಹಸಂಕಾಶೈಃ - ನವಗ್ರಹ ಸದೃಶಗಳಾದ, ಗೃಹೈಶ್ಚ - ಮನೆಗಳಿಂದಲೂ, ಪಾಂಡುರಾಭಿಃ - ಬಿಳುಪಾದ, ಉಚ್ಚಾಭಿಃ - ಎತ್ತರಗಳಾದ, ಪ್ರತೋಳೀಭಿಃ - ಬೀದಿಗಳಿಂದಲೂ, ಅಭಿಸಂವೃತಾ - ಕೂಡಿರುವ, ಅಟ್ಟಾ....ರ್ಣಾಂ - ಯುದ್ಧಮಾಡುವದಕ್ಕಾಗಿ ಕೋಟೆಯಮೇಲೆ ಕಟ್ಟಿದ ಅಟ್ಟೆಗಳ ನೂರಾರರಿಂದ ತುಂಬಿರುವ, ಪತಾ....ನೀಂ - ಬಳ್ಳಿ ಮುಂತಾದ ಆಕಾರಗಳಾಗಿ ಮಾಡಲ್ಪಟ್ಟ ಟೆಕ್ಕೆಗಳಿಂದಲೂ, ಮೀನು ಮುಂತಾದವುಗಳ ಆಕಾರವಾಗಿ ಮಾಡಲ್ಪಟ್ಟ ಧ್ವಜಪಟಗಳಿಂದಲೂ ಒಪ್ಪುತ್ತಿರುವ, ಲತಾ....ತೈಃ - ಬಳ್ಳಿಗಳ ಸಾಲಿನಿಂದ ಆಶ್ಚರ್ಯಕರಗಳಾಗಿ ಮಾಡಲ್ಪಟ್ಟ, ದಿವ್ಯೈಃ - ದೇವತಾಸಂಬಂಧಗಳಾದ, ಕಾಂಚನೈಃ - ಬಂಗಾರದ, ತೋರಣೈಃ - ಮಕರತೋರಣಗಳಿಂದಲೂ, ಯುತಾಂ - ಕೂಡಿರುವ, ದೇವ....ತಾಂ - ಅಮರಾವತೀಪಟ್ಟಣದಂತಿರುವ, ಲಂಕಾಂ - ಲಂಕಾಪಟ್ಟಣವನ್ನು, ಹನುಮಾ೯ - ಹನುಮಂತನು,

---

ಸುತ್ತಲೂ ಕಮಲಕನ್ನೈದಿಲೆಗಳಿಂದ ನಿಬಿಡವಾದ ಅಗಳ್ತೆಗಳನ್ನೂ, ಸೀತಾದೇವಿಯನ್ನು ಅಪಹರಿಸಿದ್ದಿದ್ದುದರಿಂದ ಯುದ್ಧಭಯವನ್ನಾಶಂಕಿಸಿದ ರಾವಣನಿಂದ ನಿಯಮಿತರಾಗಿ ಭಯಂಕರವಾದ ಧನುಸ್ಸುಗಳನ್ನು ಹಿಡಿದು ಸುತ್ತಲೂ ಸಂಚರಿಸುತ್ತಿರುವವರೂ, ಪಟ್ಟಣವನ್ನು ಚನ್ನಾಗಿ ರಕ್ಷಿಸುವವರೂ, ಮಹಾ ಭಯಂಕರರೂ ಆದ ರಾಕ್ಷಸರನ್ನೂ ಕಂಡನು. ಸುವರ್ಣಮಯವಾದ ಪ್ರಾಕಾರದಿಂದ ಮನೋಹರವಾಗಿರುವ ಆ ಪಟ್ಟಣದಲ್ಲಿ ಶರತ್ಕಾಲದ ಮೇಘಗಳಿಗೆ ಸಮಾನಗಳಾಗಿ ಬೆಳ್ಳಗೆ ಹೊಳೆಯುತ್ತಿರುವುವೂ, ಚಂದ್ರನೇ ಮೊದಲಾದ ಗ್ರಹಗಳಿಗೆ ಸಮಾನವಾಗಿ ಅತ್ಯುನ್ನತವಾಗಿರುವುವೂ ಆದ ಪ್ರಾಸಾದಗಳಿಂದಲಂಕೃತವಾದ ರಾಜಬೀದಿಗಳನ್ನೂ, ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವ ನೂರಾರು ಯುದ್ಧದ ಅಟ್ಟಗಳನ್ನೂ, ನೂರಾರು ಟೆಕ್ಕೆಯಗಳನ್ನೂ, ಧ್ವಜಪಟಗಳನ್ನೂ, ಸುವರ್ಣಮಯವಾಗಿ ಬೆಳ್ಳಿಯ ಬಳ್ಳಿಗಳಿಂದ ಚಿತ್ರಿತವಾದ ಮಕರತೋರಣಗಳನ್ನೂ ಕಂಡನು. ॥ ೧೪-೧೮ ॥ ಆ ಪಟ್ಟಣವು ಅಮರಾವತಿಯಂತೆ ರಾರಾ

---

‡ "ಗೃಹ" ತಿ. ಪಾ. * "ಶೋಭಿತಾಂ" ತಿ. ರಾ. ಪಾ. ¶ "ದೇವೋ" ತಿ. ಪಾ.

ಸ್ಥಿತಾಂ ಲಂಕಾಂ ಪಾಂಡುರೈರ್ಭವನೈಶ್ಶುಭೈಃ । ದದರ್ಶ ಸ ಕಪಿಶ್ರೇಷ್ಠಃ ಪುರಮಾಕಾಶಗಂಯಥಾ ॥ ೧೯ ॥ ಪಾಲಿತಾಂ ರಾಕ್ಷಸೇಂದ್ರೇಣ ನಿರ್ಮಿತಾಂ ವಿಶ್ವಕರ್ಮಣಾ । ಪ್ಲವಮಾನಾಮಿವಾಕಾಶೇ ದದರ್ಶ ಹನುಮಾನ್ ಪುರೀಂ ॥ ೨೦ ॥ ವಪ್ರಪ್ರಾಕಾರಜಘನಾಂ ವಿಪುಲಾಂಬು ನವಾಂಬರಾಂ । ಶತಘ್ನೀ ಶೂಲಕೇಶಾಂತಾಮಟ್ಟಾಲಕವತಂಸಕಾಂ ॥ ೨೧ ॥ ಮನಸೇವ ಕೃತಾಂ ಲಂಕಾಂ ನಿರ್ಮಿತಾಂ ವಿಶ್ವಕರ್ಮಣಾ । ದ್ವಾರಮುತ್ತರಮಾಸಾದ್ಯ ಚಿಂತಯಾಮಾಸ ವಾನರಃ ॥ ೨೨ ॥ ಕೈಲಾಸ ☫ ಶಿಖರಪ್ರಖ್ಯಾಮಾಲಿಖಂತೀಮಿವಾಂಬರಂ । $ ಡೀಯಮಾನಾಮಿವಾಕಾಶ ಮುಚ್ಛ್ರಿತೈ

ದದರ್ಶ - ಕಂಡನು. ॥೧೮-೧೯॥ ಸಕಪಿಶ್ರೇಷ್ಠಃ - ಆ ವಾನರಶ್ರೇಷ್ಠನು, ಆಕಾಶಗಂ - ಅಂತರಿಕ್ಷದಲ್ಲಿ ಹೋಗುತ್ತಿರುವ, ಪುರಂ - ಪಟ್ಟಣವು, ಯಥಾ - ಹೇಗೋ, ತಥಾ - ಹಾಗೆ, ಪಾಂಡುರೈಃ - ಬೆಳ್ಳಗಿರುವ, ಭವನೈಃ - ಮನೆಗಳಿಂದ, ಗಿರಿಮೂರ್ಧ್ನಿ - ಪರ್ವತಶಿಖರಗಳಲ್ಲಿ, ಸ್ಥಿತಾಂ - ಇರುವ, ಲಂಕಾಂ - ಲಂಕಾಪಟ್ಟಣವನ್ನು, ದದರ್ಶ - ಕಂಡನು. ॥ ೧೯ ॥ ಹನುಮಾನ್ - ಹನುಮಂತನು, ರಾಕ್ಷಸೇಂದ್ರೇಣ - ರಾವಣನಿಂದ, ಪಾಲಿತಾಂ - ಸಂರಕ್ಷಿಸಲ್ಪಟ್ಟ, ವಿಶ್ವಕರ್ಮಣಾ - ವಿಶ್ವಕರ್ಮಬ್ರಹ್ಮನಿಂದ, ನಿರ್ಮಿತಾಂ - ಸೃಜಿಸಲ್ಪಟ್ಟ, ಆಕಾಶೇ - ಅಂತರಿಕ್ಷದಲ್ಲಿ, ಪ್ಲವ....ತಾಂ - ಹಾರಿಹೋಗುವಂತಿರುವ, ಪುರೀಂ - ಲಂಕಾರಾಜಧಾನಿಯನ್ನು, ದದರ್ಶ - ನೋಡಿದನು. ॥ ೨೦ ॥ ವಪ್ರ....ನಾಂ - ಕೋಟೆಯ ಗೋಡೆಗೆ ಆಧಾರವಾದ ಜಗುಲಿಗಳೇ ಜಘನಪ್ರದೇಶಗಳುಳ್ಳದಾಗಿ, ವಿಮ....ರಾಂ - ನಿರ್ಮಲವಾದ ಉದಕವೇ ನೂತನ ವಸ್ತ್ರವುಳ್ಳದಾಗಿ, ಶತ....ತಾಂ - ಪಿರಂಗಿಗಳು ಶೂಲಾಯುಧಗಳು ಇವೇ ತಲೆಕೂದಲುಗಳುಳ್ಳದಾಗಿ, ಅಟ್ಟಾ....ಕಾಂ ಬುರುಜುಗಳೇ ಕರ್ಣಾಭರಣಗಳುಳ್ಳದಾಗಿ, ಮನಸಾ-ಮನಸ್ಸಿನಿಂದ, ಕೃತಾಮಿವಸ್ಥಿತಾಂ-ಮಾಡಲ್ಪಟ್ಟಂತಿರುವ, ವಿಶ್ವಕರ್ಮಣಾ - ದೇವಶಿಲ್ಪಿಯಿಂದ, ನಿರ್ಮಿತಾಂ - ಮಾಡಲ್ಪಟ್ಟ, ಲಂಕಾಂ - ಲಂಕಾಪಟ್ಟಣವನ್ನು, ದದರ್ಶ - ಕಂಡನು, ವಾನರಃ - ಆಂಜನೇಯನು, ಉತ್ತರಂದ್ವಾರಂ - ಉತ್ತರದ ಬಾಗಿಲನ್ನು, ಆಸಾದ್ಯ-ಹೊಂದಿ, ಚಿಂತಯಾಮಾಸ - ಸೀತಾದರ್ಶನೋಪಾಯವನ್ನು ಯೋಚಿಸಿದನು. ॥೨೧-೨೨॥ ವಾನರಃ - ಕಪಿಯು, ಕೈಲಾ....ಖ್ಯಾಂ-ಕೈಲಾಸದಶೃಂಗದ ಕಾಂತಿಯುಳ್ಳ, ಅಂಬರಂ - ಆಕಾಶವನ್ನು, ಆಲಿ....ಖಂತೀಂ - ಬರೆಯುವಂತಿರುವ, ಉಚ್ಛ್ರಿತೈಃ -

ಜಿಸುತ್ತಿದ್ದಿತು. ಕಪಿಶ್ರೇಷ್ಠನಾದ ಆಂಜನೇಯನು ಆ ತ್ರಿಕೂಟಾಚಲ ಶಿಖರದಮೇಲಿರುವ ಮಂಗಳಕರವಾದ ಬೆಳ್ಳನೆಯ ಭವನಗಳಿಂದೊಪ್ಪುತ್ತಿರುವ ಆ ಲಂಕಾನಗರವನ್ನು ಕಂಡನು. ರಾಕ್ಷಸಾಧಿಪನಾದ ರಾವಣೇಶ್ವರನಿಂದ ಪರಿಪಾಲಿತವಾಗಿ, ವಿಶ್ವಕರ್ಮನಿಂದ ನಿರ್ಮಿತವಾಗಿ, ಗಗನದಲ್ಲಿ ಹಾರುತ್ತಿರುವುದೋ ಎಂಬಂತಿದ್ದ ಆ ಪಟ್ಟಣವು, ಕೋಟೆಕೊತ್ತಲಗಳೆಂಬ ಜಘನಪ್ರದೇಶಗಳಿಂದಲೂ, ಸಮುದ್ರಜಲವೆಂಬ ಸುಂದರವಸ್ತ್ರದಿಂದಲೂ, ಪ್ರಾಕಾರಗಳ ಮೇಲಿರುವ ಶತಘ್ನೀಶೂಲಾಯುಧಗಳೆಂಬ ಕೇಶರಾಶಿಯಿಂದಲೂ, ಮುಗಿಲಟ್ಟೆಗಳೆಂಬ ಕರ್ಣಾಭರಣಗಳಿಂದಲೂ, ಅಲಂಕೃತಳಾಗಿ ವಿಶ್ವಕರ್ಮನ ಮನಸ್ಸಿನಿಂದಲೇ ನಿರ್ಮಿತಳಾದ ಸುಂದರಸ್ತ್ರೀಯಂತೆ ವಿರಾಜಿಸುತ್ತಿದ್ದಿತು. ಹೀಗೆ ಬಹು ರಮಣೀಯವಾಗಿರುವ ಆ ಲಂಕಾಪಟ್ಟಣದ ಉತ್ತರದ ಬಾಗಿಲಿಗೆ ಬಂದ ಆ ಕಪಿವೀರನು, ಕೈಲಾಸಶಿಖರಕ್ಕೆ ಸಮಾನವಾಗಿ ಗಗನವನ್ನು

☫ "ನಿಲಯ" ತಿ. ಪಾ. $ "ಧ್ರಿಯಮಾಣ" ತಿ. ರಾ. ಪಾ.

ರ್ಭವನೋತ್ತಮೈಃ ॥ ೨೩ ॥ ಸಂಪೂರ್ಣಾಂ ರಾಕ್ಷಸೈರ್ಘೋರೈ§ ರ್ನಾಗೈರ್ಭೋಗವತೀಮಿವ । ಅಚಿಂತ್ಯಾಂ ಸುಕೃತಾಂ ಸ್ಪಷ್ಟಾಂ ಕುಬೇರಾಧ್ಯುಷಿತಾಂ ಪುರಾ ॥ ೩೪ ॥ ದಂಷ್ಟ್ರಿಭಿರ್ಬಹುಭಿ ಶ್ಶೂರೈಶ್ಶೂಲಪಟ್ಟಿಶ ಪಾಣಿಭಿಃ । ರಕ್ಷಿತಾಂ ರಾಕ್ಷಸೈ ರ್ಘೋರೈರ್ಗುಹಾಮಾಶೀವಿಷೈರಿವ ॥ ೨೫ ॥ ತಸ್ಯಾಶ್ಚ ಮಹತೀಂ ಗುಪ್ತಿಂ ಸಾಗರಂ ಚ ನಿರೀಕ್ಷ್ಯ ಸಃ । ರಾವಣಂಚ ರಿಪುಂ ಘೋರಂ ಚಿಂತಯಾಮಾಸ ವಾನರಃ ॥ ೨೬ ॥ "ಆಗತ್ಯಾ

ಉನ್ನತಗಳಾದ, ಭವನೋತ್ತಮೈಃ - ಶ್ರೇಷ್ಠವಾದ ಮನೆಗಳಿಂದ, ಆಕಾಶಂ - ಗಗನವನ್ನು, ನೀಯ....ವ - ಎದುರುಗೊಳ್ಳುವಂತಿರುವ, ಘೋರೈಃ - ಭಯಂಕರರಾದ, ರಾಕ್ಷಸೈಃ - ರಾಕ್ಷಸರಿಂದಲೂ, ನಾಗೈಃ - ಸರ್ಪಗಳಿಂದಲೂ, ಸಂಪೂರ್ಣಾಂ - ತುಂಬಿದ, ಭೋಗ....ತೀಂ - ಭೋಗವತಿಯಂತಿರುವ, ಅಚಿಂತ್ಯಾಂ - ಚಿಂತಿಸಲಶಕ್ಯವಾದ, ಸುಕೃತಾಂ - ಚನ್ನಾಗಿ ಮಾಡಲ್ಪಟ್ಟ, ಸ್ಪಷ್ಟಂ - ಸ್ಫುಟವಾಗಿ ಕಾಣುವ, ಪುರಾ - ಮೊದಲು, ಕುಬೇ ...ತಾಂ - ಕುಬೇರನಿಂದ ವಾಸವಾಗಿದ್ದ, ದಂಷ್ಟ್ರಿಭಿಃ - ಕೋರೆಹಲ್ಲುಗಳುಳ್ಳ, ಬಹುಭಿಃ - ಅನೇಕರಾದ, ಶೂಲ....ಭಿಃ - ಭಲ್ಲೆಗಳನ್ನೂ, ಕತ್ತಿಗಳನ್ನೂ ಕೈಯಲ್ಲಿ ಹಿಡಿದಿರುವ, ಶೂರೈಃ - ವೀರರಾದ, ರಾಕ್ಷಸೈಃ - ಅಸುರರಿಂದ, ಘೋರೈಃ - ಭಯಂಕರಗಳಾದ, ಆಶೀವಿಷೈಃ - ಸರ್ಪಗಳಿಂದ, ಗುಹಾಮಿವ - ಗುಹೆಯೋಪಾದಿಯಲ್ಲಿರುವ, ರಕ್ಷಿತಾಂ - ರಕ್ಷಿಸಲ್ಪಟ್ಟ (ಲಂಕಾಪಟ್ಟಣವನ್ನೂ), ತಸ್ಯಾಃ - ಆ ಲಂಕೆಯ, ಮಹತೀಂ - ದೊಡ್ಡದಾದ, ಗುಪ್ತಿಂಚ - ಸಂರಕ್ಷಣರೂಪವಾದ, ಸಾಗರಂಚ - ಸಮುದ್ರವನ್ನೂ, ರಿಪುಂ - ಹಗೆಯನಾದ, ಘೋರಂ - ಭಯಂಕರನಾದ, ರಾವಣಂಚ - ರಾವಣಾಸುರನನ್ನೂ ಕುರಿತು, ನಿರೀಕ್ಷ್ಯ - ಯೋಚಿಸಿ, ಸವಾನರಃ ಆ ಕಪಿಯು, ಚಿಂತಯಾಮಾಸ-ಆಲೋಚಿಸಿದನು. ॥ ೨೩-೨೬ ॥ ಇಹ-ಈ ಲಂಕೆಯಲ್ಲಿ, ಹರಯಃ - ವಾನರರು, ಆಗತ್ಯಾಪಿ - ಬಂದರೂ, ನಿರರ್ಥಕಾಃ - ನಿಷ್ಪ್ರಯೋಜನರು, ಭವಿಷ್ಯಂತಿ -

ಮುಟ್ಟುತ್ತಿರುವಂತೆಯೂ, ಅತ್ಯುನ್ನತವಾದ ಭವನಗಳಿಂದ ಗಗನವನ್ನುಲ್ಲೇಖಿಸುತ್ತಿರುವಂತೆಯೂ, ವಿಮಾನದಂತೆ ಆಕಾಶದಲ್ಲಿ ಸಂಚರಿಸುತ್ತಿರುವಂತೆಯೂ, ಭಯಂಕರರಾದ ರಾಕ್ಷಸರಿಂದ ನಿಬಿಡಿತವಾಗಿ ನಾಗರಿಂದ ತುಂಬಿದ ಭೋಗವತೀ ಪಟ್ಟಣದಂತೆಯೂ, ಶೋಭಿಸುತ್ತಿದ್ದ ಆ ಲಂಕೆಯನ್ನು ಚನ್ನಾಗಿ ನೋಡಿದನು. ಮನಸ್ಸಿನಿಂದಲೂ ಯೋಚಿಸಲಾಗದಂತೆ ವಿಶ್ವಕರ್ಮನಿಂದ ನಿರ್ಮಿತವಾಗಿ ಪೂರ್ವದಲ್ಲಿ ಕುಬೇರನಿಗೆ ನಿವಾಸ ಸ್ಥಾನವಾಗಿದ್ದುದಾಗಿಯೂ, ಶೂಲಮುದ್ಗರಾದಿ ಅನೇಕ ಆಯುಧಗಳನ್ನು ಧರಿಸಿ ಕೋರೆಹಲ್ಲುಗಳಿಂದ ಅತಿಭಯಂಕರರಾದ ಅನೇಕ ರಾಕ್ಷಸರಿಂದ ಸಂರಕ್ಷಿತವಾಗಿ ಸರ್ಪಗಳ ಕಾವಲನ್ನೊಳಗೊಂಡ ಗುಹೆಯಂತಿರುವುದಾಗಿಯೂ ಆ ನಗರವು ಕಂಗೊಳಿಸುತ್ತಿದ್ದಿತು. ಧೀರನಾದ ಆ ಹನುಮಂತನು ಆ ಉತ್ತರ ದ್ವಾರದಿಂದಲೇ ಆ ಲಂಕಾಪಟ್ಟಣವೆಲ್ಲವನ್ನೂ ನೋಡಿ, ರಾಕ್ಷಸರು ಅದನ್ನು ಕಾಪಾಡುತ್ತಿರುವ ವಿಧವನ್ನೂ, ಅದರ ಸುತ್ತಣ ಮಹಾ ಸಾಗರವನ್ನೂಕಂಡು ರಾಕ್ಷಸಾಧಿಪತಿಯಾದ ರಾವಣನನ್ನು ಭಯಂಕರ ಶತ್ರುವನ್ನಾಗಿ ತಿಳಿದು ಹೀಗೆ ಆಲೋಚಿಸಿದನು.॥೧೯-೨೬॥ "ಈ ಪಟ್ಟಣವು ಮಹಾದ್ಭುತವಾದುದು. ವಾನರರು ಸಮುದ್ರವನ್ನು ದಾಟಿ ಇಲ್ಲಿಗೆ ಬಂದರೂ ಯಾವ ಪ್ರಯೋಜನ

§ ಈ ಒಂದೂವರೆ ಶ್ಲೋಕವು ಗೋ. ಪಾ. ದಲ್ಲಿ ಅಧಿಕ.

ಪೀಹ ಹರಯೋ ಭವಿಷ್ಯಂತಿ ನಿರರ್ಥಕಾಃ । ನಹಿ ಯುದ್ಧೇನ ವೈ ಲಂಕಾ ಶಕ್ಯಾ ಜೇತುಂ ಸುರೈರಪಿ ॥ ೨೭ ॥ ಇಮಾಂತು ವಿಷಮಾಂ ದುರ್ಗಾಂ ಲಂಕಾಂ ರಾವಣ ಪಾಲಿತಾಂ । ಪ್ರಾಪ್ಯಾಪಿ ಸ ಮಹಾಬಾಹುಃ ಕಿಂಕರಿಷ್ಯತಿ ರಾಘವಃ? ॥ ೨೮ ॥ ಅವ ಕಾಶೋ ನ ‡ ಸಾಂತ್ವಸ್ಯ ರಾಕ್ಷಸೇಷ್ವಭಿಗಮ್ಯತೇ । ನದಾನಸ್ಯ ನಭೇದಸ್ಯ ನೈವ ಯುದ್ಧಸ್ಯ ದೃಶ್ಯತೇ ॥ ೨೯ ॥ ಚತುರ್ಣಾಮೇವ ಹಿ ಗತಿರ್ವಾನರಾಣಾಂ * ಮಹಾ

ಆಗುವರು, ಹಿ - ಯಾವ ಕಾರಣದಿಂದ, ಲಂಕಾ - ಲಂಕಾಪಟ್ಟಣವು, ಸುರೈರಪಿ - ದೇವತೆಗಳಿಂದಲೂ, ಯುದ್ಧೇನ-ಯುದ್ಧದಿಂದ, ಜೇತುಂ-ಜಯಿಸಲು, ನಶಕ್ಯಾ-ಸಾಧ್ಯವಲ್ಲವೋ. ॥೨೭॥ ಮಹಾಬಾಹುಃ- ಮಹದ್ಭುಜಪರಾಕ್ರಮವುಳ್ಳ, ಸರಾಘವಃ - ಆ ರಾಮನು, ಇಮಾಂ - ಇಂತಹ, ವಿಷಮಾಂ- ವಿಷಮಸ್ಥಲವಾದುದರಿಂದಲೇ, ದುರ್ಗಾಂ - ಪ್ರವೇಶಿಸಲಶಕ್ಯವಾದ, ರಾವ....ತಾಂ - ರಾವಣನಿಂದ ರಕ್ಷಿತವಾದ, ಲಂಕಾಂ - ಲಂಕಾಪಟ್ಟಣವನ್ನು, ಪ್ರಾಪ್ಯಾಪಿ - ಹೊಂದಿಯೂಕೂಡ, ಕಿಂಕರಿಷ್ಯತಿ - ಏನು ಮಾಡಿಯಾನು. ॥ ೨೮ ॥ ರಾಕ್ಷಸೇಷು - ರಾಕ್ಷಸರಲ್ಲಿ, ಸಾಂತ್ವಸ್ಯ - ಸಾಮೋಪಾಯಕ್ಕೆ, ಅವಕಾಶಃ - ಆಸ್ಪದವು, ನಾಭಿಗಮ್ಯತೇ - ಹೊಂದಲಾಗುವದಿಲ್ಲ, ದಾನಸ್ಯ - ದಾನೋಪಾಯಕ್ಕೂ, ಅವಕಾಶಃ - ಆಸ್ಪದವು, ನದೃಶ್ಯತೇ - ಕಾಣುವುದಿಲ್ಲ, ಭೇದಸ್ಯ - ಭೇದೋಪಾಯಕ್ಕೂ, ಅವಕಾಶಃ - ಆಸ್ಪದವು, ನದೃಶ್ಯತೇ - ಕಾಣುವದಿಲ್ಲ, ಯುದ್ಧಸ್ಯ - ಕಾಳೆಗಕ್ಕೂ, ಅವಕಾಶಃ-ಸ್ಥಲವು, ನೈವದೃಶ್ಯತೇ- ಕಾಣುವುದೇ ಇಲ್ಲವು. ॥ ೨೯ ॥ ಧೀಮತಃ - ಬುದ್ಧಿಶಾಲಿಯಾದ, ರಾಜ್ಞಃ - ಅರಸಾದ ಸುಗ್ರೀವ ನಿಗೂ, ವಾಲಿಪುತ್ರಸ್ಯ - ಅಂಗದನಿಗೂ, ಮಮ - ನನಗೂ, ನೀಲಸ್ಯಚ - ನೀಲನಿಗೂ, ಚತುರ್ಣಾಂ -

---

ವನ್ನೂ ಹೊಂದಲಾರರು. ದೇವತೆಗಳಿಗಾದರೂ ಈ ಲಂಕೆಯು ಯುದ್ಧದಿಂದ ಜಯಿಸಲಸಾಧ್ಯ ವಾದುದು. ಸಪ್ತಸಾಲಗಳನ್ನೂ, ಪರ್ವತಭೂಮಿಗಳನ್ನೂ ಒಂದೇಒಂದು ಬಾಣದಿಂದ ಭೇದಿ ಸಿದ ಮಹಾ ಪರಾಕ್ರಮಶಾಲಿಯೂ, ಮಹಾಬಾಹುವೂ ಆದ ಶ್ರೀರಾಮನು, ಇತರರಿಗಸಾ ಧ್ಯವೂ, ದುರ್ಘಟವೂ, ರಾವಣ ಪರಿಪಾಲಿತವೂ ಆದ ಈ ಪಟ್ಟಣವನ್ನು ಪ್ರವೇಶಿಸಿದರೂ ಏನನ್ನುತಾನೇ ಮಾಡಿಯಾನು? ಸಾಮೋಪಾಯದಿಂದ ಕಾರ್ಯಸಾಧನೆಯನ್ನು ಮಾಡಬಯಸಿ ದರೂ ರಾಕ್ಷಸರು ಮಹಾ ಕ್ರೂರರಾದುದರಿಂದ ಅದು ಅವರಲ್ಲಿ ನಿಷ್ಪ್ರಯೋಜನವಾಗುವುದು. ದಾನೋಪಾಯದಿಂದ ಜಯಿಸುವೆನೆಂದರೆ ಇವರು ಗರ್ವಿತರಾಗಿರುವರು. ರಾವಣನ ಆಜ್ಞೆ ಯಂತೆ ಎಲ್ಲರೂ ಐಕಮತ್ಯದಿಂದಿರುವುದರಿಂದ ಭೇದೋಪಾಯವೂ ನಿರರ್ಥಕವೇ ಸರಿ. ಮಹಾ ಬಲಿಷ್ಠರೂ, ಎಲ್ಲ ವಿಧಗಳಲ್ಲಿಯೂ ಯುದ್ಧನಿಪುಣರೂ ಆದ ಇವರನ್ನು ಗೆಲ್ಲಲು ದಂಡೋಪಾಯದಿಂದ ಎಷ್ಟುಮಾತ್ರಕ್ಕೂ ಸಾಧ್ಯವಾಗುವುದಿಲ್ಲ. ಆದುದರಿಂದ ಈ ನಾಲ್ಕು ವಿಧಗಳಾದ ಉಪಾಯಗಳಲ್ಲಿ ಯಾವುದೂ ಕಾರ್ಯಸಾಧನೆಗೆ ಸಹಕಾರಿಯಾಗುವುದಿಲ್ಲ. ಮಹಾ ಭುಜಬಲಪರಾಕ್ರಮಶಾಲಿಗಳಾದ ವಾನರರಲ್ಲಿ ವಾಲಿಪುತ್ರನಾದ ಅಂಗದ, ವಾನರ ಯೂಥಪನಾದ ನೀಲ, ನಾನು, ನಮ್ಮೊಡೆಯನೂ ಮಹಾ ಮೇಧಾವಿಯೂ ಆದ ಸುಗ್ರೀವ, ಈ ನಾಲ್ವರಿಗೆಮಾತ್ರ ಸಮುದ್ರೋಲ್ಲಂಘನ ಸಾಮರ್ಥ್ಯವಿರುವುದು. ಉಳಿದವರಿಗಾರಿಗೂ ಆ ಶಕ್ತಿ

---

‡ "ಸಾಮ್ನಸ್ತು" ತಿ. ಪಾ. * "ತರಸ್ವಿನಾಂ" ತಿ. ಪಾ.

ತ್ಮನಾಂ । ವಾಲಿಪುತ್ರಸ್ಯ ನೀಲಸ್ಯ ಮಮ ರಾಜ್ಞಶ್ಚ ಧೀಮತಃ ॥ ೩೦ ॥ ಯಾವಜ್ಜಾನಾಮಿ ವೈದೇಹೀಂ ಯದಿ ಜೀವತಿ ವಾ ನವಾ । ತತ್ರೈವ ಚಿಂತಯಿಷ್ಯಾಮಿ ದೃಷ್ಟ್ವಾತಾಂ ಜನಕಾತ್ಮಜಾಂ" ॥ ೩೧ ॥ ತತ ಸ್ಸಚಿಂತಯಾಮಾಸ ಮುಹೂರ್ತಂ ಕಪಿಕುಂಜರಃ । ಗಿರಿಶೃಂಗೇ ಸ್ಥಿತ ಸ್ತಸ್ಮಿನ್ ರಾಮಸ್ಯಾಽಭ್ಯುದಯೇ ರತಃ ॥ ೩೨ ॥ "ಅನೇನ ರೂಪೇಣ ಮಯಾ ನಶಕ್ಯಾ ರಕ್ಷಸಾಂ ಪುರೀ । ಪ್ರವೇಷ್ಟುಂ ರಾಕ್ಷಸೈ ರ್ಗುಪ್ತಾ ಕ್ರೂರೈರ್ಬಲಸಮನ್ವಿತೈಃ ॥ ೩೩ ॥ ¶ ಉಗ್ರೌಜಸೋ ಮಹಾವೀರ್ಯಾ ♆ ಬಲವಂತಶ್ಚ ರಾಕ್ಷಸಾಃ । ವಂಚನೀಯಾ ಮಯಾ ಸರ್ವೇ ಜಾನಕೀಂ ಪರಿಮಾರ್ಗತಾ ॥ ೩೪ ॥

ನಾಲ್ವರು, ಮಹಾತ್ಮನಾಂ - ಮಹಾನುಭಾವರಾದ, ವಾನರಾಣಾಮೇವ - ಕಪಿಗಳಿಗೇನೇ, ಗತಿಃ - ಈ ಲಂಕಾಪ್ರಾಪ್ತಿಯು, (ಸಂಭಾವಿತಾ - ಆದೀತು). ॥ ೩೦ ॥ ವೈದೇಹೀಂ - ಜಾನಕಿಯನ್ನು, ಜೀವತಿ ವಾನವೇತಿ - ಬದುಕಿರುವಳೋ ಇಲ್ಲವೋ ಎಂಬುದಾಗಿ, ಜಾನಾಮಿಯಾವತ್ - ಹೇಗಾದರೂ ತಿಳಿಯುಯುತ್ತೇನೆ, ಯದಿಜೀವತಿ - ಬದುಕಿದ್ದರೆ, ತಾಂಜನಕಾತ್ಮಜಾಂ - ಆ ಸೀತಾದೇವಿಯನ್ನು, ದೃಷ್ಟ್ವಾ- ಕಂಡು, ತತ್ರೈವ - ಅಲ್ಲಿಯೇ, ಚಿಂತಯಿಷ್ಯಾಮಿ - ಆಲೋಚಿಸುವೆನು. ॥೩೧॥ ತತಃ-ಅನಂತರದಲ್ಲಿ, ಸಕಪಿಕುಂಜರಃ - ಆ ವಾನರಶ್ರೇಷ್ಠನು, ತಸ್ಮಿನ್‌ಗಿರಿಶೃಂಗೇ - ಆ ಬೆಟ್ಟದ ತುದಿಯಲ್ಲಿ, ಸ್ಥಿತಃ - ನಿಂತವನಾಗಿ, ರಾಮಸ್ಯ - ಶ್ರೀರಾಮನ, ಅಭ್ಯುದಯೇ - ಶ್ರೇಯಸ್ಸಿನಲ್ಲಿ, ರತಃ - ಆಸಕ್ತನಾಗಿ, ಮುಹೂರ್ತಂ-ಸ್ವಲ್ಪಹೊತ್ತು, ಚಿಂತಯಾಮಾಸ-ಯೋಚಿಸಿದನು. ॥ ೩೨ ॥ ಕ್ರೂರೈಃ-ತೀಕ್ಷ್ಣರಾದ, ಬಲಸಮನ್ವಿತೈಃ-ದೇಹತ್ರಾಣೆಯಿಂದ ಕೂಡಿರುವ, ರಾಕ್ಷಸೈಃ-ರಕ್ಕಸರಿಂದ, ಗುಪ್ತಾ-ಸಂರಕ್ಷಿಸಲ್ಪಟ್ಟ, ರಕ್ಷಸಾಂಪುರೀ-ಈ ಲಂಕಾಪಟ್ಟಣವು, ಮಯಾ-ನನ್ನಿಂದ, ಅನೇನರೂಪೇಣ-ಇದೇ ಆಕಾರದಿಂದ, ಪ್ರವೇಷ್ಟುಂ - ಹೋಗುವದಕ್ಕೆ, ನಶಕ್ಯಾ - ಅಸಾಧ್ಯವು. ॥ ೩೩ ॥ ಜಾನಕೀಂ - ಸೀತೆಯನ್ನು, ಪರಿಮಾರ್ಗತಾ - ಹುಡುಕುತ್ತಿರುವ, ಮಯಾ - ನನ್ನಿಂದ, ಉಗ್ರೌಜಸಃ - ಭಯಂಕರವಾದ ಅಂತಸ್ಸಾರವುಳ್ಳ, ಮಹಾವೀರ್ಯಾಃ - ಮಹಾ ಪರಾಕ್ರಮಿಗಳಾದ, ಬಲವಂತಶ್ಚ - ದೇಹತ್ರಾಣೆಯು ಉಳ್ಳ, ರಾಕ್ಷಸಾಸ್ಸರ್ವೇ - ರಕ್ಕಸರೆಲ್ಲರೂ, ವಂಚನೀಯಾಃ - ಮೋಸಗೊಳಿಸಲ್ಪಡತಕ್ಕವರು. ॥ ೩೪ ॥

ಯಿಲ್ಲವು. ಹೀಗಿರುವುದರಿಂದ ಸೈನ್ಯವನ್ನಿಲ್ಲಿಗೆ ತರುವುದಸಾಧ್ಯವೇಸರಿ. ॥೨೭–೩೦॥ ಅಥವ ಈಗ ಈ ಯೋಚನೆ ಏಕೆ? ಮೊದಲು ಜನಕನಂದಿನಿಯಾದ ಸೀತಾದೇವಿಯು ಜೀವಂತಳಾಗಿರುವಳೇ ಇಲ್ಲವೇ? ಎಂಬುದನ್ನು ತಿಳಿಯುವೆನು. ಆಕೆಯನ್ನು ಕಂಡ ಬಳಿಕ ಅಲ್ಲಿಯೇ ಮುಂದೆ ಮಾಡಬೇಕಾದ ಕಾರ್ಯಗಳನ್ನು ಯೋಚಿಸುತ್ತೇನೆ.'' ಹೀಗೆ ಯೋಚಿಸಿದ ಆ ವಾನರೋತ್ತಮನು ಆ ಲಂಬಪರ್ವತ ಶಿಖರದಲ್ಲಿಯೇ ನಿಂತು ಶ್ರೀರಾಮಮೂರ್ತಿಯ ಅಭ್ಯುದಯವನ್ನು ಕೋರಿ ಒಂದು ಮುಹೂರ್ತಕಾಲ ಹೀಗೆ ಚಿಂತಿಸಿದನು. "ಈ ಲಂಕಾಪಟ್ಟಣವನ್ನು ಮಹಾ ಕ್ರೂರರೂ, ಬಲಿಷ್ಠರೂ ಆದ ರಾಕ್ಷಸರು ಕಾಯುತ್ತಿರುವರು. ಆದುದರಿಂದ ನಾನು ಈ ರೂಪದೊಡನೆ ಪಟ್ಟಣ ಪ್ರವೇಶಮಾಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ನಾನು ಸೀತಾದೇವಿಯನ್ನು ಹುಡುಕುವಾಗ ಬಹು ಭಯಂಕರರೂ, ಅತುಳ ಬಲಪರಾಕ್ರಮಶಾಲಿಗಳೂ ಆದ ಈ ರಾಕ್ಷಸರಾರಿಗೂ ಕಾಣಿಸಿಕೊಳ್ಳದೆ ಕಪಟದಿಂದ ಅವರನ್ನು ವಂಚಿಸಬೇಕು.

¶ "ಮಹೌಜಸಃ" ತಿ. ಪಾ. ♆ "ನಾಂಬವಂತಶ್ಚ" ರಾ. ಪಾ.

ಲಕ್ಷ್ಯಾಲಕ್ಷ್ಯೇಣ ರೂಪೇಣ ರಾತ್ರೌ ಲಂಕಾಪುರೀ ಮಯಾ । ಪ್ರವೇಷ್ಟುಂ ಪ್ರಾಪ್ತ ಕಾಲಂ ಮೇ ಕೃತ್ಯಂ ಸಾಧಯಿತುಂ ಮಹತ್ ” ॥ ೩೫ ॥ ತಾಂ ಪುರೀಂ ತಾದೃಶೀಂ ದೃಷ್ಟ್ವಾ ದುರಾಧರ್ಷಾಂ ಸುರಾಸುರೈಃ । ಹನೂಮಾಂಶ್ಚಿಂತಯಾಮಾಸ ವಿನಿಶ್ವಸ್ಯ ಮುಹುರ್ಮುಹುಃ ॥ ೩೬ ॥ “ ಕೇನೋಪಾಯೇನ ಪಶ್ಯೇಯಂ ಮೈಥಿಲೀಂ ಜನಕಾತ್ಮಜಾಂ । ಅದೃಷ್ಟೋ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ ॥ ೩೭ ॥ ನವಿನಶ್ಯೇತ್ಕಥಂ ಕಾರ್ಯಂ ರಾಮಸ್ಯ ವಿದಿತಾತ್ಮನಃ । ಏಕಾಮೇಕಶ್ಚ ಪಶ್ಯೇಯಂ ರಹಿತೇ ಜನಕಾತ್ಮಜಾಂ ॥ ೩೮ ॥ ಭೂತಾಶ್ಚಾರ್ಥಾ* ವಿಪದ್ಯಂತೇ ದೇಶಕಾಲವಿರೋಧಿತಾಃ ।

ಲಕ್ಷ್ಯಾಲಕ್ಷ್ಯೇಣ - ಕಂಡೂಕಾಣದ, ರೂಪೇಣ - ಆಕಾರದಿಂದ, ಮಯಾ - ನನ್ನಿಂದ, ಲಂಕಾಪುರೀ - ಲಂಕಾಪಟ್ಟಣವು, ರಾತ್ರೌ - ರಾತ್ರಿಯಲ್ಲಿ, ಪ್ರವೇಷ್ಟುಂ - ಪ್ರವೇಶಿಸುವದಕ್ಕೂ, ಮೇ- ನನಗೆ, ಮಹತ್ಕೃತ್ಯಂ - ದೊಡ್ಡ ಕಾರ್ಯವು, ಸಾಧಯಿತುಂ - ಸಾಧಿಸುವುದಕ್ಕೂ, ಪ್ರಾಪ್ತಕಾಲಂ - ಉಚಿತಸಮಯವು (ಎಂದು ಆಲೋಚಿಸಿದನು.) ॥ ೩೫ ॥ ಸುರಾಸುರೈಃ - ದೇವರಾಕ್ಷಸರಿಂದಲೂ, ದುರಾಧರ್ಷಾಂ - ತಿರಸ್ಕರಿಸಲಸಾಧ್ಯವಾದ, ತಾದೃಶೀಂ - ಅಂತಹ, ತಾಂಪುರೀಂ - ಆ ಲಂಕಾಪಟ್ಟಣವನ್ನು, ದೃಷ್ಟ್ವಾ - ಕಂಡು, ಹನೂಮಾನ್ - ಆಂಜನೇಯನು, ವಿನಿಶ್ವಸ್ಯ - ವಿಶೇಷವಾಗಿ ನಿಟ್ಟುಸಿರುಬಿಟ್ಟು, ಮುಹುರ್ಮುಹುಃ-ಬಾರಿಬಾರಿಗೂ, ಚಿಂತಯಾಮಾಸ-ಯೋಚಿಸಿದನು. ॥೩೬॥ ರಾಕ್ಷಸೇಂದ್ರೇಣ- ರಾಕ್ಷಸರಾಜನಾದ, ದುರಾತ್ಮನಾ - ಕೆಟ್ಟಬುದ್ಧಿಯುಳ್ಳ, ರಾವಣೇನ - ರಾವಣನಿಂದ, ಅದೃಷ್ಟಃ - ನೋಡಲ್ಪಡದಿರುವನಾಗಿ, ಜನಕಾತ್ಮಜಾಂ - ಜನಕನಂದಿನಿಯಾದ, ಮೈಥಿಲೀಂ - ಸೀತಾದೇವಿಯನ್ನು, ಕೇನೋಪಾಯೇನ - ಯಾವ ಉಪಾಯದಿಂದ, ಪಶ್ಯೇಯಂ - ನೋಡಿಯೇನು. ॥೩೭॥ ವಿದಿತಾತ್ಮನಃ - ತಿಳಿಯಲ್ಪಟ್ಟ ಸ್ವಭಾವವುಳ್ಳ, ರಾಮಸ್ಯ-ರಾಮನ, ಕಾರ್ಯಂ ಕೆಲಸವು, ನವಿನಶ್ಯೇತ್-ನಷ್ಟವಾಗದಿರುವದು ಹೇಗೆ, ಏಕಃ-ಒಬ್ಬಂಟಿಗನಾದ ನಾನು, ರಹಿತೇ-ವಿಜನಪ್ರದೇಶದಲ್ಲಿ, ಏಕಾಂ - ಒಬ್ಬಂಟಿಗಳಾದ, ಜನಕಾತ್ಮಜಾಂ-ಸೀತಾದೇವಿಯನ್ನು, ಕಥಂಪಶ್ಯೇಯಂ - ಹೇಗೆ ನೋಡಿಯೇನು. ॥ ೩೮ ॥ ಅರ್ಥಾಃ - ಪ್ರಯೋಜನಗಳು, ಭೂತಾಶ್ಚ - ಆಗಿಬಂದಿದ್ದರೂ, ವಿಕ್ಲಬಂ-ಅವಿವೇಕಿಯಾದ, ದೂತಂ-ದೂತನನ್ನು, ಆಸಾದ್ಯ - ಹೊಂದಿ, ದೇಶ....ತಾಃ - ದೇಶದಿಂದಲೂ, ಸಮಯದಿಂದಲೂ ವಿರೋಧಿಸಲ್ಪಟ್ಟವುಗಳಾಗಿ,

---

ಈ ಮಹತ್ಕಾರ್ಯವನ್ನು ಸಾಧಿಸಲೋಸುಗ ಕಾಣಿಸಿಯೂ ಕಾಣಿಸದಿರುವ ರೂಪವನ್ನು ತಾಳಿ ರಾತ್ರಿಯ ಕಾಲದಲ್ಲಿ ಈ ಪಟ್ಟಣವನ್ನು ಪ್ರವೇಶಿಸಬೇಕು.” ॥ ೩೧–೩೫ ॥ ಹೀಗೆ ಸುರಾಸುರರಿಗೂ ಅಸಾಧ್ಯವಾದ ಲಂಕಾನಗರಪ್ರವೇಶವನ್ನು ನಿಶ್ಚಯಿಸಿಯೂ ಆ ಹನುಮಂತನು ಸಮುದ್ರ ಲಂಘನಕ್ಕಿಂತಲೂ ಈ ಪಟ್ಟಣಪ್ರವೇಶವು ಅತಿ ದುಷ್ಕರವೆಂದು ಅಡಿಗಡಿಗೂ ನಿಟ್ಟುಸಿರು ಬಿಡುತ್ತ, “ರಾಕ್ಷಸರಾಜನಾದ ರಾವಣನು ಬಹಳ ದುರಾತ್ಮನು. ಅವನು ಒಂದುವೇಳೆ ನನ್ನನ್ನು ನೋಡಿದಲ್ಲಿ ಈ ಕಾರ್ಯವು ಭಗ್ನವಾಗುವುದು. ಆದುದರಿಂದ ಅವನಿಗೆ ಕಾಣಿಸಿಕೊಳ್ಳದೆ ಈ ಲಂಕೆಯಲ್ಲಿ ಸೀತಾದೇವಿಯನ್ನು ಹುಡುಕಲು ಉಪಾಯವೇನು? ಈ ಪಟ್ಟಣವನ್ನು ಪ್ರವೇಶಿಸಿ ಸೀತಾದೇವಿಯನ್ನು ಕಂಡು ಆಕೆಯೊಡನೆ ಸಂಭಾಷಿಸುವಾಗ ಯಾರಾದರೂ ನೋಡಿದಲ್ಲಿ ಆತ್ಮಜ್ಞಾನಿಯಾದ ಶ್ರೀರಾಮನ ಕಾರ್ಯವು ಕೆಟ್ಟು

---

* “ ವಿನಶ್ಯಂತಿ ” ಕ. ೩. ಪಾ.

ವಿಕ್ಲಬಂ ದೂತಮಾಸಾದ್ಯ ತಮಸ್ಸೂರ್ಯೋದಯೇ ಯಥಾ ॥೩೯॥ ಅರ್ಥಾನರ್ಥಾಂತರೇ ಬುದ್ಧಿರ್ನಿಶ್ಚಿತಾಪಿ ನಶೋಭತೇ । ಘಾತಯಂತಿ ಹಿ ಕಾರ್ಯಾಣಿ ದೂತಾಃ ಪಂಡಿತಮಾನಿನಃ ॥ ೪೦ ॥ ನವಿನಶ್ಯೇತ್ಕಥಂ ಕಾರ್ಯಂ ವೈಕ್ಲಬ್ಯಂ ನಕಥಂ ಬವೇತ್ । ಲಂಘನಂಚ ಸಮುದ್ರಸ್ಯ ಕಥಂನು ನವೃಥಾಭವೇತ್ ॥ ೪೧ ॥ ಮಯಿ ದೃಷ್ಟೇತು ರಕ್ಷೋಭಿ ರಾಮಸ್ಯ ವಿದಿತಾತ್ಮನಃ । ಭವೇದ್ವ್ಯರ್ಥಮಿದಂ ಕಾರ್ಯಂ ರಾವಣಾನರ್ಥಮಿಚ್ಛತಃ ॥ ೪೨ ॥ ನಹಿ ಶಕ್ಯಂ ಕ್ವಚಿತ್‌ಸ್ಥಾತು ಮವಿಜ್ಞಾತೇನ ರಾಕ್ಷಸೈಃ । ಅಪಿ

ಸೂರ್ಯೋದಯೇ-ಸೂರ್ಯನ ಆವಿರ್ಭಾವ ಕಾಲದಲ್ಲಿ, ತಮೋಯಥಾ-ಅಂಧಕಾರದಂತೆ, ವಿಪದ್ಯಂತೇ - ನಾಶವಾಗುತ್ತವೆ. ॥೩೯॥ ಅರ್ಥಾ....ರೇ-ಕಾರ್ಯಾಕಾರ್ಯಗಳ ನಡುವೆ, ನಿಶ್ಚಿತಾಪಿ-ಒಡೆಯನಿಂದಲೂ, ಮಂತ್ರಿಯಿಂದಲೂ ನಿಶ್ಚಯಿಸಲ್ಪಟ್ಟದಾದರೂ, ಬುದ್ಧಿಃ - ಬುದ್ಧಿಯು, ವಿಕ್ಲಬಂ - ಅವಿವೇಕಿಯಾದ, ದೂತಂ - ದೂತನನ್ನು, ಆಸಾದ್ಯ - ಹೊಂದಿ, ನಶೋಭತೇ - ಪ್ರಕಾಶಿಸುವುದಿಲ್ಲ, ಹಿ - ಯಾವ ಕಾರಣದಿಂದ, ಪಂಡಿ....ನಃ-ಸಾವೇ ಪಂಡಿತರೆಂದು ಭಾವಿಸಿದ, ದೂತಾಃ-ದೂತರು, ಕಾರ್ಯಾಣಿ-ರಾಜಕಾರ್ಯಗಳನ್ನು, ಘಾತಯಂತಿ - ಕೆಡಿಸುತ್ತಾರೆಯೋ. ॥೪೦॥ ಕಾರ್ಯಂ - ರಾಮಕಾರ್ಯವು, ಕಥಂ - ಹೇಗೆ, ನವಿನಶ್ಯೇತ್ - ನಷ್ಟವಾಗದಿರುವದೋ, (ಮೇ - ನನಗೆ), ವೈಕ್ಲಬ್ಯಂ - ಅವಿವೇಕಿತನವು, ಕಥಂ - ನಭವೇತ್ .- ಆಗದಿರುವದೋ, ಸಮುದ್ರಸ್ಯ - ಕಡಲಿನ, ಲಂಘನಂಚ - ದಾಟುವಿಕೆಯೂಕೂಡ, ಕಥಂನು - ಹೇಗೆ, ವೃಥಾ - ವ್ಯರ್ಥವು, ನಭವೇತ್ - ಆಗದಿರುವದೋ, (ತಥಾ - ಹಾಗೆ, ಕರ್ತವ್ಯಂ - ಮಾಡತಕ್ಕುದು.) ॥ ೪೧ ॥ ಮಯಿತು - ನಾನಾದರೆ, ರಕ್ಷೋಭಿಃ - ದೈತ್ಯರಿಂದ, ದೃಷ್ಟೇ - ಕಾಣಲ್ಪಟ್ಟವನಾಗಲು, ವಿದಿತಾತ್ಮನಃ - ಆತ್ಮಜ್ಞಾನಿಯಾದ, ರಾವಣಾನರ್ಥಂ - ರಾವಣನಿಗೆ ಅನಿಷ್ಟವನ್ನು, ಇಚ್ಛತಃ - ಬಯಸುತ್ತಿರುವ, ರಾಮಸ್ಯ - ಶ್ರೀರಾಮನ, ಇದಂಕಾರ್ಯಂ - ಸೀತಾನ್ವೇಷಣ ರೂಪವಾದ ಈ ಕಾರ್ಯವು, ವ್ಯರ್ಥಂ - ವ್ಯರ್ಥವು, ಭವೇತ್ - ಆದೀತು. ॥೪೨॥ ರಾಕ್ಷಸೈಃ - ರಕ್ಕಸರಿಂದ, ಅವಿಜ್ಞಾತೇನ - ತಿಳಿಯಲ್ಪಡದಿರುವ, ರಾಕ್ಷಸರೂಪೇಣಾಪಿ - ರಾಕ್ಷಸರೂಪದಿಂದಲೂ ಕೂಡ, ಕ್ವಚಿತ್-

ಹೋಗುವುದು. ಆದಕಾರಣ ನಾನು ಯಾರಿಗೂ ಕಾಣಿಸಿಕೊಳ್ಳದೆ ಏಕಾಂತವಾಗಿ ಸೀತೆಯನ್ನು ಕಾಣುವ ಬಗೆ ಹೇಗೆ? ಇದಕ್ಕೆ ಉಪಾಯವೇನು? ಸುಲಭಸಾಧ್ಯವಾದ ಕೆಲಸಗಳು ಸಹ ಕಾಲದೇಶವರ್ತಮಾನಗಳ ಅರಿವೂ, ಮುಂದಾಲೋಚನೆಯೂ ಇಲ್ಲದ ದೂತನ ವಶವಾದರೆ, ಸೂರ್ಯನುದಯಿಸಿದೊಡನೆಯೇ ಕತ್ತಲೆಯು ಚದುರಿಹೋಗುವಂತೆ ಭಗ್ನವಾಗಿ ಹೋಗುವವು. **ಯುಕ್ತಾಯುಕ್ತಗಳನ್ನು ಚೆನ್ನಾಗಿ ಯೋಚಿಸಿ ನಿಶ್ಚಯಿಸಿದ ಕಾರ್ಯವಾದರೂ, ಅವಿವೇಕಿಯಾದ ದೂತನಿಯೋಜನೆಯಿಂದ ಕೆಟ್ಟುಹೋಗುತ್ತದೆ. ಏಕೆಂದರೆ, ದೂತರು ತಾವು ಪಂಡಿತರಲ್ಲದಿದ್ದರೂ ಪಂಡಿತರೆಂಬ ಗರ್ವದಿಂದ ಯುಕ್ತಾಯುಕ್ತಗಳನ್ನು ಚೆನ್ನಾಗಿ ಆಲೋಚಿಸದೆ ಕಾರ್ಯವನ್ನು ಹಾಳುಮಾಡುತ್ತಾರೆ. ॥ ೩೬-೪೦ ॥** ಆದುದರಿಂದ ಈಗ ನಾನು ಯಾವ ಮಾರ್ಗವನ್ನವಲಂಬಿಸಿದರೆ ಶ್ರೀರಾಮನ ಕಾರ್ಯವು ಕೆಟ್ಟು ನನಗೆ ಅವಿವೇಕಿಯೆಂಬ ಹೆಸರು ಬಾರದಿರುವುದೋ, ಮಹಾ ಪ್ರಯತ್ನದಿಂದ ಸಾಧಿಸಿದ ಸಮುದ್ರೋಲ್ಲಂಘನವು ನಿಷ್ಪ್ರಯೋಜನವಾಗಲಾರದೋ ಆ ಮಾರ್ಗವಾವುದು? ಈ ಲಂಕೆಯನ್ನು ಪ್ರವೇಶಿಸುವಾಗ ರಾಕ್ಷಸರಾರಾದರೂ ನನ್ನನ್ನುನೋಡಿದುದೇ ಆದರೆ ವಿದಿತಾತ್ಮನೂ, ರಾವಣನ ಅಪಜಯವನ್ನೇ ಕೋರುತ್ತಿರುವವನೂ ಆದ ಶ್ರೀರಾಮಮೂರ್ತಿಯ ಕಾರ್ಯವು ಕೆಡುತ್ತದೆ.

ರಾಕ್ಷಸರೂಪೇಣ ಕಿಮುತಾನ್ಯೇನ ಕೇನಚಿತ್ ‖ ೪೩ ‖ ವಾಯುರಪ್ಯತ್ರ ನಜ್ಞಾತ
ಶ್ಚರೇದಿತಿ ಮತಿರ್ಮಮ । ನಹ್ಯಸ್ತ್ಯವಿದಿತಂ ಕಿಂಚಿದ್ರಾಕ್ಷಸಾನಾಂ ಬಲೀಯಸಾಂ
‖೪೪‖ ಇಹಾಽಹಂ ಯದಿ ತಿಷ್ಠಾಮಿ ಸ್ವೇನ ರೂಪೇಣ ಸಂವೃತಃ । ವಿನಾಶಮುಪಯಾ
ಸ್ಯಾಮಿ ಭರ್ತುರರ್ಥಶ್ಚ ಹೀಯತೇ ‖ ೪೫ ‖ ತದಹಂ ಸ್ವೇನ ರೂಪೇಣ ರಜನ್ಯಾಂ
ಹ್ರಸ್ವತಾಂ ಗತಃ । ಲಂಕಾಮಧಿಪತಿಷ್ಯಾಮಿ ರಾಘವಸ್ಯಾರ್ಥಸಿದ್ಧಯೇ ‖ ೪೬ ‖ ರಾವ
ಣಸ್ಯ ಪುರೀಂ ರಾತ್ರೌ ಪ್ರವಿಶ್ಯ ಸುದುರಾಸದಾಂ । ವಿಚಿನ್ವನ್ ಭವನಂ ಸರ್ವಂ

ಯಾವ ಸ್ಥಳದಲ್ಲಿಯೂ, ಸ್ಥಾತುಂ - ನಿಲ್ಲಲು, ನಶಕ್ಯಂಹಿ - ಸಾಧ್ಯವಲ್ಲವಷ್ಟೆ, ಕೇನಚಿತ್ - ಯಾವು ದಾದರೂ, ಅನ್ಯೇನ - ಇತರರೂಪದಿಂದ, ಕಿಮುತ - ಏನು ಹೇಳತಕ್ಕುದು. ‖ ೪೩ ‖ ಹಿ - ಯಾವ ಕಾರಣದಿಂದ, ಬಲೀಯಸಾಂ - ಬಲಿಷ್ಠರಾದ, ರಾಕ್ಷಸಾನಾಂ - ರಾಕ್ಷಸರಿಗೆ, ಅವಿದಿತಂ - ತಿಳಿಯ ಲ್ಪಡದಿರುವ, ಕಿಂಚಿದಪಿ - ಯಾವದೊಂದೂ, ನ - ಇಲ್ಲವೋ, ತತ್ - ಆ ಕಾರಣದಿಂದ, ಅತ್ರ - ಈ ಲಂಕಾಪಟ್ಟಣದಲ್ಲಿ, ವಾಯುಃ - ವಾಯುವು, ನಜ್ಞಾತಃ - ತಿಳಿಯಲ್ಪಡದೆ, ಚರೇದಪಿ - ಸಂಚರಿಸ ಲಾರನು, ಇತಿ - ಹೀಗೆಂದು, ಮಮಮತಿಃ - ನನ್ನಬುದ್ಧಿಯು. ‖೪೪‖ ಇಹ - ಈ ಸ್ಥಳದಲ್ಲಿ, ಅಹಂ- ನಾನು, ಸ್ವೇನ - ಸ್ವಕೀಯವಾದ, ರೂಪೇಣ - ಆಕಾರದಿಂದ, ಸಂವೃತಃ - ಕೂಡಿ, ತಿಷ್ಠಾಮಿಯದಿ- ನಿಂತಿದ್ದರೆ, ವಿನಾಶಮಪಿ - ನಾಶನವನ್ನೂ ಕೂಡ, ಯಾಸ್ಯಾಮಿ - ಹೊಂದುವೆನು, ಭರ್ತುಃ - ಸ್ವಾಮಿಯಾದ ಶ್ರೀರಾಮನ, ಅರ್ಥಶ್ಚ - ಪ್ರಯೋಜನವೂ ಸಹ, ಹೀಯತೇ - ನಷ್ಟವಾಗುವದು. ‖೪೫‖ ತತ್ - ಆ ಕಾರಣದಿಂದ, ಅಹಂ - ನಾನು, ರಾಘವಸ್ಯ - ಶ್ರೀರಾಮನ, ಅರ್ಥಸಿದ್ಧಯೇ - ಪ್ರಯೋಜನದ ಸಿದ್ಧಿಗೋಸ್ಕರ, ಹ್ರಸ್ವತಾಂ - ಸೂಕ್ಷ್ಮಭಾವವನ್ನು ಹೊಂದಿ, ಸ್ವೇನರೂಪೇಣ - ಸ್ವಸ್ವರೂಪದಿಂದಲೇ, ರಜನ್ಯಾಂ - ರಾತ್ರಿಯಲ್ಲಿ, ಲಂಕಾಂ - ಲಂಕಾಪಟ್ಟಣವನ್ನು, ಅಧಿಪತಿಷ್ಯಾಮಿ - ಹೊಗುವೆನು. ‖೪೬‖ ಸುದುರಾಸದಾಂ - ಹೊಂದಲಶಕ್ಯವಾದ, ರಾವಣಸ್ಯ - ರಾವಣನ, ಪುರೀಂ - ಪಟ್ಟಣವನ್ನು, ರಾತ್ರೌ - ರಾತ್ರಿಯಲ್ಲಿ, ಪ್ರವಿಶ್ಯ - ಪ್ರವೇಶಿಸಿ, ಸರ್ವಂ - ಸಮಸ್ತವಾದ, ಭವನಂ - ಮನೆಗಳನ್ನು, ವಿಚಿನ್ವನ್ - ಹುಡುಕುತ್ತ, ಜನಕಾತ್ಮಜಾಂ - ಸೀತೆಯನ್ನು, ದ್ರಕ್ಷ್ಯಾಮಿ - ನೋಡು

ನಾನು ರಾಕ್ಷಸರೂಪವನ್ನು ಧರಿಸಿದರೂ ಈ ಲಂಕಾಪಟ್ಟಣದಲ್ಲಿ ಯಾವ ಪ್ರದೇಶದಲ್ಲಿಯೂ ಇರಲಾಗುವುದಿಲ್ಲವೆಂದಮೇಲೆ ಬೇರೊಂದು ರೂಪದಿಂದಿರಲು ಎಷ್ಟುಮಾತ್ರಕ್ಕೂ ಸಾಧ್ಯ ವಾಗುವುದೇ ಇಲ್ಲವು. ಸಾಕ್ಷಾದ್ವಾಯುದೇವನೂ ರಾಕ್ಷಸರಿಗೆ ತಿಳಿಯದೆ ಈ ಪಟ್ಟಣ ದಲ್ಲಿ ಸಂಚರಿಸಲಾರನೆಂದು ತೋರುತ್ತದೆ. ಇಲ್ಲಿರುವ ಮಹಾ ಬಲಿಷ್ಠರಾದ ರಾಕ್ಷಸರಿಗೆ ತಿಳಿಯದಿರುವುದಾವುದೂ ಇಲ್ಲವು. ಆದುದರಿಂದ ಈಗ ನಾನು ಇದೇ ರೂಪದಿಂದಿಲ್ಲಿದ್ದು ದಾದರೆ ನಾಶವನ್ನೈದುವುದಲ್ಲದೆ ನನ್ನ ಸ್ವಾಮಿಯಾದ ಶ್ರೀರಾಮನ ಕಾರ್ಯವೂ ಕೆಟ್ಟು ಹೋಗುವುದು. ‖ ೪೧–೪೫ ‖ ಆದಕಾರಣ ಶ್ರೀರಾಮನ ಕಾರ್ಯಸಿದ್ಧಿಗಾಗಿ ಈ ವಾನರ ರೂಪವನ್ನು ಕಿರಿದುಮಾಡಿಕೊಂಡು ರಾತ್ರಿಯಲ್ಲಿ ಲಂಕೆಯನ್ನು ಪ್ರವೇಶಿಸುತ್ತೇನೆ. ಬಹು ದುರ್ಗಮವಾದ ರಾವಣಾಸುರನ ಈ ಪಟ್ಟಣವನ್ನು ಯಾರೊಬ್ಬರಿಗೂ ತಿಳಿಯದಂತೆ ಪ್ರವೇಶಿಸುವುದುಮಾತ್ರವಲ್ಲದೆ ಶ್ರೀರಾಮಪತ್ನಿಯಾದ ಸೀತಾದೇವಿಯನ್ನು ಎಲ್ಲೆಡೆಗಳಲ್ಲಿಯೂ ಹುಡುಕುತ್ತೇನೆ ” ಎಂದು ಯೋಚಿಸಿದನು. ಹೀಗೆ ಮಹಾ ಪರಾಕ್ರಮಶಾಲಿಯಾದ ಹನುಮಂ

ದ್ರಕ್ಷ್ಯಾಮಿ ಜನಕಾತ್ಮಜಾಂ" ॥ ೪೭ ॥ ಇತಿ § ಸಂಚಿಂತ್ಯ ಹನುಮಾನ್ ಸೂರ್ಯಸ್ಯಾಸ್ತಮಯಂ ಕಪಿಃ । ಆಚಕಾಂಕ್ಷೇ ತದಾ ವೀರೋ ವೈದೇಹ್ಯಾ ದರ್ಶನೋತ್ಸುಕಃ ॥ ೪೮ ॥ ಸೂರ್ಯೇಚಾಸ್ತಂಗತೇ ರಾತ್ರೌ ದೇಹಂ ಸಂಕ್ಷಿಪ್ಯ ಮಾರುತಿಃ । ಪೃಷದಂಶಕಮಾತ್ರಸ್ಸನ್ ಬಭೂವಾದ್ಭುತದರ್ಶನಃ ॥ ೪೯ ॥ ಪ್ರದೋಷಕಾಲೇ ಹನುಮಾಂಸ್ತೂರ್ಣಮುತ್ಪ್ಲುತ್ಯ ವೀರ್ಯವಾನ್ । ಪ್ರವಿವೇಶ ಪುರೀಂ ರಮ್ಯಾಂ ಸುವಿಭಕ್ತಮಹಾಪಥಾಂ ॥ ೫೦ ॥ ಪ್ರಾಸಾದಮಾಲಾವಿತತಾಂ ಸ್ತಂಭೈಃ ಕಾಂಚನ ‡ ರಾಜತೈಃ । ಶಾತಕುಂಭಮಯೈ ರ್ಜಾಲೈ ರ್ಗಂಧರ್ವ ನಗರೋಪಮಾಂ ॥ ೫೧ ॥ ಸಪ್ತಭೌಮಾಷ್ಟ

ವೆನು. ॥೪೭॥ ತದಾ - ಆ ಸಮಯದಲ್ಲಿ, ವೀರಃ - ವೀರನಾದ, ಕಪಿಃ - ವಾನರನಾದ, ಹನುಮಾನ್ - ಹನುಮಂತನು, ಇತಿ - ಈ ರೀತಿಯಾಗಿ, ಸಂಚಿಂತ್ಯ - ಯೋಚಿಸಿ, ವೈದೇಹ್ಯಾಃ - ಸೀತಾದೇವಿಯ, ದರ್ಶನೋತ್ಸುಕಃ - ನೋಡುವಿಕೆಯಲ್ಲಿ ಉತ್ಕಂಠೆಯುಳ್ಳವನಾಗಿ, ಸೂರ್ಯಸ್ಯ - ಸೂರ್ಯನ, ಅಸ್ತಮಯಂ - ಅಸ್ತಮಾನವನ್ನು, ಆಚಕಾಂಕ್ಷೇ - ಬಯಸಿದನು. ॥೪೮॥ ಸೂರ್ಯೇಚ - ಸೂರ್ಯನೂ ಕೂಡ, ಅಸ್ತಂಗತೇ - ಅಸ್ತಮಿಸಲು, ರಾತ್ರೌ - ರಾತ್ರಿಯಲ್ಲಿ, ಮಾರುತಿಃ - ವಾಯುಪುತ್ರನು, ದೇಹಂ-ಶರೀರವನ್ನು, ಸಂಕ್ಷಿಪ್ಯ-ಸಣ್ಣದಾಗಿಸಿಕೊಂಡು, ಪೃಷ ...ಸ್ಸನ್-ಬೆಕ್ಕಿನ ಪ್ರಮಾಣವುಳ್ಳವನಾಗಿ, ಅದ್ಭುತದರ್ಶನಂ - ಆಶ್ಚರ್ಯಕರವಾದ ನೋಟವುಳ್ಳವನು, ಬಭೂವ - ಆದನು. ॥೪೯॥ ವೀರ್ಯವಾನ್-ಪರಾಕ್ರಮಿಯಾದ, ಹನುಮಾನ್ - ಆಂಜನೇಯನು, ಪ್ರದೋಷಕಾಲೇ - ಸಂಜೆಯಲ್ಲಿ, ತೂರ್ಣಂ - ಜಾಗ್ರತೆಯಾಗಿ, ಉತ್ಪ್ಲುತ್ಯ - ಹಾರಿ, ಸುವಿ....ಥಾಂ - ಚನ್ನಾಗಿ ವಿಂಗಡಿಸಿದ ದೊಡ್ಡ ಬೀದಿಯುಳ್ಳ. ರಮ್ಯಾಂ-ಸೊಗಸಾದ, ಪುರೀಂ-ಲಂಕಾಪಟ್ಟಣವನ್ನು, ಪ್ರವಿವೇಶ-(ಗೋ) ಪ್ರವೇಶಿಸಲುಪಕ್ರಮಿಸಿದನು, ॥ ೫೦ ॥ ಸಃ - ಆ ಆಂಜನೇಯನು, ಪ್ರಾಸಾ....ತಾಂ - ಅರಮನೆಗಳ ಪಙ್ಕ್ತಿಗಳಿಂದ ವಿಸ್ತಾರವಾದ, ಕಾಂಚನರಾಜತೈಃ - ಸುವರ್ಣಮಯವಾದ, ಬೆಳ್ಳಿಯವಿಕಾರಗಳಾದ, ಸ್ತಂಭೈಃ - ಕಂಭಗಳಿಂದಲೂ, ಶಾತ....ಯೈಃ - ಭಂಗಾರದ, ಜಾಲೈಃ - ಕಿಟಕಿಗಳಿಂದಲೂ, (ಉಪಲಕ್ಷಿತಾಂ - ಕೂಡಿರುವ), ಗಂಧ....ಮಾಂ - ನಾನಾರತ್ನಮಯವಾದ ಗೋಪುರಪ್ರಾಸಾದಿಯುಕ್ತವಾದ ಪಟ್ಟಣದಂತೆ ಅಂತರಿಕ್ಷದಲ್ಲಿ ಕಾಣಲ್ಪಡುವ ಚಿತ್ರದ, ಉಪಮಾಂ - ಸಾಮ್ಯವುಳ್ಳ, ಸ್ಫಾಟಿ....ರ್ಣೈಃ - ಸ್ಫಟಿಕಮಣಿಗಳಿಂದ

ತನು ಅನೇಕ ವಿಧವಾಗಿ ಆಲೋಚಿಸಿ ಅನುಷ್ಠಿಸಬೇಕಾದ ಕಾರ್ಯವನ್ನು ನಿಶ್ಚಯಿಸಿಕೊಂಡು ಸೀತೆಯನ್ನು ಕಾಣಬೇಕೆಂಬ ಕುತೂಹಲದಿಂದ ಸೂರ್ಯಾಸ್ತಮಯ ಕಾಲವನ್ನೆದುರು ನೋಡುತ್ತಿದ್ದನು. ಸೂರ್ಯಾಸ್ತಮಾನವಾದನಂತರ ಆ ಮಾರುತಿಯು ತನ್ನ ಶರೀರವನ್ನು ಕಿರಿದುಮಾಡಿ, ಮಾರ್ಜಾಲಮಾತ್ರರೂಪವುಳ್ಳವನಾಗಿ ನೋಡಲು ಅತ್ಯಾಶ್ಚರ್ಯಕರವಾಗಿ ತೋರುತ್ತಿದ್ದನು. ಮಹಾ ಪರಾಕ್ರಮಶಾಲಿಯಾದ ಆತನು ಸೂರ್ಯನಸ್ತಮಿಸಿ ಕತ್ತಲಾಗುತ್ತಲೇ ಆ ಲಂಬಪರ್ವತ ಶಿಖರದಿಂದ ಮೇಲಕ್ಕೆ ಹಾರಿ, ಸೊಗಸಾಗಿ ರಚಿಸಿರುವ ರಾಜಬೀದಿಗಳುಳ್ಳ ಆ ಲಂಕಾನಗರವನ್ನು ಪ್ರವೇಶಿಸಲುಪಕ್ರಮಿಸಿದನು. ॥ ೪೬-೫೦ ॥ ಆಗಲಾತನು ಅನೇಕ ಅಂತಸ್ತುಗಳುಳ್ಳ ಪ್ರಾಸಾದಗಳಿಂದಲೂ ಬೆಳ್ಳಿಭಂಗಾರಗಳ ಸ್ಥಂಭಗಳಿಂದಲೂ ಕೂಡಿ ಚಿನ್ನದ ಗವಾಕ್ಷಗಳನ್ನೊಳಗೊಂಡು ಗಂಧರ್ವಪುರದಂತಿರುವುದಾಗಿಯೂ,

§ "ನಿಶ್ಚಿತ್ಯ" ತಿ. ಪಾ. ‡ "ಸನ್ನಿಭೈಃ" ತಿ. ರಾ. ಪಾ.

ಭೌಮೈಶ್ಚ ಸ ದದರ್ಶ ಮಹಾಪುರೀಂ । * ತಲೈಸ್ಸ್ಫಾಟಿಕಸಂಕೀರ್ಣೈಃ ಕಾರ್ತಸ್ವರ ವಿಭೂಷಿತೈಃ ॥ ೫೨ ॥ ¶ ವೈಡೂರ್ಯಮಣಿ ಚಿತ್ರೈಶ್ಚ ಮುಕ್ತಾ ಜಾಲ ವಿಭೂಷಿತೈಃ । ‡ ತಲೈಶ್ಶುಶುಭಿರೇ ತಾನಿ ಭವನಾನ್ಯತ್ರ ರಕ್ಷಸಾಂ ॥ ೫೩ ॥ ಕಾಂಚನಾನಿ ವಿಚಿತ್ರಾಣಿ ತೋರಣಾನಿ ಚ ರಕ್ಷಸಾಂ । ಲಂಕಾಮುದ್ಯೋತಯಾಮಾಸುಃ ಸರ್ವತಸ್ಸಮಲಂಕೃತಾಂ ॥ ೫೪ ॥ ಅಚಿಂತ್ಯಾ ಮದ್ಭುತಾಕಾರಾಂ ದೃಷ್ಟ್ವಾ ಲಂಕಾಂ ಮಹಾಕಪಿಃ । ಆಸೀದ್ವಿಷಣ್ಣೋ ಹೃಷ್ಟಶ್ಚ ವೈದೇಹ್ಯಾ ದರ್ಶನೋತ್ಸುಕಃ ॥ ೫೫ ॥ $ ಸಪಾಂಡುರೋದ್ವಿದ್ಧವಿಮಾನಮಾಲಿನೀಂ ಮಹಾರ್ಹಜಾಂಬೂನದ ಜಾಲತೋರಣಾಂ । ಯಶಸ್ವಿನೀಂ

ಕೂಡಿರುವ, ಕಾರ್ತ....ತೈಃ - ಸುವರ್ಣದಿಂದ ಅಲಂಕೃತವಾದ, ತಲೈಃ - ಸಮಭೂಮಿಗಳಿಂದಲೂ, ಉಪಲಕ್ಷಿತೈಃ-ಯುಕ್ತವಾದ, ಸಪ್ತ....ಶ್ಚ-ಏಳಂತಸ್ತುಗಳುಳ್ಳ, ಎಂಟಂತಸ್ತುಗಳುಳ್ಳ, ಪ್ರಾಸಾದೈಶ್ಚ-ಅರಮನೆಗಳಿಂದಲೂ, ಉಪಲಕ್ಷಿತಾಂ - ಕೂಡಿರುವ, ಮಹಾಪುರೀಂ - ದೊಡ್ಡಪಟ್ಟಣವನ್ನು, ದದರ್ಶ-ಕಂಡನು. ॥ ೫೧-೫೨ ॥ ಅತ್ರ - ಈ ಲಂಕಾಪಟ್ಟಣದಲ್ಲಿ, ರಕ್ಷಸಾಂ - ರಕ್ಕಸರ, ತಾನಿಭವನಾನಿ - ಆ ಮನೆಗಳು, ವೈಡೂ....ತ್ರೈ - ವೈಡೂರ್ಯಮಣಿಗಳಿಂದ ಆಶ್ಚರ್ಯಕರಗಳಾದ, ಮುಕ್ತಾ....ತೈಃ - ಮುತ್ತುಗಳ ಸಮುದಾಯಗಳಿಂದ ಅಲಂಕರಿಸಲ್ಪಟ್ಟ. ತಲೈಃ - ಪ್ರದೇಶಗಳಿಂದ, ಶುಶುಭಿರೇ - ಹೊಳೆಯುತ್ತಿದ್ದವು. ॥ ೫೩ ॥ ಕಾಂಚನಾನಿ-ಬಂಗಾರದ, ವಿಚಿತ್ರಾಣಿ-ನಾನಾಬಣ್ಣಗಳುಳ್ಳ, ರಕ್ಷಸಾಂ-ರಾಕ್ಷಸರ, ತೋರಣಾನಿ - ತಲಬಾಗಿಲುಗಳು, ಸರ್ವತಃ - ಎಲ್ಲೆಡೆಗಳಲ್ಲಿಯೂ, ಸಮಲಂಕೃತಾಂ - ಅಲಂಕರಿಸಲ್ಪಟ್ಟ, ಲಂಕಾಂ - ಲಂಕಾಪಟ್ಟಣವನ್ನು, ಉದ್ಯೋ....ಸುಃ - ಬೆಳಗಿಸುತ್ತಿದ್ದವು. ॥೫೪॥ ಸಮಹಾಕಪಿಃ - ಆ ಆಂಜನೇಯನು, ಅಚಿಂತ್ಯಾಂ - ಯೋಚಿಸಲಶಕ್ಯವಾದ, ಅದ್ಭುತಾಕಾರಾಂ - ಆಶ್ಚರ್ಯಕರವಾದ ಆಕೃತಿಯುಳ್ಳ, ಪಾಂಡು....ನೀಂ - ಬಿಳುಪಾದ ಉನ್ನತಗಳಾದ ಪ್ರಾಸಾದಗಳ ಸಾಲುಗಳುಳ್ಳ, ಮಹಾ....ಣಾಂ - ಶ್ರೇಷ್ಠವಾದ ಬಂಗಾರದ ಗವಾಕ್ಷಿಗಳುಳ್ಳ ತಲಬಾಗಿಲುಗಳುಳ್ಳ, ರಾವ....ತಾಂ - ರಾವಣಾಸುರನ ಭುಜಗಳಿಂದ ಸಂರಕ್ಷಿತವಾದ, ಭೀಮಬಲೈಃ - ಭಯಂಕರವಾದ

ಏಳೆಂಟಂತಸ್ತುಗಳ ಉಪ್ಪರಿಗೆಗಳನ್ನೊಳಕೊಂಡು ಸ್ಫಟಿಕಶಿಲೆಗಳಿಂದ ಕಟ್ಟಿ ಸುವರ್ಣಮಯವಾಗಿರುವ ತಲಪ್ರದೇಶಗಳಿಂದ ಸುಂದರವಾಗಿರುವ ಆ ಪಟ್ಟಣವನ್ನು ಕಂಡನು. ಅಲ್ಲದೆ ಆ ಲಂಕಾನಗರದಲ್ಲಿರುವ ಮತ್ತೆ ಕೆಲವು ರಾಕ್ಷಸ ಭವನಗಳು ವೈಡೂರ್ಯಮಣಿಗಳಿಂದ ಚಿತ್ರಿತವಾಗಿಯೂ ಮುತ್ತುರತ್ನಗಳಿಂದಲಂಕೃತವಾದ ಭೂಪ್ರದೇಶವುಳ್ಳವಾಗಿಯೂ ಪ್ರಕಾಶಿಸುತ್ತಿದ್ದವು. ಅವುಗಳ ಹೊರಬಾಗಿಲುಗಳು ಸುವರ್ಣಮಯಗಳಾಗಿ ವಿವಿಧ ಚಿತ್ರಗಳಿಂದ ಚಿತ್ರಿತಗಳಾಗಿ ಎತ್ತ ನೋಡಿದರೂ ಬಹು ಸುಂದರವಾಗಿ ಶೃಂಗರಿಸಲ್ಪಟ್ಟದ್ದುದರಿಂದ ಆ ಪಟ್ಟಣಕ್ಕೆ ಮತ್ತಷ್ಟುಕಾಂತಿಯನ್ನುಂಟುಮಾಡುತ್ತಿದ್ದವು.॥೫೧–೫೪॥ ಇಷ್ಟೆಯಲ್ಲದೆ ಹೀಗೆಂದು ಯೋಚಿಸಲಸಾಧ್ಯವಾಗಿ ಮಹದಾಶ್ಚರ್ಯಕರವಾದ ರೂಪವುಳ್ಳದಾಗಿ ಬಹು ಬೆಳ್ಳಗೆ ಬೆಳಗುತ್ತ ಎತ್ತರವಾದ ಉಪ್ಪರಿಗೆಗಳ ಸಾಲುಗಳನ್ನೊಳಗೊಂಡು ಪುಟಪಾಕಶೋಧಿತವಾದ ಸುವರ್ಣದಿಂದ ಮಾಡಿದ ಜಾಲಂದ್ರಗಳು, ಹೊರಬಾಗಿಲುಗಳು, ಅವುಗಳಿಗೆ ಕಟ್ಟಿರುವ ತೋರಣ

---

* " ಸ್ಥಲೈಃ " ತಿ. ಪಾ. ¶ ಈ ಪಾದವು ಗೋ. ಪಾ. ದಲ್ಲಿ ಅಧಿಕ. ‡ " ತೈಸ್ತ್ರೈಃ " ಮ. ತಿ. ಪಾ.
$ " ಸಪಾಂಡುರಾವಿದ್ಧ " ತಿ. ಪಾ.

ರಾವಣಬಾಹುಪಾಲಿತಾಂ ಕ್ಷಪಾಚರೈರ್ಭೀಮಬಲೈ§ಸ್ಸಮಾವೃತಾಂ ॥ ೫೬ ॥
ಚಂದ್ರೋಽಪಿ ಸಾಚಿವ್ಯಮಿವಾಸ್ಯ ಕುರ್ವಂಸ್ತಾರಾಗಣೈರ್ಮಧ್ಯಗತೋ ವಿರಾಜನ್ ।
ಜ್ಯೋತ್ಸ್ನಾವಿತಾನೇನ ವಿತತ್ಯ ಲೋಕಮುತ್ತಿಷ್ಠತೇ ನೈಕ¶ಸಹಸ್ರರಶ್ಮಿಃ ॥ ೫೭ ॥

ಶಕ್ತಿಯುಳ್ಳ, ಕ್ಷಪಾಚರೈಃ - ರಕ್ಕಸರಿಂದ, ಸಮಾವೃತಾಂ - ಕೂಡಿರುವ, ಲಂಕಾಂ - ಲಂಕೆಯನ್ನು, ದೃಷ್ಟ್ವಾ - ಕಂಡು, ವೈದೇಹ್ಯಾಃ - ಸೀತಾದೇವಿಯ, ದರ್ಶನೋತ್ಸುಕಃ - ನೋಡುವಿಕೆಯಲ್ಲಿ ಉತ್ಕಂಠೆಯುಳ್ಳವನಾಗಿ, ವಿಷಣ್ಣಃ - ದುಃಖಿತನೂ, ಹೃಷ್ಟಶ್ಚ - ಸಂತೋಷಯುಕ್ತನೂ, ಆಸೀತ್ - ಆದನು. ||೫೫-೫೬|| ಜ್ಯೋತ್ಸ್ನಾ....ನ - ಬೆಳದಿಂಗಳ ಸಮೂಹದಿಂದ, ಲೋಕಂ - ಲೋಕವನ್ನು, ವಿತತ್ಯ - ವ್ಯಾಪಿಸಿ, ನೈಕ....ಶ್ಮಿಃ-ಸಹಸ್ರ ಕಿರಣಗಳುಳ್ಳ, ಚಂದ್ರೋಽಪಿ-ಚಂದ್ರನೂ, ಅಸ್ಯ-ಈ ಆಂಜನೇಯನಿಗೆ, ಸಾಚಿವ್ಯಂ - ಸಹಾಯವನ್ನು, ಕುರ್ವನ್ನಿವ - ಮಾಡುವವನಂತೆ, ಮಧ್ಯಗತಃ - ನಭಮಧ್ಯಗತನಾಗಿ, ತಾರಾಗಣೈಃ-ನಕ್ಷತ್ರಗಳ ಸಮುದಾಯದಿಂದ, ವಿರಾಜನ್ ಪ್ರಕಾಶಿಸುತ್ತ, ಉತ್ತಿಷ್ಠತೇ-ಉದಿಸಿದನು.

ಗಳು ಇವುಗಳಿಂದ ಮನೋಹರವಾಗಿ ರಾವಣನ ಬಾಹುಬಲದಿಂದ ಪರಿಪಾಲಿತವಾಗಿ ಭಯಂಕರ ಪರಾಕ್ರಮಿಗಳಾದ ರಾಕ್ಷಸರೆಲ್ಲೆಡೆಯಲ್ಲಿಯೂ ತುಂಬಿರುವ ಆ ಲಂಕಾಪಟ್ಟಣವನ್ನು ಕಪಿವೀರನಾದ ಹನುಮಂತನು ಕಂಡು ವಾನರರಾರೂ ಅದನ್ನು ಸ್ವಾಧೀನಪಡಿಸಿಕೊಳ್ಳಲಾರರೆಂಬ ವ್ಯಸನವನ್ನೂ, ಸೀತಾದೇವಿಯನ್ನು ಕಾಣುವೆನೆಂಬ ಮನಸ್ಸಂತೋಷವನ್ನೂ ಹೊಂದಿದನು. ಆ ಸಮಯದಲ್ಲಿ ಚಂದ್ರನು ಮಹಾ ಪ್ರಕಾಶಮಾನವಾದ ತನ್ನ ಕಿರಣಸಮೂಹಗಳಿಂದ ಜಗತ್ತೆಲ್ಲವನ್ನೂ ಬೆಳಗಿಸುತ್ತ ತಾನೂ ಆ ಹನುಮಂತನಿಗೆ ಸಹಾಯ ಮಾಡಲು ಬಂದವನಂತೆ ತೋರುತ್ತ ನಕ್ಷತ್ರಸಮೂಹಗಳ ನಡುವೆ ಕಾಣಿಸಿಕೊಂಡನು.

§ "ಸ್ಸುಪಾಲಿತಾಂ" ತಿ. ಪಾ.

¶ ಇಲ್ಲಿ, "ಅನೇಕ ಸಹಸ್ರರಶ್ಮಿಃ" ಎಂಬ ಪದದಿಂದ ಪೂರ್ಣಚಂದ್ರನೆಂದು ಅರ್ಥವಾಗುವುದು. ಇಲ್ಲಿ "ಚಂದ್ರನು ಖಮಧ್ಯಗತನಾಗಿ ಉದಿಸುವುದು ಅಷ್ಟಮಿಯ ದಿನ; ಅಂದು ಚಂದ್ರನಿಗೆ ಪೂರ್ಣತ್ವವಿರುವುದಿಲ್ಲ. ಪೂರ್ಣಚಂದ್ರನು ಖಮಧ್ಯಗತನಾಗಿ ಪ್ರದೋಷದಲ್ಲಿ ಉದಿಸುವುದಿಲ್ಲ" ಎಂಬ ಸಂದೇಹವು ಬರುವುದು.

ಈ ಸಂದೇಹಕ್ಕೆ ಕಾರಣವಿಲ್ಲವು. ಶುಕ್ಲೈಕಾದಶಿಯ ದಿನ ಖಮಧ್ಯ ಸಮೀಪದಲ್ಲಿ ಚಂದ್ರೋದಯವಾಗುತ್ತದೆ. "ಆಗಲೂ ಚಂದ್ರನಿಗೆ ಪೂರ್ಣತ್ವವಿರುವುದಿಲ್ಲವಲ್ಲ" ಎಂದು ಆಕ್ಷೇಪಿಸಬಹುದು. ಆದರೆ ಇಲ್ಲಿನ "ಅನೇಕ ಸಹಸ್ರರಶ್ಮಿಃ" ಎಂಬ ಪದಕ್ಕೆ ಪೂರ್ಣ ಸಮಾನನೆಂದು ಮಾತ್ರ ಅರ್ಥ ಮಾಡಿದರೆ ಈ ಆಕ್ಷೇಪಕ್ಕೆ ಆಸ್ಪದವಿರುವುದಿಲ್ಲ. ಅಥವಾ, "ಅನೇಕ ಸಹಸ್ರರಶ್ಮಿಃ" ಎಂಬ ಪದಕ್ಕೆ, "ಅನೇಕಾನ್ಯೂನಾಃ ಸಹಸ್ರಂ ರಶ್ಮಯಃ ಯಸ್ಯ ಸಃ" ಎಂದು ಮಧ್ಯಮ ಪದಲೋಪಿ ತತ್ಪುರುಷಗರ್ಭ ಸಮಾಸವನ್ನು ಮಾಡಿದರೆ ಸ್ವಲ್ಪ ಕಿರಣಗಳುಳ್ಳವನು ಎಂದು ಅರ್ಥವಾಗುತ್ತದೆ. ಮುಂದೆ ಹನುಮಂತನು ಅಶೋಕವನದಲ್ಲಿರಲು ರಾವಣಾಸುರನು ಅಲ್ಲಿಗೆ ಬಂದಾಗ ಸ್ತ್ರೀಯರು ದೀವಟಿಗೆಗಳನ್ನು ಹಿಡಿದಿದ್ದರೆಂದು ವರ್ಣಿಸಿರುವುದರಿಂದ ಆಗ ಚಂದ್ರಾಸ್ತವಾಗಿದ್ದಿತೆಂದು ಗ್ರಾಹ್ಯವು.

ಈ ಲಂಕಾಪ್ರವೇಶವು ಮಾರ್ಗಶೀರ್ಷ ಮಾಸದ ಶುಕ್ಲೈಕಾದಶಿಯೆಂದು ತಿಳಿಯಬೇಕು. ಫಾಲ್ಗುನಮಾಸದಲ್ಲಿ ಲಂಕೆಯನ್ನು ಪ್ರವೇಶಿಸಿದ ಸೀತಾದೇವಿಯು ಹನುಮಂತನನ್ನು ಕುರಿತು, "ವರ್ತತೇ ದಶಮೋ ಮಾಸೋ ದ್ವೌತು ಶೇಷೌ ಪ್ಲವಂಗಮ!" ಎಂದು ಮುಂದೆ ಹೇಳುವಳಾದುದರಿಂದ ಹನುಮಂತನ ಲಂಕಾಪ್ರವೇಶ ಸಮಯವು ಮಾರ್ಗಶೀರ್ಷ ಮಾಸನೆಂದೇ ಗ್ರಾಹ್ಯವು. ಹರಣದಿನದಲ್ಲಿಯೇ ರಾವಣನು ರಾಮಭಯದಿಂದ ಸೀತೆಯೊಡನೆ ಲಂಕೆಯನ್ನು ಪ್ರವೇಶಿಸಿದನೆಂಬುದು ವಿದಿತವೇ ಆಗಿರುವುದು. (ರಾಮಪಂಡಿತರು)

ಶಂಖಪ್ರಭಂ ಕ್ಷೀರಮೃಣಾಳವರ್ಣ
ಮುದ್ಗಚ್ಛಮಾನಂ ವ್ಯವಭಾಸಮಾನಂ ।
ದದರ್ಶ ಚಂದ್ರಂ ಸಹರಿಪ್ರವೀರಃ
ಪೋಪ್ಲೂಯಮಾನಂ ಸರಸೀವ ಹಂಸಂ ॥ ೫೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿತೀಯಸ್ಸರ್ಗಃ

॥೫೭॥ ಸಹರಿಪ್ರವೀರಃ ಆ ವಾನರಶ್ರೇಷ್ಠನು, ಶಂಖಪ್ರಭಂ-ಶಂಖದ ಕಾಂತಿಯುಳ್ಳ, ಕ್ಷೀರ....ರ್ಣಂ-ಹಾಲಿನ ಮತ್ತು ತಾವರೇಕೊಳವಿಯ ಬಣ್ಣವುಳ್ಳ, ವ್ಯವಭಾಸಮಾನಂ-ಬಹಳವಾಗಿ ಹೊಳೆಯುತ್ತಿರುವ, ಚಂದ್ರಂ-ಚಂದ್ರನನ್ನು, ಸರಸಿ - ಸರಸ್ಸಿನಲ್ಲಿ, ಪೋಪ್ಲೂಯಮಾನಂ - ಈಜುತ್ತಲಿರುವ, ಹಂಸಮಿವ - ಹಂಸಪಕ್ಷಿಯನ್ನೋಪಾದಿಯಲ್ಲಿ, ದದರ್ಶ - ಕಂಡನು. ॥ ೫೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿತೀಯಸ್ಸರ್ಗಃ.

ಆಗ ಕಪಿಶ್ರೇಷ್ಠನಾದ ಹನುಮಂತನು ಈ ರೀತಿ ಶಂಖದಂತೆ ಶುಭ್ರವಾದ ಕಾಂತಿಯುಳ್ಳವನಾಗಿ ಹಾಲಿಗೂ, ತಾವರೆಯ ಕೊಳವಿಗೂ ಸಮಾನವಾದ ಬಣ್ಣವುಳ್ಳವನಾಗಿ ಸರಸ್ಸಿನಲ್ಲಿ ಈಜುತ್ತಿರುವ ಹಂಸದಂತೊಪ್ಪುತ್ತಿದ್ದ ಆ ಚಂದ್ರಮನನ್ನು ಕಂಡನು. ॥೫೫–೫೮॥

ಇಂತಿದು ಸ್ವದೇಹ ಸಂಕೋಚನಪೂರ್ವಕ ಹನುಮತ್ಕೃತ ಲಂಕಾಪ್ರವೇಶೋಪಕ್ರಮ
ವೃತ್ತಾಂತವೆಂಬ ಎರಡನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ತೃತೀಯಸ್ಸರ್ಗಃ

ಸಲಂಬಶಿಖರೇ ಲಂಬೇ ಲಂಬತೋಯದ ಸನ್ನಿಭೇ । ¶ ಸತ್ವಮಾಸ್ಥಾಯ ಮೇಧಾವೀ ಹನೂಮಾ ನ್ಮಾರುತಾತ್ಮಜಃ ॥ ೧ ॥ ರಾತ್ರೌ ಲಂಕಾಂ ಮಹಾಸತ್ವೋ ವಿವೇಶ ಕಪಿಕುಂಜರಃ । ರಮ್ಯಕಾನನತೋಯಾಢ್ಯಾಂ ಪುರೀಂ ರಾವಣಪಾಲಿತಾಂ ॥ ೨ ॥ ಶಾರದಾಂಬುಧರಪ್ರಖ್ಯೈ ರ್ಭವನೈ ರುಪಶೋಭಿತಾಂ । ಸಾಗರೋಪಮನಿರ್ಘೋಷಾಂ ಸಾಗರಾನಿಲ ಸೇವಿತಾಂ ॥ ೩ ॥ ಸುಪುಷ್ಟ ※ ಜಲ ಸಂಪುಷ್ಟಾಂ ಯಥೈವ ವಿಟಪಾ

ಮೇಧಾವೀ - ಬುದ್ಧಿವಂತನಾದ, ಮಹಾಸತ್ವಃ - ಮಹಾ ಬಲಿಷ್ಠನಾದ, ಕಪಿಕುಂಜರಃ - ಕಪಿಶ್ರೇಷ್ಠನಾದ, ಮಾರುತಾತ್ಮಜಃ - ವಾಯುಪುತ್ರನಾದ, ಸಹನುಮಾ - ಆ ಆಂಜನೇಯನು, ಲಂಬ....ಭೇ - ಜೋಲಾಡುತ್ತಿರುವ ಮುಗಿಲಿಗೆ ಸಮಾನವಾದ, ಲಂಬೇ - ಜೋಲಾಡುವಂತಿರುವ, ಲಂಬಶಿಖರೇ-ತ್ರಿಕೂಟಪರ್ವತದ ಶಿಖರದಲ್ಲಿ, ಸತ್ವಂ-ಬಲವಾಗಿ, ಆಸ್ಥಾಯ-ನಿಂತು, ರಾತ್ರೌ-ರಾತ್ರಿಯಲ್ಲಿ, ಲಂಕಾಂ-ಲಂಕಾಪಟ್ಟಣವನ್ನು, ವಿವೇಶ-(ಗೋ)ಪ್ರವೇಶಿಸಲುಪಕ್ರಮಿಸಿದನು, ರಮ್ಯ....ಢ್ಯಾಂ - ಸೊಗಸಾದ ಅರಣ್ಯಗಳಿಂದಲೂ ಉದಕದಿಂದಲೂ ತುಂಬಿರುವ, ಶಾರ....ಖ್ಯೈಃ-ಶರತ್ಕಾಲದಲ್ಲಿ ಹುಟ್ಟಿರುವ ಮೇಘಗಳ ಕಾಂತಿಯುಳ್ಳ, ಭವನೈಃ-ಮನೆಗಳಿಂದ, ಉಪಶೋಭಿತಾಂ-ಪ್ರಕಾಶಿತವಾದ, ಸಾಗ....ಷಾಂ-ಸಮುದ್ರಕ್ಕೆ ಸದೃಶವಾದ ಧ್ವನಿಯುಳ್ಳ, ಸಾಗ....ತಾಂ - ಸಮುದ್ರದ ಗಾಳಿಯಿಂದ ಸೇವಿಸಲ್ಪಟ್ಟ, ಸುಪು....ಷ್ಟಾಂ - ಚನ್ನಾಗಿ ರಕ್ಷಿಸಲ್ಪಟ್ಟ ನೀರಿನಿಂದ ತುಂಬಿದ, ವಿಟಪಾವತೀಂಯಥಾ - ಅಲಕಾಪಟ್ಟಣವೋ ಎಂಬಂತಿರುವ, ಚಾರು....ಹಾಂ - ಮನೋಹರವಾದ ಊರುಬಾಗಿಲಲ್ಲಿರುವ ಕೃತಕ

ಹೀಗೆ ಮಹಾಬಲಿಷ್ಠನೂ, ಬುದ್ಧಿಶಾಲಿಯೂ ಆದ ಆ ಮಾರುತಿಯು ಜೋಲಾಡುತ್ತಿರುವ ಮುಗಿಲುಗಳಿಗೆ ಸಮಾನವಾದ ಆ ಲಂಬಾಚಲ ಶಿಖರದಲ್ಲಿ ಧೈರ್ಯವನ್ನವಲಂಬಿಸಿ ನಿಂತು ಅಂದಿನ ರಾತ್ರಿ ಸುಂದರವಾದ ಅರಣ್ಯಗಳಿಂದಲೂ, ಜಲಾಶಯಗಳಿಂದಲೂ ನಿಬಿಡಿತವಾಗಿ ಕಂಗೊಳಿಸುತ್ತಿದ್ದ ರಾವಣಪಾಲಿತವಾದ ಆ ಲಂಕಾಪಟ್ಟಣವನ್ನು ಪ್ರವೇಶಿಸಲುಪಕ್ರಮಿಸಿದನು. ಮನೋಮೋಹಕವಾದ ಆ ಪಟ್ಟಣವು, ಶರತ್ಕಾಲದ ಮೇಘಗಳಂತೆ ಶುಭ್ರವಾಗಿ ಬೆಳಗುತ್ತಿರುವ ಉನ್ನತಭವನಗಳಿಂದ ಪ್ರಕಾಶಿಸುತ್ತಿದ್ದಿತು. ಅಲ್ಲಿನ ಜನರ ಕಲಕಲಧ್ವನಿಯು ಸಮುದ್ರಧ್ವನಿಯನ್ನು ಹೋಲುತ್ತಿದ್ದಿತು. ಸಮುದ್ರದ ಗಾಳಿಯು ಅತಿ ತಣ್ಣಗಾಗಿ ಬೀಸುತ್ತಿದ್ದಿತು. ಮಹಾಬಲಿಷ್ಠರಾದ ಸೈನಿಕರಿಂದ ಸುರಕ್ಷಿತವಾದ ಆ ಪಟ್ಟಣವು ಕುಬೇರನ ಅಲಕಾಪಟ್ಟಣವನ್ನು

¶ ಇಲ್ಲಿ, "ಸತ್ವಮಾಸ್ಥಾಯ ಮೇಧಾವೀ" ಎಂಬ ಕಡೆ ರಾಮಪಂಡಿತರ ಅಭಿಪ್ರಾಯವು ಹೀಗಿರುವುದು.

"ಲಂಕಾನಿವಾಸಿಗಳಾದ ರಾಕ್ಷಸರೆಲ್ಲರೂ ರಜೋಗುಣ ತಮೋಗುಣಗಳೇ ಪ್ರಧಾನವಾಗುಳ್ಳವರು. ಇಂತಹವನ್ನು ಉಪಾಯದಿಂದ ಜಯಿಸಲು ಅಸಾಧ್ಯವು. ಅವರನ್ನು ಗೆಲ್ಲಲು ಸತ್ವಗುಣಾಶ್ರಯಣವೊಂದೇ ಮಾರ್ಗವು" ಎಂದು ಚಿಂತಿಸಿದ ಮಹಾ ಮೇಧಾವಿಯಾದ ಹನುಮಂತನು ಇಲ್ಲಿ ಸತ್ವವನ್ನಾಶ್ರಯಿಸಿರುವನು.

※ "ಬಲ" ತಿ. ಪಾ.

ವತೀಂ । ಚಾರುತೋರಣನಿರ್ಯೂಹಾಂ ಪಾಂಡುರದ್ವಾರತೋರಣಾಂ ॥ ೪ ॥ ಭುಜಗಾಚರಿತಾಂ ಗುಪ್ತಾಂ ಶುಭಾಂ ಭೋಗವತೀಮಿವ । ತಾಂ ಸವಿದ್ಯುದ್ಘನಾಕೀರ್ಣಾಂ ¶ ಜ್ಯೋತಿರ್ಮಾರ್ಗನಿಷೇವಿತಾಂ ॥ ೫ ॥ § ಮಂದಮಾರುತಸಂಚಾರಾಂ ಯಥೇಂದ್ರಸ್ಯಾಽಮರಾವತೀಂ । ಶಾತಕುಂಭೇನ ಮಹತಾ ಪ್ರಾಕಾರೇಣಾಭಿಸಂವೃತಾಂ ॥ ೬ ॥ ಕಿಂಕಿಣೀಜಾಲಘೋಷಾಭಿಃ ಪತಾಕಾಭಿರಲಂಕೃತಾಂ । ಆಸಾದ್ಯ ಸಹಸಾ ಹೃಷ್ಟಃ ಪ್ರಾಕಾರಮಭಿಪೇದಿವಾನ್ ॥ ೭ ॥ ವಿಸ್ಮಯಾವಿಷ್ಟಹೃದಯಃ ಪುರೀಮಾಲೋಕ್ಯ ಸರ್ವತಃ । ಜಾಂಬೂನದಮಯೈರ್ದ್ವಾರೈರ್ವೈಡೂರ್ಯಕೃತ

ಗಜಗಳುಳ್ಳ, ಪಾಂಡು....ಣಾಂ-ಬಿಳುಪಾದ ಬಾಗಿಲುಗಳೂ ಹೊರಬಾಗಿಲುಗಳೂ ಉಳ್ಳ, ಭುಜ....ತಾಂ-ಸರ್ಪಗಳಿಂದ ಸಂಚರಿಸಲ್ಪಟ್ಟ, ಗುಪ್ತಾಂ - ಚನ್ನಾಗಿ ಸಂರಕ್ಷಿಸಲ್ಪಟ್ಟ, ಭೋಗವತೀಮಿವ - ನಾಗರಾಜಧಾನಿಯಂತೆ, ಶುಭಾಂ - ಮಂಗಳಕರವಾದ, ಸವಿ....ರ್ಣಾಂ - ಮಿಂಚುಗಳಿಂದ ಕೂಡಿದ ಮೇಘಗಳಿಂದ ವ್ಯಾಪ್ತವಾದ, ಜ್ಯೋತಿ....ತಾಂ - ನಕ್ಷತ್ರಮಾರ್ಗದಿಂದ ಸೇವಿಸಲ್ಪಟ್ಟ, ಮಂದ....ರಾಂ - ತಂಗಾಳಿಯ ಸಂಚಾರವುಳ್ಳ, ಇಂದ್ರಸ್ಯ - ಇಂದ್ರನ, ಅಮರಾವತೀಂಯಥಾ - ಅಮರಾವತೀಪಟ್ಟಣದಂತಿರುವ, ಶಾತಕುಂಭೇನ - ಸುವರ್ಣಮಯವಾದ, ಮಹತಾ - ದೊಡ್ಡದಾದ, ಪ್ರಾಕಾರೇಣ - ಕೋಟೆಯಗೋಡೆಯಿಂದ, ಅಭಿಸಂವೃತಾಂ - ಸುತ್ತುವರೆದ, ಕಿಂಕಿ....ಭಿಃ - ಕಿರುಗೆಜ್ಜೆಗಳ ಸಮುದಾಯದ ಧ್ವನಿಗಳುಳ್ಳ, ಪತಾಕಾಭಿಃ - ಧ್ವಜಪಟಗಳಿಂದ, ಅಲಂಕೃತಾಂ - ಅಲಂಕರಿಸಲ್ಪಟ್ಟ, (ರಾವ....ತಾಂ - ರಾವಣನಿಂದ ರಕ್ಷಿತವಾದ, ಲಂಕಾಂ - ಲಂಕಾಪಟ್ಟಣವನ್ನು,) ಸಹಸಾ - ಜಾಗ್ರತೆಯಾಗಿ, ಆಸಾದ್ಯ - ಹೊಂದಿ, ಪ್ರಾಕಾರಂ - ಕೋಟೆಯ ಗೋಡೆಯನ್ನು, ಅಭಿಪೇದಿವಾನ್ - ಹೊಂದಿದನು. ॥ ೧-೭ ॥ ಜಾಂಬೂ....ಯೈಃ - ಸುವರ್ಣವಿಕಾರಗಳಾದ, ವೈಡೂ....ಕೈಃ - ವೈಡೂರ್ಯಗಳಿಂದ ಮಾಡಲ್ಪಟ್ಟ ಜಗುಲಿಗಳುಳ್ಳ, ವಜ್ರ....ಭಿಃ-ವಜ್ರಗಳಿಂದಲೂ, ಸ್ಫಟಿಕಗಳಿಂದಲೂ, ಮುತ್ತುಗಳಿಂದಲೂ, ಕೃತವೇದಿಕೈಃ - ಮಾಡಲ್ಪಟ್ಟ ಜಗುಲಿಗಳುಳ್ಳ, ಮಣಿ...ತ್ತೈಃ - ರತ್ನಗಳಿಂದ ಮಾಡಿದ ನಿಬದ್ಧ ಭೂಮಿಗಳಿಂದ ಅಲಂಕರಿಸಲ್ಪಟ್ಟ, ತಪ್ತ....ಹೈಃ - ಪುಟಪಾಕಶೋಧಿತವಾದ ಬಂಗಾರದಿಂದ ಮಾಡ

ಹೋಲುತ್ತಿದ್ದಿತು. ಬಹು ಸುಂದರವಾದ ಆ ಪಟ್ಟಣದ ಹೊರಬಾಗಿಲುಗಳು ಮದಗಜಗಳಿಂದ ಚಿತ್ರಿತವಾಗಿ ಸುಧಾಧವಳಿತವಾಗಿ ಸುರಕ್ಷಿತವಾಗಿದ್ದವು. ಅಲ್ಲದೆ ಸರ್ಪಗಳಿಗೆ ನಿವಾಸಸ್ಥಾನವಾದ ಭೋಗವತಿಯನ್ನನುಕರಿಸುತ್ತಿರುವ ಆ ಪಟ್ಟಣವು ಗಗನವನ್ನು ಮುಟ್ಟುತ್ತಿರುವ ಸುಂದರ ಭವನಗಳಿಂದೊಪ್ಪುತ್ತಿದ್ದಿತು. ॥೧–೫॥ ಮಲಯಮಾರುತಸಂಚಾರದಿಂದ ಶೋಭಿಸುತ್ತ ಸ್ವರ್ಗನಗರಕ್ಕೆಸಮಾನನಾಗಿ ಪ್ರಕಾಶಿಸಿ, ಎತ್ತರವಾದ ಭಂಗಾರದ ಪ್ರಾಕಾರಗಳಿಂದ ಸುತ್ತುವರೆದು, ವಾಯುವಶದಿಂದ ಚಲಿಸುವ ಕಿರುಗಂಟೆಗಳ ಧ್ವನಿಗಳಿಂದ ತುಂಬಿ, ಟೆಕ್ಕೆಗಳಿಂದಲಂಕೃತವಾದ ಆ ಪಟ್ಟಣವನ್ನು ಕಂಡು ಸಂತೋಷಭರಿತನಾದ ಆ ಕಪಿವೀರನು ಪ್ರಾಕಾರದಮೇಲೆ ಹಾರಿ ಕುಳಿತು ಆ ಪಟ್ಟಣವನ್ನು ಸುತ್ತಲೂ ನೋಡಿ ಪರಮಾಶ್ಚರ್ಯಭರಿತನಾದನು. ॥ ೬–೭ ॥ ಅದು ಸ್ವರ್ಣಮಯವಾಗಿ ವೈಡೂರ್ಯಮಣಿಗಳಿಂದ ನಿರ್ಮಿತವಾದ ಜಗುಲಿಗಳುಳ್ಳದಾಗಿಯೂ, ಕೆಲವೆಡೆಗಳಲ್ಲಿ ವಜ್ರವೈಡೂರ್ಯಗಳಿಂದಲೂ, ಸ್ಫಟಿಕಶಿಲೆಗಳಿಂದಲೂ,

---

¶ "ಜ್ಯೋತಿರ್ಗಣ" ತಿ. ರಾ. ಪಾ. § "ಚಂಡ" ತಿ. ಪಾ.

ವೇದಿಕೈಃ ॥ ೮ ॥ ವಜ್ರಸ್ಫಟಿಕಮುಕ್ತಾಭಿರ್ಮಣಿಕುಟ್ಟಿಮಭೂಷಿತೈಃ । ತಪ್ತಹಾಟಕ ನಿರ್ಯೂಹೈ ರಾಜತಾಮಲಪಾಂಡುರೈಃ ॥ ೯ ॥ ವೈಡೂರ್ಯಕೃತಸೋಪಾನೈಃ ಸ್ಫಾಟಿ ಕಾಂತರಪಾಂಸುಭಿಃ । ಚಾರುಸಂಜವನೋಪೇತೈಃ ಖಮಿವೋತ್ಪತಿತೈ ಶ್ಶುಭೈಃ ॥೧೦॥ ಕ್ರೌಂಚಬರ್ಹಿಣಸಂಘುಷ್ಟೈ ರಾಜಹಂಸನಿಷೇವಿತೈಃ । ತೂರ್ಯಾಭರಣನಿರ್ಘೋಷೈ ಸ್ಸರ್ವತಃ ಪ್ರತಿನಾದಿತಾಂ ॥ ೧೧ ॥ ವಸ್ವೌಕಸಾರಾಪ್ರತಿಮಾಂ ತಾಂ ವೀಕ್ಷ್ಯ ನಗರೀಂ ತತಃ । ಖಮಿವೋತ್ಪತಿತಾಂ ಲಂಕಾಂ ಜಹರ್ಷ ಹನುಮಾನ್ ಕಪಿಃ ॥ ೧೨ ॥ ತಾಂ ಸಮೀಕ್ಷ್ಯ ಪುರೀಂ§ ರಮ್ಯಾಂ ರಾಕ್ಷಸಾಧಿಪತೇ ಶ್ಶುಭಾಂ । ಅನುತ್ತಮಾ ಮೃದ್ಧಿಯುತಾಂ

ಲ್ಪಟ್ಟಲೇಪಗಳುಳ್ಳ, ರಾಜ....ರೈಃ-ರಜತವಿಕಾರಗಳಾಗಿ ನಿರ್ಮಲವೂ, ಬೆಳ್ಳಗೂ ಇರುವ, ವೈಡೂ....ನೈಃ-ವೈಡೂರ್ಯಗಳಿಂದ ಮಾಡಲ್ಪಟ್ಟ ಪಾವಟಿಗೆಗಳುಳ್ಳ, ಸ್ಫಾಟಿ....ಭಿಃ - ಮಧ್ಯದಲ್ಲಿ ಸ್ಫಟಿಕವಿಕಾರವಾದ ಧೂಳಿಗಳುಳ್ಳ, ಚಾರು....ತೈಃ - ಸೊಗಸಾದ ಚದರವಾದ ಮನೆಗಳಿಂದ ಕೂಡಿರುವ, ಖಂ - ಅಂತರಿಕ್ಷವನ್ನು ಕುರಿತು, ಉತ್ಪತಿತೈರಿವ-ಹಾರುವಂತಿರುವ, ಶುಭೈಃ-ಶುಭಕರಗಳಾದ, ಕ್ರೌಂಚ....ಷ್ಟೈಃ-ಕೊಕ್ಕರೆಗಳಿಂದಲೂ, ನವಿಲುಗಳಿಂದಲೂ ಶಬ್ದಾಯಮಾನಗಳಾದ, ರಾಜ ... ತೈಃ - ಬಿಳೀ ಹಂಸಪಕ್ಷಿಗಳಿಂದ ಸೇವಿಸಲ್ಪಟ್ಟ, ದ್ವಾರೈಃ-ಬಾಗಿಲುಗಳಿಂದ, (ಉಪಲಕ್ಷಿತಾಂ ಕೂಡಿರುವ,) ತೂರ್ಯಾ....ಷೈಃ - ತುತ್ತೂರಿಗಳ ಮತ್ತು ಒಡವೆಗಳ ಧ್ವನಿಗಳಿಂದ, ಸರ್ವತಃ ಎಲ್ಲಾ ಕಡೆಗಳಲ್ಲಿಯೂ,ಪ್ರತಿನಾದಿತಾಂ-ಧ್ವನಿಗೊಳಿಸಲಾದ, ಪುರೀಂ - ಪಟ್ಟಣವನ್ನು, ಸರ್ವತಃ - ಎಲ್ಲ ದಿಕ್ಕುಗಳಯೂ, ಆಲೋಕ್ಯ - ನೋಡಿ, ವಿಸ್ಮ....ಯಃ - ಆಶ್ಚರ್ಯದಿಂದ ವ್ಯಾಪ್ತವಾದ ಮನವುಳ್ಳವನಾದನು. ॥ ೮-೧೧ ॥ ತತಃ - ಅನಂತರದಲ್ಲಿ, ಕಪಿಃ - ವಾನರನಾದ, ಹನೂಮಾನ್ - ಆಂಜನೇಯನು, ವಸ್ವೌ....ಮಾಂ - ಪೂರ್ವದಿಕ್ಕಿನಲ್ಲಿರುವ ಇಂದ್ರಪಟ್ಟಣಕ್ಕೆ ಸಮಾನವಾದ, ಖಂ - ಅಂತರಿಕ್ಷವನ್ನು ಕುರಿತು, ಉತ್ಪತಿತಾಂ - ಹಾರುವುದಕ್ಕೆ, (ಕಾಮಾಮಿವಸ್ಥಿತಾಂ - ಇಚ್ಛಿಸಿದಂತಿರುವ,) ತಾಂನಗರೀಂ - ಆ ಪಟ್ಟಣವನ್ನು, ವೀಕ್ಷ್ಯ - ಕಂಡು, ಜಹರ್ಷ - ಸಂತೋಷಿಸಿದನು. ॥ ೧೨ ॥ ವೀರ್ಯವಾನ್ - ಪರಾಕ್ರಮಿಯಾದ ಆಂಜನೇಯನು, ಅನುತ್ತಮಾಂ - ಸರ್ವಶ್ರೇಷ್ಠವಾದ, ಋದ್ಧಿಯುತಾಂ - ಐಶ್ವರ್ಯದಿಂದ ಕೂಡಿ, ಶುಭಾಂ - ಶುಭಕರ

ಮುಕ್ತಾಫಲಗಳಿಂದಲೂ ಅಲಂಕೃತವಾಗಿ ವಿರಾಜಿಸುತ್ತಿರುವ ಶಿರೋಗೃಹಗಳಿಂದೊಪ್ಪುತ್ತಿರುವುದಾಗಿಯೂ, ಪುಟಪಾಕಶೋಧಿತವಾದ ಸುವರ್ಣದಿಂದಲೂ, ರಜತದಿಂದಲೂ ನಿರ್ಮಿಸಿದ ಮದಗಜಗಳ ಪ್ರತಿಮೆಗಳುಳ್ಳುದಾಗಿಯೂ, ವೈಡೂರ್ಯಮಣಿಗಳಿಂದ ನಿರ್ಮಿಸಿದ ಸೋಪಾನಗಳುಳ್ಳುದಾಗಿಯೂ, ಸ್ಫಟಿಕಶಿಲೆಗಳಿಂದ ನಿರ್ಮಿತವಾಗಿ ಬೆಳ್ಳನೆಯ ಮಳಲಿನಿಂದ ಹಾಸಿದ ಭೂಪ್ರದೇಶವುಳ್ಳುದಾಗಿ ಸುಂದರವಾದ ಚಚ್ಚೌಕದ ಮನೆಗಳಿಂದೊಪ್ಪುತ್ತಿರುವುದಾಗಿಯೂ, ಬಹು ಎತ್ತರವಾಗಿದ್ದು ಆಕಾಶಕ್ಕೆ ಹಾರುತ್ತಿರುವುವೋ ಎಂಬಂತಿರುವ ರಾಜಭವನಗಳಿಂದೊಪ್ಪುತ್ತಿರುವುದಾಗಿಯೂ, ಕ್ರೌಂಚ, ಮಯೂರ, ರಾಜಹಂಸಾದಿ ಪಕ್ಷಿನಿಕರಗಳ ಧ್ವನಿಗಳಿಂದಲೂ, ಭೇರಿಯೇ ಮುಂತಾದ ವಾದ್ಯವಿಶೇಷಗಳ, ಕಡಗ ಕಾಲಂದುಗೆಗಳೇ ಮೊದಲಾದ ಆಭರಣಗಳ ಧ್ವನಿಗಳಿಂದ ಪ್ರತಿಧ್ವನಿತವಾಗಿ, ಇಂದ್ರನಗರಿಯ ಸೊಬಗನ್ನು ಮೀರಿಸಿ ಗಗನಮಂಡಲವನ್ನು ಮುಟ್ಟುತ್ತಿರುವಂತೆ ಅತ್ಯುನ್ನತವಾಗಿಯೂ ಇರುವ ಮಹದೈಶ್ವರ್ಯ

---

§ "ಲಂಕಾಂ" ತಿ. ಪಾ.

ಚಿಂತಯಾಮಾಸ ವೀರ್ಯವಾನ್ ॥ ೧೩ ॥ ನೇಯಮನ್ಯೇನ ನಗರೀ ಶಕ್ಯಾ ಧರ್ಷಯಿತುಂ ಬಲಾತ್ । ರಕ್ಷಿತಾ ರಾವಣಬಲೈರುದ್ಯತಾಯುಧ ಧಾರಿಭಿಃ ॥ ೧೪ ॥ ಕುಮುದಾಂಗದಯೋರ್ವಾಪಿ ಸುಷೇಣಸ್ಯ ಮಹಾಕಪೇಃ । ಪ್ರಸಿದ್ಧೇಯಂ ಭವೇದ್ಭೂಮಿ ರ್ಮೈಂದದ್ವಿವಿದಯೋರಪಿ ॥ ೧೫ ॥ ವಿವಸ್ವತಸ್ತನೂಜಸ್ಯ ಹರೇಶ್ಚ ಕುಶಪರ್ವಣಃ । ಋಕ್ಷಸ್ಯ ಕೇತುಮಾಲಸ್ಯ ಮಮಚೈವ ಗತಿರ್ಭವೇತ್ ॥ ೧೬ ॥ ಸಮೀಕ್ಷ್ಯತು ಮಹಾಬಾಹೂ ರಾಘವಸ್ಯ ಪರಾಕ್ರಮಂ । ಲಕ್ಷ್ಮಣಸ್ಯಚ ವಿಕ್ರಾಂತ ಮಭವತ್ಪ್ರೀತಿರ್ಮಾ ಕಪಿಃ ॥೧೭॥ ತಾಂ ರತ್ನವಸನೋಪೇತಾಂ ಗೋಷ್ಠಾಗಾರಾವತಂಸಕಾಂ।

ವಾದ, ರಾಕ್ಷ....ತೇಃ-ರಾವಣಾಸುರನ, ತಾಂಪುರೀಂ-ಆ ಪಟ್ಟಣವನ್ನು, ಸಮೀಕ್ಷ್ಯ-ದೃಷ್ಟಿಸಿ ನೋಡಿ, ಚಿಂತಯಾಮಾಸ-ಯೋಚಿಸಿದನು. ॥ ೧೩ ॥ ಉದ್ಯ....ಭಿಃ-ಎತ್ತಿಹಿಡಿದ ಆಯುಧಗಳನ್ನು ಧರಿಸಿರುವ, ರಾವಣಬಲೈಃ - ರಾವಣನ ಸೇನೆಗಳಿಂದ, ರಕ್ಷಿತಾ - ಪಾಲಿಸಲ್ಪಟ್ಟ, ಇಯಂನಗರೀ - ಈ ಪಟ್ಟಣವು, ಅನ್ಯೇನ - ಮತ್ತೊಬ್ಬನಿಂದ, ಬಲಾತ್ - ಸಾಮರ್ಥ್ಯದ ಮೂಲಕ, ಧರ್ಷಯಿತುಂ - ತಿರಸ್ಕರಿಸಲು, ನಶಕ್ಯಾ - ಸಾಧ್ಯವಾಗುವುದಿಲ್ಲ. ॥ ೧೪ ॥ ಪ್ರಸಿದ್ಧಾ - ಪ್ರವೇಶಿಸಲಶಕ್ಯವೆಂದು ಪ್ರಖ್ಯಾತವಾದ, ಇಯಂಭೂಮಿಃ - ಈ ಲಂಕಾಭೂಮಿಯು, ಕುಮು....ಪಿ - ಕುಮುದನಿಗಾಗಲಿ, ಅಂಗದನಿಗಾಗಲಿ, ಸುಷೇಣಸ್ಯ - ಸುಷೇಣನೆಂಬ, ಮಹಾಕಪೇಃ - ವಾನರಶ್ರೇಷ್ಠನಿಗಾಗಲಿ, ಮೈಂದ....ಪಿ - ಮೈಂದನಿಗೂ, ದ್ವಿವಿದನಿಗೂ ಆಗಲಿ, ವಿವಸ್ವತಃ - ಸೂರ್ಯನ, ತನೂಜಸ್ಯ - ಮಗನಾದ ಸುಗ್ರೀವನಿಗೂ, ಕುಶಪರ್ವಣಃ - ಕುಶಪರ್ವನೆಂಬ, ಹರೇಶ್ಚ - ವಾನರನಿಗೂ, ಋಕ್ಷಸ್ಯ - ಜಾಂಬವಂತನಿಗೂ, ಕೇತುಮಾಲಸ್ಯ - ಕೇತುಮಾಲನಿಗೂ, ಮಮಚ - ನನಗೂ, ಗತಿಃ - ಹೊಂದುವುದಕ್ಕೆ ಶಕ್ಯವು, ಭವೇತ್ - ಆದೀತು. ॥ ೧೫ ೧೬ ॥ ಮಹಾಬಾಹುಃ - ದೊಡ್ಡ ಭುಜಗಳುಳ್ಳ, ಕಪಿಃ - ಆಂಜನೇಯನು, ರಾಘವಸ್ಯ - ಶ್ರೀರಾಮನ, ಪರಾಕ್ರಮಂ - ಪರಾಕ್ರಮವನ್ನು, ಲಕ್ಷ್ಮಣಸ್ಯ - ಲಕ್ಷ್ಮಣಸ್ವಾಮಿಯ, ವಿಕ್ರಾಂತಂ - ಶೌರ್ಯವನ್ನೂ, ಸಮೀಕ್ಷ್ಯ - ಸ್ಮರಿಸಿ, ಪ್ರೀತಿರ್ಮಾ - ಸಂತೋಷಗೊಂಡವನು, ಅಭವತ್ - ಆದನು. ॥ ೧೭ ॥ ಸಮಹಾಕಪಿಃ - ಆ ಹನುಮಂತನು, ರತ್ನ....ತಾಂ - ಕೆಂಪುಗಳೆಂಬ ವಸ್ತ್ರದಿಂದ ಕೂಡಿರುವ, ಗೋಷ್ಠಾ....ಕಾಂ - ಆಕಳು ದೊಡ್ಡಿಗಳೇ ಕಿವಿಯೋಲೆಗಳಾಗಿ ಉಳ್ಳ,

---

ಪರಿಪೂರಿತವೂ, ರಮಣೀಯವೂ, ಆದ ಆ ರಾಕ್ಷಸರಾಜನ ಲಂಕಾಪಟ್ಟಣವನ್ನು ನೋಡಿ ಪರಮಾಶ್ಚರ್ಯಭರಿತನಾದ ಆ ಹನುಮಂತನು ಹೀಗೆ ಚಿಂತಿಸಿದನು. ॥೮—೧೩॥ "ಈ ಪಟ್ಟಣದಲ್ಲಿ ನಿರಂತರವೂ ಆಯುಧಪಾಣಿಗಳಾಗಿ ನಲ್ದಿಕ್ಕುಗಳಲ್ಲಿಯೂ, ತಮ್ಮೊಡೆಯನಾದ ರಾವಣಾಸುರನ ಆಜ್ಞೆಯಿಂದ ರಕ್ಷಣೆಗಾಗಿ ಸಂಚರಿಸುತ್ತಿರುವ ಪ್ರಬಲಬಲಾನ್ವಿತಗಳಾದ ಸೈನ್ಯಗಳು ತುಂಬಿರುವುವು. ಎಷ್ಟೇ ಬಲಶಾಲಿಯಾದವನೂ ಈ ಪಟ್ಟಣವನ್ನೆದುರಿಸಲಾರನು. ಅಂಗದ, ಮೈಂದ, ದ್ವಿವಿದ, ಸುಷೇಣ, ಸೂರ್ಯಪುತ್ರನಾದ ಸುಗ್ರೀವ, ಕುಶಪರ್ವ, ಋಕ್ಷ, ಕೇತುಮಾಲರಿಗೂ, ನನಗೂ ಈ ಮಹಾ ಪಟ್ಟಣವು ಹೊಂದಲು ಸಾಧ್ಯವೆಂದು ತೋರುವುದು. ಇಷ್ಟುಮಂದಿಯನ್ನು ಬಿಟ್ಟು ಉಳಿದವರಿಗೆ ಈ ಪಟ್ಟಣಪ್ರವೇಶವು ಶಕ್ಯವಲ್ಲವು." ॥೧೪—೧೬॥ ಈ ರೀತಿ ಚಿಂತಿಸಿದ ಆ ಮಹಾ ಕಪಿಯು ಶ್ರೀರಾಮಲಕ್ಷ್ಮಣರ ಪೌರುಷ ಪರಾಕ್ರಮಗಳನ್ನು ಸ್ಮರಿಸಿ ಅವರು ಆ ಪಟ್ಟಣವನ್ನು ಜಯಿಸಲು ಸಮರ್ಥರೆಂದು ಸಂತೋಷವನ್ನು ಹೊಂದಿದನು.

ಯಂತ್ರಾಗಾರ ಸ್ತನೀಮೃದ್ಧಾಂ ಪ್ರಮದಾಮಿವ ಭೂಷಿತಾಂ ‖ ೧೮ ‖ ತಾಂ ನಷ್ಟ ತಿಮಿರಾಂ ದೀಪ್ತೈರ್ಭಾಸ್ವರೈಶ್ಚ ಮಹಾಗೃಹೈಃ । ನಗರೀಂ ರಾಕ್ಷಸೇಂದ್ರಸ್ಯ ದದರ್ಶ ಸ ಮಹಾಕಪಿಃ ‖ ೧೯ ‖ ಅಥ ಸಾ ಹರಿಶಾರ್ದೂಲಂ ಪ್ರವಿಶಂತಂ ಮಹಾಬಲಂ । ನಗರೀ ಸ್ವೇನ ರೂಪೇಣ ದದರ್ಶ ಪವನಾತ್ಮಜಂ ‖ ೨೦ ‖ ಸಾ ತಂ ಹರಿವರಂ ದೃಷ್ಟ್ವಾ ಲಂಕಾ ರಾವಣಪಾಲಿತಾ । ಸ್ವಯಮೇವೋತ್ಥಿತಾ ತತ್ರ ವಿಕೃತಾನನ ದರ್ಶನಾ ‖೨೧‖ * ಪುರಸ್ತಾತ್ಕಪಿವರ್ಯಸ್ಯ ವಾಯುಸೂನೋರತಿಷ್ಠತ । ಮುಂಚಮಾನಾ ಮಹಾನಾದ

ಯಂತ್ರಾ....ನೀಂ - ಯಂತ್ರದ ಮನೆಗಳೇ ಸ್ತನಗಳಾಗಿ ಉಳ್ಳ, ಋದ್ಧಾಂ - ವೃದ್ಧಿಯೊಂದಿದ, ಭೂಷಿತಾಂ - ಅಲಂಕರಿಸಲ್ಪಟ್ಟ, ಪ್ರಮದಾಮಿವ - ಹೆಂಗುಸಿನಂತಿರುವ, ಭಾಸ್ವರೈಃ - ಪ್ರಕಾಶಮಾನ ಗಳಾದ, ದೀಪ್ತೈಃ - ಪ್ರಕಾಶಮಾನಗಳಾದ, ಮಹಾಗೃಹೈಃ - ದೊಡ್ಡ ಮನೆಗಳಿಂದ, ನಷ್ಟ ತಿಮಿರಾಂ - ನಶಿಸಿದ ಕತ್ತಲುಳ್ಳ, ತಾಂ - ಪ್ರಸಿದ್ಧವಾದ, ರಾಕ್ಷಸೇಂದ್ರಸ್ಯ - ರಾವಣನ, ತಾಂನಗರೀಂ - ಆ ಲಂಕಾಪಟ್ಟಣವನ್ನು, ದದರ್ಶ - ಕಂಡನು. ‖ ೧೮-೧೯ ‖ ಅಥ - ಅನಂತರದಲ್ಲಿ, ಸಾನಗರೀ - ಆ ಲಂಕಿಣಿಯು, ಪ್ರವಿಶಂತಂ - ಪ್ರವೇಶ ಮಾಡುತ್ತಿರುವ, ಮಹಾಬಲಂ - ಅಧಿಕ ಶಕ್ತಿಯುಳ್ಳ, ಹರಿ ಶಾರ್ದೂಲಂ - ವಾನರಶ್ರೇಷ್ಠನಾದ, ಪವನಾತ್ಮಜಂ - ಆಂಜನೇಯನನ್ನು, ಸ್ವೇನರೂಪೇಣ - ಗ್ರಾಮಾಧಿದೇವತಾರೂಪದಿಂದ, ದದರ್ಶ - ಕಂಡಳು. ‖ ೨೦ ‖ ತತ್ರ - ಆ ಊರುಬಾಗಿಲಲ್ಲಿ, ರಾವ...ತಾ - ರಾವಣನಿಂದ ಸಂರಕ್ಷಿಸಲ್ಪಟ್ಟ, ಸಾಲಂಕಾ - ಆ ಲಂಕಾಭಿಮಾನಿದೇವತೆಯು, ತಂ ಹರಿವರಂ - ಆ ವಾನರಶ್ರೇಷ್ಠನನ್ನು, ದೃಷ್ಟ್ವಾ - ಕಂಡು, ಸ್ವಯಮೇವ - ತನ್ನಷ್ಟಕ್ಕೆ ತಾನೇ, ಉತ್ಥಿತಾ - ಎದ್ದುನಿಂತವಳಾಗಿ, ವಿಕೃ....ನಾ - ವಿಕಾರವಾದ ಮುಖವೂ, ನೋಟವೂ ಉಳ್ಳವಳಾಗಿ, ಕಪಿವರ್ಯಸ್ಯ - ವಾನರವರನಾದ, ವಾಯುಸೂನೋಃ - ವಾಯುಪುತ್ರನ, ಪುರಸ್ತಾತ್ - ಮುಂದೆ, ಅತಿಷ್ಠತ - ನಿಂತಳು, ಮಹಾನಾದಂ - ಮಹಾಧ್ವನಿಯನ್ನು, ಮುಂಚಮಾನಾ - ಬಿಡುತ್ತ, ಪವನಾತ್ಮಜಂ - ಮಾರುತಿಯನ್ನು ಕುರಿತು, ಅಬ್ರವೀತ್ - ಹೇಳಿದಳು. ‖ ೨೦-೨೨ ‖ ಹೇವನಾಲಯ -

---

ಈ ಪ್ರಕಾರವಾಗಿ ವಿವಿಧ ರತ್ನನಿಚಯುಗಳೆಂಬ ವಸ್ತ್ರದಿಂದಲೂ, ಸಮಸ್ತ ಸಾಮುಗ್ರಿಗಳಿಂದ ತುಂಬಿರುವ ಗೋಶಾಲೆ ಅಶ್ವಶಾಲೆಗಳೆಂಬ ಕರ್ಣಾವತಂಸಗಳಿಂದಲೂ, ಯಂತ್ರಗೃಹಗಳೆಂಬ ಸ್ತನಗಳಿಂದಲೂ ಒಪ್ಪಿ ಮೆರೆಯುತ್ತಿರುವ ಸುಂದರಸ್ತ್ರೀಯಂತೆ ವಿರಾಜಿಸುತ್ತ, ಹಗಲಿರುಳೂ ಏಕರೀತಿಯಾಗಿ ಬೆಳಗುತ್ತಿರುವ ಉನ್ನತವಾದ ರನ್ನದಮನೆಗಳಿಂದ ಕೂಡಿ ಕತ್ತಲೆ ಕವಿಯಲು ಅವಕಾಶವನ್ನೇ ಕೊಡದೆ ಶೋಭಿಸುತ್ತಿರುವ ಆ ಲಂಕಾಪಟ್ಟಣವನ್ನು ಅಡಿಗಡಿಗೂ ನೋಡಿ ನೋಡಿ ಆಶ್ಚರ್ಯಗೊಳ್ಳುತ್ತಿದ್ದ ವಾನರವೀರನಾದ ಆ ಆಂಜನೇಯನು, ರಾತ್ರಿಯ ವೇಳೆಯಲ್ಲಿ ಹ್ರಸ್ವಾಕಾರನಾಗಿ ಪುರಪ್ರವೇಶ ಮಾಡುತ್ತಿದ್ದುದನ್ನು ಆ ಲಂಕಾಭಿಮಾನಿದೇವತೆಯು ಕಂಡಳು. ‖ ೧೭–೨೦ ‖ ಆಗ ರಾವಣೇಶ್ವರನಿಂದ ಪರಿಪಾಲಿತಳಾದ ಆ ಲಂಕಿಣಿಯು ಭಯಂಕರಸ್ವರೂಪವುಳ್ಳವಳಾಗಿ ಪಟ್ಟಣವನ್ನು ಹೊಗುತ್ತಿರುವ ಮಾರುತಿಗೆ ಅಡ್ಡಲಾಗಿ ನಿಂತು ಸಿಂಹನಾದವನ್ನು ಮಾಡುತ್ತ ಅವನನ್ನು ಕುರಿತು, "ಎಲವೋ

---

* "ಪುರಸ್ತಾತ್ತಸ್ಯ ವೀರಸ್ಯ" ತಿ. ಪಾ.

ಮಬ್ರವೀತ್ಪವನಾತ್ಮಜಂ ‖ ೨೨ ‖ " ಕಸ್ತ್ವಂ ಕೇನ ಚ ಕಾರ್ಯೇಣ ಇಹ ಪ್ರಾಪ್ತೋ ವನಾಲಯ! । ಕಥಯಸ್ವೇವ ಯತ್ತತ್ತ್ವಂ ಯಾವತ್ಪ್ರಾಣಾಃ ಧರಂತಿ ತೇ ‖ ೨೩ ‖ ನಶಕ್ಯಂ ಖಲ್ವಿಯಂ ಲಂಕಾ ಪ್ರವೇಷ್ಟುಂ ವಾನರ ತ್ವಯಾ । ರಕ್ಷಿತಾ ರಾವಣಬಲೈ ರಭಿಗುಪ್ತಾ ಸಮಂತತಃ " ‖ ೨೪ ‖ ಅಥ ತಾಮಬ್ರವೀದ್ವೀರೋ ಹನೂಮಾನಗ್ರತ ಸ್ಥಿತಾಂ । " ಕಥಯಿಷ್ಯಾಮಿ ತೇ ತತ್ವಂ ಯನ್ಮಾಂ ತ್ವಂ ಪರಿಪೃಚ್ಛಸಿ ‖೨೫‖ ಕಾ ತ್ವಂ ವಿರೂಪನಯನಾ ಪುರದ್ವಾರೇಽವತಿಷ್ಠಸಿ? । ಕಿಮರ್ಥಂ ಚಾಪಿ ಮಾಂ¶ ರುದ್ಧ್ವಾ ನಿರ್ಭರ್ತ್ಸಯಸಿ ♆ ದಾರುಣಾ?" ‖ ೨೬ ‖ ಹನೂಮದ್ವಚನಂ ಶ್ರುತ್ವಾ ಲಂಕಾ ಸಾ

ಎಲೈ ವನಚರನೇ, ತ್ವಂ - ನೀನು, ಕಃ - ಯಾರು, ಕೇನಚಕಾರ್ಯೇಣ - ಯಾವ ಕಾರ್ಯದಿಂದ, ಇಹ - ಈ ಲಂಕೆಗೆ, ಪ್ರಾಪ್ತಃ - ಬಂದೆ, ತೇ - ನಿನ್ನ, ಪ್ರಾಣಾಃ - ಪ್ರಾಣಗಳು, ಯಾವತ್ - ಎಷ್ಟರ ವರೆಗೆ, ಧರಂತಿ - ಉಳಿದಿರುವುವೋ, (ತಾವತ್ - ಅಷ್ಟರೊಳಗೆ,) ಯತ್ - ಯಾವದು, ತತ್ವಂ - ಯಥಾರ್ಥವೋ, (ಅದನ್ನು,) ಇಹ - ನನ್ನ ಮುಂದೆ, ಕಥಯಸ್ವ - ಹೇಳು. ‖ ೨೩ ‖ ಹೇ ವಾನರ - ಎಲೈ ಕಪಿಯೇ, ರಾವಣಬಲೈಃ - ರಾವಣಾಸುರನ ಸೈನ್ಯಗಳಿಂದ, ರಕ್ಷಿತಾ - ಪಾಲಿಸಲ್ಪಟ್ಟ, ಸಮಂತತಃ - ಎಲ್ಲೆಡೆಯಲ್ಲಿಯೂ, ಅಭಿಗುಪ್ತಾ - ಸಂರಕ್ಷಿಲ್ಪಟ್ಟ, ಇಯಂಲಂಕಾ - ಈ ಲಂಕಾಪಟ್ಟಣವು, ಪ್ರವೇಷ್ಟುಂ - ಹೊಗಲು, ತ್ವಯಾ - ನಿನ್ನಿಂದ, ನಶಕ್ಯಂ - ಸಾಧ್ಯವಲ್ಲ. ‖ ೨೪ ‖ ಅಥ - ಅನಂತರ ದಲ್ಲಿ, ವೀರಃ - ಪರಾಕ್ರಮಿಯಾದ, ಹನೂಮಾನ್ - ಆಂಜನೇಯನು, ಅಗ್ರತಃ - ಮುಂದುಗಡೆ, ಸ್ಥಿತಾಂ ನಿಂತಿರುವ, ತಾಂ-ಆ ಲಂಕಿಣಿಯನ್ನು ಕುರಿತು, ಅಬ್ರವೀತ್-ಹೇಳಿದನು, ತ್ವಂ-ನೀನು, ಯತ್ತತ್ತ್ವಂ-ಯಾವ ವಸ್ತುಸ್ಥಿತಿಯನ್ನು ಕುರಿತು, ಮಾಂ-ನನ್ನನ್ನು, ಪರಿಪೃಚ್ಛಸಿ-ಕೇಳುವೆಯೋ, (ಅದನ್ನು,) ತೇ - ನಿನಗೆ, ಕಥಯಿಷ್ಯಾಮಿ ಮುಂದೆ ಹೇಳುವೆನು. ‖ ೨೫ ‖ ವಿರೂ....ನಾ - ವಿಕಾರವಾದ ಕಣ್ಣುಗಳುಳ್ಳ, ತ್ವಂ - ನೀನು, ಕಾ - ಯಾರು, ಪುರದ್ವಾರೇ - ಊರುಬಾಗಿಲಿನಲ್ಲಿ, ಅವತಿಷ್ಠಸಿ - ಇರುವೆ, ಮಾಂ - ನನ್ನನ್ನು, ರುದ್ಧ್ವಾ - ತಡೆದು, ದಾರುಣಾ - ಕ್ರೂರಳಾಗಿ, ಕಿಮರ್ಥಂ - ಏತಕ್ಕೋಸ್ಕರ, ನಿರ್ಭರ್ತ್ಸಯಸಿ - ಹೆದರಿಸುತ್ತಿರುವೆ. ‖ ೨೬ ‖ ಕಾಮರೂಪಿಣೀ - ಕಾಮರೂಪಿಣಿ ಯಾದ, ಸಾಲಂಕಾ - ಆ ಲಂಕಿಣಿಯು, ಹನುಮದ್ವಚನಂ - ಆಂಜನೇಯನ ವಾಕ್ಯವನ್ನು, ಶ್ರುತ್ವಾ -

---

ವನಚರನೇ! ನೀನಾರು? ಯಾವ ಕಾರ್ಯಕ್ಕೋಸುಗವಾಗಿ ಇಲ್ಲಿಗೆ ಬಂದಿರುವೆ? ನಾನು ನಿನ್ನನ್ನು ಸಂಹರಿಸುವುದಕ್ಕೆ ಮುಂಚೆಯೇ ನಿನ್ನ ವೃತ್ತಾಂತವೆಲ್ಲವನ್ನೂ ಯಥಾರ್ಥವಾಗಿ ತಿಳಿಸು. ಎಲೈ ವಾನರನೇ! ನಾಲ್ಕು ಕಡೆಗಳಲ್ಲಿಯೂ ಕೋಟೆಕೊತ್ತಲಗಳಿಂದ ಸುತ್ತುವರೆದು ರಾವಣಾಸುರನ ಸೈನ್ಯದಿಂದ ಚನ್ನಾಗಿ ಸಂರಕ್ಷಿಸಲ್ಪಡುತ್ತಿರುವ ಈ ಲಂಕಾಪಟ್ಟಣವನ್ನು ನೀನು ಎಷ್ಟುಮಾತ್ರಕ್ಕೂ ಪ್ರವೇಶಿಸಲಾರೆ" ಎಂದು ಹೇಳಿದಳು. ‖ ೨೧–೨೫ ‖ ಆಗ ಮಹಾ ವೀರನಾದ ಹನುಮಂತನು ತನ್ನ ಮುಂಗಡೆ ನಿಂತು ಗರ್ಜಿಸುತ್ತಿರುವ ಆ ಲಂಕಿಣಿ ಯನ್ನುನೋಡಿ, "ಎಲೌ ಸ್ತ್ರೀಯೆ! ನೀನು ಯಾವ ವಿಷಯವಾಗಿ ನನ್ನನ್ನು ಪ್ರಶ್ನಿಸಿದೆಯೋ ಆ ವಿಷಯದ ಯಾಥಾರ್ಥ್ಯವನ್ನು ನಾನು ತಿಳಿಸುತ್ತೇನೆ, ಅದಕ್ಕೆ ಮೊದಲು ವಿಕಾರನೇತ್ರಗಳುಳ್ಳ ವಳಾಗಿ ಈ ರೀತಿ ಗರ್ಜಿಸುತ್ತ ನಿಂತಿರುವ ನೀನಾರೆಂಬುದನ್ನು ತಿಳಿಸು; ಯಾವ ಕಾರಣದಿಂದ

¶ "ಕ್ರೋಧಾತ್" ತಿ. ಪಾ. ♆ "ದಾರುಣೇ" ತಿ. ಪಾ.

ಕಾಮರೂಪಿಣೀ । ಉವಾಚ ವಚನಂ ಕ್ರುದ್ಧಾ ಪರುಷಂ ಪವನಾತ್ಮಜಂ ॥ ೨೭ ॥ "ಅಹಂ ರಾಕ್ಷಸರಾಜಸ್ಯ ರಾವಣಸ್ಯ ಮಹಾತ್ಮನಃ । ಆಜ್ಞಾಪ್ರತೀಕ್ಷಾ ದುರ್ಧರ್ಷಾ ರಕ್ಷಾಮಿ ನಗರೀಮಿಮಾಂ ॥ ೨೮ ॥ ನಶಕ್ಯಾ ಮಾಮವಜ್ಞಾಯ ಪ್ರವೇಷ್ಟುಂ ನಗರೀ ತ್ವಯಾ । ಅದ್ಯ ಪ್ರಾಣೈಃ ಪರಿತ್ಯಕ್ತಃ ಸ್ವಪ್ಸ್ಯಸೇ ನಿಹತೋ ಮಯಾ ॥ ೨೯ ॥ ಅಹಂ ಹಿ ನಗರೀ ಲಂಕಾ ಸ್ವಯಮೇವ ಪ್ಲವಂಗಮ! । ಸರ್ವತಃ ಪರಿರಕ್ಷಾಮಿ ಹ್ಯೇತತ್ತೇ ಕಥಿತಂ ಮಯಾ" ॥ ೩೦ ॥ ಲಂಕಾಯಾ ವಚನಂ ಶ್ರುತ್ವಾ ಹನುಮಾನ್ಮಾರುತಾ

ಕೇಳಿ, ಕೃದ್ಧಾ - ಕೋಪವುಳ್ಳವಳಾಗಿ, ಪವನಾತ್ಮಜಂ - ವಾಯುಪುತ್ರನನ್ನು ಕುರಿತು, ಪರುಷಂ - ಕಠಿನವಾದ, ವಚನಂ - ಮಾತನ್ನು, ಉವಾಚ - ಹೇಳಿದಳು. ||೨೭|| ಅಹಂ - ನಾನು, ರಾಕ್ಷ....ಸ್ಯ - ರಾಕ್ಷಸಾಧಿಪತಿಯಾದ, ಮಹಾತ್ಮನಃ - ಮಹಾನುಭಾವನಾದ, ರಾವಣಸ್ಯ - ರಾವಣಾಸುರನ, ಆಜ್ಞಾಪ್ರತೀಕ್ಷಾ - ಆಜ್ಞಾವಶಳು, ದುರ್ಧರ್ಷಾ - ತಿರಸ್ಕರಿಸಲಶಕ್ಯಳಾಗಿ, ಇಮಾಂನಗರೀಂ - ಈ ಪಟ್ಟಣವನ್ನು, ರಕ್ಷಾಮಿ - ಸಂರಕ್ಷಿಸುತ್ತಿದ್ದೇನೆ. ॥ ೨೮ ॥ ಮಾಂ - ನನ್ನನ್ನು, ಅವಜ್ಞಾಯ - ಅಲಕ್ಷ್ಯಮಾಡಿ, ನಗರೀಂ-ಪಟ್ಟಣವನ್ನು, ಪ್ರವೇಷ್ಟುಂ-ಪ್ರವೇಶಿಸಲು, ತ್ವಯಾ-ನಿನ್ನಿಂದ, ನಶಕ್ಯಂ-ಸಾಧ್ಯವಲ್ಲ, ಅದ್ಯ - ಈಗಲೇ, ಮಯಾ - ನನ್ನಿಂದ, ನಿಹತಃ - ಮಡಿದು, ಪ್ರಾಣೈಃ - ಪ್ರಾಣಗಳಿಂದ, ಪರಿತ್ಯಕ್ತಃ - ಬಿಡಲ್ಪಟ್ಟವನಾಗಿ, ಸ್ವಪ್ಸ್ಯಸೇ - ಮಲಗುತ್ತೀಯೆ. ॥ ೨೯ ॥ ಹೇ ಪ್ಲವಂಗಮ - ಎಲೈ ವಾನರನೇ, ಹಿ - ಯಾವ ಕಾರಣದಿಂದ, ಅಹಂ - ನಾನು, ಲಂಕಾನಗರೀ - ಲಂಕಾಭಿಮಾನಿಯೋ, ತತ್ - ಆ ಕಾರಣದಿಂದ, ಸ್ವಯಮೇವ - ನಾನೇ, ಸರ್ವತಃ - ಎಲ್ಲಾ ಪ್ರದೇಶಗಳಲ್ಲಿಯೂ, ಪರಿರಕ್ಷಾಮಿ - ಸಂರಕ್ಷಣೆ ಮಾಡುತ್ತಿರುವೆನು, ಏತತ್ - ಈ ಮಾತು, ತೇ - ನಿನಗೆ, ಮಯಾ - ನನ್ನಿಂದ, ಕತಿಥಂ - ಹೇಳಲ್ಪಟ್ಟಿತು. ॥ ೩೦ ॥ ಹರಿಶ್ರೇಷ್ಠಃ - ವಾನರ ಶ್ರೇಷ್ಠನಾದ, ಮಾರುತಾತ್ಮಜಃ - ವಾಯುನಂದನನಾದ, ಹನೂಮಾನ್ - ಆಂಜನೇಯನು, ಲಂಕಾಯಾಃ - ಲಂಕಿಣಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಯತ್ನವಾನ್ - ಪ್ರಯತ್ನವುಳ್ಳವನಾಗಿ, ಅಪರಃ - ಮತ್ತೊಂದಾದ, ಶೈಲಇವ -

---

ಈ ಪುರದ್ವಾರಕ್ಕೆ ಅಡ್ಡಲಾಗಿ ನಿಂತಿರುವೆ; ಮಹಾ ಭಯಂಕರವಾದ ಈ ಆಕಾರವನ್ನು ತಾಳಿ ನನ್ನನ್ನಡ್ಡಗಿಸಿ ಬೆದರಿಸುತ್ತಿರುವೆಯೇಕೆ? ಈ ವೃತ್ತಾಂತವೆಲ್ಲವನ್ನೂ ಮೊದಲು ತಿಳಿಸು; ಆ ಬಳಿಕ ನನ್ನ ವೃತ್ತಾಂತವನ್ನು ತಿಳಿಸುತ್ತೇನೆ" ಎಂದನು. ಹೀಗೆ ನುಡಿದ ಆ ಕಪಿವೀರನ ಮಾತುಗಳನ್ನುಕೇಳಿ ಕಾಮರೂಪಿಣಿಯಾದ ಆ ಲಂಕಿಣಿಯು ಬಹುವಾಗಿ ಕೋಪಗೊಂಡು ಅವನನ್ನು ಕ್ರೂರವಾಗಿ ಗದ್ದರಿಸುತ್ತ, "ಎಲವೋ ವಾನರಾಧಮನೇ! ನಾನಾರೆಂದು ತಿಳಿದಿರುವೆ? ರಾಕ್ಷಸೇಶ್ವರನೂ, ಮಹಾ ಪರಾಕ್ರಮಶಾಲಿಯೂ ಆದ ರಾವಣಾಸುರನ ಆಜ್ಞಾಧಾರಕಳು; ಆತನ ಆಜ್ಞೆಯಿಂದಲೇ ಈ ನಗರವನ್ನು ರಕ್ಷಿಸುತ್ತಿದ್ದೇನೆ; ನನ್ನನ್ನೆದುರಿಸಲು ಯಾರಿಂದಲೂ ಸಾಧ್ಯವಿಲ್ಲ. ನೀನು ನನ್ನನ್ನು ಜಯಿಸಿ ಈ ನಗರವನ್ನು ಹೊಗಲು ಎಷ್ಟು ಮಾತ್ರಕ್ಕೂ ಶಕ್ಯನಲ್ಲ. ಎಲೈ ಕಪಿಯೇ! ಈಗ ನೀನು ನನ್ನಿಂದ ಹತನಾಗಿ ಪ್ರಾಣಗಳನ್ನು ತೊರೆದು ಮಹಾ ನಿದ್ರೆಯನ್ನು ಹೊಂದುವೆ; ನಾನು ಈ ಪಟ್ಟಣದ ಅಭಿಮಾನಿದೇವತೆಯು; ನಾನೇ ಸಾಕ್ಷಾತ್ತಾಗಿ ಈ ಪಟ್ಟಣವನ್ನು ಸಂರಕ್ಷಿಸುತ್ತಿದ್ದೇನೆ, ಇದೇ ನನ್ನ ವೃತ್ತಾಂತವು. ಇನ್ನು ನಿನ್ನ ವೃತ್ತಾಂತವನ್ನು ತಿಳಿಸು" ಎಂದಳು. ॥ ೨೬–೩೧ ॥ ವಿಕಾರವಾದ ಸ್ತ್ರೀರೂಪ

ತ್ಮಜಃ । ಯತ್ನವಾನ್ ಸ ಹರಿಶ್ರೇಷ್ಠಸ್ಸ್ಥಿತಶ್ಶೈಲ ಇವಾಪರಃ ॥ ೩೦ ॥ ಸ ತಾಂ ಸ್ತ್ರೀರೂಪವಿಕೃತಾಂ ದೃಷ್ಟ್ವಾ ವಾನರಪುಂಗವಃ । ಆಬಭಾಷೇಽಥ ಮೇಧಾವೀ ಸತ್ತ್ವವಾನ್ ಪ್ಲವಗರ್ಷಭಃ ॥೩೧॥ "ದ್ರಕ್ಷ್ಯಾಮಿ ನಗರೀಂ ಲಂಕಾಂ ಸಾಟ್ಟಪ್ರಾಕಾರತೋರಣಾಂ ॥ ೩೨ ॥ ಇತ್ಯರ್ಥಮಿಹ ಸಂಪ್ರಾಪ್ತಃ ಪರಂ ಕೌತೂಹಲಂ ಹಿ ಮೇ । ವನಾನ್ಯುಪವನಾನೀಹ ಲಂಕಾಯಾಃ ಕಾನನಾನಿಚ ॥೩೩॥ ಸರ್ವತೋ ಗೃಹಮುಖ್ಯಾನಿ ದ್ರಷ್ಟುಮಾಗಮನಂ ಹಿ ಮೇ" । ತಸ್ಯ ತದ್ವಚನಂ ಶ್ರುತ್ವಾ ಲಂಕಾ ಸಾ ಕಾಮರೂಪಿಣೀ ॥೩೪॥ ಭೂಯ ಏವ ಪುನರ್ವಾಕ್ಯಂ ಬಭಾಷೇ ಪರುಷಾಕ್ಷರಂ । "ಮಾಮ

ಪರ್ವತದಂತೆ ಸ್ಥಿರವಾಗಿ, ಸ್ಥಿತಃ - ನಿಂತನು. ॥ ೩೦ ॥ ಮೇಧಾವೀ - ಬುದ್ಧಿವಂತನಾದ, ಸತ್ತ್ವವಾನ್ - ಬಲಿಷ್ಠನಾದ, ಪ್ಲವಗರ್ಷಭಃ - ದಾಟುವವರಲ್ಲಿ ಉತ್ತಮನಾದ, ವಾನರಪುಂಗವಃ - ಕಪಿಶ್ರೇಷ್ಠನಾದ, ಸಃ - ಆ ಹನುಮಂತನು, ಸ್ತ್ರೀರೂ....ತಾಂ - ಸ್ತ್ರೀರೂಪದಿಂದ ವಿಕಾರಳಾದ, ತಾಂ - ಆ ಲಂಕಿಣಿಯನ್ನು, ದೃಷ್ಟ್ವಾ - ಕಂಡು, ಅಥ - ಅನಂತರದಲ್ಲಿ, ಆಬಭಾಷೇ - ಹೇಳಿದನು. ॥ ೩೧ ॥ ಹಿ-ಯಾವ ಕಾರಣದಿಂದ, ಮೇ - ನನಗೆ, ಪರಂ - ಬಹಳ, ಕೌತೂಹಲಂ - ಕುತೂಹಲವೋ, ತತ್ - ಆ ಕಾರಣದಿಂದ, ಸಾಟ್ಟ....ಣಾಂ - ಬುರುಜುಗಳಿಂದಲೂ, ಕೋಟೆಯಿಂದಲೂ, ಊರುಬಾಗಿಲುಗಳಿಂದಲೂ ಕೂಡಿರುವ, ಲಂಕಾಂನಗರೀಂ - ಈ ಲಂಕಾಪಟ್ಟಣವನ್ನು, ದ್ರಕ್ಷ್ಯಾಮಿ - ನೋಡುತ್ತೇನೆ, ಇತ್ಯರ್ಥಂ- ಇದಕ್ಕೋಸ್ಕರ, ಇಹ - ಇಲ್ಲಿಗೆ, ಪ್ರಾಪ್ತಃ - ಬಂದೆನು. ॥ ೩೨ ॥ ಇಹ - ಈಗಲೇ, ಲಂಕಾಯಾಃ - ಲಂಕಾಪಟ್ಟಣದ, ವನಾನಿ - ತೋಪುಗಳನ್ನೂ, ಉಪವನಾನಿ - ಉದ್ಯಾನವನಗಳನ್ನೂ, ಕಾನನಾನಿ - ಕಾಡುಗಳನ್ನೂ, ಸರ್ವತಃ - ಎಲ್ಲಾ ಕಡೆಯಲ್ಲಿಯೂ ಇರುವ, ಗೃಹಮುಖ್ಯಾನಿ - ಶ್ರೇಷ್ಠವಾದ ಮನೆಗಳನ್ನೂ, ದ್ರಷ್ಟುಂ - ನೋಡಲೋಸುಗ, ಮೇ - ನನ್ನ, ಆಗಮನಂಹಿ - ಬರುವಿಕೆಯಷ್ಟೆ. ॥ ೩೩ ॥ ಕಾಮರೂಪಿಣೀ - ಕಾಮರೂಪಿಣಿಯಾದ, ಸಾಲಂಕಾ - ಆ ಲಂಕಿಣಿಯು, ತಸ್ಯ - ಆ ಆಂಜನೇಯನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಭೂಯಃ - ಬಹಳ, ಪರುಷಾಕ್ಷರಂ - ಕ್ರೂರಗಳಾದ ವರ್ಣಗಳುಳ್ಳ, ವಾಕ್ಯಮೇವ - ವಚನವನ್ನೇ, ಪುನಃ - ಮತ್ತೆ, ಬಭಾಷೇ - ನುಡಿದಳು. ॥ ೩೪ ॥ ಹೇ ದುರ್ಬುದ್ಧೇ - ಎಲೈ ದುಷ್ಟಮತಿಯುಳ್ಳವನೇ, ಹೇ ವಾನರಾಧಮ - ಎಲೈ ವಾನರಾಧಮನೇ,

---

ವನ್ನು ಧರಿಸಿರುವ ಆ ಲಂಕಿಣಿಯ ಮಾತುಗಳನ್ನು ಕೇಳಿ ಧೀರನಾದ ಆ ವಾನರಶ್ರೇಷ್ಠನು ಯುದ್ಧಸನ್ನದ್ಧನಾಗಿ ಬೆಟ್ಟದಂತೆ ನೆಲೆಯಾಗಿ ನಿಂತು ಅವಳನ್ನು ಕುರಿತು, "ಎಲೌ ನಾನು ಮುಗಿಲಟ್ಟೆಗಳಿಂದಲೂ, ಕೋಟೆಕೊತ್ತಲಗಳಿಂದಲೂ, ಸೊಗಸಾದ ಊರುಬಾಗಿಲುಗಳಿಂದಲೂ ಶೋಭಿಸುತ್ತಿರುವ ಈ ಲಂಕಾಪಟ್ಟಣವನ್ನು ನೋಡಲು ಕುತೂಹಲವುಳ್ಳವನಾಗಿ ಇಲ್ಲಿಗೆ ಬಂದೆನು. ಇದೇ ನನ್ನ ಉದ್ದೇಶವು. ನಾನು ಇಲ್ಲಿರುವ ವನೋಪವನಗಳನ್ನೂ, ಗೃಹಾರಾಮಗಳನ್ನೂ, ಮುಖ್ಯಮುಖ್ಯವಾದ ರಾಜಭವನಗಳನ್ನೂ ಕಾಣಬೇಕೆಂಬ ಬಯಕೆಯಿಂದಲೇ ಬಂದಿರುವೆನು. ಮತ್ತಾವ ದುರುದ್ದೇಶವೂ ನನಗಿಲ್ಲವು" ಎಂದನು. ॥ ೩೧-೩೪ ॥ ಆಗ ಕಾಮರೂಪಿಣಿಯಾದ ಆ ಲಂಕಿಣಿಯು ಆತನ ಸಾಂತ್ವವಚನಗಳನ್ನು ಕೇಳಿಯೂ ಸುಮ್ಮನಾಗದೆ ಮತ್ತೂ ಕಠಿನವಾದ ಮಾತುಗಳಿಂದ ಆತನನ್ನು ಕುರಿತು, "ಎಲವೋ ದುಷ್ಟಬುದ್ಧಿಯುಳ್ಳ ಕಪಿಯೇ! ರಾವಣೇಶ್ವರನಿಂದ ಸಂರಕ್ಷಿತಳಾದ ನನ್ನನ್ನು ಜಯಿಸದೆ ಈ ಪಟ್ಟಣ

ನಿರ್ಜಿತ್ಯ ದುರ್ಬುದ್ಧೇ! ರಾಕ್ಷಸೇಶ್ವರಪಾಲಿತಾಂ ॥೩೬॥ ನಶಕ್ಯಮದ್ಯ ತೇ ದ್ರಷ್ಟುಂ ಪುರೀಯಂ ವಾನರಾಧಮ!" । ತತಸ್ಸಕಪಿಶಾರ್ದೂಲಸ್ತಾಮುವಾಚ ನಿಶಾಚರೀಂ ॥ ೩೭ ॥ "ದೃಷ್ಟ್ವಾ ಪುರೀಮಿಮಾಂ ಭದ್ರೇ! ಪುನರ್ಯಾಸ್ಯೇ ಯಥಾಗತಂ । ತತಃ ಕೃತ್ವಾ ಮಹಾನಾದಂ ಸಾ ವೈ ಲಂಕಾ ಭಯಾವಹಂ ॥ ೩೮ ॥ ತಲೇನ ವಾನರಶ್ರೇಷ್ಠಂ ತಾಡಯಾಮಾಸ ವೇಗಿತಾ । ತತಸ್ಸಕಪಿಶಾರ್ದೂಲೋ ಲಂಕಯಾ ತಾಡಿತೋ ಭೃಶಂ ॥೩೯॥ ನನಾದ ಸುಮಹಾನಾದಂ ವೀರ್ಯವಾನ್ ಪವನಾತ್ಮಜಃ । ತತಸ್ಸಂವರ್ತಯಾಮಾಸ ವಾಮಹಸ್ತಸ್ಯ ಸೋಽಂಗುಳೀಃ ॥ ೪೦ ॥ ಮುಷ್ಟಿನಾಽಭಿಜಘಾನೈನಾಂ ಹನೂಮಾನ್ ಕ್ರೋಧಮೂರ್ಛಿತಃ । ಸ್ತ್ರೀಚೇತಿ ಮನ್ಯಮಾನೇನ ನಾತಿಕ್ರೋಧಸ್ಸ್ವಯಂಕೃತಃ ॥ ೪೧ ॥ ಸಾತು ತೇನ ಪ್ರಹಾರೇಣ ವಿಹ್ವಲಾಂಗೀ ನಿಶಾಚರೀ ।

ರಾಕ್ಷ....ತಾಂ - ರಾವಣನಿಂದ ರಕ್ಷಿಸಲ್ಪಟ್ಟ, ಮಾಂ-ನನ್ನನ್ನು, ಅನಿರ್ಜಿತ್ಯ - ಜಯಿಸದೆ, ಅದ್ಯ-ಈಗ, ತೇ - ನಿನಗೆ, ಇಯಂಪುರೀ - ಈ ಪಟ್ಟಣವು, ದ್ರಷ್ಟುಂ - ನೋಡಲು, ನಶಕ್ಯಂ-ಸಾಧ್ಯವಿಲ್ಲವು. ॥೩೬॥ ತತಃ - ಅನಂತರದಲ್ಲಿ, ಸಕ....ಲಃ - ಆ ವಾನರೋತ್ತಮನು, ತಾಂನಿಶಾಚರೀಂ - ಆ ಲಂಕೆಯನ್ನು ಕುರಿತು, ಉವಾಚ-ಹೇಳಿದನು, ಹೇ ಭದ್ರೇ-ಎಲೌ ಮಂಗಳಕರಳೇ, ಇಮಾಂಪುರೀಂ-ಈ ನಗರವನ್ನು, ದೃಷ್ಟ್ವಾ-ಕಂಡು, ಪುನಃ-ಮರಳಿಯೂ, ಯಥಾಗತಂ-ಬಂದಂತೆ, ಯಾಸ್ಯೇ-ಹೋಗುವೆನು. ॥ ೩೭ ॥ ತತಃ - ಅನಂತರದಲ್ಲಿ, ಸಾಲಂಕಾ - ಆ ಲಂಕೆಯು, ಭಯಾವಹಂ - ಭಯಂಕರವಾದ, ಮಹಾನಾದಂ-ಗರ್ಜನೆಯನ್ನು, ಕೃತ್ವಾ - ಮಾಡಿ, ವೇಗಿತಾ - ದುಡುಕಿ, ತಲೇನ - ಅಂಗೈಯಿಂದ, ವಾನರಶ್ರೇಷ್ಠಂ-ಹನುಮಂತನನ್ನು, ತಾಡಯಾಮಾಸ - ಹೊಡೆದಳು. ॥ ೩೮ ॥ ತತಃ - ಅನಂತರದಲ್ಲಿ, ಲಂಕಯಾ - ಲಂಕಿಣಿಯಿಂದ, ಭೃಶಂ - ಬಹಳವಾಗಿ, ತಾಡಿತಃ - ಹೊಡಿಯಲ್ಪಟ್ಟ, ಕಪಿಶಾರ್ದೂಲಃ - ವಾನರಶ್ರೇಷ್ಠನಾದ, ವೀರ್ಯವಾನ್-ಪರಾಕ್ರಮಿಯಾದ, ಪವನಾತ್ಮಜಃ-ವಾಯುಪುತ್ರನು, ಸುಮಹಾನಾದಂ-ಮಹಾ ಧ್ವನಿಯಿಂದ, ನನಾದ - ಗರ್ಜಿಸಿದನು. ॥೩೯॥ ತತಃ - ಅನಂತರದಲ್ಲಿ, ಕ್ರೋಧಮೂರ್ಛಿತಃ_ ಕೋಪದಿಂದ ಮೈಮರೆತ, ಸಹನೂಮಾನ್ - ಆ ಆಂಜನೇಯನು, ವಾಮಹಸ್ತಸ್ಯ - ಎಡಗೈಯಿನ, ಅಂಗುಳೀಃ - ಬೆರಳುಗಳನ್ನು, ಸಂವರ್ತಯಾಮಾಸ - ಮೊಗಚಿದನು, ಮುಷ್ಟಿನಾ - ಕೈಹಿಡಿಯಿಂದ, ಏನಾಂ - ಈ ಲಂಕಿಣಿಯನ್ನು, ಅಭಿಜಘಾನ - ಹೊಡೆದನು. ॥ ೪೦ ॥ ಸ್ತ್ರೀಚೇತಿ - ಹೆಂಗುಸೆಂದು, ಮನ್ಯಮಾನೇನ - ತಿಳದಿರುವ ಹನುಮಂತನಿಂದ, ಸ್ವಯಂ - ತನ್ನಷ್ಟಕ್ಕೆತಾನೇ, ಅತಿಕ್ರೋಧಃ - ಬಹಳಸಿಟ್ಟು, ನಕೃತಃ - ಮಾಡಲ್ಪಡಲಿಲ್ಲ. ॥ ೪೧ ॥ ಸಾನಿಶಾಚರೀತು - ಆ ಲಂಕಿಣಿಯು, ತೇನ

ವನ್ನೆಂದಿಗೂ ನೋಡಲಾರೆ" ಎಂದು ಗದರಿಸಿದಳು. ಆಗಲಾ ಕಪಿಶ್ರೇಷ್ಠನು, "ಎಲೌ ಮಂಗಳಕರಳೇ! ನೀನು ನನ್ನಲ್ಲಿ ಸಂಶಯಪಡಬೇಡ, ನಾನು ಈ ಪಟ್ಟಣವನ್ನು ನೋಡಿದ ಬಳಿಕ ಹೇಗೆ ಬಂದೆನೋ ಹಾಗೆಯೇ ಹಿಂದಿರುಗುವೆನು" ಎಂದು ಹೇಳಿದನು. ಆ ಲಂಕಿಣಿಯು ಭಯಂಕರವಾಗಿ ಕೂಗುತ್ತ ಅಂಗೈಯಿಂದ ಆ ವಾನರೋತ್ತಮನನ್ನು ಬಲವಾಗಿ ಹೊಡೆದಳು. ॥೩೩–೩೮॥ ಆಗ ಮಹಾ ಪರಾಕ್ರಮಿಯಾದ ಹನುಮಂತನಿಗೆ ತಡೆಯಲಾರದಷ್ಟು ಕೋಪವು ಬಂದಿತು. ಕೂಡಲೇ ಆತನು ಸಿಂಹನಾದವನ್ನು ಮಾಡಿ ರೋಷದಿಂದ ಕೆಂಪಡರಿದ ಕಂಗಳುಳ್ಳವನಾಗಿ ತನ್ನೆಡಗೈಯಿನ ಬೆರಳುಗಳೆಲ್ಲವನ್ನೂ ಮುದುಡಿಕೊಂಡು ಮುಷ್ಟಿಯಿಂದ ಆ ಲಂಕಿಣಿಯನ್ನು ಅಪ್ಪಳಿಸಿದನು. ಆ ಮಹಾತ್ಮನು ಸ್ತ್ರೀಯೆಂದು ತನ್ನ ಸಂಪೂರ್ಣ

ಪಪಾತ ಸಹಸಾ ಭೂಮೌ ವಿಕೃತಾನನದರ್ಶನಾ ॥೪೨॥ ತತಸ್ತು ಹನುಮಾನ್ ಪ್ರಾಜ್ಞ ಸ್ತಾಂ ದೃಷ್ಟ್ವಾ ವಿನಿಪಾತಿತಾಂ । ಕೃಪಾಂ ಚಕಾರ ತೇಜಸ್ವೀ ಮನ್ಯಮಾನಃ ಸ್ತ್ರಿಯಂ ತು ತಾಂ ॥ ೪೩ ॥ ತತೋ ವೈ ಭೃಶಸಂವಿಗ್ನಾ ಲಂಕಾ ಸಾ ಗದ್ಗದಾಕ್ಷರಂ । ಉವಾಚಾಗರ್ವಿತಂ ವಾಕ್ಯಂ ಹನೂಮಂತಂ ಪ್ಲವಂಗಮಂ ॥ ೪೪ ॥ " ಪ್ರಸೀದ! ಸುಮಹಾಬಾಹೋ! ತ್ರಾಯಸ್ವ! ಹರಿಸತ್ತಮ!। ಸಮಯೇ ಸೌಮ್ಯ! ತಿಷ್ಠಂತಿ ಸತ್ವವಂತೋ ಮಹಾಬಲಾಃ ॥ ೪೫ ॥ ಅಹಂತು ನಗರೀ ಲಂಕಾ ಸ್ವಯಮೇವ ಪ್ಲವಂಗಮ! । ನಿರ್ಜಿತಾಽಹಂ ತ್ವಯಾ ವೀರ ವಿಕ್ರಮೇಣ ಮಹಾಬಲ! ॥ ೪೬ ॥ ಇದಂ ತು ತಥ್ಯಂ

ಪ್ರಹಾರೇಣ - ಆ ಪೆಟ್ಟಿನಿಂದ, ವಿಹ್ವಲಾಂಗೀ - ಕಳವಳಗೊಂಡ ಶರೀರವುಳ್ಳವಳಾಗಿ, ವಿಕೃ....ನಾ - ವಿಕಾರವುಳ್ಳ ಮುಖವೂ, ದೃಷ್ಟಿಯೂ ಉಳ್ಳವಳಾಗಿ, ಭೂಮೌ - ಭೂಮಿಯಲ್ಲಿ, ಸಹಸಾ - ಜಾಗ್ರತೆಯಾಗಿ, ಪಪಾತ - ಬಿದ್ದಳು. ॥೪೨॥ ತತಃ - ಅನಂತರದಲ್ಲಿ, ಪ್ರಾಜ್ಞಃ - ತಿಳದವನಾದ, ತೇಜಸ್ವೀ - ತೇಜೋವಂತನಾದ, ಹನುಮಾಂಸ್ತು-ಹನುಮಂತನಾದರೆ, ವಿನಿಪಾತಿತಾಂ-ಕೆಡುಹಲ್ಪಟ್ಟ, ತಾಂ-ಆ ಲಂಕಿಣಿಯನ್ನು, ದೃಷ್ಟ್ವಾ - ಕಂಡು, ಸ್ತ್ರಿಯಂತು - ಹೆಂಗುಸೆಂದು, ಮನ್ಯಮಾನಃ - ಭಾವಿಸಿ ಕೃಪಾಂ - ದಯೆಯನ್ನು, ಚಕಾರ - ಮಾಡಿದನು. ॥ ೪೩ ॥ ತತಃ - ಅನಂತರದಲ್ಲಿ, ಭೃಶಂಸವಿಗ್ನಾ - ಬಹಳವಾಗಿ ಗಾಬರಿಬಿದ್ದ, ಸಾಲಂಕಾವೈ - ಆ ಲಂಕಿಣಿಯಾದರೆ, ಪ್ಲವಂಗಮಂ - ವಾನರನಾದ, ಹನೂಮಂತಂ-ಹನುಮಂತನನ್ನು ಕುರಿತು, ಅಗರ್ವಿತಂ-ಅಹಂಕಾರವಿಲ್ಲದಿರುವ, ವಾಕ್ಯಂ-ಮಾತನ್ನು, ಗದ್ಗದಾಕ್ಷರಂ - ವಿಕಾರಧ್ವನಿಯುಳ್ಳ ವರ್ಣಗಳುಳ್ಳಂತೆ, ಉವಾಚ - ಹೇಳಿದಳು. ॥ ೪೪ ॥ ಹೇ ಸುಮಹಾಬಾಹೋ - ಸಮೀಚೀನವಾದ ದೊಡ್ಡ ಭುಜಗಳುಳ್ಳವನೇ, ಪ್ರಸೀದ - ಪ್ರಸನ್ನನಾಗು, ಹೇ ಹರಿಸತ್ತಮ - ಎಲೈ ವಾನರವರನೇ, ತ್ರಾಯಸ್ವ - ಸಂರಕ್ಷಿಸು, ಹೇ ಸೌಮ್ಯ - ಎಲೈ ಸೌಮ್ಯನೇ, ಮಹಾಬಲಾಃ-ಬಲಿಷ್ಠರಾದ, ಸತ್ವವಂತಃ-ಸಾತ್ವಿಕರು, ಸಮಯೇ-ನಿಬಂಧನೆಯಲ್ಲಿ, ತಿಷ್ಠಂತಿ - ಇರುತ್ತಾರೆ. ॥ ೪೫ ॥ ಹೇ ಹರೀಶ್ವರ - ಎಲೈ ಕಪಿಶ್ರೇಷ್ಠನೇ, ತಥ್ಯಂ-ಯಥಾರ್ಥವನ್ನು, ಬ್ರುವಂತ್ಯಾಃ - ಹೇಳುತ್ತಿರುವ, ಮೇ - ನನ್ನ, ಇದಂತು - ಈ ವಚನವನ್ನು, ಶ್ರುಣು - ಕೇಳು, ಪುರಾ - ಪೂರ್ವದಲ್ಲಿ, ಸ್ವಯಂಭುವಾ - ಬ್ರಹ್ಮನಿಂದ, ಮೇ - ನನಗೆ, ಯಥಾ-ಯಾವಪ್ರಕಾರ, ವರದಾನಂ - ವರಪ್ರದಾನವು,

---

ಬಲವನ್ನುಪಯೋಗಿಸದಿದ್ದರೂ ಆ ರಾಕ್ಷಸಿಯು ಆತನ ಅಲ್ಪ ತಾಡನದಿಂದಲೇ ವಿಹ್ವಲಾಂಗಳಾಗಿ ರಕ್ತವನ್ನು ಕಾರುತ್ತ ನೆಲಕ್ಕುರುಳಿದಳು. ॥ ೩೯–೪೨ ॥ ಮಹಾ ಪ್ರಾಜ್ಞನಾದ ಹನುಮಂತನು ನೆಲಕ್ಕುರುಳಿದ ಆ ರಾಕ್ಷಸಿಯನ್ನು ನೋಡಿ ಸ್ತ್ರೀಯೆಂದು ಕೃಪಾಪರವಶನಾಗಿ ಅವಳನ್ನು ಸಂಹರಿಸದೆ ಸುಮ್ಮನಾದನು. ಆಗಲವಳು ಸಂಕಟದಿಂದ ಗದ್ಗದಧ್ವನಿಯುಳ್ಳವಳಾಗಿ ಆತನನ್ನುಕುರಿತು ವಿನಯದಿಂದ, " ಎಲೈ ಮಹಾ ಭುಜನಾದ ಕಪಿಸತ್ತಮನೇ! ಪ್ರಸನ್ನನಾಗು, ನನ್ನನ್ನು ಕಾಪಾಡು. ಎಲೈ ಸೌಮ್ಯನೇ! ಮಹಾ ಪರಾಕ್ರಮಶಾಲಿಗಳಾದ ಪುರುಷರು ಸ್ತ್ರೀಹತ್ಯೆಯು ಸಂಭವಿಸುವ ಕಾಲದಲ್ಲಿ ಅನುಗ್ರಹಬುದ್ಧಿಯಿಂದಲೇ ಸುಮ್ಮನಿರುತ್ತಾರೆಯಲ್ಲವೆ? ಆದುದರಿಂದ ಈಗ ನೀನು ನನ್ನಲ್ಲಿ ಕೃಪೆಮಾಡಿ ಕಾಪಾಡಬೇಕು. ಎಲೈ ಶೂರನೇ! ನಾನು ಈ ಲಂಕಾಪಟ್ಟಣಕ್ಕೆ ಅಭಿಮಾನಿದೇವತೆಯು, ಯಾರಿಂದಲೂ ಜಯಿಸಲಸಾಧ್ಯವಾದವಳು. ಇಂತಹ ನನ್ನನ್ನು ನೀನು ನಿನ್ನ ಪರಾಕ್ರಮದಿಂದಲೂ, ಅತುಲ ಬಲದಿಂದಲೂ ಜಯಿಸಿದೆ; ಈ ಮಾತು ಸತ್ಯವಾದುದು. ಅಯ್ಯಾ

ಶ್ರುಣು ವೈ ಬ್ರುವಂತ್ಯಾ ಮೇ ಹರೀಶ್ವರ! । ಸ್ವಯಂಭುವಾ ಪುರಾ ದತ್ತಂ ವರದಾನಂ ಯಥಾ ಮಮ ॥ ೪೭ ॥ ¶ ಯದಾ ತ್ವಾಂ ವಾನರಃ ಕಶ್ಚಿದ್ವಿಕ್ರಮಾದ್ವಶಮಾನಯೇತ್ । ತದಾ ತ್ವಯಾ ಹಿ ವಿಜ್ಞೇಯಂ ರಕ್ಷಸಾಂ ಭಯಮಾಗತಂ ॥೪೭॥ ಸಹಿ ಮೇ ಸಮಯ ಸೌಮ್ಯ! ಪ್ರಾಪ್ತೋಽದ್ಯ ತವ ದರ್ಶನಾತ್ । ಸ್ವಯಂಭು ವಿಹಿತಸ್ಸತ್ಯೋ ನ ತಸ್ಯಾಸ್ತಿ ವ್ಯತಿಕ್ರಮಃ ॥ ೪೮ ॥ ಸೀತಾನಿಮಿತ್ತಂ ರಾಜ್ಞಸ್ತು ರಾವಣಸ್ಯ ದುರಾತ್ಮನಃ । ರಕ್ಷಸಾಂ ಚೈವ ಸರ್ವೇಷಾಂ ವಿನಾಶಸ್ಸಮುಪಾಗತಃ ॥ ೪೯ ॥ ತತ್ಪ್ರವಿಶ್ಯ ಹರಿಶ್ರೇಷ್ಠ! ಪುರೀಂ ರಾವಣಪಾಲಿತಾಂ । ವಿಧತ್ಸ್ವ ಸರ್ವಕಾರ್ಯಾಣಿ ಯಾನಿ ಯಾನೀಹ ವಾಂಛಸಿ" ॥೫೦॥

ದತ್ತಂ - ಮಾಡಲ್ಪಟ್ಟಿತೋ. ॥ ೪೬ ॥ ಯದಾ - ಯಾವ ಕಾಲದಲ್ಲ, ಕಶ್ಚಿದ್ವಾನರಃ - ಒಬ್ಬಾನೊಬ್ಬ ಕಪಿಯು, ತ್ವಾಂ-ನಿನ್ನನ್ನು, ವಿಕ್ರಮಾತ್-ಪರಾಕ್ರಮದಿಂನ, ವಶಂ-ಸ್ವಾಧೀನವನ್ನು, ಆನಯೇತ್-ಹೊಂದಿಸುವನೋ, ತದಾ - ಆ ಕಾಲದಲ್ಲಿ, ರಕ್ಷಸಾಂ - ರಕ್ಕಸರಿಗೆ, ಭಯಂ - ಭೀತಿಯು, ಆಗತಂ - ಬಂದಿತೆಂದು, ತ್ವಯಾ - ನಿನ್ನಿಂದ, ವಿಜ್ಞೇಯಂಹಿ - ತಿಳಿಯತಕ್ಕುದಷ್ಟೆ. ॥ ೪೭ ॥ ಹೇ ಸೌಮ್ಯ - ಎಲೈ ಸಾತ್ವಿಕನೇ, ಮೇ - ನನಗೆ, ಸಸಮಯಃ - ಆ ಕಾಲವು, ತವ - ನಿನ್ನ, ದರ್ಶನಾತ್ - ನೋಡುವಿಕೆಯಿಂದ, ಅದ್ಯ - ಈಗ, ಪ್ರಾಪ್ತೋಽಹಿ - ಪ್ರಾಪ್ತವಾಯಿತಷ್ಟೆ, ಸ್ವಯಂ....ತಃ - ಬ್ರಹ್ಮನಿಂದ ವಿಧಿಸಿದ ವರವು, ಸತ್ಯಃ - ನಿಶ್ಚಯವು, ತಸ್ಯ - ಆ ವರಕ್ಕೆ, ವ್ಯತಿಕ್ರಮಃ - ವ್ಯತ್ಯಾಸವು, ನಾಸ್ತಿ-ಇಲ್ಲವು. ॥ ೪೮ ॥ ಕಿಂತು-ಆದರೆ, ದುರಾತ್ಮನಃ-ದುಷ್ಟನಾದ, ರಾವಣಸ್ಯ-ರಾವಣನಿಗೂ, ಸರ್ವೇಷಾಂ-ಸಮಸ್ತರಾದ, ರಕ್ಷಸಾಂಚ - ರಕ್ಕಸರಿಗೂ, ಸೀತಾನಿಮಿತ್ತಂ - ಸೀತೆಗೋಸ್ಕರ, ವಿನಾಶಃ - ನಾಶವು, ಸಮುಪಾಗತಏವ - ಬಂದೇಬಂದಿತು. ॥೪೯॥ ಹೇ ಹರಿಶ್ರೇಷ್ಠ - ಎಲೈ ವಾನರೋತ್ತಮನೇ, ತತ್ - ಆದಕಾರಣ, ರಾವ....ತಾಂ - ರಾವಣನಿಂದ ರಕ್ಷಿತವಾದ, ಪುರೀಂ - ಪಟ್ಟಣವನ್ನು, ಪ್ರವಿಶ್ಯ - ಹೊಕ್ಕು, ಇಹ - ಈ ಪಟ್ಟಣದಲ್ಲಿ, ಯಾನಿಯಾನಿ - ಯಾವಯಾವ ಕೆಲಸಗಳನ್ನು, ವಾಂಛಸಿ -

---

ಕಪಿಪುಂಗವನೇ! ಹಿಂದೆ ಬ್ರಹ್ಮನು, "ಎಲೌ ಲಂಕಿಣಿಯೇ! ಯಾವಾಗ ಒಬ್ಬಾನೊಬ್ಬ ವಾನರನು ಪರಾಕ್ರಮದಿಂದ ನಿನ್ನನ್ನು ವಶಪಡಿಸಿಕೊಳ್ಳುವನೋ ಆಗ ರಾಕ್ಷಸರೆಲ್ಲರಿಗೂ ವಿನಾಶಕಾಲವೊದಗಿತೆಂಬುದನ್ನರಿತುಕೋ" ಎಂದು ಹೇಳಿ ವರವನ್ನನುಗ್ರಹಿಸಿದ್ದನು. ॥ ೪೩—೪೭ ॥ ಈಗ ನಿನ್ನ ದರುಶನದಿಂದ ಆ ಸಮಯವು ಸನ್ನಿಹಿತವಾಯಿತು. ಬ್ರಹ್ಮನ ವಿಧಾನಕ್ಕೆ ಚ್ಯುತಿಯಿಲ್ಲ. ಆತನ ಮಾತು ಸತ್ಯವಾದುದು. ಸೀತೆಯ ನಿಮಿತ್ತದಿಂದ ದುರಾತ್ಮನಾದ ರಾವಣೇಶ್ವರನಿಗೂ, ಅವನ ಪ್ರಜೆಗಳಿಗೂ ವಿನಾಶಕಾಲವು ಸಂಪ್ರಾಪ್ತವಾಯಿತು. ಆದುದರಿಂದೆಲೈ ಕಪಿಶ್ರೇಷ್ಠನೇ! ರಾವಣಪಾಲಿತವಾದ ಈ ಲಂಕಾಪಟ್ಟಣವನ್ನು ಪ್ರವೇಶಿಸಿ ಯಾವ ಯಾವ ಕಾರ್ಯಗಳನ್ನು ಮಾಡಬಯಸಿರುವೆಯೋ ಅವುಗಳೆಲ್ಲವನ್ನೂ ನಿರಾತಂಕವಾಗಿ ಸಾಧಿಸುವವನಾಗು. ಕಪೀಶ್ವರನಾದ ನೀನು ಹಿಂದೆ ಮಹಾ ಮಂಗಳಕರ

ಹಿಂದೆ ರಾವಣನ ದಿಗ್ವಿಜಯ ಕಾಲದಲ್ಲಿ ನಂದಿಕೇಶ್ವರನು, "ಲಂಕಾನಗರವು ಕೂಡಲೇ ನಾಶವಾಗಲಿ" ಎಂದು ಶಪಿಸಿದನು. ಆಗ ಲಂಕಿಣಿಯು ಬ್ರಹ್ಮನಲ್ಲಿಗೆ ಹೋಗಿ ಆತನನ್ನು ಪ್ರಾರ್ಥಿಸಿ, ತನಗೆ ನಾಶವೆಂದಿಗೂ ಉಂಟಾಗದಂತೆ ಅನುಗ್ರಹಿಸಬೇಕೆಂದು ಬೇಡಿಕೊಂಡಳು. ಆಗ ಬ್ರಹ್ಮನು, "ಎಲೌ ಲಂಕಿಣಿಯೇ! ನಿನಗೆ ಈಗಲೇ ನಾಶವುಂಟಾಗುವುದಿಲ್ಲ. ಮುಂದೆ ಒಬ್ಬ ವಾನರನು ನಿನ್ನನ್ನು ಗೆಲ್ಲುವನು. ಆಗ ನಿನಗೆ ಸರ್ವನಾಶವುಂಟಾಗುತ್ತದೆ" ಎಂದು ಹೇಳಿದನು. ಈ ಕಥೆಯನ್ನು ಇಲ್ಲಿ ಅನುಸಂಧಿಸಿಕೊಳ್ಳಬೇಕು. (ಗೋ)

ಪ್ರವಿಶ್ಯ ಶಾಪೋಪಹತಾಂ ಹರೀಶ್ವರ
ಶ್ಶುಭಾಂ ಪುರೀಂ ರಾಕ್ಷಸಮುಖ್ಯಪಾಲಿತಾಂ ।
ಯದೃಚ್ಛಯಾ ತ್ವಂ ಜನಕಾತ್ಮಜಾಂ ಸತೀಂ
ವಿಮಾರ್ಗ ಸರ್ವತ್ರ ಗತೋ ಯಥಾಸುಖಂ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತೃತೀಯಸ್ಸರ್ಗಃ

ಮಾಡಲಪೇಕ್ಷಿಸುವೆಯೋ, ತಾನಿಸರ್ವಕಾರ್ಯಾಣಿ - ಆ ಕಾರ್ಯಗಳೆಲ್ಲವನ್ನೂ, ವಿಧತ್ಸ್ವ - ಮಾಡು. ||೫೦|| ಹರೀಶ್ವರಃ - ವಾನರಸಾರ್ವಭೌಮನಾದ, ತ್ವಂ - ನೀನು, ರಾಕ್ಷ....ತಾಂ - ರಾಕ್ಷಸಮುಖ್ಯನಾದ ರಾವಣನಿಂದ, ಪಾಲಿತಾಂ - ರಕ್ಷಿಸಲ್ಪಟ್ಟ, ಶಾಪೋಪಹತಾಂ - ನಂದಿಯ ಶಾಪಕ್ಕೊಳಗಾದ, ಶುಭಾಂ - ಶುಭಕರವಾದ, ಪುರೀಂ - ಪಟ್ಟಣವನ್ನು, ಪ್ರವಿಶ್ಯ - ಪ್ರವೇಶಿಸಿ, ಸರ್ವತ್ರ - ಎಲ್ಲಾ ಪ್ರದೇಶಗಳಲ್ಲಿಯೂ, ಯದೃಚ್ಛಯಾ - ಸ್ವೇಚ್ಛೆಯಿಂದ, ಗತಃ - ಹೋಗಿ, ಸತೀಂ - ಪತಿವ್ರತೆಯಾದ, ಜನಕಾತ್ಮಜಾಂ - ಜನಕನಂದಿನಿಯನ್ನು, ಯಥಾಸುಖಂ - ಸುಖವಾಗಿ, ವಿಮಾರ್ಗ - ಹುಡುಕು. ||೫೧||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತೃತೀಯಸ್ಸರ್ಗಃ.

ನೆಗಿ ಈಗ ಶಾಪಗ್ರಸ್ತವಾಗಿರುವ ರಾವಣನ ಈ ಲಂಕಾಪಟ್ಟಣವನ್ನು ಪ್ರವೇಶಿಸಿ ಮಹಾ ಪತಿವ್ರತೆಯಾದ ಜನಕನಂದಿನಿಯನ್ನು ಎಲ್ಲೆಡೆಗಳಲ್ಲಿಯೂ ಯಾವ ಅಡಚಣೆಯೂ ಇಲ್ಲದೆ ಯಥಾಸುಖವಾಗಿ ಹುಡುಕುವವನಾಗು" ಎಂದು ಹೇಳಿದಳು. ‖ ೪೮–೫೧ ‖

ಇಂತಿದು ಹನುಮತ್ಕೃತ ಲಂಕಾ ವಿಜಯ ವೃತ್ತಾಂತನಿರೂಪಣವೆಂಬ
ಮೂರನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಚತುರ್ಥಸ್ಸರ್ಗಃ

ಸ ನಿರ್ಜಿತ್ಯ ಪುರೀಂ ಶ್ರೇಷ್ಠಾಂ ಲಂಕಾಂ ತಾಂ ಕಾಮರೂಪಿಣೀಂ । ವಿಕ್ರಮೇಣ ಮಹಾತೇಜಾ ಹನುಮಾನ್ ಕಪಿ¶ ಸತ್ತಮಃ ॥ ೧ ॥ ☬ ಅದ್ವಾರೇಣ ಮಹಾಬಾಹುಃ ಪ್ರಾಕಾರಮಭಿಪುಪ್ಲುವೇ । ಪ್ರವಿಶ್ಯ ನಗರೀಂ ಲಂಕಾಂ ಕಪಿರಾಜಹಿತಂಕರಃ ॥ ೨ ॥ $ ಚಕ್ರೇಽಥ ಪಾದಂ ಸವ್ಯಂಚ ಶತ್ರೂಣಾಂ ಸತು ಮೂರ್ಧನಿ । ಪ್ರವಿಷ್ಟಸ್ಸತ್ತ

ಕಪಿಸತ್ತಮಃ-ವಾನರೋತ್ತಮನಾದ, ಮಹಾಬಾಹುಃ-ಮಹಾ ಭುಜಬಲಪರಾಕ್ರಮಿಯಾದ, ಮಹಾತೇಜಾಃ-ಮಹತ್ತರವಾದ ಅಂತಸ್ಸಾರವುಳ್ಳ, ಸಹನುಮಾನ್-ಆ ಹನುಮಂತನು, ಕಾಮರೂಪಿಣೀಂ-ಸ್ವೇಚ್ಛಾರೂಪಿಣಿಯಾದ,ಶ್ರೇಷ್ಠಾಂ-ಉತ್ಕೃಷ್ಟಳಾದ,ಪುರೀಂ-ಪಟ್ಟಣರೂಪಿಣಿಯಾಗಿರುವ,ತಾಂಲಂಕಾಂ-ಆ ಲಂಕಾಧಿದೇವತೆಯನ್ನು, ವಿಕ್ರಮೇಣ - ಪರಾಕ್ರಮದಿಂದ, ನಿರ್ಜಿತ್ಯ - ಜಯಿಸಿ, ಅದ್ವಾರೇಣ - ದ್ವಾರವಿಲ್ಲದ ಪ್ರದೇಶದಿಂದ, ಪ್ರಾಕಾರಾಂ - ಕೋಟೆಯನ್ನು, ಅಭಿಪುಪ್ಲುವೇ - ಹಾರಿದನು. ॥ ೧ ॥ ಕಪಿ....ರಃ - ಕಪಿರಾಜನಾದ ಸುಗ್ರೀವನಿಗೆ ಪ್ರಿಯವನ್ನು ಮಾಡುತ್ತಿರುವ ಆಂಜನೇಯನು, ಲಂಕಾಂ ನಗರೀಂ-ಲಂಕಾಪಟ್ಟಣವನ್ನು, ಪ್ರವಿಶ್ಯ-ಪ್ರವೇಶಿಸಲುಪಕ್ರಮಿಸಿ, ಅಥ-ಅನಂತರದಲ್ಲಿ, ಸವ್ಯಂಪಾದಂ-ಎಡಗಾಲನ್ನು, ಅಗ್ರತಃ-ಮುಂದಾಗಿ, ಚಕ್ರೇ - ಮಾಡಿದನು, ಸತು-ಮುಂದಿಡಲಾದ ಆ ಎಡಗಾಲು, ಶತ್ರೂಣಾಂ - ಹಗೆಯರ, ಮೂರ್ಧನಿ - ಶಿರಸ್ಸಿನಲ್ಲಿ, ಭವೇತ್ - ಆದೀತು. ॥೨॥ ಮಾರುತಾತ್ಮಜಃ -

---

ಮಹಾ ಪರಾಕ್ರಮಶಾಲಿಯೂ, ಮಹಾಬಾಹುವೂ, ವಾನರೋತ್ತಮನೂ ಆದ ಹನುಮಂತನು ಈ ರೀತಿ ಕಾಮರೂಪಿಣಿಯಾದ ಆ ಲಂಕಾರಾಕ್ಷಸಿಯನ್ನು ಜಯಿಸಿ ಶತ್ರುಗಳ ಪಟ್ಟಣವನ್ನು ದ್ವಾರಮಾರ್ಗವಾಗಿ ಪ್ರವೇಶಿಸಕೂಡದೆಂಬ ರಾಜನೀತಿಯನ್ನರಿತವನಾದುದರಿಂದ ಪ್ರಾಕಾರವನ್ನು ದಾಟಿ ಆ ಪಟ್ಟಣವನ್ನು ಪ್ರವೇಶಿಸಿದನು. ಸುಗ್ರೀವರಾಜನಿಗೆ ಹಿತಂಕರನಾದ ಆತನು ಆ ರಾತ್ರಿಯಲ್ಲಿ ಲಂಕಾಪಟ್ಟಣವನ್ನು ಪ್ರವೇಶಿಸುತ್ತ ಶತ್ರುಪಟ್ಟಣವನ್ನು ಪ್ರವೇಶಿಸುವಾಗ ಎಡಗಾಲನ್ನು ಮೊದಲಿಡಬೇಕೆಂದೂ, ಅದರಿಂದ ಶತ್ರುವಿಗೆ ಅನಿಷ್ಟವುಂಟಾಗುತ್ತದೆಂದೂ ಹೇಳಿರುವ ನೀತಿಶಾಸ್ತ್ರವಚನದಂತೆ ಶತ್ರುವಿನ ಶಿರಸ್ಸಿನಲ್ಲಿಯೋಪಾದಿಯಲ್ಲಿ ಎಡಗಾಲನ್ನು ಮೊದಲಿಟ್ಟನು. ಆ ಬಳಿಕ ಧೀರನಾದ ಹನುಮಂತನು ಮಹಾ ಬಲಿಷ್ಠ

¶ "ಕುಂಜರಃ" ರಾ. ಪಾ.

☬ ಇಲ್ಲಿ, "ಅದ್ವಾರೇಣ ಪ್ರವಿಶೇಚ್ಛತ್ರುನಾಶಾಯ" ಎಂಬ ನೀತಿಯನ್ನು ತಿಳಿದಿರುವುದರಿಂದ ಹನುಮಂತನು ಅದ್ವಾರದಿಂದ ಲಂಕೆಯನ್ನು ಪ್ರವೇಶಿಸಿರುವನು. (ತಿ+ಮ+ಗೋ)

$ ಇಲ್ಲಿ ಹನುಮಂತನು ಎಡಗಾಲನ್ನು ಮುಂದಾಗಿಟ್ಟು ಲಂಕೆಯನ್ನು ಪ್ರವೇಶಿಸಿರುವುದಕ್ಕೆ ಕಾರಣ—ಪ್ರಯಾಣಕಾಲೇಚ ಗೃಹಪ್ರವೇಶೇ ವಿವಾಹಕಾಲೇಪಿಚ ದಕ್ಷಿಣಾಂಘ್ರಿಂ । ಕೃತ್ವಾಗ್ರತಃ ಶತ್ರುಪುರಪ್ರವೇಶೇ ವಾಮಂ ನಿದಧ್ಯಾಚ್ಚರಣಂ ನೃಪಾಲಯೇ ॥" ಪ್ರಯಾಣ ಕಾಲದಲ್ಲಿಯೂ, ತನ್ನ ಮನೆಯನ್ನು ಪ್ರವೇಶಿಸುವಾಗಲೂ, ವಿವಾಹ ಕಾಲದಲ್ಲಿಯೂ ಬಲಗಾಲನ್ನು ಮುಂದಾಗಿಡಬೇಕು. ಶತ್ರುವಿನ ಪಟ್ಟಣವನ್ನು ಪ್ರವೇಶ ಮಾಡುವಾಗಲಾಗಲಿ, ಶತ್ರುವಿನ ಮನೆಯನ್ನು ಪ್ರವೇಶ ಮಾಡುವಾಗಲಾಗಲಿ ಎಡಗಾಲನ್ನು ಮುಂದಾಗಿಡಬೇಕು. ಹೀಗೆ ಮಾಡುವುದರಿಂದ ಶತ್ರುಗಳ ತಲೆಯ ಮೇಲೆ ಎಡಗಾಲಿಟ್ಟಂತಾಗುವುದು.

ಸಂಪನ್ನೋ ನಿಶಾಯಾಂ ಮಾರುತಾತ್ಮಜಃ ॥ ೩ ॥ ಸಮಹಾಪಥಮಾಸ್ಥಾಯ ಮುಕ್ತಾ ಪುಷ್ಪವಿರಾಜಿತಂ । ಸೇವಿತಂ ರಾಕ್ಷಸೈರ್ಭೀಮೈರ್ಬಲಿಭಿಶ್ಶಸ್ತ್ರಪಾಣಿಭಿಃ ॥೪॥ ತತಸ್ತು ತಾಂ ಪುರೀಂ ಲಂಕಾಂ ರಮ್ಯಾಮಭಿಯಯೌ ಕಪಿಃ । ಹಸಿತೋತ್ಕೃಷ್ಟನಿನದೈಸ್ತೂರ್ಯಘೋಷಪುರಸ್ಸರೈಃ ॥ ೫ ॥ ವಜ್ರಾಂಕುಶನಿಕಾಶೈಶ್ಚ ವಜ್ರಜಾಲವಿಭೂಷಿತೈಃ । ಗೃಹಮೇಘೈಃ ಪುರೀ ರಮ್ಯಾ ಬಭಾಸೇ ದ್ಯೌರಿವಾಂಬುದೈಃ ॥ ೬ ॥ ಪ್ರಜಜ್ವಾಲ ತದಾ ಲಂಕಾ ರಕ್ಷೋಗಣಗೃಹೈಶ್ಶುಭೈಃ । § ಸಿತಾಭ್ರಸದೃಶೈಶ್ಚಿತ್ರೈಃ ಪದ್ಮ

ವಾಯುಪುತ್ರನಾದ, ಸಃ-ಆ ಆಂಜನೇಯನು, ಸತ್ವಸಂಪನ್ನಃ-ಧೈರ್ಯಸಂಪನ್ನನಾಗಿ, ನಿಶಾಯಾಂ - ರಾತ್ರಿಯಲ್ಲಿ, ಮುಕ್ತಾ....ತಂ - ಮುತ್ತುಗಳಿಂದಲೂ, ಹುವ್ವುಗಳಿಂದಲೂ, ಹೊಳೆಯುತ್ತಿರುವ, ಭೀಮೈಃ - ಭಯಂಕರರಾದ, ಬಲಿಭಿಃ - ಬಲಿಷ್ಠರಾದ, ಶಸ್ತ್ರಪಾಣಿಭಿಃ - ಆಯುಧಪಾಣಿಗಳಾದ, ರಾಕ್ಷಸೈಃ - ರಕ್ಕಸರಿಂದ, ಸೇವಿತಂ - ಸೇವಿಸಲ್ಪಟ್ಟ, ಮಹಾಪಥಂ - ರಾಜಮಾರ್ಗವನ್ನು, ಆಸ್ಥಾಯ- ಹೊಂದಿ, ಪ್ರವಿಷ್ಟಃ-ಪ್ರವೇಶಿಸಿದನು. ॥೩-೪॥ ತತಸ್ತು-ಅನಂತರದಲ್ಲಿಯಾದರೆ, ಕಪಿಃ-ಆಂಜನೇಯನು, ರಮ್ಯಾಂ - ಸೊಗಸಾದ, ತಾಂಲಂಕಾಂಪುರೀಮಭಿ - ಲಂಕಾಪಟ್ಟಣವನ್ನು ಕುರಿತು, ಯಯೌ - ಹೊರಟನು, ತೂರ್ಯ....ರೈಃ - ತುತ್ತೂರಿಗಳ ಶಬ್ದವೇ ಮೊದಲಾಗಿ ಉಳ್ಳ, ಹಸಿ....ದೈಃ - ನಗೆಯಿಂದ ಅತಿಶಯವಾದ ಧ್ವನಿಗಳುಳ್ಳ, ವಜ್ರಾಂ....ಶೈಃ -. ವಜ್ರದ ದೋಟಿಗೋಲಿನ ಪ್ರಕಾಶವುಳ್ಳ (ಗೋ) ವಜ್ರದಿಂದ ಮಾಡಿದ ಅಂಕುಶಾಯುಧ ಸದೃಶವಾದ ಅಥವಾ ವಜ್ರಾಯುಧವೇ ತಿವಿಗೋಲಾಗುಳ್ಳ, ಐರಾವತಕ್ಕೆ ಸಮಾನವಾದ, ವಜ್ರ....ತೈಃ - ವಜ್ರಮಣಿಗಳ ಸಮೂಹದಿಂದ ಅಲಂಕರಿಸಲ್ಪಟ್ಟ, ಗೃಹಮೇಘೈಃ - ಭವನಶ್ರೇಷ್ಠಗಳಿಂದ, ರಮ್ಯಾಂ - ಸುಂದರವಾದ, ಪುರೀ - ಲಂಕಾಪಟ್ಟಣವು, ಅಂಬುದೈಃ ಃ ಮೇಘಗಳಿಂದ, ದ್ಯೌರಿವ - ಅಂತರಿಕ್ಷದಂತೆ, ಬಭಾಸೇ - ಹೊಳೆಯುತ್ತಿದ್ದಿತು. ॥ ೬ ॥ ತದಾ - ಆಗ, ಸಿತಾ....ಶೈಃ - ಬಿಳುಪಾದ ಮೇಘಗಳಿಗೆ ಸಮಾನಗಳಾದ, ಚಿತ್ರೈಃ - ವಿಚಿತ್ರಗಳಾದ, ಪದ್ಮ....ತೈಃ-ಕಮಲದ ಆಕಾರವುಳ್ಳದಾಗಿ ಪೂರ್ವದ್ವಾರವಿಲ್ಲದೆಯೂ, ದಕ್ಷಿಣ,ಪಶ್ಚಿಮ,ಉತ್ತರದ್ವಾರ

ರಾಗಿಯೂ, ಆಯುಧಪಾಣಿಗಳಾಗಿಯೂ ಇರುವ ರಾಕ್ಷಸವೀರರು ಬಹು ಜಾಗರೂಕತೆಯಿಂದ ಕಾಯುತ್ತಿರುವ, ಮುತ್ತುಗಳಿಂದಲೂ ಅಲಂಕೃತವಾಗಿ ವಿರಾಜಿಸುತ್ತಿರುವ ರಾಜಮಾರ್ಗವನ್ನು ಪ್ರವೇಶಿಸಿದನು. ॥ ೧–೪ ॥ ಬಹು ರಮಣೀಯವಾಗಿರುವ ಆ ಲಂಕಾನಗರವು ಎಡೆಬಿಡದೆ ಒಂದೇಸಮನೆ ಮೊಳಗುತ್ತಲಿರುವ ವಾದ್ಯಧ್ವನಿಗಳಿಂದಲೂ, ರಾಕ್ಷಸರ ಸಂತೋಷ ಸಂಭ್ರಮಗಳಿಂದ ಹುಟ್ಟಿದ ಅಟ್ಟಹಾಸಧ್ವನಿಗಳಿಂದಲೂ ಕೂಡಿ, ವಜ್ರಮಣಿಗಳ ಸಮೂಹದಿಂದ ನಿರ್ಮಿತವಾದ ಅಂಕುಶದಂತೆ ಅತಿ ಕಠಿನಗಳಾಗಿಯೂ, ನವರತ್ನಸಮೂಹಗಳಿಂದ ಅಂದವಾಗಿ ಅಲಂಕರಿಸಲ್ಪಟ್ಟ ಉತ್ತಮಗೃಹಗಳಿಂದ ಮುಗಿಲುಮುಸುಕಿದ ಗಗನದಂತೆ ಪ್ರಕಾಶಿಸುತ್ತಿದ್ದಿತು. ಮಂಗಳಕರವಾದ ರಾಕ್ಷಸ ಗೃಹಗಳಿಂದಲೂ, ಶರತ್ಕಾಲದ ಮೇಘಗಳಿಗೆ ಸಮಾನವಾಗಿ ನೋಡುವವರಿಗೆ ಆಶ್ಚರ್ಯವನ್ನುಂಟುಮಾಡುವ ಪದ್ಮ, ಸ್ವಸ್ತಿಕ,

---

¶ ಚತುಶ್ಶಾಲಂ ಚತುರ್ದ್ವಾರಂ ಸರ್ವತೋ ಭದ್ರ ಸಂಜ್ಞಕಂ। ಪಶ್ಚಿಮದ್ವಾರರಹಿತಂ ನಂದ್ಯಾವರ್ತಾಹ್ವಯಂತು ತತ್ ॥ ದಕ್ಷಿಣದ್ವಾರರಹಿತಂ ವರ್ಧಮಾನಂ ಧನಪ್ರದಂ । ಪ್ರಾಗ್ದ್ವಾರ ರಹಿತಂ ಸ್ವಸ್ತಿಕಾಖ್ಯಂ ಪುತ್ರಧನಪ್ರದಂ ॥ ಈ ಶ್ಲೋಕಗಳ ಅರ್ಥವು ಪ್ರತಿಪದಾರ್ಥದಲ್ಲಿ ವಿವೃತವಾಗಿದೆ.

ಸ್ವಸ್ತಿಕಸಂಸ್ಥಿತೈಃ ॥ ೭ ॥ ವರ್ಧಮಾನಗೃಹೈಶ್ಚಾಪಿ ಸರ್ವತಸ್ಸುವಿಭೂಷಿತಾ । ಗೃಹ ಮುಖ್ಯೈಃ ಪುರೀ ರಮ್ಯಾ ಬಭಾಸೇ ದ್ಯೌರಿವಾಂಬುದೈಃ ॥ ೮ ॥ ತಾಂ ಚಿತ್ರಮಾಲ್ಯಾ ಭರಣಾಂ ಕಪಿರಾಜಹಿತಂಕರಃ । ‡ ರಾಘವಾರ್ಥಂ ಚರನ್ ಶ್ರೀಮಾನ್ ದದರ್ಶ ಚ ನನಂದಚ ॥ ೯ ॥ ಭವನಾದ್ಭವನಂ ಗಚ್ಛನ್ ದದರ್ಶ ಪವನಾತ್ಮಜಃ । ವಿವಿಧಾಕೃತಿ ರೂಪಾಣಿ ಭವನಾನಿ ತತಸ್ತತಃ ॥ ೧೦ ॥ ಶುಶ್ರಾವ ಮಧುರಂ ಗೀತಂ ತ್ರಿಸ್ಥಾನಸ್ವರ

ಗಳುಳ್ಳುದಾಗಿಯೂ, ಚದರವಾಗಿಯೂ ಇರುವ, ವರ್ಧಮಾನಗೃಹೈಶ್ಚಾಪಿ - ಚತುರ್ದಿಕ್ಕುಗಳಲ್ಲಿ ದಕ್ಷಿಣದ್ವಾರ ಮಾತ್ರವಿಲ್ಲದೆ ಮಿಕ್ಕ ಮೂರು ದಿಕ್ಕುಗಳಲ್ಲಿಯೂ ದ್ವಾರಗಳುಳ್ಳ ರಾಜಗೃಹಭೇದ ಗಳಿಂದಲೂ, ಶುಭೈಃ - ಶುಭಕರಗಳಾದ, ರಕ್ಷೋ....ಹೈಃ - ರಕ್ಕಸರ ಸಾಮಾನ್ಯ ಗೃಹಗಳಿಂದಲೂ, ಸರ್ವತಃ - ಎಲ್ಲಾ ಭಾಗಗಳಲ್ಲಿಯೂ, ಸುವಿಭೂಷಿತಾ - ಚೆನ್ನಾಗಿ ಅಲಂಕರಿಸಲ್ಪಟ್ಟ, ಲಂಕಾಂ - ಲಂಕಾಪಟ್ಟಣವು, ಪ್ರಜಜ್ವಾಲ - ಹೊಳೆಯುತ್ತಿದ್ದಿತು. ॥ ೭-೮ ॥ ಕಪಿ....ರಃ - ಸುಗ್ರೀವನಿಗೆ ಹಿತಕರ ನಾದ, ಶ್ರೀಮಾನ್ - ತೇಜಸ್ವಿಯಾದ ಆಂಜನೇಯನು, ರಾಘವಾರ್ಥಂ - ಶ್ರೀರಾಮನಿಗೋಸ್ಕರ, ಚರನ್ - ಸಂಚರಿಸುತ್ತಿರುವವನಾಗಿ, ಚಿತ್ರ....ಣಾಂ - ಆಶ್ಚರ್ಯಕರವಾದ ಹೂಸರಗಳೂ, ಒಡಿವೆ ಗಳೂ ಉಳ್ಳ, ತಾಂ - ಆ ಲಂಕಾಪಟ್ಟಣವನ್ನು, ದದರ್ಶಚ - ನೋಡಿದನು, ನನಂದಚ - ಸಂತೋಷ ವನ್ನೂ ಪಡೆದನು, ಪವನಾತ್ಮಜಃ - ವಾಯುಪುತ್ರನು, ಭವನಾತ್ - ಮನೆಯಿಂದ, ಭವನಂ - ಮತ್ತೊಂದು ಮನೆಯನ್ನು ಕುರಿತು, ಗಚ್ಛನ್ - ಹೋಗುತ್ತಿರುವವನಾಗಿ, ವಿವಿ....ಣಿ - ಅನೇಕ ಬಗೆ ಯಾದ ಆಕಾರಗಳೂ, ಬಣ್ಣಗಳೂ ಉಳ್ಳ, ಭವನಾನಿ - ಮನೆಗಳನ್ನು, ತತಸ್ತತಃ - ಅಲ್ಲಲ್ಲಿ, ದದರ್ಶ - ಕಂಡನು, ದಿವಿ - ಅಂತರಿಕ್ಷದಲ್ಲಿ, ಅಪ್ಸರಸಾಮಿವ - ಅಪ್ಸರಸ್ತ್ರೀಯರಂತೆ, ಮದ....ನಾಂ-ಪ್ರಾಯಧಿಂದ ತುಂಬಿರುವ, ಸ್ತ್ರೀಣಾಂ - ಹೆಂಗಳ, ಮಧುರಂ - ಮನೋಹರವಾದ, ತ್ರಿಸ್ಥಾ....ತಂ - ಉರಃಕಂಠ ಶಿರಸ್ಥಾನಗಳಲ್ಲಿ ಹುಟ್ಟುವ, ಮಂದ್ರ-ಮಧ್ಯಮ - ತಾರಗಳೆಂಬ ಸ್ವರಗಳಿಂದ ಸೊಗಸಾದ, ಗೀತಂ - ಗಾನ ವನ್ನು, ಶುಶ್ರಾವ-ಕೇಳಿದನು. ॥ ೯-೧೨ ॥ ಮಹಾತ್ಮನಾಂ-ಮಹಾನುಭಾವರಾದ ರಾಕ್ಷಸರ, ಭವನೇಷು- ಮನೆಗಳಲ್ಲಿ, ಕಾಂಚೀನಿನದಂ - ಗೆಜ್ಜೆಗಳುಳ್ಳ ಡಾಬುಗಳ, ನಿನದಂ - ಶಬ್ದವನ್ನೂ, ನೂಪುರಾಣಾಂ -

---

ವರ್ಧಮಾನಗಳೆಂಬ ಸಂಸ್ಥಾನಭೇದಗಳನ್ನನುಸರಿಸಿ ನಿರ್ಮಿಸಿದ ರಾಜಭವನಗಳಿಂದೊಪ್ಪು ತ್ತಿರುವ ಆ ಲಂಕಾಪಟ್ಟಣವು ಬಹು ರಮಣೀಯವಾಗಿ ವಿರಾಜಿಸುತ್ತಿದ್ದಿತು. ॥ ೫-೮ ॥ ಸುಗ್ರೀವನ ಹಿತಕ್ಕಾಗಿಯೂ, ಶ್ರೀರಾಮನ ಕಾರ್ಯಸಾಧನೆಗಾಗಿಯೂ ಸಂಚರಿಸುತ್ತಿರುವ ಆ ಮಾರುತಿಯು, ಎತ್ತನೋಡಿದರೂ ವಿಚಿತ್ರಮಾಲ್ಯಾಭರಣಗಳಿಂದ ಪ್ರಕಾಶಿಸುತ್ತಿರುವ ಆ ಲಂಕಾನಗರವನ್ನು ನೋಡಿ, 'ಇನ್ನು ಸೀತೆಯನ್ನು ಕಾಣುವೆನು!' ಎಂದು ಬಹಳವಾಗಿ ಸಂತೋ ಷಿಸಿದನು. ಆಗಲಾತನು ಮನೆಯಿಂದ ಮನೆಗೆ ಹೋಗುತ್ತ ಅಲ್ಲಲ್ಲಿ ವಿವಿಧಾಕಾರಗಳುಳ್ಳ ಬಣ್ಣಬಣ್ಣಗಳ ಉತ್ತಮ ಗೃಹಗಳನ್ನು ಕಂಡನು. ಅವುಗಳಲ್ಲಿ ಸ್ತ್ರೀಯರು ಮಧುಪಾನಮತ್ತ ರಾಗಿ ಹೃದಯ, ಕಂಠ, ಶಿರಸ್ಸು ಈ ಮೂರು ಸ್ಥಾನಗಳಲ್ಲಿ ಹುಟ್ಟುವ ಮಂದ್ರ, ಮಧ್ಯಮ, ತಾರಗಳೆಂಬ ಮೂರುತರನಾದ ಸ್ವರಗಳಿಂದ ದೇವಾಂಗನೆಯರ ಗಾನವನ್ನನುಸರಿಸಿ ಮನೋ ಹರವಾಗಿ ಹಾಡುತ್ತಿದ್ದರು.॥೯-೧೦॥ ಅಲ್ಲದೆ ಕಾಮಾಸಕ್ತರಾದ ಆ ಸ್ತ್ರೀಯರು ನಡೆಯುವಾಗ

---

‡ "ರಾಘವಾರ್ಥೇ" ತಿ. ಪಾ.

ಭೂಷಿತಂ । ಸ್ತ್ರೀಣಾಂ ಮದಸಮೃದ್ಧಾನಾಂ ದಿವಿ ಚಾಪ್ಸರಸಾಮಿವ ॥ ೧೧ ॥ ಶುಶ್ರಾವ ಕಾಂಚೀನಿನದಂ ನೂಪುರಾಣಾಂಚ ನಿಸ್ವನಂ । ಸೋಪಾನನಿನದಾಂಶ್ಚೈವ ಭವನೇಷು ಮಹಾತ್ಮನಾಂ ॥೧೨॥ ಆಸ್ಫೋಟಿತನಿನಾದಾಂಶ್ಚ ಕ್ಷ್ವೇಳಿತಾಂಶ್ಚ ತತಸ್ತತಃ । ಶುಶ್ರಾವ ಜಪತಾಂ ತತ್ರ ಮಂತ್ರಾನ್ ರಕ್ಷೋಗೃಹೇಷು ವೈ ॥೧೩॥ ಸ್ವಾಧ್ಯಾಯನಿರತಾಂಶ್ಚೈವ ಯಾತುಧಾನಾನ್ ದದರ್ಶ ಸಃ । ರಾವಣಸ್ತವಸಂಯುಕ್ತಾನ್ ಗರ್ಜತೋ ರಾಕ್ಷಸಾನಪಿ ॥ ೧೪ ॥ ರಾಜಮಾರ್ಗಂ ಸಮಾವೃತ್ಯ ಸ್ಥಿತಂ ರಕ್ಷೋಬಲಂ ಮಹತ್ । ದದರ್ಶ

ಕಾಲುಸರಪಣಿಗಳ, ನಿಸ್ವನಂಚ - ಧ್ವನಿಯನ್ನೂ, ಸೋ....ಶ್ಚ - ಪಾವಟಿಗೆಗಳಲ್ಲಿ ಸಂಚರಿಸುತ್ತಿರುವ ಹೆಂಗಳ ಕಾಲು ಸರಪಣಿಗಳಿಂದ ಹುಟ್ಟಿದ, ನಿನದಾಂಶ್ಚ - ಶಬ್ದಗಳನ್ನೂ, ಆಸ್ಫೋ....ಶ್ಚ - ಸಂತೋಷದಿಂದ ಕೈತಟ್ಟುವಿಕೆಯಿಂದುಂಟಾದ ಶಬ್ದಗಳನ್ನೂ, ತತಸ್ತತಃ - ಅಲ್ಲಲ್ಲಿ, ಕ್ಷ್ವೇಳಿತಾಂಶ್ಚ - ಸಿಂಹನಾದಗಳನ್ನೂ ಕೂಡ, ಶುಶ್ರಾವ-ಕೇಳಿದನು, ತತ್ರ-ಆ ಲಂಕಾಪಟ್ಟಣದಲ್ಲಿ, ರಕ್ಷೋಗೃಹೇಷು- ರಾಕ್ಷಸರ ಮನೆಗಳಲ್ಲಿ, ಜಪತಾಂ - ಜಪ ಮಾಡುತ್ತಿರುವರ, ಮಂತ್ರಾನ್‌ವೈ - ಋಗ್ವೇದವೇ ಮುಂತಾದ ಮಂತ್ರಗಳನ್ನೂ ಸಹ, ಶುಶ್ರಾವ-ಕೇಳಿದನು. ॥೧೧-೧೨॥ ಸಃ - ಆ ಆಂಜನೇಯನು, ಸ್ವಾಧ್ಯಾ....ತಾನ್- ವೇದಾಧ್ಯಯನದಲ್ಲಿ ಆಸಕ್ತರಾದ, ಯಾತುಧಾನಾಂಶ್ಚ - ರಾಕ್ಷಸರನ್ನೂ, ರಾವ....ಕ್ತಾನ್ - ರಾವಣಾ ಸುರನ ಸ್ತೋತ್ರದಲ್ಲಿ ಆಸಕ್ತರಾದ, ಗರ್ಜತಃ - ಗರ್ಜಿಸುತ್ತಿರುವ, ರಾಕ್ಷಸಾನಪಿ - ಅಸುರರನ್ನೂ, ದದರ್ಶ - ಕಂಡನು. ॥ ೧೩ ॥ ರಾಜಮಾರ್ಗಂ - ದೊಡ್ಡ ರಸ್ತೆಯನ್ನು, ಸಮಾವೃತ್ಯ - ಅಡ್ಡಗಿಸಿ, ಸ್ಥಿತಂ - ನಿಂತಿರುವ, ಮಹತ್ - ದೊಡ್ಡದಾದ, ರಕ್ಷೋಬಲಂ - ರಾಕ್ಷಸಬಲವನ್ನೂ, ಮಧ್ಯಮೇ - ಪಟ್ಟಣದ ಮಧ್ಯದಲ್ಲಿರುವ, ಗುಲ್ಮೇ - ದಂಡಿನಲ್ಲಿ, ಬಹೂನ್ - ಅನೇಕರಾದ, ರಾವಣಸ್ಯ - ರಾವಣಾ ಸುರನ, ಚಾರಾನ್ - ಗೂಢಚಾರರನ್ನೂ, ದದರ್ಶ - ಕಂಡನು. ॥ ೧೪ ॥ ದೀಕ್ಷಿತಾನ್ - ಸೋಮಯಾಜಿ ಗಳನ್ನೂ, ಜಟಿಲಾನ್ - ಜಡೆಯುಳ್ಳವರನ್ನೂ, ಮುಂಡಾನ್ - ಕ್ಷೌರಕರ್ಮ ಮಾಡಿಸಿಕೊಂಡಿರುವವರನ್ನೂ, ಗೋಜಿ....ಸಃ - ವೃಷಭಚರ್ಮಗಳೇ ವಸ್ತ್ರಗಳಾಗುಳ್ಳವರನ್ನೂ, ದರ್ಭ....ಣಾನ್ - ಅನಿಷ್ಟನಿವಾರಣ

ಅವರು ಧರಿಸಿರುವ ಕಿರುಗೆಜ್ಜೆಗಳ ಒಡ್ಯಾಣ, ಕಾಲಂದುಗೆ, ಕೈಕಡಗ ಮೊದಲಾದ ಆಭರಣ ಗಳು ಇವುಗಳಿಂದ ಹುಟ್ಟಿದ ಧ್ವನಿಯೂ ಉಪ್ಪರಿಗೆಗಳನ್ನು ಹತ್ತುವಾಗಲೂ, ಇಳಿಯುವಾ ಗಲೂ ಉಂಟಾದ ಸಪ್ಪಳವೂ, ಸಂತೋಷಸಂಭ್ರಮಗಳಿಂದ ಅವರು ಮಾಡುತ್ತಿದ್ದ ಚಪ್ಪಾಳೆಯ ಧ್ವನಿಯೂ, ಅಲ್ಲಿರುವ ರಾಕ್ಷಸರ ಸಿಂಹನಾದ ಧ್ವನಿಯೂ, ವಿಧವಿಧವಾದ ಕಲಕಲ ಧ್ವನಿ ಗಳೂ ಕೇಳಿಬರುತ್ತಿದ್ದವು. ರಾಕ್ಷಸರ ಮನೆಗಳಲ್ಲಿ ಋಗ್ವೇದವೇ ಮೊದಲಾದ ಮಂತ್ರಗಳನ್ನು ಪುನಶ್ಚರಣೆ ಮಾಡುತ್ತಿರುವವರನ್ನೂ, ವೇದಾಧ್ಯಯನ ಸಂಪನ್ನರನ್ನೂ, ತಮ್ಮೊಡೆಯನಾದ ರಾವಣನನ್ನು ಸ್ತುತಿಸುತ್ತಿರುವವರನ್ನೂ, ಉಚ್ಚಸ್ವರದಿಂದ ಪರಾಕುಗಳನ್ನು ಹೇಳುತ್ತಿದ್ದವ ರನ್ನೂ ಆ ಆಂಜನೇಯನು ಕಂಡನು. ಹೀಗೆ ಕಿವಿಗಿಂಪಾದ ಧ್ವನಿಗಳನ್ನು ಕೇಳುತ್ತ, ಕಣ್ಗಿಂ ಪಾದ ರೂಪಗಳನ್ನು ನೋಡುತ್ತ ಮುಂಬರಿಯುತ್ತಿರುವ ಆ ಕಪಿಶ್ರೇಷ್ಠನು ರಾಜಮಾರ್ಗದಲ್ಲಿ ನಿಂತಿರುವ ದೊಡ್ಡ ರಾಕ್ಷಸಸೇನೆಯನ್ನೂ, ಆಲ್ಲಲ್ಲಿ ಪಹರೆ ಕೊಡುತ್ತಲಿದ್ದ ರಾಕ್ಷಸ ಭಟರನ್ನೂ ಆ ಸೈನ್ಯದಲ್ಲಿ ಅಲ್ಲಲ್ಲಿ ಸಂಚರಿಸುತ್ತಿರುವ ಗೂಢಚಾರರನ್ನೂ ನೋಡಿದನು. ಹೀಗೆಯೇ ಮುಂದು ಮುಂದಕ್ಕೆ ನಡೆಯುತ್ತ ಯಜ್ಞದೀಕ್ಷೆಯನ್ನು ತಳೆದಿರುವ ಸೋಮಯಾಜಿಗಳನ್ನೂ, ಜಟೆಗಳನ್ನು

ಮಧ್ಯಮೇ ಗುಲ್ಮೇ ರಾವಣಸ್ಯ ಚರಾ‌ನ್ ಬಹೂನ್ ॥೧೫॥ ¶ ದೀಕ್ಷಿತಾನ್ಜಟಿಲಾನ್ಮುಂಡಾನ್ ಗೋಜಿನಾಂಬರವಾಸಸಃ।‡ದರ್ಭಮುಷ್ಟಿಪ್ರಹರಣಾನಗ್ನಿಕುಂಡಾಯುಧಾಂಸ್ತಥಾ ॥೧೬॥ ಕೂಟಮುದ್ಗರಪಾಣೀಂಶ್ಚ ದಂಡಾಯುಧಧರಾನಪಿ । ಏಕಾಕ್ಷಾನೇಕಕರ್ಣಾಂಶ್ಚ ಲಂಬೋದರಪಯೋಧರಾನ್ ॥೧೭॥ ಕರಾಳಾನ್ಭುಗ್ನವಕ್ತ್ರಾಂಶ್ಚ ವಿಕಟಾ

ಕ್ಕಾಗಿಯೂ, ಅನುಷ್ಠಾನ ಸಾಧನಕ್ಕಾಗಿಯೂ ಕುಶಮುಷ್ಟಿಯೇ ಆಯುಧವಾಗಿವುಳ್ಳವರನ್ನೂ, ಅಗ್ನಿ....ಧಾನ್ - ಶತ್ರುಮಾರಕತ್ವದಿಂದ ಅಗ್ನಿಕುಂಡವೇ ಆಯುಧವಾಗಿ ಉಳ್ಳವರನ್ನೂ, ಕೂಟ....ಶ್ಚ-ಚಮ್ಮಟಿಗೆಯಂತಿರುವ ಆಯುಧವಿಶೇಷಗಳನ್ನೂ, ಕಬ್ಬಿಣದ ಹಾರೆಗಳನ್ನೂ, ಹಸ್ತಗಳಲ್ಲಿ ಉಳ್ಳ, ದಂಡಾ....ಪಿ - ದಂಡಕೋಲುಗಳೆಂಬ ಪ್ರಹರಣಗಳನ್ನು ಧರಿಸಿರುವವರನ್ನೂ, ಏಕಾಕ್ಷಾನ್ - ಒಂದು ಕಣ್ಣುಳ್ಳವರನ್ನೂ, ಏಕಕರ್ಣಾಂಶ್ಚ - ಒಂದುಕಿವಿಯುಳ್ಳವರನ್ನೂ, ಲಂಬೋ....ರಾನ್ - ಜೋಲಾಡುತ್ತಿರುವ ಹೊಟ್ಟೆಯೂ, ಸ್ತನಗಳೂ ಉಳ್ಳವರನ್ನೂ, ಕರಾಳಾನ್ - ಭಯಂಕರರಾದವರನ್ನೂ, ಭುಗ್ನವಕ್ತ್ರಾಂಶ್ಚ - ವಕ್ರಮುಖಗಳುಳ್ಳವರನ್ನೂ, ವಿಕಟಾನ್ - ವ್ಯತ್ಯಾಸವಾದ ಅಂಗಗಳುಳ್ಳವರನ್ನೂ, ವಾಮನಾನ್ - ಮೋಟಕಾದವರನ್ನೂ, ತಥಾ - ಹಾಗೆಯೇ, ಧನ್ವಿನಃ - ಬಿಲ್ಲುಗಾರರನ್ನೂ, ಖಡ್ಗಿನಶ್ಚೈವ-ಕತ್ತಿಯೇ ಆಯುಧವಾಗಿ ಉಳ್ಳವರನ್ನೂ, ಶತ....ಧಾನ್ - ಪಿರಂಗಿಯೂ, ಮುಸಲವೂ ಆಯುಧಗಳಾಗಿ

ಧರಿಸಿರುವವರನ್ನೂ, ಮುಂಡಿಗಳನ್ನೂ, ವೃಷಭಚರ್ಮಗಳನ್ನು ಹೊದ್ದು ತಿರುಗುವವರನ್ನೂ, ದಿಗಂಬರರನ್ನೂ, ದರ್ಭೆಗಳನ್ನು ಹಿಡಿದು ಅಮಂಗಳವನ್ನು ನಿವಾರಿಸುತ್ತಿರುವವರನ್ನೂ, ಅಗ್ನಿಕುಂಡಗಳಲ್ಲಿ ಹೋಮಮಾಡಿ ಶತ್ರುಮಾರಣಾದಿಗಳನ್ನು ಮಾಡುತ್ತಿರುವ ರಾಕ್ಷಸರನ್ನೂ, ಕೂಟಮುದ್ಗರಾದಿ ಆಯುಧಗಳನ್ನು ಹಿಡಿದು ಸಂಚರಿಸುತ್ತಿರುವವರನ್ನೂ ಕಂಡವನಾದನು. ॥೧೫–೧೬॥ ಇಷ್ಟೆಯಲ್ಲದೆ ಅಲ್ಲಿ ಒಂದೇ ಕಣ್ಣುಳ್ಳವರೂ, ಒಂದೇ ಕಿವಿಯುಳ್ಳವರೂ, ಜೋಲಾಡುತ್ತಿರುವ ಹೊಟ್ಟೆ ಎದೆಗಳನ್ನುಳ್ಳವರೂ, ಮಹಾ ಕ್ರೂರಿಗಳೂ, ವಕ್ರಮುಖಗಳುಳ್ಳವರೂ ಆದ ಅನೇಕ ರಾಕ್ಷಸರು ಸಂಚರಿಸುತ್ತಿದ್ದರು. ವಕ್ರಶರೀರಿಗಳೂ, ಕುಬ್ಜರೂ, ಕತ್ತಿಗಳನ್ನು ಹಿರಿದು ನಿಂತಿರುವವರೂ, ಶತಘ್ನಿ, ಮುಸಲವೇ ಮೊದಲಾದ ಆಯುಧಗಳನ್ನು ಹಿಡಿದಿರು

¶ ಇಲ್ಲಿ "ಲಂಕಾನಗರವು ಭರತಖಂಡದ ಹೊರಗಿರುವುದಾದುದರಿಂದ ಅದು ಕರ್ಮಭೂಮಿಯಲ್ಲವು. ಹೀಗಿದ್ದರೂ ಅಲ್ಲಿನ ರಾಕ್ಷಸರಿಗೆ ಕರ್ಮಾಧಿಕಾರವನ್ನು ಹೇಳಿ ಅವರಲ್ಲಿ ದೀಕ್ಷಿತರೂ ಇದ್ದರೆಂದು ಹೇಳಿರುವುದು ನ್ಯಾಯವೇ ?" ಎಂಬ ಸಂದೇಹ ಬರುವುದು. ಅದಕ್ಕೆ ಸಮಾಧಾನವು ಹೀಗೆ—ನಿತ್ಯಕರ್ಮಗಳನ್ನು ಅನುಷ್ಠಿಸಲು ಇತರ ದೇಶದವರಿಗೂ ಅಧಿಕಾರವುಂಟು. ರಾವಣಾದಿಗಳಿಗೆ ತಪೋಮಹಾತ್ಮ್ಯವಿರುವುದರಿಂದ ಕಾಮ್ಯಕರ್ಮಗಳ ಸಿದ್ಧಿಯಿದ್ದೇ ಇರುವುದು. (ಈ ಮಾತು ಬೇರೆ) "ಯಥಾತ್ವಷ್ಟುರನೇಂದ್ರಮೇವ ಸೋಮಮಾಜಹ್ರೇ" ಎಂದು ಶತಪಥ ಬ್ರಾಹ್ಮಣದಲ್ಲಿ ವಚನವಿರುವುದರಿಂದ ರಾಕ್ಷಸರಿಗೆ ಯಜ್ಞಾಧಿಕಾರವುಂಟೆಂಬುದು ಸಿದ್ಧವಾಗುವುದು. ಭಾಷ್ಯದಲ್ಲಿಯೂ, "ದೇವಾನಾಮಿಷದ್ವಿಕೃತಾನಪಿ ಯಜ್ಞಾನ್ ದರ್ಶಯತಿ" ಎಂದು ಅಂಗವೈಕಲ್ಯವಿದ್ದರೂ ಅನುಷ್ಠಾನ ಮಾಡಿದ ಕರ್ಮದಿಂದ ವೃತ್ರೋತ್ಪತ್ತಿರೂಪವಾದ ಕಾಮನೆಯ ಸಿದ್ಧಿಯು ನಿರೂಪಿತವಾಗಿರುವುದು. ಪ್ರಕೃತದಲ್ಲಿ ದೇಶರೂಪಾಂಗವೈಕಲ್ಯವಿದ್ದರೂ ಕರ್ಮಕ್ಕೆ ಸಿದ್ಧಿಯುಂಟು. ರಾಕ್ಷಸರೂ ದೇವಯೋನಿಗಳಾದುದರಿಂದ ಅವರಿಗೆ ಯಜ್ಞಾಧಿಕಾರವುಂಟಾದುದರಿಂದ ಇಲ್ಲಿನ ದೀಕ್ಷಿತಾದಿ ಶಬ್ದಗಳು ಸೂಕ್ತವೇ ಸರಿ.

‡ ಇಲ್ಲಿ, "ಯಥಾ ವಜ್ರಂ ಹರೇಃ ಪಾಣೌ ತಥಾ ವಿಪ್ರಕರೇ ಕುಶಾಃ— ದೇವೇಂದ್ರನ ಕೈಯಲ್ಲಿ ವಜ್ರಾಯುಧವೆಂತೋ ಅಂತು ಬ್ರಾಹ್ಮಣನ ಕೈಯಲ್ಲಿನ ಕುಶವೂ" ಎಂಬ ವಚನವು ಗ್ರಾಹ್ಯವು.

ನ್ವಾಮನಾಂ ಸ್ತಥಾ । ಧನ್ವಿನಃ ಖಡ್ಗಿನಶ್ಚೈವ ಶತಘ್ನೀಮುಸಲಾಯುಧಾನ್ ॥ ೧೮ ॥ ಪರಿಘೋತ್ತಮಹಸ್ತಾಂಶ್ಚ ವಿಚಿತ್ರಕವಚೋಜ್ವಲಾನ್ । ನಾತಿಸ್ಥೂಲಾ ನ್ನಾತಿಕೃಶಾ ನ್ನಾತಿದೀರ್ಘಾತಿಹ್ರಸ್ವಕಾನ್ ॥ ೧೯ ॥ ನಾತಿಗೌರಾ ನ್ನಾತಿಕೃಷ್ಣಾ ನ್ನಾತಿಕುಬ್ಜಾ ನ್ನವಾಮನಾನ್ । ವಿರೂಪಾನ್ಬಹುರೂಪಾಂಶ್ಚ ಸುರೂಪಾಂಶ್ಚ ಸುವರ್ಚಸಃ ॥೨೦॥ ಧ್ವಜೋತ್ಪತಾಕಿನಶ್ಚೈವ ದದರ್ಶ ವಿವಿಧಾಯುಧಾನ್ । ಶಕ್ತಿವೃಕ್ಷಾಯುಧಾಂಶ್ಚೈವ ಪಟ್ಟಿಶಾಶನಿಧಾರಿಣಃ ॥ ೨೧ ॥ ಕ್ಷೇಪಣೀಪಾಶಹಸ್ತಾಂಶ್ಚ ದದರ್ಶ ಸಮಹಾಕಪಿಃ । ಸ್ರಗ್ವಿಣ

ಉಳ್ಳ, ಪರಿ....ಶ್ಚ-ಕಬ್ಬಿಣದ ಕಟ್ಟುಗಳು ಹಾಕಿರುವ ಶ್ರೇಷ್ಠವಾದ ದೊಣ್ಣೆಯ ಕೈಯಲ್ಲಿ ಉಳ್ಳವರನ್ನೂ, ವಿಚಿ....ಲಾನ್ - ಆಶ್ಚರ್ಯಕರವಾದ ಕವಚಗಳಿಂದ ಹೊಳೆಯುತ್ತಿರುವವರನ್ನೂ, ನಾತಿಸ್ಥೂಲಾನ್ - ಬಹಳ ದಪ್ಪವಿಲ್ಲದಿರುವರನ್ನೂ, ನಾತಿಕೃಶಾನ್ ಬಹಳ ಕೃಶರಲ್ಲದವರನ್ನೂ, ನಾತಿ....ಕಾನ್ - ಬಹಳ ಉದ್ದವಾಗಿಯೂ, ಕುರುಚಾಗಿಯೂ ಇಲ್ಲದವರನ್ನೂ, ನಾತಿಗೌರಾನ್ - ಬಹಳ ಬೆಳ್ಳಗಿಲ್ಲದಿರುವವರನ್ನೂ, ನಾತಿಕೃಷ್ಣಾನ್ - ಬಹು ಕಪ್ಪಾಗಿಲ್ಲದಿರುವವರನ್ನೂ, ನಾತಿಕುಬ್ಜಾನ್ - ಅತಿ ಕುಳ್ಳರಲ್ಲದವರನ್ನೂ, ನವಾಮನಾನ್-ಗಿಡ್ಡಾಗಿಲ್ಲದಿರುವವರನ್ನೂ, ವಿರೂಪಾನ್-ವಿಕಾರರೂಪವುಳ್ಳವರನ್ನೂ, ಬಹುರೂಪಾಂಶ್ಚ-ನಾನಾಬಣ್ಣಗಳುಳ್ಳವರನ್ನೂ, ಸುರೂಪಾಂಶ್ಚ-ರೂಪವಂತರಾಗಿರುವವರನ್ನೂ, ಸುವರ್ಚಸಃ - ಒಳ್ಳೆಯ ತೇಜಸ್ವಿಗಳನ್ನೂ, ಧ್ವಜ....ವ - ದೊಡ್ಡ ನಿಶಾನಿಗಳುಳ್ಳವರನ್ನೂ, ಚಿಕ್ಕ ಧ್ವಜಗಳುಳ್ಳವರನ್ನೂ, ವಿವಿಧಾಯುಧಾನ್-ನಾನಾವಿಧಗಳಾದ ಶಸ್ತ್ರಗಳುಳ್ಳವರನ್ನೂ, ದದರ್ಶ-ಕಂಡನು. ॥೧೯-೨೦॥ ಸಮಹಾಕಪಿಃ - ಆ ವಾನರಶ್ರೇಷ್ಠನು, ಶಕ್ತಿ....ವ - ಶಕ್ತ್ಯಾಯುಧಗಳುಳ್ಳವರನ್ನೂ ವೃಕ್ಷಗಳೇ ಆಯುಧಗಳಾಗಿ ಉಳ್ಳವರನ್ನೂ, ಪಟ್ಟ....ಣಃ - ದೊಡ್ಡ ಕತ್ತಿಗಳನ್ನೂ, ಧರಿಸಿರುವವರನ್ನೂ, ಕ್ಷೇಪ....ಶ್ಚ - ಹಡಗುನಡಿಸುವ ದಂಡಗಳನ್ನೂ, ಕೊರಳಿಗೆ ಹಾಕತಕ್ಕ ಹಗ್ಗಗಳನ್ನೂ, ಕೈಗಳಲ್ಲಿ ಉಳ್ಳವರನ್ನೂ, ದದರ್ಶ-ಕಂಡನು, ಸ್ರಗ್ವಿಣಃ-ಹೂಸರಗಳುಳ್ಳವರನ್ನೂ, ಅನುಲಿಪ್ತಾಂಶ್ಚ-ಗಂಧಹಚ್ಚಿಕೊಂಡವರನ್ನೂ, ವರಾ....ತಾನ್ - ಶ್ರೇಷ್ಠವಾದ ಒಡಿವೆಗಳಿಂದ ಅಲಂಕರಿಸಲ್ಪಟ್ಟವರನ್ನೂ, ನಾನಾ....ಕ್ತಾನ್ - ಅನೇಕ ವಿಧಗಳಾದ ಅಲಂಕಾರಗಳಿಂದ ಕೂಡಿದವರನ್ನೂ, ಯಥಾಸ್ವೈರಗತಾನ್ - ಸ್ವೇಚ್ಛೆಯಾಗಿ ಸಂಚರಿಸುವವರನ್ನೂ, ಬಹೂನ್ - ಅನೇಕರಾದ, ತೀಕ್ಷ್ಣ....ವ - ಹದವಾದ ಭಲ್ಲೆಗಳನ್ನು ಧರಿಸಿದವರನ್ನೂ,

---

ವವರೂ, ಉತ್ತಮವಾದ ಪರಿಘಾಯುಧವನ್ನು ಹಿಡಿದಿರುವವರೂ, ಚಿತ್ರತರವಾದ ಕವಚಗಳಿಂದ ಶೋಭಿಸುತ್ತಿರುವವರೂ, ಸ್ಥೂಲಶರೀರಿಗಳಲ್ಲದವರೂ, ಕೃಶರಲ್ಲದವರೂ, ಎತ್ತರವಾಗಿಯಾಗಲಿ, ಗಿಡ್ಡಾಗಿಯಾಗಲಿ ಇಲ್ಲದವರೂ, ಅತಿ ಬಿಳುಪಾಗಿಯಾಗಲಿ, ಬಹಳ ಕಪ್ಪಗಾಗಲಿ ಇಲ್ಲದಿರುವವರೂ, ಅತಿ ಕುಬ್ಜರೂ ಅತಿ ವಾಮನವರೂ ಅಲ್ಲದವರೂ, ವಿರೂಪವಾಗಿರುವವರೂ, ಅನೇಕ ರೂಪಗಳುಳ್ಳವರೂ, ಸುರೂಪವಂತರಾಗಿರುವವರೂ, ಮಹಾ ತೇಜಸ್ವಿಗಳಾದವರೂ, ಧ್ವಜಪತಾಕೆಗಳನ್ನು ಹಿಡಿದಿರುವವರೂ, ವಿವಿಧ ಶಸ್ತ್ರಸಮೇತರೂ ಆದ ಅನೇಕ ರಾಕ್ಷಸರು ತುಂಬಿದ್ದರು. ॥೧೭-೨೦॥ ಆ ಕಪಿಶ್ರೇಷ್ಠನು ಇವರೆಲ್ಲರನ್ನೂ ನೋಡುತ್ತ ಮುಂದು ಮುಂದಕ್ಕೆ ಹೋಗಿ ಶಕ್ತ್ಯಾಯುಧಧಾರಿಗಳನ್ನೂ ಖಡ್ಗವೇ ಮೊದಲಾದ ಆಯುಧಗಳನ್ನು ಧರಿಸಿರುವವರನ್ನೂ, ಪುಷ್ಪಮಾಲಿಕೆಗಳನ್ನು ಧರಿಸಿ ಪರಿಮಳಭರಿತವಾದ ಚಂದನಗಳನ್ನು ಲೇಪಿಸಿಕೊಂಡು ವಿವಿಧಾಭರಣಭೂಷಿತರಾಗಿ ಬಗೆಬಗೆಯ ವೇಷಗಳಿಂದೊಪ್ಪುತ್ತ ಸ್ವೇಚ್ಛೆ

ಸ್ತ್ವನುಲಿಪ್ತಾಂಶ್ಚ ವರಾಭರಣಭೂಷಿತಾನ್ ॥ ೨೨ ॥ ನಾನಾವೇಷಸಮಾಯುಕ್ತಾನ್ ಯಥಾಸ್ವೈರಗತಾನ್ ಬಹೂನ್ । ತೀಕ್ಷ್ಣಶೂಲಧರಾಂಶ್ಚೈವ ವಜ್ರಿಣಶ್ಚ ಮಹಾಬಲಾನ್ ॥೨೨॥ ಶತಸಾಹಸ್ರಮವ್ಯಗ್ರಮಾರಕ್ಷಂ ಮಧ್ಯಮಂ ಕಪಿಃ । ರಕ್ಷೋಽಧಿಪತಿನಿರ್ದಿಷ್ಟಂ ದದರ್ಶಾಂತಃಪುರಾಗ್ರತಃ ॥ ೨೩ ॥ ಸತದಾ ತದ್ಗೃಹಂ ದೃಷ್ಟ್ವಾ ಮಹಾಹಾಟಕತೋರಣಂ । ರಾಕ್ಷಸೇಂದ್ರಸ್ಯ ವಿಖ್ಯಾತಮದ್ರಿಮೂರ್ಧ್ನಿ ಪ್ರತಿಷ್ಠಿತಂ ॥ ೨೪ ॥ ಪುಂಡರೀಕಾವತಂಸಾಭಿಃ ಪರಿಘಾಭಿರಲಂಕೃತಂ । ಪ್ರಾಕಾರಾವೃತಮತ್ಯರ್ಥಂ ದದರ್ಶ ಸಮಹಾಕಪಿಃ ॥ ೨೫ ॥ ತ್ರಿವಿಷ್ಟಪನಿಭಂ ದಿವ್ಯಂ ದಿವ್ಯನಾದವಿನಾದಿತಂ । ವಾಜಿಹೇಷಿತ

ವಜ್ರಿಣಶ್ಚ - ವಜ್ರಾಯುಧಧಾರಿಗಳಾದ, ಮಹಾಬಲಾನ್ - ಬಲಿಷ್ಠರನ್ನೂ, ದದರ್ಶ - ನೋಡಿದನು. ॥ ೨೧ ೨೨ ॥ ಕಪಿಃ - ಆಂಜನೇಯನು, ಶತಸಾಹಸ್ರಂ - ಲಕ್ಷ ಸಂಖ್ಯೆಯುಳ್ಳ, ಅವ್ಯಗ್ರಂ - ಏಕಾಗ್ರಚಿತ್ತವಾಗಿ, ಅಂತಃಪುರಾಗ್ರತಃ - ಆ ರಾವಣನ ಅಂತಃಪುರದ ಮುಂಗಡೆ, ರಕ್ಷೋ....ಷ್ಟಂ - ರಾವಣನಿಂದ ಇಡಲ್ಪಟ್ಟ, ಮಧ್ಯಮಂ - ಮಧ್ಯದೇಶವರ್ತಿಯಾದ, ಆರಕ್ಷಂ - ಮೂಲಬಲವನ್ನು, ದದರ್ಶ - ಕಂಡನು. ॥ ೨೩ ॥ ಸಃ - ಪ್ರಸಿದ್ಧನಾದ, ಸಮಹಾಕಪಿಃ - ಆ ಆಂಜನೇಯನು, ಮಹಾ....ಣಂ - ದೊಡ್ಡದಾದ ಬಂಗಾರದ ಬಹಿರ್ದ್ವಾರವುಳ್ಳ, ಅದ್ರಿಮೂರ್ಧ್ನಿ-ಪರ್ವತಾಗ್ರದಲ್ಲಿ, ಪ್ರತಿಷ್ಠಿತಂ - ನಿರ್ಮಿತವಾದ, ಪುಂಡ....ಭಿಃ - ಕಮಲಗಳೇ ಭೂಷಣವಾಗಿ ಉಳ್ಳ, ಪರಿಘಾಭಿಃ - ಅಗಳ್ತೆಗಳಿಂದಲೂ, ಅಲಂಕೃತಂ - ಭೂಷಿತವಾದ, ಪ್ರಾಕಾರಾವೃತಂ - ಕೋಟೆಯಿಂದ ಸುತ್ತುವರೆದ, ವಿಖ್ಯಾತಂ - ಪ್ರಸಿದ್ಧವಾದ, ರಾಕ್ಷಸೇಂದ್ರಸ್ಯ - ರಾವಣಾಸುರನ, ತದ್ಗೃಹಂ - ಆ ಮನೆಯನ್ನು, ದೃಷ್ಟ್ವಾ - ಕಂಡು, ತದಾ - ಆ ಕಾಲದಲ್ಲಿ, ಅತ್ಯಂತಂ - ಬಹಳವಾಗಿ, ದದರ್ಶ - ಕಂಡನು. ॥ ೨೪ ॥ ಕಪಿಃ - ಆಂಜನೇಯನು, ದಿವ್ಯಂ - ದೇವತಾಸಂಬಂಧವಾದ, ತ್ರಿವಿ....ಭಂ - ಸ್ವರ್ಗಕ್ಕೆ ಸಮಾನವಾದ, ದಿವ್ಯ....ತಂ - ಶ್ರೇಷ್ಠವಾದ ಶಬ್ದಗಳಿಂದ ಶಬ್ದಾಯಮಾನವಾದ, ವಾಜಿ...ಷ್ಟಂ - ಅಶ್ವಗಳ ಕೆನತದಿಂದ ಧ್ವನಿತವಾದ, ತಥಾ - ಹಾಗೆಯೇ, ಭೂಷಣೈಃ - ಆಭರಣಗಳಿಂದ, ನಾದಿತಂ - ಶಬ್ದಾಯಮಾನವಾದ, ರಥೈಃ - ರಥಗಳಿಂದಲೂ, ಯಾನೈಃ-ಪಲ್ಲಕ್ಕಿಗಳಿಂದಲೂ, ವಿಮಾನೈಶ್ಚ-ದೇವರಥಗಳಿಂದಲೂ, ತಥಾ-ಹಾಗೆಯೇ,

---

ಯಾಗಿ ಸಂಚರಿಸುತ್ತಿರುವವರನ್ನೂ, ತೀಕ್ಷ್ಣವಾದ ಶೂಲಾಯುಧ ವಜ್ರಾಯುಧ ಮೊದಲಾದವುಗಳನ್ನು ಧರಿಸಿರುವ ಮಹಾ ಬಲಿಷ್ಠರಾದ ಆ ರಾವಣಾಸುರನ ಶತಸಂಖ್ಯಾಕವಾದ ಮೂಲಬಲವನ್ನೂ ಆತನ ಅಂತಃಪುರದ ಮುಂಭಾಗದಲ್ಲಿ ನೋಡಿದನು. ಹೀಗೆ ಆ ಸೇನೆಯನ್ನು ನೋಡಿದ ಬಳಿಕ ಹನುಮಂತನು ಕನಕಮಯವಾದ ದೊಡ್ಡ ಪ್ರಾಕಾರದಿಂದಾವೃತವಾಗಿ ಬಿಳಿದಾವರೆಗಳೇ ಅವತಂಸಗಳಾಗಿರುವ ಅಗಳ್ತೆಗಳಿಂದಲಂಕೃತವಾಗಿ ಬಂಗಾರದಿಂದ ನಿರ್ಮಿತವಾದ ಬಹಿರ್ದ್ವಾರಗಳುಳ್ಳುದಾಗಿಯೂ, ಸುಪ್ರಸಿದ್ಧವಾದ ಲಂಬಾಚಲದ ಮೇಲೆ ಸುಪ್ರತಿಷ್ಠವಾಗಿಯೂ ಇರುವ ಆ ರಾವಣಾಸುರನ ಅರಮನೆಯನ್ನು ಕಂಡನು. ಸ್ವರ್ಗಕ್ಕೆ ಸಮಾನವಾಗಿರುವುದೂ, ಮನೋಹರವಾದ ಗಾನಧ್ವನಿಯಿಂದ ಪ್ರತಿಧ್ವನಿತವಾಗಿರುವುದೂ, ಕುದುರೆಗಳ ಕೆನೆಯುವಿಕೆಯಿಂದ ಹುಟ್ಟಿದ ಶಬ್ದದಿಂದಲೂ, ಅವುಗಳಿಗೆ ತೊಡಿಸಿರುವ ಆಭರಣಗಳ ಧ್ವನಿಗಳಿಂದಲೂ ಕೂಡಿ ರಥಗಳಿಂದಲೂ, ಯಾನಗಳಿಂದಲೂ, ವಿಮಾನಗಳಿಂದಲೂ, ಮಂಗಳಕರಗಳಾದ ಕುದುರೆಗಳಿಂದಲೂ, ಗಜಗಳಿಂದಲೂ, ಚತುರ್ದಂತ

ಸಂಘುಷ್ಟಂ ನಾದಿತಂ ಭೂಷಣೈಸ್ತಥಾ ॥ ೨೬ ॥ ರಥೈರ್ಯಾನೈರ್ವಿಮಾನೈಶ್ಚ ತಥಾ ಹಯಗಜೈಶ್ಶುಭೈಃ । ವಾರಣೈಶ್ಚ ಚತುರ್ದಂತೈಶ್ಶ್ವೇತಾಭ್ರನಿಚಯೋಪಮೈಃ ॥೨೭॥ ಭೂಷಿತಂ ರುಚಿರದ್ವಾರಂ ಮತ್ತೈಶ್ಚ ಮೃಗಪಕ್ಷಿಭಿಃ । ರಕ್ಷಿತಂ ಸುಮಹಾವೀರ್ಯೈರ್ಯಾತುಧಾನೈಸ್ಸಹಸ್ರಶಃ । ರಾಕ್ಷಸಾಧಿಪತೇರ್ಗುಪ್ತಮಾವಿವೇಶ ಗೃಹಂ ಕಪಿಃ ॥೨೮॥

ಸಹೇಮಜಾಂಬೂನದಚಕ್ರವಾಳಂ
ಮಹಾರ್ಹಮುಕ್ತಾಮಣಿಭೂಷಿತಾಂತಂ ।
ಪರಾರ್ಧ್ಯಕಾಲಾಗರುಚಂದನಾಕ್ತಂ
ಸರಾವಣಾಂತಃಪುರಮಾವಿವೇಶ ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ಥಸ್ಸರ್ಗಃ

ಶುಭೈಃ - ಒಳ್ಳೆಯ ಲಕ್ಷಣಗಳುಳ್ಳ, ಹಯಗಜೈಃ - ಕುದುರೆಗಳಿಂದಲೂ, ಎರಡು ದಂತಗಳುಳ್ಳ ಗಜಗಳಿಂದಲೂ, ಭೂಷಿತಂ - ಅಲಂಕೃತವಾದ, ಮತ್ತೈಃ - ಮದಿಸಿರುವ, ಮೃಗಪಕ್ಷಿಭಿಃ - ಮೃಗಗಳಿಂದಲೂ, ಪಕ್ಷಿಗಳಿಂದಲೂ, ರುಚಿರದ್ವಾರಂ-ಮನೋಹರವಾದ ಬಾಗಿಲುಗಳುಳ್ಳ, ಸುಮಹಾವೀರ್ಯೈಃ-ಮಹಾ ಪರಾಕ್ರಮಿಗಳಾದ, ಸಹಸ್ರಶಃ - ಅನೇಕ, ಯಾತುಧಾನೈಃ - ರಾಕ್ಷಸರಿಂದ, ರಕ್ಷಿತಂ - ಸಂರಕ್ಷಿತವಾದ, ರಾಕ್ಷಸಾಧಿಪತೇಃ-ರಾವಣನ, ಗೃಹಂ-ಮನೆಯನ್ನು, ಗುಪ್ತಂ-ರಹಸ್ಯವಾಗಿ, ಆವಿವೇಶ-(ಗೋ) ಪ್ರವೇಶಿಸಲಪೇಕ್ಷಿಸಿದನು. ॥ ೨೨ ॥ ಸಃ - ಆ ಆಂಜನೇಯನು, ಜಾಂಬೂ....ಳಂ - ಬಂಗಾರದ ಕೋಟೆಯ ಸುತ್ತಲೂ, ಹೇ....ಳಂ - ಗಣಿಯಲ್ಲಿ ಹುಟ್ಟಿದ ಚಿನ್ನದ ಮತ್ತು ಜಂಬೂನದಿಯಲ್ಲಿ ಹುಟ್ಟಿದ ಚಿನ್ನದ ಕೋಟೆಯುಳ್ಳ, ಮಹಾ....ತಂ - ಶ್ರೇಷ್ಠಗಳಾದ ಮುತ್ತಿನ ಮಣಿಗಳಿಂದ ಅಲಂಕೃತವಾದ ಅಗ್ರಭಾಗಗಳುಳ್ಳ, ಪರಾ....ಕ್ತಂ - ಶ್ರೇಷ್ಠವಾದ ಕೃಷ್ಣಾಗರು ರಸದಿಂದಲೂ, ಶ್ರೀಗಂಧದಿಂದಲೂ ನೆನಸಲ್ಪಟ್ಟ, ರಾವ....ರಂ - ಸ್ವರ್ಣದಿಂದೊಡಗೂಡಿದ ರಾವಣಾಸುರನ ಪಟ್ಟಣ ಮಧ್ಯವನ್ನು, ಆವಿವೇಶ - ಪ್ರವೇಶಿಸಿದನು. ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ಥಸ್ಸರ್ಗಃ

ಗಳಿಂದೊಪ್ಪಿ ಬಿಳೀಮೋಡಗಳಿಗೆ ಸಮಾನವಾಗಿ ಶೋಭಿಸುತ್ತಿರುವ ಆನೆಗಳಿಂದಲೂ,ಮದಿಸಿದ ಮೃಗಪಕ್ಷಿಗಳಿಂದಲೂ ಅಲಂಕೃತವಾಗಿ ಮಹಾ ಭುಜಬಲಪರಾಕ್ರಮಶಾಲಿಗಳಾದ ಅನೇಕ ಸಹಸ್ರ ರಾಕ್ಷಸರಿಂದ ಸುರಕ್ಷಿತವಾಗಿ ಕಣ್ಗೊಪ್ಪಿ ರಂಜಿಸುತ್ತಿರುವ ಆ ರಾವಣೇಶ್ವರನ ಅರಮನೆಯನ್ನು ಕಂಡು ಧೀರನಾದ ಹನುಮಂತನು ಬಹು ಗೋಪ್ಯವಾಗಿ ಒಳಹೊಕ್ಕನು. ಆ ಬಳಿಕ ಆತನು ಸುವರ್ಣದಿಂದ ನಿರ್ಮಿತವಾದುದೂ, ಚಿನ್ನದ ಗಾರೆಯಿಂದ ಲೇಪಿತವಾಗಿ ಹೊಳೆಯುತ್ತಿರುವ ಗೋಡೆಗಳುಳ್ಳುದೂ, ತುದಿಗಳಲ್ಲಿ ಅತ್ಯುತ್ತಮವಾದ ಮುತ್ತುರತ್ನಗಳಿಂದ ಅಲಂಕೃತವಾಗಿರುವುದೂ, ಎಲ್ಲಿನೋಡಿದರೂ ಕೃಷ್ಣಾಗರು ಶ್ರೀಗಂಧಲೇಪಿತವಾಗಿ ಘಮಘಮಿಸುತ್ತಿರುವುದೂ ಆದ ಆ ರಾವಣನ ಅಂತಃಪುರವನ್ನು ಪ್ರವೇಶಿಸಿದನು. ॥ ೨೧-೨೯ ॥

ಇಂತಿದು ಹನುಮತ್ಕೃತ ರಾವಣನ ಮೂಲಬಲವೀಕ್ಷಣ ವೃತ್ತಾಂತವೆಂಬ
ನಾಲ್ಕನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಪಂಚಮಸ್ಸರ್ಗಃ

¶ ತತ ಸ್ಸಮಧ್ಯಂಗತ ಮಂಶುಮಂತಂ ಜ್ಯೋತ್ಸ್ನಾವಿತಾನಂ ‡ ಮಹದುದ್ವಮಂತಂ । ದದರ್ಶ ಧೀಮಾನ್ ದಿವಿ ಭಾನುಮಂತಂ ಗೋಷ್ಠೇ ವೃಷಂ ಮತ್ತಮಿವ ಭ್ರಮಂತಂ ॥ ೧ ॥ ಲೋಕಸ್ಯ ಪಾಪಾನಿ ವಿನಾಶಯಂತಂ ಮಹೋದಧಿಂ ಚಾಪಿ ಸಮೇಧಯಂತಂ । ಭೂತಾನಿ ಸರ್ವಾಣಿ ವಿರಾಜಯಂತಂ ದದರ್ಶ ಶೀತಾಂಶು ಮಥಾಭಿಯಾಂತಂ ॥ ೨ ॥ ಯಾ ಭಾತಿ ಲಕ್ಷ್ಮೀರ್ಭುವಿ ಮಂದರಸ್ಥಾ ತಥಾ ಪ್ರದೋ

ತತಃ - ಅನಂತರದಲ್ಲಿ, ಧೀಮಾನ್ - ಬುದ್ಧಿವಂತನಾದ, ಸಃ - ಆ ಆಂಜನೇಯನು, ಮಧ್ಯಂ-ಗಗನಮಧ್ಯವನ್ನು, ಗತಂ - ಹೊಂದಿರುವ, ಮಹತ್ - ಮಹತ್ತರವಾದ, ಜ್ಯೋತ್ಸ್ನಾವಿತಾನಂ - ಬೆಳದಿಂಗಳ ಸಮುದಾಯವನ್ನು, ಉದ್ವಮಂತಂ - ಪ್ರಕಟಗೊಳಿಸುತ್ತಿರುವ, ದಿವಿ - ಅಂತರಿಕ್ಷದಲ್ಲಿ, ಭಾನುಮಂತಂ - ಹೊಳೆಯುತ್ತಿರುವ, ಗೋಷ್ಠೇ - ಗೋಶಾಲೆಯಲ್ಲಿ, ಮತ್ತಂ - ಮದಿಸಿರುವ, ವೃಷಮಿವ - ವೃಷಭದಂತೆ, ಭ್ರಮಂತಂ - ತಿರುಗುತ್ತಿರುವ, ಅಂಶುಮಂತಂ - ಚಂದ್ರನನ್ನು, ದದರ್ಶ - ಕಂಡನು. ॥ ೧ ॥ ಅಥ - ಅನಂತರದಲ್ಲಿ, ಲೋಕಸ್ಯ - ಜನಗಳ, ಪಾಪಾನಿ - ದುಷ್ಕೃತ್ಯಗಳಿಂದುಂಟಾದ ದುಃಖಗಳನ್ನು, ವಿನಾಶಯಂತಂ - ಹೋಗಲಾಡಿಸುತ್ತಿರುವ, ಮಹೋದಧಿಂಚಾಪಿ - ಸಮುದ್ರವನ್ನೂ ಕೂಡ, ಸಮೇಧಯಂತಂ - ವೃದ್ಧಿಗೊಳಿಸುತ್ತಿರುವ, ಸರ್ವಾಣಿ - ಸಮಸ್ತಗಳಾದ, ಭೂತಾನಿ , ಜಂತುವಿಶೇಷಗಳನ್ನು, ವಿರಾಜಯಂತಂ - ಪ್ರಕಾಶಗೊಳಿಸುತ್ತಿರುವ, ಅಭಿಯಾಂತಂ - ಎದುರಾಗಿ ಬರುತ್ತಿರುವ, ಶೀತಾಂಶುಂ - ಚಂದ್ರನನ್ನು, ದದರ್ಶ - ನೋಡಿದನು. ॥ ೨ ॥ ಭುವಿ - ಭೂಮಿಯಲ್ಲಿ, ಮಂದರಸ್ಥಾ - ಮಂದರಪರ್ವತದಲ್ಲಿರುವ, ಯಾಲಕ್ಷ್ಮೀಃ - ಯಾವ ಕಾಂತಿಯು, ಭಾತಿ - ಹೊಳೆಯುತ್ತದೆಯೋ, ತಥಾ-ಹಾಗೆಯೇ, ಪ್ರದೋಷೇಷು-ಸಂಜೆಯ ಕಾಲಗಳಲ್ಲಿ, ಸಾಗರಸ್ಥಾ-ಸಮುದ್ರದಲ್ಲಿರುವ,

---

ಆ ಬಳಿಕ ಹನುಮಂತನು ರಾವಣಾಸುರನ ಪಟ್ಟಣವಾದ ಆ ಲಂಕಾನಗರದ ಮಧ್ಯಪ್ರದೇಶಕ್ಕೆ ಬಂದು ಗಗನ ಮಧ್ಯಗತನಾಗಿ, ತನ್ನ ಕಿರಣಗಳನ್ನೆಲ್ಲೆಡೆಯಲ್ಲಿಯೂ ಪಸರಿಸಿ ನಕ್ಷತ್ರಗಳ ಸಮೂಹಕ್ಕೂ, ಕಿರಣಸಮೂಹಕ್ಕೂ ಮಧ್ಯದಲ್ಲಿರುವವನಾಗಿ, ಗೋಶಾಲೆಯ ಮಧ್ಯದಲ್ಲಿರುವ ಕೊಬ್ಬಿದ ಗೂಳಿಯಂತೊಪ್ಪಿ ಬೆಳಗುತ್ತಿದ್ದ ಚಂದ್ರನನ್ನು ಕಂಡವನಾದನು. ಪ್ರಪಂಚದಲ್ಲಿರುವ ಸಮಸ್ತ ಜನರ ದುಃಖಗಳನ್ನು ಕಳೆಯುತ್ತಲೂ, ಸಮುದ್ರವನ್ನುಕ್ಕಿಸುತ್ತಲೂ, ಸಮಸ್ತ ಪ್ರಾಣಿಗಳನ್ನೂ ಬೆಳಗಿಸುತ್ತಲೂ ರಾರಾಜಿಸುತ್ತಿದ್ದ ಆ ಚಂದ್ರನನ್ನು ನೋಡಿ ಹನುಮಂತನು, ಸೀತಾದೇವಿಯನ್ನು ಹುಡುಕಬೇಕೆಂದಿರುವ ತನಗೆ ಆತನು ಬಹಳ

¶ ಇಲ್ಲಿ ತಿಲಕಕಾರರು, ಮೂರನೆಯ ಸರ್ಗದ ಕಡೆಯಲ್ಲಿ ಬರುವ, "ಚಂದ್ರೋಪಿಸಾಚಿವ್ಯಮಿವ" ಎಂಬ ಶ್ಲೋಕವೂ, "ಶಂಖಪ್ರಭಂ ಕ್ಷೀರಮೃಣಾಳವರ್ಣಂ" ಎಂಬ ಶ್ಲೋಕವೂ ಪ್ರಕ್ಷಿಪ್ತವೆಂದು ಹೇಳುತ್ತಾರೆ. ಈ ಸರ್ಗದಲ್ಲಿ ಚಂದ್ರೋದಯವನ್ನೇ ಪೃಥಕ್ಕಾಗಿ ಪ್ರತಿಪಾದಿಸಿರುವುದರಿಂದ ಹೀಗೆ ಹೇಳಿರಬಹುದು.

‡ "ಮುಹುರುದ್ವಮಂತಂ" ತಿ. ಪಾ.

ಷೇಷುಚ ಸಾಗರಸ್ಥಾ । ತಥೈವ ತೋಯೇಷುಚ ಪುಷ್ಕರಸ್ಥಾ ರರಾಜ ಸಾ ಚಾರು ನಿಶಾಕರಸ್ಥಾ ॥೩॥ ಹಂಸೋ ಯಥಾ ರಾಜತಪಂಜರಸ್ಥಃ ಸಿಂಹೋ ಯಥಾ ಮಂದರ ಕಂದರಸ್ಥಃ । ವೀರೋ ಯಥಾ ಗರ್ವಿತಕುಂಜರಸ್ಥ ಶ್ಚಂದ್ರೋ ವಿಬಭ್ರಾಜ ತಥಾಽಂಬರಸ್ಥಃ ॥ ೪ ॥ ಸ್ಥಿತಃ ಕಕುದ್ಮಾನಿವ ತೀಕ್ಷ್ಣಶೃಂಗೋ ಮಹಾಚಲಶ್ಶ್ವೇತಇವೋಚ್ಚ ಶೃಂಗಃ । ಹಸ್ತೀವ ಜಾಂಬೂನದಬದ್ಧಶೃಂಗೋ ರರಾಜ ಚಂದ್ರಃ ಪರಿಪೂರ್ಣಶೃಂಗಃ ॥ ೫ ॥ ವಿನಷ್ಟಶೀತಾಂಬು ತುಷಾರಪಂಕೋ ಮಹಾಗ್ರಹಗ್ರಾಹ ವಿನಷ್ಟಪಂಕಃ । ಪ್ರಕಾಶ ಲಕ್ಷ್ಮ್ಯಾಶ್ರಯ ನಿರ್ಮಲಾಂಕೋ ರರಾಜ ಚಂದ್ರೋ ಭಗವಾನ್ ಶಶಾಂಕಃ

ಯಾಲಕ್ಷ್ಮೀಶ್ಚ - ಯಾವ ಕಾಂತಿಯು, ತಥೈವ - ಅದೇ ಪ್ರಕಾರವಾಗಿಯೇ, ತೋಯೇಷು - ನದಿಗಳಲ್ಲಿ, ಪುಷ್ಕರಸ್ಥಾ - ಕಮಲಗಳಲ್ಲಿರುವ, (ಯಾಲಕ್ಷ್ಮೀಶ್ಚ - ಯಾವ ಪ್ರಭೆಯೂ) ಭಾತಿ - ಪ್ರಕಾಶಿಸುತ್ತಿದೆಯೋ, ನಿಶಾಕರಸ್ಥಾ - ಚಂದ್ರನಲ್ಲಿರುವ, ಸಾ - ಕಾಂತಿಯು, ಚಾರು - ಸೊಗಸಾಗಿ, ರರಾಜ - ಹೊಳೆಯುತ್ತಿದ್ದಿತು. ॥ ೩ ॥ ರಾಜ....ಸ್ಥಃ - ಬೆಳ್ಳಿ ವಿಕಾರವಾದ ಪಂಜರದಲ್ಲಿರುವ, ಹಂಸಃ - ಹಂಸಪಕ್ಷಿಯು, ಯಥಾ- ಹೇಗೆಯೋ, ಮಂದ....ಸ್ಥಃ-ಮಂದರಪರ್ವತದ ಗುಹೆಯಲ್ಲಿರುವ, ಸಿಂಹಃ-ಸಿಂಹವು, ಯಥಾ - ಯಾವ ರೀತಿಯೋ, ಗರ್ವಿ....ಸ್ಥಃ - ಮದವೇರಿದ ಆನೆಯ ಮೇಲಿರುವ, ವೀರಃ - ಶೂರನು, ಯಥಾ - ಹೇಗೆಯೋ, ತಥಾ - ಆ ಪ್ರಕಾರವಾಗಿ, ಅಂಬರಸ್ಥಃ - ಅಂತರಿಕ್ಷದಲ್ಲಿರುವ, ಚಂದ್ರಃ - ಸುಧಾಕರನು, ವಿಬಭ್ರಾಜ-ಬಹಳವಾಗಿ ವಿರಾಜಿಸಿದನು. ॥೪॥ ತೀಕ್ಷ್ಣಶೃಂಗಃ - ಮೊನಚಾದ ಕೊಂಬುಗಳುಳ್ಳ, ಕಕುದ್ಮಾನಿವ - ಗೂಳಿಯಂತೆಯೂ, ಉಚ್ಚಶೃಂಗಃ - ಎತ್ತರವಾದ ಶಿಖರಗಳುಳ್ಳ, ಶ್ವೇತಃ - ಮಹಾಚಲಇವ - ಶ್ವೇತಾಚಲದ ಹಾಗೆಯೂ, ಜಾಂಬೂ....ಗಃ - ಸ್ವರ್ಣದ ಕಟ್ಟುಗಳಿಂದ ಕೂಡಿದ ದಂತಗಳುಳ್ಳ, ಹಸ್ತೀವ - ಆನೆಯಂತೆಯೂ, ಸ್ಥಿತಃ - ಇರುವ, ಚಂದ್ರಃ - ನಿಶಾಕರನು, ಪರಿ....ಗಃ- ತುಂಬಿದ ಕಳೆಗಳುಳ್ಳವನಾಗಿ, ರರಾಜ - ಪ್ರಕಾಶಿಸಿದನು. ॥ ೫ ॥ ವಿನ....ಕಃ - ನಶಿಸಿದ ಮಂಜಿನ ತುಂತುರಗಳೆಂಬ ಮಾಲಿನ್ಯವುಳ್ಳ, ಮಹಾ....ಕಃ - ಸೂರ್ಯನ ಸ್ಪರ್ಶದಿಂದ ಕಳೆದ ತಮಸ್ಸುಳ್ಳ, ಪ್ರಕಾ....ಕಃ - ಕಾಂತಿಸಮೃದ್ಧಿಯ ಅನುಸರಣೆಯಿಂದ ನಿರ್ದೋಷವಾದ ಚಿಹ್ನೆಯುಳ್ಳ, ಶಶಾಂಕಃ - ಮೊಲವೇ ಗುರುತುಳ್ಳ, ಭಗವಾನ್ - ಪೂಜ್ಯನಾದ, ಚಂದ್ರಃ - ಚಂದ್ರನು, ರರಾಜ - ಪ್ರಕಾಶಿಸಿದನು.

ಉಪಕಾರ ಮಾಡಿದನೆಂದು ಸಂತೋಷಿಸಿದನು. ಭೂಮಿಯಲ್ಲಿಲ್ಲ ಮಂದರಾದ್ರಿಯಲ್ಲಿ ನೆಲಸಿರುವ ಕಾಂತಿಯೂ, ಸಂಜೆಯಸಾಗರದಲ್ಲಿನ ಕಾಂತಿಯೂ, ಹಾಗೆಯೇ ಸರೋವರದ ಕಮಲಪುಷ್ಪಗಳಲ್ಲಿ ನೆಲಸಿರುವ ಕಾಂತಿಯೂ ರಾತ್ರಿಯಲ್ಲಿ ಗಗನಮಧ್ಯಗತನಾಗಿ ಪ್ರಕಾಶಿಸುತ್ತಿದ್ದ ಆ ಚಂದ್ರನಲ್ಲಿ ನೆಲಸಿದ್ದಿತು. ॥೧–೩॥ ರಜತಪಂಜರದಲ್ಲಿ ರಾರಾಜಿಸುವ ರಾಜಹಂಸದಂತೆಯೂ, ಮಂದರಪರ್ವತದ ಗುಹೆಯಲ್ಲಿರುವ ಮೃಗರಾಜನಂತೆಯೂ, ಮದಗಜದಮೇಲೆ ಕುಳಿತಿರುವ ಮಾವಟಿಗನಂತೆಯೂ, ಆಕಾಶಮಧ್ಯಗತವಾದ ಆ ಚಂದ್ರಬಿಂಬವು ಶೋಭಿಸುತ್ತಿದ್ದಿತು. ಮೊನಚಾದ ಕೋಡುಗಳುಳ್ಳ ಕೊಬ್ಬಿದ ಗೂಳಿಯಂತೆಯೂ, ಉನ್ನತಶಿಖರಗಳುಳ್ಳ ಧವಳಗಿರಿಯಂತೆಯೂ, ಚಿನ್ನದ ಕಟ್ಟುಗಳಿಂದಲಂಕೃತವಾದ ದಂತಗಳುಳ್ಳ ಮದಗಜದಂತೆಯೂ ಆ ಚಂದ್ರಮನು ಸಂಪೂರ್ಣಕಳೆಗಳುಳ್ಳವನಾಗಿ ಹೊಳೆಯುತ್ತಿದ್ದನು. ॥ ೪–೫ ॥ ಹಿಮದ ತುಂತುರುಗಳೆಂಬ ಮಾಲಿನ್ಯರಹಿತನಾಗಿಯೂ, ಸೂರ್ಯಕಿರಣಗಳ ಸಂಪರ್ಕದಿಂದ ಕತ್ತಲೆಯನ್ನು ನಾಶಗೊಳಿಸುವವನಾಗಿಯೂ, ಶುಕ್ರಬೃಹಸ್ಪತ್ಯಾದಿ ದೊಡ್ಡದೊಡ್ಡ ಗ್ರಹಗಳನ್ನು

॥ ೬ ॥ ಶಿಲಾತಲಂ ಪ್ರಾಪ್ಯ ಯಥಾ ಮೃಗೇಂದ್ರೋ ಮಹಾರಣಂ ಪ್ರಾಪ್ಯ ಯಥಾ ಗಜೇಂದ್ರಃ । ರಾಜ್ಯಂ ಸಮಾಸಾದ್ಯ ಯಥಾ ನರೇಂದ್ರಸ್ತಥಾ ಪ್ರಕಾಶೋ ವಿರರಾಜ ಚಂದ್ರಃ ॥ ೭ ॥ ಪ್ರಕಾಶ ಚಂದ್ರೋದಯ ನಷ್ಟದೋಷಃ ಪ್ರವೃತ್ತ ರಕ್ಷಃ ಪಿಶಿತಾಶ ದೋಷಃ । ರಾಮಾಭಿರಾಮೇರಿತ ಚಿತ್ತದೋಷಃ ಸ್ವರ್ಗಪ್ರಕಾಶೋ ಭಗವಾನ್ಪ್ರದೋಷಃ ॥ ೮ ॥ ತಂತ್ರೀಸ್ವನಾಃ ಕರ್ಣಸುಖಾಃ ಪ್ರವೃತ್ತಾಃ ಸ್ವಪಂತಿ ನಾರ್ಯಃ ಪತಿಭಿಸ್ಸುವೃತ್ತಾಃ । ನಕ್ತಂಚರಾಶ್ಚಾಪಿ ತಥಾ ಪ್ರವೃತ್ತಾ ವಿಹರ್ತುಮತ್ಯದ್ಭುತ ರೌದ್ರವೃತ್ತಾಃ ॥ ೯ ॥

॥ ೬ ॥ ಮೃಗೇಂದ್ರಃ - ಸಿಂಹವು, ಶಿಲಾತಲಂ - ಗುಂಡಾದ ಕಲ್ಲಿನ ಪ್ರದೇಶವನ್ನು, ಪ್ರಾಪ್ಯ - ಹೊಂದಿ, ಯಥಾ - ಹೇಗೋ, ಮಹಾರಣಂ - ದೊಡ್ಡ ಯುದ್ಧವನ್ನು, ಪ್ರಾಪ್ಯ - ಹೊಂದಿ, ಗಜೇಂದ್ರಃ - ಗಜಶ್ರೇಷ್ಠವು, ಯಥಾ - ಹೇಗೋ, ರಾಜ್ಯಂ - ರಾಜ್ಯವನ್ನು, ಸಮಾಸಾದ್ಯ - ಹೊಂದಿ, ನರೇಂದ್ರಃ - ರಾಜನು, ಯಥಾ - ಹೇಗೋ, ತಥಾ - ಹಾಗೆ, ಪ್ರಕಾಶಃ - ಕಾಂತಿಯುಳ್ಳ, ಚಂದ್ರಃ - ಚಂದ್ರನು, ವಿರರಾಜ - ಹೊಳೆಯುತ್ತಿದ್ದನು. ॥ ೭ ॥ ಪ್ರಕಾ....ಷಃ - ಬಹಳವಾದ ಪ್ರಭೆಯುಳ್ಳ ಚಂದ್ರನ ಆವಿರ್ಭಾವದಿಂದ ಕಳೆದ ತಮೋರೂಪ ದೋಷವುಳ್ಳ, ಪ್ರವೃ....ಷಃ - ಪ್ರವರ್ತಿಸಿದ ರಾಕ್ಷಸರ ಮಾಂಸ ಭಕ್ಷಣವೆಂಬ ದೋಷವುಳ್ಳ, ರಾಮಾ....ಷಃ - ಹೆಂಗಸರೊಡಗೂಡಿ ಮನೋಹರವಾದ ಪುರುಷರಿಂದ ಹೋಗಲಾಡಿಸಿದ ಮನಸ್ಸಂಬಂಧವಾದ ಪ್ರಣಯಕಲಹರೂಪ ದೋಷವುಳ್ಳ, ಸ್ವರ್ಗಪ್ರಕಾಶಃ - ಸ್ವರ್ಗಲೋಕದ ಪ್ರಕಾಶವುಳ್ಳ, ಭಗವಾನ್ - ಪೂಜ್ಯವಾಗಿರುವ, ಪ್ರದೋಷಃ - ಪ್ರದೋಷಕಾಲವು, ಗತಃ - ಕಳೆದುಹೋಯಿತು. ॥ ೮ ॥ ಕರ್ಣ....ಖಾಃ - ಕಿವಿಗಳಿಗೆ ಇಂಪಾಗಿರುವ, ತಂತ್ರೀಸ್ವರಾಃ - ವೀಣಾದಿ ವಾದ್ಯಗಳ ಷಡ್ಜಾದಿ ಸ್ವರಗಳು, ಪ್ರವೃತ್ತಾಃ - ಪ್ರಾರಂಭಿಸಲ್ಪಟ್ಟವು, ಸುವೃತ್ತಾಃ - ಒಳ್ಳೇ ಸ್ವಭಾವಗಳುಳ್ಳ, ನಾರ್ಯಃ - ಹೆಂಗಳು, ಪತಿಭಿಃ - ಗಂಡಂದಿರೊಡನೆ, ಸ್ವಪಂತಿ - ಮಲಗುತ್ತಿದ್ದರು, ಅತ್ಯ....ತ್ತಾಃ - ಅತ್ಯಾಶ್ಚರ್ಯಕರವೂ, ಭಯಂಕರವೂ ಆದ ವ್ಯಾಪಾರಗಳುಳ್ಳ, ನಕ್ತಂ....ಪಿ - ರಾಕ್ಷಸರೂ ಕೂಡ, ತಥಾ - ಹಾಗೆಯೇ, ವಿಹರ್ತುಂ - ಕ್ರೀಡಿಸಲು, ಪ್ರವೃತ್ತಾಃ - ಆರಂಭಿಸಿದರು. ॥ ೯ ॥

ತನ್ನ ಪ್ರಕಾಶದಿಂದ ಮೆರೆಯಿಸುತ್ತಿರುವವನಾಗಿಯೂ ಇರುವ ಆ ಚಂದ್ರನು ವ್ಯಕ್ತವಾಗಿ ಹೊಳೆಯುತ್ತಿರುವ ಲಾಂಛನದಿಂದ ಗಗನಮಧ್ಯದಲ್ಲಿ ಬಹುವಾಗಿ ವಿರಾಜಿಸುತ್ತಿದ್ದನು. ಮೃಗರಾಜನು ನಿರಾವರಣವಾದ ಉನ್ನತ ಶಿಲಾತಲವನ್ನೈದಿ ಪ್ರಕಾಶಿಸುವಂತೆಯೂ, ಗಜರಾಜನು ಯುದ್ಧಾಂಗಣವನ್ನೈದಿ ವಿರಾಜಿಸುವಂತೆಯೂ, ಗಗನ ಮಧ್ಯಪ್ರದೇಶವನ್ನೈದಿದ್ದ ಆ ಚಂದ್ರನು ವಿರಾಜಿಸುತ್ತಿದ್ದನು. ಹೀಗೆ ಬಹು ಪ್ರಕಾಶಮಾನವಾಗಿ ಚಂದ್ರೋದವಾದೊಡನೆಯೇ ಕತ್ತಲೆಯು ದೂರ ಸರಿಯಿತು ; ಆ ಲಂಕಾನಗರದಲ್ಲಿದ್ದ ರಾಕ್ಷಸರೆಲ್ಲರೂ ಮಾಂಸಭಕ್ಷಣ ನಿರತರಾದರು ; ಕಾಮಿನೀಕಾಮುಕರು ತಂತಮ್ಮ ಮನಸ್ಸುಗಳಲ್ಲಿದ್ದ ಕೋಪಗಳನ್ನು ತೊರೆದು ಅನ್ಯೋನ್ಯಾಸಕ್ತರಾದರು ; ಆ ಕೂಡಲೇ ಸ್ವರ್ಗಕ್ಕೆ ಸಮಾನವಾದ ಸುಖಸಂತೋಷಗಳನ್ನೀಯುವ ಪ್ರದೋಷಕಾಲವು ಕಳೆದುಹೋಯಿತು. ॥ ೭–೮ ॥ ಆಗ ಕಿವಿಗಿಂಪಾದ ವೀಣಾದಿ ವಾದ್ಯಗಳ ಮಧುರ ಧ್ವನಿಯು ಕೇಳಿಬಂದಿತು. ಪತಿವ್ರತೆಯರಾದ ಸ್ತ್ರೀಯರು ತಮ್ಮ ತಮ್ಮ ಪತಿಗಳೊಡಗೂಡಿ ನಿದ್ರಿಸಿದರು. ರಾತ್ರಿಂಚರರಾದ ಕ್ರೂರ ರಾಕ್ಷಸರು ಆಶ್ಚರ್ಯವನ್ನೂ, ಭಯವನ್ನೂ ಹುಟ್ಟಿಸುತ್ತ ವಿಹರಿಸಲುಪಕ್ರಮಿಸಿದರು. ಮಹಾ ಬುದ್ಧಿಶಾಲಿಯಾದ ಹನುಮಂತನು

ಮತ್ತಪ್ರಮತ್ತಾನಿ ಸಮಾಕುಲಾನಿ ರಥಾಶ್ವಭದ್ರಾಸನಸಂಕುಲಾನಿ । ವೀರಶ್ರಿಯಾ ಚಾಪಿ ಸಮಾಕುಲಾನಿ ದದರ್ಶ ಧೀಮಾನ್ ಸಕಪಿಃ ಕುಲಾನಿ ॥ ೧೦ ॥ ಪರಸ್ಪರಂ ಚಾಧಿಕಮಾಕ್ಷಿಪಂತಿ ಭುಜಾಂಶ್ಚ ಪೀನಾನಧಿವಿಕ್ಷಿಪಂತಿ । ಮತ್ತಪ್ರಲಾಪಾನಧಿವಿಕ್ಷಿಪಂತಿ ಮತ್ತಾನಿ ಚಾನ್ಯೋನ್ಯಮಧಿಕ್ಷಿಪಂತಿ ॥ ೧೧ ॥ ರಕ್ಷಾಂಸಿ ವಕ್ಷಾಂಸಿಚ ವಿಕ್ಷಿಪಂತಿ ಗಾತ್ರಾಣಿ ಕಾಂತಾಸು ಚ ವಿಕ್ಷಿಪಂತಿ । ರೂಪಾಣಿ ಚಿತ್ರಾಣಿಚ ವಿಕ್ಷಿಪಂತಿ ದೃಢಾನಿ ಚಾಪಾನಿಚ ವಿಕ್ಷಿಪಂತಿ ॥ ೧೨ ॥ ದದರ್ಶ ಕಾಂತಾಶ್ಚ ಸಮಾಲಪಂತ್ಯಸ್ತಥಾಪರಾಸ್ತತ್ರ ಪುನಸ್ಸ್ವಪಂತ್ಯಃ । ಸುರೂಪವಕ್ತ್ರಾಶ್ಚ ತಥಾ ಹಸಂತ್ಯಃ ಕ್ರುದ್ಧಾಃ ಪರಾಶ್ಚಾಪಿ ವಿನಿಶ್ವ

ಧೀಮಾನ್ - ಬುದ್ಧಿವಂತನಾದ, ವೀರಃ - ಶೂರನಾದ, ಸಕಪಿಃ - ಆ ಆಂಜನೇಯನು, ಮತ್ತ....ನಿ - ಮತ್ತರೂ, ಪ್ರಮತ್ತರೂ ಆಗಿರುವ ಜನಗಳುಳ್ಳ, ರಥಾ....ನಿ - ರಥಗಳಿಂದಲೂ, ಕುದುರೆಗಳಿಂದಲೂ, ಗಜವಿಶೇಷಗಳಿಂದಲೂ, ಪೀಠಗಳಿಂದಲೂ ವ್ಯಾಪ್ತಗಳಾದ, ವೀರಶ್ರಿಯಾಚ - ಧೈರ್ಯ ಸಂಪತ್ತಿನಿಂದಲೂ, ಸಮಾಕುಲಾನಿ - ತುಂಬಿರುವ, ಪೀನಾನ್ - ಬಲಿತಿರುವ, ಭುಜಾನ್ - ಬಾಹುಗಳನ್ನು, ಅಧಿವಿಕ್ಷಿಪಂತಿ - ಒಬ್ಬರಮೇಲೊಬ್ಬರು ಹಾಕುತ್ತಿರುವ, ಮತ್ತಪ್ರಲಾಪಾನ್ - ಮದ್ಯಪಾನ ಮಾಡಿದವರ ಮಾತುಗಳಂತೆ ಮಾತುಗಳನ್ನು, ಅಧಿಕಂ - ಹೆಚ್ಚಾಗಿ, ಕ್ಷಿಪಂತಿ - ಬಿಡುತ್ತಿರುವ, ಮತ್ತಾನಿ - ಮೈಮರೆತು, ಅನ್ಯೋನ್ಯಂ - ಪರಸ್ಪರವಾಗಿ, ಅಧಿಕ್ಷಿಪಂತಿ - ಬಯ್ದಾಡುತ್ತಿರುವ, ವಕ್ಷಾಂಸಿಚ - ವಕ್ಷಸ್ಥಲಗಳನ್ನೂ, ಗಾತ್ರಾಣಿಚ - ಶರೀರಗಳನ್ನೂ, ಕಾಂತಾಸು - ಸ್ವಸ್ತ್ರೀಯರಲ್ಲಿ, ವಿಕ್ಷಿಪಂತಿ - ಇಡುತ್ತಿರುವ, ಚಿತ್ರಾಣಿ - ನಾನಾವರ್ಣಗಳುಳ್ಳ, ರೂಪಾಣಿ - ವೇಷಗಳನ್ನು, ವಿಕ್ಷಿಪಂತಿ - ಧರಿಸುತ್ತಿರುವ, ದೃಢಾನಿ - ಗಟ್ಟಿಯಾದ, ಚಾಪಾನಿಚ - ಧನುಸ್ಸುಗಳನ್ನು, ವಿಕ್ಷಿಪಂತಿ - ಟಂಕಾರ ಮಾಡುತ್ತಿರುವ, ರಕ್ಷಾಂಸಿ - ರಾಕ್ಷಸರನ್ನು, ದದರ್ಶ - ನೋಡಿದನು. ॥ ೧೨ ॥ ತತ್ರಪುನಃ - ಆ ಲಂಕಾಪಟ್ಟಣದಲ್ಲಿ, ಸಮಾಲಪಂತ್ಯಃ - ಮಧುರವಾಗಿ ಮಾತನಾಡುತ್ತಿರುವ, ತಥಾ - ಹಾಗೆಯೇ, ಸ್ವಪಂತ್ಯಃ- ನಿದ್ರೆಗೈಯ್ಯುತ್ತಿರುವ, ಅಪರಾಶ್ಚ - ಮತ್ತೆ ಕೆಲವರು ಹೆಂಗುಸರನ್ನೂ, ತಥಾ - ಹಾಗೆಯೇ, ಸುರೂಪವಕ್ತ್ರಾಃ - ಸುಂದರವಾದ ಮುಖವುಳ್ಳವರಾಗಿ, ಹಸಂತ್ಯಃ - ನಗುತ್ತಿರುವ, ಕೃದ್ಧಾಃ - ಕೋಪಿಷ್ಠರಾದ ಕಾರಣ, ವಿನಿಶ್ವಸಂತ್ಯಃ - ದೀರ್ಘನಿಶ್ವಾಸಗಳನ್ನು ಬಿಡುತ್ತಿರುವ, ಪರಾಶ್ಚಾಪಿ - ಇನ್ನು ಕೆಲವರಾದ,

---

ಆ ಸಮಯದಲ್ಲಿ ಮದಿಸಿ ಮೈಮರೆತಿರುವ ಜನರಿಂದ ನಿಬಿಡಿತವಾಗಿ, ರಥಗಳಿಂದಲೂ, ರಥಾಶ್ವಗಳಿಂದಲೂ, ಭದ್ರಗಜಗಳಿಂದಲೂ, ಸಿಂಹಾಸನಗಳಿಂದಲೂ ತುಂಬಿ ಮಹದೈಶ್ವರ್ಯದಿಂದ ಶೋಭಿಸುತ್ತಿರುವ ಅನೇಕ ಗೃಹಗಳನ್ನು ನೋಡಿದನು. ಆ ಗೃಹಗಳಲ್ಲಿರುವ ಜನರು ಒಬ್ಬರನ್ನೊಬ್ಬರು ಪರಿಹಾಸ ಮಾಡುತ್ತಿದ್ದರು. ಕಾಮಾಸಕ್ತರಾಗಿ ದಪ್ಪವಾಗಿರುವ ತಮ್ಮ ಭುಜಗಳಿಂದೊಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಿದ್ದರು. ಪಾನಮದಮತ್ತರಾಗಿ ಅರ್ಥವಿಲ್ಲದ ಮಾತುಗಳನ್ನು ತಮ್ಮಿಷ್ಟಕ್ಕೆತಾವೇ ಆಡಿಕೊಳ್ಳುತ್ತಿದ್ದರು. ಮದ್ಯಪಾನದ ಮತ್ತೇರಿ ಒಬ್ಬರನ್ನೊಬ್ಬರು ಬಯ್ದಾಡುತ್ತಿದ್ದರು. ಕೆಲವರು ಆಕಳಿಸುತ್ತ ಮೈಮುರಿಯುತ್ತಿದ್ದರು. ಕೆಲವರು ತಮ್ಮ ಭಾರ್ಯೆಯರಮೇಲೆ ಕಾಲುಚಾಚುತ್ತಿದ್ದರು. ನಾನಾರೂಪಗಳನ್ನು ಧರಿಸಿರುವ ಮತ್ತೆ ಕೆಲವರು ಬಹು ದೃಢವಾದ ಬಿಲ್ಲುಗಳನ್ನು ಎತ್ತಿಹಿಡಿದು ಯುದ್ಧಸನ್ನದ್ಧರಾಗಿದ್ದರು. ॥೯—೧೨॥ ರಮಣೀಯವಾದ ಆರಾಕ್ಷಸರ ಗೃಹಗಳಲ್ಲಿ ಕೆಲವರು ಕಾಂತೆಯರು ಚಂದನಾದಿಗಳನ್ನು ಲೇಪಿಸಿ

ಸಂತ್ಯಃ ॥೧೩॥ ಮಹಾಗಜೈಶ್ಚಾಪಿ ತಥಾ ನದದ್ಭಿ ಸ್ಸುಪೂಜಿತೈಶ್ಚಾಪಿ ತಥಾ ಸುಸದ್ಭಿಃ। ರರಾಜ ವೀರೈಶ್ಚ ವಿನಿಶ್ಶ್ವಸದ್ಭಿಃ ಹ್ರದೋ ಭುಜಂಗೈರಿವ ನಿಶ್ಶ್ವಸದ್ಭಿಃ ॥೧೪॥ ಬುದ್ಧಿ ಪ್ರಧಾನಾನ್ ರುಚಿರಾಭಿಧಾನಾನ್ ಸಂಶ್ರದ್ದಧಾನಾ ನ್ಜಗತಃ ಪ್ರಧಾನಾನ್ । ನಾನಾ ವಿಧಾನಾ ನ್ರುಚಿರಾಭಿಧಾನಾನ್ ದದರ್ಶ ತಸ್ಯಾಂ ಪುರಿ ಯಾತುಧಾನಾನ್ ॥೧೫॥ ನನಂದ ದೃಷ್ಟ್ವಾ ಸಚ ತಾನ್ಸುರೂಪಾ ನ್ನಾನಾಗುಣಾ ನಾತ್ಮಗುಣಾನುರೂಪಾನ್ । ವಿದ್ಯೋತ ಮಾನಾ ನ್ಸತದಾನುರೂಪಾ ನ್ದದರ್ಶ ಕಾಂಶ್ಚಿಚ್ಚ ಪುನರ್ವಿರೂಪಾನ್ ॥ ೧೬ ॥ ತತೋ

ಕಾಂತಾಃ - ಸ್ತ್ರೀಯರನ್ನೂ, ದದರ್ಶ - ಕಂಡನು. ॥ ೧೩ ॥ ತಥಾ - ಹಾಗೆಯೇ, (ಪೂಃ - ಲಂಕಾಪಟ್ಟಣವು,) ನದದ್ಭಿಃ - ಬೃಂಹಿತಗಳನ್ನು ಮಾಡುತ್ತಿರುವ, ಮಹಾಗಜೈಶ್ಚ - ದೊಡ್ಡ ಗಜಗಳಿಂದಲೂ, ಸುಪೂಜಿತೈಃ - ಚನ್ನಾಗಿ ಪೂಜಿಸಲ್ಪಟ್ಟ, ಸುಸದ್ಭಿಃ - ಸತ್ಪುರುಷರಿಂದಲೂ, ತಥಾ - ಹಾಗೆಯೇ, ವಿನಿಶ್ವಸದ್ಭಿಃ - ನಿಟ್ಟುಸಿರು ಬಿಡುತ್ತಿರುವ, ವೀರೈಃ - ಶೂರರಿಂದಲೂ, ನಿಶ್ವಸದ್ಭಿಃ - ವಿಶೇಷವಾಗಿ ಉಸಿರುಗಳನ್ನು ಬಿಡುತ್ತಿರುವ, ಭುಜಂಗೈಃ-ಸರ್ಪಗಳಿಂದ, ಹ್ರದಇವ-ಸರೋವರದ ಹಾಗೆ, ರರಾಜ-ಪ್ರಕಾಶಿಸಿತು. ॥ ೧೪ ॥ ತಸ್ಯಾಂಪುರಿ - ಆ ಪಟ್ಟಣದಲ್ಲಿ, ಬುದ್ಧಿಪ್ರಧಾನಾನ್ - ಬುದ್ಧಿಯಿಂದ ಶ್ರೇಷ್ಠರಾದ, ರುಚಿ....ನಾನ್ - ಮನೋಹರಗಳಾದ ಹೆಸರುಗಳುಳ್ಳ, ಸಂಶ್ರದ್ಧಧಾನಾನ್ - ಶ್ರದ್ಧಾಳುಗಳಾಗಿರುವ, ಜಗತಃ - ಲೋಕಕ್ಕೆ, ಪ್ರಧಾನಾನ್ - ಮುಖ್ಯವಾಗಿರುವ, ನಾನಾವಿಧಾನಾನ್ - ಅನೇಕ ವ್ಯಾಪಾರಗಳುಳ್ಳ, ರುಚಿ....ನಾನ್ - ಮನೋಹರವಾದ ಮಾತುಗಳುಳ್ಳ, ಯಾತುಧಾನಾನ್ - ರಾಕ್ಷಸರನ್ನು, ದದರ್ಶ - ಕಂಡನು. ॥ ೧೫ ॥ ಸಃ - ಪ್ರಸಿದ್ಧನಾದ, ಸಃ - ಆ ಆಂಜನೇಯನು, ಸುರೂಪಾನ್ - ರೂಪವಂತರಾಗಿರುವ, ನಾನಾಗುಣಾನ್ - ಅನೇಕವಾದ ಗುಣಗಳುಳ್ಳ, ಆತ್ಮ ... ಪಾನ್ - ತಮ್ಮ ಗುಣಗಳಿಗೆ ಸದೃಶರಾದ, ವಿದ್ಯೋತಮಾನಾನ್ - ಪ್ರಕಾಶಿಸುತ್ತಿರುವ, ಅನುರೂಪಾನ್ - ಅನುಸರಿಸುವ ಸ್ವಭಾವವುಳ್ಳ, ಯಾತುಧಾನಾನ್ - ರಾಕ್ಷಸರನ್ನು, ತಥಾ-ಹಾಗೆಯೇ, ವಿರೂಪಾನ್ - ವಿಕಾರರೂಪವುಳ್ಳ, ಕಾಂಶ್ಚಿತ್ - ಕೆಲವರನ್ನೂ, ದದರ್ಶ - ಕಂಡನು. ॥ ೧೬ ॥ ತತಃ - ಅನಂತರದಲ್ಲಿ, ವರಾರ್ಹಾಃ -

---

ಕೊಳ್ಳುತ್ತಿದ್ದರು; ಕೆಲವರು ನಿದ್ರಿಸುತ್ತಿದ್ದರು; ಕೆಲವರು ಸುಂದರಮುಖಿಯರು ನಗುತ್ತಲಿದ್ದರು. ಆಗಲಾ ಪಟ್ಟಣವು ಘೀಂಕಾರ ನಾದವನ್ನು ಮಾಡುತ್ತಿದ್ದ ಮಹಾ ಗಜಗಳಿಂದಲೂ, ಪೂಜನೀಯರಾದ ವಿಭೀಷಣಾದಿ ಸಾಧುಗಳಿಂದಲೂ, ಯುದ್ಧಸನ್ನದ್ಧರಾಗಿ ನಿಟ್ಟುಸಿರುಗಳನ್ನು ಬಿಡುತ್ತಿದ್ದ ಮಹಾ ವೀರರಿಂದಲೂ ನಿಬಿಡಿತವಾಗಿ, ಬುಸುಗುಟ್ಟುತ್ತಿರುವ ಸರ್ಪಗಳುಳ್ಳ ದೊಡ್ಡ ಮಡುವಿನಂತೆ ಕಂಗೊಳಿಸುತ್ತಿದ್ದಿತು. ಆಗಲಾ ಹನುಮಂತನು ಆ ಲಂಕಾನಗರದಲ್ಲಿ ಮಹಾ ಬುದ್ಧಿಶಾಲಿಗಳಾಗಿಯೂ, ಬಹು ಮನೋಹರವಾಗಿ ಮಾತನಾಡುವವರಾಗಿಯೂ, ತಮ್ಮ ಮತದಲ್ಲಿ ಸ್ಥಿರವಾದ ನಂಬುಗೆಯುಳ್ಳವರಾಗಿಯೂ, ನಾಸ್ತಿಕರಲ್ಲದವರಾಗಿಯೂ, ಲೋಕವಿಷಯಗಳನ್ನರಿತು ಮುಖ್ಯ ರಕ್ಷಕರಾಗಿಯೂ, ಅನೇಕ ಆಚಾರಗಳುಳ್ಳವರಾಗಿಯೂ, ಸುನಾಮಧೇಯರಾಗಿಯೂ ಇರುವ ಅನೇಕಮಂದಿ ರಾಕ್ಷಸರನ್ನು ಕಂಡನು. ಅವರೆಲ್ಲರೂ ರೂಪವಂತರೂ, ಸದ್ಗುಣಿಗಳೂ, ತಮ್ಮ ಗುಣಕ್ಕೆ ತಕ್ಕ ವ್ಯವಹಾರಗಳುಳ್ಳವರೂ ಆಗಿದ್ದರು. ಆ ಹನುಮಂತನಿವರೆಲ್ಲರನ್ನೂ ನೋಡಿ ಬಹಳವಾಗಿ ಸಂತೋಷಿಸಿ ಇನ್ನೂ ಸ್ವಲ್ಪ ಮುಂದಕ್ಕೆ ಹೋಗಿ ಅಲ್ಲಿ ವಿಕಾರರೂಪಗಳುಳ್ಳವರೂ, ಆ ರೂಪಕ್ಕೆ ತಕ್ಕ ವಕ್ರಗುಣಗಳುಳ್ಳವರೂ ಆದ

ವರಾಹರ್ಾಸ್ಸುವಿಶುದ್ಧಭಾವಾ ಸ್ತೇಷಾಂ ಸ್ತ್ರಿಯಸ್ತತ್ರ ಮಹಾನುಭಾವಾಃ । ಪ್ರಿಯೇಷು ಪಾನೇಷುಚ ಸಕ್ತಭಾವಾ ದದರ್ಶ ತಾರಾಇವ ಸುಪ್ರಭಾವಾಃ ॥ ೧೭ ॥ ¶ ಶ್ರಿಯಾ ಜ್ವಲಂತೀ ಸ್ತ್ರಪಯೋಪಗೂಢಾ ನಿಶೀಥಕಾಲೇ ರಮಣೋಪಗೂಢಾಃ । ದದರ್ಶ ಕಾಶ್ಚಿತ್ಪ್ರಮದೋಪಗೂಢಾಃ ಯಥಾ ವಿಹಂಗಾಃ ಕುಸುಮೋಪಗೂಢಾಃ ॥ ೧೮ ॥ ಅನ್ಯಾಃ ಪುನರ್ಹರ್ಮ್ಯತಲೋಪವಿಷ್ಟಾ ಸ್ತತ್ರ ಪ್ರಿಯಾಂಕೇಷು ಸುಖೋಪವಿಷ್ಟಾಃ । ಭರ್ತುಃ ಪ್ರಿಯಾ ಧರ್ಮಪರಾ ನಿವಿಷ್ಟಾ ದದರ್ಶ ಧೀಮಾ ನ್ಮದನಾಭಿವಿಷ್ಟಾಃ ॥ ೧೯ ॥ ಅಸ್ಪ್ರಾ

ಶ್ರೇಷ್ಠವಾದ ಭೂಷಣಾನುಲೇಪನಾದಿಗಳಿಗೆ ಯೋಗ್ಯರಾದ, ಸುವಿ....ವಾಃ - ನಿರ್ಮಲವಾದ ಸ್ವಭಾವಗಳುಳ್ಳ, ಮಹಾನುಭಾವಾಃ - ಮಹತ್ತರವಾದ ಕಟಾಕ್ಷ ವಿಕ್ಷೇಪಾದಿಗಳುಳ್ಳ, ಪ್ರಿಯೇಷು - ಪತಿಗಳಲ್ಲಿಯೂ, ಪಾನೇಷುಚ - ಮದ್ಯಪಾನಗಳಲ್ಲಿಯೂ, ಸಕ್ತಭಾವಾಃ - ಆಸಕ್ತವಾದ ಅಭಿಪ್ರಾಯವಳ್ಳವರಾಗಿ, ತಾರಾಇವ - ನಕ್ಷತ್ರಗಳಂತೆ, ಸುಪ್ರಭಾವಾಃ - ಒಳ್ಳೆಯ ಕಾಂತಿಯುಳ್ಳ, ತೇಷಾಂ - ಆ ರಾಕ್ಷಸರ, ಸ್ತ್ರಿಯಃ - ಹೆಂಗುಸರನ್ನು, ದದರ್ಶ - ನೋಡಿದನು. ॥ ೧೭ ॥ ಶ್ರಿಯಾ - ಐಶ್ವರ್ಯದಿಂದ, ಜ್ವಲಂತಃ - ಪ್ರಕಾಶಿಸುತ್ತಿರುವ, ತ್ರಪಯಾ - ನಾಚಿಕೆಯಿಂದ, ಉಪಗೂಢಾಃ - ಅವಿತುಕೊಂಡಿರುವ, ನಿಶೀಥಕಾಲೇ - ಅರ್ಧರಾತ್ರಿಯಲ್ಲಿ, ರಮ....ಢಾಃ - ಪತಿಗಳಿಂದ ಆಲಿಂಗನ ಮಾಡಲ್ಪಟ್ಟವರಾಗಿ, ಪ್ರಮ....ಢಾಃ - ಸಂತೋಷದಿಂದ ತುಂಬಿದ, ಕಾಂಶ್ಚಿತ್ - ಕೆಲ ಹೆಂಗುಸರನ್ನು, ಕುಸು....ಢಾಃ - ಹುವ್ವುಗಳಲ್ಲಿ ಅವಿತುಕೊಂಡಿರುವ, ವಿಹಂಗಾಇವ - ಹೆಣ್ಣುದುಂಬಿಗಳಂತಿರುವುದನ್ನು, ದದರ್ಶ - ಕಂಡನು. ॥ ೧೮ ॥ ತತ್ರ - ಆ ಲಂಕೆಯಲ್ಲಿ, ಧೀಮಾರ್ - ಬುದ್ಧಿಶಾಲಿಯಾದ ಆಂಜನೇಯನು, ಹರ್ಮ್ಯ....ಷ್ಟಾಃ - ಉಪ್ಪರಿಗೆಗಳ ಮೇಲೆ ಕುಳಿತಿರುವ, ಪ್ರಿಯಾಂಕೇಷು - ಪತಿಗಳ ತೊಡೆಗಳಲ್ಲಿ, ಸುಖೋಪವಿಷ್ಟಾಃ - ಸುಖವಾಗಿ ಕುಳಿತಿರುವ, ಭರ್ತುಃ - ಗಂಡನಿಗೆ, ಪ್ರಿಯಾಃ - ಇಷ್ಟರಾಗಿರುವ, ಧರ್ಮಪರಾಃ - ಸ್ವಧರ್ಮಾಸಕ್ತರಾದ, ನಿವಿಷ್ಟಾಃ - ವಿವಾಹಿತರಾದ, ಮದ....ಷ್ಟಾಃ - ಕಾಮದಿಂದ ಆಭಿವಿಷ್ಟಾಃ-ಕೂಡಿರುವ, ಅನ್ಯಾಃಪುನಃ - ಮತ್ತೆ ಕೆಲವು ಹೆಂಗುಸರನ್ನು, ದದರ್ಶ-ಕಂಡನು. ॥೧೯॥

ಮತ್ತೆ ಕೆಲವು ರಾಕ್ಷಸರನ್ನು ನೋಡಿದನು. ॥೧೩–೧೭॥ ಇಷ್ಟೆಯಲ್ಲದೆ ಆ ಕಪಿವೀರನು ಬಹು ಅಮೂಲ್ಯಗಳಾದ ಆಭರಣಗಳನ್ನು ಧರಿಸಿ, ಪರಿಶುದ್ಧಸ್ವಭಾವಗಳುಳ್ಳವರಾಗಿ, ಮಹಾನುಭಾವರಾಗಿಯೂ, ತಂತಮ್ಮ ಪತಿಗಳಲ್ಲಿ ನ್ಯಸ್ತಮಾನಸರಾಗಿ ಕಟಾಕ್ಷವೀಕ್ಷಣಗಳಿಂದ ಶೃಂಗಾರಾದಿ ಚೇಷ್ಟೆಗಳನ್ನು ಮಾಡುತ್ತ, ಪಾನಾಸಕ್ತರಾಗಿಯೂ, ತಮ್ಮ ಪಾತಿವ್ರತ್ಯಪ್ರಭಾವದಿಂದ ತಾರೆಗಳಂತೆ ಬೆಳಗುತ್ತಿರುವವರಾಗಿಯೂ ಇರುವ ಅನೇಕ ರಾಕ್ಷಸಸ್ತ್ರೀಯರನ್ನು ಕಂಡವನಾದನು. ಅತಿಶಯವಾದ ಸೌಂದರ್ಯದಿಂದ ಶೋಭಿಸುತ್ತ ಅರ್ಧರಾತ್ರಿಯಲ್ಲಿ ತಮ್ಮ ನಲ್ಲರ ಆಲಿಂಗನದಿಂದ ನಾಚಿ ಪರಮ ಸಂತುಷ್ಟರಾಗಿಯೂ, ಪುಷ್ಪಮಾಲಿಕೆಗಳಿಂದ ಮರೆಯಾಗಿರುವ ಹೆಣ್ಣು ಪಕ್ಷಿಗಳಂತೊಪ್ಪಿರುವವರಾಗಿಯೂ ಇರುವಸ್ತ್ರೀಯರನ್ನೂ ಕಂಡನು. ಮಹಾ ಮೇಧಾವಿಯಾದ ಆ ಹನುಮಂತನು ಉಪ್ಪರಿಗೆಗಳಲ್ಲಿ ವಿನೋದವಾಗಿ ಕುಳಿತಿರುವವರೂ, ತಮ್ಮ ನಲ್ಲರ ತೊಡೆಗಳಮೇಲೆ ಸುಖೋಪವಿಷ್ಟರಾದವರೂ, ತಮ್ಮ ಪತಿಗಳನ್ನು ಆನಂದಗೊಳಿಸುತ್ತಿದ್ದವರೂ, ಶಾಸ್ತ್ರೋಕ್ತವಾಗಿ ವಿವಾಹಿತರಾದವರೂ, ಧರ್ಮವನ್ನು ಮೀರದೆ ನಡೆಯುತ್ತಿರುವವರೂ ಆದ

¶ "ಸ್ತ್ರಿಯಃ" ತಿ. ಪಾ.

ವೃತಾಃ ಕಾಂಚನರಾಜಿವರ್ಣಾಃ ಕಾಶ್ಚಿತ್ಪರಾರ್ಧ್ಯಾ ಸ್ತಪನೀಯವರ್ಣಾಃ । ಪುನಶ್ಚ ಕಾಶ್ಚಿಚ್ಛಶಲಕ್ಷ್ಮವರ್ಣಾಃ ಕಾಂತಪ್ರಹೀಣಾ ರುಚಿರಾಂಗವರ್ಣಾಃ ॥ ೨೦ ॥ ತತಃ ಪ್ರಿಯಾನ್ಪ್ರಾಪ್ಯ ಮನೋಭಿರಾಮಾ ಸ್ಸುಪ್ರೀತಿಯುಕ್ತಾಃ * ಪ್ರಸಮೀಕ್ಷ್ಯ ರಾಮಾಃ । ಗೃಹೇಷು ಹೃಷ್ಟಾಃ ಪರಮಾಭಿರಾಮಾ ಹರಿಪ್ರವೀರ ಸ್ಸದದರ್ಶ ರಾಮಾಃ ॥ ೨೧ ॥ ಚಂದ್ರಪ್ರಕಾಶಾ ಶ್ಚ್ಯಹಿವಕ್ತ್ರಮಾಲಾ ವಕ್ರಾಕ್ಷಿಪಕ್ಷ್ಮಾ ಶ್ಚ ಸುನೇತ್ರಮಾಲಾಃ । ವಿಭೂಷಣಾನಾಂಚ ದದರ್ಶ ಮಾಲಾ ಶ್ಶತಹ್ರದಾನಾಮಿವ ಚಾರುಮಾಲಾಃ ॥ ೨೨ ॥ ನತ್ವೇವ

ಅಪಾವೃತಾಃ - ಹೊದಿಕೆಯಿಲ್ಲದಿರುವ, ಕಾಂಚ....ರ್ಣಾಃ - ಬಂಗಾರದ ರೇಖೆಯ ಬಣ್ಣವುಳ್ಳ, ಪರಾರ್ಧ್ಯಾಃ - ಶ್ರೇಷ್ಠವಾದ, ತಪನೀಯವರ್ಣಾಃ - ಅಪರಂಜಿಯ ಬಣ್ಣವುಳ್ಳ, ಕಾಶ್ಚಿತ್ - ಕೆಲವು ಹೆಂಗುಸರನ್ನೂ, ಪುನಃ - ಮತ್ತು, ಶಶ....ರ್ಣಾಃ - ಚಂದ್ರವರ್ಣವುಳ್ಳ, ಕಾಂತಪ್ರಹೀಣಾಃ - ನಾಯಕರಿಂದ ರಹಿತರಾದ, ರುಚಿ....ರ್ಣಾಃ - ಮನೋಹರವಾದ ದೇಹಕಾಂತಿಯುಳ್ಳ, ಕಾಶ್ಚಿತ್ - ಕೆಲವರನ್ನೂ, ದದರ್ಶ - ಕಂಡನು. ॥ ೨೦ ॥ ತತಃ - ಅನಂತರದಲ್ಲಿ, ಹರಿಪ್ರವೀರಃ - ವಾನರಶ್ರೇಷ್ಠನಾದ, ಸಃ - ಆ ಆಂಜನೇಯನು, ಗೃಹೇಷು - ಮನೆಗಳಲ್ಲಿ, ಮನೋಭಿರಾಮಾ - ಮನೋಹರವಾದ, ಪ್ರಿಯಾ - ಪತಿಗಳನ್ನು, ಪ್ರಾಪ್ಯ - ಹೊಂದಿ, ಸುಪ್ರೀತಿಯುಕ್ತಾಃ - ಬಹು ಸಂತೋಷಯುಕ್ತರಾದ, ರಾಮಾಃ - ಹೆಂಗುಸರನ್ನು, ಪ್ರಸಮೀಕ್ಷ್ಯ - ನೋಡಿ, ಹೃಷ್ಟಾಃ - ಸಂತೋಷಿಸುತ್ತಿರುವ, ಪರಮಾಭಿರಾಮಾಃ - ಅತ್ಯಂತ ಮನೋಹರಗಳಾದ, ರಾಮಾಃ - ಸ್ತ್ರೀಯರನ್ನೂ, ದದರ್ಶ - ಕಂಡನು. ॥ ೨೧ ॥ ಚಂದ್ರಪ್ರಕಾಶಾಃ - ಚಂದ್ರನ ಕಾಂತಿಯಂತೆ ಕಾಂತಿಯುಳ್ಳ, ವಕ್ತ್ರಮಾಲಾಶ್ಚ - ಮುಖಪಙ್ಕ್ತಿಗಳನ್ನೂ, ವಕ್ರಾಕ್ಷಿಪಕ್ಷ್ಮಾಃ - ಸೊಟ್ಟೆಯಾದ ಕಣ್ಣು ರೆಪ್ಪೆಗಳುಳ್ಳ, ಸುನೇತ್ರಮಾಲಾಃ - ಸೊಗಸಾದ ಕಣ್ಣುಗಳ ಸಾಲುಗಳನ್ನೂ, ವಿಭೂಷಣಾನಾಂ - ಆಭರಣಗಳ, ಮಾಲಾಶ್ಚ - ಪಙ್ಕ್ತಿಗಳನ್ನೂ, ಶತಹ್ರದಾನಾಂ - ಮಿಂಚುಗಳ, ಚಾರು - ರಮಣೀಯವಾದ, ಮಾಲಾಇವ - ಪಙ್ಕ್ತಿಗಳಂತಿರುವುವ

ಮತ್ತೆ ಕೆಲವು ಸ್ತ್ರೀಯರನ್ನು ನೋಡಿದನು ; ವಸ್ತ್ರಹೀನರಾಗಿಯೂ, ಚಿನ್ನದ ರೇಖೆಗೆ ಸಮಾನವಾದ ಮೈಬಣ್ಣವುಳ್ಳವರಾಗಿಯೂ, ಅಪರಂಜಿಗೆ ಸಮಾನವಾದ ದೇಹಾಕೃತಿಯುಳ್ಳವರಾಗಿಯೂ ಇರುವ ಮತ್ತೂ ಕೆಲವು ಹೆಂಗುಸರನ್ನು ಕಂಡನು ; ಹೊಂಬಣ್ಣದ ಮೈಯುಳ್ಳವರಾಗಿ, ಭರ್ತೃವಿರಹದಿಂದ ಬಹು ವ್ಯಸನಾಕ್ರಾಂತರಾಗಿ ಚಂದ್ರರೇಖೆಯಂತೆ ಬಿಳುಪೇರಿದ ದೇಹಕಾಂತಿಯುಳ್ಳವರಾದ, ಮನೋಹರಾಂಗಿಯರಾದ ಇನ್ನೂ ಕೆಲವುಮಂದಿ ಸ್ತ್ರೀಯರನ್ನು ಕಂಡನು. ॥೧೭–೨೦॥ ಇಷ್ಟೆಯಲ್ಲದೆ ಆ ಕಪಿಶ್ರೇಷ್ಠನು, ತಮ್ಮ ಪ್ರಿಯರನ್ನು ಹುಡುಕಿ ಅವರೊಡನೆ ಕಲೆತು ಪರಮ ಸಂತುಷ್ಟರಾಗಿರುವ ಅಭಿಸಾರಿಕೆಯರನ್ನೂ, ತಂತಮ್ಮ ಭವನಗಳಲ್ಲಿ ಪತಿಗಳೊಡನೆ ಸೇರಿ ಸುಖವನ್ನನುಭವಿಸುತ್ತಿರುವ ಪತಿವ್ರತೆಯರನ್ನೂ ನೋಡಿದನು. ಆಗಲಾತನು ತಾನು ಕಿಷ್ಕಿಂಧೆಯಿಂದ ಹೊರಡುವಾಗ ಶ್ರೀರಾಮನು ತನ್ನೊಡನೆ ಹೇಳಿದ ಗುರುತುಗಳುಳ್ಳ ಜಾನಕಿಯು ಆ ಸ್ತ್ರೀಯರಮಧ್ಯದಲ್ಲಿರುವಳೇನೋ ಎಂಬ ಸಂಶಯದಿಂದ, ಚಂದ್ರಬಿಂಬದ ಕಾಂತಿಯಿಂದ ಬೆಳಗುತ್ತಿರುವ ಅವರ ಮುಖಗಳನ್ನೂ, ಆಭರಣಗಳ ಸಮೂಹಗಳನ್ನೂ, ಬಾಗಿ ಸುಂದರವಾಗಿ ಶೋಭಿಸುತ್ತಿರುವ ಆ ಸುಂದರಿಯರ ಕಣ್ರೆಪ್ಪೆಗಳನ್ನೂ

* "ಸುಮನೋಭಿರಾಮಾಃ" ತಿ. ಪಾ.

ಸೀತಾಂ ಪರಮಾಭಿಜಾತಾಂ ಪಥಿಸ್ಥಿತೇ ರಾಜಕುಲೇ ಪ್ರಜಾತಾಂ । ಲತಾಂ ಪ್ರಫುಲ್ಲಾಮಿವ ಸಾಧುಜಾತಾಂ ದದರ್ಶ ತನ್ವೀಂ ಮನಸಾಭಿಜಾತಾಂ ॥ ೨೩ ॥ ಸನಾತನೇ ವರ್ತ್ಮನಿ ಸನ್ನಿವಿಷ್ಟಾಂ ರಾಮೇಕ್ಷಣಾಂ ತಾಂ ಮದನಾಭಿವಿಷ್ಟಾಂ । ಭರ್ತುರ್ಮನಶ್ಶ್ರೀಮದನುಪ್ರವಿಷ್ಟಾಂ ಸ್ತ್ರೀಭ್ಯೋ ವರಾಭ್ಯಶ್ಚ ಸದಾವಿಶಿಷ್ಟಾಂ ॥ ೨೪ ॥ ಉಷ್ಣಾರ್ದಿತಾಂ ಸಾನುಸೃತಾಸ್ರಕಂಠೀಂ ಪುರಾ ವರಾರ್ಹೋತ್ತಮನಿಷ್ಕಕಂಠೀಂ । ಸುಜಾತಪಕ್ಷ್ಮಾಮಭಿರಕ್ತಕಂಠೀಂ ವನೇ ಪ್ರನೃತ್ತಾಮಿವ ನೀಲಕಂಠೀಂ ॥ ೨೫ ॥ ಅವ್ಯಕ್ತ

ನ್ನಾಗಿ, ದದರ್ಶ - ಕಂಡನು. ॥ ೨೨ ॥ ಪರ....ತಾಂ - ಸರ್ವೋತ್ತಮವಾಗಿ, ಸುಂದರಳಾದ, ಪಥಿ - ಸನ್ಮಾರ್ಗದಲ್ಲಿ, ಸ್ಥಿತೇ - ಇರುವ, ರಾಜಕುಲೇ - ಜನಕರಾಯನ ಮನೆಯಲ್ಲಿ, ಪ್ರಜಾತಾಂ - ಹುಟ್ಟಿದ, ಸಾಧು - ಒಳ್ಳೆಯ ಭೂಮಿಯಲ್ಲಿ, ಜಾತಾಂ - ಹುಟ್ಟಿದ, ಪ್ರಫುಲ್ಲಾಂ - ಅರಳಿದ, ಲತಾಮಿವ - ಬಳ್ಳಿಯಂತೆ, ತನ್ವೀಂ - ವೈಯುಳ್ಳ, ಮನಸಾ - ಮನದಿಂದ, ಅಭಿಜಾತಾಂ - ಹುಟ್ಟಿರುವ, ಸೀತಾಂತು- ಸೀತಾದೇವಿಯನ್ನಾದರೆ, ನೈವದದರ್ಶ - ನೋಡಲೇ ಇಲ್ಲವು. ॥ ೨೩ ॥ ಸನಾತನೇ - ಅನಾದಿಸಿದ್ಧವಾದ, ವರ್ತ್ಮನಿ - ಪಾತಿವ್ರತ್ಯ ಮಾರ್ಗದಲ್ಲಿ, ಸನ್ನಿವಿಷ್ಟಾಂ - ಇರುವ, ರಾಮೇಕ್ಷಣಾಂ - ಶ್ರೀರಾಮನಲ್ಲಿ ದೃಷ್ಟಿಯುಳ್ಳ, ಮದ....ಷ್ಟಾಂ - ಕಾಮಪೀಡಿತಳಾದ, ಭರ್ತುಃ - ಪತಿಯ, ಶ್ರೀಮತ್ - ಸಂಪದ್ಯುಕ್ತವಾದ, ಮನಃ - ಮನವನ್ನು, ಅನುಪ್ರವಿಷ್ಟಾಂ - ಅನುಸರಿಸಿ ಪ್ರವೇಶಿಸಿರುವ, ವರಾಭ್ಯಃ - ಶ್ರೇಷ್ಠರಾದ, ಸ್ತ್ರೀಭ್ಯಃ - ಹೆಂಗುಸರಿಗಿಂತಲೂ, ಸದಾ - ನಿರಂತರವೂ, ವಿಶಿಷ್ಟಾಂ - ಅತಿಶಯಳಾದ, ಉಷ್ಣಾರ್ದಿತಾಂ - ತಾಪಜ್ವರದಿಂದ ಬಾಧಿತಳಾದ, ಸಾನು....ಠೀಂ - ಅನುಸರಿಸಿದ ಕಣ್ಣೀರುಳ್ಳ ಕೊರಳಿನಿಂದೊಡಗೂಡಿದ, ಪುರಾ - ಪೂರ್ವದಲ್ಲಿ, ವರಾ....ಠೀಂ - ಹೆಚ್ಚಾದ ಬೆಲೆಯುಳ್ಳ ಶ್ರೇಷ್ಠವಾದ ಎದೆಯಲ್ಲಿ ಧರಿಸುವ ಒಡವೆಯೇ ಕೊರಳಲ್ಲಿ ಉಳ್ಳ, ಸುಜಾತಪಕ್ಷ್ಮಾಂ - ಚನ್ನಾಗಿ ಹುಟ್ಟಿರುವ ರೆಪ್ಪೆಗಳುಳ್ಳ, ಅಭಿರಕ್ತಕಂಠೀಂ - ಗಂಭೀರವಾದ ಕಂಠವುಳ್ಳ, ವನೇ - ಅರಣ್ಯದಲ್ಲಿ, ಪ್ರನೃತ್ತಾಂ - ನರ್ತನ ಮಾಡುತ್ತಿರುವ, ನೀಲ....ಠಾಂ - ಹೆಣ್ಣು ನವಿಲಿನಂತಿರುವ, ಅವ್ಯಕ್ತರೇಖಾಂ - ಸ್ಪಷ್ಟವಾಗದಿರುವ

ಚೆನ್ನಾಗಿ ಪರೀಕ್ಷಿಸಿ ನೋಡಿದನು. ಹೀಗೆ ಆ ಮಾರುತಿಯು ಎಲ್ಲಿ ಹುಡುಕಿದರೂ, ಮಹಾ ಸೌಂದರ್ಯವತಿಯಾಗಿ, ಸತ್ಕುಲಪ್ರಸೂತಳಾಗಿ, ಭರ್ತೃವಿಯೋಗದಿಂದ ಹಗಲಿರುಳೂ ದುಃಖಿಸುತ್ತ, ಕೃಶಿಸಿರುವಳೂ, ಅರಳಿದ ಬಳ್ಳಿಯಂತೆ ಕಣ್ಗೊಪ್ಪಿ ರಂಜಿಸುವವಳೂ, ಅಯೋನಿಜೆಯೂ, ಆದ ಸೀತಾದೇವಿಯನ್ನು ಕಾಣಲಿಲ್ಲವು. ॥ ೨೧–೨೩ ॥ ಶ್ರೇಷ್ಠನಾದ ಪಾತಿವ್ರತ್ಯ ಧರ್ಮದಲ್ಲಿರುವವಳೂ, ತನ್ನ ಪತಿಯಾದ ಶ್ರೀರಾಮಮೂರ್ತಿಯನ್ನು ಕಾಣುವುದರಲ್ಲಿ ಅತ್ಯಾಸಕ್ತಳಾಗಿರುವವಳೂ, ಆತನನ್ನು ಕಾಣದಿರುವುದರಿಂದ ಮದನಪೀಡಿತಳಾಗಿರುವವಳೂ, ನಿರಂತರವೂ ಆತನನ್ನೇ ಧ್ಯಾನಿಸುತ್ತಿರುವವಳೂ, ಉತ್ತಮ ಸ್ತ್ರೀಯರಲ್ಲಿ ಗಣ್ಯಳಾಗಿ, ಪತಿ ವಿರಹದಿಂದ ನಿರಂತರವೂ ಕಂಬನಿಗರೆಯುತ್ತಿರುವವಳೂ, ಹಿಂದೆ ತನ್ನ ಪತಿಯೊಡನಿದ್ದಾಗ ಶ್ರೇಷ್ಠವಾದ ಕಂಠಾಭರಣಗಳಿಂದಲಂಕೃತಳಾಗಿ, ಈಗ ಕಂಬನಿಗಳೇ ಆಭರಣಗಳಾಗಿ ಉಳ್ಳವಳೂ, ಸುಂದರವಾಗಿ ಬಾಗಿದ ಕಣ್ರೆಪ್ಪೆಗಳುಳ್ಳವಳೂ, ಮೃದುಭಾಷಣವುಳ್ಳವಳೂ, ಅರಣ್ಯದಲ್ಲಿ ಸಂಚರಿಸುತ್ತಿರುವ ಹೆಣ್ಣು ನವಿಲಿನಂತಿರುವವಳೂ, ಚಂದ್ರರೇಖೆಯಂತೆ ವ್ಯಕ್ತಾವ್ಯಕ್ತವಾಗಿರುವವಳೂ, ಸಂಸ್ಕಾರವಿಲ್ಲದಿರುವುದರಿಂದ ಧೂಳಿ ಮುಚ್ಚಿದ ಚಿನ್ನದ ಬಳ್ಳಿಯಂತಿರು

ರೇಖಾಮಿವ ಚಂದ್ರರೇಖಾಂ ಪಾಂಸುಪ್ರದಿಗ್ಧಾಮಿವ ಹೇಮರೇಖಾಂ । ಕ್ಷತಪ್ರರೂಢಾ
ಮಿವ § ಬಾಣರೇಖಾಂ ವಾಯುಪ್ರಭಿನ್ನಾಮಿವ § ಮೇಘರೇಖಾಂ ॥ ೨೬ ॥

ಸೀತಾಮಪಶ್ಯ ನ್ಮನುಜೇಶ್ವರಸ್ಯ
ರಾಮಸ್ಯ ಪತ್ನೀಂ ವದತಾಂ ವರಸ್ಯ ।
ಬಭೂವ ದುಃಖಾಭಿಹತಶ್ಚಿರಸ್ಯ
ಪ್ಲವಂಗಮೋ ಮಂದಇವಾಚಿರಸ್ಯ ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಮಸ್ಸರ್ಗಃ

ಸ್ವರೂಪವುಳ್ಳ, ಚಂದ್ರ....ತಾಂ - ಚಂದ್ರಕಳೆಯಂತಿರುವ, ಪಾಂಸುಪ್ರದಿಗ್ಧಾಂ - ಧೂಳಿಯಿಂದ ಲೇಪನ ಮಾಡಲ್ಪಟ್ಟ, ಹೇಮ....ತಾಂ - ಚಿನ್ನದ ಸಲಾಕಿಯಂತಿರುವ, ಕ್ಷತಪ್ರರೂಢಾಂ - ಕೆರೆಯುವುದರಿಂದ ಅಂತಹ ಪ್ರಬಲವಾದ, ಬಾಣರೇಖಾಮಿವ - ಬಾಣಕ್ಷತಿಯಂತಿರುವ, ವಾಯುಪ್ರಭಿನ್ನಾಂ - ಗಾಳಿಯಿಂದ ಬೇರೆಯಾಗಿ ಮಾಡಲ್ಪಟ್ಟ, ಮೇಘ....ತಾಂ - ಪಂಙ್ತಿಯಂತಿರುವ, ಮನುಜೇಶ್ವರಸ್ಯ - ಮನುಷ್ಯರಾಜನಾದ, ವದತಾಂ - ಸತ್ಯವಾಕ್ಕುಳ್ಳವರಲ್ಲಿ, ವರಸ್ಯ - ಶ್ರೇಷ್ಠನಾದ, ರಾಮಸ್ಯ - ಶ್ರೀರಾಮನ, ಪತ್ನೀಂ - ಧರ್ಮಪತ್ನಿಯಾದ, ಸೀತಾಂ - ಸೀತಾದೇವಿಯನ್ನು, ಚಿರಸ್ಯ - ಬಹು ಕಾಲದಿಂದ, ಅಪಶ್ಯ - ಕಾಣದಿರುವನಾದುದರಿಂದಲೇ, ಪ್ಲವಂಗಮಃ - ಆಂಜನೇಯನು, ಮಂದಇವ - ಮೂಢನಂತೆ, ಚಿರಸ್ಯ - ಶೀಘ್ರವಾಗಿ, ದುಃಖಾಭಿಹತಃ - ದುಃಖಿತನು, ಬಭೂವ - ಆದನು. ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಮಸ್ಸರ್ಗಃ.

ವನಳೂ, ಬಾಣಘಾತದಿಂದುಂಟಾದ ಘಾಯದ ರೇಖೆಯಂತಿರುವವಳೂ, ವಾಯುವಿನಿಂದ ಚೆದುರಿದ ಮೇಘರೇಖೆಯಂತಿರುವವಳೂ ಆದ ಆ ಸೀತಾರಮಣಿಯನ್ನು ಕಾಣಲಿಲ್ಲ. ಹೀಗೆ ಅಂಜನಾತನಯನು ಮಾತುಗಾರರಲ್ಲಿ ಅಗ್ಗಳೆಯನಾದ ಶ್ರೀರಾಮನ ಪ್ರಿಯಪತ್ನಿ ಸೀತೆಯನ್ನು ಬಹುಕಾಲ ಚೆನ್ನಾಗಿ ಹುಡುಕಿದರೂ ಕಾಣದೆ ಒಂದು ಮುಹೂರ್ತಕಾಲ ಮತಿಗೆಟ್ಟವನಂತೆ ವ್ಯಸನಾಕ್ರಾಂತನಾದನು. ॥ ೨೪–೨೭ ॥

ಇಂತಿದು ಹನುಮತ್ಕೃತ ರಾಕ್ಷಸಗೃಹ ಗವೇಷಣವೆಂಬ
ಐದನೆಯ ಸರ್ಗವು ಸಮಾಪ್ತವಾದುದು.

§ "ವರ್ಣ" ತಿ. ಪಾ. § "ಹೇಮ" ತಿ. ರಾ. ಪಾ.

ಸುಂದರಕಾಂಡೇ ಷಷ್ಠಸ್ಸರ್ಗಃ

ಸನಿಕಾಮಂ ವಿಮಾನೇಷು ¶ ವಿಷಣ್ಣಃ ಕಾಮರೂಪಧೃತ್ । ವಿಚಚಾರ † ಪುನರ್ಲಂಕಾಂ ಲಾಘವೇನ ಸಮನ್ವಿತಃ ॥ ೧ ॥ ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಂ । ಪ್ರಾಕಾರೇಣಾಽರ್ಕವರ್ಣೇನ ಭಾಸ್ವರೇಣಾಽಭಿಸಂವೃತಂ ॥ ೨ ॥ ರಕ್ಷಿತಂ ರಾಕ್ಷಸೈಃ § ಘೋರೈಸ್ಸಿಂಹೈರಿವ ಮಹದ್ವನಂ । ಸಮೀಕ್ಷಮಾಣೋ ಭವನಂ ಚಕಾಶೇ ಕಪಿಕುಂಜರಃ ॥ ೩ ॥ ರೂಪ್ಯಕೋಪಹಿತೈಶ್ಚಿತ್ರೈಸ್ತೋರಣೈರ್ಹೇಮಭೂಷಿತೈಃ । ವಿಚಿತ್ರಾಭಿಶ್ಚ ಕಕ್ಷ್ಯಾಭಿರ್ದ್ವಾರೈಶ್ಚ ರುಚಿರೈರ್ವೃತಂ ॥ ೪ ॥ ಗಜಾಸ್ಥಿತೈ

ವಿಮಾನೇಷು - ವಿಮಾನಗಳಲ್ಲಿ, ಸಿಕಾಮಂ - ಬಹಳ, ವಿಷಣ್ಣಃ - ದುಃಖಿತನಾದ, ಕಾಮರೂಪಧೃತ್ - ಸ್ವೇಚ್ಛಾರೂಪಧಾರಿಯಾದ, ಸಃ - ಆ ಆಂಜನೇಯನು, ಲಾಘವೇನ - ವೇಗದಿಂದ, ಸಮನ್ವಿತಃ - ಕೂಡಿದವನಾಗಿ, ಪುನಃ - ಮತ್ತು, ಲಂಕಾಂ - ಲಂಕಾಪಟ್ಟಣವನ್ನು, ವಿಚಚಾರ - ಸಂಚರಿಸಿದನು. (ಹುಡುಕಿದನು.) ॥ ೧ ॥ ಅಥ - ಬಳಿಕ, ಲಕ್ಷ್ಮೀವಾನ್ - ಕಾಂತಿಯುಕ್ತನಾದ ಆಂಜನೇಯನು, ಭಾಸ್ವರೇಣ - ಪ್ರಕಾಶಮಾನವಾದ, ಅರ್ಕವರ್ಣೇನ - ಸೂರ್ಯವರ್ಣವುಳ್ಳ, ಪ್ರಾಕಾರೇಣ - ಕೋಟೆಯಿಂದ, ಅಭಿಸಂವೃತಂ - ಸುತ್ತುವರೆದ, ರಾಕ್ಷ....ನಂ - ರಾವಣನ ಮನೆಯನ್ನು, ಆಸಸಾದ - ಹೊಂದಿದನು. ॥ ೨ ॥ ಸಿಂಹೈಃ - ಸಿಂಹಗಳಿಂದ, ಮಹತ್ - ದೊಡ್ಡದಾದ, ವನಮಿವ - ಕಾಡಿನಂತೆ, ಘೋರೈಃ - ಭಯಂಕರರಾದ, ರಾಕ್ಷಸೈಃ - ರಕ್ಕಸರಿಂದ, ರಕ್ಷಿತಂ - ಪರಿಪಾಲಿತವಾದ, ಭವನಂ - ಮಂದಿರವನ್ನು, ಸಮೀಕ್ಷಮಾಣಃ - ನೋಡುತ್ತಿರುವ, ಕಪಿಕುಂಜರಃ - ವಾನರಶ್ರೇಷ್ಠನು, ಚಕಾಶೇ - ಪ್ರಕಾಶಿಸಿದನು. ॥ ೩ ॥ ರೂಪ್ಯ....ತೈಃ - ಬೆಳ್ಳಿಯಿಂದ ನಿರ್ಮಿಸಲ್ಪಟ್ಟ, ಚಿತ್ರೈಃ - ಆಶ್ಚರ್ಯಕರಗಳಾದ, ಹೇಮಭೂಷಿತೈಃ - ಸ್ವರ್ಣದಿಂದ ಅಲಂಕೃತಗಳಾದ, ತೋರಣೈಃ - ತಲಬಾಗಿಲುಗಳಿಂದ, ವಿಚಿತ್ರಾಭಿಃ-ನಾನಾಬಣ್ಣಗಳುಳ್ಳ, ಕಕ್ಷ್ಯಾಭಿಃ - ನಡುಮನೆಗಳಿಂದ. ರುಚಿರೈಃ - ಮನೋಹರಗಳಾದ, ದ್ವಾರೈಶ್ಚ - ಬಾಗಿಲುಗಳಿಂದಲೂ, ವೃತಂ - ಕೂಡಿರುವ, ಗಜಾ

ಹೀಗೆ ಎಷ್ಟು ಹುಡುಕಿದರೂ ಪತಿವ್ರತಾಶಿರೋಮಣಿಯಾದ ಜಾನಕಿಯು ಕಾಣದಿರಲು, ಆ ಮಾರುತಿಯು ಚಿಂತಾಕ್ರಾಂತನಾಗಿ ಆ ಆ ಸಮಯಕ್ಕೆ ತಕ್ಕ ರೂಪಗಳನ್ನು ಧರಿಸುತ್ತ ಆ ಲಂಕಾಪಟ್ಟಣದ ವಿಮಾನಸದೃಶಗಳಾದ ಪ್ರಾಸಾದಗಳಲ್ಲಿ ಪುನಃ ವೇಗವಾಗಿ ಸಂಚರಿಸಿದನು. ಹೀಗೆ ಸಂಚರಿಸುತ್ತ ದಿನಕರನ ತೇಜಸ್ಸಿನಿಂದ ಹೊಳೆಯುವ ಸುವರ್ಣ ಪ್ರಾಕಾರಗಳಿಂದ ಸುತ್ತುವರೆದು ಕಣ್ಗೊಪ್ಪಿ ರಂಜಿಸುವ ಆ ರಾವಣಾಸುರನ ಅರಮನೆಯ ಸಮೀಪವನ್ನು ಹೊಂದಿದನು. ಆಗಲಾತನು ಮಹಾ ಭಯಂಕರರಾದ ರಾಕ್ಷಸರಿಂದ ಸುರಕ್ಷಿತವಾಗಿ ಸಿಂಹಗಳು ಕಾವಲಿರುವ ಗೊಂಡಾರಣ್ಯದಂತೊಪ್ಪುತ್ತಿರುವ ಆ ರಾವಣಾಸುರನ ದಿವ್ಯ ಭವನವನ್ನು ನೋಡಿ ಪರಮಾಶ್ಚರ್ಯಭರಿತನಾದನು. ಆ ಭವನವು ಚಿನ್ನ ಬೆಳ್ಳಿಗಳ ತೋರಣಗಳಿಂದ ಚಿತ್ರಿತವಾದ ಬಹಿರ್ದ್ವಾರಗಳುಳ್ಳುದಾಗಿದ್ದಿತು ; ಸುಂದರವಾದ

¶ "ವಿಚರ್ನ" ತಿ. ಮು. ಪಾ. † "ಕಪಿ" ತಿ. ಪಾ. § "ಭೀಮೈಃ" ತಿ. ಪಾ.

ರ್ಮಹಾಮಾತ್ರೈಃ ಶೂರೈಶ್ಚ ವಿಗತಶ್ರಮೈಃ । ಉಪಸ್ಥಿತಮಸಂಹಾರ್ಯೈರ್ಹಯೈಃ ಸ್ಯಂದನಯಾಯಿಭಿಃ ॥ ೫ ॥ ಸಿಂಹವ್ಯಾಘ್ರತನುತ್ರಾಣೈರ್ದಾಂತಕಾಂಚನರಾಜತೈಃ । ಘೋಷವದ್ಭಿರ್ವಿಚಿತ್ರೈಶ್ಚ ಸದಾ ವಿಚರಿತಂ ರಥೈಃ ॥೬॥ ಬಹುರತ್ನಸಮಾಕೀರ್ಣಂ ಪರಾರ್ಧ್ಯಾಸನ § ಭಾಜನಂ । ಮಹಾರಥಸಮಾವಾಸಂ ಮಹಾರಥಮಹಾಸನಂ ॥ ೭ ॥ ದೃಶ್ಯೈಶ್ಚ ಪರಮೋದಾರೈಸ್ತೈಸ್ತೈಶ್ಚ ಮೃಗಪಕ್ಷಿಭಿಃ । ವಿವಿಧೈರ್ಬಹುಸಾಹಸ್ರೈಃ ಪರಿಪೂರ್ಣಂ ಸಮಂತತಃ ॥ ೮ ॥ ವಿನೀತೈರಂತಪಾಲೈಶ್ಚ ರಕ್ಷೋಭಿಶ್ಚ ಸುರಕ್ಷಿತಂ ।

ಸ್ಥಿತೈಃ-ಆನೆಗಳಮೇಲೆ ಕುಳಿತುಕೊಂಡಿರುವ, ಮಹಾಮಾತ್ರೈಃ-ಮಾವಟಿಗರಿಂದಲೂ, ವಿಗತಶ್ರಮೈಃ ಆಯಾಸವಿಲ್ಲದಿರುವ, ಶೂರೈಶ್ಚ - ವೀರರಿಂದಲೂ, ಸ್ಯಂದ....ಭಿಃ - ರಥದೊಡನೆ ಹೋಗುತ್ತಿರುವ, ಅಸಂಹಾರ್ಯೈಃ - ಅವಧ್ಯಗಳಾದ, ಹಯೈಃ - ಕುದುರೆಗಳಿಂದಲೂ, ಉಪಸ್ಥಿತಂ - ಕೂಡಿರುವ, ಸಿಂಹ....ಣೈಃ - ಸಿಂಹಗಳ, ಹುಲಿಗಳ ಚರ್ಮದಿಂದ ಮಾಡಿದ ಕವಚಗಳುಳ್ಳ, ದಾಂತ....ತೈಃ - ದಂತಮಯವಾಗಿಯೂ, ಸ್ವರ್ಣವಿಕಾರವಾಗಿಯೂ, ರಜತರೂಪವಾಗಿಯೂ ಇರುವ, ಘೋಷವದ್ಭಿಃ - ಧ್ವನಿ ಮಾಡುತ್ತಿರುವ, ವಿಚಿತ್ರೈಃ - ನಾನಾಬಣ್ಣವುಳ್ಳ, ರಥೈಃ - ವಾಹನಗಳಿಂದ, ಸದಾ - ಯಾವಾಗಲೂ, ವಿಚರಿತಂ - ಸಂಚರಿಸಲ್ಪಟ್ಟ, ಬಹು....ರ್ಣಂ - ಅನೇಕ ರತ್ನಗಳಿಂದ ವ್ಯಾಪ್ತವಾದ, ಪರಾ....ನಂ - ಶ್ರೇಷ್ಠವಾದ ಪೀಠಗಳೂ, ಪಾತ್ರೆಗಳೂ ಉಳ್ಳ, ಮಹಾ....ಸಂ - ರಥಿಕರಿಗೆ ಸ್ಥಾನವಾದ, ಮಹಾ....ನಂ - ದೊಡ್ಡ ರಥಗಳುಳ್ಳ, ಬೃಹದಾಸನಗಳುಳ್ಳ, ದೃಶ್ಯೈಃ - ನೋಡತಕ್ಕ, ಪರಮೋದಾರೈಃ - ದೊಡ್ಡದಾದ, ಬಹುಸಾಹಸ್ರೈಃ - ಅನೇಕ ಸಹಸ್ರ ಸಂಖ್ಯಾತವಾದ, ತೈಸ್ತೈಃ - ಆಯಾ ಜಾತಿಗಳ, ಮೃಗಪಕ್ಷಿಭಿಃ- ಮೃಗಗಳಿಂದಲೂ, ಪಕ್ಷಿಗಳಿಂದಲೂ, ಸಮಂತತಃ - ಎಲ್ಲೆಡೆಯಲ್ಲಿಯೂ, ಪರಿಪೂರ್ಣಂ - ತುಂಬಿರುವ, ವಿನೀತೈಃ - ವಿನಯಸಂಪನ್ನರಾದ, ಅಂತಪಾಲೈಶ್ಚ - ಪಹರೆಯವರಿಂದಲೂ, ರಕ್ಷೋಭಿಶ್ಚ - ರಕ್ಕಸರಿಂದಲೂ, ಸುರಕ್ಷಿತಂ - ರಕ್ಷಿಸಲ್ಪಟ್ಟ, ಮುಖ್ಯಾಭಿಃ - ಗಣನೀಯರಾದ, ವರಸ್ತ್ರೀಭಿಃ - ಉತ್ತಮ ಸ್ತ್ರೀಯರಿಂದಲೂ, ಸಮಂತತಃ - ಎಲ್ಲೆಡೆಗಳಲ್ಲಿಯೂ, ಪರಿಪೂರ್ಣಂ - ತುಂಬಿದ, ಮುದಿ....ತ್ನಂ -

---

ಒಳತೊಟ್ಟಿಗಳಿಂದಲೂ, ಮನೋಹರವಾದ ಒಳಬಾಗಿಲುಗಳಿಂದಲೂ ವ್ಯಾಪ್ತವಾಗಿದ್ದಿತು. ಆನೆಗಳನ್ನೇರಿ ಕುಳಿತಿರುವ ಮಹಾ ಶೂರರಿಂದಲೂ, ಉತ್ತಮಾಶ್ವಗಳು ಕಟ್ಟಿರುವ, ಸಿಂಹವ್ಯಾಘ್ರಗಳ ಚರ್ಮದಿಂದ ಮಾಡಿದ ಗೌಸಣಿಗೆಗಳಿಂದಲಂಕೃತವಾಗಿರುವ,ಗಜದಂತ ನಿರ್ಮಿತವಾಗಿಯೂ, ಚಿನ್ನಬೆಳ್ಳಿಗಳ ಕಿರುಗಂಟೆಗಳಿಂದ ಶಬ್ದಾಯಮಾನವಾಗಿಯೂ ಇರುವ ಅಸಂಖ್ಯಾತ ರಥಗಳ ಅವಿಶ್ರಾಂತಸಂಚಾರದಿಂದ ಆ ರಾಕ್ಷಸೇಂದ್ರ ಭವನವು ತುಂಬಿತುಳುಕುತ್ತಿದ್ದಿತು. ॥ ೧–೬ ॥ ರತ್ನರಾಶಿಗಳಿಂದ ತುಂಬಿ ಉತ್ತಮಮಣಿಯ ಪೀಠಗಳಿಂದಲಂಕೃತವಾಗಿ ರತ್ನಪಾತ್ರೆಗಳಿಂದ ಶೋಭಿಸುತ್ತಿದ್ದ ಆ ಭವನವು ಬಹು ರಮಣೀಯವಾಗಿದ್ದಿತು. ಮಹಾ ರಥಿಕರಾದ ರಾಕ್ಷಸಶ್ರೇಷ್ಠರಿಗೆನಿವಾಸಸ್ಥಾನವಾಗಿಯೂ,ದಿವ್ಯಯಾನಗಳಿಂದತುಂಬಿರುವುದಾಗಿಯೂ, ಸರ್ವಲೋಕಾತಿಶಯಗಳಾದ ಉತ್ತಮ ಮೃಗಜಾತಿಭೇದಗಳಿಂದಲೂ, ವಿವಿಧ ಪಕ್ಷಿಸಂಕುಲಗಳಿಂದಲೂ ನಿಬಿಡಿತವಾಗಿಯೂ ಇರುವ ಆ ಭವನವು ಕಣ್ಗೊಪ್ಪಿ ರಂಜಿಸುತ್ತಿದ್ದಿತು. ಒಡೆಯ

---

§ “ಭೂಷಿತಂ” ತಿ. ರಾ. ಪಾ.

ಮುಖ್ಯಾಭಿಶ್ಚ ವರಸ್ತ್ರೀಭಿಃ ಪರಿಪೂರ್ಣಂ ಸಮಂತತಃ ॥ ೯ ॥ ಮುದಿತಪ್ರಮದಾರತ್ನಂ ರಾಕ್ಷಸೇಂದ್ರನಿವೇಶನಂ । ವರಾಭರಣಸಂಹ್ರಾದೈಸ್ಸಮುದ್ರಸ್ವನನಿಸ್ಸ್ವನಂ ॥ ೧೦ ॥ ತದ್ರಾಜಗುಣಸಂಪನ್ನಂ ಮುಖ್ಯೈಶ್ಚಾಗರುಚಂದನೈಃ । ಮಹಾಜನೈಸ್ಸಮಾಕೀರ್ಣಂ ಸಿಂಹೈರಿವ ಮಹದ್ವನಂ ॥೧೧॥ ಭೇರೀಮೃದಂಗಾಭಿರುತಂ ಶಂಖಘೋಷನಿನಾದಿತಂ । ನಿತ್ಯಾರ್ಚಿತಂ ‡ ಪರ್ವಹುತಂ ಪೂಜಿತಂ ರಾಕ್ಷಸೈಸ್ಸದಾ ॥ ೧೨ ॥ ಸಮುದ್ರಮಿವ ಗಂಭೀರಂ ಸಮುದ್ರ ಮಿವ ನಿಸ್ಸ್ವನಂ । ಮಹಾತ್ಮನೋ ಮಹದ್ವೇಶ್ಮ ಮಹಾರತ್ನ ಪರಿಚ್ಛದಂ । ಮಹಾರತ್ನಸಮಾಕೀರ್ಣಂ ದದರ್ಶ ಸ ಮಹಾಕಪಿಃ ॥ ೧೩ ॥ ವಿರಾಜ

ಸಂತೋಷಚಿತ್ತರಾದ ಶ್ರೇಷ್ಠ ಸ್ತ್ರೀಯರುಳ್ಳ, ರಾಕ್ಷ....ನಂ-ರಾಕ್ಷಸಶ್ರೇಷ್ಠರ ಮನೆಗಳುಳ್ಳ, ವರಾ....ದೈಃ-ಶ್ರೇಷ್ಠಗಳಾದ ಒಡವೆಗಳ ಧ್ವನಿಗಳಿಂದ, ಸಮು....ನಂ - ಕಡಲಿನಂತೆ ಶಬ್ದವುಳ್ಳ, ತತ್ - ಪ್ರಸಿದ್ಧವಾದ, ರಾಜ....ನ್ನಂ - ರಾಜಚಿಹ್ನೆಗಳಾದ ಛತ್ರಚಾಮರಾದಿಗಳಿಂದ ಕೂಡಿರುವ, ಮುಖ್ಯೈಃ - ಶ್ರೇಷ್ಠಗಳಾದ, ಅಗ...ನೈಃ - ಕೃಷ್ಣಾಗರುಗಳಿಂದಲೂ, ಶ್ರೀಗಂಧಗಳಿಂದಲೂ, ಸಿಂಹೈಃ - ಸಿಂಹಗಳಿಂದ, ಮಹದ್ವನಮಿವ - ದೊಡ್ಡ ಕಾಡಿನಂತೆ, ಮಹಾಜನೈಃ - ಸಭಾಜನರಿಂದ, ಸಮಾಕೀರ್ಣಂ - ಸಮೃದ್ಧವಾದ, ಭೇರೀ....ತಂ - ಭೇರಿಗಳ ಮದ್ದಲೆಗಳ ಧ್ವನಿಗಳುಳ್ಳ, ಶಂಖ....ತಂ - ಶಂಖಗಳ ಧ್ವನಿಗಳಿಂದ ಶಬ್ದಾಯಮಾನವಾದ, ನಿತ್ಯಾರ್ಚಿತಂ - ಯಾವಾಗಲೂ ಗಂಧಾದಿಗಳಿಂದ ಪೂಜಿಸಲ್ಪಟ್ಟ, ಸರ್ವಸುಖಂ - ಎಲ್ಲರಿಗೂ ಸುಖವನ್ನುಂಟುಮಾಡುವ, ಪರ್ವಹುತಂ - ಆಯಾ ಕಾಲಗಳಲ್ಲಿ ಮಾಡಲ್ಪಟ್ಟ ಹೋಮಗಳುಳ್ಳ, ಸದಾ - ಯಾವಾಗಲೂ, ರಾಕ್ಷಸೈಃ - ರಕ್ಕಸರಿಂದ, ಪೂಜಿತಂ - ಪೂಜಿಸಲ್ಪಟ್ಟ, ಸಮುದ್ರಮಿವ - ಕಡಲಿನಂತೆ, ಗಂಭೀರಂ - ಗಂಭೀರವಾದ, ನಿಸ್ವನಂ - ಶಬ್ದವುಳ್ಳ, ಮಹಾ....ದಂ - ಅಮೂಲ್ಯವಾದ ರತ್ನದ ಹೊದಿಕೆಯುಳ್ಳ, ಮಹಾ....ರ್ಣಂ - ಹೆಚ್ಚಾದ ಬೆಲೆಯುಳ್ಳ ರತ್ನಗಳಿಂದ ವ್ಯಾಪ್ತವಾದ, ಮಹಾತ್ಮನಃ - ಮಹಾನುಭಾವನಾದ ರಾವಣಾಸುರನ, ವೇಶ್ಮ - ಮನೆಯನ್ನು, ಸಮಹಾಕಪಿಃ - ಆ ಆಂಜನೇಯನು, ದದರ್ಶ - ಕಂಡನು. ॥ ೪-೧೩ ॥ ವಪುಷಾ - ಆಕಾರದಿಂದ, ವಿರಾಜ

ನಿಗೆ ವಿಧೇಯರಾದ ಹೊರಗಾವಲಿನ ಭಟರಿಂದ ಸುರಕ್ಷಿತವಾಗಿ, ರೂಪಲಾವಣ್ಯ ಸಂಶೋಭಿತರಾದ ಸುಂದರ ಸ್ತ್ರೀಯರಿಂದಲೂ ತುಂಬಿ, ವಿಲಾಸವಿಭ್ರಮಗಳಿಂದ ಮೆರೆಯುತ್ತಿರುವ ಆ ಸ್ತ್ರೀಯರ ಶ್ರೇಷ್ಠವಾದ ಆಭರಣಗಳ ಧ್ವನಿಗಳಿಂದ ಸಮುದ್ರದಂತೆ ಧ್ವನಿಗೈಯ್ಯುತ್ತಿರುವ ಆ ರಾಕ್ಷಸೇಂದ್ರ ಭವನವು ಲೋಕಮನೋಹರವಾಗಿದ್ದಿತು. ॥೭–೧೦॥ ಹೀಗೆ ವಿವಿಧ ರಾಜೋಪಚಾರಗಳಿಂದ ಕೂಡಿ ಕೃಷ್ಣಾಗರು ಚಂದನವೇ ಮೊದಲಾದ ಶ್ರೇಷ್ಠವಾದ ಪರಿಮಳ ದ್ರವ್ಯಗಳ ಧೂಪ ಧೂಮದಿಂದ ವ್ಯಾಪ್ತವಾಗಿ ಭೇರೀ ಮೃದಂಗ ಶಂಖಾದಿ ವಾದ್ಯಗಳ ಧ್ವನಿಗಳಿಂದ ಶಬ್ದಾಯಮಾನವಾಗಿ, ಪರ್ವಕಾಲಗಳಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಿಕೊಳ್ಳುವ ಸರ್ವಪೂಜ್ಯನಾದ ಯಜ್ಞೇಶ್ವರನುಳ್ಳದಾಗಿ, ಸಮಸ್ತ ರಾಕ್ಷಸರಿಗೂ ಸನ್ಮಾನಾರ್ಹವಾಗಿಯೂ, ಸಮುದ್ರದಂತೆ ಬಹು ಗಂಭೀರವಾದ ಧ್ವನಿಯುಳ್ಳದಾಗಿಯೂ, ರತ್ನನಿರ್ಮಿತವಾದ ವಿವಿಧ

---

‡ "ಪರ್ವಸುತಂ" ತಿ. ಪಾ. "ಯಜ್ಞಾರ್ಥವಾಗಿ ಪರ್ವಕಾಲಗಳಲ್ಲಿ ಸವನಮಾಡಿದ ಸೋಮವುಳ್ಳದು" ಎಂದು ಇದರ ಅರ್ಥ.

ಮಾನಂ ವಪುಷಾ ಗಜಾಶ್ವರಥ ಸಂಕುಲಂ । ಲಂಕಾಭರಣಮಿತ್ಯೇವ ಸೋಽಮನ್ಯತ ಮಹಾಕಪಿಃ । ಚಚಾರ ಹನುಮಾಂಸ್ತತ್ರ ರಾವಣಸ್ಯ ಸಮೀಪತಃ ॥ ೧೪-೧೫ ॥ ಗೃಹಾದ್ಗೃಹಂ ರಾಕ್ಷಸಾನಾಮುದ್ಯಾನಾನಿಚ ವಾನರಃ । ವೀಕ್ಷ್ಯಮಾಣೋ ಹ್ಯಸಂತ್ರಸ್ತಃ ಪ್ರಾಸಾದಾಂಶ್ಚ ಚಚಾರ ಸಃ ॥ ೧೬ ॥ ಅವಪ್ಲುತ್ಯ ಮಹಾವೇಗಃ ಪ್ರಹಸ್ತಸ್ಯ ನಿವೇಶನಂ । ತತೋಽನ್ಯತ್ಪುಪ್ಲುವೇ ವೇಶ್ಮ ಮಹಾಪಾರ್ಶ್ವಸ್ಯ ವೀರ್ಯವಾನ್ ॥೧೭॥ ಅಥ ಮೇಘಪ್ರತೀಕಾಶಂ ಕುಂಭಕರ್ಣನಿವೇಶನಂ । ವಿಭೀಷಣಸ್ಯಚ ತಥಾ ಪುಪ್ಲುವೇ ಸ ಮಹಾಕಪಿಃ ॥ ೧೮ ॥ ಮಹೋದರಸ್ಯ ಚ ಗೃಹಂ ವಿರೂಪಾಕ್ಷಸ್ಯ ಚೈವಹಿ । ವಿದ್ಯು

ಮಾನಂ - ಹೊಳೆಯುತ್ತಿರುವ, ಗಜಾ....ಲಂ - ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ವ್ಯಾಪ್ತವಾದ ಆ ಮನೆಯನ್ನು, ಲಂಕಾಭರಣಮಿತಿ-ಲಂಕಾಪಟ್ಟಣಕ್ಕೇ ಒಡವೆಯೆಂದು, ಸಃ - ಆ ಹನುಮಂತನು, ಅಮನ್ಯತ - ಭಾವಿಸಿದನು. || ೧೪ || ತತ್ರ - ಆ ಮನೆಯಲ್ಲಿ, ರಾವಣಸ್ಯ - ರಾವಣಾಸುರನ, ಸಮೀಪತಃ - ಸಮೀಪದಲ್ಲಿ, ಹನುಮಾನ್ - ಆಂಜನೇಯನು, ಚಚಾರ - ಸಂಚರಿಸಿದನು. || ೧೫ || ಅಸಂತ್ರಸ್ತಃ - ಭಯಪಡದಿರುವ, ಸವಾನರಃ - ಆ ಕಪಿಯು, ರಾಕ್ಷಸಾನಾಂ - ಅಸುರರ, ಗೃಹಾತ್ - ಮನೆಯಿಂದ, ಗೃಹಂ - ಮತ್ತೊಂದು ಮನೆಯನ್ನು ಕುರಿತು ಹೋಗುತ್ತ, ಉದ್ಯಾನಾನಿಚ - ಕ್ರೀಡಾವನಗಳನ್ನೂ, ಪ್ರಾಸಾದಾಂಶ್ಚ - ಉಪ್ಪರಿಗೆಗಳನ್ನೂ ಸಹಾ, ವೀಕ್ಷಮಾಣಃ - ನೋಡುತ್ತಿರುವನಾಗಿ, ಚಚಾರ - ಸಂಚರಿಸಿದನು. || ೧೬ || ವೀರ್ಯವಾನ್ - ಪರಾಕ್ರಮಿಯಾದ ಆಂಜನೇಯನು, ಮಹಾವೇಗಃ - ಮಹಾವೇಗವುಳ್ಳವನಾಗಿ, ಪ್ರಹಸ್ತಸ್ಯ - ಪ್ರಹಸ್ತನ, ನಿವೇಶನಂ - ಮನೆಯನ್ನು ಕುರಿತು, ಅವಪ್ಲುತ್ಯ - ಹಾರಿ, ತತಃ - ಆ ಮನೆಯಿಂದ, ಅನ್ಯತ್ - ಮತ್ತೊಂದಾದ, ಮಹಾಪಾರ್ಶ್ವಸ್ಯ - ಮಹಾಪಾರ್ಶ್ವನ, ವೇಶ್ಮ - ಮನೆಯನ್ನು ಕುರಿತು, ಪುಪ್ಲುವೇ - ಹಾರಿದನು. || ೧೭ || ಸಮಹಾಕಪಿಃ - ಆ ಆಂಜನೇಯನು, ಅಥ - ಅನಂತರದಲ್ಲಿ, ಮೇಘ....ಶಂ - ಮೇಘಸದೃಶವಾದ, ಕುಂಭ....ನಂ - ಕುಂಭಕರ್ಣನ ಮನೆಯನ್ನೂ, ತಥಾ - ಹಾಗೆಯೇ, ವಿಭೀಷಣಸ್ಯ - ವಿಭೀಷಣನ, ನಿವೇಶನಂಚ - ಮನೆಯನ್ನೂ ಕುರಿತು, ಪುಪ್ಲುವೇ - ಹಾರಿದನು. || ೧೮ || ಸಮಹಾಕಪಿಃ - ಆ ಆಂಜನೇಯನು, ಮಹೋದರಸ್ಯ - ಮಹೋದರನ, ಗೃಹಂಚ - ಮನೆಯನ್ನೂ, ವಿರೂಪಾಕ್ಷಸ್ಯ - ವಿರೂಪಾಕ್ಷನೆಂಬವನ, ಗೃಹಂಚೈವ - ಮನೆಯನ್ನೂ, ವಿದ್ಯುಜ್ಜಿಂಹಸ್ಯ - ವಿದ್ಯುಜ್ಜಿಂಹನ, ಭವನಂ - ಮನೆ

ಪಾತ್ರೆಗಳುಳ್ಳುದಾಗಿಯೂ, ರತ್ನರಾಶಿಗಳಿಂದ ತುಂಬಿದುದಾಗಿಯೂ ಇರುವ ರಾಕ್ಷಸೇಶ್ವರನಾದ ರಾವಣನ ದಿವ್ಯಭವನವನ್ನು ಕಂಡು ಅದು ಆ ಲಂಕಾರಾಜ್ಯಕ್ಕೇ ಆಭರಣಪ್ರಾಯವೆಂದು ತಿಳಿದನು. ||೧೧ -೧೪|| ಹೀಗೆ ಲಂಕಾಭರಣವಾದ ರಾವಣೇಶ್ವರನ ಅರಮನೆಯನ್ನು ಕಂಡು ಮಹದಾಶ್ಚರ್ಯಭರಿತನಾದ ಆ ಹನುಮಂತನು ಆ ಭವನದಲ್ಲೆಲ್ಲಿಯೋ ಮಲಗಿ ನಿದ್ರಿಸುತ್ತಿದ್ದ ಆ ರಾವಣನ ಸಮೀಪದಲ್ಲಿಯೇ ಸಂಚರಿಸುತ್ತ ಒಂದು ಮನೆಯಿಂದ ಮತ್ತೊಂದು ಮನೆಗೆ ಹಾರುತ್ತ, ಉದ್ಯಾನಗಳಲ್ಲಿಯೂ, ಉಪ್ಪರಿಗೆಗಳಲ್ಲಿಯೂ ಬಹು ಎಚ್ಚರದಿಂದ ಜಾನಕಿಯನ್ನು ಹುಡುಕುತ್ತಿದ್ದನು. ಮಹಾ ಪರಾಕ್ರಮಶಾಲಿಯಾದ ಆತನು ಮೊದಲು ಪ್ರಹಸ್ತನ ಮನೆಗೆ ಹೋಗಿ ಸೀತೆಯನ್ನು ಹುಡುಕಿ ಕಾಣದೆ, ಅಲ್ಲಿಂದ ಮುಂದಕ್ಕೆ ಸುಪಾರ್ಶ್ವನ ಮನೆಗೂ, ಮೇಘಸದೃಶನಾದ ಕುಂಭಕರ್ಣನ ಮನೆಗೂ, ಮಹಾತ್ಮನಾದ ವಿಭೀಷಣನ ಮನೆಗೂ, ಮಹೋದರ, ವಿರೂಪಾಕ್ಷ, ವಿದ್ಯುಜ್ಜಿಹ್ವ, ವಿದ್ಯುನ್ಮಾಲಿ, ವಜ್ರದಂಷ್ಟ್ರ, ಶುಕ, ಮಹಾ

ಜ್ಜಿಹ್ವಸ್ಯ ಭವನಂ ವಿದ್ಯುನ್ಮಾಲೇಃ ಸ್ತಥೈವಚ । ವಜ್ರದಂಷ್ಟ್ರಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ ॥ ೧೯ ॥ ಶುಕಸ್ಯ ಚ ಮಹಾತೇಜಾ ಸ್ಸಾರಣಸ್ಯ ಚ ಧೀಮತಃ । ತಥಾ ಚೇಂದ್ರಜಿತೋ ವೇಶ್ಮ ಜಗಾಮ ಹರಿಯೂಥಪಃ ॥ ೨೦ ॥ ಜಂಬುಮಾಲೇಸ್ಸುಮಾಲೇಶ್ಚ ಜಗಾಮ ಹರಿಸತ್ತಮಃ । ರಶ್ಮಿಕೇತೋಶ್ಚ ಭವನಂ ಸೂರ್ಯಶತ್ರೋಃ ಸ್ತಥೈವಚ ॥೨೧॥ ವಜ್ರಕಾಯಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ । ಧೂಮ್ರಾಕ್ಷಸ್ಯ ಚ ಸಂಪಾತೇಃ ರ್ಭವನಂ ಮಾರುತಾತ್ಮಜಃ ॥ ೨೨ ॥ ವಿದ್ಯುದ್ರೂಪಸ್ಯ ಭೀಮಸ್ಯ ಘನಸ್ಯ ವಿಘನಸ್ಯಚ । ಶುಕನಾಸಸ್ಯ ವಕ್ರಸ್ಯ ಶಠಸ್ಯ ವಿಕಟಸ್ಯಚ ॥ ೨೩ ॥ ಹ್ರಸ್ವಕರ್ಣಸ್ಯ ದಂಷ್ಟ್ರಸ್ಯ ರೋಮಶಸ್ಯ ಚ ರಕ್ಷಸಃ । ಯುದ್ಧೋನ್ಮತ್ತಸ್ಯ ಮತ್ತಸ್ಯ ಧ್ವಜಗ್ರೀವಸ್ಯ ನಾದಿನಃ ॥೨೪॥ ವಿದ್ಯುಜ್ಜಿಹ್ವೇಂದ್ರಜಿಹ್ವಾನಾಂ ತಥಾಹಸ್ತಿಮುಖಸ್ಯಚ । ಕರಾಳಸ್ಯ ಪಿಶಾಚಸ್ಯ ಶೋಣಿತಾಕ್ಷಸ್ಯ ಚೈವಹಿ ॥ ೨೫ ॥ ಕ್ರಮಮಾಣಃ ಕ್ರಮೇಣೈವ ಹನುಮಾನ್ಮಾರು

ಯನ್ನೂ, ತಥೈವ - ಹಾಗೆಯೇ, ವಿದ್ಯುನ್ಮಾಲೇಃ - ವಿದ್ಯುನ್ಮಾಲಿಯ, ಭವನಂಚ - ಮನೆಯನ್ನೂ, ತಥಾ - ಹಾಗೆಯೇ, ವಜ್ರದಂಷ್ಟ್ರಸ್ಯ - ವಜ್ರದಂಷ್ಟ್ರನ, ನಿವೇಶನಂಚ - ಮನೆಯನ್ನೂ ಕುರಿತು, ಪುಪ್ಲುವೇ - ಹಾರಿದನು. ॥೧೯॥ ಮಹಾತೇಜಾಃ - ಮಹಾ ತೇಜೋವಂತನಾದ, ಹರಿಯೂಥಪಃ - ವಾನರಶ್ರೇಷ್ಠನು, ಶುಕಸ್ಯಚ - ಶುಕನ ಮನೆಯನ್ನೂ, ಧೀಮತಃ - ಬುದ್ಧಿಶಾಲಿಯಾದ, ಸಾರಣಸ್ಯ - ಸಾರಣನೆಂಬ ರಕ್ಕಸನ, ವೇಶ್ಮಚ - ಮನೆಯನ್ನೂ, ತಥಾ-ಹಾಗೆಯೇ, ಇಂದ್ರಜಿತಃ - ಇಂದ್ರಜಿತುವಿನ, ವೇಶ್ಮಚ - ಮನೆಯನ್ನೂ ಕುರಿತು, ಜಗಾಮ - ಹೊರಟನು. ॥ ೨೦ ॥ ಹರಿಸತ್ತಮಃ - ವಾನರಶ್ರೇಷ್ಠನು, ಜಂಬುಮಾಲೇಃ - ಜಂಬುಮಾಲಿಯೆಂಬವನ, ಸುಮಾಲೇಃ - ಸುಮಾಲಿಯೆಂಬವನ, ಭವನಂಚ - ಮನೆಯನ್ನೂ, ತಥೈವಚ - ಹಾಗೆಯೇ, ರಶ್ಮಿಕೇತೋಶ್ಚ - ರಶ್ಮಿಕೇತುವೆಂಬವನ, ಭವನಂ - ಮಂದಿರವನ್ನೂ, ಸೂರ್ಯಶತ್ರೋಃ - ಸೂರ್ಯಶತ್ರುವೆಂಬವನ ಗೃಹವನ್ನೂ ಕುರಿತು, ಜಗಾಮ - ಹೊರಟನು. ॥೨೧॥ ಮಾರುತಾತ್ಮಜಃ - ವಾಯುಪುತ್ರನಾದ, ಸಮಹಾಕಪಿಃ - ಆ ವಾನರಶ್ರೇಷ್ಠನು, ತಥಾ-ಹಾಗೆಯೇ, ವಜ್ರಕಾಯಸ್ಯಚ-ವಜ್ರಕಾಯನ ನಿವೇಶನವನ್ನೂ, ತಥಾ-ಹಾಗೆಯೇ, ಧೂಮ್ರಾಕ್ಷಸ್ಯಚ - ಧೂಮ್ರಾಕ್ಷನೆಂಬವನ ಮಂದಿರವನ್ನೂ, ಸಂಪಾತೇಃ - ಸಂಪಾತಿಯೆಂಬ ರಕ್ಕಸನ, ಭವನಂಚ-ಮನೆಯನ್ನೂ ಕುರಿತು, ಪುಪ್ಲುವೇ-ಹಾರಿದನು. ॥ ೨೨ ॥ ವಿದ್ಯುದ್ರೂಪಸ್ಯ-ವಿದ್ಯುದ್ರೂಪನೆಂಬವನ, ಭೀಮಸ್ಯ - ಭೀಮನ, ಘನಸ್ಯ - ಘನನ, ವಿಘನಸ್ಯಚ - ವಿಘನನೆಂಬವನ, ಶುಕನಾಸಸ್ಯ - ಶುಕನಾಸನ, ವಕ್ರಸ್ಯ - ವಕ್ರನ, ಶಠಸ್ಯ - ಶಠನ, ವಿಕಟಸ್ಯ - ವಿಕಟನ, ಹ್ರಸ್ವಕರ್ಣಸ್ಯ - ಹ್ರಸ್ವಕರ್ಣನ, ದಂಷ್ಟ್ರಸ್ಯ-ದಂಷ್ಟ್ರನ, ರಕ್ಷಸಃ-ರಕ್ಕಸನಾದ, ರೋಮಶಸ್ಯ-ರೋಮಶನ, ಯುದ್ಧೋನ್ಮತ್ತಸ್ಯ-ಯುದ್ಧೋನ್ಮತ್ತನಾಗಿ, ಮತ್ತಸ್ಯ - ಮದಿಸಿ, ನಾದಿನಃ - ಕೂಗುತ್ತಿರುವ, ಧ್ವಜಗ್ರೀವಸ್ಯ - ಧ್ವಜಗ್ರೀವನ, ವಿದ್ಯು....ನಾಂ-ವಿದ್ಯುಜ್ಜಿಹ್ವ, ಇಂದ್ರಜಿಹ್ವರೆಂಬವರ, ತಥಾ-ಹಾಗೆಯೇ, ಹಸ್ತಿಮುಖಸ್ಯಚ - ಹಸ್ತಿಮುಖನ, ಕರಾಳಸ್ಯ - ಕರಾಳನ, ಪಿಶಾಚಸ್ಯ - ಪಿಶಾಚನ, ಶೋಣಿತಾಕ್ಷಸ್ಯ - ಶೋಣಿತಾಕ್ಷನ, (ಭವನಾನಿ - ಮನೆಗಳನ್ನೂ), ಕ್ರಮೇಣೈವ - ಕ್ರಮವಾಗಿಯೇ, ಕ್ರಮಮಾಣಃ - ದಾಟುತ್ತಿರುವ,

---

ತೇಜಸ್ವಿಯಾದ ಸಾರಣ, ಇಂದ್ರಜಿತ್ತು, ಜಂಬುಮಾಲಿ, ಸುಮಾಲಿ, ರಶ್ಮಿಕೇತು, ಸೂರ್ಯಶತ್ರು, ವಜ್ರಕಾಯ, ಧೂಮ್ರಾಕ್ಷ, ಸಂಪಾತಿ, ಮಹಾ ಭಯಂಕರನಾದ ವಿದ್ಯುದ್ರೂಪ, ಘನ, ವಿಘನ, ಶುಕನಾಸ, ವಕ್ರ, ಶಠ, ವಿಕಟ, ಹ್ರಸ್ವಕರ್ಣ, ದಂಷ್ಟ್ರ, ರೋಮಶ, ಯುದ್ಧೋನ್ಮತ್ತ, ಮತ್ತ, ಧ್ವಜಗ್ರೀವ, ಇಂದ್ರಜಿಹ್ವ, ಹಸ್ತಿಮುಖ, ಕರಾಳ, ಪಿಶಾಚ, ಶೋಣಿತಾಕ್ಷ,

ತಾತ್ಮಜಃ । ತೇಷು ತೇಷು ಮಹಾರ್ಹೇಷು ಭವನೇಷು ಮಹಾಯಶಾಃ ॥ ೨೬ ॥ ತೇಷಾ ಮೃದ್ಧಿಮತಾಮೃದ್ಧಿಂ ದದರ್ಶ ಸ ಮಹಾಕಪಿಃ ॥೨೭॥ ಸರ್ವೇಷಾಂ ಸಮತಿಕ್ರಮ್ಯ ಭವ ನಾನಿ ಸಮಂತತಃ । ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಂ ॥೨೮॥ ರಾವಣ ಸ್ಯೋಪಶಾಯಿನ್ಯೋ ದದರ್ಶ ಹರಿಸತ್ತಮಃ । ವಿಚರನ್ ಹರಿಶಾರ್ದೂಲೋ ರಾಕ್ಷಸೀ ರ್ವಿಕೃತೇಕ್ಷಣಾಃ । ಶೂಲ ಮುದ್ಗರಹಸ್ತಾಶ್ಚ ಶಕ್ತಿತೋಮರಧಾರಿಣೀಃ ॥೨೯॥ ದದರ್ಶ ವಿವಿಧಾನ್ ಗುಲ್ಮಾಂಸ್ತಸ್ಯ ರಕ್ಷಃಪತೇರ್ಗೃಹೇ । ರಾಕ್ಷಸಾಂಶ್ಚ ಮಹಾಕಾಯಾನ್ನಾನಾ ಪ್ರಹರಣೋದ್ಯತಾನ್ ॥ ೩೦ ॥ ರಕ್ತಾನ್ ಶ್ವೇತಾನ್ ಸಿತಾಂಶ್ಚೈವ ಹರೀಂಶ್ಚಾಪಿ ಮಹಾ

ಮಹಾಯಶಾಃ - ಮಹಾ ಯಶಸ್ವಿಯೂ, ಮಹಾಕಪಿಃ - ಕಪಿಶ್ರೇಷ್ಠನೂ, ಮಾರುತಾತ್ಮಜಃ - ವಾಯು ಪುತ್ರನೂ ಆದ, ಸಹನೂವಾನ್ - ಆ ಹನುಮಂತನು, ಮಹಾರ್ಹೇಷು - ಅಮೂಲ್ಯಗಳಾದ, ತೇಷುತೇಷುಭವನೇಷು - ಆ ಆ ಮನೆಗಳಲ್ಲಿ, ಋದ್ಧಿಮತಾಂ - ಐಶ್ವರ್ಯಸಂಪನ್ನರಾದ, ತೇಷಾಂ - ಆ ರಾಕ್ಷಸರ, ಋದ್ಧಿಂ - ಸಂಪತ್ತನ್ನು, ದದರ್ಶ - ಕಂಡನು. ॥ ೨೩-೨೭ ॥ ಅಥ - ಆ ಬಳಿಕ, ಲಕ್ಷ್ಮೀವಾನ್ - ತೇಜೋವಂತನಾದ ಆಂಜನೇಯನು, ಸಮಂತತಃ - ಎಲ್ಲೆಡೆಗಳಲ್ಲಿಯೂ, ಸರ್ವೇಷಾಂ- ಸಮಸ್ತರ, ಭವನಾನಿ - ಮಂದಿರಗಳನ್ನೂ, ಸಮತಿಕ್ರಮ್ಯ - ಆತಿಕ್ರಮಿಸಿ, ರಾಕ್ಷ....ನಂ - ರಾವಣನ ಮನೆಯನ್ನು, ಆಸಸಾದ - ಹೊಂದಿದನು. ॥ ೨೮ ॥ ಹರಿಶಾರ್ದೂಲಃ - ವಾನರವ್ಯಾಘ್ರನೂ, ನಿರ್ಭ ಯನೂ, ಹರಿಸತ್ತಮಃ - ವಾನರಶ್ರೇಷ್ಠನೂ ಆದ ಆಂಜನೇಯನು, ವಿಚರನ್ - ಹೀಗೆ ಸಂಚರಿಸುತ್ತ, ರಾವಣಸ್ಯ - ರಾವಣಾಸುರನ, ಉಪಶಾಯಿನ್ಯಃ - ಸಮೀಪದಲ್ಲಿ ಮಲಗಿರುವ ರಾಕ್ಷಸಸ್ತ್ರೀಯರನ್ನು, ವಿಕೃತೇಕ್ಷಣಾಃ - ವಿಕಾರಗಳಾದ ದೃಷ್ಟಿಗಳುಳ್ಳ, ಶೂಲ....ಶ್ಚ-ಭಲ್ಲೆಗಳು ದೊಣ್ಣೆಗಳೇ ಹಸ್ತಗಳಲ್ಲಿ ಉಳ್ಳ, ಶಕ್ತಿ....ಣೀಃ - ಶಕ್ತ್ಯಾಯುಧಗಳನ್ನೂ, ತೋಮರಗಳೆಂಬ ಆಯುಧವಿಶೇಷಗಳನ್ನು, ಧಾರಿಣೀಃ - ಧರಿಸಿರುವ, ರಾಕ್ಷಸೀಶ್ಚ - ರಾಕ್ಷಸಸ್ತ್ರೀಯರನ್ನೂ, ದದರ್ಶ - ಕಂಡನು. ॥ ೨೯ ॥ ರಕ್ಷಃಪತೇಃ - ರಾಕ್ಷಸಾಧಿಪತಿಯಾದ, ತಸ್ಯ - ಆ ರಾವಣಾಸುರನ, ಗೃಹೇ - ಮನೆಯಲ್ಲಿ, ವಿವಿಧಾನ್ - ನಾನಾ ಬಗೆಗಳಾದ, ಗುಲ್ಮಾನ್ - ಸೇನೆಗಳನ್ನೂ, ಮಹಾಕಾಯಾನ್ - ದೊಡ್ಡ ಶರೀರಗಳುಳ್ಳ, ನಾನಾ....ತಾನ್ - ಅನೇಕ ವಿಧಗಳಾದ ಆಯುಧಗಳೊಡನೆ ಸನ್ನದ್ಧರಾದ, ರಾಕ್ಷಸಾಂಶ್ಚ - ದಾನವರನ್ನೂ, ದದರ್ಶ - ಕಂಡನು. ॥ ೩೦ ॥ ತಸ್ಮಿನ್ಗೃಹೇ - ಆ ಮನೆಯಲ್ಲಿ, ಸಃ - ಆ ಆಂಜನೇಯನು, ರಕ್ತಾನ್ - ಕೆಂಪಾ

ಇವರೇ ಮೊದಲಾದವರುಗಳ ಮನೆಗಳನ್ನು ಒಂದಾದಮೇಲೊಂದಾಗಿ ಹೊಕ್ಕು, ಉತ್ತಮೋ ತ್ತಮವಾಗಿರುವ ಅವರ ಮನೆಗಳ ಮಹದೈಶ್ವರ್ಯ ಸಮೃದ್ಧಿಯನ್ನು ಕಂಡವನಾದನು. ॥ ೧೫–೨೭ ॥ ಮಹಾ ಕಾಂತಿಮಂತನಾದ ಹನುಮಂತನು ಆ ಲಂಕಾನಗರದಲ್ಲಿರುವ ರಾಕ್ಷಸರ ಮನೆಗಳೆಲ್ಲವನ್ನೂ ಹುಡುಕಿ, ಸೀತಾದೇವಿಯನ್ನು ಕಾಣದೆ, ರಾಕ್ಷಸಾಧಿಪತಿಯಾದ ರಾವಣಾಸುರನ ಮನೆಯನ್ನು ಪ್ರವೇಶಿಸಿದನು. ಬಹು ಜಾಗರೂಕತೆಯಿಂದ ಸಂಚರಿಸು ತ್ತಿರುವ ಆತನು ಶೂಲ, ಮುದ್ಗರ, ಶಕ್ತಿ, ತೋಮರಗಳೇ ಮೊದಲಾದ ಆಯುಧಗಳನ್ನು ಕೈಯಲ್ಲಿ ಹಿಡಿದು, ಆ ರಾವಣನ ಸಮೀಪ ಪ್ರದೇಶದಲ್ಲಿ ನಿದ್ರಿಸುತ್ತಿದ್ದ ವಿಕಾರಸ್ವರೂಪಿಗಳಾದ ಅನೇಕ ರಾಕ್ಷಸ ಸ್ತ್ರೀಯರನ್ನು ಕಂಡನು. ಆ ರಾವಣನ ಅರಮನೆಯಲ್ಲಿ ರಾಕ್ಷಸ ಸೈನ್ಯಗಳು ಗುಂಪುಗುಂಪುಗಳಾಗಿ ನಿಂತಿದ್ದವು. ಆ ಸೈನ್ಯಗಳಲ್ಲಿ ಕೆಂಪು, ಬಿಳುಪು ಬಣ್ಣಗಳುಳ್ಳ ಮಹಾ ವೇಗಶಾಲಿಗಳಾದ ಜಾತ್ಯಶ್ವಗಳೂ, ಕುಲೀನಗಳಾಗಿ ಶುಭಕರವಾದ ರೂಪಗಳಿಂದೊಪ್ಪಿ

ಜವಾ೯। ಕುಲೀನಾ ಸ್ರೂಪಸಂಪನ್ನಾ ನ್ಗಜಾನ್ಪರಗಜಾರುಜಾ೯ ||೩೦|| ¶ನಿಷ್ಠಿತಾ೯ ಗಜ ಶಿಕ್ಷಾಯಾ ಮೈರಾವತಸಮಾನ್ಯುಧಿ। ನಿಹಂತ್ಯಾ೯ ಪರಸೈನ್ಯಾನಾಂ ಗೃಹೇತಸ್ಮಿ೯ ದದರ್ಶ ಸಃ ||೩೨|| ಕ್ಷರತಶ್ಚ ಯಥಾ ಮೇಘಾ೯ ಸ್ರವತಶ್ಚ ಯಥಾ ಗಿರೀ೯। ಮೇಘಸ್ತನಿತ ನಿರ್ಘೋಷಾ೯ ದುರ್ಧಷಾ೯ ಸಮರೇಪರೈಃ ||೩೩|| ಸಹಸ್ರಂವಾಹಿನೀಸ್ತತ್ರ ಜಾಂಬೂ ನದಪರಿಷ್ಕೃತಾಃ। ಹೇಮಜಾಲಪರಿಚ್ಛನ್ನಾ ಸ್ತರುಣಾದಿತ್ಯಸನ್ನಿಭಾಃ। ದದರ್ಶ ರಾಕ್ಷ ಸೇಂದ್ರಸ್ಯ ರಾವಣಸ್ಯ ನಿವೇಶನೇ ||೩೪|| ಶಿಬಿಕಾ ವಿವಿಧಾಕಾರಾ ಸ್ಸಕಪಿ ರ್ಮಾರುತಾ ತ್ಮಜಃ। ಲತಾಗೃಹಾಣಿ ಚಿತ್ರಾಣಿ ಚಿತ್ರಶಾಲಾಗೃಹಾಣಿಚ। ಕ್ರೀಡಾಗೃಹಾಣಿ ಚಾನ್ಯಾನಿ

ಗಿರುವ, ಶ್ವೇತಾ೯ - ಬಿಳುಪಾಗಿರುವ, ಸಿತಾ೯ - ಬೆಳ್ಳಗಿರುವ, ಮಹಾಜವಾ೯ - ಬಹು ವೇಗವುಳ್ಳ, ಹರೀಂಶ್ಚಾಪಿ - ಕುದುರೆಗಳನ್ನೂ, ಕುಲೀನಾ೯ - ಐರಾವತಕುಲದಲ್ಲಿ ಹುಟ್ಟಿರುವ, ರೂಪಸಂಪನ್ನಾ೯ - ಸೌಂದರ್ಯದಿಂದ ಕೂಡಿರುವ, ಪರ....ಜಾ೯ - ಶತ್ರುಗಜಗಳಿಗೆ ಭಂಜಕಗಳಾದ, ಗಜಶಿಕ್ಷಾಯಾಂ - ಗಜವಿದ್ಯಾಭ್ಯಾಸದಲ್ಲಿ, ನಿಷ್ಠಿತಾ೯ - ಶಿಕ್ಷಿತಗಳಾದ, ಯುಧಿ - ಯುದ್ಧದಲ್ಲಿ, ಐರಾವತಸಮಾ೯ - ಇಂದ್ರನ ಆನೆಗೆ ಸದೃಶಗಳಾದ, ಪರಸೈನ್ಯಾನಾಂ - ಶತ್ರುಸೇನೆಗಳಿಗೆ, ನಿಹಂತ್ಯಾ೯ - ಸಂಹಾರಕಗಳಾದ, ಕ್ಷರತಃ - ಜಾರಿಬಿಳುತ್ತಿರುವ, ಮೇಘಾನ್ಯಥಾ - ಮೇಘಗಳಂತೆ, ಸ್ರವತಃ - ಮದೋದಕಗಳನ್ನು ಸುರಿಸುತ್ತಿರುವ, ಗಿರೀನ್ಯಥಾ - ಬೆಟ್ಟಗಳಂತಿರುವ, ಮೇಘ....ಷಾ೯ - ಮೇಘಗರ್ಜನೆಯಂತೆ ಬೃಂಹಿತ ಗಳನ್ನುಮಾಡುತ್ತಿರುವ, ಸಮರೇ - ಕಾಳಗದಲ್ಲಿ, ಪರೈಃ - ಶತ್ರುಗಳಿಂದ, ದುರ್ಧಷಾ೯ - ತಿರಸ್ಕರಿಸಲ ಶಕ್ಯಗಳಾದ, ಗಜಾ೯ - ಆನೆಗಳನ್ನು, ದದರ್ಶ - ಕಂಡನು. ||೩೧-೩೩|| ರಾಕ್ಷಸೇಂದ್ರಸ್ಯ - ರಾಕ್ಷಸ ಶ್ರೇಷ್ಠನಾದ, ರಾವಣಸ್ಯ - ರಾವಣಾಸುರನ, ತತ್ರನಿವೇಶನೇ - ಆ ಮನೆಯಲ್ಲಿ, ಜಾಂಬೂ....ತಾಃ - ಅಪರಂಜಿಯ ಒಡವೆಗಳಿಂದ ಅಲಂಕರಿಸಲ್ಪಟ್ಟ, ಹೇಮ....ನ್ನಾಃ - ಸುವರ್ಣಮಯವಾದ ಹೊದಿಕೆ ಗಳಿಂದ ಆಚ್ಛಾದಿತಗಳಾದ, ತರು....ಭಾಃ - ಬಾಲಸೂರ್ಯನಿಗೆ, ಸನ್ನಿಭಾಃ - ಸದೃಶಗಳಾದ, ವಿವಿಧಾಕಾರಾಃ - ನಾನಾಬಗೆಗಳಾದ ಆಕೃತಿಗಳುಳ್ಳ, ಸಹಸ್ರಂ - ಸಹಸ್ರಸಂಖ್ಯೆಯುಳ್ಳ, ವಾಹಿನೀಃ - ಸೇನೆಗಳನ್ನು, ದದರ್ಶ - ಕಂಡನು. || ೩೪-೩೫ || ಮಾರುತಾತ್ಮಜಃ - ವಾಯುಪುತ್ರನಾದ, ಸಕಪಿಃ - ಆ ಆಂಜನೇಯನು, ರಾವಣಸ್ಯ - ರಾವಣಾಸುರನ, ನಿವೇಶನೇ - ಮಂದಿರದಲ್ಲಿ, ವಿವಿಧಾಕಾರಾಃ - ಅನೇಕ ವಿಧಗಳಾದ ಆಕೃತಿಗಳುಳ್ಳ, ಶಿಬಿಕಾಃ - ಪಲ್ಲಕ್ಕಿಗಳನ್ನೂ, ಚಿತ್ರಾಣಿ - ಆಶ್ಚರ್ಯಕರಗಳಾದ,

ಶತ್ರುಗಜಗಳನ್ನು ಸಂಹರಿಸುವ ಶಕ್ತಿಯುಳ್ಳುವೂ, ಚೆನ್ನಾಗಿ ಶಿಕ್ಷಿತವಾದವೂ, ಯುದ್ಧದಲ್ಲಿ ದೇವೇಂದ್ರನ ಐರಾವತಕ್ಕೆ ಸಮಾನಗಳಾಗಿ ಶತ್ರುಸೈನ್ಯವನ್ನು ಸದೆಬಡಿಯುವವೂ, ದೊಡ್ಡ ದೇಹಗಳಿಂದೊಪ್ಪಿ ಮದೋದಕವನ್ನು ಸ್ರವಿಸುತ್ತ, ಮಳೆಗರೆಯುತ್ತಿರುವ ಮೇಘಗಳಂ ತಿರುವವೂ, ಜರಿಗಳೊಡಗೂಡಿದ ಪರ್ವತಗಳಂತಿರುವವೂ, ಗುಡುಗಿನಂತೆ ಘೀಂಕರಿಸುತ್ತಿರು ವವೂ, ಯುದ್ಧದಲ್ಲಿ ಅಜೇಯಗಳಾದುವೂ ಆದ ಮದಗಜಗಳೂ ತುಂಬಿದ್ದವು. || ೨೮-೩೩ || ಇಷ್ಟೆಯಲ್ಲದೆ ಆ ರಾಕ್ಷಸೇಂದ್ರನ ಭವನದಲ್ಲಿ ಪುಟಪಾಕಶೋಭಿತವಾದ ಸುವರ್ಣರಚಿತಗಳಾಗಿ ನವರತ್ನಗಳ ಜೋಡಣೆಯ ಕೆಲಸಗಳನ್ನೊಳಗೊಂಡು ಬಾಲಸೂರ್ಯನಂತೆ ಪ್ರಕಾಶಿಸುತ್ತಿದ್ದ ವಿವಿಧಾಭರಣಗಳನ್ನು ಧರಿಸಿ ಶೋಭಿಸುತ್ತಿರುವ ಅನೇಕ ಕಾಲ್ಬಲಗಳನ್ನು ಆ ಕಪಿವೀರನು ಕಂಡನು. ಇದು ಮಾತ್ರವಲ್ಲದೆ ವಿಧವಿಧವಾದ ರೂಪಗಳುಳ್ಳ ಪಲ್ಲಕ್ಕಿಗಳೂ, ಆಶ್ಚರ್ಯ

¶ "ಶಿಕ್ಷಿತಾ೯" ತಿ. ವೇ. ಪಾ.

ದಾರುಪರ್ವತಕಾನಪಿ। ಕಾಮಸ್ಯ ಗೃಹಕಂ ರಮ್ಯಂ ದಿವಾಗೃಹಕಮೇವಚ। ದದರ್ಶ ರಾಕ್ಷಸೇಂದ್ರಸ್ಯ ರಾವಣಸ್ಯ ನಿವೇಶನೇ ॥೩೭॥ ಸ ಮಂದರ ೪ ಗಿರಿಪ್ರಖ್ಯಂ ಮಯೂರ ಸ್ಥಾನಸಂಕುಲಂ । ಧ್ವಜಯಷ್ಟಿಭಿರಾಕೀರ್ಣಂ ದದರ್ಶ ಭವನೋತ್ತಮಂ ॥ ೩೮ ॥ ಅನೇಕರತ್ನಸಂಕೀರ್ಣಂ ನಿಧಿಜಾಲಂ ಸಮಂತತಃ । § ಧೀರನಿಷ್ಠಿತಕರ್ಮಾಂತಂ ಗೃಹಂ ಭೂತಪತೇರಿವ ॥ ೩೯ ॥ ಅರ್ಚಿಭಿಶ್ಚಾಪಿ ರತ್ನಾನಾಂ ತೇಜಸಾ ರಾವಣಸ್ಯಚ। ವಿರರಾಜಾಥ ತದ್ವೇಶ್ಮ ರಶ್ಮಿಮಾನಿವ ರಶ್ಮಿಭಿಃ ॥ ೪೦ ॥ ಜಾಂಬೂನದಮಯಾನ್ಯೇವ ಶಯ

ಲತಾಗೃಹಾಣಿ - ಬಳ್ಳಿಯ ಮನೆಗಳನ್ನೂ, ಚಿತ್ರ....ಚ - ಆಶ್ಚರ್ಯಕರಗಳಾದ ಚಪ್ಪರಗಳಿಂದ ಕೂಡಿದ ಮನೆಗಳನ್ನೂ, ಅನ್ಯಾನಿ - ಮತ್ತೆ ಕೆಲವು, ಕ್ರೀಡಾಗೃಹಾಣಿ - ವಿಲಾಸಭವನಗಳನ್ನೂ, ದಾರು....ಪಿ - ಮರದಿಂದ ಮಾಡಿದ ಕೃತ್ರಿಮಪರ್ವತಗಳನ್ನೂ, ರಮ್ಯಂ-ಮನೋಹರವಾದ, ಕಾಮಸ್ಯ-ಮನ್ಮಥನ, ಗೃಹಕಂ - ಚಿಕ್ಕಮನೆಗಳನ್ನೂ, ದಿವಾ....ಚ - ಹಗಲಿನಲ್ಲಿ ಕುಳಿತು ವಿಹರಿಸಿಕೊಳ್ಳುವ ಚಿಕ್ಕ ಕೊಟ್ಟಡಿಗಳನ್ನೂ, ದದರ್ಶ - ಕಂಡನು. ॥೩೬-೩೭॥ ಸಃ - ಆ ಆಂಜನೇಯನು, ಮಂದ....ಖ್ಯಂ - ಮಂದರ ಪರ್ವತದ ಕಾಂತಿಯುಳ್ಳ, ಮಯೂ....ಲಂ - ನವಿಲು ಗೂಡುಗಳಿಂದ ವ್ಯಾಪ್ತವಾದ, ಧ್ವಜಯಷ್ಟಿಭಿಃ- ಧ್ವಜದಂಡಗಳಿಂದ, ಆಕೀರ್ಣಂ - ಸಂಕುಲವಾದ, ಅನೇ....ರ್ಣಂ - ಅನೇಕಗಳಾದ ರತ್ನಗಳಿಂದ ಕೂಡಿರುವ, ಸಮಂತತಃ - ಎಲ್ಲಾ ಕಡೆಗಳಲ್ಲಿಯೂ, ನಿಧಿಜಾಲಂ - ನಿಕ್ಷೇಪಗಳ ಸಮೂಹವುಳ್ಳ, ಧೀರ....ತಂ - ಶೂರರಿಂದ ಮಾಡಲ್ಪಟ್ಟ ವ್ಯಾಪಾರವುಳ್ಳ, ಭೂತಪತೇಃ - ಪ್ರಮಥಾಧಿಪತಿಯ, ಗೃಹಮಿವಸ್ಥಿತಂ - ಮನೆಯಂತಿರುವ, ಭವನೋತ್ತಮಂ - ಶ್ರೇಷ್ಠವಾದ ಮನೆಯನ್ನು, ದದರ್ಶ - ಕಂಡನು. ॥ ೩೮-೩೯ ॥ ಅಥ - ಅನಂತರದಲ್ಲಿ, ತದ್ವೇಶ್ಮ - ಆ ಮನೆಯು, ರತ್ನಾನಾಂ - ರತ್ನಗಳ, ಅರ್ಚಿಭಿಶ್ಚಾಪಿ-ಕಾಂತಿಗಳಿಂದಲೂ, ರಾವಣಸ್ಯ ರಾವಣಾಸುರನ, ತೇಜಸಾಚ-ತೇಜಸ್ಸಿನಿಂದಲೂ, ರಶ್ಮಿಭಿಃ - ಕಿರಣಗಳಿಂದ, ರಶ್ಮಿಮಾನಿವ - ಸೂರ್ಯನಂತೆ, ವಿರರಾಜ - ಹೊಳೆಯುತ್ತಿದ್ದಿತು. ॥೪೦॥ ಹರಿಯೂಥಪಃ - ವಾನರಶ್ರೇಷ್ಠನು, ಜಾಂಬೂ....ವ - ಸ್ವರ್ಣವಿಕಾರಗಳೇ ಆದ, ಶಯನಾನಿ -

ಜನಕವಾದ ಪುಷ್ಪಲತಾಮಂದಿರಗಳೂ, ಚಿತ್ರತರಗಳಾದ ವಿಲಾಸಭವನಗಳು, ವಿನೋದ ವಿಹಾರಕ್ಕೋಸುಗವೇ ನಿರ್ಮಿಸಿದ ದಾರುಪರ್ವತಗಳು, ಮನ್ಮಥಸದನಗಳು, ಮನೋಹರವಾದ ಮತ್ತೆ ಕೆಲವು ಸುಂದರಶಾಲೆಗಳು ರಂಜಿಸುತ್ತಿದ್ದವು. ॥ ೩೪–೩೭ ॥ ಮಂದರ ಪರ್ವತಕ್ಕೆ ಸಮಾನವಾದ ಔನ್ನತ್ಯವುಳ್ಳುದಾಗಿ, ನವಿಲುಗಳ ವಾಸಕ್ಕಾಗಿ ನಿರ್ಮಿಸಿರುವ ಚಾಲಂದ್ರದ ಚಿಕ್ಕಚಿಕ್ಕ ಮನೆಗಳಿಂದಲೂ ತುಂಬಿದ್ದ ಆ ರಾವಣನರಮನೆಯು ಎಲ್ಲಿ ನೋಡಿದರೂ ಧ್ವಜಪಟಗಳಿಂದಲೂ. ವಿವಿಧ ರತ್ನನಿಚಯಗಳಿಂದಲೂ, ನವನಿಧಿಗಳಿಂದಲೂ ನಿಬಿಡಿತವಾಗಿದ್ದಿತು. ರಾಕ್ಷಸಶ್ರೇಷ್ಠನಾದ ಆ ರಾವಣೇಶ್ವರನು ಬಹಳವಾದ ಧೈರ್ಯವನ್ನವಲಂಬಿಸಿ ಮಹಾ ನಿಷ್ಠೆಯಿಂದ ಆಚರಿಸಿದ ತಪಸ್ಸಿನ ಫಲವೋ! ಎಂಬಂತಿರುವುದಾಗಿಯೂ, ಭೂತನಾಥನಾದ ಪರಶಿವನ ಕೈಲಾಸಭವನದಂತೊಪ್ಪಿ ಮೆರೆಯುವುದಾಗಿಯೂ ಇರುವ ಆ ಕ್ರೀಡಾಭವನವು ಬಹು ರಮಣೀಯವಾಗಿದ್ದಿತು. ಆ ಭವನವು ವಿವಿಧ ರತ್ನಗಳ ಕಾಂತಿಗಳಿಂದಲೂ, ಆ ರಾವಣನ ತೇಜಸ್ಸಿನಿಂದಲೂ, ಸಹಸ್ರರಶ್ಮಿಯಾದ ಸೂರ್ಯನಂತೆ ವಿರಾಜಿಸುತ್ತಿದ್ದಿತು. ॥೩೮–೪೦॥ ಅಲ್ಲಿದ್ದ ಹಂಸತೂಲಿಕಾತಲ್ಪಗಳೂ,ಸುಖಾಸನಗಳೂ, ಮುಖ್ಯಮುಖ್ಯ

೪ "ಸಮ" ತಿ. ಪಾ. § "ಕರ್ಮಾಂಗಂ" ತಿ. ಪಾ.

ಸಾನ್ಯಾಸನಾನಿಚ । ಭಾಜನಾನಿಚ $ ಮುಖ್ಯಾನಿ ದದರ್ಶ ಹರಿಯೂಥಪಃ ॥೪೧॥ ಮಧ್ವಾ
ಸವಕೃತಕ್ಲೇದಂ ಮಣಿಭಾಜನಸಂಕುಲಂ । ಮನೋರಮಮಸಂಬಾಧಂ ಕುಬೇರಭವನಂ
ಯಥಾ ॥ ೪೨ ॥ ನೂಪುರಾಣಾಂಚ ಘೋಷೇಣ ಕಾಂಚೀನಾಂ ನಿನದೇನಚ । ಮೃದಂಗ
ತಲಘೋಷೈಶ್ಚಘೋಷವದ್ಭಿ ರ್ವಿನಾದಿತಂ ॥ ೪೩ ॥ ಪ್ರಾಸಾದಸಂಘಾತಯುತಂ ಸ್ತ್ರೀ
ರತ್ನಶತಸಂಕುಲಂ । ಸುವ್ಯೂಢಕಕ್ಷ್ಯಂ ಹನುಮಾನ್ಪ್ರವಿವೇಶಮಹಾಗೃಹಂ ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಷ್ಠಸ್ಸರ್ಗಃ

ಹಾಸಿಗೆಗಳನ್ನೂ, ಆಸನಾನಿಚ - ಪೀಠಗಳನ್ನೂ, ಮುಖ್ಯಾನಿ - ಶ್ರೇಷ್ಠಗಳಾದ, ಭಾಜನಾನಿ - ಪಾತ್ರೆಗಳನ್ನೂ, ದದರ್ಶ - ಕಂಡನು. ॥ ೪೧ ॥ ಹನುಮಾನ್ - ಹನುಮಂತನು, ಮಧ್ವಾ....ದಂ - ಇಪ್ಪೆಯ ಹೆಂಡಗಳಿಂದಲೂ (ಗೋ) ಸಿದ್ಧರಸದಿಂದಲೂ, ಕಬ್ಬಿನ ರಸದಿಂದ ಮಾಡಲ್ಪಟ್ಟ ಹೆಂಡದಿಂದಲೂ, ಕೃತ-ಮಾಡಲ್ಪಟ್ಟ, ಕ್ಲೇದಂ - ನೆನೆಯುವಿಕೆಯುಳ್ಳ, ಮಣಿ...ಲಂ - ರತ್ನದ ಪಾತ್ರೆಗಳಿಂದ ತುಂಬಿರುವ, ಮನೋರಮಂ - ಮನೋಹರವಾದ, ಅಸಂಬಾಧಂ - ಸಂಮರ್ದವಿಲ್ಲದಿರುವ, ಕುಬೇ....ಥಾ - ಕುಬೇರನ ಮನೆಯಂತಿರುವ, ನೂಪುರಾಣಾಂ - ಕಾಲುಸರಪಣಿಗಳ, ಘೋಷೇಣ - ಶಬ್ದದಿಂದಲೂ, ಕಾಂಚೀನಾಂ - ಒಡ್ಯಾಣಗಳ, ನಿನದೇನಚ - ಧ್ವನಿಗಳಿಂದಲೂ, ಘೋಷವದ್ಭಿಃ - ದೀರ್ಘವಾದ ವಿರಾಮ ಸಮಯವುಳ್ಳ, ಮೃದಂ....ಶ್ಚ - ಮದ್ದಳೆಗಳ ಧ್ವನಿಗಳಿಂದಲೂ, ವಿನಾದಿತಂ - ಶಬ್ದಾಯಮಾನವಾದ, ಪ್ರಾಸಾ....ತಂ - ಉಪ್ಪರಿಗೆಗಳ ಸಮೂಹದಿಂದ ಕೂಡಿರುವ, ಸ್ತ್ರೀರ....ಲಂ - ನೂರಾರು ಉತ್ತಮ ಸ್ತ್ರೀಯರಿಂದ ವ್ಯಾಪ್ತವಾದ, ಸುವ್ಯೂಢಕಕ್ಷ್ಯಂ - ಪದ್ಮಸ್ವಸ್ತಿಕಾದಿರಚನಾ ವಿಶೇಷದಿಂದ ಯುಕ್ತವಾದ ತೊಟ್ಟಿಗಳುಳ್ಳ, ಮಹಾಗೃಹಂ - ದೊಡ್ಡ ಅರಮನೆಯನ್ನು, ಪ್ರವಿವೇಶ - ಪ್ರವೇಶಿಸಿದನು. ॥ ೪೨-೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಷ್ಠಸ್ಸರ್ಗಃ.

ವಾದ ಪಾತ್ರೆಪದಾರ್ಥಗಳೂ ಸ್ವಚ್ಛವಾದ ಚಿನ್ನದಿಂದಲೇ ನಿರ್ಮಿತವಾಗಿದ್ದವು. ದ್ರಾಕ್ಷಾಸವಾದಿ ಪಾನದ್ರವ್ಯದಿಂದ ನೆನೆದಿರುವುದಾಗಿಯೂ, ರತ್ನಪಾತ್ರೆಗಳಿಂದ ವ್ಯಾಪ್ತವಾಗಿಯೂ ಇರುವ ಆ ರಾಕ್ಷಸಚಕ್ರವರ್ತಿಯ ದಿವ್ಯಭವನವು ಕುಬೇರಭವನದಂತೊಪ್ಪಿ ವಿವಿಧಾಭರಣಗಳಿಂದ ಹೊಳೆಯುತ್ತಿರುವ ಸುಂದರತರುಣಿಯರ ಮಂಜೀರಧ್ವನಿಗಳಿಂದಲೂ, ಕಲಕಲಧ್ವನಿಯಿಂದಲೂ, ದೇವಾಂಗನೆಯರು ನುಡಿಸುವ ವೀಣಾವೇಣುಮೃದಂಗಾದಿ ವಾದ್ಯಧ್ವನಿಗಳಿಂದಲೂ ಧ್ವನಿಗೊಂಡು ಉನ್ನತಪ್ರಾಸಾದಗಳಿಂದಲೂ, ಅವುಗಳಲ್ಲಿ ವಾಸಿಸುತ್ತಿದ್ದ ನಾಗ, ಗಂಧರ್ವ, ಕಿಂಪುರುಷಾಂಗನೆಯರಿಂದಲೂ ಕೂಡಿ ಪದ್ಮಸ್ವಸ್ತಿಕಾದಿ ರಚನಾವಿಶೇಷಗಳಿಂದ ಒಪ್ಪಿದ ಒಳತೊಟ್ಟಿಗಳಿಂದ ಶೋಭಿಸುತ್ತಿದ್ದಿತು. ಹೀಗೆ ಬಹು ಮನೋಹರವಾಗಿ ವಿರಾಜಿಸುತ್ತಿದ್ದ ಆ ರಾವಣನ ಅಂತಃಪುರವನ್ನು ವೀರಪುಂಗವನಾದ ಹನುಮಂತನು ಪ್ರವೇಶಿಸಿದವನಾದನು. ॥ ೪೧–೪೪ ॥

ಇಂತಿದು ಹನುಮತ್ಕೃತ ರಾವಣಾಂತಃಪುರಪ್ರವೇಶವೆಂಬ
ಆರನೆಯ ಸರ್ಗವು ಸಮಾಪ್ತವಾದುದು.

$ " ಶುಭ್ರಾಣಿ " ತಿ. ಪಾ.

ಸುಂದರಕಾಂಡೇ ಸಪ್ತಮಸ್ಸರ್ಗಃ

ಸವೇಶ್ಮಜಾಲಂ ಬಲವಾರ್ನ್ ದದರ್ಶ ವ್ಯಾಸಕ್ತ ವೈಡೂರ್ಯಸುವರ್ಣಜಾಲಂ। ಯಥಾ ಮಹತ್ಪ್ರಾವೃಷಿಮೇಘಜಾಲಂ ವಿದ್ಯುತ್ಪಿನದ್ಧಂ ಸವಿಹಂಗಜಾಲಂ ॥೧॥ ನಿವೇಶನಾನಾಂ ವಿವಿಧಾಶ್ಚ ಶಾಲಾಃ ಪ್ರಧಾನ ಶಂಖಾಯುಧ ಚಾಪಶಾಲಾಃ। ಮನೋಹರಾಶ್ಚಾಪಿ ಪುನರ್ವಿಶಾಲಾ ದದರ್ಶ ವೇಶ್ಮಾದ್ರಿಷು ಚಂದ್ರಶಾಲಾಃ॥ ೨ ॥ ಗೃಹಾಣಿ ನಾನಾವಸುರಾಜಿತಾನಿ ದೇವಾಸುರೈಶ್ಚಾಪಿ ಸುಪೂಜಿತಾನಿ। ಸರ್ವೈಶ್ಚದೋಷೈಃ ಪರಿವರ್ಜಿ

ಬಲವಾರ್ನ್-ಬಲಿಷ್ಠನಾದ, ಸಃ - ಆ ಆಂಜನೇಯನು, ವ್ಯಾಸ....ಲಂ-ಕೂಡಿರುವ ವೈಡೂರ್ಯ ಮಣಿಗಳುಳ್ಳ ಸುವರ್ಣಮಯವಾದ ಗವಾಕ್ಷಿಗಳುಳ್ಳ, ಪ್ರಾವೃಷಿ - ವರ್ಷಾಕಾಲದಲ್ಲಿ, ವಿದ್ಯುತ್ಪಿನದ್ಧಂ - ಮಿಂಚುಗಳಿಂದ ವ್ಯಾಪ್ತವಾದ, ಮಹತ್ - ದೊಡ್ಡದಾದ, ಮೇಘಜಾಲಂಯಥಾ - ಮೇಘಪಂಜ್ತಿ ಯಂತಿರುವ, ಸವಿಹಂಗಜಾಲಂ - ಹಕ್ಕಿಯ ಗೂಡುಗಳೊಡಗೂಡಿದ, ವೇಶ್ಮಜಾಲಂ - ಮನೆಗಳ ಸಮುದಾಯವನ್ನು, ದದರ್ಶ - ಕಂಡನು. ॥೧॥ ಪ್ರಧಾ....ಲಾಃ - ಮುಖ್ಯಗಳಾದ ಶಂಖಗಳಿಂದಲೂ, ಆಯುಧಗಳಿಂದಲೂ, ಬಿಲ್ಲುಗಳಿಂದಲೂ ಒಪ್ಪುತ್ತಿರುವ, ವಿವಿಧಾಃ-ನಾನಾವಿಧಗಳಾದ, ನಿವೇಶನಾನಾಂ- ಮನೆಗಳ, ಶಾಲಾಶ್ಚ - ಒಳಮನೆಗಳನ್ನೂ, ವೇಶ್ಮಾದ್ರಿಷು - ಮನೆಗಳೆಂಬ ಬೆಟ್ಟಗಳಲ್ಲಿ, ಮನೋಹರಾಃ - ರಮ್ಯಗಳಾದ, ವಿಶಾಲಾಃ - ವಿಸ್ತಾರಗಳಾದ, ಚಂದ್ರಶಾಲಾಶ್ಚಾಪಿ - ಶಿರೋಗೃಹಗಳನ್ನೂ, ದದರ್ಶ - ಕಂಡನು. ॥ ೨ ॥ ಕಪಿಃ - ವಾನರನು, ನಾನಾ....ನಿ - ಅನೇಕ ವಿಧವಾದ ದ್ರವ್ಯಗಳಿಂದ ಹೊಳೆಯು ತ್ತಿರುವ, ದೇವಾಸುರೈಶ್ಚಾಪಿ - ದೇವರಾಕ್ಷಸರಿಂದಲೂ ಕೂಡ, ಸುಪೂಜಿತಾನಿ - ಪೂಜಿಸಲ್ಪಟ್ಟ, ಸರ್ವೈಃ - ಸಮಸ್ತಗಳಾದ, ದೋಷೈಃ - ದೋಷಗಳಿಂದ, ಪರಿವರ್ಜಿತಾನಿ - ಬಿಡಲ್ಪಟ್ಟ, ಸ್ವಬ....ನಿ -

---

ಬಳಿಕ ಮಹಾ ಬಲಶಾಲಿಯಾದ ಆ ಮಾರುತಿಯು ಆ ಲಂಕಾಧಿಪತಿಯ ದಿವ್ಯ ಭವನದಲ್ಲಿ ಸ್ವರ್ಣಮಯವಾಗಿ ವೈಡೂರ್ಯಮಣಿಗಳ ಕೆತ್ತನೆಯ ಕೆಲಸವುಳ್ಳ, ಜಾಲಂದ್ರಗ ಳುಳ್ಳದಾಗಿಯೂ, ಮಿಂಚುಗಳೊಡಗೂಡಿ, ಪಕ್ಷಿನಿಚಯದಿಂದ ವ್ಯಾಪ್ತವಾದ ಮೇಘಸಮೂಹ ಗಳಿಂದೊಪ್ಪಿ ಶೋಭಿಸುತ್ತಿರುವುದಾಗಿಯೂ ಇರುವ ಒಳಮನೆಗಳ ಸಾಲುಗಳನ್ನು ಕಂಡವ ನಾದನು. ಆ ಗೃಹಸಮೂಹಗಳಲ್ಲಿ ವಿಶಾಲವಾದ ಶಾಲಾಪ್ರದೇಶಗಳೂ, ಅನೇಕ ವಿಧಗಳಾದ ತೊಟ್ಟಿಯಮನೆಗಳೂ, ಶ್ರೇಷ್ಠವಾದ ಶಂಖಾಯುಧಗಳಿಂದಲೂ, ಧನುಸ್ಸುಗಳಿಂದಲೂ ತುಂಬಿ ರುವ ಆಯುಧಾಗಾರಗಳೂ, ಪರ್ವತಗಳಂತೆ ಅತ್ಯುನ್ನತಗಳಾಗಿದ್ದ ಗೃಹಗಳ ಮೇಲ್ಭಾಗದಲ್ಲಿ ರುವ ಚಂದ್ರಶಾಲೆಗಳೂ ಬಹು ಮನೋಹರವಾಗಿ ಕಣ್ಗೊಪ್ಪುತ್ತಿದ್ದವು. ॥ ೧-೨ ॥ ಮಹಾ ಪರಾಕ್ರಮಿಯಾದ ರಾವಣನು ಧನಾಧಿಪನಾದ ಕುಬೇರನನ್ನು ನಿಜಬಲದಿಂದ ಜಯಿಸಿ ಆತನಲ್ಲಿದ್ದ ಸಮಸ್ತೈಶ್ವರ್ಯವನ್ನೂ ತಂದು ತುಂಬಿದ್ದ ಮನೆಗಳೂ ಆ ಪ್ರದೇಶದಲ್ಲಿ ಕಂಗೊ ಳಿಸುತ್ತಿದ್ದುವು. ಎಲ್ಲ ದೋಷಗಳಿಂದಲೂ ವರ್ಜಿತವಾಗಿ, ದೇವದಾನವರಿಗೂ ಸ್ಪೃಹಣೀ ಯವಾಗಿ, ಪ್ರಶಂಸನೀಯವಾಗಿದ್ದ ಅನೇಕ ಧನರಾಶಿಗಳಿಂದ ತುಂಬಿ ತುಳುಕುತ್ತಿದ್ದ

ತಾನಿ ಕಪಿರ್ದದರ್ಶ ಸ್ವಬಲಾರ್ಜಿತಾನಿ ‖೩‖ ತಾನಿ ಪ್ರಯತ್ನಾಭಿಸಮಾಹಿತಾನಿ ಮಯೇನ ಸಾಕ್ಷಾದಿವ ನಿರ್ಮಿತಾನಿ । ಮಹೀತಲೇಸರ್ವಗುಣೋತ್ತರಾಣಿ ದದರ್ಶ ಲಂಕಾಧಿಪತೇರ್ಗೃಹಾಣಿ ‖೪‖ ತತೋ ದದರ್ಶೋಚ್ಛ್ರಿತ ಮೇಘರೂಪಂ ಮನೋಹರಂ ಕಾಂಚನ ಚಾರುರೂಪಂ । ರಕ್ಷೋಽಧಿಪಸ್ಯಾತ್ಮಬಲಾನುರೂಪಂ ಗೃಹೋತ್ತಮಂಹ್ಯಪ್ರತಿರೂಪರೂಪಂ ‖೫‖ ಮಹೀತಲೇಸ್ವರ್ಗಮಿವಪ್ರಕೀರ್ಣಂ ಶ್ರಿಯಾ ಜ್ವಲಂತಂ ಬಹುರತ್ನ ಕೀರ್ಣಂ । ನಾನಾತರೂಣಾಂ ಕುಸುಮಾವಕೀರ್ಣಂ ಗಿರೇರಿವಾಗ್ರಂ ರಜಸಾವಕೀರ್ಣಂ ‖೬‖ ನಾರೀಪ್ರವೇಕೈರಿವ ದೀಪ್ಯಮಾನಂ ತಟಿದ್ಭಿರಂಭೋದವದರ್ಚ್ಯ

ತನ್ನ ಶಕ್ತಿಯಿಂದ ಸಂಪಾದಿಸಲ್ಪಟ್ಟ, ಗೃಹಾಣಿ - ಮಂದಿರಗಳನ್ನು, ದದರ್ಶ - ಕಂಡನು. ‖೩‖ ಪ್ರಯ....ನಿ - ಪ್ರಯಾಸದಿಂದ ಎಲ್ಲಾ ಕಡೆಗಳಲ್ಲಿಯೂ ಸ್ಥಾಪಿತಗಳಾದ, ಮಯೇನ - ಮಯಾಸುರನಿಂದ, ಸಾಕ್ಷಾತ್ - ಪ್ರತ್ಯಕ್ಷವಾಗಿ, ನಿರ್ಮಿತಾನೀವ - ನಿರ್ಮಿಸಲ್ಪಟ್ಟವೋ ಎಂಬಂತಿರುವ, ಮಹೀತಲೇ - ಭೂಮಂಡಲದಲ್ಲಿ, ಸರ್ವ....ಣಿ - ಸಮಸ್ತ ಗುಣಗಳಿಂದಲೂ ಉತ್ತಮಗಳಾದ, ಲಂಕಾಧಿಪತೇಃ - ರಾವಣಾಸುರನ, ಗೃಹಾಣಿ - ಮನೆಗಳನ್ನು, ದದರ್ಶ - ನೋಡಿದನು. ‖೪‖ ತತಃ - ಆನಂತರದಲ್ಲಿ, ಉಚ್ಛ್ರಿ....ಪಂ - ಉನ್ನತವಾದ ಮೇಘದ ವರ್ಣದಂತೆ ವರ್ಣವುಳ್ಳ, ಮನೋಹರಂ - ರಮ್ಯವಾದ, ಕಾಂಚ....ಪಂ - ಚಿನ್ನದಂತೆ ಹೊಳೆಯುತ್ತಿರುವ, ರಕ್ಷೋಽಧಿಪಸ್ಯ - ರಾವಣಾಸುರನ, ಆತ್ಮ ...ಪಂ - ಶಕ್ತಿಗೆ, ಅನುರೂಪಂ - ಸಮಾನವಾದ, ಅಪ್ರ....ಪಂ - ಅಸಮಾನವಾದ ಸ್ವರೂಪವುಳ್ಳ, ಗೃಹೋತ್ತಮಂ - ಉತ್ತಮ ಗೃಹಪ್ರಾಯವಾದ ಪುಷ್ಪಕ ವಿಮಾನವನ್ನು, ದದರ್ಶ-ಕಂಡನು ‖೫‖ ಮಹೀತಲೇ - ಭೂಮಂಡಲದಲ್ಲಿ, ಪ್ರಕೀರ್ಣಂ - ಎರಚಲ್ಪಟ್ಟ, ಸ್ವರ್ಗಮಿವ - ಸ್ವರ್ಗದಂತಿರುವ, ಶ್ರಿಯಾ - ಕಾಂತಿಯಿಂದ, ಜ್ವಲಂತಂ - ಹೊಳೆಯುತ್ತಿರುವ, ಬಹು....ರ್ಣಂ - ಅನೇಕ ರತ್ನಗಳಿಂದ ಸಂಕೀರ್ಣವಾದ, ನಾನಾತರೂಣಾಂ - ಅನೇಕ ವೃಕ್ಷಗಳ, ಕುಸುಮಾವಕೀರ್ಣಂ - ಹುವ್ವುಗಳಿಂದ ಎರಚಲ್ಪಟ್ಟ, ರಜಸಾ - ಪುಷ್ಪಧೂಳಿಯಿಂದ, ಆವಕೀರ್ಣಂ - ವ್ಯಾಪ್ತವಾದ, ಗಿರೇರಗ್ರಮಿವ - ಪರ್ವ

ಆ ಭವನಗಳು ಬಹು ಮನೋಹರವಾಗಿದ್ದುವು. ಆ ಭವನಗಳೆಲ್ಲವನ್ನೂ ದೇವಶಿಲ್ಪಿಯಾದ ವಿಶ್ವಕರ್ಮನು ಮಹಾ ಪ್ರಯತ್ನಪೂರ್ವಕವಾಗಿ ನಿರ್ಮಿಸಿದ್ದನು. ಅವುಗಳನ್ನು ಆತನು ತಾನಾಗಿಯೇ ಭೂಲೋಕಕ್ಕೈತಂದು ನಿರ್ಮಿಸಿದನೋ ಎಂಬಂತೆ ಅವು ವಿರಾಜಿಸುತ್ತಿದ್ದವು. ಅಲ್ಲದೆ ಅವುಗಳೆಲ್ಲವೂ ಸಮಸ್ತ ಸುಗುಣಸಂಪತ್ತಿಯಿಂದ ತುಂಬಿದ್ದವು. ಮಹಾನುಭಾವನಾದ ಮಾರುತಿಯು ಈ ಭವನಗಳೆಲ್ಲವನ್ನೂ ನೋಡಿದ ಬಳಿಕ, ಅತ್ಯುನ್ನತವಾಗಿ ಮೇಘದಂತೆ ಪ್ರಕಾಶಿಸುತ್ತ ಸುವರ್ಣನಿರ್ಮಿತವಾಗಿಯೂ, ಬಹು ರಮಣೀಯವಾಗಿಯೂ, ಅಸಮಾನಶೋಭೆಯಿಂದ ಕಂಗೊಳಿಸುತ್ತಿರುವುದಾಗಿಯೂ, ಆ ರಾವಣೇಶ್ವರನ ಬಲಪರಾಕ್ರಮಗಳಿಗೆ ಅನುಗುಣವಾಗಿಯೂ, ಉತ್ತಮ ಗೃಹರೂಪವಾಗಿಯೂ, ಇರುವ ಪುಷ್ಪಕ ವಿಮಾನವನ್ನು ಕಂಡನು. ‖ ೩–೫ ‖ ಆ ವಿಮಾನವು ದೈವಯೋಗದಿಂದ ಭೂಮಿಗೆ ಜಾರಿಬಿದ್ದು ಕಾಂತ್ಯತಿಶಯದಿಂದ ಪ್ರಕಾಶಿಸುತ್ತಿರುವುದಾಗಿಯೂ, ಸಮಸ್ತ ದಿವ್ಯ ಮಣಿಗಳ ಕೆತ್ತನೆಯ ಕೆಲಸವುಳ್ಳದಾಗಿಯೂ, ಸೊಗಸಾಗಿ ಹೂ ಮೊಳೆತಿರುವ ವಿವಿಧ ವೃಕ್ಷಗಳಿಂದ ಚಿತ್ರಿತವಾಗಿ, ಹೂಗಳಿಂದ ಮುಚ್ಚಿದ ಪರ್ವತದಂತೆ ಶೋಭಿಸುತ್ತಿರುವುದಾಗಿಯೂ,

ಮಾನಂ । ಹಂಸಪ್ರವೇಕೈರಿವ ವಾಹ್ಯಮಾನಂ ಶ್ರಿಯಾ ಯುತಂ ಖೇ ಸುಕೃತಾಂ ವಿಮಾನಂ ॥ ೭ ॥ ಯಥಾನಗಾಗ್ರಂ ಬಹುಧಾತುಚಿತ್ರಂ ಯಥಾನಭಶ್ಚ ಗ್ರಹಚಂದ್ರಚಿತ್ರಂ । ದದರ್ಶ ಯುಕ್ತೀಕೃತಮೇಘಚಿತ್ರಂ ವಿಮಾನರತ್ನಂ ಬಹುರತ್ನಚಿತ್ರಂ ॥೮॥ ಮಹೀಕೃತಾ ಪರ್ವತರಾಜಿಪೂರ್ಣಾ ಶೈಲಾಃ ಕೃತಾ ವೃಕ್ಷವಿತಾನಪೂರ್ಣಾಃ । ವೃಕ್ಷಾಃ ಕೃತಾಃ ಪುಷ್ಪವಿತಾನಪೂರ್ಣಾಃ ಪುಷ್ಪಂ ಕೃತಂ ಕೇಸರಪತ್ರಪೂರ್ಣಂ ॥೯॥ ಕೃತಾನಿ ವೇಶ್ಮಾನಿಚ ಪಾಂಡುರಾಣಿ ತಥಾ ಸುಪುಷ್ಪಾಣ್ಯಪಿ ಪುಷ್ಕರಾಣಿ । ಪುನಶ್ಚ ಪದ್ಮಾನಿ

ತಾಗ್ರದಂತಿರುವ, ತಟ....ತೈಃ - ಮಿಂಚುಗಳಂತಿರುವ, ನಾರೀಪ್ರವೇಕೈಃ - ಸ್ತ್ರೀರತ್ನಗಳಿಂದ, ಅಂಭೋದವತ್ - ಮೇಘದಂತೆ, ದೀಪ್ಯಮಾನಂ - ಪ್ರಕಾಶಗೊಳಿಸಲ್ಪಟ್ಟು, ಅರ್ಚ್ಯಮಾನಃ - ಪೂಜಿಸಲ್ಪಟ್ಟ, ಹಂಸಪ್ರವೇಕೈಃ - ಹಂಸಶ್ರೇಷ್ಠಗಳಿಂದ, ವಾಹ್ಯಮಾನಂ - ಹೊರಲಾದ, ಶ್ರಿಯಾಯುತಂ - ಸಕಲೈಶ್ವರ್ಯದಿಂದ ಕೂಡಿದ, ಖೇ - ಅಂತರಿಕ್ಷದಲ್ಲಿ, ಸುಕೃತಾಂ - ಪುಣ್ಯವಂತರ, ವಿಮಾ....ತಂ - ವಿಮಾನದಂತಿರುವ, ಬಹು....ತ್ರಂ - ಅನೇಕಗಳಾದ ಮಣಿಶಿಲೆಯೇ ಮೊದಲಾದ ಧಾತುಗಳಿಂದ ಚಿತ್ರವರ್ಣವುಳ್ಳ, ನಗಾಗ್ರಂಯಥಾ - ಪರ್ವತಶೃಂಗದಂತೆಯೂ, ಗ್ರಹ....ತ್ರಂ - ಅಂಗಾರಕಾದಿಗ್ರಹಗಳಿಂದಲೂ ಚಂದ್ರನಿಂದಲೂ ಆಶ್ಚರ್ಯಕರವಾದ, ನಭೋಯಥಾ - ಅಂತರಿಕ್ಷದಂತಿರುವ, ಯುಕ್ತೀ....ತ್ರಂ - ಗುಂಪಾಗಿ ಸೇರಿಸಲ್ಪಟ್ಟ ಮೇಘಗಳಂತೆ ಆಶ್ಚರ್ಯಕರವಾದ, ಬಹು....ತ್ರಂ - ಅನೇಕ ರತ್ನಗಳಿಂದ ಕೆತ್ತಿದ, ವಿಮಾನರತ್ನಂ - ವಿಮಾನಶ್ರೇಷ್ಠವನ್ನು, ದದರ್ಶ - ಕಂಡನು. ॥ ೭-೮ ॥ ಯತ್ರ - ಯಾವ ವಿಮಾನದಲ್ಲಿ, ಮಹೀ - ಭೂಮಿಯು, ಪರ್ವ....ರ್ಣಾ - ಪರ್ವತಪಂಕ್ತಿಗಳಿಂದ ತುಂಬಿದುದಾಗಿ, ಕೃತಾ-ಮಾಡಲ್ಪಟ್ಟಿದ್ದವೋ, ಶೈಲಾಃ-ಬೆಟ್ಟಗಳು, ವೃಕ್ಷ....ರ್ಣಾಃ-ವೃಕ್ಷಗಳ ಸಮೂಹದಿಂದ ತುಂಬಿದುದಾಗಿ, ಕೃತಾಃ - ಮಾಡಲ್ಪಟ್ಟಿದ್ದವೋ, ವೃಕ್ಷಾಃ - ವೃಕ್ಷಗಳು, ಪುಷ್ಪ....ರ್ಣಾಃ - ಪುಷ್ಪಸಮೂಹ ಸಮೃದ್ಧಗಳಾಗಿ, ಕೃತಾಃ - ಮಾಡಲ್ಪಟ್ಟಿದ್ದವೋ, ಪುಷ್ಪಂ - ಹುವ್ವುಗಳು, ಕೇಸ....ರ್ಣಂ - ಕಿಂಜಲ್ಕಗಳಿಂದಲೂ ಎಲೆಗಳಿಂದಲೂ ತುಂಬಿದವುಗಳಾಗಿ, ಕೃತಂ - ನಿರ್ಮಿಸಲ್ಪಟ್ಟಿದ್ದವೋ. ॥ ೯ ॥ ಪಾಂಡುರಾಣಿ - ಬೆಳ್ಳಗಿರುವ, ವೇಶ್ಮಾನಿಚ - ಮನೆಗಳೂ, ತಥಾ - ಹಾಗೆಯೇ,

---

ಮಹಾ ಸೌಂದರ್ಯವತಿಯರಾದ ಉತ್ತಮ ಸ್ತ್ರೀರತ್ನಗಳಿಂದ ವ್ಯಾಪ್ತವಾಗಿ, ಮಿಂಚಿನ ಬಳ್ಳಿಗಳಿಂದ ತುಂಬಿರುವ ಮೇಘದಂತೆ ಪ್ರಕಾಶಿಸುತ್ತಿರುವುದಾಗಿಯೂ, ಸರ್ವಪೂಜ್ಯವಾಗಿ ಹಂಸಗಳು ಹೊತ್ತು ನಿಂತಿರುವುದಾಗಿಯೂ, ಮಹಾ ಸಂಪದ್ಯುಕ್ತವಾಗಿ ಪುಣ್ಯಾತ್ಮರಾದ ದೇವತೆಗಳು ಕುಳಿತು ಆಕಾಶದಲ್ಲಿ ಸಂಚರಿಸುವಂತಹುದಾಗಿಯೂ ಇದ್ದಿತು. ಆ ಕಪಿವೀರನು, ಗೈರಿಕಾದಿ ವಿವಿಧ ಧಾತುಮಂಡಿತವಾದ ಪರ್ವತಶಿಖರದಂತೆಯೂ, ನವಗ್ರಹಗಳಿಂದಲೂ, ಚಂದ್ರಸೂರ್ಯರಿಂದಲೂ ವಿರಾಜಿಸುತ್ತಿರುವ ಗಗನಮಂಡಲದಂತೆಯೂ,ಮೇಘಜಾಲರಂಜಿತವಾಗಿ, ವಿವಿಧ ರತ್ನಚಿತ್ರಿತವಾಗಿ ಸಂಶೋಭಿಸುತ್ತಿರುವ ಆ ವಿಮಾನರತ್ನವನ್ನು ಕಂಡವನಾದನು. ॥ ೭–೮ ॥ ಆ ವಿಮಾನದ ಚಿತ್ರವಿಚಿತ್ರವಾದ ಕೆತ್ತನೆಯ ಕೆಲಸಗಳು ಬಹು ಮನೋಮೋಹಕವಾಗಿದ್ದವು. ಭೂಮಿಯು ಪರ್ವತಸಮೂಹಗಳಿಂದ ಕೂಡಿದುದಾಗಿ ಚಿತ್ರಿತವಾಗಿದ್ದಿತು. ಆ ಪರ್ವತಗಳು ಸಮಸ್ತ ವೃಕ್ಷಗಳಿಂದೊಡಗೂಡಿದುವಾಗಿಯೂ, ಆ ವೃಕ್ಷಗಳು ವಿವಿಧ ಪುಷ್ಪಭರಿತಗಳಾಗಿಯೂ, ಆ ಪುಷ್ಪಗಳು ಕಿಂಜಲ್ಕಗಳಿಂದಲೂ, .ರೇಖೆ

ಸಕೇಸರಾಣಿ § ಧನ್ಯಾನಿ ಚಿತ್ರಾಣಿ § ತಥಾ ವನಾನಿ ॥ ೧೦ ॥ ಪುಷ್ಪಾಹ್ವಯಂ ನಾಮ ವಿರಾಜಮಾನಂ ರತ್ನಪ್ರಭಾಭಿಶ್ಚ † ವಿವರ್ಧಮಾನಂ । ವೇಶ್ಮೋತ್ತಮಾನಾಮಪಿ ಚೋಚ್ಚಮಾನಂ ಮಹಾಕಪಿಸ್ತತ್ರ ಮಹಾವಿಮಾನಂ ॥ ೧೧ ॥ ಕೃತಾಶ್ಚ ವೈಡೂರ್ಯಮಯಾ ವಿಹಂಗಾ ರೂಪ್ಯಪ್ರವಾಳೈಶ್ಚ ತಥಾ ವಿಹಂಗಾಃ । ಚಿತ್ರಾಶ್ಚ ನಾನಾವಸುಭಿ ರ್ಭುಜಂಗಾ ಜಾತ್ಯಾನುರೂಪಾ ಸ್ತುರಗಾ ಶ್ಶುಭಾಂಗಾಃ ॥ ೧೨ ॥ ಪ್ರವಾಳ ಜಾಂಬೂನದ ಪುಷ್ಪ

ಸುಪುಷ್ಪಾಣಿ - ಒಳ್ಳೆ ಪುಷ್ಪಗಳುಳ್ಳ, ಪುಷ್ಕರಾಣಿ - ಸರೋವರಗಳೂ, ಪುನಶ್ಚ - ಮತ್ತು, ಸಕೇಸರಾಣಿ - ಕುಸುಮಗಳಿಂದ ಕೂಡಿದ, ಪದ್ಮಾನಿ - ಕಮಲಗಳೂ, ತಥಾ - ಹಾಗೆಯೇ, ಧನ್ಯಾನಿ - ಬಹು ದ್ರವ್ಯಸಾಧ್ಯಗಳಾದ, ಚಿತ್ರಾಣಿ - ಆಶ್ಚರ್ಯಕರಗಳಾದ, ವನಾನಿ - ವನಗಳೂ, ಕೃತಾನಿ - ನಿರ್ಮಿತಗಳಾಗಿದ್ದವೋ. ॥ ೧೦ ॥ ವಿರಾಜಮಾನಂ - ಹೊಳೆಯುತ್ತಿರುವ, ರತ್ನ....ಶ್ಚ - ರತ್ನ ಕಾಂತಿಗಳಿಂದಲೂ, ವಿವರ್ಧಮಾನಂ - ವೃದ್ಧಿಯನ್ನೈದುತ್ತಿರುವ, ವೇಶ್ಮೋ....ಪಿ - ಉತ್ತಮ ಮಂದಿರಗಳಿಗಿಂತಲೂ, ಉಚ್ಚಮಾನಂ - ಅಧಿಕ ಪ್ರಮಾಣವುಳ್ಳ, ಪುಷ್ಪಾಹ್ವಯಂನಾಮ - ಪುಷ್ಪಕವೆಂದು ಪ್ರಸಿದ್ಧವಾದ, ಮಹಾವಿಮಾನಂ - ದೊಡ್ಡ ವಿಮಾನವನ್ನು, ತತ್ರ - ಆ ಅಂತಃಪುರದಲ್ಲಿ, ಮಹಾಕಪಿಃ - ಆಂಜನೇಯನು, ದದರ್ಶ - ಕಂಡನು. ॥ ೧೧ ॥ ಯತ್ರ - ಯಾವ ವಿಮಾನದಲ್ಲಿ, ವೈಡೂರ್ಯಮಯಾಃ - ವೈಡೂರ್ಯಮಣಿ ವಿಕಾರಗಳಾದ, ವಿಹಂಗಾಃ - ಪಕ್ಷಿಗಳು, ಕೃತಾಃ - ಕೆತ್ತಲ್ಪಟ್ಟದ್ದವೋ, ತಥಾ - ಹಾಗೆಯೇ, ವಿಹಂಗಾಃ - ಹಕ್ಕಿಗಳು, ರೂಪ್ಯ....ಶ್ಚ - ಬೆಳ್ಳಿಯಿಂದಲೂ ಹವಳಗಳಿಂದಲೂ, ಕೃತಾಃ - ನಿರ್ಮಿತಗಳಾಗಿದ್ದವೋ, ನಾನಾವಸುಭಿಃ - ನಾನಾದ್ರವ್ಯಗಳಿಂದ, ಚಿತ್ರಾಃ - ಆಶ್ಚರ್ಯಕರಗಳಾದ, ಭುಜಂಗಾಶ್ಚ - ಸರ್ಪಗಳೂ, ಕೃತಾಃ - ನಿರ್ಮಿಸಲ್ಪಟ್ಟದ್ದವೋ, ಜಾತ್ಯಾನುರೂಪಾಃ - ಸತ್ಕುಲಕ್ಕೆ ತಕ್ಕಂತಿರುವ, ಶುಭಾಂಗಾಃ - ಶುಭದೇಹಗಳುಳ್ಳ, ತುರಗಾಃ - ಅಶ್ವಗಳೂ, ಕೃತಾಃ - ಮಾಡಲ್ಪಟ್ಟದ್ದವೋ. ॥ ೧೨ ॥ ಪ್ರವಾ....ಕ್ಷಾಃ - ಹವಳದ,

ಗಳಿಂದಲೂ ತುಂಬಿದುವಾಗಿಯೂ ನಿರ್ಮಿತವಾಗಿದ್ದವು. ಆ ವಿಮಾನದಲ್ಲಿ ಬೆಳ್ಳನೆ ಬೆಳಗುತ್ತಿದ್ದ ದಿವ್ಯ ಭವನಗಳು ಚಿತ್ರಿತವಾಗಿದ್ದವು ; ಅರಳಿದ ತಾವರೆಗಳಿಂದ ನಿಬಿಡಿತವಾದ ಸರೋವರಗಳು ನಿರ್ಮಿತವಾಗಿದ್ದವು. ಅವುಗಳಲ್ಲಿದ್ದ ತಾವರೆಯ ಹೂಗಳು ಕಿಂಜಲ್ಕಗಳೊಡಗೂಡಿ ಅಲ್ಲಲ್ಲಿಯೇ ಬೆಳದಿರುವಂತೆ ಬರೆಯಲಾಗಿದ್ದವು. ಇಷ್ಟೆಯಲ್ಲದೆ ಬಹು ಮನೋಹರವಾಗಿ ಕಂಗೊಳಿಸುತ್ತಿದ್ದ ಉದ್ಯಾನಗಳೂ ನಿರ್ಮಿತವಾಗಿದ್ದವು. ॥ ೯–೧೦ ॥ ಅಲ್ಲದೆ ಪುಷ್ಪಕವೆಂಬ ಆ ವಿಮಾನವು ನವರತ್ನಗಳ ಕಾಂತಿಯಿಂದ ವಿರಾಜಿಸುತ್ತಿರುವುದಾಗಿಯೂ, ಎಷ್ಟು ಮಂದಿ ಕುಳಿತುಕೊಂಡರೂ, ಇನ್ನೂ ಅನೇಕರು ಕುಳಿತುಕೊಳ್ಳಲು ಸ್ಥಳವಿರುವಂತೆ ವೃದ್ಧಿಗೊಳ್ಳುವುದಾಗಿಯೂ, ಅತ್ಯುನ್ನತ ಭವನಗಳಿಗಿಂತಲೂ ಉನ್ನತವಾಗಿರುವುದಾಗಿಯೂ ಇದ್ದಿತು. ಆ ವಿಮಾನದಲ್ಲಿ ವೈಡೂರ್ಯಮಣಿಗಳಿಂದಲೂ, ಬೆಳ್ಳಿಯಿಂದಲೂ, ಹವಳದಿಂದಲೂ ನಿರ್ಮಿತವಾದ ಪಕ್ಷಿಗಳು ತುಂಬಿದ್ದವು. ನಾನಾವಿಧಗಳಾದಮಣಿಗಳಿಂದ ನಿರ್ಮಿಸಲ್ಪಟ್ಟ ಅನೇಕ ಬಣ್ಣಗಳುಳ್ಳ ಸರ್ಪಗಳೂ, ಜಾತಿಗನುಗುಣವಾಗಿ ಮಂಗಳಕರವಾದ ದೇಹಗಳುಳ್ಳಂತೆ ನಿರ್ಮಿತವಾದ ಕುದುರೆಗಳೂ ಆ ವಿಮಾನದಲ್ಲಿ ಕಂಗೊಳಿಸುತ್ತಿದ್ದವು. ॥ ೧೧–೧೨ ॥ ಅಲ್ಲದೆ ಆ ವಿಮಾನದಲ್ಲಿ ಸುಮುಖಗಳಾಗಿಯೂ, ಕನಕನಿರ್ಮಿತ

§ "ವನಾನಿ" ತಿ. ಪಾ. § "ಸರೋವರಾಣಿ" ತಿ. ರಾ. ಪಾ. † "ವಿಘೂರ್ಣಮಾನಂ" ತಿ. ಮ. ಪಾ.

ಪಕ್ಷಾಃ ಸಲೀಲಮಾವರ್ಜಿತ ಜಿಹ್ಮಪಕ್ಷಾಃ । ಕಾಮಸ್ಯ ¶ ಸಾಕ್ಷಾದಿವ ಭಾಂತಿ ಪಕ್ಷಾಃ ಕೃತಾ ವಿಹಂಗಾ ಸ್ಸುಮುಖಾ ಸ್ಸುಪಕ್ಷಾಃ ॥ ೧೩ ॥ ನಿಯುಜ್ಯಮಾನಾಸ್ತು ಗಜಾಸ್ಸುಹಸ್ತಾ ಸಕೇಸರಾಶ್ಚೋತ್ಪಲಪತ್ರಹಸ್ತಾಃ । ಬಭೂವ ದೇವೀಚ ಕೃತಾ ಸುಹಸ್ತಾ ಲಕ್ಷ್ಮೀಸ್ತಥಾ ಪದ್ಮಿನಿ ಪದ್ಮಹಸ್ತಾ ॥ ೧೪ ॥ ಇತೀವ ತದ್ಗೃಹಮಭಿಗಮ್ಯ ಶೋಭನಂ ಸವಿಸ್ಮಯೋ ನಗಮಿವ ಚಾರುಶೋಭನಂ । ಪುನಶ್ಚ ತತ್ಪರಮಸುಗಂಧಿ ಸುಂದರಂ ಹಿಮಾತ್ಯಯೇ ನಗಮಿವ ಚಾರು ಕಂದರಂ ॥ ೧೫ ॥ ತತಸ್ಸ ತಾಂ ಕಪಿರಭಿಪತ್ಯ

ಅಪರಂಜಿಯ ಪುಷ್ಪಗಳೆಂಬ ರೇಖೆಗಳಲ್ಲಿ ಉಳ್ಳ, ಸಲೀಲಂ - ವಿಲಾಸದಿಂದೊಡಗೂಡಿದಂತೆ, ಆವ....ಕ್ಷಾಃ - ಮುದಡಿದ ವಕ್ರಗಳಾದ ಪಕ್ಷಗಳುಳ್ಳ, ಕಾಮಸ್ಯ - ಮನ್ಮಥನಿಗೆ, ಸಾಕ್ಷಾತ್ - ಪ್ರತ್ಯಕ್ಷವಾಗಿ, ಪಕ್ಷಾಇವ - ಸಹಾಯಕಗಳಂತೆ, ಸುಮುಖಾಃ - ಸುಂದರಮುಖಗಳುಳ್ಳ, ಸುಪಕ್ಷಾಃ - ಒಳ್ಳೆಯ ರೆಕ್ಕೆಗಳುಳ್ಳದಾಗಿ, ಕೃತಾಃ - ಕೃತಕಗಳಾದ, ವಿಹಂಗಾಃ - ಹಕ್ಕಿಗಳು, ಭಾಂತಿ - ಹೊಳೆಯುತ್ತಿದ್ದವೋ. ॥ ೧೩ ॥ ಯತ್ರ-ಯಾವ ವಿಮಾನದಲ್ಲಿ, ನಿಯುಜ್ಯಮಾನಾಃ-ನಿರ್ಮಿತಗಳಾಗಿ ಕಟ್ಟಲ್ಪಟ್ಟ, ಸುಹಸ್ತಾಃ - ಒಳ್ಳೆಯ ಸೊಂಡಿಲುಗಳುಳ್ಳ, ಸಕೇಸರಾಃ - ಕೇಸರಗಳಿಂದೊಡಗೂಡಿದ, ಉತ್ಪ....ಸ್ತಾಃ - ನೈದಿಲೆಯ ರೇಕುಗಳೇ ಸೊಂಡಿಲುಗಳಲ್ಲಿ ಉಳ್ಳ, ಗಜಾಶ್ಚ-ಆನೆಗಳೂ, ಕೃತಾಃ-ಕೃತಕಗಳಾಗಿವೆಯೋ, ತಥಾ-ಹಾಗೆ, ಪದ್ಮಿನಿ-ಪದ್ಮಾಕರದಲ್ಲಿ, ಸುಹಸ್ತಾ-ಸಾಮುದ್ರಿಕಾಲಕ್ಷಣಯುಕ್ತವಾದ ಅಂಗೈಗಳುಳ್ಳ, ಪದ್ಮಹಸ್ತಾ - ಕಮಲಧಾರಿಯಾದ, ಲಕ್ಷ್ಮೀರ್ದೇವೀಚ - ಲಕ್ಷ್ಮಿದೇವಿಯೂ ಕೂಡಾ, ಕೃತಾ - ನಿರ್ಮಿತಳಾದವಳು, ಬಭೂವ - ಆಗಿದ್ದಳೋ. ॥ ೧೪ ॥ ಇತೀವ - ಈ ಪ್ರಕಾರವೇ, ಶೋಭನಂ - ಪ್ರಕಾಶಿಸುತ್ತಿರುವ, ಚಾರುಶೋಭನಂ - ಮನೋಹರವಾಗಿ ಕಂಗೊಳಿಸುತ್ತ, ನಗಮಿವಸ್ಥಿತಂ - ಪರ್ವತದಂತಿರುವ, ತದ್ಗೃಹಂ ಆ ರಾವಣನ ಮಂದಿರವನ್ನು, ಅಭಿಗಮ್ಯ-ಪ್ರವೇಶಿಸಿ, ಸವಿಸ್ಮಯಃ-ಆಶ್ಚರ್ಯಯುಕ್ತನಾದವನು, (ಅಭೂತ್-ಆದನು), ಪರಮಸುಗಂಧಿ-ಸರ್ವೋತ್ಕೃಷ್ಟವಾಗಿರುವ ಸುವಾಸನೆಯುಳ್ಳ, ಸುಂದರಂ - ಮನೋಹರವಾದುದರಿಂದ, ಹಿಮಾತ್ಯಯೇ - ಹಿಮವು ನಾಶವಾಗಲು, ಚಾರುಕಂದರಂ - ಸುಂದರವಾದ ಗುಹೆಗಳುಳ್ಳ ನಗಮಿವಸ್ಥಿತಂ - ಬೆಟ್ಟದಂತಿರುವ, ತತ್ - ಆ ಮನೆಯನ್ನು, ಪುನಶ್ಚ - ಮತ್ತೂ, ಅಭಿಗಮ್ಯ - ಹೊಕ್ಕು, ಸವಿಸ್ಮಯೋಭೂತ್ - ಆಶ್ಚರ್ಯಯುಕ್ತನಾದನು. ॥ ೧೫ ॥ ತತಃ -

ಗಳಾಗಿ ಅಲ್ಲಲ್ಲಿ ಹವಳದಿಂದ ಚಿತ್ರಿತಗಳಾದ ರೆಕ್ಕೆಗಳೊಡಗೂಡಿಯೂ, ಬಹು ವಿಲಾಸದಿಂದಿರುವಂತೆ ಅವುಗಳನ್ನು ಕೊಂಚವಾಗಿ ಕೊಂಕಿಸಿ ಆಗಲೇ ಗಗನಾಂಗಣಕ್ಕೆ ಹಾರುವುವೋ ಎಂಬಂತಿರುವುವಾಗಿಯೂ ಕಣ್ಗೊಪ್ಪಿ ರಂಜಿಸುತ್ತಿರುವ ಪಕ್ಷಿಗಳು ಸಾಕ್ಷಾತ್ತಾಗಿ ಮನ್ಮಥನಿಗೆ ಸಹಾಯ ಮಾಡುತ್ತಿರುವುವೋ ಎಂಬ ಭಾವವುದಿಸುವಂತೆ ನಿರ್ಮಿಸಲಾಗಿದ್ದವು. ಆ ವಿಮಾನದಲ್ಲಿ ಚಿತ್ರಿಸಿದ್ದ ಸರೋವರದಲ್ಲಿ ವಿಹರಿಸುತ್ತಿರುವ ಗಜಗಳೂ ಸಹ ಮನೋಹರವಾದ ಸೊಂಡಿಲುಗಳಿಂದ ಕೂಡಿ, ಅನೇಕ ರೇಖೆಗಳಿಂದಲೂ, ಕಿಂಜಲ್ಕಗಳಿಂದಲೂ ಕೂಡಿದ ಕಮಲಗಳನ್ನು ಹಿಡಿದಿರುವಂತೆ ಚಿತ್ರಿತಗಳಾಗಿದ್ದವು. ಹೀಗೆಯೇ ಸಂಪದಭಿಮಾನಿ ದೇವತೆಯಾದ ಲಕ್ಷ್ಮೀದೇವಿಯೂ ಸಹ ಆ ವಿಮಾನದಲ್ಲಿ, ಪದ್ಮಹಸ್ತಳಾಗಿ ನಿರ್ಮಿತಳಾಗಿದ್ದಳು. ॥ ೧೩–೧೪ ॥ ಈ ಪ್ರಕಾರ ಹನುಮಂತನು ಬಹು ಮಂಗಳಕರವಾಗಿಯೂ, ಮನೋಹರವಾದ ಪರ್ವತಕ್ಕೆ ಸಮಾನವಾಗಿ ಅತ್ಯುನ್ನತಗಳಾಗಿರುವ ಭವನಗಳಲ್ಲೆಲ್ಲ ಸಂಚರಿಸಿ ಪರಮಾಶ್ಚರ್ಯಭರಿತನಾಗುತ್ತ, ಸುವಾಸನೆಯೊಡಗೂಡಿ ವಸಂತಋತುವಿನಲ್ಲಿ

¶ "ಪಕ್ಷಾವಿವ" ರಾ. ಪಾ.

ಪೂಜಿತಾಂ ಚರ್ರ ಪುರೀಂ ದಶಮುಖಬಾಹು ॥ ಪಾಲಿತಾಂ । ಅದೃಶ್ಯ ತಾಂ ಜನಕ ಸುತಾಂ ಸುಪೂಜಿತಾಂ ಸುದುಃಖಿತಃ ಪತಿಗುಣವೇಗನಿರ್ಜಿತಾಂ ॥ ೧೬ ॥

ತತಸ್ತದಾ ಬಹುವಿಧಭಾವಿತಾತ್ಮನಃ
ಕೃತಾತ್ಮನೋ ಜನಕಸುತಾಂ ಸುವರ್ತ್ಮನಃ ।
ಅಪಶ್ಯತೋಽಭವದತಿದುಃಖಿತಂ
ಮನಸ್ಸುಚಕ್ಷುಷಃ ಪ್ರವಿಚರತೋ ಮಹಾತ್ಮನಃ ॥ ೧೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಮಸ್ಸರ್ಗಃ

ಅನಂತರದಲ್ಲಿ, ಸಕಪಿಃ - ಆ ಆಂಜನೇಯನು, ದಶ....ತಾಂ - ರಾವಣನ ಭುಜಗಳಿಂದ ರಕ್ಷಿತವಾದ, ಪೂಜಿತಾಂ - ಪೂಜಿಸಲ್ಪಟ್ಟ, ತಾಂಪುರೀಂ - ಆ ಪಟ್ಟಣವನ್ನು, ಅಭಿಪತ್ಯ - ಹೊಂದಿ, ಚರ್ರ - ಸಂಚರಿಸುತ್ತ, ಪತಿ....ತಾಂ - ಶ್ರೀರಾಮನ ಗುಣೋತ್ಕರ್ಷದಿಂದ ವಶೀಕೃತಳಾದ, ಸುಪೂಜಿತಾಂ - ಪತಿವ್ರತೆಯರಿಂದ ಪೂಜಿಸಲ್ಪಟ್ಟ, ತಾಂಜನಕಸುತಾಂ - ಆ ಸೀತಾದೇವಿಯನ್ನು, ಅದೃಶ್ಯ - ಕಾಣದೆ, ಸುದುಃಖಿತಃ - ಶೋಕಾಕ್ರಾಂತನು, ಅಭೂತ್ - ಆದನು. ॥ ೧೬ ॥ ತತಃ - ಅನಂತರದಲ್ಲಿ, ತದಾ - ಆ ಕಾಲದಲ್ಲಿ, ಬಹು....ನಃ - ಅನೇಕ ಪ್ರಕಾರವಾಗಿ ಚಿಂತಿಸಲ್ಪಟ್ಟ ಮನವುಳ್ಳ, ಕೃತಾತ್ಮನಃ - ಕೃತ ಪ್ರಯತ್ನನಾದ, ಸುವರ್ತ್ಮನಃ - ಸನ್ಮಾರ್ಗದಲ್ಲಿರುವ, ಸುಚಕ್ಷುಷಃ - ದೂರದರ್ಶಿಯಾದ, ಪ್ರವಿಚರತಃ - ವಿಶೇಷವಾಗಿ ಸಂಚರಿಸುತ್ತಿರುವ, ಜನಕಸುತಾಂ - ಜನಕನಂದಿನಿಯನ್ನು, ಅಪಶ್ಯತಃ - ಕಾಣವಿರುವ, ಮಹಾತ್ಮನಃ - ಸ್ಥಿರಚಿತ್ತನಾದ ಆಂಜನೇಯನ, ಮನಃ - ಮನಸ್ಸು, ಅತಿದುಃಖಿತಂ - ಬಹಳ ಶೋಕ ವುಳ್ಳುದು, ಅಭೂತ್ - ಆಯಿತು. ॥ ೧೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಮಸ್ಸರ್ಗಃ.

ಮನೋಹರವಾಗಿ ಕುಸುಮಿಸಿರುವ ವೃಕ್ಷಗಳಿಂದ ತುಂಬಿ ಮನೋಜ್ಞಗಳಾದ ಗುಹೆಗಳಿಂದ ನಿಬಿಡಿತವಾದ ಕೃತಕಪರ್ವತಗಳುಳ್ಳ ಆ ಉತ್ತಮ ವಿಮಾನದಲ್ಲಿ ಮರಳಿಯೂ ಸಂಚರಿಸಿದನು. ಆತನು ಬಹು ಪೂಜನೀಯವಾಗಿ, ರಾವಣಾಸುರನ ಭುಜಬಲದಿಂದ ಸುರಕ್ಷಿತವಾದ ಆ ಲಂಕಾನಗರವನ್ನು ಪ್ರವೇಶಿಸಿ ಎಲ್ಲೆಡೆಗಳಲ್ಲಿಯೂ ಸಂಚರಿಸಿದವನಾಗಿ, ಮಹಾ ಪೂಜ್ಯಳೂ, ಪತಿಯ ಗುಣಾತಿಶಯಗಳನ್ನೇ ಸ್ಮರಿಸುತ್ತ ಆತನಲ್ಲಿಯೇ ನಟ್ಟ ಮನಸ್ಸುಳ್ಳವಳೂ, ರಾಜಪುತ್ರಿಯೂ ಆದ ಸೀತಾದೇವಿಯನ್ನು ಕಾಣದೆ ಬಹಳವಾಗಿ ಖಿತಿಗೊಂಡನು. ಮಹಾತ್ಮನಾದ ಆ ಕಪಿವೀರನು ಅನೇಕ ವಿಧವಾಗಿ ಯೋಚಿಸಿಯೂ ಶ್ರೀರಾಮಪತ್ನಿಯಾದ ಸೀತಾದೇವಿಯನ್ನು ಕಾಣದೆ ಚಿಂತೆಗೊಳಗಾದನು. ಆತನು ಮಹಾ ಪ್ರಯತ್ನದಿಂದ ಎಂತಹ ಕೆಲಸವನ್ನಾದರೂ ಸಾಧಿಸುವಾತನು ; ನೀತಿಮಾರ್ಗವನ್ನು ಎಳ್ಳಷ್ಟೂ ಮೀರಿ ನಡೆಯುವವನಲ್ಲ. ಯಾವ ಪದಾರ್ಥವು ಎಷ್ಟೇ ದೂರದಲ್ಲಿದ್ದರೂ ಅದನ್ನು ನೋಡಬಲ್ಲ ಸಾಮರ್ಥ್ಯವುಳ್ಳವನು. ಮಹಾ ಧೈರ್ಯಶಾಲಿಯು. ಇಂತಹ ಕಪಿಶ್ರೇಷ್ಠನಾದ ಆ ಹನುಮಂತನು ಸೀತಾದೇವಿಯನ್ನು ಕಾಣದೆ ಮಹತ್ತರವಾದ ಚಿಂತೆಗೊಳಗಾದನು. ॥ ೧೫–೧೭ ॥

ಇಂತಿದು ಹನುಮತ್ಕೃತ ಪುಷ್ಪಕ ವಿಮಾನ ದರ್ಶನ ವೃತ್ತಾಂತವೆಂಬ
ಏಳನೆಯ ಸರ್ಗವು ಸಮಾಪ್ತವಾದುದು.

॥ "ಸರ್ಜಿತಾಂ" ರಾ. ಪಾ.

ಸುಂದರಕಾಂಡೇ ಅಷ್ಟಮಸ್ಸರ್ಗಃ

ಸತಸ್ಯ ಮಧ್ಯೇ ಭವನಸ್ಯ¶ ಸಂಸ್ಥಿತಂ ಮಹದ್ವಿಮಾನಂ ಮಣಿವಜ್ರಚಿತ್ರಿತಂ ।
ಪ್ರತಪ್ತ ಜಾಂಬೂನದ ಜಾಲಕೃತ್ರಿಮಂ ದದರ್ಶ ‖ ವೀರಃ ಪವನಾತ್ಮಜಃ ಕಪಿಃ ॥ ೧॥
ತದಪ್ರಮೇಯಾಪ್ರತಿಕಾರಕೃತ್ರಿಮಂ ಕೃತಂ ಸ್ವಯಂ ಸಾಧ್ವಿತಿ ವಿಶ್ವಕರ್ಮಣಾ ।
ದಿವಂಗತಂ ವಾಯುಪಥೇ ಪ್ರತಿಷ್ಠಿತಂ ವ್ಯರಾಜತಾದಿತ್ಯಪಥಸ್ಯ ಲಕ್ಷ್ಮವತ್ ॥ ೨॥
ನತತ್ರ ಕಿಂಚಿನ್ನಕೃತಂ ಪ್ರಯತ್ನತೋ ನತತ್ರ ಕಿಂಚಿನ್ನ ಮಹಾರ್ಹ ರತ್ನವತ್ ।

ವೀರಃ - ಶೂರನಾದ, ಪವನಾತ್ಮಜಃ - ವಾಯುಪುತ್ರನಾದ, ಸಕಪಿಃ - ಆ ಆಂಜನೇಯನು, **ತಸ್ಯಭವನಸ್ಯ** - ಆ ಮನೆಯ, ಮಧ್ಯೇ - ಮಧ್ಯಪ್ರದೇಶದಲ್ಲಿ, ಸಂಸ್ಥಿತಂ - ಇರುವ, ಮಣಿ....ತಂ - **ರತ್ನಗಳಿಂದಲೂ, ವಜ್ರಗಳಿಂದಲೂ ಕೆತ್ತಲ್ಪಟ್ಟ,** ಪ್ರತ....ಮಂ - **ಅಪರಂಜಿಯ ಕಿಟಿಕಿಗಳ ನಿರ್ಮಾಣವುಳ್ಳ,** ಮಹದ್ವಿಮಾನಂ - ದೊಡ್ಡ ವಿಮಾನವನ್ನು, ದದರ್ಶ - ಕಂಡನು. ॥ ೧ ॥ ಅಪ್ರ....ಮಂ - **ಊಹಿಸುವದಕ್ಕೆ ಅಶಕ್ಯವಾದ ಪ್ರತಿಯಿಲ್ಲದಿರುವ ನಿರ್ಮಾಣವುಳ್ಳದಾಗಿ,** ವಿಶ್ವಕರ್ಮಣಾ - **ದೇವಶಿಲ್ಪಿಯಿಂದ,** ಸ್ವಯಂ - ತಾನೇ, ಸಾಧ್ವಿತಿ - ಚನ್ನಾಗಿದೆಯೆಂದು, ಕೃತಂ - ನಿರ್ಮಿಸಲ್ಪಟ್ಟ, ದಿವಂಗತಂ - **ಆಕಾಶಗಮನಶೀಲವಾದ,** ವಾಯು....ತಂ - ಅಂತರಿಕ್ಷಮಾರ್ಗದಲ್ಲಿ ಸ್ಥಾಪಿಸಲ್ಪಟ್ಟ, ತತ್ - ಆ ವಿಮಾನವು, ಆದಿತ್ಯಪಥಸ್ಯ - ಸೂರ್ಯಮಾರ್ಗಕ್ಕೆ, ಲಕ್ಷ್ಮವತ್ - ಚಿಹ್ನೆಯಂತೆ, ವ್ಯರಾಜತ - ಹೊಳೆಯುತ್ತಿದ್ದಿತು. ॥೨॥ ತತ್ರ - ಆ ವಿಮಾನದಲ್ಲಿ, ಪ್ರಯತ್ನತಃ - ಪ್ರಯಾಸದಿಂದ, ನಕೃತಂ - ಮಾಡಲ್ಪಡದಿರುವ, ಕಿಂಚಿತ್ - ಸ್ವಲ್ಪವಾದರೂ, ನ - ಇಲ್ಲ, ನಮ....ತ್ - ಅಮೂಲ್ಯ ರತ್ನಗಳಿಲ್ಲದಿರುವ, ಕಿಂಚಿತ್ - ಸ್ವಲ್ಪವಾದರೂ, ನ - ಇಲ್ಲ, ತೇವಿಶೇಷಾಃ - ಆ ಪುಷ್ಪಕದಲ್ಲಿರುವ ವಿಶೇಷ ಲಕ್ಷಣಗಳು,

---

ಮಹಾ ಪರಾಕ್ರಮಶಾಲಿಯಾದ ಆ ಮಾರುತಿಯು ಸೀತಾದೇವಿಯನ್ನು ಕಾಣದೆ ಚಿಂತಾಕ್ರಾಂತಚಿತ್ತನಾಗಿ ಆಲೋಚಿಸುತ್ತ, ಆ ರಾವಣೇಶ್ವರನ ದಿವ್ಯ ಭವನದ ಮಧ್ಯದಲ್ಲಿ ವಜ್ರವೇ ಮೊದಲಾದ ನವರತ್ನಗಳಿಂದ ಚಿತ್ರವರ್ಣಗಳುಳ್ಳದಾಗಿ ರಚಿಸಿದುದಾಗಿಯೂ, ಪುಟಪಾಕಶೋಧಿತವಾದ ಸುವರ್ಣದಿಂದ ಮಾಡಿದ ಕೆತ್ತನೆಯ ಚಿತ್ರಕೆಲಸಗಳುಳ್ಳದಾಗಿಯೂ ವಿರಾಜಿಸುತ್ತಿರುವ ಶ್ರೇಷ್ಠವಾದ ಆ ಪುಷ್ಪಕ ವಿಮಾನವನ್ನು ಕಂಡನು. ಅದು ಅಪ್ರಮೇಯವಾಗಿದ್ದಿತು ; ಅಸಮಾನ ರೂಪವುಳ್ಳದಾಗಿದ್ದಿತು ; ಅದನ್ನು ನಿರ್ಮಿಸಿದ ವಿಶ್ವಕರ್ಮನೇ ಅದನ್ನು ಮನಸಾರೆ ಹೊಗಳಿದ್ದನು ; ತನ್ನ ಕೃತಿಯನ್ನು ನೋಡಿ ತಾನೇ ಆಶ್ಚರ್ಯಪಟ್ಟಿದ್ದನು. ಆಕಾಶಮಾರ್ಗದಲ್ಲಿಯೂ, ಸ್ವರ್ಗದಲ್ಲಿಯೂ ಅಪ್ರತಿಹತವಾದ ಗಮನವು ಅದಕ್ಕಿದ್ದಿತು. ಹೀಗೆ ಅತಿ ಪ್ರಕಾಶಮಾನವಾದ ಆ ಪುಷ್ಪಕವು ಸೂರ್ಯನ ಮಾರ್ಗಕ್ಕೆ ಚಿಹ್ನೆಯೋ ಎಂಬಂತೆ ವಿರಾಜಿಸುತ್ತಿದ್ದಿತು. ಆ ಉತ್ತಮ ವಿಮಾನದಲ್ಲಿ ನಿರ್ಮಿಸಲಾಗಿದ್ದ ವಿಶೇಷ ಕೃತಿಗಳೆಲ್ಲವೂ ಮಹಾ ಪ್ರಯತ್ನಪೂರ್ವಕವಾಗಿಯೇ ರಚಿತವಾಗಿದ್ದವು. ಮಹಾರ್ಹವಾದ ಮಣಿಗಳ ಕೆತ್ತನೆಯ ಕೆಲಸವಿಲ್ಲದಿರುವ ಪ್ರದೇಶವು ಆ ವಿಮಾನದಲ್ಲೆಲ್ಲಿಯೂ ಇರಲಿಲ್ಲ.

¶ "ಸಂಸ್ಥಿತೋ" ತಿ. ಪಾ. ‖ "ಧೀಮಾನ್" ತಿ. ರಾ. ಪಾ.

ನ ತೇ ವಿಶೇಷಾ ನಿಯತಾಸ್ಸುರೇಷ್ವಪಿ ನತತ್ರ ಕಿಂಚಿನ್ನಮಹಾವಿಶೇಷವತ್ ॥ ೩ ॥ ತಪಸ್ಸಮಾಧಾನ ಪರಾಕ್ರಮಾರ್ಜಿತಂ ಮನಸ್ಸಮಾಧಾನ ವಿಚಾರಚಾರಿಣಂ । ಅನೇಕ ಸಂಸ್ಥಾನ ವಿಶೇಷನಿರ್ಮಿತಂ ತತಸ್ತತಸ್ತುಲ್ಯ ವಿಶೇಷದರ್ಶನಂ ॥ ೪ ॥ ಮನಸ್ಸಮಾಧಾಯತು ಶೀಘ್ರಗಾಮಿನಂ ದುರಾವರಂ ಮಾರುತತುಲ್ಯಗಾಮಿನಂ । ಮಹಾತ್ಮನಾಂ ಪುಣ್ಯಕೃತಾಂ ಮಹರ್ಧಿನಾಂ ಯಶಸ್ವಿನಾ ಮಗ್ರ್ಯಮುದಾಮಿವಾಲಯಂ ॥ ೫ ॥ ವಿಶೇಷಮಾಲಂಬ್ಯ ವಿಶೇಷಸಂಸ್ಥಿತಂ ವಿಚಿತ್ರಕೂಟಂ ಬಹುಕೂಟಮಂಡಿತಂ । ಮನೋಭಿರಾಮಂ ಶರದಿಂದುನಿರ್ಮಲಂ ವಿಚಿತ್ರಕೂಟಂ ಶಿಖರಂ ಗಿರೇರ್ಯಥಾ ॥೬॥

ಸುರೇಷ್ವಪಿ - ದೇವತೆಗಳಲ್ಲಿಯೂ, ನನಿಯತಾಃ - ನಿಶ್ಚಯವಾಗಿಯೂ ಇಲ್ಲ, ನಮ....ತ್ - ಬಹಳ ವಿಶೇಷವಿಲ್ಲದಿರುವ, ಕಿಂಚಿತ್ - ಕೊಂಚವಾದರೂ, ನ - ಇಲ್ಲ. ॥೩॥ ತಪ....ತಂ - ತಪೋನುಷ್ಠಾನ ದಿಂದಲೂ, ಶೌರ್ಯದಿಂದಲೂ ಸಂಪಾದಿಸಲ್ಪಟ್ಟ, ಮನ....ಣಂ - ನಿಶ್ಚಲ ಮನದಿಂದಲೂ, ವಿಮರ್ಶೆ ಯಿಂದಲೂ ಸಂಚಾರಶೀಲವಾದ, ಅನೇ....ತಂ-ನಾನಾವಿಧಗಳಾದ ಸನ್ನಿವೇಶಗಳಿಂದ ನಿರ್ಮಿಸಲ್ಪಟ್ಟ, ತತಸ್ತತಃ - ಆ ಆ ಪ್ರದೇಶಗಳಲ್ಲಿ, ತುಲ್ಯ....ನಂ - ಸಮಾನಗಳಾದ ಅತಿಶಯಗಳಾದ ಪದಾರ್ಥಗಳ ನೋಟವುಳ್ಳ. ॥೪॥ ಮನಃ - ಮನಸ್ಸನ್ನು, ಸಮಾಧಾಯ - ಸಮಾಧಾನಪಡಿಸಿ, ಶೀಘ್ರಗಾಮಿನಂ - ಗಮನಶೀಲವಾದ, ದುರಾವರಂ - ತಡೆಯಲು ಅಶಕ್ಯವಾದ, ಮಾರು....ನಂ - ವಾಯುವಿಗೆ ಸಮಾನವಾಗಿ ಹೋಗುತ್ತಿರುವ, ಮಹಾತ್ಮನಾಂ - ಮಹಾ ಮನಸ್ವಿಗಳಾದ, ಪುಣ್ಯಕೃತಾಂ - ಪುಣ್ಯ ಮಾಡಿರುವ, ಮಹರ್ಧಿನಾಂ - ಮಹದೈಶ್ವರ್ಯವಂತರಾದ, ಯಶಸ್ವಿನಾಂ - ಕೀರ್ತಿಶಾಲಿಗಳಾದ, ಅಗ್ರ್ಯಮುದಾಂ - ಮಹದಾನಂದವುಳ್ಳ ಇಂದ್ರಾದಿಗಳ, ಆಲ....ತಂ - ಮನೆಯೆಂಬಂತಿರುವ. ॥ ೫ ॥ ವಿಶೇಷಂ - ರತ್ನಾದಿ ದಿವ್ಯ ವಸ್ತುವಿಶೇಷವನ್ನು, ಆಲಂಬ್ಯ - ಆಶ್ರಯಿಸಿ, ವಿಶೇಷಸಂಸ್ಥಿತಂ - ಆಕಾರ ವಿಶೇಷದಿಂದಿರುವ, ವಿಚಿತ್ರಕೂಟಂ - ಆಶ್ಚರ್ಯಕರಗಳಾದ ಶೃಂಗಗಳುಳ್ಳ, ಬಹು....ತಂ - ಅನೇಕ ಗಳಾದ ಅವಾಂತರ ಶಿಖರಗಳಿಂದ ಅಲಂಕೃತವಾದ, ಮನೋಭಿರಾಮಂ - ಮನೋಹರವಾದ,

ಅದರಲ್ಲಿದ್ದ ವಿಶೇಷಗಳು ದೇವತೆಗಳ ಭವನಗಳಲ್ಲಿಯೂ ಇರಲಿಲ್ಲವು. ಆ ವಿಶೇಷಗಳು ನೋಡಿದವರಿಗೆ ಪರಮಾಶ್ಚರ್ಯವನ್ನೂ, ಆನಂದವನ್ನೂ ಹುಟ್ಟಿಸುತ್ತಿದ್ದವು. ಮಹಾ ಬಲಿಷ್ಠನಾದ ರಾವಣನು ಆ ವಿಮಾನವನ್ನು ತನ್ನ ತಪಶ್ಶಕ್ತಿಯಿಂದಲೂ, ಪರಾಕ್ರಮದಿಂದಲೂ ಸಂಪಾದಿಸಿದ್ದನು. ಅದು ತನ್ನಲ್ಲಿ ಕುಳಿತವರನ್ನು ಕೋರಿದೆಡೆಗೆ ಕೊಂಡೊಯ್ಯುವ ಸಾಮರ್ಥ್ಯವುಳ್ಳದಾಗಿದ್ದಿತು. ಗೋಪುರಗಳೇ ಮೊದಲಾದ ಅನೇಕ ಸಂಸ್ಥಾನ ಭೇದಗಳಿಂದ ನಿರ್ಮಿತವಾಗಿ, ಯಾವ ಭಾಗವನ್ನು ನೋಡಿದರೂ ಮಹದಾಶ್ಚರ್ಯವನ್ನೂ, ಉತ್ಸಾಹವನ್ನೂ ಹುಟ್ಟಿಸುವಂತೆ, ಎಲ್ಲೆಡೆಗಳಲ್ಲಿಯೂ ಆ ವಿಮಾನವು ಸಮಸಮವಾದ ವಿಶೇಷಗಳಿಂದ ನಿರ್ಮಿತವಾಗಿದ್ದಿತು. ॥ ೧–೪ ॥ ಇಷ್ಟೆಯಲ್ಲದೆ, ತನ್ನೊಡೆಯನ ಮನೋಭಿಪ್ರಾಯವರಿತು ಎಂತಹರಿಗೂ ದುರ್ನಿವಾರ್ಯವಾಗಿ ವಾಯುವೇಗ ಮನೋವೇಗಗಳಿಂದ ಸಂಚರಿಸುವುದಾಗಿಯೂ. ಮಹಾಮಹಿಮರೂ, ಪುಣ್ಯವಂತರೂ, ಮಹದೈಶ್ವರ್ಯವಂತರೂ, ಕೀರ್ತಿವಂತರೂ, ಎಲ್ಲ ಕಾಲಗಳಲ್ಲಿಯೂ ಸಂತೋಷಭರಿತರೂ ಆದ ಇಂದ್ರನೇ ಮೊದಲಾದವರಿಗೆ ನಿವಾಸಸ್ಥಾನವಾದ ಸ್ವರ್ಗದಂತೆ ಆ ವಿಮಾನಶ್ರೇಷ್ಠವು ಬಹುವಾಗಿ ವಿರಾಜಿಸುತ್ತಿದ್ದಿತು. ಅನರ್ಘ್ಯವಾದ ವಿವಿಧ ರತ್ನ ಸಮೂಹಗಳಿಂದ ನಿರ್ಮಿತವಾಗಿ ಅನೇಕ ಶಿಖರಗಳಿಂದಲಂಕೃತವಾದುದೂ, ಮನಸ್ಸಂತೋಷ

ವಹಂತಿ ಯಂ ಕುಂಡಲಶೋಭಿತಾನನಾ ಮಹಾಶನಾ ವ್ಯೋಮಚರಾ ನಿಶಾಚರಾಃ ।
ವಿವೃತ್ತ ವಿಧ್ವಸ್ತ ವಿಶಾಲ ಲೋಚನಾ ಮಹಾಜವಾ ಭೂತಗಣಾಸ್ಸಹಸ್ರಶಃ ॥ ೭ ॥

ವಸಂತ ಪುಷ್ಪೋತ್ಕರ ಚಾರುದರ್ಶನಂ
ವಸಂತಮಾಸಾದಪಿ ಕಾಂತದರ್ಶನಂ ।
ಸಪುಷ್ಪಕಂ ತತ್ರ ವಿಮಾನಮುತ್ತಮಂ
ದದರ್ಶ ತದ್ವಾನರವೀರಸತ್ತಮಃ ॥ ೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಮಸ್ಸರ್ಗಃ

ಶರ....ಲಂ - ಶರತ್ಕಾಲದ ಚಂದ್ರನಂತೆ ಶುಭ್ರವಾದುದರಿಂದಲೇ, ವಿಚಿತ್ರಕೂಟಂ - ವಿಸ್ಮಯಕರವಾದ ಶಿಖರಗಳುಳ್ಳ, ಗಿರೇಃ - ಪರ್ವತದ, ಶಿಖರಂಯಥಾ - ಶೃಂಗದಂತಿರುವ. ॥ ೬ ॥ ಯಂ - ಯಾವ ವಿಮಾನವನ್ನು, ಕುಂಡ....ನಾಂ-ಕರ್ಣಾಭರಣಗಳಿಂದ ಪ್ರಕಾಶಿಸಲ್ಪಟ್ಟ ಮುಖಗಳುಳ್ಳ, ಮಹಾಶನಾಃ-ತಿಂದು ಕೊಬ್ಬಿದ, ವ್ಯೋಮಚರಾಃ - ಅಂತರಿಕ್ಷಚಾರಿಗಳಾದ, ನಿಶಾಚರಾಃ - ರಾಕ್ಷಸಪ್ರತಿಮೆಗಳೂ, ವಿವೃ....ನಾಃ - ತಿರಗಿಸಲ್ಪಟ್ಟ ವ್ಯತ್ಯಸ್ತಗಳೂ ವಿಸ್ತಾರಗಳೂ ಆದ ನೇತ್ರಗಳುಳ್ಳ, ಮಹಾಜವಾಃ-ಮಹಾವೇಗಶಾಲಿಗಳಾದ, ಸಹಸ್ರಶಃ - ಅನೇಕ ಸಹಸ್ರಗಳಾದ, ಭೂತಗಣಾಃ - ಭೂತಗಳೂ, ವಹಂತಿ - ವಹಿಸುತ್ತಿವೆಯೋ. ॥ ೭ ॥ ವಸಂ....ನಂ - ವಸಂತಕಾಲದಲ್ಲಿ ಪುಷ್ಪಸಮೂಹದಿಂದ ರಮಣೀಯವಾದ ನೋಟವುಳ್ಳ, ವಸಂತಮಾಸಾದಪಿ - ಚೈತ್ರವೈಶಾಖಮಾಸಗಳಿಂದಲೂ, ಕಾಂತದರ್ಶನಂ - ಮನೋಹರವಾದ ನೋಟವುಳ್ಳದಾಗಿ, ತತ್ರ - ಆ ಲಂಕಾಪಟ್ಟಣದಲ್ಲಿರುವ, ಉತ್ತಮಂ - ಉತ್ಕೃಷ್ಟವಾದ, ಪುಷ್ಪಕಂ - ಪುಷ್ಪಕವೆಂಬ, ತದ್ವಿಮಾನಂ - ಆ ದೇವ ರಥವನ್ನು, ವಾನ....ಮಃ - ವಾನರವೀರರಲ್ಲಿ ಶ್ರೇಷ್ಠನಾದ, ಸಃ - ಆ ಆಂಜನೇಯನು, ದದರ್ಶ - ಕಂಡನು. ॥ ೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಮಸ್ಸರ್ಗಃ.

ಜನಕವಾದುದೂ, ಶರತ್ಕಾಲದ ಚಂದ್ರಬಿಂಬದಂತೆ ಬಹು ನಿರ್ಮಲವಾಗಿ, ಅನೇಕ ಅವಾಂತರ ಶಿಖರಗಳುಳ್ಳ ಮಹಾ ಪರ್ವತದಂತೆ ಕಣ್ಗೊಪ್ಪಿ ರಂಜಿಸುವ ಆ ವಿಮಾನಶ್ರೇಷ್ಠವು ಬಹು ರಮಣೀಯವಾಗಿದ್ದಿತು. ಕರ್ಣಕುಂಡಲಗಳಿಂದಲಂಕೃತರಾಗಿ, ದೊಡ್ಡ ಮುಖಗಳಿಂದಲೂ, ದೇಹಗಳಿಂದಲೂ ಕೂಡಿ ಆಕಾಶದಲ್ಲಿ ಸಂಚರಿಸುವ ರಾಕ್ಷಸರ ಸ್ವರೂಪದಂತಿರುವ ಅನೇಕ ಸಹಸ್ರ ಪ್ರತಿಮೆಗಳೂ, ಗುಂಡಾಗಿಯೂ, ವಿಶಾಲವಾಗಿಯೂ ಇರುವ ಕಣ್ಣುಗಳುಳ್ಳ ಮಹಾವೇಗಶೀಲಗಳಾದ ಭೂತಗಣಗಳ ಅನೇಕ ಸಹಸ್ರ ಪ್ರತಿಮೆಗಳೂ ಆ ವಿಮಾನವನ್ನು ಹೊತ್ತು ನಿಂತಿರುವಂತೆ ನಿರ್ಮಿತವಾಗಿದ್ದವು. ವಾನರವೀರರಲ್ಲಗ್ರೇಸರನಾದ ಹನುಮಂತನು, ಪರಮಾಶ್ಚರ್ಯಕರವಾದ ವಿಶೇಷಗಳಿಂದೊಪ್ಪಿ ವಸಂತಋತುವಿನಲ್ಲಿ ಚಿಗಿತು ಪುಷ್ಪಸಮೂಹಗಳಿಂದೊಪ್ಪಿ ಮನೋಹರವಾಗಿ ಕಂಗೊಳಿಸುವುದಾಗಿಯೂ, ವಸಂತಮಾಸವನ್ನೂ ಮೀರಿಸಿದ ರಾಮಣೀಯತೆಯುಳ್ಳದಾಗಿಯೂ, ವಿಮಾನಗಳಲ್ಲೆಲ್ಲ ಅತ್ಯುತ್ತಮವಾದುದಾಗಿಯೂ ಇರುವ ಆ ಪುಷ್ಪಕ ವಿಮಾನವನ್ನು ಕಂಡವನಾದನು.

ಇಂತಿದು ಪುಷ್ಪಕವಿಮಾನವರ್ಣನವೆಂಬ ಎಂಟನೆಯ ಸರ್ಗವು
ಸಮಾಪ್ತವಾದುದು.

ಸುಂದರಕಾಂಡೇ ನವಮಸ್ಸರ್ಗಃ

ತಸ್ಯಾಲಯವರಿಷ್ಠಸ್ಯ ಮಧ್ಯೇ¶ ವಿಪುಲಮಾಯತಂ । ದದರ್ಶ ಭವನಶ್ರೇಷ್ಠಂ ಹನೂಮಾ ನ್ಮಾರುತಾತ್ಮಜಃ ॥೧॥ ಅರ್ಧಯೋಜನವಿಸ್ತೀರ್ಣ ಮಾಯತಂ ಯೋಜನಂ ಹಿ ತತ್ । ಭವನಂ ರಾಕ್ಷಸೇಂದ್ರಸ್ಯ ಬಹುಪ್ರಾಸಾದಸಂಕುಲಂ ॥ ೨ ॥ ಮಾರ್ಗಮಾಣಸ್ತು ವೈದೇಹೀಂ ಸೀತಾಮಾಯತಲೋಚನಾಂ । ಸರ್ವತಃ ಪರಿಚಕ್ರಾಮ ಹನೂಮಾನರಿಸೂದನಃ ॥೩॥ ಉತ್ತಮಂ ರಾಕ್ಷಸಾವಾಸಂ ಹನುಮಾನವಲೋಕಯನ್। ಆಸಸಾದಾಥ ಲಕ್ಷ್ಮೀವಾನ್ ರಾಕ್ಷಸೇಂದ್ರನಿವೇಶನಂ ॥ ೪ ॥ ಚತುರ್ವಿಷಾಣೈ ರ್ದ್ವಿರದೈ

ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಹನುಮಂತನು, ತಸ್ಯಾ....ಸ್ಯ - ಪುಷ್ಪಕವಿಮಾನಕ್ಕೆ ಆಧಾರವಾದ ಉತ್ತಮ ಮಂದಿರದ (ಮ + ರಾ + ತಿ) ಪೂರ್ವೋಕ್ತವಾದ ಪುಷ್ಪಕ ವಿಮಾನದ, ಮಧ್ಯೇ - ಮಧ್ಯಪ್ರದೇಶದಲ್ಲಿ, ವಿಪುಲಂ - ವಿಸ್ತಾರವಾದ, ಆಯತಂ - ದೀರ್ಘವಾದ, ಅರ್ಧ....ರ್ಣಂ - ಎರಡು ಹರದಾರಿಗಳ ಅಗಲವುಳ್ಳ, ಯೋಜನಂ - ಗಾವುದ ಪರ್ಯಂತರ, ಆಯತಂ - ದೀರ್ಘವಾದ, ಭವನಶ್ರೇಷ್ಠಂ - ಗೃಹಗಳೊಳಗೆ ಉತ್ತಮವಾದ, ಬಹು....ಲಂ - ಅನೇಕಗಳಾದ ಉಪ್ಪರಿಗೆಗಳಿಂದ ವ್ಯಾಪ್ತವಾದ, ರಾಕ್ಷಸೇಂದ್ರಸ್ಯ - ರಾವಣಾಸುರನ, ಭವನಂ - ಮನೆಯನ್ನು, ದದರ್ಶ- ಕಂಡನು. ॥೧-೨॥ ಅರಿಸೂದನಃ - ಶತ್ರುನಾಶಕನಾದ, ಹನೂಮಾಂಸ್ತು - ಆಂಜನೇಯನಾದರೆ, ಆಯತಲೋಚನಾಂ - ದೀರ್ಘವಾದ ನೇತ್ರಗಳುಳ್ಳ, ವೈದೇಹೀಂ - ಜನಕನಂದಿನಿಯಾದ, ಸೀತಾಂ - ಸೀತಾದೇವಿಯನ್ನು, ಮಾರ್ಗಮಾಣಃ - ಹುಡುಕುತ್ತಿರುವವನಾಗಿ, ಸರ್ವತಃ - ಪುಷ್ಪಕವನ್ನುಳಿದು ಮಿಕ್ಕ ಎಲ್ಲಾ ಕಡೆಗಳಲ್ಲಿಯೂ, ಪರಿಚಕ್ರಾಮ - ತಿರುಗಿದನು. ॥ ೩ ॥ ಲಕ್ಷ್ಮೀವಾನ್ - ಕಾಂತಿಯುಕ್ತನಾದ, ಹನುಮಾನ್ - ಆಂಜನೇಯನು, ಉತ್ತಮಂ - ಶ್ರೇಷ್ಠವಾದ, ರಾಕ್ಷಸಾವಾಸಂ - ರಕ್ಕಸರ ಸ್ಥಾನವನ್ನು, ಅವಲೋಕಯನ್ - ನೋಡುತ್ತ, ಅಥ - ಅನಂತರದಲ್ಲಿ, ಚತುರ್ವಿಷಾಣೈಃ - ನಾಲ್ಕು ದಂತಗಳುಳ್ಳ, ತಥೈವ - ಹಾಗೆಯೇ, ತ್ರಿವಿಷಾಣೈಃ - ಮೂರು ದಂತಗಳುಳ್ಳ, ದ್ವಿರದೈಶ್ಚ - ಆನೆ

ಈ ಪ್ರಕಾರವಾಗಿ ಹನುಮಂತನು ಆ ರಾವಣಾಸುರನ ದಿವ್ಯಭವನ ಮಧ್ಯದಲ್ಲಿ ವಿಸ್ತೀರ್ಣತವಾದ ಗೃಹದಂತೆ ಕಂಗೊಳಿಸುತ್ತಿರುವ ಪುಷ್ಪಕ ವಿಮಾನವನ್ನು ಕಂಡ ಬಳಿಕ ಅನೇಕ ಪ್ರಾಸಾದಗಳಿಂದ ನಿಬಿಡಿತವಾಗಿ ಅರ್ಧಯೋಜನದುದ್ದವೂ ಒಂದುಯೋಜನದಗಲವೂ ಇರುವ ಮತ್ತೊಂದು ಮಂದಿರವನ್ನು ಕಂಡು ಅಲ್ಲಿ ವಿಶಾಲಾಕ್ಷಿಯಾದ ವೈದೇಹಿಯನ್ನು ಹುಡುಕುವವನಾಗಿ ಎಲ್ಲೆಡೆಗಳಲ್ಲಿಯೂ ಸಂಚರಿಸಲುಪಕ್ರಮಿಸಿದನು. ॥ ೧–೩ ॥ ಮಹಾ ತೇಜಸ್ವಿಯಾದ ಆ ಕಪಿವೀರನು ರಾಕ್ಷಸಗೃಹಗಳಲ್ಲಿ ಅತ್ಯುತ್ತಮವಾದುದೂ, ಚತುರ್ದಂತಗಳುಳ್ಳ ಆನೆಗಳಿಂದಲೂ, ತ್ರಿದಂತ ದ್ವಿದಂತಗಳುಳ್ಳ ಸಾಮಾನ್ಯ ಗಜಗಳಿಂದಲೂ ಪರಿವೇಷ್ಟಿತವಾಗಿ, ಬಹು ವಿಶಾಲವಾಗಿಯೂ ಎಲ್ಲ ಕಾಲಗಳಲ್ಲಿಯೂ ಆಯುಧಗಳನ್ನೆತ್ತಿ

---

೧ ¶ "ವಿಮಲ" ತಿ. ಪಾ.

ಸ್ತ್ರೀವಿಶಾಣೈಸ್ತಥೈವಚ । ಪರಿಕ್ಷಿಪ್ತಮಸಂಬಾಧಂ ರಕ್ಷ್ಯಮಾಣಮುದಾಯುಧೈಃ ॥೫॥ ರಾಕ್ಷಸೀಭಿಶ್ಚ ಪತ್ನೀಭೀರಾವಣಸ್ಯ ನಿವೇಶನಂ । ಆಹೃತಾಭಿಶ್ಚ ವಿಕ್ರಮ್ಯ ರಾಜಕನ್ಯಾಭಿರಾವೃತಂ ॥೬॥ ತನ್ನಕ್ರಮಕರಾಕೀರ್ಣಂ ತಿಮಿಂಗಿಲಝಷಾಕುಲಂ । ವಾಯುವೇಗಸಮಾಧೂತಂ ಪನ್ನಗೈರಿವ ಸಾಗರಂ ॥೭॥ ಯಾ ಹಿ ವೈಶ್ರವಣೇ ಲಕ್ಷ್ಮೀಃ¶ ಯಾಚೇಂದ್ರೇ ಹರಿವಾಹನೇ । ಸಾ ರಾವಣಗೃಹೇ§ ಸರ್ವಾ ನಿತ್ಯಮೇವಾನಪಾಯಿನಿ. ॥೮॥ ❦ ತಸ್ಯ ಹರ್ಮ್ಯಸ್ಯ ಮಧ್ಯಸ್ಥಂ ವೇಶ್ಮಚಾನ್ಯತ್ಸುನಿರ್ಮಿತಂ । ಬಹುನಿರ್ಯೂಹ

ಗಳಿಂದಲೂ, ಪರಿಕ್ಷಿಪ್ತಂ - ಸುತ್ತುವರೆದ, ಅಸಂಬಾದಂ - ಸಮ್ಮರ್ದವಿಲ್ಲದಿರುವ, ಉದಾಯುಧೈಃ - ಮೇಲಕ್ಕೆ ಎತ್ತಲ್ಪಟ್ಟ ಆಯುಧಗಳುಳ್ಳ ರಾಕ್ಷಸರಿಂದ, ರಕ್ಷ್ಯಮಾಣಂ - ಸಂರಕ್ಷಿಸಲ್ಪಡುತ್ತಿರುವ, ರಾವಣಸ್ಯ-ರಾವಣಾಸುರನಿಗೆ, ನಿವೇಶನಂ-ಕ್ರೀಡಾಗೃಹವಾದುದರಿಂದಲೇ, ಪತ್ನೀಭಿಃ-ಹೆಂಡತಿಯರು ರಾದ, ರಾಕ್ಷಸೀಭಿಃ - ರಾಕ್ಷಸಸ್ತ್ರೀಯರಿಂದಲೂ, ವಿಕ್ರಮ್ಯ - ಪರಾಕ್ರಮಿಸಿ, ಆಹೃತಾಭಿಃ - ಅಪಹರಿಸಲ್ಪಟ್ಟ, ರಾಜಕನ್ಯಾಭಿಶ್ಚ - ರಾಜಕನ್ನಿಕೆಯರಿಂದಲೂ, ಆವೃತಂ - ವ್ಯಾಪ್ತವಾಗಿ, ನಕ್ರ....ರ್ಣಂ-ಬಳ್ಳಿಮೀನುಗಳಿಂದಲೂ, ನೆಗಳುಗಳಿಂದಲೂ ವ್ಯಾಪ್ತವಾದ, ತಿಮಿಂ....ಲಂ-ದೊಡ್ಡ ಮೀನುಗಳಿಂದಲೂ, ಸಾಧಾರಣ ಮೀನುಗಳಿಂದಲೂ ವ್ಯಾಪ್ತವಾದ, ವಾಯು....ತಂ - ಗಾಳಿಯ ವೇಗದಿಂದ ಕೊಡಹಲ್ಪಟ್ಟ, ಪನ್ನಗೈಃ - ಹಾವುಗಳಿಂದ, ಉಪಲಕ್ಷಿತಂ - ಕೂಡಿರುವ, ಸಾಗರಮಿವಸ್ಥಿತಂ - ಸಮುದ್ರದಂತಿರುವ, ತತ್ - ಆ ಪೂರ್ವೋಕ್ತವಾದ, ರಾಕ್ಷ....ನಂ - ರಾವಣಾಸುರನ, ನಿವೇಶನಂ - ಶಯನಗೃಹವನ್ನು, ಆಸಸಾದ - ಹೊಕ್ಕನು. ॥೪-೭॥ ವೈಶ್ರವಣೇ - ಕುಬೇರನಲ್ಲಿ, ಯಾಲಕ್ಷ್ಮೀಃ - ಯಾವ ಸಂಪತ್ತಿದೆಯೋ, ಹರಿವಾಹನೇ - ಹಳದಿಯ ಬಣ್ಣದ ಕುದುರೆಗಳುಳ್ಳ, ಇಂದ್ರೇ - ಇಂದ್ರನಲ್ಲಿ, ಯಾಚಲಕ್ಷ್ಮೀಃ - ಯಾವ ಐಶ್ವರ್ಯವಿರುವದೋ, ಸರ್ವಾ - ಸಮಸ್ತವಾದ, ಸಾ - ಆ ಲಕ್ಷ್ಮಿಯೂ,

---

ಹಿಡಿದು ಯುದ್ಧಸನ್ನದ್ಧರಾಗಿ ನಿಂತಿರುವ ರಕ್ಷಕಭಟರಿಂದ ತುಂಬಿರುವುದಾಗಿಯೂ ಇರುವ ರಾಕ್ಷಸರಾಜನಾದ ಆ ರಾವಣನ ಮುಖ್ಯ ಗೃಹವನ್ನು ಪ್ರವೇಶಿಸಿದನು. ಆ ರಾವಣೇಶ್ವರನ ಪತ್ನಿಯರಿಂದಲೂ, ಆತನು ತನ್ನ ಭುಜಬಲಪರಾಕ್ರಮದಿಂದ ಅಪಹರಿಸಿ ತಂದಿದ್ದ ರಾಜಕನ್ನಿಕೆಯರಿಂದಲೂ ನಿಬಿಡಿತವಾಗಿ, ಮೊಸಳೆಗಳಿಂದಲೂ ತಿಮಿಂಗಿಲಗಳಿಂದಲೂ ಮತ್ಸ್ಯಗಳಿಂದಲೂ ತುಂಬಿ, ವಾಯುವೇಗದಿಂದ ಮೇಲಕ್ಕೆ ಹಾರಿಸಿದ ಸರ್ಪಗಳಿಂದ ವ್ಯಾಪ್ತವಾದ ಮಹಾ ಸಮುದ್ರದಂತೆ, ಪ್ರಕಾಶಿಸುತ್ತಿದ್ದ ಆ ಮುಖ್ಯ ಗೃಹವನ್ನು ಪ್ರವೇಶಿಸಿ ಅಲ್ಲಿಯೂ ಸಂಚರಿಸಲುಪಕ್ರಮಿಸಿದನು. ॥ ೪–೭ ॥ ಧನಾಧಿಪನಾದ ಕುಬೇರನ ಮನೆಯಲ್ಲಿಯೂ, ದೇವನಾಥನಾದ ಮಹೇಂದ್ರನ ಮನೆಯಲ್ಲಿಯೂ ನೆಲಸಿದ್ದ ಸಮಸ್ತ ಸಂಪದವೂ ಒಂದಾಗಿ ಕೂಡಿ ಆ ರಾವಣನ ಅಂತಃಪುರದಲ್ಲಿ ನೆಲಸಿದ್ದಿತು. ಕುಬೇರನಿಗೂ,

---

¶ "ಚೇಂದ್ರೇ" ತಿ. ಪಾ. § "ರಮ್ಯಾ" ರಾ. ಕ, ತಿ. ಪಾ.

❦ ಇಲ್ಲಿ ಹಿಂದೆ ಹೇಳಿರುವ ಅರ್ಥವನ್ನೇ ಪುನಃ ವರ್ಣಿಸುವುದು ಪುಷ್ಪಕ ವಿಮಾನದ ಮಧ್ಯದಲ್ಲಿ ರಾವಣನ ಪ್ರತ್ಯೇಕ ಭವನವು ಮತ್ತೊಂದಿರುವುದೆಂಬುದನ್ನು ಸ್ಪಷ್ಟೀಕರಿಸುವುದಕ್ಕಾಗಿ ಎಂಬುದು ಗ್ರಾಹ್ಯವು. (ಗೋ)

ಕತಕರು, "ವೇಶ್ಮ" ಎಂಬ ಪದಕ್ಕೆ ಸ್ತ್ರೀಯರಿಂದ ಕೂಡಿದ ಶಯನಗೃಹವೆಂದು ಅರ್ಥ ಮಾಡಿರುವರು. ತೀರ್ಥರು ಪುಷ್ಪಕವೆಂಬ ಮನೆಯೆಂದು ಹೇಳಿರುವರು. ತೀರ್ಥರ ಅರ್ಥವೇ ಸಾಧುವೆಂದು ತೋರುತ್ತದೆ. (ತಿ)

ಸಂಕೀರ್ಣಂ ದದರ್ಶ ಪವನಾತ್ಮಜಃ ‖ ೧೦ ‖ ಬ್ರಹ್ಮಣೋರ್ಥೇ ಕೃತಂ ದಿವ್ಯಂ ದಿವಿ ಯದ್ವಿಶ್ವಕರ್ಮಣಾ । ವಿಮಾನಂ ಪುಷ್ಪಕಂ ನಾಮ ಸರ್ವರತ್ನವಿಭೂಷಿತಂ । ಪರೇಣ ತಪಸಾ ಲೇಭೇ ಯತ್ಕುಬೇರಃ ಪಿತಾಮಹಾತ್ ‖ ೧೧ ‖ ಕುಬೇರಮೋಜಸಾ ಜಿತ್ವಾ ಲೇಭೇ ತದ್ರಾಕ್ಷಸೇಶ್ವರಃ । ಈಹಾಮೃಗಸಮಾಯುಕ್ತೈಃ ಕಾರ್ತಸ್ವರಹಿರಣ್ಮಯೈಃ ‖ ೧೨ ‖ ಸುಕೃತೈರಾಚಿತಂ ಸ್ತಂಭೈಃ ಪ್ರದೀಪ್ತಮಿವ ಚ ಶ್ರಿಯಾ । ಮೇರುಮಂದರ

ರಾವಣಗೃಹೇ - ರಾವಣಾಸುರನ ಮನೆಯಲ್ಲಿ, ನಿತ್ಯಮೇವ - ನಿರಂತರವೂ, ಅನಪಾಯಿನೀ - ನಾಶರಹಿತವಾಗಿ, ಅಸ್ತಿ - ಇರುವುದು, ರಾಜ್ಞಃ - ರಾಜನಾದ, ಕುಬೇರಸ್ಯ - ಕುಬೇರನಿಗೂ, ಯಮಸ್ಯ-ಯಮನಿಗೂ, ವರುಣಸ್ಯಚ-ವರುಣನಿಗೂ ಕೂಡ, ಯಾಋದ್ಧಿಶ್ಚ-ಯಾವ ಐಶ್ವರ್ಯಸಮೃದ್ಧಿಯಿರುವುದೋ, ಇಹ ಈ ಲಂಕಾಪಟ್ಟಣದಲ್ಲಿ, ರಕ್ಷೋಗೃಹೇಷು-ರಾಕ್ಷಸರ ಮನೆಗಳಲ್ಲಿ, ತಾದೃಶೀಋದ್ಧಿಃ-ಅಂತಹ ಐಶ್ವರ್ಯವೂ, ಅಥವಾ ತದ್ವಿಶಿಷ್ಟಾ-ಆ ಸಂಪತ್ತಿಗಿಂತಲೂ ಅಧಿಕವಾದುದು, ಅಸ್ತಿ-ಇರುವುದು, ತಸ್ಯಹರ್ಮ್ಯಸ್ಯ-ಆ ಪ್ರಾಸಾದದ, ಮಧ್ಯಸ್ಥಂ-ಮಧ್ಯದಲ್ಲಿರುವ, ಅನ್ಯತ್-ಮತ್ತೊಂದಾದ, ಸುನಿರ್ಮಿತಂ - ಚನ್ನಾಗಿ ಕಟ್ಟಿದ, ಬಹು....ರ್ಣಂ - ಅನೇಕ ಮದಗಜಗಳಿಂದ ವ್ಯಾಪ್ತವಾದ, ವೇಶ್ಮ - ಮನೆಯಂತಿರುವ, ಪುಷ್ಪಕಂನಾಮ - ಪುಷ್ಪಕವೆಂಬ, ವಿಮಾನಂ - ವಿಮಾನವನ್ನು, ದದರ್ಶ-ಕಂಡನು. ‖೮-೧೦‖ ಯತ್ - ಯಾವ ವಿಮಾನವು, ಬ್ರಹ್ಮಣಃ - ಬ್ರಹ್ಮದೇವನ, ಅರ್ಥೇ - ನಿಮಿತ್ತವಾಗಿ, ದಿವ್ಯಂ - ದೇವತಾಸಂಬಂಧವಾಗಿಯೂ, ಸರ್ವ....ತಂ - ನವರತ್ನಗಳಿಂದಲೂ, ಅಲಂಕೃತವಾಗಿಯೂ, ದಿವಿ - ಅಂತರಿಕ್ಷದಲ್ಲಿ, ಕೃತಂ - ಮಾಡಲ್ಪಟ್ಟದ್ದಿತೋ, ಯತ್ - ಯಾವ ವಿಮಾನವನ್ನು, ಕುಬೇರಃ - ಕುಬೇರನು, ಪರೇಣ - ಶ್ರೇಷ್ಠವಾದ, ತಪಸಾ - ತಪಸ್ಸಿನಿಂದ, ಪಿತಾಮಹಾತ್ - ಬ್ರಹ್ಮನಿಂದ, ಲೇಭೇ - ಹೊಂದಿದನೋ, ಕುಬೇರಂ - ಕುಬೇರನನ್ನು, ಓಜಸಾ - ಪರಾಕ್ರಮದಿಂದ, ಜಿತ್ವಾ-ಜಯಿಸಿ, ತತ್-ಆ ವಿಮಾನವನ್ನು, ರಾಕ್ಷಸೇಶ್ವರಃ-ರಾವಣಾಸುರನು, ಲೇಭೇ-ಹೊಂದಿದ್ದನು. ‖೧೧-೧೨‖ ಈಹಾ....ಕ್ತೈಃ - ಪ್ರತಿಮಾರೂಪಗಳಾದ ತೋಳಗಳಿಂದ ಕೂಡಿರುವ, ಕಾರ್ತ....ಯೈಃ - ಸ್ವರ್ಣರಜತವಿಕಾರಗಳಾದ, ಸುಕೃತೈಃ - ಚನ್ನಾಗಿ ಮಾಡಲ್ಪಟ್ಟ, ಸ್ತಂಭೈಃ - ಸ್ತಂಭಗಳಿಂದ, ಆಚಿತಂ -

---

ಇಂದ್ರನಿಗೂ, ವರುಣನಿಗೂ, ಯಮನಿಗೂ ಯಾವ ಐಶ್ವರ್ಯವಿದ್ದಿತೋ ಅವನ್ನೂ ಮೀರಿಸಿದ ಐಶ್ವರ್ಯವು, ಆ ಲಂಕಾನಗರದ ಸಾಮಾನ್ಯ ರಾಕ್ಷಸರ ಮನೆಗಳಲ್ಲಿ ನೆಲಸಿದ್ದಿತು. ವಿಶಾಲವಾದ ಆ ರಾವಣಾಸುರನ ಉತ್ತಮ ಗೃಹದ ಮಧ್ಯಪ್ರದೇಶದಲ್ಲಿ ಹಿಂದೆ ವಿಶ್ವಕರ್ಮನು ಬ್ರಹ್ಮನಿಗಾಗಿ ಸ್ವರ್ಗಲೋಕದಲ್ಲಿ ನಿರ್ಮಿಸಿದುದಾಗಿಯೂ, ಬಹು ಶ್ರೇಷ್ಠವಾದ ಸಮಸ್ತ ರತ್ನಗಳಿಂದ ಪ್ರಕಾಶಿಸುತ್ತಿರುವುದಾಗಿಯೂ, ಮತ್ತೊಂದು ಗೃಹಶ್ರೇಷ್ಠದಂತೆ ವಿರಾಜಿಸುತ್ತಿರುವುದಾಗಿಯೂ ಇರುವ ಪುಷ್ಪಕವೆಂಬ ವಿಮಾನವನ್ನು ಮಾರುತಿಯು ಕಂಡನು. ಹಿಂದೆ ಕುಬೇರನು ಅನೇಕ ವರುಷಗಳ ಕಾಲ ಮಹತ್ತರವಾದ ತಪಸ್ಸನ್ನು ಮಾಡಿ ಬ್ರಹ್ಮದೇವನಿಂದ ಅದನ್ನು ವರವಾಗಿ ಪಡೆದುಕೊಂಡಿದ್ದನು. ‖ ೮–೧೧ ‖ ಬಹು ಚನ್ನಾಗಿ ನಿರ್ಮಿಸಲಾಗಿದ್ದ ಆ ವಿಮಾನವು ಮದಗಜಗಳಿಂದ ಕೂಡಿ ಮನೋಹರವಾಗಿದ್ದಿತು. ಇದನ್ನು ರಾವಣನು ಕುಬೇರನನ್ನು ಪರಾಕ್ರಮದಿಂದ ಜಯಿಸಿ ಹೊಂದಿದ್ದನು. ಈಹಾಮೃಗಗಳ ಪ್ರತಿಕೃತಿಗಳಿಂದ ಕೂಡಿ, ಸುವರ್ಣರಜತಮಯವಾಗಿರುವ ಅಸಂಖ್ಯಾತ

ಸಂಕಾಶೈ ರುಲ್ಲಿಖದ್ಭಿರಿವಾಂಬರಂ । ಕೂಟಾಗಾರೈ ಶ್ಶುಭಾಕಾರೈ ಸ್ಸರ್ವತ ಸ್ಸಮಲಂಕೃತಂ ॥ ೧೩-೧೪ ॥ ಜ್ವಲನಾರ್ಕಪ್ರತೀಕಾಶಂ ಸುಕೃತಂ ವಿಶ್ವಕರ್ಮಣಾ । ಹೇಮಸೋಪಾನ ಸಂಯುಕ್ತಂ ಚಾರುಪ್ರವರ ವೇದಿಕಂ ॥ ೧೫ ॥ ಜಾಲವಾತಾಯನೈ ರ್ಯುಕ್ತಂ ಕಾಂಚನೈಃ ಸ್ಫಾಟಿಕೈರಪಿ । ¶ ಇಂದ್ರನೀಲ ಮಹಾನೀಲ ಮಣಿಪ್ರವರ ವೇದಿಕಂ ॥ ೧೬ ॥ ವಿದ್ರುಮೇಣ ವಿಚಿತ್ರೇಣ ಮಣಿಭಿಶ್ಚ ಮಹಾಧನೈಃ । ನಿಸ್ತುಲಾಭಿಶ್ಚ ಮುಕ್ತಾಭಿ ಸ್ತಲೇನಾಭಿವಿರಾಜಿತಂ ॥ ೧೭ ॥ ಚಂದನೇನಚ ರಕ್ತೇನ ತಪನೀಯ...

ವ್ಯಾಪ್ತವಾಗಿರುವ, ಶ್ರಿಯಾ - ಕಾಂತಿಯಿಂದ, ಪ್ರದೀ....ತಂ - ಥಳಥಳಿಸುತ್ತಿರುವ, ಮೇರು....ಶೈಃ - ಮೇರುಮಂದರ ಪರ್ವತಗಳಿಗೆ ಸಮಾನಗಳಾದ, ಅಂಬರಂ - ಅಂತರಿಕ್ಷವನ್ನು, ಉಲ್ಲಿಖದ್ಭಿರಿವ ಸ್ಥಿತೈಃ - ಬರೆಯುವಂತಿರುವ, ಶುಭಾಕಾರೈಃ - ಶುಭಕರವಾದ ಆಕೃತಿಯುಳ್ಳ, ಕೂಟಾಗಾರೈಃ - ಮನೇ ಚೂರಿನ ಕೆಳಗಡೆಯ ಪಟ್ಟಿಗಳಿಂದ, ಸರ್ವತಃ - ಎಲ್ಲ ಪ್ರದೇಶಗಳಲ್ಲಿಯೂ, ಸಮಲಂಕೃತಂ - ಅಲಂಕರಿಸಲ್ಪಟ್ಟಿದ್ದಾಗಿ, ಜ್ವಲ....ಶಂ - ಅಗ್ನಿಗೂ, ಸೂರ್ಯನಿಗೂ ಸಮಾನವಾಗಿ, ವಿಶ್ವಕರ್ಮಣಾ - ದೇವಶಿಲ್ಪಿಯಿಂದ ಸುಕೃತಂ - ನಿರ್ಮಿತವಾದ, ಹೇಮ....ಕ್ತಂ - ಸುವರ್ಣಮಯವಾದ ಪಾವಟಿಗೆಗಳಿಂದ, ಸಂಯುಕ್ತಂ - ಕೂಡಿರುವ, ಚಾರು....ಕಂ - ರಮಣೀಯಗಳೂ ಉತ್ಕೃಷ್ಟಗಳೂ ಆದ ಜಗುಲಿಗಳುಳ್ಳ, ಕಾಂಚನೈಃ - ಸುವರ್ಣವಿಕಾರಗಳಾದ, ಸ್ಫಾಟಿಕೈಃ - ಸ್ಫಟಿಕ ಮಣಿಮಯವಾದ, ಜಾಲ....ನೈಃ - ಸ್ವಸ್ತಿಕಸರ್ವತೋಭದ್ರಾದ್ಯಾಕಾರಗಳಾಗಿ ಮಾಡಲ್ಪಟ್ಟ ಗವಾಕ್ಷಿಗಳಿಂದಲೂ, ವಾಯುಸಂಚಾರಾರ್ಥವಾಗಿ ಮಾಡಲ್ಪಟ್ಟ ಕಿಟಕಿಗಳಿಂದಲೂ ಕೂಡಿರುವ, ಇಂದ್ರ....ಲಂ - ಕ್ಷೀರವನ್ನು ಕಪ್ಪಾಗಿ ಮಾಡುವ, ಮಣಿಪ್ರವರ - ಸಿಂಹಳದ್ವೀಪಗಳಲ್ಲಿ ಹುಟ್ಟುವ ಮಾಣಿಕ್ಯಗಳ, ವೇದಿಕಂ - ವೇದಿಕೆಗಳುಳ್ಳ, ವಿದ್ರುಮೇಣ - ಹವಳಗಳಿಂದಲೂ, ಮಹಾಧನೈಃ - ಬಹು ದ್ರವ್ಯವುಳ್ಳ, ಮಣಿಭಿಶ್ಚ - ರತ್ನಗಳಿಂದಲೂ, ನಿಸ್ತುಲಾಭಿಃ - ಅಸಮಾನಗಳಾದ, ಮುಕ್ತಾಭಿಃ - ಮುತ್ತುಗಳಿಂದಲೂ, ವಿಚಿತ್ರೇಣ - ಚಿತ್ರಬಣ್ಣವುಳ್ಳ, ತಲೇನ - ತಳದಿಂದಲೂ, ಅಭಿವಿರಾಜಿತಂ - ಎಲ್ಲಾ ಕಡೆಗಳಲ್ಲಿಯೂ ಹೊಳೆಯುತ್ತಿರುವ, ತಪನೀಯಸಿಭೇನ - ಅಪರಂಜಿಗೆ ಸದೃಶವಾದ, ಚಂದ

ಸ್ತಂಭಗಳ ಸಮೂಹಗಳಿಂದ ಹೊರಲಾಗಿರುವ ಆ ಪುಷ್ಪಕವು ಬಹು ಮನೋಹರವಾಗಿದ್ದಿತು. ಮೇರು ಮಂದರಪರ್ವತಗಳಂತೆ ಅಂತರಿಕ್ಷವನ್ನುಲ್ಲೇಖಿಸುವಂತಿದ್ದ, ಮಂಗಳಕರವಾದ ಆಕೃತಿಗಳುಳ್ಳ ಚಂದ್ರಶಾಲೆಗಳಿಂದೊಪ್ಪಿ, ಸೂರ್ಯಾಗ್ನಿಗಳಂತೆ ದೇದೀಪ್ಯಮಾನವಾದ ಚಿನ್ನದ ಪಾವಟಿಗೆಗಳಿಂದ ಕೂಡಿದುದಾಗಿಯೂ, ಪ್ರತಿಯೊಂದು ಉಪ್ಪರಿಗೆಯಲ್ಲಿಯೂ ಮನೋಹರವಾದ ವೇದಿಕೆಗಳನ್ನೊಳಗೊಂಡು ಕೆಲವೆಡೆಗಳಲ್ಲಿ ಹವಳಗಳ ನೆಲಕಟ್ಟುಗಳಿಂದಲೂ, ಸುವರ್ಣರೇಖೆಗಳಿಂದಲೂ ಸೊಗಸೊಗೆದು, ಮಾಣಿಕ್ಯಮಣಿಗಳ ಅಡಕವುಳ್ಳ ಮನೋಹರವಾದ ನೆಲಕಟ್ಟುಗಳಿಂದ ಕೂಡಿ, ಬಾಲಸೂರ್ಯನಿಗೆ ಸಮಾನವಾಗಿ ಹೊಳೆಯುತ್ತ, ಅಗರುಚಂದ

¶ ರತ್ನಪರೀಕ್ಷಾ ಶಾಸ್ತ್ರದಲ್ಲಿ, "ಕ್ಷೀರಮಧ್ಯೇ ಕ್ಷಿಪೇನ್ನೀಲಂ ಕ್ಷೀರಂಚೇ ನ್ನೀಲತಾಂ ವ್ರಜೇತ್ । ಇಂದ್ರನೀಲ ಮಿತಿಖ್ಯಾತ ಮಿತಿಚಾಗಸ್ತ್ಯ ಭಾಷಿತಂ ॥ ಹಾಲಿನಲ್ಲಿ ಇಂದ್ರನೀಲ ಮಣಿಯನ್ನು ಹಾಕಿದರೆ ಹಾಲೆಲ್ಲವೂ ನೀಲವರ್ಣವಾಗುವುದು. ಅದೇ ನೀಲಮಣಿಯೆಂದು ಅಗಸ್ತ್ಯರ ಹೇಳಿಕೆ" ಎಂದು ಹೇಳಿದೆ. ಇದು ಸಿಂಹಳದ್ವೀಪದಲ್ಲಿ ಹುಟ್ಟುವುದು (ಸಿಂಹಳಾಕರ ಸಂಭೂತಾ ಮಹಾನೀಲಾ ಇತಿಸ್ಮೃತಾ)

ನಿಭೇನಚ । ಸುಪುಣ್ಯಗಂಧಿನಾ ಯುಕ್ತಮಾದಿತ್ಯತರುಣೋಪಮಂ ॥ ೧೮ ॥ § ಕೂಟಾಗಾರೈ ರ್ವರಾಕಾರೈರ್ವಿವಿಧೈ ಸ್ಸಮಲಂಕೃತಂ । ವಿಮಾನಂ ಪುಷ್ಪಕಂ ದಿವ್ಯ ಮಾರುರೋಹ ಮಹಾಕಪಿಃ ॥ ೧೯ ॥ ತತ್ರಸ್ಥ ಸ್ಸ ತದಾ ಗಂಧಂ ಪಾನಭಕ್ಷ್ಯಾನ್ನಸಂಭವಂ । ದಿವ್ಯಂ ಸಂಮೂರ್ಛಿತಂ ಜಿಘ್ರದ್ರೂಪವಂತಮಿವಾನಿಲಂ ॥ ೨೦ ॥ ಸ ಗಂಧಸ್ತಂ ಮಹಾಸತ್ವಂ ಬಂಧುರ್ಬಂಧುಮಿವೋತ್ತಮಂ । 'ಇತಏಹೀ'ತ್ಯುವಾಚೇವ ತತ್ರ ಯತ್ರ ಸ ರಾವಣಃ ॥ ೨೧ ॥ ತತಸ್ತಾಂ ಪ್ರಸ್ಥಿತ ಶ್ಶಾಲಾಂ ದದರ್ಶ ಮಹತೀಂ ಶುಭಾಂ । ರಾವ

ನೇನ - ಶ್ರೀಗಂಧದಿಂದಲೂ, ರಕ್ತೇನ - ಕೆಂಪಾದ, ಚಂದನೇನ - ಚಂದನದಿಂದಲೂ, ಸುಪು....ನಾ - ಒಳ್ಳೇ ಪುಣ್ಯದಂತೆ ದೂರವಾಸನೆಯುಳ್ಳ, ಚಂದನೇನಚ - ಅಗುರುಗಂಧದಿಂದಲೂ, ಯುಕ್ತಂ - ಕೂಡಿರುವ, ಅದಿ....ಮಂ - ಬಾಲಸೂರ್ಯನಿಗೆ ಸದೃಶನಾದ, ದಿವ್ಯಂ - ದೇವತಾಸಂಬಂಧವಾದ, ಪುಷ್ಪಕಂ - ಪುಷ್ಪಕವೆಂಬ, ವಿಮಾನಂ - ವಿಮಾನವನ್ನು, ಮಹಾಕಪಿಃ - ಆಂಜನೇಯನು, ಆರುರೋಹ - ಹತ್ತಿದನು. ॥೧೩-೧೯॥ ತದಾ - ಆ ಸಮಯದಲ್ಲಿ, ತತ್ರಸ್ಥಃ - ಆ ವಿಮಾನದಲ್ಲಿರುವ, ಸಃ - ಆ ಹನುಮಂತನು, ಪಾನ... ವಂ - ಮದ್ಯದಿಂದಲೂ, ಭಕ್ಷ್ಯಗಳಿಂದಲೂ, ಅನ್ನದಿಂದಲೂ ಹುಟ್ಟಿ, ಸಮ್ಮೂರ್ಛಿತಂ - ಬರುತ್ತಿರುವ, ರೂಪವಂತಂ - ರೂಪಸಹಿತವಾದ, ಅನಿಲಮಿವಸ್ಥಿತಂ - ವಾಯುವಿನಂತಿರುವ, ದಿವ್ಯಂ - ರಮ್ಯವಾದ, ಗಂಧಂ - ಗಂಧವನ್ನು, ಜಿಘ್ರತ್ - ಮೂಸಿನೋಡಿದನು. ॥ ೨೦ ॥ ಯತ್ರ - ಯಾವ ಮನೆಯಲ್ಲಿ, ಸರಾವಣಃ - ಆ ರಾವಣನು, (ಅಸ್ತಿ - ಇರುವನೋ,) ತತ್ರ - ಆ ಮನೆಯಲ್ಲಿ, ಸಗಂಧಃ - ಆ ಸುವಾಸನೆಯು, ಮಹಾಸತ್ವಂ ಮಹಾ ಬಲಿಷ್ಠನಾದ, ತಂ - ಆ ಆಂಜನೇಯನನ್ನು, ಬಂಧುಃ - ನಂಟನು, ಉತ್ತಮಂ - ತನಗಿಂತಲೂ ಹೆಚ್ಚಾದ, ಬಂಧುಮಿವ - ನಂಟನನ್ನು ಎಂತೋ ಅಂತು, ಇತಃ-ಇಲ್ಲಿ, ಏಹೀತಿ-ಬಾರೆಂದು, ಉವಾಚೇವ-ಹೇಳಿತೋಯೆಂಬಂತೆ ಇತ್ತು. ॥ ೨೧ ॥ ತತಃ - ಅಲ್ಲಿಂದ, ಪ್ರಸ್ಥಿತಃ - ಹೊರಟು, ರಾವಣಸ್ಯ - ರಾವಣಾಸುರನ, ಮನಃಕಾಂತಾಂ - ಮನೋಹರಳಾದ, ವರಸ್ತ್ರಿಯಮಿವ - ಸುಂದರಸ್ತ್ರೀಯಂತೆ, ಕಾಂತಾಂ - ರಮಣೀಯವಾದ,

---

ನಾದಿ ಗಂಧದ್ರವ್ಯಗಳಿಂದ ಘಮಘಮಿಸುತ್ತಿರುವುದಾಗಿಯೂ, ವಿವಿಧಾಕಾರಗಳುಳ್ಳ ಬಿಸಿಲುಮಚ್ಚುಗಳಿಂದ ಸಂಶೋಭಿಸುತ್ತಿರುವುದಾಗಿಯೂ ಇರುವ ಆ ಪುಷ್ಪಕ ವಿಮಾನವನ್ನು ಕಂಡು ಮಾರುತಿಯು ಅದನ್ನೇರಿದವನಾದನು. ॥೧೨ ೧೯॥ ಹೀಗೆ ವಿಮಾನಾರೂಢನಾಗಿ ನಿಂತ ಆ ಹನುಮಂತನು ಎಲ್ಲೆಡೆಗಳಲ್ಲಿಯೂ ತುಂಬಿರುವ ಪಾನದ್ರವ್ಯಗಳ ಮತ್ತು ಭಕ್ಷ್ಯಭೋಜ್ಯಾದಿಗಳ ಸುವಾಸನೆಯನ್ನು, ಸುಗಂಧವನ್ನೇ ಮೂರ್ತಿಮತ್ತಾಗಿ ತಳೆದ ವಾಯುವನ್ನೆಂತೋ ಅಂತು ಆಘ್ರಾಣಿಸುತ್ತಿದ್ದನು. ಆ ರಾವಣೇಶ್ವರನ ಶಯ್ಯಾಗೃಹದಿಂದ ಹೊರಬರಬರುತ್ತಿದ್ದ ಸುಗಂಧಭರಿತವಾದ ಮಂದಮಾರುತವು, ಬಂಧುವಾದವನು ಬಂಧುವನ್ನು ಎಂತೋ ಅಂತು ಮಹಾಸತ್ವಶಾಲಿಯಾದ ಆ ಕಪಿಶ್ರೇಷ್ಠನನ್ನು ತನ್ನ ಬಳಿಗೆ ಬಾರೆಂದು ಹೇಳುವಂತಿದ್ದಿತು. ಆ ಕಪಿವೀರನು ಅಲ್ಲಿಂದ ಮುಂಬರಿದು ರಾವಣನಿಗೆ ಮನಸ್ಸಂತೋಷವನ್ನುಂಟುಮಾಡುವ ಸುಂದರಸ್ತ್ರೀಯಂತೊಪ್ಪಿ ಕಂಗೊಳಿಸುತ್ತಿರುವ, ವಿಶಾಲವೂ, ಮಂಗಳಮಯವೂ ಆದ

---

§ ಇದು ಅಧಿಕ ಪಾಠ.

ಣಸ್ಯ ಮನಃಕಾಂತಾಂ ಕಾಂತಾಮಿವ ವರಸ್ತ್ರಿಯಂ ॥ ೨೨ ॥ ಮಣಿಸೋಪಾನವಿಕೃತಾಂ ಹೇಮಜಾಲವಿಭೂಷಿತಾಂ । ಸ್ಫಾಟಿಕೈರಾವೃತತಲಾಂ ದಂತಾಂತರಿತರೂಪಿಕಾಂ ॥ ೨೩ ॥ ಮುಕ್ತಾಭಿಶ್ಚ ಪ್ರವಾಳೈಶ್ಚ ರೂಪ್ಯಚಾಮೀಕರೈರಪಿ । ವಿಭೂಷಿತಾಂ ಮಣಿಸ್ತಂಭೈಸ್ಸುಬಹುಸ್ತಂಭಭೂಷಿತಾಂ ॥ ೨೪ ॥ ಸಮೈರೃಜುಭಿರತ್ಯುಚ್ಚೈಸ್ಸಮಂತಾತ್ಸುವಿಭೂಷಿತೈಃ । ಸ್ತಂಭೈಃ ಪಕ್ಷೈರಿವಾತ್ಯುಚ್ಚೈರ್ದಿವಂ ಸಂಪ್ರಸ್ಥಿತಾಮಿವ ॥೨೫॥ ಮಹತ್ಯಾ ಕುಥಯಾಸ್ತೀರ್ಣಾಂ ಪೃಥಿವೀಲಕ್ಷಣಾಂಕಯಾ । ಪೃಥಿವೀಮಿವ ವಿಸ್ತೀರ್ಣಾಂ ಸರಾಷ್ಟ್ರಗೃಹ *ಮಾಲಿನೀಂ ॥೨೬॥ ನಾದಿತಾಂ ಮತ್ತವಿಹಗೈರ್ದಿವ್ಯಗಂಧಾದಿ

ಮಣಿ....ತಾಂ - ರತ್ನಗಳ ಪಾವಟಿಗೆಗಳಿಂದ ವಿಚಿತ್ರವಾದ, ಹೇಮ....ತಾಂ - ಸುವರ್ಣಮಯಗಳಾದ ಗವಾಕ್ಷಿಗಳಿಂದ ಅಲಂಕೃತವಾದ, ಸ್ಫಾಟಿಕೈಃ - ಸ್ಫಟಿಕಮಣಿಗಳಿಂದ, ಆವೃತತಲಾಂ - ಆಚ್ಛಾದಿತವಾದ ತಳವುಳ್ಳ, ದಂತಾಂ...ಕಾಂ - ಗಜದಂತಗಳಿಂದ ಮಧ್ಯದಲ್ಲಿ ಕೆತ್ತಲ್ಪಟ್ಟ ಆಕಾರವುಳ್ಳ, ಮುಕ್ತಾಭಿಶ್ಚ - ಮುತ್ತುಗಳಿಂದಲೂ, ಪ್ರವಾಳೈಶ್ಚ - ಹವಳಗಳಿಂದಲೂ, ರೂಪ್ಯ....ಪಿ - ಬೆಳ್ಳಿ ಚಿನ್ನಗಳಿಂದಲೂ, ಮಣಿಸ್ತಂಭೈಃ - ರನ್ನಗಂಬಗಳಿಂದಲೂ, ವಿಭೂಷಿತಾಂ - ಅಲಂಕರಿಸಲ್ಪಟ್ಟ, ಸುಬ....ತಾಂ - ಅನೇಕಗಳಾದ ಕಂಬಗಳಿಂದ ಅಲಂಕೃತವಾದ, ಸಮೈಃ - ಮೊದಲಿಂದ ಕಡೆಯವರೆಗೂ ಒಂದೇ ಸಮನಾಗಿರುವ, ಋಜುಭಿಃ - ಸೊಟ್ಟಗಿಲ್ಲದಿರುವ, ಅತ್ಯುಚ್ಚೈಃ - ಬಹಳ ಉನ್ನತಗಳಾದ, ಸಮಂತಾತ್ - ಎಲ್ಲಾ ಕಡೆಗಳಲ್ಲಿಯೂ, ಸುವಿಭೂಷಿತೈಃ - ಅಲಂಕೃತಗಳಾಗಿ, ಸ್ತಂಭೈಃ - ಸ್ತಂಭಗಳಿಂದ, ಅತ್ಯುಚ್ಚೈಃ - ಅತ್ಯುನ್ನತಗಳಾದ, ಪಕ್ಷೈರಿವ - ರೆಕ್ಕೆಗಳಿಂದಲೋಪಾದಿಯಲ್ಲಿ, ದಿವಂ - ಸ್ವರ್ಗವನ್ನು ಕುರಿತು, ಸಂಪ್ರಸ್ಥಿತಾಮಿವ ಹಾರಿಹೋಗುವಂತಿರುವ, ಪೃಥಿ....ಯಾ - ಭೂಮಿಯ ಪರಿತ್ಸವ ಎದ್ರಾದಿ ಲಕ್ಷಣಗಳೇ ಗುರ್ತುಗಳಾಗಿ ಉಳ್ಳ, ಮಹತ್ಯಾ - ದೊಡ್ಡದಾದ, ಕುಥಯಾ - ರನ್ನಗಂಬಳಿಯಿಂದ, ಆಸ್ತೀರ್ಣಾಂ - ಹಾಸಲ್ಪಟ್ಟ, ಪೃಥಿವೀಮಿವ - ಭೂಮಿಯಂತೆ, ವಿಸ್ತೀರ್ಣಾಂ - ವಿಸ್ತಾರವಾದ, ಸರಾ....ನೀಂ - ರಾಷ್ಟ್ರದೋಪಾದಿಯಲ್ಲಿರುವ ಗೃಹಪಙ್ಕ್ತಿಗಳಿಂದೊಡಗೂಡಿದ, ಮತ್ತವಿಹಗೈಃ - ಮದಿಸಿರುವ ಹಕ್ಕಿಗಳಿಂದ, ನಾದಿತಾಂ - ಶಬ್ದಾಯಮಾನವಾದ, ದಿವ್ಯ....ತಾಂ - ರಮ್ಯ

ಮತ್ತೊಂದು ಮನೆಯನ್ನು ನೋಡಿದನು. ಅದು ಮಣಿಮಯ ಸೋಪಾನರಂಜಿತವಾಗಿಯೂ, ಸುವರ್ಣಮಯವಾದ ಗವಾಕ್ಷಿಗಳಿಂದ ಕೂಡಿದುದಾಗಿಯೂ, ಸ್ಫಟಿಕಮಣಿ ನಿರ್ಮಿತಗಳಾದ ನೆಲಕಟ್ಟುಗಳಿಂದೊಪ್ಪಿ ನಡುನಡುವೆ ದಂತ ಕೆಲಸಗಳಿಂದಲಂಕೃತವಾಗಿ, ಮುಕ್ತಾಫಲಗಳಿಂದಲೂ, ಪ್ರವಾಳಮಣಿಗಳಿಂದಲೂ, ಸುವರ್ಣರಜತಗಳಿಂದಲೂ ಕೂಡಿದ ಸ್ತಂಭಗಳುಳ್ಳುದಾಗಿಯೂ, ಮಣಿಮಯಸ್ತಂಭಗಳಿಂದಲಂಕೃತವಾಗಿ ಸ್ವಲ್ಪವೂ ಕೊಂಕಿಲ್ಲದೆ ಅತ್ಯುನ್ನತಗಳಾದ ರೆಕ್ಕೆಗಳಂತಿದ್ದ ಬೋದುಗೆಗಳೊಡಗೂಡಿ ಸ್ವರ್ಗಕ್ಕೆ ಹಾರಿಹೋಗುವುದೋ ಎಂಬಂತೆಯೂ ವಿರಾಜಿಸುತ್ತಿದ್ದಿತು. ॥೨೦–೨೫॥ ಆ ದಿವ್ಯಭವನವು ಭೂಮಂಡಲದಲ್ಲಿರುವ ಸಮಸ್ತ ವಸ್ತುಗಳಿಂದಲೂ, ಅರಣ್ಯಗಳು, ಪರ್ವತಗಳು, ನದಿಗಳು, ಸಮುದ್ರಗಳು ಎಂಬ, ಆಭರಣಗಳಿಂದಲಂಕೃತವಾದ ರತ್ನಕಂಬಳಿಗಳು ಹಾಸಿರುವ ನೆಲವುಳ್ಳುದಾಗಿಯೂ, ದೇಶಗಳಿಂದಲೂ, ಪಟ್ಟಣಗಳಿಂದಲೂ, ಗೃಹಗಳಿಂದಲೂ ಕೂಡಿ ವಿರಾಜಿಸುವ ಭೂಮಿಯಂತೆ ಶೋಭಿಸುತ್ತಿ

---

* "ಶಾಲಿನೀಂ" ತಿ. ಪಾ.

ವಾಸಿತಾಂ। ಪರಾರ್ಧ್ಯಾಸ್ತರಣೋಪೇತಾಂ ರಕ್ಷೋಽಧಿಪನಿಷೇವಿತಾಂ ॥ ೨೭ ॥ ಧೂಮ್ರಾ ಮಗರುಧೂಪೇನ ವಿಮಲಾಂ ಹಂಸಪಾಂಡುರಾಂ । ಚಿತ್ರಾಂ ಪುಷ್ಪೋಪಹಾರೇಣ ಕಲ್ಮಾಷೀಮಿವ ಸುಪ್ರಭಾಂ ॥ ೨೮ ॥ ಮನಸ್ಸಂಹ್ಲಾದಜನನೀಂ ವರ್ಣಸ್ಯಾಪಿ ಪ್ರಸಾದಿನೀಂ । ತಾಂ ಶೋಕನಾಶಿನೀಂ ದಿವ್ಯಾಂ ಶ್ರಿಯಃ ಸ್ಸಂಜನನೀಮಿವ ॥ ೨೯ ॥ ಇಂದ್ರಿಯಾಣೀಂದ್ರಿಯಾರ್ಥೈಸ್ತು ಪಂಚಪಂಚಭಿರುತ್ತಮೈಃ । ತರ್ಪಯಾಮಾಸ ಮಾತೇವ ತದಾ ರಾವಣಪಾಲಿತಾ ॥೩೦॥ "ಸ್ವರ್ಗೋಽಯಂ ದೇವಲೋಕೋಽಯ ಮಿಂದ್ರಸ್ಯೇ

ಗಾದ ಸುವಾಸನೆಯಿಂದ ವಾಸನೆ ಕಟ್ಟಲ್ಪಟ್ಟ, ಪರಾ....ತಾಂ - ಶ್ರೇಷ್ಠಗಳಾದ ಹಾಸಿಗೆಗಳಿಂದ ಕೂಡಿರುವ, ರಕ್ಷೋ....ತಾಂ - ರಾವಣನಿಂದ ಪಡೆಯಲ್ಪಟ್ಟ, ಅಗ....ನ - ಕೃಷ್ಣಾಗರುವಿನ ಧೂಪದಿಂದ, ಧೂಮ್ರಾಂ - ಬೂದುಬಣ್ಣವುಳ್ಳ, ವಿಮಲಾಂ - ನಿರ್ಮಲವಾದ, ಹಂಸಪಾಂಡುರಾಂ - ಹಂಸಗಳಿಂದ ಶುಭ್ರವಾದ, ಪುಷ್ಪೋಪಹಾರೇಣ - ಹುವ್ವುಗಳೆಂಬ ಕಾಣಿಕೆಗಳಿಂದ, ಚಿತ್ರಾಂ - ಚಿತ್ರಬಣ್ಣವುಳ್ಳುದರಿಂದಲೇ, ಕಲ್ಮಾಷೀಮಿವ - ವಸಿಷ್ಠ ಋಷಿಯ ಗೋವಿನಂತೆ, ಸುಪ್ರಭಾಂ - ಪ್ರಕಾಶಮಾನವಾದ, ಮನ....ನೀಂ - ಮನಸ್ಸಿಗೆ ಸಂತೋಷವನ್ನು ಹುಟ್ಟಿಸುವ, ವರ್ಣಸ್ಯಾಪಿ - ಹಳದಿ ಬಿಳುಪೇ ಮೊದಲಾದ ಬಣ್ಣಗಳಿಗೂ ಕೂಡ, ಪ್ರಸಾದಿನೀಂ - ಅಲಂಕಾರ ಸಮೃದ್ಧಿಯನ್ನುಂಟುಮಾಡುತ್ತಿರುವ, ತಾಂ-ಪ್ರಸಿದ್ಧವಾದ, ಶೋಕನಾಶಿನೀಂ-ದುಃಖವನ್ನು ಪರಿಹರಿಸುತ್ತಿರುವ, ದಿವ್ಯಾಂ-ಮನೋಹರವಾದ, ಶ್ರಿಯಃ - ಕಾಂತಿಗೆ, ಸಂಜನನೀಮಿವ - ಉತ್ಪತ್ತಿಸ್ಥಾನದಂತಿರುವ, ಶುಭಾಂ - ಮಂಗಳಕರವಾದ, ಮಹತೀಂಶಾಲಾಂ - ದೊಡ್ಡ ತೊಟ್ಟಿಯನ್ನು, ದದರ್ಶ - ಕಂಡನು. ॥ ೨೨-೨೯ ॥ ತದಾ - ಆ ಕಾಲದಲ್ಲಿ, ರಾವ....ತಾ - ರಾವಣನಿಂದ ರಕ್ಷಿಸಲ್ಪಟ್ಟ ಸಭೆಯು, ಉತ್ತಮೈಃ - ಉತ್ಕೃಷ್ಟಗಳಾದ, ಪಂಚಭಿಃ-ಐದಾದ, ಇಂದ್ರಿಯಾರ್ಥೈಃ - ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ವಿಷಯಗಳಿಂದ, ಪಂಚ - ಪಂಚಸಂಖ್ಯಾಕವಾದ, ಇಂದ್ರಿಯಾಣಿ - ಶ್ರೋತ್ರತ್ವಕ್ಚಕ್ಷುರ್ಜಿಹ್ವಾ ಘ್ರಾಣಗಳೆಂಬ ಇಂದ್ರಿಯಗಳನ್ನು, ಮಾತೇವ - ತಾಯಿಯಂತೆ, ತರ್ಪಯಾಮಾಸ - ತೃಪ್ತಿಗೊಳಿಸಿತು. ॥ ೩೦ ॥ ಅಯಂ - ಇದು, ಸ್ವರ್ಗಃ - ಸ್ವರ್ಗವೋ, ಅಯಂ - ಇದು, ದೇವಲೋಕಃ - ದೇವಲೋಕವೋ,

ರುವ ತಲಪ್ರದೇಶವುಳ್ಳುದಾಗಿಯೂ, ಮದಿಸಿದ ಪಕ್ಷಿಗಳ ಕಲಕಲಧ್ವನಿಯಿಂದ ಪ್ರತಿಧ್ವನಿತವಾಗಿ, ದಿವ್ಯಗಂಧವಾಸಿತವೂ, ಸರ್ವೋತ್ತಮವಾದ ಚಿತ್ರವಿಚಿತ್ರ ಕಂಬಳಿಗಳ ಗೌಪಸಣೆಗೆಯುಳ್ಳುದಾಗಿ ಅಗರುಗಂಧಧೂಪಧೂಸರಿತವೂ ಹಂಸಪಕ್ಷಿಯಂತೆ ನಿರ್ಮಲವೂ, ಪುಷ್ಪಪೂಜಿತವಾಗಿ ವಿವಿಧ ವರ್ಣಗಳಿಂದಲಂಕೃತವಾದ ಕಾಮಧೇನುವಿನಂತೆ ಶೋಭಿಸುತ್ತ, ಮನಸ್ಸಂತೋಷಕರವೂ ಆಗಿ ನೋಡುವವರ ದೇಹಕಾಂತಿಯನ್ನು ವೃದ್ಧಿಗೊಳಿಸಿ ವ್ಯಸನವನ್ನು ಕಳೆದು ಲಕ್ಷ್ಮೀನಿವಾಸಸ್ಥಾನದಂತೆ ಕಣ್ಗೊಪ್ಪಿ ರಂಜಿಸುತ್ತಿದ್ದಿತು. ॥೨೬–೨೯॥ ಹೀಗೆ ಬಹು ಮನೋಹರವಾದ ಆ ರಾವಣನ ಕ್ರೀಡಾಭವನವು ತಾಯಿಯಂತೆ ಆ ಕಪಿವೀರನ ತ್ವಕ್-ಚಕ್ಷುಸ್ಸು, ಶ್ರೋತ್ರ, ಜಿಹ್ವಾ, ಘ್ರಾಣ ಗಳೆಂಬಪಂಚೇಂದ್ರಿಯಗಳನ್ನು, ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಪಂಚ ವಿಷಯಗಳಿಂದ ತೃಪ್ತಿಹೊಂದಿಸಿತು. ರಾವಣಾಸುರನಿರುವ ಆ ಪ್ರದೇಶವನ್ನು ನೋಡಿ ಆಶ್ಚರ್ಯಭರಿತನಾದ ಮಾರುತಿಯು, "ಅಹಹ! ಇದು ಸ್ವರ್ಗವೋ, ಅಲ್ಲದೆ ಆ ಸ್ವರ್ಗದಲ್ಲಿ ವಾಸಿಸುವ ದೇವತೆಗಳ ಭವನವೋ, ಸ್ವರ್ಗಾಧಿಪನಾದ ದೇವೇಂದ್ರನ

ಯಂ ಪುರೀ ಭವೇತ್ । ಸಿದ್ಧಿರ್ವೇಯಂ ಪರಾಹಿ ಸ್ಯಾ" ದಿತ್ಯಮನ್ಯತ ಮಾರುತಿಃ॥೩೧॥ ಪ್ರಧ್ಯಾಯತಇವಾಪಶ್ಯ ತ್ಪ್ರದೀಪಾಂಸ್ತತ್ರಕಾಂಚನಾನ್ । ಧೂರ್ತಾನಿವ ಮಹಾಧೂರ್ತೈರ್ದೇವನೇನಪರಾಜಿತಾನ್ ॥೩೨॥ ದೀಪಾನಾಂಚ ಪ್ರಕಾಶೇನ ತೇಜಸಾ ರಾವಣಸ್ಯಚ । ಅರ್ಚಿರ್ಭಿರ್ಭೂಷಣಾನಾಂಚ ಪ್ರದೀಪ್ತೇತ್ಯಭ್ಯಮನ್ಯತ ॥೩೩॥ ತತೋಽಪಶ್ಯತ್ಕುಥಾಸೀನಂ ನಾನಾವರ್ಣಾಂಬರಸ್ರಜಂ। ಸಹಸ್ರಂ ವರನಾರೀಣಾಂ ನಾನಾವೇಷವಿಭೂಷಿತಂ ॥ ೩೪ ॥ ಪರಿವೃತ್ತೇಽರ್ಧರಾತ್ರೇತು ಪಾನನಿದ್ರಾವಶಂಗತಂ। * ಕ್ರೀಡಿ

ಇಯಂ - ಇದು, ಇಂದ್ರಸ್ಯ - ಇಂದ್ರನ, ಪುರೀ - ಪಟ್ಟಣವೋ, ಭವೇತ್ - ಆದೀತು, ಇಯಂ - ಇದು, ವರಾ - ಉತ್ತಮವಾದ, ಸಿದ್ಧಿಃ - ತಪಸ್ಸಿದ್ಧಿರೂಪವಾದ ಬ್ರಹ್ಮಲೋಕವು, ಸ್ಯಾತ್ - ಆದೀತು, ಇತಿ - ಹೀಗೆಂದು, ಮಾರುತಿಃ - ಆಂಜನೇಯನು, ಅಮನ್ಯತ - ಭಾವಿಸಿದನು. ॥ ೩೧ ॥ ತತ್ರ - ಆ ಮನೆಯಲ್ಲಿ, ಪ್ರಧ್ಯಾಯತಇವ - ಧ್ಯಾನ ಮಾಡುವಂತಿರುವ, ಮಹಾಧೂರ್ತೈಃ - ಮೋಸಗಾರ್ರಿಂದ, ದೇವನೇನ - ಜೂಜಿನಿಂದ, ಪರಾಜಿತಾನ್ - ಸೋಲಿಸಲ್ಪಟ್ಟ, ಧೂರ್ತಾನಿವಸ್ಥಿತಾನ್ - ಜೂಜುಗಾರರಂತಿರುವ, ಕಾಂಚನಾನ್ - ಚಿನ್ನದ ಕಂಬಗಳ ಮೇಲಿರುವ, ಪ್ರದೀಪಾನ್ - ದೀಪಗಳನ್ನು, ಅಪಶ್ಯತ್ - ಕಂಡನು. ॥ ೩೨ ॥ ದೀಪಾನಾಂ - ದೀವಿಗೆಗಳ, ಪ್ರಕಾಶೇನಚ - ಕಾಂತಿಯಿಂದಲೂ, ರಾವಣಸ್ಯ - ರಾವಣಾಸುರನ, ತೇಜಸಾ - ತೇಜಸ್ಸಿನಿಂದಲೂ, ಭೂಷಣಾನಾಂ - ಆಭರಣಗಳ, ಅರ್ಚಿರ್ಭಿಶ್ಚಾಪಿ - ಕಾಂತಿಗಳಿಂದಲೂ, (ಇಯಂ - ಈ ಮನೆಯು) ಪ್ರದೀಪ್ತೇತಿ - ಉರಿಯುತ್ತಿದೆ ಎಂದು, ಅಭ್ಯಮನ್ಯತ - ತಿಳಿದನು. ॥೩೩॥ ತತಃ - ಅನಂತರದಲ್ಲಿ, ಕುಥಾಸೀನಂ - ಹಾಸಿಗೆಯಲ್ಲಿ ಮಲಗಿರುವ, ನಾನಾ....ಜಂ - ಅನೇಕ ಬಣ್ಣಗಳ ವಸ್ತ್ರಗಳೂ ಮಾಲಿಕೆಗಳೂ ಉಳ್ಳ, ನಾನಾ....ತಂ - ಅನೇಕ ವೇಷಗಳಾದ ಅಲಂಕಾರಗಳಿಂದ ಕೂಡಿದ, ವರನಾರೀಣಾಂ - ಶ್ರೇಷ್ಠರಾದ ಸ್ತ್ರೀಯರ, ಸಹಸ್ರಂ - ಅನೇಕ ಸಹಸ್ರಗಳನ್ನು, ಅಪಶ್ಯತ್ - ಕಂಡನು. ॥ ೩೪ ॥ ಅರ್ಧರಾತ್ರೇತು - ಸಮರಾತ್ರಿಯು, ಪರಿವೃತ್ತೇ - ಆಗಲು, ಪಾನ....ತಂ - ಪಾನದಿಂದಲೂ, ನಿದ್ದೆಯಿಂದಲೂ ಪರಾಧೀನವಾದ, ವರ....ಸ್ರಂ - ಉತ್ತಮ ಸ್ತ್ರೀಯರ ಸಹಸ್ರ ಸಂಖ್ಯೆಯನ್ನು, ರಾತ್ರೌ - ರಾತ್ರಿಯಲ್ಲಿ, ಕ್ರೀಡಿತ್ವಾ - ವಿಹರಿಸಿ, ಉಪರತಂ - ವಿರಾಮ

ರಾಜಧಾನಿಯಾದ ಅಮರಾವತೀ ಪಟ್ಟಣವೋ, ತಪಸ್ಸಿದ್ಧಿರೂಪವಾದ ಬ್ರಹ್ಮಲೋಕವೋ, ಆಗಿರಬೇಕು"ಎಂದು ಯೋಚಿಸಿದನು.॥೩೦–೩೧॥ಅಲ್ಲಿನ ಸುವರ್ಣಸ್ತಂಭಗಳಲ್ಲಿ ಪ್ರತಿಫಲಿಸಿದ್ದ ದೀಪಗಳು ಧ್ಯಾನನಿಷ್ಠರಂತೆಯೂ, ಧೂರ್ತರಿಂದ ಜೂಜಿನಲ್ಲಿ ಸೋತ ಜೂಜುಗಾರರಂತೆಯೂ ಕಂಗೊಳಿಸುತ್ತಿದ್ದವು. ಆಗ ಮಾರುತಿಯು ಅಲ್ಲಿ ಬೆಳಗುತ್ತಿದ್ದ ದೀವಿಗೆಗಳ ಕಾಂತಿಯಿಂದಲೂ, ಆ ರಾವಣಾಸುರನ ತೇಜಸ್ಸಿನಿಂದಲೂ, ಆಭರಣಗಳ ಕಾಂತಿಯಿಂದಲೂ, ಆ ದಿವ್ಯ ಭವನವು ಪ್ರಜ್ವಲಿಸುತ್ತಿರುವುದೆಂದು ತಿಳಿದನು. ಆ ಭವನದಲ್ಲಿ ವಿವಿಧ ವರ್ಣಗಳ ವಸ್ತ್ರಗಳನ್ನೂ, ಪುಷ್ಪಮಾಲಿಕೆಗಳನ್ನೂ ಧರಿಸಿ ವಿವಿಧಾಲಂಕಾರಭೂಷಿತೆಯರಾಗಿ ರತ್ನಕಂಬಳಿಗಳಮೇಲೆ ಮಲಗಿದ್ದ ಅನೇಕಮಂದಿ ಸ್ತ್ರೀಯರನ್ನು ಮಾರುತಿಯು ಕಂಡನು. ಅವರು ರಾತ್ರಿಯಲ್ಲಿ ವಿಧವಿಧವಾಗಿ ಕ್ರೀಡಿಸಿ ಆಯಾಸ ಹೊಂದಿ ಮದ್ಯಪಾನ ಮದದಿಂದಲೂ, ನಿದ್ರಾವಶದಿಂ

* "ಕ್ರೀಡಿತೋಽಪರತಂ" ರಾ. ಪಾ.

HANUMAN ENTERING RAVAN'S PALACE



हनुमान महालय प्रवेश

Lakshmi Art, Bombay, 8.

ತ್ತ್ಯೋಪರತಂ ರಾತ್ರೌ ¶ ಸುಷ್ವಾಪ ಬಲವತ್ತದಾ ॥ ೩೫ ॥ ತತ್ಪ್ರಸುಪ್ತಂ ವಿರುರುಚೇ ನಿಶ್ಶಬ್ದಾಂತರಭೂಷಣಂ । ನಿಶ್ಶಬ್ದಹಂಸಭ್ರಮರಂ ಯಥಾಪದ್ಮವನಂ ಮಹತ್॥೩೬॥ ತಾಸಾಂ ಸಂವೃತದಂತಾನಿ ಮೀಲಿತಾಕ್ಷಾಣಿ ಮಾರುತಿಃ । ಅಪಶ್ಯತ್ಪದ್ಮಗಂಧೀನಿ ವದನಾನಿ ಸುಯೋಷಿತಾಂ ॥ ೩೭ ॥ ಪ್ರಬುದ್ಧಾನೀವ ಪದ್ಮಾನಿ ತಾಸಾಂ ಭೂತ್ವಾ ಕ್ಷಪಾಕ್ಷಯೇ । ಪುನಸ್ಸಂವೃತಪತ್ರಾಣಿ ರಾತ್ರಾವಿವ ಬಭುಸ್ತದಾ ॥ ೩೮ ॥ "ಇಮಾನಿ ಮುಖಪದ್ಮಾನಿ ನಿಯತಂ ಮತ್ತಷಟ್ಪದಾಃ । ಅಂಬುಜಾನೀವ ಫುಲ್ಲಾನಿ ಪ್ರಾರ್ಥಯಂತಿ ಪುನಃಪುನಃ" ॥ ೩೯ ॥ ಇತಿಚಾಮನ್ಯತ ಶ್ರೀಮಾನುಪಪತ್ತ್ಯಾ ಮಹಾಕಪಿಃ ।

ಪನ್ನು ಹೊಂದಿರುವುದಾಗಿ, ಬಲವತ್ - ಹೆಚ್ಚಾಗಿ, ತದಾ - ಆ ಕಾಲದಲ್ಲಿ, ಸುಷ್ವಾಪ - ನಿದ್ರೆಗೈಯ್ಯುತ್ತಿದ್ದಿತು. ॥ ೩೫ ॥ ನಿಶ್ಶ....ಣಂ - ಅಂತರ್ಗತವಾದ ಶಬ್ದಗಳುಳ್ಳ ಒಡವೆಗಳುಳ್ಳ, ಪ್ರಸುಪ್ತಂ - ನಿದ್ದೆಹೋಗುತ್ತಿರುವ, ತತ್ - ಆ ನಾರೀ ಸಹಸ್ರವು, ನಿಶ್ಶ....ರಂ - ಶಬ್ದ ಮಾಡದಿರುವ ಹಂಸಪಕ್ಷಿಗಳೂ ದುಂಬಿಗಳೂ ಉಳ್ಳ, ಮಹತ್ - ದೊಡ್ಡದಾದ, ಪದ್ಮವನಂಯಥಾ - ಕಮಲವನದಂತೆ, ವಿರುರುಚೇ - ಶೋಭೆಯುತ್ತಿದ್ದಿತು. ॥ ೩೬ ॥ ಮಾರುತಿಃ - ಆಂಜನೇಯನು, ಸಂವೃತದಂತಾನಿ - ಮುಚ್ಚಲ್ಪಟ್ಟ ಹಲ್ಲುಗಳುಳ್ಳ, ಮೀಲಿತಾಕ್ಷಾಣಿ - ನಿಮೀಲಿತವಾದ ಕಣ್ಣುಗಳುಳ್ಳ, ಪದ್ಮಗಂಧೀನಿ - ಕಮಲಗಂಧದಂತೆ ವಾಸನೆಯುಳ್ಳ, ಸುಯೋಷಿತಾಂ - ಸುಂದರಸ್ತ್ರೀಯರ, ವದನಾನಿ - ಮುಖಗಳನ್ನು, ಅಪಶ್ಯತ್ - ಕಂಡನು. ॥ ೩೭ ॥ ತದಾ - ಆ ಕಾಲದಲ್ಲಿ, ತಾಸಾಂ - ಆ ಹೆಂಗಳ, ವದನಾನಿ - ಮುಖಗಳು, ಕ್ಷಪಾಕ್ಷಯೇ - ರಾತ್ರಿಯು ಕಳೆದುಹೋಗಲು, ಪದ್ಮಾನೀವ - ಕಮಲಗಳಂತೆ, ಪ್ರಬುದ್ಧಾನಿ - ವಿಕಸಿತಗಳು, ಭೂತ್ವಾ - ಆಗಿ, ರಾತ್ರೌ - ರಾತ್ರಿಯಲ್ಲಿ, ಪುನಃ - ಮತ್ತು, ಸಂವೃ....ಣಿ- ಮೊಗಚಿಕೊಂಡ ಪತ್ರಗಳುಳ್ಳ, ಪದ್ಮಾನೀವ - ಕಮಲಗಳಂತೆ, ಬಭುಃ - ಹೊಳೆಯುತ್ತಿದ್ದವು. ॥ ೩೮ ॥ ಇಮಾನಿ ಮುಖಪದ್ಮಾನಿ - ಈ ಮುಖಸರೋಜಗಳನ್ನು, ಮತ್ತಷಟ್ಪದಾಃ - ಮದಿಸಿದ ದುಂಬಿಗಳು, ಫುಲ್ಲಾನಿ - ಅರಳಿದ, ಅಂಬುಜಾನೀವ - ತಾವರೆಗಳನ್ನೋಪಾದಿಯಲ್ಲಿ, ಪುನಃಪುನಃ - ಬಾರಿಬಾರಿಗೂ, ಪ್ರಾರ್ಥಯಂತಿ - ಬೇಡುತ್ತಿರುವವು, ನಿಯತಂ - ನಿಶ್ಚಯವು. ॥ ೩೯ ॥ ಇತಿ - ಹೀಗೆಂದು, ಉಪಪತ್ತ್ಯಾ - ಯುಕ್ತಿಯಿಂದ, ಶ್ರೀಮಾ್ - ಜಯಸಂಪದ್ಯುಕ್ತನಾದ, ಮಹಾಕಪಿಃ - ಹನುಮಂತನು, ಅಮನ್ಯತಚ -

---

ದಲೂ ಮೈಮರೆತ್ತಿದ್ದರು. ಹೀಗೆ ನಿದ್ರಿಸುತ್ತಿದ್ದುದರಿಂದ ಧ್ವನಿಗೆಯ್ಯದಿರುವ ವಿವಿಧಾಭರಣಗಳಿಂದಲಂಕೃತವಾದ ಆ ಸ್ತ್ರೀಸಮೂಹವು ನಿಶ್ಶಬ್ದವಾಗಿ ನಿದ್ರಿಸುತ್ತಿರುವ ಹಂಸಗಳಿಂದಲೂ, ಭ್ರಮರಗಳಿಂದಲೂ, ಕೂಡಿದ ಕಮಲವನದಂತೆ ಶೋಭಿಸುತ್ತಿದ್ದಿತು.॥೩೨–೩೬॥ ಆಗ ಮಾರುತಿಯು ಗಾಢನಿದ್ರಾಪರವಶರಾದ ಆ ಸುಂದರಾಂಗನೆಯರ ಮರೆಯಾದ ರದನಪಙ್ಕ್ತಿಯೂ, ಮುಗಿದ ಕಣ್ಣುಗಳೂ ಉಳ್ಳ ಕಮಲದಂತೆ ಸುಗಂಧಬಂಧುರವಾದ ಮುಖಕಮಲಗಳನ್ನು ಕಂಡನು. ಸೂರ್ಯೋದಯಕಾಲದಲ್ಲಿ ಅರಳಿ, ಸೂರ್ಯನಸ್ತಮಿಸಿದೊಡನೆಯೇ ಮುಗಿದ ಎಸಳುಗಳುಳ್ಳ ತಾವರೆಗಳಂತೆ ಆ ಸುಂದರಿಯರ ಮುಖಗಳು ಎಸೆಯುತ್ತಿದ್ದವು. ಆಗ ಮಾರುತಿಯು ನಿದ್ರಿಸುತ್ತಿರುವ ಆ ಲಲನೆಯರ ಮುಖಪ್ರದೇಶಗಳಲ್ಲಿ ಮುತ್ತುತ್ತಿರುವ ಮದಿಸಿದ ದುಂಬಿಗಳ ಗುಂಪನ್ನು ಕಂಡು, ಅವು ಆ ಮುಖಗಳಲ್ಲಿನ ಸುವಾ

¶ "ಪ್ರಸುಪ್ತಂ" ಪಾ. ಪಾ.

ಮೇನೇಹಿ ಗುಣತಸ್ತಾನಿ ಸಮಾನಿ ಸಲಿಲೋದ್ಭವೈಃ ॥ ೪೦ ॥ ಸಾ ತಸ್ಯ ಶುಶುಭೇ ಶಾಲಾ ತಾಭಿಸ್ಸ್ತ್ರೀಭಿರ್ವಿರಾಜಿತಾ । ಶಾರದೀವ ಪ್ರಸನ್ನಾ ದ್ಯೌಸ್ತಾರಾಭಿರಭಿಶೋಭಿತಾ ॥ ೪೧ ॥ ಸಚ ತಾಭಿಃ ಪರಿವೃತಶ್ಶುಶುಭೇ ರಾಕ್ಷಸಾಧಿಪಃ । ಯಥಾಹ್ಯುಡುಪತಿಶ್ಶ್ರೀಮಾಂಸ್ತಾರಾಭಿರಭಿಸಂವೃತಃ ॥ ೪೨ ॥ ಯಾಶ್ಚ್ಯವಂತೇಽಂಬರಾತ್ತಾರಾಃ ಪುಣ್ಯಶೇಷಸಮಾವೃತಾಃ । ಇಮಾಸ್ತಾಸ್ಸಂಗತಾಃ ಕೃತ್ಸ್ನಾ ಇತಿ ಮೇನೇ ಹರಿಸ್ತದಾ ॥ ೪೩ ॥ ತಾರಾಣಾಮಿವ ಸುವ್ಯಕ್ತಂ ಮಹತೀನಾಂ ಶುಭಾರ್ಚಿಷಾಂ । ಪ್ರಭಾವರ್ಣಪ್ರಸಾದಾಶ್ಚ ವಿರೇಜುಸ್ತತ್ರ ಯೋಷಿತಾಂ ॥ ೪೪ ॥ ವ್ಯಾವೃತ್ತ * ಗುರುಪೀನಸ್ರ

ತಿಳಿದುಕೊಂಡನು, ಹಿ - ಯಾವ ಕಾರಣದಿಂದ, ತಾನಿ - ಆ ಮುಖಗಳನ್ನು, ಗುಣತಃ - ಸೌರಭ್ಯಾದಿ ಗುಣಗಳಿಂದ, ಸಲಿಲೋದ್ಭವೈಃ - ಕಮಲಗಳೊಡನೆ, ಸಮಾನಿ - ಸದೃಶಗಳಾಗಿ, ಮೇನೇ - ತಿಳಿದನೋ. ॥ ೪೦ ॥ ತಸ್ಯ - ಆ ರಾವಣಾಸುರನ, ಸಾ ಶಾಲಾ - ಆ ಮನೆಯು, ಸ್ತ್ರೀಭಿಃ - ಹೆಂಗಸರಿಂದ, ವಿರಾಜಿತಾ - ಪ್ರಕಾಶಮಾನವಾಗಿ, ತಾರಾಭಿಃ - ನಕ್ಷತ್ರಗಳಿಂದ, ಅಭಿಶೋಭಿತಾ - ಪ್ರಕಾಶಿತವಾದ, ಪ್ರಸನ್ನಾ - ನಿರ್ಮಲವಾದ, ಶಾರದಿ - ಶರತ್ಕಾಲದಲ್ಲಿರುವ, ದ್ಯೌರಿವ - ಅಂತರಿಕ್ಷದಂತೆ, ಶುಶುಭೇ - ಹೊಳೆಯುತ್ತಿದ್ದಿತು. ॥ ೪೧ ॥ ತಾಭಿಃ - ಆ ಸ್ತ್ರೀಯರಿಂದ, ಪರಿವೃತಃ - ಸುತ್ತುವರೆದ, ಸರಾ...[illegible] - ಆ ರಾವಣನೂ, ತಾರಾಭಿಃ - ನಕ್ಷತ್ರಗಳಿಂದ, ಅಭಿಸಂವೃತಃ - ಎಲ್ಲಾ ಕಡೆಗಳಲ್ಲಿಯೂ ಸುತ್ತುವರೆದ, ಶ್ರೀಮಾನ್ - ಕಾಂತಿಯುಕ್ತನಾದ, ಉಡುಪತಿರ್ಯಥಾ - ಚಂದ್ರನಂತೆ, ಶುಶುಭೇ - ಪ್ರಕಾಶಿಸಿದನು. ॥ ೪೨ ॥ ತದಾ - ಆ ಕಾಲದಲ್ಲಿ, ಹರಿಃ - ಆಂಜನೇಯನು, ಯಾಸ್ತಾರಾಃ - ಯಾವ ನಕ್ಷತ್ರಗಳು, ಪುಣ್ಯ....ತಾಃ - ಪುಣ್ಯಶೇಷದಿಂದ ಕೂಡಿ, ಅಂಬರಾತ್ - ಅಂತರಿಕ್ಷದಿಂದ, ಚ್ಯವಂತೇ - ಜಾರುತ್ತವೆಯೋ, ಕೃತ್ಸ್ನಾಃ - ಸಮಸ್ತಗಳಾದ, ತಾಃ - ಆ ನಕ್ಷತ್ರಗಳು, ಇಮಾಃ - ಈ ಸ್ತ್ರೀರೂಪಗಳಾಗಿ, ಸಂಗತಾಃ - ಸೇರಿವೆ, ಇತಿ - ಹೀಗೆಂದು, ಮೇನೇ - ತಿಳಿದನು. ॥ ೪೩ ॥ ತತ್ರ - ಆ ಶಯನಗೃಹದಲ್ಲಿ, ಶುಭಾರ್ಚಿಷಾಂ - ಒಳ್ಳೇ ಕಾಂತಿಯುಳ್ಳ, ಮಹತೀನಾಂ - ದೊಡ್ಡವುಗಳಾದ, ತಾರಾಣಾಮಿವ - ನಕ್ಷತ್ರಗಳಂತೆ, ಯೋಷಿತಾಂ - ಸ್ತ್ರೀಯರ, ಪ್ರಭಾ....ಶ್ಚ - ದೇಹಕಾಂತಿ ರೂಪ ನೈರ್ಮಲ್ಯವೆಂಬ ಗುಣಗಳೂ, ವಿರೇಜುಃ - ಹೊಳೆಯುತ್ತಿದ್ದವು. ॥ ೪೪ ॥ ಪಾನ....ಸು ಮದ್ಯಪಾನದ ಸಂಗೀತೋ

ಸನೆಗಾಗಿ ಎರಗಿರುವುದರಿಂದ ಅವುಗಳಿಗೆ ತಾವರೆಯ ಭ್ರಾಂತಿಯುಂಟಾಗಿರುವುದೆಂದೂ, ಸುವಾಸಿತಗಳಾದ ಆ ಮುಖಗಳು ಕಮಲಸದೃಶಗಳೇ ಎಂದೂ ತಿಳಿದನು. ॥೩೭–೪೦॥ ಅನೇಕ ಸ್ತ್ರೀರತ್ನಗಳಿಂದ ವಿರಾಜಿತವಾಗಿ, ಶರತ್ಕಾಲದಲ್ಲಿ ತಾರೆಗಳಿಂದ ಹೊಳೆಯುವ ನಿರ್ಮಲವಾದ ನೀಲಗಗನದಂತೆ ಆ ರಾವಣನ ಕ್ರೀಡಾಸದನವು ಬಹಳವಾಗಿ ಶೋಭಿಸುತ್ತಿದ್ದಿತು. ಆ ಸ್ತ್ರೀಯರಿಂದ ಸುತ್ತುವರೆದ ರಾಕ್ಷಸಾಧಿಪನು ತಾರೆಗಳೊಡೆಯನಾದ ಚಂದ್ರನಂತೆ ಪ್ರಕಾಶಿಸುತ್ತಿದ್ದನು. ಆ ಸುಂದರಸ್ತ್ರೀಯರನ್ನು ಕಂಡ ಮಾರುತಿಯು ಅವರು ಸ್ತ್ರೀಯರಲ್ಲವೆಂದೂ, ಪುಣ್ಯಶೇಷದೊಡಗೂಡಿ ಸ್ತ್ರೀರೂಪಗಳನ್ನು ಧರಿಸಿರುವ ತಾರೆಗಳೆಂದೂ ತಿಳಿದನು. ಪ್ರಸ್ಫುಟವಾದ ಅಸಮಾನಕಾಂತಿಯುಳ್ಳ ತಾರೆಗಳ ಪ್ರಭೆಯೂ, ನೈರ್ಮಲ್ಯವೂ ಆ ರಾವಣನ ಕ್ರೀಡಾಭವನದಲ್ಲಿ ಶಯನಿಸುತ್ತಿದ್ದ ಸ್ತ್ರೀಯರಲ್ಲಿ ಸೇರಿಗೊಂಡಿದ್ದಿತು. ಅವರೆಲ್ಲರೂ ಮಧುಪಾನಾ

---

* "ಕಚ" ತಿ. ಪಾ.

ಕ್ಸ್ರಕೀರ್ಣ ವರಭೂಷಣಾಃ । ಪಾನವ್ಯಾಯಾಮಕಾಲೇಷು ನಿದ್ರಾಪಹೃತಚೇತಸಃ ॥ ೪೫ ॥ ವ್ಯಾವೃತ್ತ ತಿಲಕಾಃ ಕಾಶ್ಚಿತ್ಕಾಶ್ಚಿದುದ್ಭ್ರಾಂತ ನೂಪುರಾಃ । ಪಾರ್ಶ್ವೇ ಗಳಿತ ಹಾರಾಶ್ಚ ಕಾಶ್ಚಿತ್ಪರಮಯೋಷಿತಃ ॥ ೪೬ ॥ ಮುಕ್ತಾ ಹಾರಾವೃತಾಶ್ಚಾನ್ಯಾಃ ಕಾಶ್ಚಿ ದ್ವಿಸ್ರಸ್ತ ವಾಸಸಃ । ವ್ಯಾವೃದ್ಧರಶನಾ ದಾಮಾಃ ಕಿಶೋರ್ಯಇವ ವಾಹಿತಾಃ ॥ ೪೭ ॥ ಸುಕುಂಡಲಧರಾಶ್ಚಾನ್ಯಾ ವಿಚ್ಛಿನ್ನಮೃದಿತಸ್ರಜಃ । ಗಜೇಂದ್ರಮೃದಿತಾಃ ಫುಲ್ಲಾಃ ಲತಾಇವ ಮಹಾವನೇ ॥ ೪೮ ॥ ಚಂದ್ರಾಂಶುಕಿರಣಾಭಾಶ್ಚ ಹಾರಾಃ ಕಾಸಾಂಚಿದು

ದ್ಯೋಗಸಮಯಗಳಲ್ಲಿ, ವ್ಯಾವೃ....ಣಾಃ - ವ್ಯತ್ಯಸ್ತಗಳಾದ ದೊಡ್ಡ ಮಾಲಿಕೆಗಳೂ, ಎರಚಲ್ಪಟ್ಟ ಉತ್ತಮಾಭರಣಗಳೂ ಉಳ್ಳವರಾಗಿ, ನಿದ್ರಾ....ಸಃ - ನಿದ್ದೆಯಿಂದ ಅಪಹರಿಸಲ್ಪಟ್ಟ ಮನವುಳ್ಳವ ರಾಗಿ, ವಿರೇಜುಃ - ಕಂಗೊಳಿಸಿದರು. ॥ ೪೫ ॥ ಪರ...ತಃ - ಉತ್ತಮ ಸ್ತ್ರೀಯರಾದ, ಕಾಶ್ಚಿತ್ - ಕೆಲವರು, ವ್ಯಾವೃ....ಕಾಃ - ಹೋಗಲಾಡಿಸಲ್ಪಟ್ಟ ತಿಲಕಗಳುಳ್ಳವರು, ಕಾಶ್ಚಿತ್ - ಕೆಲ ಹೆಂಗುಸರು, ಉದ್ಭ್ರಾಂ....ರಾಃ - ವ್ಯತ್ಯಸ್ತಗಳಾದ ಕಾಲುಕಡಗಗಳುಳ್ಳವರೂ, ಕಾಶ್ಚಿತ್ - ಕೆಲವರು, ಪಾರ್ಶ್ವೇ - ಪಕ್ಕದಲ್ಲಿ, ಗಳಿತಹಾರಾಶ್ಚ - ಜಾರಿಬಿದ್ದ ಹಾರಗಳುಳ್ಳವರೂ. ॥ ೪೬ ॥ ಅನ್ಯಾಶ್ಚ - ಮತ್ತೆ ಕೆಲವರು, ಮುಕ್ತಾ....ತಾಃ - ಮುತ್ತಿನ ಸರಗಳಿಂದ ಸುತ್ತುವರೆದವರು, ಕಾಶ್ಚಿತ್ - ಕೆಲವರು, ವಿಸ್ರ....ಸಃ - ಜಾರಿಹೋದ ವಸ್ತ್ರಗಳುಳ್ಳವರು, ವ್ಯಾವಿ....ಮಾಃ - ವ್ಯತ್ಯಾಸವಾದ ಡಾಬುಗಳ ದಂಡೆ ಗಳುಳ್ಳವರಾಗಿ, ವಾಹಿತಾಃ-ಮಾರ್ಗಾಯಾಸ ಪರಿಹಾರಕ್ಕೋಸುಗ ಹೊರಳಾಡುತ್ತಿರುವ, ಕಿಶೋರ್ಯ ಇವ - ಹೆಣ್ಣುಕುದುರೆಗಳಂತೆ, ವಿರೇಜುಃ - ಪ್ರಕಾಶಿಸಿದರು. ॥ ೪೭ ॥ ಸುಕುಂಡಲಧರಾಃ - ಒಳ್ಳೇ ಕರ್ಣಾಭರಣಗಳನ್ನು ಧರಿಸಿರುವ, ಅನ್ಯಾಶ್ಚ - ಮತ್ತೆ ಕೆಲ ಹೆಂಗಳು, ವಿಚ್ಛಿ....ಜಃ - ಕಿತ್ತುಹೋಗಿ ತುಳಿಯಲ್ಪಟ್ಟ ಮಾಲಿಕೆಗಳುಳ್ಳವರಾದಕಾರಣ, ಗಜೇಂದ್ರಮೃದಿತಾಃ - ಆನೆಯಿಂದ ತುಳಿಯಲ್ಪಟ್ಟ, ಫುಲ್ಲಾಃ - ಅರಳಿದ, ಮಹಾವನೇ - ವನದಲ್ಲಿರುವ, ಲತಾಇವ - ಬಳ್ಳಿಗಳಂತೆ, ವಿರೇಜುಃ - ಹೊಳೆ ಯುತ್ತಿದ್ದರು. ॥ ೪೮ ॥ ಚಂದ್ರಾಂ....ಶ್ಚ - ಚಂದ್ರಕಿರಣಗಳ ಕಾಂತಿಗಳುಳ್ಳ, ಕಾಸಾಂಚಿತ್ -

---

ನಂತರದಲ್ಲಿ ನೃತ್ತ, ಗೀತ ವಾದ್ಯಾದಿಗಳಲ್ಲಿ ತಮಗಿರುವ ಕೌಶಲದಿಂದ ತಮ್ಮ ನಲ್ಲನಾದ ರಾವಣೇಶ್ವರನ ಮನಸ್ಸಿಗೆ ಆನಂದವನ್ನುಂಟುಮಾಡುವ ಸಮಯಗಳಲ್ಲಿ ನೆಲೆದಪ್ಪಿದ ದೊಡ್ಡ ಹೂಸರಗಳೂ, ಒಡವೆಗಳೂ ಉಳ್ಳವರಾಗಿ ಗಾಢನಿದ್ರೆಯನ್ನು ಅನುಭವಿಸುತ್ತಿದ್ದರು.॥೪೧–೪೫॥ ಅವರಲ್ಲಿ ಕೆಲವರು ಸುಂದರಿಯರು ಬೆಮರಿನಿಂದ ಅಳಿದು ಜಾರಿದ ಮುಖತಿಲಕಗಳುಳ್ಳವ ರಾಗಿಯೂ, ಕೆಲವರು ನೆಲೆದಪ್ಪಿದ ಕಾಲ್ಕಡಗಗಳುಳ್ಳವರಾಗಿಯೂ, ಕೆಲವರು ಮಗ್ಗುಲಿನಲ್ಲಿ ಜಾರಿಬಿದ್ದ ಕಂಠಹಾರಗಳುಳ್ಳವರಾಗಿಯೂ, ಮತ್ತೆ ಕೆಲವರು ಸುಂದರಾಂಗನೆಯರು ನಿದ್ರಾ ವಶದಿಂದ ಸಡಿಲಿದ ಸೀರೆಗಳುಳ್ಳವರಾಗಿಯೂ, ಇನ್ನು ಕೆಲವರು ಸುತ್ತುವರೆದ ಮುತ್ತಿನ ಹಾರ ಗಳುಳ್ಳವರಾಗಿಯೂ, ಮತ್ತೂ ಕೆಲವರು ಬಿಚ್ಚಿಹೋದ ಒಡ್ಯಾಣಗಳುಳ್ಳವರಾಗಿಯೂ ಆಗಿ ಬಹುದೂರ ಮಾರ್ಗಸಂಚಾರದಿಂದ ಮಳಲುಭೂಮಿಯಲ್ಲಿ ಹೊರಳಾಡುವ ಹೆಣ್ಣುಕುದುರೆ ಗಳಂತೆ ಪ್ರಕಾಶಿಸುತ್ತಿದ್ದರು. ರತ್ನಖಚಿತವಾದ ಕರ್ಣಕುಂಡಲಗಳನ್ನು ಧರಿಸಿ ಕಳಚಿಹೋದ ಕಂಠಹಾರಗಳುಳ್ಳ ಇನ್ನೂ ಕೆಲವರು ಲಲನೆಯರು ಮದಗಜವು ಸರೋವರದಿಂದ ಕಿತ್ತೆಸೆದ ಕನ್ನೈದಿಲೆಯೊಡಗೂಡಿದ ಕೆಂದಾವರೆಯ ಬಳ್ಳಿಯಂತೆ ಕಂಗೊಳಿಸುತ್ತಿದ್ದರು. ಮತ್ತೆ ಕೆಲ

ತ್ಕಟಾಃ । ಹಂಸಾಇವ ಬಭುಸ್ಸುಪ್ತಾ ಸ್ಸ್ತನಮಧ್ಯೇಷು ಯೋಷಿತಾಂ ॥ ೪೯ ॥
ಅಪರಾಸಾಂಚ ವೈಡೂರ್ಯಾಃ ಕಾದಂಬಾಇವ ಪಕ್ಷಿಣಃ । ಹೇಮಸೂತ್ರಾಣಿ
ಚಾನ್ಯಾಸಾಂ ಚಕ್ರವಾಕಾ ಇವಾಭರ್ವ ॥ ೫೦ ॥ ಹಂಸಕಾರಂಡವಾಕೀರ್ಣಾಶ್ಚಕ್ರವಾ
ಕೋಪಶೋಭಿತಾಃ । ಆಪಗಾಇವ ತಾ ರೇಜು ರ್ಜಘನ್ಯೈಃ ಪುಳಿನೈರಿವ ॥೫೧॥ ಕಿಂಕಿಣೀ
ಜಾಲ ¶ ಸಂಕೋಶಾ ಸ್ತಾ ಹೈಮವಿಪುಲಾಂಬುಜಾಃ । ಭಾವಗ್ರಾಹ ಯಶಸ್ತೀರಾ
ಸ್ಸುಪ್ತಾ ನದ್ಯಇವಾಬಭುಃ ॥ ೫೨ ॥ ಮೃದುಷ್ವಂಗೇಷು ಕಾಸಾಂಚಿತ್ಕುಚಾಗ್ರೇಷುಚ

ಕೆಲವರು, ಯೋಷಿತಾಂ - ಹೆಂಗಳ, ಉತ್ಕಟಾಃ - ಸ್ಥೂಲಗಳಾದ, ಹಾರಾಶ್ಚ - ಮುತ್ತಿನ ಸರಗಳೂ, ಸ್ತನಮಧ್ಯೇಷು - ಕುಚಮಧ್ಯಪ್ರದೇಶಗಳಲ್ಲಿ, ಸುಪ್ತಾಃ - ಮಲಗಿರುವ, ಹಂಸಾಇವ - ಹಂಸಗಳಂತೆ, ಬಭುಃ - ಕಂಗೊಳಿಸಿದವು. ॥ ೪೯ ॥ ಅಪರಾಸಾಂ - ಮತ್ತೆ ಕೆಲವರ, ವೈಡೂರ್ಯಾಃ - ವೈಡೂರ್ಯ ಮಣಿಗಳೂ, ಕಾಪಂಬಾಃಪಕ್ಷಿಣಇವ - ಧೂಮ್ರವರ್ಣದ ಕಾಲುಗಳೂ, ಮೂಗುಗಳೂ ಉಳ್ಳ ಹಂಸಪಕ್ಷಿ ಗಳಂತೆ, ರೇಜುಃ - ಪ್ರಕಾಶಿಸಿದವು, ಅನ್ಯಾಸಾಂ - ಇತರರ, ಹೇಮಸೂತ್ರಾಣಿಚ - ಬಂಗಾರದ ಸರಗಳೂ, ಚಕ್ರವಾಕಾಇವ - ಜೊಕ್ಕವಕ್ಕಿಗಳಂತೆ, ಅಭರ್ವ - ಆದವು. ॥ ೫೦ ॥ ತಾಃ-ಆ ಸ್ತ್ರೀಯರು, ಪುಳಿನೈರಿವಸ್ಥಿತೈಃ - ಮರುಳುದಿಣ್ಣೆಗಳಂತಿರುವ, ಜಘನೈಃ-ಕಟಿಪುರೋಭಾಗಗಳಿಂದ, ಹಂಸ....ರ್ಣಾಃ- ಹಂಸಪಕ್ಷಿಗಳಿಂದಲೂ, ಕಾರಂಡವಪಕ್ಷಿಗಳಿಂದಲೂ ವ್ಯಾಪ್ತಗಳಾದ, ಚಕ್ರ....ತಾಃ - ಚಕ್ರವಾಕಪಕ್ಷಿ ಗಳಿಂದ ಪ್ರಕಾಶಮಾನಗಳಾದ, ಆಪಗಾಇವ - ನದಿಗಳಂತೆ, ರೇಜುಃ - ಹೊಳೆಯುತ್ತಿದ್ದರು. ॥ ೫೧ ॥ ಕಿಂಕಿ....ಶಾಃ - ಕಿರುಗೆಜ್ಜೆಗಳ ಸಮೂಹವೇ ಮೊಗ್ಗುಗಳಾಗಿ ಉಳ್ಳ, ಹೈಮ....ಜಾಃ - ಸುವರ್ಣಾಭರಣ ಗಳೆಂಬ ಅರಳಿದ ಕಮಲಗಳುಳ್ಳ, ಭಾವಗ್ರಾಹಾಃ-ಶೃಂಗಾರಚೇಷ್ಟೆಗಳೆಂಬ ನೆಗಳುಗಳುಳ್ಳ,ಯಶಸ್ತೀರಾಃ- ಕೀರ್ತಿಯೆಂಬ ದಡಗಳುಳ್ಳ, ಸುಪ್ತಾಃ - ಮಲಗಿರುವ, ತಾಃ - ಆ ಸ್ತ್ರೀಯರು, ನದ್ಯಇವ - ನದಿಗಳಂತೆ, ಆಬಭುಃ - ಕಂಗೊಳಿಸಿದರು. ॥ ೫೨ ॥ ಕಾಸಾಂಚಿತ್-ಕೆಲವರು ಸ್ತ್ರೀಯರ, ಮೃದುಷು ಮೆತ್ತಗಿರುವ,

ವರು ನಿದ್ರಾಸುಖವನ್ನನುಭವಿಸುತ್ತಿರಲು ಕಂಚುಕವಿಲ್ಲದೆ ವ್ಯಕ್ತವಾಗಿ ಕಾಣುತ್ತಿದ್ದ ಅವರ ಕುಚಗಳ ಮಧ್ಯಗಳಲ್ಲಿ ಚಂದ್ರಕಿರಣಗಳಂತೆ ಬಹಳವಾಗಿ ಹೊಳೆಯುತ್ತಿದ್ದ ಮುತ್ತಿನ ಸರಗಳು ನಿದ್ರಿಸುತ್ತಿದ್ದ ಹಂಸಗಳಂತೆ ಕಂಗೊಳಿಸುತ್ತಿದ್ದವು. ಕೆಲವರು ಉತ್ತಮಾಂಗನೆಯರ ವೈಡೂರ್ಯಾಭರಣಗಳು ಕಲಹಂಸಗಳಂತೆಯೂ, ಇನ್ನು ಕೆಲವರ ಕಟಿನಿಬದ್ಧವಾದ ಚಿನ್ನದ ಒಡ್ಯಾಣ ಗಳು ಕಿರುಗೆಜ್ಜೆಗಳಿಂದ ಕೂಡಿ, ಚಕ್ರವಾಕಗಳಂತೆಯೂ ಧ್ವನಿಗೈಯ್ಯುತ್ತಿದ್ದವು. ॥೪೬–೫೦॥ ರಾಜಹಂಸಗಳನ್ನುಹೋಲಿ ಹೊಳೆಯುತ್ತಿರುವ ಮಂಜೀರಗಳಿಂದಲೂ, ಕಾರಂಡವಪಕ್ಷಿಗಳಂತೆ ಧ್ವನಿಗೈಯ್ಯುವ ಒಡ್ಯಾಣಗಳಿಂದಲೂ, ಚಕ್ರವಾಕಗಳಂತೆ ದುಂಡಗಿರುವ ಕುಚಗಳಿಂದಲೂ, ಮರಳುದಿಬ್ಬಗಳಂತೆ ಬೃಹತ್ತಾಗಿರುವ ನಿತಂಬಪ್ರದೇಶಗಳಿಂದಲೂ ಕೂಡಿ, ಕಿರುಗೆಜ್ಜೆ ಗಳೆಂಬ ತಾವರೆಯ ಮೊಗ್ಗುಗಳಿಂದಲೂ, ಸುವರ್ಣಾಭರಣಗಳೆಂಬ ಅರಳಿದ ಅಂಬುಜ ಗಳಿಂದಲೂ, ಶೃಂಗಾರಚೇಷ್ಟೆಗಳೆಂಬ ಮೊಸಳೆಗಳಿಂದಲೂ, ಕೀರ್ತಿಯೆಂಬ ತೀರಪ್ರದೇಶ ಗಳಿಂದಲೂ ಅಲಂಕೃತರಾಗಿ ಗಾಢನಿದ್ರಾಸಕ್ತರಾಗಿದ್ದ ಆ ಸುಂದರಾಂಗನೆಯರು ನದಿಗಳಂತೆ ಕಂಗೊಳಿಸುತ್ತಿದ್ದರು. ತೊಡಿಗೆಗಳನ್ನು ತೆಗೆದಿಟ್ಟು ಮಲಗಿರುವ ಕೆಲವು ಹೆಂಗಳ ಕುಸುಮ

¶ "ಸಂಕೋಚಾ" ಗೋ. ರಾ. ಪಾ.

ಸಂಸ್ಥಿತಾಃ । ಬಭೂವುರ್ಭೂಷಣಾನೀವ ಶುಭಾ ಭೂಷಣರಾಜಯಃ ॥ ೫೩ ॥ ಅಂಶುಕಾಂತಾಶ್ಚ ಕಾಸಾಂಚಿನ್ಮುಖಮಾರುತಕಂಪಿತಾಃ । ಉಪರ್ಯುಪರಿವಕ್ತ್ರಾಣಾಂ ವ್ಯಾಧೂಯಂತೇ ಪುನಃಪುನಃ ॥ ೫೪ ॥ ತಾಃ ಪತಾಕಾಇವೋದ್ಧೂತಾಃ ಪತ್ನೀನಾಂ ರುಚಿರಪ್ರಭಾಃ । ನಾನಾವರ್ಣಸುವರ್ಣಾನಾಂ ವಕ್ತ್ರಮೂಲೇಷು ರೇಜಿರೇ ॥ ೫೫ ॥ ವವಲ್ಗುಶ್ಚಾಪಿ ಕಾಸಾಂಚಿತ್ಕುಂಡಲಾನಿ ಶುಭಾರ್ಚಿಷಾಂ । ಮುಖಮಾರುತಸಂಸರ್ಗಾನ್ಮಂದಮಂದಂ ಸುಯೋಷಿತಾಂ ॥ ೫೬ ॥ ಶರ್ಕರಾಸವಗಂಧೈಶ್ಚ ಪ್ರಕೃತ್ಯಾ ಸುರಭಿಸ್ಸುಖಃ । ತಾಸಾಂ ವದನನಿಶ್ವಾಸಸ್ಸಿಷೇವೇ ರಾವಣಂ ತದಾ ॥ ೫೭ ॥ ರಾವಣಾನನಶಂಕಾಶ್ಚ

ಅಂಗೇಷು - ಅವಯವಗಳಲ್ಲಿ, ಕುಚಾಗ್ರೇಷುಚ - ಸ್ತನಾಗ್ರಗಳಲ್ಲಿಯೂ, ಸಂಸ್ಥಿತಾಃ - ಇರುವ, ಶುಭಾಃ - ಶುಭಕರಗಳಾದ, ಭೂಷಣರಾಜಯಃ - ಆಭರಣಸಮೂಹಗಳು, ಭೂಷಣಾನೀವ - ಒಡವೆಗಳಂತೆಯೇ, ಬಭೂವುಃ - ಹೊಳೆಯುತ್ತಿದ್ದವು. ॥ ೫೩ ॥ ಕಾಸಾಂಚಿತ್ - ಕೆಲವರ, ಮುಖ....ತಾಃ - ನಿಟ್ಟುಸಿರುಗಳಿಂದ ಅಲುಗಿಸಿದ, ಅಂಶುಕಾಂತಾಃ - ಆ ವಸ್ತ್ರಗಳ ಸೆರಗುಗಳು, ವಕ್ತ್ರಾಣಾಂ - ಮುಖಗಳ, ಉಪರ್ಯುಪರಿ - ಮೇಲೆ, ಪುನಃಪುನಃ - ಬಾರಿಬಾರಿಗೂ, ವ್ಯಾಧೂಯಂತೇಸ್ಮ - ಚಲಿಸುತ್ತಿದ್ದವು. ॥ ೫೪ ॥ ಪತಾಕಾಇವ - ನಿಶಾನಿಗಳಂತೆ, ಉದ್ಧೂತಾಃ - ಕೊಡಹಲ್ಪಟ್ಟ, ರುಚಿರಪ್ರಭಾಃ - ಮನೋಹರವಾದ ಕಾಂತಿಯುಳ್ಳ, ತಾಃ - ಆ ವಸ್ತ್ರದ ಕೊನೆಗಳು, ನಾನಾ....ನಾಂ - ಅನೇಕ ಬಣ್ಣಗಳುಳ್ಳ, ಒಳ್ಳೇ ರೂಪಗಳುಳ್ಳ, ಪತ್ನೀನಾಂ - ರಾವಣಪತ್ನಿಯರ, ವಕ್ತ್ರಮೂಲೇಷು - ಮುಖಪ್ರದೇಶಗಳಲ್ಲಿ, ರೇಜಿರೇ - ಹೊಳೆಯುತ್ತಿದ್ದವು. ॥ ೫೫ ॥ ಅತ್ರ - ಈ ಮನೆಯಲ್ಲಿ, ಶುಭಾರ್ಚಿಷಾಂ - ಒಳ್ಳೆಯ ಕಾಂತಿಯುಳ್ಳ, ಕಾಸಾಂಚಿತ್ಸುಯೋಷಿತಾಂ - ಕೆಲವು ಉತ್ತಮ ಸ್ತ್ರೀಯರ, ಕುಂಡಲಾನಿ-ಕರ್ಣಾಭರಣಗಳು, ಮುಖ....ತ್-ನಿಟ್ಟುಸುರಿನ ಸಂಬಂಧದಿಂದ, ಮಂದಂಮಂದಂ - ಮೆಲ್ಲಮೆಲ್ಲಗೆ, ವವಲ್ಗುಃ - ಕುಣಿದವು. ॥ ೫೬ ॥ ತದಾ - ಆ ಕಾಲದಲ್ಲಿ, ಪ್ರಕೃತ್ಯಾ - ಸ್ವಭಾವದಿಂದ, ಸುಖಃ - ಸುಖಕರವಾದ, ಶರ್ಕ... ಧೈಃ - ಸಕ್ಕರೆಯಿಂದ ಮಾಡಿದ ಮದ್ಯಗಂಧಗಳಿಂದ, ತಾಸಾಂ - ಆ ಸ್ತ್ರೀಯರ, ವದನನಿಶ್ವಾಸಃ - ನಿಟ್ಟುಸಿರು, ರಾವಣಂ - ರಾವಣನನ್ನು, ಸಿಷೇವೇ - ಸೇವಿಸಿತು. ॥ ೫೭ ॥ ಕಾಶ್ಚಿತ್ - ಕೆಲವರು, ರಾವ....ಶ್ಚ - ರಾವಣನ ಸ್ತ್ರೀಯರೂ ಕೂಡ, ರಾವ....ಕಾಃ - ರಾವಣಮುಖವೆಂಬ ಭ್ರಾಂತಿಯುಳ್ಳವರಾಗಿ, ಸಪತ್ನೀನಾಂ -

---

ಕೋಮಲವಾದ ಅಂಗಗಳಲ್ಲಿಯೂ, ಕಠಿನವಾದ ಕುಚಕುಟ್ಮಲಗಳಲ್ಲಿಯೂ ಭೂಷಣವಿನ್ಯಾಸದಿಂದುಂಟಾದ ರೇಖೆಗಳೂ ಸಹ ಭೂಷಣಗಳಂತೆಯೇ ವಿರಾಜಿಸುತ್ತಿದ್ದವು. ಅಲ್ಲಿ ಮಲಗಿದ್ದ ಕೆಲವರ ನಿಟ್ಟುಸಿರಿನಿಂದ ಚಲಿಸುತ್ತಿರುವ ಸೂಕ್ಷ್ಮತರವಾದ ಅವರ ಸೆರಗುಗಳು ಅವರ ಮುಖಮಂಡಲಗಳ ಮೇಲ್ಭಾಗದಲ್ಲಿ ಅಡಿಗಡಿಗೂ ಮುತ್ತುತ್ತಿದ್ದವು. ವಿವಿಧ ವರ್ಣಶೋಭಿತಗಳಾದ ಆ ಸೆರಗುಗಳು ಸರ್ವಾಂಗಸುಂದರಿಯರಾದ ಆ ಸ್ತ್ರೀಯರ ಮುಖಗಳ ಮೇಲೆ ಚಲಿಸುವ ಪತಾಕೆಗಳಂತೊಪ್ಪುತ್ತಿದ್ದವು. ॥೫೩–೫೫॥ ಕಾಂತಿಮತಿಯರಾದ ಕೆಲವರು ಲಲನೆಯರ ರತ್ನಕುಂಡಲಗಳು ನಿಶ್ವಾಸಮಾರುತ ಸಂಬಂಧದಿಂದ ಮೆಲ್ಲಮೆಲ್ಲನೆ ಕದಲುತ್ತಿದ್ದವು. ಮದ್ಯಪಾನದಿಂದ ಉಂಟಾದ ಸುವಾಸನೆಯಿಂದಲೂ, ಸ್ವಭಾವದಿಂದಲೇ ಸುವಾಸನೆಯುಳ್ಳ ಆ ಸುಂದರಿಯರ ಮುಖವಾಸನೆಯಿಂದಲೂ ಕೂಡಿದ ನಿಶ್ವಾಸಗಳು ಸುಖವಾಗಿ ಶಯನಿಸುತ್ತಿರುವ ಆ ರಾವಣನ ಮೇಲೆ ಪಸರಿಸುತ್ತಿದ್ದವು. ಆ ಸಮಯದಲ್ಲಿ ಕೆಲವರು ಸುಂದರಿಯರು

ಕಾಶ್ಚಿದ್ರಾವಣಯೋಷಿತಃ । ಮುಖಾನಿ ※ ಸ್ಮ ಸಪತ್ನೀನಾಮುಪಾಜಿಘ್ರನ್ಪುನಃಪುನಃ ॥ ೫೮ ॥ ಅತ್ಯರ್ಥಂ ಸಕ್ತಮನಸೋ ರಾವಣೇ ತಾ ವರಸ್ತ್ರಿಯಃ । ಅಸ್ವತಂತ್ರಾಸ್ಸಪತ್ನೀನಾಂ ಪ್ರಿಯಮೇವಾಚರಂಸ್ತದಾ ॥ ೫೯ ॥ ಬಾಹೂನುಪನಿಧಾಯಾನ್ಯಾಃ ಪಾರಿಹಾರ್ಯವಿಭೂಷಿತಾನ್ । ಅಂಶುಕಾನಿಚ ರಮ್ಯಾಣಿ ಪ್ರಮದಾಸ್ತತ್ರ ಶಿಶ್ಯಿರೇ ॥ ೬೦ ॥ ಅನ್ಯಾ ವಕ್ಷಸಿ ಚಾನ್ಯಸ್ಯಾಸ್ತಸ್ಯಾಃ ಕಾಚಿತ್ಪುನರ್ಭುಜಂ । ಅಪರಾತ್ವಂಕಮನ್ಯಸ್ಯಾಸ್ತಸ್ಯಾಶ್ಚಾಪ್ಯಪರಾಭುಜೌ ॥ ೬೧ ॥ ಊರು ಪಾರ್ಶ್ವ ಕಟೀ ಪೃಷ್ಠಮನ್ಯೋನ್ಯಸ್ಯ

ಸವತಿಯರ, ಮುಖಾನಿ - ಮುಖಗಳನ್ನು, ಪುನಃಪುನಃ - ಬಾರಿಬಾರಿಗೂ, ಉಪಾಜಿಘ್ರನ್ಸ್ಮ - ಚುಂಬಿಸುತ್ತಿದ್ದರು. ॥೫೮॥ ತದಾ - ಆ ಕಾಲದಲ್ಲಿ, ರಾವಣೇ - ರಾವಣನಲ್ಲಿ, ಅತ್ಯರ್ಥಂ - ಬಹಳವಾಗಿ, ಸಕ್ತಮನಃ-ಆಸಕ್ತವಾದ ಮನವುಳ್ಳ, ತಾಃವರಸ್ತ್ರಿಯಃ-ಆ ಉತ್ತಮ ಸ್ತ್ರೀಯರು, ಅಸ್ವತಂತ್ರಾಃ - ಕಾಮಪರಾಧೀನರಾಗಿ, ಸಪತ್ನೀನಾಂ - ಸವತಿಯರಿಗೆ, ಪ್ರಿಯಮೇವ - ಇಷ್ಟವನ್ನೇ, ಆಚರನ್ - ಆಚರಿಸಿದರು. ॥೫೯॥ ತತ್ರ - ಆ ಮನೆಯಲ್ಲಿ, ಅನ್ಯಾಃಪ್ರಮದಾಃ - ಇತರ ಸ್ತ್ರೀಯರು, ಪಾರಿ.... ತಾನ್- ಕಡಗಗಳಿಂದ ಅಲಂಕರಿಸಲ್ಪಟ್ಟ, ಬಾಹೂನ್ - ತೋಳುಗಳನ್ನೂ, ರಮ್ಯಾಣಿ - ಮನೋಹರಗಳಾದ, ಅಂಶುಕಾನಿಚ - ವಸ್ತ್ರಗಳನ್ನೂ, ಉಪನಿಧಾಯ - ತಲೆದಿಂಬುಗಳಾಗಿ ಮಾಡಿಕೊಂಡು, ಶಿಶ್ಯಿರೇ - ಮಲಗಿದ್ದರು. ॥೬೦॥ ಅನ್ಯಾ - ಮತ್ತೊಬ್ಬಳು, ಅನ್ಯಸ್ಯಾಃ - ಮತ್ತೊಬ್ಬಳ, ವಕ್ಷಸಿ - ವಕ್ಷಸ್ಥಲದಲ್ಲಿ, ಶಿಶ್ಯೇ - ಮಲಗಿದಳು, ತಸ್ಯಾಃ - ಅವಳ, ಬಾಹೂನಪಿ - ಭುಜವನ್ನಾದರೆ, ಉಪನಿಧಾಯ - ತಲೆದಿಂಬನ್ನಾಗಿ ಮಾಡಿ, ಕಾಶ್ಚಿತ್ - ಕೆಲವರು, ಶಿಶ್ಯಿರೇ - ಮಲಗಿದರು, ಅಪರಾತು - ಮತೊಬ್ಬಳಾದರೆ, ಅನ್ಯಸ್ಯಾಃ - ಮತ್ತೊಬ್ಬಳ, ಅಂಕಂ - ತೊಡೆಯನ್ನು, ತಸ್ಯಾಃ - ಅವಳ, ಭುಜೌಚಾಪಿ - ಭುಜಗಳನ್ನೂ, ಅಪರಾ - ಮತ್ತೊಬ್ಬಳು, ಉಪನಿಧಾಯ - ತಲೆದಿಂಬನ್ನಾಗಿ ಮಾಡಿ, ಶಿಶ್ಯೇ - ಮಲಗಿದಳು. ॥೬೧॥ ಅನ್ಯೋನ್ಯಸ್ಯ - ಒಬ್ಬರೊಬ್ಬರ, ಊರು....ಷ್ಠಂ-ಊರುಗಳನ್ನೂ, ಪಾರ್ಶ್ವಗಳನ್ನೂ, ಸೊಂಟಗಳನ್ನೂ, ಪೃಷ್ಠಪ್ರದೇಶಗಳನ್ನೂ, ಸಮಾಶ್ರಿತಾಃ-ಆಶ್ರಯಿಸಿದವರಾಗಿ, ಪರ....ಗ್ಯಃ-ಅನ್ಯೋನ್ಯವಾಗಿ ಇಡಲ್ಪಟ್ಟ, ಶರೀರಗಳುಳ್ಳವರಾಗಿ, ಮದ....ಗಾಃ-ಮತ್ತತೆಯಿಂದಲೂ, ಸ್ನೇಹದಿಂದಲೂ ಪರಾಧೀನರಾಗಿ,

---

ಮದ್ಯಮದದಿಂದ ಮೈಮರೆತು ನಿದ್ರೆಯರಿತಾಗ ಪಕ್ಕದಲ್ಲಿ ಮಲಗಿರುವ ಸುಂದರಿಯರ ಮುಖಗಳನ್ನು ರಾವಣನ ಮುಖವೆಂಬ ಭ್ರಾಂತಿಯಿಂದ ಬಾರಿಬಾರಿಗೂ ಆಘ್ರಾಣಿಸುತ್ತಿದ್ದರು. ಹೀಗೆ ಆಘ್ರಾಣಿತರಾದ ಆ ಸುಂದರಿಯರೂ ಸಹ ತಮ್ಮನ್ನು ಚುಂಬಿಸುವಾತನು ರಾವಣನೇ ಎಂದು ಭ್ರಮಿಸಿದ್ದುದರಿಂದ ತಮ್ಮ ಸವತಿಯರ ಮುಖಗಳನ್ನು ತಾವೂ ಸಹ ಆಘ್ರಾಣಿಸುತ್ತಿದ್ದರು. ಕೆಲವರು ನಾರಿಯರು ಕಂಕಣಕೇಯೂರಾದಿಗಳಿಂದಲಂಕೃತವಾದ ತಮ್ಮ ಭುಜಗಳನ್ನೂ ಉಟ್ಟ ವಸ್ತ್ರಗಳನ್ನೂ ತಲೆದಿಂಬಾಗಿ ಮಾಡಿಕೊಂಡು ನಿದ್ರಿಸುತ್ತಿದ್ದರು. ॥೫೬-೬೦॥ ಇಷ್ಟೆಯಲ್ಲದೆ ಒಬ್ಬಳು ಮತ್ತೊಬ್ಬಳ ಎದೆಯಮೇಲೂ, ಅವಳ ಭುಜದಮೇಲೆ ಮಗದೊಬ್ಬಳೂ, ಹೀಗೆ ಸ್ನೇಹಪಾರವಶ್ಯದಿಂದ ಆ ಲಲನೆಯರು ಒಬ್ಬರೊಬ್ಬರ ತೊಡೆ, ಬೆನ್ನು, ಸೊಂಟ, ಪೃಷ್ಠಭಾಗಗಳನ್ನೂ ಆಶ್ರಯಿಸಿ ಮಲಗಿದ್ದರು. ಆ ರಾವಣನ ಕ್ರೀಡಾಭವನದಲ್ಲಿ ಪರಸ್ಪರ ಅಂಗಸಂಪರ್ಕದಿಂದ ಪ್ರೀತಿಗೊಂಡು ಮಲಗಿ ನಿದ್ರಿಸುತ್ತಿದ್ದ ಆ ಸುಂದರಿಯರೆಲ್ಲರೂ ಒಂದು

※ "ಚ" ಪಾ. ತಿ.

ಸಮಾಶ್ರಿತಾಃ । ಪರಸ್ಪರನಿವಿಷ್ಟಾಂಗ್ಯೋ ಮದಸ್ನೇಹವಶಾನುಗಾಃ ॥೬೨॥ §ಅನ್ಯೋನ್ಯ
ಸ್ಯಾಂಗಸಂಸ್ಪರ್ಶಾತ್ ಪ್ರಿಯಮಾಣಾ ಸ್ಸುಮಧ್ಯಮಾಃ । ಏಕೀಕೃತಭುಜಾಸ್ಸರ್ವಾಃ
ಸುಷುಪ್ತಸ್ತತ್ರ ಯೋಷಿತಃ ॥೬೩॥ ಅನ್ಯೋನ್ಯಭುಜಸೂತ್ರೇಣ ಸ್ತ್ರೀಮಾಲಾಗ್ರಥಿ
ತಾಹಿ ಸಾ । ಮಾಲೇವ ಗ್ರಥಿತಾ ಸೂತ್ರೇ ಶುಶುಭೇ ಮತ್ತಷಟ್ಪದಾಃ ॥೬೪॥
ಲತಾನಾಂ ಮಾಧವೇ ಮಾಸಿ ಫುಲ್ಲಾನಾಂ ವಾಯುಸೇವನಾತ್ । ಅನ್ಯೋನ್ಯಮಾಲಾ
ಗ್ರಥಿತಂ ಸಂಸಕ್ತಕುಸುಮೋಚ್ಚಯಂ ॥೬೫॥ ವ್ಯತಿವೇಷ್ಟಿತಸುಸ್ಕಂಧಮನ್ಯೋನ್ಯ
ಭ್ರಮರಾಕುಲಂ । ಆಸೀದ್ವನಮಿವೋದ್ಧೂತಂ ಸ್ತ್ರೀವನಂ ರಾವಣಸ್ಯ ತತ್ ॥೬೫॥
ಉಚಿತೇಷ್ವಪಿ ಸುವ್ಯಕ್ತಂ ನ ತಾಸಾಂ ಯೋಷಿತಾಂ ತದಾ । ವಿವೇಕಶ್ಶಕ್ಯ ಆಧಾತುಂ
ಭೂಷಣಾಂಗಾಂಬರಸ್ರಜಾಂ ॥೬೬॥ ರಾವಣೇ ಸುಖಸಂವಿಷ್ಟೇ ತಾಸ್ಸ್ತ್ರಿಯೋ

ಶಿಶ್ಯಿರೇ - ಮಲಗಿದರು. ॥೬೨॥ ಅನ್ಯೋ....ಣ - ಒಬ್ಬರೊಬ್ಬರ ತೋಳುಗಳೆಂಬ ತಂತಿಗಳಿಂದ, ಗ್ರಥಿತಾ - ಪೋಣಿಸಿದ, ಸಾಸ್ತ್ರೀಮಾಲಾ - ಆ ಹೆಂಗುಸರ ಪಙ್ತಿಯು, ಸೂತ್ರೇ -ದಾರದಲ್ಲಿ, ಗ್ರಥಿತಾ- ಸೇರಿಸಿದ, ಮತ್ತಷಟ್ಪದಾ - ಮದಿಸಿದ ದುಂಬಿಗಳುಳ್ಳ, ಮಾಲೇವ - ಪುಷ್ಪಮಾಲಿಕೆಯಂತೆ, ಶಶುಭೇಹಿ- ಪ್ರಕಾಶಿಸಿತಷ್ಟೆ. ॥೬೩॥ ವಾಯುಸೇವನಾತ್ - ಗಾಳಿಯ ಸೇವನೆಯಿಂದ, ಅನ್ಯೋ....ತಂ - ಒಬ್ಬರೊಬ್ಬರ ಪಙ್ತಿಯೆಂಬ ಪೂಸರಗಳಿಂದ ಕಟ್ಟಿದ, ಸಂಸ....ಯಂ - ಸಂಬಂಧಿಸಿದ ವಸ್ತ್ರಗ್ರಂಥಿಗಳೆಂಬ ಪುಷ್ಪಸಮೂಹವುಳ್ಳ, ವ್ಯತಿ....ಧಂ - ಸುತ್ತುವರೆದ ಸುಂದರವಾದ ಭುಜಗಳೆಂಬ ದೊಡ್ಡ ರೆಂಬೆಗಳುಳ್ಳ, ಅನ್ಯೋ....ಲಂ - ಪರಸ್ಪರ ಕೇಶಪಾಶಗಳೆಂಬ ದುಂಬಿಗಳಿಂದ ವ್ಯಾಪ್ತವಾದ, ರಾವಣಸ್ಯ - ರಾವಣಾಸುರನ, ತತ್ಸ್ತ್ರೀವನಂ - ಆ ಸ್ತ್ರೀವನವು, ಮಾಧವೇಮಾಸಿ - ವಸಂತಮಾಸದಲ್ಲಿ, ಫುಲ್ಲಾನಾಂ - ಅರಳಿದ, ಲತಾನಾಂ - ಬಳ್ಳಿಗಳ, ಉದ್ಧೂತಂ - ಚಲಿಸಿದ, ವನಮಿವ - ವನದಂತೆ, ಆಸೀತ್ - ಇದ್ದಿತು. ॥೬೪-೬೫॥ ತದಾ-ಆ ಸಮಯದಲ್ಲಿ, ತಾಸಾಂಯೋಷಿತಾಂ-ಆ ಸ್ತ್ರೀಯರ, ಉಚಿತೇಷ್ವಪಿ- ಯೋಗ್ಯಸ್ಥಾನಗಳಲ್ಲಿಯೂ, ಭೂಷ....ಜಾಂ - ಒಡವೆಗಳಿಗೂ, ಅವಯವಗಳಿಗೂ, ವಸ್ತ್ರಗಳಿಗೂ, ಪುಷ್ಪ ಮಾಲಿಕೆಗಳಿಗೂ, ವಿವೇಕಃ - ಭೇದಬುದ್ಧಿಯು, ಸುವ್ಯಕ್ತಂ - ಸ್ಪಷ್ಟವಾಗಿ, ಆಧಾತುಂ - ತಿಳಿಯಲು, ನಶಕ್ಯಃ - ಸಾಧ್ಯವಾಗಲಿಲ್ಲವು. ॥೬೬॥ ರಾವಣೇ - ರಾವಣನು, ಸುಖಸಂವಿಷ್ಟೇ-ನಿದ್ದೆಗೈಯ್ಯುತ್ತಿರಲು,

---

ಗೂಡಿದ ಭುಜಗಳುಳ್ಳವರಾಗಿ ಶೋಭಿಸುತ್ತಿದ್ದರು. ಹೀಗೆ ಪರಸ್ಪರ ಭುಜಪಙ್ತಿಯಿಂದ ಪೋಣಿಸಿದ ಆ ಸ್ತ್ರೀಯರ ಸಾಲು, ಮದಿಸಿದ ದುಂಬಿಗಳು ಮಧುವನ್ನೀಂಟಲೆರಗಿರುವ ಪುಷ್ಪ ಮಾಲಿಕೆಯಂತೆ ಕಂಗೊಳಿಸುತ್ತಿದ್ದಿತು. ಒಬ್ಬರ ಭುಜದಮೇಲೊಬ್ಬರು ಮಲಗಿ ಪುಷ್ಪಹಾರ ದಂತಿರುವವರೂ, ಭಿನ್ನಭಿನ್ನವಾದ ಪುಷ್ಪಸರಗಳನ್ನುಧರಿಸಿರುವವರೂ, ಒಬ್ಬರನ್ನೊಬ್ಬರು ಅಪ್ಪಿ ಮಲಗಿದ್ದುದರಿಂದ ಸುತ್ತುವರೆದ ಶರೀರಗಳುಳ್ಳವರೂ, ಕೆದರಿದ ಮುಂಗುರುಳುಗಳುಳ್ಳವರೂ, ನಿಟ್ಟುಸಿರಿನ ಗಾಳಿಯಿಂದ ಸರಿದ ಸೀರೆಯಸೆರಗುಗಳುಳ್ಳವರೂ ಆಗಿದ್ದ ಆ ರಾವಣನ ಕಾಂತಾ ಕದಂಬವು ವೈಶಾಖಮಾಸದಲ್ಲಿ ಚನ್ನಾಗಿ ಹೂಮೊಳೆತು ಬಳ್ಳಿಗಳೊಡಗೂಡಿ ಮಾಲಿಕಾರೂಪ ವಾಗಿ ವೃಕ್ಷಗಳ ಮೇಲೆ ಹರಡಿಕೊಂಡು ಹೂಗಳಿಂದ ತುಂಬಿರುವುದೂ,ಮಲಯಮಾರುತದಿಂದ ಅತ್ತಿತ್ತ ಅಲುಗಾಡುತ್ತಿರುವುದೂ ಆದ ಲತಾಕುಂಜದಂತೆ ಪ್ರಕಾಶಿಸುತ್ತಿದ್ದಿತು. ॥೬೧–೬೬॥

---

§ ಈ ಶ್ಲೋಕವು ಗೋ. ಪಾಠದಲ್ಲಿ ಅಧಿಕ.

ವಿವಿಧಪ್ರಭಾಃ । ಜ್ವಲಂತಃ ಕಾಂಚನಾ ದೀಪಾಃ ಪ್ರೈಕ್ಷಂತಾಽನಿಮಿಷಾ ಇವ ॥ ೬೭ ॥
ರಾಜರ್ಷಿ § ಪಿತೃದೈತ್ಯಾನಾಂ ಗಂಧರ್ವಾಣಾಂಚ ಯೋಷಿತಃ । ರಾಕ್ಷಸಾನಾಂಚ ಯಾಃ
ಕನ್ಯಾಸ್ತಸ್ಯ ಕಾಮವಶಂಗತಾಃ ॥ ೬೮ ॥ ಯುದ್ಧಕಾಮೇನ ತಾಸ್ಸರ್ವಾ ರಾವಣೇನ
ಹೃತಾಃ ಸ್ತ್ರಿಯಃ । ಸಮದಾ ಮದನೇನೈವ ಮೋಹಿತಾಃ ಕಾಶ್ಚಿದಾಗತಾಃ ॥ ೬೯ ॥
ನತತ್ರ ಕಾಶ್ಚಿತ್ಪ್ರಮದಾಃ ಪ್ರಸಹ್ಯ ವೀರ್ಯೋಪಪನ್ನೇನ ಗುಣೇನ ಲಬ್ಧಾ । ನಚಾನ್ಯ
ಕಾಮಾಪಿ ನಚಾನ್ಯಪೂರ್ವಾ ವಿನಾ ವರಾರ್ಹಾಂ ಜನಕಾತ್ಮಜಾಂ ತಾಂ ॥ ೭೦ ॥

ವಿವಿಧಪ್ರಭಾಃ - ವಿವಿಧ ಕಾಂತಿಗಳುಳ್ಳ, ತಾಃಸ್ತ್ರಿಯಃ - ಆ ಹೆಂಗುಸರನ್ನು, ಜ್ವಲಂತಃ -ಬೆಳಗುತ್ತಿರುವ, ಕಾಂಚನಾಃ - ಚಿನ್ನದ ಕಂಬಗಳುಳ್ಳ, ದೀಪಾಃ - ದೀಪಗಳು, ಅನಿಮಿಷಾಇವ - ದೇವತೆಗಳಂತೆ, ಪ್ರೈಕ್ಷಂತ - ನೋಡಿದವು, (ಗೋ) ನೋಡಿದವೋ ಎಂಬಂತಿದ್ದವು. ॥ ೬೭ ॥ ರಾಜ....ನಾಂ-ಅರಸರ, ಋಷಿಗಳ, ಪಿತೃದೇವತೆಗಳ, ದೈತ್ಯರ, ಗಂಧರ್ವಾಣಾಂಚ - ಗಂಧರ್ವರ, ರಾಕ್ಷಸಾನಾಂ - ರಕ್ಕಸರ, ಕನ್ಯಾಃ - ಹೆಣ್ಣುಮಕ್ಕಳು, ಯಾಃ - ಯಾರೋ, ತಾಃ - ಅವರು, ಕಾಮವಶಂಗತಾಃ - ಕಾಮಕ್ಕೆ ಅಧೀನರಾಗಿ, ತಸ್ಯ - ಆ ರಾವಣಾಸುರನಿಗೆ, ಯೋಷಿತಃ - ಸತಿಗಳು, ಅಭರ್ವ - ಆದವರು. ॥ ೬೮ ॥ ಯುದ್ಧಕಾಮೇನ - ಯುದ್ಧವನ್ನಪೇಕ್ಷಿಸುವ, ರಾವಣೇನ - ರಾವಣಾಸುರನಿಂದ, ಸರ್ವಾಃ - ಸಮಸ್ತ ರಾದ, ತಾಃಸ್ತ್ರಿಯಃ - ಆ ಸ್ತ್ರೀಯರು, ಹೃತಾಃ - ತರಲ್ಪಟ್ಟವರು, ಸಮದಾಃ - ಮದಸಹಿತರಾದ, ಕಾಶ್ಚಿತ್ - ಕೆಲ ಹೆಂಗುಸರು, ಮದನೇನೈವ - ಮನ್ಮಥನಿಂದಲೇ, ಮೋಹಿತಾಃ - ಮೋಹಿಸಲ್ಪಟ್ಟವರಾಗಿ, ಆಗತಾಃ - ಬಂದವರು. ॥ ೬೯ ॥ ತತ್ರ - ಆ ಸ್ತ್ರೀಯರಲ್ಲಿ, ವರಾರ್ಹಾಂ - ಶ್ರೇಷ್ಠಳಾದ, ತಾಂಜನಕಾತ್ಮಜಾಂವಿನಾ - ಆ ಸೀತಾದೇವಿಯ ಹೊರ್ತು, ಕಾಚಿತ್ಪ್ರಮದಾ - ಯಾವ ಹೆಂಗುಸೂ, ವೀರ್ಯೋಪಪನ್ನೇನ - ಪರಾಕ್ರಮದಿಂದ ಕೂಡಿರುವ ರಾವಣಾಸುರನಿಂದ, ಪ್ರಸಹ್ಯ - ಬಲಾತ್ಕರಿಸಿ, ನಲಬ್ಧಾ - ಹೊಂದಲ್ಪಡಲಿಲ್ಲ, ಅನ್ಯಕಾಮಾಪಿ - ಮತ್ತೊಬ್ಬನಲ್ಲಿ ಆಸಕ್ತಳಾದ ಹೆಂಗುಸೂ ಕೂಡಾ, ನಲಬ್ಧಾ - ಹೊಂದಲಾಗಿರಲಿಲ್ಲ, ಅನ್ಯಪೂರ್ವಾ - ಪೂರ್ವದಲ್ಲಿ ಮತ್ತೊಬ್ಬ ಪತಿಯುಳ್ಳವಳೂ, ನಲಬ್ಧಾ- ಪಡೆಯಲ್ಪಡಲಿಲ್ಲ. ॥ ೭೦ ॥ ತಸ್ಯ - ಆ ರಾವಣನ, ಭಾರ್ಯಾ - ಹೆಂಡತಿಯು, ಅಕುಲೀನಾ - ಕುಲ

ಆಗ ಆ ಸ್ತ್ರೀಯರು ಧರಿಸಿರುವ ಆಭರಣಗಳೂ ವಸ್ತ್ರಗಳೂ ಇರಬೇಕಾದ ಸ್ಥಾನಗಳಲ್ಲಿಲ್ಲದಿರುವುದರಿಂದ ಈ ಆಭರಣಗಳೂ ಈ ವಸ್ತ್ರಗಳೂ ಇವರದೇ ಎಂದೂ, ಇವು ಬೇರೆಯವರದೆಂದೂ ನಿರ್ಧರಿಸಲು ಅಸಾಧ್ಯವಾಗಿದ್ದಿತು. ಸುವರ್ಣಸ್ತಂಭಗಳಲ್ಲಿ ಅಲುಗಾಡದೆ ಸ್ಥಿರವಾಗಿ ಬೆಳಗುತ್ತಿದ್ದ ದೀಪಗಳು ಸುಖವಾಗಿ ನಿದ್ರಿಸುತ್ತಿದ್ದ ರಾವಣನನ್ನೂ ನೋಡಿ ಇದೇ ತಮಗೆ ತಕ್ಕ ಸಮಯವೆಂದು ಯೋಚಿಸಿ, ಮಹಾ ಸೌಂದರ್ಯವತಿಯರಾಗಿ ಅಸಮಾನ ದೇಹಕಾಂತಿಯಿಂದ ಕಂಗೊಳಿಸುತ್ತಿದ್ದ ಆ ರಾವಣನ ಭಾರ್ಯೆಯರನ್ನು ರೆಪ್ಪೆಹಾಕದೆ ನೋಡುತ್ತಿರುವವೋ ಎಂಬಂತಿದ್ದವು. ಆ ಕ್ರೀಡಾಭವನದಲ್ಲಿ ದೇವ, ದಾನವ, ಗಂಧರ್ವ, ಯಕ್ಷ, ರಾಕ್ಷಸರ ಕನ್ಯೆಯರು ರಾವಣಾಸುರನ ಮೇಲಣ ಮೋಹದಿಂದಲೇ ಬಂದವರಾಗಿದ್ದರು. ಅವರಲ್ಲಿ ಅನೇಕರನ್ನು ರಾವಣಾಸುರನು ಯುದ್ಧಾಪೇಕ್ಷೆಯಿಂದ ಕೊಂಡುಬಂದಿದ್ದನು. ಕೆಲವರು ಕಾಮಮೋಹಿತೆಯರಾಗಿ ಬಂದು ಸೇರಿದ್ದರು. ॥ ೬೭ ೭೦ ॥ ಅಲ್ಲಿದ್ದ ಸ್ತ್ರೀಯರಲ್ಲಿ

§ "ವಿಪ್ರ" ಠಿ. ಪಾ.

ನಚಾಕುಲೀನಾ ನಚ ಹೀನರೂಪಾ ನಾದಕ್ಷಿಣಾ ನಾನುಪಚಾರಯುಕ್ತಾ । ಭಾರ್ಯಾ ಭವತ್ತಸ್ಯ ನ ಹೀನಸತ್ವಾ ನಚಾಪಿ ಕಾಂತಸ್ಯ ನ ಕಾಮನೀಯಾ ॥ ೭೧ ॥ ¶ ಬಭೂವ

ಹೀನಳಾದವಳೂ, ನಬಭೂವ - ಆಗಿರಲಿಲ್ಲ, ಹೀನರೂಪಾ - ಕುರೂಪಿಯಾದವಳೂ, ನಚ - ಇಲ್ಲ, ಅದಕ್ಷಿಣಾಚ - ಆತನ ಮನೋನುಸಾರ ವರ್ತಿಸದಿರುವಳೂ, ನ - ಇಲ್ಲ, ಅನು....ಕ್ತಾ - ಉಪಚಾರ ಯುಕ್ತಳಲ್ಲದಿರುವಳೂ, ನ - ಇಲ್ಲ, ಹೀನಸತ್ವಾ - ಬಲಹೀನಳು, ನ - ಇಲ್ಲ, ಕಾಂತಸ್ಯ - ಗಂಡನಿಗೆ, ನಕಾಮನೀಯಾ - ವರಿಸುವದಕ್ಕರ್ಹಳಾಗದಿರುವಳೂ, ನ - ಇಲ್ಲ. ॥ ೭೧ ॥ ಇವಾಃರಾಕ್ಷಸರಾಜ

ಯಾವಳೊಬ್ಬಳನ್ನೂ ಬಲಾತ್ಕರಿಸಿಕೊಂಡು ಬಂದಿರಲಿಲ್ಲ. ಎಲ್ಲರೂ ಆತನನ್ನು ಮೋಹಿಸಿಯೇ ಬಂದಿದ್ದರು. ಅಲ್ಲಿ ಒಬ್ಬಳಾದರೂ ಬೇರೊಬ್ಬನಿಗೆ ಹೆಂಡತಿಯಾಗಿದ್ದವಳಿರಲಿಲ್ಲ. ಶ್ರೀರಾಮ ಪತ್ನಿಯೂ, ಮಹಾ ಪತಿವ್ರತೆಯೂ ಆದ ಸೀತಾದೇವಿಯು ಮಾತ್ರ ಆ ರಾಕ್ಷಸಾಧಿಪನನ್ನು ಸ್ವಲ್ಪವಾದರೂ ಮೋಹಿಸಿದವಳಲ್ಲ; ಆಕೆಯನ್ನು ಮಾತ್ರ ಆ ರಾವಣನು ಬಲಾತ್ಕರಿಸಿಕೊಂಡು

ಈ ಶ್ಲೋಕದಲ್ಲಿನ ವಿಶೇಷಾರ್ಥಗಳು

¶ ಈ ರಾಕ್ಷಸರಾಜ ಭಾರ್ಯೆಯರಂತೆಯೇ ರಾಘವ ಧರ್ಮಪತ್ನಿಯಾದ ಸೀತಾದೇವಿಯೂ ಈ ರಾವಣನ ಅಂತಃಪುರದಲ್ಲಿಯೇ ಇದ್ದುಕೊಂಡು ಈ ರಾವಣನಲ್ಲಿಯೇ ಅನುರಕ್ತೆಯಾಗಿದ್ದರೆ ಆತನಿಗೆ ಕ್ಷೇಮವೇ ಆದೀತು. ಏಕೆಂದರೆ, ನಾನು ರಾಮನ ಬಳಿಗೈದಿ, "ಸೀತೆಯು ರಾವಣ ಭುಕ್ತಳಾಗಿರುವಳು" ಎಂದು ಹೇಳಿದರೆ ಆತನು ಸೀತೆಯು ಮಡಿದ ಳೆಂದೇ ತಿಳಿದು ರಾವಣ ವಧೆಯಲ್ಲಿ ಉಪೇಕ್ಷಾ ಬುದ್ಧಿಯನ್ನು ಹೊಂದುತ್ತಾನೆ. (ತಿಲಕ)

ಈ ಸ್ತ್ರೀಯರು ತಮ್ಮ ಪತಿಯಾದ ರಾವಣನಲ್ಲಿ ಅನುರಕ್ತೆಯರಾಗಿರುವಂತೆಯೇ ಸೀತಾದೇವಿಯೂ ತನ್ನ ಪತಿಯಾದ ರಾಮನಲ್ಲಿ ಅನುರಕ್ತೆಯಾಗಿ ಆತನನ್ನೇ ಸ್ಮರಿಸುತ್ತಿದ್ದರೆ ಈ ರಾವಣನಿಗೆ ಶ್ರೇಯಸ್ಸುಂಟಾಗುತ್ತಿದ್ದಿತು. ಈತನು ಸೀತೆಯ ಪತಿಸ್ಮರಣೆಗೆ ವಿಘ್ನವನ್ನುಂಟುಮಾಡದಿದ್ದಲ್ಲಿ ಈತನಿಗೆ ಶ್ರೇಯಸ್ಸುಂಟಾಗುತ್ತಿದ್ದಿತು. (ಶಿರೋಮಣಿ)

"ಸೀತಾದೇವಿಯು, ಸ್ವಯಂವರಕ್ಕೆ ಮೊದಲೇ ಈ ರಾವಣನಿಗೆ ಭಾರ್ಯೆಯಾಗಿದ್ದರೆ ಈತನ ಪುಣ್ಯಕ್ಕೆ ಪಾರವೇ ಇರುತ್ತಿರಲಿಲ್ಲ" ಎಂದು ಹನುಮಂತನಿಗೆ ಬುದ್ಧಿಯುಂಟಾಯಿತು. ಆತನಿಗೆ ಈ ಬುದ್ಧಿಯುಂಟಾದುದು ಕಾಪೇಯದಿಂದಲ್ಲದೆ ಸ್ವಾಭಾವಿಕವಾಗಿಯಲ್ಲ. ಇದನ್ನು ಸಮರ್ಥಿಸಲೋಸುಗವೇ, "ಸಾಧುಬುದ್ಧೇಃ" ಎಂಬ ವಿಶೇಷಣವು ನಿವೇಶಿತವಾಗಿರುವುದು. (ತನಗೆ ಈ ಬುದ್ಧಿಯುಂಟಾದುದಕ್ಕಾಗಿ ಹನುಮಂತನು ಮುಂದೆ ಪಶ್ಚಾತ್ತಾಪಪಟ್ಟಿರುವನು.) (ಅಥವಾ) "ಈ ರಾಕ್ಷಸರಾಜ ಭಾರ್ಯೆಯರು ತಮ್ಮ ಪತಿಯೊಡಗೂಡಿ ಸಮಸ್ತ ಭೋಗಗಳನ್ನೂ ಅನುಭವಿಸುತ್ತಿರುವಂತೆ ರಾಘವ ಧರ್ಮಪತ್ನಿಯಾದ ಜಾನಕಿಯೂ ತನ್ನ ಪತಿಯೊಡಗೂಡಿ ಸುಖವಾಗಿದ್ದರೆ ಈ ರಾವಣನಿಗೆ ಶ್ರೇಯಸ್ಸುಂಟಾದೀತು; ಇವನ ಜನ್ಮವು ಸಾರ್ಥಕವಾದೀತು" ಎಂದು ಹನುಮಂತನಿಗೆ ಬುದ್ಧಿಯುಂಟಾಯಿತೆಂದೂ ಈ ಶ್ಲೋಕಕ್ಕೆ ಅರ್ಥ ಮಾಡಬಹುದು. ಹನುಮಂತನು ತಾನೇ ಒಂದು ಸಾಮ್ರಾಜ್ಯವನ್ನಾಳುವ ಸಾಮರ್ಥ್ಯವನ್ನೊಳಗೊಂಡಿದ್ದರೂ ಇತರರ ಅಭಿವೃದ್ಧಿಯನ್ನು ನೋಡಿ ಅಸೂಯೆಪಡುವವನಲ್ಲ. ಇಂತಹ ಸುಗುಣಿಯಾದ ಆತನಿಗೆ ಇಂತಹ ಸದ್ಬುದ್ಧಿಯುಂಟಾದುದು ಆಶ್ಚರ್ಯವಲ್ಲ. ಇದು ಆತನು ಶತ್ರುಗಳಲ್ಲಿಯೂ ತೋರುತ್ತಿದ್ದ ನಿರತಿಶಯವಾದ ಕನಿಕರವನ್ನು ಸೂಚಿಸುತ್ತದೆ. "ಈ ರಾವಣನು ಸೀತಾದೇವಿಯನ್ನು ಶ್ರೀರಾಮನಿಗೆ ಒಪ್ಪಿಸಿಬಿಟ್ಟರೆ ಜನ್ಮಸಾರ್ಥಕ್ಯವನ್ನು ಪಡೆಯುವನು. ಅವನ ಐಶ್ವರ್ಯವೂ, ಈ ಭೋಗನೈಖರಿಯೂ ಉಳಿಯುವುದು" ಎಂದು ಹನುಮಂತನ ಅಭಿಪ್ರಾಯ.

(ಗೋವಿಂದರಾಜರು+ಭಾವಪ್ರಕಾಶಿಕಾ.)

"ರಾವಣನು ಸೀತಾದೇವಿಯನ್ನು ಅಪಹರಿಸಿಕೊಂಡು ಬಂದಂತೆಯೇ, ನಮ್ಮ ಪ್ರಭುವಾದ ಸುಗ್ರೀವರಾಜನು, ಈ ರಾವಣ ಸ್ತ್ರೀಯರನ್ನು ಅಪಹರಿಸಿಕೊಂಡು ಹೋದರೆ ಅವನಿಗೆ ಒಳ್ಳೆಯದೇ ಆಗುವುದಲ್ಲವೆ" ಎಂಬ ಮಂತ್ರಬುದ್ಧಿಯು

ಬುದ್ಧಿಸ್ತು ಹರೀಶ್ವರಸ್ಯ ಯದೀದೃಶೀ ರಾಘವಧರ್ಮಪತ್ನೀ । ಇಮಾ ಯಥಾ ರಾಕ್ಷಸ ರಾಜಭಾರ್ಯಾಃ ಸ್ಸುಜಾತಮಸ್ಯೇತಿಹಿ ಸಾಧುಬುದ್ಧೇಃ ॥ ೭೨ ॥

ಭಾರ್ಯಾಃ - ಈ ರಾವಣನ ಸತಿಯರು, **ಯಥಾ** - ಹೇಗೆ, ಭರ್ತೃಸುಖವುಳ್ಳವರೋ, **ತಥಾ** - ಹಾಗೆ, **ರಾಘ....ತ್ನೀ** - ಶ್ರೀರಾಮನ ಹೆಂಡತಿಯು, **ಈದೃಶೀಯದಿ** - ಹೀಗೆಯೇ ಪತಿಸುಖವುಳ್ಳವಳಾದರೆ, **ಅಸ್ಯ** - ಈ ರಾವಣಾಸುರನಿಗೆ, **ಸುಜಾತಮಿತಿ** - ಶ್ರೇಯಸ್ಸಾದೀತೆಂದು, **ಸಾಧುಬುದ್ಧೇಃ** - ಶತ್ರುಗಳ ವಿಷಯದಲ್ಲಿಯೂ ಒಳ್ಳೆಯ ಬುದ್ಧಿಯುಳ್ಳ, **ಹರೀಶ್ವರಸ್ಯ** - ಆಂಜನೇಯನಿಗೆ, **ಬುದ್ಧಿಃ** - ಬುದ್ಧಿಯು, **ಬಭೂವ** - ಆಯಿತು. ॥ ೭೨ ॥ **ಹಿ(ಯಸ್ಮಾತ್ಕಾರಣಾತ್)** - ಯಾವ ಕಾರಣದಿಂದ, **ಸೀತಾ** - ಸೀತಾ

ತಂದಿದ್ದನು. ಅಲ್ಲಿ ಸೇರಿದ್ದ ಸ್ತ್ರೀಯರೆಲ್ಲರೂ ಸತ್ಕುಲಪ್ರಸೂತರಾಗಿಯೂ, ಮಹಾ ಸೌಂದರ್ಯವತಿಯರಾಗಿಯೂ, ಬಹು ಕುಶಲರಾಗಿಯೂ, ಅರೋಗದೃಢಕಾಯರಾಗಿಯೂ, ಸಮಸ್ತ ಉಪಚಾರಗಳಿಂದ ಕೂಡಿದವರಾಗಿಯೂ ಇದ್ದರು. ಆಗ ಮಹಾತ್ಮನಾದ ಆಂಜನೇಯನು "ಅಕಟಾ ! ಈ ಸುಂದರ ವನಿತೆಯರು ಈ ರಾಕ್ಷಸರಾಜನೊಡಗೂಡಿ ಸುಖಿಸುವಂತೆ ಸೀತಾ

ಹನುಮಂತನಿಗುಂಟಾಯಿತು. (ಅಥವಾ) "ಈ ರಾವಣನು ಈ ಸ್ತ್ರೀಯರನ್ನು ಅಪಹರಿಸಿ ತಂದಂತೆಯೇ ಶ್ರೀರಾಮಪತ್ನಿಯಾದ ಜಾನಕಿಯನ್ನೂ ಅಪಹರಿಸಿ ತಂದಿದ್ದರೆ ಇವನಿಗೆ ಎಂದಿಗೂ ಒಳ್ಳೆಯದಾಗುವುದಿಲ್ಲ. "ಮಮ ದಯಿತತರಾಹೃತಾ ವನಾಂತಾ ದ್ರಜನಿಚರೇಣ ತದಾ ವಿಮಥ್ಯ ಸಾ । ಕಥಯ ಮಮ ರಿಪುಂ ತ್ವಮದ್ಯ ಪ್ಲವಗಪತೇ! ಯಮಸಾದನಂ ನಯಾಮಿ॥" (ಕಿ. ಕಾಂ. ಸ. ೬ ಶ್ಲೋ. ೬) ಎಂದು ಹಿಂದೆ ರಾಮನು ಹನುಮಂತನನ್ನು ಕುರಿತು ಹೇಳಿದಂತೆ ಈ ರಾವಣನಿಗೆ ಯಮಲೋಕವಾಸವೇ ಸಿದ್ಧವಾಗುವುದು" ಎಂಬ ಬುದ್ಧಿಯು ಹನುಮಂತನಿಗುಂಟಾಯಿತು, (ಅಥವಾ) "ನಾನು ಈ ರಾಕ್ಷಸ ರಾಜ ಭಾರ್ಯೆಯರನ್ನು ಕಂಡಂತೆಯೇ ರಾಘವ ಧರ್ಮಪತ್ನಿಯಾದ ಸೀತಾದೇವಿಯನ್ನೂ ಕಂಡರೆ ನನ್ನ ಜನ್ಮವು ಸಫಲವಾಗುವುದು. ಹಿಂದೆ ಸುಗ್ರೀವನು, "ಯಸ್ತು ಮಾಸಾನ್ನಿವೃತ್ತೋಽಗ್ರೇ ದೃಷ್ಟ್ವಾ ಸೀತೇತಿ ಕಥ್ಯತಿ । ಮತ್ತುಲ್ಯವಿಭವೋ ಭೋಗೈಃ ಸುಖಂ ಸ ವಿಹರಿಷ್ಯತಿ ॥" (ಕಿ. ಕಾಂ. ಸ. ೪೧ ಶ್ಲೋ. ೪೮ ೪೯) ಎಂದು ಹೇಳಿರುವಂತೆ ನಾನು ಎಣೆಯಿಲ್ಲದ ಭಾಗ್ಯವನ್ನು ಪಡೆಯುವೆನು. ಮೇಲಾಗಿ ಪ್ರಭುವಾದ ಸುಗ್ರೀವನಿಗೆ ಪ್ರಿಯವನ್ನುಂಟುಮಾಡುವುದರಿಂದ ನನ್ನ ಜನ್ಮವೂ ಸಫಲವಾಗುವುದು. (ಅಥವಾ) ನಾನು ಈ ರಾವಣನ ಭಾರ್ಯೆಯರನ್ನು ಕಂಡಂತೆಯೇ ರಾಘವ ಧರ್ಮಪತ್ನಿಯಾದ ಸೀತಾದೇವಿಯನ್ನೂ ಕಂಡರೆ, "ಅಪ್ರವೃತ್ತೌ ಚ ಸೀತಾಯಾಃ ಪಾಪಮೇವ ಕರಿಷ್ಯತಿ । ತಸ್ಮಾತ್ ಕ್ಷಮಮಿಹಾದ್ಯೈವ ಪ್ರಾಯೋಪವಿಶನಂ ಹಿ ನಃ । ತ್ಯಕ್ತ್ವಾ ಪುತ್ರಾಂಶ್ಚ ದಾರಾಂಶ್ಚ ಧನಾನಿ ಚ ಗೃಹಾಣಿ ಚ ॥" (ಕಿ. ಕಾಂ. ಸ. ೫೩ ಶ್ಲೋ. ೨೮) ಎಂದು ಪ್ರಾಣದ ಮೇಲಣ ಆಶೆಯನ್ನು ತೊರೆದು ದುಃಖಿಸುತ್ತಿರುವ ಅಂಗದಾದಿಗಳು ಪುನಃ ಜೀವಿಸುವರು. ಇದರಿಂದ ನನಗೆ ಶ್ರೇಯಸ್ಸುಂಟಾಗುವುದು. (ಅಥವಾ) "ಜ್ಞಾಯತಾಂ ಸೌಮ್ಯ ವೈದೇಹೀ ಯದಿ ಜೀವತಿವಾ ನವಾ । (ನಹ್ಯಹಂ ಜೀವಿತುಂ ಶಕ್ತಸ್ತಾಮೃತೇ ಜನಕಾತ್ಮಜಾಂ॥?") (ಕಿ. ಕಾಂ. ಸ. ೨೮ ಶ್ಲೋ. ೧೦) ಎಂದು ಶ್ರೀರಾಮನು ಸುಗ್ರೀವನನ್ನು ಕುರಿತು ಹೇಳಿರುವನು. ಈ ರಾಕ್ಷಸರಾಜ ಭಾರ್ಯೆಯರು ಜೀವಿಸಿರುವಂತೆಯೇ ಆ ಸೀತಾದೇವಿಯೂ ಜೀವಿಸಿದ್ದರೆ ಶ್ರೀರಾಮನಿಗೆ ಒಳ್ಳೆಯದೇ ಆಗುವುದು. (ಅಥವಾ) ಎಲೈ ರಾಕ್ಷಸರಾಜನೇ ! ಈ ಸ್ತ್ರೀಯರು ನಿನಗೆ ಭಾರ್ಯೆಯರಾಗಿರುವಂತೆ ರಾಘವ ಧರ್ಮಪತ್ನಿಯಾದ ಸೀತೆಯೂ ಆಗಿರುವುದಾದರೆ ನಿನ್ನ ಸಕಲ ಸಂಪತ್ತೂ ಪುತ್ರಪೌತ್ರ ಸಹಿತವಾಗಿ ನಾಶವಾಗುವುದು. (ಮುಂದೆ ಆಂಜನೇಯನು, "ತದ್ಬುವಾ ದೃಷ್ಟಧರ್ಮಾರ್ಥಃ ತಪಃ ಕೃತಪರಿಗ್ರಹಃ । ಪರದಾರಾನ್ಮಹಾಪ್ರಾಜ್ಞ ! ನೋಪರೋದ್ಧುಂ ತ್ವಮರ್ಹಸಿ ॥" (ಸುಂ. ಕಾಂ. ಸ. ೫೧ ಶ್ಲೋ. ೧೭) ಎಂದು ರಾವಣನಿಗೆ ಉಪದೇಶ ಮಾಡುವನಾದುದರಿಂದ ಈ ಅರ್ಥವು ಸುಕರವು.) (ಅಥವಾ) ಸೀತಾದೇವಿಯು ಈ ಸ್ತ್ರೀಯರ ಮಧ್ಯದಲ್ಲಿ ಇಲ್ಲವೆಂದು ಹನುಮಂತನು ನಿಶ್ಚಯಿಸುವನು. ಸೀತಾದೇವಿಯು ಈ ರಾಕ್ಷಸರಾಜ ಭಾರ್ಯೆಯರಂತೆಯೇ ರೂಪವುಳ್ಳವಳೇನು ? ಎಂದಿಗೂ ಅಲ್ಲ. ಆಕೆಯು ಸರ್ವಾತಿಶಯ ಸೌಂದರ್ಯವತಿಯು. ಆದುದರಿಂದಲೇ ಆಕೆಯು ಈ ಸ್ತ್ರೀಯರ ಮಧ್ಯದಲ್ಲಿಲ್ಲ.

(ಮಹೇಶ್ವರ ತೀರ್ಥರು)

* ಪುನಶ್ಚ ಸೋಽಚಿಂತಯದಾರ್ತರೂಪೋ
"ಧ್ರುವಂ ವಿಶಿಷ್ಟಾ ಗುಣತೋಹಿ ಸೀತಾ ।
ಅಥಾಽಯಮಸ್ಯಾಂ ಕೃತವಾನ್ಮಹಾತ್ಮಾ
ಲಂಕೇಶ್ವರಃ ಕಷ್ಟಮನಾರ್ಯಕರ್ಮ" ॥ ೭೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ನವಮಸ್ಸರ್ಗಃ

ದೇವಿಯು, ಗುಣತಃ - ಪಾತಿವ್ರತ್ಯಾದಿ ಗುಣಗಳಿಂದ, ಧ್ರುವಂ - ನಿಶ್ಚಯವಾಗಿ, ವಿಶಿಷ್ಟಾ - ಅತಿಶಯವಾದವಳೋ, ಅಸ್ಯಾಂ - ಈಕೆಯ ವಿಷಯದಲ್ಲಿ, ಅಯಂಲಂಕೇಶ್ವರಃ - ಈ ರಾವಣನು, ಅನಾರ್ಯಕರ್ಮ - ಕೆಟ್ಟಕೆಲಸವನ್ನು, ಕೃತವಾ೯ - ಮಾಡಿದ್ದಾನೆ, ಕಷ್ಟಂ - ಕಷ್ಟವು, ಇತಿ - ಇಂತೆಂದು, ಅಥ - ಅನಂತರದಲ್ಲಿ, ಮಹಾತ್ಮಾ - ಮಹಾ ಮನಸ್ವಿಯಾದ, ಸಃ - ಆ ಆಂಜನೇಯನು, ಆರ್ತರೂಪಃ ದೀನಸ್ವಭಾವವುಳ್ಳವನಾಗಿ, ಪುನಶ್ಚ-ಮತ್ತೂ, ಅಚಿಂತಯತ್-ಆಲೋಚಿಸಿದನು. ॥ ೭೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ನವಮಸ್ಸರ್ಗಃ.

ದೇವಿಯೂ ಶ್ರೀರಾಮನೊಡಗೂಡಿ ಸುಖಿಸಲೋಸುಗ ರಾವಣನು ಆಕೆಯನ್ನು ಶ್ರೀರಾಮನಿಗೆ ಸಮರ್ಪಿಸಿದರೆ ಶ್ರೇಯಸ್ಸನ್ನು ಪಡೆಯುವನಲ್ಲವೆ! ಸೀತಾದೇವಿಯು ಮಹಾ ಪತಿವ್ರತಾ ಶಿರೋಮಣಿಯು, ಮಹಾ ಪರಾಕ್ರಮಿಯಾದ ಈ ರಾವಣನು ಆಕೆಯಲ್ಲಿ ಅಕ್ರಮವಾಗಿ ನಡೆದುಕೊಳ್ಳುತ್ತಿರುವನು. ಇದು ಇವನಿಗೆ ವಿನಾಶಕಾಲವೇ ಸರಿ" ಎಂದು ಬಹಳ ಪಶ್ಚಾತ್ತಾಪಪಡುತ್ತಿದ್ದನು. ॥ ೭೧–೭೩ ॥

ಇಂತಿದು ರಾವಣಾಸುರಾಂತಃಪುರ ವರ್ಣನೆಯೆಂಬ ಒಂಬತ್ತನೆಯ ಸರ್ಗವು
ಸಮಾಪ್ತವಾದುದು.

---

* "ಈ ರಾವಣನು ಮಹಾ ಕುಲಪ್ರಸೂತನಾದರೂ ಶ್ರೀರಾಮನ ಧರ್ಮಪತ್ನಿಯಾದ ಸೀತೆಯನ್ನು ಅಪಹರಿಸಿ ಮಹಾ ಪಾಪಕಾರ್ಯವನ್ನು ಮಾಡಿದನು. ಸೀತಾದೇವಿಯು ಮಹಾ ಪತಿವ್ರತೆಯು. ಆಕೆಯ ಪಾತಿವ್ರತ್ಯವನ್ನು ಈ ರಾವಣನು ಎಷ್ಟೇ ಪ್ರಯತ್ನಪಟ್ಟರೂ ಕೆಡಿಸಲು ಸಾಧ್ಯವಾಗುವುದಿಲ್ಲ. ಆದರೂ ಈ ರಾವಣನು ಆಕೆಯನ್ನು ಮಿಥ್ಯಾಪವಾದಕ್ಕೊಳಗಾಗಿಸಿದನು. ಕಷ್ಟಕಷ್ಟ! ಇದರಿಂದ ಇವನ ಈ ಅತುಳೈಶ್ವರ್ಯವೂ ನಾಶವಾಗಿ ಹೋಗುವುದು. ಸೀತಾದೇವಿಯು ಈ ರಾಕ್ಷಸರಾಜ ಭಾರ್ಯೆಯರಿಗಿಂತಲೂ ಗುಣಗಳಲ್ಲಿ ಶ್ರೇಷ್ಠಳಾದವಳು. ಅಂತಹ ಗುಣವತಿಯನ್ನು ಹೀನರಾದ ಈ ಸ್ತ್ರೀಯರೊಡನೆ ನಾನು ಹೋಲಿಸಿದುದು ಅಪರಾಧವಾಯಿತು" ಎಂದು ಇಲ್ಲಿನ ವಿಶೇಷಾರ್ಥವು. (ಗೋವಿಂದರಾಜರು.)

ಸುಂದರಕಾಂಡೇ ದಶಮಸ್ಸರ್ಗಃ

ತತ್ರ ದಿವ್ಯೋಪಮಂ ಮುಖ್ಯಂ ಸ್ಫಾಟಿಕಂ ರತ್ನಭೂಷಿತಂ । ಅವೇಕ್ಷಮಾಣೋ ಹನುಮಾನ್ ದದರ್ಶ ಶಯನಾಸನಂ ॥ ೧ ॥ ದಾನ್ತ ಕಾಂಚನ ಚಿತ್ರಾಂಗೈರ್ವೈಡೂರ್ಯೈಶ್ಚ ವರಾಸನೈಃ । ಮಹಾರ್ಹಾಸ್ತರಣೋಪೇತೈರುಪಪನ್ನಂಮಹಾಧನೈಃ ॥ ೨ ॥ ತಸ್ಯ ಚೈಕತಮೇ ದೇಶೇ ¶ ಸೋಗ್ರ್ಯಮಾಲಾವಿಭೂಷಿತಂ । ದದರ್ಶ ಪಾಂಡುರಛತ್ರಂ ತಾರಾಧಿಪತಿಸನ್ನಿಭಂ ॥ ೩ ॥ ಜಾತರೂಪಪರಿಕ್ಷಿಪ್ತಂ ಚಿತ್ರಭಾನುಸಮಪ್ರಭಂ । ಅಶೋಕಮಾಲಾವಿತತಂ ದದರ್ಶ ಪರಮಾಸನಂ ॥ ೪ ॥ ವಾಲವ್ಯಜನಹಸ್ತಾಭಿ

ತತ್ರ - ಆ ಮನೆಯಲ್ಲಿ, ದಿವ್ಯೋಪಮಂ - ದೇವತೆಗಳ ಹಾಸಿಗೆಗೆ ಸಮಾನವಾದ, ಮುಖ್ಯಂ - ಮುಖ್ಯವಾದ, ಸ್ಫಾಟಿಕಂ - ಸ್ಫಟಿಕಮಣಿಮಯವಾದ, ರತ್ನಭೂಷಿತಂ - ರತ್ನಗಳಿಂದ ಅಲಂಕೃತವಾದ, ದಾಂತ....ಗೈಃ-ದಂತವಿಕಾರಗಳಾದ ಚಿನ್ನದಿಂದ ವಿಚಿತ್ರವಾದ ಕಾಲುಗಳುಳ್ಳ, ವೈಡೂರ್ಯೈಶ್ಚ-ವೈಡೂರ್ಯಮಣಿವಿಕಾರಗಳಾದ, ಮಹಾ....ತೈಃ - ಶ್ರೇಷ್ಠಗಳಾದ ಹಾಸಿಗೆಗಳಿಂದ ಕೂಡಿರುವ, ಮಹಾಧನೈಃ - ಬಹು ದ್ರವ್ಯಸಾಧ್ಯಗಳಾದ, ವರಾಸನೈಃ - ಉತ್ತಮ ಪೀಠಗಳಿಂದ, ಉಪಪನ್ನಂ - ಕೂಡಿರುವ, ಶಯನಾಸನಂ - ಮಂಚವನ್ನು, ಅವೇಕ್ಷಮಾಣಃ - ನೋಡುತ್ತಿರುವ, ಹನುಮಾನ್ - ಆಂಜನೇಯನು, ದದರ್ಶ - ಕಂಡನು. ॥ ೧-೨ ॥ ತಸ್ಯ - ಆ ಮಂಚದ, ಏಕತಮೇದೇಶೇ - ಒಂದು ಪ್ರದೇಶದಲ್ಲಿ, ಸಃ - ಆ ಆಂಜನೇಯನು, ಅಗ್ರ್ಯ....ತಂ - ಶ್ರೇಷ್ಠಗಳಾದ ಹೂಸರಗಳಿಂದ ಅಲಂಕೃತವಾದ, ಪಾಂಡುರಂ - ಬೆಳ್ಳಗಿರುವುದರಿಂದ, ತಾರಾ....ಭಂ - ಚಂದ್ರಸದೃಶವಾದ, ಛತ್ರಂ - ಛತ್ರವನ್ನು, ದದರ್ಶ - ಕಂಡನು. ॥ ೩ ॥ ಜಾತ....ಪ್ತಂ - ಬಂಗಾರದಿಂದ ನಿರ್ಮಲವಾದ, ಚಿತ್ರ....ಭಂ - ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ, ಅಶೋ....ತಂ - ಅಶೋಕಪುಷ್ಪಮಾಲಿಕೆಯಿಂದ ವಿಸ್ತರಿಸಲ್ಪಟ್ಟ, ವಾಲ....ಭಿಃ - ಚಾಮರಗಳೇ ಹಸ್ತಗಳಲ್ಲಿ ಉಳ್ಳ ಪ್ರತಿಮೆಗಳಿಂದ, ಸಮಂತತಃ - ಎಲ್ಲಾಕಡೆ

ಹೀಗೆ ಹನುಮಂತನು ರಾವಣನ ಕ್ರೀಡಾಗೃಹದಲ್ಲಿ ಸೀತಾದೇವಿಯನ್ನು ಹುಡುಕುತ್ತ ಸ್ವರ್ಗಸಮಾನವಾಗಿ ಅತ್ಯುತ್ತಮವಾದ ಸ್ಫಟಿಕಮಣಿಗಳಿಂದ ರಚಿತವಾಗಿ ರತ್ನಾಲಂಕೃತವಾಗಿಯೂ, ದಂತದಿಂದಲೂ, ಭಂಗಾರದಿಂದಲೂ ಮಾಡಿದ ವಿವಿಧ ವರ್ಣಗಳಿಂದೊಪ್ಪುವ ಬಳ್ಳಿವರಸೆಗಳಿಂದ ಕೂಡಿರುವುದಾಗಿಯೂ,ವೈಡೂರ್ಯಮಣಿಗಳಿಂದಲಂಕೃತವಾಗಿ ಅಮೂಲ್ಯವಾದರತ್ನಕಂಬಳಿಗಳ ಗೌಸಣಿಗೆಯುಳ್ಳುದಾಗಿಯೂ, ಬಹು ಬೆಲೆಬಾಳುವ ಉತ್ತಮ ಪೀಠಗಳುಳ್ಳುವಾಗಿಯೂ ಶೋಭಿಸುತ್ತಿರುವ ಆ ರಾವಣೇಶ್ವರನ ಶಯನವೇದಿಕೆಯನ್ನು ಕಂಡನು. ಆ ಶಯನವೇದಿಕೆಯ ಅಗ್ರಭಾಗದಲ್ಲಿ ಪುಷ್ಪಮಾಲಿಕೆಗಳಿಂದಲಂಕೃತವಾಗಿ ಚಂದ್ರನಂತೆ ಬೆಳ್ಳನೆಬೆಳಗುತ್ತಿದ್ದ ಬೆಳುಗೊಡೆಯು ವಿರಾಜಿಸುತ್ತಿದ್ದಿತು. ಅದರ ಸಮೀಪದಲ್ಲಿ ಸುವರ್ಣನಿರ್ಮಿತವಾಗಿ ಸೂರ್ಯನಂತೆ ಪ್ರಕಾಶಿಸುತ್ತ ಅಶೋಕಪುಷ್ಪಗಳ ಹಾರಗಳಿಂದಲಂಕೃತವಾದ

¶ "ದಿವ್ಯ" ತಿ. ರಾ. ಪಾ.

ವ್ಯಿರ್ವೀಜ್ಯಮಾನಂ ಸಮಂತತಃ । ಗಂಧೈಶ್ಚ ವಿವಿಧೈರ್ಜುಷ್ಟಂ ವರಧೂಪೇನ ಧೂಪಿತಂ ॥೫॥ ಪರಮಾಸ್ತರಣಾಸ್ತೀರ್ಣ ಮಾವಿಕಾಜಿನಸಂವೃತಂ । ದಾಮಭಿರ್ವರಮಾಲ್ಯಾನಾಂ ಸಮಂತಾದುಪಶೋಭಿತಂ ॥ ೬ ॥ ತಸ್ಮಿನ್ ಜೀಮೂತಸಂಕಾಶಂ ಪ್ರದೀಪ್ತೋತ್ತಮ ಕುಂಡಲಂ । ಲೋಹಿತಾಕ್ಷಂ ಮಹಾಬಾಹುಂ ಮಹಾರಜತ ವಾಸಸಂ ॥ ೭ ॥ ಲೋಹಿತೇನಾನುಲಿಪ್ತಾಂಗಂ ಚಂದನೇನ ಸುಗಂಧಿನಾ । ಸಂಧ್ಯಾರಕ್ತಮಿವಾಕಾಶೇ ತೋಯದಂ ಸತಟಿದ್ಗಣಂ ॥ ೮ ॥ ವೃತಮಾಭರಣೈರ್ದಿವ್ಯೈಸ್ಸುರೂಪಂ ಕಾಮ

ಗಳಲ್ಲಿಯೂ, ವೀಜ್ಯಮಾನಂ - ಬೀಸಲ್ಪಡುವ, ವಿವಿಧೈಃ - ನಾನಾವಿಧಗಳಾದ, ಗಂಧೈಶ್ಚ - ಪರಿಮಳಗಳಿಂದಲೂ, ಜುಷ್ಟಂ - ವ್ಯಾಪ್ತವಾದ, ವರಧೂಪೇನ - ಶ್ರೇಷ್ಠವಾದ ಧೂಪದಿಂದ, ಧೂಪಿತಂ - ಹೊಗೆ ಹಾಕಿದ, ಪರ....ರ್ಣಂ - ಉತ್ಕೃಷ್ಟಗಳಾದ ರತ್ನಕಂಬಳಿಗಳಿಂದ ಹಾಸಿದ, ಆವಿ....ತಂ - ಕುರಿದೊಗಲಿನಿಂದ ವ್ಯಾಪ್ತವಾದ, ವರಮಾಲ್ಯಾನಾಂ - ಒಳ್ಳೆಯ ಪುಷ್ಪಗಳ, ದಾಮಭಿಃ - ಹಾರಗಳಿಂದ, ಸಮಂತಾತ್ - ಎಲ್ಲಾ ಕಡೆಗಳಲ್ಲಿಯೂ, ಉಪಶೋಭಿತಂ - ಹೊಳೆಯುತ್ತಿರುವ, ಪರಮಾಸನಂ - ಉತ್ತಮವಾದ ಆಸನವನ್ನು, ದದರ್ಶ - ಕಂಡನು. ॥ ೪-೬ ॥ ಜೀಮೂತಸಂಕಾಶಂ - ಮೇಘಕ್ಕೆ ಸದೃಶನಾದ, ಪ್ರದೀ....ಲಂ - ಥಳಥಳಿಸುತ್ತಿರುವ ಶ್ರೇಷ್ಠವಾದ ಕರ್ಣಾಭರಣಗಳುಳ್ಳ, ಲೋಹಿತಾಕ್ಷಂ - ಕೆಂಪಾಗಿರುವ ಕಣ್ಣುಗಳುಳ್ಳ, ಮಹಾಬಾಹುಂ - ದೊಡ್ಡ ಭುಜಗಳುಳ್ಳ, ಮಹಾ....ಸಂ - ಸುವರ್ಣಮಯವಾದ ವಸ್ತ್ರಗಳುಳ್ಳ, ಲೋಹಿತೇನ - ಕೆಂಪಾದ, ಸುಗಂಧಿನಾ - ಸುವಾಸನೆಯುಳ್ಳ, ಚಂದನೇನ - ಶ್ರೀಗಂಧದಿಂದ, ಅನುಲಿಪ್ತಾಂಗಂ - ಲೇಪಿಸಿದ ಶರೀರವುಳ್ಳವನಾಗಿ, ಸಂಧ್ಯಾರಕ್ತಂ - ಸಂಧ್ಯಾರಾಗದಿಂದ ಕೆಂಪು ಬಣ್ಣವುಳ್ಳ, ಸತಟಿದ್ಗಣಂ - ಮಿಂಚುಗಳ ಸಮೂಹದಿಂದ ಕೂಡಿದ, ಆಕಾಶೇ - ಅಂತರಿಕ್ಷದಲ್ಲಿರುವ, ತೋಯದಮಿವಸ್ಥಿತಂ - ಮೇಘದಂತಿರುವ. ॥ ೭-೮ ॥ ದಿವ್ಯೈಃ - ರಮ್ಯಗಳಾದ, ಆಭರಣೈಃ - ಒಡವೆಗಳಿಂದ, ವೃತಂ - ಸುತ್ತುವರೆದ, ಸುರೂಪಂ - ಒಳ್ಳೆಯ ರೂಪುಳ್ಳ, ಕಾಮರೂಪಿಣಂ - ಸ್ವೇಚ್ಛಾರೂಪಿಯಾದ, ಸವೃ....ಕ್ಷ್ಯಂ - ಪುಷ್ಪಸಹಿತವಾದ ವೃಕ್ಷಸಮೂಹದಿಂದಲೂ, ಪೊದೆಗಳಿಂದಲೂ ತುಂಬಿದ, ಮಂದರಮಿವಸ್ಥಿತಂ - ಮಂದರಪರ್ವತದಂತಿರುವ,

---

ಚಾಮರಗಳನ್ನು ಕೈಯಲ್ಲಿ ಹಿಡಿದು ಬೀಸುತ್ತಿದ್ದ ಕೃತಕ ಸ್ತ್ರೀಪ್ರತಿಮೆಗಳು ಒಪ್ಪುತ್ತಿದ್ದವು. ಆ ಉತ್ತಮ ತಲ್ಪವು ವಿವಿಧ ಗಂಧಗಳಿಂದ ಸುವಾಸಿತವಾಗಿಯೂ, ಶ್ರೇಷ್ಠವಾದ ಧೂಪಧೂಪಿತವೂ, ಬಹು ಬೆಲೆ ಬಾಳುವ ರತ್ನಕಂಬಳಿಗಳ, ಕುರಿದೊಗಲಿನ ಹಾಸುಗಳುಳ್ಳದಾಗಿಯೂ, ಸರ್ವೋತ್ತಮವಾದ ಪಾರಿಜಾತಾದಿ ಪುಷ್ಪಮಾಲಿಕೆಗಳಿಂದ ಸಂಶೋಭಿತವಾಗಿಯೂ ವಿರಾಜಿಸುತ್ತಿದ್ದಿತು. ॥೧–೬॥ ಆ ದಿವ್ಯಪರ್ಯಂಕದಲ್ಲಿ ಕಾರ್ಮುಗಿಲಿಗೆ ಸಮಾನನಾದವನೂ, ಥಳಥಳಿಸುತ್ತಿರುವ ಕರ್ಣಕುಂಡಲಗಳನ್ನು ಧರಿಸಿರುವವನೂ, ರಕ್ತದಂತೆ ಕೆಂಪಾದ ನೇತ್ರಗಳುಳ್ಳವನೂ, ದೀರ್ಘವಾದ ಬಾಹುಗಳುಳ್ಳವನೂ, ಸುವರ್ಣ ವಸ್ತ್ರವನ್ನು ಧರಿಸಿರುವವನೂ, ಅಗರು, ರಕ್ತಚಂದನ ಗಂಧಗಳನ್ನು ಪೂಸಿಕೊಂಡು, ಮಿಂಚುಗಳೊಡಗೂಡಿ ಸಂಜೆಗೆಂಪಿನಿಂದೊಪ್ಪುವ ಮುಗಿಲಿನಂತೆ ವಿರಾಜಿಸುತ್ತಿರುವವನೂ, ದಿವ್ಯಾಭರಣಭೂಷಿತನೂ, ಸುಂದರರೂಪವುಳ್ಳವನೂ, ಸ್ವೇಚ್ಛಾರೂಪಗಳನ್ನು ಧರಿಸುವವನೂ, ವೃಕ್ಷಗಳಿಂದಲೂ, ಪೊದರುಗಳಿಂದಲೂ, ಅರಣ್ಯಗಳಿಂದಲೂ ಕೂಡಿ ನಿದ್ರಿಸುತ್ತಿರುವ ಮಂದರಾದ್ರಿಯಂತಿರುವವನೂ,

ರೂಪಿಣಂ । ಸವೃಕ್ಷವನಗುಲ್ಮಾಢ್ಯಂ ಪ್ರಸುಪ್ತಮಿವ ಮಂದರಂ ॥ ೯ ॥ ಕ್ರೀಡಿತ್ವೋಪರತಂ ರಾತ್ರೌ ವರಾಭರಣಭೂಷಿತಂ । ಪ್ರಿಯಂ ರಾಕ್ಷಸಕನ್ಯಾನಾಂ ರಾಕ್ಷಸಾನಾಂ ಸುಖಾವಹಂ ॥ ೧೦ ॥ ಪೀತ್ವಾಪ್ಯುಪರತಂ ಚಾಪಿ ದದರ್ಶ ಸಮಹಾಕಪಿಃ । ಭಾಸ್ವರೇ ಶಯನೇ ವೀರಂ ಪ್ರಸುಪ್ತಂ ರಾಕ್ಷಸಾಧಿಪಂ ॥ ೧೧ ॥ ನಿಶ್ವಸಂತಂ ಯಥಾನಾಗಂ ರಾವಣಂ ವಾನರರ್ಷಭಃ । ¶ ಆಸಾದ್ಯ ಪರಮೋದ್ವಿಗ್ನಸ್ಸೋಽಪಾಸರ್ಪತ್ಸುಭೀತವತ್ ॥ ೧೨ ॥ ಅಥಾರೋಹಣಮಾಸಾದ್ಯ ವೇದಿಕಾಂತರಮಾಶ್ರಿತಃ । ‡ ಸುಪ್ತಂ

ರಾತ್ರೌ - ರಾತ್ರಿಯಲ್ಲಿ, ಕ್ರೀಡಿತ್ವಾ - ವಿಹರಿಸಿ, ಉಪರತಂ - ವಿಶ್ರಮಿಸಿದ, ವರಾ....ತಂ - ಉತ್ತಮವಾದ ಒಡವೆಗಳಿಂದ ಅಲಂಕೃತನಾದ, ರಾಕ್ಷಸಕನ್ಯಾನಾಂ - ರಾಕ್ಷಸಸ್ತ್ರೀಯರಿಗೆ, ಪ್ರಿಯಂ - ಹಿತಕರನಾದ, ರಾಕ್ಷಸಾನಾಂ - ರಕ್ಕಸರಿಗೆ, ಸುಖಾವಹಂ - ಸುಖಕರನಾದ, ಪೀತ್ವಾಪಿ - ಪಾನಮಾಡಿಯೂ, ಉಪರತಂ - ನಿರ್ವ್ಯಾಪಾರನಾಗಿರುವ, ತಸ್ಮಿನ್ - ಆ ಮಂಚದಲ್ಲಿ, ಪ್ರಸುಪ್ತಂ - ಮಲಗಿರುವ ರಾವಣನನ್ನು, ಸಮಹಾಕಪಿಃ - ಆ ಆಂಜನೇಯನು, ದದರ್ಶ - ಕಂಡನು. ॥ ೯-೧೦ ॥ ವಾನರರ್ಷಭಃ - ವಾನರಶ್ರೇಷ್ಠನಾದ, ಸಃ - ಆ ಹನುಮಂತನು, ಭಾಸ್ವರೇ - ಹೊಳೆಯುತ್ತಿರುವ, ಶಯನೇ - ಹಾಸಿಗೆಯಲ್ಲಿ, ಪ್ರಸುಪ್ತಂ - ಮಲಗಿರುವ, ನಾಗಂಯಥಾ - ಸರ್ಪದಂತೆ, ನಿಶ್ವಸಂತಂ - ನಿಟ್ಟುಸಿರು ಬಿಡುತ್ತಿರುವ, ವೀರಂ - ಶೂರನಾದ, ರಾಕ್ಷಸಾಧಿಪಂ - ರಾಕ್ಷಸಪ್ರಭುವಾದ, ರಾವಣಂ - ರಾವಣನನ್ನು, ಆಸಾದ್ಯ - ಹೊಂದಿ, ಸುಭೀತವತ್ - ಭಯಪಟ್ಟವನಂತೆ, ಪರಮೋದ್ವಿಗ್ನಃ - ಗಾಬರಿಬಿದ್ದವನಾಗಿ, ಅಪಾಸರ್ಪತ್ - ಹಿಂದಿರುಗಿದನು. ॥ ೧೧-೧೨ ॥ ಅಥ - ಅನಂತರುದಲ್ಲಿ, ಆರೋಹಣಂ - ಪಾವಟಿಗೆಯನ್ನು, ಆಸಾದ್ಯ - ಹೊಂದಿ, ವೇದಿಕಾಂತರಂ - ಜಗುಲಿಯ ಮಧ್ಯವನ್ನು, ಆಶ್ರಿತಃ - ಆಶ್ರಯಿಸಿದ,

ರಾತ್ರಿಯಲ್ಲಿ ಕ್ರೀಡಿಸಿ, ವಿಶ್ರಾಂತಿಯನ್ನು ಹೊಂದಿ ನಿದ್ರಿಸುತ್ತಿರುವವನೂ, ರಾಕ್ಷಸಾಂಗನೆಯರಿಗೆ ಪ್ರೀತಿಪಾತ್ರನೂ ರಾಕ್ಷಸರಿಗೆ ಪ್ರಿಯವನ್ನುಂಟುಮಾಡುವವನೂ, ಮಧುಪಾನದಿಂದ ಬಳಲಿದವನೂ ಆಗಿರುವ ರಾಕ್ಷಸೇಶ್ವರನಾದ ರಾವಣನನ್ನು ಕಪಿವೀರನಾದ ಆ ಮಾರುತಿಯು ಕಂಡನು. ॥ ೭-೧೦ ॥ ಆಗಲಾತನು ಮದಗಜದಂತಿರುವ ಆ ರಾವಣಾಸುರನು ಮಲಗಿ ನಿದ್ರಿಸುತ್ತಿರುವ ಹಂಸತೂಲಿಕಾತಲ್ಪದ ಬಳಿಗೈದಿ, "ಇವನು ಸೀತಾಪಹರಣಮಾಡಿದ ಮಹಾಪಾಪಿಯು!" ಎಂದು ತಿಳಿದು, ಪಿಶಾಚವನ್ನು ಕಂಡವನು ಹೆದರಿ ಹಿಂದಿರುಗುವಂತೆ ಸ್ವಲ್ಪ ಹಿಂಜರಿದನು. ಆ ಬಳಿಕ ಆ ಮಹಾಕಪಿಯು ಪಾವಟಿಗೆಯನ್ನೇರಿ ಅದರ

¶ ಇಲ್ಲಿ, "ಇತರರಿಂದ ಮಾಡಲಾಗದ ಅಸಾಧ್ಯ ಕಾರ್ಯಗಳನ್ನು ಲೀಲಾಜಾಲವಾಗಿ ಮಾಡುವ ಧೀರ ಹನುಮಂತನಿಗೆ ರಾವಣ ದರ್ಶನದಿಂದ ಭಯವುಂಟಾದುದೇತು" ಎಂಬ ಶಂಕೆಯು ಬರಬಹುದು. ಅದಕ್ಕೆ ಹೀಗೆ ಸಮಾಧಾನ:—ಯಾರಾದರೂ ಆಗಲಿ, ಪಾಪಿಗಳನ್ನು ಕಂಡರೆ ಭಯದಿಂದ ದೂರ ಸರಿಯಬೇಕು. ಇಲ್ಲದಿದ್ದರೆ ಅವರ ಸಹವಾಸದೋಷದಿಂದ ಪಾಪಲೇಪವುಂಟಾಗುವುದೆಂದು ಹೇಳಿದೆ. ಇದನ್ನರಿತ ಹನುಮಂತನು ಶ್ರೀರಾಮಚಂದ್ರನ ಧರ್ಮಪತ್ನಿಯಾದ ಸೀತಾದೇವಿಯನ್ನು ಕದ್ದುತಂದಿರುವ ಪರಮಪಾಪಿಯಾದ ಆ ರಾವಣನನ್ನು ಕಂಡು ಪಿಶಾಚಗಳನ್ನು ಕಂಡರೆ ಭಯಪಟ್ಟು ದೂರ ಸರಿಯುವಂತೆ ಹಿಂದಕ್ಕೆ ಬಂದಿರುವನು. ಆತನಿಗೆ, "ಈ ರಾವಣನ ಇಷ್ಟೊಂದು ಸಂಪತ್ತೂ ನಾಶವಾಗಿ ಹೋಗುವುದಲ್ಲ!" ಎಂದು ವ್ಯಥೆಯೂ ಆಯಿತು. ಇದರಿಂದ ಮಹಾತ್ಮನಾದ ಆ ಹನುಮಂತನಲ್ಲಿದ್ದ ಅತಿಶಯವಾದ ದಯಾಳುತ್ವವು ನಿರೂಪಿಸಲ್ಪಡುತ್ತದೆ. (ತಿಲಕ.)

‡ "ಕ್ಷೀಬಂ" ತಿ. ಪಾ.

ರಾಕ್ಷಸಶಾರ್ದೂಲಂ ಪ್ರೇಕ್ಷತೇಸ್ಮ ಮಹಾಕಪಿಃ ॥ ೧೩ ॥ ಶುಶುಭೇ ರಾಕ್ಷಸೇಂದ್ರಸ್ಯ ಸ್ವಪತಃ § ಶ್ಯಯನೋತ್ತಮಂ । ಗಂಧಹಸ್ತಿನಿ ಸಂವಿಷ್ಟೇ ಯಥಾ ಪ್ರಸ್ರವಣಂ ಮಹತ್ ॥ ೧೪ ॥ ಕಾಂಚನಾಂಗದನದ್ಧೌಚ ದದರ್ಶ ಸಮಹಾತ್ಮನಃ । ವಿಕ್ಷಿಪ್ತೌ ರಾಕ್ಷಸೇಂದ್ರಸ್ಯ ಭುಜಾವಿಂದ್ರಧ್ವಜೋಪಮೌ ॥ ೧೫ ॥ ಐರಾವತವಿಷಾಣಾಗ್ರೈ ರಾಪೀಡನಕೃತವ್ರಣೌ । ವಜ್ರೋಲ್ಲಿಖಿತಪೀನಾಂಸೌ ವಿಷ್ಣುಚಕ್ರಪರಿಕ್ಷತೌ ॥ ೧೬ ॥ ಪೀನೌ ಸಮಸುಜಾತಾಂಸೌ ಸಂಗತೌ ಬಲಸಂಯುತೌ । ಸುಲಕ್ಷಣನಖಾಂಗುಷ್ಠೌ

ಮಹಾಕಪಿಃ-ಆಂಜನೇಯನು, ಸುಪ್ತಂ ನಿದ್ರೆಗೈಯ್ಯುತ್ತಿರುವ, ರಾಕ್ಷ....ಲಂ-ರಾಕ್ಷಸಶ್ರೇಷ್ಠನನ್ನು, ಪ್ರೇಕ್ಷತೇಸ್ಮ - ನಿಕ್ಕಿನೋಡಿದನಷ್ಟೆ. ॥ ೧೩ ॥ ಸ್ವಪತಃ - ಮಲಗಿರುವ, ರಾಕ್ಷಸೇಂದ್ರಸ್ಯ - ರಾವಣನ, ಶಯನೋತ್ತಮಂ-ಉತ್ಕೃಷ್ಟವಾದ ಹಾಸಿಗೆಯು, ಗಂಧಹಸ್ತಿನಿ-ಮದವೇರಿದ ಆನೆಯು, ಸಂವಿಷ್ಟೇ-ಪ್ರವೇಶಿಸಲು, ಮಹತ್ - ದೊಡ್ಡದಾದ, ಪ್ರಸ್ರವಣಂಯಥಾ - ಬೆಟ್ಟದ ಜೌಗಿನಂತೆ, ಶುಶುಭೇ - ಕಂಗೊಳಿಸಿತು. ॥೧೪॥ ಸಃ - ಆ ಆಂಜನೇಯನು, ಕಾಂಚ....ದ್ಧೌ - ಬಂಗಾರದ ಬಾಹುಜಿಗೆಗಳಿಂದ ಕಟ್ಟಲ್ಪಟ್ಟು, ವಿಕ್ಷಿಪ್ತೌ - ಇಡಲ್ಪಟ್ಟ, ಇಂದ್ರ....ಮೌ - ದೇವೇಂದ್ರನ ನಿಶಾನಿಗಳಿಗೆ ಸಮಾನವಾದ, ಐರಾ....ಗ್ರೈಃ - ಇಂದ್ರನಾನೆಯ ದಂತಗಳ ತುದಿಗಳಿಂದ, ಆಪೀ....ಣೌ - ಬಾಧಿಸುವಿಕೆಯಿಂದ ಮಾಡಲ್ಪಟ್ಟು ಗಂಟುಕಟ್ಟಿದ ಗಾಯಗಳುಳ್ಳ, ವಜ್ರೋ....ಸೌ - ಇಂದ್ರಾಯುಧದಿಂದ ಒರೆಯಲ್ಪಟ್ಟು ಬಲಿತಿರುವ ಹೆಗಲುಗಳುಳ್ಳ, ವಿಷ್ಣು....ತೌ - ನಾರಾಯಣನ ಸುದರ್ಶನದಿಂದ ವ್ರಣಗೊಳಿಸಲ್ಪಟ್ಟ, ಪೀನೌ - ಬಲಿಷ್ಠಗಳಾದ, ಸಮ....ಸೌ - ಒಂದೇ ಸಮವಾಗಿ ಸುಂದರಗಳಾದ ಭುಜಶಿರಸ್ಸುಗಳುಳ್ಳ, ಸಂಗತೌ - ಕೂಡಿಕೊಂಡಿರುವ, ಬಲಸಂಯುತೌ - ಬಲಯುಕ್ತಗಳಾದ, ಸುಲ....ಷ್ಠೌ - ಸಲ್ಲಕ್ಷಣಗಳಾದ ಉಗುರುಗಳಿಂದ ಕೂಡಿದ ಹೆಬ್ಬೆಟ್ಟುಗಳುಳ್ಳ, ಸ್ವಂಗು....ತೌ-ಒಳ್ಳೆಯ ಉಂಗುರಗಳಿಂದ ಕೂಡಿರುವ, ಸಂಗತೌ - ದೃಢವಾದ ಸಂಧಿಸ್ಥಾನಗಳುಳ್ಳ, ಪರಿಘಾಕಾರೌ - ಲಾಳುವಿಂಡಿಗೆಗಳ ಆಕಾರವುಳ್ಳ, ವೃತ್ತೌ-ಗುಂಡಾಗಿರುವ, ಕರಿಕರೋಪಮೌ-ಆನೆಯ ಸೊಂಡಿಲಿಗೆ, ಉಪಮೌ -ಸದೃಶಗಳಾದ, ಶುಭ್ರೇ-

---

ಮಧ್ಯದಲ್ಲಿ ನಿಂತು ಆ ರಾಕ್ಷಸಾಧಿಪನನ್ನು ದೃಷ್ಟಿಸಿ ನೋಡಿದನು. ಉತ್ತಮೋತ್ತಮವಾದ ಸುಖಶಯ್ಯೆಯಲ್ಲಿರುವ ಆ ರಾವಣನ ಹಾಸಿಗೆಯು ಯಾವ ಗಜದ ಗಂಧದ ವಾಸನೆಯನ್ನು ಕಂಡೊಡನೆಯೇ ಇತರ ಗಜಗಳು ಪಲಾಯನವಾಗುವವೋ ಅಂತಹ ಮತ್ತಗಜಗಂಧಗಳಿಂದೊಡಗೂಡಿದ ಜೌಗುನೀರಿನ ತಪ್ಪಲು ಭೂಮಿಯುಳ್ಳ ಪರ್ವತದಂತೆ ಪ್ರಕಾಶಿಸುತ್ತಿದ್ದಿತು. ॥೧೧-೧೪॥ ಸುವರ್ಣಕೇಯೂರಗಳಿಂದ ವ್ಯಾಪ್ತಗಳಾಗಿ ಇಂದ್ರಧ್ವಜದಂತೊಪ್ಪಿ ಆ ಹಾಸಿಗೆಯ ಎರಡೂ ಕಡೆಗಳಲ್ಲಿ ಚಾಚಿದ್ದ, ಐರಾವತದ ದಂತಾಗ್ರಗಳಿಂದುಂಟಾದ ಜಡ್ಡುಕಟ್ಟಿದ ಗಾಯಗಳುಳ್ಳವಾಗಿಯೂ, ಇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟು ಬಲಿತಿರುವ ಭುಜ ಶಿರಸ್ಸುಗಳುಳ್ಳವಾಗಿಯೂ, ವಿಷ್ಣುವಿನ ಚಕ್ರಾಯುಧದಿಂದ ಗಾಯಗೊಂಡವುಗಳಾಗಿಯೂ, ದೇಹಾನುಗುಣಗಳಾಗಿಯೂ, ಚನ್ನಾಗಿ ಬಲಿತವುಗಳಾಗಿಯೂ, ಶುಭಲಕ್ಷಣಲಕ್ಷಿತಗಳಾದ ಉಗುರುಗಳು, ಹೆಬ್ಬೆರಳುಗಳುಳ್ಳವುಗಳಾಗಿಯೂ, ಒಂದಕ್ಕೊಂದು

---

§ "ಶಯನಂ ಶುಭಂ" ತಿ. ಪಾ.

ಸ್ವಂಗುಳೀತಲಲಕ್ಷಿತೌ ॥೧೭॥ § ಸಂಗತೌ ಪರಿಘಾಕಾರೌ ವೃತ್ತೌ ಕರಿಕರೋಪಮೌ । ವಿಕ್ಷಿಪ್ತೌ ಶಯನೇ ಶುಭ್ರೇ ಪಂಚಶೀರ್ಷಾವಿವೋರಗೌ ॥ ೧೮ ॥ ಶಶಕ್ಷತಜಕಲ್ಪೇನ ಸುಶೀತೇನ ಸುಗಂಧಿನಾ । ಚಂದನೇನ ಪರಾರ್ಧ್ಯೇನ ಸ್ವನುಲಿಪ್ತೌ ಸ್ವಲಂಕೃತೌ ॥೧೯॥ ಉತ್ತಮಸ್ತ್ರೀವಿಮೃದಿತೌ ಗಂಧೋತ್ತಮನಿಷೇವಿತೌ । ಯಕ್ಷ ಪನ್ನಗ ಗಂಧರ್ವ ದೇವ ದಾನವ ರಾವಿಣೌ ॥೨೦॥ ದದರ್ಶ ಸಕಪಿಸ್ತಸ್ಯ ¶ ಬಾಹೂಶಯನಸಂಸ್ಥಿತೌ । ಮಂದರಸ್ಯಾಂತರೇ ಸುಪ್ತೌ ಮಹಾಹೀ ‡ ರುಷಿತಾವಿವ ॥ ೨೧ ॥ ತಾಭ್ಯಾಂ ಸಪರಿ

ಬೆಳ್ಳಗಿರುವ, ಶಯನೇ - ಹಾಸಿಗೆಯಲ್ಲಿ, ವಿಕ್ಷಿಪ್ತೌ - ಇಡಲ್ಪಟ್ಟ, ಪಂಚಶೀರ್ಷೌ - ಐದು ಶಿರಸ್ಸುಗಳುಳ್ಳ, ಉರಗಾವಿವಸ್ಥಿತೌ - ಹಾವುಗಳಂತಿರುವ, ಮಹಾತ್ಮನಃ - ಮಹಾನುಭಾವನಾದ ರಾವಣಾಸುರನ, (ಭುಜೌ - ಬಾಹುಗಳನ್ನು), ದದರ್ಶ - ಕಂಡನು. ॥ ೧೫-೧೮ ॥ ಶಶ...ನ - ಮೊಲದ ರಕ್ತಕ್ಕೆ ಸದೃಶವಾದ, ಸುಶೀತೇನ - ತಣ್ಣಗಿರುವ, ಸುಗಂಧಿನಾ - ಸುವಾಸನೆಯುಳ್ಳ, ಪರಾರ್ಧ್ಯೇನ - ಶ್ರೇಷ್ಠವಾದ, ಚಂದನೇನ - ಚಂದನಗಂಧದಿಂದ, ಸ್ವನುಲಿಪ್ತೌ - ಲೇಪಿಸಲ್ಪಟ್ಟ, ಸ್ವಲಂಕೃತೌ - ಚನ್ನಾಗಿ ಅಲಂಕರಿಸಲ್ಪಟ್ಟ, ಉತ್ತ...ತೌ-ಶ್ರೇಷ್ಠಸ್ತ್ರೀಯರಿಂದ ಅಲಂಕರಿಸಲ್ಪಟ್ಟ, ಗಂಧೋ....ತೌ - ದಿವ್ಯ ಗಂಧದಿಂದ ಸೇವಿಸಲ್ಪಟ್ಟ, ಯಕ್ಷ....ಣೌ-ಯಕ್ಷ, ಕಿನ್ನರ,ಗಂಧರ್ವ,ದೇವ,ದಾನವರೆಂಬವರನ್ನು ದೀನಧ್ವನಿಯುಳ್ಳವರನ್ನಾಗಿ ಮಾಡುವ, ಮಂದರಸ್ಯ - ಮಂದರಪರ್ವತದ, ಅಂತರೇ - ಗುಹೆಯಲ್ಲಿ, ಸುಪ್ತೌ - ಮಲಗಿರುವ, ರುಷಿತೌ - ಕೋಪಿಷ್ಠಗಳಾದ, ಮಹಾಹೀವಸ್ಥಿತೌ - ದೊಡ್ಡ ಸರ್ಪಗಳಂತಿರುವ, ಶಯ....ತೌ - ಹಾಸಿಗೆಯ ಮೇಲಿರುವ, ತಸ್ಯ - ಆ ರಾವಣನ, ಬಾಹೂ - ತೋಳುಗಳನ್ನು, ಸಕಪಿಃ - ಆ ವಾನರನು, ದದರ್ಶ - ಅತ್ಯಾದರಣೆಯಿಂದ ನೋಡಿದನು. ॥೧೯-೨೧॥ ಅಚಲಸಂಕಾಶಃ-

---

ಕೂಡಿರುವ ಸೊಗಸಾದ ಬೆರಳುಗಳುಳ್ಳವುಗಳಾಗಿಯೂ, ವರ್ತುಳವಾಗಿಯೂ ಆನೆಯ ಸೊಂಡಲಿನಂತಿರುವವುಗಳಾಗಿಯೂ, ಶುಭ್ರವಾದ ಹಾಸಿಗೆಯಲ್ಲಿ ಮಲಗಿರುವ ಐದು ತಲೆಗಳುಳ್ಳ ಸರ್ಪಗಳಂತಿರುವವುಗಳಾಗಿಯೂ, ಮೊಲದ ರಕ್ತದಂತೆ ಬಹು ಕೆಂಪಾಗಿಯೂ, ತಂಪಾಗಿಯೂ ಇರುವ ಗಂಧದಿಂದ ಲೇಪಿತವಾಗಿಯೂ, ವಿವಿಧಾಭರಣಭೂಷಿತವಾಗಿಯೂ, ಉತ್ತಮಾಂಗನೆಯರ ಆಲಿಂಗನವುಳ್ಳವಾಗಿಯೂ, ಯಕ್ಷ, ಗಂಧರ್ವ, ಪನ್ನಗ, ದೇವ, ದಾನವರೇ ಮೊದಲಾದವರನ್ನು ಪೀಡಿಸಿದವುಗಳಾಗಿಯೂ, ಮಂದರಗಿರಿಯ ಮಧ್ಯಪ್ರದೇಶದಲ್ಲಿ ಮಲಗಿರುವ ಕನಲಿದ ಕೃಷ್ಣಸರ್ಪದಂತೆ ಆ ಸುಖತಲ್ಪದಲ್ಲಿದ್ದ ಆ ರಾವಣನ ತೋಳುಗಳನ್ನು ಕಂಡನು. ॥ ೧೫—೨೧ ॥ ಪರ್ವತೋಪಮನಾದ ಆ ರಾಕ್ಷಸೇಂದ್ರನು ದೀರ್ಘವಾದ ಭುಜದಂಡಗಳನ್ನು

---

§ "ಸಂವೃತೌ" ತಿ. ರಾ. ಪಾ.

¶ ಇಲ್ಲಿ ರಾವಣನಿಗೆ ಎರಡೇ ತೋಳುಗಳಿದ್ದವೆಂದು ಹೇಳಿರುವದರಿಂದ, ಯುದ್ಧಕಾಲದಲ್ಲಿ ಮಾತ್ರ ಆತನಿಗೆ ಇಪ್ಪತ್ತು ತೋಳುಗಳೂ, ಹತ್ತು ತಲೆಗಳೂ ಉಂಟಾಗುತ್ತಿದ್ದವೆಂದು ಊಹಿಸಬೇಕು. (ತಿಲಕ.)

ರಾವಣನಿಗೆ ಇಪ್ಪತ್ತು ತೋಳುಗಳೂ,ಹತ್ತು ತಲೆಗಳು ಇರುವುದಾದರೂ, ಇಲ್ಲಿ ಎರಡು ಭುಜಗಳನ್ನೂ, ಒಂದೇ ಮುಖವನ್ನೂ ಹೇಳಿರುವುದು ಆವನು ಸ್ತ್ರೀಯರಲ್ಲಿ ರತಿಸೌಕರ್ಯಕ್ಕಾಗಿ ತಾಳಿದ್ದ ರೂಪವನ್ನು ವರ್ಣಿಸುವುದಕ್ಕೋಸ್ಕರವೆಂದು ಗ್ರಾಹ್ಯವು. (ಗೋವಿಂದರಾಜೀಯ.)

‡ "ರೂಷಿತಾವಿವ" ಕ. ತಿ. ಗೋ. ಪಾ.

ಪೂರ್ಣಾಭ್ಯಾಂ ಭುಜಾಭ್ಯಾಂ ರಾಕ್ಷಸೇಶ್ವರಃ । ಶುಶುಭೇಽಚಲಸಂಕಾಶಃ ಶೃಂಗಾಭ್ಯಾಮಿವ ಮಂದರಃ ॥ ೨೨ ॥ ಚೂತಪುನ್ನಾಗಸುರಭಿರ್ವಕುಳೋತ್ತಮಸಂಯುತಃ । ಮೃಷ್ಟಾನ್ನರಸಸಂಯುಕ್ತಃ ಪಾನಗಂಧಪುರಸ್ಸರಃ ॥ ೨೩ ॥ ತಸ್ಯ ರಾಕ್ಷಸ * ಸಿಂಹಸ್ಯ ನಿಶ್ಚಕ್ರಾಮ ಮಹಾಮುಖಾತ್ । ಶಯಾನಸ್ಯ ವಿನಿಶ್ವಾಸಃ ಪೂರಯನ್ನಿವ ತದ್ಗೃಹಂ ॥೨೪॥ ಮುಕ್ತಾಮಣಿವಿಚಿತ್ರೇಣ ಕಾಂಚನೇನ ವಿರಾಜಿತಂ । ಮುಕುಟೇನಾಪವೃತ್ತೇನ ಕುಂಡಲೋಜ್ವಲಿತಾನನಂ ॥ ೨೫ ॥ ರಕ್ತಚಂದನದಿಗ್ಧೇನ ತಥಾ ಹಾರೇಣ ಶೋಭಿನಾ । ಪೀನಾಯತ ವಿಶಾಲೇನ ವಕ್ಷಸಾಽಭಿವಿರಾಜಿತಂ ॥ ೨೬ ॥ ಪಾಂಡುರೇಣಾಪವಿದ್ಧೇನ

ಪರ್ವತೋಪಮನಾದ, ಸರಾಕ್ಷಸೇಶ್ವರಃ - ಆ ರಾಕ್ಷಸಾಧಿಪತಿಯು, ಪರಿಪೂರ್ಣಾಭ್ಯಾಂ - ಗುಂಡಗಿರುವ, ತಾಭ್ಯಾಂಭುಜಾಭ್ಯಾಂ - ಆ ತೋಳುಗಳಿಂದ, ಶೃಂಗಾಭ್ಯಾಂ - ಶಿಖರಗಳಿಂದ ಕೂಡಿದ, ಮಂದರಇವ - ಮಂದರಪರ್ವತದಂತೆ, ಶುಶುಭೇ - ಕಂಗೊಳಿಸಿದನು. ॥ ೨೨ ॥ ಚೂತ....ಭಿಃ - ಸಿಹಿಮಾವಿನ ನಾಗಕೇಸರದ ಹುವ್ವುಗಳಿಂದ ಪರಿಮಳಯುಕ್ತವಾದ, ವಕು....ತಃ - ಶ್ರೇಷ್ಠವಾದ ಪ್ರವಾಳಪುಷ್ಪಾದಿಗಳಿಂದ ಕೂಡಿರುವ, ಮೃಷ್ಟಾ....ಕ್ತಃ - ದಿವ್ಯಾನ್ನದ ರಸದಿಂದ ಸಹಿತವಾದ, ಪಾನ....ರಃ - ಮದ್ಯದ ವಾಸನೆಯಿಂದ ಕೂಡಿದ, ವಿನಿಶ್ವಾಸಃ - ನಿಟ್ಟುಸಿರು, ಶಯಾನಸ್ಯ - ಮಲಗಿರುವ, ರಾಕ್ಷಸಸಿಂಹಸ್ಯ - ರಾಕ್ಷಸಶ್ರೇಷ್ಠನಾದ, ತಸ್ಯ - ಆ ರಾವಣನ, ಮಹಾಮುಖಾತ್ - ದೊಡ್ಡ ಬಾಯಿಯಿಂದ, ತದ್ಗೃಹಂ-ಆ ಮನೆಯನ್ನು, ಪೂರಯನ್ನಿವ ತುಂಬಿಸುವಂತೆ, ನಿಶ್ಚಕ್ರಾಮ- ಹೊರಟುಬಂತು. ॥ ೨೩-೨೪ ॥ ಮುಕ್ತಾ....ಣ - ಮುತ್ತಿನ ಮಣಿಗಳಿಂದ ಆಶ್ಚರ್ಯಕರವಾದ, ಕಾಂಚನೇನ - ಬಂಗಾರದ, ಅಪವೃತ್ತೇನ - ಜಾರಿದ, ಮುಕುಟೇನ - ಕಿರೀಟದಿಂದ, ವಿರಾಜಿತಂ - ಹೊಳೆಯುತ್ತಿರುವ, ಕುಂಡ....ನಂ - ಕರ್ಣಾಭರಣಗಳಿಂದ ಪ್ರಕಾಶಮಾನವಾದ ಮುಖವುಳ್ಳ, ರಕ್ತ....ನ - ರಕ್ತಗಂಧದಿಂದ ಲೇಪಿಸಿದ, ಹಾರೇಣ - ಮಾಲಿಕೆಯಿಂದ, ಶೋಭಿನಾ - ಪ್ರಕಾಶಿಸುವ, ಪೀನಾ....ನ - ಬಲಿತಿರುವ ದೀರ್ಘವೂ ವಿಸ್ತಾರವೂ ಆದ, ವಕ್ಷಸಾ - ಎದೆಯಿಂದ, ಅಭಿವಿರಾಜಿತಂ - ಕಂಗೊಳಿಸುತ್ತಿರುವ, ಪಾಂಡುರೇಣ-ಬಿಳುಪಾದ, ಅಪವಿದ್ಧೇನ ಸ್ಥಳತಪ್ಪಿದ, ಕ್ಷೌಮೇಣ-ರೇಶ್ಮೆಯ,

ಚಾಚಿ ಮಲಗಿರಲು ಶಿಖರದ್ವಯವಿರಾಜಮಾನವಾದ ಮಂದರಗಿರಿಯನ್ನು ಹೋಲುತ್ತಿದ್ದನು. ಸಿಹಿಮಾವು, ಸುರಹೊನ್ನೆ, ವಕುಳ ಇವುಗಳ ಪುಷ್ಪಗಳ ಪರಿಮಳವನ್ನು ಹೊತ್ತು, ಮೃಷ್ಟಾನ್ನದ ಷಡ್ರಸಗಳಿಂದ ಕೂಡಿ ದ್ರಾಕ್ಷಾಸವಾದಿ ವಿವಿಧಾಸವಗಳ ವಾಸನೆಯಿಂದೊಪ್ಪಿ ಹೊರಬರುತ್ತಿದ್ದ, ನಿದ್ರಾಸಕ್ತನಾಗಿದ್ದ ಆ ರಾವಣನ ನಿಶ್ವಾಸಮಾರುತವು ಆ ಕ್ರೀಡಾಭವನದ ಎಲ್ಲೆಡೆಯಲ್ಲಿಯೂ ತುಂಬಿದ್ದಿತು. ॥೨೨–೨೪॥ ನವರತ್ನಗಳೂ, ಮುಕ್ತಾಫಲಗಳೂ ಒಂದಾಗಿ ಕೂಡಿಸಿದ್ದುದರಿಂದ ನಾನಾವರ್ಣಗಳುಳ್ಳದಾಗಿಯೂ, ಸುವರ್ಣರಚಿತವಾಗಿಯೂ, ಸ್ವಲ್ಪಮಾತ್ರ ಸ್ಥಳತಪ್ಪಿದವುಗಳಾಗಿಯೂ ಇರುವ ಕಿರೀಟದಿಂದ ಪ್ರಕಾಶಿಸುತ್ತಿರುವವನೂ, ಕರ್ಣಕುಂಡಲಗಳಿಂದ ಬೆಳಗುತ್ತಿರುವ ಮುಖವುಳ್ಳವನೂ, ಹಾರಗಳಿಂದಲೂ, ರಕ್ತಗಂಧಲೇಪನದಿಂದಲೂ ಶೋಭಿಸುತ್ತಿರುವವನೂ, ಬಲಿತು ವಿಶಾಲವಾದ ಎದೆಯಿಂದೊಪ್ಪುತ್ತಿರುವವನೂ, ಶುಕ್ಲವಸ್ತ್ರವನ್ನು

* "ರಾಜಸ್ಯ" ತಿ. ಪಾ.

ಕ್ಷೈವೇಣ ಕ್ಷತಜೇಕ್ಷಣಂ। ಮಹಾರ್ಹೇಣ ಸುಸಂವೀತಂ ಪೀತೇನೋತ್ತಮವಾಸಸಾ ॥ ೨೭ ॥ ಮಾಷರಾಶಿಪ್ರತೀಕಾಶಂ ನಿಶ್ಶ್ವಸಂತಂ ಭುಜಂಗವತ್ । ಗಾಂಗೇ ಮಹತಿ ತೋಯಾಂತೇ ಪ್ರಸುಪ್ತಮಿವ ಕುಂಜರಂ ॥ ೨೮ ॥ ಚತುರ್ಭಿಃ ಕಾಂಚನೈರ್ದೀಪೈರ್ದೀಪ್ಯಮಾನಚತುರ್ದಿಶಂ । ಪ್ರಕಾಶೀಕೃತಸರ್ವಾಂಗಂ ಮೇಘಂ ವಿದ್ಯುದ್ಗಣೈರಿವ ॥ ೨೯ ॥ ಪಾದಮೂಲಗತಾಶ್ಚಾಪಿ ದದರ್ಶ ಸುಮಹಾತ್ಮನಃ । ಪತ್ನೀಸ್ಸಪ್ರಿಯಭಾರ್ಯಸ್ಯ ತಸ್ಯ ರಕ್ಷಃಪತೇರ್ಗೃಹೇ ॥ ೩೦ ॥ ಶಶಿಪ್ರಕಾಶವದನಾ ಶ್ಚಾರುಕುಂಡಲಭೂಷಿತಾಃ । ಅವಮ್ಲಾನಮಾಲ್ಯಾಭರಣಾ ದದರ್ಶ ಹರಿಯೂಥಪಃ ॥ ೩೧ ॥ ನೃತ್ತ

ಪೀತೇನ - ಹಳದಿ ಬಣ್ಣವುಳ್ಳ, ಮಹಾರ್ಹೇಣ - ಅಮೂಲ್ಯವಾದ, ಉತ್ತಮವಾಸಸಾ - ಉತ್ತಮಾಂಬರದಿಂದ, ಸುಸಂವೀತಂ - ಚನ್ನಾಗಿ ಆಚ್ಛಾದಿತನಾದ, ಮಾಷ....ಶಂ ಉದ್ದಿನರಾಶಿಗೆ ಸಮಾನವಾದ, ಭುಜಂಗವತ್ - ಹಾವಿನಂತೆ, ನಿಶ್ವಸಂತಂ - ನಿಟ್ಟುಸಿರುಬಿಡುತ್ತಿರುವ, ಮಹತಿ - ಮಹತ್ತರವಾದ, ಗಾಂಗೇ-ಗಂಗೆಯ, ತೋಯಾಂತೇ - ನೀರಿನ ದಡದಲ್ಲಿ, ಪ್ರಸುಪ್ತಂ - ನಿದ್ರಿಸುತ್ತಿರುವ, ಕುಂಜರಮಿವ-ಆನೆಯಂತಿರುವ, ಕಾಂಚನೈಃ - ಬಂಗಾರದ ಕಂಭಗಳ ಮೇಲಿರುವ, ಚತುರ್ಭಿಃ - ನಾಲ್ಕಾದ, ದೀಪೈಃ-ದೀಪಗಳಿಂದ, ದೀಪ್ಯ....ಶಂ - ಹೊಳೆಯುತ್ತಿರುವ ನಾಲ್ಕುದಿಕ್ಕುಗಳುಳ್ಳ, ಪ್ರಕಾ....ಗಂ - ಕಂಗೊಳಿಸಿದ ಎಲ್ಲಾ ಅವಯುವಗಳುಳ್ಳವನಾದಕಾರಣ, ವಿದ್ಯುದ್ಗಣೈಃ-ಮಿಂಚುಗಳ ಸಮೂಹಗಳಿಂದ ಕೂಡಿದ, ಮೇಘಮಿವ - ಮೋಡದಂತಿರುವ ರಾವಣಾಸುರನನ್ನೂ, ಸುಮಹಾತ್ಮನಃ - ದೀರ್ಘಶರೀರವುಳ್ಳ, ಪ್ರಿಯಭಾರ್ಯಸ್ಯ - ಇಷ್ಟಸತಿಗಳುಳ್ಳ, ತಸ್ಯರಕ್ಷಪತೇಃ - ಆ ರಾವಣನ, ಪಾದ....ತಾಃ - ಕಾಲು ಕೆಳಗಿನ ಪ್ರದೇಶವನ್ನು, ಗತಾಃ - ಹೊಂದಿದ, ಶಶಿ....ನಾಃ - ಚಂದ್ರನ ಕಾಂತಿಯುಳ್ಳ, ವದನಾಃ - ಮುಖಗಳುಳ್ಳ, ಚಾರು....ತಾಃ - ಮನೋಹರಗಳಾದ ಕರ್ಣಾಭರಣಗಳಿಂದ ಅಲಂಕೃತರಾದ, ಅಮ್ಲಾ....ಣಾಃ - ಬಾಡದಿರುವ ಪುಷ್ಪಮಾಲಿಕೆಗಳೇ ಒಡವೆಗಳಾಗಿ ಉಳ್ಳ, ಪತ್ನೀಃ-ಹೆಂಡತಿಯರನ್ನು, ಗೃಹೇ - ಶಯನಗೃಹದಲ್ಲಿ, ಸಹರಿಯೂಥಪಃ - ಆ ವಾನರಶ್ರೇಷ್ಠನು, ದದರ್ಶ - ಕಂಡನು. ॥೨೫-೩೧॥ ಹರಿಃ - ಆಂಜನೇಯನು, ನೃತ್ತ....ಲಾಃ - ನಾಟ್ಯದಲ್ಲಿಯೂ ನಾಲ್ಕು ಬಗೆಯ ವಾದ್ಯಗಳಲ್ಲಿಯೂ

ಧರಿಸಿರುವವನೂ, ಕೆಂಗಣ್ಣುಗಳುಳ್ಳವನೂ, ಬಹು ಶ್ರೇಷ್ಠವಾದ ಪೀತಾಂಬರವನ್ನು ಹೊದ್ದಿರುವವನೂ, ಉದ್ದಿನ ರಾಶಿಯಂತೊಪ್ಪಿ ಮಹಾ ಸರ್ಪಗಳಂತೆ ನಿಟ್ಟುಸಿರು ಬಿಡುತ್ತ ಗಂಗಾಪ್ರವಾಹದಲ್ಲಿ ಸುಖವಾಗಿ ನಿದ್ರಿಸುತ್ತಿರುವ ಮದಗಜದಂತಿರುವವನೂ, ನಾಲ್ಕೂ ದಡಗಳಲ್ಲಿರುವ ಸುವರ್ಣಸ್ತಂಭಗಳಲ್ಲಿನ ದೀಪಕಾಂತಿಗಳಿಂದ ಬೆಳಗುತ್ತಿರುವ ಸರ್ವಾವಯುವಗಳುಳ್ಳವನಾಗಿ ಮಿಂಚುಗಳೊಡಗೂಡಿದ ಮೇಘದಂತಿರುವವನೂ, ರಾಕ್ಷಸೇಶ್ವರನೂ, ಆದ ಆ ರಾವಣನು ಸುಖವಾಗಿ ನಿದ್ರಿಸುತ್ತಿರಲು ಅವನ ಪಾದಮೂಲದಲ್ಲಿ ಅವನ ಪ್ರಿಯಪತ್ನಿಯರೆಲ್ಲರೂ ನಿದ್ರಿಸುತ್ತಿರುವುದನ್ನು ಕಪಿಶ್ರೇಷ್ಠನಾದ ಆ ಹನುಮಂತನು ಕಂಡವನಾದನು. ॥ ೨೫–೩೦ ॥ ಅಲ್ಲಿ ಮಲಗಿದ್ದ ಸುಂದರಸ್ತ್ರೀಯರು ಚಂದ್ರಬಿಂಬದಂತೆ ಪ್ರಕಾಶಿಸುತ್ತಿರುವ ಮುಖಬಿಂಬವುಳ್ಳವರಾಗಿ, ಮನೋಹರವಾದ ಕರ್ಣಕುಂಡಲಗಳನ್ನು ಧರಿಸಿ, ಬಾಡದ ಪುಷ್ಪಮಾಲಿಕೆಗಳನ್ನು ತಳೆದು ಶೋಭಿಸುತ್ತಿದ್ದರು. ನೃತ್ಯದಲ್ಲಿಯೂ ವಾದ್ಯವಾದನಗಳಲ್ಲಿಯೂ ಕೌಶಲವುಳ್ಳವರೂ, ರಾಕ್ಷಸೇಶ್ವರನಾದ ಆ ರಾವಣನಿಂದ ಆಲಿಂಗಿತರಾದವರೂ, ಶ್ರೇಷ್ಠವಾದ

ನಾದಿತ್ರಕುಶಲಾ ರಾಕ್ಷಸೇಂದ್ರ ಭುಜಾಂಕಗಾಃ । ವರಾಭರಣಧಾರಿಣ್ಯೋ ನಿಷಣ್ಣಾ ದದೃಶೇ ಹರಿಃ ॥ ೩೨ ॥ ವಜ್ರವೈಡೂರ್ಯಗರ್ಭಾಣಿ ಶ್ರವಣಾಂತೇಷು ಯೋಷಿತಾಂ। ದದರ್ಶ ತಾಪನೀಯಾನಿ ಕುಂಡಲಾನ್ಯಂಗದಾನಿಚ ॥ ೩೩ ॥ ತಾಸಾಂ ಚಂದ್ರೋಪಮೈರ್ವಕ್ತ್ರೈ ಶ್ಶುಭೈ ರ್ಲಲಿತಕುಂಡಲೈಃ । ವಿರರಾಜ ವಿಮಾನಂ ತನ್ನಭಸ್ತಾರಾಗಣೈರಿವ ॥ ೩೪ ॥ ಮದವ್ಯಾಯಾಮಖಿನ್ನಾಸ್ತಾ ರಾಕ್ಷಸೇಂದ್ರಸ್ಯ ಯೋಷಿತಃ । ತೇಷು ತೇಷ್ವವಕಾಶೇಷು ಪ್ರಸುಪ್ತಾ ಸ್ತನುಮಧ್ಯಮಾಃ ॥ ೩೫ ॥ * ಅಂಗಹಾರೈ ಸ್ತಥೈವಾನ್ಯಾ ಕೋಮಲೈರ್ನೃತ್ತಶಾಲಿನೀ । ವಿನ್ಯಸ್ತ ಶುಭಸರ್ವಾಂಗೀ ಪ್ರಸುಪ್ತಾ ವರವರ್ಣಿನೀ

ಚತುರರಾದ, ರಾಕ್ಷ....ಗಾಃ-ರಾವಣನ ಬಾಹುಗಳ ಸಮೀಪವನ್ನು ಕುರಿತು ಹೋಗುವ, ವರಾ....ಣ್ಯಃ-ಉತ್ತಮಾಭರಣಗಳನ್ನು ಧರಿಸಿರುವ, ನಿಷಣ್ಣಾಃ - ಮಲಗಿರುವ ಹೆಂಗಳನ್ನು, ದದೃಶೇ - ಕಂಡನು. ॥ ೩೨ ॥ ವಜ್ರ....ಣಿ - ವಜ್ರವೈಡೂರ್ಯಮಣಿಗಳೇ ಗರ್ಭಗಳಲ್ಲಿ ಉಳ್ಳ, ತಾಪನೀಯಾನಿ - ಅಪರಂಜಿಯ, ಕುಂಡಲಾನಿ - ಕರ್ಣಾಭರಣಗಳನ್ನೂ, ಅಂಗದಾನಿಚ - ಬಾಹುಜಿಗೆಗಳನ್ನೂ, ಯೋಷಿತಾಂ - ಸ್ತ್ರೀಯರ, ಶ್ರವಣಾಂತೇಷು - ಕರ್ಣಾಂತಗಳಲ್ಲಿ, ದದರ್ಶ - ಕಂಡನು. ॥ ೩೩ ॥ ತದ್ವಿಮಾನಂ - ಆ ಶಯನಗೃಹವು, ಶುಭೈಃ - ಶುಭಕರಗಳಾದ, ಲಲಿತಕುಂಡಲೈಃ - ಮನೋಹರಗಳಾದ ತಾಟಂಕಗಳುಳ್ಳ, ಚಂದ್ರೋಪಮೈಃ - ಚಂದ್ರಸದೃಶಗಳಾದ, ತಾಸಾಂ - ಆ ಹೆಂಗಳ, ವಕ್ತ್ರೈಃ - ಮುಖಗಳಿಂದ, ತಾರಾಗಣೈಃ-ನಕ್ಷತ್ರಸಮೂಹಗಳಿಂದ ಕೂಡಿದ, ನಭಇವ-ಅಂತರಿಕ್ಷದಂತೆ, ವಿರರಾಜ-ಹೊಳೆಯುತ್ತಿದ್ದಿತು. ॥೩೪॥ ಮದ....ನ್ನಾಃ-ಮದಾಧಿಕ್ಯದಿಂದ ಬಳಲಿದ, ತನುಮಧ್ಯಮಾಃ-ಸೂಕ್ಷ್ಮವಾದ ಮಧ್ಯಪ್ರದೇಶಗಳುಳ್ಳ, ತಾಃ - ಆ ಸುಂದರಿಯರಾದ, ರಾಕ್ಷಸೇಂದ್ರಸ್ಯ - ರಾವಣಾಸುರನ, ಯೋಷಿತಃ - ಸ್ತ್ರೀಯರು, ತೇಷುತೇಷುಅವಕಾಶೇಷು - ಆಯಾಸ್ಥಳಗಳಲ್ಲಿ, ಪ್ರಸುಪ್ತಾಃ - ಮಲಗಿದ್ದರು. ॥ ೩೫ ॥ ತಥೈವ - ಹಾಗೆಯೇ, ನೃತ್ತಶಾಲಿನೀ - ನರ್ತನದಿಂದೊಪ್ಪುತ್ತಿರುವ, ಅನ್ಯಾವರವರ್ಣಿನೀ - ಮತ್ತೊಬ್ಬ ಹೆಂಗುಸು, ಕೋಮಲೈಃ - ಮನೋಹರಗಳಾದ, ಅಂಗಹಾರೈಃ - ಕುಣಿಯುವ ಕಾಲದಲ್ಲಿ ಉಂಟಾದ ಚಲನವಲನಗಳಿಂದ, ವಿನ್ಯ...ಗೀ - ಇಡಲ್ಪಟ್ಟ ಶುಭಕರಗಳಾದ ಸರ್ವಾವಯವಗಳುಳ್ಳವಳಾಗಿ, ಪ್ರಸುಪ್ತಾಃ - ನಿದ್ರೆಗೈಯ್ಯುತ್ತಿದ್ದಳು. ॥೩೬॥ ಕಾಚಿತ್ - ಮತ್ತೋರ್ವಳು, ವೀಣಾಂ - ವೀಣೆಯನ್ನು,

---

ಆಭರಣಗಳನ್ನು ಧರಿಸಿರುವವರೂ ಆದ ಆ ಸ್ತ್ರೀಯರು ಬಹು ಮನೋಹರವಾಗಿ ಕಾಣುತ್ತಿದ್ದರು. ಅವರು ಧರಿಸಿದ್ದ ಸುವರ್ಣಖಚಿತವಾಗಿ ವಜ್ರವೈಡೂರ್ಯಗಳ ಕೆತ್ತನೆ ಕೆಲಸದಿಂದ ಕೂಡಿದ ಕರ್ಣಕುಂಡಲಗಳೂ, ಅಂಗದಗಳೂ ಬಹುವಾಗಿ ವಿರಾಜಿಸುತ್ತಿದ್ದವು. ಆಗಲಾ ಹಂಸತೂಲಿಕಾತಲ್ಪವು, ಚಂದ್ರನನ್ನು ಹೋಲುವ ಆ ಸ್ತ್ರೀಯರ ಮುಖಗಳಿಂದಲೂ, ಅವರು ಧರಿಸಿರುವ ನಕ್ಷತ್ರಗಳನ್ನು ಹೋಲುವ ಕರ್ಣಕುಂಡಲಗಳಿಂದಲೂ, ನಕ್ಷತ್ರಗಳೊಡಗೂಡಿದ ಚಂದ್ರನುಳ್ಳ ಗಗನದಂತೆ ವಿರಾಜಿಸುತ್ತಿದ್ದಿತು. ॥ ೩೧–೩೪ ॥ ಸೂಕ್ಷ್ಮವಾದ ತನುಮಧ್ಯಪ್ರದೇಶವುಳ್ಳ ರಾಕ್ಷಸಸುಂದರಿಯರು ಮಧುಪಾನದಿಂದುಂಟಾದ ಮದದಿಂದಲೂ, ಅತ್ಯಾಯಾಸದಿಂದಲೂ, ಖಿನ್ನರಾಗಿ ರಾಕ್ಷಸಸ್ತ್ರೀಯರಿಂದ ತುಂಬಿದ ಆ ಕ್ರೀಡಾಭವನದಲ್ಲಿ ಮಲಗಿ

---

* (ಗೋ) ಇಲ್ಲಿ, "ಅಂಗಹಾರ" ಶಬ್ದಕ್ಕೆ ಆಂಗಿಕ ಚೇಷ್ಟೆಯೆಂದು ಅರ್ಥ. "ಅಂಗಾನಾಂ ಯೋಗ್ಯದೇಶೇಷು ಹರಣೇನ ಯಥೋಚಿತಂ । ಅಂಗನಿರ್ವರ್ತನೀಯತ್ವಾದಂಗಹಾರಸ್ತಥೋಚ್ಯತೇ ॥" (ಭರತಶಾಸ್ತ್ರ)

॥ ೩೭ ॥ ಕಾಚಿದ್ವೀಣಾಂ ಪರಿಷ್ವಜ್ಯ ಪ್ರಸುಪ್ತಾ ಸಂಪ್ರಕಾಶತೇ । ಮಹಾನದೀಪ್ರಕೀರ್ಣೇವ ನಳಿನೀ ಪೋತಮಾಶ್ರಿತಾ ॥ ೩೭ ॥ ಅನ್ಯಾ ಕಕ್ಷಗತೇನೈವ ಮೋಡುಕೇನಾಸಿತೇಕ್ಷಣಾ । ಪ್ರಸುಪ್ತಾ ಭಾಮಿನೀ ಭಾತಿ ಬಾಲಪುತ್ರೇವ ವತ್ಸಲಾ ॥ ೩೮ ॥ ಪಟಹಂ ಚಾರುಸರ್ವಾಂಗೀ ¶ ಪೀಡ್ಯ ಶೇತೇ ಶುಭಸ್ತನೀ । ಚಿರಸ್ಯ ರಮಣಂ ಲಬ್ಧ್ವಾ ಪರಿಷ್ವಜ್ಯೇವ ಭಾಮಿನೀ ॥೩೯॥ ಕಾಚಿದ್ವಂಶಂ ಪರಿಷ್ವಜ್ಯ ಸುಪ್ತಾ ಕಮಲಲೋಚನಾ। ರಹಃ ಪ್ರಿಯತಮಂ ಗೃಹ್ಯ ಸಕಾಮೇವಚ ♆ ಕಾಮಿನೀ ॥ ೪೦ ॥ ವಿಪಂಚೀಂ ಪರಿ

ಪರಿಷ್ವಜ್ಯ - ಆಲಿಂಗಿಸಿಕೊಂಡು, ಪ್ರಸುಪ್ತಾ - ಮಲಗಿ, ಮಹಾ....ರ್ಣಾ - ದೊಡ್ಡಹೊಳೆಯಲ್ಲಿ ವ್ಯಾಪ್ತವಾಗಿ ಬರುತ್ತಿರುವ, ಪೋತಂ - ತೆಪ್ಪವನ್ನು, ಆಶ್ರಿತಾ - ಅವಲಂಬಿಸಿದ, ನಳಿನೀವ - ಕಮಲದ ಬಳ್ಳಿಯಂತೆ, ಸಂಪ್ರಕಾಶತೇ - ಹೊಳೆಯುತ್ತಿದ್ದಳು. ॥ ೩೭ ॥ ಅನ್ಯಾ - ಮತ್ತೊಬ್ಬಳಾದ, ಅಸಿತೇಕ್ಷಣಾ - ಕಪ್ಪಾಗಿರುವ ಕಣ್ಣುಗಳುಳ್ಳ, ಭಾಮಿನೀ - ಸ್ತ್ರೀಯು, ಕಕ್ಷಗತೇನ - ಕಂಕಳನ್ನೈದಿದ, ಮೋಡುಕೇನ - ಮದ್ದಳೆಯೊಡನೆ, ಪ್ರಸುಪ್ತಾ - ಮಲಗಿದ, ವತ್ಸಲಾ - ವಿಶ್ವಾಸಗಾತಿಯಾದ, ಬಾಲಪುತ್ರೇವ - ಬಾಣಂತಿಯಂತೆ, ಭಾತಿ - ಹೊಳೆಯುತ್ತಿದ್ದಳು. ॥ ೩೮ ॥ ಚಾರುಸರ್ವಾಂಗೀ - ಸುಂದರಗಳಾದ ಸರ್ವಾಯವಗಳುಳ್ಳ, ಶುಭಸ್ತನೀ - ಶುಭಕರಗಳಾದ ಕುಚಗಳುಳ್ಳ, ಭಾಮಿನೀ - ಹೆಂಗುಸು, ಪಟಹಂ - ತಪಟೆಯನ್ನು, ಪೀಡ್ಯ - ತಬ್ಬಿಕೊಂಡು, ಚಿರಸ್ಯ - ಬಹುಕಾಲಕ್ಕೆ, ರಮಣಂ - ನಾಯಕನನ್ನು, ಲಬ್ಧ್ವಾ - ಹೊಂದಿ, ಪರಿಷ್ವಜ್ಯೇವ - ಆಲಿಂಗನ ಮಾಡಿದಂತೆ, ಶೇತೇ - ಮಲಗಿದ್ದಳು. ॥ ೩೯ ॥ ಕಮ....ನಾ - ಕಮಲಾಕ್ಷಿಯಾದ, ಕಾಚಿತ್ - ಒಬ್ಬಳು, ವಂಶಂ - ವೇಣುವನ್ನು, ಪರಿಷ್ವಜ್ಯ - ಅಪ್ಪಿಕೊಂಡು, ರಹಃ - ಏಕಾಂತದಲ್ಲಿ, ಪ್ರಿಯತಮಂ - ಪತಿಯನ್ನು, ಗೃಹ್ಯ - ಹೊಂದಿ, ಸಕಾಮಾ - ಕಾಮುಕಳಾದ, ಕಾಮಿನೀವ - ಅಂಗನೆಯಂತೆ, ಸುಪ್ತಾ - ಶಯನಿಸಿದ್ದಳು. ॥ ೪೦ ॥

ದ್ದರು. ಅವರಲ್ಲಿ ನಿದ್ರಿಸುತ್ತಿದ್ದ ಒಬ್ಬ ಸುಂದರಿಯು ಕೋಮಲವಾದ ತನ್ನ ಅವಯವಗಳ ಚಲನವಲನಗಳಿಂದ ಜಾಗ್ರದವಸ್ಥೆಯಲ್ಲಿಯೆಂತೋ ನಿದ್ರಿಸುತ್ತಿರುವಾಗಲೂ ಅಂತೆಯೇ ಪೂರ್ವಸಂಸ್ಕಾರಬಲದಿಂದ ಅಭಿನಯಿಸುತ್ತಿದ್ದಳು. ಮತ್ತೊಬ್ಬಳು ವೀಣಾನಾದದಿಂದ ತನ್ನ ಪ್ರಿಯನ ಮನಸ್ಸನ್ನು ಸಂತೋಷಗೊಳಿಸಿ ಆಯಾಸಗೊಂಡು ಆ ವೀಣೆಯನ್ನೇ ಆಲಿಂಗಿಸಿ ನಿದ್ರಿಸುತ್ತ ಮಹಾ ನದಿಯಲ್ಲಿ ಹರಡಿದ ತಾವರೆಯ ಬಳ್ಳಿಯು ಒಂದು ತೆಪ್ಪವನ್ನು ಹೊಂದಿ ವಿಶ್ರಮಿಸಿಕೊಳ್ಳುತ್ತಿದ್ದಂತೆ ಪ್ರಕಾಶಿಸುತ್ತಿದ್ದಳು. ಮಗದೊಬ್ಬ ಸುಂದರಿಯು ತನ್ನ ಕಕ್ಷಭಾಗವನ್ನು ಹೊಂದಿರುವ ಮೋಡುಕವಾದ್ಯದಿಂದ ತನ್ನಪ್ರಿಯನನ್ನುಸಂತೋಷಗೊಳಿಸಿ ಮಧ್ಯರಾತ್ರಿಯಲ್ಲಿ ಹಾಗೆಯೇ ಅದನ್ನುಧರಿಸಿ ಮಲಗಿರಲು, ತಾಯಿಯಾದವಳು ವಾತ್ಸಲ್ಯದಿಂದ ಎಳೆಗೂಸನ್ನು ಮಗ್ಗುಲಿನಲ್ಲಿಟ್ಟುಕೊಂಡು ಮಲಗಿರುವಂತೆ ಕಾಣುತ್ತಿದ್ದಳು. ಸರ್ವಾಂಗಸುಂದರಿಯಾದ ಮತ್ತೊಬ್ಬಳು, ಪಟಹವನ್ನಪ್ಪಿ ಮಲಗಿರಲು ತನ್ನ ರಮಣನನ್ನಾಲಿಂಗಿಸಿ ಮಲಗಿರುವರಮಣಿಯಂತೆ ಶೋಭಿಸುತ್ತಿದ್ದಳು. ಇನ್ನೊಬ್ಬಳು ವೇಣುವನ್ನು ನುಡಿಸುತ್ತಿದ್ದು ನಿದ್ರಾಕಾಲದಲ್ಲಿ ಅದನ್ನಾಲಿಂಗಿಸಿ ಮಲಗಿರಲು ರಹಸ್ಯವಾಗಿ ತನ್ನ ವಲ್ಲಭನನ್ನಪ್ಪಿ ಮಲಗಿದ್ದ ಕಾಮಿನಿಯಂತೊಪ್ಪುತ್ತಿದ್ದಳು. ॥ ೩೫–೪೦ ॥ ಮತ್ತೋರ್ವಳು ವಿಪಂಚಿಕೆಯನ್ನು ನುಡಿ

¶ "ನ್ಯಸ್ಯ" ತಿ. ಪಾ. ♆ "ವರಂ" ತಿ. ಪಾ.

ಗೃಹ್ಯಾನ್ಯಾ ನಿಯತಾ ನೃತ್ತಶಾಲಿನೀ । ನಿದ್ರಾವಶ ಮನುಪ್ರಾಪ್ತಾ ಸಹಕಾಂತೇನ ಭಾಮಿನೀ ॥ ೪೧ ॥ ಅನ್ಯಾ ಕನಕಸಂಕಾಶೈ ರ್ಮೃದುಪೀನೈ ರ್ಮನೋರಮೈಃ । ಮೃದಂಗಂ ಪರಿಪೀಡ್ಯಾಂಗೈಃ ಪ್ರಸುಪ್ತಾ ಮತ್ತಲೋಚನಾ ॥ ೪೨ ॥ ಭುಜ \$ಪಾರ್ಶ್ವಾಂತರಸ್ಥೇನ ಕಕ್ಷಗೇನ ಕೃಶೋದರೀ । ಪಣವೇನ ಸಹಾನಿಂದ್ಯಾ ಸುಪ್ತಾ ಮದಕೃತಶ್ರಮಾ ॥ ೪೩ ॥ ಡಿಂಡಿಮಂ ಪರಿಗೃಹ್ಯಾನ್ಯಾ ತಥೈವಾಸಕ್ತಡಿಂಡಿಮಾ । ಪ್ರಸುಪ್ತಾ ತರುಣಂ ವತ್ಸಮುಪಗೂಹ್ಯೇವ ಭಾಮಿನೀ ॥ ೪೪ ॥ ಕಾಚಿದಾಡಂಬರಂ ನಾರೀ ಭುಜಸಂಯೋಗಪೀಡಿತಂ । ಕೃತ್ವಾ ಕಮಲಪತ್ರಾಕ್ಷೀ ಪ್ರಸುಪ್ತಾ ಮದ

ನೃತ್ತಶಾಲಿನೀ - ಕುಣಿಯುತ್ತಿರುವ, ನಿಯತಾ - ಏಕಾಗ್ರಚಿತ್ತಳಾದ, ಅನ್ಯಾ - ಮತ್ತೋರ್ವಳಾದ, ಭಾಮಿನೀ - ಸ್ತ್ರೀಯು, ವಿಪಂಚೀಂ - ವಿಪಂಚಿಕೆಯನ್ನು, ಪರಿಗೃಹ್ಯ - ಸ್ವೀಕರಿಸಿ, ಸಹಕಾಂತೇವ - ಪತಿಯಿಂದೊಡಗೂಡಿದವಳಂತೆ, ನಿದ್ರಾವಶಂ - ನಿದ್ರಾಧೀನವನ್ನು, ಅನುಪ್ರಾಪ್ತಾ - ಹೊಂದಿದ್ದಳು. ॥ ೪೧ ॥ ಮತ್ತಲೋಚನಾ - ಮದವೇರಿದ ಕಣ್ಣುಗಳುಳ್ಳ, ಅನ್ಯಾ - ಮತ್ತೊಬ್ಬಳು, ಕನ....ಶೈಃ - ಚಿನ್ನಕ್ಕೆ ಸದೃಶಗಳಾದ, ಮೃದುಪೀನೈಃ - ಮೆತ್ತಗಿರುವ, ಮನೋರಮೈಃ - ಮನೋಹರಗಳಾದ, ಅಂಗೈಃ - ಅವಯವಗಳಿಂದ, ಮೃದಂಗಂ - ಮದ್ದಳೆಯನ್ನು, ಪರಿಪೀಡ್ಯ - ಆಲಿಂಗಿಸಿ, ಪ್ರಸುಪ್ತಾ - ಮಲಗಿದ್ದಳು. ॥ ೪೨ ॥ ಮದ....ಮಾ - ಮತ್ತತೆಯಿಂದ ಆಯಾಸಗೊಂಡ, ಅನಿಂದ್ಯಾ - ಉತ್ತಮಳಾದ, ಕೃಶೋದರೀ - ಹೆಂಗುಸು, ಭುಜ....ನ - ಬಾಹುಗಳ ಪಕ್ಕಗಳ ಮಧ್ಯೆ ಇರುವ, ಕಕ್ಷಗೇನ - ಕಂಕಳನ್ನು ಹೊಂದಿದ, ಪಣವೇನಸಹಾ - ವಾದ್ಯವಿಶೇಷದೊಡನೆ, ಸುಪ್ತಾ - ನಿದ್ದೆಹೋದಳು. ॥ ೪೩ ॥ ತಥೈವ - ಹಾಗೆಯೇ, ಅನ್ಯಾಭಾಮಿನೀ - ಮತ್ತೊಬ್ಬಳು, ಡಿಂಡಿಮಂ - ಢಕ್ಕೆಯನ್ನು, ಪರಿಗೃಹ್ಯ - ಹಿಡಿದು, ಆಸಕ್ತಡಿಂಡಿಮಾ - ಸಂಬಂಧಿಸಿದ ಮತ್ತೊಂದು ಢಕ್ಕೆಯುಳ್ಳವಳಾಗಿ, ತರುಣಂ- ತಾರುಣ್ಯವುಳ್ಳ, ವತ್ಸಂ - ಹುಡುಗನನ್ನು, ಉಪಗೂಹ್ಯ - ಆಲಿಂಗಿಸಿ, ಪ್ರಸುಪ್ತೇವ - ಶಯನಿಸಿದವಳಂತಿದ್ದಳು. ॥ ೪೪ ॥ ಕಮ....ಕ್ಷೀ - ಕಮಲದಳಗಳಂತೆ ನೇತ್ರಗಳುಳ್ಳ, ಮದಮೋಹಿತಾ - ಮತ್ತತೆಯಿಂದ ಪ್ರಜ್ಞೆತಪ್ಪಿದ, ಕಾಚಿನ್ನಾರೀ - ಒಬ್ಬ ಹೆಂಗುಸು, ಆಡಂಬರಂ - ತೂರ್ಯವೆಂಬ ವಾದ್ಯವನ್ನು, ಭುಜ....ತಂ - ಬಾಹುಗಳ ಸಂಯೋಗದಿಂದ ಬಾಧಿತವಾಗಿ, ಕೃತ್ವಾ - ಮಾಡಿ, ಪ್ರಸುಪ್ತಾ - ನಿದ್ದೆ

ಸುತ್ತ ನರ್ತನದಿಂದೊಪ್ಪಿ ಅದನ್ನು ಮೊಗ್ಗಲಿನಲ್ಲಿಟ್ಟುಕೊಂಡು ಮಲಗಿರಲು, ನಿದ್ರಿತನಾದ ಕಾಂತನ ಪಾರ್ಶ್ವದಲ್ಲಿ ಮಲಗಿರುವ ಸುಂದರಸ್ತ್ರೀಯಂತೆ ತೋರುತ್ತಿದ್ದಳು. ಮದಿರೇಕ್ಷಣೆಯಾದ ಮತ್ತೊಬ್ಬಲಲನೆಯು ಹೊಂಬಣ್ಣದಿಂದ ಹೊಳೆಯುತ್ತ, ಮೃದುವಾಗಿಯೂ, ಬಲಿತು ಮನೋಹರವಾಗಿಯೂ ಇರುವ ತನ್ನ ಅಂಗಗಳಿಂದ ಮೃದಂಗವನ್ನಪ್ಪಿಕೊಂಡು ನಿದ್ರಿಸುತ್ತಿದ್ದಳು. ಸೂಕ್ಷ್ಮವಾದ ಸೊಂಟವುಳ್ಳ ಮತ್ತೊಬ್ಬ ಕೋಮಲೆಯು ತನ್ನ ಸೊಂಟವನ್ನಾಶ್ರಯಿಸಿದ್ದ ಪಣವವೆಂಬ ವಾದ್ಯದೊಡನೆ ನಿದ್ರಿಸುತ್ತಿದ್ದಳು. ಡಿಂಡಿಮ ವಾದ್ಯವನ್ನು ಬಾರಿಸುತ್ತಿದ್ದ ಮುಗದೊಬ್ಬಳು ಅದನ್ನು ಮೊಗ್ಗುಲಿನಲ್ಲಿಟ್ಟುಕೊಂಡು ಮಲಗಿರುವ ಎಳೆಗೂಸನ್ನಪ್ಪಿ ನಿದ್ರಿಸುತ್ತಿರುವ ಸ್ತ್ರೀಯಂತೆ ಕಾಣುತ್ತಿದ್ದಳು. ಇನ್ನೊಬ್ಬಳು ತುತ್ತೂರಿ (ಆಡಂಬರವಾದ್ಯ) ಯನ್ನು ಬಾರಿಸುತ್ತ ಮದ್ಯಪಾನದ ಮದವೇರಿ ಹಾಗೆಯೇ ನಿದ್ರಿಸುತ್ತಿದ್ದಳು. ॥ ೪೧–೪೫ ॥

\$ "ಪಾಶಾಂತರಸ್ಥೇನ" ಕ. ತಿ. ಪಾ.

ವೋಹಿತಾ ॥ ೪೫ ॥ ಕಲಶೀಂ ಮಪವಿದ್ಧ್ಯಾನ್ಯಾ ಪ್ರಸುಪ್ತಾ ಭಾತಿ ಭಾಮಿನೀ । ವಸಂತೇ ಪುಷ್ಪಶಬಳಾ ಮಾಲೇವ ಪರಿಮಾರ್ಜಿತಾ ॥ ೪೬ ॥ ಪಾಣಿಭ್ಯಾಂಚ ಕುಚೌ ಕಾಚಿತ್ಸುವರ್ಣಕಲಶೋಪಮೌ । ಉಪಗೂಹ್ಯಾಬಲಾ ಸುಪ್ತಾ ನಿದ್ರಾಬಲ§ ಪರಾಜಿತಾ ॥೪೭॥ ಅನ್ಯಾಕಮಲಪತ್ರಾಕ್ಷೀ ಪೂರ್ಣೇಂದು ಸದೃಶಾನನಾ । ಅನ್ಯಾಮಾಲಿಂಗ್ಯ ಸುಶ್ರೋಣೀಂ ಪ್ರಸುಪ್ತಾ ಮದವಿಹ್ವಲಾ ॥೪೮॥ ಆತೋದ್ಯಾನಿ ವಿಚಿತ್ರಾಣಿ ಪರಿಷ್ವಜ್ಯ ವರಸ್ತ್ರಿಯಃ । ನಿಪೀಡ್ಯ ಚ ಕುಚೈಸ್ಸುಪ್ತಾಃ ಕಾಮಿನ್ಯಃ ಕಾಮುಕಾನಿವ ॥ ೪೯ ॥ ತಾಸಾಮೇಕಾಂತ

ಹೋದಳು. ॥೪೫॥ ಅನ್ಯಾಭಾಮಿನೀ - ಮತ್ತೊಬ್ಬಳು, ಕಲಶೀಂ - ಗಂಧ ತುಂಬಿದ ಹೂಜಿಯನ್ನು, ಅಪವಿಧ್ಯ - ಹೊರಳಿಸಿ, ಪ್ರಸುಪ್ತಾ - ಮಲಗಿ, ವಸಂತೇ - ವಸಂತಕಾಲದಲ್ಲಿ, ಪುಷ್ಪಶಬಳಾ - ಹುವ್ವುಗಳಿಂದ ವ್ಯಾಪ್ತವಾದ, ಪರಿಮಾರ್ಜಿತಾ - ಸೆನೆಯಿಸಲ್ಪಟ್ಟ, ಮಾಲೇವ - ಹೂಸರದಂತೆ, ಭಾತಿ - ಕಂಗೊಳಿಸಿದಳು. ॥೪೬॥ ನಿದ್ರಾ....ತಾ - ನಿದ್ರಾಧಿಕ್ಯದಿಂದ ಅಸ್ವತಂತ್ರಳಾದ, ಕಾಚಿದಬಲಾ - ಒಬ್ಬ ಯುವತಿಯು, ಸುವ....ಮೌ - ಭಂಗಾರದ ಕಲಶಗಳಿಗೆ ಸಮಾನಳಾದ, ಕುಚೌ - ಸ್ತನಗಳನ್ನು, ಪಾಣಿಭ್ಯಾಂ - ಹಸ್ತಗಳಿಂದ, ಉಪಗೂಹ್ಯ - ಮರೆಮಾಡಿಕೊಂಡು, ಸುಪ್ತಾ - ಶಯನಿಸಿದ್ದಳು. ॥ ೪೭ ॥ ಕಮ....ಕ್ಷೀ - ಕಮಲನೇತ್ರಗಳುಳ್ಳ, ಪೂರ್ಣೇಂ....ನಾ - ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳ, ಮದವಿಸ್ವಲಾ - ಪ್ರಾಯಮದದಿಂದ ಪ್ರಜ್ಞಾಹೀನಳಾದ, ಅನ್ಯಾ - ಮತ್ತೊಬ್ಬಳು, ಅನ್ಯಾಂಸುಶ್ರೋಣೀಂ - ಮತ್ತೊಬ್ಬಹೆಂಗುಸನ್ನು, ಆಲಿಂಗ್ಯ - ಆಲಿಂಗನೆ ಮಾಡಿಕೊಂಡು, ಪ್ರಸುಪ್ತಾ- ನಿದ್ರೆಗೈಯ್ಯುತ್ತಿದ್ದಳು. ॥೪೮॥ ವರಸ್ತ್ರಿಯಃ-ಉತ್ತಮ ಸ್ತ್ರೀಯರು, ವಿಚಿತ್ರಾಣಿ-ಆಶ್ಚರ್ಯಕರಗಳಾದ, ಆತೋದ್ಯಾನಿ - ಚತುರ್ವಿಧ ವಾದ್ಯಗಳನ್ನು, ಪರಿಷ್ವಜ್ಯ - ಆಲಿಂಗಿಸಿ, ಕಾಮಿನ್ಯಃ - ಕಾಮುಕಿಯರಾದ ಸ್ತ್ರೀಯರು, ಕಾಮುಕಾನ್ - ವಿಟಪುರುಷರನ್ನು, ಕುಚೈಃ - ಸ್ತನಗಳಿಂದ, ನಿಪೀಡ್ಯೇವ - ಒತ್ತಿಕೊಂಡ ಹಾಗೆ, ಸುಪ್ತಾಃ - ಮಲಗಿದ್ದರು. ॥೪೯॥ ಸಕಪಿಃ - ಆ ಆಂಜನೇಯನು, ತಾಸಾಂ - ಆ ಸ್ತ್ರೀಯರಲ್ಲಿ, ಏಕಾಂತವಿನ್ಯಸ್ತೇ - ಪ್ರತ್ಯೇಕವಾಗಿ ಹಾಸಿದ್ದ, ಶುಭೇ - ಶುಭಕರವಾದ, ಶಯನೇ - ಹಾಸಿಗೆಯಲ್ಲಿ,

---

ಒಬ್ಬ ರಮಣಿಯು ಕುಂಕುಮಕೇಸರಿಯೇ ಮೊದಲಾದ ಸುಗಂಧದ್ರವ್ಯಗಳಿಂದ ಮಾಡಿದ ಗಂಧವನ್ನುತುಂಬಿದ್ದ ಸುವರ್ಣಪಾತ್ರೆಯನ್ನುತರುತ್ತಿರಲು ಆ ಪಾತ್ರೆಯಲ್ಲಿದ್ದ ಗಂಧವು ತುಳುಕಿ ಅದರ ಬಿಂದುಗಳಿಂದ ವ್ಯಾಪ್ತವಾದ ದೇಹವುಳ್ಳವಳಾಗಿ ಮಲಗಿರಲು ವಸಂತಋತುವಿನಲ್ಲಿ ವಿಚಿತ್ರವಾದ ವಿವಿಧವಾದ ಪುಷ್ಪಗಳಿಂದ ರಚಿತವಾಗಿ ನೀರ್ಪನಿಗಳೊಡಗೂಡಿದ ಪುಷ್ಪಮಾಲಿಕೆಯಂತೆ ಶೋಭಿಸುತ್ತಿದ್ದಳು. ಮತ್ತೊಬ್ಬಳು ಕಾಂಚನಕಲಶಗಳಿಗೆ ಸಮಾನವಾದ ತನ್ನ ಕುಚದ್ವಯವನ್ನು ಕೈಗಳಿಂದ ಮುಚ್ಚಿಕೊಂಡು ನಿದ್ರಾಪರವಶಳಾಗಿ ಮಲಗಿದ್ದಳು. ಪೂರ್ಣಚಂದ್ರನಿಗೆ ಸಮಾನವಾದ ಮುಖಮಂಡಲವುಳ್ಳ ಒಬ್ಬ ಕಮಲಲೋಚನೆಯು ಮಧುಪಾನಮತ್ತಳಾಗಿ ಪಕ್ಕದಲ್ಲಿ ಮಲಗಿರುವ ಮತ್ತೊಬ್ಬಳನ್ನು ಆಲಿಂಗಿಸಿಕೊಂಡು ಮಲಗಿದ್ದಳು. ಅಲ್ಲಿದ್ದ ಕೆಲವರು ಸ್ತ್ರೀಯರು ವಿಚಿತ್ರವಾದ್ಯಭೇದಗಳನ್ನು ಎದೆಗೊರಗಿಸಿಕೊಂಡು ಮಲಗಿರಲು ಸ್ತನದ್ವಯುಗಳಿಂದ ಕಾಮುಕರನ್ನಪ್ಪಿಕೊಂಡು ಮಲಗಿರುವ ಕಾಮಿನಿಯರಂತೆ ಕಾಣುತ್ತಿದ್ದರು. ಆಗ ಹನುಮಂತನು ಅಸಂಖ್ಯಾತರಾದ ಆ ಸ್ತ್ರೀಯರ ಮಧ್ಯದಲ್ಲಿ ಪ್ರತ್ಯೇಕವಾಗಿ ಹಾಸಿದ್ದ

---

§ "ಮುಪಾಗತಾ" ತಿ. ಪಾ.

ವಿನ್ಯಸ್ತೇ ಶಯಾನಾಂ ಶಯನೇ ಶುಭೇ । ದದರ್ಶ ರೂಪಸಂಪನ್ನಾ ‡ ಮಪರಾಂ ಸ ಕಪಿಸ್ಸ್ರಿಯಂ ॥ ೫೦ ॥ ಮುಕ್ತಾಮಣಿ ಸಮಾಯುಕ್ತೈ ರ್ಭೂಷಣೈ ಸ್ಸುವಿಭೂಷಿತಾಂ । ವಿಭೂಷಯಂತೀಮಿವ ತತ್ಸ್ವಶ್ರಿಯಾ ಭವನೋತ್ತಮಂ ॥ ೫೧ ॥ ಗೌರೀಂ ಕನಕವರ್ಣಾಭಾ ಮಿಷ್ಟಾಮಂತಃಪುರೇಶ್ವರೀಂ । ಕಪಿರ್ಮಂದೋದರೀಂ ತತ್ರ ಶಯಾನಾಂ ಚಾರುರೂಪಿಣೀಂ ॥೫೨॥ ಸತಾಂ ದೃಷ್ಟ್ವಾ ಮಹಾಬಾಹು ರ್ಭೂಷಿತಾಂ ಮಾರುತಾತ್ಮಜಃ । ತರ್ಕಯಾಮಾಸ ಸೀತೇತಿ ರೂಪಯೌವನಸಂಪದಾ । ಹರ್ಷೇಣ ಮಹತಾ ಯುಕ್ತೋ ನನಂದ ಹರಿಯೂಥಪಃ * ॥ ೫೩ ॥

ಶಯನಾಂ - ಮಲಗಿರುವ, ಅಪರಾಂ - ಮತ್ತೊಬ್ಬ, ಸ್ತ್ರಿಯಂ - ಹೆಂಗುಸನ್ನು, ದದರ್ಶ - ಕಂಡನು. ॥ ೫೦ ॥ ಮುಕ್ತಾ....ಕ್ತೈಃ - ಮುತ್ತಿನ ಮಣಿಗಳಿಂದ ಕೂಡಿದ, ಭೂಷಣೈಃ - ಒಡವೆಗಳಿಂದ, ಸುವಿಭೂಷಿತಾಂ - ಅಲಂಕೃತಳಾಗಿ, ಸ್ವಶ್ರಿಯಾ - ತನ್ನ ಕಾಂತಿಯಿಂದ, ತದ್ಭವನೋತ್ತಮಂ - ಆ ಮಂದಿರಶ್ರೇಷ್ಠವನ್ನು, ವಿಭೂ....ವ - ಕಂಗೊಳಿಸುತ್ತಿರುವ, ಕನ....ಭಾಂ - ಭಂಗಾರ ಬಣ್ಣದ ಹಾಗೆ ಕಾಂತಿಯುಳ್ಳ, ಗೌರೀಂ-ಅರಸಿನ ಬಣ್ಣವುಳ್ಳ, ಇಷ್ಟಾಂ-ರಾವಣನಿಗೆ ಪ್ರಿಯಳಾದ, ಅಂತಃಪುರೇಶ್ವರೀಂ-ಅಂತಃಪುರದೊಡತಿಯಾದ, ಚಾರುರೂಪಿಣೀಂ - ಸುಂದರರೂಪವುಳ್ಳ, ತತ್ರ - ಆ ಮನೆಯಲ್ಲಿ, ಶಯಾನಾಂ ಮಲಗಿರುವ, ಭೂಷಿತಾಂ-ಅಲಂಕೃತಳಾದ, ತಾಂ-ಪ್ರಸಿದ್ಧಳಾದ, ಮಂದೋದರೀಂ-ಮಂದೋದರಿಯನ್ನು, ಮಹಾಬಾಹುಃ - ಮಹಾ ಭುಜಬಲಪರಾಕ್ರಮವುಳ್ಳ, ಮಾರುತಾತ್ಮಜಃ - ವಾಯುಪುತ್ರನಾದ, ಸಕಪಿಃ - ಆ ಆಂಜನೇಯನು, ದೃಷ್ಟ್ವಾ - ಕಂಡು, ರೂಪ....ದಾ - ಸೌಂದರ್ಯದಿಂದಲೂ, ಯೌವನದಿಂದಲೂ, ಸಂಪತ್ತಿನಿಂದಲೂ, ಸೀತೇತಿ-ಸೀತಾದೇವಿಯೆಂದು, ತರ್ಕಯಾಮಾಸ-ಊಹಿಸಿದನು. ॥ ೫೧-೫೨ ॥ ಹರಿಯೂಥಪಃ-ವಾನರಯೂಥಪತಿಯಾದ ಆಂಜನೇಯನು, ಮಹತಾ ಹರ್ಷೇಣ - ಪರಮ ಸಂತೋಷದಿಂದ, ಯುಕ್ತಃ - ಕೂಡಿದವನಾಗಿ, ನನಂದ - ಮನದಲ್ಲಿ ಸಂತೋಷಗೊಂಡನು. ॥೫೩॥ ಸ್ವಾಂ ತನ್ನ, ಕಪೀನಾಂ-ವಾನರರ, ಪ್ರಕೃತಿಂ-ಸ್ವಭಾವವನ್ನು, ನಿದರ್ಶಯನ್ - ತೋರಿಸುತ್ತ, ಆಸ್ಫೋಟಯಾಮಾಸ - ಭುಜಗಳನ್ನು ಅಪ್ಪಳಿಸಿದನು, ಪುಚ್ಛಂ - ಬಾಲವನ್ನು, ಚುಚುಂಬ - ಮುತ್ತಿಟ್ಟನು, ನನಂದ - ಸಂತೋಷಪಟ್ಟನು, ಚಿಕ್ರೀಡ - ಆಟವಾಡಿದನು, ಜಗೌ -

---

ಹಂಸತೂಲಿಕಾತಲ್ಪದಲ್ಲಿ ಸುಖವಾಗಿ ಮಲಗಿ ನಿದ್ರಿಸುತ್ತಿದ್ದ ಮಹಾ ಲಾವಣ್ಯವತಿಯಾದ ಅಂಗನಾಮಣಿಯೊಬ್ಬಳನ್ನು ಕಂಡವನಾದನು; ಆಕೆಯೇ ಮಂಡೋದರಿಯು. ॥೪೬–೫೦॥ ಮೌಕ್ತಿಕಾದಿ ಮಣಿಸಮೂಹಗಳಿಂದ ಕೂಡಿದ ಅನೇಕ ಭೂಷಣಗಳಿಂದಲಂಕೃತಳಾಗಿ ತನ್ನ ದೇಹಕಾಂತಿಯಿಂದ ಮನೋಹರವಾದ ಆ ಗೃಹವನ್ನೇ ಅಲಂಕರಿಸುವಳೋ ಎಂಬಂತಿರುವಳಾಗಿಯೂ, ಹೊಂಬಣ್ಣದಂತೆ ಮೈಬಣ್ಣವುಳ್ಳವಳಾಗಿಯೂ, ರಾವಣೇಶ್ವರನ ಅಂತಃಪುರಕ್ಕೆ ಒಡತಿಯಾಗಿಯೂ ಇರುವ ಆ ಮಂಡೋದರಿಯನ್ನು ಕಂಡೊಡನೆಯೇ ಮಹಾತ್ಮನಾದ ಹನುಮಂತನು ಆಕೆಯ ರೂಪು, ಯೌವನ, ಗಾಂಭೀರ್ಯ, ಲಾವಣ್ಯಾದಿಗಳಿಂದ ಆಕೆಯೇ ಜಾನಕಿಯೆಂದು ತರ್ಕಿಸಿದನು. ಆಗಲಾತನು ಮಹದಾನಂದವನ್ನೈದಿ ಪುಳಕಿತಗಾತ್ರನಾಗಿ

---

‡ "ಮಥತಾಂ" ತಿ. ಪಾ. * "ದೃಷ್ಟ್ವಾ ಸೀತೇತಿ ತತ್ರಾಽಭೂದ್ದೀನಶ್ಚಾರಿತ್ರ ದರ್ಶನಾತ್" ರಾ. ಪಾ.

* ಆಸ್ಫೋಟಯಾಮಾಸ ಚುಚುಂಬ ಪುಚ್ಛಂ
ನನಂದ ಚಿಕ್ರೀಡ ಜಗೌ ಜಗಾಮ ।
ಸ್ತಂಭಾನರೋಹನ್ನಿಪಪಾತ ಭೂಮೌ
ನಿದರ್ಶಯನ್ ಸ್ವಾಂ ಪ್ರಕೃತಿಂ ಕಪೀನಾಂ ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದಶಮಸ್ಸರ್ಗಃ

ಹಾಡಿದನು, ಸ್ತಂಭಾನ್ - ಕಂಭಗಳನ್ನು, ಜಗಾಮ - ಐದಿದನು, ಅರೋಹತ್ - ಹತ್ತಿದನು, ಭೂಮೌ - ನೆಲದಲ್ಲಿ, ನಿಪಪಾತ - ಬಿದ್ದನು. ॥೫೪॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದಶಮಸ್ಸರ್ಗಃ.

ತನ್ನ ಬಾಲವನ್ನು ಸ್ತಂಭದಮೇಲೆ ತಟ್ಟನೆ ಹೊಡೆದು ಅದನ್ನು ಚುಂಬಿಸಿ ಅತ್ತಿತ್ತ ಚಲಿಸುತ್ತ ತನ್ನ ಕಪಿಸ್ವಭಾವವನ್ನು ಪ್ರಕಟಿಸುತ್ತಿದ್ದನು. ॥ ೫೧–೫೪ ॥

ಇಂತಿದು ರಾವಣನ ಶಯನಾಗಾರವರ್ಣನ–ಮಂಡೋದರೀದರ್ಶನಜನಿತ
ಹನುಮದ್ಭ್ರಾಂತಿ ನಿರೂಪಣ ಎಂಬ ಹತ್ತನೆಯ ಸರ್ಗವು
ಸಮಾಪ್ತವಾದುದು.

---

* ಈ ಶ್ಲೋಕವು ಪ್ರಕ್ಷಿಪ್ತವೆಂದು ಕೆಲವರು ಅಭಿಪ್ರಾಯಪಡುತ್ತಾರೆ. "ಪೂಜ್ಯನಾದ ವಾಲ್ಮೀಕಿ ಮುನಿಯು, "ನಾನೃಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ । ನಾಸಾಮವೇದವಿದುಷಃ...." (ಕಿ. ಕಾಂ. ಸ. ೩ ಶ್ಲೋ. ೨೮) ಎಂಬಿವೇ ಮೊದಲಾದ ಶ್ಲೋಕಗಳಿಂದ ಮಹಾತ್ಮನಾದ ಮಾರುತಿಯನ್ನು ಬಹು ಮೇಲಣ ಮೆಟ್ಟಲಿನಲ್ಲಿಟ್ಟಿರುವನು. ಅಲ್ಲದೆ ಸುಗ್ರೀವನು ಮೊದಲು ರಾಮಲಕ್ಷ್ಮಣರನ್ನು ನೋಡಿ ಭಯಪಟ್ಟಾಗ, "ಸುಗ್ರೀವ! ನೀನು ನಿನ್ನ (ಕಪಿ) ಬುದ್ಧಿಯನ್ನೇ ಪ್ರಕಟಗೊಳಿಸುತ್ತಿರುವೆಯಲ್ಲಾ!" ಎಂದು ಹಾಸ್ಯ ಮಾಡಿರುವನು. ಇಂತಹನು ತನ್ನ ಬಾಲವನ್ನು ಚುಂಬಿಸಿ, ಮೇಲಕ್ಕೆ ನೆಗೆದು, ಕೆಳಕ್ಕೆ ಧುಮುಕಿ ತನ್ನ ಕಪಿತ್ವವನ್ನು ಪ್ರಕಟಗೊಳಿಸಿದನೆಂದು ಹೇಳುವುದರಲ್ಲಿ ಸ್ವಲ್ಪವೂ ಔಚಿತ್ಯವಿರುವುದಿಲ್ಲ" ಎಂದು ಅವರ ವಾದವು. ಇದು ಸಮಂಜಸವಾಗಿಯೇ ತೋರುವುದು.

ಸುಂದರಕಾಂಡೇ ಏಕಾದಶಸ್ಸರ್ಗಃ

ಅವಧೂಯಚ ತಾಂ ಬುದ್ಧಿಂ ಬಭೂವಾವಸ್ಥಿತಸ್ತದಾ । ಜಗಾಮ ಚಾಪರಾಂ ಚಿಂತಾಂ ಸೀತಾಂ ಪ್ರತಿ ಮಹಾಕಪಿಃ ॥ ೧ ॥ "ನ ರಾಮೇಣ ವಿಯುಕ್ತಾ ಸಾ ಸ್ವಪ್ತು ಮರ್ಹತಿ ಭಾಮಿನೀ । ನಭೋಕ್ತುಂ ನಾಪ್ಯಲಂಕರ್ತುಂ ನಪಾನಮುಪಸೇವಿತುಂ ॥೨॥ ನಾನ್ಯಂ ನರಮುಪಸ್ಥಾತುಂ ಸುರಾಣಾಮಪಿ ಚೇಶ್ವರಂ । ನಹಿ ರಾಮಸಮಃ ಕಶ್ಚಿದ್ವಿದ್ಯತೇ ತ್ರಿದಶೇಷ್ವಪಿ ॥ ೩ ॥ ಅನ್ಯೇಯ" ಮಿತಿ ನಿಶ್ಚಿತ್ಯ¶ ಪಾನಭೂಮೌ ಚಚಾರಸಃ ॥ ೩ ॥

ತದಾ - ಆಗ, ಮಹಾಕಪಿಃ - ಆಂಜನೇಯನು, ತಾಂಬುದ್ಧಿಂಚ - ಆ ಬುದ್ಧಿಯನ್ನೂಕೂಡ, ಅವಧೂಯ - ಬಿಟ್ಟು, ಅವಸ್ಥಿತಃ - ಸ್ಥಿರಚಿತ್ತನು, ಬಭೂವ - ಆದನು, ಸೀತಾಂಪ್ರತಿ - ಸೀತಾದೇವಿಯನ್ನು ಕುರಿತು, ಅಪರಾಂಚಿಂತಾಂ - ಮತ್ತೊಂದಾಲೋಚನೆಯನ್ನು, ಜಗಾಮ - ಹೊಂದಿದನು. ॥ ೧ ॥ ರಾಮೇಣ - ಶ್ರೀರಾಮನಿಂದ, ವಿಯುಕ್ತಾ - ರಹಿತಳಾದ, ಸಾಭಾಮಿನೀ - ಆ ಸೀತಾದೇವಿಯು, ಸ್ವಪ್ತುಂ - ನಿದ್ರಿಸಲು, ನಾರ್ಹತಿ - ಯೋಗ್ಯಳಲ್ಲ, ಭೋಕ್ತುಂ - ಭುಜಿಸಲು, ನಾರ್ಹತಿ - ಯೋಗ್ಯಳಲ್ಲ, ಅಲಂಕರ್ತುಮಪಿ - ಅಲಂಕಾರ ಮಾಡಿಕೊಳ್ಳುವದಕ್ಕೂ, ನಾರ್ಹತಿ - ಅರ್ಹಳಲ್ಲ, ಪಾನಂ - ಮದ್ಯಪಾನವನ್ನು, ಸೇವಿತುಂ - ಸೇವಿಸುವದಕ್ಕೂ, ನಾರ್ಹತಿ - ತಕ್ಕವಳಲ್ಲ, ಸುರಾಣಾಂಚ - ದೇವತೆಗಳಿಗೂ ಕೂಡ, ಈಶ್ವರಮಪಿ - ನಾಯಕನನ್ನಾದರೂ, ಅನ್ಯಂನರಂ - ಪರಪುರುಷನನ್ನು, ಉಪಸ್ಥಾತುಂ - ಅಂಗೀಕರಿಸಲು, ನಾರ್ಹತಿ - ಯೋಗ್ಯಳಲ್ಲ, ಹಿ - ಯಾವ ಕಾರಣದಿಂದ, ತ್ರಿದಶೇಷ್ವಪಿ- ದೇವತೆಗಳಲ್ಲಿಯೂ ಕೂಡ, ರಾಮಸಮಃ - ಶ್ರೀರಾಮನಿಗೆ ಸದೃಶನಾದ, ಕಶ್ಚಿತ್ - ಒಬ್ಬಾನೊಬ್ಬನೂ, ನವಿದ್ಯತೇ - ಇಲ್ಲವೋ, ತತಃ - ಆ ಕಾರಣದಿಂದ, ಇಯಂ - ಈಕೆಯು, ಅನ್ಯೇತಿ - ಮತ್ತೋರ್ವಳೆಂದು, ನಿಶ್ಚಿತ್ಯ - ನಿರ್ಣಯಿಸಿ, ಸಃ - ಆ ಆಂಜನೇಯನು, ಪಾನಭೂಮೌ - ಪಾನಶಾಲೆಯಲ್ಲಿ,

---

ಆ ಬಳಿಕ ಹನುಮಂತನು 'ಮಂಡೋದರಿಯೇ ಸೀತೆ' ಎಂಬ ಭ್ರಾಂತಿಯನ್ನು ತೊರೆದು ಸ್ಥಿರಚಿತ್ತನಾಗಿ ಮಹಾ ಪತಿವ್ರತಾಶಿರೋಮಣಿಯಾದ ಆ ದೇವಿಯ ವಿಷಯದಲ್ಲಿ ಈ ರೀತಿ ಆಲೋಚಿಸಿದನು. "ಮಹಾನುಭಾವಳಾದ ಜಾನಕಿಯು ಶ್ರೀರಾಮನನ್ನು ತೊರೆದು ವಿರಹದುಃಖವನ್ನು ಅನುಭವಿಸುತ್ತಿರುವಳು. ಇಂತಹಳು ಆತನನ್ನುಳಿದು ನಿದ್ರಿಸಲಾರಳು, ಭುಜಿಸಲಾರಳು. ಅಲಂಕರಿಸಿಕೊಳ್ಳುವುದಕ್ಕಾಗಲಿ, ಪಾನದ್ರವ್ಯಗಳನ್ನು ಸೇವಿಸುವುದಕ್ಕಾಗಲಿ ಅಪೇಕ್ಷಿಸಲಾರಳು. ಏಕೆಂದರೆ—ಶ್ರೀರಾಮಮೂರ್ತಿಗೆ ಸದೃಶನಾದ ಪುರುಷನು ಬ್ರಹ್ಮೇಂದ್ರಾದಿ ದೇವತೆಗಳಲ್ಲಿಯೂ ಇರುವುದಿಲ್ಲ. ಅಂತಹ ಮಹಾತ್ಮನನ್ನೇ ನಾಥನನ್ನಾಗಿ ಪಡೆದ ಆ ದೇವಿಯು ಯುಕ್ತವಲ್ಲದ ಕಾರ್ಯದಲ್ಲಿ ಎಂದಿಗೂ ಹೀಗೆ ಪ್ರವೃತ್ತಳಾಗಲಾರಳು. ರಾವಣನ ಪಾರ್ಶ್ವದಲ್ಲಿ ಮಲಗಿರುವ ಈಕೆಯು ಜಾನಕಿಯಲ್ಲದೆ ಬೇರೊಬ್ಬಳಾಗಿರಬೇಕು." ಹೀಗೆ ದೃಢವಾಗಿ ನಿಶ್ಚಯಿಸಿದ ಆ ಮಾರುತಿಯು ಆ ರಾಕ್ಷಸೇಶ್ವರನ ಪಾನಶಾಲೆ

¶ "ಭೂಯಸ್ತತ್ರ" ತಿ. ಪಾ.

ಕ್ರೀಡಿತೇನಾಪರಾಃ ಕ್ಲಾಂತಾ ಗೀತೇನಚ ತಥಾಪರಾಃ । ನೃತ್ತೇನಚಾಪರಾಃ ಕ್ಲಾಂತಾಃ ಪಾನವಿಪ್ರಹತಾಸ್ತಥಾ । ※ ಮುರವೇಷು ಮೃದಂಗೇಷು ‡ ಪೀಠಿಕಾಸುಚ ಸಂಸ್ಥಿತಾಃ । ತಥಾಸ್ತರಣಮುಖ್ಯೇಷು ಸಂವಿಷ್ಟಾಶ್ಚ ಪರಾಃ ಸ್ತ್ರಿಯಃ ॥೫॥ ಅಂಗನಾನಾಂ ಸಹಸ್ರೇಣ ಭೂಷಿತೇನ ವಿಭೂಷಣೈಃ । ರೂಪಸಲ್ಲಾಪಶೀಲೇನ ಯುಕ್ತಗೀತಾರ್ಥಭಾಷಿಣಾ ॥೬॥ ದೇಶಕಾಲಾಭಿಯುಕ್ತೇನ ಯುಕ್ತವಾಕ್ಯಾಭಿಧಾಯಿನಾ । § ರತಾಭಿರತಸಂಸುಪ್ತಂ

ಚಚಾರ - ಸಂಚರಿಸಿದನು. ॥ ೨-೩ ॥ ಹರಿಯೂಥಪಃ - ಆಂಜನೇಯನು, ಕ್ರೀಡಿತೇನ - ಕ್ರೀಡೆಯಿಂದ, ಕ್ಲಾಂತಾಃ - ಬಳಲಿದ, ಅಪರಃ - ಇತರ ಸ್ತ್ರೀಯರನ್ನೂ, ತಥಾ - ಹಾಗೆ, ಗೀತೇನ - ಗಾನದಿಂದ, ಕ್ಲಾಂತಾಃ-ಆಯಾಸಗೊಂಡ ಕೆಲವರನ್ನೂ, ನೃತ್ತೇನಚ-ನಾಟ್ಯದಿಂದಲೂ, ಕ್ಲಾಂತಾಃ-ಆಯಾಸಗೊಂಡ, ಅಪರಾಃ - ಕೆಲ ಹೆಂಗಳನ್ನೂ, ತಥಾ - ಅಂತೆಯೇ, ಪಾನ....ತಾಃ - ಮದ್ಯಪಾನದಿಂದ ಮತ್ತರಾಗಿ, ಮುರವೇಷು - ಡೋಲುಗಳಲ್ಲಿಯೂ, ಮೃದಂಗೇಷು - ಮದ್ದಳೆಗಳಲ್ಲಿಯೂ, ಪೀಠಿಕಾಸುಚ - ಪೀಠಗಳಲ್ಲಿಯೂ, ಸಂಸ್ಥಿತಾಃ-ನೆಲಗೊಂಡಿದ್ದವರನ್ನೂ, ತಥಾ - ಹಾಗೆಯೇ, ಆಸ್ತ....ಷು - ಹಂಸತೂಲಿಕಾ ತಲ್ಪಗಳಲ್ಲಿ, ಸಂವಿಷ್ಟಾಃ - ನಿದ್ರೆಗೈಯ್ಯುತ್ತಿರುವ, ಅಪರಾಃಸ್ತ್ರಿಯಶ್ಚ - ಇನ್ನೂ ಕೆಲವರು ಸುಂದರಿಯರನ್ನೂ, (ದದರ್ಶ - ಕಂಡನು.) ॥ ೪-೫ ॥ ರೂಪ....ನ - ತಮ್ಮ ಸೌಂದರ್ಯ ವಿಷಯವಾದ ಮಾತುಗಳಲ್ಲಿ ಸ್ವಭಾವವುಳ್ಳ (ಗೋ) ರಾವಣವಿಷಯಕ ರೂಪಪ್ರಶಂಸೆಯಲ್ಲಿ ಸ್ವಭಾವವುಳ್ಳ, ಯುಕ್ತ....ಣಾ-ಯುಕ್ತವಾಗಿ ಭರತಶಾಸ್ತ್ರದ ವ್ಯಾಖ್ಯಾನದ ಮಾತುಗಳನ್ನಾಡುತ್ತಿರುವ, ದೇಶ.....ನ - ದೇಶಕಾಲಾಭಿಜ್ಞವಾದ, ಯುಕ್ತ....ನಾ - ತಕ್ಕಮಾತುಗಳನ್ನು ಹೇಳುತ್ತಿರುವ, ವಿಭೂಷಣೈಃ - ಒಡವೆಗಳಿಂದ, ಭೂಷಿತೇನ - ಅಲಂಕೃತವಾದ, ಅಂಗನಾನಾಂ - ಸುಂದರಿಯರ, ಸಹಸ್ರೇಣ - ಸಹಸ್ರ ಸಂಖ್ಯೆಯಿಂದ, (ಯುಕ್ತಂ - ಕೂಡಿದ) ರತಾ....ಪ್ತಂ - ಬಾಹ್ಯಸುರತ ವ್ಯಾಪಾರವೂ, ಬಂಧಾದಿಗಳೂ ಉಳ್ಳವನಾಗಿ, ಸುಪ್ತಂ - ನಿದ್ರೆಗೈಯ್ಯುತ್ತಿರುವ, (ಗೋ + ತಿ) ಕ್ರೀಡೆಯಲ್ಲಿ ಆಸಕ್ತಿಯುಳ್ಳವನಾಗಿ, ಅನಂತರ ಮಲಗಿ

ಯನ್ನು ಸೀತಾದರ್ಶನಕಾಂಕ್ಷಿಯಾಗಿ ಹುಡುಕಲುಪಕ್ರಮಿಸಿದನು. ಅಲ್ಲಿ ಕೆಲವರು ಸ್ತ್ರೀಯರು ರತಿಕ್ರೀಡೆಯಿಂದ ಆಯಾಸಗೊಂಡು ನಿದ್ರಿಸುತ್ತಿದ್ದರು. ಕೆಲವರು ಗಾನ ಮಾಡಿಯೂ, ಕೆಲವರು ನಾಟ್ಯವಾಡಿಯೂ, ಕೆಲವರು ಪಾನದಿಂದ ಮತ್ತರಾಗಿಯೂ, ಮುರಜ, ಮೃದಂಗವೇ ಮೊದಲಾದ ವಾದ್ಯಗಳನ್ನೂ ಪೀಠಗಳನ್ನೂ ತಲೆದಿಂಬುಗಳನ್ನಾಗಿ ಮಾಡಿಕೊಂಡವರಾಗಿಯೂ ಆಗಿ ಉತ್ತಮ ಶಯನಗಳಲ್ಲಿ ಸುಖಸುಪ್ತರಾಗಿದ್ದರು. ॥೧-೫॥ ಆಗ ಹನುಮಂತನು ಅಲ್ಲಿಯೂ ಸೀತೆ ಇಲ್ಲದಿರಲು ಪುನಃ ರಾವಣನು ಮಲಗಿದ್ದ ಕ್ರೀಡಾಭವನಕ್ಕೆ ಬಂದು ಅಲ್ಲಿ ಮಣಿಮಯ ಭೂಷಣಾಲಂಕೃತರಾಗಿ ರಾವಣನ ರೂಪಸೌಶೀಲ್ಯಾದಿ ಗುಣಗಳನ್ನು ಮದ್ಯಪಾನವಶದಿಂದ ಮೈಮರೆತು ನಿದ್ರಿಸುತ್ತಿರುವಂತೆಯೇ ವರ್ಣಿಸಿಕೊಳ್ಳುವರಾಗಿಯೂ, ಸಂಗೀತಾಭಿಪ್ರಾಯವನ್ನು ಸೂಚಿಸುತ್ತಿರುವುದಾಗಿಯೂ, ಕಾಲ ದೇಶ ವರ್ತಮಾನಗಳ ತಿಳಿವುಳ್ಳವರಾಗಿಯೂ, ಇರುವ ಅನೇಕ ಸುಂದರಸ್ತ್ರೀಯರನ್ನೂ; ಅವರೊಡಗೂಡಿ ಬಾಹ್ಯಾಭ್ಯಂತರೋಪಭೋಗಗಳನ್ನನುಭವಿಸಿ ಸುಖವಾಗಿ ನಿದ್ರಿಸುತ್ತಿರುವ ರಾಕ್ಷಸಚಕ್ರವರ್ತಿಯಾದ ರಾವಣ

※ "ಮುರಜೇಷು" ತಿ. ರಾ. ಪಾ. ‡ "ಚೋಲಿಕಾಸು" ಮು. ತಿ. ಪಾ.

§ "ರತಾಧಿಕೇನ ಸಂಯುಕ್ತಾಂ" ತಿ. ಪಾ.

ದದರ್ಶ ಹರಿಯೂಥಪಃ ॥ ೭ ॥ ತಾಸಾಂ ಮಧ್ಯೇ ಮಹಾಬಾಹು ಶ್ಶುಶುಭೇ ರಾಕ್ಷಸೇಶ್ವರಃ । ಗೋಷ್ಠೇ ಮಹತಿ ಮುಖ್ಯಾನಾಂ ಗವಾಂ ಮಧ್ಯೇ ಯಥಾ ವೃಷಃ ॥ ೮ ॥ ಸರಾಕ್ಷಸೇಂದ್ರ ಶ್ಶುಶುಭೇ ತಾಭಿಃ ಪರಿವೃತ ಸ್ಸ್ವಯಂ ॥೯॥ ಕರೇಣುಭಿರ್ಯಥಾರಣ್ಯೇ ಪರಿಕೀರ್ಣೋ ಮಹಾದ್ವಿಪಃ । ಸರ್ವಕಾಮೈ ರುಪೇತಾಂಚ ಪಾನಭೂಮಿಂ ಮಹಾತ್ಮನಃ ॥ ೧೦ ॥ ದದರ್ಶ ಹರಿಶಾರ್ದೂಲಸ್ತಸ್ಯ ರಕ್ಷಃಪತೇರ್ಗೃಹೇ । ಮೃಗಾಣಾಂ ಮಹಿಷಾಣಾಂಚ ವರಾಹಾಣಾಂಚ ಭಾಗಶಃ ॥ ೧೧ ॥ ತತ್ರ ನ್ಯಸ್ತಾನಿ ಮಾಂಸಾನಿ ಪಾನಭೂಮೌ ದದರ್ಶ ಸಃ । ರೌಕ್ಮೇಷುಚ ವಿಶಾಲೇಷು ಭಾಜನೇಷ್ವರ್ಧ ಭಕ್ಷಿತಾನ್

ರುವ ರಾವಣನನ್ನು, ದದರ್ಶ - ಕಂಡನು. ॥ ೭ ॥ ಮಹಾಬಾಹುಃ - ಮಹಾ ಭುಜನಾದ, ರಾಕ್ಷಸೇಶ್ವರಃ - ರಾವಣಾಸುರನು, ಮಹತಿ - ಮಹತ್ತರವಾದ, ಗೋಷ್ಠೇ - ಆಕಳ ದೊಡ್ಡಿಯಲ್ಲಿ, ಗವಾಂ - ಗೋವುಗಳ, ಮಧ್ಯೇ - ಮಧ್ಯದಲ್ಲಿ, ವೃಷೋಯಥಾ - ಗೂಳಿಯಂತೆ, ಮುಖ್ಯಾನಾಂ - ಶ್ರೇಷ್ಠರಾದ, ತಾಸಾಂ - ಆ ವನಿತೆಯರ, ಮಧ್ಯೇ - ನಡುವೆ, ಶುಶುಭೇ - ಕಂಗೊಳಿಸುತ್ತಿದ್ದನು. ॥೮॥ ತಾಭಿಃ - ಆ ಹೆಂಗಳಿಂದ, ಪರಿವೃತಃ - ಸುತ್ತುವರೆದ, ಸರಾಕ್ಷಸೇಂದ್ರಃ - ಆ ರಾಕ್ಷಸರಾಜನು, ಸ್ವಯಂ - ತಾನು, ಅರಣ್ಯೇ - ವನದಲ್ಲಿ, ಕರೇಣುಭಿಃ - ಹೆಣ್ಣಾನೆಗಳಿಂದ, ಪರಿಕೀರ್ಣಃ - ಕೂಡಿದ, ಮಹಾ....ಥಾ - ಮದಗಜದಂತೆ, ಶುಶುಭೇ - ಹೊಳೆಯುತ್ತಿದ್ದನು. ॥ ೯ ॥ ಹರಿಶಾರ್ದೂಲಃ - ವಾನರೋತ್ತಮನಾದ ಆಂಜನೇಯನು, ಮಹಾತ್ಮನಃ - ಮಹಾ ದೇಹವುಳ್ಳ, ರಕ್ಷಃಪತೇಃ-ರಾಕ್ಷಸಾಧಿಪತಿಯಾದ, ತಸ್ಯ - ಆ ರಾವಣನ, ಗೃಹೇ - ಮನೆಯಲ್ಲಿ, ಸರ್ವಕಾಮೈಃ - ಸಮುಸ್ತಾಭಿಲಾಷೆಗಳಿಂದ, ಉಪೇತಾಂ - ಕೂಡಿದ, ಪಾನಭೂಮಿಂಚ - ಪಾನಶಾಲೆಯನ್ನೂ, ದದರ್ಶ - ಕಂಡನು. ॥ ೧೦ ॥ ಸಃ - ಆ ಹನುಮಂತನು, ತತ್ರ....ಮೌ - ಆ ಪಾನಶಾಲೆಯಲ್ಲಿ, ಭಾಗಶಃ - ತುಂಡುಗಳಾಗಿ, ನ್ಯಸ್ತಾನಿ-ಇಡಲ್ಪಟ್ಟ, ಮೃಗಾಣಾಂ - ಮೃಗಗಳ, ಮಹಿಷಾಣಾಂ - ಕಾಡುಕೋಣಗಳ, ವರಾಹಾಣಾಂಚ - ಹಂದಿಗಳ, ಮಾಂಸಾನಿ - ಮಾಂಸಗಳನ್ನು, ದದರ್ಶ - ವೀಕ್ಷಿಸಿದನು. ॥ ೧೧ ॥ ತಥಾ - ಹಾಗೆಯೇ, ಹರಿಶಾರ್ದೂಲಃ - ವಾನರೋತ್ತಮನಾದ ಆಂಜನೇಯನು, ರೌಕ್ಮೇಷು - ಸುವರ್ಣಮಯವಾದ, ವಿಶಾಲೇಷು - ವಿಸ್ತಾರಗಳಾದ, ಭಾಜನೇಷು - ಪಾತ್ರೆಗಳಲ್ಲಿ, ಅರ್ಧಭಕ್ಷಿತಾನ್ - ಅರ್ಧ ಭುಜಿಸಿದ, ಮಯೂರಾನ್ - ನವಿಲಿನ ಮಾಂಸಗಳನ್ನೂ, ಕುಕ್ಕುಟಾಂಶ್ಚ - ಕೋಳಿಯ ಮಾಂಸಗಳನ್ನೂ, ದದರ್ಶ -

---

ನನ್ನು ಕಂಡನು. ಮಹಾ ಭುಜಬಲಪರಾಕ್ರಮಶಾಲಿಯಾದ ಆ ರಾಕ್ಷಸ ಸಾರ್ವಭೌಮನು ಆ ಸ್ತ್ರೀಸಮೂಹದ ಮಧ್ಯದಲ್ಲಿ ಸುಖಸುಪ್ತನಾಗಿರಲು ಗೋಶಾಲೆಯಲ್ಲಿ ಗೋವುಗಳ ನಡುವೆ ಗಂಭೀರವಾಗಿ ಮಲಗಿರುವ ಮಹಾ ವೃಷಭದಂತೆಯೂ, ಅಲ್ಲದೆ ಹೆಣ್ಣಾನೆಗಳಿಂದ ಸುತ್ತುವರೆದ ಮಹಾ ಗಜದಂತೆಯೂ ವಿರಾಜಿಸುತ್ತಿದ್ದನು. ಕಪಿಕುಲತಿಲಕನಾದ ಆ ಹನುಮಂತನು ಮತ್ತೊಂದುಸಲ ಆ ಶಯನಗೃಹವೆಲ್ಲವನ್ನೂ ಹುಡುಕಿ ಅಲ್ಲೆಲ್ಲಿಯೂ ಸೀತಾದೇವಿಯನ್ನು ಕಾಣದೆ ಪುನಃ ಸಮಸ್ತ ಕಾಮ್ಯವಸ್ತುಗಳಿಂದ ಕೂಡಿದ ಪಾನಶಾಲೆಯನ್ನು ಹುಡುಕಲುಪಕ್ರಮಿಸಿದನು. ॥ ೬–೧೦ ॥ ಅಲ್ಲಿ ಜಿಂಕೆಗಳ, ಮಹಿಷಿಗಳ, ವರಾಹಗಳ, ಮಾಂಸಗಳು ಸಾಲುಸಾಲಾಗಿ ಅಡಲ್ಪಟ್ಟಿದ್ದವು. ಸುವರ್ಣನಿರ್ಮಿತವಾದ ದೊಡ್ಡದೊಡ್ಡ ಪಾತ್ರೆಗಳಲ್ಲಿ ಅರೆತಿಂದುಳಿದ ಮಯೂರ ಕುಕ್ಕುಟ ಮಾಂಸಗಳನ್ನೂ, ಮೊಸರಿನಿಂದಲೂ, ಸೌವರ್ಚ ಲವಣದಿಂದಲೂ ಕೂಡಿಸಿ ಬೇಯಿಸಿದ ಹಂದಿ, ಆಡು, ಮುಳ್ಳುಹಂದಿ, ನವಿಲು ಮೊದಲಾದವುಗಳ

॥ ೧೨ ॥ ದದರ್ಶ ಹರಿಶಾರ್ದೂಲೋ ಮಯೂರಾನ್ಕುಕ್ಕುಟಾಂಸ್ತಥಾ । ¶ ವರಾಹ ‡ ವಾರ್ಧ್ರಾಣಸಕಾನ್ ದಧಿಸೌವರ್ಚಲಾಯುತಾನ್ ॥ ೧೩ ॥ ಶಲ್ಯಾನ್ ಮೃಗಮಯೂರಾಂಶ್ಚ ಹನುಮಾನನ್ವವೈಕ್ಷತ । ಕೃಕರಾನ್ ವಿವಿಧಾ * ನ್ಸಿದ್ಧಾಂಶ್ಚಕೋರಾನರ್ಧಭಕ್ಷಿತಾನ್ ॥ ೧೪ ॥ ಮಹಿಷಾನೇಕಶಲ್ಯಾಂಶ್ಚ $ ಛಾಗಾಂಶ್ಚ ಕೃತನಿಷ್ಠಿತಾನ್ । ಲೇಹ್ಯಾನುಚ್ಚಾವಚಾನ್ಪೇಯಾನ್ ಭೋಜ್ಯಾನಿ ವಿವಿಧಾನಿಚ ॥ ೧೫ ॥ § ತಥಾಽಮ್ಲಲವಣೋತ್ತಂಸೈರ್ವಿವಿಧೈ ರಾಗ ಷಾಡಬೈಃ । ಹಾರನೂಪುರಕೇಯೂರೈ ರಪವಿದ್ಧೈರ್ಮಹಾ

ಕಂಡನು. ॥ ೧೨ ॥ ಹನುಮಾನ್-ಆಂಜನೇಯನು, ವರಾ....ಕಾನ್-ಹಂದಿಯ ಮಾಂಸಗಳನ್ನೂ, ಮುದು ಮೇಕೆಯ (ಗೋ) ಪಕ್ಷಿವಿಶೇಷಗಳ (ತಿ) ಖಡ್ಗಮೃಗಗಳ ಮಾಂಸಗಳನ್ನೂ, ದಧಿ....ತಾನ್ - ಮೊಸರುನಿಂದಲೂ, ಸೌವರ್ಚ ಲವಣದಿಂದಲೂ ಕೂಡಿದ, ಮೃಗಮಯೂರಾನ್ - ಜಿಂಕೆ ನವಿಲುಗಳ ಮಾಂಸಗಳನ್ನೂ, ಶಲ್ಯಾಂಶ್ಚ - ಮುಳ್ಳುಹಂದಿಯ ಮಾಂಸಗಳನ್ನೂ ಸಹ, ದದರ್ಶ - ನೋಡಿದನು. ॥೧೩॥ ವಿವಿಧಾನ್ - ಅನೇಕ ಬಗೆಗಳಾದ, ಸಿದ್ಧಾನ್ - ಪಕ್ವಗಳಾದ, ಕೃಕರಾನ್ - ಕಾಡುಕೊಕ್ಕರೆಗಳನ್ನು, ಅರ್ಧಭಕ್ಷಿತಾನ್ - ಅರ್ಧ ಭುಜಿಸಿದ, ಚಕೋರಾನ್ - ಚಕೋರಪಕ್ಷಿಗಳನ್ನೂ, ಮಹಿಷಾನ್ - ಕೋಣಗಳನ್ನೂ, ಏಕಶಲ್ಯಾನ್ - ಮೀನುಗಳನ್ನೂ, ಕೃತನಿಷ್ಠಿತಾನ್ - ಅಟ್ಟಡಿಗೆಯಾದ, ಛಾಗಾಂಶ್ಚ - ಮೇಕೆಗಳನ್ನೂ, ಉಚ್ಚಾವಚಾನ್ - ನಾನಾವಿಧಗಳಾದ, ಲೇಹ್ಯಾನ್ - ಚಟ್ನಿಯೇ ಮುಂತಾದ ನಂಜಿಕೊಳ್ಳುವ ಸಾಮಗ್ರಿಗಳನ್ನೂ, ಪೇಯಾನ್ - ಕುಡಿಯುವ ಪದಾರ್ಥಗಳನ್ನೂ, ವಿವಿಧಾನಿ - ಬಹು ಬಗೆಗಳಾದ, ಭೋಜ್ಯಾನಿಚ - ತಿನ್ನತಕ್ಕ ವಸ್ತುಗಳನ್ನೂ, ಅನ್ವವೈಕ್ಷತ - ಕಂಡನು. ॥೧೪-೧೫॥ ತಥಾ-ಅಂತೆಯೇ, ಅಮ್ಲ....ಸೈಃ - ಹುಣಸೇರಸ, ಉಪ್ಪು (ಇವುಗಳೇ) ಪ್ರಧಾನಗಳಾಗಿ ಉಳ್ಳ, ವಿವಿಧೈಃ - ನಾನಾವಿಧಗಳಾದ, ರಾಗಷಾಡಬೈಃ - ಸಕ್ಕರೆ,ಜೇನು,ದ್ರಾಕ್ಷಿ, ದಾಳಿಂಬೇ ರಸ ಮುಂತಾದವುಗಳಿಂದ ಪಕ್ವಮಾಡಿದ

ಮಾಂಸಗಳನ್ನೂ ಆ ಮಾರುತಿಯು ಕಂಡನು. ಇಷ್ಟೆಯಲ್ಲದೆ ಚನ್ನಾಗಿ ಬೇಯಿಸಿದ ವಿವಿಧ ಪಕ್ಷಿಗಳ ಮಾಂಸಗಳನ್ನೂ, ಅರೆತಿಂದುಳಿದ ಚಕೋರ ಮಾಂಸವನ್ನೂ, ಮಹಿಷಮಾಂಸಗಳನ್ನೂ ಅನೇಕ ಬಗೆಗಳಾದ ಮೀನುಗಳನ್ನೂ, ಪೂರ್ಣವಾಗಿ ಪಕ್ವಗೊಳಿಸಿದ ಆಡುಗಳನ್ನೂ, ಅನೇಕ ಬಗೆಯ ಪರಮಾನ್ನಾದಿಗಳನ್ನೂ, ಭೋಜನಯೋಗ್ಯವಾದ ಇತರ ವಸ್ತುಗಳನ್ನೂ ಕಂಡನು. ॥೧೧–೧೫॥ ಲವಣ ಆಮ್ಲ ರಸಗಳೊಡಗೂಡಿ ಬಿಳೀಸಾಸುವೆಯ ವಗ್ಗರಣೆಯಿಂದ ಘಮಘಮಿ

¶ "ವಾರ್ಧ್ರಾಣಸ" ಅಥವಾ "ವಾಧ್ರೀಣಸ" "ಕೃಷ್ಣಗ್ರೀವೋರಕ್ತಶಿರಾಃ ಶ್ವೇತಪಕ್ಷೋ ವಿಹಂಗಮಃ । ಸವೈವಾಧ್ರೀಣಸ ಪ್ರೋಕ್ತಃ" ಕುತ್ತಿಗೆಯು ಕಪ್ಪಾಗಿಯೂ, ತಲೆಯು ಕೆಂಪಾಗಿಯೂ, ರೆಕ್ಕೆಗಳು ಬಿಳುಪಾಗಿಯೂ ಇರುವ ಹಕ್ಕಿಗೆ ವಾಧ್ರೀಣಸ ಅಥವಾ ವಾರ್ಧ್ರಾಣಸವೆಂದು ಹೆಸರು. ಅಥವಾ, "ತ್ರಿಪಿಬಂ ತ್ವಿಂದ್ರಿಯಕ್ಷೀಣಂ ಶ್ವೇತಂ ವೃದ್ಧಪ್ರಜಾಪತಿಂ । ವಾಧ್ರೀಣಸಂ ಚ ತಂ ಪ್ರಾಹು ರ್ಯಾಜ್ಞಿಕಾಃ ಶ್ರಾದ್ಧಕರ್ಮಣಿ" ಎಂಬ ಸ್ಮೃತಿವಚನದಂತೆ ಬಾಯಿ, ಕಿವಿ, ಮೂಗು ಈ ಮೂರವಯವಗಳಿಂದ ಪಾನ ಮಾಡುವುದಾಗಿಯೂ, ಇಂದ್ರಿಯಶೂನ್ಯವಾದುದಾಗಿಯೂ ಇರುವ ಮುದು ಮೇಕೆಗೆ ವಾಧ್ರೀಣಸವೆಂದು ಯಾಜ್ಞಿಕರು ಹೇಳುತ್ತಾರೆ. ಅಥವಾ, "ವಾರ್ಧ್ರಾಣಸಃ ಖಡ್ಗಮೃಗಃ" ಎಂದು ಹಲಾಯುಧ ನಿಘಂಟು. (ಗೋ+ತಿ+ಮ)

‡ "ವಾಧ್ರೀಣಸಂ" ತಿ. ಪಾ. * "ಛಾಗಾನ್ಪಶರ್ಕಾನ್" ತಿ. ಪಾ. $ "ಛೇದಾಂಶ್ಚ" ತಿ. ಪಾ.

§ "ರಾಗಖಾಂಡವೈಃ" ರಾ. ಪಾ. "ಸಿತಾಮಧ್ವಾದಿ ಮಧುರೋದ್ರಾಕ್ಷಾ ದಾಡಿಮಜೋರಸಃ । ವಿಮಲಶ್ಚೇತ್ಕೃತೋರಾಗಃ ಸಾಂದ್ರಶ್ಚೇತ್ಖಾಂಡವಃ ಸ್ಮೃತಃ" "ರಾಗಸ್ಸಿದ್ಧಾರ್ಥಕೋಜ್ಞೇಯಃ" ಎಂಬು ಸೂದಶಾಸ್ತ್ರವು. ಷಡ್ರಸ ಸಂಯೋಗದಿಂದ ಮಾಡಿದ ಭಕ್ಷ್ಯವಿಶೇಷಕ್ಕೆ ಷಾಡವ ಅಥವಾ ಖಾಂಡವನೆಂದು ಹೆಸರು. ರಾಗವೆಂದರೆ ಬಿಳೀ ಸಾಸುವೆಯೆಂದು ಹೇಳುತ್ತಾರೆ. [ರಾ. ಗೋ.]

ಧನೈಃ ‖ ೧೬ ‖ ಪಾನಭಾಜನವಿಕ್ಷಿಪ್ತೈಃ ಫಲೈಶ್ಚ ವಿವಿಧೈರಪಿ । ಕೃತಪುಷ್ಪೋಪ
ಹಾರಾ ಭೂರಧಿಕಂ ಪುಷ್ಯತಿ ಶ್ರಿಯಂ ‖ ೧೭ ‖ ತತ್ರತತ್ರಚ ವಿನ್ಯಸ್ತೈ ಸ್ಸುಶ್ಲಿಷ್ಟೈ
ಶ್ಶಯನಾಸನೈಃ । ಪಾನಭೂಮಿ ರ್ವಿನಾವಹ್ನಿಂ ಪ್ರದೀಪ್ತೇವೋಪಲಕ್ಷ್ಯತೇ ‖ ೧೮ ‖
ಬಹುಪ್ರಕಾರೈ ರ್ವಿವಿಧೈ ರ್ವರಸಂಸ್ಕಾರಸಂಸ್ಕೃತೈಃ । ಮಾಂಸೈಃ ಕುಶಲಸಂಯುಕ್ತೈಃ
ಪಾನಭೂಮಿಗತೈಃ ಪೃಥಕ್ ‖ ೧೯ ‖ ದಿವ್ಯಾಃ ಪ್ರಸನ್ನಾ ವಿವಿಧಾ ಸ್ಸುರಾಃ ಕೃತಸುರಾ
ಅಪಿ । ¶ ಶರ್ಕರಾಸವ ಮಾಧ್ವೀಕ ಪುಷ್ಪಾಸವ ಫಲಾಸವಾಃ ‖ ೨೦ ‖ ವಾಸಚೂರ್ಣೈಶ್ಚ

ನೀರಾಗಿರುವ ಪಾನಕಗಳಿಂದಲೂ, ಮಧುರ ದ್ರವ್ಯಗಳಿಂದ ಅಟ್ಟಡಿಗೆಯಾಗಿ ಸ್ವಲ್ಪ ಗಟ್ಟಿಯಾಗಿರುವ ರಸಗಳಿಂದಲೂ, (ಗೋ) ಬಿಳೀ ಸಾಸುವೆಗಳಿಂದ ಮಿಶ್ರವಾದ ವಗ್ಗರಣೆ ಹಾಕಿದ ಷಡ್ರಸೋಪೇತವಾದ ಭಕ್ಷ್ಯವಿಶೇಷಗಳಿಂದಲೂ, ಮಹಾಧನೈಃ - ಅಮೂಲ್ಯಗಳಾದ, ಅಪವಿದ್ಧೈಃ - ತೆಗೆದುಹಾಕಿದ, ಹಾರ....ರೈಃ - ಹಾರಗಳಿಂದಲೂ, ಕಾಲುಸರಪಣಿಗಳಿಂದಲೂ, ಬಾಹುಜಿಗೆಗಳಿಂದಲೂ, ಪಾನ....ಪ್ತೈಃ - ಪಾನಪಾತ್ರೆಗಳಲ್ಲಿ ಇರಿಸಲ್ಪಟ್ಟ, ವಿವಿಧೈಃ - ಬಹು ವಿಧಗಳಾದ, ಫಲೈಶ್ಚ - ಹಣ್ಣುಗಳಿಂದಲೂ, ಕೃತ....ರಾ - ಮಾಡಲ್ಪಟ್ಟ ಪುಷ್ಪಗಳೆಂಬ ಕಾಣಿಕೆಯುಳ್ಳ, ಭೂಃ - ಭೂಮಿಯು, ಶ್ರಿಯಂ - ಕಾಂತಿಯನ್ನು, ಅಧಿಕಂ - ಅತಿಶಯವಾಗಿ, ಪುಷ್ಯತಿ - ಪೋಷಿಸುತ್ತಿದ್ದಿತು. ‖ ೧೭ ‖ ಪಾನಭೂಮಿಃ - ಪಾನಸ್ಥಳವು, ತತ್ರತತ್ರ - ಅಲ್ಲಲ್ಲಿ, ವಿನ್ಯಸ್ತೈಃ - ಇಡಲ್ಪಟ್ಟ, ಸುಶ್ಲಿಷ್ಟೈಃ - ಚನ್ನಾಗಿ ಅದಪು ಹಾಕಿದ, ಶಯನಾಸನೈಶ್ಚ - ಹಾಸಿಗೆಗಳಿಂದಲೂ, ಪೀಠಗಳಿಂದಲೂ, ವಹ್ನಿಂವಿನಾ - ಬೆಂಕಿಯಿಲ್ಲದೆ, ಪ್ರದೀಪ್ತೇವ - ಉರಿಯುವಂತೆ, ಉಪಲಕ್ಷ್ಯತೇ - ಕಾಣುತ್ತಿದ್ದಿತು. ‖೧೮‖ ಬಹು....ಧೈಃ - ಅನೇಕ ಪ್ರಕಾರವಾದ ರಸಗಳುಳ್ಳ, ವರ....ತೈಃ - ಉತ್ತಮವಾದ ರಚನಾವಿಶೇಷಗಳಿಂದ, ಸಂಸ್ಕೃತೈಃ - ವಾಸನೆ ಕಟ್ಟಿದ, ಕುಶ....ಕ್ತೈಃ - ಚತುರರಾದ ಅಡಿಗೆಯವರಿಂದ ಪಕ್ವಮಾಡಿಸಲ್ಪಟ್ಟ, ಪೃಥಕ್ - ಬೇರೆಬೇರೆಯಾಗಿ(?) ವಿಂಗಡವಾಗಿ, ಪಾನ....ತೈಃ - ಪಾನಸ್ಥಳವನ್ನೈದಿದ, ಮಾಂಸೈಃ - ಮಾಂಸಗಳಿಂದ ಕೂಡಿರುವ, ವಿವಿಧೈಃ-ಅನೇಕ ವಿಧಗಳಾದ, ತೈಸ್ತೈಃ-ಆ ಆ, ವಾಸಚೂರ್ಣೈಶ್ಚಸಹ - ಸುವಾಸನೆಯ ಪದಾರ್ಥಗಳಿಂದಲೂ ಯುಕ್ತವಾದ, ದಿವ್ಯಾಃ - ಸಮುದ್ರಮಥನೋತ್ಪನ್ನಗಳಾದ, ಪ್ರಸನ್ನಾಃ ನಿರ್ಮಲಗಳಾದ, ವಿವಿಧಾಃ-ನಾನಾಬಗೆಗಳಾದ, ಸುರಾಃ-ಮದ್ಯಗಳೂ, ಶರ್ಕ....ವಾಃ - ಸಕ್ಕರೆಯ ಮದ್ಯ, ಜೇನಿನ ಮದ್ಯ,

ಸುವ ಷಡ್ರಸೋಪೇತವಾದ ಭೋಜ್ಯವಸ್ತುಗಳಿಂದಲೂ, ಮಣಿಹಾರ, ಕಿರೀಟ, ಕೇಯೂರಾದಿ ಭೂಷಣಗಳಿಂದಲೂ, ಚಿನ್ನದ ತಟ್ಟೆಗಳಲ್ಲಿ ಇಟ್ಟಿರುವ ವಿವಿಧ ಫಲಪುಷ್ಪಗಳಿಂದಲೂ ಕೂಡಿದ ಆ ಪ್ರದೇಶವು ಬಹುವಾಗಿ ವಿರಾಜಿಸುತ್ತಿದ್ದಿತು. ಆ ಆ ಪ್ರದೇಶಗಳಲ್ಲಿ ದಟ್ಟವಾಗಿಟ್ಟಿರುವ ಶಯನಾಸನಗಳಿಂದ ಶೋಭಿಸುತ್ತಿದ್ದ ಆ ಪ್ರದೇಶವು ದೀಪವಿಲ್ಲದಿದ್ದರೂ ಅತಿಶಯವಾಗಿ ಕಂಗೊಳಿಸುತ್ತಿದ್ದಿತು. ‖೧೬–೧೮‖ ಆ ಪಾನಭೂಮಿಯಲ್ಲಿ ಬುದ್ಧಿಶಾಲಿಗಳಾದ ಅಡಿಗೆಯವರಿಂದ ಶಾಸ್ತ್ರೋಕ್ತವಾಗಿ ಪಕ್ವಗೊಳಿಸಿದ್ದ ರುಚಿರುಚಿಯಾದ ವಿವಿಧ ಮೃಗಮಾಂಸಗಳು ಒಂದಕ್ಕೊಂದು ಸೇರದಂತೆ ಇಡಲಾಗಿದ್ದವು. ಕಪಿವೀರನಾದ ಹನುಮಂತನು ಆ ಪ್ರದೇಶದಲ್ಲಿ

¶ "ಪಾನಕಂ ದ್ರಾಕ್ಷಮಾಧೂಕಂ ಖರ್ಜೂರಂ ತಾಲಮೈಕ್ಷವಂ । ಮಧೂತ್ಥಂ ಶೀಧುಮಾಧ್ವೀಕಂ ಮೈರೇಯಂ ನಾರಿಕೇಲಜಂ" ಎಂದು ರಸಾರ್ಣವದಲ್ಲಿ ಹೇಳಿದೆ. ಸಕ್ಕರೆಯಿಂದ ಮಾಡಿದ ಪಾನಕಕ್ಕೆ ಶರ್ಕರಾಸವವೆಂದೂ, ಜೇನಿನಿಂದ ಮಾಡಿದ ಪಾನೀಯಕ್ಕೆ ಮಾಧ್ವೀಕವೆಂದೂ, ದ್ರಾಕ್ಷಿಯ ರಸದಿಂದ ಮಾಡಿದ ಪಾನೀಯಕ್ಕೆ ದ್ರಾಕ್ಷಾಸವವೆಂದೂ, ಮಧೂಕ ಪುಷ್ಪಾದಿಗಳಿಂದ ಮಾಡಿದ ಪಾನೀಯಕ್ಕೆ ಪುಷ್ಪಾಸವವೆಂದೂ, ಖರ್ಜೂರವೇ ಮೊದಲಾದ ಹಣ್ಣುಗಳಿಂದ ಮಾಡಿದ ಪಾನೀಯಕ್ಕೆ ಫಲಾಸವವೆಂದೂ ಹೇಳುತ್ತಾರೆ. (ತಿ+ಮ+ರಾ+ಗೋ)

ವಿವಿಧೈಃ ದೃಷ್ಟಾಸ್ತೈಸ್ತೈಃ ಪೃಥಕ್ ಪೃಥಕ್ । ಸಂತತಾ ಶುಶುಭೇ ಭೂಮಿ ರ್ಮಾಲ್ಯೈಶ್ಚ ಬಹುಸಂಸ್ಥಿತೈಃ ॥೨೦॥ ಹಿರಣ್ಮಯೈಶ್ಚ $ ವಿವಿಧೈ ರ್ಭಾಜನೈಸ್ಸ್ಫಾಟಿಕೈರಪಿ । ಜಾಂಬೂನದಮಯೈಶ್ಚಾನ್ಯೈಃ ಕರಕೈರಭಿಸಂವೃತಾ ॥ ೨೨ ॥ ರಾಜತೇಷುಚ ಕುಂಭೇಷು ಜಾಂಬೂನದಮಯೇಷುಚ । ಪಾನಶ್ರೇಷ್ಠಂ ತದಾ ಭೂರಿ ಕಪಿಸ್ತತ್ರ ದದರ್ಶ ಸಃ ॥ ೨೩ ॥ ಸೋಽಪಶ್ಯಚ್ಛಾತಕುಂಭಾನಿ ಶೀಧೋರ್ಮಣಿಮಯಾನಿಚ । ರಾಜತಾನಿಚ ಪೂರ್ಣಾನಿ ಭಾಜನಾನಿ ಮಹಾಕಪಿಃ ॥ ೨೪ ॥ ಕ್ವಚಿದರ್ಧಾವಶೇಷಾಣಿ ಕ್ವಚಿತ್ಪೀತಾನಿ ಸರ್ವಶಃ । ಕ್ವಚಿನ್ನೈವ ಪ್ರಪೀತಾನಿ ಪಾನಾನಿ ಸ ದದರ್ಶ ಹ ॥ ೨೫ ॥

ಹುವ್ವುಗಳಿಂದ ಹುಟ್ಟಿದ ಮದ್ಯ, ಫಲರಸಗಳಿಂದ ಮಾಡಿದ ಮದ್ಯ ಎಂಬ, ಕೃತ್ರಿಮಸುರಾಅಪಿ - ಕೃತಕಗಳಾದ ಮದ್ಯಗಳೂ, ಪೃಥಕ್ಪೃಥಕ್ - ಬೇರೆಬೇರೆಯಾಗಿ, (ಹನುಮತಾ - ಆಂಜನೇಯನಿಂದ,) ದೃಷ್ಟಾಃ - ಕಾಣಲ್ಪಟ್ಟವು, ಬಹುಸಂಸ್ಥಿತೈಃ - ಅನೇಕ ಪ್ರದೇಶಗಳಲ್ಲಿರುವ, ಮಾಲ್ಯೈಶ್ಚ - ಪುಷ್ಪಮಾಲಿಕೆಗಳಿಂದಲೂ, ಹಿರಣ್ಮಯೈಃ - ಸುವರ್ಣಮಯಗಳಾದ, ಸ್ಫಾಟಿಕೈಃ - ಸ್ಫಟಿಕಮಣಿವಿಕಾರಗಳಾದ, ವಿವಿಧೈಃ - ಅನೇಕ ವಿಧಗಳಾದ, ಭಾಜನೈರಪಿ - ಪಾತ್ರೆಗಳಿಂದಲೂ, ಸಂತತಾ - ಯುಕ್ತವಾದ, ಜಾಂಬೂ....ಯೈಃ - ಅಪರಂಜಿಯ, ಅನ್ಯೈಃಕರಕೈಶ್ಚ - ಇತರ ಪಾತ್ರೆಗಳಿಂದಲೂ, ಅಭಿಸಂವೃತಾ - ಎಲ್ಲಾ ಭಾಗಗಳಲ್ಲಿಯೂ ಕೂಡಿರುವ ಭೂಮಿಯು, ಶುಶುಭೇ - ಕಂಗೊಳಿಸುತ್ತಿದ್ದಿತು. ॥ ೧೯-೨೨ ॥ ತದಾ - ಆ ಸಮಯದಲ್ಲಿ, ತತ್ರ - ಆ ಮನೆಯಲ್ಲಿ, ಸಕಪಿಃ - ಆ ಆಂಜನೇಯನು, ರಾಜತೇಷು - ಬೆಳ್ಳಿಯ ವಿಕಾರಗಳಾದ, ಜಾಂಬೂನದಮಯೇಷು - ಸುವರ್ಣಮಯಗಳೂ ಆದ, ಕುಂಭೇಷುಚ - ಘಟಗಳಲ್ಲಿಯೂ, ಭೂರಿ - ಬಹಳವಾಗಿರುವ, ಪಾನಶ್ರೇಷ್ಠಂ - ಶ್ರೇಷ್ಠವಾದ ಮದ್ಯವನ್ನು, ದದರ್ಶ - ಕಂಡನು. ॥ ೨೩ ॥ ಸಮಹಾಕಪಿಃ - ಆ ಹನುಮಂತನು, ಶಾತಕುಂಭಾನಿ - ಸುವರ್ಣವಿಕಾರಗಳಾದ, ಮಣಿಮಯಾನಿಚ - ರತ್ನವಿಕಾರಗಳೂ ಆದ, ರಾಜತಾನಿ - ಬೆಳ್ಳಿಯ ಸಂಬಂಧಗಳಾದ, ಪೂರ್ಣಾನಿ - ತುಂಬಿದ, ಶೀಧೋಃ - ಮದ್ಯದ, ಭಾಜನಾನಿ - ಪಾತ್ರೆಗಳನ್ನೂ, ಅಪಶ್ಯತ್ - ಕಂಡನು. ॥ ೨೪ ॥ ಸಃ - ಆ ಮಾರುತಿಯು, ಅರ್ಧಾ....ನಿ - ಅರ್ಧಭಾಗ ಕುಡಿದ, ಕ್ವಚಿತ್ಪಾನಾನಿ - ಕೆಲ ಪಾನಪಾತ್ರೆಗಳನ್ನು, ಸರ್ವಶಃ - ಪೂರ್ತಿಯಾಗಿ, ಪೀತಾನಿ - ಪಾನಮಾಡಿದ, ಕ್ವಚಿತ್ - ಕೆಲವು ಪಾನಪಾತ್ರೆಗಳನ್ನೂ, ನೈವಪ್ರಪೀತಾನಿ - ಕುಡಿಯದೆಯೇ ಇರುವ, ಕ್ವಚಿತ್ - ಕೆಲವು, ಪಾನಾನಿ -

ಕ್ಷೀರಸಮುದ್ರದಲ್ಲಿ ಜನಿಸಿದ ನಿರ್ಮಲವೂ ಅಕೃತ್ರಿಮವೂ ಆದ ಮದ್ಯವನ್ನೂ, ಸಕ್ಕರೆಯಿಂದಲೂ, ಪುಷ್ಪಗಳಿಂದಲೂ, ನಾರಿಕೇಳದಿಂದಲೂ, ಖರ್ಜೂರದಿಂದಲೂ ತೆಗೆದ ಬಗೆಬಗೆಯ ಪರಿಮಳ ಚೂರ್ಣಗಳಿಂದ ಕೂಡಿದ ಮದ್ಯಗಳು ಸುವರ್ಣಪಾತ್ರೆಗಳಲ್ಲಿ ಸಿದ್ಧಪಡಿಸಲಾಗಿರುವುದನ್ನು ಕಂಡನು. ಬಗೆಬಗೆಯ ಪುಷ್ಪಮಾಲಿಕೆಗಳಿಂದಲಂಕೃತವಾದ ಸುವರ್ಣಸ್ಫಟಿಕಮಯಗಳಾದ ಪಾನಪಾತ್ರೆಗಳೂ, ಗಿಂಡಿಗಳೂ ಆ ಪ್ರದೇಶದಲ್ಲಿ ಅನೇಕವಾಗಿದ್ದವು. ಆ ಕಪಿಶ್ರೇಷ್ಠನು ಚಿನ್ನಬೆಳ್ಳಿಗಳ ಪಾತ್ರೆಗಳಲ್ಲಿ ತುಂಬಿರುವ ಅನೇಕ ಪಾನೀಯ ದ್ರವ್ಯಗಳನ್ನೂ ಮದ್ಯಭರಿತವಾದ ಮಣಿಮಯಪಾತ್ರೆಗಳನ್ನೂ ಚಿನ್ನಬೆಳ್ಳಿಯೇ ಮೊದಲಾದವುಗಳ ಬಟ್ಟಲುಗಳನ್ನೂ ಕಂಡವನಾದನು. ॥ ೧೯—೨೪ ॥ ಒಂದುಕಡೆ ಅರೆಕುಡಿದುಳಿದಿರುವ ಮದ್ಯದ ಪಾತ್ರೆಗಳೂ, ಸಂಪೂರ್ಣವಾಗಿ ಕುಡಿದು ಉರುಳಿಸಿರುವ ಪಾತ್ರೆಗಳೂ ತುಂಬಿದ್ದವು. ಒಂದುಕಡೆ

$ "ಕಲಶೈಃ" ಪಾ.

ಕ್ವಚಿದ್ಭಕ್ಷ್ಯಾಂಶ್ಚ ವಿವಿಧಾನ್ ಕ್ವಚಿತ್ಪಾನಾನಿ ಭಾಗಶಃ । ಕ್ವಚಿದನ್ನಾವಶೇಷಾಣಿ ಪಶ್ಯನ್ವೈ ವಿಚಚಾರಹ ॥ ೨೬ ॥ ಕ್ವಚಿತ್ಪ್ರಭಿನ್ನೈಃ ಕರಕೈಃ ಕ್ವಚಿದಾಲೋಳಿತೈರ್ಘಟೈಃ । ಕ್ವಚಿತ್ಸಂಪೃಕ್ತಮಾಲ್ಯಾನಿ ಜಲಾನಿ ಚ ಫಲಾನಿಚ ॥ ೨೭ ॥ ಶಯನಾನ್ಯತ್ರ ನಾರೀಣಾಂ ಶೂನ್ಯಾನಿ ಬಹುಧಾ ಪುನಃ । ಪರಸ್ಪರಂ ಸಮಾಶ್ಲಿಷ್ಯ ಕಾಶ್ಚಿತ್ಸುಪ್ತಾ ವರಾಂಗನಾಃ ॥ ೨೮ ॥ ಕಾಶ್ಚಿಚ್ಚ ವಸ್ತ್ರಮನ್ಯಸ್ಯಾಸ್ಸ್ವಪಂತ್ಯಾಃ ಪರಿಧಾಯಚ । ಆಹೃತ್ಯ ಚಾಬಲಾಸ್ಸುಪ್ತಾ ನಿದ್ರಾಬಲಪರಾಜಿತಾಃ ॥೨೯॥ ತಾಸಾಮುಚ್ಛ್ವಾಸವಾತೇನ ವಸ್ತ್ರಂ ಮಾಲ್ಯಂಚ ಗಾತ್ರಜಂ । ನಾತ್ಯರ್ಥಂ ಸ್ಪಂದತೇ ಚಿತ್ರಂ ಪ್ರಾಪ್ಯ ಮಂದಮಿವಾನಲಂ ॥ ೩೦ ॥

ಪಾನಭಾಜನಗಳನ್ನು, ದದರ್ಶಹ - ಕಂಡನು. ॥ ೨೫ ॥ ಯತ್ರ - ಯಾವ ಮನೆಯಲ್ಲಿ, ವಿವಿಧಾನ್ - ಅನೇಕ ವಿಧಗಳಾದ, ಕ್ವಚಿತ್‌ಭಕ್ಷ್ಯಾನ್-ಕೆಲ ಭಕ್ಷ್ಯಗಳನ್ನೂ, ಭಾಗಶಃ-ತುಂಡುಗಳಾದ, ಕ್ವಚಿತ್ಪಾನಾನಿ - ಕೆಲ ಪಾನಪಾತ್ರೆಗಳನ್ನೂ, ಅನ್ನಾವಶೇಷಾನಿ - ಉಳಿದ ಅನ್ನಗಳುಳ್ಳ, ಕ್ವಚಿತ್ - ಕೆಲ ಪಾತ್ರೆಗಳನ್ನು, ಪ್ರಭಿನ್ನೈಃ - ಒಡೆದುಹೋದ, ಕ್ವಚಿ....ಹ - ಕೆಲ ಹೂಜಿಗಳೊಡನೆಯೂ, ಆಲೋಳಿತೈಃ - ಕದಲಾಡುತ್ತಿರುವ, ಕ್ವಚಿದ್ಘಟೈಃ - ಕೆಲ ಪಾತ್ರೆಗಳೊಡನೆಯೂ ಕೂಡಿರುವ, ಸಂಪೃ....ನಿ - ಸೇರಿದ ಹುವ್ವುಗಳುಳ್ಳ, ಕ್ವಚಿಜ್ಜಲಾನಿಚ - ಕೆಲವು ಉದಕಗಳನ್ನೂ, ಫಲಾನಿಚ - ಹಣ್ಣುಗಳನ್ನೂ, ಪುನಃ - ಮತ್ತು, ಬಹುಧಾ - ಆನೇಕ ಬಗೆಗಳಾಗಿ, ಶುಭ್ರಾಣಿ - ನಿರ್ಮಲವಾದ, ನಾರೀಣಾಂ - ಸ್ತ್ರೀಪುರ, ಶಯನಾನಿ - ಹಾಸಿಗೆಗಳನ್ನೂ, ಪರಸ್ಪರಂ - ಅನ್ಯೋನ್ಯವಾಗಿ, ಸಮಾಶ್ಲಿಷ್ಯ - ತಬ್ಬಿಕೊಂಡು, ಸುಪ್ತಾಃ - ಮಲಗಿರುವ, ಕಾಶ್ಚಿದ್ವರಾಂಗನಾಃ - ಕೆಲ ಸುಂದರಿಯರನ್ನೂ, ವಸ್ತ್ರಂ - ಬಟ್ಟೆಯನ್ನು, ಪರಿಧಾಯ - ಹೊದ್ದು, ಸ್ವಪಂತ್ಯಾಃ - ನಿದ್ರೆಗೈಯ್ಯುತ್ತಿರುವ, ಅನ್ಯಸ್ಯಾಃ - ಮತ್ತೋರ್ವಳ, ವಸ್ತ್ರಂಚ - ಬಟ್ಟೆಯನ್ನೂ, ಆಹೃತ್ಯಚ - ಎಳೆದುಕೊಂಡು, ನಿದಾ....ತಾಃ - ನಿದ್ರಾತಿಶಯದಿಂದ ಅಸ್ವತಂತ್ರರಾಗಿ, ಸುಪ್ತಾಃ-ಮಲಗಿರುವ, ಕಾಶ್ಚಿದಬಲಾಶ್ಚ-ಕೆಲ ಸ್ತ್ರೀಯರನ್ನೂ, ಪಶ್ಯನ್-ನೋಡುತ್ತ, ವಿಚಚಾರಹ - ಸಂಚರಿಸಿದನು. ॥ ೨೯ ॥ ತಾಸಾಂ - ಆ ಸುಂದರಿಯರ, ಉಚ್ಛ್ವ.... - ನಿಟ್ಟುಸಿರು ಗಾಳಿಯಿಂದ, ಚಿತ್ರಂ - ಆಶ್ಚರ್ಯಕರವಾದ, ವಸ್ತ್ರಂ - ಬಟ್ಟೆಯು, ಗಾತ್ರಜಂ - ಶರೀರದಲ್ಲಿರುವ, ಮಾಲ್ಯಂಚ - ಸರವೂ ಕೂಡ, ಮಂದಮನಿಲಂ-ಮಂದಮಾರುತವನ್ನು, ಪ್ರಾಪ್ಯೇನ - ಹೊಂದಿದಂತೆ, ಅತ್ಯರ್ಥಂ-ಬಹಳವಾಗಿ, ನಾಸ್ಪಂದತ-ಚಲಿಸುತ್ತಿರಲಿಲ್ಲ. ॥ ೩೦ ॥ ತತ್ರ-ಆ ಮನೆಯಲ್ಲಿ, ಮಾರುತಃ-

---

ಪಾನಮಾಡುವುದಕ್ಕಾಗಿ ಸಿದ್ಧವಾಗಿ ತುಂಬಿಟ್ಟಿರುವ ಪಾತ್ರೆಗಳು ಹರಡಿದ್ದವು. ಇನ್ನೊಂದು ಕಡೆ ಅನೇಕ ಭಕ್ಷ್ಯಗಳೂ, ಮತ್ತೊಂದುಕಡೆ ಪ್ರತ್ಯೇಕವಾಗಿಡಲ್ಪಟ್ಟ ಪಾನದ್ರವ್ಯಗಳೂ, ಮಗದೊಂದುಕಡೆ ತಿಂದುಳಿದ ಪಕ್ವಾನ್ನಗಳೂ ಹೇರಳವಾಗಿದ್ದವು. ಒಂದು ಕಡೆಯಲ್ಲಿ ಕುಡಿದು ಮತ್ತೇರಿ ಬಿಸುಟಿದ್ದುದರಿಂದ ಒಡೆದ ಪಾತ್ರೆಗಳೂ, ಮತ್ತೊಂದುಕಡೆ ಒಡೆದು ಬಿದ್ದಿದ್ದ ಘಟಗಳೂ, ಇನ್ನೊಂದುಕಡೆ ನೀರಿನಲ್ಲಿ ತೇಲುತ್ತಿದ್ದ ಫಲಪುಷ್ಪಗಳೂ, ಒಂದುಕಡೆ ಬಗೆಬಗೆಯ ಸ್ತ್ರೀಯರ ಶಯನಗಳೂ, ಅವುಗಳಲ್ಲಿ ಒಬ್ಬರನ್ನೊಬ್ಬರಪ್ಪಿಕೊಂಡು ನಿದ್ರಿಸುತ್ತಿದ್ದ ಉತ್ತಮ ಸ್ತ್ರೀಯರೂ, ನಿದ್ರೆಯಿಂದ ಮೈಮರೆತು ವಸ್ತ್ರನ್ಯಸ್ತರಾಗಿ ಮಲಗಿರುವ ಕೆಲವರು ಸ್ತ್ರೀಯರೂ ಮತ್ತೊಬ್ಬರ ವಸ್ತ್ರವನ್ನು ತಮ್ಮದೆಂಬ ಭ್ರಮೆಯಿಂದ ಎಳೆದು ಹೊದ್ದುಕೊಂಡಿರುವ ಕೆಲವರು ಸ್ತ್ರೀಯರೂ, ಒಬ್ಬರ ವಸ್ತ್ರವನ್ನು ಮತ್ತೊಬ್ಬರು ತಲದಿಂಬಾಗಿ ಮಾಡಿಕೊಂಡು ನಿದ್ರಿಸುತ್ತಿರುವ ಇನ್ನೂ ಕೆಲವರು ಸ್ತ್ರೀಯರೂ ಇರುವುದನ್ನು ಕಂಡನು. ಆ ಸ್ತ್ರೀಯರ ವಸ್ತ್ರಗಳು

ಚಂದನಸ್ಯಚ ಶೀತಸ್ಯ ಶೀಧೋರ್ಮಧುರಸಸ್ಯಚ । ವಿವಿಧಸ್ಯಚ ಮಾಲ್ಯಸ್ಯ ಧೂಪಸ್ಯ ವಿವಿಧಸ್ಯಚ ॥೩೧॥ ಬಹುಧಾ ಮಾರುತಸ್ತತ್ರ ಗಂಧಂ ವಿವಿಧಮುದ್ವಹನ್ । § ರಸಾನಾಂ ಚಂದನಾನಾಂಚ ಧೂಪಾನಾಂಚೈವ ಮೂರ್ಛಿತಃ ॥೩೨॥ ಪ್ರವವೌ ಸುರಭಿರ್ಗಂಧೋ ವಿಮಾನೇ ಪುಷ್ಪಕೇ ತದಾ । ಶ್ಯಾಮಾವದಾತಾಸ್ತತ್ರಾನ್ಯಾಃ ಕಾಶ್ಚಿತ್ಕೃಷ್ಣಾ ವರಾಂಗನಾಃ ॥ ೩೩ ॥ ಕಾಶ್ಚಿತ್ಕಾಂಚನವರ್ಣಾಂಗ್ಯಃ ಪ್ರಮದಾ ರಾಕ್ಷಸಾಲಯೇ । ತಾಸಾಂ ನಿದ್ರಾವಶತ್ವಾಚ್ಚ ಮದನೇನ ವಿಮೂರ್ಛಿತಂ ॥ ೩೪ ॥ ಪದ್ಮಿನೀನಾಂ ಪ್ರಸುಪ್ತಾನಾಂ

ಗಾಳಿಯು, ಶೀತಸ್ಯ-ತಣ್ಣಗಿರುವ, ಚಂದನಸ್ಯ ಚಂದನರಸದ ಸಂಬಂಧವೂ ಆದ, ಮಧುರಸಸ್ಯ-ಸಿಹಿಯಾದ ರಸವುಳ್ಳ, ಶೀಧೋಶ್ಚ - ಮದ್ಯದ ಸಂಬಂಧವೂ ಆದ, ವಿವಿಧಸ್ಯ - ನಾನಾಬಗೆಗಳಾದ, ಮಾಲ್ಯಸ್ಯಚ - ಪುಷ್ಪಗಳ ಸಂಬಂಧವೂ ಆದ, ವಿವಿಧಸ್ಯ - ಅನೇಕ ವಿಧಗಳಾದ, ಧೂಪಸ್ಯಚ - ಹಾಲುಮಡ್ಡಿಯೇ ಮುಂತಾದ ಧೂಪಗಳ, ವಿವಿಧಂಗಂಧಂ - ಅನೇಕ ರೀತಿಗಳಾಗಿರುವ ವಾಸನೆಗಳನ್ನೂ, ಉದ್ವಹನ್ - ವಹಿಸುವವನಾಗಿ, ಬಹುಧಾ - ಅನೇಕ ಪ್ರಕಾರವಾಗಿ, ವವೌ - ಬೀಸಿತು. ॥ ೩೧ ॥ ತದಾ - ಆ ಕಾಲದಲ್ಲಿ, ಚಂದ....ನಾಂ - ಚಂದನರಸಗಳ ಸಂಬಂಧವೂ, ಧೂಪಾನಾಂಚ - ಧೂಪಗಳ ಸಂಬಂಧವೂ ಆದ, ಸುರಭಿಃ - ಪರಿಮಳಯುಕ್ತವಾದ, ಗಂಧಃ - ಸುವಾಸನೆಯು, ಪುಷ್ಪಕೇ - ಪುಷ್ಪಕವೆಂಬ, ವಿಮಾನೇ - ವಿಮಾನದಲ್ಲಿ, ಮೂರ್ಛಿತಃ - ವ್ಯಾಪ್ತವಾಗಿ, ಪ್ರವವೌ - ಬೀಸಿತು. ॥೩೨॥ ತತ್ರರಾಕ್ಷಸಾಲಯೇ-ಆ ರಾಕ್ಷಸನ ಶಯನಗೃಹದಲ್ಲಿ, ಶ್ಯಾಮಾಃ-ಯೌವನಮಧ್ಯಸ್ಥರಾದ, ಅವದಾತಾಃ-ಬಿಳುಪಾಗಿರುವ, ಕಾಶ್ಚಿತ್-ಕೆಲವರು ಸುಂದರಿಯರೂ, ಕೃಷ್ಣಾಃ-ಕಪ್ಪಾಗಿರುವ, ಅನ್ಯಾ....ಶ್ಚ-ಇನ್ನೂ ಕೆಲ ಉತ್ತಮ ಸ್ತ್ರೀಯರೂ, ಕಾಂಚ....ಗ್ಯಃ-ಬಂಗಾರದ ಬಣ್ಣದಂತೆ ಅವಯವಗಳುಳ್ಳ, ಕಾಶ್ಚಿತ್ಪ್ರಮದಾಃ-ಕೆಲ ಹೆಂಗಸರೂ, ಸುಪ್ತಾಃ - ನಿದ್ರೆಗೈಯ್ಯುತ್ತಿದ್ದರು. ॥೩೩॥ ನಿದ್ರಾ....ತ್ - ನಿದ್ರಾಧೀನದಿಂದಲೂ, ಮದನೇನಚ - ಮನ್ಮಥೋದ್ದೀಪಕರತಿಯಿಂದಲೂ, ವಿಮೂರ್ಛಿತಂ - ಬಳಲಿದ, ತಾಸಾಂ - ಆ ಸುಂದರಾಂಗನೆಯರ, ರೂಪಂ - ಸೌಂದರ್ಯವು, ಪ್ರಸುಪ್ತಾನಾಂ - ಮಲಗಿರುವ, ಪದ್ಮಿನೀನಾಂ - ಕಮಲದ ಬಳ್ಳಿಗಳ, ರೂಪಂ - ರೂಪವು, ಯಥಾ - ಹೇಗೋ, ತಥೈವ - ಹಾಗೆಯೇ, ಆಸೀತ್ - ಆಯಿತು. ॥ ೩೪ ॥ ಸುಮಹಾತೇಜಾಃ - ಮಹಾ ತೇಜೋವಂತನಾದ, ಕಪಿಃ - ಆಂಜನೇಯನು,

---

ಮಲಯಮಾರುತದಂತೆ ಬರುತ್ತಿರುವ ಅವರ ನಿಟ್ಟುಸಿರಿನಿಂದ ಮೆಲ್ಲಮೆಲ್ಲನೆ ಚಲಿಸುತ್ತಿದ್ದವು. ॥ ೨೫–೩೦ ॥ ಶೀತಳವಾದ ಗಂಧದಿಂದಲೂ, ಮಧುರವಾದ ಮದ್ಯದಿಂದಲೂ, ವಿವಿಧ ಪುಷ್ಪಗಳಿಂದ ಕಟ್ಟಿದ ಮಾಲಿಕೆಗಳಿಂದಲೂ ಮನೋಹರವಾದ ದಿವ್ಯ ಧೂಪಗಳಿಂದಲೂ, ಸ್ನಾನಾರ್ಥವಾಗಿ ಹವಣಿಸಿದ್ದ ಗಂಧೋದಕಗಳಿಂದಲೂ, ಹಾಲುಮಡ್ಡಿಯೇ ಮೊದಲಾದ ಧೂಪದ್ರವ್ಯಗಳಿಂದಲೂ ಹೊರಡುತ್ತಿದ್ದ ಬಗೆಬಗೆಯ ಸುವಾಸನೆಯನ್ನು ತಳೆದ ಮಂದಮಾರುತವು ಆ ಶಯನಗೃಹದಲ್ಲಿ ಮೆಲ್ಲಮೆಲ್ಲನೆ ಬೀಸುತ್ತಿದ್ದಿತು. ಅಲ್ಲಿ ಶ್ಯಾಮಲವರ್ಣವುಳ್ಳವರೂ, ಬಿಳುಪಾಗಿರುವವರೂ, ಕೃಷ್ಣವರ್ಣವುಳ್ಳವರೂ, ಹೊಂಬಣ್ಣದ ಅವಯವಗಳುಳ್ಳವರೂ, ಆದ ಕೆಲವು ಉತ್ತಮ ವನಿತೆಯರು ನಿದ್ರಿಸುತ್ತಿದ್ದರು. ಹೀಗೆ ನಿದ್ರಿಸುತ್ತಿರುವ ಆ ಸುಂದರಾಂಗಿಯರು ಗಾಢವಾದ ರತಿಯಿಂದ ಆಯಾಸಗೊಂಡ ಮುಖವುಳ್ಳವರಾಗಿ ರಾತ್ರಿಯಲ್ಲಿ ಮುಗಿದಿರುವ ತಾವರೆಗಳೊಡಗೂಡಿದ ಕಮಲದ ಬಳ್ಳಿಗಳಂತೆ ಕಂಗೊಳಿಸುತ್ತಿದ್ದರು. ಮಹಾ ಪರಾಕ್ರಮ

---

§ "ಸ್ನಾನಾನಾಂ" ತಿ. ಪಾ.

ರೂಪಮಾಸೀದ್ಯಥೈವಹಿ । ಏವಂ ಸರ್ವಮಶೇಷೇಣ ರಾವಣಾಂತಃಪುರಂ ಕಪಿಃ ॥೩೫॥ ದದರ್ಶ ಸುಮಹಾತೇಜಾ ನದದರ್ಶ ಚ ಜಾನಕೀಂ । ನಿರೀಕ್ಷ್ಯಮಾಣಶ್ಚ ತದಾ ತಾಃ ಸ್ತ್ರಿಯಶ್ಚ ಮಹಾಕಪಿಃ ॥ ೩೬ ॥ ಜಗಾಮ ಮಹತೀಂ ‡ ಚಿಂತಾಂ ಧರ್ಮಸಾಧ್ವಸ ಶಂಕಿತಃ । "ಪರದಾರಾವರೋಧಸ್ಯ ಪ್ರಸುಪ್ತಸ್ಯ ನಿರೀಕ್ಷಣಂ ॥ ೩೭ ॥ ಇದಂಖಲು ಮಮಾತ್ಯರ್ಥಂ ಧರ್ಮಲೋಪಂ ಕರಿಷ್ಯತಿ । ನಹಿ ಮೇ ಪರದಾರಾಣಾಂ ದೃಷ್ಟಿರ್ವಿಷಯವರ್ತಿನೀ ॥ ೩೮ ॥ ಅಯಂ ಚಾತ್ರ ಮಯಾದೃಷ್ಟಃ ಪರದಾರಪರಿಗ್ರಹಃ" । ತಸ್ಯ ಪ್ರಾದುರಭೂ ಚ್ಚಿಂತಾ ಪುನರನ್ಯಾ ಮನಸ್ವಿನಃ ॥ ೩೯ ॥ ನಿಶ್ಚಿತೈಕಾಂತಚಿತ್ತಸ್ಯ

ಏವಂ - ಈ ಪ್ರಕಾರವಾಗಿ, ಅಶೇಷಣ - ನಿಶ್ಶೇಷದಿಂದ, ಸರ್ವಂ - ಸಮಸ್ತವಾದ, ರಾವಣಾಂತಃಪುರಂ- ರಾವಣಾಸುರನ ಅಂತಃಪುರದ ಸ್ತ್ರೀಜನಸಮೂಹವನ್ನು, ದದರ್ಶ - ಕಂಡನು, ಜಾನಕೀಂಚ - ಸೀತಾ ದೇವಿಯನ್ನಾದರೆ, ನದದರ್ಶ - ಕಾಣಲಿಲ್ಲವು. ॥ ೩೫ ॥ ತದಾ - ಆಗ, ಸಮಹಾಕಪಿಃ - ಆ ಆಂಜ ನೇಯನು, ತಾಃಸ್ತ್ರಿಯಃ - ಆ ಸ್ತ್ರೀಯರನ್ನು, ನಿರೀಕ್ಷಮಾಣಃ - ನೋಡುತ್ತ, ಧರ್ಮ....ತಃ - ಧರ್ಮಲೋಪದ ಭಯದಿಂದ ಹೆದರಿ, ಮಹತೀಂ - ದೊಡ್ಡದಾದ, ಚಿಂತಾಂ - ಆಲೋಚನೆಯನ್ನು, ಜಗಾಮ - ಹೊಂದಿದನು, ಪ್ರಸುಪ್ತಸ್ಯ - ನಿದ್ರೆಗೈಯ್ಯುತ್ತಿರುವ, ಪರ....ಸ್ಯ - ಪರಪತ್ನೀರೂಪವಾದ ಅಂತಃಪುರಸ್ತ್ರೀಜನರ, ಇದಂನಿರೀಕ್ಷಣಂ- ಈ ನೋಡವಿಕೆಯು, ಮಮ-ನನಗೆ, ಅತ್ಯರ್ಥಂ-ಬಹಳವಾಗಿ, ಧರ್ಮಲೋಪಂ-ಧರ್ಮಾತಿಕ್ರಮಣವನ್ನು, ಕರಿಷ್ಯತಿಖಲು-ಉಂಟುಮಾಡುತ್ತದೆಯಷ್ಟೆ, ಮೇದೃಷ್ಟಿಃ- ನನ್ನ ದೃಷ್ಟಿಯು, ಪರದಾರಾಣಾಂ - ಪರಸ್ತ್ರೀಯರ, ವಿಷಯವರ್ತಿನೀ - ಲಕ್ಷ್ಯದಲ್ಲಿ ಪ್ರವರ್ತಿಸುವದು, ನಹಿ - ಇಲ್ಲವಷ್ಟೆ, ಅತ್ರ - ಈ ಮನೆಯಲ್ಲಿ, ಮಯಾ - ನನ್ನಿಂದ, ಅಯಂ - ಈ, ಪರ....ಹಃ - ಪರಸ್ತ್ರೀರೂಪವಾದ ಸ್ತ್ರೀಸಮುದಾಯವು, ದೃಷ್ಟಃ - ನೋಡಲ್ಪಟ್ಟಿತು. ॥ ೩೭-೩೮ ॥ ನಿಶ್ಚಿ....ಸ್ಯ - ನಿಶ್ಚಯಿಸಲ್ಪಟ್ಟ ಏಕಾಗ್ರಮನವುಳ್ಳ, ಮನಸ್ವಿನಃ - ಮಹಾ ಮನಸ್ವಿಯಾದ, ತಸ್ಯ - ಆ ಆಂಜ ನೇಯನಿಗೆ, ಅನ್ಯಾ - ಮತ್ತೊಂದಾದ, ಕಾರ್ಯ....ನೀ - ತಾನು ಬಂದ ಕಾರ್ಯತತ್ವವನ್ನು ತೋರಿಸು ತ್ತಿರುವ, ಚಿಂತಾ - ಆಲೋಚನೆಯು, ಪುನಃ - ಮತ್ತು, ಪ್ರಾದುರಭೂತ್ - ಹುಟ್ಟಿತು. ॥ ೩೯ ॥

ಶಾಲಿಯಾದ ಹನುಮಂತನು ಹೀಗೆ ಸರ್ವಕಾಮ್ಯವಸ್ತು ಸಂಶೋಭಿತವಾದ ಆ ರಾವಣನ ಅಂತಃಪುರದ ಎಲ್ಲೆಡೆಗಳಲ್ಲಿಯೂ ಬಾರಿಬಾರಿಗೂ ಹುಡುಕಿ ನೋಡಿದರೂ ರಾಮಪತ್ನಿಯಾದ ಸೀತಾದೇವಿಯನ್ನು ಕಾಣಲಿಲ್ಲವು. ॥ ೩೧–೩೫ ॥ ಆಗ ವಿವಸನರಾಗಿ ಮಲಗಿ ನಿದ್ರಿಸುತ್ತಿರುವ ಆ ರಾವಣಾಂತಃಪುರದ ಸ್ತ್ರೀಯರೆಲ್ಲರನ್ನು ನೋಡಿ ಧರ್ಮಲೋಪವಾಯಿತೆಂಬ ಭಯದಿಂದ ಚಿಂತಾಕ್ರಾಂತನಾದ ಹನುಮಂತನು ತನ್ನಲ್ಲಿ ತಾನು ಹೀಗೆ ಯೋಚಿಸಿದನು. "ಮೈಮರೆತು ನಿದ್ರಿಸುತ್ತಿರುವ ಪರಪತ್ನಿಯರಾದ ಈ ಅಂತಃಪುರಸ್ತ್ರೀಯರನ್ನು ನೋಡಿದುದರಿಂದ ನನಗೆ ಧರ್ಮಹಾನಿಯುಂಟಾಗುವುದು, ಇದು ನನಗೆ ಮಹಾ ಪಾಪಕಾರಣವಾದುದು. ಆದರೆ ನಾನು ಪರಸ್ತ್ರೀಯರನ್ನು ನೋಡಬೇಕೆಂಬ ಅಭಿಪ್ರಾಯದಿಂದ ನೋಡಿದವನಲ್ಲ. ಸೀತಾ ದೇವಿಯನ್ನು ಹುಡುಕುತ್ತಿರಲು ಇವರು ತಾವಾಗಿಯೇ ನನ್ನ ಕಣ್ಣಿಗೆ ಕಾಣಿಸಿದರು, ಇಷ್ಟೆ ಯಲ್ಲದೆ ನನ್ನ ದೃಷ್ಟಿಯು ಇವರ ವಿಷಯದಲ್ಲಿ ಕಾಮಪ್ರವೃತ್ತಿಯುಳ್ಳದಾಗಿಲ್ಲ. ಅಂತು ನಾನು ಪರಪರಿಗ್ರಹವಾದ ಈ ವನಿತೆಯರ ಸಮೂಹವನ್ನು ನೋಡಿದುದಾಯಿತು." ಹೀಗೆ

---

‡ "ಶಂಕಾಂ" ತಿ. ಪಾ.

ಕಾರ್ಯನಿಶ್ಚಯದರ್ಶಿನೀ । " ಕಾಮಂ ದೃಷ್ಟಾ ಮಯಾ ಸರ್ವಾ ವಿಶ್ವಸ್ತಾ ರಾವಣ ಸ್ತ್ರಿಯಃ ॥ ೪೦ ॥ ನಹಿ ಮೇ ಮನಸಃ ಕಿಂಚಿದ್ವೈಕೃತ್ಯ ಮುಪಪದ್ಯತೇ । ಮನೋಹಿ ಹೇತುಸ್ಸರ್ವೇಷಾ ಮಿಂದ್ರಿಯಾಣಾಂ ಪ್ರವರ್ತನೇ ॥ ೪೧ ॥ ಶುಭಾಶುಭಾಸ್ವವಸ್ಥಾಸು ತಚ್ಚ ಮೇ ಸುವ್ಯವಸ್ಥಿತಂ । ನಾನ್ಯತ್ರಹಿ ಮಯಾ ಶಕ್ಯಾ ವೈದೇಹೀ ಪರಿಮಾರ್ಗಿತುಂ ॥ ೪೨ ॥ ಸ್ತ್ರಿಯೋಹಿ ಸ್ತ್ರೀಷು ದೃಶ್ಯಂತೇ ಸದಾ ಸಂಪರಿಮಾರ್ಗಣೇ । ಯಸ್ಯ ಸತ್ವಸ್ಯ ಯಾ ಯೋನಿ ಸ್ತಸ್ಯಾಂ ತತ್ಪರಿಮಾರ್ಗ್ಯತೇ ॥ ೪೩ ॥ ನಶಕ್ಯಾ ಪ್ರಮದಾ ನಷ್ಟಾ ಮೃಗೀಷು ಪರಿಮಾರ್ಗಿತುಂ । ತದಿದಂ ಮಾರ್ಗಿತಂ ತಾವಚ್ಛುದ್ಧೇನ ಮನಸಾ ಮಯಾ

ವಿಶ್ವಸ್ತಾಃ - ವಿಶ್ವಾಸವುಳ್ಳ, ಸರ್ವಾಃ - ಸಮಸ್ತರಾದ, ರಾವಣಸ್ತ್ರಿಯಃ - ರಾವಣನ ಸತಿಯರು, ಮಯಾ - ನನ್ನಿಂದ, ಕಾಮಂ - ಅತಿಶಯವಾಗಿ, ದೃಷ್ಟಾಃ - ಕಾಣಲ್ಪಟ್ಟರು, ಮೇಮನಸಃ - ನನ್ನ ಮನಸ್ಸಿಗೆ, ಕಿಂಚಿದಪಿ - ಕೊಂಚವಾದರೂ, ವೈಕೃತ್ಯಂ - ವಿಕಾರವು, ನೋಪಪದ್ಯತೇಹಿ - ಹುಟ್ಟಲಿಲ್ಲ ವಷ್ಟೆ. ॥ ೪೦ ॥ ಹಿ - ಯಾವ ಕಾರಣದಿಂದ, ಶುಭಾಶುಭಾಸು - ಮಂಗಳಾಮಂಗಳರೂಪಗಳಾದ, ಅವಸ್ಥಾಸು - ಆಯಾ ಕಾಲಗಳಲ್ಲಿ ಹುಟ್ಟುವ ವಿಶೇಷಗಳಲ್ಲಿ, ಸರ್ವೇಷಾಂ - ಸಮಸ್ತಗಳಾದ, ಇಂದ್ರಿಯಾಣಾಂ - ಚಕ್ಷುರಾದೀಂದ್ರಿಯಗಳ, ಪ್ರವರ್ತನೇ - ಪ್ರವರ್ತನೆಯಲ್ಲಿ, ಮನಃ - ಮನಸ್ಸು, ಹೇತುಃ - ಕಾರಣವೋ, ಮೇ - ನನ್ನ, ತಚ್ಚ - ಆ ಮನಸ್ಸೂ ಕೂಡ, ಸುವ್ಯವಸ್ಥಿತಂ - ಸ್ವಸ್ಥವಾಗಿದೆ. ॥ ೪೧ ॥ ಅನ್ಯತ್ರ - ಸ್ತ್ರೀವ್ಯತಿರಿಕ್ತಸ್ಥಲದಲ್ಲಿ, ವೈದೇಹೀ - ಸೀತಾದೇವಿಯು, ಮಯಾ - ನನ್ನಿಂದ, ಪರಿಮಾರ್ಗಿತುಂ - ಹುಡುಕಲೋಸುಗ, ನಶಕ್ಯಾಹಿ - ಅರ್ಹಳಲ್ಲವಷ್ಟೆ, ಹಿ - ಯಾವ ಕಾರಣದಿಂದ, ಸರ್ವದಾ - ಯಾವಾಗಲೂ, ಸಂಪ....ಣೇ - ಹುಡುಕುವ ವಿಷಯದಲ್ಲಿ, ಸ್ತ್ರೀಷು - ಹೆಂಗಳಲ್ಲಿ, ಸ್ತ್ರೀಯಃ - ಅಂಗನೆಯರು, ದೃಶ್ಯಂತೇ - ಕಾಣಲ್ಪಡುತ್ತಾರೆಯೋ. ॥ ೪೨ ॥ ಯಸ್ಯಸತ್ವಸ್ಯ - ಯಾವ ಜಂತುವಿಗೆ, ಯಾಯೋನಿಃ - ಯಾವ ಜಾತಿಯೋ, ತಸ್ಯಾಂ - ಆ ಜಾತೀಯ ವ್ಯಕ್ತಿಗಳಲ್ಲಿ, ತತ್ - ಆ ಸತ್ವವು, ಪರಿಮಾರ್ಗ್ಯತೇ - ಹುಡುಕಲ್ಪಡುತ್ತದೆ, ನಷ್ಟಾ - ಕಾಣದಿರುವ, ಪ್ರಮದಾ - ಮನುಷ್ಯ ಸ್ತ್ರೀಯು, ಮೃಗೀಷು - ಸ್ತ್ರೀಮೃಗಗಲ್ಲಿ, ಪರಿಮಾರ್ಗಿತುಂ - ಹುಡುಕಲು, ನಶಕ್ಯಾ - ಸಾಧ್ಯವಲ್ಲವು. ॥ ೪೩ ॥ ತತ್ - ಆ ಕಾರಣದಿಂದ, ಶುದ್ಧೇನ - ನಿರ್ಮಲವಾದ, ಮನಸಾ - ಮನದಿಂದ, ಮಯಾ - ನನ್ನಿಂದ, ಸರ್ವಂ-ಸಮಸ್ತವಾದ, ಇದಮಂತಃಪುರಂತಾವತ್- ಈ ಅಂತಃಪುರವಾದರೆ, ಮಾರ್ಗಿತಂ-

---

ಮಹಾ ಬಲಪರಾಕ್ರಮಶಾಲಿಯಾದ ಆ ಕಪಿವೀರನು ಧೈರ್ಯವನ್ನುಹೊಂದಿ ಪುನಃ, "ಇಲ್ಲಿಗೆ ಪರಪುರುಷನಾರೂ ಬರಲಾರನೆಂಬ ನಂಬುಗೆಯಿಂದ ಮನಸಾರೆ ಮಲಗಿ ನಿದ್ರಿಸುತ್ತಿರುವ ಈ ರಾವಣನ ಸ್ತ್ರೀಯರನ್ನು ಚನ್ನಾಗಿ ನೋಡಿದೆನು ; ಆದರೆ ನನ್ನ ಮನಸ್ಸಿನಲ್ಲಿ ಸ್ವಲ್ಪವಾದರೂ ವಿಕಾರವುಂಟಾಗಲಿಲ್ಲ. ಶುಭಾಶುಭ ಕಾರ್ಯಗಳಲ್ಲಿ ಇಂದ್ರಿಯಗಳ ಪ್ರವೃತ್ತಿಗೆ ಮನಸ್ಸೇ ಮೂಲಕಾರಣವೆನಿಸುತ್ತದೆ. ನನ್ನ ಮನಸ್ಸು ಸ್ಥಿರವಾಗಿರುವುದರಿಂದ ಈ ಸ್ತ್ರೀಯರಲ್ಲಿನ ನನ್ನ ನೋಟವು ವಿಷಯಪ್ರವೃತ್ತಿಯದಲ್ಲವೆಂಬುದರಲ್ಲಿ ಸಂದೇಹವಿಲ್ಲ. ॥೩೯–೪೧॥ ಇದಲ್ಲದೆ ಸ್ತ್ರೀಯರನ್ನು ಹುಡುಕಬೇಕಾದರೆ ಸ್ತ್ರೀಸಮೂಹದಲ್ಲಲ್ಲದೆ ಪುರುಷರ ಸಮೂಹದಲ್ಲಿ ಹುಡುಕ ಲಾಗುವುದಿಲ್ಲ. ಯಾವುದಾದರೊಂದು ಜಾತಿಯ ಜಂತುವನ್ನು ಹುಡುಕಬೇಕಾದರೆ ಆ ಜಾತಿ ಯಲ್ಲಿಯೇ ಹುಡುಕತಕ್ಕದ್ದು ರೂಢಿಯಾಗಿರುತ್ತದೆ. ಈಗ ಶ್ರೀರಾಮನನ್ನಗಲಿರುವ ಸೀತಾ ದೇವಿಯನ್ನು ಮೃಗಸಂಘದಲ್ಲಿ ಹುಡುಕುವದು ನ್ಯಾಯವಲ್ಲವಾದುದರಿಂದ ಪರಿಶುದ್ಧ

॥ ೪೪ ॥ ರಾವಣಾಂತಃಪುರಂ ಸರ್ವಂ ದೃಶ್ಯತೇ ನಚ ಜಾನಕೀ" । ದೇವಗಂಧರ್ವ ಕನ್ಯಾಶ್ಚ ನಾಗಕನ್ಯಾಶ್ಚ ವೀರ್ಯವಾನ್ । ಅವೇಕ್ಷಮಾಣೋ ಹನುಮಾನ್ ನೈವಾಪಶ್ಯತ ಜಾನಕೀಂ ॥ ೪೫ ॥ ತಾಮಪಶ್ಯ ನ್ಕಪಿಸ್ತತ್ರ ಪಶ್ಯಂಶ್ಚಾನ್ಯಾ ವರಸ್ತ್ರಿಯಃ । ಅಪ ಕ್ರಮ್ಯ ತದಾ ವೀರಃ * ಪ್ರಧ್ಯಾತು ಮುಪಚಕ್ರಮೇ ॥ ೪೬ ॥

ಸ ಭೂಯ ¶ ಸ್ತು ಪರಂ ಶ್ರೀಮಾನ್ ಮಾರುತಿರ್ಯತ್ನಮಾಸ್ಥಿತಃ ।
ಆಪಾನಭೂಮಿಮುತ್ಸೃಜ್ಯ ತದ್ವಿಚೇತುಂ ಪ್ರಚಕ್ರಮೇ ॥ ೪೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಾದಶಸ್ಸರ್ಗಃ

ಹುಡುಕಲ್ಪಟ್ಟಿತು, ಜಾನಕೀಚ - ಸೀತಾದೇವಿಯು ಮಾತ್ರ, ನದೃಶ್ಯತೇ - ಕಾಣುವುದಿಲ್ಲ. ॥೪೩-೪೪॥ ವೀರ್ಯವಾನ್ - ಸಮರ್ಥನಾದ, ಹನುಮಾನ್ - ಆಂಜನೇಯನು, ದೇವ....ಶ್ಚ - ದೇವತಾಸ್ತ್ರೀಯ ರನ್ನೂ, ಗಂಧರ್ವ ಕನ್ನಿಕೆಯರನ್ನೂ, ನಾಗಕನ್ಯಾಶ್ಚ - ಸರ್ಪಸ್ತ್ರೀಯರನ್ನೂ, ಅವೇಕ್ಷಮಾಣಃ - ನೋಡುತ್ತಿರುವನಾಗಿ, ಜಾನಕೀಂ-ಸೀತಾದೇವಿಯನ್ನು, ನೈವಾಪಶ್ಯತ - ನೋಡಲೇ ಇಲ್ಲವು. ॥೪೫॥ ತತ್ರ - ಆ ಅಂತಃಪುರದಲ್ಲಿ, ವೀರಃ - ಶೂರನಾದ, ಕಪಿಃ - ಆಂಜನೇಯನು, ತಾಂ - ಆ ಸೀತಾದೇವಿ ಯನ್ನು, ಅಪಶ್ಯನ್ - ಕಾಣದಿರುವನಾಗಿ, ಅನ್ಯಾಃವರಸ್ತ್ರಿಯಶ್ಚ - ಇತರರಾದ ಉತ್ತಮ ಸ್ತ್ರೀಯರನ್ನೂ, ಪಶ್ಯನ್ - ನೋಡುತ್ತ, ತದಾ - ಆ ಕಾಲದಲ್ಲಿ, ಅಪಕ್ರಮ್ಯ - ಹಿಂತಿರುಗಿ, ಪ್ರಧ್ಯಾತುಂ - ಚಿಂತಿಸಲು, ಉಪಚಕ್ರಮೇ - ಪ್ರಾರಂಭಿಸಿದನು. ॥ ೪೬ ॥ ಶ್ರೀಮಾನ್ - ಸಂಪದ್ಯುಕ್ತನಾದ, ಸಮಾರುತಿಃ - ಆ ವಾಯುನಂದನನು, ಪರಂಯತ್ನಂ - ಮಹಾ ಪ್ರಯತ್ನವನ್ನು, ಆಸ್ಥಿತಃ - ಹೊಂದಿದವನಾಗಿ, ಆಪಾನಭೂಮಿಂ - ಭೋಜನಶಾಲೆಯನ್ನು, ಉತ್ಸೃಜ್ಯ - ಬಿಟ್ಟು, ಭೂಯಃ - ಮತ್ತೂ, ತತ್ - ಆ ರಾವಣನ ಮನೆಯನ್ನು, ವಿಚೇತುಂ - ಹುಡುಕಲೋಸುಗ, ಪ್ರಚಕ್ರಮೇ - ಆರಂಭಿಸಿದನು. ॥ ೪೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಾದಶಸ್ಸರ್ಗಃ.

ಮನಸ್ಕನಾದ ನಾನು ಈ ರಾವಣಾಂತಃಪುರವೆಲ್ಲವನ್ನೂ ಹುಡುಕಿದುದಾಯಿತು. ಆದರೇನು! ಈ ಸ್ತ್ರೀಯರೆಲ್ಲರೂ ಕಾಣಿಸುತ್ತಿರುವರು. ಸೀತೆಯು ಮಾತ್ರ ಕಾಣಿಸಲಿಲ್ಲ" ಎಂದು ಚಿಂತಿಸಿದನು. ಆ ಬಳಿಕ ಮಾರುತಿಯು ಮತ್ತೆ ಆ ರಾವಣನ ಅಂತಃಪುರದಲ್ಲಿ ಹುಡುಕುವವನಾಗಿ ದೇವ ಗಂಧರ್ವ ಕನ್ನಿಕೆಯರನ್ನೂ, ನಾಗಕನ್ನಿಕೆಯರನ್ನೂ ನೋಡಿದನಾಗಲಿ, ಜನಕರಾಜ ಕುವರಿಯಾದ ಸೀತಾದೇವಿಯನ್ನು ಮಾತ್ರ ಕಾಣದೆ ಅಲ್ಲಿಂದ ಹೊರಟು ಸ್ವಲ್ಪ ಹೊತ್ತು ಚಿಂತಿಸಿ, ಮರಳಿಯೂ ಆ ಪಾನಶಾಲೆಯನ್ನು ಬಿಟ್ಟು ಮಿಕ್ಕ ಅಂತಃಪುರದ ಪ್ರದೇಶಗಳಲ್ಲೆಲ್ಲ ಹುಡುಕಲಾರಂಭಿಸಿದನು. ॥ ೪೨-೪೭ ॥

ಇಂತಿದು ಹನುಮತ್ಕೃತ ರಾವಣಾಂತಃಪುರಾನ್ವೇಷಣ ವೃತ್ತಾಂತವೆಂಬ
ಹನ್ನೊಂದನೆಯ ಸರ್ಗವು ಸಮಾಪ್ತವಾದುದು.

---

* "ಪ್ರಸ್ಥಾತುಮುಪಚಕ್ರಮೇ" ತಿ. ಪಾ. ¶ "ಸ್ಸರ್ವತಃ" ತಿ. ಪಾ.

ಸುಂದರಕಾಂಡೇ ದ್ವಾದಶಸ್ಸರ್ಗಃ

ಸ ತಸ್ಯ ಮಧ್ಯೇ ಭವನಸ್ಯ ¶ ಮಾರುತಿ ರ್ಲತಾಗೃಹಾಂಶ್ಚಿತ್ರಗೃಹಾ ನ್ನಿಶಾ ಗೃಹಾನ್ । ಜಗಾಮ ಸೀತಾಂ ಪ್ರತಿ ದರ್ಶನೋತ್ಸುಕೋ ನಚೈವ ತಾಂ ಪಶ್ಯತಿ ಚಾರು ದರ್ಶನಾಂ ॥೧॥ ಸ ಚಿಂತಯಾಮಾಸ ತತೋ ಮಹಾಕಪಿಃ ಪ್ರಿಯಾಮಪಶ್ಯ ನ್ರಘು ನಂದನಸ್ಯ ತಾಂ । "ಧ್ರುವಂ ※ ಹಿ ಸೀತಾ $ ಮ್ರಿಯತೇ ಯಥಾ ನ ಮೇ ವಿಚಿನ್ವತೋ ದರ್ಶನಮೇತಿ ಮೈಥಿಲೀ ॥ ೨ ॥ ಸಾ ರಾಕ್ಷಸಾನಾಂ ಪ್ರವರೇಣ § ಜಾನಕೀ ಸ್ವಶೀಲ ಸಂರಕ್ಷಣತತ್ಪರಾ ಸತೀ । ಅನೇನ ನೂನಂ ಪ್ರತಿದುಷ್ಟಕರ್ಮಣಾ ಹತಾ ಭವೇ

ಸಮಾರುತಿಃ-ಆ ಆಂಜನೇಯನು, ತಸ್ಯಭವನಸ್ಯ-ಆ ಕ್ರೀಡಾಭವನದ, ಮಧ್ಯೇ-ನಡುವೆ, ಸೀತಾಂಪ್ರತಿ - ಸೀತೆಯನ್ನು ಕುರಿತು, ದರ್ಶನೋತ್ಸುಕಃ - ನೋಡುವಿಕೆಯಲ್ಲಿ ಉತ್ಕಂಠೆಯುಳ್ಳವನಾಗಿ, ಲತಾಗೃಹಾನ್-ಲತಾಮಂದಿರಗಳನ್ನೂ, ಚಿತ್ರಗೃಹಾನ್-ಚಿತ್ರವರ್ಣವುಳ್ಳ ಮನೆಗಳನ್ನೂ, ನಿಶಾಗೃಹಾನ್-ಮಲಗುವ ಮನೆಗಳನ್ನೂ ಕುರಿತು, ಜಗಾಮ - ಹೊರಟನು, ಚಾರುದರ್ಶನಾಂ - ಮನೋಹರವಾದ ನೋಟವುಳ್ಳ, ತಾಂಚ - ಆ ಸೀತೆಯನ್ನಾದರೆ, ನೈವಪಶ್ಯತಿಸ್ಮ - ನೋಡಲೇ ಇಲ್ಲವು. ॥೧॥ ತತಃ - ಅನಂತರದಲ್ಲಿ, ಸಮಹಾಕಪಿಃ - ಆ ಮಹಾ ವಾನರನು, ತಾಂ - ಆ ಪ್ರಸಿದ್ಧಳಾದ, ರಘುನಂದನಸ್ಯ - ಶ್ರೀರಾಮನ, ಪ್ರಿಯಾಂ - ಹೆಂಡತಿಯನ್ನು, ಅಪಶ್ಯನ್ - ಕಾಣದೆ, ಯಥಾ - ಯಾವ ಕಾರಣದಿಂದ, ವಿಚಿನ್ವತಃ - ಹುಡುಕುತ್ತಿರುವ, ಮೇ - ನನಗೆ, ಮೈಥಿಲೀ - ಸೀತಾದೇವಿಯು, ಆದರ್ಶನಂ - ಕಾಣದಿರುವಿಕೆಯನ್ನು, ಏತಿ - ಹೊಂದಿರುವಳೋ, (ತತ್ - ಆ ಕಾರಣದಿಂದ,) ಸೀತಾ - ಸೀತೆಯು, ಮ್ರಿಯತೇ - ಮೃತಪಟ್ಟಿದ್ದಾಳೆ, ಇತಿ - ಹೀಗೆಂದು, ಚಿಂತಯಾಮಾಸ - ಆಲೋಚಿಸಿದನು. ॥ ೨ ॥ ಪ್ರತಿ....ಣಾ - ಬಹಳ ದುಷ್ಟ ವ್ಯಾಪಾರವುಳ್ಳ, ರಾಕ್ಷಸಾನಾಂ - ರಕ್ಕಸರೊಳಗೆ, ಪ್ರವರೇಣ - ಶ್ರೇಷ್ಠನಾದ, ಅನೇನ - ಈ ರಾವಣನಿಂದ, ಸ್ವಶೀ....ರಾ - ತನ್ನ ಸದ್ವೃತ್ತಿಯ ಪರಿಪಾಲನೆಯಲ್ಲಿ ಆಸಕ್ತಿಯುಳ್ಳ, ಪರೇ - ಶ್ರೇಷ್ಠವಾದ, ಆರ್ಯಪಥೇ - ಸನ್ಮಾರ್ಗದಲ್ಲಿ, ಸ್ಥಿತಾ - ಇರುವ, ಸತೀ - ಪತಿವ್ರತೆ

ವಾಯುಪುತ್ರನಾದ ಹನುಮಂತನು ಸೀತಾಸಂದರ್ಶನೋತ್ಸುಕನಾಗಿ ರಾವಣಾಂತಃಪುರದ ಮಧ್ಯದಲ್ಲಿ ಪುಷ್ಪಲತಾಲಂಕೃತವಾದ ಅಂತರ್ಗೃಹಗಳನ್ನೂ, ಚಿತ್ರವರ್ಣಶೋಭಿತವಾದ ಮನೆಗಳನ್ನೂ, ಅನೇಕ ಶಯನಗೃಹಗಳನ್ನೂ ಹುಡುಕಿನೋಡಿ, ಅಲ್ಲೆಲ್ಲಿಯೂ ಮಹಾ ಸುಂದರಾಂಗಿಯಾದ ರಘುನಂದನನ ಪ್ರಿಯತಮೆಯನ್ನು ಕಾಣದೆ ಹೀಗೆ ಯೋಚಿಸಿದನು ; "ಮಹಾ ಪ್ರಯತ್ನದಿಂದ ಹುಡುಕುತ್ತಿದ್ದರೂ ಸೀತಾದೇವಿಯು ನನ್ನ ಕಣ್ಣಿಗೆ ಕಾಣಿಸಲಿಲ್ಲವಾದುದರಿಂದ ಆಕೆಯು ನಿಜವಾಗಿಯೂ ಮೃತಿಯೊಂದಿರಬೇಕು. ಆಕೆಯು ಪಾತಿವ್ರತ್ಯವೆಂಬ ಮಹಾ ವ್ರತವನ್ನು ರಕ್ಷಿಸಿಕೊಂಡಿರುವವಳು ; ದುರಾತ್ಮನಾದ ರಾವಣನು ತನ್ನಿಷ್ಟಾನುಸಾರವಾಗಿ ಆಕೆಯು ನಡೆದುಕೊಳ್ಳದಿರಲು ಆಕೆಯನ್ನು ಕೊಂದಿರಬೇಕು ; ಹಾಗಿಲ್ಲದಿದ್ದರೆ ಕಾಂತಿಹೀನ

¶ "ಸಂಸ್ಥಿತೋ" ತಿ. ಪಾ. ※ "ಚ" ತಿ. ಪಾ. $ "ಧ್ರಿಯತೇ" ರಾ. ತಿ. ಪಾ. § "ಬಾಲಾ" ತಿ. ಪಾ.

ದಾರ್ಯಪಥೇ ಪರೇ ಸ್ಥಿತಾ ॥ ೩ ॥ ವಿರೂಪರೂಪಾ ವಿಕೃತಾ ವಿವರ್ಚಸೋ ಮಹಾ
ನನಾ ದೀರ್ಘವಿರೂಪದರ್ಶನಾಃ । ಸಮೀಕ್ಷ್ಯ ಸಾ ರಾಕ್ಷಸರಾಜಯೋಷಿತೋ ಭಯಾ
ದ್ವಿನಷ್ಟಾ ಜನಕೇಶ್ವರಾತ್ಮಜಾ ॥ ೪ ॥ ಸೀತಾಮದೃಷ್ಟ್ವಾ ಹ್ಯನವಾಪ್ಯ ಪೌರುಷಂ
ವಿಹೃತ್ಯ ಕಾಲಂ ಸಹವಾನರೈಶ್ಚಿರಂ।ನ ಮೇಽಸ್ತಿ ಸುಗ್ರೀವಸಮೀಪಗಾ ಗತಿಸ್ಸುತೀಕ್ಷ್ಣ
ದಂಡೋ ಬಲವಾಂಶ್ಚ ವಾನರಃ ॥ ೫ ॥ ದೃಷ್ಟಮಂತಃಪುರಂ ಸರ್ವಂ ದೃಷ್ಟಾ† ರಾವಣ
ಯೋಷಿತಃ । ನ ಸೀತಾ ದೃಶ್ಯತೇ ಸಾಧ್ವೀ ವೃಥಾ ಜಾತೋ ಮಮ ಶ್ರಮಃ ॥ ೬ ॥

ಯಾದ, ಸಾಜಾನಕೀ - ಆ ಸೀತಾದೇವಿಯು, ಹತಾ - ಸಂಹರಿಸಲ್ಪಟ್ಟವಳು, ಭವೇತ್ - ಆಗಿದ್ದಾಳು, ನೂನಂ - ನಿಶ್ಚಯವು. ॥ ೩ ॥ ದೀರ್ಘಾ....ನಾಃ - ದೀರ್ಘವಾದ ವಿಕಾರವಾದ ಕಣ್ಣುಗಳುಳ್ಳ, ವಿರೂಪರೂಪಾಃ - ಹೆಚ್ಚುಕಡಿಮೆಯಾದ ಅವಯವಗಳುಳ್ಳ, ವಿಕೃತಾಃ - ವಿಕಾರ ವೇಷಗಳುಳ್ಳ, ವಿವರ್ಚಸಃ - ನಿಸ್ತೇಜಸ್ಕರಾದ, ಮಹಾನನಾಃ - ದೊಡ್ಡ ಮುಖಗಳುಳ್ಳ, ರಾಕ್ಷ....ತಃ - ರಾವಣನ ಸ್ತ್ರೀಯರನ್ನು, ಸಮೀಕ್ಷ್ಯ - ಕಂಡು, ಭಯಾತ್ - ಭೀತಿಯಿಂದ, ಜನ....ಜಾ - ಜನಕಪುತ್ರಿ ಯಾದ, ಸಾ - ಆ ಸೀತೆಯು, ವಿನಷ್ಟಾ - ನಾಶವನ್ನೈದಿರುವಳು. ॥ ೪ ॥ ಸೀತಾಂ - ಸೀತಾದೇವಿ ಯನ್ನು, ಅದೃಷ್ಟ್ವಾ - ಕಾಣದೆ, ಪೌರುಷಂ - ಪರಾಕ್ರಮವನ್ನು, ಅನವಾಪ್ಯ - ಹೊಂದದೆ, ವಾನರೈಸ್ಸಹ - ಕಪಿಗಳೊಡನೆ, ಚಿರಂಕಾಲಂ - ಬಹು ಕಾಲವನ್ನು, ವಿಹೃತ್ಯ - ಕಳೆದ, ಮೇ - ನನಗೆ, ಸುಗ್ರೀವಸಮೀಪಗಾ - ಸುಗ್ರೀವನ ಸಮೀಪಕ್ಕೆ ಹೋಗತಕ್ಕ, ಗತಿಃ - ಗಮನವು, ನಾಸ್ತಿ - ಇಲ್ಲವು, ಬಲವಾ್ - ಬಲವಂತನಾದ, ವಾನರಶ್ಚ - ಸುಗ್ರೀವನೂ ಸಹ, ಸುತೀ....ಹಿ - ಕ್ರೂರವಾದ ಶಿಕ್ಷೆ ಯುಳ್ಳವನಷ್ಟೆ. ॥ ೫ ॥ ಸರ್ವಂ - ಸಮಸ್ತವಾದ, ಅಂತಃಪುರಂ - ಅಂತಃಪುರವು, ದೃಷ್ಟಂ - ಕಾಣ ಲ್ಪಟ್ಟಿತು, ರಾವಣಯೋಷಿತಃ - ರಾವಣಸ್ತ್ರೀಯರು, ದೃಷ್ಟಾಃ - ನೋಡಲ್ಪಟ್ಟರು, ಸಾಧ್ವೀ - ಪತಿ ವ್ರತೆಯಾದ, ಸೀತಾ - ಸೀತಾದೇವಿಯು, ನದೃಶ್ಯತೇ - ಕಾಣಲ್ಪಡಲಿಲ್ಲ, ಮಮ - ನನ್ನ, ಶ್ರಮಃ - ಆಯಾಸವು, ವೃಥಾಜಾತಃ - ವ್ಯರ್ಥವಾಯಿತು. ॥ ೬ ॥ ಗತಂ - ಹಿಂತಿರುಗಿದ, ಮಾಂ - ನನ್ನನ್ನು, ಸರ್ವೇವಾನರಾಃ - ಎಲ್ಲಾ ಕಪಿಗಳೂ, ಸಂಗತಾಃ - ಕೂಡಿ, ಕಿಂವಾವಕ್ಷ್ಯಂತಿ - ಏನುಹೇಳುವರೋ,

---

ರಾಗಿ ದೊಡ್ಡ ತುಟಿಗಳುಳ್ಳ ಮುಖಗಳಿಂದ ಭಯಂಕರರಾಗಿ, ವಿಕಾರವಾದ ನೇತ್ರಗಳುಳ್ಳವ ರಾಗಿ ಈ ರಾವಣಾಸುರನ ಆಜ್ಞೆಯಿಂದ ಅಂತಃಪುರದಲ್ಲಿ ಕಾವಲಿರುವ ಈ ರಾಕ್ಷಸ ಯುವತಿ ಯರನ್ನು ನೋಡಿ ಅಬಲೆಯಾದ ಆ ದೇವಿಯು ಭಯದಿಂದ ಮೃತಿಯೊಂದಿದಳೋ ಏನೋ; ಹಾಗಿಲ್ಲವಾಗಿದ್ದರೆ ನನ್ನ ಕಣ್ಣಿಗೆ ಕಾಣಿಸುತ್ತಿರಲಿಲ್ಲವೇಕೆ? ಈಗ ನಾನು ಸೀತಾ ದೇವಿಯನ್ನು ಕಾಣದೆ ನನ್ನ ಪರಾಕ್ರಮವನ್ನೂ ಸಾರ್ಥಕಪಡಿಸಿಕೊಳ್ಳದೆ, ನಳ, ನೀಲ, ಜಾಂಬ ವಾದಿ ಯೂಧಪತಿಗಳೊಡನೆ ಕಾಲವನ್ನು ಕಳೆದು, ಒಡೆಯನಾದ ಸುಗ್ರೀವನಲ್ಲಿಗೆ ಹೇಗೆ ತಾನೇ ಹೋಗಲಿ! ಆತನು ಮಹಾ ಬಲಿಷ್ಠನು, ಮಾತ್ರವಲ್ಲದೆ ಕ್ರೂರವಾದ ಶಾಸನವನ್ನೂ ಉಳ್ಳವನು. ॥ ೫ ॥ ರಾವಣಾಸುರನ ಅಂತಃಪುರದೆಲ್ಲೆಡೆಗಳನ್ನೂ ಹುಡುಕಿ ಅಲ್ಲಿರುವ ಸ್ತ್ರೀಯ ರೆಲ್ಲರನ್ನೂ ಕಂಡೆನಾಗಲಿ ಪತಿವ್ರತಾಶಿರೋಮಣಿಯಾದ ಸೀತೆಯನ್ನು ಕಾಣಲಿಲ್ಲ. ಅಕಟಾ! ನೂರುಗಾವುದದ ಸಮುದ್ರವನ್ನು ದಾಟಿ, ಈ ಲಂಕಾಪಟ್ಟಣವನ್ನು ಪ್ರವೇಶಿಸಿ, ಮಹಾ

---

† "ರಾಕ್ಷಸ" ತಿ. ಪಾ.

ಕಿನ್ನು ಮಾಂ ವಾನರಾಸ್ಸರ್ವೇ ಗತಂ ವಕ್ಷ್ಯಂತಿ ಸಂಗತಾಃ ! । "ಗತ್ವಾ ತತ್ರ ತ್ವಯಾ ವೀರ! ಕಿಂಕೃತಂ ತದ್ವದಸ್ವನಃ ?" ॥೭॥ ಅದೃಷ್ಟ್ವಾ ಕಿಂ ಪ್ರವಕ್ಷ್ಯಾಮಿ? ತಾಮಹಂ ಜನಕಾತ್ಮಜಾಂ । ಧ್ರುವಂ ಪ್ರಾಯ * ಮುಪೈಷ್ಯಂತಿ ಕಾಲಸ್ಯ ವ್ಯತಿವರ್ತನೇ ॥ ೮ ॥ ಕಿಂವಾ ವಕ್ಷ್ಯತಿ ವೃದ್ಧಶ್ಚ ಜಾಂಬವಾನಂಗದಶ್ಚಸಃ? । ಗತಂ ಪಾರಂ ಸಮುದ್ರಸ್ಯ ವಾನರಾಶ್ಚ ಸಮಾಗತಾಃ ॥ ೯ ॥ ಅನಿರ್ವೇದಶ್ಶ್ರಿಯೋಮೂಲಮನಿರ್ವೇದಃ ಪರಂ ಸುಖಂ । ¶ ಅನಿರ್ವೇದೋಹಿ ಸತತಂ ಸರ್ವಾರ್ಥೇಷು ಪ್ರವರ್ತಕಃ ॥೧೦॥ ಕರೋತಿ

ಹೇ ವೀರ - ಎಲೈ ಶೂರನೇ, ತತ್ರ - ಅಲ್ಲಿ, ಗತ್ವಾ - ಹೋಗಿ, ತ್ವಯಾ - ನಿನ್ನಿಂದ, ಕಿಂಕೃತಂ - ಏನು ಮಾಡಲ್ಪಟ್ಟಿತು, ತತ್ - ಅದನ್ನು, ನಃ - ನಮಗೆ, ವದಸ್ವ - ಹೇಳು, (ಎಂದರೆ) ಅಹಂ - ನಾನು, ತಾಂ ಜ....ಜಾಂ - ಆ ಸೀತಾದೇವಿಯನ್ನು, ಅದೃಷ್ಟ್ವಾ - ಕಾಣದೆ, ಕಿಂಪ್ರವಕ್ಷ್ಯಾಮಿ - ಏನುಹೇಳಲಿ. ॥೭॥ ಕಾಲಸ್ಯ - ಸಮಯದ, ವ್ಯತಿವರ್ತನೇ - ಅತಿಕ್ರಮಣವಾಗಲು, ಪ್ರಾಯಂ - ಪ್ರಾಯೋಪವೇಶನ ವನ್ನು, ಉಪೈಷ್ಯಂತಿ - ಹೊಂದುವರು, ಧ್ರುವಂ - ನಿಶ್ಚಯವು. ॥ ೮ ॥ ವೃದ್ಧಃ - ಮುದುಕನಾದ, ಜಾಂಬವಾಂಶ್ಚ-ಜಾಂಬವಂತನೂ, ಸಃ-ಆ ಪ್ರಸಿದ್ಧನಾದ, ಅಂಗದಶ್ಚ-ಅಂಗದನೂ, ಸಮುದ್ರಸ್ಯ-ಕಡಲಿನ, ಪಾರಂ-ದಡವನ್ನು, ಗತಂ-ಐದಿದ (ನನ್ನನ್ನು ಕುರಿತು,) ಕಿಂವಾವಕ್ಷ್ಯತಿ-ಏನನ್ನುವರೋ, ಸಮಾಗತಾಃ - ಬಂದ, ವಾನರಾಶ್ಚ - ಕಪಿಗಳೂ, ಕಿಂವಾವಕ್ಷ್ಯಂತಿ - ಏನುಹೇಳುವರೋ. ॥ ೯ ॥ ಅನಿರ್ವೇದಃ - ಉತ್ಸಾಹವು, ಶ್ರಿಯಃ - ಸಂಪತ್ತಿಗೆ, ಮೂಲಂ - ಕಾರಣವು, ಅನಿರ್ವೇದಃ - ಸಂಕಟ ಪಡದಿರುವಿಕೆಯು, ಪರಂಸುಖಂ - ಬಹಳ ಸೌಖ್ಯವು, ಹಿ - ಯಾವ ಕಾರಣದಿಂದ, ಅನಿರ್ವೇದಃ - ಉತ್ಸಾಹಶಕ್ತಿಯು, ಸರ್ವಾರ್ಥೇಷು - ಸರ್ವಪ್ರಯೋಜನಗಳಲ್ಲಿಯೂ, ಸತತಂ - ಯಾವಾಗಲೂ, ಪ್ರವರ್ತತೇ - ಪ್ರಯತ್ನಮಾಡಿಸುತ್ತದೆಯೋ, ಸಃ - ಆ ಉತ್ಸಾಹಶಕ್ತಿಯು, ಜಂತೋಃ - ವ್ಯಕ್ತಿಗೆ,

---

ಪ್ರಯತ್ನದಿಂದ ಹುಡುಕಿ ನೋಡಿದ ನನ್ನ ಶ್ರಮವೆಲ್ಲವೂ ವ್ಯರ್ಥವಾಯಿತಲ್ಲವೆ! ಅಕಟ ಕಟಾ!! ಆ ದೇವಿಯನ್ನು ಕಾಣದೆ ನಾನು ಅಂಗದಾದಿ ಕಪಿವೀರರಲ್ಲಿಗೆ ಹೋದರೆ ಅವರು ನನ್ನನ್ನೇನಂದಾರು? "ಎಲೈ ಮಹಾ ಪರಾಕ್ರಮಿಯಾದ ಮಾರುತಿಯೇ! ನೀನು ಲಂಕಾನಗರಕ್ಕೆ ಹೋಗಿ ಅಲ್ಲಿ ಯಾವ ಯಾವ ಕಾರ್ಯಗಳನ್ನು ನಿರ್ವಹಿಸಿದೆ?" ಎಂದು ಅವರು ನನ್ನನ್ನು ಕೇಳಿದರೆ ನಾನೇನು ಉತ್ತರ ಕೊಡಲಿ; ನಾನಿಲ್ಲಿಯೇ ನಿಂತುಬಿಡುವುದಾದರೆ ಸುಗ್ರೀವರಾಜನು ಸಮಯ ಮಾಡಿ ಕೊಟ್ಟಿರುವ ಕಾಲವು ಕಳೆದುಹೋಗಿ, ಅದರಮೇಲೂ ನಾನು ಮಾಡಿಕೊಂಡು ಬಂದಿರುವ ಸಮಯವೂ ಮೀರಿಹೋಗುವುದರಿಂದ ಅವರೆಲ್ಲರೂ ಪ್ರಾಯೋಪವೇಶವನ್ನು ಮಾಡುತ್ತಾರೆ; ಅಯ್ಯೋ!! ಇಲ್ಲಿಂದ ಸಮುದ್ರದ ಆಚಿನ ತೀರವನ್ನು ಸೇರಿದೊಡನೆಯೇ ವೃದ್ಧನಾದ ಜಾಂಬವಂತನೂ, ಯುವರಾಜನಾದ ಅಂಗದನೂ, ಇತರ ಕಪಿವೀರರೂ ನನ್ನನ್ನು ಕುರಿತು ಏನೆನ್ನುವರೋ? ಆದರೆ ನಾನೀಗ ಧೈರ್ಯವನ್ನು ಬಿಡಬಾರದು; ಹಿಂಜರಿಯಬಾರದು; ಉತ್ಸಾಹವನ್ನು ತೊರೆಯಬಾರದು; ಉತ್ಸಾಹವೇ ಸಕಲ ಸಂಪದಗಳಿಗೂ ಮೂಲವು; ಉತ್ಸಾಹಶಾಲಿಯಾದವನಿಗೆ ಸಮಸ್ತ ಸುಖಗಳೂ ಉಂಟಾಗುತ್ತವೆ. ಜನರು

---

* "ಉಪಾಶಿಷ್ಯೇ" ಕ. ತಿ. ಪಾ. ¶ "ಭೂಯಸ್ತತ್ರ ವಿಚೇಷ್ಯಾಮಿ ನಯತ್ರ ವಿಚಯಃ ಕೃತಃ" ತಿ, ಪಾ.

ಸಫಲಂ ಜಂತೋಃ ಕರ್ಮ ಯತ್ತತ್ಕರೋತಿ ಸಃ । ತಸ್ಮಾದನಿರ್ವೇದ* ಕೃತಂ ಯತ್ನಂ ಚೇಷ್ಟೇಹಮುತ್ತಮಂ ॥೧೧॥ ಭೂಯಸ್ತಾವದ್ವಿಚೇಷ್ಯಾಮಿ ದೇಶಾನ್ರಾವಣ ಪಾಲಿತಾನ್ । ಆಪಾನಶಾಲಾವಿಚಿತಾ ಸ್ತಥಾಪುಷ್ಪಗೃಹಾಣಿಚ ॥೧೨॥ ಚಿತ್ರಶಾಲಾಶ್ಚ ವಿವಿಧಾ ಭೂಯಃ ಕ್ರೀಡಾಗೃಹಾಣಿಚ । ನಿಷ್ಕುಟಾಂತರರಥ್ಯಾಶ್ಚ ವಿಮಾನಾನಿಚ ಸರ್ವಶಃ ॥೧೩॥ ಇತಿ ಸಂಚಿಂತ್ಯ ಭೂಯೋಪಿ ವಿಚೇತುಮುಪಚಕ್ರಮೇ । ಭೂಮೀ ಗೃಹಾಂಶ್ಚೈತ್ಯಗೃಹಾನ್ ಗೃಹಾತಿಗೃಹಕಾನಪಿ ॥೧೪॥ ಉತ್ಪತನ್ನಿಪತಂಶ್ಚಾಪಿ ತಿಷ್ಠ

ಯತ್ಕರ್ಮ-ಯಾವ ಕೆಲಸವನ್ನು, ಸಫಲಂ-ಸಪ್ರಯೋಜನವನ್ನಾಗಿ, ಕರೋತಿ-ಮಾಡುತ್ತದೆಯೋ, ತತ್-ಆ ಕೆಲಸವನ್ನು, ಕರೋತಿ-ಮಾಡುತ್ತಾನೆ, ತಸ್ಮಾತ್-ಆ ಕಾರಣದಿಂದ, ಅನಿರ್ವೇದಕೃತಂ-ಉತ್ಸಾಹದಿಂದ ಮಾಡಲ್ಪಟ್ಟ, ಉತ್ತಮಂ - ಉತ್ಕೃಷ್ಟವಾದ, ಯತ್ನಂ - ಪ್ರಯತ್ನವನ್ನು, ಚೇಷ್ಟೇ-ಮಾಡುತ್ತೇನೆ. ||೧೦ ೧೧|| ರಾವ....ತಾನ್ - ರಾವಣನಿಂದ ರಕ್ಷಿಸಲ್ಪಟ್ಟ ಪ್ರದೇಶಗಳನ್ನು, ಭೂಯಸ್ತಾವತ್ - ಮತ್ತೂ, ವಿಚೇಷ್ಯಾಮಿ - ಹುಡುಕುವೆನು, ಆಪಾನಶಾಲಾಃ - ಪಾನಗೃಹಗಳು, ವಿಚಿತಾಃ - ಹುಡುಕಲ್ಪಟ್ಟವು, ತಥಾ - ಹಾಗೆಯೇ, ಪುಷ್ಪಗೃಹಾಣಿಚ - ಹುವ್ವಿನ ಮನೆಗಳೂ, ವಿಚಿತಾನಿ - ಹುಡುಕಲ್ಪಟ್ಟವು. ||೧೨|| ಚಿತ್ರಶಾಲಾಶ್ಚ - ಚಿತ್ರದ ಭವನಗಳೂ, ವಿಚಿತಾಃ - ಹುಡುಕಲ್ಪಟ್ಟವು, ಕ್ರೀಡಾಗೃಹಾಣಿಚ - ವಿಲಾಸಮನೆಗಳನ್ನು, ನಿಷ್ಕು....ಶ್ಚ - ಮನೆ ಹಿಂದಿರುವ ತೋಟಗಳ ಮಧ್ಯ ದಲ್ಲಿರುವ ರಾಜಬೀದಿಗಳನ್ನು, ಸರ್ವಶಃ - ಸಮಸ್ತಗಳಾದ, ವಿಮಾನಾನಿಚ - ಮನೆಗಳನ್ನೂ, ಭೂಯಃ - ಮತ್ತೂ, ವಿಚೇಷ್ಯಾಮಿ - ಹುಡುಕುವೆನು. ||೧೩|| ಇತಿ - ಈ ಪ್ರಕಾರವಾಗಿ, ಸಂಚಿಂತ್ಯ-ಆಲೋಚಿಸಿ, ಭೂಮೀಗೃಹಾನ್ - ನೆಲಮಾಳಿಗೆಗಳನ್ನೂ, ಚೈತ್ಯಗೃಹಾನ್ - ಚತುಷ್ಪಥ ಮಂಟಪ ಗಳನ್ನೂ, ಗೃಹಾ....ಪಿ - ದೂರದೂರವಾಗಿರುವ ಮಲಗುವ ಮನೆಗಳನ್ನೂ, ಭೂಯಃ - ಮತ್ತೂ, ವಿಚೇತುಂ - ಹುಡುಕಲು, ಉಪಚಕ್ರಮೇ - ಆರಂಭಿಸಿದನು. ||೧೪|| ಉತ್ಪತನ್ - ಹಾರುತ್ತಲೂ,

---

ಹಿಂದಡಿಯಿಡದೆ ಉತ್ಸಾಹದಿಂದ ಯಾವ ಯಾವ ಕಾರ್ಯಗಳನ್ನು ಮಾಡುತ್ತಾರೆಯೋ ಆ ಕಾರ್ಯಗಳೆಲ್ಲವನ್ನೂ ಅವರಿಗಿರುವ ಉತ್ಸಾಹವೇ ಕೈಗೂಡಿಸುತ್ತದೆ. ಆದುದರಿಂದ ಈಗ ನಾನು ಅದೇ ಉತ್ಸಾಹವನ್ನವಲಂಬಿಸಿ ಸೀತಾನ್ವೇಷಣಕ್ಕಾಗಿ ಪ್ರಯತ್ನಿಸುವೆನು ; ||೬–೧೧|| ಈ ಲಂಕಾನಗರದಲ್ಲಿರುವ ಸಮಸ್ತ ಪ್ರದೇಶಗಳನ್ನೂ ಹುಡುಕಿ ನೋಡುವೆನು. ಇಲ್ಲಿರುವ ಪಾನಭೂಮಿಗಳನ್ನೂ, ಪುಷ್ಪಾಲಂಕೃತವಾದ ಗೃಹಶ್ರೇಷ್ಠಗಳನ್ನೂ, ಚಿತ್ರಗೃಹ ಕ್ರೀಡಾ ಗೃಹಗಳನ್ನೂ, ಉದ್ಯಾನಗಳನ್ನೂ, ಗೃಹಾರಾಮಗಳನ್ನೂ, ಅವಾಂತರ ವೀಧಿಗಳನ್ನೂ, ಪುಷ್ಪಕ ವಿಮಾನವೇ ಮೊದಲಾದವುಗಳನ್ನೂ ಈಗಾಗಲೇ ಹುಡುಕಿದುದಾಯಿತು; ಆದರೂ ಮತ್ತೊಮ್ಮೆ ಅವುಗಳೆಲ್ಲವನ್ನೂ ಹುಡುಕಿ ನೋಡುವೆನು" ಎಂದು ನಿಶ್ಚಯಿಸಿದನು. ಆ ಬಳಿಕ ಮಹಾತ್ಮ ನಾದ ಆ ಮಾರುತಿಯು ನೆಲಮಾಳಿಗೆಗಳನ್ನೂ, ನಾಲ್ಕು ಬೀದಿಗಳು ಕೂಡುವ ಪ್ರದೇಶಗಳಲ್ಲಿ ಕಟ್ಟಿರುವ ಮಂಟಪಗಳನ್ನೂ, ವಿಹಾರಾರ್ಥವಾಗಿ ಊರಿನಿಂದಾಚೆ ನಿರ್ಮಿಸಿರುವ ಗೃಹಗಳನ್ನೂ ಹುಡುಕಲಾರಂಭಿಸಿದನು. ಹೀಗೆ ಹುಡುಕುತ್ತಿರುವ ಆತನು ಬಾರಿಬಾರಿಗೂ ಅಲ್ಲಿಂದಿಲ್ಲಿಗೆ

---

* "ಕರಂ" ತಿ. ಪಾ.

ನ್ನಚ್ಛನ್ಸ್ಪುನಃಪುನಃ । ಅಪಾವೃಣ್ವಂಶ್ಚ ದ್ವಾರಾಣಿ ಕವಾಟಾನ್ಯವಘಾಟಯನ್ ॥ ೧೫ ॥ ಪ್ರವಿಶನ್ನಿಷ್ಪತಂಶ್ಚಾಪಿ ಪ್ರಪತನ್ನುತ್ಪತನ್ನಪಿ । ಸರ್ವಮಪ್ಯವಕಾಶಂ ಸ ವಿಚಚಾರ ಮಹಾಕಪಿಃ ॥ ೧೬ ॥ ಚತುರಂಗುಳಮಾತ್ರೋಽಪಿ ನಾವಕಾಶಸ್ಸವಿದ್ಯತೇ । ರಾವಣಾಂತಃಪುರೇ ತಸ್ಮಿನ್ ಯಂ ಕಪಿರ್ನಜಗಾಮ ಸಃ ॥ ೧೭ ॥ ಪ್ರಾಕಾರಾಂತರ ರಥ್ಯಾಶ್ಚ ವೇದಿಕಾಶ್ಚೈತ್ಯಸಂಶ್ರಯಾಃ । * ಶ್ವಭ್ರಾಶ್ಚ ಪುಷ್ಕರಿಣ್ಯಶ್ಚ ಸರ್ವಂ ತೇನಾವಲೋಕಿತಂ ॥ ೧೮ ॥ ರಾಕ್ಷಸ್ಯೋ ವಿವಿಧಾಕಾರಾ ವಿರೂಪಾ ವಿಕೃತಾಸ್ತಥಾ । ದೃಷ್ಟಾ ಹನುಮತಾ ತತ್ರ ನತು ಸಾ ಜನಕಾತ್ಮಜಾ ॥ ೧೯ ॥ ರೂಪೇಣಾಪ್ರತಿಮಾ ಲೋಕೇ ವರಾ ವಿದ್ಯಾ

ನಿಪತನ್ - ಕೆಳಗೆ ಬೀಳುತ್ತಲೂ, ತಿಷ್ಠನ್ - ನಿಂತೂ, ಗಚ್ಛನ್ - ಹೋಗುತ್ತಲೂ ಇರುವ, ಸಮಹಾಕಪಿಃ- ಆ ಆಂಜನೇಯನು, ಪುನಃಪುನಃ - ಬಾರಿಬಾರಿಗೂ, ದ್ವಾರಾಣಿ - ಬಾಗಿಲುಗಳನ್ನೂ, ಅಪಾವೃಣ್ವನ್ - ತೆರೆಯುತ್ತಲೂ, ಕವಾಟಾನಿ - ಕದಗಳನ್ನು, ಅವಘಾಟಯನ್ - ಹೊಡೆಯುತ್ತಲೂ, ಪ್ರವಿಶನ್ - ಮನೆಗಳನ್ನು ಹೊಗುತ್ತಲೂ, ನಿಷ್ಪತಂಶ್ಚಾಪಿ - ಈಚೆಗೆ ಹೊರಟುಬರುತ್ತಲೂ, ಪ್ರಪತನ್ - ಧುಮುಕುತ್ತಲೂ, ಉತ್ಪತನ್ನಪಿ - ಹಾರುತ್ತಲೂ, ಸರ್ವಂ - ಸಮಸ್ತವಾದ, ಅವಕಾಶಮಪಿ - ಸ್ಥಲವನ್ನೂ ಕೂಡಾ, ವಿಚಚಾರ - ಸಂಚರಿಸಿದನು. ॥೧೫-೧೬॥ ಸಕಪಿಃ-ಆ ಆಂಜನೇಯನು, ತಸ್ಮಿನ್‌ರಾವಣಾಂತಃಪುರೇ - ಆ ರಾವಣನ ಮನೆಯಲ್ಲಿ, ಯತ್ - ಯಾವ ಪ್ರದೇಶವನ್ನು, ನಜಗಾಮ - ಹೊಂದಲಿಲ್ಲವೋ, ಸಃಅವಕಾಶಃ - ಆ ಸ್ಥಲವು, ಚತು....ಪಿ - ನಾಲ್ಕು ಬೆರಳುಗಳ ಪ್ರಮಾಣವುಳ್ಳದ್ದೂ, ನವಿದ್ಯತೇ - ಇಲ್ಲದೇ ಹೋಯಿತು. ॥ ೧೭ ॥ ಪ್ರಾಕಾ ...ಶ್ಚ - ಕೋಟೆ ಗೋಡೆಯ ಮಧ್ಯದಲ್ಲಿರುವ ಬೀದಿಗಳನ್ನೂ, ಚೈತ್ಯಸಂಶ್ರಯಾಃ - ಗಿಡಗಳ ಬುಡದಲ್ಲಿ ಕಟ್ಟಿರುವ ಪಾದಿಗಳೇ ಆಶ್ರಯವಾಗಿ ಉಳ್ಳ, ವೇದಿಕಾಃ - ಜಗುಲಿಗಳನ್ನೂ, ಶ್ವಭ್ರಾಃ - ಕಲ್ಲುಕಟ್ಟಿದ ಭಾವಿಗಳನ್ನೂ, ಪುಷ್ಕರಿಣ್ಯಶ್ಚ - ದೊಡ್ಡ ಸರೋವರಗಳನ್ನೂ, ಸರ್ವಂ - ಸಮಸ್ತ ಸ್ಥಲಗಳನ್ನು, ತೇನ - ಆ ಆಂಜನೇಯನಿಂದ, ಅವಲೋಕಿತಂ - ನೋಡಲ್ಪಟ್ಟಿತು. ॥ ೧೮ ॥ ತತ್ರ - ಆ ಲಂಕಾಪಟ್ಟಣದಲ್ಲಿ, ವಿವಿಧಾಕಾರಾಃ - ಅನೇಕ ವಿಧಗಳಾದ ಶರೀರಗಳುಳ್ಳ, ವಿರೂಪಾಃ - ವಿಕಾರರೂಪಗಳುಳ್ಳ, ವಿಕೃತಾಃ - ವಕ್ರರೂಪಗಳುಳ್ಳ, ರಾಕ್ಷಸ್ಯಃ - ರಾಕ್ಷಸಸ್ತ್ರೀಯರು, ಹನುಮತಾ - ಆಂಜನೇಯನಿಂದ, ದೃಷ್ಟಾಃ - ಕಾಣಲ್ಪಟ್ಟರು, ಸಾಜ....ತು - ಆ ಸೀತಾದೇವಿಯಾದರೆ, ನದೃಷ್ಟಾ - ಕಾಣಲ್ಪಡಲಿಲ್ಲ. ॥ ೧೯ ॥ ಲೋಕೇ - ಜಗತ್ತಿನಲ್ಲಿ, ರೂಪೇಣ - ಸೌಂದರ್ಯದಿಂದ,

---

ಹಾರುತ್ತಲೂಧುಮುಕುತ್ತಲೂ, ಅಲ್ಲಲ್ಲಿ ನಿಂತು ನಿಂತು ಮುಂದಕ್ಕೆ ಹೋಗುತ್ತಲೂ, ಅಲ್ಲಲ್ಲಿನ ಗೃಹದ್ವಾರಗಳನ್ನು ತೆರೆದು ಒಳಗೆ ನೋಡುತ್ತಲು, ಆ ಲಂಕಾಪಟ್ಟಣದ ಸಮಸ್ತ ಪ್ರದೇಶಗಳಲ್ಲಿಯೂ ಸಂಚರಿಸಿದನು. ಹೀಗೆ ಸೀತಾದೇವಿಯನ್ನು ಹುಡುಕುತ್ತಿದ್ದ ಆ ಕಪಿವೀರನು ರಾವಣನ ಅಂತಃಪುರದಲ್ಲಿ ಹುಡುಕದ ನಾಲ್ಕು ಅಂಗುಲದ ಪ್ರದೇಶವೂ ಇಲ್ಲವಾಯಿತು. ॥ ೧೨-೧೭ ॥ ಈ ಪ್ರಕಾರವಾಗಿ ಬೀದಿಗಳನ್ನೂ, ಅಲ್ಲಲ್ಲಿರುವ ಜಗುಲಿಗಳೂ, ಭಾವಿಗಳೂ, ಸರೋವರಗಳೂ ಇವೇ ಮೊದಲಾದವುಗಳನ್ನೂ ಹುಡುಕಿದನು. ಆ ಸಮಯದಲ್ಲಿ ಬಗೆಬಗೆಯ ಆಕಾರಗಳುಳ್ಳವರೂ, ವಕ್ರರೂಪಗಳುಳ್ಳವರೂ ಆದ ಅನೇಕ ಮಂದಿ ರಾಕ್ಷಸ ಸ್ತ್ರೀಯರು ಕಾಣಿಸಿದರಲ್ಲದೆ, ಜನಕನಂದಿನಿಯಾದ ಸೀತಾದೇವಿಯು ಮಾತ್ರ ಕಾಣಿಸಲಿಲ್ಲ. ಆ ಕಪಿ

---

* "ದೀರ್ಘಿಕಾಶ್ಚ" ತಿ. ಪಾ.

ಧರಸ್ತ್ರಿಯಃ । ದೃಷ್ಟಾ ಹನುಮತಾ ತತ್ರ ನತು ರಾಘವನಂದಿನೀ ॥ ೨೦ ॥ ನಾಗಕನ್ಯಾ ವರಾರೋಹಾಃ ಪೂರ್ಣಚಂದ್ರನಿಭಾನನಾಃ । ದೃಷ್ಟಾ ಹನುಮತಾ ತತ್ರ ನತು ಸೀತಾ ಸುಮಧ್ಯಮಾ ॥ ೨೧ ॥ ಪ್ರಮಥ್ಯ ರಾಕ್ಷಸೇಂದ್ರೇಣ ನಾಗಕನ್ಯಾ ಬಲಾದ್ಧೃತಾಃ । ದೃಷ್ಟಾ ಹನುಮತಾ ತತ್ರ ನ ಸಾ ಜನಕನಂದಿನೀ ॥ ೨೨ ॥ ಸೋಽಪಶ್ಯಂಸ್ತಾಂ ಮಹಾಬಾಹುಃ ಪಶ್ಯಂಶ್ಚಾನ್ಯಾ ವರಸ್ತ್ರಿಯಃ । ವಿಷಸಾದ ಮುಹುರ್ಧೀಮಾನ್ ಹನೂಮಾನ್ಮಾರುತಾತ್ಮಜಃ ॥ ೨೩ ॥ ಉದ್ಯೋಗಂ ವಾನರೇಂದ್ರಾಣಾಂ ಪ್ಲವನಂ ಸಾಗರಸ್ಯಚ । ವ್ಯರ್ಥಂ ವೀಕ್ಷ್ಯಾನಿಲಸುತಶ್ಚಿಂತಾಂ ಪುನರುಪಾಗಮತ್ ॥ ೨೪ ॥

ಅಪ್ರತಿಮಾ - ಸಮಾನವಿಲ್ಲದ, ವರಾಃ - ಶ್ರೇಷ್ಠರಾದ, ವಿದ್ಯಾ....ಯಃ - ವಿದ್ಯಾಧರಸ್ತ್ರೀಯರು, ತತ್ರ - ಆ ರಾವಣನ ಮನೆಯಲ್ಲಿ, ಹನುಮತಾ - ಆಂಜನೇಯನಿಂದ, ದೃಷ್ಟಾಃ - ನೋಡಲ್ಪಟ್ಟರು, ರಾಘವನಂದಿನೀ - ಶ್ರೀರಾಮನಿಗೆ ಸಂತೋಷಕರಳಾದ ಆ ಸೀತಾದೇವಿಯು, ನದೃಷ್ಟಾ - ನೋಡಲ್ಪಡಲಿಲ್ಲ. ॥ ೨೦ ॥ ವರಾರೋಹಾಃ - ಶ್ರೇಷ್ಠರಾದ, ಪೂರ್ಣ....ನಾಃ - ಷೋಡಶಕಳಾಪರಿಪೂರ್ಣನಾದ ಚಂದ್ರನಿಗೆ ಸಮಾನಗಳಾದ ಮುಖಗಳುಳ್ಳ, ನಾಗಕನ್ಯಾಃ - ಸರ್ಪಕನ್ನಿಕೆಯರು, ತತ್ರ - ಆ ಅಂತಃಪುರದಲ್ಲಿ, ಹನುಮತಾ - ಆಂಜನೇಯನಿಂದ, ದೃಷ್ಟಾಃ - ಕಾಣಲ್ಪಟ್ಟರು, ಸುಮಧ್ಯಮಾ - ಒಳ್ಳೆಯ ನಡುವುಳ್ಳ, ಸೀತಾ - ಸೀತೆಯು, ನದೃಷ್ಟಾ - ಕಾಣಲ್ಪಡಲಿಲ್ಲ. ॥೨೧॥ ರಾಕ್ಷಸೇಂದ್ರೇಣ - ರಾವಣನಿಂದ, ಪ್ರಮಥ್ಯ - ಯುದ್ಧಮಾಡಿ, ಬಲಾತ್ - ಸಾಮರ್ಥ್ಯದಿಂದ, ಹೃತಾಃ - ತರಲ್ಪಟ್ಟ, ನಾಗಕನ್ಯಾಃ - ಸರ್ಪಸ್ತ್ರೀಯರು, ತತ್ರ - ಆ ಅಂತಃಪುರದಲ್ಲಿ, ಹನುಮತಾ - ಆಂಜನೇಯನಿಂದ, ದೃಷ್ಟಾಃ - ಕಾಣಲ್ಪಟ್ಟರು, ಜನಕನಂದಿನೀ - ಜನಕಪುತ್ರಿಯಾದ, ಸಾ - ಆ ಸೀತೆಯು, ನದೃಷ್ಟಾ - ಕಾಣಲ್ಪಡಲಿಲ್ಲ. ॥ ೨೨ ॥ ಧೀಮಾನ್ - ಬುದ್ಧಿಶಾಲಿಯಾದ, ಮಹಾಬಾಹುಃ - ಮಹಾ ಭುಜಗಳುಳ್ಳ, ಮಾರುತಾತ್ಮಜಃ - ವಾಯುಪುತ್ರನಾದ, ಸಃಹನೂಮಾನ್ - ಆ ಆಂಜನೇಯನು, ತಾಂ - ಸೀತಾದೇವಿಯನ್ನು, ಅಪಶ್ಯನ್ - ಕಾಣದೆ, ಅನ್ಯಾವರಸ್ತ್ರಿಯಃ - ಇತರ ಸ್ತ್ರೀಯರನ್ನು, ಪಶ್ಯನ್ - ನೋಡುತ್ತಿರುವನಾಗಿ, ಮುಹುಃ - ಬಾರಿಬಾರಿಗೂ, ವಿಷಸಾದ - ಕ್ಲೇಶಗೊಂಡನು. ॥ ೨೩ ॥ ಅನಿಲಸುತಃ - ಆಂಜನೇಯನು, ವಾನರೇಂದ್ರಾಣಾಂ - ವಾನರಶ್ರೇಷ್ಠರ, ಉದ್ಯೋಗಂ - ಪ್ರಯತ್ನವನ್ನೂ, ಸಾಗರಸ್ಯ - ಸಮುದ್ರದ, ಪ್ಲವನಂ - ಲಂಘನವನ್ನೂ, ವ್ಯರ್ಥಂ - ನಿಷ್ಪ್ರಯೋಜನವನ್ನಾಗಿ, ವೀಕ್ಷ್ಯ - ಕಂಡು, ಪುನಃ - ಮತ್ತು, ಚಿಂತಾಂ - ಆಲೋಚನೆಯನ್ನೂ, ಉಪಾಗಮತ್ - ಹೊಂದಿದನು. ॥ ೨೪ ॥ ಮಾರುತಾತ್ಮಜಃ - ವಾಯುಪುತ್ರನಾದ, ಹನೂಮಾನ್ - ಆಂಜನೇಯನು, ವಿಮಾನಾತ್ - ಪುಷ್ಪಕ

ವೀರನು ಅನುಪಮ ರೂಪವತಿಯರಾದ ವಿದ್ಯಾಧರಾಂಗನೆಯರನ್ನೂ, ಚಂದ್ರವದನೆಯರಾದ ನಾಗಕನ್ನಿಕೆಯರನ್ನೂಕಂಡನಲ್ಲದೆ, ರಘುಕುಲೋತ್ತಮನಾದ ರಾಮಮೂರ್ತಿಯ ಪ್ರಿಯಪತ್ನಿಯಾಗಿ, ಸಣ್ಣನೆಯ ಕಟಿಪ್ರದೇಶವುಳ್ಳ ಜಾನಕಿಯನ್ನು ಮಾತ್ರ ಕಾಣಲಿಲ್ಲವು. ॥ ೧೮–೨೧ ॥ ಆ ಮಾರುತಿಯು ರಾಕ್ಷಸಾಧಿಪನಾದ ರಾವಣನು ಬಲಾತ್ಕರಿಸಿ ಕೊಂಡುಬಂದಿದ್ದ ಗರುಡ, ಗಂಧರ್ವ, ಯಕ್ಷ, ಕಿನ್ನರಾದಿ ವನಿತೆಯರನ್ನು ಕಂಡನಲ್ಲದೆ ರಾಮಪತ್ನಿಯಾದ ಜಾನಕೀದೇವಿಯನ್ನು ಮಾತ್ರ ಕಾಣಲಿಲ್ಲವು. ಹೀಗೆ ಮಹಾ ಬುದ್ಧಿಶಾಲಿಯಾದ ಆ ಹನುಮಂತನು ರಾವಣನ ಮನೆಯಲ್ಲಿ ಹುಡುಕಿ ಹುಡುಕಿ ಸೀತಾದೇವಿಯನ್ನು ಕಾಣದೆ ಬಹು ಮಂದಿ ಇತರ ಸ್ತ್ರೀಯರನ್ನು ನೋಡಿ ಅಡಿಗಡಿಗೂ ದುಃಖಾಕ್ರಾಂತನಾದನು. ಅಂಗದಾದಿ ವಾನರಶ್ರೇಷ್ಠರ

ಅವತೀರ್ಯ ವಿಮಾನಾಚ್ಚ ಹನೂಮಾನ್ಮಾರುತಾತ್ಮಜಃ ।
ಚಿಂತಾಮುಪಜಗಾಮಾಽಥ ಶೋಕೋಪಹತಚೇತನಃ ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾದಶಸ್ಸರ್ಗಃ

ವಿಮಾನದಿಂದ, ಅವತೀರ್ಯ - ಇಳಿದು, ಅಥ - ಅನಂತರದಲ್ಲಿ, ಶೋಕೋ....ನಃ - ಶೋಕಾಕ್ರಾಂತ ಚಿತ್ತವುಳ್ಳವನಾಗಿ, ಚಿಂತಾಂ - ಆಲೋಚನೆಯನ್ನು, ಉಪಜಗಾಮ - ಐದಿದನು. ॥೨೫॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾದಶಸ್ಸರ್ಗಃ.

ಪ್ರಯತ್ನವೂ, ತಾನು ಸಮುದ್ರೋಲ್ಲಂಘನವನ್ನೆಸಗಿದ ಮಹಾ ಕಾರ್ಯವೂ ವ್ಯರ್ಥವಾದುವೆಂದು ಈ ಕಪಿಸತ್ತಮನಿಗೆ ವ್ಯಸನವಾಯಿತು. ಹೀಗೆ ಚಿಂತೆಗೀಡಾದ ಆ ಹನುಮಂತನು ಪುಷ್ಪಕವಿಮಾನದಿಂದ ಕೆಳಗಿಳಿದು ಚಿಂತಾಹೃತಚಿತ್ತನಾಗಿ ಯೋಚಿಸತೊಡಗಿದನು.॥೨೨-೨೫॥

ಇಂತಿದು ರಾವಣಾಂತಃಪುರಾನ್ವೇಷಣಾನಂತರ ಹನುಮಚ್ಚಿಂತಾಪ್ರಕಾರ ನಿರೂಪಣವೆಂಬ ಹನ್ನೆರಡನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ತ್ರಯೋದಶಸ್ಸರ್ಗಃ

ವಿಮಾನಾತ್ತು ಸುಸಂಕ್ರಮ್ಯ ಪ್ರಾಕಾರಂ ಹರಿಯೂಥಪಃ । ಹನುಮಾನ್ವೇಗವಾನಾಸೀದ್ಯಥಾ ವಿದ್ಯುದ್ಘನಾಂತರೇ ॥ ೧ ॥ ಸಂಪರಿಕ್ರಮ್ಯ ಹನುಮಾನ್ ರಾವಣಸ್ಯ ನಿವೇಶನಾತ್ । ಅದೃಷ್ಟ್ವಾ ಜಾನಕೀಂ ಸೀತಾಮಬ್ರವೀದ್ವಚನಂ ಕಪಿಃ ॥ ೨ ॥ ಭೂಯಿಷ್ಠಂ ಲೋಳಿತಾ ಲಂಕಾ ರಾಮಸ್ಯ ಚರತಾ ಪ್ರಿಯಂ । ನಹಿ ಪಶ್ಯಾಮಿ ವೈದೇಹೀಂ ಸೀತಾಂ ಸರ್ವಾಂಗಶೋಭನಾಂ ॥ ೩ ॥ ಪಲ್ವಲಾನಿ ತಟಾಕಾನಿ ಸರಾಂಸಿ ಸರಿತಸ್ತಥಾ । ನದ್ಯೋಽನೂಪವನಾಂತಾಶ್ಚ ದುರ್ಗಾಶ್ಚ ಧರಣೀಧರಾಃ ॥ ೪ ॥

ಹರಿಯೂಥಪಃ - ವಾನರಯೂಥಪನಾದ, ಹನುಮಾನ್ - ಆಂಜನೇಯನು, ವಿಮಾನಾತ್ - ರಾವಣನ ಮನೆಯಿಂದ, ಪ್ರಾಕಾರಂ - ಕೋಟೆ ಗೋಡೆಗಳನ್ನು, ಸುಸಂಕ್ರಮ್ಯ - ದಾಟಿ, ವೇಗವಾನ್ - ಶೀಘ್ರಗಮನವುಳ್ಳವನಾಗಿ, ಘನಾಂತರೇ - ಮೇಘದ ಮಧ್ಯದಲ್ಲಿ, ವಿದ್ಯುದ್ಯಥಾ - ಮಿಂಚಿನಂತೆ, ಆಸೀತ್ - ಆದನು. ॥ ೧ ॥ ಕಪಿಃ - ವಾನರನಾದ, ಹನುಮಾನ್ - ಆಂಜನೇಯನು, ರಾವಣಸ್ಯ - ರಾವಣನ, ನಿವೇಶನಾತ್ - ಮನೆಯಿಂದ, ಸಂಪರಿಕ್ರಮ್ಯ - ಹೊರಟು, ಜಾನಕೀಂ - ಜನಕಪುತ್ರಿಯಾದ, ಸೀತಾಂ - ಸೀತೆಯನ್ನು, ಅದೃಷ್ಟ್ವಾ - ಕಾಣದೆ, ವಚನಂ - ಮಾತನ್ನು (ಮನಸ್ಸಿನಲ್ಲಿಯೇ), ಅಬ್ರವೀತ್ - ಹೇಳಿದನು. ॥೨॥ ರಾಮಸ್ಯ - ಶ್ರೀರಾಮನಿಗೆ, ಪ್ರಿಯಂ - ಇಷ್ಟವಾದ ಕಾರ್ಯವನ್ನು, ಚರತಾ - ಮಾಡಲಪೇಕ್ಷಿಸುವ ನನ್ನಿಂದ, ಲಂಕಾ - ಲಂಕೆಯು, ಭೂಯಿಷ್ಠಂ - ಬಹುಪ್ರಕಾರವಾಗಿ- ಲೋಳಿತಾ - ಹುಡುಕಲ್ಪಟ್ಟಿತು, ಸರ್ವಾ....ನಾಂ - ಸಮಸ್ತಾವಯವಗಳಿಂದಲೂ ಶುಭಕರಳಾದ, ವೈದೇಹೀಂ - ಜನಕರಾಯನ ಮಗಳಾದ, ಸೀತಾಂ - ಸೀತಾದೇವಿಯನ್ನು, ನಪಶ್ಯಾಮಿಹಿ - ಕಾಣದೇ ಹೋದೆನಷ್ಟೆ. ॥೩॥ ಪಲ್ವಲಾನಿ - ಕೊಂಚ ನೀರುಳ್ಳ ಸರಸ್ಸುಗಳೂ, ತಟಾಕಾನಿ - ಕೆರೆಗಳೂ, ಸರಾಂಸಿ, ಬತ್ತದ ಜಲವುಳ್ಳ ಚಿಲುಮೆಗಳೂ, ಸರಿತಃ - ಸ್ವಲ್ಪ ನೀರು ಹರಿಯುವ ನದಿಗಳೂ, ನದ್ಯಃ - ದೊಡ್ಡ ಪ್ರವಾಹಗಳೂ, ಅನೂ....ಶ್ಚ - ಜಲದಿಂದ ತುಂಬಿರುವ ವನಪ್ರದೇಶಗಳೂ, ದುರ್ಗಾಶ್ಚ - ದುರ್ಗಮ ಸ್ಥಾನಗಳೂ, ಧರಣೀಧರಾಃ - ಬೆಟ್ಟಗಳೂ, ಸರ್ವಾ - ಸಮಸ್ತವಾದ, ವಸುಧಾ - ಭೂಮಿಯೂ,

---

ಕಪಿಯೂಥಪನಾದ ಮಾರುತಿಯು ಆ ಪುಷ್ಪಕ ವಿಮಾನದಿಂದ ಲಂಕಾಪಟ್ಟಣದ ಪ್ರಾಕಾರದ ಮೇಲಕ್ಕೆಹಾರಿ ಮುಗಿಲಿಂದ ಮುಗಿಲಿಗೆ ನೆಗೆಯುವ ಮಿಂಚಿನ ಬಳ್ಳಿಯಂತೆ ವೇಗವುಳ್ಳವನಾಗಿ ಅಲ್ಲಿಯೂ ಹುಡುಕಿ ಜಾನಕಿಯನ್ನು ಕಾಣದೆ ತನ್ನಲ್ಲಿ ತಾನು ಹೀಗೆಂದುಕೊಂಡನು. “ನಾನು ಶ್ರೀರಾಮಚಂದ್ರನ ಪ್ರಿಯವನ್ನು ಕೋರಿ ಲಂಕಾಪಟ್ಟಣವೆಲ್ಲವನ್ನೂ ಅನೇಕಾವರ್ತಿ ಹುಡುಕಿದೆನು. ಸರ್ವಾಂಗಸುಂದರಿಯಾದ ಸೀತೆಯು ಗೋಚರಳಾಗಲಿಲ್ಲ, ನೀರಿರುವ ಚಿಕ್ಕ ಚಿಕ್ಕ ಹಳ್ಳಗಳೂ, ತಟಾಕಗಳೂ, ಸರೋವರಗಳೂ, ಕಾಲುವೆಗಳೂ, ನದಿಗಳೂ, ಉಪವನಗಳೂ, ಅರಣ್ಯಪ್ರದೇಶಗಳೂ, ಅಗಮ್ಯವಾದ ಪರ್ವತಗಳು ಇವೇ ಮೊದಲಾದ ಸಮಸ್ತ ಪ್ರದೇಶಗಳೂ ಹುಡುಕಲಾಯಿತು; ಆದರೇನು! ಜಾನಕಿಯನ್ನು ಕಾಣದಾದೆನು. ಹೆಚ್ಚೇನು! ಅಖಂಡಭೂಮಂಡಲವನ್ನೇ ಹುಡುಕಿದಂತಾಯಿತು. ನನ್ನ

ಲೋಳಿತಾ ವಸುಧಾ ಸರ್ವಾ ನತು ಪಶ್ಯಾಮಿ ಜಾನಕೀಂ । ಇಹ ಸಂಪಾತಿನಾ ಸೀತಾ ರಾವಣಸ್ಯ ನಿವೇಶನೇ ॥೫॥ ಆಖ್ಯಾತಾ ಗೃಧ್ರರಾಜೇನ ನಚ ¶ ಪಶ್ಯಾಮಿ ತಾಮಹಂ । ಕಿನ್ನು ಸೀತಾಽಥ ವೈದೇಹೀ ಮೈಥಿಲೀ ಜನಕಾತ್ಮಜಾ ॥ ೬ ॥ ಉಪತಿಷ್ಠೇತ ವಿವಶಾ ¥ ರಾವಣಂ ದುಷ್ಟಚಾರಿಣಂ । ಕ್ಷಿಪ್ರಮುತ್ಪತತೋ ಮನ್ಯೇ ಸೀತಾಮಾದಾಯ ರಕ್ಷಸಃ ॥ ೭ ॥ ಬಿಭ್ಯತೋ ರಾಮಬಾಣಾನಾಮಂತರಾ ಪತಿತಾ ಭವೇತ್ । ಅಥವಾ ಹ್ರಿಯಮಾಣಾಯಾಃ ಪಥಿ ಸಿದ್ಧನಿಷೇವಿತೇ ॥ ೮ ॥ ಮನ್ಯೇ ಪತಿತಮಾರ್ಯಾಯಾ

ಲೋಳಿತಾ - ಹುಡುಕಲ್ಪಟ್ಟಿತು, ಜಾನಕೀಂತು - ಸೀತಾದೇವಿಯನ್ನಾದರೆ, ನಪಶ್ಯಾಮಿ - ಕಾಣದೇ ಹೋದೆನು. ॥ ೪ ॥ ಗೃಧ್ರರಾಜೇನ - ಹದ್ದುಗಳಿಗೆ ಅರಸಾದ, ಸಂಪಾತಿನಾ - ಸಂಪಾತಿಯಿಂದ, ಸೀತಾ - ಸೀತೆಯು, ರಾವಣಸ್ಯನಿವೇಶನೇ - ರಾವಣನ ಮನೆಯಲ್ಲಿ, ಇಹ - ಇಲ್ಲಿಯೇ, ಸ್ಥಿತೇತಿ - ಇರುವಳೆಂದು, ಆಖ್ಯಾತಾ - ಹೇಳಲ್ಪಟ್ಟಳು, ತಾಂಚ - ಆ ಸೀತೆಯನ್ನು, ಅಹಂ - ನಾನು, ನಪಶ್ಯಾಮಿ - ಕಾಣಲಿಲ್ಲ. ॥ ೫ ॥ ಅಥ - ಆ ಬಳಿಕ, ವೈದೇಹೀ - ವಿದೇಹರಾಯನ ವಂಶಸ್ಥಳಾದ, ಮೈಥಿಲೀ - ಮಿಥಿಲದೇಶದಲ್ಲಿ ಹುಟ್ಟಿದ, ಜನಕಾತ್ಮಜಾ - ಜನಕರಾಯನ ಮಗಳಾದ, ಸೀತಾ - ಸೀತಾದೇವಿಯು, ದುಷ್ಟಚಾರಿಣಂ - ದುರ್ವ್ಯಾಪಾರಿಯಾದ, ರಾವಣಂ - ರಾವಣನನ್ನು, ವಿವಶಾ - ಪರಾಧೀನಳಾಗಿ, ಉಪತಿಷ್ಠೇತಕಿನ್ನು - ಹೊಂದಿದಳೇನು? (ಇರಲಾರದು). ॥ ೬ ॥ ಸೀತಾಂ - ಸೀತೆಯನ್ನು, ಆದಾಯ - ಅಪಹರಿಸಿ, ಕ್ಷಿಪ್ರಂ - ಜಾಗ್ರತೆಯಾಗಿ, ಉತ್ಪತತಃ - ಹಾರಿದ, ರಾಮಬಾಣಾನಾಂ - ಶ್ರೀರಾಮನ ಬಾಣಗಳ ದೆಸೆಯಿಂದ, ಬಿಭ್ಯತಃ - ಭಯಪಟ್ಟಿರುವ, ರಕ್ಷಸಃ - ರಾವಣನಿಂದ, ಅಂತರಾ - ಮಧ್ಯಸಮುದ್ರದಲ್ಲಿ, ಪತಿತಾ - ಬಿದ್ದವಳು, ಭವೇತ್ - ಆಗಿದ್ದಾಳು. ॥ ೭ ॥ ಅಥವಾ - ಹಾಗಲ್ಲದಿದ್ದರೆ, ಹ್ರಿಯಮಾಣಾಯಾಃ - ಕದ್ದೊಯ್ಯಲಾದ, ಆರ್ಯಾಯಾಃ - ಪೂಜ್ಯಳಾದ ಸೀತಾದೇವಿಯ, ಹೃದಯಂ - ಮನಸ್ಸು, ಸಾಗರಂಪ್ರೇಕ್ಷ್ಯ - ಸಮುದ್ರವನ್ನು ನೋಡಿ, ಸಿದ್ಧನಿಷೇವಿತೇ - ಸಿದ್ಧರಿಂದ ಸೇವಿಸಲ್ಪಟ್ಟ, ಪಥಿ - ಮಾರ್ಗದಲ್ಲಿ, ಪತಿತಂ - ಉತ್ಕ್ರಮಣವನ್ನು ಹೊಂದಿದಳು, ಇತಿ - ಹೀಗೆಂದು, ಮನ್ಯೇ - ಎಣಿಸುತ್ತೇನೆ. ॥ ೮ ॥ ರಾವಣಸ್ಯ -

---

ಮನೋರಥವು ಮಾತ್ರ ಈಡೇರಲಿಲ್ಲ. ಹಿಂದೆ ಮಹೇಂದ್ರಪರ್ವತದಲ್ಲಿ ನಾವೆಲ್ಲರೂ ಪ್ರಾಯೋಪವೇಶನಕ್ಕೆ ಸಿದ್ಧರಾಗಿರಲು ಗೃಧ್ರರಾಜನಾದ ಸಂಪಾತಿಯು, ರಾಮಪತ್ನಿಯಾದ ಜಾನಕಿಯು ಲಂಕೆಯಲ್ಲಿರುವಳೆಂದು ಹೇಳಿದನು. ॥ ೧-೫ ॥ ಆದರೆ ಆಕೆಯು ಇಲ್ಲಿ ಕಾಣಿಸಲಿಲ್ಲ. ಒಂದುವೇಳೆ ವಿದೇಹಾಧೀಶನಾದ ಜನಕರಾಜನ ಮಗಳಾದ ಆ ಸೀತಾದೇವಿಯು ಸದಾಚಾರ ಪ್ರವರ್ತನೆಯನ್ನು ತೊರೆದು ಕಾಮಪರವಶಳಾಗಿ ದುಷ್ಟಾತ್ಮನಾದ ರಾವಣನನ್ನೇ ಹೊಂದಿದಳೋ ಏನೋ? ಶಾಂತಂ ಪಾಪಂ! ಹಾಗೆಂದಿಗೂ ಇರಲಾರದು. ಪ್ರಾಯಶಃ ದುಷ್ಟನಾದ ರಾವಣನು ಸೀತಾದೇವಿಯನ್ನಪಹರಿಸಿ ಹಾರಿಹೋಗುವಾಗ ರಾಮಬಾಣಗಳಿಗೆ ಹೆದರಿ ಆಕೆಯನ್ನು ಸಮುದ್ರಮಧ್ಯದಲ್ಲಿ ಬಿಸುಟುಬಿಟ್ಟನೋ? ಅಥವ ಬಲಾತ್ಕಾರದಿಂದ ಅಪಹೃತಳಾಗಿ ರಾವಣನೊಡನೆ ಗಗನಮಾರ್ಗದಲ್ಲಿ ಹೋಗುತ್ತಿರುವ ಜಾನಕಿಯು ಅಪಾರವಾದ ಸಾಗರವನ್ನು ಕಂಡು ಭಯದಿಂದ ಎದೆಯೊಡೆದು ಮಡಿದಳೋ? ಹಾಗಲ್ಲದೆ ಶ್ರೀರಾಮನ

¶ "ಸಾದೃಶ್ಯತೇನಕಿಂ" ತಿ. ಪಾ. ¥ "ರಾವಣೇನ ಹೃತಾಬಲಾತ್" ಮ. ತಿ. ಪಾ.

ಹೃದಯಂ ಪ್ರೇಕ್ಷ್ಯ ಸಾಗರಂ । ರಾವಣಸ್ಯೋರುವೇಗೇನ ಭುಜಾಭ್ಯಾಂ ಪೀಡಿತೇನಚ ॥ ೯ ॥ ತಯಾ ಮನ್ಯೇ ವಿಶಾಲಾಕ್ಷ್ಯಾ ತ್ಯಕ್ತಂ ಜೀವಿತಮಾರ್ಯಯಾ । ಉಪರ್ಯುಪರಿವಾ ನೂನಂ ಸಾಗರಂ ಕ್ರಮತಸ್ತಥಾ ॥೧೦॥ ವಿವೇಷ್ಟಮಾನಾ ಪತಿತಾ ಸಮುದ್ರೇ ಜನಕಾತ್ಮಜಾ । ಅಹೋ! ಕ್ಷುದ್ರೇಣ ಚಾಽನೇನ ರಕ್ಷಂತೀ ಶೀಲಮಾತ್ಮನಃ ॥ ೧೧ ॥ ಅಬಂಧುರ್ಭಕ್ಷಿತಾ ಸೀತಾ ರಾವಣೇನ ತಪಸ್ವಿನೀ । ಅಥವಾ ರಾಕ್ಷಸೇಂದ್ರಸ್ಯ ಪತ್ನೀಭಿರಸಿತೇಕ್ಷಣಾ ॥ ೧೨ ॥ ಅದುಷ್ಟಾ ದುಷ್ಟಭಾವಾಭಿರ್ಭಕ್ಷಿತಾ ಸಾ ಭವಿಷ್ಯತಿ ।

ರಾವಣಾಸುರನ, ಊರುವೇಗೇನ - ತೊಡೆಗಳ ವೇಗದಿಂದಲೂ, ಭುಜಾಭ್ಯಾಂ - ತೋಳುಗಳಿಂದ ಹುಟ್ಟಿದ, ಪೀಡಿತೇನಚ - ಬಾಧೆಯಿಂದಲೂ, ವಿಶಾಲಾಕ್ಷ್ಯಾ - ವಿಸ್ತಾರವಾದ ಕಣ್ಣುಗಳುಳ್ಳ, ಆರ್ಯಯಾ - ಪೂಜ್ಯಳಾದ, ತಯಾ - ಆ ಸೀತಾದೇವಿಯಿಂದ, ಜೀವಿತಂ - ಪ್ರಾಣವು, ತ್ಯಕ್ತಂ - ಬಿಡಲ್ಪಟ್ಟಿತು, (ಇತಿ - ಹೀಗೆಂದು,) ಮನ್ಯೇ - ತಿಳಿಯುತ್ತೇನೆ. ॥ ೯ ॥ ತದಾ - ಆ ಸಮಯದಲ್ಲಿ, ಸಾಗರಂ - ಸಮುದ್ರದ, ಉಪರ್ಯುಪರಿ - ಮೇಲೆಮೇಲೆ, ಕ್ರಮತಃ - ಹಾರಿಹೋಗುತ್ತಿರುವ ರಾವಣನ ದೆಸೆಯಿಂದ, ಜನಕಾತ್ಮಜಾ - ಸೀತಾದೇವಿಯು, ವಿವೇಷ್ಟಮಾನಾ - ತಲೆತಿರುಗಿ, ಸಮುದ್ರೇ - ಕಡಲಿನಲ್ಲಿ, ಪತಿತಾ - ಬಿದ್ದಿರಬೇಕು, ನೂನಂ - ನಿಶ್ಚಯವು. ॥ ೧೦ ॥ ಅಥವಾ - ಹಾಗಲ್ಲದಿದ್ದರೆ, ಆತ್ಮನಃ - ತನ್ನ, ಶೀಲಂ - ಸದ್ವೃತ್ತಿಯನ್ನು, ರಕ್ಷಂತೀ - ಪಾಲಿಸುತ್ತಿರುವ, ತಪಸ್ವಿನೀ - ದುಃಖಿತಳಾದ, ಅಬಂಧುಃ - ನೆಂಟರಿಲ್ಲದ, ಸೀತಾ - ಸೀತಾದೇವಿಯು, ಕ್ಷುದ್ರೇಣ - ನೀಚನಾದ, ಅನೇನರಾವಣೇನ - ಈ ರಾವಣನಿಂದ, ಭಕ್ಷಿತಾ - ತಿನ್ನಲ್ಪಟ್ಟಳೋ, ಅಹೋ - ಕಷ್ಟವು. ॥ ೧೧ ॥ ಅಥವಾ - ಹಾಗಲ್ಲದಿದ್ದರೆ, ಅಸಿತೇಕ್ಷಣಾ - ಕಪ್ಪಾದ ಕಣ್ಣುಗಳುಳ್ಳ, ಅದುಷ್ಟಾ - ದುಷ್ಟಳಲ್ಲದ, ಸಾ - ಆ ಸೀತಾದೇವಿಯು, ದುಷ್ಟಭಾವಾಭಿಃ - (ಸವತಿಯಾಗುವಳೆಂಬ) ಅಸೂಯೆಯುಳ್ಳ, ರಾಕ್ಷಸೇಂದ್ರಸ್ಯ - ರಾವಣಾಸುರನ, ಪತ್ನೀಭಿಃ - ಹೆಂಡತಿಯರಿಂದ, ಭಕ್ಷಿತಾ - ತಿನ್ನಲಾದವಳು, ಭವಿಷ್ಯತಿ - ಆಗಿಹೋದಳೋ. ॥೧೨॥ ಸಂಪೂ....ಮಂ - ಷೋಡಶಕಳಾಪರಿಪೂರ್ಣನಾದ ಚಂದ್ರನೊಡನೆ ಸಮಾನವಾದ, ಪದ್ಮ....ಣಂ - ಕಮಲದ ಎಲೆಗಳಿಗೆ ಸಮಾನವಾದ ನೇತ್ರ

ಪರ್ಣಶಾಲೆಯಿಂದ ರಾವಣನಾಕೆಯನ್ನು ಕೊಂಡೊಯ್ಯುತ್ತಿರಲು ಆತನ ಊರುವೇಗದಿಂದಲೂ, ಬಾಹುಪೀಡನದಿಂದಲೂ, ಕೋಮಲಾಂಗಿಯಾದ ಆ ಜಾನಕಿಯು ಪ್ರಾಣಗಳನ್ನು ತೊರೆದಳೋ? ಇಲ್ಲದೆ ಆ ರಾವಣಾಸುರನು ಆಕೆಯನ್ನೆತ್ತಿಕೊಂಡು ಆಕಾಶಮಾರ್ಗದಲ್ಲಿ ಹಾರುತ್ತಿರಲು ವಿಶಾಲಾಕ್ಷಿಯೂ, ಪೂಜ್ಯಳೂ ಆದ ಆಕೆಯು ತಲೆತಿರುಗಿ ಸಮುದ್ರದಲ್ಲಿ ಬಿದ್ದಳೋ? ॥೬–೧೦॥ ಅಥವ ಮಹಾ ದುರಾತ್ಮನಾದ ರಾವಣಾಸುರನು ತನ್ನ ಬಯಕೆಯು ಈಡೇರಲಿಲ್ಲವೆಂಬ ಕೋಪದಿಂದ ಸದಾಚಾರವನ್ನು ರಕ್ಷಿಸಿಕೊಂಡಿರುವವಳಾಗಿಯೂ, ಬಂಧುಗಳಾರೂ ಸಮೀಪದಲ್ಲಿಲ್ಲದಿರುವವಳಾಗಿಯೂ, ಶ್ರೀರಾಮನನ್ನು ತೊರೆದು ತಪಿಸುತ್ತಿರುವವಳಾಗಿಯೂ ಇರುವ ಆ ಜಾನಕಿಯನ್ನು ಭಕ್ಷಿಸಿಬಿಟ್ಟನೋ ಹಾಗಿಲ್ಲದಿದ್ದರೆ ದುಷ್ಟೆಯರಾದ ರಾವಣನ ಪತ್ನಿಯರು ತಮ್ಮ ಸುಖಕ್ಕೆ ಕುಂದುಬಂದೀತೆಂದು ಯೋಚಿಸಿ ಮಹಾ ಸೌಂದರ್ಯಶಾಲಿನಿಯೂ, ಸಾತ್ವಿಕಭಾವವುಳ್ಳವಳೂ ಆದ ಆ ದೇವಿಯನ್ನು ಭಕ್ಷಿಸಿಬಿಟ್ಟರೋ ಏನೋ? ಇರಬೇಕಿರಬೇಕು!! ಆಕೆಯು ಹಾಗೆಯೇ ಮೃತಿಯೊಂದಿರಬೇಕು!!! ದಯ

$ ಸಂಪೂರ್ಣಚಂದ್ರಪ್ರತಿಮಾ ಪದ್ಮಪತ್ರನಿಭೇಕ್ಷಣಾ ॥೧೩॥ ರಾಮಸ್ಯ ಧ್ಯಾಯತೀ ವಕ್ತ್ರಂ ಪಂಚತ್ವಂ ಕೃಪಣಾ ಗತಾ । "ಹಾ ರಾಮ! ಲಕ್ಷ್ಮಣೇತ್ಯೇವಂ ಹಾಽಯೋಧ್ಯೇ! ಚೇತಿ ಮೈಥಿಲೀ" ॥೧೪॥ ವಿಲಪ್ಯ ಬಹು ವೈದೇಹೀ ನ್ಯಸ್ತದೇಹಾ ಭವಿಷ್ಯತಿ । ಅಥವಾ ನಿಹಿತಾಂ ಮನ್ಯೇ ರಾವಣಸ್ಯ ನಿವೇಶನೇ ॥೧೫॥ § ನೂನಂ ಲಾಲಪ್ಯತೇ ‡ ಸೀತಾ ಪಂಜರಸ್ಥೇವ ಶಾರಿಕಾ । ಜನಕಸ್ಯ * ಸುತಾ ಸೀತಾ ರಾಮಪತ್ನೀ ಸುಮಧ್ಯಮಾ । ಕಥಮುತ್ಪಲಪತ್ರಾಕ್ಷೀ ರಾವಣಸ್ಯ ವಶಂ ವ್ರಜೇತ್ ॥೧೬॥ ವಿನಷ್ಟಾವಾ ಪ್ರಣಷ್ಟಾವಾ

ಗಳುಳ್ಳ, ರಾಮಸ್ಯ - ಶ್ರೀರಾಮನ, ವಕ್ತ್ರಂ - ಮುಖವನ್ನು, ಧ್ಯಾಯತೀ - ನೆನೆಯುತ್ತಿದ್ದ ಸೀತೆಯು, ಕೃಪಣಾ - ದೀನಳಾಗಿ, ಪಂಚತ್ವಂ - ಮರಣವನ್ನು, ಗತಾ - ಹೊಂದಿದಳೋ. ॥ ೧೩ ॥ ವೈದೇಹೀ - ವಿದೇಹರಾಜನ ಮಗಳಾದ, ಮೈಥಿಲೀ - ಸೀತಾದೇವಿಯು, ಹಾ ರಾಮ - ಎಲೈ ರಾಮನೇ, ಹಾ ಲಕ್ಷ್ಮಣಾ - ಎಲೈ ಲಕ್ಷ್ಮಣನೇ, ಹಾ ಆಯೋಧ್ಯೇ - ಓ ಅಯೋಧ್ಯಾನಗರವೇ, ಇತ್ಯೇವಂ - ಹೀಗೆಂದು, ಬಹು - ಅಧಿಕವಾಗಿ, ವಿಲಪ್ಯ - ಅತ್ತು, ನ್ಯಸ್ತದೇಹಾ - ಬಿಡಲ್ಪಟ್ಟ ಶರೀರವುಳ್ಳವಳು, ಭವಿಷ್ಯತಿ - ಆದಳೇನೋ. ॥ ೧೪ ॥ ಅಥವಾ - ಹಾಗಲ್ಲದಿದ್ದರೆ, ಸೀತಾ - ಸೀತಾದೇವಿಯು, ರಾವಣಸ್ಯ - ರಾವಣಾಸುರನ, ನಿವೇಶನೇ - ಮನೆಯಲ್ಲಿ, ನಿಹಿತಾ-ಗೂಢವಾಗಿ ಇರಿಸಲ್ಪಟ್ಟವಳನ್ನಾಗಿ, ಮನ್ಯೇ - ತಿಳಿಯುತ್ತೇನೆ, ಸೀತಾ - ಸೀತಾದೇವಿಯು, ಪಂಜರಸ್ಥಾ - ಪಂಜರದಲ್ಲಿರುವ, ಶಾರಿಕೇವ - ಗಿಳಿಯಂತೆ, ಲಾಲಪ್ಯತೇ - ಅಳುತ್ತಾಳೆ, ನೂನಂ - ನಿಶ್ಚಯವು. ॥ ೧೫ ॥ ಜನಕಸ್ಯ - ಜನಕರಾಯನ, ಸುತಾ - ಮಗಳಾದ, ರಾಮಪತ್ನೀ - ಶ್ರೀರಾಮನ ಹೆಂಡತಿಯಾದ, ಸುಮಧ್ಯಮಾ - ಒಳ್ಳೆಯ ನಡುವುಳ್ಳ, ಉತ್ಪ....ಕ್ಷೀ - ಕನ್ನೈದಿಲೆಯಂತೆ ಕಣ್ಣುಗಳುಳ್ಳ, ಸೀತಾ - ಸೀತಾದೇವಿಯು, ರಾವಣಸ್ಯ - ರಾವಣನ, ವಶಂ - ಸ್ವಾಧೀನವನ್ನು, ಕಥಂವ್ರಜೇತ್ - ಹೇಗೆತಾನೆ ಹೊಂದುವಳು. ॥ ೧೬ ॥ ಜನಕಾತ್ಮಜಾ - ಜಾನಕಿಯು, ವಿನಷ್ಟಾವಾ - (ಗೋ) ಕಾಣುವ ಪ್ರದೇಶದಲ್ಲಿ ಮಾಯೆಯಿಂದ ಅದರ್ಶನವಾದಳೋ (ಗೋ+ಮ) ನೆಲಮಾಳಿಗೆ ಮುಂತಾದವುಗಳಲ್ಲಿ ಇಟ್ಟಿರುವುದರಿಂದ, ಪ್ರಣಷ್ಟಾವಾ - (ಗೋ+ಮ) ಕಾಣಲ್ಪಡದಿರುವ ಸ್ಥಳದಲ್ಲಿರಿಸಲ್ಪಟ್ಟ ಕಾರಣ ಕಾಣಲ್ಪಡಲಿಲ್ಲವೋ,

---

ನೀಯಳೂ, ಪೂರ್ಣಚಂದ್ರನಿಗೆ ಸಮಾನವಾದ ಮುಖಕಾಂತಿಯುಳ್ಳವಳೂ, ಕಮಲಪತ್ರದಂತೆ ವಿಶಾಲವಾದ ಕಣ್ಣುಗಳುಳ್ಳವಳೂ ಆದ ಆ ಸೀತಾದೇವಿಯು ಶ್ರೀರಾಮಚಂದ್ರನನ್ನೇ ಧ್ಯಾನಿಸುತ್ತ ದೈನ್ಯವನ್ನು ಹೊಂದಿ ಪ್ರಾಣಗಳನ್ನು ತೊರೆದಿರಬೇಕು. ಆಗಲಾಕೆಯು, "ಹಾ ರಾಮಾ! ಹಾ ಲಕ್ಷ್ಮಣಾ!! ಓ ಅಯೋಧ್ಯೆಯೇ!!!" ಎಂದು ಬಹುಪ್ರಕಾರವಾಗಿ ದುಃಖಿಸುತ್ತ ದೇಹತ್ಯಾಗವನ್ನು ಮಾಡಿದಳೋ ಏನೋ? ಹಾಗಿಲ್ಲದಿದ್ದರೆ ರಾವಣನ ಮನೆಯಲ್ಲಿ ರಹಸ್ಯವಾದ ಯಾವುದೋ ಒಂದು ಪ್ರದೇಶದಲ್ಲಿ ಬಂಧಿತಳಾಗಿ ಪಂಜರದಲ್ಲಿಟ್ಟ ಗಿಳಿಯಂತೆ ಹಗಲಿರಳೂ ರೋದಿಸುತ್ತಿರುವಳೋ ಏನೋ !! ॥೧೧-೧೫॥ ಅಥವ, ಆ ದೇವಿಯು ರಾವಣನ ವಶವರ್ತಿನಿಯಾಗಿರಬಹುದೇ!! ಛೀ! ಛೀ!! ಹಾಗೆಂದಿಗೂ ಯೋಚಿಸಬಾರದು. ಜನಕಮಹಾರಾಜನ ಕುವರಿಯಾಗಿ, ಶ್ರೀರಾಮಚಂದ್ರನಿಗೆ ಪತ್ನಿಯಾಗಿ, ಬಹು ಸುಂದರವಾದ ಮಧ್ಯಪ್ರದೇಶ

$ ಇಲ್ಲಿಂದ ಎರಡು ಶ್ಲೋಕಗಳು ಗೋ. ಪಾ. ದಲ್ಲಿ ಅಧಿಕ.

§ "ಭೃಶಂ" ತಿ. ಪಾ. ‡ "ಬಾಲಾ" ತಿ. ರಾ. ಪಾ. * "ಕುಲೇಜಾತಾ" ತಿ. ರಾ. ಪಾ.

ಮೃತಾವಾ ಜನಕಾತ್ಮಜಾ । ರಾಮಸ್ಯ ಪ್ರಿಯಭಾರ್ಯಸ್ಯ ನ ನಿವೇದಯಿತುಂ ಕ್ಷಮಂ ॥ ೧೭ ॥ ನಿವೇದ್ಯಮಾನೇ ದೋಷಸ್ಸ್ಯಾದ್ದೋಷಸ್ಸ್ಯಾದನಿವೇದನೇ । ಕಥನ್ನು ಖಲು ಕರ್ತವ್ಯಂ ವಿಷಮಂ ಪ್ರತಿಭಾತಿ ಮೇ ॥ ೧೮ ॥ ಅಸ್ಮಿನ್ನೇವಂ ಗತೇ ಕಾರ್ಯೇ ಪ್ರಾಪ್ತ ಕಾಲಂ ಕ್ಷಮಂ ಚ ಕಿಂ? ಭವೇ''ದಿತಿ ಮತಂ ಭೂಯೋ ಹನುಮಾನ್ ಪ್ರವಿಚಾರಯತ್ ॥ ೧೯ ॥ " ಯದಿ ಸೀತಾ ಮದೃಷ್ಟ್ವಾಽಹಂ ವಾನರೇಂದ್ರಪುರೀಮಿತಃ । ಗಮಿಷ್ಯಾಮಿ ತತಃ ಕೋಮೇ ಪುರುಷಾರ್ಥೋ ಭವಿಷ್ಯತಿ ॥ ೨೦ ॥ ಮಮೇದಂ ಲಂಘನಂ ವ್ಯರ್ಥಂ

ಸಮುದ್ರಪತನವೇ ಮೊದಲಾದವುಗಳಿಂದ ಮೃತಿಪಟ್ಟಳೋ, ಮೃತಾವಾ - ರಾಮವಿರಹದುಃಖವನ್ನು ಸೈರಿಸದೆ ತನ್ನಷ್ಟಕ್ಕೆತಾನೇ ಮರಣವನ್ನೈದಿದಳೋ, ಪ್ರಿಯಭಾರ್ಯಸ್ಯ - ಇಷ್ಟಸತಿಯುಳ್ಳ, ರಾಮಸ್ಯ-ಶ್ರೀರಾಮನಿಗೆ, ನಿವೇದಯಿತುಂ - ತಿಳಿಸುವುದು, ನಕ್ಷಮಂ - ಯೋಗ್ಯವಲ್ಲ. ॥೧೭॥ ನಿವೇದ್ಯಮಾನೇ-ತಿಳಿಸಿದಲ್ಲಿ, ದೋಷಃ - ಪಾತಕವು, ಸ್ಯಾತ್ - ಆದೀತು, ಅನಿವೇದನೇ-ಅರಿಕೆ ಮಾಡದಿದ್ದಲ್ಲಿ, ದೋಷಃ - ಸ್ವಾಮಿವಂಚನರೂಪವಾದ ಪಾಪವು, ಸ್ಯಾತ್ - ಆದೀತು, ಕಥನ್ನುಖಲು - ಹೇಗೆತಾನೆ, ಕರ್ತವ್ಯಂ - ಮಾಡತಕ್ಕದು, ವಿಷಮಂ - ಒಂದಕ್ಕೊಂದು ವಿರುದ್ಧವಾಗಿ, ಮೇ - ನನಗೆ, ಪ್ರತಿಭಾತಿ - ತೋರುತ್ತಿದೆ. ॥೧೮॥ ಹನುಮಾನ್ - ಆಂಜನೇಯನು, ಅಸ್ಮಿನ್ಕಾರ್ಯೇ - ಈ ಕೆಲಸವು, ಏವಂಗತೇ - ಹೀಗೆ ವಿಷಮವಾಗುತ್ತಿರಲು, ಪ್ರಾಪ್ತಕಾಲಂ - ಉಚಿತ ಸಮಯವು, ಕ್ಷಮಂಚ - ಸಮರ್ಥವೂ, ಕಿಂಭವೇತ್-ಯಾವದಾದೀತು, ಇತಿ - ಹೀಗೆಂದು, ಮತಂ - ಪಕ್ಷವನ್ನು, ಭೂಯಃ - ಮತ್ತು, ಪ್ರವಿಚಾರಯತ್-ವಿಚಾರಿಸಿದನು. ॥೧೯॥ ಅಹಂ - ನಾನು, ಸೀತಾಂ - ಸೀತಾದೇವಿಯನ್ನು, ಅದೃಷ್ಟ್ವಾ - ಕಾಣದೆ, ಇತಃ - ಈ ಪ್ರದೇಶದಿಂದ, ವಾನರೇಂದ್ರಪುರೀಂ - ಕಿಷ್ಕಿಂಧಾನಗರಿಯನ್ನು ಕುರಿತು, ಗಮಿಷ್ಯಾಯದಿ-ಹೋದರೆ, ತತಃ - ಬಳಿಕ, ಮೇ - ನನಗೆ, ಕಃಪುರುಷಾರ್ಥಃ - ಯಾವ ಪ್ರಯೋಜನವು, ಭವಿಷ್ಯತಿ - ಆಗುತ್ತದೆ. ॥ ೨೦ ॥ ಮಮ-ನನ್ನ, ಇದಂ-ಈ, ಸಾಗರಸ್ಯ-ಸಮುದ್ರದ, ಲಂಘನಂ-ದಾಟುವಿಕೆಯೂ,

---

ಉಳ್ಳವಳೂ, ಕನ್ನೈದಿಲೆಯಂತೆ ಮನೋಹರವಾದ ಕಂಗಳುಳ್ಳವಳೂ, ಆದ ಆ ಜಾನಕಿಯು ಎಷ್ಟುಮಾತ್ರಕ್ಕೂ ರಾವಣನನ್ನು ಹೊಂದಲಾರಳು. ಆಕೆಯು ರಹಸ್ಯಸ್ಥಳದಲ್ಲಿದ್ದು ಮಡಿದಳೋ, ಸಮುದ್ರದಮೇಲೆ ಆಕಾಶಮಾರ್ಗದಲ್ಲಿ ಬರುವಾಗ ಬಿದ್ದುಹೋದಳೋ, ಪ್ರಿಯತಮನಾದ ಶ್ರೀರಾಮನ ವಿರಹದುಃಖವನ್ನು ಸಹಿಸಲಾರದೆ ಪ್ರಾಣಗಳನ್ನು ತೊರೆದಳೋ ತಿಳಿಯದಾಗಿದೆ. ಹೀಗೆ ಯಾವ ನಿಶ್ಚಯವನ್ನೂ ಅರಿಯದವನಾದೆನು. ಆಕೆಯಲ್ಲಿ ಪ್ರಾಣಾಧಿಕ ಪ್ರೇಮವುಳ್ಳ ಶ್ರೀರಾಮನಿಗೆ, 'ರಾಮಾ! ನಿನ್ನಮಡದಿಯು ಮಡಿದಳೆಂದು ನುಡಿವುದೆಂತು?' ಈಗ ಸೀತೆಯು ಕಾಣಿಸಲಿಲ್ಲವೆಂದು ಶ್ರೀರಾಮನಿಗೆ ನಿವೇದಿಸಿದರೂ ಮಹಾ ದೋಷವೇ ಸಂಭವಿಸುತ್ತದೆ. ಇಲ್ಲವೆ ಹೇಳದೆಯೇ ಇದ್ದರೂ ಸ್ವಾಮಿವಂಚನೆಯ ದೋಷವು ಸಂಭವಿಸುವುದು; ಹೀಗೆ ಈ ಎರಡೂ ವಿಷಮವಾಗಿಯೇ ಪರಿಣಮಿಸುವುದರಿಂದ ನಾನು ಮಾಡಬೇಕಾದುದೇನು? ನಾನು ಪ್ರಯತ್ನಿಸಿದ ಸೀತಾನ್ವೇಷಣ ಕಾರ್ಯವು ಹೀಗಾಗಿರುವಲ್ಲಿ ಕಾಲೋಚಿತವಾಗಿ ನಾನು ಮಾಡಬೇಕಾಗಿರುವ ಕರ್ತವ್ಯವೇನು?" ಎಂಬೀಪ್ರಕಾರವಾಗಿ ಬಹು ವಿಧವಾಗಿ ಆಲೋಚಿಸಿ ಆ ಕಪಿವೀರನು ಪುನಃ ಹೀಗೆ ಯೋಚಿಸಿದನು. " ಒಂದುವೇಳೆ ಸೀತಾದೇವಿಯನ್ನು ಕಾಣದೆ ಇಲ್ಲಿಂದ ಕಿಷ್ಕಿಂಧಾಪಟ್ಟಣಕ್ಕೆ ಹೋದೆನಾದರೆ ಅದರಿಂದ ನಾನು ಯಾವ ಪುರುಷಾರ್ಥವನ್ನು ಸಾಧಿಸಿದಂತಾಯಿತು? ॥೧೬-೨೦॥ ಹಾಗೊಂದುವೇಳೆ ಹಿಂತಿರುಗಿದೆನಾದರೆ ನಾನು ಮಾಡಿದ

ಸಾಗರಸ್ಯ ಭವಿಷ್ಯತಿ । ಪ್ರವೇಶಶ್ಚೈವ ಲಂಕಾಯಾ ರಾಕ್ಷಸಾನಾಂಚ ದರ್ಶನಂ ॥೨೦॥ ಕಿಂ ಮಾಂ ವಕ್ಷ್ಯತಿ ಸುಗ್ರೀವೋ ಹರಯೋ ವಾ ಸಮಾಗತಾಃ । ಕಿಷ್ಕಿಂಧಾಂ ಸಮನುಪ್ರಾಪ್ತಂ ತೌ ವಾ ದಶರಥಾತ್ಮಜೌ ॥೨೨॥ ಗತ್ವಾತು ಯದಿ ಕಾಕುತ್‌ಸ್ಥಂ ವಕ್ಷ್ಯಾಮಿ ಪರಮಪ್ರಿಯಂ । ನದೃಷ್ಟೇತಿ ಮಯಾ ಸೀತಾ ತತಸ್ತ್ಯಕ್ಷ್ಯತಿ ಜೀವಿತಂ ॥ ೨೩ ॥ ಪರುಷಂ ದಾರುಣಂ ಕ್ರೂರಂ ತೀಕ್ಷ್ಣಮಿಂದ್ರಿಯತಾಪನಂ । ಸೀತಾನಿಮಿತ್ತಂ ದುರ್ವಾಕ್ಯಂ ಶ್ರುತ್ವಾ ಸ ನಭವಿಷ್ಯತಿ ॥ ೨೪ ॥ ತಂತು ಕೃಚ್ಛ್ರಗತಂ ದೃಷ್ಟ್ವಾ ಪಂಚತ್ವಗತಮಾನಸಂ । ಭೃಶಾನುರಕ್ತೋ ಮೇಧಾವೀ ನಭವಿಷ್ಯತಿ ಲಕ್ಷ್ಮಣಃ ॥ ೨೫ ॥

ಲಂಕಾಯಾಃ - ಲಂಕಾಪುರಿಯ, ಪ್ರವೇಶಶ್ಚ - ಪ್ರವೇಶವೂ, ರಾಕ್ಷಸಾನಾಂ - ರಕ್ಕಸರ, ದರ್ಶನಂಚ-ನೋಡುವಿಕೆಯೂ ಸಹಾ, ವ್ಯರ್ಥಂ - ನಿಷ್ಪ್ರಯೋಜನವು, ಭವಿಷ್ಯತಿ-ಆಗುತ್ತದೆ. ॥೨೧॥ ಕಿಷ್ಕಿಂಧಾಂ-ಕಿಷ್ಕಿಂಧಾಪಟ್ಟಣವನ್ನು, ಸಮನುಪ್ರಾಪ್ತಂ - ಹೊಂದಿದ, ಮಾಂ - ನನ್ನನ್ನು ಕುರಿತು, ಸುಗ್ರೀವಃ - ಸುಗ್ರೀವನು, ಕಿಂವಕ್ಷ್ಯತಿ - ಏನು ಹೇಳುವನೋ, ಸಮಾಗತಾಃ - ಬಂದ, ಹರಯೋವಾ - ಕಪಿಗಳಾಗಲೀ, ಕಿಂವಕ್ಷ್ಯಂತಿ - ಏನನ್ನುವರೋ, ದಶರಥಾತ್ಮಜೌ - ದಶರಥಪುತ್ರರಾದ, ತೌ - ಆ ರಾಮಲಕ್ಷ್ಮಣರಿಬ್ಬರೂ, ಕಿಂವಕ್ಷ್ಯತಃ - ಏನನ್ನುವರೋ. ॥ ೨೨ ॥ ಕಿಂತು - ಮತ್ತೇನೆಂದರೆ, ಗತ್ವಾ - ಹೋಗಿ, ಸೀತಾ - ಸೀತಾದೇವಿಯು, ಮಯಾ - ನನ್ನಿಂದ, ನದೃಷ್ಟಾ - ಕಾಣಲ್ಪಡಲಿಲ್ಲ, ಇತಿ - ಎಂದು, ಪರಂ - ಅತಿಶಯವಾಗಿ, ಅಪ್ರಿಯಂ - ಅನಿಷ್ಟವಾದ ಮಾತನ್ನು, ಕಾಕುತ್ಸ್ಥಂ - ಶ್ರೀರಾಮನನ್ನು ಕುರಿತು, ವಕ್ಷ್ಯಾಮಿಯದಿ-ಹೇಳಿದವನಾದರೆ, (ಆತನು) ತತಃ-ಬಳಿಕ, ಜೀವಿತಂ-ಪ್ರಾಣವನ್ನು, ತ್ಯಕ್ಷ್ಯತಿ-ಬಿಡುವನು. ॥ ೨೩ ॥ ಸಃ-ಆ ಶ್ರೀರಾಮನು, ಪರುಷಂ-ಕರ್ಣಕಠೋರವಾದ, ದಾರುಣಂ-ಭಯಂಕರವಾದ, ಕ್ರೂರಂ - ಉಗ್ರವಾದ, ತೀಕ್ಷ್ಣಂ-ಸಹಿಸಲಶಕ್ಯವಾದ, ಇಂದ್ರಿ....ನಂ - ಶ್ರೋತ್ರಾದೀಂದ್ರಿಯಗಳಿಗೆ ಕ್ಷೋಭಕವಾದ, ಸೀತಾನಿಮಿತ್ತಂ - ಸೀತಾವಿಷಯಕವಾದ, ದುರ್ವಾಕ್ಯಂ - ಕೆಟ್ಟಮಾತನ್ನು, ಶ್ರುತ್ವಾ - ಕೇಳಿ, ನಭವಿಷ್ಯತಿ - ಜೀವಿಸಲಾರನು. ॥ ೨೪ ॥ ಭೃಶಾನುರಕ್ತಃ - ಬಹಳ ಅನುರಾಗವುಳ್ಳ, ಮೇಧಾವೀ - ಬುದ್ಧಿಶಾಲಿಯಾದ, ಲಕ್ಷ್ಮಣಸ್ತು - ಲಕ್ಷ್ಮಣನಾದರೆ, ಕೃಚ್ಛ್ರಗತಂ - ಕಷ್ಟವನ್ನೈದಿದವನಾದುದರಿಂದಲೇ, ಪಂಚ....ಸಂ-ಮರಣದಲ್ಲಿ ಕೃತನಿಶ್ಚಯವುಳ್ಳ, ತಂ - ಆ ರಾವಣ

ಈ ಸಮುದ್ರೋಲ್ಲಂಘನವು ವ್ಯರ್ಥವಾಗುವುದಲ್ಲದೆ ಲಂಕಾನಗರವನ್ನು ಪ್ರವೇಶಿಸಿ ರಾವಣಾಂತಃಪುರವನ್ನು ಹೊಕ್ಕು ರಾಕ್ಷಸರೆಲ್ಲರನ್ನೂ ನೋಡಿದ ಶ್ರಮವೂ ನಿಷ್ಫಲವಾಗುವುದು. ಸುಗ್ರೀವನ ಆಜ್ಞೆಯನ್ನು ನೆರವೇರಿಸದ ನನ್ನನ್ನು ಆ ಮಹಾರಾಜನಾಗಲಿ ಆತನ ಪರಿಜನರಾಗಲಿ, ದಶರಥನಂದನರಾದ ರಾಮಲಕ್ಷ್ಮಣರಾಗಲಿ ಏನೆಂದಾರು? ಇಲ್ಲಿ ಸೀತೆಯನ್ನು ಕಾಣದೆ ಕಿಷ್ಕಿಂಧೆಗೆ ಹಿಂತಿರುಗಿ ಶ್ರೀರಾಮನನ್ನು ಕಂಡು, 'ನಾನು ಸೀತೆಯನ್ನು ನೋಡಲಿಲ್ಲ!' ಎಂದು ಹೇಳಿದೊಡನೆಯೇ ಮಹಾ ಕಠಿನವೂ, ಭಯಂಕರವೂ, ಕ್ರೂರವೂ, ಅಸಹ್ಯವೂ, ಸರ್ವೇಂದ್ರಿಯಗಳಿಗೂ ಸಂತಾಪವನ್ನುಂಟುಮಾಡುವುದೂ ಆದ ಈ ಮಾತುಗಳನ್ನು ಕೇಳಿದೊಡನೆಯೇ ಆ ರಘುಕುಲೋತ್ತಂಸನು ಖಂಡಿತವಾಗಿಯೂ ಜೀವದಿಂದಿರಲಾರನು; ಅಣ್ಣನಲ್ಲಿ ಭಕ್ತಿವಾತ್ಸಲ್ಯಗಳುಳ್ಳವನಾಗಿಯೂ, ಪ್ರಜ್ಞಾಶಾಲಿಯಾಗಿಯೂ ಇರುವ ಲಕ್ಷ್ಮಣನು ದುಃಖಸಂತಪ್ತನಾಗಿ ಮರಣೋದ್ಯುಕ್ತನಾದ ಶ್ರೀರಾಮನನ್ನು ಕಂಡು ತಾನೂ ಪ್ರಾಣಗಳನ್ನು

ವಿನಷ್ಟೌ ಭ್ರಾತರೌ ಶ್ರುತ್ವಾ ಭರತೋಽಪಿ ಮರಿಷ್ಯತಿ । ಭರತಂಚ ಮೃತಂ ದೃಷ್ಟ್ವಾ ಶತ್ರುಘ್ನೋ ನ ಭವಿಷ್ಯತಿ ॥ ೨೬ ॥ ಪುತ್ರಾನ್ ಮೃತಾನ್ ಸಮೀಕ್ಷ್ಯಾಥ ನಭವಿಷ್ಯಂತಿ ಮಾತರಃ । ಕೌಸಲ್ಯಾಚ ಸುಮಿತ್ರಾಚ ಕೈಕೇಯೀಚ ನಸಂಶಯಃ ॥ ೨೭ ॥ ಕೃತಜ್ಞಸ್ಸತ್ಯಸಂಧಶ್ಚ ಸುಗ್ರೀವಃ ಪ್ಲವಗಾಧಿಪಃ । ರಾಮಂ ತಥಾ ಗತಂ ದೃಷ್ಟ್ವಾ ತತಸ್ತ್ಯಕ್ಷ್ಯತಿ ಜೀವಿತಂ ॥೨೮॥ ದುರ್ಮನಾ ವ್ಯಥಿತಾ ದೀನಾ ನಿರಾನಂದಾ ತಪಸ್ವಿನೀ । ಪೀಡಿತಾ ಭರ್ತೃಶೋಕೇನ ರುಮಾ ತ್ಯಕ್ಷ್ಯತಿ ಜೀವಿತಂ ॥ ೨೯ ॥ ವಾಲಿಜೇನತು

ನನ್ನು, ದೃಷ್ಟ್ವಾ - ಕಂಡು, ನಭವಿಷ್ಯತಿ - ಜೀವದಿಂದಿರಲಾರನು. ॥೨೫॥ ವಿನಷ್ಟೌ - ನಾಶವನ್ನೈದಿದ, ಭ್ರಾತರೌ-ಅಣ್ಣತಮ್ಮಂದಿರ ವಿಷಯವನ್ನು, ಶ್ರುತ್ವಾ-ಕೇಳಿ, ಭರತೋಽಪಿ-ಭರತನೂ, ಮರಿಷ್ಯತಿ-ಮೃತಿಯೊಂದುವನು, ಶತ್ರುಘ್ನಶ್ಚ - ಶತ್ರುಘ್ನನೂ, ಮೃತಂ - ಮಡಿದ, ಭರತಂ - ಭರತನನ್ನು, ದೃಷ್ಟ್ವಾ-ಕಂಡು, ನಭವಿಷ್ಯತಿ - ಇರಲಾರನು. ॥ ೨೬ ॥ ಅಥ - ಅನಂತರದಲ್ಲಿ, ಮಾತರಃ - ತಾಯಿಯಾದ, ಕೌಸಲ್ಯಾಚ-ಕೌಸಲ್ಯೆಯೂ, ಸುಮಿತ್ರಾಚ-ಸುಮಿತ್ರಾದೇವಿಯೂ, ಕೈಕೆಯೀಚ-ಕೈಕೇಯೀದೇವಿಯೂ ಸಹಾ, ಮೃತಾನ್ - ಮೃತಪಟ್ಟ, ಪುತ್ರಾನ್ - ಮಕ್ಕಳನ್ನು, ಸಮೀಕ್ಷ್ಯ - ಕಂಡು, ನಭವಿಷ್ಯಂತಿ - ಜೀವಿಸಿರಲಾರರು, ನಸಂಶಯಃ - ಸಂದೇಹವಿಲ್ಲ. ॥ ೨೭ ॥ ಕೃತಜ್ಞಃ - ಮಾಡಿದುಪಕಾರಗಳನ್ನು ಬಲ್ಲವನಾದ, ಸತ್ಯಸಂಧಃ - ಸತ್ಯವಾದ ಪ್ರತಿಜ್ಞೆಯುಳ್ಳವನಾದ, ಪ್ಲವಗಾಧಿಪಃ - ವಾನರಾಧಿಪತಿಯಾದ, ಸುಗ್ರೀವಶ್ಚ - ಸುಗ್ರೀವನೂ ಕೂಡಾ, ತಥಾ - ಆ ಪ್ರಕಾರವಾಗಿಯೇ, ಗತಂ - ಮಡಿದ, ರಾಮಂ - ಶ್ರೀರಾಮನನ್ನು, ದೃಷ್ಟ್ವಾ - ಕಂಡು, ತತಃ - ಅನಂತರದಲ್ಲಿ, ಜೀವಿತಂ - ಪ್ರಾಣವನ್ನು, ತ್ಯಕ್ಷ್ಯತಿ - ಬಿಡುವನು. ॥ ೨೮ ॥ ಭರ್ತೃಶೋಕೇನ - ಪತಿವಿಷಯಕವಾದ ದುಃಖದಿಂದ, ಪೀಡಿತಾ - ಬಾಧಿತಳಾದ, ದುರ್ಮನಾ - ವಿಮನಸ್ಕಳಾದ, ವ್ಯಥಿತಾ-ದುಃಖವುಳ್ಳವಳಾದುದರಿಂದಲೇ, ನಿರಾನಂದಾ-ಸಂತೋಷರಹಿತಳಾದ, ತಪಸ್ವಿನೀ-ಕೃಶಳಾದ, ರುಮಾ-ರುಮೆಯು, ಜೀವಿತಂ-ಪ್ರಾಣವನ್ನು, ತ್ಯಕ್ಷ್ಯತಿ-ಬಿಡುವಳು. ॥೨೯॥ ಕಿಂತು - ಮತ್ತೇನಂದರೆ, ಪಂಚತ್ವಂ - (ಸುಗ್ರೀವನು) ಮರಣವನ್ನು, ಗತೇಸತಿ-ಹೊಂದಲು, ರಾಜ್ಞೀಚ ರಾಣಿಯಾದ, ತಾರಾ-ತಾರಾದೇವಿಯು, ವಾಲಿಜೇನ-ವಾಲಿಯಿಂದ ಹುಟ್ಟಿದ,

---

ತೊರೆಯುವನು. ॥೨೧–೨೫॥ ಈ ರೀತಿ ಸಹೋದರರಾದ ಶ್ರೀರಾಮಲಕ್ಷ್ಮಣರು ಮೃತಪಟ್ಟರೆಂಬ ವೃತ್ತಾಂತವನ್ನು ಕೇಳಿದೊಡನೆಯೇ, ನಂದಿಗ್ರಾಮದಲ್ಲಿರುವ ಭರತಶತ್ರುಘ್ನರೂ ಪ್ರಾಣಗಳನ್ನು ತೊರೆಯುವರು. ತಮ್ಮ ಪುತ್ರರು ಈ ರೀತಿ ವಿಧಿವಶರಾದರೆಂಬ ವಾರ್ತೆಯನ್ನು ಕೇಳಿ ದಶರಥರಾಜಪತ್ನಿಯರಾದ ಕೌಸಲ್ಯೆ, ಕೈಕೇಯಿ, ಸುಮಿತ್ರೆಯರೂ ಮರಣವನ್ನೈದುವುದರಲ್ಲಿ ಸಂದೇಹವಿಲ್ಲವು. ಶ್ರೀರಾಮಚಂದ್ರನಿಂದ ಉಪಕಾರವನ್ನು ಪಡೆದವನೂ, ಸತ್ಯಸಂಧನೂ, ವಾನರಾಧಿಪನೂ, ಆದ ಸುಗ್ರೀವನೂ ಸಹ ಹೀಗೆ ದುರವಸ್ಥೆಯನ್ನೈದಿದ ತನ್ನ ಮಿತ್ರನಾದ ಶ್ರೀರಾಮನನ್ನು ಕಂಡು ತಾನೂ ಪ್ರಾಣತ್ಯಾಗ ಮಾಡುವನು. ಸುಗ್ರೀವಪತ್ನಿಯಾದ ರುಮೆಯೂ ಗಂಡನ ಮರಣವಾರ್ತೆಯನ್ನು ಕೇಳಿ ದುಃಖಿಸಿ ದೀನಳಾಗಿ ಜೀವವನ್ನು ತೊರೆಯುವಳು. ತಾರಾದೇವಿಯು ಶ್ರೀರಾಮನ ಬಾಣದಿಂದ ಮೃತನಾದ ತನ್ನ ಪತಿಯ ಶೋಕದಿಂದ ದುಃಖಿಸಿ ಕೃಶಳಾಗಿದ್ದರೂ ಮೈದುನನಾದ ಸುಗ್ರೀವರಾಜನ ಪ್ರಭುತ್ವದಿಂದಲೂ ಮಗನಾದ ಅಂಗದನು ಯುವರಾಜನಾಗಿರುವದರಿಂದಲೂ ಸ್ವಲ್ಪ ಸಮಾಧಾನದಿಂ

ದುಃಖೇನ ಪೀಡಿತಾ ಶೋಕಕರ್ಶಿತಾ। ಪಂಚತ್ವಂಚ ಗತೇ ರಾಜ್ಞೀ ತಾರಾಪಿ ನಭವಿಷ್ಯತಿ ॥ ೩೦ ॥ ಮಾತಾಪಿತ್ರೋರ್ವಿನಾಶೇನ ಸುಗ್ರೀವವ್ಯಸನೇನಚ । ಕುಮಾರೋಽಪ್ಯಂಗದಃ ಕಸ್ಮಾದ್ಧಾರಯಿಷ್ಯತಿ ಜೀವಿತಂ? ॥೩೧॥ ಭರ್ತೃಜೇನತು ದುಃಖೇನ ಹ್ಯಭಿಭೂತಾ ವನೌಕಸಃ । ಶಿರಾಂಸ್ಯಭಿಹನಿಷ್ಯಂತಿ ತಲೈರ್ಮುಷ್ಟಿಭಿರೇವಚ ॥ ೩೨ ॥ ಸಾಂತ್ವೇನಾನುಪ್ರದಾನೇನ ಮಾನೇನಚ ಯಶಸ್ವಿನಾ । ಲಾಲಿತಾಃ ಕಪಿರಾಜೇನ ಪ್ರಾಣಾಂಸ್ತ್ಯಕ್ಷ್ಯಂತಿ ವಾನರಾಃ ॥ ೩೩ ॥ ನ ವನೇಷು ನ ಶೈಲೇಷು ನ ನಿರೋಧೇಷು ವಾ ಪುನಃ । ಕ್ರೀಡಾಮನುಭವಿಷ್ಯಂತಿ ಸಮೇತ್ಯ ಕಪಿಕುಂಜರಾಃ ॥೩೪॥ ಸಪುತ್ರದಾರಾ ಸ್ಸಾಮಾತ್ಯಾ

ದುಃಖೇನ - ಖೇದದಿಂದ, ಪೀಡಿತಾ - ಬಾಧೆಗೊಂಡ, ಶೋಕಕರ್ಶಿತಾ - ಅಂತಸ್ತಾಪದಿಂದ ಕೃಶಳಾದ, ತಾರಾಪಿ - ತಾರೆಯೂ ಕೂಡ, ನಭವಿಷ್ಯತಿ - ಇರಲಾರಳು. ॥ ೩೦ ॥ ಕುಮಾರಃ - ಕುಮಾರನಾದ, ಅಂಗದೋಪಿ - ಅಂಗದನೂ, ಮಾತಾಪಿತ್ರೋಃ - ತಾಯಿತಂದೆಗಳ, ವಿನಾಶೇನ - ನಾಶದಿಂದಲೂ, ಸುಗ್ರೀ....ಚ - ಸುಗ್ರೀವ ವಿಷಯಕವಾದ ದುಃಖದಿಂದಲೂ, ಜೀವಿತಂ - ಪ್ರಾಣವನ್ನು, ಕಸ್ಮಾತ್ - ಯಾವ ಕಾರಣದಿಂದ, ಧಾರಯಿಷ್ಯತಿ - ಧರಿಸಿಯಾನು ? ॥೩೧॥ ಭರ್ತೃಜೇನ - ಗಂಡನಿಂದುಂಟಾದ, ದುಃಖೇನತು - ಶೋಕದಿಂದಲೇ, ಅಭಿಭೂತಾಃ - ತಿರಸ್ಕೃತರಾದ, ವನೌಕಸಃ - ಕಪಿಗಳು, ತಲೈಃ - ಅಂಗೈಗಳಿಂದಲೂ, ಮುಷ್ಟಿಭಿರೇವಚ - ಮುಷ್ಟಿಗಳಿಂದಲೂ, ಶಿರಾಂಸಿ - ತಮ್ಮ ತಲೆಗಳನ್ನು, ಅಭಿಹನಿಷ್ಯಂತಿಹಿ - ಹೊಡೆದುಕೊಳ್ಳುವರು. ॥ ೩೨ ॥ ಯಶಸ್ವಿನಾ - ಕೀರ್ತಿವಂತನಾದ, ಕಪಿರಾಜೇನ - ಸುಗ್ರೀವನಿಂದ, ಸಾಂತ್ವೇನ - ಸಮಾಧಾನದಿಂದಲೂ, ಅನುಪ್ರದಾನೇನ - ಕೇಳಿದ್ದನ್ನು ಕೊಡುವಿಕೆಯಿಂದಲೂ, ಮಾನೇನಚ - ಬಹುಮತಿಯಿಂದಲೂ, ಲಾಲಿತಾಃ - ಲಾಲಿಸಲ್ಪಟ್ಟ, ವಾನರಾಃ - ಕಪಿಗಳು, ಪ್ರಾಣಾನ್ - ಜೀವಗಳನ್ನು, ತ್ಯಕ್ಷ್ಯಂತಿ - ಬಿಡುವರು. ॥ ೩೩ ॥ ಕಪಿಕುಂಜರಾಃ - ವಾನರಶ್ರೇಷ್ಠರು, ಸಮೇತ್ಯ - ಗುಂಪುಗೂಡಿ, ವನೇಷು - ಅರಣ್ಯಗಳಲ್ಲಿ, ಕ್ರೀಡಾಂ - ವಿಹಾರವನ್ನು, ನಪ್ರಚರಿಷ್ಯಂತಿ - ಮಾಡಲಾರರು, ಶೈಲೇಷು - ಪರ್ವತಗಳಲ್ಲಿ, ನಪ್ರಚರಿಷ್ಯಂತಿ - ತಿರುಗಲಾರರು, ಪುನಃ - ಮತ್ತು, ನಿರೋಧೇಷುವಾ - ಮನೆಗಳಿಂದ ಆವೃತವಾದ ಪ್ರದೇಶಗಳಲ್ಲಿಯಾದರೂ, ನಪ್ರಚರಿಷ್ಯಂತಿ - ವಿಹಾರಗಳನ್ನು ಮಾಡಲಾರರು. ॥ ೩೪ ॥ ಭರ್ತೃ....ತಾಃ - ಧೊರೆಯಾದ ಸುಗ್ರೀವನ ವಿಷಯಕವಾದ ದುಃಖದಿಂದ ಬಾಧಿತರಾದಕಾರಣ, ಸಪುತ್ರದಾರಾಃ - ಮಕ್ಕಳು ಹೆಂಡತಿಯರೊಡನೆ ಕೂಡಿದವರಾಗಿ,

---

ದಿದ್ದಳು. ಈಗ ಸುಗ್ರೀವನು ಮಡಿದರೆ ಆಕೆಯು ಉಳಿಯುವಳೇ? ॥ ೨೬–೩೦ ॥ ಕೇವಲ ಬಾಲಕನಾದ ಅಂಗದನು ತಾಯಿತಂದೆಗಳ ವಿನಾಶದಿಂದಲೂ ಸುಗ್ರೀವನ ವಿಪತ್ತಿನಿಂದಲೂ ದುಃಖಿತನಾಗಿ ಹೇಗೆತಾನೆ ಜೀವದಿಂದಿದ್ದಾನು. ಇನ್ನುಕಪಿನಾಯಕರ ಪಾಡಂತೂ ಹೇಳಲಸದಳವು; ಅವರೂ ತಮ್ಮೊಡೆಯನ ವಿನಾಶದಿಂದ ದುಃಖಸಂತಪ್ತರಾಗಿ ಕರತಲಗಳಿಂದಲೋ, ಮುಷ್ಟಿ ಗಳಿಂದಲೋ,ತಲೆಯೊಡದುಕೊಂಡೋ ಪ್ರಾಣಗಳನ್ನುಬಿಡುತ್ತಾರೆ. ಸದ್ವರ್ತನೆಯಿಂದಲೂ ದಾನಮಾನಾದಿಗಳಿಂದಲೂ ಪ್ರಭುವಾದ ಸುಗ್ರೀವನಿಂದ ಲಾಲಿತರಾದ ಪ್ರಜೆಗಳೆಲ್ಲರೂ ಆತನ ವಿನಾಶದುಃಖವನ್ನು ಸಹಿಸಲಾರದೆ ಜೀವಗಳನ್ನು ತೊರೆಯುತ್ತಾರೆ. ವಾನರವೀರರಾದರೋ ಮಹಾರಾಜನ ದುರ್ಮರಣ ವೃತ್ತಾಂತವನ್ನರಿತು ವನಗಳಲ್ಲಿಯಾಗಲಿ, ಪರ್ವತಗಳಲ್ಲಿಯಾಗಲಿ, ವನನದೀತೀರಗಳಲ್ಲಿಯಾಗಲಿ, ವಿನೋದವಿಹಾರಗಳಿಂದಿರಬಲ್ಲರೇ? ಅವರೆಲ್ಲರೂ ಪರ್ವತಶಿಖರಗಳಿಂದ ಬಿದ್ದಾಗಲಿ, ಆಳವಾದ ಪ್ರವಾಹಗಳಲ್ಲಿ ಧುಮುಕಿಯಾಗಲಿ, ಪ್ರಾಣ

ಭರ್ತೃವ್ಯಸನಪೀಡಿತಾಃ । ಶೈಲಾಗ್ರೇಭ್ಯಃ ಪತಿಷ್ಯಂತಿ ಸಮೇತ್ಯ ವಿಷಮೇಷುಚ ॥೩೫॥ ವಿಷಮುದ್ಬಂಧನಂ ವಾಪಿ ಪ್ರವೇಶಂ ಜ್ವಲನಸ್ಯವಾ । ಉಪವಾಸಮಥೋ ಶಸ್ತ್ರಂ ಪ್ರಚರಿಷ್ಯಂತಿ ವಾನರಾಃ ॥ ೩೬ ॥ ಘೋರಮಾರೋದನಂ ಮನ್ಯೇ ಗತೇ ಮಯಿ ಭವಿಷ್ಯತಿ । ಇಕ್ಷ್ವಾಕುಕುಲನಾಶಶ್ಚ ನಾಶಶ್ಚೈವ ವನೌಕಸಾಂ ॥ ೩೭ ॥ ಸೋಽಹಂ ನೈವ ಗಮಿಷ್ಯಾಮಿ ಕಿಷ್ಕಿಂಧಾಂ ನಗರೀಮಿತಃ । ನಚ ಶಕ್ಷ್ಯಾಮ್ಯಹಂ ದ್ರಷ್ಟುಂ ಸುಗ್ರೀವಂ ಮೈಥಿಲೀಂ ವಿನಾ ॥ ೩೮ ॥ ಮಯ್ಯಗಚ್ಛತಿ ಚೇಹಸ್ಥೇ ಧರ್ಮಾತ್ಮಾನೌ ಮಹಾರಥೌ । ಆಶಯಾ ತೌ ಧರಿಷ್ಯೇತೇ ವಾನರಾಶ್ಚ ಮನಸ್ವಿನಃ ॥ ೩೯ ॥ ಹಸ್ತಾ

ಸಾಮಾತ್ಯಾಃ - ಮಂತ್ರಿಗಳೊಡನೆ, ಸಮೇತ್ಯ - ಬಂದು, ಶೈಲಾಗ್ರೇಭ್ಯಃ - ಪರ್ವತಶಿಖರಗಳಿಂದ, ವಿಷಮೇಷು - ನಿಮ್ನೋನ್ನತಗಳಾದ ಪ್ರದೇಶಗಳಲ್ಲಿ, ಪತಿಷ್ಯಂತಿ - ಬೀಳುವರು. ॥ ೩೫ ॥ ವಾನರಾಃ - ಕಪಿಗಳು, ವಿಷಂ - ವಿಷಪಾನವನ್ನೋ ಅಥವಾ, ಉದ್ಬಂಧನಮಪಿ - ಕಂಠಪಾಶವನ್ನೋ, ಜ್ವಲನಸ್ಯ ಪ್ರವೇಶಂವಾ - ಅಗ್ನಿಪ್ರವೇಶವನ್ನೋ, ಉಪವಾಸಂ - ಉಪವಾಸವನ್ನೋ, ಅಥ - ಅನಂತರ, ಶಸ್ತ್ರಂ - ಶಸ್ತ್ರಘಾತವನ್ನೋ, ಪ್ರಚರಿಷ್ಯಂತಿ - ಮಾಡಿಕೊಳ್ಳುವರು. ॥ ೩೬ ॥ ಮಯಿ - ನಾನು, ಗತೇ - ಹೋದರೆ, ಘೋರಂ - ಭಯಂಕರವಾದ, ಆರೋದನಂ - ಎಲ್ಲೆಡೆಗಳಲ್ಲಿಯೂ ರೋದನವು, ಭವಿಷ್ಯತಿ - ಆಗುತ್ತದೆ, ಇಕ್ಷ್ವಾ....ಶ್ಚ - ಇಕ್ಷ್ವಾಕುರಾಯನ ವಂಶದ ವಿನಾಶವೂ, ವನೌಕಸಾಂ - ವಾನರರ, ನಾಶಶ್ಚೈವ - ನಾಶವೂ, ಭವಿಷ್ಯತಿ - ಆಗುತ್ತದೆ. ॥೩೭॥ ಸೋಽಹಂ - ಆ ನಾನು, ಇತಃ - ಈ ಸ್ಥಳದಿಂದ, ಕಿಷ್ಕಿಂಧಾಂ - ಕಿಷ್ಕಿಂಧಾಪಟ್ಟಣವನ್ನು ಕುರಿತು, ನೈವಗಮಿಷ್ಯಾಮಿ - ಹೋಗುವದೇ ಇಲ್ಲವು, ಮೈಥಿಲೀಂವಿನಾ - ಸೀತೆಯನ್ನು ಕಾಣದೆ, ಸುಗ್ರೀವಂ - ಸುಗ್ರೀವನನ್ನು, ದ್ರಷ್ಟುಂ - ನೋಡುವದಕ್ಕೋಸುಗ, ನಶಕ್ಷ್ಯಾಮಿ - ಸಮರ್ಥನಲ್ಲ. ॥ ೩೮ ॥ ಮಯಿ - ನಾನು, ಇಹಸ್ಥೇ - ಇಲ್ಲಿಯೇ ಇರುವನಾಗಿ, ಅಗಚ್ಛತಿ-ಹೋಗದಿದ್ದರೆ, ಧರ್ಮಾತ್ಮಾನೌ-ಧರ್ಮಾತ್ಮರಾದ, ಮಹಾರಥೌ - ಮಹಾ ರಥಿಕರಾದ, ತೌ - ಆ ರಾಮಲಕ್ಷ್ಮಣರು, ಆಶಯಾ - ಸೀತೆಯು ಬದುಕಿರುವಳೆಂಬ ಆಶೆಯಿಂದ, ಧರಿಷ್ಯೇತೇ - ಪ್ರಾಣದಿಂದಿರುತ್ತಾರೆ, ಮನಸ್ವಿನಃ - ಒಳ್ಳೇ ಮನಸ್ವಿಗಳಾದ, ವಾನರಾಶ್ಚ - ಕಪಿಗಳೂ, ಧರಿಷ್ಯಂತಿ - ಪ್ರಾಣದಿಂದಿರುತ್ತಾರೆ. ॥ ೩೯ ॥ ವೃಕ್ಷಮೂಲಿಕಃ - ಗಿಡದ ಬುಡದಲ್ಲಿ ವಾಸ

ಗಳನ್ನು ತೊರೆಯುತ್ತಾರೆ. ॥ ೩೧–೩೫ ॥ ಇಲ್ಲವೆ ವಿಷವನ್ನು ಕುಡಿದೋ, ಕುತ್ತಿಗೆಗೆ ನೇಣು ಹಾಕಿಕೊಂಡೋ, ಬೆಂಕಿಯಲ್ಲಿ ಬಿದ್ದೋ, ಆಹಾರವನ್ನು ಬಿಟ್ಟೋ, ಶಸ್ತ್ರಗಳಿಂದ ಪ್ರಹರಿಸಿಕೊಂಡೋ, ಪ್ರಾಣಗಳನ್ನು ಕಳೆದುಕೊಳ್ಳುವರು. ಆದುದರಿಂದ ನಾನು ಈ ಲಂಕಾನಗರವನ್ನು ಬಿಟ್ಟು ಅಕೃತಾರ್ಥನಾಗಿ ಕಿಷ್ಕಿಂಧೆಗೆ ಹಿಂತಿರುಗಿಹೋದಲ್ಲಿ ಇಕ್ಷ್ವಾಕುಕುಲಕ್ಕೆನಾಶವೂ, ಕಪಿಕುಲಕ್ಕೆ ಹಾನಿಯೂ, ಉಂಟಾಗಿ ಪರಿಸ್ಥಿತಿಯು ಕ್ರೂರವೂ ದುಃಖಕರವೂ ಆಗುತ್ತದೆಯೆಂದು ತಿಳಿಯುತ್ತೇನೆ. ಆದುದರಿಂದ ನಾನೀ ಸ್ಥಳವನ್ನು ಬಿಟ್ಟು ಕಿಷ್ಕಿಂಧೆಗೆ ಎಷ್ಟುಮಾತ್ರಕ್ಕೂ ಹೋಗುವುದಿಲ್ಲ. ಸೀತಾದೇವಿಯನ್ನು ಕಾಣದೆ ನಮ್ಮ ಪ್ರಭುವನ್ನು ನೋಡಲು ನನಗೆ ಶಕ್ತಿಯುಂಟಾಗಲಾರದು. ಈ ಎಲ್ಲ ಕಾರಣಗಳಿಂದಲೂ ನಾನು ಇಲ್ಲಿಯೇ ಇದ್ದುದಾದರೆ ಮಹಾಧರ್ಮಿಷ್ಠರೂ, ಮಹಾ ರಥರೂ, ಸ್ಥಿರಚಿತ್ತರೂ, ಆದ ಶ್ರೀರಾಮಲಕ್ಷ್ಮಣರೂ, ಧೀರರಾದ ವಾನರರೂ, "ಸೀತಾನ್ವೇಷಣಕ್ಕಾಗಿ ಲಂಕಾನಗರಕ್ಕೆ ಹೋದ ಹನುಮಂತನು ಕೃತಕತ್ಯನಾಗಿ ಇಂದೋ ನಾಳೆಯೋ ಬಂದೇ ಬರುತ್ತಾನೆ" ಎಂಬ ಪ್ರತ್ಯಾಶೆಯಿಂದ ಪ್ರಾಣಗಳನ್ನು ಧರಿಸಿ

ದಾನೋ ಮುಖಾದಾನೋ ನಿಯತೋ ವೃಕ್ಷಮೂಲಿಕಃ । ವಾನಪ್ರಸ್ಥೋ ಭವಿಷ್ಯಾಮಿ ಹ್ಯದೃಷ್ಟ್ವಾ ಜನಕಾತ್ಮಜಾಂ ॥ ೪೦ ॥ ಸಾಗರಾನೂಪಜೇ ದೇಶೇ ಬಹುಮೂಲಫಲೋದಕೇ । ಚಿತಾಂ ಕೃತ್ವಾ ಪ್ರವೇಕ್ಷ್ಯಾಮಿ ಸಮಿದ್ಧಮರಣೀಸುತಂ ॥ ೪೧ ॥ ಉಪವಿಷ್ಟಸ್ಯ ವಾ ಸಮ್ಯಗ್ಲಿಂಗಿನೀಂ ಸಾಧಯಿಷ್ಯತಃ । ಶರೀರಂ ಭಕ್ಷಯಿಷ್ಯಂತಿ ವಾಯಸಾಶ್ಶ್ವಾಪದಾನಿಚ ॥ ೪೨ ॥ ಇದಂ ಮಹರ್ಷಿಭಿರ್ದೃಷ್ಟಂ ನಿರ್ಯಾಣಮಿತಿ ಮೇ ಮತಿಃ । ಸಮ್ಯಗಾಪಃ ಪ್ರವೇಕ್ಷ್ಯಾಮಿ ನಚೇತ್ಪಶ್ಯಾಮಿ ಜಾನಕೀಂ ॥ ೪೩ ॥ ¶ ಸುಜಾತಮೂಲಾ

ಮಾಡುವ ನಾನು, ನಿಯತಃ - ನಿಯಮಬದ್ಧನಾಗಿ, ಹಸ್ತಾದಾನಃ - ಕೈಯಲ್ಲಿ ಬೀಳವ ಫಲವನ್ನು ಭಕ್ಷಿಸುವನಾಗಿ, ಮುಖಾದಾನಃ - ಬಾಯಿಯಲ್ಲಿ ಬೀಳುವ ಆಹಾರವನ್ನು ತೆಗೆದುಕೊಳ್ಳುವವನಾಗಿ, ಜನಕಾತ್ಮಜಾಂ - ಸೀತೆಯನ್ನು, ಅದೃಷ್ಟ್ವಾ - ಕಾಣದೆ, ವಾನಪ್ರಸ್ಥಃ - ವಾನಪ್ರಸ್ಥಾಶ್ರಮಿಯು, ಭವಿಷ್ಯಾಮಿ - ಆಗಿಹೋಗುವೆನು. ॥ ೪೦ ॥ ಸಾಗ....ಜೇ - ಸಮುದ್ರದ ಜಲಪೂರ್ಣಭೂಮಿಯಲ್ಲಿ ಹುಟ್ಟಿದ, ದೇಶೇ - ಪ್ರದೇಶದಲ್ಲಿ, ಬಹು....ಕೇ - ಬಹಳವಾದ ಕಂದಮೂಲಗಳೂ, ಫಲಗಳೂ, ಜಲವೂ ಇರುವ, ದೇಶೇ - ದೇಶದಲ್ಲಿ, ಚಿತಾಂ - ಚಿತಿಯನ್ನು, ಕೃತ್ವಾ - ಮಾಡಿ, ಸಮಿದ್ಧಂ - ಪ್ರಜ್ವಲಿಸುವ, ಅರಣೀಸುತಂ - ಅಗ್ನಿಯನ್ನು, ಪ್ರವೇಕ್ಷ್ಯಾಮಿ - ಪ್ರವೇಶ ಮಾಡುವೆನು. ॥೪೧॥ ಅಥವಾ - ಹಾಗಲ್ಲದೆ ಹೋದರೆ, ಸಮ್ಯಕ್ - ಚನ್ನಾಗಿ, ಉಪವಿಷ್ಟಸ್ಯ - ಪ್ರಾಯೋಪವಿಷ್ಟನಾದ, ಲಿಂಗಿನೀಂ - ಲಿಂಗಶರೀರಧಾರಿಯಾದ ಆತ್ಮನನ್ನು, ಸಾಧಯಿಷ್ಯತಃ - ಸಾಧಿಸತಕ್ಕವನಾದ ನನ್ನ, ಶರೀರಂ - ದೇಹವನ್ನು, ವಾಯಸಾಃ - ಕಾಗೆಗಳೂ, ಶ್ವಾಪದಾನಿಚ - ನಾಯಿ, ಹುಲಿ ಮುಂತಾದವುಗಳೂ, ಭಕ್ಷಯಿಷ್ಯಂತಿ - ತಿನ್ನುವವು. ॥ ೪೨ ॥ ಇದಂನಿರ್ಯಾಣಂ-ಈ ಮರಣವು, ಮಹರ್ಷಿಭಿಃ-ಮಹರ್ಷಿಗಳಿಂದ, ದೃಷ್ಟಮಿತಿ-ಕಾಣಲ್ಪಟ್ಟಿದೆಂದು, ಮೇ - ನನ್ನ, ಮತಿಃ - ಅಭಿಪ್ರಾಯವು, ಜಾನಕೀಂ - ಸೀತಾದೇವಿಯನ್ನು, ಸಮ್ಯಕ್ - ಚನ್ನಾಗಿ (ಹುಡುಕಿದರೂ), ನಪಶ್ಯಾಮಿಚೇತ್ - ಕಾಣದೇಹೋದರೆ, ಆಪಃ - ಉದಕವನ್ನು, ಪ್ರವೇಕ್ಷ್ಯಾಮಿ - ಪ್ರವೇಶಿಸುವೆನು, ಸುಜಾತಮೂಲಾ - (ಗೋ + ಮ) ಲಂಕಾಪ್ರವೇಶಾರಂಭ

ಕೊಂಡಿರುತ್ತಾರೆ; ಆದುದರಿಂದ ಸೀತಾದೇವಿಯು ಕಾಣದಿರುವಕಾರಣ ದೈವವಶದಿಂದ ಕೈಬಾಯಿಗಳಿಗೆ ಬಂದ ಆಹಾರವನ್ನು ಭಕ್ಷಿಸುತ್ತ ವೃಕ್ಷದ ಕೆಳಗೆ ವಾಸಮಾಡಿ ನಿಯಮದಿಂದ ವಾನಪ್ರಸ್ಥನಾಗಿ ಇಲ್ಲಿಯೇ ಇದ್ದುಬಿಡುತ್ತೇನೆ. ॥೩೬–೪೦॥ ಅಥವ ವಿಶೇಷವಾಗಿ ಕಂದಮೂಲಫಲಗಳು, ಜಲವೂಉಳ್ಳ ಸಮುದ್ರದ ಸಮೀಪದಲ್ಲಿರುವ ಭೂಪ್ರದೇಶದಲ್ಲಿ ಚಿತಿಯನ್ನೇರ್ಪಡಿಸಿ ಧಗಧಗನುರಿಯುತ್ತಿರುವ ಬೆಂಕಿಯನ್ನಾದರೂ ಹೊಗುತ್ತೇನೆ. ಅಥವ ಯಾವ ಆಹಾರವನ್ನೂ ತೆಗೆದುಕೊಳ್ಳದೆ ವ್ರತವನ್ನವಲಂಬಿಸಿ ಪ್ರಾಣಗಳು ತಾವಾಗಿಯೇ ದೇಹದಿಂದ ಹೊರಹೊರಡುವಂತೆ ಮಾಡುತ್ತೇನೆ. ಹೀಗೆ ಗತಿಸಿದ ನನ್ನ ದೇಹವನ್ನು ಕಾಗೆಗಳೂ, ನಾಯಿಯೇ ಮೊದಲಾದ ಕ್ಷುದ್ರ ಮೃಗಗಳೂ ಭಕ್ಷಿಸುತ್ತವೆ. ಹೀಗೆ ಪ್ರಾಣವನ್ನು ತೊರೆಯುವುದು ಬಹು ಶ್ರೇಷ್ಠವೆಂದು ಮಹರ್ಷಿಗಳು ಹೇಳಿರುವರೆಂದು ತೋರುತ್ತದೆ; ಒಂದುವೇಳೆ ಸೀತಾದೇವಿಯು ನನ್ನ ಕಣ್ಣಿಗೆ ಬೀಳದಿದ್ದಲ್ಲಿ ನಾನು ಜಲಪ್ರವೇಶವಮಾಡಿಯಾದರೂ ಪ್ರಾಣಗಳನ್ನು ತೊರೆಯು

¶ "ಆಹಾ! ಸೀತೆಯನ್ನು ಹುಡುಕಲೋಸುಗ ಹನುಮಂತನು ಲಂಕಾನಗರವನ್ನು ಪ್ರವೇಶಿಸಿದ ಈ ರಾತ್ರಿಯು ಎಷ್ಟು ಪುಣ್ಯಕರವಾದುದು!" ಎಂದು ಎಲ್ಲರೂ ಹೊಗಳುವುದರಿಂದ ವಿಶೇಷ ಕೀರ್ತಿಗೆ ಇಂದಿನ ರಾತ್ರಿಯು ಭಾಜನ

ಸುಭಗಾ ಕೀರ್ತಿಮಾಲಾ ಯಶಸ್ವಿನೀ । ಪ್ರಭಗ್ನಾ ❀ ಚಿರರಾತ್ರೀಯಂ ಮಮ ಸೀತಾ ಮಪಶ್ಯತಃ ॥ ೪೪ ॥ ತಾಪಸೋ ವಾ ಭವಿಷ್ಯಾಮಿ ನಿಯತೋ ವೃಕ್ಷಮೂಲಿಕಃ । ನೇತಃ ಪ್ರತಿಗಮಿಷ್ಯಾಮಿ ತಾಮದೃಷ್ಟ್ವಾಽಸಿತೇಕ್ಷಣಾಂ ॥ ೪೫ ॥ ಯದೀತಃ ಪ್ರತಿ ಗಚ್ಛಾಮಿ ಸೀತಾಮನಧಿಗಮ್ಯ ತಾಂ । ಅಂಗದಸ್ಸಹತೈಸ್ಸರ್ವೈರ್ವಾನರೈರ್ನಭವಿಷ್ಯತಿ

ಕಾಲದಲ್ಲಿ ಲಂಕಾವಿಜಯರೂಪ ಶುಭವುಳ್ಳ, ಸುಭಗಾ - ಚಂದ್ರೋದಯದಿಂದ ಮನೋಹರವಾದ, ಕೀರ್ತಿಮಾಲಾ - (ಗೋ+ಮ) ಆಂಜನೇಯನು ಲಂಕಾಪ್ರವೇಶ ಮಾಡಿದನೆಂಬ ಕೀರ್ತಿಪರಂಪರೆ ಯುಳ್ಳ, ಯಶಸ್ವಿನೀ - ಪ್ರಖ್ಯಾತಿಕರವಾದ, ಇಯಂಚಿರರಾತ್ರೀ - ಈ ದೀರ್ಘರಾತ್ರಿಯು, ಸೀತಾಂ - ಸೀತೆಯನ್ನು, ಅಪಶ್ಯತಃ-ಕಾಣದೇ ಇರುವ, ಮಮ-ನನಗೆ, ಪ್ರಭಗ್ನಾ-ವ್ಯರ್ಥವಾಯಿತು. ॥ ೪೩-೪೪ ॥ ಅಸಿತೇಕ್ಷಣಾಂ - ಕಪ್ಪಾಗಿರುವ ನೇತ್ರಗಳುಳ್ಳ, ತಾಂ - ಆ ಸೀತೆಯನ್ನು, ಅದೃಷ್ಟ್ವಾ - ಕಾಣದೆ, ಇತಃ-ಇಲ್ಲಿಂದ, ನಪ್ರತಿಗಮಿಷ್ಯಾಮಿ-ಹೋಗಲಾರೆನು, ನಿಯತಃ-ನಿಷ್ಠಾಪರನಾಗಿ, ವೃಕ್ಷಮೂಲಿಕಃ- ಗಿಡದ ಬುಡದಲ್ಲಿ ವಾಸಮಾಡುವ, ತಾಪಸೋವಾ - ಋಷಿಯಾದರೂ, ಭವಿಷ್ಯಾಮಿ - ಆಗಿಹೋಗುವೆನು. ॥ ೪೫ ॥ ತಾಂಸೀತಾಂ - ಆ ಸೀತಾದೇವಿಯನ್ನು, ಅನಧಿಗಮ್ಯ - ಕಾಣದೆ, ಇತಃ - ಇಲ್ಲಿಂದ, ಪ್ರತಿಗಚ್ಛಾಮಿಯದಿ - ಹೋದವನಾದರೆ, ಅಂಗದಃ - ಅಂಗದನು, ಸರ್ವೈಃ - ಸಮಸ್ತರಾದ, ತೈರ್ವಾನರೈಸ್ಸಹ - ಆ ವಾನರರೊಡನೆ, ನಭವಿಷ್ಯತಿ - ಉಳಿಯುವುದಿಲ್ಲ. ॥ ೪೬ ॥ ವಿನಾಶೇ - ಮರಣ

ತ್ತೇನೆ. ಲಂಕಾಪ್ರವೇಶ ಸಮಯದಲ್ಲಿ ರಾಕ್ಷಸೀವಿಜಯದಿಂದ ಕೀರ್ತಿಕರವಾಗಿಯೂ, ಚಂದ್ರೋದಯದಿಂದ ರಮಣೀಯವಾಗಿಯೂ, ಕೀರ್ತಿಪರಂಪರೆಯಿಂದ ಪ್ರಸಿದ್ಧವಾಗಿಯೂ ಇರುವ ಈ ರಾತ್ರಿಯು ಸೀತಾದೇವಿಯನ್ನು ಕಾಣದಿರುವ ನನಗೆ ವ್ಯರ್ಥವಾಗಿ ಪರಿಣಮಿಸಿತು. ಕುವಲಯನೇತ್ರಿಯಾದ ಸೀತಾದೇವಿಯನ್ನು ಕಾಣದೆ ನಾನು ಎಷ್ಟುಮಾತ್ರಕ್ಕೂ ಹಿಂದಿರು ಗುವದಿಲ್ಲ. ಇಲ್ಲಿಯೇ ವೃಕ್ಷಮೂಲದಲ್ಲಿ ವಾಸಿಸುತ್ತ ಯಾಚಿಸದೆ ತಾನಾಗಿಯೇ ದೊರಕುವ ಆಹಾರದಿಂದ ಋಷಿವೃತ್ತಿಯನ್ನವಲಂಬಿಸುವೆನು. ॥ ೪೧–೪೫ ॥ ಸೀತಾವೃತ್ತಾಂತವನ್ನರಿ ಯದೆ ನಾನು ಹಿಂದಿರುಗಿದುದಾದರೆ ಮಹೇಂದ್ರಪರ್ವತದಲ್ಲಿರುವ ವಾನರಸೈನ್ಯದೊಡಗೂಡಿದ ಅಂಗದನು ಜೀವದಿಂದಿರಲಾರನು. ಲೋಕದಲ್ಲಿ ಜೀವಿಯಾದವನು ಬಲಾತ್ಕಾರದಿಂದ ಜೀವ

ವಾಗಿದೆ. ನಾನು ಈ ರಾತ್ರಿಯಲ್ಲೆಲ್ಲಾ ಜಾಗರಣೆ ಮಾಡಿರುವದರಿಂದ ಇದು ದೀರ್ಘವಾಗಿಯೂ ಪರಿಣಮಿಸಿದೆ. ಇಂತಹ ಮಂಗಳಕರವಾದ ಬೆಳದಿಂಗಳು ಕೂಡಿ ಮನೋಹರವಾದ ಈ ರಾತ್ರಿಯು ಸೀತಾದೇವಿಯನ್ನು ಕಾಣದಿರುವದರಿಂದ ಅಂತೂ ಇಂತೂ ನಿಷ್ಪ್ರಯೋಜನವಾಗಿ ಕಳೆದುಹೋಯಿತು. (ಗೋ+ಮ)

ಸೀತಾ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸುವುದರಿಂದ ಆತನಿಗೂ, ನನ್ನೊಡೆಯನಾದ ಸುಗ್ರೀವನಿಗೂ ಇರುವ ಮೈತ್ರಿಯು ಮತ್ತಷ್ಟು ಹೆಚ್ಚುವುದು. ಇದರಿಂದ ನನಗೂ ವಿಶೇಷ ಕೀರ್ತಿಯುಂಟಾಗುವದು. ಇಂದು ಸೀತಾದೇವಿಗೆ ಶ್ರೀರಾಮನ ಮುದ್ರೆಯುಂಗುರವನ್ನು ಸಮರ್ಪಿಸಿದರೆ ಆಕೆಗೂ, ಆತನಿಗೂ ಇರುವ ಪ್ರೇಮವು ಪ್ರಬಲವಾಗುವುದು. ಇದರಿಂದಲೂ ನನಗೆ ವಿಶೇಷ ಕೀರ್ತಿಯೇ ಲಭಿಸುವುದು. ಆದರೇನು ? ನಾನು ಇಂದಿನ ರಾತ್ರಿಯಲ್ಲಿ ಬಹುಕಾಲ ಆ ದೇವಿ ಯನ್ನು ಕಾಣದಿದ್ದೇನೆ. ಇದರಿಂದ ನನ್ನ ಕೀರ್ತಿಯು ಭಗ್ನವಾಗಿಹೋಯಿತು. (ರಾ-ಶಿ)

ಯಶಸ್ವಿಯಾದವನು ಮಡಿದರೂ ಅವನು ಯಶಶ್ಶರೀರದಿಂದ ಬದುಕಿಯೇ ಇರುತ್ತಾನೆ. ಸೀತೆಯನ್ನು ಕಾಣ ದಿರುವ ನನ್ನ ಕೀರ್ತಿಯಾದರೋ ನಾನು ಬದುಕಿದ್ದಂತೆಯೇ ಸಂಪೂರ್ಣವಾಗಿ ನಶಿಸಿಹೋಯಿತು. (ತಿಲಕ)

❀ "ಚಿರರಾತ್ರಾಯ" ತಿ. ಪಾ.

॥ ೪೬ ॥ ವಿನಾಶೇ ಬಹವೋ ದೋಷಾ ಜೀವನ್ಭದ್ರಾಣಿಪಶ್ಯತಿ । ತಸ್ಮಾತ್ಪ್ರಾಣಾನ್ಧರಿಷ್ಯಾಮಿ ಧ್ರುವೋ ಜೀವಿತಸಂಗಮಃ" ॥ ೪೭ ॥ ಏವಂ ಬಹುವಿಧಂ ದುಃಖಂ ಮನಸಾ ಧಾರಯ¶ನ್ಮುಹುಃ । ನಾಧ್ಯಗಚ್ಛತ್ತದಾಪಾರಂ ಶೋಕಸ್ಯ ಕಪಿಕುಂಜರಃ ॥ ೪೮ ॥ ♆"ರಾವಣಂ ವಾ ವಧಿಷ್ಯಾಮಿ ದಶಗ್ರೀವಂ ಮಹಾಬಲಂ। ಕಾಮಮಸ್ತು ಹೃತಾ ಸೀತಾ ಪ್ರತ್ಯಾಚೀರ್ಣಂ ಭವಿಷ್ಯತಿ ॥ ೪೯ ॥ ಅಥವೈನಂ ಸಮುತ್ಕ್ಷಿಪ್ಯ ಉಪರ್ಯುಪರಿ ಸಾಗರಂ । ರಾಮಾಯೋಪಹರಿಷ್ಯಾಮಿ§ಪಶುಂ ಪಶುಪತೇರಿವ" ॥ ೫೦ ॥ ಇತಿ

ವಾದಲ್ಲಿ, ಬಹವಃ - ಅನೇಕವಾದ, ದೋಷಾಃ-ದೋಷಗಳು, ಸಂತಿ-ಇವೆ, ಜೀವನ್ - ಬದುಕಿರುವವನು, ಭದ್ರಾಣಿ - ಶುಭಗಳನ್ನು, ಪಶ್ಯತಿ - ಕಾಣುತ್ತಾನೆ, ತಸ್ಮಾತ್ - ಆದಕಾರಣ, ಪ್ರಾಣಾನ್ - ಪ್ರಾಣಗಳನ್ನು, ಧರಿಷ್ಯಾಮಿ - ಧರಿಸುತ್ತೇನೆ, ಜೀವಿತಸಂಗಮಃ - ಪ್ರಾಣದಿಂದಿದ್ದ ಪಕ್ಷದಲ್ಲಿ ಶ್ರೇಯಃಪ್ರಾಪ್ತಿಯು, ಧ್ರುವಃ - ನಿಶ್ಚಯವು. ॥ ೪೭ ॥ ಏವಂ - ಈ ಪ್ರಕಾರವಾಗಿ, ಬಹುವಿಧಂ - ಅನೇಕ ಬಗೆಯಾದ, ದುಃಖಂ - ವ್ಯಸನವನ್ನು, ಮನಸಾ - ಮನಸ್ಸಿನಿಂದ, ಧಾರಯನ್ - ವಹಿಸಿರುವ, ಕಪಿಕುಂಜರಃ - ಆಂಜನೇಯನು, ತದಾ - ಆ ಕಾಲದಲ್ಲಿ, ಮುಹುಃ - ಬಾರಿಬಾರಿಗೂ, ಶೋಕಸ್ಯ - ದುಃಖದ, ಪಾರಂ - ಅಂತವನ್ನು, ನಾಧ್ಯಗಚ್ಛತ್ - ಹೊಂದಲಿಲ್ಲ. ॥ ೪೮ ॥ ದಶಗ್ರೀವಂ - ಹತ್ತು ಕಂಠಗಳುಳ್ಳ, ಮಹಾಬಲಂ-ಮಹಾ ಬಲಿಷ್ಠನಾದ, ರಾವಣಂವಾ-ರಾವಣನನ್ನಾದರೂ, ವಧಿಷ್ಯಾಮಿ-ಸಂಹರಿಸುವೆನು, ಸೀತಾ - ಸೀತಾದೇವಿಯು, ಕಾಮಂ - ಸ್ವೇಚ್ಛೆಯಿಂದ, ಹೃತಾ - ಅಪಹರಿಸಲ್ಪಟ್ಟವಳು, ಅಸ್ತು - ಆಗಲಿ, ಪ್ರತ್ಯಾಚೀರ್ಣಂ - ರಾವಣನು ಮಾಡಿದ ಕಾರ್ಯಕ್ಕೆ ಪ್ರತೀಕಾರವು, ಭವಿಷ್ಯತಿ - ಆಗುತ್ತದೆ. ॥೪೯॥ ಅಥವಾ - ಹಾಗಲ್ಲದಿದ್ದರೆ, ಏನಂ - ಈ ರಾವಣನನ್ನು, ಸಾಗರಂ - ಸಮುದ್ರದ, ಉಪರ್ಯುಪರಿ - ಮೇಲೆಮೇಲೆ, ಸಮುತ್ಕ್ಷಿಪ್ಯ - ಎತ್ತಿಕೊಂಡುಹೋಗಿ, ರಾಮಾಯ-ಶ್ರೀರಾಮನಿಗೆ, ಪಶುಪತೇಃ - ಅಗ್ನಿಗೆ, ಪಶುಮಿವ - ಪಶುವನ್ನೋಪಾದಿಯಲ್ಲಿ, ಉಪಹರಿಷ್ಯಾಮಿ -

---

ವನ್ನು ತೊರೆದರೆ ಐಹಿಕಾಮುಷ್ಮಿಕ ಸುಖಗಳಿಗೆ ಬಾಧಕವಾದ ಅನೇಕ ದೋಷಗಳು ಸಂಭವಿಸುತ್ತವೆ. ಬದುಕಿದ್ದರೆ ಒಂದುವೇಳೆ ಶುಭವನ್ನು ಕಂಡರೂ ಕಾಣಬಹುದು. ಹೀಗೆ ಹಿಂದಿನವರು ಹೇಳುತ್ತಿದ್ದುದರಿಂದ ನಾನು ಪ್ರಾಣಗಳನ್ನು ಭರಿಸಿಕೊಂಡಿರುತ್ತೇನೆ. ಬದುಕಿದ್ದರೆ ಪ್ರಾಣಿಗೆ ಎಂದಾದರೊಂದುದಿನ ಶ್ರೇಯಃಪ್ರಾಪ್ತಿಯು ಸಂಭವಿಸಲೇ ಸಂಭವಿಸುತ್ತದೆ" ಎಂಬೀಪ್ರಕಾರವಾಗಿ ವಾನರೋತ್ತಮನಾದ ಆ ಹನುಮಂತನು ಅನೇಕ ವಿಧವಾಗಿ ವ್ಯಸನವನ್ನು ಹೊಂದುತ್ತ ದುಃಖಸಾಗರದಲ್ಲಿ ಮುಳುಗಿ ತಡಿಗಾಣದವನಾದನು. ಹೀಗೆ ದುಃಖಿಸುತ್ತಿರುವ ಆತನು ಪುನಹ ಈ ರೀತಿ ಆಲೋಚಿಸಿದನು. ॥ ೪೬–೪೮ ॥ "ಈ ಸಮಾಚಾರವು ಹೇಗಾದರೂ ಇರಲಿ, ಮಹಾ ಭುಜಬಲಪರಾಕ್ರಮಶಾಲಿಯೂ, ದಶಕಂಠನೂ ಆದ ಈ ರಾವಣನನ್ನು ಹಿಡಿದು ಸಂಹರಿಸುತ್ತೇನೆ, ಹೀಗೆ ಮಾಡುವುದರಿಂದ ಅವನು ಅಪಹರಿಸಿದ ಸೀತಾದೇವಿಯು ಕಾಣಿಸಲಿ, ಕಾಣಿಸದಿರಲಿ, ಅವನ ದುಷ್ಕಾರ್ಯಕ್ಕೆ ಪ್ರತೀಕಾರವನ್ನು

¶ "ಬಹು" ತಿ. ಪಾ. ♆ "ತತೋ ವಿಕ್ರಮಮಾಸಾದ್ಯ ಧೈರ್ಯವಾನ್ಕಪಿಕುಂಜರಃ" ತಿ. ರಾ. ಪಾ.

§ ಇಲ್ಲಿ "ಪಶುಪತಿ" ಶಬ್ದಕ್ಕೆ "ಅಗ್ನಿ" ಎಂದರ್ಥ. "ಇಮಂ ಪಶುಂ ಪಶುಪತೇ ತೇ ಅದ್ಯಬಧ್ನಾಮ್ಯಗ್ನೇ" ಎಂದು ಶ್ರುತಿಯಿದೆ.

ಚಿಂತಾಂ ಸಮಾಪನ್ನ ಸ್ಸೀತಾಮನಧಿಗಮ್ಯ ತಾಂ । ಧ್ಯಾನಶೋಕಪರೀತಾತ್ಮಾ ಚಿಂತಯಾಮಾಸ ವಾನರಃ ॥ ೫೧ ॥ " ಯಾವತ್ಸೀತಾಂ ಹಿ ಪಶ್ಯಾಮಿ ರಾಮಪತ್ನೀಂ ಯಶಸ್ವಿನೀಂ । ತಾವದೇತಾಂ ಪುರೀಂ ಲಂಕಾಂ ವಿಚಿನೋಮಿ ಪುನಃಪುನಃ ॥ ೫೨ ॥ ಸಂಪಾತಿವಚನಾಚ್ಚಾಪಿ ರಾಮಂ ಯದ್ಯಾನಯಾಮ್ಯಹಂ । ಅಪಶ್ಯನ್ರಾಘವೋ ಭಾರ್ಯಾಂ ನಿರ್ದಹೇತ್ಸರ್ವವಾನರಾನ್ ॥೫೩॥ ಇಹೈವ ನಿಯತಾಹಾರೋ ವತ್ಸ್ಯಾಮಿ ನಿಯತೇಂದ್ರಿಯಃ । ಮತ್ಕೃತೇ ವಿನಶ್ಯೇಯುಸ್ತೇ ಸ್ಸರ್ವೇ ನರವಾನರಾಃ ॥ ೫೪ ॥

ಕಾಣಿಕೆಯನ್ನಾಗಿ ಕೊಡುವೆನು. ॥ ೫೦ ॥ ಇತಿ - ಈ ಬಗೆಯಾಗಿ, ಚಿಂತಾಂ - ಆಲೋಚನೆಯನ್ನು, ಸಮಾಪನ್ನಃ - ಹೊಂದಿದ, ವಾನರಃ - ಆಂಜನೇಯನು, ತಾಂಸೀತಾಂ - ಆ ಸೀತಾದೇವಿಯನ್ನು, ಅನಧಿಗಮ್ಯ - ಕಾಣದೆ, ಧ್ಯಾನ....ತ್ಮಾ - ಮುಂದೆ ನಡೆಯುವ ಕಾರ್ಯವಿಷಯಕ ಜ್ಞಾನದಿಂದಲೂ, ಸೀತೆಯನ್ನು ಕಾಣದೆ ದುಃಖದಿಂದಲೂ ವ್ಯಾಪ್ತವಾದ ಮನಪುಳ್ಳವನಾಗಿ, ಚಿಂತಯಾಮಾಸ-ಆಲೋಚಿಸಿದನು. ॥೫೧॥ ಯಶಸ್ವಿನೀಂ - ಕೀರ್ತಿವಂತಳಾದ, ರಾಮಪತ್ನೀಂ-ರಾಮನ ಹೆಂಡತಿಯಾದ, ಸೀತಾಂ-ಸೀತಾದೇವಿಯನ್ನು, ಯಾವತ್ಪಶ್ಯಾಮಿಹಿ - ಎಷ್ಟುಪರ್ಯಂತವೂ ನೋಡುವೆನೋ, ತಾವತ್ - ಅದುಪರ್ಯಂತವೂ, ಏತಾಂಲಂಕಾಂಪುರೀಂ - ಈ ಲಂಕಾನಗರವನ್ನು, ಪುನಃಪುನಃ - ಬಾರಿಬಾರಿಗೂ, ವಿಚಿನೋಮಿ-ಹುಡುಕುವೆನು. ॥೫೨॥ ಅಪಿಚ-ಇದೂ ಅಲ್ಲದೆ, ಅಹಂ-ನಾನು, ಸಂಪಾ....ತ್-ಸಂಪಾತಿಯ ಮಾತಿನಂತೆ, ರಾಮಂ - ರಾಮನನ್ನು, ಆನಯಾಮಿಯದಿ - ಕರದುಕೊಂಡು ಬಂದರೆ, ರಾಘವಃ - ಶ್ರೀರಾಮನು, ಭಾರ್ಯಾಂ - ಹೆಂಡತಿಯನ್ನು, ಅಪಶ್ಯನ್ - ಕಾಣದೆ, ಸರ್ವವಾನರಾನ್ - ವಾನರರನ್ನೆಲ್ಲಾ, ನಿರ್ದಹೇತ್ - ಸುಟ್ಟಾನು. ॥೫೩॥ ಇಹೈವ - ಇಲ್ಲಿಯೇ, ನಿಯತಾಹಾರಃ - ಕ್ಲುಪ್ತವಾದ ಆಹಾರವುಳ್ಳ, ನಿಯತೇಂದ್ರಿಯಃ - ಜಿತೇಂದ್ರಿಯನಾಗಿ, ವತ್ಸ್ಯಾಮಿ - ಇರುವೆನು, ಸರ್ವೇ - ಸಮಸ್ತರಾದ, ತೇನರವಾನರಾಃ - ಆ ಮನುಷ್ಯರೂ, ಕಪಿಗಳೂ, ಮತ್ಕೃತೇ - ನನ್ನ ನಿಮಿತ್ತದಿಂದ,

---

ಮಾಡಿದಂತಾಗುವುದು. ಅಥವ ಈ ರಾಕ್ಷಸಾಧಮನನ್ನು ಬಂಧಿಸಿ ಸಮುದ್ರದ ಮೇಲೆಮೇಲೆ ಅವನು ಭಯಪಟ್ಟು ತತ್ತರಿಸಿಹೋಗುವಂತೆ ಕೊಂಡುಹೋಗಿ ಅಗ್ನಿಗೆ ಪಶುವನ್ನು ಬಲಿಗೊಡುವಂತೆ, ಶ್ರೀರಾಮನಿಗೆ ಕಾಣಿಕೆಯಾಗಿ ಒಪ್ಪಿಸುವೆನು " ಎಂದು ಯೋಚಿಸಿ, ಅದರಿಂದ ಸೀತಾಲಾಭ ಉಂಟಾಗಲಾರದೆಂದು ಚಿಂತಾಕ್ರಾಂತನಾಗಿ ಮರಳಿಯೂ ಹೀಗೆ ಆಲೋಚಿಸಿದನು. " ಮಹಾ ಕೀರ್ತಿವಂತಳೂ, ಶ್ರೀರಾಮನ ಭಾರ್ಯೆಯೂ ಆದ ಸೀತಾದೇವಿಯು ದೊರಕುವವರೆಗೂ ಈ ಲಂಕಾನಗರವೆಲ್ಲವನ್ನೂ ಬಾರಿಬಾರಿಗೂ ಹುಡುಕುವೆನು. ಅದಂತಿರಲಿ ; ನಾನು ಸಂಪಾತಿಯಮಾತುಗಳನ್ನು ನಂಬಿ ಶ್ರೀರಾಮನನ್ನೇ ಇಲ್ಲಿಗೆ ಕರೆತಂದಿದ್ದರೆ ಆತನು ತನ್ನ ಪ್ರಿಯಪತ್ನಿಯಾದ ಜಾನಕಿಯನ್ನು ಕಾಣದಿರುವುದರಿಂದ ಕುಪಿತನಾಗಿ ವಾನರಪೀಳಿಗವನ್ನೇ ನಾಶಮಾಡಿಬಿಡುತ್ತಿದ್ದನಲ್ಲವೆ? ಆದುದರಿಂದ ಆತನನ್ನು ಕರೆದುಕೊಳ್ಳದೆ ಬಂದುದೇ ಒಳ್ಳೆಯದಾಯಿತು. ನಾನು ಮೊದಲು ಯೋಚಿಸಿದಂತೆ ಜಿತೇಂದ್ರಿಯನಾಗಿ ನಿಯತಾಹಾರದಿಂದ ಇಲ್ಲಿಯೇ ಇದ್ದುಬಿಡುತ್ತೇನೆ, ಸುಗ್ರೀವನೇ ಮೊದಲಾದ ಕಪಿವೀರರೂ ಶ್ರೀರಾಮಲಕ್ಷ್ಮಣರೇ ಮೊದಲಾದವರು ನನ್ನ ನಿಮಿತ್ತದಿಂದ ಜೀವಗಳನ್ನು ಏಕೆ ತೊರೆಯಬೇಕು? ಆದುದರಿಂದ ಅನೇಕರ ಜೀವಿತಕ್ಕಾಗಿ ನಾನೊಬ್ಬನು ಜೀವವನ್ನು ತೊರೆಯುವುದೇ

ಅಶೋಕವನಿಕಾ $ ಚೇಯಂ ದೃಶ್ಯತೇ ಯಾ ಮಹಾದ್ರುಮಾ । ಇಮಾಮಧಿಗಮಿ
ಷ್ಯಾಮಿ ನಹೀಯಂ ವಿಚಿತಾ ಮಯಾ ॥ ೫೫ ॥ ವಸೂನ್ರುದ್ರಾಂಸ್ತಥಾಽದಿತ್ಯಾನಶ್ವಿನೌ
ಮರುತೋಽಪಿ ಚ । ನಮಸ್ಕೃತ್ವಾ ಗಮಿಷ್ಯಾಮಿ ರಕ್ಷಸಾಂ ಶೋಕವರ್ಧನಃ ॥ ೫೬ ॥
ಜಿತ್ವಾತು ರಾಕ್ಷಸಾನ್ § ಸರ್ವಾನಿಕ್ಷ್ವಾಕುಕುಲನಂದಿನೀಂ।ಸಂಪ್ರದಾಸ್ಯಾಮಿ ರಾಮಾಯ
‡ ಯಥಾ ಸಿದ್ಧಿಂ ತಪಸ್ವಿನೇ ॥ ೫೭ ॥ ಸ ಮುಹೂರ್ತಮಿವಧ್ಯಾತ್ವಾ ಚಿಂತಾವಗ್ರಥಿ
ತೇಂದ್ರಿಯಃ । ಉದತಿಷ್ಠನ್ ಮಹಾತೇಜಾ ಹನೂಮಾನ್ ಮಾರುತಾತ್ಮಜಃ ॥ ೫೮ ॥

ನವಿನಶ್ಯೇಯುಃ - ನಷ್ಟರಾಗದಿರಲಿ. ॥ ೫೪ ॥ ಮಹಾದ್ರುಮಾ - ದೊಡ್ಡ ವೃಕ್ಷಗಳುಳ್ಳ, ಯೇಯಂ ಅಶೋಕವನಿಕಾ - ಯಾವ ಈ ಅಶೋಕವನವು, ದೃಶ್ಯತೇ - ಕಾಣುತ್ತದೆಯೋ, ಇಮಾಂ - ಈ ವನವನ್ನು, ಅಧಿಗಮಿಷ್ಯಾಮಿ - ಹೊಗುವೆನು, ಇಯಂ - ಈ ವನವು, ಮಯಾ - ನನ್ನಿಂದ, ನವಿಚಿತಾಹಿ - ಹುಡುಕಲ್ಪಡಲಿಲ್ಲವಷ್ಟೆ. ॥ ೫೫ ॥ (ಅಹಂ - ನಾನು), ವಸೂನ್ - ಅಷ್ಟವಸುಗಳನ್ನೂ, ರುದ್ರಾನ್ - ಏಕಾದಶರುದ್ರರನ್ನೂ, ತಥಾ - ಹಾಗೆ, ಆದಿತ್ಯಾನ್ - ದ್ವಾದಶಾದಿತ್ಯರನ್ನೂ, ಅಶ್ವಿನೌ - ಅಶ್ವಿನೀ ದೇವತೆಗಳನ್ನೂ, ಮರುತೋಽಪಿ - ಸಪ್ತಮರುತ್ತುಗಳನ್ನೂ ಕುರಿತು, ನಮಸ್ಕೃತ್ವಾ - ನಮಸ್ಕರಿಸಿ, ರಕ್ಷಸಾಂ - ರಾಕ್ಷಸರಿಗೆ, ಶೋಕವರ್ಧನಃ - ದುಃಖವೃದ್ಧಿಯನ್ನು ಮಾಡುವನಾಗಿ, ಗಮಿಷ್ಯಾಮಿ - ಹೋಗುವೆನು. ॥೫೬॥ ಸರ್ವಾನ್‌ರಾಕ್ಷಸಾನ್-ಸಮಸ್ತರಾಕ್ಷಸರನ್ನೂ, ಜಿತ್ವಾ-ಜಯಿಸಿ, ಇಕ್ಷ್ವಾ....ನೀಂ- ಇಕ್ಷ್ವಾಕುರಾಯನ ವಂಶಕ್ಕೆ ಸಂತೋಷಕರಳಾದ ಸೀತಾದೇವಿಯನ್ನಾದರೆ, ರಾಮಾಯ - ರಾಮನಿಗೆ, ತಪಸ್ವಿನೇ - ತಾಪಸನಿಗೆ, ಸಿದ್ಧಿಂಯಥಾ - ತಪಃಫಲವನ್ನೋಪಾದಿಯಲ್ಲಿ, ಸಂಪ್ರದಾಸ್ಯಾಮಿ - ಕೊಡುವೆನು. ॥೫೭॥ ಚಿಂತಾ....ಯಃ - ಚಿಂತೆಯಿಂದ ವ್ಯಾಕುಲಚಿತ್ತನಾದ, ಮಹಾತೇಜಾಃ - ಮಹಾಪರಾಕ್ರಮಿಯಾದ, ಮಾರುತಾತ್ಮಜಃ - ವಾಯುಪುತ್ರನಾದ, ಸಹನುಮಾನ್ - ಆ ಆಂಜನೇಯನು, ಮುಹೂರ್ತಂ - ಸ್ವಲ್ಪಹೊತ್ತು, ಧ್ಯಾತ್ವೇವ - ಧ್ಯಾನಮಾಡಿದಹಾಗೆ ಮಾಡಿ, ಉದತಿಷ್ಠತ್ - ಮೇಲಕ್ಕೆದ್ದನು. ॥ ೫೮ ॥ ಸಲಕ್ಷ್ಮಣಾಯ - ಲಕ್ಷ್ಮಣಸಹಿತನಾದ, ರಾಮಾಯ - ರಾಮನಿಗೋಸ್ಕರ,

---

ಶ್ರೇಯಸ್ಕರವು. ॥೪೯–೫೪॥ ಇದೋ ಈ ಮುಂಭಾಗದಲ್ಲಿ ಕಾಣುತ್ತಿರುವ ವನವೇ ಅಶೋಕವನವು. ಇದು ಬಹು ರಮಣೀಯವಾದ ವೃಕ್ಷಲತಾಗುಲ್ಮರಾಜಿಗಳಿಂದ ಕಂಗೊಳಿಸುತ್ತಿರುವುದು. ನಾನು ಈ ಪ್ರದೇಶದಲ್ಲಿ ಸೀತಾದೇವಿಯನ್ನು ಹುಡುಕಲಿಲ್ಲವು. ಆದುದರಿಂದ ಈ ವನವನ್ನು ಪ್ರವೇಶಿಸಿ ಹುಡುಕುವೆನು. ಅಷ್ಟವಸುಗಳಿಗೂ, ಏಕಾದಶರುದ್ರರಿಗೂ, ದ್ವಾದಶಾದಿತ್ಯರಿಗೂ, ಅಶ್ವಿನೀದೇವತೆಗಳಿಗೂ, ಸಪ್ತಮರುತ್ತುಗಳಿಗೂ, ನಮಸ್ಕಾರವನ್ನು ಮಾಡಿ ಸಮಸ್ತ ರಾಕ್ಷಸರಿಗೂ ದುಃಖವನ್ನು ವೃದ್ಧಿಗೊಳಿಸುವವನಾಗಿ ಈ ವನವನ್ನು ಪ್ರವೇಶಿಸಿ ಇಲ್ಲಿ ಕಾವಲಿರುವ ರಾಕ್ಷಸರೆಲ್ಲರನ್ನೂ ಜಯಿಸಿ ಇಕ್ಷ್ವಾಕುಕುಲನಂದಿನಿಯಾದ ಸೀತಾದೇವಿಯನ್ನು ತಪಸ್ವಿಯಾದವನಿಗೆ ಫಲಪ್ರದಾನ ಮಾಡುವಂತೆ ಆಕೆಯ ವಿರಹದಿಂದ ತಪಿಸುತ್ತಿರುವ ಶ್ರೀರಾಮನಿಗೆ ಆಕೆಯನ್ನು ಒಪ್ಪಿಸುತ್ತೇನೆ.'' ಈ ಪ್ರಕಾರವಾಗಿ ಮಹಾ ಪರಾಕ್ರಮಶಾಲಿಯಾದ ವಾಯುಪುತ್ರನು ಒಂದು ಮುಹೂರ್ತಕಾಲ ಧ್ಯಾನಿಸಿ ಆ ಬಳಿಕ ಧೈರ್ಯವನ್ನವಲಂಬಿಸಿ ಆ ಸ್ಥಳದಿಂದ ಹೊರಟನು. ಆ ಬಳಿಕ ಶ್ರೀರಾಮಲಕ್ಷ್ಮಣರಿಗೂ, ಜನಕ

$ "ಚಾಥ" ತಿ. ಪಾ, § "ದೇವೀಂ" ತಿ. ಪಾ. ‡ "ಸಿದ್ಧೀಮಿವ ತಪಸ್ವಿನೇ" ತಿ. ಪಾ.

¶ ನಮೋಽಸ್ತು ರಾಮಾಯ ಸಲಕ್ಷ್ಮಣಾಯ ದೇವ್ಯೈಚ ತಸ್ಯೈ ಜನಕಾತ್ಮಜಾಯೈ । ನಮೋಽಸ್ತು ರುದ್ರೇಂದ್ರ ಯಮಾನಿಲೇಭ್ಯೋ ನಮೋಽಸ್ತು * ಚಂದ್ರಾರ್ಕ ಮರುದ್ಗಣೇಭ್ಯಃ ॥ ೫೯ ॥ ಸತು ತೇಭ್ಯೋ ನಮಸ್ಕೃತ್ಯ ಸುಗ್ರೀವಾಯಚ ಮಾರುತಿಃ । ದಿಶಸ್ಸರ್ವಾ ಸಮಾಲೋಕ್ಯ ಹ್ಯಶೋಕವನಿಕಾಂ ಪ್ರತಿ ॥ ೬೦ ॥ ಸ ಗತ್ವಾ ಮನಸಾ ಪೂರ್ವಮಶೋಕವನಿಕಾಂ ಶುಭಾಂ । ಉತ್ತರಂ ಚಿಂತಯಾಮಾಸ ವಾನರೋ ಮಾರುತಾತ್ಮಜಃ ॥ ೬೧ ॥ ಧ್ರುವಂತು ರಕ್ಷೋ ಬಹುಳಾ ಭವಿಷ್ಯತಿ ವನಾಕುಲಾ । ಅಶೋಕ

ಜನಕಾತ್ಮಜಾಯೈ - ಜನಕಪುತ್ರಿಯಾದ, ತಸ್ಯೈದೇವ್ಯೈಚ - ಆ ಸೀತಾದೇವಿಗೂ, ನಮಃ - ನಮಸ್ಕಾರವು, ಅಸ್ತು - ಆಗಲಿ, ರುದ್ರೇಂ....ಭ್ಯಃ - ಪರಮೇಶ್ವರನಿಗೂ, ಇಂದ್ರನಿಗೂ, ಯಮನಿಗೂ, ವಾಯುವಿಗೂ, ನಮಃ - ನಮಸ್ಕಾರವು, ಅಸ್ತು - ಆಗಲಿ, ಚಂದ್ರಾ....ಭ್ಯಃ - ಚಂದ್ರನಿಗೂ, ಸೂರ್ಯನಿಗೂ, ದೇವತಾಗಣಗಳಿಗ್ಗೂ, ನಮಃ - ನತಿಯು, ಅಸ್ತು - ಆಗಲಿ. ॥ ೫೯ ॥ ಸಮಾರುತಿಃ - ಆ ವಾಯುಪುತ್ರನು, ತೇಭ್ಯಃ - ಪೂರ್ವೋಕ್ತರಾದ ಆ ದೇವತೆಗಳಿಗೂ, ಸುಗ್ರೀವಾಯಚ - ಸುಗ್ರೀವನಿಗೂ ಸಹ, ನಮಸ್ಕೃತ್ಯ - ನಮಸ್ಕರಿಸಿ, ಸರ್ವಾದಿಶಃ - ದಿಕ್ಕುಗಳನ್ನೆಲ್ಲಾ, ಸಮಾಲೋಕ್ಯ - ನೋಡಿ, ಅಶೋ....ತಿ - ಅಶೋಕವನವನ್ನು ಕುರಿತು, (ಗತೋಽಹಿ - ಹೋದನಷ್ಟೆ). ॥ ೬೦ ॥ ಮಾರುತಾತ್ಮಜಃ - ವಾಯುನಂದನನಾದ, ಸವಾನರಃ - ಆ ಕಪಿಯು, ಮನಸಾ - ಮನದಿಂದ, ಪೂರ್ವಂ - ಮೊದಲು, ಶುಭಾಂ-ಶುಭಕರವಾದ, ಅಶೋ....ಕಾಂ-ಅಶೋಕವನವನ್ನು ಕುರಿತು, ಗತ್ವಾ - ಹೋಗಿ, ಉತ್ತರಂ - ಮುಂದಿನ ಕಾರ್ಯವನ್ನು, ಚಿಂತಯಾಮಾಸ- ಆಲೋಚನೆ ಮಾಡಿದನು. ॥ ೬೧ ॥ ವನಾಕುಲಾ - ಕಾಡುಗಳಿಂದ, (ನೀರಿನಿಂದ, ಅಥವಾ ವೃಕ್ಷಸಮೂಹದಿಂದ,) ಆಕುಲಾ - ವ್ಯಾಪ್ತವಾದ, ರಕ್ಷೋಬಹುಳಾ - ವನಪಾಲಕರಾದ ರಕ್ಕಸರಿಂದ, ತುಂಬಿದ ಸರ್ವ....ತಾ - ಸಮಸ್ತಗಳಾದ,

---

ರಾಜ ಕುವರಿಯಾದ ಸೀತಾದೇವಿಗೂ, ರುದ್ರಯಮಾನಿಲರಿಗೂ, ಚಂದ್ರನೇ ಮೊದಲಾದ ಗ್ರಹದೇವತೆಗಳಿಗೂ, ಮರುದ್ಗಣಗಳಿಗೂ, ನಮಸ್ಕಾರವನ್ನು ಮಾಡಿ ತನ್ನೊಡೆಯನಾದ ಸುಗ್ರೀವನನ್ನು ವಂದಿಸಿ ಎಲ್ಲ ದಿಕ್ಕುಗಳನ್ನೂ ನೋಡುತ್ತ ರಾವಣನ ಅಂತಃಪುರೋಪವನವಾದ ಅಶೋಕವನವನ್ನು ಪ್ರವೇಶಿಸಲುದ್ಯುಕ್ತನಾದನು. ॥೫೫–೬೦॥ ಆ ಸಮಯದಲ್ಲಿ ಕಪಿಸತ್ತಮನಾದ ಮಾರುತಿಯು ಆ ವನವನ್ನು ಪ್ರವೇಶಿಸುವುದಕ್ಕೆ ಮುಂಚೆಯೆ ಅಲ್ಲಿ ತಾನು ಮಾಡಹೋಗುವ ಕಾರ್ಯಗಳೆಲ್ಲವನ್ನು ತನ್ನಲ್ಲಿಯೇ ಹೀಗೆ ಆಲೋಚಿಸಿಕೊಂಡನು. "ಈಗ ನಾನು ಹೊಗಲೆತ್ನಿಸಿರುವ ಈ ಅಶೋಕವನವು ನಿಶ್ಚಯವಾಗಿ ಅನೇಕ ರಾಕ್ಷಸರಿಂದ ಸುರಕ್ಷಿತವಾಗಿ, ವಿವಿಧ ವೃಕ್ಷಗಳಿಂದ ನಿಬಿಡಿತವಾಗಿ, ಆ ವೃಕ್ಷಗಳು ದೋಹದಾದಿ ಸಮಸ್ತ

¶ ಇಲ್ಲಿ ರಾಮನು ಭಗವಂತನ ಅವತಾರವೆಂಬ ವಿಷಯವು ಸೂಚಿತವಾಗುತ್ತದೆ. ಇಲ್ಲಿ ಕಂಡುಬರುವ ರುದ್ರಾದಿಗಳಿಗೆ ಮಾಡಿದ ನಮಸ್ಕಾರವೂ, ವಿರಾಟ್ಪುರುಷನಾದ ಭಗವಂತನಿಗೆ ಸಲ್ಲತಕ್ಕದ್ದೇ ಎಂದು ಗ್ರಾಹ್ಯವು. (ತಿ)

ಗೋವಿಂದರಾಜರು, " ಹನುಮಂತನು ಮೊದಲು ರಾಮಾದಿಗಳನ್ನು ನಮಸ್ಕರಿಸಿ, ಆ ಬಳಿಕ ರಾಮನ ಕಾರ್ಯಸಿದ್ಧಿಗೋಸುಗವಾಗಿ ತನ್ನ ಅಭೀಷ್ಟವು ಬೇಗನೆ ಲಭಿಸಲೆಂದು ಎಲ್ಲ ದೇವತೆಗಳನ್ನೂ ನಮಸ್ಕರಿಸುತ್ತಾ" ಎಂದು ವ್ಯಾಖ್ಯಾನ ಮಾಡಿದ್ದಾರೆ.

* "ಚಂದ್ರಾಗ್ನಿ" ತಿ. ಮ. ಪಾ.

ವನಿಕಾ ¶ ಚಿಂತ್ಯಾ ಸರ್ವಸಂಸ್ಕಾರಸಂಸ್ಕೃತಾ ॥ ೬೨ ॥ ರಕ್ಷಿಣಶ್ಚಾತ್ರ ನಿಹಿತಾ ನೂನಂ ರಕ್ಷಂತಿ ಪಾದಪಾನ್ । ಭಗವಾನಪಿ ℣ ಸರ್ವಾತ್ಮಾ ನಾತಿಕ್ಷೋಭಂ ಪ್ರವಾತಿ ವೈ ॥೬೩॥ ಸಂಕ್ಷಿಪ್ತೋಽಯಂ ಮಯಾತ್ಮಾಚ ರಾಮಾರ್ಥೇ ರಾವಣಸ್ಯಚ । ಸಿದ್ಧಿಂ ಮೇ ಸಂವಿಧಾಸ್ಯಂತಿ ದೇವಾಸ್ಸರ್ಷಿಗಣಾಸ್ತ್ವಿಹ ॥ ೬೪ ॥ ಬ್ರಹ್ಮಾ ಸ್ವಯಂಭೂರ್ಭಗವಾನ್ ದೇವಾಶ್ಚೈವ § ದಿಶಂತು ಮೇ । ಸಿದ್ಧಿಮಗ್ನಿಶ್ಚ ವಾಯುಶ್ಚ ಪುರುಹೂತಶ್ಚ ವಜ್ರಭೃತ್ ॥ ೬೫ ॥ ವರುಣಃ ಪಾಶಹಸ್ತಶ್ಚ ಸೋಮಾದಿತ್ಯೌ ತಥೈವಚ । ಅಶ್ವಿನೌಚ ಮಹಾ

ಪಾತಿಯನ್ನು ಕಟ್ಟುವಿಕೆ ಕಳೆಕೀಳುವಿಕೆಯೇ ಮುಂತಾದವುಗಳಿಂದ, ಸಂಸ್ಕೃತಾ - ಬೆಳೆಯಿಸಿದ, ಅಶೋ....ಕಾ - ಅಶೋಕವನವು, ಚಿಂತ್ಯಾ - ಆಲೋಚಿಸಿ ಹುಡುಕತಕ್ಕದ್ದು, ಭವಿಷ್ಯತಿ - ಆಗಿ ಹೋಗುವದು, ಧ್ರುವಂ - ನಿಶ್ಚಯವು, ॥ ೬೨ ॥ ಅತ್ರ - ಈ ವನದಲ್ಲಿ, ನಿಹಿತಾಃ - ನಿಯೋಜಿತರಾದ, ರಕ್ಷಿಣಃ - ಕಾವಲುಗಾರರು, ಪಾದಪಾನ್ - ಗಿಡಗಳನ್ನು, ರಕ್ಷಂತಿ - ಪಾಲಿಸುತ್ತಿದ್ದಾರೆ, ನೂನಂ - ನಿಶ್ಚಯವು, ಭಗವಾನ್ - ಪೂಜ್ಯನಾದ, ಸರ್ವಾತ್ಮಾ - ವಾಯುವು, ನಾತಿಕ್ಷೋಭಂ - ಅತಿಕಂಪನವಿಲ್ಲದೆ, ಪ್ರವಾತಿವೈ - ಬೀಸುವನು. ॥ ೬೩ ॥ ಮಯಾ - ನನ್ನಿಂದ, ಅಯಮಾತ್ಮಾಚ - ಈ ದೇಹವೂ, ರಾಮಾರ್ಥೇ - ಶ್ರೀರಾಮನ ಕಾರ್ಯಸಿದ್ಧಿಗಾಗಿಯೂ, ರಾವಣಸ್ಯಚ - ರಾವಣನ ನಿಮಿತ್ತವಾಗಿಯೂ, ಸಂಕ್ಷಿಪ್ತಃ - ಕೊಂಚವಾಗಿ ಮಾಡಲ್ಪಟ್ಟಿತು, ಇಹ - ಈ ವನದಲ್ಲಿ, ಸರ್ಷಿಗಣಾಃ-ಋಷಿಸಮೂಹದಿಂದ ಕೂಡಿದ, ದೇವಾಸ್ತು - ದೇವತೆಗಳಾದರೆ, ಮೇ - ನನಗೆ, ಸಿದ್ಧಿಂ - ಕಾರ್ಯಸಿದ್ಧಿಯನ್ನು, ಸಂವಿಧಾಸ್ಯಂತಿ - ಸಫಲಗೊಳಿಸಲಿ. ॥ ೬೪ ॥ ಸ್ವಯಂಭೂಃ - ಸ್ವಯಂವ್ಯಕ್ತನಾದ, ಭಗವಾನ್ - ಪೂಜ್ಯನಾದ, ಬ್ರಹ್ಮಾ - ಚತುರ್ಮುಖ ಬ್ರಹ್ಮನೂ, ದೇವಾಶ್ಚೈವ - ಇತರ ದೇವತೆಗಳೂ, ಅಗ್ನಿಶ್ಚ - ಅಗ್ನಿಯೂ, ವಾಯುಶ್ಚ - ವಾಯುವೂ, ವಜ್ರಭೃತ್ - ವಜ್ರಧಾರಿಯಾದ, ಪುರುಹೂತಶ್ಚ - ದೇವೇಂದ್ರನೂ, ಪಾಶಹಸ್ತಃ - ಪಾಶಪಾಣಿಯಾದ, ವರುಣಶ್ಚ - ವರುಣನೂ, ತಥೈವಚ - ಹಾಗೆಯೇ, ಸೋಮಾದಿ

ಸಂಸ್ಕಾರ ಸಂಸ್ಕೃತಗಳಾಗಿಯೂ ಇರಬಹುದು. ಈ ವನವನ್ನು ರಕ್ಷಿಸಲೋಸುಗ ರಾವಣನಿಂದ ಆಜ್ಞಾಪಿತರಾದ ರಾಕ್ಷಸರು ಇದನ್ನು ಬಹಳ ಎಚ್ಚರಿಕೆಯಿಂದ ಕಾಯುತ್ತಿರಬಹುದು. ಸರ್ವವ್ಯಾಪಕನೂ, ಮಹಾತ್ಮನೂ ಆದ ವಾಯುದೇವನೂ ಸಹ ಈ ವನದಲ್ಲಿರುವ ವೃಕ್ಷಗಳಿಗೆ ಸ್ವಲ್ಪಮಾತ್ರವೂ ಬಾಧೆಯುಂಟಾಗದಂತೆ ಬೀಸುತ್ತಿರುವನು. ಈ ವನದಲ್ಲಿ ನಿಶ್ಚಯವಾಗಿಯೂ ಸೀತೆಯಿರುವಳೆಂದರಿತು ನಾನು ಶ್ರೀರಾಮನ ಕಾರ್ಯಸಾಧನೆಗಾಗಿ ಬಂದೆನಲ್ಲದೆ ರಾವಣನಾಗಲಿ, ರಾವಣನ ಭಟರಾಗಲಿ, ಕಂಡುಕೊಳ್ಳದ ಈ ಸಂಕ್ಷಿಪ್ತರೂಪವನ್ನೂ ತಾಳಿರುವೆನು. ಆದುದರಿಂದ ಸಮಸ್ತ ಋಷಿಸಮೂಹಗಳೂ, ದೇವಗಣಗಳೂ ಈ ವಿಷಯದಲ್ಲಿ ನನಗೆ ಕಾರ್ಯಸಿದ್ಧಿಯನ್ನುಂಟುಮಾಡಲಿ. ॥ ೬೧–೬೪ ॥ ಇಷ್ಟೆಯಲ್ಲದೆ ಸ್ವಯಂಸಂಭೂತನಾದ ಬ್ರಹ್ಮದೇವನೂ, ಸಮಸ್ತ ದೇವತೆಗಳೂ, ಯಜ್ಞೇಶ್ವರನೂ, ನಮ್ಮ ತಂದೆಯಾದ ವಾಯುದೇವನೂ,ವಜ್ರಹಸ್ತನಾದದೇವೇಂದ್ರನೂ, ಪಾಶಹಸ್ತನಾದವರುಣನೂ, ಚಂದ್ರಸೂರ್ಯರೂ, ಮಹಾತ್ಮರಾದ ಅಶ್ವಿನೀದೇವತೆಗಳೂ, ಸಪ್ತಮರುತ್ತುಗಳೂ, ಪರಮೇಶ್ವರನೂ, ಅದೃಶ್ಯರಾಗಿ

¶ "ಪುಣ್ಯಾ" ತಿ. ರಾ. ಪಾ. ℣ "ವಿಶ್ವಾತ್ಮಾ" ತಿ. ಪಾ. § "ತಪಸ್ವಿನಃ" ತಿ. ಪಾ.

ತ್ಮಾನೌ ಮಾರುತಶ್ಶರ್ವ ಏವಚ ॥ ೬೬ ॥ ಸಿದ್ಧಿಂ ಸರ್ವಾಣಿ ಭೂತಾನಿ ¶ ಭೂತಾನಾಂ ಚೈವ ಯಃ ಪ್ರಭುಃ । ದಾಸ್ಯಂತಿ ಮಮ ಯೇ ಚಾನ್ಯೇ ಹ್ಯದೃಷ್ಟಾಃ ಪಥಿ ಗೋಚರಾಃ ॥ ೬೭ ॥ ತದುನ್ನಸಂ ಪಾಂಡುರದಂತಮವ್ರಣಂ ಶುಚಿಸ್ಮಿತಂ ಪದ್ಮಪಲಾಶಲೋಚನಂ । ದ್ರಕ್ಷ್ಯೇ ತದಾರ್ಯಾವದನಂ ಕದಾನ್ವಹಂ ಪ್ರಸನ್ನ ತಾರಾಧಿಪ ತುಲ್ಯದರ್ಶನಂ ॥೬೮॥

ಕ್ಷುದ್ರೇಣ § ಪಾಪೇನ ನೃಶಂಸಕರ್ಮಣಾ
ಸುದಾರುಣಾಽಲಂಕೃತವೇಷಧಾರಿಣಾ ।

ತ್ಯೌ - ಚಂದ್ರಸೂರ್ಯರೂ, ಮಹಾತ್ಮಾನೌ - ಮಹಾತ್ಮರಾದ, ಅಶ್ವಿನೌಚ - ಅಶ್ವಿನೀದೇವತೆಗಳೂ, ಮರುತಃ - ಸಪ್ತಮರುತ್ತುಗಳೂ, ಶರ್ವಏವಚ - ಶಿವನೂ ಕೂಡಾ, ಸಿದ್ಧಿಂ - ಕಾರ್ಯಸಿದ್ಧಿಯನ್ನು, ದಿಶಂತು-ಉಂಟುಮಾಡಲಿ. ||೬೫-೬೬|| ಸರ್ವಾಣಿ ಸಮಸ್ತಗಳಾದ, ಭೂತಾನಿ-ದೇವಯೋನಿವಿಶೇಷಗಳೂ, ಭೂತಾನಾಂ-ಪ್ರಾಣಿಗಳಿಗೆ, ಯಃ-ಯಾವನು, ಪ್ರಭುಃ-ಸ್ವಾಮಿಯಾದವನೊ, (ಸಃ-ಆ ವಿಷ್ಣುವೂ) ಪಥಿ - ಮಾರ್ಗದಲ್ಲಿ, ಗೋಚರಾಃ - ಕಾಣುವ, ಅದೃಷ್ಟಾಃ - ಕಾಣದಿರುವ, ಅನ್ಯೇಚ - ಇತರ ದೇವತೆಗಳೂ, ಯೇ - ಯಾರೋ, ತೇ - ಅವರೂ, ಮಮ - ನನಗೆ, ಸಿದ್ಧಿಂ - ಸಿದ್ಧಿಯನ್ನು, ದಾಸ್ಯಂತಿ-ಕೊಡಲಿ. || ೬೭ || ತತ್-ಆ, ಉನ್ನಸಂ-ಉನ್ನತವಾದ ಮೂಗುಳ್ಳ, ಪಾಂಡುರದಂತಂ-ಬೆಳ್ಳಗಿರುವ ಹಲ್ಲುಗಳುಳ್ಳ, ಅವ್ರಣಂ - ನಿರ್ದೋಷವಾದ, ಶುಚಿಸ್ಮಿತಂ-ಶುಭ್ರವಾದ ಕಿರುನಗೆಯುಳ್ಳ, ಪದ್ಮ....ಲೋಚನಂ - ಕಮಲಪತ್ರಗಳಂತೆ ವಿಶಾಲವಾದ ನೇತ್ರಗಳುಳ್ಳ, ಪ್ರಸ....ನಂ - ಕಳಂಕವಿಲ್ಲದಿರುವ ಚಂದ್ರನಿಗೆ ಸಮಾನವಾದ ನೋಟವುಳ್ಳ, ತದಾರ್ಯಾವದನಂ-ಆ ಸೀತಾದೇವಿಯ ಮುಖವನ್ನು, ಅಹಂ - ನಾನು, ಕದಾನು - ಯಾವಾಗ, ದ್ರಕ್ಷ್ಯೇ - ನೋಡುವೆನೋ. || ೬೮ || ಕ್ಷುದ್ರೇಣ - ನೀಚನಾದ, ಪಾಪೇನ - ಪಾಪಿಷ್ಠನಾದ, ನೃಶಂ .... ಣಾ - ದುರ್ವ್ಯಾಪಾರನಾದ, ಸುದಾ....ಣಾ - ಬಹಳ ಭಯಂಕರನಾದಾಗ್ಗೂ ಅಲಂಕಾರ ಮಾಡಲ್ಪಟ್ಟ ಆಕಾರವನ್ನು ಧರಿಸಿರುವ ರಾವಣನಿಂದ, ಬಲಾಭಿಭೂತಾ - ಬಲಾತ್ಕಾರದಿಂದ ಬಚ್ಚಿಡಲ್ಪಟ್ಟವಳಾದಕಾರಣ, ತಪಸ್ವಿನೀ - ತಪಸ್ವಿನಿಯಾದ, ಅಬಲಾ -

---

ನನಗೆ ಶುಭೋದರ್ಕವನ್ನುಂಟುಮಾಡಲಿ. ಉನ್ನತವಾದ ನಾಸಿಕೆಯುಳ್ಳವಳೂ ಶುಭ್ರವಾದ ದಂತಪಂಙ್ತಿಯುಳ್ಳವಳೂ, ನಿರ್ದುಷ್ಟಳೂ, ಬೆಳ್ಳನೆ ಬೆಳಗುವ ನಸುನಗೆಯುಳ್ಳವಳೂ, ಕಮಲಪತ್ರದಂತೆ ವಿಶಾಲನೇತ್ರಗಳುಳ್ಳವಳೂ, ಶುಭ್ರವಾದ ಪೂರ್ಣಚಂದ್ರನನ್ನು ಹೋಲುವ ಮುಖವುಳ್ಳವಳೂ, ಪೂಜ್ಯಳೂ ಆದ ಸೀತಾದೇವಿಯನ್ನು ಯಾವಾಗ ಕಾಣುವೆನೋ ನೀಚನೂ, ಪಾಪಿಯೂ, ಕ್ರೂರಕರ್ಮಿಯೂ ಅದ ರಾವಣನು ವೇಷವನ್ನು ಧರಿಸಿ ಬಲಾತ್ಕಾರ

¶ "ಭೂತಾನಾಂಚೈವ ಯಃ ಪ್ರಭುಃ" ಎಂದಿರುವುದರಿಂದ, ಹಿಂದೆ ೫ನೆಯ ಶ್ಲೋಕದಲ್ಲಿ ಹೇಳಿರುವ ಬ್ರಹ್ಮ, ರುದ್ರಾದಿಗಳಿಗೆ ಒಡೆಯನಾದ "ವಿಷ್ಣು"ವು ಹೇಳಲ್ಪಟ್ಟಿರುವನೆಂದು ತೋರುತ್ತದೆ. (ಗೋ)

ತಿಲಕರು "ಭೂತಾನಾಂ ಪ್ರಭುಃ ಪ್ರಜಾಪತಿಃ" ಎಂದು ವ್ಯಾಖ್ಯಾನ ಮಾಡಿದ್ದಾರೆ.

§ "ಹೀನೇನ ನೃಶಂಸ ಮೂರ್ತಿನಾ" ತಿ. ಪಾ.

ಬಲಾಭಿಭೂತಾ ಹ್ಯಬಲಾ ತಪಸ್ವಿನೀ
ಕಥನ್ನು ಮೇ ದೃಷ್ಟಿಪಥೇಽದ್ಯ ಸಾ ಭವೇತ್ ॥ ೬೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯೋದಶಸ್ಸರ್ಗಃ

ಬಲಹೀನಳಾದ, ಸಾ - ಆ ಸೀತಾದೇವಿಯು, ಅದ್ಯ - ಈಗ, ಮೇ - ನನ್ನ, ದೃಷ್ಟಿಪಥೇ - ದೃಷ್ಟಿಗೆ ಬಿದ್ದವಳು, ಕಥನ್ನು ಭವೇತ್ - ಹೇಗೆ ಆದಾಳು. ॥ ೬೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯೋದಶಸ್ಸರ್ಗಃ.

ವಾಗಿ ಅಪಹರಿಸಿ ತಂದಿರುವ ಅಬಲೆಯೂ, ದೀನೆಯೂ, ಚಿರತಪಸ್ವಿನಿಯೂ ಆದ ಆ ದೇವಿಯನ್ನು ಯಾವಾಗ ಕಾಣುವೆನೋ! ” ಎಂದು ಚಿಂತಿಸಿದನು. ॥ ೬೫–೬೯ ॥

ಇಂತಿದು ಹನುಮಂತನ ಚಿಂತೆ – ಅಶೋಕವನದಿದೃಕ್ಷೆ ಎಂಬ
ಹದಿಮೂರನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಚತುರ್ದಶಸ್ಸರ್ಗಃ

ಸಮುಹೂರ್ತಮಿವ ಧ್ಯಾತ್ವಾ ಮನಸಾ ಚಾಧಿಗಮ್ಯತಾಂ । ಅವಪ್ಲುತೋ ಮಹಾತೇಜಾಃ ಪ್ರಾಕಾರಂ ತಸ್ಯವೇಶ್ಮನಃ ॥೧॥ ಸತು ಸಂಹೃಷ್ಟ ಸರ್ವಾಂಗಃ ಪ್ರಾಕಾರಸ್ಥೋ ಮಹಾಕಪಿಃ । ¶ ಪುಷ್ಪಿತಾಗ್ರಾನ್ವಸಂತಾದೌ ದದರ್ಶ ವಿವಿಧಾನ್ ದ್ರುಮಾನ್ ॥೨॥ ಸಾಲಾನಶೋಕಾನ್ಭವ್ಯಾಂಶ್ಚ ಚಂಪಕಾಂಶ್ಚ ಸುಪುಷ್ಪಿತಾನ್ । ಉದ್ದಾಲಕಾನ್ನಾಗವೃಕ್ಷಾಂಶ್ಚೂತಾನ್ಕಪಿಮುಖಾನಪಿ ॥೩॥ ಅಥಾಮ್ರವಣಸಂಛನ್ನಾಂ ಲತಾಶತಸಮಾವೃತಾಂ । ಜ್ಯಾಮುಕ್ತ ಇವ ನಾರಾಚಃ ಪುಪ್ಲುವೇ ವೃಕ್ಷವಾಟಿಕಾಂ ॥೪॥

ಮಹಾತೇಜಾಃ - ಮಹಾ ಪರಾಕ್ರಮಿಯಾದ, ಸಃ - ಆ ಆಂಜನೇಯನು, ಮುಹೂರ್ತಂ - ಸ್ವಲ್ಪಹೊತ್ತು, ಧ್ಯಾತ್ವೇವ - ಧ್ಯಾನಿಸಿ, ಮನಸಾ - ಮನದಿಂದ, ತಾಂಚ - ಆ ಅಶೋಕವನವನ್ನು, ಅಧಿಗಮ್ಯ - ಹೊಕ್ಕು, ತಸ್ಯ - ಆ ರಾವಣನ, ವೇಶ್ಮನಃ - ಮನೆಯಿಂದ, ಪ್ರಾಕಾರಂ - ಕೋಟೆಯನ್ನು ಕುರಿತು, ಅವಪ್ಲುತಃ - ಹಾರಿದನು. ॥೧॥ ಪ್ರಾಕಾರಸ್ಥಃ - ಕೋಟೆ ಗೋಡೆಯಲ್ಲಿ ನಿಂತಿರುವ, ಸಂಹೃ....ಗಂ - ಸಂತೋಷಗೊಂಡ ಸರ್ವಾವಯುವಗಳುಳ್ಳ, ಸಮಹಾಕಪಿಃ - ಆ ಆಂಜನೇಯನು, ವಸಂತಾದೌ - ವಸಂತಋತುವಿನ ಆರಂಭದಲ್ಲಿ, ಪುಷ್ಪಿತಾಗ್ರಾನ್ - ಪುಷ್ಪಿಸಿದ ಕೊನೆಗಳುಳ್ಳ, ಸಾಲಾನ್ - ಮತ್ತೀಗಿಡಗಳನ್ನೂ, ಭವ್ಯಾನ್ - ಶುಭಕರಗಳಾದ, ಅಶೋಕಾನ್ - ಅಶೋಕವೃಕ್ಷಗಳನ್ನೂ, ಸುಪುಷ್ಪಿತಾನ್ - ಪುಷ್ಪಸಹಿತಗಳಾದ, ಚಂಪಕಾಂಶ್ಚ - ಸಂಪಗೇಗಿಡಗಳನ್ನೂ, ಉದ್ದಾಲಕಾನ್ - ಚಳ್ಳೇ ಮರಗಳನ್ನೂ, ನಾಗವೃಕ್ಷಾನ್ - ನಾಗಸಂಪಗೇಗಿಡಗಳನ್ನೂ, ಚೂತಾನ್-ಸಿಹಿಮಾವಿನ ಗಿಡಗಳನ್ನೂ, ಕಪಿಮುಖಾನ್ - ಚಿಕ್ಕನಸುಗುನ್ನಿೀಗಿಡಗಳನ್ನೂ, ವಿವಿಧಾನ್-ಅನೇಕ ಬಗೆಗಳಾದ, ದ್ರುಮಾನ್ - ವೃಕ್ಷಗಳನ್ನೂ, ದದರ್ಶ - ಕಂಡನು. ॥೩॥ ಅಥ - ಅನಂತರದಲ್ಲಿ, ಆಮ್ರ....ನ್ನಾಂ - ಸೀಮಾವಿನ ತೋಪಿನಿಂದ ವ್ಯಾಪ್ತವಾದ, ಲತಾ....ತಾಂ - ಅನೇಕ ಬಳ್ಳಿಗಳಿಂದ ಸುತ್ತುವರೆದ, ವೃಕ್ಷವಾಟಿಕಾಂ - ಮರಗಳ ಬಂತಿಯನ್ನು, ಜ್ಯಾಮುಕ್ತಃ - ಹೆದೆಯಿಂದ ಬಿಡಲ್ಪಟ್ಟ ನಿಡಿಗೋಲಿನಂತೆ, ಪುಪ್ಲುವೇ - ದಾಟಿದನು. ॥೪॥

ಮಹಾ ತೇಜಸ್ವಿಯಾದ ಆ ಮಾರುತಿಯು ಒಂದು ಮುಹೂರ್ತಕಾಲದವರೆಗೂ ಹೀಗೆ ಯೋಚಿಸುತ್ತಿದ್ದು, ಮನೋವೇಗದಿಂದಲೇ ಸೀತೆಯ ಬಳಿಗೈದುವವನಾಗಿ ಆ ರಾವಣಾಂತಃಪುರದಿಂದ ಅಶೋಕವನದ ಪ್ರಾಕಾರಕ್ಕೆ ಹಾರಿದನು. ಅಲ್ಲಿ ನಿಂತು ವಸಂತಋತುವಿನ ಮೊದಲಲ್ಲಿ ಹೂಮೊಳೆತ ಅಗ್ರಭಾಗಗಳುಳ್ಳ ಸಾಲ, ಅಶೋಕ, ಚಂಪಕ, ಉದ್ದಾಲಕ, ನಾಗ, ಚೂತವೇ ಮೊದಲಾದ ವೃಕ್ಷಗಳನ್ನು ಕಂಡು ಸಂತುಷ್ಟಾಂತರಂಗನಾದನು. ಆಗ ಆತನು ಹೆದೆಯಿಂದ ಹಾರಿದ ನಿಡಿಗೋಲಿನಂತೆ ಆ ಪ್ರಾಕಾರದಿಂದ ಹಾರಿ ರಸಾಲವನಗಳಿಂದ ನಿಬಿಡವಾಗಿ ಅನೇಕ ಸಹಸ್ರ ಲತಾರಾಜಿಗಳಿಂದ ಸುತ್ತುವರೆದ ಆ ವೃಕ್ಷವಾಟಿಕೆಯನ್ನು

¶ ಇಲ್ಲಿ ವಸಂತಮಾಸದ ಸಂಖ್ಯಾಕ್ರಮವು, "ವಸಂತಾದೌ ಪೌರ್ಣಮಾಸ್ಯಾ ಮಾಸಾನ್ ಸಂಪಾದ್ಯ" ಎಂಬ ಪಕ್ಷವನ್ನನುಸರಿಸಿ ಫಾಲ್ಗುಣ ಪೌರ್ಣಿಮೆಗೆ ಎರಡು ದಿನಗಳು ಹಿಂದೆಯೇ ವಸಂತಕ್ಕೆ ಪ್ರಾರಂಭವೆಂದು ಇರುವದರಿಂದ "ವಂಸತಾದೌ" ಎಂದು ಹೇಳಿದೆ.

ಸ ಪ್ರವಿಶ್ಯ ವಿಚಿತ್ರಾಂತಾಂ ವಿಹಗೈರಭಿನಾದಿತಾಂ । ರಾಜತೈಃ ಕಾಂಚನೈಶ್ಚೈವ ಪಾದಪೈಸ್ಸರ್ವತೋವೃತಾಂ ॥ ೫ ॥ ವಿಹಗೈರ್ಮೃಗಸಂಘೈಶ್ಚ ವಿಚಿತ್ರಾಂ ಚಿತ್ರಕಾನನಾಂ । ಉದಿತಾದಿತ್ಯಸಂಕಾಶಾಂ ದದರ್ಶ ಹನುಮಾ ೞ ನ್ಕಪಿಃ ॥ ೬ ॥ ವೃತಾಂ ನಾನಾವಿಧೈರ್ವೃಕ್ಷೈಃ ಪುಷ್ಪೋಪಗಫಲೋಪಗೈಃ । ಕೋಕಿಲೈರ್ಭೃಂಗರಾಜೈಶ್ಚ ಮತ್ತೈರ್ನಿತ್ಯನಿಷೇವಿತಾಂ ॥ ೭ ॥ ಪ್ರಹೃಷ್ಟಮನುಜೇ ಕಾಲೇ ಮೃಗಪಕ್ಷಿಸಮಾಕುಲೇ । ಮತ್ತಬರ್ಹಿಣಸಂಘುಷ್ಟಾಂ ನಾನಾದ್ವಿಜಗಣಾಯುತಾಂ ॥ ೮ ॥ ಮಾರ್ಗಮಾಣೋ ವರಾರೋಹಾಂ ರಾಜಪುತ್ರೀಮನಿಂದಿತಾಂ । ಸುಖಪ್ರಸುಪ್ತಾನ್ವಿಹಗಾ೯ ಬೋಧಯಾಮಾಸ

ಕಪಿಃ - ವಾನರನಾದ, ಸಹನುಮಾ೯ - ಆ ಆಂಜನೇಯನು, ವಿಚಿತ್ರಾಂ - ಆಶ್ಚರ್ಯಕರವಾಗಿರುವ, ವಿಹಗೈಃ - ಹಕ್ಕಿಗಳಿಂದ, ಅಭಿನಾದಿತಾಂ - ಧ್ವನಿಗೊಳಿಸಿದ, ರಾಜತೈಃ - ರಜತಮಯಗಳಾದ, ಕಾಂಚನೈಶ್ಚ - ಚಿನ್ನದ ವಿಕಾರಗಳೂ ಆದ, ಪಾದಪೈಃ - ಗಿಡಗಳಿಂದ, ಸರ್ವತಃ - ಸುತ್ತುಮುತ್ತಲೂ, ವೃತಾಂ - ಕೂಡಿದ, ವಿಹಗೈಃ - ಪಕ್ಷಿಗಳಿಂದಲೂ, ಮೃಗಸಂಘೈಶ್ಚ - ಮೃಗಸಮೂಹಗಳಿಂದಲೂ, ವಿಚಿತ್ರಾಂ - ಆಶ್ಚರ್ಯಕರವಾದ, ಚಿತ್ರಕಾನನಾಂ - ನಾನಾಬಣ್ಣದ ಕೃತ್ರಿಮ ವನಗಳುಳ್ಳ, ಉದಿ....ಶಾಂ - ಉದಿಸಿದ ಸೂರ್ಯನಿಗೆ ಸದೃಶವಾದ, ಪುಷ್ಪೋ....ಗೈಃ - ಸರ್ವದಾ ಪುಷ್ಪಗಳನ್ನು ಹೊತ್ತು ಯಾವಾಗಲೂ ಫಲಿತಗಳಾದ, ನಾನಾವಿಧೈಃ - ಅನೇಕ ವಿಧಗಳಾದ, ವೃಕ್ಷೈಃ - ಗಿಡಗಳಿಂದ, ವೃತಾಂ-ಆಚ್ಛಾದಿತವಾದ, ಕೋಕಿಲೈಃ-ಕೋಗಿಲೆಗಳಿಂದಲೂ, ಮತ್ತೈಃ-ಮದಿಸಿರುವ, ಭೃಂಗರಾಜೈಶ್ಚ - ಉತ್ತಮವಾದ ದುಂಬಿಗಳಿಂದಲೂ, ನಿತ್ಯನಿಷೇವಿತಾಂ - ಯಾವಾಗಲೂ ಸೇವಿಸಲ್ಪಟ್ಟ, ಪ್ರಹೃಷ್ಟಮನುಜೇ - ಸಂತೋಷಗೊಂಡ ಜನರುಗಳುಳ್ಳ, ಮೃಗ....ಲೇ - ಮೃಗಗಳಿಂದಲೂ, ಹಕ್ಕಿಗಳಿಂದಲೂ ವ್ಯಾಪ್ತವಾದ, ವಸಂತಸಮಯದಲ್ಲಿ, ಮತ್ತ....ಷ್ಟಾಂ - ಮದಿಸಿರುವ ನವಿಲುಗಳಿಂದ, ಸಂಘುಷ್ಟಾಂ - ಶಬ್ದಾಯಮಾನವಾದ, ನಾನಾ....ತಾಂ - ಅನೇಕ ಪಕ್ಷಿಗಳಿಂದ ಕೂಡಿರುವ, ತಾಂ - ಆ ವನವನ್ನು, ಪ್ರವಿಶ್ಯ - ಪ್ರವೇಶಿಸಿ, (ಅದನ್ನು) ದದರ್ಶ - ಕಂಡನು. ॥೮॥ ವರಾರೋಹಾಂ-ಉತ್ತಮಳಾದ, ಅನಿಂದಿತಾಂ - ದೋಷರಹಿತಳಾದ, ರಾಜಪುತ್ರೀಂ - ಸೀತಾದೇವಿಯನ್ನು, ಮಾರ್ಗಮಾಣಃ - ಹುಡುಕುತ್ತಿರುವ, ವಾನರಃ - ಆಂಜನೇಯನು, ಸುಖಪ್ರಸುಪ್ತಾ೯ - ಸುಖವಾಗಿ ನಿದ್ರೆಗೈಯ್ಯುತ್ತಿರುವ, ವಿಹಗಾ೯ - ಹಕ್ಕಿಗಳನ್ನು, ಬೋಧಯಾಮಾಸ - ಎಬ್ಬಿಸಿದನು. ॥೯॥ ಉತ್ಪತದ್ಭಿಃ - ಮೇಲಕ್ಕೆ

ಹೊಂದಿದನು. ॥ ೧--೩ ॥ ಹೀಗೆ ಆ ಕಪಿವೀರನು ಅಶೋಕವನಕ್ಕೈತಂದು ನೋಡುವವರಿಗಾನಂದವನ್ನುಂಟುಮಾಡುವುದೂ, ಮೃಗಗಳಿಂದಲೂ, ವಿವಿಧ ಪಕ್ಷಿಸಮೂಹಗಳಿಂದಲೂ ತುಂಬಿರುವುದೂ, ಚಿಗುರಿ ವಿವಿಧ ಪಕ್ಷಿಗಳ ಧ್ವನಿಗಳಿಂದ ಕೂಡಿ ಸುವರ್ಣರಜತವಿಕಾರವಾದ ವೃಕ್ಷಗಳಿಂದ ತುಂಬಿರುವುದೂ, ಅನೇಕ ಮೃಗಪಕ್ಷಿಸಂಘಗಳಿಂದ ಆಶ್ಚರ್ಯಕರವಾದ ಉಪವನಗಳುಳ್ಳುದೂ, ಆಗತಾನೆ ಉದಿಸಿದ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳುದಾಗಿ ರಾರಾಜಿಸುತ್ತಿರುವುದೂ ಆದ ಆ ಅಶೋಕವನವನ್ನು ಕಂಡನು. ಆ ಬಳಿಕ ಫಲಭರಿತವಾದ ಗಿಡಗಳಿಂದಲೂ, ಪುಷ್ಪಭರಿತಗಳಾದ ವೃಕ್ಷಗಳಿಂದಲೂ ಸುತ್ತುವರೆದು, ಕೋಗಿಲೆಗಳಿಂದಲೂ, ಮದಿಸಿದ ದುಂದುಬಿಗಳಿಂದಲೂ, ನವಿಲುಗಳಿಂದಲೂ, ಎಲ್ಲ ಕಾಲಗಳಲ್ಲಿಯೂ ಸೇವಿಸಲ್ಪಡು

ೞ "ಬಲೀ" ತಿ. ಪಾ.

ವಾನರಃ ॥ ೯ ॥ ಉತ್ಪತದ್ಭಿರ್ದ್ವಿಜಗಣೈಃ ಪಕ್ಷೈಸ್ಸಾಲಾಸ್ಸಮಾಹತಾಃ । ಅನೇಕ ವರ್ಣಾ ವಿವಿಧಾ ಮುಮುಚುಃ ಪುಷ್ಪವೃಷ್ಟಯಃ ॥೧೦॥ ಪುಷ್ಪಾವಕೀರ್ಣಃ ಶುಶುಭೇ ಹನುಮಾನ್ಮಾರುತಾತ್ಮಜಃ । ಅಶೋಕವನಿಕಾಮಧ್ಯೇ ಯಥಾ ಪುಷ್ಪಮಯೋಗಿರಿಃ ॥ ೧೧ ॥ ದಿಶಸ್ಸರ್ವಾಃ ಪ್ರಧಾವಂತಂ ವೃಕ್ಷಷಂಡಗತಂ ಕಪಿಂ । ದೃಷ್ಟ್ವಾ ಸರ್ವಾಣಿ ಭೂತಾನಿ ವಸಂತಇತಿ ಮೇನಿರೇ ॥ ೧೨ ॥ ವೃಕ್ಷೇಭ್ಯಃ ಪತಿತೈಃ ಪುಷ್ಪೈರವಕೀರ್ಣಾ ಪೃಥಗ್ವಿಧೈಃ । ರರಾಜ ವಸುಧಾ ತತ್ರ ಪ್ರಮದೇವ ವಿಭೂಷಿತಾ ॥ ೧೩ ॥ ತರಸ್ವಿನಾ ತೇ ತರವಸ್ತರಸಾಭಿಪ್ರಕಂಪಿತಾಃ । ಕುಸುಮಾನಿ ವಿಚಿತ್ರಾಣಿ ಸಸೃಜುಃ ಕಪಿನಾ ತದಾ

ಹಾರುತ್ತಿರುವ, ದ್ವಿಜಗಣೈಃ - ಹಕ್ಕಿಗಳ ಗುಂಪುಗಳ, ಪಕ್ಷೈಃ ರೆಕ್ಕೆಗಳಿಂದ, ಸಮಾಹತಾಃ - ಹೊಡೆಯಲ್ಪಟ್ಟ, ಸಾಲಾಃ - ಮತ್ತೀಗಿಡಗಳು, ಅನೇಕವರ್ಣಾಃ - ನಾನಾಬಣ್ಣಗಳುಳ್ಳ, ವಿವಿಧಾಃ- ನಾನಾವಿಧಗಳಾದ, ಪುಷ್ಪವೃಷ್ಟಯಃ - ಹೂಗಳ ಮಳೆಯನ್ನು, ಮುಮುಚುಃ - ಸುರಿಸಿದವು. ॥ ೧೦ ॥ ಪುಷ್ಪಾವಕೀರ್ಣಃ - ಪುಷ್ಪಗಳಿಂದ ಆವೃತನಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್- ಆಂಜನೇಯನು, ಅಶೋ....ಧ್ಯೇ - ಆ ಅಶೋಕವನದ ಮಧ್ಯದಲ್ಲಿ, ಪುಷ್ಪಮಯಃ - ಹುವ್ವುಗಳ ವಿಕಾರವಾದ, ಗಿರಿರ್ಯಥಾ - ಪರ್ವತದಂತೆ, ಶುಶುಭೇ - ಕಂಗೊಳಿಸಿದನು. ॥ ೧೧ ॥ ಸರ್ವಾಣಿ - ಸಮಸ್ತಗಳಾದ, ಭೂತಾನಿ - ಭೂತಗಳು, ಸರ್ವಾಃದಿಶಃ - ಎಲ್ಲಾ ದಿಕ್ಕುಗಳಲ್ಲಿಯೂ, ಪ್ರಧಾವಂತಂ - ಓಡುತ್ತಿರುವ, ವೃಕ್ಷ....ತಂ- ಗಿಡಗಳ ಪೊದೆಯನ್ನು ಹೊಂದಿರುವ, ಕಪಿಂ - ವಾನರನನ್ನು, ದೃಷ್ಟ್ವಾ- ಕಂಡು, ವಸಂತಇತಿ - ವಸಂತನೆಂದು, ಮೇನಿರೇ - ತಿಳಿದವು. ॥ ೧೨ ॥ ತತ್ರ - ಆ ವನದಲ್ಲಿ, ವೃಕ್ಷೇಭ್ಯಃ - ಗಿಡಗಳಿಂದ, ಪತಿತೈಃ - ಬಿದ್ದಿರುವ, ಪೃಥಗ್ವಿಧೈಃ - ನಾನಾವಿಧಗಳಾದ, ಪುಷ್ಪೈಃ - ಹುವ್ವುಗಳಿಂದ, ಅವಕೀರ್ಣಾ - ತುಂಬಿರುವ, ವಸುಧಾ - ಭೂಮಿಯೂ, ವಿಭೂಷಿತಾ- ಅಲಂಕೃತಳಾದ, ಪ್ರಮದೇವ - ಸ್ತ್ರೀಯಂತೆ, ರರಾಜ - ಹೊಳೆಯುತ್ತಿದ್ದಿತು. ॥೧೩॥ ತರಸ್ವಿನಾ - ವೇಗಶಾಲಿಯಾದ, ಕಪಿನಾ - ಆ ಹನುಮಂತನಿಂದ, ತದಾ - ಆ ಕಾಲದಲ್ಲಿ, ತರಸಾ - ವೇಗದಿಂದ, ಅಭಿಪ್ರಕಂಪಿತಾಃ - ಅಲುಗಿಸಿದ, ತರವಃ - ವೃಕ್ಷಗಳು, ವಿಚಿತ್ರಾಣಿ - ನಾನಾವರ್ಣಗಳುಳ್ಳ,

---

ತ್ತಿರುವ ಆ ಅಶೋಕವನದಲ್ಲಿ, ಲೋಕಪೂಜ್ಯವಾದ ನಡವಳಿಯುಳ್ಳವಳೂ, ರಾಜಪುತ್ರಿಯೂ ಆದ ಸೀತಾದೇವಿಯನ್ನು ಹುಡುಕುವವನಾಗಿ ಅಲ್ಲಿ ಸುಖವಾಗಿ ನಿದ್ರಿಸುತ್ತಿದ್ದ ಪಕ್ಷಿಗಳೆಲ್ಲವನ್ನೂ ಎಚ್ಚರಗೊಳಿಸಿದನು. ಆ ಪಕ್ಷಿಸಮೂಹವು ಹಾರಿಹೋಗುವಾಗ ಅವುಗಳ ರೆಕ್ಕೆಗಳ ಹೊಡೆತದಿಂದ ಬಣ್ಣಬಣ್ಣಗಳ ಅನೇಕ ಹೂಗಳು ಸಾಲವೃಕ್ಷಗಳಿಂದ ಕೆಳಕ್ಕುದುರುತ್ತಿದ್ದವು. ॥೫—೧೦॥ ಹೀಗೆ ಆ ವನಮಧ್ಯದಲ್ಲಿ ಉದುರಿದ ಆ ಹುವ್ವುಗಳು ಹನುಮಂತನನ್ನಾವರಿಸಲು ಆತನು ಪುಷ್ಪಮಯವಾದ ಪರ್ವತದಂತೆ ಶೋಭಿಸುತ್ತಿದ್ದನು. ಆಗ ಸೀತಾದೇವಿಯನ್ನು ಹುಡುಕಲೋಸುಗ ಸಮಸ್ತ ದಿಕ್ಕುಗಳಿಗೂ ಓಡುತ್ತ ಗಿಡಗಳ ಗುಂಪಿನಲ್ಲಿ ಒಂದು ಮುಹೂರ್ತಕಾಲಮಾತ್ರ ನಿಂತಿರುವ ಆ ಕಪಿಕುಂಜರನನ್ನು ನೋಡಿ, ಸಮಸ್ತ ಪ್ರಾಣಿಗಳೂ ಆತನೇ ವಸಂತನಿರಬಹುದೆಂದು ತಿಳಿದವು. ವೃಕ್ಷಗಳಿಂದ ಉದುರುತ್ತಿರುವ ಬಣ್ಣಬಣ್ಣದ ಹೂಗಳಿಂದ ತುಂಬಿದ ಆ ವನಭೂಮಿಯು ಸರ್ವಾಲಂಕೃತಳಾದ ಸ್ತ್ರೀಯಂತೆ ಶೋಭಿಸುತ್ತಿದ್ದಿತು. ಮಹಾ ಭುಜಬಲಪರಾಕ್ರಮಶಾಲಿಯಾದ ಮಾರುತಿಯು ಅಲ್ಲಿದ್ದ ವೃಕ್ಷಗಳೆಲ್ಲವನ್ನೂ ಅಲು

||೧೪|| ನಿರ್ಧೂತಪತ್ರಶಿಖರಾಃ ಶೀರ್ಣಪುಷ್ಪಫಲಾ ದ್ರುಮಾಃ | ನಿಕ್ಷಿಪ್ತವಸ್ತ್ರಾಭರಣಾ ಧೂರ್ತಾಇವ ಪರಾಜಿತಾಃ || ೧೫ || ಹನೂಮತಾ ವೇಗವತಾ ಕಂಪಿತಾಸ್ತೇ ನಗೋತ್ತಮಾಃ | ಪುಷ್ಪಪರ್ಣಫಲಾನ್ಯಾಶು ಮುಮುಚುಃ ಪುಷ್ಪಶಾಲಿನಃ || ೧೬ || ವಿಹಂಗಸಂಘೈರ್ಹೀನಾಸ್ತೇ ಸ್ಕಂಧಮಾತ್ರಾಶ್ರಯಾ ದ್ರುಮಾಃ | ಬಭೂವುರಗಮಾಸ್ಸರ್ವೇ ಮಾರುತೇನೇವ ನಿರ್ಧೂತಾಃ || ೧೭ || ನಿರ್ಧೂತಕೇಶೀ ಯುವತಿರ್ಯಥಾ ಮೃದಿತವರ್ಣಕಾ | ನಿಷ್ಪೀತಶುಭದಂತೋಷ್ಠೀ ನಖೈರ್ದಂತೈಶ್ಚ ವಿಕ್ಷತಾ || ೧೮ || ತಥಾ ಲಾಂಗೂಲಹಸ್ತೈಶ್ಚ ಚರಣಾಭ್ಯಾಂಚ ಮರ್ದಿತಾ | ¶ ಬಭೂವಾಶೋಕವನಿಕಾ

ಕುಸುಮಾನಿ - ಹುವ್ವುಗಳನ್ನು, ಸಸೃಜುಃ - ಕರೆದವು. ||೧೪|| ನಿರ್ಧೂ....ರಾಃ - ಕೊಡಹಿದ ಎಲೆಗಳೂ, ರೆಂಬೆಗಳೂ ಉಳ್ಳ, ಶೀರ್ಣ...ಲಾಃ ಶೀಳಿಹೋದ ಪುಷ್ಪಗಳೂ ಫಲಗಳೂ ಉಳ್ಳ, ದ್ರುಮಾಃ-ವೃಕ್ಷಗಳು, ನಿಕ್ಷಿ....ಣಾಃ - ಇಡಲ್ಪಟ್ಟ ಉಡುಗೆ ತೊಡಿಗೆಗಳುಳ್ಳ, ಪರಾಜಿತಾಃ - ಸೋತುಹೋದ, ಧೂರ್ತಾಇವ - ಜೂಜುಗಾರರಂತೆ, (ಆಸನ್ - ಇದ್ದವು.) || ೧೫ || ವೇಗವತಾ - ವೇಗವುಳ್ಳ, ಹನೂಮತಾ - ಆಂಜನೇಯನಿಂದ, ಕಂಪಿತಾಃ - ಅಲುಗಿಸಿದ, ಪುಷ್ಪಶಾಲಿನಃ - ಹುವ್ವುಗಳಿಂದೊಪ್ಪುತ್ತಿರುವ, ತೇ ನಗೋತ್ತಮಾಃ - ಆ ವೃಕ್ಷಶ್ರೇಷ್ಠಗಳು, ಪುಷ್ಪ....ನಿ - ಪುಷ್ಪಗಳನ್ನೂ ಎಲೆಗಳನ್ನೂ ಹಣ್ಣುಗಳನ್ನೂ, ಆಶು - ಜಾಗ್ರತೆಯಾಗಿ, ಮುಮುಚುಃ - ಸುರಿಸಿದವು. || ೧೬ || ವಿಹಂಗಸಂಘೈಃ - ಹಕ್ಕಿಗಳ ಗುಂಪುಗಳಿಂದ, ಹೀನಾಃ - ರಹಿತಗಳಾದ, ಸ್ಕಂಧ....ಯಾಃ - ರೆಂಬೆಗಳು ಮಾತ್ರವೇ ಆಧಾರವಾಗಿ, ಅಗಮಾಃ- ಅಗಮ್ಯಗಳಾದ, ಸರ್ವೇ ತೇ ದ್ರುಮಾಃ-ಆ ವೃಕ್ಷಗಳೆಲ್ಲವೂ, ಮಾರುತೇನ ಬಿರುಗಾಳಿಯಿಂದ, ನಿರ್ಧೂತಾ ಇವ- ಕೊಡವಿದಂತೆ, ಬಭೂವುಃ - ಆದವು. ||೧೭|| ಲಾಂಗೂ....ಶ್ಚ - ಬಾಲದಿಂದಲೂ, ಕೈಗಳಿಂದಲೂ, ಚರಣಾಭ್ಯಾಂಚ - ಕಾಲುಗಳಿಂದಲೂ, ಮರ್ದಿತಾ - ಹೊಡೆಯಲ್ಪಟ್ಟ ಕಾರಣ, ಪ್ರಭ....ಪಾ- ಮುರಿದು ಹೋದ, ಉತ್ತಮ ವೃಕ್ಷಗಳುಳ್ಳ, ಅಶೋಕವನಿಕಾ - ಅಶೋಕವನವು, ನಿರ್ಧೂತಕೇಶೀ - ಕೆದರಿದ ಕೂದಲುಗಳುಳ್ಳ, ಮೃದಿ....ಕಾ - ಹೋಗಲಾಡಿಸಲ್ಪಟ್ಟ ಅಂಗಲೇಪನವುಳ್ಳ, ನಿಷ್ಪೀ....ಷ್ಠೀ - ಪಾನ ಮಾಡಿ ಶುಭ್ರವಾದ ಹಲ್ಲುಗಳೂ ತುಟಿಗಳೂ ಉಳ್ಳ, ನಖೈಃ - ಉಗುರುಗಳಿಂದಲೂ, ದಂತೈಶ್ಚ - ಹಲ್ಲು

ಗಾಡಿಸಲು ಅವು ಹೂಮಳೆಯನ್ನು ಸುರಿಸುತ್ತಿದ್ದವು. ಆಗಲಾ ವೃಕ್ಷಗಳೆಲ್ಲವೂ ಉದುರಿದ ಚಿಗುರುಗಳು, ಹೂ ಹಣ್ಣುಗಳೂ ಉಳ್ಳುವಾಗಿ ಜೂಜಿನಲ್ಲಿ ವಸ್ತ್ರಾಭರಣಗಳನ್ನು ಕಳೆದುಕೊಂಡು ಸೋತುಕುಳಿತ ಜೂಜುಗಾರರಂತೆ ಕಾಣಿಸುತ್ತಿದ್ದವು. || ೧೦–೧೫ || ಮಹಾ ವೇಗಶಾಲಿಯಾದ ಆ ಮಾರುತಿಯು ಪುಷ್ಪಮಯವಾದ ಮತ್ತೆ ಕೆಲವು ವೃಕ್ಷಗಳನ್ನು ಅಲುಗಿಸಲು ಅವುಗಳಲ್ಲಿದ್ದ ಪುಷ್ಪಗಳೆಲ್ಲವೂ ಕೆಳಕ್ಕುದುರಿತಲ್ಲದೆ ಅವುಗಳಲ್ಲಿದ್ದ ಎಲೆಗಳೂ ಕಾಯಿಗಳೂ ಸಹ ಕೆಳಕ್ಕೆ ಬಿದ್ದುಹೋದವು. ಶುಕಪಿಕಾದಿ ಪಕ್ಷಿಸಮೂಹಗಳಿಂದಲೂ ಫಲಪುಷ್ಪಕೋರಕಾದಿಗಳಿಂದಲೂ ರಹಿತವಾದ ಆ ವೃಕ್ಷಗಳೆಲ್ಲವೂ ಬಿರುಗಾಳಿಯಿಂದ ಮುರಿದವುಗಳಂತೆ ಸ್ಕಂಧಮಾತ್ರಾವಶಿಷ್ಟವಾಗಿದ್ದವು. ಧೂರ್ತನಾದ ವಿಟನ ಸಂಯೋಗದಿಂದ ತಿಲಕ ವಳಿದು ತಾಂಬೂಲರಸದಿಂದ ರಕ್ತಿಮವಾದ ರದನಪಂಙ್ಕ್ತಿಯೂ, ಅಧರವೂ ಚುಂಬನದಿಂದ ಶುಭ್ರವಾಗಿ, ದಂತಕ್ಷತ ನಖಕ್ಷತಗಳಿಂದ ಕೂಡಿ, ಕೆದರಿಂದ ಕೇಶರಾಶಿಯುಳ್ಳ ಯುವತೀ

¶ "ತಥೈವ" ಶಿ. ಪಾ.

ಪ್ರಭಗ್ನವರಪಾದಪಾ ॥ ೧೯ ॥ ಮಹಾಲತಾನಾಂ ದಾಮಾನಿ ವ್ಯಥಮುತ್ತರಸಾ ಕಪಿಃ । ಯಥಾ ಪ್ರಾವೃಷಿ ⁕ ವಿಂಧ್ಯಸ್ಯ ಮೇಘಜಾಲಾನಿ ಮಾರುತಃ ॥ ೨೦ ॥ ಸತತ್ರ ಮಣಿಭೂಮಿಶ್ಚ ರಾಜತೀಶ್ಚ ಮನೋರಮಾಃ । ತಥಾ ಕಾಂಚನಭೂಮಿಶ್ಚ ದದರ್ಶ ವಿಚರರ್ಕಪಿಃ ॥೨೧॥ ವಾಪೀಶ್ಚ ವಿವಿಧಾಕಾರಾಃ ಪೂರ್ಣಾಃ ಪರಮವಾರಿಣಾ । ಮಹಾರ್ಹೈರ್ಮಣಿಸೋಪಾನೈ ರುಪಪನ್ನಾಸ್ತತಸ್ತತಃ ॥೨೨॥ ಮುಕ್ತಾಪ್ರವಾಳಸಿಕತಾಃ ಸ್ಫಾಟಿಕಾಂತರಕುಟ್ಟಿಮಾಃ । ಕಾಂಚನೈಸ್ತರುಭಿಶ್ಚಿತ್ರೈಸ್ತೀರಜೈ ರುಪಶೋಭಿತಾಃ ॥೨೩॥ ಫುಲ್ಲ

ಗಳಿಂದಲೂ, ವಿಕ್ಷತಾ-ಗಾಯಮಾಡಲ್ಪಟ್ಟ, ಯುವತಿಃ-ಅಂಗನೆಯು, ಯಥಾ-ಹೇಗೆಯೋ, ತಥಾ-ಹಾಗೆ, ಬಭೂವ-ಆಯಿತು. ॥ ೧೮-೧೯ ॥ ಕಪಿಃ-ವಾನರನು, ಮಹಾಲತಾನಾಂ-ದೊಡ್ಡ ಬಳ್ಳಿಗಳ, ದಾಮಾನಿ-ಸಮೂಹಗಳನ್ನು, ತರಸಾ - ಬಲದಿಂದ, ಪ್ರಾವೃಷಿ - ವರ್ಷಾಕಾಲದಲ್ಲಿ, ವಿಂಧ್ಯಸ್ಯ - ವಿಂಧ್ಯಪರ್ವತದ, ಮಾರುತಃ - ಗಾಳಿಯು, ಮೇಘಜಾಲಾನಿಯಥಾ - ಮೇಘಸಮೂಹಗಳನ್ನು ಎಂತೋ ಅಂತು, ವ್ಯಥಮತ್-ಕೊಡವಿದನು. ॥ ೨೦ ॥ ಸಕಪಿಃ-ಆ ವಾನರನು, ತತ್ರ-ಆ ವನದಲ್ಲಿ, ಚರ್ರ-ತಿರುಗುತ್ತ, ಮಣಿಭೂಮಿಶ್ಚ - ರತ್ನಖಚಿತ ಭೂಮಿಗಳನ್ನೂ, ಮನೋರಮಾಃ - ರಮ್ಯಗಳಾದ, ರಾಜತೀಶ್ಚ - ರಜತದ ಭೂಮಿಗಳನ್ನೂ, ತಥಾ - ಹಾಗೆಯೇ, ಕಾಂಚನಭೂಮಿಶ್ಚ - ಬಂಗಾರದ ಭೂಮಿಗಳನ್ನೂ. ॥ ೨೧ ॥ ವಿವಿಧಾಕಾರಾಃ - ನಾನಾಬಗೆಯ ಕಟ್ಟಡಗಳುಳ್ಳ, ಪರಮವಾರಿಣಾ - ಒಳ್ಳೇ ನೀರಿನಿಂದ, ಪೂರ್ಣಾಃ - ತುಂಬಿರುವ, ತತಸ್ತತಃ - ಅಲ್ಲಲ್ಲಿ, ಮಹಾರ್ಹೈಃ - ಶ್ರೇಷ್ಠಗಳಾದ, ಮಣಿಸೋಪಾನೈಃ - ಮಣಿವಿಕಾರಗಳಾದ ಪಾವಟಿಗೆಗಳಿಂದ, ಉಪಪನ್ನಾಃ - ಕೂಡಿರುವ, ಮುಕ್ತಾ....ತಾಃ - ಮುತ್ತುಗಳೂ ಮತ್ತು ಹವಳಗಳೂ ಇವುಗಳೇ ಮರಳುಗಳಾಗುಳ್ಳ, ಸ್ಫಾಟಿ....ಮಾಃ - ಸ್ಫಟಿಕಮಣಿಗಳ ಮಧ್ಯದಲ್ಲಿರುವ ನಿಬದ್ಧಭೂಮಿಗಳುಳ್ಳ, ತೀರಜೈಃ - ದಡಗಳಲ್ಲಿ ಹುಟ್ಟಿರುವ, ಕಾಂಚನೈಃ - ಸುವರ್ಣಮಯಗಳಾದ, ಚಿತ್ರೈಃ - ಆಶ್ಚರ್ಯಕರಗಳಾದ, ತರುಭಿಃ - ವೃಕ್ಷಗಳಿಂದ, ಉಪಶೋಭಿತಾಃ - ಕಂಗೊಳಿ

ಮಣಿಯಂತೆ, ಆ ಹನುಮಂತನ ಬಾಲದ ಹೊಡೆತದಿಂದಲೂ, ಕರಘಟ್ಟನದಿಂದಲೂ, ಪಾದತಾಡನದಿಂದಲೂ, ಮುರಿದ ವೃಕ್ಷಗಳಿಂದಲೂ ಕೂಡಿದ ಆ ಅಶೋಕವನವು ಅಲಂಕಾರ ಹೀನವಾಗಿದ್ದಿತು. ವರ್ಷಾಕಾಲದಲ್ಲಿ ಬೀಸುವ ಬಿರುಗಾಳಿಯು ವಿಂಧ್ಯಾಚಲದ ಮೇಲ್ಭಾಗವನ್ನು ಕವಿದಿರುವ ಮೇಘಸಮೂಹಗಳನ್ನು ಚದುರಿಸುವಂತೆ ಆ ಕಪಿವೀರನು ಅಲ್ಲಿನ ಲತಾಸಮೂಹಗಳೆಲ್ಲವನ್ನೂ ಮುರಿದಿಕ್ಕಿದನು. ॥೧೬–೨೦॥ ಹೀಗೆ ಆ ವನದಲ್ಲಿ ಸಂಚರಿಸುತ್ತಿದ್ದ ಆ ಹನುಮಂತನು ವಿಹಾರಾರ್ಥವಾಗಿ ರಚಿಸಿದ್ದ ರಮಣೀಯವಾದ ರತ್ನನಿಚಯಗಳಿಂದಲಂಕೃತವಾದ ಮಣಿಮಯವೂ, ಸುವರ್ಣರಜತಮಯವೂ ಆದ ಭೂಪ್ರದೇಶಗಳನ್ನು ಕಂಡನು. ಅಲ್ಲದೆ, ವಿವಿಧಾಕಾರಗಳುಳ್ಳದಾಗಿ, ನಿರ್ಮಲೋದಕದಿಂದ ತುಂಬಿ, ಅಲ್ಲಲ್ಲಿ ಮಹಾರ್ಹವಾದ ಮಣಿಗಳಿಂದ ನಿರ್ಮಿಸಿದ ಸೋಪಾನಗಳುಳ್ಳದಾಗಿಯೂ, ಮುತ್ತು ಹವಳಗಳ ಕಾಂತಿಯನ್ನನುಕರಿಸುವ ಮಳಲಿನಿಂದ ಪ್ರಕಾಶಿಸುತ್ತಿರುವುದಾಗಿಯೂ, ಸ್ಫಟಿಕ ಶಿಲೆಗಳಿಂದ ಕಟ್ಟಿದ ಶಿರೋಗೃಹಗಳುಳ್ಳದಾಗಿಯೂ, ಸುವರ್ಣಮಯವಾಗಿ ವಿವಿಧ ವರ್ಣಗಳುಳ್ಳ ತೀರದಲ್ಲಿ ಬೆಳೆದ

⁕ "ವೇಗೇನ" ತಿ. ರಾ. ಪಾ.

ಪದ್ಮೋತ್ಪಲವನಾ ಶ್ಚಕ್ರವಾಕೋಪಕೂಜಿತಾಃ । ನತ್ಯೂಹ ರುತಸಂಘುಷ್ಟಾ ಹಂಸಸಾರ ಸನಾದಿತಾಃ ॥೨೪॥ ದೀರ್ಘಾಭಿರ್ದ್ರುಮಯುಕ್ತಾಭಿ ಸ್ಸರಿದ್ಭಿಶ್ಚ ಸಮಂತತಃ । ಅಮೃತೋಪಮತೋಯಾಭಿ ಶ್ಶಿವಾಭಿರುಪಸಂಸ್ಕೃತಾಃ ॥೨೫॥ ಲತಾಶತೈ ರವತತಾ ಸ್ಸಂತಾನ ಕುಸುಮಾವೃತಾಃ । ನಾನಾಗುಲ್ಮಾವೃತಘನಾಃ ಕರವೀರಕೃತಾಂತರಾ ॥ ೨೬ ॥ ತತೋಽಂಬುಧರಸಂಕಾಶಂ ಪ್ರವೃದ್ಧಶಿಖರಂ ಗಿರಿಂ। ವಿಚಿತ್ರಕೂಟಂ ಕೂಟೈಶ್ಚ ಸರ್ವತಃ ಪರಿವಾರಿತಂ ॥ ೨೭ ॥ ಶಿಲಾಗೃಹೈ ರವತತಂ ನಾನಾವೃಕ್ಷೈ ಸ್ಸಮಾವೃತಂ । ದದರ್ಶ

ಸುತ್ತಿರುವ, ಫುಲ್ಲ....ನಾಃ - ಅರಳಿದ ಕಮಲಗಳೂ, ಕನ್ನೈದಿಲೆಗಳೂ ಉಳ್ಳ, ವನಾಃ - ಜಲವುಳ್ಳ, ಚಕ್ರ....ತಾಃ - ಚಕ್ರವಾಕಪಕ್ಷಿಗಳಿಂದ ಧ್ವನಿಗೊಳಿಸಲ್ಪಟ್ಟ, ನತ್ಯೂ....ಷ್ಟಾಃ - ಮಳೆಗುಟಕನ ಹಕ್ಕಿಗಳ ಧ್ವನಿಗಳಿಂದ ಶಬ್ದಾಯಮಾನಗಳಾದ, ಹಂಸ....ತಾಃ - ಹಂಸಪಕ್ಷಿಗಳಿಂದಲೂ, ಸಾರಸ ಪಕ್ಷಿಗಳಿಂದಲೂ ಧ್ವನಿಗೊಳಿಸಲ್ಪಟ್ಟ, ದೀರ್ಘಾಭಿಃ - ವಿಸ್ತಾರಗಳಾದ, ದ್ರುಮಯುಕ್ತಾಭಿಃ - ವೃಕ್ಷ ಸಹಿತಗಳಾದ, ಶಿವಾಭಿಃ - ಶುಭಕರಗಳಾದ, ಅಮೃ....ಭಿಃ - ಅಮೃತಕ್ಕೆ ಸಮಾನವಾದ ನೀರುಳ್ಳ, ಸರಿದ್ಭಿಶ್ಚ - ನದಿಗಳಿಂದಲೂ, ಸಮಂತತಃ - ಎಲ್ಲಾ ಕಡೆಗಳಲ್ಲಿಯೂ, ಉಪಸಂಸ್ಕೃತಾಃ - ಅಲಂಕೃತ ಗಳಾದ, ಲತಾಶತೈಃ - ಅನೇಕ ಬಳ್ಳಿಗಳಿಂದ, ಅವತತಾಃ - ವ್ಯಾಪ್ತಗಳಾದ, ಸಂತಾ....ತಾಃ - ಕಲ್ಪ ವೃಕ್ಷಗಳಿಂದ ಕೂಡಿರುವ, ನಾನಾ....ನಾಃ - ಅನೇಕ ಪೊದೆಗಳಿಂದ ಸುತ್ತುವರೆದು ತುಂಬಿರುವ ಕಣಿ ಗಿಲು ಗಿಡಗಳಿಂದ ವ್ಯಾಪ್ತಗಳಾದ ಮಧ್ಯಪ್ರದೇಶಗಳುಳ್ಳ, ವಾಪೀಶ್ಚ - ಕಲ್ಲುಕಟ್ಟಿದ ಭಾವಿಗಳನ್ನೂ, ದದರ್ಶ - ಕಂಡನು. ॥ ೨೨-೨೬ ॥ ತತಃ - ಅನಂತರದಲ್ಲಿ, ಹರಿಶಾರ್ದೂಲಃ - ವಾನರಶ್ರೇಷ್ಠನು, ಅಂಬು....ಶಂ - ಮೇಘಸದೃಶವಾದ, ಪ್ರವೃ....ರಂ - ದೊಡ್ಡ ಶಿಖರಗಳುಳ್ಳ, ವಿಚಿತ್ರಕೂಟಂ - ಆಶ್ಚರ್ಯಕರವಾದ, ಕೂಟಂ - ಮಧ್ಯಶಿಖರವುಳ್ಳ, ಸರ್ವತಃ - ಎಲ್ಲಾ ಸ್ಥಳಗಳಲ್ಲಿಯೂ, ಕೂಟೈಶ್ಚ - ಅವಾಂತರಶಿಖರಗಳಿಂದಲೂ, ಪರಿವೃತಂ-ಸುತ್ತುವರೆದ, ಶಿಲಾಗೃಹೈಃ-ಗುಹೆಗಳಿಂದಲೂ, ಅವತತಂ- ತುಂಬಿರುವ, ನಾನಾವೃಕ್ಷೈಃ - ಅನೇಕ ಗಿಡಗಳಿಂದ, ಸಮಾವೃತಂ - ವ್ಯಾಪ್ತವಾದ, ಜಗತಿ - ಲೋಕದಲ್ಲಿ, ರಮ್ಯಂ - ಸುಂದರವಾದ, ಪರ್ವತಂ - ಪರ್ವತವನ್ನು (ಗೋ) ಜಗತಿ ಪರ್ವತವನ್ನು,

---

ವೃಕ್ಷಗಳಿಂದ ಶೋಭಿಸುತ್ತಿರುವುದಾಗಿಯೂ, ಅರಳಿದ ಕಮಲ ಕನ್ನೈದಿಲೆಗಳಿಂದ ಕೂಡಿ, ಚಕ್ರವಾಕ, ನತ್ಯೂಹ, ಹಂಸ, ಸಾರಸವೇ ಮೊದಲಾದ ಜಲಪಕ್ಷಿಗಳ ಕಲಕಲ ಧ್ವನಿಯಿಂದ ತುಂಬಿ, ಎರಡು ತೀರಗಳಲ್ಲಿಯೂ, ಅತ್ಯುನ್ನತವಾದ ವೃಕ್ಷಗಳುಳ್ಳುದಾಗಿರುವ ಹಳ್ಳ ಗಳಿಂದಲೂ, ಅಮೃತೋಪಮವಾದ ಜಲದಿಂದ ಕೂಡಿದ ಮನೋಹರವಾದ ಕಾಲುವೆಗಳಿಂ ದಲೂ ಎಲ್ಲೆಡೆಯುಗಳಲ್ಲಿಯೂ ಸುತ್ತುವರೆದು, ವಿವಿಧ ವರ್ಣಗಳ ಲತಾಸಮೂಹಗಳಿಂದ ವ್ಯಾಪ್ತವಾಗಿ ಕಲ್ಪವೃಕ್ಷಗಳ ಪುಷ್ಪಗಳಿಂದಾವೃತವಾಗಿ ವಿವಿಧ ಗುಲ್ಮಗಳಿಂದ ನಿಬಿಡಿತವಾಗಿ ನಡುನಡುವೆ ಕಣಿಗಲು ಗಿಡಗಳಿಂದ ಸುತ್ತುವರೆದ ಅನೇಕ ಕಲ್ಲುಕಟ್ಟಿದ ಭಾವಿಗಳನ್ನು ನೋಡಿ ದನು. ॥೨೧-೨೬॥ ಇಷ್ಟೆಯಲ್ಲದೆ ಮುಗಿಲಿಗೆ ಸಮಾನವಾಗಿ ಹೊಳೆಯುತ್ತಿರುವ ದೊಡ್ಡ ದೊಡ್ಡ ಶಿಖರಗಳಿಂದಲೂ, ವಿಧವಿಧವಾದ ದಿವ್ಯಕೂಟಗಳಿಂದಲೂ ಕೂಡಿ ಎಲ್ಲಿನೋಡಿದರೂ ಶಿಖರ ಗಳಿಂದಲಂಕೃತವಾಗಿರುವುದೂ, ಅನೇಕ ಗುಹೆಗಳಿಂದಲೂ, ಅನೇಕ ವೃಕ್ಷಸಮೂಹಗಳಿಂದಲೂ ಸುತ್ತುವರೆದು ಮನೋಹರವಾಗಿ ಕಣ್ಗೊಪ್ಪಿರಂಜಿಸುತ್ತಿರುವುದೂ ಆದ ಜಗತಿ ಪರ್ವತವೆಂಬ

ಹರಿಶಾರ್ದೂಲಲೋ ರಮ್ಯಂ ಜಗತಿಪರ್ವತಂ ॥೨೮॥ ದದರ್ಶ ಚ ನಗಾತ್ತಸ್ಮಾನ್ನದೀಂ ನಿಪತಿತಾಂ ಕಪಿಃ । ಅಂಕಾದಿವ ಸಮುತ್ಪತ್ಯ ಪ್ರಿಯಸ್ಯ ಪತಿತಾಂ ಪ್ರಿಯಾಂ ॥ ೨೯ ॥ ಜಲೇ ನಿಪತಿತಾಗ್ರೈಶ್ಚ ಪಾದಪೈ ರುಪಶೋಭಿತಾಂ । ವಾರ್ಯಮಾಣಾಮಿವ ಕ್ರುದ್ಧಾಂ ಪ್ರಮದಾಂ ಪ್ರಿಯಬಂಧುಭಿಃ ॥೩೦॥ ಪುನರಾವೃತ್ತತೋಯಾಂಚ ದದರ್ಶ ಸ ಮಹಾಕಪಿಃ । ಪ್ರಸನ್ನಾಮಿವ ಕಾಂತಸ್ಯ ಕಾಂತಾಂ ಪುನರುಪಸ್ಥಿತಾಂ ॥ ೩೧ ॥ ತಸ್ಮಾದೂರಾತ್ಸಪದ್ಮಿನ್ಯೋ ನಾನಾದ್ವಿಜಗಣಾಯುತಾಃ । ದದರ್ಶ ಹರಿಶಾರ್ದೂಲಲೋ ಹನುಮಾನ್ಮಾರುತಾತ್ಮಜಃ ॥೩೨॥ ಕೃತ್ರಿಮಾಂ ದೀರ್ಘಿಕಾಂಚಾಪಿ ಪೂರ್ಣಾಂ ಶೀತೇನ ವಾರಿಣಾ।

ದದರ್ಶ - ಕಂಡನು. ॥ ೨೭-೨೮ ॥ ಕಪಿಃ - ಆಂಜನೇಯನು, ತಸ್ಮಾನ್ನಗಾತ್ - ಆ ಬೆಟ್ಟದಿಂದ, ನಿಪತಿತಾಂ-ಹರಿಯುತ್ತಿರುವ, ನದೀಂ-ಹೊಳೆಯನ್ನು, ಪ್ರಿಯಸ್ಯ-ಗಂಡನ, ಅಂಕಾತ್-ತೊಡೆಯಿಂದ, ಸಮುತ್ಪತ್ಯ - ಎದ್ದು, ಪತಿತಾಂ - ದೂರ ಸರಿದಿರುವ, ಪ್ರಿಯಾಮಿವ - ನಾಯಕಿಯನ್ನಂತೆ, ದದರ್ಶ - ಕಂಡನು. ॥ ೨೯ ॥ ಸಮಹಾಕಪಿಃ-ಆ ಆಂಜನೇಯನು, ಜಲೇ-ನೀರಿನಲ್ಲಿ, ನಿಪತಿತಾಗ್ರೈಃ-ಬಿದ್ದಿರುವ ರೆಂಬೆಗಳುಳ್ಳ, ಪಾದಪೈಃ-ವೃಕ್ಷಗಳಿಂದ, ಅಭಿಶೋಭಿತಾಂ-ಹೊಳೆಯುತ್ತ, ಪ್ರಿಯಬಂಧುಭಿಃ-ಇಷ್ಟರಾದ ನೆಂಟರಿಂದ, ವಾರ್ಯಮಾಣಾಂ - ತಡೆಯುತ್ತಿರುವ, ಕ್ರುದ್ಧಾಂ - ಕೋಪಿಸ್ಠಳಾದ, ಪ್ರಮ.... ತಾಂ - ಹೆಂಗುಸಿನಂತಿರುವ, ಪುನ....ಯಾಂ - ಹಿಂತಿರುಗಿದ ನೀರುಳ್ಳದಾದುದರಿಂದಲೇ, ಕಾಂತಸ್ಯ-ನಾಯಕನ ವಿಷಯದಲ್ಲಿ, ಪ್ರಸನ್ನಾಂ-ಪ್ರಸನ್ನಳಾಗಿ, ಪುನರುಪಸ್ಥಿತಾಂ-ಮತ್ತೆ ಹಿಂತಿರುಗಿ ಬರುತ್ತಿರುವ, ಕಾಂತಾಂ-ಹೆಂಗುಸನ್ನೋಪಾದಿಯಲ್ಲಿ, ನದೀಂ-ನದಿಯನ್ನು, ದದರ್ಶ-ಕಂಡನು. ॥೩೦-೩೧॥ ಹರಿಶಾರ್ದೂಲಃ-ವಾನರಶ್ರೇಷ್ಠನಾದ, ಮಾರುತಾತ್ಮಜಃ-ವಾಯುಪುತ್ರನಾದ, ಸಹನುಮಾನ್-ಆ ಆಂಜನೇಯನು, ತಸ್ಯ-ಆ ಪರ್ವತಕ್ಕೆ, ಅದೂರಾತ್ - ಸಮೀಪದಲ್ಲಿ, ನಾನಾ....ತಾಃ - ಅನೇಕ ಹಕ್ಕಿಗಳ ಸಮೂಹದಿಂದ ಕೂಡಿದ, ಪದ್ಮಿನ್ಯಃ - ಕಮಲಗಳುಳ್ಳ ಸರೋವರಗಳನ್ನು, ದದರ್ಶ - ಕಂಡನು. ॥ ೩೨ ॥ ಶೀತೇನ - ತಣ್ಣಗಿರುವ, ವಾರಿಣಾ - ನೀರಿನಿಂದ, ಪೂರ್ಣಾಂ - ತುಂಬಿರುವ, ಮಣಿ....ನಾಂ - ರತ್ನಶ್ರೇಷ್ಠಗಳಿಂದ ಮಾಡಿದ ಪಾವಟಿಗೆಗಳುಳ್ಳ, ಮುಕ್ತಾ....ತಾಂ - ಮುತ್ತುಗಳ ಮರಳಿನಿಂದ ಹೊಳೆಯುತ್ತಿರುವ, ವಿವಿಧೈಃ - ನಾನಾವಿಧಗಳಾದ, ಮೃಗಸಂಘೈಶ್ಚ - ಮೃಗಗಳ ಸಮೂಹಗಳಿಂದಲೂ, ವಿಚಿತ್ರಾಂ -

---

ಕೃತಕಾದ್ರಿಯೊಂದನ್ನು ಆ ಮಾರುತಿಯು ಕಂಡನು. ಆ ಪರ್ವತದಿಂದ ನದಿಯೊಂದು ವೇಗವಾಗಿ ಪ್ರವಹಿಸುತ್ತ ಪ್ರಿಯನ ತೊಡೆಯಿಂದ ಕೋಪಗೊಂಡು ಎದ್ದುಹೋಗುವ ಸ್ತ್ರೀಯನ್ನು ಹೋಲುತ್ತಿದ್ದಿತು. ಅದರ ತೀರದಲ್ಲಿದ್ದ ವೃಕ್ಷಗಳ ರೆಂಬೆಗಳು ನೀರಿನಲ್ಲಿ ಬಗ್ಗಿರಲು ಕುಪಿತಳಾಗಿ ಹೊರಟುಹೋಗುತ್ತಿರುವ ಆ ಸ್ತ್ರೀಯನ್ನು ಪ್ರಿಯಬಂಧುಗಳಾದವರು ತಡೆಯುವಂತಿದ್ದಿತು. ॥೨೯–೩೦॥ ಸ್ವಲ್ಪದೂರ ಪ್ರವಹಿಸುತ್ತ ದಿಣ್ಣೆಗಳಲ್ಲಿ ಪ್ರವಹಿಸಲಾರದೆ ಹಿಂದಿರುಗುತ್ತಲಿರುವ ಆ ನದಿಯು ಕೋಪವು ಕಳೆದ ಬಳಿಕ ಮರಳಿ ಪ್ರಿಯನೆಡೆಗೆ ಬರುವ ಅನುಕೂಲ ಕಾಮಿನಿಯಂತಿದ್ದಿತು. ಆ ಮಾರುತಾತ್ಮಜನು ಮೊದಲು ತಾನು ಕಂಡ ನದಿಯ ಸಮೀಪದಲ್ಲಿಯೇ ಅನೇಕ ಪಕ್ಷಿಸಮೂಹಗಳಿಂದೊಡಗೂಡಿದ ಕಮಲಸರೋವರಗಳನ್ನು ಕಂಡನು. ಅವುಗಳ ಸಮೀಪದಲ್ಲಿ ಶೀತಳೋದಕದಿಂದ ತುಂಬಿರುವುದೂ, ಅನರ್ಘಮಣಿಮಯ ಸೋಪಾನಗಳುಳ್ಳುದೂ, ಮುತ್ತಿನಂತಿರುವ ಮಳಲಿನಿಂದಲಂಕೃತವಾಗಿ ಅನೇಕ ಮೃಗಸಮೂಹಗಳಿಂದ

ಮಣಿಪ್ರವರಸೋಪಾನಾಂ ಮುಕ್ತಾಸಿಕತಶೋಭಿತಾಂ ॥೩೩॥ ವಿವಿಧೈರ್ಮೃಗಸಂಘೈಶ್ಚ ವಿಚಿತ್ರಾಂ ಚಿತ್ರಕಾನನಾಂ । ಪ್ರಾಸಾದೈಸ್ಸುಮಹದ್ಭಿಶ್ಚ ನಿರ್ಮಿತೈರ್ವಿಶ್ವಕರ್ಮಣಾ । ಕಾನನೈಃ ಕೃತ್ರಿಮೈಶ್ಚಾಪಿ ಸರ್ವತಸ್ಸಮಲಂಕೃತಾಂ ॥೩೪॥ ಯೇಕೇಚಿತ್ಪಾದಪಾಸ್ತತ್ರ ಪುಷ್ಪೋಪಗ ಫಲೋಪಗಾಃ । ಸಚ್ಛತ್ರಾ ಸ್ಸವಿತರ್ದೀಕಾಃ ಸರ್ವೇ ಸೌವರ್ಣವೇದಿಕಾಃ ॥೩೫॥ ಲತಾಪ್ರತಾನೈರ್ಬಹುಭಿಃ ಪರ್ಣೈಶ್ಚ ಬಹುಭಿರ್ವೃತಾಂ । ಕಾಂಚನೀಂ ಶಿಂಶುಪಾಮೇಕಾಂ ದದರ್ಶ $ ಹನುಮಾನ್ಕಪಿಃ । ವೃತಾಂ ಹೇಮಮಯೀಭಿಸ್ತು ವೇದಿಕಾಭಿಸ್ಸಮಂತತಃ ॥ ೩೬ ॥ ಸೋಽಪಶ್ಯದ್ಭೂಮಿಭಾಗಾಂಶ್ಚ ಗರ್ತಪ್ರಸ್ರವಣಾನಿಚ ।

ಆಶ್ಚರ್ಯಕರವಾದ, ಚಿತ್ರಕಾನನಾಂ - ನಾನಾಬಣ್ಣಗಳುಳ್ಳ ಅರಣ್ಯಗಳುಳ್ಳ, ವಿಶ್ವಕರ್ಮಣಾ - ವಿಶ್ವಕರ್ಮನಿಂದ, ನಿರ್ಮಿತೈಃ - ನಿರ್ಮಿಸಲ್ಪಟ್ಟ, ಮಹದ್ಭಿಃ - ದೊಡ್ಡದಾದ, ಪ್ರಾಸಾದೈಃ - ಉಪ್ಪರಿಗೆಗಳಿಂದಲೂ, ಕೃತ್ರಿಮೈಃ - ಕಲ್ಪಿತಗಳಾದ, ಕಾನನೈಃ - ತೋಪುಗಳಿಂದಲೂ, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಸಮಲಂಕೃತಾಂ - ಅಲಂಕೃತವಾದ, ಕೃತ್ರಿಮಾಂ - ಕಲ್ಪಿತವಾದ, ದೀರ್ಘಕಾಂಚಾಪಿ - ಕಲ್ಲುಕಟ್ಟಿದ ಭಾವಿಯನ್ನೂ, ದದರ್ಶ - ಕಂಡನು ॥ ೩೩-೩೪ ॥ ತತ್ರ - ಆ ಭಾವಿಯ ದಡದಲ್ಲಿ, ಪುಷ್ಪೋ....ಗಾಃ-ನಿತ್ಯಪುಷ್ಪ ಫಲಗಳುಳ್ಳ, ಕೇಚಿತ್ಪಾದಪಾಃ-ಕೆಲವು ವೃಕ್ಷಗಳು, ಯೇ-ಯಾವುವೋ, ತೇ - ಅವು, ಸಚ್ಛತ್ರಾಃ - ಚತ್ರಾಕಾರದಿಂದ ಕೂಡಿರುವವು, ಸವಿತರ್ದೀಕಾಃ - ಜಗುಲಿಗಳಿಂದ ಕೂಡಿದವು, ಸರ್ವೇ - ಸಮಸ್ತ ವೃಕ್ಷಗಳೂ, ಸೌವ....ಕಾಃ - ಸುವರ್ಣಮಯಗಳಾದ ವೇದಿಕೆಗಳುಳ್ಳವುಗಳು. ॥೩೫॥ ಕಪಿಃ - ವಾನರನಾದ, ಹನೂಮಾನ್ - ಆಂಜನೇಯನು, ಬಹುಭಿಃ - ಅನೇಕಗಳಾದ, ಲತಾಪ್ರತಾನೈಃ-ಬಳ್ಳಿಯ ಸಮೂಹಗಳಿಂದ, ಬಹುಭಿಃ-ಬಹಳವಾದ, ಪರ್ಣೈಶ್ಚ-ಎಲೆಗಳಿಂದಲೂ, ವೃತಾಂ - ಕೂಡಿರುವ, ಕಾಂಚನೀಂ - ಸುವರ್ಣಮಯವಾದ, ಹೇಮಮಯೀಭಿಃ - ಚಿನ್ನದ ವಿಕಾರಗಳಾದ, ವೇದಿಕಾಭಿಃ - ಜಗುಲಿಗಳಿಂದ, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ವೃತಾಂ - ಸುತ್ತುವರೆದ, ಏಕಾಂ - ಒಂದಾದ, ಶಿಂಶುಪಾಂ - ಶಿಂಶುಪಾವೃಕ್ಷವನ್ನು, ದದರ್ಶ - ಕಂಡನು. ॥೩೬ ೩೭॥ ಸಃ - ಆ ಹನುಮಂತನು, ಭೂಮಿಭಾಗಾಂಶ್ಚ - ಭೂಖಂಡಗಳನ್ನೂ, ಗರ್ತ....ಚ - ಗುಣಿಗಳನ್ನು

ತುಂಬಿದ ಆಶ್ಚರ್ಯಕರವಾದ ಕಾಡುಗಳುಳ್ಳದಾಗಿ ವಿಶ್ವಕರ್ಮನಿಂದ ನಿರ್ಮಿಸಿದ ಅನೇಕ ಉಪ್ಪರಿಗೆಗಳಿಂದಲಂಕೃತವಾಗಿ ಕೃತ್ರಿಮವಾದ ಕಾಡುಗಳಿಂದ ಕೂಡಿ ಎಲ್ಲೆಡೆಗಳಲ್ಲಿಯೂ ಶೃಂಗರಿಸಲ್ಪಟ್ಟ ಒಂದು ಕೃತ್ರಿಮ ಸರೋವರವನ್ನು ಕಂಡನು. ॥೩೧–೩೪॥ ಆ ಸರೋವರದಲ್ಲಿ ನಿತ್ಯಪುಷ್ಪಫಲಗಳನ್ನೊಳಗೊಂಡ ಕೆಲವು ವೃಕ್ಷಗಳು ತಮ್ಮ ನೆರಳಿನಲ್ಲಿ ಕುಳಿತವರಿಗೆ ಮಳೆಬಿಸಲುಗಳ ಬಾಧೆಯಾಗದಂತೆ ನಿರ್ಮಿಸಿದ ಛತ್ರಿಗಳಂತಿದ್ದವು. ಅವುಗಳ ಬುಡಗಳಲ್ಲಿ ಸುವರ್ಣಮಯಗಳಾದ ವೇದಿಕೆಗಳು ನಿರ್ಮಿತವಾಗಿದ್ದವು. ವಾನರೋತ್ತಮನಾದ ಹನುಮಂತನು ಅವುಗಳ ಬಳಿಯಲ್ಲಿರುವ ಅನೇಕ ಲತಾಸಮೂಹಗಳಿಂದಲೂ, ಪರ್ಣಗಳಿಂದಲೂ ಕೂಡಿ ನಾಲ್ಕುಕಡೆಗಳಲ್ಲಿಯೂ ಚಿನ್ನದ ಜಗುಲಿಗಳಿಂದ ಸುತ್ತುವರೆದ ಶಿಂಶುಪಾವೃಕ್ಷವೊಂದನ್ನು ಕಂಡನು. ಆ ವನದಲ್ಲಿ ವಿವಿಧ ಭೂಖಂಡಗಳನ್ನೂ, ಹಳ್ಳಗಳನ್ನೂ ಜೌಗುಪ್ರದೇಶಗಳನ್ನೂ, ಅಗ್ನಿಗೆ ಸಮಾನವಾಗಿ ಪ್ರಕಾಶಿಸುತ್ತಿರುವ ಮತ್ತೆ ಕೆಲವು ಸುವರ್ಣ ವೃಕ್ಷಗಳನ್ನೂ

$ "ಸಮುಹಾಕಪಿಃ" ತಿ. ಪಾ.

ಸುವರ್ಣವೃಕ್ಷಾನಪರಾ ದದರ್ಶ ಶಿಖಿಸನ್ನಿಭಾ ॥ ೩೮ ॥ ತೇಷಾಂ ದ್ರುಮಾಣಾಂ ಪ್ರಭಯಾ ಮೇರೋರಿವ ದಿವಾಕರಃ । ಅಮನ್ಯತ ತದಾ ವೀರಃ 'ಕಾಂಚನೋಽಸ್ಮೀ'ತಿ ವಾನರಃ ॥ ೩೯ ॥ § ತಾಂ ಕಾಂಚನೈಸ್ತರುಗಣೈ ರ್ಮಾರುತೇನಚ ವೀಜಿತಾಂ । ಕಿಂಕಿಣೀಶತನಿರ್ಘೋಷಾಂ ದೃಷ್ಟ್ವಾ ವಿಸ್ಮಯಮಾಗಮತ್ ॥ ೪೦ ॥ ಸಪುಷ್ಪಿತಾಗ್ರಾಂ ರುಚಿರಾಂ ತರುಣಾಂಕುರಪಲ್ಲವಾಂ । ತಾಮಾರುಹ್ಯ ‡ ಮಹಾಬಾಹುಃ ಶಿಂಶುಪಾಂ ಪರ್ಣಸಂವೃತಾಂ ॥ ೪೧ ॥ "ಇತೋ ದ್ರಕ್ಷ್ಯಾಮಿ ವೈದೇಹೀಂ ರಾಮದರ್ಶನ

ಬೆಟ್ಟದ ಜೌಗುಗಳನ್ನೂ, ಅಪಶ್ಯತ್ - ಕಂಡನು, ಶಿಖಿಸನ್ನಿಭಾ - ಅಗ್ನಿಸದೃಶಗಳಾದ, ಅಪರಾ - ಮತ್ತೆ ಕೆಲವು, ಸುವರ್ಣವೃಕ್ಷಾ - ಬಂಗಾರದ ಗಿಡಗಳನ್ನು, ದದರ್ಶ - ಕಂಡನು. ॥೩೮॥ ತದಾ - ಆ ಕಾಲದಲ್ಲಿ, ವೀರಃ - ಶೂರನಾದ, ವಾನರಃ - ಆಂಜನೇಯನು, ತೇಷಾಂದ್ರುಮಾಣಾಂ - ಆ ವೃಕ್ಷಗಳ, ಪ್ರಭಯಾ - ಕಾಂತಿಯಿಂದ, ಮೇರೋಃ - ಮೇರುಪರ್ವತದ ದೆಸೆಯಿಂದ, ದಿವಾಕರಇವ - ಸೂರ್ಯನಂತೆ, ಕಾಂಚನಃ - ಸುವರ್ಣಮಯವಾದವನು, ಅಸ್ಮಿ - ಆದೆನು, ಇತಿ - ಇಂತೆಂದು, ಅಮನ್ಯತ - ತಿಳಿದನು. ॥ ೩೯ ॥ ಕಾಂಚನೈಃ - ಚಿನ್ನದ ವಿಕಾರವಾದ, ತರುಗಣೈಃ - ವೃಕ್ಷಸಮೂಹಗಳಿಂದಲೂ, ಮಾರುತೇನಚ - ಗಾಳಿಯಿಂದಲೂ, ವೀಜಿತಾಂ ಬೀಸಲ್ಪಟ್ಟ, ಕಿಂಕಿ....ಷಾಂ - ಅನೇಕ ಕಿರುಗಂಟೆಗಳ ಧ್ವನಿಯುಳ್ಳ, ತಾಂ - ಆ ಶಿಂಶುಪಾವೃಕ್ಷವನ್ನು, ದೃಷ್ಟ್ವಾ - ಕಂಡು, ವಿಸ್ಮಯಂ - ಆಶ್ಚರ್ಯವನ್ನು, ಆಗಮತ್ - ಹೊಂದಿದನು. ॥ ೪೦ ॥ ಮಹಾಬಾಹುಃ - ಮಹಾ ಪರಾಕ್ರಮಿಯಾದ, ಸಃ - ಆ ಆಂಜನೇಯನು, ಪುಷ್ಪಿತಾಗ್ರಾಂ - ಹುವ್ವುಬಿಟ್ಟಿರುವ, ಕೊನೆಗಳುಳ್ಳ, ರುಚಿರಾಂ - ಮನೋಹರವಾದ, ತರು...ವಾಂ - ಆಗತಾನೆ ಮೊಳೆತಿರುವ ಚಿಗುರುಳ್ಳ, ಪರ್ಣಸಂವೃತಾಂ - ಎಲೆಗಳಿಂದ ತುಂಬಿದ, ತಾಂಶಿಂಶುಪಾಂ - ಆ ಶಿಂಶುಪಾವೃಕ್ಷವನ್ನು, ಆರುಹ್ಯ - ಹತ್ತಿ, (ಅಚಿಂತಯತ್ - ಆಲೋಚಿಸಿದನು). ॥ ೪೧ ॥ ಇತಃ - ಈ ವೃಕ್ಷವನ್ನೇರಿ, ರಾಮ....ನಾಂ - ಶ್ರೀರಾಮನನ್ನು ನೋಡುವುದರಲ್ಲಿ ಆಸಕ್ತಿಯುಳ್ಳ, ದುಃಖಾರ್ತಾಂ - ದುಃಖಿತಳಾದ, ಇತಶ್ಚೇತಶ್ಚ - ಇಲ್ಲಿಲ್ಲಿಯೇ,

ಕಂಡ ಆ ಕಪಿಶ್ರೇಷ್ಠನು ಅವುಗಳ ಕಾಂತಿಯಿಂದ ತಾನೂ ಸಹ ಮೇರುಪರ್ವತದ ಕಾಂತಿಯಿಂದ ಸೂರ್ಯನು ಸುವರ್ಣಚ್ಛಾಯೆಯುಳ್ಳವನಾಗಿ ತೋರುವಂತೆ ಸ್ವರ್ಣದೇಹಿಯಾದೆನೆಂದೆಣಿಸಿದನು. ಆ ವೃಕ್ಷಗಳ ಮಧ್ಯದಲ್ಲಿ ಮಂದಮಾರುತದಿಂದ ಕದಲಿ ಧ್ವನಿಗೈಯ್ಯುತ್ತಿರುವ ಅನೇಕ ಚಿನ್ನದ ಕಿರುಗಂಟೆಗಳ ಮನೋಹರವಾದ ಧ್ವನಿಯಿಂದೊಪ್ಪುತ್ತಿರುವ ಆ ಶಿಂಶುಪಾವೃಕ್ಷವನ್ನು ಕಂಡು ಹನುಮಂತನು ಮಹದಾಶ್ಚರ್ಯಭರಿತನಾದನು. ॥ ೩೭-೪೦ ॥ ಮಹಾ ಪರಾಕ್ರಮಶಾಲಿಯಾದ ಅಂಜನಾನಂದನನು ಹೂಮೊಳೆತ ತುದಿಗಳುಳ್ಳುದಾಗಿ ಮನೋಹರವಾದ ಎಳೆಚಿಗುರಿನಿಂದೊಪ್ಪುತ್ತಿರುವ ಆ ಶಿಂಶುಪಾವೃಕ್ಷವನ್ನೇರಿ ಕುಳಿತು ಹೀಗೆ ಆಲೋಚಿಸಿದನು. "ಶ್ರೀರಾಮನನ್ನು ನೋಡಬೇಕೆಂಬ ಕುತೂಹಲವುಳ್ಳವಳೂ, ವ್ಯಸನಪೀಡಿತಳಾಗಿರುವವಳೂ, ದುರ್ದೈವದಿಂದ ಈ ಪ್ರದೇಶಕ್ಕೆ ಬಂದು ಏನೂ ತೋರದೆ ಅತ್ತಿತ್ತ ಸುಳಿ

§ "ತಾಂ ಕಾಂಚನಾನ್ವೃಕ್ಷಗಣಾನ್ಮಾರುತೇನ ಪ್ರಕಂಪಿತಾ" ತಿ. ಪಾ.

‡ "ಮಹಾವೇಗಃ ಶಿಂಶುಪಾಂ" ತಿ. ಪಾ.

ಲಾಲಸಾಂ । ಇತಶ್ಚೇತಶ್ಚ ದುಃಖಾರ್ತಾಂ ಸಂಪತಂತೀಂ ಯದೃಚ್ಛಯಾ ‖ ೪೨ ‖ ಅಶೋಕವನಿಕಾ ಚೇಯಂ ದೃಢಂ ರಮ್ಯಾ ದುರಾತ್ಮನಃ । ಚಂಪಕೈಶ್ಚಂದನೈಶ್ಚಾಪಿ ವಕುಳೈಶ್ಚ ವಿಭೂಷಿತಾ ‖ ೪೩ ‖ ಇಯಂ ಚ ನಳಿನೀ ರಮ್ಯಾ ದ್ವಿಜಸಂಘನಿಷೇವಿತಾ । ಇಮಾಂ ಸಾ ರಾಮಮಹಿಷೀ ನೂನಮೇಷ್ಯತಿ ಜಾನಕೀ ‖ ೪೪ ‖ ಸಾ ರಾಮಾ ರಾಮಮಹಿಷೀ ರಾಘವಸ್ಯ ಪ್ರಿಯಾ ಸತೀ । ವನಸಂಚಾರಕುಶಲಾ ನೂನಮೇಷ್ಯತಿ ಜಾನಕೀ ‖ ೪೫ ‖ ಅಥವಾ ಮೃಗಶಾಬಾಕ್ಷೀ ವನಸ್ಯಾಽಸ್ಯ ವಿಚಕ್ಷಣಾ । ವನಮೇಷ್ಯತಿ ಸಾಽರ್ಯೇಹ ರಾಮಚಿಂತಾನುಕರ್ಶಿತಾ ‖ ೪೬ ‖ ರಾಮಶೋಕಾಭಿಸಂತಪ್ತಾ ಸಾ

ಯದೃಚ್ಛಯಾ - ಸ್ವೇಚ್ಛೆಯಿಂದ, ಸಂಪತಂತೀಂ - ಬರುವ, ವೈದೇಹೀಂ - ಸೀತಾದೇವಿಯನ್ನು, ದ್ರಕ್ಷ್ಯಾಮಿ - ನೋಡುವೆನು. ‖ ೪೨ ‖ ಚಂಪಕೈಃ - ಸಂಪಗೆಗಿಡಗಳಿಂದಲೂ, ಚಂದನೈಶ್ಚಾಪಿ - ಶ್ರೀಗಂಧದ ಗಿಡಗಳಿಂದಲೂ, ವಕುಳೈಶ್ಚ-ಹವಳದ ಗಿಡಗಳಿಂದಲೂ, ವಿಭೂಷಿತಾ-ಅಲಂಕರಿಸಲ್ಪಟ್ಟ, ದುರಾತ್ಮನಃ-ದುಷ್ಟಬುದ್ಧಿಯುಳ್ಳ ರಾವಣನ, ಇಯಂ ಅಶೋಕವನಿಕಾ- ಈ ಅಶೋಕವನವು, ರಮ್ಯಾ-ಮನೋಹರವಾಗಿರುವುದು, ದೃಢಂ - ನಿಶ್ಚಯವು. ‖೪೩‖ ಇಯಂ - ಇದು, ದ್ವಿಜ....ತಾ - ಹಕ್ಕಿಗಳ ಗುಂಪುಗಳಿಂದ ಸೇವಿಸಲ್ಪಟ್ಟ, ರಮ್ಯಾ - ಮನೋಹರವಾದ, ನಳಿನೀಂ - ಕಮಲಗಳುಳ್ಳ ಸರೋವರವು, ರಾಮಮಹಿಷೀ - ರಾಮನಿಗೆ ಪಟ್ಟದರಸಿಯಾದ, ಸಾ ಜಾನಕೀ - ಆ ಸೀತಾದೇವಿಯು, ಇಮಾಂ - ಈ ವನವನ್ನು ಕುರಿತು, ಏಷ್ಯತಿ - ಬರುತ್ತಾಳೆ, ನೂನಂ - ನಿಶ್ಚಯವು. ‖ ೪೪ ‖ ವನ....ಲಾ - ಸಂಚಾರದಲ್ಲಿ ಕುಶಲಳಾದ, ಜಾನಕೀ - ಜನಕಪುತ್ರಿಯಾದ, ರಾಘವಸ್ಯ - ಶ್ರೀರಾಮನಿಗೆ, ಪ್ರಿಯಾ - ಇಷ್ಟಳಾದ, ಸತೀ-ಪತಿವ್ರತೆಯಾದ, ರಾಮಮಹಿಷೀ-ಶ್ರೀರಾಮನ ಪಟ್ಟದರಸಿಯಾದ, ಸಾ ರಾಮಾ-ಆ ಸ್ತ್ರೀಯು, ಏಷ್ಯತಿ - ಬರುವಳು, ನೂನಂ - ನಿಶ್ಚಯವು. ‖ ೪೫ ‖ ಅಥವಾ, ಅಸ್ಯವನಸ್ಯ - ಈ ವನದ, ವಿಚಕ್ಷಣಾ - ಸುಖಾನುಭವಚತುರಳಾದ, ಮೃಗಶಾಬಾಕ್ಷೀ - ಜಿಂಕೆಮರಿಯ ನೇತ್ರದಂತೆ ನೇತ್ರಗಳುಳ್ಳ, ಆರ್ಯಾ - ಪೂಜ್ಯಳಾದ, ಸಾ - ಆ ಸೀತಾದೇವಿಯು, ರಾಮ....ತಾ - ಶ್ರೀರಾಮನನ್ನು ಕುರಿತು ಚಿಂತಿಸುತ್ತ, ಅನುಕರ್ಶಿತಾ - ಕೃಶಳಾಗಿ, ವನಂ - ವನವನ್ನು ಕುರಿತು, ಇಹ - ಈಗಲೇ, ಏಷ್ಯತಿ - ಬರಹೋಗುವಳು. ‖ ೪೬ ‖ ರಾಮ....ಪ್ತಾ - ಶ್ರೀರಾಮನ ವಿರಹದಿಂದುಂಟಾದ ಅಂತಸ್ಸಂತಾಪ

ಪಡುತ್ತಿರುವವಳೂ ಆದ ಸೀತಾದೇವಿಯನ್ನು ನಾನು ಈ ವೃಕ್ಷದಮೇಲಿದ್ದುಕೊಂಡೇ ನೋಡಬಹುದು. ಮಹಾದುರಾತ್ಮನಾದ ರಾವಣನ ಈ ಅಶೋಕವನವು ಬಹು ರಮಣೀಯವಾಗಿರುವುದು. ಇಲ್ಲಿ ಸಂಪಗೆ, ಶ್ರೀಗಂಧ, ವಕುಳವೇ ಮುಂತಾದ ವೃಕ್ಷಗಳು ಶೋಭಿಸುತ್ತಿರುವವು. ಅನೇಕ ಜಲಪಕ್ಷಿಸಮೂಹಗಳಿಂದ ಕೂಡಿರುವ ಈ ಕಮಲಸರೋವರವು ನೇತ್ರಗಳಿಗಾನಂದವನ್ನುಂಟುಮಾಡುತ್ತಿರುವುದು. ಜನಕರಾಯನ ಕುವರಿಯೂ, ಶ್ರೀರಾಮನ ಮಡದಿಯೂ ಆದ ಸೀತಾದೇವಿಯು ಈ ಸರೋವರದ ಬಳಿಗೆ ನಿಜವಾಗಿಯೂ ಬಾರದಿರುವಳೇ? ಶ್ರೀರಾಮನ ಪ್ರಿಯಪತ್ನಿಯೂ, ಮಹಾ ಪತಿವ್ರತೆಯೂ, ವನಸಂಚಾರ ಕುಶಲಳೂ ಆದ ಆ ದೇವಿಯು ನಿಸ್ಸಂಶಯವಾಗಿಯೂ ಈ ಪ್ರದೇಶಕ್ಕೆ ಬಂದೇ ಬರುವಳು. ‖೪೧—೪೫‖ ಹಾಗಿಲ್ಲದಿದ್ದರೆ ಮೃಗೇಕ್ಷಣೆಯೂ, ವಿಚಕ್ಷಣೆಯೂ, ಪರಮ ಪೂಜ್ಯಳೂ, ರಾಮನಗಲಿಕೆಯಿಂದುಂಟಾದ ವ್ಯಸನದಿಂದ ಬಸಳವಾಗಿ ಕೃಶಿಸಿರುವವಳೂ ಆದ ಆಕೆಯು ಈ ವನಕ್ಕೆ ಬಂದೇ

ದೇವೀ ವಾಮಲೋಚನಾ । ವನವಾಸೇ ರತಾ ನಿತ್ಯಮೇಷ್ಯತೇ ವನಚಾರಿಣೀ ॥ ೪೭ ॥
ವನೇಚರಾಣಾಂ ಸತತಂ ನೂನಂ ಸ್ಪೃಹಯತೇ ಪುರಾ । ರಾಮಸ್ಯ ದಯಿತಾ
* ಭಾರ್ಯಾ ಜನಕಸ್ಯ ಸುತಾ ಸತೀ ॥ ೪೮ ॥ ಸಂಧ್ಯಾಕಾಲಮನಾಃ ಶ್ಯಾಮಾ ಧ್ರುವ
ಮೇಷ್ಯತಿ ಜಾನಕೀ । ¶ ನದೀಂ ಚೇಮಾಂ ಶಿವಜಲಾಂ ಸಂಧ್ಯಾರ್ಥೇ ವರವರ್ಣಿನೀ
॥ ೪೯ ॥ ತಸ್ಯಾಶ್ಚಾಪ್ಯನುರೂಪೇಯಮಶೋಕವನಿಕಾ ಶುಭಾ । ಶುಭಾ ಯಾ ಪಾರ್ಥಿ

ವುಳ್ಳ, ವಾಮಲೋಚನಾ - ಸುಂದರನೇತ್ರೆಯಾದ, ವನವಾಸೇ - ಅರಣ್ಯವಾಸದಲ್ಲಿ, ರತಾ - ಅಸಕ್ತಳಾದ, ಸಾದೇವೀ - ಆ ಸೀತಾದೇವಿಯು, ನಿತ್ಯಂ - ಯಾವಾಗಲೂ, ವನಚಾರಿಣೀ - ವನದಲ್ಲಿ ತಿರುಗುವಳಾಗಿ, ಏಷ್ಯತೇ - ಬರುವಳು. ||೪೭|| ಪುರಾ - ಸೀತೆಯು ದಂಡಕಾರಣ್ಯದಲ್ಲಿದ್ದಾಗ, ಸಾ - ಆಕೆಯು, ವನೇಚರಾಣಾಂ - ವನಮೃಗಗಳ ವಿಷದಲ್ಲಿ, ಸತತಂ - ಯಾವಾಗಲೂ, ಸ್ಪೃಹಯತೇ - ಪ್ರೀತಿಸುತ್ತಿದ್ದಳು, ರಾಮಸ್ಯ - ರಾಮನಿಗೆ, ದಯಿತಾ - ಇಷ್ಟಳಾದ. ಭಾರ್ಯಾ - ಹೆಂಡತಿಯಾದ, ಜನಕಸ್ಯ - ಜನಕರಾಯನಿಗೆ, ಸುತಾ - ಮಗಳಾದ, ಸತೀ - ಪತಿವ್ರತೆಯಾದ, ಶ್ಯಾಮಾ - ಯೌವನವತಿಯಾದ, ವರವರ್ಣಿನೀ - ಶ್ರೇಷ್ಠಳಾದ, ಜಾನಕೀ - ಸೀತಾದೇವಿಯು, ಸಂಧ್ಯಾ....ನಾಃ - ಸಂಜೆಯಲ್ಲಿ ಮನವುಳ್ಳವಳಾಗಿ, ಸಂಧ್ಯಾರ್ಥೇ - ಸಂಧ್ಯಾವಂದನ ನಿಮಿತ್ತವಾಗಿ, ಶಿವಜಲಾಂ - ನಿರ್ಮಲವಾದ ನೀರುಳ್ಳ, ಇಮಾಂನದೀಂಚ - ಈ ನದಿಯನ್ನೂ ಕುರಿತು, ಏಷ್ಯತಿ - ಬರುವಳು, ಧ್ರುವಂ - ನಿಶ್ಚಯವು. ||೪೮-೪೯|| ಶುಭಾ - ಶುಭಕರವಾದ, ಇಯಮಶೋಕವನಿಕಾ - ಈ ಅಶೋಕವನವು, ತಸ್ಯಾಃ - ಆ ಸೀತಾದೇವಿಗೆ, ಅನುರೂಪಾಚ - ಸದೃಶವಾದುದು, ಶುಭಾ - ಶುಭಕರಳಾದ, ಯಾ - ಯಾವ ಸೀತಾದೇವಿಯು, ಪಾರ್ಥಿವೇಂದ್ರಸ್ಯ - ರಾಜಶ್ರೇಷ್ಠನಾದ, ರಾಮಸ್ಯ - ಶ್ರೀರಾಮನಿಗೆ, ಸಮ್ಮತಾ - ಇಷ್ಟ

ಬರುವಳು. ಶ್ರೀರಾಮನ ವಿಯೋಗದುಃಖದಿಂದ ತಪಿಸುತ್ತಿರುವವಳೂ, ಸುಂದರವಾದ ನೇತ್ರಗಳುಳ್ಳವಳೂ ಆದ ಆ ದೇವಿಯು ಯಾವಾಗಲೂ ವನವಾಸದಲ್ಲಿ ಅಪೇಕ್ಷೆಯುಳ್ಳವಳಾದುದರಿಂದ ಈ ವನದಲ್ಲಿ ಸಂಚರಿಸಲೋಸುಗ ಬಂದೇ ಬರುತ್ತಾಳೆ. ಜನಕಪುತ್ರಿಯೂ ಶ್ರೀರಾಮನ ಮಡದಿಯೂ ಆದ ಆಕೆಯು ಹಿಂದೆ ದಂಡಕಾರಣ್ಯದಲ್ಲಿದ್ದಾಗ ವನದಲ್ಲಿ ಸಂಚರಿಸುವ ಪ್ರಾಣಿಗಳನ್ನು ಬಹಳವಾಗಿ ಪ್ರೀತಿಸುತ್ತ ಅವುಗಳೊಡನೆ ಸಂಚರಿಸುತ್ತಿದ್ದಳಾದುದರಿಂದ ಈಗಲೂ ಈ ಪ್ರದೇಶಕ್ಕೆ ಬಾರದಿರಳು. ಅಥವಾ ಯೌವನ ಮಧ್ಯಸ್ಥಳೂ, ಶ್ರೇಷ್ಠವಾದ ದೇಹಕಾಂತಿಯುಳ್ಳವಳೂ, ಜನಕರಾಜಕುವರಿಯೂ ಆದ ಆ ದೇವಿಯು ಸಂಧ್ಯಾಕಾಲಿಕ ಕರ್ಮಗಳಲ್ಲಿ ಆಸಕ್ತಳಾದುದರಿಂದ ಈ ನದಿಯ ಬಳಿಗೆ ಸಂಧ್ಯಾವಂದನೆಗಾಗಿ ಬರುವಳು. ಮಂಗಳಮಯವಾದ ಈ ಅಶೋಕವನವು ಶ್ರೀರಾಮನ ಪ್ರಿಯತಮೆಯಾದ ಆಕೆಗನುಗುಣವಾಗಿರುವುದು. ಚಂದ್ರಮುಖಿಯಾದ ಆಕೆಯು ಜೀವಿ

---

* "ಚಾರ್ಯಾ" ತಿ. ಪಾ.

¶ ಇಲ್ಲಿ "ಸ್ತ್ರೀಯರಿಗೆ ಸಂಧ್ಯಾವಂದನೆಯುಂಟೆ?" ಎಂಬ ಸಂಶಯವು ಬರುತ್ತದೆ. ಅದಕ್ಕಿಷ್ಟೇ ಸಮಾಧಾನ:— ಸ್ತ್ರೀಯರಿಗೆ ಸಮಂತ್ರಕವಾದ ಸಂಧ್ಯಾವಂದನ ಕರ್ಮವು ಶಾಸ್ತ್ರದಲ್ಲಿ ವಿಹಿತವಾಗಿರುವುದಿಲ್ಲ. ಗಾಯತ್ರೀ ಮಂತ್ರಾರ್ಥಾನುಸಂಧಾನದಿಂದ ಧ್ಯಾನ ಮಾಡುವುದೇ ಸ್ತ್ರೀಯರಿಗೆ ಸಂಧ್ಯಾಕರ್ಮವೆನಿಸುತ್ತದೆ. ಈ ದೃಷ್ಟಿಯಿಂದ ಸ್ತ್ರೀಯರಿಗೆ ಸಂಧ್ಯಾವಂದನವುಂಟು. (ಮ+ತಿ+ಗೋ)

ವೇಂದ್ರಸ್ಯ ಪತ್ನೀ ರಾಮಸ್ಯ ಸಮ್ಮತಾ ॥ ೫೦ ॥ ಯದಿ ಜೀವತಿ ಸಾ ದೇವೀ ತಾರಾಧಿಪ ನಿಭಾನನಾ । ಆಗಮಿಷ್ಯತಿ ಸಾಽವಶ್ಯಮಿಮಾಂ ಶಿವಜಲಾಂ ನದೀಂ " ॥ ೫೧ ॥

ಏವಂತು ಮತ್ವಾ ಹನುಮಾನ್ಮಹಾತ್ಮಾ
ಪ್ರತೀಕ್ಷಮಾಣೋ ಮನುಜೇಂದ್ರಪತ್ನೀಂ ।
ಅವೇಕ್ಷಮಾಣಶ್ಚ ದದರ್ಶ ಸರ್ವಂ
ಸುಪುಷ್ಪಿತೇ ಪರ್ಣಘನೇ ನಿಲೀನಃ ॥ ೫೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ದಶಸ್ಸರ್ಗಃ

ಳಾದ, ಪತ್ನೀ - ಹೆಂಡತಿಯೋ, ತಾರಾ....ನಾ - ಚಂದ್ರನಿಗೆ ಸಮಾನವಾದ ಮುಖವುಳ್ಳ, ಸಾದೇವೀ - ಆ ಸೀತಾದೇವಿಯು, ಜೀವತಿಯದಿ - ಬದುಕಿದ್ದರೆ, ಸಾ - ಆಕೆಯು, ಶಿವಜಲಾಂ - ಶುಭೋದಕವುಳ್ಳ, ಇಮಾಂನದೀಂ - ಈ ನದಿಯನ್ನು ಕುರಿತು, ಅವಶ್ಯಂ - ನಿಶ್ಚಯವಾಗಿಯೂ, ಆಗಮಿಷ್ಯತಿ - ಬರುವಳು. ||೫೦-೫೧|| ಮಹಾತ್ಮಾ - ಮಹಾ ಮನಸ್ವಿಯಾದ, ಹನುಮಾ್ - ಆಂಜನೇಯನು, ಏವಂಮತ್ವಾ - ಹೀಗೆ ತಿಳಿದು, ಮನು....ತ್ನೀಂ - ನರಪತಿಯಾದ ಶ್ರೀರಾಮನ ಹೆಂಡತಿಯಾದ ಸೀತಾದೇವಿಯನ್ನು, ಪ್ರತೀಕ್ಷಮಾಣಃ - ನಿರೀಕ್ಷಿಸಿ, ಅವೇಕ್ಷಮಾಣಶ್ಚ - ಹುಡುಕುತ್ತ, ಸುಪುಷ್ಪಿತೇ - ಒಳ್ಳೇ ಪುಷ್ಪಗಳುಳ್ಳ, ಪರ್ಣಘನೇ - ಎಲೆಗಳಿಂದ ಸಾಂದ್ರವಾದ ಪ್ರದೇಶದಲ್ಲಿ, ನಿಲೀನಃ - ಹೊಕ್ಕು, ಸರ್ವಂ - ಸಮಸ್ತವನ್ನೂ, ದದರ್ಶ - ಕಂಡನು. ॥ ೫೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ದಶಸ್ಸರ್ಗಃ.

ಸಿದ್ದರೆ ಅವಶ್ಯವಾಗಿಯೂ ಈ ನದಿಯಬಳಿಗೆ ಬಂದೇ ಬರುತ್ತಾಳೆ." ಮಹಾತ್ಮನಾದ ಹನುಮಂತನು ಈ ರೀತಿಯಾಗಿ ಚಿಂತಿಸುತ್ತ ಸೀತಾದೇವಿಯ ಆಗಮನವನ್ನೇ ನಿರೀಕ್ಷಿಸಿ ಪುಷ್ಪಭರಿತವಾಗಿ ಎಲೆಗಳಿಂದ ತುಂಬಿರುವ ಆ ಶಿಂಶುಪಾವೃಕ್ಷದಲ್ಲಿಯೇ ಅಡಗಿಕೊಂಡು ಆ ವನವೆಲ್ಲವನ್ನೂ ನೋಡುತ್ತಿದ್ದನು. ॥ ೪೬–೫೨ ॥

ಇಂತಿದು ಹನುಮತ್ಕೃತ ಅಶೋಕವನಪ್ರವೇಶ ವೃತ್ತಾಂತವೆಂಬ
ಹದಿನಾಲ್ಕನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಪಂಚದಶಸ್ಸರ್ಗಃ

ಸ ವೀಕ್ಷಮಾಣಸ್ತತ್ರಸ್ಥೋ ಮಾರ್ಗಮಾಣಶ್ಚ ಮೈಥಿಲೀಂ। ಅವೇಕ್ಷಮಾಣಶ್ಚ ಮಹೀಂ ಸರ್ವಾಂ ತಾಮನ್ವವೈಕ್ಷತ ॥೧॥ ಸಂತಾನಕ ಲತಾಭಿಶ್ಚ ಪಾದಪೈರುಪ ಶೋಭಿತಾಂ । ದಿವ್ಯಗಂಧರಸೋಪೇತಾಂ ಸರ್ವತಸ್ಸಮಲಂಕೃತಾಂ ॥೨॥ ತಾಂ ಸ ನಂದನಸಂಕಾಶಾಂ ಮೃಗಪಕ್ಷಿಭಿರಾವೃತಾಂ । ಹರ್ಮ್ಯಪ್ರಾಸಾದ ಸಂಬಾಧಾಂ ಕೋಕಿಲಾಕುಲನಿಸ್ವನಾಂ॥೩॥ ಕಾಂಚನೋತ್ಪಲ ಪದ್ಮಾಭಿ ರ್ವಾಪೀಭಿರುಪಶೋಭಿತಾಂ। ಬಹ್ವಾಸನ ಕುಥೋಪೇತಾಂ ಬಹುಭೂಮಿ ಗೃಹಾಯುತಾಂ ॥೪॥ ಸರ್ವರ್ತುಕುಸುಮೈ

ಸಃ - ಆ ಆಂಜನೇಯನು, ತತ್ರಸ್ಥಃ - ಆ ಶಿಂಶುಪಾವೃಕ್ಷದಲ್ಲಿರುವನಾಗಿ, ಮೈಥಿಲೀಂಚ - ಸೀತಾದೇವಿಯನ್ನು, ಮಾರ್ಗಮಾಣಃ - ಹುಡುಕುತ್ತ, ವೀಕ್ಷಮಾಣಃ - ನಾನಾವಿಧವಾಗಿ ದೃಷ್ಟಿ ಪ್ರಸರಣೆಯನ್ನು ಮಾಡುತ್ತ, ಮಹೀಂ - ಭೂಮಿಯನ್ನು, ಅವೇಕ್ಷಮಾಣಃ - ಅಧೋದೃಷ್ಟಿಯಿಂದ ನೋಡುವವನಾಗಿ, ಸರ್ವಾಂ - ಸಮಸ್ತವಾದ, ತಾಂ - ಆ ವನವನ್ನು, ಅನ್ವವೈಕ್ಷತ - ನೋಡಿದನು. ॥೧॥ ಸಂತಾ....ಶ್ಚ-ಕಲ್ಪವೃಕ್ಷದ ಬಳ್ಳಿಗಳಿಂದಲೂ, ಪಾದಪೈಃ-ಗಿಡಗಳಿಂದಲೂ, ಉಪಶೋಭಿತಾಂ - ಕಂಗೊಳಿಸುತ್ತಿರುವ, ದಿವ್ಯ....ತಾಂ - ಮನೋಹರವಾದ ಗಂಧದಿಂದಲೂ, ಪುಷ್ಪರಸದಿಂದಲೂ ಕೂಡಿರುವ, ಸರ್ವತಃ - ಸಮಸ್ತ ಪ್ರದೇಶಗಳಲ್ಲಿಯೂ, ಸಮಲಂಕೃತಾಂ - ಅಲಂಕೃತವಾದ, ನಂದ....ಶಾಂ- ಇಂದ್ರೋದ್ಯಾನಕ್ಕೆ ಸಮಾನವಾದ, ಮೃಗಪಕ್ಷಿಭಿಃ - ಮೃಗಗಳಿಂದಲೂ, ಪಕ್ಷಿಗಳಿಂದಲೂ, ಆವೃತಾಂ- ಸುತ್ತುವರೆದ, ಹರ್ಮ್ಯ....ಧಾಂ - ಧನವಂತರ ಮನೆಗಳಿಂದಲೂ, ಅರಮನೆಗಳಿಂದಲೂ ತುಂಬಿರುವ, ಕೋಕಿ....ನಾಂ - ಕೋಗಿಲೆಗಳ ಧ್ವನಿಗಳಿಂದ ತುಂಬಿದ, ಕಾಂಚ....ಭಿಃ - ಸ್ವರ್ಣಮಯವಾದ, ಉತ್ಪ....ಭಿಃ - ನೈದಿಲೆಗಳೂ, ಕಮಲಗಳೂ ಉಳ್ಳ, ವಾಪೀಭಿಃ - ಕಲ್ಲುಕಟ್ಟಿದ ಭಾವಿಗಳಿಂದ, ಉಪಶೋಭಿತಾಂ - ಹೊಳೆಯುತ್ತಿರುವ, ಬಹ್ವಾ ...ತಾಂ - ಅನೇಕ ಪೀಠಗಳಿಂದಲೂ, ಆಸ್ತರಣಗಳಿಂದಲೂ ಕೂಡಿರುವ, ಬಹು....ತಾಂ - ಅನೇಕ ನೆಲಮಾಳಿಗೆಗಳಿಂದ ಕೂಡಿರುವ, ಸರ್ವ....ಮೈಃ - ಸರ್ವಕಾಲಗಳಲ್ಲಿಯೂ ಹುವ್ವುಗಳುಳ್ಳ, ಫಲವದ್ಭಿಃ - ಹಣ್ಣುಬಿಟ್ಟಿರುವ, ಪಾದಪೈಃ - ವೃಕ್ಷಗಳಿಂದ, ರಮ್ಯಾಂ -

---

ಈ ಪ್ರಕಾರವಾಗಿ ಹನುಮಂತನು ಆ ಶಿಂಶುಪಾವೃಕ್ಷದಮೇಲೆ ಕುಳಿತು ಸೀತಾದೇವಿಯನ್ನು ಹುಡಕಲೋಸುಗ ಅತ್ತಿತ್ತ ನೋಡುತ್ತ, ಆ ವನದ ಭೂಪ್ರದೇಶಗಳೆಲ್ಲವನ್ನೂ ದೃಷ್ಟಿಸಿ ನೋಡಿದನು. ಕಲ್ಪವೃಕ್ಷದ ಲತೆಳಿಗಳಿಂದಲೂ, ವಿವಿಧ ವೃಕ್ಷಗಳಿಂದಲೂ, ಶೋಭಿಸಿ, ಪರಿಮಳೋದಕದಿಂದ ತುಂಬಿ ಎಲ್ಲೆಡೆಗಳಲ್ಲಿಯೂ ಚನ್ನಾಗಿ ಅಲಂಕರಿಸಿದ ನಂದನಾರಾಮಕ್ಕೆ ಸಮಾನವಾಗಿ, ಮೃಗಪಕ್ಷಿಗಳಿಂದಲೂ, ರಾಜಮಂದಿರಗಳಿಂದಲೂ, ಪಾಸಾದಗಳಿಂದಲೂ ನಿಬಿಡಿತವಾಗಿ, ಕೋಗಿಲೆಗಳ ಮನೋಹರ ಧ್ವನಿಯಿಂದೊಪ್ಪಿ, ಸುವರ್ಣಕಮಲ ಕನ್ನೈದಿಲೆಗಳಿಂದ ಶೋಭಿಸುತ್ತಿರುವ ಕೊಳಗಳಿಂದ ಕೂಡಿ, ಅನೇಕ ದಿವ್ಯಾಸನಗಳಿಂದಲೂ, ರತ್ನಕಂಬಳಿಗಳಿಂದಲೂ ಅಲಂಕೃತವಾದ ಭೂಪ್ರದೇಶವುಳ್ಳ ನೆಲಮಾಳಿಗೆಗಳಿಂದ ವ್ಯಾಪ್ತವಾಗಿರುವುದೂ, ಸಮಸ್ತ ಋತುಗಳಲ್ಲಿಯೂ ಪುಷ್ಪಿಸುವ ಫಲಭರಿತಗಳಾದ ಅನೇಕ ವೃಕ್ಷಗಳಿಂದ ಕಂಗೊಳಿ

ರಮ್ಯಾಂ ಫಲವದ್ಭಿಶ್ಚ ಪಾದಪೈಃ । ಪುಷ್ಪಿತಾನಾಮಶೋಕಾನಾಂ ಶ್ರಿಯಾ ಸೂರ್ಯೋದಯಪ್ರಭಾಂ ॥ ೫ ॥ ಪ್ರದೀಪ್ತಾಮಿವ ತತ್ರಸ್ಥೋ ಮಾರುತಿಸ್ಸಮುದೈಕ್ಷತ । ನಿಷ್ಪತ್ರಶಾಖಾಂ ವಿಹಗೈಃ ಕ್ರಿಯಮಾಣಾಮಿವಾಸಕೃತ್ ॥ ೬ ॥ ವಿನಿಷ್ಪತದ್ಭಿಶ್ಶತಶಶ್ಚಿತ್ರೈಃ ಪುಷ್ಪಾವತಂಸಕೈಃ । ಆಮೂಲಪುಷ್ಪನಿಚಿತೈರಶೋಕೈಶ್ಶೋಕನಾಶನೈಃ ॥ ೭ ॥ ಪುಷ್ಪಭಾರಾತಿಭಾರೈಶ್ಚ ಸ್ಪೃಶದ್ಭಿರಿವ ಮೇದಿನೀಂ । ಕರ್ಣಿಕಾರೈಃ ಕುಸುಮಿತೈಃ ಕಿಂಶುಕೈಶ್ಚ ಸುಪುಷ್ಪಿತೈಃ ॥೮॥ ಸದೇಶಃ ಪ್ರಭಯಾ ತೇಷಾಂ ಪ್ರದೀಪ್ತಇವ ಸರ್ವತಃ। ಪುನ್ನಾಗಾಸ್ಸಪ್ತಪರ್ಣಾಶ್ಚ ಚಂಪಕೋದ್ದಾಲಕಾಸ್ತಥಾ ॥ ೯ ॥ ವಿವೃದ್ಧಮೂಲಾ

ಸೊಗಸಾದ, ಪುಷ್ಪಿತಾನಾಂ - ಹುವ್ವುಬಿಟ್ಟಿರುವ, ಅಶೋಕಾನಾಂ - ಅಶೋಕವೃಕ್ಷಗಳ, ಶ್ರಿಯಾ - ಕಾಂತಿಯಿಂದ, ಸೂರ್ಯೋ....ಭಾಂ - ಸೂರ್ಯನ ಉದಯಕ್ಕೆ ಸಮಾನವಾದ ಕಾಂತಿಯುಳ್ಳ, ಪ್ರದೀ....ತಾಂ-ಉರಿಯುವಂತಿರುವ, ಶತಶಃ-ಅನೇಕವಾಗಿ, ವಿನಿಷ್ಪತದ್ಭಿಃ-ಬೀಳುತ್ತಿರುವ, ಚಿತ್ರೈಃ-ಆಶ್ಚರ್ಯಕರಗಳಾದ, ಪುಷ್ಪಾ....ಕೈಃ - ಹುವ್ವುಗಳೇ ಶಿರೋಭೂಷಣಗಳಾಗಿ ಉಳ್ಳ, ವಿಹಗೈಃ - ಹಕ್ಕಿಗಳಿಂದ, ಅಸಕೃತ್-ಬಾರಿಬಾರಿಗೂ, ನಿಷ್ಪತ್ರಶಾಖಾಂ-ಎಲೆಗಳಿಲ್ಲದ ಕೊನೆಗಳುಳ್ಳುದಾಗಿ, ಕ್ರಿಯಮಾಣಾಮಿವ-ಮಾಡಲ್ಪಡುವಂತಿರುವ, ಆಮೂ....ತೈಃ-ಬುಡಮೊದಲುಗೊಂಡು ತುದಿಯವರೆಗೂ ಹುವ್ವುಗಳಿಂದ ತುಂಬಿರುವ, ಶೋಕನಾಶನೈಃ - ದುಃಖಹರಗಳಾದ ಅಶೋಕ ವೃಕ್ಷಗಳಿಂದಲೂ, ಪುಷ್ಪ....ರೈಃ - ಪುಷ್ಪಸಮೂಹಗಳ ಭಾರದಿಂದಲೂ, ಮೇದಿನೀಂ - ಭೂಮಿಯನ್ನು, ಸ್ಪೃಶದ್ಭಿರಿವ - ಸ್ಪರ್ಶಿಸುವಂತಿರುವ, ಕುಸುಮಿತೈಃ - ಪುಷ್ಪಿಸಿದ, ಕರ್ಣಿಕಾರೈಃ - ಕರ್ಣಿಕಾರ ವೃಕ್ಷಗಳಿಂದಲೂ, ಸುಪುಷ್ಪಿತೈಃ - ಚೆನ್ನಾಗಿ ಹೂಮೊಳೆತಿರುವ, ಕಿಂಶುಕೈಶ್ಚ - ಮುತ್ತುಗದ ಗಿಡಗಳಿಂದಲೂ, ಉಪಲಕ್ಷಿತಾಂ - ಕೂಡಿರುವ, ಅಶೋಕವನಿಕಾಂ - ಅಶೋಕವನವನ್ನು, ತತ್ರಸ್ಥಃ - ಅಲ್ಲಿರುವ, ಮಾರುತಿಃ - ವಾಯುಪುತ್ರನಾದ ಆಂಜನೇಯನು, ಸಮುದೈಕ್ಷತ - ಕಂಡನು, ತೇಷಾಂ - ಆ ವೃಕ್ಷಗಳ, ಪ್ರಭಯಾ - ಕಾಂತಿಯಿಂದ, ಸದೇಶಃ - ಆ ಸ್ಥಳವು, ಸರ್ವತಃ - ಎಲ್ಲಾ ಕಡೆಗಳಲ್ಲಿಯೂ, ಪ್ರದೀಪ್ತಇವಸ್ಥಿತಃ - ಉರಿಯುವಂತಿತ್ತು. ॥ ೮ ॥ ಪುನ್ನಾಗಾಃ - ಸುರಹೊನ್ನೇಗಿಡಗಳು, ಸಪ್ತಪರ್ಣಾಶ್ಚ - ಏಳೆಲೆ ಬಾಳೆಯ ಗಿಡಗಳು, ತಥಾ - ಹಾಗೆಯೇ, ವಿವೃದ್ಧಮೂಲಾಃ - ಬಲಿತಿರುವ ಬುಡಗಳುಳ್ಳ, ಸುಪುಷ್ಪಿತಾಃ - ಚೆನಾಗಿ ಹುವ್ವು ಬಿಟ್ಟಿರುವ, ಬಹವಃ - ಅನೇಕ, ಚಂಪ....ಕಾಃ - ಸಂಪಗೇಗಿಡಗಳೂ, ಚಳ್ಳೇಗಿಡಗಳೂ, ಶೋಭಂತೇಸ್ಮ - ಹೊಳೆಯುತ್ತಿದ್ದವು, ತತ್ರ - ಆ ವನದಲ್ಲಿ, ಕೇಚಿತ್ - ಕೆಲವು ಅಶೋಕವೃಕ್ಷಗಳು, ಶಾತ....ಭಾಃ -

---

ಸುತ್ತಿರುವುದೂ, ಅರಳಿದ ಅಶೋಕಪುಷ್ಪಗಳ ಕಾಂತಿಯಿಂದ ಉದ್ಯತ್ಸೂರ್ಯನಿಗೆ ಸಮಾನವಾದ ಪ್ರಭೆಯುಳ್ಳುದೂ, ಅಡಿಗಡಿಗೂ ಮೇಲಕ್ಕೆ ಹಾರುತ್ತಿರುವ ಪಕ್ಷಿಗಳಿಂದ ಪತ್ರರಹಿತವಾದ ರೆಂಬೆಗಳುಳ್ಳುದಾಗಿ ಪರಮಾಶ್ಚರ್ಯಕರಗಳಾದ ಪುಷ್ಪಗಳೇ ಆಭರಣಗಳಾಗಿ ಉಳ್ಳ, ಬುಡದಿಂದ ತುದಿಯವರೆಗೂ ಕುಸುಮಿಸಿರುವ ಅಶೋಕವೃಕ್ಷಗಳಿಂದ ನಿಬಿಡಿತವಾದುದೂ, ಪುಷ್ಪಸಮೂಹಗಳ ಭಾರವನ್ನು ಹೊರಲಾರದೆ ನೆಲವನ್ನು ಸೋಕುತ್ತಿರುವ ಕರ್ಣಿಕಾರ ಕಿಂಶುಕ ವೃಕ್ಷಗಳಿಂದ ಪ್ರಜ್ವಲಿಸುತ್ತಿರುವ ಆ ಅಶೋಕವನವನ್ನು ಮಾರುತಿಯು ಕಂಡನು. ॥೧-೮॥ ಆ ಸಮಯದಲ್ಲಿ ಸೊಗಸಾಗಿ ಹೂಮೊಳೆತಿರುವ ಅನೇಕ ವೃಕ್ಷಗಳ ಕಾಂತಿಯಿಂದ ಆ ಅಶೋಕವನವು ಎಲ್ಲೆಡೆಗಳಲ್ಲಿಯೂ ಪ್ರಜ್ವಲಿಸುವಂತಿದ್ದಿತು. ಸುರಹೊನ್ನೆ, ಏಳೆಲೆಯ ಭಾಳೆ, ಸಂಪಗೆ, ಉದ್ದಾಲಕವೇ ಮೊದಲಾದ ವೃಕ್ಷಗಳು ಎತ್ತರವಾಗಿ ಬೆಳೆದು ಬಲಿತ ಬುಡ

ಬಹವಶ್ಶೋಭಂತೇಸ್ಮ ಸುಪುಷ್ಪಿತಾಃ । ಶಾತಕುಂಭನಿಭಾಃ ಕೇಚಿತ್ಕೇಚಿದಗ್ನಿ ¶ ಶಿಖೋಪಮಾಃ । ನೀಲಾಂಜನನಿಭಾಃ ಕೇಚಿತ್ತತ್ರಾಽಶೋಕಾ ಸ್ಸಹಸ್ರಶಃ ॥ ೧೦ ॥ ನಂದನಂ ♆ ವಿವಿಧೋದ್ಯಾನಂ ಚಿತ್ರಂ ಚೈತ್ರರಥಂ ಯಥಾ । ಅತಿವೃತ್ತಮಿವಾಚಿಂತ್ಯಂ ದಿವ್ಯಂ ರಮ್ಯಂ ಶ್ರಿಯಾ ವೃತಂ ॥ ೧೧ ॥ ದ್ವಿತೀಯಮಿವ ಚಾಕಾಶಂ ಪುಷ್ಪಜ್ಯೋತಿರ್ಗಣಾಯುತಂ । ಪುಷ್ಪರತ್ನಶತೈಶ್ಚಿತ್ರಂ ಪಂಚಮಂ ಸಾಗರಂ ಯಥಾ ॥ ೧೨ ॥ ಸರ್ವರ್ತುಪುಷ್ಪೈರ್ನಿಚಿತಂ ಪಾದಪೈರ್ಮಧುಗಂಧಿಭಿಃ । ನಾನಾನಿನಾದೈರುದ್ಯಾನಂ ರಮ್ಯಂ ಮೃಗಗಣೈರ್ದ್ವಿಜೈಃ ॥ ೧೩ ॥ ಅನೇಕಗಂಧಪ್ರವಹಂ ಪುಣ್ಯಗಂಧಂ ಮನೋರಮಂ ।

ಚಿನ್ನಕ್ಕೆ ಸದೃಶಗಳಾಗಿದ್ದವು, ಕೇಚಿತ್ - ಕೆಲವು ವೃಕ್ಷಗಳು, ಅಗ್ನಿಶಿಖೋಪಮಾಃ - ಬೆಂಕಿಯ ಜ್ವಾಲೆಗೆ ಸದೃಶಗಳಾಗಿದ್ದವು, ಕೇಚಿತ್ - ಕೆಲವು, ನೀಲಾ....ಭಾಃ - ಕಪ್ಪಾಗಿರುವ ಕಾಡಿಗೆಗೆ ಸದೃಶಗಳಾಗಿದ್ದವು, ಸಹಸ್ರಶಃ - ಅನೇಕ, ಅಶೋಕಾಃ - ಅಶೋಕವೃಕ್ಷಗಳು, ಶೋಭಂತೇಸ್ಮ - ಕಂಗೊಳಿಸುತ್ತಿದ್ದವು. ‖ ೯-೧೦ ‖ ವಿವಿಧೋದ್ಯಾನಂ - ನಾನಾವಿಧಗಳಾದ ಉಪವನಗಳುಳ್ಳ, ಚಿತ್ರಂ - ಆಶ್ಚರ್ಯಕರವಾದ, ನಂದನಂ - ಇಂದ್ರೋದ್ಯಾನವನ್ನು, ಅತಿ....ತಂ - ಅತಿಕ್ರಮಿಸಿದಂತಿರುವ, ಚೈತ್ರರಥಂಯಥಾ - ಕುಬೇರನ ವನದಂತಿರುವ, ಚಿತ್ರಂ - ಆಶ್ಚರ್ಯಕರವಾದ, ಅಚಿಂತ್ಯಂ - ಊಹಿಸಲಶಕ್ಯವಾದ, ದಿವ್ಯಂ - ದೇವತಾಸಂಬಂಧವಾದ, ರಮ್ಯಂ - ಸೊಗಸಾದ, ಶ್ರಿಯಾ - ಕಾಂತಿಯಿಂದ, ವೃತಂ - ಕೂಡಿರುವ, ದ್ವಿತೀಯಂ - ಎರಡನೆಯ, ಆಕಾಶಮಿವ - ಅಂತರಿಕ್ಷದಂತಿರುವ, ಪುಷ್ಪ....ತಂ - ಹುವ್ವುಗಳೆಂಬ ನಕ್ಷತ್ರಗಳ ಸಮುದಾಯದಿಂದ ವ್ಯಾಪ್ತವಾದ, ಪುಷ್ಪ....ಮೇ - ಪುಷ್ಪಗಳೆಂಡ ಅನೇಕ ರತ್ನಗಳಿಂದ, ಚಿತ್ರಂ - ಆಶ್ಚರ್ಯಕರವಾದ, ಪಂಚಮಂ - ಐದನೆಯ, ಸಾಗರಂಯಥಾ - ಕಡಲಿನಂತಿರುವ, ಸರ್ವರ್ತುಪುಷ್ಪೈಃ - ಷಡೃತುಗಳಲ್ಲಿಯೂ ಹುವ್ವುಗಳುಳ್ಳ, ಮಧುಗಂಧಿಭಿಃ - ಮಕರಂದರಸವೂ, ಸುವಾಸನೆಯೂ ಉಳ್ಳ, ಪಾದಪೈಃ - ವೃಕ್ಷಗಳಿಂದ, ನಿಚಿತಂ - ಸಂಕುಲವಾದ, ನಾನಾನಿನಾದೈಃ - ಅನೇಕ ವಿಧವಾದ ಧ್ವನಿಗಳುಳ್ಳ, ಮೃಗಗಣೈಃ - ಮೃಗಸಮೂಹಗಳಿಂದಲೂ, ದ್ವಿಜೈಃ - ಹಕ್ಕಿಗಳಿಂದಲೂ, ರಮ್ಯಂ - ಸೊಗಸಾದ, ಅನೇ....ಹಂ - ಬಹು ಬಗೆಯ ಸುವಾಸನೆಗಳನ್ನು ಸೂಸುತ್ತಿರುವ, ಪುಣ್ಯಗಂಧಂ - ಪುಷ್ಪಗಳ ಸುವಾಸನೆಯುಳ್ಳ,

---

ಗಳುಳ್ಳವಾಗಿ ಶೋಭಿಸುತ್ತಿದ್ದವು. ಅಲ್ಲಿದ್ದ ಸಾವಿರಾರು ಅಶೋಕವೃಕ್ಷಗಳಲ್ಲಿ ಕೆಲವು ಸುವರ್ಣಕುಂಭಕ್ಕೆ ಸಮಾನವಾದ ಕಾಂತಿಯುಳ್ಳವಾಗಿಯೂ ಕೆಲವು ಅಗ್ನಿಜ್ವಾಲೆಗೆ ಸಮಾನವಾದ ಕಾಂತಿಯುಳ್ಳವಾಗಿಯೂ, ಕೆಲವು ಕಪ್ಪು ಕಾಡಿಗೆಗೆ ಸಮಾನವಾದ ಕಾಂತಿಯುಳ್ಳವಾಗಿಯೂ ಕಂಗೊಳಿಸುತ್ತಿದ್ದವು. ಇಷ್ಟೆಯಲ್ಲದೆ ಆ ವನವು ಬಗೆಬಗೆಯ ಉಪವನಗಳಿಂದ ಆಶ್ಚರ್ಯವನ್ನುಂಟುಮಾಡುವ ಇಂದ್ರನ ನಂದನೋದ್ಯಾನದ ಸೊಬಗನ್ನು ಮೀರಿಸಿ, ಕುಬೇರನ ಚೈತ್ರರಥದಂತೆ ಮನೋಹರವಾಗಿ ಕಂಗೊಳಿಸುತ್ತ ವರ್ಣನಾತೀತವಾದ ಮಹಾಕಾಂತಿಯಿಂದ ಕೂಡಿ ಹೂಗಳೆಂಬ ನಕ್ಷತ್ರಗಳಿಂದ ಶೋಭಿಸಿ ಎರಡನೆಯ ಅಂತರಿಕ್ಷದಂತಿರುವುದಾಗಿಯೂ, ಪುಷ್ಪಗಳೆಂಬ ನೂರಾರು ರತ್ನಗಳಿಂದ ಚಿತ್ರಿತವಾಗಿ ಐದನೆಯ ಕಡಲಿನಂತಿರುವುದಾಗಿಯೂ, ಷಡೃತುಗಳಲ್ಲಿಯೂ ಪುಷ್ಪಿಸುವವೂ, ಮಧುಗಂಧಭರಿತವಾದವೂ ಆದ ವೃಕ್ಷಗಳಿಂದ ಶೋಭಿ

¶ "ಶಿಖಿಪ್ರಭಾಃ" ತಿ. ರಾ. ಪಾ. ♆ "ವಿಬುಧೋದ್ಯಾನಂ" ತಿ. ಪಾ.

ಶೈಲೇಂದ್ರಮಿವ ಗಂಧಾಢ್ಯಂ ದ್ವಿತೀಯಂ ಗಂಧಮಾದನಂ ॥ ೧೪ ॥ ಅಶೋಕವನಿಕಾಯಾಂತು ತಸ್ಯಾಂ ವಾನರಪುಂಗವಃ । ಸದದರ್ಶಾವಿದೂರಸ್ಥಂ ಚೈತ್ಯಪ್ರಾಸಾದ $ ಮುಚ್ಛ್ರಿತಂ ॥ ೧೫ ॥ ಮಧ್ಯೇ ಸ್ತಂಭಸಹಸ್ರೇಣ ಸ್ಥಿತಂ ಕೈಲಾಸಪಾಂಡುರಂ । ಪ್ರವಾಳಕೃತಸೋಪಾನಂ ತಪ್ತಕಾಂಚನವೇದಿಕಂ ॥೧೬॥ ಮುಷ್ಣಂತಮಿವ ಚಕ್ಷೂಂಷಿ ದ್ಯೋತಮಾನಮಿವ ಶ್ರಿಯಾ । ವಿಮಲಂ ಪ್ರಾಂಶುಭಾವತ್ವಾದುಲ್ಲಿಖಂತಮಿವಾಂಬರಂ ॥ ೧೭ ॥ ತತೋ ಮಲಿನಸಂವೀತಾಂ ರಾಕ್ಷಸೀಭಿಸ್ಸಮಾವೃತಾಂ । ಉಪವಾಸಕೃಶಾಂ ದೀನಾಂ ನಿಶ್ವಸಂತೀಂ ಪುನಃಪುನಃ ॥ ೧೮ ॥ ದದರ್ಶ ಶುಕ್ಲಪಕ್ಷಾದೌ ಚಂದ್ರರೇಖಾ

ಮನೋರಮಂ - ಮನಸ್ಸಿಗಿಂಪಾಗಿರುವ, ಗಂಧಾಢ್ಯಂ - ಪರಿಮಳಯುಕ್ತವಾದ, ಶೈಲೇಂದ್ರಂ - ಪರ್ವತಶ್ರೇಷ್ಠವಾದ, ದ್ವಿತೀಯಂ - ಎರಡನೆಯ, ಗಂಧ....ತಂ - ಗಂಧಮಾದನಪರ್ವತದಂತಿರುವ, ಉದ್ಯಾನಂ - ಅಶೋಕವನವನ್ನು, ದದರ್ಶ - ಕಂಡನು. ॥ ೧೧-೧೪ ॥ ತಸ್ಯಾಮಶೋಕವನಿಕಾಯಾಂತು - ಆ ಅಶೋಕವನದಲ್ಲಿ, ಸವಾನರಪುಂಗವಃ - ಆ ಕಪಿವರನು, ಅವಿದೂರಸ್ಥಂ - ಸಮೀಪದಲ್ಲಿರುವ, ಉಚ್ಛ್ರಿತಂ - ಉನ್ನತವಾದ, ಸ್ತಂಭ....ಣ - ಸಹಸ್ರ ಕಂಭಗಳೊಡನೆ, ಮಧ್ಯೇ - ವನಮಧ್ಯದಲ್ಲಿ, ಸ್ಥಿತಂ - ಇರುವ, ಕೈಲಾ....ರಂ - ಕೈಲಾಸಪರ್ವತದಂತೆ ಬೆಳ್ಳಗಿರುವ, ಪ್ರವಾ....ನಂ - ಹವಳಗಳಿಂದ ನಿರ್ಮಿತವಾದ ಪಾವಟಿಗೆಗಳುಳ್ಳ, ತಪ್ತ....ಕಂ - ಅಪರಂಜಿಯ ಜಗುಲಿಗಳುಳ್ಳ, ಚಕ್ಷೂಂಷಿ - ನೇತ್ರಗಳನ್ನು, ಮುಷ್ಣಂ....ತಂ - ಪೂರೈಸುವಂತಿರುವ, ಶ್ರಿಯಾ - ಕಾಂತಿಯಿಂದ ದ್ಯೋತ....ತಂ - ಹೊಳೆಯುವಂತಿರುವ, ವಿಮಲಂ - ನಿರ್ಮಲವಾದ, ಪ್ರಾಂಶು....ತ್ - ಅತ್ಯೌನ್ನತ್ಯದಿಂದ, ಅಂಬರಂ - ಅಂತರಿಕ್ಷವನ್ನು, ಉಲ್ಲಿ....ತಂ - ಬರೆಯುವಂತಿರುವ, ಚೈತ್ಯಪ್ರಾಸಾದಂ - ಯಜ್ಞಶಾಲೆಯಂತಿರುವ, ಪ್ರಾಸಾದಂ - ಮಹಡಿಯನ್ನು, ದದರ್ಶ - ಕಂಡನು. ॥ ೧೫-೧೭ ॥ ತತಃ - ಅನಂತರದಲ್ಲಿ, ಮಲಿನಸಂವಿತಾಂ - ಮಾಸಿದ ಬಟ್ಟೆಯಿಂದ ಆಚ್ಛಾದಿತಳಾದ, ರಾಕ್ಷಸೀಭಿಃ - ರಾಕ್ಷಸಸ್ತ್ರೀಯರಿಂದ, ಸಮಾವೃತಾಂ - ಸುತ್ತುವರಿದ, ಉಪ....ಶಾಂ - ನಿರಶನವ್ರತದಿಂದ ಕೃಶಳಾಗಿರುವ, ದೀನಾಂ - ದುಃಖಿತಳಾದ, ಪುನಃಪುನಃ - ಬಾರಿಬಾರಿಗೂ, ನಿಶ್ವಸಂತೀಂ - ನಿಟ್ಟುಸಿರು ಬಿಡುತ್ತಿರುವ,

---

ಸುವುದಾಗಿಯೂ, ಬಗೆಬಗೆಯ ಧ್ವನಿಗಳನ್ನು ಮಾಡುತ್ತಿರುವ ಮೃಗಸಮೂಹಗಳಿಂದಲೂ, ಪಕ್ಷಿಸಮೂಹಗಳಿಂದಲೂ ಬಹು ರಮಣೀಯವಾದುದಾಗಿಯೂ, ವಿವಿಧ ಸುಗಂಧಗಳನ್ನು ಹೊತ್ತು ಸಂಚರಿಸುವ ಮಲಯಮಾರುತದಿಂದೊಪ್ಪಿ ಎರಡನೆಯ ಗಂಧಮಾದನ ಪರ್ವತದಂತೆ ಕಂಗೊಳಿಸುತ್ತಿದ್ದಿತು. ॥೯–೧೫॥ ಹೀಗೆ ಬಹು ರಮಣೀಯವಾದ ಆ ವನಮಧ್ಯದಲ್ಲಿ ಸಮೀಪದಲ್ಲಿಯೇ ಬಹು ಎತ್ತರವಾಗಿ ಸಹಸ್ರ ಸ್ತಂಭಗಳಿಂದ ಕೂಡಿ ಕೈಲಾಸಪರ್ವತದಂತೆ ಬಹು ಶುಭ್ರವಾಗಿ ಬೆಳಗುತ್ತಿರುವುದೂ, ಹವಳಗಳಿಂದ ಮಾಡಿದ ಸೋಪಾನಗಳುಳ್ಳುದೂ, ಸುವರ್ಣ ವೇದಿಕೆಗಳುಳ್ಳುದೂ, ಕಾಂತ್ಯತಿಶಯದಿಂದ ಕಣ್ಣುಗಳನ್ನು ಕೋರೈಸುವುದೂ ಅತ್ಯೌನ್ನತ್ಯದಿಂದ ಅಂತರಿಕ್ಷವನ್ನುಲ್ಲೇಖಿಸುವಂತಿರುವುದೂ ಆದ ಒಂದು ಯಜನಶಾಲೆಯ ಆಕಾರವನ್ನು ತಾಳಿರುವ ಉಪ್ಪರಿಗೆಯನ್ನು ಕಂಡನು. ॥ ೧೬–೧೭ ॥ ಆ ಬಳಿಕ ಮಹಾ ತೇಜಸ್ವಿಯಾದ ಆಂಜನೇಯನು ಮಾಸಿದ ಬಟ್ಟೆಯನ್ನುಟ್ಟು ರಾಕ್ಷಸಸ್ತ್ರೀಯರಿಂದ ಸುತ್ತುವರೆದವಳಾಗಿ ಉಪವಾಸದಿಂದ ಕೃಶಳೂ, ದೀನಳೂ, ಬಾರಿಬಾರಿಗೂ ನಿಟ್ಟುಸಿರುಗಳನ್ನು ಬಿಡುತ್ತಿರುವವಳೂ,

---

$ "ಊರ್ಜಿತಂ" ತಿ. ಮು. ಪಾ.

ಮಿವಾಮಲಾಂ । ಮಂದಪ್ರಖ್ಯಾಯಮಾನೇನ ರೂಪೇಣ ರುಚಿರಪ್ರಭಾಂ ॥ ೧೯ ॥ ಪಿನದ್ಧಾಂ ಧೂಮಜಾಲೇನ ಶಿಖಾಮಿವ ವಿಭಾವಸೋಃ । ಪೀತೇನೈಕೇನಸಂವೀತಾಂ ಕ್ಲಿಷ್ಟೇನೋತ್ತಮವಾಸಸಾ॥೨೦॥ಸಪಂಕಾಮನಲಂಕಾರಾಂ ವಿಪದ್ಮಾಮಿವ ಪದ್ಮಿನೀಂ। § ವ್ರೀಳಿತಾಂ ದುಃಖಸಂತಪ್ತಾಂ ‡ ಪರಿಮ್ಲಾನಾಂ ತಪಸ್ವಿನೀಂ ॥ ೨೧ ॥ ಗ್ರಹೇಣಾಂಗಾರಕೇಣೇವ ಪೀಡಿತಾಮಿವ ರೋಹಿಣೀಂ। ಅಶ್ರುಪೂರ್ಣಮುಖೀಂ¶ ದೀನಾಂ ಕೃಶಾಮನಶನೇನಚ ॥ ೨೨ ॥ ಶೋಕಧ್ಯಾನಪರಾಂ ದೀನಾಂ ನಿತ್ಯಂ ದುಃಖಪರಾಯಣಾಂ ।

ಶುಕ್ಲಪಕ್ಷಾದೌ - ಶುಕ್ಲಪಕ್ಷದ ಪಾಡ್ಯಮಿಯಲ್ಲಿ, ಚಂದ್ರರೇಖಾಮಿವ - ಚಂದ್ರರೇಖೆಯಂತೆ, ಅಮಲಾಂ - ಬೆಳ್ಳಗಿರುವ, ಮಂದ....ನ - ಇದು ಆದೆಂದು ಅತಿ ಪ್ರಯಾಸದಿಂದ ಊಹಿಸತಕ್ಕ, ರೂಪೇಣ - ಸೌಂದರ್ಯದಿಂದ, ರುಚಿರಪ್ರಭಾಂ - ರಮ್ಯವಾದ ಕಾಂತಿಯುಳ್ಳ, ಧೂಮಜಾಲೇನ - ಹೊಗೆಯ ತಂಡದಿಂದ, ಪಿನದ್ಧಾಂ - ಮುಚ್ಚಲ್ಪಟ್ಟ, ವಿಭಾವಸೋಃ - ಅಗ್ನಿಯು, ಶಿಖಾಮಿವಸ್ಥಿತಾಂ - ಜ್ವಾಲೆಯಂತಿರುವ, ಪೀತೇನ - ಹಳದಿಯ, ಕ್ಲಿಷ್ಟೇನ - ಜೀರ್ಣವಾದ, ಏಕೇನ - ಒಂದಾದ, ಉತ್ತ....ಸಾ - ಶ್ರೇಷ್ಠವಸ್ತ್ರದಿಂದ, ಸಂವೀತಾಂ - ಹೊದಿಸಲ್ಪಟ್ಟ, ಸಪಂಕಾಂ - ಕೆಸರಿನಿಂದ ಕೂಡಿದ, ವಿಪದ್ಮಾಂ - ಕಮಲಗಳಿಲ್ಲದಿರುವ, ಪದ್ಮಿನೀಮಿವ - ತಾವರೆಯ ಬಳ್ಳಿಯಂತೆ, ಅನಲಂಕಾರಾಂ - ಅಲಂಕಾರವಿಲ್ಲದಿರುವ, ವ್ರೀಳಿತಾಂ - ನಾಚಿಕೆಗೊಂಡ, ದುಃಖಸಂತಪ್ತಾಂ - ಮನೋರೋಗದಿಂದ ಪರಿತಾಪವುಳ್ಳ, ಪರಿಮ್ಲಾನಾಂ - ಬಾಡಿದ, ತಪಸ್ವಿನೀಂ - ದೀನಳಾದ, ಅಂಗಾರಕೇಣ - ಅಂಗಾರಕವೆಂಬ, ಗ್ರಹೇಣ - ಗ್ರಹದಿಂದ, ಪೀಡಿತಾಂ - ಬಾಧಿತಳಾದ, ರೋಹಿಣೀಮಿವ - ರೋಹಿಣೀನಕ್ಷತ್ರದಂತಿರುವವಳೂ, - ಅಶ್ರು....ಖೀಂ - ಕಣ್ಣೀರಿನಿಂದ ತುಂಬಿರುವ ಮುಖವುಳ್ಳ, ದೀನಾಂ - ದುಃಖಿತಳಾದ, ಅನಶನೇನಚ - ಅನ್ನವಿಲ್ಲದಿರೋಣದರಿಂದಲೂ, ಕೃಶಾಂ - ಕೃಶಳಾದ, ಶೋಕ....ರಾಂ - ಅಂತಸ್ತಾಪದಿಂದ ಚಿರಸಂತಪ್ತಳಾದ, ದೀನಾಂ - ಪರಿತಪಿ

ಶುಕ್ಲಪಕ್ಷದ ಬಿದಿಗೆಯ ಚಂದ್ರರೇಖೆಯಂತೆ ಕಾಂತಿವೈಶಿಷ್ಟ್ಯದಿಂದ ವಿರಾಜಿಸುತ್ತಿರುವವಳೂ, ವೇಷಭಾಷೆಗಳಿಂದ ಬಹಳ ಬದಲಿಸಿದ್ದರೂ ಸ್ವಲ್ಪಮಟ್ಟಿಗೆ ಗುರ್ತಿಸಬಹುದಾದ ಆಕಾರದಿಂದ ಕೂಡಿದ ಕಾಂತಿಯುಳ್ಳವಳೂ, ಹೊಗೆ ಮುಚ್ಚಿದ ಜ್ವಾಲೆಯಂತೆ ಕಂಗೊಳಿಸುವವಳೂ, ಮಾಸಿದ ಪೀತಾಂಬರವನ್ನುಟ್ಟಿರುವುದರಿಂದ ಕೆಸರಿನಿಂದ ಕೂಡಿ ಸೊಬಗಿಲ್ಲದ, ಹುವ್ವಿಲ್ಲದ ತಾವರೆಯ ಬಳ್ಳಿಯಂತಿರುವವಳೂ, ಲಜ್ಜೆಗೊಂಡು ದುಃಖದಿಂದ ಕುದಿದು ಬಾಡಿ ಬೆಂಡಾಗಿರುವವಳೂ, ಅಂಗಾರಕ ಗ್ರಹದಿಂದ ಪೀಡಿತವಾದ ರೋಹಿಣೀನಕ್ಷತ್ರದಂತಿರುವವಳೂ, ಕಂಬನಿಗೂಡಿದ ಮುಖವುಳ್ಳವಳಾಗಿ, ಅಶನವನ್ನು ತೊರೆದಿರುವುದರಿಂದ ಕೃಶಳಾಗಿ ಸಂಕಟಪಡುತ್ತ ಚಿಂತಿಸುತ್ತಿರುವವಳೂ, ಯಾವಾಗಲೂ ದುಃಖದಲ್ಲಿಯೇ ಮುಳುಗಿ ಪ್ರಿಯಜನರನ್ನು ಕಾಣದೆ

§ "ಪೀಡಿತಾಂ" ತಿ. ಪಾ. ‡ "ಪರಿಕ್ಷೀಣಾಂ" ಎ. ರಾ. ಪಾ.

¶ ಇಲ್ಲಿ, "ದೀನಾಂ - ಕೃಶಾಂ" ಎಂಬ ವಿಶೇಷಣಗಳನ್ನು ಪುನಃ ಪುನಃ ಹೇಳುತ್ತಿರುವುದು ಸೀತೆಯ ದೈನ್ಯಕಾರ್ಶ್ಯಗಳ ಅತಿಶಯಾವಸ್ಥೆಯನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ಎಂದು ತಿಳಿಯಬೇಕು. "ಕೃಶಾಮನಶನೇನಚ" ಎಂದು ಇಲ್ಲಿಯೂ ಹೇಳಿರುವುದರಿಂದ ಹಿಂದಿನ ಕಾಂಡದಲ್ಲಿ ನಿರೂಪಿತನಾಗಿರುವ ಇಂದ್ರನ ಪಾಯಸಪ್ರದಾನವು ಕಲ್ಪಿತವೆಂದೇ ನಿರ್ಧಾರವಾಯಿತು. (ಗೋ)

ಪ್ರಿಯಂ ಜನಮಪಶ್ಯಂತೀಂ ಪಶ್ಯಂತೀಂ ರಾಕ್ಷಸೀಗಣಂ ॥ ೨೩ ॥ ಸ್ವಗಣೇನ ಮೃಗೀಂ ಹೀನಾಂ ಶ್ವಗಣಾಭಿವೃತಾಮಿವ । ನೀಲನಾಗಾಭಯಾ ವೇಣ್ಯಾ ಜಘನಂ ಗತಯೈಕಯಾ ॥೨೪॥ ನೀಲಯಾ ನೀರದಾಪಾಯೇ ವನರಾಜ್ಯಾ ಮಹೀಮಿವ । ಸುಖಾರ್ಹಾಂ ದುಃಖಸಂತಪ್ತಾಂ ವ್ಯಸನಾನಾಮಕೋವಿದಾಂ ॥ ೨೫ ॥ ತಾಂ ಸಮೀಕ್ಷ್ಯ ವಿಶಾಲಾಕ್ಷೀಮಧಿಕಂ ಮಲಿನಾಂ ಕೃಶಾಂ । ತರ್ಕಯಾಮಾಸ ಸೀತೇತಿ ಕಾರಣೈರುಪಪಾದಿಭಿಃ ॥೨೬॥ "ಹ್ರಿಯಮಾಣಾ ತದಾ ತೇನ ರಕ್ಷಸಾ ಕಾಮರೂಪಿಣಾ । ಯಥಾ ರೂಪಾಹಿ ದೃಷ್ಟಾ

ಸುತ್ತಿರುವ, ನಿತ್ಯಂ - ಯಾವಾಗಲೂ, ದುಃಖ....ಣಾಂ - ದುಃಖದಲ್ಲಿಯೇ ಮುಳುಗಿರುವ, ಪ್ರಿಯಂ ಜನಂ - ನೆಂಟರನ್ನು, ಅಪಶ್ಯಂತೀಂ - ಕಾಣದಿರುವ, ರಾಕ್ಷಸೀಗಣಂ - ರಾಕ್ಷಸಸ್ತ್ರೀಯರ ಗುಂಪನ್ನು, ಪಶ್ಯಂತೀಂ - ನೋಡುತ್ತಿರುವ, ಸ್ವಗಣೇನ - ತನ್ನ ಸಮೂಹದಿಂದ, ಹೀನಾಂ - ರಹಿತವಾದ, ಶ್ವಗ....ತಾಂ - ನಾಯಿಗಳ ಗುಂಪಿನಿಂದ ಸುತ್ತುವರೆದ, ಮೃಗೀಮಿವಸ್ಥಿತಾಂ - ಹೆಣ್ಣು ಹುಲ್ಲೆಯಂತಿರುವ, ನೀಲ....ಯಾ - ಕೃಷ್ಣಸರ್ಪದ ಕಾಂತಿಯುಳ್ಳ, ಜಘನಂ - ಕಟಿಪ್ರದೇಶವನ್ನು, ಗತಯಾ - ಹೊಂದಿರುವ, ಏಕಯಾ-ಒಂದೇ ತಿರಿಯಾದ, ವೇಣ್ಯಾ-ಜಡೆಯಿಂದ, ನೀರದಾಪಾಯೇ-ಶರದೃತುವಿನಲ್ಲಿ, ನೀಲಯಾ - ಕಪ್ಪಾಗಿರುವ, ವನರಾಜ್ಯಾ - ವನಪಜ್ತಿಯಿಂದ, ಉಪಲಕ್ಷಿತಾಂ - ಕೂಡಿರುವ, ಮಹೀಮಿವಸ್ಥಿತಾಂ - ಭೂಮಿಯಂತಿರುವ, ಸುಖಾರ್ಹಾಂ - ಸುಖಕ್ಕೆ ಅರ್ಹಳಾದ, ದುಃಖಸಂತಪ್ತಾಂ - ವ್ಯಸನದಿಂದ, ಪರಿತಪಿಸುತ್ತಿರುವ, ವ್ಯಸನಾನಾಂ - ದುಃಖಗಳಿಗೆ, ಅಕೋವಿದಾಂ - ಅನರ್ಹಳಾದ ಸೀತಾದೇವಿಯನ್ನು, ದದರ್ಶ - ಕಂಡನು. ॥ ೧೮-೨೫ ॥ ಅಧಿಕಂ - ಹೆಚ್ಚಾಗಿ, ಮಲಿನಾಂ - ಕೊಳೆಯುಳ್ಳ, ಕೃಶಾಂ - ಕ್ಷೀಣಾಂಗಿಯಾದ, ವಿಶಾಲಾಕ್ಷೀಂ - ವಿಸ್ತಾರಗಳಾದ ಕಣ್ಣುಗಳುಳ್ಳ, ತಾಂ - ಆ ಸೀತಾದೇವಿಯನ್ನು, ಸಮೀಕ್ಷ್ಯ - ಕಂಡು, ಉಪಪಾದಿಭಿಃ - ತೋರಿಸುತ್ತಿರುವ, ಕಾರಣೈಃ - ಹೇತುಗಳಾದ ಲಕ್ಷಣಗಳಿಂದ, ಲಕ್ಷಯಾಮಾಸ - ಊಹಿಸಿದನು. ॥ ೨೬ ॥ ತದಾ - ಆ ಕಾಲದಲ್ಲಿ, ಕಾಮರೂಪಿಣಾ - ಸ್ವೇಚ್ಛಾರೂಪವುಳ್ಳ, ತೇನರಕ್ಷಸಾ - ಆ ರಾಕ್ಷಸನಿಂದ, ಹ್ರಿಯಮಾಣಾ - ಕದ್ದೊಯ್ದಿದ್ದ, ಅಂಗನಾ - ಭಾಮಿನಿಯು, ಯಥಾರೂಪಾ - ಎಂತಹ ರೂಪವುಳ್ಳವಳಾಗಿ, ದೃಷ್ಟಾಹಿ - ಕಾಣಲ್ಪಟ್ಟಳೋ, ಇಯಂ - ಈಕೆಯು, ತಥಾರೂಪಾವೈ - ಅದೇ ರೂಪವುಳ್ಳವಳಷ್ಟೆ. ॥ ೨೭ ॥

ರಾಕ್ಷಸಸ್ತ್ರೀಸಮೂಹವನ್ನು ನೋಡುತ್ತ ಗುಂಪಿನಿಂದ ಬೇರೆಯಾಗಿ ನಾಯಿಗಳಿಂದ ಸುತ್ತುವರೆದ ಹೆಣ್ಣು ಹುಲ್ಲೆಯಂತಿರುವವಳೂ, ಕೃಷ್ಣಸರ್ಪದ ಕಾಂತಿಯುಂತಿರುವ ಜಘನಪ್ರದೇಶದವರೆಗೂ ಜಾರಿರುವ ಒಂದೇ ತಿರಿಯಾದ ಜಡೆಯುಂದ ಕೂಡಿ ಶರದೃತುವಿನಲ್ಲಿ ಕಪ್ಪಾದ ವೃಕ್ಷಪಙ್ಕ್ತಿಯಿಂದ ಕೂಡಿದ ಭೂಮಿಯಂತಿರುವವಳೂ, ಸುಖಾರ್ಹಳಾದರೂ ದುಃಖಸಂತಪ್ತಳಾಗಿರುವವಳೂ, ಅಪಾರವಾದ ದುಃಖವನ್ನನುಭವಿಸುತ್ತಿರುವವಳೂ ಆದ ಒಬ್ಬ ಸ್ತ್ರೀಯನ್ನು ಕಂಡನು. ॥ ೧೮–೨೫ ॥ ಹೀಗೆ ದುಃಖದಿಂದ ಕಂಗೆಟ್ಟು ಮಾಲಿನ್ಯದಿಂದ ಕೂಡಿ ಕೃಶಳಾಗಿರುವ ಆಕೆಯನ್ನು ಕಂಡ ಆ ಮಾರುತಿಯು ಯುಕ್ತವಾದ ಕಾರಣಗಳಿಂದ ಆಕೆಯೇ ಸೀತಾದೇವಿಯೆಂದು ಊಹಿಸಿದನು. ಅಲ್ಲದೆ, "ಕಾಮರೂಪಿಯಾದ ರಾವಣನು ಅಪಹರಿಸಿಕೊಂಡುಹೋಗುತ್ತಿರುವಾಗ, ನಾವು ನೋಡಿದ ಸ್ತ್ರೀಗೆ ಯಾವ ರೂಪಸೌಂದರ್ಯಗಳಿದ್ದವೋ, ಅದೇ ರೂಪಸೌಂದರ್ಯಗಳೇ ಈ ಸ್ತ್ರೀಯಲ್ಲಿಯೂ ಇರುವವು. ಈಕೆಯೇ ಸೀತಾದೇವಿಯಿರಬೇಕು" ಎಂದು ಚಿಂತಿಸಿದನು. ॥ ೨೬–೨೭ ॥ ಪೂರ್ಣಚಂದ್ರನನ್ನು ಹೋಲುವ ಮುಖ

* ನೈ ತಥಾ ರೂಪೇಯಮಸುಂಗನಾ" ॥ ೨೭ ॥ ಪೂರ್ಣಚಂದ್ರಾನನಾಂ ಸುಭ್ರೂಂ ಚಾರುವೃತ್ತಪಯೋಧರಾಂ । ಕುರ್ವಂತೀಂ ಪ್ರಭಯಾ ದೇವೀಂ ಸರ್ವಾ ವಿತಿಮಿರಾ ದಿಶಃ ॥ ೨೮ ॥ ತಾಂ ¶ ನೀಲಕೇಶೀಂ ಬಿಂಬೋಷ್ಠೀಂ ಸುಮಧ್ಯಾಂ ಸುಪ್ರತಿಷ್ಠಿತಾಂ । ಸೀತಾಂ ಪದ್ಮಪಲಾಶಾಕ್ಷೀಂ ಮನ್ಮಥಸ್ಯ ರತಿಂ ಯಥಾ ॥ ೨೯ ॥ ಇಷ್ಟಾಂ ಸರ್ವಸ್ಯ ಜಗತಃ ಪೂರ್ಣಚಂದ್ರಪ್ರಭಾಮಿವ । ಭೂಮೌ ಸುತನುಮಾಸೀನಾಂ ನಿಯತಾಮಿವ ತಾಪಸೀಂ ॥ ೩೦ ॥ ನಿಶ್ವಾಸಬಹುಳಾಂ ಭೀರುಂ ಭುಜಗೇಂದ್ರವಧೂಮಿವ । ಶೋಕಜಾಲೇನ ಮಹತಾ ವಿತತೇನ ನ ರಾಜತೀಂ ॥ ೩೧ ॥ ಸಂಸಕ್ತಾಂ ಧೂಮಜಾಲೇನ

ಪೂರ್ಣ....ನಾಂ - ಹುಣ್ಣಿಮೆಯ ಚಂದ್ರನಂತೆ ಮುಖವುಳ್ಳ, ಸುಭ್ರೂಂ - ಒಳ್ಳೆಯ ಕಣ್ಣುಬ್ಬುಗಳುಳ್ಳ, ಚಾರು....ರಾಂ - ಸೊಗಸಾದ ಗುಂಡಾಗಿರುವ ಸ್ತನಗಳುಳ್ಳ, ಪ್ರಭಯಾ - ಕಾಂತಿಯಿಂದ, ಸರ್ವಾ ದಿಶಃ - ಎಲ್ಲಾ ದಿಕ್ಕುಗಳನ್ನೂ, ವಿತಿಮಿರಾಃ - ಕತ್ತಲಿಲ್ಲದವುಗಳನ್ನಾಗಿ, ಕುರ್ವಂತೀಂ - ಮಾಡುತ್ತಿರುವ, ತಾಂ - ಪ್ರಸಿದ್ಧಳಾದ, ನೀಲಕೇಶೀಂ - ಕಪ್ಪಾಗಿರುವ ತಲೆಗೂದಲುಗಳುಳ್ಳ, ಬಿಂಬೋಷ್ಠೀಂ - ತೊಂಡೇ ಹಣ್ಣಿನಂತಿರುವ ತುಟಿಗಳುಳ್ಳ, ಸುಮಧ್ಯಾಂ - ಒಳ್ಳೆಯ ಕಟಿಭಾಗವುಳ್ಳ, ಸುಪ್ರತಿಷ್ಠಿತಾಂ - ಚನ್ನಾಗಿ ನೆಲದಲ್ಲಿಡಲ್ಪಟ್ಟ ಪಾದಗಳುಳ್ಳ, ಸೀತಾಂ - ಅಯೋನಿಜಳಾದ, ಪದ್ಮಾಕ್ಷೀಂ - ಕಮಲದೆಲೆಯಂತೆ ವಿಶಾಲವಾದ ಕಣ್ಣುಗಳುಳ್ಳ, ಮನ್ಮಥಸ್ಯ - ಮನ್ಮಥನ ಪತ್ನಿಯಾದ, ರತಿಂಯಥಾ - ರತೀದೇವಿಯಂತಿರುವ, ಪೂರ್ಣ....ವ - ಪೂರ್ಣಿಮಾಚಂದ್ರನ ಕಾಂತಿಯಂತೆ, ಸರ್ವಸ್ಯ - ಸಮಸ್ತವಾದ, ಜಗತಃ - ಜಗತ್ತಿಗೆ, ಇಷ್ಟಾಂ - ಪ್ರಿಯಳಾದ, ಭೂಮೌ - ನೆಲದಲ್ಲಿ, ಆಸೀನಾಂ - ಕುಳಿತು, ನಿಯತಾಂ - ನಿಯಮನಿಷ್ಠಳಾದ, ಸುತನುಂ - ಒಳ್ಳೆಯ ದೇಹವುಳ್ಳ, ತಾಪ....ತಾಂ - ಋಷಿಪತ್ನಿಯಯಂತಿರುವ, ಭುಜ....ವ - ನಾಗಕನ್ನಿಕೆಯಂತೆ, ನಿಶ್ವಾಸಬಹುಳಾಂ - ಬಹಳವಾಗಿ ನಿಟ್ಟುಸಿರುಬಿಡುತ್ತಿರುವ, ಭೀರುಂ - ಭಯಗೊಂಡಿರುವ, ವಿತತೇನ - ವಿಸ್ತಾರವಾದ, ಧೂಮಜಾಲೇನ - ಹೊಗೆಯ ತಂಡದಿಂದ, ಸಂಸಕ್ತಾಂ - ಕೂಡಿರುವ, ವಿಭಾವಸೋಃ - ಅಗ್ನಿಯ, ಶಿಖಾಮಿವ - ಜ್ವಾಲೆಯಂತೆ, ಮಹತಾ - ದೊಡ್ಡದಾದ, ಶೋಕಜಾಲೇನ - ದುಃಖಪರಂಪರೆಯಿಂದ, ನರಾಜತೀಂ - ಕಂಗೊಳಿಸದಿರುವ, ತಾಂ - ಪ್ರಸಿದ್ಧಳಾದ, ಸಂದಿಗ್ಧಾಂ - ಸಂದೇಹಾಸ್ಪದವಾದ ಅರ್ಥವುಳ್ಳ,

---

ವುಳ್ಳವಳೂ, ಸೊಗಸಾದ ಹುಬ್ಬುಗಳುಳ್ಳವಳೂ, ಮನೋಹರವಾದ ವೃತ್ತಕುಚಗಳುಳ್ಳವಳೂ, ಇಂತಹ ದುರ್ದಶೆಯಲ್ಲಿಯೂ ತನ್ನ ತನುಕಾಂತಿಯಿಂದ ಎಲ್ಲ ದಿಕ್ಕುಗಳನ್ನೂ ಬೆಳಗಿಸುತ್ತಿರುವವಳೂ, ಕಪ್ಪಾದ ತಲೆಗೂದಲುಳ್ಳವಳೂ, ಕೆಂದುಟಿಯುಳ್ಳವಳೂ, ಕೃಶವಾದ ಕಟಿಪ್ರದೇಶವುಳ್ಳವಳೂ, ಮರ್ಯಾದಾರ್ಹಳೂ, ತಾವರೆಯ ಎಸಳಿನಂತೆ ವಿಶಾಲವಾದ ಕಂಗಳುಳ್ಳವಳೂ, ಕಾಮಕುಟುಂಬಿನಿಯಾದ ರತಿಯಂತೆ ಸರ್ವಾಂಗಸುಂದರಿಯಾಗಿ ಜಗತ್ತನ್ನು ಆನಂದಗೊಳಿಸುವ ಪೂರ್ಣಚಂದ್ರಪ್ರಭೆಯಂತಿರುವವಳೂ, ಸ್ಥಂಡಿಲಶಯನವನ್ನು ಮಾಡುತ್ತಿರುವ ತಾಪಸಾಂಗನೆಯಂತಿರುವವಳೂ, ಭೂಮಿಯಮೇಲೆ ಕುಳಿತು ನಾಗಕನ್ನಿಕೆಯಂತೆ ನಿಟ್ಟುಸಿರುಬಿಡುತ್ತಿರುವವಳೂ, ಬಹಳವಾದ ದುಃಖದಿಂದ ಕೂಡಿ ಧೂಮಾಕ್ರಾಂತವಾದ ಅಗ್ನಿಜ್ವಾಲೆಯಂತೆ ಪ್ರಕಾಶವಿಲ್ಲದಿರುವವಳೂ, ಸಂದಿಗ್ಧಾರ್ಥವುಳ್ಳ ಸ್ಮೃತಿಯಂತಿರುವವಳೂ, ಕ್ಷೀಣವಾದ ಭಾಗ್ಯ

* "ಸಾ" ತಿ. ಪಾ. ¶ "ನೀಲಕಂಠೀಂ" ತಿ. ಪಾ.

ಶಿಖಾಮಿವ ವಿಭಾವಸೋಃ । ತಾಂ ಸ್ಮೃತೀಮಿವ ಸಂದಿಗ್ಧಾಮೃದ್ಧಿಂ ನಿಪತಿತಾಮಿವ
॥ ೩೨ ॥ ನಿಹತಾಮಿವ ಚ ಶ್ರದ್ಧಾಮಾಶಾಂ ಪ್ರತಿಹತಾಮಿವ । ಸೋಪಸರ್ಗಾಂ
ಯಥಾ ಸಿದ್ಧಿಂ ಬುದ್ಧಿಂ ಸಕಲುಷಾಮಿವ ॥ ೩೩ ॥ ಅಭೂತೇನಾಪವಾದೇನ ಕೀರ್ತಿಂ
ನಿಪತಿತಾಮಿವ । ರಾಮೋಪರೋಧವ್ಯಥಿತಾಂ * ರಕ್ಷೋಹರಣಕರ್ಶಿತಾಂ ॥ ೩೪ ॥
ಅಬಲಾಂ ಮೃಗಶಾಬಾಕ್ಷೀಂ ವೀಕ್ಷಮಾಣಾಂ ತತಸ್ತತಃ । ಬಾಷ್ಪಾಂಬುಪರಿಪೂರ್ಣೇನ
ಕೃಷ್ಣವಕ್ರಾಕ್ಷಿಪಕ್ಷ್ಮಣಾ ॥ ೩೫ ॥ ವದನೇನಾಪ್ರಸನ್ನೇನ ನಿಶ್ವಸಂತೀಂ ಪುನಃಪುನಃ ।
ಮಲಪಂಕಧರಾಂ ದೀನಾಂ ಮಂಡನಾರ್ಹಾಮಮಂಡಿತಾಂ । ಪ್ರಭಾಂ ನಕ್ಷತ್ರರಾಜಸ್ಯ

ಸ್ಮೃತೀಮಿವಸ್ಥಿತಾಂ - ಮನ್ವಾದಿ ಸ್ಮೃತಿಗಳಲ್ಲಿರುವ, ನಿಪತಿತಾಂ - ಕ್ಷೀಣವಾದ, ಋದ್ಧಿಮಿವ - ಐಶ್ವರ್ಯದಂತಿರುವ, ನಿಹತಾಂ - ಹೋಗಲಾಡಿಸಲ್ಪಟ್ಟ ಇಷ್ಟಾರ್ಥವುಳ್ಳ, ಶ್ರದ್ಧಾಮಿವಸ್ಥಿತಾಂ - ಅವಶ್ಯವಾಗಿ ಫಲಪ್ರಾಪ್ತಿಯುಂಟಾಗುವದೆಂಬ ನಿಶ್ಚಯಜ್ಞಾನದಂತಿರುವ, ಪ್ರತಿಹತಾಂ - ಹೊಡೆಯಲ್ಪಟ್ಟ ಕಾರ್ಯವುಳ್ಳ, ಆಶಾಮಿವ - ಅಪೇಕ್ಷೆಯಂತಿರುವ, ಸೋಪಸರ್ಗಾಂ - ವಿಘ್ನಗಳಿಂದ ಕೂಡಿದ, ಸಿದ್ಧಿಂಯಥಾ - ಸಿದ್ಧಿಯಂತಿರುವ, ಸಕಲುಷಾಂ - ಕಪಟಸಹಿತವಾದ, ಬುದ್ಧಿಮಿವ - ಬುದ್ಧಿಯಂತಿರುವ, ಅಭೂತೇನ-ಎಂದಿಗೂ ಇಲ್ಲದಿರುವ, ಅಪವಾದೇನ-ಅಪವಾದದಿಂದ, ನಿಪತಿತಾಂ-ನಾಶವನ್ನೈದಿದ, ಕೀರ್ತಿಮಿವ - ಯಶಸ್ಸಿನಂತಿರುವ, ರಾಮೋ....ತಾಂ - ಶ್ರೀರಾಮನೊಡಗೂಡಲು ಉಂಟಾಗಿರುವ ತಡೆಯಿಂದ ದುಃಖಿತಳಾದ, ರಕ್ಷೋ....ತಾಂ - ರಾವಣನಪಹರಿಸುವಿಕೆಯಿಂದ ಕೃಶಳಾದ, ಅಬಲಾಂ - ಬಲಹೀನಳಾದ, ಮೃಗಶಾಬಾಕ್ಷೀಂ - ಜಿಂಕೇಮರಿಯ ನೇತ್ರದಂತೆ ನೇತ್ರಗಳುಳ್ಳ, ತತಸ್ತತಃ - ಅಲ್ಲಲ್ಲಿ, ವೀಕ್ಷಮಾಣಾಂ - ನೋಡುತ್ತಿರುವ, ಬಾಷ್ಪಾಂ....ನ - ಕಣ್ಣೀರಿನಿಂದ ತುಂಬಿರುವ, ಕೃಷ್ಣ....ಣಾ - ಸೊಟ್ಟೆಯಾಗಿರುವ ಕಪ್ಪಾದ ಕಣ್ಣುರೆಪ್ಪೆಗಳುಳ್ಳ, ಅಪ್ರಸನ್ನೇನ - ನಿರ್ಮಲವಲ್ಲದ, ವದನೇನ - ಮುಖದಿಂದ, ಪುನಃಪುನಃ - ಬಾರಿಬಾರಿಗೂ, ನಿಶ್ವಸಂತೀಂ - ನಿಟ್ಟುಸಿರು ಬಿಡುತ್ತಿರುವ, ಮಲ....ರಾಂ - ಸ್ನಾನವಿಲ್ಲದಿರುವದರಿಂದ ಮಲಿನವಾಗಿರುವ, ದೀನಾಂ - ದೈನ್ಯವನ್ನು ಹೊಂದಿರುವ, ಮಂಡನಾರ್ಹಾಂ - ಅಲಂಕಾರಕ್ಕೆ ಯೋಗ್ಯಳಾದರೂ, ಅಮಂಡಿತಾಂ - ಅಲಂಕರಿಸಲ್ಪಡದಿರುವ, ಕಾಲಮೇಘೈಃ - ವರ್ಷಾಕಾಲದ ಮೋಡಗಳಿಂದ, ಆವೃತಾಂ - ಮರೆಯಾದ, ನಕ್ಷತ್ರ

ಲಕ್ಷ್ಮಿಯಂತಿರುವವಳೂ ಆಗಿ, ನಶಿಸಿದ ಶ್ರದ್ಧೆಯಂತೆಯೂ, ಫಲವನ್ನು ಕಾಣದ ಆಶೆಯಂತೆಯೂ, ವಿಘ್ನಹೊಂದಿದ ಕಾರ್ಯಸಿದ್ಧಿಯಂತೆಯೂ, ಕಪಟದಿಂದ ಕೂಡಿದ ಬುದ್ಧಿಯಂತೆಯೂ, ಅಪನಿಂದೆಯಿಂದ ನಶಿಸಿದ ಕೀರ್ತಿಯಂತೆಯೂ ಕಾಣುತ್ತ, ತನ್ನ ಪತಿಯಾದ ಶ್ರೀರಾಮನ ವಿರಹದಿಂದ ವ್ಯಥೆಪಡುತ್ತಿರುವವಳೂ, ರಾಕ್ಷಸನಾದ ರಾವಣನು ತನ್ನನ್ನು ಕದ್ದು ತಂದುದರಿಂದ ಮನಮರುಗಿ ಕೃಶಳಾದವಳೂ, ಭಯಚಕಿತವಾದ ಹೆಣ್ಣುಹುಲ್ಲೆಯಂತೆ ದಿಕ್ಕುದಿಕ್ಕುಗಳನ್ನೂ ನೋಡುತ್ತಿರುವವಳೂ, ಕಂಬನಿಗೂಡಿದ ಕಣ್ರೆಪ್ಪೆಗಳಿಂದ ಕೂಡಿ ಮಲಿನವಾದ ಮುಖದಿಂದ ಅಡಿಗಡಿಗೂ ನಿಟ್ಟುಸಿರುಗಳನ್ನು ಬಿಡುತ್ತಿರುವವಳೂ, ಸ್ನಾನಾದಿ ಸಂಸ್ಕಾರಗಳಿಲ್ಲದುದರಿಂದ ಮಲಿನಾಂಗಿಯೂ, ಅಲಂಕಾರಾರ್ಹಳಾದರೂ ಅಲಂಕಾರರಹಿತಳೂ ಆಗಿ ಮಳೆಗಾಲದಲ್ಲಿ ಮುಗಿಲಿನಿಂದ ಮರೆಯಾದ ಚಂದ್ರಪ್ರಭೆಯಂತಿರುವವಳೂ ಆದ ಆ ಸೀತಾ

---

* “ರಕ್ಷೋಗಣನಿಪೀಡಿತಾಂ” ತಿ. ರಾ. ಪಾ.

ಕಾಲಮೇಘೈರಿವಾವೃತಾಂ ॥ ೩೭ ॥ ತಸ್ಯ ಸಂದಿದಿಹೇ ಬುದ್ಧಿರ್ಮುಹುಸ್ಸೀತಾಂ ನಿರೀಕ್ಷ್ಯತು । ಆಮ್ನಾಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ॥ ೩೮ ॥ ದುಃಖೇನ ಬುಬುಧೇ ಸೀತಾಂ ಹನುಮಾನನಲಂಕೃತಾಂ । ಸಂಸ್ಕಾರೇಣ ಯಥಾ ಹೀನಾಂ ವಾಚಮರ್ಥಾಂತರಂಗತಾಂ ॥ ೩೯ ॥ ತಾಂ ಸಮೀಕ್ಷ್ಯ ವಿಶಾಲಾಕ್ಷೀಂ ರಾಜಪುತ್ರೀಂ ಮನಿಂದಿತಾಂ । ತರ್ಕಯಾಮಾಸ ಸೀತೇತಿ ಕಾರಣೈರುಪಪಾದಿಭಿಃ ॥ ೪೦ ॥ “ ವೈದೇಹ್ಯಾ ಯಾನಿ ಚಾಂಗೇಷು ತದಾ ರಾಮೋಽನ್ವಕೀರ್ತಯತ್ । ¶ ತಾನ್ಯಾಭರಣಜಾಲಾನಿ ಶಾಖಾಶೋಭೀನ್ಯಲಕ್ಷಯತ್ ॥ ೪೧ ॥ ಸುಕೃತೌ ಕರ್ಣವೇಷ್ಟೌಚ ಶ್ವದಂಷ್ಟ್ರೌಚ

ರಾಜಸ್ಯ - ಚಂದ್ರನ, ಪ್ರಭಾಮಿವಸ್ಥಿತಾಂ - ಕಾಂತಿಯಂತಿರುವ, ಆಮ್ನಾಯಾನಾಂ - ವೇದಗಳ, ಅಯೋಗೇನ - ಅನಭ್ಯಾಸದಿಂದ, ಪ್ರಶಿಥಿಲಾಂ - ಗಳಿತವಾದ, ವಿದ್ಯಾಮಿವಸ್ಥಿತಾಂ - ಜ್ಞಾನವಿದ್ಯೆಯಂತಿರುವ, ತಾಂಸೀತಾಂತು - ಆ ಸೀತಾದೇವಿಯನ್ನಾದರೆ, ಮುಹುಃ - ಬಾರಿಬಾರಿಗೂ, ನಿರೀಕ್ಷ್ಯ - ಕಂಡು, ತಸ್ಯ - ಆ ಆಂಜನೇಯನ, ಬುದ್ಧಿಃ - ಬುದ್ಧಿಯು, ಸಂದಿದಿಹೇ - ಸಂಶಯ ಗೊಂಡಿತು. ॥ ೨೮ ೩೭ ॥ ಹನುಮಾನ್ - ಆಂಜನೇಯನು, ಅನಲಂಕೃತಾಂ - ಅಲಂಕಾರ ಮಾಡಲ್ಪಡದಿರುವ, ಸೀತಾಂ-ಸೀತಾದೇವಿಯನ್ನು, ಸಂಸ್ಕಾರೇಣ-ವ್ಯುತ್ಪತ್ತಿಯಿಂದ, ಹೀನಾಂ-ರಹಿತವಾದ, ಅರ್ಥಾಂತರಂ-ಮತ್ತೊಂದರ್ಥವನ್ನು, ಗತಾಂ - ಹೊಂದಿದ, ವಾಚಂಯಥಾ - ಮಾತಿನಂತೆ, ದುಃಖೇನ - ಕಷ್ಟದಿಂದ, ಬುಬುಧೇ - ತಿಳಿದುಕೊಂಡನು. ॥೩೯॥ ವಿಶಾಲಾಕ್ಷೀಂ - ವಿಸ್ತಾರಗಳಾದ ನೇತ್ರಗಳುಳ್ಳ, ರಾಜಪುತ್ರೀಂ-ಜನಕರಾಜನ ಮಗಳಾದ, ಅನಿಂದಿತಾಂ - ನಿರ್ದೋಷಳಾದ, ತಾಂ - ಆ ಸೀತಾದೇವಿಯನ್ನು, ಸಮೀಕ್ಷ್ಯ - ಕಂಡು, ಉಪಪಾದಿಭಿಃ - ಗುರ್ತು ತೋರಿಸತಕ್ಕ, ಕಾರಣೈಃ - ಹೇತುಗಳಿಂದ, ಸೀತೇತಿ-ಸೀತಾದೇವಿಯೆಂದು, ತರ್ಕಯಾಮಾಸ - ಊಹಿಸಿದನು. ॥ ೪೦ ॥ ತದಾ - ಆ ವಾನರಪ್ರೇಷಣ ಕಾಲದಲ್ಲಿ, ರಾಮಃ - ಶ್ರೀರಾಮನು, ವೈದೇಹ್ಯಾಃ - ಸೀತಾದೇವಿಯ, ಅಂಗೇಷು - ಅವಯವಗಳಲ್ಲಿ, ಯಾನಿ - ಯಾವ ಆಭರಣಗಳನ್ನು, ಅನ್ವಕೀರ್ತಯತ್ - ವರ್ಣಿಸಿದನೋ, ಸುಕೃತೌ - ಚೆನ್ನಾಗಿ ನಿರ್ಮಿತಗಳಾದ, ಕರ್ಣವೇಷ್ಟೌಚ - ವಾಲೆಗಳನ್ನು, ಸುಸಂಸ್ಥಿತೌ - ಸೊಗಸಾದ, ಶ್ವದಂಷ್ಟ್ರೌಚ - ಬಾವಲಿಗಳನ್ನೂ, ಮಣಿ....ಣಿ - ರತ್ನಗಳಿಂದಲೂ, ಹವಳಗಳಿಂದಲೂ ಕೆತ್ತಿದ, ಹಸ್ತೇಷು - ಕೈಯ್ಗ

ದೇವಿಯನ್ನು ಕಂಡ ಆ ಮಾರುತಿಗೆ ಈಕೆಯು ಸೀತೆಯು ಹೌದೊ ಅಲ್ಲವೊ ಎಂಬ ಸಂದೇಹವುಂಟಾದರೂ, ಆಕೆಯನ್ನು ಚನ್ನಾಗಿ ನೋಡಿ ಆವೃತ್ತಿರಾಹಿತ್ಯದಿಂದ ಶೈಥಿಲ್ಯವನ್ನೈದುವ ವಿದ್ಯೆಯಂತೆಯೂ, ಅಲಂಕಾರಶೂನ್ಯಳಾಗಿ ಬೇರೆ ಅರ್ಥವನ್ನು ಕೊಡುವ ಅವಿವೇಕಿಯ ಮಾತುಗಳಂತೆಯೂ ಇರುವ ಆಕೆಯನ್ನು ಬಹು ಕಷ್ಟದಿಂದ ಸೀತೆಯೇ ಎಂದು ತಿಳಿದುಕೊಂಡನು.॥೨೮–೪೦॥ ಇಷ್ಟೆಯಲ್ಲದೆ ಅನಿಂದಿತಳೂ, ರಾಜಕುಮಾರಿಯೂ ವಿಶಾಲನೇತ್ರಿಯೂ ಆದ ಆಕೆಯನ್ನು ಇನ್ನೂ ಕೆಲವು ಗುರುತುಗಳಿಂದ ಸೀತಾದೇವಿಯೆಂದೇ ನಿಶ್ಚಯಿಸಿದನು. ಹನುಮಂತನು, “ ನಾವು ಕಿಷ್ಕಿಂಧೆಯಿಂದ ಸೀತಾನ್ವೇಷಣಕ್ಕಾಗಿ ಹೊರಟಾಗ ಶ್ರೀರಾಮನು

¶ ಇಲ್ಲಿ, “ ಗಾತ್ರಶೋಭೀನಿ ” ಎಂಬ ಪಾಠವು ಕತಕ ಸಮ್ಮತವಾದುದು. “ ಯಾವ ಯಾವ ಅಂಗಗಳಲ್ಲಿ ಯಾವ ಯಾವ ಆಭರಣಗಳಿರುವ್ರವೆಂದು ರಾಮನು ವರ್ಣಿಸಿದ್ದನೋ ಆ ಆ ಆಭರಣಗಳನ್ನು ಆ ಆ ಅಂಗಗಳಲ್ಲಿ ಹನುಮಂತನು ಕಂಡನು. ಇದರಿಂದ ಆತನಿಗೆ ಆಕೆಯು ಸೀತೆಯೇ ಎಂದು ಅರಿವಾಯಿತು ” ಎಂದು ಕತಕರ ವ್ಯಾಖ್ಯಾನ. ತೀರ್ಥರಾದರೋ, “ ಶಾಖಾಶೋಭೀನಿ ” ಎಂಬ ಪಾಠವನ್ನು ಕಲ್ಪನೆ ಮಾಡಿ, “ ಪತಿವ್ರತಾಶಿರೋಮಣಿಯಾದ ಸೀತೆಯು

ಸುಸಂಸ್ಥಿತಾ । ಮಣಿವಿದ್ರುಮಚಿತ್ರಾಣಿ ಹಸ್ತೇಷ್ವಾಭರಣಾನಿಚ ॥ ೪೨ ॥ ಶ್ಯಾಮಾನಿ ಚಿರಯುಕ್ತತ್ವಾತ್ತಥಾ ಸಂಸ್ಥಾನವಂತಿಚ । ತಾನ್ಯೇವೈತಾನಿ ಮನ್ಯೇಽಹಂ ಯಾನಿ ರಾಮೋಽನ್ವಕೀರ್ತಯತ್ ॥ ೪೩ ॥ ತತ್ರ ಯಾನ್ಯವಹೀನಾನಿ ತಾನ್ಯಹಂ ನೋಪಲಕ್ಷಯೇ । ಯಾನ್ಯಸ್ಯಾ ನಾವಹೀನಾನಿ ತಾನೀಮಾನಿ ನಸಂಶಯಃ ॥ ೪೪ ॥ ಪೀತಂ ಕನಕಪಟ್ಟಾಭಂ ಸ್ರಸ್ತಂ ತದ್ವಸನಂ ಶುಭಂ । ಉತ್ತರೀಯಂ ನಗಾಸಕ್ತಂ ತದಾ ದೃಷ್ಟಂ

ಅಲ್ಲಿರುವ, ಆಭರಣಾನಿಚ - ಒಡವೆಗಳನ್ನೂ, ಚಿರಯುಕ್ತತ್ವಾತ್ - ಬಹು ಕಾಲದಿಂದಲೂ ಉಪಯೋಗಿಸಿದ್ದುದರಿಂದ, ಶ್ಯಾಮಾನಿ - ಕಪ್ಪಾಗಿರುವ, ತಥಾಸಂಸ್ಥಾನವಂತಿ - ಅದೇ ರೀತಿಯಾಗಿಯೇ ಇರುವ, ತಾನಿಆಭರಣಜಾಲಾನಿ - ಆ ಒಡವೆಗಳ ಸಮೂಹಗಳನ್ನು, ಶಾಖಾಶೋಭೀನಿ - ರೆಂಬೆಗಳಲ್ಲಿ ಹೊಳೆಯುತ್ತಿರುವವುಗಳನ್ನಾಗಿ, ಅಲಕ್ಷಯತ್ - ಕಂಡನು. ॥ ೪೧-೪೨ ॥ ರಾಮಃ - ಶ್ರೀರಾಮನು, ಯಾನಿ - ಯಾವ ಒಡವೆಗಳನ್ನು, ಅನ್ವಕೀರ್ತಯತ್ - ಹೇಳಿದನೋ, ಏತಾನಿ - ಇವುಗಳನ್ನು, ತಾನ್ಯೇವ - ಅವುಗಳೆಂದೇ, ಅಹಂ - ನಾನು, ಮನ್ಯೇ - ಭಾವಿಸುತ್ತೇನೆ. ॥ ೪೩ ॥ ತತ್ರ - ಆ ಋಷ್ಯಮೂಕದಲ್ಲಿ, ಯಾನಿ - ಯಾವ ಆಭರಣಗಳು, ಅವಹೀನಾನಿ - ಬಿದ್ದಿದ್ದವೋ, ತಾನಿ - ಅವುಗಳನ್ನು, ಅಹಂ - ನಾನು, ಅತ್ರ - ಇಲ್ಲಿ, ನೋಪಲಕ್ಷಯೇ - ಕಾಣುವದಿಲ್ಲ, ಅಸ್ಯಾಃ - ಈ ಸೀತಾದೇವಿಯ, ಯಾನಿ - ಯಾವ ಒಡವೆಗಳು, ನಾವಹೀನಾನಿ - ಋಷ್ಯಮೂಕದಲ್ಲಿ ಬೀಳಲಿಲ್ಲವೋ, ತಾನಿ - ಅವು, ಇಮಾನಿ - ಇವುಗಳೇ, ನಸಂಶಯಃ - ಸಂದೇಹವಿಲ್ಲ. ॥ ೪೪ ॥ ತದಾ - ಆ ಸೀತಾಪಹಾರ ಕಾಲದಲ್ಲಿ, ಪೀತಂ - ಹಳದಿ ಬಣ್ಣವಾದ, ಕನ....ಭಂ - ಅಪರಂಜೀರೇಖಿನ ಕಾಂತಿಯುಳ್ಳ, ಶುಭಂ - ಶುಭಕರವಾದ, ಉತ್ತರೀಯಂ-ಹೊದ್ದುಕೊಳ್ಳತಕ್ಕ, ಸ್ರಸ್ತಂ-ಜಾರಿದ, ತದ್ವಸನಂ-ಆ ವಸ್ತ್ರವು, ನಗಾಸಕ್ತಂ-

ಯಾವ ಯಾವ ಆಭರಣಗಳನ್ನು ಸೀತಾದೇವಿಯು ಧರಿಸಿರುವಳೆಂದು ಗುರುತು ಹೇಳಿದ್ದನೋ ಆ ಆಭರಣಗಳೆಲ್ಲವೂ ಆ ಶಿಂಶುಪಾವೃಕ್ಷದ ಶಾಖೆಗಳಲ್ಲಿ ಪ್ರಕಾಶಿಸುತ್ತಿವೆ. ಬಹು ಚನ್ನಾಗಿ ನಿರ್ಮಿಸಿದ ವಾಲೆಗಳು, ಹೊನ್ನುವ್ವುಗಳು ಮಾಣಿಕ್ಯಗಳಿಂದಲೂ, ಹವಳಗಳಿಂದಲೂ ಸುಂದರವಾಗಿರುವ ಹಸ್ತಾಭರಣಗಳು ಇವೇ ಮೊದಲಾದ ಆಭರಣಗಳು ಬಹು ಕಾಲದಿಂದಲು ಧರಿಸಲಾಗಿದ್ದನಾದುದರಿಂದಲೂ ಪತಿಯ ವಿರಹತಾಪದಿಂದುಂಟಾದ ಆಕೆಯ ಔಷ್ಣ್ಯದಿಂದಲೂ ಮಲಿನವಾಗಿವೆ. ಇಷ್ಟೆಯಲ್ಲದೆ ಶ್ರೀರಾಮನು ಹೇಳಿದ ಆಭರಣಗಳಲ್ಲಿ ಸೀತಾದೇವಿಯು ರಾವಣನು ತನ್ನನ್ನು ಕದ್ದೊಯ್ಯುತ್ತಿದ್ದಾಗ ಋಷ್ಯಮೂಕಪರ್ವತದಮೇಲೆ ಬಿಸುಟು ಹೋದ ಆಭರಣಗಳನ್ನುಳಿದು ಮಿಕ್ಕವು ಇವೇ ಆಗಿರಬೇಕೆಂಬುದರಲ್ಲಿ ಸಂದೇಹವಿಲ್ಲ. ಆ ದೇವಿಯು ಋಷ್ಯಮೂಕಪರ್ವತವನ್ನು ಸಮೀಪಿಸಿದಾಗ ಆಭರಣಗಳನ್ನು ಕಟ್ಟಿ ಆ ಪರ್ವತದಮೇಲೆ ಬಿಸುಟು ಚಿನ್ನದ ರೇಖೆಗಳ ಕಾಂತಿಯಿಂದ ಕೂಡಿದ ಹಳದಿಯ ಮೇಲ್ಹೊದಿಕೆಯನ್ನೂ, ಅದ

ಶ್ರೀರಾಮನನ್ನಗಲಿರುವಾಗ ಆಭರಣಗಳನ್ನು ತೊಡುವುದು ಉಚಿತವಲ್ಲವೆಂದು ಅವುಗಳನ್ನು ತೆಗೆದು ಆ ಶಿಂಶುಪಾವೃಕ್ಷದ ರೆಂಬೆಗಳಿಗೆ ತಗುಲಿಹಾಕಿದ್ದಳು" ಎಂದು ವ್ಯಾಖ್ಯಾನಿಸಿದ್ದಾರೆ. ಇದು ಅಸಂಗತ. ಇದನ್ನು ಒಪ್ಪುವುದಾದರೆ ಮುಂದೆ, "ಹಸ್ತೇಷ್ವಾಭರಣಾನಿಚ - ಶ್ಯಾಮಾನಿ ಚಿರಯುಕ್ತತ್ವಾತ್" ಮೊದಲಾದ ಪದಗಳಿಗೆ ವೈಯರ್ಥ್ಯವುಂಟಾಗುತ್ತದೆಯಲ್ಲದೆ, ರಾಮನು ಹೇಳಿದ ಆಭರಣಗಳು ಆಕೆಯ ಅಂಗಗಳಲ್ಲಿಲ್ಲದಿದ್ದರೆ ಆಕೆಯು ಸೀತೆಯೋ ಅಲ್ಲವೋ ಎಂಬ ಸಂಶಯವೂ ಹನುಮಂತನಿಗುಂಟಾಗುತ್ತಿದ್ದಿತು. ಆದುದರಿಂದ ಕತಕರ, "ಗಾತ್ರಶೋಭೀನಿ" ಎಂಬ ಪಾಠವೇ ಸಾಧುವು. (೩)

ಪ್ಲವಂಗಮೈಃ ॥೪೫॥ ಭೂಷಣಾನಿಚ ಮುಖ್ಯಾನಿ ದೃಷ್ಟಾನಿ ಧರಣೀತಲೇ । ಅನಯೈವಾಪವಿದ್ಧಾನಿ ಸ್ವನವಂತಿ ಮಹಾಂತಿಚ ॥ ೪೬ ॥ ಇದಂ ಚಿರಗೃಹೀತತ್ವಾದ್ವಸನಂ ಕ್ಲಿಷ್ಟವತ್ತರಂ । ಯಥಾಹಿ ನೂನಂ ತದ್ವರ್ಣಂ ತಥಾ ಶ್ರೀಮದ್ಯಥೇತರತ್ ॥ ೪೭ ॥ ಇಯಂ ಕನಕವರ್ಣಾಂಗೀ ರಾಮಸ್ಯ ಮಹಿಷೀ ಪ್ರಿಯಾ । ಪ್ರಣಷ್ಟಾಪಿ ಸತೀ § ಯಸ್ಯ ಮನಸೋ ನಪ್ರಣಶ್ಯತಿ ॥ ೪೮ ॥ ಇಯಂ ಸಾ ಯತ್ಕೃತೇ ರಾಮಶ್ಚತುರ್ಭಿಃ ‡ ಪರಿತಪ್ಯತೇ । ¶ ಕಾರುಣ್ಯೇನಾನೃಶಂಸ್ಯೇನ ಶೋಕೇನ ಮದನೇನಚ ॥ ೪೯ ॥ ಸ್ತ್ರೀಪ್ರಣ

ಗಿಡಪಲ್ಲಿ ಸಂಬಂಧಿಸಿದುದಾಗಿ, ಪ್ಲವಂಗಮೈಃ - ಕಪಿಗಳಿಂದ, ದೃಷ್ಟಂ - ಕಾಣಲ್ಪಟ್ಟಿತು. ॥ ೪೫ ॥ ಧರಣೀತಲೇ - ಭೂಪ್ರದೇಶದಲ್ಲಿ, ಅನಯೈವ - ಈಕೆಯಿಂದಲೇ, ಅಪವಿದ್ಧಾನಿ - ಬಿಸುಡಲಾದ, ಸ್ವನವಂತಿ - ಶಬ್ದಾಯಮಾನಗಳಾದ, ಮಹಾಂತಿ - ದೊಡ್ಡವುಗಳಾದ, ಮುಖ್ಯಾನಿ - ಶ್ರೇಷ್ಠಗಳಾದ, ಭೂಷಣಾನಿಚ - ಒಡವೆಗಳೂ, ದೃಷ್ಟಾನಿ - ನೋಡಲ್ಪಟ್ಟವು. ॥೪೬॥ ಚಿರ....ತ್ - ಬಹು ಕಾಲದಿಂದ ಉಟ್ಟುಕೊಂಡಿರುವುದರಿಂದ, ಇದಂವಸನಂ - ಈ ವಸ್ತ್ರವು, ಕ್ಲಿಷ್ಟವತ್ತರಂ - ಬಹಳ ಮಲಿನವಾಗಿದೆ, ತಥಾಪಿ - ಹಾಗಾದರೂ, ಇತರತ್ - ಋಷ್ಯಮೂಕದಲ್ಲಿರುವ ಬಟ್ಟೆಯು, ಯಥಾಶ್ರೀಮತ್ - ಯಾವ ಪ್ರಕಾರವಾಗಿ ಕಾಂತಿಯುಳ್ಳದ್ದೋ, ತಥಾ - ಹಾಗೆಯೇ, ತದ್ವರ್ಣಂ - ಅದೇ ಬಣ್ಣವುಳ್ಳದು. ॥೪೭॥ ಕನ....ಗೀ - ಬಂಗಾರದ ಬಣ್ಣದ ಶರೀರವುಳ್ಳ, ರಾಮಸ್ಯ - ಶ್ರೀರಾಮನಿಗೆ, ಪ್ರಿಯಾ - ಇಷ್ಟಳಾದ, ಮಹಿಷೀ - ಪಟ್ಟದರಸಿಯಾದ, ಸತೀಂ - ಪತಿವ್ರತೆಯಾದ, ಯಾ - ಯಾವ ಸೀತಾದೇವಿಯು, ಪ್ರಣಷ್ಟಾಪಿ - ಕಣ್ಣಿಗೆ ಕಾಣದವಳಾದರೂ, ಅಸ್ಯ - ಈ ಶ್ರೀರಾಮನ, ಮನಸಃ - ಮನಸ್ಸಿನಿಂದ, ನಪ್ರಣಶ್ಯತಿ - ನಾಶವಾಗದಿರುವಳೋ, ಸಾ - ಆ ಸೀತೆಯು, ಇಯಂ - ಈಕೆಯೇ. ॥೪೮॥ ರಾಮಃ - ಶ್ರೀರಾಮನು, ಯತ್ಕೃತೇ - ಯಾವ ಸೀತಾ ನಿಮಿತ್ತವಾಗಿ, ಕಾರುಣ್ಯೇನ - ದಯೆ, ಆನೃಶಂಸ್ಯೇನ - ಅಕ್ರೌರ್ಯ, ಶೋಕೇನ - ದುಃಖ, ಮದನೇನಚ - ಕಾಮೋದ್ರೇಕ ಎಂಬ, ಚತುರ್ಭಿಃ - ನಾಲ್ಕರಿಂದಲೂ, ಪರಿತಪ್ಯತೇ - ದುಃಖಪಡುತ್ತಾನೆಯೋ, ಸ್ತ್ರೀ - ಹೆಂಗಸು, ಪ್ರಣಷ್ಟಾ - ನಾಶವಾದಳು, ಇತಿ - ಎಂದು, ಕಾರುಣ್ಯಾತ್ - ಕೃಪೆಯಿಂದಲೂ, ಆಶ್ರಿತೇತಿ - ನನ್ನನ್ನೇ ಹೊಂದಿ

ರಲ್ಲಿದ್ದ ಅಮೂಲ್ಯವಾದ ಆಭರಣಗಳನ್ನೂ ವಾನರರೆಲ್ಲರೂ ಕಂಡಿದ್ದರು. ಅಲ್ಲಿ ಕಂಡ ವಸ್ತ್ರವೂ, ಇಲ್ಲಿ ಈಕೆಯುಟ್ಟಿರುವ ವಸ್ತ್ರವೂ ಒಂದೇ ಬಣ್ಣವುಳ್ಳದಾಗಿದೆ. ಆದರೆ ಈಕೆಯಿದನ್ನು ಬಹು ದಿನಗಳಿಂದಲೂ ಧರಿಸುತ್ತಿರುವುದರಿಂದ ಇದು ಮಲಿನವಾಗಿರುವುದು. ಆದಕಾರಣ ಶ್ರೀರಾಮನಿಗೆ ಪ್ರಿಯಭಾರ್ಯೆಯೂ, ಪತಿವ್ರತೆಯೂ ಆದ ಯಾವ ಸ್ತ್ರೀಯು ಆತನನ್ನಗಲಿದರೂ ನಿರಂತರವೂ ಆತನ ಚಿತ್ತದಲ್ಲಿ ನೆಲಸಿ ಹೃದಯಫಲಕದಲ್ಲಿ ಕಾಣುತ್ತಿರುವಳೋ ಆ ಸೀತಾದೇವಿಯೆಂಬ ಸ್ತ್ರೀಯು ಈಕೆಯೇ. ॥ ೪೧–೪೮ ॥ ಅಲ್ಲದೆ ಶ್ರೀರಾಮನು ಮಡದಿಯು ಅಗಲಿಹೋದಳೆಂಬ ಕಾರುಣ್ಯದಿಂದಲೂ, ತನ್ನನ್ನೇ ನಂಬಿದ್ದಳೆಂಬ ಸ್ನೇಹದಿಂದಲೂ, ಧರ್ಮಾಚರಣೆಯಲ್ಲಿ ಸಮಭಾಗಿನಿಯಾದವಳು ನಷ್ಟಳಾದಳೆಂಬ ವ್ಯಸನದಿಂದಲೂ, ಆತ್ಮಸುಖಕ್ಕೆ

---

§ "ಯಾಽಸ್ಯ" ಗೋ. ಪಾ. ‡ "ಇಹ" ತಿ. ಪಾ.

¶ ಇಲ್ಲಿ ರಾಮನ ಪರಿತಾಪಕ್ಕೆ ನಾಲ್ಕು ಕಾರಣಗಳನ್ನು ಹೇಳಿರುವರು. (೧) ಶ್ರೀರಾಮನು ಪರಮ ಕರುಣಾಮಯನು. ಆತನು ದಯನೀಯರಲ್ಲದವರಲ್ಲಿಯೂ ದಯೆಯನ್ನು ತೋರುವವನು. ಅಂತಹನು ಕೈಹಿಡಿದ ತನ್ನ ಸಹ

ಷ್ಟೇತಿ ಕಾರುಣ್ಯಾದಾಶ್ರಿತೇತ್ಯಾನೃಶಂಸ್ಯತಃ । ಪತ್ನೀ ನಷ್ಟೇತಿ ಶೋಕೇನ ಪ್ರಿಯೇತಿ ಮದನೇನಚ ॥ ೫೦ ॥ ಅಸ್ಯಾ ದೇವ್ಯಾ ಯಥಾರೂಪಮಂಗಪ್ರತ್ಯಂಗಸೌಷ್ಠವಂ । ರಾಮಸ್ಯಚ ಯಥಾ ರೂಪಂ ತಸ್ಯೇಯಮಸಿತೇಕ್ಷಣಾ ॥ ೫೧ ॥ ಅಸ್ಯಾ ದೇವ್ಯಾ ಮನಸ್ತಸ್ಮಿಂಸ್ತಸ್ಯಚಾಸ್ಯಾಂ ಪ್ರತಿಷ್ಠಿತಂ । ತೇನೇಯಂ ಸಚ ಧರ್ಮಾತ್ಮಾ ಮುಹೂರ್ತಮಪಿ

ದವಳೆಂದು, ಅನೃಶಂಸ್ಯತಃ - ಆಶ್ರಿತಸಂರಕ್ಷಣ ಸ್ವಭಾವವುಳ್ಳ ವಾತ್ಸಲ್ಯದಿಂದಲೂ, ಪತ್ನೀ - ಧರ್ಮಪತ್ನಿಯು, ನಷ್ಟಾ - ನಾಶವಾದಳು, ಇತಿ - ಎಂದು, ಶೋಕೇನ - ದುಃಖದಿಂದಲೂ, ಪ್ರಿಯೇತಿ - ಪ್ರೀತಿಪಾತ್ರಳೆಂದು, ಮದನೇಚ - ಕಾಮೋದ್ರೇಕದಿಂದಲೂ, ಪರಿತಪ್ಯತೇ - ಶೋಕಿಸುತ್ತಾನೆಯೋ, ಸಾ - ಆ ಸೀತಾದೇವಿಯು, ಇಯಂ - ಈಕೆಯೇ. ॥ ೫೦ ॥ ಅಸ್ಯಾದೇವ್ಯಾಃ - ಈ ಸೀತಾದೇವಿಯ, ರೂಪಂ - ಆಕಾರವು, ಅಂಗ....ವಂ - ಕರಚರಣಾದ್ಯವಯವಗಳ ಸೌಂದರ್ಯವು, ಯಥಾ- ಹೇಗೆಯೋ, ರಾಮಸ್ಯ - ಶ್ರೀರಾಮನ, ರೂಪಂ - ರೂಪವೂ, ತಥಾ - ಹಾಗೆಯೇ ಇರುವುದು, ರಾಮಸ್ಯ - ರಾಮನ, ರೂಪಂ - ರೂಪವು, ಯಥಾ - ಹೇಗೆಯೋ, ಅಸ್ಯಾದೇವ್ಯಾಃ - ಈ ಸೀತಾದೇವಿಯ, ರೂಪಂ - ರೂಪವೂ, ತಥಾ - ಹಾಗೆಯೇ ಸರಿ, (ಅತಃ - ಈ ಕಾರಣದಿಂದ,) ಇಯಮಸಿತೇಕ್ಷಣಾ - ಈ ಸೀತಾದೇವಿಯು, ತಸ್ಯ - ಆ ರಾಮನಿಗೆ, (ಯೋಗ್ಯಾ - ಅರ್ಹಳು.) ॥೫೧॥ ಅಸ್ಯಾದೇವ್ಯಾಃ - ಈ ಸೀತಾದೇವಿಯ, ಮನಃ - ಮನಸ್ಸು, ತಸ್ಮಿನ್ - ಆ ರಾಮಮೂರ್ತಿಯಲ್ಲಿ, ಪ್ರತಿಷ್ಠಿತಂ - ನೆಲಸಿದೆ, ತೇನ - ಆ ಕಾರಣದಿಂದ, ಇಯಂ - ಈ ಸೀತಾದೇವಿಯು, ಜೀವತಿ - ಬದುಕಿದ್ದಾಳೆ, ತೇನ-ಆ ಕಾರಣದಿಂದ, ಧರ್ಮಾತ್ಮಾ-ಧರ್ಮಸ್ವಭಾವವುಳ್ಳ, ಸಚ-ಆ ಶ್ರೀರಾಮನೂ ಕೂಡ, ಮುಹೂರ್ತಮಪಿ - ಸ್ವಲ್ಪ ಹೊತ್ತಾದರೂ, ಜೀವತಿ - ಬದುಕಿದ್ದಾನೆ. ॥ ೫೨ ॥ ಪ್ರಭುಃ - ಸಮರ್ಥ

ಕಾರಣಳಾದ ಪ್ರಿಯೆಯು ತಪ್ಪಿಹೋದಳೆಂಬ ಕಾಮಜ್ವರದಿಂದಲೂ ಯಾವಾಕೆಗಾಗಿ ಹಗಲಿರುಳೂ ದುಃಖದಿಂದ ಬೇಯುತ್ತಿರುವನೋ, ಆಕೆಯೇ ಈಕೆಯೆಂಬುದರಲ್ಲಿ ಸಂದೇಹವಿಲ್ಲವು. ಇದೂ ಅಲ್ಲದೆ ಶ್ರೀರಾಮನಲ್ಲಿರುವ ಸೌಂದರ್ಯವೂ ಅವಯವಗಳ ಅನುಗುಣವೂ ಹೇಗಿರುವುದೋ ಹಾಗೆಯೇ ಈಕೆಯ ಸೌಂದರ್ಯವೂ, ಅಂಗಪ್ರತ್ಯಂಗಳ ಸೌಷ್ಟವೂ ಅತಿಶಯವಾಗಿರುವುದರಿಂದ ಕನ್ನೈದಿಲೆಯಂತೆ ಕಣ್ಣುಗಳುಳ್ಳ ಈಕೆಯು ಆತನ ಅರ್ಧಾಂಗಿಯೇ ಸರಿ. ಈ ಸೀತಾದೇವಿಯ ಮನಸ್ಸು ಪತಿಯಾದ ಶ್ರೀರಾಮನಲ್ಲಿಯೂ, ಆತನ ಮನಸ್ಸು ಪತ್ನಿಯಾದ ಈಕೆಯಲ್ಲಿಯೂ ಸಂತತವೂ ಸುಪ್ರತಿಷ್ಠಿತವಾಗಿರುವುದರಿಂದ ಧರ್ಮಾತ್ಮನಾದ ಆತನೂ, ಮಹಾ ಪತಿವ್ರತೆಯಾದ ಈಕೆಯೂ ಇದುವರೆಗೂ ಬದುಕಿರುವರು. ಆದರೆ ಶ್ರೀರಾಮನು

ಧರ್ಮಿಣಿ - ಸೀತೆಯು ಇತರರ ಕೈಗೆ ಸಿಕ್ಕಿ ಬಾಧೆಪಡುತ್ತಿದ್ದರೂ ಆಕೆಯನ್ನು ಸಂರಕ್ಷಿಸದಿದ್ದುದಕ್ಕಾಗಿ ಮರುಗುವನು. "ಆಪದಿಸ್ತ್ರಿಯೋ ರಕ್ಷ್ಯಾಃ" ಎಂದಿದೆ. (೨) ಆಶ್ರಿತಸಂರಕ್ಷಣ ಧುರೀಣನಾದ ರಾಮನು ತನ್ನನ್ನೇ ಆಶ್ರಯಿಸಿ ತನ್ನೊಡನೆ ವನವಾಸಕ್ಕಾಗಿ ಬಂದ ಆಕೆಯನ್ನು ಸಂರಕ್ಷಿಸದಿದ್ದುದಕ್ಕಾಗಿ ಮರುಗುವನು. (೩) "ಅರ್ಧೋವಾ ಏಷ ಆತ್ಮನೋ ಯತ್ಪತ್ನೀ" ಎಂಬಂತೆ ತನ್ನ ಅರ್ಧಾಂಗಿಯು ನಷ್ಟವಾದುದರಿಂದ ತನ್ನ ಅರ್ಧದೇಹವೇ ನಷ್ಟವಾಯಿತೆಂದು ಮರುಗುವನು. (೪) ಪರಮ ರೂಪಲಾವಣ್ಯಮಯಿಯಾಗಿ ಪರಮ ಸುಖಸಾಧನಭೂತಳಾದ ಪ್ರಿಯೆಯು ನಷ್ಟವಾದಳೆಂದು ಮರುಗುವನು. ಹೀಗೆ ಮರುಗುವುದು, "ಕಾರುಣ್ಯ - ಆನೃಶಂಸ್ಯ - ಶೋಕ - ಮದನ" ಎಂಬ ನಾಲ್ಕು ಕಾರಣಗಳಿಂದ, ಎಂಬುದೇ ಇಲ್ಲಿ ಸ್ವಾರಸಿಕಾರ್ಥವು. (ತಿ+ಶ್ರೀ)

ಜೀವತಿ ‖ ೫೨ ‖ ¶ ದುಷ್ಕರಂ ಕೃತವಾನ್ರಾಮೋ ಹೀನೋ ಯದನಯಾ ಪ್ರಭುಃ ।
ಧಾರಯತ್ಯಾತ್ಮನೋ ದೇಹಂ ನಶೋಕೇನಾವಸೀದತಿ ‖ ೫೩ ‖ $

ನಾದ, ರಾಮಃ - ಶ್ರೀರಾಮನು, ಅನಯಾ - ಈ ಸೀತಾದೇವಿಯಿಂದ, ಹೀನಃ - ರಹಿತನಾಗಿ, ಆತ್ಮನಃ- ತನ್ನ, ದೇಹಂ - ಶರೀರವನ್ನು, ಧಾರಯತೀತಿಯತ್ - ಧರಿಸಿರುವನೆಂಬ, ಶೋಕೇನ - ದುಃಖ ದಿಂದ, ನಾವಸೀದತೀತಿಯತ್ - ಪರಿತಪಿಸುವದಿಲ್ಲವೆಂಬ, ತತ್‌ದುಷ್ಕರಂ - ಅಂಥಾ ಅಸಾಧ್ಯ ಕಾರ್ಯವನ್ನು, ಕೃತವಾನ್ - ಮಾಡಿದ್ದಾನೆ. ‖ ೫೩ ‖ ಮಹಾಬಾಹುಃ - ಮಹಾ ಪರಾಕ್ರಮಿಯಾದ, ಯಃರಾಮಃ - ಯಾವ ಶ್ರೀರಾಮನು, ಮತ್ತಕಾಶಿನೀಂ - ಉತ್ತಮ ಸ್ತ್ರೀಯಾದ, ಇಮಾಂಸೀತಾಂವಿನಾ- ಈ ಸೀತಾದೇವಿಯನ್ನು ಬಿಟ್ಟು, ಮುಹೂರ್ತಮಪಿ - ಮುಹೂರ್ತಕಾಲವಾದರೂ, ಜೀವತಿ - ಬದುಕಿ ದ್ದಾನೋ, ಸಃ - ಆ ಶ್ರೀರಾಮನು, ದುಷ್ಕರಂ - ಇತರರು ಮಾಡಲಸಾಧ್ಯವಾದ ಕಾರ್ಯವನ್ನು, ಕೃತವಾನ್ - ಮಾಡಿದ್ದಾನೆ. ‖ ೫೪ ‖ ಏವಂ - ಈ ರೀತಿಯಾಗಿ, ತದಾ - ಆ ಕಾಲದಲ್ಲಿ, ಸೀತಾಂ - ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಹೃಷ್ಟಃ - ಸಂತೋಷಗೊಂಡ, ಪವನಸಂಭವಃ - ವಾಯು

ಇಂತಹ ಸಕಲಸದ್ಗುಣಸಂಪನ್ನಳಾದ ಈ ಸೀತಾದೇವಿಯನ್ನಗಲಿ ಇನ್ನೂ ಶರೀರವನ್ನು ಧರಿ ಸಿದ್ದಾನೆ. ಆತನು ಈಕೆಯ ವಿಯೋಗದುಃಖದಿಂದ ದೇಹವನ್ನು ತೊರೆಯದಿರುವುದು ಅತ್ಯಾಶ್ಚರ್ಯವೇ ಸರಿ.'' ಹೀಗೆ ಪವನಸಂಭವನಾದ ಹನುಮಂತನು ಬಹು ಪ್ರಕಾರ

ಈ ಶ್ಲೋಕದಲ್ಲಿನ ವಿಶೇಷಾರ್ಥಗಳು

¶ ಆಬಾಲ ಬ್ರಹ್ಮಚಾರಿಯಾಗಿ ಸ್ತ್ರೀಮೋಹದ ಸ್ಪೃಕ್ಕನ್ನೇ ಕಾಣದಿರುವ ಹನುಮಂತನು ಮಾಲ್ಯವತ್ಪರ್ವತದಲ್ಲಿ ಸೀತಾವಿರಹ ಕ್ಲೇಶಾತಿಶಯದಿಂದ ಸಂತಪಿಸುತ್ತಿರುವ ಶ್ರೀರಾಮಮೂರ್ತಿಯನ್ನು ನೋಡಿ ಆತನನ್ನು ಆಕ್ಷೇಪಿಸಿ ಪರಿಹಾಸ ಮಾಡುವನು. "ಅಹಹ! ಷಡ್ಗುಣೈಶ್ವರ್ಯಸಂಪನ್ನರಾದ ವಸಿಷ್ಟ ಮಹರ್ಷಿಗಳಿಗೆ ಶಿಷ್ಯನಾಗಿ ಪ್ರಾಪಂಚಿಕ ವಿಷಯ ಸುಖಗಳ ರೀತಿನೀತಿಗಳನ್ನು ತಿಳಿದಿರುವ ಶ್ರೀರಾಮನು ಒಬ್ಬ ಸ್ತ್ರೀಗಾಗಿ ಹೀಗೆ ವ್ಯಸನಪಡುವುದುಂಟೆ!" ಎಂದು ಹನು ಮಂತನಿಗೆ ತೋರಿತು. "ಶ್ರೀರಾಮನು ಈಕೆಯ ವಿರಹದಿಂದ ದುಃಖಿಸುತ್ತಿರುವುದನ್ನು ನೋಡಿದರೆ ಆತನು ಜೀವಿಸು ವುದು ಸರ್ವಥಾ ದುಸ್ತರವೇ ಸರಿ. ಹೀಗಾದರೂ ಆತನು ತನ್ನ ಪ್ರಾಣವನ್ನು ಉಳಿಸಿಕೊಂಡಿರುವ ಅಸದಳವಾದ ಕಾರ್ಯ ವನ್ನು ಮಾಡಿರುವನು. ಇದು ಮಹಾ ಕಾರ್ಯವೇ ಸರಿ. ಈಕೆಯನ್ನುಳಿದು ಆತನು ಬದುಕಿರುವನೆಂಬುದು ಅಶಕ್ಯವು. ಆದರೂ ಶ್ರೀರಾಮನು ಪ್ರಭುತ್ವಶಕ್ತಿಯಲ್ಲಿ ಮಹಾ ಸಮರ್ಥನು. ಅದರೇನು? ಆತನು ಗಜಾಶ್ವಾದಿಗಳನ್ನು ಶಿಕ್ಷಿಸುವುದ ರಲ್ಲಿಯೂ, ರಾಜ್ಯಪರಿಪಾಲನವನ್ನು ಮಾಡುವುದರಲ್ಲಿಯೂ ಸಮರ್ಥನೇ ಹೊರತು ಈ ವಿರಹವ್ಯಥೆಯನ್ನು ತಡೆಯುವುದ ರಲ್ಲಿ ಸಮರ್ಥನಲ್ಲವು. ಕೇವಲ ಭೋಗಾಯತನವಾದ ಈ ಶರೀರವನ್ನು ಆತನೇಕೆ ತೊರೆದುಬಿಡಬಾರದು? ದೇಹವನ್ನು ತೊರೆಯಲು ಆತನು ಸ್ವತಂತ್ರನೇ ಆಗಿರುವನು. ಸೀತೆಯಂತೆ ಆತನೂ ಪರತಂತ್ರನಾಗಿದ್ದರೆ ದೇಹವನ್ನು ತೊರೆಯುವುದು ಹೇಗೆಂದು ಆತನು ಯೋಚಿಸಬೇಕಾಗಿದ್ದಿತು. ಆದರೂ ದೇಹವನ್ನು ಧರಿಸಿರುವನು. ಭಕ್ತರಿಗಾಗಿಯೇ ತಾನು ಈ ದೇಹ ವನ್ನು ಧರಿಸಿರುವನಾದುದರಿಂದ ಆತನೂ ಪರತಂತ್ರನೇ ಸರಿ. ಆದುದರಿಂದಲೇ ಆತನು ಇಂತಹ ದುಃಖದಶೆಯಲ್ಲಿಯೂ ದೇಹವನ್ನು ತೊರೆಯದೆ ಅದನ್ನುಳಿಸಿಕೊಂಡಿರುವನು" ಎಂದು ಹನುಮಂತನ ಹೃದಯ. (ಗೋವಿಂದರಾಜರು)

ತನಿ ಶ್ಲೋಕಿಯಲ್ಲಿ ಇನ್ನೂ ಕೆಲವು ವಿಶೇಷಾರ್ಥಗಳು ಪ್ರತಿಪಾದಿತವಾಗಿವೆ. ಅವುಗಳನ್ನು ಗ್ರಂಥವಿಸ್ತರ ಭಯ ದಿಂದ ಇಲ್ಲಿ ಕೊಡಲು ಆಗಲಿಲ್ಲ.

$ ದುಷ್ಕರಂ ಕುರುತೇ ರಾಮೋ ಯ ಇಮಾಂ ಮತ್ತಕಾಶಿನೀಂ ।
ಸೀತಾಂ ವಿನಾ ಮಹಾಬಾಹು ರ್ಮುಹೂರ್ತಮಪಿ ಜೀವತಿ ‖

ಈ ಶ್ಲೋಕವು ಗೋ. ಪಾ. ದಲ್ಲಿ ಅಧಿಕ.

¶ ಏವಂ ಸೀತಾಂ ತದಾ ದೃಷ್ಟ್ವಾ ಹೃಷ್ಟಃ ಪವನಸಂಭವಃ ।
ಜಗಾಮ ಮನಸಾ ರಾಮಂ ಪ್ರಶಶಂಸ ಚ ತಂ ಪ್ರಭುಂ ॥ ೫೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚದಶಸ್ಸರ್ಗಃ

ಪುತ್ರನಾದ ಆಂಜನೇಯನು, ಪ್ರಭುಂ-ಸ್ವಾಮಿಯಾದ, ತಂರಾಮಂ-ಆ ಶ್ರೀರಾಮನನ್ನು, ಮನಸಾ-ಮನದಿಂದ, ಜಗಾಮ - ಹೊಂದಿದನು, ಪ್ರಶಶಂಚ - ಸ್ತೋತ್ರವನ್ನೂ ಮಾಡಿದನು. ॥ ೫೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚದಶಸ್ಸರ್ಗಃ.

ವಾಗಿ ಯೋಚಿಸಿ ಸೀತಾದರ್ಶನದಿಂದ ಮನಸ್ಸಂತೋಷವನ್ನು ಹೊಂದಿ ಶ್ರೀರಾಮಮೂರ್ತಿಯನ್ನು ತನ್ನಲ್ಲಿ ತಾನೇ ಹೊಗಳಿದನು. ॥ ೪೯—೫೫ ॥

ಇಂತಿದು ಹನುಮತ್ಕೃತ ಸೀತಾದರ್ಶನ ವೃತ್ತಾಂತವೆಂಬ ಹದಿನೈದನೆಯ
ಸರ್ಗವು ಸಮಾಪ್ತವಾದುದು.

ಈ ಶ್ಲೋಕದಲ್ಲಿನ ಸ್ವಾರಸಿಕಾರ್ಥ:—

¶ ಮಲಿನಾಂಬರತ್ವ, ಉಪವಾಸಕೃತತ್ವ, ಶೋಕಧ್ಯಾನಪರಾಯಣತ್ವವೇ ಮೊದಲಾದ ಪಾತಿವ್ರತ್ಯ ಧರ್ಮಗಳಿಂದ ಕೂಡಿದ ಸೀತಾದೇವಿಯನ್ನು ನೋಡಿದ ವಾಯುನಂದನನು "ಆಹಾ! ಮಹಾ ಪತಿವ್ರತಾಶಿರೋಮಣಿಯಾದ, ಸದ್ಗುಣಮಣಿಯಾದ ಈಕೆಯನ್ನು ಕೈಹಿಡಿದ ನಮ್ಮ ರಘುರಾಮನು ಏನು ಭಾಗ್ಯವಂತನೋ!" ಎಂದು ಶ್ರೀರಾಮನನ್ನು ಪ್ರಶಂಸಿಸಿದನು. "ಸೀತಾಂಚ ಪ್ರಶಶಂಸ" "ಮಹಾ ಬಲಾಢ್ಯನಾಗಿ, ಭವ್ಯವಾದ ಪ್ರಭುತ್ವಶಕ್ತಿಯುಳ್ಳ ರಾವಣನಿಂದ ಅಪಹೃತಳಾಗಿದ್ದರೂ ಪಾತಿವ್ರತ್ಯಾದಿ ಗುಣಗಳನ್ನುಳಿಸಿಕೊಂಡಿರುವ ಈಕೆಯೇ ಸರ್ವೋತ್ತಮಳು! ಈಕೆಯೇ ನಾರೀಶಿರೋಮಣಿಯು" ಎಂದು ಸೀತಾದೇವಿಯನ್ನೂ ಕೊಂಡಾಡಿದನು. (ರಾಮಪಂಡಿತರು)

ಸುಂದರಕಾಂಡೇ ಷೋಡಶಸ್ಸರ್ಗಃ

ಪ್ರಶಸ್ಯತು ಪ್ರಶಸ್ತವ್ಯಾಂ ಸೀತಾಂ ತಾಂ ಹರಿಪುಂಗವಃ । ಗುಣಾಭಿರಾಮಂ ರಾಮಂಚ ಪುನಶ್ಚಿಂತಾಪರೋಽಭವತ್ ॥ ೧ ॥ ಸ ಮುಹೂರ್ತಮಿವ ಧ್ಯಾತ್ವಾ ಬಾಷ್ಪ ಪರ್ಯಾಕುಲೇಕ್ಷಣಃ । ಸೀತಾಮಾಶ್ರಿತ್ಯ ತೇಜಸ್ವೀ ಹನುಮಾನ್ವಿಲಲಾಪ ಹ ! ॥೨॥ ¶ ಮಾನ್ಯಾ ಗುರುವಿನೀತಸ್ಯ ಲಕ್ಷ್ಮಣಸ್ಯ ಗುರುಪ್ರಿಯಾ । ಯದಿ ಸೀತಾಪಿ ದುಃಖಾರ್ತಾ

ಹರಿಪುಂಗವಃ - ವಾನರಶ್ರೇಷ್ಠನು, ಪ್ರಶಸ್ತವ್ಯಾಂ - ಸ್ತೋತ್ರಾರ್ಹಳಾದ, ತಾಂಸೀತಾಂ - ಆ ಸೀತಾದೇವಿಯನ್ನು, ಗುಣಾಭಿರಾಮಂ ಸೌಶೀಲ್ಯಾದಿ ಗುಣಗಳಿಂದ ಮನೋಹರನಾದ, ರಾಮಂಚ- ಶ್ರೀರಾಮನನ್ನೂ, ಪ್ರಶಸ್ಯ - ಪ್ರಶಂಸಿಸಿ, ಪುನಃ - ಮತ್ತು, ಚಿಂತಾಪರಃ - ಆಲೋಚನೆಯಲ್ಲಿ ಆಸಕ್ತನಾದವನು, ಅಭವತ್ - ಆದನು. ॥ ೧ ॥ ತೇಜಸ್ವೀ - ಅಂತಸ್ಸಾರವುಳ್ಳ, ಸಹನುಮಾನ್ - ಆ ಆಂಜನೇಯನು, ಮುಹೂರ್ತಂ-ಸ್ವಲ್ಪಕಾಲ, ಧ್ಯಾತ್ವೇವ-ಧ್ಯಾನಿಸಿದ ಹಾಗೆ ಮಾಡಿ, ಬಾಷ್ಪ....ಣಃ- ಕಣ್ಣೀರಿನಿಂದ ತುಂಬಿದ ನೇತ್ರಗಳುಳ್ಳವನಾಗಿ, ಸೀತಾಂ - ಸೀತಾದೇವಿಯನ್ನು, ಆಶ್ರಿತ್ಯ - ಉದ್ದೇಶಿಸಿ, ವಿಲಲಾಪಹ - ವಿಲಪಿಸಿದನು. ॥ ೨ ॥ ಗುರು....ಸ್ಯ - ದೊಡ್ಡವರಿಂದ ಶಿಕ್ಷಿಸಲ್ಪಟ್ಟ, ಲಕ್ಷ್ಮಣಸ್ಯ - ಲಕ್ಷ್ಮಣನ, ಗುರುಪ್ರಿಯಾ - ಅಣ್ಣನಾದ ಶ್ರೀರಾಮಮೂರ್ತಿಗೆ ಹೆಂಡತಿಯಾದ, ಮಾನ್ಯಾ - ಪೂಜ್ಯಳಾದ, ಸೀತಾಪಿ-ಸೀತಾದೇವಿಯೂ ಕೂಡ, ದುಃಖಾರ್ತಾಯದಿ-ದುಃಖಿತಳಾದವಳೇ

ಕಪಿವರನಾದ ಮಾರುತಿಯು ಈ ರೀತಿ ಸ್ತೋತ್ರಾರ್ಹಳಾದ ಸೀತಾದೇವಿಯನ್ನೂ, ಸುಗುಣಸಂಪನ್ನನಾದ ಶ್ರೀರಾಮನನ್ನೂ ಹೊಗಳಿ, ಆತನನ್ನು ಸ್ಮರಿಸಿ ಕೂಡಲೇ ಚಿಂತಾ ಮಗ್ನನಾದನು. ಹೀಗೆ ಚಿಂತಾಪರವಶನಾಗಿ ಒಂದು ಮುಹೂರ್ತಕಾಲ ಯೋಚಿಸು ತ್ತಿದ್ದು ದುಃಖವನ್ನು ತಡೆಯಲಾರದೆ ಕಂಬನಿದುಂಬಿದ ಕಂಗಳುಳ್ಳವನಾಗಿ ಸೀತಾದೇವಿಯನ್ನು ದ್ದೇಶಿಸಿ ಹೀಗೆ ವಿಲಪಿಸಿದನು. "ಅಕ್ಕಟ! ಗುರುಜನಗಳಿಗೆ ವಿಧೇಯನಾಗಿ ಲಕ್ಷ್ಮಣನಿಗೆ ಅಣ್ಣ ನಾದ ಶ್ರೀರಾಮನ ಪ್ರಿಯತಮೆಯೂ, ಪೂಜ್ಯಳೂ ಆದ ಈ ಸೀತಾದೇವಿಯೂ ಹೀಗೆ ದುಃಖ ವನ್ನನುಭವಿಸಬೇಕಾಗಿ ಬಂದಿತೇ! ಅಯ್ಯೊ! ಇದು ಕಾಲವೈಪರೀತ್ಯವೇ ಸರಿ. ಆ ಕಾಲವನ್ನತಿ

ಇಲ್ಲಿ ಈ ವಿಷಯವನ್ನು ಗಮನಿಸತಕ್ಕುದು:—

¶ "ದುಃಖವಾಗಲಿ, ಸುಖವಾಗಲಿ ಕಾಲದಿಂದಲೇ ಸಂಭವಿಸುತ್ತದೆಯೆಂದು ಹೇಳಬಾರದು. ಹಾಗೆ ಹೇಳುವು ದಾದರೆ ಕರ್ಮಾನುಷ್ಠಾನಕ್ಕೆ ವೈಫಲ್ಯವು ಬರುತ್ತದೆ. ಕರ್ಮಾನುಷ್ಠಾನಕ್ಕೆ ಫಲವೊದಗುವ ಕಾಲಕ್ಕೇ ಸುಖದುಃಖಾದಿ ಗಳುಂಟಾಗುತ್ತವೆಂದು ಅಂಗೀಕಾರ ಮಾಡಿಕೊಂಡರೂ ಈಶ್ವರಾವತಾರಸ್ವರೂಪರಾದ ಸೀತಾರಾಮರಿಗೆ ಕರ್ಮಲೇಪವೇ ಇಲ್ಲದಿರುವುದರಿಂದ ಅವರಿಗೆ ಈ ದುಃಖವೇಕೆ ? ಸುಖವೇಕೆ ? ಅದಕ್ಕಾಗಿ ಅವರು ವ್ಯಥೆಪಡುವುದೇಕೆ ?" ಎಂಬ ಸಂಶಯ ವುಂಟಾಗಬಹುದು. ಅದಕ್ಕೆ ಹೀಗೆ ಸಮಾಧಾನ,—

ವಾಸ್ತವವಾಗಿ ಸೀತಾರಾಮರಿಗೆ ಸುಖದುಃಖಗಳಿಲ್ಲವಾದರೂ ಲೋಕಾನುಗ್ರಹಾರ್ಥವಾಗಿ ಮಾನುಷ ದೇಹವನ್ನು ಧರಿಸಿರುವ ಅವರಿಬ್ಬರೂ, ತಾವು ಮನುಷ್ಯರಲ್ಲವೆಂದು ಲೋಕವು ತಿಳಿದೀತೆಂದು, ನಟರಂತೆ ಆ ಆ ಕಾಲಕ್ಕನುಗುಣವಾಗಿ

ಕಾಲೋಹಿ ದುರತಿಕ್ರಮಃ॥೩॥¶ ರಾಮಸ್ಯ ವ್ಯವಸಾಯಜ್ಞಾ ಲಕ್ಷ್ಮಣಸ್ಯ ಚ ಧೀಮತಃ । ನಾತ್ಯರ್ಥಂ ಕ್ಷುಭ್ಯತೇ ದೇವೀ ಗಂಗೇವ ಜಲದಾಗಮೇ ॥ ೪ ॥ ‡ ತುಲ್ಯಶೀಲವಯೋ

ಆದರೆ, ಕಾಲಃ - ಸಮಯವು, ದುರತಿಕ್ರಮೋಹಿ - ಅತಿಕ್ರಮಿಸತಕ್ಕುದಲ್ಲವಷ್ಟೆ. ॥ ೩ ॥ ರಾಮಸ್ಯ - ಶ್ರೀರಾಮನ, ಧೀಮತಃ - ಬುದ್ಧಿಶಾಲಿಯಾದ, ಲಕ್ಷ್ಮಣಸ್ಯಚ - ಲಕ್ಷ್ಮಣನ, ವ್ಯವಸಾಯಜ್ಞಾ - ಉದ್ಯೋಗವನ್ನು ಬಲ್ಲವಳಾದ, ದೇವೀ - ಸೀತಾದೇವಿಯು, ಜಲದಾಗಮೇ - ವರ್ಷಾಕಾಲದಲ್ಲಿ, ಗಂಗೇವ - ಗಂಗಾನದಿಯೋಪಾದಿಯಲ್ಲಿ, ನಾತ್ಯರ್ಥಂಕ್ಷುಭ್ಯತೇ - ಎಷ್ಟುಮಾತ್ರವೂ ಕ್ಷೋಭೆಗೊಳ್ಳುವದಿಲ್ಲ. ॥ ೪ ॥ ತುಲ್ಯ....ತ್ತಾಂ - ಸಮಾನಸ್ವಭಾವವೂ, ಯೌವನವೂ, ಚರಿತ್ರೆಯೂ ಉಳ್ಳ,

---

ಕ್ರಮಿಸಲು ಯಾರಿಂದಲೂ ಸಾಧ್ಯವಲ್ಲವು. ಹಾಗಲ್ಲದಿದ್ದರೆ ಜಗದ್ರಕ್ಷಕರಾದ ಶ್ರೀರಾಮ ಲಕ್ಷ್ಮಣರಿಂದ ಸುರಕ್ಷಿತಳಾದ ಈ ದೇವಿಯು ಈತೆರನಾಗಿ ದುಃಖಿಸಬೇಕಾಗಿದ್ದಿತೆ! ಈಕೆಯು ತನ್ನ ಪತಿದೇವನಾದ ರಾಮಮೂರ್ತಿಯ ಪರಾಕ್ರಮವನ್ನೂ, ಮಹಾ ಮೇಧಾವಿಯಾದ ಲಕ್ಷ್ಮಣಸ್ವಾಮಿಯ ಧೈರ್ಯಸ್ಥೈರ್ಯಗಳನ್ನೂ ಬಲ್ಲವಳಾದುದರಿಂದ ಮಳೆಗಾಲದಲ್ಲಿ ದಡಮೀರಿ ಹರಿಯದ ಗಂಗಾನದಿಯಂತೆ ಬಹಳವಾಗಿ ದುಃಖಿಸದಿರುವಳು. ಶ್ರೀರಾಮ

ಸುಖದುಃಖಾದಿ ವಿಕಾಸಗಳನ್ನಭಿನಯಿಸುತ್ತಿರುವರು. ಅವರ ಮಾಯೆಯಿಂದ ಮೋಹಿತನಾದುದರಿಂದಲೇ ಹನುಮಂತನೂ ಕೂಡ ಅವರಭಿನಯಿಸಿದ ಕಾರ್ಯಗಳ ಕಾರಣಗಳನ್ನು ಅನ್ವೇಯಿಸಿ ಅವರ ದುಃಖಾರ್ತತ್ವಾದಿಗಳನ್ನು ಹೇಳುತ್ತಿರುವುದರಿಂದ ಇದು ಸಮಂಜಸವೇ ಆಗಿರುವುದು "ಹನುಮಂತನೂ ಹೀಗೆ ಮಾಡುವುದುಂಟೆ?" ಎಂದರೆ ಹನುಮಂತನಿಗೆ ಇತರರ ಉತ್ತೇಜನದಿಂದಲೇ ಸ್ವಸ್ವರೂಪವು ಗೊತ್ತಾದುದು. ಜಾಂಬವಂತನ ಉದ್ಬೋಧನೆಯಿಂದ ಹನುಮಂತನು ತನ್ನ ಸಾಮರ್ಥ್ಯವನ್ನರಿತುಕೊಂಡುದೇ ಇದಕ್ಕೆ ದೃಷ್ಟಾಂತವು. ಭಗವದಿಚ್ಛೆಯಿಂದಲೇ ಆತನಿಗೆ ಸೀತಾರಾಮರ ಸ್ವರೂಪಜ್ಞಾನ ಉಂಟಾದುದೆಂದು ಹೇಳಲು ಶಕ್ಯವೇ ಸರಿ. (ರಾಮಪಂಡಿತರು)

¶ ಇಲ್ಲಿ, "ವ್ಯವಸಾಯಜ್ಞಾ" ಎಂಬ ಪದಸ್ವಾರಸ್ಯವನ್ನು ತಿಲಕಕಾರರು ಹೀಗೆ ಪ್ರತಿಪಾದಿಸುವರು.

"ಶ್ರೀರಾಮಲಕ್ಷ್ಮಣರು ನಾನಿಂತಹ ದುರ್ಗಮಸ್ಥಳದಲ್ಲಿದ್ದರೂ, ದಿವ್ಯಾಸ್ತ್ರಗಳ ಬಲದಿಂದ ಸಮುದ್ರವನ್ನು ದಾಟಿ ಇಲ್ಲಿಗೆ ಬಂದು ನನ್ನನ್ನು ಸಂರಕ್ಷಿಸುವರು" ಎಂದು ತಿಳಿದಿರುವ ಸೀತಾದೇವಿಯು ದೇಹವನ್ನುಳಿಸಿಕೊಂಡಿರುವಳು. ಆಕೆಯು ಗಂಗಾಸಮಾನಳು. ಗಂಗಾನದಿಯು ವರ್ಷಾಕಾಲ ಬಂದರೂ ಇತರ ಕ್ಷುದ್ರ ನದಿಗಳಂತೆ ದಡಮೀರಿ ಹರಿಯುವುದಿಲ್ಲ.

ಗೋವಿಂದರಾಜರು, "ಅಪ್ಯಹಂ ಜೀವಿತಂ ಜಹ್ಯಾತ್" ಎಂದು ಪ್ರತಿಜ್ಞೆ ಮಾಡಿರುವ ಶ್ರೀರಾಮನ ವ್ಯವಸಾಯವನ್ನೂ, ರಾಮನು ಮಾಯಾಮೃಗವನ್ನಟ್ಟಿಹೋಗಿದ್ದ ಕಾಲದಲ್ಲಿ, ಅದು ಜಿಂಕೆಯಲ್ಲವೆಂದೂ, ಮಾರೀಚನ ಮಾಯೆಯೆಂದೂ ನಿಶ್ಚಯಿಸಿದ ಲಕ್ಷ್ಮಣನ ವ್ಯವಸಾಯವನ್ನೂ ತಿಳಿದಿರುವ ಆ ದೇವಿಯು ಜಲದಾಗಮದಲ್ಲಿಯೂ ಕ್ಷೋಭೆಗೊಳ್ಳದ ಗಂಗಾನದಿಯಂತೆ ಬಹಳವಾಗಿ ಕ್ಷೋಭೆಗೊಳ್ಳಲಿಲ್ಲ" ಎಂದು ವ್ಯಾಖ್ಯಾನಿಸಿರುವರು.

‡ "ತುಲ್ಯಶೀಲವಯೋವೃತ್ತಾಂ" ಎಂಬ ಕಡೆ ಶ್ರೀರಾಮಲಕ್ಷ್ಮಣರಿಬ್ಬರಿಗೂ ಒಂದೇ ವಯಸ್ಸೆಂದು ಅರ್ಥ ಮಾಡಬಾರದು. ಹದಿನಾರು ವರ್ಷದ ವರನಿಗೆ ಹನ್ನೆರಡು ವರ್ಷದ ಕನ್ಯೆಯಾದರೆ ಸಮಾನ ದಾಂಪತ್ಯವಾಗುತ್ತದೆಯೇ ಹೊರತು ಹದಿನಾರು ವರ್ಷದ ವರನಿಗೆ ಹದಿನಾರು ವರ್ಷದ ಕನ್ಯೆಯಾದರೆ ವಿರಸವೂ, ಶಾಸ್ತ್ರಪ್ರಕ್ರಿಯಾವಿರೋಧವೂ ಉಂಟಾಗುತ್ತದೆ. ಆದುದರಿಂದಲೇ ವಿಷ್ಣುವು "ವರ್ಷೈರೇಕಗುಣಾಂ ಭಾರ್ಯಾಮುದ್ವಹೇತ್ತ್ರಿಗುಣೋ ವರಃ । ದ್ವ್ಯಷ್ಟವರ್ಷೋಽಷ್ಟವರ್ಷಾಂ ವಾ ಮಯೋಮಾತ್ರಾನರಾಚಯಾ" ಎಂದು ಹೇಳಿದೆ. ಈ ದೃಷ್ಟಿಯು ತುಲ್ಯವಯಸ್ಕರೆಂದು ಅರ್ಥ. ಶೀಲವೃತ್ತಗಳ ಸಾಮರಸ್ಯ ಭಾವವು ಹೀಗೆ. "ದೋಷೋ ಯದ್ಯಪಿ ತಸ್ಯ ಸ್ಯಾತ್ ಸತಾಮೇತದಗರ್ಹಿತಂ"

ವೃತ್ತಾಂ ತುಲ್ಯಾಭಿಜನಲಕ್ಷಣಾಂ । ರಾಘವೋಽರ್ಹತಿ ವೈದೇಹೀಂ ತಂ ಚೇಯ
ಮಸಿತೇಕ್ಷಣಾ ॥೫॥ ತಾಂ ದೃಷ್ಟ್ವಾ ನವಹೇಮಾಭಾಂ ಲೋಕಕಾಂತಾಮಿವ ಶ್ರಿಯಂ।
ಜಗಾಮ ಮನಸಾ ರಾಮಂ ವಚನಂ ಚೇದಮಬ್ರವೀತ್ ॥ ೬ ॥ ಅಸ್ಯಾ ಹೇತೋರ್ವಿ
ಶಾಲಾಕ್ಷ್ಯಾ ಹತೋ ವಾಲೀ ಮಹಾಬಲಃ । ರಾವಣಪ್ರತಿಮೋ ವೀರ್ಯೇ ಕಬಂಧಶ್ಚ
ನಿಪಾತಿತಃ ॥ ೭ ॥ ವಿರಾಧಶ್ಚ ಹತಸ್ಸಂಖ್ಯೇ ರಾಕ್ಷಸೋ ಭೀಮವಿಕ್ರಮಃ । ವನೇ

ತುಲ್ಯಾ....ಣಾಂ-ಸದೃಶವಾದ ಸಾಮುದ್ರಿಕೋಕ್ತ ಲಕ್ಷಣಗಳೂ ಉಳ್ಳ, ವೈದೇಹೀಂ-ಸೀತಾದೇವಿಯನ್ನು ಕುರಿತು, ರಾಘವಃ - ಶ್ರೀರಾಮನು, ಅರ್ಹತಿ - ಯೋಗ್ಯನಾಗುತ್ತಾನೆ, ಅಸಿತೇಕ್ಷಣಾ - ಕನ್ನೈದಿಲೆ ಯಂತೆ ನೇತ್ರಗಳುಳ್ಳ, ಇಯಂಚ - ಈ ಸೀತಾದೇವಿಯೂ ಕೂಡ, ತಂ - ಆ ಶ್ರೀರಾಮನನ್ನು ಕುರಿತು, ಅರ್ಹತಿ-ತಕ್ಕವಳಾಗಿರುವಳು. ॥ ೫ ॥ ನವಹೇಮಾಭಾಂ-ನೂತನವಾದ ಬಂಗಾರದ ಬಣ್ಣವುಳ್ಳ, ಲೋಕ ಕಾಂತಾಂ - ಲೋಕಸುಂದರಿಯಾದ, ಶ್ರಿಯಮಿವಸ್ಥಿತಾಂ - ಲಕ್ಷ್ಮೀದೇವಿಯಂತಿರುವ, ತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಮನಸಾ - ಮನಸ್ಸಿನಿಂದ, ರಾಮಂ - ಶ್ರೀರಾಮನನ್ನು, ಜಗಾಮ - ಹೊಂದಿದನು, ಇದಂವಚನಂಚ - ಈ ಮಾತನ್ನೂ ಸಹಾ, ಅಬ್ರವೀತ್ - ಹೇಳಿದನು, ವಿಶಾಲಾಕ್ಷ್ಯಾಃ - ವಿಸ್ತಾರವಾದ ಕಣ್ಣುಗಳುಳ್ಳ, ಅಸ್ಯಾಹೇತೋಃ - ಈಕೆಯ ಕಾರಣದಿಂದ, ಮಹಾ ಬಲಃ - ಮಹಾ ಪರಾಕ್ರಮಿಯಾದ, ವಾಲೀ - ವಾಲಿಯು, ಹತಃ - ಸಂಹರಿಸಲ್ಪಟ್ಟನು, ವೀರ್ಯೇ - ಪರಾಕ್ರಮದಲ್ಲಿ, ರಾವ....ಮಃ - ರಾವಣನಿಗೆ ಸದೃಶನಾದ, ಕಬಂಧಶ್ಚ - ಕಬಂಧನೂ, ನಿಪಾತಿತಃ - ಬೀಳಿಸಲ್ಪಟ್ಟನು. ॥ ೭ ॥ ಭೀಮವಿಕ್ರಮಃ - ಭಯಂಕರವಾದ ಪರಾಕ್ರಮವುಳ್ಳ, ರಾಕ್ಷಸಃ - ರಕ್ಕಸ ನಾದ, ವಿರಾಧಶ್ಚ - ವಿರಾಧನೂ, ವನೇ - ವನದಲ್ಲಿ, ಸಂಖ್ಯೇ - ಯುದ್ಧದಲ್ಲಿ ವಿಕ್ರಮ್ಯ-ಪರಾಕ್ರಮಿಸಿ, ರಾಮೇಣ - ಶ್ರೀರಾಮನಿಂದ, ಮಹೇಂದ್ರೇಣ - ದೇವೇಂದ್ರನಿಂದ, ಶಂಬರಇವ - ಶಂಬರಾಸುರನ

ಮೂರ್ತಿಯು, ಶೀಲದಲ್ಲಿಯೂ, ವಯಸ್ಸಿನಲ್ಲಿಯೂ, ಸದಾಚಾರಪ್ರವರ್ತನೆಯಲ್ಲಿಯೂ, ಸತ್ಕುಲ ಪ್ರಸೂತ್ವದಲ್ಲಿಯೂ, ಶುಭಲಕ್ಷಣಗಳಲ್ಲಿಯೂ, ಈ ಸೀತಾದೇವಿಗೆ ತಕ್ಕ ಪತಿಯೇ ಆಗಿರುವನು. ಅಂತೆಯೇ ಈಕೆಯೂ ಆತನಿಗೆ ಸರಿಸಮಾನಳಾದ ಪತ್ನಿಯೇ ಆಗಿರುವಳು.'' ॥೧–೫॥ ಹೀಗೆ ಬ್ರಹ್ಮಚಾರಿಯಾದ ಆ ಮಾರುತಿಯು ನವಕಾಂಚನಕಾಂತಿಸಂಪನ್ನಳೂ, ಸಕಲ ಲೋಕ ಸುಖ ಸಂಧಾತ್ರಿಯಾದ ಲಕ್ಷ್ಮಿಯಂತಿರುವವಳೂ ಆದ ಆ ದೇವಿಯನ್ನು ಕುರಿತು ಚಿಂತಿಸಿ ಕೂಡಲೇ ಶ್ರೀರಾಮನನ್ನು ಸ್ಮರಿಸಿ ತನ್ನಲ್ಲಿತಾನು ಹೀಗೆಂದುಕೊಂಡನು. "ವಿಶಾಲನೇತ್ರಿ ಯಾದ ಈಕೆಗಾಗಿಯೇ ಮಹಾ ಭುಜಬಲಪರಾಕ್ರಮಶಾಲಿಯಾದ ವಾಲಿಯನ್ನು ರಾಮನು ಸಂಹರಿಸಿದುದು. ಶೌರ್ಯದಲ್ಲಿ ರಾವಣನಿಗೆ ಸಮಾನನಾದ ಕಬಂಧರಾಕ್ಷಸನೂ ಕೂಡ ಈಕೆಯ ನಿಮಿತ್ತದಿಂದಲೇ ಹತನಾದನು. ಈಕೆಗೋಸುಗವೇ ಶ್ರೀರಾಮನು ವಿಕ್ರಮಿಸಿ ಶಂಬರಾಸುರನನ್ನು ದೇವೇಂದ್ರನು ಸಂಹರಿಸಿದಂತೆ ಮಹಾ ಪರಾಕ್ರಮಶಾಲಿಯಾದ ವಿರಾಧ

ಎಂದು ಹೇಳುವುದು ರಾಮನ ಸ್ವಭಾವ. "ಪಾಪಾನಾಂವಾ ಶುಭಾನಾಂವಾ ವಧಾರ್ಹಾಣಾಂ ಪ್ಲವಂಗಮ! ಕಾರ್ಯಂ ಕರುಣಮಾರ್ಯೇಣ ನಕಶ್ಚಿನ್ನಾಪರಾಧ್ಯತಿ" ಎಂಬುದು ಸೀತೆಯ ಸ್ವಭಾವ. ಇವರಿಬ್ಬರ ಸ್ವಭಾವವೂ ಒಂದೇ ಎಂದು ಭಾವ. ಒಟ್ಟಿನಮೇಲೆ, ಕುಲ, ಸಾಮುದ್ರಿಕಲಕ್ಷಣ, ಸಾರ್ವಭೌಮಾದಿಗಳ ಲಕ್ಷಣಗಳಲ್ಲಿ ಇಬ್ಬರೂ ಸರಿಸಮಾನರಾದವ ರೆಂದು ಈ ಶ್ಲೋಕದ ತಾತ್ಪರ್ಯವು. (ಗೋವಿಂದರಾಜರು)

ರಾಮೇಣ ವಿಕ್ರಮ್ಯ ಮಹೇಂದ್ರೇಣೇವ ಶಂಬರಃ ॥ ೮ ॥ ಚತುರ್ದಶಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಂ । ನಿಹತಾನಿ ಜನಸ್ಥಾನೇ ಶರೈರಗ್ನಿಶಿಖೋಪಮೈಃ ॥ ೯ ॥ ಖರಶ್ಚ ನಿಹತಸ್ಸಂಖ್ಯೇ ತ್ರಿಶಿರಾಶ್ಚ ನಿಪಾತಿತಃ । ದೂಷಣಶ್ಚ ಮಹಾತೇಜಾ ರಾಮೇಣ ವಿದಿತಾತ್ಮನಾ ॥ ೧೦ ॥ ಐಶ್ವರ್ಯಂ ವಾನರಾಣಾಂಚ ದುರ್ಲಭಂ ವಾಲಿಪಾಲಿತಂ । ಅಸ್ಯಾನಿಮಿತ್ತೇ ಸುಗ್ರೀವಃ ಪ್ರಾಪ್ತವಾ೯ ಲೋಕ¶ ಸತ್ಕೃತಂ ॥ ೧೧ ॥ ಸಾಗರಶ್ಚ ಮಯಾಕ್ರಾಂತಶ್ಶ್ರೀಮಾನ್ನದನದೀಪತಿಃ । ಅಸ್ಯಾಹೇತೋರ್ವಿಶಾಲಾಕ್ಷ್ಯಾಃ ಪುರೀ ಚೇಯಂ ನಿರೀಕ್ಷಿತಾ ॥ ೧೨ ॥ ಯದಿ ರಾಮಸ್ಸಮುದ್ರಾಂತಾಂ ಮೇದಿನೀಂ ಪರಿವರ್ತ

ಹಾಗೆ, ಹತಃ - ಕೊಲ್ಲಲ್ಪಟ್ಟನು. ॥ ೮ ॥ ಭೀಮ....ಣಾಂ - ಭಯಂಕರ ವ್ಯಾಪಾರವುಳ್ಳ, ರಕ್ಷಸಾಂ - ರಾಕ್ಷಸರ, ಚತು....ಣಿ - ಹದಿನಾಲ್ಕು ಸಾವಿರಗಳು, ಅಗ್ನಿ....ಮೈಃ - ಅಗ್ನಿಜ್ವಾಲೆಗೆ ಸಮಾನಗಳಾದ, ಶರೈಃ - ಬಾಣಗಳಿಂದ, ಜನಸ್ಥಾನೇ - ಜನಸ್ಥಾನವೆಂಬ ಉಕ್ಕಡದಲ್ಲಿ, ನಿಹತಾನಿ - ಸಂಹರಿಸಲ್ಪಟ್ಟವು, ವಿದಿತಾತ್ಮನಾ - ಸ್ವಸ್ವರೂಪವನ್ನು ತಿಳಿದಿರುವ, ರಾಮೇಣ - ಶ್ರೀರಾಮನಿಂದ, ಸಂಖ್ಯೇ - ಕಾಳಗದಲ್ಲಿ, ಖರಶ್ಚ - ಖರಾಸುರನೂ, ನಿಹತಃ - ಸಂಹರಿಸಲ್ಪಟ್ಟನು, ತ್ರಿಶಿರಾಶ್ಚ - ತ್ರಿಶಿರಸನೂ, ನಿಪಾತಿತಃ - ಕೊಲ್ಲಲಾದನು, ಮಹಾತೇಜಾಃ - ಮಹಾ ತೇಜಸ್ವಿಯಾದ, ದೂಷಣಶ್ಚ - ದೂಷಣನೂ, ಹತಃ - ಮೃತನಾದನು. ॥ ೯-೧೦ ॥ ಅಸ್ಯಾನಿಮಿತ್ತೇ - ಈ ಸೀತಾದೇವಿಯ ನಿಮಿತ್ತದಿಂದಲೇ, ಸುಗ್ರೀವಃ - ಸುಗ್ರೀವನು, ವಾಲಿಪಾಲಿತಂ - ವಾಲಿಯಿಂದ ರಕ್ಷಿಸಲ್ಪಟ್ಟ, ದುರ್ಲಭಂ - ಹೊಂದಲಶಕ್ಯವಾದ, ಲೋಕಸತ್ಕೃತಂ - ಜಗತ್ತಿನಲ್ಲಿ ಸ್ತುತ್ಯವಾದ, ವಾನರಾಣಾಂ - ಕಪಿಗಳ, ಐಶ್ವರ್ಯಂಚ - ಸಂಪತ್ತನ್ನೂ, ಪ್ರಾಪ್ತವಾ೯ - ಹೊಂದಿದನು. ॥ ೧೧ ॥ ಅಸ್ಯಾವಿಶಾಲಾಕ್ಷ್ಯಾಃ - ವಿಶಾಲ ನೇತ್ರಗಳುಳ್ಳ ಸೀತಾದೇವಿಯ, ಹೇತೋಃ - ಕಾರಣದಿಂದಲೇ, ಮಯಾ - ನನ್ನಿಂದ, ಶ್ರೀಮಾ೯ - ಸಂಪದ್ಯುಕ್ತನಾದ, ನದನದೀಪತಿಃ - ಪುರುಷನದಿಗಳಿಗೂ, ಸ್ತ್ರೀನದಿಗಳಿಗೂ ಪ್ರಭುವಾದ, ಸಾಗರಶ್ಚ - ಸಮುದ್ರವೂ, ಆಕ್ರಾಂತಃ - ಆಕ್ರಮಿಸಲ್ಪಟ್ಟಿತು, ಇಯಂಪುರೀಚ - ಈ ಲಂಕಾಪಟ್ಟಣವೂ, ನಿರೀಕ್ಷಿತಾ - ನೋಡಲ್ಪಟ್ಟಿತು. ॥ ೧೨ ॥ ರಾಮಃ - ಶ್ರೀರಾಮನು, ಸಮುದ್ರಾಂತಾ - ಸಮುದ್ರವೇ ತುದಿಯಾಗಿ ಉಳ್ಳ, ಮೇದಿನೀಂ - ಭೂಮಿಯನ್ನು, ಜಗಚ್ಚಾಪಿ - ಲೋಕಗಳನ್ನೂ,

ನನ್ನು ಸಂಹರಿಸಿದುದು. ಈಕೆಗೋಸುಗವೇ ಶ್ರೀರಾಮನು ಜನಸ್ಥಾನದಲ್ಲಿ ಮಹಾ ಕ್ರೂರ ಕರ್ಮಿಗಳಾದ ಹದಿನಾಲ್ಕುಸಾವಿರ ರಾಕ್ಷಸರನ್ನು ಅಗ್ನಿಜ್ವಾಲೆಗೆ ಸಮಾನವಾದ ಬಾಣಪರಂಪರೆಯಿಂದ ಸಂಹರಿಸಿದನು. ಖರ, ಮಹಾ ಪರಾಕ್ರಮಶಾಲಿಯಾದ ದೂಷಣ, ತ್ರಿಶಿರ ಎಂಬ ರಾಕ್ಷಸರೂ, ಆತ್ಮಜ್ಞಾನಿಯೂ, ಮಹಾ ತೇಜಸ್ವಿಯೂ ಆದ ಶ್ರೀರಾಮನಿಂದ, ಯುದ್ಧದಲ್ಲಿ ಮಡಿದುದೂ ಈಕೆಯ ನಿಮಿತ್ತದಿಂದಲೇ. ॥೬–೧೦॥ ಈಕೆಗೋಸುಗವೇ ವಾಲಿ ಪಾಲಿತವೂ ಹೊಂದಲಶಕ್ಯವೂ ಲೋಕಪ್ರಸಿದ್ಧವೂ ಆದ ವಾನರೈಶ್ವರ್ಯವನ್ನು ನಮ್ಮ ಪಭುವಾದ ಸುಗ್ರೀವನು ಪಡೆದುದು. ನಾನೂ ಸಹ ನದನದೀಪತಿಯಾದ ಈ ಸಮುದ್ರವನ್ನು ದಾಟಿ ಈ ಲಂಕಾನಗರಕ್ಕೆ ಬಂದುದೂ ಈಕೆಯ ನಿಮಿತ್ತದಿಂದಲೇ. ಇದೆಲ್ಲವನ್ನೂ ಯೋಚಿಸಿ ನೋಡಿದರೆ ಇಂತಹ ಸೀತಾದೇವಿಯ ನಿಮಿತ್ತದಿಂದ ಶ್ರೀರಾಮನು ಚತುಸ್ಸಾಗರಪರ್ಯಂತವಾದ ಭೂಮಿ

¶ "ವಿಶ್ರುತಃ" ತಿ. ಪಾ.

ಯೇತ್ । ಅಸ್ಯಾಃ ಕೃತೇ ಜಗಚ್ಚಾಪಿ ಯುಕ್ತಮಿತ್ಯೇವ ಮೇ ಮತಿಃ ॥ ೧೩ ॥ ರಾಜ್ಯಂ ವಾ ತ್ರಿಷು ಲೋಕೇಷು ಸೀತಾ ವಾ ಜನಕಾತ್ಮಜಾ । ತ್ರೈಲೋಕ್ಯರಾಜ್ಯಂ ಸಕಲಂ ಸೀತಾಯಾ ನಾಪ್ನುಯಾತ್ಕಲಾಂ ॥ ೧೪ ॥ ಇಯಂ ಸಾ ಧರ್ಮಶೀಲಸ್ಯ ಮೈಥಿಲಸ್ಯ ಮಹಾತ್ಮನಃ । ಸುತಾ ಜನಕರಾಜಸ್ಯ ಸೀತಾ ಭರ್ತೃದೃಢವ್ರತಾ ॥ ೧೫ ॥ ಉತ್ಥಿತಾ ಮೇದಿನೀಂ ಭಿತ್ವಾ ಕ್ಷೇತ್ರೇ ಹಲಮುಖಕ್ಷತೇ । ಪದ್ಮರೇಣುನಿಭೈಃ ಕೀರ್ಣಾ ಶುಭೈಃ ಕೇದಾರಪಾಂಸುಭಿಃ ॥ ೧೬ ॥ ವಿಕ್ರಾಂತಸ್ಯಾರ್ಯಶೀಲಸ್ಯ ಸಂಯುಗೇಷ್ವನಿವರ್ತಿನಃ । ಸ್ನುಷಾ ದಶರಥಸ್ಯೈಷಾ ಜ್ಯೇಷ್ಠಾ ರಾಜ್ಞೋ ಯಶಸ್ವಿನೀ ॥ ೧೭ ॥

ಅಸ್ಯಾಃಕೃತೇ - ಈ ಸೀತಾದೇವಿಗೋಸುಗವೇ, ಪರಿವರ್ತಯೇತ್ - ವ್ಯತ್ಯಾಸಮಾಡುವುದು, ಯುಕ್ತಮಿತ್ಯೇವ - ಸರಿಯೇ ಎಂದು, ಮೇ - ನನ್ನ, ಮತಿಃ - ಬುದ್ಧಿಯು. ॥ ೧೩ ॥ ತ್ರಿಷುಲೋಕೇಷು - ಲೋಕತ್ರಯದಲ್ಲಿ, ರಾಜ್ಯಂ - ದೊರೆತನವು, (ಉತ್ಕೃಷ್ಟಂವಾ - ಅತಿಶಯವಾದುದೇ,) ಜನಕಾತ್ಮಜಾ - ಜನಕಪುತ್ರಿಯಾದ, ಸೀತಾ - ಸೀತಾದೇವಿಯು, (ಉತ್ಕೃಷ್ಟಾವಾ - ಹೆಚ್ಚಾದವಳೇ ಎಂದು ಪರಿಶೀಲಿಸಿದರೆ,) ಸಕಲಂ - ಸಮಸ್ತವಾದ, ತ್ರೈಲೋಕ್ಯರಾಜ್ಯಂ - ಲೋಕತ್ರಯಾಧಿಪತ್ಯವು, ಸೀತಾಯಾಃ - ಸೀತಾದೇವಿಯ, ಕಲಾಂ - ಹದಿನಾರಲ್ಲಿ ಒಂದು ಭಾಗವನ್ನು, ನಾಪ್ನುಯಾತ್ - ಹೊಂದಲಾರದು. ॥ ೧೪ ॥ ಇಯಂ - ಈಕೆಯು, ಹಲಮುಖಕ್ಷತೇ - ಉತ್ತಿದ ಯಜ್ಞಕ್ಷೇತ್ರದಲ್ಲಿ, ಮೇದಿನೀಂ - ಭೂಮಿಯನ್ನು, ಭಿತ್ವಾ - ಭೇದಿಸಿ, ಉತ್ಥಿತಾ - ಮೇಲಕ್ಕೆದ್ದುದರಿಂದಲೇ, ಶುಭೈಃ - ಶುಭಗಳಾದ, ಪದ್ಮರೇಣುನಿಭೈಃ - ತಾವರೆಯ ಧೂಳಿಗೆ ಸಮಾನಗಳಾದ, ಕೇದಾರಪಾಂಸುಭಿಃ - ಯಜ್ಞಕ್ಷೇತ್ರದ ಧೂಳಿಗಳಿಂದ, ಕೀರ್ಣಾ - ವ್ಯಾಪ್ತಳಾಗಿ, ಧರ್ಮಶೀಲಸ್ಯ - ಧರ್ಮಸ್ವಭಾವವುಳ್ಳ, ಮೈಥಿಲಸ್ಯ - ಮಿಥಿಲ ದೇಶದರಸಾದ, ಮಹಾತ್ಮನಃ - ಮಹಾನುಭಾವನಾದ, ಜನಕರಾಜಸ್ಯ - ಜನಕರಾಯನ, ಸುತಾ - ಮಗಳಾಗಿ, ಭರ್ತೃ....ತಾ - ಪತಿಯಾದ ಶ್ರೀರಾಮನಲ್ಲಿ ದೃಢನಿಯಮವುಳ್ಳವಳಾದ, ಸಾಸೀತಾ - ಆ ಸೀತಾದೇವಿಯು. ॥ ೧೫-೧೬ ॥ ಏಷಾ - ಈಕೆಯು, ವಿಕ್ರಾಂತಸ್ಯ - ಶೂರನಾದ, ಆರ್ಯಶೀಲಸ್ಯ - ಶ್ರೇಷ್ಠ ಸ್ವಭಾವವುಳ್ಳ, ಸಂಯುಗೇಷು - ಕಾಳೆಗಗಳಲ್ಲಿ, ಅನಿವರ್ತಿನಃ - ಹಿಂತಿರುಗದಿರುವ, ದಶರಥಸ್ಯರಾಜ್ಞಃ - ದಶರಥನಿಗೆ, ಯಶಸ್ವಿನೀಂ - ಕೀರ್ತಿವಂತಳಾದ, ಜ್ಯೇಷ್ಠಾ ಸ್ನುಷಾ - ಹಿರಿಸೊಸೆಯು. ॥ ೧೭ ॥ ಧರ್ಮಜ್ಞಸ್ಯ - ಧರ್ಮವನ್ನು ಬಲ್ಲವನಾದ, ಕೃತಜ್ಞಸ್ಯ - ಇತರರು ಮಾಡಿದ ಉಪಕಾರಗಳನ್ನು ಸ್ಮರಿಸುವ, ವಿದಿತಾತ್ಮನಃ - ತಿಳಿಯಲ್ಪಟ್ಟ ಧೈರ್ಯವುಳ್ಳ, ರಾಮಸ್ಯ - ಶ್ರೀರಾಮನ, ದಯಿತಾ - ಇಷ್ಟಳಾದ, ಭಾರ್ಯಾ - ಹೆಂಡತಿಯಾದ, ಸೇಯಂ - ಆ

ಯನ್ನಾಗಲಿ, ಅತಲವಿತಲಾದಿ ಚತುರ್ದಶಭುವನಗಳನ್ನಾಗಲಿ ತಲೆಕೆಳಗುಮಾಡಿದರೂ ಯುಕ್ತವೆಂದೇ ತೋರುತ್ತದೆ. "ಸ್ವರ್ಗಮರ್ತ್ಯಪಾತಾಳಗಳ ಏಕಛತ್ರಾಧಿಪತ್ಯವು ಹೆಚ್ಚಿನದೋ? ಜನಕರಾಜಕುವರಿಯಾದ ಸೀತಾದೇವಿಯು ಹೆಚ್ಚಿನವಳೋ?" ಎಂದು ಪರ್ಯಾಲೋಚಿಸಲು ಆತ್ರಿಲೋಕಾಧಿಪತ್ಯವು ಸೀತೆಯ ಸೌಖ್ಯದಲ್ಲಿ ಸಹಸ್ರಾಂಶಕ್ಕೂ ಸರಿದೂಗದು. ಧರ್ಮಮಾರ್ಗಪ್ರವೃತ್ತನೂ, ಮಹಾತ್ಮನೂ ಆದ ಜನಕರಾಯನು ಯಜನಭೂಮಿಯಲ್ಲಿ ನೇಗಿಲಿನಿಂದ ಉಳುವಾಗ ಪದ್ಮಪರಾಗಕ್ಕೆ ಸದೃಶವಾದ ಆ ಯಜನಭೂಮಿಯ ಧೂಳಿನಿಂದ ಪರಿವೃತಳಾಗಿ ಈ ಸೀತಾದೇವಿಯು ಭೂಮಿಯನ್ನು ಭೇದಿಸಿಕೊಂಡು ಜನಿಸಿದವಳಲ್ಲವೆ? ॥೧೫-೧೬॥ ಮಹಾ ಕೀರ್ತಿವಂತಳಾದ ಈಕೆಯು ದೇವಾಸುರ ಯುದ್ಧಗಳಲ್ಲಿ ಜಯಶೀಲನೂ, ಸದ್ಗುಣಸಂಪನ್ನನೂ ಆದ ದಶರಥರಾಯನಿಗೆ ಹಿರಿಸೊಸೆಯು. ಧರ್ಮರಹಸ್ಯಗಳನ್ನರಿತು

ಧರ್ಮಜ್ಞಸ್ಯ ಕೃತಜ್ಞಸ್ಯ ರಾಮಸ್ಯ ವಿದಿತಾತ್ಮನಃ । ಇಯಂ ಸಾ ದಯಿತಾ ಭಾರ್ಯಾ ರಾಕ್ಷಸೀವಶಮಾಗತಾ ॥ ೧೮ ॥ ಸರ್ವಾನ್ಭೋಗಾನ್ಪರಿತ್ಯಜ್ಯ ಭರ್ತೃಸ್ನೇಹಬಲಾತ್ಕೃತಾ । ಅಚಿಂತಯಿತ್ವಾ* ದುಃಖಾನಿ ಪ್ರವಿಷ್ಟಾ ನಿರ್ಜನಂ ವನಂ ॥೧೯॥ ಸಂತುಷ್ಟಾ ಫಲಮೂಲೇನ § ಭರ್ತೃಶುಶ್ರೂಷಣೇ ರತಾ । ಯಾ ಪರಾಂ ಭಜತೇ ಪ್ರೀತಿಂ ವನೇಽಪಿ ಭವನೇ ಯಥಾ ॥ ೨೦ ॥ ಸೇಯಂ ಕನಕವರ್ಣಾಂಗೀ ನಿತ್ಯಂ ಸುಸ್ಮಿತಭಾಷಿಣೀ । ಸಹತೇ ಯಾತನಾಮೇತಾಮನರ್ಥಾನಾಮಭಾಗಿನೀ ॥ ೨೧ ॥ ಇಮಾಂತು ಶೀಲಸಂಪನ್ನಾಂ ದ್ರಷ್ಟುಮರ್ಹತಿ ರಾಘವಃ । ರಾವಣೇನ ಪ್ರಮಥಿತಾಂ ಪ್ರಪಾಮಿವ ಪಿಪಾ

ಸೀತಾದೇವಿಯು, ರಾಕ್ಷಸೀವಶಂ - ರಾಕ್ಷಸಸ್ತ್ರೀಯರ ಸ್ವಾಧೀನವನ್ನು, ಆಗತಾ - ಹೊಂದಿದವಳು. ॥ ೧೮ ॥ ಯಾ - ಯಾವ ಸೀತಾದೇವಿಯು, ಸರ್ವಾನ್ - ಸಮಸ್ತಗಳಾದ, ಭೋಗಾನ್ - ಸುಖಗಳನ್ನು, ಪರಿತ್ಯಜ್ಯ - ಬಿಟ್ಟು, ಭರ್ತೃ....ತಾ - ಪತಿಯ ವಿಶ್ವಾಸದಿಂದ ಬಲವಂತ ಮಾಡಲ್ಪಟ್ಟವಳಾಗಿ, ದುಃಖಾನಿ - ಶೋಕಗಳನ್ನು, ಅಚಿಂತಯಿತ್ವಾ - ಯೋಚಿಸದೆ, ನಿರ್ಜನಂ - ಜನವಿಲ್ಲದಿರುವ, ವನಂ- ಕಾಡನ್ನು, ಪ್ರವಿಷ್ಟಾ - ಹೊಕ್ಕು, ಫಲಮೂಲೇನ - ಫಲಗಳಿಂದಲೂ, ಕಂದಮೂಲಗಳಿಂದಲೂ, ಸಂತುಷ್ಟಾ - ಸಂತೋಷಗೊಂಡವಳಾದಕಾರಣ, ಭರ್ತೃ....ತಾ - ಪತಿಸೇವೆಯಲ್ಲಿಯೇ ಆಸಕ್ತಳಾಗಿ, ವನೇಽಪಿ-ವನದಲ್ಲಿಯೂ, ಭವನೇಯಥಾ - ಮನೆಯಲ್ಲಿಯಂತೆ, ಪರಾಂ - ಉತ್ತಮವಾದ, ಪ್ರೀತಿಂ - ಸಂತೋಷವನ್ನು, ಭಜತೇ - ಹೊಂದುತ್ತಲಿದ್ದಾಳೆಯೋ, ಕನ....ಗೀ - ಬಂಗಾರದ ಬಣ್ಣದ ಶರೀರವುಳ್ಳ, ನಿತ್ಯಂ - ಯಾವಾಗಲೂ, ಸುಸ್ಮಿತಭಾಷಿಣೀ - ಕಿರುನಗೆಗೂಡಿ ಮಾತನಾಡುತ್ತಿರುವ, ಅನರ್ಥಾನಾಂ - ಕಷ್ಟಗಳಿಗೆ, ಅಭಾಗಿನೀ - ಅರ್ಹಳಾಗದಿರುವ, ಸೇಯಂ - ಅಂತಹ ಈ ರಾಮಪತ್ನಿಯು, ಏತಾಂ - ಇಂತಹ, ಯಾತನಾಂ-ಬಾಧೆಯನ್ನು, ಸಹತೇ-ಸೈರಿಸುತ್ತಾಳೆ. ॥ ೧೯-೨೧ ॥ ರಾಘವಸ್ತು- ಶ್ರೀರಾಮನಾದರೆ, ರಾವಣೇನ - ರಾವಣನಿಂದ, ಪ್ರಮಥಿತಾಂ - ಅಪಹರಿಸಲ್ಪಟ್ಟ, ಶೀಲಸಂಪನ್ನಾಂ - ಒಳ್ಳೆಯ ನಡೆವಳಿಯಿಂದ ಕೂಡಿರುವ, ಇಮಾಂ- ಈ ಸೀತಾದೇವಿಯನ್ನು, ಪಿಪಾಸಿತಃ-ನೀರಡಿಕೆಯುಳ್ಳವನು, ಪ್ರಪಾಮಿವ - ಅರವಟಿಗೆಯನ್ನೋಪಾದಿಯಲ್ಲಿ, ದ್ರಷ್ಟುಂ - ನೋಡುವದಕ್ಕೆ, ಅರ್ಹತಿ - ಯೋಗ್ಯನು. ॥ ೨೨ ॥ ರಾಘವಃ - ಶ್ರೀರಾಮನು, ಅಸ್ಯಾಃ - ಈಕೆಯ, ಪುನಃ - ಮತ್ತೂ, ಲಾಭಾತ್-

---

ಮಾಡಿದ ಉಪಕಾರವನ್ನು ಸ್ಮರಿಸುವ ಆತ್ಮಜ್ಞಾನಿಯಾದ ಶ್ರೀರಾಮನ ಪ್ರಾಣವಲ್ಲಭೆಯಾದ ಈಕೆಯು ಈಗ ರಾಕ್ಷಸಸ್ತ್ರೀಯರ ವಶವಾಗಿರುವಳು. ಈಕೆಯು ಅಯೋಧ್ಯಾನಗರದಲ್ಲಿ ಸಮಸ್ತ ಭೋಗಭಾಗ್ಯಗಳನ್ನು ತ್ಯಜಿಸಿ, ಭರ್ತೃಸ್ನೇಹಪರವಶಳಾಗಿ ಅರಣ್ಯವಾಸದ ಕಷ್ಟಪರಂಪರೆಯನ್ನೆಣಿಸದೆ ನಿರ್ಜನವಾದ ಕಟ್ಟಡವಿಯನ್ನು ಪ್ರವೇಶಿಸಿದಳು. ಅಲ್ಲಿಯಾದರೋ, ಕೇವಲ ಗೆಡ್ಡೆಗೆಣಸುಗಳಿಂದಲೇ ತೃಪ್ತಿಹೊಂದಿ ಪತಿಶುಶ್ರೂಷಣೆಯಲ್ಲಿಯೇ ನಿರತಳಾಗಿ ತನ್ನ ತವರುಮನೆಯಲ್ಲಿದ್ದಂತೆಯೇ ಅಲ್ಲಿಯೂ ಸದಾ ಸಂತುಷ್ಟಚಿತ್ತಳಾಗಿರುವಳು. ಅಂತಹ ಕನಕವರ್ಣಾಂಗಿಯೂ, ಮಧುರಭಾಷಿಣಿಯೂ, ದುಃಖಾನುಭವಕ್ಕೆ ಅನರ್ಹಳೂ ಆದ ಈಕೆಯು ಈಗ ಪಡಬಾರದ ಕಷ್ಟವನ್ನೂ, ಯಾತನೆಗಳನ್ನೂ ಅನುಭವಿಸುತ್ತಿರುವಳಲ್ಲವೆ! ॥ ೧೭-೨೧ ॥ ಶ್ರೀರಾಮನು, ರಾವಣನಿಂದ ಪೀಡಿತಳಾಗಿದ್ದರೂ ಸದಾಚಾರಸಂಪನ್ನಳಾದ ಈಕೆಯನ್ನು ಬಾಯಾರಿದವನು ಅರವಟಿಕೆಯನ್ನು ಕಂಡಂತೆ ನೋಡುವದೇ ಯುಕ್ತವು. ರಾಜ್ಯಭ್ರಷ್ಟ

---

* "ಕಷ್ಟಾನಿ" ತಿ. ಮ. ಪಾ. § "ಭರ್ತೃಶುಶ್ರೂಷಣಾಪರಾ" ತಿ. ಪಾ.

ಸಿತಃ ||೨೨|| ಅಸ್ಯಾ ನೂನಂ ಪುನರ್ಲಾಭಾ ದ್ರಾಘವಃ ಪ್ರೀತಿಮೇಷ್ಯತಿ | ರಾಜಾ ರಾಜ್ಯ ಪರಿಭ್ರಷ್ಟಃ ಪುನಃ ಪ್ರಾಪ್ಯೇವ ಮೇದಿನೀಂ ||೨೩|| ಕಾಮಭೋಗೈಃ ಪರಿತ್ಯಕ್ತಾ ಹೀನಾ ಬಂಧುಜನೇನಚ | ಧಾರಯತ್ಯಾತ್ಮನೋ ದೇಹಂ ತತ್ಸಮಾಗಮಕಾಂಕ್ಷಿಣೀ || ೨೪ || ನೈಷಾ ಪಶ್ಯತಿ ರಾಕ್ಷಸ್ಯೋ ನೇಮಾನ್ಪುಷ್ಪಫಲದ್ರುಮಾನ್ | ಏಕಸ್ಥಹೃದಯಾ ನೂನಂ ರಾಮಮೇವಾನುಪಶ್ಯತಿ ||೨೫|| ಭರ್ತಾನಾಮ ಪರಂ ನಾರ್ಯಾ § ಭೂಷಣಂ ಭೂಷಣಾದಪಿ | ಏಷಾತು ರಹಿತಾ ತೇನ ‡ ಭೂಷಣಾರ್ಹಾ ನ ಶೋಭತೇ ||೨೬|| ದುಷ್ಕರಂ ಕುರುತೇ ರಾಮೋ ಹೀನೋ ಯದನಯಾ ಪ್ರಭುಃ | ಧಾರಯತ್ಯಾತ್ಮನೋ ದೇಹಂ

ಪ್ರಾಪ್ತಿಯಿಂದ, ರಾಜ್ಯಪರಿಭ್ರಷ್ಟಃ - ರಾಜ್ಯಪರಿತ್ಯಕ್ತನಾದ, ರಾಜಾ - ಅರಸು, ಪುನಃ - ಮತ್ತೂ, ಮೇದಿನೀಂ - ಭೂಮಿಯನ್ನು, ಪ್ರಾಪ್ಯೇವ - ಹೊಂದಿದಂತೆ, ಪ್ರೀತಿಂ - ವಿಶ್ವಾಸವನ್ನು, ಏಷ್ಯತಿ - ಪಡೆಯುವನು. || ೨೩ || ಕಾಮಭೋಗೈಃ - ಇಚ್ಛಾವಿಷಯಗಳಾದ ಸ್ರಕ್ಚಂದನಾದ್ಯುಪಭೋಗಗಳಿಂದ, ಪರಿತ್ಯಕ್ತಾ - ವಿರಹಿತಳಾದ, ಬಂಧುಜನೇನ - ನೆಂಟರಿಂದ, ಹೀನಾ - ರಹಿತಳಾದ ಸೀತಾದೇವಿಯು, ತತ್ಸ....ಣೀ-ಆ ಶ್ರೀರಾಮನ ಬರುವಿಕೆಯನ್ನು, ಅಪೇಕ್ಷಿಸುವವಳಾಗಿ, ಆತ್ಮನಃ-ತನ್ನ, ದೇಹಂ - ಶರೀರವನ್ನು, ಧಾರಯತಿ - ಧರಿಸಿದ್ದಾಳೆ. ||೨೪|| ಏಕ....ಯಾ - ಏಕಾಗ್ರಚಿತ್ತಳಾದ, ಏಷಾ - ಈ ಸೀತಾದೇವಿಯು, ರಾಕ್ಷಸ್ಯಃ - ರಾಕ್ಷಸಸ್ತ್ರೀಯರನ್ನೂ, ನಪಶ್ಯತಿ - ನೋಡುವದಿಲ್ಲ, ಇಮಾನ್ - ಈ ಕಾಣುತ್ತಿರುವ, ಪುಷ್ಪ... ಮಾನ್ - ಹುವ್ವುಗಳಿಂದಲೂ, ಹಣ್ಣುಗಳಿಂದಲೂ ಕೂಡಿದ ವೃಕ್ಷಗಳನ್ನೂ, ನಪಶ್ಯತಿ - ನೋಡುವುದಿಲ್ಲ, ರಾಮಮೇವ - ಶ್ರೀರಾಮನನ್ನೇ, ಅನುಪಶ್ಯತಿ - ಮನದಿಂದ ಬಾರಿಬಾರಿಗೂ ನೋಡುತ್ತಾಳೆ. || ೨೫ || ನಾರ್ಯಾಃ - ಸ್ತ್ರೀಗೆ, ಭರ್ತಾ - ಗಂಡನು, ಭೂಷಣಾದಪಿ - ಒಡವೆಗಿಂತಲೂ, ಪರಂ - ಬಹಳವಾಗಿ, ಭೂಷಣಂನಾಮ - ಭೂಷಣವಷ್ಟೆ, ಭೂಷಣಾರ್ಹಾ-ಆಭರಣಗಳಿಗೆ ಯೋಗ್ಯಳಾದ, ಏಷಾತು - ಈ ಸೀತಾದೇವಿಯಾದರೆ, ತೇನ - ಆ ರಾಮನಿಂದ, ರಹಿತಾ - ಹೀನಳಾದುದರಿಂದಲೇ, ನಶೋಭತೇ-ಶೋಭಿಸುತ್ತಿಲ್ಲ. || ೨೬ || ಪ್ರಭುಃ - ಸಮರ್ಥನಾದ, ರಾಮಃ - ಶ್ರೀರಾಮನು, ಅನಯಾ - ಈ ಸೀತಾದೇವಿಯಿಂದ, ಹೀನಃ - ರಹಿತನಾಗಿ, ಆತ್ಮನಃ - ತನ್ನ, ದೇಹಂ - ಶರೀರವನ್ನು, ಧಾರಯತೀತಿಯತ್ - ಧರಿಸಿರುವನೆಂಬುವದಾವದೋ, ದುಃಖೇನ - ಶೋಕ

ನಾದ ರಾಜನು ಪುನಃ ತನ್ನ ರಾಜ್ಯವನ್ನು ಹೊಂದಿದಂತೆ, ಶ್ರೀರಾಮನು ಈಕೆಯನ್ನು ಮರಳಿಯೂ ಪಡೆದುದೇ ಆದರೆ ಆತನ ಆನಂದಕ್ಕೆ ಪಾರವುಂಟೆ! ಈಕೆಯು ಕಾಮೋಪಭೋಗಗಳನ್ನೂ ಬಂಧುಜನರನ್ನೂ ತೊರೆದು ದುಃಖಿತಳಾಗಿದ್ದರೂ, ತನ್ನ ಪತಿದೇವನ ಸಮಾಗಮವಾಗುವುದೆಂಬ ಬಯಕೆಯಿಂದ ಪ್ರಾಣಗಳನ್ನು ಧರಿಸಿಕೊಂಡಿರುವಳು. ಈಕೆಯು ತನ್ನ ಸುತ್ತಲಿರುವ ರಾಕ್ಷಸಿಯರನ್ನಾಗಲಿ, ಹೂ ಹಣ್ಣುಗಳಿಂದ ಕೂಡಿ ಶೋಭಿಸುತ್ತಿರುವ ವೃಕ್ಷಗಳನ್ನಾಗಲಿ ನೋಡದೆ ಏಕಾಗ್ರಚಿತ್ತದಿಂದ ರಾಮನನ್ನೇ ಧ್ಯಾನಿಸುತ್ತ ಅವನನ್ನು ಕಂಡೇ ಕಾಣುವೆನೆಂಬ ಭರವಸೆಯಿಂದಿರುವಳು. ಲೋಕದಲ್ಲಿ ಸ್ತ್ರೀಯರಿಗೆ ಪತಿಯೇ ಎಲ್ಲ ಭೂಷಣಗಳಿಗಿಂತಲೂ ಪರಮಭೂಷಣವು. ಈಕೆಯು ಅಂತಹ ಭೂಷಣರಹಿತಗಳಾಗಿರುವುದರಿಂದ ಕಾಂತಿಗುಂದಿದಂತಿರುವಳು. ||೨೨–೨೬|| ಸರ್ವಲೋಕಾಧಿಪನಾದ ಶ್ರೀರಾಮನು ಇಂತಹ ಪ್ರಾಣಕಾಂತೆಯನ್ನಗಲಿ ದುಃಖಾತಿರೇಕದಿಂದ ಪ್ರಾಣಗಳನ್ನು ತೊರೆಯದೆ ಉಳಿದಿರುವುದೇ ಅತಿ ದುಷ್ಕರವು.

§ "ಶೋಭನಂ" ತಿ. ಪಾ. ‡ "ಶೋಭನಾರ್ಹಾ" ತಿ. ಪಾ.

ನ ದುಃಖೇನಾವಸೀದತಿ ॥೨೭॥ ¶ ಇಮಾಮಸಿತಕೇಶಾಂತಾಂ ಶತಪತ್ರನಿಭೇಕ್ಷಣಾಂ। ಸುಖಾರ್ಹಾಂ ದುಃಖಿತಾಂ * ದೃಷ್ಟ್ವಾ ಮಮಾಪಿ ವ್ಯಥಿತಂ ಮನಃ ॥೨೮॥ ಕ್ಷಿತಿಕ್ಷಮಾ ಪುಷ್ಕರ§ ಸನ್ನಿಭಾಕ್ಷೀ ಯಾ ರಕ್ಷಿತಾ ರಾಘವ ಲಕ್ಷ್ಮಣಾಭ್ಯಾಂ । ಸಾ ರಾಕ್ಷಸೀಭಿರ್ವಿಕೃತೇಕ್ಷಣಾಭಿ ಸ್ಸಂರಕ್ಷ್ಯತೇ ಸಂಪ್ರತಿ ವೃಕ್ಷಮೂಲೇ ॥ ೨೯ ॥ ಹಿಮಹತನಳಿನೀವ ನಷ್ಟಶೋಭಾ ವ್ಯಸನಪರಂಪರಯಾ ♆ ನಿಪೀಡ್ಯಮಾನಾ । ಸಹಚರ ರಹಿತೇವ ಚಕ್ರ

ದಿಂದ, ಸಾವಸೀದತೀತಿಚಯತ್ - ವ್ಯಸನಪಡುವದಿಲ್ಲವೆಂಬುವದೂ ಯಾವದುಂಟೋ, ತತ್ - ಆ, ದುಷ್ಕರಂ - ಅಸಾಧ್ಯವಾದ ಕಾರ್ಯವನ್ನು, ಕುರುತೇ - ಮಾಡುತ್ತಲಿದ್ದಾನೆ. ॥ ೨೭ ॥ ಅಸಿ....ತಾ - ಕಪ್ಪಾಗಿರುವ ಕೇಶಾಗ್ರಗಳುಳ್ಳ, ಶತ....ಣಾಂ- ತಾವರೆಗೆ ಸದೃಶಗಳಾದ ನೇತ್ರಗಳುಳ್ಳ, ಸುಖಾರ್ಹಾಂ- ಸುಖಯೋಗ್ಯಳಾದ, ಇಮಾಂ- ಈ ಸೀತಾದೇವಿಯನ್ನು, ದುಃಖಿತಾಂ-ದುಃಖವುಳ್ಳವಳನ್ನಾಗಿ, ದೃಷ್ಟ್ವಾ- ಕಂಡು, ಮಮ - ನನ್ನ, ಮನೋಪಿ - ಮನಸ್ಸೂ ಕೂಡ, ವ್ಯಥಿತಂ - ದುಃಖಿತವಾಗಿದೆ. ॥ ೨೮ ॥ ಕ್ಷಿತಿ....ಕ್ಷೀ - ಭೂಮಿಯಂತೆ ಸೈರಣೆಯುಳ್ಳ ಕಮಲಗಳಿಗೆ ಸಮಾನಗಳಾದ ನೇತ್ರಗಳುಳ್ಳ, ಯಾ - ಯಾವ ಸೀತಾದೇವಿಯು, ರಾಘ....ಭ್ಯಾಂ - ರಾಮಲಕ್ಷ್ಮಣರಿಂದ, ರಕ್ಷಿತಾ - ಪರಿಪಾಲಿಸಲ್ಪಟ್ಟಳೋ, ಸಾ - ಆ ಸೀತಾದೇವಿಯು, ಸಂಪ್ರತಿ - ಈಗ, ವೃಕ್ಷಮೂಲೇ - ಗಿಡದ ಬುಡದಲ್ಲಿ, ವಿಕೃ....ಭಿಃ - ವಿಕಾರಗಳಾದ ಕಣ್ಣುಗಳುಳ್ಳ, ರಾಕ್ಷಸೀಭಿಃ - ರಾಕ್ಷಸಸ್ತ್ರೀಯರಿಂದ, ಸಂರಕ್ಷ್ಯತೇ - ರಕ್ಷಿಸಲ್ಪಡುತ್ತಾಳೆ. ॥ ೨೯ ॥ ಹಿಮ....ವ - ಮಂಜಿನಿಂದ ಹೊಡೆಯಲ್ಪಟ್ಟ ಕಮಲದ ಬಳ್ಳಿಯೋಪಾದಿಯಲ್ಲಿ, ನಷ್ಟಶೋಭಾ - ಕ್ಷೀಣವಾದ ಕಾಂತಿಯುಳ್ಳ, ವ್ಯಸ....ಯಾ - ದುಃಖಪರಂಪರೆ

ನೀಲಕುಂತಲೆಯೂ, ನೀರಜೇಕ್ಷಣೆಯೂ ಆದ ಈಕೆಯು ಪರಮಸುಖಾರ್ಹಳು. ಇಂತಹ ಮಹಸೀಯಳನುಭವಿಸುತ್ತಿರುವ ದುಃಖವನ್ನು ನೋಡಿ ನಿಷ್ಕಾಮನಾದ ನನ್ನ ಮನಸ್ಸಿಗೂ ವ್ಯಸನವುಂಟಾಗಿರುವುದು. ॥ ೨೭–೨೮ ॥ ಎಂದಮೇಲೆ ದಯಾಸಾಗರನಾಗಿ ಈಕೆಯಲ್ಲಿಯೇ ತನ್ನ ಪಂಚಪ್ರಾಣಗಳನ್ನೂ ಇಟ್ಟುಕೊಂಡಿರುವ ಆ ರಾಮಮೂರ್ತಿಯ ಮನಸ್ಸಿಗೆ ಇನ್ನೆಷ್ಟರ ವ್ಯಥೆಯಾಗಿರುವುದೋ ಹೇಳಲಳವಲ್ಲ. ಸೈರಣೆಯಲ್ಲಿ ಭೂಮಿಗೆ ಸಮಾನಳೂ, ಕಮಲದಳಾಯತಾಕ್ಷಿಯೂ ಆದ ಈ ದೇವಿಯು ಹಿಂದೆ ಶ್ರೀರಾಮಲಕ್ಷ್ಮಣರ ರಕ್ಷಣೆಯಿಂದ ಸುಖವಾಗಿದ್ದಳು. ಈಗ ಈ ಶಿಂಶುಪಾವೃಕ್ಷದ ಕೆಳಗೆ ವಿಕೃತೇಕ್ಷಣೆಯರಾದ ಈ ವಕ್ರರಾಕ್ಷಸಿಯರ ಸಂರಕ್ಷಣೆಗೊಳಗಾಗಿದ್ದಾಳೆ. ಅಕಟಾ! ಹಿಮದಿಂದ ಬಾಧಿತವಾದ ಕಮಲದ ಬಳ್ಳಿಯಂತೆ ದುಃಖ

ಇಲ್ಲಿ ಕೆಲವು ಪದಸ್ವಾರಸ್ಯಗಳು:—

¶ "ಅಸಿತಕೇಶಾಂತಾಂ" ಸ್ತ್ರೀಯರಿಗೆ ತಲೆಗೂದಲಿನ ಕೊನೆಯಲ್ಲಿ ನೈಲ್ಯವಿರುವುದು ಅತ್ಯಪರೂಪವು. ಸೀತಾದೇವಿಗೆ ಮಾತ್ರ ಹಾಗಿದ್ದಿತು. ಗುಡಾಲಕ (ನೀಲಿಯ ತಲೆಗೂದಲುಗಳುಳ್ಳವ)ನಾದ ಶ್ರೀರಾಮನಿಗೂ ವ್ಯಾಮೋಹವನ್ನುಂಟುಮಾಡುವವಳು.

"ಶತಪತ್ರನಿಭೇಕ್ಷಣಾ" ಅಸಿತೇಕ್ಷಣೆಯಾದರೂ ಕಮಲಪತ್ರಾಕ್ಷಿಯು, ಕಮಲಾಯತೇಕ್ಷಣನಾದ ಶ್ರೀರಾಮನಿಗೆ ಅತ್ಯಂತ ವ್ಯಾಮೋಹಕಳು.

"ಮಮಾಪಿ ವ್ಯಥಿತಂ ಮನಃ" ರಾಮೋತ್ಸಂಗದಲ್ಲಿರಲು ಪರಮಾರ್ಹಳಾದ ಈಕೆಯು ಈ ದುರವಸ್ಥೆಯಲ್ಲಿರುವುದನ್ನು ನೋಡಿ, ಶಾಖಾಮೃಗವಾದ (?) ನನಗೂ ದುಃಖವಾಗಿರುವುದೆಂದಮೇಲೆ ಪರಮ ದಯಾಳುವಾದ ಶ್ರೀರಾಮಮೂರ್ತಿಗೆ ಇನ್ನೆಷ್ಟು ದುಃಖವಾಗಿರಬಹುದು ?

* "ಜ್ಞಾತ್ವಾ" ತಿ. ರಾ. ಪಾ. § "ಸನ್ನಿಭೇಕ್ಷಣಾ" ತಿ. ಪಾ. ♆ "ಅತಿಪೀಡ್ಯಮಾನಾ" ತಿ. ಪಾ.

ವಾಕೀ ಜನಕಸುತಾ ಕೃಪಣಾಂ ದಶಾಂ ಪ್ರಪನ್ನಾ ‖೩೦‖ ಅಸ್ಯಾಹಿ ಪುಷ್ಪಾವನತಾಗ್ರ ಶಾಖಾ ಶ್ಶೋಕಂ ದೃಢಂ ನೈ ಜನಯಂತ್ಯಶೋಕಾಃ। ಹಿಮವ್ಯಪಾಯೇ ನಚ * ಮಂದ ರಶ್ಮಿರಭ್ಯುತ್ಥಿತೋ ನೈವ ಸಹಸ್ರರಶ್ಮಿಭಿಃ ‖ ೩೧ ‖

ಇತ್ಯೇವಮರ್ಥಂ ಕಪಿರನ್ವವೇಕ್ಷ್ಯ
ಸೀತೇಯಮಿತ್ಯೇವ ನಿವಿಷ್ಟಬುದ್ಧಿಃ ।
ಸಂಶ್ರಿತ್ಯ ತಸ್ಮಿನ್ನಿಷಸಾದ ವೃಕ್ಷೇ
ಬಲೀಹರೀಣಾಂ ಪ್ರವರಸ್ತರಸ್ವೀ ‖ ೩೨ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷೋಡಶಸ್ಸರ್ಗಃ

ಯಿಂದ, ನಿಪೀಡ್ಯಮಾನಾ - ಬಾಧಿಸಲ್ಪಡುತ್ತಿರುವ, ಜನಕಸುತಾ - ಸೀತಾದೇವಿಯು, ಸಹ....ತಾ - ಜೊತೆ ಹಕ್ಕಿಗಳಿಂದ ಹೀನವಾದ, ಚಕ್ರವಾಕೀನ - ಚಕ್ರವಾಕ ಪಕ್ಷಿಯೋಪಾದಿಯಲ್ಲಿ, ಕೃಪಣಾಂ - ದೀನವಾದ, ದಶಾಂ - ಅವಸ್ಥೆಯನ್ನು, ಪ್ರಪನ್ನಾ - ಹೊಂದಿರುವಳು. ‖ ೩೦ ‖ ಪುಷ್ಪಾ....ಖಾಃ - ಹುವ್ವುಗಳಿಂದ ಬೊಗ್ಗಿರುವ ಕೊನೆ ರೆಂಬೆಗಳುಳ್ಳ, ಅಶೋಕಾಃ - ಅಶೋಕವೃಕ್ಷಗಳು, ಅಸ್ಯಾಃ - ಈ ಸೀತಾದೇವಿಗೆ, ಶೋಕಂ - ದುಃಖವನ್ನು, ದೃಢಂ - ನಿಶ್ಚಯವಾಗಿಯೂ, ಜನಯಂತಿಹಿವೈ - ಹುಟ್ಟಿಸುತ್ತವೆಯಷ್ಟೆ, ಹಿಮವ್ಯಪಾಯೇನ - ಮಂಜಿನ ನಾಶದಿಂದ, ನೈಕ....ಶ್ಮಿಃ - ಸಾವಿರ ಕಿರಣ ಗಳುಳ್ಳ, ಮಂದರಶ್ಮಿಃ - ಚಂದ್ರನು, ಅಭ್ಯುತ್ಥಿತಃ - ಹುಟ್ಟಿ, ಶೋಕಂ - ದುಃಖವನ್ನು, ಜನಯತಿ - ಹುಟ್ಟಿಸುತ್ತಾನೆ. ‖ ೩೧ ‖ ಬಲೀ - ಬಲಿಷ್ಠನಾದ, ಹರೀಣಾಂ - ವಾನರರಲ್ಲಿ, ಋಷಭಃ - ಶ್ರೇಷ್ಠ ನಾದ, ತರಸ್ವೀ - ವೇಗವಂತನಾದ, ಕಪಿಃ - ಆಂಜನೇಯನು, ಇತ್ಯೇವಂ - ಈ ಪೂರ್ವೋಕ್ತವಾದ, ಅರ್ಥಂ - ಅರ್ಥವನ್ನು, ಅನ್ವವೇಕ್ಷ್ಯ - ಆಲೋಚಿಸಿ, ಇಯಂ - ಈಕೆಯು, ಸೀತೇತಿ - ಸೀತಾ ದೇವಿಯೇ ಎಂದು, ನಿವಿಷ್ಟಬುದ್ಧಿಃ - ನಿಶ್ಚೈಸಲ್ಪಟ್ಟ ಬುದ್ಧಿಯುಳ್ಳವನಾಗಿ, ತಸ್ಮಿನ್ವೃಕ್ಷೇ - ಆ ವೃಕ್ಷ ವನ್ನು, ಸಂಶ್ರಿತ್ಯ - ಅವಲಂಬಿಸಿ, ನಿಷಸಾದ - ಕುಳಿತುಕೊಂಡನು. ‖ ೩೨ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷೋಡಶಸ್ಸರ್ಗಃ

ಪರಂಪರೆಯಿಂದ ಬಾಧಿತಳಾಗಿ ಕಾಂತಿಗುಂದಿದ ಈ ಜನಕಸುತೆಯು ಪ್ರಿಯನನ್ನಗಲಿದ ಚಕ್ರ ವಾಕದಂತೆ ಅತಿ ದೀನದಶೆಯನ್ನು ಹೊಂದಿರುವಳು. ಇದು ಮಾತ್ರವಲ್ಲದೆ, ಮೊದಲೇ ದುಃಖಿತ ಳಾಗಿರುವ ಈಕೆಗೆ ಹೂಗಳ ಹೊರೆಯಿಂದ ಬಗ್ಗಿರುವ ರೆಂಬೆಗಳುಳ್ಳ ಈ ಅಶೋಕವೃಕ್ಷ ಗಳು ಅತಿ ತಾಪವನ್ನುಂಟುಮಾಡುತ್ತಿರುವವು. ಶೀತಲ ಕಿರಣಗಳುಳ್ಳ ಚಂದ್ರನು ವಸಂತ ಋತುವಿನ ಸಮಾಗಮದಿಂದ ಸಹಸ್ರ ಕಿರಣಗಳುಳ್ಳವನಾಗಿ ಈಕೆಯನ್ನು ಮತ್ತೂ ಬಾಧೆಗೊಳಿಸುತ್ತಿರುವನು.'' ‖ ೨೯–೩೦ ‖ ಮಹಾ ಬಲಿಷ್ಠನೂ, ವಾನರಶ್ರೇಷ್ಠನೂ, ವೇಗ ವಂತನೂ ಆದ ಹನುಮಂತನು ಹೀಗೆ ಅನೇಕ ವಿಧವಾಗಿ ಚಿಂತಿಸಿ ಆಕೆಯೇ ಸೀತಾದೇವಿ ಯೆಂದು ನಿರ್ಧರಿಸಿಕೊಂಡು ಆ ಶಿಂಶುಪಾವೃಕ್ಷದಲ್ಲಿಯೇ ಕುಳಿತಿದ್ದನು. ‖ ೩೨ ‖

ಇಂತಿದು ದುಃಖಿತ ಸೀತಾದರ್ಶನಜನಿತ ಹನುಮತ್ಸಂತಾಪರೂಪಣವೆಂಬ
ಹದಿನಾರನೆಯ ಸರ್ಗವು ಸಮಾಪ್ತವಾದುದು.

---

* " ಶೀತರಶ್ಮಿಃ " ತಿ. ಪಾ.

ಸುಂದರಕಾಂಡೇ ಸಪ್ತದಶಸ್ಸರ್ಗಃ

ತತಃ ಕುಮುದ ‡ ಷಂಡಾಭೋ § ನಿರ್ಮಲೋ ನಿರ್ಮಲಂ ಸ್ವಯಂ । ಪ್ರಜಗಾಮ ನಭಶ್ಚಂದ್ರೋ ಹಂಸೋ ನೀಲಮಿವೋದಕಂ ॥೧॥ ಸಾಚಿವ್ಯಮಿವ ಕುರ್ವನ್ಸ ಪ್ರಭಯಾ ನಿರ್ಮಲಪ್ರಭಃ । ಚಂದ್ರಮಾ ರಶ್ಮಿಭಿಶ್ಶೀತೈ ಸ್ಸಿಷೇವೇ ಪವನಾತ್ಮಜಂ ॥೨॥ ಸ ದದರ್ಶ ತತ ಸ್ಸೀತಾಂ ಪೂರ್ಣಚಂದ್ರನಿಭಾನನಾಂ । ಶೋಕಭಾರೈರಿವ ನ್ಯಸ್ತಾಂ ಭಾರೈರ್ನಾವಮಿವಾಂಭಸಿ ॥ ೩ ॥ ದಿದೃಕ್ಷಮಾಣೋ ವೈದೇಹೀಂ ಹನೂಮಾನ್ಮಾರುತಾತ್ಮಜಃ । ಸ

ತತಃ ಅನಂತರದಲ್ಲಿ, ಕುಮು....ಭಃ ನೈದಿಲೆ ಹುವ್ವುಗಳ ತಂಡದ ಕಾಂತಿಯುಳ್ಳ, ಸ್ವಯಂ- ಸ್ವಾಭಾವಿಕವಾಗಿ, ನಿರ್ಮಲಃ - ಸ್ವಚ್ಛವಾದ, ಚಂದ್ರಃ - ಚಂದ್ರನು, ನಿರ್ಮಲಂ - ಮಲಿನವಿಲ್ಲದ, ನಭಃ - ಅಂತರಿಕ್ಷವನ್ನು, ಹಂಸಃ - ಹಂಸಪಕ್ಷಿಯು, ನೀಲಂ - ಕಪ್ಪಾಗಿರುಪ, ಉದಕಮಿವ - ನೀರನ್ನೋಪಾದಿಯಲ್ಲಿ, ಪ್ರಜಗಾಮ - ಹೊಂದಿದನು. ॥ ೧ ॥ ನಿರ್ಮಲಪ್ರಭಃ - ಪ್ರಸನ್ನವಾದ ಕಾಂತಿಯುಳ್ಳ, ಸಚಂದ್ರಮಾಃ - ಆ ಚಂದ್ರನು, ಪ್ರಭಯಾ - ಪ್ರಕಾಶದಿಂದ, ಸಾಚಿವ್ಯಂ - ಸಹಾಯವನ್ನು, ಕುರ್ವನ್ನಿವ - ಮಾಡುವನಂತೆ, ಶೀತೈಃ - ತಣ್ಣಗಿರುವ, ರಶ್ಮಿಭಿಃ - ಕಿರಣಗಳಿಂದ, ಪವನಾತ್ಮಜಂ - ವಾಯುಪುತ್ರನನ್ನು, ಸಿಷೇವೇ - ಸೇವಿಸಿದನು. ॥ ೨ ॥ ತತಃ - ಬಳಿಕ, ಸಃ - ಆ ಆಂಜನೇಯನು, ಪೂರ್ಣ....ನಾಂ-ಷೋಡಶಕಳಾಪರಿಪೂರ್ಣನಾದ ಚಂದ್ರನಿಗೆ ಸದೃಶವಾದ ಮುಖವುಳ್ಳ, ಶೋಕಭಾರೈಃ- ಶೋಕಗಳೆಂಬ ಹೊರೆಗಳಿಂದ, ನ್ಯಸ್ತಾಮಿವಸ್ಥಿತಾಂ-ಆಕ್ರಮಿಸಲ್ಪಟ್ಟಂತಿರುವಳಾದುದರಿಂದ, ಅಂಭಸಿ- ಉದಕದಲ್ಲಿ, ನ್ಯಸ್ತಾಂ - ಇಡಲ್ಪಟ್ಟ, ಭಾರೈಃ - ಭಾರಗಳಿಂದ ಕೂಡಿದ, ನಾವಮಿವ - ಹಡಗಿನಂತಿರುವ, ಸೀತಾಂ - ಸೀತಾದೇವಿಯನ್ನು, ದದರ್ಶ - ಕಂಡನು. ॥ ೩ ॥ ಮಾರುತಾತ್ಮಜಃ - ವಾಯುಪುತ್ರನಾದ, ಸಹನೂಮಾನ್-ಆ ಆಂಜನೇಯನು, ವೈದೇಹೀಂ-ಸೀತಾದೇವಿಯನ್ನು, ದಿದೃಕ್ಷಮಾಣಃ- ನೋಡುತ್ತ, ಏಕಾಕ್ಷೀಂ - ಒಂದು ಕಣ್ಣುಳ್ಳವಳನ್ನೂ, ಏಕಕರ್ಣಾಂಚ - ಒಂದೇ ಕಿವಿಯುಳ್ಳವಳನ್ನೂ,

---

ಆ ಬಳಿಕ ಬಿಳಿ ನೈದಿಲೆಯಂತೆ ಶುಭ್ರವಾದ ಕಾಂತಿಯುಳ್ಳವನೂ, ನಿರ್ಮಲನೂ ಆದ ಚಂದ್ರನು ಕಪ್ಪಾದ ನೀರನ್ನು ಪ್ರವೇಶಿಸಿ ಬರುವ ರಾಜಹಂಸದಂತೆ ಆ ನೀಲಾಕಾಶದ ತುದಿಯನ್ನು ಮುಟ್ಟಿದನು. ನಿರ್ಮಲಕಾಂತಿಯುಳ್ಳ ಆ ಚಂದ್ರನು ತಣ್ಪಾದ ತನ್ನ ಕಿರಣಗಳಿಂದ ಪವನಾತ್ಮಜನನ್ನು ಸೇವಿಸಿ ಮಂತ್ರಿತ್ವವನ್ನು ಮಾಡುವಂತಿದ್ದನು. ಆ ಸಮಯದಲ್ಲಿ ಮಾರುತಿಯು ಭಾರಾತಿಶಯದಿಂದ ಕಡಲಲ್ಲಿ ಮುಳುಗುವ ಹಡಗಿನಂತೆ ಶೋಕಭಾರದಿಂದ ಕುಗ್ಗಿರುವ ಪೂರ್ಣಚಂದ್ರಮುಖಿಯಾದ ಆ ಸೀತಾದೇವಿಯನ್ನು ನೋಡುತ್ತಿದ್ದನು. ಆಗಲಾತನು ಆಕೆಯ ಸಮೀಪದಲ್ಲಿ ಸುತ್ತಲೂ ಕಾವಲಾಗಿ ಕುಳಿತಿದ್ದ ಘೋರಾಕೃತಿಯುಳ್ಳ ರಾಕ್ಷಸಿಯರನ್ನು ಕಂಡನು. ಅವರಲ್ಲಿ ಒಂದೇ ಕಣ್ಣುಳ್ಳವಳೊಬ್ಬಳು, ಒಂದೇ ಕಿವಿಯುಳ್ಳವಳೊಬ್ಬಳು, ತಲೆ ತುಂಬ ಮುಸುಕು ಹಾಕಿದಂತಿರುವ ಕಿವಿಗಳುಳ್ಳವಳೊಬ್ಬಳು, ಕಿವಿಗಳೇ

---

§ "ಖಂಡಾಭೋ" ರಾ. ಪಾ. ‡ "ನಿರ್ಮಲಂ" ತಿ. ಮು. ಪಾ.

ನದರ್ಶಾವಿದೂರಸ್ಥಾ ರಾಕ್ಷಸೀ ರ್ಘೋರದರ್ಶನಾಃ ॥೪॥ ಏಕಾಕ್ಷೀಮೇಕಕರ್ಣಾಂಚ ಕರ್ಣಪ್ರಾವರಣಾಂ ತಥಾ । ಅಕರ್ಣಾಂ ಶಂಕುಕರ್ಣಾಂಚ ಮಸ್ತಕೋಚ್ಛ್ವಾಸ ನಾಸಿಕಾಂ ॥ ೫ ॥ ಅತಿಕಾಯೋತ್ತಮಾಂಗೀಂಚ ತನುದೀರ್ಘಶಿರೋಧರಾಂ । ಧ್ವಸ್ತ ಕೇಶೀಂ ತಥಾ ಕೇಶೀಂ ಕೇಶಕಂಬಳಧಾರಿಣೀಂ ॥ ೬ ॥ ಲಂಬಕರ್ಣಲಲಾಟಾಂಚ ಲಂಬೋದರಪಯೋಧರಾಂ । ಲಂಬೋಷ್ಠೀಂ ಚುಬುಕೋಷ್ಠೀಂಚ ಲಂಬಾಸ್ಯಾಂ ಲಂಬ ಜಾನುಕಾಂ ॥೭॥ ಹ್ರಸ್ವಾಂ ದೀರ್ಘಾಂ ತಥಾ ಕುಬ್ಜಾಂ ವಿಕಟಾಂ ವಾಮನಾಂ ತಥಾ ।

ತಥಾ - ಹಾಗೆಯೇ, ಕರ್ಣ....ಣಾಂ - ಕಿವಿಗಳೇ ಆಚ್ಛಾದನ ವಸ್ತ್ರವಾಗುಳ್ಳವಳನ್ನೂ, ಅಕರ್ಣಾಂ - ಕಿವಿಯಿಲ್ಲದಿರುವವಳನ್ನೂ, ಶಂಕುಕರ್ಣಾಂಚ-ಗೂಟದಂತಿರುವ ಕಿವಿಗಳುಳ್ಳವಳನ್ನೂ, ಮಸ್ತ....ಕಾಂ- ಮಂಡೆಯಲ್ಲಿ ಊರ್ಧ್ವಶ್ವಾಸವುಳ್ಳ ಮೂಗುಳ್ಳವಳನ್ನೂ, ಅತಿ....ಚ - ಅತಿ ಸ್ಥೂಲವಾದ ಶಿರಸ್ಸು ಳ್ಳವಳನ್ನೂ, ತನು....ರಾಂ - ಸೂಕ್ಷ್ಮವಾದ ಉದ್ದವಾದ ಕೊರಳುಳ್ಳವಳನ್ನೂ, ಧ್ವಸ್ತಕೇಶೀಂ- ಮೊಟಕಾದ ತಲೆಗೂದಲುಳ್ಳವಳನ್ನೂ, ತಥಾ - ಹಾಗೆಯೇ, ಅಕೇಶೀಂ - ಕೂದಲಿಲ್ಲದವಳನ್ನೂ, ಕೇಶ....ಣೀಂ - ಕಂಬಳಿಯಂತಿರುವ ಕೂದಲನ್ನು ಧರಿಸಿರುವವಳನ್ನೂ, ಲಂಬ....ಚ - ಜೋಲಾಡುತ್ತಿ ರುವ ಕಿವಿಯೂ, ಹಣೆಯೂ ಉಳ್ಳ, ಲಂಬೋ....ರಾಂ - ಲಂಬಾಯಮಾನವಾದ ಹೊಟ್ಟೆಯೂ, ಸ್ತನ ಗಳೂ ಉಳ್ಳವಳನ್ನೂ, ಲಂಬೋಷ್ಠೀಂ-ನೇತಾಡುತ್ತಿರುವ ತುಟಿಯುಳ್ಳವನ್ನೂ, ಚುಬುಕೋಷ್ಠೀಂಚ- ಗಡ್ಡದಲ್ಲಿ ತುಟಿಯುಳ್ಳವಳನ್ನೂ, ಲಂಬಾಸ್ಯಾಂ - ಜಣುಕುತ್ತಿರುವ ಮುಖವುಳ್ಳವಳನ್ನೂ, ಲಂಬಜಾ ನುಕಾಂ - ಲಂಬಾಯಮಾನವಾದ ಮೊಣಕಾಲುಗಳುಳ್ಳವಳನ್ನೂ, ಹ್ರಸ್ವಾಂ - ಕುರುಚಾದವಳನ್ನೂ, ದೀರ್ಘಾಂ - ಉದ್ದವಾದವಳನ್ನೂ, ತಥಾ - ಹಾಗೆಯೇ, ಕುಬ್ಜಾಂ - ಗೂನುಳ್ಳವಳನ್ನೂ, ವಿಕಟಾಂ- ಸೊಟ್ಟೆಯಾಗಿರುವವಳನ್ನೂ, ವಾಮನಾಂ - ಮೊಟಕಾದವಳನ್ನೂ, ಕರಾಳಾಂ - ಉದ್ದವಾಗಿ ಬೆಳೆದು ಬೊಗ್ಗಿರುವವಳನ್ನೂ, ಭುಗ್ನವಕ್ತ್ರಾಂಚ - ಬೊಗ್ಗಿದ ಮುಖವುಳ್ಳವಳನ್ನೂ, ಪಿಂಗಾಕ್ಷೀಂ - ಹಸುರಾದ ಕಣ್ಣುಗಳುಳ್ಳವಳನ್ನೂ, ವಿಕೃತಾನನಾಂ - ವಿಕಾರವಾದ ಮುಖವುಳ್ಳವಳನ್ನೂ, ಅವಿದೂರಸ್ಥಾಃ -

---

ಇಲ್ಲದವಳು ಒಬ್ಬಳು, ಊರುಗೋಲಿನಂತಿರುವ ಕಿವಿಯುಳ್ಳವಳೊಬ್ಬಳು, ಒಬ್ಬಳು ತಲೆಯ ಮೇಲೆ ಮೂಗುಳ್ಳವಳು, ಪರ್ವತದಂತಹ ತಲೆಯುಳ್ಳವಳೊಬ್ಬಳು, ಸೂಕ್ಷ್ಮವಾಗಿಯೂ, ಬಹಳ ಉದ್ದವಾಗಿಯೂ ಕೊರಳುಳ್ಳವಳೊಬ್ಬಳು, ಕೆದರಿದ ತಲೆಗೂದಲುಳ್ಳವಳೊಬ್ಬಳು, ತಲೆಯಲ್ಲಿ ಕೂದಲೇ ಇಲ್ಲದವಳೊಬ್ಬಳು, ಕೂದಲಿನಿಂದಲೇ ಹೆಣೆದ ಕಂಬಳಿಯುಳ್ಳವ ಳೊಬ್ಬಳು, ಇನ್ನೊಬ್ಬಳು ಜೋಲಾಡುತ್ತಿರುವ ಕಿವಿಗಳುಳ್ಳವಳು, ಜೋಲುವ ಮುಖವುಳ್ಳವ ಳೊಬ್ಬಳು, ಜೋಲುವ ದೊಡ್ಡ ಹೊಟ್ಟೆ ಮತ್ತು ಕುಚಗಳುಳ್ಳವಳು ಒಬ್ಬಳು, ಜೋಲಾಡುವ ತುಟಿಯುಳ್ಳವಳೊಬ್ಬಳು, ಗಡ್ಡದವರೆಗೂ ಜೋಲುತ್ತಿರುವ ತುಟಿಯುಳ್ಳವಳು, ಒಬ್ಬಳು ಜೋಲುಮುಖದವಳು, ಒಬ್ಬಳು ಜೋಲುವ ಮೊಣಕಾಲುಗಳುಳ್ಳವಳು, ಗಿಡ್ಡನಾದವ ಳೊಬ್ಬಳು, ಎತ್ತರವಾಗಿರುವಳೊಬ್ಬಳು, ಗೂನುಮೈಯ್ಯುಳ್ಳವಳೊಬ್ಬಳು, ಒಬ್ಬಳು ವಿಕಾರ ರೂಪವುಳ್ಳವಳು, ಒಬ್ಬಳು ಕರಾಳಸ್ವರೂಪಳು, ಚಪ್ಪಟೆಯಾಗಿರುವ ಮೊಗವೊಬ್ಬಳಿಗೆ, ಪಿಂಗಳವಾದ ಕಣ್ಣೊಬ್ಬಳಿಗೆ, ವಿಕಾರವಾದ ಮೋರೆಯೊಬ್ಬಳಿಗೆ, ವಕ್ರರೂಪವೊಬ್ಬಳಿಗೆ, ಪಿಂಗಳವರ್ಣದ ಮೈಯೊಬ್ಬಳಿಗೆ, ಕಪ್ಪುಬಣ್ಣದ ಮೆಯ್ಯೊಬ್ಬಳಿಗೆ, ಒಬ್ಬಳು ಯಾವಾಗಲೂ

ಕರಾಳಾಂ ಭುಗ್ನವಕ್ತ್ರಾಂಚ ಪಿಂಗಾಕ್ಷೀಂ ವಿಕೃತಾನನಾಂ ॥ ೮ ॥ ವಿಕೃತಾಃ ಪಿಂಗಳಾಃ ಕಾಳೀಃ ಕ್ರೋಧನಾಃ ಕಲಹಪ್ರಿಯಾಃ । ಕಾಲಾಯಸ ಮಹಾಶೂಲ ಕೂಟಮುದ್ಗರ ಧಾರಿಣೀಃ ॥ ೯ ॥ ವರಾಹ ಮೃಗಶಾರ್ದೂಲ ಮಹಿಷಾಜ ಶಿವಾಮುಖೀಃ । ಗಜೋಷ್ಟ್ರ ಹಯಪಾದಾಶ್ಚ ನಿಖಾತಶಿರಸೋಽಪರಾಃ ॥೧೦॥ ಏಕಹಸ್ತೈಕಪಾದಾಶ್ಚ ಖರಕರ್ಣ್ಯಶ್ವ ಕರ್ಣಿಕಾಃ । ಗೋಕರ್ಣೀರ್ಹಸ್ತಿಕರ್ಣೀಶ್ಚ ಹರಿಕರ್ಣೀಸ್ತಥಾಽಪರಾಃ ॥ ೧೧ ॥ ಅನಾಸಾ ಅತಿನಾಸಾಶ್ಚ ತಿರ್ಯಙ್ನಾಸಾ ವಿನಾಸಿಕಾಃ । ಗಜಸನ್ನಿಭನಾಸಾಶ್ಚ ಲಲಾಟೋ

ಸಮೀಪದಲ್ಲಿರುವ, ಘೋರದರ್ಶನಾಃ - ಭಯಂಕರವಾದ ದೃಷ್ಟಿಯುಳ್ಳ, ರಾಕ್ಷಸೀಃ - ರಾಕ್ಷಸಸ್ತ್ರೀಯರನ್ನೂ, ದದರ್ಶ - ಕಂಡನು. ॥ ೪-೮ ॥ ವಿಕೃತಾಃ - ವಿಕಾರರಾದವರನ್ನೂ, ಪಿಂಗಳಾಃ - ಹಸುರು ಬಣ್ಣವುಳ್ಳವರನ್ನೂ, ಕಾಳೀಃ - ಕಪ್ಪಾಗಿರುವವರನ್ನೂ, ಕ್ರೋಧನಾಃ - ಕೋಪಗಾತಿಯರನ್ನೂ, ಕಲಹಪ್ರಿಯಾಃ - ಜಗಳಗಂಟಿಯರನ್ನೂ, ಕಾಲಾ....ಣೀಃ - ಕಬ್ಬಿಣದ ದೊಡ್ಡ ತ್ರಿಶೂಲಗಳನ್ನೂ, ಚಮ್ಮಟಿಗೆಗಳನ್ನೂ, ಕಬ್ಬಿಣದ ಹಾರಗಳನ್ನೂ, ಧರಿಸಿರುವವರನ್ನೂ, ವರಾ....ಖೀಃ - ಹಂದಿ, ಜಿಂಕೆ, ಹುಲಿ, ಎಮ್ಮೆ, ಕೋಣ, ಮೇಕೆ, ನರಿಗಳ ಮುಖಗಳುಳ್ಳವರನ್ನೂ, ಗಜೋ....ಶ್ಚ - ಆನೆಯ, ಒಂಟೆಯ, ಕುದುರೆಯ, ಪಾದಗಳುಳ್ಳವರನ್ನೂ, ನಿಖಾತಶಿರಸಃ - ಶರೀರದಲ್ಲಿ ಔತುಕೊಂಡಿರುವ ಮಂಡೆಗಳುಳ್ಳ, ಅಪರಾಃ - ಮತ್ತೆ ಕೆಲವರನ್ನೂ, ಏಕ....ಶ್ಚ - ಒಂದೇ ಕೈಯುಳ್ಳವರನ್ನೂ, ಒಂದೇ ಕಾಲುಳ್ಳವರನ್ನೂ, ಖರ....ಕಾಃ - ಕತ್ತೆಗಳ, ಕುದುರೆಗಳ ಕಿವಿಗಳಂತೆ ಕಿವಿಗಳುಳ್ಳವರನ್ನೂ, ಗೋಕರ್ಣೀಃ - ಆಕಳ ಕಿವಿಗಳುಳ್ಳವರನ್ನೂ, ಹಸ್ತಿಕರ್ಣೀಶ್ಚ - ಆನೆಯ ಕಿವಿಗಳಂತೆ ಕಿವಿಗಳುಳ್ಳವರನ್ನೂ, ಹರಿಕರ್ಣೀಃ - ಸಿಂಹದಂತೆ ಕಿವಿಗಳುಳ್ಳ, ತಥಾ - ಹಾಗೆಯೇ, ಅಪರಾಃ - ಇನ್ನೂ ಕೆಲವರನ್ನೂ, ಅನಾಸಾಃ - ಮೂಗಿಲ್ಲದವರನ್ನೂ, ಅತಿನಾಸಾಶ್ಚ - ದೊಡ್ಡ ಮೂಗುಳ್ಳವರನ್ನೂ, ತಿರ್ಯಙ್ನಾಸಾಃ - ಅಡ್ಡವಾಗಿರುವ ಮೂಗುಳ್ಳವರನ್ನೂ, ವಿನಾಸಿಕಾಃ - ವಿಕಾರವಾದ ಮೂಗುಳ್ಳವರನ್ನೂ, ಗಜ....ಶ್ಚ - ಆನೆಗೆ ಸಮಾನವಾದ ಮೂಗುಳ್ಳವರನ್ನೂ, ಲಲಾ....ಕಾಃ - ಫಾಲಪ್ರದೇಶದಲ್ಲಿ ಉಸಿರು ಬಿಡುತ್ತಿರುವ, ಮೂಗುಳ್ಳವರನ್ನೂ, ಹಸ್ತಿಪಾದಾಃ - ಆನೆಯ ಕಾಲುಗಳಂತೆ, ಕಾಲುಗಳುಳ್ಳವರನ್ನೂ, ಮಹಾಪಾದಾಃ - ದೊಡ್ಡ ಪಾದಗಳುಳ್ಳವರನ್ನೂ, ಪಾದಚೂಳಿಕಾಃ - ಪಾದಗಳಲ್ಲಿ ಕೂದಲುಳ್ಳವರನ್ನೂ, ಅತಿ....ವಾಃ - ಬಹು ಪ್ರಮಾಣವುಳ್ಳ

ಕೋಪವೇ ಉಳ್ಳವಳು, ಒಬ್ಬಳು ಯಾವಾಗಲೂ ಜಗಳವನ್ನೇ ಆಡುತ್ತಿರುವವಳು, ಕೆಲವರು ಶೂಲ, ಮುದ್ಗರ, ಕೂಟಮುದ್ಗರ ಮೊದಲಾದ ಆಯುಧಗಳನ್ನು ಧರಿಸಿರುವವರೂ, ಹಂದಿ, ಜಿಂಕೆ, ಹುಲಿ, ಆಡು, ನರಿ ಮೊದಲಾದವುಗಳ ಮುಖವುಳ್ಳವರೂ ಕೆಲವರು. ಕೆಲವರಿಗೆ ಆನೆಯಕಾಲು, ಒಂಟೆಯಕಾಲು ಕೆಲವರಿಗೆ, ಕೆಲವರಿಗೆ ಕುದುರೆಯಕಾಲು, ಹೊಟ್ಟೆಯಲ್ಲಿ ಅಡಗಿದ ತಲೆಯುಳ್ಳವರು ಕೆಲವರು, ಒಂದೇಕೈ, ಒಂದೇಕಾಲು ಉಳ್ಳವರು ಕೆಲವರು. ಕತ್ತೆಯ ಕಿವಿಗಳೂ, ಕುದುರೆಯಕಾಲು, ಹೊಟ್ಟೆಯಲ್ಲಿ ಅಡಗಿದ ತಲೆಯುಳ್ಳವರು ಕೆಲವರು. ಒಂದೇಕೈ ಒಂದೇಕಾಲು ಉಳ್ಳವರು ಕೆಲವರು. ಕತ್ತೆಯ ಕಿವಿಗಳೂ, ಕುದುರೆಯ ಕಿವಿಗಳೂ, ಹಸುವಿನ ಕಿವಿಗಳೂ, ಆನೆಯ ಕಿವಿಗಳೂ, ಸಿಂಹದ ಕಿವಿಗಳೂ ಉಳ್ಳವರು; ಮತ್ತೆ ಕೆಲವರು ಮೂಗಿಲ್ಲದವರೂ, ದೊಡ್ಡ ಮೂಗಿರುವವರೂ, ಅಡ್ಡಮೂಗುಳ್ಳವರೂ, ಆನೆಯ ಮೂಗುಳ್ಳವರೂ ಇನ್ನು ಕೆಲವರು. ಮತ್ತೂ ಕೆಲವರು ಆನೆಯ ಪಾದಗಳುಳ್ಳವರೂ, ದೊಡ್ಡ ಪಾದಗಳುಳ್ಳವರೂ, ಗೋವಿನ ಪಾದಗಳುಳ್ಳವರೂ, ಪಾದಗಳಲ್ಲಿ ಕೂದಲುಗಳುಳ್ಳವರೂ ಕೆಲವರು.

ಚ್ಛ್ವಸನಾಸಿಕಾಃ ||೧೨|| ಹಸ್ತಿಪಾದಾ ಮಹಾಪಾದಾ ಗೋಪಾದಾಃ ಪಾದಚೂಳಿಕಾಃ | ಅತಿಮಾತ್ರಸಿರೋಗ್ರೀವಾ ಅತಿಮಾತ್ರಕುಚೋದರೀಃ||೧೩||ಅತಿಮಾತ್ರಾಽಸ್ಯ ನೇತ್ರಾಶ್ಚ ದೀರ್ಘಜಿಹ್ವಾ ನಖಾಸ್ತಥಾ | ಅಜಾಮುಖೀರ್ಹಸ್ತಿಮುಖೀ ರ್ಗೋಮುಖೀ ಸ್ಸೂಕರೀ ಮುಖೀಃ ||೧೪|| ಹಯೋಷ್ಟ್ರ ಖರವಕ್ತ್ರಾಶ್ಚ ರಾಕ್ಷಸೀ ಘೋರದರ್ಶನಾಃ | ಶೂಲ ಮುದ್ಗರಹಸ್ತಾಶ್ಚ ಕ್ರೋಧನಾಃ ಕಲಹಪ್ರಿಯಾಃ || ೧೫ || ಕರಾಳಾ ಧೂಮ್ರಕೇಶೀಶ್ಚ ರಾಕ್ಷಸೀ ರ್ವಿಕೃತಾನನಾಃ | ಪಿಬಂತೀ ಸ್ಸತತಂ ಪಾನಂ ಸದಾ ಮಾಂಸಸುರಾಪ್ರಿಯಾಃ || ೧೬ || ಮಾಂಸಶೋಣಿತದಿಗ್ಧಾಂಗೀ ರ್ಮಾಂಸಶೋಣಿತಭೋಜನಾಃ | ತಾ ದದರ್ಶ

ಶಿರಸ್ಸೂ ಕೊರಳೂ ಉಳ್ಳವರನ್ನೂ, ಅತಿ....ರೀಃ - ಪ್ರಮಾಣಾತೀತಗಳಾದ ಸ್ತನಗಳೂ ಹೊಟ್ಟೆಯೂ ಉಳ್ಳವರನ್ನೂ, ಅತಿ....ಶ್ಚ - ದೊಡ್ಡ ಮುಖಗಳೂ, ಕಣ್ಣುಗಳೂ ಉಳ್ಳವರನ್ನೂ, ತಥಾ - ಹಾಗೆಯೇ, ದೀರ್ಘ....ಖಾಃ-ಉದ್ದವಾದ ನಾಲಗೆಯೂ, ಉಗುರುಗಳೂ ಉಳ್ಳವರನ್ನೂ, ಅಜಾಮುಖೀಃ-ಮೇಕೆಯ ಮುಖವುಳ್ಳವರನ್ನೂ, ಹಸ್ತಿಮುಖೀಃ - ಆನೆಯ ಮುಖಗಳುಳ್ಳವರನ್ನೂ, 'ಗೋಮುಖೀಃ-ಆಕಳ ಮುಖ ಗಳುಳ್ಳವರನ್ನೂ, ಸೂಕರೀಮುಖೀಃ - ಹೆಣ್ಣು ಹಂದಿಯ ಮುಖಗಳುಳ್ಳವರನ್ನೂ, ಹಯೋ....ಶ್ಚ - ಕುದುರೆಯ ಮುಖಗಳುಳ್ಳವರನ್ನೂ, ಒಂಟೆಯ ಮುಖಗಳುಳ್ಳವರನ್ನೂ, ಕತ್ತೆಯ ಮುಖಗಳುಳ್ಳವರನ್ನೂ, ಘೋರದರ್ಶನಾಃ - ಭಯಂಕರವಾದ ದೃಷ್ಟಿಯುಳ್ಳವರನ್ನೂ, ಶೂಲ....ಶ್ಚ - ಶೂಲಾಯುಧಗಳೂ, ಮುದ್ಗರಾಯುಧಗಳೂ ಹಸ್ತಗಳಲ್ಲಿ ಉಳ್ಳವರನ್ನೂ, ಕ್ರೋಧನಾಃ - ಕೋಪಗಾತಿಯರನ್ನೂ, ಧೂಮ್ರ ಕೇಶೀಶ್ಚ - ಕಪ್ಪು, ಕೆಂಪೂ ಬೆರತ ಬಣ್ಣದ ಕೂದಲುಳ್ಳವರನ್ನೂ, ವಿಕೃತಾನನಾಃ - ವಿಕಾರಮುಖ ಗಳುಳ್ಳವರನ್ನೂ, ಸತತಂ - ಯಾವಾಗಲೂ, ಪಾನಂ - ಮದ್ಯವನ್ನು, ಪಿಬಂತೀಃ - ಪಾನಮಾಡು ತ್ತಿರುವ, ಸದಾ - ನಿರಂತರವೂ, ಮಾಂಸ....ಯಾಃ - ಮಾಂಸದಲ್ಲಿಯೂ, ಮದ್ಯದಲ್ಲಿಯೂ ಪ್ರೇಮ ವುಳ್ಳವರನ್ನೂ, ಮಾಂಸ....ಗೀಃ-ಮಾಂಸದಿಂದಲೂ, ರಕ್ತದಿಂದಲೂ ಲೇಪನ ಮಾಡಲ್ಪಟ್ಟ ಶರೀರವುಳ್ಳ, ಮಾಂಸ....ನಾಃ - ಮಾಂಸರಕ್ತಗಳೇ ಭೋಜನವಾಗಿ ಉಳ್ಳ, ರೋಮ....ನಾಃ - ರೋಮಾಂಚಕರ ವಾದ ನೋಡುವಿಕೆಯುಳ್ಳ, ಸ್ಕಂಧವಂತಂ - ರೆಂಬೆಗಳುಳ್ಳ, ವನಸ್ಪತಿಂ - ಅಶೋಕವೃಕ್ಷವನ್ನು, ಪರಿವಾರ್ಯ - ಸುತ್ತಿಕೊಂಡು, ಉಪಾಸೀನಾಃ - ಮಲಗಿರುವ, ತಾಃರಾಕ್ಷಸೀಃ - ಆ ರಾಕ್ಷಸಸ್ತ್ರೀಯ

ಪ್ರಮಾಣಕ್ಕೆ ನಿಲುಕದಂತೆ ಬೆಳೆದ ತಲೆ, ಕುತ್ತಿಗೆಯುಳ್ಳವರೂ, ಸ್ತನೋದರಗಳುಳ್ಳವರೂ, ಮುಖನೇತ್ರಗಳುಳ್ಳವರೂ, ಉದ್ದವಾದ ನಾಲಗೆ ಉಗುರೂ ಉಳ್ಳವರೂ ಕೆಲವರು. ಮೇಕೆ, ಆನೆ, ಹಸು, ಹೆಣ್ಣುಹಂದಿ, ಇವುಗಳ ಮುಖಗಳುಳ್ಳವರೂ, ಕುದುರೆ, ಒಂಟೆ, ಕತ್ತೆ ಮೊದ ಲಾದವುಗಳಂತೆ ಮುಖಗಳುಳ್ಳವರೂ ಕೆಲವರು. ಭಯಂಕರಾಕಾರರಾಗಿ ಶೂಲಾಯುಧ ಮುದ್ಗರಾಯುಧಗಳನ್ನು ಹಿಡಿದಿರುವವರು ಕೆಲವರು; ಇವರೆಲ್ಲರೂ ಕೋಪಗಾತಿಯರು. ಬೂದುಬಣ್ಣದ ಕೂದಲುಳ್ಳವರೂ, ವಕ್ರಮುಖಗಳುಳ್ಳವರೂ ಕೆಲವರು; ಯಾವಾಗಲೂ ಮದ್ಯಪಾನ ಮಾಡುತ್ತಿರುವವರು ಕೆಲವರು; ಮಾಂಸವನ್ನು ತಿನ್ನುತ್ತಿದ್ದವರು ಕೆಲವರು; ಮಾಂಸದಿಂದಲೂ, ರಕ್ತದಿಂದಲೂ ಲೇಪನ ಮಾಡಿಕೊಂಡ ಶರೀರವುಳ್ಳವರು ಕೆಲವರು; ರಕ್ತ ಮಾಂಸಗಳೇ ಭೋಜನವಾಗುಳ್ಳವರು ಕೆಲವರು. ಹೀಗೆ ನೋಡಿದೊಡನೆಯೇ ರೋಮಾಂಚವ ನ್ನುಂಟುಮಾಡುವ ಬಹು ಭಯಂಕರಸ್ವರೂಪಿಣಿಯರಾದ ಆ ರಾಕ್ಷಸ್ತ್ರೀಯರೆಲ್ಲರನ್ನೂ ಮಾರು

ಕಪಿಶ್ರೇಷ್ಠೋ ರೋಮಹರ್ಷಣದರ್ಶನಾಃ ॥ ೧೭ ॥ ಸ್ಕಂಧವಂತ ಮುಪಾಸೀನಾಃ ಪರಿವಾರ್ಯ ವನಸ್ಪತಿಂ । ತಸ್ಯಾಧಸ್ತಾಚ್ಚ ತಾಂ ದೇವೀಂ ರಾಜಪುತ್ರೀ ಮನಿಂದಿತಾಂ ॥೧೮॥ ಅಲಕ್ಷಯಾಮಾಸ ಲಕ್ಷ್ಮೀವಾನ್ ಹನುಮಾನ್ ಜನಕಾತ್ಮಜಾಂ । ನಿಷ್ಪ್ರಭಾಂ ಶೋಕಸಂತಪ್ತಾಂ ಮಲಸಂಕುಲಮೂರ್ಧಜಾಂ ॥ ೧೯ ॥ ಕ್ಷೀಣಪುಣ್ಯಾಂ ಚ್ಯುತಾಂ ಭೂಮೌ ತಾರಾಂ ನಿಪತಿತಾಮಿವ । ಚಾರಿತ್ರವ್ಯಪದೇಶಾಢ್ಯಾಂ ಭರ್ತೃದರ್ಶನದುರ್ಗತಾಂ ॥೨೦॥ ಭೂಷಣೈ ರುತ್ತಮೈರ್ಹೀನಾಂ ಭರ್ತೃವಾತ್ಸಲ್ಯಭೂಷಿತಾಂ । ರಾಕ್ಷಸಾಧಿಪಸಂರುದ್ಧಾಂ ಬಂಧುಭಿಶ್ಚ ವಿನಾಕೃತಾಂ ॥ ೨೧ ॥ ವಿಯೂಥಾಂ ಸಿಂಹಸಂರುದ್ಧಾಂ ಬದ್ಧಾಂ ಗಜವ

ರನ್ನು, ಸಕಪಿಶ್ರೇಷ್ಠಃ - ಆ ಆಂಜನೇಯನು, ದದರ್ಶ - ಕಂಡನು. ॥೯-೧೭॥ ತಸ್ಯ - ಆ ಶಿಂಶುಪಾವೃಕ್ಷದ, ಅಧಸ್ತಾತ್ - ಕೆಳಗಡೆ, ಲಕ್ಷ್ಮೀವಾನ್ - (ಗೋ) ಸೀತಾದರ್ಶನ ಭಾಗ್ಯವಂತನಾದ, ಹನೂಮಾನ್ - ಆಂಜನೇಯನು, ಅನಿಂದಿತಾಂ - ದೋಷರಹಿತಳಾದ, ಜನಕಾತ್ಮಜಾಂ - ಜನಕರಾಯನ ಮಗಳಾದ, ನಿಷ್ಪ್ರಭಾಂ - ಕಾಂತಿಯಿಲ್ಲದೆ, ಶೋಕಸಂತಪ್ತಾಂ - ದುಃಖದಿಂದ ಪರಿತಪಿಸುತ್ತಿರುವ, ಮಲ....ಜಾಂ - ಮಾಲಿನ್ಯದಿಂದ ವ್ಯಾಪ್ತವಾದ ಕೇಶಗಳುಳ್ಳ, ಕ್ಷೀಣಪುಣ್ಯಾಂ - ನಶಿಸಿಹೋದ ಪುಣ್ಯವುಳ್ಳವಳಾದಕಾರಣ, ದಿವಃ - ಅಂತರಿಕ್ಷದಿಂದ, ಚ್ಯುತಾಂ - ಜಾರಿ, ಭೂಮೌ - ಭೂಮಿಯಲ್ಲಿ, ನಿಪತಿತಾಂ - ಬೀಳುತ್ತಿರುವ, ತಾರಾಮಿವಸ್ಥಿತಾಂ - ನಕ್ಷತ್ರದಂತಿರುವ, ಚಾರಿ....ಢ್ಯಾಂ - ಪಾತಿವ್ರತ್ಯವೆಂಬ ವ್ಯಾಜದಿಂದ ಸಂಪನ್ನಳಾದ, ಭರ್ತೃ....ತಾಂ-ಶ್ರೀರಾಮನನ್ನು ನೋಡದಿರುವುದರಿಂದ ರಿಕ್ತಳಾದ, ಉತ್ತಮೈಃ - ಶ್ರೇಷ್ಠಳಾದ, ಭೂಷಣೈಃ - ಒಡವೆಗಳಿಂದ, ಹೀನಾಂ - ರಹಿತಳಾದ, ಭರ್ತೃ....ತಾಂ - ಗಂಡನಲ್ಲಿನ ಸ್ನೇಹಮಾತ್ರವೇ ಅಲಂಕಾರವಾಗಿಯುಳ್ಳ, ರಾಕ್ಷ....ದ್ಧಾಂ - ರಾವಣನಿಂದ ಬಂಧಿಸಲ್ಪಟ್ಟ, ಬಂದುಭಿಶ್ಚ - ನೆಂಟರಿಂದಲೂ, ವಿನಾಕೃತಾಂ - ರಹಿತಳಾಗಿ ಮಾಡಲ್ಪಟ್ಟ, ವಿಯೂಥಾಂ - ತಪ್ಪಿಹೋದ ಗುಂಪುಳ್ಳ, ಸಿಂಹಸಂರುದ್ಧಾಂ - ಸಿಂಹದಿಂದ ತಡೆಮಾಡಲ್ಪಟ್ಟ, ಬದ್ಧಾಂ - ಕಟ್ಟಲ್ಪಟ್ಟ, ಗಜ....ತಾಂ-ಹೆಣ್ಣಾನೆಯಂತಿರುವ, ಪಯೋದಾಂತೇ - ಶರತ್ಕಾಲದಲ್ಲಿ, ಶಾರದಾಭ್ರೈಃ - ಬಿಳೀಮೋಡಗಳಿಂದ, ಆವೃತಾಂ - ಸುತ್ತಿಕೊಳ್ಳಲ್ಪಟ್ಟ, ಚಂದ್ರ....ತಾಂ-ಚಂದ್ರಕಳೆಯಂತಿರುವ, ಅಸಂಸ್ಪರ್ಶಾತ್-ಮುಟ್ಟ

ತಿಯು ಕಂಡನು. ಅವರೆಲ್ಲರೂ ಆ ಶಿಂಶುಪಾವೃಕ್ಷವನ್ನು ಸುತ್ತುವರೆದು ಕುಳಿತಿದ್ದರು.॥೧-೧೭॥ ತೇಜಸ್ವಿಯಾದ ಹನುಮಂತನು ಆ ರಾಕ್ಷಸಿಯರನ್ನು ಕಂಡು ಅವರ ನಡುವೆ ಶಿಂಶುಪಾವೃಕ್ಷದ ಬುಡದಲ್ಲಿ ಕುಳಿತಿದ್ದ ನಿರ್ದೋಷಿಯೂ, ರಾಜಪುತ್ರಿಯೂ ಆದ ಸೀತಾದೇವಿಯನ್ನು ಕಂಡನು. ಆಕೆಯು ಕಾಂತಿಗುಂದಿ ದುಃಖದಿಂದ ಬೇಯುತ್ತ ಮಾಸಿದ ತಲೆಗೂದಲುಳ್ಳವಳಾಗಿ, ಪುಣ್ಯವು ಕಳೆದಮೇಲೆ ಭೂಮಿಗೆ ಬಿದ್ದ ನಕ್ಷತ್ರದಂತಿದ್ದಳು. ಪಾತಿವ್ರತ್ಯ ಧರ್ಮದಿಂದ ಪ್ರಸಿದ್ಧಳಾಗಿದ್ದರೂ ಪತಿದರ್ಶನವಿಲ್ಲದೆ ಬಹಳವಾಗಿ ತಪಿಸುತ್ತಿರುವವಳೂ, ಉತ್ತಮಭೂಷಣಗಳೆಲ್ಲವನ್ನೂ ತೊರೆದು ಪತಿಭಕ್ತಿಯೆಂಬ ಒಂದೇ ಒಂದು ಭೂಷಣದಿಂದ ಅಲಂಕೃತಳಾಗಿಯೂ ರಾಕ್ಷಸರೊಡೆಯನಾದ ರಾವಣನಿಂದ ಬಂಧಿತಳಾಗಿ ಸ್ವಜನರಿಂದ ವಿಯುಕ್ತಳಾಗಿಯೂ, ಸಲಗದಿಂದ ಬೇರೆಯಾದ ಹೆಣ್ಣಾನೆಯು ಸಿಂಹಗಳ ನಡುವೆ ಸಿಕ್ಕಿಬಿದ್ದಂತಿರುವವಳೂ, ವರ್ಷಾಕಾಲವು ಮುಗಿದಮೇಲೆ ಶರತ್ಕಾಲದ ಮೇಘಗಳಿಂದ ಆವೃತವಾದ ಚಂದ್ರರೇಖೆಯಂತಿರುವವಳೂ, ಬಹು ಕಾಲದಿಂದಲೂ ಅಭ್ಯಂಜನಾದಿ ಸಂಸ್ಕಾರಗಳಿಲ್ಲದಿರುವುದರಿಂದ

ಧೂಮಿವ । ಚಂದ್ರರೇಖಾಂ ಪಯೋದಾಂತೇ ಶಾರದಾಭ್ರೈರಿವಾವೃತಾಂ ॥ ೨೨ ॥
ಕ್ಲಿಷ್ಟರೂಪಾ ಮಸಂಸ್ಪರ್ಶಾದಯುಕ್ತಾಮಿವ ವಲ್ಲಕೀಂ । * ಸೀತಾಂ ಭರ್ತೃವಶೇ
ಯುಕ್ತಾಂಮಯುಕ್ತಾಂ ರಾಕ್ಷಸೀವಶೇ॥೨೩॥ಅಶೋಕವನಿಕಾಮಧ್ಯೇ ಶೋಕಸಾಗರ
ಮಾಪ್ಲುತಾಂ । ತಾಭಿಃ ಪರಿವೃತಾಂ ತತ್ರ ¶ ಸಂಗ್ರಹಾಮಿವ ರೋಹಿಣೀಂ ॥ ೨೪ ॥
ದದರ್ಶ ಹನುಮಾನ್ ದೇವೀಂ ಲತಾಮಕುಸುಮಾಮಿವ । ಸಾ ಮಲೇನಚ ದಿಗ್ಧಾಂಗೀ
ವಪುಷಾ ಚಾಪ್ಯಲಂಕೃತಾ ॥ ೨೫ ॥ ಮೃಣಾಳೀ ಪಂಕದಿಗ್ಧೇವ ವಿಭಾತಿ ನವಿಭಾತಿಚ ।
ಮಲಿನೇನತು ವಸ್ತ್ರೇಣ ಪರಿಕ್ಲಿಷ್ಟೇನ ಭಾಮಿನೀಂ ॥೨೬॥ ಸಂವೃತಾಂ ಮೃಗಶಾಬಾಕ್ಷೀಂ

ದಿರೋಣದರಿಂದ, ಕ್ಲಿಷ್ಟರೂಪಾಂ - ಮಲಿನವಾದ ಆಕಾರವುಳ್ಳ, ಅಯುಕ್ತಾಂ - ತಂತಿಗಳಿಂದ ಯುಕ್ತವಾಗದಿರುವ, ವಲ್ಲಕೀಮಿವಸ್ಥಿತಾಂ - ವೀಣೆಯಂತಿರುವ, ರಾಜಪುತ್ರೀಂ - ರಾಜಕನ್ನಿಕೆಯಾದ, ತಾಂದೇವೀಂ - ಆ ಸೀತಾದೇವಿಯನ್ನು, ಲಕ್ಷಯಾಮಾಸ - ನೋಡಿದನು. ॥ ೧೮-೨೨ ॥ ಹನುಮಾನ್ - ಆಂಜನೇಯನು, ಭರ್ತೃವಶೇ - ಗಂಡನ ಸ್ವಾಧೀನದಲ್ಲಿ, ಯುಕ್ತಾಂ - ಇರುವದಕ್ಕೆ ಅರ್ಹಳಾಗಿದ್ದರೂ, ರಾಕ್ಷಸೀವಶೇ-ರಾಕ್ಷಸಸ್ತ್ರೀಯರ ಅಧೀನದಲ್ಲಿ, ಅಯುಕ್ತಾಂ-ಇರುವದಕ್ಕೆ ಅನರ್ಹಳಾದ, ಅಶೋ....ಧ್ಯೇ-ಅಶೋಕವನ ಮಧ್ಯದಲ್ಲಿ, ಶೋಕಸಾಗರಂ - ದುಃಖಸಮುದ್ರದಲ್ಲಿ, ಆಪ್ಲುತಾಂ - ಮುಳುಗಿರುವ, ತತ್ರ - ಆ ಗಿಡದ ಕೆಳಗೆ, ತಾಭಿಃ - ಆ ರಾಕ್ಷಸಾಂಗನೆಯರಿಂದ, ಪರಿವೃತಾಂ - ಸುತ್ತುವರೆದವಳಾದಕಾರಣ, ಸಗ್ರಹಾಂ - ಅಂಗಾರಕ ಗ್ರಹಯುಕ್ತವಾದ, ರೋಹಿಣೀಮಿವ - ರೋಹಿಣೀನಕ್ಷತ್ರದಂತಿರುವ, ಅಕುಸುಮಾಂ - ಹುವ್ವಿಲ್ಲದ, ಲತಾಮಿವ - ಬಳ್ಳಿಯಂತಿರುವ, ಸೀತಾಂದೇವೀಂ - ಸೀತಾದೇವಿಯನ್ನು, ದದರ್ಶ - ಕಂಡನು. ॥ ೨೩-೨೪ ॥ ಮಲೇನ - ಕೊಳೆಯಿಂದ, ದಿಗ್ಧಾಂಗೀ - ವ್ಯಾಪ್ತವಾದ ಶರೀರವುಳ್ಳ, ವಪುಷಾಚಾಪಿ - ಶರೀರದಿಂದಲೂ, ಅಲಂಕೃತಾ - ಅಲಂಕರಿಸಲ್ಪಟ್ಟ, ಸಾ - ಆ ಸೀತಾದೇವಿಯು, ಪಂಕದಿಗ್ಧಾ - ಕೆಸರಿನಿಂದ ವ್ಯಾಪ್ತವಾದ, ಮೃಣಾಳೀವ - ಕಮಲದ ಬಳ್ಳಿಯಂತೆ, ವಿಭಾತಿ - ಹೊಳೆಯುತ್ತಿದ್ದಳು, ನವಿಭಾಚ - ಪ್ರಕಾಶವಿಲ್ಲದವಳೂ ಆಗಿದ್ದಳು. ॥ ೨೫ ॥ ಕಪಿಃ - ವಾನರನಾದ, ಹನುಮಾನ್ - ಆಂಜನೇಯನು, ಪರಿಕ್ಲಿಷ್ಟೇನ - ಹಳೆಯದಾದ, ಮಲಿನೇನ - ಮಾಸಿದ, ವಸ್ತ್ರೇಣ - ವಸ್ತ್ರದಿಂದ, ಸಂವೃತಾಂ - ಆಚ್ಛಾದಿತಳಾದ, ಭಾಮಿನೀಂ - ಸುಂದರಿಯಾದ, ಮೃಗಶಾಬಾಕ್ಷೀಂ - ಜಿಂಕೆಮರಿಯಂತೆ ನೇತ್ರಗಳುಳ್ಳ, ದೀನವದನಾಂ - ದೈನ್ಯಮುಖವುಳ್ಳ, ಭರ್ತೃ

ವೀಣೆಯಂತಿರುವವಳೂ ಆದ ಸೀತಾದೇವಿಯನ್ನು ಕಂಡು ಹನುಮಂತನು ಬಹಳವಾಗಿ ವ್ಯಸನಗೊಂಡನು. ॥೧೮–೨೨॥ ಪತಿದೇವನಾದ ಶ್ರೀರಾಮನ ವಶವರ್ತಿನಿಯಾಗಿರಲು ತಕ್ಕವಳಾಗಿದ್ದರೂ ರಾಕ್ಷಸಿಯರ ಕೈಗೆ ಸೆರೆಸಿಕ್ಕಿ ಆ ಅಶೋಕವನದ ಮಧ್ಯದಲ್ಲಿ ಕುಳಿತು ದುಃಖಸಾಗರದಲ್ಲಿ ಮುಳುಗಿ, ಕ್ರೂರ ಗ್ರಹಗಳ ನಡುವೆ ಸಿಕ್ಕಿಬಿದ್ದ ರೋಹಿಣೀ ನಕ್ಷತ್ರದಂತಿರುವವಳಾಗಿ ಹೂವಿಲ್ಲದ ಬಳ್ಳಿಯಂತೆ ಆಭರಣರಹಿತಳಾದ ಆ ದೇವಿಯನ್ನು ಹನುಮಂತನು ಕಂಡನು. ಅಲಂಕಾರವಿಲ್ಲದಿದ್ದರೂ ಸರ್ವಾಲಂಕಾರಗಳನ್ನೂ ಧರಿಸಿರುವ ಆಕೆಯ ದೇಹವೇ ಆಕೆಗೆ ಉತ್ತಮವಾದ ಅಲಂಕಾರವಾಗಿದ್ದರೂ, ಮಲಿನವಾದ ಮೈಯುಳ್ಳವಳಾಗಿ ಪಂಕಮಗ್ನವಾದ ಪದ್ಮದಂತೆ ವ್ಯಕ್ತಾವ್ಯಕ್ತವಾದ ಕಾಂತಿಯುಳ್ಳವಳಾಗಿದ್ದಳು. ಹಳೆಯದಾಗಿ ಮುದುರಿದ ಮಲಿನ

---

* "ಸತಾಂ ಭರ್ತೃಹಿತೇ ಯುಕ್ತಾಮಯುಕ್ತಾಂ ರಕ್ಷಸಾಂ ವಶೇ" ¶ "ಸಂಗ್ರಹಾಂ" ಗೋ. ಪಾ.

ದದರ್ಶ ಹನುಮಾನ್ ಕಪಿಃ । ತಾಂ ದೇವೀಂ ದೀನವದನಾ ಮದೀನಾಂ ಭರ್ತೃತೇಜಸಾ ॥ ೨೭ ॥ ರಕ್ಷಿತಾಂ ಸ್ವೇನ ಶೀಲೇನ ಸೀತಾ ಮಸಿತಲೋಚನಾಂ । ತಾಂ ದೃಷ್ಟ್ವಾ ಹನುಮಾನ್ ಸೀತಾಂ ಮೃಗಶಾಬನಿಭೇಕ್ಷಣಾಂ ॥ ೨೮ ॥ ಮೃಗಕನ್ಯಾಮಿವ ತ್ರಸ್ತಾಂ ವೀಕ್ಷಮಾಣಾಂ ಸಮಂತತಃ । ದಹಂತೀಮಿವ ನಿಶ್ವಾಸೈರ್ವೃಕ್ಷಾನ್ ಪಲ್ಲವಧಾರಿಣಃ ॥ ೨೯ ॥ ಸಂಘಾತಮಿವ ಶೋಕಾನಾಂ ದುಃಖಸ್ಯೋರ್ಮಿಮಿವೋತ್ಥಿತಾಂ । * ತಾಂ ಕ್ಷಾಮಾಂ ಸುವಿಭಕ್ತಾಂಗೀಂ ವಿನಾಭರಣಶೋಭಿನೀಂ । ಪ್ರಹರ್ಷಮತುಲಂ ಲೇಭೇ

ತೇಜಸಾ - ಪತಿಶಕ್ತಿಯಿಂದ, ಅದೀನಾಂ - ದೈನ್ಯವನ್ನೈದದಿರುವ, ಸ್ವೇನ - ಸ್ವಕೀಯವಾದ, ಶೀಲೇನ - ಸದ್ವೃತ್ತಿಯಿಂದ, ರಕ್ಷಿತಾಂ - ಪರಿಪಾಲಿತಳಾದ, ಅಸಿತಲೋಚನಾಂ - ಕಪ್ಪಾದ ಕಣ್ಣುಗಳುಳ್ಳ, ತಾಂಸೀತಾಂದೇವೀಂ - ಆ ಸೀತಾದೇವಿಯನ್ನು, ದದರ್ಶ - ಕಂಡನು. ॥ ೨೬ ೨೭ ॥ ಮಾರುತಿಃ - ವಾಯುನಂದನನಾದ, ಹನುಮಾನ್ - ಆಂಜನೇಯನು, ಮೃಗ....ಣಾಂ - ಜಿಂಕೆಯ ಕಣ್ಣುಗಳಿಗೆ ಸದೃಶಗಳಾದ ನೇತ್ರಗಳುಳ್ಳ, ಮೃಗಕನ್ಯಾಮಿವ - ಜಿಂಕೆಯ ಮರಿಯಂತೆ, ತ್ರಸ್ತಾಂ - ಭಯಗೊಂಡವಳಾಗಿ, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ವೀಕ್ಷಮಾಣಾಂ - ನೋಡುತ್ತಿರುವ, ನಿಶ್ವಾಸೈಃ-ನಿಟ್ಟುಸಿರುಗಳಿಂದ, ಪಲ್ಲವಧಾರಿಣಃ - ಚಿಗುರುಗಳನ್ನು ಧರಿಸಿರುವ, ವೃಕ್ಷಾನ್ - ಗಿಡಗಳನ್ನು, ದಹಂತೀಮಿವಸ್ಥಿತಾಂ - ಸುಟ್ಟುಬಿಡುವಂತಿರುವ, ಶೋಕಾನಾಂ - ಸಂಕಟಗಳ, ಸಂಘಾತಮಿವಸ್ಥಿತಾಂ - ರಾಸಿಯಂತಿರುವ, ದುಃಖಸ್ಯಸಾಗರೇ-ಶೋಕಸಮುದ್ರದಲ್ಲಿ, ಉತ್ಥಿತಾಂ-ಮೇಲಕ್ಕೆ ಉಕ್ಕಿದ, ಊರ್ಮಿಮಿವಸ್ಥಿತಾಂ-ತೆರೆಯಂತಿರುವ, ತಾಂ - ಪ್ರಸಿದ್ಧಳಾದ, ಕ್ಷಾಮಾಂ - ಕೃಶಳಾದ, ಸುವಿಭಕ್ತಾಂಗೀಂ - ವಿವರವಾಗಿ ಕಾಣುತ್ತಿರುವ ಶರೀರವುಳ್ಳ, ವಿನಾ....ನೀಂ - ಒಡವೆಗಳಿಲ್ಲದೆಯೇ ಹೊಳೆಯುತ್ತಿರುವ, ಮೈಥಿಲೀ - ಜನಕರಾಜನ ಪುತ್ರಿಯಾದ, ತಾಂಸೀತಾಂ ಆ ಸೀತಾದೇವಿಯನ್ನು, ಪ್ರೇಕ್ಷ್ಯ - ಚನ್ನಾಗಿ ನೋಡಿ, ಅತುಲಂ - ಸಮಾನವಿಲ್ಲದ, ಪ್ರಹರ್ಷಂ - ಸಂತೋಷವನ್ನು, ಲೇಭೇ - ಹೊಂದಿದನು. ॥ ೧೮-೩೦ ॥

ವಸ್ತ್ರವನ್ನುಟ್ಟು ಬಾಡಿದ ಮುಖಕಮಲವುಳ್ಳವಳಾದರೂ ಆ ಹರಿಣಾಕ್ಷಿಯು ತನ್ನ ಪತಿಯಾದ ಶ್ರೀರಾಮನ ಶಕ್ತಿಸಾಮರ್ಥ್ಯಗಳನ್ನು ಸ್ಮರಿಸಿಕೊಂಡು ಸಮಾಧಾನ ಹೊಂದುತ್ತ ಬೇರೆ ರಕ್ಷಕರಿಲ್ಲದಿದ್ದರೂ ತನ್ನ ಸೌಶೀಲ್ಯದಿಂದಲೇ ರಕ್ಷಿತಳಾಗಿದ್ದಳು. ॥೨೩–೨೭॥ ಉತ್ಪಲನೇತ್ರಿಯಾದ ಆ ಸೀತಾದೇವಿಯು ಜಿಂಕೆಯಂತೆ ಭಯಗೊಂಡು ಅತ್ತಿತ್ತ ದಿಕ್ಕುಗಳನ್ನು ನೋಡುತ್ತಿದ್ದಳು. ಅಲ್ಲದೆ ನಿಟ್ಟುಸಿರುಗಳಿಂದ, ಚಿಗುರಿದ ಆ ಅಶೋಕವನದ ವೃಕ್ಷಗಳನ್ನು ಸುಡುವಂತಿರುವವಳೂ, ರೂಪಗೊಂಡ ದುಃಖಪರಂಪರೆಯಂತೆಯೂ, ದುಃಖತರಂಗಗಳೇ ಎದ್ದು ಬಂದಂತೆಯೂ ಕಾಣುತ್ತಿರುವವಳೂ ಆದ ಆ ಸೀತಾದೇವಿಯನ್ನು ಮಾರುತಿಯು ಕಂಡನು. ಭೂಮಿಯಂತೆ ಸೈರಣೆಯುಳ್ಳವಳಾಗಿಯೂ, ಸುವಿಭಕ್ತವಾದ ಅಂಗಪ್ರತ್ಯಂಗಗಳುಳ್ಳವಳೂ ಆಭರಣವಿಲ್ಲದೆಯೇ ಶೋಭಿಸುತ್ತಿರುವವಳೂ ಆದ ಆ ಮಿಥಿಲರಾಜಕುಮಾರಿಯನ್ನು ಕಂಡ ಮಾರುತಿಯ ಆನಂದಕ್ಕೆ ಪಾರವೇ ಇಲ್ಲವಾಯಿತು. ॥ ೨೮–೩೦ ॥ ಆಗಲಾತನು ಹೀಗೆ ಆ ಅಶೋಕವನದಲ್ಲಿ ಮದಿರೇಕ್ಷಣೆಯಾದ ಜಾನಕಿಯನ್ನು ಕಂಡು ಸಂತೋಷಾಧಿಕ್ಯದಿಂದ

---

* "ಕ್ಷಮಾಂ" ತಿ. ಪಾ.

ಮಾರುತಿಃ ಪ್ರೇಕ್ಷ್ಯ ಮೈಥಿಲೀಂ ॥೩೦॥ ಹರ್ಷಜಾಣಿಚ ಸೋಽಶ್ರೂಣಿ ತಾಂ ದೃಷ್ಟ್ವಾ ಮದಿರೇಕ್ಷಣಾಂ । ಮುಮೋಚ ಹನುಮಾಂಸ್ತತ್ರ ನಮಶ್ಚಕ್ರೇಚ ರಾಘವಂ ॥ ೩೧ ॥

ನಮಸ್ಕೃತ್ವಾ ಸರಾಮಾಯ ಲಕ್ಷ್ಮಣಾಯಚ ವೀರ್ಯವಾ ।
ಸೀತಾದರ್ಶನಸಂಹೃಷ್ಟೋ ಹನುಮಾ ಸಂವೃತೋಽಭವತ್ ॥೩೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತದಶಸ್ಸರ್ಗಃ

ಸಹನುಮಾ - ಆ ಹನುಮಂತನು, ಮದಿರೇಕ್ಷಣಾಂ - ಮದವೇರಿದ ನೇತ್ರಗಳುಳ್ಳ, ತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಹರ್ಷಜಾಣಿ - ಸಂತೋಷದಿಂದ ಹುಟ್ಟಿದ, ಅಶ್ರೂಣಿ - ಕಣ್ಣೀರನ್ನು, ಮುಮೋಚ - ಸುರಿಸಿದನು, ತತ್ರ - ಆ ವೃಕ್ಷದಲ್ಲಿ, ರಾಘವಂಚ - ಶ್ರೀರಾಮನನ್ನು ಕುರಿತು, ನಮಶ್ಚಕ್ರೇ - ಕೈಮುಗಿದನು. ॥೩೧॥ ವೀರ್ಯವಾ - ಪರಾಕ್ರಮಿಯಾದ, ಸಹನುಮಾ - ಆ ಆಂಜನೇಯನು, ರಾಮಾಯ - ಶ್ರೀರಾಮನಿಗೂ, ಲಕ್ಷ್ಮಣಾಯಚ - ಲಕ್ಷ್ಮಣನಿಗೂ ಸಹ, ನಮಸ್ಕೃತ್ವಾ - ಕೈಮುಗಿದು, ಸೀತಾ....ಷ್ಟಃ-ಸೀತಾದೇವಿಯ ನೋಡುವಿಕೆಯಿಂದ ಸಂತೋಷವುಳ್ಳವನಾಗಿ, ಸಂವೃತಃ - ಆಚ್ಛಾದಿತನು, ಅಭವತ್ - ಆದನು. ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತದಶಸ್ಸರ್ಗಃ.

ಆನಂದಬಾಷ್ಪಗಳನ್ನು ಸುರಿಸುತ್ತ, ಶ್ರೀರಾಮನನ್ನು ಸ್ಮರಿಸಿ, ಮೊದಲು ಆತನಿಗೂ, ಆಮೇಲೆ ಲಕ್ಷ್ಮಣಸ್ವಾಮಿಗೂ ನಮಸ್ಕರಿಸಿ ಸೀತಾದರ್ಶನದಿಂದ ಸಂತುಷ್ಟನಾಗಿ ಆ ಶಿಂಶುಪಾವೃಕ್ಷದಲ್ಲಿಯೇ ಅವಿತುಕೊಂಡಿದ್ದನು. ॥ ೩೨ ॥

ಇಂತಿದು ಹನುಮತ್ಕೃತ ಸೀತಾಸಂದರ್ಶನ ವೃತ್ತಾಂತವೆಂಬ
ಹದಿನೇಳನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಅಷ್ಟಾದಶಸ್ಸರ್ಗಃ

ತಥಾ ವಿಪ್ರೇಕ್ಷಮಾಣಸ್ಯ ವನಂ ಪುಷ್ಪಿತಪಾದಪಂ । ವಿಚಿನ್ವತಶ್ಚ ವೈದೇಹೀಂ ಕಿಂಚಿಚ್ಛೇಷಾ ನಿಶಾಽಭವತ್ ॥೧॥ ಷಡಂಗವೇದವಿದುಷಾಂ ಕ್ರತುಪ್ರವರಯಾಜಿನಾಂ। ಶುಶ್ರಾವ ಬ್ರಹ್ಮಘೋಷಾಂಶ್ಚ ವಿರಾತ್ರೇ ಬ್ರಹ್ಮರಕ್ಷಸಾಂ ॥೨॥ ಅಥ ಮಂಗಳವಾದಿತ್ರೈಶ್ಶಬ್ದೈಶ್ಶ್ರೋತ್ರಮನೋಹರೈಃ । ಪ್ರಾಬುಧ್ಯತ ಮಹಾಬಾಹುರ್ದಶಗ್ರೀವೋ ಮಹಾಬಲಃ॥೩॥ವಿಬುಧ್ಯತು * ಯಥಾಕಾಲಂ ರಾಕ್ಷಸೇಂದ್ರಃ ಪ್ರತಾಪವಾನ್। ಸ್ರಸ್ತಮಾಲ್ಯಾಂ

ತಥಾ - ಆ ಪ್ರಕಾರವಾಗಿ, ಪುಷ್ಪಿತಪಾದಪಂ - ಹೂವೊಳೆತ ವೃಕ್ಷಗಳುಳ್ಳ, ವನಂ - ವನವನ್ನು, ವಿಪ್ರೇಕ್ಷಮಾಣಸ್ಯ - ನೋಡುತ್ತಿರುವ, ವೈದೇಹೀಂ - ಸೀತಾದೇವಿಯನ್ನು ಕುರಿತು, ವಿಚಿನ್ವತಶ್ಚ - (ಗೋ) ರಾಕ್ಷಸಸ್ತ್ರೀ, ನಿದ್ರಾಸಮಯವನ್ನೂ ಸಹ ಹುಡುಕುತ್ತಿರುವ ಆಂಜನೇಯನಿಗೆ, ನಿಶಾ ರಾತ್ರಿಯು, ಕಿಂಚಿಚ್ಛೇಷಾ - ಕೊಂಚ ಮಿಕ್ಕಿರುವದು, ಅಭವತ್ - ಆಯಿತು. ॥೧॥ ಷಡಂ....ಷಾ - ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪವೆಂಬ ಆರು ಅಂಗಗಳುಳ್ಳ ವೇದಗಳಲ್ಲಿ ಪಂಡಿತರಾದ, ಕ್ರತು....ನಾಂ - ಉತ್ತಮ ಯಜ್ಞಗಳಿಂದ ದೇವಸಂತುಷ್ಟಿಯನ್ನು ಮಾಡುತ್ತಿರುವ, ಬ್ರಹ್ಮರಕ್ಷಸಾಂ - ಬ್ರಹ್ಮರಾಕ್ಷಸರ, ಬ್ರಹ್ಮಘೋಷಾಂಶ್ಚ - ವೇದಘೋಷಗಳನ್ನೂ, ವಿರಾತ್ರೇ - ಅಪರರಾತ್ರಿಯಲ್ಲಿ, ಶುಶ್ರಾವ - ಕೇಳಿದನು. ॥೨॥ ಅಥ - ಅನಂತರದಲ್ಲಿ, ಮಹಾಬಾಹುಃ-ಮಹಾ ಭುಜಬಲ ಪರಾಕ್ರಮವುಳ್ಳ, ಮಹಾಬಲಃ-ಮಹಾ ಬಲಿಷ್ಠನಾದ, ದಶಗ್ರೀವಃ-ರಾವಣಾಸುರನು, ಮಂಗ....ತ್ರೈಃ- ಶುಭಕರಗಳಾದ ವಾದ್ಯವಿಶೇಷಗಳಿಂದಲೂ, ಶ್ರೋತ್ರ....ರೈಃ - ಕಿವಿಗಿಂಪಾದ, ಶಬ್ದೈಃ - ಧ್ವನಿಗಳಿಂದಲೂ, ಪ್ರಾಬುಧ್ಯತ - ಎಚ್ಚರಗೊಂಡನು. ॥೩॥ ಪ್ರತಾಪವಾನ್ - ಪರಾಕ್ರಮಿಯಾದ, ರಾಕ್ಷಸೇಂದ್ರಃ- ರಾವಣನು, ಯಥಾಕಾಲಂ - ಏಳತಕ್ಕಕಾಲದಲ್ಲಿ, ವಿಬುಧ್ಯ -ಎದ್ದು, ಸ್ರಸ್ತ....ರಃ- ಜಾರಿಹೋದ, ಪೂಮಾಲಿಕೆಗಳನ್ನೂ, ವಸ್ತ್ರವನ್ನೂ ಧರಿಸಿದವನಾಗಿ, ವೈದೇಹೀಂ-ಸೀತಾದೇವಿಯನ್ನು,

ಈ ಪ್ರಕಾರವಾಗಿ ಹನುಮಂತನು ಆ ಮರದಲ್ಲಿಕುಳಿತು ಪುಷ್ಪಿಸಿರುವ ವೃಕ್ಷಗಳುಳ್ಳ ಆ ಅಶೋಕವನದಲ್ಲಿ ಜಾನಕಿಯನ್ನು ಹುಡುಕುವಷ್ಟರಲ್ಲಿಯೇ ಆ ರಾತ್ರಿಯಲ್ಲಿ ಸ್ವಲ್ಪಮಾತ್ರ ಉಳಿಯಿತು. ಆಗ ಶಿಕ್ಷಾದಿ ಷಡಂಗಗಳಿಂದ ಕೂಡಿದ ವೇದಗಳನ್ನು ಚನ್ನಾಗಿ ಅಧ್ಯಯನ ಮಾಡಿದವರೂ, ಸಮಸ್ತ ಯಾಗಗಳನ್ನು ಮಾಡಿರುವವರೂ ಆದ ಬ್ರಹ್ಮರಾಕ್ಷಸರು ಪಠನ ಮಾಡುವ ವೇದಘೋಷಗಳು ಕೇಳಿಬರುತ್ತಿದ್ದವು. ಮಂಗಳತೂರ್ಯಗಳು ಮನೋಹರವಾಗಿ ಮೊಳಗಲಾರಂಭಿಸಿದವು. ಆಗ ಮಹಾ ಭುಜಬಲಪರಾಕ್ರಮವುಳ್ಳವನೂ, ಬಲಿಷ್ಠನೂ ಆದ ರಾವಣನು ಸುಶ್ರಾವ್ಯವಾಗಿ ಮೊಳಗುತ್ತಿದ್ದ ಮಂಗಳವಾದ್ಯಧ್ವನಿಗಳಿಂದ ಎಚ್ಚರಗೊಂಡನು. ಮಹಾಬಲಾಢ್ಯನಾದ ಆತನು ಹೀಗೆ ಎಚ್ಚತ್ತು ನಿದ್ರೆಯ ಕಾಲದಲ್ಲಿ ಅತ್ತಿತ್ತ ಕದಲಿದ ವಸ್ತ್ರಾಭರಣಗಳುಳ್ಳವನಾಗಿ ಎದ್ದು ಕುಳಿತನು. ಆ ಕೂಡಲೇ ಆತನಿಗೆ ಸೀತೆಯು ಸ್ಮರಣೆಯುಂಟಾಯಿತು.

* "ಮಹಾಭಾಗೋ" ತಿ. ರಾ. ಪಾ.

ಬರಧರೋ ವೈದೇಹೀ ಮನ್ವಚಿಂತಯತ್ ||೪|| ¶ ಭೃಶಂ ನಿಯುಕ್ತಸ್ತಸ್ಯಾಂಚ ಮದನೇನ ಮದೋತ್ಕಟಃ । ನ ಸ ತಂ ರಾಕ್ಷಸಃ ಕಾಮಂ ಶಶಾಕಾತ್ಮನಿ ಗೂಹಿತುಂ || ೫ || ಸ ಸರ್ವಾಭರಣೈರ್ಯುಕ್ತೋ ಬಿಭ್ರಚ್ಛ್ರಿಯಮನುತ್ತಮಾಂ । ತಾಂ ನಗೈರ್ಬಹುಭಿರ್ಜುಷ್ಟಾಂ ಸರ್ವಪುಷ್ಪಫಲೋಪಗೈಃ || ೬ || ವೃತಾಂ ಪುಷ್ಕರಣೀಭಿಶ್ಚ ನಾನಾ

ಅನ್ವಚಿಂತಯತ್ - ನೆನೆಸಿಕೊಂಡನು. ||೪|| ತಸ್ಯಾಂ - ಆ ಸೀತಾದೇವಿಯ ವಿಷಯದಲ್ಲಿ, ಭೃಶಂ - ಬಹಳವಾಗಿ, ಮದನೇನಚ - ಮನ್ಮಥನಿಂದಲೂ, ನಿಯುಕ್ತಃ - ಪ್ರೇರಿತನಾದ, ಮದೋತ್ಕಟಃ - ಯೌವನಮದದಿಂದ, ಔದ್ಧತ್ಯವುಳ್ಳವನಾದ, ಸರಾಕ್ಷಸಃ - ಆ ರಾವಣನು, ಆತ್ಮನಿ - ಮನಸ್ಸಿನಲ್ಲಿ, ತಂಕಾಮಂ - ಆ ಮನ್ಮಥನನ್ನು, ಗೂಹಿತುಂ - ಅಡಗಿಸಲು, ನಶಶಾಕ - ಸಮರ್ಥನಾಗಲಿಲ್ಲ. ||೫|| ಸರ್ವಾಭರಣೈಃ - ಸಮಸ್ತ ಒಡವೆಗಳಿಂದ, ಯುಕ್ತಃ - ಕೂಡಿರುವನಾದಕಾರಣ, ಅನುತ್ತಮಾಂ - ಸರ್ವೋತ್ತಮವಾದ, ಶ್ರಿಯಂ - ಕಾಂತಿಯನ್ನು, ಬಿಭ್ರತ್ - ಧರಿಸಿರುವ, ಸಃ - ಆ ರಾವಣನು, ಬಹುಭಿಃ - ಅನೇಕಗಳಾದ, ಸರ್ವ....ಗೈಃ - ಸಮಸ್ತ ಹುವ್ವುಗಳನ್ನೂ, ಫಲಗಳನ್ನೂ ಹೊಂದಿರುವ, ನಗೈಃ - ವೃಕ್ಷಗಳಿಂದ, ಜುಷ್ಟಾಂ - ವ್ಯಾಪ್ತವಾದ, ಪುಷ್ಕರಿಣೀಭಿಶ್ಚ - ಸರೋವರಗಳಿಂದಲೂ,

---

ಮದೋನ್ಮತ್ತನಾದ ಆ ರಾವಣನು ಆಕೆಯನ್ನು ಸ್ಮರಿಸಿದೊಡನೆಯೇ ಮನ್ಮಥನಿಂದ ಪ್ರೇರಿತನಾಗಿ ಆಕೆಯಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ ಆ ಕಾಮಾತುರತೆಯನ್ನು ಯಾವ ವಿಧದಿಂದಲೂ ತಡೆಯಲು ಶಕ್ತನಾಗದೇಹೋದನು. ||೧-೫|| ಹೀಗೆ ಕಾಮಬಾಧೆಯನ್ನಡಗಿಸಿಕೊಳ್ಳಲಾಗದ ಆ ರಾವಣನು ಆಭರಣಾಲಂಕೃತನಾಗಿ ಅಸಮಾನಕಾಂತಿಯಿಂದ ಶೋಭಿಸುತ್ತ,

---

¶ ಇಲ್ಲಿ ರಾವಣ ವಿಷಯಕವಾದ ಈ ನುಡಿಯು ಹೊರಕ್ಕೆ ದೋಷಯುಕ್ತವಾಗಿ ತೋರಿದರೂ ರಸಹ್ಯಾರ್ಥವನ್ನೊಳಗೊಂಡಿದೆ. "ದಶಕಂಠನು ಮಹಾಲಕ್ಷ್ಮೀಸ್ವರೂಪಿಣಿಯಾದ ಸೀತಾದೇವಿಯ ಭಕ್ತನು. ಇಂತಹನು ಸಹಜವಾಗಿಯೇ ಮನ್ಮಥೋದ್ರೇಕದಿಂದಲೂ, ಮದ್ಯಮದದಿಂದಲೂ, ಮೈಮೇಲೆ ಎಚ್ಚರಿಕೆಯಿಲ್ಲದವನಾಗಿದ್ದರೂ ತನ್ನ ಸ್ವಾಮಿನಿಯಾದ ಸೀತಾದೇವಿಯ ವಿಷಯದಲ್ಲಿ ವಿಶೇಷವಾದ ಭಕ್ತಿನಮ್ರತೆಯನ್ನುಂಟಾಗಿದ್ದನು. ಆತನಲ್ಲಿದ್ದ ನಮ್ರತೆಯ ಕೋರಿಕೆಯನ್ನು ಆತನು ಯಾವ ವಿಧದಲ್ಲಿಯೂ ತನ್ನಲ್ಲಿ ಅಡಗಿಸಿಕೊಳ್ಳಲು ಶಕ್ತನಾಗಲಿಲ್ಲ" ಎಂಬುದೇ ಇಲ್ಲಿನ ರಹಸ್ಯಾರ್ಥವು. (ಮ)

ತಿಲಕಕಾರರು ಮಹೇಶ್ವರತೀರ್ಥರ ಈ ವ್ಯಾಖ್ಯಾನವನ್ನು ಖಂಡಿಸಿ, "ಇಂತಹ ಸ್ಥಳಗಳಲ್ಲಿ ತೀರ್ಥರು ಅನ್ಯಥಾ ಯೋಜನೆಯನ್ನು ಮಾಡಿರುವುದು ಕೇವಲ ಅನುಚಿತವೇ ಸರಿ. ಇದು ಅವರ ಭ್ರಾಂತಿಯೆಂದೇ ಗ್ರಾಹ್ಯವು. ರಾಕ್ಷಸರು ತಮೋಗುಣಪ್ರಧಾನರು. ರಾಕ್ಷಸನಾದ ರಾವಣನೂ ತಮೋಗುಣಪ್ರಧಾನನೂ, ಭಗವಂತನ ಮಾಯೆಯಿಂದ ಮೋಹಿತನೂ ಆಗಿ ಅಕೃತ್ಯಗಳಲ್ಲಿ ತೊಡಗುತ್ತಾನೆ. ಹೀಗೆ ಮಾಡಿದ ಭಗವದ್ಧ್ಯಾನವೂ ಪಾಪಭೋಗಾನಂತರದಲ್ಲಿ (ಅಂದರೆ) ಜನ್ಮಾಂತರದಲ್ಲಿ ಉತ್ತಮ ಫಲಪ್ರಾಪ್ತಿಗೇ ಕಾರಣವಾಗುತ್ತದೆ. ಆದುದರಿಂದಲೇ ಋಕ್ಷಾಶ್ವಮೇಧನೆಂಬ ರಾಜನ ದಾನವನ್ನು ಸ್ತೋತ್ರ ಮಾಡಿರುವ ಋಙ್ಮಂತ್ರವು. "ನಯುಷ್ಮೇ ವಾಜಬಂಧವೋ ನಿನಿತ್ಸುಶ್ಚನ ಮರ್ತ್ಯಃ ! ಅವದ್ಯಮದೀಧರತ್" ಎಂಬು ಹೊರಟಿದೆ. ಇದರ ಅರ್ಥ—ಅನ್ನದಾನದಿಂದ ಎಲ್ಲರಿಗೂ ಬಂಧುಗಳಾದವರೇ ! ಮರ್ತ್ಯನು ನಿಮ್ಮನ್ನು ನಿಂದಿಸುವುದರಲ್ಲಿ ಅಪೇಕ್ಷೆಯುಳ್ಳವನಾಗಿದ್ದರೂ ಅವನಿಗೆ ಅದು ಯಾವ ಕೊರತೆಯನ್ನೂ ಉಂಟುಮಾಡುವುದಿಲ್ಲ. (ಭಗವಂತನ ಅನುಸಂಧಾನದಿಂದಲೇ ಪಾಪಪರಿಹಾರವಾಗುವುದರಿಂದ ಆತನಿಗೆ ಸದ್ಗತಿಯೇ ದೊರಕುವುದು ಎಂದು ತಾತ್ಪರ್ಯ.) ಇದರಿಂದ ಭಗವಂತನನ್ನು ನಿಂದಾವಿರುದ್ಧ ಭಾವದಿಂದ ಧ್ಯಾನ ಮಾಡುವುದೂ ನರಕಭೋಗಾನಂತರದಲ್ಲಿ (ಜನ್ಮಾಂತರದಲ್ಲಿ) ಉತ್ತಮ ಫಲಗಳನ್ನು ಭೋಗಿಸುವುದಕ್ಕೋಸ್ಕರವೇ ಪ್ರಯೋಜನವಾಗುವುದು. ಆದುದರಿಂದಲೇ ರಾವಣನು ತನ್ನ ಮರಣಾನಂತರದಲ್ಲಿ ಚೇದಿರಾಜ ಕುಲದಲ್ಲಿ ಜನ್ಮವೆತ್ತಿದುದು" ಎಂದು ಬರೆದಿದ್ದಾರೆ.

ಪುಷ್ಪೋಪಶೋಭಿತಾಂ। ಸದಾಮದೈಶ್ಚ ವಿಹಗೈರ್ವಿಚಿತ್ರಾಂ § ಪರಮಾದ್ಭುತಾಂ ॥೭॥ ಈಹಾಮೃಗೈಶ್ಚ ವಿವಿಧೈರ್ಜುಷ್ಟಾಂ ದೃಷ್ಟಿಮನೋಹರೈಃ । ವೀಥೀಸ್ಸಂಪ್ರೇಕ್ಷಮಾಣಶ್ಚ ಮಣಿಕಾಂಚನ ‡ ತೋರಣಾಃ ॥ ೮ ॥ ನಾನಾಮೃಗಗಣಾಕೀರ್ಣಾಂ ಫಲೈಃ ಪ್ರಪತಿತೈರ್ವೃತಾಂ । ಅಶೋಕವನಿಕಾಮೇವ ಪ್ರಾವಿಶತ್ಸಂತತದ್ರುಮಾಂ ॥ ೯ ॥ ಅಂಗನಾಶತಮಾತ್ರಂತು ತಂ ವ್ರಜಂತಮನುವ್ರಜತ್ । ಮಹೇಂದ್ರಮಿವ ಪೌಲಸ್ತ್ಯಂ ದೇವಗಂಧರ್ವಯೋಷಿತಃ ॥ ೧೦ ॥ ದೀಪಿಕಾಃ ಕಾಂಚನೀಃ ಕಾಶ್ಚಿ ಜ್ಜಗೃಹುಸ್ತತ್ರ

ವೃತಾಂ - ಸುತ್ತುವರೆದ, ನಾನಾ....ತಾಂ-ಅನೇಕ ಹುವ್ವುಗಳಿಂದ ಕಂಗೊಳಿಸುತ್ತಿರುವ, ಸದಾಮದೈಃ - ಯಾವಾಗಲೂ ಮದಿಸಿರುವ, ವಿಹಗೈಶ್ಚ - ಹಕ್ಕಿಗಳಿಂದಲೂ, ವಿಚಿತ್ರಾಂ - ಮನಸ್ಸಂತೋಷಕರವಾದ, ಪರಮಾದ್ಭುತಾಂ - ವಿಸ್ಮಯಕರವಾದ, ವಿವಿಧೈಃ - ನಾನಾಬಗೆಗಳಾದ, ದೃಷ್ಟಿಮನೋಹರೈಃ - ನೋಡುವದಕ್ಕೆ ಸೊಗಸಾದ, ಈಹಾಮೃಗೈಶ್ಚ - ಕೃತಕಗಳಾದ ತೋಳಗಳಿಂದಲೂ, ಜುಷ್ಟಾಂ - ಕೂಡಿರುವ, ಮಣಿ....ಣಾಃ - ರತ್ನವಿಕಾರವೂ ಸುವರ್ಣಮಯವೂ ಆದ ತೋರಣಗಳುಳ್ಳ, ವೀಥೀಃ - ಅಶೋಕವನದ ದಾರಿಗಳನ್ನು, ಸಂಪ್ರೇಕ್ಷಮಾಣಃ - ನೋಡುತ್ತಿರುವನಾಗಿ, ನಾನಾ....ರ್ಣಾಂ - ಅನೇಕ ಮೃಗಗಳ ಗುಂಪುಗಳಿಂದ ಸಮೃದ್ಧವಾದ, ಪ್ರಪತಿತೈಃ - ಕೆಳಗೆ ಬಿದ್ದಿರುವ, ಫಲೈಃ - ಹಣ್ಣುಗಳಿಂದ, ವೃತಾಂ - ವ್ಯಾಪ್ತವಾದ, ಸಂತತದ್ರುಮಾಂ - ಒಂದಕ್ಕೊಂದು ಸೇರಿರುವ ವೃಕ್ಷಗಳುಳ್ಳ, ತಾಮಶೋಕವನಿಕಾಮೇವ - ಆ ಅಶೋಕವನವನ್ನೇ, ಪ್ರಾವಿಶತ್ - ಪ್ರವೇಶಿಸಿದನು. ॥೭-೯॥ ಅಂಗ....ತು - ಅನೇಕ ಸ್ತ್ರೀಸಮುದಾಯವು, ವ್ರಜಂತಂ - ನಡೆದುಹೋಗುತ್ತಿರುವ, ತಂಪೌಲಸ್ತ್ಯಂ - ಆ ರಾವಣನನ್ನು, ದೇವ....ತಃ - ದೇವಗಂಧರ್ವ ಸ್ತ್ರೀಯರು, ಮಹೇಂದ್ರಮಿವ - ದೇವೇಂದ್ರನನ್ನೋಪಾದಿಯಲ್ಲಿ, ಅನುವ್ರಜತ್ - ಅನುಸರಿಸಿ ಹೊರಟರು. ॥೧೦॥ ತತ್ರ - ಆ ಸ್ತ್ರೀಯರ ಗುಂಪಿನಲ್ಲಿ, ಕಾಶ್ಚಿದ್ಯೋಷಿತಃ - ಕೆಲ ಹೆಂಗಸರು, ಕಾಂಚನೀಃ - ಚಿನ್ನದ ವಿಕಾರಗಳಾದ, ದೀಪಿಕಾಃ - ದೀವಟಿಗೆಗಳನ್ನು, ಜಗೃಹುಃ - ತೆಗೆದುಕೊಂಡರು, ಅಪರಾಃ - ಮತ್ತು ಕೆಲವರು, ವಾಲ....ಸ್ತಾಃ - ಚೌರಿಗಳೇ ಕೈಯ್ಯಿಗಳಲ್ಲಿ ಉಳ್ಳ

ಬಗೆಬಗೆಯ ಪುಷ್ಪವೃಕ್ಷಗಳಿಂದಲಂಕೃತವಾಗಿರುವ ಅನೇಕ ಕೊಳಗಳಿಂದ ತುಂಬಿ ಪುಷ್ಪಗಳಿಂದ ಶೋಭಿಸುತ್ತಿರುವುದೂ, ಯಾವಾಗಲೂ ಮದಿಸಿರುವ ಪಕ್ಷಿಗಳಿಂದ ತುಂಬಿ ಆಶ್ಚರ್ಯಕರವೂ, ಮಹಾದ್ಭುತವೂ ಆಗಿರುವುದೂ, ನೋಡಲು ಸುಂದರವಾದ ಈಹಾಮೃಗಗಳಿಂದ ಕೂಡಿ ಕಂಗೊಳಿಸುತ್ತಿರುವ ಮಣಿಕಾಂಚನ ತೋರಣಗಳಿಂದಲಂಕೃತವಾದ ಅಶೋಕವನದ ಬೀದಿಗಳನ್ನು ನೋಡುತ್ತ, ಅನೇಕ ಮೃಗಸಂಘಗಳಿಂದ ಸಮೃದ್ಧವಾಗಿ ಕೆಳಗೆ ಉದುರಿರುವ ಹಣ್ಣುಗಳಿಂದ ನಿಬಿಡಿತವಾಗಿ, ಒಂದಕ್ಕೊಂದು ಸೇರಿರುವ ರೆಂಬೆಗಳುಳ್ಳ ಅನೇಕ ವೃಕ್ಷಗಳಿಂದ ತುಂಬಿದ ಆ ವನವನ್ನು ಸೇರಿದನು. ಹೀಗೆ ರಾವಣನು ಆ ವನವನ್ನು ಪ್ರವೇಶಿಸುತ್ತಿರಲು ನೂರುಮಂದಿ ಹೆಂಗಸರು ಮಾತ್ರ, ದೇವರಾಜನನ್ನು ಹಿಂಬಾಲಿಸಿ ಬರುವ ದೇವಗಂಧರ್ವ ಸ್ತ್ರೀಯರಂತೆ ಆತನನ್ನನುಸರಿಸಿ ಹೋಗುತ್ತಿದ್ದರು. ॥೬–೧೦॥ ಅವರಲ್ಲಿ ಕೆಲವರು ಬಂಗಾರದ ದೀವಟಿಗೆಗಳನ್ನೂ ಹಿಡಿದಿದ್ದರು. ಮತ್ತೆ ಕೆಲವರು ಛತ್ರಚಾಮರಗಳನ್ನೂ, ಇನ್ನು ಕೆಲವರು ಬೀಸಣಿಗೆಗಳನ್ನೂ ಹಿಡಿದಿದ್ದರು. ಕೆಲವರು ಉದಕಪೂರ್ಣವಾದ ಸುವರ್ಣ

§ "ಪರಮಾದ್ಭುತೈಃ" ತಿ. ಪಾ. ‡ "ತೋರಣಾಂ" ತಿ. ಪಾ.

ಯೋಷಿತಃ।ವಾಲವ್ಯಜನಹಸ್ತಾಶ್ಚ ತಾಲವೃಂತಾನಿ ಚಾಪರಾಃ ॥೧೧॥ * ಕಾಂಚನೈರಪಿ ಭೃಂಗಾರೈರ್ಜಹ್ರುಸ್ಸಲಿಲಮಗ್ರತಃ । ಮಂಡಲಾಗ್ರಾನ್ ಬೃಸೀಂಶ್ಚೈವ ಗೃಹ್ಯಾನ್ಯಾಃ ಪೃಷ್ಠತೋ ಯಯುಃ ॥ ೧೨ ॥ ಕಾಚಿದ್ರತ್ನಮಯೀಂ ಸ್ಥಾಲೀಂ ಪೂರ್ಣಾಂ ಪಾನಸ್ಯ ಭಾಮಿನೀ । ದಕ್ಷಿಣಾ ದಕ್ಷಿಣೇನೈವ ತದಾ ಜಗ್ರಾಹ ಪಾಣಿನಾ ॥ ೧೩ ॥ ರಾಜಹಂಸ ಪ್ರತೀಕಾಶಂ ¶ ಛತ್ರಂಪೂರ್ಣಶಶಿಪ್ರಭಂ । ಸೌವರ್ಣದಂಡಮಪರಾ ಗೃಹೀತ್ವಾ ಪೃಷ್ಠತೋ ಯಯೌ ॥ ೧೪ ॥ ನಿದ್ರಾಮದಪರೀತಾಕ್ಷ್ಯೋ ರಾವಣಸ್ಯೋತ್ತಮಾಸ್ಸ್ತ್ರಿಯಃ । ಅನುಜಗ್ಮುಃ ಪತಿಂ ವೀರಂ ಘನಂ ವಿದ್ಯುಲ್ಲತಾ ಇವ ॥ ೧೫ ॥ ವ್ಯಾವಿದ್ಧ

ವರು, (ಅಭವನ್ - ಆದರು,) ಕಾಶ್ಚಿತ್ - ಕೆಲವರು, ತಾಲವೃಂತಾನಿಚ - ಬೀಸಣಿಗೆಗಳನ್ನು, ಜಗೃಹುಃ - ಗ್ರಹಿಸಿದರು. ॥೧೧॥ ಅನ್ಯಾಃ - ಇತರ ಸ್ತ್ರೀಯರು, ಕಾಂಚನೈಃ - ಚಿನ್ನದ ವಿಕಾರಗಳಾದ, ಭೃಂಗಾರೈರಪಿ - ಗಿಂಡಿಗಳಿಂದಲೂ, ಸಲಿಲಂ - ಉದಕವನ್ನು, ಅಗ್ರತಃ - ಮುಂದುಗಡೆ, ಜಹ್ರುಃ - ತೆಗೆದುಕೊಂಡು ಹೊರಟರು, ಮಂಡಲಾಗ್ರಾನ್ - ಪಟ್ಟಾಕತ್ತಿಗಳನ್ನೂ, ಬೃಸೀಂಶ್ಚೈವ - ಆಸ್ತರಣಗಳನ್ನೂ ಗೃಹ್ಯ - ತೆಗೆದುಕೊಂಡು, ಪೃಷ್ಠತಃ - ಹಿಂದುಗಡೆ, ಯಯುಃ - ಹೊರಟರು. ॥೧೨॥ ದಕ್ಷಿಣಾ - ಶ್ರೇಷ್ಠಳಾದ, ಕಾಚಿದ್ಭಾಮಿನೀ - ಒಬ್ಬ ಸುಂದರಿಯು, ತದಾ - ಆ ಕಾಲದಲ್ಲಿ, ದಕ್ಷಿಣೇನ ಪಾಣಿನಾ - ಬಲಗೈಯಿಂದ, ರತ್ನಮಯೀಂ - ರತ್ನಖಚಿತವಾದ, ಪಾನಸ್ಯ - ಮದ್ಯದಿಂದ, ಪೂರ್ಣಾಂ- ತುಂಬಿರುವ, ಸ್ಥಾಲೀಂ - ಪಾತ್ರವಿಶೇಷವನ್ನು, ಜಗ್ರಾಹ - ಗ್ರಹಿಸಿದಳು. ॥೧೩॥ ಅಪರಾ - ಮತ್ತೊಬ್ಬಳು, ರಾಜ....ಶಂ-ಹಂಸಪಕ್ಷಿಗೆ ಸದೃಶವಾದ, ಪೂರ್ಣ....ಭಂ-ಪೂರ್ಣಚಂದ್ರನ ಕಾಂತಿಯುಳ್ಳ, ಸೌವರ್ಣದಂಡಂ - ಬಂಗಾರದ ದಂಡವುಳ್ಳ, ಛತ್ರಂ - ಕೊಡೆಯನ್ನು, ಗೃಹೀತ್ವಾ-ಗ್ರಹಿಸಿ, ಪೃಷ್ಠತಃ-ಹಿಂದೆ, ಯಯೌ-ಹೊರಟಳು. ॥೧೪॥ ನಿದ್ರಾ....ಕ್ಷ್ಯಃ - ನಿದ್ದೆಯಿಂದಲೂ ಮದಮತ್ತತೆಯಿಂದಲೂ ವ್ಯಾಪ್ತಗಳಾದ ನೇತ್ರಗಳುಳ್ಳ, ರಾವಣಸ್ಯ - ರಾವಣನ, ಉತ್ತಮಾಃಸ್ತ್ರಿಯಃ - ಉತ್ತಮಾಂಗನೆಯರು, ವೀರಂ - ಶೂರನಾದ, ಪತಿಂ - ಗಂಡನಾದ ರಾವಣನನ್ನು ಕುರಿತು, ಘನಂ - ಮೇಘವನ್ನು, ವಿದ್ಯುಲ್ಲತಾ ಇವ - ಮಿಂಚಿನ ಬಳ್ಳಿಗಳಂತೆ, ಅನುಜಗ್ಮುಃ - ಅನುಸರಿಸಿ ಹೊರಟರು. ॥೧೫॥ ವ್ಯಾವಿ....ರಾಃ - ವ್ಯತ್ಯಸ್ತಗಳಾದ ಕಂಠೀಸರಗಳೂ, ಬಾಹುಜಿಗೆಗಳೂ ಉಳ್ಳ, ಸಮಾ....ಕಾಃ - ಹೋಗಲಾಡಿಸ

ಕುಂಭಗಳನ್ನು ಹೊತ್ತು ಮುಂದುಗಡೆ ಹೋಗುತ್ತಿದ್ದರು. ಇನ್ನು ಕೆಲವರು ಪಟ್ಟಾಕತ್ತಿಗಳನ್ನು ಹಿಡಿದು ಹಿಂದೆ ಬರುತ್ತಿದ್ದರು. ಓರ್ವ ಸುಂದರಿಯು ರತ್ನಮಯವಾದ ಮದ್ಯಪಾತ್ರೆಯನ್ನು ಬಲಗೈಯಲ್ಲಿ ಹಿಡಿದು ಬರುತ್ತಿದ್ದಳು. ಮತ್ತೊಬ್ಬಳು ರಾಜಹಂಸದಂತೆಯೂ, ಪೂರ್ಣಚಂದ್ರನಂತೆಯೂ, ಶುಭ್ರವಾಗಿ ಹೊಳೆಯುತ್ತಿರುವ ಸುವರ್ಣದಂಡಮಂಡಿತವಾದ ಶ್ವೇತಛತ್ರವನ್ನು ಹಿಡಿದು ಆ ರಾವಣನನ್ನು ಹಿಂಬಾಲಿಸುತ್ತಿದ್ದಳು. ಇವರು ಮಾತ್ರವಲ್ಲದೆ ಆ ರಾವಣಾಸುರನ ಭಾರ್ಯೆಯರಾದ ಉತ್ತಮ ಸ್ತ್ರೀಯರು ಇನ್ನೂ ಚನ್ನಾಗಿ ನಿದ್ರೆ ತಿಳಿಯದಿದ್ದುದರಿಂದ ಸುತ್ತುತ್ತಿರುವ ಕಣ್ಣಾಲಿಗಳುಳ್ಳವರಾಗಿ ಮೇಘವನ್ನು ಅನುಸರಿಸಿ ಹೋಗುವ ಮಿಂಚುಗಳಂತೆ ತಮ್ಮ ಪತಿಯಾದ ರಾವಣನನ್ನನುಸರಿಸಿ ಹೋಗುತ್ತಿದ್ದರು. ॥ ೧೧–೧೫ ॥ ನಿದ್ರೆಯಲ್ಲಿ ಹೊರಳಾಡಿದುದರಿಂದ ಅವರ ಕಂಠಾಭರಣಗಳೂ ತೋಳ್ಬಳೆಗಳೂ ಜಾರಿದ್ದವು.

---

* "ಕಾಂಚನೈಶ್ಚೈವ" ತಿ. ರಾ. ಪಾ. ¶ "ಪಾತ್ರೀಂ" ತಿ. ಪಾ.

ಹಾರಕೇಯೂರಾಸ್ಸಮಾಮೃದಿತ ವರ್ಣಕಾಃ । ಸಮಾಗಳಿತಕೇಶಾಂತಾಸ್ಸಸ್ವೇದ ವದನಾಸ್ತಥಾ ॥ ೧೬ ॥ ಘೂರ್ಣಂತ್ಯೋ ಮದಶೇಷೇಣ ನಿದ್ರಯಾಚ ಶುಭಾನನಾಃ । ಸ್ವೇದಕ್ಲಿಷ್ಟಾಂಗಕುಸುಮಾ ಸಮಾಲ್ಯಾಕುಲಮೂರ್ಧಜಾಃ ॥ ೧೭ ॥ ಪ್ರಯಾಂತಂ ನೈರ್ಋತಪತಿಂ ನಾರ್ಯೋ ಮದಿರಲೋಚನಾಃ । ಬಹುಮಾನಾಚ್ಚ ಕಾಮಾಚ್ಚ* ಪ್ರಿಯಾ ಭಾರ್ಯಾಸ್ತಮನ್ವಯುಃ॥೧೮॥ ಸಚ ಕಾಮಪರಾಧೀನಃ ಪತಿಸ್ತಾಸಾಂ ಮಹಾಬಲಃ। ಸೀತಾಸಕ್ತಮನಾ ಮಂದೋ ಮದಾಂಚಿತಗತಿರ್ಬಭೌ ॥೧೯॥ ತತಃ ಕಾಂಚೀನಿನಾದಂಚ ನೂಪುರಾಣಾಂಚ ನಿಸ್ವನಂ। ಶುಶ್ರಾವ ಪರಮಸ್ತ್ರೀಣಾಂ ಸಕಪಿ ರ್ಮಾರು

ಲ್ಪಟ್ಟಅಂಗಲೇಪನವುಳ್ಳ, ಸಮಾ....ತಾಃ-ಕೆದರಿದ ಕೂದಲ ಕೊನೆಗಳುಳ್ಳ, ತಥಾ-ಹಾಗೆಯೇ, ಸಸ್ವೇದ ವದನಾಃ - ಬೆವರಿನಿಂದೊಡಗೂಡಿದ ಮುಖಗಳುಳ್ಳ, ಮದಶೇಷಣ - ಮದವಿಶೇಷದಿಂದಲೂ, ನಿದ್ರಯಾಚ - ನಿದ್ದೆಯಿಂದಲೂ, ಘೂರ್ಣಂತ್ಯಃ - ತಲೆತಿರುಗುತ್ತಿರುವ, ಶುಭಾನನಾಃ - ಸುಂದರ ಮುಖಗಳುಳ್ಳ, ಸ್ವೇದ....ಮಾಃ - ಬೆವರಿನಿಂದ ಬಾಡಿದ ಅವಯವಗಳೂ, ಹುವ್ವುಗಳೂ ಉಳ್ಳ, ಸುಮಾ....ಜಾಃ - ಒಳ್ಳೆಯ ಪೂಸರಗಳಿಂದ ವ್ಯಾಪ್ತವಾದ ಕೇಶಗಳುಳ್ಳ, ಮದಿರಲೋಚನಾಃ - ಮದಯುಕ್ತಗಳಾದ ನೇತ್ರಗಳುಳ್ಳ, ಪ್ರಿಯಾಃ - ಇಷ್ಟರಾದ, ಭಾರ್ಯಾಃ - ಹೆಂಡತಿಯರಾದ, ನಾರ್ಯಃ - ಸ್ತ್ರೀಯರು, ಪ್ರಯಾಂತಂ - ಹೋಗುತ್ತಿರುವ, ನೈರ್ಋತಪತಿಂ - ರಾಕ್ಷಸಾಧಿಪತಿಯಾದ, ತಂ - ಆ ರಾವಣನನ್ನು, ಬಹುಮಾನಾಚ್ಚ - ಗೌರವದಿಂದಲೂ, ಕಾಮಾಚ್ಚ - ಅಭಿಲಾಷೆಯಿಂದಲೂ, ಅನ್ವಯುಃ - ಅನುಸರಿಸಿ ಹೊರಟರು. ॥ ೧೮ ॥ ಮಹಾಬಲಃ - ಮಹಾ ಬಲಿಷ್ಠನಾದ, ಕಾಮ....ನಃ - ಮನ್ಮಥೋದ್ರೇಕದಿಂದ ಅಸ್ವತಂತ್ರನಾದ, ತಾಸಾಂ - ಆ ರಾಕ್ಷಸಾಂಗನೆಯರಿಗೆ, ಪತಿಃ - ಗಂಡನಾದ, ಸಃ - ಆ ರಾವಣನು, ಸೀತಾ....ನಾಃ - ಸೀತಾದೇವಿಯಲ್ಲಿ ಸಂಬಂಧಿಸಿದ ಮನಸ್ಸುಳ್ಳವನಾದಕಾರಣ, ಮಂದಃ - ಬುದ್ಧಿಮಾಂದ್ಯವುಳ್ಳವನಾಗಿಯೂ, (ಗೋ + ತಿ) ದುರ್ಬುದ್ಧಿಯುಳ್ಳವನಾಗಿಯೂ, ಮದಾಂ....ಶ್ಚ - ಮತ್ತತೆಯಿಂದ ಗುರುತುಳ್ಳುದಾಗಿ ಮಾಡಲ್ಪಟ್ಟ ಗಮನವುಳ್ಳವನೂ ಆಗಿ, ಬಭೌ - ಹೊಳೆಯುತ್ತಿದ್ದನು. ॥ ೧೯ ॥ ತತಃ - ಅನಂತರದಲ್ಲಿ, ಮಾರುತಾತ್ಮಜಃ - ವಾಯುಪುತ್ರನಾದ, ಸಕಪಿಃ - ಆ ಆಂಜನೇಯನು, ಪರಮಸ್ತ್ರೀಣಾಂ - ಉತ್ತಮ

ಅವರು ತೊಡೆದಿದ್ದ ಗಂಧಾನುಲೇಪನಗಳೆಲ್ಲವೂ ಉದುರಿಹೋಗಿದ್ದವು. ಮುಂಗುರುಳುಗಳು ಕೆದರಿ ಮುಖಗಳು ಬೆವರ್ಪನಿಯೊಡಗೂಡಿದ್ದವು; ಕಣ್ಣುಗಳು ಕೆಂಪಡರಿದ್ದವು; ಬೆವರಿನ ಬೇಗೆಯಿಂದ ಮುಡಿದಿದ್ದ ಹೂಗಳೆಲ್ಲವೂ ಬಾಡಿ ಜೋಲಾಡುತ್ತಿದ್ದವು. ಹೀಗಿದ್ದರೂ ಆ ಸ್ತ್ರೀಯರು ರಾವಣನಲ್ಲಿನ ಪ್ರೇಮದಿಂದಲೂ, ಗೌರವದಿಂದಲೂ ಅವನನ್ನು ಹಿಂಬಾಲಿಸಿ ಬರುತ್ತಿದ್ದರು. ಕೇವಲ ಕಾಮಾಧೀನನಾದ ಆ ರಾವಣನು ಅವರಾರನ್ನೂ ಗಮನಿಸದೆ ಜಾನಕಿಯೊಬ್ಬಳಲ್ಲಿಯೇ ನೆಟ್ಟ ಮನಸ್ಸುಳ್ಳವನಾಗಿ ಮಂದಗತಿಯಿಂದ ಮುಂಬರಿಯುತ್ತಿದ್ದನು. ಈ ಪ್ರಕಾರವಾಗಿ ಪರಿವಾರದೊಡಗೂಡಿ ರಾವಣನು ಬರುತ್ತಿರಲು, ಆ ಉತ್ತಮ ಸ್ತ್ರೀಯರ ಒಡ್ಯಾಣ, ಕಾಲ್ಕಡಗಗಳ ಧ್ವನಿಯು ಮರದಮೇಲೆ ಅವಿತುಕೊಂಡಿದ್ದ ಹನುಮಂತನ ಕಿವಿಗೆ ಕೇಳಿಸಿತು. ಆತನು ಆ ಧ್ವನಿಯು ಬರುತ್ತಿರುವ ದಿಕ್ಕನ್ನು ನೋಡುತ್ತಿರು

---

* “ಪ್ರಿಯಭಾರ್ಯಾಸ್ತಮನ್ವಯುಃ” ತಿ. ಪಾ.

ತಾತ್ಮಜಃ ||೨೦|| ತಂ ಚಾಪ್ರತಿಮಕರ್ಮಾಣ ಮಚಿಂತ್ಯ ಬಲಪೌರುಷಂ । ದ್ವಾರದೇಶ ಮನುಪ್ರಾಪ್ತಂ ದದರ್ಶ ಹನುಮಾನ್ಕಪಿಃ || ೨೧ || ದೀಪಿಕಾಭಿರನೇಕಾಭಿ ಸ್ಸಮಂತಾ ದವಭಾಸಿತಂ । ಗಂಧತೈಲಾವಸಿಕ್ತಾಭಿ ರ್ಧ್ರಿಯಮಾಣಾಭಿರಗ್ರತಃ ||೨೨|| ಕಾಮದರ್ಪ ಮದೈರ್ಯುಕ್ತಂ ಜಿಹ್ಮತಾಮ್ರಾಯತೇಕ್ಷಣಂ । ಸಮಕ್ಷಮಿವ ಕಂದರ್ಪ ಮಪವಿದ್ಧ ಶರಾಸನಂ || ೨೩ || ಮಥಿತಾಮೃತಫೇನಾಭಮರಜೋವಸ್ತ್ರಮುತ್ತಮಂ । * ಸಲೀಲ

ಸ್ತ್ರೀಯರ, ಕಾಂಚೀ....ಶ್ಚ-ಒಡ್ಯಾಣಗಳ ಧ್ವನಿಗಳನ್ನೂ, ನೂಪುರಾಣಾಂ - ಕಾಲುಸರಪಣಿಗಳ, ನಿಸ್ವನಂಚ - ಶಬ್ದವನ್ನೂ, ಶುಶ್ರಾವ - ಕೇಳಿದನು. || ೨೦ || ಕಪಿಃ - ವಾನರನಾದ, ಹನುಮಾನ್ - ಆಂಜನೇಯನು, ಅಪ್ರ....ಣಂ - ಅಸದೃಶವಾದ ಕಾರ್ಯವುಳ್ಳ, ಅಚಿಂ....ಷಂ - ಆಲೋಚಿಸುವದಕ್ಕೆ ಅಶಕ್ಯವಾದ ತ್ರಾಣೆಯೂ ಪರಾಕ್ರಮವೂ ಉಳ್ಳ, ದ್ವಾರದೇಶಂ - ಅಶೋಕವನ ಪ್ರಕಾರ ಪ್ರದೇಶವನ್ನು, ಅನುಪ್ರಾಪ್ತಂ - ಹೊಂದಿದ, ಗಂಧ....ಭಿಃ - ವಾಸನೆ ಕಟ್ಟಿದ ತೈಲದಿಂದ ನೆನೆಸಲ್ಪಟ್ಟ, ಅಗ್ರತಃ - ಮುಂದುಗಡೆ, ಧ್ರಿಯಮಾಣಾಭಿಃ - ಧರಿಸಲ್ಪಡುತ್ತಿರುವ, ಅನೇಕಾಭಿಃ - ಬಹಳವಾದ, ದೀಪಿಕಾಭಿಃ - ದೀಪಗಳಿಂದ, ಸಮಂತಾತ್ - ಎಲ್ಲಾ ಕಡೆಗಳಲ್ಲಿಯೂ, ಅವಭಾಸಿತಂ - ಕಂಗೊಳಿಸುತ್ತಿರುವ, ಕಾಮ....ದೈಃ - ಕಾಮೋದ್ರೇಕದಿಂದುಂಟಾದ ಗರ್ವದಿಂದಲೂ ಮತ್ತತೆಯಿಂದಲೂ, ಯುಕ್ತಂ - ಕೂಡಿರುವ, ಜಿಹ್ಮ....ಣಂ - ವಕ್ರಗಳೂ, ಕೆಂಪೂ ಆದ ದೀರ್ಘಗಳಾದ ಕಣ್ಣುಗಳುಳ್ಳ, ಅಪ....ನಂ - ಬಿಡಲ್ಪಟ್ಟ ಧನುಸ್ಸುಳ್ಳ, ಸಮಕ್ಷಂ - ಪ್ರತ್ಯಕ್ಷನಾದ, ಕಂದರ್ಪಮಿವಸ್ಥಿತಂ - ಮನ್ಮಥನಂತಿರುವ, ಮಥಿ....ಭಂ - ನೀರು ಬೆರಸದೆ ಕಡಗೋಲಿನಿಂದ ಕಡೆದ ಮಜ್ಜಿಗೆಯ ನೊರೆಯ ಕಾಂತಿಯುಳ್ಳ, ಅರಜಃ - ಮೈಲಿಗೆಯಿಲ್ಲದಿರುವ, ವಿಮುಕ್ತಂ - ಜಾರಿದುದರಿಂದಲೇ, ಅಂಗದೇ - ಬಾಹುಜಿಗೆಯಲ್ಲಿ, ಸಕ್ತಂ - ತಗುಲಿದ, ಉತ್ತಮಂ - ಶ್ರೇಷ್ಠವಾದ, ವಸ್ತ್ರಂ - ಬಟ್ಟೆಯನ್ನು, ಸಲೀಲಂ - ವಿಲಾಸದಿಂದೊಡಗೂಡಿದಂತೆ, ಅನುಕರ್ಷಂತಂ - ಸೆಳೆಯು

ವಲ್ಲಿಯೇ ಊಹಿಸಲಶಕ್ಯವಾದ ಭುಜಬಲಪರಾಕ್ರಮಗಳುಳ್ಳವನಾಗಿಯೂ, ಎಣೆಯಿಲ್ಲದ ಸಾಹಸ ಕಾರ್ಯವುಳ್ಳವನಾಗಿಯೂ ಇದ್ದ ಆ ರಾವಣನು ಅಶೋಕವನದ ಬಾಗಿಲನ್ನು ದಾಟಿ ಬರುತ್ತಿದ್ದನು. ||೧೬-೨೦|| ಆ ರಾಕ್ಷಸನ ಮುಂಗಡೆ ಕೆಲವು ಸ್ತ್ರೀಯರು ಗಂಧತೈಲದಿಂದ ಉರಿಸಲ್ಪಡುತ್ತಿರುವ ಕೈದೀವಟಿಗೆಗಳನ್ನು ಹಿಡಿದು ಬರುತ್ತಿದ್ದರು. ಆಗ ರಾವಣನು ಆ ದೀವಟಿಗೆಗಳ ಬೆಳಕಿನಿಂದ ಪ್ರಕಾಶಿಸುತ್ತ, ಕಾಮಾತುರತೆಯಿಂದಲೂ, ವೀರ್ಯದ ಕೆಚ್ಚಿನಿಂದಲೂ, ಮಧುಪಾನ ಮದದಿಂದಲೂ ಮೈತಿಳಿಯದೆ ಆಲುತ್ತ ಕೆಂಪೇರಿದ ಕಂಗಳುಳ್ಳವನಾಗಿ ಕುಸುಮಚಾಪವನ್ನು ತೊರೆದುಬಂದಿರುವ ಮದನನಂತೆ ಠೀವಿಯಿಂದ ಬರುತ್ತಿದ್ದನು. ಅಲ್ಲದೆ ಕಡೆದ ಹಾಲಿನಲ್ಲಿ ಹುಟ್ಟುವ ನೊರೆಯಂತೆ ಬಿಳುಪಾಗಿಯೂ, ನಿರ್ಮಲವಾಗಿಯೂ ಇರುವ ಬಿಳಿಯ ದುಕೂಲವೊಂದನ್ನು ಹೆಗಲಮೇಲೆ ಹಾಕಿಕೊಂಡು, ಅಸ್ತವ್ಯಸ್ತವಾಗಿ ನಡೆಯುವಾಗ ಭುಜಕೀರ್ತಿಗಳಲ್ಲಿ ತಗುಲಿಕೊಂಡ ಆ ವಸ್ತ್ರವನ್ನು ಗಾಂಭೀರ್ಯದಿಂದ ಸೆಳೆದುಕೊಳ್ಳುತ್ತ ಬಹು ದೂರದಲ್ಲಿ ನಡೆದುಬರುತ್ತಿರುವನಾದರೂ ತೇಜೋವಿಶೇಷದಿಂದ ಸಮೀಪ

* "ಸಪುಷ್ಪಮಪಕರ್ಷಂತಂ" ತಿ. ರಾ. ಪಾ.

ಮನುಕರ್ಷಂತಂ ವಿಮುಕ್ತಂ ಸಕ್ತಮಂಗದೇ ॥ ೨೪ ॥ ತಂ ಪತ್ರವಿಟಪೇಲೀನಃ ಪತ್ರ ಪುಷ್ಪಘನಾವೃತಃ । ಸಮೀಪಮುಪಸಂಕ್ರಾಂತಂ ನಿಧ್ಯಾತುಮುಪಚಕ್ರಮೇ ॥ ೨೫ ॥ ಅವೇಕ್ಷಮಾಣಸ್ತು ತತೋ ದದರ್ಶ ಕಪಿಕುಂಜರಃ । ರೂಪಯೌವನಸಂಪನ್ನಾ ರಾವಣಸ್ಯ ವರಸ್ತ್ರಿಯಃ ॥೨೬॥ ತಾಭಿಃ ಪರಿವೃತೋ ರಾಜಾ ಸುರೂಪಾಭಿ ರ್ಮಹಾಯಶಾಃ। ತನ್ಮೃಗದ್ವಿಜಸಂಘುಷ್ಟಂ ಪ್ರವಿಷ್ಟಃ ಪ್ರಮದಾವನಂ ॥ ೨೭ ॥ ಕ್ಷೀಬೋ ವಿಚಿತ್ರಾ ಭರಣ ಶ್ಶಂಕುಕರ್ಣೋ ಮಹಾಬಲಃ । ತೇನ ವಿಶ್ರವಸಃಪುತ್ರ ಸ್ಸದೃಷ್ಟೋ ರಾಕ್ಷಸಾ

ತ್ತಿರುವ, ತಂ - ಆ ರಾವಣನನ್ನು, ದದರ್ಶ - ಕಂಡನು. ॥ ೨೪ ॥ ಪತ್ರವಿಟಪೇ - ಪರ್ಣಯುಕ್ತವಾದ ರೆಂಬೆಯಲ್ಲಿ, ಲೀನಃ - ಔತುಕೊಂಡಿರುವ, ಪತ್ರ....ತಃ - ಎಲೆಗಳಿಂದಲೂ ಹುವ್ವುಗಳಿಂದಲೂ ದೃಢವಾಗಿ ಆಚ್ಛಾದಿತನಾದ ಆಂಜನೇಯನು, ಸಮೀಪಂ - ಹತ್ತಿರ, ಸಂಕ್ರಾಂತಮಿವ - ಬರುವನಂತಿರುವ, ತಂ - ಆ ರಾವಣನನ್ನು, ನಿಧ್ಯಾತುಂ - ಕಾಣುವದಕ್ಕೋಸ್ಕರ, ಉಪಚಕ್ರಮೇ - ಆರಂಭಿಸಿದನು ॥ ೨೫ ॥ ತತಃ - ಅನಂತರದಲ್ಲಿ, ಅವೇಕ್ಷಮಾಣಃ - ರಾವಣನನ್ನು ನೋಡುತ್ತಿರುವ, ಕಪಿಕುಂಜರಃ - ವಾನರಶ್ರೇಷ್ಠನಾದ ಆಂಜನೇಯನು, ರೂಪ....ನ್ನಾಃ - ಸೌಂದರ್ಯದಿಂದಲೂ ಯೌವನದಿಂದಲೂ ಕೂಡಿರುವ, ರಾವಣಸ್ಯ - ರಾವಣಾಸುರನ, ವರಸ್ತ್ರಿಯಃ - ಉತ್ತಮ ವನಿತೆಯರನ್ನು, ದದರ್ಶ - ಕಂಡನು. ॥ ೨೬ ॥ ಸುರೂಪಾಭಿಃ - ಸುಂದರಿಯರಾದ, ತಾಭಿಃ - ಆ ಸ್ತ್ರೀಯರೊಡನೆ, ಪರಿವೃತಃ - ಕೂಡಿರುವ, ಮಹಾಯಶಾಃ - ಕೀರ್ತಿಶಾಲಿಯಾದ, ರಾಜಾ - ರಾಕ್ಷಸಾಧಿಪತಿಯಾದ ರಾವಣನು, ಮೃಗ....ಷ್ಟಂ - ಮೃಗಗಳಿಂದಲೂ ಹಕ್ಕಿಗಳಿಂದಲೂ ಶಬ್ದಾಯಮಾನವಾದ, ತತ್ಪ್ರಮದಾವನಂ - ಆ ಉದ್ಯಾನವನವನ್ನು, ಪ್ರವಿಷ್ಟಃ - ಪ್ರವೇಶಿಸಿದನು. ॥ ೨೭ ॥ ಕ್ಷೀಬಃ - ಮತ್ತನಾದ, ವಿಚಿ....ಣಃ - ಆಶ್ಚರ್ಯಕರಗಳಾದ ಒಡವೆಗಳುಳ್ಳ, ಶಂಕುಕರ್ಣಃ - ಗೂಟದೋಪಾದಿಯಲ್ಲಿ ಸ್ತಬ್ಧಗಳಾದ ಕಿವಿಗಳುಳ್ಳ, ಮಹಾಬಲಃ - ಮಹಾ ಪರಾಕ್ರಮಿಯಾದ, ವಿಶ್ರವಸಃ - ವಿಶ್ರವಸ್ಸೆಂಬ ಬ್ರಹ್ಮನ, ಪುತ್ರಃ - ಕುಮಾರನಾದ, ಪರಮನಾರೀಭಿಃ - ಉತ್ತಮ ಸ್ತ್ರೀಯರಿಂದ, ತಾರಾಭಿಃ - ನಕ್ಷತ್ರಗಳಿಂದ, ಚಂದ್ರಮಾ ಇವ - ಚಂದ್ರನಂತೆ, ವೃತಃ - ಸುತ್ತುವರೆದ, ಸರಾಕ್ಷಸಾಧಿಪಃ - ಆ ರಾವಣನು, ತೇನ - ಆ ಆಂಜನೇಯನಿಂದ, ದೃಷ್ಟಃ - ಕಾಣಲ್ಪಟ್ಟನು. ॥ ೨೮ ॥

ದಲ್ಲಿದ್ದಂತೆಯೇ ಕಾಣುತ್ತಿದ್ದ ಆ ರಾವಣಾಸುರನನ್ನು ಶಿಂಶುಪಾವೃಕ್ಷದ ಎಲೆದುಂಬಿದ ರೆಂಬೆಯಲ್ಲಿ ಅವಿತುಕೊಂಡು ಹೂಗಳಿಂದಲೂ, ಎಲೆಗಳಿಂದಲೂ, ತನ್ನನ್ನು ಮತ್ತಷ್ಟು ಚನ್ನಾಗಿ ಮರೆಸಿಕೊಂಡು ಕುಳಿತಿದ್ದ ಆ ಹನುಮಂತನು ಕಣ್ಣಿಟ್ಟು ನೋಡಲುಪಕ್ರಮಿಸಿದನು.॥೨೧—೨೫॥ ಆ ರಾವಣಾಸುರನನ್ನು ಹಿಂಬಾಲಿಸಿ ಬರುತ್ತಿದ್ದ ರೂಪಯೌವನಸಂಪನ್ನೆಯರಾದ ಸುಂದರ ಸ್ತ್ರೀಯರನ್ನು ಆ ಮಾರುತಿಯು ನೋಡುತ್ತಿರುವಲ್ಲಿಯೇ, ಮೃಗಪಕ್ಷಿಗಳ ಧ್ವನಿಗಳಿಂದ ಶೋಭಿಸಿ ಸುಪುಷ್ಪಿತವಾಗಿರುವ ಅಶೋಕವನವನ್ನು ರಾವಣನು ಪ್ರವೇಶಿಸಿಯೇ ಬಿಟ್ಟನು. ಮದೋನ್ಮತ್ತನಾಗಿಯೂ, ಪರಮಾಶ್ಚರ್ಯಕರಗಳಾದ ಆಭರಣಗಳನ್ನು ತೊಟ್ಟವನಾಗಿಯೂ, ಮಹಾ ಪರಾಕ್ರಮಶಾಲಿಯಾಗಿಯೂ, ನೆಟ್ಟಗಿರುವ ಕಿವಿಗಳುಳ್ಳವನಾಗಿಯೂ, ನಕ್ಷತ್ರಪರಿವೃತನಾದ ಚಂದ್ರಮನಂತೆ ನಾರೀನಿವಹದಿಂದ ಪರಿವೃತನಾಗಿಯೂ ಬರುತ್ತಿರುವ ಆ ರಾಕ್ಷಸನನ್ನು ಕಂಡೊಡನೆಯೇ ಮಹಾ ತೇಜೋವಂತನಾದ ಹನುಮಂತನು ಆತನೇ ರಾವಣನೆಂದು ನಿಶ್ಚಯಿ

ಧಿಪಃ ॥ ೨೮ ॥ ವೃತಃ ಪರಮನಾರೀಭಿಸ್ತಾರಾಭಿರಿವ ಚಂದ್ರಮಾಃ । ತಂ ದದರ್ಶ ಮಹಾತೇಜಾಸ್ತೇಜೋವಂತಂ ಮಹಾಕಪಿಃ ॥ ೨೯ ॥ ರಾವಣೋಽಯಂ ಮಹಾಬಾಹುರಿತಿ ಸಂಚಿಂತ್ಯ ವಾನರಃ । § ಅವಪ್ಲುತೋ ಮಹಾತೇಜಾ ಹನುಮಾನ್ಮಾರುತಾತ್ಮಜಃ ॥೩೦॥ ಸತಥಾಪ್ಯುಗ್ರತೇಜಾಸ್ಸನ್ನಿರ್ಧೂತಸ್ತಸ್ಯ ತೇಜಸಾ । ಪತ್ರಗುಹ್ಯಾಂತರೇ ಸಕ್ತೋ ಹನುಮಾನ್ಸಂವೃತೋಽಭವತ್ ॥೩೧॥

ಸೀತಾಮಸಿತಕೇಶಾಂತಾಂ ಸುಶ್ರೋಣೀಂ ಸಂಹತಸ್ತನೀಂ ।
ದಿದೃಕ್ಷುರಸಿತಾಪಾಂಗೀಮುಪಾವರ್ತತ ರಾವಣಃ ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಾದಶಸ್ಸರ್ಗಃ.

ಮಹಾತೇಜಾಃ - ಮಹಾ ಪರಾಕ್ರಮಿಯಾದ, ಮಹಾಕಪಿಃ - ಆಂಜನೇಯನು, ತೇಜೋವಂತಂ - ತೇಜಸ್ವಿಯಾದ, ತಂ - ಆ ರಾವಣನನ್ನು, ದದರ್ಶ - ಕಂಡನು. ॥ ೨೯ ॥ ಅಯಂ - ಈತನು, ಮಹಾಬಾಹುಃ - ಮಹಾಭುಜನಾದ, ರಾವಣ ಇತಿ - ರಾವಣನೆಂದು, ಸಂಚಿಂತ್ಯ - ಆಲೋಚಿಸಿ, ಮಹಾತೇಜಾಃ - ತೇಜಸ್ವಿಯಾದ, ಮಾರುತಾತ್ಮಜಃ - ವಾಯುಪುತ್ರನಾದ, ವಾನರಃ - ಕಪಿಯಾದ, ಹನುಮಾನ್ - ಆಂಜನೇಯನು, ಅವಪ್ಲುತಃ - ಸ್ವಲ್ಪ ಕೆಳಗೆ ಇಳಿದನು. ॥ ೩೦ ॥ ತಥಾ - ಆ ರೀತಿಯಾಗಿ, ಸಹನುಮಾನ್ - ಆ ಆಂಜನೇಯನು, ಉಗ್ರತೇಜಾಃಸನ್ನಪಿ - ಭಯಂಕರವಾದ ಪರಾಭಿಭವಸಾಮರ್ಥ್ಯವುಳ್ಳವನಾದರೂ, ತಸ್ಯ - ಆ ರಾವಣನ, ತೇಜಸಾ - ಪ್ರಕಾಶದಿಂದ, ನಿರ್ಧೂತಃ - ಕೊಡಹಲ್ಪಟ್ಟವನಾದಕಾರಣ, ಪತ್ರಗುಹ್ಯಾಂತರೇ - ಎಲೆಗಳಿಂದ ಗೂಢವಾದ ಮಧ್ಯಪ್ರದೇಶದಲ್ಲಿ, ಸಕ್ತಃ - ಸಂಬಂಧಿಸಿದವನಾಗಿ, ಸಂವೃತಃ - ಔತುಕೊಂಡವನು, ಅಭವತ್ - ಆದನು. ॥ ೩೧ ॥ ಸರಾವಣಃ - ಆ ರಾವಣನು, ಅಸಿ....ತಾಂ - ಕಪ್ಪಾಗಿರುವ ಕೊನೆಗೂದಲುಗಳುಳ್ಳ, ಸುಶ್ರೋಣೀಂ - ಸುಶ್ರೋಣಿಯಾದ, ಸಂಹತಸ್ತನೀಂ - ಕೂಡಿರುವ ಕುಚಗಳುಳ್ಳ, ಅಸಿತಾಪಾಂಗೀಂ - ಕಪ್ಪಾದ ಕಡೆಗಣ್ಣಿನ ನೋಟವುಳ್ಳ, ತಾಂ - ಆ ಸೀತಾದೇವಿಯನ್ನು, ದಿದೃಕ್ಷುಃ - ನೋಡಲಿಚ್ಛಿಸಿದವನಾಗಿ, ಉಪಾವರ್ತತ - ಸಮೀಪಕ್ಕೆ ಬಂದನು. ॥೩೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಾದಶಸ್ಸರ್ಗಃ.

ಸಿದನು. ಆಗಲಾತನು, ಆ ರಾಕ್ಷಸನು ಮುಂದೆ ಮಾಡಹೋಗುವ ವ್ಯಾಪಾರಗಳನ್ನು ನೋಡಬೇಕೆಂದು ತಾನು ಅವಿತುಕೊಂಡಿದ್ದ ರೆಂಬೆಯಿಂದ ಕೆಳಗಿಳಿದು ಮತ್ತೊಂದು ರೆಂಬೆಯ ತುಟ್ಟತುದಿಯಲ್ಲಿ ಎಲೆಗಳಿಂದ ತನ್ನನ್ನು ಮರೆಸಿಕೊಂಡು ಕುಳಿತನು. ॥೨೬–೩೦॥ ಅಸಮಾನತೇಜಸ್ಕನಾಗಿದ್ದರೂ, ಆ ಮಾರುತಿಯು ರಾವಣನ ತೇಜಸ್ಸಿನಿಂದ ತಿರಸ್ಕೃತನಾದವನಂತೆ ಎಲೆಗಳ ನಡುವೆ ತನ್ನನ್ನು ಮರಿಸಿಕೊಂಡಿದ್ದನು. ರಾವಣನಾದರೋ ನೀಲವೇಣಿಯೂ, ಸುಂದರ ನಿತಂಬಿನಿಯೂ, ಸಂಹತಸ್ತನಿಯೂ, ಕುವಲಯನೇತ್ರಿಯೂ ಆದ ಸೀತೆಯನ್ನು ನೋಡಲಪೇಕ್ಷಿಸಿದವನಾಗಿ ಸಮೀಪಕ್ಕೆ ಬಂದನು. ॥ ೩೧–೩೨ ॥

ಇಂತಿದು ರಾವಣನ ಅಶೋಕವನಪ್ರವೇಶವೆಂಬ ಹದಿನೆಂಟನೆಯ ಸರ್ಗವು
ಸಮಾಪ್ತವಾದುದು.

---

§ "ಸೋಽಯಮೇವ ಪುರಾಶೇತೇ ಪುರಮಧ್ಯೇ ಗೃಹೋತ್ತಮೇ" ತಿ. ಮ. ಕ. ರಾ. ಪಾ.

ಸುಂದರಕಾಂಡೇ ಏಕೋನವಿಂಶಸ್ಸರ್ಗಃ

ತಸ್ಮಿನ್ನೇವ ತತಃ ಕಾಲೇ ರಾಜಪುತ್ರೀ ತ್ವನಿಂದಿತಾ । ರೂಪಯೌವನಸಂಪನ್ನಂ ಭೂಷಣೋತ್ತಮಭೂಷಿತಂ ॥ ೧ ॥ ತತೋದೃಷ್ಟ್ವೈವ ವೈದೇಹೀ ರಾವಣಂ ರಾಕ್ಷಸಾಧಿಪಂ । ಪ್ರಾವೇಪತ ವರಾರೋಹಾ ಪ್ರವಾತೇ ಕದಳೀ ಯಥಾ ॥೨॥ ‡ ಅಚ್ಛಾದ್ಯೋದರಮೂರುಭ್ಯಾಂ ಬಾಹುಭ್ಯಾಂಚ ಪಯೋಧರೌ। ಉಪವಿಷ್ಟಾ ವಿಶಾಲಾಕ್ಷೀ * ರುದಂತೀ ವರವರ್ಣಿನೀ ॥೩॥ ದಶಗ್ರೀವಸ್ತು ವೈದೇಹೀಂ ರಕ್ಷಿತಾಂ ರಾಕ್ಷಸೀ ¶ ಗಣೈಃ । ದದರ್ಶ ಸೀತಾಂ ದುಃಖಾರ್ತಾಂ ನಾವಂ ಸನ್ನಾಮಿವಾರ್ಣವೇ ॥ ೪ ॥ ಅಸಂವೃತಾಯಾ

ತತಃ - ರಾವಣಾಗಮನಾನಂತರದಲ್ಲಿ, ತಸ್ಮಿನ್ನೇವಕಾಲೇ - ಅದೇ ಸಮಯದಲ್ಲಿ, ರಾಜಪುತ್ರೀ - ರಾಜಕನ್ನಿಕೆಯಾದ, ಅನಿಂದಿತಾ - ನಿರ್ದೋಷಳಾದ, ವರಾರೋಹಾ - ಉತ್ತಮ ಸ್ತ್ರೀಯಾದ, ವೈದೇಹೀ - ಸೀತಾದೇವಿಯು, ರೂಪ....ನ್ನಂ - ರೂಪದಿಂದಲೂ, ಪ್ರಾಯದಿಂದಲೂ ಕೂಡಿರುವ, ಭೂಷ....ತಂ - ಉತ್ತಮಾಭರಣಗಳಿಂದಲಂಕೃತನಾದ, ರಾಕ್ಷಸಾಧಿಪಂ - ರಾಕ್ಷಸರಿಗೆ ಪ್ರಭುವಾದ, ರಾವಣಂ - ರಾವಣಾಸುರನನ್ನು, ತತಃ - ಆ ದೂರಮಾರ್ಗದಲ್ಲಿಯೇ, ದೃಷ್ಟ್ವೈವ - ಕಂಡೇ, ಪ್ರವಾತೇ - ಬಿರುಗಾಳಿಯಲ್ಲಿ, ಕದಳೀಯಥಾ - ಬಾಳೆಯಂತೆ, ಪ್ರಾವೇಪತ - ನಡುಗಿದಳು. ॥ ೨ ॥ ವಿಶಾಲಾಕ್ಷೀ - ವಿಸ್ತಾರವಾದ ನೇತ್ರಗಳುಳ್ಳ, ವರವರ್ಣಿನೀ - ಉತ್ತಮ ಸ್ತ್ರೀಯಾದ ಸೀತಾದೇವಿಯು, ರುದಂತೀ - ಅಳುತ್ತಿರುವಳಾಗಿ, ಊರುಭ್ಯಾಂ - ತೊಡೆಗಳಿಂದ, ಉದರಂ - ಹೊಟ್ಟೆಯನ್ನೂ, ಬಾಹುಭ್ಯಾಂ - ತೋಳುಗಳಿಂದ, ಪಯೋಧರೌಚ - ಸ್ತನಗಳನ್ನೂ, ಆಚ್ಛಾದ್ಯ - ಮುಚ್ಚಿಕೊಂಡು, ಉಪವಿಷ್ಟಾ - ಕುಳಿತಿದ್ದಳು. ॥ ೩ ॥ ದಶಗ್ರೀವಸ್ತು, - ರಾವಣಾಸುರನಾದರೆ, ವೈದೇಹೀಂ - ಜನಕರಾಜನ ಮಗಳಾದ, ರಾಕ್ಷಸೀಗಣೈಃ - ರಾಕ್ಷಸ ಸ್ತ್ರೀಸಮೂಹಗಳಿಂದ, ರಕ್ಷಿತಾಂ - ಸಂರಕ್ಷಿಸಲ್ಪಟ್ಟ, ದುಃಖಾರ್ತಾಂ - ವ್ಯಸನದಿಂದ ಅಳುತ್ತಿರುವ, ಅರ್ಣವೇ - ಸಮುದ್ರದಲ್ಲಿ, ಸನ್ನಾಂ - ಕ್ಷೀಣವಾದ, ನಾವಮಿವಸ್ಥಿತಾಂ - ಹಡುಗಿನಂತಿರುವ, ಅಸಂವೃತಾಯಾಂ -

---

ಅದೇ ಸಮಯದಲ್ಲಿ ಇತ್ತ, ಮರದಡಿಯಲ್ಲಿ ಕುಳಿತುಕೊಂಡಿದ್ದ ಕಳಂಕವಿಲ್ಲದ ನಡವಳಿಕೆಯುಳ್ಳ ರಾಜಪುತ್ರಿಯಾದ ಜಾನಕಿಯು ದೂರದಿಂದಲೇ ರಾವಣನು ಬರುತ್ತಿರುವುದನ್ನು ಕಂಡಳು. ರೂಪಯೌವನಸಂಪನ್ನನೂ, ಉತ್ತಮೋತ್ತಮಗಳಾದ ಆಭರಣಗಳನ್ನು ಧರಿಸಿರುವವನೂ ಆದ ರಾಕ್ಷಸೇಶ್ವರನನ್ನು ಕಂಡೊಡನೆಯೇ ಆಕೆಯು ಬಿರುಗಾಳಿಗೆ ಸಿಕ್ಕಿದ ಬಾಳೆಯಂತೆ ಗಡಗಡನೆ ನಡುಗಿಬಿಟ್ಟಳು. ವಿಶಾಲಾಕ್ಷಿಯೂ, ವರವರ್ಣಿನಿಯೂ ಆದ ಆ ದೇವಿಯು ತೊಡೆಗಳಿಂದ ಉದರಪ್ರದೇಶವನ್ನೂ, ತೋಳುಗಳಿಂದ ಸ್ತನಗಳನ್ನೂ ಚೆನ್ನಾಗಿ ಮುಚ್ಚಿಟ್ಟುಕೊಂಡು ಆ ಮರದಡಿಯಲ್ಲಿಯೇ ಕುಳಿತು ಧಾರೆಧಾರೆಯಾಗಿ ಕಂಬನಿಗರೆಯುತ್ತ ವಿಲಪಿಸುತ್ತಿದ್ದಳು. ಸಮುದ್ರಮಧ್ಯದಲ್ಲಿ ಭಾರದಿಂದ ಕುಗ್ಗುತ್ತಿರುವ ಹಡಗಿನಂತೆ, ರಾಕ್ಷಸಸ್ತ್ರೀಯರ ರಕ್ಷಣೆಗೊಳಗಾಗಿ ದುಃಖದಿಂದ ಕುಗ್ಗಿರುವ ಆಕೆಯನ್ನು ದಶಗ್ರೀವನು

---

‡ "ಊರುಭ್ಯಾಮುದರಂಛಾದ್ಯ" ತಿ. ಪಾ. * "ರುದತೀ" ಮ. ಪಾ. ¶ "ಗಣೇ" ತಿ. ಪಾ.

ಮಾಸೀನಾಂ ಧರಣ್ಯಾಂ ಸಂಶಿತವ್ರತಾಂ । ಛಿನ್ನಾಂ ಪ್ರಪತಿತಾಂ ಭೂಮೌ ಶಾಖಾಮಿವ ವನಸ್ಪತೇಃ ॥ ೫ ॥ ಮಲಮಂಡನ*ಚಿತ್ರಾಂಗೀಂ ಮಂಡನಾರ್ಹಾ ಮಮಂಡಿತಾಂ । ಮೃಣಾಳೀ ಪಂಕದಿಗ್ಧೇವ ವಿಭಾತಿ ನವಿಭಾತಿಚ ॥೬॥ ಸಮೀಪಂ ರಾಜಸಿಂಹಸ್ಯ ರಾಮಸ್ಯ ವಿದಿತಾತ್ಮನಃ । ಸಂಕಲ್ಪಹಯಸಂಯುಕ್ತೈ ರ್ಯಾಂತೀಮಿವ ಮನೋರಥೈಃ ॥ ೭ ॥ ಶುಷ್ಯಂತೀಂ ರುದತೀಮೇಕಾಂ ಧ್ಯಾನಶೋಕಪರಾಯಣಾಂ । ದುಃಖಸ್ಯಾಂತಮಪಶ್ಯಂತೀಂ ರಾಮಾಂ ರಾಮಮನುವ್ರತಾಂ ॥ ೮ ॥ ಚೇಷ್ಟಮಾನಾಮಥಾವಿಷ್ಟಾಂ ಪನ್ನ

ಹಾಸಿಗೆಯಿಲ್ಲದ, ಧರಣ್ಯಾಂ - ನೆಲದಲ್ಲಿ, ಆಸೀನಾಂ - ಕುಳಿತಿರುವ, ಸಂಶಿತವ್ರತಾಂ - ತೀಕ್ಷ್ಣವಾದ ಉಪವಾಸ ವ್ರತವುಳ್ಳ, ಛಿನ್ನಾಂ - ಕಡಿಯಲ್ಪಟ್ಟುದಾದುದರಿಂದಲೇ, ಭೂಮೌ - ನೆಲದಲ್ಲಿ, ಪ್ರಪತಿತಾಂ - ಬಿದ್ದಿರುವ, ವನಸ್ಪತೇಃ - ಗಿಡದ, ಶಾಖಾಮಿವಸ್ಥಿತಾಂ - ರೆಂಬೆಯಂತಿರುವ, ಮಲ.... ಗೀ - ಮಾಲಿನ್ಯವೆಂಬ ಅಲಂಕಾರದಿಂದ ಕರ್ಬುರವರ್ಣದ ಅವಯವಗಳುಳ್ಳ, ಮಂಡನಾರ್ಹಾಂ - ಅಲಂಕಾರಕ್ಕೆ ಯೋಗ್ಯಳಾದ, ಅಮಂಡಿತಾಂ - ಅಲಂಕಾರರಹಿತಳಾದ, ಸೀತಾಂ - ಸೀತಾದೇವಿಯನ್ನು, ದದರ್ಶ - ಕಂಡನು, ಯಾ - ಯಾವ ಸೀತಾದೇವಿಯು, ಪಂಕದಿಗ್ಧಾ - ಕೆಸರಿನಿಂದ ಲೇಪನ ಮಾಡಲ್ಪಟ್ಟ, ಮೃಣಾಳೀವ - ಕಮಲದ ಬಳ್ಳಿಯೋಪಾದಿಯಲ್ಲಿ, ವಿಭಾತಿ - ಪ್ರಕಾಶಿಸುವಳೋ, ನವಿಭಾತಿಚ-ಹೊಳೆಯುವದೂ ಇಲ್ಲವೋ. ॥ ೬ ॥ ರಾಜಸಿಂಹಸ್ಯ-ರಾಜಶ್ರೇಷ್ಠನಾದ, ವಿದಿತಾತ್ಮನಃ-ತಿಳಿಯಲ್ಪಟ್ಟ ಮನಸ್ಸುಳ್ಳ, ರಾಮಸ್ಯ - ಶ್ರೀರಾಮನ, ಸಮೀಪಂ - ಸಮೀಪವನ್ನು, ಸಂಕ....ಕ್ತೈಃ - ಮನೋವ್ಯಾಪಾರಗಳೆಂಬ ಕುದುರೆಗಳಿಂದ ಕೂಡಿರುವ, ಮನೋರಥೈಃ - ಮನಸ್ಸೆಂಬ ರಥಗಳಿಂದ, ಯಾಂತೀಮಿವಸ್ಥಿತಾಂ - ಹೋಗುವಳಂತಿರುವ, ಶುಷ್ಯಂತೀಂ - ಒಣಗುತ್ತಿರುವ, ರುದತೀಂ - ಅಳುತ್ತಿರುವ, ಏಕಾಂ - ಒಬ್ಬಂಟಿಗಳಾದ, ಧ್ಯಾನ.... ಣಾಂ - ರಾಮಧ್ಯಾನದಲ್ಲಿಯೂ ರಾಮವಿಷಯಕ ದುಃಖದಲ್ಲಿಯೂ ಆಸಕ್ತಳಾದ, ದುಃಖಸ್ಯ - ವ್ಯಸನದ, ಅಂತಂ - ತುದಿಯನ್ನು, ಅಪಶ್ಯಂತೀಂ - ಕಾಣದಿರುವ, ರಾಮಂ - ಶ್ರೀರಾಮನನ್ನು, ಅನುವ್ರತಾಂ - ಅನುಸರಿಸಿದ ನಿಯಮ

ಕಂಡವನಾದನು. ॥ ೧--೮ ॥ ಆಗಲಾಕೆಯು ಬಹು ತೀಕ್ಷ್ಣವಾದ ಪಾತಿವ್ರತ್ಯ ವ್ರತವನ್ನವಲಂಬಿಸಿ ಆಸ್ತರಣವಿಲ್ಲದ ಬರಿನೆಲದಲ್ಲಿ ಕುಳಿತು, ಮುರಿದು ನೆಲದಮೇಲೆ ಬಿದ್ದಿರುವ ಮರದ ರೆಂಬೆಯಂತೆ ಕಾಣುತ್ತಿದ್ದಳು. ಕೊಳೆಯು ವಿಶೇಷವಾಗಿ ದೇಹವನ್ನಾವರಿಸಿದ್ದುದರಿಂದ ಚಿತ್ರವರ್ಣಗಳುಳ್ಳ ಶರೀರವುಳ್ಳವಳಾಗಿ, ಸರ್ವಾಲಂಕಾರಭೂಷಿತೆಯಾಗಿರಬೇಕಾದರೂ ಆಭರಣರಹಿತಳಾಗಿ, ಕೆಸರುಮುಚ್ಚಿದ ತಾವರೆಯಂತೆ ವ್ಯಕ್ತಾವ್ಯಕ್ತವಾದ ದೇಹಕಾಂತಿಯಿಂದ ಶೋಭಿಸುತ್ತಿದ್ದಳು. ಆಕೆಯು ತನ್ನ ಮನೋರಥಗಳಲ್ಲಿ ಸಂಕಲ್ಪಗಳೆಂಬ ಕುದುರೆಗಳನ್ನು ಕಟ್ಟಿ ಅದರಲ್ಲಿ ಕುಳಿತು, ರಾಜಸಿಂಹನೂ, ಪರಮಾತ್ಮನೂ ಆದ ಶ್ರೀರಾಮನಿರುವೆಡೆಗೆ ಓಡಿಸುತ್ತಿರುವಳೋ ಎಂಬಂತೆ ಅತ್ಯಾತುರದಿಂದ ಆತನನ್ನೇ ಧ್ಯಾನಿಸುತ್ತಿದ್ದಳು. ದುಃಖದಿಂದ ಕೃಶಳಾಗಿ ತನ್ನವರೆಲ್ಲರನ್ನೂ ಬಿಟ್ಟು ಒಬ್ಬೊಂಟಿಗಳಾಗಿರುವುದರಿಂದ ಅಡಿಗಡಿಗೂ ಅಳುತ್ತ ದುಃಖದ ಕೊನೆಯನ್ನು ಕಾಣದೆ ತದೇಕಾಯತ್ತಚಿತ್ತಳಾಗಿ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದಳು. ॥೫–೮॥ ಮಣಿಮಂತ್ರಾದಿಗಳ ಪ್ರಭಾವದಿಂದ ದರ್ಪವುಡಿಗಿಸಲಾದ ಹೆಣ್ಣು

---

* "ದಿಗ್ಧಾಂಗೀಂ" ತಿ. ಪಾ.

ಗೇಂದ್ರವಧೂಮಿವ । ಧೂಪ್ಯಮಾನಾಂ ಗ್ರಹೇಣೇವ ರೋಹಿಣೀಂ ಧೂಮಕೇತುನಾ ॥ ೯ ॥ ವೃತ್ತಶೀಲಕುಲೇಜಾತಾಮಾಚಾರವತಿ ಧಾರ್ಮಿಕೇ । § ಪುನಸ್ಸಂಸ್ಕಾರಮಾಪನ್ನಾಂ ಜಾತಾಮಿವ ಚ ದುಷ್ಕುಲೇ ॥ ೧೦ ॥ ‡ ಅಭೂತೇನಾಪವಾದೇನ ಕೀರ್ತಿಂ ನಿಪತಿತಾಮಿವ । ಆಮ್ನಾಯಾನಾಮಯೋಗೇನ ವಿದ್ಯಾಂ ಪ್ರಶಿಥಿಲಾಮಿವ ॥ ೧೧ ॥ ಸನ್ನಾಮಿವ ಮಹಾಕೀರ್ತಿಂ ಶ್ರದ್ಧಾಮಿವ ವಿಮಾನಿತಾಂ । * ಪೂಜಾಮಿವ ಪರಿಕ್ಷೀಣಾ

ವುಳ್ಳ, ರಾಮಾಂ - ರಮಣೀಯಳಾದ, ವೇಷ್ಟಮಾನಾಂ - ನೆಲದಲ್ಲಿ ಉರುಳುತ್ತಿರುವ, ತಥಾ - ಹಾಗೆಯೇ, ಆವಿಷ್ಟಾಂ - ಮಂತ್ರಾದಿಗಳಿಂದ ಕಟ್ಟಲ್ಪಟ್ಟ, ಪನ್ನ....ತಾಂ - ನಾಗಕನ್ನಿಕೆಯಂತಿರುವ, ಧೂಮಕೇತುನಾ - ಧೂಮಕೇತುವೆಂಬ, ಗ್ರಹೇಣ - ಗ್ರಹದಿಂದ, ಧೂಪ್ಯಮಾನಾಂ - ಸಂತಾಪಿಸಲ್ಪಟ್ಟ, ರೋಹಿ....ತಾಂ - ರೋಹಿಣೀನಕ್ಷತ್ರದಂತಿರುವ, ಆಚಾರವತಿ - ಸದಾಚಾರವುಳ್ಳ, ಧಾರ್ಮಿಕೇ- ಧರ್ಮಪ್ರಧಾನವಾದ, ವೃತ್ತ....ಲೇ - ಸಂಪ್ರದಾಯವನ್ನು ಅತಿಕ್ರಮಿಸದಿರುವಿಕೆಯಿಂದಲೂ, ಒಳ್ಳೆಯ ನಡತೆಯಿಂದಲೂ ಕೂಡಿದ, ಕುಲೇ-ವಂಶದಲ್ಲಿ, ಜಾತಾಂ - ಹುಟ್ಟಿ, ದುಷ್ಕುಲೇ - ಕೆಟ್ಟವಂಶದಲ್ಲಿ, ಸಂಸ್ಕಾರಂ - ಮದುವೆಯೆಂಬ ಸಂಸ್ಕಾರವನ್ನು, ಆಪನ್ನಾಂ - ಹೊಂದಿರುವಕಾರಣ, ಪುನ ...ತಾಂ - ಪುನರ್ಜನ್ಮವನ್ನು ಹೊಂದಿದವಳಂತಿರುವ, ಅಭೂತೇನ - ಎಂದಿಗೂ ಇಲ್ಲದಿರುವ, ಅಪವಾದೇನ - ದೋಷಾರೋಪಣೆಯಿಂದ, ನಿಪತಿತಾಂ - ಹೋಗಲಾಡಿಸಲ್ಪಟ್ಟ, ಕೀರ್ತಿ....ತಾಂ - ಯಶಸ್ಸಿನಂತಿರುವ, ಆಮ್ನಾಯಾನಾಂ - ವೇದಗಳ, ಅಯೋಗೇನ - ಅನಭ್ಯಾಸದಿಂದ, ಪ್ರಶಿಥಿಲಾಂ - ಗಳಿತವಾದ, ವಿದ್ಯಾಮಿವಸ್ಥಿತಾಂ - ಜ್ಞಾನಸಂಪತ್ತಿಯಂತಿರುವ, ಸನ್ನಾಂ - ಕ್ಷೀಣವಾದ, ಮಹಾ....ತಾಂ - ದೊಡ್ಡಕೀರ್ತಿಯಂತಿರುವ, ವಿಮಾನಿತಾಂ - ತಿರಸ್ಕರಿಸಲ್ಪಟ್ಟ, ಶ್ರದ್ಧಾಮಿವ - ಫಲವಾಗುವದೆಂಬ ನಂಬಿಕೆಯಂತಿರುವ, ಪರಿಕ್ಷೀಣಾಂ - ನಶಿಸಿಹೋದ, ಪೂಜಾ....ತಾಂ - ಪೂಜೆಯಂತಿರುವ, ಪ್ರತಿಹತಾಂ-

---

ಸರ್ಪದಂತೆ ಆಕೆಯು ಹೊರಳುತ್ತಿದ್ದಳು; ಧೂಮಕೇತುವಿನಿಂದ ಬಾಧೆಗೊಳಗಾದ ರೋಹಿಣೀನಕ್ಷತ್ರದಂತೆ ಬಹುವಾಗಿ ಸಂಕಟಪಡುತ್ತಿದ್ದಳು ; ನಡತೆ, ಶೀಲ, ಸದಾಚಾರಗಳೇ ಮೊದಲಾದವುಗಳಲ್ಲಿ ಸರ್ವೋತ್ತಮವೆನಿಸಿಕೊಂಡ ಧರ್ಮಿಷ್ಠವಾದ ಒಂದು ಕುಲದಲ್ಲಿ ಹುಟ್ಟಿ ಅಂತೆಯೇ ಸರ್ವೋತ್ತಮವಾದ ಕುಲದಲ್ಲಿ ಸೇರಿ ವಿವಾಹಿತಳಾಗಿದ್ದರೂ ಕೇವಲ ದುಷ್ಕುಲದ ಕನ್ನಿಕೆಯಂತೆ ಆಕೆಯು ದೈನ್ಯವನ್ನು ಹೊಂದಿದ್ದಳು. ॥ ೯–೧೦ ॥ ಮಿಥ್ಯಾಪವಾದದಿಂದ ನಷ್ಟವಾದ ಕೀರ್ತಿಯಂತೆಯೂ, ಆವೃತ್ತಿಯಿಲ್ಲದಿರುವುದರಿಂದ ಸಡಿಲವಾದ ವೇದವಿದ್ಯೆಯಂತೆಯೂ, ನಶಿಸಿಹೋದ ಪ್ರಖ್ಯಾತಿಯಂತೆಯೂ, ಅವಮಾನಿತವಾದ ಆಸ್ತಿಕ್ಯ ಬುದ್ಧಿಯಂತೆಯೂ, ಶ್ರದ್ಧಾಭಕ್ತಿಗಳಿಲ್ಲದ ಪೂಜೆಯಂತೆಯೂ, ಫಲವಿಲ್ಲದಾದ ಆಸೆಯಂತೆಯೂ, ನೀಗಿಹೋದ ನಿಧಿಯಂತೆಯೂ, ಆಚರಣೆಯಲ್ಲಿ ತಾರದ ಅರಸನ ಅಪ್ಪಣೆಯಂತೆಯೂ,

---

§ ಇಲ್ಲಿ "ಪುನಃ ಸಂಸ್ಕಾರ" ಎಂದರೆ ವಿವಾಹವೆಂದು ಅರ್ಥ. ಸ್ತ್ರೀಯರಿಗೆ ವಿವಾಹವು ಉಪನಯನ ಸ್ಥಾನೀಯವೆಂದು ಧರ್ಮಶಾಸ್ತ್ರ ವಚನವಿರುವುದು. "ಕುಮಾರಾಣಾಮುಪನಯನಮಿವ ಕುಮಾರೀಣಾಂ ವಿವಾಹೋ ದ್ವಿತೀಯಂ ಜನ್ಮ" "ವೈವಾಹಿಕೋವಿಧಿ ಸ್ಸ್ತ್ರೀಣಾಮೌಪನಾಯನಿಕಃ ಸ್ಮೃತಃ" ಎಂದು ಸ್ಮೃತಿ. (ಗೋ+ತಿ+ಮ)

‡ ಈ ಶ್ಲೋಕವು ಗೋ. ಪಾಠದಲ್ಲಿಲ್ಲ. * "ಪ್ರಜ್ಞಾಮಿವ" ತಿ. ಪಾ.

ಮಾಶಾಂ ಪ್ರತಿಹತಾಮಿವ ॥೧೨॥ ಆಯತೀಮಿವ ವಿಧ್ವಸ್ತಾ ಮಾಜ್ಞಾಂ ಪ್ರತಿಹತಾ ಮಿವ । ದೀಪ್ತಾ ಮಿವ ದಿಶಂ ಕಾಲೇ ಪೂಜಾಮಪಹೃತಾಮಿವ ॥೧೩॥ ಪದ್ಮಿನೀಮಿವ ವಿಧ್ವಸ್ತಾಂ ಹತಶೂರಾಂ ಚಮೂಮಿವ । ಪ್ರಭಾಮಿವ ತಮೋಧ್ವಸ್ತಾ ಮುಪಕ್ಷೀಣಾ ಮಿವಾಪಗಾಂ ॥೧೪॥ ವೇದೀಮಿವ ಪರಾಮೃಷ್ಟಾಂ ಶಾಂತಾ ಮಗ್ನಿಶಿಖಾಮಿವ । ಪೌರ್ಣಮಾಸೀಮಿವ ನಿಶಾಂ ರಾಹುಗ್ರಸ್ತೇಂದುಮಂಡಲಾಂ ॥೧೫॥ ಉತ್ಕೃಷ್ಟಪರ್ಣ ಕಮಲಾಂ ವಿತ್ರಾಸಿತ ವಿಹಂಗಮಾಂ । ಹಸ್ತಿಹಸ್ತ ಪರಾಮೃಷ್ಟಾ ಮಾಕುಲಾಂ ಪದ್ಮಿನೀ ಮಿವ ॥೧೬॥ ಪತಿಶೋಕಾತುರಾಂ ಶುಷ್ಕಾಂ ನದೀಂ ವಿಸ್ರಾವಿತಾಮಿವ । ಪರಯಾ

ಹೋಗಲಾಡಿಸಲ್ಪಟ್ಟ, ಆಶಾಮಿವಸ್ಥಿತಾಂ - ಕಾಂಕ್ಷೆಯಂತಿರುವ, ವಿಧ್ವಸ್ತಾಂ - ನಾಶಮಾಡಲ್ಪಟ್ಟ, ಆಯ....ತಾಂ - ಸ್ನೇಹದಂತಿರುವ, ಪ್ರತಿಹತಾಂ - ತಿರಸ್ಕರಿಸಲ್ಪಟ್ಟ, ಆಜ್ಞಾ....ತಾಂ - ರಾಜಾಜ್ಞೆ ಯಂತಿರುವ, ಕಾಲೇ - ಉತ್ಪಾತಕಾಲದಲ್ಲಿ, ದೀಪ್ತಾಂ - ಉರಿಯುತ್ತಿರುವ, ದಿಶಮಿವಸ್ಥಿತಾಂ - ದಿಕ್ಕಿನಂತಿರುವ, ಅಪಹೃತಾಂ - ಅಪಹರಿಸಲ್ಪಟ್ಟ, ಪೂಜಾ....ತಾಂ - ಪೂಜಾದ್ರವ್ಯದಂತಿರುವ, ವಿಧ್ವಸ್ತಾಂ - ಧ್ವಂಸಮಾಡಲ್ಪಟ್ಟ, ಪದ್ಮಿನೀಮಿವ - ಕಮಲದ ಬಳ್ಳಿಯಂತಿರುವ, ಹತಶೂರಾಂ - ಮೃತವೀರರುಳ್ಳ, ಚಮೂ....ತಾಂ - ಸೇನೆಯಂತಿರುವ, ತಮೋಧ್ವಸ್ತಾಂ - ಅಂಧಕಾರದಿಂದ ಹೋಗಲಾಡಿಸಲ್ಪಟ್ಟ, ಪ್ರಭಾಮಿವ - ಸೂರ್ಯಕಾಂತಿಯಂತಿರುವ, ಉಪಕ್ಷೀಣಾಂ - ಕೃಶವಾದ, ಆಪಗಾಮಿವ - ನದಿಯಂತಿರುವ, ಪರಾಮೃಷ್ಟಾಂ - ಅಪವಿತ್ರವಾದ ವೇದೀಮಿವ - ಯಜನ ವೇದಿಕೆಯಂತಿರುವ, ಶಾಂತಾಂ - ತಣ್ಣಗಾದ, ಅಗ್ನಿ....ವ - ಅಗ್ನಿಜ್ವಾಲೆಯಂತಿರುವ, ರಾಹು....ಲಾಂ- ರಾಹುಗ್ರಹದಿಂದ ನುಂಗಲ್ಪಟ್ಟ ಚಂದ್ರಮಂಡಲವುಳ್ಳ, ಪೌರ್ಣಮಾಸೀಂ - ಹುಣ್ಣಿಮೆಯ ಸಂಬಂಧ ವಾದ, ನಿಶಾ....ತಾಂ - ರಾತ್ರಿಯಂತಿರುವ, ಉತ್ಕೃ....ಲಾಂ - ಕಿತ್ತೆಸೆದ ಎಲೆಗಳೂ, ತಾವರೇ ಹುವ್ವುಗಳೂ ಉಳ್ಳ, ವಿತ್ರಾ....ಮಾಂ - ಹೆದರಿಸಲ್ಪಟ್ಟ ಹಕ್ಕಿಗಳುಳ್ಳ, ಹಸ್ತಿ....ಷ್ಟಾಂ - ಆನೆಯು ಸೊಂಡಿಲದಿಂದ ಸೆಳೆಯಲ್ಪಟ್ಟುದಾದುದರಿಂದಲೇ, ಆಕುಲಾಂ - ಬಾಡಿದ, ಪದ್ಮಿ....ತಾಂ - ಕಮಲದ ಬಳ್ಳಿಯಂತಿರುವ, ಪತಿ....ರಾಂ - ಗಂಡನ ವಿರಹ ವ್ಯಸನದಿಂದ ಕಳವಳಗೊಂಡು, ಶುಷ್ಕಾಂ - ಒಣಗಿ ಹೋಗುತ್ತಿರುವಳಾದಕಾರಣ, ವಿಸ್ರಾವಿತಾಂ - ಬತ್ತಿಹೋಗುತ್ತಿರುವ, ನದೀ....ತಾಂ - ನದಿಯಂತಿರುವ, ಪರಯಾ - ಶ್ರೇಷ್ಠವಾದ, ಮೃಜಯಾಹೀನಾಂ - ಮೈಯ್ಯುಜ್ಜಿ ತೊಳದುಕೊಳ್ಳದಿರುವುದರಿಂದ,

---

ಪ್ರಳಯಕಾಲದಲ್ಲಿ ಧಗಧಗನುರಿಯುವ ದಿಕ್ಕುಗಳಂತೆಯೂ, ಕಳ್ಳರಿಂದ ಕದಿಯಲಾದ ಪೂಜಾ ದ್ರವ್ಯಗಳಂತೆಯೂ, ಹಿಮಕಣಗಳಿಂದ ಕುಗ್ಗಿ ಕಾಂತಿಯಿಲ್ಲದಾದ ಕಮಲಲತೆಯಂತೆಯೂ, ಶೂರರು ಮಡಿದುಳಿದ ಸೈನ್ಯದಂತೆಯೂ, ಕ್ಷಯಿಸಿಹೋದ ನದಿಯಂತೆಯೂ, ಶೂದ್ರಾದಿಗಳ ಸ್ಪರ್ಶದಿಂದ ಅಪವಿತ್ರವಾದ ಅಗ್ನಿಕುಂಡದಂತೆಯೂ, ನಂದಿದ ಅಗ್ನಿಶಿಖೆಯಂತೆಯೂ, ರಾಹು ಗ್ರಸ್ತ ಚಂದ್ರನುಳ್ಳ ಪೂರ್ಣಿಮಾರಾತ್ರಿಯಂತೆಯೂ, ಎಲೆಗಳೂ, ಹೂಗಳೂ ಉದುರಿ ಬೆಚ್ಚನೆ ಬೆದರಿಹಾರಿಹೋದ ಹಂಸ, ಕಾರಂಡವಾದಿ ಪಕ್ಷಿಗಳುಳ್ಳುದಾಗಿ ಆನೆಯು ಸೊಂಡಿಲಿನಿಂದ ಕಿತ್ತೆಸೆದು ಬಾಡಿದ ತಾವರೆಯ ಬಳ್ಳಿಯಂತೆಯೂ, ಪತಿವಿಯೋಗದುಃಖಿತಳಾದುದರಿಂದ, ಒಣಗಿದ ನದಿಯು ಮತ್ತೆ ನೀರುಕ್ಕಿ ಹರಿದಂತೆಯೂ, ಕಾಲಕಾಲಕ್ಕೆ ಅಭ್ಯಂಜನಾದಿ ಗಳಿಲ್ಲದಿದ್ದುದರಿಂದ ಕೃಷ್ಣಪಕ್ಷದ ರಾತ್ರಿಯಂತೆಯೂ, ತೋರುತ್ತಿದ್ದ ಆ ಜಾನಕಿಯು ಬಹಳ

ಮೃಜಯಾ ಹೀನಾಂ ಕೃಷ್ಣಪಕ್ಷ ನಿಶಾಮಿವ ॥ ೧೭ ॥ ಸುಕುಮಾರೀಂ ಸುಜಾತಾಂಗೀಂ । ರತ್ನಗರ್ಭ ಗೃಹೋಚಿತಾಂ । ತಪ್ಯಮಾನಾಮಿವೋಷ್ಣೇನ ಮೃಣಾಳೀ ಮಚಿರೋದ್ಧೃತಾಂ ॥ ೧೮ ॥ ¶ಗೃಹೀತಾ ಮಾಳಿತಾಂ ಸ್ತಂಭೇ ಯೂಥಪೇನ ವಿನಾಕೃತಾಂ । ನಿಶ್ಶ್ವಸಂತೀಂ ಸುದುಃಖಾರ್ತಾಂ ಗಜರಾಜ ವಧೂಮಿವ॥೧೯॥ಏಕಯಾ ದೀರ್ಘಯಾ ವೇಣ್ಯಾ ಶೋಭಮಾನಾ ಮಯತ್ನತಃ । ನೀಲಯಾ ನೀರದಾಪಾಯೇ ವನರಾಜ್ಯಾ ಮಹೀಮಿವ ॥ ೨೦ ॥ ಉಪವಾಸೇನ ಶೋಕೇನ ಧ್ಯಾನೇನ ಚ ಭಯೇನಚ । ಪರಿಕ್ಷೀಣಾಂ ಕೃಶಾಂ ದೀನಾ ಮಲ್ಪಾಹಾರಾಂ ತಪೋಧನಾಂ ॥ ೨೧ ॥ ಆಯಾಚಮಾನಾಂ

ಕೃಷ್ಣ....ತಾಂ-ಬಹುಳಪಕ್ಷದ ರಾತ್ರಿಯಂತಿರುವ, ಸುಕುಮಾರೀಂ-ಅತಿಮಾರ್ದವವುಳ್ಳ, ಸುಜಾತಾಂಗೀಂ ಸುಂದರಗಳಾದ ಅವಯವಗಳುಳ್ಳ, ರತ್ನ....ತಾಂ - ರತ್ನಖಚಿತಗಳಾದ ಅಂತಃಪುರಗಳುಳ್ಳ ಮನೆಯಲ್ಲಿರುವದಕ್ಕೆ ಅರ್ಹಳಾದ, ಉಷ್ಣೇನ - ಬಿಸಿಲಿನಿಂದ, ತಪ್ಯಮಾನಾಂ-ಬಾಡಿದ, ಅಚಿರೋದ್ಧೃತಾಂ - ಜಾಗ್ರತೆಯಾಗಿ, ಉದ್ಧೃತಾಂ - ಕೀಳಲ್ಪಟ್ಟ, ಮೃಣಾ....ತಾಂ - ತಾವರೆಯ ಕೊಳವಿಯಂತಿರುವ, ಗೃಹೀತಾಂ - ಹಿಡಿಯಲ್ಪಟ್ಟ, ಸ್ತಂಭೇ - ಕಂಭದಲ್ಲಿ, ಆಳಿತಾಂ - ಕಟ್ಟಲ್ಪಟ್ಟ, ಯೂಥಪೇನ - ಯೂಥಪತಿಯಾದ ಗಜದಿಂದ, ವಿನಾಕೃತಾಂ - ರಹಿತವಾಗಿ ಮಾಡಿದ, ನಿಶ್ವಸಂತೀಂ-ನಿಟ್ಟುಸಿರು ಬಿಡುತ್ತಿರುವ, ಸುದುಃಖಾರ್ತಾಂ - ಬಹಳ ಶೋಕಾಕ್ರಾಂತವಾದ, ಗಜ....ತಾಂ - ಶ್ರೇಷ್ಠವಾದ ಹೆಣ್ಣಾನೆಯಂತಿರುವ, ಏಕಯಾ - ಒಂದೇ ತಿರಿಯಾದ, ದೀರ್ಘಯಾ - ಉದ್ದವಾದ, ವೇಣ್ಯಾ - ಜಡೆಯಿಂದ ಆಯತ್ನತಃ - ಪ್ರಯತ್ನವಿಲ್ಲದೆ, ನೀರದಾಪಾಯೇ - ಶರದೃತುವಿನಲ್ಲಿ, ನೀಲಯಾ - ಕಪ್ಪಾಗಿರುವ, ವನರಾಜ್ಯಾ-ವನಪಜ್ತಿಯಿಂದ, ಮಹೀಮಿವ - ಭೂಮಿಯೋಪಾದಿಯಲ್ಲಿ, ಶೋಭಮಾನಾಂ-ಹೊಳೆಯುತ್ತಿರುವ, ಉಪವಾಸೇನ - ನಿರಶನವ್ರತದಿಂದಲೂ, ಶೋಕೇನ - ವ್ಯಸನದಿಂದಲೂ, ಧ್ಯಾನೇನ - ರಾಮನಲ್ಲಿಯೇ ಚಿತ್ತವೃತ್ತಿಯಿಟ್ಟಿರುವಿಕೆಯಿಂದಲೂ, ಭಯೇನಚ - ರಾವಣನ ಭಯದಿಂದಲೂ, ಪರಿಕ್ಷೀಣಾಂ - ಕ್ಷಯಾವಸ್ಥೆಯನ್ನು ಹೊಂದಿರುವ ಕಾರಣ, ಕೃಶಾಂ - ಸಣ್ಣದಾಗಿರುವ, ದೀನಾಂ - ದುಃಖಿತಳಾದ, ಅಲ್ಪಾಹಾರಾಂ - ಉದಕರೂಪ ಸ್ವಲ್ಪಾಹಾರವುಳ್ಳ, ತಪೋಧನಾಂ - ತಪಸ್ಸೇ ಧನವಾಗಿ ಉಳ್ಳ, ದುಃಖಾರ್ತಾಂ - ವ್ಯಸನಾಕ್ರಾಂತಳಾದ ಕಾರಣ, ದೇವತಾಂ - ಇಷ್ಟದೇವತೆಯನ್ನು

ವಾಗಿ ಕಳೆಗುಂದಿದ್ದಳು. ॥೧೧–೧೭॥ ಸುಕುಮಾರಿಯಾಗಿಯೂ, ಸೌಂದರ್ಯವುಳ್ಳ ಸರ್ವಾವಯವಗಳುಳ್ಳವಳಾಗಿಯೂ, ರತ್ನಗೃಹಗಳಲ್ಲಿರುವುದಕ್ಕೆ ಯೋಗ್ಯಳಾಗಿಯೂ ಇದ್ದ ಆಕೆಯು, ಆಗಲೇ ಕಿತ್ತು ಬಿಸಿನೀರಿಗೊಗೆದ ತಾವರೆಯ ಬಳ್ಳಿಯಂತೆ ಕಾಂತಿಹೀನಳಾಗಿ, ವನದಲ್ಲಿ ತಾನೇತಾನಾಗಿ ವಿಹರಿಸುತ್ತಿದ್ದು ಗುಂಪನ್ನಗಲಿ ಬೇಡರಕೈಗೆ ಸಿಕ್ಕಿಬಿದ್ದು ಕಂಭದಲ್ಲಿ ಬಂಧಿಸಲ್ಪಟ್ಟು ಸಲಗವನ್ನಗಲಿ ದುಃಖಕ್ಕೀಡಾಗಿ ನಿಟ್ಟುಸಿರಿಡುವ ಹೆಣ್ಣಾನೆಯಂತೆ ತೋರುತ್ತ, ಯಾವ ಸಂಸ್ಕಾರವೂ ಇಲ್ಲದೆ ಒಂದೇ ತಿರಿಯಾದ ತಲೆಗೂದಲಿನಿಂದ ಕೂಡಿ ಶರದೃತುವಿನ ಕಪ್ಪಾದ ವನರಾಜಿಯಿಂದ ಕೂಡಿದ ಭೂಮಿಯಂತೆ ಕಾಣುತ್ತಿದ್ದಳು. ॥೧೮–೨೦॥ ಉಪವಾಸದಿಂದಲೂ, ದುಃಖದಿಂದಲೂ, ಚಿಂತೆಯಿಂದಲೂ ಬಹಳವಾಗಿ ಸವೆದು ರಾವಣನ ಭೀತಿಯಿಂದ ದೀನಳಾಗಿ ತೇಜೋರಹಿತಳಾಗಿಯೂ, ಪ್ರಾಣಗಳನ್ನುಳಿಸಿಕೊಳ್ಳುವುದಕ್ಕಾಗಿಮಾತ್ರ

¶ "ಗೃಹೀತಾಂ ಲಾಲಿತಾಂ" ತಿ. ಪಾ.

ದುಃಖಾರ್ತಾಂ ಪ್ರಾಂಜಲಿಂ ದೇವತಾಮಿವ । ಭಾವೇನ ರಘುಮುಖ್ಯಸ್ಯ ದಶಗ್ರೀವ ಪರಾಭವಂ ॥ ೨೨ ॥

ಸಮೀಕ್ಷಮಾಣಾಂ ರುದತೀ ಮನಿಂದಿತಾಂ
ಸುಪಕ್ಷ್ಮ ತಾಮ್ರಾಯತ ಶುಕ್ಲಲೋಚನಾಂ ।
ಅನುವ್ರತಾಂ ರಾಮಮತೀವ ಮೈಥಿಲೀಂ
ಪ್ರಲೋಭಯಾಮಾಸ ವಧಾಯ ರಾವಣಃ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನವಿಂಶಸ್ಸರ್ಗಃ.

ಕುರಿತು, ಪ್ರಾಂಜಲಿಂ - ಅಂಜಲಿಬದ್ಧಳಾಗಿ, ಭಾವೇನ - ಮನಸ್ಸಿನಿಂದ, ರಘುಮುಖ್ಯಸ್ಯ - ರಾಮನೇ ಕರ್ತನಾಗಿ ಉಳ್ಳ, (ರಾಮಕರ್ತೃಕವಾದ) ದಶಗ್ರೀ....ವಂ - ರಾವಣಾಸುರನಿಗೆ ತಿರಸ್ಕಾರವನ್ನು, ಆಯಾ....ತಾಂ - ಪ್ರಾರ್ಥಿಸುವಳಂತಿರುವ, ಸಮೀಕ್ಷಮಾಣಾಂ - ರಾಕ್ಷಸಿಯರನ್ನು ನೋಡುತ್ತಿರುವ, ರುದಂತೀಂ - ಅಳುತ್ತಿರುವ, ಅನಿಂದಿತಾಂ - ನಿರ್ದೋಷಳಾದ, ಸುಪ....ನಾಂ - ಒಳ್ಳೇರೆಪ್ಪೆಗಳುಳ್ಳ, ಕೆಂಪಾಗಿಯೂ, ದೀರ್ಘವಾಗಿಯೂ, ಬಿಳುಪಾಗಿಯೂ ಇರುವ, ನೇತ್ರಗಳುಳ್ಳ, ರಾಮಂ - ಶ್ರೀರಾಮನನ್ನು, ಅನುವ್ರತಾಂ - ಅನುಸರಿಸಿರುವ, ಮೈಥಿಲೀಂ - ಜನಕರಾಯನ ಮಗಳಾದ ಸೀತಾದೇವಿಯನ್ನು, ರಾವಣಃ - ರಾವಣನು, ವಧಾಯ - ತನ್ನ ಸಾವಿಗೋಸ್ಕರ, ಪ್ರಲೋಭಯಾಮಾಸ - ಅಪೇಕ್ಷಿಸಿದನು.

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನವಿಂಶಸ್ಸರ್ಗಃ.

ಜಲಾಹಾರವುಳ್ಳವಳಾಗಿಯೂ ಇದ್ದ ಆ ಸೀತಾದೇವಿಯು ದುಃಖಪೀಡಿತಳಾಗಿ ಶ್ರೀರಾಮನಿಂದ ರಾವಣನಿಗೆ ಪರಾಭವವುಂಟಾಗಬೇಕೆಂದು ಮನಸ್ಸಿನಲ್ಲಿಯೇ ತನ್ನ ಕುಲದೇವತೆಯನ್ನುದ್ದೇಶಿಸಿ ಮಣಿಯುತ್ತಿರುವವಳೂ, ತನ್ನ ಪತಿಯ ಆಗಮನವನ್ನು ನಿರೀಕ್ಷಿಸುತ್ತಿರುವವಳೂ, ಆಗಾಗ್ಗೆ ಶ್ರೀರಾಮನನ್ನು ನೆನೆನೆನೆದು ರೋದಿಸುತ್ತಿರುವವಳೂ, ಸತ್ಸ್ವಭಾವವುಳ್ಳವಳೂ, ಅಂದವಾದ ಕಂಗಳುಳ್ಳವಳೂ ಆದ ಆ ಮಿಥಿಲರಾಜಕುಮಾರಿಯನ್ನು ನೋಡಿ ತನ್ನ ಸಾವಿಗಾಗಿಯೇ ಆಕೆಯನ್ನು ಕುರಿತು ಪ್ರಲೋಭನ ವಾಕ್ಯಗಳನ್ನು ನುಡಿಯತೊಡಗಿದನು. ॥ ೨೩ ॥

ಇಂತಿದು ರಾವಣಕೃತ ಪರಿತಪ್ತ ಸೀತಾದರ್ಶನ ವೃತ್ತಾಂತವೆಂಬ
ಹತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ವಿಂಶಸ್ಸರ್ಗಃ

¶ಸ ತಾಂ§ಪತಿವ್ರತಾಂ ದೀನಾಂ ನಿರಾನಂದಾಂ ತಪಸ್ವಿನೀಂ। ಸಾಕಾರೈರ್ಮಧುರೈರ್ವಾಕ್ಯೈರ್ನ್ಯದರ್ಶಯತ ರಾವಣಃ॥೧॥ ❦"ಮಾಂ ದೃಷ್ಟ್ವಾ ನಾಗನಾಸೋರು! ಗೂಹಮಾನಾ ಸ್ತನೋದರಂ । ಅದರ್ಶನಮಿವಾತ್ಮಾನಂ ಭಯಾನ್ನೇತುಂ ತ್ವಮಿಚ್ಛಸಿ ॥೨॥ ‡ಕಾಮಯೇ ತ್ವಾಂ ವಿಶಾಲಾಕ್ಷಿ! ಬಹುಮನ್ಯಸ್ವ ಮಾಂ ಪ್ರಿಯೇ! । ಸರ್ವಾಂಗಗುಣ

ಸಃ ರಾವಣಃ - ಆ ರಾವಣಾಸುರನು, ಪತಿವ್ರತಾಂ - ಏಕಪತಿಯಲ್ಲಿಯೇ ನಿಯಮಸ್ಥಳಾದ, ದೀನಾಂ - ದುಃಖಿತಳಾದ, ನಿರಾನಂದಾಂ - ಸಂತೋಷರಹಿತಳಾದ, ತಪಸ್ವಿನೀಂ - ಅನಶನವ್ರತವೆಂಬ ತಪಸ್ಸುಳ್ಳ, ತಾಂ - ಆ ಸೀತಾದೇವಿಯನ್ನು ಕುರಿತು, ಸಾಕಾರೈಃ - ಸಾಭಿಪ್ರಾಯಗಳಾದ, ಮಧುರೈಃ - ಕಿವಿಗಿಂಪಾಗಿರುವ, ವಾಕ್ಯೈಃ - ಮಾತುಗಳಿಂದ, ನ್ಯದರ್ಶಯತ - ತನ್ನ ಅಭಿಪ್ರಾಯವನ್ನು ತೋರಿಸಿದನು. ॥ ೧ ॥ ಹೇನಾ....ರು - ಎಲೌ ಆನೆಯ ಸೊಂಡಿಲನಂತೆ ತೊಡೆಗಳುಳ್ಳವಳೇ, ಮಾಂ - ನನ್ನನ್ನು, ದೃಷ್ಟ್ವಾ - ಕಂಡು, ಸ್ತನೋದರಂ - ಕುಚಗಳನ್ನೂ ಉದರವನ್ನೂ, ಗೂಹಮಾನಾ - ಮರೆಮಾಡಿಕೊಂಡು, ಭಯಾತ್ - ಭೀತಿಯಿಂದ, ಆತ್ಮಾನಂ - ತನ್ನನ್ನು, ಅದರ್ಶನಂ - ಅದೃಶ್ಯತ್ವವನ್ನು, ನೇತುಮಿವ - ಹೊಂದಿಸಲೆಂಬಂತೆ, ತ್ವಂ - ನೀನು, ಇಚ್ಛಸಿ-ಅಪೇಕ್ಷಿಸುವೆ. ॥ ೨ ॥ ಹೇ ವಿಶಾಲಾಕ್ಷಿ - ಓ ವಿಶಾಲನೇತ್ರಿಯೇ, ತ್ವಾಂ - ನಿನ್ನನ್ನು, ಕಾಮಯೇ - ಅಪೇಕ್ಷಿಸುವೆನು, ಹೇಸ....ನ್ನೇ ಸಮಸ್ತಾವಯವಗಳಲ್ಲಿಯೂ ಸೌಶೀಲ್ಯಾದಿಗುಣಗಳಿಂದ ಕೂಡಿರುವಳೇ, ಸರ್ವ....ರೇ-

---

ಈ ಪ್ರಕಾರವಾಗಿ ಸ್ವಲ್ಪವೂ ಸಂತೋಷವಿಲ್ಲದೆ ದುಃಖಿಸುತ್ತ ಕುಳಿತಿರುವ ಪತಿವ್ರತೆಯೂ, ತಪಸ್ವಿನಿಯೂ ಆದ ಸೀತಾದೇವಿಯನ್ನು ಕುರಿತು ಆ ರಾವಣಾಸುರನು ಅಭಿಪ್ರಾಯಸೂಚಕವಾದ ಪ್ರಿಯವಾಕ್ಕುಗಳಿಂದ ಆಕೆಗೆ ಆಶೆ ಹುಟ್ಟಿಸಲು ಹೀಗೆ ನುಡಿಯಲುಪಕ್ರಮಿಸಿದನು. "ಎಲೌ ಮನೋಹರಾಂಗಿಯೇ! ನನ್ನನ್ನು ನೋಡಿ ಹೀಗೇಕೆ ಹೆದರುತ್ತಿರುವೆ! ನನ್ನನ್ನು ನೋಡಿದೊಡನೆಯೆ ಕುಚೋದರಗಳನ್ನು ಮುಚ್ಚಿಕೊಂಡು ನಿನ್ನ ದೇಹವನ್ನು ವ್ಯಕ್ತಪಡಿಸದೆ ಭಯದಿಂದ ನನ್ನ ಕಣ್ಣಿಗೆ ಕಾಣದಿರಬೇಕೆಂದೆಣಿಸಿ ಸಂಕೋಚಪಡುತ್ತಿರುವೆಯೇಕೆ? ಎಲೆ ವಿಶಾಲಾಕ್ಷಿ! ನಾನು ನಿನ್ನನ್ನು ಕಾಮಿಸುತ್ತಿರುವೆನು, ನನ್ನನ್ನು ಅನುಗ್ರಹಿಸು! ಬಹು

¶ ಈ ಸರ್ಗದಲ್ಲಿ ಬರುವ ರಾವಣನ ವಾಕ್ಯಗಳೆಲ್ಲವೂ ಹೊರಗೆ ದೋಷಯುಕ್ತವಾಗಿ ಕಂಡುಬಂದರೂ, ವಾಸ್ತವವಾಗಿ ಅವುಗಳೆಲ್ಲವೂ ರಹಸ್ಯಾರ್ಥಗಳನ್ನೊಳಗೊಂಡಿರುವವು. ರಾವಣನು ತನ್ನ ಪೂರ್ವಜನ್ಮ ಸಂಸ್ಕಾರಬಲದಿಂದ ಸೀತಾದೇವಿಯು ಮಹಾಲಕ್ಷ್ಮೀ ಸ್ವರೂಪಿಣಿಯೆಂದರಿತು ಆಕೆಯಲ್ಲಿ ತನ್ನ ಭಕ್ತಿಯನ್ನು ಸಮರ್ಪಿಸುವುದಲ್ಲದೆ, ಭಕ್ತ್ಯುದ್ರೇಕದಿಂದ ತನ್ನ ಸಮಸ್ತವನ್ನೂ, ತನ್ನನ್ನೂ, ಆಕೆಗೆ ಸಮರ್ಪಿಸುತ್ತಾನೆಂಬುದು ಈ ಸರ್ಗದ ವಾಸ್ತವಿಕವಾದ ತಾತ್ಪರ್ಯವು. (ಮ)

§ "ಪರಿವೃತಾಂ" ತಿ. ಪಾ.

❦ ವಾಸ್ತವಿಕಾರ್ಥ:—"ನಾನು ನಿನ್ನ ಸೇವಕನು, ಪುತ್ರಸಮಾನನು. ನನ್ನನ್ನು ಮಾತೃಸಮಾನಳಾದ ನೀನು ನೋಡಲು ಹೀಗೆ ನಾಚಿಕೆಪಡುವುದಾಗಲಿ, ಭಯಪಡುವುದಾಗಲಿ ಯುಕ್ತವಲ್ಲವು"

‡ ವಾಸ್ತವಿಕಾರ್ಥ:—"ಜಗದೀಶ್ವರಿಯಾದ ನಿನ್ನನ್ನೇ ಪರದೇವತೆಯನ್ನಾಗಿ ಕೋರುವೆನು"

ಸಂಪನ್ನೇ! ಸರ್ವಲೋಕಮನೋಹರೇ! ||೩|| ¶ ನೇಹ ಕೇಚಿನ್ಮನುಷ್ಯಾವಾ ರಾಕ್ಷಸಾಃ ಕಾಮರೂಪಿಣಃ । ವ್ಯಪಸರ್ಪತು ತೇ ಸೀತೇ! ಭಯಂ ಮತ್ತ ಸ್ಸಮುತ್ಥಿತಂ || ೪ || ಸ್ವಧರ್ಮೋ ರಕ್ಷಸಾಂ ಭೀರು! ಸರ್ವಥೈವ ನ ಸಂಶಯಃ। ಗಮನಂ ವಾ ಪರಸ್ತ್ರೀಣಾಂ ಹರಣಂ ಸಂಪ್ರಮಥ್ಯ ವಾ || ೫ || ಏವಂ ☙ ಚೈತದಕಾಮಾಂತು ನತ್ವಾಂ ಸ್ಪ್ರಕ್ಷ್ಯಾಮಿ ಮೈಥಿಲಿ! । ಕಾಮಂ ಕಾಮಶ್ಶರೀರೇ ಮೇ ಯಥಾಕಾಮಂ ಪ್ರವರ್ತತಾಂ || ೬ ||

ಲೋಕಸುಂದರಿಯೇ, ಹೇ ಪ್ರಿಯೇ - ಎಲೌಪ್ರಿಯಳೇ, ಮಾಂ - ನನ್ನನ್ನು, ಬಹುಮನ್ಯಸ್ವ - ಬಹು ಮತಿಸು. || ೩ || ಹೇ ಸೀತೇ - ಎಲೌ ಸೀತೆಯೇ, ಇಹ - ಈ ಸ್ಥಳದಲ್ಲಿ, ಮನುಷ್ಯಾವಾ - ಪುರುಷ ರಾಗಲಿ, ಕಾಮರೂಪಿಣಃ-ಸ್ವೇಚ್ಛಾರೂಪಿಗಳಾದ, ರಾಕ್ಷಸಾವಾ-ಅಸುರರಾಗಲಿ, (ನಿನಗೆ ಭಯವನ್ನುಂಟು ಮಾಡುವವರು.) ಕೇಚಿತ್ - ಯಾರೂ, ನಸಂತಿ - ಇಲ್ಲವು, ತೇ - ನಿನಗೆ, ಮತ್ತಃ - ನನ್ನ ದೆಶೆಯಿಂದ, ಸಮುತ್ಥಿತಂ - ಉಂಟಾಗಿರುವ, ಭಯಂ - ಅಂಜಿಕೆಯು, ವ್ಯಪಸರ್ಪತು - ತೊಲಗಲಿ. || ೪ || ಹೇಭೀರು - ಓಭಯಶೀಲಳೇ, ಪರಸ್ತ್ರೀಣಾಂ - ಪರಸತಿಗಳ, ಗಮನಂವಾ - ಸಂಗವಾಗಲಿ, ಪ್ರಮಥ್ಯ - ಯುದ್ಧಮಾಡಿ, ಹರಣಂವಾ - ಅಪಹರಿಸುವಿಕೆಯಾಗಲಿ, ರಕ್ಷಸಾಂ - ರಾಕ್ಷಸರಿಗೆ, ಸರ್ವಥೈವ - ಹೇಗಾದರೂ, ಸ್ವಧರ್ಮಃ - ಸ್ವಾಭಾವಿಕಧರ್ಮವು, ನಸಂಶಯಃ - ಸಂದೇಹವಿಲ್ಲ, ಏವಂಚ - ಹೀಗಿರಲು, ಏತತ್ - ಈ ಸಂಗಮನವನ್ನು, ಅಕಾಮಾಂ - ಅಪೇಕ್ಷಿಸದಿರುವ, ತ್ವಾಂ - ನಿನ್ನನ್ನು, ನಸ್ಪ್ರಕ್ಷ್ಯಾಮಿ - ಸ್ಪರ್ಶಿಸುವದಿಲ್ಲ, ಹೇ ಮೈಥಿಲಿ - ಓ ಸೀತೆಯೇ, ಮೇ - ನನ್ನ, ಶರೀರೇ - ದೇಹದಲ್ಲಿ, ಕಾಮಂ - ಬಹಳವಾಗಿ, ಕಾಮಃ - ಮನ್ಮಥನು, ಯಥಾಕಾಮಂ - ಇಷ್ಟವಿದ್ದಷ್ಟು, ಪ್ರವರ್ತತಾಂ - ಪ್ರವರ್ತಿಸಲಿ, (ಮ) ಮದನನು ನನ್ನ ದೇಹದಲ್ಲಿ ತ್ವದ್ವಿಷಯಕವಾದ ಇಚ್ಛೆಯನ್ನು ಯಥೇಚ್ಛ ವಾಗಿ ಉಂಟುಮಾಡಲಿ. || ೬ || ಹೇ ದೇವಿ - ಸರ್ವಾಂತಃಪುರ ಪೂಜ್ಯಳಾದವಳೇ, ಇಹ - ಇಲ್ಲಿ,

ಮತಿಸು!! ನೀನು ಕಂದುಕುಂದಿಲ್ಲದ ಸರ್ವಾವಯವಗಳುಳ್ಳವಳು; ಸಮಸ್ತ ಜನರ ಹೃನ್ಮನಸ್ಸುಗಳನ್ನು ಆಕರ್ಷಿಸುವ ಅನುಪಮವಾದ ಸೌಂದರ್ಯವುಳ್ಳವಳು, ನೀನು ಈ ಅಶೋಕವನದಲ್ಲಿ ಯಾರೊಬ್ಬರಿಗೂ ಭಯಪಡಬೇಕಾಗಿಲ್ಲವು. ಮನುಷ್ಯರಾಗಲಿ, ಕಾಮರೂಪಿಗಳಾದ ರಾಕ್ಷಸರಾಗಲಿ, ಇಲ್ಲಿ ಯಾರೂ ಇಲ್ಲವಲ್ಲ! ಸೀತೇ!; ಒಂದುವೇಳೆ ನನ್ನಿಂದ ನಿನಗೆ ಭಯವುಂಟಾಗಿದ್ದಲ್ಲಿ ಅದನ್ನು ನೀನೀಗಲೇ ಬಿಟ್ಟುಬಿಡು. || ೧–೪ || ಎಲೌ ಭೀರುವೇ! ಸರ್ವ ಪ್ರಯತ್ನದಿಂದಲೂ ಪರಾಂಗನೆಯರನ್ನು ಸೇರುವುದಾಗಲಿ, ಅವರನ್ನು ಬಲಾತ್ಕಾರದಿಂದ ಅಪಹರಿಸಿ ತರುವುದಾಗಲಿ ರಾಕ್ಷಸರಾದ ನಮಗೆ ಕುಲಧರ್ಮವು. ಇದರಿಂದ ನಿನ್ನನ್ನು ಅಪಹರಿಸಿ ತಂದುದಕ್ಕಾಗಿ ನಾನು ದೋಷಿಯೂ, ಧೂರ್ತನೂ ಆದೆನೆಂದು ಭಾವಿಸಬೇಡ. ಎಲೆ ಮೈಥಿಲೀ!

¶ ವಾಸ್ತವಿಕಾರ್ಥ:—"ಎಲೌ ದೇವಿಯೆ! ನಾನು ರಾಕ್ಷಸನು; ರಾಕ್ಷಸರಿಗೆ ಪರದಾರಾಪಹರಣಾದಿಗಳೆಲ್ಲವೂ ಸ್ವಾಭಾವಿಕವಾದ ಧರ್ಮವೇ ಸರಿ. ನನ್ನಲ್ಲಿ ವಿಷಯಪಿಪಾಸೆಯೂ ಯಥೇಚ್ಛವಾಗಿಯೇ ಇರುವುದು. ಆದರೇನು. ಇವೆಲ್ಲವೂ ನಿನ್ನಲ್ಲಿ ಕೂಡುವುದಿಲ್ಲ. ನಾನು ನಿನ್ನನ್ನು ಮಾತೃಭಾವನೆಯಿಂದ ಆಶ್ರಯಿಸಿರುವೆನು. ನೀನು ಭೃತ್ಯನಾದ ನನ್ನನ್ನು ಅನುಗ್ರಹಿಸದಿದ್ದಲ್ಲಿ ನಾನು ನಿನ್ನ ಪಾದವನ್ನು ಹೊಂದಲಾರೆನು. ಅಥವಾ ವಿಷ್ಣುವನ್ನೇ ಕಾಮಿಸುವ ಮಹಾಲಕ್ಷ್ಮೀಸ್ವರೂಪಿಣಿಯಾದ ನಿನ್ನನ್ನು ನಾನೆಂದಿಗೂ ಕಾಮಿಸಲಾರೆ. (ಅಕಾಮಾಂ - ಅ+ಕಾಮಾಂ)"

☙ "ಚೈವಂ" ತಿ. ಪಾ.

¶ ದೇವಿ! ನೇಹ ಭಯಂ ಕಾರ್ಯಂ ಮಯಿ ವಿಶ್ವಸಿಹಿ ಪ್ರಿಯೇ! । ಪ್ರಣಯಸ್ವ ಚ ತತ್ವೇನ ಮೈವಂ ಭೂಶ್ಶೋಕಲಾಲಸಾ ॥ ೭ ॥ ಏಕವೇಣೀ $ ಧರಾಶಯ್ಯಾ ಧ್ಯಾನಂ ಮಲಿನಮಂಬರಂ । ಅಸ್ಥಾನೇಽಪ್ಯುಪವಾಸಶ್ಚ ನೈತಾನ್ಯೌಪಯಿಕಾನಿ ತೇ ॥ ೮ ॥ ವಿಚಿತ್ರಾಣಿ ಚ ಮಾಲ್ಯಾನಿ ಚಂದನಾನ್ಯಗರೂಣಿಚ । ವಿವಿಧಾನಿಚ ವಾಸಾಂಸಿ ದಿವ್ಯಾನ್ಯಾಭರಣಾನಿಚ॥೯॥ಘಮಹಾರ್ಹಾಣಿಚ ಪಾನಾನಿ ಶಯನಾನ್ಯಾಸನಾನಿಚ । ಗೀತಂ ನೃತ್ತಂ ಚ ವಾದ್ಯಂಚ ಲಭ ಮಾಂ ಪ್ರಾಪ್ಯ ಮೈಥಿಲಿ! ॥೧೦॥ § ಸ್ತ್ರೀರತ್ನಮಸಿ ಮೈವಂ ಭೂಃ

ಭಯಂ - ಅಂಜಿಕೆಯು, ನಕಾರ್ಯಂ - ಮಾಡತಕ್ಕದಲ್ಲ, ಮಯಿ - ನನ್ನ ವಿಷಯದಲ್ಲಿ, ವಿಶ್ವಸಿಹಿ - ವಿಶ್ವಾಸಮಾಡು, ತತ್ವೇನ - ಯಥಾರ್ಥವಾಗಿ, ಪ್ರಣಯಸ್ವ - ಪ್ರಸನ್ನಳಾಗು, (ಗೋ) ಸ್ನೇಹವನ್ನು ಬೆಳೆಯಿಸು, (ಎಂದರೆ) ಬಹುಮತಿಸು, ಏವಂ-ಈ ಪ್ರಕಾರವಾಗಿ, ಶೋಕಲಾಲಸಾ-ದುಃಖಾಕ್ರಾಂತಳಾದವಳು, ಮಾಭೂಃ-ಆಗಬೇಡ. ॥ ೭ ॥ ಏಕವೇಣೀ - ತಲೆಬಾಚಿಕೊಳ್ಳದಿರುವಿಕೆಯೂ, ಧರಾಶಯ್ಯಾ - ಭೂಶಯನವೂ, ಧ್ಯಾನಂ - ಚಿಂತೆಯೂ, ಮಲಿನಂ - ಕೊಳೆಯಾದ, ಅಂಬರಂ - ಬಟ್ಟೆಯೂ, ಅಸ್ಥಾನೇಪಿ - ಅಕಾಲದಲ್ಲಿಯೂ ಕೂಡ, ಉಪವಾಸಶ್ಚ - ನಿರಶನವ್ರತವೂ, ಏತಾನಿ - ಇವುಗಳು, ತೇ - ನಿನಗೆ, ನೌಪಯಿಕಾನಿ - ಯುಕ್ತವಾದುವಲ್ಲ. ॥ ೮ ॥ ಹೇ ಮೈಥಿಲಿ - ಓ ಸೀತೆಯೇ, ಮಾಂ-ನನ್ನನ್ನು, ಪ್ರಾಪ್ಯ - ಹೊಂದಿ, ವಿಚಿತ್ರಾಣಿ ನಾನಾಬಗೆಗಳಾದ, ಮಾಲ್ಯಾನಿ - ಪುಷ್ಪಗಳನ್ನು, ಚಂದನಾನಿ - ಚಂದನ ಗಂಧಗಳನ್ನೂ, ಅಗರೂಣಿಚ - ಕೃಷ್ಣಾಗರುಗಳನ್ನೂ, ವಿವಿಧಾನಿ - ಅನೇಕ ಬಗೆಯಾದ, ವಾಸಾಂಸಿ - ವಸ್ತ್ರಗಳನ್ನೂ, ದಿವ್ಯಾನಿ - ಶ್ರೇಷ್ಠಗಳಾದ, ಆಭರಣಾನಿಚ - ಒಡವೆಗಳನ್ನೂ, ಮಹಾರ್ಹಾಣಿ - ಉತ್ತಮಗಳಾದ, ಪಾನಾನಿ - ಮದ್ಯಗಳನ್ನೂ, ಶಯನಾನಿ-ಹಾಸಿಗೆಗಳನ್ನೂ, ಆಸನಾನಿಚ - ಪೀಠಗಳನ್ನೂ, ಗೀತಂ - ಗಾನವನ್ನೂ, ನೃತ್ತಂಚ - ನಾಟ್ಯವನ್ನೂ, ವಾದ್ಯಂ - ವಾದ್ಯವನ್ನೂ,

---

ನನ್ನಲ್ಲಿ ಕಾಮವು ಎಷ್ಟೇ ಅಧಿಕವಾಗಿದ್ದರೂ ನೀನಾಗಿ ನನ್ನನ್ನು ಕಾಮಿಸದ ಹೊರತು ನಾನು ನಿನ್ನನ್ನು ಮುಟ್ಟುವುದಿಲ್ಲ; ದೇವಿ! ಇಲ್ಲಿ ನೀನು ಭಯಪಡಬೇಕಾದುದಿಲ್ಲ; ನನ್ನಲ್ಲಿ ನಂಬಿಕೆಯನ್ನಿಡು, ಯಥಾರ್ಥವಾದ ಸ್ನೇಹವನ್ನು ಬೆಳೆಯಿಸು. ಹೀಗೆ ದುಃಖಾಕ್ರಾಂತಳಾಗಬೇಡ; ಕೋಮಲಾಂಗಿಯಾದ ನೀನು ತಲೆಬಾಚಿಕೊಳ್ಳದೆಯೂ, ಭೂಮಿಯಮೇಲೆ ಶಯನಿಸಿಯೂ, ಚಿಂತಿಸಿ ಕೊರಗುವುದೂ, ಕೊಳಕು ಬಟ್ಟೆಯನ್ನುಡುವುದೂ, ನಿಷ್ಕಾರಣವಾಗಿ ನಿರಶನ ವ್ರತವನ್ನು ಮಾಡುವುದೂ ಯುಕ್ತವಲ್ಲ. ॥೭–೮॥ ಎಲೆ ಮಿಥಿಲರಾಜಕುವರಿ! ನನ್ನನ್ನು ವರಿಸು; ನನ್ನ ಅರಮನೆಯಲ್ಲಿ ವಿಚಿತ್ರಗಳಾದ ಪುಷ್ಪಮಾಲಿಕೆಗಳೂ, ಅಗರುಚಂದನವೇ ಮೊದಲಾದ ಪರಿಮಳದ್ರವ್ಯಗಳೂ, ಬಗೆಬಗೆಯ ಉತ್ತಮ ವಸನಗಳೂ, ದಿವ್ಯಾಭರಣಗಳೂ ಇರುವವು. ಸರ್ವಶ್ರೇಷ್ಠವಾದ ಪಾನದ್ರವ್ಯಗಳೂ, ಬಗೆಬಗೆಯ ಸುಪ್ಪತ್ತಿಗೆಗಳೂ, ಗಾನನಾಟ್ಯಗಳೂ,

---

¶ ಇಲ್ಲಿ "ಪ್ರಣಯಸ್ವ" ಎಂದರೆ ನನ್ನಲ್ಲಿ ಪ್ರಸನ್ನೆಯಾಗು ಎಂದರ್ಥ.

$ "ಅಧಃಶಯ್ಯಾ" ತಿ. ಪಾ.

ಘ ವಾಸ್ತವಿಕಾರ್ಥಃ—"ಎಲೌ ದೇವಿಯೇ! ಭೃತ್ಯನಾದ ನನ್ನನ್ನು ಸೇರಿಸಿಕೊಂಡು ನಾನರ್ಪಿಸುವ ಗಂಧಮಾಲ್ಯಾದಿಗಳನ್ನು ಸ್ವೀಕರಿಸು."

§ "ಸ್ತ್ರೀರತ್ನಮಪಿ" ಗೋ. ಪಾ.

ಕುರು ಗಾತ್ರೇಷು ಭೂಷಣಂ । ಮಾಂ ಪ್ರಾಪ್ಯ ಹಿ ಕಥಂ ನುಸ್ಯಾಸ್ತ್ವಮನರ್ಹಾ ಸುವಿಗ್ರಹೇ! ॥೧೧॥ ¶ಇದಂ ತೇ ಚಾರುಸಂಜಾತಂ ಯೌವನಂ ವ್ಯತಿವರ್ತತೇ । ಯದ ತೀತಂ ಪುನರ್ನೈತಿ ಸ್ರೋತಃ‡ಶ್ಶೀಘ್ರಮಪಾಮಿವ॥೧೨॥ ತ್ವಾಂ ಕೃತ್ವೋಪರತೋ ಮನ್ಯೇ ರೂಪಕರ್ತಾ ಸ ವಿಶ್ವಸೃಕ್ । ನಹಿ ರೂಪೋಪಮಾಪ್ಯನ್ಯಾ ತವಾಸ್ತಿ ಶುಭದರ್ಶನೇ!

ಲಭ - ಹೊಂದು. ॥ ೧೦ ॥ ಹೇ ಸುವಿಗ್ರಹೇ - ಓ ಸುಂದರಾಂಗಿಯೇ, ತ್ವಂ - ನೀನು, ಸ್ತ್ರೀರತ್ನಂ - ಅಂಗನಾಮಣಿಯು, ಅಸಿ - ಆಗಿರುವೆ, ಏವಂ - ಹೀಗೆ ವ್ಯಸನವುಳ್ಳವಳು, ಮಾಭೂಃ - ಆಗಬೇಡ, ಗಾತ್ರೇಷು - ಅಂಗಗಳಲ್ಲಿ, ಭೂಷಣಂ - ಒಡವೆಗಳನ್ನು, ಕುರು - ಧರಿಸು, ಮಾಂ - ನನ್ನನ್ನು, ಪ್ರಾಪ್ಯಹಿ-ಹೊಂದಿಯೂ, (ಭೂಷಣಾನಾಂ-ಆಭರಣಗಳಿಗೆ) ಅನರ್ಹಾ-ಅಯೋಗ್ಯಳು, ಕಥನ್ನುಸ್ಯಾಃ - ಹೇಗೆತಾನೇ ಆಗಿರುವೆ. ॥ ೧೧ ॥ ತೇ - ನಿನಗೆ, ಸಂಜಾತಂ - ಹುಟ್ಟಿರುವ, ಚಾರು - ಸೊಗಸಾದ, ಇದಂಯೌವನಂ - ಈ ವಯಸ್ಸು, ವ್ಯತಿವರ್ತತೇ - ಅತಿಕ್ರಮಿಸಿ ಹೋಗುತ್ತದೆ, ಯತ್ - ಯಾವುದು, ಅತೀತಂ - ಅತಿಕ್ರಮಿಸಿ ಹೋಗುವುದೋ, ತತ್ - ಅದು, ಶೀಘ್ರಂ - ಜಾಗ್ರತೆಯಾಗಿ ಹೋಗುವ, ಅಪಾಂ - ಉದಕಗಳ, ಸ್ರೋತಇವ - ಪ್ರವಾಹದಂತೆ, ಪುನಃ - ಮರಳಿ, ನೈತಿ - ಬರುವದಿಲ್ಲ, (ಅತಃ - ಈ ಕಾರಣದಿಂದ,) ಭೋಗಾನ್ - ಸುಖಗಳನ್ನು, ಭುಙ್ಕ್ಷ್ವ - ಅನುಭವಿಸು. ॥ ೧೨ ॥ ರೂಪಕರ್ತಾ - ದಿವ್ಯರೂಪವನ್ನು ಸೃಜಿಸತಕ್ಕ, ಸವಿಶ್ವಸೃಕ್ - ಲೋಕಸೃಷ್ಟಿ ಕರ್ತನಾದ ಬ್ರಹ್ಮ ದೇವನು, ತ್ವಾಂ - ನಿನ್ನನ್ನು, ಕೃತ್ವಾ - ನಿರ್ಮಿಸಿ, ಉಪರತಃ - ವಿಶ್ರಮಿಸಿದನು, ಇತಿ - ಇಂತೆಂದು, ಮನ್ಯೇ - ಭಾವಿಸುತ್ತೇನೆ. ಹೇ ಶುಭದರ್ಶನೇ - ಎಲೌ ಸುಂದರದೃಷ್ಟಿಯುಳ್ಳವಳೇ, ಹಿ - ಯಾವ ಕಾರಣದಿಂದ, ತವ - ನಿನ್ನ, ರೂಪೋಪಮಾ - ಸೌಂದರ್ಯದ ಸಾಮ್ಯವುಳ್ಳವಳು, ಅನ್ಯಾ - ಮತ್ತೊಬ್ಬಳು, ನಾಸ್ತಿ - ಇಲ್ಲವೋ. ॥ ೧೩ ॥ ಹೇ ವೈದೇಹಿ - ಓ ಸೀತೆಯೇ, ರೂಪ.... ನೀಂ -

---

ವಿವಿಧ ವಾದ್ಯಗಳೂ ಉಂಟು. ನೀನು ನನ್ನನ್ನು ಹೊಂದಿ ಇವೆಲ್ಲವನ್ನೂ ಅನುಭವಿಸು. ಎಲೌ ಸುಂದರಾಂಗಿಯೇ, ನೀನು ಸ್ತ್ರೀಯರೆಲ್ಲರಲ್ಲಿಯೂ ರತ್ನಪ್ರಾಯವಾದವಳು, ಇಂತಹ ನೀನು ಈ ರೀತಿ ದುಃಖಿಸುತ್ತ ಕುಳಿತಿರಬಾರದು ; ನಿನ್ನ ದೇಹವನ್ನು ದಿವ್ಯಾಭರಣಗಳಿಂದಲಂಕರಿಸಿಕೊ, ಮನೋಹರೆಯಾದ ನೀನು ನನ್ನನ್ನು ಹೊಂದಿಯೂ ಈ ಹೀನಸ್ಥಿತಿಯಲ್ಲಿರಬಹುದೇ! ನಿನ್ನಲ್ಲಿ ವ್ಯಕ್ತವಾಗಿರುವ ಈ ಯೌವನದ ಸೊಬಗು ಕಳೆದುಹೋಗುತ್ತಿರುವುದೆಂಬುದನ್ನು ತಿಳಿಯೆಯಾ !! ಮುಂದಕ್ಕೆ ಹರಿದುಹೋದ ಜಲಪ್ರವಾಹದಂತೆ ಕಳೆದುಹೋದ ಯೌವನವು ಮರಳಿ ಹಿಂದಿರುಗುವುದಿಲ್ಲ. ॥ ೯–೧೨ ॥ ಎಲೆ ಸುಂದರಿ! ಸೃಷ್ಟಿಕರ್ತನಾದ ಬ್ರಹ್ಮನು ನಿನ್ನ ರೂಪವನ್ನು ಸೃಷ್ಟಿಸಿದ ಬಳಿಕ ಯಾವೊಂದು ರೂಪವನ್ನೂ ಸೃಷ್ಟಿಸಲಾರದೆ ಬಳಲಿರುವನೆಂದು ತೋರುತ್ತದೆ. ವೈದೇಹೀ! ನಿನ್ನ ರೂಪನ್ನು ಸರಿಹೋಲುವ ಸುಂದರಿಯು ಹದಿನಾಲ್ಕು ಲೋಕಗಳಲ್ಲಿ ಯಾವಳೂ ಇರುವದಿಲ್ಲ. ಎಲೌ ಜಾನಕಿಯೆ! ವಯಸ್ಸಿನಿಂದಲೂ, ಆಕೃತಿ

¶ ವಾಸ್ತವಿಕಾರ್ಥ:—"ಎಲೌ ದೇವಿಯೇ! ನಿನ್ನ ಪರಿಚರ್ಯೆಗಾಗಿಯೇ ನಾನು ಪಡೆದಿರುವ ಈ ಯೌವನವೆಲ್ಲವೂ ನಿಷ್ಪ್ರಯೋಜನವಾಗಿ ಕಳೆದುಹೋಗುತ್ತಿರುವುದು. ನನಗೆ ಈ ದೇಹದಾರ್ಢ್ಯವಿರುವಾಗಲೇ ನೀನು ಅನುಗ್ರಹ ಬುದ್ಧಿಯಿಂದ ನನ್ನ ಸೇವೆಯನ್ನು ಸ್ವೀಕರಿಸು. ನನ್ನನ್ನು ನಿನ್ನ ಸೇವಕನನ್ನಾಗಿ ಅಂಗೀಕರಿಸು."

‡ "ಸ್ರೋತಸ್ವಿನಾಮಿವ" ತಿ. ಪಾ.

॥೧೩॥ ❦ ತ್ವಾಂ ಸಮಾಸಾದ್ಯ ವೈದೇಹಿ! ರೂಪಯೌವನಶಾಲಿನೀಂ। ಕಃ ಪುಮಾನತಿವ ರ್ತೇತ ಸಾಕ್ಷಾದಪಿ ಪಿತಾಮಹಃ ॥ ೧೪ ॥ ¶ ಯದ್ಯತ್ಪಶ್ಯಾಮಿ ತೇ ಗಾತ್ರಂ ಶೀತಾಂಶು ಸದೃಶಾನನೇ! । ತಸ್ಮಿಂಸ್ತಸ್ಮಿನ್ ಪೃಥುಶ್ರೋಣಿ! ಚಕ್ಷುರ್ಮಮ ನಿಬಧ್ಯತೇ ॥ ೧೫ ॥ $ ಭವ ಮೈಥಿಲಿ! ಭಾರ್ಯಾ ಮೇ ಮೋಹಮೇನಂ ವಿಸರ್ಜಯ। ಬಹ್ವೀನಾಮುತ್ತಮ

ಸೊಗಸಿನಿಂದಲೂ, ಪ್ರಾಯದಿಂದಲೂ ಒಪ್ಪುತ್ತಿರುವ, ತ್ವಾಂ - ನಿನ್ನನ್ನು, ಸಮಾಸಾದ್ಯ - ಹೊಂದಿ ಕಃಪುಮಾನ್ - ಯಾವ ಪುರುಷನು, ಸಾಕ್ಷಾತ್ - ಪ್ರತ್ಯಕ್ಷನಾದ, ಪಿತಾಮಹೋಪಿ - ಬ್ರಹ್ಮದೇವ ನಾದರೂ, ನಾತಿವರ್ತೇತ-ಕ್ಷೋಭೆಗೊಳ್ಳದಿದ್ದಾನೆಯೋ. ॥ ೧೪ ॥ ಹೇಶೀ....ನೇ-ಚಂದ್ರನಿಗೆ ಸಮಾನ ವಾದ ಮುಖವುಳ್ಳವಳೇ, ತೇ - ನಿನ್ನ, ಯದ್ಯತ್‌ಗಾತ್ರಂ - ಯಾವ ಯಾವ ಅವಯವ ವಿಶೇಷವನ್ನು, ಪಶ್ಯಾಮಿ - ನೋಡುತ್ತೇನೆಯೋ, ಹೇ ಪೃಥುಶ್ರೋಣಿ - ಬೃಹನ್ನಿತಂಬಗಳುಳ್ಳವಳೇ, ತಸ್ಮಿನ್ ತಸ್ಮಿನ್ - ಆ ಆ ಅವಯವದಲ್ಲಿ, ಮಮ - ನನ್ನ, ಚಕ್ಷುಃ - ಕಣ್ಣು, ನಿಬಧ್ಯತೇ - ಸ್ತಂಭಿಸಲ್ಪಡುತ್ತದೆ. ॥ ೧೫ ॥ ಹೇ ಮೈಥಿಲಿ - ಓ ಸೀತೆಯೇ, ಮೇ - ನನಗೆ, ಭಾರ್ಯಾ - ಹೆಂಡತಿಯು, ಭವ - ಆಗು, ಏನಂ ಮೋಹಂ - ಈ ಭ್ರಾಂತಿಯನ್ನು, ವಿಸರ್ಜಯ - ತೊರೆ, ಇತಸ್ತತಃ - ಇತ್ತಲತ್ತಲಿಂದ, ಆಹೃತಾನಾಂ - ತರಲ್ಪಟ್ಟ, ಬಹ್ವೀನಾಂ - ಅನೇಕರಾದ, ಸರ್ವಾಸಾಂ - ಸಮಸ್ತರಾದ, ಉತ್ತಮಸ್ತ್ರೀಣಾಂ - ಶ್ರೇಷ್ಠ ರಾದ ಸ್ತ್ರೀಯರಲ್ಲಿ, ಮಮ - ನನ್ನ, ಅಗ್ರಮಹಿಷೀ - ಪಟ್ಟದರಸಿಯು, ಭವ - ಆಗು, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ಏನಂಮೋಹಂ - ನನ್ನಲ್ಲಿ ಈ ಶತ್ರುತ್ವ ಭ್ರಾಂತಿಯನ್ನು, ವಿಸರ್ಜಯ - ಬಿಟ್ಟುಬಿಡು, ಉತ್ತಮಸ್ತ್ರೀಣಾಂ - ಉತ್ತಮಾಂಗನೆಯರಲ್ಲಿ, ಯಾ - ಯಾವ ಮಂಡೋ ದರಿಯು, ಅಗ್ರಮಹಿಷೀ - ಪಟ್ಟದರಸಿಯೋ, ತಸ್ಯಾಃ - ಆಕೆಗೂ, ಮಮಚ - ನನಗೂ ಸಹ, ಈಶ್ವರೀ-

---

ವಿಶೇಷದಿಂದಲೂ, ಒಪ್ಪುತ್ತಿರುವ ನಿನ್ನನ್ನು ನೋಡಿದಮೇಲೆ ಯಾವ ಪುರುಷನುತಾನೆ ತನ್ನ ಮನಸ್ಸನ್ನು ಜಯಿಸಬಲ್ಲನು? ಸಾಕ್ಷಾತ್ಪಿತಾಮಹನೂ ಸಹ ಜಯಿಸಲಾರನು. ಎಲೌ ಚಂದ್ರ ಮುಖಿಯೇ! ನಿನ್ನ ಸೌಂದರ್ಯಸಂಶೋಭಿತವಾದ ಅವಯವಗಳಲ್ಲಿ ಯಾವುಯಾವುದನ್ನು ನೋಡುವೆನೋ ಆ ಆ ಅವಯವಗಳಲ್ಲಿಯೇ ನನ್ನ ದೃಷ್ಟಿಯು ದೃಢವಾಗಿ ನಿಂತುಬಿಡುವುದು. ಮೈಥಿಲೀ! ನೀನು ನನಗೆ ಭಾರ್ಯೆಯಾಗು, ಈ ಅವಿವೇಕವನ್ನು ದೂರಮಾಡು. ಇಗೋ, ಈಗ ನಾನು ನಿನ್ನ ಶ್ರೇಯಸ್ಸಿಗಾಗಿಯೇ ಹೇಳುತ್ತಿರುವೆನು; ನಾನು ಅಲ್ಲಲ್ಲಿ ಅನೇಕ ಉತ್ತಮ ಸ್ತ್ರೀಯರನ್ನು ತಂದಿಟ್ಟಿರುವೆನು, ನೀನು ಅವರೆಲ್ಲರಿಗೂ ಒಡತಿಯಾಗಿ ನನ್ನ ಪಟ್ಟಮಹಿಷಿ

❦ ವಾಸ್ತವಿಕಾರ್ಥ:—"ಸಾಕ್ಷಾತ್ ಪಿತಾಮಹನಾದರೂ ನಿನ್ನನ್ನು ನೋಡಿ ಭಕ್ತಿಪರವಶನಾಗದಿರಲಾರನೆಂದಬಳಿಕ ಕೇವಲ ಪ್ರಾಕೃತರಾದ ನಮ್ಮಂತಹರು ಭಕ್ತರಾಗುವರೆಂಬುದರಲ್ಲಿ ಆಶ್ಚರ್ಯವೇನಿರುವುದು?"

¶ ವಾಸ್ತವಿಕಾರ್ಥ:—ಎಲೌ ಪೂಜ್ಯಳೇ! ನಿನ್ನ ಪ್ರತಿಯೊಂದು ಅವಯವದ ಸೌಂದರ್ಯವೂ ನನ್ನ ಭಕ್ತಿ ಯನ್ನು ವೃದ್ಧಿಗೊಳಿಸುವುದು. ಇಷ್ಟದೇವತೆಯಾದ ನಿನ್ನ ದರ್ಶನವು ಮುಕ್ತಿಸಾಧಕವಾದುದಷ್ಟೆ."

$ ವಾಸ್ತವಿಕಾರ್ಥ:—"ಎಲೌ ಮೈಥಿಲಿಯೇ! ನೀನು ನನಗೆ (ಭಾ - ಆರ್ಯೆ) ನಿನ್ನ ತೇಜೋವಿಶೇಷದಿಂದ ಪೂಜ್ಯಳಾಗು, ಅಲ್ಲದೆ ನಾನು ತಂದಿಟ್ಟಿರುವ ಸಮಸ್ತ ಸ್ತ್ರೀಯರಿಗೂ ನೀನೇ ಅಧೀಶ್ವರಿಯಾಗು. ನಾನು ನಿನ್ನ ಸೇವಕನೇ ಆಗಿರು ವೆನು, ಆದುದರಿಂದ ನನಗೂ ನೀನೇ ಅಧೀಶ್ವರಿಯಾಗು."

ಸ್ತ್ರೀಣಾ¶ಮಾಹೃತಾನಾಮಿತಸ್ತತಃ । ಸರ್ವಾಸಾಮೇವ ಭದ್ರಂ ತೇ ಮಮಾಗ್ರಮಹಿಷೀ ಭವ ॥ ೧೬ ॥ ೫ ಲೋಕೇಭ್ಯೋ ಯಾನಿ ರತ್ನಾನಿ ಸಂಪ್ರಮಥ್ಯಾಹೃತಾನಿ ವೈ । ತಾನಿ §ಮೇ ಭೀರು! ಸರ್ವಾಣಿ ರಾಜ್ಯಂ‡ಚೈತದಹಂಚ ತೇ॥೧೭॥ ವಿಜಿತ್ಯ ಪೃಥಿವೀಂ ಸರ್ವಾಂ ನಾನಾ ನಗರಮಾಲಿನೀಂ । ಜನಕಾಯ ಪ್ರದಾಸ್ಯಾಮಿ ತವ ಹೇತೋರ್ವಿಲಾಸಿನಿ! ॥ ೧೮ ॥ ನೇಹ ಪಶ್ಯಾಮಿ ಲೋಕೇಽನ್ಯಂ ಯೋ ಮೇ ಪ್ರತಿಬಲೋ ಭವೇತ್ । ಪಶ್ಯ ಮೇ ಸುಮಹದ್ವೀರ್ಯಮಪ್ರತಿದ್ವಂದ್ವಮಾಹವೇ ॥೧೯॥ ಅಸಕೃತ್ಸಂಯುಗೇ ಭಗ್ನಾ ಮಯಾ ವಿಮೃದಿತಧ್ವಜಾಃ । ಅಶಕ್ತಾಃ ಪ್ರತ್ಯನೀಕೇಷು ಸ್ಥಾತುಂ ಮಮ ಸುರಾ

ಯಜಮಾನಿಯು, ಭವ - ಆಗು. ॥ ೧೬ ॥ ಯಾನಿರತ್ನಾನಿ - ಯಾವ ರತ್ನಗಳು, ಸಂಪ್ರಮಥ್ಯ - ಯುದ್ಧಮಾಡಿ, ಲೋಕೇಭ್ಯಃ - ಜನರಿಂದ, (ಗೋ) ಸ್ವರ್ಗಾದಿಲೋಕಗಳಿಂದ, ಆಹೃತಾನಿವೈ - ತರಲ್ಪಟ್ಟಿವೆಯೋ, ಹೇ ಭೀರು - ಓ ಭಯಶೀಲಳೇ, ಸರ್ವಾಣಿ - ಸಮಸ್ತಗಳಾದ, ಮೇ - ನನ್ನ, ತಾನಿ - ಆ ರತ್ನಗಳೂ, ಏತದ್ರಾಜ್ಯಂಚ - ಈ ರಾಜ್ಯವೂ, ಅಹಂಚ - ನಾನೂ, ತೇ - ನಿನ್ನವೇ ಸರಿ. ॥ ೧೭ ॥ ಹೇ ವಿಲಾಸಿನಿ - ಎಲೆ ವಿಲಾಸವತಿಯೇ, ತವಹೇತೋಃ - ನಿನಗೋಸುಗ, ನಾನಾ....ನೀಂ - ಅನೇಕ ಪಟ್ಟಣಗಳ ಮಾಲಿಕೆಯಾಗಿವುಳ್ಳ, ಸರ್ವಾಂಪೃಥ್ವೀಂ - ಭೂಮಿಯನ್ನೆಲ್ಲಾ, ವಿಜಿತ್ಯ-ಗೆದ್ದು, ಜನಕಾಯ - ಜನಕರಾಯನಿಗೆ, ಪ್ರದಾಸ್ಯಾಮಿ - ಕೊಡುತ್ತೇನೆ. ॥ ೧೮ ॥ ಇಹಲೋಕೇ - ಈ ಲೋಕದಲ್ಲಿ, ಯಃ - ಯಾವನು, ಮೇ - ನನಗೆ, ಪ್ರತಿಬಲಃ - ಶತ್ರುವು, ಭವೇತ್ - ಆಗುವನೋ, ತಂ - ಅಂತಹ, ಅನ್ಯಂ - ಮತ್ತೊರ್ವನನ್ನು, ನಪಶ್ಯಾಮಿ - ಕಾಣೆನು, ಆಹವೇ - ಕಾಳಗದಲ್ಲಿ, ಅಪ್ರತಿದ್ವಂದ್ವಂ - ಪ್ರತಿಭಟನಿಲ್ಲದಿರುವ, ಸುಮಹತ್ - ದೊಡ್ಡದಾದ, ವೀರ್ಯಂ - ಶೌರ್ಯವನ್ನು, ಪಶ್ಯ - ನೋಡು. ॥೧೯॥ ಸಂಯುಗೇ-ಯುದ್ಧದಲ್ಲಿ, ಮಯಾ-ನನ್ನಿಂದ, ವಿಮೃ....ಜಾಃ-ಮುರಿಯಲ್ಪಟ್ಟ ನಿಶಾನಿಗಳುಳ್ಳವರಾಗಿ, ಅಸಕೃತ್-ಅನೇಕಸಲ, ಭಗ್ನಾಃ-ಸೋತುಹೋದ, ಸುರಾಸುರಾಃ-ದೇವರಾಕ್ಷಸರು, ಮಮ-ನನ್ನ, ಪ್ರತ್ಯನೀಕೇಷು ವಿರೋಧಿ ಸೇನೆಗಳಲ್ಲಿ, ಸ್ಥಾತುಂ-ನಿಲ್ಲುವುದಕ್ಕೆ, ಅಶಕ್ತಾಃ-ಸಮರ್ಥರಲ್ಲ.

ಯಾಗಿರು. ॥೧೩–೧೬॥ ಎಲೆ ಭೀರುವೆ! ನಾನು ಎಲ್ಲ ಲೋಕಗಳನ್ನು ಜಯಿಸಿ ರತ್ನಪ್ರಾಯಗಳಾದ ಅನೇಕ ಉತ್ತಮ ವಸ್ತುಗಳನ್ನು ತಂದು ತುಂಬಿರುವೆನು. ಇನ್ನುಮೇಲೆ ಅವು ಮಾತ್ರವಲ್ಲದೆ ನಾನೂ, ನನ್ನೀರಾಜ್ಯವೂ, ನಿನ್ನವೆಂದೇ ತಿಳಿ. ಎಲೌ ವಿಲಾಸವತಿಯೆ! ನಿನ್ನ ತೃಪ್ತ್ಯರ್ಥವಾಗಿ ಬೇಕಾದರೆ ನಗರಗ್ರಾಮಾಲಂಕೃತವಾದ ಈ ಜಗತ್ತನ್ನೇ ಜಯಿಸಿ ನಿನ್ನ ತಂದೆಯಾದ ಜನಕರಾಜನಿಗೆ ಸಮರ್ಪಿಸುತ್ತೇನೆ; ಈ ಲೋಕದಲ್ಲಿ ನನ್ನನ್ನಿದಿರಿಸಿ ನಿಲ್ಲುವ ವೀರನಾವನೂ ಇಲ್ಲ; ನನ್ನ ಯುದ್ಧಸಾಮರ್ಥ್ಯವನ್ನು ಎಷ್ಟೆಂದು ಹೇಳಲಿ; ಬಾರಿಬಾರಿಗೂ ಜಯಿಸಲ್ಪಟ್ಟು ಮುರಿದ ರಥದ ಧ್ವಜಪತಾಕಾದಿಗಳುಳ್ಳವರಾದ ದೇವಾಸುರರು ನನ್ನೆದುರಿಗೆ ನಿಲ್ಲಲು ಶಕ್ತಿಸಾಲದೆ ಪಲಾಯನವಾಗಿ ಹೋಗಿದ್ದಾರೆ. ಎಲೌ ಸುಂದರಿಯೇ! ನೀನು ನನ್ನನ್ನು

¶ ಇದು ಗೋ. ಪಾ. ದಲ್ಲಿ ಅಧಿಕ.

೫ ವಾಸ್ತವಿಕಾರ್ಥ:—ಇಲ್ಲಿ ರಾವಣನು ತಾನು ಶೇಖರಿಸಿಟ್ಟಿರುವ ಸಮಸ್ತ ರತ್ನರಾಶಿಗಳನ್ನೂ, ಸ್ತ್ರೀಸಮುದಾಯವನ್ನೂ ಸೀತಾದೇವಿಗೆ ಸಮರ್ಪಿಸಿ ಅಧೀಶ್ವರಿಯಾಗಿರೆಂದು ಹೇಳುವುದರಿಂದ ಅವನು ಆಕೆಯಲ್ಲಿ ಶರಣಾಗತನಾಗಿ ಆತ್ಮಸಮರ್ಪಣವನ್ನೂ, ಆತ್ಮೀಯ ಸಮರ್ಪಣವನ್ನೂ ಮಾಡುವನೆಂದು ವಾಸ್ತವಾರ್ಥವು.

§ "ತೇ" ತಿ. ಪಾ. ‡ "ಚೈವದದಾಮಿ ತೇ" ತಿ. ಪಾ.

ಸುರಾಃ ॥ ೨೦ ॥ § ಇಚ್ಛಯಾ ಕ್ರಿಯತಾಮದ್ಯ ಪ್ರತಿಕರ್ಮ ತವೋತ್ತಮಂ । ‡ ಸಪ್ರಭಾಣ್ಯವಸಜ್ಯಂತಾಂ ತವಾಂಗೇ ಭೂಷಣಾನಿಚ ॥ ೨೧ ॥ ಸಾಧು ಪಶ್ಯಾಮಿ ತೇ ರೂಪಂ ಸಂಯುಕ್ತಂ ಪ್ರತಿಕರ್ಮಣಾ ಪ್ರತಿಕರ್ಮಾಭಿಸಂಯುಕ್ತಾಂ ದಾಕ್ಷಿಣ್ಯೇನ ವರಾನನೇ! ॥ ೨೨ ॥ ಭುಙ್‌ಕ್ಷ್ವ ಭೋಗಾನ್ಯಥಾಕಾಮಂ ಪಿಬ ಭೀರು! ರಮಸ್ವಚ ¶ ಯಥೇಷ್ಟಂಚ ಪ್ರಯಚ್ಛ ತ್ವಂ ಪೃಥಿವೀಂ ವಾ ಧನಾನಿಚ ॥ ೨೩ ॥ ಲಲಸ್ವ ಮಯಿ ವಿಸ್ರಬ್ಧಾ ಧೃಷ್ಟಮಾಜ್ಞಾಪಯಸ್ವಚ । ಮತ್ಪ್ರಸಾದಾ ಲ್ಲಲಂತ್ಯಾಶ್ಚ ಲಲಂತಾಂ ಬಾಂಧ

॥ ೨೦ ॥ ಅದ್ಯ - ಈಗ, ತವ - ನಿನ್ನ, ಇಚ್ಛಯಾ - ಅಭಿಲಾಷೆಯಿಂದ, ಉತ್ತಮಂ - ಶ್ರೇಷ್ಠವಾದ, **ಪ್ರತಿಕರ್ಮ** - ಅಲಂಕಾರವು, ಕ್ರಿಯತಾಂ - ಮಾಡಲ್ಪಡಲಿ, ತವ - ನಿನ್ನ, ಅಂಗೇ - ಶರೀರದಲ್ಲಿ, **ಸಪ್ರಭಾಣಿ** - ಕಾಂತಿಯಿಂದಕೂಡಿದ, ಭೂಷಣಾನಿಚ - ಒಡವೆಗಳೂ, ಅವಸಜ್ಯಂತಾಂ - ಇಡಲ್ಪಡಲಿ, ॥ ೨೧ ॥ ಪ್ರತಿಕರ್ಮಣಾ - ಅಲಂಕಾರದಿಂದ, ಸಂಯುಕ್ತಂ-ಕೂಡಿರುವ, ತೇ - ನಿನ್ನ, ರೂಪಂ - ಸೌಂದರ್ಯವನ್ನು, ಸಾಧು - ಚನ್ನಾಗಿ, ಪಶ್ಯಾಮಿ - ನೋಡುತ್ತೇನೆ. ಹೇವರಾನನೇ - ಎಲೌ ಶ್ರೇಷ್ಠವಾದ ಮುಖವುಳ್ಳವಳೇ, (ಮಯಿ - ನನ್ನಲ್ಲಿ, ತ್ವಂ - ನೀನು,) ದಾಕ್ಷಿಣ್ಯೇನ - ಪ್ರೀತಿಯಿಂದ, **ಪ್ರತಿ....ಕ್ತಾ** - ಅಲಂಕಾರಗಳಿಂದ ಕೂಡಿದವಳಾಗಿ, ಯಥಾಕಾಮಂ - ಮನಬಂದಂತೆ, ಭೋಗಾನ್ - ಸ್ರಕ್ಚಂದನಾದಿ ಸುಖಗಳನ್ನು, ಭುಙ್‌ಕ್ಷ್ವ - ಅನುಭವಿಸು, ಹೇ ಭೀರು - ಎಲೌ ಭಯಶೀಲಳೇ, ಪಿಬ - ಪಾನಮಾಡು, ರಮಸ್ವಚ - ಕ್ರೀಡಿಸು. ತ್ವಂ - ನೀನು, ಪೃಥಿವೀಂವಾ - ಭೂಮಿಯನ್ನಾಗಲಿ, ಧನಾನಿಚ - ದ್ರವ್ಯಗಳನ್ನಾಗಲಿ, ಯಥೇಷ್ಟಂಚ - ಇಷ್ಟವಿದ್ದಂತೆ, ಪ್ರಯಚ್ಛ - ಕೊಡು, ಮಯಿ - ನನ್ನಲ್ಲಿ, ವಿಸ್ರಬ್ಧಾ - ವಿಶ್ವಾಸವುಳ್ಳವಳಾಗಿ, ಲಲಸ್ವ - ಪ್ರೀತಿಸು, ಧೃಷ್ಟಂ - ಧೈರ್ಯವಾಗಿ, **ಆಜ್ಞಾಪಯಸ್ವ** - ಇತರರಿಗೆ ಆಜ್ಞಾಪಿಸು, ಮತ್ಪ್ರಸಾದಾತ್ - ನನ್ನ ಅನುಗ್ರಹದಿಂದ, ಲಲಂತ್ಯಾಃ - **ಸಂತೋಷಿಸುತ್ತಿರುವ**, ತವ - ನಿನ್ನ, ಬಾಂಧವಾಶ್ಚ - ನೆಂಟರೂ ಸಹ, ಲಲಂತಾಂ - ಸಂತೋಷ**ಪಡಲಿ.** ॥ ೨೨-೨೪ ॥ ಹೇ ಭದ್ರೇ - ಎಲೌ ಶುಭಕರಳೇ, ತ್ವಂ - ನೀನು, ಮಮ - ನನ್ನ, ಬುದ್ಧಿಂ -

---

ವರಿಸಿ ಮನಃಪೂರ್ವಕವಾಗಿ ನಿನಗೆ ಬೇಕುಬೇಕಾದ ದಿವ್ಯಾಭರಣಗಳಿಂದ ನಿನ್ನ ದೇಹವನ್ನಲಂಕರಿಸಿಕೊ !! ಸ್ವಭಾವಸುಂದರವಾದ ನಿನ್ನ ಈ ರೂಪವು ಆ ದಿವ್ಯಾಭರಣಗಳಿಂದ ಮತ್ತಷ್ಟು ಸೊಗಸಾಗಿ ಬೆಳಗುವದನ್ನು ನಾನು ಕಾಣಲಪೇಕ್ಷಿಸುವೆನು. ॥೧೭–೨೨॥ ಎಲೌ ವರಾನನೆಯೇ! ನೀನು ಯಾವ ಬಗೆಯ ಸಂಕೋಚವನ್ನೂ ಪಡದೆ ನನ್ನಲ್ಲಿ ಸರಸದಿಂದ ನಡೆಯುತ್ತ ಸಕಲ ಭೋಗಗಳನ್ನೂ ಯಥೇಚ್ಛವಾಗಿ ಭೋಗಿಸು. ನಿನ್ನ ಮನಬಂದಂತೆ ಪಾನದ್ರವ್ಯಗಳನ್ನು ಕುಡಿದು ಸಂತೋಷಪಡುತ್ತ ಸ್ವೇಚ್ಛೆಯಾಗಿ ವಿಹರಿಸು. ನಿನಗೆ ಬೇಕಾದವರಿಗೆ ಭೂಮಿಯನ್ನಾಗಲಿ, ಧನವನ್ನಾಗಲಿ, ಬೇಕಾದಹಾಗೆ ಕೊಡಬಹುದು. ನನ್ನಲ್ಲಿ ದೃಢವಾದ ಪ್ರೀತಿಯನ್ನಿಟ್ಟು ಯಾವ ಹೆದರಿಕೆಯೂ ಇಲ್ಲದವಳಾಗಿ ಬೇಕುಬೇಕಾದುದನ್ನು ನನಗೆ ಆಜ್ಞಾಪಿಸುತ್ತಿರು; ನನ್ನ ಅನುಗ್ರಹದಿಂದ ಸಂತೋಷಿಸುತ್ತಿರುವ ನಿನ್ನ ಬಂಧುಗಳೂ ಯಥೇಷ್ಟವಾದ

---

§ "ಇಚ್ಛಮಾಂ" ತಿ. ಪಾ. ‡ "ಸುಪ್ರಭಾಣ್ಯವ ಸಜ್ಜಂತಾಂ" ತಿ. ರಾ. ಪಾ.

¶ ವಾಸ್ತವಿಕಾರ್ಥ:—"ಎಲೌ ದೇವಿಯೆ! ನೀನು ನನ್ನನ್ನು ಅನುಗ್ರಹಿಸಿ ಯಾವಾಗಲೂ ಆನಂದಿಸುತ್ತಿರು. ನೀನು ಆನಂದಿಸುತ್ತಿರುವುದನ್ನು ನೋಡಿ ನನ್ನ ಬಂಧುಗಳೆಲ್ಲರೂ ಆನಂದಿಸಲಿ"

ವಾಸ್ತವ ॥೨೪॥ ¶ ಋದ್ಧಿಂ ಮಮಾನುಪಶ್ಯ ತ್ವಂ ಶ್ರಿಯಂ ಭದ್ರೇ! ಯಶಶ್ಚ ಮೇ। ಕಿಂ ಕರಿಷ್ಯಸಿ ರಾಮೇಣ ಸುಭಗೇ! ಚೀರ*ವಾಸಸಾ॥೨೫॥ ನಿಕ್ಷಿಪ್ತ ವಿಜಯೋ ರಾಮೋ ಗತಶ್ರೀರ್ವನಗೋಚರಃ । ವ್ರತೀ ಸ್ಥಂಡಿಲಶಾಯೀಚ ಶಂಕೇ ಜೀವತಿ ವಾ ನವಾ ॥ ೨೬ । ನಹಿ ವೈದೇಹಿ! ರಾಮಸ್ತ್ವಾಂ ದ್ರಷ್ಟುಂ ವಾಪ್ಯುಪಪದ್ಯತೇ । ಪುರೋ ಬಲಾಕೈರಸಿತೈ

ಐಶ್ವರ್ಯವನ್ನೂ, ಶ್ರಿಯಂ - ಕಾಂತಿಯನ್ನೂ, ಯಶಶ್ಚ - ಕೀರ್ತಿಯನ್ನೂ ಸಹ, ಅನುಪಶ್ಯ - ನೋಡು, ಹೇ ಸುಭಗೇ - ಓ ಸುಂದರಿಯೇ, ಚೀರವಾಸಸಾ - ನಾರುಮಡಿಯನ್ನುಟ್ಟಿರುವ, ರಾಮೇಣ - ಶ್ರೀರಾಮನಿಂದ, ಕಿಂಕರಿಷ್ಯಸಿ - ಏನುಮಾಡುತ್ತೀಯೆ, ನಿಕ್ಷಿಪ್ತವಿಜಯಃ - ಮತ್ತೊಬ್ಬನಲ್ಲಿಡಲ್ಪಟ್ಟ ಜಯವುಳ್ಳ, ಗತಶ್ರೀಃ - ಕಳೆದುಹೋದ ರಾಜ್ಯಸಂಪತ್ತುಳ್ಳವನಾದಕಾರಣ, ವನಗೋಚರಃ - ವನವಾಸಿಯಾದ, ವ್ರತೀ - ನಿಯಮಸ್ಥನಾದ, ಸ್ಥಂಡಿಲಶಾಯೀಚ - ನೆಲದಲ್ಲಿ ಮಲಗುತ್ತಿರುವ, ರಾಮಃ - ರಾಮನು, ಜೀವತಿವಾ - ಬದುಕಿರುವನೋ, ನವಾ - ಇಲ್ಲವೋ, ಇತಿ - ಈ ಪರಿಯಾಗಿ, ಶಂಕೇ - ಊಹಿಸುತ್ತೇನೆ, ಹೇ ವೈದೇಹಿ - ಎಲೌ ಸೀತೆಯೆ, ರಾಮಃ - ರಾಮನು, ತ್ವಾಂ - ನಿನ್ನನ್ನು, ಪುರೋಬಲಾಕೈಃ - ಮುಂದುಗಡೆ ಬೆಳ್ಳಕ್ಕಿಗಳುಳ್ಳ, ಅಸಿತೈಃ - ಕಪ್ಪಾಗಿರುವ, ಮೇಘೈಃ - ಮೇಘಗಳಿಂದ, ಆವೃತಾಂ - ಸುತ್ತುವರೆದ, ಜ್ಯೋತ್ಸ್ನಾಮಿವ- ಬೆಳದಿಂಗಳನ್ನೋಪಾದಿಯಲ್ಲಿ, ದ್ರಷ್ಟುಂವಾಪಿ-

ಸುಖವನ್ನನುಭವಿಸಲಿ. ಎಲೌ ಮಂಗಳಕರಳೇ! ನನ್ನ ಪದವಿಯನ್ನು ನೋಡು, ನನ್ನ ಭಾಗ್ಯವನ್ನೂ ಕೀರ್ತಿಯನ್ನೂ ನೋಡು. ಉಡುವ ಬಟ್ಟೆಗೂ ಗತಿಯಿಲ್ಲದೆ ನಾರುಬಟ್ಟೆಯನ್ನುಟ್ಟಿರುವ ಆ ರಾಮನಿಂದ ಇನ್ನು ನಿನಗಾಗಬೇಕಾದುದೇನು? ಅವನ ಪರಾಕ್ರಮವು ಕುಗ್ಗಿತು! ಅವನ ಭಾಗ್ಯವು ನಶಿಸಿಹೋಯಿತು!! ಆವನು ವನದಲ್ಲಿ ಸಂಚರಿಸುತ್ತ ವ್ರತವೆಂಬ ನೆವದಿಂದ ಭೂಶಾಯಿಯಾಗಿರುವನು. ಇಂತಹ ದುರವಸ್ಥೆಯಲ್ಲಿ ಅವನು ಈವರೆಗೆ ಬದುಕಿರುವನೋ ಇಲ್ಲವೋ ಎಂದು ನನಗೆ ಸಂದೇಹ ಉಂಟಾಗಿರುವುದು. ॥೨೫–೨೬॥ ವೈದೇಹಿ! ಇನ್ನು ಆ ರಾಮನ ಚಿಂತೆಯನ್ನು ಬಿಟ್ಟುಬಿಡು; ಆತನಿಗೆ ಮರಳಿ ನಿನ್ನನ್ನು ನೋಡುವ ಭಾಗ್ಯವಿಲ್ಲವೆಂದು ತಿಳಿ; ನೀಲಮೇಘಗಳಿಂದಾಚ್ಛಾದಿತವಾದ ಜ್ಯೋತ್ಸ್ನೆಯಂತೆ ನಾನು ಬಚ್ಚಿಟ್ಟಿರುವ ನಿನ್ನನ್ನು

¶ ವಾಸ್ತವಿಕಾರ್ಥ:—ಸೀತಾದೇವಿಯು, "ಎಲೈ ರಾವಣನೇ! ನೀನು ನನ್ನನ್ನು ನನ್ನ ಪತಿಯಾದ ಶ್ರೀರಾಮನೊಡಗೂಡಿಸು. ಆಗ ನಿನಗೆ ಸಮಸ್ತ ಸಂಪದಗಳನ್ನೂ ಕೊಡುವೆನು" ಎಂದು ಹೇಳಿಯಾಳೆಂದು ಆಶಂಕಿಸಿದ ರಾವಣನು ಆಕೆಯನ್ನು ಕುರಿತು, "ಎಲೌ ದೇವಿಯೆ! ನಾನು ಸಂಪತ್ತನ್ನು ಬಯಸುವವನಲ್ಲ; ನನಗೆ ಬೇಕಾಗಿರುವುದು ಮೋಕ್ಷ. ಅದು ನಿನ್ನಿಂದ ದೊರಕುವವರೆಗೂ ನಿನ್ನ ಅಡಿದಾವರೆಗಳನ್ನು ನಾನೆಂದಿಗೂ ಬಿಡಲಾಗುವುದಿಲ್ಲವು. ನೀನು ನಿನ್ನ ಪತಿಯಾದ ಶ್ರೀರಾಮನ ವಿಷಯವಾಗಿ ಯೋಚಿಸಬೇಡ. ಆತನು ಸ್ವತಸ್ಸಿದ್ಧವಾದ ವಿಜಯವುಳ್ಳವನು. ಜಲವೇ ನಿವಾಸಸ್ಥಾನವಾಗಿ ಉಳ್ಳವನು; ಅರ್ಥಾತ್ ಕ್ಷೀರಸಾಗರಶಯನನಾದ ಶ್ರೀಮನ್ನಾರಾಯಣಮೂರ್ತಿಯು. ಆದುದರಿಂದಲೇ ಆತನು ಲಕ್ಷ್ಮೀವಲ್ಲಭನೂ ಭಕ್ತಸಂರಕ್ಷಣಶೀಲನೂ ಆಗಿರುವನು. ಇದರಿಂದಲೇ ಈ ಮನುಷ್ಯಾವತಾರದಲ್ಲಿಯೂ ಪಿತೃವಾಕ್ಯಪರಿಪಾಲನೆಗಾಗಿ ಅರಣ್ಯದಲ್ಲಿ ಸ್ಥಂಡಿಲಶಾಯಿಯಾಗಿರುವನು. ಪೀತಾಂಬರಧಾರಿಯಾದ ಅಂತಹ ಶ್ರೀರಾಮನನ್ನು ಕೈಹಿಡಿದಿರುವಲ್ಲಿ ಈ ನನ್ನ ಐಶ್ವರ್ಯಾದಿಗಳು ನಿನ್ನನ್ನೇನು ಮಾಡಿಯಾವು? ಇದೂ ಅಲ್ಲದೆ ಶ್ರೀರಾಮನು ನಾನು ಬದುಕಿರುವಾಗ ನನ್ನ ಕೈಯಿಂದ ನಿನ್ನನ್ನು ಪಡೆಯಲು ಅರ್ಹನಲ್ಲ. ನಾನು ಮಡಿದಮೇಲೆ ಆತನು ನಿನ್ನನ್ನು ಪಡೆಯುವನು. ಹಿಂದೆ ಹಿರಣ್ಯಕಶಿಪುವು ಅಪಹರಿಸಿದ ತನ್ನ ಭಾರ್ಯೆಯನ್ನು ಪುನಃ ಪಡೆದಂತೆ ನಿನ್ನ ಪತಿಯಾದ ಶ್ರೀರಾಮನೂ ನಿನ್ನನ್ನು ಪಡೆದೇ ಪಡೆಯುತ್ತಾನೆ.

* "ವಾಸಿನಾ" ತಿ. ಪಾ.

ನ್ಯೇಷ್ಯೈರ್ಜ್ಯೋತಿಷ್ಮನ್ನಿವಾವೃತಾಂ ॥೨೭॥ ನಚಾಪಿ ಮಮ ಹಸ್ತಾತ್ತ್ವಾಂಪ್ರಾಪ್ತು ಮರ್ಹತಿ ರಾಘವಃ । ಹಿರಣ್ಯಕಶಿಪುಃ ಕೀರ್ತಿಮಿಂದ್ರಹಸ್ತಗತಾಮಿವ ॥೨೮॥ ಚಾರು ಸ್ಮಿತೇ ಚಾರುದತಿ! ಚಾರುನೇತ್ರೇ! ವಿಲಾಸಿನಿ! । ಮನೋ ಹರಸಿ ಮೇ ಭೀರು! ಸುಪರ್ಣಃ ಪನ್ನಗಂ ಯಥಾ ॥ ೨೯ ॥ ¶ ಕ್ಲಿಷ್ಟಕೌಶೇಯವಸನಾಂ ತನ್ವೀಂ ಮಪ್ಯನಲಂ ಕೃತಾಂ । ತ್ವಾಂ ದೃಷ್ಟ್ವಾ ಸ್ವೇಷು ದಾರೇಷು ರತಿಂ ನೋಪಲಭಾಮ್ಯಹಂ ॥ ೩೦ ॥ ಅಂತಃಪುರನಿವಾಸಿನ್ಯಃ ಸ್ತ್ರಿಯಸ್ಸರ್ವಗುಣಾನ್ವಿತಾಃ। ಯಾವಂತ್ಯೋ ಮಮ ಸರ್ವಾಸಾ

ನೋಡುವದಕ್ಕೂ, ನೋಪಲಭ್ಯತೇ - ಸಮರ್ಥನಾಗಲಾರನು, ರಾಘವಃ - ರಾಮನು, ಮಮ - ನನ್ನ, ಹಸ್ತಾತ್ - ಕೈಯಿಂದ, ತ್ವಾಂ - ನಿನ್ನನ್ನು, ಹಿರಣ್ಯಕಶಿಪುಃ - ಹಿರಣ್ಯಕಶಿಪುವೆಂಬ ರಾಕ್ಷಸನು, ಇಂದ್ರ....ತಾಂ - ದೇವೇಂದ್ರನ ಹಸ್ತವನ್ನು ಹೊಂದಿರುವ, ಕೀರ್ತಿಮಿವ - ಯಶೋಭೂತ ಳಾದ ಹೆಂಡತಿಯನ್ನೋಪಾದಿಯಲ್ಲಿ, ಪ್ರಾಪ್ತುಂ - ಹೊಂದುವದಕ್ಕೂ, ನಾರ್ಹತಿ - ಸಮರ್ಥನಲ್ಲ. ॥ ೨೭-೨೮ ॥ ಹೇ ಚಾರುಸ್ಮಿತೇ-ರಮ್ಯವಾದ ಕಿರುನಗೆಯುಳ್ಳವಳೇ, ಚಾರುದತಿ-ಶುಭದಂತಗಳುಳ್ಳವಳೆ, ಹೇ ಚಾರುನೇತ್ರೇ - ಸುಂದರಗಳಾದ ಕಣ್ಣುಗಳುಳ್ಳವಳೇ, ಹೇ ವಿಲಾಸಿನಿ - ಓ ವಿಲಾಸಕ್ಕೆ ಅರ್ಹಳೇ, ಹೇ ಭೀರು - ಓ ಭಯಶೀಲಳೇ, ಮೇ - ನನ್ನ, ಮನಃ - ಮನಸ್ಸನ್ನು, ಸುಪರ್ಣಃ - ಗರುಡನು, ಪನ್ನಗಂಯಥಾ - ಸರ್ಪವನ್ನೋಪಾದಿಯಲ್ಲಿ, ಹರಸಿ - ಅಪಹರಿಸುನೆ. ॥ ೨೯ ॥ ಅಹಂ - ನಾನು, ಕ್ಲಿಷ್ಟ....ನಾಂ - ಹಳೆಯದಾದ ಪಟ್ಟುಸೀರೆಯನ್ನುಟ್ಟಿರುವ, ಅನಲಂಕೃತಾಂ - ಅಲಂಕಾರವಿಲ್ಲದಿರುವ, ತನ್ವೀಂ - ಕೃಶಾಂಗಿಯಾದ, ತ್ವಾಂ - ನಿನ್ನನ್ನು, ದೃಷ್ಟ್ವಾ - ಕಂಡು, ಸ್ವೇಷು - ಸ್ವಕೀಯರಾದ, ದಾರೇಷು - ಹೆಂಡತಿಯರಲ್ಲಿ, ರತಿಂ - ಆಸಕ್ತಿಯನ್ನು, ನೋಪಲಭಾಮಿ - ಹೊಂದಲಾರೆನು. ॥ ೩೦ ॥ ಅಂತಃಪುರನಿವಾಸಿನ್ಯಃ - ಅಂತಃಪುರದಲ್ಲಿ ಇರುವ, ಸರ್ವ....ತಾಃ - ಸಮಸ್ತಗಳಾದ ಗುಣಗಳಿಂದ, ಅನ್ವಿತಾಃ - ಕೂಡಿರುವ, ಸ್ತ್ರಿಯಃ - ಸುಂದರಿಯರು, ಮಮ - ನನಗೆ, ಯಾವಂತ್ಯಃ - ಎಷ್ಟು ಮಂದಿಯೋ, ಹೇ ಜಾನಕಿ - ಓ ಸೀತೆಯೇ, ತಾಸಾಂಸರ್ವಾಸಾಂ - ಅವರೆಲ್ಲರ, ಐಶ್ವರ್ಯಂ - ಅಧಿ

ಆ ರಾಮನೆಂದಿಗೂ ನೋಡಲಾರನು. ಹಿರಣ್ಯಕಶಿಪುವು ದೇವೇಂದ್ರನ ಕೈಗೆ ಸಿಕ್ಕಿದ ಸ್ವರ್ಗ ರಾಜ್ಯವನ್ನು ಕಸೆದುಕೊಳ್ಳಲು ಪ್ರಯತ್ನಿಸುವಂತೆ ನನ್ನ ವಶವರ್ತಿನಿಯಾದ ನಿನ್ನನ್ನು ಆ ರಾಮನು ಎಂದಿಗೂ ಬಿಡಿಸಿಕೊಂಡು ಹೋಗಲಾರನು. ಸೀತೇ! ಆಹಾ!! ನಿನ್ನ ಸೌಂದರ್ಯ ವನ್ನೆಷ್ಟೆಂದು ಹೇಳಲಿ. ನಿನ್ನ ಮುಗುಳುನಗೆಯ ಚಂದವೋ, ನಿನ್ನ ದಂತಪಙ್ಕ್ತಿಗಳ ಅಂದವೋ, ನಿನ್ನ ಕಣ್ಣುಗಳ ಚಲುವೋ, ಇವು ಒಂದೊಂದೂ ಗರುಡನು ಹಾವನ್ನೆಳೆಯುವಂತೆ ನನ್ನ ಮನಸ್ಸನ್ನೆಳೆಯುತ್ತಿರುವುವು. ಮಲಿನವಾಗಿಯೂ, ಜೀರ್ಣವಾಗಿಯೂ ಇರುವ ಈ ಪಟ್ಟು ವಸ್ತ್ರವನ್ನುಟ್ಟು ಯಾವೊಂದು ಅಲಂಕಾರವೂ ಇಲ್ಲದೆ ಉಪವಾಸದಿಂದ ಕೃಶಳಾಗಿದ್ದರೂ ಪರಮ ಸುಂದರಿಯಾದ ನಿನ್ನನ್ನು ಕಂಡು ನನಗೆ ನನ್ನ ಪತ್ನಿಯರಲ್ಲಿನ ಪ್ರೇಮವು ತಪ್ಪಿ ಹೋಗಿರು ವುದು. ॥ ೨೭–೩೦ ॥ ಎಲೆ ಜಾನಕಿ! ನನ್ನಂತಃಪುರದಲ್ಲಿ ಸೌಂದರ್ಯಶಾಲಿನಿಯರಾದ ಎಷ್ಟೋಮಂದಿ ಉತ್ತಮ ಸ್ತ್ರೀಯರಿರುವರು. ನೀನು ಅವರೆಲ್ಲರಿಗೂ ಒಡತಿಯಾಗಿದ್ದು

ವಾಸ್ತವಿಕಾರ್ಥ:---ನನ್ನ ಇಷ್ಟದೇವತೆಯಾದ ನಿನ್ನ ದರ್ಶನಮಾತ್ರದಿಂದ ಆನಂದಿತನಾದ ನಾನು ಈ ನನ್ನ ಐಶ್ವರ್ಯದಲ್ಲಿಯೂ, ಹೆಂಡತಿಯರಲ್ಲಿಯೂ ವಿರಕ್ತನಾಗಿರುವೆನು.



—: ಸೀತಾ ರಾವಣ ಸಂವಾದ :—

" ಮಯಿ ಲಲ ಲಲನೇ ! ಯಥಾ ಸುಖಂ ತ್ವಂ ।
ತ್ವಯಿಚ ಸಮೇತ್ಯ ಲಲಂತು ಬಾಂಧವಾಸೇ ॥ "

ಪುಟ ೨೫೪

ನ್ಯೈಶ್ವರ್ಯಂ ಕುರುಜಾನಕಿ ! ||೩೧|| ಮಮ ಹ್ಯಸಿತಕೇಶಾಂತೇ ! ತ್ರೈಲೋಕ್ಯಪ್ರವರಾ ಸ್ತ್ರಿಯಃ । ತಾಸ್ತ್ವಾಂ ಪರಿಚರಿಷ್ಯಂತಿ ಶ್ರಿಯಮಪ್ಸರಸೋ ಯಥಾ || ೩೨ || ಯಾನಿ ವೈಶ್ರವಣೇ ಸುಭ್ರು ! ರತ್ನಾನಿಚ ಧನಾನಿಚ । ತಾನಿ ಲೋಕಾಂಶ್ಚ ಸುಶ್ರೋಣಿ ! ಮಾಂಚ ಭುಙ್ಕ್ಷ್ವ ಯಥಾಸುಖಂ||೩೩|| ¶ ನರಾಮಸ್ತಪಸಾ ದೇವಿ! ನ ಬಲೇನ ನ ವಿಕ್ರಮೈಃ। ನ ಧನೇನ ಮಯಾ ತುಲ್ಯಸ್ತೇಜಸಾ ಯಶಸಾಪಿ ವಾ ||೩೪|| ‡ ಪಿಬ ವಿಹರ ರಮಸ್ವ ಭುಙ್ಕ್ಷ್ವ ಭೋಗಾನ್ ಧನನಿಚಯಂ ಪ್ರದಿಶಾಮಿ ಮೇದಿನೀಂ ಚ । ಮಯಿ ಲಲ

ಪತ್ಯವನ್ನು, ಕುರು - ಸ್ವೀಕರಿಸು. || ೩೧ || ಹಿಯ....ತ್ - ಯಾವ ಕಾರಣದಿಂದ, ಅಸಿ....ತಾಃ - ಕಪ್ಪಾಗಿರುವ ಕೊನೆಕೂದಲುಗಳುಳ್ಳ, ತ್ರೈಲೋಕ್ಯಪ್ರವರಾಃ - ಲೋಕತ್ರಯಗಳಲ್ಲಿಯೂ ಉತ್ತಮರಾದ, ಮಮ - ನನ್ನ, ತಾಃಸ್ತ್ರಿಯಃ - ಆ ಸುಂದರಿಯರು, ತ್ವಾಂ - ನಿನ್ನನ್ನು, ಅಪ್ಸರಸಃ - ಅಪ್ಸರಸ್ತ್ರೀಯರು, ಶ್ರಿಯಂಯಥಾ - ಲಕ್ಷ್ಮೀದೇವಿಯನ್ನಂತೆ, ಪರಿಚರಿಷ್ಯಂತಿ - ಉಪಚರಿಸುತ್ತಾರೆ. ||೩೨|| ಹೇ ಸುಭ್ರು - ಎಲೈ ಒಳ್ಳೆಯ ಕಣ್ಣುಬ್ಬುಗಳುಳ್ಳವಳೇ, ವೈಶ್ರವಣೇ - ಕುಬೇರನಲ್ಲಿರುವ, ರತ್ನಾನಿ - ನವರತ್ನಗಳೂ, ಧನಾನಿಚ - ಧನಗಳೂ, ಯಾನಿ - ಯಾವುವೋ, ಹೇ ಸುಶ್ರೋಣೀ - ಸೊಗಸಾದ ಶ್ರೋಣೀಪ್ರದೇಶವುಳ್ಳವಳೇ, ತಾನಿ - ಆ ರತ್ನಾಭರಣಗಳನ್ನೂ, ಲೋಕಾಂಶ್ಚ - ಸ್ವರ್ಗಾದಿ ಲೋಕಗಳನ್ನೂ, ಮಾಂಚ - ನನ್ನನ್ನೂ, ಯಥಾಸುಖಂ-ಸುಖವಾಗಿ, ಭುಙ್ಕ್ಷ್ವ - ಅನುಭವಿಸು. || ೩೩ || ಹೇ ದೇವಿ - ಎಲೌ ದೇವಿಯೇ, ರಾಮಃ - ರಾಮನು, ತಪಸಾ - ತಪಸ್ಸಿನಿಂದಲೂ, ಮಯಾ - ನನ್ನೊಡನೆ, ತುಲ್ಯಃ - ಸಮಾನನು, ನ - ಅಲ್ಲ, ಬಲೇನ - ದೇಹಶಕ್ತಿಯಿಂದಲೂ, ನ - ಸದೃಶನಲ್ಲ, ವಿಕ್ರಮೈಃ - ಪರಾಕ್ರಮಗಳಿಂದಾಗಲಿ, ನ - ಸಮಾನನಲ್ಲ, ಧನೇನ - ಸಂಪತ್ತಿನಿಂದಾಗಲಿ, ನ - ಸರಿಯಾದವನಲ್ಲ, ತೇಜಸಾ - ಇತರರು ಮಾಡಿದ ಅಪಕಾರಗಳನ್ನು ಸೈರಿಸದಿರುವುದರಿಂದಾಗಲಿ, ಯಶಸಾಪಿವಾ - ಕೀರ್ತಿಯಿಂದಾಗಲಿ, ಮಯಾ - ನನ್ನೊಡನೆ, ತುಲ್ಯಃ - ಸಮಾನಸ್ಕಂದನು, ನ - ಅಲ್ಲ.||೩೪|| ಪಿಬ - ಪಾನಮಾಡು, ವಿಹರ - ವಿಹರಿಸು, (ಮ) - ಸಂಚರಿಸು, ರಮಸ್ವ - ಕ್ರೀಡಿಸು, ಭೋಗಾನ್ -

ಕೊಂಡು ಅವರೆಲ್ಲರನ್ನೂ ಆಳುವವಳಾಗು. ಎಲೌ ನೀಲಕುಂತಳೆಯೇ! ಆ ಸುಂದರ ಸ್ತ್ರೀಯರೆಲ್ಲರೂ ಸ್ವರ್ಗ ಮರ್ತ್ಯ ಪಾತಾಳ ಲೋಕಗಳಿಂದ ನನ್ನಿಂದ ಕರೆತರಲ್ಪಟ್ಟವರು, ರಂಭಾದ್ಯಪ್ಸರೆಯರು ಲಕ್ಷ್ಮೀದೇವಿಯನ್ನುಪಚರಿಸುವಂತೆ ಅವರೆಲ್ಲರೂ ನಿನ್ನನ್ನುಪಚರಿಸುವರು ; ನಾನು ಕುಬೇರನಲ್ಲಿದ್ದ ಉತ್ತಮೋತ್ತಮವಾದ ಎಲ್ಲ ರತ್ನಗಳನ್ನು ತಂದಿಟ್ಟಿರುವೆನು, ನೀನು ಅವುಗಳನ್ನು ಸುಖವಾಗಿ ಅನುಭವಿಸು. ಎಲೌ ಸುಶ್ರೋಣಿಯೆ! ನೀನು ನನ್ನನ್ನು ಸೇರಿದಮೇಲೆ ಚತುರ್ದಶ ಭುವನಗಳೂ ನಿನ್ನ ವಶವಾದುವೆಂದೇ ತಿಳಿ; ದೇವೀ! ಬಲದಿಂದಲೂ, ಪರಾಕ್ರಮದಿಂದಲೂ, ಧನದಿಂದಲೂ, ತೇಜಸ್ಸಿನಿಂದಲೂ, ಕೀರ್ತಿಯಿಂದಲೂ ಕೂಡಿರುವ ನನಗೆ ತಪಸ್ವಿಯಾದ ರಾಮನು ಸಮಾನನಾದಾನೆ? ಎಲೆ ಭಾಮಿನಿ! ನೀನು ನನ್ನನ್ನು ಸೇರಿ ಮನಬಂದಂತೆ ಪಾನದ್ರವ್ಯಗಳನ್ನು ಸೇವಿಸು; ಸುಖವಾಗಿ ವಿಹರಿಸು; ವಿನೋದವಾಗಿ ಕ್ರೀಡಿಸು;

¶ ವಾಸ್ತವಿಕಾರ್ಥ:—"ಷಡ್ಗುಣೈಶ್ವರ್ಯಸಂಪನ್ನನಾಗಿ ಕೇವಲ ತಪಶ್ಶೀಲನಾದ ಶ್ರೀರಾಮನ ಮುಂದೆ ನಾನೆಷ್ಟರವನು."

‡ ವಾಸ್ತವಿಕಾರ್ಥ:—"ಭೃತ್ಯನಾದ ನಾನಿರುವಾಗ ನೀನು ನಿನ್ನ ಮನಬಂದಂತೆ ವಿಹರಿಸಿ ಸಂತೋಷಪಡು."

ಲಲನೇ! ಯಥಾ ಸುಖಂ ತ್ವಂ ತ್ವಯಿಚ ಸಮೇತ್ಯ ಲಲಂತು ಬಾಂಧವಾಸ್ತೇ ॥ ೩೫ ॥

§ ಕುಸುಮಿತ ತರುಜಾಲ ಸಂತತಾನಿ
ಭ್ರಮರಯುತಾನಿ ಸಮುದ್ರತೀರಜಾನಿ ।
ಕನಕ ವಿಮಲ ಹಾರಭೂಷಿತಾಂಗೀ !
ವಿಹರ ಮಯಾಸಹ ಭೀರು! ಕಾನನಾನಿ ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ವಿಂಶಸ್ಸರ್ಗಃ

ವಿಲಾಸಗಳನ್ನು, ಭುಙ್ಕ್ಷ್ವ - ಅನುಭವಿಸು, ಧನನಿಚಯಂ-ದ್ರವ್ಯಸಮೂಹವನ್ನು, ಮೇದಿನೀಂಚ - ಭೂಮಿಯನ್ನೂ ಸಹ, ಪ್ರದಿಶಾಮಿ - ಕೊಡುತ್ತೇನೆ, ಹೇ ಲಲನೇ - ಓ ಸುಂದರಿಯೇ, ತ್ವಂ - ನೀನು, ಯಥಾಸುಖಂ - ಸುಖವಾಗಿ, ಮಯಿ - ನನ್ನಲ್ಲಿ, ಲಲ - ಪ್ರೀತಿಸು, ತೇಬಾಂಧವಾಶ್ಚ - ನಿನ್ನ ನೆಂಟರೂ ಕೂಡ, ತ್ವಯಿ - ನಿನ್ನಲ್ಲಿ, ಸಮೇತ್ಯ - ಬಂದು, ಲಲಂತು - ಸುಖವಾಗಿರಲಿ. ॥ ೩೫ ॥ ಹೇ ಭೀರು - ಎಲೌ ಭಯಶೀಲಳೇ, 'ತ್ವಂ - ನೀನು,' ಕನ....ಗೀ - ಸುವರ್ಣಮಯವಾದ ನಿರ್ದೋಷವಾದ ಕಂಠಸರಗಳಿಂದ ಅಲಂಕರಿಸಲ್ಪಟ್ಟ ಶರೀರವುಳ್ಳವಳಾಗಿ, ಕುಸು....ನಿ - ಪುಷ್ಪಿಸಿರುವ ವೃಕ್ಷಗಳ ಗುಂಪಿನಿಂದ ತುಂಬಿರುವ, ಭ್ರಮ....ನಿ - ದುಂಬಿಗಳಿಂದ ಕೂಡಿರುವ, ಸಮು....ನಿ - ಕಡಲಿನ ತೀರದಲ್ಲಿ ಹುಟ್ಟಿರುವ, ಕಾನನಾನಿ - ವನಗಳಲ್ಲಿ, ಮಯಾಸಹ - ನನ್ನೊಡನೆ, ವಿಹರ - ಕ್ರೀಡಿಸು. ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ವಿಂಶಸ್ಸರ್ಗಃ.

ನನಗಿರುವ ಸಮಸ್ತ ಐಶ್ವರ್ಯವನ್ನೂ, ಸಮಸ್ತ ಭೂಪ್ರದೇಶಗಳನ್ನೂ ನಿನಗೆ ಒಪ್ಪಿಸುತ್ತೇನೆ; ನೀನು ನನ್ನಲ್ಲಿ ಪ್ರೀತಿಯನ್ನಿಡು, ನಿನ್ನೊಡನೆ ನಿನ್ನ ಬಂಧುಗಳೂ ಸೇರಿ ಸಂತೋಷಿಸಲಿ. ಎಲೆ ಭೀರು! ಪುಷ್ಪಿಸಿರುವ ವೃಕ್ಷಸಮೂಹಗಳಿಂದ ಕೂಡಿ ನಿರಂತರವೂ ಆರಡಿಗಳು ಹೂಗಳನ್ನು ಮುತ್ತಿ ಝೇಂಕರಿಸುತ್ತಿರುವ ಸಮುದ್ರದ ತೀರದಲ್ಲಿರುವ ಈ ತೋಟಗಳಲ್ಲಿ ಸ್ವರ್ಣಹಾರದಿಂದ ಶೋಭಿತಳಾಗಿ ನನ್ನೊಡಗೂಡಿ ಯಥೇಚ್ಛವಾಗಿ ವಿಹರಿಸು. ॥೩೧–೩೬॥

ಇಂತಿದು ರಾವಣಕೃತ ಸೀತಾಪ್ರಲೋಭನ ವೃತ್ತಾಂತವೆಂಬ
ಇಪ್ಪತ್ತನೆಯ ಸರ್ಗವು ಸಮಾಪ್ತವಾದುದು.

§ ವಾಸ್ತವಿಕಾರ್ಥ:—"ಎಲೌದೇವಿಯೇ! ನಾನು ನಿನಗಾಗಿಯೇ ಬೆಳಯಿಸಿರುವ ಈ ಉದ್ಯಾನವನಗಳಲ್ಲಿ ಯಥೇಚ್ಛವಾಗಿ ವಿಹರಿಸು."

ಸುಂದರಕಾಂಡೇ ಏಕವಿಂಶಸ್ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ಸೀತಾ ರೌದ್ರಸ್ಯ ರಕ್ಷಸಃ । ಆರ್ತಾ ದೀನಸ್ವರಾ ದೀನಂ ಪ್ರತ್ಯುವಾಚ ¶ಶನೈರ್ವಚಃ ॥೧॥ ದುಃಖಾರ್ತಾ ರುದತೀ ಸೀತಾ ವೇಪಮಾನಾ ತಪಸ್ವಿನೀ । ಚಿಂತಯಂತೀ ವರಾರೋಹಾ ಪತಿಮೇವ ಪತಿವ್ರತಾ । $ ತೃಣಮಂತರತಃ ※ಕೃತ್ವಾ ಪ್ರತ್ಯುವಾಚ ಶುಚಿಸ್ಮಿತಾ ॥೨॥ ನಿವರ್ತಯ ಮನೋ ಮತ್ತಸ್ಸ್ವಜನೇ

ರೌದ್ರಸ್ಯ - ಕ್ರೂರನಾದ, ತಸ್ಯರಕ್ಷಸಃ - ಆ ರಾಕ್ಷಸನ, ತದ್ವಚನಂ - ಆ ವಾಕ್ಯವನ್ನು, ಶ್ರುತ್ವಾ - ಕೇಳಿ, ಆರ್ತಾ - ದುಃಖಿತಳಾದ, ಸೀತಾ - ಸೀತಾದೇವಿಯು, ದೀನಸ್ವರಾ - ಗದ್ಗದ ಧ್ವನಿಯುಳ್ಳವಳಾಗಿ, ವಚಃ - ಮಾತನ್ನು, ಶನೈಃ - ಮೆಲ್ಲಮೆಲ್ಲಗೆ, ಪ್ರತ್ಯುವಾಚ - ಪ್ರತ್ಯುತ್ತರ ಕೊಟ್ಟಳು. ॥೧॥ ದುಃಖಾರ್ತಾ - ವ್ಯಸನದಿಂದ ಪೀಡಿತಳಾದ, ರುದತೀ - ಅಳುತ್ತಿರುವ, ವೇಪಮಾನಾ - ನಡುಗುತ್ತಿರುವ, ತಪಸ್ವಿನೀ - ಅನಶನವ್ರತದಿಂದ ಕೃಶಳಾದ, ವರಾರೋಹಾ - ಉತ್ತಮ ಸ್ತ್ರೀಯಾದ, ಪತಿವ್ರತಾ - ಪ್ರತಿವ್ರತೆಯಾದ, ಶುಚಿಸ್ಮಿತಾ - ಮುಗುಳುನಗೆಯುಳ್ಳ, ಸೀತಾ - ಸೀತಾದೇವಿಯು, ಪತಿಮೇವ - ಪತಿಯನ್ನೇ, ಚಿಂತಯಂತೀ - ಧ್ಯಾನಮಾಡುತ್ತಿರುವಳಾಗಿ, ತೃಣಂ - ಹುಲ್ಲನ್ನು, ಅಂತರತಃಕೃತ್ವಾ - ಮಧ್ಯವರ್ತಿಯನ್ನಾಗಿ ಮಾಡಿ, ಪ್ರತ್ಯುವಾಚ - ಬದುಲು ಹೇಳಿದಳು. ॥ ೨ ॥ ಮತ್ತಃ - ನನ್ನಿಂದ, ಮನಃ - ಚಿತ್ತವನ್ನು, ನಿವರ್ತಯ - ಹಿಂತಿರುಗಿಸು, ಸ್ವಜನೇ - ಸ್ವಕಳತ್ರದಲ್ಲಿ,

---

ಬಹು ಭಯಂಕರನಾದ ಆ ರಾವಣಾಸುರನ ಮಾತುಗಳನ್ನು ಕೇಳಿ ಸೀತಾದೇವಿಯು ಪರಮ ದುಃಖಿತೆಯಾಗಿ ಬಹಳ ಸಂಕಟಪಟ್ಟು, ದೈನ್ಯದಿಂದ ಮೆಲ್ಲನೆ ಪ್ರತ್ಯುತ್ತರವನ್ನು ಹೇಳತೊಡಗಿದಳು. ಆಗ ಆಕೆಗೆ ದುಃಖವು ಉಕ್ಕಿ ಬರುತ್ತಿದ್ದಿತು; ಕಣ್ಣೀರಿಡುತ್ತ ರೋದಿಸುತ್ತಿದ್ದಳು. ಮಹಾ ಪತಿವ್ರತೆಯಾದ ಆಕೆಯು ತನ್ನ ಪತಿದೇವನಾದ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದಳು. ಇಂತಹ ಶೋಚನೀಯಾವಸ್ಥೆಯಲ್ಲಿದ್ದ ಆಕೆಯು ಪರಮ ನೀಚನಾದ ಆ ರಾವಣನೊಡನೆ ಮುಖಕೊಟ್ಟು ಮಾತನಾಡುವುದು ತನ್ನ ಧರ್ಮಕ್ಕೆ ವಿರುದ್ಧವೆಂದೆಣಿಸಿ ಒಂದು ಹುಲ್ಲುಕಡ್ಡಿಯನ್ನು ನಡುವೆ ಇರಿಸಿ ಅದರೊಡನೆ ಮಾತನಾಡುವ ನೆವದಿಂದ ಹೀಗೆಂದಳು. ॥ ೧-೨ ॥ ಹೀಗೆ ಮಾತನಾಡುವಾಗಲೂ ಆ ದೇವಿಯು ಮುಖವಿಕಾರಾದಿಗಳನ್ನು ಮಾಡದೆ

¶ "ತತಶ್ಶನೈಃ" ತಿ. ಪಾ.

$ ಇಲ್ಲಿ "ತೃಣಮಂತರತಃಕೃತ್ವಾ" ಎಂಬುವಕ್ಕೆ ತನಿಶ್ಲೋಕೀಕಾರರು ಅನೇಕ ಸ್ವಾರಸಿಕಾರ್ಥಗಳನ್ನು ಬರೆದಿರುವರು. ಅವುಗಳಲ್ಲಿ ಅತಿಮುಖ್ಯವಾದ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿರುವೆವು.

"ಪತಿವ್ರತೆಯಾದ ಸ್ತ್ರೀಯು ಪರಪುರುಷನನ್ನು ನೋಡಿ ಅವನೊಡನೆ ಮಾತನಾಡಕೂಡದು" ಎಂಬ ಧರ್ಮವನ್ನರಿತು ಹಾಗೆಯೇ ಆಚರಿಸಲೋಸುಗವೋ, "ಎಲಾ ರಾವಣ! ಧರ್ಮಬಾಹಿರನಾದ ನೀನೂ ಈ ಹುಲ್ಲುಕಡ್ಡಿಯೂ ಒಂದೇ. ಇಂತಹ ನಿನ್ನೊಡನೆ ನನಗೇನು ಮಾತು?" ಎಂಬ ಭಾವವನ್ನು ನಿರ್ದೇಶಿಸಲೋಸುಗವೋ, "ಅಕಟ! ಕೇವಲ ಕಾಮಾಂಧ

※ "ಯುಕ್ತಸ್ತ್ವಂ" ಕ. ತಿ. ಪಾ.

$ಕ್ರಿಯತಾಂ ಮನಃ । ನ ಮಾಂ ಪ್ರಾರ್ಥಯಿತುಂ ಯುಕ್ತಂ ಸುಸಿದ್ಧಿಮಿವ ಪಾಪಕೃತ್ ॥೩॥ ಅಕಾರ್ಯಂ ನ ಮಯಾ ಕಾರ್ಯಮೇಕಪತ್ನ್ಯಾ ವಿಗರ್ಹಿತಂ । ಕುಲಂ ಸಂಪ್ರಾಪ್ತಯಾ ಪುಣ್ಯಂ ಕುಲೇ ಮಹತಿ ಜಾತಯಾ ॥ ೪ ॥ ಏವಮುಕ್ತ್ವಾತು ವೈದೇಹೀ ರಾವಣಂ ತಂ ಯಶಸ್ವಿನೀ । § ರಾಕ್ಷಸಂ ಪೃಷ್ಠತಃ ಕೃತ್ವಾ ಭೂಯೋ ವಚನಮಬ್ರ

ಮನಃ - ಮನವು, ಕ್ರಿಯತಾಂ - ಮಾಡಲ್ಪಡಲಿ, ತ್ವಂ - ನೀನು, ಪಾಪಕೃತ್ - ಪಾಪಿಯು, ಸುಸಿದ್ಧಿಮಿವ-ತಪಸ್ಸಿದ್ಧಿಯನ್ನಂತೆ, ಮಾಂ - ಎನ್ನನ್ನು, ಪ್ರಾರ್ಥಯಿತುಂ - ಬೇಡುವದು, ನಯುಕ್ತಂ - ಯುಕ್ತವಲ್ಲವು. ॥೩॥ ಮಹತೀಕುಲೇ - ಒಳ್ಳೆಯ ವಂಶದಲ್ಲಿ, ಜಾತಯಾ - ಹುಟ್ಟಿರುವ, ಪುಣ್ಯಂ - ಪುಣ್ಯಕರವಾದ, ಕುಲಂ - ವಂಶವನ್ನು, ಸಂಪ್ರಾಪ್ತಯಾ - ಸೇರಿರುವ, ಏಕಪತ್ನ್ಯಾಂ - ಒಬ್ಬನಾದ ರಾಮನಿಗೇನೇ ಭಾರ್ಯೆಯಾದ, ಮಯಾ - ನನ್ನಿಂದ, ವಿಗರ್ಹಿತಂ - ನಿಂದಿತವಾದ, ಅಕಾರ್ಯಂ - ಕೆಟ್ಟಕೆಲಸವು, ನಕಾರ್ಯಂ - ಮಾಡತಕ್ಕುದಲ್ಲವು. ॥೪॥ ಯಶಸ್ವಿನೀ - ಕೀರ್ತಿವಂತಳಾದ, ವೈದೇಹೀ-ಸೀತಾದೇವಿಯು, ಏವಮುಕ್ತ್ವಾ - ಹೀಗೆ ಹೇಳಿ, ರಾಕ್ಷಸಂ - ರಾಕ್ಷಸನಾದ, ತಂರಾವಣಂ - ಆ ರಾವಣನನ್ನು, ಪೃಷ್ಠತಃಕೃತ್ವಾ - ಹಿಂದೆಮಾಡಿ, ಭೂಯಃ - ಮತ್ತೂ, ವಚನಂ - ಮಾತನ್ನು,

ಸಹಜವಾದ ಮುಗುಳುನಗೆಯೊಡಗೂಡಿದವಳಾಗಿಯೇ "ಎಲೆ ರಾವಣ! ನೀನು ನನ್ನಲ್ಲಿಟ್ಟಿರುವ ಈ ಅನುರಾಗವನ್ನು ತೊರೆದು ಬಿಡು. ಅದೇ ಅನುರಾಗವನ್ನು ನಿನ್ನ ಪತ್ನಿಯರಲ್ಲಿ ತೋರಿಸು. ಇದರಿಂದ ನಿನಗೆ ಶ್ರೇಯಸ್ಸುಂಟಾಗುವುದು. ಪಾಪಿಷ್ಠನಾದವನು ಮುಕ್ತಿಯನ್ನು ಬಯಸುವಂತೆ ನೀನು ನನ್ನನ್ನು ಬಯಸುವುದು ಯುಕ್ತವಲ್ಲವು. ನಾನು ಸತ್ಕುಲ ಪ್ರಸೂತೆಯು; ಪರಮ ಪವಿತ್ರವಾದ ಮತ್ತೊಂದು ಕುಲಕ್ಕೆ ಸೇರಿರುವೆನು; ಏಕಪತ್ನೀ ವ್ರತವನ್ನು ತಪ್ಪದೆ ಆಚರಿಸುತ್ತಿರುವೆನು; ಇಂತಹ ನಾನು ಲೋಕನಿಂದ್ಯವಾದ ಇಂತಹ ಕಾರ್ಯಕ್ಕೆ ಒಡಂಬಡುವೆನೇ? ಎಂದಿಗೂ ಇಲ್ಲ" ಎಂದು ಹೇಳಿದಳು. ವಿದೇಹ ರಾಜಕುವರಿಯಾದ ಆ ಸೀತಾದೇವಿಯು ಈ ಮಾತುಗಳನ್ನಾಡಿ ಪುನಃ ಆ ರಾವಣನನ್ನು ತಿರ

ನಾದ ಈ ದುಷ್ಟನು ನಾನು ಹೇಳುವಮಾತುಗಳೆಲ್ಲವನ್ನೂ ಈ ಹುಲ್ಲುಕಡ್ಡಿಗೆ ಸಮಾನವಾಗೆಣಿಸಿ ಕಡೆಗಾಣುವನಲ್ಲವೆ" ಎಂಬ ಅಭಿಪ್ರಾಯವನ್ನು ಸೂಚಿಸುವುದಕ್ಕಾಗಿಯೋ, "ಸಶೂರಸ್ಸಚ ವಿಕ್ರಾಂತೋ ಯಾತ್ವಂ ದೇವಿ ನಿರೀಕ್ಷಸೇ" ಎಂಬಂತೆ ತಾನು ಆ ರಾವಣನನ್ನು ಕಟಾಕ್ಷಿಸಿದುದೇ ಆದರೆ ಅವನು ಮಹಾಶೂರನೂ, ಪರಾಕ್ರಮಿಯೂ ಆಗುವನಾದುದರಿಂದ, ದುಷ್ಟನಾದ ಅವನು ಹಾಗಾಗಕೂಡದೆಂಬ ನಿರ್ಧಾರದಿಂದಲೋ, "ನನ್ನ ಸ್ವಾಮಿಯಾದ ಶ್ರೀರಾಮನು ಹುಲ್ಲುಕಡ್ಡಿಯಿಂದಲೇ ಕಾಕಾಸುರನನ್ನು ನಿಗ್ರಹಿಸಿದಂತೆ, ನಿನ್ನನ್ನು ಇದೇ ಹುಲ್ಲುಕಡ್ಡಿಯಿಂದಲೇ ತಿರಸ್ಕರಿಸುತ್ತಾನೆ" ಎಂಬ ಭಾವಪ್ರಕಟನೆಗಾಗಿಯೋ, "ಪಾಪಿಚೇತನನಾದ ಇವನನ್ನು ಸಂಬೋಧಿಸಿ ಮಾತನಾಡುವುದು ಕೇವಲ ಅನುಚಿತವಾದುದರಿಂದ ಚೇತನವಿಲ್ಲದ ಈ ಹುಲ್ಲುಕಡ್ಡಿಗೇ ಚೇತನವಿತ್ತು ಇದನ್ನು ಸಂಬೋಧಿಸಿಯೇ ಮಾತನಾಡುವೆನು" ಎಂಬುದನ್ನು ನಿರ್ದೇಶಿಸಲೋಸುಗವೋ, "ಸಮೀಪಿಸಿರುವ ಇವನಿಗೂ ನನಗೂ ವ್ಯವಧಾನವಿರಬೇಕೆಂಬ" ಭಾವದಿಂದಲೋ, "ಎಲಾ! ರಾವಣ!! ನೀನು ಪಶುತುಲ್ಯನು; ಇಂತಹ ನಿನಗೆ ಈ ಹುಲ್ಲುಕಡ್ಡಿಯೇ ಗತಿ, ನನ್ನ ಪತಿಯಾದ ರಘುರಾಮರೊಡನೆ ನೀನು ಯುದ್ಧಕ್ಕೆ ನಿಂತಾಗ ನೀನು ಈ ಹುಲ್ಲುಕಡ್ಡಿಯನ್ನು ಕಚ್ಚಿಕೊಂಡು ಓಡುವೆ" ಎಂಬ ಅರ್ಥವನ್ನು ರಾವಣನಿಗೆ ತಿಳಿಸುವುದಕ್ಕೋಸುಗವೋ, "ರಾವಣ! ಈ ಒಂದು ಹುಲ್ಲುಕಡ್ಡಿಯನ್ನು ಕಿತ್ತು ನನ್ನ ಸ್ವಾಮಿಯು ನಿನ್ನ ಕಡೆಗೆಸೆದರೆ, ಶ್ರೀರಾಮನೊಡನೆ ವಿರೋಧ ಕಟ್ಟಿಕೊಂಡಿರುವ ನೀನು ಬಂಧುಮಿತ್ರರೊಡಗೂಡಿ ನಾಶವಾಗಿ ಹೋಗುತ್ತೀಯೆ" ಎಂಬುದನ್ನು ಆ ರಾವಣನಿಗೆ ತಿಳಿಸುವುದಕ್ಕೋಸುಗವೋ ಸೀತಾದೇವಿಯು ತನಗೂ ರಾವಣನಿಗೂ ಮಧ್ಯೆ ಹುಲ್ಲುಕಡ್ಡಿಯನ್ನಿಟ್ಟು ಮಾತನಾಡುವಳು.

$ "ಪ್ರೀಯತಾಂ ಮನಃ" ತಿ. ಪಾ. § "ರಾವಣಂ" ಕ. ಪಾ.

ವೀತ್ ॥ ೫ ॥ ನಾಹ ಮೌಪಯಿಕೀ ಭಾರ್ಯಾ ಪರಭಾರ್ಯಾ ಸತೀ ತವ । ಸಾಧು ಧರ್ಮಮವೇಕ್ಷಸ್ವ ಸಾಧು ಸಾಧುವ್ರತಂ ಚರ ॥೬॥ ಯಥಾ ತವ ತಥಾನ್ಯೇಷಾಂ ದಾರಾ ರಕ್ಷ್ಯಾ ನಿಶಾಚರ! । ಆತ್ಮಾನ ಮುಪಮಾಂ ಕೃತ್ವಾ ಸ್ವೇಷು ದಾರೇಷು ರಮ್ಯತಾಂ ॥ ೭ ॥ ಅತುಷ್ಟಂ ಸ್ವೇಷು ದಾರೇಷು ಚಪಲಂ ಚಲಿತೇಂದ್ರಿಯಂ । ನಯಂತಿ ನಿಕೃತ ಪ್ರಜ್ಞಂ ಪರದಾರಾಃ ಪರಾಭವಂ ॥೮॥¶ ಇಹ ಸಂತೋ ನವಾಸಂತಿ ಸತೋ ವಾ ನಾನು

ಅಬ್ರವೀತ್ - ಹೇಳಿದಳು. ॥೫॥ ಪರಭಾರ್ಯಾ - ಇತರನಿಗೆ ಹೆಂಡತಿಯಾದ, ಅಹಂ - ನಾನು, ತವ, ನಿನಗೆ, ಔಪಯಿಕೀ - ಯುಕ್ತಳಾದ, ಭಾರ್ಯಾನ - ಹೆಂಡತಿಯಲ್ಲ, ಸಾಧು - ಸತ್ಪುರುಷರ ಧರ್ಮಂ - ಧರ್ಮವನ್ನು, ಅವೇಕ್ಷಸ್ವ - ನೋಡು, ಸಾಧುವ್ರತಂ - ಸತ್ಪುರುಷರ ನಿಯಮವನ್ನು, ಸಾಧು - ಚನ್ನಾಗಿ, ಚರ - ಆಚರಿಸು. ॥ ೬ ॥ ಹೇ ನಿಶಾಚರ - ಎಲೈ ರಾಕ್ಷಸನೇ, ಯಥಾ - ಯಾವ ಪ್ರಕಾರವಾಗಿ, ತವ - ನಿನ್ನ, ದಾರಾಃ - ಹೆಂಡತಿಯರು, ರಕ್ಷ್ಯಾಃ - ರಕ್ಷಣೀಯರೋ, ಆತ್ಮಾನಂ - ತನ್ನನ್ನು, ಉಪಮಾಂ - ಸಾಮ್ಯವಾಗಿ, ಕೃತ್ವಾ - ಮಾಡಿ, ಸ್ವೇಷು - ಸ್ವಕೀಯರಾದ, ದಾರೇಷು - ಹೆಂಡತಿಯರಲ್ಲಿ, ರಮ್ಯತಾಂ - ರಮಿಸು. ॥ ೭ ॥ ಸ್ವೇಷುದಾರೇಷು - ತನ್ನ ಹೆಂಡತಿಯರಲ್ಲಿ, ಅತುಷ್ಟಂ-ಅತೃಪ್ತನಾದ, ಚಪಲಂ-ವಿಕ್ಷಿಪ್ತಚಿತ್ತನಾದುದರಿಂದಲೇ, ಪರದಾರಾಃ-ಪರಸತಿಗಳು, ನಿಕೃತ ಪ್ರಜ್ಞಂ - ಶಾಠ್ಯದಲ್ಲಿ ಜ್ಞಾನವುಳ್ಳ ಪುರುಷನನ್ನು, ಪರಾಭವಂ-ಐಶ್ವರ್ಯದಿಂದ ಕ್ಷಯರೂಪ ತಿರಸ್ಕಾರ ವನ್ನು, ನಯಂತಿ - ಹೊಂದಿಸುತ್ತಾರೆ. ॥ ೮ ॥ ಇಹ - ವಿಸ್ತಾರವಾದಾಗ್ಯೂ ದುರ್ಜನಸಂಕುಲವಾದ ಈ ಸ್ಥಳದಲ್ಲಿ, ಸಂತಃ - ಅನರ್ಥದಿಂದ ನಿನ್ನನ್ನು ಹಿಂತಿರುಗಿಸುವ ಸತ್ಪುರುಷರು, ನಸಂತಿವಾ -

---

ಸ್ಕರಿಸಿ ಅವನನ್ನು ಕುರಿತು ಹೀಗೆಂದಳು. "ಎಲವೊ ರಾಕ್ಷಸನೇ! ನಾನು ಪರಸತಿಯು; ಎಂದಿಗೇ ಆಗಲಿ ನಿನಗೆ ಭಾರ್ಯೆಯಾಗಲು ತಕ್ಕವಳಲ್ಲ. ನೀನು ಧರ್ಮವನ್ನು ಚೆನ್ನಾಗಿ ಕಾಪಾಡಿಕೊ. ಸತ್ಪುರುಷರ ಮಾರ್ಗವನ್ನನುಸರಿಸಿ ಅವರು ನಡೆದಂತೆಯೇ ನಡೆಯುವವ ನಾಗು. ನಿನ್ನ ಹೆಂಡತಿಯರಂತೆಯೇ ಇತರರ ಹೆಂಡತಿಯರೂ ಸಂರಕ್ಷಣೀಯರೆಂಬುದನ್ನು ತಿಳಿ. ಈ ನನ್ನ ದೃಷ್ಟಾಂತವನ್ನರಿತು ನಿನ್ನ ಪತ್ನಿಯರಲ್ಲಿ ನೀನು ರಮಿಸು. ॥ ೩-೭ ॥ ನಿಜ ಭಾರ್ಯೆಯರಲ್ಲಿ ತೃಪ್ತನಾಗದೆ, ಚಪಲನಾಗಿ, ಇಂದ್ರಿಯಗಳನ್ನು ಜಯಿಸದೆ ಧೂರ್ತನಾಗಿ ನಡೆಯುವವನಿಗೆ ಎಂದಿಗೂ ಕೇಡು ತಪ್ಪುವುದಿಲ್ಲ. ಪರಸತಿಯಲ್ಲಿ ವರ್ತಿಸಿದ ಪಾಪವು

¶ ಈ ಶ್ಲೋಕದ ವಿಶೇಷಾರ್ಥ:—ವಿಶಾಲವಾದ ಈ ಲಂಕಾನಗರವು ಕೇವಲ ದುರ್ಜನಭೂಯಿಷ್ಠವಾಗಿರುವುದಾ ದರೂ ಇಲ್ಲಿ ನಿನಗೆ ಹಿತವನ್ನು ಹೇಳಿ ಈ ದುರ್ವರ್ತನೆಯಿಂದ ನಿನ್ನನ್ನು ಹಿಂತಿರುಗಿಸುವ ಸತ್ಪುರುಷರಿಲ್ಲದೆ ಇಲ್ಲ. ಇಲ್ಲವೆಂದು ಹೇಗೆ ಹೇಳಲಾದೀತು? ಇದ್ದರೂ ಧೂರ್ತನಾದ ನೀನು, "ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ । ಉಪದೇ ಕ್ಷ್ಯಂತಿ ತೇ ಜ್ಞಾನಂ ಜ್ಞಾನಿನಸ್ತತ್ವದರ್ಶಿನಃ" ಎಂಬಂತೆ ಅವರನ್ನು ಗೌರವಿಸಿ ನಮಸ್ಕರಿಸಿ ಅವರನ್ನು ಹಿತೋಪದೇಶಕ್ಕಾಗಿ ವಿನಯದಿಂದ ಪ್ರಾರ್ಥಿಸುವುದಿಲ್ಲ. ಹೀಗಿರುವಲ್ಲಿ ಯಾರುತಾನೇ ನಿನಗೆ ಹಿತವನ್ನು ಕೋರಿಯಾರು! ಹೇಳಿಯಾರು? ಜ್ಞಾನಿ ಗಳಾದವರು ತಮ್ಮಲ್ಲಿಗೆ ಬಂದು ನಮಸ್ಕರಿಸಿ ವಿನಯದಿಂದ ಪ್ರಶ್ನೆ ಮಾಡಿದವರಿಗಲ್ಲದೆ ಇತರರಿಗೆ ಹಿತೋಪದೇಶವನ್ನೆಂದಿಗೂ ಮಾಡರು. ನೀನೂ ಅವರ ಪಾದಗಳಿಗೊಮ್ಮೆಯಾದರೂ ಮಣಿದವನಲ್ಲ. "ಇದನ್ನು ನೀನು ತಿಳಿದುದೆಂತು?" ಎಂದರೆ, ನಿನ್ನ ಬುದ್ಧಿವೈಪರೀತ್ಯವೇ ನೀನು ಶಿಷ್ಟರನ್ನನುವರ್ತಿಸುವವನಲ್ಲವೆಂಬುದನ್ನು ಸೂಚಿಸುವುದು. "ಇತರರ ಬುದ್ಧಿಯು ಅಪ್ರತ್ಯಕ್ಷ

ವರ್ತಸೇ । ‡ತಥಾಹಿ ವಿಪರೀತಾ ತೇ ಬುದ್ಧಿರಾಚಾರವರ್ಜಿತಾ ॥೯॥ ವಚೋ ಮಿಥ್ಯಾಪ್ರಣೀತಾತ್ಮಾ ಪಥ್ಯಮುಕ್ತಂ ವಿಚಕ್ಷಣೈಃ । ರಾಕ್ಷಸಾನಾಮಭಾವಾಯ ತ್ವಂ ವಾ ನ ಪ್ರತಿಪದ್ಯಸೇ ॥೧೦॥ ¶ ಅಕೃತಾತ್ಮಾನಮಾಸಾದ್ಯ ರಾಜಾನಮನಯೇ ರತಂ । ಸಮೃ

ಇರಲಿಲ್ಲವೆ, ಸತೋವಾ - ಇದ್ದರೂ ಕೂಡಾ, ನಾನುವರ್ತಸೇ - ನೀನೇ ಅನುಸರಿಸುವದಿಲ್ಲವೋ, ತಥಾಹಿ - ಹಾಗೆಯೇ ಸರಿ, ವಿಪರೀತಾ - ವಿರುದ್ಧಾಚಾರವುಳ್ಳ, ತೇ - ನಿನ್ನ, ಬುದ್ಧಿಃ - ಬುದ್ಧಿಯು, ಆಚಾರವರ್ಜಿತಾ - ಸದಾಚಾರದಿಂದ ಬಿಡಲ್ಪಟ್ಟಿದೆ. ॥೯॥ ಮಿಥ್ಯಾ....ತ್ಮಾ - ಸುಳ್ಳುಸ್ನೇಹದಿಂದೊಡಗೂಡಿದ ಮನವುಳ್ಳ, ತ್ವಂ - ನೀನು, ವಿಚಕ್ಷಣೈಃ - ಜ್ಞಾನಿಗಳಿಂದ, ಉಕ್ತಂ - ಹೇಳಲ್ಪಟ್ಟ, ಪಥ್ಯಂ-ಹಿತವಚನವನ್ನು, ರಾಕ್ಷಸಾನಾಂ - ರಾಕ್ಷಸರ, ಅಭಾವಾಯ - ನಾಶಕ್ಕೋಸುಗ, ನಪ್ರತಿಪದ್ಯಸೇ - ಅಂಗೀಕರಿಸುವದಿಲ್ಲ. ॥೧೦॥ ಅಕೃತಾತ್ಮಾನಂ - ಸತ್ಪುರುಷರ ಉಪದೇಶವನ್ನು ಗ್ರಹಿಸದಿರುವ ಬುದ್ಧಿಯುಳ್ಳ, ಅನಯೇರಿತಂ - ದುರ್ನಡತೆಯಿಂದ ಕೂಡಿರುವ, ರಾಜಾನಂ - ಅರಸನನ್ನು, ಆಸಾದ್ಯ - ಹೊಂದಿ, ಸಮೃದ್ಧಾನಿ - ಐಶ್ವರ್ಯದಿಂದ ಕೂಡಿರುವ, ರಾಷ್ಟ್ರಾಣಿ - ದೇಶಗಳೂ, ನಗರಾಣಿಚ -

ಸಾಮಾನ್ಯವಾದುದೆಂದೆಣಿಸಿದೆಯಾ? ಅದು ಆಯುರಾರೋಗ್ಯೈಶ್ವರ್ಯಾದಿಗಳನ್ನು ನಾಶಮಾಡುತ್ತದೆ. ಅಂತಹ ಪಾಪಕಾರ್ಯವನ್ನು ಮಾಡಿದವನನ್ನು ಲೋಕವೆಲ್ಲವೂ ತಿರಸ್ಕರಿಸುತ್ತದೆ. ಎಲೈ! ನಿನ್ನ ಪಟ್ಟಣದಲ್ಲಿ ಹಿರಿಯರಾರೂ ಇಲ್ಲವೆ? ಅವರನ್ನನುಸರಿಸಿ ನೀನು ನಡೆಯುವುದಿಲ್ಲವೆ? ನೀನು ಬುದ್ಧಿಹೀನನಾಗಿ ಧರ್ಮಗಳನ್ನು ದೂರಮಾಡಿ ಸದಾಚಾರಸಂಪತ್ತಿಯನ್ನು ತೊರೆದಿದ್ದೀಯೆ. ಈ ಕಾರಣದಿಂದ ನಿನ್ನ ದೇಶದಲ್ಲಿ ಹಿರಿಯರಿದ್ದರೂ ಅವರು ನಿನಗೆ ಹಿತೋಪದೇಶವನ್ನು ಮಾಡದಿದ್ದಾರೆಂದು ತೋರುತ್ತದೆ. ಅಲ್ಲದೆ, ನೀನು ವಿನಯ ವಿಧೇಯತೆಗಳಿಂದ ಹಿರಿಯರು ಹೇಳಿದ ಹಿತಬೋಧನೆಗಳನ್ನು ಕೇಳುವುದೂ ಇಲ್ಲವೆಂದು ತೋರುತ್ತದೆ. ಅಕ್ಕಟ! ನಿನಗೆ ಇಂತಹ ಬುದ್ಧಿಯು ಏಕೆ ಹುಟ್ಟಿತೋ? ರಾಕ್ಷಸರು ನಾಶವಾಗುವ ಕಾಲವು ಸಮೀಪಿಸಿರುವುದರಿಂದಲೇ ನಿನಗಿಂತಹ ದುರ್ಬುದ್ಧಿಯು ಹುಟ್ಟಿರುವುದೆಂದು ತೋರುತ್ತದೆ! ರಾವಣ! ಕಾಲವು ಸಮೀಪಿಸಿ ಬಂದಿರುವುದರಿಂದಲೇ ನೀನು ಹಿರಿ

ವಾಗಿರಲು ನೀನು ಅದನ್ನು ಹೇಗೆ ತಿಳಿದೆ" ಎಂದರೆ, ಶಿಷ್ಟಾಚಾರವನ್ನು ತೊರೆದು ದುರ್ಮಾರ್ಗದಲ್ಲಿ ನಡೆಯುತ್ತಿರುವ ನಿನ್ನ ವರ್ತನೆಯೇ ನಿನ್ನ ಬುದ್ಧಿಯನ್ನು ಪ್ರಕಟಗೊಳಿಸುವುದು. (ತ)

ಎಲೈ ರಾವಣನೇ! ನಿನ್ನ ರಾಜ್ಯದಲ್ಲಿ ಧರ್ಮತತ್ವಗಳನ್ನರಿತವರಿದ್ದರೂ ಅವರಲ್ಲಿ ನೀನು ಧರ್ಮಜಿಜ್ಞಾಸೆಯನ್ನು ಮಾಡಿರುವುದಿಲ್ಲ. ಇದರಿಂದಲೇ ನಿನ್ನ ಬುದ್ಧಿಯು ಧರ್ಮಾಚಾರ ವಿಮುಖವಾಗಿ, ನಿನ್ನನ್ನು ಪಾಪಕಾರ್ಯಗಳಲ್ಲಿ ತೊಡಗಿಸಿರುವುದು. ನೀನು ವಿಚಕ್ಷಣರಾದ ವಿದ್ವಾಂಸರೊಡನೆ ಸೇರಿ ಧರ್ಮವಿಷಯಗಳನ್ನರಿತುಕೊಳ್ಳದೆ ಹೀಗೆ ದುಷ್ಕಾರ್ಯಗಳಲ್ಲಿ ತೊಡಗಿರುವುದು ರಾಕ್ಷಸರ ನಾಶಕ್ಕಾಗಿಯೇ ಎಂದು ತಿಳಿದುಕೊ. (ಮ)

‡ "ಯಥಾ" ತಿ. ಪಾ.

¶ "ನಾನು ಸಜ್ಜನರ ಉಪದೇಶವನ್ನು ಕೇಳದಿದ್ದ ಮಾತ್ರಕ್ಕೆ ರಾಕ್ಷಸರೆಲ್ಲರೂ ಏಕೆ ನಾಶವಾಗಬೇಕು" ಎಂದು ರಾವಣನು ಕೇಳಿಯಾನೆಂದು ಊಹಿಸಿ ಸೀತೆಯು "ಅಕೃತಾತ್ಮಾನಂ" ಎಂಬ ಶ್ಲೋಕದಿಂದ ಉತ್ತರ ಹೇಳುವಳು. (ಗೋ)

ದ್ಧಾನಿ ವಿನಶ್ಯಂತಿ ರಾಷ್ಟ್ರಾಣಿ ನಗರಾಣಿಚ ॥ ೧೧ ॥ *ತಥೇಯಂ ತ್ವಾಂ ಸಮಾಸಾದ್ಯ ಲಂಕಾ ರತ್ನೌಘಸಂಕುಲಾ । ಅಪರಾಧಾ ತ್ತವೈಕಸ್ಯ ನಚಿರಾ ದ್ವಿನಶಿಷ್ಯತಿ ॥ ೧೨ ॥ ಸ್ವಕೃತೈ ರ್ಹನ್ಯಮಾನಸ್ಯ ರಾವಣಾಽದೀರ್ಘದರ್ಶಿನಃ। ಅಭಿನಂದಂತಿ ಭೂತಾನಿ ವಿನಾಶೇ ಪಾಪಕರ್ಮಣಃ ॥೧೩॥ ಏವಂ ತ್ವಾಂ ಪಾಪಕರ್ಮಾಣಂ ವಕ್ಷ್ಯಂತಿ ನಿಕೃತಾ ಜನಾಃ । ದಿಷ್ಟ್ಯೈತದ್ವ್ಯಸನಂ ಪ್ರಾಪ್ತೋ ರೌದ್ರ ಇತ್ಯೇವ ಹರ್ಷಿತಾಃ ॥೧೪॥ ♣ಶಕ್ಯಾ ಲೋಭ

ದೊಡ್ಡ ಪಟ್ಟಣಗಳೂ ಸಹ, ವಿನಶ್ಯಂತಿ - ಹಾಳಾಗುವವು, ತಥಾ - ಹಾಗೆಯೇ, ರತ್ನೌ....ಲಾ - ನವ ರತ್ನಗಳ ರಾಶಿಗಳಿಂದ ತುಂಬಿರುವ, ಇಯಂಲಂಕಾ - ಈ ಲಂಕಾಪಟ್ಟಣವು, ತ್ವಾಂ - ನಿನ್ನನ್ನು, ಸಮಾಸಾದ್ಯ - ಹೊಂದಿ, ಏಕಸ್ಯ - ಒಬ್ಬನಾದ, ತವ - ನಿನ್ನ, ಅಪರಾಧಾತ್ - ಪಾಪದದೆಶೆಯಿಂದ, ನಚಿರಾತ್ - ಜಾಗ್ರುತೆಯಾಗಿಯೇ, ವಿನಶಿಷ್ಯತಿ - ನಾಶವಾಗುವದು. ॥ ೧೧-೧೨ ॥ ಹೇ ರಾವಣ - ಎಲೈ ರಾವಣನೆ, ಸ್ವಕೃತೈಃ - ತನ್ನ ದುಷ್ಕರ್ಮಗಳಿಂದ, ಹನ್ಯಮಾನಸ್ಯ - ಹೊಡೆಯಲ್ಪಡುತ್ತಿರುವ ಅದೀ....ನಃ - ದೂರದೃಷ್ಟಿಯಿಲ್ಲದಿರುವ, ಪಾಪಕರ್ಮಣಃ - ಪಾಪಿಯಾದ ನಿನ್ನ, ವಿನಾಶೇ - ನಾಶ ವಾಗುತ್ತಿರಲು, ಭೂತಾನಿ - ಪ್ರಾಣಿಗಳು, ಅಭಿನಂದಂತಿ - ಸಂತೋಷಿಸುತ್ತವೆ, ಏವಂ - ಈ ಪರಿ ಯಾಗಿ, ನಿಕೃತಾಃ - ನಿನ್ನಿಂದ ವಂಚಿಸಲ್ಪಟ್ಟ, ಜನಾಃ - ಜನಗಳು, ರೌದ್ರಃ - ದುಷ್ಟನು, ದಿಷ್ಟ್ಯಾ - ದೈವದಿಂದ, ಏತದ್ವ್ಯಸನಂ - ಈದುಃಖವನ್ನು, ಪ್ರಾಪ್ತಃ - ಹೊಂದಿದನು, ಇತಿ - ಎಂದು, ಹರ್ಷಿತಾಃ - ಸಂತೋಷಗೊಂಡವರಾಗಿ, ತ್ವಾಂ - ನಿನ್ನನ್ನು, ಪಾಪಕರ್ಮಾಣಂ - ಪಾಪಕೃತ್ಯವುಳ್ಳವ ನನ್ನಾಗಿ, ವಕ್ಷ್ಯಂತಿ - ಹೇಳುತ್ತಾರೆ. ॥ ೧೩-೧೪ ॥ ಅಹಂ - ನಾನು, ಐಶ್ವರ್ಯೇಣ - ಪ್ರಭುತ್ವದಿಂ

ಯರ ಹಿತವಚನಗಳನ್ನು ಕೇಳದಿರುವೆ? ಅವಿವೇಕಿಯೂ, ಅಧರ್ಮಿಷ್ಠನೂ ಆದವನು ರಾಜ ನಾಗಿದ್ದರೆ, ಪಟ್ಟಣಗಳೂ, ರಾಜ್ಯಗಳೂ, ಸಕಲಸಂಪದಗಳೂ ನಾಶವಾಗಿ ಹೋಗುವವು. ಹಾಗೆಯೇ ನೀನು ರಾಜನಾಗಿರುವುದರಿಂದ ನಾನಾರತ್ನಸಮನ್ವಿತವಾಗಿ ಮಹದೈಶ್ವರ್ಯ ಪೂರ್ಣವಾಗಿರುವ ಈ ಲಂಕಾರಾಜ್ಯವೂ ನಿನ್ನೊಬ್ಬನಿಂದಲೇ ನಾಶವಾಗುವುದು. ॥ ೮–೧೨ ॥ ಎಲೆ ನಿಶಾಚರ! ಲೋಕದಲ್ಲಿ ಮುಂದಾಲೋಚನೆಯುಲ್ಲದೆ ಪಾಪಕಾರ್ಯಗಳನ್ನು ಮಾಡಿ ದಾತನು, ಆ ಪಾಪಕರ್ಮಗಳಿಂದಲೇ ನಾಶವಾಗುತ್ತಾನೆ. ಅವನು ನಾಶವಾದುದನ್ನು ನೋಡಿ ಸಮಸ್ತ ಪ್ರಾಣಿಗಳೂ ಸಂತೋಷಿಸುತ್ತವೆ. ಈಗ ನೀನು ಮುಂದಾಲೋಚನೆಯಿಲ್ಲದೆ ನನ್ನನ್ನು ಕದ್ದು ತಂದು ಪಾಪವನ್ನು ಮಾಡಿರುವೆಯಷ್ಟೆ. ಇದರಿಂದ ನೀನು ನಾಶವಾಗುವು ದಂತೂ ಖಂಡಿತವೆಂದು ತಿಳಿ. ನೀನು ನಾಶವಾದೊಡನೆಯೇ ನಿನ್ನಿಂದ ಅಪಕೃತರಾದವರೆಲ್ಲರೂ ಬಹಳವಾಗಿ ಸಂತೋಷಪಟ್ಟು "ನಮ್ಮ ಭಾಗ್ಯವಶದಿಂದ ಮಹಾ ಕ್ರೂರನಾದ ಈ ರಾಕ್ಷಸನು ತನ್ನ ಅಪರಾಧದಿಂದಲೇ ಅಳಿದು ಹೋದನು; ನಮ್ಮ ಬಾಧೆಗಳೆಲ್ಲವೂ ಇಂದಿಗೆ ತೀರಿದವು" ಎಂದು ಹೇಳಿಕೊಳ್ಳುತ್ತಾರೆ. ॥ ೧೩–೧೪ ॥ ನಾನು ನಿನ್ನ ಐಶ್ವರ್ಯಕ್ಕೂ, ಧನಕ್ಕೂ, ಮೋಸ

* "ತಥೈವ" ತಿ. ಪಾ.

♣ "ರಾವಣಾ! ನಿನ್ನ ಅಂತಃಪುರದ ಸ್ವಾಮಿನೀತ್ವದಿಂದಾಗಲಿ, ಆಭರಣದಾನದಿಂದಾಗಲಿ ನೀನು ನನ್ನನ್ನು ಮೋಸಗೊಳಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆಯೋ ? ನಿತ್ಯಾನಪಾಯಿನಿಯಾದ ನಾನು ರಘುಕುಲಾವತೀರ್ಣನಾದ ವಿಷ್ಣು

ಯಿತುಂ ನಾಹ ಮೈಶ್ವರ್ಯೇಣ ಧನೇನ ವಾ । ಅನನ್ಯಾ ರಾಘವೇಣಾಽಹಂ ಭಾಸ್ಕರೇಣ ಪ್ರಭಾ ಯಥಾ ॥ ೧೫ ॥ ಉಪಧಾಯ ಭುಜಂ ತಸ್ಯ ಲೋಕನಾಥಸ್ಯ ಸತ್ಕೃತಂ । ಕಥಂ ನಾಮೋಪಧಾಸ್ಯಾಮಿ ಭುಜಮನ್ಯಸ್ಯ ಕಸ್ಯಚಿತ್ ॥೧೬॥ $ ಅಹಮೌಪಯಿಕೀ ಭಾರ್ಯಾ ತಸ್ಯೈವ ¶ವಸುಧಾಪತೇಃ । ವ್ರತಸ್ನಾತಸ್ಯ ♆ವಿಪ್ರಸ್ಯ ವಿದ್ಯೇವ ವಿದಿತಾತ್ಮನಃ ॥ ೧೭ ॥

ದಾಗಲಿ, ಧನೇನವಾ - ದ್ರವ್ಯದಿಂದಾಗಲಿ, ಲೋಭಯಿತುಂ - ವಂಚಿಸುವದಕ್ಕೂ, ನಶಕ್ಯಾ - ಅರ್ಹಳಲ್ಲವು, ಅಹಂ - ನಾನು, ರಾಘವೇಣ - ಶ್ರೀರಾಮನಿಂದ, ಭಾಸ್ಕರೇಣ - ಸೂರ್ಯನಿಂದ, ಪ್ರಭಾ ಯಥಾ - ಕಾಂತಿಯಂತೆ, ಅನನ್ಯಾ - ಅವಿಭಕ್ತಳಾಗಿದ್ದೇನೆ. ॥ ೧೫ ॥ ಲೋಕನಾಥಸ್ಯ - ಸರ್ವಲೋಕಗಳಿಗೂ ಸ್ವಾಮಿಯಾದ, ತಸ್ಯ - ಆ ಶ್ರೀರಾಮನಿಗೆ, ಭುಜಂ - ಭುಜವನ್ನು, ಉಪಧಾಯ - ತಲದಿಂಬಾಗಿಮಾಡಿ, ಅನ್ಯಸ್ಯ - ಮತ್ತೊರ್ವನಾದ, ಕಸ್ಯಚಿತ್ - ಒಬ್ಬಾನೊಬ್ಬ ಅಧಮನಿಗೆ, ಕಥಂನಾಮ-ಹೇಗೆತಾನೆ, ಉಪಧಾಸ್ಯಾಮಿ - ತಲದಿಂಬಾಗಿ ಮಾಡುವೆನು. ॥೧೬॥ ಅಹಂ - ನಾನು, ವಸುಧಾಪತೇಃ-ಭೂಪತಿಯಾದ, ತಸ್ಯೈವ - ಆ ಶ್ರೀರಾಮನಿಗೇನೇ. ವ್ರತಸ್ನಾತಸ್ಯ - ಪ್ರಾಜಾಪತ್ಯಾದಿ ವ್ರತಗಳಿಂದ ಸ್ನಾತಕಬ್ರಹ್ಮಚಾರಿಯಾದ, ವಿದಿತಾತ್ಮನಃ - ಬ್ರಹ್ಮನಿಷ್ಠನಾದ, ವಿಪ್ರಸ್ಯ - ಬ್ರಾಹ್ಮಣನಿಗೆ, ವಿದ್ಯೇವ-ಬ್ರಹ್ಮವಿದ್ಯೆಯಂತೆ, ಔಪಯಿಕೀ-ಉಪಯುಕ್ತಳಾದ, ಭಾರ್ಯಾ-ಹೆಂಡತಿಯು. ॥ ೧೭ ॥ ಹೇ ರಾವಣ-

ಹೋಗಿ ನಿನ್ನ ವಶವರ್ತಿಯಾಗುವೆನೆಂದು ಭಾವಿಸಿದೆಯಾ ? ಅದು ಅಸಾಧ್ಯವೆಂದು ತಿಳಿ. ಸೂರ್ಯನನ್ನು ಎಡೆಬಿಡದೆ ಹೊಂದುಕೊಂಡಿರುವ ಸುವರ್ಚಲಾದೇವಿಯಂತೆ ನಾನು ನನ್ನ ಪತಿಯಾದ ಶ್ರೀರಾಮನನ್ನು ಹೊಂದಿಕೊಂಡಿರುವವಳು. ಅಲ್ಲದೆ ನಾನು ಲೋಕೇಶ್ವರನಾದ ಶ್ರೀರಾಮನ ಭುಜವನ್ನು ಆಶ್ರಯಿಸಿದವಳಾಗಿದ್ದು ಬೇರೊಬ್ಬ ಅನಾಮಧೇಯನ ಭುಜವನ್ನಾಶ್ರಯಿಸುವೆನೆ ? ಎಲೆ ರಾವಣ ! ವೇದವ್ರತಸ್ನಾತನೂ, ಆತ್ಮವೇತ್ತನೂ ಆದ ಸದ್ಬ್ರಾಹ್ಮಣನಿಗೆ ವೇದವಿದ್ಯೆಯೊಲಿವಂತೆ, ನಾನು ಲೋಕನಾಥನಾದ ಆ ರಘುನಾಥನಿಗೇ ಒಲಿದು ಆತನಿಗೇ ಭಾರ್ಯೆಯಾಗಿರುವವಳೆಂದು ತಿಳಿ. ರಾವಣಾ ! ಅರಣ್ಯದಲ್ಲಿ ಗಂಡಾನೆಯನ್ನಗಲದೆ, ಅದನ್ನೆಡೆ

ವಿಗೆ ಭಾರ್ಯೆಯು. ಎಂದಿಗೂ ಅವನಿಂದ ವಿಭಕ್ತಳಾಗುವವಳಲ್ಲವು, (ವಿಷ್ಣುವು ಯಾವ ಯಾವ ಕುಲದಲ್ಲಿ ಅವತರಿಸಿದರೂ ಲಕ್ಷ್ಮೀದೇವಿಯು ಆತನಿಗೆ ಪತ್ನಿಯಾಗಿ ಅವತರಿಸುವಳೆಂಬುದು ಪುರಾಣಪ್ರಸಿದ್ಧವಾಗಿರುವುದು.) ನಾನು ಆ ರಘುರಾಮನಿಗೆ ರಪತಂತ್ರಳಾಗಿರುವೆನು. ನಾನು ಆತನಿಗೆ ಕೇವಲ ಪರತಂತ್ರಳಾದವಳು ಮಾತ್ರನಲ್ಲ. ಅಂತಹ ಲೋಕನಾಥನಿಗೂ ಒಂದು ಹೆಚ್ಚಿಗೆಯನ್ನುಂಟುಮಾಡುವವಳು. ಈ ಅರ್ಥವನ್ನು ದೃಷ್ಟಾಂತದಿಂದ ಸೂಚಿಸುವಳು. (ಭಾಸ್ಕರೇಣ ಪ್ರಭಾ ಯಥಾ) ಪ್ರಭೆಯು ಸೂರ್ಯನಿಗೂ ಅತಿಶಯವನ್ನುಂಟುಮಾಡುವುದಷ್ಟೆ. ಈ ಅರ್ಥವನ್ನು ಮಾರೀಚನು ಹಿಂದೆಯೇ ನಿನಗೆ ತಿಳಿಸಿದನಷ್ಟೆ. (ಅಪ್ರಮೇಯಂ ಹಿ ತತ್ತೇಜೋ ಯಸ್ಯ ಸಾ ಜನಕಾತ್ಮಜಾ ಎಂದು) ಆತನ ಪ್ರಿಯವಚನವನ್ನೂ ಇಷ್ಟು ಬೇಗ ಮರೆತುಬಿಟ್ಟೆಯಾ ?" ಎಂಬುದು ಇಲ್ಲಿನ ವಿಶೇಷಾರ್ಥವು. (ಗೋ)

$ ಇಲ್ಲಿ, "ವಿಪ್ರ" ಪದವು ತ್ರೈವರ್ಣಿಕಪದವು. ತ್ರೈವರ್ಣಿಕರಿಗೆ ಮಾತ್ರ ಬ್ರಹ್ಮವಿದ್ಯಾಧಿಕಾರವೆಂದೇ ಶಾಸ್ತ್ರವಿಹಿತವಾಗಿರುವುದು. (ತಿ)

"ಶೀಲ ವಯಸ್ಸು ವೃತ್ತಿಗಳಿಂದ ಕೂಡಿರುವ ನಾನು, ಸಮಾನವಾದ ಶಿಲವಯೋವೃತ್ತ ಸಂಪನ್ನನಾಗಿರುವ ಶ್ರೀರಾಮನಿಗೆ ಉಚಿತಳಾದ ಭಾರ್ಯೆಯು." ಎಂದುದರಿಂದ, "ಹ್ರೀಶ್ಚತೇ ಲಕ್ಷ್ಮೀಶ್ಚ ಪತ್ನ್ಯೌ" ಎಂಬ ಶ್ರುತ್ಯರ್ಥ ಪ್ರತಿಪಾದಿತಳಾದ ಲಕ್ಷ್ಮೀದೇವಿಯೇ ನಾನು. ಧರಾಪತಿಯಾದ (ವಿಷ್ಣುವಾದ) ಶ್ರೀರಾಮನಿಗೇ ತಕ್ಕ ಭಾರ್ಯೆಯು" ಎಂದು ಹೃದಯವು.

¶ "ಚ ಧರಾಪತೇಃ" ರಾ. ತಿ. ಪಾ. ♆ "ಧೀರಸ್ಯ" ಗೋ. ಪಾ.

¶ ಸಾಧು ರಾವಣ! ರಾಮೇಣ ಮಾಂ ಸಮಾನಯ ದುಃಖಿತಾಂ । ವನೇ ವಾಶಿತಯಾ ಸಾರ್ಧಂ ಕರೇಣ್ವೇವ ಗಜಾಧಿಪಂ ॥ ೧೮ ॥ ೪ಮಿತ್ರಮೌಪಯಿಕಂ ಕರ್ತುಂ ರಾಮ ಸ್ಥಾನಂ ಪರೀಪ್ಸತಾ । $ವಧಂ ಚಾನಿಚ್ಛತಾ ಘೋರಂ ತ್ವಯಾಽಸೌ ಪುರುಷರ್ಷಭಃ ॥ ೧೯ ॥ ವಿದಿತ ಸ್ಸಹಿ ಧರ್ಮಜ್ಞ ಶ್ಶರಣಾಗತ ವತ್ಸಲಃ । ತೇನ ಮೈತ್ರೀ ಭವತು

ಎಲೈ ರಾವಣನೇ, ದುಃಖಿತಾಂ - ದುಃಖಿತಳಾದ, ಮಾಂ - ನನ್ನನ್ನು, ರಾಮೇಣ - ಶ್ರೀರಾಮನೊಡನೆ, ವನೇ - ಕಾಡಿನಲ್ಲಿ, ವಾಸಿತಯಾ - ಯೌವನಸ್ಥಳಾದ, ಕರೇಣ್ವಾ - ಹೆಣ್ಣಾನೆಯೊಡನೆ, ಗಜಾ....ವ - ಗಜಯೂಥಪತಿಯನ್ನಂತೆ, ¦ಸಾಧು - ಚನ್ನಾಗಿ, ಸಮಾನಯ - ಸೇರಿಸು. ॥ ೧೮ ॥ ಸ್ಥಾನಂ - ಲಂಕಾನಿವಾಸವನ್ನು, ಪರೀಪ್ಸಿತಾ - ಹೊಂದಲಿಚ್ಛಿಸುವ, ಘೋರಂ - ಭಯಂಕರವಾದ, ವಧಂ - ಮರಣವನ್ನು, ಅನಿಚ್ಛತಃಚ - ಅಪೇಕ್ಷಿಸದೆಯೂ ಇರುವ, ತ್ವಯಾ - ನಿನ್ನಿಂದ, ಪುರುಷರ್ಷಭಃ - ಪುರುಷಶ್ರೇಷ್ಠನಾದ, ಅಸೌರಾಮಃ - ಈ ಶ್ರೀರಾಮನು, ಮಿತ್ರಂ - ಸಖನನ್ನಾಗಿ, ಕರ್ತುಂ - ಮಾಡುವುದಕ್ಕೂ, ಔಪಯಿಕಂ - ಯುಕ್ತವು. ॥ ೧೯ ॥ ಧರ್ಮಜ್ಞಃ - ಧರ್ಮಿಷ್ಠನಾದ, ಸಃ - ಆ ಶ್ರೀರಾಮನು, ಶರ....ಲಃ - ನಂಬಿದವರಲ್ಲಿ, - ವಾತ್ಸಲ್ಯವುಳ್ಳವನಾಗಿ, ವಿದಿತೋಹಿ - ಪ್ರಸಿದ್ಧಿ ಪಡೆದವನಷ್ಟೆ, ತ್ವಂ - ನೀನು, ಜೀವಿತುಂ - ಬದುಕಲು, ಇಚ್ಛಸಿಯದಿ - ಆಶೆಯುಳ್ಳವನಾದರೆ,

ಬಿಡದೆ ಹೊಂದಿಕೊಂಡಿದ್ದು ಅದನ್ನಗಲಿ ವ್ಯಸನಪಡುತ್ತಿರುವ ಯೌವನವುಳ್ಳ ಹೆಣ್ಣಾನೆಯನ್ನು ಗಂಡಾನೆಯೊಡಗೂಡಿಸುವಂತೆ, ನೀನು ಮಹಾ ದುಃಖಿತಳಾಗಿರುವ ನನ್ನನ್ನು ಶ್ರೀರಾಮ ನೊಡಗೂಡಿಸು ॥ ೧೭–೧೮ ॥ ನೀನು ಪುರುಷೋತ್ತಮನಾದ ಶ್ರೀರಾಮನೊಡನೆ ಯುದ್ಧಮಾಡಿ ಅವನಿಂದ ಸಾಯಲು ಕೋರದಿರುವವನಾದರೆ ಆತನನ್ನು ಪ್ರಸನ್ನನನ್ನಾಗಿ ಮಾಡಿಕೊ. ಆತನ ಹೆಂಡತಿಯನ್ನು ಕದ್ದು ತಂದು ಅಪರಾಧವನ್ನು ಮಾಡಿದ ನಾನು ಆತನನ್ನು ಪ್ರಸನ್ನನನ್ನಾಗಿ ಮಾಡುವುದು ಹೇಗೆ ಎಂದು ಯೋಚಿಸಬೇಡ. ಪುರುಷಶ್ರೇಷ್ಠನಾದ ಆತನು ಸಕಲ ಧರ್ಮ

೪ ಇಲ್ಲಿ "ಕರೇಣ್ವಾ ಗಜಾಧಿಪಮಿವ" ಎಂದು ಹೇಳಿರುವುದರಿಂದ, "ನನ್ನ ಪತಿದೇವನಾದ ಶ್ರೀರಾಮಮೂರ್ತಿ ಯನ್ನು ಕರೆಯಿಸಿ ಆತನಿಗೆ ನನ್ನನ್ನು ಒಪ್ಪಿಸು" ಎಂಬ ಅರ್ಥವು ಸೂಚಿತವಾಗುತ್ತದೆ. "ನನ್ನನ್ನು ಕರೆದುಕೊಂಡು ಹೋಗಿ ಶ್ರೀರಾಮನೊಡನೆ ಸೇರಿಸು" ಎಂದು ಅರ್ಥಮಾಡಬಾರದು.

¶ ಇಲ್ಲಿನ ವಿಶೇಷಾರ್ಥ:—ಸೀತಾದೇವಿಯು ಲೋಕ ಜನನಿಯಾದರೂ ದುರಾತ್ಮನಾದ ರಾವಣನು ಆಕೆಯಲ್ಲಿನ ಜನನೀತ್ವ ಪ್ರತಿಪತ್ತಿಯನ್ನು ತೊರೆದು ಅಸಂಗತವಾದ ಕಹಿನುಡಿಗಳನ್ನೇ ನುಡಿಯಲು, ದಯಾವತಿಯಾದ ಆಕೆಯು ಆತ ನಲ್ಲಿ ಪುತ್ರವಾತ್ಸಲ್ಯವನ್ನೇ ಇಟ್ಟುಕೊಂಡು ಅವನ ದುರ್ವರ್ತನಕ್ಕೆ ಮನನುರುಗಿ, "ಅಯ್ಯೋ! ಇವನಿಗೆ ಹಿತೋಪದೇಶ ಮಾಡಿ ಇವನನ್ನು ಸದ್ವರ್ತನದಲ್ಲಿ ತೊಡಗಿಸುವವರಾರೂ ಇಲ್ಲವೇ ?" ಎಂದು, "ಇಹಸಂತೋನವಾಸಂತಿ" ಮೊದಲಾದ ವಾಕ್ಯಗಳಿಂದ ಚಿಂತಿಸಿ ತಾನೇ ಅವನಿಗೆ ಹಿತೋಪದೇಶ ಮಾಡುವಳು.

ಹೀಗೆ ಉಪದೇಶಮಾಡುವಾಗಲೂ, "ರಾವಣ! ರಾಮನಲ್ಲಿ ಶರಣಾಗತನಾಗು" ಎಂದು ಹೇಳಿದರೆ ಮೊದಲೇ ಮೊರಟನಾದ ಆ ರಾವಣನು ದುರ್ಮಾನಿಯಾಗಿ ಆ ಮಾತನ್ನು ಸಹಿಸದೆ ಎಲ್ಲಿ ತಳ್ಳಿಹಾಕುವನೋ ಎಂದು ಯೋಚಿಸಿ, "ಮಿತ್ರಮೌಪ ಯಿಕ ಕರ್ತುಂ" ಅವನನ್ನು ಸ್ನೇಹಿತನನ್ನಾಗಿ ಮಾಡಿಕೊ ಎಂದು ಹೇಳುವಳು. ಸೀತೆಯು ಹೀಗೆ ಹೇಳಿರು ವುದು ಆಕೆಯ ಗುಣಕ್ಕನುಗುಣವಾದುದು. ಅಲ್ಲದೆ ಆಕೆಯೂ, ಶ್ರೀರಾಮನೂ ಇಬ್ಬರೂ ಶರಣಾಗತರಕ್ಷಕರಲ್ಲವೆ; ಆದುದ ರಿಂದಲೇ ಶ್ರೀರಾಮನೂ ಸಹ "ಮಿತ್ರಭಾವೇನ ಸಂಪ್ರಾಪ್ತಂ ನತ್ಯಜೇಯಂ ಕಥಂಚನ" ಎಂದು ಹೇಳುವನು. ಇಲ್ಲಿ

$ "ಬಂಧಂ" ತಿ. ಪಾ.

ತೇ ಯದಿ ಜೀವಿತುಮಿಚ್ಛಸಿ ॥ ೨೦ ॥ ಪ್ರಸಾದಯಸ್ವ ತ್ವಂ ಚೈನಂ ಶರಣಾಗತ ವತ್ಸಲಂ । ಮಾಂ ಚಾಽಸ್ಮೈ ಪ್ರಯತೋ ಭೂತ್ವಾ ನಿರ್ಯಾತಯಿತುಮರ್ಹಸಿ ॥೨೧॥ ಏವಂ ಹಿ ತೇ ಭವೇತ್ಸ್ವಸ್ತಿ ಸಂಪ್ರದಾಯ ರಘೂತ್ತಮೇ । ಅನ್ಯಥಾ ತ್ವಂಹಿ ಕುರ್ವಾಣೋ §ವಧಂ ಪ್ರಾಪ್ಸ್ಯಸಿ ‡ರಾವಣ! ॥ ೨೨ ॥ ವರ್ಜಯೇದ್ವಜ್ರಮುತ್ಸೃಷ್ಟಂ

ತೇ - ನಿನಗೆ, **ತೇನ** - ಆ ಶ್ರೀರಾಮನೊಡನೆ, **ಮೈತ್ರೀ** - ಸ್ನೇಹವು, **ಭವತು** - ಆಗಲಿ, **ತ್ವಂಚ** - ನೀನೂ, **ಶರ....ಲಂ** - ನಂಬಿದವರಲ್ಲಿ, ವಿಶ್ವಾಸವುಳ್ಳ, **ಏನಂ** - ಈ ಶ್ರೀರಾಮನನ್ನು, **ಪ್ರಸಾದಯಸ್ವ** - ಸೌಮ್ಯನನ್ನಾಗಿ ಮಾಡಿಕೊ, **ಮಾಂಚ** - ನನ್ನನ್ನೂ ಸಹ, **ಅಸ್ಮೈ** - ಈ ಶ್ರೀರಾಮನಿಗೆ, **ನಿರ್ಯಾತಯಿತುಂ** - ಸಮರ್ಪಿಸಲು, **ಅರ್ಹಸಿ** - ಯೋಗ್ಯನಾಗು. ॥ ೨೦-೨೧ ॥ **ಅನ್ಯಥಾ** - ಮತ್ತೊಂದು ವಿಧವಾಗಿ, **ಕುರ್ವಾಣೋ** - ಏನನ್ನು ಸಮರ್ಪಿಸಿ ನಿಂತಿರುವ, **ತೇ** - ನಿನಗೆ, **ಸ್ವಸ್ತಿ** - ಶುಭವು, **ಭವೇತ್** - ಆದೀತು, **ಉತ್ಸೃಷ್ಟಂ** - ಬಿಡಲ್ಪಟ್ಟ, **ವಜ್ರಂ** - ವಜ್ರಾಯುಧವು, **ವರ್ಜಯೇತ್** - ಬಿಟ್ಟೀತು, **ಅಂತಕಃ** - ಯಮನು, **ಚಿರಂ** - ಬಹುಕಾಲ, **ತ್ವದ್ವಿಧಂ** - ನಿನ್ನಂತಹ

ಗಳನ್ನೂ ಬಲ್ಲವನು. ಶರಣಾಗತರಾದವರನ್ನು ಬಹಳ ಪ್ರೀತಿಯಿಂದ ಕಾಣುವವನೆಂದು ಪ್ರಖ್ಯಾತಿಪಡೆದವನು. ನೀನು ನಿಜವಾಗಿಯೂ ಜೀವದಿಂದ ಉಳಿಯಬೇಕೆಂಬ ಆಶೆಯುಳ್ಳವನಾದರೆ ಆತನೊಡನೆ ಮೈತ್ರಿಯನ್ನು ಬೆಳಿಸು. ನೀನು ಆತನಿಗೆ ಶರಣಾಗತನಾಗುವುದು ಮಾತ್ರವಲ್ಲದೆ ಪರಮ ಪರಿಶುದ್ಧೆಯಾದ ನನ್ನನ್ನು ಪುನಃ ಆತನಿಗೆ ಒಪ್ಪಿಸು. ಇದರಿಂದ ನಿನಗೆ ಶುಭವುಂಟಾಗುವುದು. ॥೧೯-೨೧॥ ಎಲೈ ರಾವಣನೇ! ನೀನು ಹೀಗೆ ಮಾಡದೆ ತಪ್ಪಿ ನಡೆಯುವೆಯುವೆಯಾದರೆ ಮಹಾ ಪರಾಕ್ರಮಿಯಾದ ಆ ಶ್ರೀರಾಮನು ನಿನ್ನನ್ನು ಸಂಹರಿಸದೆ ಬಿಡುವುದಿಲ್ಲವು. ಅವನು ನನಗೆಷ್ಟರವನೆಂದು ನಿರ್ಲಕ್ಷ್ಯದಿಂದಿರಬೇಡ. ಇಂದ್ರನ ವಜ್ರಾಯುಧವು ಒಂದುವೇಳೆ ನಿನಗೆ ಹೆದರಿ ನಿನ್ನಮೇಲೆ ಬೀಳದಿರಬಹುದು. ಯಮನು

ಸೀತಾದೇವಿಯು, "ಮಿತ್ರಮೌಪಯಿಕರ್ತುಂ" ಎಂದು ಹೇಳಿದ್ದರೂ "ಮಿತ್ರ" ಶಬ್ದಕ್ಕೆ ಶರಣಾಗತಿಯೆಂದೇ ಅರ್ಥ. ಮುಂದೆಯೂ, "ವಿದಿತಸ್ಸರ್ವ ಧರ್ಮಜ್ಞಃ ಶರಣಾಗತವತ್ಸಲಃ" ಎಂದಿರುವುದರಿಂದ ಇಲ್ಲಿನ ಮಿತ್ರಶಬ್ದಕ್ಕೆ ಶರಣಾಗತಿಯೆಂದೇ ಅರ್ಥಮಾಡುವುದು ಯುಕ್ತವು. "ಅದೇಕೆ ಶರಣಾಗತಿಯನ್ನು ಮಾಡಬೇಕು" ಎಂದರೆ ಅದಕ್ಕೆ ಉತ್ತರ ಹೇಳುವಳು. "ಸ್ಥಾನಂ ಪರೀಪ್ಸತಾ" "ನೀನು ಈ ಪದವಿಯಲ್ಲಿಯೇ ಇರಬೇಕೆಂದು ಬಯಸುವನೆಯಾದರೆ, ಆತನನ್ನು ಶರಣುಹೋಗು. ಶರಣಾಗತಿ ಮತ್ತು ದೈನ್ಯಗಳಿಗಿಂತಲೂ ಸಾಯುವುದೇ ಲೇಸೆಂದು ನೀನು ತಿಳಿಯುವುದಾದರೂ ಶ್ರೀರಾಮನಿಂದ ಚಿತ್ರಹಿಂಸೆಯನ್ನು ತಪ್ಪಿಸಿಕೊಂಡು ಆತನಿಂದ ಸುಖಮರಣವನ್ನು ಪಡೆಯುವುದಕ್ಕಾದರೂ ನೀನು ಆತನನ್ನು ಕುರಿತು ಶರಣುಹೋಗಬೇಕು. "ಹಾಗೆಯೇ ಆಗಲಿ; ಆದರೂ ಅವನು ಆಶ್ರಿತ ರಕ್ಷಕನೆಂಬುದರಲ್ಲಿ ಪ್ರಮಾಣವೇನು" ಎಂದರೆ ಎಲ್ಲ ಪ್ರಮಾಣಗಳಿಂದಲೂ ಅವನು ಪ್ರತ್ಯಕ್ಷನಾಗಿರುವಂತೆಯೇ ಭಾಸವಾಗುವನು. (ರಾವಣನಿಗೂ ಇದು ಸಾದೃಶ್ಯಕ್ಕೆ ಬಂದಿರುವುದು. ಮಾಯಾಮೃಗಾನುಸರಣಕಾಲದಲ್ಲಿ ಮಾರೀಚನು ರಾವಣನಿಗೆ ಹಿತೋಕ್ತಿಗಳನ್ನು ಹೇಳುತ್ತ, "ವೃಕ್ಷೇ ವೃಕ್ಷೇ ಚಪಶ್ಯಾಮಿ" ಎಂಬಿವೇ ಮೊದಲಾದ ವಾಕ್ಯಗಳಿಂದ ಶ್ರೀರಾಮನು ತನ್ನ ಕಣ್ಣೆದುರಿಗೇ ಭಾಸವಾಗುತ್ತಿರುವುದಾಗಿ ಹೇಳಿರುವನು.) ಪುರುಷೋತ್ತಮನಾದ ಶ್ರೀರಾಮನು ನಾನು ಮಾಡಿರುವ ಅಪರಾಧವನ್ನು ಮನ್ನಿಸಿ ನನ್ನ ಶರಣಾಗತಿಯನ್ನು ಅಂಗೀಕರಿಸುವನೇ" ಎಂದು ಚಿಂತಿಸಬೇಡ. ಆತನು ಪುರುಷಧೌರೇಯನಾದುದರಿಂದ ಗುಣಲೇಶವಿದ್ದರೂ ಶತಾಪರಾಧಗಳನ್ನೂ ಮನ್ನಿಸಿ ಶರಣಾಗತಿಯನ್ನೊಪ್ಪಿಕೊಳ್ಳುವನು. ಆದುದರಿಂದ ನೀನು (ಪ್ರಯತೋ ಭೂತ್ವಾ) ಈ ಮನಃಕಾಲುಷ್ಯವನ್ನೂ ದೂರಮಾಡಿ ಶ್ರೀರಾಮನನ್ನು ಕುರಿತು ಶರಣುಹೋಗು." (ಗೋ)

§ "ಪರಾಂ" ತಿ. ಪಾ. ‡ "ಚಾಪದಂ" ತಿ. ಪಾ.

ವರ್ಜಯೇದಂತಕಶ್ಚಿರಂ । ತ್ವದ್ವಿಧಂ ತು ನಸಂಕ್ರುದ್ಧೋ ಲೋಕನಾಥ ಸ್ಸರಾಘವಃ
॥ ೨೩ ॥ ರಾಮಸ್ಯ ಧನುಷ ಶ್ಶಬ್ದಂ ಶ್ರೋಷ್ಯಸಿ ತ್ವಂ ಮಹಾಸ್ವನಂ । ಶತಕ್ರತುವಿ
ಸೃಷ್ಟಸ್ಯ ನಿರ್ಘೋಷಮಶನೇರಿವ ॥ ೨೪ ॥ ಇಹ ಶೀಘ್ರಂ ಸುಪರ್ವಾಣೋ ಜ್ವಲಿ
ತಾಸ್ಯಾ ಇವೋರಗಾಃ। ಇಷವೋ ನಿಪತಿಷ್ಯಂತಿ ರಾಮಲಕ್ಷ್ಮಣಲಕ್ಷಣಾಃ॥೨೫॥ ರಕ್ಷಾಂಸಿ
ಪರಿನಿಘ್ನಂತಃ ಪುರ್ಯಾಮಸ್ಯಾಂ ಸಮಂತತಃ । ಅಸಂಪಾತಂ ಕರಿಷ್ಯಂತಿ ಪತಂತಃ
ಕಂಕವಾಸಸಃ ॥ ೨೬ ॥ ರಾಕ್ಷಸೇಂದ್ರ ಮಹಾಸರ್ಪಾನ್ ಸರಾಮಗರುಡೋಮಹಾನ್ ।
ಉದ್ಧರಿಷ್ಯತಿ ವೇಗೇನ ವೈನತೇಯ ಇವೋರಗಾನ್ ॥ ೨೭ ॥ ಅಪನೇಷ್ಯತಿ ಮಾಂ ಭರ್ತಾ

ನನ್ನು, ವರ್ಜಯೇತ್ - ಬಿಟ್ಟಾನು, ಸಂಕ್ರುದ್ಧಃ - ಬಹಳ ಕೋಪಿಷ್ಠನಾದ, ಲೋಕನಾಥಃ - ಜಗತ್ತಿಗೆಲ್ಲಾ ಸ್ವಾಮಿಯಾದ, ಸರಾಮಸ್ತು - ಆ ಶ್ರೀರಾಮನಾದರೇ, ತ್ವದ್ವಿಧಂ - ನಿನ್ನಂತಹನನ್ನು, ನವರ್ಜಯೇತ್ - ಬಿಡಲಾರನು. ॥೨೩॥ ತ್ವಂ - ನೀನು, ರಾಮಸ್ಯ - ಶ್ರೀರಾಮನ, ಮಹಾಸ್ವನಂ - ಮಹಾ ಧ್ವನಿಯುಳ್ಳ, ಧನುಷಃ - ಬಿಲ್ಲಿನ, ಶಬ್ದಂ - ಟಂಕಾರವನ್ನು, ಶತ....ಸ್ಯ - ದೇವೇಂದ್ರನಿಂದ ಬಿಡಲ್ಪಟ್ಟ, ಅಶನೇಃ - ವಜ್ರಾಯುಧದ, ನಿರ್ಘೋಷಮಿವ - ಧ್ವನಿಯನ್ನೋಪಾದಿಯಲ್ಲಿ, ಶ್ರೋಷ್ಯಸಿ - ಕೇಳುವೆ. ॥೨೪॥ ಇಹ-ಈ ಲಂಕಾಪಟ್ಟಣದಲ್ಲಿ, ಸುಪರ್ವಾಣಃ-ಒಳ್ಳೇ ಗೆಣ್ಣುಗಳುಳ್ಳ, ರಾಮ....ಣಾಃ - ರಾಮಲಕ್ಷ್ಮಣರಿಬ್ಬರ ಗುರ್ತುಗಳುಳ್ಳ, ಇಷವಃ - ಅಂಬುಗಳು, ಜ್ವಲಿತಾಸ್ಯಾಃ - ಉರಿಯುತ್ತಿರುವ ಬಾಯಿಗಳುಳ್ಳ, ಉರಗಾಇವ - ಹಾಗವುಳಂತೆ, ಶೀಘ್ರಂ - ಜಾಗ್ರತೆಯಾಗಿ, ನಿಪತಿಷ್ಯಂತಿ - ಬೀಳುವವು, ಅಸ್ಯಾಂಪುರ್ಯಾಂ - ಈ ಲಂಕಾಪಟ್ಟಣದಲ್ಲಿ, ಸಮಂತತಃ - ಎಲ್ಲಾಕಡೆಯಲ್ಲಿಯೂ, ರಕ್ಷಾಂಸಿ-ರಾಕ್ಷಸರನ್ನು, ಪರಿನಿಘ್ನಂತಃ-ಹೊಡೆಯುತ್ತಿರುವವುಗಳಾಗಿ, ಪತಂತಃ-ಬೀಳುತ್ತಿರುವ, ಕಂಕವಾಸಸಃ-ರೆಕ್ಕೆಗಳನ್ನು ಕಟ್ಟಿರುವ ಬಾಣಗಳು, ಅಸಂಪಾತಂ - ಎಡೆಯಿಲ್ಲದಂತೆ, ಕರಿಷ್ಯಂತಿ - ಮಾಡುತ್ತವೆ. ॥ ೨೫-೨೬ ॥ ಮಹಾನ್ - ಮಹಾತ್ಮನಾದ, ಸಃ - ಆ ಪ್ರಸಿದ್ಧನಾದ, ರಾಮಗರುಡಃ - ರಾಮನೆಂಬ ಗರುಡನು, ರಾಕ್ಷ....ರ್ಪಾನ್ - ರಾಕ್ಷಸಶ್ರೇಷ್ಠರೆಂಬ ದೊಡ್ಡ ಹಾವುಗಳನ್ನು, ವೇಗೇನ - ಶೀಘ್ರವಾಗಿ,

---

ನಿನಗೆ ಹೆದರಿ ನಿನ್ನನ್ನು ಎಳೆದುಕೊಂಡು ಹೋಗದಿದ್ದರೂ ಇರಬಹುದು. ಆದರೆ ಲೋಕೇಶ್ವರನಾದ ಶ್ರೀರಾಮನು ರೋಷಗೊಂಡರೆ ಮಾತ್ರ ನಿನ್ನನ್ನು ಎಷ್ಟುಮಾತ್ರಕ್ಕೂ ಬಿಡುವುದಿಲ್ಲವು. ಆದುದರಿಂದ ನೀನು ನನ್ನನ್ನು ನನ್ನ ನಾಥನಿಗೊಪ್ಪಿಸದಿದ್ದಲ್ಲಿ, ದೇವೇಂದ್ರನು ಪ್ರಯೋಗಿಸಿದ ವಜ್ರಾಯುಧದ ಧ್ವನಿಯಂತೆ ಮಹಾ ಧ್ವನಿಯನ್ನು ಆತನ ಧನುಷ್ಟಾಂಕಾರದಲ್ಲಿ ಶೀಘ್ರದಲ್ಲಿಯೇ ಕೇಳುತ್ತೀಯೆ. ಇದನ್ನು ನಂಬು. ಎಲೆವೊ ರಾಕ್ಷಸನೇ! ಬಹು ಸುಂದರವಾದ ಗೆಣ್ಣುಗಳುಳ್ಳವೂ, ವಿಷಾಗ್ನಿಗಳಿಂದ ಉರಿಯುತ್ತಿರುವ ಬಾಯಿಗಳುಳ್ಳ ಮಹಾ ಸರ್ಪಗಳಂತಿರುವುವೂ, ಆ ಶ್ರೀರಾಮಲಕ್ಷ್ಮಣರ ನಾಮಾಂಕಿತವಾಗಿರುವುವೂ ಆದ ಬಾಣಗಳು ಈ ಲಂಕಾನಗರದ ಎಲ್ಲೆಡೆಗಳಲ್ಲಿಯೂ ವ್ಯಾಪಿಸಿರುವುದನ್ನೂ ನೀನು ಬಹು ಬೇಗನೆಯೇ ನೋಡುತ್ತೀಯೆ. ॥೨೨–೨೬॥ ಆ ಬಾಣಗಳು ಈ ಲಂಕೆಯಲ್ಲಿರುವ ರಾಕ್ಷಸರಲ್ಲಿ ಯಾವನೊಬ್ಬನನ್ನೂ ಉಳಿಸದೆ ಎಲ್ಲರನ್ನೂ ನಾಶಮಾಡುತ್ತವೆಯೆಂಬುದನ್ನು ತಿಳಿದಿರು. ಎಲೈ ರಾವಣನೇ! ಗರುತ್ಮಂತನು ದೊಡ್ಡದೊಡ್ಡ ಸರ್ಪಗಳನ್ನು ಸೀಳಿಕೊಂಡು ಹೋಗುವಂತೆ ಶ್ರೀರಾಮನೆಂಬ ಗರುಡನು ರಾಕ್ಷಸರೆಂಬ ಈ ವಿಷಸರ್ಪಗಳೆಲ್ಲವನ್ನೂ ತನ್ನ ಬಾಣಗಳೆಂಬ ಉಗುರುಗಳಿಂದ ಶೀಳಿ

ತ್ವತ್ತಶ್ಶೀಘ್ರಮರಿಂದಮಃ । ಅಸುರೇಭ್ಯಶ್ಶ್ರಿಯಂ ದೀಪ್ತಾಂ ವಿಷ್ಣುಸ್ತ್ರಿಭಿರಿವ ಕ್ರಮೈಃ ॥೨೮॥ ಜನಸ್ಥಾನೇ ಹತಸ್ಥಾನೇ ನಿಹತೇ ರಕ್ಷಸಾಂ ಬಲೇ । ಅಶಕ್ತೇನ ತ್ವಯಾ ರಕ್ಷಃ ಕೃತಮೇತದಸಾಧು ವೈ ॥ ೨೯ ॥ ಆಶ್ರಮಂತು ತಯೋಶ್ಶೂನ್ಯಂ ಪ್ರವಿಶ್ಯ ನರಸಿಂಹಯೋಃ । ಗೋಚರಂಗತಯೋ ರ್ಭ್ರಾತ್ರೋ ರಪನೀತಾ ತ್ವಯಾಽಧಮ ! ॥೩೦॥ ನಹಿ ಗಂಧಮುಪಾಘ್ರಾಯ ರಾಮಲಕ್ಷ್ಮಣಯೋಸ್ತ್ವಯಾ । ಶಕ್ಯಂ ಸಂದರ್ಶನೇ ಸ್ಥಾತುಂ ಶುನಾ ಶಾರ್ದೂಲಯೋರಿವ ॥ ೩೧ ॥ ತಸ್ಯ ತೇ ವಿಗ್ರಹೇ ತಾಭ್ಯಾಂ ಯುಗ

ಉದ್ಧರಿಷ್ಯತಿ - ಎತ್ತಿ ಬಿಸಡುವನು. ॥ ೨೭ ॥ ಅರಿಂದಮಃ - ಶತ್ರುನಾಶಕನಾದ, ಭರ್ತಾ - ನನ್ನ ಪತಿಯು, ತ್ವತ್ತಃ - ನಿನ್ನ ದೆಶೆಯಿಂದ, ಮಾಂ - ನನ್ನನ್ನು, ವಿಷ್ಣುಃ - ವಿಷ್ಣುವು, ಅಸುರೇಭ್ಯಃ - ರಾಕ್ಷಸರ ದೆಶೆಯಿಂದ, ತ್ರಿಭಿಃ - ಮೂರಾದ, ಕ್ರಮೈಃ - ಪಾದನ್ಯಾಸಗಳಿಂದ, ದೀಪ್ತಾಂ - ಹೊಳೆಯುತ್ತಿರುವ, ಶ್ರಿಯಮಿವ - ಐಶ್ವರ್ಯವನ್ನೋಪಾದಿಯಲ್ಲಿ, ಶೀಘ್ರಂ - ಜಾಗ್ರತೆಯಾಗಿ, ಅಪನೇಷ್ಯತಿ - ತೆಗೆದುಕೊಂಡು ಹೋಗುವನು. ॥ ೨೮ ॥ ಹೇ ರಕ್ಷಃ - ಎಲೈ ರಾಕ್ಷಸನೇ, ರಕ್ಷಸಾಂ - ರಾಕ್ಷಸರ, ಬಲೇ - ಹದಿನಾಲ್ಕುಸಾವಿರ ಸೈನ್ಯವು, ನಿಹತೇಸತಿ - ಸಂಹರಿಸಲ್ಪಟ್ಟುದಾಗತಿರಲು, ಜನಸ್ಥಾನೇ - ಹೊಡೆಯಲ್ಪಟ್ಟ ಜನರಸ್ಥಿತಿಯುಳ್ಳುದಾಗಲು, ಅಶಕ್ತೇನ - ಅಸಮರ್ಥನಾದ, ತ್ವಯಾ - ನಿನ್ನಿಂದ, ಏತತ್ - ಈ, ಅಸಾಧು - ನನ್ನ ಅಪಹರಣರೂಪವಾದ ಕೆಟ್ಟಕೆಲಸವು, ಕೃತಂವೈ - ಮಾಡಲ್ಪಟ್ಟಿತಷ್ಟೆ. ॥ ೨೯ ॥ ಹೇ ಅಧಮ - ಎಲೈ ನೀಚನೇ, ಗೋಚರಂ - ಉದ್ದೇಶ್ಯವಾದ ಬಾಹ್ಯಪ್ರದೇಶವನ್ನು ಕುರಿತು, ಗತಯೋಃ - ಹೊರಟುಹೋದ, ನರಸಿಂಹಯೋಃ - ಪುರುಷಶ್ರೇಷ್ಠರಾದ, ಭ್ರಾತ್ರೋಃ - ಅಣ್ಣತಮ್ಮಂದಿರಾದ, ತಯೋಃ - ಆ ರಾಮಲಕ್ಷ್ಮಣರಿಬ್ಬರ, ಶೂನ್ಯಂ - ಜನರಹಿತವಾದ, ಆಶ್ರಮಂ - ಪರ್ಣಶಾಲೆಯನ್ನು, ಪ್ರವಿಶ್ಯ - ಹೊಕ್ಕು, ತ್ವಯಾ - ನಿನ್ನಿಂದ, ಅಹಂ - ನಾನು, ಅಪನೀತಾ - ತರಲ್ಪಟ್ಟೆನು. ॥೩೦॥ ರಾಮ....ಯೋಃ - ರಾಮಲಕ್ಷ್ಮಣರ, ಗಂಧಂ - ವಾಸನೆಯನ್ನು, ಆಘ್ರಾಯ-ಮೂಸಿನೋಡಿ, ತ್ವಯಾ-ನಿನ್ನಿಂದ, ಶಾರ್ದೂಲಯೋಃ - ದೊಡ್ಡ ಹುಲಿಗಳ, ಸಂದರ್ಶನೇ-ಸಮಕ್ಷಮದಲ್ಲಿ, ಶುನೇವ - ನಾಯಿಯಿಂದಲೋಪಾದಿಯಲ್ಲಿ, ಸ್ಥಾತುಂ - ನಿಲ್ಲಲು, ನಶಕ್ಯಂಹಿ - ಸಾಧ್ಯವಲ್ಲವಷ್ಟೆ. ॥ ೩೧ ॥ ತಸ್ಯ - ಅಂತಹ ಚೋರವೃತ್ತಿಯುಳ್ಳ, ತೇ - ನಿನಗೆ, ತಾಭ್ಯಾಂ - ಆ

ಬಿಡುವನು. ಇಷ್ಟೆಯಲ್ಲದೆ, ಶ್ರೀಮಹಾವಿಷ್ಣುವು ಹಿಂದೆ ತ್ರಿವಿಕ್ರಮಾವತಾರದಲ್ಲಿ ಮೂರಡಿಯಿಂದ ಬಲಿದಾನವನ್ನೂ ಸಕಲೈಶ್ವರ್ಯವನ್ನೂ ನಿಗ್ರಹಿಸಿದಂತೆ, ನನ್ನ ನಾಥನಾದ ರಘುನಾಥನು ನಿನ್ನ ಬಳಿಯಲ್ಲಿರುವ ನನ್ನನ್ನು ಬಹು ಬೇಗನೆಯೆ ನನ್ನನ್ನು ಕರೆದೊಯ್ಯುವನು. ಎಲೆ ರಾವಣ ! ನೀನು ಜನಸ್ಥಾನದಲ್ಲಿ ಮಡಿದುಬಿದ್ದ ಹದಿನಾಲ್ಕುಸಾವಿರ ಮಂದಿ ರಾಕ್ಷಸರ ವೃತ್ತಾಂತವನ್ನು ಕೇಳಿ ಭಯಪಟ್ಟು ನನ್ನ ಪತಿಯಾದ ಶ್ರೀರಾಮನನ್ನು ಎದುರಿಸಿ ನಿಲ್ಲಲು ಹಿಂಜರಿದು ಗತ್ಯಂತರವಿಲ್ಲದೆ ಈ ಕಳ್ಳತನವನ್ನು ಮಾಡಿರುವೆ. ರಾಕ್ಷಸಾಧಮ ! ಪುರುಷೋತ್ತಮರೂ, ಅಣ್ಣತಮ್ಮಂದಿರೂ ಆದ ಶ್ರೀರಾಮಲಕ್ಷ್ಮಣರಿಬ್ಬರೂ ಹೊರಗಿರುವಾಗ ಸಮಯವನ್ನೇ ಕಾದಿದ್ದ ನೀನು ಆಶ್ರಮವನ್ನು ಪ್ರವೇಶಿಸಿ ನನ್ನನ್ನು ಕದ್ದುತಂದೆಯಲ್ಲವೆ? ॥ ೨೭–೩೦ ॥ ಎಲೆವೋ ನೀಚನೇ ! ನೀನಲ್ಲಿಗೆ ಬಂದಾಗ ಆ ಪುರುಷೋತ್ತಮರ ವಾಸನೆಯನ್ನಾದರೂ ಹಿಡಿದಿದ್ದರೆ ಮಹಾ ವ್ಯಾಘ್ರದ ವಾಸನೆಯನ್ನು ಕಂಡ ನಾಯಿಯಂತೆ ಅವರೆನ್ನೆದುರಿಸಲು ಶಕ್ತಿಸಾಲದೆ

ಗ್ರಹಣಮಸ್ಥಿರಂ । § ವೃತ್ರಸ್ಯೇವೇಂದ್ರಬಾಹುಭ್ಯಾಂ ಬಾಹೋಃರೇಕಸ್ಯ ನಿಗ್ರಹಃ ॥೩೨॥
ಕ್ಷಿಪ್ರಂ ತವ ಸನಾಥೋ ಮೇ ರಾಮ ಸೌಮಿತ್ರಿಣಾ ಸಹ । ತೋಯಮಲ್ಪಮಿವಾದಿತ್ಯಃ
ಪ್ರಾಣಾನಾದಾಸ್ಯತೇಶರೈಃ ॥ ೩೩ ॥

¶ ಗಿರಿಂ ಕುಬೇರಸ್ಯ ಗತೋ ಪಧಾಯ ವಾ
ಸಭಾಂ ಗತೋವಾ ವರುಣಸ್ಯ ರಾಜ್ಞಃ ।

ರಾಮಲಕ್ಷ್ಮಣರಿಂದ, ವಿಗ್ರಹೇ-ಕಾಳೆಗವಾಗುತ್ತಿರಲು, ವೃತ್ರಸ್ಯ-ವೃತ್ರಾಸುರನ, ಏಕಸ್ಯ-ಒಂದಾದ, ಬಾಹೋಃ-ತೋಳಿಗೆ, ಇಂದ್ರಬಾಹುಭ್ಯಾಂ-ದೇವೇಂದ್ರನ ಭುಜಗಳಿಂದ, ನಿಗ್ರಹಇವ-ಜಯದಂತೆ, ಯುಗಗ್ರಹಣಂ - ಜಯಸ್ಥಿತಿಯು, ಅಸ್ಥಿರಂ - ಅಸಂಭಾವ್ಯವು. ॥ ೩೨ ॥ ಮೇನಾಥಃ - ನನ್ನ ಪತಿಯಾದ, ರಾಮಃ - ಶ್ರೀರಾಮನು, ಸೌಮಿತ್ರಿಣಾಸಹ - ಲಕ್ಷ್ಮಣನೊಡನೆ, ಆದಿತ್ಯಃ - ಸೂರ್ಯನು, ಅಲ್ಪಂ - ಕೊಂಚವಾದ, ತೋಯಮಿವ - ಉದಕವನ್ನೇಪಾದಿಯಲ್ಲಿ, ತವ - ನಿನ್ನ ಪ್ರಾಣಗಳನ್ನು, ಶರೈಃ - ಬಾಣಗಳಿಂದ, ಕ್ಷಿಪ್ರಂ - ಜಾಗ್ರತೆಯಾಗಿ, ಆದಾಸ್ಯತೇ - ಅಪಹರಿಸುವನು. ॥ ೩೩ ॥ ತ್ವಂ - ನೀನು, ಅಪಧಾಯ - ಓಡಿಹೋಗಿ, ಕುಬೇರಸ್ಯ - ಕುಬೇರನ, ಗಿರಿಂ - ಗಂಧಮಾದನ ಪರ್ವತವನ್ನು, ಗತೋವಾ - ಹೊಂದಿದವನಾದರೂ, ಅಥವಾ - ಹಾಗಲ್ಲದಿದ್ದರೆ, ರಾಜ್ಞಃ - ಉದಕಾಧಿಪತಿಯಾದ, ವರುಣಸ್ಯ - ವರುಣನ, ಸಭಾಂ - ಮನೆಯನ್ನು, ಗತೋವಾ - ಹೊಕ್ಕವನಾದರೂ, ದಾಶರಥೇಃ -

ಪಲಾಯನಸೂಕ್ತವನ್ನು ಪಠಿಸುತ್ತಿದೆ. ಇದೂ ಅಲ್ಲದೆ, ಹೇಡಿಯಾದ ನೀನು ಅವರೊಡನೆ ಯುದ್ಧಮಾಡಿ ಜಯವನ್ನು ಪಡೆಯುತ್ತಿದ್ದೆಯಾ? ಹಿಂದೆ ಎರಡು ಭುಜಗಳುಳ್ಳ ದೇವೇಂದ್ರನೊಡನೆ ಹೋರಾಡಿ ಒಂದೇ ಭುಜವುಳ್ಳ ವೃತ್ರಾಸುರನು ಸಂಹೃತನಾದಂತೆ ನೀನೂ ಆ ರಾಮಲಕ್ಷ್ಮಣರೊಡನೆ ಯುದ್ಧಮಾಡಿ ಅವರಿಬ್ಬರ ಬಾಣಘಾತವನ್ನು ತಡೆದು ಜೀವದಿಂದಿರುತ್ತಿದ್ದೆಯಾ? ಅಲ್ಲೇ ಮಡಿದು ನೆಲಕ್ಕುರುಳುತ್ತಿದ್ದೆ. ಎಲೆ ರಾಕ್ಷಸಾಧಮನೇ! ನನ್ನೊಡೆಯನಾದ ಶ್ರೀರಾಮಚಂದ್ರನು ತಮ್ಮನಾದ ಲಕ್ಷ್ಮಣಸ್ವಾಮಿಯೊಡಗೂಡಿ, ಗ್ರೀಷ್ಮರ್ತುವಿನ ದಿನಕರನು ತನ್ನ ಕಿರಣಗಳಿಂದ ನೀರನ್ನು ಹೀರುವಂತೆ ತನ್ನ ಬಾಣಗಳಿಂದ ನಿನ್ನ ಪ್ರಾಣಗಳನ್ನು ಹೀರಿಬಿಡುವನು. ॥೩೧–೩೩॥ ರಾವಣ! ಈಗ ನಿನಗೆ ಕೇಡುಗಾಲವು ಸನ್ನಿಹಿತವಾಗಿರುವುದು. ಈಗ ನೀನು ಕೈಲಾಸಕ್ಕೆ ಹೋದರೂ, ಕುಬೇರನ ರಾಜಧಾನಿಗೆ ಹೋದರೂ, ವರುಣನನ್ನು ಮೊರೆಹೊಕ್ಕರೂ ಅದೂ ಅಲ್ಲದಿದ್ದರೆ ಹದಿನಾಲ್ಕು ಲೋಕಗಳಲ್ಲಿ ಯಾವ ಲೋಕಕ್ಕೆ ಹೋಗಿ

§ ವಜ್ರಾಯುಧದಿಂದ ಒಂದು ತೋಳು ಬಿದ್ದುಹೋದರೂ ಉಳಿದ ತೋಳಿನಿಂದಲೇ ವೃತ್ರಾಸುರನು ದೇವೇಂದ್ರನೊಡನೆ ಬಹುಕಾಲ ಯುದ್ಧಮಾಡಿ ಸೋತನೆಂದು ಭಾಗವತದಲ್ಲಿ ಕಥೆಯಿರುವುದು. ಈ ದೃಷ್ಟಾಂತವನ್ನಿತ್ತು ಸೀತೆಯು, "ರಾವಣ! ಮುಂದೆ ನಿನಗೂ, ಶ್ರೀರಾಮಲಕ್ಷ್ಮಣರಿಗೂ ಯುದ್ಧವು ನಡೆದರೆ, ಎರಡು ತೋಳುಗಳುಳ್ಳ ಇಂದ್ರನೊಡನೆ ಒಂದೇ ತೋಳಿನ ವೃತ್ರನು ಯುದ್ಧದಲ್ಲಿ ಸೋತಂತೆ ನೀನೂ ಸೋಲುವುದು ಖಂಡಿತ" ಎಂದು ಹೇಳುವಳು.

(ರಾ. ತಿ. ಮ)

¶ ಈ ಸರ್ಗದಲ್ಲಿ ವರ್ಣಿತವಾಗಿರುವ ಸೀತಾವಾಕ್ಯಗಳೆಲ್ಲವೂ ಹೊರಕ್ಕೆ ಬಹು ಕಟುವಾಗಿ ಕಂಡುಬಂದರೂ ಅಂತತಃ ತತ್ವಾರ್ಥವನ್ನೇ ಒಳಗೊಂಡಿರುವುವು. ಹಿಂದಿನ ಸರ್ಗದಲ್ಲಿ ರಾವಣನ ಮಾತುಗಳು ಹೊರಗೆ ದೋಷಯುಕ್ತವಾಗಿ ಕಂಡುಬಂದರೂ ಒಳಗೆ ತತ್ವಾರ್ಥವನ್ನೊಳಗೊಂಡಿದ್ದಂತೆ ಇಲ್ಲಿಯೂ ಭಾವಿಸಬೇಕು. (ಮ)

ಅಸಂಶಯಂ ದಾಶರಥೇ ರ್ನಮೋಕ್ಷ್ಯಸೇ
ಮಹಾದ್ರುಮಃ ಕಾಲಹತೋಽಶನೇರಿವ ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕವಿಂಶಸ್ಸರ್ಗಃ

ಶ್ರೀರಾಮನದೆಶೆಯಿಂದ, ಕಾಲತಃ - ವರ್ಷಾಕಾಲದಲ್ಲಿ ಹೊಡಿಯಲ್ಪಟ್ಟ, ಮಹಾದ್ರುಮಃ - ದೊಡ್ಡ ವೃಕ್ಷವು, ಅಶನೇರಿವ - ಸಿಡಿಲಿನ ದೆಶೆಯಿಂದಂತೆ, ನಮೋಕ್ಷ್ಯಸೇ - ಬಿಡಲ್ಪಡಲಾರೆ. ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕವಿಂಶಸ್ಸರ್ಗಃ.

ಸೇರಿಕೊಂಡರೂ ಸಿಡಿಲು ಬಡಿದ ಮಹಾ ವೃಕ್ಷವು ನಾಶವಾಗುವಂತೆ ಆ ರಾಮಲಕ್ಷ್ಮಣರಿಂದ ನಾಶವಾಗುವೆಯೆಂಬುದರಲ್ಲಿ ಎಷ್ಟುಮಾತ್ರವೂ ಸಂಶಯವಿಲ್ಲವು. ॥ ೩೪—೩೫ ॥

ಇಂತಿದು ಸೀತಾಕೃತ ರಾವಣನಿಂದಾಪೂರ್ವಕ ಹಿತೋಪದೇಶ ವೃತ್ತಾಂತವೆಂಬ
ಇಪ್ಪತ್ತೊಂದನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ದ್ವಾವಿಂಶಸ್ಸರ್ಗಃ

ಸೀತಾಯಾ ವಚನಂ ಶ್ರುತ್ವಾ ಪರುಷಂ ರಾಕ್ಷಸಾಧಿಪಃ । ಪ್ರತ್ಯುವಾಚ ತತ ಸ್ಸೀತಾಂ ವಿಪ್ರಿಯಂ ಪ್ರಿಯದರ್ಶನಾಂ ॥ ೧ ॥ "ಯಥಾ ಯಥಾ ಸಾಂತ್ವಯಿತಾ ವಶ್ಯ ಸ್ತ್ರೀಣಾಂ ತಥಾ ತಥಾ । ಯಥಾ ಯಥಾ ಪ್ರಿಯಂ ವಕ್ತಾ ಪರಿಭೂತ ಸ್ತಥಾ ತಥಾ ॥೨॥ ¶ ಸನ್ನಿಯಚ್ಛತಿ ಮೇಕ್ರೋಧಂ ತ್ವಯಿ ಕಾಮ ಸ್ಸಮುತ್ಥಿತಃ । ದ್ರವತೋ ಮಾರ್ಗ ಮಾಸಾದ್ಯ ಹಯಾನಿವ ಸು ಸಾರಥಿಃ ॥೩॥ ವಾಮಃ ಕಾಮೋ ಮನುಷ್ಯಾಣಾಂ ಯಸ್ಮಿ

ರಾಕ್ಷಸಾಧಿಪಃ-ರಾಕ್ಷಸನಾಯಕನಾದ ರಾವಣನು, ಪರುಷಂ-ಕಠಿನವಾದ, ಸೀತಾಯಾಃ-ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ತತಃ - ಬಳಿಕ, ಪ್ರಿಯದರ್ಶನಾಂ - ಇಷ್ಟವಾದ ನೋಟವುಳ್ಳ, ಸೀತಾಂ - ಸೀತಾದೇವಿಯನ್ನು ಕುರಿತು, ವಿಪ್ರಿಯಂ-ವಿರುದ್ಧವಾದ ಮಾತನ್ನು, ಪ್ರತ್ಯುವಾಚ-ಉತ್ತರ ಕೊಟ್ಟನು. ॥೧॥ (ನರಃ-ಮನುಷ್ಯನು,) ಯಥಾಯಥಾ-ಹೇಗೆ ಹೇಗೆ, ಸಾಂತ್ವಯಿತಾ-ಸಮಾಧಾನಗೊಳಿಸುವನೋ, ತಥಾತಥಾ-ಹಾಗೆ ಹಾಗೆಯೇ, ಸ್ತ್ರೀಣಾಂ-ಸ್ತ್ರೀಯರಿಗೆ, ವಶ್ಯಃ-ಸ್ವಾಧೀನನಾಗುವನು, ಯಥಾಯಥಾ - ಹೇಗೆ ಹೇಗೆ, ಪ್ರಿಯಂವಕ್ತಾ - ಇಷ್ಟವಾದ ಮಾತುಗಳನ್ನು ನುಡಿಯುವನೋ, ತಥಾತಥಾ - ಹಾಗೆ ಹಾಗೆಯೇ, ಪರಿಭೂತಃ - ತಿರಸ್ಕರಿಸಲ್ಪಡುವನು. ॥ ೨ ॥ ತ್ವಯಿ - ನಿನ್ನ ವಿಷಯದಲ್ಲಿ, ಸಮುತ್ಥಿತಃ - ಹುಟ್ಟಿರುವ, ಕಾಮಃ - ಅಪೇಕ್ಷೆಯು, ಮೇ - ನನ್ನ, ಕ್ರೋಧಂ - ಕೋಪವನ್ನು, ಸುಸಾರಥಿಃ - ಒಳ್ಳೆಯ ಸಾರಥಿಯು, ಮಾರ್ಗಂ-ದಾರಿಯನ್ನು, ಆಸಾದ್ಯ - ಹೊಂದಿ, ದ್ರವತಃ - ಓಡಿಹೋಗುತ್ತಿರುವ, ಹಯಾನಿವ - ಕುದುರೆಗಳನ್ನಂತೆ, ಸನ್ನಿಯಚ್ಛತಿ - ತಡೆಯುತ್ತಿದೆ. ॥೩॥ ಮನುಷ್ಯಾಣಾಂ - ಮನುಷ್ಯರ ಸಂಬಂಧವಾದ, ವಾಮಃ - ಪ್ರತಿಕೂಲವಾದ, ಕಾಮಃ-

ಆಗ ರಾಕ್ಷಸಪ್ರಭುವಾದ ರಾವಣನು ಸೀತೆಯಾಡಿದ ಮಾತುಗಳನ್ನು ಕೇಳಿ, ಪ್ರಿಯದರ್ಶನೆಯಾದ ಆಕೆಯನ್ನು ನೋಡಿ ಬಹು ಕಠಿನಗಳಾದ ವಾಕ್ಯಗಳಿಂದ ಹೀಗೆಂದನು. "ಎಲೆ ಸೀತೇ! ಲೋಕದಲ್ಲಿ ಪುರುಷನು, ಸ್ತ್ರೀಯರನ್ನು ಸಮಾಧಾನ ಗೊಳಿಸಿದಷ್ಟೂ ಅವರಿಗೆ ವಶನಾಗಿ ಹೋಗುವನು; ಅಲ್ಲದೆ ಅವರಿಗೆ ಎಷ್ಟು ಪ್ರಿಯವಾಕ್ಕುಗಳನ್ನು ಹೇಳುವನೋ ಅಷ್ಟೂ ಅವರಿಂದ ತಿರಸ್ಕೃತನಾಗುವನು. ಸಾರಥಿಯಾದವನು ಹದ್ದುಮೀರಿ ಹೋಗುತ್ತಿರುವ ಕುದುರೆಗಳನ್ನು ಬಿಗಿಹಿಡಿಯುವಂತೆ, ನಿನ್ನ ವಿಷಯದಲ್ಲಿ ನನಗುಂಟಾಗಿರುವ ಕೋಪವನ್ನು, ನಿನ್ನಮೇಲಿರುವ ನನ್ನ ಕಾಮವೇ ತಡೆದು ನಿಲ್ಲಿಸಿರುವುದು. ಲೋಕದಲ್ಲಿ ಮನುಷ್ಯನಿಗೆ ಕಾಮವೆಂಬುದು ಬಹು ಕೆಟ್ಟುದು. ಆ ಕಾಮವು ಯಾರಲ್ಲಿ ಪ್ರವರ್ತಿಸುವುದೋ ಅವರಲ್ಲಿ ದಯಾದಾಕ್ಷಿಣ್ಯವೂ, ಪ್ರೇಮವೂ ವಿಶೇಷವಾಗಿ ಹುಟ್ಟುತ್ತದೆ. ಅವರು ಎಷ್ಟೇ ಅಪರಾಧ

¶ ದೇವಿ! ಇಷ್ಟದೇವತೆಯಾದ ನಿನ್ನಲ್ಲಿ ನನಗೆ ಅಪಾರವಾದ ಭಕ್ತಿಯು ಹುಟ್ಟಿದೆ. ಹೀಗೆ ಹುಟ್ಟಿರುವ ಭಕ್ತಿಯು ರಾಕ್ಷಸ ಜಾತೀಯನಾದ ನನ್ನಲ್ಲಿರುವ ಕಾಮಕ್ರೋಧಾದಿಗಳೆಲ್ಲವನ್ನೂ ಅಡಗಿಸಿಬಿಟ್ಟಿರುವುದು" ಎಂದು ಇಲ್ಲಿನ ವಾಸ್ತವಿಕಾರ್ಥ. (ಮ)

ಕಿಲ ನಿಬಧ್ಯತೇ । ಜನೇ ತಸ್ಮಿಂಸ್ತ್ವನುಕ್ರೋಶಃ ಸ್ನೇಹಶ್ಚ ಕಿಲ ಜಾಯತೇ ॥ ೪ ॥ ¶ ಏತಸ್ಮಾತ್ಕಾರಣಾನ್ನತ್ವಾಂ ಘಾತಯಾಮಿ ವರಾನನೇ! । ವಧಾರ್ಹಮವಮಾನಾರ್ಹಾಂ ಮಿಥ್ಯಾಪ್ರ $ ವ್ರಜಿತೇ ರತಾಂ ॥ ೫ ॥ ೪ ಪರುಷಾಣೀಹ ವಾಕ್ಯಾನಿ ಯಾನಿ ಯಾನಿ ಬ್ರವೀಷಿ ಮಾಂ। ತೇಷು ತೇಷು ವಧೋ ಯುಕ್ತ ಸ್ತವ ಮೈಥಿಲಿ! ದಾರುಣಃ"

ಕಾಮವು, ಯಸ್ಮಿಂಜನೇ - ಯಾವ ಜನದಲ್ಲಿ, ನಿಬಧ್ಯತೇ - ಉಂಟಾಗುವದೋ, ತಸ್ಮಿಂಜನೇಕಿಲ - ಶಿಕ್ಷಾರ್ಹವಾದ ಅಂತಹ ಜನದಲ್ಲಿಯೇ, ಅನುಕ್ರೋಶಃ - ದಯೆಯೂ, ಸ್ನೇಹಶ್ಚ-ಮೈತ್ರಿಯೂ ಕೂಡ, ಜಾಯತೇಕಿಲ-ಹುಟ್ಟುವದಷ್ಟೆ, ಹೇ ವರಾನನೇ - ಎಲೆ ಶ್ರೇಷ್ಠವಾದ ಮುಖವುಳ್ಳವಳೇ, ವಧಾರ್ಹಾಂ- ಸಂಹಾರಕ್ಕೆ ಯೋಗ್ಯಳಾದ, ಅವಮಾನಾರ್ಹಾಂ - ತಿರಸ್ಕರಿಸುವದಕ್ಕೆ ತಕ್ಕವಳಾದ, ಮಿಥ್ಯಾ....ತೇ - ಕಪಟಸನ್ಯಾಸಿಯಾದ ರಾಮನಲ್ಲಿ, ರತಾಂ - ಆಸಕ್ತಳಾದ, ತ್ವಾಂ - ನಿನ್ನನ್ನು, ಏತಸ್ಮಾತ್ಕಾರಣಾತ್- ಈ ಕಾರಣದ ದೆಶೆಯಿಂದ, ನಘಾತಯಾಮಿ-ಕೊಲ್ಲಲಾರೆನು. ॥ ೪-೫ ॥ ಹೇ ಮೈಥಿಲಿ-ಓ ಸೀತೆಯೇ, ಮಾಂ - ನನ್ನನ್ನು ಕುರಿತು, ಇಹ - ಈ ಸಮಯದಲ್ಲಿ, ಪರುಷಾಣಿ - ಕ್ರೂರಗಳಾದ, ಯಾನಿಯಾನಿ ವಾಕ್ಯಾನಿ - ಯಾವ ಯಾವ ಮಾತುಗಳನ್ನು, ಬ್ರವೀಷಿ - ನುಡಿದೆಯೋ, ತೇಷುತೇಷು - ಆಯಾ ಮಾತುಗಳಿಂದ, ತವ - ನಿನ್ನ, ದಾರುಣಃ - ಕ್ರೂರವಾದ, ವಧಃ - ಸಂಹಾರವು, ಯುಕ್ತಃ - ನ್ಯಾಯವು. ॥ ೬ ॥ ಏವಂ - ಈ ಪರಿಯಾಗಿ, ರಾಕ್ಷಸಾಧಿಪಃ - ರಾಕ್ಷಸಾಧಿಪತಿಯಾದ, ರಾವಣಃ -

ಗಳನ್ನು ಮಾಡಲಿ ಅವರನ್ನು ಶಿಕ್ಷಿಸಬೇಕೆಂಬ ಬುದ್ಧಿಯೇ ಹುಟ್ಟುದಿಲ್ಲ. ಎಲೆ ಸುಂದರಮುಖಿ, ಸೀತೇ! ಈ ಕಾರಣಗಳಿಂದಲೇ, ಕಪಟವೇಷವನ್ನು ಹಾಕಿಕೊಂಡು ಅರಣ್ಯದಲ್ಲಿ ವಾಸಮಾಡಿ ಕೊಂಡಿರುವ ಆ ರಾಮನಲ್ಲಿ ಆಸಕ್ತೆಯಾಗಿರುವವಳೂ, ಅವಮಾನಗೊಳಿಸಲರ್ಹಳಾಗಿರು ವವಳೂ, ವಧೆಗೆ ಅರ್ಹಳೂ ಆಗಿರುವ ನಿನ್ನನ್ನು ಏನೂ ಮಾಡದೆ ಮನ್ನಿಸಿ ಸುಮ್ಮಗಿರುವುದು. ॥೧-೫॥ ಎಲೆ ವೈದೇಹಿ! ನೀನೀಗ ನನ್ನನ್ನು ಕುರಿತು ಎಷ್ಟು ಕಠಿನ ವಾಕ್ಯಗಳನ್ನಾಡಿದೆಯೋ ಅವುಗಳಲ್ಲಿ ಪ್ರತಿಮಾತಿಗೂ ಭಯಂಕರವಾದ ವಧೆಯೇ ನಿನಗೆ ಯುಕ್ತವಾಗಿರುವುದು. ಆದರೂ ನನಗುಂಟಾಗಿರುವ ಕಾಮವೇ ನನ್ನ ಕೋಪವನ್ನು ತಡೆದಿಟ್ಟಿರುವುದು." ಈ ಪ್ರಕಾರವಾಗಿ ಆ ರಾವಣಾಸುರನು ಸೀತೆಗೆ ಹೇಳಿ, ಮಹಾ ಕೋಪೋದ್ರೇಕದಿಂದ ಆಕೆ

¶ "ಎಲೈ ರಾವಣನೇ! ಸ್ತ್ರೀಘಾತುಕನಾಗಿಯೂ, ನನ್ನ ವಧೆಯಲ್ಲಿ ಉದ್ಯುಕ್ತನಾಗಿಯೂ ಇರುವ ನಿನ್ನೊಡನೆ ನನಗೆ ಮಾತೇಕೆ?" ಎಂದು ಸೀತೆಯು ಹೇಳಿಯಾಳೆಂದು ಶಂಕಿಸಿ, ಪರಮ ಭಕ್ತಾಗ್ರೇಸರನಾದ ಆ ರಾವಣನು, "ಎಲೌ ಸ್ವಾಮಿನಿಯೇ! ನನ್ನನ್ನು ಉದ್ಧಾರಮಾಡುವುದಕ್ಕಾಗಿಯೇ ವನದಲ್ಲಿ ವಾಸಮಾಡುತ್ತಿರುವ ನನ್ನ ಸ್ವಾಮಿಯಾದ ರಾಮ ನನ್ನೇ ಕಾಮಿಸಿ ಆತನಲ್ಲಿಯೇ ನ್ಯಸ್ತಚಿತ್ತಳಾಗಿರುವವಳು ನೀನು. ಮೇಲಾಗಿ ನೀನು ನನ್ನ ಇಷ್ಟದೇವತೆಯು. ನಾನು ವಧಾರ್ಹಳಾಗಿಯೂ, ಅವಮಾನಾರ್ಹಳಾಗಿಯೂ ಇದ್ದರೂ ಯಾವ ಸ್ತ್ರೀಯನ್ನೂ ಘಾತಿಸುವುದಿಲ್ಲ. ಎಂದಮೇಲೆ ನನ್ನ ಪರದೇವತೆಯಾದ ನಿನ್ನನ್ನು ಘಾತಿಸುವೆನೆ? ಎಂದಿಗೂ ಇಲ್ಲ" ಎಂದು ಇಲ್ಲಿನ ವಾಸ್ತವಿಕಾರ್ಥ. (ಮ)

$ "ಪ್ರವ್ರಜನೇ" ತಿ. ಪಾ.

೪ "ನೀನು ನನ್ನನ್ನು ಕುರಿತು ಯಾವಯಾವ ದೋಷವಾಕ್ಯಗಳನ್ನಾಡಿದೆಯೋ ಆ ಎಲ್ಲವುಗಳಿಂದಲೂ ನನಗೆ ವಧೆಯೇ ಯೋಗ್ಯವಾಗಿರುವುದು" ಎಂದು ಇಲ್ಲಿನ ವಾಸ್ತವಿಕಾರ್ಥ. (ಮ)

|| ೭ || ಏವಮುಕ್ತ್ವಾತು ವೈದೇಹೀಂ ರಾವಣೋ ರಾಕ್ಷಸಾಧಿಪಃ । ಕ್ರೋಧಸಂರಂಭ ಸಂಯುಕ್ತಸ್ಸೀತಾಂ ಪುನರಥಾಬ್ರವೀತ್ || ೭ || ¶ "ದ್ವೌಮಾಸೌ ರಕ್ಷಿತವ್ಯೌ ಮೇ ಯೋಽವಧಿಸ್ತೇ ಮಯಾ ಕೃತಃ। ತತಶ್ಶಯನಮಾರೋಹ ಮಮ ತ್ವಂ ವರವರ್ಣಿನಿ! । || ೮ || ಊರ್ಧ್ವಂ ದ್ವಾಭ್ಯಾಂತು ಮಾಸಾಭ್ಯಾಂ ಭರ್ತಾರಂ ಮಾಮನಿಚ್ಛತೀಂ । ಮಮ ‡ ತ್ವಾಂ ಪ್ರಾತರಾಶಾರ್ಥ ಮಾರಭಂತೇ ಮಹಾನಸೇ" || ೯ || ತಾಂ $ ತರ್ಜ್ಯಮಾನಾಂ ಸಂಪ್ರೇಕ್ಷ್ಯ ರಾಕ್ಷಸೇಂದ್ರೇಣ ಜಾನಕೀಂ । ದೇವಗಂಧರ್ವಕನ್ಯಾಸ್ತಾ ವಿಷೇದು ರ್ವಿಕೃ

ರಾವಣನು, ವೈದೇಹೀಂತು - ಸೀತಾದೇವಿಯನ್ನು ಕುರಿತು, ಕ್ರೋಧ....ಕ್ತಃ - ಕೋಪದಿಂದ ಹುಟ್ಟಿದ ವೇಗಾತಿಶಯದಿಂದ ಕೂಡಿ. ಸೀತಾಂ - ಸೀತಾದೇವಿಯನ್ನು ಕುರಿತು, ಉತ್ತರಂ - ಈ ಮಾತನ್ನು, ಅಬ್ರವೀತ್ - ನುಡಿದನು. || ೭ || ಹೇ ವರವರ್ಣಿನಿ - ಎಲೈ ಉತ್ತಮಾಂಗನೆಯೇ, ತೇ - ನಿನಗೆ, ಮಯಾ - ನನ್ನಿಂದ, ಯೋಽವಧಿಃ - ಯಾವ ಹನ್ನೆರಡುತಿಂಗಳುಗಳ ಪರಿಮಿತಕಾಲವು, ಕೃತಃ - ಮಾಡಲ್ಪಟ್ಟಿತೋ, ತತ್ರ - ಆ ಅವಧಿಯಲ್ಲಿ, ದ್ವೌಮಾಸೌ - ಎರಡು ತಿಂಗಳುಗಳು, ಮೇ - ನನ್ನಿಂದ, ರಕ್ಷಿತವ್ಯೌ - ಸಂರಕ್ಷಿಸತಕ್ಕವುಗಳು, ತತಃ - ಅನಂತರದಲ್ಲಿ, ಮಮ - ನನ್ನ, ಶಯನಂ - ಹಾಸಿಗೆಯನ್ನು, ತ್ವಂ - ನೀನು, ಆರೋಹ - ಏರು. ||೮|| ದ್ವಾಭ್ಯಾಂಮಾಸಾಭ್ಯಾಂಊರ್ಧ್ವಂತು - ಎರಡುತಿಂಗಳು ಕಳೆದಮೇಲಾದರೆ, ಮಾಂ - ನನ್ನನ್ನು, ಭರ್ತಾರಂ - ಪತಿಯನ್ನಾಗಿ, ಅನಿಚ್ಛತೀಂ- ಅಪೇಕ್ಷಿಸದಿರುವ, ತ್ವಾಂ - ನಿನ್ನನ್ನು, ಮಹಾನಸೇ - ಅಡಿಗೆಯ ಮನೆಯಲ್ಲಿ, ಮಮ - ನನಗೆ, ಪ್ರಾತಃ - ಪ್ರಾತಃಕಾಲದ, ಅಶಾರ್ಥಂ - ಭೋಜನಕ್ಕೋಸ್ಕರ, ಆರಭಂತೇ - ಕುಯ್ಯುತ್ತಾರೆ. ||೯|| ರಾಕ್ಷಸೇಂದ್ರೇಣ - ರಾಕ್ಷಸಾಧಿಪತಿಯಾದ ರಾವಣನಿಂದ, ತರ್ಜ್ಯಮಾನಾಂ - ಭಯಗೊಳಿಸಲ್ಪಟ್ಟ, ತಾಂಜಾನಕೀಂ - ಆ ಸೀತೆಯನ್ನು, ಸಂಪ್ರೇಕ್ಷ್ಯ - ಕಂಡು, ತಾಃ - ಆ ರಾವಣನ ಜೊತೆಯಲ್ಲಿ ಬಂದಿರುವ, ವಿಕೃತೇಕ್ಷಣಾಃ - ವಿಕಾರಗಳಾದ ನೇತ್ರಗಳುಳ್ಳ, ದೇವ....ನ್ಯಾಃ - ದೇವಗಂಧರ್ವ ಸ್ತ್ರೀಯರು,

---

ಯನ್ನುಕುರಿತು ಪುನಃ ಈ ರೀತಿ ನುಡಿದನು. ||೬-೭|| "ಎಲೆ ಸೀತೇ! ನಾನು ಕೊಟ್ಟಿದ್ದ ಅವಧಿಯಲ್ಲಿ ಇನ್ನು ಎರಡು ತಿಂಗಳಗಳು ಮಾತ್ರ ಉಳಿದಿರುವುದು. ಈ ಎರಡು ತಿಂಗಳಕಾಲ ನಾನು ನಿನ್ನನ್ನು ಪಾಲಿಸಬೇಕಾಗಿರುವುದು. ಅಷ್ಟರೊಳಗಾಗಿ ನೀನು ನನ್ನ ಹಾಸಿಗೆಯನ್ನೇರಬೇಕು. ಆಗಲೂ ನೀನು ನನ್ನನ್ನು ನಿನ್ನ ವಲ್ಲಭನನ್ನಾಗಿ ಕೋರದಿದ್ದಲ್ಲಿ, ನನ್ನ ಪ್ರಾತಃಕಾಲ ಭೋಜನಕ್ಕಾಗಿ ನಿನ್ನನ್ನು ಅಡಿಗೆಯಮನೆಗೆ ಕರೆಯಿಸಿಕೊಳ್ಳುವುದೇ ನಿಶ್ಚಯವು." ಹೀಗೆ ರಾವಣನು ಸೀತಾದೇವಿಯನ್ನು ಬೆದರಿಸಿ ಕಠಿನ ವಾಕ್ಯಗಳನ್ನಾಡುತ್ತಿರಲು, ಆ ಮಾತುಗಳನ್ನು ಕೇಳಿ ದೇವಗಂಧರ್ವಸ್ತ್ರೀಯರೆಲ್ಲರೂ ದಿಕ್ಕುಕಾಣದೆ, ದುಃಖದಿಂದ ಕಂಬನಿಗರೆಯುತ್ತಲೂ, ಭಯ

¶ ಈ ಎರಡು ಶ್ಲೋಕಗಳ ವಾಸ್ತವಿಕಾರ್ಥ:—"ಲಕ್ಷ್ಮೀಸ್ವರೂಪೆಯಾದ ಎಲೌ ಸೀತಾದೇವಿಯೇ! ನಾನು ಹಿಂದೆ, "ಮಾಸಾ ದ್ವಾದಶಭಾಮಿನಿ ಪ್ರತೀಕ್ಷ್ಯೇ" ಎಂದು ಪ್ರಾರ್ಥಿಸಿಕೊಂಡಿದ್ದ ಅವಧಿಯಲ್ಲಿ ಇನ್ನು ಎರಡು ತಿಂಗಳುಗಳು ಮಾತ್ರ ಉಳಿದಿವೆ. ಆ ಎರಡು ತಿಂಗಳುಗಳಾದಮೇಲೆ ನೀನು ನಿನ್ನ ಸ್ವಾಮಿಯನ್ನೂ, ಈಗಲೇ ನನ್ನನ್ನು ಅಪೇಕ್ಷಿಸದಿರುವ ಈ ರಾಜ್ಯಲಕ್ಷ್ಮಿಯನ್ನೂ ಪಡೆಯುವೆ. ನಿನ್ನನ್ನು ಪ್ರಾರ್ಥಿಸಿಕೊಳ್ಳುವೆನು; ದೇವಿ! ನನ್ನ ಅಡಿಗೆಯ ಮನೆಯಲ್ಲಿ ಬೆಳಗಿನ ಊಟಕ್ಕಾಗಿ ಪಕ್ವಾನ್ನಗಳನ್ನು ಸಿದ್ಧಗೊಳಿಸುವರು. ಅವನ್ನು ಯಥೇಷ್ಟವಾಗಿ ಭುಜಿಸು. ಸುಖಶಯನವನ್ನನುಭವಿಸು. (ಮ)

‡ "ಪ್ರಾತರಾಶಾರ್ಥೇ ಸೂದಾಶ್ಛೇತ್ಸ್ಯಂತಿ ಖಂಡಶಃ" ತಿ. ಮ. ಪಾ. $ "ಭರ್ತ್ಸ್ಯಮಾನಾಂ" ತಿ. ಪಾ.

ತೇಕ್ಷಣಾಃ ॥ ೧೦ ॥ ಓಷ್ಠಪ್ರಕಾರೈರಪರಾ ವಕ್ತ್ರನೇತ್ರೈಸ್ತಥಾಪರಾಃ । ಸೀತಾಮಾ ಶ್ವಾಸಯಾಮಾಸು ಸ್ತರ್ಜಿತಾಂ ತೇನ ರಕ್ಷಸಾ ॥ ೧೧ ॥ ತಾಭಿರಾಶ್ವಾಸಿತಾ ಸೀತಾ ರಾವಣಂ ರಾಕ್ಷಸಾಧಿಪಂ । ಉವಾಚಾತ್ಮಹಿತಂ ವಾಕ್ಯಂ ವೃತ್ತಶೌಂಡೀರ್ಯಗರ್ವಿತಂ ॥ ೧೨ ॥ "ನೂನಂ ನತೇ ಜನಃ ಕಶ್ಚಿದಸ್ತಿ ನಿಶ್ಶ್ರೇಯಸೇ ಸ್ಥಿತಃ । ನಿವಾರಯತಿ ಯೋ ನ ತ್ವಾಂ ಕರ್ಮಣೋಽಸ್ಮಾದ್ವಿಗರ್ಹಿತಾತ್ ॥ ೧೩ ॥ ಮಾಂ ಹಿ ಧರ್ಮಾತ್ಮನಃ ಪತ್ನೀಂ ಶಚೀಮಿವ ಶಚೀಪತೇಃ । ತ್ವದನ್ಯಸ್ತ್ರಿಷುಲೋಕೇಷು ಪ್ರಾರ್ಥಯೇನ್ಮನಸಾಪಿ ಕಃ? ॥ ೧೪ ॥ ರಾಕ್ಷಸಾಧಮ! ರಾಮಸ್ಯ ಭಾರ್ಯಾಮಮಿತತೇಜಸಃ । ಉಕ್ತವಾನಸಿ

ವಿಷೇದುಃ - ವ್ಯಸನಗೊಂಡರು. ॥ ೧೦ ॥ ತೇನರಕ್ಷಸಾ - ಆ ರಾವಣನಿಂದ, ತರ್ಜಿತಾಂ - ಭಯಗೊಳಿಸಲ್ಪಟ್ಟ, ಸೀತಾಂ - ಸೀತಾದೇವಿಯನ್ನು, ಅಪರಾಃ - ಮತ್ತು ಕೆಲಸ್ತ್ರೀಯರು, ಓಷ್ಠಪ್ರಕಾರೈಃ - ತುಟಿಗಳ ಸಂಜ್ಞೆಗಳಿಂದ, ತಥಾ - ಹಾಗೆಯೇ, ಅಪರಾಃ - ಇನ್ನೂ ಕೆಲ ಅಂಗನೆಯರು, ವಕ್ತ್ರನೇತ್ರೈಃ - ಮುಖಚೇಷ್ಟೆಗಳಿಂದಲೂ, ಕಣ್ಣುಸನ್ನೆಗಳಿಂದಲೂ, ಆಶ್ವಾಸಯಾಮಾಸುಃ - ಸಮಾಧಾನಗೊಳಿಸಿದರು. ॥ ೧೧ ॥ ತಾಭಿಃ - ಆ ಸ್ತ್ರೀಯರಿಂದ, ಆಶ್ವಾಸಿತಾ - ಸಮಾಧಾನಗೊಳಿಸಲ್ಪಟ್ಟ, ಸೀತಾ - ಸೀತಾದೇವಿಯು, ರಾಕ್ಷಸಾಧಿಪಂ - ರಾಕ್ಷಸಾಧಿಪತಿಯಾದ ರಾವಣನನ್ನು ಕುರಿತು, ಆತ್ಮಹಿತಂ - ತನ್ನ ಮನಸ್ಸಿಗೆ ಇಷ್ಟವಾದ, ವಾಕ್ಯಂ - ವಚನವನ್ನು, ವೃತ್ತ....ತಂ - ಪಾತಿವ್ರತ್ಯದ ಬಲದಿಂದ ಹುಟ್ಟಿದ, ಗರ್ವದಿಂದ, ಉವಾಚ - ಹೇಳಿದಳು. ॥ ೧೨ ॥ ತೇ - ನಿನ್ನ, ನಿಶ್ಶ್ರೇಯಸೇ - ಸುಕ್ಷೇಮದಲ್ಲಿ, ಸ್ಥಿತಃ-ಇರುವ, ಕಶ್ಚಿಜ್ಜನಃ - ಯಾವಜನವೂ, ನಾಸ್ತಿ - ಇಲ್ಲ, ಯಃ - ಯಾವಜನವು, ಅಸ್ಮಾತ್-ಈ, ವಿಗರ್ಹಿತಾತ್ - ನಿಂದ್ಯವಾದ, ಕರ್ಮಣಃ - ಕೆಲಸದಿಂದ, ತ್ವಾಂ - ನಿನ್ನನ್ನು, ನಿವಾರಯತಿ - ಅಡ್ಡಿಮಾಡುವನೋ, ಸಚಾಪಿ - ಅವನೂ ಕೂಡ, ನಾಸ್ತಿ - ಇಲ್ಲ, ನೂನಂ - ನಿಶ್ಚಯವು. ॥ ೧೩ ॥ ಹಿ - ಯಾವಕಾರಣದಿಂದ, ತ್ರಿಷುಲೋಕೇಷು - ಮೂರುಲೋಕಗಳಲ್ಲಿಯೂ, ತ್ವದನ್ಯಃ - ನಿನಗಿಂತಲೂ ಬೇರೆಯಾದ, ಕಃ - ಯಾವಪುರುಷನು, ಶಚೀಪತೇಃ - ದೇವೇಂದ್ರನಿಗೆ, ಶಚೀಮಿವ - ಶಚೀದೇವಿಯನ್ನಂತೆ, ಧರ್ಮಾತ್ಮನಃ- ಧರ್ಮಿಷ್ಠನಾದ ಶ್ರೀರಾಮನ, ಪತ್ನೀಂ - ಹೆಂಡತಿಯಾದ, ಮಾಂ - ನನ್ನನ್ನು, ಮನಸಾಪಿ - ಮನಸ್ಸಿನಿಂದಲೂ ಕೂಡ, ಪ್ರಾರ್ಥಯೇತ್ - ಅಪೇಕ್ಷಿಸಿಯಾನು? ॥ ೧೪ ॥ ಹೇರಾಕ್ಷಸಾಧಮ - ಎಲೈ ನೀಚರಾಕ್ಷಸನೇ, ಅಮಿತತೇಜಸಃ - ಅಪಾರಪರಾಕ್ರಮವುಳ್ಳ, ರಾಮಸ್ಯ - ಶ್ರೀರಾಮನ, ಭಾರ್ಯಾಂ -

---

ವಿಹ್ವಲೆಯರಾಗುತ್ತಲೂ ತಳಮಳಗೊಳ್ಳುತ್ತಿದ್ದರು. ಅವರಲ್ಲಿ ಆ ಜನಕರಾಜನಂದಿನಿಯನ್ನು ನೋಡಿ, ಕಣ್ಣಿನ ಸಂಜ್ಞೆಯಿಂದ ಕೆಲವರೂ, ಕೆಲವರು ತುಟಿಗಳ ಸಂಜ್ಞೆಯಿಂದಲೂ, ಕೆಲವರು ಮುಖ ಸಂಜ್ಞೆಯಿಂದಲೂ ಆಕೆಯನ್ನು ಸಮಾಧಾನಗೊಳಿಸುತ್ತಿದ್ದರು. ॥೮–೧೧॥ ಆಗ ಸೀತಾದೇವಿಯು ಧೈರ್ಯಗೆಡದೆ ತನ್ನ ಪಾತಿವ್ರತ್ಯಬಲದಿಂದ ಕೂಡಿ ತನಗೆ ಹಿತಕರವಾದ ಈ ಮಾತನ್ನಾಡಿದಳು. "ಎಲೆರಾವಣ! ನಿನ್ನ ಹಿತವನ್ನೇ ಬಯಸಿ ನಿನಗೆ ಹಿತಬೋಧೆಮಾಡುವವನೊಬ್ಬನೂ ಇಲ್ಲಿಲ್ಲವೆಂದೇ ತೋರುತ್ತದೆ. ಇಂತಹ ಹೀನಕಾರ್ಯದಲ್ಲಿ ಪ್ರವರ್ತಿಸಿರುವ ನಿನ್ನನ್ನು ತಡೆಯುವವರು ಯಾರೂ ಇಲ್ಲದೆಹೋದರೆ! ಇಂದ್ರನಿಗೆ ಶಚೀದೇವಿಯಂತೆ, ಮಹಾಧರ್ಮಾತ್ಮನಾದ ಶ್ರೀರಾಮನಿಗೆ ಧರ್ಮಪತ್ನಿಯಾಗಿರುವ ನನ್ನನ್ನು ಬಯಸುವವರು ಮೂರು ಲೋಕಗಳಲ್ಲಿ ನಿನ್ನಹೊರತು ಯಾರೂ ಇರುವುದಿಲ್ಲವು. ॥೧೨–೧೪॥ ಇದು ಧರ್ಮವಿರುದ್ಧವಾದ ಕಾರ್ಯವೆಂದು ನಿನಗೆ ಹೇಳಿ ನಿನ್ನ ಬುದ್ಧಿಯನ್ನು ನಿರ್ಮಲಗೊಳಿಸುವವನಾವನೂ ಇಲ್ಲವೇ!

¶ ಯತ್ಪಾಪಂ ಕ್ವಗತಸ್ತಸ್ಯ ಮೋಕ್ಷ್ಯಸೇ ॥ ೧೫ ॥ ಯಥಾ ದೃಪ್ತಶ್ಚ ಮಾತಂಗ ಶ್ಯಶಶ್ಚ ಸಹಿತಾ ವನೇ । ತಥಾ ದ್ವಿರದವದ್ರಾಮಸ್ತ್ವಂ ನೀಚ ಶಶವತ್ಸ್ಮೃತಃ ॥ ೧೬ ॥ ಸತ್ವ ಮಿಕ್ಷ್ವಾಕುನಾಥಂವೈ ಕ್ಷಿಪನ್ನಿಹ ನಲಜ್ಜಸೇ । ಚಕ್ಷುಷೋ ರ್ವಿಷಯಂ ತಸ್ಯ ನತಾವ ದುಪಗಚ್ಛಸಿ ॥ ೧೭ ॥ ಇಮೇ ತೇ ನಯನೇ ಕ್ರೂರೇ ¥ ವಿರೂಪೇ ಕೃಷ್ಣಪಿಂಗಳೇ । ಕ್ಷಿತೌ ನಪತಿತೇ ಕಸ್ಮಾನ್ಮಾಮನಾರ್ಯ! ನಿರೀಕ್ಷತಃ ॥ ೧೮ ॥ ತಸ್ಯ ಧರ್ಮಾತ್ಮನಃ

ಹೆಂಡತಿಯಾದ ನನ್ನನ್ನು ಕುರಿತು, ಪಾಪಂ-ಪಾಪಕರವಾದ, ಯತ್-ಯಾವಮಾತನ್ನು, ಉಕ್ತವಾ‌ಕ್ - ಹೇಳಿದವನು, ಅಸಿ - ಆದೆಯೋ, ಕ್ವಗತಃ - ಎಲ್ಲಿಹೋದರೂ, ತಸ್ಯ - ಆ ವಾಗ್ದೋಷದಿಂದ, ಮೋಕ್ಷ್ಯಸೇ - ಬಿಡುಗಡೆಯಾಗುವೆ. ॥ ೧೫ ॥ ವನೇ - ಕಾಡಿನಲ್ಲಿ, ದೃಪ್ತಃ - ಕೊಬ್ಬಿದ, ಮಾತಂಗಶ್ಚ - ಆನೆಯೂ, ಶಶಶ್ಚ - ಮೊಲವೂ ಕೂಡ, ಯಥಾ-ಯಾವಬಗೆಯಾಗಿ, ಸಹಿತೌ - ಕಾಳೆಗಕ್ಕಾಗಿ ಸೇರುತ್ತ ವೆಯೋ, ತಥಾ - ಹಾಗೆ, ಹೇನೀಚ - ಎಲೈ ನೀಚನೇ, ರಾಮಃ - ಶ್ರೀರಾಮನು, ದ್ವಿರದವತ್ - ಆನೆ ಯಂತೆ, ಸ್ಮೃತಃ - ನೆನಿಸಲ್ಪಟ್ಟವನು, ತ್ವಂ-ನೀನು, ಶಶವತ್ - ಮೊಲದಂತೆ, ಸ್ಮೃತಃ - ಭಾವಿಸಲ್ಪಟ್ಟಿ ರುವವನು. ॥ ೧೬ ॥ ಸತ್ವಂ - ಅಂತಹ ನೀನು, ಇಕ್ಷ್ವಾಕುನಾಥಂ - ಇಕ್ಷ್ವಾಕುವಂಶಾಧಿಪತಿಯಾದ ಶ್ರೀರಾಮನನ್ನು, ಕ್ಷಿಪ‌ನ್ - ಎತ್ತಿಹಾಕಿ, ಇಹ ಈ ಸ್ತ್ರೀಜನಗಳಲ್ಲಿ, ನಲಜ್ಜಸೇ - ನಾಚಿಕೆಗೊಳ್ಳದಿರುವೆ ಯೇಕೆ, ತಸ್ಯ - ಆ ಶ್ರೀರಾಮನ, ಚಕ್ಷುಷೋಃ - ನೇತ್ರಗಳಿಗೆ, ವಿಷಯಂತಾವತ್ - ಲಕ್ಷ್ಯವನ್ನಾದರೇ, ನೋಪಗಚ್ಛಸಿ - ಹೊಂದಿದವನಲ್ಲದೆ ಹೋದೆ. ॥ ೧೭ ॥ ಹೇ ಅನಾರ್ಯ - ಎಲೈ ನೀಚನೇ, ಮಾಂ- ನನ್ನನ್ನು, ನಿರೀಕ್ಷತಃ - ನೋಡುತ್ತಿರುವ, ತೇ - ನಿನ್ನ, ಇಮೇ - ಈ ಕಾಣುತ್ತಿರುವ, ಕ್ರೂರೇ - ಭಯಂಕರಂಗಳಾದ, ವಿರೂಪೇ - ವಿಕಾರವಾದ, ಕೃಷ್ಣಪಿಂಗಳೇ - ಕಪ್ಪಾಗಿಯೂ ಹಸುರಾಗಿಯೂ ಇರುವ, ನಯನೇ - ನೇತ್ರಗಳು, ಕ್ಷಿತೌ - ನೆಲದಲ್ಲಿ, ಕಸ್ಮಾತ್ - ಯಾವಕಾರಣದಿಂದ, ನಪತಿತೇ - ಬೀಳದೇ ಇರುವವು. ॥ ೧೮ ॥ ಧರ್ಮಾತ್ಮನಃ - ಧರ್ಮಿಷ್ಠನಾದ, ತಸ್ಯ - ಆ ಶ್ರೀರಾಮನಿಗೆ, ಪತ್ನೀಂ- ಹೆಂಡತಿಯಾದ, ದಶರಥಸ್ಯ - ದಶರಥರಾಯನಿಗೆ, ಸ್ನುಷಾಂಚ - ಸೊಸೆಯೂ ಆದ, ಮಾಂ - ನನ್ನನ್ನು,

ಇದು ಸತ್ಯವು. ಎಲೈ ರಾಕ್ಷಸಾಧಮನೇ! ಮಹಾ ಭುಜಬಲಪರಾಕ್ರಮಶಾಲಿಯಾದ ಶ್ರೀರಾ ಮನ ಭಾರ್ಯೆಯಾದ ನನ್ನನ್ನು ಕುರಿತು ನೀನು ಯಾವಯಾವ ಪಾಪವಚನಗಳನ್ನಾಡಿದೆಯೋ, ಅವುಗಳ ಫಲವನ್ನು ನೀನೆಲ್ಲಿಗೆ ಹೋದರೆತಾನೆ ತಪ್ಪಿಸಿಕೊಂಡೀಯೆ! ಅರಣ್ಯದಲ್ಲಿ ಮದಗಜ ವನ್ನು ಎದುರಿಸಿ ನಿಲ್ಲುವ ಮೊಲದಂತೆ, ಮದಗಜಸಮಾನನಾದ ಶ್ರೀರಾಮನನ್ನು, ಮೊಲವಾದ ನೀನು ಎದುರಿಸಿ ನಿಲ್ಲಬಲ್ಲೆಯೆಂದು ತಿಳಿದೆಯೇನು? ಅಯ್ಯೋ ನಾಚಿಕೆಯಿಲ್ಲದವನೇ! ನೀನು ಇಕ್ಷ್ವಾಕುವಂಶಜರಲ್ಲಿ ಶ್ರೇಷ್ಠನಾದ ಶ್ರೀರಾಮನು ದೂರದಲ್ಲಿರುವುದನ್ನು ನೋಡಿ ನನ್ನನ್ನು ಕದ್ದುತಂದೆಯಲ್ಲವೆ? ನೀನಿದುವರೆಗೂ ಆತನ ಕಣ್ಣಿಗೆ ಬೀಳಲಿಲ್ಲ. ಆತನ ದೃಷ್ಟಿಗೆ ನೀನು ಬಿದ್ದೆಯಾದರೆ ಆಗ ಆತನ ಪ್ರರಾಕ್ರಮವು ನಿನಗೆ ಮನವರಿಕೆಯಾಗುವುದು. ಎಲೈ ಕ್ರೂರ ಕರ್ಮಿಯೇ! ನನ್ನನ್ನು ನೆಟ್ಟನೆ ನೋಡುತ್ತಿರುವ ವಿಕಾರವಾದ ನಿನ್ನ ಕಣ್ಣುಗಳೇಕೆ ಭೂಮಿಗೆ ಕಳಚಿ ಬೀಳಲಿಲ್ಲವೋ! ॥೧೫-೧೮॥ ಎಲವೊ ದುಷ್ಟ ರಾವಣನೇ! ನಾನು ಮಹಾ ಧರ್ಮಿಷ್ಠ ನಾದ ಶ್ರೀರಾಮಚಂದ್ರನ ಪತ್ನಿಯು. ಸುಪ್ರಸಿದ್ಧನಾದ ದಶರಥರಾಯನ ಸೊಸೆಯು. ಇಂತಹ

¶ "ಯಚ್ಛಾಪಂ" ಗೋ. ಪಾ. ¥ "ವಿಕೃತೇ" ತಿ. ಪಾ.

ಪತ್ನೀಂ ಸ್ನುಷಾಂ ಧಶರಥಸ್ಯಚ। ಕಥಂ ವ್ಯಾಹರತೋ ಮಾಂ ತೇ ನ ಜಿಹ್ವಾ§ ವ್ಯವಶೀರ್ಯತೇ ॥ ೧೯ ॥ ಅಸಂದೇಶಾತ್ತು ರಾಮಸ್ಯ ತಪಸಶ್ಚಾನುಪಾಲನಾತ್ । ನತ್ವಾಂ ಕುರ್ಮಿ ದಶಗ್ರೀವ! ಭಸ್ಮ ಭಸ್ಮಾರ್ಹತೇಜಸಾ ॥ ೨೦ ॥ ನಾಪಹರ್ತುಮಹಂ ಶಕ್ಯಾ ತ್ವಯಾ ರಾಮಸ್ಯ ಧೀಮತಃ । ವಿಧಿಸ್ತವ ವಧಾರ್ಥಾಯ ವಿಹಿತೋ ನಾತ್ರಸಂಶಯಃ ॥ ೨೧ ॥ ಶೂರೇಣ ಧನದ ಭ್ರಾತ್ರಾ ಬಲೈಸ್ಸಮುದಿತೇನಚ । ಅಪೋಹ್ಯ ರಾಮಂ ಕಸ್ಮಾದ್ಧಿ ದಾರಚೌರ್ಯಂ ತ್ವಯಾ ಕೃತಂ?'' ॥ ೨೨ ॥ ಸೀತಾಯಾ ವಚನಂ ಶ್ರುತ್ವಾ

ವ್ಯಾಹರತಃ - ಬೈಯುತ್ತಿರುವ, ತೇ - ನಿನ್ನ, ಜಿಹ್ವಾ - ನಾಲಿಗೆಯು, ಕಥಂನವ್ಯವಶೀರ್ಯತೇ - ಸೀಳಿಹೋಗದಿರುವುದೇಕೆ. ॥ ೧೯ ॥ ಕಿಂತು - ಮತ್ತೇನಂದರೆ, ಹೇ ದಶಗ್ರೀವ - ಎಲೈ ದಶಕಂಠನೇ, ಹೇ ಭಸ್ಮಾರ್ಹ - ಬೂದಿಯಾಗುವದಕ್ಕೆ ಅರ್ಹನೇ, ರಾಮಸ್ಯ - ಶ್ರೀರಾಮನ, ಅಸಂದೇಶಾತ್ - ಅಪ್ಪಣೆಯಿಲ್ಲದ್ದರಿಂದಲೂ, ತಪಸಃ - ಪಾತಿವ್ರತ್ಯರೂಪವಾದ ತಪಸ್ಸಿನ, ಅನುಪಾಲನಾಚ್ಚ - ಸಂರಕ್ಷಿಸುವಿಕೆಯಿಂದಲೂ, ತ್ವಾಂ - ನಿನ್ನನ್ನು, ತೇಜಸಾ - ಪಾತಿವ್ರತ್ಯಪ್ರಭಾವದಿಂದ, ಭಸ್ಮ - ಬೂದಿಯನ್ನಾಗಿ, ನಕುರ್ಮಿ - ಮಾಡಲಾರೆನು. ॥ ೨೦ ॥ ಧೀಮತಃ - ಬುದ್ಧಿಶಾಲಿಯಾದ, ರಾಮಸ್ಯ - ಶ್ರೀರಾಮನ ಸಂಬಂಧಿಯಾದ, ಅಹಂ - ನಾನು, ತ್ವಯಾ - ನಿನ್ನಿಂದ, ಅಪಹರ್ತುಂ - ಅಪಹರಿಸುವದಕ್ಕೆ ನಶಕ್ಯಾ-ಸಾಧ್ಯಳಲ್ಲ, ವಿಧಿಃ - ನನ್ನ ಅಪಹರಣರೂಪವಾದ ಕಾರ್ಯವು, ತವ - ನಿನ್ನ, ವಧಾರ್ಥಾಯ - ಸಂಹಾರರೂಪ ಪ್ರಯೋಜನಕ್ಕೋಸ್ಕರ, ವಿಹಿತಃ - ಮಾಡಲ್ಪಟ್ಟಿತು, ಅತ್ರ - ಈ ವಿಷಯದಲ್ಲಿ, ನಸಂಶಯಃ - ಸಂದೇಹವಿಲ್ಲ. ॥ ೨೧ ॥ ಶೂರೇಣ - ವೀರನಾದ, ಧನದಭ್ರಾತ್ರಾ - ಕುಬೇರನಿಗೆ ತಮ್ಮನಾದ, ಬಲೈಃ - ಸೈನ್ಯಗಳಿಂದ, ಸಮುದಿತೇನಚ - ಸರ್ವಶ್ರೇಷ್ಠನೂ ಆದ, ತ್ವಯಾ - ನಿನ್ನಿಂದ, ರಾಮಂ - ಶ್ರೀರಾಮನನ್ನು, ಅಪೋಹ್ಯ - ವಂಚಿಸಿ, ದಾರಚೌರ್ಯಂ-ಇತರನ ಹೆಂಡತಿಯ ಕಳ್ಳತನವು, ಕಸ್ಮಾದ್ಧಿ-ಯಾವಕಾರಣದಿಂದ, ಕೃತಂ - ಮಾಡಲ್ಪಟ್ಟಿತು. ॥ ೨೨ ॥ ರಾಕ್ಷಸಾಧಿಪಃ - ರಾಕ್ಷಸಪ್ರಭುವಾದ,

---

ನನ್ನನ್ನು ಕುರಿತು ನೀನು ಅಧರ್ಮವಾಗಿ ಮಾತನಾಡುತ್ತಿರುವೆಯಲ್ಲಾ ! ನಿನ್ನ ನಾಲಿಗೆಯು ಏಕೆ ಶೀಳಿಹೋಗಲಿಲ್ಲವೋ ಕಾಣೆನು. ಎಲೈ ರಾವಣನೇ! ನಾನೀಗಲೇ ನಿನ್ನನ್ನು ಬಸ್ಮಮಾಡಬಲ್ಲೆನು. ಆದರೆ ನನ್ನ ಪತಿಯಾದ ಶ್ರೀರಾಮನ ಆಜ್ಞೆಯಾಗಿಲ್ಲದಿರುವುದರಿಂದಲೂ, ನನ್ನ ಪಾತಿವ್ರತ್ಯರೂಪವಾದ ತಪಸ್ಸಿನ ಫಲವು ತಗ್ಗಿಹೋಗುವುದರಿಂದಲೂ ನನ್ನ ತಪಃಪ್ರಭಾವದಿಂದ ನಿನ್ನನ್ನು ಸುಟ್ಟು ಬೂದಿಮಾಡದಿರುವೆನು. ॥ ೧೯–೨೦ ॥ ಎಲೈ ರಾವಣನೇ! ನೀನು ಮಹಾ ಧೀರನಾದ ಶ್ರೀರಾಮನಿಂದ ಪತಿವ್ರತೆಯಾದ ನನ್ನನ್ನು ತಪ್ಪಿಸಬೇಕೆಂದು ಯತ್ನಿಸಿದರೆ ಅದು ಸಾಧ್ಯವಾದೀತೆ? ಈಗ ನೀನು ನನ್ನನ್ನಿಲ್ಲಿಗೆ ತಂದಿದ್ದರೂ ನಿನ್ನ ಸಾವಿಗಾಗಿಯೇ ಈ ರೀತಿಯಾದೊಂದು ವಿಧಿಯು ಏರ್ಪಟ್ಟಿರುವುದೆಂದು ತಿಳಿ. ಎಲೆವೊ ನೀಚನೇ! ನೀನು ನನ್ನಮುಂದೆ ನಿಂತು "ನಾನು ಮಹಾ ಪರಾಕ್ರಮಿಯು! ನಾನು ಕುಬೇರನ ತಮ್ಮನು!! ನಾನು ಬಲದಲ್ಲಿ ಸಮಸ್ತರನ್ನೂ ಮೀರಿಸಬಲ್ಲವನು !!!'' ಎಂದು ಹೆಮ್ಮೆಯನ್ನು ಕೊಚ್ಚಿಕೊಂಡೆಯಲ್ಲವೆ? ನೀನು ಹೇಳಿಕೊಂಡುದೆಲ್ಲವೂ ಸತ್ಯವಾಗಿದ್ದಲ್ಲಿ ಮೋಸದಿಂದ ನನ್ನ ಪತಿಯಾದ ಶ್ರೀರಾಮನನ್ನು ದೂರಮಾಡಿ ನನ್ನನ್ನು ಕದ್ದು ತಂದೆಯೇಕೆ?'' ಎಂದು ಹೇಳಿದಳು. ॥೨೧–೨೨॥

---

§ "ಶಾಪ" ತಿ. ಪಾ.

ರಾವಣೋ ರಾಕ್ಷಸಾಧಿಪಃ । ವಿವೃತ್ಯ ನಯನೇ ಕ್ರೂರೇ ಜಾನಕೀ ಮನ್ವವೈಕ್ಷತ ॥೨೩॥ ನೀಲಜೀಮೂತ ಸಂಕಾಶೋ ಮಹಾಭುಜ ಶಿರೋಧರಃ । ಸಿಂಹಸತ್ವಗತಿಶ್ಶ್ರೀಮಾ೯ ದೀಪ್ತ § ಜಿಹ್ವಾಗ್ರಲೋಚನಃ ॥ ೨೪ ॥ ಚಲಾಗ್ರಮುಕುಟಪ್ರಾಂಶು ಶ್ಚಿತ್ರಮಾಲ್ಯಾನು ಲೇಪನಃ । ರಕ್ತಮಾಲ್ಯಾಂಬರಧರ ಸ್ತಪ್ತಾಂಗದವಿಭೂಷಣಃ ॥ ೨೫ ॥ ಶ್ರೋಣೀ ಸೂತ್ರೇಣ ಮಹತಾ ಮೇಚಕೇನ ಸುಸಂವೃತಃ । ಅಮೃತೋತ್ಪಾದನದ್ಧೇನ ಭುಜಗೇ ನೇವ ಮಂದರಃ ॥೨೬॥ ತಾಭ್ಯಾಂ ಸಪರಿಪೂರ್ಣಾಭ್ಯಾಂ ಭುಜಾಭ್ಯಾಂ ರಾಕ್ಷಸೇಶ್ವರಃ । ಶುಶುಭೇಽಚಲಸಂಕಾಶ ಶ್ಶೃಂಗಾಭ್ಯಾಮಿವ ಮಂದರಃ ॥ ೨೭ ॥ ತರುಣಾದಿತ್ಯ

ರಾವಣಃ - ರಾವಣನು, ಸೀತಾಯಾಃ - ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಕೋಪಾತ್ - ಕ್ರೋಧದಿಂದ, ನಯನೇ - ನೇತ್ರಗಳನ್ನು, ವಿವೃತ್ಯ - ತಿರುವಿ, ಜಾನಕೀಂ - ಸೀತಾದೇವಿಯನ್ನು, ಅನ್ವವೈಕ್ಷತ - ಕಂಡನು. ॥ ೨೩ ॥ ನೀಲ....ಶಃ - ಕಪ್ಪಾಗಿರುವ ಮೇಘಕ್ಕೆ ಸದೃಶನಾದ, ಮಹಾ....ರಃ-ದೊಡ್ಡವುಗಳಾದ ತೋಳುಗಳೂ ಕೊರಳೂ ಉಳ್ಳ, ಸಿಂಹಸತ್ವಗತಿಃ - ಸಿಂಹದಂತೆ, ಬಲವೂ ಗಮನವೂ ಸಹಾ ಉಳ್ಳ, ಶ್ರೀಮಾ೯ - ತೇಜೋವಂತನಾದ, ದೀಪ್ತ....ನಃ - ಸುಡುತ್ತಿರುವ, ಕೊನೆನಾಲಿಗೆಯೂ ನೇತ್ರಗಳೂ ಉಳ್ಳ, ಚಲಾ....ಶಃ - ಚಲಿಸುತ್ತಿರುವ ಕೊನೆಯುಳ್ಳ ಕಿರೀಟದಿಂದ ಉದ್ದವಾಗಿರುವ, ಚಿತ್ರ....ನಃ - ನಾನಾವಿಧಗಳಾದ ಪೂಸರಗಳೂ ಗಂಧವೂ ಉಳ್ಳ, ರಕ್ತ....ರಃ - ಕೆಂಪಾಗಿರುವ, ಮಾಲಿಕೆಗಳನ್ನೂ ವಸ್ತ್ರವನ್ನೂ ಧರಿಸಿರುವ, ತಪ್ತಾಂ....ಣಃ ಅಪರಂಜಿಯ ಬಾಹುಜಿಗೆಗಳೇ ಆಭರಣವಾಗಿಯುಳ್ಳ, ಮಹತಾ - ದೊಡ್ಡದಾದ, ಮೇಚಕೇನ - ಶ್ಯಾಮಲವರ್ಣವಾದ, ಶ್ರೋಣೀಸೂತ್ರೇಣ - ಉಡುಧಾರದಿಂದ, ಸುಸಂವೃತಃ - ಸುತ್ತುವರೆದವನಾದಕಾರಣವೇ, ಅಮೃ....ನ-ಅಮೃತವು ಹುಟ್ಟುವಕಾಲದಲ್ಲಿ ಕಟ್ಟಲ್ಪಟ್ಟ, ಭುಜಂಗೇನ - ಸರ್ಪರಾಜನಾದ ವಾಸುಕಿಯಿಂದ, ಮಂದರಇವ ಸ್ಥಿತಃ - ಮಂದರಪರ್ವತದಂತಿರುವ, ಅಚಲಸಂಕಾಶಃ - ಪರ್ವತಕ್ಕೆ ಸಮಾನನಾದ, ರಾಕ್ಷಸೇಶ್ವರಃ - ರಾಕ್ಷಸಾಧಿಪತಿಯಾದ, ಸಃ-ಆ ರಾವಣನು, ಪರಿಪೂರ್ಣಾಭ್ಯಾಂ-ತುಂಬಿರುವ, ತಾಭ್ಯಾಂಭುಜಾಭ್ಯಾಂ - ಆ ತೋಳುಗಳಿಂದ, ಶೃಂಗಾಭ್ಯಾಂ - ಎರಡುಶಿಖರಗಳಿಂದ, ಮಂದರಇವ - ಮಂದರಪರ್ವತದಂತೆ, ಶುಶುಭೇ - ಹೊಳೆಯುತ್ತಿದ್ದನು. ॥ ೨೪-೨೭ ॥ ತರು....ಭ್ಯಾಂ - ಬಾಲಸೂರ್ಯನ ಬಣ್ಣವುಳ್ಳ,

---

ಸೀತಾದೇವಿಯು ಆಡಿದ ಈ ಮಾತುಗಳನ್ನು ಕೇಳಿ ರಾವಣನು ಮಹಾ ಭಯಂಕರವಾದ ತನ್ನ ನೇತ್ರಗಳಿಂದ ಆಕೆಯನ್ನು ದುರದುರನೆ ನೋಡುತ್ತಿದ್ದನು. ಆ ರಾವಣನು ನೀಲಮೇಘದಂತೆ ಕಪ್ಪಾದವನು ; ದೊಡ್ಡ ಭುಜಗಳುಳ್ಳವನು ; ಸಿಂಹದಂತೆ ನಡಿಗೆಯುಳ್ಳವನು ; ಮುಖದಲ್ಲಿ ರಾಜಕಳೆಯುಳ್ಳವನು ; ಮಹಾ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿರುವ ನಾಲಿಗೆಯ ಕೊನೆಯೂ, ಕಣ್ಣುಗಳೂ ಉಳ್ಳವನು. ಕೋಪವು ಅಧಿಕವಾಗಿ ಅವನ ತಲೆಯಮೇಲಿದ್ದ ಕಿರೀಟವು ಕಂಪಿಸುತ್ತಿದ್ದಿತು. ವಿವಿಧ ಪುಷ್ಪಮಾಲಿಗಳನ್ನು ಧರಿಸಿ, ಲೇಪನಗಳನ್ನು ಲೇಪಿಸಿಕೊಂಡು ಪುಟಪಾಕಶೋಧಿತವಾದ ಬಂಗಾರದ ಬಾಹುಜಿಗೆಗಳನ್ನೂ, ಬಹು ದೊಡ್ಡದಾದ ಸೊಗಸಾದ ಉಡುದಾರವನ್ನೂ ಧರಿಸಿದವನಾಗಿ ಅಮೃತಮಥನಕ್ಕಾಗಿ ಸರ್ಪದಿಂದ ಸುತ್ತುವರೆದ ಮಂದರಪರ್ವತದಂತೆ ಕಂಗೊಳಿಸುತ್ತಿದ್ದನು. ॥ ೨೩–೨೭ ॥ ಬಾಲಸೂರ್ಯನಂತೆ

---

§ "ಜಿಹ್ವೋಗ್ರ" ತಿ. ಪಾ.

ವರ್ಣಾಭ್ಯಾಂ ಕುಂಡಲಾಭ್ಯಾಂ ವಿಭೂಷಿತಃ । ರಕ್ತಪಲ್ಲವಪುಷ್ಪಾಭ್ಯಾಮಶೋಕಾಭ್ಯಾಮಿವಾಚಲಃ ॥ ೨೮ ॥ ಸಕಲ್ಪವೃಕ್ಷಪ್ರತಿಮೋ ವಸಂತಇವ ಮೂರ್ತಿಮಾನ್ । ಶ್ಮಶಾನಚೈತ್ಯಪ್ರತಿಮೋ ಭೂಷಿತೋಽಪಿ ಭಯಂಕರಃ ॥ ೨೯ ॥ ಅವೇಕ್ಷಮಾಣೋ ವೈದೇಹೀಂ ಕೋಪಸಂರಕ್ತಲೋಚನಃ । ಉವಾಚ ರಾವಣಸ್ಸೀತಾಂ ಭುಜಂಗಇವ ನಿಶ್ಶ್ವಸನ್ ॥೩೦॥ ¶ "ಅನಯೇನಾಭಿಸಂಪನ್ನಮರ್ಥಹೀನಮನುವ್ರತೇ! । ನಾಶಯಾಮ್ಯಹಮದ್ಯ ತ್ವಾಂ ಸೂರ್ಯಸ್ಸಂಧ್ಯಾಮಿವೌಜಸಾ" ॥ ೩೧ ॥ ಇತ್ಯುಕ್ತ್ವಾ ಮೈಥಿಲೀಂ

ಕುಂಡಲಾಭ್ಯಾಂ - ಹತ್ತುಕಡುಕುಗಳಿಂದ, ವಿಭೂಷಿತಃ - ಅಲಂಕೃತನಾದಕಾರಣವೇ, ರಕ್ತ....ಭ್ಯಾಂ - ಕೆಂಪಾಗಿರುವ ಚಿಗುರುಗಳೂ ಹುವ್ವುಗಳೂ ಉಳ್ಳ, ಅಶೋಕಾಭ್ಯಾಂ - ಅಶೋಕವೃಕ್ಷಗಳಿಂದ ಕೂಡಿರುವ, ಅಚಲಇವಸ್ಥಿತಃ-ಬೆಟ್ಟದಂತಿರುವ, ಕಲ್ಪ....ಮಃ-ಕಲ್ಪವೃಕ್ಷಕ್ಕೆ ಸಮಾನನಾದ, ಮೂರ್ತಿಮಾನ್ - ಶರೀರಧಾರಿಯಾದ, ವಸಂತಇವಸ್ಥಿತಃ - ವಸಂತಕಾಲದಂತಿರುವ, ಶ್ಮಶಾ....ಮಃ-ರುದ್ರಭೂಮಿಯಲ್ಲಿರುವ ಮಂಟಪಕ್ಕೆ (ಅರಳೆಯಮರಕ್ಕೆ) ಸಮಾನನಾದಕಾರಣವೇ, ಭೂಷಿತೋಽಪಿ - ಅಲಂಕೃತನಾದರೂ, ಭಯಂಕರಃ - ಭೀಕರನಾದ, ಕೋ....ನಃ-ಕ್ರೋಧದಿಂದ ಬಹಳ ಕೆಂಪಾದ, ನೇತ್ರಗಳುಳ್ಳ, ಸರಾವಣಃ - ಆ ರಾವಣನು, ಭುಜಂಗಇವ - ಸರ್ಪದಂತೆ, ನಿಶ್ಶ್ವಸನ್ - ನಿಟ್ಟುಸಿರು ಬಿಟ್ಟವನಾಗಿ, ವೈದೇಹೀಂ-ಜನಕರಾಯನಮಗಳಾದ, ಸೀತಾಂ-ಸೀತಾದೇವಿಯನ್ನು, ಅವೇಕ್ಷಮಾಣಃ-ನೋಡುತ್ತಿರುವನಾಗಿ, ಉವಾಚ - ಹೇಳಿದನು. ॥ ೨೮-೩೦ ॥ ಹೇ ಅನಯೇ - ಎಲೌ ಅನೀತಿವಂತಳೇ, ನಾಭಿಸಂಪನ್ನಂ - ರಾಜ್ಯಲಕ್ಷ್ಮಿಯಿಂದೊಡಗೂಡದಿರುವಕಾರಣ, ಅರ್ಥಹೀನಂ - ದ್ರವ್ಯದಿಂದ ರಹಿತನಾದ ರಾಮನನ್ನು, ಅನುವ್ರತೇ - ಅನುಸರಿಸಿದವಳೇ, ಅದ್ಯ - ಈಗ, ಅಹಂ - ನಾನು, ತ್ವಾಂ - ನಿನ್ನನ್ನು, ಸೂರ್ಯಃ - ಸೂರ್ಯನು, ಓಜಸಾ - ತೇಜಸ್ಸಿನಿಂದ, ಸಂಧ್ಯಾಮಿವ - ಸಂಧ್ಯಾಕಾಲವನ್ನಂತೆ, ನಾಶಯಾಮಿ - ನಾಶಮಾಡುತ್ತೇನೆ. ॥ ೩೧ ॥ ಶತ್ರುರಾವಣಃ - ಹಗೆಗಳನ್ನು ದೀನಧ್ವನಿಯುಳ್ಳವರನ್ನಾಗಿ ಮಾಡುತ್ತಿರುವ, ರಾಜಾ - ರಾಕ್ಷಸರಾಜನಾದ, ರಾವಣಃ - ರಾವಣನು, ಮೈಥಿಲೀಂ - ಸೀತಾದೇವಿ

ಹೊಳೆಯುತ್ತಿರುವ ಕರ್ಣಕುಂಡಲಗಳನ್ನು ಧರಿಸಿದ್ದ ಆ ರಾಕ್ಷಸರಾಜನು, ಕೆಂದಳಿರುಗಳಿಂದಲೂ, ಹೂವುಗಳಿಂದಲೂ ಕೂಡಿದ ಅಶೋಕವೃಕ್ಷಗಳಿಂದ ಶೋಭಿಸುತ್ತಿರುವ ಪರ್ವತದಂತೆಯೂ, ಮೂರ್ತೀಭವಿಸಿದ ವಸಂತಋತುವಿನಂತೆಯೂ, ಕಲ್ಪವೃಕ್ಷದಂತೆಯೂ ಕಂಗೊಳಿಸುತ್ತಿದ್ದರೂ ಶ್ಮಶಾನದಲ್ಲಿರುವ ವೃಕ್ಷದಂತೆ ಬಹು ಭಯಂಕರನಾಗಿ ಕಾಣುತ್ತಿದ್ದನು. ಹೀಗೆ ಮಹಾ ಭಯಂಕರವಾದ ನೋಟವುಳ್ಳ ಆ ರಾವಣನು ಸೀತಾದೇವಿಯನ್ನು ಕೆಂಡದಂತೆ ಕೆಂಪಾದ ತನ್ನ ಕಣ್ಣುಗಳಿಂದ ದುರದುರನೆ ನೋಡುತ್ತ ಆಕೆಯನ್ನು ಕುರಿತು, "ಎಲೆ, ನೀತಿಹೀನನಾದ, ನ್ಯಾಯಹೀನನಾದ, ದರಿದ್ರನಾದ ರಾಮನಲ್ಲಿಯೇ ವ್ರತವುಳ್ಳ ಸೀತೇ! ಸೂರ್ಯನು ಸ್ವತೇಜಸ್ಸಿನಿಂದ ಸಂಧ್ಯಾಕಾಲವನ್ನು ನಾಶಗೊಳಿಸುವಂತೆ ಈಗಲೇ ನಾನು ನಿನ್ನನ್ನು ಧ್ವಂಸಮಾಡುವೆನು" ಎಂದು ಹೇಳಿ ಅಲ್ಲಿಯೇ ಕಾವಲಿದ್ದ ಭಯಂಕರ ರಾಕ್ಷಸಿಯರ ಕಡೆಗೆ ತಿರುಗಿದನು. ಆ ರಾಕ್ಷಸಿಯರಲ್ಲಿ ಒಬ್ಬಳು ಒಂದೇ ಕಣ್ಣಿನವಳು ; ಒಬ್ಬಳು ಒಂದೇ ಕಿವಿಯುಳ್ಳವಳು;

¶ ಈ ಶ್ಲೋಕವು ಅನೇಕ ಮಾತೃಕೆಗಳಲ್ಲಿ ಕಂಡುಬರುವುದಿಲ್ಲವಾದಕಾರಣ ಇದನ್ನು ವ್ಯಾಖ್ಯಾನಿಸಿರುವುದಿಲ್ಲ. (ಮ)

ರಾಜಾ ರಾವಣ ಶ್ಶತ್ರುರಾವಣಃ । ‡ ಸಂದಿದೇಶ ತತಸ್ಸರ್ವಾ ರಾಕ್ಷಸೀ ರ್ಘೋರ ದರ್ಶನಾಃ ॥ ೩೨ ॥ ಏಕಾಕ್ಷೀ ಮೇಕಕರ್ಣಾಂಚ ಕರ್ಣಪ್ರಾವರಣಾಂ ತಥಾ । ಗೋಕರ್ಣೀಂ ಹಸ್ತಿಕರ್ಣೀಂಚ ಲಂಬಕರ್ಣೀ ಮಕರ್ಣಿಕಾಂ ॥ ೩೩ ॥ ಹಸ್ತಿಪಾದ್ಯಶ್ವ ಪಾದ್ಯೌಚ ಗೋಪಾದೀಂ ಪಾದಚೂಳಿಕಾಂ । ಏಕಾಕ್ಷೀ ಮೇಕಪಾದೀಂಚ ಪೃಥುಪಾದೀ ಮಪಾದಿಕಾಂ ॥ ೩೪ ॥ ಅತಿಮಾತ್ರಶಿರೋಗ್ರೀವಾ ಮತಿಮಾತ್ರಕುಚೋದರೀಂ । ಅತಿಮಾತ್ರಾಽಸ್ಯನೇತ್ರಾಂಚ ದೀರ್ಘಜಿಹ್ವಾ ಮಜಿಹ್ವಿಕಾಂ । ಅನಾಸಿಕಾಂ ಸಿಂಹ ಮುಖೀಂ ಗೋಮುಖೀಂ ಸೂಕರೀಮುಖೀಂ ॥ ೩೫ ॥ " ಯಥಾ ಮದ್ವಶಗಾ ಸೀತಾ

ಯನ್ನು ಕುರಿತು, ಇತಿ - ಈ ಪ್ರಕಾರವಾಗಿ, ಉಕ್ತ್ವಾ - ಹೇಳಿ, ತತಃ - ಬಳಿಕ, ಏಕಾಕ್ಷೀಂ - ಒಂದು ಕಣ್ಣುಳ್ಳವಳನ್ನೂ, ಏಕಕರ್ಣಾಂಚ - ಒಂದು ಕಿವಿಯುಳ್ಳವಳನ್ನೂ, ಕರ್ಣ....ಣಾಂ - ಕಿವಿಯೇ ಹೊದ್ದಿಕೆಯಾಗಿವುಳ್ಳವಳನ್ನೂ, ಗೋಕರ್ಣೀಂ - ಆಕಳಿನ ಕಿವಿಗಳಂತೆ ಕಿವಿಗಳುಳ್ಳವಳನ್ನೂ, ಹಸ್ತಿ ಕರ್ಣೀಂಚ - ಆನೆಯ ಶ್ರೋತ್ರಗಳಂತೆ ಶ್ರೋತ್ರಗಳುಳ್ಳವಳನ್ನೂ, ಲಂಬಕರ್ಣೀಂ - ಜೋಲಾಡುತ್ತಿ ರುವ ಕರ್ಣಗಳುಳ್ಳವಳನ್ನೂ, ಅಕರ್ಣಿಕಾಂ - ಕಿವಿಯಿಲ್ಲದಿರುವವಳನ್ನೂ. ಹಸ್ತ....ಚ-ಆನೆಯ ಪಾದಗ ಪಾದಗಳುಳ್ಳವಳನ್ನೂ, ಕುದುರೆಯ ಕಾಲುಗಳಂತೆ ಕಾಲುಗಳುಳ್ಳವಳನ್ನೂ, ಗೋಪಾದೀಂ-ಗೋವಿನ ಪಾದಗಳಂತೆ ಪಾದಗಳುಳ್ಳವಳನ್ನೂ, ಪಾದಚೂಳಿಕಾಂ - ಪಾದದಲ್ಲಿ ಕೂದುಲುಳ್ಳವಳನ್ನೂ, ಏಕಾಕ್ಷೀಂ- ಒಂದು ಕಣ್ಣುಳ್ಳ ಮತ್ತೋರ್ವಳನ್ನೂ, (ಗೋ) ಒಂದೊಂದೇ ಇಂದ್ರಿಯವುಳ್ಳವಳನ್ನೂ, ಏಕಪಾ ದೀಂಚ - ಒಂದು ಪಾದವುಳ್ಳ, ಮತ್ತೊಬ್ಬಳನ್ನೂ, ಪೃಥುಪಾದೀಂ - ದೊಡ್ಡಪಾದಗಳುಳ್ಳವಳನ್ನೂ, ಅಪಾದಿಕಾಂ - ಪಾದಗಳಿಲ್ಲದವಳನ್ನೂ, ಅತಿ....ವಾಂ - ಪ್ರಮಾಣಾತೀತವಾದ ತಲೆಯೂ ಕೊರಳೂ ಉಳ್ಳವಳನ್ನೂ, ಅತಿ....ರೀಂ - ಬಹಳ ದೊಡ್ಡವಾದ ಸ್ತನಗಳೂ ಹೊಟ್ಟೆಯೂ ಉಳ್ಳ, ಅತಿ....ಚ - ಅತಿ ದೀರ್ಘವಾದ ಮುಖವೂ, ಕಣ್ಣುಗಳೂ ಉಳ್ಳವಳನ್ನೂ, ದೀರ್ಘಜಿಹ್ವಾಂ - ಉದ್ದವಾದ ನಾಲಿಗೆಯುಳ್ಳವ ಳನ್ನು, ಅಜಿಹ್ವಿಕಾಂ - ನಾಲಿಗೆಯಿಲ್ಲದವಳನ್ನೂ, ಅನಾಸಿಕಾಂ - ಮೂಗಿಲ್ಲದವಳನ್ನೂ, ಸಿಂಹಮುಖೀಂ- ಸಿಂಹಮುಖವುಳ್ಳವಳನ್ನೂ, ಗೋಮುಖೀಂ - ಆಕಳಿನ ಮುಖವುಳ್ಳವಳನ್ನೂ, ಸೂಕರೀಮುಖೀಂ - ಹಂದಿಯಮುಖವುಳ್ಳವಳನ್ನೂ, (ಎಂಬ) ಘೋರದರ್ಶನಾಃ - ಭಯಂಕರ ದೃಷ್ಟಿಯುಳ್ಳ, ಸರ್ವಾಃ - ಸಮಸ್ತರಾದ, ರಾಕ್ಷಸೀಃ - ರಾಕ್ಷಸಿಯರನ್ನು ಕುರಿತು, ಸಂದಿದೇಶ - ಆಜ್ಞಾಪಿಸಿದನು. ॥ ೩೨-೩೫ ॥

ಒಬ್ಬಳು ತಲೆಯಮೇಲೆ ಕಿವಿಯುಳ್ಳವಳು ; ಒಬ್ಬಳಿಗೆ ಆಕಳಕಿವಿ ; ಒಬ್ಬಳಿಗೆ ಆನೆಯಕಿವಿ ; ಜೋಲ್ಗಿವಿಯೊಬ್ಬಳಿಗೆ ; ಕಿವಿಯೇ ಇಲ್ಲದವಳೊಬ್ಬಳು ; ಒಬ್ಬಳಿಗೆ ಆನೆಯಕಾಲುಗಳು ; ಕುದುರೆಯಕಾಲೊಬ್ಬಳಿಗೆ, ಹಸುವಿನಕಾಲೊಬ್ಬಳಿಗೆ ; ಕಾಲಿನಲ್ಲಿ ಜುಟ್ಟಿದ್ದವಳೊಬ್ಬಳು ; ಒಬ್ಬಳಿಗೆ ಒಂದೇಕಾಲು ; ಒಬ್ಬಳಿಗೆ ದೊಡ್ಡಕಾಲುಗಳು ; ಕಾಲೇ ಇಲ್ಲದವಳೊಬ್ಬಳು ; ಒಬ್ಬಳು ದಪ್ಪತಲೆಯವಳು ; ದೊಡ್ಡ ಕೊರಳಿನವಳೊಬ್ಬಳು ; ಒಬ್ಬಳಿಗೆ ಪರ್ವತದಂತಹ ಮೊಲೆಗಳು ; ಒಬ್ಬಳಿಗೆ ಬಾನೆಯಂತಹ ಹೊಟ್ಟೆ ; ಗವಿಯಂತೆ ಬಾಯುಳ್ಳವಳೊಬ್ಬಳು ; ಅಗಲವಾದ ಕಣ್ಣುಳ್ಳವಳೊಬ್ಬಳು ; ಬಹು ಉದ್ದವಾದ ನಾಲಗೆಯುಳ್ಳವಳೊಬ್ಬಳು ; ಒಬ್ಬ ಳಿಗೆ ನಾಲಿಗೆಯೇ ಇಲ್ಲ ; ಒಬ್ಬಳಿಗೆ ಮೂಗೇ ಇಲ್ಲ ; ಸಿಂಹ, ಹಂದಿ, ಹಸು ಮುಂತಾದ ಮೃಗ ಗಳ ಮುಖಗಳುಳ್ಳವರು ಕೆಲವರು. ॥ ೩೨-೩೫ ॥ ರಾವಣನು ಇವರೆಲ್ಲರನ್ನೂ ಕುರಿತು,

‡ " ಸಂವದರ್ಶ " ತಿ. ಪಾ.

ಕ್ಷಿಪ್ರಂ ಭವತಿ ಜಾನಕೀ । ತಥಾ ಕುರುತ ರಾಕ್ಷಸ್ಯಸ್ಸರ್ವಾಃ ಕ್ಷಿಪ್ರಂ ಸಮೇತ್ಯಚ॥೩೬॥
ಪ್ರತಿಲೋಮಾನುಲೋಮೈಶ್ಚ ಸಾಮದಾನಾದಿಭೇದನೈಃ । ಆವರ್ಜಯತ ವೈದೇಹೀಂ
ದಂಡಸ್ಯೋದ್ಯಮನೇನಚ" ॥೩೭॥ಇತಿ ಪ್ರತಿಸಮಾದಿಶ್ಯ ರಾಕ್ಷಸೇಂದ್ರಃ ಪುನಃ ಪುನಃ ।
ಕಾಮಮನ್ಯುಪರೀತಾತ್ಮಾ ಜಾನಕೀಂ ಪರ್ಯತರ್ಜಯತ್ ॥ ೩೮ ॥ ಉಪಗಮ್ಯ
ತತಃ ಕ್ಷಿಪ್ರಂ ರಾಕ್ಷಸೀ ¶ ಧಾನ್ಯಮಾಲಿನೀ । ಪರಿಷ್ವಜ್ಯ ದಶಗ್ರೀವ ಮಿದಂ ವಚನ
ಮಬ್ರವೀತ್ ॥ ೩೯ ॥ "ಮಯಾ ಕ್ರೀಡ! ಮಹಾರಾಜ! ಸೀತಯಾ ಕಿಂ ತವಾಽ

ಹೇ ರಾಕ್ಷಸ್ಯಃ - ಎಲೈ ರಾಕ್ಷಸಿಯರೇ, ಜಾನಕೀ - ಜನಕರಾಯನ ಮಗಳಾದ, ಸೀತಾ - ಸೀತೆಯು, ಕ್ಷಿಪ್ರಂ - ಜಾಗ್ರತೆಯಾಗಿ, ಯಥಾ - ಯಾವ ಪ್ರಕಾರವಾಗಿ, ಮದ್ವಶಗಾ - ನನ್ನ ಅಧೀನಳು, ಭವತಿ- ಆಗುವಳೋ, ತಥಾ - ಆ ಪ್ರಕಾರವಾಗಿ, ಸರ್ವಾಃ - ನೀವೆಲ್ಲರೂ, ಸಮೇತ್ಯ - ಸೇರಿ, ಕ್ಷಿಪ್ರಂ - ಬೇಗ, ಕುರುತ - ಮಾಡಿ. ॥ ೩೬ ॥ ಪ್ರತಿ....ಶ್ಚ - ಪ್ರತಿಕೂಲವ್ಯಾಪಾರಗಳಿಂದಲೂ ಅನುಕೂಲಕಾರ್ಯಗ ಳಿಂದಲೂ, ಸಾಮ....ನೈಃ - ಒಡಂಬಡಿಕೆಯು ಆಶೋತ್ಪಾದಕಮಾತುಗಳೇ ಮೊದಲಾದ ಉಪಾಯಗ ಳಿಂದಲೂ, ಭೇದನೈಃ - ಭೇದೋಪಾಯಗಳಿಂದಲೂ, ದಂಡಸ್ಯ - ಶಿಕ್ಷೆಯ, ಉದ್ಯಮನೇನಚ - ಉದ್ಯೋಗದಿಂದಲೂ, ವೈದೇಹೀಂ - ಸೀತೆಯನ್ನು, ಆವರ್ಜಯತ - ಅಧೀನಗೊಳಿಸಿಕೊಳ್ಳಿರಿ. ॥ ೩೭ ॥ ರಾಕ್ಷಸೇಂದ್ರಃ - ರಾಕ್ಷಸಾಧಿಪತಿಯಾದ ರಾವಣನು, ಇತಿ - ಹೀಗೆ, ಪ್ರತಿಸಮಾದಿಶ್ಯ - ಅಪ್ಪಣೆಯ ನ್ನಿತ್ತು, ಕಾಮ....ತ್ಮಾ-ಕಾಮದಿಂದಲೂ ಕೋಪದಿಂದಲೂ ಕೂಡಿರುವ, ಮನವುಳ್ಳವನಾಗಿ, ಜಾನಕೀಂ- ಸೀತಾದೇವಿಯನ್ನು, ಪುನಃಪುನಃ - ಬಾರಿಬಾರಿಗೂ, ಪರ್ಯ....ತ್ - ಹೆದರಿಸಿದನು. ॥ ೩೮ ॥ ತತಃ - ಅನಂತರದಲ್ಲಿ, ರಾಕ್ಷಸೀ-ರಾಕ್ಷಸಿಯಾದ, ಧಾನ್ಯಮಾಲಿನೀ - (ಯ) ಧಾನ್ಯಮಾಲಿಸಿಯೆಂಬ ಪರ್ಯಾಯ ನಾಮವುಳ್ಳ ಮಂಡೋದರಿಯು, (ಗೋ) ರಾವಣನ ಕನಿಷ್ಠಪತ್ನಿಯಾದ ಧಾನ್ಯಮಾಲಿನಿಯೆಂಬವಳು, ಕ್ಷಿಪ್ರಂ - ತ್ವರೆಯಾಗಿ, ಉಪಗಮ್ಯ - ಬಂದು, ದಶಗ್ರೀವಂ - ರಾವಣನನ್ನು, ಪರಿಷ್ವಜ್ಯ - ಆಲಿಂಗನ ಮಾಡಿ, ಇದಂವಚನಂ - ಈ ಮುಂದೆ ಹೇಳುವ ವಾಕ್ಯವನ್ನು, ಅಬ್ರವೀತ್ - ಹೇಳಿದಳು. ॥ ೩೯ ॥ ಹೇ ಮಹಾರಾಜ - ಎಲೈ ಮಹಾರಾಜನೇ, ಹೇ ರಾಕ್ಷಸೇಶ್ವರ - ಎಲೈ ರಾಕ್ಷಸನಾಥನೆ, ಮಯಾ - ನನ್ನೊಡನೆ, ಕ್ರೀಡ - ವಿಹರಿಸು, ವಿವರ್ಣಯಾ - ವಿಜಾತೀಯಳಾದ, ಕೃಪಣಯಾ - ದೀನಳಾದ,

---

"ಎಲೌ ರಾಕ್ಷಸಿಯರೇ! ನೀವೆಲ್ಲರೂ ಸೇರಿ ಈ ಸೀತೆಯು ಶೀಘ್ರವಾಗಿ ನನ್ನ ವಶವಾಗು ವಂತೆ ಮಾತತಕ್ಕದ್ದು. ನಯ, ಭಯ, ವಿರೋಧ, ದಾನಗಳಿಂದಾಗಲಿ, ಮತ್ತಾವ ಉಪಾಯ ದಿಂದಾಗಲಿ ಇವಳು ನನ್ನ ಕೈಸೇರುವಂತೆ ಮಾಡಲೇಬೇಕು" ಎಂದು ಅವರಿಗೆ ಆಜ್ಞಾಪಿಸಿ ದನು. ಇದಾದಮೇಲೆ ಕಾಮಕ್ರೋಧಗಳಿಂದ ಮೈಮೇಲೆ ಪ್ರಜ್ಞೆತಪ್ಪಲು ಆ ರಾವಣನು ಸೀತಾದೇವಿಯನ್ನು ಹೆದರಿಸುತ್ತ ಆಕೆಯ ಕಡೆಗೆ ನುಗ್ಗಿಬಂದನು. ಆ ಸಮಯದಲ್ಲಿ ಧಾನ್ಯ ಮಾಲಿನಿಯೆಂಬ ರಾಕ್ಷಸಾಂಗನೆಯೊಬ್ಬಳು ಮುಂದೆ ಬಂದು ಆ ರಾವಣನನ್ನು ತಡೆದು ಅವನನ್ನು ಬಿಗಿದಪ್ಪಿ, "ಮಹಾರಾಜ! ಮನುಷ್ಯಾಂಗನೆಯಾದ ಈ ಸೀತೆಯಿಂದ ನಿನಗೇನು ಸುಖವುಂಟಾ

¶ ಮುಂದೆ ಹನುಮಂತನು ವಾನರರಲ್ಲಿ ಲಂಕಾವೃತ್ತಾಂತವನ್ನು ಹೇಳುವಾಗ ಮಂಡೋದರಿಯು ರಾವಣನನ್ನು ಅಕೃತ್ಯದಿಂದ ತಡೆದಳೆಂದು ಹೇಳಿರುವುದರಿಂದ ಇಲ್ಲಿ ಮಂಡೋದರಿಗೇ ಧಾನ್ಯಮಾಲಿನಿಯೆಂಬ ಮತ್ತೊಂದು ಹೆಸರೂ ಇದ್ದಿ ತೆಂದು ತಿಳಿಯಬೇಕು. (ಗೋ)

ನಯಾ। ವಿವರ್ಣಯಾ ಕೃಪಣಯಾ ಮಾನುಷ್ಯಾ ರಾಕ್ಷಸೇಶ್ವರ! ॥ ೪೦ ॥ ನೂನ ಮಸ್ಯಾ ಮಹಾರಾಜ! ನದಿವ್ಯಾರ್ ಭೋಗಸತ್ತಮಾರ್ । ವಿದಧಾತ್ಯಮರಶ್ರೇಷ್ಠ ಸ್ತವ ಬಾಹುಬಲಾರ್ಜಿತಾಃ ॥ ೪೧ ॥ ಅಕಾಮಾಂ ಕಾಮಯಾನಸ್ಯ ಶರೀರ ಮುಪತಪ್ಯತೇ । ಇಚ್ಛಂತೀಂ ಕಾಮಯಾನಸ್ಯ ಪ್ರೀತಿ ರ್ಭವತಿ ಶೋಭನಾ" ॥೪೨॥ ಏವಮುಕ್ತಸ್ತು ರಾಕ್ಷಸ್ಯಾ ಸಮುತ್ಕ್ಷಿಪ್ತ ಸ್ತತೋ ಬಲೀ। ಪ್ರಹಸನ್ಮೇಘಸಂಕಾಶೋ ರಾಕ್ಷಸ ಸ್ಸನ್ಯ ವರ್ತತ ॥ ೪೩ ॥ ಪ್ರಸ್ಥಿತ ಸ್ಸದಶಗ್ರೀವಃ ಕಂಪಯನ್ನಿವ ಮೇದಿನೀಂ। ಜ್ವಲದ್ಭಾಸ್ಕರ ವರ್ಣಾಭಂ ಪ್ರವಿವೇಶ ನಿವೇಶನಂ ॥ ೪೪ ॥ ದೇವಗಂಧರ್ವಕನ್ಯಾಶ್ಚ ನಾಗಕನ್ಯಾಶ್ಚ

ಮಾನುಷ್ಯಾ - ಮನುಷ್ಯ ಸ್ತ್ರೀಯಾದ, ಅನಯಾಸೀತಯಾ - ಈ ಸೀತೆಯಿಂದ, ತವ - ನಿನಗೆ, ಕಿಂ - ಏನು ಪ್ರಯೋಜನವು. ॥ ೪೦ ॥ ಹೇ ಮಹಾರಾಜ - ಎಲೈ ಮಹಾರಾಜನೇ, ಅಮರಶ್ರೇಷ್ಠಃ-ದೇವತಾಶ್ರೇಷ್ಠನಾದ ಬ್ರಹ್ಮನು, ಅಸ್ಯಾಃ - ಈ ಸೀತೆಗೆ, ದಿವ್ಯಾರ್ - ದೇವತಾಸಂಬಂಧಗಳಾದ, ತವ - ನಿನ್ನ, ಬಾಹು....ತಾರ್ - ಭುಜಬಲದಿಂದ ಸಂಪಾದಿಸಲ್ಪಟ್ಟ, ಭೋಗಸತ್ತಮಾರ್ - ಒಳ್ಳೆಯ ಸುಖಗಳನ್ನೂ, ನವಿದಧಾತಿ - ವಿಧಿಸಿಲ್ಲವೆಂಬುದು, ನೂನಂ - ನಿಶ್ಚಯವು. ॥ ೪೧ ॥ ಅಕಾಮಾಂ - ಇಚ್ಛೆಯಿಲ್ಲದವಳನ್ನು, ಕಾಮಯಾನಸ್ಯ-ಅಪೇಕ್ಷಿಸುತ್ತಿರುವ ಪುರುಷನ, ಶರೀರಂ - ದೇಹವು, ಉಪತಪ್ಯತೇ - ಕುದಿಸಲ್ಪಡುತ್ತದೆ, ಇಚ್ಛಂತೀಂ-ಕಾಂಕ್ಷಿಸುತ್ತಿರುವವಳನ್ನು, ಕಾಮಯಾನಸ್ಯ - ಕಾಂಕ್ಷಿಸುವ ಪುರುಷನಿಗೆ, ಶೋಭನಾ - ಮಂಗಳಕರವಾದ, ಪ್ರೀತಿಃ - ಸಂತೋಷವು, ಭವತಿ - ಆಗುವದು. ॥ ೪೨ ॥ ಏವಂ - ಹೀಗೆ, ರಾಕ್ಷಸ್ಯಾ - ಧಾನ್ಯಮಾಲಿನಿಯಿಂದ, ಉಕ್ತಃ-ಹೇಳಲ್ಪಟ್ಟವನಾಗಿ, ತತಃ - ಆ ಸೀತೆಯ ಸಮೀಪದಿಂದ, ಸಮುತ್ಕ್ಷಿಪ್ತಃ - ಪ್ರೋತ್ಸಾಹಿಸಲ್ಪಟ್ಟ, ಬಲೀ - ಬಲವಂತನಾದ, ಮೇಘಸಂಕಾಶಃ - ಮೇಘಸದೃಶನಾದ, ರಾಕ್ಷಸಃ - ರಾವಣನು, ಪ್ರಹಸರ್ - ನಗೆಯುಳ್ಳವನಾಗಿ, ಸನ್ಯವರ್ತತ - ಹಿಂತಿರುಗಿದನು. ॥ ೪೩ ॥ ಪ್ರಸ್ಥಿತಃ - ಹೊರಟ, ಸದಶಗ್ರೀವಃ - ಆ ರಾವಣನು, ಮೇದಿನೀಂ - ನೆಲವನ್ನು, ಕಂಪಯನ್ನಿವ - ಚಲಿಸುವಂತೆ ಮಾಡುತ್ತ, ಜ್ವಲ....ಭಂ - ಹೊಳೆಯುತ್ತಿರುವ ಸೂರ್ಯನ ಬಣ್ಣದಂತೆ ಕಾಂತಿಯುಳ್ಳ, ನಿವೇಶನಂ - ಮನೆಯನ್ನು, ಪ್ರವಿವೇಶ - ಹೊಕ್ಕನು. ॥ ೪೪ ॥ ದೇವ....ಶ್ಚ - ದೇವಾಂಗನೆಯರು, ಗಂಧರ್ವಸ್ತ್ರೀಯರು, ನಾಗಕನ್ಯಾಶ್ಚ - ನಾಗಕನ್ನಿಕೆಯರೂ, ದಶಗ್ರೀವಂ - ರಾವಣ

ದೀತು? ಇಷ್ಟುಕೋಪವೇಕೆ? ಬಿಡು. ನನ್ನೊಡನೆ ಯಥೇಷ್ಟವಾಗಿ ಭೋಗಿಸು. ದೀನಳಾಗಿ ವರ್ಣಹೀನಳಾಗಿರುವ ಈ ಸೀತೆಯಿಂದೇನು? ॥ ೩೬—೪೦ ॥ ಪ್ರಭುವೇ! ಸೃಷ್ಟಿಕರ್ತನಾದ ಚತುರಾನನು ಇಂತಹ ರಾಜಾಧಿರಾಜನನ್ನು ಸೇರಿ ಸುಖಿಸುವ ಪ್ರಾಪ್ತಿಯನ್ನು ಈ ಸೀತೆಯ ಹಣೆಯಲ್ಲಿ ಬರೆದಿಲ್ಲ. ಮೇಲಾಗಿ, ಎಲೈ ಧೊರೆಯೇ! **ಅನುರಾಗವೇ ಇಲ್ಲದವಳನ್ನು ಭೋಗಿಸುವುದರಿಂದ ದೇಹವು ಸಂತಪಿಸಿಹೋಗುತ್ತದೆ. ತಾನಾಗಿಯೇ ಬಯಿಸಿಬಂದವಳೊಡನೆ ಅನುಭವಿಸುವ ಭೋಗವು ಸುಖವನ್ನುಂಟುಮಾಡುತ್ತದೆ.** ಆದುದರಿಂದ ನಿನ್ನನ್ನು ಕಾಮಿಸದೆಯೇ ಇರುವ ಈ ಮನುಷ್ಯಸ್ತ್ರೀಯನ್ನು ಬಿಟ್ಟು ಕಾಮುಕಿಯಾಗಿ ಬಂದಿರುವ ನನ್ನನ್ನು ಉಪಭೋಗಿಸು" ಎಂದು ಹೇಳಿದಳು. ಮಹಾ ಬಲಿಷ್ಠನಾದ ಮೇಘೋಪಮನಾದ ಆ ರಾವಣನು ಧಾನ್ಯಮಾಲಿಯ ಮಾತುಗಳಿಂದ ಹರ್ಷಿತನಾಗಿ ನಸುನಗುತ್ತ ಅವಳೊಡನೆ ಹಿಂತಿರುಗಿದನು. ಆ ರಾವಣನು ತನ್ನ ಗಮನವೇಗದಿಂದ ಭೂಮಿಯನ್ನೇ ನಡುಗಿಸುತ್ತ ಹೊರಟು ಪ್ರಜ್ವಲಿಸುತ್ತಿರುವ ಸೂರ್ಯನಂತೆ ಹೊಳೆಯುತ್ತಿರುವ ತನ್ನ ಅರಮನೆಯನ್ನು ಸೇರಿದನು.

* ಸರ್ವತಃ । ಪರಿವಾರ್ಯ ದಶಗ್ರೀವಂ ವಿವಿಶುಸ್ತದ್ಗೃಹೋತ್ತಮಂ ॥ ೪೫ ॥

ಸಮೈಥಿಲೀಂ ಧರ್ಮಪರಾಮವಸ್ಥಿತಾಂ
ಪ್ರವೇಪಮಾನಾಂ ಪರಿಭರ್ತ್ಸ್ಯ ರಾವಣಃ! ।
ವಿಹಾಯ ಸೀತಾಂ ಮದನೇನ ಮೋಹಿತ
ಸ್ಸ್ವಮೇವ ವೇಶ್ಮ ಪ್ರವಿವೇಶ ಭಾಸ್ವರಂ ॥ ೪೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾವಿಂಶಸ್ಸರ್ಗಃ

ನನ್ನು, ಸರ್ವತಃ - ಎಲ್ಲಾ ಕಡೆಗಳಲ್ಲಿಯೂ, ಪರಿವಾರ್ಯ - ಸುತ್ತುವರೆದು, ತದ್ಗೃಹೋತ್ತಮಂ - ಆ ಉತ್ತಮ ಮಂದಿರವನ್ನು, ವಿವಿಶುಃ - ಪ್ರವೇಶಿಸಿದರು. ॥ ೪೫ ॥ ಮದನೇನ - ಮನ್ಮಥನಿಂದ, ಮೋಹಿತಃ - ಮೋಹಿಸಲ್ಪಟ್ಟ, ಸರಾವಣಃ - ಆ ರಾವಣನು, ಧರ್ಮಪರಾಂ - ಪಾತಿವ್ರತ್ಯಧರ್ಮದಲ್ಲಿ ಆಸಕ್ತಳಾಗಿ, ಅವಸ್ಥಿತಾಂ - ಇರುತ್ತಿರುವ, ಪ್ರವೇಪಮಾನಾಂ - ನಡುಗುತ್ತಿರುವ, ಮೈಥಿಲೀಂ - ಜನಕ ರಾಯನ ಮಗಳಾದ, ಸೀತಾಂ - ಸೀತಾದೇವಿಯನ್ನು, ಪರಿಭರ್ತ್ಸ್ಯ - ಹೆದರಿಸಿ, ವಿಹಾಯ - ಅವಳನ್ನು ಬಿಟ್ಟು, ಭಾಸ್ವರಂ - ಹೊಳೆಯುತ್ತಿರುವ, ಸ್ವಂವೇಶ್ಮೈವ - ತನ್ನ ಮನೆಯನ್ನೇ, ಪ್ರವಿವೇಶ-ಹೊಕ್ಕನು.

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾವಿಂಶಸ್ಸರ್ಗಃ

ದೇವಗಂಧರ್ವಕನ್ನೆಯರೂ, ನಾಗಕನ್ನಿಕೆಯರೂ ಆ ದಶಕಂಠನೊಡನೆಯೇ ಅರಮನೆಯನ್ನು ಪ್ರವೇಶಿಸಿದರು. ಹೀಗೆ ಪಾತಿವ್ರತ್ಯಧರ್ಮದಲ್ಲಿಯೇ ನಿರತಳಾಗಿ ನೆಟ್ಟ ಮನಸ್ಸಿನಿಂದಿದ್ದರೂ ಭಯದಿಂದ ಗಡಗಡನೆ ನಡುಗುತ್ತಿದ್ದ ಆ ಸೀತಾದೇವಿಯನ್ನು ಭಯಗೊಳಿಸಿ ಕಡೆಗೆ ಆಕೆಯನ್ನು ಬಿಟ್ಟು ಕಾಮಮೋಹಿತನಾಗಿ ಹಿಂತಿರುಗಿದ ಆ ರಾಕ್ಷಸೇಶ್ವರನು ನಿಜಾಂತಃಪುರವನ್ನು ಪ್ರವೇಶಿಸಿದನು. ॥ ೪೧–೪೬ ॥

ಇಂತಿದು ಸೀತಾರಾವಣ ಸಂವಾದವೆಂಬ ಇಪ್ಪತ್ತೆರಡನೆಯ
ಸರ್ಗವು ಸಮಾಪ್ತವಾದುದು.

---

* " ತಾಸ್ತತಃ " ತಿ. ರಾ. ಪಾ.

ಸುಂದರಕಾಂಡೇ ತ್ರಯೋವಿಂಶಸ್ಸರ್ಗಃ

ಇತ್ಯುಕ್ತ್ವಾ ಮೈಥಿಲೀಂ ರಾಜಾ ರಾವಣ ಶ್ಶತ್ರುರಾವಣಃ । ಸಂದಿಶ್ಯಚ ತತ ಸ್ಸರ್ವಾ ರಾಕ್ಷಸೀ ರ್ನಿರ್ಜಗಾಮ ಹ ॥ ೧ ॥ ನಿಷ್ಕ್ರಾಂತೇ ರಾಕ್ಷಸೇಂದ್ರೇತು ಪುನ ರಂತಃಪುರಂಗತೇ । ರಾಕ್ಷಸ್ಯೋ ಭೀಮರೂಪಾಸ್ತಾ ಸ್ಸೀತಾಂ ಸಮಭಿದುದ್ರುವುಃ ॥ ೨ ॥ ತತ ಸ್ಸೀತಾಮುಪಾಗಮ್ಯ ರಾಕ್ಷಸ್ಯಃ ಕ್ರೋಧಮೂರ್ಛಿತಾಃ । ಪರಂ ಪರುಷಯಾ ವಾಚಾ ವೈದೇಹೀ ಮಿದಮಬ್ರುರ್ವ ॥ ೩ ॥ "ಪೌಲಸ್ತ್ಯಸ್ಯ ಪರಿಷ್ಠಸ್ಯ ರಾವಣಸ್ಯ

ಶತ್ರುರಾವಣಃ - ಶತ್ರುನಾಶಕನಾದ, ರಾಜಾರಾವಣಃ - ರಾಕ್ಷಸರಾಜನಾದ ರಾವಣನು ಮೈಥಿಲೀಂ - ಸೀತಾದೇವಿಯನ್ನು ಕುರಿತು, ಇತ್ಯುಕ್ತ್ವಾ - ಹೀಗೆ ಹೇಳಿ, ತತಃ - ಬಳಿಕ, ಸರ್ವಾ ರಾಕ್ಷಸೀಃ - ರಾಕ್ಷಸಸ್ತ್ರೀಯರನ್ನೆಲ್ಲಾ, ಸಂದಿಶ್ಯ - ಆಜ್ಞಾಪಿಸಿ, ನಿರ್ಜಗಾಮಹ - ಹೊರಟು ಬಂದನಷ್ಟೆ. ॥ ೧ ॥ ರಾಕ್ಷಸೇಂದ್ರೇತು - ರಾವಣನು, ನಿಷ್ಕ್ರಾಂತೇ - ಹೊರಟು, ಪುನಃ - ಮತ್ತು, ಅಂತಃಪುರಂ - ತನ್ನ ಶಯನಗೃಹವನ್ನು, ಗತೇ - ಹೊಂದಿದವನಾಗು, ಭೀಮರೂಪಾಃ - ಭಯಂಕರಗಳಾದ ಆಕಾರಗಳುಳ್ಳ, ತಾಃರಾಕ್ಷಸ್ಯಃ - ಆ ರಾಕ್ಷಸಸ್ತ್ರೀಯರು, ಸೀತಾಂ - ಸೀತಾದೇವಿಯನ್ನು ಕುರಿತು, ಸಮಭಿದುದ್ರುವುಃ - ಓಡಿಬಂದರು. ॥ ೨ ॥ ತತಃ - ಅನಂತರದಲ್ಲಿ, ಕ್ರೋಧಮೂರ್ಛಿತಾಃ - ಕೋಪದಿಂದ ಮೈಮರೆತಿರುವ, ರಾಕ್ಷಸ್ಯಃ - ರಾಕ್ಷಸಾಂಗನೆಯರು, ಸೀತಾಂ - ಸೀತಾದೇವಿಯನ್ನು ಕುರಿತು, ಉಪಾಗಮ್ಯ - ಬಂದು, ಪರಂ - ಬಹಳವಾಗಿ, ಪರುಷಯಾ - ಕ್ರೂರವಾದ, ವಾಚಾ - ಮಾತಿನಿಂದ, ವೈದೇಹೀಂ - ಸೀತಾದೇವಿಯನ್ನು ಕುರಿತು, ಇದಂ-ಈ ವಕ್ಷ್ಯಮಾಣವಾಕ್ಯವನ್ನು, ಅಬ್ರುರ್ವ - ನುಡಿದರು. ॥ ೩ ॥ ಹೇ ಸೀತೆ - ಓ ಸೀತೆಯೇ, ತ್ವಂ - ನೀನು, ಪೌಲಸ್ತ್ಯಸ್ಯ - ಪುಲಸ್ತ್ಯಬ್ರಹ್ಮನ

ಈ ಪ್ರಕಾರವಾಗಿ ಶತ್ರುಭಯಂಕರನಾದ ರಾವಣನು ಸೀತಾದೇವಿಯನ್ನು ಹೆದರಿಸಿ ಅವಳನ್ನು ಹೇಗಾದರೂಮಾಡಿ ವಶಪಡಿಸುವಂತೆ ಆ ಕ್ರೂರರಾಕ್ಷಸಿಯರಿಗೆ ಆಜ್ಞಾಪಿಸಿ ತನ್ನ ಅಂತಃಪುರಕ್ಕೆ ಹೊರಟುಹೋದನು. ಅತ್ತಲಾಗಿ ರಾವಣನು ತನ್ನ ಅಂತಃಪುರವನ್ನು ಸೇರಿದಬಳಿಕ ಇತ್ತಲಾಗಿ ಭಯಂಕರಾಕಾರವುಳ್ಳ ರಾಕ್ಷಸಿಯರು ಸೀತೆಯಬಳಿಗೆ ಒಟ್ಟಾಗಿ ಓಡಿಬಂದರು. ಅವರೆಲ್ಲರೂ ಮಹಾ ಕೋಪವನ್ನು ತೋರಿಸುತ್ತ ಸೀತೆಯನ್ನು ಕುರಿತು, "ಎಲೆ ಸೀತೇ! ನಮ್ಮ ಪ್ರಭುನಾದ ರಾವಣನೆಂದರೆ ಸಾಮಾನ್ಯನಲ್ಲ. ಆತನು ಪುಲಸ್ತ್ಯಬ್ರಹ್ಮನ ವಂಶದಲ್ಲಿ ಹುಟ್ಟಿದವನು; ಮಹಾ ಶ್ರೇಷ್ಠನು; ಮಹಾನುಭಾವನು. ಅಂತಹ ದಶಕಂಠನಿಗೆ ಭಾರ್ಯೆಯಾಗಿರಲು ನಿನಗೆ ಇಷ್ಟವಿಲ್ಲದೆ ಹೋಯಿತೋ!" ಎಂದು ಬಹು ಕಠಿನವಾದ ನುಡಿ

¶ ಈ ಸರ್ಗ ಇದರ ಮುಂದಿನ ಸರ್ಗಗಳಲ್ಲಿ ಕಂಡುಬರುವ "ಭಾರ್ಯಾ" ಶಬ್ದಗಳಿಗೆ, "ಭರಣಯೋಗ್ಯಳು" ಎಂದು ಅರ್ಥಮಾಡಬೇಕು. ಉದಾರಣೆ:—"ರಾಕ್ಷಸೇಂದ್ರಸ್ಯ ಭಾರ್ಯಾಭವಿತುಮರ್ಹಸಿ" ಎಲೌ ಸೀತಾದೇವಿಯೇ! ರಾಕ್ಷಸೇಂದ್ರನಾದ ರಾವಣನನ್ನು ಸೇವಕನನ್ನಾಗಿ ಸ್ವೀಕರಿಸಿ ಅವನನ್ನು ಕಾಪಾಡು. ನೀನು ಅವನನ್ನು ಕಾಪಾಡಲು ಸಮರ್ಥಳಾಗಿರುವೆ.

ಮಹಾತ್ಮನಃ । ದಶಗ್ರೀವಸ್ಯ ಭಾರ್ಯಾ ತ್ವಂ ಸೀತೇ ನಬಹುಮನ್ಯಸೇ?" ॥ ೪ ॥ ತತಸ್ತ್ವೇಕಜಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ । ಆಮಂತ್ರ್ಯ ಕ್ರೋಧ ತಾಮ್ರಾಕ್ಷೀ ಸೀತಾಂ ಕರತಲೋದರೀಂ ॥ ೫ ॥ "ಪ್ರಜಾಪತೀನಾಂ ಷಣ್ಣಾಂತು ಚತುರ್ಥೋ ಯಃ ಪ್ರಜಾಪತಿಃ । ಮಾನಸೋ ಬ್ರಹ್ಮಣಃ ಪುತ್ರಃ ಪುಲಸ್ತ್ಯ ಇತಿ ವಿಶ್ರುತಃ ॥ ೬ ॥ ಪುಲಸ್ತ್ಯಸ್ಯತು ತೇಜಸ್ವೀ ಮಹರ್ಷಿರ್ಮಾನಸಸ್ಸುತಃ । ನಾಮ್ನಾ ಸವಿಶ್ರವಾ ನಾಮ ಪ್ರಜಾಪತಿಸಮಪ್ರಭಃ ॥೭॥ ತಸ್ಯ ಪುತ್ರೋ ವಿಶಾಲಾಕ್ಷಿ! ರಾವಣ ಶ್ಶತ್ರುರಾವಣಃ । ತಸ್ಯ ತ್ವಂ ರಾಕ್ಷಸೇಂದ್ರಸ್ಯ ಭಾರ್ಯಾ ಭವಿತುಮರ್ಹಸಿ ॥ ೮ ॥

ಮೊಮ್ಮಗನಾದ, ವರಿಷ್ಠಸ್ಯ - ಶ್ರೇಷ್ಠನಾದ, ಮಹಾತ್ಮನಃ - ಮಹಾನುಭಾವನಾದ, ದಶಗ್ರೀವಶ್ಯ - ದಶಕಂಠನಾದ, ರಾವಣಸ್ಯ - ರಾವಣಾಸುರನ, ಭಾರ್ಯಾತ್ವಂ - ಪತ್ನೀತ್ವವನ್ನು, ನಬಹುಮನ್ಯಸೇ - ಒಪ್ಪುವದಿಲ್ಲವೇ. ॥ ೪ ॥ ತತಃ - ಬಳಿಕ, ಏಕಜಟಾನಾಮ - ಏಕಜಟೆಯೆಂದು ಹೆಸರುಳ್ಳ, ರಾಕ್ಷಸೀ - ರಾಕ್ಷಸಾಂಗನೆಯು, ಕ್ರೋಧತಾಮ್ರಾಕ್ಷೀ - ಕೋಪದಿಂದ ಕೆಂಗಣ್ಣುಗಳುಳ್ಳವಳಾಗಿ, ಕರ ತಲೋದರೀಂ - ಅಂಗೈಯ್ಯಿಯಂತೆ ಮೃದುವಾದ, ಉದರೀಂ - ಹೊಟ್ಟೆಯುಳ್ಳ, ಸೀತಾಂ - ಸೀತಾದೇವಿ ಯನ್ನು, ಅಮಂತ್ರ್ಯ - ಕರೆದು, ವಾಕ್ಯಂ - ಮಾತನ್ನು, ಅಬ್ರವೀತ್ - ಹೇಳಿದಳು. ॥ ೫ ॥ ಷಣ್ಣಾಂ - ಆರುಮಂದಿ, ಪ್ರಜಾಪತೀನಾಂ - ಬ್ರಹ್ಮರಲ್ಲಿ, ಚತುರ್ಥಃ - ನಾಲ್ಕನೆಯವನಾದ, ಪ್ರಜಾ ಪತಿಃ - ಬ್ರಹ್ಮನಾದ, ಪುಲಸ್ತ್ಯಇತಿ - ಪುಲಸ್ತ್ಯನೆಂದು, ವಿಶ್ರುತಃ - ಪ್ರಸಿದ್ಧನಾದ, ಬ್ರಹ್ಮಣಃ - ಚತುರ್ಮುಖಬ್ರಹ್ಮನಿಗೆ, ಮಾನಸಃ - ಮನದಲ್ಲಿ ಹುಟ್ಟಿದ, ಪುತ್ರಃ - ಕುಮಾರನು, ಯಃ - ಯಾವನೋ. ॥ ೬ ॥ ತಸ್ಯಪುಲಸ್ತ್ಯಸ್ಯ - ಆ ಪುಲಸ್ತ್ಯಬ್ರಹ್ಮನಿಗೆ, ತೇಜಸ್ವೀ - ತೇಜೋವಂತನಾದ, ಮಹರ್ಷಿಃ - ತಪಸ್ವಿಯಾದ, ನಾಮ್ನಾ - ಹೆಸರಿನಿಂದ, ವಿಶ್ರವಾನಾಮ-ವಿಶ್ರವಸ್ಸೆಂದು ಪ್ರಸಿದ್ಧನಾದ, ಪ್ರಜಾ....ಭಃ - ಬ್ರಹ್ಮನಿಗೆ ಸಮಾನವಾದ ಕಾಂತಿಯುಳ್ಳ, ಸಃ - ಪ್ರಸಿದ್ಧನಾದ, ಮಾನಸಸ್ಸುತಃ - ಮಾನಸಪುತ್ರನು, ಅಸ್ತಿ - ಇರುವನು. ॥ ೭ ॥ ಹೇ ವಿಶಾಲಾಕ್ಷಿ - ಎಲೌ ವಿಸ್ತಾರನೇತ್ರೆಯೇ, ತಸ್ಯ - ಆ ವಿಶ್ರವಸ್ಸೆಂಬ ಬ್ರಹ್ಮನಿಗೆ, ಪುತ್ರಃ - ಮಗನಾದವನು, ಶತ್ರುರಾವಣಃ - ಹಗೆಯರನ್ನು ದೀನಾರಾವವುಳ್ಳವರನ್ನಾಗಿ ಮಾಡುವ, ರಾವಣಃ - ರಾವಣನು, ತ್ವಂ - ನೀನು, ರಾಕ್ಷಸೇಂದ್ರಸ್ಯ - ರಾಕ್ಷಸಾಧಿಪತಿಯಾದ, ತಸ್ಯ - ಆ ರಾವಣನಿಗೆ, ಭಾರ್ಯಾ - ಹೆಂಡತಿಯು, ಭವಿತುಂ - ಆಗುವದಕ್ಕೆ, ಅರ್ಹಸಿ - ಯೋಗ್ಯಳಾಗು, ಹೇಚಾ....ಗಿ - ಎಲೌ ಸುಂದರಾಂಗಿಯೇ, ಮಯಾ - ನನ್ನಿಂದ, ಉಕ್ತಂ - ಹೇಳಲ್ಪಟ್ಟ,

---

ಗಳನ್ನಾಡತೊಡಗಿದರು. ॥೧-೪॥ ಆ ಮೇಲೆ ಏಕಜಟೆಯೆಂಬ ರಾಕ್ಷಸಿಯೊಬ್ಬಳು ಕೆಂಪೇರಿದ ಕಣ್ಣುಗಳುಳ್ಳವಳಾಗಿ ಆ ಸೀತೆಯನ್ನು ಕುರಿತು, "ಸೀತೇ! ನಮ್ಮ ಪ್ರಭುವಾದ ರಾವಣ ನಾರೆಂಬುದನ್ನು ನೀನು ಕಾಣೆ! ಮರೀಚಿಯೇ ಮೊದಲಾದ ಆರುಮಂದಿ ಬ್ರಹ್ಮರಲ್ಲಿ ನಾಲ್ಕನೆಯವನೇ ಪುಲಸ್ತ್ಯನು. ಅವನು ಬ್ರಹ್ಮಮಾನಸಪುತ್ರನು. ಆ ಪುಲಸ್ತ್ಯನಿಗೆ ವಿಶ್ರ ವಸ್ಸೆಂಬ ಮಾನಸಪುತ್ರನಾದ ಮಹರ್ಷಿಯಿರುವನು. ಅತನು ಮಹಾ ಪ್ರಭಾವಶಾಲಿಯು; ಅವನ ತೇಜಸ್ಸು ಬ್ರಹ್ಮನಿಗೆ ಸಮಾನವಾದುದು. ಅವನ ಮಗನೇ ನಮ್ಮ ರಾಜನಾದ ರಾವ ಣೇಶ್ವರನೆಂದರಿತುಕೋ! ಶತ್ರು ರಾವಣನಾದ ಈತನು ನಮ್ಮ ರಾಕ್ಷಸರೆಲ್ಲರಿಗೂ ಚಕ್ರ ವರ್ತಿಯು. ಇಂತಹನಿಗೆ ನೀನು ಪತ್ನಿಯಾಗಿರಲು ಸಮ್ಮತಿಸುವುದಿಲ್ಲವೆ? ಎಲೆ ವಿಶಾಲ ನೇತ್ರೆಯೆ! ಇಗೋ ನಾನು ನಿನ್ನ ಹಿತಕ್ಕಾಗಿಯೇ ಹೇಳುತ್ತಿರುವೆನು. ಹಟಮಾಡಬೇಡ;

ಮಯೋಕ್ತಂ ಚಾರುಸರ್ವಾಂಗಿ! ವಾಕ್ಯಂ ಕಿನ್ನಾನುಮನ್ಯಸೇ?" । ತತೋ ಹರಿಜಟಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ । ವಿವರ್ತ್ಯ ನಯನೇ ಕೋಪಾನ್ಮಾರ್ಜಾರಸದೃಶೇಕ್ಷಣಾ ॥ ೯ ॥ "ಯೇನ ದೇವಾಸ್ತ್ರಯಸ್ತ್ರಿಂಶದ್ದೇವರಾಜಶ್ಚ ನಿರ್ಜಿತಾಃ । ತಸ್ಯ ತ್ವಂ ರಾಕ್ಷಸೇಂದ್ರಸ್ಯ ಭಾರ್ಯಾ ಭವಿತುಮರ್ಹಸಿ" ॥ ೧೦ ॥ ತತಸ್ತು ಪ್ರಘಸಾ ನಾಮ ರಾಕ್ಷಸೀ ಕ್ರೋಧಮೂರ್ಛಿತಾ । ಭರ್ತ್ಸಯಂತೀ ತದಾ ಘೋರಮಿದಂ ವಚನಮಬ್ರವೀತ್ ॥ ೧೧ ॥ "ವೀರ್ಯೋತ್ಸಿಕ್ತಸ್ಯ ಶೂರಸ್ಯ ಸಂಗ್ರಾಮೇಷ್ವನಿವರ್ತಿನಃ । ಬಲಿನೋ ವೀರ್ಯಯುಕ್ತಸ್ಯ ಭಾರ್ಯಾ ತ್ವಂ ಕಿನ್ನಲಪ್ಸ್ಯಸೇ? ॥ ೧೨ ॥ ಪ್ರಿಯಾಂ

ವಾಕ್ಯಂ - ಮಾತನ್ನು, ಕಿಂನಾನುಮನ್ಯಸೇ - ಏತಕ್ಕೆ ಅಂಗೀಕರಿಸುವದಿಲ್ಲ. ॥ ೮ ॥ ತತಃ - ಅನಂತರದಲ್ಲಿ, ಮಾರ್ಜಾ....ಣಾ - ಬೆಕ್ಕಿನ ಕಣ್ಣುಗಳಿಗೆ ಸದೃಶಗಳಾದ ಕಣ್ಣುಗಳುಳ್ಳ, ಹರಿಜಟಾನಾಮ - ಹರಿಜಟೆಯೆಂದು ಪ್ರಖ್ಯಾತಳಾದ, ರಾಕ್ಷಸೀ - ರಾಕ್ಷಸಸ್ತ್ರೀಯು, ಕೋಪಾತ್ - ಸಿಟ್ಟಿನಿಂದ, ನಯನೇ - ನೇತ್ರಗಳನ್ನು, ವಿವರ್ತ್ಯ - ತಿರುಗಿಸಿ, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದಳು. ॥ ೯ ॥ ಯೇನ - ಯಾವ ರಾವಣನಿಂದ, ತ್ರಯ....ವಾಃ-ಮೂವತ್ತು ಮೂರುಕೋಟಿ ದೇವತೆಗಳೊಳಗೆ ಪ್ರಧಾನರಾದ ಮೂವತ್ತುಮೂರುಮಂದಿಯೂ, ದೇವರಾಜಶ್ಚ - ದೇವೇಂದ್ರನೂಕೂಡ, ನಿರ್ಜಿತಾಃ - ಜಯಿಸಲ್ಪಟ್ಟರೋ, ತಸ್ಯರಾಕ್ಷಸೇಂದ್ರಸ್ಯ - ಆ ರಾಕ್ಷಸಾಧಿಪತಿಗೆ, ತ್ವಂ - ನೀನು, ಭಾರ್ಯಾ - ಹೆಂಡತಿಯು, ಭವಿತುಂ - ಆಗುವದಕ್ಕೆ, ಅರ್ಹಸಿ - ಯೋಗ್ಯಳಾಗು. ॥ ೧೦ ॥ ತತಸ್ತು - ಆ ಬಳಿಕಾದರೆ, ಕ್ರೋಧಮೂರ್ಛಿತಾ - ಕೋಪದಿಂದ ಪ್ರಜ್ಞೆತಪ್ಪಿದ, ಪ್ರಘಸೆ ಎಂದು ಪ್ರಸಿದ್ಧಳಾದ, ರಾಕ್ಷಸೀ-ರಾಕ್ಷಸಸ್ತ್ರೀಯು, ತದಾ - ಆ ಸಮಯದಲ್ಲಿ, ಭರ್ತ್ಸಯಂತೀ-ಹೆದರಿಸಿದವಳಾಗಿ, ಘೋರಂ - ಭಯಂಕರವಾದ, ಇದಂ ವಚನಂ - ಈ ಮಾತನ್ನು, ಅಬ್ರವೀತ್ - ಹೇಳಿದಳು. ॥ ೧೧ ॥ ವೀರ್ಯೋತ್ಸಿಕ್ತಸ್ಯ - ಪರಾಕ್ರಮದಿಂದ, ಗರ್ವಿತನಾದ, ಶೂರಸ್ಯ - ಧೀರನಾದ, ಸಂಗ್ರಾಮೇಷು-ಕಾಳಗಗಳಲ್ಲಿ, ಅನಿವರ್ತಿನಃ-ಹಿಂತಿರುಗದಿರುವ, ಬಲಿನಃ - ದೇಹತ್ರಾಣಯುಳ್ಳ, ವೀರ್ಯಯುಕ್ತಸ್ಯ - ಅಂತಸ್ಸಾರಯುತನಾದ ರಾವಣನಿಗೆ, ಭಾರ್ಯಾತ್ವಂ - ಪತ್ನೀತ್ವವನ್ನು, ಕಿಂನಲಪ್ಸ್ಯಸೇ - ಏತಕ್ಕೆ ಇಚ್ಛಿಸುವದಿಲ್ಲ. ॥ ೧೨ ॥ ಮಹಾಬಲಃ-ಮಹಾಸಾಮರ್ಥ್ಯವಂತನಾದ, ರಾಜಾ - ರಾಕ್ಷಸರಾಜನಾದ, ರಾವಣಃ - ರಾವಣನು, ಸರ್ವಾಸಾಂ -

---

ರಾವಣನಿಗೆ ಪತ್ನಿಯಾಗು" ಎಂದಳು. ॥ ೫-೮ ॥ ಆ ಬಳಿಕ ಬೆಕ್ಕಿನ ಕಣ್ಣುಗಳಿಗೆ ಸಮಾನವಾದ ಕಣ್ಣುಗಳುಳ್ಳ ಹರಿಜಟೆಯೆಂಬವಳು ಕೋಪದಿಂದ ಕಣ್ಣುಗಳನ್ನು ತಿರುಗಿಸಿ, "ಎಲೆ ಮದಗಜಗಾಮಿನಿ! ರಾವಣನನ್ನು ಸಾಮಾನ್ಯನೆಂದು ತಿಳಿಯಬೇಡ. ಈತನು ಮುವತ್ತು ಮೂರುದೇವತೆಗಳನ್ನೂ, ಆ ದೇವತೆಗಳ ಒಡೆಯನಾದ ದೇವೇಂದ್ರನನ್ನೂ ಜಯಿಸಿರುವನು. ಇಂತಹ ರಾಕ್ಷಸೇಂದ್ರನಿಗೆ ನೀನು ಭಾರ್ಯೆಯಾಗುವುದು ಯೋಗ್ಯವಾಗಿಯೇ ಇರುವುದು" ಎಂದಳು. ಆಮೇಲೆ ಪ್ರಘಸೆಯೆಂಬ ರಾಕ್ಷಸಿಯು ಕೋಪದಿಂದ ಮೈಮರೆತು ಸೀತೆಯನ್ನು ಕ್ರೂರವಾಗಿ ಹೆದರಿಸುತ್ತ, "ಸೀತೇ! ಈ ರಾವಣನನ್ನು ನೀನೇನು ಬಲ್ಲೆ; ಕೇಳು. ಇವನು ಮಹಾ ವೀರ್ಯವಂತನು; ಮಹಾ ಶೂರನು; ಪರಾಕ್ರಮಿಯು, ಯಾವ ಯುದ್ಧಗಳಲ್ಲಿಯೂ ಹಿಂದಿರುಗುವವನಲ್ಲ. ಇಂತಹ ಮಹಾ ಪರಾಕ್ರಮಿಗೆ ಭಾರ್ಯೆಯಾಗಿರಲು ನೀನು ಸಮ್ಮತಿಸುವುದಿಲ್ಲವೇ! ಆತನು ತನಗೆ ಪತ್ನಿಯರಿಲ್ಲದಿರುವುದಕ್ಕಾಗಿ ನಿನ್ನಲ್ಲಿ ಬಂದು ಬೇಡುತ್ತಿರುವನೆಂದು ತಿಳಿದೀಯೆ. ಆತನಿಗೆ ಸಹಸ್ರಾರುಮಂದಿ ಪತ್ನಿಯರಿರುವರು. ಅವ

ಬಹುಮತಾಂ ಭಾರ್ಯಾಂ ತ್ಯಕ್ತ್ವಾ ರಾಜಾ ಮಹಾಬಲಃ । ಸರ್ವಾಸಾಂಚ ಮಹಾಭಾಗಾಂ ತ್ವಾಮುಪೈಷ್ಯತಿ ರಾವಣಃ ॥೧೨॥ ಸಮೃದ್ಧಂ ಸ್ತ್ರೀಸಹಸ್ರೇಣ ನಾನಾರತ್ನೋಪಶೋಭಿತಂ । ಅಂತಃಪುರಂ ಸಮುತ್ಸೃಜ್ಯ ತ್ವಾಮುಪೈಷ್ಯತಿ ರಾವಣಃ" ॥೧೪॥ ಅನ್ಯಾತು ವಿಕಟಾನಾಮ ರಾಕ್ಷಸೀ ವಾಕ್ಯಮಬ್ರವೀತ್ ॥೧೫॥ "ಅಸಕೃದ್ದೇವತಾ ಯುದ್ಧೇ ನಾಗಗಂಧರ್ವ ದಾನವಾಃ । ನಿರ್ಜಿತಾ ಸ್ಸಮರೇ ಯೇನ ಸತೇ ಪಾರ್ಶ್ವಮುಪಾಗತಃ ॥೧೬॥ ತಸ್ಯ ಸರ್ವಸಮೃದ್ಧಸ್ಯ ರಾವಣಸ್ಯ ಮಹಾತ್ಮನಃ । ಕಿಮದ್ಯ ರಾಕ್ಷಸೇಂದ್ರಸ್ಯ ಭಾರ್ಯಾತ್ವಂ ನೇಚ್ಛಸೇಽಧಮೇ ?" ॥೧೭॥ ತತಸ್ತು ದುರ್ಮುಖೀ

ಎಲ್ಲಾ ಸ್ತ್ರೀಯರಲ್ಲಿಯೂ, ಪ್ರಿಯಾಂ-ಇಷ್ಟಳಾದ, ಬಹುಮತಾಂ - ಪೂಜ್ಯಳಾದ, ಭಾರ್ಯಾಂ-ಹೆಂಡತಿಯಾದ ಮಂಡೋದರಿಯನ್ನೂ ಕೂಡ, ತ್ಯಕ್ತ್ವಾ - ಬಿಟ್ಟು, ಮಹಾಭಾಗಾಂ - ಮಹಾಪುಣ್ಯವತಿಯಾದ-ತ್ವಾಂ - ನಿನ್ನನ್ನು, ಉಪೈಷ್ಯತಿ - ಹೊಂದುವನು. ॥೧೩॥ ರಾವಣಃ - ರಾವಣನು, ಸ್ತ್ರೀಸಹಸ್ರೇಣ, ಸಾವಿರಮಂದಿ ಸ್ತ್ರೀಯರಿಂದ, ಸಮೃದ್ಧಂ-ತುಂಬಿರುವ, ನಾನಾ....ತಂ-ಅನೇಕ ರತ್ನಗಳಿಂದ ಹೊಳೆಯುತ್ತಿರುವ, ಅಂತಃಪುರಂ - ಅಂತಃಪುರವನ್ನು, ಸಮುತ್ಸೃಜ್ಯ - ತ್ಯಜಿಸಿ, ತ್ವಾಂ - ನಿನ್ನನ್ನು, ಉಪೈಷ್ಯತಿ - ಹೊಂದುವನು. ॥೧೪॥ ವಿಕಟಾನಾಮ - ವಿಕಟೆಯೆಂದು ಪ್ರಸಿದ್ಧಳಾದ, ಅನ್ಯಾರಾಕ್ಷಸೀ-ಮತ್ತೊಬ್ಬ ರಾಕ್ಷಸಿಯು, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದಳು. ॥೧೫॥ ಯೇನ - ಯಾವರಾವಣನಿಂದ, ಸಮರೇ - ಸಮಾನಸ್ಕಂಧರನ್ನು ಕರೆಯುತ್ತಿರುವ, ಯುದ್ಧೇ-ಕಾಳಗದಲ್ಲಿ, ದೇವತಾಃ - ದೇವತೆಗಳು, ನಾಗ....ವಾಃ - ಸರ್ಪಗಂಧರ್ವದಾನವರೆಲ್ಲರೂ, ನಿರ್ಜಿತಾಃ - ಜಯಿಸಲ್ಪಟ್ಟರೋ, ಸಃ - ಆ ರಾವಣನು, ತೇ - ನಿನ್ನ, ಪಾರ್ಶ್ವಂ - ಸಮೀಪವನ್ನು, ಉಪಾಗತಃ - ಹೊಂದಿದನು. ॥೧೬॥ ಹೇ ಅಧಮೇ - ಎಲೆ ನೀಚಳೇ, ಸರ್ವ....ಸ್ಯ - ಸಮಸ್ತ ವಿಷಯಗಳಲ್ಲಿಯೂ, ಪೂರ್ಣನಾದ, ಮಹಾತ್ಮನಃ - ಮಹಾಮನಸ್ವಿಯಾದ, ರಾಕ್ಷಸೇಂದ್ರಸ್ಯ - ರಾಕ್ಷಸಾಧಿಪತಿಯಾದ, ತಸ್ಯರಾವಣಸ್ಯ - ಆ ರಾವಣನಿಗೆ, ಅದ್ಯ - ಈಗ, ಭಾರ್ಯಾತ್ವಂ - ಪತ್ನೀಭಾವವನ್ನು, ಕಿಂನೇಚ್ಛಸಿ - ಏತಕ್ಕೆ ಇಚ್ಛಿಸುವದಿಲ್ಲ, ತತಃ - ಅನಂತರದಲ್ಲಿ, ದುರ್ಮುಖೀನಾಮ - ದುರ್ಮುಖಿ ಎಂದು ಪ್ರಖ್ಯಾತಿಪಡೆದ, ರಾಕ್ಷಸೀ - ರಾಕ್ಷಸ ಸ್ತ್ರೀಯು, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದಳು. ॥೧೭॥ ಸೂರ್ಯಃ - ಸೂರ್ಯನು, ಯಸ್ಯ - ಯಾವನದೆಶೆಯಿಂದ, ಭೀತಃ - ಅಂಜಿ, ನತಪತಿ-ಸುಡುವುದಿಲ್ಲವೋ, ಮಾರುತಃ - ವಾಯುವು, ಯಸ್ಯ - ಯಾವಾತನದೆಶೆಯಿಂದ, ಭೀತಃ - ಭಯಗೊಂಡು, ನವಾತಿಸ್ಮ - ಬೀಸುವುದಿಲ್ಲವೋ,

---

ರಲ್ಲಿಯೂ ಅವನಿಗೆ ಪ್ರಿಯತಮೆಯಾಗಿರುವ ಮಂಡೋದರಿಯು ಪಟ್ಟಮಹಿಷಿಯಾಗಿರುವಳು. ಇಂತಹ ಸ್ತ್ರೀರತ್ನಗಳಿಂದ ತುಂಬಿರುವ ಅಂತಃಪುರವನ್ನು ಬಿಟ್ಟು ರಾವಣನು ನಿನ್ನಬಳಿಗೆ ಬರುವನು. ಇಂತಹನಿಗೆ ನೀನು ಭಾರ್ಯೆಯಾಗುವುದಿಲ್ಲವೆ!" ಎಂದು ಹೇಳಿದಳು. ॥೯-೧೪॥ ವಿಕಟೆಯೆಂಬ ರಾಕ್ಷಸಿಯು ಸೀತೆಯನ್ನು ಕುರಿತು, "ಎಲೆ ಅಧಮಳೇ! ಯುದ್ಧದಲ್ಲಿ ದೈತ್ಯ ದಾನವ ಗಂಧರ್ವರನ್ನು ಅನೇಕಬಾರಿ ಪರಾಜಿತರನ್ನಾಗಿ ಮಾಡಿದ ಮಹಾತ್ಮನಾದ ರಾವಣನು ತಾನಾಗಿಯೇ ನಿನ್ನ ಪಾರ್ಶ್ವಕ್ಕೆ ಬಂದಿರುವನು. ಮಹಾತ್ಮನೂ, ಸರ್ವಸಂಪತ್ಸಮೃದ್ಧನೂ ಆದ ಇಂತಹ ರಾವಣೇಶ್ವರನಿಗೆ ಭಾರ್ಯೆಯಾಗಿರಲು ನಿನಗೆ ಬುದ್ಧಿಯು ಹುಟ್ಟಲಿಲ್ಲವೆ?" ಎಂದಳು. ಆ ಬಳಿಕ ದುರ್ಮುಖಿಯೆಂಬವಳು, ಎಲೆ ಜಾನಕಿ! ಯಾವಾತನಿಗೆ ಹೆದರಿ ಸೂರ್ಯನೂ ತನ್ನ ಕಿರಣಗಳನ್ನು ಉಡುಗಿಸಿಕೊಳ್ಳುವನೋ, ವಾಯುವೂ ಅಧಿಕವಾಗಿ

ಸಾಮ ರಾಕ್ಷಸೀ ವಾಕ್ಯಮಬ್ರವೀತ್ ॥ ೧೭ ॥ ಯಸ್ಯ ಸೂರ್ಯೋ ನತಪತಿ ಭೀತೋ ಯಸ್ಯಚ ಮಾರುತಃ । ನವಾತಿಸ್ಮಾಽಯತಾಪಾಂಗೇ! ಕಿಂ ತ್ವಂ ತಸ್ಯ ನತಿಷ್ಠಸಿ? ॥೧೮॥ ಪುಷ್ಪವೃಷ್ಟಿಂಚ ತರವೋ ಮುಮುಚು ರ್ಯಸ್ಯ ವೈ ಭಯಾತ್ । ಶೈಲಾಶ್ಚ ಸಸ್ರುಃ ಪಾನೀಯಂ ಜಲದಾಶ್ಚ ಯದೇಚ್ಛತಿ ॥ ೧೯ ॥ ತಸ್ಯ ನೈರ್ಋತರಾಜಸ್ಯ ರಾಜರಾಜಸ್ಯ ಭಾಮಿನಿ! । ಕಿಂ ತ್ವಂ ನಕುರುಷೇ ಬುದ್ಧಿಂ ಭಾರ್ಯಾರ್ಥೇ ರಾವಣಸ್ಯ ಹಿ? ॥ ೨೦ ॥

ಸಾಧು ತೇ ತತ್ವತೋ ದೇವಿ! ಕಥಿತಂ ಸಾಧು ಭಾಮಿನಿ! ।
ಗೃಹಾಣ ಸುಸ್ಮಿತೇ! ವಾಕ್ಯ ಮನ್ಯಥಾ ನ ಭವಿಷ್ಯಸಿ" ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯೋವಿಂಶಸ್ಸರ್ಗಃ.

ಹೇ ಆಯತಾಪಾಂಗೇ-ದೀರ್ಘಗಳಾದ ಕಟಾಕ್ಷಗಳುಳ್ಳವಳೇ, ತ್ವಂ - ನೀನು, ತಸ್ಯ - ಆ ರಾವಣನ, ವಶೇ - ಅಧೀನದಲ್ಲಿ, ಕಿಂನತಿಷ್ಠಸಿ - ಏತಕ್ಕಿರುವದಿಲ್ಲ. ॥ ೧೮ ॥ ಹೇ ಸುಭ್ರು - ಎಲೌ ಸುಂದರವಾದ ಕಣ್ಣುಬ್ಬುಗಳುಳ್ಳವಳೇ, ಯಸ್ಯ - ಯಾವರಾವಣನ, ಭಯಾತ್ - ಭೀತಿಯಿಂದ, ತರವಃ - ವೃಕ್ಷಗಳು, ಪುಷ್ಪವೃಷ್ಟಿಂ - ಪುಷ್ಪವರ್ಷವನ್ನು, ಮುಮುಚುಃ - ಸುರಿಸಿದವೋ, ಯದಾ - ಯಾವಕಾಲದಲ್ಲಿ, ರಾವಣಃ - ರಾವಣನು, ಪಾನೀಯಂ - ಉದಕವನ್ನು, ಇಚ್ಛತಿ - ಅಪೇಕ್ಷಿಸುವನೋ, ತದಾ - ಆಕಾಲದಲ್ಲಿ, ಶೈಲಾಶ್ಚ - ಬೆಟ್ಟಗಳೂ, ಜಲದಾಶ್ಚ - ಮೇಘಗಳೂ, ಪಾನೀಯಂ - ಉದಕವನ್ನು, ಮುಮುಚುಃ - ಬಿಡುತ್ತವೆಯೋ, ಹೇ ಭಾಮಿನಿ - ಎಲೌ ಸುಂದರಿಯೇ, ತ್ವಂ - ನೀನು, ನೈರ್ಋತರಾಜಸ್ಯ - ರಾಕ್ಷಸಾಧಿಪತಿಯಾದ, ರಾಜರಾಜಸ್ಯ - ರಾಜಾಧಿರಾಜನಾದ, ತಸ್ಯರಾವಣಸ್ಯ - ಆ ರಾವಣಾಸುರನ, ಭಾರ್ಯಾರ್ಥೇ - ಪತ್ನೀನಿಮಿತ್ತವಾಗಿ, ಬುದ್ಧಿಂ - ಮತಿಯನ್ನು, ಕಿಂನಕುರುಷೇ - ಏತಕ್ಕೆ ಮಾಡುವದಿಲ್ಲ. ॥ ೧೯-೨೦ ॥ ಹೇ ಭಾಮಿನಿ-ಎಲೌ ಅಂಗನೆಯೇ, ಹೇ ಸುಸ್ಮಿತೇ - ಎಲೌ ಮುಗುಳುನಗೆಯುಳ್ಳವಳೇ, ಹೇ ದೇವಿ - ಓಸೀತೆಯೇ, ತೇ - ನಿನಗೆ, ಸಾಧು-ಚೆನ್ನಾಗಿ, ತತ್ವತಃ - ಯಥಾರ್ಥವಾಗಿ, ಕಥಿತಂ - ಹೇಳಲ್ಪಟ್ಟ, ವಾಕ್ಯಂ - ಮಾತನ್ನು, ಗೃಹಾಣ - ಗ್ರಹಿಸು, ಅನ್ಯಥಾ - ಹಾಗಲ್ಲದಿದ್ದರೆ, ತ್ವಂ - ನೀನು, ನಭವಿಷ್ಯಸಿ - ಉಳಿಯುವದಿಲ್ಲ. ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯೋವಿಂಶಸ್ಸರ್ಗಃ

ಬೀಸನೋ ಅಂತಹ ರಾವಣೇಶ್ವರನ ಪ್ರೀತಿಗೆ ಪಾತ್ರಳಾಗಿ ಆತನ ಭಾರ್ಯೆಯಾಗಲು ನಿನಗೆ ಸಮ್ಮತವಾಗಲಿಲ್ಲವೆ? ಆತನ ಭಯದಿಂದ ಪುಷ್ಪವೃಕ್ಷಗಳಿಂದ ಕೂಡಿದ ಪರ್ವತಗಳು ಪುಷ್ಪವೃಷ್ಟಿಯನ್ನು ಸುರಿಸುವುವು. ಮೇಘಗಳು ಮಳೆಗರೆಯುವುವು, ಅಂತಹ ರಾಕ್ಷಸಾಧಿಪನಿಗೆ ಭಾರ್ಯೆಯಾಗಲು ನಿನ್ನ ಮನಸ್ಸು ಒಪ್ಪದಾಯಿತೆ? ॥ ೧೫-೨೦॥ ಎಲೆ ಸುಂದರಾಂಗಿಯೇ! ಇದುವರೆಗೂ ನಾವು ಯಥಾರ್ಥವಾದ ಮಾತುಗಳಿಂದ ನಿನಗೆ ಹಿತವನ್ನು ಹೇಳಿದ್ದೇವೆ. ಇವುಗಳನ್ನು ಮನಸ್ಸಿಗೆ ತಂದುಕೊಂಡು ರಾವಣೇಶ್ವರನಿಗೆ ಭಾರ್ಯೆಯಾಗಿ ಸುಖಿಸು. ಹಾಗಿಲ್ಲದಿದ್ದರೆ ನಿನ್ನ ಪ್ರಾಣಗಳು ಉಳಿಯುವುದೇ ಕಷ್ಟವಾಗುವುದು ” ಎಂದಳು. ॥ ೨೧ ॥

ಇಂತಿದು ರಾಕ್ಷಸೀಕೃತ ಸೀತಾತರ್ಜನ ವೃತ್ತಾಂತವೆಂಬ ಇಪ್ಪತ್ಮೂರನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಚತುರ್ವಿಂಶಸ್ಸರ್ಗಃ

ತತ ಸ್ಸೀತಾಮುಪಾಗಮ್ಯ ರಾಕ್ಷಸ್ಯೋ ವಿಕೃತಾನನಾಃ । ಪರುಷಂ¶ ಪರುಷಾ ನಾರ್ಯ ಊಚುಸ್ತಾಂ ವಾಕ್ಯಮಪ್ರಿಯಮ್ ॥ ೧ ॥ "ಕಿಂ ತ್ವಮಂತಃ ಪುರೇ ಸೀತೇ! ಸರ್ವಭೂತ ಮನೋಹರೇ । ಮಹಾರ್ಹ ಶಯನೋಪೇತೇ ನ ವಾಸಮನುಮನ್ಯಸೇ? ॥ ೨ ॥ ‡ ಮಾನುಷೀ ಮಾನುಷಸ್ಯೈವ ಭಾರ್ಯಾತ್ವಂ ಬಹುಮನ್ಯಸೇ । ಪ್ರತ್ಯಾಹರ ಮನೋ ರಾಮಾನ್ನ ತ್ವಂ ಜಾತು ಭವಿಷ್ಯಸಿ ॥ ೩ ॥ ತ್ರೈಲೋಕ್ಯವಸುಭೋಕ್ತಾರಂ

ತತಃ - ಬಳಿಕ, ವಿಕೃತಾನನಾಃ - ವಿಕಾರಮುಖಿಯರಾದ, ಪರುಷಾಃ - ಕ್ರೂರತಿಯದ, ರಾಕ್ಷಸ್ಯೋನಾರ್ಯಃ - ರಾಕ್ಷಸಸ್ತ್ರೀಯರು, ತಾಂಸೀತಾಂ - ಆ ಸೀತಾದೇವಿಯನ್ನು, ಉಪಾಗಮ್ಯ - ಹೊಂದಿ, ಪರುಷಂ - ಕರ್ಣಕಠೋರವಾದ, ಅಪ್ರಿಯಂ - ಕಹಿಯಾದ, ವಾಕ್ಯಂ - ಮಾತನ್ನು, ಊಚುಃ - ನುಡಿದರು. ॥ ೧ ॥ ಹೇ ಸೀತೇ - ಓ ಸೀತೆಯೇ, ಸರ್ವ....ರೇ - ಸಮಸ್ತ ಪ್ರಾಣಿಗಳಿಗೂ ರಮ್ಯವಾದ, ಮಹಾ....ತೇ - ಅಮೂಲ್ಯಗಳಾದ ಹಾಸಿಗೆಗಳಿಂದ ಕೂಡಿರುವ, ಅಂತಃಪುರೇ - ಅಂತಃಪುರದಲ್ಲಿ, ವಾಸಂ - ಸ್ಥಿತಿಯನ್ನು, ತ್ವಂ - ನೀನು, ಕಿಂನಾನುಮನ್ಯಸೇ - ಏತಕ್ಕೆ ಒಡಂಬಡುವದಿಲ್ಲ. ॥ ೨ ॥ ಮಾನುಷೀ - ಮನುಷ್ಯಳಾದ ನೀನು, ಮಾನುಷಸ್ಯೈವ - ನರನಾದ ರಾಮನಿಗೇನೇ, ಭಾರ್ಯಾತ್ವಂ - ಪತ್ನೀಭಾವವನ್ನು, ಬಹುಮನ್ಯಸೇ - ಹೆಚ್ಚಾಗಿ ಎಣಿಸಿರುವೆ, ರಾಮಾತ್ - ರಾಮನ ದೆಶೆಯಿಂದ, ಮನಃ - ಮನವನ್ನು, ಪ್ರತ್ಯಾಹರ - ಹಿಂತಿರುಗಿಸು, ತ್ವಂ - ನೀನು, ಜಾತು - ಒಂದು

ಅನಂತರದಲ್ಲಿ ವಿಕಾರಮುಖಿಯರಾದ ಆ ಘೋರರಾಕ್ಷಿಯರು ಪುನಃ ಸೀತೆಯ ಬಳಿಗೆ ಬಂದು ಅಪ್ರಿಯವಾದ ಮಾತುಗಳನ್ನಾಡುತ್ತ ಆಕೆಯನ್ನು ನಿರ್ಬಂಧಗೊಳಿಸತೊಡಗಿದರು. ಅವರೆಲ್ಲರೂ ಆಕೆಯನ್ನು ಮುತ್ತಿ ನಿಂತು, "ಎಲೆ ಸೀತೇ! ಉತ್ತಮೋತ್ತಮವಾದ ಶಯನಾಸನಗಳಿಂದೊಪ್ಪಿ ಸಮಸ್ತ ಪ್ರಾಣಿಗಳಿಗೂ ಮನೋಹರವಾದ ರಾವಣೇಶ್ವರನ ಅಂತಃಪುರದಲ್ಲಿ ವಾಸಮಾಡುವುದು ನಿನಗೆ ರುಚಿಸದೆ ಹೋಯಿತೇಕೆ? ಎಲೆ ಹುಚ್ಚಳೆ! ನೀನು ಮನುಷ್ಯಳಾದ ಮಾತ್ರಕ್ಕೆ ಮನುಷ್ಯನಿಗೇ ಭಾರ್ಯೆಯಾಗಿದ್ದುಬಿಡಬೇಕೆಂದೆಣಿಸಿರುವೆಯಾ! ಚನ್ನಾಯಿತು. ಮನುಷ್ಯನಾದ ರಾಮನಿಂದ ನಿನ್ನ ಮನಸ್ಸನ್ನು ಹಿಂತಿರುಗಿಸು. ಇನ್ನು ಆ ರಾಮನ ಮುಖವನ್ನು ನೀನು ನೋಡುವುದೆಂದರೇನು? ಆ ಆಶೆಯನ್ನೇ ಬಿಟ್ಟುಬಿಡು.

¶ "ಪರುಷಾನರ್ಹಾಂ" ತಿ. ರಾ. ಮ. ಪಾ.

‡ "ಎಲೌ ಸೀತಾದೇವಿಯೇ! ನಿನು ಮನುಷ್ಯಳಾಗಿ ಅವತರಿಸಿರುವುದರಿಂದಲೇ, ಮನುಷ್ಯನಾಗಿಯೇ ಅವತರಿಸಿರುವ, ಶ್ರೀರಾಮನಲ್ಲಿಯೇ ಭಾರ್ಯಾತ್ವವನ್ನು ಆದರಿಸುತ್ತಿದ್ದೀಯೆ. (ಇಲ್ಲಿ "ರಾಘವತ್ವೇಭವತ್ಸೀತಾ" ಎಂಬ ಪುರಾಣ ವಾಕ್ಯವನ್ನು ಹಿಡಿದು ವಿಷ್ಣುವು ಯಾವಯಾವ ಅವತಾರಗಳನ್ನೆತ್ತುವನೋ ಆ ಆ ಅವತಾರಗಳಿಂದಲೇ ನಿತ್ಯಾನಪಾಯಿನಿಯಾದ ಲಕ್ಷ್ಮೀದೇವಿಯೂ ಆತನಿಗೆ ಭಾರ್ಯೆಯಾಗುವಳೆಂಬ ತತ್ವವನ್ನು ತಿಳಿಯತಕ್ಕದು.) ನೀನು ರಾಮನಲ್ಲಿಯೇ ನೆಲೆಗೊಂಡಿರುವ ನಿನ್ನ ಮನಸ್ಸನ್ನು ಹಿಂತಿರುಗಿಸಬೇಡ. ಪುನಃ ನೀನು ಅತನನ್ನು ಸೇರುವುದರಲ್ಲಿ ಸಂಶಯವೇ ಇಲ್ಲವು." ಎಂದು ವಾಸ್ತವಿಕಾರ್ಥ. (ಮ)

ರಾವಣಂ ರಾಕ್ಷಸೇಶ್ವರಂ । ಭರ್ತಾರ ಮುಪಸಂಗಮ್ಯ ವಿಹರಸ್ವ ಯಥಾಸುಖಂ ॥ ೪ ॥ ¶ ಮಾನುಷೀ ಮಾನುಷಂ ತಂತು ರಾಮಮಿಚ್ಛಸಿ ಶೋಭನೇ ! । ರಾಜ್ಯಾದ್ಭ್ರಷ್ಟ ಮಸಿದ್ಧಾರ್ಥಂ ವಿಕ್ಲಬಂ ತ್ವಮನಿಂದಿತೇ !" ॥ ೫ ॥ ರಾಕ್ಷಸೀನಾಂ ವಚಶ್ಶ್ರುತ್ವಾ ಸೀತಾ ಪದ್ಮನಿಭೇಕ್ಷಣಾ । ನೇತ್ರಾಭ್ಯಾಮಶ್ರುಪೂರ್ಣಾಭ್ಯಾಮಿದಂ ವಚನಮಬ್ರವೀತ್ ॥ ೬ ॥ " ಯದಿದಂ ಲೋಕವಿದ್ವಿಷ್ಟ ಮುದಾಹರಥ ಸಂಗತಾಃ । ನೈತನ್ಮನಸಿ ವಾಕ್ಯಂ

ಕಾಲಕ್ಕೂ ಕೂಡ, ನಭವಿಷ್ಯಸಿ - ಇರಲಾರೆ, ತ್ರೈಲೋ....ರಂ - ಮೂರು ಲೋಕಗಳಲ್ಲಿಯೂ ಇರುವ ಸಂಪತ್ತಿಗೆ ಅನುಭವಕರ್ತನಾದ, ರಾಕ್ಷಸೇಶ್ವರಂ - ರಾಕ್ಷಸಾಧಿಪತಿಯಾದ, ರಾವಣಂ - ರಾವಣನನ್ನು, ಭರ್ತಾರಂ - ಗಂಡನನ್ನಾಗಿ, ಉಪಸಂಗಮ್ಯ - ಸೇರಿ, ಯಥಾಸುಖಂ - ಸುಖವಾಗಿ, ವಿಹರಸ್ವ - ವಿಹರಿಸು. ॥ ೩-೪ ॥ ಹೇ ಶೋಭನೇ - ಎಲೌ ಶುಭಕರಳೇ, ಹೇ ಅನಿಂದಿತೇ - ನಿಂದಿಗೆ ಅನರ್ಹಳೆ, ಮಾನುಷೀ - ಮನುಷ್ಯಳಾದ, ತ್ವಂ - ನೀನು, ಮಾನುಷಂ - ಮನುಷ್ಯನಾದ, ರಾಜ್ಯಾತ್ - ತನ್ನ ದೇಶದಿಂದ, ಭ್ರಷ್ಟಂ - ಬಿಡಲ್ಪಟ್ಟವನಾದಕಾರಣವೇ, ಅಸಿದ್ಧಾರ್ಥಂ - ಇಲ್ಲದಿರುವ ಧನವುಳ್ಳ, ವಿಕ್ಲಬಂ-ಚಿತ್ತಕ್ಷೋಭೆಯನ್ನು ಹೊಂದಿರುವ, ತಂರಾಮಂ-ಆ ರಾಮನನ್ನು, ಇಚ್ಛಸಿ-ಅಪೇಕ್ಷಿಸುವೆ. ॥೫॥ ರಾಕ್ಷಸೀನಾಂ - ರಕ್ಕಸಿಯರ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಪದ್ಮ....ಣಾ - ಕಮಲ ಗಳಿಗೆ ಸಮಾನಗಳಾದ ನೇತ್ರಗಳುಳ್ಳ, ಸೀತಾ - ಸೀತಾದೇವಿಯು, ಅಶ್ರುಪೂರ್ಣಾಭ್ಯಾಂ - ಕಣ್ಣೀರಿನಿಂದ ತುಂಬಿರುವ, ನೇತ್ರಾಭ್ಯಾಂ - ಕಣ್ಣುಗಳಿಂದ, ಉಪಲಕ್ಷಿತಾ - ಕೂಡಿ, ಇದಂವಚನಂ - ಈ ಮುಂದೆ ಹೇಳತಕ್ಕ ಮಾತನ್ನು, ಅಬ್ರವೀತ್ - ನುಡಿದನು. ॥ ೬ ॥ ಲೋಕವಿದ್ವಿಷ್ಟಂ - ಜನರಿಗೆ ವಿರುದ್ಧವಾದ, ಇದಂ - ಈ, ಯತ್ - ಯಾವ ಮಾತನ್ನು, ಸಂಗತಾಃ - ಗುಂಪುಗೂಡಿದ ನೀವು,

ನಮ್ಮ ಪ್ರಭುವಾದ ರಾವಣನೆಂದರೆ ಸಾಮಾನ್ಯನಲ್ಲ. ಆತನು ಮೂರು ಲೋಕಗಳಲ್ಲಿರುವ ಸಂಪತ್ತೆಲ್ಲವನ್ನೂ ಅನುಭವಿಸುತ್ತಿರುವವನು ; ರಾಕ್ಷಸೇಶ್ವರನು. ಅವನನ್ನು ಸೇರಿ ಅವನನ್ನು ಭರ್ತನನ್ನಾಗಿ ಪರಿಗ್ರಹಿಸಿ ಸುಖಪಡು. ಎಲೌ ಮಂಗಳಕರಳೇ ! ನೀನೋ ಕಂದುಕುಂದಿಲ್ಲದ ಚಲುವುಳ್ಳವಳು. ಮಾನುಷಿಯಾದ ನೀನು ಕಾಮಿಸಿರುವ ಕೇವಲ ಮನುಷ್ಯನಾದ ಆ ರಾಮನಾದರೋ ರಾಜ್ಯಭ್ರಷ್ಟನು; ಈಡೇರದ ಸಂಕಲ್ಪವುಳ್ಳವನು; ಕೇವಲ ದೀನನು; ದರಿದ್ರನು ; ಇಂತಹನನ್ನು ನೀನು ಅಪೇಕ್ಷಿಸುವುದೆಂದರೇನು ! ಈ ಮರುಳಾಟವು ಸಾಕು" ಎಂದರು. ॥ ೧-೫ ॥ ಕಮಲೇಕ್ಷಣೆಯಾದ ಆ ಜಾನಕಿಯು ರಾಕ್ಷಸಿಯರಾಡಿದ ಮಾತುಗಳನ್ನು ಕೇಳಿ ದುಃಖದಿಂದ ಕಂಬನಿದುಂಬಿದ ಕಣ್ಣುಗಳುಳ್ಳವಳಾಗಿ ಆ ರಾಕ್ಷಸಿಯರನ್ನು ಕುರಿತು, " ಎಲೆ ರಾಕ್ಷಸಿಯರೇ! ಇದುವರೆಗೆ ನೀವು ಹೇಳಿದ ಈ ಅಸಹ್ಯವಾದ, ಲೋಕನಿಂದಿತವಾದ ಮಾತುಗಳು ಮಹಾ ಪಾಪಿಷ್ಠವಾದವೆಂದು ನಿಮ್ಮ ಮನಸ್ಸಿಗೆ ತೋರಲಿಲ್ಲವೇಕೆ? ನೀವಾಡಿದ

¶ " ಎಲೌ ನಿರ್ದುಷ್ಟವಾದ ನಡತೆಯುಳ್ಳ ಜಾನಕಿಯೇ ! ನೀನು ಮನುಷ್ಯಾವತಾರವನ್ನೆತ್ತಿ, ಪಿತೃವಾಕ್ಯ ಪರಿಪಾಲನಾರ್ಥವಾಗಿ ರಾಜ್ಯವನ್ನು ತೊರೆದು ಅರಣ್ಯವಾಸಮಾಡುತ್ತ, (ಅಸಿದ್ಧಾರ್ಥಂ-ಅಶ್ಚಾಸೌ-ಸಿದ್ಧಾರ್ಥಶ್ಚತಂ) ವಿಷ್ಣುವಿನ ಅವತಾರರೂಪನಾದುದರಿಂದ, ಅವಾಪ್ತಸಮಸ್ತ ಕಾಮನಾಗಿಯೂ, (ವಿಕ್ಲಬಂ) ದಯಾಶೀಲನಾಗಿಯೂ ಇರುವ ಶ್ರೀರಾಮಮೂರ್ತಿಯನ್ನೇ ಭರ್ತನನ್ನಾಗಿ ಕಾಮಿಸಿರುವುದು ಯುಕ್ತವಾಗಿಯೇ ಇರುವುದು" ಎಂದು ಇಲ್ಲಿನ ವಾಸ್ತವಿಕಾರ್ಥ. (ಮ)

ಮೇ ಕಿಲ್ಬಿಷಂ ಪ್ರತಿಭಾತಿ ವಃ ॥ ೭ ॥ ನಮಾನುಷೀ ರಾಕ್ಷಸಸ್ಯ ಭಾರ್ಯಾಭವಿತು ಮರ್ಹತಿ । ಕಾಮಂ ಖಾದತ ಮಾಂ ಸರ್ವಾ ನಕರಿಷ್ಯಾಮಿ ವೋ ವಚಃ ॥ ೮ ॥ ದೀನೋವಾ ರಾಜ್ಯಹೀನೋವಾ ಯೋ ಮೇ ಭರ್ತಾ ಸ ಮೇ ಗುರುಃ । ತಂ ನಿತ್ಯಮನು ರಕ್ತಾಸ್ಮಿ ಯಥಾ ಸೂರ್ಯಂ ಸುವರ್ಚಲಾ ॥ ೯ ॥ ಯಥಾ ಶಚೀ ಮಹಾಭಾಗಾ ಶಕ್ರಂ ಸಮುಪತಿಷ್ಠತಿ । ಅರುಂಧತೀ ವಸಿಷ್ಠಂ ಚ ರೋಹಿಣೀ ಶಶಿನಂ ಯಥಾ ॥೧೦॥ ಲೋಪಾಮುದ್ರಾ ಯಥಾಽಗಸ್ತ್ಯಂ ಸುಕನ್ಯಾ ಚ್ಯವನಂ ಯಥಾ । ಸಾವಿತ್ರೀ ಸತ್ಯ

ಉದಾಹರಥ - ನುಡಿದರೋ, ಕಿಲ್ಬಿಷಂ - ಪಾಪಕರವಾದ, ವಃ - ನಿಮ್ಮ, ತದ್ವಾಕ್ಯಂ - ಆ ಮಾತು, ಮೇ - ನನ್ನ, ಮನಸಿ - ಮನದಲ್ಲಿ, ನಪ್ರತಿಭಾತಿ - ರುಚಿಸುವದಿಲ್ಲ. ॥ ೭ ॥ ಮಾನುಷೀ - ಮನುಷ್ಯ ಸ್ತ್ರೀಯು, ರಾಕ್ಷಸಸ್ಯ - ರಕ್ಕಸನಿಗೆ, ಭಾರ್ಯಾ - ಹೆಂಡತಿಯು, ಭವಿತುಂ - ಆಗುವದಕ್ಕೆ, ನಾರ್ಹತಿ- ಯೋಗ್ಯಳಲ್ಲ, ಸರ್ವಾಃ - ನೀವೆಲ್ಲರೂ, ಮಾಂ - ನನ್ನನ್ನು, ಕಾಮಂ - ಇಚ್ಛಾನುಸಾರವಾಗಿ, ಖಾದತ - ತಿಂದುಬಿಡಿ, ವಃ - ನಿಮ್ಮ, ವಚಃ - ಮಾತನ್ನು, ನಕರಿಷ್ಯಾಮಿ - ಮಾಡಲಾರೆನು. ॥ ೮ ॥ ದೀನೋವಾ - ದರಿದ್ರನಾಗಲಿ, ರಾಜ್ಯಹೀನೋವಾ - ರಾಜ್ಯವಿಲ್ಲದವನೇ ಆಗಲಿ, ಯಃ - ಯಾವ ರಾಮನು, ಮೇ - ನನಗೆ, ಭರ್ತಾ - ಗಂಡನೋ, ಸಃ - ಆ ರಾಮನು, ಮೇ - ನನಗೆ, ಗುರುಃ - ದೊಡ್ಡವನು, ತಂ - ಆ ರಾಮನನ್ನು ಕುರಿತು, ನಿತ್ಯಂ-ನಿರಂತರದಲ್ಲಿಯೂ, ಸೂರ್ಯಂ ಸೂರ್ಯನನ್ನು, ಸುವರ್ಚಲಾಯಥಾ - ಸುವರ್ಚಲಾದೇವಿಯಂತೆ, ಅನುರಕ್ತಾ - ಆಸಕ್ತಿಯುಳ್ಳವಳು, ಅಸ್ಮಿ - ಆಗಿದ್ದೇನೆ. ॥ ೯ ॥ ಶಚೀ - ಶಚೀದೇವಿಯು, ಶಕ್ರಂ - ದೇವೇಂದ್ರನನ್ನು, ಯಥಾ - ಯಾವರೀತಿಯಾಗಿ, ಸಮುಪತಿಷ್ಠತಿ - ಅನುಸರಿಸುವಳೋ, ಅರುಂಧತೀ - ಅರುಂಧತಿಯು, ವಸಿಷ್ಠಂಚ - ವಸಿಷ್ಠ ಋಷಿಯನ್ನು, ಯಥಾ - ಹೇಗೆಯೋ; ರೋಹಿಣೀ - ರೋಹಿಣೀದೇವಿಯು, ಶಶಿನಂ - ಚಂದ್ರನನ್ನು, ಯಥಾ - ಹೇಗೆಯೊ, ಲೋಪಾಮುದ್ರಾ - ಲೋಪಾಮುದ್ರೆಯು, ಅಗಸ್ತ್ಯಂ - ಅಗಸ್ತ್ಯಋಷಿಯನ್ನು, ಯಥಾ - ಹೇಗೆಯೋ, ಸುಕನ್ಯಾ - ಸುಕನ್ಯೆಯು, ಚ್ಯವನಂ - ಚ್ಯವನಋಷಿಯನ್ನು, ಯಥಾ - ಹೇಗೆಯೋ, ಸಾವಿತ್ರೀ - ಸಾವಿತ್ರೀದೇವಿಯು, ಸತ್ಯವಂತಂಚ - ಸತ್ಯವಂತನೆಂಬರಾಜನನ್ನು, ಯಥಾ- ಹೇಗೆಯೋ, ಕಪಿಲಂ - ಕಪಿಲಋಷಿಯನ್ನು, ಶ್ರೀಮತೀ - ಶ್ರೀಮತೀದೇವಿಯು, ಯಥಾ - ಹೇಗೆಯೋ, ಸೌದಾಸಂ - ಸೌದಾಸನೆಂಬ ಅರಸನನ್ನು, ಮದಯಂತೀವ - ಮದಯಂತಿ ಎಂಬವಳಂತೆಯೂ,

ಮಾತುಗಳೆಲ್ಲವೂ ಮಹಾ ಪಾಪಭೂಯಿಷ್ಠವಾದವುಗಳು. ಅವೊಂದೂ ನನ್ನ ಮನಸ್ಸಿಗೆ ಹಿಡಿಯುವುದಿಲ್ಲ. ಮನುಷ್ಯ ಸ್ತ್ರೀಯಾದ ನಾನು ರಾಕ್ಷಸನಿಗೆ ಭಾರ್ಯೆಯಾಗುವುದು ಯುಕ್ತವಾದುದಲ್ಲ. ನೀವೆಲ್ಲರೂ ಸೇರಿ ನನ್ನನ್ನು ಭಕ್ಷಿಸಿದರೂ ಭಕ್ಷಿಸಿರಿ. ನಾನು ಬೇರೆ ನಿಮ್ಮ ಮಾತಿನಂತೆ ನಡೆಯುವವಳಲ್ಲವು. **ದರಿದ್ರನಾಗಿರಲಿ, ರಾಜ್ಯಭ್ರಷ್ಟನಾಗಿರಲಿ ನನ್ನನ್ನು ಕೈಹಿಡಿದವನಾವನೋ ಅವನೇ ನನಗೆ ಗುರುವು. ಸುವರ್ಚಲಾದೇವಿಯು ಪತಿಯಾದ ಸೂರ್ಯದೇವನನ್ನು ಹೇಗೆಯೋ ಹಾಗೆ ನಾನು ನನ್ನಪತಿಯಾದ ಶ್ರೀರಾಮನನ್ನು ಪ್ರೀತಿಸುವವಳು. ॥೭-೯॥** ಶಚೀದೇವಿಯು ದೇವೇಂದ್ರನನ್ನೂ, ಅರುಂಧತಿಯು ವಸಿಷ್ಠನನ್ನೂ, ರೋಹಿಣಿಯು ಚಂದ್ರನನ್ನೂ, ಲೋಪಾಮುದ್ರೆಯು ಅಗಸ್ತ್ಯನನ್ನೂ, ಸುಕನ್ಯೆಯು ಚ್ಯವನಋಷಿಯನ್ನೂ, ಸಾವಿತ್ರಿಯು ಸತ್ಯವಂತನನ್ನೂ, ಶ್ರೀಮತಿಯು ಕಪಿಲಋಷಿಯನ್ನೂ, ಮದಯಂತಿಯು ಸೌದಾಸನನ್ನೂ, ಕೇಶಿನಿಯು ಸಗರರಾಯನನ್ನೂ ಹೇಗೆ ಪ್ರೀತಿಸಿ ಅನುವರ್ತಿಸುತ್ತಿದ್ದರೋ ಹಾಗೆಯೇ

ವಂತಂಚ ಕಪಿಲಂ ಶ್ರೀಮತೀ ಯಥಾ ‖ ೧೧ ‖ ಸೌದಾಸಂ ಮದಯಂತೀವ ಕೇಶಿನೀ ಸಗರಂ ಯಥಾ । ನೈಷಧಂ ದಮಯಂತೀವ ಭೈಮೀ ಪತಿಮನುವ್ರತಾ ‖ ೧೨ ‖ ತಥಾಹಮಿಕ್ಷ್ವಾಕುವರಂ ರಾಮಂ ಪತಿಮನುವ್ರತಾ" । ಸೀತಾಯಾ ವಚನಂ ಶ್ರುತ್ವಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ । ಭರ್ತ್ಸಯಂತಿಸ್ಮ ಪರುಷೈರ್ವಾಕ್ಯೈ ರಾವಣಚೋದಿತಾಃ ‖ ೧೩ ‖ ಅವಲೀನಸ್ಸನಿರ್ವಾಕ್ಯೋ ಹನೂಮಾನ್ ಶಿಂಶುಪಾದ್ರುಮೇ । ಸೀತಾಂ ಸಂತರ್ಜಯಂತೀಸ್ತಾ ರಾಕ್ಷಸೀರಶೃಣೋತ್ಕಪಿಃ ‖ ೧೪ ‖ ತಾಮಭಿಕ್ರಮ್ಯ

ಕೇಶಿನೀ - ಕೇಶಿನೀದೇವಿಯು, ಸಗರಂ - ಸಗರಚಕ್ರವರ್ತಿಯನ್ನು, ಯಥಾ - ಹೇಗೆಯೋ, ಭೈಮೀ - ಭೀಮರಾಯನಮಗಳಾದ, ದಮಯಂತೀ - ದಮಯಂತೀದೇವಿಯು, ನೈಷಧಂ - ನಿಷಧದೇಶಕ್ಕೆ ಅಧಿಪತಿಯಾದ ನಳಮಹಾರಾಯನನ್ನು, ಪತಿಂ - ಗಂಡನನ್ನಾಗಿ, ಯಥಾ-ಹೇಗೆ, ಅನುವ್ರತಾ - ಅನುಸರಿಸಿ ವ್ರತವುಳ್ಳವಳೋ, ತಥಾ - ಹಾಗೆಯೆ, ಅಹಂ - ನಾನು, ಇಕ್ಷ್ವಾಕುವರಂ - ಇಕ್ಷ್ವಾಕುಮಹಾರಾಯನ ವಂಶಸ್ಥರಲ್ಲಿ ಶ್ರೇಷ್ಠನಾದ, ರಾಮಂ - ಶ್ರೀರಾಮನನ್ನು, ಪತಿಂ - ಗಂಡನನ್ನಾಗಿ, ಅನುವ್ರತಾ - ಅನುಸರಿಸಿ ಪಾತಿವ್ರತ್ಯರೂಪನಿಯಮವುಳ್ಳವಳು. ‖ ೧೨ ‖ ಸೀತಾಯಾಃ - ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ರಾಕ್ಷಸ್ಯಃ - ರಾಕ್ಷಸಿಯರು, ಕ್ರೋಧಮೂರ್ಛಿತಾಃ - ಕೋಪದಿಂದ ಪ್ರಜ್ಞೆತಪ್ಪಿದವರಾಗಿ, ರಾವಣಚೋದಿತಾಃ - ರಾವಣನಿಂದ, ಆಜ್ಞಾಪಿಸಲ್ಪಟ್ಟವರಾದ ಕಾರಣ, ಪರುಷೈಃ - ಕಠಿನಗಳಾದ, ವಾಕ್ಯೈಃ - ಮಾತುಗಳಿಂದ, ಸೀತಾಂ - ಸೀತೆಯನ್ನು, ಭರ್ತ್ಸಯಂತಿಸ್ಮ - ಹೆದರಿಸಿದರಷ್ಟೆ. ‖ ೧೩ ‖ ಶಿಂಶುಪಾದ್ರುಮೇ - ಶಿಂಶುಪಾವೃಕ್ಷದಲ್ಲಿ, ಅವಲೀನಃ - ಅವಿತುಕೊಂಡಿರುವ, ನಿರ್ವಾಕ್ಯಃ - ಮಾತುಗಳನ್ನಾಡಿರುವ, ಕಪಿಃ - ವಾನರನಾದ, ಸಹನೂಮಾನ್ - ಆ ಆಂಜನೇಯನು, ಸೀತಾಂ - ಸೀತಾದೇವಿಯನ್ನು, ಸಂತರ್ಜಯಂತೀಃ - ಹೆದರಿಸುತ್ತಿರುವ, ತಾಃರಾಕ್ಷಸೀಃ ಆ ರಾಕ್ಷಸಾಂಗನೆಯರ (ಮಾತುಗಳನ್ನು,) ಅಶೃಣೋತ್-ಕೇಳಿದನು. ‖ ೧೪ ‖ ಸಂಕ್ರುದ್ಧಾಃ - ಸ್ವಾಭಾವಿಕವಾಗಿ ಕೋಪವುಳ್ಳರಾಕ್ಷಸಸ್ತ್ರೀಯರು, ವೇಪಮಾನಾಂ - ನಡುಗುತ್ತಿರುವ, ತಾಂ - ಆ ಸೀತೆಯನ್ನು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಅಭಿಕ್ರಮ್ಯ - ಸುತ್ತಿಕೊಂಡು, ಪರಮಕ್ರುದ್ಧಾಃ-

---

ನಾನೂ ನನ್ನ ಪತಿದೇವನಾದ ಶ್ರೀರಾಮುನನ್ನೇ ಅನುವರ್ತಿಸುವವಳೆಂದು ತಿಳಿಯಿರಿ. ಮಹಾ ಪತಿವ್ರತೆಯಾದ ದಮಯಂತಿಯು ನಳಮಹಾರಾಯನನ್ನು ಹೇಗೆ ಅನುವರ್ತಿಸಿ, ನಡೆದಳೋ ಹಾಗೆಯೇ ನಾನೂ ಇಕ್ಷ್ವಾಕುಕುಲತಿಲಕನಾದ ಶ್ರೀರಾಮಮೂರ್ತಿಯನ್ನೇ ಅನುಸರಿಸುವ ಪವಿತ್ರ ವ್ರತವನ್ನು ಕೈಕೊಂಡಿರುವವಳು" ಎಂದು ಹೇಳಿದಳು. ‖ ೧೦–೧೨ ‖ ಮಹಾ ಪತಿವ್ರತೆಯಾದ ಸೀತೆಯು ಈ ರೀತಿ ನುಡಿಯಲು ರಾವಣನಿಂದ ಪ್ರೇರೇಪಿತರಾದ ಆ ರಾಕ್ಷಸಸ್ತ್ರೀಯರೆಲ್ಲರೂ ಕೋಪಾವೇಗದಿಂದ ಮೈಮೇಲೆ ಪ್ರಜ್ಞೆಯೇ ಇಲ್ಲದವರಾಗಿ ಮಹಾ ಕಠಿನತರವಾದ ವಾಕ್ಯಗಳಿಂದ ಆಕೆಯನ್ನು ಬೆದರಿಸಿದರು. ಆ ಸಮಯದಲ್ಲಿ ಶಿಂಶುಪಾವೃಕ್ಷದಲ್ಲಿ ತನ್ನನ್ನು ಮರೆಮಾಡಿಕೊಂಡು ಕುಳಿತಿದ್ದ ಆಂಜನೇಯನು ಏನನ್ನೂ ನುಡಿಯದೆ ಮೌನವಾಗಿಯೇ ಕುಳಿತು ಆ ರಾಕ್ಷಸಸ್ತ್ರೀಯರು ಸೀತೆಯನ್ನು ಬಹುಬಿರುಸಾಗಿ ಬೆದರಿಸಿ ಆಕೆಯನ್ನು ಕುರಿತು ಆಡುತ್ತಿದ್ದ ಕಹಿನುಡಿಗಳನ್ನೂ ಕೇಳುತ್ತಿದ್ದನು. ‖ ೧೩–೧೪ ‖ ಆಗಲಾ ರಾಕ್ಷಸಿಯರು ಗಡಗಡನೆ ನಡುಗುತ್ತಿದ್ದ ಆ ಸೀತಾದೇವಿಯನ್ನು, ಕೋಪದಿಂದ ಅಲಗಾಡು

† ಸಂಕ್ರುದ್ಧಾ ವೇಪಮಾನಾಂ ಸಮಂತತಃ । ಭೃಶಂ ಸಂಲಿಲಿಹುರ್ದೀಪ್ತಾನ್ಪ್ರಲಂಬಾನ್ದಶನಚ್ಛದಾನ್ ॥೧೫॥ ಊಚುಶ್ಚ ಪರಮಕ್ರುದ್ಧಾಃ ಪ್ರಗೃಹ್ಯಾಶು ಪರಶ್ವಧಾನ್ । "ನೇಯಮರ್ಹತಿ ಭರ್ತಾರಂ ರಾವಣಂ ರಾಕ್ಷಸಾಧಿಪಂ" ॥ ೧೬ ॥ ಸಾ ಭರ್ತ್ಸ್ಯಮಾನಾ ಭೀಮಾಭೀ ರಾಕ್ಷಸೀಭಿರ್ವರಾನನಾ । ಸಾ ಬಾಷ್ಪಮಪಮಾರ್ಜಂತೀ ಶಿಂಶುಪಾಂ ತಾಮುಪಾಗಮತ್ ॥ ೧೭ ॥ ತತಸ್ತಾಂ ಶಿಂಶುಪಾಂ ಸೀತಾ ರಾಕ್ಷಸೀಭಿಸ್ಸಮಾವೃತಾ । ಅಭಿಗಮ್ಯ ವಿಶಾಲಾಕ್ಷೀ ತಸ್ಥೌ ಶೋಕಪರಿಪ್ಲುತಾ ॥ ೧೮ ॥ ತಾಂ ಕೃಶಾಂ ದೀನವದನಾಂ ಮಲಿನಾಂಬರ § ಧಾರಿಣೀಂ । ಭರ್ತ್ಸಯಾಂಚಕ್ರಿರೇ ಸೀತಾಂ ರಾಕ್ಷಸ್ಯಸ್ತಾಂ ಸಮಂತತಃ ॥ ೧೯ ॥ ತತಸ್ತಾಂ ವಿನತಾ ನಾಮ ರಾಕ್ಷಸೀ ಭೀಮದರ್ಶನಾ । ಅಬ್ರವೀ

ಬಹಳ ಕೋಪವುಳ್ಳವರಾದಕಾರಣ, ಆಶು - ಶೀಘ್ರವಾಗಿ, ಪರಶ್ವಧಾನ್ - ಕೊಡಲಿಗಳನ್ನು, ಪ್ರಗೃಹ್ಯ - ಹಿಡಿದುಕೊಂಡು, ದೀಪ್ತಾನ್ - ಹೊಳೆಯುತ್ತಿರುವ, ಪ್ರಲಂಬಾನ್-ಜೋಲಾಡುತ್ತಿರುವ, ದಶನಚ್ಛದಾನ್-ತುಟಿಗಳನ್ನು, ಭೃಶಂ - ಬಹಳವಾಗಿ, ಲಿಲಿಹುಃ - ಕಚ್ಚಿದರು, ಇಯಂ - ಈ ಸೀತೆಯು, ಭರ್ತಾರಂ - ಸ್ವಾಮಿಯಾದ, ರಾಕ್ಷಸಾಧಿಪಂ - ರಾಕ್ಷಸರಿಗೆ ಅಧಿಪತಿಯಾದ, ರಾವಣಂ - ರಾವಣನನ್ನು ಕುರಿತು, ನಾರ್ಹತಿ - ಯೋಗ್ಯಳಲ್ಲಾ, ಇತಿ - ಹೀಗೆಂದು, ಉಚುಶ್ಚ - ಮಾತನ್ನೂ ಹೇಳಿದರು. ॥ ೧೫-೧೬ ॥ ಭೀಮಾಭಿಃ - ಭಯಂಕರರಾದ, ರಾಕ್ಷಸೀಭಿಃ - ರಾಕ್ಷಸಸ್ತ್ರೀಯರಿಂದ, ಸಂಭರ್ತ್ಸ್ಯಮಾನಾ - ಹೆದರಿಸಲ್ಪಟ್ಟ, ವರಾನನಾ - ಸುಂದರವಾದ ಮುಖವುಳ್ಳ, ಸಾ - ಆ ಸೀತೆಯು, ಬಾಷ್ಪಂ - ಕಣ್ಣೀರನ್ನು, ಅಪಮಾರ್ಜಂತೀ - ಒರಸಿಕೊಳ್ಳುತ್ತ, ತಾಂಶಿಂಶುಪಾಂ - ಆ ಶಿಂಶುಪಾವೃಕ್ಷವನ್ನು, ಉಪಾಗಮತ್ - ಹೊಂದಿದಳು. ॥ ೧೭ ॥ ತತಃ - ಬಳಿಕ, ರಾಕ್ಷಸೀಭಿಃ - ರಾಕ್ಷಸಾಂಗನೆಯರಿಂದ, ಸಮಾವೃತಾ - ಸುತ್ತುವರೆಯಲಾದ, ಶೋಕಪರಿಪ್ಲುತಾ - ವ್ಯಸನದಿಂದ ಬಾಡಿರುವ, ಸೀತಾ - ಸೀತಾದೇವಿಯು, ತಾಂಶಿಂಶುಪಾಂ - ಆ ಶಿಂಶುಪಾವೃಕ್ಷವನ್ನು, ಉಪಾಗಮ್ಯ - ಹೊಂದಿ, ತಸ್ಥೌ - ಕುಳಿತಳು. ॥ ೧೮ ॥ ಕೃಶಾಂ - ವ್ಯಸನದಿಂದ ಸಣ್ಣದಾಗಿರುವ, ದೀನವದನಾಂ - ಬತ್ತಿದಮುಖವುಳ್ಳ, ಮಲಿ....ಣೀಂ - ಮಾಸಿದಬಟ್ಟೆಯನ್ನು ಧರಿಸಿರುವ, ತಾಂ - ಪ್ರಸಿದ್ಧಳಾದ, ತಾಂಸೀತಾಂ - ಆ ಸೀತೆಯನ್ನು, ರಾಕ್ಷಸ್ಯಃ - ರಾಕ್ಷಸಸ್ತ್ರೀಯರು, ಸಮಂತತಃ-ಎಲ್ಲಾ ಕಡೆಯಲ್ಲಿಯೂ, ಭರ್ತ್ಸಯಾಂಚಕ್ರಿರೇ-ಹೆದರಿಸಿದರು. ॥ ೧೯ ॥

ತ್ತಿದ್ದ ತಮ್ಮ ತುಟಿಗಳನ್ನು ಕಡಿಯುತ್ತ ಮುತ್ತಿಕೊಂಡು, ಮಹಾ ಭಯಂಕರಗಳಾದ ಗಂಡು ಗೊಡಲಿಗಳನ್ನೆತ್ತಿಕೊಂಡು ಆಕೆಯನ್ನು ನೋಡಿ, "ಈ ಸೀತೆಯು ರಾಕ್ಷಸೇಶ್ವರನಾದ ರಾವಣನನ್ನು ಗಂಡನನ್ನಾಗಿ ಪರಿಗ್ರಹಿಸಲೊಪ್ಪುವುದಿಲ್ಲ. ರಾವಣಾಸುರನಿಗೆ ಭಾರ್ಯೆಯಾಗುವ ಭಾಗ್ಯವು ಇವಳಿಗೆಲ್ಲಿ ಲಭಿಸಬೇಕು?" ಎಂದರು. ಆಗ ವರಾನನೆಯಾದ ಜಾನಕಿಯು ಆ ರಾಕ್ಷಸಿಯರಿಗೆ ಹೆದರಿ ಮಹಾ ವ್ಯಸನದಿಂದ ಕಂಬನಿಗರೆಯುತ್ತ ಮತ್ತೆ ಕಣ್ಣೀರನ್ನೊರಸಿಕೊಂಡು ಆಂಜನೇಯನು ಕುಳಿತಿದ್ದ ಶಿಂಶುಪಾವೃಕ್ಷದಬಳಿಗೆ ಹೋದಳು. ॥೧೫–೧೮॥ ಹೀಗೆ ಶಿಂಶುಪಾವೃಕ್ಷದ ಬಳಿಗೈದುತ್ತಿರುವ ಆ ದೇವಿಯನ್ನು ಅಲ್ಲಿದ್ದ ಕಾವಲಿನ ರಾಕ್ಷಸಿಯರೆಲ್ಲರೂ ಸುತ್ತಿಕೊಂಡು ಆಕೆಯು ದುಃಖ ಮಹಾ ಸಮುದ್ರದಲ್ಲಿ ಮುಳುಗಿಹೋಗಿದ್ದರೂ ಆಕೆಯನ್ನು ಪೀಡಿಸಲುಪಕ್ರಮಿಸಿದರು. ಅವರೆಲ್ಲರೂ ಆ ಸೀತೆಯನ್ನು ಸುತ್ತಿಕೊಂಡು ವ್ಯಸನದಿಂದ

---

† "ಸಂರಬ್ಧಾ" ತಿ. ಪಾ. § "ವಾಸಿನೀಂ" ತಿ. ರಾ. ಪಾ.

ತ್ಕುಪಿತಾಕಾರಾ ಕರಾಳಾ ನಿರ್ಣತೋದರೀ || ೨೦ || "ಸೀತೇ! ಪರ್ಯಾಪ್ತಮೇತಾವ ದ್ಭರ್ತುಸ್ಸ್ನೇಹೋ § ನಿದರ್ಶಿತಃ|ಸರ್ವತ್ರಾಽತಿಕೃತಂ ಭದ್ರೇ! ವ್ಯಸನಾಯೋಪಕಲ್ಪತೇ || ೨೧ || ಪರಿತುಷ್ಟಾಸ್ಮಿ ಭದ್ರಂತೇ ಮಾನುಷಸ್ತೇ ಕೃತೋ ವಿಧಿಃ | ಮಮಾಪಿ ತು ವಚಃ ಪಥ್ಯಂ ಬ್ರುವಂತ್ಯಾಃ ಕುರು ಮೈಥಿಲಿ! || ೨೨ || ¶ ರಾವಣಂ ಭಜಭರ್ತಾರಂ

ತತಃ - ಅನಂತರದಲ್ಲಿ, ಕುಪಿತಾಕಾರಾ - ಸಿಟ್ಟುಳ್ಳ ದೇಹವುಳ್ಳ, ಕರಾಳಾ - ಸ್ವಭಾವದಿಂದಲೇ ಕ್ರೂರೆಯಾದ, ನಿರ್ಣತೋದರೀ - ಕೃಶವಾದ ಹೊಟ್ಟೆಯುಳ್ಳ, ಭೀಮದರ್ಶನಾ - ಭಯಂಕರವಾದ ಕಣ್ಣುಗಳುಳ್ಳ, ವಿನತಾನಾಮ - ವಿನತೆಯೆಂದು ಪ್ರಸಿದ್ಧಳಾದ, ರಾಕ್ಷಸೀ - ರಾಕ್ಷಸಸ್ತ್ರೀಯು, ತಾಂ - ಆ ಸೀತೆಯನ್ನು ಕುರಿತು, ಅಬ್ರವೀತ್ - ನುಡಿದಳು. || ೨೦ || ಹೇ ಸೀತೇ - ಎಲೆ ಸೀತೇ, ಎತಾವತ್ - ಇಷ್ಟುಮಾತ್ರವು, ಪರ್ಯಾಪ್ತಂ - ಸಾಕು, ಭರ್ತುಃ - ಗಂಡನ, ಸ್ನೇಹಃ-ವಿಶ್ವಾಸವು, ನಿದರ್ಶಿತಃ - ತೋರಿಸಲ್ಪಟ್ಟಿತು, ಹೇ ಭದ್ರೇ - ಎಲೆ ಶುಭಕರಳೇ, ಅತಿಕೃತಂ - ಅತ್ಯಾಚಾರವು, ವ್ಯಸನಾಯ - ದುಃಖಕ್ಕೋಸ್ಕರ, ಉಪಕಲ್ಪತೇ - ಆಗುತ್ತದೆ. || ೨೧ || ತೇ - ನಿನಗೆ, ಭದ್ರಂ - ಶುಭವಾಗಲಿ, ಪರಿತುಷ್ಟಾಸ್ಮಿ - ಸಂತೋಷಗೊಂಡೆನು, ಮಾನುಷಃ - ಮನುಷ್ಯಸಂಬಂಧಿಯಾದ, ವಿಧಿಃ - ಪಾತಿವ್ರತ್ಯ ಪ್ರಕಟನರೂಪವಾದ ನಿಯಮವು, ತೇ - ನಿನ್ನಿಂದ, ಕೃತಃ - ವ್ಯಕ್ತಮಾಡಲ್ಪಟ್ಟಿತು, ಅಪಿತು - ಮತ್ತೇನೆಂದರೆ, ಹೇ ಮೈಥಿಲಿ - ಎಲೆ ಸೀತೇ, ಪಥ್ಯಂ - ಇಷ್ಟವನ್ನು, ಬ್ರುವಂತ್ಯಾಃ - ನುಡಿಯುತ್ತಿರುವ, ಮಮ - ನನ್ನ, ವಚಃ - ಮಾತನ್ನು, ಕುರು - ಮಾಡು. || ೨೨ || ಸರ್ವರಕ್ಷಸಾಂ - ರಾಕ್ಷಸರೆಲ್ಲರಿಗೂ, ಭರ್ತಾರಂ -

---

ಕೂಡಿದ ಮುಖವುಳ್ಳವಳೂ, ಯಾವಾಗಲೂ ಉಡುತ್ತಿದ್ದುದರಿಂದ ಮಾಸಿದ ಉಡುಗೆಯುಳ್ಳವಳೂ ಆದ ಆಕೆಯನ್ನು ಕುರಿತು ಪುನಃ ಬೆದರಿಸಲಾರಂಭಿಸಿದರು. ಅವರಲ್ಲಿ ಮಹಾ ಭಯಂಕರವಾದ ಕಣ್ಣುಗಳುಳ್ಳವಳೂ, ವಿಕಾರರೂಪೆಯೂ, ಬಹಳವಾಗಿ ಕೃಶಿಸಿ ಹೋಗಿದ್ದ ಹೊಟ್ಟೆಯುಳ್ಳವಳೂ ಆದ ವಿನತೆಯೆಂಬ ರಾಕ್ಷಸಿಯು ಆ ಸೀತೆಯನ್ನುಕುರಿತು, "ಎಲೆ ಸೀತೇ! ನೀನು ನಿನಗಿರುವ ಪತಿಪ್ರೇಮವನ್ನು ನಮ್ಮೆಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಪ್ರದರ್ಶಿಸದೆ; ಇನ್ನು ಸಾಕು, ಇನ್ನು ಆ ನಿನ್ನ ಪತಿಸ್ನೇಹವನ್ನು ಸಾಕುಮಾಡು. ಓ ಮಂಗಳರೂಪಿಣಿಯೇ! ಯಾವ ಕೆಲಸವಾದರೂ ಅತಿಯಾಗಿ ಮಾಡಿದುದಾದರೆ ಅದು ವ್ಯಸನಕ್ಕೆ ಕಾರಣವಾಗಿ ಪರಿಣಮಿಸುವುದೇಹೊರ್ತು ಮತ್ತೆಬೇರೆಯಲ್ಲವು. ನೀನು ಇದುವರೆಗೆ ಮನುಷ್ಯಜಾತಿಗೆ ತಕ್ಕಂತೆ ನಡೆದಿದ್ದೀಯೆ. ನಿನ್ನ ಪತಿಯಾದ ಆ ರಾಮನಲ್ಲಿ ನಿನಗಿರುವ ಪೂರ್ಣಪ್ರೇಮವನ್ನೂ ಇದುವರೆಗೆ ಚೆನ್ನಾಗಿಯೇ ಪ್ರಕಟಗೊಳಿಸಿದ್ದೀಯೆ. ಇನ್ನು ಅದೆಲ್ಲವನ್ನೂ ಸಾಕುಮಾಡು. ನೀನಿದುವರೆಗೂ ನಿನ್ನ ಪತಿಯಲ್ಲಿ ನಿನಗಿರುವ ಸ್ನೇಹವನ್ನು ತೋರಿದುದಕ್ಕಾಗಿ ನಾನು ಬಹಳ ಸಂತೋಷಪಟ್ಟಿದ್ದೇನೆ. ನಿನಗೆ ಮಂಗಳವಾಗಲಿ! ಇದೋ ನಾನೀಗ ನಿನ್ನ ಮೇಲ್ಮೆಗಾಗಿ ಒಂದು ಮಾತನ್ನು ಹೇಳುತ್ತೇನೆ. ಅದನ್ನು ಕೇಳಿ ಆದರಂತೆ ನಡೆಯುವವಳಾಗು.

---

§ "ಪ್ರದರ್ಶಿತಃ" ತಿ. ಪಾ.

¶ ಇಲ್ಲಿ, "ಜಾನಕಿ! ರಾಕ್ಷಸರೆಲ್ಲರಿಗೂ ಪ್ರಭುವಾದ ರಾವಣೇಶ್ವರನನ್ನೇ ನಿನ್ನ ಸೇವಕನನ್ನಾಗಿ ಮಾಡಿಕೊಂಡು ಆತನಿಂದ ಸೇವೆಗಳನ್ನು ಸಲ್ಲಿಸಿಕೊ. ಬಲಪರಾಕ್ರಮಾದಿಗಳಿಂದ ಶ್ರೇಷ್ಠನಾದ ಶ್ರೀರಾಮಮೂರ್ತಿಯನ್ನೇ ಹೊಂದು" ಎಂದು ವಾಸ್ತವಿಕಾರ್ಥ. (ಮ)

ಭರ್ತಾರಂ ಸರ್ವರಕ್ಷಸಾಂ । ವಿಕ್ರಾಂತಂ ‡ ರೂಪವಂತಂಚ ಸುರೇಶಮಿವ ವಾಸವಂ । ದಕ್ಷಿಣಂ ತ್ಯಾಗಶೀಲಂಚ ಸರ್ವಸ್ಯ ಪ್ರಿಯದರ್ಶನಂ ॥ ೨೪ ॥ ಮಾನುಷಂ ಕೃಪಣಂ ರಾಮಂ ತ್ಯಕ್ತ್ವಾ ರಾವಣಮಾಶ್ರಯ । ದಿವ್ಯಾಂಗರಾಗಾ ವೈದೇಹಿ! ದಿವ್ಯಾಭರಣ ಭೂಷಿತಾ ॥ ೨೫ ॥ ಅದ್ಯಪ್ರಭೃತಿ ಸರ್ವೇಷಾಂ ಲೋಕಾನಾಮೀಶ್ವರೀ ಭವ । ಅಗ್ನೇಸ್ಸ್ವಾಹಾ ಯಥಾ ದೇವೀ ಶಚೀವೇಂದ್ರಸ್ಯ ಶೋಭನೇ! ॥ ೨೬ ॥ ¶ ಕಿಂ ತೇ ರಾಮೇಣ ವೈದೇಹಿ! ಕೃಪಣೇನ ಗತಾಯುಷಾ । ಏತದುಕ್ತಂ ಚ ಮೇ ವಾಕ್ಯಂ ಯದಿ

ಒಡೆಯನಾದ, ವಿಕ್ರಾಂತಂ - ಪರಾಕ್ರಮಿಯಾದ, ರೂಪವಂತಂಚ - ಸೌಂದರ್ಯಶಾಲಿಯಾದ, ಸುರೇಶಂ - ದೇವತಾಧಿಪತಿಯಾದ, ವಾಸವಮಿವಸ್ಥಿತಂ - ದೇವೇಂದ್ರನಂತಿರುವ, ದಕ್ಷಿಣಂ - ದಾಕ್ಷಿಣ್ಯ ಶಾಲಿಯಾದ, ಸರ್ವಸ್ಯ - ಎಲ್ಲಕ್ಕೂ, ತ್ಯಾಗಶೀಲಂ - ದಾತನಾದ, ಪ್ರಿಯದರ್ಶನಂ - ಇಷ್ಟವಾದ ನೋಟವುಳ್ಳ, ರಾವಣಂ - ರಾವಣನನ್ನು, ಭರ್ತಾರಂ - ಗಂಡನನ್ನಾಗಿ, ಭಜ - ಹೊಂದು, ಕೃಪಣಂ - ದರಿದ್ರನಾದ, ಮಾನುಷಂ - ಮನುಷ್ಯನಾದ, ರಾಮಂ - ರಾಮನನ್ನು, ತ್ಯಕ್ತ್ವಾ - ಬಿಟ್ಟು, ರಾವಣಂ - ರಾವಣನನ್ನು, ಆಶ್ರಯ - ಅವಲಂಬಿಸು. ॥ ೨೪ ॥ ಹೇ ವೈದೇಹಿ - ಎಲೆ ಸೀತೆ, ಹೇ ಶೋಭನೇ - ಎಲೌ ಶುಭಕರಳೇ, ದಿವ್ಯಾಂಗರಾಗಾ-ಸೊಗಸಾದ ಗಂಧವುಳ್ಳ, ತ್ವಂ - ನೀನು, ದಿವ್ಯಾ.... ತಾ - ಮನೋಹರಗಳಾದ ಒಡವೆಗಳಿಂದ, ಅಲಂಕೃತಳಾಗಿ, ಅಗ್ನೇಃ - ಅಗ್ನಿಗೆ, ಸ್ವಾಹಾದೇವೀಯಥಾ - ಸ್ವಾಹಾದೇವಿಯಂತೆ, ದೇವೇಂದ್ರಸ್ಯ-ಇಂದ್ರನಿಗೆ, ಶಚೀವ - ಶಚೀದೇವಿಯಂತೆ, ಅದ್ಯಪ್ರಭೃತಿ - ಇದು ಮೊದಲಾಗಿ, ಲೋಕಾನಾಂ - ಸಮಸ್ತಲೋಕಗಳಿಗೂ, (ಅಥವಾ ಸಮಸ್ತಜನರಿಗೂ) ಈಶ್ವರೀ - ಅರಿಸಿಯು, ಭವ - ಆಗು, ಹೇ ವೈದೇಹಿ - ಓ ಸೀತೆಯೇ, ಕೃಪಣೇನ-ದರಿದ್ರನಾದ, ಗತಾಯುಷಾ - ಅಲ್ಪಾಯುವಾದ, ರಾಮೇಣ - ರಾಮನಿಂದ, ತೇ - ನಿನಗೆ, ಕಿಂ - ಏನುಪ್ರಯೋಜನವು, ಉಕ್ತಂ-

ದೇವತೆಗಳೊಡೆಯನಾದ ದೇವೇಂದ್ರನಿಗೆ ಸಮಾನನಾಗಿ, ಮಹಾ ಚಾತುರ್ಯವಂತನೂ, ದಾನಶೀಲನೂ, ಸಮಸ್ತ ಜನರಿಗೂ ಮಹದಾನಂದಕರವಾದ ನೋಟವುಳ್ಳವನೂ, ಸಕಲ ರಾಕ್ಷಸರಿಗೂ ಒಡೆಯನೂ ಆದ ರಾವಣೇಶ್ವರನನ್ನು ಭರ್ತನನ್ನಾಗಿ ಅಂಗೀಕರಿಸು. ಸೀತೇ! ಮನುಷ್ಯನೂ, ಮಹಾ ಕುತ್ಸಿತನೂ ಆದ ಆ ರಾಮನನ್ನು ಪರಿತ್ಯಜಿಸಿ ಮಹಾತ್ಮನಾದ ನಮ್ಮ ರಾವಣೇಶ್ವರನನ್ನು ಅಂಗೀಕರಿಸು. ಎಲೌ! ನೀನು ಸುಗಂಧದೊಡಗೂಡಿದ ಚಂದನಾದಿ ಗಳನ್ನು ಲೇಪಿಸಿಕೊಂಡು, ದಿವ್ಯಾಭರಣಗಳನ್ನು ಧರಿಸಿ ಅಲಂಕೃತಳಾಗಿ ಶೋಭಿಸಬೇಕು. ಇದು ಮೊದಲಾಗಿ ನೀನು ಸಮಸ್ತ ಲೋಕಗಳಿಗೂ ಮಹಾರಾಜ್ಞಿಯಾಗು. ಎಲೌ ಮಂಗ ಳಾಂಗಿಯೇ! ಅಗ್ನಿಹೋತ್ರನಿಗೆ, ಸ್ವಾಹಾದೇವಿಯೆಂತೋ, ದೇವೇಂದ್ರನಿಗೆ ಶಚೀದೇವಿ ಯೆಂತೋ ಅಂತೆಯೇ ನೀನು ರಾಕ್ಷಸಪ್ರಭುವಾದ ರಾವಣಾಸುರನಿಗೆ ಭಾರ್ಯೆಯಾಗು.

‡ "ಆಪತಂತಂಚ" ರಾ. ತಿ. ಪಾ.

¶ "ಎಲೆ ವೈದೇಹೀ! ಚಿರಾಯುವಾದ ಶ್ರೀರಾಮನೊಡನೆ ನೀನು ಸೇರುವೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದುದರಿಂದ ಈ ರೀತಿ ನೀನು ಹಲುಬುವುದು ಯುಕ್ತವಲ್ಲವು. ಇಂದಿನಿಂದ ನೀನು ಈ ಕಾರ್ಪಣ್ಯವನ್ನು ಬಿಟ್ಟು ದಿವ್ಯಾಂಗ ರಾಗಾದಿಗಳಿಂದಲಂಕೃತಳಾಗಿ ನಮ್ಮೆಲ್ಲರಿಗೂ ಒಡತಿಯಾಗಿ ಇಷ್ಟದೇವತೆಯಾಗಿ ನಮ್ಮನ್ನು ಕಾಪಾಡು. ನೀನು ಹೀಗೆ ಮಾಡದಿದ್ದಲ್ಲಿ ಇದೋಈಗಲೇ ನಾವೆಲ್ಲರೂ ವಿಷವನ್ನು ಕುಡಿದು ಪ್ರಾಣಗಳನ್ನು ತೊರೆಯುತ್ತೇವೆ." ಎಂದು ವಾಸ್ತವಿಕಾರ್ಥ. (ಮ)

ತ್ವಂ ನಕರಿಷ್ಯಸಿ । ಅಸ್ಮಿನ್ಮುಹೂರ್ತೇ ಸರ್ವಾಸ್ತ್ವಾಂ ಭಕ್ಷಯಿಷ್ಯಾಮಹೇ ವಯಂ" ॥ ೨೭ ॥ ಅನ್ಯಾತು ವಿಕಟಾ ನಾಮ ಲಂಬಮಾನಪಯೋಧರಾ । ಅಬ್ರವೀತ್ಕುಪಿತಾ ಸೀತಾಂ ಮುಷ್ಟಿಮುದ್ಯಮ್ಯ ಗರ್ಜತೀ ॥೨೮॥ "¶ ಬಹೂನ್ಯಪ್ರಿಯರೂಪಾಣಿ ವಚನಾನಿ ಸುದುರ್ಮತೇ! । ಅನುಕ್ರೋಶಾನ್ಮೃದುತ್ವಾಚ್ಚ ಸೋಢಾನಿ ತವ ಮೈಥಿಲಿ! ॥೨೯॥ ನಚ ನಃ ಕುರುಷೇ ವಾಕ್ಯಂ ಹಿತಂ ಕಾಲಪುರಸ್ಕೃತಂ ॥ ೩೦ ॥ ಆನೀತಾಸಿ ಸಮುದ್ರಸ್ಯ

ಹೇಳಲ್ಪಟ್ಟ, ಮೇ - ನನ್ನ, ಏತದ್ವಾಕ್ಯಂ - ಈ ಮಾತನ್ನು, ತ್ವಂ - ನೀನು, ನಕರಿಷ್ಯಸಿಯದಿ-ಮಾಡದೆ ಹೋದರೆ, ವಯಂ - ನಾವು, ಸರ್ವಾಃ - ಎಲ್ಲರೂ, ತ್ವಾಂ - ನಿನ್ನನ್ನು, ಅಸ್ಮಿನ್ಮುಹೂರ್ತೇ-ಈ ಕ್ಷಣ ದಲ್ಲಿಯೇ, ಭಕ್ಷಯಿಷ್ಯಾಮಹೇ-ತಿಂದುಬಿಡುತ್ತೇವೆ. ॥ ೨೫-೨೭ ॥ ಅನ್ಯಾ-ಮತ್ತೊಬ್ಬಳಾದ, ಲಂಬ.... ರಾ - ಜೋಲಾಡುತ್ತಿರುವ ಕುಚಗಳುಳ್ಳ, ಕುಪಿತಾ - ಕೋಪಿಸ್ಠಳಾದ, ವಿಕಟಾನಾಮ - ವಿಕಟಿಯೆಂದು ಪ್ರಖ್ಯಾತಳಾದ ರಾಕ್ಷಸಿಯು, ಮುಷ್ಟಿಂ - ಕೈ ಹಿಡಿಯನ್ನು, ಉದ್ಯಮ್ಯ - ಮೇಲಕ್ಕೆತ್ತಿ, ಗರ್ಜತೀ - ಹೆದರಿಸಿ, ಸೀತಾಂ - ಸೀತೆಯನ್ನು ಕುರಿತು, ಆಬ್ರವೀತ್ - ಹೇಳಿದಳು. ॥ ೨೮ ॥ ಹೇ ಸುದುರ್ಮತೇ- ಎಲೆ ದುರ್ಬುದ್ಧಿಯುಳ್ಳವಳೇ, ಹೇ ಮೈಥಿಲಿ-ಎಲೆ ಸೀತೆಯೆ, ಅಪ್ರಿಯರೂಪಾಣಿ - ಇಷ್ಟವಲ್ಲದಿರುವ, ಬಹೂನಿ - ಅನೇಕಗಳಾದ, ತವವಚನಾನಿ-ನಿನ್ನಮಾತುಗಳನ್ನು, ಅನುಕ್ರೋಶಾತ್ - ದಯೆಯಿಂದಲೂ, ಮೃದುತ್ವಾಚ್ಚ - ಮಾರ್ದವದಿಂದಲೂ, ಸೋಢಾನಿ - ಸಹಿಸಲ್ಪಟ್ಟವು. ॥ ೨೯ ॥ ಹಿತಂ-ಇಷ್ಟವಾದ, ಕಾಲ... ತಂ - ಕಾಲೋಚಿತವಾದ, ನಃವಾಕ್ಯಂಚ - ನಮ್ಮಮಾತನ್ನೂ ಕೂಡ, ನಕುರುಷೇ - ಮಾಡದಿ ರುವೆ, ಹೇ ಮೈಥಿಲಿ - ಎಲೆ ಸೀತೇ, ಅನ್ಯೈಃ - ಇತರರಿಂದ, ದುರಾಸದಂ - ಹೊಂದಲಸಾಧ್ಯವಾದ,

---

ಮಹಾ ವ್ಯಸನದಿಂದ ಗತಾಯುವಾಗಿರುವ ಆ ರಾಮನಿಂದ ಇನ್ನು ನಿನಗೇನು ಪ್ರಯೋಜನ? ಇಷ್ಟನ್ನೂ ನಿನ್ನ ಹಿತಕ್ಕಾಗಿ ಹೇಳಿರುವೆನು. ನೀನು ಈ ನನ್ನ ಮಾತುಗಳನ್ನು ಕೇಳಿ ನಾನು ಹೇಳಿದಂತೆಯೇ ಮಾಡಿದಿರುವೆಯಾದರೆ, ಇದೋ ಈ ಕ್ಷಣದಲ್ಲಿಯೇ ನಾವೆಲ್ಲರೂ ಸೇರಿ ನಿನ್ನನ್ನು ಭಕ್ಷಿಸಿಬಿಡುವೆವು" ಎಂದು ಹೇಳಿದಳು. ॥೧೯–೨೭॥ ಆಮೇಲೆ ಜೋಲಾಡುತ್ತಿರುವ ಸಮಸ್ತಾವಯವಗಳುಳ್ಳ ವಿಕಟಿಯೆಂಬ ಮತ್ತೊಬ್ಬ ರಾಕ್ಷಸಿಯು ಕೋಪಗೊಂಡು ಬೆರಳು ಗಳನ್ನೆಲ್ಲಾ ಮಡಚಿ ಮುಷ್ಟಿಯನ್ನೆತ್ತಿಕೊಂಡು ಸಿಂಹನಾದವನ್ನು ಮಾಡುತ್ತ ಸೀತೆಯನ್ನು ಕುರಿತು, "ಎಲೆ ದುರಾತ್ಮಳೇ! ಸೀತೇ!! ಇದುವರೆಗೆ ನೀನೆಷ್ಟು ಅಪ್ರಿಯ ವಚನಗಳನ್ನು ಹೇಳುತ್ತಿದ್ದರೂ ದಯೆಯಿಂದಲೂ, ತಾಳ್ಮೆಯಿಂದಲೂ ಅವುಗಳನ್ನು ಮನ್ನಿಸಿ ಸುಮ್ಮನಿದ್ದೆವು. ಇನ್ನು ಹಾಗಿರಲು ಎಷ್ಟುಮಾತ್ರಕ್ಕೂ ಸಾಧ್ಯವಿಲ್ಲ. ಕೇಳು; ಕಾಲೋಚಿತವಾಗಿಯೂ, ನಿನಗೆ ಮೇಲನ್ನುಂಟುಮಾಡುವುದಾಗಿಯೂ ಇರುವ ನಮ್ಮ ಒಳ್ಳುಡಿಗಳನ್ನು ಕೇಳದೆ ನೀನು ಕೇವಲ ಅಸಡ್ಡೆ ಮಾಡುತ್ತಿರುವೆ. ಇದರಿಂದ ನಿನಗೆ ಮೇಲುಂಟಾಗುವುದಿಲ್ಲ. ಇದೂ ಅಲ್ಲದೆ ನೀನು ಅಪಾರವಾದ ಸಮುದ್ರದ ಆಚಿನ ದಡಕ್ಕೆ ಕರೆದೊಯ್ಯಲ್ಪಟ್ಟಿರುವೆಯೆಂಬುದನ್ನೂ ಮರೆತಿರುವೆ.

¶ "ಎಲೆ ದೇವಿ! ಇದುವರೆಗೂ ನಮ್ಮ ಒಡೆಯನಾದ ರಾವಣನು ಯಾವ ಯಾವ ಅಪ್ರಿಯವಾಕ್ಕುಗಳನ್ನಾಡಿ ದನೋ ಅವುಗಳು ಯಾರಿಗೂ ತಡೆಯಲಸಾಧ್ಯಗಳು. ಅಸಹ್ಯಕರಗಳಾದುವು. ಅಂತಹ ಕಹಿನುಡಿಗಳೆಲ್ಲವನ್ನೂ ಪರಮ ದಯಾಮಯಿಯಾದ ನೀನು ನಿನ್ನಲ್ಲಿರುವ ಸಹಜವಾದ ದಯಾಗುಣದಿಂದಲೂ, ಮೃದುತ್ವದಿಂದಲೂ ಸಹಿಸಿರುವೆ; ಅವುಗಳೆಲ್ಲವನ್ನೂ ನೀನು ಮನ್ನಿಸಿರುವೆ." ಎಂದು ಇಲ್ಲಿನ ವಾಸ್ತವಾರ್ಥ. (ಮ)

ಪಾರಮನ್ಯೈರ್ದುರಾಸದಂ । ರಾವಣಾಂತಃಪುರಂ ಘೋರಂ ಪ್ರವಿಷ್ಟಾಚಾಸಿ ಮೈಥಿಲಿ! ॥ ೩೧ ॥ ರಾವಣಸ್ಯ ಗೃಹೇ ರುದ್ಧಾಮಸ್ಮಾಭಿಸ್ತು ಸುರಕ್ಷಿತಾಂ । ನತ್ವಾಂ ಶಕ್ತಃ ಪರಿತ್ರಾತುಮಪಿ ಸಾಕ್ಷಾತ್ಪುರಂದರಃ ॥೩೨॥ ಕುರುಷ್ವ ಹಿತವಾದಿನ್ಯಾ ವಚನಂ ಮಮ ಮೈಥಿಲಿ! । ಅಲಮಶ್ರುಪ್ರಪಾತೇನ ತ್ಯಜ ಶೋಕಮನರ್ಥಕಂ ॥೩೩॥ ಭಜ ಪ್ರೀತಿಂ ಪ್ರಹರ್ಷಂಚ * ತ್ಯಜ್ಯೈತಾಂ ನಿತ್ಯದೈನ್ಯತಾಂ । ಸೀತೇ! ರಾಕ್ಷಸರಾಜೇನ ಸಹ ಕ್ರೀಡ

ಸಮುದ್ರಸ್ಯ - ಕಡಲಿನ, ಪಾರಂ - ದಡವನ್ನು ಕುರಿತು, ಆನೀತಾಸಿ - ತರಲ್ಪಟ್ಟವಳಾಗಿದ್ದೀಯೆ, ಘೋರಂ - ಭಯಂಕರವಾದ, ರಾವ....ರಂ - ರಾವಣನಮನೆಯನ್ನು, ಪ್ರವಿಷ್ಟಾ - ಹೊಕ್ಕವಳು, ಅಸಿ - ಆಗಿರುವೆ, ರಾವಣಸ್ಯ - ರಾವಣನ, ಗೃಹೇ - ಮನೆಯಲ್ಲಿ, ರುದ್ಧಾಂ - ತಡೆದಿರುವ, ಅಸ್ಮಾಭಿಶ್ಚ - ನಮ್ಮಗಳಿಂದಲೂ, ಸುರಕ್ಷಿತಾಂ - ರಕ್ಷಿತಳಾದ, ತ್ವಾಂ - ನಿನ್ನನ್ನು, ಪರಿತ್ರಾತುಂ - ರಕ್ಷಿಸುವದಕ್ಕೆ, ಸಾಕ್ಷಾ....ಪಿ - ಎದುರಾಗಿಬಂದ ದೇವೇಂದ್ರನೂ ಕೂಡ, ನಶಕ್ತಃ - ಸಮರ್ಥನಲ್ಲವು. ॥ ೩೦-೩೨ ॥
ಹೇ ಮೈಥಿಲಿ - ಎಲೆ ಸೀತೇ, ಹಿತವಾದಿನ್ಯಾಃ - ಹಿತವನ್ನು ನುಡಿಯುತ್ತಿರುವ, ಮಮ - ನನ್ನ, ವಚನಂ - ಮಾತನ್ನು, ಕುರುಷ್ವ - ಮಾಡು, ಅಶ್ರುಪ್ರಪಾತೇನ - ಕಂಬನಿಯನ್ನು ಸುರಿಸುವುದರಿಂದ ಅಲಂಸಾಕು, ಅನರ್ಥಕಂ - ವ್ಯರ್ಥವಾದ, ಶೋಕಂ - ದುಃಖವನ್ನು, ತ್ಯಜ - ಬಿಡು. ॥ ೩೩ ॥
ಹೇ ಸೀತೇ - ಎಲೌ ಸೀತಾದೇವಿಯೇ, ಪ್ರೀತಿಂ - ಸ್ನೇಹವನ್ನು, ಪ್ರಹರ್ಷಂಚ - ಸಂತೋಷವನ್ನೂ, ಭಜ - ಹೊಂದು, ಏನಾಂ - ಈ, ನಿತ್ಯದೈನ್ಯತಾಂ - ಯಾವಾಗಲೂ ಇರುವ ದುಃಖಾವಸ್ಥೆಯನ್ನು, ತ್ಯಜ - ಬಿಡು, ರಾಕ್ಷ....ಹ - ರಾವಣನೊಡನೆ, ಯಥಾಸುಖಂ - ಸುಖವಾಗಿ, ಕ್ರೀಡ - ವಿಹರಿಸು.

ಎಲೌ ಸೀತೇ! ಬೇರೊಬ್ಬನಾವನೂ ಈ ಮಹಾ ಸಾಗರವನ್ನು ದಾಟಿ ಇಲ್ಲಿಗೆ ಬರಲಾರನೆಂಬುದು ಎಷ್ಟುಮಾತ್ರಕ್ಕೂ ನಿಜವೆಂದು ತಿಳಿ. ಇದುಮಾತ್ರವಲ್ಲದೆ ನೀನು ಎಂತಹ ಪರಾಕ್ರಮಶಾಲಿಗೂ ಪ್ರವೇಶಿಸಲಶಕ್ಯವಾದ ಈ ರಾವಣಾಂತಃಪುರದಲ್ಲಿರುವೆಯೆಂಬುದನ್ನು ತಿಳಿಯದಿರುವೆ. ಹೀಗೆ ರಾವಣನ ಅಂತಃಪುರದಲ್ಲಿ ಅಡ್ಡಿಪಡಿಸಲ್ಪಟ್ಟವಳಾಗಿಯೂ, ಮೇಲಾಗಿ ನಮ್ಮಿಂದ ರಕ್ಷಿಸಲ್ಪಡುತ್ತಿರುವವಳಾಗಿಯೂ ಇರುವ ನಿನ್ನನ್ನು ಯಾರುತಾನೇ ಸಂರಕ್ಷಿಸಬಲ್ಲರು? ಯಾರೂ ನಿನ್ನನ್ನು ಇಲ್ಲಿಂದ ಬಿಡಿಸಿಕೊಂಡು ಹೋಗಲಾರರು. ಸಾಕ್ಷಾತ್ತಾಗಿ ದೇವೇಂದ್ರನೇ ಪ್ರಯತ್ನಿಸಿದರೂ ನಿನ್ನನ್ನು ರಕ್ಷಿಸಿ ಇಲ್ಲಿಂದ ಬಿಡಿಸಿಕೊಂಡು ಹೋಗಲಾರನು. ಸೀತೇ! ನಿನ್ನ ಮೇಲನ್ನು ಕೋರಿ ನಾನೀಗ ಒಂದು ಮಾತನ್ನು ಹೇಳುತ್ತಿರುವೆನು. ನನ್ನ ಮಾತಿನಂತೆ ನಡೆಯುವವಳಾಗು. ಹೀಗೆ ಕಣ್ಣೀರನ್ನು ಸುರಿಸುವುದರಿಂದ ಯಾವ ಪ್ರಯೋಜನವೂ ಇಲ್ಲವು. ಇನ್ನು ನೀನು ಈ ವ್ಯಸನಪಡುವುದನ್ನು ಸಾಕುಮಾಡು. ರಾವಣಾಸುರನಲ್ಲಿ ಪ್ರೀತಿಯುಳ್ಳವಳಾಗಿ ನಿರಂತರವೂ ದುಃಖಿಸುವುದನ್ನು ಬಿಟ್ಟು ಸಂತೋಷವಾಗಿರು. ಸೀತೇ! ರಾಕ್ಷಸೇಶ್ವರನಾದ ರಾವಣನೊಡನೆ ನಿನ್ನ ಮನಬಂದಂತೆ

¶ "ದೇವಿ! ನೀನು ಕ್ರೂರನಾದ ರಾವಣನ ಪರುಷವಾಕ್ಯಗಳಿಗೆ ಕನಲದೆ, ಸಮಾಧಾನದಿಂದ್ದು ನಿನ್ನಿಷ್ಟಬಂದಂತೆ ಸುಖದಿಂದಿರು" ಎಂದು ಇಲ್ಲಿನ ವಾಸ್ತವಾರ್ಥ. (ಮ)

* "ತ್ಯಜಂತೀ" ತಿ. ಪಾ.

ಯಥಾಸುಖಂ ॥೩೪॥ ಜಾನಾಸಿ ಹಿ ಯಥಾ ಭೀರು! ಸ್ತ್ರೀಣಾಂ ಯೌವನಮಧ್ರುವಂ । ಯಾವನ್ನತೇಽವ್ಯತಿಕ್ರಾಮೇ ತ್ತಾವ¶ ತ್ಸುಖಮವಾಪ್ನುಹಿ ॥ ೩೫ ॥ ಉದ್ಯಾನಾನಿಚ ರಮ್ಯಾಣಿ ಪರ್ವತೋಪವನಾನಿಚ । ಸಹ ರಾಕ್ಷಸರಾಜೇನ ಚರ ತ್ವಂ ಮದಿರೇಕ್ಷಣೇ! ॥ ೩೬ ॥ ಸ್ತ್ರೀಸಹಸ್ರಾಣಿ ತೇ ಸಪ್ತ ವಶೇ ಸ್ಥಾಸ್ಯಂತಿ ಸುಂದರಿ! । ರಾವಣಂ ಭಜ ಭರ್ತಾರಂ ಭರ್ತಾರಂ ಸರ್ವರಕ್ಷಸಾಂ ॥ ೩೭ ॥ ಉತ್ಪಾಟ್ಯವಾ ತೇ ಹೃದಯಂ ಭಕ್ಷ ಯಿಷ್ಯಾಮಿ ಮೈಥಿಲಿ! । ಯದಿ ಮೇ ವ್ಯಾಹೃತಂ ವಾಕ್ಯಂ ನ ಯಥಾವತ್ಕರಿಷ್ಯಸಿ"

॥ ೩೪ ॥ ಹೇ ಭೀರು - ಎಲೌ ಭಯಶೀಲಳೇ, ಸ್ತ್ರೀಣಾಂ - ಹೆಂಗಸರಿಗೆ, ಯೌವನಂ - ಪ್ರಾಯವು, ಯಥಾ - ಹೇಗೆ, ಅಧ್ರುವಂ - ಅಶಾಶ್ವತವೋ, ತಥಾ - ಅದೇಪರಿಯಾಗಿ, ಜಾನಾಸಿಹಿ - ತಿಳಿದಿರುವೆ ಯಷ್ಟೆ, ತೇ - ನಿನಗೆ, (ತತ್ - ಆ ಯೌವನವು) ಯಾವತ್ - ಎಷ್ಟರಲ್ಲಿ, ನವ್ಯತಿಕ್ರಾಮೇತ್ - ಕಳೆದುಹೋಗದೆ ಇರುವುದೋ, ತಾವತ್ - ಅಷ್ಟರೊಳಗೆ, ಸುಖಂ - ಸುಖವನ್ನು, ಅವಾಪ್ನುಹಿ - ಹೊಂದು. ॥ ೩೫ ॥ ಹೇ ಮದಿರೇಕ್ಷಣೇ - ಎಲೌ ಮದಯುಕ್ತಗಳಾದ ನೇತ್ರಗಳುಳ್ಳವಳೇ, ತ್ವಂ - ನೀನು, ರಮ್ಯಾಣಿ - ಮನೋಹರಗಳಾದ, ಉದ್ಯಾನಾನಿ - ಕ್ರೀಡಾವನಗಳಲ್ಲಿಯೂ, ಪರ್ವ....ಚ - ಬೆಟ್ಟ ದಲ್ಲಿರುವ ತೋಪುಗಳಲ್ಲಿಯೂ, ರಾಕ್ಷ....ಹ - ರಾಕ್ಷಸಾಧಿಪನೊಡನೆ, ಚರ - ಸಂಚರಿಸು. ॥ ೩೬ ॥ ಹೇ ಸುಂದರಿ - ಎಲೌ ಮನೋಜ್ಞಳೇ, ತೇ - ನಿನ್ನ, ವಶೇ - ಕೈಕೆಳಗೆ, ಸಪ್ತಸ್ತ್ರೀಸಹಸ್ರಾಣಿ - ಏಳು ಸಾವಿರಮಂದಿ ಸ್ತ್ರೀಯರು, ಸ್ಥಾಸ್ಯಂತಿ-ಇರುವರು, ಸರ್ವರಕ್ಷಸಾಂ-ರಾಕ್ಷಸರಿಗೆಲ್ಲ, ಭರ್ತಾರಂ-ಅಧಿಪತಿ ಯಾದ, ರಾವಣಂ - ರಾವಣನನ್ನು, ಭರ್ತಾರಂ - ಗಂಡನನ್ನಾಗಿ, ಭಜ - ಹೊಂದು. ॥ ೩೭ ॥ ಹೇ ಮೈಥಿಲಿ - ಎಲೆ ಜನಕನಂದಿನಿಯೇ, ವ್ಯಾಹೃತಂ - ಹೇಳಲ್ಪಟ್ಟ, ಮೇ-ನನ್ನ, ವಾಕ್ಯಂ-ಮಾತನ್ನು, ಯಥಾವತ್ - ಹೇಳಿದಂತೆ, ನಕರಿಷ್ಯಸಿಯದಿ - ಮಾಡದಿದ್ದರೆ, ತೇ - ನಿನ್ನ, ಹೃದಯಂ - ಎದೆಯನ್ನು, ಉತ್ಪಾಟ್ಯವಾ-ಸೀಳಿಯಾದರೂ, ಭಕ್ಷಯಿಷ್ಯಾಮಿ-ತಿನ್ನುತ್ತೇನೆ. ॥ ೩೮ ॥ ತತಃ-ಬಳಿಕ, ಚಂಡೋದರೀ

ಕ್ರೀಡಿಸುತ್ತ ಸುಖವನ್ನನುಭವಿಸುತ್ತಿರು. ಎಲೆ ಭೀರು! ಸ್ತ್ರೀಯರಿಗೆ ಯೌವನವು ಅಸ್ಥಿರವಾದು ದಲ್ಲವೆ? ಇದು ನಿನಗೆ ತಿಳಿಯದ ವಿಷಯವಲ್ಲ. ಆದುದರಿಂದ ಈ ಯೌವನಕಾಲವು ಕಳೆದುಹೋಗುವುದಕ್ಕೆ ಮೊದಲೇ ಎಲ್ಲ ಸುಖಗಳನ್ನೂ ಅನುಭವಿಸು. ಎಲೌ ರಕ್ತಾಂತಲೋಚ ನೆಯೇ! ನೀನು ರಾಕ್ಷಸಪ್ರಭುವಾದ ರಾವಣಾಸುರನೊಡಗೂಡಿ ಮನೋಹರವಾದ ಉದ್ಯಾನ ವನಗಳಲ್ಲಿಯೂ, ಪರ್ವತಪ್ರದೇಶಗಳಲ್ಲಿಯೂ, ಅರಣ್ಯಗಳಲ್ಲಿಯೂ ಸಂಚರಿಸುತ್ತ ಆನಂದಿಸು ತ್ತಿರು. ಸುಂದರಾಂಗಿಯಾದ ಓ ಸೀತೇ! ಸಮಸ್ತ ರಾಕ್ಷಸರಿಗೂ ಪ್ರಭುವಾದ ರಾವಣಾ ಸುರನನ್ನು ಭರ್ತನನ್ನಾಗಿ ಅಂಗೀಕರಿಸು. ನೀನು ಆತನನ್ನು ಭರ್ತನನ್ನಾಗಿ ಅಂಗೀಕರಿಸಿದರೆ ಏಳುಸಾವಿರಮಂದಿ ರಾಕ್ಷಸಾಂಗನೆಯರು ನಿನ್ನನ್ನು ಸೇವಿಸುವರು. ಅವರೆಲ್ಲರಿಗೂ ನೀನೇ ಸ್ವಾಮಿನಿಯಾಗುವೆ. ಆಗ ನಿನ್ನ ಭಾಗ್ಯಕ್ಕೆಣೆಯುಂಟೆ? ನನ್ನ ಮಾತುಗಳನ್ನು ಕೇಳು. ರಾವಣಾಸುರನಿಗೆ ಭಾರ್ಯೆಯಾಗು. ಸೀತೇ! ಈಗ ನಾನು ಹೇಳಿದಂತೆ ನೀನು ಮಾಡದೆ ಹೋದೆಯಾದರೆ ಇದೋ ಈಗಲೇ ನಾನು ನಿನ್ನ ಗುಂಡಿಗೆಯನ್ನು ಕಿತ್ತು ತಿಂದುಬಿಡುತ್ತೇನೆ"

¶ "ದುಃಖಂ" ಪಾ. ಪಾ.

॥ ೩೮ ॥ ತತಶ್ಚಂಡೋದರೀ ನಾಮ ರಾಕ್ಷಸೀ * ಕ್ರೋಧಮೂರ್ಛಿತಾ । ಭ್ರಾಮಯಂತೀ ಮಹಚ್ಛೂಲಮಿದಂ ವಚನಮಬ್ರವೀತ್ ॥ ೩೯ ॥ "ಇಮಾಂ ಹರಿಣ $ ಲೋಲಾಕ್ಷೀಂ ತ್ರಾಸೋತ್ಕಂಪಿಪಯೋಧರಾಂ । ರಾವಣೇನ ಹೃತಾಂ ದೃಷ್ಟ್ವಾ ದೌಹೃದೋ ಮೇ ಮಹಾನಯಂ ॥೪೦॥ ಯಕೃತ್ ಪ್ಲೀಹಮಥೋತ್ಪೀಡಂ ಹೃದಯಂ ಚ ಸಬಂಧನಂ । § ಆಂತ್ರಾಣ್ಯಪಿ ತಥಾಶೀರ್ಷಂ ಖಾದೇಯಮಿತಿ ಮೇ ಮತಿಃ" । ತತಸ್ತು ಪ್ರಘಸಾನಾಮ ರಾಕ್ಷಸೀ ವಾಕ್ಯಮಬ್ರವೀತ್ ॥ ೪೧ ॥ ‡ "ಕಂಠಮಸ್ಯಾ

ನಾಮ - ಚಂಡೋದರಿಯೆಂಬ, ರಾಕ್ಷಸೀ - ರಕ್ಕಸಿಯು, ಕ್ರೋಧಮೂರ್ಛಿತಾ - ಕೋಪದಿಂದ ಮೈಮರೆತವಳಾಗಿ, ಮಹಚ್ಛೂಲಂ - ದೊಡ್ಡಶೂಲವನ್ನು, ಭ್ರಾಮಯಂತೀ - ತಿರುಗಿಸುತ್ತ, ಇದಂ ವಚನಂ - ಈ ಮುಂದೆ ಹೇಳುವವಮಾತನ್ನು, ಅಬ್ರವೀತ್ - ಹೇಳತೊಡಗಿದಳು. ॥ ೩೯ ॥ ರಾವಣೇನ - ರಾವಣನಿಂದ, ಹೃತಾಂ - ಅಪಹರಿಸಲ್ಪಟ್ಟವಳಾದಕಾರಣ, ತ್ರಾಸೋ....ರಾಂ - ಅಂಜಿಕೆಯಿಂದ, ನಡುಗುತ್ತಿರುವ, ಸ್ತನಗಳುಳ್ಳ, ಹರಿಣಲೋಲಾಕ್ಷೀಂ-ಚಿಗರಿಯಂತೆ ಚಂಚಲಾಕ್ಷಿಯಾದ, ಇಮಾಂ- ಈ ಸೀತೆಯನ್ನು, ದೃಷ್ಟ್ವಾ - ಕಂಡು, ಮೇ-ನಿನಗೆ, ಮಹಾ- ದೊಡ್ಡದಾದ, ದೌಹೃದಃ-ಬಯಕೆಯು, ಅಭೂತ್ - ಆಯಿತು. ॥ ೪೦ ॥ ಯಕೃತ್ಪ್ಲೀಹಮಹತ್ - ಹೊಟ್ಟೆಯಬಲಗಡೆಯಿರುವ ಕಪ್ಪಾದ ಮಾಂಸದಿಂದಲೂ, ಎಡಭಾಗದಲ್ಲಿರುವ ಮಾಂಸದಿಂದಲೂ, ದೊಡ್ಡದಾದ, ಕ್ರೋಡಂ - ವಕ್ಷಸ್ಥಲದಲ್ಲಿ ರುವ ಮಾಂಸವಿಶೇಷವನ್ನು, ಸಬಂಧನಂ - ಸಂಧಿಸ್ಥಾನಗಳಿಂದೊಡಗೂಡಿದ, ಹೃದಯಂಚ - ಎದೆಯನ್ನೂ, ಆಂತ್ರಾಣ್ಯಪಿ - ಕರಳುಗಳನ್ನೂ, ತಥಾ - ಹಾಗೆಯೆ, ಶೀರ್ಷಂ - ಮಂಡೆಯನ್ನೂ, ಖಾದೇಯಂ - ತಿನ್ನುವೆನು, ಇತಿ - ಹೀಗೆಂದು, ಮೇಮತಿಃ - ನನ್ನ ಬುದ್ಧಿಯು. ॥ ೪೧ ॥ ತತಃ - ಅನಂತರದಲ್ಲಿ, ಪ್ರಘಸಾನಾಮರಾಕ್ಷಸೀ - ಪ್ರಘಸೆ ಎಂಬ ರಕ್ಕಸಿಯು, ವಾಕ್ಯಂ - ಮಾತನ್ನು, ಅಬ್ರ

ಎಂದು ಹೇಳಿದಳು. ॥ ೨೮–೩೮ ॥ ಆ ಬಳಿಕ ಚಂಡೋದರಿಯೆಂಬ ಮತ್ತೊಬ್ಬ ರಕ್ಕಸಿಯು ಕೋಪದಿಂದ ಮೈಮರೆತು ದೊಡ್ಡ ಶೂಲವೊಂದನ್ನು ಗಿರಗಿರನೆ ತಿರುಗಿಸುತ್ತ ಅಲ್ಲಿದ್ದ ರಾಕ್ಷಸ ಸ್ತ್ರೀಯರೆಲ್ಲರನ್ನೂ ಕುರಿತು, "ಎಲೌ ರಾಕ್ಷಸಿಯರೇ! ಜಿಂಕೆಯ ಕಂಗಳಂತೆ ಚಂಚಲವಾದ ಕಂಗಳುಳ್ಳವಳಾಗಿಯೂ, ಭಯದಿಂದ ನಡುಗುತ್ತಿರುವ ಸ್ತನಗಳುಳ್ಳವಳಾಗಿಯೂ ಇರುವ ಈ ಸೀತೆಯನ್ನು ನಮ್ಮ ಪ್ರಭುವಾದ ರಾವಣಾಸುರನಿಲ್ಲಿಗೆ ಕೊಂಡುಬಂದಾಗಿನಿಂದ, ನಾನಿವಳನ್ನು ಕಂಡಾಗಿನಿಂದ ನನಗೆ ಮಹತ್ತರವಾದ ಒಂದು ಬಯಕೆಯಿರುವುದು. "ಇವಳ ಶರೀರದಲ್ಲಿ ರುವ ಹೃದಯವನ್ನೂ, ದಕ್ಷಿಣಭಾಗದಲ್ಲಿರುವ ಪ್ಲೀಹವೆಂಬ ಕಪ್ಪು ಮಾಂಸವನ್ನೂ, ಕೆಳ ಭಾಗಕ್ಕಾಧಾರವಾಗಿರುವ ಸ್ಯಂದನವೆಂಬ ಮಾಂಸವನ್ನೂ, ತಾವರೆಯಮೊಗ್ಗಿನಂತಿರುವ ಸ್ತನಗಳನ್ನೂ ಕರುಳು, ಮಸ್ತಿಷ್ಕಗಳನ್ನೂ, ಭಕ್ಷಿಸಬೇಕು ಎಂಬುದೇ ನನ್ನ ಆ ಬಯಕೆ" ಎಂದಳು. ಆಗ ಪ್ರಘಸೆಯೆಂಬ ರಾಕ್ಷಸಿಯು, "ಎಲೆ ರಾಕ್ಷಸಿಯರೇ! ನನಗೊಂದು ತೋರುತ್ತದೆ.

* "ಕ್ರೂರದರ್ಶನಾ" ತಿ. ರಾ. ಪಾ. $ "ಶಾಬಾಕ್ಷೀಂ" ಮ. ತಿ. ಪಾ. § "ಗಾತ್ರಾಣ್ಯಪಿ" ಕ. ತಿ. ಪಾ.

‡ ಈ ಶ್ಲೋಕ ಇದರ ಮುಂದಿನ ಶ್ಲೋಕ ಇವೆರಡೂ ಗೋ. ರಾ. ಪಾಠಗಳಲ್ಲಿ ಅಧಿಕ, ಕತಕನ ಮತದಲ್ಲಿ ಇವು ಪ್ರಕ್ಷಿಪ್ತಗಳು.

ನೃಶಂಸಾಯಾಃ ಪೀಡಯಾಮ ಕಿಮಾಸ್ಯತೇ? । ನಿವೇದ್ಯತಾಂತತೋ ರಾಜ್ಞೇ ಮಾನುಷೀ ಸಾ ಮೃತೇತಿಹ । ನಾಽತ್ರ ಕಶ್ಚನ ಸಂದೇಹಃ ಖಾದತೇತಿ ಸವಕ್ಷ್ಯತಿ" ॥೪೩॥ ತತಸ್ತ್ವಜಾಮುಖೀ ನಾಮ ರಾಕ್ಷಸೀ ವಾಕ್ಯಮಬ್ರವೀತ್ ॥೪೩॥ "ವಿಶಸ್ಯೇಮಾಂ ತತಸ್ಸರ್ವಾ ಸ್ಸಮಾನ್ಕುರುತ * ಪಿಂಡಕಾನ್ । ವಿಭಜಾಮ ತತಸ್ಸರ್ವಾ ವಿವಾದೋ ಮೇ ನರೋಚತೇ । ಪೇಯಮಾನೀಯತಾಂ ಕ್ಷಿಪ್ರಂ ಲೇಹ್ಯಮುಚ್ಚಾವಚಂ ಬಹು" ॥ ೪೫ ॥ ತತಶ್ಶೂರ್ಪಣಖಾ ನಾಮ ರಾಕ್ಷಸೀ ವಾಕ್ಯಮಬ್ರವೀತ್ ॥ ೪೫ ॥ "ಅಜಾ

ವೀತ್ - ನುಡಿದಳು, ನೃಶಂಸಾಯಾಃ - ಘಾತುಕಳಾದ, ಅಸ್ಯಾಃ - ಈ ಸೀತೆಯ, ಕಂಠಂ - ಕುತ್ತಿಗೆಯನ್ನು, ಪೀಡಯಾಮಃ - ಕಿವಿಚಿಬಿಡೋಣ, ಕಿಮಾಸ್ಯತೇ - ಏತಕ್ಕೆ ಸುಮ್ಮನೆ ಕುಳಿತಿರುವಿರಿ, ತತಃ- ಬಳಿಕ, ರಾಜ್ಞೇ - ಅರಸಿಗೆ, ಸಾಮಾನುಷೀ - ಆ ಮನುಷ್ಯಳು, ಮೃತಾ-ಸತ್ತಳು, ಇತಿಹ - ಇಂತೆಂದೇ, ನಿವೇದ್ಯತಾಂ - ತಿಳಿಸಲ್ಪಡಲಿ, ಖಾದತ - ತಿಂದುಬಿಡಿ, ಇತಿ - ಹೀಗೆಂದು, ಸಃ - ಆ ರಾವಣನು, ವಕ್ಷ್ಯತಿ - ಹೇಳುವನು, ಅತ್ರ - ಈ ವಿಷಯದಲ್ಲಿ, ಕಶ್ಚನಸಂದೇಹಃ - ಯಾವ ಸಂಶಯವೂ, ನ - ಇಲ್ಲ. ॥ ೪೩ ॥ ತತಸ್ತು - ಬಳಿಕ, ಅಜಾಮುಖೀನಾಮ - ಅಜಾಮುಖಿಯೆಂದು ಪ್ರಸಿದ್ಧಳಾದ, ರಾಕ್ಷಸೀ - ರಾಕ್ಷಸಿಯು, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದಳು, ಇಮಾಂ - ಈ ಸೀತೆಯನ್ನು, ವಿಶಸ್ಯ - ಕುಯ್ದು, ತತಃ - ಆಮೇಲೆ, ಸರ್ವಾಃ - ನೀವೆಲ್ಲರೂ, ಸಮಾನ್ - ಸರಿಯಾದ, ಪಿಂಡಕಾನ್ - ತುತ್ತುಗಳನ್ನಾಗಿ, ಕುರುತ - ಮಾಡಿರಿ, ತತಃ - ಬಳಿಕ, ಸರ್ವಾಃ - ನಾವೆಲ್ಲರೂ, ವಿಭಜಾಮ - ಹಂಚಿಕೊಳ್ಳೋಣ, ಅತ್ರ - ಈ ವಿಷಯದಲ್ಲಿ, ವಿವಾದಃ - ಸಂವಾದವು, ನರೋಚತೇ - ಅಗತ್ಯವಿಲ್ಲ, ಉಚ್ಚಾವಚಂ - ನಾನಾಬಗೆಯಾದ, ಬಹು - ಅನೇಕವಾದ, ಲೇಹ್ಯಂ - ನಂಜಿಕೊಳ್ಳುವ ಪದಾರ್ಥವನ್ನೂ, ಪೇಯಂ - ಕುಡಿಯುವದ್ರವ್ಯವನ್ನೂ, ಕ್ಷಿಪ್ರಂ - ಜಾಗ್ರತೆಯಾಗಿ, ಆನೀಯತಾಂ ತರಲ್ಪಡಲಿ. ॥ ೪೫ ॥ ತತಃ - ಬಳಿಕ, ಶೂರ್ಪಣಖಾನಾಮ - ಶೂರ್ಪಣಖಿ ಎಂದು ಪ್ರಖ್ಯಾತಳಾದ, ರಾಕ್ಷಸೀ - ರಾಕ್ಷಸಿಯು, ವಾಕ್ಯಂ - ಮುಂದೆಹೇಳತಕ್ಕ ಮಾತನ್ನು, ಅಬ್ರವೀತ್ - ನುಡಿದಳು, ಯತ್ - ಯಾವಮಾತು, ಅಜಾ

ನಾವೀಗ ಸುಮ್ಮನೇಕಿರಬೇಕು? ಮಹಾ ಕಠಿನಚಿತ್ತಳಾದ ಈ ಸೀತೆಯನ್ನು ಕತ್ತುಹಿಸಿಕಿ ರಾಕ್ಷಸೇಶ್ವರನಾದ ರಾವಣನ ಬಳಿಗೈದಿ, ಮನುಷ್ಯಸ್ತ್ರೀಯಾದ ಸೀತೆಯು ಸತ್ತುಹೋದಳೆಂದು ಹೇಳಿಬಿಡೋಣ. ಆತನು, "ಹಾಗೆ ಅವಳು ಸತ್ತಿದ್ದರೆ ನೀವೇ ತಿಂದುಬಿಡಿ"ರೆಂದು ಹೇಳುವನು. ಈ ವಿಷಯದಲ್ಲಿ ನೀವೆಷ್ಟುಮಾತ್ರಕ್ಕೂ ಸಂಶಯಪಡಬೇಡಿರಿ" ಎಂದಳು. ॥ ೩೩—೪೩ ॥ ಬಳಿಕ ಅಜಾಮುಖಿಯೆಂಬ ಮತ್ತೊಬ್ಬ ರಕ್ಕಸಿಯು, "ಎಲೆ ಸಖಿಯರೇ! ನೀವು ಈ ಸೀತೆಯನ್ನು ಕೊಯ್ದು (ತುತ್ತುಗಳನ್ನಾಗಿ ಮಾಡಿರಿ) ಸಮಭಾಗಗಳಾಗಿ ರಾಶಿಹಾಕಿರಿ. ಆಮೇಲೆ ನಾವೆಲ್ಲರೂ ಸಮವಾಗಿ ಹಂಚಿಕೊಳ್ಳೋಣ. ಜಗಳವಾಡುವುದಕ್ಕೆ ನನಗೆ ಎಷ್ಟುಮಾತ್ರಕ್ಕೂ ಇಷ್ಟವಿಲ್ಲವು. ಮೇಲಾಗಿ ನಾನಾವಿಧಗಳಾದ ಮದ್ಯಗಳನ್ನೂ, ಜೇನು ಮೊದಲಾದ ಲೇಹ್ಯಗಳನ್ನೂ ಜಾಗ್ರತೆಯಾಗಿ ತೆಗೆದುಕೊಂಡುಬನ್ನಿರಿ. ಅವುಗಳೊಡನೆ ಇವಳ ಮಾಂಸವನ್ನು ಚೆನ್ನಾಗಿ ಭುಜಿಸೋಣ" ಎಂದಳು. ಶೂರ್ಪಣಖಿಯೆಂಬ ಮಗದೊಬ್ಬ ರಾಕ್ಷಸಿಯು, "ಎಲೆ ಗೆಳತಿಯರೇ! ಅಜಾಮುಖಿಯು ಹೇಳಿದ ಮಾತು ನನಗೂ ಸರಿಯೆಂದು ತೋರುತ್ತದೆ. ಆದುದರಿಂದ ಸೊಗಸಾದ,

---

* "ಪೀಲುಕಾನ್" ತಿ. ರಾ. ಪಾ.

ಮುಖ್ಯಾ ಯದುಕ್ತಂ ಹಿ ತದೇವ ಮಮ ರೋಚತೇ । ಸುರಾಚಾನೀಯತಾಂ ಕ್ಷಿಪ್ರಂ ಸರ್ವಶೋಕವಿನಾಶಿನೀ । ಮಾನುಷಂ ಮಾಂಸಮಾಸ್ವಾದ್ಯ ನೃತ್ಯಾಮೋಽಥ ನಿಕುಂಭಿಲಾಂ" ॥ ೪೭ ॥

¶ ಏವಂ ಸಂಭರ್ತ್ಸ್ಯಮಾನಾ ಸಾ ಸೀತಾ ಸುರಸುತೋಪಮಾ ।
ರಾಕ್ಷಸೀಭಿ ಸ್ಸುಘೋರಾ ಭಿರ್ಧೈರ್ಯಮುತ್ಸೃಜ್ಯ ರೋದಿತಿ ॥ ೪೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ವಿಂಶಸ್ಸರ್ಗಃ

ಮುಖ್ಯಾ - ಅಜಾಮುಖಿಯಿಂದ, ಉಕ್ತಂ - ಹೇಳಲ್ಪಟ್ಟಿತೋ, ತದೇವ - ಅದೇಮಾತೇ, ಮಮ - ನನಗೆ, ರೋಚತೇಹಿ - ಇಷ್ಟವಷ್ಟೆ, ಸರ್ವ....ಶಿನೀ - ಸಮಸ್ತಗಳಾದ ವ್ಯಸನಗಳನ್ನು ಹೋಗಲಾಡಿಸುತ್ತಿರುವ, ಸುರಾಚ - ಮದ್ಯವಿಶೇಷವೂ, ಆನೀಯತಾಂ - ತರಲ್ಪಡಲಿ, ಮಾನುಷಂ - ಮನುಷ್ಯಸಂಬಂಧವಾದ, ಮಾಂಸಂ - ಮಾಂಸವನ್ನು, ಆಸ್ವಾದ್ಯ - ತಿಂದು, ಅಥ - ಆಬಳಿಕ, ನಿಕುಂಭಿಳಾಂ - ನಿಕುಂಭಳೆಯೆಂಬ ದೇವತೆಯನ್ನು ಕುರಿತು, ನೃತ್ಯಾಮಃ - ಕುಣಿಯೋಣ. ॥ ೪೭ ॥ ಏವಂ - ಈಪರಿಯಾಗಿ, ಸುಘೋರಾಭಿಃ - ಮಹಾಭಯಂಕರರಾದ, ರಾಕ್ಷಸೀಭಿಃ - ರಾಕ್ಷಸಸ್ತ್ರೀಯರಿಂದ, ಸಂಭರ್ತ್ಸ್ಯಮಾನಾ - ಹೆದರಿಸಲ್ಪಟ್ಟ, ಸುರಸುತೋಪಮಾ - ದೇವಕನ್ನಿಕೆಗೆ ಸಮಾನಳಾದ, ಸಾಸೀತಾ - ಆ ಸೀತಾದೇವಿಯು, ಧೈರ್ಯಂ - ಧೈರ್ಯವನ್ನು, ಉತ್ಸೃಜ್ಯ - ಬಿಟ್ಟು, ರೋದಿತಿ - ಅಳುತ್ತಿದ್ದಳು. ॥ ೪೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುರ್ವಿಂಶಸ್ಸರ್ಗಃ

ಆನಂದದಾಯಕವಾದ ಮದ್ಯಗಳನ್ನು ಜಾಗ್ರತೆಯಾಗಿ ತೆಗೆದುಕೊಂಡುಬನ್ನಿರಿ. ಆಮೇಲೆ ಈ ಮಾನವಸ್ತ್ರೀಯ ಮಾಂಸವನ್ನು ಭಕ್ಷಿಸಿ, ಲಂಕಾನಗರದ ಪಶ್ಚಿಮದ್ವಾರದಲ್ಲಿರುವ ನಿಕುಂಭಿಲೆಯೆಂಬ ಗ್ರಾಮದೇವತೆಯನ್ನು ಕುರಿತು ಗಾನನಾಟ್ಯಗಳನ್ನು ಮಾಡೋಣ" ಎಂದಳು. ಹೀಗೆ ಅನೇಕ ವಿಧವಾಗಿ ಮಾತನಾಡಿಕೊಳ್ಳುತ್ತ ಆ ರಾಕ್ಷಸಿಯರೆಲ್ಲರೂ ಸೀತಾದೇವಿಯನ್ನು ಬೆದರಿಸುತ್ತಿದ್ದರು. ದೇವಕನ್ನಿಕೆಗೆ ಸಮಾನಳಾದ ಆಕೆಯು ಧೈರ್ಯವನ್ನು ತೊರೆದು ಭಯದಿಂದ ವಿಲಪಿಸಲಾರಂಭಿಸಿದಳು. ॥೪೪-೪೭॥

ಇಂತಿದು ರಾಕ್ಷಸೀ ತರ್ಜನವೃತ್ತಾಂತವೆಂಬ ಇಪ್ಪತ್ತನಾಲ್ಕನೆಯ ಸರ್ಗವು
ಸಮಾಪ್ತವಾದುದು.

¶ ಈ ಸರ್ಗದಲ್ಲಿ ಚಂಡೋದರಿಯೇ ಮೊದಲಾದ ರಾಕ್ಷಸಸ್ತ್ರೀಯರಾಡಿರುವ ಕಹಿನುಡಿಗಳೆಲ್ಲವೂ, ಸೀತೆಯನ್ನು ಹೆದರಿಸಿ ಮಾತನಾಡಿದ ವಿಕಟೆಯನ್ನು ಕುರಿತು ಆಡಿದುವೆಂದು ಗ್ರಹಿಸಬೇಕು. (ಮ)

ಸುಂದರಕಾಂಡೇ ಪಂಚವಿಂಶಸ್ಸರ್ಗಃ

¶ ತಥಾ ತಾಸಾಂ ವದಂತೀನಾಂ ಪರುಷಂ ದಾರುಣಂ ಬಹು । ರಾಕ್ಷಸೀನಾಮ ಸೌಮ್ಯಾನಾಂ ರುರೋದ ಜನಕಾತ್ಮಜಾ ॥೧॥ ಏವಮುಕ್ತಾ ತು ವೈದೇಹೀ ರಾಕ್ಷಸೀಭಿ ರ್ಮನಸ್ವಿನೀ । ಉವಾಚ ಪರಮತ್ರಸ್ತಾ ಬಾಷ್ಪಗದ್ಗದಯಾ ಗಿರಾ ॥ ೨ ॥ " ನಮಾನುಷೀ ರಾಕ್ಷಸಸ್ಯ ಭಾರ್ಯಾಭವಿತುಮರ್ಹತಿ । ಕಾಮಂ ಖಾದತ ಮಾಂ ಸರ್ವಾ ನಕರಿಷ್ಯಾಮಿ ವೋ ವಚಃ " ॥ ೩ ॥ ☬ ಸಾ ರಾಕ್ಷಸೀಮಧ್ಯಗತಾ ಸೀತಾ ಸುರ

ಅಸೌಮ್ಯಾನಾಂ - ಕ್ರೂರೆಯರಾದ, ತಾಸಾಂರಾಕ್ಷಸೀನಾಂ - ಆ ರಾಕ್ಷಸಸ್ತ್ರೀಯರ, ತಥಾ - ಆ ಪರಿಯಾದ, ದಾರುಣಂ - ಅಂತಸ್ತಾಪಕರವಾಗಿಯೂ, ಪರುಷಂ - ಕರ್ಣಕಠೋರವಾಗಿಯೂ, ಬಹು - ನಾನಾಬಗೆಯಾಗಿಯೂ, ವದಂತೀನಾಂ - ಹೇಳುತ್ತಿರಲು, ಜನಕಾತ್ಮಜಾ - ಸೀತಾದೇವಿಯು, ರುರೋದ - ಅಳುತ್ತಿದ್ದಳು. ॥ ೧ ॥ ರಾಕ್ಷಸೀಭಿಃ - ರಾಕ್ಷಸಿಯರಿಂದ, ಏವಂ - ಈಪರಿಯಾಗಿ, ಉಕ್ತಾ - ಹೇಳಲ್ಪಟ್ಟ, ಮನಸ್ವಿನೀ - ಪಾತಿವ್ರತ್ಯದಲ್ಲಿಯೇ, ದೃಢಮನಸುಳ್ಳ, ವೈದೇಹೀತು-ಸೀತಾದೇವಿಯಾದರೆ, ಪರಮತ್ರಸ್ತಾ - ಬಹಳ ಭಯಗೊಂಡವಳಾಗಿ, ಭಾಷ್ಪ....ಯಾ - ಕಂಬನಿಗಳಿಂದ ವಿಸ್ವರವಾದ ಮಾತಿನಿಂದ, ಉವಾಚ - ನುಡಿದಳು. ॥ ೨ ॥ ಮಾನುಷೀ - ಮನುಷ್ಯಸ್ತ್ರೀಯು, ರಾಕ್ಷಸಸ್ಯ - ರಾಕ್ಷಸನಿಗೆ, ಭಾರ್ಯಾ - ಹೆಂಡತಿಯು, ಭವಿತುಂ - ಆಗುವುದಕ್ಕೆ, ನಾರ್ಹತಿ - ಯೋಗ್ಯಳಲ್ಲ, ಸರ್ವಾಃ - ನೀವೆಲ್ಲರೂ, ಮಾಂ - ನನ್ನನ್ನು, ಕಾಮಂ - ಮನಬಂದಂತೆ, ಖಾದತ - ತಿನ್ನಿರಿ, ವಃ - ನಿಮ್ಮ, ವಚಃ - ಮಾತನ್ನು, ನಕರಿಷ್ಯಾಮಿ - ಮಾಡುವುದಿಲ್ಲ. ॥ ೩ ॥ ರಾಕ್ಷ....ತಾ - ರಕ್ಕಸಿ

ಹೀಗೆ ಮಹಾ ಭಯಂಕರವಾದ ಆಕಾರಗಳುಳ್ಳ ಆ ರಾಕ್ಷಸಸ್ತ್ರೀಯರು ಕಠಿನವಾಗಿಯೂ, ಮಹತ್ತರವಾದ ಭಯವುಂಟಾಗುವಂತೆಯೂ ಅನೇಕ ವಿಧವಾಗಿ ಮಾತನಾಡಿಕೊಳ್ಳುತ್ತ ಬೆದರಿಸುತ್ತಿರಲು, ಜನಕರಾಜಕುಮಾರಿಯಾದ ಆ ಸೀತಾದೇವಿಯು ವ್ಯಸನದಿಂದ ವಿಲಪಿಸಿದಳು. ಸಹೃದಯೆಯಾದ ಆಕೆಯು ರಾಕ್ಷಸಸ್ತ್ರೀಯರು ತನ್ನನ್ನು ಬೆದರಿಸುತ್ತಿರಲು ಮಹಾ ವ್ಯಸನದಿಂದ ಗದ್ಗದ ಕಂಠೆಯಾಗಿ ಭಯದಿಂದ ನಡುಗುತ್ತ ಅವರನ್ನು ಕುರಿತು "ಎಲೌ ರಾಕ್ಷಸಿಯರೇ! ಮನುಷ್ಯಸ್ತ್ರೀಯು ರಾಕ್ಷಸನಿಗೆ ಭಾರ್ಯೆಯಾಗುವುದು ಉಚಿತವಲ್ಲ. ನೀವು ಹೇಳಿದ ಪ್ರಕಾರ ನಾನೆಷ್ಟುಮಾತ್ರಕ್ಕೂ ನಡೆವಳಲ್ಲವೆಂದು ತಿಳಿಯಿರಿ. ನೀವೆಲ್ಲರೂ ಸೇರಿ ಯಥೇಷ್ಟವಾಗಿ ನನ್ನನ್ನು ಭಕ್ಷಿಸಿಬಿಡಿರಿ " ಎಂದು ಹೇಳಿದಳು. ॥೧-೩॥ ಹೀಗೆ

¶ " ಅಥ " ತಿ. ಪಾ.

☬ ಈ ಸೀತಾ ಪ್ರಲಾಪವೆಲ್ಲವೂ, ಸೀತಾರೂಪದಿಂದ ಅವತರಿಸಿರುವ ಲಕ್ಷ್ಮೀದೇವಿಯು ನಟಿಯಂತೆ ಲೋಕವೃತ್ತಿಯನ್ನು ಅನುಕರಣ ಮಾಡುತ್ತಿರುವುದಾಗಿ ತಿಳಿಯಬೇಕು. (ತಿಲಕ) ಇದರಿಂದ ಮಹೇಶ್ವರ ತೀರ್ಥರು ಆಕೆಯ ಮಾತುಗಳಲ್ಲಿ ಸಾಹಸಪಟ್ಟು ಅಂತರಾರ್ಥಗಳನ್ನು ಎಳೆದು ತೆಗೆದಿರುವುದು ನಿಷ್ಪ್ರಯೋಜನವೇ ಸರಿ. ಆದಿಕವಿ ವಾಲ್ಮೀಕಿಯು ಶ್ಲೇಷಾರ್ಥವನ್ನಿಟ್ಟು ಕಾವ್ಯವನ್ನು ರಚಿಸಿಲ್ಲವೆಂದು ಕೆಲವರ ಅಭಿಪ್ರಾಯವು.

ಸುತೋಪಮಾ । ನಶರ್ಮ ಲೇಭೇ ದುಃಖಾರ್ತಾ ‡ ರಾವಣೇನ ಚ ತರ್ಜಿತಾ ॥ ೪ ॥ ವೇಪತೇಸ್ಮಾಽಧಿಕಂ ಸೀತಾ ವಿಶಂತೀವಾಂಗಮಾತ್ಮನಃ । ವನೇ ಯೂಥಪರಿಭ್ರಷ್ಟಾ ಮೃಗೀ ಕೋಕೈರಿವಾರ್ದಿತಾ ॥ ೫ ॥ ¶ ಸಾತ್ವಶೋಕಸ್ಯ ವಿಪುಲಾಂ ಶಾಖಾಮಾಲಂಬ್ಯ ಪುಷ್ಪಿತಾಂ । ಚಿಂತಯಾಮಾಸ ಶೋಕೇನ ಭರ್ತಾರಂ ಭಗ್ನಮಾನಸಾ ॥ ೬ ॥ ಸಾ ಸ್ನಾಪಯಂತೀ ವಿಪುಲೌ ಸ್ತನೌ ನೇತ್ರಜಲಸ್ರವೈಃ । ಚಿಂತಯಂತೀ ನ ಶೋಕಸ್ಯ

ಯರ ನಡುವೆ ಇರುವ, ಸುರ....ಮಾ - ದೇವಕನ್ನಿಕೆಗೆ ಸದೃಶಳಾದ, ರಾವಣೇನಚ - ರಾವಣನಿಂದಲೂ, ತರ್ಜಿತಾ - ಹೆದರಿಸಲ್ಪಟ್ಟವಳಾದಕಾರಣ - ದುಃಖಾರ್ತಾ - ವ್ಯಸನಗೊಂಡ, ಸಾಸೀತಾ - ಆ ಸೀತೆಯು, ಶರ್ಮ - ಸುಖವನ್ನು, ನಲೇಭೇ - ಹೊಂದಲಿಲ್ಲ. ॥ ೪ ॥ ಸೀತಾ - ಜಾನಕಿಯು, ಆತ್ಮನಃ - ತನ್ನ, ಅಂಗಂ - ದೇಹವನ್ನು, ವಿಶಂತೀವ-ಹೊಕ್ಕವಳಂತೆಯೇ, ವನೇ ವನದಲ್ಲಿ, ಯೂಥ....ಷ್ಟಾ - ತನ್ನ ಗುಂಪಿನಿಂದ ಅಗಲಿದ, ಕೋಕೈಃ - ತೋಳಗಳಿಂದ, ಅರ್ದಿತಾ - ಹೆದರಿಸಲ್ಪಟ್ಟ, ಮೃಗೀವ - ಚಿಗರಿಯಂತೆ, ಅಧಿಕಂ - ಹೆಚ್ಚಾಗಿ, ವೇಪತೇಸ್ಮ - ನಡುಗಿದಳಷ್ಟೆ. ॥ ೫ ॥ ಸಾತು - ಆ ಸೀತೆಯಾದರೆ, ಅಶೋಕಸ್ಯ - ಅಶೋಕವೃಕ್ಷದ, ಪುಷ್ಪಿತಾಂ - ಹುವ್ವುಗಳುಳ್ಳ, ವಿಪುಲಾಂ - ವಿಸ್ತಾರವಾದ, ಶಾಖಾಂ - ರೆಂಬೆಯನ್ನು, ಆಲಂಬ್ಯ - ಆಶ್ರಯಿಸಿ, ಭಗ್ನಮಾನಸಾ - ಮನಗೆಟ್ಟವಳಾಗಿ, ಶೋಕೇನ - ವ್ಯಸನದಿಂದ, ಭರ್ತಾರಂ - ಗಂಡನನ್ನೇ, ಚಿಂತಯಾಮಾಸ - ಯೋಚಿಸಿದಳು. ॥ ೬ ॥ ಸಾ - ಆ ಸೀತೆಯು, ತದಾ - ಆ ಕಾಲದಲ್ಲಿ, ವಿಪುಲೌ - ದೊಡ್ಡವುಗಳಾದ, ಸ್ತನೌ - ಕುಚಗಳನ್ನು,

ರಾವಣಾಸುರನಿಂದ ಭಯಗೊಳಿಸಲ್ಪಟ್ಟವಳಾಗಿಯೂ, ರಾಕ್ಷಸಸ್ತ್ರೀಯರಿಂದ ಸುತ್ತುವರೆಯಲ್ಪಟ್ಟು ಪೀಡಿಸಲ್ಪಟ್ಟವಳಾಗಿಯೂ ಇರುವ, ದೇವಕನ್ನಿಕೆಗೆ ಸಮಾನಳಾದ ಆ ಸೀತೆಯು ಮಹಾ ವ್ಯಸನಪೀಡಿತಳಾಗಿ ಸ್ವಲ್ಪನಾದರೂ ಶಾಂತಿಯಿಲ್ಲದವಳಾದಳು. ಆಗ ಸಮಸ್ತ ಇಂದ್ರಿಯಗಳನ್ನೂ ಉಪರಮಿಸುವಂತೆ ಮಾಡಿದವಳಂತಿದ್ದ ಆ ದೇವಿಯು, ಅರಣ್ಯದಲ್ಲಿ ಸ್ವಜಾತಿಯ ಮೃಗಗಳಿಂದ ಚದುರಿಹೋಗಿ ತೋಳಗಳ ಕೈಗೆ ಸಿಕ್ಕಿ ಅವುಗಳಿಂದ ಸುತ್ತುವರೆಯಲಾದ ಜಿಂಕೆಯಮರಿಯಂತೆ ಮಹಾ ಭಯದಿಂದ ಮನಸ್ಸು ತಲ್ಲಣಿಸಿಹೋಗಿರಲು ಚೆನ್ನಾಗಿ ಹೂವೊಳತಿರುವ, ಆಂಜನೇಯನು ಹತ್ತಿ ಕುಳಿತಿದ್ದ ಅಶೋಕವೃಕ್ಷದ ಕೊಂಬೆಯನ್ನು ತಬ್ಬಿಕೊಂಡು ತನ್ನ ಪತಿದೇವನಾದ ಶ್ರೀರಾಮನನ್ನೇ ಧ್ಯಾನಿಸುತ್ತ ನಿಂತಿದ್ದಳು, ॥ ೪—೬ ॥ ಹೀಗೆ ನಿಂತು ದುಃಖಿಸುತ್ತಿದ್ದುದರಿಂದ ಜಾರಿದ ಕಣ್ಣೀರಿನಿಂದ ತನ್ನ ಪೀನವಾದ

‡ "ರಾವಣೇನೇವ ಭತ್ಸಿ೯ತಾ" ತಿ. ಪಾ.

¶ ಇಲ್ಲಿ ಹನುಮಂತನು ಎಲೆಗಳಿಂದ ಮೈಮರೆಸಿಕೊಂಡು ಕುಳಿತಿದ್ದ ಅಶೋಕವೃಕ್ಷವೂ, ಸೀತೆಯು ಕುಳಿತಿದ್ದ ಶಿಂಶುಪಾ ವೃಕ್ಷದ ಬುಡವೂ ಒಂದಕ್ಕೊಂದು ತಗುಲಿಕೊಂಡಿದ್ದುದರಿಂದ ಇಲ್ಲಿ ಆಕೆಯು ಶಿಂಶುಪಾ ವೃಕ್ಷದ ಬುಡದಲ್ಲಿ ಕುಳಿತಿದ್ದರೂ ಅಶೋಕವೃಕ್ಷದ ರೆಂಬೆಯನ್ನು ಅವಲಂಬಿಸಿರುವುದಾಗಿ ಹೇಳಿರುವಂತೆ ತೋರುತ್ತದೆ. (ಗೋ)

ಅಶೋಕದಂತೆಯೇ ಇರುವ ಶಿಂಶುಪಾವೃಕ್ಷದ ರೆಂಬೆಯನ್ನವಲಂಬಿಸಿ ನಿಂತುದಾಗಿ ರಾಮಾನುಜೀಯ ವ್ಯಾಖ್ಯಾನದಲ್ಲಿ ಬರೆದಿದೆ.

ರಾಮಪಂಡಿತರು ಅಶೋಕಶಬ್ದವು ಶೋಕವನಪರವೆಂದೂ ಆಶೋಕವನ ಸಂಬಂಧವಾದ ಶಿಂಶುಪಾವೃಕ್ಷದ ರೆಂಬೆಯೆಂದೂ ಬರೆದಿದ್ದಾರೆ.

ತದಾಂತಮಧಿಗಚ್ಛತಿ ‖ ೭ ‖ ಸಾ ವೇಪಮಾನಾ ಪತಿತಾ ಪ್ರವಾತೇ ಕದಳೀ ಯಥಾ । ರಾಕ್ಷಸೀನಾಂ ಭಯತ್ರಸ್ತಾ ವಿವರ್ಣವದನಾಽಭವತ್ ‖ ೮ ‖ ತಸ್ಯಾಸ್ಸಾ ದೀರ್ಘ ವಿಪುಲಾ ವೇಪಂತ್ಯಾ ಸೀತಯಾ ತದಾ । ದದೃಶೇ ಕಂಪಿನೀ ವೇಣೀ ವ್ಯಾಳೀವ ಪರಿ ಸರ್ಪತೀ ‖ ೯ ‖ ಸಾ ನಿಶ್ಶ್ವಸಂತೀ ದುಃಖಾರ್ತಾ ಶೋಕೋಪಹತಚೇತನಾ । ಆರ್ತಾ ವ್ಯಸೃಜದಶ್ರೂಣಿ ಮೈಥಿಲೀ ವಿಲಲಾಪಹ ! ‖ ೧೦ ‖ 'ಹಾ ! ರಾಮೇ'ತಿಚ ದುಃಖಾರ್ತಾ 'ಹಾ! ಪುನರ್ಲಕ್ಷ್ಮಣೇ'ತಿಚ । 'ಹಾ! ಶ್ವಶ್ರು! ಮಮ ಕೌಸಲ್ಯೇ! ಹಾ ! ಸುಮಿತ್ರೇ'ತಿ ಭಾಮಿನೀ ‖ ೧೧ ‖ "ಲೋಕೇ ಪ್ರವಾದಸ್ಸತ್ಯೋಽಯಂ

ನೇತ್ರಜಲಸ್ರವೈಃ - ಕಂಬನಿಗಳ ಸುರಿಯುವಿಕೆಯಿಂದ, ಸ್ನಾಪಯಂತೀ - ನೆನಸುತ್ತ, ಚಿಂತಯಂತೀ - ಚಿಂತಿಸುತ್ತ, ಶೋಕಸ್ಯ - ದುಃಖದ, ಅಂತಂ - ತುದಿಯನ್ನು, ನಾಧಿಗಚ್ಛತಿ - ಹೊಂದಲಿಲ್ಲವು. ‖ ೭ ‖ ವೇಪಮಾನಾ - ನಡುಗುತ್ತಿರುವ, ಸಾ - ಆ ಸೀತೆಯು, ಪ್ರವಾತೇ - ಬಿರುಗಾಳಿಯಲ್ಲಿ, ಕದಳೀಯಥಾ - ಬಾಳೇಗಿಡದಂತೆ, ಪತಿತಾ - ಬಿದ್ದು, ರಾಕ್ಷಸೀನಾಂ - ರಕ್ಕಸಿಯರ, ಭಯತ್ರಸ್ತಾ - ಭಯದಿಂದ ಅಂಜಿ, ವಿವರ್ಣವದನಾ - ಕಂಗೆಟ್ಟಮುಖವುಳ್ಳವಳು, ಅಭವತ್ - ಆದಳು. ‖ ೮ ‖ ತದಾ - ಆ ಸಮಯದಲ್ಲಿ, ವೇಪಂತ್ಯಾ - ನಡುಗುತ್ತಿರುವ, ತಸ್ಯಾಸ್ಸೀತಾಯಾಃ - ಆ ಸೀತೆಯ, ದೀರ್ಘವಿಪುಲಾ - ಉದ್ದವಾಗಿಯೂ, ಅಗಲವಾಗಿಯೂ ಇರುವ, ಕಂಪಿನೀ - ಚಲಿಸುವ, ಸಾವೇಣೀ - ಆ ಜಡೆಯು, ಪರಿ ಸರ್ಪತೀ - ಓಡಾಡುವ, ವ್ಯಾಳೀವ - ಹೆಣ್ಣುಸರ್ಪದಂತೆ, ದದೃಶೇ - ಕಾಣಿಸಿತು. ‖ ೯ ‖ ನಿಶ್ವಸಂತೀ - ನಿಟ್ಟುಸಿರು ಬಿಡುತ್ತಿರುವ, ದುಃಖಾರ್ತಾ - ವ್ಯಸನಗೊಂಡ, ಶೋಕೋ....ನಾ - ದುಃಖದಿಂದ ಮತಿ ಗೆಟ್ಟು, ಆರ್ತಾ - ಅಳುತ್ತಿರುವ, ಸಾಮೈಥಿಲೀ - ಆ ಸೀತೆಯು, ಅಶ್ರೂಣಿ - ಕಂಬನಿಗಳನ್ನು, ವ್ಯಸೃಜತ್ - ಬಿಟ್ಟಳು, ವಿಲಲಾಪಹ - ಪ್ರಲಪಿಸಿದಳು. ‖ ೧೦ ‖ ದುಃಖಾರ್ತಾ - ವ್ಯಸನಾಕ್ರಾಂತ ಳಾದ, ಭಾಮಿನೀ - ಸೀತೆಯು, ಹೇ ರಾಮ - ಓ ರಾಮನೇ, ಹಾ - ಕಷ್ಟವು, ಇತಿ - ಎಂತಲೂ, ಪುನಃ - ಮತ್ತು, ಹಾಲಕ್ಷ್ಮಣೇತಿ - ಅಯ್ಯೋ ಲಕ್ಷ್ಮಣನೇ ಎಂತಲೂ, ಮಮ - ನನಗೆ, ಶ್ವಶ್ರು - ಅತ್ತೆ ಯಾದ, ಹಾ ಕೌಸಲ್ಯೇ - ಓ ಕೌಸಲ್ಯಾದೇವಿಯೇ, ಹಾ ಸುಮಿತ್ರೇ - ಓ ಸುಮಿತ್ರೆಯೇ, ಹಾ - ಕಷ್ಟವು, ಇತಿ - ಎಂತಲೂ, ವಿಲಲಾಪಹ - ರೋದಿಸಿದಳು. ‖ ೧೧ ‖ ಮೃತ್ಯುಃ - ಮರಣವು, ಸ್ತ್ರೀ ಯೋವಾ -

---

ಸ್ತನಯುಗ್ಮವನ್ನು ನೆನೆಸುತ್ತಲಿದ್ದ ಆಕೆಯು ಶ್ರೀರಾಮನನ್ನು ಧ್ಯಾನಿಸುತ್ತಲೇ ವ್ಯಸನ ಸಮುದ್ರದಲ್ಲಿ ಮುಳುಗಿದವಳಾಗಿ ದಡಕಾಣದೆ ಹೋದಳು. ಅಲ್ಲದೆ ಆ ಸಮಯದಲ್ಲಿ ಆಕೆಯು ರಾಕ್ಷಸಸ್ತ್ರೀಯರಿಂದ ಭಯಪಟ್ಟು ಗಡಗಡನೆ ನಡುಗುತ್ತ ಸುಂಡರಗಾಳಿಯಿಂದ ನೆಲಕ್ಕುರುಳಿದ ಬಾಳೆಯಗಿಡದಂತೆ ನೆಲದಮೇಲೆ ಬಿದ್ದು ಮಹಾ ಭಯದಿಂದ ಬಿಳುಪೇರಿದ ಮುಖವುಳ್ಳವಳಾದಳು. ಹೀಗೆ ವರ್ಣಿಸಲಸದಳವಾದ ಭೀತಿಯಿಂದ ನಡುಗುತ್ತಿದ್ದ ಆ ಸೀತೆಯ ಬಹಳ ಉದ್ದವೂ ಅಗಲವೂ ಆದ ಜಡೆಯು ಅತ್ತಿತ್ತ ಕದಲುತ್ತ ಹೆಣ್ಣು ಹಾವಿನಂತೆ ಕಾಣಿಸುತ್ತಿದ್ದಿತು. ಆಕೆಯು ರಾಮವಿರಹದಿಂದ ಪೀಡಿತಳಾಗಿ ದುಃಖದಿಂದ ವ್ಯಾಕುಲ ಚಿತ್ತಳೂ ಆಗಿ ನಿಟ್ಟುಸಿರುಗಳನ್ನು ಬಿಟ್ಟು ಭೋರನೆ ಅಳತೊಡಗಿದಳು. ಹೀಗೆ ಮಹಾ ವ್ಯಸನದಿಂದ ಬಿಕ್ಕಿಬಿಕ್ಕಿ ಅಳುತ್ತ, 'ಹಾ! ರಾಮ!' ಎಂದೂ, 'ಹಾ! ಲಕ್ಷ್ಮಣಾ! ಎಂದೂ, 'ಅತ್ತೆ ಕೌಸಲ್ಯೆ!' ಎಂದೂ, 'ಹಾ ಸುಮಿತ್ರೇ!' ಎಂದೂ ಮೊರೆಯಿಡುತ್ತಿದ್ದಳು. ‖ ೭–೧೧ ‖

ಪಂಡಿತೈಸ್ಸಮುದಾಹೃತಃ । "ಅಕಾಲೇ ದುರ್ಲಭೋ ಮೃತ್ಯುಃ ಸ್ತ್ರಿಯೋ ವಾ ಪುರುಷಸ್ಯ ವಾ" ॥೧೨॥ ಯತ್ರಾಹಮೇವಂ ಕ್ರೂರಾಭೀ ರಾಕ್ಷಸೀಭಿರಿಹಾರ್ದಿತಾ । ಜೀವಾಮಿ ಹೀನಾ ರಾಮೇಣ ಮುಹೂರ್ತಮಪಿ ದುಃಖಿತಾ ॥ ೧೩ ॥ ಏಷಾಽಲ್ಪಪುಣ್ಯಾ ಕೃಪಣಾ ವಿನಶಿಷ್ಯಾಮ್ಯನಾಥವತ್ । ಸಮುದ್ರಮಧ್ಯೇ ನೌಃ ಪೂರ್ಣಾ ವಾಯುವೇಗೈರಿವಾಹತಾ ॥೧೪॥ ಭರ್ತಾರಂ ತಮಪಶ್ಯಂತೀ ರಾಕ್ಷಸೀ ವಶಮಾಗತಾ । ಸೀದಾಮಿ ಖಲು ಶೋಕೇನ ಕೂಲಂ ತೋಯಹತಂ ಯಥಾ ॥೧೫॥ ¶ ತಂ ಪದ್ಮದಳಪತ್ರಾಕ್ಷಂ ಸಿಂಹ

ಹೆಂಗುಸಿಗಾಗಲಿ, ಪುರುಷಸ್ಯವಾ-ಗಂಡಸಿಗಾಗಲಿ, ಅಕಾಲೇ-ಆ ಸಮಯದಲ್ಲಿ, ದುರ್ಲಭಃ-ಹೊಂದಲ ಸಾಧ್ಯವು, (ಇತಿ - ಇಂತೆಂದು,) ಪಂಡಿತೈಃ - ವಿದ್ವಾಂಸರಿಂದ, ಸಮುದಾಹೃತಃ - ಹೇಳಲ್ಪಟ್ಟ, **ಅಯಂಲೋಕಪ್ರವಾದಃ** - ಈ ಲೋಕವಾರ್ತೆಯು, ಸತ್ಯಃ - ಯಥಾರ್ಥವು, ಯತಃ - ಯಾವಕಾರಣ ದಿಂದ, ಏವಂಕ್ರೂರಾಭಿಃ - ಹೀಗೆ ಕ್ರೂರೆಯರಾದ, ರಾಕ್ಷಸೀಭಿಃ - ರಕ್ಕಸಿಯರಿಂದ, ಇಹ - ಇಲ್ಲಿ, **ಅರ್ದಿತಾ** - ಅಂಜಿಸಲ್ಪಟ್ಟ, ದುಃಖಿತಾ - ವ್ಯಸನಗೊಂಡ, ಅಹಂ - ನಾನು, ರಾಮೇಣ - ಶ್ರೀರಾಮ ನಿಂದ, ಹೀನಾ - ರಹಿತಳಾಗಿ, ಮುಹೂರ್ತಮಪಿ-ಸ್ವಲ್ಪಕಾಲವಾದರೂ, ಜೀವಾಮಿ - ಬದುಕಿದ್ದೇನೆಯೋ. ॥ ೧೨-೧೩ ॥ ಅಲ್ಪಪುಣ್ಯಾ - ಹೀನಭಾಗ್ಯಳಾದ, ಕೃಪಣಾ - ದೀನಳಾದ, ಏಷಾ - ಈನಾನು, ಸಮುದ್ರ ಮಧ್ಯೇ - ಕಡಲಿನನಡುವೆ, ಪೂರ್ಣಾ - ಪದಾರ್ಥಪೂರಿತವಾದ, ವಾಯುವೇಗೈಃ-ಗಾಳಿಯ ವೇಗದಿಂದ, **ಆಹತಾ** - ಹೊಡೆಯಲ್ಪಟ್ಟ, ನೌರಿವ - ಹಡಗಿನಂತೆ, ಅನಾಥವತ್ - ರಕ್ಷಕನಿಲ್ಲದಂತೆ, ವಿನಶಿಷ್ಯಾಮಿ - ನಶಿಸಿಹೋಗುವೆನು. ॥ ೧೪ ॥ ಭರ್ತಾರಂ - ಪತಿಯಾದ, ತಂ - ಆ ರಾಮನನ್ನು, ಅಪಶ್ಯಂತೀ - ಕಾಣದಿರುವ, ರಾಕ್ಷಸೀವಶಂ - ರಕ್ಕಸಿಯರ ಅಧೀನವನ್ನು, ಆಗತಾ - ಹೊಂದಿದ ನಾನು, ತೋಯ ಹತಂ - ನೀರಿನಿಂದ ಕಿತ್ತುಹೋದ, ಕೂಲಂಯಥಾ - ದಡದಂತೆ, ಸೀದಾಮಿಖಲು - ನಾಶವಾಗುವೆ ನಷ್ಟೆ. ॥ ೧೫ ॥ ಧನ್ಯಾಃ - ಪುಣ್ಯವಂತರು, ಪದ್ಮ....ಕ್ಷಂ - ಕಮಲದ ವಿಕಸಿತವಾದ ಎಲೆಯಂತೆ

ಹೀಗೆ ದುಃಖಿಸುತ್ತ "ಅಯ್ಯೋ! ಈಗ ನಾನು ಹೀಗೆ ನಿರ್ದಯರಾದ ರಾಕ್ಷಸಿಯರ ಕೈಗೆ ಸಿಕ್ಕಿ ಮಹಾ ವ್ಯಸನವನ್ನು ಹೊಂದಿದವಳಾಗಿ ಶ್ರೀರಾಮನನ್ನಗಲಿಯೂ ಒಂದು ಮುಹೂರ್ತಕಾಲ ವಾದರೂ ಬದುಕಿರುವೆನಲ್ಲವೆ! **"ಪುರುಷರಿಗಾಗಲಿ, ಸ್ತ್ರೀಯರಿಗಾಗಲಿ ಕಾಲವು ಬರದೆ ಮರಣವು ಸಂಭವಿಸದು"** ಎಂದು ಹಿರಿಯರು ಹೇಳುವ ಹೇಳಿಕೆಯು ಸತ್ಯವಾದುದು. ಆದುದ ರಿಂದ ನನಗಿನ್ನೂ ಮರಣಕಾಲವು ಬಂದಿಲ್ಲವೆಂದೇ ತೋರುತ್ತದೆ. ಹೀಗಿರಲು ನಾನು ಸಾಯುವುದೆಂತು? ಅಕ್ಕಟ! ಅಲ್ಪಪುಣ್ಯಳೂ, ಪಾಪಿಷ್ಠಳೂ ಆದ ನಾನು ಸರಕುಗಳಿಂದ ತುಂಬಿದ ಹಡಗು ಸಮುದ್ರ ಮಧ್ಯದಲ್ಲಿ ಬಿರುಗಾಳಿಯಿಂದ ಮುಳುಗಿಹೋದಂತೆ ವ್ಯಸನ ಮಹಾ ಸಮುದ್ರದಲ್ಲಿ ಮುಳುಗಿದವಳಾಗಿ ದಿಕ್ಕುಕಾಣದೆ ಅನಾಥೆಯಂತೆ ನಾಶವಾಗಿ ಹೋಗು ತ್ತಿರುವೆನು. ॥೧೨–೧೪॥ ಅಯ್ಯೋ! ಈಗ ನಾನೇನುತಾನೆ ಮಾಡಲಾದೀತು? ಅಕಟಕಟ!! ನಾನು ನನ್ನ ಭರ್ತನಾದ ಶ್ರೀರಾಮನನ್ನು ನೋಡದೆಯೇ, ನಿರಂತರವೂ ರಾಕ್ಷಸಸ್ತ್ರೀಯರನ್ನೇ ನೋಡುತ್ತ, ಮಹಾ ಪ್ರವಾಹದಿಂದ ದಡಮುರಿದ ನದಿಯಂತೆ ನಶಿಸಿಹೋಗುತ್ತಿರುವೆನು!

¶ ಇಲ್ಲಿನ ವಿಶೇಷಾರ್ಥ:—ಸೀತಾದೇವಿಯು, "ಇದುವರೆಗೂ ನನ್ನ ಸರ್ವಸ್ವ ಧನರೂಪನಾಗಿದ್ದ ಶ್ರೀರಾಮ ಚಂದ್ರನು ಎಲ್ಲರ ಸ್ವತ್ತಾಗುವ"ನೆಂದು ಮನಮರುಗುವಳು. "ಬಹವೋ ನೃಪಕಲ್ಯಾಣ ಗುಣಾಃ ಪುತ್ರಸ್ಯ ಸಂತಿತೇ" ಎಂದು

ವಿಕ್ರಾಂತಗಾಮಿನಂ । ಧನ್ಯಾಃ ಪಶ್ಯಂತಿ ಮೇನಾಥಂ ಕೃತಜ್ಞಂ ಪ್ರಿಯವಾದಿನಂ ॥೧೬॥ ಸರ್ವಥಾ ತೇನ ಹೀನಾಯಾ ರಾಮೇಣ ವಿದಿತಾತ್ಮನಾ । ತೀಕ್ಷ್ಣಂ ವಿಷಮಿವಾಸ್ವಾದ್ಯ ದುರ್ಲಭಂ ಮಮ ಜೀವಿತಂ॥೧೭॥ ಕೀದೃಶಂತು ಮಯಾ ಪಾಪಂ* ಪುರಾ ಜನ್ಮಾಂತರೇ ಕೃತಂ । ಯೇನೇದಂ ಪ್ರಾಪ್ಯತೇ § ದುಃಖಂ ಮಯಾ ಘೋರಂ ಸುದಾರುಣಂ ॥೧೮॥

ನೇತ್ರಗಳುಳ್ಳ, ಸಿಂಹ....ನಂ - ಸಿಂಹದಂತೆ ಶೂರನಾಗಿ ನಡೆಯುತ್ತಿರುವ, ಕೃತಜ್ಞಂ - ಉಪಕಾರ ವನ್ನೆಣಿಸುವ, ಪ್ರಿಯವಾದಿನಂ - ಇಷ್ಟವಾಗಿ ನುಡಿಯುತ್ತಿರುವ, ಮೇನಾಥಂ - ನನ್ನ ಪತಿಯಾದ, ತಂ - ಆ ಶ್ರೀರಾಮುನನ್ನು, ಧನ್ಯಾಃ - ಪುಣ್ಯವಂತರು, ಪಶ್ಯಂತಿ - ನೋಡುತ್ತಾರೆ. ॥೧೬॥ ಸರ್ವಥಾ - ಸರ್ವಪ್ರಕಾರವಾಗಿ, ವಿದಿತಾತ್ಮನಾ-ತಿಳಿವಳಿಕೆಯುಳ್ಳ, ತೇನರಾಮೇಣ-ಆ ರಾಮನಿಂದ, ಹೀನಾಯಾಃ - ರಹಿತಳಾದ, ಮೇ - ನನ್ನ, ಜೀವಿತಂ - ಪ್ರಾಣವು, ತೀಕ್ಷ್ಣಂ - ಕ್ರೂರವಾದ, ವಿಷಂ - ವಿಷವನ್ನು, ಆಸ್ವಾದ್ಯೇವ - ತಿಳಿದಂತೆ, ದುರ್ಲಭಂ - ಜೀವಿಸುವುದು ಕಷ್ಟವು. ॥ ೧೭ ॥ ಪುರಾ - ಪೂರ್ವದಲ್ಲಿ, ಜನ್ಮಾಂತರೇ - ಯಾವುದೋ ಜನ್ಮದಲ್ಲಿ, ಕೀದೃಶಂಪಾಪಂ - ಎಂತಹ ಪಾಪವು, ಮಯಾ - ನನ್ನಿಂದ, ಕೃತಂ - ಮಾಡಲ್ಪಟ್ಟಿತೋ, ಯೇನ - ಯಾವ ಕಾರಣದಿಂದ, ಮಯಾ - ನನ್ನಿಂದ, ಘೋರಂ-ಭಯಂ ಕರವಾದ, ಸುದಾರುಣಂ - ಸಹಿಸಲಸಾಧ್ಯವಾದ, ಇದಂದುಃಖಂ - ಈ ವ್ಯಸನವು, ಪ್ರಾಪ್ಯತೇ - ಹೊಂದಲ್ಪಟ್ಟಿತೋ. ॥ ೧೮ ॥ ರಾಕ್ಷಸೀಭಿಃ - ರಕ್ಕಸಿಯರಿಂದ, ರಕ್ಷ್ಯಂತ್ಯಾ - ರಕ್ಷಿಸಲ್ಪಡುತ್ತಿರುವ,

---

ಅರಳಿದ ತಾವರೆಯ ರೇಕಿನಂತೆ ವಿಶಾಲನೇತ್ರಗಳುಳ್ಳವನಾಗಿಯೂ, ಸಿಂಹದಂತೆ ಗಮನ ವಿಭ್ರಮವಿಲಾಸಗಳುಳ್ಳವನಾಗಿಯೂ, ಯಾವಾಗಲೂ ಪ್ರಿಯವಾಕ್ಕುಗಳನ್ನೇ ನುಡಿಯುವವ ನಾಗಿಯೂ, ಸದ್ಗುಣಸಂಪತ್ತಿಯುಳ್ಳವನಾಗಿಯೂ ಇರುವ ನನ್ನ ಸ್ವಾಮಿಯಾದ ಶ್ರೀರಾಮ ಮೂರ್ತಿಯನ್ನು ಪುಣ್ಯಶಾಲಿಗಳಾದವರು ನೋಡುವ ಭಾಗ್ಯವನ್ನು ಪಡೆಯುತ್ತಾರೆ. ನನ್ನಂತಹ ಅಭಾಗ್ಯಳಿಗೆ ಆ ಭಾಗ್ಯವಿಲ್ಲದಾಯಿತು. ಅಂತಹ ಆತ್ಮವೇತ್ತನಾದ ಶ್ರೀರಾಮುನನ್ನಗಲಿರುವ ನನಗೆ ಮಹಾವಿಷವನ್ನು ಭುಜಿಸಿದವರಂತೆ ಎಷ್ಟುಮಾತ್ರಕ್ಕೂ ಬದುಕುವ ಇಚ್ಛೆಯಿಲ್ಲವು. ಈಗ ನಾನು ಮಹಾ ಭಯಂಕರವಾದ ವ್ಯಸನವನ್ನನುಭವಿಸುತ್ತಿರುವೆನು. ಆದುದರಿಂದ ನಾನು ಹಿಂದಣಜನ್ಮದಲ್ಲಿ ಮಹಾಪಾಪಕಾರ್ಯವನ್ನೇ ಮಾಡಿರಬೇಕೆಂದು ತೋರುತ್ತದೆ. ॥೧೪-೧೮॥

ಹೇಳಿರುವಂತೆ ಸದ್ಗುಣಸಂಪತ್ತಿಯಿಂದ ಸುಪ್ರಸಿದ್ಧನಾಗಿರುವ ನನ್ನೊಡೆಯನನ್ನು ಪುಣ್ಯಾತ್ಮರಾದವರು ನೋಡಿ ನಲಿಯು ವರು" ಎಂದು ಹೇಳಿ ಅದಕ್ಕೆ ಕಾರಣವಾಗಿ ಆ ಸುಂದರಮೂರ್ತಿಯಲ್ಲಿರುವ ಹೊರಗಣ ಸೌಂದರ್ಯವನ್ನು "ಪದ್ಮದಳ ಪತ್ರಾಕ್ಷಂ" ಮೊದಲಾದ ವಿಶೇಷಣಗಳಿಂದ ಹೇಳಿರುವಳು.

"ಪದ್ಮದಳಪತ್ರಾಕ್ಷಂ" ಎಂಬ ಕಡೆ "ಪದ್ಮದಳಂ ವಿಕಸಿತಂ ಪದ್ಮಂ - ತಸ್ಯ ಪತ್ರಮಿವಾಕ್ಷಿಣೀ ಯಸ್ಯ ತಂ" ಎಂದು ಸಮಾಸ ಮಾಡಬೇಕು. ಇಲ್ಲದಿದ್ದರೆ ದಳ ಶಬ್ದಕ್ಕೆ ವೈಯರ್ಥ್ಯವುಂಟಾಗುತ್ತದೆ. ಗೋವಿಂದರಾಜರು ಹೀಗೂ ಬರೆದು, "ಅಥವ ಚೆನ್ನಾಗಿ ತಿಳಿಯುವುದಕ್ಕೋಸ್ಕರ ಒಂದೇ ಅರ್ಥದ ಎರಡು ಶಬ್ದಗಳನ್ನು ಹಾಕಿರಬಹುದು" ಎಂದೂ ಬರೆದಿರುವರು. ಮತ್ತೆ ಕೆಲವರು "ದಳ ಮತ್ತು ಪತ್ರ" ಶಬ್ದಗಳು ವೈಶಾಲ್ಯ ಮತ್ತು ವರ್ಣಗಳನ್ನು ಸೂಚಿಸುವುದಕ್ಕಾಗಿ ಪ್ರಯುಕ್ತವಾಗಿವೆಯೆಂದು ಹೇಳುತ್ತಾರೆ. ಕ್ಷತ್ರಿಯ ಶ್ರೇಷ್ಠರಾದ ಮಹಾ ಪುರುಷರಿಗೆ ರಕ್ತಾಂತಲೋಚನತ್ವವು ಒಂದು ಲಕ್ಷಣವೆಂದಿರುವುದು, ಈ ಅಭಿಪ್ರಾಯಕ್ಕೆ ಕಾರಣವೆಂದು ತೋರುತ್ತದೆ. ಆದಿಕವಿಯೂ, ಅನೇಕ ಕಡೆ, "ರಾಮಂ ರಕ್ತಾಂತಲೋಚನಂ" ಎಂದಿರುವುದರಿಂದ ಈ ಅರ್ಥವೂ ಯುಕ್ತವಾದುದೆಂದು ತೋರುತ್ತದೆ.

* "ಮಯಾ ದೇಹಾಂತರೇ" ರಾ. ತಿ. ಪಾ. § "ಘೋರಂ ಮಹಾದುಃಖಂ" ತಿ. ರಾ. ಕ. ಪಾ.

ಜೀವಿತಂ ತ್ಯಕ್ತುಮಿಚ್ಛಾಮಿ ಶೋಕೇನ ಮಹತಾವೃತಾ ।
ರಾಕ್ಷಸೀಭಿಶ್ಚ ರಕ್ಷಂತ್ಯಾ ರಾಮೋ ನಾಽಸಾದ್ಯತೇ ಮಯಾ ॥ ೧೯ ॥

ಧಿಗಸ್ತು ಖಲು ಮಾನುಷ್ಯಂ ಧಿಗಸ್ತು ಪರವಶ್ಯತಾಂ ।
ನಶಕ್ಯಂ ಯತ್ಪರಿತ್ಯಕ್ತು ಮಾತ್ಮಚ್ಛಂದೇನ ಜೀವಿತಂ" ॥ ೨೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚವಿಂಶಸ್ಸರ್ಗಃ

ಮಯಾ - ನನ್ನಿಂದ, ರಾಮಃ - ಶ್ರೀರಾಮನು, ನಾಸಾದ್ಯತೇ - ಹೊಂದಲ್ಪಡುವದಿಲ್ಲ, ಮಹತಾ ಶೋಕೇನ - ಮಹಾ ವ್ಯಸನದಿಂದ, ವೃತಾ - ವ್ಯಾಪ್ತಳಾದ ನಾನು, ಜೀವಿತಂ - ಪ್ರಾಣವನ್ನು, ತ್ಯಕ್ತುಂ- ಬಿಡುವದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೧೯ ॥ ಮಾನುಷ್ಯಂಖಲು - ಮನುಷ್ಯಭಾವ ವಾದರೆ, ಧಿಗಸ್ತು - ಸುಡಬೇಕು, ಪರವಶ್ಯತಾಂ - ಪರಾಧೀನತೆಯನ್ನು, ಧಿಗಸ್ತು - ಸುಡಬೇಕು, ಯತ್ - ಯಾವ ಕಾರಣದಿಂದ, ಆತ್ಮಚ್ಛಂದೇನ - ಸ್ವೇಚ್ಛೆಯಿಂದ, ಜೀವಿತಂ - ಪ್ರಾಣವನ್ನು, ಪರಿತ್ಯಕ್ತುಂ - ಬಿಡುವುದಕ್ಕೆ, ನಶಕ್ಯಂ - ಸಾಧ್ಯವಲ್ಲವೋ. ॥ ೨೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚವಿಂಶಸ್ಸರ್ಗಃ.

ಅಯ್ಯೋ! ಇಂತಹ ಮಹಾ ದುಃಖವನ್ನು ಅನುಭವಿಸುತ್ತ ನಾನೆಷ್ಟು ಮಾತ್ರಕ್ಕೂ ಬದುಕಿರಲಾರೆನು. ಪ್ರಾಣಗಳನ್ನು ತೊರೆದುಬಿಡುವೆನು. ಮಹಾ ಭಯಂಕರೆಯರಾದ ರಾಕ್ಷಸ ಸ್ತ್ರೀಯರಿಂದ ರಕ್ಷಿತಳಾದ ನಾನು ಮನೋವಲ್ಲಭನಾದ ಶ್ರೀರಾಮನನ್ನು ನೋಡುವುದಕ್ಕಾ ದೀತೇ! ಆಗುವುದಿಲ್ಲ. ಆದುದರಿಂದ ನಾನಿನ್ನೇಕೆ ಬದುಕಿರಬೇಕು? ಪ್ರಾಣಗಳನ್ನು ತೊರೆಯು ತ್ತೇನೆ. ಅಕಟ! ಇಷ್ಟಾದರೂ ನಾನು ಪ್ರಾಣಗಳನ್ನು ತೊರೆಯಲು ಸ್ವತಂತ್ರಳಲ್ಲವು. ಒಬ್ಬರ ಅಧೀನೆಯಾದ ಹೆಣ್ಣು ತನ್ನ ಮನಬಂದಂತೆ ಪ್ರಾಣಗಳನ್ನು ಹೇಗೆತಾನೇ ಬಿಟ್ಟಾಳು? **ಆದುದ ರಿಂದ ಒಬ್ಬರ ಅಧೀನದಲ್ಲಿರುವಿಕೆಯೆಂಬುದು ಸುಟ್ಟುಹೋಗಲಿ. ಮಾನವನು ಮನಬಂದಂತೆ ಪ್ರಾಣಗಳನ್ನು ಬಿಡಲು ಅಶಕ್ತನಾದುದರಿಂದ ಆ ಮಾನುಷ್ಯವೂ ಸುಡಲಿ"** ಎಂದುಕೊಂಡು ಮತ್ತೂ ದುಃಖಪರವಶಳಾದಳು. ॥೧೯-೨೦॥

ಇಂತಿದು ಸೀತಾವಿಲಾಪವೆಂಬ ಇಪ್ಪತ್ತೈದನೆಯ ಸರ್ಗವು
ಸಮಾಪ್ತವಾದುದು.

ಸುಂದರಕಾಂಡೇ ಷಡ್ತ್ರಿಂಶಸ್ಸರ್ಗಃ

ಪ್ರಸಕ್ತಾಶ್ರುಮುಖೀತ್ಯೇವಂ ಬ್ರುವಂತೀ ಜನಕಾತ್ಮಜಾ । ¶ ಅಧೋಮುಖಮುಖೀ ಬಾಲಾ ವಿಲಪ್ತು ಮುಪಚಕ್ರಮೇ ॥ ೧ ॥ ಉನ್ಮತ್ತೇವ ಪ್ರಮತ್ತೇವ ಭ್ರಾಂತಚಿತ್ತೇವ ಶೋಚತೀ । ಉಪಾವೃತ್ತಾ ಕಿಶೋರೀವ ವಿವೇಷ್ಟಂತೀ ಮಹೀತಲೇ ॥ ೨ ॥ “ರಾಘವಸ್ಯ ಪ್ರಮತ್ತಸ್ಯ ರಕ್ಷಸಾ ಕಾಮರೂಪಿಣಾ । ರಾವಣೇನ ಪ್ರಮಥ್ಯಾಹಮಾನೀತಾ ಕ್ರೋಶತೀ ಬಲಾತ್ ॥ ೩ ॥ ರಾಕ್ಷಸೀವಶಮಾಪನ್ನಾ ಭರ್ತ್ಸ್ಯಮಾನಾ ಸುದಾರುಣಂ । ಚಿಂತಯಂತೀ ಸುದುಃಖಾರ್ತಾ ನಾಽಹಂ ಜೀವಿತುಮುತ್ಸಹೇ ॥ ೪ ॥

ಇತ್ಯೇವಂ - ಈ ಪರಿಯಾಗಿ, ಬ್ರುವಂತೀ - ಹೇಳುತ್ತಿರುವ, ಪ್ರಸ....ಖೀ - ಸುರಿಯುತ್ತಿರುವ ಕಣ್ಣೀರಿನ ಮುಖವುಳ್ಳ, ಅಧೋಮುಖಮುಖೀ - ಬೊಗ್ಗಿದಮುಖವುಳ್ಳ, ಬಾಲಾ - ಯೌವನವತಿಯಾದ, ಜನಕಾತ್ಮಜಾ - ಸೀತೆಯು, ಉನ್ಮತ್ತೇವ - ಹುಚ್ಚಳಂತೆ, ಪ್ರಮತ್ತೇವ - ಮೈಮರೆತವಳಂತೆ, ಭ್ರಾಂತಚಿತ್ತೇವ - ಅವ್ಯವಸ್ಥಿತ ಚಿತ್ತಳಂತೆ, ಶೋಚತೀ - ದುಃಖಿತಳಾದಕಾರಣವೇ, ಮಹೀತಲೇ - ಭೂಪ್ರದೇಶದಲ್ಲಿ, ವಿವೇಷ್ಟಂತೀ - ಹೊರಳಾಡುತ್ತಿರುವ, ಕಿಶೋರೀವ - ಕುದುರೆಯಮರಿಯಂತೆ, ಉಪಾವೃತ್ತಾ - ತಿರುಗುವಳಾಗಿ, ವಿಲಪ್ತುಂ - ಪ್ರಲಾಪಿಸುವುದಕ್ಕೆ, ಉಪಚಕ್ರಮೇ - ಆರಂಭಿಸಿದಳು. ॥ ೧-೨ ॥ ಅಹಂ - ನಾನು, ಪ್ರಮತ್ತಸ್ಯ - ಉಪೇಕ್ಷೆಯಾಗಿರುವ, ರಾಘವಸ್ಯ - ಶ್ರೀರಾಮನ, (ಸಮೀಪದಿಂದ) ರಕ್ಷಸಾ - ಅಸುರನಾದ, ಕಾಮರೂಪಿಣಾ - ಸ್ವೇಚ್ಛಾರೂಪನಾದ, ರಾವಣೇನ - ರಾವಣನಿಂದ, ಪ್ರಮಥ್ಯ - ಔದ್ಧತ್ಯದಿಂದಲೂ, ಬಲಾತ್ - ಬಲಾತ್ಕಾರದಿಂದಲೂ, ಆನೀತಾ - ತರಲ್ಪಟ್ಟೆನು, ರಾಕ್ಷಸೀವಶಂ - ರಕ್ಕಸಿಯರವಶವನ್ನು, ಆಪನ್ನಾ - ಹೊಂದಿದ, ಸುದಾರುಣಂ - ಮಹಾಭಯಂಕರವಾಗಿ,

---

ಆಗ ಸುಕುಮಾರಿಯಾದ ಸೀತಾದೇವಿಯು ಮಹಾ ವ್ಯಸನದಿಂದ ಧಾರೆಧಾರೆಯಾಗಿ ಕಣ್ಣೀರನ್ನು ಸುರಿಸುತ್ತ, ಭೀತಿಯಿಂದಲೂ, ಲಜ್ಜೆಯಿಂದಲೂ ತಲೆ ತಗ್ಗಿಸಿಕೊಂಡು ವಿಧವಿಧವಾಗಿ ಪ್ರಲಪಿಸತೊಡಗಿದಳು. ಆಕೆಯು ಹೀಗೆ ಪ್ರಲಪಿಸುತ್ತ ಹುಚ್ಚಿಯಂತೆಯೂ, ದಿಗ್ಭ್ರಾಂತಿ ಹೊಂದಿದವಳಂತೆಯೂ ಆಗಿ ಆಯಾಸಪರಿಹಾರಕ್ಕಾಗಿ ನೆಲದಮೇಲೆ ಬಿದ್ದು ಹೊರಳುತ್ತಿರುವ ಹೆಣ್ಣು ಕುದುರೆಯಂತೆ ಹೊರಳಾಡುತ್ತ ತನ್ನಲ್ಲಿ ತಾನು ಹೀಗೆಂದುಕೊಂಡಳು. ॥ ೧-೨ ॥ “ಅಕಟಕಟಾ! ವೀರಾಧಿವೀರನಾದ ಶ್ರೀರಾಮನು ಆಶ್ರಮದಲ್ಲಿ ಇಲ್ಲದಿರುವಾಗ ಆತನ ನಚ್ಚಿನ ಮಡದಿಯಾದ ನನ್ನನ್ನು, ಕಾಮರೂಪನಾದ ರಾವಣನು, ನಾನೆಷ್ಟು ಕೂಗಿಕೊಂಡರೂ ಬಿಡದೆ, ತನ್ನ ದೌರಾತ್ಮ್ಯದಿಂದಲೂ, ಬಲಾತ್ಕಾರದಿಂದಲೂ ಈ ಲಂಕಾನಗರಕ್ಕೆ ಕರೆತಂದಿರುವನಲ್ಲವೆ! ಅಯ್ಯೋ! ಇಲ್ಲಿ ನಾನು ಈ ಕ್ರೂರ ರಾಕ್ಷಸಿಯರ ಕೈಗೆ ಸಿಕ್ಕಿರುವೆನು. ಇವರೆಲ್ಲರೂ ನನ್ನನ್ನು ಭಯಂಕರವಾಗಿ ಭೀತಿಗೊಳಿಸು

¶ “ಅಧೋಗತ” ರಾ. ಪ್ರಾ.

ನಹಿ ಮೇ ಜೀವಿತೇನಾರ್ಥೋ ನೈವಾರ್ಥೈರ್ನಚ ಭೂಷಣೈಃ । ವಸಂತ್ಯಾ ರಾಕ್ಷಸೀ ಮಧ್ಯೇ ವಿನಾರಾಮಂ ಮಹಾರಥಂ ॥ ೫ ॥ ಅಶ್ಮಸಾರಮಿದಂ ನೂನ ಮಥವಾಪ್ಯಜ ರಾಮರಂ । ಹೃದಯಂ ಮಮ ಯೇನೇದಂ ನದುಃಖೇನಾವಶೀರ್ಯತೇ ॥ ೬ ॥ ಧಿಙ್ಮಾಮನಾರ್ಯಾಮಸತೀಂ ಯಾऽಹಂ ತೇನ ವಿನಾಕೃತಾ । ಮುಹೂರ್ತಮಪಿ * ರಕ್ಷಾಮಿ ಜೀವಿತಂ ಪಾಪಜೀವಿತಾ ॥೭॥ ಕಾಚ ಮೇ ಜೀವಿತೇ ಶ್ರದ್ಧಾ ಸುಖೇವಾ ತಂ ಪ್ರಿಯಂ ವಿನಾ । ಭರ್ತಾರಂ ಸಾಗರಾಂತಾಯಾ ವಸುಧಾಯಾಃ ಪ್ರಿಯಂವದಂ

ಭರ್ತ್ಸ್ಯಮಾನಾ - ಹೆದರಿಸಲ್ಪಟ್ಟವಳಾಗಿ, ಚಿಂತಯಂತೀ - ಆಲೋಚಿಸುತ್ತಿರುವ, ಸುದುಃಖಾರ್ತಾ - ದುಃಖಿಸುತ್ತಿರುವ, ಅಹಂ - ನಾನು, ಜೀವಿತುಂ - ಬದುಕುವುದಕ್ಕೆ, ನೋತ್ಸಹೇ - ಬಯಸೆನು. ॥ ೩-೪ ॥ ರಾಕ್ಷಸೀಮಧ್ಯೇ - ರಾಕ್ಷಸಿಯರನಡುವೆ, ಮಹಾರಥಂ - ಮಹಾರಥಿಕನಾದ, ರಾಮಂವಿನಾ - ರಾಮನನ್ನು ಬಿಟ್ಟು, ವಸಂತ್ಯಾಃ - ಇರುತ್ತಿರುವ, ಮೇ - ನನಗೆ, ಜೀವಿತೈಃ - ಪ್ರಾಣಗಳಿಂದ, ಅರ್ಥಃ - ಪ್ರಯೋಜನವು, ನ - ಇಲ್ಲ, ಅರ್ಥೈಃ - ಧನಗಳಿಂದ, ನೈವ-ಉಪಯೋಗವಿಲ್ಲವೇ ಇಲ್ಲ, ಭೂಷಣೈಶ್ಚ - ಒಡವೆಗಳಿಂದಲೂ, ನ - ಪ್ರಯೋಜನವಿಲ್ಲ. ॥ ೫ ॥ ಮಮ - ನನ್ನ, ಇದಂಹೃದಯಂ - ಈ ಎದೆಯು, ಅಶ್ಮಸಾರಂ - ಕಲ್ಲಿಗಿಂತಲೂ ಬಲವಾದದ್ದು, ಅಥವಾ - ಹಾಗಲ್ಲದಿದ್ದರೆ, ಅಜರಾಮರಮಪಿ - ಮುದಿತನವೂ, ಮರಣವೂ ಸಹ ಇಲ್ಲದ್ದು, ನೂನಂ - ನಿಶ್ಚಯವು, ಯೇನ - ಯಾವಕಾರಣದಿಂದ, ಇದಂ - ಈ ಎದೆಗುಂಡಿಗೆಯು, ದುಃಖೇನ - ದುಃಖದಿಂದ, ನಾವಶೀರ್ಯತೇ - ಸೀಳಲ್ಪಡಲಿಲ್ಲವೋ. ॥ ೬ ॥ ಪಾಪಜೀವಿತಾ - ಪಾಪದಿಂದ ಬದುಕಿರುವ, ಯಾऽಹಂ - ಯಾವ ನಾನು, ತೇನ - ಆ ರಾಮನಿಂದ, ವಿನಾಕೃತಾ - ವಿರಹಿತಳಾಗಿ, ಮುಹೂರ್ತಮಪಿ - ಎರಡು ಘಳಿಗೆಯಾದರೂ, ಜೀವಿತಂ - ಪ್ರಾಣವನ್ನು, ರಕ್ಷಾಮಿ - ಪಾಲಿಸಿಕೊಂಡಿದ್ದೇನೆಯೋ, ಅನಾರ್ಯಾಂ - ನೀಚಳಾದ, ಅಸತೀಂ - ದುಷ್ಟಳಂತಿರುವ, ಮಾಂ - ನನ್ನನ್ನು, ಧಿಕ್ - ಸುಡಲಿ. ॥ ೭ ॥ ಸಾಗರಾಂತಾಯಾಃ-ಸಮುದ್ರವೇ ತುದಿಯಾಗುಳ್ಳ, ವಸುಧಾಯಾಃ - ಭೂಮಿಗೆ, ಭರ್ತಾರಂ - ಪ್ರಭುವಾದ, ಪ್ರಿಯಂವದಂ - ಇಷ್ಟವಾದ ಮಾತುಗಳನ್ನಾಡುವ, ತಂಪ್ರಿಯಂವಿನಾ - ಅಂತಹ ಗಂಡನನ್ನು ಬಿಟ್ಟು, (ಸ್ಥಿತಾಯಾಃ - ಇರುವ,) ಮೇ - ನನಗೆ,

ತ್ತಿರುವರು. ಹೀಗೆ ನಾನು ನನ್ನ ಮನೋವಲ್ಲಭನಾದ ಆ ರಘುರಾಮನನ್ನೇ ಕುರಿತು ಚಿಂತಿಸುತ್ತ ದುಃಖದಿಂದ ಬೆಂಡಾಗಿ ಎಷ್ಟುಮಾತ್ರಕ್ಕೂ ಜೀವಿಸಿರಲು ಬಯಸುವುದಿಲ್ಲ. ಮಹಾರಥನಾದ ಶ್ರೀರಾಮನನ್ನಗಲಿ ಈ ರಾಕ್ಷಸಿಯರ ಮಧ್ಯದಲ್ಲಿರುವ ನನಗೆ ಬದುಕಿನಿಂದಾಗಲಿ, ವಸ್ತ್ರಾಭರಣಗಳಿಂದಾಗಲಿ ಯಾವ ಪ್ರಯೋಜನವೂ ಇಲ್ಲವು. ನಾನಿಷ್ಟು ದುಃಖಿಸುತ್ತಿದ್ದರೂ ನನ್ನ ಹೃದಯವು ಸೀಳಿಹೋಗದಿರುವುದರಿಂದ ಇದು ಕಲ್ಲಿನಂತೆ ಅತಿ ಕಠಿನವಾದುದಾಗಿರಬೇಕು. ಇಲ್ಲವೇ ಅಜರಾಮರವೆಂದು ತೋರುತ್ತದೆ! ॥ ೩–೬ ॥ ಅಯ್ಯೋ! ಪ್ರಿಯನಾದ ಶ್ರೀರಾಮನನ್ನಗಲಿ ಒಂದು ಮುಹೂರ್ತಕಾಲವಾದರೂ ಬದುಕಿ, ಪಾಪಿಷ್ಠವಾದ ಈ ಬಾಳನ್ನು ಬಾಳುತ್ತಿರುವ ಅನಾರ್ಯೆಯೂ, ಅಸತಿಯೂ ಆದ ನನ್ನನ್ನು ಸುಡಬೇಕು! ರಾಕ್ಷಸನಾದ ಆ ದುಷ್ಟ ರಾವಣನನ್ನು ನಾನು ಎಡಗಾಲಿನಿಂದಲೂ ಮುಟ್ಟುವಳಲ್ಲವು. ಎಂದಮೇಲೆ ತುಚ್ಛನಾದ ಅವನನ್ನು ಕಾಮಿಸುವೆನೇ? ಎಂದಿಗೂ ಇಲ್ಲವು. ಕಾಮಮೋಹಿತನಾದ

* "ಜೀವಿತಂ" ತಿ. ಪಾ.

‖ ೮ ‖ ಭಿದ್ಯತಾಂ ಭಕ್ಷ್ಯತಾಂ ನಾಪಿ ಶರೀರಂ ವಿಸೃಜಾಮ್ಯಹಂ । ನಚಾಪ್ಯಹಂ ಚಿರಂ ದುಃಖಂ ಸಹೇಯಂ ಪ್ರಿಯವರ್ಜಿತಾ ‖ ೯ ‖ ಚರಣೇನಾಪಿ ಸವ್ಯೇನ ನಸ್ಪೃಶೇಯಂ $ ನಿಶಾಚರಂ । ರಾವಣಂ ಕಿಂಪುನರಹಂ ಕಾಮಯೇಯಂ ವಿಗರ್ಹಿತಂ ‖ ೧೦ ‖ ಪ್ರತ್ಯಾಖ್ಯಾತಂ ನಜಾನಾತಿ ನಾತ್ಮಾನಂ ನಾತ್ಮನಃ ಕುಲಂ । ನೃಶಂಸಸ್ವಭಾವೇನ ಮಾಂ ಪ್ರಾರ್ಥಯಿತುಮಿಚ್ಛತಿ ‖ ೧೧ ‖ ಛಿನ್ನಾ ಭಿನ್ನಾ ವಿಭಕ್ತಾವಾ ದೀಪ್ತೇವಾಗ್ನೌ ಪ್ರದೀಪಿತಾ । ರಾವಣಂ ನೋಪತಿಷ್ಠೇಯಂ ಕಿಂಪ್ರಲಾಪೇನ ವಶ್ಚಿರಂ ‖೧೨‖ ಖ್ಯಾತಃ

ಜೀವಿತೇ - ಬದುಕುವಿಕೆಯಲ್ಲಿಯಾಗಲಿ, ಸುಖೇವಾ - ಸುಖದಲ್ಲಿ ಆಗಲಿ, ಕಾಶ್ರದ್ಧಾ - ಏನುವಿಶ್ವಾಸವು, (ಭವೇತ್ - ಆದೀತು.) ‖ ೮ ‖ ಪ್ರಿಯವರ್ಜಿತಾ - ಪತಿಯಿಂದ ಬಿಡಲ್ಪಟ್ಟ, ಅಹಂ - ನಾನು, ಚಿರಂ-ಬಹುಕಾಲ, ದುಃಖಂಚ - ವ್ಯಸನವನ್ನೂ ಕೂಡ, ನಸಹೇಯಂ - ಸೈರಿಸಲಾರೆನು, ಅಹಂ - ನಾನು, ಶರೀರಂ - ದೇಹವನ್ನು, ವಿಸೃಜಾಮಿ - ಬಿಡುವೆನು, ಭಿದ್ಯತಾಂ - ಕುಯ್ಯಲ್ಪಡಲಿ, ಅಥವಾ ಹಾಗಲ್ಲದಿದ್ದರೆ, ಭಕ್ಷ್ಯತಾಂ - ಉಣ್ಣಲ್ಪಡಲಿ. ‖ ೯ ‖ ಅಹಂ - ನಾನು, ನಿಶಾಚರಂ - ರಾಕ್ಷಸನನ್ನು, ಸವ್ಯೇನ ಚರಣೇನಾಪಿ - ಎಡಗಾಲಿನಿಂದಲೂ, ನಸ್ಪೃಶೇಯಂ - ಮುಟ್ಟಲಾರೆ, ವಿಗರ್ಹಿತಂ - ನಿಂದಿತನಾದ, ರಾವಣಂಪುನಃ - ರಾವಣನನ್ನಾದರೆ, ಕಾಮಯೇಯಂಕಿಂ - ಇಚ್ಛಿಸುವೆನೇನು. ‖ ೧೦ ‖ ಯಃ - ಯಾವ ರಾವಣನು, ನೃಶಂಸಸ್ವಭಾವೇನ - ಘಾತುಕಸ್ವಭಾವದಿಂದ, ಮಾಂ - ನನ್ನನ್ನು, ಪ್ರಾರ್ಥಯಿತುಂ - ಅಪೇಕ್ಷಿಸುವುದಕ್ಕೆ, ಇಚ್ಛತಿ - ಇಚ್ಛೆಸುತ್ತಾನೋ, ಸಃ - ಆ ರಾವಣನು, ಪ್ರತ್ಯಾಖ್ಯಾತಂ - ನಿರಾಕರಣೆಯನ್ನು, ನಜಾನಾತಿ - ಅರಿಯನು, ಆತ್ಮಾನಂ - ತನ್ನ ಸ್ವರೂಪವನ್ನು, ನಜಾನಾತಿ - ತಿಳಿಯಲಾರನು, ಆತ್ಮನಃ - ತನ್ನ, ಕುಲಂ - ವಂಶವನ್ನು, ನಜಾನಾತಿ - ಅರಿಯಲಾರನು. ‖ ೧೧ ‖ ಛಿನ್ನಾ - ಕುಯ್ಯಲ್ಪಟ್ಟವಳಾದರೂ, ಭಿನ್ನಾ - ಸೀಳಲ್ಪಟ್ಟವಳಾದರೂ, ವಿಭಕ್ತಾವಾ - ಕತ್ತರಿಸಲ್ಪಟ್ಟವಳಾದರೂ, ದೀಪ್ತೇ - ಉರಿಯುತ್ತಿರುವ, ಅಗ್ನೌ - ಬೆಂಕಿಯಲ್ಲಿ, ಪ್ರದೀಪಿತಾವಾ - ಸುಡಲ್ಪಟ್ಟವಳಾದರೂ, ರಾವಣಂ - ರಾವಣನನ್ನು, ನೋಪತಿಷ್ಠೇಯಂ - ಹೊಂದಲಾರೆನು, ವಃ - ನಿಮ್ಮ, ಚಿರಂ - ಬಹಳವಾದ, ಪ್ರಲಾಪೇನ - ಅನರ್ಥಭಾಷಣದಿಂದ, ಕಿಂ - ಏನುಪ್ರಯೋಜನವು. ‖ ೧೨ ‖ ಖ್ಯಾತಃ-

ಆ ದುಷ್ಟನು ನಾನು ಮಾಡುವ ತಿರಸ್ಕಾರವನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ, ತನ್ನ ಯೋಗ್ಯತೆಯನ್ನೂ ಅರಿತುಕೊಳ್ಳದೆ, ತನ್ನ ವಂಶೋನ್ನತಿಯನ್ನೂ ಗಮನಿಸದೆ ಕೇವಲ ತನ್ನ ದೌರಾತ್ಮ್ಯದಿಂದ ನನ್ನನ್ನು ಈ ರಾಕ್ಷಸಿಯರ ಮೂಲಕ ವಶಪಡಿಸಿಕೊಳ್ಳಲಪೇಕ್ಷಿಸುತ್ತಿರುವನಲ್ಲ! ಎಲೌ ರಾಕ್ಷಸಿಯರೇ! ಇದೋ, ನೀವು ನನ್ನನ್ನು ಶೂಲಾಯುಧಾದಿಗಳಿಂದ ಕತ್ತರಿಸಿದರೂ, ಕತ್ತಿಯೇ ಮೊದಲಾದುವುಗಳಿಂದ ಚೂರುಚೂರುಗಳಾಗಿ ತುಂಡರಿಸಿದರೂ, ಕುಠಾರದಿಂದ ಮರ್ದಿಸಿದರೂ, ಕಡೆಗೆ ಬೆಂಕಿಯಲ್ಲಿ ಬೇಯಿಸಿಬಿಟ್ಟರೂ ನಾನು ಬೇರೆ ನಿಮ್ಮ ದೊರೆಯಾದ ರಾವಣನನ್ನು ಸೇರಲಾರೆನು. ಹೀಗಿರುವಲ್ಲಿ ಏತಕ್ಕೆ ಸುಮ್ಮನೆ ಪ್ರಲಪಿಸುತ್ತೀರಿ. ‖ ೭–೧೦ ‖ ನನ್ನ ಪತಿದೇವನಾದ ಶ್ರೀರಾಮನು ಸಾಮಾನ್ಯನೆಂದು ತಿಳಿದಿರಾ! ಆತನು ಪ್ರಾಜ್ಞನು. ವಿಶಾಲವಾದ ಕೀರ್ತಿಯುಳ್ಳವನು; ಇತರರು ಮಾಡಿದ ಉಪಕಾರವನ್ನು ಸ್ಮರಿಸುವಾತನು; ದಯಾವಂತನು; ಸದ್ವೃತ್ತಿಯುಳ್ಳವನು. ಅಕಟ! ಅಂತಹ ಶ್ರೀರಾಮನೂ ಸಹ ನನ್ನ

$ "ವಿಗರ್ಹಿತಂ" ತಿ. ಪಾ.

ಪ್ರಾಜ್ಞಃ ಕೃತಜ್ಞಶ್ಚ ಸಾನುಕ್ರೋಶಶ್ಚ ರಾಘವಃ । ಸದ್ವೃತ್ತೋ ನಿರನುಕ್ರೋಶ ಶ್ಶಂಕೇ ಮದ್ಭಾಗ್ಯ ಸಂಕ್ಷಯಾತ್ ॥ ೧೩ ॥ ರಾಕ್ಷಸಾನಾಂ ಸಹಸ್ರಾಣಿ ಜನಸ್ಥಾನೇ ಚತುರ್ದಶ । ಯೇನೈಕೇನ ನಿರಸ್ತಾನಿ ಸಮಾಂ ಕಿಂ ನಾಭಿಪದ್ಯತೇ ॥ ೧೪ ॥ ನಿರುದ್ಧಾ ರಾವಣೇನಾಹಮಲ್ಪವೀರ್ಯೇಣ ರಕ್ಷಸಾ । ಸಮರ್ಥಃಖಲು ಮೇ ಭರ್ತಾ ರಾವಣಂ ಹಂತುಮಾಹವೇ ॥ ೧೫ ॥ ವಿರಾಧೋ ದಂಡಕಾರಣ್ಯೇ ಯೇನ ರಾಕ್ಷಸಪುಂಗವಃ । ರಣೇ ರಾಮೇಣ ನಿಹತಸ್ಸಮಾಂ ಕಿಂ ನಾಭಿಪದ್ಯತೇ ॥ ೧೬ ॥ ¶ ಕಾಮಂ ಮಧ್ಯೇ ಸಮುದ್ರಸ್ಯ ಲಂಕೇಯಂ ದುಷ್ಪ್ರಧರ್ಷಣಾ । ನತು ರಾಘವಬಾಣಾನಾಂ ಗತಿ § ರೋ

ಪ್ರಸಿದ್ಧನಾದ, ಪ್ರಾಜ್ಞಃ -ಪಂಡಿತನಾದ, ಕೃತಜ್ಞಶ್ಚ - ಉಪಕಾರಗಳನ್ನು ಎಣಿಸುವನಾದ, ಸದ್ವೃತ್ತಃ- ಸಚ್ಚರಿತ್ರೆಯುಳ್ಳ, ಸಾನುಕ್ರೋಶಶ್ಚ - ದಯಾವಂತನಾದ, ರಾಘವಃ - ಶ್ರೀರಾಮನು, ಮದ್ಭಾ....ತ್ - ನನ್ನ ಪುಣ್ಯದ, ನಾಶದಿಂದ, ನಿರನುಕ್ರೋಶಇತಿ - ದಯಾಹೀನನಾದನೆಂದು, ಶಂಕೇ - ಊಹಿಸುತ್ತೇನೆ. ॥ ೧೩ ॥ ಜನಸ್ಥಾನೇ - ರಾವಣನಗಡಿನಾಡಿನಲ್ಲಿ, ರಾಕ್ಷಸಾನಾಂ - ರಕ್ಕಸರ, ಚತು....ಣಿ - ಹದಿನಾಲ್ಕುಸಾವಿರಗಳು, ಏಕೇನ-ಒಬ್ಬಂಟಿಗನಾಗಿ, ಯೇನ - ಯಾವ ರಾಮನಿಂದ, ನಿರಸ್ತಾನಿ-ಧ್ವಂಸಿಸಲ್ಪಟ್ಟವೋ, ಸಃ - ಆ ರಾಮನು, ಮಾಂ - ನನ್ನನ್ನು ಕುರಿತು, ಕಿಂನಾಭಿಪದ್ಯತೇ - ಏತಕ್ಕೆ ಬರಲಿಲ್ಲವೋ. ॥ ೧೪ ॥ ಅಹಂ - ನಾನು, ಅಲ್ಪವೀರ್ಯೇಣ - ಸ್ವಲ್ಪ ಪರಾಕ್ರಮಿಯಾದ, ರಕ್ಷಸಾ - ರಕ್ಕಸನಾದ, ರಾವಣೇನ - ರಾವಣನಿಂದ, ನಿರುದ್ಧಾ - ಸೆರೆಹಾಕಲ್ಪಟ್ಟೆನು, ಮೇಭರ್ತಾ - ನನ್ನ ಗಂಡನು, ಆಹವೇ- ಯುದ್ಧದಲ್ಲಿ, ರಾವಣಂ - ರಾವಣನನ್ನು, ಹಂತುಂ - ಕೊಲ್ಲುವುದಕ್ಕೆ, ಸಮರ್ಥಃಖಲು - ಶಕ್ತನಷ್ಟೆ. ॥ ೧೫ ॥ ಯೇನರಾಮೇಣ - ಯಾವ ಶ್ರೀರಾಮನಿಂದ, ದಂಡಕಾರಣ್ಯೇ - ದಂಡಕಾರಣ್ಯದಲ್ಲಿ, ರಾಕ್ಷಸಪುಂಗವಃ - ರಾಕ್ಷಸಶ್ರೇಷ್ಠನಾದ, ವಿರಾಧಃ - ವಿರಾಧನು, ರಣೇ - ಕಾಳೆಗದಲ್ಲಿ, ನಿಹತಃ - ಹೊಡೆಯಲ್ಪಟ್ಟನೋ, ಸಃ - ಆ ರಾಮನು, ಮಾಂ - ನನ್ನನ್ನು, ಕಿಂನಾಭಿಪದ್ಯತೇ - ಏತಕ್ಕೆ ಹೊಂದಲಿಲ್ಲವೋ. ॥ ೧೬ ॥ ಸಮುದ್ರಸ್ಯಮಧ್ಯೇ - ಕಡಲಿನನಡುವೆ, ಇಯಂಲಂಕಾ - ಈ ಲಂಕೆಯು, ಕಾಮಂ - ಬಹಳವಾಗಿ, ದುಷ್ಪ್ರಧರ್ಷಣಾ - ತಿರಸ್ಕರಿಸಲಶಕ್ಯವು, ಕಿಂತು - ಆದರೆ, ಇಹ - ಈ ಲಂಕೆಯಲ್ಲಿ, ರಾಘ.... ನಾಂ - ರಾಮಬಾಣಗಳಿಗೆ, ಗತಿರೋಧೀ - ಗಮನವನ್ನು ತಡೆಪಡಿಸುವನು, ನವಿದ್ಯತೇ - ಇರುವುದಿಲ್ಲ.

ದೌರ್ಭಾಗ್ಯದಿಂದ ನನ್ನ ವಿಷಯದಲ್ಲಿ ನಿರ್ದಯನಾಗಿರುವನಲ್ಲವೆ! ಇದರಲ್ಲಿ ಎಷ್ಟುಮಾತ್ರವೂ ಸಂಶಯವಿಲ್ಲವು. ಜನಸ್ಥಾನದಲ್ಲಿ ಒಬ್ಬನೇ ಹದಿನಾಲ್ಕುಸಾವಿರ ಮಂದಿ ರಾಕ್ಷಸರನ್ನು ಸಂಹರಿಸಿದ ಶ್ರೀರಾಮನು ಈಗ ನನ್ನನ್ನು ಕಾಪಾಡದಿರುವನೇಕೆ! ಅಲ್ಲದೆ ಅತ್ಯಲ್ಪ ಪರಾಕ್ರಮವುಳ್ಳ ರಾವಣಾಸುರನು ನನ್ನನ್ನು ನಿರ್ಬಂಧದಲ್ಲಿರಿಸಿರುವನು. ಮಹಾ ಪರಾಕ್ರಮಿಯಾದ ನನ್ನ ಪತಿದೇವನು ಯುದ್ಧದಲ್ಲಿ ಇವನನ್ನು ಸಂಹರಿಸಲು ಶಕ್ತನೇ ಅಲ್ಲವೆ! ॥ ೧೧–೧೫ ॥ ಆತನು ಸಮರ್ಥನೆಂಬುದರಲ್ಲಿ ಸಂಶಯವೇನು? ದಂಡಕಾರಣ್ಯದಲ್ಲಿ ವಿರಾಧನೆಂಬ ಕ್ರೂರ ರಾಕ್ಷಸನನ್ನು ಯುದ್ಧದಲ್ಲಿ ನಿಗ್ರಹಿಸಿದ ನನ್ನ ಪ್ರಭುವು ನನ್ನನ್ನೇಕೆ ಕಾಪಾಡದಿರುವನು? ಸಮುದ್ರಮಧ್ಯದಲ್ಲಿರುವ ಈ ಲಂಕಾನಗರವು ಯಾರಿಗೂ ದುಷ್ಪ್ರವೇಶ್ಯವಾಗಿರುವುದು! ಆದರೂ ಶ್ರೀರಾಮನ ಬಾಣಗಳು ಪ್ರವೇಶಿಸದಿರುವ ಪ್ರದೇಶವು ಈ ಲೋಕದಲ್ಲೆಲ್ಲಿಯೂ

---

§ "ರೋಧೋಭವಿಷ್ಯತಿ" ತಿ. ಪಾ.

ಧೀಹ ವಿದ್ಯತೇ ॥ ೧೭ ॥ ಕಿಂತು ತತ್ಕಾರಣಂ ಯೇನ ರಾಮೋ ದೃಢಪರಾಕ್ರಮಃ । ರಕ್ಷಸಾಪಹೃತಾಂ ಭಾರ್ಯಾಮಿಷ್ಟಾಂ ನಾಭ್ಯವಪದ್ಯತೇ ॥ ೧೮ ॥ ಇಹಸ್ಥಾಂ ಮಾಂ ನಜಾನೀತೇ ಶಂಕೇ ಲಕ್ಷ್ಮಣಪೂರ್ವಜಃ । ಜಾನನ್ನಪಿ ‡ ಹಿ ತೇಜಸ್ವೀ ಧರ್ಷಣಂ ಮರ್ಷಯಿಷ್ಯತಿ ॥ ೧೯ ॥ ಹೃತೇತಿ ಯೋಽಧಿಗತ್ವಾ ಮಾಂ ರಾಘವಾಯ ನಿವೇದ ಯೇತ್ । ಗೃಧ್ರರಾಜೋಪಿ ಚ ರಣೇ ರಾವಣೇನ ನಿಪಾತಿತಃ ॥ ೨೦ ॥ ಕೃತಂ ಕರ್ಮ ಮಹತ್ತೇನ ಮಾಂ ತಥಾಽಭ್ಯವಪದ್ಯತಾ । ತಿಷ್ಠತಾ ರಾವಣದ್ವಂದ್ವೇ ವೃದ್ಧೇನಾಪಿ ಜಟಾಯುಷಾ ॥೨೧॥ ಯದಿ ಮಾಮಿಹ ಜಾನೀಯಾದ್ವರ್ತಮಾನಾಂ ಸ ರಾಘವಃ ।

॥ ೧೭ ॥ ದೃಢಪರಾಕ್ರಮಃ - ನಿಶ್ಚಿತಪರಾಕ್ರಮವುಳ್ಳ, ರಾಮಃ - ರಾಮನು, ರಕ್ಷಸಾ - ರಕ್ಕಸನಿಂದ, ಅಪಹೃತಾಂ - ಅಪಹರಿಸಲ್ಪಟ್ಟ, ಇಷ್ಟಾಂ - ಪ್ರೀತಿಪಾತ್ರಳಾದ, ಭಾರ್ಯಾಂ - ಹೆಂಡತಿಯನ್ನು, ಯೇನ - ಯಾವಕಾರಣದಿಂದ, ನಾಭ್ಯವಪದ್ಯತೇ - ಹೊಂದಲ್ಪಡಲಿಲ್ಲವೋ, ತತ್ಕಾರಣಂ-ಆ ಕಾರಣವು, ಕಿನ್ನು - ಯಾವುದಿರಬಹುದು. ॥ ೧೮ ॥ ಲಕ್ಷ್ಮ....ಜಃ - ಲಕ್ಷ್ಮಣಾಗ್ರಜನಾದ ರಾಮನು, ಇಹಸ್ಥಾಂ- ಇಲ್ಲಿರುವ, ಮಾಂ - ನನ್ನನ್ನು, ನಜಾನೀತೇ - ಅರಿಯನು, ಇತಿಶಂಕೇ - ಎಂದು ಊಹಿಸುತ್ತೇನೆ, ಹಿ - ಯಾವಕಾರಣದಿಂದ, ತೇಜಸ್ವೀ - ಪರಾಕ್ರಮಿಯಾದ ರಾಮನು, ಜಾನನ್ನಪಿ - ತಿಳಿದವನಾದರೂ, ಧರ್ಷಣಂ - ಅವಮಾನವನ್ನು, ಮರ್ಷಯಿಷ್ಯತಿ - ಸೈರಿಸುವನೋ. ॥ ೧೯ ॥ ಯಃ - ಯಾವ ಜಟಾ ಯುವು, ಮಾಂ - ನನ್ನನ್ನು, ಅಧಿಗತ್ವಾ - ತಿಳದು, ಹೃತೇತಿ - ಅಪಹರಿಸಲ್ಪಟ್ಟಳೆಂದು, ರಾಘವಾಯ, ಶ್ರೀರಾಮನಿಗೆ, ನಿವೇದಯೇತ್ - ತಿಳುಹುತ್ತಿದ್ದನೋ, ಸಗೃಧ್ರರಾಜೋಪಿ - ಆ ಗೃಧ್ರಾಧಿಪನಾದ ಜಟಾಯುವೂ, ರಣೇ - ಯುದ್ಧದಲ್ಲಿ, ರಾವಣೇನ - ರಾವಣನಿಂದ, ನಿಪಾತಿತಃ - ಬೀಳಿಸಲ್ಪಟ್ಟನು. ॥ ೨೦ ॥ ಮಾಂ - ನನ್ನನ್ನು, ತಥಾಭ್ಯವಪದ್ಯತಾ - ಹಾಗೆ ರಕ್ಷಿಸಬೇಕೆಂದು ಬಂದ, ರಾವಣದ್ವಂದ್ವೇ- ರಾವಣನ ಯುದ್ಧದಲ್ಲಿ, ತಿಷ್ಠತಾ - ನಿಂತ, ವೃದ್ಧೇನ - ಮುದುಕನಾದ, ತೇನಜಟಾಯುಷಾಪಿ - ಆ ಜಟಾಯುವಿನಿಂದಲೂ, ಮಹತ್ಕರ್ಮ - ಮಹಾಕಾರ್ಯವು, ಕೃತಂ - ಮಾಡಲ್ಪಟ್ಟಿತು. ॥ ೨೧ ॥ ಸರಾಘವಃ - ಆ ರಾಮನು, ಇಹವರ್ತಮಾನಾಂ - ಇಲ್ಲಿರುವ, ಮಾಂ - ನನ್ನನ್ನು, ಜಾನೀಯಾದ್ಯದಿ -

---

ಇರುವುದಿಲ್ಲವು. ದೃಢವಾದ ಪರಾಕ್ರಮವುಳ್ಳ ಶ್ರೀರಾಮನು ಹೀಗಿದ್ದರೂ ಭಾರ್ಯೆಯಾದ ನನ್ನನ್ನು ರಾವಣಾಸುರನಪಹರಿಸಿರಲು ರಕ್ಷಿಸದೆ ಸುಮ್ಮನಿರುವನೇಕೆ? ಇದಕ್ಕೆ ಕಾರಣ ವೇನೋ ತಿಳಿಯದಾಗಿರುವುದು. ನಾನು ಇಲ್ಲಿ ಈ ರಾವಣ ಗೃಹದಲ್ಲಿರುವುದು ಆತನಿಗೆ ತಿಳಿ ದಿಲ್ಲವೆಂದು ತೋರುತ್ತದೆ. ಮಹಾ ಪರಾಕ್ರಮಿಯಾದ ಶ್ರೀರಾಮನು ಹಾಗೆ ತಿಳಿದಿದ್ದರೆ ಆತನು ಈ ಪರಿಭವವನ್ನು ಎಷ್ಟುಮಾತ್ರಕ್ಕೂ ಸೈರಿಸನು. ನನ್ನನ್ನು ರಾವಣನು ಕದ್ದೊಯ್ಯು ತ್ತಿರುವುದನ್ನು ನೋಡುತ್ತಿದ್ದ ಜಟಾಯುವಾದರೂ ಶ್ರೀರಾಮನಿಗೆ ತಿಳಿಸಬಹುದಾಗಿದ್ದಿತು. ಆದರೆ ಆತನೂ ನನ್ನನ್ನು ಬಿಡಿಸಿಕೊಳ್ಳುವುದಕ್ಕೋಸುಗ ರಾವಣನೊಡನೆ ಯುದ್ಧಮಾಡಿ ರಾವಣನಿಂದ ಸಂಹೃತನಾದನು. ॥ ೧೭–೨೦ ॥ ಅಯ್ಯೋ! ಜಟಾಯು ಬಹಳ ಮುದುಕ ನಾದರೂ ನನ್ನನ್ನು ರಕ್ಷಿಸುವುದಕ್ಕೋಸ್ಕರ ರಾವಣಾಸುರನೊಡನೆ ದ್ವಂದ್ವಯುದ್ಧಕ್ಕೆ ನಿಂತು ಬಹಳ ದೊಡ್ಡ ಕೆಲಸವನ್ನು ಮಾಡಿದನಲ್ಲವೆ! ನಾನು ಈ ಲಂಕಾನಗರದಲ್ಲಿ ರಾಕ್ಷಸರ ಕೈಗೆ ಸಿಕ್ಕಿ

---

‡ "ಸ" ತಿ. ಪಾ.

ಅದ್ಯ ಬಾಣೈರಭಿಕ್ರುದ್ಧಃ ಕುರ್ಯಾಲ್ಲೋಕಮರಾಕ್ಷಸಂ ॥ ೨೨ ॥ * ವಿಧಮೇಚ್ಚ ಪುರೀಂ ಲಂಕಾಂ ಶೋಷಯೇಚ್ಚ ಮಹೋದಧಿಂ । ರಾವಣಸ್ಯ ಚ ನೀಚಸ್ಯ ಕೀರ್ತಿಂ ನಾಮಚ ನಾಶಯೇತ್ ॥೨೩॥ ತತೋ ನಿಹತನಾಥಾನಾಂ ರಾಕ್ಷಸೀನಾಂ ಗೃಹೇಗೃಹೇ । ಯಥಾಽಹಮೇವಂ ರುದತೀ ತಥಾ ಭೂಯೋ ನಸಂಶಯಃ ॥ ೨೪ ॥ ಅನ್ವಿಷ್ಯ ರಕ್ಷಸಾಂ ಲಂಕಾಂ ಕುರ್ಯಾದ್ರಾಮಸ್ಸಲಕ್ಷ್ಮಣಃ । ನಹಿ ತಾಭ್ಯಾಂ ರಿಪುರ್ದೃಷ್ಟೋ ಮುಹೂರ್ತ

ತಿಳಿದವನಾದರೆ, ಅಭಿಕೃದ್ಧಃ - ಕೋಪಿಷ್ಠನಾಗಿ, ಅದ್ಯ - ಈಗಲೇ, ಬಾಣೈಃ - ಅಂಬುಗಳಿಂದ, ಲೋಕಂ-ಜಗತ್ತನ್ನು, ಅರಾಕ್ಷಸಂ-ರಕ್ಕಸರಿಲ್ಲದುದನ್ನಾಗಿ, ಕುರ್ಯಾತ್-ಮಾಡುವನು, ಲಂಕಾಂಪುರೀಂ-ಲಂಕಾಪಟ್ಟಣವನ್ನು, ವಿಧಮೇಚ್ಚ - ಧ್ವಂಸಿಸುವನು, ಮಹೋದಧಿಂಚ - ಕಡಲನ್ನು, ಶೋಷಯೇತ್-ಬತ್ತಿಸುವನು, ನೀಚಸ್ಯ - ದುಷ್ಟನಾದ, ರಾವಣಸ್ಯ - ರಾವಣನ, ಕೀರ್ತಿಂಚ-ಯಶಸ್ಸನ್ನೂ, ನಾಮಚ - ಹೆಸರನ್ನೂ ಕೂಡ, ನಾಶಯೇತ್ - ಹೋಗಲಾಡಿಸುವನು. ॥ ೨೩ ॥ ತತಃ - ಬಳಿಕ, ನಿಹ....ನಾ-ಮಡಿದಪತಿಗಳುಳ್ಳ, ರಾಕ್ಷಸೀನಾಂ - ರಕ್ಕಸಿಯರ, ಗೃಹೇಗೃಹೇ - ಮನೆಮನೆಯಲ್ಲಿಯೂ, ಅಹಂ - ನಾನು, ಯಥಾ - ಹೇಗೆ, ಏವಂರುದತೀ - ಈಪರಿಯಾಗಿ, ಅಳುತ್ತಿದ್ದೇನೆಯೋ, ತಥಾ - ಹಾಗೆಯೇ, ಭೂಯಃ - ಬಹುತರವಾಗಿ, (ಭವಿಷ್ಯತಿ - ಆಗುವದು,) ನಸಂಶಯಃ - ಸಂದೇಹವಿಲ್ಲವು. ॥ ೨೪ ॥ ಸಲಕ್ಷ್ಮಣಃ - ಲಕ್ಷ್ಮಣಸಹಿತನಾದ, ರಾಮಃ - ಶ್ರೀರಾಮನು, ಲಂಕಾಂ - ಲಂಕೆಯನ್ನು, ಅನ್ವಿಷ್ಯ - ಹುಡುಕಿ, ರಕ್ಷಸಾಂ - ದೈತ್ಯರ, ನಾಶಂ - ಸಂಹಾರವನ್ನು, ಕುರ್ಯಾತ್ - ಮಾಡುವನು, ತಾಭ್ಯಾಂ - ಆ ರಾಮಲಕ್ಷ್ಮಣರಿಂದ, ದೃಷ್ಟಃ - ಕಾಣಲ್ಪಟ್ಟ, ರಿಪುಃ - ಶತ್ರುವು, ಮುಹೂರ್ತಮಪಿ - ಸ್ವಲ್ಪ ಹೊತ್ತಾದರೂ, ನಹಿಜೀವತಿ - ಬದುಕುವದೇ ಇಲ್ಲವು. ॥ ೨೫ ॥ ಇಯಂಲಂಕಾ - ಈ ಲಂಕೆಯು,

ರುವೆನೆಂದು ಶ್ರೀರಾಮನರಿತಿದ್ದರೆ ಈ ಕ್ಷಣದಲ್ಲಿಯೇ ಮಹಾ ಕೋಪೋದ್ದೀಪಿತನಾಗಿ ಲೋಕದಲ್ಲಿರುವ ಸಮಸ್ತ ರಾಕ್ಷಸರನ್ನೂ ತನ್ನ ಬಾಣಗಳಿಂದ ನಾಶಮಾಡಿ, ಲೋಕದಲ್ಲಿ ರಾಕ್ಷಸರ ಹೆಸರೇ ಇಲ್ಲದಂದೆ ತೊಡೆದುಬಿಡುತ್ತಿದ್ದನು. ನಾನಿಲ್ಲಿರುವುದು ಆತನಿಗೆ ತಿಳಿದಿದ್ದರೆ ಆತನು ಈ ಸಮುದ್ರವನ್ನು ಬತ್ತಿಸಿ, ಈ ಲಂಕಾನಗರವನ್ನೇ ನಿರ್ಮೂಲ ಮಾಡಿಬಿಡುತ್ತಿದ್ದನೆಂಬುದರಲ್ಲಿ ಸಂದೇಹವೇ ಇಲ್ಲವು ; ಇಷ್ಟುಮಾತ್ರವೇ ಅಲ್ಲದೆ ನನ್ನ ಪ್ರಭುವಾದ ರಘುರಾಮನು ನೀಚನಾದ ಈ ರಾವಣಾಸುರನನ್ನೂ, ಅವನ ಕೀರ್ತಿಯನ್ನೂ ನಿರ್ನಾಮಮಾಡಿಬಿಡುತ್ತಿದ್ದನು. ಈಗ ನಾನು ಹೇಗೆ ದುಃಖಿಸುತ್ತಿರುವೆನೋ ಹಾಗೆಯೇ ಈ ಲಂಕಾನಗರದಲ್ಲಿರುವ ಸಮಸ್ತ ರಾಕ್ಷಸಸ್ತ್ರೀಯರೂ ಮನೆಮನೆಯಲ್ಲಿಯೂ ತಮ್ಮತಮ್ಮ ಗಂಡಂದಿರು ಮೃತಿಪಟ್ಟುದಕ್ಕಾಗಿ ಅತಿಯಾಗಿ ದುಃಖಿಸಿ, ನನಗಿಂತಲೂ ಹೆಚ್ಚಾಗಿ ಅಳುವುದನ್ನು ಕೇಳುತ್ತಿದ್ದೆನು. ಇದರಲ್ಲಿ ಸಂಶಯವಿಲ್ಲವು. ಮುಖ್ಯವಾಗಿ ಶ್ರೀರಾಮಲಕ್ಷ್ಮಣರು ಈ ಲಂಕಾನಗರವನ್ನು ಪ್ರವೇಶಿಸಿದರೆಂದರೆ ಅವರು ಈ ನಗರದ ಮೂಲೆಮೂಲೆಯನ್ನೂ ಹುಡುಕಿ ಹುಡುಕಿ ಅಲ್ಲಲ್ಲಿರುವ ರಾಕ್ಷಸರನ್ನು ಅಲ್ಲಲ್ಲಿಯೇ ಕೊಂದುಬಿಡುವರು. ಅವರಿಬ್ಬರ ಕಣ್ಣಿಗೆ ಬಿದ್ದ ಯಾವ ಶತ್ರುವೂ ಮುಹೂರ್ತಕಾಲವಾದರೂ ಜೀವಿಸಿರುವುದು ಅಸಂಭವವು.॥೨೧–೨೫॥

* " ನಿರ್ದಹೇಚ್ಚ " ತಿ. ರಾ. ಪಾ.

ಮಪಿ ಜೀವತಿ ॥ ೨೫ ॥ ಚಿತಾ ಧೂಮಾಕುಲ ಪಥಾ ಗೃಧ್ರಮಂಡಲಸಂಕುಲಾ । ಅಚಿರೇಣ ತು ಲಂಕೇಯಂ ಶ್ಮಶಾನಸದೃಶೀ ಭವೇತ್ ॥ ೨೬ ॥ ಅಚಿರೇಣೈವ ಕಾಲೇನ ಪ್ರಾಪ್ಸ್ಯಾಮ್ಯೇವ ಮನೋರಥಂ । ದುಷ್ಪ್ರಸ್ಥಾನೋಽಯಮ್ ¶ ಮಾಖ್ಯಾತಿ ಸರ್ವೇಷಾಂ ವೋ ವಿಪರ್ಯಯಂ ॥೨೭॥ ಯಾದೃಶಾನೀಹ ದೃಶ್ಯಂತೇ ಲಂಕಾಯಾಮಶುಭಾನಿವೈ । ಅಚಿರೇಣ ತು ಕಾಲೇನ ಭವಿಷ್ಯತಿ ಹತಪ್ರಭಾ ॥ ೨೮ ॥ ನೂನಂ ಲಂಕಾ ಹತೇ ಪಾಪೇ ರಾವಣೇ ರಾಕ್ಷಸಾಧಮೇ । ಶೋಷಂ ಯಾಸ್ಯತಿ ದುರ್ಧರ್ಷಾ ಪ್ರಮದಾ ವಿಧವಾ ಯಥಾ ॥ ೨೯ ॥ ಪುಣ್ಯೋತ್ಸವಸಮುತ್ಥಾ ಚ ನಷ್ಟಭರ್ತ್ರೀ ಸರಾಕ್ಷಸೀ । ಭವಿಷ್ಯತಿ

ಚಿತಾ....ಥಾ - ಚಿತಿಗಳ, ಹೊಗೆಯಿಂದ ವ್ಯಾಪ್ತವಾದ ಮಾರ್ಗವುಳ್ಳದಾಗಿ, ಗೃಧ್ರ....ಲಾ - ಹದ್ದುಗಳ ತಂಡದಿಂದ, ಸಂಮಿಳಿತವಾಗಿ, ಅಚಿರೇಣತು - ಜಾಗ್ರತೆಯಾಗಿಯೇ, ಶ್ಮಶಾ....ಶೀ-ಮಸಣಕ್ಕೆ ಸಮಾನ ವಾದದ್ದು, ಭವೇತ್ - ಆಗುವುದು ॥ ೨೬ ॥ ಅಚಿರೇಣೈವಕಾಲೇನ - ಸ್ವಲ್ಪಕಾಲದಲ್ಲಿಯೇ, ಮನೋರಥಂ - ಇಷ್ಟಾರ್ಥವನ್ನು, ಪ್ರಾಪ್ಸ್ಯಾಮೇವ - ಹೊಂದಲೇಹೊಂದುತ್ತೇನೆ, ಅಯಂದುಷ್ಪ್ರಸ್ಥಾನಃ - ಈ ದುರ್ಮಾರ್ಗತನವೇ, ಸರ್ವೇಷಾಂವಃ - ನಿಮಗೆಲ್ಲರಿಗೂ, ವಿಪರ್ಯಯಂ - ನಾಶವನ್ನು, ಆಖ್ಯಾತಿ - ಹೇಳುತ್ತದೆ. ॥ ೨೭ ॥ ಇಹಲಂಕಾಯಾಂ - ಈ ಲಂಕೆಯಲ್ಲಿ, ಯಾದೃಶಾನಿ - ಎಂತಹ ವುಗಳಾದ, ಅಶುಭಾನಿ - ಅಮಂಗಳಗಳು, ದೃಶ್ಯಂತೇ - ಕಾಣಲ್ಪಡುತ್ತವೋ, (ತೈಃ - ಆ ಅಶುಭ, ಗಳಿಂದಲೇ,) ಅಚಿರೇಣತುಕಾಲೇನ - ಶೀಘ್ರಕಾಲದಲ್ಲಿಯೇ, ಹತಪ್ರಭಾ - ನಷ್ಟಕಾಂತಿಯುಳ್ಳದ್ದು ಭವಿಷ್ಯತಿ - ಆಗಿಹೋಗುವುದು. ॥ ೨೮ ॥ ಪಾಪೇ - ಪಾಪಿಯಾದ, ರಾವಣೇ - ರಾವಣನೆಂಬ, ರಾಕ್ಷಸಾಧಮೇ - ನೀಚರಕ್ಕಸನು, ಹತೇ - ಮಡಿಯಲು, ದುರ್ಧರ್ಷಾ - ತಿರಸ್ಕರಿಸಲಶಕ್ಯವಾದ, ಲಂಕಾ - ಲಂಕೆಯು, ವಿಧವಾ - ಗಂಡನಿಲ್ಲದ, ಪ್ರಮದಾಯಥಾ - ಸ್ತ್ರೀಯಂತೆ, ಶೋಷಂ - ಕ್ಷಯ ವನ್ನು, ಯಾಸ್ಯತಿ - ಹೊಂದುವಳು, ನೂನಂ - ನಿಶ್ಚಯವು. ॥ ೨೯ ॥ ಪುಣ್ಯೋ....ಚ - ಪುಣ್ಯಕರಂಗಳಾದ ಉತ್ಸವಗಳಿಂದ ಬಿಡಲ್ಪಟ್ಟ, ನಷ್ಟಭರ್ತ್ರೀ - ನಿಹತಪತಿಯುಳ್ಳ, ಸರಾಕ್ಷಸೀ - ರಕ್ಕಸಿಯರೊಡಗೂಡಿದ, ಲಂಕಾಪುರೀ - ಲಂಕಾಪಟ್ಟಣವು, ನಷ್ಟಭರ್ತ್ರೀ - ಪತಿಹೀನಳಾದ, ಅಂಗನಾಯಥಾ -

---

ಇನ್ನು ಸ್ವಲ್ಪಕಾಲದಲ್ಲಿಯೇ ಈ ಲಂಕಾಪಟ್ಟಣದ ಬಾಗಿಲುಗಳೆಲ್ಲವೂ ಹೆಣಗಳ ಹೊಗೆಯಿಂದ ತುಂಬಿಹೋಗುವುದು. ಅಲ್ಲದೆ ಈ ಲಂಕೆಯು ಎಲ್ಲಿನೋಡಿದರೂ ರಣಹದ್ದುಗಳ ಕೋಲಾಹಲಧ್ವನಿಯಿಂದ ತುಂಬಿ ಸ್ಮಶಾನಕ್ಕೆ ಸಮವಾದುದಾಗುತ್ತದೆಯೆಂಬುದರಲ್ಲಿ ಸಂಶಯವಿಲ್ಲವು. ನಾನಿದನ್ನು ಬಹು ಸ್ವಲ್ಪಕಾಲದಲ್ಲಿಯೇ ನೋಡುವೆನು. ಆಗ ನನ್ನ ಮನೋರಥವು ಸಫಲವಾಗುವುದು. ಎಲೆ ರಾಕ್ಷಸಿಯರೇ! ನಿಮ್ಮ ಈ ದೌಷ್ಟ್ಯವೇ ಈ ಲಂಕಾನಗರದ ನಾಶವನ್ನು ಸೂಚಿಸುತ್ತಿರುವುದು. ಈ ಲಂಕಾನಗರಕ್ಕೆ ಕೇಡು ಸಂಭವಿಸುವುದಕ್ಕೆ ಅನೇಕ ಅಪಶಕುನಗಳೂ ತಲೆದೋರುತ್ತಿವೆ. ಇದು ಸ್ವಲ್ಪಕಾಲದಲ್ಲಿಯೇ ಕಾಂತಿಹೀನವಾಗುವುದು. ಮಹಾಪಾಪಿಷ್ಠನಾದ, ರಾಕ್ಷಸಾಧಮನಾದ ರಾವಣನು ಹತನಾದೊಡನೆಯೇ, ಮಹಾ ದುರಾಸದವಾದ ಈ ಲಂಕೆಯು ಗಂಡ ಸತ್ತ ವಿಧವೆಯಂತೆ ಕಾಂತಿಹೀನವಾಗುವುದು; ಇದು ನಿಶ್ಚಯವು. ಹಾಗೆ ಮಡಿದ ಧೊರೆಯುಳ್ಳದೂ ವಿಧವಾಸ್ತ್ರೀಯರೊಡಗೂಡಿರುವುದೂ ಆದ

¶ "ಆಭಾತಿ" ತಿ. ಪಾ.

ಪುರೀ ಲಂಕಾ ನಷ್ಟಭರ್ತ್ರೀ ಯಥಾಂಗನಾ ॥ ೩೦ ॥ ನೂನಂ ರಾಕ್ಷಸಕನ್ಯಾನಾಂ ರುದಂತೀನಾಂ ಗೃಹೇಗೃಹೇ । ಶ್ರೋಷ್ಯಾಮಿ ನಚಿರಾದೇವ ದುಃಖಾರ್ತಾನಾ ಮಿಹ ಧ್ವನಿಂ ॥ ೩೦ ॥ ಸಾಂಧಕಾರಾಹತದ್ಯೋತಾ ಹತರಾಕ್ಷಸಪುಂಗವಾ । ಭವಿಷ್ಯತಿ ಪುರೀ ಲಂಕಾ ನಿರ್ದಗ್ಧಾ ರಾಮಸಾಯಕೈಃ ॥೩೧॥ ಯದಿ ನಾಮ ಸಶೂರೋ ಮಾಂ ರಾಮೋ ರಕ್ತಾಂತಲೋಚನಃ । ಜಾನೀಯಾದ್ವರ್ತಮಾನಾಂ ಹಿ ರಾವಣಸ್ಯ ನಿವೇಶನೇ ॥೩೩॥ ಅನೇನತು ನೃಶಂಸೇನ ರಾವಣೇನಾಧಮೇನ ಮೇ । ಸಮಯೋ ಯಸ್ತು ನಿರ್ದಿಷ್ಟ ಸ್ತಸ್ಯ ಕಾಲೋಽಯ ಮಾಗತಃ ॥೩೪॥ ❀ ಅಕಾರ್ಯಂ ಯೇ ನಜಾನಂತಿ ನೈರ್ಋತಾಃ

ಸ್ತ್ರೀಯಂತೆ, ಭವಿಷ್ಯತಿ - ಆಗುವುದು. ॥ ೩೦ ॥ ಇಹ - ಈ ಪಟ್ಟಣದಲ್ಲಿ, ದುಃಖಾರ್ತಾನಾಂ - ದುಃಖಪೀಡಿತರಾದ, ಗೃಹೇಗೃಹೇ - ಮನೆಮನೆಯಲ್ಲಿಯೂ, ರುದಂತೀನಾಂ - ಅಳುತ್ತಿರುವ, ರಾಕ್ಷಸ ಕನ್ಯಾನಾಂ - ರಕ್ಕಸಕನ್ನೆಯರ, ಧ್ವನಿಂ - ರೋದನಧ್ವನಿಯನ್ನು, ನಚಿರಾದೇವ - ಶೀಘ್ರದಲ್ಲಿಯೇ, ಶ್ರೋಷ್ಯಾಮಿ - ಕೇಳುವೆನು, ನೂನಂ - ನಿಶ್ಚಯವು. ॥ ೩೧ ॥ ರಕ್ತಾಂತಲೋಚನಃ - ಕೆಂಪಾದ ಕಡೆಕಣ್ಣುಗಳುಳ್ಳ, ಶೂರಃ - ವೀರನಾದ, ಸರಾಮಃ - ಆ ಶ್ರೀರಾಮನು, ರಾವಣಸ್ಯ - ರಾವಣನ, ನಿವೇ ಶನೇ - ಮನೆಯಲ್ಲಿ, ವರ್ತಮಾನಾಂ - ಇರುವ, ಮಾಂನಾಮಹಿ - ನನ್ನನ್ನು ಮಾತ್ರ, ಜಾನೀಯ್ಯಾ ದ್ಯದಿ - ತಿಳಿದುದೇ ಆದರೆ, ರಾಮಸಾಯಕೈಃ - ರಾಮಬಾಣಗಳಿಂದ, ನಿರ್ದಗ್ಧಾ - ಸುಡಲ್ಪಟ್ಟ, ಲಂಕಾ ಪುರೀ - ಲಂಕಾಪಟ್ಟಣವು, ಸಾಂಧಕಾರಾ - ಕತ್ತಲಿಂದಕೂಡಿದುದಾಗಿ, ಹತದ್ಯೋತಾ - ನಷ್ಟಕಾಂತಿ ಯುಳ್ಳದಾಗಿ, ಹತರಾಕ್ಷಸಪುಂಗವಾ - ಮೃತರಾದ ರಕ್ಕಸವೀರರುಳ್ಳದು, ಭವಿಷ್ಯತಿ - ಆಗುವುದು. ॥ ೩೨-೩೩ ॥ ನೃಶಂಸೇನ - ಘಾತಕನಾದ, ಅಧಮೇನ - ನೀಚನಾದ, ಅನೇನರಾವಣೇನ - ಈ ರಾವಣ ನಿಂದ, ಮೇ - ನನಗೆ, ಯೋಸಮಯಸ್ತು-ಯಾವಸಮಯಬಂಧವಾದರೆ, ನಿರ್ದಿಷ್ಟಃ - ಗೊತ್ತುಮಾಡಲ್ಪ ಟ್ಟದ್ದಿತೋ, ತಸ್ಯ - ಅದಕ್ಕೆ, ಕಾಲಃ - ಸಮಯವು, ಆಗತಃ - ಬಂದಿತು. ॥ ೩೪ ॥ ಪಾಪಕಾರಿಣಃ-

ಈ ಲಂಕೆಯು ವಿಧವೆಯಂತೆ ಶುಭೋತ್ಸವಗಳಾವುವೂ ಇಲ್ಲದೆ ನಾಶಹೊಂದಿ ಕಳಾಹೀನವಾಗಿ ಹೋಗುವುದು. ॥ ೨೬–೩೦ ॥ ಅಲ್ಲದೆ ಇನ್ನು ಸ್ವಲ್ಪ ದಿನಗಳಲ್ಲಿಯೇ ಈ ಲಂಕೆಯಲ್ಲಿ ಮನೆ ಮನೆಯಲ್ಲಿಯೂ ಭರ್ತೃವಿಯೋಗ ವ್ಯಸನದಿಂದ ಧಾರೆಧಾರೆಯಾಗಿ ಕಣ್ಣೀರು ಬಿಡುತ್ತ ರೋದಿಸುತ್ತಿರುವ ರಾಕ್ಷಸಸ್ತ್ರೀಯರ ಆರ್ತಧ್ವನಿಗಳನ್ನು ನಾನು ಕೇಳಹೋಗುವೆನು. ಇದರಲ್ಲಿ ಸಂಶಯವೇ ಇಲ್ಲವು. ಮಹಾ ಶೌರ್ಯವಂತನೂ, ರಕ್ತಾಂತಲೋಚನನೂ ಆದ ಶ್ರೀರಾಮನು ನಾನು ಈ ರಾವಣನ ಮನೆಯಲ್ಲಿರುವುದು ತಿಳಿದರೆ ಆತನು ಈ ಲಂಕಾನಗರ ವನ್ನು ತನ್ನ ಬಾಣಪರಂಪರೆಯಿಂದ ಸುಟ್ಟು ಬೂದಿಮಾಡಿಬಿಡುವನು. ಆಗ ಈ ಪಟ್ಟಣವು ಹತರಾದ ರಾಕ್ಷಸಶ್ರೇಷ್ಠರುಳ್ಳುದಾಗಿಯೂ, ಅಂಧಕಾರದಲ್ಲಿ ಮುಳುಗಿದುದಾಗಿಯೂ ಆಗಿ ಕಾಂತಿಹೀನವಾಗಿ ಹೋಗುವುದು. ಆದರೆ ಈ ನನ್ನ ಕೋರಿಕೆಯು ಈಡೇರುವವರೆಗೂ ನಾನು ಮಾತ್ರ ಬದುಕಿರುವ ಹಾಗಿಲ್ಲ. ನೀಚನಾದ ಆ ಕ್ರೂರ ರಾವಣಾಸುರನು ನನಗೆ ವಿಧಿಸಿರುವ ಅವಧಿಯೂ ಕಳೆಯುತ್ತ ಬಂದಿರುವುದು. ಇನ್ನು ಅದರಲ್ಲಿ ಎರಡು ತಿಂಗಳುಗಳು

❀ "ಸಚಮೇ ವಿಹಿತೋ ಮೃತ್ಯುಃ ರಸ್ಮಿ ದುಷ್ಟೇ ನವರ್ತತೇ" ತಿ. ರಾ. ಪಾ.

ಪಾಪಕಾರಿಣಃ । ಅಧರ್ಮಾತ್ತು ಮಹೋತ್ಪಾತೋ ಭವಿಷ್ಯತಿ ಹಿ ಸಾಂಪ್ರತಂ ॥೩೫॥ ನೈತೇ ಧರ್ಮಂ ವಿಜಾನಂತಿ ರಾಕ್ಷಸಾಃ ಪಿಶಿತಾಶನಾಃ । ಧ್ರುವಂ ಮಾಂ ಪ್ರಾತರಾಶಾರ್ಥೇ ರಾಕ್ಷಸಃ ಕಲ್ಪಯಿಷ್ಯತಿ ॥ ೩೬ ॥ ಸಾಽಹಂ ಕಥಂ ಕರಿಷ್ಯಾಮಿ ತಂ ವಿನಾ ಪ್ರಿಯದರ್ಶನಂ । ರಾಮಂ ರಕ್ತಾಂತನಯನ ಮಪಶ್ಯಂತೀ ಸುದುಃಖಿತಾ ॥ ೩೭ ॥ $ ಯದಿ ಕಶ್ಚಿತ್ಪ್ರದಾತಾ ಮೇ ವಿಷಸ್ಯಾದ್ಯ ಭವೇದಿಹ । ಕ್ಷಿಪ್ರಂ ವೈವಸ್ವತಂ ದೇವಂ ಪಶ್ಯೇಯಂ ಪತಿನಾ ವಿನಾ ॥ ೩೮ ॥ ನಾಜಾನಾಜ್ಜೀವತೀಂ ರಾಮ ಸ್ಸಮಾಂ ಲಕ್ಷ್ಮಣ

ಪಾಪಕಾರ್ಯಗಳನ್ನು ಮಾಡುವವರಾದ, ಯೇನೈರ್ಋತಾಃ - ಯಾವರಾಕ್ಷಸರು, ಅಧರ್ಮಾತ್ - ಧರ್ಮವಿಲ್ಲದಿರುವುದರಿಂದ, ಅಕಾರ್ಯಂ - ಅಕೃತ್ಯವನ್ನು, ನಜಾನಂತಿ - ಅರಿಯರೋ, ತೈಃ - ಅವರಿಂದಲೇ, ಮಹೋತ್ಪಾತಃ - ಅನರ್ಥವು, ಸಾಂಪ್ರತಂಹಿ - ಈಗಲೇ, ಭವಿಷ್ಯತಿ - ಆಗುವುದು. ॥ ೩೫ ॥ ಪಿಶಿತಾಶನಾಃ - ಮಾಂಸಭಕ್ಷಕರಾದ, ಏತೇರಾಕ್ಷಸಾಃ - ಈ ರಕ್ಕಸರು, ಧರ್ಮಂ - ಪುಣ್ಯವನ್ನು, ನವಿಜಾನಂತಿ - ತಿಳಿಯರು, ರಾಕ್ಷಸಃ - ದಾನವನಾದ ರಾವಣನು, ಮಾಂ - ನನ್ನನ್ನು, ಪ್ರಾತರಾಶಾರ್ಥೇ-ಬೆಳಗಿನಊಟಕ್ಕೆ, ಕಲ್ಪಯಿಷ್ಯತಿ - ಸಿದ್ಧಪಡಿಸುವನು, ಧ್ರುವಂ - ನಿಶ್ಚಯವು ॥ ೩೬ ॥ ಸಾಹಂ - ಆ ನಾನು, ಪ್ರಿಯದರ್ಶನಂ - ಇಷ್ಟವಾದದೃಷ್ಟಿಯುಳ್ಳ, ತಂವಿನಾ - ಆ ರಾಮುನನ್ನು ಬಿಟ್ಟು, ರಕ್ತಾಂತನಯನಂ - ಕೆಂಪಾದನೇತ್ರಗಳುಳ್ಳ, ರಾಮಂ - ಶ್ರೀರಾಮುನನ್ನು, ಅಪಶ್ಯಂತೀ-ನೋಡದೆ ಸುದುಃಖಿತಾ-ವ್ಯಸನಗೊಂಡವಳಾಗಿ, ಕಥಂಕರಿಷ್ಯಾಮಿ - ಏನುಮಾಡುವೆನು. ॥ ೩೭ ॥ ಇಹ - ಇಲ್ಲಿ, ಮೇ - ನನಗೆ, ಅದ್ಯ - ಈಗಲೇ, ಕಶ್ಚಿತ್ - ಯಾವನಾದರೂ, ವಿಷಸ್ಯ - ವಿಷವನ್ನು, ಪ್ರದಾತಾ - ಕೊಡುವೆನು, ಭವೇದ್ಯದಿ - ದೊರಕುವನಾದರೆ, ಪತಿನಾವಿನಾ - ಗಂಡನನ್ನುಳಿದು, ಕ್ಷಿಪ್ರಂ - ಜಾಗ್ರತೆಯಾಗಿ, ವೈವಸ್ವತಂದೇವಂ - ಯಮುನನ್ನು, ಪಶ್ಯೇಯಂ - ನೋಡಿಯೇನು. ॥ ೩೮ ॥ ಲಕ್ಷ್ಮಣಪೂರ್ವಜಃ-ಲಕ್ಷ್ಮಣಾಗ್ರಜನಾದ, ಸರಾಮಃ - ಆ ರಾಮುನು, ಜೀವತೀಂ - ಬದುಕಿರುವ, ಮಾಂ - ನನ್ನನ್ನು,

ಮಾತ್ರ ಉಳಿದಿರುವುದು. ಮಹಾ ಪಾಪಕೃತ್ಯಗಳನ್ನು ಮಾಡುವವರೂ, ಅಧರ್ಮಿಷ್ಠರೂ ಕಾರ್ಯಾಕಾರ್ಯಗಳನ್ನರಿಯದಿರುವವರೂ ಆದ ಈ ರಾಕ್ಷಸರಿಂದ ಮಹೋತ್ಪಾತಗಳುಂಟಾದರೂ ಆಗಬಹುದು. ॥ ೩೧—೩೫ ॥ ಇವರು ನನ್ನನ್ನು ಕೊಲ್ಲುವುದಕ್ಕೂ ಹೇಸುವುದಿಲ್ಲವು. ಕೇವಲ ಮಾಂಸಭಕ್ಷಕರಾದ ಈ ರಾಕ್ಷಸರು ಧರ್ಮಾಧರ್ಮಗಳನ್ನೇನು ಬಲ್ಲರು? ರಾಕ್ಷಸರಿಗೆಲ್ಲ ಧೊರೆಯಾದ ಈ ರಾವಣಾಸುರನು ನನ್ನನ್ನು ಪ್ರಾತಃಕಾಲದ ಭೋಜನಕ್ಕಾಗಿ ಅಣಿಮಾಡಿಸಿಕೊಳ್ಳುವನು. ಇದರಲ್ಲಿ ಸಂಶಯವಿಲ್ಲವೆಂದು ತೋರುತ್ತದೆ. ರಕ್ತಾಂತಲೋಚನನೂ, ಪ್ರಿಯದರ್ಶನನೂ ಆದ ಶ್ರೀರಾಮುನ ವಿಯೋಗದಿಂದ ಮಹಾ ದುಃಖಸಮುದ್ರದಲ್ಲಿ ಮುಳುಗಿ ಬಳಲುತ್ತಿರುವ ನಾನೇನು ಮಾಡಬಲ್ಲೆನು! ಈಗ ಇಲ್ಲಿ ಯಾವನಾದರೂ ನನಗೆ ವಿಷವನ್ನು ತಂದುಕೊಟ್ಟು ಉಪಕಾರ ಮಾಡಿದರೆ ಅದನ್ನು ತಿಂದು ಯಮುಪುರಕ್ಕೆ ಸುಖವಾಗಿ ಹೋದೇನು? ಶ್ರೀರಾಮುನನ್ನಗಲಿ ವ್ಯಸನದಿಂದ ಪರಿತಪಿಸುತ್ತಿರುವ ನನಗೆ ಹೀಗೆ ಮಾಡುವುದು ಉತ್ತಮವೆಂದೇ ತೋರುತ್ತದೆ. ಅಯ್ಯೋ! ನಾನಿಲ್ಲಿ ಜೀವದಿಂದಿರುವುದು ಲಕ್ಷ್ಮ

$ ಈ ಪಾದವು ಗೋ. ರಾ. ಪಾಠಗಳಲ್ಲಿ ಅಧಿಕ.

ಪೂರ್ವಜಃ । ಜಾನಂತೌ ತೌ ನಕುರ್ಯಾತಾಂ ನೋರ್ವ್ಯಾಂಹಿ ಮಮ ಮಾರ್ಗಣಂ ॥ ೩೯ ॥ ನೂನಂ ಮಮೈವ ಶೋಕೇನ ಸವೀರೋ ಲಕ್ಷ್ಮಣಾಗ್ರಜಃ । ದೇವಲೋಕ ಮಿತೋ ಯಾತ ಸ್ತ್ಯಕ್ತ್ವಾ ದೇಹಂ ಮಹೀತಲೇ ॥೪೦॥ ಧನ್ಯಾ ದೇವಾಸ್ಸಗಂಧರ್ವಾ ಸ್ಸಿದ್ಧಾಶ್ಚ ಪರಮರ್ಷಯಃ । ಮಮ ಪಶ್ಯಂತಿ ಯೇ ನಾಥಂ ರಾಮಂ ರಾಜೀವ ಲೋಚನಂ ॥ ೪೧ ॥ ಅಥವಾ ನಹಿ ತಸ್ಯಾರ್ಥೋ ಧರ್ಮಕಾಮಸ್ಯ ಧೀಮತಃ । ಮಯಾ ರಾಮಸ್ಯ ರಾಜರ್ಷೇ ರ್ಭಾರ್ಯಯಾ ಪರಮಾತ್ಮನಃ ॥ ೪೨ ॥ ದೃಶ್ಯಮಾನೇ ಭವೇತ್ಪ್ರೀತಿ ಸ್ಸೌಹೃದಂ ನಾಸ್ತ್ಯಪಶ್ಯತಃ । ನಾಶಯಂತಿ ಕೃತಘ್ನಾಸ್ತು ನರಾಮೋ

ನಾಜಾನಾತ್ - ಅರಿಯದೆಹೋದನು, ಹಿ - ಯಾವಕಾರಣದಿಂದ, ತೌ - ಆ ರಾಮಲಕ್ಷ್ಮಣರು, ಜಾನಂತೌ - ತಿಳಿದವರಾಗಿ, ಉರ್ವ್ಯಾಂ - ಭೂಮಿಯಲ್ಲಿ, ಮಮ - ನನ್ನ, ಮಾರ್ಗಣಂ - ಹುಡುಕುವಿಕೆಯನ್ನು, ನಕುರ್ಯಾತಾಂನ - ಮಾಡದಿರುವರೆಂಬುವುದಿಲ್ಲವೋ. ॥ ೩೯ ॥ ಲಕ್ಷ್ಮಣಾಗ್ರಜಃ - ಲಕ್ಷ್ಮಣನಿಗೆ ಅಣ್ಣನಾದ, ವೀರಃ - ಶೂರನಾದ, ಸಃ - ಆ ಶ್ರೀರಾಮನು, ಮಮಶೋಕೇನೈವ - ನನ್ನ ದುಃಖದಿಂದಲೇ, ಮಹೀತಲೇ - ಭೂಮಿಯಲ್ಲಿ, ದೇಹಂ - ಶರೀರವನ್ನು, ತ್ಯಕ್ತ್ವಾ ಬಿಟ್ಟು, ಇತಃ - ಈಲೋಕದಿಂದ, ದೇವಲೋಕಂ - ಸ್ವರ್ಗಲೋಕವನ್ನು, ನೂನಂ - ನಿಶ್ಚಯವಾಗಿ, ಯಾತಃ - ಐದಿದನು. ॥ ೪೦ ॥ ಯೇ - ಯಾರು, ಮಮ - ನನಗೆ, ನಾಥಂ - ಪತಿಯಾದ, ರಾಜೀವಲೋಚನಂ - ಕಮಲಾಕ್ಷನಾದ, ರಾಮಂ - ರಾಮನನ್ನು, ಪಶ್ಯಂತಿ - ನೋಡುತ್ತಾರೆಯೋ, ತೇ - ಅ, ಸಗಂಧರ್ವಾಃ- ಗಂಧರ್ವರಿಂದೊಡಗೂಡಿದ, ದೇವಾಃ - ದೇವತೆಗಳೂ, ಸಿದ್ಧಾಶ್ಚ - ಸಿದ್ಧರೂ, ಪರಮರ್ಷಯಶ್ಚ - ಋಷಿಶ್ರೇಷ್ಠರೂ, ಧನ್ಯಾಃ - ಪುಣ್ಯವಂತರು. ॥ ೪೧ ॥ ಅಥವಾ - ಧರ್ಮಕಾಮಸ್ಯ - ಧರ್ಮಿಷ್ಠನಾದ, ಧೀಮತಃ - ಜ್ಞಾನಿಯಾದ, ರಾಜರ್ಷೇಃ - ರಾಜನಾದರೂ ತಪಸ್ವಿಯಾದ, ಪರಮಾತ್ಮನಃ - ಆತ್ಮಾರಾಮನಾದ, ತಸ್ಯರಾಮಸ್ಯ - ಆ ಶ್ರೀರಾಮನಿಗೆ, ಭಾರ್ಯೆಯಾ - ಹೆಂಡತಿಯಾದ, ಮಯಾ - ನನ್ನಿಂದ, ಅರ್ಥಃ - ಪ್ರಯೋಜನವು, ನಹಿ - ಇಲ್ಲವಷ್ಟೆ. ॥ ೪೨ ॥ ದೃಶ್ಯಮಾನೇ - ಕಾಣುವ ಜನದಲ್ಲಿ, ಪ್ರೀತಿಃ - ವಿಶ್ವಾಸವು, ಭವೇತ್ - ಆಗುವುದು, ಅಪಶ್ಯತಃ - ನೋಡದಿರುವವನಿಗೆ, ಸೌಹೃದಂ - ಮೈತ್ರಿಯು, ನಾಸ್ತಿ - ಇಲ್ಲವು, ಕೃತಘ್ನಾಸ್ತು-ಉಪಕಾರವನ್ನೆಣಿಸದಿರುವರಾದರೆ, (ಪ್ರೀತಿಂ - ಪ್ರೇಮ

ಣಾನುಜನಾದ ಶ್ರೀರಾಮಮೂರ್ತಿಗೆ ತಿಳಿಯದು! ಹಾಗೆ ಆ ರಾಮಲಕ್ಷ್ಮಣರು ತಿಳಿದಿದ್ದರೆ ಭೂಲೋಕದಲ್ಲಿರುವ ಎಲ್ಲ ಸ್ಥಳಗಳಲ್ಲಿಯೂ ಹುಡುಕಿ ನನ್ನನ್ನು ರಕ್ಷಿಸದೆ ಸುಮ್ಮನಿರುತ್ತಿರಲಿಲ್ಲ. ಒಂದುವೇಳೆ ಮಹಾ ಪರಾಕ್ರಮಶಾಲಿಯಾದ ಶ್ರೀರಾಮನು ನನಗಾಗಿ ದುಃಖಿಸಿ ಈ ಭೂಲೋಕದಲ್ಲಿಯೇ ದೇಹವನ್ನು ತೊರದಿರಬಹುದೇ! ಆತನು ನನ್ನ ವಿರಹದುಃಖದಿಂದ ಮೃತಿಯೊಂದಿ ಸ್ವರ್ಗಲೋಕಕ್ಕೆ ಹೋಗಿರಬಹುದೇ! ॥೩೬–೪೦॥ ಅಕಟ! ಹಾಗೆ ಆತನು ಮೃತಿಹೊಂದಿದ್ದರೆ, ಪುಂಡರೀಕಾಕ್ಷನೂ, ಲೋಕಾಭಿರಾಮನೂ ನನ್ನ ಪತಿದೇವನೂ ಆದ ಆತನನ್ನು ನೋಡುತ್ತಿರುವ ದೇವತೆಗಳೂ, ಗಂಧರ್ವರೂ, ಸಿದ್ಧರೂ, ಮಹರ್ಷಿಗಳೂ, ಎಷ್ಟು ಭಾಗ್ಯಶಾಲಿಗಳೋ! ಹಾಗಿಲ್ಲದೆ ಆತನು ಬದುಕಿದ್ದರೂ ಬದುಕಿರಬಹುದು. ಆತನು ಧರ್ಮದಲ್ಲಿಯೇ ನೆಟ್ಟಮನಸ್ಸುಳ್ಳವನಾಗಿ, ಮನಸ್ಥೈರ್ಯದಿಂದ ರಾಜರ್ಷಿಯಾಗಿರುವವನು. ಮಹಾ ವೈರಾಗ್ಯದಿಂದಿರುವವನು. ಇಂತಹನಿಗೆ ನನ್ನಿಂದೇನುಪ್ರಯೋಜನ. ಆದರೂ ಆತನಿಗೆ ನನ್ನಮೇಲೆ ಬಹಳ ಪ್ರೇಮವಿದ್ದಿತೆಂಬುದೇನೋ ನಿಶ್ಚಯವಾದುದು. ಆದರೇನು,

ನಾಶಯಿಷ್ಯತಿ ॥ ೪೩ ॥ § ಕಿನ್ನು ಮೇ ನಗುಣಾಃ ಕೇಚಿತ್ ಕಿಂವಾ ಭಾಗ್ಯಕ್ಷಯೋ ಮಮ । ಯಾಽಹಂ ಸೀದಾಮಿ ರಾಮೇಣ ಹೀನಾ ಮುಖ್ಯೇನ ಭಾಮಿನೀ ॥ ೪೪ ॥ ಶ್ರೇಯೋ ಮೇ ಜೀವಿತಾನ್ಮರ್ತುಂ ವಿಹೀನಾ ಯಾ ಮಹಾತ್ಮನಃ । ರಾಮಾದಕ್ಲಿಷ್ಟ ಚಾರಿತ್ರಾಚ್ಛೂರಾಚ್ಛತ್ರುನಿಬರ್ಹಣಾತ್ ॥ ೪೫ ॥ ಅಥವಾ ನ್ಯಸ್ತಶಸ್ತ್ರೌ ತೌ ವನೇ ಮೂಲಫಲಾಶಿನೌ । ಭ್ರಾತರೌ ಹಿ ನರಶ್ರೇಷ್ಠೌ ಸಂವೃತ್ತೌ ವನಗೋಚರೌ ॥ ೪೬ ॥

ವನ್ನು,) ನಾಶಯಂತಿ - ಹೋಗಲಾಡಿಸುತ್ತಾರೆ, ರಾಮಸ್ತು - ಶ್ರೀರಾಮನಾದರೆ, (ಪ್ರೀತಿಂ - ಸ್ನೇಹವನ್ನು,) ನನಾಶಯಿಷ್ಯತಿ - ಹೋಗಲಾಡಿಸಲಾರನು. ॥ ೪೩ ॥ ಭಾಮಿನೀ-ಸ್ತ್ರೀಯಾದ, ಯಾಹಂ-ಯಾವನಾನು, ಮುಖ್ಯೇನ - ಅವಶ್ಯಕನಾದ, ರಾಮೇಣ - ಶ್ರೀರಾಮನಿಂದ, ಹೀನಾ - ವಿರಹಿತಳಾಗಿ, ಸೀದಾಮಿ - ನಾಶವಾಗುತ್ತಿರುವೆನೋ, ತಸ್ಯಾಃ - ಅಂತಹ, ಮೇ-ನನಗೆ, ಗುಣಾಃ - ಒಳ್ಳೆಯಗುಣಗಳು, ನಕಿಂನು - ಇಲ್ಲವೋ ಏನೋ. ॥ ೪೪ ॥ ಅಕ್ಲಿ....ತ್ - ದುಃಖಕರವಲ್ಲದ ನಡೆವಳಿಕೆಯುಳ್ಳ, ಶೂರಾತ್ - ಶೂರನಾದ, ಶತ್ರು....ತ್ - ಶತ್ರುಸಂಹಾರಕನಾದ, ಮಹಾತ್ಮನಃ - ಒಳ್ಳೆಯಮನಸ್ಸುಳ್ಳ, ರಾಮಾತ್ - ಶ್ರೀರಾಮನಿಂದ, ವಿಹೀನಾಯಾಃ - ರಹಿತಳಾದ, ಮೇ - ನನಗೆ, ಜೀವಿತಾತ್ - ಬದುಕಿಗಿಂತಲೂ, ಮರ್ತುಂ - ಸಾಯುವುದೇ, ಶ್ರೇಯಃ-ಲೇಸು. ॥ ೪೫ ॥ ಅಥವಾ, ನ್ಯಸ್ತಶಸ್ತ್ರೌ-ಬಿಡಲ್ಪಟ್ಟ ಶಸ್ತ್ರಗಳುಳ್ಳ, ವನೇ - ಕಾಡಿನಲ್ಲಿ, ಮೂಲಫಲಾಶಿನೌ - ಕಂದಮೂಲಗಳನ್ನು, ಫಲಗಳನ್ನೂ ಭಕ್ಷಿಸುತ್ತಿರುವ, ನರಶ್ರೇಷ್ಠೌ - ಮನುಷ್ಯೋತ್ತಮರಾದ, ತೌಭ್ರಾತರೌ - ಆ ಅಣ್ಣ ತಮ್ಮಂದಿರಿಬ್ಬರೂ, ವನಗೋಚರೌ - ವನವಾಸಿಗಳು, ಸಂವೃತ್ತೌಹಿ - ಆದರಷ್ಟೆ. ॥ ೪೬ ॥ ಅಥವಾ - ಹಾಗಲ್ಲದಿದ್ದರೆ,

ಲೋಕದಲ್ಲಿ ಒಬ್ಬರನ್ನೊಬ್ಬರು ನೋಡುತ್ತಿದ್ದರೆ ಮೈತ್ರಿಯು ನಶಿಸಿಹೋಗದಿರುತ್ತದೆಯಲ್ಲದೆ ಅದು ವೃದ್ಧಿಯೈದುತ್ತಲೂ ಇರುತ್ತದೆ. ಒಬ್ಬರನ್ನೊಬ್ಬರು ನೋಡದಿದ್ದರೆ ಅದೇ ಸ್ನೇಹವು ನಶಿಸಿಹೋಗುತ್ತದೆ. ತನಗೆ ಮಾಡಿದ ಮೇಲನ್ನು ಮರೆಯುವ ಕೃತಘ್ನರಲ್ಲಿ ಮಾತ್ರ ಸ್ನೇಹವು ನಶಿಸುವುದೇ ಹೊರತು, ಮಾಡಿದ ಉಪಕಾರವನ್ನೆಂದಿಗೂ ಮರೆಯದಿರುವ, ಅಪಕಾರಿಗಳಲ್ಲಿಯೂ ಅಪಾರ ಕರುಣೆಯುಳ್ಳ ಶ್ರೀರಾಮನಲ್ಲಿ ಮಾತ್ರ ಸ್ನೇಹವೆಂದಿಗೂ ನಶಿಸಿಹೋಗುವುದಿಲ್ಲವು. ಕೇವಲ ಸ್ತ್ರೀಯಾದ ನಾನು ಮಹಾತ್ಮನಾದ ನನ್ನ ಭರ್ತನನ್ನಗಲಿ ಹೀಗೆ ಪರಮ ದುಃಖಿತಳಾಗಿ ನಾಶವಾಗುತ್ತಿರುವುದನ್ನು ನೋಡಿದರೆ ಇದು ನಾನು ಹಿಂದೆ ಮಾಡಿದ ಪಾಪ ಕರ್ಮಫಲವೆಂದು ತೋರುವುದು. ಅಥವ ನಾನು ಮಾಡಿದ ಸುಕೃತವು ನಶಿಸಿಹೋಗಿರಬೇಕು. ಮಹಾತ್ಮನೂ, ದೋಷರಹಿತವಾದ ಸಚ್ಚಾರಿತ್ರವುಳ್ಳವನೂ, ಮಹಾ ಶೂರನೂ, ಶತ್ರುಗಳನ್ನು ನಿಗ್ರಹಿಸುವುದರಲ್ಲಿ ಮಹಾ ಸಮರ್ಥನೂ ಆದ ಶ್ರೀರಾಮನನ್ನಗಲಿ ಜೀವಿಸಿರುವುದಕ್ಕಿಂತಲೂ ಮೃತಿಯೊಂದುವುದೇ ಲೇಸು. ॥ ೪೧-೪೫ ॥ ಇದೇ ನನಗೆ ಶ್ರೇಯಸ್ಕರವೆಂದು ತೋರುತ್ತದೆ. ಒಂದುವೇಳೆ ಅಣ್ಣತಮ್ಮಂದಿರಾದ ಆ ಶ್ರೀರಾಮಲಕ್ಷ್ಮಣರು ಅರಣ್ಯದಲ್ಲಿ ಕಂದಮೂಲಫಲಗಳನ್ನು ಭುಜಿಸಿಕೊಂಡು ಮುನಿವೃತ್ತಿಯಿಂದ ಸಂಚರಿಸುತ್ತಿರುವರೋ ಏನೋ! ಅವರು ಮಹಾ ವ್ಯಸನದಿಂದ ಆಯುಧಗಳನ್ನು ತೊರೆದುಬಿಟ್ಟಿರಬಹುದು. ಹಾಗಿಲ್ಲದಿದ್ದರೆ ಮಹಾ

§ " ಕಿಂವಾ ಮಯ್ಯಗುಣಾಃ ಕೇಚಿತ್ ಕಿಂವಾ ಭಾಗ್ಯಕ್ಷಯೋ ಹಿಮೇ " ತಿ. ಪಾ.

ಅಥವಾ ರಾಕ್ಷಸೇಂದ್ರೇಣ ರಾವಣೇನ ದುರಾತ್ಮನಾ । ಛದ್ಮನಾ ಸಾದಿತೌ ಶೂರೌ ಭ್ರಾತರೌ ರಾಮಲಕ್ಷ್ಮಣೌ ॥೪೭॥ ಸಾಽಹಮೇವಂ ಗತೇ ಕಾಲೇ ಮರ್ತುಮಿಚ್ಛಾಮಿ ಸರ್ವಥಾ । ನಚ ಮೇ ವಿಹಿತೋ ಮೃತ್ಯುರಸ್ಮಿನ್ ದುಃಖೇಪಿ ವರ್ತತಿ ॥ ೪೮ ॥ ಧನ್ಯಾಃ ಖಲು ಮಹಾತ್ಮಾನೋ‡ ಮುನಯಸ್ತ್ಯಕ್ತಕಿಲ್ಬಿಷಾಃ । ಜಿತಾತ್ಮಾನೋ ಮಹಾಭಾಗಾ ಯೇಷಾಂ ನಸ್ತಃ ಪ್ರಿಯಾಪ್ರಿಯೇ ॥ ೪೯ ॥ ಪ್ರಿಯಾನ್ನಸಂಭವೇದ್ದುಃಖಮಪ್ರಿಯಾದಧಿಕಂ ಭಯಂ । ತಾಭ್ಯಾಂ ಹಿ ಯೇ ವಿಯುಜ್ಯಂತೇ ನಮಸ್ತೇಷಾಂ ಮಹಾತ್ಮನಾಂ ॥ ೫೦ ॥

ದುರಾತ್ಮನಾ - ದುಷ್ಟಬುದ್ಧಿಯುಳ್ಳ, ರಾಕ್ಷಸೇಂದ್ರೇಣ - ರಾಕ್ಷಸಾಧಿಪತಿಯಾದ, ರಾವಣೇನ - ರಾವಣನಿಂದ, ಶೂರೌ - ವೀರರಾದ, ಭ್ರಾತರೌ - ಅಣ್ಣತಮ್ಮಂದಿರಾದ, ರಾಮಲಕ್ಷ್ಮಣೌ - ರಾಮಲಕ್ಷ್ಮಣರೀರ್ವರು, ಛದ್ಮನಾ-ಮೋಸದಿಂದ, ಸಾದಿತೌ-ಕೊಲ್ಲಲ್ಪಟ್ಟರೇನೋ. ॥ ೪೭ ॥ ಸಾಽಹಂ ಆ ನಾನು, ಏವಂಗತೇ - ಇಂತಹ ಅವಸ್ಥೆಯನ್ನು ಹೊಂದಿದ, ಕಾಲೇ - ಸಮಯದಲ್ಲಿ, ಸರ್ವಥಾ - ಹೇಗಾದರೂ, ಮರ್ತುಂ - ಸಾಯುವದಕ್ಕೋಸ್ಕರ, ಇಚ್ಛಾಮಿ-ಅಪೇಕ್ಷಿಸುತ್ತೇನೆ, ಮೇ - ನನಗೆ, ಅಸ್ಮಿನ್ದುಃಖೇಪಿ- ಇಂತಹ ದುಃಖವೂ, ವರ್ತತಿ - ಇರಲಾಗಿ, ಮೃತ್ಯುಶ್ಚ - ಮರಣವೂ ಕೂಡ, ನವಿಹಿತಃ - ಮಾಡಲ್ಪಡಲಿಲ್ಲ. ॥ ೪೮ ॥ ಯೇಷಾಂ - ಯಾರಿಗೆ, ಪ್ರಿಯಾಪ್ರಿಯೇ - ಇಷ್ಟಾನಿಷ್ಟಗಳು, ನಸ್ತಃ - ಇಲ್ಲವೋ, ಮಹಾತ್ಮಾನಃ - ಮಹಾಮನಸ್ವಿಗಳಾದ, ತ್ಯಕ್ತಕಿಲ್ಬಿಷಾಃ - ಬಿಡಲ್ಪಟ್ಟ, ಪಾಪಗಳುಳ್ಳ, ಜಿತಾತ್ಮಾನಃ - ಜಿತೇಂದ್ರಿಯರಾದ, ಮಹಾಭಾಗಾಃ - ಪುಣ್ಯವಂತರಾದ, ತೇ ಮುನಯಃ - ಅಂತಹ ಋಷಿಗಳು, ಧನ್ಯಾಃಖಲು - ಕೃತಾರ್ಥರಷ್ಟೆ. ॥ ೪೯ ॥ ಪ್ರಿಯಾತ್ - ಇಷ್ಟದಿಂದ, ದುಃಖಂ - ವ್ಯಸನವು, ನಸಂಭವೇತ್ - ಬರುವದಿಲ್ಲ, ಅಪ್ರಿಯಾತ್ - ಅನಿಷ್ಟದಿಂದ, ಅಧಿಕಂ - ಹೆಚ್ಚಾಗಿ, ಭಯಂ - ಭಯವು, (ಭವೇತ್ - ಆಗುವದು) ತಾಭ್ಯಾಂ - ಅಂತಹ ಪ್ರಿಯಾಪ್ರಿಯಗಳಿಂದ, ಯೇ-ಯಾರು, ವಿಯುಜ್ಯಂತೇ- ಬಿಡಲ್ಪಟ್ಟಿರುವರೋ, ತೇಷಾಂ - ಅಂತಹ, ಮಹಾತ್ಮನಾಂ - ಮಹಾತ್ಮರಿಗೆ, ನಮಃ - ನಮಸ್ಕಾರವು, ಅಸ್ತು-ಆಗಲಿ. ॥ ೫೦ ॥ ಸಾಽಹಂ - ಅಂತಹ ನಾನು, ಪ್ರಿಯಾರ್ಹೇಣ - ಪ್ರೀತಿಗೆ ಯೋಗ್ಯನಾದ,

ದುರಾತ್ಮನಾದ ಈ ರಾವಣಾಸುರನು ಅವರಿವರಿಗೆ ನಿಂತು ಯುದ್ಧ ಮಾಡುವುದಕ್ಕೆ ಅಂಜಿ ಅವರಿಬ್ಬರನ್ನೂ ಕಪಟೋಪಾಯದಿಂದ ಕೊಂದಿರಬಹುದೇ? ಅಕಟಕಟ! ನನಗೊಂದೂ ತೋರದಾಗಿರುವುದು! ಕಾಲಗತಿಯು ಹೀಗೆ ಸಂಭವಿಸಿರುವಾಗ ನಾನೆಷ್ಟು ದುಃಖಿಸಿದರೆ ತಾನೆ ಪ್ರಯೋಜನವೇನು. ಹೇಗೆ ಹೇಗೆ ಯೋಚಿಸಿದರೂ ಈಗ ನನಗೆ ಮರಣವೇ ಶ್ರೇಯಸ್ಕರವೆಂದು ತೋರುತ್ತದೆ. ಹಾಗೆ ನಾನು ಮರಣಕ್ಕೆ ಆಸೆಪಟ್ಟರೂ ಪ್ರಯೋಜನವಿಲ್ಲದೆ ಹೋಗಿರುವುದು. ಮಹಾ ದುಃಖಿತೆಯಾಗಿದ್ದರೂ ನನಗೆ ಮರಣವು ಸಂಭವಿಸದಿರುವುದು! ಏನುಮಾಡಲಿ! ಲೋಕದಲ್ಲಿ ಧೈರ್ಯಶಾಲಿಗಳೂ, ಪಾಪವಿಮುಕ್ತರೂ, ಜಿತೇಂದ್ರಿಯರೂ ಆಗಿರುವ ಮಹರ್ಷಿಗಳು ಸುಖದುಃಖಗಳನ್ನೇ ಬಿಟ್ಟಿರುವುದರಿಂದ ಅವರೇ ಧನ್ಯರು. ಪ್ರಿಯವಸ್ತುವಿರುವವರೆಗೂ ದುಃಖವು ತಪ್ಪುವುದಿಲ್ಲ. ಅದರಿಂದ ಭಯವೂ ಅಧಿಕ. ಆದುದರಿಂದ ಪ್ರಿಯಾಪ್ರಿಯಗಳನ್ನು ತೊರೆದಿರುವ ಮಹಾತ್ಮರೇ ಧನ್ಯರು. ಅಂತಹರಿಗೆ ವಂದಿಸು

‡ "ಸತ್ಯಸಮ್ಮತಾಃ" ರಾ. ತಿ. ಪಾ.

ಸಾಽಹಂ ತ್ಯಕ್ತಾ * ಪ್ರಿಯಾರ್ಹೇಣ ರಾಮೇಣ ವಿದಿತಾತ್ಮನಾ ।
ಪ್ರಾಣಾಂಸ್ತ್ಯಕ್ಷ್ಯಾಮಿ ಪಾಪಸ್ಯ ರಾವಣಸ್ಯ ಗತಾ ವಶಂ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಡ್ತ್ರಿಂಶಸ್ಸರ್ಗಃ

ವಿದಿತಾತ್ಮನಾ - ಆತ್ಮಜ್ಞಾನಿಯಾದ, ರಾಮೇಣ - ಶ್ರೀರಾಮನಿಂದ, ತ್ಯಕ್ತಾ - ಬಿಡಲ್ಪಟ್ಟವಳಾಗಿ, ಪಾಪಸ್ಯ - ಪಾಪಿಷ್ಠನಾದ, ರಾವಣಸ್ಯ - ರಾವಣನ, ವಶಂ - ಅಧೀನವನ್ನು, ಗತಾ-ಹೊಂದಿದವಳಾದಕಾರಣ, ಪ್ರಾಣಾ಼್ - ಪ್ರಾಣಗಳನ್ನು, ತ್ಯಕ್ಷ್ಯಾಮಿ - ಬಿಡುವೆನು. ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಡ್ತ್ರಿಂಶಸ್ಸರ್ಗಃ

ವೆನು. ನಾನಾದರೋ ಕೇವಲ ಪ್ರಿಯನೂ, ಪರಮಾತ್ಮವೇತ್ತನೂ ಆದ ಶ್ರೀರಾಮನಿಂದ ವಿರಹಿತಳಾಗಿ ಮಹಾ ಪಾಪಿಷ್ಠನಾದ ಈ ರಾವಣನ ಬಂದಿಯಾಗಿ ಎಷ್ಟುಮಾತ್ರಕ್ಕೂ ಜೀವಿಸಿರಲಾರೆನು. ಪ್ರಾಣಗಳನ್ನು ತೊರೆಯುವನು. ॥ ೪೬–೫೧ ॥

ಇಂತಿದು ಸೀತಾಕೃತ ಪ್ರಾಣತ್ಯಾಗ ಪ್ರತಿಜ್ಞಾ ವೃತ್ತಾಂತವೆಂಬ
ಇಪ್ಪತ್ತಾರನೆಯ ಸರ್ಗವು ಸಮಾಪ್ತವಾದುದು.

* "ಪ್ರಿಯೇಣೈವ" ತಿ. ಪಾ.

ಸುಂದರಕಾಂಡೇ ಸಪ್ತವಿಂಶಸ್ಸರ್ಗಃ

ಇತ್ಯುಕ್ತಾ ಸ್ಸೀತಯಾ ಘೋರಾ ರಾಕ್ಷಸ್ಯಃ ಕ್ರೋಧಮೂರ್ಛಿತಾಃ । ಕಾಶ್ಚಿ ಜ್ಜಗ್ಮು ಸ್ತದಾಖ್ಯಾತುಂ ರಾವಣಸ್ಯ ತರಸ್ವಿನಃ ॥ ೧ ॥ ತತಸ್ಸೀತಾ ಮುಪಾಗಮ್ಯ ರಾಕ್ಷಸ್ಯೋ ಘೋರದರ್ಶನಾಃ । ಪುನಃ ಪರುಷಮೇಕಾರ್ಥ ಮನರ್ಥಾರ್ಥ ಮಥಾ ಬ್ರುವನ್ ॥ ೨ ॥ " ಅದ್ಯೇದಾನೀಂ ತವಾನಾರ್ಯೇ! ಸೀತೇ! ಪಾಪವಿನಿಶ್ಚಯೇ! । ರಾಕ್ಷಸ್ಯೋ ಭಕ್ಷಯಿಷ್ಯಂತಿ ಮಾಂಸಮೇತದ್ಯಥಾ ಸುಖಂ" ॥ ೩ ॥ ಸೀತಾಂ ತಾಭಿರನಾರ್ಯಾಭಿ ರ್ದೃಷ್ಟ್ವಾ ಸಂತರ್ಜಿತಾಂ ತದಾ । ರಾಕ್ಷಸೀ ತ್ರಿಜಟಾ ವೃದ್ಧಾ

ಸೀತಾಯಾ - ಸೀತಾದೇವಿಯಿಂದ, ಇತಿ - ಈಪರಿಯಾಗಿ, ಉಕ್ತಾಃ - ನುಡಿಯಲ್ಪಟ್ಟ, ಘೋರಾಃ - ಕ್ರೂರೆಯರಾದ, ಕಾಶ್ಚಿದ್ರಾಕ್ಷಸ್ಯಃ-ಕೆಲರಕ್ಕಸಿಯರು, ಕ್ರೋಧಮೂರ್ಛಿತಾಃ - ಕೋಪದಿಂದ ಮೈಮರೆತವರಾಗಿ, ತರಸ್ವಿನಃ - ಬಲಿಷ್ಠನಾದ, ರಾವಣಸ್ಯ - ರಾವಣನಿಗೆ, ತತ್ - ಸೀತೆಯ ಮರಣೋದ್ಯೋಗವನ್ನು, ಆಖ್ಯಾತುಂ - ಹೇಳುವದಕ್ಕಾಗಿ, ಜಗ್ಮುಃ - ಹೊರಟರು. ॥ ೧ ॥ ತತಃ - ಬಳಿಕ, ಘೋರದರ್ಶನಾಃ - ಭಯಂಕರದೃಷ್ಟಿಯುಳ್ಳ, ರಾಕ್ಷಸ್ಯಃ - ರಕ್ಕಸಿಯರು, ಸೀತಾಂ - ಸೀತಾದೇವಿಯನ್ನು ಕುರಿತು, ಉಪಾಗಮ್ಯ - ಸಮೀಪಕ್ಕೆ ಬಂದು, ಅಥ - ಅನಂತರದಲ್ಲಿ, ಪುನಃ - ತಿರುಗಿ, ಪರುಷಂ - ಕ್ರೂರವಾದ, ಏಕಾರ್ಥಂ - ಒಂದೇ ಅಭಿಪ್ರಾಯವುಳ್ಳ, ಅನರ್ಥಾರ್ಥಂ - ಅನಿಷ್ಟವೇಫಲವಾಗಿ ಉಳ್ಳ ಮಾತನ್ನು, ಅಬ್ರುವನ್ - ನುಡಿದರು, ಹೇ ಪಾಪವಿನಿಶ್ಚಯೇ - ಎಲೆ ಪಾಪಬುದ್ಧಿಯುಳ್ಳವಳೇ, ಹೇ ಸೀತೇ - ಓ ಸೀತೆಯೇ, ಅದ್ಯ - ಈಗ, ಇದಾನೀಂ - ಈ ಕ್ಷಣದಲ್ಲಿ, ರಾಕ್ಷಸ್ಯಃ - ರಕ್ಕಸಿಯರು, ತವ - ನಿನ್ನ, ಏತನ್ಮಾಂಸಂ - ಈ ಮಾಂಸವನ್ನು, ಯಥಾಸುಖಂ - ಸುಖವಾಗಿ, ಭಕ್ಷಯಿಷ್ಯಂತಿ - ತಿನ್ನುವರು. ॥ ೩ ॥ ತದಾ - ಆಕಾಲದಲ್ಲಿ, ಅನಾರ್ಯಾಭಿಃ - ದುಷ್ಟರಾದ, ತಾಭಿಃ - ಆ ರಕ್ಕಸಿಯರಿಂದ, ಸಂತರ್ಜಿತಾಂ - ಹೆದರಿಸಲ್ಪಟ್ಟ, ಸೀತಾಂ - ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಶಯಾನಾ-

---

ಸೀತಾದೇವಿಯು ಈ ರೀತಿ ನುಡಿದುದನ್ನು ಕೇಳಿದೊಡನೆಯೇ, ಅಲ್ಲಿದ್ದ ಮಹಾ ಭಯಂಕರಾಕಾರೆಯರಾದ ಆ ರಾಕ್ಷಸಸ್ತ್ರೀಯರು ಕೋಪದಿಂದ ಮೈಮರೆತು ಹೋದರು. ಆಗಲೇ ಅವರಲ್ಲಿ ಕೆಲವರು ಸೀತೆಯು ಪ್ರಾಣಬಿಡುವುದಾಗಿ ಹೇಳಿದುದನ್ನು ರಾವಣನಿಗೆ ತಿಳಿಸುವುದಕ್ಕೆ ಹೊರಟುಹೋದರು. ಭಯಂಕರೆಯರಾದ ಮಿಕ್ಕ ರಾಕ್ಷಸಿಯರು ಸೀತಾದೇವಿಯ ಬಳಿಗೈದಿ ಹಿಂದಿನಂತೆಯೇ ಮಹಾ ಕಠಿನವಾದ ಅರ್ಥವುಳ್ಳ ಮಾತುಗಳಿಂದ, "ಎಲೆ ದುಷ್ಟೆ! ಪಾಪಕಾರ್ಯದಲ್ಲಿ ಮನವುಳ್ಳವಳೇ, ಈಗಲೇ, ಇಲ್ಲವೇ ಈಕ್ಷಣವೇ ರಾಕ್ಷಸಸ್ತ್ರೀಯರೆಲ್ಲರೂ ನಿನ್ನ ಮಾಂಸವನ್ನು ಯಥಾಸುಖವಾಗಿ ಭಕ್ಷಿಸಿಬಿಡುವರು. ಪಾಪಕಾರ್ಯವಾದ ಆತ್ಮಹತ್ಯಕ್ಕೂ ಹೇಸದಾದೆಯಾ? ಚೆನ್ನಾಯಿತು" ಎಂದು ಹೇಳಿದರು. ॥೧–೩॥ ದುಷ್ಟೆಯರಾದ ಆ ರಾಕ್ಷಸಿಯರು ಸೀತೆಯನ್ನೀರೀತಿ ಬೆದರಿಸುತ್ತಿರಲು ಅಲ್ಲಿಯೇ ಮಲಗಿದ್ದ ತ್ರಿಜಟೆಯೆಂಬ ಒಬ್ಬ ಜ್ಞಾನವೃದ್ಧೆಯಾದ ರಾಕ್ಷಸಿಯು ಅವರ ಮಾತುಗಳನ್ನು ಕೇಳಿ ಅವರನ್ನು

¶ ಶಯಾನಾ ವಾಕ್ಯಮಬ್ರವೀತ್ ॥ ೪ ॥ "ಆತ್ಮಾನಂ ಖಾದತಾನಾರ್ಯಾ! ನಸೀತಾಂ ಭಕ್ಷಯಿಷ್ಯಥ । ಜನಕಸ್ಯ ಸುತಾಮಿಷ್ಟಾಂ ಸ್ನುಷಾಂ ದಶರಥಸ್ಯಚ ॥ ೫ ॥ ಸ್ವಪ್ನೋ ಹ್ಯದ್ಯ ಮಯಾ ದೃಷ್ಟೋ ದಾರುಣೋ ರೋಮಹರ್ಷಣಃ । ರಾಕ್ಷಸಾನಾಮಭಾವಾಯ ಭರ್ತುರಸ್ಯಾ ಜಯಾಯಚ" ॥ ೬ ॥ ಏವಮುಕ್ತಾ ಸ್ತ್ರಿಜಟಯಾ ರಾಕ್ಷಸ್ಯಃ ಕ್ರೋಧ ಮೂರ್ಛಿತಾಃ । ಸರ್ವಾ ಏವಾಬ್ರುವನ್ ಭೀತಾ ಸ್ತ್ರಿಜಟಾಂ ತಾಮಿದಂ ವಚಃ । "ಕಥಯಸ್ವ ತ್ವಯಾ ದೃಷ್ಟಃ ಸ್ವಪ್ನೋಽಯಂ ಕೀದೃಶೋ ನಿಶಿ" ॥ ೭ ॥ ತಾಸಾಂ ಶ್ರುತ್ವಾತು ವಚನಂ ರಾಕ್ಷಸೀನಾಂ ಮುಖಾಚ್ಚ್ಯುತಂ । ಉವಾಚ ವಚನಂ ಕಾಲೇ

ಮಲಗಿರುವ, ವೃದ್ಧಾ - ಜ್ಞಾನವೃದ್ಧೆಯಾದ, ತ್ರಿಜಟಾ - ತ್ರಿಜಟೆಯೆಂಬ, ರಾಕ್ಷಸೀ - ರಾಕ್ಷಸಸ್ತ್ರೀಯು, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದಳು, ಹೇ ಅನಾರ್ಯಾಃ - ಎಲೆ ದುಷ್ಟೆಯರೇ, ಆತ್ಮಾನಂ- ನಿಮ್ಮನ್ನು, ಖಾದತ - ಭಕ್ಷಿಸಿರಿ, ಜನಕಸ್ಯ - ಜನಕರಾಯನಿಗೆ, ಇಷ್ಟಾಂ - ಪ್ರೀತಿಪಾತ್ರಳಾದ, ಸುತಾಂ - ಮಗಳಾದ, ದಶರಥಸ್ಯ - ದಶರಥರಾಯನಿಗೆ, ಸ್ನುಷಾಂಚ - ಸೊಸಯೂ ಆದ, ಸೀತಾಂ - ಸೀತಾದೇವಿಯನ್ನು, ನಭಕ್ಷಯಥ - ತಿನ್ನಬೇಡಿರಿ, ಹಿ - ಯಾವಕಾರಣದಿಂದ, ಮಯಾ - ನನ್ನಿಂದ, ಅದ್ಯ - ಈಗ, ದಾರುಣಃ - ಕ್ರೂರವಾದಕಾರಣ, ರೋಮಹರ್ಷಣಃ - ರೋಮಾಂಚಕರವಾದ, ಸ್ವಪ್ನಃ- ಕನಸು, ರಾಕ್ಷಸಾನಾಂ - ರಕ್ಕಸರ, ಅಭಾವಾಯ - ನಾಶಕ್ಕೋಸ್ಕರವೂ, ಅಸ್ಯಾಃ - ಈ ಸೀತಾದೇವಿಯ, ಭರ್ತುಃ - ಗಂಡನಾದ ಶ್ರೀರಾಮನ, ಜಯಾಯಚ - ಅಭಿವೃದ್ಧಿಗೋಸ್ಕರವೂ, ದೃಷ್ಟಃ - ಕಾಣಲ್ಪಟ್ಟಿತು. ॥ ೬ ॥ ಕ್ರೋಧಮೂರ್ಛಿತಾಃ - ಕೋಪದಿಂದ ಮೈಮರೆತು, ರಾಕ್ಷಸ್ಯಸ್ಸರ್ವಾಃ - ರಕ್ಕಸಿಯರೆಲ್ಲರೂ, ತ್ರಿಜಟಯಾ - ತ್ರಿಜಟೆಯಿಂದ, ಏವಂ - ಈಪರಿಯಾಗಿ, ಉಕ್ತಾಃ - ಹೇಳಲ್ಪಟ್ಟವರಾದಕಾರಣ, ಭೀತಾಃ - ಭಯಗೊಂಡವರಾಗಿ, ತ್ವಯಾ - ನಿನ್ನಿಂದ, ನಿಶಿ - ರಾತ್ರಿಯಲ್ಲಿ, ದೃಷ್ಟಃ - ಕಾಣಲ್ಪಟ್ಟ, ಸ್ವಪ್ನಃ - ಕನಸು, ಕೀದೃಶಃ - ಎಂಥದು, ಕಥಯಸ್ವ - ಹೇಳು, (ಇತಿ - ಇಂತೆಂದು,) ತಾಂತ್ರಿಜಟಾ ಮೇವ - ಆತ್ರಿಜಟೆಯನ್ನು ಕುರಿತೇ, ಇದಂವಚಃ - ಈ ಮಾತನ್ನು, ಅಬ್ರುವನ್ - ಹೇಳಿದರು. ॥ ೭ ॥ ತ್ರಿಜಟಾ - ತ್ರಿಜಟೆಯು, ಕಾಲೇ-ಉಷಃಕಾಲದಲ್ಲಿ, ತಾಸಾಂರಾಕ್ಷಸೀನಾಂ-ಆ ರಕ್ಕಸಿಯರ, ಮುಖಾತ್- ಮುಖದಿಂದ, ಚ್ಯುತಂ - ಜಾರಿದ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಸ್ವಪ್ನಸಂಶ್ರಿತಂ -

ಕುರಿತು, "ಎಲೆ ದುಷ್ಟೆಯರೆ! ನಿಮ್ಮ ನಿಮ್ಮ ಶವಗಳನ್ನು ನೀವೇ ಕಿತ್ತು ತಿನ್ನಬೇಕಾಗಿ ಬಂದಿರುವಾಗ ಜನಕರಾಜಕುಮಾರಿಯಾಗಿ, ದಶರಥರಾಯನಿಗೆ ಸೊಸೆಯಾಗಿರು ಈ ಸೀತಾ ದೇವಿಯನ್ನು ತಿನ್ನುವಿರಾ! ಈಗ ನಾನೊಂದು ಭಯಂಕರವಾದ ಕನಸನ್ನು ಕಂಡೆನು. ರಾಕ್ಷಸ ರೆಲ್ಲರ ಅಳಿವಿಗೂ, ಈಕೆಯ ಪತಿಯಾದ ಶ್ರೀರಾಮನ ಅಭ್ಯುದಯಕ್ಕೂ ಸೂಚಕವಾದ ಆ ಸ್ವಪ್ನ ವನ್ನು ಕೇಳಿದರೇನೇ ರೋಮಾಂಚವಾಗುವುದು. ಅದು ಮಹಾ ಭಯಂಕರವಾಗಿರುವುದು ಸಾಕು; ಈಕೆಯನ್ನು ಬೆದರಿಸದೆ ಸುಮ್ಮನಿರಿ" ಎಂದು ಹೇಳಿದಳು. ॥ ೪-೬ ॥ ಕೋಪದಿಂದ ಮೈ ಮರೆತಿದ್ದ ಆ ರಾಕ್ಷಸಿಯರೆಲ್ಲರೂ ಆ ತ್ರಿಜಟೆಯ ಮಾತುಗಳನ್ನು ಕೇಳಿ ಭಯದಿಂದ ನಡ ಗುತ್ತ, "ಎಲೆ ತ್ರಿಜಟೇ! ನೀನು ಕಂಡ ಸ್ವಪ್ನವೆಂಥದೆಂಬುದನ್ನು ಹೇಳು" ಎಂದು ಕೇಳಿದರು. ಆಗ ತ್ರಿಜಟೆಯು ತಾನು ಕಂಡ ಸ್ವಪ್ನವೃತ್ತಾಂತವನ್ನು ಆ ರಾಕ್ಷಸಿಯರಿಗೆ ತಿಳಿಯಹೇಳಲುಪ

¶ "ಪ್ರಬುದ್ಧಾ" ತಿ. ರಾ. ಪಾ.

ತ್ರಿಜಟಾ ಸ್ವಪ್ನಸಂಶ್ರಿತಂ ॥ ೮ ॥ "ಗಜದಂತಮಯೀಂ ದಿವ್ಯಾಂ ಶಿಬಿಕಾಮಂತರಿಕ್ಷಗಾಂ । ✻ ಯುಕ್ತಾಂ ಹಂಸಸಹಸ್ರೇಣ ಸ್ವಯಮಾಸ್ಥಾಯ ರಾಘವಃ । ಶುಕ್ಲಮಾಲ್ಯಾಂಬರಧರೋ ಲಕ್ಷ್ಮಣೇನ ಸಮಾಗತಃ ॥ ೧೦ ॥ ಸ್ವಪ್ನೇಚಾದ್ಯ ಮಯಾ ದೃಷ್ಟಾ ಸೀತಾ ಶುಕ್ಲಾಂಬರಾವೃತಾ । ಸಾಗರೇಣ ಪರಿಕ್ಷಿಪ್ತಂ ಶ್ವೇತಂ ಪರ್ವತಮಾಸ್ಥಿತಾ । ರಾಮೇಣ ಸಂಗತಾ ಸೀತಾ ಭಾಸ್ಕರೇಣ ಪ್ರಭಾ ಯಥಾ ॥ ೧೧ ॥ ರಾಘವಶ್ಚ ಮಯಾ ದೃಷ್ಟಶ್ಚತುರ್ದಂತಂ ಮಹಾಗಜಂ । ಆರೂಢಶ್ಶೈಲಸಂಕಾಶಂ

ಸ್ವಪ್ನದಲ್ಲಿ ಕೇಳಿದ, ವಚನಂ - ಮಾತನ್ನು, ಉವಾಚ - ಹೇಳಿದಳು. ॥ ೮ ॥ ರಾಘವಃ - ಶ್ರೀರಾಮನು, ಶುಕ್ಲ....ರಃ - ಬಿಳುಪಾದ ಹುವ್ವಿನ ಸರಗಳನ್ನೂ ವಸ್ತ್ರಗಳನ್ನೂ ಧರಿಸಿದವನಾಗಿ, ಹಂಸಸಹಸ್ರೇಣ - ಸಾವಿರಹಂಸಗಳಿಂದ, ಯುಕ್ತಾಂ - ಕೂಡಿ, ಅಂತರಿಕ್ಷಗಾಂ - ಗಗನದಲ್ಲಿ ಹೋಗುತ್ತಿರುವ, ಗಜ....ಯೀಂ - ಆನೆಯದಂತವಿಕಾರವಾದ, ದಿವ್ಯಾಂ - ಉತ್ಕೃಷ್ಟವಾದ, ಶಿಬಿಕಾಂ - ಪಲ್ಲಕ್ಕಿಯಲ್ಲಿ, ಅಸ್ಥಾಯ - ಕುಳಿತುಕೊಂಡು, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, (ಲಂಕಾಂ-ಲಂಕಾಪಟ್ಟಣವನ್ನು ಕುರಿತು,) ಆಗತಃ - ಬಂದನು. ॥ ೯-೧೦ ॥ ಅದ್ಯ - ಈಗ, ಸ್ವಪ್ನೇ - ಸ್ವಪ್ನದಲ್ಲಿ, ಸೀತಾ - ಜನಕರಾಯನ ಯಜ್ಞಭೂಮಿಯಲ್ಲಿ ಹುಟ್ಟಿದ, ಸೀತಾ - ಸೀತಾದೇವಿಯು, ಶುಕ್ಲಾಂ....ತಾ - ಬಿಳೀ ಸೀರೆಯನ್ನುಟ್ಟು, ಸಾಗರೇಣ - ಕ್ಷೀರಸಮುದ್ರದಿಂದ, ಪರಿಕ್ಷಿಪ್ತಂ - ಸುತ್ತುವರೆದ, ಶ್ವೇತಂಪರ್ವತಂ - ಬಿಳಿಯಬೆಟ್ಟದಲ್ಲಿ, ಆಸ್ಥಿತಾ - ಇರುವಳಾಗಿ, ತತ್ರೈವಪರ್ವತೇ - ಅದೇ ಬೆಟ್ಟದಲ್ಲಿ, ಭಾಸ್ಕರೇಣ - ಸೂರ್ಯನಿಂದ, ಪ್ರಭಾಯಥಾ - ಕಾಂತಿಯಂತೆ, ಸಂಗತಾ - ಕೂಡಿದವಳಾಗಿ, ಮಯಾ - ನನ್ನಿಂದ, ದೃಷ್ಟಾ - ಕಾಣಲ್ಪಟ್ಟಳು. ॥ ೧೧ ॥ ಶೈಲಸಂಕಾಶಂ - ಪರ್ವತಸದೃಶವಾದ, ಚತುರ್ದಂತಂ - ನಾಲ್ಕುದಂತಗಳುಳ್ಳ, ಮಹಾಗಜಂ - ದೊಡ್ಡ ಆನೆಯನ್ನು, ಆರೂಢಃ - ಏರಿದ, ರಾಘವಶ್ಚ - ಶ್ರೀರಾಮನೂ ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟವನಾಗಿ, ಸಹಲಕ್ಷ್ಮಣಃ - ಲಕ್ಷ್ಮಣಸಹಿತನಾಗಿ,

ಕ್ರಮಿಸಿದಳು. "ಎಲೆ ರಾಕ್ಷಸಿಯರೇ! ಶ್ರೀರಾಮನು ಶ್ವೇತ ಪುಷ್ಪಮಾಲಿಕೆಯನ್ನು ಧರಿಸಿ, ಗಜದಂತದಿಂದ ಮಾಡಲ್ಪಟ್ಟು, ಸಾವಿರ ಹಂಸಗಳಿಂದ ಹೊರಲ್ಪಟ್ಟು ಆಕಾಶದಲ್ಲಿ ಶೀಘ್ರಗಾಮಿಯಾದ ವಿಮಾನವನ್ನೇರಿ ಲಕ್ಷ್ಮಣಸಮೇತನಾಗಿ ಈ ಲಂಕಾಪಟ್ಟಣಕ್ಕೆ ಬಂದನು. ಸೀತಾದೇವಿಯೂ ಸಹ ಶ್ವೇತವಸ್ತ್ರವನ್ನುಟ್ಟು, ಪುಷ್ಪಮಾಲಿಕೆಗಳನ್ನು ಧರಿಸಿ ಸಮುದ್ರದಿಂದ ಸುತ್ತುವರೆದಿರುವ ಶ್ವೇತಪರ್ವತವನ್ನೇರಿದ್ದಂತೆ ನಾನು ಸ್ವಪ್ನದಲ್ಲಿ ಕಂಡೆನು. ಆಗ ಸೀತಾದೇವಿಯು "ಸೂರ್ಯನೊಡನೆ ಬೆಳಕು ಸೇರಿರುವಂತೆ" ಶ್ರೀರಾಮನೊಡನಿರುವುದನ್ನು ಕಂಡೆನು. ॥೭-೧೧॥ ಶ್ರೀರಾಮನೂ ಸಹ ತಮ್ಮನಾದ ಲಕ್ಷ್ಮಣಸ್ವಾಮಿಯೊಡನೆ, ಪರ್ವತೋಪಮವಾಗಿ, ಚತುರ್ದಂತಗಳಿಂದ ಶೋಭಿಸುತ್ತಿರುವ ಗಜವೊಂದನ್ನೇರಿ ಸಂಚರಿಸುತ್ತಿರುವಂತೆ ಈಗತಾನೆ ನಾನು ಸ್ವಪ್ನದಲ್ಲಿ ಕಂಡೆನು. ಆಗ ಆ ಪುರುಷಸಿಂಹರೀರ್ವರೂ ಬಿಳಿಯ ದುಕೂಲಗಳನ್ನುಟ್ಟು ಶ್ವೇತಪುಷ್ಪಮಾಲಿಕೆಗಳನ್ನು ಧರಿಸಿದವರಾಗಿ, ತಮ್ಮ ದೇಹಕಾಂತಿಯಿಂದಲೂ, ತಮ್ಮ ಅಪೂರ್ವ ತೇಜಸ್ಸಂಪತ್ತಿಯಿಂದಲೂ ಬೆಳಗುತ್ತ ಸೀತೆಯ ಬಳಿಗೈದಿದರು. ಹೀಗೆ ಆ ಶ್ವೇತಪರ್ವತದ

✻ "ವಾಜಿ" ತಿ. ಮ. ಪಾ.

ಚಚಾರ ಸಹಲಕ್ಷ್ಮಣಃ $ ॥ ೧೨ ॥ ತತಸ್ತೌ ನರಶಾರ್ದೂಲೌ ದೀಪ್ಯಮಾನೌ ಸ್ವತೇಜಸಾ । ಶುಕ್ಲಮಾಲ್ಯಾಂಬರಧರೌ ಜಾನಕೀಂ ಪರ್ಯುಪಸ್ಥಿತೌ ॥ ೧೩ ॥ § ತತಸ್ತಸ್ಯ ನಗಸ್ಯಾಗ್ರೇ ಹ್ಯಾಕಾಶಸ್ಥಸ್ಯ ದಂತಿನಃ । ಭರ್ತ್ರಾ ಪರಿಗೃಹೀತಸ್ಯ ಜಾನಕೀ ಸ್ಕಂಧಮಾಶ್ರಿತಾ ॥ ೧೪ ॥ ಭರ್ತುರಂಕಾತ್ಸಮುತ್ಪತ್ಯ ತತಃ ಕಮಲಲೋಚನಾ । ¶ ಚಂದ್ರಸೂರ್ಯೌ ಮಯಾ ದೃಷ್ಟ್ವಾ ಪಾಣಿನಾ ಪರಿಮಾರ್ಜತೀ ॥ ೧೫ ॥ ತತಸ್ತಾಭ್ಯಾಂ ಕುಮಾರಾಭ್ಯಾಮಾಸ್ಥಿತಸ್ಸಗಜೋತ್ತಮಃ । ಸೀತಯಾಚ ವಿಶಾಲಾಕ್ಷ್ಯಾ ಲಂಕಾಯಾ

ಚಚಾರ - ಸಂಚರಿಸಿದನು. ॥ ೧೨ ॥ ತತಃ - ಬಳಿಕ, ಸ್ವತೇಜಸಾ - ತಮ್ಮ ಪರಾಕ್ರಮದಿಂದ, ದೀಪ್ಯಮಾನೌ - ಬೆಳಗುತ್ತಿರುವ, ತೌನರಶಾರ್ದೂಲೌ - ಆ ನರಶ್ರೇಷ್ಠರು,ಶುಕ್ಲ....ರೌ - ಬಿಳೀಹುವ್ವಿನ ಮಾಲಿಕೆಗಳನ್ನೂ, ವಸ್ತ್ರಗಳನ್ನೂ ಧರಿಸಿದವರಾಗಿ, ಜಾನಕೀಂ - ಸೀತೆಯನ್ನು, ಪರ್ಯುಪಸ್ಥಿತೌ - ಸಮೀಪಿಸಿದರು. ॥ ೧೩ ॥ ತತಃ - ಆಬಳಿಕ, ಜಾನಕೀ - ಸೀತಾದೇವಿಯು, ತಸ್ಯನಗಸ್ಯ - ಆ ಶ್ವೇತಪರ್ವತದ, ಅಗ್ರೇ - ಶಿಖರದಲ್ಲಿ, ಭರ್ತ್ರಾ - ಪತಿಯಿಂದ, ಪರಿಗೃಹೀತಂ - ಪರಿಗ್ರಹಿಸಲಾದ, ಆಕಾಶಸ್ಥಸ್ಯ - ಅಂತರಿಕ್ಷದಲ್ಲಿರುವ, ದಂತಿನಃ - ಆನೆಯ, ಸ್ಕಂಧಂ-ಹೆಗಲನ್ನು, ಆಶ್ರಿತಾ - ಅವಲಂಬಿಸಿದಳು. ॥ ೧೪ ॥ ತತಃ - ಅನಂತರದಲ್ಲಿ, ಕಮ....ನಾ - ಕಮಲಾಕ್ಷಿಯಾದ ಸೀತೆಯು, ಭರ್ತುಃ - ಪತಿಯ, ಅಂಕಾತ್ - ತೊಡೆಯಿಂದ, ಸಮುತ್ಪತ್ಯ - ಹಾರಿ, ಚಂದ್ರಸೂರ್ಯೌ - ಚಂದ್ರಸೂರ್ಯರನ್ನು, ಪಾಣಿನಾ - ಕೈಯಿಂದ, ಪರಿಮಾರ್ಜತೀ-ಮುಟ್ಟುವಳಾಗಿ, ಮಯಾ-ನನ್ನಿಂದ, ದೃಷ್ಟಾ - ಕಾಣಲ್ಪಟ್ಟಳು. ॥ ೧೫ ॥ ತತಃ - ಆಬಳಿಕ, ತಾಭ್ಯಾಂಕುಮಾರಾಭ್ಯಾಂ-ಆ ರಾಮಲಕ್ಷ್ಮಣರಿಂದಲೂ, ವಿಶಾಲಾಕ್ಷ್ಯಾ - ವಿಶಾಲನೇತ್ರಿಯಾದ, ಸೀತಯಾಚ - ಸೀತಾದೇವಿಯಿಂದಲೂ, ಆಸ್ಥಿತಃ -

ಮೇಲೆ ಆಕಾಶದಲ್ಲಿ ಸಂಚರಿಸುತ್ತಿರುವ ಪತಿದೇವನಾದ ಶ್ರೀರಾಮನಿಂದ ಆನೆಯ ಕುಂಭಸ್ಥಳದ ಮೇಲಕ್ಕೆ ಕುಳ್ಳಿರಿಸಿಕೊಳ್ಳಲಾದ ಕಮಲಲೋಚನೆಯಾದ ಜಾನಕಿಯು ಆತನ ತೊಡೆಯಮೇಲೆ ಕುಳಿತಿದ್ದು ಆ ಬಳಿಕ ಕೂಡಲೇ ಮೇಲಕ್ಕೆ ಹಾರಿ ಸೂರ್ಯಚಂದ್ರರನ್ನು ಕೈಯಲ್ಲಿ ಹಿಡಿಯುತ್ತಿದ್ದಳು.॥೧೨–೧೫॥ಆ ಮೇಲೆ ವಿಶಾಲಾಕ್ಷಿಯಾದ ಸೀತೆಯಿಂದಲೂ, ಶ್ರೀರಾಮಲಕ್ಷ್ಮಣರಿಂದಲೂ ಅಧಿಷ್ಠಿತವಾಗಿದ್ದ ಆ ಶ್ವೇತ ಗಜವು ಈ ಲಂಕಾನಗರದ ಮೇಲಕ್ಕೆ ಬಂದಿತು. ಆಗ ಮಹಾ

$ "ತತಸ್ತು ಸೂರ್ಯಸಂಕಾಶೌ" ಕಾ. ತಿ. ಪಾ.

$ ಇಲ್ಲಿ, "ಆರೋಹಣಂ ಗೋವೃಷ ಕುಂಜರಾಣಾಂ ಪ್ರಾಸಾದ ಶೈಲಾಗ್ರವನಸ್ಪತೀನಾಂ। ವಿಷ್ಠಾನುಲೇಪೋ ರುದಿತಂ ಮೃತಂ ಚಸ್ವಪ್ನೇ ಷ್ವಗಮ್ಯಾಗಮನಂ ಚ ಧನ್ಯಂ ॥" ಎಂಬ ಸ್ವಪ್ನಾಧ್ಯಾಯ ವಚನವನ್ನು ಗಮನಿಸಬೇಕು. "ಸ್ವಪ್ನದಲ್ಲಿ ಎತ್ತುಗಳನ್ನೂ, ಆನೆಗಳನ್ನೂ, ಉಪ್ಪರಿಗೆಗಳನ್ನೂ, ಪರ್ವತಶಿಖರಗಳನ್ನೂ, ಫಲವೃಕ್ಷಗಳನ್ನೂ ಏರುವುದೂ, ಮೈಗೆ ಗೋಮಯವನ್ನು ಲೇಪಿಸಿಕೊಳ್ಳುವುದೂ, ಅಳುವುದೂ, ಸತ್ತಂತೆ ಕಾಣುವುದೂ, ಅಗಮ್ಯಾಗಮನವನ್ನು ಮಾಡುವುದೂ, ಧನ್ಯವಾದುವು" ಎಂದು ಈ ವಚನದ ಅರ್ಥವು. (ತ್ರಿ+ಗೋ+ಮ).

§ ಇಲ್ಲಿಗೆ ಹನ್ನೆರಡುಸಾವಿರ ಶ್ಲೋಕಗಳು ಮುಗಿದವು. ಇಲ್ಲಿಂದ ಮುಂದಕ್ಕೆ ಹದಿಮೂರನೆಯ ಸಾವಿರವು ಪ್ರಾರಂಭವಾಗುವುದು. "ತತಸ್ತಸ್ಯನಗಸ್ಯಾಗ್ರೇ" ಎಂಬ ಕಡೆ, "ಸ್ಯ" ಎಂಬ ಅಕ್ಷರವು ಗಾಯತ್ರಿಯ ಹದಿಮೂರನೆಯ ಅಕ್ಷರವು. (ಗೋ+ಮ+ಕ).

¶ ಇಲ್ಲಿ, "ಆದಿತ್ಯಮಂಡಲಂವಾತು ಚಂದ್ರಮಂಡಲಮೇವವಾ। ಸ್ವಪ್ನೇ ಗೃಹ್ಣಾತಿ ಹಸ್ತಾಭ್ಯಾಂ ರಾಜ್ಯಂ ಸಂಪ್ರಾಪ್ನುಯಾನ್ಮಹತ್ ॥" ಎಂಬ ಸ್ವಪ್ನಾಧ್ಯಾಯ ವಚನವು ಗ್ರಾಹ್ಯವು. (ಮ+ಗೋ).

ಉಪರಿಸ್ಥಿತಃ ॥ ೧೭ ॥ ಪಾಂಡುರರ್ಷಭಯುಕ್ತೇನ ರಥೇನಾಷ್ಟಯುಜಾಸ್ವಯಂ ।
§ ಇಹೋಪಯಾತಃ ಕಾಕುತ್ಸ್ಥಃ ಸೀತಯಾಸಹ ಭಾರ್ಯಯಾ ॥ ೧೮ ॥ ಲಕ್ಷ್ಮಣೇನ ಸಹಭ್ರಾತ್ರಾ ಸೀತಯಾಸಹ ವೀರ್ಯವಾನ್ । ‡ ಆರುಹ್ಯ ಪುಷ್ಪಕಂ ದಿವ್ಯಂ ವಿಮಾನಂ ಸೂರ್ಯಸನ್ನಿಭಂ । ಉತ್ತರಾಂ ದಿಶಮಾಲೋಕ್ಯ ಜಗಾಮ ಪುರುಷೋತ್ತಮಃ॥೧೯॥
$ ಏವಂ ಸ್ವಪ್ನೇ ಮಯಾ ದೃಷ್ಟೋ ರಾಮೋ ವಿಷ್ಣುಪರಾಕ್ರಮಃ । ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾಸಹ ಭಾರ್ಯಯಾ ॥ ೨೦ ॥ ನಹಿ ರಾಮೋ ಮಹಾತೇಜಾ

ಹತ್ತಲ್ಪಟ್ಟ, ಸಗಜೋತ್ತಮಃ - ಆ ಉತ್ತಮಗಜವು, ಲಂಕಾಯಾಃ - ಲಂಕಾಪಟ್ಟಣದ, ಉಪರಿ - ಮೇಲೆ, ಸ್ಥಿತಃ - ಇದ್ದಿತು. ॥ ೧೭ ॥ ಅಷ್ಟಯುಜಾ - ಎಂಟೆಂಬ ಸಂಖ್ಯೆಯನ್ನು ಹೊಂದಿದ, ಪಾಂಡು....ನ - ಬಿಳುಪಾದ, ಎತ್ತುಗಳಿಂದ ಸಹಿತವಾದ, ರಥೇನ - ರಥದಿಂದ, ಕಾಕುತ್ಥ್ಸಃ - ಶ್ರೀರಾಮನು, ಭಾರ್ಯಯಾ - ಹೆಂಡತಿಯಾದ, ಸೀತಯಾಸಹ - ಸೀತಾದೇವಿಯೊಡನೆ, ಸ್ವಯಂ - ತಾನೇ, ಇಹ - ಇಲ್ಲಿ, ಉಪಯಾತಃ ಬಂದನು. ॥ ೧೮ ॥ ವೀರ್ಯವಾನ್-ಪರಾಕ್ರಮಿಯಾದ, ಪುರುಷೋತ್ತಮಃ-ಪುರುಷಶ್ರೇಷ್ಠನಾದ ಶ್ರೀರಾಮನು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನಸಹ - ಲಕ್ಷ್ಮಣನೊಡನೆ, ಸೀತಾಯಾಸಹ - ಸೀತೆಯೊಡನೆಯೂ, ಸೂರ್ಯಸನ್ನಿಭಂ - ಸೂರ್ಯಸದೃಶವಾದ, ಪುಷ್ಪಕಂ - ಪುಷ್ಪಕವೆಂಬ, ದಿವ್ಯಂವಿಮಾನಂ - ದೇವತಾಸಂಬಂಧವಾದ ರಥವನ್ನು, ಆರುಹ್ಯ - ಹತ್ತಿಕೊಂಡು, ಉತ್ತರಾಂ ದಿಶಂ - ಉತ್ತರದಿಕ್ಕನ್ನು, ಆಲೋಕ್ಯ - ನೋಡಿ, ಜಗಾಮ - ಹೊರಟನು. ॥ ೧೯ ॥ ವಿಷ್ಣುಪರಾಕ್ರಮಃ - ವಿಷ್ಣುವಿನಪರಾಕ್ರಮವುಳ್ಳ, ರಾಮಃ - ಶ್ರೀರಾಮನು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನ ಸಹ - ಲಕ್ಷ್ಮಣನೊಡನೆಯೂ, ಭಾರ್ಯಯಾ - ಹೆಂಡತಿಯಾದ, ಸೀತಯಾಸಹ - ಸೀತೆಯೊಡನೆಯೂ, ಏವಂ - ಈ ಪರಿಯಾಗಿ, ಸ್ವಪ್ನೇ - ಸ್ವಪ್ನದಲ್ಲಿ, ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟನು. ॥ ೨೦ ॥ ಅಪಿಚ-ಇಷ್ಟುಮಾತ್ರವಲ್ಲ, ಮಹಾತೇಜಾಃ-ಮಹಾಪರಾಕ್ರಮಿಯಾದ, ರಾಮಃ-ಶ್ರೀರಾಮನು,

ಪರಾಕ್ರಮಿಯಾದ, ಶ್ರೀರಾಮನು ಲಕ್ಷ್ಮಣನೊಡನೆಯೂ,ಸೀತೆಯೊಡನೆಯೂ ಕೂಡಿದವನಾಗಿ, ಎಂಟ ಬಿಳಿಯ ಎತ್ತುಗಳಿಂದ ಕೂಡಿದ ರಥವನ್ನೇರಿ ಇಲ್ಲಿಗೈತಂದು ಸೂರ್ಯನಂತೆ ಬಹು ಪ್ರಕಾಶಮಾನವಾದ ಪುಷ್ಪಕ ವಿಮಾನವನ್ನೇರಿ ಉತ್ತರದಿಕ್ಕನ್ನು ಕುರಿತು ಹೋಗುತ್ತಿರುವುದನ್ನು ನಾನು ಸ್ವಪ್ನದಲ್ಲಿ ಕಂಡೆನು. ಈ ರೀತಿ ನಾನಿಂದಿನ ಸ್ವಪ್ನದಲ್ಲಿ ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳ ಶ್ರೀರಾಮನು ಸೀತೆಯೊಡನೆಯೂ, ಲಕ್ಷ್ಮಣನೊಡನೆಯೂ ಈ ಲಂಕೆಗೆ ಬಂದುದನ್ನು ಕಂಡೆನು. ॥೧೭-೨೦॥ ಎಲೆ ರಾಕ್ಷಸಿಯರೇ ! ಪಾಪಿಷ್ಠನಾದವನು ಸ್ವರ್ಗವನ್ನು

§ ಈ ಪಾದವು ಗೋಪಾಠದಲ್ಲಿ ಅಧಿಕ, ತಿಲಕ ಪಾಠದಲ್ಲಿ, "ಶುಕ್ಲಮಾಲ್ಯಾಂಬರಧರೋ ಲಕ್ಷ್ಮಣೇನ ಸಮಾಗತಃ । ತತೋನ್ಯತ್ರಮಯಾದೃಷ್ಟೋ ರಾಮಃಸತ್ಯ ಪರಾಕ್ರಮಃ ॥ ಎಂಬ ಶ್ಲೋಕವಿರುವುದು.

‡ ಇಲ್ಲಿಂದ ಎರಡು ಶ್ಲೋಕಗಳು ಗೋಪಾಠದಲ್ಲಿ ಅಧಿಕ.

$ ಇಲ್ಲಿ ತ್ರಿಜಟೆಯು ಕಂಡ ಸ್ವಪ್ನದ ಕ್ರಮವು ಹೇಗೆಂದರೆ,—ಪಲ್ಲಕ್ಕಿಯಲ್ಲಿ ಕುಳಿತಿದ್ದ ರಾಮನನ್ನೂ, ಶ್ವೇತಪರ್ವತ ಶಿಖರದಲ್ಲಿ ನಿಂತಿದ್ದ ಸೀತಾದೇವಿಯನ್ನು ಕಂಡಬಳಿಕ, ಶ್ರೀರಾಮನು ಪಲ್ಲಕ್ಕಿಯಿಂದ ಕೆಳಕ್ಕಿಳಿದು ಶ್ವೇತಗಜವನ್ನೇರಿ ಲಕ್ಷ್ಮಣನೊಡನೆ ಶ್ವೇತಪರ್ವತವನ್ನೇರಿ, ಸೀತೆಯ ಬಳಿಗೈದಿ ಆಕೆಯನ್ನು ಗಜದಮೇಲೆ ಕುಳ್ಳಿರಿಸಿಕೊಂಡು ಆಕಾಶಮಾರ್ಗದಿಂದ ಈ ಲಂಕಾನಗರದಮೇಲೆ ನಿಂತು, ಆ ಮೇಲೆ ಎಂಟು ಬಿಳಿಯ ಎತ್ತುಗಳಿಂದ ಕೂಡಿದ ರಥವನ್ನು ಹತ್ತಿ ಅಲ್ಲಿಂದ ಪುಷ್ಪಕ ವಿಮಾನವನ್ನಧಿರೋಹಿಸಿ ಅಯೋಧ್ಯಾಭಿಮುಖನಾಗಿ ಹೊರಟು ಹೋದನು" ಎಂದು. (ಗೋ)

ಶ್ಶಕ್ಯೋ ಜೇತುಂ ಸುರಾಸುರೈಃ । ರಾಕ್ಷಸೈರ್ವಾಪಿ ಚಾನ್ಯೈರ್ವಾ ಸ್ವರ್ಗಃ ಪಾಪಜನೈರಿವ ॥೨೧॥ ರಾವಣಶ್ಚ ಮಯಾ ದೃಷ್ಟಃ * ಕ್ಷಿತೌ ತೈಲಸಮುತ್ಕ್ಷಿತಃ । ರಕ್ತವಾಸಾಃ ಪಿಬನ್ಮತ್ತಃ ಕರವೀರಕೃತಸ್ರಜಃ ॥೨೨॥ ವಿಮಾನಾತ್ಪುಷ್ಪಕಾದದ್ಯ ರಾವಣಃ ಪತಿತೋ ಭುವಿ । ಕೃಷ್ಯಮಾಣಃ ಸ್ತ್ರಿಯಾ ದೃಷ್ಟೋ ಮುಂಡಃ ಕೃಷ್ಣಾಂಬರಃ ಪುನಃ ॥ ೨೩ ॥ ರಥೇನ ಖರಯುಕ್ತೇನ ರಕ್ತಮಾಲ್ಯಾನುಲೇಪನಃ । ¶ ಪ್ರಯಾತೋ ದಕ್ಷಿಣಾಮಾಶಾಂ ಪ್ರವಿಷ್ಟಃ ಕರ್ದಮಂ ಹ್ರದಂ । ಪಿಬಂಸ್ತೈಲಂ ಹಸನ್ನೃತ್ಯನ್ ಭ್ರಾಂತಚಿತ್ತಾಕುಲೇಂ

ಸುರಾಸುರೈಃ - ದೇವಾಸುರರಿಂದಲೂ, ರಾಕ್ಷಸೈರ್ವಾ - ರಾಕ್ಷಸರಿಂದಲಾದರೂ, ಅನ್ಯೈರ್ವಾ-ಇತರರಿಂದಲಾದರೂ, ಪಾಪಜನೈಃ - ಪಾಪಿಷ್ಠರಿಂದ, ಸ್ವರ್ಗಇವ - ಸ್ವರ್ಗವನ್ನೋಪಾದಿಯಲ್ಲಿ, ಜೇತುಂ - ಜಯಿಸುವುದಕ್ಕೆ, ನಹಿಶಕ್ಯಃ - ಸಮರ್ಥನಲ್ಲವಷ್ಟೆ. ॥ ೨೧ ॥ ಕ್ಷಿತೌ - ಭೂಮಿಯಲ್ಲಿ, ತೈಲಸಮುತ್ಕ್ಷಿತಃ - ತೈಲದಿಂದ ಅಭಿಷೇಕಿಸಲ್ಪಟ್ಟ, ರಕ್ತವಾಸಾಃ - ಕೆಂಪುವಸ್ತ್ರವುಳ್ಳ, ಪಿಬನ್ - ಮದ್ಯಪಾನಮಾಡಿದ, ರಾವಣಶ್ಚ - ರಾವಣನೂ ಸಹ, ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟನು, ಅದ್ಯ - ಈಗ, ಕರ....ಜಃ - ಕಣಿಗಲ ಹುವ್ವಿನ ಸರವುಳ್ಳ, ಪುಷ್ಪ....ತ್ - ಪುಷ್ಪಕವಿಮಾನದಿಂದ, ಭುವಿ - ನೆಲದಲ್ಲಿ, ಪತಿತಃ - ಬಿದ್ದ, ರಾವಣಃ - ರಾವಣನು, ಮುಂಡಃ - ತಲೆಬೋಳಿಸಿಕೊಂಡು, ಕೃಷ್ಣಾಂಬರಃ - ಕಪ್ಪುವಸ್ತ್ರವುಳ್ಳವನಾಗಿ, ಪುನಃ-ಮರಳಿಯೂ, ಸ್ತ್ರಿಯಾ-ಹೆಂಗುಸಿನಿಂದ, ಕೃಷ್ಯಮಾಣಃ-ಸೆಳೆಯಲ್ಪಟ್ಟವನಾಗಿ, ದೃಷ್ಟಃ - ನೋಡಲ್ಪಟ್ಟನು. ॥ ೨೨-೨೩ ॥ ರಕ್ತ....ನಃ - ಕೆಂಪು ಹೂಗಳೂ, ಕೆಂಪು ಗಂಧವೂ ಉಳ್ಳ ರಾವಣನು, ತೈಲಂ - ಎಣ್ಣೆಯನ್ನು, ಪಿಬನ್-ಕುಡಿಯುತ್ತಲೂ, ಹಸನ್ - ನಗುತ್ತಲೂ, ನೃತ್ಯನ್-ಕುಣಿಯುತ್ತಲೂ, ಭ್ರಾಂತ....ಯಃ - ಚಿತ್ತಭ್ರಮಣೆಯಿಂದ ವ್ಯಾಕುಲಗಳಾದ ವಾಗಾದೀಂದ್ರಿಯಗಳುಳ್ಳವನಾಗಿ, ಖರಯುಕ್ತೇನ - ಕತ್ತೆಗಳು ಹೂಡಿದ, ರಥೇನ - ರಥದಿಂದ, ದಕ್ಷಿಣಾಂದಿಶಂ-ದಕ್ಷಿಣದಿಕ್ಕಿನಲ್ಲಿ, ಆಸ್ಥಿತಃ - ಇರುವನಾಗಿ, ಗರ್ದಭೇನ - ಕತ್ತೆಯಿಂದ, ಶೀಘ್ರಂ - ಜಾಗ್ರತೆಯಾಗಿ, ಯಯೌ - ಹೊರಟನು. ॥ ೨೪ ॥ ಪುನಃ - ಮತ್ತು, ರಾಕ್ಷಸೇಶ್ವರಃ - ರಾಕ್ಷಸಾಧಿಪತಿಯಾದ, ರಾವಣಃ -

---

ಸಾಧಿಸಲು ಹೇಗೆ ಸಾಧ್ಯವಾಗುವದಿಲ್ಲವೋ, ಹಾಗೆಯೇ ಮಹಾ ಪರಾಕ್ರಮಿಯಾದ ಶ್ರೀರಾಮನನ್ನು ದೇವತೆಗಳಾಗಲಿ, ರಾಕ್ಷಸರಾಗಲಿ, ಎಷ್ಟುಮಾತ್ರಕ್ಕೂ ಜಯಿಸಲಾರರೆಂದು ತಿಳಿಯಿರಿ. ಅದು ಹಾಗಿರಲಿ ; ಆ ಬಳಿಕ ನಾನೀಸ್ವಪ್ನದಲ್ಲಿ ನಮ್ಮ ದೊರೆಯಾದ ರಾವಣನು ಮೈಗೆಲ್ಲ ಎಣ್ಣೆಯನ್ನು ಲೇಪಿಸಿಕೊಂಡು, ರಕ್ತವಸ್ತ್ರಗಳನ್ನುಟ್ಟು, ರಕ್ತಪುಷ್ಪಮಾಲಿಕೆಗಳನ್ನು ಧರಿಸಿ ಮದ್ಯಪಾನದಿಂದ ಮದಿಸಿಹೋಗಿ ಪುಷ್ಪಕವಿಮಾನವನ್ನೇರಿ ಅಲ್ಲಿಂದ ನೆಲಕ್ಕೆ ಬಿದ್ದು ಉರುಳಾಡುತ್ತಿದ್ದನು. ಆ ಬಳಿಕ ಅದೇ ರಾವಣನು ಜುಟ್ಟಿಲ್ಲದಂತೆ ತಲೆಯು ಬೋಳಾಗಿ ಕಪ್ಪುಬಟ್ಟೆಯುಟ್ಟಿದ್ದನು. ಆಗ ಒಬ್ಬ ಹೆಂಗುಸು ಅವನನ್ನು ಎಳೆದುಕೊಂಡು ಹೋಗುತ್ತಿದ್ದಳು. ಆಮೇಲೆ ರಾವಣನು ಪುನಃ ಕೆಂಪು ಹೂಗಳ ಮಾಲಿಕೆಗಳನ್ನು ಧರಿಸಿ, ಕೆಂಪು ಗಂಧವನ್ನು ಬೊಳೆದುಕೊಂಡು ತೈಲಪಾನಮಾಡಿ, ಭ್ರಾಂತಚಿತ್ತನಾಗಿ ನಗುತ್ತಲೂ, ಕುಣಿಯುತ್ತಲೂ, ಬಗೆಬಗೆಯ ಚೇಷ್ಟೆಗಳನ್ನು ಮಾಡುತ್ತಲೂ ಕತ್ತೆಗಳನ್ನು ಹೂಡಿದ ರಥವ

---

* " ಮುಂಡಃ " ತಿ. ಪಾ. ¶ ಇದು ಪ್ರಕ್ಷಿಪ್ತ ಪಾಠ.

ದ್ರಿಯಃ ॥ ೨೪ ॥ ಗರ್ದಭೇನ ಯಯೌ ಶೀಘ್ರಂ ದಕ್ಷಿಣಾಂ ದಿಶಮಾಸ್ಥಿತಃ ॥ ೨೪ ॥ ಪುನರೇವ ಮಯಾ ದೃಷ್ಟೋ ರಾವಣೋ ರಾಕ್ಷಸೇಶ್ವರಃ । * ಪತಿತೋಽವಾಕ್ಛಿರಾ ಭೂಮೌ ಗರ್ದಭಾದ್ಭಯಮೋಹಿತಃ ॥ ೨೫ ॥ ಸಹಸೋತ್ಥಾಯ ಸಂಭ್ರಾಂತೋ ಭಯಾರ್ತೋ ಮದವಿಹ್ವಲಃ । ಉನ್ಮತ್ತ † ಇವ ದಿಗ್ವಾಸಾ ದುರ್ವಾಕ್ಯಂ ಪ್ರಲಪನ್ಬಹು । ದುರ್ಗಂಧಂ ದುಸ್ಸಹಂ ಘೋರಂ ತಿಮಿರಂ ನರಕೋಪಮಂ । ಮಲಪಂಕಂ ಪ್ರವಿಶ್ಯಾಶು ಮಗ್ನಸ್ತತ್ರ ಸ ರಾವಣಃ ॥ ೨೭ ॥ ಕಂಠೇ ಬಧ್ವಾ ದಶಗ್ರೀವಂ ಪ್ರಮದಾ ರಕ್ತವಾಸಿನೀ । ಕಾಳೀ ಕರ್ದಮಲಿಪ್ತಾಂಗೀ ದಿಶಂ ಯಾಮ್ಯಾಂ ಪ್ರಕರ್ಷತಿ ॥ ೨೮ ॥ ಏವಂ ತತ್ರ ಮಯಾ ದೃಷ್ಟಃ ಕುಂಭಕರ್ಣೋ ನಿಶಾಚರಃ ॥ ೨೯ ॥ ರಾವಣಸ್ಯ ಸುತಾ

ರಾವಣನು, ಭಯಮೋಹಿತಃ - ಭೀತಿಯಿಂದ ಮೈಮರೆತು, ಗರ್ದಭಾತ್ - ಕತ್ತೆಯಿಂದ, ಅವಾಕ್ಛಿರಾಃ- ತಲೆಕೆಳಗಾಗಿ, ಭೂಮೌ - ನೆಲದಲ್ಲಿ, ಪತಿತಏವ - ಬಿದ್ದವನಾಗಿಯೇ, ಮಯಾ - ನನ್ನಿಂದ, ದೃಷ್ಟಃ - ಕಾಣಲ್ಪಟ್ಟನು. ॥ ೨೫ ॥ ಸಹಸಾ - ಬೇಗನೆ, ಉತ್ಥಾಯ - ಎದ್ದು, ಸಂಭ್ರಾಂತಃ-ಗಾಬರಿಗೊಂಡು, ಭಯಾರ್ತಃ - ಭಯದಿಂದ ದೀನನಾದ, ಮದವಿಹ್ವಲಃ - ಮತ್ತತೆಯಿಂದ ತಲೆತಿರುಗುತ್ತಿರುವ, ಉನ್ಮತ್ತಇವ - ಹುಚ್ಚನಂತೆ, ದಿಗ್ವಾಸಾಃ - ದಿಗಂಬರನಾದ, ಸರಾವಣಃ - ಆ ರಾವಣನು, ಬಹು - ಅನೇಕ ಬಗೆಯಾಗಿ, ದುರ್ವಾಕ್ಯಂ - ಕೆಟ್ಟಮಾತನ್ನು, ಪ್ರಲಪನ್ - ಕೂಗುತ್ತ, ದುರ್ಗಂಧಂ - ಕೆಟ್ಟ ನಾತವುಳ್ಳುದಾದಕಾರಣ, ದುಸ್ಸಹಂ-ಸಹಿಸಲಶಕ್ಯವಾದ, ಘೋರಂ-ಭಯಂಕರವಾದ, ನರಕೋಪಮಂ - ನರಕಕ್ಕೆ ಸದೃಶವಾದ, ಮಲಪಂಕಂ - ಪುರೀಷವೇ ಕೆಸರಾಗಿ ಉಳ್ಳ, ತಿಮಿರಂ - ಕತ್ತಲನ್ನು, ಪ್ರವಿಶ್ಯ - ಹೊಕ್ಕು, ತತ್ರ - ಅಲ್ಲಿ, ಆಶು - ಜಾಗ್ರತೆಯಾಗಿ, ಮಗ್ನಃ - ಮುಳುಗಿದವನಾಗಿ, ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟನು. ॥ ೨೬-೨೭ ॥ ರಕ್ತವಾಸಿನೀ - ಕೆಂಪು ಸೀರೆಯನ್ನುಟ್ಟ, ಕಾಳೀ - ಕಪ್ಪಾಗಿರುವ, ಕರ್ದ....ಗೀ - ಕೆಸರು ಹಚ್ಚಲ್ಪಟ್ಟ ದೇಹವುಳ್ಳ, ಪ್ರಮದಾ - ಹೆಂಗುಸು, ದಶಗ್ರೀವಂ - ರಾವಣನನ್ನು, ಕಂಠೇಬಧ್ವಾ - ಕೊರಳಲ್ಲಿ ಅಪ್ಪಿಕೊಂಡು, ಯಾಮ್ಯಾಂದಿಶಂ-ದಕ್ಷಿಣದಿಕ್ಕನ್ನು ಕುರಿತು, ಪ್ರಕರ್ಷತಿ-ಸೆಳೆಯುತ್ತಿದ್ದಳು. ॥ ೨೮ ॥ ಏವಂ - ಈ ಪರಿಯಾಗಿಯೇ, ನಿಶಾಚರಃ - ರಕ್ಕಸನಾದ, ಕುಂಭಕರ್ಣಃ - ಕುಂಭಕರ್ಣನು, ತತ್ರ - ಆ ಅಂಧಕಾರದಲ್ಲಿ, ಮಯಾ - ನನ್ನಿಂದ, ದೃಷ್ಟಃ -

---

ನ್ನೇರಿ ಬಹು ಬೇಗನೆ ದಕ್ಷಿಣದಿಕ್ಕಿಗೆ ಹೋದುದನ್ನು ನಾನೀಗ ಸ್ವಪ್ನದಲ್ಲಿ ಕಂಡೆನು. ಹೀಗೆ ಹೊರಟ ಆ ರಾವಣನು ಆ ರಥದಿಂದ ತಲೆಕೆಳಗಾಗಿ ಭೂಮಿಗೆ ಬಿದ್ದುಹೋದನು. ॥೨೧—೨೫॥ ಹೀಗೆ ನೆಲಕ್ಕೆ ಬಿದ್ದ ಆ ರಾವಣನು ಕೂಡಲೇ ಕಕ್ಕುಬಿಕ್ಕಾದಂತೆ ಭಯಭ್ರಾಂತನಾಗಿಯೂ, ಮದವಿಹ್ವಲನಾಗಿಯೂ, ದಿಗಂಬರನಾಗಿ ಹುಚ್ಚನಂತೆ ಕೆಟ್ಟಕೆಟ್ಟ ಮಾತುಗಳನ್ನಾಡುತ್ತ, ಬಹಳವಾಗಿ ದುರ್ಗಂಧದಿಂದ ಕೂಡಿ ಅಸಹ್ಯವಾಗಿಯೂ, ಮಹಾ ಭಯಂಕರವಾಗಿಯೂ, ಗಾಢಾಂಧಕಾರದಿಂದ ತುಂಬಿ ನರಕಕ್ಕೆ ಸಮಾನವಾಗಿಯೂ ಇರುವ ಮಲಪಂಕದಲ್ಲಿ ಬಿದ್ದು ಮುಳುಗಿಹೋದನು. ಇಷ್ಟುಮಾತ್ರವಲ್ಲದೆ ನಮ್ಮ ದೊರೆಯಾದ ಆ ರಾವಣೇಶ್ವರನ ಮಕ್ಕಳೆಲ್ಲರೂ ಶರೀರಕ್ಕೆ ಎಣ್ಣೆಯನ್ನು ಬೊಳೆದುಕೊಂಡಿರುವುದನ್ನೂ ಈಗತಾನೇ ಸ್ವಪ್ನದಲ್ಲಿ ಕಂಡೆನು. ರಾವಣನು ಹಂದಿಯನ್ನೂ,

---

* "ವಿಶಿರಾ" ತಿ. ಪಾ. † "ರೂಪೋ" ತಿ. ಪಾ.

ಸ್ಸರ್ವೇ § ದೃಷ್ಟಾಸ್ತೈಲಸಮುತ್ಕ್ಷಿತಾಃ ‖ ವರಾಹೇಣ ದಶಗ್ರೀವಶ್ಶಿಂಶುಮಾರೇಣ ಚೇಂದ್ರಜಿತ್ । ಉಷ್ಟ್ರೇಣ ಕುಂಭಕರ್ಣಶ್ಚ ಪ್ರಯಾತೋ ದಕ್ಷಿಣಾಂದಿಶಂ ‖ ೩೦ ‖ ಏಕಸ್ತತ್ರ ಮಯಾದೃಷ್ಟ ಶ್ಶ್ವೇತಚ್ಛತ್ರೋ ವಿಭೀಷಣಃ । ‡ ಶುಕ್ಲಮಾಲ್ಯಾಂಬರಧರ ಶ್ಶುಕ್ಲಗಂಧಾನುಲೇಪನಃ । ಶಂಖದುಂದುಭಿನಿರ್ಘೋಷೈ ರ್ನೃತ್ತಗೀತೈರಲಂಕೃತಃ । ಆರುಹ್ಯ ಶೈಲಸಂಕಾಶಂ ಮೇಘಸ್ತನಿತನಿಸ್ಸ್ವನಂ । ಚತುರ್ದಂತಂ ಗಜಂ ದಿವ್ಯ ಮಾಸ್ತೇ ತತ್ರ ವಿಭೀಷಣಃ । ಚತುರ್ಭಿಸ್ಸಚಿವೈಸ್ಸಾರ್ಧಂ ವೈಹಾಯಸಮುಪಸ್ಥಿತಃ

ಕಾಣಲ್ಪಟ್ಟನು. ‖ ೨೯ ‖ ರಾವಣಸ್ಯ - ರಾವಣನ, ಸುತಾಸ್ಸರ್ವೇ - ಮಕ್ಕಳೆಲ್ಲರೂ, ತೈಲಸಮುತ್ಕ್ಷಿತಾಃ - ಎಣ್ಣೆಯನ್ನು ಹಚ್ಚಿಕೊಂಡವರಾಗಿ, ದೃಷ್ಟಾಃ - ನೋಡಲ್ಪಟ್ಟರು, ದಶಗ್ರೀವಃ - ರಾವಣನು, ವರಾಹೇಣ - ಹಂದಿಯಿಂದಲೂ, ಇಂದ್ರಜಿತ್ - ಇಂದ್ರಜಿತುವು, ಶಿಂಶುಮಾರೇಣ - ನೆಗಳೆಯಿಂದಲೂ, ಕುಂಭಕರ್ಣಶ್ಚ - ಕುಂಭಕರ್ಣನೂ ಕೂಡ, ಉಷ್ಟ್ರೇಣ - ಒಂಟೆಯಿಂದಲೂ, ದಕ್ಷಿಣಾಂದಿಶಂ - ದಕ್ಷಿಣದಿಕ್ಕನ್ನು ಕುರಿತು, ಪ್ರಯಾತಃ - ಹೊರಟನು. ‖ ೩೦ ‖ ತತ್ರ-ಆ ಗುಂಪಿನಲ್ಲಿ, ಏಕಃ-ಒಬ್ಬನಾದ, ಶ್ವೇತಚ್ಛತ್ರಃ-ಬೆಳುಗೊಡೆಯುಳ್ಳ, ವಿಭೀಷಣಃ-ವಿಭೀಷಣನು, ಮಯಾ-ನನ್ನಿಂದ, ದೃಷ್ಟಃ-ನೋಡಲ್ಪಟ್ಟನು, ಶುಕ್ಲ....ರಃ - ಬಿಳೀ ಹುವ್ವಿನ ಮಾಲಿಕೆಗಳನ್ನೂ, ವಸ್ತ್ರಗಳನ್ನೂ ಧರಿಸಿರುವ, ಶುಕ್ಲ....ನಃ - ಬೆಳ್ಳಗಿರುವ ಗಂಧವನ್ನು ಹಚ್ಚಿಕೊಂಡವನಾಗಿ, ಶಂಖ....ಷೈಃ-ಶಂಖ ದುಂದುಭಿಯೇ ಮೊದಲಾದ ವಾದ್ಯ ಧ್ವನಿಗಳಿಂದಲೂ, ನೃತ್ತಗೀತೈಃ - ನರ್ತನ ಗೀತಗಳಿಂದಲೂ, ಅಲಂಕೃತಃ - ಅಲಂಕರಿಸಲ್ಪಟ್ಟವನಾಗಿ, ಶೈಲಸಂಕಾಶಂ - ಬೆಟ್ಟಕ್ಕೆ ಸಮಾನವಾದ, ಮೇಘ....ನಂ - ಮೇಘಗರ್ಜನೆಯಂತೆ ಧ್ವನಿಯುಳ್ಳ, ಚತುರ್ದಂತಂ - ನಾಲ್ಕು ದಂತಗಳುಳ್ಳ, ದಿವ್ಯಂ - ದೇವತಾಸಂಬಂಧವಾದ, ಗಜಂ - ಆನೆಯನ್ನು, ಆರುಹ್ಯ - ಏರಿ, ಚತುರ್ಭಿಸ್ಸಚಿವೈಸ್ಸಾರ್ಧಂ - ನಾಲ್ಕುಮಂದಿ ಮಂತ್ರಿಗಳೊಡನೆ, ವೈಹಾಯಸಂ - ಅಂತರಿಕ್ಷಮಾರ್ಗದಲ್ಲಿ, (ಅಥವಾ ವಿಮಾನದಲ್ಲಿ) ಸಮುಪಸ್ಥಿತಃ-ನಿಂತಿರುವ, ವಿಭೀಷಣಃ-ವಿಭೀಷಣನು, ತತ್ರ - ಅಲ್ಲಿಯೇ, ಆಸ್ತೇ - ಇದ್ದನು. ‖ ೩೧-೩೩ ‖ ಪಿಬತಾಂ - ಮದ್ಯವನ್ನು ಕುಡಿಯುತ್ತಿರುವ, ರಕ್ತಮಾಲ್ಯಾನಾಂ - ಕೆಂಪಾದ ಮಾಲಿಕೆಗಳುಳ್ಳ, ರಕ್ತವಾಸಸಾಂ-ರಕ್ತವಸ್ತ್ರಗಳುಳ್ಳ, ರಕ್ಷಸಾಂ - ರಕ್ಕಸರ,

---

ಇಂದ್ರಜಿತುವು ಮೊಸಳೆಯನ್ನೂ, ಕುಂಭಕರ್ಣನು ಒಂಟೆಯನ್ನೂ ಏರಿದವರಾಗಿ ದಕ್ಷಿಣ ದಿಕ್ಕಿಗೆ ಪ್ರಯಾಣ ಮಾಡಿದುದನ್ನು ನಾನಿಂದಿನ ಸ್ವಪ್ನದಲ್ಲಿ ಕಂಡೆನು. ‖ ೨೬-೩೦ ‖ ಆಗ ವಿಭೀಷಣನೊಬ್ಬನು ಮಾತ್ರ ಶ್ವೇತಚ್ಛತ್ರವುಳ್ಳವನಾಗಿ, ಶ್ವೇತವಸ್ತ್ರಗಳನ್ನೂ, ಶ್ವೇತಪುಷ್ಪ ಮಾಲಿಕೆಗಳನ್ನೂ ಧರಿಸಿದವನಾಗಿ, ಶ್ರೀಗಂಧವನ್ನು ಲೇಪಿಸಿಕೊಂಡು ಶಂಖಧ್ವನಿಗಳಿಂದಲೂ, ಭೇರೀಮೃದಂಗಾದಿ ವಾದ್ಯಗಳಿಂದಲೂ, ನೃತ್ತಗೀತಾದಿಗಳಿಂದಲೂ, ಕ್ರೀಡಾವಿನೋದ ಗಳಿಂದಲೂ ಕೂಡಿದವನಾಗಿ, ದಿವ್ಯಾಭರಣಭೂಷಿತನಾಗಿ ಪರ್ವತೋಪಮವಾದ, ಮೇಘ ಧ್ವನಿಗೆ ಸಮಾನವಾದ ಧ್ವನಿಯುಳ್ಳದಾಗಿ, ಚತುರ್ದಂತಗಳುಳ್ಳದಾಗಿಯೂ, ಉತ್ತಮೋತ್ತಮವಾಗಿಯೂ, ಆಕಾಶಮಾರ್ಗದಲ್ಲಿ ಸಂಚರಿಸುತ್ತಿರುವುದಾಗಿಯೂ ಇರುವ ಗಜ ವನ್ನು ತನ್ನ ನಾಲ್ವರು ಸಚಿವರೊಡನೇರಿ ಹೋಗುತ್ತಿದ್ದುದನ್ನೂ ಸ್ವಪ್ನದಲ್ಲಿ ಕಂಡೆನು. ಮಿಕ್ಕ ರಾಕ್ಷಸರೆಲ್ಲರೂ ಎಣ್ಣೆಯನ್ನು ಕುಡಿದು, ಕೆಂಪು ಬಟ್ಟೆಗಳನ್ನುಟ್ಟು, ಕೆಂಪು ಹೂಗಳ

---

§ "ಮುಂಡಾಃ" ತಿ. ಪಾ. ‡ ಈ ಎರಡು ಶ್ಲೋಕಗಳೂ ಗೋ. ಪಾಠದಲ್ಲಿ ಅಧಿಕ.

॥ ೩೩ ॥ ಸಮಾಜಶ್ಚ * ಮಯಾ ದೃಷ್ಟೋ ಗೀತವಾದಿತ್ರನಿಸ್ಸ್ವನಃ । ಪಿಬತಾಂ ರಕ್ತಮಾಲ್ಯಾನಾಂ ರಕ್ಷಸಾಂ ರಕ್ತವಾಸಸಾಂ ॥ ೩೪ ॥ ¶ ಲಂಕಾ ಚೇಯಂ ಪುರೀ ರಮ್ಯಾ ಸವಾಜಿರಥಕುಂಜರಾ । ಸಾಗರೇ ಪತಿತಾ ದೃಷ್ಟಾ ಭಗ್ನಗೋಪುರತೋರಣಾ ॥ ೩೫ ॥ ಲಂಕಾ ದೃಷ್ಟಾ ಮಯಾ ಸ್ವಪ್ನೇ ರಾವಣೇನಾಭಿರಕ್ಷಿತಾ । ದಗ್ಧಾ ರಾಮಸ್ಯ ದೂತೇನ ವಾನರೇಣ ತರಸ್ವಿನಾ ॥ ೩೬ ॥ ಪೀತ್ವಾ ತೈಲಂ ಪ್ರನೃತ್ತಾಶ್ಚ ಪ್ರಹಸಂತ್ಯೋ ಮಹಾಸ್ವನಾಃ । ಲಂಕಾಯಾಂ ಭಸ್ಮರೂಕ್ಷಾಯಾಂ ಪ್ರವಿಷ್ಟಾ ರಾಕ್ಷಸಸ್ತ್ರಿಯಃ ॥ ೩೭ ॥ ಕುಂಭಕರ್ಣಾದಯಶ್ಚೇಮೇ ಸರ್ವೇ ರಾಕ್ಷಸಪುಂಗವಾಃ । ರಕ್ತಂ ನಿವಸನಂ ಗೃಹ್ಯ ಪ್ರವಿಷ್ಟಾ ಗೋಮಯಹ್ರದೇ ॥ ೩೮ ॥ ಅಪಗಚ್ಛತ Ψ ನಶ್ಯಧ್ವಂ ಸೀತಾ § ಮಾಪ

ಸಮಾಜಃ - ಸಭೆಯು, ಗೀತ....ನಃ - ಗಾನದಿಂದಲೂ, ವಾದ್ಯಗಳಿಂದಲೂ ಧ್ವನಿಮಾಡುತ್ತಿರುವುದಾಗಿ, ಮಯಾ - ನನ್ನಿಂದ, ದೃಷ್ಟಾ-ಕಾಣಲ್ಪಟ್ಟಿತು. ॥ ೩೪ ॥ ರಮ್ಯಾ-ಮನೋಹರವಾದ, ಸವಾ....ರಾ- ಕುದುರೆಗಳಿಂದಲೂ, ರಥಗಳಿಂದಲೂ, ಆನೆಗಳಿಂದಲೂ ಕೂಡಿರುವ, ಇಯಂಲಂಕಾಪುರೀಚ - ಈ ಲಂಕಾಪಟ್ಟಣವೂ ಕೂಡ, ಭಗ್ನ....ಣಾ - ಮುರಿದ ಗೋಪುರಗಳೂ, ಊರುಬಾಗಿಲುಗಳೂ ಉಳ್ಳುದಾಗಿಯೂ, ಸಾಗರೇ - ಕಡಲಿನಲ್ಲಿ, ಪತಿತಾ - ಬಿದ್ದುಹೋದುದಾಗಿಯೂ, ದೃಷ್ಟಾ - ಕಾಣಲ್ಪಟ್ಟಿತು. ॥ ೩೫ ॥ ರಾವಣೇನ - ರಾವಣನಿಂದ, ಅಭಿರಕ್ಷಿತಾ - ರಕ್ಷಿಸಲ್ಪಟ್ಟ, ಲಂಕಾ - ಲಂಕಾನಗರಿಯು, ರಾಮಸ್ಯ - ಶ್ರೀರಾಮನ, ದೂತೇನ - ಕಿಂಕರನಾದ, ತರಸ್ವಿನಾ - ಬಲವಂತನಾದ, ವಾನರೇಣ - ಕಪಿಯಿಂದ, ದಗ್ಧಾ - ಸುಡಲ್ಪಟ್ಟುದಾಗಿ, ಸ್ವಪ್ನೇ - ಕನಸಿನಲ್ಲಿ, ಮಯಾ - ನನ್ನಿಂದ, ದೃಷ್ಟಾ - ಕಾಣಲ್ಪಟ್ಟಿತು. ॥ ೩೬ ॥ ತೈಲಂ - ಎಣ್ಣೆಯನ್ನು, ಪೀತ್ವಾ - ಕುಡಿದು, ಪ್ರನೃತ್ತಾಃ - ಕುಣಿಯುತ್ತಿರುವ, ಪ್ರಹಸಂತ್ಯಃ - ನಗುತ್ತಿರುವ, ಮಹಾಸ್ವನಾಃ - ಗರ್ಜಿಸುತ್ತಿರುವ, ರಾಕ್ಷಸಸ್ತ್ರಿಯಃ - ರಕ್ಕಸಿಯರು, ಭಸ್ಮರೂಕ್ಷಾಯಾಂ - ಬೂದಿಯಿಂದ ವ್ಯಾಪ್ತವಾದ, ಲಂಕಾಯಾಂ - ಲಂಕಾಪುರಿಯನ್ನು, ಪ್ರವಿಷ್ಟಾಃ - ಹೊಕ್ಕರು. ॥ ೩೭ ॥ ಕುಂಭ....ಯಃ - ಕುಂಭಕರ್ಣನೇ ಮೊದಲಾದ, ರಾಕ್ಷಸಪುಂಗವಾಃ-ರಾಕ್ಷಸಶ್ರೇಷ್ಠರಾದ, ಇಮೇಸರ್ವೇ - ಇವರೆಲ್ಲರೂ, ರಕ್ತಂ - ಕೆಂಪಾದ, ನಿವಸನಂ - ವಸ್ತ್ರಗಳನ್ನು, ಗೃಹ್ಯ - ಗ್ರಹಿಸಿ, ಗೋಮಯಹ್ರದೇ - ಸಗಣಿಯ ಗುಳಿಯಲ್ಲಿ, ಪ್ರವಿಷ್ಟಾಃ - ಪ್ರವೇಶಿಸಿದರು. ॥ ೩೮ ॥ ಅಪ

ಹಾರಗಳನ್ನು ಧರಿಸಿ, ಆಡುತ್ತ, ಹಾಡುತ್ತ, ನಾನಾವಾದ್ಯಗಳು ಮೊಳಗುತ್ತಿರಲು ಗುಂಪುಗೂಡಿದ್ದುದನ್ನು ಕಂಡೆನು. ಇದುಮಾತ್ರವಲ್ಲದೆ ರಾವಣನು ಪರಿಪಾಲಿಸುತ್ತಿರುವ ಈ ಲಂಕಾನಗರವೆಲ್ಲವೂ ಶ್ರೀರಾಮದೂತನೂ, ಮಹಾ ಪರಾಕ್ರಮಶಾಲಿಯೂ ಆದ ಒಬ್ಬ ವಾನರೋತ್ತಮನಿಂದ ಸುಡಲ್ಪಡುತ್ತಿರುವಂತೆಯೂ ನಾನು ಸ್ವಪ್ನವನ್ನು ಕಂಡೆನು. ॥ ೩೧–೩೬ ॥ ಲಂಕಾನಗರದಲ್ಲಿರುವ ರಾಕ್ಷಸಸ್ತ್ರೀಯರೆಲ್ಲರೂ ಎಣ್ಣೆಯನ್ನು ಕುಡಿದು, ಬಹಳವಾಗಿ ನಗುತ್ತಲೂ, ಮಹಾ ಕೋಲಾಹಲವಾಗಿ ಧ್ವನಿಗೈಯುತ್ತಲೂ ಸುಟ್ಟು ಬೂದಿಯಾಗಿ ಪ್ರವೇಶಿಸಲಸದಳವಾದ ಈ ಲಂಕಾನಗರದಲ್ಲಿ ಅಲ್ಲಲ್ಲಿ ಅಲೆದಾಡುತ್ತಿದ್ದರು. ಇಷ್ಟೆಯಲ್ಲದೆ ಕುಂಭಕರ್ಣನೇ ಮೊದಲಾದ ರಾಕ್ಷಸರೆಲ್ಲರೂ ರಕ್ತವಸ್ತ್ರಗಳನ್ನೂ, ರಕ್ತಪುಷ್ಪಮಾಲಿಕೆಗಳನ್ನೂ ಧರಿಸಿ ಒಂದು ದೊಡ್ಡ ಗೋಮಯ ಹ್ರದದಲ್ಲಿ ಮುಳುಗಿಹೋದರು. ಎಲೆ ರಾಕ್ಷಸಿಯರೇ!

---

* "ಮಹಾನ್ಸ್ವೃತ್ತೋ" ತಿ. ಮ. ಪಾ. ¶ ಈ ಶ್ಲೋಕವು ಗೊ. ಪಾಠದಲ್ಲಿ ಅಧಿಕ.

Ψ "ಪಶ್ಯಧ್ವಂ" ತಿ. ರಾ. ಪಾ. § "ಆಪ್ನೋತಿ" ಕ. ತಿ. ಪಾ.

ಸರಾಘವಃ । ಘಾತಯೇತ್ಪರಮಾಮರ್ಷೀ ಸರ್ವೈಸ್ಸಾರ್ಧಂ ಹಿ ರಾಕ್ಷಸೈಃ ॥ ೩೯ ॥ ಪ್ರಿಯಾಂ ಬಹುಮತಾಂ ಭಾರ್ಯಾಂ ವನವಾಸಮನುವ್ರತಾಂ । ಭರ್ತ್ಸಿತಾಂ ತರ್ಜಿತಾಂ ವಾಪಿ ನಾನುಮಂಸ್ಯತಿ ರಾಘವಃ ॥೪೦॥ ತದಲಂ ಕ್ರೂರವಾಕ್ಯೈರ್ವಸ್ಸಾಂತ್ವಮೇವಾಭಿಧೀಯತಾಂ । ಅಭಿಯಾಚಾಮ ವೈದೇಹೀಮೇತದ್ಧಿ ಮಮ ರೋಚತೇ ॥೪೧॥ ಯಸ್ಯಾಮೇವಂ ವಿಧಸ್ಸ್ವಪ್ನೋ ದುಃಖಿತಾಯಾಂ ಪ್ರದೃಶ್ಯತೇ। ಸಾ ದುಃಖೈರ್ವಿವಿಧೈರ್ಮುಕ್ತಾ ಪ್ರಿಯಂ ಪ್ರಾಪ್ನೋತ್ಯನುತ್ತಮಂ ॥ ೪೨ ॥ ಭರ್ತ್ಸಿತಾಮಪಿ ಯಾಚಧ್ವಂ

ಗಚ್ಛತಿ - ಓಡಿಹೋಗಿರಿ, ನಶ್ಯಧ್ವಂ - ನಾಶವಾಗುತ್ತೀರಿ, ಸರಾಘವಃ-ಆ ಶ್ರೀರಾಮನು, ಸೀತಾಂ -ಸೀತಾದೇವಿಯನ್ನು, ಆಪ-ಹೊಂದಿದನು, ಪರಮಾಮರ್ಷೀ-ಮಹಾ ಕೋಪಿಷ್ಠನಾದ, (ಸಃ ಆ ಶ್ರೀರಾಮನು) ಸರ್ವೈಃ-ಸಮಸ್ತರಾದ, ರಾಕ್ಷಸೈಸ್ಸಾರ್ಧಂ-ರಾಕ್ಷಸರೊಡನೆ, (ವಃ-ನಿಮ್ಮನ್ನು) ಘಾತಯೇದ್ಧಿ-ಕೊಲ್ಲಿಸುವನಷ್ಟೆ. ॥ ೩೯ ॥ ರಾಘವಃ - ಶ್ರೀರಾಮನು, ಬಹುಮತಾಂ - ಪೂಜ್ಯಳಾದ, ವನವಾಸಂ - ವನವಾಸವನ್ನು ಕುರಿತು, ಅನುವ್ರತಾಂ - ಅನುಸರಿಸಿ ಬಂದಿರುವ, ಪ್ರಿಯಾಂ - ಇಷ್ಟಳಾದ, ಭಾರ್ಯಾಂ - ಹೆಂಡತಿಯನ್ನು, ಭರ್ತ್ಸಿತಾಂ - ಹೆದರಿಸಲ್ಪಟ್ಟವಳನ್ನಾದರೂ, ತರ್ಜಿತಾಂವಾಪಿ - ಹಿಂಸಿಸಲ್ಪಟ್ಟವಳನ್ನಾದರೂ, ನಾನುಮಂಸ್ಯತಿ - ಸೈರಿಸಲಾರನು. ॥ ೪೦ ॥ ತತ್ - ಆ ಕಾರಣದಿಂದ, ವಃ - ನಿಮ್ಮ, ಕ್ರೂರವಾಕ್ಯೈಃ - ಕೆಟ್ಟಮಾತುಗಳಿಂದ, ಅಲಂ - ಸಾಕು, ಸಾಂತ್ವಮೇವ-ಸೈರಣೆಯೇ, ಅಭಿಧೀಯತಾಂ-ತಾಳಲ್ಪಡಲಿ, ವೈದೇಹೀಂ - ಸೀತಾದೇವಿಯನ್ನು, ಅಭಿಯಾಚಾಮ - ಬೇಡೋಣ, ಏತದ್ಧಿ - ಇದೇ, ಮಮ - ನನಗೆ, ರೋಚತೇ - ತೋರುತ್ತದೆ. ॥ ೪೧ ॥ ಯಸ್ಯಾಂ - ಯಾವ ಸೀತೆಯು, ದುಃಖಿತಾಯಾಂ - ದುಃಖಿತಳಾಗಲು, ಏವಂವಿಧಃ - ಈ ಪರಿಯಾದ, ಸ್ವಪ್ನಃ - ಕನಸು, ಪ್ರದೃಶ್ಯತೇ - ಕಾಣಲ್ಪಟ್ಟಹೋ, ಸಾ - ಆ ಸೀತೆಯು, ವಿವಿಧೈಃ - ಅನೇಕ ರೀತಿಗಳಾದ, ದುಃಖೈಃ - ವ್ಯಸನಗಳಿಂದ, ಮುಕ್ತಾ - ಬಿಡಲ್ಪಟ್ಟವಳಾಗಿ, ಅನುತ್ತಮಂ - ಸರ್ವಶ್ರೇಷ್ಠನಾದ, ಪ್ರಿಯಂ-ಪತಿಯನ್ನು, ಪ್ರಾಪ್ನೋತಿ - ಹೊಂದುವಳು. ॥ ೪೨ ॥ ಹೇ ರಾಕ್ಷಸ್ಯಃ-ಓ ರಾಕ್ಷಸಾಂಗನೆಯರೇ, ಭರ್ತ್ಸಿತಾಮಪಿ-ಹೆದರಿಸಲ್ಪಟ್ಟವಳ

ನೀವಿಲ್ಲಿಂದ ಹೊರಟುಹೋಗಿರಿ. ಹಾಗೆ ಮಾಡದೆ ಇಲ್ಲಿಯೇ ಇದ್ದುದಾದರೆ ನಿಮಗೆ ಕೇಡು ತಪ್ಪದು. ಖಂಡಿತವಾಗಿಯೂ ನೀವೆಲ್ಲರೂ ನಾಶವಾಗಿ ಹೋಗುವಿರಿ. ಶ್ರೀರಾಮನು ಸೀತೆಯನ್ನು ಪಡೆದನೆಂಬುದರಲ್ಲಿ ಎಷ್ಟುಮಾತ್ರವೂ ಸಂಶಯವಿಲ್ಲವು. ಆ ಶ್ರೀರಾಮನು ಮಹಾಕೋಪೋದ್ದೀಪಿತನಾಗಿ ಸಮಸ್ತ ರಾಕ್ಷಸರನ್ನೂ, ನಿಮ್ಮನ್ನೂ ಸಂಹರಿಸುವನೆಂದು ತಿಳಿಯಿರಿ. ಎಲೌ ಅಸುರಾಂಗನೆಯರೇ! ಶ್ರೀರಾಮನಿಗೆ ಪರಮಪ್ರಿಯಳಾದವಳೂ, ಆತನಿಂದ ವಿಶೇಷವಾಗಿ ಗೌರವಿಸಲಾದವಳೂ, ವನವಾಸದಲ್ಲಿಯೂ ಕೂಡ ಆತನನ್ನೇ ಹಿಂಬಾಲಿಸಿದವಳೂ ಆದ ಈ ಸೀತಾದೇವಿಯನ್ನು ನೀವೆಲ್ಲರೂ ನಿಂದಿಸಿದರೂ, ಬೆದರಿಸಿದರೂ ಶ್ರೀರಾಮನೆಷ್ಟುಮಾತ್ರಕ್ಕೂ ಸಹಿಸುವುದಿಲ್ಲವು. ಆದುದರಿಂದ ನೀವೀಗ ಕ್ರೂರವಾಕ್ಯಗಳನ್ನು ಬಿಟ್ಟು ಸಾಂತ್ವವಚನಗಳಿಂದ ಈಕೆಯನ್ನು ಸಮಾಧಾನಗೊಳಿಸಿರಿ. ಎಲೆ ರಾಕ್ಷಸಿಯರೇ! ಈಗ ನಾವೆಲ್ಲರೂ ತಪ್ಪುಗಳೆಲ್ಲವನ್ನು ಮನ್ನಿಸೆಂದು ಈಕೆಯನ್ನು ಪ್ರಾರ್ಥಿಸೋಣ. ಇದರಿಂದ ನಮಗೆ ಶ್ರೇಯಸ್ಸಾಗುವುದೆಂದು ನನಗೆ ತೋರುವುದು. ॥ ೩೭—೪೧ ॥ ಇಷ್ಟೆಯಲ್ಲದೆ ಯಾವ ಸ್ತ್ರೀಯೇ ಆದರೂ ವ್ಯಸನಸಮುದ್ರದಲ್ಲಿ ಮುಳುಗಿರುವಾಗ ಇಂತಹ ಸ್ವಪ್ನವುಂಟಾದರೆ ಆ ಸ್ತ್ರೀಯು ಸಮಸ್ತ ವ್ಯಸನಗಳಿಂದಲೂ ವಿಮುಕ್ತಳಾಗಿ ಹೇಳಲಸದಳವಾದ ಸುಖಸಂತೋಷಗಳನ್ನು ಪಡೆದೇ ಪಡೆ

ರಾಕ್ಷಸ್ಯಃ ಕಿಂ ವಿವಕ್ಷಯಾ? । ರಾಘವಾದ್ಧಿ ಭಯಂ ಘೋರಂ ರಾಕ್ಷಸಾನಾಮುಪಸ್ಥಿತಂ ॥ ೪೩ ॥ ಅಭಿಪಾತಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ । ಅಲಮೇಷಾ ಪರಿತ್ರಾತುಂ ರಾಕ್ಷಸ್ಯೋ ಮಹತೋ ಭಯಾತ್ ॥ ೪೪ ॥ ಅಪಿಚಾಽಸ್ಯಾ ವಿಶಾಲಾಕ್ಷ್ಯಾ ನಕಿಂಚಿದುಪಲಕ್ಷಯೇ । ವಿರೂಪಮಪಿ ಚಾಂಗೇಷು ಸುಸೂಕ್ಷ್ಮಮಪಿ ಲಕ್ಷಣಂ ॥೪೫॥ ಛಾಯಾವೈಗುಣ್ಯಮಾತ್ರಂತು ಶಂಕೇ ದುಃಖಮುಪಸ್ಥಿತಂ । ಅದುಃಖಾರ್ಹಾಮಿಮಾಂ ದೇವೀಂ ವೈಹಾಯಸಮುಪಸ್ಥಿತಾಂ ॥ ೪೬ ॥ ಅರ್ಥಸಿದ್ಧಿಂ ತು ವೈದೇಹ್ಯಾಃ ಪಶ್ಯಾ

ನ್ನಾದರೂ, ಯಾಚಧ್ವಂ - ಬೇಡಿಕೊಳ್ಳಿರಿ, ವಿವಕ್ಷಯಾ - ಬಹಳ ಮಾತನಾಡುವುದರಿಂದ, ಕಿಂ - ಏನುಪ್ರಯೋಜನವು, ರಾಕ್ಷಸಾನಾಂ - ರಕ್ಕಸರಿಗೆ, ರಾಘವಾತ್ - ಶ್ರೀರಾಮನಿಂದ, ಘೋರಂ - ಕ್ರೂರವಾದ, ಭಯಂ - ಭೀತಿಯು, ಉಪಸ್ಥಿತಂ - ಸಮೀಪಿಸಿತು. ॥ ೪೩ ॥ ಹೇ ರಾಕ್ಷಸ್ಯಃ - ಓ ರಕ್ಕಸಿಯರೇ, ಹಿ-ಯಾವ ಕಾರಣದಿಂದ, ಜನಕಾತ್ಮಜಾ - ಜನಕಪುತ್ರಿಯಾದ, ಏಷಾ - ಈ, ಮೈಥಿಲೀ-ಸೀತೆಯು, ಅಭಿಪಾತಪ್ರಸನ್ನಾ - ಶರಣಾಗತಿಯಿಂದ ಅನುಗ್ರಹವುಳ್ಳವಳಾದ ಕಾರಣವೇ, ಮಹತೋ ಭಯಾತ್ - ಮಹಾ ಭೀತಿಯಿಂದ, ಪರಿತ್ರಾತುಂ - ರಕ್ಷಿಸುವುದಕ್ಕೆ, ಅಲಂ - ಸಮರ್ಥಳು. ॥ ೪೪ ॥ ಅಪಿಚ - ಇಷ್ಟುಮಾತ್ರವಲ್ಲ, ವಿಶಾಲಾಕ್ಷ್ಯಾಃ - ವಿಶಾಲನೇತ್ರಗಳುಳ್ಳ, ಅಸ್ಯಾಃ - ಈ ಸೀತಾದೇವಿಯ, ಅಂಗೇಷು - ಅವಯವಗಳಲ್ಲಿ, ಸುಸೂಕ್ಷ್ಮಂ - ಅತಿ ಸ್ವಲ್ಪವಾದ, ಲಕ್ಷಣಂ - ಲಕ್ಷಣವನ್ನು, ಕಿಂಚಿತ್ - ಸ್ವಲ್ಪವಾದರೂ, ವಿರೂಪಂ - ವಿಕಲ್ಪವಾಗಿರುವದನ್ನಾಗಿ, ನೋಪಲಕ್ಷಯೇ - ಕಾಣೆನು. ॥ ೪೫ ॥ ಛಾಯಾ....ತು - ಕಾಂತಿಯ ಒಂದು ಕಳೆಮಾತ್ರ ಕಂದಿರುವದನ್ನು, ಉಪಲಕ್ಷಯೇ - ಕಾಣುತ್ತೇನೆ, ಅದುಃಖಾರ್ಹಾಂ - ದುಃಖಕ್ಕೆ ತಕ್ಕವಳಲ್ಲದಿರುವ, ವೈಹಾಯಸಂ - ವಿಮಾನವನ್ನು, ಉಪಸ್ಥಿತಾಂ - ಹೊಂದಿರುವ, ಇಮಾಂದೇವೀಂ - ಈ ಸೀತಾದೇವಿಯನ್ನು ಕುರಿತು, ದುಃಖಂ - ವ್ಯಸನವು, ಉಪಸ್ಥಿತಮಿತಿ - ಸಮೀಪಿಸಿತೆಂದು, ಶಂಕೇ - ಊಹಿಸುತ್ತೇನೆ. ॥ ೪೬ ॥ ಕಿಂತು-ಆದರೆ, ವೈದೇಹ್ಯಾಃ - ಸೀತಾದೇವಿಗೆ, ಉಪಸ್ಥಿತಾಂ - ಸಮೀಪಿಸಿದ, ಅರ್ಥಸಿದ್ಧಿಂ - ಕಾರ್ಯಸಿದ್ಧಿಯನ್ನು,

---

ಯುತ್ತೇನೆಂಬುದರಲ್ಲಿ ಸಂಶಯವಿಲ್ಲವು. ಆದುದರಿಂದಲೇ ರಾಕ್ಷಸಿಯರೇ ನೀವು ಈ ಸೀತಾದೇವಿಯನ್ನು ಪ್ರಾರ್ಥಿಸಿಕೊಳ್ಳಿರಿ. ಈ ವಿಷಯದಲ್ಲಿ ಸಂದೇಹಪಡಬೇಡಿರಿ. ಈ ಸೀತೆಯು ನಿಮ್ಮಿಂದ ಬಹಳ ಪೀಡಿತಳಾಗಿರುವಳು. ಹೀಗಿದ್ದರೂ ನೀವು ಪ್ರಾರ್ಥಿಸಿದುದಾದರೆ ನಿಮ್ಮನ್ನು ಮನ್ನಿಸದಿರಲಾರಳು. ಇದೋ ಶ್ರೀರಾಮನಿಂದ ಸಮಸ್ತ ರಾಕ್ಷಸರಿಗೂ ಮಹತ್ತರವಾದ ಭಯವೊದಗಬಹುದು ; ಒದಗುತ್ತದೆ. ಆದುದರಿಂದ ಎಲೌ ರಾಕ್ಷಸಿಯರೇ! ಜನಕರಾಜಕುವರಿಯಾದ ಈ ಸೀತೆಯು ನಿಮ್ಮ ನಮಸ್ಕೃತಿಗಳಿಂದ ಪ್ರಸನ್ನಳಾಗಿ ನಿಮ್ಮನ್ನು ಸಮಸ್ತ ಭಯಗಳಿಂದಲೂ,ಆಪತ್ತುಗಳಿಂದಲೂ ಕಾಪಾಡಲು ಸಮರ್ಥಳಾಗಿರುವಳೆಂದು ತಿಳಿಯಿರಿ. ಶ್ರೀರಾಮನಿಂದ ಮುಂದಕ್ಕೆ ಒದಗುವ ಸಂಕಟದಿಂದ ರಕ್ಷಿಸಲು ಈಕೆಯು ಸಮರ್ಥಳೇ ಆಗಿರುವಳು. ॥೪೨-೪೪॥ ಇದೂ ಅಲ್ಲದೆ ವಿಶಾಲನೇತ್ರೆಯಾದ ಈ ಸೀತಾದೇವಿಯ ಅವಯವಗಳಲ್ಲಿ ವ್ಯಸನವನ್ನುಂಟುಮಾಡುವ ಬಹು ಸೂಕ್ಷ್ಮವಾದ ಸಾಮುದ್ರಿಕಾ ಲಕ್ಷಣವಾಗಲಿ,ಅಂಗವೈಕಲ್ಯವಾಗಲಿ ಕಾಣುವುದಿಲ್ಲ. ಆದರೂ ಕಾಂತಿಯು ಮಾತ್ರ ಸ್ವಲ್ಪ ಕಂದಿರುವುದು. ಆದುದರಿಂದಲೇ ಈಕೆಯು ಈ ರೀತಿ ವ್ಯಸನಕ್ಕೀಡಾಗಿರುವಳೆಂದು ಶಂಕಿಸುವೆನು. ನಮ್ಮ ರಾಕ್ಷಸೇಶ್ವರನಾದ ರಾವ

ನ್ಮಹಮುಪಸ್ಥಿತಾಂ । ರಾಕ್ಷಸೇಂದ್ರವಿನಾಶಂಚ ವಿಜಯಂ ರಾಘವಸ್ಯಚ ॥ ೪೭ ॥ ನಿಮಿತ್ತಭೂತಮೇತತ್ತು ಶ್ರೋತುಮಸ್ಯಾ ಮಹತ್ಪ್ರಿಯಂ । ದೃಶ್ಯತೇ ತತ್ ಸ್ಫುರಚ್ಚಕ್ಷುಃ ಪದ್ಮಪತ್ರಮಿವಾಯತಂ ॥೪೮॥ ಈಷಚ್ಚ ಹೃಷಿತೇವಾಽಸ್ಯಾದಕ್ಷಿಣಾಯಾ ಹ್ಯದಕ್ಷಿಣಃ । ಅಕಸ್ಮಾದೇವ ವೈದೇಹ್ಯಾ ಬಾಹುರೇಕಃ ಪ್ರಕಂಪತೇ ॥ ೪೯ ॥ ಕರೇಣುಹಸ್ತಪ್ರತಿಮ ಸ್ಸವ್ಯಶ್ಚೋರುರನುತ್ತಮಃ । ‡ ವೇಪಮಾನಸ್ಸೂಚಯತಿ ರಾಘವಂ ಪುರತಸ್ಥಿತಂ ॥ ೫೦ ॥

ಪಶ್ಯಾಮಿ - ನೋಡುತ್ತೇನೆ, ರಾಕ್ಷ....ಚ - ರಾವಣಾಸುರನ ಮರಣವನ್ನು, ರಾಘವಸ್ಯ-ಶ್ರೀರಾಮನಿಗೆ, ವಿಜಯಂಚ - ಜಯವನ್ನು ಸಹಾ, ಪಶ್ಯಾಮಿ - ನೋಡುವೆನು. ॥ ೪೭ ॥ ಅಸ್ಯಾಃ - ಈ ಸೀತಾದೇವಿಗೆ, ಮಹತ್ - ದೊಡ್ಡದಾದ, ಪ್ರಿಯಂ - ಇಷ್ಟವಾದ ಮಾತನ್ನು, ಶ್ರೋತುಂ - ಕೇಳುವದಕ್ಕೆ, ನಿಮಿತ್ತಭೂತಂ - ಕಾರಣವಾದ, ಪದ್ಮಪತ್ರಮಿವ - ಕಮಲದೆಸಳಿನಂತೆ, ಆಯತಂ - ವಿಸ್ತಾರವಾದ, ಏತಚ್ಚಕ್ಷುಃ - ಈ ಕಣ್ಣು, ಸ್ಫುರತಂ - ಚಲಿಸುತ್ತಿರುವುದಾಗಿಯೂ, ದೃಶ್ಯತೇ - ಕಾಣಲ್ಪಡುತ್ತದೆ, ದಕ್ಷಿಣಾಯಾಃ - ದಾಕ್ಷಿಣ್ಯಶಾಲಿನಿಯಾದ, ಅಸ್ಯಾವೈದೇಹ್ಯಾಃ-ಈ ಸೀತಾದೇವಿಯ, ಏಕಃ - ಒಂದಾದ, ಅದಕ್ಷಿಣೋಬಾಹುಃ - ಎಡಭುಜವು, ಈಷತ್ - ಸ್ವಲ್ಪವಾಗಿ, ಹೃಷಿತೋವಾ - ಸಂತೋಷವುಳ್ಳುದಂತೆ, ಅಕಸ್ಮಾತ್ - ಕಾರಣವಿಲ್ಲದೆಯೇ, ಪ್ರಕಂಪತೇ-ಚಲಿಸುತ್ತದೆ, ಕರೇ....ಮಃ-ಹೆಣ್ಣಾನೆಯ ಸೊಂಡಿಲಿಗೆ ಸಮಾನವಾದ, ಅನುತ್ತಮಃ - ಉತ್ಕೃಷ್ಟವಾದ, ವೇಪಮಾನಃ - ನಡುಗುತ್ತಿರುವ, ಸವ್ಯಃಊರುಶ್ಚ - ಎಡದೊಡೆಯೂ, ರಾಘವಂ - ಶ್ರೀರಾಮನನ್ನು, ಪುರತಃ - ಮುಂದುಗಡೆ, ಸ್ಥಿತಂ - ಇರುವವನನ್ನಾಗಿ, ಸೂಚಯತಿ - ತೋರಿಸಿಕೊಡುತ್ತದೆ. ॥ ೪೮-೫೦ ॥ ಶಾಖಾನಿಲಯಂ-ರಂಬೆಯೊಳಗಣ ಗೂಡನ್ನು, ಪ್ರವಿಷ್ಟಃ - ಹೊಕ್ಕಿರುವ, ಉತ್ತ....ದೀ - ಒಳ್ಳೆಯದಾದ ಶಾಂತವಾದ ಮಾತನ್ನು ಹೇಳುತ್ತಿರುವ, ಪುನಃಪುನಃ - ಬಾರಿಬಾರಿಗೂ, ಸುಸ್ವಾಗತಾಂ - ಶೋಭನವಾದ ಶುಭಾಗಮನವುಳ್ಳ, ವಾಚಂ -

ಣನ ನಾಶವನ್ನೂ, ಶ್ರೀರಾಮನ ಅಭ್ಯುದಯವನ್ನೂ ಕೋರುತ್ತಿರುವ ಈಕೆಯ ಬಯಕೆಯು ಈಡೇರುವ ಕಾಲವು ಸಮೀಪಿಸಿರುವುದೆಂದು ತಿಳಿಯುತ್ತೇನೆ. ಈಗ ನಾನು ಕಂಡ ಸ್ವಪ್ನವು ಈ ಸೀತೆಯು ಇಷ್ಟರಲ್ಲಿಯೇ ಒಂದು ದೊಡ್ಡ ಶುಭವಾರ್ತೆಯನ್ನು ಕೇಳುವುದನ್ನೂ ಸೂಚಿಸುವುದು. ಇದು ಮಾತ್ರವಲ್ಲದೆ ಕಮಲಪತ್ರದಂತೆ ಅಗಲವಾದ ಕಣ್ಣುಗಳುಳ್ಳ ಈಕೆಯ ಎಡಗಣ್ಣು ಆಗಾಗ ಅದಿರುತ್ತಿರುವುದು. ಈಕೆಯ ಎಡಭುಜವು ನಿಮಿತ್ತವಿಲ್ಲದೆಯೇ ಅದಿರುತ್ತಿರುವುದು. ಆಗಿಂದಾಗ್ಗೆ ಈಕೆಯ ಎಡತೋಳಿನಲ್ಲಿ ರೋಮಾಂಚವು ಮೂಡುತ್ತಿರುವುದು. ಗಜನಾಸಕ್ಕೆ ಸಮನಾದ ಈಕೆಯ ಎಡದೊಡೆಯು ಆಗಾಗ್ಗೆ ಅದಿರುತ್ತಿರುವುದು. ಈ ಸೂಚನೆಗಳೆಲ್ಲವನ್ನೂ ನೋಡಿದರೆ ಈವೊತ್ತಿಗಾಗಲೇ ಈಕೆಯ ಗಂಡನಾದ ಶ್ರೀರಾಮನು ಈಕೆಯೆದುರಿಗೆ ಬಂದು ನಿಂತಿರುವಂತೆ ಸೂಚಿಸುವುದು. ॥ ೪೫—೫೦॥ ಎಲೆ ರಾಕ್ಷಸಾಂಗನೆಯರೇ! ಅದೋ, ಶಕುನಪಕ್ಷಿಯೂ ವೃಕ್ಷಾಗ್ರದಲ್ಲಿ ಕುಳಿತು ಅತಿ ಸಂತೋಷದಿಂದ ಅಡಿಗಡಿಗೂ ಮಧುರವಾದ ಸಮಾಧಾನದ ಮಾತುಗಳನ್ನು ನುಡಿಯುತ್ತಿರುವುದಲ್ಲದೆ ಆಪ್ತ ಬಂಧುಗಳನ್ನು ಕುರಿತ ಸುಖಾಗಮನ

‡ " ವೇಪನ್ಕಥಯತೀವಾಸ್ಯಾಃ " ತಿ. ಪಾ.

¶ ಪಕ್ಷೀಚ ಶಾಖಾನಿಲಯಂ ಪ್ರವಿಷ್ಟಃ
ಪುನಃಪುನಶ್ಚೋತ್ತಮಸಾಂತ್ವವಾದೀ ।
ಸುಸ್ವಾಗತಾಂ ವಾಚಮುದೀರಯಾನಃ
ಪುನಃಪುನಶ್ಚೋದಯತೀವಹೃಷ್ಟಃ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತವಿಂಶಸ್ಸರ್ಗಃ

ಮಾತನ್ನು, ಉದೀರಯಾನಃ-ಹೇಳುತ್ತಿರುವ, ಪಕ್ಷೀಚ-ಹಕ್ಕಿಯೂ ಕೂಡಾ, ಹೃಷ್ಟಃ-ಸಂತೋಷಯುಕ್ತವಾಗಿ, ಚೋದಯತೀವ - ಪ್ರೇರಣೆ ಮಾಡುವಂತೆ ತೋರುತ್ತಿದೆ. ॥ ೫೧ ॥ ೞ

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತವಿಂಶಸ್ಸರ್ಗಃ

ವನ್ನು ಕೇಳುವಂತೆ ಕಲಕಲ ಧ್ವನಿಗೈಯುತ್ತ ಆ ಶ್ರೀರಾಮನ ಆಗಮನವನ್ನೇ ಸೂಚಿಸುವಂತಿರುವುದು. ॥ ೫೧ ॥

ಇಂತಿದು ತ್ರಿಜಟಾ ಸ್ವಪ್ನವೃತ್ತಾಂತವೆಂಬ ಇಪ್ಪತ್ತೇಳನೆಯ ಸರ್ಗವು
ಸಮಾಪ್ತವಾದುದು.

ೞ “ ತತಃ ಸಾ ಹ್ರೀಮತೀ ಬಾಲಾಭರ್ತುರ್ವಿಜಯ ಹರ್ಷಿತಾ । ಅವೋಚ ದ್ಯದಿ ತತ್ತಥ್ಯಂ ಭವೇಯಂ ಶರಣಂ ಹಿವಃ ॥ ” ತಿ. ಪಾ.

ಅರ್ಥ.—ತತಃ - ತ್ರಿಜಟೆಯು ಸ್ವಪ್ನವನ್ನು ಹೇಳಿದಮೇಲೆ, ಹ್ರೀಮತೀ - ನಾಚಿಕೆಯುಳ್ಳ, ಬಾಲಾ - ಸುಕುಮಾರಿಯಾದ, ಸಾ - ಆ ಸೀತೆಯು, ಭರ್ತು...ತಾ - ತನ್ನ ಪತಿದೇವನಾದ ಶ್ರೀರಾಮನ ವಿಜಯಸೂಚಕವಾದ ಆ ತ್ರಿಜಟೆಯ ಸ್ವಪ್ನವೃತ್ತಾಂತದಿಂದ ಸಂತೋಷಪಟ್ಟವಳಾಗಿ, “ತತ್ - ತ್ರಿಜಟೆಯು ಸ್ವಪ್ನದಂತೆ ಶ್ರೀರಾಮನ ವಿಜಯವು, ಯದಿತಥ್ಯಂ - ನಿಜವಾದುದೇ ಆದರೆ, ಅಹಂ - ನಾನು, ವಃ - ನಿಮಗೆ, ಶರಣಂ - ಶರಣ್ಯಳು, ಭವೇಯಂಹಿ - ಆಗುವೆನಷ್ಟೆ?” ಇತಿ - ಹೀಗೆಂದು, ಅವೋಚತ್ - ಹೇಳಿದಳು. (ತಾತ್ಪರ್ಯ ಸುಗಮವಾಗಿದೆ.)

¶ ಈ ಶ್ಲೋಕದಲ್ಲಿನ ವಿಶೇಷಾರ್ಥಗಳು:—ವಾಲ್ಮೀಕಿ ಪ್ರಣೀತವಾದ ಶ್ರೀಮದ್ರಾಮಾಯಣವು ಉತ್ತಮ ಕಾವ್ಯವು; ಉತ್ತಮ ಕಾವ್ಯದ ವೈಶಿಷ್ಟ್ಯವೆಂದರೆ ವ್ಯಂಗ್ಯಪ್ರಧಾನವಾಗಿರುವುದು. ಈ ವ್ಯಂಗ್ಯವು ಪದಗತವೆಂದೂ, ವಾಕ್ಯಗತವೆಂದೂ, ಪ್ರಬಂಧಗತವೆಂದೂ ಮೂರು ಬಗೆ. (ಕಾವ್ಯವು ಉತ್ತಮ ಮಧ್ಯಮಾದಿ ಭೇದಗಳಿಂದ ಮೂರು ಬಗೆಯಾಗಿವೆ. ಎಲ್ಲಿ ವಾಚ್ಯಾತಿಶಾಯಿಯಾದ ವ್ಯಂಗ್ಯತ್ವವಿರುವುದೋ ಅದು ಉತ್ತಮ ಕಾವ್ಯಕೋಟಿಗೆ ಸೇರುವುದು. (ಈ ವ್ಯಂಗ್ಯವೇ ಧ್ವನಿಯೆನಿಸಿಕೊಳ್ಳುತ್ತದೆ.) ವಾಚ್ಯಾನತಿಶಾಯಿ ವ್ಯಂಗ್ಯತ್ವವನ್ನೊಳಗೊಂಡಿರುವ ಕಾವ್ಯವು ಮಧ್ಯಮಕೋಟಿಗೂ, ವ್ಯಂಗ್ಯತ್ವವೇ ಶೂನ್ಯವಾಗಿರುವ ಕಾವ್ಯವು ಅಧಮಕೋಟಿಗೂ ಸೇರುತ್ತವೆ.) ಎಂದರೆ ಅಧಮ ಕಾವ್ಯದಲ್ಲಿ ಧ್ವನಿಯೆಂಬುದಿರುವುದಿಲ್ಲ. ಕೇವಲ ಪದಾಡಂಬರವೇ ಅಧಿಕವಾಗಿದ್ದು ಶುಷ್ಕವಾಗಿರುತ್ತದೆಯೆಂದು ತಿಳಿಯಬೇಕು.

ಪ್ರಕೃತದಲ್ಲಿ ವಾಲ್ಮೀಕಿಮುನಿಯು, ಈ ಸುಂದರಕಾಂಡರೂಪಪ್ರಬಂಧದಲ್ಲಿ ಅನಾದಿ ಭಗವತ್ಸಂಬಂಧವುಳ್ಳ ಚೇತನನನ್ನು ಉಜ್ಜೀವನಗೊಳಿಸುವಂತೆ ಮಾಡಲೋಸುಗ ಆಚಾರ್ಯನ ಪ್ರವೃತ್ತಿಯನ್ನು ವ್ಯಂಗ್ಯವಾಗಿ ಪ್ರತಿಪಾದಿಸಿರುವನು. (ಈ ವಿಷಯವನ್ನು ನಾವು ಈ ಕಾಂಡದ ಮೊದಲನೇ ಶ್ಲೋಕವಾದ “ ತತೋ ರಾವಣ ನೀತಾಯಾಃ ” ಎಂಬ ಕಡೆಯೇ ಪ್ರಸ್ತಾಪಿಸಿದ್ದೇವೆ.) ಇಲ್ಲಿ ಲಂಕಾ ಪದದಿಂದ (ಚೇತನನ) ಶರೀರವು ದ್ಯೋತಿತವಾಗುವುದು. ಏಕಾಕ್ಷೀ, ಏಕಕರ್ಣೀ ಮೊದಲಾದವರ ವೃತ್ತಾಂತದಿಂದ ಚೇತನನ ಇಂದ್ರಿಯಗಳು ಸೂಚಿತವಾಗುವುವು. ರಾವಣ, ಕುಂಭಕರ್ಣರ ನಿರ್ದೇಶ

ದಿಂದ ಅಹಂಕಾರ ಮಮಕಾರಗಳು ಸೂಚಿತವಾಗುತ್ತವೆ. ಇಂದ್ರಜಿತುವೇ ಮೊದಲಾದವರು ಕಾಮಕ್ರೋಧಾದಿಗಳೆಂದು ತಿಳಿಯಬೇಕು. ಇಂತಹ ಲಂಕಾನಗರವೆಂಬ ಶರೀರದಲ್ಲಿ ಸೆರೆಹಾಕಲ್ಪಟ್ಟವನೇ ಸೀತಾರೂಪನಾದ ಚೇತನನು, ಅವನಿಗೆ ಜ್ಞಾನಮಾರ್ಗೋಪದೇಶಕನಾದ ಆಚಾರ್ಯಸ್ವರೂಪನೇ ಮಾರುತಿಯು. ಇಂತಹ ಆಚಾರ್ಯನ ಲಕ್ಷಣವು ಈ ಶ್ಲೋಕ ದಿಂದ ಹೇಳಲ್ಪಡುತ್ತದೆ.

"ಪಕ್ಷೀ" ಶಬ್ದದಿಂದ ಜ್ಞಾನಕರ್ಮಗಳೆರಡೂ ಸೂಚಿತವಾಗುತ್ತವೆ. (ವಾಸಿಷ್ಠದಲ್ಲಿಯೂ, ಉಭಾಭ್ಯಾಮಪಿ ಪಕ್ಷಾಭ್ಯಾಂ ಯಥಾ ಖೇ ಪಕ್ಷಿಣಾಂ ಗತಿಃ । ತಥೈವ ಜ್ಞಾನಕರ್ಮಭ್ಯಾಂ ನಿಯತಾ ಪರಮಾ ಗತಿಃ" ಎಂದು ಹೇಳಲ್ಪಟ್ಟಿರುವುದು.) ಆದುದರಿಂದ ಜ್ಞಾನಕರ್ಮಗಳೆರಡೂ ಪಕ್ಷಗಳಿರುವವನು ಆಚಾರ್ಯನೆಂದಂತಾಯಿತು. ಜ್ಞಾನಕರ್ಮಗಳು ಅಂಗಾಂಗೀಭಾವದಿಂದಿರುವುದು. ಇಲ್ಲಿ ಅವುಗಳ ಸಮುಚ್ಚಯವು ಹೇಳಲ್ಪಟ್ಟಿದೆ. "ಬ್ರಾಹ್ಮಣಾ ವಿವಿದಿಷಂತಿ ಯಜ್ಞೇನ ದಾನೇನ ತಪಸಾಽನಾಶಕೇನ" ಎಂದು ಶ್ರುತಿಯು ಸಾರುತ್ತದೆ. ಆಚಾರ್ಯ ಶಬ್ದನಿರ್ವಚನವು, "ಆಚಿನೋತಿಹಿ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಪಿ । ಸ್ವಯಮಾಚರತೇ ಯಸ್ಮಾತ್ ತಸ್ಮಾದಾಚಾರ್ಯ ಇತ್ಯುಚ್ಯತೇ" ಎಂಬ ಶ್ಲೋಕ ದಿಂದ ಗೊತ್ತಾಗುತ್ತದೆ. ಈ ಶ್ಲೋಕದಲ್ಲಿನ "ಶಾಖಾ" ಶಬ್ದದಿಂದ ವೇದಶಾಖೆಗಳು ಸೂಚಿತವಾಗುವುವು. "ನಿಲಯ" ಶಬ್ದದಿಂದ ತದೇಕಪರತ್ವವೂ, (ತ್ಯಾಗದಲ್ಲಿ ಪ್ರತ್ಯವಾಯವು ಕೇಳಿಬರುವುದಿಲ್ಲವಾದುದರಿಂದ ಅಂತೆಯೇ ಶಿಕ್ಷೆಯಲ್ಲಿ, "ಅಧೀತಮಪಿ ಯೋ ವೇದಂ ವಿಮುಂಚತಿ ನರಾಧಮಃ । ಭ್ರೂಣಹಾ ಸತುವಿಜ್ಞೇಯಃ ನಿಯೋನಿಮಧಿಗಚ್ಛತಿ ॥" ಎಂದು ಹೇಳಿದೆ. ಇದೂ ಅಲ್ಲದೆ, ನಿಲಯವೆಂಬುದರಿಂದ ಬ್ರಹ್ಮವಿಷಯಕ ಶ್ರವಣಮನನ ನಿಧಿಧ್ಯಾಸನ ರೂಪವಾದ ಅನುಷ್ಠಾನಾದಿಗಳೂ ಹೇಳಲ್ಪಡುತ್ತವೆ. ಏತೇನ ಆಚಾರ್ಯನ ಮತ್ತೊಂದು ಲಕ್ಷಣವೂ ಹೇಳಿದಂತಾಗುವುದು. "ಆಚಾರ್ಯೋ ವೇದ ಸಂಪನ್ನೋ ವಿಷ್ಣುಭಕ್ತೋ ವಿಮತ್ಸರಃ । ಮಂತ್ರಜ್ಞೋ ಮಂತ್ರಭಕ್ತಶ್ಚ ಸದಾ ಮಂತ್ರಾಶ್ರಯ ಶ್ಶುಚಿಃ ॥ ಗುರುಭಕ್ತ ಸಮಾಯುಕ್ತಃ ಪುರಾಣಜ್ಞೋ ವಿಶೇಷತಃ । ಏವಂ ಲಕ್ಷಣ ಸಂಪನ್ನೋ ಗುರುರಿತ್ಯಭಿಧೀಯತೇ ॥" ಎಂದು.) ಪ್ರಹೃಷ್ಟಃ. ಯಾವಾಗಲೂ ಸಂತುಷ್ಟಹೃದಯವುಳ್ಳವನು. ಇದರಿಂದ ಆಚಾರ್ಯನು ಸದಾ ಸೇವನೀಯನೆಂಬ ವಿಷಯವು ಸೂಚಿತ ವಾಯಿತು. ("ಆಹ್ಲಾದ ಶೀತನೇತ್ರಾಂಬುಃ ಪುಳಕೀಕೃತಗಾತ್ರವಾ । ಸದಾ ಪರಗುಣಾವಿಷ್ಟೋ ದ್ರಷ್ಟವ್ಯ ಸ್ಸರ್ವ ದೇಹಿಭಿಃ" ಎಂದು ಆಚಾರ್ಯನ ಸೇವಾವಿಧಾನವು ಹೇಳಲಾಗಿದೆ.) ಪುನಃ ಪುನಶ್ಶ್ಯೋತ್ತಮ ಸಾಂತ್ವವಾದೀ, ಉತ್ತಮಃ "ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಂ" ಎಂಬಂತೆ ಪರಮಾತ್ಮವಿಷಯಕವಾದ ವಿಚಾರವನ್ನು ಸಾಂತ್ವ ವಚನಾದಿಗಳಿಂದ ಶಿಷ್ಯರಿಗೆ ತಿಳಿಯಪಡಿಸುವವನು, "ತ್ವಂ ಮೇಽಹಂಮೇ ಕುತಸ್ತತ್ತದಪಿ ಕುತ ಇದಂ ವೇದ ಮೂಲ ಪ್ರಮಾಣಾದೇತಚ್ಚಾನಾದಿಸಿದ್ಧಾದನುಭವ ವಿಭವಾತ್ತರ್ಹಿ ಸಾಕ್ರೋಶ ಏವ । ಕ್ವಾಕ್ರೋಶಃ ಕಸ್ಯಗೀತಾದಿಷು ಮಮ ವಿದಿತಃ ಕೋಽತ್ರಸಾಕ್ಷೀ ಸುಧೀಸ್ಸ್ಯಾದ್ಧಂತ! ತ್ವತ್ಪಕ್ಷಪಾತೀ ಸ ಇತಿ ನೃಕಲಹೇ ಮೃಗ್ಯಮಧ್ಯಸ್ಥವತ್ತ್ವಂ ॥" ಎಂದಿರುವಂತೆ ಭಗವಂತನಲ್ಲಿ, ಮನುಷ್ಯರ ಕಲಹ ವಿಷಯದಲ್ಲಿ (ಯಮೋ ವೈವಸ್ವತೋ ರಾಜಾ ಯಸ್ತವೈಷ ಹೃದಿಸ್ಥಿತಃ । ತೇನ ಚೇದಪಿ ವಾದಸ್ತೇ ಮಾ ಗಂಗಾಂ ಮಾಕುರೂಗಮಃ ॥ ಎಂದಿದೆ) ಸಾಂತ್ವವಾದ ಶೀಲನಾದವನೆಂದರ್ಥ. "ಪುನಃ ಪುನಃ" ಎಂಬುದರಿಂದ "ರೈತನಾದವನು ಫಲ ದೊರೆಯಲಿಲ್ಲವೆಂದು ತನ್ನ ಕೃಷಿಯನ್ನು ಹೇಗೆ ಬಿಡುವುದಿಲ್ಲವೋ ಹಾಗೆಯೇ ಆಚಾರ್ಯನೂ ಸಹ ತನ್ನ ಮಾತುಗಳಿಂದ ಶಿಷ್ಯರು ಕೃತಾರ್ಥರಾಗದಿದ್ದರೂ, ಅಥವಾ ಅವರು ತನ್ನ ಮಾತುಗಳನ್ನು ಕೇಳದಿದ್ದರೂ ತಾನು ಮಾತ್ರ ತನ್ನ ಉಪದೇಶ ವಾಣಿಯನ್ನು ನಿಲ್ಲಿಸುವುದಿಲ್ಲವೆಂಬ ಅರ್ಥವು ಸೂಚಿತವಾಗುತ್ತದೆ. ಇದರಿಂದ ಆಚಾರ್ಯನು ಭಗವಂತನಿಗಿಂತಲೂ ಹೆಚ್ಚಿನವನೆಂದು ಸೂಚಿಸಿದಂತಾಯಿತು. (ಆ ಭಗವಂತನೂ ಸಹ ಪಾರ್ಥ ನಿಗೆ ಗೀತೋಪದೇಶವನ್ನು ಮಾಡಿ ಮರಳಿಯೂ ಅಶ್ವಮೇಧ ಪರ್ವದಲ್ಲಿ ತಾನು ಉಪದೇಶಿಸಿದ್ದ ಗೀತಾ ವಿಷಯವನ್ನು ಮರೆತು, ಪಾರ್ಥನು ಮತ್ತೆ ಕೇಳಲು, "ನಾನು ಹೇಳುವುದಿಲ್ಲ" ಎಂದುದಲ್ಲದೆ, "ನೂನಮಶ್ರದ್ದಧಾನೋಸಿ ದುರ್ಮೇಧಾಶ್ಚಾಸಿ ಪಾಂಡವ" ಎಂದು ಹೀಯಾಳಿಸಿಯೂ ಇದ್ದಾನೆ.) ಅಲ್ಲದೆ, ಸುಸ್ವಾಗತಾಂ ವಾಚಮುದೀರಯಾನಃ "ಸಂಪ್ರದಾಯಕ್ಕೆ ವಿರೋಧ ಬಾರದಂತೆ, ತನಗೂ ಆಚಾರ್ಯ ಪರಂಪರೆಯಿಂದ ಬಂದಿರುವ ಹಿತವಾಕ್ಯಗಳನ್ನು (ಅಷ್ಟಾಕ್ಷರಾದಿ ಮಂತ್ರಗಳನ್ನು) ಅಕಾರಣವಾಗಿಯೇ ನುಡಿಯುತ್ತ (ಇದರಿಂದ ಆಚಾರ್ಯ ಪರಂಪರೆಯು ಅನುಸಂಧೇಯವೇ ಸರಿ ಎಂಬ ವಿಚಾರವು ನಿರೂಪಿತವಾಗುವುದು) "ಪುನಃ ಪುನಶ್ಶೋದಯತೀವ" ಇದರಿಂದ ಆಚಾರ್ಯನುಪ ದೇಶಿಸಿದುದನ್ನು ತಪ್ಪದೆ ಅನುಷ್ಠಿಸಬೇಕೆಂಬುದು ಸೂಚಿತವಾಗುತ್ತದೆ. ಹೀಗಿಲ್ಲದಿದ್ದರೆ ಆಚಾರ್ಯನ ಉಪದೇಶವು ನಿರರ್ಥಕವಾಗುತ್ತದೆಯೆಂದಂತಾಯಿತು. ಆದುದರಿಂದಲೇ "ಆಚಾರ್ಯಾಃ ಸ್ವಾಲಿತ್ಯೇಶಾಸಿತಾರಃ" ಎಂದಿರುವುದು. "ಹೃಷ್ಟಃ" ಈ ಶಬ್ದದಿಂದ ಆಚಾರ್ಯನಿಗೆ ಶಿಷ್ಯಶಿಕ್ಷಣವೇ ಪರಮಪ್ರಯೋಜನವೆಂದಂತಾಯಿತು. (ತನಿಶ್ಲೋಕೀ) ಇಲ್ಲಿ "ಪಕ್ಷೀ" ಎಂದರೆ ಗರುಡಪಕ್ಷಿಯೆಂದರಿಯಬೇಕು. (ಗೋ)

ಈ ಸರ್ಗದಲ್ಲಿ "ಇಹೋಪಯಾತಃ ಕಾಕುತ್ಸ್ಥಃ ಸೀತಯಾ ಸಹಭಾರ್ಯಯಾ" ಎಂಬ ಶ್ಲೋಕವಾದ ಮೇಲೆ ಈ ಕೆಳಗೆ ಕಾಣಿಸಿರುವ ಪ್ರಕ್ಷಿಪ್ತ ಶ್ಲೋಕಗಳು ಕೆಲವು ಮಾತೃಕೆಗಳಲ್ಲಿ ಕಂಡುಬರುತ್ತವೆ.

ಶುಕ್ಲಮಾಲ್ಯಾಂಬರಧರೋ ಲಕ್ಷ್ಮಣೇನ ಸಮಾಗತಃ ।
ಸಾಂಡಂ ತ್ರಿಭುವನಂ ಭೀಮಂ ಸರ್ವತ ಸ್ಸಚರಾಚರಂ ॥

ಸರ್ವಂ ಗ್ರಸ್ತಂ ಮಯಾದೃಷ್ಟಂ ರಾಮೇಣಾಕ್ಲಿಷ್ಟಕರ್ಮಣಾ ।
ಕ್ಷೀರೋದಧಿಜಲೇ ಮಧ್ಯೇ ಶ್ವೇತಃ ಶೈಲಸಮುಚ್ಛ್ರಿತಃ ॥

ತಸ್ಯಮೂರ್ಧ್ನಿ ತತಃ ಶ್ವೇತಶ್ಚತುರ್ದಂತೋ ಮಹಾಗಜಃ ।
ತಸ್ಯ ಪೃಷ್ಠೇ ಸ್ಥಿತಃ ಶ್ರೀಮಾನ್ ರಾಮೋ ರಾಜೀವಲೋಚನಃ ॥

ಲಕ್ಷ್ಮಣೇನ ಸಹಭ್ರಾತ್ರಾ ಸೀತಯಾಸಹ ಭಾರ್ಯಯಾ ।
ತತೋಽನ್ಯತ್ರ ಮಯಾದೃಷ್ಟೋ ರಾಮೋ ರಕ್ತಾಂತಲೋಚನಃ ॥

ಆಸೀನಃ ಪ್ರಾಙ್ಮುಖಃ ಶ್ರೀಮಾನಾಸನೇ ಪರಮೇ ಶುಭೇ ।
ಅಭಿಷಿಕ್ತಃ ಸ ಕಾಕುತ್ಸ್ಥಃ ಸರ್ವದೇವೈರ್ನಮಸ್ಕೃತಃ ॥

ಬ್ರಹ್ಮರ್ಷೀಣಾಂ ಗಣೈಃ ಸರ್ವೈಃ ಸರ್ವತೀರ್ಥಜಲೇನಚ ।
ಶುಕ್ಲಮಾಲ್ಯಾಂಬರಧರಾ ಶುಕ್ಲಮಾಲ್ಯಾನುಲೇಪನಾ ॥

ಸೀತಾ ತತ್ರ ಪೃಥುಶ್ರೋಣೀ ರರಾಜ ಜನಕಾತ್ಮಜಾ ।
ತತೋ ದೇವಾಃ ಸಗಂಧರ್ವಾಃ ಸಿದ್ಧಾಶ್ಚ ಪರಮರ್ಷಯಃ ॥

ಬ್ರಹ್ಮಾಣಮಗ್ರತಃ ಕೃತ್ವಾ ರಾಮಂ ತತ್ರ ವವಂದಿರೇ ।
ಪುನರೇವ ಮಯಾದೃಷ್ಟೋ ರಾಮೋ ರಮಯತಾಂ ವರಃ ॥

ವಿಷ್ಣುರೇವ ಸ್ವಯಂ ಭೂತ್ವಾ ತಸ್ಮಿನ್ನಾಸ್ತೇ ವರಾಸನೇ ।
ಪರಂಬ್ರಹ್ಮ ಪರಂ ಸತ್ಯಂ ಪರಂ ಜ್ಞಾನಂ ಪರಂತಪಃ ॥

ಪರಂ ಬೀಜಂ ಪರಂ ಕ್ಷೇತ್ರಂ ಪರಂ ಕಾರಣಕಾರಣಂ ।
ಶಂಖಚಕ್ರಧರಃ ಶ್ರೀಮಾನ್ ಪುಂಡರೀಕಾಯತೇಕ್ಷಣಃ ॥

ಶ್ರೀವತ್ಸವಕ್ಷಾ ನಿತ್ಯಶ್ರೀರಜಯ್ಯಃ ಶಾಶ್ವತೋ ಧ್ರುವಃ ।
ಏವಂಭೂತೋ ಮಹಾತೇಜಾ ರಾಮಃ ಕಮಲಲೋಚನಃ ।
ಸರ್ವಲೋಕೇಶ್ವರಃ ಶ್ರೀಮಾನ್ ರರಾಜ ರಘುನಂದನಃ ॥

ತತೋ ನರೇಂದ್ರಾಃ ಪಿತರೋ ಮುನೀಂದ್ರಾ ಗಂಧರ್ವವಿದ್ಯಾಧರ ಪನ್ನಗೇಂದ್ರಾಃ ।
ಕೃತಾಭಿಷೇಕಂ ಪರಿವಾರ್ಯ ರಾಮಂ ಪ್ರತ್ಯಷ್ಟುವುಃ ಪ್ರಾಂಜಲಯಃ ಪ್ರಹೃಷ್ಟಾಃ ॥

ತತಸ್ತು ಸರ್ವಾಪ್ಸರಸಃ ಪ್ರಹೃಷ್ಟಾ ನೃತ್ಯಂತಿ ಗಾಯಂತಿ ಸಮೇತ್ಯ ತತ್ರ ।
ವಾದ್ಯಂ ಪ್ರಕುರ್ವಂತಿ ನದಂತಿ ಶಂಖಾ ವಂಶಾಶ್ಚವೀಣಾ ಮುರವಾಶ್ಚ ಭೇರ್ಯಃ ॥

ಸಾರಾಕ್ಷಸೇಂದ್ರಸ್ಯ ವಚೋ ನಿಶಮ್ಯ ತದ್ರಾವಣಸ್ಯಾಽಪ್ರಿಯಮಪ್ರಿಯಾರ್ತಾ। ಸೀತಾ ವಿತತ್ರಾಸ ಯಥಾ ವನಾಂತೇ ಸಿಂಹಾಭಿಪನ್ನಾ ಗಜರಾಜಕನ್ಯಾ ॥ ೧ ॥ ಸಾ ರಾಕ್ಷಸೀ ಮಧ್ಯಗತಾ ಚ ಭೀರು ರ್ವಾಗ್ಭಿರ್ಭೃಶಂ ರಾವಣತರ್ಜಿತಾ ಚ । ಕಾಂತಾರ ಮಧ್ಯೇ ವಿಜನೇ ವಿಸೃಷ್ಟಾ ಬಾಲೇವ ಕನ್ಯಾ ವಿಲಲಾಪ ಸೀತಾ ॥೨॥ "ಸತ್ಯಂ ಬತೇದಂ ಪ್ರವದಂತಿ ಲೋಕೇ ನಾಕಾಲಮೃತ್ಯುರ್ಭವತೀತಿ ಸಂತಃ । ಯತ್ರಾಹಮೇವಂ ಪರಿ ಭರ್ತ್ಸ್ಯಮಾನಾ ಜೀವಾಮಿ ¶ ಕಿಂಚಿತ್ ಕ್ಷಣಮಪ್ಯಪುಣ್ಯಾ ॥ ೩ ॥ ಸುಖಾದ್ವಿಹೀನಂ

ಸಾಸೀತಾ - ಆ ಸೀತಾದೇವಿಯು, ರಾಕ್ಷಸೇಂದ್ರಸ್ಯ - ರಾಕ್ಷಸಾಧಿಪತಿಯಾದ, ರಾವಣಸ್ಯ - ರಾವಣನ, ಅಪ್ರಿಯಂ - ಇಷ್ಟವಲ್ಲದಿರುವ, ತದ್ವಚಃ - ಆ ಮಾತನ್ನು, ನಿಶಮ್ಯ-ಕೇಳಿ, ಅಪ್ರಿಯಾರ್ತಾ-ಕೆಟ್ಟಮಾತುಗಳಿಂದ ದುಃಖಿತಳಾದ ಕಾರಣವೇ, ವನಾಂತೇ - ವನಮಧ್ಯದಲ್ಲಿ, ಸಿಂಹಾಭಿಪನ್ನಾ - ಸಿಂಹದಿಂದ, ಅನುಸರಿಸಲ್ಪಟ್ಟ, ಗಜ....ಥಾ - ಹೆಣ್ಣಾನೆಯ ಮರಿಯಂತೆ, ವಿತತ್ರಾಸ - ಭಯಗೊಂಡಳು. ॥ ೧ ॥ ರಾಕ್ಷ....ತಾ - ರಕ್ಕಸಿಯರ ನಡುವೆ ಇರುವ ಕಾರಣ, ಭೀರುಃ - ಭಯಶೀಲಳಾದ, ವಾಗ್ಭಿಃ - ರಾಕ್ಷಸಿಯರ ಮಾತುಗಳಿಂದಲೂ, ಭೃಶಂ - ಬಹಳವಾಗಿ, ರಾವ....ಚ-ರಾವಣನಿಂದ ಹೆದರಿಸಲ್ಪಟ್ಟವಳೂ ಆದ, ಸಾಸೀತಾ - ಆ ಸೀತಾದೇವಿಯು, ವಿಜನೇ - ಸ್ವಜನರಿಲ್ಲದಿರುವ, ಕಾಂತಾರಮಧ್ಯೇ - ಕಾಡಿನ ನಡುವೆ, ವಿಸೃಷ್ಟಾ-ಬಿಡಲ್ಪಟ್ಟ, ಬಾಲಾ-ಹುಡುಗಿಯಾದ, ಕನ್ಯೇವ - ಮದುವೆಯಿಲ್ಲದ ಹುಡುಗಿಯಂತೆ, ವಿಲಲಾಪ - ಅತ್ತಳು. ॥ ೨ ॥ ಸಂತಃ - ಸತ್ಪುರುಷರು, ಲೋಕೇ - ಜಗತ್ತಿನಲ್ಲಿ, ಅಕಾಲಮೃತ್ಯುಃ - ಕಾಲವಲ್ಲದ ಕಾಲದಲ್ಲಿ ಮರಣವು, ನಭವತೀತಿ - ಆಗುವುದಿಲ್ಲವೆಂದು, ಪ್ರವದಂತಿ - ಹೇಳುವರು, ಇದಂ - ಈ ಹೇಳಿಕೆಯು, ಸತ್ಯಂ - ಯಥಾರ್ಥವು, ಬತ - ಕಷ್ಟವು, ಯತ್ರ - ಯಾವ ಕಾರಣ ದಿಂದ, ಅಹಂ - ನಾನು, ಏವಂ - ಈ ಪರಿಯಾಗಿ, ಪರಿಭರ್ತ್ಸ್ಯಮಾನಾ - ಹೆದರಿಸಲ್ಪಟ್ಟವಳಾಗಿ, ಅಪುಣ್ಯಾ - ಪುಣ್ಯಹೀನಳಾಗಿ, ಕ್ಷಣಮಪಿ - ಸ್ವಲ್ಪ ಹೊತ್ತಾದರೂ, ಕಿಂಚಿಜ್ಜೀವಾಮಿ - ಕುತ್ಸಿತಜೀವನ ವುಳ್ಳವಳಾಗಿದ್ದೇನೆಯೋ. ॥ ೩ ॥ ಸುಖಾತ್-ಸುಖದಿಂದ, ವಿಹೀನಂ-ಶೂನ್ಯವಾದ, ಬಹು....ರ್ಣಂ-

---

ರಾಕ್ಷಸರಾಜನಾದ ರಾವಣಾಸುರನ ಮಾತುಗಳನ್ನು ಕೇಳಿ ಊಹಿಸಲಸದಳವಾದ ವ್ಯಸನದಿಂದ ಪೀಡಿತಳಾದ ಸೀತಾದೇವಿಯು, ಮಹಾರಣ್ಯದಲ್ಲಿ ಸಿಂಹವಡ್ಡಗಿಸಿದ ಹೆಣ್ಣಾನೆಯಂತೆ ಮಹಾ ಭಯದಿಂದ ಗಡಗಡನೆ ನಡುಗುತ್ತಿದ್ದಳು. ಮೊದಲೇ ಭೀರುವಾದ ಆಕೆಯು ಆ ರಾಕ್ಷಸಸ್ತ್ರೀಯರ ನಡುವೆ ಸಿಕ್ಕಿಕೊಂಡು, ರಾವಣಾಸುರನೂ ಆಕೆಯನ್ನು ಪರುಷ ವಾಕ್ಯಗಳಿಂದ ಭೀತಿಗೊಳಿಸಿರಲು ನಿರ್ಜನವಾದ ಅರಣ್ಯಪ್ರದೇಶದಲ್ಲಿ ಒಂಟಿಯಾದ ಜಿಂಕೆಯ ಮರಿಯಂತೆ ವ್ಯಸನಸಂತಪ್ತಳಾಗಿ ತನ್ನಲ್ಲಿ ತಾನು ಹೀಗೆಂದುಕೊಂಡು ಪ್ರಲಪಿಸಲುಪಕ್ರಮಿಸಿದಳು. ॥೧–೨॥ "ಅಯ್ಯೋ! ನಾನು ಮಹಾ ಪಾಪಿನಿಯು! ರಾಕ್ಷಸಿಯರಿಂತು ವಿಧವಿಧವಾಗಿ ನನ್ನನ್ನು ನಿಂದಿಸಿ ಪೀಡಿಸುತ್ತಿದ್ದರೂ ನಿರ್ಭಾಗ್ಯಳಾದ ನಾನಿನ್ನೂ ಜೀವಂತಳಾಗಿರುವುದರಿಂದ

¶ "ಯಸ್ಮಾತ್" ತಿ. ಪಾ.

ಬಹುದುಃಖಪೂರ್ಣಮಿದಂ ತು ನೂನಂ ಹೃದಯಂ ಸ್ಥಿರಂ ಮೇ । ವಿಶೀರ್ಯತೇ ಯನ್ನಸಹಸ್ರಧಾಽದ್ಯ ವಜ್ರಾಹತಂ ಶೃಂಗಮಿವಾಚಲಸ್ಯ ॥ ೪ ॥ ನೈವಾಸ್ತಿ ದೋಷಂ ಮಮ ನೂನಮತ್ರ ವಧ್ಯಾಹಮಸ್ಯಾಽಪ್ರಿಯದರ್ಶನಸ್ಯ । ಭಾವಂ ನಚಾಸ್ಯಾಽಹಮನು ಪ್ರದಾತುಮಲಂ ದ್ವಿಜೋ ಮಂತ್ರಮಿವಾಽದ್ವಿಜಾಯ ॥ ೫ ॥ ನೂನಂ ಮಮಾಂಗಾನ್ಯ ಚಿರಾದನಾರ್ಯಶ್ಶಸ್ತ್ರೈಶ್ಶಿತೈಶ್ಛೇತ್ಸ್ಯತಿ ರಾಕ್ಷಸೇಂದ್ರಃ । ತಸ್ಮಿನ್ನನಾಗಚ್ಛತಿ ಲೋಕನಾಥೇ ಗರ್ಭಸ್ಥಜಂತೋರಿವ ಶಲ್ಯಕೃಂತಃ ॥ ೬ ॥ ದುಃಖಂ ಬತೇದಂ ಮಮ ದುಃಖಿತಾಯಾ

ಬಹಳ ದುಃಖಗಳಿಂದ ತುಂಬಿರುವ, ಮೇ - ನನ್ನ, ಇದಂಹೃದಯಂ - ಈ ಎದೆಯು, ಯತ್ - ಯಾವ ಕಾರಣದಿಂದ, ಅದ್ಯ - ಈಗ, ವಜ್ರಾಹತಂ - ಇಂದ್ರಾಯುಧದಿಂದ ಹೊಡೆಯಲ್ಪಟ್ಟ, ಅಚಲಸ್ಯ - ಬೆಟ್ಟದ, ಶೃಂಗಮಿವ - ಶಿಖರದಂತೆ, ಸಹಸ್ರಧಾ - ಅನೇಕ ಭಾಗಗಳಾಗಿ, ನವಿಶೀರ್ಯತೇ - ಸೀಳದಿರುವದೋ, ತತ್ - ಆ ಕಾರಣದಿಂದ, ಸ್ಥಿರಂ - ಶಾಶ್ವತವಾದುದು. ॥ ೪ ॥ ಅತ್ರ - ಈ ದುರ್ಮರಣದಲ್ಲಿ, ಮಮ - ನನಗೆ, ದೋಷಂ - ಪಾಪವು, ನೈವಾಸ್ತಿ - ಇಲ್ಲವೇ ಇಲ್ಲ, ನೂನಂ - ನಿಶ್ಚಯವು, ಅಪ್ರಿಯದರ್ಶನಸ್ಯ - ಕ್ರೂರದೃಷ್ಟಿಯುಳ್ಳ, ಅಸ್ಯ - ಈ ರಾವಣನಿಗೆ, ವಧ್ಯಾ - ವಧಾರ್ಹಳಾದ, ಅಹಂ- ನಾನು, ಭಾವಂ - ಚಿತ್ತವನ್ನು, ದ್ವಿಜಃ - ಬ್ರಾಹ್ಮಣನು, ಅದ್ವಿಜಾಯ - ಶೂದ್ರನಿಗೆ, ಮಂತ್ರಮಿವ - ಮಂತ್ರವನ್ನಂತೆ, ಅನುಪ್ರದಾತುಂ - ಕೊಡುವದಕ್ಕೆ, ನಾಲಂ - ಸಮರ್ಥಳಲ್ಲ. ॥ ೫ ॥ ಲೋಕನಾಥೇ - ಲೋಕಸ್ವಾಮಿಯಾದ, ತಸ್ಮಿನ್ - ಆ ಶ್ರೀರಾಮನು, ಅನಾಗಚ್ಛತಿ - ಸಮಯದೊಳಗಾಗಿ ಬಾರದೆ ಇದ್ದರೆ, ಗರ್ಭಸ್ಥಜಂತೋಃ-ಹೊಟ್ಟೆಯಲ್ಲಿ ಮೃತನಾದ ಶಿಶುವಿನ, ಅಂಗಾನಿ ಅವಯವಗಳನ್ನು, ಶಲ್ಯಕೃಂತಇವ - ಶಸ್ತ್ರವೈದ್ಯನಂತೆ, ಅನಾರ್ಯಃ - ನೀಚನಾದ, ರಾಕ್ಷಸೇಂದ್ರಃ - ರಾವಣನು, ಮಮ - ನನ್ನ, ಅಂಗಾನಿ - ಅವಯವಗಳನ್ನು, ಶಿತೈಃ - ಹದವಿಟ್ಟ, ಶಸ್ತ್ರೈಃ - ಶಸ್ತ್ರಗಳಿಂದ, ಅಚಿರಾತ್ - ಜಾಗ್ರತೆಯಾಗಿ, ಛೇತ್ಸ್ಯತಿ - ಕತ್ತರಿಸುವನು, ನೂನಂ - ನಿಶ್ಚಯವು. ॥ ೬ ॥ ಚಿರಾಯ - ಬಹು ಕಾಲದಿಂದ, ದುಃಖಿತಾಯಾಃ - ವ್ಯಸನಗೊಂಡಿರುವ, ಮಮ - ನನಗೆ, ಇದಂದುಃಖಂ - ಈ ವ್ಯಸನವು,

---

ಯಾರೊಬ್ಬರಿಗೂ ಕಾಲವಲ್ಲದ ಕಾಲದಲ್ಲಿ ಮೃತ್ಯುವು ಬಾರದೆಂದೇ ತೋರುತ್ತದೆ. ಅಕಟ! ನಾನೇನು ಮಾಡಲಿ? ಸುಖದಿಂದ ದೂರವಾಗಿ, ಅಮಿತವಾದ ವ್ಯಸನವನ್ನನುಭವಿಸುತ್ತ ಬೆಂದು ಬೇಗುದಿಗೊಳ್ಳುತ್ತಿರುವ ನನ್ನ ಹೃದಯವು ಬಹು ಕಠಿನತರವಾದುದು. ಅದರಿಂದಲೇ, ಇದು ವಜ್ರಾಯುಧದಿಂದ ಕಡಿದ ಪರ್ವತದಂತೆ ಸಾವಿರ ಹೋಳುಗಳಾಗಿ ಹೋಗದಿರುವುದೆಂದು ತೋರುತ್ತದೆ. ಇದರಲ್ಲಿ ಎಷ್ಟುಮಾತ್ರಕ್ಕೂ ಸಂಶಯವಿಲ್ಲವು. ಇದು ಮಾತ್ರವಲ್ಲದೆ ನೋಡುವವರಿಗೆ ಭಯಂಕರವಾದ ರೂಪವುಳ್ಳ ಈ ರಾವಣಾಸುರನೀಗ ನನ್ನನ್ನು ಕೊಲ್ಲುವನು. ಆದುದರಿಂದ ಈಗ ನಾನೇ ನನ್ನನ್ನು ಕೊಂದುಕೊಳ್ಳುವುದು ದೋಷವಾಗಲಾರದು. ಇಲ್ಲದಿದ್ದರೆ ರಾವಣಾಸುರನಿಗೆ ವಶವರ್ತಿನಿಯಾಗಿ ಪ್ರಾಣಗಳನ್ನುಳಿಸಿಕೊಳ್ಳುವುದೇ? ಛೀ! ಬ್ರಾಹ್ಮಣನು ವೇದಮಂತ್ರವನ್ನು ಶೂದ್ರನಿಗಿತ್ತಂತೆ ಪವಿತ್ರನಾದ ನನ್ನ ಮನಸ್ಸನ್ನು ರಾವಣನಿಗೆಷ್ಟುಮಾತ್ರಕ್ಕೂ ಕೊಡಲಾರೆನು. ಲೋಕನಾಥನಾದ ಶ್ರೀರಾಮನು ಇನ್ನು ಎರಡು ತಿಂಗಳೊಳಗಾಗಿ ಇಲ್ಲಿ ಬಾರದಿದ್ದಲ್ಲಿ ಮಹಾ ದುಷ್ಟಾತ್ಮನಾದ ಈ ರಾವಣಾಸುರನು, ಶಸ್ತ್ರವೈದ್ಯನು ಗರ್ಭದಲ್ಲಿರುವ ಶಿಶುವನ್ನಂತೆ, ನನ್ನ ಸಮಸ್ತಾವಯವಗಳನ್ನೂ ಮೊನಚಾದ ಕತ್ತಿಗಳಿಂದ ಕತ್ತರಿಸಿ ತುಂಡುತುಂಡು ಮಾಡುವನು. ॥ ೩-೬ ॥ ಈ ಎರಡು ತಿಂಗಳುಗಳೂ ಬಹು ಬೇಗ

ಮಾಸೌ ಚಿರಾಯಾಧಿಗಮಿಷ್ಯತೋ ದ್ವೌ । ಬದ್ಧಸ್ಯ ವಧ್ಯಸ್ಯ ಯಥಾನಿಶಾಂತೇ * ರಾಜಾಪರಾಧಾದಿವ ತಸ್ಕರಸ್ಯ ॥೭॥ ಹಾ ರಾಮ! ಹಾಲಕ್ಷ್ಮಣ! ಹಾ! ಸುಮಿತ್ರೇ! ಹಾ! ರಾಮಮಾತಸ್ಸಹಮೇ ಜನನ್ಯಾ । ಏಷಾ ವಿಪದ್ಯಾಮ್ಯಹಮಲ್ಪಭಾಗ್ಯಾ ಮಹಾರ್ಣವೇ ನೌರಿವ ಮೂಢವಾತಾ ॥ ೮ ॥ ತರಸ್ವಿನೌ ಧಾರಯತಾ ಮೃಗಸ್ಯ ಸತ್ವೇನ ರೂಪಂ ಮನುಜೇಂದ್ರಪುತ್ರೌ । ನೂನಂ ವಿಶಸ್ತೌ ಮಮ ಕಾರಣಾತ್ತೌ ಸಿಂಹರ್ಷಭೌ ದ್ವಾವಿವ ವೈದ್ಯುತೇನ ॥೯॥ ನೂನಂ ಸಕಾಲೋ ಮೃಗರೂಪಧಾರೀ ಮಾಮಲ್ಪಭಾಗ್ಯಾಂ

ದ್ವೌಮಾಸೌ - ಅವಧಿಭೂತಗಳಾದ ಎರಡು ತಿಂಗಳುಗಳು, ಅಧಿಗಮಿಷ್ಯತಃ - ಕಳೆಯುತ್ತವೆ, ಬತ - ಕಷ್ಟವು, ರಾಜಾ....ತ್ - ರಾಜದ್ರೋಹದಿಂದ, ಬದ್ಧಸ್ಯ - ಸೆರೆ ಹಾಕಲ್ಪಟ್ಟ, ನಿಶಾಂತೇ - ಪ್ರಾತಃಕಾಲದಲ್ಲಿ, ವಧ್ಯಸ್ಯ - ವಧಾರ್ಹನಾದ, ತಸ್ಕರಸ್ಯ - ಕಳ್ಳನಿಗೆ, ಯಥೇವ - ಹೇಗೆಯೋ, (ತಥಾ - ಹಾಗೆ) ಆಗತಂ - ಪ್ರಾಪ್ತವಾಯಿತು. ॥ ೭ ॥ ಹೇ ರಾಮ-ಎಲೈ ರಾಮನೇ, ಹಾ-ಕಷ್ಟವು, ಹಾ ಲಕ್ಷ್ಮಣ - ಅಯ್ಯೋ ಲಕ್ಷ್ಮಣನೇ, ಹಾ ಸುಮಿತ್ರೇ-ಓ ಸುಮಿತ್ರೆಯೇ, ಮೇ-ನನ್ನ, ಜನನ್ಯಾಸಹ-ತಾಯಿಯೊಡನೆ ಸೇರಿದ, ಹೇ ರಾಮಮಾತಃ - ಓ ರಾಮನ ತಾಯಿಯೇ, ಅಲ್ಪಭಾಗ್ಯಾ-ಹೀನಭಾಗ್ಯಳಾದ, ಏಷಾಹಂ - ಈ ನಾನು, ಮಹಾರ್ಣವೇ-ಕಡಲಿನಲ್ಲಿ, ಮೂಢವಾತಾ-ನಾನಾಮುಖವಾಗಿ ಬೀಸುತ್ತಿರುವ ಗಾಳಿಯುಳ್ಳ, ನೌರಿವ - ಹಡಗಿನಂತೆ, ವಿಪದ್ಯಾಮಿ - ನಶಿಸುವೆನು. ॥ ೮ ॥ ಮೃಗಸ್ಯ - ಜಿಂಕೆಯ, ರೂಪಂ - ರೂಪವನ್ನು, ಧಾರಯತಾ - ಧರಿಸುತ್ತಿರುವ, ಸತ್ವೇನ - ಜಂತುವಿನಿಂದ, ತರಸ್ವಿನೌ - ಬಲಿಷ್ಠರಾದ, ಮನುಜೇಂದ್ರಪುತ್ರೌ - ರಾಜಪುತ್ರರಾದ, ತೌ - ಆ ರಾಮಲಕ್ಷ್ಮಣರು, ವೈದ್ಯುತೇನ - ಸಿಡಿಲಿನಿಂದ, ದ್ವೌಸಿಂಹರ್ಷಭಾವಿವ-ಎರಡುಸಿಂಹಶ್ರೇಷ್ಠಗಳಂತೆ, ಮಮಕಾರಣಾತ್-ನನ್ನನಿಮಿತ್ತವಾಗಿ, ವಿಶಸ್ತೌ - ಹಿಂಸಿಸಲ್ಪಟ್ಟರು, ನೂನಂ - ನಿಶ್ಚಯವು. ॥ ೯ ॥ ತದಾನೀಂ - ಆ ಕಾಲದಲ್ಲಿ, ಮೃಗ....ರೀ - ಜಿಗರಿಯ ರೂಪವನ್ನು ಧರಿಸಿರುವ, ಸಃ - ಪ್ರಸಿದ್ಧನಾದ, ಕಾಲಃ - ಯಮನು, ಅಲ್ಪಭಾಗ್ಯಾಂ - ದುರ

ನೆಯೇ ಕಳೆದುಹೋಗುವುದಲ್ಲವೇ! ಅಕಟ!! ನಾನೇನು ಮಾಡಲಿ; ಅಯ್ಯೋ! ಈ ಎರಡು ತಿಂಗಳು ಕಳೆದಕೂಡಲೇ, "ರಾಜದ್ರೋಹಿಯಾದ ಚೋರನನ್ನು ರಾತ್ರಿಯು ಕಳೆದ ಬಳಿಕ ಪ್ರಾತಃಕಾಲದಲ್ಲಿ ಕೊಲ್ಲುವಾಗ ಅವನಿಗುಂಟಾಗುವ ವ್ಯಸನವೇ" ನನಗೂ ಸಂಭವಿಸುವುದೋ ಏನೋ! ಹಾ! ರಾಮ! ಹಾ! ಲಕ್ಷ್ಮಣ! ಹಾ! ಸೌಮಿತ್ರೇ! ಓ ರಾಮ ಜನನಿಯಾದ ಕೌಸಲ್ಯಾದೇವಿಯೇ! ಅಮ್ಮಾ! ದುರದೃಷ್ಟವತಿಯಾದ ನಾನು, ಮಹಾ ಸಮುದ್ರಮಧ್ಯದಲ್ಲಿ ಹಡಗು ಬಿರುಗಾಳಿಯ ಹೊಡೆತದಿಂದ ನಾಶವಾಗುವಂತೆ ಇದೋ ಈ ಲಂಕಾನಗರ ಮಧ್ಯದಲ್ಲಿ ನಾಶವಾಗುತ್ತಿರುವೆನು. ಅಯ್ಯೋ! ಮಹಾ ಬಲಿಷ್ಠರೂ, ರಾಜ ಪುತ್ರರೂ ಆದ ಶ್ರೀರಾಮಲಕ್ಷ್ಮಣರಿಬ್ಬರೂ ನನ್ನ ನಿಮಿತ್ತವಾಗಿ ಜಿಂಕೆಯ ರೂಪವನ್ನು ತಾಳಿ ಬಂದ ಮಾರೀಚನಿಂದ, "ಎರಡು ಸಿಂಹಗಳಾಗಲಿ, ಎರಡು ವೃಷಭಗಳಾಗಲಿ ತಟಕ್ಕನೆ ಸಿಡಿಲಿನಿಂದ ಭೂಮಿಗೆ ಬಿದ್ದಂತೆ" ಕೊಲ್ಲಲ್ಪಟ್ಟಿರಬಹುದು! ಅಯ್ಯೋ! ಯಮನೇ ಆ ಜಿಂಕೆಯ ರೂಪದಿಂದ ಬಂದು ಬಹು ದುರದೃಷ್ಟೆಯೂ, ಪುಣ್ಯಹೀನೆಯೂ ಆದ ನಾನು ಲುಬ್ಧತೆಯಿಂದ ನಾಶವೈದುವಂತೆ ಮಾಡಿರಬೇಕು. ಇದರಲ್ಲಿ ಯಾವ ಸಂಶಯವೂ ಇಲ್ಲವು. ಆದುದರಿಂದಲೇ ಮಹಾ ಬುದ್ಧಿಹೀನೆಯಾದ ನಾನು ನನ್ನ ಭರ್ತನಾದ ಶ್ರೀರಾಮನನ್ನೂ, ಆತನ

---

* "ರಾಜೋಪರೋಧಾದಿವ" ತಿ. ಪಾ.

ಲುಲುಭೇ ತದಾನೀಂ । ಯತ್ರಾರ್ಯಪುತ್ರಂ ವಿಸಸರ್ಜ ಮೂಢಾ ರಾಮಾನುಜಂ ಲಕ್ಷ್ಮಣಪೂರ್ವಜಂಚ ॥೧೦॥ ಹಾರಾಮ! ಸತ್ಯವ್ರತ! ದೀರ್ಘಬಾಹೋ! ಹಾಪೂರ್ಣ ಚಂದ್ರಪ್ರತಿಮಾನವಕ್ತ್ರ! । ಹಾಜೀವಲೋಕಸ್ಯ ಹಿತಃ! ಪ್ರಿಯಶ್ಚ! ವಧ್ಯಾಂ ನಮಾಂ ವೇತ್ಸಿಹಿ ರಾಕ್ಷಸಾನಾಂ ॥ ೧೧ ॥ ¶ ಅನನ್ಯದೈವತ್ವಮಿಯಂ ಕ್ಷಮಾಚ ಭೂಮೌ ಚ

ದೃಷ್ಟವತಿಯಾದ, ಮಾಂ - ನನ್ನನ್ನು, ಲುಲುಭೇ - ವಂಚಿಸಿದನು, ಯತ್ರ - ಯಾವ ಸಮಯದಲ್ಲಿ, (ಅಥವಾ ಯಾವ ಕಾರಣದಿಂದ) ಮೂಢಾ - ಮತಿಹೀನಳಾದ ನಾನು, ಆರ್ಯಪುತ್ರಂ - ರಾಜಪುತ್ರನಾದ, ರಾಮಾನುಜಂ - ಲಕ್ಷ್ಮಣನನ್ನು, ಲಕ್ಷ್ಮ....ಚ - ಲಕ್ಷ್ಮಣನಿಗೆ ಅಣ್ಣನಾದ ಶ್ರೀರಾಮನನ್ನು, ವಿಸಸರ್ಜ-ಅಗಲಿದೆನೋ. ॥ ೧೦ ॥ ಹೇ ಸತ್ಯವ್ರತ-ಓ ಸತ್ಯವಾದ ನಿಯಮವುಳ್ಳವನೇ, ಹೇ ದೀರ್ಘ-ಬಾಹೋ - ದೀರ್ಘಭುಜಗಳುಳ್ಳವನೇ, ಹೇ ಪೂ....ಕ್ತ್ರ-ಪೂರ್ಣಿಮಾಚಂದ್ರನಿಗೆ ಸದೃಶವಾದ ಮುಖವುಳ್ಳವನೇ, ಹೇ ರಾಮ - ಓ ಶ್ರೀರಾಮನೇ, ಹಾಹಾ - ವಿಷಾದವು, ಹಿ - ಯಾವ ಕಾರಣದಿಂದ, ಜೀವಲೋಕಸ್ಯ - ಪ್ರಾಣಿಗಳ ಸಮೂಹಕ್ಕೆ, ಹಿತಃ - ಇಷ್ಟನಾದ, ಪ್ರಿಯಃ - ನನ್ನ ಪ್ರಿಯನಾದ ನೀನು, ರಾಕ್ಷಸಾನಾಂ-ರಾಕ್ಷಸರಿಗೆ, ವಧ್ಯಾಂ-ವಧಾರ್ಹಳಾದ, ಮಾಂ-ನನ್ನನ್ನು, ನವೇತ್ಸಿಹಿ-ತಿಳಿಯಲಿಲ್ಲವೋ. ॥ ೧೧ ॥ ಅನ....ತ್ವಂ-ಪತಿಯನ್ನು ಬಿಟ್ಟು ಇತರ ದೇವತೆಗಳನ್ನು ಭಾವಿಸದಿರುವಿಕೆಯು, ಇಯಂ ಕ್ಷಮಾಚ - ಈ ರಾವಣಾದಿಗಳ ದುರ್ವಾಕ್ಯಗಳನ್ನು ಸೈರಿಸಿಕೊಂಡಿರುವಿಕೆಯೂ, ಭೂಮೌ - ನೆಲದಲ್ಲಿ, ಶಯ್ಯಾಚ - ಶಯನವೂ, ಧರ್ಮೇ-ಸ್ವಧರ್ಮದಲ್ಲಿ, ನಿಯಮಶ್ಚ-ತಪ್ಪದಿರುವಿಕೆಯೂ, ಪತಿವ್ರತಾತ್ವಂ.

ತಮ್ಮನಾದ ಲಕ್ಷ್ಮಣಸ್ವಾಮಿಯನ್ನೂ ಹೋಗಿರೆಂದು ಪ್ರೇರೇಪಿಸಿದೆನು. ॥೭–೧೦॥ ಅಯ್ಯೋ! ಶ್ರೀರಾಮನೇ! ದೀರ್ಘಬಾಹುವೇ! ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳವನೇ! ಹಾ! ರಾಮ! ಲೋಕದಲ್ಲಿರುವ ಸಮಸ್ತ ಪ್ರಾಣಿಗಳಿಗೂ ಮೇಲನ್ನುಂಟುಮಾಡುವ ನೀನು ನಿನ್ನ ಮನದನ್ನೆಯಾದ ನಾನು ರಾಕ್ಷಸರ ಕೈಗೆ ಸಿಕ್ಕಿ ಸಾಯಲು ಸಿದ್ಧಳಾಗಿರುವುದನ್ನು ತಿಳಿಯದಿರುವೆಯಲ್ಲವೇ! ಅಯ್ಯೋ! ನಾನು ಪತಿಗಿಂತಲೂ ಪರದೈವವಾವುದೂ ಇಲ್ಲವೆಂದು ತಿಳಿದು

¶ ಇಲ್ಲಿನ ರಹಸ್ಯಾರ್ಥ :—ಅನನ್ಯದೈವತ್ವಂ--"ಆಶ್ರಯಿಸಬೇಕಾದ ಮತ್ತೊಂದು ದೇವತೆಯು ನನ್ನನ್ನು ರಕ್ಷಿಸುತ್ತದೆ" ಎಂಬ ಯೋಚನೆಯು ನನಗಿಲ್ಲವು. (ಹಿಂದೆ "ನಾರಾಯಣಮುಪಾಗಮತ್" ಎಂಬ ಕಡೆಯಲ್ಲಿಯೂ ಕೂಡ, "ಸಹಪತ್ನ್ಯಾ" ಎಂದು ಅಪ್ರಾಧಾನ್ಯವಾಗಿ ಹೇಳಿದೆ. ಅಲ್ಲಿ ನಾರಾಯಣಮೂರ್ತಿಯನ್ನು ಸೇವಿಸುತ್ತಿರುವ ಶ್ರೀರಾಮನಿಗೆ ನಾನು ಸೇವಕಳು" ಎಂದು ಅಲ್ಲಿನ ಅರ್ಥವು) "ಇಯಂಕ್ಷಮಾಚ"—ನಾನು, "ಮುಂದೆ ಯಾವಾಗಲಾದರೂ ನನ್ನ ಪತಿದೇವನಾದ ನಿನ್ನ ಮಧುರಾಲಾಪಗಳನ್ನು ಕೇಳುವೆನಲ್ಲವೆ" ಎಂಬ ಆಕಾಂಕ್ಷೆಯಿಂದ, ಈ ರಾವಣನ ಮತ್ತು ಈ ರಾಕ್ಷಸಿಯರ, ಕಠಿನ ವಾಕ್ಕುಗಳ ಕೇಳಿಕೆಯನ್ನೆಲ್ಲ ಸಹಿಸಿಕೊಂಡಿದ್ದುದೂ, ಭೂಮೌಚಶಯ್ಯಾ--ರಾಮ! ನಿನ್ನ ತೊಡೆಯಮೇಲೆ ಮಲಗುವೆನೆಂಬ ನನ್ನ ಆಶೆಯು ನಿರರ್ಥಕವಾಗದೆಂಬ ನಂಬುಗೆಯಿಂದ, ಈಗ ನಾನು ಮಾಡುತ್ತಿರುವ ಈ ಭೂಶಯನವೂ, ನಿಯಮಶ್ಚಧರ್ಮೇ—ರಕ್ಷಕತ್ವ ಧರ್ಮವೂ ನಿನ್ನನ್ನೇ ಸೇರಿದೆ (ಆದುದರಿಂದಲೇ ಸೀತೆಯು ರಾವಣನನ್ನು ಕುರಿತು, "ನತ್ವಾಂ ಕುರ್ಮಿ ದಶಗ್ರೀವ ಭಸ್ಮಭಸ್ಮಾರ್ಹತೇಜಸಾ" ಎಂದು ಹೇಳಿರುವಳು) ಎಂಬ ಬುದ್ಧಿಯಿಂದ ಧರ್ಮದಲ್ಲಿ ನಿಯತಳಾಗಿದ್ದುದೂ, ಪತಿವ್ರಾತಾತ್ವಂ--"ನೀನೇ ನನಗೆ ಸರ್ವಸ್ವವು. ನಿನ್ನನ್ನು ಅನುಸರಿಸಿ ವ್ರತವನ್ನು ಆಚರಿಸುವುದೇ ನನ್ನ ಕರ್ತವ್ಯವು" ಎಂಬ ಮತಿಯಿಂದ ನಿನ್ನನ್ನೇ ಕುರಿತು ಚಿಂತಿಸುತ್ತಿದ್ದುದೂ, ವಿಫಲಂ ಮಮೇದಂ--ಇವೆಲ್ಲವೂ ಅಮೋಘವಾದರೂ (ವಿಫಲವಾಗತಕ್ಕವುಗಳಲ್ಲವಾದರೂ) ಮೋಘವಾದುವು (ನಿಷ್ಫಲವಾದುವು) ಹೇಗೆ? "ಕೃತಂಕೃತಘ್ನೇಷ್ವಿವಮಾನುಷಾಣಾಂ" ("ಆತ್ಮಾನಂ ಮಾನುಷಂ ಮನ್ಯೇ" ಎಂಬಂತೆ ರಾಮನಿಗೆ ಮಾನುಷತ್ವವುಂಟು) ನಿನ್ನನ್ನು ಬಿಟ್ಟು ಇತರ ಕೃತಘ್ನ ಮನುಷ್ಯರಿಗೆ ಮಾಡಿದ ಉಪಕಾರದಂತೆ (ಎಲ್ಲವೂ ನಿಷ್ಫಲವಾದುವು) ಇದಕ್ಕೆ ಕಾರಣವು, ನನ್ನ ಪೂರ್ವಾರ್ಜಿತ ಕರ್ಮವೇ ಹೊರ್ತು ನಿನ್ನ ದೋಷವೇನೂ ಇರುವುದಿಲ್ಲವು. (ತನಿಶ್ಲೋಕೀ)

ಶಯ್ಯಾ ನಿಯಮುಶ್ಚ ಧರ್ಮೇ । ಪತಿವ್ರತಾತ್ವಂ ವಿಫಲಂ ಮಮೇದಂ ಕೃತಂ ಕೃತಘ್ನೇಷ್ವಿವ ಮಾನುಷಾಣಾಂ ॥ ೧೨ ॥ § ಮೋಘೋಹಿ ಧರ್ಮಶ್ಚರಿತೋ ಮಯಾಽಯಂ ತಥೈವಪತ್ನೀತ್ವಮಿದಂ ನಿರರ್ಥಕಂ । ಯಾ ತ್ವಾಂ ನಪಶ್ಯಾಮಿ ಕೃಶಾ ವಿವರ್ಣಾ ಹೀನಾ ತ್ವಯಾ ಸಂಗಮನೇ ನಿರಾಶಾ ॥ ೧೩ ॥ ಪಿತುರ್ನಿದೇಶಂ ನಿಯಮೇನ ಕೃತ್ವಾ ವನಾನ್ನಿವೃತ್ತ ಶ್ಚರಿತವ್ರತಶ್ಚ । ಸ್ತ್ರೀಭಿಸ್ತು ಮನ್ಯೇ ವಿಪುಲೇಕ್ಷಣಾಭಿ ಸ್ಸ್ತ್ವಂ ರಂಸ್ಯತೇ ವೀತ

ಪಾತಿವ್ರತ್ಯವೂ (ಎಂಬ) ಇದಂ - ಈ ಸರ್ವವೂ, ಮಮ - ನನಗೆ, ಕೃತಘ್ನೇಷು - ಉಪಕಾರಗಳನ್ನು ಬಯಸದಿರುವ ಜನರಲ್ಲಿ, ಮಾನುಷಾಣಾಂ - ಮನುಷ್ಯರ, ಕೃತಮಿವ - ಉಪಕಾರದಂತೆ, ವಿಫಲಂ - ವ್ಯರ್ಥವಾಯಿತು. ॥ ೧೨ ॥ ಮಯಾ - ನನ್ನಿಂದ, ಚರಿತಃ - ಆಚರಿಸಲ್ಪಟ್ಟ, ಅಯಂಧರ್ಮಃ - ಈ ಧರ್ಮವು, ಮೋಘೋಹಿ - ವ್ಯರ್ಥವಷ್ಟೆ, ತಥಾ - ಹಾಗೆ, ಇದಮೇಕಪತ್ನೀತ್ವಂ - ಈ ಏಕಪತ್ನಿವ್ರತವೂ ಕೂಡ, ನಿರರ್ಥಕಂ - ನಿಷ್ಪ್ರಯೋಜನವು, ತ್ವಯಾ - ನಿನ್ನಿಂದ, ಹೀನಾ - ರಹಿತಳಾದ ಕಾರಣವೇ, ಸಂಗಮನೇ - ಸಂಗಮದಲ್ಲಿ, ನಿರಾಶಾ - ಆಶೆಯಿಲ್ಲದವಳಾದ, ವಿವರ್ಣಾ - ಬಣ್ಣಗೆಟ್ಟು, ಕೃಶಾ - ಕ್ಷೀಣಳಾದ, ಯಾ - ಯಾವ ನಾನು, ತ್ವಾಂ - ನಿನ್ನನ್ನು, ನಪಶ್ಯಾಮಿ - ನೋಡಲಿಲ್ಲವೋ. ॥ ೧೩ ॥ ಪಿತುಃ - ತಂದೆಯ, ನಿದೇಶಂ - ಆಜ್ಞೆಯನ್ನು, ನಿಯಮೇನ - ತಪ್ಪದಿರುವಿಕೆಯಿಂದ, ಕೃತ್ವಾ - ಮಾಡಿ, ವನಾತ್ - ಅರಣ್ಯದಿಂದ, ನಿವೃತ್ತಃ - ಹಿಂತಿರುಗಿದ, ಚರಿತವ್ರತಃ - ಆಚರಿಸಲ್ಪಟ್ಟ ವನವಾಸರೂಪವಾದ ನಿಯಮವುಳ್ಳ, ತ್ವಂ - ನೀನು, ವೀತಭಯಃ - ಭಯವಿಲ್ಲದವನಾಗಿ, ಕೃತಾರ್ಥಃ- ಕೃತಪ್ರಯೋಜನನಾಗಿ, ವಿಪುಲೇಕ್ಷಣಾಭಿಃ - ವಿಶಾಲನೇತ್ರೆಯರಾದ, ಸ್ತ್ರೀಭಿಸ್ತು - ಸ್ತ್ರೀಯರೊಡನೆ, ರಂಸ್ಯಸ್ಯೇ - ವಿಹರಿಸುವೆ, ಇತಿಮನ್ಯೇ - ಎಂದು ಭಾವಿಸುತ್ತೇನೆ. ॥ ೧೪ ॥

ಪಾತಿವ್ರತ್ಯ ವ್ರತವನ್ನವಲಂಬಿಸಿ, ಈ ರಾಕ್ಷಸಸ್ತ್ರೀಯರೂ, ರಾವಣನೂ ಎಷ್ಟುವಿಧವಾಗಿ ದುಃಖಕ್ಕೀಡುಮಾಡಿದರೂ ಅವೆಲ್ಲವನ್ನೂ ಸಹಿಸಿಕೊಂಡು, ಧರ್ಮವ್ರತವನ್ನೇ ಅವಲಂಬಿಸಿರುವೆನು. ಹೀಗೆ ನಾನು ಭೂಶಾಯಿನಿಯಾಗಿ ಪಾತಿವ್ರತ್ಯವ್ರತವನ್ನೇ ಅನುಸರಿಸಿ, ಧರ್ಮದಲ್ಲಿಯೇ ನಂಬುಗೆಯುಳ್ಳವಳಾಗಿರುವುದೆಲ್ಲವೂ, "ಕೃತಘ್ನನಿಗೆ ಮಾಡಿದ ಉಪಕಾರದಂತೆ" ನಿರರ್ಥಕವಾಗಿ ನಶಿಸುತ್ತಿರುವುದಲ್ಲವೇ? ಅಯ್ಯೋ! ನನ್ನ ದೌರ್ಭಾಗ್ಯವೇ! ಎಲೈ ಪ್ರಾಣನಾಥನೇ! ನಿನ್ನನ್ನಗಲಿ ಪರಿತಪಿಸಿ ಕೃಶಳಾಗಿ ಮತ್ತೆ ನಿನ್ನನ್ನು ಸೇರುವ ಆಸೆಯೂ ಇಲ್ಲದಾಗಿರುವಾಗ ನಾನಿದುವರೆಗೂ ನಡೆಸಿದ ಧರ್ಮಕ್ಕೂ, ನನ್ನ ಏಕಪತ್ನೀವ್ರತಕ್ಕೂ ಯಾವ ಫಲವುಂಟಾದ ಹಾಗಾಯಿತು? ಎಲೈ ಪ್ರಿಯನೇ! ನಾನು ನಿನ್ನನ್ನು ಅಗಲಿದ್ದರೂ ಪುನಃ ನಿನ್ನನ್ನು ಸೇರಬಹುದೆಂಬ ಪ್ರತ್ಯಾಶೆಯಿಂದ ಇದುವರೆಗೆ ಆ ನನ್ನ ನಿಯಮಗಳೆಲ್ಲವನ್ನೂ ಅನುಸರಿಸಿಕೊಂಡು ಬಂದಿದ್ದೆನು. ಆದರೆ ಅದು ನಿಷ್ಫಲವಾಯಿತು. ಅಕಟ! ನಾನು ದುರುಳ ರಾವಣನ ಕೈಗೆ ಸಿಕ್ಕಿಬಿದ್ದಾಗಲೇ ದೇಹತ್ಯಾಗ ಮಾಡಿದ್ದರೆ ಈಗ ನಾನು ಅನುಭವಿಸುತ್ತಿರುವ ಕಷ್ಟಪರಂಪರೆಯೆಲ್ಲವೂ ತಪ್ಪುತ್ತಿದ್ದಿತು. ಎಲೈ ಶ್ರೀರಾಮನೇ! ನೀನು ಪಿತೃವಾಕ್ಯಪರಿಪಾಲನೆಗಾಗಿ ಮುಗಿಸಬೇಕಾದ ಅರಣ್ಯವಾಸವನ್ನು ಮುಗಿಸಿ ಕೃತಕೃತ್ಯನಾಗಿ ಅರಣ್ಯವನ್ನು ಬಿಟ್ಟು ಮತ್ತೆ ಅಯೋಧ್ಯಾಪಟ್ಟಣಕ್ಕೆ ಹೋಗಿ ಸಮಸ್ತ ದುಃಖಗಳನ್ನೂ ಮರೆತು ವಿಶಾಲನೇತ್ರೆಯ

"ಮೋಘಂ" ತಿ. ಧಾ. ಪಾ.

ಭಯಃ ಕೃತಾರ್ಥಃ ॥ ೧೪ ॥ ಅಹಂತು ರಾಮ! ತ್ವಯಿ ಜಾತಕಾಮಾ ಚಿರಂ ವಿನಾಶಾಯ ನಿಬದ್ಧಭಾವಾ । ಮೋಘಂ ಚರಿತ್ವಾಽಥ ತಪೋ ವ್ರತಂಚ ತ್ಯಕ್ಷ್ಯಾಮಿ ಧಿಗ್ಜೀವಿತಮಲ್ಪ § ಭಾಗ್ಯಾ ॥೧೫॥ ಸಾ ಜೀವಿತಂ ಕ್ಷಿಪ್ರಮಹಂ ತ್ಯಜೇಯಂ ವಿಷೇಣ ಶಸ್ತ್ರೇಣ ಶಿತೇನ ವಾಪಿ । ವಿಷಸ್ಯ ದಾತಾ ನಹಿ ಮೇಽಸ್ತಿ ಕಶ್ಚಿಚ್ಛಸ್ತ್ರಸ್ಯ ವಾ ವೇಶ್ಮನಿ ರಾಕ್ಷಸಸ್ಯ" ॥ ೧೬ ॥ ‡ ಇತೀವ ದೇವೀ ಬಹುಧಾ ವಿಲಪ್ಯ ಸರ್ವಾತ್ಮನಾ ರಾಮಮನುಸ್ಮರಂತೀ । ಪ್ರವೇಪಮಾನಾ ಪರಿಶುಷ್ಕವಕ್ತ್ರಾ ನಗೋತ್ತಮಂ ಪುಷ್ಪಿತಮಾಸಸಾದ॥೧೭॥ಶೋಕಾಭಿತಪ್ತಾ ಬಹುಧಾ ವಿಚಿಂತ್ಯ ಸೀತಾಽಥ ವೇಣ್ಯುದ್ಗ್ರಥನಂ ಗೃಹೀತ್ವಾ । ಉದ್ಬಧ್ಯ

ಹೇ ರಾಮ - ಓ ರಾಮನೇ, ಅಹಂತು - ನಾನಾದರೆ, ತ್ವಯಿ - ನಿನ್ನಲ್ಲಿ, ಜಾತಕಾಮಾ - ಹುಟ್ಟದ ಅಪೇಕ್ಷೆಯುಳ್ಳವಳಾಗಿ, ಚಿರಂ - ಬಹುಕಾಲ, ವಿನಾಶಾಯ - ನಾಶಕ್ಕೋಸ್ಕರ, ನಿಬದ್ಧಭಾವಾ - ಕಟ್ಟಲ್ಪಟ್ಟ ಅಭಿಪ್ರಾಯವುಳ್ಳವಳಾಗಿ, ಅಥ - ಆ ಬಳಿಕ, ಮೋಘಂ - ವ್ಯರ್ಥವಾದ, ತಪೋವ್ರತಂ - ನಿರಾಹಾರ ವ್ರತವನ್ನು, ಚರಿತ್ವಾಚ - ಮಾಡಿಯೂ, ಅಲ್ಪಭಾಗ್ಯಾ - ಹೀನಾದೃಷ್ಟೆಯಾಗಿ, ಜೀವಿತಂ - ಪ್ರಾಣವನ್ನು, ತ್ಯಕ್ಷ್ಯಾಮಿ - ಬಿಡುವೆನು, ಧಿಕ್ - ನಿಂದಿಸು. ॥ ೧೫ ॥ ಸಾಹಂ - ಆ ನಾನು, ವಿಷೇಣ - ವಿಷದಿಂದಲಾಗಲಿ, ಶಿತೇನ-ತೀಕ್ಷ್ಣವಾದ, ಶಸ್ತ್ರೇಣವಾಪಿ-ಕತ್ತಿಯಿಂದಲಾಗಲಿ, ಜೀವಿತಂ - ಪ್ರಾಣವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ತ್ಯಜೇಯಂ - ಬಿಡುವೆನು, ರಾಕ್ಷಸಸ್ಯ - ರಕ್ಕಸನಾದ ರಾವಣನ, ವೇಶ್ಮನಿ - ಮನೆಯಲ್ಲಿ, ವಿಷಸ್ಯ - ವಿಷವನ್ನಾದರೂ, ಶಸ್ತ್ರಸ್ಯವಾ - ಶಸ್ತ್ರವನ್ನಾದರೂ, ದಾತಾ - ಕೊಡುವ, ಕಶ್ಚಿತ್ - ಒಬ್ಬನೂ, ನಾಸ್ತಿಹಿ - ಇಲ್ಲವಲ್ಲ. ॥ ೧೬ ॥ ಇತೀವ - ಈ ಪ್ರಕಾರವಾಗಿ, ದೇವೀ - ಸೀತಾದೇವಿಯು, ಬಹುಧಾ - ಅನೇಕ ಪ್ರಕಾರವಾಗಿ, ವಿಲಪ್ಯ - ಪ್ರಲಾಪಿಸಿ, ಸರ್ವಾತ್ಮನಾ - ಹೇಗಾದರೂ, ರಾಮಂ - ಶ್ರೀರಾಮನನ್ನು, ಅನುಸ್ಮರಂತೀ - ಧ್ಯಾನಿಸುತ್ತ, ಪ್ರವೇಪಮಾನಾ - ರಾವಣನ ಭಯದಿಂದ ನಡುಗುತ್ತ, ಪರಿ....ಕ್ತ್ರಾ-ಬತ್ತಿದ ಮುಖವುಳ್ಳವಳಾಗಿ, ಪುಷ್ಪಿತಂ - ಹೂ ಮೊಳೆತಿರುವ, ನಗೋತ್ತಮಂ - ವೃಕ್ಷಶ್ರೇಷ್ಠವನ್ನು, ಆಸಸಾದ - ಹೊಂದಿದಳು. ॥ ೧೭ ॥ ಮೃದು....ತ್ರೀ - ಮೆತ್ತಗಿರುವ ಸಮಸ್ತಾವಯವಗಳುಳ್ಳ, ಶೋಕಾಭಿತಪ್ತಾ - ದುಃಖಾಕ್ರಾಂತಳಾದ, ಸಾಸೀತಾ - ಆ ಸೀತಾದೇವಿಯು, ಬಹುಧಾ - ಅನೇಕ ವಿಧವಾಗಿ, ವಿಚಿಂತ್ಯ - ಆಲೋಚಿಸಿ, ಅಥ -

---

ರಾದ ಸ್ತ್ರೀಯರೊಡನೆ ಕ್ರೀಡಿಸುವೆ. ಮಹಾ ದೌರ್ಭಾಗ್ಯವತಿಯಾದ ನಾನು ಮಾತ್ರ ನಿನ್ನಲ್ಲಿ ವಿಶೇಷವಾದ ಅನುರಾಗವುಳ್ಳವಳಾಗಿ ನಿನ್ನನ್ನೇ ನಿರೀಕ್ಷಿಸುತ್ತಿದ್ದೆನು. ಅದು ವ್ಯರ್ಥವಾಯಿತು. ಈಗ ಸಾಯಲೂ ಸಿದ್ಧಳಾಗಬೇಕಾಯಿತು. ನಾನಿದುವರೆಗೂ ನಡೆಸಿದ ತಪಸ್ಸು, ಆಚರಿಸಿದ ವ್ರತ ಇವೂ ನಿಷ್ಫಲವಾದವು. ಅಲ್ಪ ಭಾಗ್ಯಳಾದ ನನ್ನ ಜೀವಿತವನ್ನು ಸುಡಬೇಕು! ॥೧೧–೧೫॥ ಇಂತಹ ನಿರ್ಭಾಗ್ಯೆಯಾದ ನಾನು ಶೀಘ್ರವಾಗಿಯೇ, ಶಸ್ತ್ರದಿಂದಲೋ, ವಿಷದಿಂದಲೋ ಪ್ರಾಣಗಳನ್ನುಬಿಡುವುದೇ ಲೇಸು. ಆದರೆ ಈ ರಾಕ್ಷಸನಗೃಹದಲ್ಲಿ ನನಗೆ ವಿಷವನ್ನಾಗಲಿಶಸ್ತ್ರವನ್ನಾಗಲಿ ತಂದುಕೊಡುವವರು ಯಾರೂ ಇಲ್ಲದೆ ಹೋಗಿರುವರು!" ಹೀಗೆ ಸೀತಾದೇವಿಯು ಅನೇಕ ಬಗೆಯಾಗಿ ಪ್ರಲಪಿಸುತ್ತ ತನ್ನ ಮನಸ್ಸನ್ನು ಶ್ರೀರಾಮನಲ್ಲಿಯೇ ನೆಲೆಗೊಳಿಸಿ ಅನೇಕ ವಿಧವಾಗಿ ಆತನನ್ನೇ ಧ್ಯಾನಿಸುತ್ತ ಗಡಗಡನೆ ನಡುಗುತ್ತ ಹೂಮೊಳೆತಿರುವ ಅಶೋಕವೃಕ್ಷದ ಬಳಿಗೈದಿದಳು. ಆಗಲಾಕೆಯು ಮಹಾ ವ್ಯಸನದಿಂದ ತಪಿಸುತ್ತ ಬಗೆಬಗೆಯಾಗಿ ಚಿಂತಿಸುತ್ತ ಮರ

---

§ "ಭಾಗ್ಯಾಂ" ತಿ. ಮ. ಪಾ. ‡ ಈ ಶ್ಲೋಕವು ಗೋ+ಮ ಪಾಠಗಳಲ್ಲಿ ಅಧಿಕ.



—: ವೇಣ್ಯುದ್ಗ್ರಥನ :—

ಪುಟ ೩೩೭

ವೇಣ್ಯುದ್ಗ್ರಥನೇನ ಶೀಘ್ರಮಹಂ ಗಮಿಷ್ಯಾಮಿ ಯಮಸ್ಯ ಮೂಲಂ ||೧೮|| ಉಪ
ಸ್ಥಿತಾ ಸಾ ಮೃದುಸರ್ವಗಾತ್ರೀ ಶಾಖಾಂ ಗೃಹೀತ್ವಾಽಥ ನಗಸ್ಯ ತಸ್ಯ | ತಸ್ಯಾಸ್ತು
ರಾಮಂ ಪ್ರವಿಚಿಂತಯಂತ್ಯಾ ರಾಮಾನುಜಂ ಸ್ವಂ ಚ ಕುಲಂ ಶುಭಾಂಗ್ಯಾಃ || ೧೯ ||

* ಶೋಕಾಽನಿಮಿತ್ತಾನಿ ತಥಾ ಬಹೂನಿ
ಧೈರ್ಯಾರ್ಜಿತಾನಿ ಪ್ರವರಾಣಿ ಲೋಕೇ |
ಪ್ರಾದುರ್ನಿಮಿತ್ತಾನಿ ತದಾ ಬಭೂವುಃ
ಪುರಾಪಿ ಸಿದ್ಧಾನ್ಯುಪಲಕ್ಷಿತಾನಿ || ೨೦ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಾವಿಂಶಸ್ಸರ್ಗಃ

ಬಳಿಕ, ವೇಣ್ಯುದ್ಗ್ರಥನಂ - ಜಡೆಮುಡಿಯನ್ನು, ಗೃಹೀತ್ವಾ-ಹಿಡಿದುಕೊಂಡು, ವೇಣ್ಯುದ್ಗ್ರಥನೇನ-ಕೇಶಪಾಶದಿಂದ, ಉದ್ಬಧ್ಯ - ಉರುಲು ಹಾಕಿಕೊಂಡು, ಅಹಂ - ನಾನು, ಯಮಸ್ಯ - ಯಮನ, ಮೂಲಂ - ತಳವನ್ನು ಕುರಿತು, ಗಮಿಷ್ಯಾಮಿ - ಹೋಗುವೆನು, ಇತಿ - ಹೀಗೆಂದು ಯೋಚಿಸಿ, ಅಥ-ಬಳಿಕ, ತಸ್ಯನಗಸ್ಯ - ಆ ಅಶೋಕವೃಕ್ಷದ, ಶಾಖಾಂ - ರೆಂಬೆಯನ್ನು, ಗೃಹೀತ್ವಾ-ಹಿಡಿದುಕೊಂಡು, ಉಪಸ್ಥಿತಾ - ನಿಂತಳು. || ೧೮ || ತದಾ - ಆ ಕಾಲದಲ್ಲಿ, ತಥಾ - ಹಾಗೆ, ರಾಮಂ - ಶ್ರೀರಾಮನನ್ನು, ರಾಮಾನುಜಂ - ಲಕ್ಷ್ಮಣನನ್ನೂ, ಸ್ವಂಕುಲಂಚ - ತನ್ನವಂಶವನ್ನೂ, ಪ್ರವಿಚಿಂತಯಂತ್ಯಾಃ-ಬಹುತರವಾಗಿ ಆಲೋಚಿಸುತ್ತಿರುವ, ಶುಭಾಂಗ್ಯಾಃ - ಲಕ್ಷಣಯುಕ್ತವಾದ ದೇಹವುಳ್ಳ, ತಸ್ಯಾಸ್ತು - ಆ ಸೀತೆಗಾದರೆ, ಶೋಕಾಽನಿಮಿತ್ತಾನಿ - ದುಃಖಕಾರಣಗಳಲ್ಲದಿರುವ, ಧೈರ್ಯಾರ್ಜಿತಾನಿ - ಧೈರ್ಯವನ್ನುಂಟುಮಾಡುವ, ಲೋಕೇ - ಲೋಕದಲ್ಲಿ, ಪ್ರವರಾಣಿ - ಪ್ರಸಿದ್ಧಗಳಾದ, ಪುರಾಪಿ - ಪೂರ್ವದಲ್ಲಿಯೂ, ಸಿದ್ಧಾನಿ - ಸಫಲಗಳಾಗಿ, ಉಪಲಕ್ಷಿತಾನಿ - ಕಾಣಿಸಲ್ಪಟ್ಟ, ಬಹೂನಿ - ಅನೇಕ, ನಿಮಿತ್ತಾನಿ - ಶಕುನಗಳು, ಪ್ರಾದುರ್ಬಭೂವುಃ - ಹುಟ್ಟಿದವು. || ೧೯-೨೦ ||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಾವಿಂಶಸ್ಸರ್ಗಃ

ಣಕ್ಕೆ ನಿಶ್ಚಯಿಸಿದವಳಾಗಿ ಉದ್ದವಾದ ತನ್ನತಲೆಗೂದಲನ್ನೇ ಕೊರಳಿಗೆ ಸುತ್ತಿ, "ಈ ಮರದ ರೆಂಬೆಗೆ ನೇತುಹಾಕಿಕೊಂಡು ಶೀಘ್ರದಲ್ಲಿಯೇ ಪ್ರಾಣಗಳನ್ನು ತೊರೆದು ಯಮಪುರಿಗೆ ಹೋಗುವೆನು" ಎಂದು ಹೇಳುತ್ತ ಆಗಿಂದಾಗ್ಗೆ ತನ್ನ ಪತಿದೇವನಾದ ಶ್ರೀರಾಮಮೂರ್ತಿಯನ್ನೂ, ಮೈದುನನಾದ ಲಕ್ಷ್ಮಣಸ್ವಾಮಿಯನ್ನೂ ಧ್ಯಾನಿಸುತ್ತ, ಅಂತಹ ವೀರರಿದ್ದರೂ ತನಗೆ ಕಷ್ಟವು ತಪ್ಪಲಿಲ್ಲವೆಂದು ಕೊರಗುತ್ತ ತನ್ನ ಪವಿತ್ರವಾದ ವಂಶವನ್ನೂ, ಈಗ ತನಗೊದಗಿರುವ ದುರವಸ್ಥೆಯನ್ನೂ ಸ್ಮರಿಸಿದವಳಾಗಿ ಅಡಿಗಡಿಗೂ ದುಃಖಿಸುತ್ತಿದ್ದಳು. ಆ ಸಮಯದಲ್ಲಿ ಆಕೆಗೆ ವ್ಯಸನಗಳನ್ನು ಹೋಗಲಾಡಿಸುವಂತಹುದೂ, ಧೈರ್ಯವನ್ನುಂಟುಮಾಡುವಂತಹುದೂ, ಲೋಕಪ್ರಸಿದ್ಧವಾದುದೂ, ಹಿಂದೆ ಅನೇಕಸಲ ಸಿದ್ಧಿಸಿದಂತೆ ಪರೀಕ್ಷಿಸಲ್ಪಟ್ಟುದೂ ಆದ ಶುಭಶಕುನಗಳ ಸೂಚನೆಯಾಯಿತು. || ೧೬-೨೦ ||

ಇಂತಿದು ವೇಣ್ಯುದ್ಗ್ರಥನಪೂರ್ವಕ ಸೀತಾಕೃತ ಮರಣ ನಿಶ್ಚಯವೃತ್ತಾಂತವೆಂಬ
ಇಪ್ಪತ್ತೆಂಟನೆಯ ಸರ್ಗವು ಸಮಾಪ್ತವಾದುದು.

---

* "ತಸ್ಯಾವಿಶೋಕಾನಿಂದಾ" ಶಿ. ರಾ. ಪಾ.

ಸುಂದರಕಾಂಡೇ ಏಕೋನತ್ರಿಂಶಸ್ಸರ್ಗಃ

¶ ತಥಾಗತಾಂ ತಾಂ ವ್ಯಥಿತಾಮನಿಂದಿತಾಂ ವ್ಯಪೇತಹರ್ಷಾಂ ಪರಿದೀನಮಾನಸಾಂ । ಶುಭಾಂ ನಿಮಿತ್ತಾನಿ ಶುಭಾನಿ ಭೇಜಿರೇ ನರಂ ಶ್ರಿಯಾ ಜುಷ್ಟಮಿವೋಪಜೀವಿನಃ॥೧॥ತಸ್ಯಾಶ್ಶುಭಂ ವಾಮ ಮರಾಳಪಕ್ಷ್ಮ ರಾಜೀವೃತಂ ಶುಕ್ಲ ವಿಶಾಲಕೃಷ್ಣಂ। ಪ್ರಾಸ್ಪಂದತೈಕಂ ನಯನಂ ಸುಕೇಶ್ಯಾ ಮೀನಾಹತಂ ಪದ್ಮಮಿವಾಭಿತಾಮ್ರಂ ॥ ೨ ॥

ತಥಾಗತಾಂ-ಅಂತಹ ದುರವಸ್ಥೆಯನ್ನು ಹೊಂದಿರುವ, ಅನಿಂದಿತಾಂ - ನಿಂದೆಗೆ ಅನರ್ಹಳಾದ, ವ್ಯಪೇತಹರ್ಷಾಂ - ಕಳೆದುಹೋದ ಸಂತೋಷವುಳ್ಳ, ಪರಿ....ಸಾಂ - ಕುಗ್ಗ ಮನಸ್ಸುಳ್ಳ, ಶುಭಾಂ - ಶುಭಕರಳಾದ, ತಾಂ - ಆ ಸೀತಾದೇವಿಯನ್ನು, ಶುಭಾನಿ - ಶುಭಕರಗಳಾದ, ನಿಮಿತ್ತಾನಿ - ಶಕುನಗಳು, ಶ್ರಿಯಾ - ಸಂಪತ್ತಿನಿಂದ, ಜುಷ್ಟಂ - ಯುಕ್ತನಾದ, ನರಂ - ಮನುಷ್ಯನನ್ನು, ಉಪಜೀವಿನಇವ - ಸೇವಕರೋಪಾದಿಯಲ್ಲಿ, ಭಜಿರೇ - ಹೊಂದಿದವು. ॥ ೧ ॥ ಸುಕೇಶ್ಯಾಃ - ಲಕ್ಷಣವಾದ ಕೇಶರಾಶಿಯುಳ್ಳ, ತಸ್ಯಾಃ - ಆ ಸೀತಾದೇವಿಯ, ಅರಾ....ತಂ-ಕುಟಿಲಗಳಾದ ರೆಪ್ಪೆಗಳ ಪಜ್ಕ್ತಿಯಿಂದ ಸುತ್ತುವರೆದ, ಶುಕ್ಲ....ಷ್ಣಂ-ಬಿಳುಪಾಗಿಯೂ, ವಿಸ್ತಾರವಾಗಿಯೂ, ಕಪ್ಪಾಗಿಯೂ ಇರುವ, ಶುಭಂ - ಶುಭಕರವಾದ, ಏಕಂ - ಒಂದಾದ, ವಾಮಂನಯನಂ - ಎಡಗಣ್ಣು, ಮೀನಾಹತಂ - ಮೀನಿನಿಂದ ಹೊಡೆಯಲ್ಪಟ್ಟ, ಅಭಿತಾಮ್ರಂ - ಸುತ್ತಲೂ ಕೆಂಪಾಗಿರುವ, ಪದ್ಮಮಿವ - ಕಮಲದಂತೆ, ಪ್ರಾಸ್ಪಂದತ - ಚಲಿಸಿತು. ॥ ೨ ॥ ಚಾರ್ವಂ....ತ್ರಃ - ಸೊಗಸಾದ ಗುಂಡಗಳ್ಳುದಾಗಿ ಬಲಿತು

ಈ ಪ್ರಕಾರ ಮಹಾ ವ್ಯಸನಸಂತಪ್ತಳಾಗಿ, ಮನಸ್ಸಿನಲ್ಲಿ ಯಾವ ಬಗೆಯ ಹರ್ಷವೂ ಇಲ್ಲದೆ ದುಃಖದಿಂದ ಕೊರಗುತ್ತಿರುವ ಆ ಸೀತಾದೇವಿಗೆ, " ಐಶ್ವರ್ಯವಂತನನ್ನು ಸೇರಿ ಬದುಕುವ ಆಶ್ರಿತರಂತೆ " ಕೆಲವು ಶುಭ ಶಕುನಗಳುಂಟಾಗುತ್ತಿದ್ದವು. ಬಹು ಮಂಗಳಕರವಾದುದೂ, ಬಿಲ್ಲಿನಂತೆ ಡೊಂಕಾಗಿರುವ ಕಣ್ರೆಪ್ಪೆಗಳಿಂದ ಕೂಡಿರುವುದೂ, ಕಪ್ಪಾಗಿಯೂ, ವಿಶಾಲವಾಗಿಯೂ, ಬೆಳ್ಳಗೂ ಇರುವುದೂ, ತುದಿಗಳಲ್ಲಿ ರಕ್ತವರ್ಣವಾಗಿರುವುದೂ ಆದ ಆಕೆಯ ಎಡಗಣ್ಣು ಮಾತ್ರ ಮೀನಿನಿಂದ ಕದಲಿಸಲ್ಪಟ್ಟ ಕಮಲದಂತೆ ಅದಿರುತ್ತಿದ್ದಿತು.

¶ ಇಲ್ಲಿ, " ರಹಸ್ಯಂಚ ಪ್ರಕಾಶಂಚ " ಎಂಬುದಾಗಿ ಎಲ್ಲವನ್ನೂ ಯಥಾವತ್ತಾಗಿ ಸಾಕ್ಷಾತ್ಕರಿಸಿಕೊಂಡಿರುವ ವಾಲ್ಮೀಕಿ ಮುನಿಯು, "ತಥಾಗತಾಂ" ಎಂಬ ಶಬ್ದವನ್ನು ಇಲ್ಲಿ ಉಪಯೋಗಿಸಿರುವುದರಿಂದ ಆತನೂ ಸಹ ಸೀತಾದೇವಿಯ ದುಃಖಪರಿಮಿತಿಯಿಂತಿಷ್ಟೇ ಎಂಬುದನ್ನು ನಿರ್ಧರಿಸಲಾರದೇ ಹೋಗಿ ತನ್ನ ಭಾವವನ್ನೆಲ್ಲ ಈ ಒಂದು ಶಬ್ದದಲ್ಲಿಯೇ ಅಡಕ ಮಾಡಿರುವುದಾಗಿ ತಿಳಿಯಬೇಕು. ಅನಿಂದಿತಾಂ – ಶ್ರೀರಾಮನನ್ನು ಅಗಲಿರುವ ಕಾಲದಲ್ಲಿ ತಾನು ಹೇಗೆ ಆಚರಿಸಿಕೊಂಡಿರಬೇಕೋ ಹಾಗೆಯೇ ಇದ್ದುದರಿಂದ ತನ್ನ ಪತಿವ್ರತಾಧರ್ಮಕ್ಕೆ ಎಳ್ಳಷ್ಟೂ ಕುಂದುಬಾರದಂತೆ ಗೋಚರಿಸುವವಳು. ವ್ಯಪೇತಹರ್ಷಾಂ—" ಸಮಾ ದ್ವಾದಶ ತತ್ರಾಹಂ ರಾಘವಸ್ಯ ನಿವೇಶನೇ । ಭುಂಜಾನಾ ಮಾನುಷಾ ಭೋಗಾ ಸರ್ವಕಾಮ ಸಮೃದ್ಧಿನೀ " ಎಂದು ಸೀತೆಯೇ ಹಿಂದೆ ಹೇಳಿರುವಂತೆ, ಮೊದಲು ಯಾವಾಗಲೋ ಸಂತೋಷವನ್ನನುಭವಿಸಿದವಳಾದರೂ ಪ್ರಕೃತದಲ್ಲಿ ಆ ಸೂಚನೆಯೇ ತೋರದಂತೆ ಖಿನ್ನಮನಸ್ಕಳಾಗಿರುವವಳು. ಪರಿದೀನಮಾನಸಾ – ಒಂದು ಸಮಯದಲ್ಲಿ ಆಕಸ್ಮಿಕವಾಗಿ ಹರ್ಷವುಂಟಾಗುವ ಹಾಗಿದ್ದರೂ ಅದಕ್ಕೆಡೆಗೊಡದೆ ನಿರಂತರವೂ ದುಃಖಪೂರ್ಣವಾದ ಮನವುಳ್ಳವಳು. ಶುಭಂ – ಉತ್ತಮೋತ್ತಮ ಗುಣಸಂಪತ್ತಿಯುಳ್ಳ ಮಹಾತ್ಮನಾದ ಶ್ರೀರಾಮಮೂರ್ತಿಯನ್ನೇ ಕುರಿತು ದುಃಖಿಸುತ್ತಿರುವ ಆಕೆಯ ವಿರಹಕಾಲದ ವಿಕಾರಗಳೂ ಸುಂದರಗಳಾಗಿಯೂ, ಮಂಗಳಕರಗಳಾಗಿಯೂ ಇದ್ದುವು. (ತನಿಶ್ಲೋಕಿ)

ಭುಜಶ್ಚ ಚಾರ್ವಂಚಿತಪೀನವೃತ್ತಃ ಪರಾರ್ಧ್ಯಕಾಲಾಗರುಚಂದನಾರ್ಹಃ । ಅನುತ್ತಮೇನಾಧ್ಯುಷಿತಃ ಪ್ರಿಯೇಣ ಚಿರೇಣ ವಾಮ ಸ್ಸಮವೇಪತಾಶು ॥೩॥ ಗಜೇಂದ್ರಹಸ್ತಪ್ರತಿಮಶ್ಚ ಪೀನಸ್ತಯೋರ್ದ್ವಯೋ ಸ್ಸಂಹತಯೋಸ್ಸುಜಾತಃ ।ಪ್ರಸ್ಪಂದಮಾನಃ ಪುನರೂರುರಸ್ಯಾ ರಾಮಂ ಪುರಸ್ತಾತ್ ಸ್ಥಿತಮಾಚಚಕ್ಷೇ ॥ ೪ ॥ ಶುಭಂ ಪುನರ್ಹೇಮಸಮಾನವರ್ಣಮೀಷದ್ರಜೋಧ್ವಸ್ತಮಿವಾಮಲಾಕ್ಷ್ಯಾಃ । ವಾಸಸ್ಸ್ಥಿತಾಯಾಶ್ಶಿಖರಾಗ್ರದಂತ್ಯಾಃ ಕಿಂಚಿತ್ಪರಿಸ್ರಂಸತ ಚಾರುಗಾತ್ರ್ಯಾಃ ॥ ೫ ॥ ಏತೈರ್ನಿಮಿತ್ತೈ ರಪರೈಶ್ಚ ಸುಭ್ರೂಸ್ಸಂಬೋಧಿತಾ ಪ್ರಾಗಪಿ ಸಾಧುಸಿದ್ಧ್ಯೈಃ । ವಾತಾತಪಕ್ಲಾಂತಮಿವ ಪ್ರಣಷ್ಟಂ

ಗುಂಡಗಿರುವ, ಪರಾ ...ರ್ಹಃ - ಶ್ರೇಷ್ಠವಾದ ಅಗರುಗಂಧಲೇಪನಕ್ಕೆ ಯೋಗ್ಯವಾದ, ಅನುತ್ತಮೇನ - ಸರ್ವೋತ್ತಮನಾದ, ಪ್ರಿಯೇನ - ಪತಿಯಾದ ರಾಮನಿಂದ, ಚಿರೇಣ - ಬಹುಕಾಲ, ಅಧ್ಯುಷಿತಃ - ಅನುಭವಿಸಲ್ಪಟ್ಟ, ವಾಮೋಭುಜಶ್ಚ - ಎಡಭುಜವೂ ಸಹ, ಆಶು - ಬೇಗನೆ, ಸಮವೇಪತ - ಅದಿರಿತು. ॥ ೩ ॥ ಪುನಃ - ಮರಳಿಯೂ, ಅಸ್ಯಾಃ - ಈ ಸೀತೆಯ, ತಯೋಃ - ಸುಲಕ್ಷಣ ಲಕ್ಷಿತಗಳಿಂದು ಪ್ರಸಿದ್ಧಗಳಾದ, ಸಂಹತಯೋಃ - ಒಂದಕ್ಕೊಂದು ಕೂಡಿರುವ, ದ್ವಯೋಃ - ಎರಡಾದ ಊರುಗಳಲ್ಲಿ, ಸುಜಾತಃ - ಚನ್ನಾಗಿರುವ, ಗಜೇಂ....ಮಃ - ಆನೆಯ ಸೊಂಡಿಲದಂತಿರುವ ಬಲಿಷ್ಠವಾದ, ಊರುಶ್ಚ - ಎಡದೊಡೆಯೂ, ಪ್ರಸ್ಪಂದಮಾನಃ-ಅದಿರುತ್ತಿರುವುದಾಗಿ, ರಾಮಂ-ಶ್ರೀರಾಮನನ್ನು, ಪುರಸ್ತಾತ್ - ಮುಂದೆ, ಸ್ಥಿತಂ - ಇರುವವನನ್ನಾಗಿ, ಆಚಚಕ್ಷೇ - ಹೇಳಿತು. ॥ ೪ ॥ ಪುನಃ - ಮತ್ತು, ಅಮಲಾಕ್ಷ್ಯಾಃ - ನಿರ್ಮಲನೇತ್ರಿಯಾದ, ಶಿಖ....ತ್ಯಾಃ - ಗುಂಡಾಗಿರುವ, (ಅಥವಾ ದಾಳಿಂಬೇಬೀಜದಂತಿರುವ) - ಮುಂದುಗಡೆಯಲ್ಲಿರುವ ಹಲ್ಲುಗಳುಳ್ಳ, ಸ್ಥಿತಾಯಾಃ - ಇರುತ್ತಿರುವ, ಚಾರುಗಾತ್ರ್ಯಾಃ - ಸುಂದರ ದೇಹವುಳ್ಳ ಸೀತಾದೇವಿಯ, ಹೇಮ....ರ್ಣಂ - ಚಿನ್ನಕ್ಕೆ ಸದೃಶವಾದ ಬಣ್ಣವುಳ್ಳ, ಈಷತ್ - ಕೊಂಚ, ರಜೋ....ತಂ - ಧೂಳು ಮುಚ್ಚಿದಂತಿರುವ, ಶುಭಂ - ಮಂಗಳಕರವಾದ, ವಾಸಃ - ಸೀರೆಯು, ಕಿಂಚಿತ್ - ಸ್ವಲ್ಪ, ಪರಿಸ್ರಂಸತ - ಜಾರಿಹೋಯಿತು. ॥ ೫ ॥ ಏತೈಃ - ಈ ಪೂರ್ವೋಕ್ತಗಳಾದ, ಅಪರೈಃ-ಮತ್ತೂ ಕೆಲವಾದ, ಪ್ರಾಗಪಿ-ಮೊದಲೇ, ಸಾಧುಸಿದ್ಧ್ಯೈಃ - ಚೆನ್ನಾಗಿ ಅನುಭವಸಿದ್ಧಗಳಾದ, ನಿಮಿತ್ತೈಶ್ಚ-ಶಕುನಗಳಿಂದಲೂ, ಸಂಬೋಧಿತಾ - ಸೂಚಿಸಲ್ಪಟ್ಟ, ಸುಭ್ರೂಃ - ಒಳ್ಳೆಯ ಹುಬ್ಬುಗಳುಳ್ಳ ಸೀತಾದೇವಿಯು, ವಾತಾ....ತಂ - ಗಾಳಿಯಿಂದಲೂ ಬಿಸಲಿ

ಮಹಾ ಸುಂದರವೂ, ಶ್ರೇಷ್ಠವೂ ಆಗಿ ಬಲಿತು ಗುಂಡಾಗಿರುವುದೂ, ಉತ್ತಮೋತ್ತಮವಾದ ಅಗರುಗಂಧ ಲೇಪನಕ್ಕೆ ಯೋಗ್ಯವಾದುದಾಗಿ ಪುರುಷೋತ್ತಮನಾದ ಶ್ರೀರಾಮನಿಂದ ಬಹುಕಾಲದವರೆಗೂ ಆಲಿಂಗನವನ್ನನುಭವಿಸಿದ್ದ ಆಕೆಯ ವಾಮಭುಜವು ಅಕಾರಣವಾಗಿಯೇ ಅದಿರುತ್ತಿದ್ದಿತು. ॥ ೧–೩ ॥ ಇಷ್ಟೆಯಲ್ಲದೆ ಒಂದಕ್ಕೊಂದು ಕೂಡಿರುವ ಊರುದ್ವಯದಲ್ಲಿ, ಗಜನಾಸೋಪಮವಾಗಿ, ಮಹಾ ಸೌಂದರ್ಯವಿರಾಜಿತವಾಗಿರುವ ಎಡದೊಡೆಯೂ ಅದಿರುತ್ತ ಶ್ರೀರಾಮನಾಕೆಯೆದುರಿನಲ್ಲಿಯೇ ನಿಂತಿರುವಂತೆ ಸೂಚಿಸುತ್ತಿದ್ದಿತು. ನಿರ್ಮಲವಾದ ನೇತ್ರಗಳುಳ್ಳವಳಾಗಿ, ಗುಂಡಗೆ ಶಿಖರಾಕಾರವಾಗಿರುವ ತುದಿಗಳುಳ್ಳ ದಂತಗಳಿಂದ ಸೊಗಸಾಗಿರುವ ಆ ಸೀತಾದೇವಿಯ ಮಂಗಳಕರವಾದ ಸ್ವರ್ಣಛಾಯೆಯುಳ್ಳದೂ ಧೂಳಿನಿಂದ ಮಲಿನವಾಗಿರುವುದೂ ಆದ ಸೀರೆಯು ಸ್ವಲ್ಪ ಮಾತ್ರ ಜಾರಿದ್ದಿತು. ಕಾರ್ಯಸಿದ್ಧಿಯನ್ನು ಪಡೆದಂತೆ ಎಣಿಸಲ್ಪಟ್ಟ ಈ ಶುಭ ಸೂಚನೆಗಳಿಂದಲೂ, ಇನ್ನೂ ಅನೇಕವಾದ ಇತರ ನಿಮಿತ್ತ

ವರ್ಷೇಣ ಬೀಜಂ ಪ್ರತಿಸಂಜಹರ್ಷ ॥ ೬ ॥ ತಸ್ಯಾಃ ಪುನರ್ಬಿಂಬ ಫಲಾಧರೋಷ್ಠಂ ಸ್ವಕ್ಷಿಭ್ರುಕೇಶಾಂತಮರಾಳಪಕ್ಷ್ಮ । ವಕ್ತ್ರಂ ಬಭಾಸೇಽಸಿತಶುಕ್ಲದಂಷ್ಟ್ರಂ ರಾಹೋರ್ಮುಖಾಚ್ಚಂದ್ರ ಇವ ಪ್ರಮುಕ್ತಃ ॥ ೭ ॥

ಸಾ ವೀತಶೋಕಾ ವ್ಯಪನೀತತಂದ್ರೀ ಶಾಂತಜ್ವರಾ ಹರ್ಷವಿವೃದ್ಧಸತ್ವಾ ।
ಅಶೋಭತಾರ್ಯಾ ವದನೇನ ಶುಕ್ಲೇ ಶೀತಾಂಶುನಾ ರಾತ್ರಿರಿವೋದಿತೇನ ॥ ೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನತ್ರಿಂಶಸ್ಸರ್ಗಃ.

ನಿಂದಲೂ ಬಾಡಿರುವ ಕಾರಣ, ಪ್ರಣಷ್ಟಂ - ಕೃಶವಾದ, ಬೀಜಂ - ಬೀಜವು, ವರ್ಷೇಣೇವ - ವರ್ಷದಿಂದಲಂತೆ, ಪ್ರತಿಸಂಜಹರ್ಷ - ಸಂತೋಷಗೊಂಡಳು. ॥ ೬ ॥ ಪುನಃ - ಮತ್ತು, ತಸ್ಯಾಃ - ಆ ಸೀತಾದೇವಿಯ, ಬಿಂಬ....ಷ್ಠಂ - ತೊಂಡೆಯ ಹಣ್ಣಿನಂತಿರುವ ತುಟಿಗಳುಳ್ಳ, ಸ್ವಕ್ಷಿ....ತಂ - ಶುಭಕರಗಳಾದ ಕಣ್ಣುಗಳು, ಹುಬ್ಬುಗಳು, ಕೊನೆ ಕೂದಲುಗಳೂ ಉಳ್ಳ, ಅರಾಳಪಕ್ಷ್ಮ - ವಕ್ರಗಳಾದ ರೆಪ್ಪೆಗಳುಳ್ಳ, ವಕ್ತ್ರಂ - ಮುಖವು, ರಾಹೋಃ - ರಾಹುವಿನ, ಮುಖಾತ್ - ಮುಖದಿಂದ, ಪ್ರಮುಕ್ತಃ- ಬಿಡಲ್ಪಟ್ಟ, ಚಂದ್ರ ಇವ - ಚಂದ್ರನಂತೆ, ಬಭಾಸೇ - ಹೊಳೆಯುತ್ತಿದ್ದಿತು. ॥ ೭ ॥ ವೀತಶೋಕಾ - ಕಳೆದ ವ್ಯಸನವುಳ್ಳ, ವ್ಯಪ....ದ್ರೀ - ಹೋಗಲಾಡಿಸಲ್ಪಟ್ಟ ನಿದ್ದೆಯುಳ್ಳ, ಶಾಂತಜ್ವರಾ - ಉಪಶಾಂತವಾದ ಸಂತಾಪವುಳ್ಳ, ಹರ್ಷ....ತ್ವಾ - ಸಂತೋಷದಿಂದ ವೃದ್ಧಿಗೊಳಿಸಲ್ಪಟ್ಟ ಬಲವುಳ್ಳ, ಆರ್ಯಾ - ಪೂಜ್ಯಳಾದ, ಸಾ - ಆ ಸೀತಾದೇವಿಯು, ವದನೇನ - ಮುಖದಿಂದ, ಶುಕ್ಲೇ - ಶುಕ್ಲಪಕ್ಷದಲ್ಲಿ, ಉದಿತೇನ - ಹುಟ್ಟಿರುವ, ಶೀತಾಂಶುನಾ - ಚಂದ್ರನಿಂದ, ರಾತ್ರಿರಿವ - ರಾತ್ರಿಯಂತೆ, ಅಶೋಭತ - ಕಂಗೊಳಿಸಿದಳು. ॥ ೮ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನತ್ರಿಂಶಸ್ಸರ್ಗಃ.

ಗಳಿಂದಲೂ ಬಹು ಸುಂದರವಾದ ಕಣ್ರೆಪ್ಪೆಗಳುಳ್ಳ ಆ ಸೀತೆಯು ತನ್ನ ಪತಿಯಾದ ರಘುರಾಮನ ಆಗಮನವು ಸಮೀಪಿಸಿತೆಂದು, " ಗಾಳಿಯಿಂದಲೂ, ಬಿಸಿಲಿನಿಂದಲೂ ಬಹಳವಾಗಿ ಬಾಡಿ ಬೆಂಡಾಗಿರುವ ಪೈರುಗಳು ಮಳೆ ಸುರಿಯುವುದರಿಂದ ಹೇಗೋ ಹಾಗೆ " ಬಹಳವಾಗಿ ಸಂತೋಷಗೊಂಡಳು. ॥ ೪-೬ ॥ ಇಷ್ಟೆಯಲ್ಲದೆ ತೊಂಡೆಯಹಣ್ಣಿನಂತೆ ಬಹು ಕೆಂಪಾದ ತುಟಿಯುಳ್ಳವಳೂ, ಬಹು ರಮಣೀಯವಾದ ಕಣ್ಣುಗಳೂ, ಕಣ್ರೆಪ್ಪೆಗಳೂ ಉಳ್ಳವಳೂ, ಸೊಗಸಾದ ಮುಂಗುರುಳುಗಳುಳ್ಳವಳೂ, ಡೊಂಕಾದ ಕಣ್ರೆಪ್ಪೆಯ ಕೂದಲುಗಳುಳ್ಳವಳೂ, ಬಹು ಶುಭ್ರವಾದ ದಂತಸಜ್ಞ್ತಿಯುಳ್ಳವಳೂ ಆದ ಆ ಜಾನಕಿಯ ಮುಖವು ರಾಹುಗ್ರಹದಿಂದ ಮುಕ್ತವಾದ ಚಂದ್ರಬಿಂಬದಂತೆ ಬಹಳವಾಗಿ ಪ್ರಕಾಶಿಸುತ್ತಿದ್ದಿತು. ಆ ಸಮಯದಲ್ಲಿ ಮಹಾ ಪವಿತ್ರಳೂ, ಪೂಜ್ಯಳೂ ಆದ ಆಕೆಯು ಬಹಳ ಶೀಘ್ರವಾಗಿಯೇ ಸಮಸ್ತ ವ್ಯಸನಗಳಿಂದಲೂ ಬಿಡಲ್ಪಟ್ಟವಳಾಗಿಯೂ, ಶಾಂತಿಯೊಂದಿದ ತಾಪವುಳ್ಳವಳಾಗಿಯೂ, ಬಹಳವಾದ ಸಂತೋಷದಿಂದ ಅರಳಿದ ಮನಸ್ಸುಳ್ಳವಳಾಗಿಯೂ ಆಗಿ ಶುಕ್ಲಪಕ್ಷದ ರಾತ್ರಿಯಲ್ಲಿ ಉದಿಸಿದ ಚಂದ್ರಬಿಂಬದಂತೆ ಶೋಭಿಸುತ್ತಿದ್ದಳು. ॥ ೭-೮ ॥

ಇಂತಿದು ಶುಭ ನಿಮಿತ್ತ ಜನಿತ ಸೀತಾ ಸಂತೋಷ ವೃತ್ತಾಂತವೆಂಬ
ಇಪ್ಪತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ತ್ರಿಂಶಸ್ಸರ್ಗಃ

ಹನುಮಾನಪಿ¶ ವಿಶ್ರಾಂತ ಸ್ಸರ್ವಂ ಶುಶ್ರಾವ ತತ್ವತಃ। ಸೀತಾಯಾ ಸ್ತ್ರಿಜಟಾಯಾಶ್ಚ ರಾಕ್ಷಸೀನಾಂ ಚ ತರ್ಜನಂ ॥ ೧ ॥ ಅವೇಕ್ಷಮಾಣ ಸ್ತಾಂ ದೇವೀಂ ದೇವತಾಮಿವ ನಂದನೇ । ತತೋ ಬಹುವಿಧಾಂ ಚಿಂತಾಂ ಚಿಂತಯಾಮಾಸ ವಾನರಃ ॥ ೨ ॥ "ಯಾಂ ಕಪೀನಾಂ ಸಹಸ್ರಾಣಿ ಸುಬಹೂನ್ಯಯುತಾನಿಚ। ದಿಕ್ಷು ಸರ್ವಾಸು ಮಾರ್ಗಂತೇ ಸೇಯಮಾಸಾದಿತಾ ಮಯಾ ॥ ೩ ॥ ಚಾರೇಣತು ಸುಯುಕ್ತೇನ ಶತ್ರೋಶ್ಶಕ್ತಿಮವೇ

ವಿಶ್ರಾಂತಃ - ಆಯಾಸ ಪರಿಹಾರ ಮಾಡಿಕೊಂಡ, ಹನುಮಾನಪಿ - ಆಂಜನೇಯನೂ ಕೂಡ, ಸೀತಾಯಾಃ - ಸೀತಾದೇವಿಯ, ತ್ರಿಜಟಾಯಾಶ್ಚ - ತ್ರಿಜಟೆಯ, ಸರ್ವಂ - ಸಮಸ್ತ ವೃತ್ತಾಂತವನ್ನೂ, ರಾಕ್ಷಸೀನಾಂ - ರಕ್ಕಸಿಯರ, ತರ್ಜನಂಚ - ಹೆದರಿಸುವಿಕೆಯನ್ನೂ, ತತ್ವತಃ - ಯಥಾರ್ಥವಾಗಿ, ಶುಶ್ರಾವ - ಕೇಳಿದನು. ॥ ೧ ॥ ತತಃ - ಬಳಿಕ, ನಂದನೇ - ಇಂದ್ರೋದ್ಯಾನದಲ್ಲಿ, ದೇವತಾಮಿವ ಸ್ಥಿತಾಂ - ದೇವತೆಯಂತಿರುವ, ತಾಂದೇವೀಂ - ಆ ಸೀತಾದೇವಿಯನ್ನು, ಅವೇಕ್ಷಮಾಣಃ - ನೋಡುತ್ತಿರುವ, ವಾನರಃ - ಕಪಿಯಾದ ಆಂಜನೇಯನು, ಬಹುವಿಧಾಂ - ನಾನಾಬಗೆಯಾದ, ಚಿಂತಾಂ - ಆಲೋಚನೆಯನ್ನು, ಚಿಂತಯಾಮಾಸ - ಮಾಡಿದನು. ॥ ೨ ॥ ಯಾಂ - ಯಾವ ಸೀತಾದೇವಿಯನ್ನು, ಸುಬಹೂನಿ - ಅನೇಕಗಳಾದ, ಅಯುತಾನಿ - ಹತ್ತುಸಾವಿರ ಸಂಖ್ಯೆಯುಳ್ಳ, ಕಪೀನಾಂ - ವಾನರಗಳ, ಸಹಸ್ರಾಣಿ - ಸಾವಿರಗಳು, ಸರ್ವಾಸುದಿಕ್ಷು - ಸಮಸ್ತ ದಿಕ್ಕುಗಳಲ್ಲಿಯೂ, ಮಾರ್ಗಂತೇ - ಹುಡುಕುತ್ತಿರುವರೋ, ಸೇಯಂ - ಅಂತಹ ಈ ಸೀತಾದೇವಿಯು, ಮಯಾ - ನನ್ನಿಂದ, ಆಸಾದಿತಾ - ಹೊಂದಲ್ಪಟ್ಟಳು. ॥ ೩ ॥ ಶತ್ರೋಃ - ಶತ್ರುವಿನ, ಶಕ್ತಿಂ - ಸಾಮರ್ಥ್ಯವನ್ನು, ಅವೇಕ್ಷತಾ - ನೋಡುತ್ತಿರುವ, ಸುಯುಕ್ತೇನ - ಯುಕ್ತಮಾರ್ಗದಲ್ಲಿ, ಗೂಢೇನ - ರಹಸ್ಯವಾಗಿ ಬಂದು, ಚರತಾ - ಸಂಚರಿಸುತ್ತಿರುವ, ಚಾರೇಣ - ಚಾರನಾದ, ಮಯಾ - ನನ್ನಿಂದ, ಇದಂತಾವತ್ -

---

ಆ ಬಳಿಕ ಶಿಂಶುಪಾವೃಕ್ಷದ ಮೇಲೆ ಕುಳಿತಿದ್ದ ಮಹಾ ಪರಾಕ್ರಮಿಯಾದಮಾರುತಿಯು ಸೀತಾದೇವಿಯ ವೃತ್ತಾಂತವನ್ನೂ, ತ್ರಿಜಟೆಯು ಹೇಳಿದ ಸ್ವಪ್ನ ವೃತ್ತಾಂತವನ್ನೂ, ರಾಕ್ಷಸಸ್ತ್ರೀಯರು ಸೀತೆಯನ್ನು ಬೆದರಿಸುತ್ತಿರುವುದನ್ನೂ, ಚೆನ್ನಾಗಿ ನೋಡಿ ಅವೆಲ್ಲವನ್ನೂ ಗ್ರಹಿಸುತ್ತಲೇ ಇದ್ದನು. ಆ ವಾನರೋತ್ತಮನು ಆ ಶಿಂಶುಪಾವೃಕ್ಷದಮೇಲೆ ಕುಳಿತು, 'ನಂದನವನದಲ್ಲಿರುವ ವನದೇವತೆಯಂ'ತಿರುವ ಸೀತಾದೇವಿಯನ್ನು ನೋಡುತ್ತಾ ಅನೇಕ ವಿಧವಾಗಿ ಆಲೋಚಿಸುತ್ತ ಹೀಗೆಂದುಕೊಂಡನು. ॥೧-೨॥ ಅನೇಕ ಸಾವಿರ ವಾನರರು ಗುಂಪುಗುಂಪಾಗಿ ಹೊರಟುಸಮಸ್ತ ದಿಕ್ಕುಗಳಿಗೂ ಹೋಗಿ ಯಾವ ಸ್ತ್ರೀಯನ್ನು ಕುರಿತು ಹುಡುಕುತ್ತಿರುವರೋ ಆ ಸ್ತ್ರೀಯು ಈ ಸೀತಾದೇವಿಯೇ! ಈಕೆಯು ನನ್ನಿಂದ ಕಾಣಲ್ಪಟ್ಟಳಲ್ಲವೆ! ನಾನು ಮಹಾ ಸಾಮರ್ಥ್ಯದಿಂದ ಗೂಢಚಾರನಾಗಿ ಯಾರಿಗೂ ಕಾಣಿಸಿಕೊಳ್ಳದೆ ಈ ಲಂಕಾನಗರವನ್ನು ಪ್ರವೇ

¶ "ವಿಶ್ರಾಂತಃ" ತಿ. ಪಾ.

ಕ್ಷಿತಾ । ಗೂಢೇನ ಚರತಾ ತಾವದವೇಕ್ಷಿತಮಿದಂ ಮಯಾ ॥ ೪ ॥ ರಾಕ್ಷಸಾನಾಂ ವಿಶೇಷಶ್ಚ ಪುರೀ ಚೇಯಮವೇಕ್ಷಿತಾ । ರಾಕ್ಷಸಾಧಿಪತೇರಸ್ಯ ಪ್ರಭಾವೋ ರಾವಣಸ್ಯಚ ॥೫॥ ✱ ಯುಕ್ತಂ ತಸ್ಯಾಽಪ್ರಮೇಯಸ್ಯ ಸರ್ವಸತ್ವದಯಾವತಃ । ಸಮಾಶ್ವಾಸಯಿತುಂ ಭಾರ್ಯಾಂ ಪತಿದರ್ಶನಕಾಂಕ್ಷಿಣೀಂ ॥ ೬ ॥ ಅಹಮಾಶ್ವಾಸಯಾಮ್ಯೇನಾಂ ಪೂರ್ಣಚಂದ್ರನಿಭಾನನಾಂ । ಅದೃಷ್ಟದುಃಖಾಂ ದುಃಖಾರ್ತಾಂ ದುಃಖಸ್ಯಾಂತಮಗಚ್ಛತೀಂ ॥೭॥ ಯದ್ಯಪ್ಯಹಮಿಮಾಂ ದೇವೀಂ ಶೋಕೋಪಹತಚೇತನಾಂ।ಅನಾಶ್ವಾಸ್ಯ

ಈ ಮುಂದೆ ಹೇಳತಕ್ಕ ಕಾರ್ಯವಾದರೆ, ಅವೇಕ್ಷಿತಂ - ನೋಡಲ್ಪಟ್ಟಿತು. ॥ ೪ ॥ ರಾಕ್ಷಸಾನಾಂ - ರಕ್ಕಸರ, ವಿಶೇಷಶ್ಚ - ಭೇದವೂ, ಅವೇಕ್ಷಿತಃ - ನೋಡಲ್ಪಟ್ಟಿತು, ಇಯಂಪುರೀಚ - ಈ ಲಂಕಾಪಟ್ಟಣವೂ, ಅವೇಕ್ಷಿತಾ-ಕಾಣಲ್ಪಟ್ಟಿತು, ರಾಕ್ಷಸಾಧಿಪತೇಃ-ರಾಕ್ಷಸಾಧಿಪತಿಯಾದ, ಅಸ್ಯರಾವಣಸ್ಯ - ಈ ರಾವಣನ, ಪ್ರಭಾವಶ್ಚ-ಸಾಮರ್ಥ್ಯವೂ, ಅವೇಕ್ಷಿತಃ ನೋಡಲ್ಪಟ್ಟಿತು. ॥ ೫ ॥ ಅಪ್ರಮೇಯಸ್ಯ - (ಗೋ) ಹೇಳುವದಕ್ಕೆ ಅಸಾಧ್ಯನಾದ, ಸರ್ವ....ತಃ-ಎಲ್ಲಾ ಜಂತುಗಳಲ್ಲಿಯೂ ದಯಾಶಾಲಿಯಾದ, ತಸ್ಯ - ಆ ಶ್ರೀರಾಮನ, ಭಾರ್ಯಾಂ - ಹೆಂಡತಿಯಾದ, ಪತಿ....ಣೀಂ - ಗಂಡನ ದರ್ಶನವನ್ನಪೇಕ್ಷಿಸುತ್ತಿರುವ ಸೀತಾದೇವಿಯನ್ನು, ಸಮಾಶ್ವಾಸಯಿತುಂ - ಸಮಾಧಾನಗೊಳಿಸುವುದು, ಯುಕ್ತಂ - ನ್ಯಾಯವು. ॥ ೬ ॥ ಅಹಂ - ನಾನು, ಅದೃಷ್ಟದುಃಖಾಂ - ನೋಡಲ್ಪಡದಿರುವ ಶೋಕವುಳ್ಳ, ದುಃಖಾರ್ತಾಂ - ವ್ಯಸನಗೊಂಡಿರುವ, ದುಃಖಸ್ಯ - ವ್ಯಸನದ, ಅಂತಂ - ತುದಿಯನ್ನು, ಅಗಚ್ಛತೀಂ - ಕಾಣದಿರುವ, ಪೂರ್ಣ....ನಾಂ - ಪೂರ್ಣಿಮಾಚಂದ್ರುನಿಗೆ ಸಮಾನವಾದ ಮುಖವುಳ್ಳ, ಏನಾಂ - ಈ ಸೀತಾದೇವಿಯನ್ನು, ಆಶ್ವಾಸಯಾಮಿ - ಸಮಾಧಾನಗೊಳಿಸುವೆನು. ॥ ೭ ॥ ಶೋಕೋಪಹತಚೇತನಾಂ - ವ್ಯಸನದಿಂದ ಕುಗ್ಗಿದ ಪ್ರಜ್ಞೆಯುಳ್ಳ, ಇಮಾಂದೇವೀಂ - ಈ ಸೀತಾದೇವಿಯನ್ನು, ಅನಾಶ್ವಾಸ್ಯ - ಸಮಾಧಾನಗೊಳಿಸದೆ, ಗಮಿಷ್ಯಾಮಿಯದಿ - ಹೋದೆನಾದರೆ, ಗಮನಮಪಿ-

ಶಿಸಿ ಎಲ್ಲೆಡೆಗಳಲ್ಲಿಯೂ ಸಂಚರಿಸುತ್ತ, ಶತ್ರುಗಳಾದ ಈ ರಾಕ್ಷಸರ ಶಕ್ತಿ ಸಾಮರ್ಥ್ಯಗಳನ್ನರಿತುಕೊಂಡು, ಎಲ್ಲವನ್ನೂ ಚೆನ್ನಾಗಿ ಕಂಡುಕೊಂಡುದಾಯಿತು. ಈ ನಗರದ ನಾಲ್ಕೂಭಾಗಗಳನ್ನು ಚೆನ್ನಾಗಿ ಪರಿಶೀಲಿಸಿ ನೋಡಿದೆನು. ರಾಕ್ಷಸಾಧಿಪತಿಯಾದ ರಾವಣೇಶ್ವರನ ಸಾಮರ್ಥ್ಯವನ್ನೂ ಪರೀಕ್ಷಿಸಿದೆನು. ಇನ್ನು ಮಿತಿಯಿಲ್ಲದ ಪ್ರಭಾವವುಳ್ಳವನೂ, ಸಮಸ್ತ ಜಂತುಜಾಲಗಳಲ್ಲಿ ದಯೆಯುಳ್ಳವನೂ ಆದ ಶ್ರೀರಾಮನನ್ನು ನೋಡ ಬಯಸುತ್ತಿರುವ ಈ ಸೀತಾದೇವಿಯನ್ನು ಸಮಾಧಾನಗೊಳಿಸುವ ಕಾರ್ಯವೊಂದುಳಿದಿರುವುದು. ಮಹಾ ವ್ಯಸನಸಂತಪ್ತಳಾಗಿರುವ ಈಕೆಯನ್ನು ಸಮಾಧಾನಗೊಳಿಸುವುದು ನನಗೆ ನ್ಯಾಯವಾಗಿರುವುದು. ॥ ೩-೬ ॥ ಇದುವರೆಗೆ ಎಂದಿಗೂ ವ್ಯಸನವೆಂಬುದನ್ನೇ ತಿಳಿಯದಿರುವಳೂ, ಈಗ ಮಹಾ ವ್ಯಸನದಿಂದ ಪೀಡಿಸಲ್ಪಟ್ಟು ವ್ಯಸನಾರ್ಣವದ ತಡಿಯನ್ನೇ ಕಾಣದೆ ಬಳಲುತ್ತಿರುವವಳೂ, ಪೂರ್ಣಚಂದ್ರನನ್ನು ಸರಿಹೋಲುವ ಮುಖವುಳ್ಳವಳೂ ಆದ ಈಕೆಯನ್ನು ಈಗ ಸಮಾಧಾನಗೊಳಿಸುವೆನು. ವ್ಯಸನದಿಂದ ಬಹಳವಾಗಿ ಪರಿತಪಿಸುತ್ತಿರುವ ಈಕೆಯನ್ನು ಸಮಾಧಾನಗೊಳಿಸದೆ ಶ್ರೀರಾಮನ ಬಳಿ ಗೈದಿದರೆ ನನಗೆ ಮಹಾ ದೋಷವೇ ಘಟಿಸುವುದು. ಈಗ ನಾನು

✱ "ಯಥಾ" ತಿ. ರಾ. ಪಾ.

ಗಮಿಷ್ಯಾಮಿ ದೋಷವದ್ಗಮನಂ ಭವೇತ್ ॥ ೮ ॥ ಗತೇಹಿ ಮಯಿ ತತ್ರೇಯಂ ರಾಜ ಪುತ್ರೀ ಯಶಸ್ವಿನೀ । ಪರಿತ್ರಾಣ * ಮವಿಂದಂತೀ ಜಾನಕೀ ಜೀವಿತಂ ತ್ಯಜೇತ್ ॥೯॥ ಮಯಾಚ ಸ ಮಹಾಬಾಹುಃ ಪೂರ್ಣಚಂದ್ರನಿಭಾನನಃ । ಸಮಾಶ್ವಾಸಯಿತುಂ ನ್ಯಾಯ್ಯಸ್ಸೀತಾದರ್ಶನಲಾಲಸಃ ॥ ೧೦ ॥ ನಿಶಾಚರೀಣಾಂ ಪ್ರತ್ಯಕ್ಷಮನರ್ಹಂ ಚಾಪಿ ಭಾಷಣಂ । ಕಥನ್ನು ಖಲು ಕರ್ತವ್ಯಮಿದಂ ಕೃಛ್ರಗತೋಽಹ್ಯಹಂ ॥ ೧೧ ॥ ಅನೇನ ರಾತ್ರಿಶೇಷೇಣ ಯದಿ ನಾಶ್ವಾಸ್ಯತೇ ಮಯಾ । ಸರ್ವಥಾ ನಾಸ್ತಿ ಸಂದೇಹಃ ಪರಿತ್ಯ

ಪಯಣವೂ, ದೋಷವತ್ - ಕಾರ್ಯಹಾನಿಕರ ದೋಷವುಳ್ಳದ್ದಾಗಿ, ಭವೇತ್ - ಆಗುವುದು. ॥ ೮ ॥ ಮಯಿ - ನಾನು, ತತ್ರ - ಅಲ್ಲಿ, ಗತೇ - ಹೋದರೆ, ಯಶಸ್ವಿನೀ - ಕೀರ್ತಿವಂತಳಾದ, ರಾಜಪುತ್ರೀ - ಜನಕರಾಯನ ಮಗಳಾದ, ಇಯಂಜಾನಕೀ - ಈ ಸೀತಾದೇವಿಯು, ಪರಿತ್ರಾಣಂ - ಪ್ರಾಣರಕ್ಷಕನನ್ನು, ಅವಿಂದಂತೀ - ಪಡೆಯದಿರುವವಳಾಗಿ, ಜೀವಿತಂ - ಪ್ರಾಣವನ್ನು, ತ್ಯಜೇತ್ - ಬಿಟ್ಟಾಳು. ॥ ೯ ॥ ಪೂರ್ಣ....ನಃ - ಹುಣ್ಣಿಮೆಯ ಚಂದ್ರನಿಗೆ ಸಮಾನವಾದ ಮುಖವುಳ್ಳ, ಸೀತಾ....ಸಃ - ಸೀತಾ ದರ್ಶನದಲ್ಲಿ ತತ್ಪರನಾದ, ಮಹಾಬಾಹುಃ-ಮಹಾ ಪರಾಕ್ರಮಿಯಾದ, ಸಚ - ಆ ಶ್ರೀರಾಮನೂ, ಮಯಾ - ನನ್ನಿಂದ, ಸಮಾಶ್ವಾಸಯಿತುಂ - ಸಮಾಧಾನಗೊಳಿಸುವದಕ್ಕೆ, ನ್ಯಾಯ್ಯಃ - ಅರ್ಹನು. ॥ ೧೦ ॥ ನಿಶಾಚರೀಣಾಂ - ರಕ್ಕಸಿಯರ, ಪ್ರತ್ಯಕ್ಷಂ - ಎದುರಾಗಿ, ಭಾಷಣಮಪಿ - ಮಾತನಾಡುವುದೂ ಕೂಡ, ಅನರ್ಹಂ - ಅಯೋಗ್ಯವು, ಇದಂಖಲು - ಈ ಕಾರ್ಯವಾದರೆ, ಕಥನ್ನುಕರ್ತವ್ಯಂ - ಹಾಗೆ ಮಾಡತಕ್ಕದ್ದು? ಇತ್ಯೇವಂ - ಈ ಪರಿಯಾಗಿ, ಅಹಂ - ನಾನು, ಕೃಛ್ರಗತಃ - ಕಷ್ಟವನ್ನೈದಿದವನು, ಅಸ್ಮಿಹಿ - ಆಗಿರುವೆನಷ್ಟೆ. ॥ ೧೧ ॥ ಮಯಾ - ನನ್ನಿಂದ, ಅನೇನರಾತ್ರಿಶೇಷೇಣ - ಈ ರಾತ್ರಿಯ ಮಿಕ್ಕ ಭಾಗದಲ್ಲಿಯೇ, ನಾಶ್ವಾಸ್ಯತೇಯದಿ - ಸಮಾಧಾನಗೊಳಿಸಲ್ಪಡದಿದ್ದರೆ, ಜೀವಿತಂ - ಪ್ರಾಣವನ್ನು, ಪರಿತ್ಯಕ್ಷ್ಯತಿ - ಬಿಡುವಳು, ಸರ್ವಥಾ - ಹೇಗಾದರೂ, ಸಂದೇಹೋನಾಸ್ತಿ - ಸಂಶಯವಿಲ್ಲ. ॥ ೧೨ ॥ ಸೀತಾ - ಸೀತೆಯು, ಮಾಂ - ನನ್ನನ್ನು ಕುರಿತು, ವಚಃ - ಮಾತನ್ನು,

ಈಕೆಯನ್ನು ನೋಡದೆಯೇ ಹಿಂತಿರುಗಿ ಹೋದುದಾದರೆ, ಮಹಾ ಕೀರ್ತಿವಂತಳೂ, ರಾಜ ಕುಮಾರಿಯೂ ಆದ ಈಕೆಯು ತನ್ನನ್ನು ಕಾಪಾಡುವರಾರೂ ಇಲ್ಲವೆಂದು ಬಗೆದು ಪ್ರಾಣಗಳನ್ನು ತೊರೆದುಬಿಡಬಹುದು. ಇದು ಮಾತ್ರವಲ್ಲದೆ ಮಹಾ ಬಾಹುವೂ, ಪೂರ್ಣಚಂದ್ರ ಸಮಾನವಾದ ಮುಖವುಳ್ಳವನೂ, ಸೀತಾದೇವಿಯನ್ನು ನೋಡುವುದರಲ್ಲಿ ಮಹಾ ಸಂತೋಷವುಳ್ಳವನೂ ಆದ ಶ್ರೀರಾಮನಿಗೂ ಸಹ ಸೀತಾದೇವಿಯ ಕುಶಲ ವಾರ್ತೆಯನ್ನು ಹೇಳಿ ಸಮಾಧಾನಗೊಳಿಸಬೇಕಲ್ಲವೆ? ಆದುದರಿಂದ ನಾನು ಈ ಸೀತಾದೇವಿಯನ್ನು ಕಂಡು ಮಾತನಾಡಿಸಿ ಸಮಾಧಾನಗೊಳಿಸಲೇ ಬೇಕಾಗಿರುವುದು. ॥೭–೧೦॥ ಆದರೆ ಈ ರಾಕ್ಷಸಸ್ತ್ರೀಯರೆದುರಾಗಿ ನಾನೀಕೆಯನ್ನು ಮಾತನಾಡಿಸುವುದೂ ಉಚಿತವಾಗಿ ತೋರುವುದಿಲ್ಲವು. ಆದುದರಿಂದ ನಾನು ಯಾವ ರೀತಿ ಮಾಡಿದರೆ ನನ್ನ ಕಾರ್ಯವು ಕೈಗೂಡೀತು? ನನಗೇನೊಂದೂ ತೋರದಿರುವುದಿಲ್ಲವು! ನನಗೀಗ ಒಳ್ಳೆಯ ಸಂಕಟವೇ ಪ್ರಾಪ್ತವಾಯಿತು! ಈ ರಾತ್ರಿ ಕಳೆದು ಬೆಳಗಾಗುವುದಕ್ಕೆ ಮೊದಲೇ ನಾನು ಈಕೆಯನ್ನು ಸಮಾಧಾನಗೊಳಿಸದಿದ್ದಲ್ಲಿ ಈಕೆಯು ನಿಜವಾಗಿಯೂ ಪ್ರಾಣಗಳನ್ನು ತೊರೆಯದಿರುವುದಿಲ್ಲ. ಈ ವಿಷಯ

* "ಅಪಶ್ಯಂತೀ" ತಿ. ಪಾ.

ಕ್ಷ್ಯತಿ ಜೀವಿತಂ ‖ ೧೨ ‖ ರಾಮಶ್ಚ ಯದಿ ಪೃಚ್ಛೇನ್ಮಾಂ "ಕಿಂ ಮಾಂ ಸೀತಾಽಬ್ರವೀದ್ವಚಃ"। ಕಿಮಹಂ ತಂ ಪ್ರತಿಬ್ರೂಯಾಮಸಂಭಾಷ್ಯ ಸುಮಧ್ಯಮಾಂ ‖೧೩‖ ಸೀತಾಸಂದೇಶರಹಿತಂ ಮಾಮಿತ ಸ್ತ್ವರಯಾಗತಂ । ನಿರ್ದಹೇ ದಪಿ ಕಾಕುತ್ಸ್ಥಃ§ ಕ್ರುದ್ಧ ಸ್ತೀವ್ರೇಣ ಚಕ್ಷುಷಾ ‖ ೧೪ ‖ ಯದಿವೋದ್ಯೋಜಯಿಷ್ಯಾಮಿ ಭರ್ತಾರಂ ರಾಮಕಾರಣಾತ್ । ವ್ಯರ್ಥಮಾಗಮನಂ ತಸ್ಯ ಸಸೈನ್ಯಸ್ಯ ಭವಿಷ್ಯತಿ ‖೧೫‖ ಅಂತರಂ ತ್ವಹಮಾಸಾದ್ಯ ರಾಕ್ಷಸೀನಾ ಮಿಹಸ್ಥಿತಃ । ಶನೈರಾ‡ಶ್ವಾಸಯಿಷ್ಯಾಮಿ ಸಂತಾಪಬಹುಳಾ

ಕಿಂ-ಏನು, ಅಬ್ರವೀತ್-ಹೇಳಿದಳು, ಇತಿ-ಹೀಗೆಂದು, ರಾಮಶ್ಚ-ಶ್ರೀರಾಮನೂ ಕೂಡ, ಮಾಂ-ನನ್ನನ್ನು, ಪೃಚ್ಛೇದ್ಯದಿ - ಕೇಳಿದವನಾದರೆ, ಅಹಂ - ನಾನು, ಸುಮಧ್ಯಮಾಂ - ಒಳ್ಳೆಯ ಮಧ್ಯಪ್ರದೇಶವುಳ್ಳ ಸೀತಾದೇವಿಯನ್ನು ಕುರಿತು, ಅಸಂಭಾಷ್ಯ - ಮಾತನಾಡದೆ, ತಂ - ಆ ಶ್ರೀರಾಮನನ್ನು ಕುರಿತು, ಕಿಂಪ್ರತಿಬ್ರೂಯಾಂ - ಏನು ಉತ್ತರ ಹೇಳಲಿ. ‖ ೧೩ ‖ ಕಾಕುತ್ಸ್ಥಃ - ಶ್ರೀರಾಮನು, ಸೀತಾ....ತಂ- ಸೀತಾದೇವಿಯ ಸಂದೇಶವಿಲ್ಲದೆ, ಇತಃ - ಇಲ್ಲಿಂದ, ತ್ವರಯಾ - ಜಾಗ್ರತೆಯಾಗಿ, ಗತಂ - ಪಯಣಿಸಿದ, ಮಾಮಪಿ - ನನ್ನನ್ನೂ, ಕೃದ್ಧಃ - ಕೋಪಿತನಾಗಿ, ತೀವ್ರೇಣಚಕ್ಷುಷಾ - ಕ್ರೂರದೃಷ್ಟಿಯಿಂದ, ನಿರ್ದಹೇತ್ - ಸುಡುವನು. ‖ ೧೪ ‖ ಭರ್ತಾರಂ - ನಮ್ಮೊಡೆಯನಾದ ಸುಗ್ರೀವನನ್ನು, ರಾಮಕಾರಣಾತ್ - ರಾಮನ ನಿಮಿತ್ತದಿಂದ, ಉದ್ಯೋ....ದಿ - ಪ್ರಯಾಣೋದ್ಯುಕ್ತನನ್ನಾಗಿ ಮಾಡಿದೆನಾದರೆ, ಸಸೈನ್ಯಸ್ಯ - ಸೈನ್ಯಸಮೇತನಾದ, ತಸ್ಯ - ಆ ಸುಗ್ರೀವನ, ಆಗಮನಂ - ಬರುವಿಕೆಯು, ವ್ಯರ್ಥಂ ಭವಿಷ್ಯತಿ - ನಿಷ್ಪ್ರಯೋಜನವಾಗುವುದು. ‖ ೧೫ ‖ ಅಹಂ - ನಾನು, ಇಹಸ್ಥಿತಃ - ಇಲ್ಲಿರುವವನಾಗಿ, ರಾಕ್ಷಸೀನಾಂ - ರಕ್ಕಸಿಯರ, ಅಂತರಂ - ಇಲ್ಲದಿರುವ ಸಮಯವನ್ನು, ಆಸಾದ್ಯ - ಹೊಂದಿ, ಸಂತಾ....ಳಾಂ - ಬಹು ಕಷ್ಟಪಡುತ್ತಿರುವ, ಇಮಾಂ - ಈ ಸೀತಾದೇವಿಯನ್ನು, ಶನೈಃ - ಮೆಲ್ಲಗೆ, ಆಶ್ವಾಸಯಿಷ್ಯಾಮಿ - ಸಮಾಧಾನ ಮಾಡುತ್ತೇನೆ. ‖ ೧೬ ‖ ಅಹಂ - ನಾನು, ಅತಿತನುಶ್ಚ - ಬಹಳ

ದಲ್ಲಿ ಸಂದೇಹವೇ ಇಲ್ಲವು. ಅಲ್ಲದೆ ಈಗ ನಾನು ಸುಂದರವಾದ ಕಟಿಪ್ರದೇಶವುಳ್ಳ ಈಕೆಯೊಡನೆ ಸಂಭಾಷಿಸದೆಯೇ, ಶ್ರೀರಾಮನ ಬಳಿಗೆ ಹೋದರೆ ಆತನು, "ಸೀತೆಯು ನನ್ನನ್ನು ಕುರಿತು ಏನು ಹೇಳಿದಳು" ಎಂದು ಕೇಳಿದರೆ ಆತನಿಗೆ ನಾನು ಏನೆಂದು ಉತ್ತರಕೊಡಬೇಕು? ನಾನಿಲ್ಲಿಂದ ಮಹಾ ವೇಗವಾಗಿ ಕಾಕುತ್ಸ್ಥವಂಶೋದ್ಭವನಾದ ಶ್ರೀರಾಮನ ಬಳಿಗೈದಿದುದಾದರೆ, ಆತನು ಸೀತೆಯ ವಿಚಾರವನ್ನು ಕೇಳಿಯೇ ಕೇಳುವನು. ಆಗ ನಾನು ಆಕೆಯೊಡನೆ ಮಾತನಾಡಲಿಲ್ಲವೆಂದು ಹೇಳಲೇ? ಹಾಗೆ ನಾನು ಹೇಳಿದೊಡನೆಯೇ ಆತನು ನನ್ನನ್ನು ಕೋಪದಿಂದ ದೃಷ್ಟಿಸಿನೋಡಿ ದಹಿಸಿಬಿಡುವನು. ಇದೂ ಅಲ್ಲದೆ ಈಗ ನಾನು ಈಕೆಯೊಡನೆ ಸಂಭಾಷಿಸಿ ಈಕೆಯನ್ನು ಸಮಾಧಾನಗೊಳಿಸದೆ ನಮ್ಮ ದೊರೆಯಾದ ಸುಗ್ರೀವನ ಬಳಿಗೈದಿ ಸೀತಾವೃತ್ತಾಂತವನ್ನಾತನಿಗೆ ತಿಳಿಸಿ ಆತನನ್ನು ಇಲ್ಲಿಗೆ ಹೊರಡಲು ಪ್ರೇರೇಪಿಸಿ ಕರೆದುಕೊಂಡು ಬಂದರೂ ನಿಷ್ಪ್ರಯೋಜನವೇ ಆಗುವುದು. ಏಕೆಂದರೆ ಸಸೈನ್ಯನಾದ ಆತನು ಇಲ್ಲಿಗೆ ಬರುವುದರೊಳಗಾಗಿ ಈಕೆಯು ಪ್ರಾಣಗಳನ್ನೇ ತೊರೆದಿರುತ್ತಾಳೆ! ‖ ೧೧—೧೫ ‖ ಆದುದರಿಂದ ನಾನಿಲ್ಲಿಯೇ ಇದ್ದುಕೊಂಡು, ಈ ರಾಕ್ಷಸಸ್ತ್ರೀಯರು ಸ್ವಲ್ಪ ಎಚ್ಚರದಪ್ಪಿರುವಾಗ ಬಹಳವಾಗಿ ವ್ಯಸನಗೊಂಡಿರುವ ಈ ಸೀತಾದೇವಿಯನ್ನು ಸವಿಮಾತುಗಳಿಂದ ಮೆಲ್ಲನೆಲ್ಲಗೆ ಸಮಾ

§ "ಕ್ರೋಧತೀವ್ರೇಣ ಚಕ್ಷುಷಾ" ತಿ. ಪಾ. ‡ "ಆಶ್ವಾಸಯಾಮ್ಯದ್ಯ" ತಿ. ಪಾ.

ಮಿಮಾಂ ॥ ೧೬ ॥ ಅಹಂತ್ವತಿತನುಶ್ಚೈವ ವಾನರಶ್ಚ ವಿಶೇಷತಃ । ವಾಚಂ ಚೋದಾ
ಹರಿಷ್ಯಾಮಿ ಮಾನುಷೀಮಿಹ ಸಂಸ್ಕೃತಾಂ ॥ ೧೭ ॥ ಯದಿ ವಾಚಂ ಪ್ರದಾಸ್ಯಾಮಿ
ದ್ವಿಜಾತಿರಿವ ಸಂಸ್ಕೃತಾಂ । ರಾವಣಂ ಮನ್ಯಮಾನಾ ಮಾಂ ಸೀತಾ ಭೀತಾ ಭವಿಷ್ಯತಿ ।
¶ ವಾನರಸ್ಯ ವಿಶೇಷೇಣ ಕಥಂ ಸ್ಯಾದಭಿಭಾಷಣಂ ॥ ೧೮ ॥ ಅವಶ್ಯಮೇವ ವಕ್ತವ್ಯಂ
ಮಾನುಷಂ ವಾಕ್ಯಮರ್ಥವತ್ । ಮಯಾ ಸಾಂತ್ವಯಿತುಂ ಶಕ್ಯಾ ನಾನ್ಯಥೇಯ
ಮನಿಂದಿತಾ ॥ ೧೯ ॥ ಸೇಯಮಾಲೋಕ್ಯ ಮೇ ರೂಪಂ ಜಾನಕೀ ಭಾಷಿತಂ ತಥಾ ।

ಸ್ವಲ್ಪ ದೇಹವುಳ್ಳವನಾಗಿಯೂ, ವಿಶೇಷತಃ - ವಿಶೇಷವಾಗಿ, ವಾನರಶ್ಚ-ಕಪಿಯೂ ಆಗಿ, ಇಹ-ಇಲ್ಲಿ, ಮಾನುಷೀಂ - ಮನುಷ್ಯಸಂಬಂಧವಾದ, ಸಂಸ್ಕೃತಾಂ - ವ್ಯಾಕರಣಶಿಕ್ಷಿತವಾದ, ವಾಚಂಚ - ಮಾತನ್ನೂ ಕೂಡ, ಉದಾಹರಿಷ್ಯಾಮಿ - ಹೇಳುವೆನು. ॥ ೧೭ ॥ (ಅಹಂ - ನಾನು) ದ್ವಿಜಾತಿರಿವ - ಬ್ರಾಹ್ಮಣನಂತೆ, ಸಂಸ್ಕೃತಾಂ - ಶಬ್ದಸೌಷ್ಟವದಿಂದ ಯುಕ್ತವಾದ, ವಾಚಂ - ವಾಕ್ಯವನ್ನು, ಪ್ರದಾಸ್ಯಾಮಿಯದಿ - ಕೊಡುವೆನಾದರೆ, ಸೀತಾ - ಸೀತಾದೇವಿಯು, ಮಾಂ - ನನ್ನನ್ನು, ರಾವಣಂ - ರಾವಣನನ್ನಾಗಿ, ಮನ್ಯಮಾನಾ - ಭಾವಿಸಿ, ಭೀತಾ - ಅಂಜಿದವಳು, ಭವಿಷ್ಯತಿ - ಆಗುವಳು, ವಾನರಸ್ಯ - ಕಪಿಗೆ, ವಿಶೇಷೇಣ-ಬಹುತರವಾಗಿ, ಅಭಿಭಾಷಣಂ ಮಾತನಾಡುವಿಕೆಯು, ಕಥಂಸ್ಯಾತ್ - ಹೇಗಾಗುವುದು. (ಎಂದು) ॥ ೧೮ ॥ ಮಾನುಷಂ-ಮನುಷ್ಯಸಂಬಂಧವಾದ, ಅರ್ಥವತ್-ಅರ್ಥಯುಕ್ತವಾದ, ವಾಕ್ಯಮೇವ - ವಚನವೇ, ಅವಶ್ಯಂ - ಅಗತ್ಯವಾಗಿ, ವಕ್ತವ್ಯಂ - ಹೇಳತಕ್ಕುದು, ಅನ್ಯಥಾ - ಹಾಗಲ್ಲದಿದ್ದರೆ, ಮಯಾ - ನನ್ನಿಂದ, ಅನಿಂದಿತಾ - ಪೂಜ್ಯಳಾದ, ಇಯಂ - ಈ ಸೀತಾದೇವಿಯು, ಸಾಂತ್ವಯಿತುಂ - ಸಮಾಧಾನಗೊಳಿಸಲು, ನಶಕ್ಯಾ - ಸಾಧ್ಯಳಲ್ಲವು. ॥ ೧೯ ॥ ಪೂರ್ವಂ-ಮೊದಲೇ, ರಕ್ಷೋಭಿಃ - ರಾಕ್ಷಸರಿಂದ, ತ್ರಾಸಿತಾ - ಭಯಗೊಳಿಸಲ್ಪಟ್ಟ, ಸೇಯಂಜಾನಕೀ - ಆ ಈ ಸೀತಾ

ಧಾನಗೊಳಿಸುವೆನು. ಈಗ ನಾನು ಕಿರಿದಾದ ರೂಪವನ್ನು ತಾಳಿರುವೆನಷ್ಟೆ. ಅದೂ ವಾನರ ರೂಪದಿಂದಲೇ ಇರುವೆನು. ಆದುದರಿಂದ ನಾನು ವಾನರ ಭಾಷೆಯಿಂದ ಮಾತನಾಡಿದೆನಾದರೆ ಈ ರಾಕ್ಷಸಿಯರೆಲ್ಲರೂ ಸಂಶಯಪಡುತ್ತಾರೆ. ಅದರಿಂದ ನನ್ನ ಕಾರ್ಯವು ಕೆಟ್ಟು ಹೋಗುತ್ತದೆ. ಆದಕಾರಣ ನಾನು ಮಾನವರು ಮಾತನಾಡುವಂತೆ ಸಂಸ್ಕೃತ ಭಾಷೆಯಲ್ಲಿಯೇ ಮಾತನಾಡುತ್ತೇನೆ. ಆಗ ಈ ರಾಕ್ಷಸಿಯರಿಗೆ ಯಾವ ಸಂಶಯವೂ ಬರುವುದಿಲ್ಲ. ನನ್ನ ಕಾರ್ಯವೂ ಸುಸೂತ್ರವಾಗಿ ಕೈಗೂಡುತ್ತದೆ. ಇದು ಸರಿಯೆ! ನಾನು ಸುಶಿಕ್ಷಿತನಾದ ಬ್ರಾಹ್ಮಣನಂತೆ ಸಂಸ್ಕೃತದಲ್ಲಿ ಮಾತನಾಡಿದರೆ, "ವಾನರನಿಗೆ ಸಂಸ್ಕೃತ ಭಾಷೆಯು ತಿಳಿದುದೆಂತು. ಇವನು ವಾನರನಲ್ಲ! ದುರುಳ ರಾವಣನು ನನ್ನನ್ನು ವಂಚಿಸುವುದಕ್ಕಾಗಿ ಈ ವಾನರ ರೂಪವನ್ನು ತಾಳಿರಬೇಕು" ಎಂದು ಸೀತಾದೇವಿಯು ಸಂಶಯಪಡದಿರುವಳೆ? ಆದುದರಿಂದ ನಾನು ಸಂಸ್ಕೃತದಲ್ಲಿ ಮಾತನಾಡುವುದೂ ಯುಕ್ತವಲ್ಲವು. ಆದುದರಿಂದ ನಾನು ಅಯೋಧ್ಯಾಪುರದ ಜನರಾಡುವ ಅರ್ಥಯುಕ್ತವಾದ, ಭಾಷೆಯಲ್ಲಿಯೇ ಮಾತನಾಡುವೆನು. ಬೇರಿನ್ನಾವ ರೀತಿಯಿಂದಲೂ ಈಕೆಯನ್ನು ಸಮಾಧಾನಗೊಳಿಸುವುದು ಸಾಧ್ಯವಲ್ಲವು. ಹೀಗೆ ನಾನು ಮಾನವ ಭಾಷೆಯಿಂದ ಮಾತನಾಡಿದರೂ, ಈವರೆಗೂ ರಾಕ್ಷಸರ

¶ ಈ ಅರ್ಧ ಶ್ಲೋಕವು ಗೋ. ಪಾಠದಲ್ಲಿ ಅಧಿಕ.

ರಕ್ಷೋಭಿಸ್ತ್ರಾಸಿತಾ ಪೂರ್ವಂ ಭೂಯಸ್ತ್ರಾಸಂ ಗಮಿಷ್ಯತಿ ॥ ೨೦ ॥ ತತೋ ಜಾತಪರಿತ್ರಾಸಾ ಶಬ್ದಂ ಕುರ್ಯಾನ್ಮನಸ್ವಿನೀ । * ಜಾನಮಾನಾ ವಿಶಾಲಾಕ್ಷೀ ರಾವಣಂ ಕಾಮರೂಪಿಣಂ ॥ ೨೧ ॥ ಸೀತಯಾಚ ಕೃತೇ ಶಬ್ದೇ ಸಹಸಾ ರಾಕ್ಷಸೀಗಣಃ । ನಾನಾಪ್ರಹರಣೋ ಘೋರಸ್ಸಮೇಯಾದಂತಕೋಪಮಃ ॥ ೨೨ ॥ ತತೋ ಮಾಂ ಸಂಪರಿಕ್ಷಿಪ್ಯ ಸರ್ವತೋ ವಿಕೃತಾನನಾಃ । ವಧೇಚ ಗ್ರಹಣೇಚೈವ ಕುರ್ಯುರ್ಯತ್ನಂ ಯಥಾಬಲಂ ॥ ೨೩ ॥ ತಂ ಮಾಂ ಶಾಖಾಃ ಪ್ರಶಾಖಾಶ್ಚ ಸ್ಕಂಧಾಶ್ಚೋತ್ತಮಶಾಖಿನಾಂ । ದೃಷ್ಟ್ವಾ ವಿಪರಿಧಾವಂತಂ ಭವೇಯುರ್ಭಯಶಂಕಿತಾಃ ॥ ೨೪ ॥

ದೇವಿಯು, ಮೇರೂಪಂ - ನನ್ನ ರೂಪವನ್ನು, ತಥಾ - ಹಾಗೆಯೇ, ಭಾಷಿತಂ - ಮಾತನ್ನೂ, ಆಲೋಕ್ಯ - ಕಂಡು, ಭೂಯಃ - ಮತ್ತೂ, ತ್ರಾಸಂ - ಭೀತಿಯನ್ನು, ಗಮಿಷ್ಯತಿ - ಹೊಂದುವಳು. ॥ ೨೦ ॥ ತತಃ - ಬಳಿಕ, ಜಾತ....ಸಾ - ಹುಟ್ಟಿದ ಭಯವುಳ್ಳ, ಮನಸ್ವಿನೀ - ರಾಮನಲ್ಲಿಯೇ ಮನಸ್ಸುಳ್ಳ, ವಿಶಾಲಾಕ್ಷೀ - ವಿಶಾಲನೇತ್ರಿಯಾದ ಸೀತಾದೇವಿಯು, ಮಾಂ - ನನ್ನನ್ನು, ಕಾಮರೂಪಿಣಂ - ಸ್ವೇಚ್ಛಾರೂಪನಾದ, ರಾವಣಂ - ರಾವಣನನ್ನಾಗಿ, ಜಾನಮಾನಾ - ಭಾವಿಸಿ, ಶಬ್ದಂ - ದೀನಧ್ವನಿಯನ್ನು, ಕುರ್ಯಾತ್ - ಮಾಡುವಳು. ॥ ೨೧ ॥ ಸೀತಯಾ - ಸೀತಾದೇವಿಯಿಂದ, ಶಬ್ದೇಚ - ಧ್ವನಿಯೂ ಕೂಡ, ಕೃತೇ - ಮಾಡಲ್ಪಟ್ಟದಾಗಲು, ನಾನಾಪ್ರಹರಣಃ - ನಾನಾ ಬಗೆಯಾದ ಆಯುಧಗಳುಳ್ಳ, ಅಂತಕೋಪಮಃ - ಯಮನಿಗೆ ಸಮಾನವಾದ, ಘೋರಃ - ಭಯಂಕರವಾದ, ರಾಕ್ಷಸೀಗಣಃ - ರಕ್ಕಸಿಯರ ಗುಂಪು, ಸಹಸಾ - ಶೀಘ್ರವಾಗಿ, ಸಮೇಯಾತ್ - ಬರುವುದು. ॥ ೨೨ ॥ ತತಃ - ಬಳಿಕ, ವಿಕೃತಾನನಾಃ - ವಿಕಾರರೂಪಿಗಳಾದ ರಕ್ಕಸಿಯರು, ಮಾಂ - ನನ್ನನ್ನು, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಸಂಪರಿಕ್ಷಿಪ್ಯ - ಸುತ್ತಿಕೊಂಡು, ವಧೇಚ - ಸಂಹಾರದಲ್ಲಿಯೂ, ಗ್ರಹಣೇಚೈವ - ಹಿಡಿಯುವುದರಲ್ಲಿಯೂ, ಯಥಾಬಲಂ - ಶಕ್ತಿಯಿದ್ದಂತೆ, ಯತ್ನಂ - ಪ್ರಯತ್ನವನ್ನು, ಕುರ್ಯುಃ - ಮಾಡುವರು. ॥ ೨೩ ॥ ಉತ್ತಮಶಾಖಿನಾಂ - ದೊಡ್ಡ ಮರಗಳ, ಶಾಖಾಃ - ರೆಂಬೆಗಳನ್ನೂ, ಪ್ರಶಾಖಾಶ್ಚ - ಚಿಕ್ಕ ರೆಂಬೆಗಳನ್ನೂ, ಸ್ಕಂಧಾಶ್ಚ - ದೊಡ್ಡ ರೆಂಬೆಗಳನ್ನೂ ಸಹ, ಗೃಹ್ಯ - ಹಿಡಿದುಕೊಂಡು, ವಿಪರಿಧಾವಂತಂ - ಓಡಾಡುತ್ತಿರುವ ನನ್ನನ್ನು, ದೃಷ್ಟ್ವಾ - ಕಂಡು, ಭಯಶಂಕಿತಾಃ - ಭಯಗೊಂಡವರು, ಭವೇಯುಃ - ಆಗುವರು. ॥ ೨೪ ॥ ವಿಕೃತಾನನಾಃ - ವಿಕಾರ

ಕಪಟವೇಷಗಳಿಂದ ಭಯಗೊಂಡಿರುವ ಈಕೆಯು ನನ್ನನ್ನು ನೋಡಿ ಮತ್ತೂ ಭಯಗೊಳ್ಳುವುದಿಲ್ಲವೆ? ॥ ೧೬–೨೦ ॥ ಹಾಗೊಂದುವೇಳೆ, ವಿಶಾಲನೇತ್ರಿಯೂ, ಸುಹೃದಯೆಯೂ, ಮಹಾ ಪತಿವ್ರತೆಯೂ ಆದ ಈಕೆಯು ಭಯಗೊಂಡು, ರಾಕ್ಷಸೇಶ್ವರನಾದ ರಾವಣನು ಕಾಮರೂಪಿಯೆಂದು ತಿಳಿದಿರುವಳಾದಕಾರಣ ಅವನೇ ನಾನೆಂದು ಬಗೆದು ಮಹಾ ಭಯದಿಂದ ಗಟ್ಟಿಯಾಗಿ ಕೂಗಿಕೊಂಡರೆ? ಒಂದುವೇಳೆ ಈಕೆಯು ಹಾಗೆ ಕೂಗಿಕೊಂಡರೆ ಈ ರಾಕ್ಷಸಸ್ತ್ರೀಯರೆಲ್ಲರೂ ನಾನಾವಿಧಗಳಾದ ಆಯುಧಗಳನ್ನು ಧರಿಸಿದವರಾಗಿ ಮೃತ್ಯುದೇವತೆಗಳಂತೆ ಬಹು ಜಾಗ್ರತೆಯಾಗಿ ನನ್ನನ್ನು ಮುತ್ತುವರು. ಅಲ್ಲದೆ ವಿಕಾರರೂಪಿಣಿಯರಾದ ಈ ರಾಕ್ಷಸಿಯರೆಲ್ಲರೂ ನನ್ನನ್ನು ಸುತ್ತಿಕೊಂಡು ಕೊಲ್ಲುವುದಕ್ಕಾಗಲಿ, ಹಿಡಿದು ರಾವಣನ ಬಳಿಗೆಳೆದುಕೊಂಡು ಹೋಗುವುದಕ್ಕಾಗಲಿ ಪ್ರಯತ್ನ ಮಾಡುತ್ತಾರೆ. ಆಗ ಈ ವೃಕ್ಷಗಳ ದೊಡ್ಡ ಚಿಕ್ಕ

---

* "ಜಾನಾನಾ" ತಿ. ಪಾ.

ಮಮ ರೂಪಂಚ ಸಂಪ್ರೇಕ್ಷ್ಯ ವನೇ ವಿಚರತೋ ಮಹತ್ । ರಾಕ್ಷಸ್ಯೋ ಭಯ ವಿತ್ರಸ್ತಾ ಭವೇಯುಃ $ ರ್ವಿಕೃತಾನನಾಃ ॥ ೨೫ ॥ ತತಃ ಕುರ್ಯುಸ್ಸಮಾಹ್ವಾನಂ ರಾಕ್ಷಸ್ಯೋ ರಕ್ಷಸಾಮಪಿ । ರಾಕ್ಷಸೇಂದ್ರನಿಯುಕ್ತಾನಾಂ ರಾಕ್ಷಸೇಂದ್ರನಿವೇಶನೇ ॥ ೨೬ ॥ ತೇ ಶೂಲಶಕ್ತಿನಿಸ್ತ್ರಿಂಶ ವಿವಿಧಾಯುಧಪಾಣಯಃ । ಆಪತೇಯು ರ್ವಿಮ ರ್ದೇಽಸ್ಮಿ ನ್ವೇಗೇನೋದ್ವಿಗ್ನಕಾರಿಣಃ ॥ ೨೭ ॥ ಸಂಕ್ರುದ್ಧಸ್ತೈಸ್ತು ಪರಿತೋ ವಿಧ ಮನ್ರಕ್ಷಸಾಂ ಬಲಂ । ಶಕ್ನುಯಾನ್ನತು ಸಂಪ್ರಾಪ್ತುಂ ಪರಂ ಪಾರಂ ಮಹೋದಧೇಃ ॥ ೨೮ ॥ ಮಾಂ ವಾ ಗೃಹ್ಣೀಯುರಾಪ್ಲುತ್ಯ ಬಹವಶ್ಶೀಘ್ರಕಾರಿಣಃ । ಸ್ಯಾದಿಯಂ ಚಾಗೃಹೀತಾರ್ಥಾ ಮಮಚ ಗ್ರಹಣಂ ಭವೇತ್ ॥ ೨೯ ॥ ಹಿಂಸಾಭಿರುಚಯೋ

ಮುಖಿಯರಾದ, ರಾಕ್ಷಸ್ಯಃ - ರಕ್ಕಸಿಯರು, ವನೇ - ವನದಲ್ಲಿ, ವಿಚರತಃ - ಓಡಾಡುತ್ತಿರುವ, ಮಮ - ನನ್ನ, ಮಹತ್ - ದೊಡ್ಡದಾದ, ರೂಪಂಚ - ಆಕಾರವನ್ನೂ ಸಹ, ಸಂಪ್ರೇಕ್ಷ್ಯ - ಕಂಡು, ಭಯವಿತ್ರಸ್ತಾಃ - ಭಯದಿಂದ ನಡುಗಿದವರು, ಭವೇಯುಃ - ಆಗುವರು. ॥ ೨೫ ॥ ತತಃ - ಬಳಿಕ, ರಾಕ್ಷಸ್ಯಃ - ರಕ್ಕಸಿಯರು, ರಾಕ್ಷ....ನೇ - ರಾವಣನ ಮನೆಯಲ್ಲಿ, ರಾಕ್ಷ....ನಾಂ - ರಾವಣನಿಂದ ಪ್ರೇರೇಪಿಸಲ್ಪಟ್ಟ, ರಕ್ಷಸಾಂ - ರಾಕ್ಷಸರ, ಸಮಾಹ್ವಾನಂ - ಕರೆಯುವಿಕೆಯನ್ನು, ಕುರ್ಯುಃ-ಮಾಡು ವರು. ॥ ೨೬ ॥ ಅಸ್ಮಿನ್ವಿಮರ್ದೇ - ಈ ಕಾಳಗದಲ್ಲಿ, ಶೂಲ....ಯಃ - ಭಲ್ಲೆಗಳು ಶಕ್ತ್ಯಾಯುಧಗಳು ಕತ್ತಿಗಳೇ ಮೊದಲಾದ ಅನೇಕ ವಿಧಗಳಾದ ಆಯುಧಗಳೇ ಹಸ್ತಗಳಲ್ಲಿ ಉಳ್ಳವರಾಗಿ, ವೇಗೇನ - ಜಾಗ್ರುತೆಯಾಗಿ, ಉದ್ವಿ....ಣಃ - ಭಯವನ್ನುಂಟುಮಾಡುವವರಾಗಿ, ಆಪತೇಯುಃ - ಬರುವರು. ॥ ೨೭ ॥ ತೈಃ - ಆ ರಾಕ್ಷಸರಿಂದ, ಪರಿತಃ - ಎಲ್ಲಾ ಕಡೆಯಲ್ಲಿಯೂ, ಸಂರುದ್ಧಃ - ತಡೆಮಾಡಲ್ಪಟ್ಟವನಾದ ನಾನು, ರಕ್ಷಸಾಂಬಲಂ - ರಕ್ಕಸರ ಸೈನ್ಯವನ್ನು, ವಿಧಮನ್ - ಸಂಹರಿಸುತ್ತ, ಮಹೋದಧೇಃ - ಕಡಲಿನ, ಪರಂಪಾರಂ - ಆಚಿನ ದಡವನ್ನು, ಪ್ರಾಪ್ತುಂ - ಹೊಂದುವುದಕ್ಕೆ, ನಶಕ್ನುಯಾಂ-ಸಮರ್ಥ ನಾಗಲಾರೆನು. ॥ ೨೮ ॥ ಶೀಘ್ರಕಾರಿಣಃ - ಜಾಗರೂಕರಾದ, ಬಹವಃ - ಬಹು ಮಂದಿ, ಅಪ್ಲುತ್ಯ - ಹಾರಿಬಂದು, ಮಾಂವಾ - ನನ್ನನ್ನಾದರೂ, ಗೃಹ್ಣೀಯುಃ - ಹಿಡಿಯುವರು, ಇಯಂಚ - ಈ ಸೀತಾ ದೇವಿಯೂ, ಅಗೃಹೀತಾರ್ಥಾ - ಗ್ರಹಿಸಲ್ಪಡದಿರುವ ಕಾರ್ಯವುಳ್ಳವಳು, ಸ್ಯಾತ್ - ಆಗುವಳು, ಮಮ - ನನ್ನ, ಗ್ರಹಣಂಚ - ಹಿಡಿಯುವಿಕೆಯೂ, ಭವೇತ್ - ಆಗುವದು. ॥ ೨೯ ॥ ಹಿಂಸಾ....ಯಃ-

ರೆಂಬೆಗಳಿಂದ ಅಲ್ಲಿಂದಿಲ್ಲಿಗೆ ಹಾರುತ್ತ ನಾಲ್ಕೂ ದಿಕ್ಕುಗಳಿಗೆ ಸಂಚರಿಸಿದರೆ, ಇವರೆಲ್ಲರೂ ನನ್ನ ರೂಪವನ್ನು ನೋಡಿ ಭೀತಿಗೊಳ್ಳುವರು. ॥ ೨೧—೨೫ ॥ ಹೀಗೆ ಭಯದಿಂದ ತತ್ತರಿಸಿ ಹೋದ ವಿಕಾರ ರೂಪಿಣಿಯರಾದ ಈ ರಕ್ಕಸಿಯರೆಲ್ಲರೂ ತಮ್ಮ ದೊರೆಯಾದ ರಾವಣಾಸುರನಿಂದ ನಿಯುಕ್ತರಾದ ಕ್ರೂರ ರಾಕ್ಷಸ ಭಟರನ್ನು ಕರೆಯುತ್ತಾರೆ. ಆ ಕೂಡಲೇ ಅವರು ಶೂಲಾಯುಧ ಗಳನ್ನೂ, ಶಕ್ತ್ಯಾಯುಧಗಳನ್ನೂ, ಕತ್ತಿಗಳನ್ನೂ, ಇನ್ನೂ ಅನೇಕ ಬಗೆಯ ಆಯುಧಗಳನ್ನೂ ತೆಗೆದುಕೊಂಡು ಬಹುಬೇಗನೆ ಯುದ್ಧಸನ್ನದ್ಧರಾಗಿ ಬರುತ್ತಾರೆ. ಅವರೆಲ್ಲರೂ ನನ್ನನ್ನು ಆಕ್ರಮಿ ಸಲು ನಾನು ಆ ರಾಕ್ಷಸ ಸೈನ್ಯವೆಲ್ಲವನ್ನೂ ಸಂಹರಿಸುವುದರಿಂದುಂಟಾಗುವ ಆಯಾಸದಿಂದ ಸಮುದ್ರದ ಆಚಿನ ದಡವನ್ನು ಸೇರುವುದಕ್ಕೆ ಸಮರ್ಥನಾಗದೇ ಹೋಗಬಹುದು. ಹಾಗೆ ನಾನು ಸಮುದ್ರವನ್ನು ದಾಟಲು ಯತ್ನಿಸಿದರೂ, ಬಹು ಶೀಘ್ರಕಾರಿಗಳಾದ ಈ ರಾಕ್ಷಸರನೇಕರು

$ "ವಿಕೃತಸ್ವರಾಃ" ತಿ. ರಾ. ಪಾ.

ಹಿಂಸ್ಯುರಿಮಾಂ ವಾ ಜನಕಾತ್ಮಜಾಂ । ವಿಪನ್ನಂ ಸ್ಯಾತ್ತತಃ ಕಾರ್ಯಂ ರಾಮಸುಗ್ರೀವಯೋರಿದಂ ॥ ೩೦ ॥ ಉದ್ದೇಶೇ ನಷ್ಟಮಾರ್ಗೇಽಸ್ಮಿನ್ರಾಕ್ಷಸೈಃ ಪರಿವಾರಿತೇ । ಸಾಗರೇಣ ಪರಿಕ್ಷಿಪ್ತೇ ಗುಪ್ತೇ ವಸತಿ ಜಾನಕೀ ॥ ೩೧ ॥ ವಿಶಸ್ತೇವಾ ಗೃಹೀತೇವಾ ರಕ್ಷೋಭಿರ್ಮಯಿ ಸಂಯುಗೇ । ನಾನ್ಯಂ ಪಶ್ಯಾಮಿ ರಾಮಸ್ಯ ಸಹಾಯಂ ಕಾರ್ಯಸಾಧನೇ ॥ ೩೨ ॥ ವಿಮೃಶಂಶ್ಚ ನಪಶ್ಯಾಮಿ ಯೋ ಹತೇ ಮಯಿ ವಾನರಃ । ಶತಯೋಜನವಿಸ್ತೀರ್ಣಂ ಲಂಘಯೇತ ಮಹೋದಧಿಂ ॥ ೩೩ ॥ ಕಾಮಂ ಹಂತುಂ

ಪರರನ್ನು ಕೊಲ್ಲುವದರಲ್ಲಿಯೇ ಆಸಕ್ತರಾದ ರಕ್ಕಸರು, ಇಮಾಂ....ವಾ - ಈ ಜನಕಪುತ್ರಿಯನ್ನಾದರೂ, ಹಿಂಸ್ಯುಃ - ಹಿಂಸಿಸುವರು, ತತಃ - ಬಳಿಕ, ರಾಮಸುಗ್ರೀವಯೋಃ - ರಾಮಸುಗ್ರೀವರ, ಇದಂ ಕಾರ್ಯಂ - ಈ ಕೆಲಸವು, ವಿಪನ್ನಂಸ್ಯಾತ್ - ಕೆಟ್ಟುಹೋಗುವದು. ॥ ೩೦ ॥ ಜಾನಕೀ - ಸೀತಾದೇವಿಯು, ಸಾಗರೇಣ - ಸಮುದ್ರದಿಂದ, ಪರಿಕ್ಷಿಪ್ತೇ - ಸುತ್ತುವರೆದ, ರಾಕ್ಷಸೈಃ - ರಕ್ಕಸರಿಂದ, ಪರಿವಾರಿತೇ - ಸುತ್ತಿಕೊಳ್ಳಲ್ಪಟ್ಟ, ನಷ್ಟಮಾರ್ಗೇ - ಕಾಣದಿರುವ ಮಾರ್ಗವುಳ್ಳ, ಗುಪ್ತೇ - ರಹಸ್ಯವಾದ, ಅಸ್ಮಿನ್ದೇಶೇ - ಈ ಸ್ಥಳದಲ್ಲಿ, ವಸತಿ - ಇರುವಳು. ॥ ೩೧ ॥ ಮಯಿ - ನಾನು, ರಕ್ಷೋಭಿಃ- ರಾಕ್ಷಸರಿಂದ, ಸಂಯುಗೇ - ಕಾಳಗದಲ್ಲಿ, ವಿಶಸ್ತೇವಾ - ಹೊಡೆಯಲ್ಪಟ್ಟವನಾದರೂ, ಗೃಹೀತೇವಾ - ಹಿಡಿಯಲ್ಪಟ್ಟವನಾದರೂ, ರಾಮಸ್ಯ - ಶ್ರೀರಾಮನ, ಕಾರ್ಯಸಾಧನೇ - ಕೆಲಸವನ್ನು ನೆರವೇರಿಸುವಿಕೆಯಲ್ಲಿ, ಸಹಾಯಂ - ಸಹಾಯಭೂತನಾದ, ಅನ್ಯಂ - ಮತ್ತೊರ್ವನನ್ನು, ನಪಶ್ಯಾಮಿ - ಕಾಣೆನು. ॥ ೩೨ ॥ ಮಯಿ - ನಾನು, ಹತೇ - ಮಡಿದರೆ, ಯೋವಾನರಃ - ಯಾವ ವಾನರನು, ಶತ....ರ್ಣಂ - ನೂರುಗಾವುದ ಅಗಲವಾದ, ಮಹೋದಧಿಂ - ಸಮುದ್ರವನ್ನು, ಲಂಘಯೇತ - ದಾಟುವನೋ, ತಂ - ಅಂತಹ ವಾನರನನ್ನು, ವಿಮೃಶಂಶ್ಚ - ಆಲೋಚಿಸುತ್ತಿರುವ ನಾನು, ನಪಶ್ಯಾಮಿ - ಕಾಣೆನು. ॥ ೩೩ ॥ ರಕ್ಷಸಾಂ - ರಾಕ್ಷಸರ, ಸಹಸ್ರಾಣ್ಯಪಿ - ಸಾವಿರಗಳನ್ನೂ, ಹಂತುಂ - ಸಂಹರಿಸಲು,

ಆಕಾಶಕ್ಕೆ ಹಾರಿ ನನ್ನನ್ನು ಹಿಡಿದುಕೊಳ್ಳುವರು. ಹಾಗೊಂದು ವೇಳೆ ಅವರು ನನ್ನನ್ನು ಹಿಡಿದು ಬಂಧಿಸಿದುದಾದರೆ ಈ ಸೀತಾದೇವಿಗೆ ಶ್ರೀರಾಮನ ವೃತ್ತಾಂತವೇ ತಿಳಿಯದೇ ಹೋಗುವುದು. ನಾನಾದರೋ ಆರಾಕ್ಷಸರ ಕೈಗೆ ಸಿಕ್ಕಿಕೊಂಡು, ಹಿಂಸೆಯಲ್ಲಿಯೇ ಆಸೆಯಿರುವ ಅವರಿಂದ ಸಂಹೃತನಾಗಬೇಕಾಗುವುದು. ಇಲ್ಲವೇ ಈ ಸೀತೆಯನ್ನಾದರೂ ಕೊಲ್ಲತ್ತಾರೆ. ಸೀತೆಯೇ ರಾಕ್ಷಸರಿಂದಸಂಹೃತಳಾದರೆ ನಾನು ಉದ್ದೇಶಿಸಿ ಬಂದಿರುವ ಶ್ರೀರಾಮಸುಗ್ರೀವರ ಕಾರ್ಯಗಳೆಲ್ಲವೂ ಭಗ್ನವಾಗಿಹೋಗುವುವು. ॥೨೬–೩೦॥ ಶ್ರೀರಾಮ ಪತ್ನಿಯಾದ ಈ ಸೀತೆಯಿರುವ ಸ್ಥಳವಾದರೋ ಯಾರೊಬ್ಬರಿಗೂ ದುಷ್ಪ್ರವೇಶ್ಯವಾಗಿರುವುದು. ಈ ಪ್ರದೇಶದ ನಾಲ್ಕುಕಡೆಗಳಲ್ಲಿಯೂ ರಾಕ್ಷಸರು ಕಾವಲಿರುವರಲ್ಲದೆ, ಇದು ಸಮುದ್ರಮಧ್ಯದಲ್ಲಿರುವುದರಿಂದ ಯಾರಿಗೂ ತಿಳಿಯಲಸದಳವಾಗಿರುವುದು. ನಾನೊಂದು ವೇಳೆ ಈ ರಾಕ್ಷಸರೊಡನೆ ಸೆಣಸಿನಿಂತು ಕಾದಾಡಿ ಕಡೆಗೂ ಪ್ರಾಣಗಳನ್ನು ತೊರೆದರೆ, ಅಥವ ಇವರ ಕೈಗೆ ಸೆರೆಸಿಕ್ಕಿಕೊಂಡರೆ; ಶ್ರೀರಾಮಕಾರ್ಯವನ್ನು ಮಾಡುವವನಾರು? ಈ ಕಾರ್ಯವನ್ನು ಸಾಧಿಸಲು ನನ್ನನ್ನು ಬಿಟ್ಟರೆ ಯಾರೂ ಸಮರ್ಥರಲ್ಲವೆಂದು ತೋರುವುದು. ಒಂದು ವೇಳೆ ನಾನಿಲ್ಲಿ ಮಡಿದರೆ ಶತಯೋಜನವಿಸ್ತೀರ್ಣವಾದ ಈ ಮಹಾ ಸಮುದ್ರವನ್ನು ದಾಟಬರುವ ವಾನರನಾವನೆಂದು ಎಷ್ಟು ಯೋಚಿಸಿದರೂ ತೋರದಾಗಿರುವುದು. ನಾನು ಈ ರಾಕ್ಷಸರಿಗೆ ಹೆದರುವವನಲ್ಲ. ಈ ರಾಕ್ಷಸರು

ಸಮರ್ಥೋಽಸ್ಮಿ ಸಹಸ್ರಾಣ್ಯಪಿ ರಕ್ಷಸಾಂ । ನತು ಶಕ್ಷ್ಯಾಮಿ ಸಂಪ್ರಾಪ್ತುಂ ಪರಂ ಪಾರಂ ಮಹೋದಧೇಃ ॥ ೩೪ ॥ ಅನಿತ್ಯಾನಿಚ ಯುದ್ಧಾನಿ ಸಂಶಯೋ ಮೇ ನರೋಚತೇ । ಕಶ್ಚ ನಿಸ್ಸಂಶಯಂ ಕಾರ್ಯಂ ಕುರ್ಯಾತ್ಪ್ರಾಜ್ಞಸ್ಸಸಂಶಯಂ ॥ ೩೫ ॥ ಪ್ರಾಣತ್ಯಾಗಶ್ಚ ವೈದೇಹ್ಯಾ ಭವೇದನಭಿಭಾಷಣೇ । ಏಷ ದೋಷೋ ಮಹಾನ್ ಹಿ ಸ್ಯಾನ್ಮಮಸೀತಾಽಭಿಭಾಷಣೇ ॥ ೩೬ ॥ ಭೂತಾಶ್ಚಾರ್ಥಾ ವಿಪದ್ಯಂತೇ ದೇಶಕಾಲವಿರೋಧಿತಾಃ । ವಿಕ್ಲಬಂ ದೂತಮಾಸಾದ್ಯ ತಮಸ್ಸೂರ್ಯೋದಯೇ ಯಥಾ ॥ ೩೭ ॥ ಅರ್ಥಾನರ್ಥಾಂತರೇ ಬುದ್ಧಿರ್ನಿಶ್ಚಿತಾಪಿ ನಶೋಭತೇ । ಘಾತಯಂತಿ ಹಿ ಕಾರ್ಯಾಣಿ

ಸಮರ್ಥೋಽಸ್ಮಿ - ಶಕ್ತನಾಗಿದ್ದೇನೆ, ಮಹೋದಧೇಃ - ಸಮುದ್ರದ, ಪರಂಪಾರಂ - ಆಚಿನ ದಡವನ್ನು, ಸಂಪ್ರಾಪ್ತುಂ - ಹೊಂದುವದಕ್ಕೆ, ನತುಶಕ್ಷ್ಯಾಮಿ - ಸಮರ್ಥನಾಗಲಾರೆನು. ॥ ೩೪ ॥ ಕಿಂಚ - ಇಷ್ಟೇ ಅಲ್ಲ, ಯುದ್ಧಾನಿ - ಕಾಳಗಗಳು, ಅನಿತ್ಯಾನಿ - ಗೊತ್ತಿಲ್ಲದ ಜಯಾಪಜಯಗಳುಳ್ಳವುಗಳು, ಸಂಶಯಃ - ಸಂದಿಗ್ಧಾರ್ಥವು, ಮೇ - ನನಗೆ, ನರೋಚತೇ - ಸೇರುವುದಿಲ್ಲವು, ಪ್ರಾಜ್ಞಃ - ಬಲ್ಲವನಾದ, ಕಶ್ಚ - ಯಾವನುತಾನೇ, ಸಸಂಶಯಂ-ಸಂದೇಹದಿಂದೊಡಗೂಡಿದ, ಕಾರ್ಯಂ-ಕೆಲಸವನ್ನು, ನಿಸ್ಸಂಶಯಂ-ವಿಚಾರವಿಲ್ಲದೆ ನಿಸ್ಸಂಶಯವಾಗಿ, ಕುರ್ಯಾತ್-ಮಾಡಿಯಾನು ? ॥೩೫॥ ಅನಭಿಭಾಷಣೇ-ಮಾತನಾಡದಿದ್ದಲ್ಲಿ, ವೈದೇಹ್ಯಾಃ - ಸೀತಾದೇವಿಯ, ಪ್ರಾಣತ್ಯಾಗಶ್ಚ - ಜೀವಪರಿತ್ಯಾಗವೂ, ಭವೇತ್-ಆಗುವದು, ಸೀತಾಭಿಭಾಷಣೇ - ಸೀತಾಸಂಭಾಷಣವಾಗುತ್ತಿರಲು, ಮಮ - ನನಗೆ, ಏಷಃ - ಈ ಪೂರ್ವೋಕ್ತವಾದ, ಮಹಾನ್ದೋಷಃ - ದೊಡ್ಡ ತಪ್ಪು, ಸ್ಯಾದ್ಧಿ - ಆಗುವುದಷ್ಟೆ. ॥ ೩೬ ॥ ಭೂತಾಃ - ಕೈಗೂಡಿದ, ಅರ್ಥಾಶ್ಚ - ಕಾರ್ಯಗಳೂ, ವಿಕ್ಲಬಂ - ಅವಿವೇಕಿಯಾದ, ದೂತಂ - ಭೃತ್ಯನನ್ನು, ಆಸಾದ್ಯ - ಹೊಂದಿ, ದೇಶ....ತಃ - ದೇಶದಿಂದಲೂ, ಕಾಲದಿಂದಲೂ ವಿರೋಧಿಸಲ್ಪಟ್ಟು, ಸೂರ್ಯೋದಯೇ - ಪ್ರಾತಃಕಾಲದಲ್ಲಿ, ತಮೋಯಥಾ - ಅಂಧಕಾರದಂತೆ, ವಿನಶ್ಯಂತಿ - ನಾಶವಾಗುತ್ತವೆ. ॥೩೭॥ ಅರ್ಥಾ....ರೇ - ಕಾರ್ಯಾಕಾರ್ಯ ವಿಷಯದಲ್ಲಿ, ನಿಶ್ಚಿತಾಪಿ - ನಿಶ್ಚಯಿಸಲ್ಪಟ್ಟುದಾದರೂ, ಬುದ್ಧಿಃ - ಬುದ್ಧಿಯು, ವಿಕ್ಲಬಂದೂತಮಾಸಾದ್ಯ - ಅವಿವೇಕಿಯಾದ ದೂತನನ್ನು ಹೊಂದಿ ನಶೋಭತೇ - ಸಫಲವಾಗುವುದಿಲ್ಲ, ಪಂಡಿತಮಾನಿನಃ - ನಾನೇ ಪಂಡಿತನೆಂಬ ಅಹಂಕಾರವನ್ನು ಹೊಂದಿರುವ,

---

ಸಾವಿರಮಂದಿ ಬಂದರೂ ಎಲ್ಲರನ್ನೂ ಲೀಲಾಜಾಲವಾಗಿ ಕೊಲ್ಲುವ ಸಾಮರ್ಥ್ಯವು ನನಗುಂಟು. ಆದರೆ ಆ ಬಳಿಕ ಈ ಸಮುದ್ರದಾಚಿನ ದಡವನ್ನು ಸೇರಲು ಮಾತ್ರ ನನ್ನಿಂದ ಆಗದೇ ಹೋಗಬಹುದು. ಮೇಲಾಗಿ ಯುದ್ಧವಾದರೆ ನಾನೇ ಗೆಲ್ಲುವೆನೆಂದು ಊಹಿಸುವುದು ತಾನೆ ಹೇಗೆ. ಯುದ್ಧದಲ್ಲಿ ಜಯಾಪಜಯಗಳು ಅನಿತ್ಯವಾದುವು. ಹೀಗೆ ಸಂಶಯಾಸ್ಪದವಾದ ಕೆಲಸವನ್ನು ಮೊದಲುಮಾಡುವುದೇ ನನಗೆ ಇಷ್ಟವಿಲ್ಲವು. ಯುಕ್ತಾಯುಕ್ತ ವಿವೇಕ ಶೀಲನಾದ ಯಾವನು ತಾನೇ ಈ ರೀತಿ ಸಂಶಯಾಸ್ಪದವಾದ ಕಾರ್ಯವನ್ನು ಆರಂಭಿಸಿಯಾನು ? ॥ ೩೧-೩೫ ॥ ಏನೇ ಆಗಲಿ, ಯಾವ ತೊಂದರೆಯಾದರೂ ಅಡ್ಡಪಡಿಸಲಿ. ನಾನು ಸೀತಾದೇವಿಯನ್ನು ನೋಡಿ ಮಾತನಾಡಿಸದೆ ಹೋಗುವುದೇನೋ ಯುಕ್ತವಾಗಿ ತೋರಲಿಲ್ಲ. ಈಕೆಯು ಬೆಳಗಾಗುವುದರೊಳಗಾಗಿ ಪ್ರಾಣಗಳನ್ನು ತೊರೆಯುವುದೇನೋ ನಿಜವು. ಆದರೆ ಈಕೆಯನ್ನು ಮಾತನಾಡಿಸೋಣವೆಂದರೆ ಹಿಂದೆ ನಾನೆಂದುಕೊಂಡ ಅನರ್ಥಗಳೆಲ್ಲವೂ ಸಂಭವಿಸುವುದು ಖಂಡಿತವೆಂದೇ ತೋರುವುದು. ಏನೇ ಆಗಲಿ ಮಾತನಾಡಿಸೋಣವೆಂದರೆ ಅದೂ ಪ್ರಮಾ

ದೂತಾಃ ಪಂಡಿತಮಾನಿನಃ ‖ ೩೮ ‖ ನವಿನಶ್ಯೇತ್ಕಥಂ ಕಾರ್ಯಂ ವೈಕ್ಲಬ್ಯಂ ನಕಥಂ ಭವೇತ್? । ಲಂಘನಂಚ ಸಮುದ್ರಸ್ಯ ಕಥನ್ನು ನವೃಥಾ ಭವೇತ್? ‖ ೩೯ ‖ ಕಥನ್ನು ಖಲು ವಾಕ್ಯಂ ಮೇ ಶೃಣುಯಾನ್ನೋದ್ವಿಜೇತವಾ!" । ಇತಿ ಸಂಚಿಂತ್ಯ ಹನುಮಾಂಶ್ಚಕಾರ ಮತಿಮಾನ್ಮತಿಂ ‖೪೦‖ "ರಾಮಮಕ್ಲಿಷ್ಟಕರ್ಮಾಣಂ ಸ್ವಬಂಧು ಮನುಕೀರ್ತಯನ್ । ನೈನಾಮುದ್ವೇಜಯಿಷ್ಯಾಮಿ ತದ್ಬಂಧುಗತಮಾನಸಾಂ ‖ ೪೧ ‖

ದೂತಾಃ - ಭೃತ್ಯರು, ಕಾರ್ಯಾಣಿ - ಕೆಲಸಗಳನ್ನು, ಘಾತಯಂತಿಹಿ - ನಾಶಗೊಳಿಸುವರಷ್ಟೆ. ‖ ೩೮ ‖ ಕಾರ್ಯಂ - ಕೆಲಸವು, ಕಥಂನವಿನಶ್ಯೇತ್ - ಹೇಗೆ ಕೆಡದಿರುವುದೋ, ವೈಕ್ಲಬ್ಯಂ - ಅವಿವೇಕಿತನವು, ಕಥಂನಭವೇತ್ - ಹೇಗೆ ಇಲ್ಲದೆಹೋಗುವುದೋ, ಸಮುದ್ರಸ್ಯ - ಕಡಲಿನ, ಲಂಘನಂಚ - ದಾಟುವಿಕೆಯೂ ಕೂಡ, ಕಥಂನು ನವೃಥಾಭವೇತ್ - ಹೇಗೆ ವ್ಯರ್ಥವಾಗದೇ ಇರುವದೋ. ‖ ೩೯ ‖ ಮೇ - ನನ್ನ, ವಾಕ್ಯಂ - ಮಾತನ್ನು, ಕಥಂನು - ಹೇಗಾದರೆ, ಶೃಣುಯಾತ್ - ಕೇಳುವಳೋ, ನೋದ್ವಿಜೇತವಾ - ಅಂಜದೆಯೂ ಇರುವಳೋ, ಮತಿಮಾನ್ - ಬುದ್ಧಿಶಾಲಿಯಾದ, ಹನುಮಾನ್ - ಆಂಜನೇಯನು, ಇತಿ - ಈ ಪ್ರಕಾರವಾಗಿ, ಸಂಚಿಂತ್ಯ - ಆಲೋಚಿಸಿ, ಮತಿಂ - ಬುದ್ಧಿಯನ್ನು, ಚಕಾರ - ಮಾಡಿದನು. ‖ ೪೦ ‖ ಅಕ್ಲಿ....ಣಂ - ಕ್ಲೇಶವಿಲ್ಲದೆಯೇ ಕಾರ್ಯಗಳನ್ನು ನಡೆಸುತ್ತಿರುವ, ಸ್ವಬಂಧುಂ - ತನ್ನ ಬಂಧುವಾದ, ರಾಮಂ - ಶ್ರೀರಾಮನನ್ನು, ಅನುಕೀರ್ತಯನ್-ಸ್ತುತಿಸುವವನಾಗಿ, ತದ್ಬಂ....ಸಾಂ - ಬಂಧುವಾದ ಶ್ರೀರಾಮನನ್ನು, ಹೊಂದಿದ ಮನವುಳ್ಳ, ಏನಾಂ - ಈ ಸೀತಾದೇವಿಯನ್ನು, ನೋದ್ವೇಜಯಿಷ್ಯಾಮಿ - ಹೆದರಿಕೆಯಿಲ್ಲದವಳನ್ನಾಗಿ ಮಾಡುವೆನು. ‖ ೪೧ ‖

ದವೇ ಆಗುವುದು. ಏಕೆಂದರೆ, ಸರ್ವಸಿದ್ಧಗಳಾದ ಕಾರ್ಯಗಳೂ ಕೂಡ ಅವಿವೇಕಿಯಾದ ದೂತನಿಂದ ದೇಶಕಾಲವಿರೋಧಗಳಾಗಿ ಸೂರ್ಯನುದಿಸಿದೊಡನೆಯೇ ಕತ್ತಲೆಯು ನಾಶವಾಗುವಂತೆ, ನಾಶವಾಗುವುದರಲ್ಲಿ ಸಂಶಯವಿಲ್ಲವು. ಇದೂ ಅಲ್ಲದೆ ಕಾರ್ಯಾಕಾರ್ಯಗಳನ್ನು ಚೆನ್ನಾಗಿ ಪರಿಶೀಲಿಸಿ, ಹೀಗೆಯೇ ಮಾಡಬೇಕೆಂದು ನಿರ್ಧರಿಸಿಕೊಂಡು ಮಾಡುವ ಕಾರ್ಯವಾದರೂ, ಆ ಕಾರ್ಯದಲ್ಲಿ ನಾನು ನಿಷ್ಣಾತನೆಂದು ತಿಳಿದು ಗರ್ವಪಡುವ ಅವಿವೇಕಿಯಾದ ದೂತರು ನಿಯುಕ್ತರಾದರೆ ಅದು ನಿರರ್ಥಕವಾಗುವುದರಲ್ಲಿ ಸಂದೇಹವಿಲ್ಲವು. ಆದುದರಿಂದ ಈ ಮಹತ್ಕಾರ್ಯವು ಕೆಡದಿರುವಂತೆಯೂ, ನನಗೆ ಕೆಟ್ಟ ಹೆಸರು ಬರದಿರುವಂತೆಯೂ ಆಗಬೇಕಾದರೆ ಹೇಗೆ ಮಾಡಬೇಕು? ಏನು ಮಾಡಬೇಕು? ನಾನು ಶತಯೋಜನ ವಿಸ್ತೀರ್ಣವಾದ ಈ ಮಹಾ ಸಮುದ್ರವನ್ನು ದಾಟಿ ಈ ಲಂಕೆಗೆ ಬಂದುದು ನಿರರ್ಥಕವಾಗಕೂಡದು. ಆದುದರಿಂದ ನಾನು ಚೆನ್ನಾಗಿ ಆಲೋಚಿಸಿ ಮುಂದಣ ಕಾರ್ಯವನ್ನು ಮಾಡಬೇಕಾಗಿರುವುದು. ನಾನು ಹೇಳುವ ಮಾತುಗಳು ಈ ಸೀತಾದೇವಿಯು ಯಾವ ಭಯವೂ ಇಲ್ಲದೆ ಕೇಳುವಂತಹವುಗಳಾಗಿರಬೇಕು." ಈ ಪ್ರಕಾರವಾಗಿ ಮಹಾ ಮೇಧಾವಿಯಾದ ಹನುಮಂತನು ಬಹು ವಿಧವಾಗಿ ಯೋಚಿಸಿ ಕಟ್ಟಕಡೆಗೆ ತಾನೆಸಗಬೇಕಾದ ಕಾರ್ಯವನ್ನು ನಿಶ್ಚಯಿಸಿದನು. ‖ ೩೬–೪೦ ‖ ಹಗೆಗಳಿಗೆ ವ್ಯಸನವನ್ನುಂಟುಮಾಡುವ ಕೆಲಸಗಳನ್ನೇ ಮಾಡುವವನಾದ ಆಂಜನೇಯನು, "ಸೀತಾದೇವಿಗೆ ಪ್ರಿಯಬಂಧುವಾದ ಶ್ರೀರಾಮನನ್ನು ಹೊಗಳಿ ಆವನ ಕಥೆಯನ್ನು ವರ್ಣಿಸಿ ಈಕೆಯ ಮನಸ್ಸನ್ನು ಆತನಲ್ಲಿಯೇ ನೆಲೆಗೊಳಿಸುವೆನು.

ಇಕ್ಷ್ವಾಕೂಣಾಂ ವರಿಷ್ಠಸ್ಯ ರಾಮಸ್ಯ ವಿದಿತಾತ್ಮನಃ । ಶುಭಾನಿ ಧರ್ಮಯುಕ್ತಾನಿ ವಚನಾನಿ ಸಮರ್ಪಯನ್ ॥೪೨॥ ಶ್ರಾವಯಿಷ್ಯಾಮಿ ಸರ್ವಾಣಿ ಮಧುರಾಂ ಪ್ರಬ್ರುವನ್ ಗಿರಂ । ಶ್ರದ್ಧಾಸ್ಯತಿ ಯಥಾಹೀಯಂ ತಥಾ ಸರ್ವಂ ಸಮಾದಧೇ" ॥ ೪೩ ॥

ಇತಿ ಸ ಬಹುವಿಧಂ ಮಹಾನುಭಾವೋ
ಜಗತಿಪತೇಃ ಪ್ರಮದಾಮವೇಕ್ಷಮಾಣಃ ।
ಮಧುರಮವಿತಥಂ ಜಗಾದ ವಾಕ್ಯಂ
ದ್ರುಮವಿಟಪಾಂತರಮಾಸ್ಥಿತೋ ಹನೂಮಾನ್ ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಂಶಸ್ಸರ್ಗಃ

ಇಕ್ಷ್ವಾಕೂಣಾಂ - ಇಕ್ಷ್ವಾಕುವಂಶದರಸರಲ್ಲಿ, ವರಿಷ್ಠಸ್ಯ - ಶ್ರೇಷ್ಠನಾದ, ವಿದಿತಾತ್ಮನಃ - ಆತ್ಮಜ್ಞಾನಿಯಾದ, ರಾಮಸ್ಯ - ಶ್ರೀರಾಮನ, ಧರ್ಮಯುಕ್ತಾನಿ - ಧರ್ಮದಿಂದ ಕೂಡಿದ, ಸರ್ವಾಣಿ - ಸಮಸ್ತಗಳಾದ, ಶುಭಾನಿವಚನಾನಿ - ಒಳ್ಳೆಯ ಮಾತುಗಳನ್ನು, ಸಮರ್ಪಯನ್ - ಅರಿಕೆ ಮಾಡುವವನಾಗಿ, ಮಧುರಾಂ - ಶ್ರಾವ್ಯವಾದ, ಗಿರಂ - ಮಾತನ್ನು, ಪ್ರಬ್ರುವನ್ - ಹೇಳುವವನಾಗಿ, ಶ್ರಾವಯಿಷ್ಯಾಮಿ - ಕೇಳಿಸುತ್ತೇನೆ, ಇಯಂ - ಈ ಸೀತಾದೇವಿಯು, ಯಥಾಶ್ರದ್ಧಾಸ್ಯತಿ - ಹೇಗೆ ನಂಬುವಳೋ, ತಥಾ - ಹಾಗೆ, ಸರ್ವಂ - ಸಮಸ್ತವನ್ನು, ಸಮಾದಧೇ - ಸಂಧಾನ ಮಾಡುವೆನು. ॥೪೧-೪೩॥ ಜಗತಿಪತೇಃ - ಭೂನಾಯಕನಾದ ಶ್ರೀರಾಮನ, ಪ್ರಮದಾಂ - ಸ್ತ್ರೀಯನ್ನು, ಅವೇಕ್ಷಮಾಣಃ - ನೋಡುತ್ತಿರುವ, ಮಹಾನುಭಾವಃ - ಮಹಾ ಪ್ರಭಾವವುಳ್ಳ, ಸಹನೂಮಾನ್ - ಆ ಆಂಜನೇಯನು - ದ್ರುಮ....ರಂ - ವೃಕ್ಷದ ರೆಂಬೆಗಳ ನಡುವೆ, ಆಸ್ಥಿತಃ - ಇರುವವನಾಗಿ, ಬಹುವಿಧಂ - ನಾನಾಬಗೆಯಾಗಿ, ಮಧುರಂ - ಶ್ರಾವ್ಯವಾದ, ಅವಿತಥಂ - ಸತ್ಯವಾದ, ವಾಕ್ಯಂ - ಮಾತನ್ನು, ಇತಿ - ಈ ಪ್ರಕಾರವಾಗಿ, ಜಗಾದ - ಹೇಳಲಾರಂಭಿಸಿದನು. ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಂಶಸ್ಸರ್ಗಃ

ನಾನು ಹೀಗೆ ಮಾಡಿದೆನಾದರೆ ಈಕೆಗೆ ಯಾವ ವಿಧದಲ್ಲಿಯೂ ಭಯವುಂಟಾಗದು. ಅಲ್ಲದೆ ನಾನು ಇಕ್ಷ್ವಾಕುವಂಶ ಪ್ರಸೂತರಾದವರಲ್ಲಿ ಮಹಾ ಶ್ರೇಷ್ಠನಾಗಿ, ಪರಮಾತ್ಮಜ್ಞಾನಿಯಾದ ಶ್ರೀರಾಮನು ಈ ಸೀತೆಗೆ ಹೇಳಿದ ಮಂಗಳಕರವಾದ, ಧರ್ಮಯುಕ್ತವಾದ ಮಾತುಗಳನ್ನು ಮನಕಿಂಪಾಗುವಂತೆ ಕೇಳಿಸುವೆನು." ಎಂದು ಯೋಚಿಸಿ ಹೇಗೆ ಮಾತನಾಡಿದರೆ ಸೀತೆಯು ಭಯಗೊಳ್ಳುವುದಿಲ್ಲವೋ, ಹಾಗೆ ಮಾತನಾಡಲು ನಿಶ್ಚಯಿಸಿಕೊಂಡನು. ಮಹಾನುಭಾವನಾದ ಆ ಹನುಮಂತನು ಗಿಡದ ಕೊಂಬೆಯಮೇಲೆ ಎಲೆಗಳ ಮರೆಯಲ್ಲಿ ಯಾರಿಗೂ ತಿಳಿಯದಂತೆ ಕುಳಿತು, ಜಗತ್ಕರ್ತನಾದ ಶ್ರೀರಾಮನಿಗೆ ಭಾರ್ಯೆಯಾದ ಸೀತಾದೇವಿಯನ್ನು ನೋಡಿ ಬಹು ಮನೋಹರವಾದ, ಅಮೋಘವಾದ ಮಾತುಗಳಿಂದ ಅನೇಕಬಗೆಯಾಗಿ ನುಡಿಯಲು ಮೊದಲು ಮಾಡಿದನು. ॥ ೪೧–೪೪ ॥

ಇಂತಿದು ಹನುಮತ್ಕೃತ ಸಂಭಾಷಣ ನಿಶ್ಚಯ ವೃತ್ತಾಂತವೆಂಬ
ಮೂವತ್ತನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಏಕತ್ರಿಂಶಸ್ಸರ್ಗಃ

ಏವಂ ಬಹುವಿಧಾಂ ಚಿಂತಾಂ ಚಿಂತಯಿತ್ವಾ ಮಹಾಕಪಿಃ । ಸಂಶ್ರವೇ ಮಧುರಂ ವಾಕ್ಯಂ ವೈದೇಹ್ಯಾ ವ್ಯಾಜಹಾರ ಹ ॥ ೧ ॥ " ರಾಜಾ ದಶರಥೋ ನಾಮ ರಥಕುಂಜರ ವಾಜಿಮಾನ್ । ಪುಣ್ಯಶೀಲೋ ಮಹಾಕೀರ್ತಿರೃಜುರಾಸೀ ನ್ಮಹಾಯಶಾಃ ॥ ೨ ॥ ರಾಜರ್ಷೀಣಾಂ ಗುಣಶ್ರೇಷ್ಠ ಸ್ತಪಸಾಚ ರ್ಷಿಭಿಸ್ಸಮಃ । ಚಕ್ರವರ್ತಿ ಕುಲೇ ಜಾತಃ ಪುರಂದರಸಮೋ ಬಲೇ । ಅಹಿಂಸಾರತಿರಕ್ಷುದ್ರೋ ಘೃಣೀ ಸತ್ಯ

ಮಹಾಕಪಿಃ - ಮಹಾ ವಾನರನಾದ ಆಂಜನೇಯನು, ಏವಂ - ಹೀಗೆ, ಬಹುವಿಧಾಂ - ನಾನಾ ಬಗೆಯಾದ, ಚಿಂತಾಂ - ಆಲೋಚನೆಯನ್ನು, ಚಿಂತಯಿತ್ವಾ - ಯೋಚಿಸಿ, ಸಂಶ್ರವೇ - ಕೇಳುವದಕ್ಕೆ, ಮಧುರಂ - ಇಂಪಾಗಿರುವ, ವಾಕ್ಯಂ - ಮಾತನ್ನು, ವೈದೇಹ್ಯಾಃ - ಸೀತಾದೇವಿಗೆ, ವ್ಯಾಜಹಾರಹ-ಹೇಳಿದನು, (ಗೋ) ಚನ್ನಾಗಿ ಕೇಳಿಸುವ ಸ್ಥಳದಲ್ಲಿ, ಈ ಮುಂದೆ ಹೇಳುವಂತೆ ನುಡಿದನು. ॥೧॥ ಪುಣ್ಯಶೀಲಃ - ಪುಣ್ಯಸ್ವಭಾವವುಳ್ಳ, ಮಹಾಕೀರ್ತಿಃ - ಪರಾಕ್ರಮದಿಂದ ಮಹಾ ಯಶಸ್ವಿಯಾದ, ಋಜುಃ - ಕಪಟವಿಲ್ಲದಿರುವ, ಮಹಾಯಶಾಃ - ಮಹಾದಾತನೆಂದು ಪ್ರಸಿದ್ಧನಾದ, ರಾಜರ್ಷೀಣಾಂ - ಪ್ರಭುಗಳಾದರೂ ಋಷಿಗಳಾದವರಲ್ಲಿ, ಗುಣಶ್ರೇಷ್ಠಃ - ಗುಣಗಳಿಂದ ಅಧಿಕನಾದ, ತಪಸಾಚ - ತಪಸ್ಸಿನಿಂದಲೂ, ಋಷಿಭಿಃ - ತಪಸ್ವಿಗಳಿಗೆ, ಸಮಃ - ಸಮಾನನಾದ, ಚಕ್ರವರ್ತಿಕುಲೇ - ಸಾರ್ವಭೌಮನೆಂದು ಪ್ರಖ್ಯಾತನಾದ ಇಕ್ಷ್ವಾಕುವಿನ ವಂಶದಲ್ಲಿ, ಜಾತಃ - ಹುಟ್ಟಿದ, ಬಲೇ - ಶಕ್ತಿಯಲ್ಲಿ, ಪುರಂದರಸಮಃ - ಇಂದ್ರಸದೃಶನಾದ, ಅಹಿಂಸಾರತಿಃ - ಅಹಿಂಸೆಯಲ್ಲಿ ಆಸಕ್ತನಾದ, ಅಕ್ಷುದ್ರಃ - ಅಸೂಯೆಯಿಲ್ಲದಿರುವ, ಘೃಣೀ - ದಯಾವಂತನಾದ, ಸತ್ಯಪರಾಕ್ರಮಃ - ಯಥಾರ್ಥವಾದ ಸಾಮರ್ಥ್ಯವುಳ್ಳ, ಇಕ್ಷ್ವಾ....ಸ್ಯ - ಇಕ್ಷ್ವಾಕುರಾಯನ ಕುಲಕ್ಕೆ, ಮುಖ್ಯಶ್ಚ - ಶ್ರೇಷ್ಠನಾದ, ಲಕ್ಷ್ಮೀವಾನ್ - ಭಾಗ್ಯವಂತನಾದ, ಲಕ್ಷ್ಮಿವರ್ಧನಃ - ರಾಜ್ಯಲಕ್ಷ್ಮಿಯನ್ನು ವೃದ್ಧಿಗೊಳಿಸುತ್ತಿರುವ, ಪಾರ್ಥಿ....ನೈಃ - ರಾಜಲಕ್ಷಣಗಳಿಂದ, ಯುಕ್ತಃ - ಕೂಡಿರುವ, ಪೃಥುಶ್ರೀಃ - ಮಹದೈಶ್ವರ್ಯವಂತನಾದ, ಪಾರ್ಥಿವ

ವಾನರೋತ್ತಮನಾದ ಮಾರುತಿಯು ಈ ರೀತಿ ಅನೇಕ ವಿಧವಾಗಿ ಯೋಚಿಸಿ ಕೇಳುವುದಕ್ಕೆ ಬಹು ಮನೋಹರವಾದ ಮಾತುಗಳಿಂದ ಸೀತಾದೇವಿಗೆ ಕೇಳಿಸುವಂತೆ ಹೇಳಲು ಪಕ್ರಮಿಸಿದನು. " ರಥಗಜತುರಗಗಳಿಗೆ ಒಡೆಯನಾದ ದಶರಥನೆಂಬ ರಾಜನಿದ್ದನು. ಆತನು ಪುಣ್ಯಕರವಾದ ಕಾರ್ಯಗಳನ್ನು ಮಾಡುವುದರಲ್ಲಿಯೇ ನಿರತನಾಗಿದ್ದನು. ಆತನ ಕೀರ್ತಿಯು ಅಪಾರವಾದುದು. ಮಹಾ ಯಶಸ್ವಿಯಾದ ಆ ರಾಯನು ಕೇವಲ ಋಜುಮಾರ್ಗದಿಂದಿದ್ದನಲ್ಲದೆ, ಕಪಟವೆಂಬುದು ಆತನಲ್ಲಿ ಲೇಶವಾದರೂ ಇರಲಿಲ್ಲವು. ಆತನು ರಜರ್ಷಿಗಳಲ್ಲಿ ಮಹಾ ಶ್ರೇಷ್ಠನಾದವನು. ಅಲ್ಲದೆ ತಪಸ್ಸಿನಲ್ಲಿ ಋಷಿಗಳಿಗೆ ಸಮಾನವಾದವನು. ಚಕ್ರವರ್ತಿಗಳ ವಂಶದಲ್ಲಿ ಹುಟ್ಟಿದ ಆತನು ದೇವೇಂದ್ರನಿಗೆ ಸಮನಾದ ಪರಾಕ್ರಮಶಾಲಿಯಾಗಿದ್ದನು. ಅಹಿಂಸಾವ್ರತಿಯೂ, ಮಹಾ ಸಾತ್ವಿಕನೂ, ಅತುಳ ಬಲನೂ ಆಗಿದ್ದ ಆತನು ಇಕ್ಷ್ವಾಕು ರಾಯನ ವಂಶಕ್ಕೆ ಸಂಪತ್ಕರನಾಗಿಯೂ, ಮಹಾ ತೇಜಸ್ವಿಯೂ ಆಗಿದ್ದನು. ಸಮಸ್ತ ರಾಜ

ಪರಾಕ್ರಮಃ । ಮುಖ್ಯಶ್ಚೇಕ್ಷ್ವಾಕುವಂಶಸ್ಯ ಲಕ್ಷ್ಮೀವಾನ್ ಲಕ್ಷ್ಮಿವರ್ಧನಃ ॥ ೪ ॥ ಪಾರ್ಥಿವವ್ಯಂಜನೈರ್ಯುಕ್ತಃ ಪೃಥುಶ್ರೀಃ ಪಾರ್ಥಿವರ್ಷಭಃ । ಪೃಥಿವ್ಯಾಂ ಚತುರಂತಾಯಾಂ ವಿಶ್ರುತ ಸ್ಸುಖದಸ್ಸುಖೀ ॥ ೫ ॥ ತಸ್ಯ ಪುತ್ರಃ ಪ್ರಿಯೋ ಜ್ಯೇಷ್ಠ ಸ್ತಾರಾಧಿಪನಿಭಾನನಃ । ರಾಮೋನಾಮ ವಿಶೇಷಜ್ಞಃ ಶ್ರೇಷ್ಠಸ್ಸರ್ವಧನುಷ್ಮತಾಂ ॥೬॥ ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯಚ ರಕ್ಷಿತಾ । ರಕ್ಷಿತಾ ಜೀವಲೋಕಸ್ಯ ಧರ್ಮಸ್ಯಚ ಪರಂತಪಃ ॥೭॥ ತಸ್ಯ ಸತ್ಯಾಭಿಸಂಧಸ್ಯ ವೃದ್ಧಸ್ಯ ವಚನಾತ್ಪಿತುಃ । ಸಭಾರ್ಯಸ್ಸಹಚ ಭ್ರಾತ್ರಾ ವೀರಃ ಪ್ರವ್ರಾಜಿತೋವನಂ ॥ ೮ ॥ ತೇನ ತತ್ರ ಮಹಾರಣ್ಯೇ ಮೃಗಯಾಂ

ರ್ಷಭಃ-ರಾಜಶ್ರೇಷ್ಠನಾದ, ಚತುರಂತಾಯಾಂ-ನಾಲ್ಕು ನಾಲ್ಕುದಿಕ್ಕುಗಳುಳ್ಳ, ಪೃಥಿವ್ಯಾಂ-ಭೂಮಿಯಲ್ಲಿ, ವಿಶ್ರುತಃ - ಕೇಳಲ್ಪಟ್ಟವನಾದ, ಸುಖದಃ - ಇತರರಿಗೆ ಸುಖವನ್ನೀಯುತ್ತಿರುವ, ಸುಖೀ - ಸುಖವಂತನಾದ, ರಥ....ವಾನ್ - ರಥಗಳೂ, ಆನೆಗಳೂ, ಕುದುರೆಗಳೂ ಉಳ್ಳ, ದಶರಥೋನಾಮ - ದಶರಥನೆಂದು ಪ್ರಸಿದ್ಧನಾದ, ರಾಜಾ - ಅರಸನು, ಆಸೀತ್ - ಇದ್ದನು. ॥ ೨ ೫ ॥ ತಾರಾ....ನಃ - ಚಂದ್ರಸದೃಶವಾದ ಮುಖವುಳ್ಳ, ವಿಶೇಷಜ್ಞಃ - ಮಹಾ ತಿಳಿವಳಿಕೆಯುಳ್ಳ, ಸರ್ವ....ತಾಂ - ಸಮಸ್ತ ಧನುರ್ಧಾರಿಗಳಲ್ಲಿ, ಶ್ರೇಷ್ಠಃ - ಉತ್ತಮನಾದ, ಸ್ವಸ್ಯಧರ್ಮಸ್ಯ - ತನ್ನ ರಾಜನೀತಿಗೆ, ರಕ್ಷಿತಾ - ಪಾಲಕನಾದ, ಸ್ವಜನಸ್ಯ - ತನ್ನ ಜನಕ್ಕೂ, ರಕ್ಷಿತಾ - ರಕ್ಷಕನಾದ, ಜೀವಲೋಕಸ್ಯ - ಪ್ರಾಣಿಸಮೂಹಕ್ಕೂ, ಧರ್ಮಸ್ಯಚ - ಧರ್ಮಕ್ಕೂ ಸಹ, ರಕ್ಷಿತಾ - ಪರಿಪಾಲಕನಾದ, ಪರಂತಪಃ - ಮುಖ್ಯನಾದ, ರಾಮೋನಾಮ - ಶ್ರೀರಾಮನೆಂಬವನು, ತಸ್ಯ - ಆ ದಶರಥರಾಜನಿಗೆ, ಪ್ರಿಯಃ - ಇಷ್ಟನಾದ, ಜ್ಯೇಷ್ಠಃಪುತ್ರಃ - ಹಿರಿಯಮಗನು. ॥ ೭ ॥ ವೀರಃ - ಶೂರನಾದ ರಾಮನು, ಸತ್ಯಾಭಿಸಂಧಸ್ಯ - ಸತ್ಯಸಂಕಲ್ಪನಾದ, ವೃದ್ಧಸ್ಯ - ಮುದುಕನಾದ, ತಸ್ಯಪಿತುಃ - ಆ ತಂದೆಯ, ವಚನಾತ್ - ಮಾತಿನಂತೆ, ಸಭಾರ್ಯಃ - ಪತ್ನೀಸಮೇತನಾಗಿಯೂ, ಭ್ರಾತ್ರಾಚಸಹ - ತಮ್ಮನೊಡನೆಯೂ, ವನಂ - ಅರಣ್ಯವನ್ನು, ಪ್ರವ್ರಾಜಿತಃ-ಹೊರಡಿಸಲಾದನು. ॥೮॥ ತತ್ರಮಹಾರಣ್ಯೇ-ಆ ಗೊಂಡಾರಣ್ಯದಲ್ಲಿ, ಮೃಗಯಾಂ-

---

ಲಕ್ಷಣ ಲಕ್ಷಿತನಾಗಿ, ಅಪಾರಸಂಪತ್ತಿಗೆ ಒಡೆಯನಾದ ರಾಜಶ್ರೇಷ್ಠನೆನಿಸಿದ್ದನು. ಚತುಸ್ಸಮುದ್ರಪರಿವೃತವಾದ ಭೂಮಂಡಲಕ್ಕೆಲ್ಲಾ ಅರಸಾಗಿ ತನ್ನನ್ನಾಶ್ರಯಿಸಿದ್ದ ಪ್ರಜೆಗಳೆಲ್ಲರಿಗೂ ಸುಖದಾಯಕನಾಗಿ ತಾನೂ ಸುಖವಾಗಿದ್ದವನೆಂದು ಪ್ರಖ್ಯಾತಿಯನ್ನು ಪಡೆದಿದ್ದನು. ॥ ೧–೫ ॥ ಇಂತಹ ದಶರಥಭೂಪಾಲನಿಗೆ ಚಂದ್ರಬಿಂಬಸಮಾನವಾದ ಮುಖವುಳ್ಳವನೂ, ಸಮಸ್ತ ವಿಷಯಗಳನ್ನು ತಿಳಿದವನೂ, ಸಮಸ್ತ ಧನುರ್ಧಾರಿಗಳಲ್ಲಿ ಮೇಲೆನಿಸಿಕೊಂಡವನೂ, ಜ್ಯೇಷ್ಠನೂ, ಶ್ರೀರಾಮನೆಂಬ ನಾಮಧೇಯವುಳ್ಳವನೂ ಆದ ಒಬ್ಬ ಪುತ್ರನುಂಟು. ಆ ಶ್ರೀರಾಮಮೂರ್ತಿಯು ತನ್ನ ಕ್ಷತ್ರಿಯಧರ್ಮವನ್ನು ಚೆನ್ನಾಗಿ ಬಲ್ಲವನು ; ತನ್ನ ಬಂಧುಜನಗಳನ್ನು ಚೆನ್ನಾಗಿ ಸಂರಕ್ಷಿಸುವವನು ; ಸಮಸ್ತ ಪ್ರಾಣಿಸಮೂಹಗಳ ಸಂರಕ್ಷಣೆಯಲ್ಲಿಯೂ ನಿರತನಾದವನು ; ವರ್ಣಾಶ್ರಮಧರ್ಮಗಳನ್ನು ಚೆನ್ನಾಗಿ ಬಲ್ಲವನು ; ಶತ್ರುಜನಸಂತಾಪಕರನವನು. ಇಂತಹ ಮಹಾ ಪರಾಕ್ರಮಶಾಲಿಯಾದ ಆತನು, ಸತ್ಯಸಂಧನೂ, ವೃದ್ಧನೂ, ತನಗೆ ತಂದೆಯೂ ಆದ ದಶರಥಮಹೀಪಾಲನ ವಾಕ್ಯಪರಿಪಾಲನೆಗಾಗಿ, ಹೆಂಡತಿಯೊಡನೆಯೂ, ತಮ್ಮನೊಡನೆಯೂ ದಂಡಕಾರಣ್ಯವನ್ನು ಪ್ರವೇಶಿಸಿದನು. ಆ ಮಹಾರಣ್ಯದಲ್ಲಿ ಆ ತನು

ಪರಿಧಾವತಾ । ರಾಕ್ಷಸಾ ನಿಹತಾಶ್ಶೂರಾ ಬಹವಃ ಕಾಮರೂಪಿಣಃ ॥೯॥ ಜನ ಸ್ಥಾನವಧಂ ಶ್ರುತ್ವಾ ಹತೌಚ ಖರದೂಷಣೌ । ತತಸ್ತ್ವಮರ್ಷಾಪಹೃತಾ ಜಾನಕೀ ರಾವಣೇನತು । ವಂಚಯಿತ್ವಾ ವನೇ ರಾಮಂ ಮೃಗರೂಪೇಣ ಮಾಯಯಾ ॥೧೦॥ ಸಮಾರ್ಗಮಾಣಸ್ತಾಂ ದೇವೀಂ ರಾಮಸ್ಸೀತಾ ಮನಿಂದಿತಾಂ । ಆಸಸಾದ ವನೇ ಮಿತ್ರಂ ಸುಗ್ರೀವಂ ನಾಮ ವಾನರಂ ॥೧೧॥ ಸುಗ್ರೀವೇಣ ಪ್ರತಿಜ್ಞಾತಂ ಸೀತಾಯಾಃ ಪರಿಮಾರ್ಗಣಂ । ಸುಗ್ರೀವಸ್ಯಾಪಿ ರಾಮೇಣ ಹರಿರಾಜ್ಯಂ ನಿವೇದಿತಂ ॥೧೨॥

ಬೇಟೆಗಾಗಿ, ಪರಿಧಾವತಾ - ಓಡಾಡುವ, ತೇನ - ಆ ಶ್ರೀರಾಮನಿಂದ, ಕಾಮರೂಪಿಣಃ - ಸ್ವೇಚ್ಛಾ ರೂಪಿಗಳಾದ, ಶೂರಾಃ - ಪರಾಕ್ರಮಿಗಳಾದ, ಬಹವಃರಾಕ್ಷಸಾಃ - ಖರನೇ ಮೊದಲಾದ ಅನೇಕ ಮಂದಿ ರಕ್ಕಸರು, ನಿಹತಾಃ - ಕೊಲ್ಲಲ್ಪಟ್ಟರು. ॥೯॥ ಜನ....ಧಂ - ಗಡಿನಾಡಿನಲ್ಲಿರುವ ರಾಕ್ಷಸರ ಸಂಹಾರವನ್ನೂ, ಹತೌ-ಮೃತಿಗೊಂಡ, ಖರದೂಷಣೌಚ-ಖರದೂಷಣರ ವಿಷಯವನ್ನೂ ಸಹ, ಶ್ರುತ್ವಾ-ಕೇಳಿ, ವನೇ - ಕಾಡಿನಲ್ಲಿ, ಮೃಗರೂಪೇಣ - ಮೃಗರೂಪದಿಂದ, (ಗೋ) ಉತ್ತಮ ಮೃಗದ, ಮಾಯಯಾ - ಮಾಯೆಯಿಂದ, ರಾಮಂ - ಶ್ರೀರಾಮನನ್ನು, ವಂಚಯಿತ್ವಾ - ಮೋಸಗೊಳಿಸಿ, ತತಸ್ತು - ಆ ಬಳಿಕ, (ಗೋ) ಅದೇ ಅರಣ್ಯದಲ್ಲಿಯೇ, ರಾವಣೇನತು - ರಾವಣನಿಂದಲೇ, ಜಾನಕೀ - ಸೀತಾದೇವಿಯು, ಅಮ....ತಾ - ಕೋಪದಿಂದ ಅಪಹರಿಸಲ್ಪಟ್ಟಳು. ॥೧೦॥ ಸರಾಮಃ - ಆ ಶ್ರೀರಾಮನು, ಅನಿಂದಿತಾಂ - ಪೂಜ್ಯಳಾದ, ತಾಂಸೀತಾಂದೇವೀಂ - ಆ ಸೀತಾದೇವಿಯನ್ನು, ಮಾರ್ಗಮಾಣಃ - ಹುಡುಕುತ್ತಿರುವನಾಗಿ, ವನೇ - ಅರಣ್ಯದಲ್ಲಿ, ಮಿತ್ರಂ - ಸ್ನೇಹಿತನಾದ, ಸುಗ್ರೀವಂ ನಾಮ - ಸುಗ್ರೀವನೆಂದು ಪ್ರಸಿದ್ಧನಾದ, ವಾನರಂ - ಕಪಿಯನ್ನು, ಆಸಸಾದ - ಹೊಂದಿದನು. ॥೧೧॥ ತತಃ - ಆನಂತರ, ಪರ....ಯಃ - ಶತ್ರುದೇಶಗಳನ್ನು ಜಯಿಸುವ, ಮಹಾಬಲಃ - ಮಹಾ ಪರಾಕ್ರಮಿಯಾದ, ರಾಮಃ-ಶ್ರೀರಾಮನು, ವಾಲಿನಂ - ಕಿಷ್ಕಿಂಧಾಧಿಪನಾದ ವಾಲಿಯನ್ನು, ಹತ್ವಾ-ಸಂಹರಿಸಿ, ತತ್ಕಪಿರಾಜ್ಯಂ - ಆ ವಾನರ ರಾಜ್ಯವನ್ನು, ಸುಗ್ರೀವಾಯ-ಸುಗ್ರೀವನಿಗೆ, ಪ್ರಾಯಚ್ಛತ್ - ಕೊಟ್ಟನು.

ಮೃಗಯಾವಿಹಾರಕ್ಕಾಗಿ ತಿರುಗುತ್ತಿರಲು, ಮಹಾ ಶೂರರೂ, ಕಾಮರೂಪಿಗಳೂ ಆದ ಅನೇಕ ರಾಕ್ಷಸರು ಎದುರುಬೀಳಲು ಅವರೆಲ್ಲರನ್ನೂ ಬಿಡದೆ ಸಂಹರಿಸಿದನು. ಶ್ರೀರಾಮನು ಹೀಗೆ ಅನೇಕ ರಾಕ್ಷಸರನ್ನೂ, ಜನಸ್ಥಾನದಲ್ಲಿದ್ದ ಖರದೂಷಣಾದಿಗಳನ್ನೂ ಸಂಹರಿಸಿದನೆಂಬ ವೃತ್ತಾಂತವನ್ನು ಕೇಳಿ ಲಂಕಾಧಿಪತಿಯಾದ ರಾವಣಾಸುರನು ಮಹಾ ಕೋಪೋದ್ದೀಪಿತ ನಾಗಿ, ತನ್ನ ಮಾಯೆಯಿಂದ ಮೃಗರೂಪವನ್ನು ತಾಳಿದ್ದ ಮಾರೀಚನ ಸಹಾಯದಿಂದ ಶ್ರೀರಾಮಮೂರ್ತಿಯನ್ನು ವಂಚಿಸಿ ಆತನ ಪ್ರಿಯಪತ್ನಿಯಾದ ಸೀತಾದೇವಿಯನ್ನು ಅಪಹರಿಸಿ ಕೊಂಡು ಹೋದನು. ॥೬–೧೦॥ ಆ ಬಳಿಕ ಶ್ರೀರಾಮನು ಮಹಾ ಪತಿವ್ರತೆಯಾದ ತನ್ನ ಪ್ರಿಯಭಾರ್ಯೆಯನ್ನು ಹುಡುಕುತ್ತ ಸುಗ್ರೀವನೆಂಬ ಕಪಿರಾಜನೊಡನೆ ಸ್ನೇಹಮಾಡಿಕೊಂಡನು. ಶತ್ರುಪುರಂಜಯನೂ, ಮಹಾ ಬಲಶಾಲಿಯೂ ಆದ ಆತನು ಹೀಗೆ ಸುಗ್ರೀವನೊಡನೆ ಸ್ನೇಹ ವನ್ನು ಬೆಳಸಿಕೊಂಡು ಆ ಸುಗ್ರೀವನ ಅಣ್ಣನಾದ ವಾಲಿಯೆಂಬ ದುಷ್ಟವಾನರನನ್ನು ಸಂಹ ರಿಸಿ ಆ ಸುಗ್ರೀವನಿಗೆ ವಾನರರಾಜ್ಯಾಭಿಷೇಕವನ್ನು ಮಾಡಿದನು. ಆ ಮೇಲೆ ಕಾಮರೂಪಿ ಗಳಾದ ವಾನರರೆಲ್ಲರೂ ಆತನ ಆಜ್ಞೆಯಿಂದ ಗುಂಪುಗುಂಪಾಗಿ ಹೊರಟು ದಶದಿಶೆ

ತತಸ್ಸವಾಲಿನಂ ಹತ್ವಾ ರಾಮಃ ಪರಪುರಂಜಯಃ । ಪ್ರಾಯಚ್ಛತ್ಕಪಿರಾಜ್ಯಂ ತತ್ಸುಗ್ರೀವಾಯ ಮಹಾಬಲಃ ॥ ೧೩ ॥ ಸುಗ್ರೀವೇಣಾಪಿ ಸಂದಿಷ್ಟಾ ಹರಯಃ ಕಾಮರೂಪಿಣಃ । ದಿಕ್ಷು ಸರ್ವಾಸು ತಾಂ ದೇವೀಂ ವಿಚಿನ್ವಂತಿ ಸಹಸ್ರಶಃ ॥ ೧೪ ॥ ಅಹಂ ಸಂಪಾತಿವಚನಾ ಚ್ಛತಯೋಜನಮಾಯತಮ್ । ಅಸ್ಯಾ ಹೇತೋರ್ವಿಶಾಲಾಕ್ಷ್ಯಾ ಸ್ಸಾಗರಂ ವೇಗವಾನ್ ಪ್ಲುತಃ ॥ ೧೫ ॥ ಯಥಾ ರೂಪಾಂ ಯಥಾ ವರ್ಣಾಂ ಯಥಾ ಲಕ್ಷ್ಮೀಂಚ ನಿಶ್ಚಿತಾಂ। ಅಶ್ರೌಷಂ ರಾಘವಸ್ಯಾಽಹಂ ಸೇಯಮಾಸಾದಿತಾ ಮಯಾ'' ॥ ೧೬ ॥ ವಿರರಾಮೈವಮುಕ್ತ್ವಾಽಸೌ ವಾಚಂ ವಾನರಪುಂಗವಃ । ಜಾನಕೀಚಾಪಿ

॥ ೧೩ ॥ ಸುಗ್ರೀವೇಣ - ಸುಗ್ರೀವನಿಂದ, ಸಂದಿಷ್ಟಾಃ - ಪ್ರೇರಿತರಾದ, ಕಾಮರೂಪಿಣಃ - ಸ್ವೇಚ್ಛಾರೂಪಿಗಳಾದ, ಸಹಸ್ರಶಃ - ಅನೇಕರಾದ, ಹರಯಃ - ಕಪಿಗಳು, ಸರ್ವಾಸುದಿಕ್ಷು - ಸಮಸ್ತ ದಿಕ್ಕುಗಳಲ್ಲಿಯೂ, ತಾಂದೇವೀಂ - ಆ ಸೀತಾದೇವಿಯನ್ನು, ವಿಚಿನ್ವಂತಿ - ಹುಡುಕುತ್ತಾರೆ. ॥ ೧೪ ॥ ಅಹಂ - ನಾನು, ಸಂಪಾ....ತ್ - ಸಂಪಾತಿಯ ಮಾತಿನಿಂದ, ಅಸ್ಯಾಹೇತೋಃ - ಈ ಸೀತೆಯ ನಿಮಿತ್ತವಾಗಿ, ಶತಯೋಜನಂ - ನೂರು ಗಾವುದಗಳು, ಆಯತಂ - ದೀರ್ಘವಾದ, ಸಾಗರಂ - ಸಮುದ್ರವನ್ನು, ವೇಗವಾನ್ - ವೇಗವುಳ್ಳವನಾಗಿ, ಪ್ಲುತಃ - ಹಾರಿದೆನು. ॥ ೧೫ ॥ ಅಹಂ - ನಾನು, ಯಾಂ - ಯಾವ ಸೀತಾದೇವಿಯನ್ನು, ಯಥಾರೂಪಾಂ - ಎಂತಹ ಶರೀರವುಳ್ಳವಳನ್ನಾಗಿಯೂ, ಯಥಾವರ್ಣಾಂ - ಎಂತಹ ಬಣ್ಣವುಳ್ಳವಳನ್ನಾಗಿಯೂ, ಯಥಾಲಕ್ಷ್ಮೀಂ - ಎಂತಹ ಕಾಂತಿಯುಳ್ಳವಳನ್ನಾಗಿಯೂ, ನಿಶ್ಚಿತಾಂ - ಯಥಾರ್ಥವಾಗಿ, ರಾಘವಸ್ಯ - ಶ್ರೀರಾಮನಿಂದ, ಅಶ್ರೌಷಂ - ಕೇಳಿದೆನೋ, ಸೇಯಂ - ಅಂತಹ ಈ ಸೀತಾದೇವಿಯು, ಮಯಾ - ನನ್ನಿಂದ, ಆಸಾದಿತಾ - ಹೊಂದಲ್ಪಟ್ಟಳು. ॥ ೧೬ ॥ ಅಸೌವಾನರಪುಂಗವಃ ಈ ಕಪಿವರನು, ವಾಚಂ-ಮಾತನ್ನು, ಏವಮುಕ್ತ್ವಾ-ಹೀಗೆ ಹೇಳಿ, ವಿರರಾಮ - ಸುಮ್ಮನಾದನು, ಜಾನಕೀಚಾಪಿ - ಸೀತಾದೇವಿಯೂ ಕೂಡ, ತಚ್ಛ್ರುತ್ವಾ - ಆ ವಚನವನ್ನು ಕೇಳಿ, ಪರಮಂವಿಸ್ಮಯಂ - ಮಹಾ ಸಂತೋಷವನ್ನು, ಗತಾ - ಹೊಂದಿದಳು. ॥ ೧೭ ॥ ತತಃ - ಅನಂತರ, ವಕ್ರಕೇಶಾಂತಾ - ಕುಟಿಲವಾದ ಕೊನೆಗೂದಲುಗಳುಳ್ಳ, ಸುಕೇಶೀ - ಕಪ್ಪಾಗಿಯೂ, ಸೂಕ್ಷ್ಮವಾಗಿಯೂ ಇರುವ ಕೇಶಗಳುಳ್ಳ, ಭೀರುಃ - ಭಯಶೀಲಳಾದ, ಸಾ - ಆ ಸೀತಾದೇವಿಯು, ಕೇಶಸಂವೃತಂ - ಕೂದಲುಗಳಿಂದ ವ್ಯಾಪ್ತವಾದ, ವದನಂ - ಮುಖವನ್ನು, ಉನ್ನಮ್ಯ - ಮೇಲಕ್ಕೆತ್ತಿ,

---

ಗಳಲ್ಲಿಯೂ ಶ್ರೀರಾಮಪತ್ನಿಯಾದ ಸೀತಾದೇವಿಯನ್ನು ಹುಡುಕುತ್ತಿರುವರು. ನಾನು ಗೃಧ್ರರಾಜನಾದ ಸಂಪಾತಿಯ ಮಾತಿನಮೇಲೆ ಅದೇ ಸೀತಾದೇವಿಯನ್ನು ಹುಡಿಕಿಕೊಂಡೇ, ಶತಯೋಜನ ವಿಸ್ತೀರ್ಣವಾದ ಮಹಾ ಸಮುದ್ರವನ್ನು ದಾಟಿದೆನು. ಶ್ರೀರಾಮಚಂದ್ರನಿಂದ ಸೀತಾದೇವಿಯ ರೂಪಕಾಂತಿಗಳನ್ನು ಕೇಳಿದ್ದನು. ಅದೇ ರೂಪಕಾಂತಿಗಳಿಂದ ಕೂಡಿದ ಸ್ತ್ರೀಯನ್ನು ನಾನಿಲ್ಲಿ ಕಂಡೆನು. ಅದೇ ಸೀತೆಯನ್ನೇ ಇಲ್ಲಿ ಕಂಡಂತಾಯಿತು.'' ॥ ೧೧–೧೬ ॥ ವಾಕ್ಚತುರನಾದ ಹನುಮಂತನು ಇಷ್ಟು ಮಾತ್ರ ಹೇಳಿ ಸುಮ್ಮನಾದನು. ಈ ರೀತಿ ಆತನಾಡಿದ ಮಾತುಗಳು ಸೀತಾದೇವಿಯ ಕಿವಿಗಳಿಗೆ ಬಿದ್ದವು. ಅವುಗಳನ್ನು ಕೇಳಿದೊಡನೆಯೇ ಆಕೆಗೆ ಪರಮಾಶ್ಚರ್ಯವಾಯಿತು. ಆಗ ಡೊಂಕುಡೊಂಕಾದ ಮುಂಗುರುಳುಗಳುಳ್ಳವಳೂ, ಸುಂದರವಾದ ಕೇಶರಾಶಿಯುಳ್ಳವಳೂ, ಭೀರುವೂ ಆದ ಆ ಸೀತಾದೇವಿಯು ಭಯಗೊಂಡು ಉರಲುಹಾಕಿಕೊಳ್ಳಲು ಸುತ್ತಿಕೊಂಡಿದ್ದ ತಲೆಗೂದಲಿನಿಂದ

ತಚ್ಛ್ರುತ್ವಾ ವಿಸ್ಮಯಂ ಪರಮಂ ಗತಾ ॥ ೧೭ ॥ ತತಸ್ಸಾ ವಕ್ರಕೇಶಾಂತಾ ಸುಕೇಶೀ ಕೇಶಸಂವೃತಂ । ಉನ್ನಮ್ಯ ವದನಂ ಭೀರು ಶ್ಶಿಂಶುಪಾವೃಕ್ಷಮೈಕ್ಷತ ॥ ೧೮ ॥

¶ ನಿಶಮ್ಯ ಸೀತಾ ವಚನಂ ಕಪೇಶ್ಚ
ದಿಶಶ್ಚ ಸರ್ವಾಃ ಪ್ರದಿಶಶ್ಚ ವೀಕ್ಷ್ಯ ।
ಸ್ವಯಂ ಪ್ರಹರ್ಷಂ ಪರಮಂ ಜಗಾಮ
ಸರ್ವಾತ್ಮನಾ ರಾಮಮನುಸ್ಮರಂತೀ ॥ ೧೯ ॥

ಶಿಂಶುಪಾವೃಕ್ಷಂ - ಅಶೋಕವೃಕ್ಷವನ್ನು, ಐಕ್ಷತ - ನೋಡಿದಳು. ॥೧೮॥ ಸೀತಾ - ಸೀತಾದೇವಿಯು, ಕಪೇಃ - ವಾನರನ, ವಚನಂ - ಮಾತನ್ನು, ನಿಶಮ್ಯಚ - ಕೇಳಿಯೂ ಕೂಡ, ಸರ್ವಾದಿಶಶ್ಚ - ಸಮಸ್ತ ದಿಕ್ಕುಗಳನ್ನೂ, ಪ್ರದಿಶಶ್ಚ - ವಿದಿಕ್ಕುಗಳನ್ನೂ ಸಹ, ವೀಕ್ಷ್ಯ - ಕಂಡು, ಸರ್ವಾತ್ಮನಾ - ಸರ್ವ ಪ್ರಕಾರವಾಗಿಯೂ, ರಾಮಂ - ಶ್ರೀರಾಮನನ್ನು, ಅನುಸ್ಮರಂತೀ - ಧ್ಯಾನಿಸುತ್ತ, ಸ್ವಯಂ - ತಾನು, ಪರಮಂಪ್ರಹರ್ಷಂ - ಸಂತೋಷವನ್ನು, ಜಗಾಮ - ಹೊಂದಿದಳು. ॥ ೧೯ ॥ ಸಾ - ಆ ಸೀತಾ ದೇವಿಯು, ತಿರ್ಯಕ್ - ಅಡ್ಡವಾಗಿಯೂ, ಊರ್ಧ್ವಂಚ - ಮೇಲೆಯೂ, ತಥಾ - ಹಾಗೆಯೇ, ಅಧಸ್ತಾದಪಿ - ಕೆಳಗೂ, ನಿರೀಕ್ಷಮಾಣಾ - ನೋಡುತ್ತಿರುವವಳಾಗಿ, ಅಚಿಂತ್ಯಬುದ್ಧಿಂ - ಚಿಂತಿಸಲ ಶಕ್ಯವಾದ ಬುದ್ಧಿಯುಳ್ಳ, ಪಿಂಗಾಧಿಪತೇಃ - ಸುಗ್ರೀವನಿಗೆ, ಅಮಾತ್ಯಂ - ಮಂತ್ರಿಯಾದ, ವಾತಾ

ಕೂಡಿದ್ದ ಕತ್ತನ್ನು ಮೇಲಕ್ಕೆತ್ತಿ ಅಲ್ಲಿ ಶಿಂಶುಪಾವೃಕ್ಷವನ್ನು ನೋಡಿದಳು. ಸಂತತವೂ ಶ್ರೀರಾಮನನ್ನೇ ಸ್ಮರಿಸುತ್ತಿದ್ದ ಆ ಜಾನಕಿಯು, ರಾಮನ ಗುಣವರ್ಣನೆಯನ್ನೇ ಮಾಡುತ್ತಿದ್ದ ಹನುಮಂತನ ಮಾತುಗಳನ್ನು ಕೇಳಿ ನಾಲ್ಕೂಕಡೆಗಳಲ್ಲಿ ದಿಕ್ಕುವಿದಿಕ್ಕುಗಳನ್ನೆಲ್ಲಾ ನೋಡುತ್ತ ತನ್ನಲ್ಲಿ ತಾನೇ ಸಂತೋಷಪಡುತ್ತಿದ್ದಳು. ಹೀಗೆ ಆಕೆಯು ಮೇಲಕ್ಕೂ, ಕೆಳಕ್ಕೂ, ಸುತ್ತಮುತ್ತಲೂ ಚೆನ್ನಾಗಿ ನೋಡಿ ಆ ಬಳಿಕ, ಮಹಾ ಬುದ್ಧಿಶಾಲಿಯಾಗಿ, ಆಗತಾನೆ ಉದಿ

¶ ಇಲ್ಲಿ ಸೀತಾದೇವಿಯು ಅಂಜನೇಯನನ್ನು ಪ್ರತ್ಯಕ್ಷವಾಗಿ ನೋಡುವುದಕ್ಕೆ ಮೊದಲೇ ಆತನು ಮಹಾತ್ಮನೆಂದು ತಿಳಿದಳೆಂಬುದಾಗಿ ಈ ಶ್ಲೋಕದಲ್ಲಿರುವ ವಿಶೇಷಣಗಳಿಂದ ಸೂಚಿತವಾಗುತ್ತದೆ. (ಅಚಿಂತ್ಯಬುದ್ಧಿಂ) ಯಾರಿಂದಲೂ ದುಷ್ಪ್ರವೇಶ್ಯವಾದ ಈ ಲಂಕಾನಗರವನ್ನು ಪ್ರವೇಶಿಸಿ ಮಹಾಪರಾಕ್ರಮಿಯಾದ ರಾವಣನ ಅಂತಃಪುರದ ಮಧ್ಯದಲ್ಲಿರುವ ಈ ಅಶೋಕವನವನ್ನೂ ಪ್ರವೇಶಿಸಿರುವುದರಿಂದ ಈತನು ಊಹಿಸಲಸದಳವಾದ ಬುದ್ಧಿಶಕ್ತಿಯುಳ್ಳವನು. ಇವನ ಕಂಠ ಸ್ವರವು ದೈನ್ಯದಿಂದ ಕೂಡಿದ್ದರಿಂದ ರಾಮದೂತನಾದ ವಾನರನೇ ಸರಿ. (ಅಮಾತ್ಯಂ) ಮಹಾ ವಾಕ್ಚತುರ ನಾದುದರಿಂದ ಇವನು ರಾಜಕಾರ್ಯದುರೀಣನಾದ ಮಂತ್ರಿಯೇ ಆಗಿರಬೇಕು. ಪ್ರಕೃತದಲ್ಲಿ ನನಗೆ ಪ್ರಾಣದಾನ ಮಾಡುತ್ತಿರುವುದರಿಂದ, ಸಮಸ್ತ ಜೀವಿಗಳಿಗೂ ಪ್ರಾಣಾಧಾರಕನಾದ ವಾಯುದೇವನ ಮಗನೇ ಇವನು. ನನ್ನ ಪತಿ ಯಾದ ಶ್ರೀರಾಮನ ಆಗಮನವನ್ನು ಸೂಚಿಸುತ್ತಿರುವುದರಿಂದ, ರಾಮನೆಂಬ ಸೂರ್ಯೋದಯಕ್ಕೆ ಈತನು ಅರುಣೋ ದಯವಂತಿರುವನು. (ಗೋ+ತ)

ಸಾತಿರ್ಯಗೂರ್ಧ್ವಂಚ ತಥಾಪ್ಯಧಸ್ತಾ
ನ್ನಿರೀಕ್ಷಮಾಣಾ ತಮಚಿಂತ್ಯಬುದ್ಧಿಂ ।
ದದರ್ಶ ಪಿಂಗಾಧಿಪತೇರಮಾತ್ಯಂ
ವಾತಾತ್ಮಜಂ ಸೂರ್ಯಮಿವೋದಯಸ್ಥಂ ॥ ೨೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕತ್ರಿಂಶಸ್ಸರ್ಗಃ

ತ್ಮಜಂ - ವಾಯುಪುತ್ರನಾದ, ಉದಯಸ್ಥಂ - ಉದಯಪರ್ವತದಲ್ಲಿರುವ, ಸೂರ್ಯಮಿವಸ್ಥಿತಂ - ಸೂರ್ಯನಂತಿರುವ, ತಂ - ಆ ಆಂಜನೇಯನನ್ನು, ದದರ್ಶ - ಕಂಡಳು. ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕತ್ರಿಂಶಸ್ಸರ್ಗಃ

ಸಿದ ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳವನೂ, ಸುಗ್ರೀವರಾಜನ ಮಂತ್ರಿಯೂ ವಾಯುಪುತ್ರನೂ ಆದ ಹನುಮಂತನನ್ನು ಕಂಡಳು. ॥ ೧೬–೧೯ ॥

ಇಂತಿದು ಹನುಮತ್ಕಥಿತ ಶ್ರೀರಾಮ ಗುಣವರ್ಣನ ಶ್ರವಣಜನಿತ ಸೀತಾಸಂತೋಷ–
ಸೀತಾಕೃತ ಹನುಮತ್ಸಂದರ್ಶನ ವೃತ್ತಾಂತವೆಂಬ ಮೂವತ್ತೊಂದನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ದ್ವಾತ್ರಿಂಶಸ್ಸರ್ಗಃ

ತತ ಶ್ಶಾಖಾಂತರೇ ಲೀನಂ ದೃಷ್ಟ್ವಾ ಚಲಿತಮಾನಸಾ । ವೇಷ್ಟಿತಾರ್ಜುನ ವಸ್ತ್ರಂತಂ ವಿದ್ಯುತ್ಸಂಘಾತಪಿಂಗಳಂ ॥೧॥ ಸಾ ದದರ್ಶ ಕಪಿಂ ತತ್ರ ಪ್ರಶ್ರಿತಂ ಪ್ರಿಯವಾದಿನಂ । ಫುಲ್ಲಾಶೋಕೋತ್ಕರಾಭಾಸಂ ತಪ್ತಚಾಮೀಕರೇಕ್ಷಣಂ ॥೨॥ ಮೈಥಿಲೀ ಚಿಂತಯಾಮಾಸ ವಿಸ್ಮಯಂ ಪರಮಂ ಗತಾ । "ಅಹೋ! ಭೀಮಮಿದಂ ರೂಪಂ ವಾನರಸ್ಯ ದುರಾಸದಂ। ದುರ್ನಿರೀಕ್ಷ್ಯ" ಮಿತಿ ಜ್ಞಾತ್ವಾ ಪುನರೇವ ಮುಮೋಹ ಸಾ ॥೩॥ ವಿಲಲಾಪ ಭೃಶಂ ಸೀತಾ ಕರುಣಂ ಭಯಮೋಹಿತಾ । "ರಾಮ!

ತತಃ - ಬಳಿಕ, ಶಾಖಾಂತರೇ - ಕೊಂಬೆಗಳ ನಡುವೆ, ಲೀನಂ - ಅವಿತುಕೊಂಡಿರುವ, ವೇಷ್ಟಿ....ಸ್ತ್ರಂ - ಹೊದ್ದಿರುವ ಬಿಳೀ ವಸ್ತ್ರವುಳ್ಳ, ವಿದ್ಯು....ಳಂ - ಮಿಂಚುಗಳ ಸಮೂಹದಂತೆ ಹಚ್ಚಗಿರುವ, ತಂ - ಆ ಆಂಜನೇಯನನ್ನು, ದೃಷ್ಟ್ವಾ - ಕಂಡು, ಚಲಿತಮಾನಸಾ - ಚಪಲಚಿತ್ತಳು, (ಅಭೂತ್-ಆದಳು) ॥೧॥ ಸಾ-ಆ ಸೀತಾದೇವಿಯು, ತತ್ರ-ಆ ಶಾಖಾಗ್ರದಲ್ಲಿ, ಪ್ರಶ್ರಿತಂ-ವಿನಯಸಂಪನ್ನನಾಗಿ, ಪ್ರಿಯವಾದಿನಂ-ಒಳ್ಳೆಯ ಮಾತುಗಳನ್ನು ನುಡಿಯುತ್ತಿರುವ, ಫುಲ್ಲಾ....ಸಂ - ಅರಳಿದ ಅಶೋಕ ಪುಷ್ಪಗಳ ಸಮೂಹದಂತೆ ಹೊಳೆಯುತ್ತಿರುವ, ತಪ್ತ....ಣಂ - ಅಪರಂಜಿಯ ಬಣ್ಣದ ನೇತ್ರಗಳುಳ್ಳ, ತಂ - ಆ ವಾನರನನ್ನು, ದದರ್ಶ - ಕಂಡಳು. ॥೨॥ ಮೈಥಿಲೀ - ಸೀತಾದೇವಿಯು, ಪರಂವಿಸ್ಮಯಂ - ಅತ್ಯಾಶ್ಚರ್ಯವನ್ನು, ಗತಾ - ಹೊಂದಿ, ಚಿಂತಯಾಮಾಸ - ಆಲೋಚಿಸಿದಳು, ಸಾ - ಆ ಸೀತಾದೇವಿಯು, ಭೀಮಂ - ಭಯಂಕರವಾದ, ದುರಾಸದಂ - ಅಸಾಧ್ಯವಾದ, ವಾನರಸ್ಯ - ಕಪಿಯ, ಇದಂರೂಪಂ - ಈ ಆಕಾರವು, ದುರ್ನಿರೀಕ್ಷ್ಯಂ - ನೋಡಲಶಕ್ಯವು, ಅಹೋ - ಆಶ್ಚರ್ಯವು, ಇತಿ - ಇಂತೆಂದು, ಜ್ಞಾತ್ವಾ - ತಿಳಿದು, ಪುನರೇವ - ಮತ್ತು, ಮುಮೋಹ - ಭ್ರಾಂತಿಗೊಂಡಳು. ॥೩॥ ಭಯಮೋಹಿತಾ - ಭೀತಿಯಿಂದ ಪ್ರಜ್ಞೆ ತಪ್ಪಿದ, ಭಾಮಿನೀ - ಸ್ತ್ರೀಯಾದ, ಸೀತಾ - ಸೀತಾ

ಆ ಬಳಿಕ ರೆಂಬೆಗಳ ಮರೆಯಲ್ಲಿ ಅವಿತುಕೊಂಡು, ಶುಭ್ರವಾದ ವಸ್ತ್ರಗಳನ್ನು ಧರಿಸಿ ಮಿಂಚಿನ ಬಳ್ಳಿಗಳ ಸಮೂಹದ ಕಾಂತಿಗೆ ಸಮಾನವಾದ ಪಿಂಗಳಕಾಂತಿಯುಳ್ಳವನಾದ ಆ ಆಂಜನೇಯನ್ನು ನೋಡಿದೊಡನೆಯೇ ಸೀತಾದೇವಿಯು ಭಯದಿಂದ ನಡುಗಿಹೋದಳು. ಆಕೆಯು ಹೀಗೆ ಭಯಗೊಂಡಿದ್ದರೂ ಆ ಕೊಂಬೆಯಮೇಲೆ ಕುಳಿತಿದ್ದ ಆತನನ್ನು ದೃಷ್ಟಿಸಿ ನೋಡುತ್ತಲೇ ಇದ್ದಳು. ಆಗಲಾ ಹನುಮಂತನಾದರೋ ಸಂತೋಷಕರವಾದ ಮಾತುಗಳನ್ನು ವಿನಯಪೂರ್ವಕವಾಗಿ ಆಡುತ್ತಲೇ ಇದ್ದನು. ಆತನ ಕಾಂತಿಯಾದರೋ ಚೆನ್ನಾಗಿ ಅರಳಿರುವ ಅಶೋಕಪುಷ್ಪಗಳ ಕಾಂತಿಗೆ ಸಮಾನವಾಗಿದ್ದಿತು. ಪುಟಪಾಕಶೋಧಿತವಾದ ಸುವರ್ಣಕಾಂತಿಯನ್ನು ಹೋಲಿದ್ದ ಆತನ ಕಣ್ಣುಗಳು ಬಲುಸೊಗಸಾಗಿದ್ದವು. ಹೀಗೆ ವಿನೀತಭಾವದಿಂದ ಕುಳಿತಿರುವ ಆ ಮಾರುತಿಯನ್ನು ನೋಡಿ ಸೀತಾದೇವಿಯು ಭಯದಿಂದಲೂ, ಆಶ್ಚರ್ಯದಿಂದಲೂ ತತ್ತರಿಸಿಹೋಗಿ ತನ್ನಲ್ಲಿ ತಾನು ಹೀಗೆಂದುಕೊಂಡಳು. "ಅಕಟಕಟಾ! ನಾನೀಗ ಕಾಣುತ್ತಿರುವ ಈ ವಾನರನ ರೂಪವು ಮಹಾ ಭಯಂಕರವಾ

ರಾಮೇತಿ" ದುಃಖಾರ್ತಾ "ಲಕ್ಷ್ಮಣೇ" ತಿಚ ಭಾಮಿನೀ ||೪|| ರುರೋದ ಬಹುಧಾ ಸೀತಾ ಮಂದಂ ಮಂದಸ್ವರಾ ಸತೀ || ೫ || ಸಾ ತಂ ದೃಷ್ಟ್ವಾ ಹರಿಶ್ರೇಷ್ಠಂ ವಿನೀತ ವದುಪಸ್ಥಿತಂ । ಮೈಥಿಲೀ ಚಿಂತಯಾಮಾಸ ಸ್ವಪ್ನೋಽಯಮಿತಿ ಭಾಮಿನೀ || ೬ || ಸಾ ವೀಕ್ಷಮಾಣಾ ಪೃಥುಭುಗ್ನವಕ್ತ್ರಂ ಶಾಖಾಮೃಗೇಂದ್ರಸ್ಯ ಯಥೋಕ್ತಕಾರಂ । ದದರ್ಶ ಪಿಂಗಾಧಿಪತೇರಮಾತ್ಯಂ ವಾತಾತ್ಮಜಂ ಬುದ್ಧಿಮತಾಂ ವರಿಷ್ಠಂ || ೭ || ಸಾ ತಂ ಸಮೀಕ್ಷ್ಯೈವ ಭೃಶಂ ವಿಸಂಜ್ಞಾ ಗತಾಸುಕಲ್ಪೇವ ಬಭೂವ ಸೀತಾ । "ಚಿರೇಣ

ದೇವಿಯು, ರಾಮರಾಮೇತಿ-ರಾಮ ರಾಮ ಎಂದೂ, ಲಕ್ಷ್ಮಣೇತಿಚ-ಲಕ್ಷ್ಮಣನೆಂದೂ, ದುಃಖಾರ್ತಾ - ದುಃಖಿತಳಾಗಿ, ಕರುಣಂ - ದೈನ್ಯವಾಗಿ, ಭೃಶಂ - ಬಹಳವಾಗಿ, ವಿಲಲಾಪ - ರೋದಿಸಿದಳು. || ೪ || ಮಂದಸ್ವರಾ - ದೀನಧ್ವನಿಯುಳ್ಳ, ಸತೀ - ಪತಿವ್ರತೆಯಾದ, ಸೀತಾ - ಸೀತಾದೇವಿಯು, ಮಂದಂ - ಮೆಲ್ಲನೆ, ಬಹುಧಾ - ಅನೇಕ ಪ್ರಕಾರವಾಗಿ, ರುರೋದ - ವಿಲಪಿಸಿದಳು. || ೫ || ಮೈಥಿಲೀ - ಜನಕ ರಾಜನ ಮಗಳಾದ, ಸಾಭಾಮಿನೀ - ಆ ಸೀತಾದೇವಿಯು, ವಿನೀತವತ್ - ನಮ್ರಳಾಗಿ, ಉಪಸ್ಥಿತಂ - ಬಳಿಗೆ ಬಂದಿರುವ, ತಂಹರಿಶ್ರೇಷ್ಠಂ - ಆ ಕಪಿಶ್ರೇಷ್ಠನನ್ನು, ದೃಷ್ಟ್ವಾ - ಕಂಡು, ಅಯಂ - ಇದು, ಸ್ವಪ್ನಇತಿ - ಕನಸೆಂದು, ಚಿಂತಯಾಮಾಸ - ಯೋಚಿಸಿದಳು. || ೬ || ಸಾ - ಆ ಸೀತಾದೇವಿಯು, ಪರಿತಃ - ಎಲ್ಲೆಡೆಯಲ್ಲಿಯೂ, ವೀಕ್ಷಮಾಣಾ - ನೋಡುತ್ತಿರುವಳಾಗಿ, ಪೃಥು....ಕ್ತ್ರಂ - ವಿಸ್ತಾರ ವಾಗಿ ಬೊಗ್ಗಿರುವ ಮುಖವುಳ್ಳ, ಶಾಖಾ....ಸ್ಯ - ಸುಗ್ರೀವನ, ಯಥೋಕ್ತಕಾರಂ-ಹೇಳಿದಂತೆ ಮಾಡು ತ್ತಿರುವ, ಪಿಂಗಾಧಿಪತೇಃ - ಕಪಿರಾಜನ, ಅಮಾತ್ಯಂ - ಮಂತ್ರಿಯಾದ, ಬುದ್ಧಿಮತಾಂ - ಜ್ಞಾನಿಗಳಲ್ಲಿ, ವರಿಷ್ಠಂ - ಶ್ರೇಷ್ಠನಾದ, ವಾತಾತ್ಮಜಂ - ವಾಯುಪುತ್ರನನ್ನು, ದದರ್ಶ - ಕಂಡನು. || ೭ || ವಿಶಾಲ ನೇತ್ರಾ - ವಿಶಾಲಾಕ್ಷಿಯಾದ, ಸಾಸೀತಾ - ಆ ಸೀತಾದೇವಿಯು, ತಂ - ಆ ವಾನರನನ್ನು, ಸಮೀ ಕ್ಷ್ಯೈವ - ಕಾಣುತ್ತಲೇ, ಗತಾಸುಕಲ್ಪೇವ - ಮೃತಿಪಟ್ಟವಳಂತೆ, ಭೃಶಂ - ಬಹಳ, ವಿಸಂಜ್ಞಾ -

---

ದುದು. ಮಹತ್ತರವಾದ ವ್ಯಸನವುಂಟಾಗುವುದಕ್ಕೆ ಇದು ಸೂಚಕವಾದುದು. ಆದುದ ರಿಂದ ನಾನಿದನ್ನು ನೋಡಬಾರದು. ಇದನ್ನು ನೋಡುವವರಿಗೆ ಮಹಾ ವ್ಯಸನವೇ ಸಂಭವಿಸು ವುದು. ಅಯ್ಯೋ! ನಾನೇನುಮಾಡಲಿ!" ಹೀಗೆಂದುಕೊಂಡ ಆಕೆಯು ಅನೇಕ ವಿಧವಾಗಿ ಚಿಂತಿಸಿ, ಒಂದು ಕಡೆ ವಾನರದರ್ಶನಜನಿತ ಭಯದಿಂದಲೂ, ಒಂದು ಕಡೆ ರಾಕ್ಷಸಿಯ ಭಯದಿಂದಲೂ ಘಟ್ಟಿಯಾಗಿಯೂ ರೋಧಿಸಲಾರದೆ ದೀನಸ್ವರದಲ್ಲಿಯೇ, "ಹಾ! ರಾಮಾ! ಹಾ ಲಕ್ಷ್ಮಣಾ!" ಎಂದು ಬಗೆಬಗೆಯಾಗಿ ವಿಲಪಿಸುತ್ತಿದ್ದಳು. || ೧-೫ || ಹೀಗೆ ವಿಲ ಪಿಸುತ್ತಿದ್ದ ಆಕೆಯು ಬಹುವಿನಯದಿಂದ ತನ್ನ ಸಮೀಪದಲ್ಲಿಯೇ ಇರುವ ವಾನರ ಶ್ರೇಷ್ಠನಾದ ಮಾರುತಿಯನ್ನು ನೋಡಿ "ಇದು ಸ್ವಪ್ನವಾಗಿರಬಹುದೇ? ಇಗಿಲ್ಲದಿದ್ದರೆ ಈ ಪ್ರದೇಶದಲ್ಲಿಇಂತಹ ವಾರ್ತೆಯನ್ನು ಹೇಳುವರಾರು?" ಎಂದುಕೊಂಡಳು. ಆ ದೇವಿಯು ಪುನಃ ಆ ವೃಕ್ಷದ ಕಡೆಗೆ ನೋಡಿ, ಅಲ್ಲಿ ದೊಡ್ಡದಾಗಿಯೂ, ಡೊಂಕಾಗಿಯೂ ಇರುವ ನಗುಮುಖವುಳ್ಳವನಾಗಿ, ವಾನರೇಶ್ವರನಾದ ಸುಗ್ರೀವನ ಅಪ್ಪಣೆಯಂತೆ ನಡೆಯುವ ಮಂತ್ರಿಯೂ, ಬುದ್ಧಿವಂತರಲ್ಲಿ ಮಹಾ ಶ್ರೇಷ್ಠನೂ, ವಾಯುಪುತ್ರನೂ ಆದ ಆಂಜನೇಯನ್ನು ನೋಡಿ, ಪ್ರಾಣಗಳನ್ನು ತೊರೆದವಳಂತೆ ಬಲವಾಗಿ ಮೂರ್ಛೆಹೋದಳು. ವಿಶಾಲನೇತ್ರಿ

ಸಂಜ್ಞಾಂ ಪ್ರತಿಲಭ್ಯ ಭೂಯೋ ವಿಚಿಂತಯಾಮಾಸ ವಿಶಾಲನೇತ್ರಾ ॥ ೮ ॥
ಸ್ವಪ್ನೇ ಮಯಾಽಯಂ ವಿಕೃತೋಽದ್ಯ ದೃಷ್ಟಃ ಶಾಖಾಮೃಗಶ್ಶಾಸ್ತ್ರಗಣೈರ್ನಿಷಿದ್ಧಃ ।
ಸ್ವಸ್ತ್ಯಸ್ತು ರಾಮಾಯ ಸಲಕ್ಷ್ಮಣಾಯ ತಥಾ ಪಿತುರ್ಮೇ ಜನಕಸ್ಯ ರಾಜ್ಞಃ ॥ ೯ ॥
ಸ್ವಪ್ನೋಽಪಿ ನಾಽಯಂ ನಹಿ ಮೇಽಸ್ತಿ ನಿದ್ರಾ ಶೋಕೇನ ದುಃಖೇನ ಚ ಪೀಡಿತಾಯಾಃ ।
ಸುಖಂ ಹಿ ಮೇ ನಾಸ್ತಿ ಯತೋಽಸ್ಮಿ ಹೀನಾ ತೇನೇಂದುಪೂರ್ಣಪ್ರತಿಮಾನನೇನ ॥ ೧೦ ॥
ರಾಮೇತಿ ರಾಮೇತಿ ಸದೈವ ಬುದ್ಧ್ಯಾ ವಿಚಿಂತ್ಯ ವಾಚಾ ಬ್ರುವತೀ ತಮೇವ । ತಸ್ಯಾನು

ಪ್ರಜ್ಞೆ ತಪ್ಪಿದವಳಾಗಿ, ಚಿರೇಣ - ಬಹುಕಾಲದ ಮೇಲೆ, ಭೂಯಃ-ಮತ್ತು, ಸಂಜ್ಞಾಂ-ಪ್ರಜ್ಞೆಯನ್ನು, ಪ್ರತಿಲಭ್ಯ - ಹೊಂದಿ, ವಿಚಿಂತಯಾಮಾಸ - ಆಲೋಚಿಸಿದಳು. ॥ ೮ ॥ ಶಾಸ್ತ್ರಗಣೈಃ - ಶಾಸ್ತ್ರ ಸಮೂಹಗಳಿಂದ, ನಿಷಿದ್ಧಃ - ಕೂಡದೆಂದು ಹೇಳಲ್ಪಟ್ಟ, ವಿಕೃತಃ - ವಿಕಾರ ಮುಖವುಳ್ಳ, ಅಯಂ ಶಾಖಾಮೃಗಃ - ಈ ವಾನರನು, ಅದ್ಯ - ಈಗ, ಸ್ವಪ್ನೇ - ಸ್ವಪ್ನದಲ್ಲಿ, ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟನು, ಸಲಕ್ಷ್ಮಣಾಯ - ಲಕ್ಷ್ಮಣಸಹಿತನಾದ, ರಾಮಾಯ - ಶ್ರೀರಾಮನಿಗೆ, ಸ್ವಸ್ತಿ - ಶುಭವು, ಅಸ್ತು - ಆಗಲಿ, ತಥಾ - ಹಾಗೆ, ಮೇಪಿತುಃ - ನನ್ನ ತಂದೆಯಾದ, ಜನಕಸ್ಯರಾಜ್ಞಃ - ಜನಕರಾಯನಿಗೆ, ಸ್ವಸ್ತ್ಯಸ್ತು - ಕುಶಲವಾಗಲಿ. ॥ ೯ ॥ ಹಿ - ಯಾವ ಕಾರಣದಿಂದ, ದುಃಖೇನ - ಬಾಹ್ಯದುಃಖದಿಂದಲೂ, ಶೋಕೇನಚ - ಅಂತಸ್ತಾಪದಿಂದಲೂ, ಪೀಡಿತಾಯಾಃ - ಬಾಧಿತಳಾದ, ಮೇ - ನನಗೆ, ನಿದ್ರಾ - ನಿದ್ದೆಯು, ನಾಸ್ತಿ - ಇಲ್ಲವೋ, ತತಃ - ಆ ಕಾರಣದಿಂದ, ಅಯಂ - ಇದು, ಸ್ವಪ್ನೋಪಿ - ಸ್ವಪ್ನವೂ, ನ - ಅಲ್ಲ, ಯತಃ - ಯಾವ ಕಾರಣದಿಂದ, ಇಂದು....ನ - ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳ, ತೇನ - ಆ ಶ್ರೀರಾಮನಿಂದ, ಹೀನಾಸ್ಮಿ - ರಹಿತಳಾದೆನೋ, ತೇನ - ಆ ಕಾರಣದಿಂದ, ಮೇ - ನನಗೆ, ಸುಖಂ - ಸುಖವು, ನಾಸ್ತಿಹಿ - ಇಲ್ಲವಷ್ಟೆ. ॥ ೧೦ ॥ ಸದೈವ - ಯಾವಾಗಲೂ, ರಾಮೇತಿರಾಮೇತಿ - ಶ್ರೀರಾಮ ಶ್ರೀರಾಮ ಎಂದು, ಬುದ್ಧ್ಯಾ - ಜ್ಞಾನದಿಂದಲೂ,

ಯಾದ ಆ ಸೀತೆಯು ಬಹಳಕಾಲದಮೇಲೆ ಎಚ್ಚತ್ತುಕೊಂಡು ತನ್ನಲ್ಲಿ ತಾನು ಹೀಗೆ ಆಲೋಚಿಸಿಕೊಂಡಳು. "ಈಗ ನಾನು ಕಲೆಯಲ್ಲಿ ವಿಕೃತಾಕಾರವಾದ ಈ ವಾನರರೂಪವನ್ನು ಕಂಡೆನು. ಸ್ವಪ್ನದಲ್ಲಿ ವಾನರವನ್ನು ನೋಡಬಾರದೆಂದು ಶಾಸ್ತ್ರವು ಸಾರುತ್ತದೆ. ಆದುದರಿಂದ ನಮ್ಮ ಬಂಧುಗಳಿಗೆ ಯಾವ ಅನರ್ಥವು ಸಂಭವಿಸುವುದೋ ಏನೋ ! ನನ್ನ ಪ್ರಿಯವಲ್ಲಭನಾದ ಶ್ರೀರಾಮನಿಗೂ, ಆತನ ತಮ್ಮನಾದ ಲಕ್ಷ್ಮಣಸ್ವಾಮಿಗೂ ಮಂಗಳವಾಗಲಿ! ನನ್ನ ತಂದೆಯಾದ ಜನಕರಾಜನಿಗೆ ಶುಭವಾಗಲಿ ! ಅಯ್ಯೋ ! ಇದು ಸ್ವಪ್ನವಲ್ಲ ! ನಿದ್ರೆಬಂದರಲ್ಲವೇ ಸ್ವಪ್ನವನ್ನು ಕಾಣುವುದು ? ರಾಮವಿಯೋಗದಿಂದ ಸಂತತವೂ ಪರಿತಪಿಸುತ್ತಿರುವವಳೂ, ಮೇಲಾಗಿ ಈ ರಾಕ್ಷಸಿಯರ ನಡುವೆ ಸಿಕ್ಕಿಕೊಂಡು ಬಹಳವಾಗಿ ನರಳುತ್ತಿರುವವಳೂ ಆದ ನನಗೆ ನಿದ್ದೆಯೆಲ್ಲಿ ಬರಬೇಕು ? ಇದೂ ಅಲ್ಲದೆ ಯಾವ ಯೋಚನೆಯೂ ಇಲ್ಲದೆ ಸುಖವಾಗಿರುವವರಿಗೆ ಮಾತ್ರ ನಿದ್ದೆಯು ಬರುವುದು. ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳ ಶ್ರೀರಾಮನನ್ನಗಲಿರುವ ನನಗೆ ಸುಖವೆಲ್ಲಿಯದು ? ಇಂತಹ ನನಗೆ ನಿದ್ದೆಯೆಂದರೇನು ! ನಾನು ಎಚ್ಚರವಾಗಿಯೇ ಇರುವೆನಲ್ಲವೆ ? ॥ ೬–೧೦ ॥ ಇದೂ ಅಲ್ಲದೆ ನಾನು ನಿರಂತರವೂ, 'ರಾಮ ! ರಾಮ !' ಎಂದು ಮನೋವಾಕ್ಕಾಯಕರ್ಮಗಳಲ್ಲಿ ನನ್ನ ಪ್ರಿಯವಲ್ಲಭನಾದ ಶ್ರೀರಾಮನನ್ನೇ

ರೂಪಾಂಚ ಕಥಾಂ ತಮರ್ಥಮೇವಂ ಪ್ರಪಶ್ಯಾಮಿ ತಥಾ ಶೃಣೋಮಿ ॥ ೧೧ ॥ ಅಹಂಹಿ ತಸ್ಯಾಽದ್ಯ ಮನೋಭವೇನ ಸಂಪೀಡಿತಾ ತದ್ಗತಸರ್ವಭಾವಾ । ವಿಚಿಂತಯಂತೀ ಸತತಂ ತಮೇವ ತಥೈವ ಪಶ್ಯಾಮಿ ತಥಾ ಶೃಣೋಮಿ ॥ ೧೨ ॥ ಮನೋರಥಸ್ಸ್ಯಾದಿತಿ ಚಿಂತಯಾಮಿ ತಥಾಪಿ ಬುದ್ಧ್ಯಾಚ ವಿತರ್ಕಯಾಮಿ । ಕಿಂ ಕಾರಣಂ ತಸ್ಯ ಹಿ ನಾಸ್ತಿ ರೂಪಂ ಸುವ್ಯಕ್ತರೂಪಶ್ಚ ವದತ್ಯಯಂ ಮಾಂ ॥ ೧೩ ॥

ವಿಚಿಂತ್ಯ - ಧ್ಯಾನಮಾಡಿ, ತಮೇವ - ಆ ಶ್ರೀರಾಮನನ್ನೇ, ವಾಚಾ - ವಾಕ್ಕಿನಿಂದ, ಬ್ರುವತೀ - ಹೇಳುತ್ತಿರುವ ನಾನು, ತಸ್ಯ - ಆ ಹೇಳಿಕೆಗೆ, ಅನುರೂಪಾಂ - ಸದೃಶವಾದ, ಕಥಾಂ - ಚರಿತ್ರೆಯನ್ನು, ತಥಾ - ಹಾಗೆಯೇ, ಶೃಣೋಮಿ - ಕೇಳುತ್ತೇನೆ, ತಮರ್ಥಂ - ಆ ಕಥಾರ್ಥವನ್ನೇ, ಏವಂ - ಈ ಪ್ರಕಾರವಾಗಿ, ಪಶ್ಯಾಮಿ - ನೋಡುವೆನು. ॥ ೧೧ ॥ ಹಿ - ಯಾವಕಾರಣದಿಂದ, ಅಹಂ - ನಾನು, ಅದ್ಯ - ಈಗ, ತಸ್ಯ - ಆ ಶ್ರೀರಾಮನ ವಿಷಯವಾದ, ಮನೋಭವೇನ - ಕಾಮದಿಂದ, ಪೀಡಿತಾ - ಬಾಧಿತಳಾಗಿ, ತದ್ಗ....ವಾ-ಆ ರಾಮನನ್ನೇ ಹೊಂದಿದ ಸರ್ವಾಭಿಪ್ರಾಯವುಳ್ಳವಳಾದ ಕಾರಣ, ಸತತಂ-ಯಾವಾಗಲೂ, ತಮೇವ-ಆ ಶ್ರೀರಾಮನನ್ನೇ, ವಿಚಿಂತಯಂತೀ-ಧ್ಯಾನಿಸುತ್ತ, ತಥೈವ-ಹಾಗೆಯೇ, ಪಶ್ಯಾಮಿ - ನೋಡುತ್ತೇನೆ, ತಥಾ - ಹಾಗೆಯೇ, ಶೃಣೋಮಿ - ಕೇಳುತ್ತೇನೆ. ॥ ೧೨ ॥ ಮನೋರಥಃ-ಅಭಿಲಾಷೆಯು ಮಾತ್ರವು, ಸ್ಯಾತ್ - ಆದೀತು, ಇತಿ - ಇಂತೆಂದು, ಚಿಂತಯಾಮಿ - ಆಲೋಚಿಸುತ್ತೇನೆ, ತಥಾಪಿ - ಹಾಗೆಯೇ ಆಲೋಚಿಸಿದಾಗ್ಗೂ, ಬುದ್ಧ್ಯಾ - ಬುದ್ಧಿಯಿಂದ, ವಿತರ್ಕಯಾಮಿ - ಮನೋರಥವಾಗುವುದಿಲ್ಲವೆಂದು ಊಹಿಸುತ್ತೇನೆ, ಕಿಂಕಾರಣಮಿತಿಚೇತ್ - ಏನು ಕಾರಣವೆಂದರೆ, ತಸ್ಯ - ಆ ಅಭಿಲಾಷೆಗೆ, ರೂಪಂ - ಪ್ರಾಪ್ತಿಸಾಧಕವು, ನಾಸ್ತಿಹಿ - ಇಲ್ಲವಷ್ಟೆ, ಅಯಂಚ - ಈ ವಾನರನೂ, ಸುವ್ಯಕ್ತರೂಪಃ - ಪ್ರಕಟವಾದ ರೂಪವುಳ್ಳವನಾಗಿ, ಮಾಂ - ನನ್ನನ್ನು ಕುರಿತು, ವದತಿಚ - ಹೇಳಲೂ ಹೇಳುತ್ತಾನೆ. ॥ ೧೩ ॥ ಸವಜ್ರಿಣೇ - ಇಂದ್ರನಿಂದೊಡಗೂಡಿದ, ವಾಚಸ್ಪತಯೇ - ಬೃಹಸ್ಪತಿಗೂ, ಸ್ವಯಂಭುವೇಚ - ಬ್ರಹ್ಮನಿಗೂ, ಹುತಾಶನಾಯಚ - ಅಗ್ನಿಗೂ, ನಮಃ - ನಮಸ್ಕಾರವು,

---

ಸ್ಮರಿಸುತ್ತಿರುವೆನು. ಆದುದರಿಂದ ಅದಕ್ಕೆ ತಕ್ಕಂತೆ ಈಗ ನಾನು ಕಂಡುದು ಕೇಳಿದುದೆಲ್ಲವೂ ಶ್ರೀರಾಮ ವಿಷಯವಾಗಿಯೇ ತೋರುತ್ತಿರಬಹುದೆಂದೆಣಿಸುತ್ತೇನೆ. ಇದೂ ಅಲ್ಲದೆ ನಾನು ಶ್ರೀರಾಮನನ್ನಗಲಿದುದು ಮೊದಲುಗೊಂಡು ಮನ್ಮಥಪೀಡಿತಳಾಗಿ ನಿರಂತರವೂ ಆತನನ್ನೇ ಧ್ಯಾನಿಸುತ್ತ, ಆತನಲ್ಲಿಯೇ ಲೀನವಾದ ಮನಸ್ಸುಳ್ಳವಳಾಗಿರುವೆನು. ಆದುದರಿಂದ ನನ್ನ ದೃಷ್ಟಿಗೆ ಒಬ್ಬರು ಬಂದು ಎದುರಿಗೆ ನಿಂತು ರಾಮಚರಿತ್ರೆಯನ್ನು ಹೇಳುತ್ತಿರುವಂತೆ ತೋರಿರಬಹುದೆ? ಹಾಗೆಯೇ ಕೇಳುತ್ತಿರುವೆನು. ಆದರೂ ಇದು ನಿಜವಿರಬಹುದು. ನನ್ನ ಮನೋರಥವೇ ನನ್ನನ್ನು ಈ ರೀತಿ ಭ್ರಾಂತಿಗೊಳಿಸುತ್ತಿರುವುದೆಂದು ತೋರುವುದು. ಆದರೂ ಚೆನ್ನಾಗಿ ಪರ್ಯಾಲೋಚಿಸಿ ನೋಡುವಲ್ಲಿ ನನ್ನ ಮನೋರಥದಿಂದಲೇ ಹೀಗಾಗಿರುವುದೆಂದು ನಿರ್ಣಯಿಸಲೂ ಸಾಧ್ಯವಾಗುವುದಿಲ್ಲವು. ಏಕೆಂದರೆ, ಮನೋರಥಕ್ಕೆ ರೂಪವೆಲ್ಲಿ ಬರಬೇಕು? ನನ್ನೆದುರಿಗೆ ಒಂದು ವಾನರಾಕಾರವು ಸ್ಪಷ್ಟವಾಗಿ ಗೋಚರಿಸುತ್ತಿರುವುದು. ಶ್ರೀರಾಮ ಕಥೆಯನ್ನು ಈ ವಾನರನೇ ಹೇಳುತ್ತಿರುವನಲ್ಲದೆ ಇದು ಎಂದಿಗೂ ಕನವರಿಕೆಯಲ್ಲ. ಆದರೂ ಇವನು ನನ್ನನ್ನು ಕುರಿತು ಹೀಗೆ ಹೇಳಲು ಕಾರಣವೇನಿರಬಹುದು? ಹೇಗಾದರೂ ಆಗಲಿ!

ನಮೋಽಸ್ತು ವಾಚಸ್ಪತಯೇ ಸವಜ್ರಿಣೇ
ಸ್ವಯಂಭುವೇ ಚೈವ ಹುತಾಶನಾಯ ।
ಅನೇನ ಚೋಕ್ತಂ ಯದಿದಂ ಮಮಾಗ್ರತೋ
ವನೌಕಸಾ ತಚ್ಚ ತಥಾಸ್ತು ನಾನ್ಯಥಾ ॥ ೧೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾತ್ರಿಂಶಸ್ಸರ್ಗಃ

ಅಸ್ತು - ಆಗಲಿ, ಅನೇನವನೌಕಸಾ - ಈ ಕಪಿಯಿಂದ, ಮಮಾಗ್ರತಃ - ನನ್ನ ಮುಂದೆ, ಯದಿದಂ - ಯಾವ ಈ ಮಾತು, ಉಕ್ತಂ - ಹೇಳಲ್ಪಟ್ಟಿತೋ, ತತ್ - ಆ ವಚನವು, ತಥಾಚ - ಹಾಗೆಯೇ, ಅಸ್ತು - ಆಗಲಿ, ಅನ್ಯಥಾ - ಮತ್ತೊಂದು ರೀತಿಯಾಗಿ, ನ - ಆಗದಿರಲಿ. ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಾತ್ರಿಂಶಸ್ಸರ್ಗಃ.

ಇದೋ ದೇವೇಂದ್ರನಿಗೂ, ಬೃಹಸ್ಪತಿಗೂ, ಬ್ರಹ್ಮನಿಗೂ, ಅಗ್ನಿದೇವನಿಗೂ ನಮಸ್ಕರಿಸುವೆನು. ನನ್ನ ಮುಂದೆ ಈ ವಾನರನು ಹೇಳಿದುದೆಲ್ಲವೂ ಯಥಾರ್ಥವಾಗಲಿ" ॥ ೧೧–೧೪ ॥

ಇಂತಿದು ಹನುಮದ್ದರ್ಶನ ಜನಿತ ಸೀತಾಚಿಂತನ ವೃತ್ತಾಂತವೆಂಬ
ಮೂವತ್ತೆರಡನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ತ್ರಯಸ್ತ್ರಿಂಶಸ್ಸರ್ಗಃ

ಸೋಽವತೀರ್ಯ ದ್ರುಮಾತ್ತಸ್ಮಾದ್ವಿದ್ರುಮಪ್ರತಿಮಾನನಃ । ವಿನೀತವೇಷಃ ಕೃಪಣಃ ಪ್ರಣಿಪತ್ಯೋಪಸೃತ್ಯ ಚ ॥ ೧ ॥ ತಾಮಬ್ರವೀನ್ಮಹಾತೇಜಾ ಹನೂಮಾನ್ಮಾರುತಾತ್ಮಜಃ । ಶಿರಸ್ಯಂಜಲಿಮಾಧಾಯ ಸೀತಾಂ ಮಧುರಯಾ ಗಿರಾ ॥ ೨ ॥ " ಕಾನು ಪದ್ಮಪಲಾಶಾಕ್ಷಿ! ಕ್ಲಿಷ್ಟಕೌಶೇಯವಾಸಿನಿ! ದ್ರುಮಸ್ಯ ಶಾಖಾಮಾಲಂಬ್ಯ ತಿಷ್ಠಸಿ ತ್ವಮನಿಂದಿತೇ! ॥ ೩ ॥ ಕಿಮರ್ಥಂ ತವ ನೇತ್ರಾಭ್ಯಾಂ ವಾರಿ ಸ್ರವತಿ ಶೋಕಜಂ? । ಪುಂಡರೀಕಪಲಾಶಾಭ್ಯಾಂ ವಿಪ್ರಕೀರ್ಣಮಿವೋದಕಂ? ॥ ೪ ॥

ವಿದ್ರು....ನಃ-ಹವಳದ ಬಣ್ಣಕ್ಕೆ ಸಮಾನವಾದ ಮುಖವುಳ್ಳ, ವಿನೀತವೇಷಃ-ನಮ್ರವಾದ ಅಲಂಕಾರವುಳ್ಳ, ಕೃಪಣಃ - ದೀನನಾದ, ಮಹಾತೇಜಾಃ - ಮಹಾ ತೇಜೋವಂತನಾದ, ಮಾರುತಾತ್ಮಜಃ - ವಾಯುಪುತ್ರನಾದ, ಸಹನೂಮಾನ್ - ಆ ಹನುಮಂತನು, ತಸ್ಮಾದ್ದ್ರುಮಾತ್ - ಆ ವೃಕ್ಷದಿಂದ, ಅವತೀರ್ಯ - ಇಳಿದು, ಪ್ರಣಿಪತ್ಯ - ನಮಸ್ಕರಿಸಿ, ಉಪಸೃತ್ಯ ಚ - ಬಳಿಗೂ ಬಂದು, ಶಿರಸಿ - ಮಂಡೆಯಲ್ಲಿ, ಅಂಜಲಿಮಾದಾಯ-ಕೈಜೋಡಿಸಿಕೊಂಡು, ತಾಂಸೀತಾಂ - ಆ ಸೀತಾದೇವಿಯನ್ನು ಕುರಿತು, ಮಧುರಯಾ - ಮನೋಹರವಾದ, ಗಿರಾ - ಮಾತಿನಿಂದ, ಅಬ್ರವೀತ್ - ನುಡಿದಳು. ॥ ೧ ॥ ಹೇ ಪದ್ಮ....ಕ್ಷಿ - ಎಲೈ ಕಮಲಪತ್ರಾಕ್ಷಿಯೇ, ಹೇ ಕ್ಲಿಷ್ಟ....ನೀ - ಓ ಜೀರ್ಣಾಂಬರೆಯೇ, ಹೇ ಅನಿಂದಿತೇ - ಎಲೌ ಪೂಜ್ಯಳೇ, ತ್ವಂ - ನೀನು, ದ್ರುಮಸ್ಯ - ವೃಕ್ಷದ, ಶಾಖಾಂ - ರೆಂಬೆಯನ್ನು, ಆಲಂಬ್ಯ-ಅಪ್ಪಿಕೊಂಡು, ತಿಷ್ಠಸಿ - ಇರುವೆ, ಕಾನು - ನೀನಾರು. ॥ ೩ ॥ ತವ - ನಿನ್ನ, ನೇತ್ರಾಭ್ಯಾಂ - ಕಣ್ಣುಗಳಿಂದ, ಶೋಕಜಂ - ದುಃಖದಿಂದ ಹುಟ್ಟಿದ, ವಾರಿ - ಕಂಬನಿಯು, ಪುಂಡ....ಭ್ಯಾಂ - ಕಮಲಪತ್ರಗಳಿಂದ, ವಿಪ್ರಕೀರ್ಣಂ - ಜಾರುತ್ತಿರುವ, ಉದಕಮಿವ - ನೀರಿನಂತೆ, ಕಿಮರ್ಥಂ - ಯಾವ ನಿಮಿತ್ತವಾಗಿ, ಸ್ರವತಿ - ಸುರಿಯುತ್ತಿದೆ. ॥ ೪ ॥ ಹೇ ಶೋಭನೇ - ಎಲೌ ಶುಭಕರಳೇ, ಸುರಾಣಾಂ -

---

ಆಮೇಲೆ ಹವಳದ ಕಾಂತಿಗೆ ಸಮಾನವಾದ ಕಾಂತಿಯುಳ್ಳ ಮುಖವುಳ್ಳವನೂ, ಮಹಾ ತೇಜಸ್ವಿಯೂ ಆದ ಹನುಮಂತನು ಶಿಂಶುಪಾವೃಕ್ಷದಿಂದ ಕೆಳಗಿಳಿದು, ದೈನ್ಯದಿಂದ ಬಹು ವಿನಯವಾಗಿ ಆ ಸೀತಾದೇವಿಗೆ ನಮಸ್ಕರಿಸಿ, ಸಮೀಪಕ್ಕೆ ಬಂದು ಬದ್ಧಾಂಜಲಿಪುಟನಾಗಿ ನಿಂತು ಬಹು ಮನೋಹರವಾದ ಮಾತುಗಳಿಂದ ಆಕೆಯನ್ನು ಕುರಿತು ಹೀಗೆಂದನು. " ಎಲೆ ತಾಯೇ! ಪದ್ಮದಳದಂತೆ ವಿಶಾಲವಾದ ಕಂಗಳುಳ್ಳವಳೂ, ಮಲಿನ ವಸ್ತ್ರವನ್ನುಟ್ಟಿರುವವಳೂ, ಕಳಂಕವಿಲ್ಲದ ನಡೆವಳಿಕೆಯುಳ್ಳವಳೂ ಆದ ನೀನಾರು? ಈ ಮರದ ರೆಂಬೆಯನ್ನು ನೆಮ್ಮಿ ಇಲ್ಲಿ ನಿಂತಿರುವುದೇಕೆ? ವಾತಾಹತವಾದ ಜಲಬಿಂದುಗಳು ಬಿಳಿದಾವರೆಯ ಮೇಲೆ ಬಿದ್ದು ಅಲ್ಲಿಂದ ಕೆಳಗೆ ಜಾರಿದಂತೆ, ಪದ್ಮದಳಾಯತೇಕ್ಷಣೆಯಾದ ನಿನ್ನ ಕಣ್ಣುಗಳಿಂದ ಶೋಕಾಶ್ರುವು ಸುರಿಯುತ್ತಿರುವುದೇಕೆ? ಎಲೌ ಶುಭಾನನೆಯೇ! ನೀನು ದೇವತೆಗಳಲ್ಲಿ ಸೇರಿದವಳೇ; ಅಸುರರಲ್ಲಿ ಸೇರಿದವಳೇ; ನಾಗರಲ್ಲಿ ಸೇರಿದವಳೇ; ಗಂಧರ್ವರಲ್ಲಿ ಸೇರಿ

ಸುರಾಣಾ ಮಸುರಾಣಾಂ ವಾ ನಾಗಗಂಧರ್ವರಕ್ಷಸಾಂ । ಯಕ್ಷಾಣಾಂ ಕಿನ್ನರಾಣಾಂವಾ ಕಾ ತ್ವಂ ಭವಸಿ ಶೋಭನೇ? ॥ ೫ ॥ ಕಾ ತ್ವಂ ಭವಸಿ ರುದ್ರಾಣಾಂ ಮರುತಾಂ ವಾ ವರಾನನೇ? । ವಸೂನಾಂ ವಾ ವರಾರೋಹೇ ದೇವತಾ ಪ್ರತಿಭಾಸಿ ಮೇ ॥ ೬ ॥ ಕಿನ್ನು ಚಂದ್ರಮಸಾ ಹೀನಾ ಪತಿತಾ ವಿಬುಧಾಲಯಾತ್ । ರೋಹಿಣೀ ಜ್ಯೋತಿಷಾಂ ಶ್ರೇಷ್ಠಾ ಶ್ರೇಷ್ಠಸ್ಸರ್ವಗುಣಾನ್ವಿತಾ ॥ ೭ ॥ ಕಾ ತ್ವಂ ಭವಸಿ ಕಲ್ಯಾಣಿ! ತ್ವಮನಿಂದಿತ ಲೋಚನೇ? । ಕೋಪಾದ್ವಾ ಯದಿವಾ ಮೋಹಾ ದ್ಭರ್ತಾರಮಸಿತೇಕ್ಷಣೇ? । ವಸಿಷ್ಠಂ ಕೋಪಯಿತ್ವಾ ತ್ವಂ ನಾಸಿ ಕಲ್ಯಾಣ್ಯರುಂಧತಿ? ॥ ೮ ॥ ಕೋನುಪುತ್ರಃ

ದೇವತೆಗಳಲ್ಲಿಯಾಗಲಿ, ಅಸುರಾಣಾಂವಾ - ದೈತ್ಯರಲ್ಲಿಯಾಗಲಿ, ನಾಗ....ಸಾಂ - ಸರ್ಪಗಳು, ಗಂಧರ್ವರು, ರಾಕ್ಷಸರು, ಇವರಲ್ಲಿಯಾಗಲಿ, ಯಕ್ಷಾಣಾಂ - ಯಕ್ಷರಲ್ಲಿಯಾಗಲಿ, ಕಿನ್ನರಾಣಾಂವಾ - ಕಿನ್ನರರಲ್ಲಿಯಾಗಲಿ, ತ್ವಂ - ನೀನು, ಕಾಭವಸಿ - ಯಾರಾಗಿರುವೆ. ॥ ೫ ॥ ಹೇ ವರಾನನೇ - ಓ ಸುಮುಖಿಯೇ, ಹೇ ವರಾರೋಹೇ - ಎಲೌ ಉತ್ತಮಾಂಗನೆಯೇ, ರುದ್ರಾಣಾಂ - ಏಕಾದಶರುದ್ರರಲ್ಲಿಯಾದರೂ, ಮರುತಾಂವಾ-ಸಪ್ತಮರುತ್ತುಗಳಲ್ಲಿಯಾದರೂ, ವಸೂನಾಂವಾ-ಅಷ್ಟವಸುಗಳಲ್ಲಿಯಾದರೂ, ತ್ವಂ - ನೀನು, ಕಾಭವಸಿ - ಯಾವ ಪುರುಷನ ಸಂಬಂಧಿಯು, ಮೇ - ನನಗೆ, ದೇವತಾ - ದೇವತಾ ಸ್ವರೂಪಳಾಗಿ, ಪ್ರತಿಭಾಸಿ - ತೋರುತ್ತಿರುವೆ. ॥ ೬ ॥ ಚಂದ್ರಮಸಾ - ಚಂದ್ರನಿಂದ, ಹೀನಾ - ರಹಿತಳಾಗಿ, ವಿಬು....ತ್ - ದೇವತಾಸ್ಥಾನದಿಂದ, ಪತಿತಾ - ಬಿದ್ದಿರುವ, ಶ್ರೇಷ್ಠ....ತಾ - ಉತ್ತಮಗಳಾದ ಸಮಸ್ತ ಗುಣಗಳಿಂದೊಡಗೂಡಿದ, ಜ್ಯೋತಿಷಾಂ - ನಕ್ಷತ್ರಗಳೊಳಗೆ, ಶ್ರೇಷ್ಠಾ - ಮುಖ್ಯಳಾದ, ರೋಹಿಣೀಕಿನ್ನು - ರೋಹಿಣೀದೇವಿಯೇನು. ॥ ೭ ॥ ಹೇ ಕಲ್ಯಾಣಿ - ಎಲೌ ಶುಭಕರಳೇ, ತ್ವಂ - ನೀನು, ಕಾಭವಸಿ - ಯಾವಾಕೆಯಾಗಿರುವೆ, ಹೇ ಅನಿಂ....ನೇ - ಎಲೌ ಅಮಲಾಕ್ಷಿಯೇ, ತ್ವಂಕಾ - ನೀನಾರು. ॥ ೭ ॥ ಹೇ ಅಸಿತೇಕ್ಷಣೇ - ಎಲೌ ನೀಲನೇತ್ರಿಯೇ, ಹೇ ಕಲ್ಯಾಣಿ - ಓ ಶುಭಕರಳೇ, ತ್ವಂ - ನೀನು, ಕೋಪಾದ್ವಾ - ಕೋಪದಿಂದಲಾಗಲೀ, ಯದಿವಾ - ಹಾಗಲ್ಲದಿದ್ದರೆ, ಮೋಹಾತ್ - ಮಮತೆಯಿಂದಲಾಗಲಿ, ಭರ್ತಾರಂ - ಗಂಡನಾದ, ವಸಿಷ್ಠಂ - ವಸಿಷ್ಠನನ್ನು, ಕೋಪಯಿತ್ವಾ-ಕೋಪಗೊಳಿಸಿ ಭೂಲೋಕಕ್ಕೆ ಬಂದಿರುವ, ಅರುಂಧತೀ-ಅರುಂಧತಿಯು, ನಾಸಿ-ಅಲ್ಲವಷ್ಟೆ? ॥ ೮ ॥ ಹೇ ಸುಮಧ್ಯಮೇ - ಓ ಸುಂದರವಾದ ನಡುವುಳ್ಳವಳೇ, ತೇ - ನಿನಗೆ, ಪುತ್ರಃ - ಮಗನು,

---

ದವಳೇ; ಯಕ್ಷಕನ್ಯೆಯೋ; ರಾಕ್ಷಸಕನ್ಯೆಯೋ? ಇಲ್ಲವೆ ಕಿನ್ನರಾಂಗನೆಯೋ? ತಿಳಿಸು. ಇವರಲ್ಲಿ ನೀನು ಯಾರಾಗಿರುವೆ? ॥ ೧-೫ ॥ ಎಲೌ ವರಾನನೆಯೇ! ನೀನು ರುದ್ರಗಣಗಳಲ್ಲಿ ಸೇರಿದವಳಾಗಿರಬಹುದೆ? ವಾಯುಗಣಗಳಲ್ಲಿಯಾಗಲಿ, ವಸುಗಳಲ್ಲಿಯಾಗಲಿ ಸೇರಿದವಳೋ? ಎಲೌ ಕಲ್ಯಾಣಿಯೇ! ನಿರ್ದುಷ್ಟವಾದ ನೇತ್ರಗಳುಳ್ಳ ನೀನು ಚಂದ್ರಮನನ್ನು ತೊರೆದು ಸ್ವರ್ಗವನ್ನು ಬಿಟ್ಟು ಇಲ್ಲಿಗೈತಂದಿರುವ ಜ್ಯೋತಿರ್ಗಣಗಳಲ್ಲಿ ಸರ್ವಶ್ರೇಷ್ಠಳಾದ ರೋಹಿಣಿಯಾಗಿರಬಹುದೇ? ಎಲೌ ಅಸಿತೇಕ್ಷಣೆಯೇ! ನೀನು ಕೋಪದಿಂದಲಾಗಲಿ, ಮೋಹದಿಂದಾಗಲಿ ಭರ್ತನಾದ ವಸಿಷ್ಠ ಮಹರ್ಷಿಯನ್ನು ಕೋಪಗೊಳಿಸಿ ಭೂಮಿಗೈತಂದಿರುವ ಅರುಂಧತಿಯಾಗಿರಬಹುದೇ? ಸುಂದರವಾದ ಕಟಿಪ್ರದೇಶವುಳ್ಳ ಎಲೌ ದೇವಿಯೇ? ನಿನ್ನ ಪುತ್ರನೂ, ತಂದೆಯೂ, ಸಹೋದರನೂ, ಭರ್ತನೂ ಯಾರು? ಈ ಲೋಕದಿಂದ ಪರಲೋಕವನ್ನು ಕುರಿತು ಹೋದ ಯಾರನ್ನಾದರೂ ಸ್ಮರಿಸಿ ದುಃಖಿಸುತ್ತಿರುವೆಯೇನು? ನೀನು ವಿಲ

ಪಿತಾ ಭ್ರಾತಾ ಭರ್ತಾ ವಾ ತೇ ಸುಮಧ್ಯಮೇ? । ಅಸ್ಮಾಲ್ಲೋಕಾದಮುಂ ಲೋಕಂ ಗತಂ ತ್ವಮನುಶೋಚಸಿ? ॥ ೯ ॥ ರೋದನಾದತಿನಿಶ್ವಾಸಾದ್ಭೂಮಿಸಂಸ್ಪರ್ಶನಾದಪಿ । ನತ್ವಾಂ ದೇವೀ ಮಹಂಮನ್ಯೇ ರಾಜ್ಞಸ್ಸಂಜ್ಞಾವಧಾರಣಾತ್ ॥ ೧೦ ॥ ವ್ಯಂಜನಾನಿಚ ತೇ ಯಾನಿ ಲಕ್ಷಣಾನಿ ಚ ಲಕ್ಷಯೇ । ಮಹಿಷೀ ಭೂಮಿಪಾಲಸ್ಯ ರಾಜಕನ್ಯಾಸಿ ಮೇ ಮತಾ ॥೧೧॥ ರಾವಣೇನ ಜನಸ್ಥಾನಾದ್ಬಲಾದಪಹೃತಾ ಯದಿ । ಸೀತಾತ್ವಮಸಿ ಭದ್ರಂ ತೇ ತನ್ಮಮಾಚಕ್ಷ್ವ ಪೃಚ್ಛತಃ ॥ ೧೨ ॥ ಯಥಾಹಿ ತವ ವೈ ದೈನ್ಯಂ ರೂಪಂ ಚಾಪ್ಯತಿಮಾನುಷಂ। ತಪಸಾ ಚಾನ್ವಿತೋ ವೇಷಸ್ತ್ವಂ ರಾಮಮಹಿಷೀ ಧ್ರುವಂ"॥೧೩॥

ಕಃ - ಯಾರು, ಪಿತಾ - ತಂದೆಯು, ಕಃ - ಯಾರು, ಭ್ರಾತಾ - ಅಣ್ಣನು, ಕಃ - ಯಾರು, ಭರ್ತಾವಾ - ಗಂಡನಾದರೂ, ಕಃ - ಯಾವನು, ತ್ವಂ - ನೀನು, ಅಸ್ಮಾಲ್ಲೋಕಾತ್ - ಈ ಲೋಕದಿಂದ, ಅಮುಂ ಲೋಕಂ - ಪರಲೋಕವನ್ನು, ಗತಮನು - ಹೊಂದಿದ ಬಂಧುವನ್ನು ಕುರಿತು, ಅನುಶೋಚಸಿಕಿಂ - ದುಃಖಿಸುತ್ತಿರುವೆಯಾ. ॥ ೯ ॥ ರೋದನಾತ್ - ಅಳುವಿಕೆಯಿಂದಲೂ, ಅತಿನಿಶ್ವಾಸಾತ್ - ಬಹಳ ನಿಟ್ಟುಸುರುಬಿಡುವದರಿಂದಲೂ, ಭೂಮಿ....ಪಿ - ಭೂಸ್ಪರ್ಶದಿಂದಲೂ, ರಾಜ್ಞಃ - ಅರಸನ, ಸಂಜ್ಞಾ....ತ್ - ಲಕ್ಷಣದ ನಿಶ್ಚಯಜ್ಞಾನದಿಂದಲೂ, ತ್ವಾಂ - ನಿನ್ನನ್ನು, ದೇವೀಂ - ದೇವತಾಸ್ತ್ರೀಯನ್ನಾಗಿ, ಅಹಂ - ನಾನು, ನಮನ್ಯೇ - ತಿಳಿಯಲಾರೆನು. ॥ ೧೦ ॥ ವ್ಯಂಜನಾನಿ - ಉತ್ತಮಸ್ತ್ರೀತ್ವವನ್ನು ಸೂಚಿಸುತ್ತಿರುವ, ತೇ - ನಿನ್ನ, ಯಾನಿಲಕ್ಷಣಾನಿ-ಯಾವ ಲಕ್ಷಣಗಳನ್ನು, ಲಕ್ಷಯೇ - ನೋಡುತ್ತೇನೆಯೋ, ತೈಃ - ಆ ಹೆಗ್ಗುರ್ತುಗಳಿಂದ, ಭೂಮಿಪಾಲಸ್ಯ - ಭೂಪತಿಗೆ, ಮಹಿಷೀ - ಪಟ್ಟದರಸಿಯಾದ, ರಾಜಕನ್ಯಾ - ರಾಜಸ್ತ್ರೀಯಾಗಿ, ಮೇಮತಾಸಿ - ನನಗೆ ತೋರುತ್ತಿರುವೆ. ॥೧೧॥ ರಾವಣೇನ - ರಾವಣಾಸುರನಿಂದ, ಜನಸ್ಥಾನಾತ್-ಉಕ್ಕಡದಿಂದ, ಬಲಾತ್-ಬಲಾತ್ಕಾರದಿಂದ, ಅಪಹೃತಾಯದಿ-ತರಲ್ಪಟ್ಟವಳಾಗಿದ್ದರೆ, ತೇ - ನಿನಗೆ, ಭದ್ರಂ - ಶುಭವಾಗಲಿ, ತ್ವಂ - ನೀನು, ಸೀತಾಸಿ - ಸೀತಾದೇವಿಯೇ ಆಗಿರುವೆ, ತತ್ - ಆ ಕಾರಣದಿಂದ, ಪೃಚ್ಛತಃ - ಕೇಳುತ್ತಿರುವ, ಮಮ - ನನಗೆ, ಆಚಕ್ಷ್ವ-ಹೇಳು. ॥೧೨॥ ಹಿ - ಯಾವಕಾರಣದಿಂದ, ತವ - ನಿನ್ನ, ದೈನ್ಯಂವೈ - ದೈನ್ಯವಾದರೆ, ಯಥಾ - ಎಂತಹುದೋ, ಅತಿಮಾನುಷಂ - ಮಾನುಷ್ಯವನ್ನತಿಕ್ರಮಿಸಿರುವ, ರೂಪಂಚ-ಸೌಂದರ್ಯವು, ಯಥಾ - ಎಂತಹುದೋ, ತಪಸಾ - ತಪಸ್ಸಿನಿಂದ, ಅನ್ವಿತಃ - ಕೂಡಿದ, ವೇಷಶ್ಚ - ಅಲಂಕಾರವೂ, ಯಥಾ - ಎಂತಹುದೋ, ತೈಃ - ಆಕಾರಣಗಳಿಂದ, ತ್ವಂ - ನೀನು, ರಾಮಮಹಿಷೀ - ಶ್ರೀರಾಮನ ಪಟ್ಟದರಸಿಯೇ, ಧ್ರುವಂ -

---

ಪಿಸುತ್ತಿರುವುದನ್ನೂ, ವಿಶೇಷವಾಗಿ ನಿಟ್ಟುಸಿರುಬಿಡುತ್ತಿರುವುದನ್ನೂ, ಕಂಬನಿಗಳಿಂದ ಭೂಮಿಯನ್ನು ನೆನೆಸುತ್ತಿರುವುದನ್ನೂ, ನಿನ್ನಲ್ಲಿ ಕಾಣುತ್ತಿರುವ ರಾಜಚಿಹ್ನೆಗಳನ್ನೂ ಪರ್ಯಾಲೋಚಿಸಿ ನೋಡಿದರೆ ನೀನು ದೇವತಾಸ್ತ್ರೀಯಲ್ಲವೆಂದು ತೋರುವುದು. ನೀನು ರಾಜಪುತ್ರಿಯಾಗಿರಬೇಕು. ॥ ೬–೧೦ ॥ ನಿನ್ನ ಅವಯುವ ಸೌಷ್ಟವವನ್ನೂ, ಸಾಮುದ್ರಿಕಾಲಕ್ಷಣಗಳನ್ನೂ ನೋಡಿದರೆ ನೀನೊಬ್ಬ ರಾಜಶ್ರೇಷ್ಠನ ಪಟ್ಟಮಹಿಷಿಯೆಂದೂ ರಾಜಪುತ್ರಿಯೆಂದೂ ತೋರುತ್ತದೆ. ಓ ದೇವಿಯೇ! ನೀನು ಜನಸ್ಥಾನದಿಂದ ರಾವಣಾಸುರನು ಕದ್ದುತಂದ ಸೀತಾದೇವಿಯೇ? ಹೇಳು ; ನೀನು ಸೀತೆಯೇ ಆಗಿದ್ದರೆ ನಿನಗೆ ಮಂಗಳವಾಗಲಿ! ಎಲೆ ತಾಯೇ! ನಿನ್ನ ಈ ವ್ಯಸನವನ್ನೂ, ಅನನ್ಯ ಸಾಧಾರಣವಾದ ನಿನ್ನೀಮಾನವ ರೂಪವನ್ನೂ, ನಿನ್ನ ಈ ತಾಪಸೀ ವೇಷವನ್ನೂ ನೋಡಿದ ನಾನು, ನೀನು ಶ್ರೀರಾಮನ ಭಾರ್ಯೆಯೆಂದೇ ಊಹಿಸುತ್ತಿರುವೆನು"

ಸಾ ತಸ್ಯ ವಚನಂ ಶ್ರುತ್ವಾ ರಾಮಕೀರ್ತನಹರ್ಷಿತಾ । ಉವಾಚ ವಾಕ್ಯಂ ವೈದೇಹೀ ಹನೂಮಂತಂ ದ್ರುಮಾಶ್ರಿತಂ ॥ ೧೪ ॥ "ಪೃಥಿವ್ಯಾಂ ರಾಜಸಿಂಹಾನಾಂ ಮುಖ್ಯಸ್ಯ ವಿದಿತಾತ್ಮನಃ । ಸ್ನುಷಾ ದಶರಥಸ್ಯಾಽಹಂ ಶತ್ರುಸೈನ್ಯಪ್ರತಾಪಿನಃ ॥ ೧೫ ॥ ದುಹಿತಾ ಜನಕಸ್ಯಾಽಹಂ ವೈದೇಹಸ್ಯ ಮಹಾತ್ಮನಃ । ಸೀತಾಚ ನಾಮ ನಾಮ್ನಾಹಂ ಭಾರ್ಯಾ ರಾಮಸ್ಯ ಧೀಮತಃ ॥ ೧೬ ॥ ಸಮಾ ದ್ವಾದಶ ತತ್ರಾಹಂ ರಾಘವಸ್ಯ ನಿವೇಶನೇ । ಭುಂಜಾನಾ ಮಾನುಷಾನ್ಭೋಗಾನ್ ಸರ್ವಕಾಮಸಮೃದ್ಧಿನೀ ॥ ೧೭ ॥ ತತ್ರ ತ್ರಯೋದಶೇವರ್ಷೇ ರಾಜ್ಯೇನೇಕ್ಷ್ವಾಕುನಂದನಂ । ಅಭಿಷೇಚಯಿತುಂ ರಾಜಾ ಸೋಪಾ

ನಿಶ್ಚಯವು. ॥ ೧೩ ॥ ಸಾವೈದೇಹೀ - ಆ ಸೀತಾದೇವಿಯು, ತಸ್ಯ - ಆ ಆಂಜನೇಯನ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ರಾಮ....ತಾ - ಶ್ರೀರಾಮನ ಸ್ತುತಿಯಿಂದ ಸಂತೋಷಗೊಂಡವಳಾಗಿ, ದ್ರುಮಾಶ್ರಿತಂ - ಗಿಡದ ಬುಡದಲ್ಲಿರುವ, ಹನುಮಂತಂ - ಆಂಜನೇಯನನ್ನು ಕುರಿತು, ವಾಕ್ಯಂ - ವಚನವನ್ನು, ಉವಾಚ - ಹೇಳಿದಳು. ॥ ೧೪ ॥ ಅಹಂ - ನಾನು, ಪೃಥಿವ್ಯಾಂ - ಭೂಮಿಯಲ್ಲಿರುವ, ರಾಜಸಿಂಹಾನಾಂ - ರಾಜೋತ್ತಮರಲ್ಲಿ, ಮುಖ್ಯಸ್ಯ - ಶ್ರೇಷ್ಠನಾದ, ವಿದಿತಾತ್ಮನಃ - ಆತ್ಮಜ್ಞಾನಿಯಾದ, ಶತ್ರು....ನಃ - ವಿರೋಧಿಸೇನೆಗಳನ್ನು ತಪಿಸುವಂತೆಮಾಡುತ್ತಿರುವ, ದಶರಥಸ್ಯ - ದಶರಥರಾಜನಿಗೆ, ಸ್ನುಷಾ - ಸೊಸೆಯು, ॥ ೧೫ ॥ ಅಹಂ - ನಾನು, ಮಹಾತ್ಮನಃ - ಮಹಾನುಭಾವನಾದ, ವೈದೇಹಸ್ಯ - ವಿದೇಹರಾಜನಾದ, ಜನಕಸ್ಯ - ಜನಕರಾಯನಿಗೆ, ದುಹಿತಾ - ಮಗಳು, ನಾಮ್ನಾ - ಹೆಸರಿನಿಂದ, ಸೀತೇತಿ - ಸೀತೆಯೆಂದು, ನಾಮ - ಪ್ರಸಿದ್ಧಳಾದ, ಅಹಂ - ನಾನು, ಧೀಮತಃ - ಬುದ್ಧಿಶಾಲಿಯಾದ, ರಾಮಸ್ಯ - ಶ್ರೀರಾಮನಿಗೆ, ಭಾರ್ಯಾ - ಹೆಂಡತಿಯು. ॥ ೧೬ ॥ ರಾಘವಸ್ಯ - ದಶರಥನ, ತತ್ರನಿವೇಶನೇ - ಆ ಮನೆಯಲ್ಲಿ, ದ್ವಾದಶಸಮಾಃ - ಹನ್ನೆರಡು ಸಂವತ್ಸರಗಳಲ್ಲಿ, ಅಹಂ - ನಾನು; ಮಾನುಷಾನ್-ಮನುಷ್ಯಸಂಬಂಧಗಳಾದ, ಭೋಗಾನ್-ಸ್ರಕ್ಚಂದನ ತಾಂಬೂಲಾದಿಗಳನ್ನು, ಭುಂಜಾನಾ-ಅನುಭವಿಸುತ್ತ, ಸರ್ವ....ನೀ - ಸಮಸ್ತಗಳಾದ ಅಭಿಲಾಷೆಗಳಿಂದ ತೃಪ್ತಳಾಗಿ, (ನ್ಯವಸಂ-ಇದ್ದೆನು.) ॥ ೧೭ ॥ ತತ್ರ - ಆ ಅಯೋಧ್ಯಾಪಟ್ಟಣದಲ್ಲಿ, ತ್ರಯೋದಶೇವರ್ಷೇ-ಹದಿಮೂರನೆಯ ಸಂವತ್ಸರದಲ್ಲಿ, ರಾಜಾ - ದಶರಥರಾಯನು, ಇಕ್ಷ್ವಾ....ನಂ - ಶ್ರೀರಾಮನನ್ನು, ರಾಜ್ಯೇನ - ಯೌವರಾಜ್ಯದಿಂದ, ಅಭಿಷೇಚಯಿತುಂ-ಪಟ್ಟಾಭಿಷೇಕಮಾಡಲು, ಸೋಪಾಧ್ಯಾಯಃ-ಉಪಾಧ್ಯಾಯಸಹಿತನಾಗಿ, ಪ್ರಕ್ರಮೇ-

---

ಹನುಮಂತನೀರೀತಿ ನುಡಿದುದನ್ನು ಕೇಳಿ ಶ್ರೀರಾಮಕೀರ್ತನ ಹರ್ಷಿತಳಾದ ಜಾನಕಿಯು, ಆ ಶಿಂಶುಪಾವೃಕ್ಷದ ಕೆಳಗಡೆ ನಿಂತಿರುವ ಆತನನ್ನು ಕುರಿತು, "ಎಲೈ ವಾನರನೇ! ನಾನು ಈ ಭೂಮಂಡಲದ ರಾಜರ್ಷಿಗಳಲ್ಲಿ ಮೇಲೆನಿಸಿದ ದಶರಥರಾಯನ ಸೊಸೆಯು. ಆ ದಶರಥರಾಯನಾದರೋ ಶತ್ರುಕುಲತಾಪನನು. ವಿದೇಹಾಧೀಶನೂ, ಮಹಾ ಪರಾಕ್ರಮಿಯೂ ಆದ ಜನಕಭೂಪಾಲನೇ ನನ್ನ ತಂದೆಯು. ನನ್ನನ್ನು ಸೀತೆಯೆಂದು ಕರೆಯುವರು. ನಾನು ಧೀಮಂತನಾದ ಶ್ರೀರಾಮನ ಭಾರ್ಯೆಯು. ॥೧೧-೧೬॥ ಎಲೈ ಕಪಿಶ್ರೇಷ್ಠನೇ! ನನ್ನ ವಿವಾಹವಾದಮೇಲೆ ನನ್ನ ಮಾವನಾದ ದಶರಥರಾಯನ ಮನೆಯಲ್ಲಿ ನನ್ನ ಭರ್ತನಾದ ಶ್ರೀರಾಮನೊಡನೆ ಸಮಸ್ತಗಳಾದ ಮಾನುಷಭೋಗಗಳನ್ನೂ ಅನುಭವಿಸುತ್ತ ಈಡೇರಿದ ಸಮಸ್ತ ಕೋರಿಕೆಗಳೂ ಉಳ್ಳವಳಾಗಿ ಸುಖದಿಂದಿದ್ದೆನು. ಆ ಬಳಿಕ ಹದಿಮೂರನೆಯ ಸಂವತ್ಸರದಲ್ಲಿ ನನ್ನ ಮಾವನಾದ ದಶರಥರಾಯನು ಕುಲಗುರುವಾದ ವಸಿಷ್ಠಋಷಿಯೊಡಗೂಡಿ ಇಕ್ಷ್ವಾಕು

ಧ್ಯಾಯಃ ಪ್ರಚಕ್ರಮೇ ॥ ೧೮ ॥ ತಸ್ಮಿನ್ ಸಂಭ್ರಿಯಮಾಣೇತು ರಾಘವಸ್ಯಾಭಿಷೇಚನೇ । ಕೈಕೇಯೀನಾಮ ಭರ್ತಾರಂ ದೇವೀ ವಚನಮಬ್ರವೀತ್ ॥ ೧೯ ॥ ನಪಿಬೇಯಂ ನಖಾದೇಯಂ ಪ್ರತ್ಯಹಂ ಮಮ ಭೋಜನಂ । ಏಷಮೇ ಜೀವಿತಸ್ಯಾಂತೋ ರಾಮೋ ಯದ್ಯಭಿಷಿಚ್ಯತೇ ॥ ೨೦ ॥ ಯತ್ತದುಕ್ತಂ ತ್ವಯಾ ವಾಕ್ಯಂ ಪ್ರೀತ್ಯಾ ನೃಪತಿಸತ್ತಮ! । ತಚ್ಚೇನ್ನವಿತಥಂ ಕಾರ್ಯಂ ವನಂ ಗಚ್ಛತು ರಾಘವಃ । ॥ ೨೧ ॥ ಸರಾಜಾ ಸತ್ಯವಾಗ್ದೇವ್ಯಾ ವರದಾನಮನುಸ್ಮರನ್ । ಮುಮೋಹ ವಚನಂ ಶ್ರುತ್ವಾ ಕೈಕೇಯ್ಯಾಃ ಕ್ರೂರಮಪ್ರಿಯಂ ॥ ೨೨ ॥ ತತಸ್ತು ಸ್ಥವಿರೋ ರಾಜಾ ಸತ್ಯೇ

ಪ್ರಾರಂಭಿಸಿದನು. ॥ ೧೮ ॥ ತಸ್ಮಿನ್ - ಆ ದಶರಥರಾಯನು, ಸಂಭ್ರೀಯಮಾಣೇ - ಸಾಮುಗ್ರಿಗಳನ್ನು ಅಣಿಮಾಡುತ್ತಿರಲು, ರಾಘವಸ್ಯ - ಶ್ರೀರಾಮನ, ಅಭಿಷೇಚನೇ - ಪಟ್ಟಾಭಿಷೇಕಕ್ಕೋಸುಗ, ಕೈಕೇಯೀನಾಮ - ಕೈಕೇಯೀ ಎಂದು ಪ್ರಸಿದ್ಧಳಾದ, ದೇವೀ - ದೇವಿಯು, ಭರ್ತಾರಂ - ಗಂಡನಾದ ದಶರಥನನ್ನು ಕುರಿತು, ವಚನಂ - ಮುಂದೆ ಹೇಳತಕ್ಕ ಮಾತನ್ನು, ಅಬ್ರವೀತ್ - ನುಡಿದಳು. ॥ ೧೯ ॥ ರಾಮಃ-ಶ್ರೀರಾಮನು, ಅಭಿಷಿಚ್ಯತೇಯದಿ-ಅಭಿಷೇಕಮಾಡಲ್ಪಟ್ಟುದಾದರೆ, ಮಮ-ನಾನು, ಪ್ರತ್ಯಹಂ-ಪ್ರತಿದಿವಸದಲ್ಲಿಯೂ, ಭೋಜನಂ - ತಿನ್ನುವಪದಾರ್ಥವನ್ನು, ನಖಾದೇಯಂ - ತಿನ್ನುವುದಿಲ್ಲ, ನಪಿಬೇಯಂ - ಪಾನಮಾಡುವುದೂ ಇಲ್ಲ, ಏಷಃ - ಈ ರಾಮಪಟ್ಟಾಭಿಷೇಕವು, ಮೇ - ನನ್ನ, ಜೀವಿತಸ್ಯ - ಬದುಕುವಿಕೆಗೆ, ಅಂತಃ - ತುದಿಯು. ॥ ೨೦ ॥ ಹೇನೃಪತಿಸತ್ತಮ - ಎಲೈ ರಾಜಶ್ರೇಷ್ಠನೇ, ಪ್ರೀತ್ಯಾ - ಸಂತೋಷದಿಂದ, ತ್ವಯಾ - ನಿನ್ನಿಂದ, ಯತ್ತದ್ವಾಕ್ಯಂ - ಯಾವ ವರಪ್ರದಾನರೂಪವಾದ ಮಾತು, ಉಕ್ತಂ - ಹೇಳಲ್ಪಟ್ಟಿತೋ, ತತ್ - ಆ ಮಾತು, ವಿತಥಂ - ವ್ಯರ್ಥವಾಗಿ, ನಕಾರ್ಯಂಚೇತ್ - ಮಾಡಲ್ಪಡದಿದ್ದರೆ, ರಾಘವಃ - ಶ್ರೀರಾಮನು, ವನಂ - ಅರಣ್ಯವನ್ನು ಕುರಿತು, ಗಚ್ಛತು - ಹೋಗಲಿ. ॥ ೨೧ ॥ ಸತ್ಯವಾಕ್ - ಸತ್ಯವಾಕ್ಯವುಳ್ಳ, ಸರಾಜಾ - ಆ ದಶರಥರಾಯನು, ದೇವ್ಯಾಃ - ಕೈಕೇಯೀದೇವಿಯ, ವರದಾನಂ - ವರಪ್ರದಾನವನ್ನು, ಅನುಸ್ಮರನ್ - ಜ್ಞಾಪಿಸಿಕೊಂಡವನಾಗಿ, ಕೈಕೇಯ್ಯಾಃ - ಕೈಕೆಯೀದೇವಿಯ, ಕ್ರೂರಂ - ಘೋರವಾದ, ಅಪ್ರಿಯಂ - ಹಿತವಲ್ಲದ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಮುಮೋಹ- ಭ್ರಾಂತಿಗೊಂಡನು. ॥ ೨೨ ॥ ತತಸ್ತು - ಆಬಳಿಕ, ಸ್ಥವಿರಃ - ಮುದುಕ

ಕುಲನಂದನನೂ, ತನಗೆ ಜ್ಯೇಷ್ಠಪುತ್ರನೂ ಆದ ಶ್ರೀರಾಮನಿಗೆ ಯೌವರಾಜ್ಯ ಪಟ್ಟಾಭಿಷೇಕ ಪ್ರಯತ್ನವನ್ನು ಮಾಡಲುಪಕ್ರಮಿಸಿದನು. ಹೀಗೆ ಪಟ್ಟಾಭಿಷೇಕ ಸಂಭಾರಗಳೆಲ್ಲವನ್ನೂ ಶೇಖರಿಸಿಡಲಾಗುತ್ತಿರಲು ದಶರಥಭಾರ್ಯೆಯರಲ್ಲಿ ಕಿರಿಯವಳಾದ ಕೈಕೇಯಿಯೆಂಬುವಳು ತನ್ನ ಪತಿಯನ್ನು ಕುರಿತು, “ಎಲೈ ರಾಯನೇ! ನೀನು ಶ್ರೀರಾಮನಿಗೆ ಯೌವರಾಜ್ಯಾಭಿಷೇಕವನ್ನು ಮಾಡಿದುದಾದರೆ ನಾನು ಅನ್ನವನ್ನು ಭುಜಿಸೆನು. ಜಲಪ್ರಾಶನವನ್ನೂ ಸಹ ಮಾಡೆನು; ಈ ಪಟ್ಟಾಭಿಷೇಕವೇ ನನ್ನ ಜೀವಿತಾಂತ್ಯವಾಗುವುದು. ॥ ೧೭–೨೦ ॥ ಎಲೈ ರಾಜಶ್ರೇಷ್ಠನೇ! ಹಿಂದೆ ನೀನು ಮಹಾ ಸಂತೋಷದಿಂದ ನನಗೆ ಕೊಟ್ಟಿದ್ದ ಮಾತು ವ್ಯರ್ಥವಾಗದಿರಬೇಕಾದರೆ ಈಗ ನೀನು ರಾಮನನ್ನು ಅರಣ್ಯಕ್ಕೆ ಕಳುಹಿಸು” ಎಂದು ಹೇಳಿದಳು. ಆಗ ಸತ್ಯವಂತನಾದ ದಶರಥರಾಯನು ತನ್ನ ಭಾರ್ಯೆಯಾದ ಕೈಕೇಯಿಯು ನುಡಿದ ಅಪ್ರಿಯವಾದ ಕ್ರೂರ ವಾಕ್ಯಗಳನ್ನು ಕೇಳಿ, ತಾನು ಹಿಂದೆ ಆಕೆಗೆ ವರವಾಗಿ ಕೊಟ್ಟಿದ್ದ ಮಾತನ್ನು ನೆನೆದುಕೊಂಡು

ಧರ್ಮೇ ವ್ಯವಸ್ಥಿತಃ । ಜ್ಯೇಷ್ಠಂ ಯಶಸ್ವಿನಂ ಪುತ್ರಂ ರುದನ್ರಾಜ್ಯಮಯಾಚತ ॥೨೩॥ ಸಪಿತುರ್ವಚನಂ ಶ್ರೀಮಾನಭಿಷೇಕಾತ್ಪರಂ ಪ್ರಿಯಂ । ಮನಸಾ ಪೂರ್ವಮಾಸಾದ್ಯ ವಾಚಾ ಪ್ರತಿಗೃಹೀತವಾನ್ ॥ ೨೪ ॥ ದದ್ಯಾನ್ನಪ್ರತಿಗೃಹ್ಣೀಯಾನ್ನಬ್ರೂಯಾತ್ಕಿಂಚಿದಪ್ರಿಯಂ । ಅಪಿ ಜೀವಿತಹೇತೋರ್ವಾ ರಾಮಸ್ಸತ್ಯಪರಾಕ್ರಮಃ ॥ ೨೫ ॥ ಸವಿಧಾಯೋತ್ತರೀಯಾಣಿ ಮಹಾರ್ಹಾಣಿ ಮಹಾಯಶಾಃ । ವಿಸೃಜ್ಯ ಮನಸಾ ರಾಜ್ಯಂ ಜನನ್ಯೈಮಾಂ ಸಮಾದಿಶತ್ ॥ ೨೬ ॥ ಸಾಽಹಂ ತಸ್ಯಾಗ್ರತಸ್ತೂರ್ಣಂ ಪ್ರಸ್ಥಿತಾ ವನಚಾರಿಣೀ । ನಹಿ ಮೇ ತೇನ ಹೀನಾಯಾ ವಾಸಸ್ಸ್ವರ್ಗೇಽಪಿ ರೋಚತೇ ॥ ೨೭ ॥

ನಾದ, ಸತ್ಯೇ - ಸತ್ಯದಲ್ಲಿಯೂ, ಧರ್ಮೇ - ಧರ್ಮದಲ್ಲಿಯೂ, ವ್ಯವಸ್ಥಿತಃ-ಇರುವ, ರಾಜಾ - ದಶರಥರಾಯನು, ರುದನ್ - ಅಳುತ್ತ, ಯಶಸ್ವಿನಂ - ಕೀರ್ತಿಶಾಲಿಯಾದ, ಜ್ಯೇಷ್ಠಂಪುತ್ರಂ - ಹಿರಿಮಗನನ್ನು ಕುರಿತು, ರಾಜ್ಯಂ - ಧೊರೆತನವನ್ನು, ಅಯಾಚತ - ಕೇಳಿಕೊಂಡನು. ॥ ೨೩ ॥ ಶ್ರೀಮಾನ್ - ಸಂಪದ್ಯುಕ್ತನಾದ, ಸಃ - ಆ ಶ್ರೀರಾಮನು, ಅಭಿಷೇಕಾತ್ - ಪಟ್ಟಾಭಿಷೇಕಕ್ಕಿಂತಲೂ, ಪರಂಪ್ರಿಯಂ - ಬಹಳ ಇಷ್ಟವಾದ, ಪಿತುರ್ವಚನಂ - ತಂದೆಯಮಾತನ್ನು, ಮನಸಾ - ಮನದಿಂದ, ಪೂರ್ವಂ - ಮೊದಲೇ, ಆಸಾದ್ಯ - ಒಪ್ಪಿಕೊಂಡು, ವಾಚಾ - ಮಾತಿನಿಂದಲೇ, ಪ್ರತಿಗೃಹೀತವಾನ್ - ಅಂಗೀಕರಿಸಿದನು. ॥ ೨೪ ॥ ಸತ್ಯಪರಾಕ್ರಮಃ - ಯಥಾರ್ಥಪರಾಕ್ರಮವುಳ್ಳ, ರಾಮಃ - ಶ್ರೀರಾಮನು, ಜೀವಿತಹೇತೋರ್ವಾ - ಬದುಕುವನಿಮಿತ್ತವಾಗಿಯಾದರೂ, ದದ್ಯಾತ್ - ಕೊಡುವನು, ನಪ್ರತಿಗೃಹ್ಣೀಯಾತ್ - ತೆಗದುಕೊಳ್ಳಲಾರನು, ಅಪ್ರಿಯಂ - ಇಷ್ಟವಿಲ್ಲದಿರುವಮಾತನ್ನು, ಕಿಂಚಿದಪಿ - ಸ್ವಲ್ಪವಾದರೂ, ನಬ್ರೂಯಾತ್-ಹೇಳಲಾರನು. ॥ ೨೫ ॥ ಮಹಾಯಶಾಃ-ಮಹಾಕೀರ್ತಿಸಂಪನ್ನನಾದ, ಸಃ-ಆ ಶ್ರೀರಾಮನು, ಮಹಾರ್ಹಾಣಿ - ಅಮೂಲ್ಯಗಳಾದ, ಉತ್ತರೀಯಾಣಿ - ವಸ್ತ್ರಗಳನ್ನೂ, ರಾಜ್ಯಂ - ರಾಜ್ಯವನ್ನೂ, ಮನಸಾ - ಮನದಿಂದ, ವಿಸೃಜ್ಯ - ಬಿಟ್ಟು, ಜನನ್ಯೈ - ತಾಯಿಯಾದ ಕೌಸಲ್ಯಾದೇವಿಗೆ, ಮಾಂ - ನನ್ನನ್ನು, ಸಮಾದಿಶತ್ - ಒಪ್ಪಿಸಿದನು. ॥ ೨೬ ॥ ಸಾಹಂ - ಆ ಪ್ರಕಾರವಾಗಿ ಒಪ್ಪಿಸಲ್ಪಟ್ಟ ನಾನು,

---

ಮೂರ್ಛೆಯೊಂದಿದನು. ಮಹಾ ಸತ್ಯಸಂಧನೂ, ಧರ್ಮಬುದ್ಧಿಯುಳ್ಳವನೂ, ವೃದ್ಧನೂ ಆದ ಆ ರಾಯನು ಸ್ವಲ್ಪಹೊತ್ತಿನಮೇಲೆ ಮೂರ್ಛೆ ತಿಳಿದೆದ್ದು ಜ್ಯೇಷ್ಠಪುತ್ರನಾದ ಶ್ರೀರಾಮನನ್ನು ಕುರಿತು, ತಾನಿತ್ತರಾಜ್ಯವನ್ನು ಮರಳಿ ತನಗೆ ಕೊಡಬೇಕೆಂದು ಯೋಚಿಸಿದನು. ಆಗ ಶ್ರೀಮಂತನಾದ ಶ್ರೀರಾಮನು ಪಟ್ಟಾಭಿಷೇಕಕ್ಕಿಂತಲೂ ಮಿಗಿಲಾದ ತಂದೆಯ ಮಾತನ್ನು ಮನಃಪೂರ್ವಕವಾಗಿ ಅನುಮೋದಿಸಿ ಆತನಿಗೆ ರಾಜ್ಯವನ್ನು ಹಿಂತಿರುಗಿ ಕೊಟ್ಟುಬಿಟ್ಟನು. ನನ್ನ ಭರ್ತನಾದ ಶ್ರೀರಾಮನು ಸಾರ್ಥಕವಾದ ಪರಾಕ್ರಮವುಳ್ಳವನು ; ತನ್ನ ಪ್ರಾಣವು ಕಳೆದುಹೋದರೂ ಒಬ್ಬರಿಂದ ಒಂದು ಪದಾರ್ಥವನ್ನು ಸ್ವೀಕರಿಸನು. ಯಾರು ಏನನ್ನು ಕೋರಿದರೂ ಕೊಟ್ಟುಬಿಡುವನು. ಇತರರಿಗೆ ಅಪ್ರಿಯವಾದ ಮಾತುಗಳನ್ನೆಂದಿಗೂ ಆತನು ಆಡನು. ॥ ೨೧–೨೫ ॥ ಹೀಗೆ ಮಹಾ ಕೀರ್ತಿವಂತನಾದ ಆ ಶ್ರೀರಾಮನು ತನಗೆ ಬರಬೇಕಾದ ರಾಜ್ಯೈಶ್ವರ್ಯವನ್ನು ಬಿಟ್ಟುಕೊಟ್ಟು, ಅಮೂಲ್ಯವಾದ ವಸ್ತ್ರಭೂಷಣಾದಿಗಳನ್ನು ತ್ಯಜಿಸಿ, ನಾರುಮಡಿಗಳನ್ನುಟ್ಟು, ಮನಸ್ಸಿನಲ್ಲಿಯೂ ರಾಜ್ಯವನ್ನು ಕುರಿತು ಚಿಂತಿಸದವನಾಗಿ ನನ್ನನ್ನು ತನ್ನ ತಾಯಿಯಾದ ಕೌಸಲ್ಯಾದೇವಿಗೊಪ್ಪಿಸಿದನು. ಆಗ ನಾನು ವನಸಂಚಾರದಲ್ಲಿ

¶ ಪ್ರಾಗೇವ ತು ಮಹಾಭಾಗ ಸ್ಸೌಮಿತ್ರಿರ್ಮಿತ್ರನಂದನಃ । ಪೂರ್ವಜಸ್ಯಾನುಯಾತ್ರಾರ್ಥೇ ದ್ರುಮಚೀರೈರಲಂಕೃತಃ ॥ ೨೮ ॥ ತೇ ವಯಂ ಭರ್ತುರಾದೇಶಂ ಬಹುಮಾನ್ಯ ದೃಢವ್ರತಾಃ । ಪ್ರವಿಷ್ಟಾಸ್ಮ ಪುರಾದೃಷ್ಟಂ ವನಂ ಗಂಭೀರದರ್ಶನಂ ॥ ೨೯ ॥ ವಸಂತೋ ದಂಡಕಾರಣ್ಯೇ ತಸ್ಯಾಹ ಮಮಿತೌಜಸಃ । ರಕ್ಷಸಾಪಹೃತಾ ಭಾರ್ಯಾ ರಾವಣೇನ ದುರಾತ್ಮನಾ ॥ ೩೦ ॥

ತಸ್ಯ-ಆ ಶ್ರೀರಾಮನ, ಅಗ್ರತಃ-ಮುಂದೆ, ವನಚಾರಿಣೀ-ವನದಲ್ಲಿ ಸಂಚರಿಸುವವಳಾಗಿ, ತೂರ್ಣಂ-ಜಾಗ್ರತೆಯಾಗಿ, ಪ್ರಸ್ಥಿತಾ - ಹೊರಟೆನು, ಹಿ - ಯಾವಕಾರಣದಿಂದ, ತೇನ - ಆ ಶ್ರೀರಾಮನಿಂದ, ಹೀನಾಯಾಃ - ರಹಿತಳಾದ, ಮೇ - ನನಗೆ, ಸ್ವರ್ಗೇಽಪಿ - ಸ್ವರ್ಗದಲ್ಲಿಯಾದರೂ, ವಾಸಃ - ನಿವಾಸವು, ನರೋಚತೇ - ಇಷ್ಟವಿಲ್ಲವು. ॥ ೨೭ ॥ ಮಹಾಭಾಗಃ - ಮಹಾನುಭಾವನಾದ, ಮಿತ್ರನಂದನಃ - ಸ್ನೇಹಿತರನ್ನು ಸಂತೋಷಗೊಳಿಸುತ್ತಿರುವ, ಸೌಮಿತ್ರಿಃ - ಲಕ್ಷ್ಮಣನು, ಪೂರ್ವಜಸ್ಯ - ಅಣ್ಣನಾದ ಶ್ರೀರಾಮನ, ಅನುಯಾತ್ರಾರ್ಥೇ - ಸಂಗಡಬರುವದಕ್ಕೋಸ್ಕರ, ದ್ರುಮಚೀರೈಃ - ನಾರುಮಡಿಗಳಿಂದ, ಪ್ರಾಗೇವತು - ಮೊದಲೇ, ಅಲಂಕೃತಃ - ಅಲಂಕರಿಸಲ್ಪಟ್ಟನು. ॥ ೨೮ ॥ ತೇವಯಂ - ಆ ನಾವು ಮೂವರೂ, ದೃಢವ್ರತಾಃ - ನಿಶ್ಚಯವ್ರತ ಉಳ್ಳವರಾಗಿ, ಭರ್ತುಃ - ಪ್ರಭುವಾದ ದಶರಥನ, ಆದೇಶಂ - ಅಪ್ಪಣೆಯನ್ನು, ಬಹುಮಾನ್ಯ - ಗೌರವಿಸಿ, ಪುರಾದೃಷ್ಟಂ - ಮೊದಲುಕಾಣದಿರುವ, ಗಂಭೀರದರ್ಶನಂ - ಪ್ರವೇಶಿಸುವದಕ್ಕೆ ಅಶಕ್ಯವಾದ ನೋಟವುಳ್ಳ, ವನಂ - ಅರಣ್ಯವನ್ನು, ಪ್ರವಿಷ್ಟಾಸ್ಮ - ಪ್ರವೇಶಿಸಿದೆವಷ್ಟೆ. ॥ ೨೯ ॥ ದಂಡಕಾರಣ್ಯೇ - ದಂಡಕಾರಣ್ಯದಲ್ಲಿ, ವಸತಃ - ಇರುತ್ತಿರುವ, ಅಮಿತೌಜಸಃ - ಮಹಾಪರಾಕ್ರಮಿಯಾದ, ತಸ್ಯ - ಆ ಶ್ರೀರಾಮನ, ಭಾರ್ಯಾ - ಹೆಂಡತಿಯಾದ, ಅಹಂ - ನಾನು, ರಕ್ಷಸಾ -

---

ಬಹಳವಾದ ಆಶೆಯುಳ್ಳವಳಾಗಿ, ಬಹುಬೇಗನೆ, ನನ್ನಪತಿಯಾದ ಶ್ರೀರಾಮನಿಗಿಂತಲೂ ಮುಂದಾಗಿ ಹೊರಟೆನು. ಇದಕ್ಕೆ ಬೇರೊಂದು ಕಾರಣವೂ ಉಂಟು. ನಾನು ರಾಮನನ್ನಗಲಿ ಸ್ವರ್ಗವಾಸವನ್ನಾದರೂ ಬಯಿಸೆನು. ಇದಕ್ಕೆ ಮೊದಲೇ ಮಹಾ ಪೂಜ್ಯವಾದ ಸ್ವಭಾವವುಳ್ಳವನೂ, ಸುಮಿತ್ರಾನಂದವರ್ಧನನೂ ಆದ ಲಕ್ಷ್ಮಣನು ತನ್ನ ಅಣ್ಣನನ್ನು ಹಿಂಬಾಲಿಸಿ ಅರಣ್ಯಕ್ಕೆ ತೆರಳಲು ನಾರುಮಡಿಗಳನ್ನುಟ್ಟಿದ್ದನು. ಹೀಗೆ ನಾವು ಮೂವರೂ ನಾರುಮಡಿಗಳನ್ನುಟ್ಟು ಪ್ರಭುವಾದ ದಶರಥರಾಯನ ಆಜ್ಞೆಯನ್ನು ಗೌರವಿಸಲೋಸುಗ ದೃಢವಾದ ವ್ರತವನ್ನು ಕೈಕೊಂಡು ಹಿಂದಾವಾಗಲೂ ಗುರ್ತರಿಯದ ಬಹು ಗಭೀರವಾದ ಅರಣ್ಯವನ್ನು

¶ ಇಲ್ಲಿನ ವಿಶೇಷಾರ್ಥ:— (ಪ್ರಾಗೇವ) ಲಕ್ಷ್ಮಣನು ರಾಮನಿಗಿಂತಲೂ ಮೊದಲೇ ನಾರುಮಡಿಯನ್ನುಟ್ಟು ವನವಾಸಕ್ಕೆ ಸಿದ್ಧವಾದನೆಂದು ಅಭಿಪ್ರಾಯ. ಹಿಂದೆ ರಾಮನು ನಾರುಮಡಿಯನ್ನುಟ್ಟ ಬಳಿಕ ಲಕ್ಷ್ಮಣನುಟ್ಟನೆಂದು ಹೇಳಿದೆಯಾದರೂ ಇಲ್ಲಿ ರಾಮಸೇವಾನಿರತನಾದ ಲಕ್ಷ್ಮಣನ ತ್ವರಾತಿಶಯವನ್ನು ಸೂಚಿಸುವುದಕ್ಕಾಗಿಯೇ ಹೀಗೆ ಹೇಳಿರುವುದಾಗಿ ಗ್ರಹಿಸಬೇಕು. (ಮಹಾಭಾಗಃ) "ಅಹಂಸರ್ವಂಕರಿಷ್ಯಾಮಿ" ಎಂದು ರಾಮನನ್ನುಪಚರಿಸುವುದರಲ್ಲಿ ತಾನೆಸಗಿದ ಪ್ರತಿಜ್ಞೆಯಂತೆ ಆತನ ಸೇವಾಚರಣೆಗಾಗಿ ತಾನೊಬ್ಬನೇ ಅತನೊಡಗೂಡಿ ಅರಣ್ಯವಾಸ ಕಾಲದಲ್ಲಿ ಆತನ ಪರಿಚರ್ಯೆಯನ್ನು ಮಾಡುವ ಭಾಗ್ಯವುಳ್ಳವನು. "ಸೃಷ್ಟಸ್ತ್ವಂವನವಾಸಾಯ" ಎಂದು ಹೇಳಿದ ಮಹನೀಯಳಾದ ಸುಮಿತ್ರೆಯ ಮಗನು (ಸೌಮಿತ್ರಿಃ) ಭಗವಂತನ ಕೈಂಕರ್ಯವನ್ನು ಮಾಡುವುದರಲ್ಲಿ ಆಸಕ್ತರಾಗಿರುವ ಭಕ್ತರ ಮನಸನ್ನಾನಂದ ಪಡಿಸುವನು. (ಮಿತ್ರನಂದನಃ) ಅಣ್ಣನಾದ ಶ್ರೀರಾಮನ ವೇಷಕ್ಕೆ ತಕ್ಕಂತೆ ತಾನೂ ಆ ನಾರುಡಿಯುನ್ನುಡುವುದೇ ತನಗೆ ಪರಮಾಲಂಕಾರವೆಂದು ಭಾವಿಸಿರುವವನು. (ಗೋ)

ದ್ವೌ ಮಾಸೌ ತೇನ ಮೇ ಕಾಲೋ
ಜೀವಿತಾನುಗ್ರಹಃ ಕೃತಃ ।
ಊರ್ಧ್ವಂ ದ್ವಾಭ್ಯಾಂತು ಮಾಸಾಭ್ಯಾಂ
ತತಸ್ತ್ಯಕ್ಷ್ಯಾಮಿ ಜೀವಿತಂ" ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯಸ್ತ್ರಿಂಶಸ್ಸರ್ಗಃ

ರಕ್ಕಸನಾದ, ದುರಾತ್ಮನಾ - ದುಷ್ಟಬುದ್ಧಿಯುಳ್ಳ, ರಾವಣೇನ - ರಾವಣನಿಂದ, ಅಪಹೃತಾ - ಅಪಹರಿಸಲ್ಪಟ್ಟೆನು. ॥ ೩೦ ॥ ದ್ವೌಮಾಸೌ - ಎರಡುತಿಂಗಳ, ಕಾಲಃ - ಕಾಲವು, ತೇನ - ಆ ರಾವಣನಿಂದ, ಮೇ - ನನಗೆ, ಜೀವಿ....ಹಃ - ಬದುಕುವದಕ್ಕೆ ಅಪ್ಪಣೆಯು, ಕೃತಃ - ಮಾಡಲ್ಪಟ್ಟಿತು, ದ್ವಾಭ್ಯಾಂಮಾಸಾಭ್ಯಾಂಊರ್ಧ್ವಂ - ಎರಡುತಿಂಗಳು ಕಳೆದಮೇಲೆ, ತತಃ-ಅನಂತರದಲ್ಲಿ, ಜೀವಿತಂ - ಪ್ರಾಣವನ್ನು, ತ್ಯಕ್ಷ್ಯಾಮಿ - ನನ್ನಷ್ಟಕ್ಕೆ ನಾನೇಬಿಡುವೆನು. ॥ ೩೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಯಸ್ತ್ರಿಂಶಸ್ಸರ್ಗಃ

ಪ್ರವೇಶಿಸಿದೆವು. ಹೀಗೆ ಅರಣ್ಯವನ್ನು ಪ್ರವೇಶಿಸಿದ ಮಹಾ ಪರಾಕ್ರಮಿಯಾದ ಶ್ರೀರಾಮನ ಪ್ರಿಯಪತ್ನಿಯಾದ ನನ್ನನ್ನು ದುರಾತ್ಮನಾದ ರಾವಣಾಸುರನು ಕಪಟದಿಂದ ಕದ್ದು ತಂದನು. ಆ ದುರುಳ ರಾವಣನು ನನಗೆ ಇನ್ನೆರಡು ತಿಂಗಳುಗಳ ಅವಧಿಯನ್ನು ಕೊಟ್ಟಿರುವನು. ಆ ಎರಡು ತಿಂಗಳುಗಳು ಕಳೆದಬಳಿಕ ನಾನೆಷ್ಟು ಮಾತ್ರಕ್ಕೂ ಜೀವಿಸಲಾರೆನು." ಎಂದು ಹೇಳಿದಳು. ॥ ೨೬–೩೦ ॥

ಇಂತಿದು ಸೀತಾಕಥಿತ ಸ್ವವೃತ್ತಾಂತನಿರೂಪಣವೆಂಬ ಮೂವತ್ತಮೂರನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಚತುಸ್ತ್ರಿಂಶಸ್ಸರ್ಗಃ

ತಸ್ಯಾಸ್ತದ್ವಚನಂ ಶ್ರುತ್ವಾ ಹನುಮಾನ್ ಹರಿಯೂಥಪಃ । ದುಃಖಾದ್ದುಃಖಾಭಿಭೂತಾಯಾ ಸ್ಸಾಂತ್ವಮುತ್ತರಮಬ್ರವೀತ್ ॥ ೧ ॥ "ಅಹಂ ರಾಮಸ್ಯ ಸಂದೇಶಾದ್ದೇವಿ! ದೂತಸ್ತವಾಗತಃ । ವೈದೇಹಿ! ಕುಶಲೀ ರಾಮ ಸ್ತ್ವಾಂಚ ಕೌಶಲಮಬ್ರವೀತ್ ॥ ೨ ॥ ಯೋ ಬ್ರಾಹ್ಮಮಸ್ತ್ರಂ ವೇದಾಂಶ್ಚ ವೇದವೇದವಿದಾಂ ವರಃ । ಸ ತ್ವಾಂ ದಾಶರಥೀ ರಾಮೋ ದೇವಿ! ಕೌಶಲಮಬ್ರವೀತ್ ॥ ೩ ॥ ಲಕ್ಷ್ಮಣಶ್ಚ ಮಹಾತೇಜಾ ಭರ್ತುಸ್ತೇಽನುಚರಃ ಪ್ರಿಯಃ । ಕೃತವಾನ್ ಶೋಕಸಂತಪ್ತ ಶ್ಶಿರಸಾ ತೇಽಭಿವಾದನಂ"

ಹರಿಯೂಥಪಃ - ವಾನರೋತ್ತಮನಾದ, ಹನುಮಾನ್ - ಆಂಜನೇಯನು, ದುಃಖಾ....ಯಾಃ - ವ್ಯಸನದಿಂದ ವ್ಯಸನವನ್ನೇಹೊಂದಿದ, ತಸ್ಯಾಃ - ಆ ಸೀತಾದೇವಿಯ, ತದ್ವಚನಂ - ಆ ವಾಕ್ಯವನ್ನು, ಶ್ರುತ್ವಾ - ಕೇಳಿ, ಸಾಂತ್ವಂ - ಮೆಲ್ಲನೆ, ಉತ್ತರಂ - ಪ್ರತ್ಯುತ್ತರವನ್ನು, ಅಬ್ರವೀತ್ - ನುಡಿದನು. ॥ ೧ ॥ ಹೇ ದೇವಿ - ಓ ತಾಯಿಯೇ, ಅಹಂ - ನಾನು, ರಾಮಸ್ಯ - ಶ್ರೀರಾಮನ, ಸಂದೇಶಾತ್ - ಆಜ್ಞೆಯಿಂದ, ತವ - ನಿನ್ನ, ಸವಿಧಂ - ಬಳಿಗೆ, ಆಗತಃ - ಬಂದೆನು, ಹೇ ವೈದೇಹಿ - ಓ ಸೀತಾ ದೇವಿಯೇ, ರಾಮಃ - ಶ್ರೀರಾಮ, ಕುಶಲೀ - ಕ್ಷೇಮವು, ತ್ವಾಂ - ನಿನ್ನನ್ನು ಕುರಿತು, ಕೌಶಲಂಚ - ಕುಶಲಪ್ರಶ್ನೆಯನ್ನೂ, ಅಬ್ರವೀತ್ - ಹೇಳಿದನು. ॥ ೨ ॥ ವೇದವಿದಾಂ - ವೇದಾರ್ಥವನ್ನು ತಿಳಿದವರಲ್ಲಿ, ವರಃ - ಶ್ರೇಷ್ಠನಾದ, ಯಃ-ಯಾವರಾಮನು, ಬ್ರಾಹ್ಮಮಸ್ತ್ರಂ-ಬ್ರಹ್ಮಾಸ್ತ್ರವನ್ನೂ, ವೇದಾಂಶ್ಚ- ವೇದಗಳನ್ನೂ, ವೇದ - ಬಲ್ಲನೋ, ಹೇ ದೇವಿ - ಓ ಸೀತಾದೇವಿಯೆ, ದಾಶರಥಿಃ - ದಶರಥಪುತ್ರನಾದ, ಸರಾಮಃ - ಆ ಶ್ರೀರಾಮನು, ತ್ವಾಂ - ನಿನ್ನನ್ನು ಕುರಿತು, ಕೌಶಲಂ - ಕುಶಲಪ್ರಶ್ನೆಯನ್ನು, ಅಬ್ರವೀತ್ - ಹೇಳಿದನು. ॥ ೩ ॥ ಮಹಾತೇಜಾಃ - ಮಹಾಪರಾಕ್ರಮಿಯಾದ, ತೇಭರ್ತುಃ - ನಿನ್ನ ಪತಿಗೆ, ಅನುಚರಃ - ಸೇವಕನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ ಕೂಡ, ಶೋಕಸಂತಪ್ತಃ - ದುಃಖದಿಂದ ಕುದ್ದಮನಸ್ಸುಳ್ಳವನಾಗಿ, ಶಿರಸಾ - ಶಿರಸ್ಸಿನಿಂದ, ತೇ - ನಿನಗೆ, ಅಭಿವಾದನಂ - ನಮಸ್ಕಾರ

ಕಪಿಯೂಥಪತಿಯಾದ ಮಾರುತಿಯು ವ್ಯಸನಸಂತಪ್ತಳಾದ ಜಾನಕಿಯ ಮಾತುಗಳನ್ನು ಕೇಳಿ, ತಾನೂ ವ್ಯಸನಪಟ್ಟವನಾಗಿ, ಆಕೆಯನ್ನು ಸಮಾಧಾನಗೊಳಿಸುವುದಕ್ಕೋಸ್ಕರ ಬಹುವಿನಯದಿಂದ ಹೀಗೆಂದನು. "ಓ ಸೀತಾದೇವಿಯೇ! ನಾನು ಶ್ರೀರಾಮನ ಆಜ್ಞಾಧಾರಕನಾದ ದೂತನು. ಆತನ ಆಜ್ಞೆಯಿಂದಲೇ ನಿನ್ನನ್ನು ಹುಡುಕುವುದಕ್ಕಾಗಿ ಇಲ್ಲಿಗೈತಂದೆನು. ಎಲೌ ವೈದೇಹಿಯೇ! ಶ್ರೀರಾಮಚಂದ್ರನು ಕುಶಲದಿಂದಿರುವನು. ತಾನು ಕ್ಷೇಮವಾಗಿರುವ ಸಂಗತಿಯನ್ನು ನಿನ್ನೊಡನೆ ಹೇಳೆಂದು ನನಗೆ ಆಜ್ಞಾಪಿಸಿರುವನು. ಎಲೆ ತಾಯೇ! ಬ್ರಹ್ಮಾಸ್ತ್ರ ಸಂಯೋಜನೆಯಲ್ಲಿ ನಿಷ್ಣಾತನಾದವನೂ, ವೇದವನ್ನರಿತವರಲ್ಲಿ ಶ್ರೇಷ್ಠನಾದವನೂ, ಆತ್ಮಜ್ಞಾನಿಯಾದವನೂ, ದಶರಥರಾಜ ಕುಮಾರನೂ ಆದ ಶ್ರೀರಾಮನು ನಿನಗೆ ಕ್ಷೇಮವನ್ನು ಹೇಳಿಕಳುಹಿಸಿರುವನು. ಆ ನಿನ್ನ ಪತಿಗೆ ಪ್ರಿಯಕರವಾಗಿ, ನಿರಂತರವೂ ಆತನೊಡನೆಯೇ ಸಂಚರಿಸುತ್ತಿರುವ ಮಹಾ ತೇಜಸ್ವಿಯಾದ ಲಕ್ಷ್ಮಣಸ್ವಾಮಿಯೂ ನಿನ್ನ ವಿಷಯ

॥ ೪ ॥ ಸಾ ತಯೋಃ ಕುಶಲಂ ದೇವೀ ನಿಶಮ್ಯ ನರಸಿಂಹಯೋಃ । ಪ್ರೀತಿಸಂಹೃಷ್ಟ ಸರ್ವಾಂಗೀ ಹನೂಮಂತ ಮಥಾಬ್ರವೀತ್ ॥೫॥ "ಕಲ್ಯಾಣೀ ಬತ ಗಾಥೇಯಂ ಲೌಕಿಕೀ ಪ್ರತಿಭಾತಿ ಮಾ । ಏತೀ ಜೀವಂತಮಾನಂದೋ ನರಂ ವರ್ಷಶತಾದಪಿ" ॥ ೬ ॥ ತಯಾ ಸಮಾಗತೇ ತಸ್ಮಿನ್ ಪ್ರೀತಿರುತ್ಪಾದಿತಾದ್ಭುತಾ । ಪರಸ್ಪರೇಣಚಾಲಾಪಂ ವಿಶ್ವಸ್ತೌ ತೌ ಪ್ರಚಕ್ರತುಃ ॥ ೭ ॥ ತಸ್ಯಾಸ್ತದ್ವಚನಂ ಶ್ರುತ್ವಾ ಹನುಮಾನ್ ಹರಿಯೂಥಪಃ । ಸೀತಾಯಾಶ್ಶೋಕದೀನಾಯಾಸ್ಸಮೀಪಮುಪಚಕ್ರಮೇ ॥ ೮ ॥ ಯಥಾ

ವನ್ನು, ಕೃತವಾನ್ - ಮಾಡಿದನು. ॥ ೪ ॥ ಸಾದೇವೀ - ಆ ಸೀತಾದೇವಿಯು, ನರಸಿಂಹಯೋಃ - ನರವರರಾದ, ತಯೋಃ - ಆ ರಾಮಲಕ್ಷ್ಮಣರ, ಕುಶಲಂ - ಕ್ಷೇಮವನ್ನು, ನಿಶಮ್ಯ - ಕೇಳಿ, ಪ್ರೀತಿ.... ಗೀ - ಸಂತೋಷದಿಂದ ರೋಮಾಂಚನವುಳ್ಳವಳಾಗಿ, ಹನುಮಂತಂ - ಆಂಜನೇಯನನ್ನು ಕುರಿತು, ಅಥ - ಬಳಿಕ, ಅಬ್ರವೀತ್ - ನುಡಿದಳು. ॥ ೫ ॥ ಆನಂದಃ - ಸಂತೋಷವು, ಜೀವಂತಂ - ಬದುಕಿರುವ, ನರಂ - ಮನುಷ್ಯನನ್ನು, ವರ್ಷಶತಾದಪಿ - ನೂರುವರುಷದಮೇಲಾದರೂ, ಏತಿ - ಹೊಂದುವುದು, ಇತಿ-ಎಂಬ, ಕಲ್ಯಾಣೀ ಸತ್ಯಾರ್ಥವುಳ್ಳ, ಲೌಕಿಕೀ-ಸರ್ವಜನಸಾಧಾರಣವಾದ, ಇಯಂಗಾಥಾ-ಈಗಾದೆಯು, ಮಾಂ - ನನ್ನನ್ನು ಕುರಿತು ಹುಟ್ಟಿದ್ದೆಂದು, ಪ್ರತಿಭಾತಿ - ತೋರುತ್ತದೆ. ॥ ೬ ॥ ತಯಾ - ಆ ಸೀತಾದೇವಿಯೊಡನೆ, ಸಮಾಗತೇ - ಸೇರಿರುವ, ತಸ್ಮಿನ್ - ಆ ಆಂಜನೇಯನ ವಿಷಯದಲ್ಲಿ, ಅದ್ಭುತಾ - ಆಶ್ಚರ್ಯಕರವಾದ, ಪ್ರೀತಿಃ - ವಿಶ್ವಾಸವು, ಉತ್ಪಾತಾ - ಹುಟ್ಟಿಸಲ್ಪಟ್ಟಿತು, ತೌ - ಆ ಸೀತಾ ಹನುಮಂತರಿಬ್ಬರೂ, ವಿಶ್ವಸ್ತೌ - ನಂಬುಗೆಯುಳ್ಳವರಾಗಿ, ಪರಸ್ಪರೇಣ - ಒಬ್ಬರಿಗೊಬ್ಬರು, ಆಲಾಪಂಚ - ಮುಂದೆ ಹೇಳುವ ಮಾತುಗಳನ್ನು, ಪ್ರಚಕ್ರತುಃ - ನುಡಿದರು. ॥ ೭ ॥ ಶೋಕದೀನಾಯಾಃ - ಅಂತಸ್ತಾಪದಿಂದ ದೀನಳಾದ, ತಸ್ಯಾಸ್ಸೀತಾಯಾಃ - ಆ ಸೀತಾದೇವಿಯ, ತದ್ವಚನಂ - ಆ ಮಾತನ್ನು, ಹರಿಯೂಥಪಃ - ಕಪಿಶ್ರೇಷ್ಠನಾದ, ಹನುಮಾನ್ - ಆಂಜನೇಯನು, ಶ್ರುತ್ವಾ - ಕೇಳಿ, ಸಮೀಪಂ - ಬಳಿಗೆ, ಉಪಚಕ್ರಮೇ - ಬಂದನು. ॥ ೮ ॥ ಸಹನುಮಾನ್ - ಆ ಆಂಜನೇಯನು, ಯಥಾಯಥಾ - ಹೇಗೆಹೇಗೆ, ಸಮೀಪಂ - ಹತ್ತಿರಹತ್ತಿರ, ಉಪಸರ್ಪತೇ - ಬಂದನೋ, ತಥಾತಥಾ -

ವಾಗಿ ಯೋಚಿಸಿ ದುಃಖದಿಂದ ತಪಿಸುವವನಾಗಿ ತನ್ನ ನಮಸ್ಕಾರಗಳನ್ನು ನಿನಗೆ ಸಲ್ಲಿಸಬೇಕೆಂದು ಹೇಳಿ ಕಳುಹಿಸುವನು." ಹೀಗೆ ನುಡಿದ ಹನುಮಂತನಿಂದ ಪುರುಷೋತ್ತಮರಾದ ಶ್ರೀರಾಮ ಲಕ್ಷ್ಮಣರ ಕುಶಲವಾರ್ತೆಯನ್ನು ಕೇಳಿ ಅತ್ಯಂತ ಸಂತೋಷ ಹೊಂದಿದ ಜಾನಕಿಯು ಆತನನ್ನು ಕುರಿತು, "ಎಲೈ ವಾನರೋತ್ತಮನೇ! "ಮನುಷ್ಯನು ಮೃತಿಯೊಂದದೆ ಜೀವಿಸಿದ್ದರೆ ನೂರುವರ್ಷಗಳಿಗಾದರೂ ಒಂದುಸಲ ಸುಖಸಂತೋಷಗಳನ್ನು ಕಂಡೇಕಾಣುವನು." ಎಂಬ ಜನರ ಹೇಳಿಕೆಯು ಯಥಾರ್ಥವೆಂದೇ ನನಗೆ ತೋರುವುದು. ಆಃ! ಇದು ನನಗೆ ಪರಮಸಂತೋಷಕರವಾದುದು" ಎಂದು ಹೇಳಿದಳು. ॥ ೧-೬ ॥ ಅಲ್ಲದೆ ಶ್ರೀರಾಮನ ಕಡೆಯಿಂದ ಕುಶಲವಾರ್ತೆಯನ್ನುತಂದಿರುವ ಹನುಮಂತನನ್ನು ಚೆನ್ನಾಗಿ ವೀಕ್ಷಿಸಿ ಆತನು ಹೇಳಿದ ಕ್ಷೇಮವಾರ್ತೆಯಿಂದಲೇ ಆ ಸೀತಾದೇವಿಯು ಪರಮಸಂತುಷ್ಟಳಾದಳು. ಆ ಮೇಲೆ ಕಪಿಸಿಂಹನಾದ ಮಾರುತಿಯೂ, ಸೀತಾದೇವಿಯೂ ಒಬ್ಬರಿಗೊಬ್ಬರು ಸಂಪೂರ್ಣ ನಂಬುಗೆಯುಳ್ಳವರಾಗಿ ಒಬ್ಬರೊಡನೊಬ್ಬರು ಕಷ್ಟಸುಖಗಳ ಮಾತುಗಳನ್ನಾಡಲಾರಂಭಿಸಿದರು. ವ್ಯಸನದಿಂದ ಕುಗ್ಗಿದ ಆ ಜಾನಕಿಯು ನುಡಿಯುವ ಮಾತುಗಳನ್ನು ಕೇಳುತ್ತ ಪವನ

ಯಥಾ ಸಮೀಪಂ ಸ ಹನುಮಾನುಪಸರ್ಪತಿ । ತಥಾ ತಥಾ ರಾವಣಂ ಸಾ ತಂ ಸೀತಾ ಪರಿಶಂಕತೇ ॥ ೯ ॥ " ಅಹೋ! ಧಿಗ್ದುಷ್ಕೃತಮಿದಂ ಕಥಿತಂ ಹಿ ಯದಸ್ಯ ಮೇ । ರೂಪಾಂತರಮುಪಾಗಮ್ಯ ಸ ಏವಾಯಂ ಹಿ ರಾವಣಃ ॥ ೧೦ ॥ ತಾಮಶೋಕಸ್ಯ ಶಾಖಾಂ ಸಾ ವಿಮುಕ್ತ್ವಾ ಶೋಕಕರ್ಶಿತಾ । ತಸ್ಯಾಮೇವಾನವದ್ಯಾಂಗೀ ಧರಣ್ಯಾಂ ಸಮುಪಾವಿಶತ್ ॥ ೧೧ ॥ ಹನುಮಾನಪಿ ದುಃಖಾರ್ತಾಂ ತಾಂ ದೃಷ್ಟ್ವಾ ಭಯಮೋಹಿತಾಂ । ಅವಂದತ ಮಹಾಬಾಹುಸ್ತತಸ್ತಾಂ ಜನಕಾತ್ಮಜಾಂ । ಸಾಚೈನಂ ಭಯವಿತ್ರಸ್ತಾ ಭೂಯೋ ನೈವಾಭ್ಯುದೈಕ್ಷತ ॥ ೧೨ ॥ ತಂ ದೃಷ್ಟ್ವಾ ವಂದಮಾನಂತು

ಹಾಗೆಲ್ಲಾ, ಸಾಸೀತಾ - ಆ ಸೀತಾದೇವಿಯು, ತಂ - ಆಂಜನೇಯನನ್ನು, ರಾವಣಂ - ರಾವಣನನ್ನಾಗಿ, ಪರಿಶಂಕತೇ - ಸಂದೇಹಗೊಂಡಳು. ॥ ೯ ॥ ಅಸ್ಯ - ಈ ರಾವಣನಮುಂದೆ, ಮೇ - ನನ್ನಿಂದ, ಯತ್ಕಥಿತಂ - ಯಾವುದು ಹೇಳಲ್ಪಟ್ಟಿತೊ, ತತ್ - ಅದು, ದುಷ್ಕೃತಂ - ಕೆಟ್ಟಕೆಲಸವು, ಕೃತಂ - ಮಾಡಲ್ಪಟ್ಟಿತು, ಇದಂ - ಇದನ್ನು, ಧಿಕ್ - ನಿಂದಿಸು, ಅಹೋ - ಕಷ್ಟವು, ಯಃ - ಯಾವರಾವಣನು, (ಪೂರ್ವಂಮಾಯಯಾಸಮುಪಾಹರತ್ - ಮೊದಲು ಮಾಯೆಯಿಂದ ಅಪಹರಿಸಿಕೊಂಡುಬಂದನೋ,) ಸೋಽಯಂರಾವಣಏವ - ಅಂತಹ ಈ ರಾವಣನೇ, ರೂಪಾಂತರಂ - ಮಾರುವೇಷವನ್ನು, ಉಪಾಗಮ್ಯ - ಹೊಂದಿ, (ವರ್ತತೇ - ಇರುವನು) ॥ ೧೦ ॥ ಅನವದ್ಯಾಂಗೀ - ನಿರ್ದೋಷವಾದ ದೇಹವುಳ್ಳ, ಸಾ - ಆ ಸೀತಾದೇವಿಯು, ಅಶೋಕಸ್ಯ - ಅಶೋಕವೃಕ್ಷದ, ಶಾಖಾಂ - ರೆಂಬೆಯನ್ನು, ವಿಮುಕ್ತ್ವಾ - ಬಿಟ್ಟು, ಶೋಕಕರ್ಶಿತಾ - ದುಃಖದಿಂದ ಬತ್ತಿ, ತಸ್ಯಾಂಧರಣ್ಯಾಮೇವ - ಆ ನೆಲದಲ್ಲಿಯೇ, ಸಮುಪಾವಿಶತ್ - ಕುಳಿತುಕೊಂಡಳು. ॥ ೧೧ ॥ ಮಹಾಬಾಹುಃ - ಮಹಾಪರಾಕ್ರಮಿಯಾದ, ಹನುಮಾನಪಿ - ಆಂಜನೇಯನೂ ಕೂಡ, ದುಃಖಾರ್ತಾಂ - ವ್ಯಸನದಿಂದ ಬಾಧಿತಳಾದಕಾರಣ, ಭಯಮೋಹಿತಾಂ - ಭೀತಿಯಿಂದ ಮೈಮರೆತ, ತಾಂ - ಪ್ರಸಿದ್ಧಳಾದ, ತಾಂಜನಕಾತ್ಮಜಾಂ - ಆ ಜನಕಪುತ್ರಿಯನ್ನು, ದೃಷ್ಟ್ವಾ - ಕಂಡು, ತತಃ - ಬಳಿಕ, ಅವಂದತ - ನಮಸ್ಕರಿಸಿದನು, ಸಾಚ - ಆ ಸೀತಾದೇವಿಯಾದರೆ, ಭಯವಿತ್ರಸ್ತಾ - ಭಯದಿಂದ ಹೆದರಿದವಳಾಗಿ, ಏನಂ - ಈ ಆಂಜನೇಯನನ್ನು, ಭೂಯಃ - ಮತ್ತು, ನೈವಾಭ್ಯುದೈಕ್ಷತ - ನೋಡಲೇ ಇಲ್ಲವು. ॥ ೧೨ ॥ ಶಶಿನಿಭಾನನಾ - ಚಂದ್ರಸದೃಶವಾದ ಮುಖವುಳ್ಳ,

ತನಯನಾದ ಹನುಮಂತನು ಮೆಲ್ಲಮೆಲ್ಲಗೆ ಆಕೆಯ ಸಮೀಪಕ್ಕೆ ಬರುತ್ತಿದ್ದನು. ಹೀಗೆ ಆತನು ಮುಂದು ಮುಂದಕ್ಕೆ ಬಂದಂತೆಲ್ಲಾ ಸೀತಾದೇವಿಗೆ ಆತನಲ್ಲಿ ರಾವಣನೆಂಬ ಶಂಕೆಯು ಹುಟ್ಟಿ ಭಯವು ಅಧಿಕವಾಗಿ ಹಿಂದು ಹಿಂದಕ್ಕೆ ಸರಿಯುತ್ತಿದ್ದಳು. ಈ ಪ್ರಕಾರ ಭಯವಿಹ್ವಲೆಯಾದ ಆಕೆಯು, "ಛೀ! ನಾನೆಂತಹ ಅಕಾರ್ಯವನ್ನು ಮಾಡಿದೆನು. ನಾನು ಈ ವಿಷಯಗಳನ್ನು ಇವನೊಡನೆ ಹೇಳಬಾರದಾಗಿತ್ತು. ಇವನು ರೂಪಾಂತರವನ್ನು ಹೊಂದಿದ ರಾವಣನಲ್ಲದೆ ಮತ್ತೆ ಬೇರೆಯಲ್ಲವು." ಎಂದು ಚಿಂತಿಸಿ ತಾನು ನೆಮ್ಮಿ ನಿಂತಿದ್ದ ಅಶೋಕ ವೃಕ್ಷದ ಕೊಂಬೆಯನ್ನು ಬಿಟ್ಟು ದುಃಖಾಕ್ರಾಂತಳಾಗಿ ನೆಲದಲ್ಲಿ ಕುಳಿತುಬಿಟ್ಟಳು. ॥ ೭–೧೧ ॥ ಆಗ ಮಹಾಬಾಹುವಾದ ಆಂಜನೇಯನು ವ್ಯಸನದಿಂದ ಬಹಳವಾಗಿ ಶ್ರಮಪಟ್ಟಿರುವವಳೂ, ಭಯಭ್ರಾಂತಳಾಗಿರುವವಳೂ, ಆದ ಆಕೆಯನ್ನು ನೋಡಿ ಆಕೆಯು ತನ್ನನ್ನು ರಾವಣನೆಂದು ಶಂಕಿಸಿರುವಳೆಂದು ತಿಳಿದವನಾಗಿ ಆಕೆಗೆ ನಮಸ್ಕರಿಸಿದನು. ಆಂಜನೇಯನು ನಮಸ್ಕರಿಸಿದರೂ ಸೀತೆಯು ಮಾತ್ರ ಭಯಕರ್ಶಿತಳಾಗಿ ಮರಳಿ ಅವನನ್ನು ಮುಖವೆತ್ತಿ ನೋಡದೆ ಹೋದಳು.

ಸೀತಾ ಶಶಿನಿಭಾನನಾ । ಅಬ್ರವೀದ್ದೀರ್ಘಮುಚ್ಛ್ವಸ್ಯ ವಾನರಂ ಮಧುರಸ್ವರಾ ॥೧೩॥ "ಮಾಯಾಂ ಪ್ರವಿಷ್ಟೋ ಮಾಯಾವೀ ಯದಿ ತ್ವಂ ರಾವಣಸ್ಸ್ವಯಂ । ಉತ್ಪಾದಯಸಿ ಮೇ ಭೂಯಸ್ಸಂತಾಪಂ ತನ್ನಶೋಭನಂ ॥ ೧೪ ॥ ಸ್ವಂ ಪರಿತ್ಯಜ್ಯ ರೂಪಂ ಯಃ ಪರಿವ್ರಾಜಕ ರೂಪಧೃತ್ । ಜನಸ್ಥಾನೇ ಮಯಾ ದೃಷ್ಟಸ್ತ್ವಂ ಸ ಏವಾಸಿ ರಾವಣಃ ॥೧೫॥ ಉಪವಾಸಕೃಶಾಂ ದೀನಾಂ ಕಾಮರೂಪ! ನಿಶಾಚರ! । ಸಂತಾಪಯಸಿ ಮಾಂ ಭೂಯಸ್ಸಂತಪ್ತಾಂ ತನ್ನಶೋಭನಂ ॥ ೧೬ ॥ ಅಥವಾ ನೈತದೇವಂ ಹಿ ಯನ್ಮಯಾ ಪರಿಶಂಕಿತಂ । ಮನಸೋಹಿ ಮಮ ಪ್ರೀತಿರುತ್ಪನ್ನಾ ತವ ದರ್ಶನಾತ್

ಮಧುರಸ್ವರಾ - ಗಂಭೀರ ಧ್ವನಿಯುಳ್ಳ, ಸೀತಾ - ಸೀತಾದೇವಿಯು, ವಂದಮಾನಂ - ನಮಸ್ಕರಿಸುತ್ತಿರುವ, ತಂವಾನರಂ - ಆ ಕಪಿಯನ್ನು, ದೃಷ್ಟ್ವಾ - ಕಂಡು, ದೀರ್ಘಂ - ಬಹಳವಾಗಿ, ಉಚ್ಛ್ವಸ್ಯ - ನಿಟ್ಟುಸಿರುಬಿಟ್ಟು, ಅಬ್ರವೀತ್ - ನುಡಿದಳು. ॥ ೧೩ ॥ ಮಾಯಾವೀ - ಮಾಯೆಯುಳ್ಳ, ಮಾಯಾಂ - ಮಾಯೆಯನ್ನು, ಪ್ರವಿಷ್ಟಃ - ಆಶ್ರಯಿಸಿದ, ತ್ವಂ - ನೀನು, ಸ್ವಯಂ - ನೀನೇ, ರಾವಣಸ್ಸ - ರಾವಣನಾಗಿ, ಮೇ - ನನಗೆ, ಸಂತಾಪಂ - ಬಾಧೆಯನ್ನು, ಭೂಯಃ - ಮತ್ತೂ, ಉತ್ಪಾದಯಸಿಯದಿ - ಹುಟ್ಟಿಸುತ್ತಿರುವೆಯಾದರೆ, ತತ್ - ಅದು, ನಶೋಭನಂ - ಒಳ್ಳೆಯದಲ್ಲಾ. ॥ ೧೪ ॥ ಯಃ - ಯಾವ ರಾವಣನು, ಸ್ವಂ - ಸ್ವಕೀಯವಾದ, ರೂಪಂ - ರೂಪವನ್ನು, ಪರಿತ್ಯಜ್ಯ - ಬಿಟ್ಟು, ಪರಿ....ತ್ - ಸನ್ಯಾಸಿಯ ವೇಷವನ್ನು ಧರಿಸಿದವನಾಗಿ, ಜನಸ್ಥಾನೇ-ಜನಸ್ಥಾನದಲ್ಲಿ, ಮಯಾ-ನನ್ನಿಂದ, ದೃಷ್ಟಃ-ಕಾಣಲ್ಪಟ್ಟನೋ, ಸರಾವಣಏವ - ಆ ರಾವಣಾಸುರನೇ, ತ್ವಂ - ನೀನು, ಅಸಿ - ಆಗಿರುವೆ. ॥ ೧೫ ॥ ಹೇ ಕಾಮರೂಪ - ಎಲೈ ಸ್ವೇಚ್ಛಾರೂಪನೇ, ಹೇ ನಿಶಾಚರ - ಎಲೈ ರಾಕ್ಷಸನೇ, ಉಪ....ಶಾಂ - ಅನಶನವ್ರತದಿಂದ ಕೃಶಳಾದ, ದೀನಾಂ - ದುಃಖಿತಳಾದ, ಸಂತಪ್ತಾಂ - ಬಾಧೆಗೊಂಡಿರುವ, ಮಾಂ - ನನ್ನನ್ನು, ಭೂಯಃ - ಮತ್ತೂ, ಸಂತಾ....ತ್ - ಬಾಧಿಸುವೆಯೆಂಬುದು, ತತ್ - ಅದು, (ತವ - ನಿನಗೆ) ನಶೋಭನಂ - ಒಳ್ಳೆಯದಲ್ಲ. ॥ ೧೬ ॥ ಅಥವಾ - ಹಾಗಲ್ಲದಿದ್ದರೆ, ಮಯಾ - ನನ್ನಿಂದ, ಯತ್ಪರಿಶಂಕಿತಂ - ಯಾವುದು ಆಲೋಚಿಸಲ್ಪಟ್ಟಿತೋ, ಏತತ್ - ಇದು, ನೈವಂಹಿ - ಹೀಗಲ್ಲವೇ ಅಲ್ಲ, ಹಿ - ಯಾವಕಾರಣದಿಂದ, ತವ - ನಿನ್ನ, ದರ್ಶನಾತ್ - ನೋಡುವಿಕೆಯಿಂದ, ಮಮ - ನನ್ನ, ಮನಸಃ -

---

ಪೂರ್ಣಚಂದ್ರ ಮುಖಿಯಾದ ಆಕೆಯು, ತನ್ನನ್ನು ನಮಸ್ಕರಿಸುತ್ತಿರುವ ಆ ಹನುಮಂತನನ್ನು ನೋಡಿ ಮಧುರಸ್ವರದಿಂದ ಅವನನ್ನು ಕುರಿತು, "ಎಲೈ ರಾವಣನೇ! ನೀನು ಮಹಾ ಮಾಯಾವಿಯು. ಈಗಲೀವಾನರರೂಪವನ್ನು ಧರಿಸಿ ಬಂದಿರುವೆ. ನೀನು ನಿನ್ನ ನಿಜರೂಪವನ್ನು ತೊರೆದು ಸನ್ಯಾಸಿಯ ವೇಷವನ್ನು ಧರಿಸಿ ಜನಸ್ಥಾನದಲ್ಲಿ ನೋಡಲ್ಪಟ್ಟ ರಾವಣನೇ ಸರಿ. ಇನ್ನೂ ನನ್ನನ್ನೇಕೆ ಬಾಧೆಗೊಳಿಸುವೆ? ಇದು ನಿನಗೆ ಯುಕ್ತವಲ್ಲವು. ನಾನು ಉಪವಾಸದಿಂದ ಕೃಶಳಾಗಿ, ದೀನಳಾಗಿ, ವ್ಯಸನಸಂತಪ್ತಳಾಗಿರುವೆನು. ಇನ್ನೂ ನನ್ನನ್ನೇಕೆ ಗೋಳಾಡಿಸುವೆ? ಇದು ನಿನಗೆ ಶ್ರೇಯಸ್ಕರವಲ್ಲವು." ಎಂದು ಹೇಳಿದಳು. ॥ ೧೨–೧೫ ॥ ಪುನಃ ಆಕೆಯು, "ಅಥವ ನಾನು ಯೋಚಿಸಿದುದು ಯುಕ್ತವಾಗಿಲ್ಲದಿದ್ದರೂ ಇರಬಹುದು. ಏಕೆಂದರೆ, ನಾನು ನಿನ್ನನ್ನು ನೋಡಿದೊಡನೆಯೇ, ನನ್ನ ಮನಸ್ಸಿಗೆ ಸಂತೋಷವುಂಟಾಗುತ್ತಿರುವುದು. ಎಲೈ ವಾನರನೇ! ನೀನು ನಿಜವಾಗಿಯು ಶ್ರೀರಾಮದೂತನೇ ಆಗಿದ್ದ ಪಕ್ಷದಲ್ಲಿ ನಿನಗೆ ಮಂಗಳವಾಗಲಿ. ಎಲೈ ವಾನರಶ್ರೇಷ್ಠನೇ! ಶ್ರೀರಾಮನ ಕಥೆಯನ್ನು ಕೇಳುವುದು ನನಗೆ

॥ ೧೭ ॥ ಯದಿ ರಾಮಸ್ಯ ದೂತಸ್ತ್ವಮಾಗತೋ ಭದ್ರಮಸ್ತು ತೇ । ಪೃಚ್ಛಾಮಿ ತ್ವಾಂ ಹರಿಶ್ರೇಷ್ಠ ! ಪ್ರಿಯಾ ರಾಮಕಥಾ ಹಿ ಮೇ ॥ ೧೮ ॥ ಗುಣಾನ್ರಾಮಸ್ಯ ಕಥಯ ಪ್ರಿಯಸ್ಯ ಮಮ ವಾನರ! । ಚಿತ್ತಂ ಹರಸಿ ಮೇ ಸೌಮ್ಯ! ನದೀಕೂಲಂ ಯಥಾ ರಯಃ ॥೧೯॥ ಅಹೋ ಸ್ವಪ್ನಸ್ಯ ಸುಖತಾ ಯಾಽಹಮೇವಂ ಚಿರಾಹೃತಾ । ಪ್ರೇಷಿತಂ ನಾಮ ಪಶ್ಯಾಮಿ ರಾಘವೇಣ ವನೌಕಸಂ ॥ ೨೦ ॥ ಸ್ವಪ್ನೇಽಪಿ ಯದ್ಯಹಂ ವೀರಂ ರಾಘವಂ ಸಹಲಕ್ಷ್ಮಣಂ । ಪಶ್ಯೇಯಂ ನಾವಸೀದೇಯಂ ಸ್ವಪ್ನೋಽಪಿ ಮಮ ಮತ್ಸರೀ ॥ ೨೧ ॥ ನಾಽಹಂ ಸ್ವಪ್ನಮಿಮಂ ಮನ್ಯೇ ಸ್ವಪ್ನೇ ದೃಷ್ಟ್ವಾ ಹಿ ವಾನರಂ । ನಶಕ್ಯೋಽ

ಮನಸ್ಸಿಗೆ, ಪ್ರೀತಿಃ - ವಿಶ್ವಾಸವು, ಉತ್ಪನ್ನಾ - ಹುಟ್ಟಿತೋ. ॥ ೧೭ ॥ ತ್ವಂ - ನೀನು, ರಾಮಸ್ಯ - ಶ್ರೀರಾಮನಿಗೆ, ದೂತಃ - ಭೃತ್ಯನಾಗಿ, ಆಗತೋಯದಿ - ಬಂದವನಾದರೆ, ತೇ - ನಿನಗೆ, ಭದ್ರಂ - ಶುಭವು, ಅಸ್ತು - ಆಗಲಿ, ಹೇ ಹರಿಶ್ರೇಷ್ಠ - ಎಲೈ ವಾನರೋತ್ತಮನೇ, ಹಿ - ಯಾವಕಾರಣದಿಂದ, ರಾಮಕಥಾಃ - ಶ್ರೀರಾಮಚರಿತ್ರೆಗಳು, ಮೇ - ನನಗೆ, ಪ್ರಿಯಾಃ - ಇಷ್ಟವಾದವುಗಳೋ, ತತ್ - ಆಕಾರಣದಿಂದ, ತ್ವಾಂ - ನಿನ್ನನ್ನು, ಪೃಚ್ಛಾಮಿ - ಕೇಳುತ್ತೇನೆ, ಹೇವಾನರ - ಎಲೈ ಕಪಿಯೆ, ಮಮ ಪ್ರಿಯಸ್ಯ - ನನ್ನ ಪ್ರಿಯನಾದ, ರಾಮಸ್ಯ - ಶ್ರೀರಾಮನ, ಗುಣಾನ್ - ಗುಣಗಳನ್ನು, ಮೇ - ನನಗೆ, ಕಥಯ - ಹೇಳು, ಹೇ ಸೌಮ್ಯ - ಎಲೈ ಕೋಪರಹಿತನೆ, ತ್ವಂ - ನೀನು, ಮೇಚಿತ್ತಂ - ನನ್ನ ಮನವನ್ನು, ನದೀಕೂಲಂ - ನದೀತೀರವನ್ನು, ರಯೋಯಥಾ - ವೇಗದಂತೆ, ಹರಸಿ - ಅಪಹರಿಸುತ್ತಿರುವೆ. ॥ ೧೯ ॥ ಸ್ವಪ್ನಸ್ಯ - ಕನಸಿನ, ಸುಖತಾ - ಸೌಖ್ಯವು, ಅಹೋ - ಆಶ್ಚರ್ಯವು, ಏವಂ - ಹೀಗೆ, ಚಿರಾಹೃತಾ - ಬಹುಕಾಲದವರೆಂಚೆ ಅಪಹರಿಸಲ್ಪಟ್ಟ, ಯಾಽಹಂ - ಯಾವ ನಾನು, ರಾಘವೇಣ - ಶ್ರೀರಾಮನಿಂದ, ಪ್ರೇಷಿತಂ - ಕಳುಹಿಸಲಾದ, ವನೌಕಸಂ - ವಾನರನನ್ನು, ಪಶ್ಯಾಮಿನಾಮ - ನೋಡುತ್ತೇನೆಯಷ್ಟೆ. ॥ ೨೦ ॥ ಸ್ವಪ್ನೇಽಪಿ - ಕನಸಿನಲ್ಲಿಯೂ, ಅಹಂ - ನಾನು, ಸಹಲಕ್ಷ್ಮಣಂ - ಲಕ್ಷ್ಮಣಸಹಿತನಾದ, ವೀರಂ ಶೂರನಾದ, ರಾಘವಂ ಶ್ರೀರಾಮನನ್ನು, ಪಶ್ಯೇಯಂಯದಿ-ನೋಡಿದವಳಾದರೆ, ನಾವಸೀದೇಯಂ - ದುಃಖವಿಲ್ಲದಿದ್ದೇನು, ಸ್ವಪ್ನೋಽಪಿ - ಸ್ವಪ್ನವೂ ಕೂಡ, ಮಮ - ನನ್ನ, ವಿಷಯದಲ್ಲಿ, ಮತ್ಸರೀ - ದ್ವೇಷವುಳ್ಳುದಾಗಿರುವುದು. ॥ ೨೧ ॥ ಅಹಂ - ನಾನು, ಇಮಂ - ಇದನ್ನು, ಸ್ವಪ್ನಂ - ಕನಸನ್ನಾಗಿ, ನಮನ್ಯೇ - ತಿಳಿಯಲಾರೆನು, ಹಿ - ಯಾವಕಾರಣದಿಂದ, ಸ್ವಪ್ನೇ - ಕನಸಿನಲ್ಲಿ, ವಾನರಂ - ಕಪಿಯನ್ನು, ದೃಷ್ಟ್ವಾ - ಕಂಡು, ಅಭ್ಯುದಯಃ - ಶುಭವು, ಪ್ರಾಪ್ತುಂ - ಹೊಂದು

ಬಹುಸಂತೋಷಕರವು. ಆದುದರಿಂದ ನಿನ್ನನ್ನು ಕೇಳಿಕೊಳ್ಳುವೆನು. ಎಲೈ ಮಾರುತಿಯೇ! ನನ್ನ ಮನೋವಲ್ಲಭನಾದ ಶ್ರೀರಾಮನ ಗುಣಗಳನ್ನು ವರ್ಣಿಸಿ ಹೇಳು. ಎಲೈ ಕಪಿಸತ್ತಮನೇ! ಜಲವು, ನದೀತೀರವನ್ನು ಅಪಹರಿಸುವಂತೆ, ನೀನು ನನ್ನ ಮನಸ್ಸನ್ನು ಆಕರ್ಷಿಸುತ್ತಿರುವೆ. ಇದೂ ಅಲ್ಲದೆ ಬಹುಕಾಲದಿಂದಲೂ ಶ್ರೀರಾಮನನ್ನಗಲಿ ಪರಿತಪಿಸುತ್ತಿರುವ ನಾನು ಈಗ ಆತನಿಂದ ಕಳುಹಲ್ಪಟ್ಟ ವಾನರನನ್ನು ಸ್ವಪ್ನದಲ್ಲಿ ಕಾಣುತ್ತಿರುವೆನೇ! ಆಹಾ! ಸ್ವಪ್ನವೂ ಎಷ್ಟು ಸುಖಕರವಾಗಿದೆ! ॥ ೧೬-೨೦ ॥ ಸ್ವಪ್ನದಲ್ಲಿಯಲ್ಲಾದರೂ ಶ್ರೀರಾಮನನ್ನೂ, ಮಹಾಪರಾಕ್ರಮಿಯಾದ ಲಕ್ಷ್ಮಣನನ್ನೂ ನೋಡಿದೆನಾದರೆ ನನ್ನ ವ್ಯಸನವು ಕಳೆದು ಬದುಕುವೆನೆಂದು ತೋರುವುದು. ಆದರೇನು ? ಆ ಸ್ವಪ್ನವೂ ನನ್ನಲ್ಲಿ ಮತ್ಸರಗೊಂಡಿರುವುದು. ಅದೂ ಆಗುವುದಿಲ್ಲವು. ಏನುಮಾಡಲಿ. ನನಗಿದು ಸ್ವಪ್ನವಾಗಿ ತೋರುವುದಿಲ್ಲವು. ಸ್ವಪ್ನದಲ್ಲಿ ವಾನರ

ಭ್ಯುದಯಃ ಪ್ರಾಪ್ತುಂ ಪ್ರಾಪ್ತಶ್ಚಾಭ್ಯುದಯೋ ಮಮ ‖ ೨೨ ‖ ಕಿನ್ನು ಸ್ಯಾಚ್ಚಿತ್ತ ಮೋಹೋಽಯಂ ಭವೇದ್ವಾತಗತಿಸ್ತ್ವಿಯಂ । ಉನ್ಮಾದಜೋ ವಿಕಾರೋವಾ ಸ್ಯಾದಿಯ ಮ್ಮೃಗತೃಷ್ಣಿಕಾ ‖೨೪‖ ಅಥವಾ ನಾಽಯಮುನ್ಮಾದೋ ಮೋಹೋಪ್ಯುನ್ಮಾದಲಕ್ಷಣಃ । ಸಂಬುಧ್ಯೇ ಚಾಹಮಾತ್ಮಾನಮಿಮಂ ಚಾಪಿ ವನೌಕಸಂ" ‖ ೨೪ ‖ ಇತ್ಯೇವಂ ಬಹುಧಾ ಸೀತಾ ಸಂಪ್ರಧಾರ್ಯ ಬಲಾಬಲಂ । ರಕ್ಷಸಾಂ ಕಾಮರೂಪತ್ವಾನ್ಮೇನೇ ತಂ ರಾಕ್ಷಸಾಧಿಪಂ ‖೨೫‖ ಏತಾಂ ಬುದ್ಧಿಂ ತದಾ ಕೃತ್ವಾ ಸೀತಾ ಸಾ ತನುಮಧ್ಯಮಾ । ನಪ್ರತಿವ್ಯಾಜಹಾರಾಥ ವಾನರಂ ಜನಕಾತ್ಮಜಾ ‖೨೬‖ ಸೀತಾಯಾಶ್ಚಿಂತಿತಂ ಬುದ್ಧ್ವಾ

ವದಕ್ಕೆ, ನಶಕ್ಯಃ - ಆಗಲಾರದೋ, ಮಮ - ನನ್ನ, ಅಭ್ಯುದಯಶ್ಚ - ಕಲ್ಯಾಣವೂ ಸಹ, ಪ್ರಾಪ್ತಃ - ಹೊಂದಲ್ಪಟ್ಟಿತೋ. ‖ ೨೨ ‖ ಅಯಂ-ಇದು, ಚಿತ್ತಮೋಹಃ-ಮನೋಭ್ರಾಂತಿಯು, ಕಿನ್ನುಸ್ಯಾತ್ - ಇರಬಹುದೇ, ಅಥವಾ, ಇಯಂ - ಇದು, ವಾತಗತಿಃ - ಪಿತ್ತವಿಕಾರವು, ಭವೇದ್ವಾ - ಆಗಿರಬಹುದೇ, ಉನ್ಮಾದಜಃ - ವಿರಹವೆಂಬ ಹುಚ್ಚುತನದಿಂದ ಹುಟ್ಟಿದ, ವಿಕಾರೋವಾ - ಭ್ರಮೆಯೋ, ಅಥವಾ - ಹಾಗಲ್ಲದಿದ್ದರೆ, ಇಯಂ - ಇದು, ಮೃಗತೃಷ್ಣಿಕಾ - ಬಿಸಿಲ್ಗುದುರೆಯು, ಸ್ಯಾದ್ವಾ - ಆಗಿರಬಹುದೇ, ‖ ೨೩ ‖ ಅಥವಾ - ಹಾಗಲ್ಲದಿದ್ದರೆ, ಅಯಂ - ಇದು, ಉನ್ಮಾದಃ - ಚಿತ್ತಭ್ರಮಣೆಯು, ನ - ಅಲ್ಲ, ಮೋಹೋಪಿ - ಮೋಹವುಕೂಡ, ಉನ್ಮಾದಲಕ್ಷಣಃ - ಚಿತ್ತಭ್ರಮಣಲಕ್ಷಣದಂತೆ ಲಕ್ಷಣವುಳ್ಳದ್ದು, ಯತಃ - ಯಾವಕಾರಣದದೆಶೆಯಿಂದ, ಅಹಂ - ನಾನು, ಆತ್ಮಾನಂಚ - ನನ್ನನ್ನೂ, ವನೌಕಸಂ - ವಾನರನಾದ, ಇಮಂಚಾಪಿ - ಈ ವಾನರನನ್ನು ಕೂಡಾ, ಸಂಬುಧ್ಯೆ - ತಿಳಿಯುತ್ತೇನೆಯೋ, ‖ ೨೪ ‖ ಇತ್ಯೇವಂ - ಈ ಪ್ರಕಾರವಾಗಿ, ಸೀತಾ ಸೀತಾದೇವಿಯು, ಬಹುಧಾ ನಾನಾಬಗೆಯಾಗಿ, ಬಲಾಬಲಂ- ಹೆಚ್ಚುಕಡಿಮೆಯನ್ನು, ಸಂಪ್ರಧಾರ್ಯ - ವಿಚಾರಿಸಿ, ರಕ್ಷಸಾಂ - ರಕ್ಕಸರಿಗೆ, ಕಾಮರೂಪತ್ವಾತ್ - ಸ್ವೇಚ್ಛಾರೂಪತ್ವದ ದೆಶೆಯಿಂದ, ತಂ - ಆ ಆಂಜನೇಯನನ್ನು, ರಾಕ್ಷಸಾಧಿಪಂ - ರಾವಣನನ್ನಾಗಿ, ಮೇನೇ - ಭಾವಿಸಿದಳು. ‖ ೨೫ ‖ ತದಾ - ಆಕಾಲದಲ್ಲಿ, ತನುಮಧ್ಯಮಾ - ಸೂಕ್ಷ್ಮವಾದ ಸೊಂಟ ವುಳ್ಳ, ಜನಕಾತ್ಮಜಾ - ಜನಕಪುತ್ರಿಯಾದ, ಸಾಸೀತಾ - ಆ ಸೀತಾದೇವಿಯು, ಏತಾಂಬುದ್ಧಿಂ - ಈ ಬುದ್ಧಿಯನ್ನು, ಕೃತ್ವಾ-ಹೊಂದಿ, ಅಥ - ಬಳಿಕ, ವಾನರಂ - ಕಪಿಯಾದ ಆಂಜನೇಯನನ್ನು ಕುರಿತು,

---

ನನ್ನು ನೋಡಿದವರಿಗೆ ಸುಖವುಂಟಾಗುವುದೆ? ಉಂಟಾಗದು. ಆದರೆ ನನಗೆ ಸುಖವುಂಟಾ ಗಿರುವುದು. ಇದೊಂದು ವೇಳೆ ಚಿತ್ತಭ್ರಮೆಯಾಗಿರಬಹದೇ? ಇಲ್ಲವೇ, ಪಿತ್ತಾಧಿಕ್ಯದಿಂದ ಹೀಗೇನಾದರೂ ತೋರುತ್ತಿರುವುದೋ? ಅಥವ ನನಗೆ ಹುಚ್ಚೇನಾದರೂ ಹಿಡಿಯಿತೋ? ಅಥವ ಇದು ಮರುಮರೀಚಿಕೆಯೋ! ಬಿಸಿಲ್ಗುದುರೆಗಳಂತೆಯೋ! ಹೇಗೆ ಯೋಚಿಸಿದರೂ ಇದು ಚಿತ್ತವಿಭ್ರಮವಾಗಲಿ, ಉನ್ಮಾದಾವಸ್ಥೆಯಾಗಲಿ ಅಲ್ಲವೆಂದೇ ತೋರುವುದು. ಆ ಲಕ್ಷಣ ಗಳಾವುವೂ ಕಾಣುವುದಿಲ್ಲವು. ನನಗೆ ದೇಹದ ಮೇಲೆ ಪ್ರಜ್ಞೆಯು ಚೆನ್ನಾಗಿದೆ. ಈ ವಾನರ ನನ್ನೂ ಚೆನ್ನಾಗಿ ನೋಡುತ್ತಿರುವೆನು. ಆದುದರಿಂದ ಇದು ಚಿತ್ತಭ್ರಮಣೆಯೂ ಅಲ್ಲ, ಉನ್ಮಾದವೂ ಅಲ್ಲ.'' ಎಂಬೀಪ್ರಕಾರವಾಗಿ ಆ ಸೀತಾದೇವಿಯು ಅನೇಕಬಗೆಯಾಗಿ ಚಿಂತಿಸಿ ಬಲಾಬಲಗಳನ್ನು ನಿಶ್ಚಯಿಸಿ ರಾಕ್ಷಸರು ಕಾಮರೂಪಿಗಳಾದುದರಿಂದ ಆ ಹನುಮಂತನನ್ನು ರಾವಣನೆಂದೇ ತಿಳಿದಳು. ‖ ೨೧-೨೫ ‖ ಹೀಗೆ ತನುಮಧ್ಯಮೆಯಾದ ಜಾನಕಿಯು ಹನುಮಂತನನ್ನು ರಾವಣನೆಂದು ತಿಳಿದು ಆತನೊಡನೆ ಯಾವ ಮಾತನ್ನೂ ಆಡದೆ, ಯಾವ

ಹನುಮಾನ್ಮಾರುತಾತ್ಮಜಃ । ಶ್ರೋತ್ರಾನುಕೂಲೈರ್ವಚನೈಸ್ತದಾ ತಾಂ ಸಂಪ್ರಹರ್ಷಯತ್ ॥ ೨೭ ॥ "ಆದಿತ್ಯ ಇವ ತೇಜಸ್ವೀ ಲೋಕಕಾಂತ ಶ್ಶಶೀ ಯಥಾ । ರಾಜಾ ಸರ್ವಸ್ಯ ಲೋಕಸ್ಯ ದೇವೋ ವೈಶ್ರವಣೋ ಯಥಾ ॥ ೨೮ ॥ ವಿಕ್ರಮೇಣೋಪಪನ್ನಶ್ಚ ಯಥಾ ವಿಷ್ಣುರ್ಮಹಾಯಶಾಃ । ಸತ್ಯವಾದೀ ಮಧುರವಾಗ್ದೇವೋ ವಾಚಸ್ಪತಿರ್ಯಥಾ ॥ ೨೯ ॥ ರೂಪವಾನ್ ಸುಭಗಶ್ಶ್ರೀಮಾನ್ ಕಂದರ್ಪಇವ ಮೂರ್ತಿಮಾನ್ । ಸ್ಥಾನೇ ಕ್ರೋಧಃ ಪ್ರಹರ್ತಾಚ ಶ್ರೇಷ್ಠೋ ಲೋಕೇ ಮಹಾರಥಃ ॥ ೩೦ ॥ ಬಾಹು

ನಪ್ರತಿವ್ಯಾಜಹಾರ-ಯಾವ ಪ್ರತ್ಯುತ್ತರವನ್ನೂ ಕೊಡಲಿಲ್ಲ. ॥ ೨೬ ॥ ತದಾ-ಆಗ, ಮಾರುತಾತ್ಮಜಃ-ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಸೀತಾಯಾಃ - ಸೀತಾದೇವಿಯ, ಚಿಂತಿತಂ - ಯೋಚನೆಯನ್ನು, ಬುದ್ಧ್ವಾ - ತಿಳಿದು, ಶ್ರೋತ್ರಾನುಕೂಲೈಃ - ಕಿವಿಗಿಂಪಾಗಿರುವ, ವಚನೈಃ - ಮಾತುಗಳಿಂದ, ತಾಂ - ಆಕೆಯನ್ನು, ಸಂಪ್ರಹರ್ಷಯತ್ - ಸಂತೋಷಗೊಳಿಸಿದನು. ॥ ೨೭ ॥ ರಾಮಃ - ಶ್ರೀರಾಮನು, ಆದಿತ್ಯಇವ - ಸೂರ್ಯನೋಪಾದಿಯಲ್ಲಿ, ತೇಜಸ್ವೀ - ಕಾಂತಿಯುಳ್ಳವನು, ಶಶೀಯಥಾ - ಚಂದ್ರನಂತೆ, ಲೋಕಕಾಂತಃ - ಜನಮನೋಹರನಾದವನು, ಸರ್ವಸ್ಯಲೋಕಸ್ಯ - ಸಮಸ್ತಲೋಕಗಳಿಗೂ, ದೇವಃ - ದೇವನಾದ, ವೈಶ್ರವಣೋಯಥಾ - ಕುಬೇರನೋಪಾದಿಯಲ್ಲಿ, ರಾಜಾ - ಅರಸನಾದವನು, ವಿಷ್ಣುರ್ಯಥಾ - ವಿಷ್ಣುವಿನಂತೆ, ಮಹಾಯಶಾಃ - ಮಹಾಕೀರ್ತಿಯುಳ್ಳವನು, ವಿಕ್ರಮೇಣ - ಪರಾಕ್ರಮದಿಂದ, ಉಪಪನ್ನಶ್ಚ-ಕೂಡಿರುವವನು, ದೇವಃ-ದೇವನಾದ, ವಾಚಸ್ಪತಿರ್ಯಥಾ-ಬೃಹಸ್ಪತಿಯಂತೆ, ಸತ್ಯವಾದೀ - ಸತ್ಯವನ್ನೇ ಹೇಳುವವನು, ಮಧುರವಾಕ್ - ಮನೋಹರವಾಗಿ ಮಾತನಾಡುವವನು, ಮೂರ್ತಿಮಾನ್-ದೇಹಧಾರಿಯಾದ, ಕಂದರ್ಪಇವ-ಮನ್ಮಥನಂತೆ, ರೂಪವಾನ್-ಸೌಂದರ್ಯವುಳ್ಳವನು, ಸುಭಗಃ - ರಮಣೀಯನಾದವನು, ಶ್ರೀಮಾನ್ - ಕಾಂತಿಮಂತನು, ಸ್ಥಾನೇಕ್ರೋಧಃ - ಅಪಕಾರಕ್ಕೆ ತಕ್ಕ ಕೋಪವುಳ್ಳವನು, ಪ್ರಹರ್ತಾಚ - ಕೋಪಾನುಗುಣವಾದ ದಂಡನೆಯುಳ್ಳವನು, ಲೋಕೇ - ಲೋಕದಲ್ಲಿ, ಶ್ರೇಷ್ಠಃ - ಉತ್ತಮನಾದ, ಮಹಾರಥಃ - ಮಹಾರಥನು. ॥ ೨೮-೩೦ ॥

ಪ್ರತ್ಯುತ್ತರವನ್ನೂ ಕೊಡದೆ ಸುಮ್ಮನಿದ್ದುಬಿಟ್ಟಳು. ಆಗ ಮಾರುತಾತ್ಮಜನಾದ ಆಂಜನೇಯನು, ಸೀತೆಯು ಮನಸ್ಸಿನಲ್ಲಿ ಚಿಂತಿಸಿದುದೆಲ್ಲವನ್ನೂ ತಿಳಿದವನಾಗಿ, ಕಿವಿಗಿಂಪಾದ ಮಾತುಗಳಿಂದ ಆಕೆಗೆ ಸಂತೋಷವನ್ನುಂಟುಮಾಡುವವನಾಗಿ, "ಎಲೌ ಜಾನಕಿಯೆ! ಶ್ರೀರಾಮನು ಸೂರ್ಯನಿಗೆ ಸಮಾನವಾದ ತೇಜಸ್ಸುಳ್ಳವನು. ಚಂದ್ರನಂತೆ ಪ್ರಪಂಚಕ್ಕೆಲ್ಲಾ ಮನೋಹರನಾದವನು; ವಿಶ್ರವಸ್ಸಿನ ಮಗನಾದ ಕುಬೇರನಂತೆ ರಾಜಾಧಿರಾಜನಾದವನು; ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳವನು; ಮಹಾ ಕೀರ್ತವಂತನು; ದೇವಗುರುವಾದ ಬ್ರುಹಸ್ಪತ್ಯಾಚಾರ್ಯನಿಗೆ ಸಮಾನನಾದ ಸತ್ಯವಾದಿಯು; ಬಹು ಮನೋಹರವಾಗಿ ಮಾತನಾಡುವವನು; ರೂಪನ್ನು ಧರಿಸಿರುವ ಮನ್ಮಥನಂತಿರುವವನು; (ಮಹಾ ಸೌಂದರ್ಯವಂತನು) ಮಹಾ ಕಾಂತಿವಂತನು; ಯುಕ್ತವಾದ ಕೋಪವುಳ್ಳವನು; ಕೋಪಬಂದ ಕಾಲದಲ್ಲಿ ತನ್ನ ಆ ಕೋಪವನ್ನು ಸಾರ್ಥಕಗೊಳಿಸುವವನು; ಲೋಕೋತ್ತರವಾದ ಗುಣಗಳುಳ್ಳವನು; ಮಹಾರಥನಾದವನು. ॥ ೨೮-೩೦ ॥ ಇಂತಹ ಪ್ರಭಾವಗಳನ್ನೊಳಗೊಂಡ ಯಾವ ಮಹಾತ್ಮನ ಬಾಹುಚ್ಛಾಯೆಯನ್ನಾಶ್ರಯಿಸಿ ಪ್ರಪಂಚವೆಲ್ಲವೂ ಜೀವಿಸುತ್ತಿರುವುದೋ

ಚ್ಛಾಯಾಮವಷ್ಟಬ್ಧೋ ಯಸ್ಯ ಲೋಕೋ ಮಹಾತ್ಮನಃ । ಅಪಕೃಷ್ಯಾಶ್ರಮಪದಾ ನ್ಮೃಗರೂಪೇಣ ರಾಘವಂ । ಶೂನ್ಯೇ ಯೇನಾಪನೀತಾಸಿ ತಸ್ಯ ದ್ರಕ್ಷ್ಯಸಿ ಯತ್ಫಲಂ ॥ ೩೨ ॥ ನಚಿರಾದ್ರಾವಣಂ ಸಂಖ್ಯೇ ಯೋ ವಧಿಷ್ಯತಿ ವೀರ್ಯವಾನ್ । ರೋಷ ಪ್ರಮುಕ್ತೈ ರಿಷುಭಿ ರ್ಜ್ವಲದ್ಭಿರಿವ ಪಾವಕೈಃ । ತೇನಾಽಹಂ ಪ್ರೇಷಿತೋ ದೂತ ಸ್ತ್ವತ್ಸಕಾಶಮಿಹಾಗತಃ ॥ ೩೩ ॥ ತ್ವದ್ವಿಯೋಗೇನ ದುಃಖಾರ್ತಃ ಸತ್ವಾಂ ಕೌಶಲ ಮಬ್ರವೀತ್ । ಲಕ್ಷ್ಮಣಶ್ಚ ಮಹಾತೇಜಾ ಸ್ಸುಮಿತ್ರಾನಂದವರ್ಧನಃ । ಅಭಿವಾದ್ಯ ಮಹಾಬಾಹು ಸ್ಸತ್ವಾಂ ಕೌಶಲಮಬ್ರವೀತ್ ॥ ೩೫ ॥ ರಾಮಸ್ಯ ಚ ಸಖಾ ದೇವಿ

ಲೋಕಃ - ಜನವು, ಯಸ್ಯಮಹಾತ್ಮನಃ - ಯಾವಮಹಾತ್ಮನ, ಬಾಹುಚ್ಛಾಯಾಂ - ಭುಜದ ನೆರಳನ್ನು, ಅವಷ್ಟಬ್ಧಃ - ಆಶ್ರಯಿಸಿದೆಯೊ, ತಂರಾಘವಂ - ಆ ಶ್ರೀರಾಮನನ್ನು, ಆಶ್ರಮಪದಾತ್ - ಆಶ್ರಮ ಸ್ಥಾನದಿಂದ, ಮೃಗರೂಪೇಣ - ಮೃಗರೂಪದಿಂದ, ಅಪಕೃಷ್ಯ - ದೂರವಾಗಿ ಸೆಳದುಕೊಂಡು ಬಂದು, ಯೇನ - ಯಾವಶ್ರೀರಾಮನಿಂದ, ಶೂನ್ಯೇ - ರಹಿತವಾದಸ್ಥಳದಲ್ಲಿ, ಯೇನ - ಯಾವರಾವಣ ನಿಂದ, ಅಪನೀತಾ - ಅಪಹರಿಸಲ್ಪಟ್ಟವಳು, ಅಸಿ - ಅದೆಯೊ, ತಸ್ಯ - ಆ ರಾವಣನಿಗೆ, ಯತ್ - ಯಾವಮರಣವು, ಫಲಂ - ಫಲರೂಪವೊ, ತತ್ - ಅದನ್ನು, ದ್ರಕ್ಷ್ಯಸಿ - ನೋಡುವೆ. ॥ ೩೨ ॥ ವೀರ್ಯವಾನ್ - ಪರಾಕ್ರಮಿಯಾದ, ಯಃ - ಯಾವರಾಮನು, ಸಂಖ್ಯೇ - ಯುದ್ಧದಲ್ಲಿ, ನಚಿರಾತ್ - ಜಾಗ್ರತೆಯಾಗಿಯೇ, ರಾವಣಂ - ರಾವಣನನ್ನು, ಜ್ವಲದ್ಭಿಃ - ಉರಿಯುತ್ತಿರುವ, ಪಾವಕೈರಿವಸ್ಥಿತೈಃ - ಅಗ್ನಿಗಳಂತಿರುವ, ರೋಷಪ್ರಮುಕ್ತೈಃ - ಕೋಪದಿಂದ ಬಿಡಲ್ಪಟ್ಟ, ಇಷುಭಿಃ - ಬಾಣಗಳಿಂದ, ವಧಿಷ್ಯತಿ - ಸಂಹರಿಸುವನೊ, ತೇನ - ಆ ಶ್ರೀರಾಮನಿಂದ, ಪ್ರೇಷಿತಃ - ಕಳುಹಿಸಲ್ಪಟ್ಟ, ದೂತಃ - ದೂತನಾದ, ಅಹಂ - ನಾನು, ತ್ವತ್ಸಕಾಶಂ - ನಿನ್ನ ಬಳಿಗೆ, ಇಹ - ಇಲ್ಲಿಗೆ, ಆಗತಃ - ಬಂದೆನು. ॥ ೩೩ ॥ ತ್ವದ್ವಿಯೋಗೇನ - ನಿನ್ನಗಲಿಕೆಯಿಂದ, ದುಃಖಾರ್ತಃ - ದುಃಖಪೀಡಿತನಾದ, ಸಃ - ಆ ಶ್ರೀರಾಮನು, ತ್ವಾಂ - ನಿನ್ನನ್ನು ಕುರಿತು, ಕೌಶಲಂ - ಕ್ಷೇಮವನ್ನು, ಅಬ್ರವೀತ್ - ನುಡಿದನು, ಸುಮಿ....ನಃ - ಸುಮಿತ್ರಾದೇವಿಗೆ ಸಂತೋಷವನ್ನು ವೃದ್ಧಿಗೊಳಿಸುತ್ತಿರುವ, ಮಹಾತೇಜಾಃ - ಮಹಾ ತೇಜೋವಂತನಾದ, ಮಹಾಬಾಹುಃ - ಮಹಾಭುಜಪರಾಕ್ರಮವುಳ್ಳ, ಲಕ್ಷ್ಮಣಶ್ಚ - ಲಕ್ಷ್ಮಣನೂ ಕೂಡ, ತ್ವಾಂ - ನಿನ್ನನ್ನು ಕುರಿತು, ಅಭಿವಾದ್ಯ - ವಂದಿಸಿ, ಕೌಶಲಂ - ಕುಶಲಪ್ರಶ್ನೆಯನ್ನು, ಅಬ್ರವೀತ್ - ಹೇಳಿದನು. ॥ ೩೪-೩೫ ॥ ಹೇ ದೇವಿ - ಓ ತಾಯಿಯೆ, ರಾಮಸ್ಯ - ಶ್ರೀರಾಮನಿಗೆ,

---

ಆ ಶ್ರೀರಾಮನಿಗೆ ಅಪಕಾರವನ್ನು ಮಾಡಬಯಿಸಿ ಮಾಯೆಯಿಂದ ಆತನು ಆಶ್ರಮ ದಲ್ಲಿಲ್ಲದಿರುವ ಸಮಯದಲ್ಲಿ ಆತನ ಪ್ರಿಯಭಾರ್ಯೆಯಾದ ನಿನ್ನನ್ನು ಅಪಹರಿಸಿದ ಆ ರಾವಣಾಸುರನಿಗೆ ಉಂಟಾಗುವ ಫಲವನ್ನು ನೀನೇ ಕಣ್ಣಾರ ನೋಡುವೆ. ವೀರಾಧಿವೀರ ನಾದ ಯಾವನು ಇಷ್ಟರಲ್ಲಿಯೇ ಯುದ್ಧದಲ್ಲಿ ದುರುಳರಾವಣನನ್ನು, ರೋಷದಿಂದ ತಾನು ಬಿಡುವ ಬಾಣಗಳಿಂದ ವಧಿಸುವನೋ ಆ ಶ್ರೀರಾಮನಿಂದ ಪ್ರೇರೇಪಿತನಾಗಿ ಬಂದ ದೂತನೇ ನಾನು. ನಾನಿಲ್ಲಿಗೈತಂದುದು ನಿನ್ನ ನಿಮಿತ್ತವಾಗಿಯೆ. ಎಲೆ ದೇವಿ! ನಿನ್ನ ವಿರಹದಿಂದ ವ್ಯಸನಪಟ್ಟು ಪರಿತಪಿಸುತ್ತಿರುವ ಶ್ರೀರಾಮಚಂದ್ರನು ನಿನ್ನ ಕುಶಲವನ್ನು ಕೇಳಿದನು. ಮಹಾ ಪರಾಕ್ರಮಶಾಲಿಯೂ, ಮಹಾ ಬಾಹುವೂ ಆದ ಲಕ್ಷ್ಮಣನೂ ಕೂಡ ತನ್ನ ನಮಸ್ಕಾರ ಗಳನ್ನು ನಿನಗೆ ಸಮರ್ಪಿಸಿ ಕುಶಲವನ್ನು ಕೇಳಬೇಕೆಂದು ಹೇಳಿರುವನು. ॥ ೩೧–೩೫ ॥

ಸುಗ್ರೀವೋ ನಾಮ ವಾನರಃ । ರಾಜಾ ವಾನರಮುಖ್ಯಾನಾಂ ಸತ್ವಾಂ ಕೌಶಲಮಬ್ರವೀತ್ ॥ ೩೬ ॥ ನಿತ್ಯಂ ಸ್ಮರತಿ ರಾಮಸ್ತ್ವಾಂ ಸಸುಗ್ರೀವಸ್ಸಲಕ್ಷ್ಮಣಃ । ದಿಷ್ಟ್ಯಾ ಜೀವಸಿ ವೈದೇಹಿ! ರಾಕ್ಷಸೀವಶಮಾಗತಾ ॥ ೩೭ ॥ ನಚಿರಾದ್ದ್ರಕ್ಷ್ಯಸೇ ರಾಮಂ ಲಕ್ಷ್ಮಣಂ ಚ ಮಹಾಬಲಂ । ಮಧ್ಯೇ ವಾನರಕೋಟೀನಾಂ ಸುಗ್ರೀವಂಚಾಽಮಿತೌಜಸಂ ॥ ೩೮ ॥ ಅಹಂ ಸುಗ್ರೀವಸಚಿವೋ ಹನುಮಾನ್ನಾಮ ವಾನರಃ । ಪ್ರವಿಷ್ಟೋ ನಗರೀಂ ಲಂಕಾಂ ಲಂಘಯಿತ್ವಾ ಮಹೋದಧಿಂ ॥ ೩೯ ॥ ಕೃತ್ವಾ ಮೂರ್ಧ್ನಿ ಪದನ್ಯಾಸಂ ರಾವಣಸ್ಯ ದುರಾತ್ಮನಃ । ತ್ವಾಂ ದ್ರಷ್ಟುಮುಪಯಾತೋಽಹಂ ಸಮಾಶ್ರಿತ್ಯ ಪರಾಕ್ರಮಂ ॥ ೪೦ ॥

ಸಖಾ - ಸ್ನೇಹಿತನಾದ, ಸುಗ್ರೀವೋನಾಮ - ಸುಗ್ರೀವನೆಂದು ಪ್ರಸಿದ್ಧನಾದ, ವಾನರಃ - ಕಪಿಯಾದ, ವಾನರಮುಖ್ಯಾನಾಂ - ಕಪಿಶ್ರೇಷ್ಠರಿಗೆ, ರಾಜಾ - ರಾಜನು, ತ್ವಾಂ - ನಿನ್ನನ್ನು ಕುರಿತು, ಕೌಶಲಂ - ಕ್ಷೇಮವನ್ನು, ಅಬ್ರವೀತ್ - ಕೇಳಿದನು. ॥ ೩೬ ॥ ಸಸುಗ್ರೀವಃ - ಸುಗ್ರಿವಸಹಿತನಾದ, ಸಲಕ್ಷ್ಮಣಃ - ಲಕ್ಷ್ಮಣನಿಂದೊಡಗೂಡಿದ, ರಾಮಃ - ಶ್ರೀರಾಮನು, ನಿತ್ಯಂ - ಯಾವಾಗಲೂ, ತ್ವಾಂ - ನಿನ್ನನ್ನೇ, ಸ್ಮರತಿ - ಸ್ಮರಿಸುತ್ತಾನೆ, ಹೇ ವೈದೇಹಿ - ಓ ಸೀತಾದೇವಿಯೇ, ರಾಕ್ಷಸೀವಶಂ - ರಕ್ಕಸಿಯರ ಆಧೀನವನ್ನು, ಆಗತಾ-ಹೊಂದಿದವಳಾಗಿ, ದಿಷ್ಟ್ಯಾ-ಅದೃಷ್ಟವಶದಿಂದ, ಜೀವಸಿ-ಬದುಕಿರುವೆಯಷ್ಟೆ. ॥ ೩೭ ॥ ರಾಮಂ - ಶ್ರೀರಾಮನನ್ನು, ಮಹಾಬಲಂ - ಮಹಾಬಲವುಳ್ಳ, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ವಾನರಕೋಟೀನಾಂ - ಕೋಟ್ಯಂತರಕಪಿಗಳ, ಮಧ್ಯೇ - ನಡುವೆ, ಅಮಿತೌಜಸಂ - ಮಹಾಪರಾಕ್ರಮವುಳ್ಳ, ಸುಗ್ರೀವಂಚ-ಸುಗ್ರೀವನನ್ನೂ ಸಹ, ನಚಿರಾತ್-ಜಾಗ್ರತೆಯಾಗಿ, ದ್ರಕ್ಷ್ಯಸೇ-ನೋಡುವೆ. ॥ ೩೮ ॥ ಅಹಂ - ನಾನು, ಸುಗ್ರೀವಸಚಿವಃ - ಸುಗ್ರೀವನಮಂತ್ರಿಯಾದ, ಹನುಮಾನ್ನಾಮ - ಹನುಮಂತನೆಂದು ಪ್ರಸಿದ್ಧನಾದ, ವಾನರಃ - ವಾನರನು, ಮಹೋದಧಿಂ - ಸಮುದ್ರವನ್ನು, ಲಂಘಯಿತ್ವಾ - ದಾಟಿ, ಲಂಕಾಂನಗರೀಂ - ಲಂಕಾಪಟ್ಟಣವನ್ನು, ಪ್ರವಿಷ್ಟಃ - ಪ್ರವೇಶಿಸಿದೆನು. ॥ ೩೯ ॥ ಅಹಂ - ನಾನು, ತ್ವಾಂ - ನಿನ್ನನ್ನು, ದ್ರಷ್ಟುಂ - ನೋಡುವದಕ್ಕಾಗಿ, ಪರಾಕ್ರಮಂ - ಸಾಮರ್ಥ್ಯವನ್ನು, ಸಮಾಶ್ರಿತ್ಯ - ಆಶ್ರಯಿಸಿ, ದುರಾತ್ಮನಃ - ದುಷ್ಟಬುದ್ಧಿಯುಳ್ಳ, ರಾವಣಸ್ಯ - ರಾವಣಾಸುರನ, ಮೂರ್ಧ್ನಿ - ಶಿರಸ್ಸಿನಲ್ಲಿ, ಪದನ್ಯಾಸಂ-ಪಾದವಿಕ್ಷೇಪವನ್ನು, ಕೃತ್ವಾ-ಮಾಡಿ, ಉಪಯಾತಃ-ಬಂದೆನು. ॥ ೪೦ ॥ ಹೇ ದೇವಿ - ಓ ತಾಯಿಯೇ, ಮಾಂ-ನನ್ನನ್ನು, ಯಥಾ-ಎಂಥವನನ್ನಾಗಿ, ಅವಗಚ್ಛಸಿ-ತಿಳಿದಿದ್ದೀಯೋ, ಅಹಂ-

ಎಲೆ ತಾಯೇ! ಶ್ರೀರಾಮ ಲಕ್ಷ್ಮಣ ಸುಗ್ರೀವರು ನಿನ್ನ ಕ್ಷೇಮವನ್ನು ನಿರಂತರವೂ ಸ್ಮರಿಸುತ್ತಿರುವರು. ನೀನು ರಾಕ್ಷಸಸ್ತ್ರೀಯರ ವಶವಾಗಿದ್ದರೂ ಭಾಗ್ಯವಶದಿಂದ ಜೀವದಿಂದಿರುವೆಯಲ್ಲವೆ! ನೀನು ಶ್ರೀರಾಮ ಲಕ್ಷ್ಮಣರನ್ನೂ, ವಾನರಸಮೂಹವನ್ನೂ, ಅದರ ಮಧ್ಯದಲ್ಲಿರುವ ಸುಗ್ರೀವರಾಜನನ್ನೂ ಇನ್ನು ಸ್ವಲ್ಪಕಾಲದಲ್ಲಿಯೇ ನೋಡುವೆಯೆಂಬುದರಲ್ಲಿ ಸಂದೇಹವಿಲ್ಲವು. ನಾನು ಮಹಾ ಪರಾಕ್ರಮಿಯಾದ ಆ ಸುಗ್ರೀವರಾಜನಿಗೆ ಮುಖ್ಯ ಮಂತ್ರಿಯು. ನನ್ನ ಹೆಸರು ಹನಮಂತನೆನ್ನುವರು. ನಾನು ನಿನಗೋಸ್ಕರವಾಗಿಯೇ ಮಹಾ ಸಾಗರವನ್ನು ದಾಟಿ ಈ ಲಂಕಾನಗರವನ್ನು ಪ್ರವೇಶಿಸಿದೆನು. ಓ ಸೀತಾದೇವಿಯೇ! ನಾನು ಮಹಾ ಧೈರ್ಯಸ್ಥೈರ್ಯ ಶೌರ್ಯಾದಿಗಳನ್ನವಲಂಬಿಸಿ ಮಹಾ ದುರ್ಮಾರ್ಗನಾದ ರಾವಣಾಸುರನ ತಲೆಯಮೇಲೆ ಪಾದವನ್ನಿಟ್ಟು ನಿನ್ನನ್ನು ನೋಡುವ ಉದ್ದೇಶದಿಂದಿಲ್ಲಿಗೆ ಬಂದೆನು. ನೀನು

ನಾಹಮಸ್ಮಿ ತಥಾ ದೇವಿ ಯಥಾ ಮಾಮವಗಚ್ಛಸಿ ।
ವಿಶಂಕಾ ತ್ಯಜ್ಯತಾಮೇಷಾ ಶ್ರದ್ಧತ್ಸ್ವ ವದತೋ ಮಮ ॥ ೪೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಸ್ತ್ರಿಂಶಸ್ಸರ್ಗಃ

ನಾನು, ತಥಾ - ಅಂಥವನು, (ಅಂದರೆ ಮಾಯಾಮಾನರರೂಪವಂತನು) ನಾಸ್ಮಿ - ಅಲ್ಲವು, ಏಷಾ ವಿಶಂಕಾ - ಈ ಸಂದೇಹವು, ತ್ಯಜ್ಯತಾಂ - ಬಿಡಲ್ಪಡಲಿ, ವದತಃ - ಹೇಳುತ್ತಿರುವ, ಮಮ - ನನ್ನ, (ವಚಃ - ಮಾತನ್ನು) ಶ್ರದ್ಧತ್ಸ್ವ - ನಂಬು. ॥ ೪೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಸ್ತ್ರಿಂಶಸ್ಸರ್ಗಃ.

ನನ್ನನ್ನು ಕುರಿತು, "ಇವನು ಕಾಮರೂಪಿಯಾದ ರಾವಣಾಸುರನೇ ಸರಿ" ಎಂದು ಚಿಂತಿಸಿದೆಯಲ್ಲವೆ? ನೀನು ಹಾಗೆ ಚಿಂತಿಸುದುದು ಯುಕ್ತವಲ್ಲವು. ನಾನು ರಾವಣನಲ್ಲವು. ಈ ಸಂಶಯವನ್ನು ತೊರೆಯುವವಳಾಗು. ನಾನು ಹೇಳುವ ಮಾತುಗಳಲ್ಲಿ ನಂಬುಗೆಯನ್ನಿಡು" ಎಂದು ಹೇಳಿದನು. ॥ ೩೬–೪೧ ॥

ಇಂತಿದು ಹನುಮತ್ಸೀತಾ ಸಂವಾದವೆಂಬ ಮೂವತ್ತನಾಲ್ಕನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಪಂಚತ್ರಿಂಶಸ್ಸರ್ಗಃ

ತಾಂತು ರಾಮಕಥಾಂ ಶ್ರುತ್ವಾ ವೈದೇಹೀ ವಾನರರ್ಷಭಾತ್ । ಉವಾಚ ವಚನಂ ಸಾಂತ್ವಮಿದಂ ಮಧುರಯಾ ಗಿರಾ ॥ ೧ ॥ "ಕ್ವತೇ ರಾಮೇಣ ಸಂಸರ್ಗಃ ಕಥಂ ಜಾನಾಸಿ ಲಕ್ಷ್ಮಣಂ । ವಾನರಾಣಾಂ ನರಾಣಾಂಚ ಕಥಮಾಸೀತ್ಸಮಾಗಮಃ ? ॥ ೨ ॥ ಯಾನಿ ರಾಮಸ್ಯ ¶ ಲಿಂಗಾನಿ ಲಕ್ಷ್ಮಣಸ್ಯ ಚ ವಾನರ ! । ತಾನಿ ಭೂಯ ಸ್ಸಮಾಚಕ್ಷ್ವ ನಮಾಂ ಶೋಕಸ್ಸಮಾವಿಶೇತ್ ॥ ೩ ॥ ಕೀದೃಶಂ ತಸ್ಯ ಸಂಸ್ಥಾನಂ ರೂಪಂ ರಾಮಸ್ಯ ಕೀದೃಶಂ । ಕಥಮೂರೂ ಕಥಂ ಬಾಹೂ ಲಕ್ಷ್ಮಣಸ್ಯಚ ಶಂಸ

ವೈದೇಹೀ - ಸೀತಾದೇವಿಯು, ವಾನರರ್ಷಭಾತ್ - ವಾನರಶ್ರೇಷ್ಠನಾದ ಆಂಜನೇಯನಿಂದ, ತಾಂರಾಮಕಥಾಂತು - ಆ ರಾಮಚರಿತ್ರೆಯನ್ನಾದರೆ, ಶ್ರುತ್ವಾ - ಕೇಳಿ, ಮಧುರಯಾ - ಮನೋಹರವಾದ, ಗಿರಾ - ಮಾತಿನಿಂದ, ಸಾಂತ್ವಂ - ಸಮಾಧಾನಕರವಾದ, ಇದಂ - ಈ ಮುಂದೆ ಹೇಳತಕ್ಕ, ವಚನಂ - ವಾಕ್ಯವನ್ನು, ಉವಾಚ - ನುಡಿದಳು. ॥ ೧ ॥ ತೇ - ನಿನಗೆ, ರಾಮೇಣ - ಶ್ರೀರಾಮನೊಡನೆ, ಸಂಸರ್ಗಃ - ಕೂಡುವಿಕೆಯು, ಕ್ವ - ಎಲ್ಲಿ, ಲಕ್ಷ್ಮಣಂ - ಲಕ್ಷ್ಮಣನನ್ನು, ಕಥಂಜಾನಾಸಿ - ತಿಳಿದುದೆಂತು, ವಾನರಾಣಾಂ - ಕಪಿಗಳಿಗೂ, ನರಾಣಾಂಚ - ಮನುಷ್ಯರಿಗೂ, ಸಮಾಗಮಃ - ಪರಿಚಯವು, ಕಥಮಾಸೀತ್ - ಹೇಗಾಯಿತು. ॥ ೨ ॥ ಹೇ ವಾನರ - ಎಲೈ ವಾನರನೇ, ರಾಮಸ್ಯ - ಶ್ರೀರಾಮನಿಗೂ, ಲಕ್ಷ್ಮಣಸ್ಯಚ - ಲಕ್ಷ್ಮಣನಿಗೂ, ಯಾನಿಲಿಂಗಾನಿ - ಯಾವ ಅಸಾಧಾರಣಗಳಾದ ಗುರ್ತುಗಳೋ, ತಾನಿ - ಅವುಗಳನ್ನು, ಭೂಯಃ - ಮತ್ತೂ, ಸಮಾಚಕ್ಷ್ವ - ಹೇಳು, ಶೋಕಃ - ವ್ಯಸನವು, ಮಾಂ - ನನ್ನನ್ನು, ನಸಮಾವಿಶೇತ್ - ಹೊಂದಲಾರದು. ॥ ೩ ॥ ತಸ್ಯರಾಮಸ್ಯ - ಆ ಶ್ರೀರಾಮನಿಗೂ, ಲಕ್ಷ್ಮಣಸ್ಯಚ - ಲಕ್ಷ್ಮಣನಿಗೂ, ಸಂಸ್ಥಾನಂ - ಅವಯವಸ್ಥಿತಿಯು, ಕೀದೃಶಂ - ಎಂಥದು, ರೂಪಂ - ಆಕಾರವು, ಕೀದೃಶಂ - ಹೇಗಿರುವದು, ಊರೂ - ತೊಡೆಗಳು, ಕಥಂ - ಯಾವ

ಆಮೇಲೆ ಸೀತೆಯು, ಹನುಮಂತನು ಹೇಳಿದ ರಾಮಕಥೆಯನ್ನು ಕೇಳಿ ಸಂತಸಗೊಂಡು, ಮೃದುಮಧುರವಾದ ಮಾತುಗಳಿಂದ ಅವನನ್ನು ಕುರಿತು, "ಎಲೆ ಕಪಿಪುಂಗವಾ ! ನಿನಗೂ ಶ್ರೀರಾಮನಿಗೂ ಸಂಬಂಧವುಂಟಾದುದು ಹೇಗೆ? ಆತನನ್ನು ಕಂಡುದುದೆಲ್ಲಿ? ಆತನ ತಮ್ಮನಾದ ಲಕ್ಷ್ಮಣಸ್ವಾಮಿಯನ್ನು ನೀನು ಹೇಗೆ ಬಲ್ಲೆ? ವಾನರರಿಗೂ, ನರರಿಗೂ ಈ ಸಂಬಂಧವು ಹೇಗೆ ಘಟಿಸಿತು. ಶ್ರೀರಾಮಮೂರ್ತಿಗೆ ಯಾವ ಯಾವ ಗುರುತುಗಳಿರುವುವೋ, ಲಕ್ಷ್ಮಣಸ್ವಾಮಿಗೆ ಯಾವ ಚಿಹ್ನೆಗಳಿರುವುವೋ ಅವೆಲ್ಲನ್ನೂ ನನಗೆ ಹೇಳು. ಎಲೈ ಕಪಿಯೆ ! ಅವುಗಳನ್ನು ಕೇಳುವುದರಿಂದ ನನಗೆ ದುಃಖವು ಶಾಂತವಾಗುವುದು ಮಾತ್ರವಲ್ಲದೆ, ನಿನ್ನಲ್ಲಿ ನನಗಿರುವ ಸಂದೇಹವೂ ದೂರವಾಗುವುದು. ಎಲೈ ಮಾರುತಿಯೆ ! ಶ್ರೀರಾಮನ ಅವಯವ ಸಂಸ್ಥಾನವೆಂತಹುದು? ಆತನ ರೂಪವೆಂತಿರುವುದು? ಅಂತೆಯೇ ಲಕ್ಷ್ಮಣನ ಅವಯವ

¶ "ಚಿಹ್ನಾನಿ" ತಿ. ಪಾ.

ಮೇ ?" ॥ ೪ ॥ ಏವಮುಕ್ತಸ್ತು ವೈದೇಹ್ಯಾ ಹನುಮಾನ್ಮಾರುತಾತ್ಮಜಃ । ತತೋ ರಾಮಂ ಯಥಾ ತತ್ವಮಾಖ್ಯಾತುಮುಪಚಕ್ರಮೇ ॥೫॥ "ಜಾನಂತೀ ಬತ ದಿಷ್ಟ್ಯಾ ಮಾಂ ವೈದೇಹಿ! ಪರಿಪೃಚ್ಛಸಿ । ಭರ್ತುಃ ಕಮಲಪತ್ರಾಕ್ಷಿ! ಸಂಸ್ಥಾನಂ ಲಕ್ಷ್ಮಣಸ್ಯಚ ॥ ೬ ॥ ಯಾನಿ ರಾಮಸ್ಯ ಚಿಹ್ನಾನಿ ಲಕ್ಷ್ಮಣಸ್ಯಚ ಯಾನಿ ವೈ । ಲಕ್ಷಿತಾನಿ ವಿಶಾಲಾಕ್ಷಿ! ವದತಶ್ಶೃಣು ತಾನಿ ಮೇ ॥೭॥ ¶ ರಾಮಃ ಕಮಲಪತ್ರಾಕ್ಷಃ ❦ ಸ್ಸರ್ವ

ರೀತಿಯಾಗಿರುವುವು, ಬಾಹೂ - ಭುಜಗಳು, ಕಥಂ - ಹೇಗಿವೆ, ಮೇ - ನನಗೆ, ಶಂಸ - ಹೇಳು. ॥ ೪ ॥ ವೈದೇಹ್ಯಾ - ಸೀತಾದೇವಿಯಿಂದ, ಏವಂ - ಈ ಪ್ರಕಾರವಾಗಿ, ಉಕ್ತಃ - ಹೇಳಲ್ಪಟ್ಟ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ತತಃ - ಬಳಿಕ, ರಾಮಂ - ಶ್ರೀರಾಮನನ್ನು, ಯಥಾತತ್ವಂ - ಯಥಾವತ್ತಾಗಿ, ಆಖ್ಯಾತುಂ - ಹೇಳುವಸಕ್ಕೆ, ಉಪಚಕ್ರಮೇ - ಆರಂಭಿಸಿದನು. ॥ ೫ ॥ ಹೇ ವೈದೇಹಿ - ಓ ಜನಕಪುತ್ರಿಯೆ, ಹೇ ಕಮಲಪತ್ರಾಕ್ಷಿ - ಎಲೌ ಕಮಲದೆಲೆಯಂತೆ ವಿಶಾಲವಾದ ನೇತ್ರಗಳುಳ್ಳವಳೇ, ಮಾಂ - ನನ್ನನ್ನು, ಜಾನಂತೀ - ರಾಮದೂತನೆಂದು ತಿಳಿದವಳಾಗಿ, ಭರ್ತುಃ - ಪತಿಯಾದ, ರಾಮಸ್ಯ - ಶ್ರೀರಾಮನ, ಲಕ್ಷ್ಮಣಸ್ಯಚ - ಲಕ್ಷ್ಮಣನ, ಸಂಸ್ಥಾನಂ - ಅವಯವಸ್ಥಿತಿಯನ್ನು, ದಿಷ್ಟ್ಯಾ - ನನ್ನ ಭಾಗ್ಯವಶದಿಂದ, ಪರಿಪೃಚ್ಛಸಿ - ಕೇಳುತ್ತಿರುವೆ, ಬತ - ಸಂತೋಷವು, ಹೇ ವಿಶಾಲಾಕ್ಷಿ - ಎಲೈ ವಿಶಾಲನೇತ್ರಿಯೇ, ರಾಮಸ್ಯ - ಶ್ರೀರಾಮನ, ಲಕ್ಷ್ಮಣಸ್ಯಚ - ಲಕ್ಷ್ಮಣನ, ಯಾನಿಯಾನಿಚಿಹ್ನಾನಿ - ಯಾವಯಾವಲಕ್ಷಣಗಳು, ತ್ವಯಾ - ನಿನ್ನಿಂದ, ಲಕ್ಷಿತಾನಿ - ನೋಡಲ್ಪಟ್ಟವೆಯೋ, ತಾನಿ - ಆ ಚಿಹ್ನೆಗಳನ್ನು, ವದತಃ - ಹೇಳುತ್ತಿರುವ, ಮೇ - ನನ್ನ ದೆಶೆಯಿಂದ, ಶೃಣು - ಕೇಳು. ॥ ೭ ॥ ಹೇ ಜನಕಾತ್ಮಜೇ - ಓ ಜನಕಪುತ್ರಿಯೇ, ರಾಮಃ - (ಗೋ+ಮ) ಸರ್ವಾಂಗಸುಂದರನಾದ ಶ್ರೀರಾಮನು, ಕಮಲಪತ್ರಾಕ್ಷಃ - ಕಮಲಪತ್ರಗಳಂತೆ ನೇತ್ರಗಳುಳ್ಳವನಾಗಿಯೂ, (ಗೋ) ಕಾಂತಿಯೆಂಬ ಪ್ರವಾಹದಲ್ಲಿ ಸುಳಿಗಳಂತೆ ಶೆಳೆಯುತ್ತಿರುವ ನೇತ್ರಕಾಂತಿಯುಳ್ಳವನಾಗಿಯೂ, ಸರ್ವ....ರಃ-ಸಮಸ್ತಜಂತುಗಳಿಗೂ ಮನೋಹರನಾಗಿಯೂ, ಅಥವಾ-ಸರ್ವಸತ್ವಾಂತಃಪಾತಿಯಾದ,

ಸಂಸ್ಥಾನ ವಿಶೇಷಗಳನ್ನೂ ತಿಳಿಸು. ಅಯ್ಯಾ! ಶ್ರೀರಾಮನ ಬಾಹುಗಳು ಹೇಗಿರುವುವು ಈ ವಿಷಯಗಳೆಲ್ಲವನ್ನೂ ವಿಶದವಾಗಿ ತಿಳಿಯ ಹೇಳುವವನಾಗು." ಎಂದಳು. ಆಗ ಹನುಮಂತನು ಶ್ರೀರಾಮನನ್ನು ಚೆನ್ನಾಗಿ ವರ್ಣಿಸಿ ಇದ್ದುದನ್ನಿದ್ದಂತೆ ಆ ಸೀತಾದೇವಿಗೆ ಹೇಳಲುಪಕ್ರಮಿಸಿದನು. ॥ ೨-೫ ॥ ಎಲೆ ತಾಯೇ! ನೀನು ನನ್ನನ್ನು ಭಾಗ್ಯವಶದಿಂದ, ಶ್ರೀರಾಮದೂತನನ್ನಾಗಿ ತಿಳಿದು ಶ್ರೀರಾಮ ಲಕ್ಷ್ಮಣರ ಅವಯವ ಸನ್ನಿವೇಶಗಳನ್ನು ಕುರಿತು ಪ್ರಶ್ನಿಸಿದೆ. ಇದರಿಂದ ನನಗೆ ಬಹಳವಾದ ಸಂತೋಷವುಂಟಾಗಿರುವುದು. ದೇವಿ! ನೀನು ಶ್ರೀರಾಮ ಲಕ್ಷ್ಮಣರ ಯಾವ ಯಾವ ಗುರುತುಗಳನ್ನು ಕಂಡಿರುವೆಯೋ ಆ ಗುರುತುಗಳೆಲ್ಲವನ್ನೂ ವರ್ಣಿಸಿ ಹೇಳುವೆನು. ಆಲಿಸಿ ಕೇಳು. ಎಲೌ ಜಾನಕಿಯೇ! ಶ್ರೀರಾಮನು ಸರ್ವಾಂಗಸುಂದರನು. ಕಮಲಪತ್ರದಂತೆ ವಿಶಾಲವಾದ ನೇತ್ರಗಳುಳ್ಳವನು; ಸಮಸ್ತ ಜೀವಜಂತುಜಾಲಗಳಿಗೂ ಮನೋಹರನಾದವನು; ಅಪ್ರತಿಮ ರೂಪಶಾಲಿಯಾದನು; ದಯಾದಾಕ್ಷಿ

❦ "ಪೂರ್ಣಚಂದ್ರನಿಭಾನನಃ" ತಿ. ರಾ. ಪಾ.

¶ ವಿಶೇಷಾರ್ಥ:—ರಾಮಃ-ಸರ್ವಾಂಗಸುಂದರನಾದವನು. ಕಮಲಪತ್ರಾಕ್ಷಃ-ಕಾಂತಿಪ್ರವಾಹದಲ್ಲಿ ಸುಳಿಗಳಂತೆ ಬಹಳವಾದ ಆಕರ್ಷಣಶಕ್ತಿಯಿರುವ ನಯನಶೋಭೆಯುಳ್ಳವನು. ಸರ್ವಸತ್ವ ಮನೋಹರಃ-ತಿರ್ಯಗ್ಜಂತುವಾಗಿ ಗಿಡ

ಭೂತಮನೋಹರಃ । ರೂಪದಾಕ್ಷಿಣ್ಯಸಂಪನ್ನಃ ಪ್ರಸೂತೋ ಜನಕಾತ್ಮಜೇ ॥ ೮ ॥
ತೇಜಸಾಽದಿತ್ಯಸಂಕಾಶಃ ಕ್ಷಮಯಾ ಪೃಥಿವೀಸಮಃ । ಬೃಹಸ್ಪತಿಸಮೋ ಬುದ್ಧ್ಯಾ
ಯಶಸಾ ವಾಸವೋಪಮಃ ॥ ೯ ॥ ರಕ್ಷಿತಾ ಜೀವಲೋಕಸ್ಯ ಸ್ವಜನಸ್ಯಾಭಿರಕ್ಷಿತಾ ।
ರಕ್ಷಿತಾ ಸ್ವಸ್ಯ ವೃತ್ತಸ್ಯ ಧರ್ಮಸ್ಯಚ ಪರಂತಪಃ॥೧೦॥¶ರಾಮೋ ಭಾಮಿನಿ! ಲೋಕಸ್ಯ

ನನ್ನಂಥತಿರ್ಯಗ್ಜಂತುವಿಗೂ ಸಹ ಚಿತ್ತಾಪಹಾರಕನಾಗಿಯೂ, ರೂಪ....ನ್ನಃ-ಸೌಂದರ್ಯದಿಂದಲೂ, ಸರ್ವಸಮಬುದ್ಧಿಯಿಂದಲೂ ಕೂಡಿದವನಾಗಿಯೂ, (ಗೋ+ಮ) ರೂಪ - ಶರೀರಗುಣಗಳಿಂದಲೂ, ದಯಾದಾಕ್ಷಿಣ್ಯಾದ್ಯನೇಕ - ಆತ್ಮಗುಣಗಳಿಂದಲೂ ಸಂಪೂರ್ಣನಾಗಿ, ಪ್ರಸೂತಃ - ಜನಿಸಿದನು. ॥ ೮ ॥ ತೇಜಸಾ - ತೇಜಸ್ಸಿನಿಂದ, ಆದಿ....ಶಃ - ಸೂರ್ಯಸದೃಶನು, ಕ್ಷಮಯಾ - ಸೈರಣೆಯಿಂದ, ಪೃಥಿವಿಗೆ ಸಮಃ - ಭೂಮಿಗೆ ಸಮಾನನಾದವನು, ಬುದ್ಧ್ಯಾ - ಬುದ್ಧಿಯಿಂದ, ಬೃಹಸ್ಪತಿಸಮಃ - ದೇವಗುರುವಿಗೆ ಸಮಾನನಾದವನು, ಯಶಸಾ - ಕೀರ್ತಿಯಿಂದ, ವಾಸವೋಪಮಃ - ದೇವೇಂದ್ರನಿಗೆ ಸಮಾನನಾದವನು, ಜೀವಲೋಕಸ್ಯ - ಪ್ರಾಣಿಸಮುದಾಯಕ್ಕೆ, ರಕ್ಷಿತಾ - ಸಂರಕ್ಷಕನು, ಸ್ವಜನಸ್ಯ - ತನ್ನ ಜನಕ್ಕೆ, ಅಭಿರಕ್ಷಿತಾ - ಪಾಲಕನಾದವನು, ಸ್ವಸ್ಯವೃತ್ತಸ್ಯ - ತನ್ನ ಕ್ಷತ್ರಿಯಧರ್ಮಕ್ಕೂ, ರಕ್ಷಿತಾ - ಸಂರಕ್ಷಣಕರ್ತನಾದವನು, ಧರ್ಮಸ್ಯಚ - ಧರ್ಮವೆಂಬ ಪುರುಷಾರ್ಥಕ್ಕೂ, ರಕ್ಷಿತಾ - ರಕ್ಷಣಕರ್ತನಾದವನು, ಪರಂತಪಃ - ಶತ್ರುಸಂಹಾರಕನು, ಹೇ ಭಾಮಿನಿ - ಓ ಸೀತಾದೇವಿಯೆ, ಸರಾಮಃ - ಆ ಶ್ರೀರಾಮನು, ಲೋಕಸ್ಯ - ಸರ್ವಲೋಕಗಳಿಗೂ, ಚಾತು....ಸ್ಯ - ಬ್ರಹ್ಮ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕುಜಾತಿಗಳಿಗೂ, ರಕ್ಷಿತಾ - ಸಂರಕ್ಷಣಕರ್ತನು, ಲೋಕಸ್ಯ - ಜನರ, ಮರ್ಯಾದಾನಾಂ - ಪದ್ಧತಿ

ಣ್ಯಾದಿ ಗುಣಗಳಿಗೆ ಆತನು ನೆಲೆಯಾಗಿರುವವನು ; ಓ ಜನನೀ! ಶ್ರೀರಾಮಮೂರ್ತಿಯು ತೇಜಸ್ಸಿನಲ್ಲಿ ದಿನಕರನಿಗೆ ಸಮಾನನಾದವನು ; ತಾಳ್ಮೆಯಲ್ಲಿ ಭೂಮಿಗೆ ಸದೃಶನು ; ಬುದ್ಧಿಯಲ್ಲಿ ಸುರಗುರುವಾದ ಬೃಹಸ್ಪತ್ಯಾಚಾರ್ಯನಿಗೆ ಸಮಾನನು ; ಕೀರ್ತಿಯಲ್ಲಿ ದೇವೇಂದ್ರನಿಗೆ ಸಮಾನನು. ಎಲೆ ಜನನೀ! ಶ್ರೀರಾಮನು ಸಮಸ್ತ ಪ್ರಾಣಿಗಳಿಗೂ ಸಂರಕ್ಷಕನು ; ತನ್ನ ಬಂಧುಬಳಗದವರಿಗೂ ರಕ್ಷಕನು ; ಮಾತ್ರವಲ್ಲದೆ ತನ್ನ ಕುಲಕ್ಕೆ ತಕ್ಕ ಆಚಾರವುಳ್ಳವನು ; ಕುಲಕ್ರಮಾಗತವಾದ ಧರ್ಮಗಳನ್ನು ಎಡಬಿಡದೆ ಪಾಲಿಸಿಕೊಂಡು ಬರುವವನು ; ವರ್ಣಾಶ್ರಮ ಧರ್ಮಗಳ ಸಂರಕ್ಷಕನು ; ಕ್ಷತ್ರಿಯ ಧರ್ಮವನ್ನು ಚೆನ್ನಾಗಿ ಪಾಲಿಸುವಾತನು. ॥ ೬–೧೦ ॥ ದೇವೀ! ಶ್ರೀರಾಮನು ಈ ಪ್ರಪಂಚದಲ್ಲಿರುವ ಬ್ರಹ್ಮ ಕ್ಷತ್ರಿಯ

ದಿಂದ ಗಿಡಕ್ಕೆ ಹಾರುವವನಾದ ನನ್ನಂತಹ ನಚಿತ್ತವನ್ನೂ ಅಪಹರಿಸುವವನೆಂದಮೇಲೆ ಇತರರ ಪಾಡೇನು. ರೂಪದಾಕ್ಷಿಣ್ಯ ಸಂಪನ್ನಃ-(ರೂಪವು ವಿಗ್ರಹ ಗುಣಕ್ಕೆ ಉಪಲಕ್ಷಣ. ದಾಕ್ಷಿಣ್ಯವು ಆತ್ಮ ಗುಣಗಳಿಗೆ ಉಪಲಕ್ಷಣವು) ದೇಹಗುಣಗಳಲ್ಲಿಯೂ, ಆತ್ಮ ಗುಣಗಳಲ್ಲಿಯೂ ನ್ಯೂನತೆಯಿಲ್ಲದವನು. ಇವೆಲ್ಲವೂ ಹೊಸತಾಗಿ ಬಂದುದಲ್ಲ; ಜನ್ಮದೊಡನೆಯೇ ಬಂದುದು. (ಇದೇನು ವಿಪರೀತವಾಗಿ ಹೇಳುತ್ತಿರುವೆ. ಅವನಂತೆ ಮತ್ತಾರೂ ಇಲ್ಲವೆ. ಎಂದರೆ) ಜನಕಾತ್ಮಜೇ-ಜನಕರಾಜಕುಮಾರಿಯಾದ ನೀನುಮಾತ್ರ ಸರ್ವವಿಧದಲ್ಲಿಯೂ ಆ ರಘುರಾಮನಿಗೆ ಸದೃಶಳಾಗಿರುವೆ. (ಗೋ)

¶ ಇಲ್ಲಿ ಶ್ರೀರಾಮನು ಎಲ್ಲಕ್ಕೂ ಕರ್ತೃವೂ, ಹರ್ತೃವೂ, ಭರ್ತೃವೂ ಆದವನೆಂದು ವಿಶೇಷಾರ್ಥವು. ಇದರಿಂದ ಸೃಷ್ಟಿ ಸ್ಥಿತಿ ಸಂಹಾರ ಕರ್ತೃತ್ವರೂಪವಾದ ಬ್ರಹ್ಮಲಕ್ಷಣವು ನಿರೂಪಿತವಾಗುವುದು. (ರಾಮನೇ ಪರಬ್ರಹ್ಮನೆಂದು ಗೂಢಾಭಿಪ್ರಾಯವು) ಶ್ರೀರಾಮನು ಭಗವಂತನ ಅವತಾರವಾದುದರಿಂದ ಲೋಕದಲ್ಲಿ ವರ್ಣಾಶ್ರಮಗಳ ಮರ್ಯಾದೆಗಳನ್ನು ರಕ್ಷಿಸುವನು. ಆ ಆ ವರ್ಣಗಳವರನ್ನು ಅವರವರ ಧರ್ಮದಲ್ಲಿ ನಿರತರಾಗುವಂತೆ ಮಾಡುವವನು. ಕಾಲಾತ್ಮಕನಾಗಿ ಅವತರಿಸಿ ಮಾನುಷರೂಪದಿಂದಲೇ ಚಾತುರ್ವರ್ಣ್ಯವನ್ನು ರಕ್ಷಿಸುವವನೆಂದು ಅರ್ಥ. (ತಿ)

ಚಾತುರ್ವರ್ಣ್ಯಸ್ಯ ರಕ್ಷಿತಾ । ಮರ್ಯಾದಾನಾಂಚ ಲೋಕಸ್ಯ ಕರ್ತಾ ಕಾರಯಿತಾಚ ಸಃ ॥೧೧॥ ಅರ್ಚಿಷ್ಮಾನರ್ಚಿತೋಽತ್ಯರ್ಥಂ ¶ ಬ್ರಹ್ಮಚರ್ಯವ್ರತೇ ಸ್ಥಿತಃ । ಸಾಧೂನಾಮುಪಕಾರಜ್ಞಃ ☸ ಪ್ರಚಾರಜ್ಞಶ್ಚ ಕರ್ಮಣಾಂ ॥೧೨॥ ರಾಜವಿದ್ಯಾವಿನೀತಶ್ಚ ಬ್ರಾಹ್ಮಣಾನಾಮುಪಾಸಿತಾ । $ ಶ್ರುತವಾನ್ ಶೀಲಸಂಪನ್ನೋ ವಿನೀತಶ್ಚ ಪರಂತಪಃ ॥ ೧೩ ॥

ಗಳಿಗೆ, ಕರ್ತಾ - ನಿಯಾಮಕನು, ಕಾರಯಿತಾಚ - ಇತರರಿಂದ ಮಾಡಿಸುವಂತಹನು, ಅರ್ಚಿಷ್ಮಾನ್ - ತೇಜೋವಂತನು, ಅತ್ಯರ್ಥಂ - ಬಹಳವಾಗಿ, ಅರ್ಚಿತಃ - ಸತ್ಪುರುಷರಿಂದ ಪೂಜಿಸಲ್ಪಟ್ಟವನು, ಬ್ರಹ್ಮಚರ್ಯವ್ರತೇ - ಬ್ರಹ್ಮಚರ್ಯವ್ರತದಲ್ಲಿ, ಸ್ಥಿತಃ - ಇರುವವನು, ಸಾಧೂನಾಂ - ಸತ್ಪುರುಷರ ಉಪಕಾರಜ್ಞಃ - ಉಪಕಾರವನ್ನೆಣಿಸುವವನು, ಕರ್ಮಣಾಂ - ಸತ್ಕರ್ಮಗಳ, ಪ್ರಚಾರಜ್ಞಃ - ಪ್ರಯೋಗವನ್ನು ತಿಳಿದವನು, ರಾಜ....ಶ್ಚ-ಕಾಮಂದಕ್ಯಾದಿ-ರಾಜನೀತಿಶಾಸ್ತ್ರದಲ್ಲಿ ಶಿಕ್ಷಿತನು, ಬ್ರಾಹ್ಮಣಾನಾಂ - ಬ್ರಾಹ್ಮಣರಿಗೆ, ಉಪಾಸಿತಾ-ಸೇವೆಯನ್ನು ಸಲ್ಲಿಸುವವನು, ಶ್ರುತವಾನ್-ಬಹುಶಾಸ್ತ್ರಜ್ಞನು, ಶೀಲಸಂಪನ್ನಃ-ಸತ್ಸ್ವಭಾವದಿಂದ ಕೂಡಿದವನು, ವಿನೀತಶ್ಚ - ಮಿತ್ರರಲ್ಲಿ ವಿನಯಸಂಪನ್ನನು, ಪರಂತಪಃ - ಶತ್ರುಗಳನ್ನು ತಪಿಸುವಂಥಾವನು, ಯಜು....ಶ್ಚ - ಯಜುರ್ವೇದದಲ್ಲಿ ಶಿಕ್ಷಿತನಾದವನು, ವೇದವಿದ್ಭಿಃ -

ವೈಶ್ಯ ಶೂದ್ರ ಎಂಬ ನಾಲ್ಕೂವರ್ಣಗಳಿಗೂ ರಕ್ಷಕನಾದವನು. ಅಲ್ಲದೆ ಲೋಕಮರ್ಯಾದೆಗಳನ್ನು ತಾನು ಚೆನ್ನಾಗಿ ತಿಳಿದುಕೊಂಡು ಅದರಂತೆಯೇ ನಡೆಯುತ್ತ, ಎಲ್ಲರಿಂದಲೂ ನಡೆಯಿಸುವವನು. ಆತನು ಮಹಾ ಪೂಜ್ಯನು: ಮಹಾ ಕೀರ್ತಿವಂತನು; ಬ್ರಹ್ಮಚರ್ಯವ್ರತವುಳ್ಳವನು; ಮಾತ್ರವಲ್ಲದೆ ಆ ಬ್ರಹ್ಮಚರ್ಯವ್ರತದಿಂದಲೇ ಪ್ರಸಿದ್ಧಿಯುಳ್ಳವನು; ಆತನು ಹಿರಿಯರಿಗೆ ಉಪಕಾರಮಾಡುವುದರಲ್ಲಿ ನಿರತನಾದವನು; ಸಮಸ್ತ ಕಾರ್ಯಗಳನ್ನೂ ಚೆನ್ನಾಗಿ ಬಲ್ಲವನು. ಓ ಜನಕಪುತ್ರಿಯೇ! ರಾಜನೀತಿ ಶಾಸ್ತ್ರದಲ್ಲಿ ಶ್ರೀರಾಮನು ಮಹಾ ಪಾಂಡಿತ್ಯವುಳ್ಳವನು; ಬ್ರಾಹ್ಮಣೋಪಾಸಕನು; ಅರಿತ ಹಿರಿಯರಿಂದ ಸದಸದ್ವಿಚಾರಗಳ ರೀತಿನೀತಿಗಳನ್ನು ಚೆನ್ನಾಗಿ ಕೇಳಿ ತಿಳಿದವನು; ವಿನಯ ಸಂಪನ್ನನು; ಗುಣಾಢ್ಯನು; ಶತ್ರುತಾಪನನು; ಋಗ್ಯಜುಸ್ಸಾಮಾಥರ್ವಣಗಳೆಂಬ ನಾಲ್ಕೂವೇದಗಳನ್ನು ಬಲ್ಲವನು ಮಾತ್ರವಲ್ಲದೆ ಅವುಗಳನ್ನರಿತವರಿಂದ ಗೌರವಿಸಲ್ಪಟ್ಟವನು; ಧನುರ್ವೇದದಲ್ಲಿಯೂ, ಇತರ ವೇದಗಳ

¶ ಬ್ರಹ್ಮಚರ್ಯವ್ರತೇಸ್ಥಿತಃ-“ಷೋಡಶರ್ತುನಿಶಾಃ ಸ್ತ್ರೀಣಾಂ ತಸ್ಮಿನ್ಯುಗ್ಮಾಸು ಸಂವಿಶೇತ್, ಬ್ರಹ್ಮಚಾರ್ಯೇವ ಪರ್ವಾಣ್ಯಾದ್ಯಾಶ್ಚತಸ್ರಶ್ಚ ವಿವರ್ಜಯೇತ್” ಎಂಬಂತೆ ಋತುಕಾಲಗಳ ಹೊರತು ಇತರ ಸಮಯಗಳಲ್ಲಿ ಸ್ತ್ರೀಸಂಗವನ್ನು ದೂರಮಾಡಿರುವ ಬ್ರಹ್ಮಚಾರಿಯೆಂದರ್ಥ.

ಶ್ರೀರಾಮನು ಭಗವದವತಾರವಾದುದರಿಂದಲೇ ಪೂಜ್ಯನಾದ ಆದಿತ್ಯರೂಪನಾಗಿ ತ್ರೈವರ್ಣಿಕರಿಂದ ಪೂಜಿಸಲ್ಪಡುವನು. (ಬ್ರಹ್ಮಚರ್ಯವ್ರತೇಸ್ಥಿತಃ - ಗೃಹಸ್ಥರಿಗೆ ಉಚಿತವಾಗಿ ಪರ್ವಾದಿ ದಿನಗಳನ್ನು ಬಿಟ್ಟು ಋತುಕಾಲಗಳಲ್ಲಿ ಮಾತ್ರ ಸ್ತ್ರೀಗಮನ ಮಾಡುವವನು) ವಾಸ್ತವವಾಗಿ ಶ್ರೀರಾಮನು ಗಾರ್ಹಸ್ಥ್ಯದಲ್ಲಿಯೂ ಅಸ್ಖಲಿತತೇಜಸ್ಸುಳ್ಳವನು. ಎಂದರೆ ಮನಃಸಂಕಲ್ಪದಿಂದಲೇ ದೇವಿಯರತಿ ಪ್ರೀತಿಗಳಿಗನುಗುಣವಾಗಿ ಸಂತಾಪವನ್ನುಂಟುಮಾಡುವವನೆಂದು ರಹಸ್ಯಾರ್ಥವು. (ತಿ) ಅರ್ಚಿಷ್ಮಾ - ಮಹಾ ಕಾಂತಿಯುತನು (ಶ್ರುತಿ - ತಸ್ಯ ಭಾಸಾ ಸರ್ವಮಿದಂ ವಿಭಾತಿ”) (ರಾ)

☸ ಪ್ರಚಾರಜ್ಞಃ—ಐಹಿಕಾಮುಷ್ಮಿಕಗಳಾದ ಕರ್ಮಗಳನ್ನು ಪ್ರಚಾರಮಾಡುವವನು ಮಾತ್ರವಲ್ಲದೆ ಅವುಗಳ ಗತಿ, ಕಾರಣ, ಫಲಭಾವ ವ್ಯವಸ್ಥೆಗಳನ್ನು ಚೆನ್ನಾಗಿ ತಿಳಿದವನು. (ಗೋ)

$ “ಜ್ಞಾನವಾನ್” ತಿ. ಪಾ.

ಯಜುರ್ವೇದವಿನೀತಶ್ಚ ವೇದವಿದ್ಭಿಸ್ಸುಪೂಜಿತಃ । ಧನುರ್ವೇದೇಚ ವೇದೇಷು ವೇದಾಂಗೇಷುಚ ನಿಷ್ಠಿತಃ ॥ ೧೪ ॥ ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವ ಶ್ಶುಭಾನನಃ । ಗೂಢಜತ್ರು ಸ್ಸುತಾಮ್ರಾಕ್ಷೋ ರಾಮೋ ದೇವಿ! ಜನೈಶ್ಶ್ರುತಃ ॥ ೧೫ ॥ ದುಂದುಭಿಸ್ವನನಿರ್ಘೋಷ ಸ್ಸ್ನಿಗ್ಧವರ್ಣಃ ಪ್ರತಾಪವಾನ್ । ಸಮಸ್ಸಮ ವಿಭಕ್ತಾಂಗೋ ವರ್ಣಂ ಶ್ಯಾಮಂ ಸಮಾಶ್ರಿತಃ ॥ ೧೬ ॥ ¶ ತ್ರಿಸ್ಥಿರಸ್ತ್ರಿಪ್ರಲಂಬಶ್ಚ

ವೇದಜ್ಞರಿಂದ, ಸುಪೂಜಿತಃ - ಚೆನ್ನಾಗಿ ಶ್ಲಾಘಿಸಲ್ಪಟ್ಟವನು, ಧನುರ್ವೇದೇಚ - ಧನುರ್ವೇದದಲ್ಲಿಯೂ, ವೇದಷು - ಋಕ್, ಸಾಮ, ಅಥರ್ವಣಗಳೆಂಬ ವೇದತ್ರಯದಲ್ಲಿಯೂ, ವೇದಾಂಗೇಷುಚ - ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪವೆಂಬ, ಆರುಶಾಸ್ತ್ರಗಳಲ್ಲಿಯೂ, ನಿಷ್ಠಿತಃ - ನಿಷ್ಣಾತನೂ, ವಿಪುಲಾಂಸಃ-ವಿಸ್ತಾರಗಳಾದ ಹೆಗಲುಗಳುಳ್ಳವನು, ಮಹಾಬಾಹುಃ-ದೀರ್ಘವಾದ ಕೈಗಳುಳ್ಳವನು, ಕಂಬುಗ್ರೀವಃ - ಶಂಖದಂತಿರುವ ಕೊರಳುಳ್ಳವನು, ಶುಭಾನನಃ - ಶುಭಕರವಾದ ಮುಖವುಳ್ಳವನು, ಗೂಢಜತ್ರುಃ - ಕಾಣಿಸದಿರುವ ಭುಜ ಶಿರಸ್ಸುಗಳ ಸಂಧಿಸ್ಥಾನವುಳ್ಳ, ಸುತಾಮ್ರಾಕ್ಷಃ - ಸೊಗಸಾದ ಕೆಂಗಣ್ಣುಗಳುಳ್ಳ, ರಾಮಃ - ಶ್ರೀರಾಮನು, ಜನೈಃ - ಜನರಿಂದ, ಶ್ರುತಃ - ಕೇಳಲ್ಪಟ್ಟವನು, ಹೇ ದೇವಿ - ಎಲೌ ಸೀತಾದೇವಿಯೆ, ರಾಮಃ - ಶ್ರೀರಾಮನು, ದುಂದು....ಷಃ - ಭೇರಿಯಧ್ವನಿಗೆ ಸಮಾನವಾದ ಕಂಠಧ್ವನಿಯುಳ್ಳವನು, ಸ್ನಿಗ್ಧವರ್ಣಃ - ಹೊಳೆಯುತ್ತಿರುವ ದೇಹಕಾಂತಿಯುಳ್ಳವನು, ಪ್ರತಾಪವಾನ್ - ಪರಾಕ್ರಮಶಾಲಿಯಾದವನು, ಸಮಃ - ಹೆಚ್ಚುಕಡಿಮೆ ಇಲ್ಲದಿರುವ ದೇಹಪ್ರಮಾಣವುಳ್ಳವನು, ಸಮವಿಭಕ್ತಾಂಗಃ - ಒಂದಕ್ಕೊಂದು ಸಮವಾಗಿರುವಂತೆ ನಿರ್ಮಿತವಾದ ಸಮಸ್ತಾವಯವಗಳುಳ್ಳವನು, ಶ್ಯಾಮಂವರ್ಣಂ-ನೀಲವರ್ಣವನ್ನೂ, ಸಮಾಶ್ರಿತಃ-ಹೊಂದಿದವನು. ॥ ೧೬ ॥ ರಾಮಃ-ಶ್ರೀರಾಮನು, ನಿತ್ಯಶಃ-ಸದಾಕಾಲದಲ್ಲಿಯೂ, ತ್ರಿಸ್ಥಿರಃ-ಎದೆ, ಮಣಿಬಂಧ, ಮುಷ್ಟಿ ಎಂಬ ಮೂರು ಅವಯವಗಳಲ್ಲಿಯೂ, ದಾರ್ಢ್ಯವುಳ್ಳವನು, ತ್ರಿಪ್ರಲಂಬಃ - ಕಣ್ಣುಬ್ಬುಗಳು, ಭುಜಗಳು, ವೃಷಣಗಳೆಂಬ ಮೂರರಲ್ಲಿಯೂ ಜೋಲಾಡುವಿಕೆಯುಳ್ಳವನು, ತ್ರಿಸಮಃ-ಕೇಶಾಗ್ರಗಳು, ವೃಷಣಗಳು, ಮೊಣಕಾಲುಗಳೆಂಬ ಮೂರು

ಲ್ಲಿಯೂ, ವೇದಾಂಗಗಳಲ್ಲಿಯೂ ಪಂಡಿತನಾದವನು. ಎಲೌ ಸೀತಾದೇವಿಯೇ! ಶ್ರೀರಾಮನು ವಿಶಾಲವಾದ ಹೆಗಲುಳ್ಳವನು ; ನೀಳಾದ ತೋಳುಗಳುಳ್ಳವನು ; ಆತನ ಕಂಠವು ಶಂಖದಂತಿರುವುದು ; ಆತನ ಮುಖವು ಮಂಗಳಕರವಾದ ಕಳೆಯೊಡಗೂಡಿರುವುದು. ಆತನು ಮಾಂಸಳವಾದ ಭುಜದ ಕೀಲುಗಳ್ಳವನು, ರಕ್ತಾಂತಲೋಚನನು, ಈ ವಿಷಯವು ಲೋಕಕ್ಕೆಲ್ಲಾ ತಿಳಿದೇ ಇರುವುದು. ಅಲ್ಲದೆ ಶ್ರೀರಾಮನಿಗೆ ಭೇರಿಯ ಧ್ವನಿಯಂತಹ ಕಂಠವಿರುವುದು ; ಶ್ಯಾಮಲವೂ, ಮನೋಹರವೂ ಆದ ದೇಹಚ್ಛಾಯೆಯುಳ್ಳವನೂ, ಮಹಾ ಪರಾಕ್ರಮಶಾಲಿಯೂ ಆದ ಆತನು ಬಹಳ ಉದ್ದವೂ, ಬಹಳ ಗಿಡ್ಡವೂ ಅಲ್ಲದ ದೇಹವುಳ್ಳವನು. ಹೆಚ್ಚುಕಡಿಮೆಯಿಲ್ಲದೆ ಸಮವಾಗಿರುವ ಅವಯವಗಳುಳ್ಳವನು. ॥ ೧೧—೧೬ ॥ ಎಲೌ ಸೀತಾದೇವಿಯೇ! ಆತನ ಅವಯವ ಸಂಸ್ಥಾನದಲ್ಲಿ ಇನ್ನೂ ಕೆಲವು ವಿಶೇಷ

¶ (ತ್ರಿಸ್ಥಿರಃ)—"ಊರುಶ್ಚ ಮಣಿಬಂಧಶ್ಚ ಮುಷ್ಟಿಶ್ಚ ನೃಪತೇಸ್ಸ್ಥಿರಾಃ" ಎಂದೂ, (ತ್ರಿಪ್ರಲಂಬಃ) "ಪ್ರಲಂಬಾ ಯಸ್ಯ ಸ ಧನೀ ತ್ರಯೋ ಭ್ರೂಮುಷ್ಕಬಾಹವಃ" ಎಂದೂ, (ತ್ರಿಸಮಃ)—"ಕೇಶಾಗ್ರಂ ವೃಷಣಂ ಜಾನು ಸ್ಸಮಂ ಯಸ್ಯ ಸ ಭೂಪತಿಃ" ಎಂದೂ, (ತ್ರಿಷುಚೋನ್ನತಃ)—"ನಾಭ್ಯಂತಃ ಕುಕ್ಷಿವಕ್ಷೋಭಿ ರುನ್ನತೈಃ ಕ್ಷಿತಿಪೋಭವೇತ್"

ತ್ರಿಸಮಸ್ತ್ರಿಷುಚೋನ್ನತಃ । ತ್ರಿತಾಮ್ರಸ್ತ್ರಿಷು ಚ ಸ್ನಿಗ್ಧೋ ಗಂಭೀರಸ್ತ್ರಿಷು ನಿತ್ಯಶಃ ॥ ೧೭ ॥ ¶ ತ್ರಿವಳೀವಾಂಸ್ತ್ರ್ಯವನತ ಶ್ಚತುರ್ವ್ಯಂಗಸ್ತ್ರಿಶೀರ್ಷವಾನ್ । ಚತುಷ್ಕಲ ಶ್ಚತು

ಅಂಗಗಳಲ್ಲಿ ಸಾಮ್ಯವುಳ್ಳವನು, ತ್ರಿಷುಚೋನ್ನತಃ - ಹೊಸಳು ಹೊಟ್ಟೆ, ಎದೆ, ಇವುಗಳಲ್ಲಿ ಔನ್ನತ್ಯ ವುಳ್ಳವನು, ತ್ರಿತಾಮ್ರಃ-ಉಗುರು, ಅಂಗೈ, ಅಂಗಾಲು ಇವುಗಳಲ್ಲಿ ಕೆಂಪುಬಣ್ಣವುಳ್ಳವನು, ತ್ರಿಷುಚ ಸ್ನಿಗ್ಧಃ-ಪಾದಗಳು, ರೇಖೆಗಳು, ಕೇಶಗಳೆಂಬ ಮೂರರಲ್ಲಿಯೂ ನುಣುಪುಳ್ಳವನು, ತ್ರಿಷು-ಸ್ವರ, ಬಲ, ನಾಭಿ ಇವುಗಳಲ್ಲಿ, ಗಂಭೀರಃ - ಗಾಂಭೀರ್ಯವುಳ್ಳವನು. ॥ ೧೭ ॥ ತ್ರಿವಳೀವಾನ್ - ಹೊಟ್ಟೆಯಲ್ಲಿಯೂ, ಕಂಠದಲ್ಲಿಯೂ, ಮೂರುರೇಖೆಗಳುಳ್ಳವನು, ತ್ರ್ಯವನತಃ - ತಗ್ಗಾದ ಸ್ತನಗಳೂ, ಸ್ತನಗಳ ತುದಿಗಳೂ, ಪಾದರೇಖೆಗಳೂ ಉಳ್ಳವನು, ಚತುರ್ವ್ಯಂಗಃ - ಕಂಠ, ಶಿಶ್ನ, ಪೃಷ್ಠ, ಮೊಣಕಾಲು ಈ ನಾಲ್ಕು ಅಂಗಗಳೂ ಮೋಟಾಗಿ ಉಳ್ಳವನು, ತ್ರಿಶೀರ್ಷವಾನ್ - ಮೂರುಸುಳಿಗಳುಳ್ಳ ತಲೆಯುಳ್ಳವನು, ಚತುಷ್ಕಲಃ-ನಾಲ್ಕು ವೇದಗಳಿಗೂ ಪ್ರಾಪ್ತಿಸಾಧಕಗಳಾದ ನಾಲ್ಕುರೇಖೆಗಳುಳ್ಳ ಬಲಗೈಯಿನ ಹೆಬ್ಬೆರಳು

ಗಳನ್ನು ಹೇಳುವೆನು ; ಕೇಳು ಸಾಮುದ್ರಿಕಾಲಕ್ಷಣವನ್ನನುಸರಿಸಿ ಶ್ರೀರಾಮನ ಎದೆ, ಮಣಿ ಬಂಧಗಳು, ಹಿಡಿಗಳು ಇವುಮೂರೂ ಬಲಿಷ್ಠವಾಗಿರುವುವು. ಕಣ್ಣಾಲಿಗಳು, ಬಾಹುಗಳು, ವೃಷಣಗಳು ಇವು ಮೂರೂ ಆತನಿಗೆ ದೀರ್ಘವಾಗಿರುವುವು ; ತಲೆಗೂದಲಿನ ಕೊನೆಗಳೂ, ಎರಡು ವೃಷಣಗಳೂ, ಎರಡು ಮೊಣಕಾಲುಗಳೂ ಇವು ಮೂರವಯವಗಳೂ ಹೆಚ್ಚುಕಡಿಮೆ ಯಿಲ್ಲದೆ ಸಮನಾಗಿರುವುವು. ಅವನ ಹೊಟ್ಟೆ, ಹೊಕ್ಕುಳು, ಎದೆ ಇವು ಮೂರೂ ಉಬ್ಬಿರು ವುವು ; ಅವನ ಕಡೆಗಣ್ಣು, ಉಗುರು, ಅಂಗೈ, ಅಂಗಾಲುಗಳೆಂಬಿವು ಮೂರವಯವಗಳೂ ಕೆಂಪಾಗಿರುವುವು ; ಕಾಲಿನರೇಖೆ, ಕೂದಲು, ಲಿಂಗವೆಂಬ ಇವು ಮೂರೂ ನುಣುಪಾಗಿರು ವುವು ; ಕಂಠಧ್ವನಿ, ನಡಿಗೆ, ಹೊಕ್ಕುಳು ಇವು ಮೂರೂ ಮೃದುವಾಗಿರುವುವು ; ಅವನ ಹೊಟ್ಟೆ, ಕುತ್ತಿಗೆ ಈ ಎರಡೂ ಸ್ಫುಟವಾದ ತ್ರಿವಳೀರೇಖೆಗಳಿಂದ ಕಂಗೊಳಿಸುತ್ತಿರುವುವು. ಆತ ನಿಗೆ ಸ್ತನಾಗ್ರಗಳು, ಪಾದರೇಖೆಗಳು, ಸ್ತನಗಳು ಎಂಬ ಈ ಮೂರೂ ಆಳಕ್ಕಿರುವುವು. ಅಲ್ಲದೆ ಅವನ ಕೊರಳು, ಲಿಂಗ, ಬೆನ್ನು, ಮೊಳಕಾಲುಗಳು ಈ ನಾಲ್ಕೂ ಹ್ರಸ್ವವಾಗಿರುವುವು. ಅವನ ಶಿರಸ್ಸಿನಲ್ಲಿ ಶುಭಸೂಚಕಗಳಾದ ಮೂರು ಸುಳಿಗಳಿರುವುವು. ಅವನ ಅಂಗುಷ್ಠಮೂಲದಲ್ಲಿ ನಾಲ್ಕು ವೇದರೇಖೆಗಳಿರುವುವು. ವಜ್ರ, ಧ್ವಜ, ಶಂಕಾಂಕುಶರೇಖೆಗಳು ಅವನ ಅಂಗೈ ಯಲ್ಲಿಯೂ, ಅಂಗಾಲುಗಳಲ್ಲಿಯೂ ಇರುವುವು. ಅವನ ಹಣೆಯಲ್ಲಿಯೂ ಈ ನಾಲ್ಕು ರೇಖೆ ಗಳಿರುವುವು. ಆತನು ನಾಲ್ಕುಮೊಳ (ತೊಂಬತ್ತಾರಂಗುಲ) ಪ್ರಮಾಣದ ದೇಹವುಳ್ಳವನು.

ಎಂದೂ, (ತ್ರಿತಾಮ್ರಃ)--“ನೇತ್ರಾಂತ ನಖಪಾಣ್ಯಂಘ್ರಿ ತಲೈಸ್ತಾಮ್ರಸ್ತ್ರಿಭಿಃ ಸುಖೀ” ಎಂದೂ, (ತ್ರಿಷುಸ್ನಿಗ್ಧಃ)-- “ಸ್ನಿಗ್ಧಾಭವಂತಿ ಯೈಯೇಷಾಂ ಪಾದರೇಖಾಃ ಶಿರೋರುಹಾಃ । ತಥಾಲಿಂಗ ಮಣಿಸ್ತೇಷಾಂ ಮಹಾಭಾಗ್ಯಂ ವಿನಿರ್ದಿಶೇತ್” ಎಂದೂ, (ತ್ರಿಷುಗಂಭೀರಃ)-ಸ್ವರೇಗತೌಚ ನಾಭೌಚ ಗಂಭೀರಸ್ತ್ರಿಷು ಶಸ್ಯತೇ” ಎಂದೂ ಸಾಮುದ್ರಿಕಾಶಾಸ್ತ್ರ ಲಕ್ಷಣಗಳು, ಈ ಲಕ್ಷಣಗಳಿರುವವನು ಚಕ್ರವರ್ತಿಯೆಂದು ತಿಳಿಯಬೇಕು. (ಗೋ+ತ+ತಿ+ಮ) ಇವುಗಳ ಅರ್ಥವನ್ನು ಪ್ರತಿಪದಾರ್ಥ ವಿವರಿಸಿದೆ.

¶ (ತ್ರ್ಯವನತಃ)-“ಗ್ರೀವಾಪ್ರಜನನಂ ಪೃಷ್ಠ ಹ್ರಸ್ವೇ ಜಂಘೇಚ ಪೂಜಿತೇ” ಎಂದೂ, (ಚತುರ್ವ್ಯಂಗಃ)-“ಆ ವರ್ತತ್ರಯ ಯುಕ್ತೋಯಸ್ಯಶಿರಃ ಕ್ಷಿತಿಭೃತಾಮಯಂ ನಾಥಃ” ಎಂದೂ,(ಚತುಷ್ಕಲಃ)-“ಮೂಲೇಂಗುಷ್ಠಸ್ಯ ರೇಖಾನಾಂ

ರ್ಲೇಖ ಶ್ಚತುಷ್ಕಿಷ್ಕುಶ್ಚತುಸ್ಸಮಃ ‖೧೮‖ ¶ ಚತುರ್ದಶ ಸಮದ್ವಂದ್ವ ಶ್ಚತುರ್ದಂಷ್ಟ್ರ
ಶ್ಚತುರ್ಗತಿಃ । ಮಹೋಷ್ಠಹನುನಾಸಶ್ಚ ಪಂಚಸ್ನಿಗ್ಧೋಽಷ್ಟವಂಶವಾನ್ ‖ ೧೯ ‖

ಳ್ಳವನು, ಚತುರ್ಲೇಖಃ-ಹಣೆ, ಕೈ, ಕಾಲು, ಇವುಗಳಲ್ಲಿ ನಾಲ್ಕು ರೇಖೆಗಳುಳ್ಳವನು, ಚತುಷ್ಕಿಷುಃ-ತೊಂಭತ್ತಾರಂಗುಳ ಎಂದರೆ ನಾಲ್ಕುಮೊಳ ಪರಿಮಿತವಾದ ಶರೀರಪ್ರಮಾಣವುಳ್ಳವನು, ಚತುಸ್ಸಮಃ - ಬಾಹುಗಳು, ಮೊಣಕಾಲುಗಳು, ತೊಡೆಗಳು, ಕಣಕಾಲುಗಳು ಈ ನಾಲ್ಕೂ ಒಂದೇ ಸಮವಾಗಿ ಉಳ್ಳವನು. ‖ ೧೮ ‖ ಚತು....ದ್ವಃ - ಸಮಪ್ರಮಾಣವುಳ್ಳ ಹದಿನಾಲ್ಕು ಸಂಖ್ಯೆಯುಳ್ಳ ಜೊತೆಯಾದ ಹುಬ್ಬುಗಳು, ನಾಸಾಪ್ರದೇಶಗಳು, ಕಣ್ಣುಗಳು, ಕಿವಿಗಳು, ತುಟಿಗಳು, ಸ್ತನಾಗ್ರಗಳು, ಮೊಣಕೈಗಳು, ಮಣಿಬಂಧಗಳು, ಮೊಣಕಾಲುಗಳು, ವೃಷಣಗಳು, ಪೃಷ್ಠಗಳು, ಕೈಗಳು, ಪಾದಗಳು, ದಂತಪಂಜ್ತಿಗಳು, ಇವುಗಳುಳ್ಳವನು, ಚತುರ್ದಂಷ್ಟ್ರಃ - ನಾಲ್ಕು ಕೋರೆಹಲ್ಲುಗಳುಳ್ಳವನು, ಚತುರ್ಗತಿಃ - ಸಿಂಹ, ಶಾರ್ದೂಲ, ಗಜ, ವೃಷಭಗಳ ಗಮನದೋಪಾದಿಯಲ್ಲಿ ಗಮನವುಳ್ಳವನು, ಮಹೋ....ಶ್ಚ - ದೊಡ್ಡದಾದ ತುಟಿಗಳೂ, ಕೆನ್ನೆಗಳೂ, ಮೂಗೂ ಉಳ್ಳವನು, ಪಂಚಸ್ನಿಗ್ಧಃ - ವಾಕ್ಕು, ಮುಖ, ನಖ, ರೋಮ, ಚರ್ಮಗಳೆಂಬ ಐದರಲ್ಲಿ ಮೃದುತ್ವವುಳ್ಳವನು, ಅಷ್ಟವಂಶವಾನ್ - ದೀರ್ಘಗಳಾದ ತೋಳುಗಳೂ, ಬೆರಳುಗಳೂ, ತೊಡೆಗಳೂ, ಜಂಘೆಗಳೂ, ಉಳ್ಳವನು. ‖ ೧೯ ‖ ದಶಪದ್ಮಃ -

---

ಅವನ ಎರಡು ತೋಳುಗಳೂ, ಎರಡು ತೊಡೆಗಳೂ, ಎರಡು ಮೊಣಕಾಲುಗಳೂ, ಎರಡು ಕೆನ್ನೆಗಳೂ ಹೆಚ್ಚುಕಡಿಮೆಯಿಲ್ಲದೆ ಸಮವಾಗಿರುವುವು. ಎಲೌ ಜನಕರಾಜಪುತ್ರಿಯೇ! ಆತನ ಹುಬ್ಬುಗಳು, ಮೂಗಿನ ಹೊಳ್ಳೆಗಳು, ಕಣ್ಣುಗಳು, ಕಿವಿಗಳು, ತುಟಿಗಳು, ಸ್ತನಾಗ್ರಗಳು, ಮೊಳಕೈಗಳು, ಮಣಿಕಟ್ಟುಗಳು, ಮೊಳಕಾಲುಗಳು, ಅಂಡಗಳು, ಕಟಿಪ್ರದೇಶಗಳು, ಕೈಕಾಲುಗಳು, ಪಕ್ಕೆಗಳು ಎಂಬ ಈ ಹದಿನಾಲ್ಕೂ ಸಮಪ್ರಮಾಣದಿಂದಿರುವುವು. ಆತನಿಗೆ ಕೋರೆದಾಡೆಗಳಂತಿರುವ ನಾಲ್ಕು ಹಲ್ಲುಗಳಿರುವುವು. ಆತನ ನಡಿಗೆಯು ಸಿಂಹ, ಹುಲಿ, ಆನೆ, ವೃಷಭಗಳ ನಡಿಗೆಗೆ ಸಮಾನವಾದುದು. ಆತನ ತುಟಿ, ಮುಸುಡಿ, ಮೂಗು ಇವು ಮೂರೂ ದೊಡ್ಡದಾಗಿರುವುವು. ಆತನು ಮಹಾ ಕಾಂತಿಯೊಡಗೂಡಿದ ಕಣ್ಣುಗಳನ್ನೂ ದಂತಗಳನ್ನೂ, ದೇಹಚರ್ಮವನ್ನೂ, ಪಾದಗಳನ್ನೂ, ತಲೆಗೂದಲುಗಳನ್ನೂ ಉಳ್ಳವನು. ಆತನ ಬೆನ್ನಲುಬು, ಮೈ, ಬೆರಳುಗಳು, ಕೈ, ಮೂಗು, ಕಣ್ಣು, ಕಿವಿ, ಮೇಢ್ರ ಈ ಎಂಟೂ ದೀರ್ಘವಾಗಿರುವುವು; ಮುಖ, ನೇತ್ರ, ಜಿಹ್ವೆ, ತುಟಿಗಳು, ಮುಸುಡಿ, ಸ್ತನಗಳು, ನಖ,

---

ಚತಸ್ರಸ್ತಿಸ್ರ ಏವಚ । ಏಕಾ ದ್ವೇವಾ ಯಥಾಯೋಗಂ ವೇದರೇಖಾ ದ್ವಿಜನ್ಮನಾಂ" ಎಂದೂ, (ಚತುರ್ಲೇಖಃ)-" ಲಲಾಟೇ ಯಸ್ಯ ದೃಶ್ಯಂತೇ ಚತುಸ್ತ್ರಿ ದ್ವೇಕ ರೇಖಿಕಾಃ । ಶತದ್ವಯಂ ಶತಂ ಷಷ್ಟಿಸ್ತಸ್ಯಾಯುರ್ವಿಂಶತಿಃ ಕ್ರಮಾತ್" ಎಂದೂ, (ಚತುಃಸಮಃ)-" ಬಾಹುಜಾನೂರು ಗಂಡಾನಿ ಚತ್ವಾರ್ಯಥ ಸಮಾನಿಚ" ಎಂದೂ ಸಾಮುದ್ರಿಕಾಶಾಸ್ತ್ರವು. (ತ್ರಿವಲೀವಾನ್ "ಸ್ಥಿರಾತ್ರಿರೇಖಾ ಸುಭಗೋಪಪನ್ನಾ ಸ್ನಿಗ್ಧಾಸುಮಾಂಸೋಪಚಿತಾ ಸುವೃತ್ತಾ । ನಚಾತಿದೀರ್ಘಾ ಚತುರಂಗುಲಾಚ ಗ್ರೀವಾ ಸುದೀರ್ಘಾಭವತೀಹಧನ್ಯಾ")

¶ "ಚತುರ್ದಶಸಮದ್ವಂದ್ವಃ" ಹದಿನಾಲ್ಕು ದ್ವಂದ್ವಾವಯವಗಳೂ ಸಮವಾಗಿರುವವನು. "ಭ್ರುವೌ ನಾಸಾಪುಟೇ ನೇತ್ರೇ ಕರ್ಣಾವೋಷ್ಠೌ ಚ ಚೂಚುಕೇ । ಕೂರ್ಪರೌ ಮಣಿ ಬಂಧೌ ಚ ಜಾನುನೀ ವೃಷಣೌ ಕಟೀ ‖ ಕರೌ ಪಾದೌ ಸ್ಫಿಜೌ ಯಸ್ಯ ಸಮೌ ಜ್ಞೇಯಸ್ಸಭೂಪತಿಃ ।" ಎಂದು ಸಾಮುದ್ರಿಕವು. "ಚತುರ್ದಂಷ್ಟ್ರಃ" ದಂಷ್ಟ್ರಾಕಾರವಾದ ನಾಲ್ಕು

¶ ದಶಪದ್ಮೋ ದಶಬೃಹತ್ತ್ರಿಭಿರ್ವ್ಯಾಪ್ತೋ ದ್ವಿಶುಕ್ಲವಾನ್ । ಷಡುನ್ನತೋ ನವತನು

ಪದ್ಮಾಕಾರವಾಗಿಯೂ, ಕೆಂಪಾಗಿಯೂ ಇರುವ ಮುಖ, ಕಣ್ಣುಗಳು, ಬಾಯಿ, ನಾಲಿಗೆ, ತುಟಿಗಳು, ದವಡೆಗಳು, ಸ್ತನಗಳು, ಉಗುರುಗಳು, ಅಂಗೈಗಳು, ಪಾದಗಳೂ ಇವುಗಳುಳ್ಳವನು, ದಶಬೃಹತ್-ದೊಡ್ಡದಾದ ಶಿರಸ್ಸು, ಲಲಾಟ, ಕಿವಿಗಳು, ಕಂಠ, ಎದೆ, ಹೊಟ್ಟೆ, ಚಿತ್ತ, ಕೈಕಾಲುಗಳು, ಪೃಷ್ಠ ಇವುಗಳುಳ್ಳವನು, ತ್ರಿಭಿಃ-ತೇಜಸ್ಸು, ಯಶಸ್ಸು, ಐಶ್ವರ್ಯವೆಂಬ ಮೂರರಿಂದ, ವ್ಯಾಪ್ತಃ-ತುಂಬಿರುವವನು, ದ್ವಿಶುಕ್ಲವಾನ್ - ಪರಿಶುದ್ಧವಾದ ಮಾತಾಪಿತೃವಂಶವುಳ್ಳವನು, (ಗೋ + ಮ) ಬಿಳುಪಾದ ನೇತ್ರಗಳೂ ದಂತಪಙ್ಕ್ತಿಗಳೂ ಉಳ್ಳವನು, ಷಡುನ್ನತಃ ಕಂಕಳು, ಹೊಟ್ಟೆ, ಎದೆ, ಮೂಗು, ಹೆಗಲು, ಲಲಾಟವೆಂಬ ಉನ್ನತವಾದ ಆರು ಅವಯವಗಳುಳ್ಳವನು, ನವತನುಃ-ಕೂದಲು, ಮಿಾಸೆ, ಉಗುರುಗಳು, ರೋಮಗಳು, ಚರ್ಮ, ಬೆರಳುಗಳು, ಗೆಣ್ಣುಗಳು, ಶಿಶ್ನ, ಬುದ್ಧಿ, ದೃಷ್ಟಿ ಎಂಬ ಈ ಒಂಭತ್ತೂ ಸೂಕ್ಷ್ಮವಾಗಿರುವವನು, ರಾಘವಃ - ಶ್ರೀರಾಮನು, ತ್ರಿಭಿಃ - ಪ್ರಾತರಾದಿಕಾಲತ್ರಯಗಳಿಂದಲೂ,

---

ಕೈ, ಕಾಲು ಎಂಬ ಈ ಹತ್ತೂ ಆತನಲ್ಲಿ ಪದ್ಮಾಕಾರದಿಂದೊಪ್ಪುತ್ತಿರುವುವು. ತಲೆ, ಹಣೆ, ಕಿವಿ, ಕಂಠ, ಎದೆ, ಹೃದಯ, ವಕ್ತ್ರ, ಕೈ, ಕಾಲು, ಪೃಷ್ಠಗಳೆಂಬ ಈ ಹತ್ತವಯವಗಳೂ ದೊಡ್ಡವಾಗಿರುವುವು. ತೇಜಸ್ಸು ಅಥವ ಕಾಂತಿ, ಕೀರ್ತಿ, ಸಂಪತ್ತು ಇವು ಮೂರರಿಂದಲೂ ಆತನು ಲೋಕದಲ್ಲಿ ಪ್ರಸಿದ್ಧನಾಗಿರುವನು. ಇಷ್ಟೆಯಲ್ಲದೆ ಪರಿಶುದ್ಧವಾದ ಮಾತಾಪಿತೃ ವಂಶಗಳುಳ್ಳವನಾತನು. (ಅಥವಾ, ಅತಿಶುಭ್ರವಾದ ದಂತ ನೇತ್ರಗಳುಳ್ಳವನು.) ಆತನ ಕಂಕುಳು, ಹೊಟ್ಟೆ, ಎದೆ, ಮೂಗು, ಹೆಗಲು, ಹಣೆ ಇವು ಆರೂ ಉನ್ನತವಾಗಿರುವುವು. ಆತನ ತಲೆಗೂದಲು, ಮಿಾಸೆ, ಉಗುರು, ಬೆರಳಿನ ಗಿಣ್ಣುಗಳು, ಮೈಗೂದಲು, ಲಿಂಗ, ದೃಷ್ಟಿ, ಬುದ್ಧಿ ಇವು ಒಂಬತ್ತೂ ಸೂಕ್ಷ್ಮಗಳಾಗಿರುವುವು. ಅಲ್ಲದೆ ರಘುವಂಶೋದ್ಭವನಾದ ಆತನು ಪೂರ್ವಾಹ್ಣ, ಮಧ್ಯಾಹ್ನ, ಅಪರಾಹ್ಣಗಳಲ್ಲಿ ಧರ್ಮಾರ್ಥಕಾರ್ಯಗಳನ್ನು ಸಮಸಮವಾಗಿ

ದಂತಗಳುಳ್ಳವನು. "ಸ್ನಿಗ್ಧಾಘನಾಶ್ಚ ದಶನಾಸ್ಸುತೀಕ್ಷ್ಣ ದಂಷ್ಟ್ರಾಸ್ಸಮಾಶ್ಚಶುಭಾಃ" ಎಂದು ಮಿಹಿರವಚನ. "ಚತುರ್ಗತಿಃ" ಆನೆ, ಸಿಂಹ, ವ್ಯಾಘ್ರ, ವೃಷಭಗಳ ಗಮನದಂತೆ ಗಮನವುಳ್ಳವನು. ಬಾಲಕಾಂಡದಲ್ಲಿ, "ಗಜಸಿಂಹ ಗತೀವೀರೌಶಾರ್ದೂಲ ವೃಷಭೋಪಮೌ" ಎಂದು ಹೇಳಿದೆ. "ಮಹೋಷ್ಠ ಹನುನಾಸಶ್ಚ—ಬಂಧುಜೀವ ಕುಸುಮೋಪಮೋಧರೌ ಮಾಂಸಳೋರುಚಿರ ಬಿಂಬರೂಪಧೃತ್ । ಪೂರ್ಣಮಾಂಸಳ ಹನುಸ್ತು ಭೂಮಿಪ ಸ್ತುಂಗತುಂಡರುಚಿರಾಕೃತಿಸ್ತಥಾ ॥" ಎಂದು ಸಂಹಿತಾವಚನ. "ಪಂಚಸ್ನಿಗ್ಧಃ" ಐದರಲ್ಲಿ ಸ್ನಿಗ್ಧತ್ವವುಳ್ಳವನು. ಈ ವಿಷಯದಲ್ಲಿವರ ರುಚಿಯು "ಚಕ್ಷುಸ್ನೇಹೇನ ಸೌಭಾಗ್ಯಂ ದಂತಸ್ನೇಹೇನ ಭೋಜನಂ । ತ್ವಚಸ್ನೇಹೇನ ಶಯನಂ ಪಾದಸ್ನೇಹೇನ ವಾಹನಂ ॥ ಕಣ್ಣುಗಳಲ್ಲಿ ಸ್ನಿಗ್ಧತೆಯಿದ್ದರೆ ಸೌಭಾಗ್ಯವೂ, ದಂತಗಳಲ್ಲಿ ಸ್ನಿಗ್ಧತೆಯಿದ್ದರೆ ಭೋಜನಲಾಭವೂ, ತ್ವಕ್ಕಿನಲ್ಲಿ ಸ್ನಿಗ್ಧತೆಯಿದ್ದರೆ ಶಯನಲಾಭವೂ, ಪಾದಗಳಲ್ಲಿ ಸ್ನಿಗ್ಧತೆಯಿದ್ದರೆ ವಾಹನಲಾಭವೂ ಉಂಟಾಗುತ್ತದೆ." ಎಂದು ಹೇಳಿರುವನು. "ಸ್ನಿಗ್ಧನಾಲ ಮೃದುಕುಂಚಿತಾಸ್ತಥಾ ಮೂರ್ಧಜಾಸ್ಸುಖಕರಾಸ್ಸಮಂಶಿರಃ" ಎಂದು ಮಿಹಿರವಚನ. (ಹಿಂದೆ, "ತ್ರಿಷುಚಸ್ನಿಗ್ಧಃ" ಎಂದು ಹೇಳಿ ಇಲ್ಲಿ, "ಪಂಚಸ್ನಿಗ್ಧಃ" ಎಂದು ಹೇಳಿರುವುದು ಮತಭೇದವನ್ನನುಸರಿಸಿ ಎಂದು ತಿಳಿಯಬೇಕು. "ಆಯತಾಷ್ಟವಂಶವಾನ್" ದೀರ್ಘವಾದ ಎಂಟು ಅವಯವಗಳುಳ್ಳವನು. "ಪೃಷ್ಠವಂಶಶ್ಶರೀರಂಚ ಹಸ್ತಪಾದಾಂಗಳೀಕರೌ । ನಾಸಿಕಾ ಚಕ್ಷುಷೀಕರ್ಣೌ ಪ್ರಜನೋಯಸ್ಯಚಾಯತಾಃ" ಎಂದು ಸಾಮುದ್ರಿಕವು. (ತ+ಮ)

¶ "ದಶಪದ್ಮಃ" ಪದ್ಮಾಕಾರವಾದ ಹತ್ತು ಅವಯವಗಳುಳ್ಳವನು. "ಮುಖನೇತ್ರಾಸ್ಯ ಜಿಹ್ವೋಷ್ಠ ಸ್ತಾಲು ಸ್ತನ ನಖಾಃಕರೌ । ಪಾದೌಚ ದಶಪದ್ಮಾನಿ ಪದ್ಮಾಕಾರಾಣಿಯಸ್ಯಚ" ಎಂದು ಸಾಮುದ್ರಿಕವು. "ದಶಬೃಹತ್" ಹತ್ತು ದೊಡ್ಡದಾದ ಅವಯವಗಳುಳ್ಳವನು. "ಉರಶ್ಶಿರೋ ಲಲಾಟಂಚ ಗ್ರೀವಾಬಾಹ್ವಂಸ ನಾಭಯಃ । ಪಾರ್ಶ್ವಪೃಷ್ಠ ಸ್ವರಾ

ಸ್ತ್ರಿಭಿರ್ವ್ಯಾಪ್ನೋತಿ ರಾಘವಃ ‖ ೨೦ ‖ ಸತ್ಯಧರ್ಮಪರಶ್ಶ್ರೀಮಾನ್ ಸಂಗ್ರಹಾನುಗ್ರಹೇ ರತಃ । ದೇಶಕಾಲ ವಿಭಾಗಜ್ಞ ಸ್ಸರ್ವಲೋಕಪ್ರಿಯಂವದಃ ‖ ೨೧‖ * ಭ್ರಾತಾಚ ತಸ್ಯ ದ್ವೈಮಾತ್ರ ಸ್ಸೌಮಿತ್ರಿ ¶ ರಪರಾಜಿತಃ । ಅನುರಾಗೇಣ ರೂಪೇಣ ಗುಣೈಶ್ಚೈವ ತಥಾ

(ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳನ್ನು) ವ್ಯಾಪ್ನೋತಿ - ಸಂಪಾದಿಸುವವನು. ‖ ೨೦ ‖ ಸತ್ಯಧರ್ಮಪರಃ - ಸತ್ಯದಲ್ಲಿಯೂ ಧರ್ಮದಲ್ಲಿಯೂ ಆಸಕ್ತನಾದವನು, ಶ್ರೀಮಾನ್ - ಸಂಪದ್ಯುಕ್ತನು ಸಂಗ್ರ....ತಃ - ಸಂಪಾದನೆಯಲ್ಲಿಯೂ, ಕೊಡುವುದರಲ್ಲಿಯೂ ಆಸಕ್ತನಾದವನು, ದೇಶ.... ಜ್ಞಃ - ದೇಶಕಾಲವಿಭಾಗಗಳನ್ನು ಅರಿತವನು, ಸರ್ವ....ದಃ - ಸಮಸ್ತಪ್ರಾಣಿಗಳ ವಿಷಯದಲ್ಲಿಯೂ, ಪ್ರಿಯಭಾಷಿಯಾದವನು. ‖ ೨೧ ‖ ತಸ್ಯ-ಆ ಶ್ರೀರಾಮನಿಗೆ, ಭ್ರಾತಾ-ತಮ್ಮನಾದ, ದ್ವೈಮಾತ್ರಃ - ಬಲತಾಯಿಯ ಮಗನಾದ, ಅಪರಾಜಿತಃ - ಯುದ್ಧದಲ್ಲಿ ಸೋಲದಿರುವ, ಸೌಮಿತ್ರಿಶ್ಚ - ಲಕ್ಷ್ಮಣನೂ ಕೂಡ, ಅನುರಾಗೇಣ - ಪ್ರೀತಿಯಿಂದಲೂ, ರೂಪೇಣ - ಸೌಂದರ್ಯದಿಂದಲೂ, ಗುಣೈಶ್ಚೈವ - ಗುಣಗಳಿಂದಲೂ, ತಥಾವಿಧಃ - ಆ ರಾಮನಿಗೆ ಸಮನಾದವನು. ‖ ೨೨ ‖ ತ್ವದ್ದ......ಕೌ - ನಿನ್ನನ್ನು

ಹೊಂದುತ್ತಿರುವನು. ಎಲೌ ದೇವಿಯೇ! ಶ್ರೀರಾಮನು ಸತ್ಯದಲ್ಲಿಯೂ, ಧರ್ಮದಲ್ಲಿಯೂ ಆಸಕ್ತಿಯುಳ್ಳವನು ; ಮಹಾ ಸಂಪದ್ಯುಕ್ತನು ; ದ್ರವ್ಯಸಂಪಾದನೆಯಲ್ಲಿಯೂ, ಸಂಪಾದಿಸಿದ ದ್ರವ್ಯದಸಂರಕ್ಷಣೆಯಲ್ಲಿಯೂ, ಸಂರಕ್ಷಿಸಿದದ್ರವ್ಯವನ್ನು ಆಶ್ರಿತರಿಗೆ ದಾನಮಾಡುವುದರಲ್ಲಿಯೂ ಬಹಳವಾದ ಆಸಕ್ತಿಯುಳ್ಳವನು. ದೇಶಕಾಲಗಳನ್ನು ಚೆನ್ನಾಗಿ ತಿಳಿದುಕೊಂಡು, ಯಾವ ಯಾವ ಕಾರ್ಯಗಳನ್ನು ಮಾಡಬೇಕೋ ಆ ಆ ಕಾರ್ಯಗಳನ್ನು ತಪ್ಪದೆ ಮಾಡುವವನು. ಸಮಸ್ತರಿಗೂ ಪ್ರೀತಿಯುಂಟಾಗುವಂತೆ ಬಹು ಮನೋಹರವಾಗಿ ಮಾತನಾಡುವವನು. ‖೧೬—೨೧‖ ಅಂತೆಯೆ ಕೌಸಲ್ಯಾ ಸುಮಿತ್ರೆಯರಿಬ್ಬರಿಗೂ ಮುದ್ದಿನ ಮಗನಾಗಿ ಶ್ರೀರಾಮಮೂರ್ತಿಗೆ ಅನುಜನಾದ ಲಕ್ಷ್ಮಣನೂ ಸಹ ರಣರಂಗದಲ್ಲಿ ಶತ್ರುಗಳಿಗೆ ಅಜೇಯನಾಗಿ, ಪ್ರೇಮದಲ್ಲಿಯೂ, ದಯೆಯಲ್ಲಿಯೂ, ಸೌಂದರ್ಯದಲ್ಲಿಯೂ, ಸಮಸ್ತ ಗುಣವಿಶೇಷಗಳಲ್ಲಿಯೂ ಅಣ್ಣನಾದ ಶ್ರೀರಾಮನನ್ನೇ ಸರಿಹೋಲುವನು. ಅಮ್ಮಾ, ಸೀತಾದೇವಿಯೇ! ಪುರುಷೋತ್ತಮರಾದ

ಶ್ಚೈಟಿ ವಿಶಾಲಾಸ್ತೇ ಶುಭಪ್ರದಾಃ ‖ " ಎಂದು ಸಾಮುದ್ರಿಕವು. " ತ್ರಿಭಿರ್ವ್ಯಾಪ್ತಃ " ತೇಜಸ್ಸು, ಯಶಸ್ಸು, ಸಂಪತ್ತು ಇವು ಮೂರರಲ್ಲಿಯೂ ವ್ಯಾಪಕನಾಗಿರುವವನು, ಬ್ರಾಹ್ಮದಲ್ಲಿ "ತ್ರಿರ್ಭಿವ್ಯಾಪ್ತಿಶ್ಚ ಯಸ್ಯಸ್ಯಾತ್ ತೇಜಸಾ ಯಶಸಾ ಶ್ರಿಯಾ" ಎಂದು ಹೇಳಿದೆ. " ದ್ವಿಶುಕ್ಲವಾನ್ " ಪವಿತ್ರವಾದ ಮಾತಾಪಿತೃಗಳ ವಂಶಗಳುಳ್ಳವನು. ಅಥವಾ ಕಣ್ಣುಗಳೂ, ಹಲ್ಲುಗಳೂ ಬೆಳ್ಳಗಿರುವವನು. ಎಂದರ್ಥ. " ಷಡುನ್ನತಃ " " ಕಕ್ಷಃ ಕುಕ್ಷಿಶ್ಚ ವಕ್ಷಶ್ಚ ಘ್ರಾಣಸ್ಕಂಧೋ ಲಲಾಟಿಕಾ । ಸರ್ವಭೂತೇಷು ನಿರ್ದಿಷ್ಟ ಉನ್ನತಾಂಗಾಶ್ಶುಭಪ್ರದಾಃ " ಎಂದು ವರರುಚಿ ವಚನವು. " ನವತನುಃ " ಸೂಕ್ಷ್ಮವಾದ ಒಂಬತ್ತು ಅವಯವಗಳುಳ್ಳವನು. (ಇಲ್ಲಿ ಪೌನರುಕ್ತಿದೋಷವು ಬರುವುದೆಂದು ಯಾರೂ ಶಂಕಿಸಬಾರದು. ಇದುವರೆಗೂ ಹೇಳಿಕೊಂಡು ಬಂದಿರುವ ಲಕ್ಷಣಗಳೆಲ್ಲವೂ ಮಹಾ ಪುರುಷಲಕ್ಷಣಗಳು. ರಾಮನಲ್ಲಿ ಇವೆಲ್ಲವೂ ಅನೆಕೊರೆಯಿಲ್ಲದೆ ಸಂಪೂರ್ಣನಾಗಿದ್ದವೆಂಬುದನ್ನು ಸ್ಪಷ್ಟಪಡಿಸುವುದಕ್ಕಾಗಿಯೇ ಹೀಗೆ ಮತ್ತೂ, ಮತ್ತು ಹೇಳಿರುವುದು.) " ಸೂಕ್ಷ್ಮಾಣ್ಯಂಗುಳಿಪರ್ವಾಣಿ ಕೇಶಲೋಮ ನಖತ್ವಚಃ । ಶೇಫಶ್ಚಯೇಷಾಂ ಸೂಕ್ಷ್ಮಾಣಿ ತೇನರಾ ದೀರ್ಘದರ್ಶಿನಃ " ಎಂದು ವರರುಚಿವಚನವು.

* ಇಲ್ಲಿ " ದ್ವೈಮಾತ್ರಃ " ಎಂದು ಲಕ್ಷ್ಮಣನಿಗೆ ವಿಶೇಷಣವಿರುವುದು. ಅವನು ಸುಮಿತ್ರೆಯ ಮಗನಾದರೂ, ಬಾಲ್ಯದಿಂದಲೂ ರಾಮನೊಡನೆಯೇ ಕೌಸಲ್ಯೆಯಿಂದ ಲಾಲಿತನಾಗಿರುವನು. ಆದರಿಂದ ಹೀಗೆ ಹೇಳಿರಬೇಕು. (ರಾ)

¶ " ಅಮಿತಪ್ರಭಃ " ತಿ. ರಾ. ಪಾ.

ವಿಧಃ॥೨೨॥ ತಾವುಭೌ ನರಶಾರ್ದೂಲೌ ತ್ವದ್ದರ್ಶನಸಮುತ್ಸುಕೌ। ವಿಚಿನ್ವಂತೌ ಮಹೀಂ ಕೃತ್ಸ್ನಾಮಸ್ಮಾಭಿರಭಿಸಂಗತೌ ॥ ೨೩ ॥ ತ್ವಾಮೇವ ಮಾರ್ಗಮಾಣೌ ತೌ ವಿಚರಂತೌ ವಸುಂಧರಾಂ। ದದರ್ಶತು ರ್ಮೃಗಪತಿಂ ಪೂರ್ವಜೇನಾವರೋಪಿತಂ॥೨೪॥ಋಶ್ಯಮೂಕಸ್ಯ ಪೃಷ್ಠೇತು ಬಹುಪಾದಪಸಂಕುಲೇ। ಭ್ರಾತುರ್ಭಯಾರ್ತ ಮಾಸೀನಂ ಸುಗ್ರೀವಂ ಪ್ರಿಯದರ್ಶನಂ ॥ ೨೫ ॥ ವಯಂತು ಹರಿರಾಜಂ ತಂ ಸುಗ್ರೀವಂ ಸತ್ಯಸಂಗರಂ । ಪರಿಚರ್ಯಾಸ್ಮಹೇ ರಾಜ್ಯಾತ್ಪೂರ್ವಜೇನಾವರೋಪಿತಂ ॥ ೨೬ ॥ ತತಸ್ತೌ ಚೀರವಸನೌ ಧನುಃ ಪ್ರವರಪಾಣಿನೌ । * ಋಶ್ಯಮೂಕಸ್ಯ ಶೈಲಸ್ಯ ರಮ್ಯಂ ದೇಶಮುಪಾ

ನೋಡುವುದರಲ್ಲಿ ಉತ್ಸುಕರಾದ, ನರಶಾರ್ದೂಲೌ - ನರಶ್ರೇಷ್ಠರಾದ, ತಾವುಭೌ - ಆ ರಾಮಲಕ್ಷ್ಮಣರೀರ್ವರೂ, ಮಹೀಂಕೃತ್ಸ್ನಾಂ - ಭೂಮಿಯನ್ನೆಲ್ಲಾ, ವಿಚಿನ್ವಂತೌ - ಹುಡುಕುತ್ತ, ಅಸ್ಮಾಭಿಃ - ನಮ್ಮೊಡನೆ, ಅಭಿಸಂಗತೌ - ಸೇರಿದರು. ॥ ೨೩ ॥ ತ್ವಾಮೇವ - ನಿನ್ನನ್ನೇ, ಮಾರ್ಗಮಾಣೌ - ಹುಡುಕುತ್ತಿರುವರಾಗಿ, ವಸುಂಧರಾಂ - ಭೂಮಿಯಲ್ಲಿ, ವಿಚರಂತೌ - ಸಂಚರಿಸುತ್ತಿರುವ ರಾಮಲಕ್ಷ್ಮಣರು, ಪೂರ್ವಜೇನ-ಅಣ್ಣನಾದ ವಾಲಿಯಿಂದ, (ರಾಜ್ಯಾತ್-ರಾಜ್ಯದದೆಶೆಯಿಂದ) ಅವರೋಪಿತಂ-ತಳ್ಳಲ್ಪಟ್ಟವನಾದಕಾರಣ, ಭ್ರಾತುಃ - ಅಣ್ಣನ ದೆಶೆಯಿಂದ, ಭಯಾರ್ತಂ - ಭೀತಿಗೊಂಡವನಾಗಿ, ಬಹು....ಲೇ - ಅನೇಕ ವೃಕ್ಷಗಳಿಂದ ವ್ಯಾಪ್ತವಾದ, ಋಶ್ಯಮೂಕಸ್ಯ - ಋಶ್ಯಮೂಕಪರ್ವತದ, ಪೃಷ್ಠೇ-ಮಧ್ಯಭಾಗದಲ್ಲಿ, ಆಸೀನಂ - ಕುಳಿತಿರುವ, ಪ್ರಿಯದರ್ಶನಂ - ಇಷ್ಟವಾದ ದೃಷ್ಟಿಯುಳ್ಳ, ಸುಗ್ರೀವಂ - ಸುಗ್ರೀವನೆಂಬ, ಮೃಗಪತಿಂ - ಕಪಿರಾಜನನ್ನು, ದದರ್ಶತುಃ - ಕಂಡರು. ॥ ೨೫ ॥ ವಯಂತು - ನಾವಾದರೊ, ಪೂರ್ವಜೇನ - ಅಣ್ಣನಿಂದ, ರಾಜ್ಯಾತ್ - ರಾಜ್ಯದದೆಶೆಯಿಂದ, ಅವರೋಪಿತಂ - ನೂಕಲ್ಪಟ್ಟ, ಸತ್ಯಸಂಗರಂ - ಯಥಾರ್ಥವಾದ ಯುದ್ಧವುಳ್ಳ, ಹರಿರಾಜಂ - ವಾನರಾಧಿಪತಿಯಾದ, ತಂಸುಗ್ರೀವಂ - ಆ ಸುಗ್ರೀವನನ್ನು, ಪರಿಚರ್ಯ - ಉಪಚರಿಸಿ, ಆಸ್ಮಹೇ - ಇದ್ದೆವು. ॥ ೨೬ ॥ ತತಃ - ಬಳಿಕ, ಧನುಃ....ನೌ - ಉತ್ತಮವಾದಬಿಲ್ಲುಗಳೇ ಕೈಯಲ್ಲುಳ್ಳ, ಚೀರವಸನೌ - ನಾರುಮಡಿಗಳನ್ನುಟ್ಟಿರುವ, ತೌ - ಆ ರಾಮಲಕ್ಷ್ಮಣರು, ಋಶ್ಯಮೂಕಸ್ಯ - ಋಶ್ಯಮೂಕವೆಂಬ, ಶೈಲಸ್ಯ - ಪರ್ವತದ, ರಮ್ಯಂ - ಮನೋಹರವಾದ, ದೇಶಂ - ಸ್ಥಳವನ್ನು, ಉಪಾಗತೌ - ಹೊಂದಿದರು. ॥೨೭॥

ಆ ಶ್ರೀರಾಮಲಕ್ಷ್ಮಣರೀರ್ವರೂ ನಿನ್ನನ್ನು ನೋಡುವುದರಲ್ಲಿ ಪರಮೋತ್ಸಾಹಿಗಳಾಗಿ ಭೂಮಿಯಲ್ಲೆಲ್ಲಾ ಸುತ್ತುತ್ತಿರಲು ಅವರಿಗೂ, ನಮಗೂ ಸಮಾಗಮವುಂಟಾಯಿತು. ಆ ವೃತ್ತಾಂತವನ್ನೂ ನಿನಗೆ ತಿಳಿಸುವೆನು, ಆಲಿಸಿ ಕೇಳು. ಶ್ರೀರಾಮಲಕ್ಷ್ಮಣರಿಬ್ಬರೂ ಹಾಗೆ ಸಂಚರಿಸುತ್ತ, ಅಣ್ಣನಾದ ವಾಲಿಯಿಂದ ರಾಜ್ಯಭ್ರಷ್ಟನಾಗಿ ಆತನಭಯದಿಂದ ಕಿಷ್ಕಿಂಧಾನಗರವನ್ನುತೊರೆದು, ಅನೇಕ ವೃಕ್ಷಗಳಿಂದ ತುಂಬಿರುವ ಋಷ್ಯಮೂಕಪರ್ವತದ ಒಂದು ರಮ್ಯಸ್ಥಳದಲ್ಲಿ ವಾಸಮಾಡಿಕೊಂಡಿದ್ದ, ಪ್ರಿಯದರ್ಶನನೂ, ವಾನರೇಶ್ವರನೂ ಆದ ಸುಗ್ರೀವನನ್ನು ಕಂಡರು. ॥ ೨೦-೨೫ ॥ ಅಣ್ಣನಿಂದ ರಾಜ್ಯಭ್ರಷ್ಟನಾಗಿದ್ದ, ಸತ್ಯಪ್ರತಿಜ್ಞನಾದ ಆ ಸುಗ್ರೀವನಿಗೆ ನಾವೆಲ್ಲರೂ ಆಜ್ಞಾಧಾರಕರಾಗಿ ಅವನನ್ನು ಉಪಚರಿಸಿಕೊಂಡಿದ್ದೆವು. ಆಗ ಶ್ರೀರಾಮಲಕ್ಷ್ಮಣರೀರ್ವರೂ ನಾರುಮಡಿಗಳನ್ನುಟ್ಟು, ಧನುರ್ಬಾಣಗಳನ್ನು ಧರಿಸಿ ಋಷ್ಯಮೂಕಕ್ಕೆ ಬಂದರು. ಆ ಸಮಯದಲ್ಲಿ ನಮ್ಮ ಸುಗ್ರೀವರಾಜನು ಅವರನ್ನು ನೋಡಿ, ವಾಲಿಯು ಅವರನ್ನು

---

* ಈ ಪದವು ಗೋ. ಪಾಠದಲ್ಲಿ ಅಧಿಕ.

ಗತೌ ||೨೭|| ಸ ತೌ ದೃಷ್ಟ್ವಾ ನರವ್ಯಾಘ್ರೌ ಧನ್ವಿನೌ ವಾನರರ್ಷಭಃ । ಅವಪ್ಲುತೋ ಗಿರೇಸ್ತಸ್ಯ ಶಿಖರಂ ಭಯಮೋಹಿತಃ ||೨೮|| ತತಸ್ಸಶಿಖರೇ ತಸ್ಮಿನ್ ವಾನರೇಂದ್ರೋ ವ್ಯವಸ್ಥಿತಃ । ತಯೋಸ್ಸಮೀಪಂ ಮಾಮೇವ ಪ್ರೇಷಯಾಮಾಸ ಸತ್ವರಂ ||೨೯|| ತಾವಹಂ ಪುರುಷವ್ಯಾಘ್ರೌ ಸುಗ್ರೀವವಚನಾತ್ಪ್ರಭೂ । ರೂಪಲಕ್ಷಣಸಂಪನ್ನೌ ಕೃತಾಂಜಲಿರುಪಸ್ಥಿತಃ ||೩೦|| ತೌ ಪರಿಜ್ಞಾತತತ್ತ್ವಾರ್ಥೌ ಮಯಾ ಪ್ರೀತಿಸಮನ್ವಿತೌ । ಪೃಷ್ಠಮಾರೋಪ್ಯ ತಂ ದೇಶಂ ಪ್ರಾಪಿತೌ ಪುರುಷರ್ಷಭೌ ||೩೧|| ನಿವೇದಿತೌ ಚ ತತ್ತ್ವೇನ ಸುಗ್ರೀವಾಯ ಮಹಾತ್ಮನೇ । ತಯೋರನ್ಯೋನ್ಯಸಲ್ಲಾಪಾದ್ಭೃಶಂ

ಸವಾನರರ್ಷಭಃ - ವಾನರಶ್ರೇಷ್ಠನಾದ ಆ ಸುಗ್ರೀವನು, ಧನ್ವಿನೌ - ಧನುರ್ಧಾರಿಗಳಾದ, ತೌನರವ್ಯಾಘ್ರೌ - ಆ ಮನುಜ ಶ್ರೇಷ್ಠರನ್ನು, ದೃಷ್ಟ್ವಾ - ಕಂಡು, ಭಯಮೋಹಿತಃ - ಅಂಜಿದವನಾಗಿ, ತಸ್ಯಗಿರೇಃ - ಆ ಪರ್ವತದ, ಶಿಖರಂ - ಶೃಂಗವನ್ನು ಕುರಿತು, ಅವಪ್ಲುತಃ - ಹಾರಿದನು. ||೨೮|| ತತಃ - ಬಳಿಕ, ತಸ್ಮಿನ್‌ಶಿಖರೇ - ಆ ತುದಿಗುಂಡಿನಲ್ಲಿ, ವ್ಯವಸ್ಥಿತಃ - ಇರುವ, ಸವಾನರೇಂದ್ರಃ - ಆ ಕಪಿರಾಜನು, ತಯೋಃ-ಆ ರಾಮಲಕ್ಷ್ಮಣರ, ಸಮೀಪಂ-ಬಳಿಗೆ, ಮಾಮೇವ-ನನ್ನನ್ನೇ, ಸತ್ವರಂ-ಜಾಗ್ರತೆಯಾಗಿ, ಪ್ರೇಷಯಾಮಾಸ - ಕಳುಹಿದನು. ||೨೯|| ಅಹಂ - ನಾನು, ಸುಗ್ರೀ....ತ್ - ಸುಗ್ರೀವನಾಜ್ಞೆಯಿಂದ, ಪ್ರಭೂ - ಅರಸುಗಳಾದ, ಪುರುಷವ್ಯಾಘ್ರೌ - ಪುರುಷೋತ್ತಮರಾದ, ರೂಪ....ನ್ನೌ - ರೂಪದಿಂದಲೂ, ಲಕ್ಷಣಗಳಿಂದಲೂ ಒಪ್ಪುತ್ತಿರುವ, ತೌ - ಆ ರಾಮಲಕ್ಷ್ಮಣರನ್ನು, ದೃಷ್ಟ್ವಾ-ನೋಡಿ, ಕೃತಾಂಜಲಿಃ-ನಮಸ್ಕರಿಸಿ, ಸ್ಥಿತಃ-ನಿಂತುಕೊಂಡೆನು. ||೩೦|| ಪರಿ....ರ್ಥೌ-ತಿಳಿಯಲ್ಪಟ್ಟ ಯಾಥಾರ್ಥ್ಯವುಳ್ಳವರಾದಕಾರಣ, ಪ್ರೀತಿಸಮನ್ವಿತೌ - ಸಂತೋಷದಿಂದೊಡಗೂಡಿ, ತೌಪುರುಷರ್ಷಭೌ - ಆ ರಾಮಲಕ್ಷ್ಮಣರಿಬ್ಬರೂ, ಮಯಾ - ನನ್ನಿಂದ, ಪೃಷ್ಠಂ - ಪೃಷ್ಠಪ್ರದೇಶವನ್ನು, ಆರೋಪ್ಯ - ಏರಿಕೊಂಡು, ತಂದೇಶಂ - ಆ ಸುಗ್ರೀವನಿರುವ ಸ್ಥಳಕ್ಕೆ, ಪ್ರಾಪಿತೌ - ಹೊಂದಿಸಲ್ಪಟ್ಟರು. ||೩೧|| ಮಹಾತ್ಮನೇ - ಮಹಾನುಭಾವನಾದ, ಸುಗ್ರೀವಾಯ - ಸುಗ್ರೀವನಿಗೆ, ತತ್ತ್ವೇನ - ನಿಜವಾಗಿ, ನಿವೇದಿತೌಚ - ತಿಳಿಸಲ್ಪಟ್ಟರು, ತಯೋಃ - ಆರಾಮಸುಗ್ರೀವರಿಗೆ, ಅನ್ಯೋ....ತ್ - ಒಬ್ಬರೊಬ್ಬರ ಮಾತುಗಳಿಂದ, ಭೃಶಂ - ಬಹಳವಾಗಿ, ಪ್ರೀತಿಃ - ವಿಶ್ವಾಸವು, ಅಜಾಯತ - ಹುಟ್ಟಿತು.

ತನ್ನ ವಧೆಗಾಗಿಯೇ ಕಳುಹಿಸಿರಬಹುದೆಂದು ಶಂಕಿಸಿ ಪರ್ವತಶಿಖರಕ್ಕೆ ಓಡಿಹೋದನು. ಹೀಗೆ ಭಯದಿಂದ ತತ್ತರಿಸಿಹೋಗಿ ಪರ್ವತಶಿಖರವನ್ನು ಸೇರಿದ ಆ ಸುಗ್ರೀವನು ನನ್ನನ್ನು ಶ್ರೀರಾಮಲಕ್ಷ್ಮಣರ ವಿಚಾರವನ್ನರಿತು ಬಾರೆಂದು ಬಹುಜಾಗ್ರತೆಯಾಗಿಯೇ ಕಳುಹಿಸಿದನು. ನಾನು ಆತನಾಣತಿಯನ್ನು ಶಿರಸಾವಹಿಸಿ ಪುರುಷಶ್ರೇಷ್ಠರೂ, ಸರ್ವಲಕ್ಷಣಸಂಪನ್ನರೂ, ರೂಪವಂತರೂ ರಾಜಕುಮಾರರೂ ಆದ ಆ ಶ್ರೀರಾಮಲಕ್ಷ್ಮಣರ ಬಳಿಗೈದಿ ದಂಡವತ್ಪ್ರಣಾಮ ಮಾಡಿ ಬದ್ಧಾಂಜಲಿಪುಟನಾಗಿ ನಮ್ಮ ದೊರೆಯಾದ ಸುಗ್ರೀವನ ವೃತ್ತಾಂತವನ್ನವರಿಗೆ ತಿಳಿಸಿದೆನು. ||೨೫—೩೦|| ನಾನು ಅವರಿಬ್ಬರಿಗೂ ಯಥಾರ್ಥವಾದ ಸ್ಥಿತಿಯನ್ನು ತಿಳಿಸಲು ಅವರಿಬ್ಬರೂ ಪರಮಸಂತೋಷಭರಿತರಾದರು. ಆ ಬಳಿಕ ನಾನು ಆ ರಾಜಪುತ್ರರೀರ್ವರನ್ನೂ ಬೆನ್ನಮೇಲೇರಿಸಿಕೊಂಡು ನಮ್ಮ ದೊರೆಯಾದ ಸುಗ್ರೀವರಾಜನಿದ್ದೆಡೆಗೆ ಕರೆದೊಯ್ದೆನು. ಹೀಗೆ ಅವರನ್ನು ಕರೆದುಕೊಂಡು ಹೋಗಿ ಅಲ್ಲಿಬಿಟ್ಟು ಈ ಸಮಾಚಾರವನ್ನು ಸುಗ್ರೀವರಾಜನಿಗೆ ತಿಳಿಸಿದೆನು. ಆ ಬಳಿಕ ಸುಗ್ರೀವನೂ, ಶ್ರೀರಾಮಲಕ್ಷ್ಮಣರೂ ಒಂದುಗೂಡಿ ಸರಸ

ಪ್ರೀತಿರಜಾಯತ ॥ ೩೨ ॥ ತತಸ್ತೌ ಪ್ರೀತಿಸಂಪನ್ನೌ ಹರೀಶ್ವರನರೇಶ್ವರೌ । ಪರಸ್ಪರಕೃತಾಶ್ವಾಸೌ ಕಥಯಾ ಪೂರ್ವವೃತ್ತಯಾ ॥ ೩೩ ॥ ತತಸ್ಸಸಾಂತ್ವಯಾಮಾಸ ಸುಗ್ರೀವಂ ಲಕ್ಷ್ಮಣಾಗ್ರಜಃ । ಸ್ತ್ರೀಹೇತೋರ್ವಾಲಿನಾ ಭ್ರಾತ್ರಾ ನಿರಸ್ತಮುರುತೇಜಸಾ ॥ ೩೪ ॥ ತತಸ್ತ್ವನ್ನಾಶಜಂ ಶೋಕಂ ರಾಮಸ್ಯಾಕ್ಲಿಷ್ಟಕರ್ಮಣಃ । ಲಕ್ಷ್ಮಣೋ ವಾನರೇಂದ್ರಾಯ ಸುಗ್ರೀವಾಯ ನ್ಯವೇದಯತ್ ॥ ೩೫ ॥ ಸ ಶ್ರುತ್ವಾ ವಾನರೇಂದ್ರಸ್ತು ಲಕ್ಷ್ಮಣೇನೇರಿತಂ ವಚಃ । ತದಾಸೀನ್ನಿಷ್ಪ್ರಭೋಽತ್ಯರ್ಥಂ ರಾಹುಗ್ರಸ್ತ ಇವಾಂಶುಮಾನ್ ॥ ೩೬ ॥ ತತಸ್ತ್ವದ್ಗಾತ್ರಶೋಭೀನಿ ರಕ್ಷಸಾ ಹ್ರಿಯಮಾಣಯಾ ।

॥ ೩೨ ॥ ತತಃ - ಅನಂತರದಲ್ಲಿ, ಪ್ರೀತಿಸಂಪನ್ನೌ - ವಿಶ್ವಾಸದಿಂದೊಡಗೂಡಿದ, ತೌಹ....ರೌ - ಆ ಕಪಿಪತಿ, ನರಪತಿಗಳು, ಪೂರ್ವವೃತ್ತಯಾ-ಮೊದಲು ನಡೆದಿರುವ, ಕಥಯಾ-ಕಥೆಯಿಂದ, ಪರ....ಸೌ - ಒಬ್ಬರಿಗೊಬ್ಬರು ಸಮಾಧಾನಪಡಿಸಿಕೊಂಡರು. ॥ ೩೩ ॥ ತತಃ - ಬಳಿಕ, ಲಕ್ಷ್ಮಣಾಗ್ರಜಃ - ಲಕ್ಷ್ಮಣನಿಗೆ ಅಣ್ಣನಾದ, ಸಃ-ಆ ಶ್ರೀರಾಮನು, ಉರುತೇಜಸಾ ಬಹುಪರಾಕ್ರಮಿಯಾದ, ಭ್ರಾತ್ರಾ-ಅಣ್ಣನಾದ, ವಾಲಿನಾ-ವಾಲಿಯಿಂದ, ಸ್ತ್ರೀಹೇತೋಃ-ಸ್ತ್ರೀನಿಮಿತ್ತವಾಗಿ, ನಿರಸ್ತಂ ಹೊರಡಿಸಲ್ಪಟ್ಟ, ಸುಗ್ರೀವಂ - ಸುಗ್ರೀವನನ್ನು, ಸಾಂತ್ವಯಾಮಾಸ - ಸಮಾಧಾನಗೊಳಿಸಿದನು. ॥ ೩೪ ॥ ತತಃ - ಅನಂತರದಲ್ಲಿ, ಲಕ್ಷ್ಮಣಃ - ಲಕ್ಷ್ಮಣನು, ಅಕ್ಲಿಷ್ಟಕರ್ಮಣಃ - ಕ್ಲೇಶಪಡೆದಿರುವ ಕಾರ್ಯಗಳುಳ್ಳ, ರಾಮಸ್ಯ - ಶ್ರೀರಾಮನ ಸಂಬಂಧವಾದ, ತ್ವನ್ನಾಶಜಂ - ನಿನ್ನಗಲಿಕೆಯಿಂದುಂಟಾದ, ಶೋಕಂ - ದುಃಖವನ್ನು, ವಾನರೇಂದ್ರಾಯ - ವಾನರಾಧಿಪತಿಯಾದ, ಸುಗ್ರೀವಾಯ - ಸುಗ್ರೀವನಿಗೆ, ನ್ಯವೇದಯತ್ - ತಿಳುಹಿದನು. ॥ ೩೫ ॥ ಸವಾನರೇಂದ್ರಸ್ತು - ಆ ಸುಗ್ರೀವನಾದರೆ, ತದಾ - ಆಕಾಲದಲ್ಲಿ, ಲಕ್ಷ್ಮಣೇನ - ಲಕ್ಷ್ಮಣನಿಂದ, ಈರಿತಂ - ಹೇಳಲ್ಪಟ್ಟ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ರಾಹುಗ್ರಸ್ತಃ - ರಾಹುವಿನಿಂದ ಹಿಡಿಯಲ್ಪಟ್ಟ, ಅಂಶುಮಾನಿವ - ಸೂರ್ಯನಂತೆ, ಅತ್ಯರ್ಥಂ - ಬಹಳವಾಗಿ, ನಿಷ್ಪ್ರಭಃ - ಕಾಂತಿಯಿಲ್ಲದವನು, ಆಸೀತ್ - ಆದನು. ॥ ೩೬ ॥ ತತಃ - ಬಳಿಕ, ತ್ವದ್ಗಾತ್ರಶೋಭೀನಿ - ನಿನ್ನಶರೀರವನ್ನು ಹೊಳೆಯುವಂತೆ ಮಾಡುತ್ತಿರುವ, ಯಾನ್ಯಾ....ನಿ - ಯಾವ ಒಡವೆಗಳ

ಸಲ್ಲಾಪಪೂರ್ವಕವಾದ ಮಾತುಗಳನ್ನಾಡಿಕೊಂಡು ಒಬ್ಬರೊಡನೊಬ್ಬರು ಸ್ನೇಹವನ್ನು ಬೆಳೆಸಿದರು. ದೇವಿ! ಹೀಗೆ ನರವಾನರರಿಗೆ ಸ್ನೇಹವುಂಟಾಯಿತು. ಆಮೇಲಿನ ವೃತ್ತಾಂತವನ್ನು ಕೇಳು. ಆ ಬಳಿಕ ರಾಮಸುಗ್ರೀವರಿಬ್ಬರೂ ಅದುವರೆಗೆ ತಮಗೆ ಪ್ರಾಪ್ತವಾದ ದುಃಖಗಳನ್ನು ಒಬ್ಬರೊಡನೊಬ್ಬರು ಹೇಳಿಕೊಂಡು ಒಬ್ಬರನ್ನೊಬ್ಬರು ಸಮಾಧಾನಪಡಿಸಿಕೊಂಡರು. ಆಗ ಶ್ರೀರಾಮನು ಮಹಾ ಬಲಪರಾಕ್ರಮಶಾಲಿಯಾದ ವಾಲಿಯು ಸ್ತ್ರೀನಿಮಿತ್ತವಾಗಿ ಸುಗ್ರೀವನನ್ನು ಅವಮಾನಪಡಿಸಿದ ವೃತ್ತಾಂತವನ್ನು ಕೇಳಿ ಅವನನ್ನು ಸಮಾಧಾನಪಡಿಸಿದನು. ಎಲೌ ಸೀತಾದೇವಿಯೇ! ಆ ಬಳಿಕ ಲಕ್ಷ್ಮಣನು ಶ್ರೀರಾಮನಿಗೆ ನಿನ್ನ ವಿಯೋಗದಿಂದುಂಟಾಗಿರುವ ವ್ಯಸನವನ್ನು ವಾನರಾಧಿಪತಿಯಾದ ಸುಗ್ರೀವನಿಗೆ ಹೇಳಿದನು. ॥ ೩೧–೩೫ ॥ ಲಕ್ಷ್ಮಣಸ್ವಾಮಿಯ ಮಾತುಗಳನ್ನು ಕೇಳಿ ನಮ್ಮ ದೊರೆಯಾದ ಸುಗ್ರೀವನಿಗೆ, ಮಿತ್ರನಾದ ಶ್ರೀರಾಮನ ದುಃಖವನ್ನು ಕೇಳಿದುದರಿಂದ ಬಹಳ ವ್ಯಸನವಾಯಿತು. ಕೂಡಲೆ ಅವನ ಮುಖವು ರಾಹುಗ್ರಸ್ತವಾದ ಸೂರ್ಯನಂತೆ ತೇಜೋಹೀನವಾಯಿತು. ಆ ಬಳಿಕ ಅಲ್ಲಿದ್ದ ವಾನರರು ರಾಕ್ಷಸ

ಯಾನ್ಯಾಭರಣಜಾಲಾನಿ ಪಾತಿತಾನಿ ಮಹೀತಲೇ ||೩೭|| ತಾನಿ ಸರ್ವಾಣಿ ರಾಮಾಯ ಆನೀಯ ಹರಿಯೂಥಪಾಃ | ಸಂಹೃಷ್ಟಾ ದರ್ಶಯಾಮಾಸು ರ್ಗತಿಂತು ನವಿದುಸ್ತ್ವವ ||೩೮|| ¶ ತಾನಿ ರಾಮಾಯ ದತ್ತಾನಿ ಮಯೈವೋಪಹೃತಾನಿಚ | ಸ್ವನವಂತ್ಯವ ಕೀರ್ಣಾನಿ ತಸ್ಮಿನ್ವಿಗತಚೇತಸಿ ||೩೯|| ತಾನ್ಯಂಕೇ ದರ್ಶನೀಯಾನಿ ಕೃತ್ವಾ ಬಹುವಿಧಂ ತವ | ತೇನ ದೇವಪ್ರಕಾಶೇನ ದೇವೇನ ಪರಿದೇವಿತಂ ||೪೦|| $ ಪಶ್ಯತಸ್ತಾನಿ

ಸಮೂಹವು, ರಕ್ಷಸಾ - ರಕ್ಕಸನಿಂದ, ಹ್ರಿಯಮಾಣಯಾ - ಕದ್ದುಯ್ಯಲ್ಪಡುತ್ತಿರುವ, **ತ್ವಯಾ** - ನಿನ್ನಿಂದ, ಮಹೀತಲೇ - ಭೂಪ್ರದೇಶದಲ್ಲಿ, ಪಾತಿತಾನಿ - ಬೀಳಿಸಲ್ಪಟ್ಟವೊ, ತಾನಿಸರ್ವಾಣಿ - ಅವುಗಳನ್ನೆಲ್ಲಾ, ಹರಿಯೂಥಪಾಃ - ಕಪಿಶ್ರೇಷ್ಠರು, ಆನೀಯ - ತೆಗೆದುಕೊಂಡುಬಂದು, ಸಂಹೃಷ್ಟಾಃ - ಸಂತೋಷಗೊಂಡವರಾಗಿ, ರಾಮಾಯ - ಶ್ರೀರಾಮನಿಗೆ, ದರ್ಶಯಾಮಾಸುಃ - ತೋರಿಸಿದರು, ತವ - ನಿನ್ನ, ಗತಿಂತು - ಗಮನವನ್ನಾದರೆ, ನವಿದುಃ - ತಿಳಿದವರಾಗಿರಲಿಲ್ಲವು. ||೩೮|| **ತಸ್ಮಿನ್** - ಆ ಶ್ರೀರಾಮನು, ವಿಗತಚೇತಸಿ - ಮೂರ್ಛೆಯೊಂದುತ್ತಿರಲು, ಪೂರ್ವಂ - ಮೊದಲು, ಮಯೈವ - ನನ್ನಿಂದಲೇ, ಉಪಹೃತಾನಿ - ತರಲ್ಪಟ್ಟ, ಸ್ವನವಂತಿ - ಹರಿಯೂಥಪರಿಂದ ತರಲ್ಪಡುವಕಾಲದಲ್ಲಿ ಅಥವಾ ಆಕಾಶದಿಂದ ಕೆಳಕ್ಕೆ ಬೀಳುವಕಾಲದಲ್ಲಿ ಶಬ್ದಾಯಮಾನಗಳಾಗಿ, ಅವಕೀರ್ಣಾನಿಚ-ಏರ್ಪಡಿಸಿಡಲ್ಪಟ್ಟವುಗಳೂ ಆದ, ತಾನಿ - ಆ ಆಭರಣಗಳು, (ಸುಗ್ರೀವೇಣ - ಸುಗ್ರೀವನಿಂದ) ರಾಮಾಯ - ಶ್ರೀರಾಮನಿಗೆ ದತ್ತಾನಿ - ಕೊಡಲ್ಪಟ್ಟವು. ||೩೯|| ತವ - ನಿನ್ನ ಸಂಬಂಧವಾದ, ತಾನಿ - ಆ ಆಭರಣಗಳನ್ನು, ಅಂಕೇ - ಸಮೀಪದಲ್ಲಿ, ದರ್ಶನೀಯಾನಿ - ನೋಡತಕ್ಕವುಗಳನ್ನಾಗಿ, ಕೃತ್ವಾ - ಮಾಡಿ, ದೇವಪ್ರಕಾಶೇನ-ದೇವತೆಗಳಿಗೆ ಸಮಾನವಾದ ಕಾಂತಿಯುಳ್ಳ, ತೇನದೇವೇನ-ಆ ಶ್ರೀರಾಮನಿಂದ, ಬಹುವಿಧಂ-ಬಗೆಗೆಬಯಾಗಿ, ಪರಿದೇವಿತಂ-ವಿಲಪಿಸಲಾಯಿತು. ||೪೦|| ತಾನಿ-ಆ ಒಡವೆಗಳನ್ನು, **ಪಶ್ಯತಃ**-ನೋಡುತ್ತಿರುವನಾದಕಾರಣ, ರುದತಃ - ಅಳುತ್ತಿರುವ, ಪುನಃಪುನಃ - ಬಾರಿಬಾರಿಗೂ, ತಾಮ್ಯತಃ -

---

ರಾಜನಾದ ರಾವಣನು ನಿನ್ನನ್ನು ಕೊಂಡುಹೋಗುತ್ತಿದ್ದಾಗ ನೀನು ನಿನ್ನ ಮೈಮೇಲಿದ್ದ ಆಭರಣಗಳನ್ನು ಕೆಳಕ್ಕೆ ಬಿಸುಟ ಸಂಗತಿಯನ್ನು ಹೇಳಿ ಅವುಗಳೆಲ್ಲವನ್ನೂ ತಂದು ಸಂಭ್ರಮದಿಂದ ಶ್ರೀರಾಮನಿಗೆ ತೋರಿಸಿದರು. ಎಲೆ ತಾಯೇ! ಆ ವಾನರರು ನೀನಿರುವ ಸ್ಥಳವನ್ನು ಮಾತ್ರ ಗೊತ್ತರಿತಿರಲಿಲ್ಲವು. ದುರುಳ ರಾವಣನು ನಿನ್ನನ್ನು ಕೊಂಡುಹೋಗುವ ಸಂಭ್ರಮದಲ್ಲಿದ್ದಾಗ ಧ್ವನಿಮಾಡುತ್ತ ಕೆಳಕ್ಕೆ ಬಿದ್ದ ಆಭರಣಗಳೆಲ್ಲವನ್ನೂ ನಾನೇ ಆರಿಸಿಕೊಂಡು ಬಂದಿದ್ದೆನು. ಅವುಗಳನ್ನು ನಾನೇ ಶ್ರೀರಾಮನ ಮುಂದಿರಿಸಿದೆನು. ಆಗ ಶ್ರೀರಾಮನು ಅವುಗಳನ್ನು ನೋಡುತ್ತಲೇ ದುಃಖಾತಿಶಯವುಳ್ಳವನಾಗಿ ಮೂರ್ಛೆಯೊಂದಿದನು. ದೇವತೆಗಳಿಗೆ ಸಮಾನನೂ, ನಿನ್ನ ಪತಿದೇವನೂ ಆದ ಆ ಶ್ರೀರಾಮನು ಸುಂದರವಾದ ಆ ಒಡವೆಗಳೆಲ್ಲವನ್ನೂ ತನ್ನ ತೊಡೆಯಲ್ಲಿರಿಸಿಕೊಂಡು ಬಹು ವಿಧವಾಗಿ ವಿಲಪಿಸಿದನು. || ೩೭—೪೦ || ಆಗಿನ ಆತನ ಸಂಕಟವು ವರ್ಣನಾತೀತವಾಗಿದ್ದಿತು. ಆ ಮಹಾನುಭಾವನು ಆ ಒಡವೆ

¶ ಇಲ್ಲಿ "ಮಯೈವೋಪಹೃತಾನಿ" ಎಂದರೆ, ಹಿಂದೆ ಪತನಕಾಲದಲ್ಲಿ ನಾನೇ ಅವುಗಳನ್ನು ಆಯ್ದು ತಂದೆನು, ಎಂದು ಅರ್ಥ. ಆದುದರಿಂದಲೇ "ಸ್ವನವಂತಿ" ಎಂಬ ವಿಶೇಷಣವಿರುವುದು. (ಗೋ)

$ ಈ ಅರ್ಧಶ್ಲೋಕವು ಗೋ. ಪಾಠದಲ್ಲಿ ಅಧಿಕ.

ರುದತ ಸ್ತಾನ್ಯತಶ್ಚ ಪುನಃಪುನಃ । ಪ್ರಾದೀಪಯನ್ದಾಶರಥೇಸ್ತಾನಿ ಶೋಕಹುತಾಶನಂ ॥೪೧॥ ಶಯಿತಂ ಚ ಚಿರಂ ತೇನ ದುಃಖಾರ್ತೇನ ಮಹಾತ್ಮನಾ । ಮಯಾಪಿ ವಿವಿಧೈರ್ವಾಕ್ಯೈಃ ಕೃಚ್ಛ್ರಾದುತ್ಥಾಪಿತಃ ಪುನಃ ॥ ೪೨ ॥ ತಾನಿ ದೃಷ್ಟ್ವಾ ಮಹಾಬಾಹುರ್ದರ್ಶಯಿತ್ವಾ ಮುಹುರ್ಮುಹುಃ । ರಾಘವಸ್ಸಹಸೌಮಿತ್ರಿಃ ಸುಗ್ರೀವಸ್ಯ ನ್ಯವೇದಯತ್ ॥೪೩॥¶ ತವಾದರ್ಶನಜೇನಾರ್ಯೇ! ರಾಘವಃ § ಪರಿತಪ್ಯತೇ । ಮಹತಾ ಜ್ವಲತಾ ನಿತ್ಯಮಗ್ನಿನೇವಾಗ್ನಿಪರ್ವತಃ ॥೪೪॥ ತ್ವತ್ಕೃತೇ ಮದನಶ್ಚೈವ ಶೋಕಶ್ಚಿಂತಾಚ ರಾಘವಂ ।

ಭ್ರಾಂತಿಯನ್ನೂ ಹೊಂದುತ್ತಿರುವ, ದಾಶರಥೇಃ - ಶ್ರೀರಾಮನಿಗೆ, ತಾನಿ - ಆ ಒಡವೆಗಳು, ಶೋಕಹುತಾಶನಂ - ದುಃಖಾಗ್ನಿಯನ್ನು, ಪ್ರಾದೀಪಯನ್ - ವೃದ್ಧಿಗೊಳಿಸಿದವು. ॥ ೪೧ ॥ ಮಹಾತ್ಮನಾ - ಮಹಾನುಭಾವನಾದ, ದುಃಖಾರ್ತೇನ - ದುಃಖಪೀಡಿತನಾದ, ತೇನಚ - ಆ ಶ್ರೀರಾಮನಿಂದಲೂ, ಶಯಿತಂ - ಶಯನಿಸಲ್ಪಟ್ಟಿತು, ಮಯಾಪಿ - ನನ್ನಿಂದಲೂ, ಪುನಃ - ಮತ್ತು, ವಿವಿಧೈಃ - ಅನೇಕ ವಿಧಗಳಾದ, ವಾಕ್ಯೈಃ - ಮಾತುಗಳಿಂದ, ಕೃಚ್ಛ್ರಾತ್ - ಕಷ್ಟದಿಂದ, ಉತ್ಥಾಪಿತಃ - ಎಬ್ಬಿಸಲ್ಪಟ್ಟನು. ॥ ೪೨ ॥ ಮಹಾಬಾಹುಃ - ಮಹಾಪರಾಕ್ರಮಿಯಾದ, ರಾಘವಃ - ಶ್ರೀರಾಮನು, ಸಹಸೌಮಿತ್ರಿಃ - ಲಕ್ಷ್ಮಣಸಹಿತನಾಗಿ, ತಾನಿ - ಆ ಒಡವೆಗಳನ್ನು, ದೃಷ್ಟ್ವಾ - ನೋಡಿ, ಮುಹುರ್ಮುಹುಃ - ಬಾರಿಬಾರಿಗೂ, ದರ್ಶಯಿತ್ವಾ - ನಮ್ಮಗಳಿಗೆಲ್ಲಾ ತೋರಿಸಿ, ಸುಗ್ರೀವೇ - ಸುಗ್ರೀವನ ಅಧೀನದಲ್ಲಿ, ಸನ್ಯವೇದಯತ್ - ಇರಿಸಿದನು. ॥ ೪೩ ॥ ಹೇ ಆರ್ಯೇ - ಎಲೌ ಪೂಜ್ಯಳೆ, ಸರಾಘವಃ - ಆ ಶ್ರೀರಾಮನು, ತವ - ನಿನ್ನ, ಅದರ್ಶನಾತ್ - ಅಗಲುವಿಕೆಯಿಂದ, ಮಹತಾ - ವಿಶೇಷವಾದ, ನಿತ್ಯಂ - ಯಾವಾಗಲೂ, ಜ್ವಲತಾ - ಉರಿಯುತ್ತಿರುವ, ಅಗ್ನಿನಾ - ಬೆಂಕಿಯಿಂದ, ಅಗ್ನಿಪರ್ವತಇವ - ಅಗ್ನಿಪರ್ವತದಂತೆ, ಪರಿತಪ್ಯತೇ - ಕುದಿಸಲ್ಪಡುತ್ತಾನೆ. ॥ ೪೪ ॥ ಅನಿದ್ರಾಚ - ನಿದ್ದೆಯಿಲ್ಲದಿರುವಿಕೆಯೂ, ಶೋಕಃ -

---

ಗಳನ್ನು ಅಡಿಗಡಿಗೂ ನೋಡುತ್ತಲೂ, ಅವುಗಳನ್ನು ನೋಡಿ ನೋಡಿ ಅಳುತ್ತಲೂ, ಮನಸ್ಸಿನಲ್ಲಿಯೇ ದುಃಖಾತಿಶಯದಿಂದ ಬೇಯುತ್ತಲೂ ಬಹುವಾಗಿ ವಿಲಪಿಸಿದನು. ದೇವಿ! ಈ ರೀತಿ ನಿನ್ನ ಆ ಒಡವೆಗಳು ಶ್ರೀರಾಮಮೂರ್ತಿಯ ದುಃಖಾಗ್ನಿಯನ್ನು ಅತ್ಯಧಿಕವಾಗಿ ಪ್ರಜ್ವಲಗೊಳಿಸಿದವು. ಶ್ರೀರಾಮನು ಹೀಗೆ ಬಹಳ ಹೊತ್ತಿನವರೆಗೂ ಆ ದುಃಖದಿಂದ ಮೈಮರೆತ್ತಿದ್ದುದನ್ನು ನೋಡಿ ಆತನ ತಮ್ಮನಾದ ಲಕ್ಷ್ಮಣನೂ, ನಮ್ಮ ದೊರೆಯಾದ ಸುಗ್ರೀವನೂ, ನಾನೂ ಆತನನ್ನು ಅನೇಕ ವಿಧದಿಂದ ಸಮಾಧಾನಗೊಳಿಸಿದೆವು. ಆಮೇಲೆ ಆತನು ಬಹು ಪ್ರಯಾಸದಿಂದ ಸಮಾಧಾನ ಹೊಂದಿದನು. ಮಹಾಬಾಹುವಾದ ಶ್ರೀರಾಮನೂ, ಲಕ್ಷ್ಮಣನೂ ಆ ಒಡವೆಗಳನ್ನು ಬಾರಿಬಾರಿಗೂ ನೋಡುತ್ತ, ಸುಗ್ರೀವನಿಗೂ ತೋರಿಸಿ ವಿಲಪಿಸುತ್ತ ಕಡೆಗೆ ಅವನ ಕೈಗೇ ಕೊಟ್ಟುಬಿಟ್ಟರು. ಓ ಪೂಜ್ಯಳೇ! ಶ್ರೀರಾಮಮೂರ್ತಿಯು ನಿನ್ನನ್ನು ಅಗಲಿ ನಿನ್ನನ್ನು ಕಾಣದಂದಿನಿಂದ ಮಹಾ ಜ್ವಾಲೆಯಿಂದಾವೃತ

¶ ಇಲ್ಲಿ "ಅಗ್ನಿಪರ್ವತ"ವೆಂದರೆ ಸುಮೇರು ಶಿಖರದಲ್ಲಿರುವ ಒಂದು ಬೆಟ್ಟವೆಂದು ತಿಳಿಯಬೇಕು. ಭಾರತದಲ್ಲಿಯೂ, "ಅತ್ರಮಾಲ್ಯವತಶ್ಶೃಂಗೇ ದೃಶ್ಯತೇ ಹವ್ಯವಾಟ್ಸದಾ । ನಾಮ್ನಾಸಂವರ್ತಕೋನಾಮ ಕಾಲಾಗ್ನಿರ್ಭರತರ್ಷಭ ॥" ಎಂದು ಹೇಳಿದೆ.

§ "ಪರಿಚಾಲ್ಯತೇ" ಗೋ. ಪಾ.

ತಾಪಯಂತಿ ಮಹಾತ್ಮಾನಮಗ್ನ್ಯಗಾರಮಿವಾಗ್ನಯಃ ॥೪೫॥ ತವಾದರ್ಶನ ಶೋಕೇನ ರಾಘವಃ ಪ್ರವಿಚಾಲ್ಯತೇ । ಮಹತಾ ಭೂಮಿಕಂಪೇನ ಮಹಾನಿವ ಶಿಲೋಚ್ಚಯಃ ॥ ೪೬ ॥ ಕಾನನಾನಿ ಸುರಮ್ಯಾಣಿ ನದೀಃ ಪ್ರಸ್ರವಣಾನಿಚ । ಚರನ್ನರತಿಮಾಪ್ನೋತಿ ತ್ವಾಮಪಶ್ಯನ್ನೃಪಾತ್ಮಜೇ! ॥ ೪೭ ॥ ಸತ್ವಾಂ ಮನುಜಶಾರ್ದೂಲಃ ಕ್ಷಿಪ್ರಂ ಪ್ರಾಪ್ಸ್ಯತಿ ರಾಘವಃ । ಸಮಿತ್ರಬಾಂಧವಂ ಹತ್ವಾ ರಾವಣಂ ಜನಕಾತ್ಮಜೇ ! ॥ ೪೮ ॥ ಸಹಿತೌ ರಾಮಸುಗ್ರೀವಾವುಭಾವಕುರುತಾಂ ತದಾ । ಸಮಯಂ ವಾಲಿನಂ ಹಂತುಂ ತವಚಾ

ವ್ಯಸನವು, ಚಿಂತಾಚ - ಆಲೋಚನೆಯು, ತ್ವತ್ಕೃತೇ - ನಿನ್ನನಿಮಿತ್ತವಾಗಿ, ಮಹಾತ್ಮಾನಂ - ಮಹಾನುಭಾವನಾದ, ತಂರಾಘವಂ - ಆ ಶ್ರೀರಾಮನನ್ನು, ಅಗ್ನ್ಯಗಾರಂ - ಅಗ್ನಿಶಾಲೆಯನ್ನು, ಅಗ್ನಯಇವ - ಅಗ್ನಿಗಳಂತೆ, ತಾಪಯಂತಿ - ತಪಿಸುತ್ತವೆ. ॥ ೪೫ ॥ ರಾಘವಃ - ಶ್ರೀರಾಮನು, ತವ - ನನ್ನ, ಅದ....ನ-ಅಗಲುವಿಕೆಯಿಂದುಂಟಾದ ದುಃಖದಿಂದ, ಮಹತಾ-ಮಹತ್ತರವಾದ, ಭೂಮಿಕಂಪೇನ-ಭೂಚಲನೆಯಿಂದ, ಮಹಾ್ - ದೊಡ್ಡದಾದ, ಶಿಲೋಚ್ಚಯಇವ - ಬೆಟ್ಟದಂತೆ, ಪ್ರವಿಚಾಲ್ಯತೇ - ಚಲಿಸಲ್ಪಡುತ್ತಾನೆ. ॥ ೪೬ ॥ ಹೇನೃಪಾತ್ಮಜೇ - ಎಲೌ ಜನಕರಾಜಪುತ್ರಿಯೇ, ತ್ವಾಂ - ನಿನ್ನನ್ನು, ಅಪಶ್ಯ್ - ಕಾಣದಿರುವನಾಗಿ, ಸುರಮ್ಯಾಣಿ - ಮನೋಹರಗಳಾದ, ಕಾನನಾನಿ - ಕಾಡುಗಳಲ್ಲಿಯೂ, ನದೀಃ-ನದಿಗಳಲ್ಲಿಯೂ, ಪ್ರಸ್ರವಣಾನಿಚ-ಬೆಟ್ಟದ ಜೌಗುಭೂಮಿಗಳಲ್ಲಿಯೂ, ಚರ್-ಸಂಚರಿಸುತ್ತಿರುವನಾಗಿ, ರತಿಂ - ಕ್ರೀಡೆಯನ್ನು, ನಾಪ್ನೋತಿ - ಹೊಂದುವದಿಲ್ಲ. ॥ ೪೭ ॥ ಹೇಜನಕಾತ್ಮಜೇ - ಓ ಜನಕರಾಜಪುತ್ರಿಯೇ, ಮನು....ಲಃ - ಮನುಜಶ್ರೇಷ್ಠನಾದ, ಸರಾಘವಃ - ಆ ಶ್ರೀರಾಮನು, ಸಮಿತ್ರಬಾಂಧವಂ - ಸ್ನೇಹಿತರಿಂದಲೂ, ಬಂಧುಗಳಿಂದಲೂ ಕೂಡಿರುವ, ರಾವಣಂ - ರಾವಣನನ್ನು, ಹತ್ವಾ - ಸಂಹರಿಸಿ, ತ್ವಾಂ - ನಿನ್ನನ್ನು, ಪ್ರಾಪ್ಸ್ಯತಿ - ಹೊಂದುವನು. ॥ ೪೮ ॥ ತದಾ - ಆ ಸಖ್ಯಕಾಲದಲ್ಲಿ, ಉಭೌ - ಈರ್ವರಾದ, ಸಹಿತೌ - ಒಡಗೂಡಿರುವ, ರಾಮಸುಗ್ರೀವೌ - ರಾಮಸುಗ್ರೀವರು, ವಾಲಿನಂ - ವಾಲಿಯನ್ನು, ಹಂತುಂ - ಸಂಹರಿಸುವುದಕ್ಕೋಸ್ಕರವೂ, ತವ - ನಿನ್ನ, ಅನ್ವೇಷಣಂಚ - ಹುಡುಕುವಿಕೆಯನ್ನೂ ಕುರಿತು, ಸಮಯಂ - ಪ್ರತಿಜ್ಞೆಯನ್ನು, ಅಕುರುತಾಂ - ಮಾಡಿದರು. ॥ ೪೯ ॥ ತತಃ -

---

ವಾದ ಅಗ್ನಿಪರ್ವತದಂತೆ ಸಂತತವೂ ಸಂತಪಿಸುತ್ತ, ನಿನಗಾಗಿ ಹಗಲಿರಳೂ ನಿದ್ರೆಯಿಲ್ಲದಿರುವುದು, ನಿನ್ನ ವಿರಹದಿಂದುಂಟಾದ ದುಃಖದಿಂದ ಕಂದುವುದು, ಚಿಂತಿಸುವುದು ಈ ಮೂರರಿಂದ ಪಂಚಾಗ್ನಿಗಳಿಂದ ಕೂಡಿದ ಅಗ್ನಿಜ್ವಾಲೆಯಿಂದ ಬೆಂದು ಬೇಗುದಿಗೊಳ್ಳುತ್ತಿರುವನು. ॥೪೧—೪೫॥ ಇಷ್ಟೆಯಲ್ಲದೆ ಆತನು ನಿನ್ನನ್ನಗಲಿದಾಗಿನಿಂದ, ಮಹಾ ವ್ಯಸನಸಂತಪ್ತನಾಗಿ, ಭೂಕಂಪದಿಂದ ಗಡಗಡನೆ ನಡುಗುತ್ತಿರುವ ಮಹಾ ಪರ್ವತದಂತೆ ನಿಲುಗಡೆಯಿಲ್ಲದವನಾಗಿರುವನು. ಎಲೌ ರಾಜಪುತ್ರಿಯೇ! ಶ್ರೀರಾಮಮೂರ್ತಿಯು ನಿನ್ನನ್ನಗಲಿದಂದಿನಿಂದ ರಮಣೀಯವಾದ ಅರಣ್ಯಗಳಲ್ಲಿಯೂ, ನದಿಗಳಲ್ಲಿಯೂ, ಜರಿಗಳಲ್ಲಿಯೂ ನಿನ್ನನ್ನು ಹುಡುಕುತ್ತ ಚಿತ್ತಶಾಂತಿಯನ್ನು ಹೊಂದದವನಾಗಿರುವನು. ಓ ಜಾನಕಿಯೇ! ಪುರುಷೋತ್ತಮನಾದ ಆ ಶ್ರೀರಾಮನು ಬಹು ಜಾಗ್ರತೆಯಾಗಿಯೇ ರಾಕ್ಷಸಾಧಿಪತಿಯಾದ ರಾವಣಾಸುರನನ್ನು, ಬಂಧು ಮಿತ್ರ ಸಮೇತವಾಗಿ ಸಂಹರಿಸಿ ನಿನ್ನನ್ನು ಹೊಂದುವನು. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವು. ಎಲೆ ತಾಯೇ! ಶ್ರೀರಾಮ ಸುಗ್ರೀವರೀರ್ವರೂ ಸಖ್ಯ ಮಾಡಿ

ನ್ವೇಷಣಂ ತಥಾ ॥೪೯॥ ತತಸ್ತಾಭ್ಯಾಂ ಕುಮಾರಾಭ್ಯಾಂ ವೀರಾಭ್ಯಾಂ ಸಹರೀಶ್ವರಃ । ಕಿಷ್ಕಿಂಧಾಂ ಸಮುಪಾಗಮ್ಯ ವಾಲೀ ಯುದ್ಧೇ ನಿಪಾತಿತಃ ॥ ೫೦ ॥ ತತೋ ನಿಹತ್ಯ ತರಸಾ ರಾಮೋ ವಾಲಿನಮಾಹವೇ । ಸರ್ವರ್ಕ್ಷಹರಿಸಂಘಾನಾಂ ಸುಗ್ರೀವಮಕರೋತ್ಪತಿಂ ॥ ೫೧ ॥ ¶ ರಾಮಸುಗ್ರೀವಯೋರೈಕ್ಯಂ ದೇವ್ಯೇವಂ ಸಮಜಾಯತ । ಹನುಮಂತಂಚ ‡ ಮಾಂ ವಿದ್ಧಿ ತಯೋರ್ದೂತಮಿಹಾಗತಂ ॥೫೨॥ * ಸ್ವರಾಜ್ಯಂ ಪ್ರಾಪ್ಯ ಸುಗ್ರೀವ ☋ ಸ್ಸಮಾನೀಯ ಹರೀಶ್ವರಾನ್ । ತ್ವದರ್ಥಂ ಪ್ರೇಷಯಾಮಾಸ ದಿಶೋ ದಶ

ಬಳಿಕ, ಸಹರೀಶ್ವರಃ - ಆ ಸುಗ್ರೀವನು, ವೀರಾಭ್ಯಾಂ - ಶೂರರಾದ, ತಾಭ್ಯಾಂಕುಮಾರಾಭ್ಯಾಂ - ಆ ರಾಮಲಕ್ಷ್ಮಣರೊಡನೆ, ಕಿಷ್ಕಿಂಧಾಂ - ಕಿಷ್ಕಿಂಧಾಪಟ್ಟಣವನ್ನು ಕುರಿತು, ಸಮುಪಾಗಮ್ಯ - ಬಂದು, ವಾಲೀ - ವಾಲಿಯು, ಯುದ್ಧೇ - ಕಾಳಗದಲ್ಲಿ, ನಿಪಾತಿತಃ - ಬೀಳಿಸಲ್ಪಟ್ಟನು ॥ ೫೦ ॥ ತತಃ - ಬಳಿಕ, ರಾಮಃ - ಶ್ರೀರಾಮನು, ತರಸಾ - ಬಲಾತ್ಕಾರದಿಂದ, ಆಹವೇ - ಯುದ್ಧದಲ್ಲಿ, ವಾಲಿನಂ - ವಾಲಿಯನ್ನು, ನಿಹತ್ಯ - ಸಂಹರಿಸಿ, ಸರ್ವ....ನಾಂ - ಸಮಸ್ತರಾದ ಕರಡಿಗಳ, ಕಪಿಗಳ, ಸಮೂಹಗಳಿಗೆ, ಸುಗ್ರೀವಂ - ಸುಗ್ರೀವನನ್ನು, ಪತಿಂ - ದೊರೆಯನ್ನಾಗಿ, ಅಕರೋತ್ - ಮಾಡಿದನು. ॥ ೫೧ ॥ ರಾಮಸುಗ್ರೀವಯೋಃ - ರಾಮಸುಗ್ರೀವರ, ಐಕ್ಯಂ - ಸೇರುವಿಕೆಯು, ಏವಂ - ಈ ಪ್ರಕಾರವಾಗಿ, ಸಮಜಾಯತ - ಹುಟ್ಟಿತು, ಹೇ ದೇವಿ - ಎಲೌ ಸೀತಾದೇವಿಯೆ, ಹನುಮಂತಂ - ಹನುಮಂತನೆಂಬ, ಮಾಂಚ - ನನ್ನನ್ನೂ, ತಯೋಃ - ಅವರಿಗೆ, ದೂತಂ - ದೂತನಾಗಿ, ಇಹ - ಇಲ್ಲಿಗೆ, ಆಗತಂ - ಬಂದವನನ್ನಾಗಿ, ವಿದ್ಧಿ - ತಿಳಿದುಕೊ. ॥ ೫೨ ॥ ಸುಗ್ರೀವಃ - ಸುಗ್ರೀವನು, ಸ್ವರಾಜ್ಯಂ - ತನ್ನ ಕಪಿರಾಜ್ಯವನ್ನು, ಪ್ರಾಪ್ಯ-ಹೊಂದಿ, ಮಹಾಬಲಾನ್-ಅತಿಬಲಾಢ್ಯರಾದ, ಹರೀಶ್ವರಾನ್-ಕಪಿನಾಯಕರನ್ನು,

---

ಕೊಳ್ಳುವಾಗ, ಶ್ರೀರಾಮನು ವಾಲಿಯನ್ನು ಕೊಂದು ಸುಗ್ರೀವನಿಗೆ ವಾನರ ರಾಜ್ಯಾಧಿಪತ್ಯವನ್ನು ಕೊಡುವುದಾಗಿಯೂ, ಅದಕ್ಕೆ ಬದಲಾಗಿ ಸುಗ್ರೀವನು ನಿನ್ನನ್ನು ಹುಡುಕುವುದಾಗಿಯೂ ಪ್ರತಿಜ್ಞೆ ಮಾಡಿರುವರು. ಆ ಬಳಿಕ ಶ್ರೀರಾಮ ಸುಗ್ರೀವರಿಬ್ಬರೂ ಕಿಷ್ಕಿಂಧಾಪಟ್ಟಣಕ್ಕೆ ಹೋದರು. ಆಗ ಶ್ರೀರಾಮನು ವಾನರಾಧಿಪತಿಯಾದ ವಾಲಿಯನ್ನು ಯುದ್ಧದಲ್ಲಿ ಸಂಹರಿಸಿ, ಸಮಸ್ತ ವಾನರ ಸಮೂಹಗಳಿಗೂ, ಭಲ್ಲೂಕ ಸಮೂಹಗಳಿಗೂ ಸುಗ್ರೀವನನ್ನು ಅಧಿಪತಿಯನ್ನಾಗಿ ಮಾಡಿದನು. ॥ ೪೬–೫೧ ॥ ದೇವಿ ! ಈ ರೀತಿ ಶ್ರೀರಾಮ ಸುಗ್ರೀವರೀರ್ವರಿಗೂ ಸಖ್ಯವುಂಟಾಯಿತು. ನಾನು ಆ ಶ್ರೀರಾಮ ಸುಗ್ರೀವರಿಬ್ಬರಿಗೂ ದೂತನು. ನನ್ನ ಹೆಸರು ಹನುಮಂತನು. ನಿನ್ನನ್ನು ಹುಡುಕುವುದಕ್ಕಾಗಿ ಇಲ್ಲಿಗೈತಂದೆನು. ಅಲ್ಲದೆ ಸುಗ್ರೀವನು

¶ ಈ ಶ್ಲೋಕಕ್ಕೆ ಮುನ್ನುಡಿ:—ಹಿಂದೆ ಸೀತಾದೇವಿಯು ಆಂಜನೇಯನನ್ನು ಕುರಿತು, "ಅಯ್ಯಾ ವಾನರನೇ! ನರವಾನರರಿಗೆ ಸಮಾಗಮವೆಂತಾಯಿತು ? ಸಖ್ಯವು ಹೇಗೆ ? ವಾನರರೆಂದರೆ ಎಡಗೈಬಲಗೈಗಳ ತಾರತಮ್ಯಜ್ಞಾನವಿಲ್ಲದವರು. ಕೇವಲ ಪಾಮರರು, ತಿರ್ಯಗ್ಜಂತುಗಳು. ನರವರರಾದ ಶ್ರೀರಾಮಲಕ್ಷ್ಮಣರಾದರೋ ಮಹಾತ್ಮನಾದ ವಸಿಷ್ಠ ಮುನಿಪುಂಗವನ ಶಿಷ್ಯರು ; ಪ್ರಸಿದ್ಧವಾದ, ಆಚಾರಸಂಪನ್ನವಾದ ಇಕ್ಷ್ವಾಕುವಂಶಪ್ರಸೂತರು. ಇವರಿಗೂ, ಆ ವಾನರರಿಗೂ ಸಖ್ಯವು ಹೇಗಾಯಿತು" ಎಂದು ಪ್ರಶ್ನಿಸಿರುವಳು. ಅದಕ್ಕೆ ಆಂಜನೇಯನ ಉತ್ತರವಿದು, " ಅಂತು ಅವರೀರ್ವರಿಗೂ ಹೀಗೆ ಸಮಾಗಮವುಂಟಾದುದನ್ನು ನಾನು ಕಂಡೆನು. ಯೋಗ್ಯತಾಯೋಗ್ಯತೆಗಳೇನೆಂಬುದನ್ನು ನಾನರಿಯೆನು.' (ಗೋ)

‡ " ದೇವಿ " ಗೋ. ಪಾ. * " ಸ್ವಂ " ತಿ. ಪಾ. ☋ " ಸ್ಥಾನಾನೀಯ ಮಹಾಕಪೀನ್ " ಕ. ತಿ. ಪಾ.

ಮಹಾಬಲಾನ್ ॥ ೫೩ ॥ ಆದಿಷ್ಟಾ ವಾನರೇಂದ್ರೇಣ ಸುಗ್ರೀವೇಣ ಮಹೌಜಸಾ ।
ಅದ್ರಿರಾಜಪ್ರತೀಕಾಶಾ ಸ್ಸರ್ವತಃ ಪ್ರಸ್ಥಿತಾ ಮಹೀಂ ॥ ೫೪ ॥ ತತಸ್ತೇ ಮಾರ್ಗ
ಮಾಣಾ ವೈ ಸುಗ್ರೀವವಚನಾತುರಾಃ । ಚರಂತಿ ವಸುಧಾಂ ಕೃತ್ಸ್ನಾಂ ವಯಮನ್ಯೇಚ
ವಾನರಾಃ ॥ ೫೫ ॥ ಅಂಗದೋ ನಾಮ ಲಕ್ಷ್ಮೀವಾನ್ ವಾಲಿಸೂನುರ್ಮಹಾಬಲಃ ।
ಪ್ರಸ್ಥಿತಃ ಕಪಿಶಾರ್ದೂಲಸ್ತ್ರಿಭಾಗಬಲಸಂವೃತಃ ॥ ೫೬ ॥ ತೇಷಾಂ ನೋ ವಿಪ್ರಣ
ಷ್ಟಾನಾಂ ವಿಂಧ್ಯೇ ಪರ್ವತಸತ್ತಮೇ । ಕ್ಷುಧಿತಾನಾಂ ನಿರಾಶಾನಾಂ ಬಿಲೇ ತಸ್ಮಿಂ
ಶ್ಚಿದಾಸತಾಂ । ಭೃಶಂ ಶೋಕಪರೀತಾನಾಮಹೋರಾತ್ರಗಣಾಗತಾಃ ॥ ೫೭ ॥

ಸಮಾನೀಯ - ಕರೆಯಿಸಿ, ದಶದಿಶಃ - ಹತ್ತುದಿಕ್ಕುಗಳಿಗೂ, ತ್ವದರ್ಥಂ - ನಿನಿಗೋಸುಗ, ಪ್ರೇಷಯಾ ಮಾಸ - ಕಳುಹಿದನು. ॥ ೫೩ ॥ ಮಹೌಜಸಾ - ಮಹಾತೇಜಸ್ವಿಯಾದ, ವಾನರೇಂದ್ರಣ - ಕಪಿ ರಾಜನಾದ, ಸುಗ್ರೀವೇಣ - ಸುಗ್ರೀವನಿಂದ, ಆದಿಷ್ಟಾಃ - ಆಜ್ಞಾಪಿಸಲ್ಪಟ್ಟ, ಅದ್ರಿ....ಶಾಃ - ಪರ್ವತ ಶ್ರೇಷ್ಠಗಳಿಗೆ, ಸಮಾನರಾದ ಕಪಿಗಳು, ಸರ್ವತಃ - ಎಲ್ಲಾ ಕಡೆಗಳಲ್ಲಿಯೂ, ಮಹೀಂ - ಭೂಮಿಯಲ್ಲಿ, ಪ್ರಸ್ಥಿತಾಃ - ಹೊರಟರು. ॥ ೫೪ ॥ ತತಃ - ಬಳಿಕ, ಸುಗ್ರೀ....ರಾಃ - ಸುಗ್ರೀವನ ಮಾತಿನಲ್ಲಿ ಜಾಗರೂಕರಾದಕಾರಣ, ಮಾರ್ಗಮಾಣಾಃ - ಹುಡುಕುತ್ತಿರುವ, ವಯಂ - ನಾವೂ, ಅನ್ಯೇ - ಇತರ ರಾದ, ವಾನರಾಶ್ಚ-ಕಪಿಗಳೂ, ವಸುಧಾಂಕೃತ್ಸ್ನಾಂ-ಭೂಮಿಯಲ್ಲೆಲ್ಲಾ, ಚರಂತಿ-ಸಂಚರಿಸುತ್ತಿದ್ದಾರೆ. ॥ ೫೫ ॥ ಮಹಾಬಲಃ-ಮಹಾಪರಾಕ್ರಮಿಯಾದ, ಲಕ್ಷ್ಮೀವಾನ್-ಕಾಂತಿಯುಕ್ತನಾದ, ವಾಲಿಸೂನುಃ- ವಾಲಿಯಮಗನಾದ, ಅಂಗದೋನಾಮ - ಅಂಗದನೆಂದು ಪ್ರಸಿದ್ಧನಾದ, ಕಪಿಶಾರ್ದೂಲಃ - ವಾನರ ಶ್ರೇಷ್ಠನು, ತ್ರಿಭಾ....ತಃ - ಮೂರುಪಾಲು ಸೇನೆಯಿಂದ ಕೂಡಿರುವನಾಗಿ, ಪ್ರಸ್ಥಿತಃ - ಹೊರಟನು. ॥ ೫೬ ॥ ಪರ್ವತಸತ್ತಮೇ - ಪರ್ವತಶ್ರೇಷ್ಠವಾದ, ವಿಂಧ್ಯೇ - ವಿಂಧ್ಯಪರ್ವತದಲ್ಲಿ, ವಿಪ್ರಣಷ್ಟಾನಾಂ - ದಾರಿತಪ್ಪಿ ಬಿಲವನ್ನು ಹೊಕ್ಕ, ಅಥವಾ ಬಿಲದಲ್ಲಿ ಆದರ್ಶನವನ್ನು ಹೊಂದಿದವರಾದಕಾರಣ, ಭೃಶಂ - ಬಹಳವಾಗಿ, ಶೋ....ನಾಂ-ವ್ಯಸನಾಕ್ರಾಂತರಾದ, ತೇಷಾಂನಃ-ಅಂತಹ ನಮಗೆ, ಅಹೋರಾತ್ರಗಣಾಃ- ಹಗಲುರಾತ್ರಿಗಳು, (ಅಂದರೆ ಸುಗ್ರೀವನಿಂದ ಕೊಡಲ್ಪಟ್ಟ ಗಡುವಿನ ಕಾಲವು) ಗತಾಃ - ಕಳೆದು ಹೋದವು. ॥ ೫೭ ॥ ತೇವಯಂ - ಆ ನಾವು, ಕಾರ್ಯನೈರಾಶ್ಯಾತ್ - ಕೆಲಸದ ನಿರಾಶೆಯಿಂದಲೂ, ಕಾಲಸ್ಯ - ಸಮಯಬಂಧದ, ಅತಿಕ್ರಮೇಣಚ - ಮೀರಿಹೋಗುವಿಕೆಯಿಂದಲೂ, ಕಪಿರಾಜಸ್ಯ -

---

ತನ್ನ ರಾಜ್ಯವನ್ನು ಪಡೆದೊಡನೆಯೇ, ಮಹಾ ಬಲಪರಾಕ್ರಮಶಾಲಿಗಳಾದ ವಾನರ ನಾಯಕರನ್ನು ಕರೆಯಿಸಿ ನಿನ್ನನ್ನು ಹುಡುಕುವುದಕ್ಕಾಗಿ ದಶದಿಶೆಗಳಿಗೂ ಕಳುಹಿಸಿದನು. ಆ ವಾನರಯೂಥಪತಿಗಳು ಪ್ರಭುವಾದ ಸುಗ್ರೀವನಾಜ್ಞೆಯಂತೆ ಭೂಮಿಯಲ್ಲೆಲ್ಲಾ ನಿನ್ನನ್ನು ಹುಡುಕುತ್ತಿದ್ದಾರೆ. ॥ ೫೨–೫೫ ॥ ಹೀಗೆ ಹೊರಟ ವಾನರರಲ್ಲಿ ವಾಲಿಯ ಮಗನೂ, ಮಹಾ ಬಲಪರಾಕ್ರಮವಂತನೂ, ಸಂಪದ್ಯುಕ್ತನೂ, ವಾನರೋತ್ತಮನೂ ಆದ ಅಂಗದಕುಮಾರನು ಮೂರುಪಾಲು ಸೈನ್ಯದಿಂದ ಸಮೇತನಾಗಿ ಹೊರಟನು. ಹೀಗೆ ಅಂಗದನನ್ನು ಸೇನಾಧಿಪತಿಯನ್ನಾಗಿ ಮಾಡಿಕೊಂಡು ಹೊರಟ ನಾವೆಲ್ಲರೂ ವಿಂಧ್ಯ ಪರ್ವತವನ್ನು ಪ್ರವೇಶಿಸಿ ಅಲ್ಲಿ ದಾರಿತಿಳಿಯದೆ ಆಯಾಸಪಟ್ಟು ಅನೇಕ ದಿವಸಗಳನ್ನು ಕಳೆದೆವು. ಹೀಗೆ ಅನೇಕ ದಿನಗಳು ಕಳೆದುಹೋದುದರಿಂದ ಸುಗ್ರೀವನು ನಿರ್ಣಯಿಸಿ ಹೇಳಿದ್ದ ಗಡುವು ಮೀರಿಹೋಗುತ್ತಿರುವುದನ್ನು ನೋಡಿ, ವಾನರೇಶ್ವರನಾದ ಆತನ ಭಯ

ತೇವಯಂ ಕಾರ್ಯನೈರಾಶ್ಯಾತ್ಕಾಲಸ್ಯಾತಿಕ್ರಮೇಣಚ । ಭಯಾಚ್ಚ ಕಪಿರಾಜಸ್ಯ ಪ್ರಾಣಾಂಸ್ತ್ಯಕ್ತುಂ ವ್ಯವಸ್ಥಿತಾಃ ॥೫೮॥ ವಿಚಿತ್ಯ ವನದುರ್ಗಾಣಿ ಗಿರಿಪ್ರಸ್ರವಣಾನಿಚ । ಅನಾಸಾದ್ಯ ಪದಂ ದೇವ್ಯಾಃ ಪ್ರಾಣಾಂಸ್ತ್ಯಕ್ತುಂ ಸಮುದ್ಯತಾಃ ॥ ೫೯ ॥ ದೃಷ್ಟ್ವಾ ಪ್ರಾಯೋಪವಿಷ್ಟಾಂಶ್ಚ ಸರ್ವಾನ್ವಾನರಪುಂಗವಾನ್ । ಭೃಶಂ ಶೋಕಾರ್ಣವೇ ಮಗ್ನಃ ಪರ್ಯದೇವಯದಂಗದಃ ॥ ೬೦ ॥ ತವ ನಾಶಂಚ ವೈದೇಹಿ! ವಾಲಿನಶ್ಚ ವಧಂ ತಥಾ । ಪ್ರಾಯೋಪವೇಶಮಸ್ಮಾಕಂ ಮರಣಂಚ ಜಟಾಯುಷಃ ॥ ೬೧ ॥ ತೇಷಾಂ ನಸ್ಸ್ವಾಮಿಸಂದೇಶಾನ್ನಿರಾಶಾನಾಂ ಮುಮೂರ್ಷತಾಂ । ಕಾರ್ಯಹೇತೋರಿವಾಯಾತ

ಸುಗ್ರೀವನದೆಸೆಯಿಂದುಂಟಾದ, ಭಯಾಚ್ಚ - ಭೀತಿಯಿಂದಲೂ, ಪ್ರಾಣಾನ್ - ಜೀವಗಳನ್ನು, ತ್ಯಕ್ತುಂ - ಬಿಡುವದಕ್ಕೆ, ವ್ಯವಸ್ಥಿತಾಃ - ನಿಶ್ಚಯಿಸಿಕೊಂಡೆವು. ॥ ೫೮ ॥ ವನದುರ್ಗಾಣಿ - ತೋಪುಗಳನ್ನೂ ಕಷ್ಟಸಾಧ್ಯವಾದ ಕಾಡುಗಳನ್ನೂ, ಗಿರಿ....ಚ - ಪರ್ವತಗಳನ್ನು ಬೆಟ್ಟದ ಜೌಗುಭೂಮಿಗಳನ್ನು ಸಹ, ವಿಚಿತ್ಯ - ಹುಡುಕಿ, ದೇವ್ಯಾಃ - ತಾಯಿಯಾದ ನಿನ್ನ, ಪದಂ - ಸ್ಥಾನವನ್ನು, ಅನಾಸಾದ್ಯ - ಹೊಂದದೆ, ಪ್ರಾಣಾನ್ - ಜೀವಗಳನ್ನು, ತ್ಯಕ್ತುಂ - ಬಿಡುವುದಕ್ಕೋಸ್ಕರ, ಸಮುದ್ಯತಾಃ - ಯತ್ನಿಸಿದೆವು. ॥ ೫೯ ॥ ಹೇ ವೈದೇಹಿ - ಓ ಸೀತಾದೇವಿಯೇ, ಅಂಗದಃ - ಅಂಗದನು, ಪ್ರಾಯೋಪವಿಷ್ಟಾನ್ - ಅನ್ನಾಹಾರಗಳನ್ನು ತ್ಯಜಿಸಿರುವ, ಸರ್ವಾನ್ - ಸಮಸ್ತರಾದ, ವಾನರಪುಂಗವಾಂಶ್ಚ - ಕಪಿಶ್ರೇಷ್ಠರನ್ನು ಸಹ, ದೃಷ್ಟ್ವಾ - ಕಂಡು, ಭೃಶಂ - ಬಹಳವಾಗಿ, ಶೋಕಾರ್ಣವೇ - ದುಃಖಸಮುದ್ರದಲ್ಲಿ, ಮಗ್ನಃ - ಮುಳುಗಿದವನಾಗಿ, ತವ - ನಿನ್ನ, ನಾಶಂಚ - ಅಗಲುವಿಕೆಯನ್ನು, ವಾಲಿನಃ - ವಾಲಿಯ, ವಧಂಚ - ಸಂಹಾರವನ್ನೂ, ತಥಾ - ಹಾಗೆಯೇ ಅಸ್ಮಾಕಂ - ನಮ್ಮ. ಪ್ರಾಯೋಪವೇಶಂ - ಪ್ರಾಯೋಪವೇಶವನ್ನೂ, ಜಟಾಯುಷಃ - ಜಟಾಯುವಿನ, ಮರಣಂಚ - ಸಂಹಾರವನ್ನು ಕುರಿತು, ಪರ್ಯದೇವಯತ್ - ವರ್ಣಿಸಿಕೊಂಡು ಹಂಬಲಿಸುತ್ತಿದ್ದನು. ॥ ೬೦-೬೧ ॥ ಸ್ವಾಮಿಸಂದೇಶಾತ್ - ನಮ್ಮೊಡೆಯನಾದ ಸುಗ್ರೀವನಾಜ್ಞೆಯಿಂದ, ನಿರಾಶಾನಾಂ-ಜೀವಿತದಲ್ಲಿ ಆಶೆಯಿಲ್ಲದಿರುವರಾದಕಾರಣ, ಮುಮೂರ್ಷತಾಂ-

---

ದಿಂದ ನಾವೆಲ್ಲರೂ ಪ್ರಾಣಗಳನ್ನು ತೊರೆಯುವುದಕ್ಕೆ ನಿಶ್ಚಯಿಸಿಕೊಂಡೆವು. ಇಷ್ಟುಮಾತ್ರವಲ್ಲದೆ ದುಷ್ಪ್ರವೇಶ್ಯವಾದ ಅರಣ್ಯ ಪ್ರದೇಶಗಳಲ್ಲಿಯೂ, ನದಿಗಳಲ್ಲಿಯೂ, ಜರಿಗಳಲ್ಲಿಯೂ ನಿನ್ನನ್ನು ಹುಡುಕಿ ಹುಡುಕಿ ಬೇಸತ್ತೆವು. ಇಷ್ಟಾದರೂ ನೀನು ಸಿಕ್ಕದಿದ್ದುದರಿಂದ ನಾವೆಲ್ಲರೂ ಪ್ರಾಯೋಪವಿಷ್ಟರಾಗಿ ಪ್ರಾಣಗಳನ್ನು ತೊರೆಯಲು ನಿಶ್ಚಯಿಸಿಕೊಂಡೆವು. ಎಲೌ ಸೀತಾದೇವಿಯೇ! ಹೀಗೆ ಸರ್ವಸಂಗ ಪರಿತ್ಯಾಗವನ್ನು ಮಾಡಿ ದೇಹದಿಂದ ಪ್ರಾಣಗಳ ಹೊರಟು ಹೋಗುವವರೆಗೂ ಅನ್ನಾಹಾರಾದಿಗಳನ್ನು ವರ್ಜಿಸುವುದೆಂಬ ವ್ರತರೂಪ ಪ್ರಾಯೋಪವೇಶವನ್ನು ಮಾಡಿರುವ ಎಲ್ಲ ವಾನರರನ್ನೂ ನೋಡಿ, ಯುವರಾಜನಾದ ಅಂಗದ ಕುಮಾರನು ವ್ಯಸನಸಮುದ್ರದಲ್ಲಿ ಮುಳುಗಿದವನಾಗಿ ನೀನು ದೊರಕದಿರುವುದನ್ನೂ, ನಾವೆಲ್ಲರೂ ಪ್ರಯೋಪವಿಷ್ಟರಾಗಿರುವುದನ್ನೂ, ವಾಲಿಯು ಸಂಹೃತನಾದುದನ್ನೂ, ರಾವಣನಿಂದ ಜಟಾಯುವು ಮೃತನಾದುದನ್ನೂ ಇವೇ ಮೊದಲಾದ ಕಷ್ಟಗಳೆಲ್ಲವನ್ನೂ ನೆನೆದುಕೊಂಡು ದುಃಖಿಸುತ್ತಿದ್ದನು. ॥ ೫೬-೬೧ ॥ ಹೀಗೆ ಸುಗ್ರೀವರಾಜನು ಮೊದಲು ನಿರ್ಣಯಿಸಿದ ಸಮಯವು ಮೀರಿದಂತೆ ತೋರಿದುದರಿಂದ ನಾವೆಲ್ಲರೂ ಪ್ರಾಣಗಳ ಮೇಲಣ ಆಶೆಯನ್ನು

ಶ್ಶಕುನಿರ್ವೀರ್ಯವಾನ್ ಮಹಾನ್ ॥ ೬೨ ॥ ಗೃಧ್ರರಾಜಸ್ಯ ಸೋದರ್ಯಃ ಸಂಪಾತಿ ರ್ನಾಮ ಗೃಧ್ರರಾಟ್ । ಶ್ರುತ್ವಾ ಭ್ರಾತೃವಧಂ ಕೋಪಾದಿದಂ ವಚನಮಬ್ರವೀತ್ ॥ ೬೩ ॥ "ಯವೀಯಾನ್ ಕೇನ ಮೇ ಭ್ರಾತಾ ಹತಃ ಕ್ವಚ ನಿಪಾತಿತಃ । ಏತದಾಖ್ಯಾತು ಮಿಚ್ಛಾಮಿ ಭವದ್ಭಿರ್ವಾನರೋತ್ತಮಾಃ" ॥ ೬೪ ॥ ಅಂಗದೋ ಕಥಯತ್ತಸ್ಯ ಜನಸ್ಥಾನೇ ಮಹದ್ವಧಂ । ರಕ್ಷಸಾ ಭೀಮರೂಪೇಣ ತ್ವಾಮುದ್ದಿಶ್ಯ ಯಥಾತಥಂ ॥ ೬೫ ॥ ಜಟಾ ಯುಷಶ್ಚ ಸಂಪಾತಿ ರ್ವಧಂ ಶ್ರುತ್ವಾತಿದುಃಖಿತಃ । ತ್ವಾಮಾಚಷ್ಟ ವರಾರೋಹೇ

ಸಾಯಲಿಚ್ಛಿಸಿದ, ತೇಷಾಂನಃ-ಆ ನಮಗೆ, ಕಾರ್ಯಹೇತೋರಿವ-ಕಾರ್ಯಕಾರಣದ ಸಂಯೋಗದಿಂದ ಲೆಂಬಂತೆ, ವೀರ್ಯವಾನ್ - ಪರಾಕ್ರಮಿಯಾದ, ಮಹಾನ್ - ದೊಡ್ಡದಾದ, ಶಕುನಿಃ - ಪಕ್ಷಿಯು, ಆಯಾತಃ - ಬಂದಿತು. ॥ ೬೨ ॥ ಗೃಧ್ರರಾಜಸ್ಯ - ಹದ್ದುಗಳಿಗೊಡೆಯನಾದ ಜಟಾಯುವಿಗೆ, ಸೋದರ್ಯಃ - ಅಣ್ಣನಾದ, ಸಂಪಾತಿರ್ನಾಮ - ಸಂಪಾತಿ ಎಂದು ಪ್ರಸಿದ್ಧನಾದ, ಗೃಧ್ರರಾಟ್ - ಗೃಧ್ರರಾಜನು, ಭ್ರಾತೃವಧಂ-ತಮ್ಮನ ಮರಣವನ್ನು, ಶ್ರುತ್ವಾ-ಕೇಳಿ, ಕೋಪಾತ್-ಕೋಪದಿಂದ, ಇದಂವಚನಂ - ಈ ಮಾತನ್ನು, ಅಬ್ರವೀತ್ - ಹೇಳಿದನು. ॥ ೬೩ ॥ ಹೇ ವಾನರೋತ್ತಮಾಃ - ಎಲೈ ವಾನರಶ್ರೇಷ್ಠರೇ, ಯವೀಯಾನ್ - ಕಿರಿಯನಾದ, ಮೇಭ್ರಾತಾ - ನನ್ನ ತಮ್ಮನು, ಕೇನ - ಯಾವ ನಿಂದ, ಹತಃ - ಸಂಹರಿಸಲ್ಪಟ್ಟನು, ಕ್ವಚ - ಎಲ್ಲಿ, ನಿಪಾತಿತಃ - ಬೀಳಿಸಲ್ಪಟ್ಟನು, ಏತತ್ - ಇದನ್ನು, ಭವದ್ಭಿಃ - ನಿಮ್ಮಗಳಿಂದ, ಆಖ್ಯಾತುಂ - ಹೇಳುವುದಕ್ಕೆ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೬೪ ॥ ಅಂಗದಃ - ಅಂಗದನು, ತ್ವಾಮುದ್ದಿಶ್ಯ - ನಿನ್ನನ್ನುದ್ದೇಶಿಸಿ, ಜನಸ್ಥಾನೇ - ಪಂಚವಟೀತೀರದಲ್ಲಿ, ಭೀಮರೂಪೇಣ-ಭಯಂಕರರೂಪವುಳ್ಳ, ರಕ್ಷಸಾ-ರಕ್ಕಸನಾದ ರಾವಣನಿಂದ, (ಕೃತಂ-ಮಾಡಲ್ಪಟ್ಟ) ತಸ್ಯ - ಆ ಜಟಾಯುವಿನ, ಮಹದ್ವಧಂ - ಮಹಾಮರಣವನ್ನು, ಯಥಾ ತಥಂ - ನಡೆದಹಾಗೆ, ಅಕಥ ಯತ್ - ಹೇಳಿದನು. ॥ ೬೫ ॥ ಹೇ ವರಾರೋಹೇ - ಓ ಉತ್ತಮಾಂಗನೆಯೇ, ಜಟಾಯುಷಃ - ಜಟಾಯುವಿನ, ವಧಂ - ಸಂಹಾರವನ್ನು, ಶ್ರುತ್ವಾ - ಕೇಳಿ, ದುಃಖಿತಃ - ದುಃಖಾಕ್ರಾಂತನಾದ, ಅರುಣಾತ್ಮಜಃ-ಅರುಣಪುತ್ರನಾದ, ಸಃ-ಆ ಸಂಪಾತಿಯು, ರಾವಣಾಲಯೇ-ರಾವಣನ ಮನೆಯಲ್ಲಿ,

---

ತೊರೆದು ಪ್ರಾಯೋಪವೇಶನವ್ರತದಿಂದ ಸಾಯಲು ಸಿದ್ಧರಾಗಿರಲು, ನಮ್ಮ ಕಾರ್ಯಸಿದ್ಧಿ ಗಾಗಿಯೋ ಎಂಬಂತೆ ಮಹಾ ಪರಾಕ್ರಮಶಾಲಿಯೂ, ಮಹಾ ಪೂಜ್ಯನೂ ಆದ ಸಂಪಾತಿ ಯೆಂಬ ಗೃಧ್ರರಾಜನು ನಾವಿದ್ದ ಸ್ಥಳಕ್ಕೆ ಬಂದನು. ಅವನು ರಾವಣಾಸುರನಿಂದ ಹತನಾದ ಜಟಾಯುವಿನ ಸೋದರನು. ಅವನು ತನ್ನ ಸೋದರನು ರಾವಣನಿಂದ ಹತನಾದ ವೃತ್ತಾಂತ ವನ್ನು ನಮ್ಮಿಂದ ಕೇಳಿ ಮಹಾ ಕೋಪಾವಿಷ್ಟನಾಗಿ, " ಎಲೈ ವಾನರಶ್ರೇಷ್ಠರೇ ! ನನ್ನ ತಮ್ಮ ನಾದ ಜಟಾಯುವನ್ನು ಕೊಂದವನಾರು ? ಅವನು ಯಾವ ಪ್ರದೇಶದಲ್ಲಿ ಮಡಿದನು ? ಈ ವಿಷಯಗಳೆಲ್ಲವನ್ನೂ ವಿಸ್ತಾರವಾಗಿ ಹೇಳಿರಿ" ಎಂದು ಕೇಳಿದನು. ಆಗ ಅಂಗದನು ಆ ಸಂಪಾತಿಯನ್ನು ನೋಡಿ, "ಎಲೈ ಸಂಪಾತಿಯೇ ! ನಿನ್ನ ತಮ್ಮನಾದ ಜಟಾಯುವು ಜನಸ್ಥಾನ ದಲ್ಲಿ ಸೀತಾನಿಮಿತ್ತವಾಗಿ ರಾವಣಾಸುರನಿಂದ ಅತಿಕ್ರೂರವಾಗಿ ಸಂಹರಿಸಲ್ಪಟ್ಟನು." ಎಂದು ಹೇಳಿದನು. ಎಲೌ ದೇವಿಯೇ ! ಅರುಣಕುಮಾರನಾದ ಆ ಸಂಪಾತಿಯು ತನ್ನ ತಮ್ಮನಾದ ಜಟಾಯುವು, ರಾವಣಾಸುರನಿಂದ ಮೃತನಾದುದನ್ನು ಕೇಳಿ ಪರಮ ದುಃಖಿತನಾಗಿ ನೀನು

ವಸಂತೀಂ ರಾವಣಾಲಯೇ ‖ ೬೬ ‖ ತಸ್ಯ ತದ್ವಚನಂ ಶ್ರುತ್ವಾ ಸಂಪಾತೇಃ ಪ್ರೀತಿವರ್ಧನಂ । ಅಂಗದಪ್ರಮುಖಾಸ್ತೂರ್ಣಂ ತತಸ್ಸಂಪ್ರಸ್ಥಿತಾ ವಯಂ ‖ ೬೭ ‖ ವಿಂಧ್ಯಾದುತ್ಥಾಯ ಸಂಪ್ರಾಪ್ತಾಸ್ಸಾಗರಸ್ಯಾಂತಮುತ್ತರಂ । ತ್ವದ್ದರ್ಶನಕೃತೋತ್ಸಾಹಾ ಹೃಷ್ಟಾಸ್ತುಷ್ಟಾಃ ಪ್ಲವಂಗಮಾಃ ‖ ೬೮ ‖ ಅಂಗದಪ್ರಮುಖಾಸ್ಸರ್ವೇ ವೇಲೋಪಾಂತಮುಪಸ್ಥಿತಾಃ । ಚಿಂತಾಂ ಜಗ್ಮುಃ ಪುನರ್ಭೀತಾಸ್ತ್ವದ್ದರ್ಶನಸಮುತ್ಸುಕಾಃ ‖೬೯‖ ಅಥಾಹಂ ಹರಿಸೈನ್ಯಸ್ಯ ಸಾಗರಂ ಪ್ರೇಕ್ಷ್ಯ ಸೀದತಃ । ವ್ಯವಧೂಯ ಭಯಂ ತೀವ್ರಂ ಯೋಜನಾನಾಂ ಶತಂ ಪ್ಲುತಃ ‖ ೭೦ ‖ ಲಂಕಾ ಚಾಪಿ ಮಯಾ

ತ್ವಾಂ - ನಿನ್ನನ್ನು, ವಸಂತೀಂ - ಇರುವವಳನ್ನಾಗಿ, ಶಶಂಸ - ಹೇಳಿದನು. ‖ ೬೬ ‖ ತಸ್ಯಸಂಪಾತೇಃ ಆ ಸಂಪಾತಿಯ, ಪ್ರೀತಿವರ್ಧನಂ - ಸಂತೋಷವನ್ನು ವೃದ್ಧಿಮಾಡುತ್ತಿರುವ, ತದ್ವಚನಂ - ಆ ವಾಕ್ಯವನ್ನು, ಶ್ರುತ್ವಾ - ಕೇಳಿ, ತತಃ - ಬಳಿಕ, ಅಂಗದಪ್ರಮುಖಾಃ - ಅಂಗದನೇ ಮೊದಲಾದ, ವಯಂ - ನಾವು, ಸಂಪ್ರಸ್ಥಿತಾಃ - ಹೊರಟೆವು. ‖ ೬೭ ‖ ವಿಂಧ್ಯಾತ್ - ವಿಂಧ್ಯಪರ್ವತದಿಂದ, ಉತ್ಥಾಯ - ಹೊರಟು, ತ್ವದ್ದ....ಹಾಃ - ನಿನ್ನ, ನೋಡುವಿಕೆಯಲ್ಲಿ, ಮಾಡಲ್ಪಟ್ಟ ಪ್ರಯತ್ನವುಳ್ಳವರಾದಕಾರಣ, ಹೃಷ್ಟಾಃ-ಮನಸ್ಸಿನಲ್ಲಿ ಸಂತೋಷವುಳ್ಳ, ತುಷ್ಟಾಃ-ಬಹಿರಾನಂದಭರಿತರಾದ, ಪ್ಲವಂಗಮಾಃ-ವಾನರರು, ಸಾಗರಸ್ಯ - ಸಮುದ್ರದ, ಉತ್ತರಮಂತಂ - ಉತ್ತರತೀರವನ್ನು, ಸಂಪ್ರಾಪ್ತಾಃ - ಹೊಂದಿದೆವು. ‖ ೬೮ ‖ ತ್ವದ್ದ....ಕಾಃ - ನಿನ್ನ ದರ್ಶನದಲ್ಲಿ ಉತ್ಕಂಠಾಭರಿತರಾದ, ಅಂಗ....ಖಾಃ - ಅಂಗದನೇ ಮೊದಲಾದ, ಸರ್ವೇ - ನಾವೆಲ್ಲರೂ, ವೇಲೋಪಾಂತಂ - ಸಮುದ್ರತೀರದ ಬಳಿಯಲ್ಲಿ, ಉಪಸ್ಥಿತಾಃ - ನಿಂತವರಾಗಿ, ಪುನಃ - ಮತ್ತೂ, ಭೀತಾಃ - ಭಯಗೊಂಡವರಾಗಿ, ಚಿಂತಾಂ - ಆಲೋಚನೆಯನ್ನು, ಜಗ್ಮುಃ - ಹೊಂದಿದೆವು. ‖ ೬೯ ‖ ಅಥ - ಅನಂತರದಲ್ಲಿ, ಅಹಂ - ನಾನು, ಸಾಗರಂ - ಕಡಲನ್ನು, ಪ್ರೇಕ್ಷ್ಯ - ನೋಡಿ, ಸೀದತಃ - ದುಃಖಿಸುತ್ತಿರುವ, ಹರಿಸೈನ್ಯಸ್ಯ - ವಾನರಸೇನೆಯ, ಭಯಂ - ಭೀತಿಯನ್ನು, ವ್ಯವಧೂಯ - ಕೊಡಹಿ, ತೀವ್ರಂ - ಜಾಗ್ರತೆಯಾಗಿ, ಯೋಜನಾನಾಂಶತಂ - ನೂರುಗಾವುದಗಳನ್ನು, ಪ್ಲುತಃ - ದಾಟಿದೆನು. ‖ ೭೦ ‖ ಮಯಾ - ನನ್ನಿಂದ, ರಾತ್ರೌ - ರಾತ್ರಿಯಲ್ಲಿ, ರಾಕ್ಷಸಾಕುಲಾ-ರಕ್ಕಸರಿಂದ ತುಂಬಿರುವ, ಲಂಕಾಚಾಪಿ-ಲಂಕಾಪಟ್ಟಣವೂ, ಪ್ರವಿಷ್ಟಾ-ಪ್ರವೇಶಿಸಲ್ಪಟ್ಟಿತು,

ಈ ರಾವಣ ಗೃಹದಲ್ಲಿರುವ ವಿಷಯವನ್ನು ನಮಗೆ ತಿಳಿಸಿದನು. ‖ ೬೨–೬೬ ‖ ಆಮೇಲೆ ಅಂಗದನೇ ಮೊದಲಾದ ನಾವೆಲ್ಲರೂ ಸಂಪಾತಿಯ ಮಾತುಗಳನ್ನು ಕೇಳಿ ಪರಮಸಂತುಷ್ಟರಾಗಿ ಬಹುಜಾಗ್ರತೆಯಾಗಿ ಅಲ್ಲಿಂದ ಹೊರಟುಬಂದೆವು. ನಾವೆಲ್ಲರೂ ಕೂಡಲೇ ವಿಂಧ್ಯಪರ್ವತದಿಂದ ಹೊರಟು ಒಂದೇ ನೆಗೆತದಿಂದ ದಕ್ಷಿಣಸಮುದ್ರ ತೀರವನ್ನು ಸೇರಿದೆವು. ಎಲೆ ತಾಯೇ! ನಿನ್ನನ್ನು ನೋಡುವುದರಲ್ಲಿ ಮಹಾ ಸಂತೋಷವುಳ್ಳ ಅಂಗದನೇ ಮೊದಲಾದ ನಾವೆಲ್ಲರೂ ಆ ದಕ್ಷಿಣ ಸಮುದ್ರತೀರಕ್ಕೆ ಬಂದು ಅಪಾರವಾದ ಆ ಜಲರಾಶಿಯನ್ನು ನೋಡಿ ಪುನಃ ಭಯದಿಂದ ವ್ಯಸನಸಂತಪ್ತರಾಗಿ ಹೋದೆವು. ಹೀಗೆ ದುಃಖಿಸುತ್ತಿರುವ ವಾನರಸೈನ್ಯವನ್ನು ನೋಡಿ ಅವರ ದುಃಖವೆಲ್ಲವನ್ನೂ ಹೋಗಲಾಡಿಸಬೇಕೆಂದು ಬಯಿಸಿ ನಾನು ಶತಯೋಜನವಿಸ್ತೀರ್ಣವಾದ ಆ ಸಮುದ್ರವನ್ನು ಲಂಘಿಸಿದೆನು. ಎಲೆ ತಾಯೇ! ಹೀಗೆ ನಾನು ಸಮುದ್ರವನ್ನು ದಾಟಿ ರಾತ್ರಿಯಕಾಲದಲ್ಲಿ ಈ ಲಂಕಾನಗರವನ್ನು ಪ್ರವೇಶಿಸಿದೆನು. ದುಷ್ಟನಾದ ರಾವಣಾಸುರನನ್ನೂ ನೋಡಿದೆನು. ಅಲ್ಲದೆ ಮಹಾ ವ್ಯಸನಸಂತಪ್ತಳಾಗಿರುವ ನಿನ್ನನ್ನೂ

ರಾತ್ರೌ ದೃಷ್ಟ್ವಾ ನೈ ರಾಕ್ಷಸಾಕುಲಾ । ರಾವಣಶ್ಚ ಮಯಾ ದೃಷ್ಟ ಸ್ತ್ವಂಚ ಶೋಕ ❀ ಪರಿಪ್ಲುತಾ ॥ ೭೧ ॥ ಏತತ್ತೇ ಸರ್ವಮಾಖ್ಯಾತಂ ಯಥಾವೃತ್ತ ಮನಿಂದಿತೇ! । ಅಭಿಭಾಷಸ್ವ ಮಾಂ ದೇವಿ! ದೂತೋ ದಾಶರಥೇರಹಂ ॥ ೭೨ ॥ ತ್ವಂ ಮಾಂ ರಾಮ ಕೃತೋದ್ಯೋಗಂ ತ್ವನ್ನಿಮಿತ್ತಮಿಹಾಗತಂ । ಸುಗ್ರೀವಸಚಿವಂ ದೇವಿ! ಬುಧ್ಯಸ್ವ ಪವನಾತ್ಮಜಂ ॥೭೩॥ ಕುಶಲೀ ತವ ಕಾಕುತ್ಸ್ಥ ಸ್ಸರ್ವಶಸ್ತ್ರಭೃತಾಂವರಃ । ಗುರೋ ರಾರಾಧನೇ ಯುಕ್ತೋ ಲಕ್ಷ್ಮಣಶ್ಚ ಸುಲಕ್ಷಣಃ ॥ ೭೪ ॥ ತಸ್ಯ ವೀರ್ಯವತೋ ದೇವಿ! ಭರ್ತುಸ್ತವ ಹಿತೇ ರತಃ । ಅಹಮೇಕಸ್ತು ಸಂಪ್ರಾಪ್ತ ಸ್ಸುಗ್ರೀವವಚನಾ

ರಾವಣಶ್ಚ - ರಾವಣನೂ, ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟನು, ಶೋಕಪರಿಪ್ಲುತಾ - ವ್ಯಸನದಿಂದ ಬತ್ತಿಹೋದ, ತ್ವಂಚ-ನೀನೂ, ದೃಷ್ಟಾ-ನೋಡಲ್ಪಟ್ಟಿರುವೆ. ॥ ೭೧ ॥ ಹೇ ಅನಿಂದಿತೇ-ಎಲೌ ನಿರ್ದೋಷಿಯೇ, ಹೇ ದೇವಿ - ಓ ಸೀತಾದೇವಿಯೇ, ತೇ - ನಿನಗೆ, ಏತತ್ - ಈ ಪೂರ್ವೋಕ್ತವಾದ, ಸರ್ವಂ - ಸಮಸ್ತವೂ, ಯಥಾವೃತ್ತಂ - ನಡೆದಂತೆ, ಆಖ್ಯಾತಂ - ಹೇಳಲ್ಪಟ್ಟಿತು, ಅಹಂ - ನಾನು, ದಾಶರಥೇಃ - ಶ್ರೀರಾಮನಿಗೆ, ದೂತಃ - ಕಿಂಕರನು, ಮಾಂ - ನನ್ನನ್ನು, ಅಭಿಭಾಷಸ್ವ - ಮಾತನಾಡಿಸು. ॥ ೭೨ ॥ ಹೇ ದೇವಿ - ಓ ಸೀತಾದೇವಿಯೇ, ರಾಮ - ಗಂ - ರಾಮನಿಮಿತ್ತವಾಗಿ ಮಾಡಲ್ಪಟ್ಟ ಪ್ರಯತ್ನವುಳ್ಳ, ತ್ವನ್ನಿಮಿತ್ತಂ-ನಿನ್ನ ನಿಮಿತ್ತವಾಗಿ, ಇಹ-ಇಲ್ಲಿಗೆ, ಆಗತಂ-ಬಂದಿರುವ, ಸುಗ್ರೀವಸಚಿವಂ - ಸುಗ್ರೀವನಿಗೆ ಮಂತ್ರಿಯಾದ, ಮಾಂ - ನನ್ನನ್ನು, ಪವನಾತ್ಮಜಂ - ವಾಯು ಪುತ್ರನನ್ನಾಗಿ, ಬುಧ್ಯಸ್ವ - ತಿಳಿದುಕೊ. ॥ ೭೩ ॥ ಸರ್ವ....ತಾಂ - ಸಮಸ್ತ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ, ತವ - ನಿನ್ನ ಪತಿಯಾದ, ಕಾಕುತ್ಸ್ಥಃ - ಶ್ರೀರಾಮನು, ಕುಶಲೀ - ಕ್ಷೇಮವಂತನು, ಗುರೋಃ - ಅಣ್ಣನ, ಆರಾಧನೇ - ಸೇವೆಯಲ್ಲಿ, ಯುಕ್ತಃ - ನಿರತನಾದ, ಸುಲಕ್ಷಣಃ - ಸಲ್ಲಕ್ಷಣವಂತನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ ಕೂಡ, ಕುಶಲೀ - ಕ್ಷೇಮವಂತನು. ॥ ೭೪ ॥ ಹೇ ದೇವಿ - ಓ ಸೀತಾದೇವಿಯೇ, ವೀರ್ಯವತಃ - ಪರಾಕ್ರಮಿಯಾದ, ತವ - ನಿನ್ನ, ಭರ್ತುಃ - ಪತಿಯಾದ, ತಸ್ಯ - ಆ ಶ್ರೀರಾಮನ, ಹಿತೇ - ಮೇಲ್ಮೆಯಲ್ಲಿ, ರತಃ - ಆಸಕ್ತನಾದ, ಅಹಂತು - ನಾನಾದರೆ, ಸುಗ್ರೀ....ತ್ - ಸುಗ್ರೀವನ ಮಾತಿನಿಂದ, ಏಕಃ - ಒಬ್ಬಂಟಿಗನಾಗಿಯೇ, ಇಹ - ಇಲ್ಲಿಗೆ, ಪ್ರಾಪ್ತಃ-

ನೋಡಿದೆನು. ॥ ೬೬–೭೧ ॥ ಎಲೌ ಮಹಾಪತಿವ್ರತೆಯೇ! ಈ ಎಲ್ಲ ವಿಷಯಗಳನ್ನೂ ನಡೆದುದು ನಡೆದಂತೆಯೇ ನಿನಗೆ ತಿಳಿಸಿರುವೆನು. ನಾನು ದಶರಥರಾಜಕುಮಾರನಾದ ಶ್ರೀರಾಮನ ದೂತನು. ನನ್ನೊಡನೆ ಮಾತನಾಡು. ಎಲೌ ಸೀತಾದೇವಿಯೇ! ನಾನು ಶ್ರೀರಾಮಮೂರ್ತಿಯ ಕಾರ್ಯಕ್ಕಾಗಿ ಬಂದಿರುವವನು; ಆತನ ಕಾರ್ಯವನ್ನೇ ಮಾಡುವವನು; ಆತನು ಕಳುಹಿದುದರಿಂದ ನಿನಗಾಗಿ ನಾನು ಬಂದೆನು. ನಾನು ಸುಗ್ರೀವನ ಮಂತ್ರಿಯು. ವಾಯುದೇವನ ಪುತ್ರನು; ಇದನ್ನು ನಂಬು. ಸಮಸ್ತಶಸ್ತ್ರಾಸ್ತ್ರಗಳನ್ನು ಬಲ್ಲವರಲ್ಲಿ ಉತ್ತಮನೂ, ಕಕುತ್ಸ್ಥವಂಶೋದ್ಭವನೂ ಆದ ಶ್ರೀರಾಮನು ಕ್ಷೇಮವಾಗಿರುವನು. ಸಕಲಲಕ್ಷಣಸಂಪನ್ನನಾದ ಲಕ್ಷ್ಮಣನು ಅಣ್ಣನಿಗೆ ಶುಶ್ರೂಷೆಯನ್ನು ಮಾಡುತ್ತ ಕುಶಲದಿಂದಿರುವನು. ಓ ದೇವಿಯೇ! ನಾನೊಬ್ಬನು ಮಾತ್ರ ಸುಗ್ರೀವನ ಆಜ್ಞೆಯಿಂದ ಮಹಾಪರಾಕ್ರಮಶಾಲಿಯಾದ ನಿನ್ನ ಭರ್ತನಿಗೆ ಹಿತವನ್ನು ಮಾಡುವವನಾಗಿ ಇಲ್ಲಿಗೈತಂದಿರುವೆನು. ॥ ೭೨ -೭೫ ॥

❀ "ನಿಪೀಡಿತಾ" ತಿ. ಪಾ.

ದಿಹ ॥ ೭೫ ॥ ಮಯೇಯಮಸಹಾಯೇನ ಚರತಾ ಕಾಮರೂಪಿಣಾ । ದಕ್ಷಿಣಾದಿಗನು ಕ್ರಾಂತಾ ತ್ವನ್ಮಾರ್ಗವಿಚಯೈಷಿಣಾ ॥ ೭೬ ॥ ದಿಷ್ಟ್ಯಾಹಂ ಹರಿಸೈನ್ಯಾನಾಂ ತ್ವನ್ನಾಶ ಮನುಶೋಚತಾಂ । ಅಪನೇಷ್ಯಾಮಿ ಸಂತಾಪಂ ತವಾಭಿಗಮಶಂಸನಾತ್ ॥ ೭೭ ॥ ದಿಷ್ಟ್ಯಾ ಕೃತಂ ಮಯಾ ಚೇದಂ ದೇವಿ! ಸಾಗರಲಂಘನಂ । ಪ್ರಾಪ್ಸ್ಯಾಮ್ಯಹಮಿದಂ ದಿಷ್ಟ್ಯಾ ತ್ವದ್ದರ್ಶನಕೃತಂ ಯಶಃ ॥ ೭೮ ॥ ರಾಘವಶ್ಚ ಮಹಾವೀರ್ಯಃ ಕ್ಷಿಪ್ರಂ ತ್ವಾಮಭಿಪತ್ಸ್ಯತೇ । ಸಮಿತ್ರಬಾಂಧವಂ ಹತ್ವಾ ರಾವಣಂ ರಾಕ್ಷಸಾಧಿಪಂ ॥ ೭೯ ॥ ಮಾಲ್ಯವಾನ್ನಾಮ ವೈದೇಹಿ! ಗಿರೀಣಾಮುತ್ತಮೋಗಿರಿಃ । ತತೋ ಗಚ್ಛತಿ

ಬಂದೆನು. ॥೭೫॥ ಅಸಹಾಯೇನ - ಸಹಾಯವಿಲ್ಲದಿರುವ, ಕಾಮರೂಪಿಣಾ - ಸ್ವೇಚ್ಛಾರೂಪಿಯಾದ, ತ್ವನ್ಮಾ....ಣಾ - ನಿನ್ನ ದಾರಿಯನ್ನು ಹುಡುಕಲಿಚ್ಛಿಸಿದಕಾರಣ, ಚರತಾ - ತಿರುಗುತ್ತಿರುವ, ಮಯಾ-ನನ್ನಿಂದ, ಇಯಂದಕ್ಷಿಣಾದಿಕ್ - ಈ ದಕ್ಷಿಣದಿಕ್ಕು, ಅನುಕ್ರಾಂತಾ - ಆಕ್ರಮಿಸಲ್ಪಟ್ಟಿತು. ॥ ೭೬ ॥ ಅಹಂ - ನಾನು, ತ್ವನ್ನಾಶಮನು - ನಿನ್ನಗಲುವಿಕೆಯನ್ನು ಕುರಿತು, ಶೋಚತಾಂ - ದುಃಖಿಸುತ್ತಿರುವ, ಹರಿಸೈನ್ಯಾನಾಂ - ಕಪಿಸೇನೆಗಳ, ಸಂತಾಪಂ - ಪರಿತಾಪವನ್ನು, ತವ - ನಿನ್ನ, ಅಭಿಗಮಶಂಸನಾತ್ - ಸಮಾಪಪ್ರಾಪ್ತಿಯ ಹೇಳುವಿಕೆಯಿಂದ, ದಿಷ್ಟ್ಯಾ - ದೈವವಶದಿಂದ, ಅಪನೇಷ್ಯಾಮಿ - ಹೋಗಲಾಡಿಸುವೆನು. ॥೭೭॥ ಹೇ ದೇವಿ - ಓ ತಾಯಿಯೇ, ಸಾಗರಲಂಘನಂ - ಸಮುದ್ರತರಣವು, ದಿಷ್ಟ್ಯಾ - ನನ್ನ ಭಾಗ್ಯದಿಂದ, ಮಮ - ನನಗೆ, ವ್ಯರ್ಥಂ - ನಿಷ್ಪ್ರಯೋಜನವು, ನಹಿ - ಆಗಲಿಲ್ಲ, ಅಹಂ - ನಾನು, ತ್ವದ್ದರ್ಶನಕೃತಂ - ನಿನ್ನ ಸಂದರ್ಶನದಿಂದ ಮಾಡಲ್ಪಟ್ಟ, ಇದಂಯಶಃ - ಈ ಕೀರ್ತಿಯನ್ನು, ದಿಷ್ಟ್ಯಾ - ದೈವಾಧೀನದಿಂದ, ಪ್ರಾಪ್ಸ್ಯಾಮಿ - ಹೊಂದುವೆನು. ॥ ೭೮ ॥ ಮಹಾವೀರ್ಯಃ - ಮಹಾಪರಾಕ್ರಮಿಯಾದ, ರಾಘವಶ್ಚ - ಶ್ರೀರಾಮನೂ, ಸಮಿ....ವಂ - ಮಿತ್ರಬಂಧುಸಹಿತನಾದ, ರಾಕ್ಷಸಾಧಿಪಂ - ರಾಕ್ಷಸನಾಥನಾದ, ರಾವಣಂ - ರಾವಣನನ್ನು, ಹತ್ವಾ - ಸಂಹರಿಸಿ, ಕ್ಷಿಪ್ರಂ - ಬೇಗನೆ, ತ್ವಾಂ - ನಿನ್ನನ್ನು, ಅಭಿಪತ್ಸ್ಯತೇ - ಹೊಂದುವನು. ॥ ೭೯ ॥ ಹೇ ವೈದೇಹಿ - ಓ ಸೀತಾದೇವಿಯೆ, ಗಿರೀಣಾಂ - ಪರ್ವತಗಳಲ್ಲಿ, ಉತ್ತಮಃ - ಶ್ರೇಷ್ಠವಾದ, ಮಾಲ್ಯವಾನ್ಗಿರಿಃ - ಮಾಲ್ಯವತ್ಪರ್ವತವು, ನಾಮ - ಪ್ರಸಿದ್ಧವಾಗಿದೆ, ತತಃ - ಆ ಬೆಟ್ಟದದಿಂದ, ಕೇಸರೀ - ಕೇಸರಿಯೆಂಬ, ಹರಿಃ - ವಾನರನು, ಗೋಕರ್ಣಂ - ಗೋಕರ್ಣವೆಂಬ, ಪರ್ವತಂ - ಬೆಟ್ಟವನ್ನು ಕುರಿತು, ಗಚ್ಛತಿ - ಹೊರಟನು ॥ ೮೦ ॥

ನಾನು ಒಬ್ಬಂಟಿಗನಾಗಿ ಕಾಮರೂಪವನ್ನು ಧರಿಸಿ ಈ ಲಂಕಾನಗರದಲ್ಲೆಲ್ಲಾ ತಿರುಗಿ ಈ ದಕ್ಷಿಣ ದಿಗ್ಭಾಗದಲ್ಲಿ ನನ್ನ ಭಾಗ್ಯವಶದಿಂದ ನಿನ್ನನ್ನು ಕಂಡೆನು. ಇನ್ನು ನೀನು ಕಾಣಿಸದಿರುವುದರಿಂದ ಮಹಾ ವ್ಯಸನವನ್ನು ಹೊಂದಿರುವ ವಾನರಸೈನ್ಯದ ದುಃಖವನ್ನು ಶೀಘ್ರದಲ್ಲಿಯೇ ಹೋಗಲಾಡಿಸುವೆನು. ಎಲೌ ಸೀತಾದೇವಿಯೇ! ಭಾಗ್ಯವಶದಿಂದ ನಾನು ಈ ಸಮುದ್ರವನ್ನು ದಾಟಿದುದು ಸಫಲವಾಯಿತು. ನನ್ನ ಭಾಗ್ಯವಶದಿಂದಲೇ ನಿನ್ನನ್ನು ಕಾಣಿಸಿಕೊಳ್ಳುವ ಕೀರ್ತಿಯನ್ನು ಪಡೆದನು. ಮಹಾ ಪರಾಕ್ರಮಶಾಲಿಯಾದ ಶ್ರೀರಾಮಮೂರ್ತಿಯು ಅತಿಶೀಘ್ರವಾಗಿಯೇ ರಾವಣಾಸುರನನ್ನು ಬಂಧುಮಿತ್ರ ಸಮೇತವಾಗಿ ಸಂಹರಿಸಿ ನಿನ್ನನ್ನು ಕರೆದುಕೊಂಡು ಹೋಗುವನು. ಇದರಲ್ಲಿ ಸಂಶಯವಿಲ್ಲವು. ಎಲೆ ತಾಯೇ! ನನ್ನ ಜನ್ಮ ವೃತ್ತಾಂತವನ್ನು ವಿಸ್ತಾರವಾಗಿ ತಿಳಿಸುವೆನು; ಕೇಳು. ಪರ್ವತಗಳೆಲ್ಲಲ್ಲಾ ಉತ್ತಮೋತ್ತಮವಾದ ಮಾಲ್ಯವಂತವೆಂಬುದೊಂದುಂಟು. ಅಲ್ಲಿ ಕೇಸರಿಯೆಂಬ ವಾನರೋತ್ತಮನು ವಾಸಿ

ಗೋಕರ್ಣಂ ಪರ್ವತಂ ಕೇಸರೀ ಹರಿಃ ‖ ೮೦ ‖ ಸಚ ದೇವರ್ಷಿನಿರ್ದಿಷ್ಟಃ ಪಿತಾ ಮಮ ಮಹಾಕಪಿಃ । ತೀರ್ಥೇ ನದೀಪತೇಃ ಪುಣ್ಯೇ ಶಂಬಸಾದನಮುದ್ಧರತ್ ‖೮೧‖ ¶ ತಸ್ಯಾಽಹಂ ಹರಿಣಃ ಕ್ಷೇತ್ರೇ ಜಾತೋ ವಾತೇನ ಮೈಥಿಲಿ! । ಹನೂಮಾನಿತಿ ವಿಖ್ಯಾತೋ ಲೋಕೇ ಸ್ವೇನೈವ ಕರ್ಮಣಾ ‖ ೮೨ ‖ ವಿಶ್ವಾಸಾರ್ಥಂತು ವೈದೇಹಿ! ಭರ್ತುರುಕ್ತಾ ಮಯಾ ಗುಣಾಃ । ಅಚಿರಾದ್ರಾಘವೋ ದೇವಿ! ತ್ವಾಮಿತೋ ನಯಿತಾಽನಘೇ'' ‖ ೮೩ ‖ ಏವಂ ವಿಶ್ವಾಸಿತಾ ಸೀತಾ ಹೇತುಭಿಶ್ಶೋಕಕರ್ಶಿತಾ ।

ಮಹಾಕಪಿಃ - ಮಹಾ ವಾನರನಾದ, ಮಮ ಪಿತಾ - ನನ್ನ ತಂದೆಯಾದ, ಸಃ - ಆ ಕೇಸರಿಯು, ದೇವರ್ಷಿಭಿಃ - ಇಲ್ಲಿರುವ ದೇವಋಷಿಗಳಿಂದ, ನಿರ್ದಿಷ್ಟಃ - ಆಜ್ಞಾಪಿಸಲ್ಪಟ್ಟವನಾಗಿ, ನದೀಪತೇಃ - ಸಮುದ್ರದ, ಪುಣ್ಯೇ - ಪುಣ್ಯಕರವಾದ, ತೀರ್ಥೇ - ತೀರ್ಥದಲ್ಲಿ, ಶಂಬಸಾದನಂ - ಶಂಬಸಾದನನೆಂಬ ರಕ್ಕಸನನ್ನು, ಉದ್ಧರತ್ - ಹೊಡೆದನು. ‖ ೮೧ ‖ ಹೇ ಮೈಥಿಲಿ - ಓ ಸೀತಾದೇವಿಯೆ, ಅಹಂ - ನಾನು, ಹರಿಣಃ - ವಾನರನಾದ, ತಸ್ಯ - ಆ ಕೇಸರಿಯ, ಕ್ಷೇತ್ರೇ - ಪತ್ನಿಯಾದ ಅಂಜನಾದೇವಿಯಲ್ಲಿ, ವಾತೇನ - ವಾಯುವಿನಿಂದ, ಜಾತಃ - ಹುಟ್ಟಿದವನಾಗಿ, ಲೋಕೇ - ಜಗತ್ತಿನಲ್ಲಿ, ಸ್ವೇನ - ಸ್ವಕೀಯವಾದ, ಕರ್ಮಣೈವ - ಕೃತ್ಯದಿಂದಲೇ, ಹನುಮಾನಿತಿ - ಹನುಮಂತನೆಂದು, ವಿಖ್ಯಾತಃ - ಪ್ರಸಿದ್ಧನಾದೆನು. ‖ ೮೨ ‖ ಹೇ ವೈದೇಹಿ - ಓ ಸೀತಾದೇವಿಯೆ, ಭರ್ತುಃ - ಪತಿಯಾದ ಶ್ರೀರಾಮನ, ಗುಣಾಸ್ತು - ಗುಣಗಳಾದರೆ, ವಿಶ್ವಾಸಾರ್ಥಂ - ಪ್ರೀತಿಗೋಸ್ಕರ, ಮಯಾ - ನನ್ನಿಂದ, ಉಕ್ತಾಃ - ಹೇಳಲ್ಪಟ್ಟವು, ಹೇ ಅನಘೇ - ಎಲೌ ನಿರ್ದೋಷಿಯೇ, ಹೇ ದೇವಿ - ಓ ತಾಯೇ, ರಾಘವಃ - ಶ್ರೀರಾಮನು, ತ್ವಾಂ - ನಿನ್ನನ್ನು, ಇತಃ - ಈ ಪ್ರದೇಶದದೆಶೆಯಿಂದ, ಅಚಿರಾತ್ - ಜಾಗ್ರತೆಯಾಗಿ, ನಯಿತಾ - ಕರೆದುಕೊಂಡು ಹೋಗುವನು. ‖ ೮೩ ‖ ಶೋಕಕರ್ಶಿತಾ - ದುಃಖದಿಂದ ಕೃಶಳಾದ, ಸೀತಾ - ಸೀತಾದೇವಿಯು, ಹೇತುಭಿಃ - ಕಾರಣಗಳಿಂದ, ಏವಂ - ಈ ಪರಿಯಾಗಿ, ವಿಶ್ವಾಸಿತಾ -

ಸುತ್ತಿದ್ದನು. ‖ ೭೫–೮೦ ‖ ಆ ಕೇಸರಿಯೆಂಬ ವಾನರಪುಂಗವನೇ ನನ್ನ ತಂದೆಯು. ಆತನು ಹಿಂದೆ ಗೋಕರ್ಣವೆಂಬ ಪರ್ವತಕ್ಕೆ ಹೋಗಿ, ಅಲ್ಲಿ ದೇವತೆಗಳಿಂದಲೂ, ಮಹರ್ಷಿಗಳಿಂದಲೂ ಪ್ರೇರೇಪಿತನಾಗಿ, ಸಮುದ್ರತೀರದ ಒಂದು ಪುಣ್ಯಪ್ರದೇಶದಲ್ಲಿ ಶಂಬಸಾದನನೆಂಬ ಒಬ್ಬ ರಾಕ್ಷಸನನ್ನು ಸಂಹರಿಸಿದನು. ಹೀಗೆ ಆತನು ಗೋಕರ್ಣಪರ್ವತಕ್ಕೆ ಹೋಗಿದ್ದ ಕಾಲದಲ್ಲಿ ನಾನು ಆತನ ಭಾರ್ಯೆಯಾದ ಅಂಜನಾದೇವಿಯಲ್ಲಿ ವಾಯುದೇವನ ಪ್ರಸಾದದಿಂದ ಜನಿಸಿದೆನು. ನಾನು ಮಾಡಿದ ಅದ್ಭುತಕಾರ್ಯದಿಂದಲೇ ಲೋಕದಲ್ಲಿ ಹನುಮಂತನೆಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದೆನು. ಎಲೌ ಸೀತಾದೇವಿಯೇ! ನಿನಗೆ ನಂಬುಗೆಯುಂಟಾಗಲೋಸುಗ ಶ್ರೀರಾಮಮೂರ್ತಿಯ ವೃತ್ತಾಂತವೆಲ್ಲವನ್ನೂ ಹೇಳಿದೆನು. ಎಲೆ ನಿರ್ದುಷ್ಟಳೇ! ಶ್ರೀರಾಮನು ಶೀಘ್ರದಲ್ಲಿಯೇ ನಿನ್ನನ್ನು ಇಲ್ಲಿಂದ ಕರೆದುಕೊಂಡು ಹೋಗಲು ಬರುವನು.'' ‖ ೮೧-೮೩ ‖ ಹನುಮಂತನೀರೀತಿ ನುಡಿಯಲು, ಮಹಾವ್ಯಸನದಿಂದ ಕೃಶಳಾಗಿದ್ದ ಸೀತಾದೇವಿಯು ಅನೇಕ ಕಾರಣಗಳಿಂದ ಆತನಲ್ಲಿ ನಂಬುಗೆಯುಳ್ಳವಳಾದಳು.

¶ ಇಲ್ಲಿ ಹನುಮಂತನು, ಸೀತೆಗೆ ತಾನು ಮಾಯಾವಿಯಾದ ರಾವಣನಲ್ಲವೆಂದೂ, ವಾಯುಪುತ್ರನಾದ ಹನುಮಂತನೆಂದೂ, ಹಾಗಿಲ್ಲದಿದ್ದರೆ ಒಂದು ಕುಲದಲ್ಲಿ ಹುಟ್ಟಿದವನು ಬೇರೊಂದು ಕುಲದ ಹೆಸರನ್ನು ಹೇಳುವುದಿಲ್ಲವೆಂದೂ ಚೆನ್ನಾಗಿ ಅರ್ಥವಾಗುವಂತೆ ವಿವರಿಸಿ ಹೇಳಿರುವನು.

ಉಪಪನ್ನೈ ರಭಿಜ್ಞಾನೈರ್ದೂತಂ ತಮಧಿಗಚ್ಛತಿ ॥ ೪೪ ॥ ಅತುಲಂಚ ಗತಾ ಹರ್ಷಂ ಪ್ರಹರ್ಷೇಣ ಚ ಜಾನಕೀ। ನೇತ್ರಾಭ್ಯಾಂ ವಕ್ರಪಕ್ಷ್ಮಾಭ್ಯಾಂ ಮುಮೋಚಾನಂದಜಂ ಜಲಂ ॥ ೪೫ ॥ ಚಾರು ತದ್ವದನಂ ತಸ್ಯಾಸ್ತಾಮ್ರಶುಕ್ಲಾಯತೇಕ್ಷಣಂ। ಅಶೋಭತ ವಿಶಾಲಾಕ್ಷ್ಯಾ ರಾಹುಮುಕ್ತ ಇವೋಡುರಾಟ್ ॥ ೪೬ ॥ ಹನೂಮಂತಂ ಕಪಿಂ ವ್ಯಕ್ತಂ ಮನ್ಯತೇ ನಾನ್ಯಥೇತಿ ಸಾ ॥ ೪೭ ॥ ಅಥೋವಾಚ ಹನೂಮಾಂಸ್ತಾಮುತ್ತರಂ ಪ್ರಿಯದರ್ಶನಾಂ ॥ ೪೭ ॥ "ಏತತ್ತೇ ಸರ್ವಮಾಖ್ಯಾತಂ ಸಮಾಶ್ವಸಿಹಿ ಮೈಥಿಲಿ!। ಕಿಂ ಕರೋಮಿ ಕಥಂ ವಾ ತೇ ರೋಚತೇ ಪ್ರತಿಯಾಮ್ಯಹಂ ॥ ೪೮ ॥

ನಂಬುಗೆಯುಳ್ಳವಳಾಗಿ, ಉಪಪನ್ನೈಃ - ತಿಳಿವಳಿಕೆಗೆಬಂದ, ಅಭಿಜ್ಞಾನೈಃ - ಗುರುತುಗಳಿಂದ, ತಂ- ಆ ಆಂಜನೇಯನನ್ನು, ದೂತಂ - ಭೃತ್ಯನನ್ನಾಗಿ, ಅಧಿಗಚ್ಛತಿ - ಅರಿತುಕೊಂಡಳು. ॥ ೪೪ ॥ ಜಾನಕೀ - ಸೀತಾದೇವಿಯು, ಪ್ರಹರ್ಷೇಣ - ಅಂತಸ್ಸಂತೋಷದಿಂದ, ಅತುಲಂ - ಅಸದೃಶವಾದ, ಹರ್ಷಂ - ಬಹಿರಾನಂದವನ್ನು, ಗತಾ - ಹೊಂದಿದಳು, ವಕ್ರಪಕ್ಷ್ಮಾಭ್ಯಾಂ - ಸೊಟ್ಟೆಯಾದ ಹುಬ್ಬುಗಳುಳ್ಳ, ನೇತ್ರಾಭ್ಯಾಂ - ಕಣ್ಣುಗಳಿಂದ, ಆನಂದಜಂ - ಸಂತೋಷದಿಂದ ಹುಟ್ಟಿದ, ಜಲಂ - ಉದಕವನ್ನು, ಮುಮೋಚ - ಸುರಿಸಿದಳು. ॥ ೪೫ ॥ ತಾಮ್ರ....ಣಂ - ಕೊನೆಗಳಲ್ಲಿ ಕೆಂಪಾಗಿಯೂ, ಆದರ ನಡುವೆ ಬಿಳುಪಾಗಿಯೂ, ದೀರ್ಘವಾಗಿಯೂ ಇರುವ ನೇತ್ರಗಳುಳ್ಳ, ಚಾರು - ಸುಂದರವಾದ, ತಸ್ಯಾವಿಶಾಲಾಕ್ಷ್ಯಾಃ - ಆ ವಿಸ್ತಾರನೇತ್ರೆಯ, ತದ್ವದನಂ - ಆ ಮುಖವು, ರಾಹುಮುಕ್ತಃ - ರಾಹುವಿನಿಂದ ಬಿಡಲ್ಪಟ್ಟ, ಉಡುರಾಡಿವ - ಚಂದ್ರನಂತೆ, ಅಶೋಭತ - ಹೊಳೆಯುತ್ತಿತ್ತು. ॥ ೪೬ ॥ ಸಾ - ಆ ಸೀತಾದೇವಿಯು, ಹನುಮಂತಂ - ಹನುಮಂತನನ್ನು, ಕಪಿಂ - ವಾನರನನ್ನಾಗಿ, ವ್ಯಕ್ತಂ - ಸ್ಫುಟವಾಗಿ, ಮನ್ಯತೇ - ಅರಿತುಕೊಂಡಳು, ಅನ್ಯಥಾ - ಮತ್ತೊಂದುವಿಧವಾಗಿ, (ಅಂದರೆ ಕೃತ್ರಿಮ ಕಪಿಯನ್ನಾಗಿ), ನಾಮನ್ಯತ - ತಿಳಿದುಕೊಳ್ಳಲಿಲ್ಲವು, ಅಥ - ಅನಂತರದಲ್ಲಿ, ಹನುಮಾ್ - ಆಂಜನೇಯನು, ಪ್ರಿಯದರ್ಶನಾಂ - ಇಂಪಾದ ನೋಟವುಳ್ಳ, ತಾಂ - ಆ ಸೀತಾದೇವಿಯನ್ನು ಕುರಿತು, ಉತ್ತರಂ - ಪ್ರತ್ಯುತ್ತರವನ್ನು, ಉವಾಚ - ಹೇಳಿದನು. ॥ ೪೭ ॥ ಹೇ ಮೈಥಿಲಿ - ಎಲೌ ಸೀತಾದೇವಿಯೇ, ಏತತ್ಸರ್ವಂ - ಇದೆಲ್ಲವು, ತೇ - ನಿನಗೆ, ಆಖ್ಯಾತಂ - ಹೇಳಲ್ಪಟ್ಟಿತು, ಸಮಾಶ್ವಸಿಹಿ - ಸಮಾಧಾನಚಿತ್ತಳಾಗು, ಕಿಂಕರೋಮಿ - ಏನುಮಾಡಲಿ, ಕಥಂವಾ - ಹೇಗೆತಾನೆ, ತೇ - ನಿನಗೆ,

ಇಷ್ಟೆಯಲ್ಲದೆ, ಯಥಾರ್ಥವಾದ ಅನೇಕ ಗುರುತುಗಳಿಂದ ಆ ಹನುಮಂತನು ಶ್ರೀರಾಮಮೂರ್ತಿಯಿಂದ ಪ್ರೇಷಿತನಾದ ದೂತನೆಂದೇ ನಿರ್ಧರಿಸಿಕೊಂಡಳು. ಆಕೆಯು ಹೀಗೆ ನಿಶ್ಚಯಿಸಿಕೊಂಡ ಬಳಿಕ ಮಿತಿಯಿಲ್ಲದ ಸಂತೋಷವುಳ್ಳವಳಾಗಿ ವಕ್ರಪಕ್ಷ್ಮಗಳೊಡಗೂಡಿದ ತನ್ನ ಕಣ್ಣುಗಳಿಂದ ಆನಂದಬಾಷ್ಪಗಳನ್ನು ಸುರಿಸಿದಳು. ಅಲ್ಲದೆ ಕಮಲದಳದಂತೆ ವಿಶಾಲವಾಗಿ, ಕೆಂಪೊಗೆದುಒಪ್ಪುತ್ತಿರುವ ನೇತ್ರಗಳುಳ್ಳ ಸೀತಾದೇವಿಯ ಮುಖವು, ರಾಹುಗ್ರಹದಿಂದ ಮುಕ್ತವಾದ ಚಂದ್ರನಂತೆ ಪ್ರಕಾಶಿಸುತ್ತಿದ್ದಿತು. ಆಗಲಾಕೆಯು ಆಂಜನೇಯನನ್ನು ವಾನರನೆಂದೇ ಸಂಪೂರ್ಣವಾಗಿ ನಂಬಿದಳು. ಆಂಜನೇಯನು ಸಮಸ್ತರಿಗೂ ಆನಂದಕರವಾದ ದರ್ಶನವುಳ್ಳ ಸೀತಾದೇವಿಯನ್ನು ನೋಡಿ, "ಎಲೌ ಸೀತಾದೇವಿಯೇ! ಈ ವೃತ್ತಾಂತವೆಲ್ಲವನ್ನೂ ವಿಸ್ತಾರವಾಗಿ ನಿನಗೆ ತಿಳಿಸಿದೆನು. ಇನ್ನು ದುಃಖವನ್ನುಳಿದು ಸಮಾಧಾನವನ್ನು ಹೊಂದು. ಈಗ ನಾನು ಮಾಡಬೇಕಾದ ಕಾರ್ಯವಾವುದು? ನಿನ್ನ ಇಷ್ಟವನ್ನು ತಿಳಿಸುವವಳಾಗು. ನಾನು ಪುನಃ

ಹತೇಽಸುರೇ ಸಂಯತಿ ಶಂಬಸಾದನೇ
ಕಪಿಪ್ರವೀರೇಣ ಮಹರ್ಷಿಚೋದನಾತ್ ।
ತತೋಽಸ್ಮಿ ವಾಯುಪ್ರಭವೋಹಿ ಮೈಥಿಲಿ!
ಪ್ರಭಾವತಸ್ತತ್ಪ್ರತಿಮಶ್ಚ ವಾನರಃ" ॥ ೮೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚತ್ರಿಂಶಸ್ಸರ್ಗಃ

ರೋಚತೇ - ತೋರುವದು, ಅಹಂ - ನಾನು, ಪ್ರತಿಯಾಮಿ - ಹಿಂತಿರುಗಿ ಹೋಗುವೆನು. ॥ ೮೭ ॥ ಹೇ ಮೈಥಿಲಿ - ಓ ಸೀತಾದೇವಿಯೆ, ಮಹ....ತ್ - ಮಹಾ ಮುನಿಗಳ ಪ್ರೇರಣೆಯಿಂದ, ಸಂಯತಿ - ಕಾಳೆಗದಲ್ಲಿ, ಕಪಿಪ್ರವೀರೇಣ - ಕೇಸರೀಯೆಂಬ ಕಪಿಶ್ರೇಷ್ಠನಿಂದ, ಶಂಬಸಾದನೇ - ಶಂಬಸಾದನನೆಂಬ, ಅಸುರೇ - ರಕ್ಕಸನು, ಹತೇ - ಮೃತನಾದವನಾಗಲು, ತತಃ - ಬಳಿಕ, ಹಿ - ಯಾವಕಾರಣ ದಿಂದ, ವಾಯುಪ್ರಭವಃ-ವಾಯುವಿನಿಂದ ಹುಟ್ಟಿದವನು, ಅಸ್ಮಿ-ಆಗಿದ್ದೇನೆಯೋ, ತತಃ-ಆ ಕಾರಣ ದಿಂದ, ವಾನರಃ - ಕಪಿಯಾದ ನಾನು, ಪ್ರಭಾವತಃ - ಪರಾಕ್ರಮುವಿಷಯದಲ್ಲಿಯು, ತತ್ಪ್ರತಿಮಶ್ಚ - ಆ ವಾಯುವಿಗೆ ಸಮಾನನಾದವನೂ ಕೂಡ, ಅಸ್ಮಿ - ಆದೆನೋ. ॥ ೮೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚತ್ರಿಂಶಸ್ಸರ್ಗಃ.

ಶ್ರೀರಾಮನು ವಾಸಮಾಡುತ್ತಿರುವ ಸ್ಥಳಕ್ಕೆ ಹೋಗಬೇಕಾಗಿರುವುದು. ಓ ದೇವಿಯೇ! ನನ್ನ ತಂದೆಯಾದ ಕೇಸರಿಯು, ಮಹರ್ಷಿಗಳಿಂದ ಪ್ರೇರೇಪಿತನಾಗಿ ಶಂಬಸಾದನನೆಂಬ ರಾಕ್ಷಸ ನನ್ನು ಯುದ್ಧದಲ್ಲಿ ಸಂಹರಿಸಲು ಗೋಕರ್ಣಪರ್ವತಕ್ಕೆ ಹೋದಾಗ, ವಾಯುದೇವನ ಪ್ರಸಾದದಿಂದ ಜನಿಸಿದವನೇ ನಾನು. ನಾನು ವಾಯುದೇವನಿಗೆ ಸಮಾನವಾದ ಪ್ರಭಾವ ವುಳ್ಳವನು." ಎಂದುಹೇಳಿದನು. ॥ ೮೩–೮೯ ॥

ಇಂತಿದು ಹನುಮತ್ಸೀತಾ ಸಂವಾದವೆಂಬ ಮೂವತ್ತೈದನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಷಟ್ತ್ರಿಂಶಸ್ಸರ್ಗಃ

ಭೂಯ ಏವ ಮಹಾತೇಜಾ ಹನುಮಾನ್ಮಾರುತಾತ್ಮಜಃ । ಅಬ್ರವೀತ್ಪ್ರಶ್ರಿತಂ ವಾಕ್ಯಂ ಸೀತಾಪ್ರತ್ಯಯಕಾರಣಾತ್ ‖೧‖ ವಾನರೋಽಹಂ ಮಹಾಭಾಗೇ! ದೂತೋ ರಾಮಸ್ಯ ಧೀಮತಃ । ರಾಮನಾಮಾಂಕಿತಂ ಚೇದಂ ಪಶ್ಯ ದೇವ್ಯಂಗುಳೀಯಕಂ ‖೨‖ ¶ ಪ್ರತ್ಯಯಾರ್ಥಂ ತವಾನೀತಂ ತೇನ ದತ್ತಂ ಮಹಾತ್ಮನಾ । ಸಮಾಶ್ವಸಿಹಿ ಭದ್ರಂ ತೇ

ಮಹಾತೇಜಾಃ - ಮಹಾ ಪರಾಕ್ರಮಿಯಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಸೀತಾ....ತ್ - ಸೀತಾದೇವಿಯ ವಿಶ್ವಾಸನಿಮಿತ್ತವಾಗಿ, ಪ್ರಶ್ರಿತಂ - ನಮ್ರವಾದ, ವಾಕ್ಯಮೇವ - ಮಾತನ್ನೇ, ಅಬ್ರವೀತ್ - ನುಡಿದನು. ‖೧‖ ಹೇ ಮಹಾಭಾಗೇ - ಎಲೌ ಪುಣ್ಯವತಿಯೇ, ವಾನರಃ - ಕಪಿಯಾದ, ಅಹಂ - ನಾನು, ಧೀಮತಃ - ಬುದ್ಧಿಶಾಲಿಯಾದ, ರಾಮಸ್ಯ - ಶ್ರೀರಾಮನ, ದೂತಃ - ಸೇವಕನು, ಹೇ ದೇವಿ - ಓ ತಾಯೇ - ತವ - ನಿನಗೆ, ಪ್ರತ್ಯಯಾರ್ಥಂ - ಗುರುತಿಗೋಸ್ಕರ, ಮಹಾತ್ಮನಾ - ಮಹಾನುಭಾವನಾದ, ತೇನ - ಆ ಶ್ರೀರಾಮನಿಂದ, ದತ್ತಂ - ಕೊಡಲ್ಪಟ್ಟುದಾಗಿ, ಆನೀತಂ - ನನ್ನಿಂದ ತರಲ್ಪಟ್ಟ, ರಾಮನಾಮಾಂಕಿತಂ - ರಾಮನಾಮದಿಂದ ಗುರುತುಳ್ಳುದಾಗಿ ಮಾಡಲ್ಪಟ್ಟ, ಇದಮಂಗುಳೀಯಕಂ - ಈ ಉಂಗುರವನ್ನು, ಪಶ್ಯ - ನೋಡು, ಸಮಾಶ್ವಸಿಹಿ - ಸಮಾಧಾನಗೊಳಿಸಿಕೋ, ಹಿ - ಯಾವ ಕಾರಣದಿಂದ, ಕ್ಷೀಣದುಃಖಫಲಾ - ನಶಿಸಿಹೋದ ದುಃಖಫಲವುಳ್ಳವಳು, ಅಸಿ - ಆದೆಯೋ, ತೇನ - ಆ

ಮಹಾ ಪರಾಕ್ರಮಿಯೂ, ವಾಯುಪುತ್ರನೂ ಆದ ಆಂಜನೇಯನು, ಸೀತಾದೇವಿಗೆ ನಂಬುಗೆಯನ್ನುಂಟುಮಾಡಲೋಸುಗ ಪುನಃ ಆಕೆಯನ್ನು ಕುರಿತು, "ಎಲೌ ಮಹಾ ಭಾಗ್ಯವತಿಯೆ, ಸೀತಾದೇವಿಯೆ! ನಾನು ಯಥಾರ್ಥವಾಗಿಯೂ ವಾನರನೇ ಎಂದು ತಿಳಿಯುವವಳಾಗು. ನಾನು ಮಹಾ ಬುದ್ಧಿಶಾಲಿಯಾದ ಶ್ರೀರಾಮನ ದೂತನು. ಎಲೌ ದೇವಿಯೇ! ಇದೋ ನೋಡು; ಶ್ರೀರಾಮನಾಮಾಂಕಿತವಾಗಿರುವ ಈ ಉಂಗುರವನ್ನು ನಿನಗೆ ನಂಬುಗೆಯನ್ನುಂಟುಮಾಡುವುದಕ್ಕಾಗಿ ಗುರುತಾಗಿ ತಂದಿರುವೆನು. ಇದನ್ನು ಮಹಾತ್ಮನಾದ ಶ್ರೀರಾಮನೇ ನನ್ನ ಕೈಗೆ ಕೊಟ್ಟು ಕಳುಹಿಸಿರುವನು. ಎಲೆ ತಾಯೇ! ಇನ್ನು ನೀನು ಶಂಕಿಸಬೇಡ; ನಿಶ್ಚಿಂತಳಾಗು. ನಿನಗೆ ಮಂಗಳವಾಗಲಿ!

¶ ಈ ಶ್ಲೋಕದಲ್ಲಿನ ವಿಶೇಷಾರ್ಥ:—ಸೀತಾದೇವಿಯು ಮಾರುತಿಯಿತ್ತ ರಾಮಾಂಗುಳೀಯಕವನ್ನು ಸ್ವೀಕರಿಸಿ, ದೇಶಾಂತರಗತನಾದ ಬಂಧುದರ್ಶನದಿಂದಲೆಂಬಂತೆ ಅತ್ಯಂತ ಸಂತೋಷಭರಿತಳಾದಳು. (ಇಲ್ಲಿ ವರ್ತಮಾನಾರ್ಥಕ ಶಾನಚ್‌ಪ್ರತ್ಯಯದಿಂದ, ಆಕೆಯು ಆಯಂಗುಳೀಯಕದಲ್ಲಿಟ್ಟ ದೃಷ್ಟಿಯನ್ನು ಚಲನಗೊಳಿಸದಿದ್ದಳು ಎಂಬ ಸ್ವಾರಸಿಕಾರ್ಥವು ದ್ಯೋತಿತವಾಗುವುದು). ಆಯಂಗುಳೀಯಕವನ್ನು ಸೀತೆಯು ಮೊದಲು ಸ್ಪರ್ಶಿಸಿದ್ದು ವಿವಾಹ ಕಾಲದಲ್ಲಿ; ಶ್ರೀರಾಮನ ಕೈಹಿಡಿದಾಗ. ತಾನು ಮೊದಲು ಮಾಯಾವಿಯಾದ ರಾವಣನೆಂದೇ ಶಂಕಿಸಿದ್ದ ಆ ಮಾರುತಿಯು ಕೊಟ್ಟ ತನ್ನ ಪತಿಯ ಆ ಅಂಗುಳೀಯಕವನ್ನು ತೆಗೆದುಕೊಂಡು ನೋಡುತ್ತ ಅಗಣ ಸಂತೋಷಾಧಿಕ್ಯವನ್ನು ಪಡೆದಳೆಂದೂ ಅರ್ಥವಾಗುವುದು. "ಇದು ನನ್ನ ಪತಿಯ ಪಾಣಿಗ್ರಹಣ ಕಾಲದಲ್ಲಿ ಆತನು ಧರಿಸಿದ್ದ ಕರಭೂಷಣವು. ಇದನ್ನೀಗ ನೋಡಿ ಸ್ಪರ್ಶಿಸುವ

HANUMAN GIVING RING



मुद्रिका

ಕ್ಷೀಣದುಃಖಫಲಾಹ್ಯಸಿ ॥ ೩ ॥ ಗೃಹೀತ್ವಾ ಪ್ರೇಕ್ಷಮಾಣಾ ಸಾ ಭರ್ತುಃ ಕರವಿಭೂಷಣಂ । ಭರ್ತಾರಮಿವ ಸಂಪ್ರಾಪ್ತಾ ಜಾನಕೀ ಮುದಿತಾ ಭವತ್ ॥ ೪ ॥ ಚಾರು ತದ್ವದನಂ ತಸ್ಯಾ ಸ್ತಾಮ್ರಶುಕ್ಲಾಯತೇಕ್ಷಣಂ । ¶ ಅಶೋಭತ ವಿಶಾಲಾಕ್ಷ್ಯಾ ರಾಹುಮುಕ್ತ ಇವೋಡುರಾಟ್ ॥ ೫ ॥ ತತಸ್ಸಾ ಹ್ರೀಮತೀ ಬಾಲಾ ಭರ್ತೃಸಂದೇಶ

ಕಾರಣದಿಂದ, ತೇ - ನಿನಗೆ, ಭದ್ರಂ - ಶುಭವಾಗುವದು. ‖ ೨-೩ ‖ ಸಾಜಾನಕೀ - ಆ ಸೀತಾದೇವಿಯು, ಭರ್ತುಃ - ಪತಿಯ, ಕರ....ಣಂ - ಅಂಗುಳೀಯಕವನ್ನು, ಗೃಹೀತ್ವಾ - ತೆಗದುಕೊಂಡು, ಪ್ರೇಕ್ಷಮಾಣಾ - ನೋಡುತ್ತಿರುವವಳಾಗಿ, ಭರ್ತಾರಂ - ಪತಿಯನ್ನು, ಸಂಪ್ರಾಪ್ತೇವ - ಹೊಂದಿದವಳಂತೆ, ಮುದಿತಾ - ಸಂತುಷ್ಟಳಾದವಳು, ಅಭವತ್ - ಆದಳು. ‖ ೪ ‖ ವಿಶಾಲಾಕ್ಷ್ಯಾಃ - ವಿಸ್ತಾರನೇತ್ರೆಯಾದ, ತಸ್ಯಾ-ಆ ಸೀತಾದೇವಿಯ, ತಾಮ್ರ....ಣಂ-ಕೆಂಪಾಗಿಯೂ, ಬಿಳುಪಾಗಿಯೂ, ವಿಸ್ತಾರವಾಗಿಯೂ ಇರುವ ನೇತ್ರಗಳುಳ್ಳ, ಚಾರು - ಸುಂದರವಾದ, ತದ್ವದನಂ - ಆ ಮುಖವು, ರಾಹುಮುಕ್ತಃ - ರಾಹುವಿನಿಂದ ಬಿಡಲ್ಪಟ್ಟ, ಉಡುರಾಡಿವ - ಚಂದ್ರನಂತೆ, ಅಶೋಭತ - ಹೊಳೆಯುತ್ತಿತ್ತು. ‖೫‖ ತತಃ ಅನಂತರ, ಹ್ರೀಮತೀ - ನಾಚಿಕೆಯುಳ್ಳ, ಭರ್ತೃ....ತಾ-ಪತ್ಯಾಜ್ಞೆಯಿಂದ ಮನಸ್ಸಂ

ನಿನ್ನ ದುಃಖಪರಂಪರೆಯೆಲ್ಲವೂ ನಶಿಸಿಹೋದುವೆಂದು ತಿಳಿ ” ಎಂದು ಹೇಳಿದನು. ಆಗ ಸೀತಾದೇವಿಯು ತನ್ನ ಭರ್ತನ ಹಸ್ತಾಭರಣವಾದ ಆ ಉಂಗುರವನ್ನು ಕೈಗೆ ತೆಗೆದುಕೊಂಡು ಅದನ್ನು ಕಂಡು, ತನ್ನ ಭರ್ತನನ್ನು ಕಂಡಂತೆಯೇ ಮಹದಾನಂದ ಭರಿತಳಾದಳು. ಕಮಲದೆಳೆಯಂತೆ ವಿಶಾಲವಾಗಿ, ಕೆಂಪಾದ ತುದಿಗಳುಳ್ಳುವಾಗಿ ಬಹು ಸುಂದರವಾದ ನೇತ್ರಗಳುಳ್ಳ ಆ ಸೀತಾದೇವಿಯ ಮುಖವು ಆ ಸಮಯದಲ್ಲಿ ರಾಹುಗ್ರಹದಿಂದ ಮುಕ್ತವಾದ ಚಂದ್ರನಂತೆ ಪ್ರಕಾಶಿಸುತ್ತಿದ್ದಿತು. ಆಗಲಾಕೆಯು ತನ್ನ ಮನೋವಲ್ಲಭನಾದ ಶ್ರೀರಾಮನು ಹೇಳಿಕಳುಹಿಸಿರುವ ಮಾತುಗಳನ್ನು ಕೇಳಿ ಪುಳುಕಿತಗಾತ್ರೆಯಾಗಿ, ಕೂಡಲೇ ಲಜ್ಜೆಗೊಂಡು ಅಂತಸ್ಸಂತೋಷಭರಿತಳಾಗಿ ವಾನರೋತ್ತಮನಾದ ಆ ಹನುಮಂತ

ಭಾಗ್ಯವೊದಗಿತಲ್ಲವೆ!” ಎಂದು ಆಕೆಯು ಅತ್ಯಂತ ಸಂತೋಷಭರಿತಳಾದಳು. ಅಲ್ಲದೆ “ಅದರಲ್ಲಿಯೇ ನೆಟ್ಟದೃಷ್ಟಿಯುಳ್ಳವಳಾದಳು.” ಎಂದು ಮತ್ತೊಂದು ಅರ್ಥವು. (ಅಂದು ದೇವಿಯು ಅನುಭವಿಸಿದ ಭೋಗಾತಿಶಯವು ಇಂದು ಆಕೆಗೆ ಅರಿವಾಗಿ ಅದರಿಂದ ಆಕೆಗೆ ವರ್ಣನಾತೀತವಾದ ಸಂತೋಷವುಂಟಾಯಿತು” ಎಂದು ಕತಕರು ಬರೆಯುತ್ತಾರೆ). ಭೋಗಾತಿಶಯದಿಂದ ಸೀತೆಗೆ ಪ್ರಣಯಕೋಪವುಂಟಾಗಿ ಆಕೆಗೂ, ರಾಮನಿಗೂ ಪರಸ್ಪರ ಸಂಭಾಷಣಾದಿಗಳು ನಿಂತುಹೋಗಿ, ಆಕೆಯು ಮಾತನಾಡಬೇಕೆಂದು ಬಯಸಿದರೂ ಬಿಂಕದಿಂದ ಸುಮ್ಮನಿರಲು, ರಾಮನು ತನ್ನ ಬೆರಳಿನಲ್ಲಿದ್ದ ಅಂಗುಳೀಯಕವನ್ನು ಮೆಲ್ಲನೆ ಕೆಳಕ್ಕೆ ಹಾಕಿದನು. ಆಗ ಸೀತೆಯು ಅದನ್ನು ಅವನಿಗೆ ತಿಳಿಸಿದಳು. ಆ ಸಮಯದಲ್ಲಿ ಇಬ್ಬರಿಗೂ ಸಂಭಾಷಣೆಯ ಮೂಲಕ ಕೋಪವು ದೂರವಾದುದಲ್ಲದೆ ಆಲಿಂಗನಾದಿಗಳೂ ನಡೆದವು. ಹೀಗೆ ಅಂತಹ ಸಂದರ್ಭಗಳಲ್ಲಿ ಇಬ್ಬರಿಗೂ ಘಟಕಭೂತವಾಗಿದ್ದ ಆಯಂಗುಳೀಯಕವನ್ನು ನೋಡಿದ ಸೀತೆಯು, ಮೊದಲು ಆಯಂಗುಳೀಯಕದಿಂದಲಂಕೃತವಾಗಿದ್ದ ತನ್ನ ಪತಿಯ ಕರವನ್ನೂ, ಆ ಮೇಲೆ ಆತನ ಬಾಹುಗಳನ್ನೂ, ಆ ಬಳಿಕ ಆತನ ವಿಗ್ರಹವನ್ನೂ ಸ್ಮರಿಸಿಕೊಂಡು ಅಭಾವನಾಧಿಕ್ಯದಿಂದ, ಅವನು ತನ್ನ ಮುಂಗಡೆಯೇ ನಿಂತಿರುವನೆಂದು ತಿಳಿದು ಅದನ್ನು ಅಪ್ಪಿಕೊಂಡಳು. ಪೂಜ್ಯನಾದ ವಾಲ್ಮೀಕಿಮುನಿಯು, ಜನನಿಯ ಭೋಗವು ಅವರ್ಣನೀಯವಾದುದರಿಂದ, “ಸಂಪ್ರಾಪ್ತೇವ—ಹೊಂದಿದಂತೆ” ಎಂದು ಮಾತ್ರ ಹೇಳಿರುವನು. (ತನಿಶ್ಲೋಕೀ)

¶ “ಬಭೂವ ಹರ್ಷೋದಗ್ರಾಂಚ” ತಿ. ರಾ. ಪಾ.

ಹರ್ಷಿತಾ । ಪರಿತುಷ್ಟಾ ಪ್ರಿಯಂ ಕೃತ್ವಾ ಪ್ರಶಶಂಸ ಮಹಾಕಪಿಂ ॥ ೬ ॥ "ವಿಕ್ರಾಂತಸ್ತ್ವಂ ಸಮರ್ಥಸ್ತ್ವಂ ಪ್ರಾಜ್ಞಸ್ತ್ವಂ ವಾನರೋತ್ತಮ!।ಯೇನೇದಂ ರಾಕ್ಷಸ ಪದಂ ತ್ವಯೈಕೇನ ಪ್ರಧರ್ಷಿತಂ ॥ ೭ ॥ ಶತಯೋಜನವಿಸ್ತೀರ್ಣಃ ಸಾಗರೋ ಮಕರಾಲಯಃ । ವಿಕ್ರಮಶ್ಲಾಘನೀಯೇನ ಕ್ರಮತಾ ಗೋಷ್ಪದೀಕೃತಃ ॥ ೮ ॥ ನಹಿ ತ್ವಾಂ ಪ್ರಾಕೃತಂ ಮನ್ಯೇ ವಾನರಂ ವಾನರರ್ಷಭ! । ಯಸ್ಯ ತೇ ನಾಸ್ತಿ ಸಂತ್ರಾಸೋ ರಾವಣಾನ್ನಾಪಿ ಸಂಭ್ರಮಃ ॥ ೯ ॥ ಅರ್ಹಸೇಚ ಕಪಿಶ್ರೇಷ್ಠ! ಮಯಾ ಸಮಭಿ

ತೋಷವುಳ್ಳ, ಸಾಬಾಲಾ-ಆ ಸೀತಾದೇವಿಯು, ಪರಿತುಷ್ಟಾ-ಬಹಿಸ್ಸಂತೋಷವುಳ್ಳವಳಾಗಿ, ಪ್ರಿಯಂ-ಆದರಣೆಯನ್ನು, ಕೃತ್ವಾ - ಮಾಡಿ, ಮಹಾಕಪಿಂ - ವಾನರಶ್ರೇಷ್ಠನನ್ನು, ಪ್ರಶಂಶಸ - ಸ್ತುತಿಸಿದಳು. ||೬|| ಹೇ ವಾನರೋತ್ತಮ - ಎಲೈ ಕಪಿಶ್ರೇಷ್ಠನೇ, ಏಕೇನ - ಒಬ್ಬಂಟಿಗನಾದ, ತ್ವಯಾ- ನಿನ್ನಿಂದ, ಇದಂರಾಕ್ಷಸಪದಂ - ಈ ರಾಕ್ಷಸಸ್ಥಾನವು, ಯೇನ - ಯಾವ ಕಾರಣದಿಂದ, ಪ್ರಧರ್ಷಿತಂ - ಹೆದರಿಸಲ್ಪಟ್ಟಿತೋ, ತೇನ - ಆ ಕಾರಣದಿಂದ, ತ್ವಂ - ನೀನು, ವಿಕ್ರಾಂತಃ - ಶೂರನು, ತ್ವಂ - ನೀನು, ಸಮರ್ಥಃ - ಕಾಲದೇಶಗಳಿಗೆ ತಕ್ಕ ಕೆಲಸಗಳಲ್ಲಿ ಸಮರ್ಥನು, ತ್ವಂ - ನೀನು, ಪ್ರಾಜ್ಞಃ - ತತ್ವಾರ್ಥವನ್ನರಿತವನು. ||೭|| ಕ್ರಮತಾ - ಸಮುದ್ರವನ್ನು ಲಂಘಿಸುತ್ತಿರುವ, ವಿಕ್ರ....ನ - ಪರಾಕ್ರಮದಿಂದ ಸ್ತುತಿಸತಕ್ಕ ನಿನ್ನಿಂದ, ಶತ....ರ್ಣಃ - ನೂರುಗಾವುದ ವಿಸ್ತಾರವಾದ, ಮಕರಾಲಯಃ - ಮೊಸಳೆಗಳಿಗೆ ಸ್ಥಾನವಾದ, ಸಾಗರಃ - ಸಮುದ್ರವು, ಗೋಷ್ಪದೀಕೃತಃ - ಗೋಷ್ಪಾದ ಪ್ರಮಾಣವುಳ್ಳುದಾಗಿ ಮಾಡಲ್ಪಟ್ಟಿತು. ॥ ೮ ॥ ಹೇ ವಾನರರ್ಷಭ - ಎಲೈ ವಾನರಶ್ರೇಷ್ಠನೇ, ಯಸ್ಯತೇ - ಯಾವ ನಿನಗೆ, ಸಂತ್ರಾಸಃ - ಸಮುದ್ರಭಯವು, ನಾಸ್ತಿ - ಇಲ್ಲವೋ, ರಾವಣಾದಪಿ - ರಾವಣನಿಂದಲೂ ಕೂಡ, ಸಂಭ್ರಮಃ - ವ್ಯಾಕುಲವು, ನಾಸ್ತಿ - ಇಲ್ಲವೋ, ತ್ವಾಂ - ನಿನ್ನನ್ನು, ಪ್ರಾಕೃತಂ - ಕ್ಷುದ್ರನಾದ, ವಾನರಂ - ಕಪಿಯನ್ನಾಗಿ, ನಮನ್ಯೇಹಿ - ತಿಳಿಯುವುದಿಲ್ಲ, ॥ ೯ ॥ ಹೇ ಕಪಿಶ್ರೇಷ್ಠ-ಎಲೈ ಕಪಿವರನೆ, ಯದ್ಯಪಿ - ಯಾವ ಕಾರಣದಿಂದಲಾದರೂ, ವಿದಿತಾತ್ಮನಾ - ತಿಳಿಯಲ್ಪಟ್ಟ ಮನವುಳ್ಳ, ತೇನರಾಮೇಣ-ಆ ಶ್ರೀರಾಮನಿಂದ, ಪ್ರೇಷಿತಃ - ಕಳುಹಿಸಲ್ಪಟ್ಟಿಯೋ, ತೇನ - ಆ ಕಾರಣದಿಂದ, ತ್ವಂ - ನೀನು,

---

ನನ್ನು ಬಹಳವಾಗಿ ಸನ್ಮಾನಿಸಿ ಈ ರೀತಿ ಸ್ತುತಿಸಿದಳು. ॥ ೧–೬ ॥ " ಎಲೈ ವಾನರಶ್ರೇಷ್ಠನಾದ ಆಂಜನೇಯನೇ! ನೀನೊಬ್ಬನೇ ರಾಕ್ಷಸಭೂಯಿಷ್ಠವಾದ ಈ ಲಂಕಾನಗರವನ್ನು ನಿರ್ಭಯವಾಗಿ ಪ್ರವೇಶಿಸಿದೆ. ನಿನ್ನ ಬಲಪರಾಕ್ರಮಗಳು ಕೇವಲ ಪ್ರಶಂಸನೀಯವಾದವುಗಳು ; ಅವರ್ಣನೀಯವಾದವುಗಳು ; ಎಲೈ ಮಾರುತಿಯೇ! ನೀನು ಮಹಾ ಶೂರನು ; ನೀನೇ ಸಮರ್ಥನು ; ನಿನ್ನ ಬುದ್ಧಿಯು ಅಪಾರವಾದುದು ; ನೂರುಯೋಜನಗಳಗಲವುಳ್ಳುದಾಗಿ, ತಿಮಿತಿಮಿಂಗಿಲಾದಿ ಕ್ರೂರ ಸತ್ವಗಳಿಂದ ತುಂಬಿ ಭಯಂಕರವಾಗಿರುವ ಈ ಮಹಾ ಸಮುದ್ರವನ್ನು, ವಿಕ್ರಮಿಸಿ ಗೋಷ್ಪದವನ್ನೋಪಾದಿಯಲ್ಲಿ ಬಹು ಸುಲಭವಾಗಿ ಲಂಘಿಸಿರುವೆ! ವಾನರೋತ್ತಮನೇ! ಆಂಜನೇಯನೇ! ರಾವಣಾಸುರನಿಂದಲೂ ನಿನಗೆ ಎಳ್ಳಷ್ಟು ಸಂಭ್ರಮವಾಗಲಿ, ಭಯವಾಗಲಿ ಇಲ್ಲದಿರುವುದನ್ನು ನೋಡಿದರೆ ನೀನು ಸಾಮಾನ್ಯವಾನರನಂತೆ ಕಾಣುವುದಿಲ್ಲವು. ಓ ವಾನರಶ್ರೇಷ್ಠನೇ! ನೀನು ಆತ್ಮಜ್ಞಾನಿಯಾದ ಶ್ರೀರಾಮನಿಂದ ಪ್ರೇಷಿತನಾಗಿರುವೆ. ಆದುದರಿಂದ ನಿನ್ನೊಡನೆ ನಾನು ಮಾತನಾಡುವುದು ಯುಕ್ತವಾಗಿರುವುದು.

ಭಾಷಿತುಂ । ಯದ್ಯಪಿ ಪ್ರೇಷಿತಸ್ತೇನ ರಾಮೇಣ ವಿದಿತಾತ್ಮನಾ ॥ ೧೦ ॥ ಪ್ರೇಷ
ಯಿಷ್ಯತಿ ದುರ್ಧರ್ಷೋ ರಾಮೋ ನಹ್ಯಪರೀಕ್ಷಿತಂ । ಪರಾಕ್ರಮಮವಿಜ್ಞಾಯ ಮತ್ಸ
ಕಾಶಂ ವಿಶೇಷತಃ ॥ ೧೧ ॥ ದಿಷ್ಟ್ಯಾ ಚ ಕುಶಲೀ ರಾಮೋ ಧರ್ಮಾತ್ಮಾ ಸತ್ಯಸಂಗರಃ ।
ಲಕ್ಷ್ಮಣಶ್ಚ ಮಹಾತೇಜಾಸ್ಸುಮಿತ್ರಾನಂದವರ್ಧನಃ ॥ ೧೨ ॥ ¶ ಕುಶಲೀ ಯದಿ
ಕಾಕುತ್‌ಸ್ಥಃ ಕಿನ್ನು ಸಾಗರಮೇಖಲಾಂ । ಮಹೀಂ ದಹತಿ ಕೋಪೇನ ಯುಗಾಂ

ಮಯಾಸಹ - ನನ್ನೊಡನೆ, ಸಮಭಿಭಾಷಿತುಂಚ - ಮಾತಾಡುವದಕ್ಕೂ ಕೂಡ, ಅರ್ಹಸೀ - ಯೋಗ್ಯನಾಗಿರುವೆಯೋ? ॥ ೧೦ ॥ ದುರ್ಧರ್ಷಃ - ತಿರಸ್ಕರಿಸಲಶಕ್ಯನಾದ, ರಾಮಃ - ಶ್ರೀರಾಮನು, ವಿಶೇಷತಃ - ಅತಿಶಯವಾಗಿ, ಮತ್ಸಕಾಶಂ - ನನ್ನ ಸಮೀಪವನ್ನು ಕುರಿತು, ಪರಾಕ್ರಮಂ - ಸಾಮರ್ಥ್ಯವನ್ನು, ಅವಿಜ್ಞಾಯ - ಅರಿಯದೆ, ಅಪರೀಕ್ಷಿತಂ - ಪರಿಕ್ಷಿಸದಿರುವ ದೂತನನ್ನು, ನಪ್ರೇಷಯಿಷ್ಯತಿ- ಕಳುಹಿಸುವದಿಲ್ಲವು. ॥ ೧೧ ॥ ಧರ್ಮಾತ್ಮಾ - ಧರ್ಮಿಷ್ಠನಾದ, ಸತ್ಯಸಂಗರಃ - ಸತ್ಯಯುದ್ಧಮಾಡುವವನಾದ, ರಾಮಃ - ಶ್ರೀರಾಮನು, ದಿಷ್ಟ್ಯಾ - ದೈವವಶದಿಂದ, ಕುಶಲೀಚ - ಕ್ಷೇಮವಷ್ಟೆ, ಮಹಾತೇಜಾಃ - ಮಹಾಪರಾಕ್ರಮಶಾಲಿಯಾದ, ಸುಮಿ....ನಃ - ಸುಮಿತ್ರಾದೇವಿಗೆ ಸಂತೋಷವನ್ನು ವೃದ್ಧಿಗೊಳಿಸುವ, ಲಕ್ಷ್ಮಣಶ್ಚ - ಲಕ್ಷ್ಮಣನೂ ಕೂಡ, ಕುಶಲೀ - ಕ್ಷೇಮವಾಗಿರುವನೇ. ॥೧೨॥ ಕಾಕುತ್ಸ್ಥಃ- ಶ್ರೀರಾಮನು, ಕುಶಲೀಯದಿ - ಕ್ಷೇಮವಂತನಾಗಿದ್ದವನಾದರೆ, ಉತ್ಥಿತಃ - ಮೇಲಕ್ಕೆ ಉಕ್ಕಿಬರುವ, ಯುಗಾಂ....ವ - ಪ್ರಳಯಾಗ್ನಿಯಂತೆ, ಕೋಪೇನ - ಕೋಪದಿಂದ, ಸಾಗ....ಲಾಂ - ಸಮುದ್ರವೇ

ವುದು. ನೀನು ನಿಜವಾಗಿಯೂ ಸಂಭಾಷಣಾರ್ಹನಾಗಿರುವೆ. ಎಲೈ ಕಪಿಸಿಂಹನೇ! ವಿರೋಧಿಗಳಿಂದ ಅಜೇಯವಾದ ಪರಾಕ್ರಮವುಳ್ಳ ಶ್ರೀರಾಮನು ನಿನ್ನ ಬಲಪರಾಕ್ರಮಗಳನ್ನರಿಯದೆ, ಚೆನ್ನಾಗಿ ನಿನ್ನನ್ನು ಪರೀಕ್ಷಿಸದೆ ನಿನ್ನನ್ನಿಲ್ಲಿಗೆ ಕಳುಹಿಸನು. ಅದರಲ್ಲಿಯೂ ನನ್ನಲ್ಲಿಗೆ ಕಳುಹಿಸಿರುವ ವಿಷಯದಲ್ಲಿ ಹೇಳಬೇಕಾದುದೇ ಇಲ್ಲವು. ॥ ೬—೧೧ ॥ ನೀನು ಮಹಾ ಬಲಪರಾಕ್ರಮಗಳುಳ್ಳವನೆಂಬುದರಲ್ಲಿ ಸಂಶಯವಿಲ್ಲವು. ಹನುಮಂತ! ನನ್ನ ಅದೃಷ್ಟವಶದಿಂದ ಸತ್ಯಪ್ರತಿಜ್ಞೆಯುಳ್ಳವನಾಗಿ, ಧರ್ಮಾತ್ಮನಾಗಿರುವ ಶ್ರೀರಾಮನೂ, ಸುಮಿತ್ರಾ ಪುತ್ರನಾದ ಲಕ್ಷ್ಮಣನೂ ಕ್ಷೇಮವಾಗಿರುವರೆಂಬ ಸುವಾರ್ತೆಯನ್ನು ನಿನ್ನಿಂದ ಕೇಳಿದೆನು. ಕಕುತ್ಸ್ಥ ವಂಶೋದ್ಭವನಾದ ಶ್ರೀರಾಮನು ಕ್ಷೇಮವಾಗಿದ್ದರೆ, ಆತನಿಗೆ ಪ್ರಿಯಭಾರ್ಯೆಯಾದ ನಾನು ಕಾಣದಿರುವುದರಿಂದ ಆತನು ಮಹಾ ಕೋಪವನ್ನು ಹೊಂದಿ ಪ್ರಳಯಕಾಲದ ಅಗ್ನಿಹೋತ್ರನಂತೆ ಬಹಳವಾಗಿ ಕನಲಿ ಚತುಸ್ಸಮುದ್ರಪರಿವೇಷ್ಟಿತವಾದ ಈ ಭೂಮಿಯೆಲ್ಲವನ್ನೂ ದಹಿಸದಿರುವನೇ? ಆತನು ಹಾಗೆ ದಹಿಸದಿರಲು ಕಾರಣವಾದರೂ ಏನು? ಅಲ್ಲದೆ ಶ್ರೀರಾಮ

¶ ಈ ಶ್ಲೋಕದಲ್ಲಿ ಸೀತಾದೇವಿಯು ಪ್ರಣಯದೋಷದಿಂದ, ದೂತನೆಂಬುದನ್ನೂ ಗಮನಿಸದೆ ಅವನೆದುರಿಗೇ ತನ್ನ ಪ್ರಿಯನಾದ ರಾಮನನ್ನು ನಿಂದಿಸುತ್ತಾಳೆ. "ಎಲೈ ಮಾರುತಿಯೇ! ಇತರರ ಪರಿಭವವನ್ನು ಸಹಿಸದ ಕಾಕುತ್ಸ್ಥನು ತನಗೆ ಪರಿಭವವಾದರೂ ಅವನ್ನು ಸಹಿಸಬೇಕೆಂಬ ನಿಯಮವನ್ನಿಟ್ಟುಕೊಂಡಿರುವನೇ! (ತನ್ನ ಪತ್ನಿಗಾದ ಪರಿಭವವು ತನಗಾದುದುಲ್ಲವೆಂದು ತಿಳಿದಿರುವನೇ?) ನನಗಿಂತಹ ಅವಮಾನವಾಗಿರುವಾಗ ನನ್ನ ಪತಿಯಾದ ಶ್ರೀರಾಮನು ಇದಕ್ಕೆ ಪ್ರತೀಕಾರರೂಪವಾಗಿ, ಚತುಸ್ಸಾಗರಪರಿವೃತವಾದ ಈ ಮಹೀಮಂಡಲವನ್ನೇ ದಹಿಸಿಬಿಡಬೇಕು. ಅವನು ಪರಪರಿಭವಾಸಹನಪ್ರಿಯನಾದುದರಿಂದ ಅವನು ಹಾಗೆಂದಿಗೂ ಮಾಡುವುದಿಲ್ಲ. ನನಗೆ ಗೊತ್ತುಂಟು. (ಇಲ್ಲಿ "ಕಿಂನು

ತಾಗ್ನಿರಿವೋತ್ಥಿತಃ? ‖ ೧೩ ‖ ಅಥವಾ ಶಕ್ತಿಮಂತೌ ತೌ ಸುರಾಣಾಮಪಿ ನಿಗ್ರಹೇ । ಮಮೈವತು ನ ದುಃಖಾನಾಮಸ್ತಿ ಮನ್ಯೇ ವಿಪರ್ಯಯಃ ‖ ೧೪ ‖ ಕಚ್ಚಿನ್ನ ವ್ಯಥಿತೋ ರಾಮಃ ಕಚ್ಚಿನ್ನಪರಿತಪ್ಯತೇ । ಉತ್ತರಾಣಿಚ ಕಾರ್ಯಾಣಿ ಕುರುತೇ ಪುರುಷೋತ್ತಮಃ ‖ ೧೫ ‖ ಕಚ್ಚಿನ್ನದೀನಸ್ಸಂಭ್ರಾಂತಃ ಕಾರ್ಯೇಷುಚ ನಮುಹ್ಯತಿ । ಕಚ್ಚಿತ್ ಪುರುಷಕಾರ್ಯಾಣಿ ಕುರುತೇ ನೃಪತೇಸ್ಸುತಃ ‖ ೧೬ ‖ ದ್ವಿವಿಧಂ ತ್ರಿವಿಧೋ

ಓಡ್ಯಾಣ್ಯವಾಗಿಯುಳ್ಳ, ಮಹೀಂ - ಭೂಮಿಯನ್ನು, ದಹತಿಕಿನ್ನು - ಸುಡುವನಲ್ಲವೇ? ‖ ೧೩ ‖ ಅಥವಾ - ಹಾಗಲ್ಲದಿದ್ದರೆ, ಸುರಾಣಾಂ - ದೇವತೆಗಳ, ನಿಗ್ರಹೇಪಿ - ಸಂಹಾರದಲ್ಲಿಯೂ ಕೂಡ, ತೌ - ಆ ರಾಮಲಕ್ಷ್ಮಣರು, ಶಕ್ತಿಮಂತೌ - ಸಾಮರ್ಥ್ಯವಂತರು, ಕಿಂತು - ಆದರೆ, ಮಮ - ನನಗೆ, ದುಃಖಾನಾಂ - ದುಃಖಗಳ, ವಿಪರ್ಯಯಏವ - ವ್ಯತ್ಯಾಸವೇ, ನಾಸ್ತಿ - ಇಲ್ಲವು, ಇತಿ - ಇಂತೆಂದು, ಮನ್ಯೇ - ಭಾವಿಸುತ್ತೇನೆ. ‖೧೪‖ ಪುರುಷೋತ್ತಮಃ - ಪುರುಷಶ್ರೇಷ್ಠನಾದ, ರಾಮಃ - ಶ್ರೀರಾಮನು, ನವ್ಯಥಿತೋಕಚ್ಚಿತ್ - ವ್ಯಥೆಪಡದೆ ಇರುವನೆ, ನಪರಿತಪ್ಯತೇಕಚ್ಚಿತ್ - ಸಂತಾಪಗೊಳ್ಳುವುದಿಲ್ಲವೆ, ಉತ್ತರಾಣಿಕಾರ್ಯಾಣಿಚ - ಮುಂದಿನ ಪ್ರಯತ್ನಗಳನ್ನೂ ಕೂಡ, ಕುರುತೇಕಚ್ಚಿತ್ - ಮಾಡುತ್ತಿರುವ· ‖ ೧೫ ‖ ನೃಪತೇಃ - ದಶರಥರಾಯನುಸುತಃ - ಮಗನಾದ ಶ್ರೀರಾಮನು, ನದೀನಃ - ದೈನ್ಯಹೊಂದದೇ ಇರುವವನಾಗಿ, ಸಂಭ್ರಾಂತಃಕಚ್ಚಿತ್ - ಮೋಹವನ್ನೈದದೇ ಇರುವನೆ, ಪುರುಷಕಾರ್ಯಾಣಿ - ಮನುಷ್ಯಪ್ರಯತ್ನಗಳನ್ನು, ಕುರುತೇಕಚ್ಚಿತ್ - ಮಾಡುತ್ತಲಿದ್ದಾನೆಯೇ? ‖ ೧೬ ‖ ಪರಂತಪಃ -

---

ಲಕ್ಷ್ಮಣರೀರ್ವರೂ ದೇವತೆಗಳನ್ನಾದರೂ ಜಯಿಸಬಲ್ಲ ಸಮರ್ಥರು; ಅವರು ಈ ರಾವಣನನ್ನು ವಧಿಸಿ ನನ್ನನ್ನು ಕರೆದುಕೊಂಡು ಹೋಗುವುದೇನತಿಶಯ? ಆದರೆ ನನ್ನ ವ್ಯಸನಗಳಿಗಿನ್ನೂ ಕೊನೆಗಾಲವು ಬರಲಿಲ್ಲವೆಂದು ತೋರುವುದು! ಆದುದರಿಂದ ಅವರಿಬ್ಬರೂ ಹಾಗೆ ಸುಮ್ಮನಿರುವರು. ಅದು ಹಾಗಿರಲಿ! ಎಲೈ ಕಪಿಸಾರ್ವಭೌಮನೇ! ಶ್ರೀರಾಮಚಂದ್ರನು ನನಗಾಗಿ ವ್ಯಸನಪಟ್ಟು ನಿರಂತರವೂ ತಪಿಸುತ್ತಿಲ್ಲವಷ್ಟೆ! ನನಗಾಗಿಯೇ ಸಸಂತತವೂ ದುಃಖಸಮುದ್ರದಲ್ಲಿ ಮುಳುಗಿಲ್ಲವಷ್ಟೆ! ಪುರುಷೋತ್ತಮನಾದ ಶ್ರೀರಾಮನು ನಿರಂತರವೂ ಚಿಂತಾಕ್ರಾಂತನಾಗಿರದೆ ಮುಂದೆ ತಾನು ಮಾಡಬೇಕಾದ ಕೆಲಸಗಳಲ್ಲಿ ಜಾಗರೂಕನಾಗಿರುವನೇ? ‖೧೨–೧೫‖ ಮಾನವೇಶ್ವರನಾದ ದಶರಥರಾಯನಿಗೆ ಪುತ್ರನಾದ ಶ್ರೀರಾಮನು ಯಾವಾಗಲೂ ದೈನ್ಯವನ್ನೇ ಹೊಂದಿ ಸಂಭ್ರಮದಿಂದ ಕರ್ತವ್ಯವನ್ನು ಕೆಡಿಸುತ್ತಿಲ್ಲವಷ್ಟೆ? ವ್ಯಾಮೋಹಕ್ಕೆ ಕಟ್ಟುಬೀಳದೆ ಸಮಸ್ತ ಪುರುಷ ಪ್ರಯತ್ನಗಳನ್ನೂ ಆತನು ತಪ್ಪದೆ

ಸಾಗರಮೇಖಲಾಂ" ಎಂಬ ವಿಶೇಷಣದಿಂದ ಈ ಅರ್ಥವು ದ್ಯೋತಿತವಾಗುವುದು. ದ್ರವದ್ರವ್ಯವನ್ನೊಂದು ಬಾಣದಿಂದಲೂ, ಕಠಿನದ್ರವ್ಯವನ್ನೊಂದು ಬಾಣದಿಂದಲೂ ದಹಿಸುವನೇನು? ಸಾಗರಸಲಿಲವನ್ನೇ ತೈಲವನ್ನಾಗಿ ಮಾಡಿಕೊಂಡು ಭೂಮಂಡಲವೆಲ್ಲವನ್ನೂ ದಹಿಸುವುದಕ್ಕೆ ಶ್ರೀರಾಮಮೂರ್ತಿಯು ಸಮರ್ಥನೇ ಅಹುದು. ಅಥವಾ ನನ್ನ ಸವತಿಯಾದ ಭೂದೇವಿಯನ್ನು ಪರಿಧಾನಗಳಿಂದ ರಕ್ಷಿಸುವನಲ್ಲವೆ? ಅನಾದಿಯಿಂದಲೂ ಮರ್ಯಾದಿಸಿಕೊಂಡು ಬಂದಿರುವ ಭೂದೇವಿಯನ್ನು ದಹಿಸಲು ಹೇಗೆತಾನೆ ಸಮರ್ಥನಾದಾನು? "ಯುಗಾಂತಾಗ್ನಿರಿವ" ಭೂಮಿಯಮೇಲೆ ಆತನಿಗಿರುವ ಮರ್ಯಾದೆಯೆಲ್ಲವೂ ಆತನ ನಯನರಾಗಪರ್ಯಂತವೇ ಹೊರ್ತು ಮತ್ತೆ ಬೇರೆಯಲ್ಲವು. ಕಾಕುತ್ಸ್ಥನು ಕುಶಲಿಯಾಗಿದ್ದಲ್ಲಿ ಈ ಭೂಮಂಡಲವೆಲ್ಲವನ್ನೂ ದಹಿಸದೇಕಿರುವನು? ಶಕ್ತನಾದರೆ ದಹಿಸಿಯೇ ದಹಿಸುವನು; ದಹಿಸುವುದಿಲ್ಲ; ಏಕೆ? ಶಕ್ತಿಯಿಲ್ಲ!) (ತನಿಶ್ಲೋಕಿ)

ಪಾಯಮುಪಾಯಮಪಿ ಸೇವತೇ । ¶ ವಿಜಿಗೀಷು ಸ್ಸುಹೃತ್ಕಚ್ಚಿನ್ಮಿತ್ರೇಷು ಚ ಪರಂ ತಪಃ? ‖ ೧೭ ‖ ಕಚ್ಚಿನ್ಮಿತ್ರಾಣಿ ಲಭತೇ ಮಿತ್ರೈಶ್ಚಾಪ್ಯಭಿಗಮ್ಯತೇ । ಕಚ್ಚಿತ್ಕಲ್ಯಾಣ ಮಿತ್ರಶ್ಚ ಮಿತ್ರೈಶ್ಚಾಪಿ ಪುರಸ್ಕೃತಃ? ‖ ೧೮ ‖ ಕಚ್ಚಿದಾಶಾಸ್ತಿ ದೇವಾನಾಂ ಪ್ರಸಾದಂ ಪಾರ್ಥಿವಾತ್ಮಜಃ । ಕಚ್ಚಿತ್ಪುರುಷಕಾರಂಚ ದೈವಂಚ ಪ್ರತಿಪದ್ಯತೇ? ‖೧೯‖ ಕಚ್ಚಿನ್ನವಿಗತಸ್ನೇಹಃ ☋ ಪ್ರವಾಸಾನ್ಮಯಿ ರಾಘವಃ । ಕಚ್ಚಿನ್ಮಾಂ ವ್ಯಸನಾದಸ್ಮಾ ನ್ಮೋಕ್ಷಯಿಷ್ಯತಿ ವಾನರ? ‖ ೨೦ ‖ ಸುಖಾನಾಮುಚಿತೋ ನಿತ್ಯಮಸುಖಾನಾ

ಶತ್ರುನಾಶಕನಾದ ಶ್ರೀರಾಮನು, ಮಿತ್ರೇಷು - ಸ್ನೇಹಿತರ ವಿಷಯದಲ್ಲಿ, ಸುಹೃತ್ಸನ್ - ಮಿತ್ರನಾದವನಾಗಿ, ದ್ವಿವಿಧಂ - ಸಾಮದಾನರೂಪವಾದ, ಉಪಾಯಂ - ಯುಕ್ತಿಯನ್ನು, ಸೇವತೇಕಚ್ಚಿತ್ - ಸೇವಿಸುತ್ತಾನೆಯೇ, (ಅಮಿತ್ರೇಷುಚ - ಶತ್ರುಗಳ ವಿಷಯದಲ್ಲಿಯೂ), ವಿಜಗೀಷುಸ್ಸನ್ - ಜಯೇಚ್ಛೆಯುಳ್ಳವನಾಗಿ, ತ್ರಿವಿಧೋಪಾಯಂ - ದಾನ, ಭೇದ, ದಂಡಗಳೆಂಬ ಮೂರು ಉಪಾಯಗಳನ್ನು, ಸೇವತೇಕಚ್ಚಿತ್ - ಉಪಯೋಗಿಸುತ್ತಾನೆಯೇ. ‖೧೭‖ ಮಿತ್ರಾಣಿ - ಸ್ನೇಹಿತರನ್ನು, ಲಭತೇಕಚ್ಚಿತ್-ಹೊಂದುತ್ತಿರುವನೇ, ಮಿತ್ರೈಶ್ಚಾಪಿ - ಮಿತ್ರರಿಂದಲೂ, ಅಭಿಗಮ್ಯತೇಕಚ್ಚಿತ್ - ಸ್ವಪ್ರಯತ್ನದಿಂದಲೇ ಹೊಂದಲ್ಪಟ್ಟಿರುವನೆ, ಕಲ್ಯಾಣಮಿತ್ರಶ್ಚ - ಸೌಮ್ಯಸಖರುಳ್ಳವನಾಗಿರುನೇ, ಮಿತ್ರೈಶ್ಚಾಪಿ - ಸಖರಿಂದಲೂ, ಪುರಸ್ಕೃತಃಕಚ್ಚಿತ್ - ಬಹುಮಾನಿಸಲ್ಪಟ್ಟಿದ್ದಾನೆಯೇ. ‖ ೧೮ ‖ ಪಾರ್ಥಿವಾತ್ಮಜಃ - ರಾಜಪುತ್ರನಾದ ಶ್ರೀರಾಮನು, ದೇವಾನಾಂ - ದೇವತೆಗಳ, ಪ್ರಸಾದಂ - ಅನುಗ್ರಹವನ್ನು ಕುರಿತು, ಆಶಾಸ್ತಿಕಚ್ಚಿತ್ - ಪ್ರಾರ್ಥಿಸುತ್ತಾನೆಯೇ, ಪುರುಷಕಾರಂಚ - ಪ್ರಯತ್ನವನ್ನು, ದೈವಂಚ - ದೈವಾನುಕೂಲವನ್ನು, ಪ್ರತಿಪದ್ಯತೇಕಚ್ಚಿತ್-ಹೊಂದಿರುವನೇ. ‖೧೯‖ ರಾಘವಃ ಶ್ರೀರಾಮನು, ಪ್ರವಾಸಾತ್ - ಅಗಲುವಿಕೆಯಿಂದ, ಮಯಿ - ನನ್ನ ವಿಷಯದಲ್ಲಿ, ನವಿಗತಸ್ನೇಹಃಕಚ್ಚಿತ್ - ಕಳೆದುಹೋದ ಸ್ನೇಹವಿಲ್ಲದಿರುವನಷ್ಟೆ, ಹೇವಾನರ - ಎಲೈ ಕಪಿಯೇ, ಮಾಂ - ನನ್ನನ್ನು, ಅಸ್ಮಾದ್ವ್ಯಸನಾತ್ - ಈ ದುಃಖದಶೆಯಿಂದ, ಮೋಕ್ಷಯಿಷ್ಯತಿಕಚ್ಚಿತ್-ತಪ್ಪಿಸುವನೇ. ‖ ೨೦ ‖ ನಿತ್ಯಂ-ಯಾವಾಗಲೂ, ಸುಖಾನಾಂ-

---

ಮಾಡುತ್ತಿರುವನಲ್ಲವೆ? ಎಲೈ ಮಾರುತಿಯೇ! ವಿರೋಧಿಗಳನ್ನು ತಪಿಸುವಂತೆ ಮಾಡುವ ಶ್ರೀರಾಮನು ಜಯೇಚ್ಛೆಯುಳ್ಳವನಾಗಿ ಮಿತ್ರರಲ್ಲಿ ಸಾಮದಾನೋಪಾಯಗಳೆರಡನ್ನೂ, ವಿರೋಧಿಗಳಲ್ಲಿ ದಾನಭೇದ ದಂಡೋಪಾಯಗಳು ಮೂರನ್ನೂ ಪ್ರಯೋಗಿಸುತ್ತ ಆ ಆ ಕಾಲಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿರುವನೇ? ಆತನು ಹೊಸಹೊಸದಾಗಿ ಸ್ನೇಹಿತರನ್ನು ಸಂಪಾದಿಸುತ್ತಿರುವನೇ? ಅಲ್ಲದೆ ಇತರರೂ ಆತನ ಸ್ನೇಹವನ್ನು ಕೋರುತ್ತಿರುವರನೇ? ಎಲೈ ಹನುಮಂತನೇ! ಶ್ರೀರಾಮಚಂದ್ರನು ನನ್ನನ್ನು ಈ ದುಃಖಸಮುದ್ರದಿಂದ ಕಡೆಹಾಯಿಸುವನೇ? ‖ ೧೭–೨೦ ‖ ನಿರಂತರವೂ ಸುಖವನ್ನೇ ಅನುಭವಿಸತಕ್ಕವನೂ, ದುಃಖಾನು

¶ “ಇಲ್ಲಿಂದ ಮುಂದಕ್ಕೆ ಸೀತಾದೇವಿಯು, ತನ್ನ ಪತಿಯಾದ ರಾಮನು ರಾಜನೀತಿಶಾಸ್ತ್ರಾನುಗುಣವಾಗಿ (ಅರಣ್ಯವಾಸಿಯಾಗಿ, ಗೆಡ್ಡೆಗೆಣಸುಗಳನ್ನು ತಿನ್ನುತ್ತಿದ್ದರೂ ಅದನ್ನು ಮರೆಯದೆ) ನಡೆದುಕೊಳ್ಳುತ್ತಿರುವ ವಿಷಯದಲ್ಲಿ ಪ್ರಶ್ನಿಸುತ್ತಾಳೆ. ಸೀತೆಯು ಕ್ಷತ್ರಿಯನಂದಿನಿ; ಕ್ಷತ್ರಿಯಕುಲದಲ್ಲಿ ಬೆಳೆದವಳು; ಆದುದರಿಂದ ಆಕೆಗೆ ಕಾಮಂದಕ್ಯಾದಿ ರಾಜನೀತಿಶಾಸ್ತ್ರಗಳೆಲ್ಲವೂ ಕರತಲಾಮಲಕಪ್ರಾಯಗಳಾಗಿದ್ದುವೆ”ಂದು ಕತಕರು ಬರೆಯುತ್ತಾರೆ.

☋ “ಪ್ರಸಾದಾತ್” ಗೋ. ಪಾ. “ವಿವಾಸಾತ್” ತಿ. ಪಾ.

ಮನೂಚಿತಃ । ದುಃಖಮುತ್ತರಮಾಸಾದ್ಯ ಕಚ್ಚಿದ್ರಾಮೋ ನ ಸೀದತಿ ? ॥ ೨೧ ॥ ಕೌಸಲ್ಯಾಯಾಸ್ತಥಾ ಕಚ್ಚಿತ್ಸುಮಿತ್ರಾಯಾಸ್ತಥೈವಚ । ಅಭೀಕ್ಷ್ಣಂ ಶ್ರೂಯತೇ ಕಚ್ಚಿತ್ಕುಶಲಂ ಭರತಸ್ಯಚ ? ॥ ೨೨ ॥ ಮನ್ನಿಮಿತ್ತೇನ ಮಾನಾರ್ಹಃ ಕಚ್ಚಿಚ್ಛೋಕೇನ ರಾಘವಃ । ಕಚ್ಚಿನ್ನಾನ್ಯಮನಾ ರಾಮಃ ಕಚ್ಚಿನ್ಮಾಂ ತಾರಯಿಷ್ಯತಿ ? ॥ ೨೩ ॥ ಕಚ್ಚಿದಕ್ಷೌಹಿಣೀಂ ಭೀಮಾಂ ಭರತೋ ಭ್ರಾತೃವತ್ಸಲಃ । ಧ್ವಜಿನೀಂ ಮಂತ್ರಿಭಿರ್ಗುಪ್ತಾಂ ಪ್ರೇಷಯಿಷ್ಯತಿ ಮತ್ಕೃತೇ ? ॥ ೨೪ ॥ ವಾನರಾಧಿಪತಿಶ್ಶ್ರೀಮಾನ್ ಸುಗ್ರೀವಃ ಕಚ್ಚಿದೇಷ್ಯತಿ । ಮತ್ಕೃತೇ ಹರಿಭಿರ್ವೀರೈರ್ವೃತೋ ದಂತನಖಾಯುಧೈಃ ? ॥ ೨೫ ॥

ವಿಲಾಸಗಳಿಗೆ, ಉಚಿತಃ - ಅರ್ಹನಾದ, ದುಃಖಾನಾಂ - ವ್ಯಸನಗಳಿಗೆ, ಅನೂಚಿತಃ - ಅನರ್ಹನಾದ, ರಾಮಃ - ಶ್ರೀರಾಮನು, ಉತ್ತರಂ - ಅಧಿಕವಾದ, ದುಃಖಂ - ಶೋಕವನ್ನು, ಆಸಾದ್ಯ - ಹೊಂದಿ, ನಸೀದತಿಕಚ್ಚಿತ್ - ದುಃಖಿಸದಿರುವನೇ. ॥ ೨೧ ॥ ಕೌಸಲ್ಯಾಯಾಃ - ಕೌಸಲ್ಯಾದೇವಿಯ, ತಥಾ - ಹಾಗೆಯೇ, ಸುಮಿತ್ರಾಯಾಃ - ಸುಮಿತ್ರಾದೇವಿಯ, ಕುಶಲಂ - ಕ್ಷೇಮವು, ಶ್ರೂಯತೇಕಚ್ಚಿತ್ - ಕೇಳಲ್ಪಟ್ಟತೇ, ತಥೈವಚ - ಹಾಗೆಯೇ, ಭರತಸ್ಯ - ಭರತನ, ಕುಶಲಂ - ಕ್ಷೇಮವೂ, ಅಭೀಕ್ಷ್ಣಂ- ಬಾರಿಬಾರಿಗೂ, ಶ್ರೂಯತೇಕಚ್ಚಿತ್ - ಕೇಳಲ್ಪಟ್ಟತೆ. ॥ ೨೨ ॥ ಮಾನಾರ್ಹಃ - ಬಹುಮತಿಗೆ ಯೋಗ್ಯನಾದ, ರಾಘವಃ - ಶ್ರೀರಾಮನು, ಮನ್ನಿಮಿತ್ತೇನ - ನನ್ನಿಂದ ಹುಟ್ಟಿರುವ, ಶೋಕೇನ - ವ್ಯಸನದಿಂದ, (ಪರಿತಪ್ಯತೇಕಚ್ಚಿತ್ - ಪರಿತಾಗೊಳ್ಳುತ್ತಿರುವನೇ,) ರಾಮಃ - ಶ್ರೀರಾಮನು, ನಾನ್ಯಮನಾಃಕಚ್ಚಿತ್ - ಕಾರ್ಯಾಂತರಾಸಕ್ತನಾಗಲಿಲ್ಲವೇ, ಮಾಂ ನನ್ನನ್ನು, ತಾರಯಿಷ್ಯತಿಕಚ್ಚಿತ್-ಕಡೆಹಾಯಿಸುವನೇ. ॥೨೩॥ ಭ್ರಾತೃವತ್ಸಲಃ - ಅಣ್ಣನಲ್ಲಿ ಪ್ರೀತಿಯುಳ್ಳ, ಭರತಃ - ಭರತನು, ಮತ್ಕೃತೇ - ನನ್ನ ನಿಮಿತ್ತವಾಗಿ, ಮಂತ್ರಿಭಿಃ - ಮಂತ್ರಿಗಳಿಂದ, ಗುಪ್ತಾಂ - ಪಾಲಿತವಾದ, ಅಕ್ಷೌಹಿಣೀಂ - ಅಕ್ಷೌಹಿಣಿಸಂಖ್ಯೆಯುಳ್ಳ, ಭೀಮಾಂ-ಭಯಂಕರವಾದ, ಧ್ವಜಿನೀಂ-ಸೇನೆಯನ್ನು, ಪ್ರೇಷಯಿಷ್ಯತಿಕಚ್ಚಿತ್-ಕಳುಹಿಸುವನೇ, ವಾನರಾಧಿಪತಿಃ - ಕಪಿರಾಜನಾದ, ಶ್ರೀಮಾನ್ - ಸಂಪದ್ಯುಕ್ತನಾದ, ಸುಗ್ರೀವಃ - ಸುಗ್ರೀವನು, ಮತ್ಕೃತೇ - ನನ್ನ ನಿಮಿತ್ತವಾಗಿ, ವೀರೈಃ - ಶೂರರಾದ, ದಂತ....ಧೈಃ - ದಂತನಖಗಳೇ ಆಯುಧಗಳಾಗಿ ಉಳ್ಳ, ಹರಿಭಿಃ - ಕಪಿಗಳೊಡನೆ, ಏಷ್ಯತಿಕಚ್ಚಿತ್ - ಬರುವನೇ. ॥ ೨೪-೨೫ ॥ ಶೂರಃ - ವೀರನಾದ, ಸುಮಿತ್ರಾನಂದವರ್ಧನಃ - ಸುಮಿತ್ರಾದೇವಿಗೆ ಸಂತೋಷವನ್ನು ವೃದ್ಧಿಗೊಳಿಸುವ,

---

ಭವಕ್ಕೆ ಅನರ್ಹನೂ ಆದ ಶ್ರೀರಾಮಮೂರ್ತಿಯು ಈ ಮಹಾ ದುಃಖಕ್ಕೆ ಸಿಕ್ಕಿ ಕೃಶವಾಗಿಲ್ಲವಷ್ಟೆ? ಕೌಸಲ್ಯಾ ಸುಮಿತ್ರೆಯರ, ಮತ್ತು ಭರತನೇ ಮೊದಲಾದವರ ಯೋಗಕ್ಷೇಮವು ಆಗಿಂದಾಗ್ಗೆ ತಿಳಿದುಬರುತ್ತಿರುವುದೇ? ಮಹಾ ಮಾನ್ಯನಾದ ಶ್ರೀರಾಮನು ನನಗೋಸುಗವಾಗಿಯೇ ಬಹಳವಾಗಿ ಪರಿತಪಿಸುತ್ತಿರುವನಲ್ಲವೆ? ಶ್ರೀರಾಮನು ನನ್ನಲ್ಲಿ ನೆಟ್ಟಮನಸ್ಸುಳ್ಳವನಾಗಿರುವನೇ? ಆತನು ನನ್ನನ್ನೀದುಃಖಸಮುದ್ರದಿಂದ ಕಡೆಹಾಯಿಸುವನೇ? ಅಣ್ಣನಲ್ಲಿ ಪರಮಪ್ರೀತಿಯುಳ್ಳ ಭರತಕುಮಾರನು ನನಗಾಗಿ ಮಂತ್ರಿಗಳಿಂದ ಸಂರಕ್ಷಿತವಾಗಿ ಮಹಾ ಭಯಂಕರವಾದ ಅಕ್ಷೌಹಿಣೀ ಸೇನೆಯನ್ನು ಕಳುಹಿಸುವನೇ? ವಾನರೇಶ್ವರನಾದ ಸುಗ್ರೀವನು ಮಹಾ ಪರಾಕ್ರಮಶಾಲಿಗಳಾಗಿ, ದಂತನಖಗಳೇ ಆಯುಧಗಳಾಗಿ ಉಳ್ಳ ವಾನರರಿಂದ ಪರಿವೇಷ್ಟಿತನಾಗಿ ನನಗೋಸ್ಕರ ಇಲ್ಲಿಗೈತರುವನಷ್ಟೆ? ॥ ೨೧-೨೫ ॥ ಯುದ್ಧವೀರನೂ ಶಸ್ತ್ರಾಸ್ತ್ರವೇತ್ತನೂ ಆದ ಸುಮಿತ್ರಾನಂದನನು ಬಾಣಪರಂಪರೆಗಳಿಂದ ರಾಕ್ಷಸರೆಲ್ಲರನ್ನೂ

ಕಚ್ಚಿಚ್ಚ ಲಕ್ಷ್ಮಣಶ್ಶೂರಃ ಸುಮಿತ್ರಾನಂದವರ್ಧನಃ । ಅಸ್ತ್ರವಿಚ್ಛರಜಾಲೇನ ರಾಕ್ಷಸಾ ನ್ನಿಧಮಿಷ್ಯತಿ? ॥ ೨೬ ॥ ರೌದ್ರೇಣ ಕಚ್ಚಿದಸ್ತ್ರೇಣ ಜ್ವಲತಾ ನಿಹತಂ ರಣೇ । ದ್ರಕ್ಷ್ಯಾ ಮ್ಯಲ್ಪೇನ ಕಾಲೇನ ರಾವಣಂ ಸಸುಹೃಜ್ಜನಂ? ॥ ೨೭ ॥ ಕಚ್ಚಿನ್ನತದ್ಧೇಮಸಮಾನ ವರ್ಣಂ ತಸ್ಯಾನನಂ ಪದ್ಮಸಮಾನಗಂಧಿ । ಮಯಾ ವಿನಾ ಶುಷ್ಯತಿ ಶೋಕದೀನಂ ಜಲಕ್ಷಯೇ ಪದ್ಮಮಿವಾತಪೇನ? ॥ ೨೮ ॥ ಧರ್ಮಾಪದೇಶಾತ್ತ್ಯಜತಶ್ಚ ರಾಜ್ಯಂ ಮಾಂ ಚಾಪ್ಯರಣ್ಯಂ ನಯತಃ ಪದಾತಿಂ । ನಾಸೀದ್ವ್ಯಥಾ ಯಸ್ಯ ನಭೀರ್ನಶೋಕಃ

ಅಸ್ತ್ರವಿತ್ - ಅಸ್ತ್ರಜ್ಞನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಶರಜಾಲೇನ - ಬಾಣಸಮೂಹದಿಂದ, ರಾಕ್ಷಸಾನ್ - ರಕ್ಕಸರನ್ನು, ನಿಧಮಿಷ್ಯತಿಕಚ್ಚಿತ್ - ಸಂಹರಿಸುತ್ತಾನೆಯೇ. ॥೨೬॥ ಸಸುಹೃಜ್ಜನಂ - ಸ್ನೇಹಿತಜನರಿಂದೊಡಗೂಡಿದ, ರಾವಣಂ - ರಾವಣನನ್ನು, ಅಲ್ಪೇನಕಾಲೇನ - ಜಾಗ್ರತೆಯಾಗಿ, ರೌದ್ರೇಣ - ಭಯಂಕರವಾದ, ಜ್ವಲತಾ - ಉರಿಯುತ್ತಿರುವ, ಅಸ್ತ್ರೇಣ - ಅಸ್ತ್ರದಿಂದ, ರಣೇ - ಯುದ್ಧದಲ್ಲಿ, ನಿಹತಂ - ಕೊಲ್ಲಲ್ಪಟ್ಟವನನ್ನಾಗಿ, ದ್ರಕ್ಷ್ಯಾಮಿಕಚ್ಚಿತ್ - ನೋಡುತ್ತೇನೆಯೇ. ॥೨೭॥ ಹೇಮ....ರ್ಣಂ - ಭಂಗಾರದ ಬಣ್ಣದಂತೆ ಸ್ಪೃಹಣೀಯವಾದ ವರ್ಣವುಳ್ಳ, ಪದ್ಮ....ಧಿ - ಪದ್ಮಸದೃಶ ವಾದ ವಾಸನೆಯುಳ್ಳ, ತಸ್ಯ - ಆ ಶ್ರೀರಾಮನ, ತದಾನನಂ - ಆ ಮುಖವು, ಮಯಾವಿನಾ - ನನ್ನಗಲುವಿಕೆಯಿಂದ, ಶೋಕದೀನಂ - ದುಃಖದಿಂದ ಬತ್ತಿದುದಾಗಿ, ಜಲಕ್ಷಯೇ - ಜಲನಾಶದಲ್ಲಿ, ಆತಪೇನ - ಬಿಸಿಲಿಂದ, ಪದ್ಮಮಿವ - ಪದ್ಮದಂತೆ, ಶುಷ್ಯತಿ - ಒಣಗಿಹೋಗುತ್ತದೆ. ॥೨೮॥ ಯಸ್ಯ- ಯಾವ ಶ್ರೀರಾಮನಿಗೆ, ಧರ್ಮಾ....ತ್ - ಧರ್ಮವನ್ನುದ್ದೇಶಿಸಿ, ರಾಜ್ಯಂ - ರಾಜ್ಯವನ್ನು, ತ್ಯಜತಃ - ಬಿಡುವದರದೆಸೆಯಿಂದ, ವ್ಯಥಾ - ಮನಶ್ಚಾಂಚಲ್ಯವು, ನಾಸೀತ್ - ಆಗಲಿಲ್ಲವೊ, ಮಾಂಚಾಪಿ - ನನ್ನನ್ನುಕೂಡ, ಅರಣ್ಯಂ - ವನವನ್ನು, ನಯತಃ - ಸೇರಿಸುವದರಿಂದ, ಭೀಃ - ಭಯವು, ನಾಸೀತ್ - ಆಗಲಿಲ್ಲವೊ, ಮಾಂ - ನನ್ನನ್ನು, ಪದಾತಿಂ - ಪಾದಚಾರಿಣಿಯನ್ನಾಗಿ, ನಯತಃ - ಹೊಂದಿಸುವಿಕೆಯಿಂದ, ಶೋಕಃ - ವ್ಯಸನವು, ನಾಸೀತ್ - ಆಗಲಿಲ್ಲವೊ, ಸಃ - ಅಂತಹ ಶ್ರೀರಾಮನು, ಧೈರ್ಯಂ - ಧೈರ್ಯವನ್ನು, ಹೃದಯೇ - ಮನಸ್ಸಿನಲ್ಲಿ, ಕರೋತಿಕಚ್ಚಿತ್ - ಮಾಡು

ಸಂಹರಿಸಲು ಯತ್ನಿಸುವನೇ? ಅಯ್ಯಾ ಹನುಮಂತನೇ! ನಾನು, ಮಹಾ ಭಯಂಕರವಾಗಿ ಉರಿಯುತ್ತಿರುವ ಅಸ್ತ್ರಗಳಿಂದ ಯುದ್ಧದಲ್ಲಿ ಬಂಧುಮಿತ್ರಸಮೇತನಾಗಿ ಸಂಹೃತನಾಗುವ ರಾವಣನನ್ನು ಕಾಣುವೆನಷ್ಟೆ? ಸುವರ್ಣಕಾಂತಿಯಂತಹ ಕಾಂತಿಯುಳ್ಳದೂ, ತಾವ ರೆಯ ಕಿಂಜಲ್ಕಗಳ ವಾಸನೆಯುಳ್ಳದೂ ಆದ ಶ್ರೀರಾಮನ ಮುಖಕಮಲವು, ನನ್ನನ್ನ ಗಲಿರುವುದುಂಟಾದ ದುಃಖದಿಂದ ದೈನ್ಯವನ್ನು ಹೊಂದಿ, ಬೇಸಗೆಯಲ್ಲಿ ಸೂರ್ಯಾ ತಪದಿಂದ ನೀರುಬತ್ತಿದ ಕೆಸರಿನಲ್ಲಿನ ಕಮಲದಂತಾಗಿರುವುದಲ್ಲವೆ? ಧರ್ಮಪರಿ ಪಾಲನೆಗಾಗಿ ರಾಜ್ಯವನ್ನು ತೊರೆದು ನನ್ನನ್ನು ಕೂಡ ಪಾದಚಾರಿಣಿಯನ್ನಾಗಿ ಅರಣ್ಯಕ್ಕೆ ಕರೆದೊಯ್ಯುವಾಗ ಸ್ವಲ್ಪವಾದರೂ ಮನೋವ್ಯಥೆಯನ್ನಾಗಲಿ, ಭೀತಿಯನ್ನಾಗಲಿ, ದುಃಖವ ನ್ನಾಗಲಿ ಹೊಂದದಿದ್ದ ಶ್ರೀರಾಮನು ಈಗ ಮನಸ್ಸಿನಲ್ಲಿ ಸ್ವಲ್ಪವಾದರೂ ಚಿಂತೆಯನ್ನೂ, ಭೀತಿಯನ್ನೂ, ಜುಗುಪ್ಸೆಯನ್ನೂ ಹೊಂದದಿರುವನೇ? ಎಲೈ ಮಾರುತಿಯೇ! ಆತನಿಗೆ ತಾಯಿ ಯಾಗಲಿ, ತಂದೆಯಾಗಲಿ, ಮಿಕ್ಕಿತರಬಂಧುಗಳಾಗಲಿ, ಸ್ನೇಹದಲ್ಲಿ ನನಗೆ ಸಮಾನರಾದವರ ಲ್ಲವು. ಅಷ್ಟೇಅಲ್ಲ; ನನಗಿಂತ ಅಧಿಕರೂ ಅಲ್ಲವು. ಆ ಶ್ರೀರಾಮನಿಗೆ ನನ್ನಲ್ಲಿರುವ ಪ್ರೇಮವು,

ಕಚ್ಚಿಚ್ಚ ಧೈರ್ಯಂ ಹೃದಯೇ ಕರೋತಿ? ॥ ೨೯ ॥ ¶ ನಚಾಸ್ಯ ಮಾತಾ ನಪಿತಾ ಚ ನಾನ್ಯಸ್ಸ್ನೇಹಾದ್ವಿಶಿಷ್ಟೋಽಸ್ತಿ ಮಯಾ ಸಮೋ ವಾ । ತಾವತ್ತ್ವಹಂ ದೂತ! ಜಿಜೀವಿಷೇಯಂ ಯಾವತ್ಪ್ರವೃತ್ತಿಂ ಶೃಣುಯಾಂ ಪ್ರಿಯಸ್ಯ" ॥೩೦॥ ¥ ಇತೀವ ದೇವೀ

ತ್ತಾನೆಯೇ. ॥ ೨೯ ॥ ಹೇದೂತ - ಎಲೈ ದೂತನೇ, ಅಸ್ಯ - ಈ ಶ್ರೀರಾಮನ ವಿಷಯದಲ್ಲಿ, ಮಾತಾಚ - ತಾಯಿಯೂ ಕೂಡ, ಸ್ನೇಹಾತ್ - ಸ್ನೇಹದಿಂದ, ಮಯಾ - ನನಿಗಿಂತಲೂ, ವಿಶಿಷ್ಟಾ - ಹೆಚ್ಚಾದವಳು, ನ - ಅಲ್ಲ, ಸಮಾವಾ - ಸಮಳಾದವಳೂ, ನ - ಅಲ್ಲ, ಪಿತಾಚ - ತಂದೆಯು ಕೂಡ, ನ - ಅಲ್ಲಾ, ಅನ್ಯಶ್ಚ - ಮತ್ತೊಬ್ಬನು ಕೂಡ, ನಾಸ್ತಿ - ಇಲ್ಲವು, ಯಾವತ್ - ಎದುವರೆಗೂ, ಅಹಂ - ನಾನು, ಪ್ರಿಯಸ್ಯ - ನನ್ನ ಪತಿಯಾದ ಶ್ರೀರಾಮನ, ಪ್ರವೃತ್ತಿಂ - ವೃತ್ತಾಂತವನ್ನು, ಶೃಣುಯಾಂ - ಕೇಳುತ್ತೇನೆಯೊ, ತಾವತ್ - ಅದುವರೆಗೂ, ಜಿಜೀವಿಷೇಯಂ - ಬದುಕಲಿಚ್ಛಿಸುವೆನು.

ಆತನ ಮಾತಾಪಿತೃಗಳಲ್ಲಿಯಾಗಲಿ, ಇತರ ಸ್ನೇಹಿತರಲ್ಲಿಯಾಗಲಿ, ಬಂಧುಗಳಲ್ಲಿಯಾಗಲಿ ಇಲ್ಲವು. ಆದುದರಿಂದೆಲೈ ಮಹಾಕಪಿಯೇ! ಶ್ರೀರಾಮನು ಪುನಃ ನನ್ನನ್ನು ಹಿಂದಕ್ಕೆ ಕರೆದು ಕೊಂಡು ಹೋಗುವನೋ ಇಲ್ಲವೋ ಎಂಬ ವೃತ್ತಾಂತವು ತಿಳಿಯುವವರೆಗೂ ನಾನು ಜೀವ ದಿಂದಿರುವೆನು." ॥ ೨೯-೩೦ ॥ ಈ ಪ್ರಕಾರವಾಗಿ ಸೀತಾದೇವಿಯು ಗೂಢಾರ್ಥಗರ್ಭಿತ

¶ ಇಲ್ಲಿ ಪ್ರಣಯರೋಷ ಪಕ್ಷವನ್ನು ಹಿಡಿದು ತನಿಶ್ಲೋಕಿಕಾರರು ಕೆಲವು ವಿಶೇಷಾರ್ಥಗಳನ್ನು ಪ್ರತಿಪಾದಿಸಿರು ವರು, ಅವು ಯಾವುವೆಂದರೆ,—

"ಎಲೈ ಮಹಾ ಕಪಿಯೇ! ಶ್ರೀರಾಮನು ಕೇವಲ ಪಿತೃವಾಕ್ಯಪರಿಪಾಲನೆಗಾಗಿಯೇ ವನವಾಸಕ್ಕೆ ಬಂದನೆಂದು ತಿಳಿದೆಯಾ? ಹಾಗೆ ತಿಳಿಯಬೇಡ; ನನ್ನ ಹಿಂಸೆಗೋಸ್ಕರವೇ ಬಂದನು. ("ಎಲ್ಲಾ ತಪ್ಪೂ ರಾಮನದೇ; ನನ್ನದೇನೂ ಇಲ್ಲ" ಎಂದು ಸೀತೆಯು ಹೇಳಲು, ಹನುಮಂತನು, "ನಾವುತಾನೇ ಚನ್ನಾಗಿರುವೆವೇ? ರಾಮನನ್ನಗಲಿದ ಕ್ಷಣವೇ ಪ್ರಾಣಗಳನ್ನು ಬಿಡುವುದಕ್ಕೂ ಸಿದ್ಧರಾಗಿಯೇ ಇರುವೆವು" ಎಂದು ಅಭಿಪ್ರಾಯಪಟ್ಟನೆಂದೂಹಿಸಿ) ಶ್ರೀರಾಮನಿಗೆ ತಾಯಿ, ತಂದೆ, ಬಂಧುಗಳೇ ಮೊದಲಾದವರು ಸ್ನೇಹವಿಷಯದಲ್ಲಿ ಮಿಗಿಲಾದವರಲ್ಲವು. ಎಲ್ಲರಿಗಿಂತಲೂ ನಾನೇ ಅಧಿಕಳಾದವಳು. ಆದುದರಿಂದ ನಾನು ಪ್ರಾಣಗಳನ್ನು ತೊರೆಯಲಾರೆನು. ಪರತಂತ್ರೆಯಾದ ನಾನು ಏನುತಾನೇ ಮಾಡಲಾದೀತು? ಎಲೈ ಮಾರುತಿಯೇ! ನಾನು ಶ್ರೀರಾಮನಿಗೆ ಪರತಂತ್ರಳಾಗಿರುವುದರಿಂದ ಆತನಿಲ್ಲಿಗೆ ಬರುವವರೆಗೂ ಜೀವಿಸಿ ಕೊಂಡಿರುತ್ತೇನೆ. ಅಥವಾ, ಈ ವಿಷಯದಲ್ಲಿ ಆತನ ಪ್ರವೃತ್ತಿಯನ್ನರಿಯುವವರೆಗೂ ನಾನು ಪ್ರಾಣಗಳನ್ನುಳಿಸಿಕೊಂಡಿರು ತ್ತೇನೆ. ಅಯ್ಯಾ! ನೀನು, "ರಾಮನು ಮಾಂಸವನ್ನು ಭುಜಿಸುವುದಿಲ್ಲ; ನಿದ್ರೆಯಿಲ್ಲದಿರುವನು; ನಿನ್ನನ್ನೇ ಧ್ಯಾನಿಸು ತ್ತಿರುವನು; ಸಮುದ್ರವನ್ನು ಬಂಧಿಸಿ ಇಲ್ಲಿಗೆ ಬಂದುಬಿಡುವನು; ಬಾಯಾರಿದವನನ್ನು ಪಾನಶಾಲೆಗೆಂತೋ ಅಂತು ಬಂದೇ ಬರುವನು"; ಎಂದು ಮುಂತಾಗಿ ಹೇಳಿದೆಯಲ್ಲವೆ. ಆಗಲಿ. ಅವನು ಬರಲಿ; ಅವನಿಲ್ಲಿಗೆ ಬರುವವರೆಗೂ ಬದು ಕಿರುತ್ತೇನೆ. ಆದರೇನು? ಅವನು ಬಂದಮೇಲೆ ನಾನು ಬದುಕಿರುತ್ತೇನೆಂಬು ತಿಳಿದೆಯಾ? ಹಾಗೇನಾದರೂ ನಾನು ಬದು ಕಿದ್ದರೆ ಆಗ ನೀನು ಈ ಮಾತುಗಳನ್ನಾಡು. (ಇದುವರೆಗೂ, "ಮಹಾಕಪೇ! ವಾನರ! ಪ್ಲವಂಗಮ!" ಎಂಬುದಾ ಗಿಯೇ ಸಂಬೋಧಿಸುತ್ತಿದ್ದು ಈಗ ಮಾತ್ರ "ದೂತ!" ಎಂದು ಸೀತೆಯು ಸಂಬೋಧಿಸಿರುವುದನ್ನು ನೋಡಿದರೆ, "ಎಲೈ! ನೀನು ರಾಮದೂತನು! ಆದಕ್ಕಾಗಿಯೇ ಅವನ ಪಕ್ಷವನ್ನು ಹಿಡಿದು, ಅವನ ಮೂಗಿಗೆ ನೇರವಾಗಿ ಮಾತನಾಡುತ್ತಿರುವೆ. ಸಾಕು ಸಾಕು!" ಎಂಬ ಸೀತೆಯ ಮನೋಗತವು ವ್ಯಕ್ತವಾಗುವುದು.

ಪ್ರಣಯರೋಷಾಭಾವ ಪಕ್ಷದಲ್ಲಿ ತಾತ್ಪರ್ಯದಲ್ಲಿ ಕಂಡ ಪ್ರಣಾಳಿಕೆಯೇ ಸರಿ. (ತನಿಶ್ಲೋಕಿ)

¥ ಇದುವರೆಗೂ ಆದಿಕವಿಯು ಸೀತಾದೇವಿಯ ಪ್ರಣಯಧಾರಾಸೂಚಕವಾದ ವಿಷಯಗಳೆಲ್ಲವನ್ನೂ ಪ್ರತಿಪಾದಿಸಿ, ಅತಿ ಸೂಕ್ಷ್ಮಾತಿಸೂಕ್ಷ್ಮವಾದ ಆಕೆಯ ಪ್ರಣಯಧಾರೇಯನ್ನು ಅರಿಯಲಾರದವನಾಗಿ, ಅದನ್ನು ವರ್ಣಿಸಲಶಕ್ತನಾಗಿ ಈ ಶ್ಲೋಕದಲ್ಲಿ, "ಇತೀವದೇವೀ" ಎಂಬುದಾಗಿ ಹೇಳಿರುವನು. ಇದರಿಂದ, "ವಲ್ಲಭೆಯ ವ್ಯವಹಾರವು ಅನ್ಯರೊಬ್ಬರಿಗೂ,

ವಚನಂ ಮಹಾರ್ಥಂ ತಂ ವಾನರೇಂದ್ರಂ ಮಧುರಾರ್ಥ ಮುಕ್ತ್ವಾ । ಶ್ರೋತುಂ ಪುನ
ಸ್ತಸ್ಯ ವಚೋಽಭಿರಾಮಂ ರಾಮಾರ್ಥಯುಕ್ತಂ ವಿರರಾಮ ರಾಮಾ ॥೩೧॥ ಸೀತಾಯಾ
ವಚನಂ ಶ್ರುತ್ವಾ ಮಾರುತಿ ರ್ಭೀಮವಿಕ್ರಮಃ । ಶಿರಸ್ಯಂಜಲಿಮಾಧಾಯ ವಾಕ್ಯ
ಮುತ್ತರಮಬ್ರವೀತ್ ॥ ೩೨ ॥ ¶ " ನತ್ವಾಮಿಹಸ್ಥಾಂ ಜಾನೀತೇ ರಾಮಃ ಕಮಲ
ಲೋಚನೇ? । ತೇನ ತ್ವಾಂ ನಾನಯತ್ಯಾಶು ಶಚೀಮಿವ ಪುರಂದರಃ ॥ ೩೩ ॥

॥ ೩೦ ॥ ರಾಮಾ - ಸ್ತ್ರೀಯಾದ, ದೇವೀ - ಸೀತಾದೇವಿಯು, ತಂವಾನರೇಂದ್ರಂ - ಆ ಆಂಜನೇಯನನ್ನು ಕುರಿತು, ಮಹಾರ್ಥಂ - ವಿಶೇಷಾರ್ಥವುಳ್ಳ, ವಚನಂ - ಮಾತನ್ನು, ಇತೀವ - ಈ ಪ್ರಕಾರವಾಗಿಯೇ, ಮಧುರಾರ್ಥಂ-ಕಿವಿಗಿಂಪಾಗಿರುವಂತೆ, ಉಕ್ತ್ವಾ-ಹೇಳಿ, ರಾಮಾರ್ಥಯುಕ್ತಂ-ಶ್ರೀರಾಮವಿಷಯವನ್ನು ಕುರಿತೇ ನುಡಿದ, ಅಭಿರಾಮಂ - ಮನೋಹರವಾದ, ತಸ್ಯ - ಆ ಆಂಜನೇಯನ, ವಚನಂ - ಮಾತನ್ನು, ಪುನಃ - ಮತ್ತೂ, ಶ್ರೋತುಂ - ಕೇಳುವುದಕ್ಕೆ, ವಿರರಾಮ - ಸುಮ್ಮನಾದಳು. ॥೩೧॥ ಭೀಮವಿಕ್ರಮಃ - ಭಯಂಕರ ಪರಾಕ್ರಮವುಳ್ಳ, ಮಾರುತಿಃ - ಆಂಜನೇಯನು, ಸೀತಾಯಾಃ - ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಶಿರಸಿ - ಶಿರಸ್ಸಿನಲ್ಲಿ, ಅಂಜಲಿಂ - ಬೊಗಸೆಯನ್ನು, ಆದಾಯ - ಮಾಡಿ, ಉತ್ತರಂವಾಕ್ಯಂ - ಉತ್ತರವಚನವನ್ನು, ಅಬ್ರವೀತ್ - ಹೇಳಿದನು. ॥ ೩೨ ॥ ಹೇ ಕಮಲಲೋಚನೇ - ಓ ಕಮಲಾಕ್ಷಿಯೇ, ರಾಮಃ - ಶ್ರೀರಾಮನು, ಇಹಸ್ಥಾಂ - ಇಲ್ಲಿರುವ, ತ್ವಾಂ - ನಿನ್ನನ್ನು, ಶಚೀಂ - ಶಚೀದೇವಿಯನ್ನು, ಪುರಂದರಇವ - ಇಂದ್ರನಂತೆ, ನಜಾನೀತೇ - ತಿಳಿಯಲಿಲ್ಲ, ತೇನ - ಆ ಕಾರಣದಿಂದ, ತ್ವಾಂ - ನಿನ್ನನ್ನು, ಆಶು - ಬೇಗನೆ,

ವಾದ ಮನೋಹರವಾದ ಮಾತುಗಳನ್ನು ಹೇಳಿ ಸುಮ್ಮನಾದಳು. ಆಕೆಯು ಆಂಜನೇಯನಿಂದ ರಾಮನ ಸಂಬಂಧವಾದ ಮನೋಹರವಾದ ಮಾತುಗಳನ್ನು ಕೇಳಲು ಕುತೂಹಲವುಳ್ಳವಳಾಗಿದ್ದಳು. ಆಗ ಮಹಾ ಭಯಂಕರವಾದ ಪರಾಕ್ರಮವುಳ್ಳವನೂ, ವಾಯುಪುತ್ರನೂ ಆದ ಆಂಜನೇಯನು ಸೀತಾದೇವಿಯು ಹೇಳಿದ ಮಾತುಗಳನ್ನು ಕೇಳಿ ಆಕೆಗೆ ನಮಸ್ಕಾರ ಮಾಡಿ, ಬದ್ಧಾಂಜಲಿಪುಟನಾಗಿ, "ಎಲೌ ಸೀತಾದೇವಿಯೇ! ಕಮಲೇಕ್ಷಣೆಯಾದ ನೀನು ಈ ಲಂಕಾನಗರದಲ್ಲಿರುವುದು ಶ್ರೀರಾಮಮೂರ್ತಿಗೆ ತಿಳಿಯದು. ಆದುದರಿಂದಲೇ ಆತನು, ಹಿಂದೆ ಅನುಹ್ಲಾದನೆಂಬುವನು ಇಂದ್ರಪತ್ನಿಯಾದ ಶಚೀದೇವಿಯನ್ನು ಕದ್ದೊಯ್ದಾಗ ಆಕೆಯಿರುವ ಸ್ಥಳವನ್ನರಿಯದೆ ಆಕೆಯನ್ನು ದೇವೇಂದ್ರನು ಬಹುಕಾಲ ಪುನಃ ಕರೆದುಕೊಂಡು

ಏಕೆ? ದೇಶಿಕರಾದ ನಮಗೂ ಗೊತ್ತಾಗುವುದಿಲ್ಲವು" ಎಂದು ಸೂಚಿತವಾಗುವುದು. ಇಲ್ಲಿನ, "ವಾನರೇಂದ್ರ" ಶಬ್ದದ ಸ್ವಾರಸ್ಯ:—ಸುಗ್ರೀವನು ಶೇಷತ್ವದಲ್ಲಿ ಅಭಿಷಿಕ್ತನಾಗಿದ್ದರೂ, ಪಾರತಂತ್ರ್ಯ ವಿಷಯದಲ್ಲಿ ಆಂಜನೇಯನು ಅಭಿಷಿಕ್ತನಾಗಿರುವುದರಿಂದ ಹೀಗೆ "ವಾನರೇಂದ್ರ" ಶಬ್ದವುಪ್ರಯುಕ್ತವಾಗಿರುವುದು.

¶ ಇಲ್ಲಿನ ವಿಶೇಷಾರ್ಥ:—"ನಜೀವೇಯಂ ಕ್ಷಣಮಪಿ ವಿನಾತಾಮಸಿತೇಕ್ಷಣಾಂ" ಎಂದು ಹೇಳಿದ ಆ ಶ್ರೀರಾಮನು ಇನ್ನೂ ಏತಕ್ಕೆ ಬರಲಿಲ್ಲ" ಎಂಬ ಸೀತೆಯ ಪ್ರಶ್ನೆಗೆ ಉತ್ತರವಾಗಿ ಹನುಮಂತನು, "ಕಮಲಲೋಚನೇ! ನಿನ್ನ ನಯನಸೌಂದರ್ಯವೆಂಬ ದರ್ಪಣತಲದಲ್ಲಿ ಶ್ರೀರಾಮನು ನಿನ್ನನ್ನು ಯಾವಾಗಲೂ ನೋಡುತ್ತಲೇ ಇರುವನು. ಇಂತಹ ಅನುಪಮರೂಪ ಲಾವಣ್ಯವತಿಯಾದ ನಿನ್ನನ್ನು ಳಿದು ಆತನು ಹೇಗೆತಾನೆ ವ್ಯವಸಾಯಪರನಾಗದೆ ಸುಮ್ಮನಿದ್ದಾನು" ಎಂದು ಉತ್ತರ ಕೊಡುವನು.

ಶ್ರುತ್ವೈವತು ವಚೋ ಮಹ್ಯಂ ಕ್ಷಿಪ್ರಮೇಷ್ಯತಿ ರಾಘವಃ । ಚಮೂಂ ಪ್ರಕರ್ಷ
ನ್ಮಹತೀಂ ಹರ್ಯೃಕ್ಷಗಣಸಂಕುಲಾಂ ॥ ೩೪ ॥ ವಿಷ್ಟಂಭಯಿತ್ವಾ ಬಾಣೌಘೈ
ರಕ್ಷೋಭ್ಯಂ ವರುಣಾಲಯಂ । ಕರಿಷ್ಯತಿ ಪುರೀಂ ಲಂಕಾಂ ಕಾಕುತ್ಸ್ಥಶ್ಶಾಂತ
ರಾಕ್ಷಸಾಂ ॥ ೩೫ ॥ ತತ್ರ ಯದ್ಯಂತರಾಮೃತ್ಯುರ್ಯದಿ ದೇವಾಸ್ಸಹಾಸುರಾಃ ।
ಸ್ಥಾಸ್ಯಂತಿ ಪಥಿ ರಾಮಸ್ಯ ಸ ತಾನಪಿ ವಧಿಷ್ಯತಿ ॥ ೩೬ ॥ ತವಾದರ್ಶನಜೇನಾರ್ಯೇ!
ಶೋಕೇನ ಸ ಪರಿಪ್ಲುತಃ । ನಶರ್ಮ ಲಭತೇ ರಾಮಸ್ಸಿಂಹಾರ್ದಿತ ಇವದ್ವಿಪಃ ॥೩೭॥

ನಾನಯತಿ - ಕರೆದುಕೊಂಡು ಹೋಗಲಿಲ್ಲ. ॥ ೩೩ ॥ ರಾಘವಃ - ಶ್ರೀರಾಮನು, ಮಹ್ಯಂ - ನನ್ನ, ವಚಃ - ಮಾತನ್ನು, ಶ್ರುತ್ವೈವತು - ಕೇಳಿದ ಕೂಡಲೇ, ಹರ್ಯೃ....ಲಾಂ - ಕಪಿಗಳ, ಕರಡಿಗಳ ಸಮೂಹದಿಂದ ವ್ಯಾಪ್ತವಾದ, ಮಹತೀಂ - ದೊಡ್ಡದಾದ, ಚಮೂಂ - ಸೈನ್ಯವನ್ನು, ಪ್ರಕರ್ಷನ್ - ನಡೆಸಿಕೊಂಡು, ಕ್ಷಿಪ್ರಂ - ಜಾಗ್ರತೆಯಾಗಿ, ಏಷ್ಯತಿ - ಬರುವನು. ॥೩೪॥ ಕಾಕುತ್ಸ್ಥಃ- ಶ್ರೀರಾಮನು, ಅಕ್ಷೋಭ್ಯಂ - ಕ್ಷೋಭಿಸಲಶಕ್ಯವಾದ, ವರುಣಾಲಯಂ - ಸಮುದ್ರವನ್ನು, ಬಾಣೌಘೈಃ - ಬಾಣಗಳ ಸಮುದಾಯದಿಂದ, ವಿಷ್ಟಂಭಯಿತ್ವಾ - ಸ್ತಂಭಿಸಿ, ಲಂಕಾಂಪುರೀಂ - ಲಂಕಾಪಟ್ಟಣವನ್ನು, ಶಾಂತರಾಕ್ಷಸಾಂ - ಪ್ರಶಾಂತರಾದ ರಕ್ಕಸರುಳ್ಳಂಥದನ್ನಾಗಿ, ಕರಿಷ್ಯತಿ - ಮಾಡುವನು. ॥೩೫॥ ತತ್ರ-ಮರಳಿಯು ನಿನ್ನನ್ನು ಪಡಿಯಬೇಕೆಂಬ ಈ ಕಾರ್ಯದಲ್ಲಿ, ಮೃತ್ಯುಃ-ಮೃತ್ಯುದೇವತೆಯು, ಪಥಿ - ಮಾರ್ಗದಲ್ಲಿ, ರಾಮಸ್ಯ - ಶ್ರೀರಾಮನಿಗೆ, ಅಂತರಾ - ಅಡ್ಡವಾಗಿ, ಸ್ಥಾಸ್ಯತಿಯದಿ - ನಿಂತರೂ, ಸಹಾಸುರಾಃ - ರಾಕ್ಷಸಸಹಿತರಾದ, ದೇವಾಃ - ದೇವತೆಗಳು, ಸ್ಥಾಸ್ಯಂತಿಯದಿ - ವಿಘ್ನಕಾರಿಗಳಾಗಿ ನಿಂತರೂ, ಸಃ - ಆ ಶ್ರೀರಾಮನು, ತಾನಪಿ - ಆ ಮೃತ್ಯುವನ್ನೂ, ಆ ದೇವತೆಗಳನ್ನೂ ಸಹ, ವಧಿಷ್ಯತಿ- ಸಂಹರಿಸುವನು. ॥ ೩೬ ॥ ಹೇ ಆರ್ಯೇ - ಎಲೌ ಪೂಜ್ಯಳೇ, ಸರಾಮಃ - ಆ ಶ್ರೀರಾಮನು, ತವ - ನಿನ್ನ, ಅದರ್ಶನಜೇನ - ನೋಡದಿರುವದರಿಂದುಂಟಾಗಿ, ಶೋಕೇನ - ದುಃಖದಿಂದ, ಪರಿಪ್ಲುತಃ - ತೋಯ್ದವನಾಗಿ, ಸಿಂಹಾರ್ದಿತಃ - ಸಿಂಹದಿಂದ ಹೆದರಿಸಲ್ಪಟ್ಟ, ದ್ವಿಪ ಇವ - ಆನೆಯಂತೆ, ಶರ್ಮ - ಸುಖವನ್ನು, ನಲಭತೇ-ಹೊಂದುವದಿಲ್ಲವು. ॥ ೩೭ ॥ ಹೇ ದೇವೀ-ಓ ಸೀತಾದೇವಿಯೇ, ಸುನಯನಂ- ಒಳ್ಳೆಯ ಕಣ್ಣುಗಳುಳ್ಳ, ವಲ್ಗು - ಕುಣಿದಾಡುತ್ತಿರುವ, ಬಿಂಬೋಷ್ಠಂ - ತೊಂಡೆಯಹಣ್ಣಿನೋ

ಹೋಗುವುದಕ್ಕಾಗದಂತೆ ನಿನ್ನನ್ನು ಶೀಘ್ರವಾಗಿ ಕರೆದೊಯ್ಯದಿರುವನು. ದೇವೀ! ಶ್ರೀರಾಮಮೂರ್ತಿಯು ನನ್ನಿಂದ ನಿನ್ನ ವೃತ್ತಾಂತವನ್ನು ಕೇಳಿದೊಡನೆಯೇ ತಡೆಮಾಡದೆ ಅಪಾರ ಹರ್ಯೃಕ್ಷ ಸೇನೆಯನ್ನು ನಡೆಸಿಕೊಂಡು ಬಹುಜಾಗ್ರತೆಯಾಗಿಯೇ ಇಲ್ಲಿಗೆ ಬಂದುಬಿಡುವನು. ಇದರಲ್ಲಿ ಸಂಶಯವಿಲ್ಲವು. ರಘುಕುಲೋದ್ಭವನಾದ ಶ್ರೀರಾಮನು ಬಾಣಪರಂಪರೆಗಳಿಂದ ಈ ಮಹಾ ಸಮುದ್ರವನ್ನು ಸ್ತಂಭಿಸಿ ಲಂಕಾನಗರವನ್ನು ಪ್ರವೇಶಿಸಿ ಇಲ್ಲಿರುವ ರಾಕ್ಷಸರೆಲ್ಲರನ್ನೂ ನಿರ್ಮೂಲವಮಾಡುವನು. ॥ ೩೧–೩೫ ॥ ಹಾಗೆ ಆತನಿಲ್ಲಿಗೈತರುವಾಗ, ಮೃತ್ಯುವಾಗಲಿ, ದೇವಾಸುರರಾಗಲಿ ಆತನನ್ನಡ್ಡಗಿಸಲಾರರು. ಒಂದುವೇಳೆ ಅಡ್ಡಗಿಸದರೂ ಶ್ರೀರಾಮನು ಅವರೆಲ್ಲರನ್ನೂ ಸಂಹರಿಸಿಬಿಡುವನೆಂದು ತಿಳಿ. ಓ ಪೂಜ್ಯಳೇ! ಶ್ರೀರಾಮನು ನಿನ್ನನ್ನು ಕಾಣದಿರುವುದರಿಂದುಂಟಾದ ಮಹಾ ವ್ಯಸನಸಮುದ್ರದಲ್ಲಿ ಮುಳುಗಿ, ಸಿಂಹಪೀಡಿತವಾದ ಮದಗಜದಂತೆ ಎಷ್ಟುಮಾತ್ರವೂ ಸುಖವನ್ನು ಕಾಣದಾಗಿರುವನು. ಎಲೌ ದೇವಿಯೇ! ಸುಂದರವಾದ ನೇತ್ರಗಳುಳ್ಳದೂ, ತೊಂಡೆಯ ಹಣ್ಣಿನಂತಿರುವ ತುಟಿಗಳುಳ್ಳದೂ, ಮನೋಹರ

ಮಲಯೇನಚ ವಿಂಧ್ಯೇನ ಮೇರುಣಾ ಮಂದರೇಣಚ । ದರ್ದುರೇಣಚ ತೇ ದೇವಿ! ಶಪೇ ಮೂಲಫಲೇನಚ ॥ ೩೮ ॥ ಯಥಾ ಸುನಯನಂ ವಲ್ಗು ಬಿಂಬೋಷ್ಠಂ ಚಾರು ಕುಂಡಲಂ । ಮುಖಂ ದ್ರಕ್ಷ್ಯಸಿ ರಾಮಸ್ಯ ಪೂರ್ಣಚಂದ್ರಮಿವೋದಿತಂ ॥ ೩೯ ॥ ಕ್ಷಿಪ್ರಂ ದ್ರಕ್ಷ್ಯಸಿ ವೈದೇಹಿ! ರಾಮಂ ಪ್ರಸ್ರವಣೇ ಗಿರೌ । ಶತಕ್ರತುಮಿವಾಸೀನಂ ನಾಕಪೃಷ್ಠಸ್ಯ ಮೂರ್ಧನಿ ॥೪೦॥ ¶ ನ ಮಾಂಸಂ ರಾಘವೋ ಭುಙ್ತ್ತೇ ನಚಾಪಿ ಮಧು ಸೇವತೇ । ☫ ವನ್ಯಂ ಸುವಿಹಿತಂ ನಿತ್ಯಂ ಭಕ್ತಮಶ್ನಾತಿ ಪಂಚಮಂ ॥ ೪೧ ॥ ನೈವ

ಪಾದಿಯಲ್ಲಿರುವ ತುಟಿಗಳುಳ್ಳ, ಚಾರುಕುಂಡಲಂ - ಮನೋಹರವಾದ ಕರ್ಣಾಭರಣಗಳುಳ್ಳ, ಉದಿತಂ- ಹುಟ್ಟಿರುವ, ಪೂರ್ಣ....ತಂ - ಪೂರ್ಣಿಮಾಚಂದ್ರನಂತಿರುವ, ರಾಮಸ್ಯ - ಶ್ರೀರಾಮನ, ಮುಖಂ - ಮುಖವನ್ನು, ಯಥಾದ್ರಕ್ಷ್ಯಸಿ - ಹೇಗೆ ನೋಡುವೆಯೋ, (ತಥಾ - ಹಾಗೆ), ತೇ - ನಿನಗೆ, ಮಲಯೇನ - ಮಲಯಪರ್ವತದಿಂದಲೂ, ವಿಂಧ್ಯೇನ - ವಿಂಧ್ಯಪರ್ವತದಿಂದಲೂ, ಮೇರುಣಾ - ಮೇರುಪರ್ವತದಿಂದಲೂ, ಮಂದರೇಣಚ - ಮಂದರಪರ್ವತದಿಂದಲೂ, ದರ್ದುರೇಣ - ದರ್ದುರ ಪರ್ವತದಿಂದಲೂ, ಮೂಲಫಲೇನಚ - ಕಂದಮೂಲಗಳಿಂದಲೂ, ಫಲಗಳಿಂದಲೂ ಸಹ, ಶಪೇ - ಆಣೆಯಿಟ್ಟುಕೊಳ್ಳುತ್ತೇನೆ. ॥ ೩೯ ॥ ಹೇ ವೈದೇಹಿ - ಓ ಸೀತಾದೇವಿಯೆ, ಪ್ರಸ್ರವಣೇಗಿರೌ - ಪ್ರಸ್ರವಣಪರ್ವತದಲ್ಲಿ, ರಾಮಸ್ಯ - ಶ್ರೀರಾಮನನ್ನು, ನಾಕ....ನಿ - ಸ್ವರ್ಗದ ಮೇಲ್ಭಾಗದಲ್ಲಿ, ಆಸೀನಂ - ಕುಳಿತುಕೊಂಡಿರುವ, ಶತಕ್ರತುಮಿವ - ದೇವೇಂದ್ರನಂತೆ, ಕ್ಷಿಪ್ರಂ - ಜಾಗ್ರತೆಯಾಗಿ, ದ್ರಕ್ಷ್ಯಸಿ - ನೋಡುವೆ. ॥೪೦॥ ರಾಘವಃ - ಶ್ರೀರಾಮನು, ಮಾಂಸಂ - ಮಾಂಸವನ್ನು, ನಭುಙ್ತ್ತೇ- ಭುಜಿಸುವದಿಲ್ಲ, ಮಧುಚ - ಮದ್ಯವನ್ನೂ, ನಾಪಿಸೇವತೇ - ಸೇವಿಸುವದಿಲ್ಲ, ವನ್ಯಂ - ವನದಲ್ಲಿ ಹುಟ್ಟಿದ ಕಂದಮೂಲಾದಿಗಳನ್ನು, ಸುವಿಹಿತಂ - ವಾನಪ್ರಸ್ಥಯೋಗ್ಯತೆಯಿಂದ ಮಾಡಲ್ಪಟ್ಟ, ಭಕ್ತಂ - ಅನ್ನವನ್ನಾಗಿ, ನಿತ್ಯಂ - ಪ್ರತಿದಿನವೂ, ಪಂಚಮಂ - ಪ್ರಾತಃ, ಸಂಗವ, ಮಧ್ಯಾಹ್ನ, ಅಪರಾಹ್ಣ,

---

ವಾದ ಕರ್ಣಕುಂಡಲಗಳುಳ್ಳುದೂ, ರಮಣೀಯವಾದುದೂ, ಆಗತಾನೇ ಉದಿಸಿದ ಪೂರ್ಣಿಮಾ ಚಂದ್ರನಂತಿರುವ ಆ ರಘುರಾಮನ ಮುಖವನ್ನು ಬಹುಬೇಗನೆಯೇ ನೀನು ನೋಡುವಿ. ಎಲೌ ಜಾನಕಿಯೇ! ಇದು ಯಥಾರ್ಥವೆಂದು ತಿಳಿಯುವಳಾಗು. ಇದೋ ವಾಸಸ್ಥಾನಗಳಾದ ಮಲಯ, ವಿಂಧ್ಯ, ಮೇರು, ಮಂದರ, ದರ್ದುರ ಈ ಪರ್ವತಗಳ ಮೇಲೂ, ನನಗೆ ಆಹಾರ ಪದಾರ್ಥಗಳಾದ ಕಂದಮೂಲ ಫಲಗಳ ಮೇಲೂ ಆಣೆಯಿಟ್ಟು ಹೇಳುತ್ತಿರುವೆನು. ನನ್ನ ಮಾತನ್ನು ನಂಬು. ಪ್ರಸ್ರವಣ ಪರ್ವತದಮೇಲೆ ಕುಳಿತಿರುವ ಶ್ರೀರಾಮನನ್ನು, "ಸ್ವರ್ಗ ದಲ್ಲಿ ಐರಾವತದಮೇಲೆ ಕುಳಿತಿರುವ ದೇವೇಂದ್ರನನ್ನಂತೆ" ನೀನು ಅತ್ಯಲ್ಪಕಾಲದಲ್ಲಿಯೇ ನೋಡುವಿ. ॥ ೩೭-೪೦ ॥ ಓ ಸೀತಾದೇವಿಯೇ! ನಿನ್ನನ್ನಗಲಿದುದು ಮೊದಲಾಗಿ ಶ್ರೀರಾಮ ಮೂರ್ತಿಯು ಮಾಂಸವನ್ನು ಭಕ್ಷಿಸನು; ಮಧುಪಾನವನ್ನು ಮಾಡನು; ವಾನಪ್ರಸ್ಥಾಶ್ರಮ ದಲ್ಲಿರುವವನಾಗಿ, ಮನಬಂದಂತೆ ಭುಜಿಸದೆ, ನಿಯತಾಹಾರನಾಗಿ ಪ್ರಾತಸ್ಸಂಗವ,

---

¶ ಇಲ್ಲಿ, "ದೃಙ್ಮನಸ್ಸಂಗ ಸಂಕಲ್ಪಾಜಾಗರಃ ಕೃಶತಾರತಿಃ । ಹ್ರೀತ್ಯಾಗೋನ್ಮಾದಮೂರ್ಛಾಂತಾ ಇತ್ಯನಂಗ ದಶಾದಶ" ಎಂಬ ಹತ್ತು ಅನಂಗದಶೆಗಳಲ್ಲಿಯೂ ರಾಮನು ವಿರಕ್ತನಾಗಿರುವನು. ಮಾಂಸಾದಿಗಳ ಭೋಜನರಾಹಿತ್ಯವು ಅರತಿಯಿಂದಲೇ; ಪೂರ್ವದಲ್ಲಿ ಮಾಂಸಾದಿಗಳ ಭೋಜನವು ಉಕ್ತವಾಗಿರುವುದು. (ತನಿಶ್ಲೋಕಿ)

☫ ಇಲ್ಲಿ ಮನಸ್ಸಂಗಾವಸ್ಥೆಯು ವರ್ಣಿತವಾಗಿದೆ.

**ದಂಶಾನ್ನಮಶಕಾನ್ನಕೀಟಾನ್ನ ಸರೀಸೃಪಾನ್। ರಾಘವೋಽಪನಯೇದ್ಗಾತ್ರಾತ್ತ್ವದ್ಗತೇ
ನಾಂತರಾತ್ಮನಾ ॥ ೪೨ ॥ ನಿತ್ಯಂ ಧ್ಯಾನಪರೋ ರಾಮೋ ನಿತ್ಯಂ ಶೋಕಪರಾಯಣಃ।
ನಾನ್ಯಚ್ಚಿಂತಯತೇ ಕಿಂಚಿತ್ಸತು ಕಾಮವಶಂಗತಃ ॥೪೩॥ ¶ ಅನಿದ್ರಸ್ಸತತಂ ರಾಮಃ
ಸುಪ್ತೋಽಪಿ ಚ ನರೋತ್ತಮಃ। ಸೀತೇತಿ ಮಧುರಾಂ ವಾಣೀಂ ವ್ಯಾಹರನ್ಪ್ರತಿಬುಧ್ಯತೇ
॥ ೪೪ ॥ ದೃಷ್ಟ್ವಾ ಫಲಂ ವಾ ಪುಷ್ಪಂ ವಾ ಯದ್ವಾನ್ಯತ್ಸುಮನೋಹರಂ । ಬಹುಶೋ
ಹಾ! ಪ್ರಿಯೇತ್ಯೇವಂ § ಶ್ವಸಂಸ್ತ್ವಾಮಭಿಭಾಷತೇ ॥ ೪೫ ॥ ಸ ದೇವಿ! ನಿತ್ಯಂ ಪರಿ**

ಸಾಯಂಕಾಲ ರೂಪಗಳಾದ ಕಾಲಗಳಲ್ಲಿ, ಐದನೇ ಕಾಲವಲ್ಲ, (ಅಥವಾ ಪಂಚಮಂ - ಐದರಲ್ಲಿ ಒಂದು ಭಾಗವನ್ನು,) ರಾಘವಃ - ಶ್ರೀರಾಮನು, ತ್ವದ್ಗತೇನ - ನಿನ್ನನ್ನು ಹೊಂದಿದ, ಅಂತರಾತ್ಮನಾ - ಜೀವಾತ್ಮನಿಂದ, ಗಾತ್ರಾತ್ - ತನ್ನ ದೇಹದ ದೆಸೆಯಿಂದ, ದಂಶಾನ್ - ಕಾಡು ನೊಣಗಳನ್ನು, ನಾಪನಯೇತ್ ಓಡಿಸುವುದಿಲ್ಲಾ, ಮಶಕಾನ್ - ನೊಣಗಳನ್ನು, ನಾಪನಯೇತ್ - ಓಡಿಸುವುದಿಲ್ಲ, ಕೀಟಾನ್- ಹುಳಗಳನ್ನು, ನ - ಓಡಿಸುವುದಿಲ್ಲಾ, ಸರೀಸೃಪಾನ್ - ಹಾವುಗಳನ್ನು, ನಾಪನಯೇತ್ - ಓಡಿಸುವದಿಲ್ಲವು. ॥ ೪೧-೪೨ ॥ ಸಃರಾಮಃ-ಆ ಶ್ರೀರಾಮನು, ನಿತ್ಯಂ-ಯಾವಾಗಲೂ, ಧ್ಯಾನಪರಃ - ಧ್ಯಾನದಲ್ಲಿ ಆಸಕ್ತನಾದವನು, ನಿತ್ಯಂ - ಸದಾ ಕಾಲದಲ್ಲಿಯೂ, ಶೋಕ....ಣಃ - ವ್ಯಸನಾಕ್ರಾಂತನಾದವನು, ಕಾಮವಶಂಗತಃ - ಮನ್ಮಥಾಧೀನನಾಗಿ, ಕಿಂಚಿತ್ - ಸ್ವಲ್ಪವಾದರೂ, ಅನ್ಯತ್ - ಮತ್ತೊಂದನ್ನು, ನತುಚಿಂತಯತೇ - ಯೋಚಿಸುವುದೇ ಇಲ್ಲವು. ॥ ೪೩ ॥ ನರೋತ್ತಮಃ - ಪುರುಷಶ್ರೇಷ್ಠನಾದ, ರಾಮಃ - ಶ್ರೀರಾಮನು, ಸತತಂ - ಯಾವಾಗಲೂ, ಸುಪ್ತೋಽಪಿ - ಮಲಗಿದ್ದರೂ, ಅನಿದ್ರಃ - ನಿದ್ರೆಯಿಲ್ಲದವನಾಗಿ, ಸೀತೇತಿ - ಸೀತೇ ಎಂದು, ಮಧುರಾಂ - ಮನೋಹರವಾದ, ವಾಣೀಂ-ಮಾತನ್ನು, ವ್ಯಾಹರನ್ - ಹೇಳುತ್ತ, ಪ್ರತಿಬುಧ್ಯತೇ - ಎಚ್ಚರಗೊಳ್ಳುತ್ತಾನೆ. ॥೪೪॥ ಯದ್ವಾ - ಹಾಗಲ್ಲದಿದ್ದರೆ, ಫಲಂವಾ - ಹಣ್ಣನ್ನಾಗಲಿ, ಪುಷ್ಪಂವಾ - ಹುವ್ವನ್ನಾಗಲಿ, ಸುಮನೋಹರಂ - ಬಹಳ ಸೊಗಸಾದ, ಅನ್ಯತ್ - ಮತ್ತೊಂದು ಪದಾರ್ಥವನ್ನಾಗಲಿ, ದೃಷ್ಟ್ವಾ - ಕಂಡು, ಬಹುಶಃ - ಬಹುತರವಾಗಿ,

---

ಮಧ್ಯಾಹ್ನಾಪರಾಹ್ಣ ಸಾಯಂಕಾಲಗಳಲ್ಲಿ ವನ್ಯಗಳಾದ ಕಂದಮೂಲ ಫಲಾದಿಗಳನ್ನು ಮಾತ್ರ ಆತನು ಭುಜಿಸುತ್ತಿರುವನು. ಎಲೆ ತಾಯೇ! ಶ್ರೀರಾಮನು ನಿರಂತರವೂ ತನ್ನ ಹೃದಯದಲ್ಲಿ ನಿನ್ನನ್ನೇ ಧ್ಯಾನಿಸುತ್ತ ಮೈಮರೆತು, ತನ್ನ ದೇಹದಮೇಲೆ ಕುಳಿತು ಕಚ್ಚುವ ಕಾಡುನೊಣಗಳನ್ನಾಗಲಿ, ಸೊಳ್ಳೆಗಳನ್ನಾಗಲಿ ಓಡಿಸುವುದಿಲ್ಲವು. ಇಷ್ಟುಮಾತ್ರವಲ್ಲದೆ ಆ ಮಹಾತ್ಮನು, ನಿನ್ನನ್ನಗಲಿದಂದಿನಿಂದಲೂ, ಕಾಮಪರವಶನಾಗಿ, ನಿರಂತರವೂ ನಿನ್ನನ್ನೇ ಧ್ಯಾನಿಸುತ್ತ, ಯಾವಾಗಲೂ ನಿನಗಾಗಿಯೇ ದುಃಖಿಸುತ್ತ ಯಾವುದನ್ನೂ ಸ್ವಲ್ಪವಾದರೂ ನೆನೆಯುವುದಿಲ್ಲವು. ॥ ೪೧-೪೩ ॥ ಪುರುಷೋತ್ತಮನಾದ ಶ್ರೀರಾಮನು ನಿದ್ರಿಸಿದುದೇ ಇಲ್ಲವು. ಒಂದುವೇಳೆ ನಿದ್ರಿಸಿದರೂ, "ಸೀತೇ! ಸೀತೇ!" ಎಂದು ಬಹು ಮನೋಹರವಾಗಿ ನುಡಿಯುತ್ತಲೇ ಇರುವನು. ಎಲೆ ತಾಯೇ! ಶ್ರೀರಾಮನು ಯಾವುದಾದರೂ ಒಂದು ಮನೋಹರವಾದ ಪುಷ್ಪವನ್ನಾಗಲಿ, ಫಲವನ್ನಾಗಲಿ ಕಂಡುದಾದರೆ, "ಹಾ! ಪ್ರಿಯೇ! ಈ ವಸ್ತುವನ್ನು ಅನುಭವಿಸಲು ನೀನಿಲ್ಲದಾದೆಯಾ!" ಎಂದು ನಿಟ್ಟುಸಿರುಗಳನ್ನು ಬಿಡುತ್ತ ಅನೇಕ ವಿಧವಾಗಿ ವಿಲಪಿಸುವನು.

¶ ಇಲ್ಲಿ ಜಾಗರಾವಸ್ಥೆಯು ವರ್ಣಿತವಾಗಿರುವುದು. ಮಿಕ್ಕ ಅವಸ್ಥೆಗಳೂ ಹೀಗೆಯೇ ತಿಳಿಯಬೇಕು.

§ "ಸ್ಮರನ್" ತಿ. ಪಾ.

ತಪ್ಯಮಾನ ಸ್ತ್ವಾಮೇವ ಸೀತೇತ್ಯಭಿಭಾಷಮಾಣಃ । ದೃಢವ್ರತೋ ರಾಜಸುತೋ ಮಹಾತ್ಮಾ ತವೈವ ಲಾಭಾಯ ಕೃತಪ್ರಯತ್ನಃ'' ॥ ೪೬ ॥

ಸಾ ರಾಮಸಂಕೀರ್ತನವೀತಶೋಕಾ
ರಾಮಸ್ಯ ಶೋಕೇನ ಸಮಾನಶೋಕಾ ।
ಶರನ್ಮುಖೇ ಸಾಂಬುದಶೇಷಚಂದ್ರಾ
ನಿಶೇವ ವೈದೇಹಸುತಾ ಬಭೂವ ॥ ೪೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್ತ್ರಿಂಶಸ್ಸರ್ಗಃ

ಹಾ ಪ್ರಿಯೇತಿ - ಹಾ ಪ್ರಿಯಳೇ ಎಂದು, ಏವಂ - ಈ ಪರಿಯಾಗಿ, ಶ್ವಸನ್ - ನಿಟ್ಟುಸಿರುಬಿಡುತ್ತ, ತ್ವಾಂ - ನಿನ್ನನ್ನು ಕುರಿತು, ಅಭಿಭಾಷತೇ - ಮಾತನಾಡುತ್ತಾನೆ. ||೪೫|| ಹೇ ದೇವಿ - ಓ ದೇವಿಯೇ, ಧೃಢವ್ರತಃ - ಧರಿಸಲ್ಪಟ್ಟ ನಿಯಮವುಳ್ಳ, ರಾಜಪುತ್ರಃ - ದಶರಥಪುತ್ರನಾದ, ಮಹಾತ್ಮಾ - ಮಹಾನುಭಾವನಾದ, ಸಃ - ಆ ಶ್ರೀರಾಮನು, ನಿತ್ಯಂ - ಸರ್ವಕಾಲದಲ್ಲಿಯೂ, ಪರಿತಪ್ಯಮಾನಃ - ಕುದಿಯುತ್ತಿರುವವನಾಗಿ, ತ್ವಾಮೇವ - ನಿನ್ನನ್ನೇ ಕುರಿತು, ಸೀತೇತಿ - ಸೀತೇ ಎಂದು, ಅಭಿಭಾಷಮಾಣಃ - ಹೇಳುತ್ತ, ತವ - ನಿನ್ನ, ಲಾಭಾಯೈವ - ದೊರಕುವಿಕೆಯಲ್ಲಿಯೇ, ಕೃತಪ್ರಯತ್ನಃ - ಮಾಡಲ್ಪಟ್ಟ ಪ್ರಯತ್ನವುಳ್ಳವನು. ||೪೬|| ರಾಮ....ಕಾ - ರಾಮಕಥಾಶ್ರವಣದಿಂದ ಕಳೆದ ವ್ಯಸನವುಳ್ಳ, ರಾಮಸ್ಯ - ಶ್ರೀರಾಮನ, ಶೋಕೇನ-ದುಃಖದೊಡನೆ, ಸಮಾನಶೋಕಾ-ಸದೃಶವಾದ ದುಃಖವುಳ್ಳ, ಸಾವೈದೇಹಸುತಾ - ಆ ಜಾನಕಿಯು, ಶರನ್ಮುಖೇ - ಶರತ್ಕಾಲದ ಆದಿಭಾಗದಲ್ಲಿ, ಸಾಂಬು....ದ್ರಾ-ಮೇಘಶೇಷದಿಂದೊಡಗೂಡಿದ ಚಂದ್ರನುಳ್ಳ, ನಿಶೇವ - ರಾತ್ರಿಯಂತೆ, ಬಭೂವ - ಆದಳು. ||೪೭||

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್ತ್ರಿಶಸ್ಸರ್ಗಃ

ಮಹಾ ಪರಾಕ್ರಮಶಾಲಿಯಾದ ಆ ರಾಜಪುತ್ರನು ವಾನಪ್ರಸ್ಥಾಶ್ರಮದಲ್ಲಿದ್ದುಕೊಂಡು ನಿರಂತರವೂ ನಿನ್ನನ್ನು ಕುರಿತೇ ಚಿಂತಿಸುತ್ತ, "ಸೀತೇ! ಸೀತೇ!'' ಎಂದು ನಿನ್ನನ್ನೇ ಧ್ಯಾನಿಸುತ್ತ, ನಿನ್ನನ್ನು ಹುಡುಕುವುದಕ್ಕಾಗಿಯೇ ನಿರಂತರವೂ ಪ್ರಯತ್ನವನ್ನು ಮಾಡುತ್ತಿರುವನು.'' ಮಹಾಮೇಧಾವಿಯಾದ ಹನುಮಂತನೀರೀತಿ ಅನೇಕ ವಿಧವಾಗಿ ಹೇಳಿದುದನ್ನು ಕೇಳಿ, ಜನಕರಾಜಕುಮಾರಿಯಾದ ಸೀತಾದೇವಿಯು ಶ್ರೀರಾಮನ ಚರಿತ್ರೆಯನ್ನು ಕೇಳಿದುದರಿಂದ ವ್ಯಸನವಿಲ್ಲದವಳಾದರೂ, ಶ್ರೀರಾಮನು ತನಗಾಗಿ ನಿರಂತರವೂ ದುಃಖಿಸುತ್ತಿರುವನೆಂಬ ಸಂಗತಿಯನ್ನು ಕೇಳಿದುದರಿಂದ ರಾಮಸಮಾನವಾದ ವ್ಯಸನವನ್ನು ಹೊಂದಿ, ಶರದೃತುವಿನ ಆರಂಭದಲ್ಲಿ ಅಲ್ಪಮೇಘದಿಂದ ಆಚ್ಛಾದಿತವಾದ ಚಂದ್ರನಿಂದ ಕೂಡಿದ ರಾತ್ರಿಯಂತೆ ಪ್ರಕಾಶಿಸಿಯೂ ಪ್ರಕಾಶಿಸದವಳಂತಿದ್ದಳು.

ಇಂತಿದು ಹನುಮತ್ಕಥಿತ ಶ್ರೀರಾಮ ವೃತ್ತಾಂತ ನಿರೂಪಣವೆಂಬ
ಮೂವತ್ತಾರನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಸಪ್ತತ್ರಿಂಶಸ್ಸರ್ಗಃ

[1] ಸೀತಾ ತದ್ವಚನಂ ಶ್ರುತ್ವಾ ಪೂರ್ಣಚಂದ್ರನಿಭಾನನಾ । ಹನೂಮಂತ ಮುವಾಚೇದಂ ಧರ್ಮಾರ್ಥಸಹಿತಂ ವಚಃ ॥ ೧ ॥ "ಅಮೃತಂ ವಿಷಸಂಸೃಷ್ಟಂ ತ್ವಯಾ ವಾನರ! ಭಾಷಿತಂ । ಯಚ್ಚ ನಾನ್ಯಮನಾ ರಾಮೋ ಯಚ್ಚ ಶೋಕಪರಾಯಣಃ ॥ ೨ ॥ ಐಶ್ವರ್ಯೇವಾ ಸುವಿಸ್ತೀರ್ಣೇ ವ್ಯಸನೇವಾ ಸುದಾರುಣೇ । ರಜ್ಜ್ವೇವ ಪುರುಷಂ ಬಧ್ವಾ ಕೃತಾಂತಃ ಪರಿಕರ್ಷತಿ ॥ ೩ ॥ ವಿಧಿರ್ನೂನಮಸಂಹಾರ್ಯಃ

ಪೂರ್ಣ....ನಾ - ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳ, ಸೀತಾ - ಸೀತಾದೇವಿಯು, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಹನೂಮಂತಂ - ಆಂಜನೇಯನನ್ನು ಕುರಿತು, ಧರ್ಮಾ....ತಂ - ಧರ್ಮಯುಕ್ತವಾದ ಅರ್ಥದಿಂದಲೂ ಕೂಡಿದ, ಇದಂವಚಃ - ಈ ಮಾತನ್ನು, ಉವಾಚ - ಹೇಳಿದಳು. ॥ ೧ ॥ ರಾಮಃ - ಶ್ರೀರಾಮನು, ನಾನ್ಯಮನಾಃ - ಇತರ ವಸ್ತುಗಳಲ್ಲಿ ಮನವಿಲ್ಲದಿರುವನೆಂಬುದು, ಯಚ್ಚ - ಯಾವದು, ತ್ವಯಾ - ನಿನ್ನಿಂದ, ಭಾಷಿತಂ - ಹೇಳಲ್ಪಟ್ಟಿತೋ, ತತ್ - ಅದು, ಅಮೃತಂ - ಅಮೃತವು, ಹೇ ವಾನರ - ಎಲೈ ಕಪಿಯೇ, ಶೋಕಪರಾಯಣಃ - ಶೋಕಾಕ್ರಾಂತನೆಂದು, ಯಚ್ಚ - ಯಾವದು, ಭಾಷಿತಂ - ಹೇಳಲ್ಪಟ್ಟಿತೋ, ತತ್ - ಅದು, ವಿಷಸಂಸೃಷ್ಟಂ - ವಿಷದಿಂದ ಕೂಡಿದ್ದು. ॥೨॥ ಕೃತಾಂತಃ - ದೈವವು, ಸುವಿಸ್ತೀರ್ಣೇ - ವಿಸ್ತಾರವಾದ, ಐಶ್ವರ್ಯೇವಾ - ಐಶ್ವರ್ಯದಲ್ಲಿಯಾಗಲಿ, ಸುದಾರುಣೇ - ಮಹಾ ಭಯಂಕರವಾದ, ವ್ಯಸನೇವಾ - ವ್ಯಸನಕಾಲದಲ್ಲಿಯಾಗಲಿ, ರಜ್ಜ್ವೇವ - ಹಗ್ಗದಿಂದಲಂತೆ, ಪುರುಷಂ - ಮನುಷ್ಯನನ್ನು, ಬಧ್ವಾ - ಕಟ್ಟಿ, ಪರಿಕರ್ಷತಿ - ಸೆಳೆಯುತ್ತದೆ. ॥ ೩ ॥ ಹೇಪ್ಲವಗೋತ್ತಮ - ಎಲೈ ಕಪಿಶ್ರೇಷ್ಠನೆ, ವಿಧಿಃ - ದೈವವು,

ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳ ಸೀತಾದೇವಿಯು ಹನುಮಂತನ ಮಾತುಗಳನ್ನು ಕೇಳಿ ಧರ್ಮಾರ್ಥ ಸಹಿತವಾಗಿರುವ ಈ ಮಾತುಗಳನ್ನಾಡಿದಳು. "ಎಲೈ ವಾನರನೇ! ಶ್ರೀರಾಮನು ಇತರ ವಸ್ತುಗಳಲ್ಲಿ ಆಸಕ್ತಿಯಿಲ್ಲದವನಾಗಿ ನಿರಂತರವೂ ನನ್ನನ್ನೇ ಕುರಿತು ಚಿಂತಿಸುತ್ತಿರುವನೆಂದೂ, ಶೋಕವೇ ಮುಖ್ಯವಾದ ಗತಿಯುಳ್ಳವನಾಗಿರುವನೆಂದೂ ಹೇಳಿದ ನಿನ್ನ ಮಾತುಗಳು ನನ್ನ ಕಿವಿಗಳಿಗೆ ಅಮೃತೋಪಮವಾಗಿರುವುದು. ಈ ಎರಡು ಮಾತುಗಳೂ ನನಗೆ ಅತ್ಯಂತ ಸಂತೋಷವನ್ನುಂಟುಮಾಡಿವೆ. ಆದರೆ ಅವು ವಿಷಸಮ್ಮಿಶ್ರವಾಗಿಯೂ ಇರುವುವು. ಆತನು ನನ್ನನ್ನೇ ಧ್ಯಾನಿಸುತ್ತಿರುವ ಸಂಗತಿಯು ನನಗೆ ಸಂತೋಷಕರವಾದರೂ, ಆತನು ಸದಾಕಾಲದಲ್ಲಿಯೂ ವ್ಯಸನಸಂತಪ್ತನಾಗಿರುವನೆಂಬುದು ನನ್ನ ಮನಸ್ಸಿಗೆ ಕೇವಲ ವಿಷಸಮಾನವಾಗಿರುವುದು. ಎಲೈ ಮಾರುತಿಯೇ, ಮಹದೈಶ್ವರ್ಯದಲ್ಲಿಯಾಗಲಿ, ಮಹಾ ಭಯಂಕರವಾದ ದುಃಖದಲ್ಲಿಯೇ ಆಗಲಿ ದೈವವೊಂದೇ ಕಾರಣವಾಗುತ್ತದೆಯಲ್ಲದೆ ಮತ್ತೆಬೇರೆಯಲ್ಲವು. ಪುರುಷಪ್ರಯತ್ನವು ಯಾವ ವಿಧದಲ್ಲಿಯೂ ಕೆಲಸಕ್ಕೆ ಬರು

[1] "ಸಾ" ತಿ. ರಾ. ಪಾ.

ಪ್ರಾಣಿನಾಂ ಪ್ಲವಗೋತ್ತಮ! । ಸೌಮಿತ್ರಿಂ ಮಾಂಚ ರಾಮಂಚ ವ್ಯಸನೈಃ ಪಶ್ಯ ಮೋಹಿತಾ೯ ‖ ೪ ‖ ಶೋಕಸ್ಯಾಽಸ್ಯ ❀ ಕದಾ ಪಾರಂ ರಾಘವೋಽಧಿಗಮಿಷ್ಯತಿ? । ಪ್ಲವಮಾನಃ ಪರಿಶ್ರಾಂತೋ ಹತನೌಸ್ಸಾಗರೇ ಯಥಾ ‖ ೫ ‖ ರಾಕ್ಷಸಾನಾಂ ವಧಂ ಕೃತ್ವಾ ಸೂದಯಿತ್ವಾಚ ರಾವಣಂ । ಲಂಕಾ § ಮುನ್ಮೂಲಿತಾಂ ಕೃತ್ವಾ ಕದಾ ದ್ರಕ್ಷ್ಯತಿ ಮಾಂ ಪತಿಃ? ‖ ೬ ‖ ಸ ವಾಚ್ಯಸ್ಸಂತ್ವರಸ್ವೇತಿ ಯಾವದೇವ ನಪೂರ್ಯತೇ । ಅಯಂ ಸಂವತ್ಸರಃ ಕಾಲಸ್ತಾವದ್ಧಿ ಮಮ ಜೀವಿತಂ ‖ ೭ ‖ ವರ್ತತೇ ದಶಮೋ

ಪ್ರಾಣಿನಾಂ - ಜೀವರಾಶಿಗಳಿಗೆ, ಅಸಂಹಾರ್ಯಃ - ನಿವಾರಿಸುವುದಕ್ಕೆ ಅಶಕ್ಯವು, ನೂನಂ - ನಿಶ್ಚಯವು, ವ್ಯಸನೈಃ - ದುಃಖಗಳಿಂದ, ಮೋಹಿತಾ೯ - ಭ್ರಮೆಗೊಳಿಸಲ್ಪಟ್ಟ, ಸೌಮಿತ್ರಿಂ - ಲಕ್ಷ್ಮಣನನ್ನು, ಮಾಂಚ - ನನ್ನನ್ನೂ, ರಾಮಂಚ - ಶ್ರೀರಾಮನನ್ನು ಸಹ, ಪಶ್ಯ - ನೋಡು. ‖ ೪ ‖ ರಾಘವಃ - ಶ್ರೀರಾಮನು, ಅಸ್ಯಶೋಕಸ್ಯ - ಈ ದುಃಖದ, ಸಾಗರೇ - ಸಮುದ್ರದಲ್ಲಿ, ಪ್ಲವಮಾನಃ - ತೇಲಾಡಿಕೊಂಡು ಹೋಗುತ್ತ, ಪರಿಶ್ರಾಂತಃ - ಬಳಲಿದ, ಹತನೌರ್ಯಥಾ - ಮುರಿದುಹೋದ ಹಡಗಿನಂತೆ, ಪಾರಂ - ತೀರವನ್ನು, ಕದಾ - ಯಾವಾಗ, ಅಧಿಗಮಿಷ್ಯತಿ - ಹೊಂದುವನೋ, ‖ ೫ ‖ ಪತಿಃ - ಸ್ವಾಮಿಯಾದ ಶ್ರೀರಾಮನು, ರಾಕ್ಷಸಾನಾಂ - ರಕ್ಕಸರ, ವಧಂ - ನಾಶವನ್ನು, ಕೃತ್ವಾ - ಮಾಡಿ, ರಾವಣಂಚ-ರಾವಣನನ್ನು, ಸೂದಯಿತ್ವಾ-ಮರ್ದಿಸಿ, ಲಂಕಾಂ-ಲಂಕಾಪಟ್ಟಣವನ್ನು, ಉನ್ಮೂಲಿತಾಂ ಕೃತ್ವಾ - ಮೂಲೋತ್ಪಾಟನಮಾಡಿ, ಮಾಂ - ನನ್ನನ್ನು, ಕದಾದ್ರಕ್ಷ್ಯತಿ - ಯಾವಾಗ ನೋಡುವೆನೋ. ‖ ೬ ‖ ಸಂವತ್ಸರಃ - ಸಂವತ್ಸರಪರಿಮಿತವಾದ, ಅಯಂಕಾಲಃ - ಈ ಕಾಲವು, ಯಾವದೇವ - ಎಷ್ಟರಲ್ಲಿ, ನಪೂರ್ಯತೇ - ಪೂರ್ಣವಾಗುವುದಿಲ್ಲವೋ, ತಾವತ್ - ಅಷ್ಟರಪರೆಗೂ, ಮಮ - ನನ್ನ, ಜೀವಿತಂಹಿ - ಬದುಕುವಿಕೆಯಷ್ಟೆ, ತಾವತ್ - ಅಷ್ಟರಲ್ಲಿ, ಸಂತ್ವರಸ್ವೇತಿ - ಜಾಗ್ರತೆಮಾಡುಯೆಂದು, ಸಃ - ಆ

ವುದಿಲ್ಲವು. ಎಲೈ ಮಹಾ ಕಪಿಯೇ! ಈ ದೈವವು ಮನುಷ್ಯನನ್ನು ಹಗ್ಗದಿಂದ ಹೇಗೋ ಹಾಗೆ ಬಂಧಿಸಿ ಸೆಳೆಯುತ್ತಿರುತ್ತದೆ. ಈ ದೈವವೆಂಬುದು ಸಮಸ್ತ ಪ್ರಾಣಿಗಳಿಗೂ ಅಸಂಹಾರ್ಯವಾದುದು; ಇದು ನಿಶ್ಚಯವು. ಈಗ ಲಕ್ಷ್ಮಣನೂ, ಶ್ರೀರಾಮಚಂದ್ರನೂ, ನಾನೂ ವ್ಯಸನಗಳಿಂದ ಭ್ರಾಂತರಾಗಿರುವುದನ್ನು ನೋಡು. ಇದು ವಿಧಿವಿಲಾಸವಲ್ಲದೆ ಮತ್ತೇನೂ ಅಲ್ಲವು. ಎಲೈ ಪ್ಲವಗೋತ್ತಮನೇ! ಸಮುದ್ರದಲ್ಲಿ ಹಡುಗೊಡೆದು, ಆಧಾರವೇನೂ ದೊರಕದೆ ಬಹು ಕಷ್ಟದಿಂದ ಈ ಸುತ್ತಲಿರುವ ದಡವನ್ನು ಅತಿಪ್ರಯಾಸದಿಂದ ಸೇರುವಂತೆ, ನನ್ನ ಪತಿಯಾದ ರಾಘವನು ಈ ದುಃಖಸಮುದ್ರವನ್ನು ಯಾವಾಗ ದಾಟುವನೋ? ‖ ೧–೫ ‖ ನನ್ನ ಪತಿಯಾದ ಆ ರಾಮಮೂರ್ತಿಯು ಈ ಲಂಕಾನಗರವನ್ನು ಪ್ರವೇಶಿಸಿ ಇಲ್ಲಿರುವ ರಕ್ಕಸರನ್ನೊಕ್ಕಲಿಕ್ಕಿ ಇವರೆಲ್ಲರಿಗೂ ಒಡೆಯನಾದ ದುರುಳರಾವಣನನ್ನೂ ಸಂಹರಿಸಿ, ಈ ಲಂಕಾಪಟ್ಟಣವೆಲ್ಲವನ್ನೂ ಧ್ವಂಸಮಾಡಿ ನನ್ನನ್ನು ಯಾವಾಗ ನೋಡುವನೋ! ಎಲೈ ಹನುಮಂತನೇ! ರಾವಣಾಸುರನು ನನಗೆ ಒಂದುವರ್ಷದ ಅವಧಿಯನ್ನು ಕೊಟ್ಟಿರುವನು. ಈ ವರ್ಷದ ಅವಧಿಯು ಮುಗಿಯುವುದಕ್ಕೆ ಮೊದಲೇ ನೀನಿಲ್ಲಿಂದ ಹೋಗಿ ನನ್ನ ವೃತ್ತಾಂತವೆಲ್ಲವನ್ನೂ ಶ್ರೀರಾಮನಿಗೆ ತಿಳುಹಿ ಆತನನ್ನಿಲ್ಲಿಗೆ ಕರೆದುಕೊಂಡು ಬರುವವ

❀ "ಕಥಂ" ರಾ. ಪಾ. § "ಉನ್ಮಥಿತಾಂ" ತಿ. ಪಾ.

ಮಾಸೌ ದ್ವೌತು ಶೇಷೌ ಪ್ಲವಂಗಮ ! । ರಾವಣೇನ ನೃಶಂಸೇನ ಸಮಯೋ ಯಃ ಕೃತೋ ಮಮ ॥ ೮ ॥ ವಿಭೀಷಣೇನಚ ಭ್ರಾತ್ರಾ ಮಮ ನಿರ್ಯಾತನಂ ಪ್ರತಿ । ಅನುನೀತಃ ಪ್ರಯತ್ನೇನ ನಚ ತತ್ಕುರುತೇ ಮತಿಂ ॥ ೯ ॥ ಮಮ ಪ್ರತಿಪ್ರದಾನಂಹಿ ರಾವಣಸ್ಯ ನರೋಚತೇ ! । ರಾವಣಂ ಮಾರ್ಗತೇ ಸಂಖ್ಯೇ ಮೃತ್ಯುಃ ಕಾಲವಶಂಗತಃ ॥೧೦॥ ಜ್ಯೇಷ್ಠಾ ಕನ್ಯಾ §ಽನಲಾ ನಾಮ ವಿಭೀಷಣಸುತಾ ಕಪೇ ! । ತಯಾ ಮಮೇದ

ಶ್ರೀರಾಮನು, (ತ್ವಯಾ - ನಿನ್ನಿಂದ,) ವಾಚ್ಯಃ - ಹೇಳಲ್ಪಡತಕ್ಕವನು. ॥ ೭ ॥ ಹೇಪ್ಲವಂಗಮ - ಎಲೈ ವಾನರನೇ, ನೃಶಂಸೇನ-ಘಾತುಕನಾದ, ರಾವಣೇನ-ರಾವಣನಿಂದ, ಮಮ-ನನಗೆ, ಯಸ್ಸಮಯಃ-ಯಾವ ಅವಧಿಯು, ಕೃತಃ-ಮಾಡಲ್ಪಟ್ಟಿತೋ, ತಸ್ಮಿನ್-ಅದರಲ್ಲಿ, ದಶಮಃಮಾಸಃ-ಹತ್ತನೆಯ ತಿಂಗಳು, **ವರ್ತತೇ** - ನಡೆಯುತ್ತಿದೆ, ದ್ವೌತು - ಎರಡುಮಾಸಗಳು ಮಾತ್ರ, ಶೇಷೌ - ಉಳಿದಿರುವವು. ॥ ೮ ॥ **ಮಮ**-ನನ್ನ, ನಿರ್ಯಾತನಂಪ್ರತಿ-ಪ್ರತ್ಯರ್ಪಣೆಯನ್ನು ಕುರಿತು, ಭ್ರಾತ್ರಾ-ತಮ್ಮನಾದ, ವಿಭೀಷಣೇನಚ-ವಿಭೀಷಣನಿಂದಲೂ, ಪ್ರಯತ್ನೇನ - ಮಹಾ ಪ್ರಯಾಸದಿಂದ, (ರಾವಣಃ - ರಾವಣಾಸುರನು,) ಅನುನೀತಃ - ಪ್ರಾರ್ಥಿಸಲ್ಪಟ್ಟನು, ತತ್ - ಅದನ್ನು ಕುರಿತು, ಮತಿಂ - ಬುದ್ಧಿಯನ್ನು, ನಕುರುತೇ - ಮಾಡುವುದಿಲ್ಲ. ॥ ೯ ॥ ಹಿ - ಯಾವಕಾರಣದಿಂದ, ಮಮ - ನನ್ನ, ಪ್ರತಿಪ್ರದಾನಂ - ಪ್ರತ್ಯರ್ಪಣವು, ರಾವಣಸ್ಯ - ರಾವಣನಿಗೆ, ನರೋಚತೇ - ರುಚಿಸುವುದಿಲ್ಲವೋ, (ತೇನ - ಆ ಕಾರಣದಿಂದ,) ಮೃತ್ಯುಃ - ಮೃತ್ಯುವು, ಸಂಖ್ಯೇ - ಯುದ್ಧದಲ್ಲಿ, ಕಾಲವಶಂಗತಂ - ದೈವಾಧೀನನಾದ, ರಾವಣಂ - ರಾವಣಾಸುರನನ್ನು, ಮಾರ್ಗತೇ - ಹುಡುಕುತ್ತಿದೆ. ॥ ೧೦ ॥ ಹೇಕಪೇ - ಎಲೈ ವಾನರನೇ, ಅನಲಾನಾಮ - ಅನಲೆಯೆಂದು ಪ್ರಸಿದ್ಧಳಾದ, ಜ್ಯೇಷ್ಠಾ - ದೊಡ್ಡವಳಾದ, ವಿಭೀ....ತಾ - ವಿಭೀಷಣನ ಮಗಳಾದ, ಕನ್ಯಾ - ಹುಡುಗಿಯು, (ಅಸ್ತಿ - ಇರುವಳು,) ಸ್ವಯಂ - ತನ್ನಷ್ಟಕ್ಕೆತಾನೆ, ಮಾತ್ರಾ - ತಾಯಿಯಿಂದ, ಪ್ರಹಿತಯಾ-ಪ್ರೇರೇಪಿಸಲ್ಪಟ್ಟ, ತಯಾ-ಆ ವಿಭೀಷಣಪುತ್ರಿಯಿಂದ, ಇದಂ-ಈ ಮಾತು, ಮಮ-

ನಾಗು. ಈ ವರ್ಷವು ಕಳೆದಮೇಲೆ ನಾನು ಜೀವದಿಂದಿರುವುದಿಲ್ಲವು. ಎಲೈ ಪ್ಲವಂಗಮನೇ ! ಆ ರಾವಣನು ಅವಧಿಮಾಡಿಕೊಟ್ಟಿದ್ದ ಒಂದು ವರ್ಷದಲ್ಲಿ ಹತ್ತುತಿಂಗಳು ಕಳೆದುಹೋಗಿರುವುವು. ಇನ್ನು ಎರಡು ತಿಂಗಳುಗಳು ಮಾತ್ರ ಉಳಿದಿವೆ. ಈ ಕಾಲವೂ ಕಳೆದ ಬಳಿಕ ಆ ದುಷ್ಟನು ನನ್ನನ್ನು ಖಂಡಿತವಾಗಿಯೂ ಸಂಹರಿಸಿಬಿಡುವನು. ಈ ರಾವಣನಿಗೆ ವಿಭೀಷಣನೆಂಬ ಒಬ್ಬ ತಮ್ಮನಿರುವನು. ಆತನು ನನ್ನನ್ನು ರಾಮನಿಗೆ ಸಮರ್ಪಿಸೆಂದು ಅನೇಕ ಸಲ, ಅನೇಕ ವಿಧವಾಗಿ ಬುದ್ಧಿ ಹೇಳಿದನು. ಆದರೇನು ; ಆ ದುಷ್ಟನು ಆತನ ಮಾತನ್ನು ಲಕ್ಷ್ಯಕ್ಕೇ ತಂದುಕೊಳ್ಳಲಿಲ್ಲವು. ನನ್ನನ್ನು ಪುನಃ ಶ್ರೀರಾಮನಿಗೆ ಒಪ್ಪಿಸುವ ವಿಷಯದಲ್ಲಿ ಆ ರಾವಣನು ಸಮ್ಮತಿಸಲಿಲ್ಲವು. ವಿನಾಶಕಾಲವೊದಗಿರುವ ಆ ರಾವಣನನ್ನು ಯುದ್ಧದಲ್ಲಿ ಸೆಳೆದುಕೊಂಡು ಹೋಗಲು ಮೃತ್ಯುದೇವತೆಯು ಹೊಂಚುತ್ತಿರುವುದೋ ಏನೋ ! ಆದುದರಿಂದಲೇ ಆ ದುಷ್ಟನು ವಿಭೀಷಣನ ಮಾತುಗಳನ್ನು ಕೇಳಲಿಲ್ಲವು. ॥ ೬–೧೦ ॥ ಎಲೈ ಮಾರುತಿಯೇ ! ಆ ವಿಭೀಷಣನಿಗೆ ಅನಲೆಯೆಂಬ ಹಿರಿಮಗಳೊಬ್ಬಳಿರುವಳು. ತಾಯಿಯಿಂದ ಪ್ರೇರೇಪಿತಳಾದ ಆ ಅನಲೆಯು ಈ ವೃತ್ತಾಂತವೆಲ್ಲವನ್ನೂ ನನಗೆ ತಿಳುಹಿದಳು. ಎಲೈ ಆಂಜನೇಯನೇ ! ನನ್ನ

§ "ಕಲಾ" ತಿ. ಪಾ.

ಮಾಖ್ಯಾತಂ ಮಾತ್ರಾ ಪ್ರಹಿತಯಾ ಸ್ವಯಂ ॥ ೧೧ ॥ ‡ ಅಸಂಶಯಂ * ಹರಿಶ್ರೇಷ್ಠ! ಕ್ಷಿಪ್ರಂ ಮಾಂ ಪ್ರಾಪ್ಸ್ಯತೇ ಪತಿಃ । ಅಂತರಾತ್ಮಾಹಿ ಮೇ ಶುದ್ಧ ಸ್ತಸ್ಮಿಂಶ್ಚ ಬಹವೋ ಗುಣಾಃ ॥೧೨॥ ಉತ್ಸಾಹಃ ಪೌರುಷಂ ಸತ್ವಮಾನೃಶಂಸ್ಯಂ ಕೃತಜ್ಞತಾ । ವಿಕ್ರಮಶ್ಚ ಪ್ರಭಾವಶ್ಚ ಸಂತಿ ವಾನರ! ರಾಘವೇ ॥ ೧೩ ॥ ಚತುರ್ದಶ ಸಹಸ್ರಾಣಿ ರಾಕ್ಷಸಾನಾಂ

ನನಗೆ, ಆಖ್ಯಾತಂ - ಹೇಳಲ್ಪಟ್ಟಿತು. ॥ ೧೧ ॥ ಹೇಹರಿಶ್ರೇಷ್ಠ - ಎಲೈ ಕಪಿಶ್ರೇಷ್ಠನೆ, ಹಿ - ಯಾವ ಕಾರಣದಿಂದ, ಮೇ - ನನ್ನ, ಅಂತರಾತ್ಮಾ - ಮನಸ್ಸು, ಶುದ್ಧಃ - ಪರಿಶುದ್ಧವಾದುದೋ, ತಸ್ಮಿನ್ - ಆ ಶ್ರೀರಾಮನಲ್ಲಿ, ಬಹವಃ - ಅನೇಕಗಳಾದ, ಗುಣಾಶ್ಚ - ಗುಣಗಳು, (ಸಂತಿ - ಇರುವವು,) ತೇನ - ಆ ಕಾರಣದಿಂದ, ಪತಿಃ - ಸ್ವಾಮಿಯಾದ ಶ್ರೀರಾಮನು, ಮಾಂ - ನನ್ನನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಪ್ರಾಪ್ಸ್ಯತೇ - ಹೊಂದುವನು, ಅಸಂಶಯಂ - ಸಂದೇಹವಿಲ್ಲವು ॥ ೧೨ ॥ ಹೇವಾನರ - ಎಲೈ ಕಪಿಯೇ, ರಾಘವೇ-ಶ್ರೀರಾಮನಲ್ಲಿ, ಉತ್ಸಾಹಃ-ಹೀಗೆ ಮಾಡಬೇಕೆಂಬ ಪ್ರಯತ್ನವೂ, ಪೌರುಷಂ-ಪೌರುಷವೂ, ಸತ್ವಂ - ಬಲವೂ, ಆನೃಶಂಸ್ಯಂ - ದಯಾಳುತ್ವವೂ, ಕೃತಜ್ಞತಾ - ಉಪಕಾರಜ್ಞತೆಯೂ, ವಿಕ್ರಮಃ - ಶೌರ್ಯವೂ, ಪ್ರಭಾವಶ್ಚ - ಶಕ್ತಿಯೂ ಕೂಡ, ಸಂತಿ - ಇರುತ್ತವೆ. ॥ ೧೩ ॥ ಯಃ - ಯಾವ ರಾಮನು, ಭ್ರಾತ್ರಾವಿನಾ - ಲಕ್ಷ್ಮಣನಿಲ್ಲದೇನೆ, ರಾಕ್ಷಸಾನಾಂ - ರಕ್ಕಸರ, ಚತು....ಣಿ - ಹದಿನಾಲ್ಕುಸಾವಿರಗಳನ್ನು, ಜನಸ್ಥಾನೇ - ಜನಸ್ಥಾನದಲ್ಲಿ, ಜಘಾನ - ಸಂಹರಿಸಿದನೋ, ತಸ್ಯ -

---

ಪತಿದೇವನಾದ ಶ್ರೀರಾಮನು ಬಹು ಶೀಘ್ರದಲ್ಲಿಯೇ ನನ್ನನ್ನು ಹೊಂದುತ್ತಾನೆ. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವು. ಏಕೆಂದರೆ, ನನ್ನ ಅಂತರಾತ್ಮವು ಪರಿಶುದ್ಧವಾಗಿರುವುದು. ಇದೂ ಅಲ್ಲದೆ ಶ್ರೀರಾಮನಲ್ಲಿಯೂ ಅನೇಕ ಸದ್ಗುಣಗಳಿರುವುವು. ಎಲೈ ಮಾರುತಿಯೇ! ಕಾರ್ಯಗಳನ್ನು ಮಾಡುವುದರಲ್ಲಿ ಉತ್ಸಾಹವೂ, ಪುರುಷಪ್ರಯತ್ನವೂ, ಬಲವೂ, ಅಕ್ರೌರ್ಯವೂ, ಮಾಡಿದ ಉಪಕಾರವನ್ನು ಮರೆಯದಿರುವಿಕೆಯೂ, ಪರಾಕ್ರಮವೂ, ಪ್ರಭಾವವೂ ಶ್ರೀರಾಮನಲ್ಲಿ ನೆಲೆಯಾಗಿರುವುವು. ಹಿಂದೆ ಜನಸ್ಥಾನದಲ್ಲಿ ತಮ್ಮನ ಸಹಾಯವೂ ಇಲ್ಲದೆ ತಾನೊಬ್ಬನೇ ನಿಂತು ಯುದ್ಧಮಾಡಿ ಹದಿನಾಲ್ಕುಸಾವಿರಮಂದಿ ರಕ್ಕಸರನ್ನೊಕ್ಕಲಿಕ್ಕಿದ ಶ್ರೀರಾಮಮೂರ್ತಿ

---

‡ "ಅವಿಂಧ್ಯೋನಾಮ ಮೇಧಾವೀ ವಿದ್ವಾನ್ ರಾಕ್ಷಸಪುಂಗವಃ ।
ಧೃತಿಮಾನ್ ಶೀಲವಾನ್ ವೃದ್ಧೋ ರಾವಣಸ್ಯ ಸುಸಮ್ಮತಃ ॥
ರಾಮಕ್ಷಯಮನುಪ್ರಾಪ್ತಂ ರಕ್ಷಸಾಂ ಪ್ರತ್ಯಚೋದಯತ್ ।
ನಚ ತಸ್ಯ ಸ ದುಷ್ಟಾತ್ಮಾ ಶೃಣೋತಿ ವಚನಂ ಹಿತಂ ॥"

ಈ ಎರಡು ಶ್ಲೋಕಗಳೂ, ಗೋ. ಪಾ. ದಲ್ಲಿ ಅಧಿಕ. ಇವುಗಳ ತಾತ್ಪರ್ಯ:—"ಅವಿಂಧ್ಯನೆಂಬ ವೃದ್ಧ ರಾಕ್ಷಸನೊಬ್ಬನಿರುವನು. ಆತನು ಬಹಳ ಬುದ್ಧಿವಂತನು; ವಿದ್ವಾಂಸನು; ಧೈರ್ಯಶಾಲಿಯು; ಗುಣಶಾಲಿಯು. ಆತನು ರಾವಣನಿಗೆ ಬಹಳ ಸಮ್ಮತನಾದವನು. ಆತನು ಶ್ರೀರಾಮನಿಂದ ರಾಕ್ಷಸರಿಗೆ ಸಂಭವಿಸಿರುವ ನಾಶವನ್ನು ಕುರಿತು ಅವನಿಗೆ ಹಿತಬೋಧೆಯನ್ನು ಮಾಡಿದನು. ಆದರೆ ದುಷ್ಟಾತ್ಮನಾದ ರಾವಣನು ಆತನ ಹಿತವಚನವನ್ನು ಕೇಳುವುದಿಲ್ಲವು" (ಮುಂದೆಯೂ ಈ ಸಂಗತಿಯು ಬರುವುದಿಲ್ಲವಾದುದರಿಂದಲೂ ಇತರ ಮಾತೃಕೆಗಳಲ್ಲಿ ಈ ಶ್ಲೋಕಗಳು ಕಂಡುಬರುವುದಿಲ್ಲವಾದುದರಿಂದ ಇವು ಪ್ರಕ್ಷಿಪ್ತಗಳೆಂದೇ ನಮ್ಮ ಮತ.)

* "ಅಶಂಸೇಯಂ" ತಿ. ಪಾ.

ಜಘಾನ ಯಃ । ಜನಸ್ಥಾನೇ ವಿನಾ ಭ್ರಾತ್ರಾ ಶತ್ರುಃ ಕಸ್ತಸ್ಯ ನೋದ್ವಿಜೇತ್ ॥೧೪॥ ನ ಸ ಶಕ್ಯಸ್ತುಲಯಿತುಂ ವ್ಯಸನೈಃ ಪುರುಷರ್ಷಭಃ । ಅಹಂ ತಸ್ಯ ಪ್ರಭಾವಜ್ಞಾ ಶಕ್ರಸ್ಯೇವ ಪುಲೋಮಜಾ ॥ ೧೫ ॥ ಶರಜಾಲಾಂಶುವರ್ಮಾಶೂರಃ ಕಪೇ! ರಾಮದಿವಾಕರಃ । ಶತ್ರುರಕ್ಷೋಮಯಂ ತೋಯಮುಪಶೋಷಂ ನಯಿಷ್ಯತಿ" ॥ ೧೬ ॥ ಇತಿ ಸಂಜಲ್ಪಮಾನಾಂ ತಾಂ ರಾಮಾರ್ಥೇ ಶೋಕಕರ್ಶಿತಾಂ । ಅಶ್ರುಸಂಪೂರ್ಣನಯನಾಮುವಾಚ ವಚನಂ ಕಪಿಃ ॥ ೧೭ ॥ "ಶ್ರುತ್ವೈವತು ವಚೋ ಮಹ್ಯಂ ಕ್ಷಿಪ್ರಮೇಷ್ಯತಿ ರಾಘವಃ । ಚಮೂಂ ಪ್ರಕರ್ಷನ್ಮಹತೀಂ ಹರ್ಯೃಕ್ಷಗಣಸಂಕುಲಾಂ ॥ ೧೮ ॥

ಅಂತಹ ಶ್ರೀರಾಮನನ್ನುಂದೆ, ಕಶ್ಶತ್ರುಃ-ಯಾವ ಹಗೆಯನ್ನು, ನೋದ್ವಿಜೇತ್-ಭಯವಿಲ್ಲದಿದ್ದಾನು. ॥ ೧೪ ॥ ಪುರುಷರ್ಷಭಃ - ಪುರುಷಶ್ರೇಷ್ಠನಾದ, ಸಃ - ಆ ಶ್ರೀರಾಮನು, ವ್ಯಸನೈಃ - ದುಃಖಗಳಿಂದ, ತುಲಯಿತುಂ - ಚಲಿಸುವದಕ್ಕೆ, ನಶಕ್ಯಃ - ಸಮರ್ಥನಲ್ಲ, ಅಹಂ - ನಾನು, ತಸ್ಯ - ಆ ಶ್ರೀರಾಮನ, ಶಕ್ರಸ್ಯ-ದೇವೇಂದ್ರನ ಬಲವನ್ನು, ಪುಲೋಮಜೇವ-ಶಚೀದೇವಿಯಂತೆ, ಪ್ರಭಾವಜ್ಞಾ-ಪ್ರಭಾವವನ್ನು ಬಲ್ಲವಳು. ॥ ೧೫ ॥ ಹೇಕಪೇ - ಓ ವಾನರನೇ, ಶೂರಃ - ವೀರನಾದ, ಶರ....ವರ್ಮಾ - ಬಾಣತಂಡಗಳೇ ಕಿರಣಗಳಾಗಿ ಉಳ್ಳ, ರಾಮದಿವಾಕರಃ - ರಾಮನೆಂಬ ಸೂರ್ಯನು, ಶತ್ರು....ಯಂ - ಹಗೆಯಾದ ರಕ್ಕಸರೆಂಬ, ತೋಯಂ-ನೀರನ್ನು, ಉಪಶೋಷಂ-ನಾಶವನ್ನು, ನಯಿಷ್ಯತಿ-ಹೊಂದಿಸುತ್ತಾನೆ. ॥ ೧೬ ॥ ಇತಿ - ಈ ಪರಿಯಾಗಿ, ಸಂಜಲ್ಪಮಾನಾಂ - ಮಾತನಾಡುತ್ತಿರುವ, ರಾಮಾರ್ಥೇ - ರಾಮನಿಮಿತ್ತವಾಗಿ, ಶೋಕಕರ್ಶಿತಾಂ - ದುಃಖದಿಂದ ಕೃಶಳಾದ, ಅಶ್ರು....ನಾಂ - ಕಂಬನಿ ತುಂಬಿದ ನೇತ್ರಗಳುಳ್ಳ, ತಾಂ - ಆ ಸೀತಾದೇವಿಯನ್ನು ಕುರಿತು, ಕಪಿಃ - ಆಂಜನೇಯನು, ವಚನಂ - ಮಾತನ್ನು, ಉವಾಚ-ಹೇಳಿದನು. ॥ ೧೭ ॥ ರಾಘವಃ-ಶ್ರೀರಾಮನು, ಮಹ್ಯಂ-ನನ್ನ, ವಚಸ್ತು-ವಾಕ್ಯವನ್ನಾದರೆ, ಶ್ರುತ್ವೈವ - ಕೇಳುತ್ತಲೇ, ಕ್ಷಿಪ್ರಂ - ಜಾಗ್ರತೆಯಾಗಿ, ಮಹತೀಂ - ದೊಡ್ಡದಾದ, ಹರ್ಯೃ....ಲಾಂ - ಕಪಿಗಳಿಂದಲೂ, ಕರಡಿಗಳಿಂದಲೂ ವ್ಯಾಪ್ತವಾದ, ಚಮೂಂ - ಸೇನೆಯನ್ನು, ಪ್ರಕರ್ಷನ್ - ನಡೆಯಿಸುತ್ತ, ಏಷ್ಯತಿ-ಬರುವನು. ॥ ೧೮ ॥ ಅಥವಾ-ಹಾಗಲ್ಲದಿದ್ದರೆ, ಹೇ ವರಾನನೇ-ಎಲೌ ಶ್ರೇಷ್ಠವಾದ ಮುಖವುಳ್ಳವಳೇ, ತ್ವಾಂ - ನಿನ್ನನ್ನು, ಅದ್ಯೈವ - ಈಗಲೇ, ಅಸ್ಮಾತ್‌ದುಃಖಾತ್ - ಈ

ಯನ್ನು ಅದಾವಶತ್ರುವುತಾನೆ ಎದುರಿಸಿ ದುಃಖಿಸದಿದ್ದಾನು? ಆಂಜನೇಯಾ! ಶ್ರೀರಾಮನು ಪುರುಷೋತ್ತಮನು. ಆತನು ಎಂತಹ ದುಃಖಸಮಯದಲ್ಲಿಯೂ ಚಿತ್ತಚಾಂಚಲ್ಯವನ್ನು ಹೊಂದುವುದಿಲ್ಲವು. ದೇವೇಂದ್ರನಪರಾಕ್ರಮವನ್ನು ಪುಲೋಮಜೆಯಂತೆ, ರಾಮನ ಪರಾಕ್ರಮ ಪ್ರಭಾವವನ್ನು ಆತನ ಧರ್ಮಪತ್ನಿಯಾದ ನಾನು ಸಂಪೂರ್ಣವಾಗಿ ಬಲ್ಲೆನು. ॥ ೧೧–೧೫ ॥ ಎಲೈ ಕಪಿಯೇ! ಬಾಣಸಮೂಹಗಳೆಂಬ ಕಿರಣಗಳುಳ್ಳ ಶ್ರೀರಾಮನೆಂಬ ದಿನಕರನು, ಶತ್ರುಗಳಾದ ಈ ರಾಕ್ಷಸರೆಂಬ ನೀರನ್ನು ಖಂಡಿತವಾಗಿಯೂ ಬತ್ತಿಸಿಬಿಡುವನು." ಸೀತಾದೇವಿಯು ಹೀಗೆ ಹೇಳಿ ಶ್ರೀರಾಮನಿಗಾಗಿ ಶೋಕಸಂತಪ್ತಳಾಗಿ ಕಂಬನಿಗರೆಯುತ್ತಿದ್ದಳು. ಆಗ ಮಾರುತಿಯು ಆಕೆಯನ್ನು ಕುರಿತು, "ಓ ಸೀತಾದೇವಿಯೇ! ಶ್ರೀರಾಮನು ನನ್ನಿಂದ ವೃತ್ತಾಂತವನ್ನು ಕೇಳಿದೊಡನೆಯೇ ಇಲ್ಲಿಗೆ ಬರುವನೆಂದು ತಿಳಿ. ಆತನು ಮಹತ್ತರವಾದ ಕಪಿ ಭಲ್ಲೂಕಗಳ ಸೈನ್ಯವನ್ನು ನಡೆಯಿಸಿಕೊಂಡು ಬರುವನು. ಅಥವಾ ಅದುವರೆಗೂ ನೀನೇಕೆ ಚಿಂತಿಸುತ್ತಿರಬೇಕು? ಎಲೌ ವರಾರೋಹೆಯೇ! ಈಗಲೇ ನಿನ್ನನ್ನು ಈ ದುಃಖದಿಂದ ಬಿಡುಗಡೆಮಾಡು

ಅಥವಾ ಮೋಚಯಿಷ್ಯಾಮಿ ತ್ವಾಮದ್ಯೈವ ವರಾನನೇ! ಅಸ್ಮಾದ್ದುಃಖಾದುಪಾರೋಹ ಮಮ ಪೃಷ್ಠ ಮನಿಂದಿತೇ! ॥ ೧೯ ॥ ತ್ವಾಂತು ಪೃಷ್ಠಗತಾಂ ಕೃತ್ವಾ ಸಂತರಿಷ್ಯಾಮಿ ಸಾಗರಂ । ಶಕ್ತಿರಸ್ತಿಹಿ ಮೇ ವೋಢುಂ ಲಂಕಾಮಪಿ ಸರಾವಣಾಂ ॥ ೨೦ ॥ ಅಹಂ ಪ್ರಸ್ರವಣಸ್ಥಾಯ ರಾಘವಾಯಾಽದ್ಯ ಮೈಥಿಲಿ! । ಪ್ರಾಪಯಿಷ್ಯಾಮಿ ಶಕ್ರಾಯ ಹವ್ಯಂ ಹುತಮಿವಾನಲಃ ॥ ೨೧ ॥ ದ್ರಕ್ಷ್ಯಸ್ಯದ್ಯೈವ ವೈದೇಹಿ! ರಾಘವಂ ಸಹ ಲಕ್ಷ್ಮಣಂ । ವ್ಯವಸಾಯಸಮಾಯುಕ್ತಂ ವಿಷ್ಣುಂ ದೈತ್ಯವಧೇ ಯಥಾ ॥ ೨೨ ॥ ತ್ವದ್ದರ್ಶನಕೃತೋತ್ಸಾಹಮಾಶ್ರಮಸ್ಥಂ ಮಹಾಬಲಂ । ಪುರಂದರಮಿವಾಸೀನಂ¶ ನಾಗ

ದುಃಖದದೆಸೆಯಿಂದ, ಮೋಚಯಿಷ್ಯಾಮಿ - ಬಿಡಿಸುವೆನು, ಹೇ ಅನಿಂದಿತೇ - ಎಲೌ ನಿರ್ದುಷ್ಟಳೇ, ಮಮ - ನನ್ನ, ಪೃಷ್ಠಂ - ಬೆನ್ನನ್ನು, ಉಪಾರೋಹ - ಏರು. ॥ ೧೯ ॥ ತ್ವಾಂತು - ನಿನ್ನನ್ನಾದರೆ, ಪೃಷ್ಠಗತಾಂ - ಬೆನ್ನನ್ನೈದಿದವಳನ್ನಾಗಿ, ಕೃತ್ವಾ - ಮಾಡಿಕೊಂಡು, ಸಾಗರಂ - ಸಮುದ್ರವನ್ನು, ಸಂತರಿಷ್ಯಾಮಿ - ಹಾರುವೆನು, ಸರಾವಣಾಂ - ರಾವಣನಿಂದೊಡಗೂಡಿದ, ಲಂಕಾಮಪಿ - ಲಂಕಾ ಪಟ್ಟಣವನ್ನಾದರೂ, ವೋಢುಂ - ಹೊರುವದಕ್ಕೆ, ಮೇ - ನನಗೆ, ಶಕ್ತಿಃ - ಸಾಮರ್ಥ್ಯವು, ಅಸ್ತಿಹಿ - ಇರುವುದಷ್ಟೆ. ॥ ೨೦ ॥ ಹೇಮೈಥಿಲೀ - ಓ ಸೀತಾದೇವಿಯೇ, ಅದ್ಯ - ಈಗ, ಅಹಂ - ನಾನು, ಪ್ರಸ್ರವಣಸ್ಥಾಯ-ಪ್ರಸ್ರವಣ ಪರ್ವತದ ಸಮೀಪದಲ್ಲಿರುವ, ರಾಘವಾಯ-ಶ್ರೀರಾಮನಿಗೆ, ಶಕ್ರಾಯ-ದೇವೇಂದ್ರನಿಗೆ, ಹುತಂ - ಹೋಮಮಾಡಲ್ಪಟ್ಟ, ಹವ್ಯಂ - ಹವಿಸ್ಸನ್ನು, ಅನಲಇವ - ಯಜ್ಞೇಶ್ವರ ನೋಪಾದಿಯಲ್ಲಿ, (ತ್ವಾಂ - ನಿನ್ನನ್ನು) ಪ್ರಾಪಯಿಷ್ಯಾಮಿ - ಹೊಂದಿಸುವೆನು. ॥ ೨೧ ॥ ಹೇವೈದೇಹಿ - ಓ ವಿದೇಹರಾಜಪುತ್ರಿಯೇ, ಅದ್ಯೈವ-ಈಗಲೇ, ಸಹಲಕ್ಷ್ಮಣಂ-ಲಕ್ಷ್ಮಣಸಹಿತನಾದ, ವ್ಯವ....ಕ್ತಂ - ಉದ್ಯೋಗದಿಂದ ಕೂಡಿರುವ, ರಾಘವಂ - ಶ್ರೀರಾಮನನ್ನು, ದೈತ್ಯವಧೇ - ರಾಕ್ಷಸರ ಸಂಹಾರ ವಿಷಯದಲ್ಲಿ, ವಿಷ್ಣುಂಯಥಾ - ವಿಷ್ಣುವಿನಂತೆ, ದ್ರಕ್ಷ್ಯಸಿ - ನೋಡುವೆ. ॥ ೨೨ ॥ ತ್ವದ್ದ....ಹಂ - ನಿನ್ನನ್ನು ನೋಡುವುದರಲ್ಲಿ ಮಾಡಲ್ಪಟ್ಟ ಪ್ರಯತ್ನವುಳ್ಳ, ಆಶ್ರಮಸ್ಥಂ - ಆಶ್ರಮದಲ್ಲಿರುವ, ಮಹಾಬಲಂ - ಮಹಾ ಬಲಿಷ್ಠನಾದ ರಾಮನನ್ನು, ನಾಗರಾಜಸ್ಯ - ಐರಾವತದ, ಮೂರ್ಧನಿ - ಶಿರಸ್ಸಿನಲ್ಲಿ,

---

ವೆನು. ಎಲೌ ಅನಿಂದಿತೆಯೇ! ಈಗಲೇ ನನ್ನ ಬೆನ್ನನ್ನೇರು. ನಿನ್ನನ್ನು ಬೆನ್ನಮೇಲೇರಿಸಿಕೊಂಡು ಈ ಸಮುದ್ರವನ್ನು ಒಂದೇ ಪಟ್ಟಿಗೆ ಹಾರುವೆನು. ಇಷ್ಟಕ್ಕೆ ನಾನು ಸಮರ್ಥನಹುದೋ ಅಲ್ಲವೋ ಎಂದು ನೀನು ಶಂಕಿಸಬೇಡ. ನಾನು ರಾವಣಸಮೇತವಾದ ಈ ಲಂಕಾನಗರವ ನ್ನಾದರೂ ಹೊತ್ತುಕೊಂಡು ಹೋಗುವುದಕ್ಕೆ ಸಮರ್ಥನಾಗಿರುವೆನು. ॥ ೧೯—೨೦ ॥ ಓ ಮೈಥಿಲೀ! ಇದೋ, ನಾನೀಗ ಪ್ರಸ್ರವಣಗಿರಿಯಲ್ಲಿರುವ ಶ್ರೀರಾಮನಿಗೆ, ಅಗ್ನಿಯು ದೇವೇಂದ್ರನಿಗೆ ಹವ್ಯವನ್ನಂತೆ, ನಿನ್ನನ್ನು ಒಪ್ಪಿಸುವೆನು. ನೀನು ಸ್ವಲ್ಪವೂ ಚಿಂತಿಸಬೇಡ. ಎಲೌ ವೈದೇಹಿಯೇ! ಲಕ್ಷ್ಮಣನೊಡಗೂಡಿ, ವ್ಯವಸಾಯನಿರತವಾಗಿರುವ ಶ್ರೀರಾಮನನ್ನು, ದೈತ್ಯವಧೆಯಲ್ಲಿ ನಿರತನಾದ ಶ್ರೀ ಮಹಾವಿಷ್ಣುವನ್ನೆಂತೋ ಅಂತು ನೀನೀಗಲೇ ನೋಡುವೆ. ದೇವೀ! ಮಹಾಬಲನಾದ ಆ ರಘುರಾಮನು ಪ್ರಸ್ರವಣಪರ್ವತದ ಮೇಲಣ ಆಶ್ರಮದಲ್ಲಿ ನಿನ್ನನ್ನು ನೋಡುವುದರಲ್ಲಿಯೇ ಕೃತೋತ್ಸಾಹನಾಗಿ ಕುಳಿತಿರುವನು. ಐರಾವತದಮೇಲೆ

¶ "ನಗ" ಇ. ಪಾ.

ರಾಜಸ್ಯ ಮೂರ್ಧನಿ ॥ ೨೩ ॥ ಪೃಷ್ಠಮಾರೋಹ ಮೇ ದೇವಿ! ಮಾವಿಕಾಂಕ್ಷಸ್ವ ಶೋಭನೇ! । ಯೋಗಮನ್ವಿಚ್ಛ ರಾಮೇಣ ಶಶಾಂಕೇನೇವ ರೋಹಿಣೀ ॥ ೨೪ ॥ * ಕಥಯಂತೀವ § ಚಂದ್ರೇಣ ಸೂರ್ಯೇಣ ಚ ಮಹಾರ್ಚಿಷಾ । ಮತ್ಪೃಷ್ಠಮಧಿರುಹ್ಯ ತ್ವಂ ತರಾಽಕಾಶಮಹಾರ್ಣವೌ ॥ ೨೫ ॥ ನಹಿ ಮೇ ಸಂಪ್ರಯಾತಸ್ಯ ತ್ವಾಮಿತೋ ನಯತೋಽಂಗನೇ! । ಅನುಗಂತುಂ ಗತಿಂ ಶಕ್ತಾ ಸ್ಸರ್ವೇ ಲಂಕಾನಿವಾಸಿನಃ ॥ ೨೬ ॥ ಯಥೈವಾಹಮಿಹಪ್ರಾಪ್ತ ಸ್ತಥೈವಾಹಮಸಂಶಯಃ । ಯಾಸ್ಯಾಮಿ ಪಶ್ಯ ವೈದೇಹಿ! ತ್ವಾಮುದ್ಯಮ್ಯ ವಿಹಾಯಸಂ" ॥ ೨೭ ॥ ಮೈಥಿಲೀತು ಹರಿಶ್ರೇಷ್ಠಾ

ಆಸೀನಂ - ಕುಳಿತಿರುವ, ಪುರಂದರಮಿವ - ದೇವೇಂದ್ರನಂತೆ, ದ್ರಕ್ಷ್ಯಸಿ - ನೋಡುವೆ. ॥ ೨೩ ॥ ಹೇ ಶೋಭನೇ - ಎಲೌ ಮಂಗಳಕರಳೇ, ಹೇದೇವೀ - ಓ ಸೀತಾದೇವಿಯೇ, ಮೇ - ನನ್ನ, ಪೃಷ್ಠಂ - ಬೆನ್ನನ್ನು, ಮಾವಿಕಾಂಕ್ಷಸ್ವ - ಉಪೇಕ್ಷೆಮಾಡಬೇಡ, ರಾಮೇಣ - ಶ್ರೀರಾಮನೊಡನೆ, ತ್ವಂ - ನೀನು, ಶಶಾಂಕೇನ-ಚಂದ್ರನೊಡನೆ, ರೋಹಿಣೀವ-ರೋಹಿಣೀನಕ್ಷತ್ರದಂತೆ, ಯೋಗಂ-ಕೂಡುವಿಕೆಯನ್ನು, ಅನ್ವಿಚ್ಛ - ಹೊಂದು. ॥ ೨೪ ॥ ತ್ವಂ - ನೀನು, ಮತ್ಪೃಷ್ಠಂ - ನನ್ನ ಬೆನ್ನನ್ನು, ಅಧಿರುಹ್ಯ - ಏರಿ, ಮಹಾರ್ಚಿಷಾ - ಮಹಾತೇಜಸ್ಸುಳ್ಳ, ಚಂದ್ರೇಣ - ಚಂದ್ರನೊಡನೆಯೂ, ಸೂರ್ಯೇಣಚ - ಸೂರ್ಯನೊಡನೆಯೂ, ಕಥಯಂತೀವ - ಮಾತನಾಡುವವಳಂತೆ, ಆಕಾ....ವೌ - ಅಂತರಿಕ್ಷ ಸಮುದ್ರಗಳೆರಡನ್ನೂ, ತರ - ದಾಟು. ॥ ೨೫ ॥ ಹೇಅಂಗನೇ - ಓ ಸ್ತ್ರೀಯೆ, ತ್ವಾಂ - ನಿನ್ನನ್ನು, ಇತಃ - ಈ ಪ್ರದೇಶದಿಂದ, ನಯತಃ - ತೆಗೆದುಕೊಂಡು ಹೋಗುತ್ತಿರುವಕಾರಣ, ಪ್ರಯಾತಸ್ಯ - ಪಯಣ ಮಾಡುತ್ತಿರುವ, ಮೇ - ನನ್ನ, ಗತಿಂ - ಮಾರ್ಗವನ್ನು, ಅನುಗಂತುಂ - ಅನುಸರಿಸಿಬರಲು, ಲಂಕಾ.... ನಃ - ಲಂಕಾವಾಸಿಗಳಾದ, ಸರ್ವೇ - ಸಮಸ್ತ ರಕ್ಕಸರೂ, ನಶಕ್ತಾಃ - ಸಮರ್ಥರಲ್ಲವು. ॥ ೨೬ ॥ ಹೇ ವೈದೇಹೀ - ಓ ಸೀತಾದೇವಿಯೇ, ಅಹಂ - ನಾನು, ಇಹ - ಇಲ್ಲಿ, ಯಥೈವ - ಹೇಗೆ, ಪ್ರಾಪ್ತಃ - ಬಂದೆನೋ, ತಥೈವ - ಹಾಗೆಯೇ, ಅಹಂ - ನಾನು, ತ್ವಾಂ - ನಿನ್ನನ್ನು, ಉದ್ಯಮ್ಯ - ಎತ್ತಿಕೊಂಡು,

---

ಕುಳಿತಿರುವ ದೇವೇಂದ್ರನಿಗೆ ಸಮಾನನಾದ ಆತನನ್ನು ನೀನೀಗಲೇ ನೋಡುವೆ. ಎಲೆ ತಾಯೇ! ನನ್ನ ಬೆನ್ನನ್ನೇರು; ಉಪೇಕ್ಷೆಮಾಡಬೇಡ. ರೋಹಿಣೀ ದೇವಿಯು ಚಂದ್ರನೊಡಗೂಡುವಂತೆ, ನೀನು ಶ್ರೀರಾಮನೊಡಗೂಡುವವಳಾಗು. ಎಲೌ ದೇವಿಯೇ! ನೀನು ನನ್ನ ಬೆನ್ನನ್ನೇರಿದ ಕೂಡಲೇ ನಾನು ಬಹು ಎತ್ತರವಾಗಿ ನಿನ್ನನ್ನು ಕೊಂಡುಹೋಗುತ್ತೇನೆ. ಆಗ ನೀನು ಚಂದ್ರನೊಡನೆಯೂ, ಸೂರ್ಯನೊಡನೆಯೂ ಸಂಭಾಷಿಸುತ್ತಿರುವವಳಂತೆ, ಸಮುದ್ರಾಕಾಶಗಳೆರಡನ್ನೂ ಬಹು ಶೀಘ್ರವಾಗಿ ದಾಟುವೆ. ॥ ೨೧—೨೫ ॥ ಎಲೌ ಸೀತಾದೇವಿಯೇ! ನಾನು ಹಾಗೆ ದಾಟಹೋಗುವಾಗ ಅಡಚಣೆಗಳು ಬರುವುವೆಂದು ಶಂಕಿಸಬೇಡ. ನಾನು ವೇಗದಿಂದ ಹಾರಿಹೋಗುತ್ತಿರಲು ನನ್ನ ವೇಗವನ್ನನುಸರಿಸಲು ಈ ಲಂಕಾನಿವಾಸಿಗಳಾರಿಂದಲೂ ಸಾಧ್ಯವಾಗುವುದಿಲ್ಲವು. ಎಲೆ ತಾಯೇ! ನಾನು ಹೇಗೆ ಬಂದೆನೋ ಹಾಗೆಯೇ ಈಗಲೂ ನಿನ್ನನ್ನು ಹೊತ್ತುಕೊಂಡು ಆಕಾಶದಲ್ಲಿ ದಾಟಹೋಗುವೆನು. ಇದರಲ್ಲಿ ಯಾವ

---

* "ಪೌಲೋಮೀ ಸಹೇಂದ್ರೇಣ ಸೂರ್ಯೇಣೇವ ಸುವರ್ಚಲಾ" ತಿ. ಪಾ.

§ "ಶಶಿನಾ ಸಂಗಮಿಷ್ಯಸಿ ರೋಹಿಣೀ" ತಿ. ಪಾ.

ಚ್ಛ್ರುತ್ವಾ ವಚನಮದ್ಭುತಂ । ಹರ್ಷವಿಸ್ಮಿತಸರ್ವಾಂಗೀ ಹನುಮಂತ ಮಥಾಬ್ರವೀತ್ ॥೨೮॥ ಹನೂಮನ್ ! ದೂರಮಧ್ವಾನಂ ಕಥಂ ಮಾಂ§ ವೋಢುಮಿಚ್ಛಸಿ? । ತದೇವಖಲು ತೇ ಮನ್ಯೇ ಕಪಿತ್ವಂ ಹರಿಯೂಥಪ ! ॥೨೯॥ ಕಥಂ ವಾಽಲ್ಪಶರೀರಸ್ತ್ವಂ ಮಾಮಿತೋ ನೇತುಮಿಚ್ಛಸಿ? । ಸಕಾಶಂ ಮಾನವೇಂದ್ರಸ್ಯ ಭರ್ತುರ್ಮೇ ಪ್ಲವಗರ್ಷಭ ! " ॥೩೦॥ ಸೀತಾಯಾ ವಚನಂ ಶ್ರುತ್ವಾ ಹನುಮಾ ನ್ಮಾರುತಾತ್ಮಜಃ । ಚಿಂತಯಾಮಾಸ

ವಿಹಾಯಸಂ - ಅಂತರಿಕ್ಷದಲ್ಲಿ, ಯಾಸ್ಯಾಮಿ - ಹೋಗುವೆನು, ಅಸಂಶಯಃ - ಸಂದೇಹವಿಲ್ಲವು, ಪಶ್ಯ - ನೋಡು. ॥ ೨೭ ॥ ಮೈಥಿಲೀತು - ಸೀತಾದೇವಿಯಾದರೆ, ಹರಿಶ್ರೇಷ್ಠಾತ್ - ಕಪಿಶ್ರೇಷ್ಠನಾದ ಆಂಜನೇಯನಿಂದ, ಅದ್ಭುತಂ - ಆಶ್ಚರ್ಯಕರವಾದ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಹರ್ಷ....ಗೀ-ಸಂತೋಷದಿಂದ ರೋಮಾಂಚವುಳ್ಳವಳಾಗಿ, ಅಥ-ಬಳಿಕ, ಹನುಮಂತಂ-ಆಂಜನೇಯ ನನ್ನು ಕುರಿತು, ಅಬ್ರವೀತ್ - ನುಡಿದಳು. ॥ ೨೮ ॥ ಹೇಹರಿಯೂಥಪ - ಎಲೈ ಕಪಿಸೇನಾನಾಯಕನೇ, ಹೇ ಹನೂಮನ್ - ಓ ಹನುಮಂತನೆ, (ತ್ವಂ - ನೀನು) ಮಾಂ - ನನ್ನನ್ನು, ದೂರಮಧ್ವಾನಂ - ದೂರದ ದಾರಿಯನ್ನು, ವೋಢುಂ - ಹೊರುವದಕ್ಕೆ, ಕಥಮಿಚ್ಛಸಿ - ಹೇಗೆ ಅಪೇಕ್ಷಿಸುವೆ, ತದೇವ - ಅದೇ, ತೇ-ನಿನ್ನ, ಕಪಿತ್ವಂಖಲು-ವಾನರಭಾವವಷ್ಟೆ, (ಇತಿ-ಇಂತೆಂದು,) ಮನ್ಯೇ-ತಿಳಿಯುತ್ತೇನೆ. ॥ ೨೯ ॥ ಹೇಪ್ಲವಗರ್ಷಭ - ಎಲೈ ವಾನರಶ್ರೇಷ್ಠನೆ, ಅಲ್ಪಶರೀರಃ - ಸ್ವಲ್ಪಾಕಾರವುಳ್ಳ, ತ್ವಂ - ನೀನು, ಮಾಂ - ನನ್ನನ್ನು, ಇತಃ - ಈ ಸ್ಥಳದಿಂದ, ಮಾನವೇಂದ್ರಸ್ಯ - ಮನುಜೇಂದ್ರನಾದ, ಮೇ - ನನ್ನ, ಭರ್ತುಃ - ಪತಿಯ, ಸಕಾಶಂ - ಸಮೀಪವನ್ನು, ನೇತುಂ - ಹೊಂದಿಸಲು, ಕಥಮಿಚ್ಛಸಿ - ಹೇಗೆ ಅಪೇಕ್ಷಿಸುವೆ. ॥ ೩೦ ॥ ಮಾರುತಾತ್ಮಜಃ - ವಾಯುಪುತ್ರನಾದ, ಲಕ್ಷ್ಮೀವಾನ್ - ಕಾಂತಿಯುಕ್ತ ನಾದ, ಹನುಮಾನ್-ಆಂಜನೇಯನು, ಸೀತಾಯಾಃ-ಸೀತಾದೇವಿಯ, ವಚನಂ-ಮಾತನ್ನು, ಶ್ರುತ್ವಾ-ಕೇಳಿ, ನವಂ-ನೂತನವಾದ, ಪರಿಭವಂ-ತಿರಸ್ಕಾರವು, ಕೃತಂ ಮಾಡಲ್ಪಟ್ಟಿತು, (ಇತಿ-ಇಂತೆಂದು)

ಸಂಶಯವೂ ಇರುವುದಿಲ್ಲವು. ನನ್ನ ಮಾತನ್ನು ಕೇಳು. ನಾನು ಹೇಗೆ ದಾಟುವೆನೆಂಬುದ ನ್ನಾದರೂ ನೋಡು.'' ಎಂದು ಹೇಳಿದನು. ಆಗ ಮಿಥಿಲರಾಜತನೂಜೆಯಾದ ಆ ಸೀತಾ ದೇವಿಯು ಹನುಮಂತನಿಂದ ಅತ್ಯದ್ಭುತವಾದ ಮಾತುಗಳನ್ನು ಕೇಳಿ ಪರಮಾಶ್ಚರ್ಯ ಭರಿತಳೂ, ಸಂತೋಷಭರಿತವಾದ ಸರ್ವಾವಯವಗಳುಳ್ಳವಳೂ ಆಗಿ ಅವನನ್ನು ಕುರಿತು, "ಅಯ್ಯಾ ಹನುಮಂತನೇ! ನೀನು ಚೆನ್ನಾಗಿ ಆಲೋಚಿಸದೆ ಬಹುದೂರಮಾರ್ಗವುಳ್ಳ ಈ ಸಮುದ್ರದಮೇಲೆ ನನ್ನನ್ನು ಹೊತ್ತುಕೊಂಡು ಹೋಗುವೆನೆಂದು ಹೇಳುವೆಯಲ್ಲವೆ? ನೀನು ಹೀಗೆ ಹೇಳಿದುದರಿಂದ ನಿನ್ನ ಕಪಿತ್ವವು ವ್ಯಕ್ತವಾಯಿತು. ಎಲೈ ಕಪಿಯೂಥಪನೇ! ನೀನು ಅತ್ಯಲ್ಪ ಶರೀರವುಳ್ಳವನು ; ಇಂತಹ ನೀನು ನನ್ನನ್ನು ಹೊತ್ತುಕೊಂಡು, ನನ್ನ ಪತಿದೇವನಾದ ಶ್ರೀರಾ ಮನ ಬಳಿಗೈದುವೆನೆಂದು ಬಯಸುವೆಯೆಂತು?'' ಎಂದು ಹೇಳಿದಳು. ॥ ೨೭–೩೦ ॥ ಮಹಾ ತೇಜಸ್ವಿಯೂ, ವಾಯುಪುತ್ರನೂ ಆದ ಹನುಮಂತನು ಸೀತೆಯಾಡಿದ ಮಾತುಗಳನ್ನು ಕೇಳಿ, "ಅಸಿತೇಕ್ಷಣೆಯಾದ ಈ ದೇವಿಯು ನನ್ನ ಪರಾಕ್ರಮವನ್ನಾಗಲಿ, ನನ್ನ ರೂಪವನ್ನಾಗಲಿ ತಿಳಿ

---

§ "ನೇತುಂ" ಪಾ. ಪಾ.

ಲಕ್ಷ್ಮೀವಾ ''ನ್ನವಂ ಪರಿಭವಂ ಕೃತಂ ||೩೧|| ನ ಮೇ ಜಾನಾತಿ ಸತ್ವಂ ವಾ ಪ್ರಭಾವಂ ವಾಽಸಿತೇಕ್ಷಣಾ । ತಸ್ಮಾತ್ಪಶ್ಯತು ವೈದೇಹೀ ಯದ್ರೂಪಂ ಮಮ ಕಾಮತಃ'' ||೩೨|| ಇತಿ ಸಂಚಿಂತ್ಯ ಹನುಮಾಂಸ್ತದಾ ಪ್ಲವಗಸತ್ತಮಃ । ದರ್ಶಯಾಮಾಸ ವೈದೇಹ್ಯಾಸ್ಸ್ವಂ ರೂಪಮರಿಮರ್ದನಃ ||೩೩|| ¶ ಸ ತಸ್ಮಾತ್ಪಾದಪಾದ್ಧೀಮಾನಾಪ್ಲುತ್ಯ ಪ್ಲವಗರ್ಷಭಃ । ತತೋ ವರ್ಧಿತುಮಾರೇಭೇ ಸೀತಾಪ್ರತ್ಯಯಕಾರಣಾತ್ ||೩೪|| ಮೇರುಮಂದರಸಂಕಾಶೋ ಬಭೌ ದೀಪ್ತಾನಲಪ್ರಭಃ । ಅಗ್ರತೋ ವ್ಯವತಸ್ಥೇ ಚ ಸೀತಾಯಾ

ಚಿಂತಯಾಮಾಸ - ಆಲೋಚಿಸಿದನು. ||೩೧|| ಅಸಿತೇಕ್ಷಣಾ - ಕನ್ನೈದಿಲೆಯಂತೆ ಕಣ್ಣುಗಳುಳ್ಳ, ವೈದೇಹೀ-ಸೀತಾದೇವಿಯು, ಮೇ-ನನ್ನ, ಸತ್ವಂ-ಬಲವನ್ನಾಗಲಿ, ಪ್ರಭಾವಂವಾ-ಸಾಮರ್ಥ್ಯವನ್ನಾಗಲಿ, ನಜಾನಾತಿ - ಅರಿಯಳು, ತಸ್ಮಾತ್ - ಆ ಕಾರಣದಿಂದ, ಕಾಮತಃ - ಸ್ವೇಚ್ಛೆಯಿಂದ, ಮಮ - ನನ್ನ, ಯದ್ರೂಪಂ - ಯಾವ ಆಕಾರವೋ, ತತ್ - ಅದನ್ನು, ಪಶ್ಯತು - ನೋಡಲಿ. ||೩೨|| ಪ್ಲವಗಸತ್ತಮಃ - ವಾನರಶ್ರೇಷ್ಠನಾದ, ಅರಿಮರ್ದನಃ - ಶತ್ರುನಾಶಕನಾದ, ಹನುಮಾನ್ - ಆಂಜನೇಯನು, ಇತಿ - ಈ ಪರಿಯಾಗಿ, ಸಂಚಿಂತ್ಯ - ಯೋಚಿಸಿ, ವೈದೇಹ್ಯಾಃ - ಸೀತಾದೇವಿಗೆ, ಸ್ವಂರೂಪಂ - ತನ್ನ ರೂಪವನ್ನು, ದರ್ಶಯಾಮಾಸ - ತೋರಿಸಿದನು. ||೩೩|| ಪ್ಲವಗರ್ಷಭಃ - ಕಪಿಶ್ರೇಷ್ಠನಾದ, ಧೀಮಾನ್ - ಬುದ್ಧಿಶಾಲಿಯಾದ, ಸಃ - ಆ ಆಂಜನೇಯನು, ತಸ್ಮಾತ್ಪಾದಪಾತ್ - ಆ ಗಿಡದದೆಸೆಯಿಂದ, ಆಪ್ಲುತ್ಯ - ಇಳಿದು, ತತಃ - ಬಳಿಕ, ಸೀತಾ....ತ್ - ಸೀತಾದೇವಿಯ ನಂಬಿಕೆಗೋಸ್ಕರ, ವರ್ಧಿತುಂ - ವೃದ್ಧಿಹೊಂದಲು, ಆರೇಭೇ - ಪ್ರಾರಂಭಿಸಿದನು. ||೩೪|| ವಾನರೋತ್ತಮಃ - ಕಪಿಶ್ರೇಷ್ಠನಾದ ಆಂಜನೇಯನು, ಸೀತಾಯಾಃ - ಸೀತಾದೇವಿಯ, ಅಗ್ರತಃ - ಮುಂಗಡೆ ಇರುವ ಉತ್ತಮಪ್ರದೇಶದಲ್ಲಿ, ಮೇರು....ಶಃ - ಮೇರುಪರ್ವತಕ್ಕೂ ಮಂದರಪರ್ವತಕ್ಕೂ

ಯಳು. ಆದುದರಿಂದ ಈಗ ನನ್ನ ನಿಜರೂಪವನ್ನು ಈಕೆಯು ನೋಡಲಿ'' ಎಂದು ಚಿಂತಿಸಿ ನಿರ್ಧರಿಸಿಕೊಂಡನು. ಆ ಬಳಿಕ ಕಪಿಸತ್ತಮನಾದ ಆತನು ತನ್ನ ಸ್ವರೂಪವನ್ನು ಸೀತಾದೇವಿಗೆ ತೋರುವವನಾಗಿ, ತಾನು ಕುಳಿತಿದ್ದ ಮರದಿಂದ ಅತ್ತಕಡೆಗೆ ಹಾರಿ ನಿಂತು, ಆಕೆಗೆ ನಂಬುಗೆಯನ್ನುಂಟುಮಾಡಲೋಸುಗ ತನ್ನ ದೇಹವನ್ನು ಬೆಳೆಯಿಸಲುಪಕ್ರಮಿಸಿದನು. ಆತನುಕೂಡಲೇ ಮೇರುಮಂದರ ಪರ್ವತಗಳಿಗೆ ಸಮಾನನಾಗಿ, ಪ್ರಜ್ವಲಿಸುತ್ತಿರುವ ಯಜ್ಞೇಶ್ವರನಂತೆ ಆಕೆಯ ಮುಂಗಡೆ ನಿಂತನು. ಆಗ ಆತನ ಸ್ವರೂಪವು ಅತ್ಯದ್ಭುತವಾಗಿದ್ದಿತು. ದೇಹವೋ ಪರ್ವತದಂತಹುದು ; ಕೆಂಪಾದ ಮುಖ ; ಮಹಾ ಬಲಿಷ್ಠನಂತೆ ತೋರುವನು ; ವಜ್ರಾಯುಧಕ್ಕೆ ಸಮಾನವಾದ ಕೋರೆಹಲ್ಲುಗಳೂ, ಉಗುರುಗಳೂ ಉಳ್ಳವನಾಗಿ ಆ ದೇವಿಯ ಮುಂಗಡೆ

¶ ಇಲ್ಲಿ, ಆಂಜನೇಯನು ತನ್ನ ಮೈಯನ್ನು ವೃದ್ಧಿಗೊಳಿಸುವುದಕ್ಕೋಸುಗ ಈಗಲೇ ಮರದಿಂದ ಕೆಳಕ್ಕಿಳಿದುದಾಗಿ ಗ್ರಹಿಸಬೇಕು. ಹಿಂದೆ ಮರದಿಂದ ಕೆಳಕ್ಕಿಳಿದುದಾಗಿ ಹೇಳಿದ್ದರೂ ಆತನು ತಾನು ಕುಳಿತಿದ್ದ ರೆಂಬೆಯಿಂದ ಕೆಳಗಿನ ಮತ್ತೊಂದು ರೆಂಬೆಗಿಳಿದನೆಂದು ಅರ್ಥ ಮಾಡಬೇಕು. (ಗೋ)

ಮಹೇಶ್ವರ ತೀರ್ಥರು, "ಹನುಮಂತನು ತಾನು ನಿಂತಿದ್ದ ಮರದ ಕೆಳಗೇ ಮೈಯನ್ನು ಬೆಳಸಿದುದಾದರೆ ತನ್ನ ವೇಗಕ್ಕೆ ಆ ಮರದ ರೆಂಬೆಗಳು ಛಿನ್ನಭಿನ್ನವಾಗಬಹುದೆಂದೆಣಿಸಿ ಅಲ್ಲಿಂದ ಸ್ವಲ್ಪ ಮುಂದಕ್ಕೆ ಹೋಗಿ ಮೈಯನ್ನು ಬೆಳಸುವನೆಂದರಿಯಬೇಕು. ಹಾಗೊಂದುವೇಳೆ ತಾನಿದ್ದ ಕಡೆಯೇ ಮೈಯನ್ನು ಬೆಳಸಿ ಆದರಿಂದ ಅಲ್ಲಿದ್ದ ಮರಗಳು ಮುರಿದುದಾದರೆ ಅದರ ಶಬ್ದದಿಂದ ರಾಕ್ಷಸರೆಲ್ಲರೂ ತಾನಿರುವ ಸಂಗತಿಯನ್ನು ತಿಳಿದು ತೊಂದರೆಗೀಡುಮಾಡಿಯಾರೆಂದು ಆತನ ಅಭಿಪ್ರಾಯವೆಂದು ತೋರುತ್ತದೆ" ಎಂದು ಬರೆಯುತ್ತಾರೆ.



ಹನುಮಂತನ ಸ್ವಸ್ವರೂಪ ಪ್ರದರ್ಶನ

ಪುಟ ೪೨೮

ವಾನರೋತ್ತಮಃ ॥ ೩೫ ॥ ಹರಿಃ ಪರ್ವತಸಂಕಾಶಸ್ತಾಮ್ರವಕ್ತ್ರೋ ಮಹಾಬಲಃ । ವಜ್ರದಂಷ್ಟ್ರನಖೋ ಭೀಮೋ ವೈದೇಹೀ ಮಿದಮಬ್ರವೀತ್ ॥ ೩೬ ॥ "ಸಪರ್ವತ ವನೋದ್ದೇಶಾಂ ಸಾಟ್ಟಪ್ರಾಕಾರತೋರಣಾಂ । ಲಂಕಾಮಿಮಾಂ ಸನಾಥಾಂ ವಾ ನಯಿತುಂ ಶಕ್ತಿರಸ್ತಿ ಮೇ ॥ ೩೭ ॥ ತದವಸ್ಥಾಪ್ಯತಾಂ ಬುದ್ಧಿರಲಂ ದೇವಿ! ವಿಕಾಂಕ್ಷಯಾ । ವಿಶೋಕಂ ಕುರು ವೈದೇಹಿ! ರಾಘವಂ ಸಹಲಕ್ಷ್ಮಣಂ" ॥ ೩೮ ॥ ತಂ ದೃಷ್ಟ್ವಾ ‡ ಭೀಮಸಂಕಾಶಮುವಾಚ ಜನಕಾತ್ಮಜಾ । ಪದ್ಮಪತ್ರವಿಶಾಲಾಕ್ಷೀ ಮಾರುತಸ್ಯೌರಸಂ ಸುತಂ ॥ ೩೯ ॥ "ತವ ಸತ್ವಂ ಬಲಂಚೈವ ವಿಜಾನಾಮಿ ಮಹಾ

ಸಮಾನನಾಗಿಯೂ, ದೀಪ್ತಾ....ಶ್ಚ - ಉರಿಯುವ ಅಗ್ನಿಯಂತೆ ಕಾಂತಿಯುಳ್ಳವನಾಗಿಯೂ ಆಗಿ, ಬಭೌ - ಹೊಳೆಯುತ್ತಿದ್ದನು. ॥ ೩೫ ॥ ಪರ್ವತಸಂಕಾಶಃ - ಪರ್ವತಸದೃಶನಾದ, ತಾಮ್ರವಕ್ತ್ರಃ - ಕೆಂಪಾದಮುಖವುಳ್ಳ, ಮಹಾಬಲಃ - ಮಹಾಬಲಿಷ್ಠನಾದ, ಭೀಮಃ - ಭಯಂಕರನಾದ, ಹರಿಃ - ವಾನರನಾದ ಆಂಜನೇಯನು, ವಜ್ರದಂಷ್ಟ್ರನಖಃ - ವಜ್ರಾಯುಧದೋಪಾದಿಯಲ್ಲಿರುವ ಕೋರೆಹಲ್ಲುಗಳೂ, ಉಗುರುಗಳೂ ಉಳ್ಳವನಾಗಿ, ವೈದೇಹೀಂ - ಸೀತಾದೇವಿಯನ್ನು ಕುರಿತು, ಇದಂ - ಈ ಮುಂದೆ ಹೇಳುವ ಮಾತನ್ನು, ಅಬ್ರವೀತ್ - ನುಡಿದನು. ॥ ೩೬ ॥ ಸಪ....ಶಾಂ - ಪರ್ವತಗಳಿಂದಲೂ ವನಗಳಿಂದಲೂ ಕೂಡಿರುವ ಪ್ರದೇಶವುಳ್ಳ, ಸಾಟ್ಟ....ಣಾಂ - ಬುರುಜುಗಳಿಂದೊಡಗೂಡಿದ, ಕೋಟೆಗೋಡೆಯೂ, ಊರುಬಾಗಲೂ ಉಳ್ಳ, ಸನಾಥಾಂ - ರಾವಣನಿಂದೊಡಗೂಡಿದ, ಇಮಾಂ ಲಂಕಾಂವಾ - ಈ ಲಂಕಾಪಟ್ಟಣವನ್ನಾದರೂ, ನಯಿತುಂ - ರಾಮಸಮೀಪವನ್ನು ಹೊಂದಿಸುವದಕ್ಕೆ, ಮೇ - ನನಗೆ, ಶಕ್ತಿಃ - ಬಲವು, ಅಸ್ತಿ - ಇರುವುದು. ॥ ೩೭ ॥ ಹೇ ದೇವಿ - ಓ ಸೀತಾದೇವಿಯೆ, ತತ್ - ಆ ಕಾರಣದಿಂದ, ಬುದ್ಧಿಃ - ಬುದ್ಧಿಯು, ಅವಸ್ಥಾಪ್ಯತಾಂ - ನಿಲ್ಲಿಸಲ್ಪಡಲಿ, ವಿಕಾಂಕ್ಷಯಾ - ಉಪೇಕ್ಷೆಯಿಂದ, ಅಲಂ - ಸಾಕು, ಹೇ ವೈದೇಹಿ - ಓ ವಿದೇಹಪುತ್ರಿಯೆ, ಸಹಲಕ್ಷ್ಮಣಂ - ಲಕ್ಷ್ಮಣ ಸಮೇತನಾದ, ರಾಘವಂ - ಶ್ರೀರಾಮನನ್ನು, ವಿಶೋಕಂ - ದುಃಖವಿಲ್ಲದವನನ್ನಾಗಿ, ಕುರು- ಮಾಡು. ॥೩೮॥ ಪದ್ಮ....ಕ್ಷೀ - ಕಮಲದಯಳೆಯಂತೆ ವಿಸ್ತಾರವಾದ ನೇತ್ರಗಳುಳ್ಳ, ಜನಕಾತ್ಮಜಾ - ಸೀತಾದೇವಿಯು, ಭೀಮಸಂಕಾಶಂ-(ಮ) ಈಶ್ವರನಿಗೆ ಸಮಾನನಾದ, ಮಾರುತಸ್ಯ-ವಾಯುವಿನ, ಔರಸಂ ಸುತಂ-ಸ್ವಂತ ಮಗನಾದ, ತಂ - ಆ ಆಂಜನೇಯನನ್ನು, ದೃಷ್ಟ್ವಾ-ಕಂಡು, ಉವಾಚ-ನುಡಿದಳು. ॥ ೩೯ ॥ ಹೇ ಮಹಾಕಪೇ - ಎಲೈ ಮಹಾ ವಾನರನೇ, ತವ - ನಿನ್ನ, ಸತ್ವಂ - ಅಂತಸ್ಸಾರವನ್ನು,

ನಿಂತು ಆಕೆಯನ್ನು ಕುರಿತು ಹೀಗೆಂದನು. ॥ ೩೧-೩೫ ॥ "ಎಲೆ ತಾಯೇ, ಸೀತಾದೇವಿಯೇ! ಇದೋ ನೋಡು ನನ್ನ ರೂಪವನ್ನು ನಾನು ಪರ್ವತಗಳಿಂದಲೂ, ವನಗಳಿಂದಲೂ, ಕೋಟೆಯ ಬುರುಜುಗಳಿಂದಲೂ, ಪ್ರಾಕಾರಗಳಿಂದಲೂ ಕೂಡಿರುವ ಈ ಲಂಕಾನಗರವನ್ನು ಇದರ ಪ್ರಭುವಾದ ರಾವಣನೊಡನೆ ಕಿತ್ತು ಎತ್ತಿಕೊಂಡು ಹೋಗಲು ಶಕ್ತನಾಗಿರುವೆನು. ದೇವೀ! ನನ್ನ ಈ ಆಕೃತಿಯನ್ನು ನೋಡಿ ಭಯಪಡಬೇಡ; ಧೈರ್ಯವನ್ನು ತಂದುಕೊ; ಉಪೇಕ್ಷೆ ಮಾಡಬೇಡ. ದೇವಿ! ಶ್ರೀರಾಮಲಕ್ಷ್ಮಣರ ದುಃಖವನ್ನು ಕಳೆಯುವವಳಾಗು." ಆ ಮಾತುಗಳನ್ನು ಕೇಳಿ ಸೀತಾದೇವಿಯು ಮಹಾ ಭಯಂಕರನೂ, ವಾಯುಪುತ್ರನೂ ಆದ ಹನುಮಂತನನ್ನು ನೋಡಿ, "ಎಲೈ ಮಹಾ ಕಪಿಯೇ! ನಿನ್ನ ಬಲಪರಾಕ್ರಮಗಳನ್ನೂ,

‡ "ಅಚಲಸಂಕಾಶಂ" ತಿ. ಪಾ.

ಕಪೇ! । ವಾಯೋರಿವ ಗತಿಂ ಚಾಪಿ ತೇಜಶ್ಚಾಗ್ನೇರಿವಾದ್ಭುತಂ ॥ ೪೦ ॥ ಪ್ರಾಕೃತೋಽನ್ಯಃ ಕಥಂ ಚೇಮಾಂ ಭೂಮಿಮಾಗಂತು ಮರ್ಹತಿ? । ಉದಧೇರಪ್ರಮೇಯಸ್ಯ ಪಾರಂ ವಾನರಪುಂಗವ! ॥ ೪೧ ॥ ಜಾನಾಮಿ ಗಮನೇ ಶಕ್ತಿಂ ನಯನೇಚಾಪಿ ತೇ ಮಮ । ಅವಶ್ಯಂ ಸಂಪ್ರಧಾರ್ಯಾಶು ಕಾರ್ಯಸಿದ್ಧಿರ್ಮಹಾತ್ಮನಃ ॥ ೪೨ ॥ ಅಯುಕ್ತಂತು ಕಪಿಶ್ರೇಷ್ಠ! ಮಮ ಗಂತುಂ ತ್ವಯಾಽನಘ! । ವಾಯುವೇಗಸವೇಗಸ್ಯ ವೇಗೋ ಮಾಂ ಮೋಹಯೇತ್ತವ ॥ ೪೩ ॥ ಅಹಮಾಕಾಶಮಾಪನ್ನಾ ಹ್ಯುಪರ್ಯುಪರಿ ಸಾಗರಂ । ಪ್ರಪತೇಯಂ ಹಿ ತೇ ಪೃಷ್ಠಾದ್ಭಯಾದ್ವೇಗೇನ ಗಚ್ಛತಃ ॥ ೪೪ ॥

ಬಲಂಚೈವ - ದೇಹತ್ರಾಣವನ್ನೂ ಕೂಡ, ವಾಯೋಃ - ವಾಯುವಿನ, ಗತಿಮಿವ - ಗಮನದಂತೆಯೂ, ಅಗ್ನೇಃ - ಯಜ್ಞೇಶ್ವರನ, ತೇಜಇವ - ಜ್ವಾಲೆಯಂತೆಯೂ, ಅದ್ಭುತಂ - ಆಶ್ಚರ್ಯಕರವನ್ನಾಗಿ, ವಿಜಾನಾಮಿ - ತಿಳಿಯುತ್ತೇನೆ. ॥ ೪೦ ॥ ಹೇ ವಾನರಪುಂಗವ - ಎಲೈ ಕಪಿವರನೇ, ಪ್ರಾಕೃತಃ - ಸಾಧಾರಣನಾದ, ಅನ್ಯಃ - ಮತ್ತೊಬ್ಬನು, ಇಮಾಂಭೂಮಿಂಚ - ಈ ಸ್ಥಳವನ್ನು ಕುರಿತು, ಅಪ್ರಮೇಯಸ್ಯ - ಸಮಾನವಿಲ್ಲದಿರುವ, ಉದಧೇಃ - ಸಮುದ್ರದ, ಪಾರಂಚ - ತೀರವನ್ನೂ ಕುರಿತು, ಬರುವುದಕ್ಕೆ, ಕಥಮರ್ಹತಿ-ಹೇಗೆ ಸಮರ್ಥನಾದಾನು. ॥ ೪೧ ॥ ಗಮನೇ-ಪ್ರಯಾಣದಲ್ಲಿಯಾಗಲಿ, ಮಮ - ನನ್ನನ್ನು, ನಯನೇಚಾಪಿ - ತೆಗದುಕೊಂಡು ಹೋಗುವದರಲ್ಲಾಗಲಿ, ತೇ - ನಿನ್ನ, ಶಕ್ತಿಂ-ಸಾಮರ್ಥ್ಯವನ್ನು, ಜಾನಾಮಿ - ಬಲ್ಲೆನು, ಮಹಾತ್ಮನಃ - ಮಹಾನುಭಾವನಾದ ಶ್ರೀರಾಮನ, ಕಾರ್ಯಸಿದ್ಧಿಃ - ಕಾರ್ಯಾನುಕೂಲತೆಯು, ಅವಶ್ಯಂ - ಮುಖ್ಯವಾಗಿ, ಆಶು - ಶೀಘ್ರವಾಗಿ, ಸಂಪ್ರಧಾರ್ಯಾ-ವಿಚಾರಿಸತಕ್ಕದು. ॥ ೪೨ ॥ ಹೇ ಕಪಿಶ್ರೇಷ್ಠ - ಎಲೈ ವಾನರೋತ್ತಮನೇ, ತ್ವಯಾ - ನಿನ್ನೊಡನೆ, ಗಂತುಂ - ಪಯಣಿಸುವದಕ್ಕೆ, ಮಮ - ನನಗೆ, ಅಯುಕ್ತಂ - ನ್ಯಾಯವಲ್ಲ, ಕಿಂತು - ಆದರೆ, ಹೇ ಅನಘ - ಎಲೈ ನಿರ್ದೋಷನೇ, ವಾಯು....ಸ್ಯ - ವಾಯುವೇಗದಂತೆ ವೇಗವುಳ್ಳ, ತೇ - ನಿನ್ನ, ವೇಗಃ - ಶೀಘ್ರಗಮನವು, ಮಾಂ - ನನ್ನನ್ನು, ಮೋಹಯೇತ್ - ಭ್ರಮೆಗೊಳಿಸಬಹುದು. ॥ ೪೩ ॥ ಸಾಗರಂ - ಸಮುದ್ರದ, ಉಪರ್ಯುಪರಿ - ಮೇಲೆಮೇಲೆ, ವೇಗೇನ - ತ್ವರಿತಗಮನದಿಂದ, ಗಚ್ಛತಃ - ಹೋಗುತ್ತಿರುವ, ತೇ - ನಿನ್ನ, ಪೃಷ್ಠಾತ್ - ಬೆನ್ನಿನದೆಸೆಯಿಂದ, ಆಕಾಶಂ - ಅಂತರಿಕ್ಷವನ್ನು, ಆಪನ್ನಾ - ಹೊಂದಿರುವ, ಅಹಂ - ನಾನು, ಭಯಾತ್ - ಭೀತಿಯಿಂದ, ಪ್ರಪತೇಯಂಹಿ - ಕೆಳಗೆ ಬೀಳುವೆನಷ್ಟೆ. ॥ ೪೪ ॥ ತಿಮಿ....ಲೇ - ನೂರುಗಾವುದ ಉದ್ದವಾದ ಮೀನುಗಳಿಂದಲೂ, ಮೊಸಳೆ

ವಾಯುವಿಗೆ ಸಮಾನವಾದ ನಿನ್ನ ಗಮನವೇಗವನ್ನು ಅಗ್ನಿಗೆ ಸಮಾನವಾಗಿ ಪರಮಾಶ್ಚರ್ಯಕರವಾದ ನಿನ್ನ ತೇಜಸ್ಸನ್ನೂ ಚೆನ್ನಾಗಿ ತಿಳಿದೆನು. ॥ ೩೬–೪೦ ॥ ಎಲೈ ವಾನರೋತ್ತಮನಾದ ಆಂಜನೇಯನೇ! ಸಾಮಾನ್ಯನಾದವನುತಾನೇ ಈ ಮಹಾ ಸಮುದ್ರವನ್ನು ದಾಟಿ, ರಾಕ್ಷಸಭೂಯಿಷ್ಠವಾದ ಈ ಪ್ರದೇಶಕ್ಕೆ ಬರವನು? ನೀನಿಲ್ಲಿಂದ ತಪ್ಪಿಸಿಕೊಳ್ಳುವುದು ಮಾತ್ರವಲ್ಲದೆ, ನನ್ನನ್ನೂ ಕೊಂಡುಹೋಗಲು ಸಮರ್ಥನೇ ಸರಿ. ಮಹಾತ್ಮನಾದ ಶ್ರೀರಾಮಕಾರ್ಯವು ಶೀಘ್ರವಾಗಿ ನೆರವೇರುವಂತೆ ಮಾಡಲು ಅತ್ಯವಶ್ಯಕವಾಗಿ ಯೋಚಿಸಬೇಕಾದುದೂ ಸರಿಯೇ! ಎಲೈ ನಿರ್ದುಷ್ಟನೇ, ಆಂಜನೇಯನೇ? ಆದರೆ, ನಾನು ನಿನ್ನೊಡನೆ ಬರುವುದು ಯುಕ್ತವಲ್ಲವು. ನೀನು ವಾಯುವೇಗ, ಮನೋವೇಗದಿಂದ ಆಕಾಶಮಾರ್ಗದಲ್ಲಿ ಸಮುದ್ರದಮೇಲೆ ಹಾರಿಹೋಗುವಾಗ ನಾನು ನಿನ್ನ ಆ ಗಮನವೇಗದಿಂದ ಮೂರ್ಛೆಯೊಂದಿ

ಪತಿತಾ ಸಾಗರೇ ಚಾಽಹಂ ತಿಮಿನಕ್ರಝಷಾಕುಲೇ । ಭವೇಯಮಾಶು ವಿವಶಾ ಯಾದಸಾಮನ್ನಮುತ್ತಮಂ ॥ ೪೫ ॥ ನಚ ಶಕ್ಷ್ಯೇ ತ್ವಯಾ ಸಾರ್ಧಂ ಗಂತುಂ ಶತ್ರುವಿನಾಶನ ! । ಕಳತ್ರವತಿ ಸಂದೇಹ ಸ್ತ್ವಯ್ಯಪಿ ಸ್ಯಾದಸಂಶಯಃ ॥ ೪೬ ॥ ಹ್ರಿಯಮಾಣಾಂತು ಮಾಂ ದೃಷ್ಟ್ವಾ ರಾಕ್ಷಸಾ ಭೀಮವಿಕ್ರಮಾಃ । ಅನುಗಚ್ಛೇಯುರಾದಿಷ್ಟಾ ರಾವಣೇನ ದುರಾತ್ಮನಾ ॥೪೭॥ ತೈಸ್ತ್ವಂ ಪರಿವೃತ ಶ್ಶೂರೈ ಶ್ಶೂಲಮುದ್ಗರಪಾಣಿಭಿಃ । ಭವೇಸ್ತ್ವಂ ಸಂಶಯಂ ಪ್ರಾಪ್ತೋ ಮಯಾ ವೀರ! ಕಳತ್ರವಾ೯ ॥೪೮॥ ಸಾಯುಧಾ

ಗಳಿಂದಲೂ, ಸಾಧಾರಣ ಮಿಾನುಗಳಿಂದಲೂ, ವ್ಯಾಪ್ತವಾದ, ಸಾಗರೇ - ಸಮುದ್ರದಲ್ಲಿ, ಪತಿತಾ - ಬಿದ್ದ, ಅಹಂ - ನಾನು, ವಿವಶಾ - ಪರಾಧೀನಳಾಗಿ, ಆಶು - ಬೇಗನೆ, ಯಾದಸಾಂ-ಜಲಜಂತುಗಳಿಗೆ, ಉತ್ತಮಂ-ಶ್ರೇಷ್ಠವಾದ, ಅನ್ನಂ-ಆಹಾರವು, ಭವೇಯಂ-ಆಗುವೆನು. ॥೪೫॥ ಹೇ ಶತ್ರುವಿನಾಶನ - ಎಲೈ ಶತ್ರುಸಂಹಾರಕನೇ, ಕಳತ್ರವತಿ - ಪರಸತಿರಕ್ಷಕನಾದ, ತ್ವಯ್ಯಪಿ - ನಿನ್ನಲ್ಲಿಯೂ ಕೂಡ, ಸಂದೇಹಃ - ಸಂಶಯವು, ಸ್ಯಾತ್ - ಆದೀತು, ಅಸಂಶಯಃ - ಸಂದೇಹವಿಲ್ಲ, ತ್ವಯಾಸಾರ್ಧಂ - ನಿನ್ನೊಡನೆ, ಗಂತುಂ - ಬರುವದಕ್ಕೆ, ನಚಶಕ್ಷ್ಯೇ - ಸಮರ್ಥಳಾಗಲಾರೆನು. ॥ ೪೬ ॥ ಭೀಮವಿಕ್ರಮಾಃ - ಭಯಂಕರಪರಾಕ್ರಮಿಗಳಾದ, ರಾಕ್ಷಸಾಃ - ರಕ್ಕಸರು, ಹ್ರಿಯಮಾಣಾಂತು - ಕೊಂಡು ಹೊಗುತ್ತಿರುವ, ಮಾಂ - ನನ್ನನ್ನು, ದೃಷ್ಟ್ವಾ - ಕಂಡು, ದುರಾತ್ಮನಾ - ದುಷ್ಟಬುದ್ಧಿಯುಳ್ಳ ರಾವಣನಿಂದ, ಆದಿಷ್ಟಾಃ - ಆಜ್ಞಾಪಿಸಲ್ಪಟ್ಟವರಾಗಿ, ಅನುಗಚ್ಛೇಯುಃ - ಅನುಸರಿಸಿ ಬರುವರು. ॥೪೭॥ ತ್ವಂ - ನೀನು, ಶೂಲ....ಭಿಃ - ಭಲ್ಲಾಯುಧಗಳೂ, ಮುದ್ಗರಾಯುಧಗಳೂ ಇವುಗಳೇ ಹಸ್ತಗಳಲ್ಲಿ ಉಳ್ಳ, ಶೂರೈಃ - ವೀರರಾದ, ತೈಃ - ಆ ರಕ್ಕಸರಿಂದ, ಪರಿವೃತಃ - ಸುತ್ತಿಕೊಳ್ಳಲ್ಪಟ್ಟವನು, ಭವೇಃ - ಆಗುವೆ, ಹೇ ವೀರ - ಎಲೈ ಶೂರನೆ, ಕಳತ್ರವಾ೯ - ರಕ್ಷಣೆಯುಳ್ಳ, ತ್ವಂ - ನೀನು, ಮಯಾ - ನನ್ನೊಡನೆ, ಸಂಶಯಂ - ಸಂದೇಹವನ್ನು, ಪ್ರಾಪ್ತಃ - ಹೊಂದುವವನು, ಭವೇಃ - ಆಗುವೆ. ॥೪೮॥ ವ್ಯೋಮ್ನಿ - ಅಂತರಿಕ್ಷದಲ್ಲಿ, ಸಾಯುಧಾಃ - ಆಯುಧಗಳಿಂದೊಡಗೂಡಿದ,

---

ನಿನ್ನ ಬೆನ್ನಿನಿಂದ ಭಯಚಕಿತಳಾಗಿ ಸಮುದ್ರದಲ್ಲಿ ಬೀಳಬಹುದು. ಹಾಗೇನಾದರೂ ನಾನು ಸಮುದ್ರದಲ್ಲಿ ಬಿದ್ದರೆ ಅದರಲ್ಲಿರುವ ತಿಮಿತಿಮಿಂಗಿಲಾದಿನಗಳಿಗೆ ಆಹಾರವಾಗಿ ಹೋಗುವೆನು. ॥ ೪೧-೪೫ ॥ ಎಲೈ ಶತ್ರುಮರ್ದನನೇ ! ಇದೂ ಅಲ್ಲದೆ ನಿನ್ನೊಡನೆ ಬರುವುದಕ್ಕೆ ನನ್ನ ಮನಸ್ಸೂ ಒಡಂಬಡುವುದಿಲ್ಲವು. ಏಕೆಂಬೆಯೋ ? ಕೇಳು ; ನೀನು ನನ್ನನ್ನು ಎತ್ತಿಕೊಂಡು ಹೋಗುವಾಗ ಯಾವುದಾದರೂ ಒಂದು ಆಪತ್ತು ಸಂಭವಿಸಿದರೆ, ನೀನು ಅದನ್ನೂ ನಿವಾರಿಸಿಕೊಂಡು, ನನ್ನನ್ನೂ ರಕ್ಷಿಸಿ ಎತ್ತಿಕೊಂಡು ಹೋಗುವ ವಿಷಯದಲ್ಲಿ ನನಗೆ ಸಂದೇಹವೇ ಇರುವುದು. ಆಪತ್ತು ಸಂಭವಿಸುವುದಂತೂ ಖಂಡಿತವೇ ಸರಿ. ನೀನು ನನ್ನನ್ನು ಎತ್ತಿಕೊಂಡು ಹೋಗುತ್ತಿರುವುದನ್ನು ನೋಡಿದೊಡನೆಯೇ ಭಯಂಕರ ಪರಾಕ್ರಮಶಾಲಿಗಳಾದ ಈ ರಾಕ್ಷಸರೆಲ್ಲರೂ, ದುರಾತ್ಮನಾದ ರಾವಣಾಸುರನಿಂದ ಪ್ರೇರೇಪಿತರಾಗಿ ಆತನ ಆಜ್ಞೆಯಂತೆ ನಿನ್ನನ್ನು ಬೆನ್ನಟ್ಟಬರುತ್ತಾರೆ. ಎಲೈ ಮಹಾ ಶೂರನೇ! ಯುದ್ಧವೀರರಾದ ಆ ರಾಕ್ಷಸರೆಲ್ಲರೂ ಶೂಲಾಯುಧ, ಮುದ್ಗರಾಯುಧವೇ ಮೊದಲಾದ ವಿವಿಧಾಯುಧಗಳನ್ನು ಧರಿಸಿ ನಿನ್ನನ್ನು ಸುತ್ತಿಕೊಂಡಾಗ, ನಿನ್ನಿಂದ ಸಂರಕ್ಷಣೀಯಳಾದ ನನ್ನನ್ನೂ ನೀನು ರಕ್ಷಿಸಿಕೊಂಡು, ಅವರೊಡನೆಯೂ ಯುದ್ಧಮಾಡುವುದೂ ನಿನಗೆ ಬಹಳ ಕಷ್ಟವೇ ಆಗುವುದು. ಆಗ ನಿನಗೆ

ಬಹವೋ ವ್ಯೋಮ್ನಿ ರಾಕ್ಷಸಾ ಸ್ತ್ವಂ ನಿರಾಯುಧಃ । ಕಥಂ ಶಕ್ಷ್ಯಸಿ ಸಂಯಾತುಂ ಮಾಂಚೈವ ಪರಿರಕ್ಷಿತುಂ ॥ ೪೯ ॥ ಯುಧ್ಯಮಾನಸ್ಯ ರಕ್ಷೋಭಿಸ್ತವ ತೈಃ ಕ್ರೂರ ಕರ್ಮಭಿಃ । ಪ್ರಪತೇಯಂಹಿ ತೇ ಪೃಷ್ಠಾತ್ ಭಯಾರ್ತಾ ಕಪಿಸತ್ತಮ! ॥ ೫೦ ॥ ಅಥ ರಕ್ಷಾಂಸಿ ಭೀಮಾನಿ ಮಹಾಂತಿ ಬಲವಂತಿಚ । ಕಥಂಚಿತ್ಸಾಂಪರಾಯೇ ತ್ವಾಂ ಜಯೇಯುಃ ಕಪಿಸತ್ತಮ! ॥೫೧॥ ಅಥವಾ ಯುಧ್ಯಮಾನಸ್ಯ ಪತೇಯಂ ವಿಮುಖ ಸ್ಯತೇ । ಪತಿತಾಂಚ ಗೃಹೀತ್ವಾ ಮಾಂ ನಯೇಯುಃ ಪಾಪರಾಕ್ಷಸಾಃ ॥ ೫೨ ॥ ಮಾಂ ವಾ ಹರೇಯು ಸ್ತ್ವದ್ಧಸ್ತಾದ್ವಿಶಸೇಯುರಥಾಪಿ ವಾ । ಅವ್ಯವಸ್ಥೌಹಿ ದೃಶ್ಯೇತೇ

ಬಹವಃ - ಅನೇಕರಾದ, ರಾಕ್ಷಸಾಃ - ರಕ್ಕಸರು, ನಿರಾಯುಧಃ - ಆಯುಧವಿಲ್ಲದಿರುವ, ತ್ವಂಚ - ನೀನ, ಸಂಯಾತುಂ - ಯುದ್ಧಮಾಡುವದಕ್ಕೂ, ಮಾಂ - ನನ್ನನ್ನೂ, ಪರಿರಕ್ಷಿತುಂಚ - ಸಂರಕ್ಷಿಸು ವದಕ್ಕೂ ಸಹ, ಕಥಮೇವ - ಹೇಗೆತಾನೆ, ಶಕ್ಷ್ಯತಿ - ಸಮರ್ಥನಾಗುವೆ. ॥೪೯॥ ಹೇ ಕಪಿಸತ್ತಮ - ಎಲೈ ಕಪಿಶ್ರೇಷ್ಠನೆ, ಭಯಾರ್ತಾ - ಭಯಪೀಡಿತಳಾದ ನಾನು, ಕ್ರೂರಕರ್ಮಭಿಃ - ಕ್ರೂರ ಕೃತ್ಯಗಳುಳ್ಳ, ತೈರಕ್ಷೋಭಿಃ - ಆ ರಾಕ್ಷಸರೊಡನೆ, ಯುಧ್ಯಮಾನಸ್ಯ - ಕಾಳೆಗಮಾಡುತ್ತಿರುವ, ತವ - ನಿನ್ನ, ಪೃಷ್ಠಾತ್ - ಬೆನ್ನಿನದೆಸೆಯಿಂದ, ತೇ-ನಿನ್ನ, ಪುರತಃ - ಮುಂಗಡೆ, ಪ್ರಪತೇಯಂಹಿ - ಬೀಳುವೆನಷ್ಟೆ. ॥೫೦॥ ಹೇ ಕಪಿಸತ್ತಮ - ಓ ಕಪಿಶ್ರೇಷ್ಠನೇ, ಅಥ - ಬಳಿಕ, ಸಾಂಪರಾಯೇ - ಯುದ್ಧದಲ್ಲಿ, ಭೀಮಾನಿ - ಭಯಂಕರರಾದ, ಮಹಾಂತಿ - ಮಹತ್ತರರಾದ, ಬಲವಂತಿ - ಬಲಿಷ್ಠರಾದ, ರಕ್ಷಾಂಸಿಚ - ರಕ್ಕಸರೂ, ಕಥಂಚಿತ್ - ಹೇಗಾದರೂ ಮಾಡಿ, ತ್ವಾಂ - ನಿನ್ನನ್ನು, ಜಯೇಯುಃ - ಜಯಿಸುವರು. ॥ ೫೧ ॥ ಅಥವಾ - ಹಾಗಲ್ಲದಿದ್ದರೆ, ಯುಧ್ಯಮಾನಸ್ಯ - ಯುದ್ಧಮಾಡುವಕಾರಣ, ವಿಮುಖಸ್ಯ - ಯುದ್ಧಪರವಶನಾದ, ತೇ - ನಿನ್ನ, ಪೃಷ್ಠಾತ್ - ಬೆನ್ನಿನಿಂದ, ಪತೇಯಂ - ಬೀಳು ವೆನು, ಪಾಪರಾಕ್ಷಸಾಃ - ಪಾಪರಾಕ್ಷಸರು, ಪತಿತಾಂ - ಕೆಳಗೆಬಿದ್ದ, ಮಾಂಚ - ನನ್ನನ್ನೂ, ಗೃಹೀತ್ವಾ- ತೆಗೆದುಕೊಂಡು, ನಯೇಯುಃ - ರಾವಣಸಮಾಪವನ್ನೇ ಹೊಂದಿಸುವರು. ॥ ೫೨ ॥ ಅಪಿಚ - ಇಷ್ಟು ಮಾತ್ರವಲ್ಲ, ತ್ವದ್ಧಸ್ತಾತ್ - ನಿನ್ನ ಕೈಯಿಂದ, ಮಾಂವಾ - ನನ್ನನ್ನಾದರೂ, ಹರೇಯುಃ - ಅಪ ಹರಿಸುವರು, ಅಥವಾ - ಹಾಗಲ್ಲದಿದ್ದರೆ, ವಿಶಸೇಯುಃ - ಕೊಲ್ಲುವರು, ಯುದ್ಧೇ - ಯುದ್ಧದಲ್ಲಿ,

ಸಂದೇಹವೇ ಉಂಟಾಗುವುದು. ದಿಗ್ಭ್ರಮೆಹಿಡಿಯುವುದು. ಅನೇಕಮಂದಿ ರಾಕ್ಷಸರು ಆಯುಧಪಾಣಿಗಳಾಗಿ ನಿನ್ನನ್ನಡ್ಡಗಿಸಿದರೆ, ಒಬ್ಬಂಟಿಗನಾಯೂ, ನಿರಾಯುಧನಾಗಿಯೂ ಇರುವ ನೀನು ಅವರೊಡನೆ ಕಾದಾಡುತ್ತ, ನನ್ನನ್ನು ಹೇಗೆ ಕಾಪಾಡುವೆ? ಎಲೈ ವಾನರೋತ್ತ ಮನೇ! ನೀನು ಹಾಗೆ ಮಹಾ ಕ್ರೂರಕಾರ್ಯಗಳನ್ನು ಮಾಡುವ ಆ ರಾಕ್ಷಸರೊಡನೆ ಕಾದಾಡು ತ್ತಿರುವಾಗ ದಿಗ್ಭ್ರಾಂತಳಾಗಿ ಕೆಳಕ್ಕೆ ಬಿದ್ದರೂ ಬೀಳಬಹುದು. ॥ ೪೬ ೫೦ ॥ ಹಾಗೊಂದು ವೇಳೆ ನಾನು ಕೆಳಕ್ಕೆ ಬೀಳದಿದ್ದರೂ ಮಹಾ ಕ್ರೂರರಾದ ಆ ಭಯಂಕರರಾಕ್ಷಸರು ನಿನ್ನನ್ನು ಜಯಿಸಿದರೂ ಜಯಿಸಬಹುದು. ಓ ಕಪಿಶ್ರೇಷ್ಠನೇ! ಹಾಗೂ ಅಲ್ಲದಿದ್ದರೆ, ನೀನು ಅವರೊಡನೆ ಯುದ್ಧಮಾಡುತ್ತ ವೈಮರೆತಿರುವಾಗಲಾದರೂ ನಾನು ಕೆಳಕ್ಕೆ ಬೀಳಬಹುದು. ಆಗ ರಾಕ್ಷ ಸರು ನನ್ನನ್ನು ಎತ್ತಿಕೊಂಡು ಹೋಗುವರು. ಇದೂ ಅಲ್ಲದೆ ಯುದ್ಧದಲ್ಲಿ ಜಯಾಪಜಯ ಗಳು ಹೀಗೆಂದು ನಿರ್ಧರಿಸಲು ಸಾಧ್ಯವಲ್ಲವಷ್ಟೆ? ಆದುದರಿಂದ ಒಂದುವೇಳೆ ನಿನಗೆ ಸೋಲುಂ ಟಾದರೆ, ಈ ಕ್ರೂರರಾಕ್ಷಸರು ನಿನ್ನಿಂದಲೇ ನನ್ನನ್ನು ಕಸೆದುಕೊಂಡು ಹೋಗಿ ಕಡಿದುಹಾಕ

ಯುದ್ಧೇ ಜಯಪರಾಜಯೌ ॥ ೫೩ ॥ ಅಹಂ ವಾಽಪಿ ವಿಪದ್ಯೇಯಂ ರಕ್ಷೋಭಿ ರಭಿತರ್ಜಿತಾ । ತ್ವತ್ಪ್ರಯತ್ನೋ ಹರಿಶ್ರೇಷ್ಠ! ಭವೇನ್ನಿಷ್ಫಲ ಏವತು ॥ ೫೪ ॥ ಕಾಮಂ ತ್ವಮಸಿ ಪರ್ಯಾಪ್ತೋ ನಿಹಂತುಂ ಸರ್ವರಾಕ್ಷಸಾನ್ । ರಾಘವಸ್ಯ ಯಶೋ ಹೀಯೇತ್ತ್ವಯಾ ಶಸ್ತ್ರೈಸ್ತು ರಾಕ್ಷಸೈಃ ॥೫೫॥ ಅಥವಾಽದಾಯ ರಕ್ಷಾಂಸಿ ನ್ಯಸೇಯು ಸ್ಸಂವೃತೇಹಿ ಮಾಂ । ಯತ್ರ ತೇ ನಾಭಿಜಾನೀಯು ರ್ಹರಯೋ ನಾಪಿ ರಾಘವೌ ॥ ೫೬ ॥ ಆರಂಭಸ್ತು ಮದರ್ಥೋಽಯಂ ತತಸ್ತವ ನಿರರ್ಥಕಃ । ತ್ವಯಾಹಿ ಸಹ ರಾಮಸ್ಯ ಮಹಾನಾಗಮನೇ ಗುಣಃ ॥ ೫೭ ॥ ಮಯಿ ಜೀವಿತಮಾಯತ್ತಂ ರಾಘವಸ್ಯ

ಜಯಪರಾಜಯೌ - ಸೋಲುಗೆಲುವುಗಳು, ಅವ್ಯವಸ್ಥೌ - ನಿಶ್ಚಯವಿಲ್ಲದವುಗಳಾಗಿ, ದೃಶ್ಯೇತೇಹಿ - ಕಾಣಲ್ಪಡುತ್ತವಷ್ಟೆ. ॥೫೩॥ ಅಹಂವಾಪಿ - ನಾನಾದರೂ, ರಕ್ಷೋಭಿಃ - ರಕ್ಕಸರಿಂದ, ಅಭಿತರ್ಜಿತಾ- ಹೆದರಿಸಲ್ಪಟ್ಟವಳಾಗಿ, ವಿಪದ್ಯೇಯಂ - ನಾಶವಾಗುವೆನು, ಹೇ ಹರಿಶ್ರೇಷ್ಠ - ಎಲೈ ವಾನರೋತ್ತಮನೇ, ತ್ವತ್ಪ್ರಯತ್ನಸ್ತು-ನಿನ್ನ ಉದ್ಯೋಗವಾದರೆ, ನಿಷ್ಫಲಏವ-ನಿಷ್ಪ್ರಯೋಜನವೇ, ಭವೇತ್-ಆಗುವುದು. ॥೬೪॥ ಕಾಮಂ - ಯಥೇಷ್ಟವಾಗಿ, ಸರ್ವರಾಕ್ಷಸಾನ್ - ರಕ್ಕಸರನ್ನೆಲ್ಲಾ, ನಿಹಂತುಂ - ಸಂಹರಿಸುವುದಕ್ಕೆ, ತ್ವಂ - ನೀನು, ಪರ್ಯಾಪ್ತೋಸಿ - ಸಮರ್ಥನಾಗಿರುವೆ, ತ್ವಯಾ - ನಿನ್ನಿಂದ, ಶಸ್ತ್ರೈಃ - ಸಂಹರಿಸಲ್ಪಟ್ಟ, ರಾಕ್ಷಸೈಸ್ತು - ರಕ್ಕಸರಿಂದಲಾದರೆ, ರಾಘವಸ್ಯ - ಶ್ರೀರಾಮನ, ಯಶಃ - ಕೀರ್ತಿಯು, ಹೀಯೇತ್ - ಕಡಿಮೆಯಾದೀತು. ॥ ೫೫ ॥ ಅಥವಾ - ಹಾಗಲ್ಲದಿದ್ದರೆ, ರಕ್ಷಾಂಸಿ - ರಕ್ಕಸರು, ಮಾಂ - ನನ್ನನ್ನು, ಆದಾಯ - ಕೊಂಡುಹೋಗಿ, ಸಂವೃತೇ - ರಹಸ್ಯವಾದ ಸ್ಥಳದಲ್ಲಿ, ನ್ಯಸೇಯುಃ- ಇಡುವರು, ಯತ್ರ - ಯಾವ ಸ್ಥಳದಲ್ಲಿ, ತೇಹರಯಃ - ಆ ಕಪಿಗಳೂ, ನಾಭಿಜಾನೀಯುಃ - ಅರಿಯಲಾರೆರೋ, ರಾಘವಾವಪಿ-ರಾಮಲಕ್ಷ್ಮಣರೂ, ನಾಭಿಜಾನೀಯಾ-ತಿಳಿಯದೇಹೋಗುವರೋ, ತತಃ- ಆ ಬಳಿಕ, ಮದರ್ಥಃ - ನಾನೇ ಪ್ರಯೋಜನವಾಗುಳ್ಳ, ತವ - ನಿನ್ನ, ಅಯಮಾರಂಭಃ - ಈ ಸಮುದ್ರಲಂಘನಾದಿ ಪ್ರಯತ್ನವು, ನಿರರ್ಥಕಃ - ವ್ಯರ್ಥವಾಗುವುದು. ॥ ೫೬ ॥ ತ್ವಯಾಸಹ - ನಿನ್ನೊಡನೆ, ರಾಘವಸ್ಯ-ಶ್ರೀರಾಮನ, ಆಗಮನೇ-ಬರುವಿಕೆಯಲ್ಲಿ, ಮಹಾನ್‌ಗುಣೋಹಿ-ಬಹಳ ಗುಣವಿರುವುದಷ್ಟೆ. ॥೫೭॥ ಹೇ ಮಹಾಬಾಹೋ-ಎಲೈ ಭುಜಬಲಪರಾಕ್ರಮವಂತನೇ, ಮಹಾತ್ಮನಃ-ಮಹಾನು

ಬಹುದು. ಹಾಗೆ ಕಡಿದುಹಾಕದಿದ್ದರೂ, ಅದಕ್ಕಿಂತಲೂ ಹೆಚ್ಚಿನ ಬಾಧೆಗೊಳಗಾಗಿಸಬಹುದು. ಹಾಗೇನಾದರೂ ಆದರೆ ನಾನು ದೊಡ್ಡ ಆಪತ್ತಿಗೇ ತುತ್ತಾಗುವೆನಲ್ಲವೆ? ಎಲೈ ವಾನರೋತ್ತಮನೇ! ಆಗ ನಿನ್ನ ಪ್ರಯತ್ನಗಳೆಲ್ಲವೂ ನಿಷ್ಫಲಗಳಾಗುತ್ತವೆ. ಎಲೈ ಮಾರುತಿಯೇ! ನೀನೇನೋ ಈ ರಾಕ್ಷಸರೆಲ್ಲರನ್ನೂ ಸಂಹರಿಸಲು ಸಮರ್ಥನೇ ಆಗಿರುವೆ. ಆದರೇನು ? ನೀನೇ ಈ ರಾಕ್ಷಸರೆಲ್ಲರನ್ನೂ ಸಂಹರಿಸಿಬಿಟ್ಟರೆ ರಘುಕುಲೋದ್ಭವನ ಕೀರ್ತಿಗೆ ಕಳಂಕಬರುವುದು. ॥ ೫೧–೫೫ ॥ ಅಥವಾ ಈ ರಾಕ್ಷಸರು ನನ್ನನ್ನು ಕೊಂಡುಹೋಗಿ ವಾನರರಾರಿಗೂ ತಿಳಿಯದಿರುವ, ಶ್ರೀರಾಮಲಕ್ಷ್ಮಣರಿಗೂ ಗೊತ್ತರಿಯದಿರುವ ರಹಸ್ಯವಾದೊಂದು ಪ್ರದೇಶದಲ್ಲಿ ಬೈತಿಟ್ಟರೂ ಇಡಬಹುದು. ಹೀಗೇನಾದರೂ ಆದರೆ, ನನಗೋಸುಗ ನೀನು ಮಾಡಿದ ಈ ಮಹಾಪ್ರಯತ್ನಗಳೆಲ್ಲವೂ ವಿಫಲವಾಗುವುದಿಲ್ಲವೆ? ಆದುದರಿಂದ ನೀನಿಲ್ಲಿಂದ ಹಿಂತಿರುಗಿ ಹೋಗಿ ಶ್ರೀರಾಮನನ್ನು ಕರೆತರುವುದೇ ಯುಕ್ತವೆಂದು ತೋರುವುದು. ಎಲೈ ಮಹಾ

* ಮಹಾತ್ಮನಃ । ಭ್ರಾತೄಣಾಂಚ ಮಹಾಬಾಹೋ! ತವ ರಾಜಕುಲಸ್ಯಚ ॥ ೫೮ ॥ ತೌ ನಿರಾಶೌ ಮದರ್ಥಂತು ಶೋಕಸಂತಾಪಕರ್ಶಿತೌ । ಸಹಸರ್ವರ್ಕ್ಷಹರಿಭಿಸ್ತ್ಯಕ್ಷ್ಯತಃ ಪ್ರಾಣಸಂಗ್ರಹಂ ॥ ೫೯ ॥ ಭರ್ತೃಭಕ್ತಿಂ ಪುರಸ್ಕೃತ್ಯ ರಾಮಾದನ್ಯಸ್ಯ ವಾನರ! । ನಸ್ಪೃಶಾಮಿ ಶರೀರಂತು ಪುಂಸೋ ವಾನರಪುಂಗವ! ॥ ೬೦ ॥ ಯದಹಂ ಗಾತ್ರ ಸಂಸ್ಪರ್ಶಂ ರಾವಣಸ್ಯ ಬಲಾದ್ಗತಾ । ಅನೀಶಾ ಕಿಂಕರಿಷ್ಯಾಮಿ ವಿನಾಥಾ ವಿವಶಾ ಸತೀ

ಭಾವನಾದ, ರಾಘವಸ್ಯ - ಶ್ರೀರಾಮನ, ಜೀವಿತಂ - ಪ್ರಾಣವು, ಮಯಿ - ನನ್ನಲ್ಲಿ, ಆಯತ್ತಂ - ಅಧೀನವಾಗಿದೆ, ಭ್ರಾತೄಣಾಂ - ಅಣ್ಣತಮ್ಮಂದಿರಾದ ಭರತಾದಿಗಳ, ತವ - ನಿನ್ನ ಸಂಬಂಧವಾದ, ರಾಜಕುಲಸ್ಯಚ - ರಾಜನಾದ ಸುಗ್ರೀವನ ವಂಶದ, ಜೀವಿತಂ - ಪ್ರಾಣವು, ಮಯಿ - ನನ್ನಲ್ಲಿ, ಆಯತ್ತಂ - ಅಸಕ್ತವಾಗಿದೆ. ॥೫೮॥ ಕಿಂತು - ಆದರೆ, ಮದರ್ಥಂ - ನನಗೋಸ್ಕರ, ತೌ - ಆ ರಾಮ ಲಕ್ಷ್ಮಣರು, ನಿರಾಶೌ - ಆಶೆಯಿಲ್ಲದವರಾದಕಾರಣ, ಶೋಕ....ತೌ - ವ್ಯಸನದಿಂದ ಹುಟ್ಟಿದ ಜ್ವರದಿಂದ ಕೃಶರಾಗಿ, ಸರ್ವ....ಭಿಃ - ಸಮಸ್ತ ಕರಡಿಗಳಿಂದಲೂ, ವಾನರರಿಂದಲೂ ಕೂಡಿ, ಪ್ರಾಣಸಂಗ್ರಹಂ - ಪ್ರಾಣಸರ್ವಸ್ವವನ್ನು, ತ್ಯಕ್ಷ್ಯತಃ - ಬಿಡುವರು. ॥ ೫೯ ॥ ವಾನರಪುಂಗವ - ವಾನರ ಶ್ರೇಷ್ಠನೇ, ಭರ್ತೃಭಕ್ತಿಂ - ಪತಿಭಕ್ತಿಯನ್ನು, ಪುರಸ್ಕೃತ್ಯ - ಶ್ರೇಷ್ಠವಾಗಿ ಎಣಿಸಿ, ರಾಮಾತ್ - ಶ್ರೀರಾಮನಗಿಂತಲೂ, ಅನ್ಯಸ್ಯ - ಇತರನಾದ, ಪುಂಸಃ - ಪುರುಷನ, ಶರೀರಂ - ದೇಹವನ್ನು, ನಸ್ಪೃಶಾಮಿ - ಸ್ಪರ್ಶಿಸಲಾರೆನು. ॥ ೬೦ ॥ ಅಹಂ - ನಾನು, ರಾವಣಸ್ಯ ರಾವಣನ, ಅಂಗಸಂಸ್ಪರ್ಶಂ - ದೇಹಸಂಪರ್ಕವನ್ನು, ಬಲಾತ್ - ಬಲಾತ್ಕಾರದಿಂದ, ಗತೇತಿಯತ್ - ಹೊಂದಿದೆನೆಂಬುವದಾವದುಂಟೋ, ತತ್ - ಅದನ್ನು ಕುರಿತು, ಅನೀಶಾ - ಅಸಮರ್ಥಳಾದ, ಸತೀ- ಪತಿವ್ರತೆಯಾದ, (ಅಹಂ - ನಾನು,) ಕಿಂಕರಿಷ್ಯಾಮಿ - ಏನುಮಾಡುವೆನು. ॥ ೬೧ ॥ ರಾಮಃ - ಶ್ರೀರಾಮನು, ಇಹ- ಈಗ, ಸಬಾಂಧವಂ-ನಂಟರಿಂದೊಡಗೂಡಿರುವ, ದಶಗ್ರೀವಂ-ರಾವಣನನ್ನು,

ಬಾಹುವೇ! ಮಹಾ ಭುಜಪರಾಕ್ರಮಶಾಲಿಯಾದ ಶ್ರೀರಾಮನೂ, ಆತನ ತಮ್ಮನಾದ ಲಕ್ಷ್ಮಣಸ್ವಾಮಿಯೂ, ವಾನರೇಶ್ವರನಾದ ಸುಗ್ರೀವನೂ, ಉಳಿದ ವನಚರರೂ ನನ್ನ ಕ್ಷೇಮ ಸಮಾಚಾರವನ್ನು ನಿರೀಕ್ಷಿಸಿಯೇ ಪ್ರಾಣಗಳಿಂದಿರುವರಲ್ಲವೆ? ಹೀಗಿರಲು ನನಗಾವುದಾದರೂ ಅಪಾಯವು ಸಂಭವಿಸಿದುದಾದರೆ, ನನಗೋಸುಗ ಬಹಳವಾಗಿ ವ್ಯಸನಪಟ್ಟು ಶ್ರೀರಾಮ ಲಕ್ಷ್ಮಣರೂ, ಸಮಸ್ತ ವಾನರ ಭಲ್ಲೂಕ ಸೈನ್ಯಗಳವರೂ ಪ್ರಾಣಗಳನ್ನು ತೊರೆಯುತ್ತಾರೆ. ಎಲೈ ವಾನರನೇ! ಈ ಎಲ್ಲ ಕಾರಣಗಳೂ ಹಾಗಿರಲಿ; ಇನ್ನೊಂದು ವಿಶೇಷ ವಿಷಯವನ್ನು ಹೇಳುವೆನು ಕೇಳು. ಪತಿಪರಾಯಣೆಯಾದ ನಾನು ಪರಪುರುಷನ ದೇಹವನ್ನು ಎಂದಿಗೂ ಮುಟ್ಟುವುದಿಲ್ಲ. ॥ ೫೬–೬೦ ॥ "ಹಾಗಾದರೆ ನಿನ್ನನ್ನು ರಾವಣಾಸುರನು ಮುಟ್ಟಲಿಲ್ಲವೆ?" ಎಂದು ಕೇಳುವೆಯೇನೋ? ಅದು ಅನಿವಾರ್ಯವು; ಆಗ ನಾನು ಅದರಿಂದ ತಪ್ಪಿಸಿಕೊಳ್ಳಲು ಸಮರ್ಥಳಾಗಿರಲಿಲ್ಲ. ಅದೂ ಅಲ್ಲದೆ ನನ್ನನ್ನು ಕಾಪಾಡುವ ನನ್ನ ಸ್ವಾಮಿಯೂ ನನ್ನ ಬಳಿಯಿರಲಿಲ್ಲ. ನಾನೂ ಸಹ ಮೈಮೇಲೆ ಅರಿವಿಲ್ಲದಿದ್ದೆನು. ಆ ಸಮಯದಲ್ಲಿ ದುರಾತ್ಮ

* "ಅಮಿತೌಜಸಃ" ತಿ. ರಾ. ಪಾ.

॥೬೧॥ ಯದಿ ರಾಮೋ ದಶಗ್ರೀವಮಿಹ ಹತ್ವಾ ಸಬಾಂಧವಮ್ । ಮಾಮಿತೋ ಗೃಹ್ಯ ಗಚ್ಛೇತ ತತ್ತಸ್ಯ ಸದೃಶಂ ಭವೇತ್ ॥ ೬೨ ॥ ¶ ಶ್ರುತಾ ಹಿ ದೃಷ್ಟಾಶ್ಚ ಮಯಾ ಪರಾಕ್ರಮಾ ಮಹಾತ್ಮನಸ್ತಸ್ಯ ರಣಾವಮರ್ದಿನಃ । ನದೇವಗಂಧರ್ವಭುಜಂಗರಾಕ್ಷಸಾ ಭವಂತಿ ರಾಮೇಣ ಸಮಾ ಹಿ ಸಂಯುಗೇ ॥ ೬೩ ॥ ಸಮೀಕ್ಷ್ಯ ತಂ ಸಂಯತಿ ಚಿತ್ರಕಾರ್ಮುಕಂ ಮಹಾಬಲಂ ವಾಸವತುಲ್ಯವಿಕ್ರಮಮ್ । ಸಲಕ್ಷ್ಮಣಂ ಕೋ ವಿಷಹೇತ ರಾಘವಂ ಹುತಾಶನಂ ದೀಪ್ತಮಿವಾನಿಲೇರಿತಮ್ ॥ ೬೪ ॥ ಸಲಕ್ಷ್ಮಣಂ ರಾಘವಮಾಜಿಮರ್ದನಂ ದಿಶಾಗಜಂ ಮತ್ತಮಿವ ವ್ಯವಸ್ಥಿತಮ್ । ಸಹೇತ ಕೋ ವಾನರಮುಖ್ಯ! ಸಂಯುಗೇ ಯುಗಾಂತಸೂರ್ಯಪ್ರತಿಮಂ ಶರಾರ್ಚಿಷಮ್ ॥ ೬೫ ॥

ಹತ್ವಾ - ಕೊಂದು, ಇತಃ - ಈ ಸ್ಥಳದಿಂದ, ಮಾಂ - ನನ್ನನ್ನು, ಗೃಹ್ಯ - ಪರಿಗ್ರಹಿಸಿ, ಗಚ್ಛೇತಯದಿ- ಹೋಗುವನಾದರೆ, ತತ್ - ಅದು, ತಸ್ಯ - ಆ ಶ್ರೀರಾಮನಿಗೆ, ಸದೃಶಂ - ಸಮವಾದದ್ದು, ಭವೇತ್- ಆಗುವುದು. ॥೬೨॥ ರಣಾವಮರ್ದಿನಃ - ಯುದ್ಧದಲ್ಲಿ ಶತ್ರುಸಂಹಾರಕನಾದ, ಮಹಾತ್ಮನಃ - ಮಹಾಮನಸ್ವಿಯಾದ, ತಸ್ಯ - ಆ ಶ್ರೀರಾಮನ, ಪರಾಕ್ರಮಾಃ - ಪ್ರತಾಪಗಳು, ಶ್ರುತಾಹಿ - ಕೇಳಲ್ಪಟ್ಟಿರುವುವಷ್ಟೆ, ದೃಷ್ಟಾಶ್ಚ - ನೋಡಲ್ಪಟ್ಟವೆಯಷ್ಟೆ, ಸಂಯುಗೇ - ಕಾಳೆಗದಲ್ಲಿ, ದೇವ....ಸಾಃ - ದೇವತೆಗಳು, ಗಂಧರ್ವರು, ಸರ್ಪಗಳು, ರಾಕ್ಷಸರೂ, ರಾಮೇಣ - ಶ್ರೀರಾಮನೊಡನೆ, ಸಮಾಃ - ಸರಿಯಾದವರು, ನಭವಂತಿಹಿ - ಆಗುವುದಿಲ್ಲವಷ್ಟೆ. ॥ ೬೩ ॥ ಸಂಯತಿ - ಕಾಳೆಗದಲ್ಲಿ, ಚಿತ್ರಕಾರ್ಮುಕಂ - ಆಶ್ಚರ್ಯಕರವಾದ ಧನುಸ್ಸುಳ್ಳ, ಮಹಾಬಲಂ - ಮಹಾ ಬಲಿಷ್ಠನಾದ, ವಾಸ....ಮಂ - ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ಸಲಕ್ಷ್ಮಣಂ - ಲಕ್ಷ್ಮಣನೊಡಗೂಡಿದ, ಅನಿಲೇರಿತಂ - ವಾಯುವಿನಿಂದ ಪ್ರೇರಿತವಾದ, ದೀಪ್ತಂ-ಪ್ರಜ್ವಲಿಸುತ್ತಿರುವ, ಹುತಾ....ತಂ-ಅಗ್ನಿಯಂತಿರುವ, ತಂರಾಘವಂ- ಆ ಶ್ರೀರಾಮನನ್ನು, ಕಃ - ಯಾರುತಾನೆ, ವಿಷಹೇತ - ಸಹಿಸುವರು. ॥೬೪॥ ಹೇ ವಾನರಮುಖ್ಯ - ಎಲೈ ವಾನರಶ್ರೇಷ್ಠನೆ, ಆಜಿಮರ್ದನಂ - ಯುದ್ಧದಲ್ಲಿ ಶತ್ರುಮರ್ದನನಾಗಿ, ಮತ್ತಂ - ಮದವೇರಿದ, ದಿಶಾಗಜಮಿವ - ದಿಗ್ಗಜದೋಪಾದಿಯಲ್ಲಿ, ಸಂಯುಗೇ - ಕಾಳೆಗದಲ್ಲಿ, ವ್ಯವಸ್ಥಿತಂ - ನಿಂತಿರುವ,

ನಾದ ಆ ರಾವಣನು ನನ್ನನ್ನು ಎತ್ತಿಕೊಂಡು ಬಂದನು. ಆಗ ನಾನೇನುತಾನೆ ಮಾಡಬಲ್ಲೆನು? ಎಲೈ ಮಾರುತಿಯೇ! ಶ್ರೀರಾಮನು ಇಲ್ಲಿಗೈತಂದು ದಶಗ್ರೀವನನ್ನು ಬಂಧುಮಿತ್ರಸಹಿತವಾಗಿ ಸಂಹರಿಸಿ ನನ್ನನ್ನು ಕರೆದುಕೊಂಡು ಹೋದರೆ ಅದು ಅವನಿಗೆ ತಕ್ಕುದಾಗಿರುತ್ತದೆ. ಎಲೈ ಪ್ಲವಂಗಮನೇ! ರಣದುರ್ಮದನಾದ ಮಹಾತ್ಮನಾದ ಶ್ರೀರಾಮನ ಪರಾಕ್ರಮಾದಿಗಳನ್ನು ನಾನು ಕೇಳಿಯೂ ಇರುವೆನು. ನೋಡಿಯೂ ಇರುವೆನು. ಕಾಳೆಗದಲ್ಲಿ ನಿಂತ ಆತನಿಗೆ ದೇವತೆಗಳಾಗಲಿ, ಗಂಧರ್ವರಾಗಲಿ, ನಾಗರಾಗಲಿ, ರಾಕ್ಷಸರಾಗಲಿ ಸಮಾನರಾಗಲಾರರು. ॥೬೧–೬೩॥ ವಾಸವತುಲ್ಯಪರಾಕ್ರಮಿಯಾದ ಆತನು ಲಕ್ಷ್ಮಣಸಹಿತನಾಗಿ ಯುದ್ಧದಲ್ಲಿ ನಿಂತು, ವಾಯುವಿನಿಂದ ಉಜ್ವಲಗೊಳಿಸಿದ ಯಜ್ಞೇಶ್ವರನಂತೆ ಕನಲಿ ನಿಂತಿರುವಾಗ, ವಿವಿಧಗತಿಗಳುಳ್ಳ ಬಿಲ್ಲನ್ನು ಹಿಡಿದಿರುವಾಗ ಅದಾವನುತಾನೇ ಆತನನ್ನೆದುರಿಸಿಯಾನು? ಎಲೈ ವಾನರೋತ್ತಮನೇ! ಲಕ್ಷ್ಮಣಸಮೇತನಾಗಿ, ವಿರೋಧಿಗಳನ್ನು ಯುದ್ಧದಲ್ಲಿ ಸಂಹರಿಸುವವನಾಗಿ,

¶ "ಶ್ರುತಾಶ್ಚ" ತಿ. ಪಾ.

¶ ಸ ಮೇ ಹರಿಶ್ರೇಷ್ಠ ! ಸಲಕ್ಷ್ಮಣಂ ಪತಿಂ
ಸಯೂಥಪಂ ಕ್ಷಿಪ್ರಮಿಹೋಪಪಾದಯ ।
ಚಿರಾಯ ರಾಮಂ ಪ್ರತಿಶೋಕಕರ್ಶಿತಾಂ
ಕುರುಷ್ವ ಮಾಂ ವಾನರಮುಖ್ಯ ! ಹರ್ಷಿತಾಂ ॥ ೬೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತತ್ರಿಂಶಸ್ಸರ್ಗಃ

ಶರಾರ್ಚಿಷಂ - ಬಾಣಗಳೇ ಜ್ವಾಲೆಗಳಾಗುಳ್ಳ, ಯುಗಾಂ....ಮಂ - ಪ್ರಳಯಕಾಲದ ಸೂರ್ಯನಿಗೆ ಸಮಾನನಾದ, ಸಲಕ್ಷ್ಮಣಂ - ಲಕ್ಷ್ಮಣನಿಂದ ಕೂಡಿರುವ, ರಾಘವಂ - ಶ್ರೀರಾಮನನ್ನು, ಕಃ - ಯಾವ ಪುರುಷನು, ಸಹೇತ - ಸಹಿಸಿಯಾನು. ॥ ೬೫ ॥ ಹೇ ವಾನರಮುಖ್ಯ - ಎಲೈ ಕಪಿಶ್ರೇಷ್ಠನೇ, ಸಃತ್ವಂ - ಆ ನೀನು, ಮೇ - ನನಗೆ, ಪತಿಂ - ಗಂಡನಾದ, ಸಲಕ್ಷ್ಮಣಂ - ಲಕ್ಷ್ಮಣನಿಂದೊಡಗೂಡಿದ, ಸಯೂಥಪಂ - ಕಪಿಸೇನಾಧಿಪತಿಗಳಿಂದಕೂಡಿರುವ, ರಾಮಂ - ಶ್ರೀರಾಮನನ್ನು, ಇಹ - ಇಲ್ಲಿಗೆ, ಕ್ಷಿಪ್ರಂ-ಶೀಘ್ರವಾಗಿ, ಉಪಪಾದಯ-ಕರೆದುಕೊಂಡು ಬಂದುಬಿಡು, ಚಿರಾಯ-ಬಹಳ ಕಾಲದಿಂದ, ಶೋಕಕರ್ಶಿತಾಂ - ವ್ಯಸನದಿಂದ ಕ್ಷಯಿಸಿರುವ, ಮಾಂ - ನನ್ನನ್ನು, ಹರ್ಷಿತಾಂ - ಸಂತೋಷವುಳ್ಳವಳನ್ನಾಗಿ, ಕುರುಷ್ವ - ಮಾಡು. ॥೬೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತತ್ರಿಂಶಸ್ಸರ್ಗಃ.

ಮದಸಿದ ದಿಗ್ಗಜವನ್ನು ಹೋಲಿ, ಸೂರ್ಯಕಿರಣಗಳಂತಹ ಬಾಣಸಮೂಹಗಳೊಡಗೂಡಿ, ಪ್ರಳಯಕಾಲದ ದಿನಕರನಂತಿರುವ ಶ್ರೀರಾಮನನ್ನು ಯುದ್ಧದಲ್ಲಿ ಯಾವನುತಾನೆ ಜಯಿಸಲು ಸಮರ್ಥನಾದಾನು? ಆದುದರಿಂದ ಎಲೈ ವಾನರಶ್ರೇಷ್ಠನೇ! ನೀನಿಲ್ಲಿಂದ ಹಿಂತಿರುಗಿ ಹೋಗಿ ಲಕ್ಷ್ಮಣಸಮೇತನಾಗಿ, ವಾನರಸಮೂಹಗಳಿಗಧಿಪತಿಗಳಾದವರೊಡಗೂಡಿರುವ ನನ್ನ ಭರ್ತನನ್ನು ಜಾಗ್ರತೆಯಾಗಿ ಇಲ್ಲಿಗೆ ಕರೆದುಕೊಂಡು ಬರುವವನಾಗು ಎಲೈ ವಾನರಮುಖ್ಯನಾದ ಮಾರುತಿಯೇ! ಬಹುಕಾಲದಿಂದ ದುಃಖಪಟ್ಟು ಕೃಶಿಸಿರುವ ನನ್ನನ್ನು ಶ್ರೀರಾಮನೊಡಗೂಡಿಸಿ ನನಗೆ ಸಂತೋಷವನ್ನುಂಟುಮಾಡು" ಎಂದು ಹೇಳಿದಳು. ॥ ೬೪–೬೬ ॥

ಇಂತಿದು ಹನುಮತ್ಸೀತಾ ಸಂವಾದವೆಂಬ ಮೂವತ್ತೇಳನೆಯ
ಸರ್ಗವು ಸಮಾಪ್ತವಾದುದು.

¶ ಈ ಸರ್ಗದಲ್ಲಿ ಭಗವಂತನನ್ನು ಹೊಂದಲೋಸುಗ ಬೇರೊಂದು ಉಪಾಯವನ್ನು ಆಶ್ರಯಿಸುವುದು ಆತನ ಸ್ವರೂಪಕ್ಕೆ ವಿರುದ್ಧವಾದುದೆಂದೂ, ಭಗವಂತನೇ ಜೀವನು ತನ್ನನ್ನು ಹೊಂದುವುದಕ್ಕೂ ಉಪಾಯವೆಂದೂ ಸೂಚಿತವಾಗುತ್ತದೆ. ಇದೇ ಸಂಗತಿಯನ್ನೇ ಸೀತಾದೇವಿಯು ಆಂಜನೇಯನಿಗೆ ತಿಳಿಸಿರುವಳು. (ಗೋ)

ಸುಂದರಕಾಂಡೇ ಅಷ್ಟತ್ರಿಂಶಸ್ಸರ್ಗಃ

ತತ ಸ್ಸಕಪಿಶಾರ್ದೂಲ ಸ್ತೇನವಾಕ್ಯೇನ ಹರ್ಷಿತಃ । ಸೀತಾಮುವಾಚ ತಚ್ಛ್ರುತ್ವಾ ವಾಕ್ಯಂ ವಾಕ್ಯವಿಶಾರದಃ ||೧|| ಯುಕ್ತರೂಪಂ ತ್ವಯಾ ದೇವಿ! ಭಾಷಿತಂ ಶುಭದರ್ಶನೇ! । ಸದೃಶಂ ಸ್ತ್ರೀಸ್ವಭಾವಸ್ಯ ಸಾಧ್ವೀನಾಂ ವಿನಯಸ್ಯಚ ||೨|| ¶ ಸ್ತ್ರೀತ್ವಂ ನತು ಸಮರ್ಥಾಹಿ ಸಾಗರಂ ವ್ಯತಿವರ್ತಿತುಂ । ಮಾಮಧಿಷ್ಠಾಯ ‡ ವಿಸ್ತೀರ್ಣಂ ಶತಯೋಜನಮಾಯತಂ ||೩|| ದ್ವಿತೀಯಂ ಕಾರಣಂ ಯಚ್ಚ ಬ್ರವೀಷಿ

ತತಃ - ಬಳಿಕ, ವಾಕ್ಯವಿಶಾರದಃ - ಮಾತುಗಳಲ್ಲಿ ನಿಪುಣನಾದ, ಕಪಿಶಾರ್ದೂಲಃ - ವಾನರ ಶ್ರೇಷ್ಠನಾದ, ಸಃ - ಆ ಆಂಜನೇಯನು, ತತ್ವಾಕ್ಯಂ - ಆ ಸೀತೆಯ ಮಾತನ್ನು, ಶ್ರುತ್ವಾ - ಕೇಳಿ, ತೇನವಾಕ್ಯೇನ - ಆ ಮಾತಿನಿಂದ, ಹರ್ಷಿತಃ - ಸಂತೋಷಗೊಂಡವನಾಗಿ, ಸೀತಾಂ - ಸೀತೆಯನ್ನು ಕುರಿತು, ಉವಾಚ - ಹೇಳಿದನು. ||೧|| ಹೇ ಶುಭದರ್ಶನೇ - ಎಲೈ ಶುಭಕರವಾದ ದೃಷ್ಟಿಯುಳ್ಳ ವಳೇ, ಹೇ ದೇವಿ - ಓ ತಾಯೇ, ತ್ವಯಾ - ನಿನ್ನಿಂದ, ಸ್ತ್ರೀಸ್ವಭಾವಸ್ಯ - ಹೆಂಗುಸಿನ ಸ್ವಭಾವಕ್ಕೂ, ಸ್ವಾಧ್ವೀನಾಂ-ಪತಿವ್ರತೆಯರಿಗೂ, ವಿನಯಸ್ಯಚ-ನಮ್ರತೆಗೂ, ಸದೃಶಂ-ಅನುರೂಪವಾದ, ಯುಕ್ತ ರೂಪಂ - ಯೋಗ್ಯವಾದ ಮಾತು, ಭಾಷಿತಂ - ನುಡಿಯಲ್ಪಟ್ಟಿತು. ||೨|| ಮಾಂ - ನನ್ನಮೇಲೆ, ಅಧಿಷ್ಠಾಯ - ಕುಳಿತು, ವಿಸ್ತೀರ್ಣಂ - ವಿಶಾಲವಾದ, ಶತಯೋಜನಂ - ನೂರುಗಾವುದ, ಆಯತಂ - ದೀರ್ಘವಾದ, ಸಾಗರಂ - ಕಡಲನ್ನು, ವ್ಯತಿವರ್ತಿತುಂ - ದಾಟುವದಕ್ಕೆ, ಸ್ತ್ರೀ - ಹೆಂಗುಸಾದ, ತ್ವಂತು - ನೀನಾದರೆ, ನಸಮರ್ಥಾಹಿ - ಸಾಮರ್ಥ್ಯವಿಲ್ಲದವಳಷ್ಟೆ. ||೩|| ಹೇ ವಿನಯಾನ್ವಿತೇ - ಎಲೌ ವಿನಯಸಂಪನ್ನಳೇ, ಹೇ ಜಾನಕಿ - ಓ ಸೀತೆಯೇ, ರಾಮಾತ್ - ಶ್ರೀರಾಮನಿಗಿಂತಲೂ,

---

ಆ ಬಳಿಕ ವಾಕ್ಯವಿಶಾರದನೂ, ಕಪಿಶ್ರೇಷ್ಠನೂ ಆದ ಆಂಜನೇಯನು, ಸೀತಾ ದೇವಿಯ ಮಾತುಗಳನ್ನು ಕೇಳಿ ಸಂತುಷ್ಟಸ್ವಾಂತನಾಗಿ ಆಕೆಯನ್ನು ಕುರಿತು ಹೀಗೆಂದನು. "ಎಲೌ ವಿನಯಸಂಪನ್ನಳೇ! ನೀನು ಸ್ತ್ರೀತ್ವಕ್ಕೂ, ಪಾತಿವ್ರತ್ಯಕ್ಕೂ ಅನುರೂಪವಾದ ಮಾತು ಗಳನ್ನಾಡಿದೆ. ವಿನಯಕ್ಕೂ, ಸದಾಚಾರಸಂಪನ್ನತೆಗೂ ತಕ್ಕಂತೆ ನೀನಾಡಿದ ಮಾತುಗಳು ಯುಕ್ತವಾದುವು. ದೇವೀ! ನೀನು ವಿಶೇಷವಾಗಿ ವೃದ್ಧಿಗೊಂಡ ನನ್ನ ಭುಜವನ್ನೇರಿದರೂ, ಶತಯೋಜನ ವಿಸ್ತೀರ್ಣವಾದ ಈ ಸಾಗರವನ್ನು ದಾಟುವುದು ಹೆಂಗುಸಿಗೆ ಸಾಧ್ಯವಲ್ಲ ವೆಂಬುದು ನಿಜವಾದುದು. ಮೇಲಾಗಿ ಎರಡನೆಯ ಕಾರಣವಾಗಿ, "ಶ್ರೀರಾಮನನ್ನುಳಿದು

¶ "ಸ್ತ್ರೀತ್ವಾನ್ನತ್ವಂ" ತಿ. ಪಾ.

‡ "ಶತಯೋಜನ ವಿಸ್ತೀರ್ಣವಾದ ಸಮುದ್ರದಷ್ಟೇ ದೊಡ್ಡದಾಗಿ ಬೆಳದ ನನ್ನ ಬೆನ್ನಿನಮೇಲೇರಿದರೂ ನಿನ್ನ ಭೀರುತ್ವವು ದೂರವಾಗುವುದಿಲ್ಲವು, ಅಥವಾ—ನನ್ನ ಬೆನ್ನಿನಮೇಲೆ ಹತ್ತಿ ಕುಳಿತರೂ ನೀನು ಸ್ತ್ರೀತ್ವವನ್ನು ತೊರೆಯಲು ಎಂದಿಗೂ ಸಮರ್ಥಳಾಗಲಾರೆ" ಎಂದು ಇಲ್ಲಿನ ವಿಶೇಷಾರ್ಥವು. "ಸ್ತ್ರೀಯಾದ ನೀನು ಶತಯೋಜನ ವಿಸ್ತೀರ್ಣವಾದ ಸಾಗರವನ್ನು ನನ್ನ ಬೆನ್ನನ್ನೇರಿಯಾದರೂ ದಾಟಲು ಸಮರ್ಥಳಲ್ಲವು" (ಇಲ್ಲಿ ಸ್ತ್ರೀಗೆ ಭೀರುತ್ವವೂ ಒಂದು ಭೂಷಣವೆಂದು ಅಭಿಪ್ರಾಯ) (ಮ+ಗೋ)

ವಿನಯಾನ್ವಿತೇ! । ರಾಮಾದನ್ಯಸ್ಯ ನಾರ್ಹಾಮಿ ಸಂಸ್ಪರ್ಶಮಿತಿ ಜಾನಕಿ! ॥ ೪ ॥ ಏತತ್ತೇ ದೇವಿ! ಸದೃಶಂ ಪತ್ನ್ಯಾಸ್ತಸ್ಯ ಮಹಾತ್ಮನಃ । ಕಾಹ್ಯನ್ಯಾ ತ್ವಾಮೃತೇ ದೇವಿ! ಬ್ರೂಯಾದ್ವಚನಮೀದೃಶಂ ॥ ೫ ॥ ಶ್ರೋಷ್ಯತೇ ಚೈವ ಕಾಕುತ್ಸ್ಥಸ್ಸರ್ವಂ ನಿರವಶೇಷತಃ । ಚೇಷ್ಟಿತಂ ಯತ್ತ್ವಯಾ ದೇವಿ! ಭಾಷಿತಂ ಮಮಚಾಗ್ರತಃ ॥ ೬ ॥ ಕಾರಣೈರ್ಬಹುಭಿರ್ದೇವಿ! ರಾಮಪ್ರಿಯಚಿಕೀರ್ಷಯಾ । ಸ್ನೇಹಪ್ರಸ್ಕನ್ನಮನಸಾ ಮಯೈತತ್ಸಮುದೀರಿತಂ ॥೭॥ ಲಂಕಾಯಾ ದುಷ್ಪ್ರವೇಶತ್ವಾದ್ದುಸ್ತರತ್ವಾನ್ಮಹೋ

ಅನ್ಯಸ್ಯ - ಇತರನ, ಸಂಸ್ಪರ್ಶಂ - ಸಂಪರ್ಕವನ್ನು ಕುರಿತು, ನಾರ್ಹಾಮೀತಿ - ಸಹಿಸುವಳಲ್ಲವೆಂದು, ದ್ವಿತೀಯಂ - ಎರಡನೆಯದಾಗಿ, ಯತ್ಕಾರಣಂ - ಯಾವ ಕಾರಣವನ್ನು, ಬ್ರವೀಷಿ - ನುಡಿದೆಯೋ, ಹೇ ದೇವಿ - ಓ ತಾಯಿಯೇ, ತಸ್ಯಮಹಾತ್ಮನಃ - ಆ ಮಹಾನುಭಾವನಾದ ಶ್ರೀರಾಮನಿಗೆ, ಪತ್ನ್ಯಾಃ - ಧರ್ಮಪತ್ನಿಯಾದ, ತೇ - ನಿನಗೆ, ಏತತ್ - ಈ ಮಾತು, ಸದೃಶಂ - ಸಮವಾದದ್ದು, ಹೇ ದೇವಿ - ಎಲೌ ಸೀತಾದೇವಿಯೇ, ತ್ವಾಮೃತೇ - ನಿನ್ನನ್ನು ಬಿಟ್ಟರೆ, ಅನ್ಯಾ - ಮತ್ತೊಬ್ಬಳಾದ, ಕಾ - ಯಾವ ಸ್ತ್ರೀಯು ತಾನೆ, ಈದೃಶಂವಚನಂ - ಇಂತಹ ಮಾತನ್ನು, ಬ್ರೂಯಾತ್ - ಹೇಳಿಯಾಳು ॥ ೫ ॥ ಹೇ ದೇವಿ - ಓ ತಾಯಿಯೇ, ತ್ವಯಾ - ನಿನ್ನಿಂದ, ಮಮ - ನನ್ನ, ಅಗ್ರತಃ - ಸಮಕ್ಷದಲ್ಲಿ, ಯಚ್ಚೇಷ್ಟಿತಂ-ಯಾವ ಉದ್ಬಂಧನಾದಿರೂಪ ಕಾರ್ಯವು ನಡೆಯಿಸಲ್ಪಟ್ಟಿತೋ, ಯಚ್ಚ-ಯಾವ ಮಾತು, ಭಾಷಿತಂ - ಹೇಳಲ್ಪಟ್ಟಿತೋ, ತತ್ಸರ್ವಂ - ಆ ಸಮಸ್ತವೂ, ನಿರವಶೇಷತಃ - ಸಂಪೂರ್ಣವಾಗಿ, ಕಾಕುತ್ಸ್ಥಃ - ಶ್ರೀರಾಮನು, ಶ್ರೋಷ್ಯತೇ - ಕೇಳಿಸಲ್ಪಡುತ್ತಾನೆ. ॥ ೬ ॥ ಹೇ ದೇವಿ - ಓ ತಾಯೇ, ಬಹುಭಿಃಕಾರಣೈಃ - ಅನೇಕ ಹೇತುಗಳಿಂದ, ರಾಮ....ಯಾ - ಶ್ರೀರಾಮನಿಗೆ ಇಷ್ಟವನ್ನು ಮಾಡಲಿಚ್ಛೆಯಿಂದ, ಸ್ನೇಹ....ಸಾ-ಪ್ರೇಮದಿಂದ ಕರಗಿದ ಮನವುಳ್ಳ, ಮಯಾ-ನನ್ನಿಂದ, ಏತತ್ - ಈ ಮಾತು, ಸಮುದೀರಿತಂ - ಹೇಳಲ್ಪಟ್ಟಿತು. ॥ ೭ ॥ ಲಂಕಾಯಾಃ - ಲಂಕಾಪಟ್ಟಣವು, ದುಷ್ಪ್ರವೇಶತ್ವಾತ್ - ಹೊಗಲಶಕ್ಯವಾದ್ದರಿಂದಲೂ, ಮಹೋದಧೇಃ - ಕಡಲು, ದುಸ್ತರತ್ವಾತ್ - ದಾಟುವದಕ್ಕೆ ಅಶಕ್ಯ

ಇತರಾರನ್ನೂ ನಾನು ಮುಟ್ಟುವುದಿಲ್ಲ'' ಎಂದು ನೀನು ಹೇಳಿದುದು ಶ್ರೀರಾಮನ ನಚ್ಚಿನ ಮಡದಿಯಾದ ನಿನಗನುರೂಪವಾದುದು. ಮಹಾತ್ಮನಾದ ಶ್ರೀರಾಮನಿಗೆ ಭಾರ್ಯೆಯಾದ ನಿನ್ನ ಹೊರ್ತು ಮತ್ತಾವಳುತಾನೆ ಇಂತಹ ಮಾತನ್ನಾಡಿಯಾಳು? ಎಲೆ ತಾಯೇ! ನಾನು ಶ್ರೀರಾಮನ ಬಳಿಗೈದಿದಾಗ ನೀನು ರಾಮವಿರಹವನ್ನು ಸಹಿಸಲಾರದೆ ಪ್ರಾಣತ್ಯಾಗವನ್ನು ಮಾಡಲು ಸಿದ್ಧಳಾದುದು ಮೊದಲುಗೊಂಡು ನೀನೆಸಗಿದ ಸಮಸ್ತ ವ್ಯಾಪಾರಗಳನ್ನೂ, ನಿನ್ನನ್ನು ರಾವಣನು ತೃಣೀಕರಿಸಿ ಆಡಿದ ಮಾತುಗಳನ್ನೂ ಆತನಿಗೆ ಸವಿಸ್ತರವಾಗಿ ತಿಳಿಯಹೇಳುವೆನು. ॥೧-೬॥ ಎಲೌ ಸೀತಾದೇವಿಯೇ! ನಾನು ನಿನ್ನನ್ನೇ ಕೊಂಡುಹೋಗಿ ಶ್ರೀರಾಮನಿಗೊಪ್ಪಿಸುವುದಾಗಿ ಹೇಳಿದುದಕ್ಕಾಗಿ ನೀನು ನನ್ನನ್ನು ಮನ್ನಿಸಬೇಕು. ನಾನು ಹಾಗೆ ಹೇಳಲು ಕೆಲವು ಕಾರಣಗಳುಂಟು, ಆಲಿಸಿ ಕೇಳು; ನನಗೆ ಶ್ರೀರಾಮನಲ್ಲಿ ಅನಿರ್ವಚನೀಯವಾದ ಸ್ನೇಹವುಂಟು. ಹೀಗೆ ಸ್ನೇಹಪರವಶನಾದ ನಾನು ಹೇಗಾದರೂಮಾಡಿ ಆತನಿಗೆ ಪ್ರಿಯವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಹೀಗೆ ಹೇಳಿದೆನು. ಮೇಲಾಗಿ ಈ ಲಂಕಾನಗರವಾದರೋ ಯಾರಿಂದಲೂ ದುಷ್ಪ್ರವೇಶ್ಯವಾಗಿರುವುದು; ಅಪಾರಸಾಗರವಾದರೋ ಇತರರಿಂದ

ದಧೇಃ । ಸಾಮರ್ಥ್ಯಾದಾತ್ಮನಶ್ಚೈವ ಮಯೈತತ್ಸಮುದೀರಿತಮ್ ॥ ೮ ॥ ಇಚ್ಛಾಮಿ ತ್ವಾಂ ಸಮಾನೇತುಮದ್ಯೈವ ರಘುಬಂಧುನಾ । ಗುರುಸ್ನೇಹೇನ ಭಕ್ತ್ಯಾ ಚ ನಾನ್ಯಥೈತದುದಾಹೃತಮ್ ॥೯॥ ಯದಿ ನೋತ್ಸಹಸೇ ಯಾತುಂ ಮಯಾ ಸಾರ್ಧಮನಿಂದಿತೇ ! । ಅಭಿಜ್ಞಾನಂ ಪ್ರಯಚ್ಛ ತ್ವಂ ಜಾನೀಯಾದ್ರಾಘವೋಹಿ ತತ್ ॥ ೧೦ ॥ ಏವಮುಕ್ತಾ ಹನುಮತಾ ಸೀತಾ ಸುರಸುತೋಪಮಾ । ಉವಾಚ ವಚನಂ ಮಂದಂ ಬಾಷ್ಪಪ್ರಗ್ರಥಿತಾಕ್ಷರಮ್ ॥ ೧೧ ॥ "ಇದಂ ಶ್ರೇಷ್ಠಮಭಿಜ್ಞಾನಂ ಬ್ರೂಯಾಸ್ತ್ವಂ ತು

ವಾದ್ದರಿಂದಲೂ, ಆತ್ಮನಃ - ನನ್ನ, ಸಾಮರ್ಥ್ಯಾಚ್ಚಾಪಿ - ದೇಹಸಾಟವದಿಂದಲೂ, ಮಯಾ-ನನ್ನಿಂದ, ಏತತ್ - ನನ್ನ ಪೃಷ್ಠದಲ್ಲಿ ಕುಳಿತುಕೋ ಎಂಬ ಮಾತು, ಸಮುದೀರಿತಂ - ಹೇಳಲ್ಪಟ್ಟಿತು. ॥ ೮ ॥ ಅದ್ಯೈವ - ಈಗಲೇ, ರಘುಬಂಧುನಾ - ರಘುವಂಶೋತ್ಪನ್ನನಾದ ರಾಮನೊಡನೆ, ತ್ವಾಂ - ನಿನ್ನನ್ನು, ಸಮಾನೇತುಂ - ಕೂಡಿಸಲು, ಇಚ್ಛಾಮೀತಿ - ಅಪೇಕ್ಷಿಸುತ್ತೇನೆಂಬ, ಯತ್ - ಯಾವ ಮಾತುಂಟೋ, ಏತತ್ - ಈ ಮಾತು, ಗುರುಸ್ನೇಹೇನ - ಸ್ವಾಮಿಯಾದ ಶ್ರೀರಾಮನಲ್ಲಿನ ಪ್ರೀತಿಯಿಂದಲೂ, ಭಕ್ತ್ಯಾಚ - ಭಕ್ತಿಯಿಂದಲೂ, ಉದಾಹೃತಂ - ಹೇಳಲ್ಪಟ್ಟಿತು, ಅನ್ಯಥಾ - ಮತ್ತೊಂದು ರೀತಿಯಾಗಿ, ನೋದಾಹೃತಂ - ಹೇಳಲ್ಪಡಲಿಲ್ಲ. ॥ ೯ ॥ ಹೇ ಅನಿಂದಿತೇ - ಎಲೌ ಅನಘಳೇ, ಮಯಾ ಸಾರ್ಧಂ - ನನ್ನೊಡನೆಯೇ, ಯಾತುಂ - ಬರುವುದಕ್ಕೆ, ನೋತ್ಸಹಸೇಯದಿ - ಸಮ್ಮತಿಸದೆ ಇದ್ದರೆ, ರಾಘವಃ - ಶ್ರೀರಾಮನು, ಯತ್ - ಯಾವ ಗುರ್ತನ್ನು, ಜಾನೀಯಾತ್ - ತಿಳಿದಾನೋ, ತ್ವಂ - ನೀನು, ತದಭಿಜ್ಞಾನಂ - ಆ ಗುರ್ತನ್ನು, ಪ್ರಯಚ್ಛ - ಕೊಡು. ॥ ೧೦ ॥ ಏವಂ - ಈ ಪರಿಯಾಗಿ, ಹನುಮತಾ - ಆಂಜನೇಯನಿಂದ, ಉಕ್ತಾ - ಹೇಳಲ್ಪಟ್ಟ, ಸುರ....ಮಾ - ದೇವಕನ್ನಿಕೆಗೆ ಸಮಾನಳಾದ, ಸೀತಾ - ಸೀತಾದೇವಿಯು, ಬಾಷ್ಪ....ರಂ - ಕಂಬನಿಗಳಿಂದ ತಡೆಮಾಡಲ್ಪಟ್ಟ ವರ್ಣಗಳುಳ್ಳ, ವಚನಂ - ಮಾತನ್ನು, ಮಂದಂ - ಮೆಲ್ಲಗೆ, ಉವಾಚ - ಹೇಳಿದಳು. ॥ ೧೧ ॥ ತ್ವಂತು - ನೀನಾದರೆ, ಪುರಾ - ಪೂರ್ವದಲ್ಲಿ, ಚಿತ್ರಕೂಟಸ್ಯ - ಚಿತ್ರಕೂಟವೆಂಬ, ಶೈಲಸ್ಯ - ಬೆಟ್ಟದ, ಪೂರ್ವೋ

ದುಸ್ತರವಾಗಿರುವುದು. ನಾನು ಸಮುದ್ರವನ್ನೂ ದಾಟಿ ಲಂಕೆಯನ್ನೂ ಪ್ರವೇಶಿಸಿದ ಸಮರ್ಥನು. ಆದುದರಿಂದ ನಾನು ಆ ಕಾರ್ಯವನ್ನೂ ಮಾಡಲು ಸಾಮರ್ಥ್ಯವುಳ್ಳವನೆಂಬುದನ್ನು ತಿಳಿಸಲು ಹಾಗೆ ಹೇಳಿದೆನು. ನಿನ್ನನ್ನೀಗಲೇ ರಘುವಂಶೋದ್ಭವನಾದ ಶ್ರೀರಾಮನೊಡಗೂಡಿಸಲು ಬಯಸುವೆನೆಂದು ನಾನು ಹೇಳಿದುದೂ ಆತನಲ್ಲಿ ನನಗಿರುವ ಸ್ನೇಹದಿಂದಲೂ, ಗೌರವದಿಂದಲೂ ಅಲ್ಲದೆ ಮತ್ತೆ ಬೇರೆಯಲ್ಲವು. ಆದುದರಿಂದ ನೀನು ಬೇರೊಂದು ವಿಧವಾಗಿ ಭಾವಿಸಬೇಡ. ಎಲೌ ಅನಘಳೇ! ನೀನು ನನ್ನೊಡನೆ ಬರಲು ಒಪ್ಪದಿದ್ದರೂ ಚಿಂತೆಯಿಲ್ಲವು. ನಾನು ಇಲ್ಲಿಗೆ ಬಂದು ನಿನ್ನನ್ನು ನೋಡಿದೆನೆಂದು ಆತನು ತಿಳಿಯುವಂತೆ ಯಾವುದಾದರೊಂದು ಗುರ್ತನ್ನು ದಯಪಾಲಿಸು. ॥ ೩–೧೦ ॥ ಆಂಜನೇಯನಿಂತು ನುಡಿಯಲು ದೇವಕನ್ನಿಕೆಗೆ ಸಮಾನಳಾದ ಆ ಜಾನಕಿಯು, ತಾನು ಶ್ರೀರಾಮನೊಡನೆ ಏಕಾಂತದಲ್ಲಿದ್ದ ಸಮಯದಲ್ಲಿ ನಡೆದ ಒಂದು ವೃತ್ತಾಂತವನ್ನು ಸ್ಮರಣೆಗೆ ಬಂದು, ವ್ಯಸನಸಂತಪ್ತೆಯಾಗಿ ಕಂಬನಿಗರೆಯುತ್ತ ಗದ್ಗದಸ್ವರಭರಿತಳಾದ ಆ ಹನುಮಂತನನ್ನು ಕುರಿತು ಮೆಲ್ಲಮೆಲ್ಲನೆ ಹೀಗೆಂದಳು. "ಅಯ್ಯಾ ಮಾರುತಿಯೇ ! ನಿನಗೆ ಉತ್ತಮೋತ್ತಮವಾದೊಂದು ಗುರ್ತನ್ನು ಹೇಳುವೆನು,

ಮಮ ಪ್ರಿಯಂ । ಶೈಲಸ್ಯ ಚಿತ್ರಕೂಟಸ್ಯ ಪಾದೇ ಪೂರ್ವೋತ್ತರೇ ಪುರಾ ॥ ೧೨ ॥ ತಾಪಸಾಶ್ರಮವಾಸಿನ್ಯಾಃ ಪ್ರಾಜ್ಯಮೂಲಫಲೋದಕೇ । ತಸ್ಮಿನ್ ಸಿದ್ಧಾಶ್ರಮೇ ದೇಶೇ ಮಂದಾಕಿನ್ಯಾ ಹ್ಯದೂರತಃ ॥೧೩॥ ತಸ್ಯೋಪವನಷಂಡೇಷು ನಾನಾಪುಷ್ಪಸುಗಂಧಿಷು । ವಿಹೃತ್ಯ ಸಲಿಲಕ್ಲಿನ್ನಾ ತವಾಂಕೇ ಸಮುಪಾವಿಶಂ ॥ ೧೪ ॥ ತತೋ ಮಾಂಸಸಮಾಯುಕ್ತೋ ವಾಯಸಃ ಪರ್ಯತುಂಡಯತ್ । ತಮಹಂ ಲೋಷ್ಟಮುದ್ಯಮ್ಯ ವಾರಯಾಮಿ ಸ್ಮ ವಾಯಸಂ ॥ ೧೫ ॥ ದಾರಯನ್ ಸ ಚ ಮಾಂ ಕಾಕಸ್ತತ್ರೈವ ಪರಿಲೀ

ತ್ತರೇ - ಈಶಾನ್ಯಕೋಣದಲ್ಲಿರುವ, ಪಾದೇ - ಬೆಟ್ಟದ ಸಮೀಪದಲ್ಲಿ, ಮಂದಾಕಿನ್ಯಾಃ - ದೇವಗಂಗೆಗೆ, ಆದೂರತಃ - ಬಳಿಯಲ್ಲಿರುವ, ಪ್ರಾಜ್ಯ....ಕೇ - ಬಹಳವಾದ ಕಂದಮೂಲಗಳೂ, ಹಣ್ಣುಗಳೂ, ಉದಕವೂ ಉಳ್ಳ, ಸಿದ್ಧಾಶ್ರಮೇ - ತಪಸ್ಸಿದ್ಧರ ವಾಸಸ್ಥಾನಗಳುಳ್ಳ, ತಸ್ಮಿನ್ದೇಶೇ - ಆ ಪ್ರದೇಶದಲ್ಲಿ, ತಾಪ....ನ್ಯಾಃ - ಋಷ್ಯಾಶ್ರಮದಲ್ಲಿ ಇರುವ ನನ್ನ, ಶ್ರೇಷ್ಠಂ - ಉತ್ತಮವಾದ, ಇದಮಭಿಜ್ಞಾನಂ - ಈ ಗುರ್ತನ್ನು, ಮಮಪ್ರಿಯಂ - ನನ್ನ ಗಂಡನಾದ ಶ್ರೀರಾಮನನ್ನು ಕುರಿತು, ಬ್ರೂಯಾಃ - ಹೇಳು. ॥ ೧೨-೧೩ ॥ ಹೇ ರಾಮ - ಓ ಶ್ರೀರಾಮನೇ, ತಸ್ಯ - ಆ ಪರ್ವತದ, ನಾನಾ....ಷು - ನಾನಾಬಗೆಯ ಹೂವುಗಳಿಂದ ಪರಿಮಳಯುಕ್ತಗಳಾದ, ಉಪ....ಷು - ಬಳಿಯಲ್ಲಿರುವ ವನತಂಡಗಳಲ್ಲಿ, ವಿಹೃತ್ಯ - ವಿಹರಿಸಿ, ಸಲಿಲಕ್ಲಿನ್ನಾ - ಉದಕದಿಂದ ನೆನೆಸಲ್ಪಟ್ಟವಳಾಗಿ, ತವ - ನಿನ್ನ, ಅಂಕೇ - ತೊಡೆಯಲ್ಲಿ, ಸಮುಪಾವಿಶಂ - ಕುಳಿತಿದ್ದೆನು. ॥ ೧೪ ॥ ತತಃ - ಬಳಿಕ, ಮಾಂಸಸಮಾಸಕ್ತಃ - ಮಾಂಸಭಕ್ಷಣೆಯಲ್ಲಿ ಆಸಕ್ತವಾದ, ವಾಯಸಃ - ಕಾಗೆಯು, (ಸ್ತನಾಂತರೇ - ಕುಚಮಧ್ಯದಲ್ಲಿ) ಪರ್ಯತುಂಡಯತ್ - ಕಡಿಯಿತು, ಅಹಂ - ನಾನು, ಲೋಷ್ಟಂ - ಹೆಂಟೆಯನ್ನು, ಉದ್ಯಮ್ಯ - ಎತ್ತಿ, ತಂವಾಯಸಂ - ಆ ಕಾಗೆಯನ್ನು, ವಾರಯಾಮಿಸ್ಮ - ನಿವಾರಿಸಿದೆನಷ್ಟೆ. ॥ ೧೫ ॥ ಬಲಿಭೋಜನಃ - ಬಲಿಯನ್ನು ಭುಜಿಸುವ, ಸಕಾಕಶ್ಚ - ಆ ಕಾಗೆಯೂ, ಮಾಂ - ನನ್ನನ್ನು, ದಾರಯನ್ಸ - ಸೀಳುತ್ತಿರುವದಾಗಿ, ತತ್ರೈವ - ಆ ಸ್ತನಾಂತರದಲ್ಲಿಯೇ, ಪರಿಲೀಯತೇ - ಔತುಕೊಂಡಿತು, ಭಕ್ಷಾರ್ಥೀ - ತಿಂಡಿ

ನೀನು ಇದನ್ನು ನನ್ನ ಭರ್ತನಿಗೆ ತಿಳಿಸು. ಚಿತ್ರಕೂಟಕ್ಕೆ ಸೇರಿದ ಒಂದಾನೊಂದು ಉಪಪರ್ವತದಲ್ಲಿ ಈಶಾನ್ಯದಕಡೆಗೆ ಮಂದಾಕಿನೀ ನದಿಗೆ ಸಮೀಪವಾಗಿ, ಕಂದಮೂಲಫಲಾದಿಗಳಿಂದ ತುಂಬಿ ಜನಭರಿತವಾದ ಸಿದ್ಧಾಶ್ರಮಪ್ರದೇಶವೊಂದಿರುವುದು. ಹಿಂದೆ ನಾವು ಅಲ್ಲಿರುವಾಗ ಒಂದು ವೃತ್ತಾಂತವು ನಡೆಯಿತು. ಅದನ್ನೇ ನಾನೀಗ ನಿನಗೆ ತಿಳಿಸುವೆನು. ನೀನು ಈ ವೃತ್ತಾಂತವನ್ನು ನನ್ನ ಮಾತುಗಳಿಂದ ನನ್ನ ಭರ್ತನಾದ ಶ್ರೀರಾಮಚಂದ್ರನಿಗೆ ತಿಳಿಸುವವನಾನು. "ಎಲೈ ಪ್ರಿಯನೇ! ಆ ಚಿತ್ರಕೂಟಪರ್ವತದ ಪ್ರತ್ಯಂತಪರ್ವತದಲ್ಲಿ ಅರಳಿದ ವಿವಿಧ ಸುಗಂಧಕುಸುಮನಿಬಿಡಿತವಾದ ಉದ್ಯಾನದಲ್ಲಿ ಸಂಚರಿಸಿ ಆಯಾಸಗೊಂಡು, ಬೆವರಿದ ದೇಹವುಳ್ಳ ನಾನು ಆಯಾಸಪರಿಹಾರಕ್ಕಾಗಿ ನಿನ್ನ ತೊಡೆಯಮೇಲೆ ಕುಳಿತಿದ್ದೆನಷ್ಟೆ? ಆಗ ಒಂದು ಕಾಗೆಯು ಮಾಂಸದಾಶೆಯಿಂದ ನನ್ನ ಎದೆಯನ್ನು ಕುಕ್ಕಿತು. ಆಗ ನಾನು ಒಂದು ಮಣ್ಣುಹೆಂಟೆಯನ್ನು ಹಾಕಿ ಅದನ್ನು ಓಡಿಸುವುದಕ್ಕೆ ಹೋದೆನು.॥೧೧-೧೫॥ ಎಷ್ಟು ಹೆದರಿಸಿದರೂ ಆ ಕಾಗೆಯು ಆ ಸ್ಥಳವನ್ನು ಬಿಟ್ಟುಹೋಗದೆ ಅಲ್ಲಿಯೇ ಅಡಗಿಕೊಂಡು ಆಗಿಂದಾಗ್ಗೆ ಬಂದು ನನ್ನೆದೆಯನ್ನು ಕುಕ್ಕುತ್ತಲೇ ಇದ್ದಿತು. ಅದು ಮಾಂಸಾರ್ಥಿ

ಯತೇ । ನಚಾಪ್ಯುಪಾರಮನ್ಮಾಂಸಾದ್ಭಕ್ಷಾರ್ಥೀ ಬಲಿಭೋಜನಃ ॥ ೧೬ ॥ ಉತ್ಕರ್ಷಂತ್ಯಾಂ ಚ ರಶನಾಂ ಕ್ರುದ್ಧಾಯಾಂ ಮಯಿ ಪಕ್ಷಿಣಿ । ಸ್ರಸ್ಯಮಾನೇಚ ವಸನೇ ತತೋ ದೃಷ್ಟಾ ತ್ವಯಾ ಹ್ಯಹಂ ॥ ೧೭ ॥ ತ್ವಯಾಽಪಹಸಿತಾ ಚಾಽಹಂ ಕ್ರುದ್ಧಾ ಸಂಲಜ್ಜಿತಾ ತದಾ । ಭಕ್ಷಗೃಧ್ನೇನ ಕಾಕೇನ ದಾರಿತಾ ತ್ವಾಮುಪಾಗತಾ ॥ ೧೮ ॥ ಆಸೀನಸ್ಯ ಚ ತೇ ಶ್ರಾಂತಾ ಪುನರುತ್ಸಂಗಮಾವಿಶಂ । ಕ್ರುಧ್ಯಂತೀಚ ಪ್ರಹೃಷ್ಟೇನ ತ್ವಯಾಽಹಂ ಪರಿಸಾಂತ್ವಿತಾ ॥ ೧೯ ॥ ಬಾಷ್ಪಪೂರ್ಣಮುಖೀ ಮಂದಂ ಚಕ್ಷುಷೀ

ಯನ್ನಿಚ್ಛಿಸುತ್ತಿರುವದಾಗಿ, ಮಾಂಸಾಚ್ಚ - ಮಾಂಸದ ದೆಸೆಯಿಂದಲೂ, ನೋಪಾರಮತ್ - ವಿರಾಮವನ್ನೈದಲಿಲ್ಲ. ॥ ೧೬ ॥ ವಸನೇ - ಸೀರೆಯು, ಸ್ರಸ್ಯಮಾನೇ - ಜಾರಲು, ರಶನಾಂ - ಒಡ್ಯಾಣವನ್ನು, ಉತ್ಕರ್ಷಂತ್ಯಾಂ - ಸೆಳೆಯುತ್ತಿರುವ, ಪಕ್ಷಿಣಿ - ಕಾಗೆಯು ವಿಷಯದಲ್ಲಿ, ಮಯಿ - ನಾನು, ಕೃದ್ಧಾಯಾಂ - ಕುಪಿತಳಾಗಲು, ತತಃ - ಆಗ, ಅಹಂ - ನಾನು, ತ್ವಯಾ - ನಿನ್ನಿಂದ, ದೃಷ್ಟಾ - ನೋಡಲ್ಪಟ್ಟೆನು. ॥ ೧೭ ॥ ತದಾ - ಆ ಕಾಲದಲ್ಲಿ, ಭಕ್ಷಗೃಧ್ನೇನ - ಭುಜಿಸುವದರಲ್ಲಿ ಆಸಕ್ತವಾದ, ಕಾಕೇನ - ಕಾಗೆಯಿಂದ, ದಾರಿತಾ - ಕುಕ್ಕಲ್ಪಟ್ಟ, ಅಹಂ - ನಾನು, ತ್ವಯಾ - ನಿನ್ನಿಂದ, ಅಪಹಸಿತಾ-ಹಾಸ್ಯ ಮಾಡಲ್ಪಟ್ಟವಳಾಗಿ, ಲಜ್ಜಿತಾ-ನಾಚಿಕೆಯುಳ್ಳವಳಾದಕಾರಣ, ಕೃದ್ಧಾಚ ಕೋಪಗೊಂಡವಳೂ ಆಗಿ, ತ್ವಾಂ - ನಿನ್ನನ್ನು, ಉಪಾಗತಾ - ಹೊಂದಿದವಳಾದೆನು. ॥ ೧೮ ॥ ಪುನಃ - ಮತ್ತು, ಶ್ರಾಂತಾ-ಆಯಾಸಗೊಂಡ, ಅಹಂ - ನಾನು, ಕೃಧ್ಯಂತೀ - ಕುಪಿತಳಾಗಿ, ಆಸೀನಸ್ಯ - ಕುಳಿತಿರುವ, ತೇ - ನಿನ್ನ, ಉತ್ಸಂಗಂ - ಸಮೀಪವನ್ನು, ಆವಿಶಂ - ಹೊಂದಿದೆನು, ಪ್ರಹೃಷ್ಟೇನ - ಸಂತೋಷಗೊಂಡ, ತ್ವಯಾ - ನಿನ್ನಿಂದ, ಪರಿಸಾಂತ್ವಿತಾ - ಸಮಾಧಾನಗೊಳಿಸಲ್ಪಟ್ಟೆನು. ॥ ೧೯ ॥ ಹೇ ನಾಥ - ಓ ಕಾಂತನೇ, ವಾಯಸೇನ - ಕಾಗೆಯಿಂದ, ಪ್ರಕೋಪಿತಾ - ಕೋಪಿಷ್ಠಳಾಗಿ ಮಾಡಲ್ಪಟ್ಟ, ಅಹಂ - ನಾನು, ಬಾಷ್ಪ....ಖೀ - ಕಂಬನಿಗಳಿಂದ ತುಂಬಿದ ಮುಖವುಳ್ಳವಳಾದಕಾರಣ, ಮಂದಂ - ಮೆಲ್ಲಗೆ, ಚಕ್ಷುಷೀ-ನೇತ್ರಗಳನ್ನು, ಪರಿಮಾರ್ಜತೀ - ಒರಸಿಕೊಳ್ಳುತ್ತಿರುವಳಾಗಿ, ತ್ವಯಾ - ನಿನ್ನಿಂದ, ಲಕ್ಷಿತಾ - ನೋಡ

ಯಾಗಿ ಆ ಸ್ಥಳವನ್ನು ಬಿಟ್ಟು ಅತ್ತಿತ್ತ ಕದಲದೆ ನನ್ನ ಸ್ತನಮಾಂಸದಲ್ಲಿಯೇ ಕಣ್ಣಿಟ್ಟು ಕಾಯುತ್ತಿದ್ದಿತು. ಆ ಕಾಗೆಯು ಮತ್ತೆ ಮತ್ತೆ ಬಂದು ನನ್ನ ಬಟ್ಟೆಯನ್ನೆಳೆದು ಹಿಂಸಿಸುತ್ತಿರಲು, ನಾನದನ್ನೋಡಿಸಲು ಒಡ್ಯಾಣವನ್ನು ಬಿಗಿಮಾಡಿ, ಸೀರೆಯನ್ನೆಳೆದು ಕಟ್ಟಿ ಕೋಪದಿಂದಿರಲು ನೀನು ನನ್ನನ್ನು ನೋಡಿದೆಯಷ್ಟೆ? ನಾನು ಕೋಪಗೊಂಡು ಎದ್ದುನಿಂತು ಎಷ್ಟೆಷ್ಟು ಪ್ರಯತ್ನಪಟ್ಟು ಓಡಿಸಿದರೂ ಆ ದುಷ್ಟ ಕಾಕವು ಅತ್ತಿತ್ತ ಚಲಿಸಲಿಲ್ಲ. ಹೀಗೆ ನಾನದನ್ನು ನಿವಾರಿಸಲಾರದಾಗಿರುವುದನ್ನು ನೋಡಿ ನೀನು ನನ್ನನ್ನು ಹಾಸ್ಯಮಾಡಿದೆ. ಆಗ ನಾನು ಬಹಳವಾಗಿ ಲಜ್ಜೆಗೊಂಡೆನು. ಆ ಕಾಗೆಯಾದರೋ ಅಷ್ಟಕ್ಕೆ ಸುಮ್ಮನಾಗದೆ ಪುನಃ ನನ್ನನ್ನು ಕುಕ್ಕಲು ಬರಲು ನಾನದನ್ನು ಮತ್ತೊಮ್ಮೆ ಓಡಿಸಿ ನಿನ್ನ ಬಳಿಗೈದಿ ಬಹು ದುಃಖಿತೆಯಾಗಿ ನಿನ್ನ ತೊಡೆಯಮೇಲೆಯೇ ಕುಳಿತುಕೊಂಡೆನು. ಆಗ ಕಾಗೆಯಮೇಲೆ ಕೋಪಿಸಿಕೊಂಡಿದ್ದ ನನ್ನನ್ನು ಸಂತೋಷದಿಂದ ಪರಿಹಾಸ ಮಾಡುತ್ತಿದ್ದ ನೀನು ಒಳ್ಳುಡಿಗಳಿಂದ ಸಮಾಧಾನಪಡಿಸಿದೆ. ಎಲೈ ಪ್ರಾಣನಾಥನೇ! ಕಾಗೆಯಿಂದ ಅವಮಾನಿತಳಾಗಿಯೂ, ಮಹಾ ಕುಪಿತಳಾಗಿಯೂ, ಕಂಬನಿದುಂಬಿದ ಮುಖವುಳ್ಳವಳಾಗಿಯೂ ಇರುವ ನನ್ನನ್ನು ನೀನು ನೋಡು

ಪರಿಮಾರ್ಜತೀ । ಲಕ್ಷಿತಾಹಂ ತ್ವಯಾ ನಾಥ ವಾಯಸೇನ ಪ್ರಕೋಪಿತಾ ॥ ೨೦ ॥ ಪರಿಶ್ರಮಾತ್ಪ್ರಸುಪ್ತಾ ಚ ರಾಘವಾಂಕೇಪ್ಯಹಂ ಚಿರಂ। ಪರ್ಯಾಯೇಣ ಪ್ರಸುಪ್ತಶ್ಚ ಮಮಾಂಕೇ ಭರತಾಗ್ರಜಃ । ಸತತ್ರ ಪುನರೇವಾಥ ವಾಯಸಸ್ಸಮುಪಾಗಮತ್ ॥೨೧॥ ತತಸ್ಸುಪ್ತಪ್ರಬುದ್ಧಾಂ ಮಾಂ ರಾಮಸ್ಯಾಂಕಾತ್ಸಮುತ್ಥಿತಾಂ । ವಾಯಸಸ್ಸಹಸಾಽಗಮ್ಯ ವಿದದಾರ ಸ್ತನಾಂತರೇ ॥ ೨೨ ॥ ¶ ಪುನಃಪುನರಥೋತ್ಪತ್ಯ ವಿದದಾರ ಸಮಾಂ ಭೃಶಂ । ತತಸ್ಸಮುಕ್ಷಿತೋ ರಾಮೋ ಮುಕ್ತೈಶ್ಶೋಣಿತಬಿಂದುಭಿಃ ॥ ೨೩ ॥

ಲ್ಪಟ್ಟೆನು. ॥ ೨೦ ॥ ಅಹಂ - ನಾನು, ರಾಘವಾಂಕೇಪಿ - ಶ್ರೀರಾಮನ ತೊಡೆಯಲ್ಲಿಯೂ ಕೂಡ, ಪರಿಶ್ರಮಾತ್ - ಬಳಲಿಕೆಯಿಂದ, ಚಿರಂ - ಬಹುಕಾಲ, ಪ್ರಸುಪ್ತಾಚ - ಮಲಗಿ ಕೂಡಾ ಇದ್ದೆನು, ಭರತಾಗ್ರಜಃ - ಭರತನಿಗೆ ಅಣ್ಣನಾದ ಶ್ರೀರಾಮನು, ಪರ್ಯಾಯೇಣ - ಕ್ರಮವಾಗಿ, ಮಮಾಂಕೇಚ- ನನ್ನ ತೊಡೆಯಲ್ಲಿಯೂ ಕೂಡ, ಪ್ರಸುಪ್ತಃ - ಮಲಗಿದ್ದನು. ॥ ೨೧ ॥ ಅಥ - ಬಳಿಕ, ತತ್ರ - ಆ ಸ್ಥಳದಲ್ಲಿ, ಸವಾಯಸಃ - ಆ ಕಾಗೆಯು, ಪುನಃ - ಮತ್ತು, ಸಮುಪಾಗಮತ್ - ಬಂದಿತು, ತತಃ - ಬಳಿಕ, ಸುಪ್ತಪ್ರಬುದ್ಧಾಂ - ಮಲಗಿ ಎಚ್ಚರಗೊಂಡವಳಾದಕಾರಣ, ರಾಮಸ್ಯ - ಶ್ರೀರಾಮನ, ಅಂಕಾತ್ - ತೊಡೆಯಿಂದ, ಸಮುತ್ಥಿತಾಂ - ಮೇಲಕ್ಕೆದ್ದ, ಮಾಂ - ನನ್ನನ್ನು ಕುರಿತು, ವಾಯಸಃ - ಕಾಗೆಯು, ಸಹಸಾ - ಜಾಗ್ರತೆಯಾಗಿ, ಆಗಮ್ಯ - ಬಂದು, ಸ್ತನಾಂತರೇ - ಕುಚಮಧ್ಯದಲ್ಲಿ, ವಿದದಾರ - ಕುಕ್ಕಿತು. ॥ ೨೨ ॥ ಅಥ - ಅನಂತರದಲ್ಲಿ, ಸಃ - ಆ ಕಾಗೆಯು, ಪುನಃಪುನಃ - ಬಾರಿಬಾರಿಗೂ, ಉತ್ಪತ್ಯ - ಹಾರಿಬಂದು, ಮಾಂ - ನನ್ನನ್ನು, ಭೃಶಂ - ಬಹಳವಾಗಿ, ವಿದದಾರ - ಕುಕ್ಕಿತು, ತತಃ - ಬಳಿಕ, ಮುಕ್ತೈಃ - ಬಿಡಲ್ಪಟ್ಟ, ಶೋಣಿ....ಭಿಃ - ರಕ್ತಬಿಂದುಗಳಿಂದ, ರಾಮಃ - ಶ್ರೀರಾಮನು, ಸಮುಕ್ಷಿತಃ - ನೆನೆಸಲ್ಪಟ್ಟನು. ॥ ೨೩ ॥ ತತಃ - ಬಳಿಕ, ತೇನವಾಯಸೇನ - ಆ ಕಾಗೆಯಿಂದ,

ತ್ತಿದ್ದೆಯಲ್ಲವೆ?" ಎಂದು ನಾನು ಹೇಳಿದುದಾಗಿ ಈ ಗುರ್ತನ್ನು ಶ್ರೀರಾಮನಿಗೆ ತಿಳಿಸುವವನಾಗು. ॥೧೯–೨೦॥ ಎಲೈ ಮಾರುತಿಯೇ! ನಾನು ಆ ಕೆಟ್ಟ ಕಾಗೆಯನ್ನು ಓಡಿಸಿ ಓಡಿಸಿ ಬಹಳವಾಗಿ ಬಳಲಿದ್ದೆನಾದುದರಿಂದ ಆ ನನ್ನ ಪ್ರಿಯನ ತೊಡೆಯಮೇಲಿಯೇ ಬಹಳಹೊತ್ತು ಮಲಗಿ ನಿದ್ರಿಸಿದೆನು. ನಾನು ನಿದ್ರೆಯಿಂದೆಚ್ಚತ್ತಮೇಲೆ ಶ್ರೀರಾಮನು ನನ್ನ ತೊಡೆಯಮೇಲೆ ಮಲಗಿ ನಿದ್ರಿಸುತ್ತಿದ್ದನು. ಆ ಸಮಯದಲ್ಲಿ ಅದೇ ಕಾಗೆಯೇ ಅಲ್ಲಿಗೆ ಬಂದಿತು. ನಾನು ಶ್ರೀರಾಮನ ತೊಡೆಯಿಂದ ಎಚ್ಚರಗೊಂಡಿದ್ದುದನ್ನು ನೋಡಿ ಅದು ಮೊದಲಿನಂತೆಯೇ ತಟಕ್ಕನೆ ನನ್ನಮೇಲೆ ಬಿದ್ದು ನನ್ನ ಸ್ತನಾಂತಗಳನ್ನು ಕುಕ್ಕಿತು. ನನ್ನ ಪ್ರಿಯನಿಗೆ ನಿದ್ರಾಭಂಗವನ್ನುಂಟುಮಾಡಬಾರದೆಂದು ನಾನು ಆ ಕಾಗೆಯು ಕುಕ್ಕುತ್ತಿದ್ದರೂ ಹಾಗೆಯೇ ಸುಮ್ಮನೆ ಕುಳಿತಿದ್ದೆನು. ಆ ಕಾಗೆಯಾದರೋ ಪುನಃ ಪುನಃ ಹಾರಿಬಂದು ನನ್ನ ಸ್ತನಾಗ್ರಗಳನ್ನು ಕುಕ್ಕಿಕುಕ್ಕಿ ಗಾಯಮಾಡಿತು. ಆ ಗಾಯದಿಂದ ಸ್ರವಿಸಿದ ಕೆಲವು ರಕ್ತಬಿಂದುಗಳು ಮಲಗಿ ನಿದ್ರಿಸುತ್ತಿದ್ದ ನನ್ನ ಪ್ರಿಯನಮೇಲೆ ಬಿದ್ದುವು. ಈ ಪ್ರಕಾರವಾಗಿ ಆ ಕಾಗೆಯು

¶ ಇಲ್ಲಿ ಭಗವಂತನು, ತನ್ನ ರಕ್ಷಣೆಗಾಗಿ ತಾವೇ ಪ್ರಯತ್ನಿಸುವವರನ್ನು ಉಪೇಕ್ಷಿಸುವನೆಂದೂ, ಸ್ವರಕ್ಷಣೀಯವಿಷಯದಲ್ಲಿ ಸಮಸ್ತ ಭಾರವನ್ನೂ ತನ್ನ ಮೇಲೆಯೇ ಹೊರಿಸಿ ಅನನ್ಯಶರಣರಾಗಿರುವವರನ್ನು ಕೈಬಿಡದೆ ಸಂರಕ್ಷಿಸುವನೆಂದೂ ಸೂಚಿತವಾಗುತ್ತದೆ.

¶ ವಾಯಸೇನ ತತಸ್ತೇನ ಬಲವತ್ ಕ್ಲಿಶ್ಯಮಾನಯಾ । ಸಮಯಾ ಬೋಧಿತ ಶ್ರೀಮಾ ಸ್ಸುಖಸುಪ್ತಃ ಪರಂತಪಃ ॥ ೨೪ ॥ ಸ ಮಾಂ ದೃಷ್ಟ್ವಾ ಮಹಾಬಾಹು ರ್ವಿತುನ್ನಾಂ ಸ್ತನಯೋಸ್ತದಾ । ಆಶೀವಿಷಇವಕ್ರುದ್ಧ ಶ್ಶ್ವಸನ್ ವಾಕ್ಯಮಭಾಷತ ॥೨೫॥ "ಕೇನ ತೇ ನಾಗನಾಸೋರು ವಿಕ್ಷತಂ ವೈ ಸ್ತನಾಂತರಂ? । ಕಃ ಕ್ರೀಡತಿ ಸರೋಷೇಣ ಪಂಚ ವಕ್ತ್ರೇಣ ಭೋಗಿನಾ?" ॥ ೨೬ ॥ ವೀಕ್ಷಮಾಣಸ್ತತಸ್ತಂವೈ ವಾಯಸಂ ಸಮು

ಬಲವತ್ - ಅತಿಶಯವಾಗಿ, ಕ್ಲಿಶ್ಯಮಾನಯಾ - ಕ್ಲೇಶಪಡುತ್ತಿರುವ, ಮಯಾ - ನನ್ನಿಂದ, ಸಃ - ಆ ನಿರತಿಶಯ ಸೌಂದರ್ಯ ಪ್ರಸಿದ್ಧನಾದ, ಶ್ರೀಮಾನ್ - ಸಂಪದ್ಯುಕ್ತನಾದ, ಸುಖಸುಪ್ತಃ - ಸುಖವಾಗಿ ನಿದ್ರೆಗೈಯ್ಯುತ್ತಿರುವ, ಪರಂತಪಃ - ಶಯನಕಾಲದಲ್ಲಿಯೂ ಸಹ ಶತ್ರುನಾಶಕನಾದ ಶ್ರೀರಾಮನು, ಬೋಧಿತಃ - ಎಬ್ಬಿಸಲ್ಪಟ್ಟನು. ॥ ೨೪ ॥ ಮಹಾಬಾಹುಃ - ಮಹಾ ಭುಜಬಲಪರಾಕ್ರಮವುಳ್ಳ, ಸಃ - ಆ ಶ್ರೀರಾಮನು, ತದಾ - ಆ ಕಾಲದಲ್ಲಿ, ಸ್ತನಯೋಃ - ಕುಚಗಳಲ್ಲಿ, ವಿತುನ್ನಾಂ - ಸೀಳಲ್ಪಟ್ಟ, ಮಾಂ - ನನ್ನನ್ನು, ದೃಷ್ಟ್ವಾ - ಕಂಡು, ಕೃದ್ಧಃ - ಕುಪಿತವಾದ, ಆಶೀವಿಷಇವ - ಸರ್ಪದಂತೆ, ಶ್ವಸನ್ - ನಿಟ್ಟುಸಿರುಬಿಡುತ್ತ, ವಾಕ್ಯಂ-ಮಾತನ್ನು, ಅಭಾಷತ - ಹೇಳಿದನು. ॥೨೫॥ ಹೇ ನಾಗ....ರು - ಆನೆಯ ಸೊಂಡಿಲನಂತೆ ತೊಡೆಗಳುಳ್ಳವಳೇ, ತೇ - ನಿನ್ನ, ಸ್ತನಾಂತರಂ - ಕುಚಮಧ್ಯವು, ಕೇನ - ಯಾವನಿಂದ, ವಿಕ್ಷತಂ - ಘಾಯ ಮಾಡಲ್ಪಟ್ಟಿತು, ಸರೋಷೇಣ - ಕೋಪದಿಂದೊಡಗೂಡಿದ, ಪಂಚ ವಕ್ತ್ರೇಣ - ವಿಸ್ತಾರವಾದ ಮುಖವುಳ್ಳ, ಭೋಗಿನಾ - ಸರ್ಪದೊಡನೆ, ಕಃ - ಯಾವನು, ಕ್ರೀಡತಿ - ಆಡುವನು. ॥ ೨೬ ॥ ತತಃ - ಬಳಿಕ, ವೀಕ್ಷಮಾಣಃ - ಅತ್ತಿತ್ತ ನೋಡುತ್ತಿರುವನಾಗಿ, ತೀಕ್ಷ್ಣೈಃ - ಕ್ರೂರಗಳಾದ, ಸರುಧಿರೈಃ - ರಕ್ತದಿಂದೊಡಗೂಡಿದ, ನಖೈಃ - ಉಗುರುಗಳೊಡನೆ, ಮಾಂ - ನನ್ನ, ಅಭಿಮುಖಂ - ಎದುರಿಗೆ, ಸ್ಥಿತಂ - ಇರುವ, ತಂವಾಯಸಂವೈ - ಆ ಕಾಗೆಯನ್ನಾದರೆ, ಸಮುದೈಕ್ಷತ-

---

ನನ್ನನ್ನು ಪೀಡಿಸುತ್ತಿರಲು ನಾನುಗತ್ಯಂತರವನ್ನು ಕಾಣದೆ ನನ್ನತೊಡೆಯಮೇಲೆ ಸುಖ ವಾಗಿ ನಿದ್ರಿಸುತ್ತಿದ್ದ ಶತ್ರುತಾಪನನಾದ ನನ್ನ ಪ್ರಿಯನನ್ನು ಎಚ್ಚರಗೊಳಿಸಿದೆನು. ಆಗಲಾತನು ನನ್ನ ಸ್ತನಾಗ್ರದಲ್ಲಿರುವ ಗಾಯವನ್ನು ಕಂಡು, ಕಾಳಸರ್ಪದಂತೆ ಕನಲಿ ನಿಟ್ಟುಸಿರಿಡುತ್ತ, "ಪ್ರಿಯಳೇ! ಏನಿದು? ನಿನ್ನ ಸ್ತನಾಂತರವನ್ನು ಗಾಯ ಗೊಳಿಸದವನಾವನು? ಕನಲಿದ ಐದು ಹೆಡೆಯ ಸರ್ಪದೊಡನೆ ಸರಸವಾಡುವಂತೆ ಈ ಕ್ರೂರಕೃತ್ಯವನ್ನು ಮಾಡಿದವನಾರು? ಜಾಗ್ರತೆಯಾಗಿ ಹೇಳು!" ಎಂದು ನನ್ನನ್ನು ಕೇಳುತ್ತ ನಾಲ್ಕೂ ಕಡೆಗಳಿಗೂ ದೃಷ್ಟಿಸಿ ನೋಡಿದನು. ॥ ೨೧–೨೬ ॥ ಆಗ ರಕ್ತದಿಂದ ನೆನೆದ ಮೊನಚಾದ ಉಗುರುಗಳುಳ್ಳ ಆ ಕಾಗೆಯು ನನ್ನ ಸ್ತನಮಾಂಸಕ್ಕಾಗಿಯೇ ಕಾದಿ ರುವುದನ್ನು ನನ್ನ ಪ್ರಿಯನು ಕಂಡನು. ಇಂದ್ರಪುತ್ರನೇ ಆ ರೀತಿ ಕಾಗೆಯ ರೂಪದಿಂದ

¶ ಇಲ್ಲಿನ ಕೆಲವು ವಿಶೇಷಾರ್ಥಗಳು:—ಸಃ - ಸಮಸ್ತ ಜನರೂ ಅರಿತಿರುವ ಅಸಾಧಾರಣ ಸೌಂದರ್ಯದಿಂದ ಪ್ರಖ್ಯಾತನಾದ ಶ್ರೀರಾಮನು ನನ್ನಿಂದ ಎಚ್ಚರಗೊಳಿಸಲಾದನು. ಆತನು ಮಲಗಿರುವಾಗ ಆತನ ಸೌಂದರ್ಯ ವಿಶೇಷ ವನ್ನು ಅನುಭವಿಸುವ ಭಾಗ್ಯವನ್ನು ನಾನಾಗಿಯೇ ಹಾಳುಮಾಡಿಕೊಂಡೆನು. (ಲೋಕದಲ್ಲಿ ಯಾವನಾದರೂ ಸಂಚಾರ ದಶೆಯಲ್ಲಿ ಸುಂದರನಾಗಿಯೇ ಕಾಣಬಹುದು. ಆದರೆ ಮಲಗಿರುವಾಗ ದುರ್ಲಕ್ಷಣಾದಿ ದೋಷಗಳು ಆತನಲ್ಲಿ ಕಾಣುತ್ತವೆ. ಆದರೆ ನನ್ನ ಪ್ರಿಯನಾದ ಶ್ರೀರಾಮನಲ್ಲಿ ಹಾಗಲ್ಲ. ಆತನು ಮಲಗಿ ನಿದ್ರಿಸುತ್ತಿರುವಾಗಲೂ ಆತನ ಸೌಂದರ್ಯವು ಸ್ಪೃಹಣೀಯವೇ ಆಗಿರುತ್ತದೆ. (ಗೋ)

ದೃಕ್ಷತ । ನಖೈಸ್ಸರುಧಿರೈಸ್ತೀಕ್ಷ್ಣೈರ್ಮಾಮೇವಾಭಿಮುಖಂ ಸ್ಥಿತಂ ॥ ೨೭ ॥ ¶ ಪುತ್ರಃ ಕಿಲ ಸಶಕ್ರಸ್ಯ ವಾಯಸಃ ಪತತಾಂ ವರಃ । ಧರಾಂತರಗತಶ್ಶೀಘ್ರಂ ಪವನಸ್ಯಗತೌ ಸಮಃ ॥ ೨೮ ॥ ತತಸ್ತಸ್ಮಿನ್ಮಹಾಬಾಹುಃ ಕೋಪಸಂವರ್ತಿತೇಕ್ಷಣಃ । ವಾಯಸೇ ಕೃತವಾನ್ ಕ್ರೂರಾಂ ಮತಿಂ ಮತಿಮತಾಂ ವರಃ ॥ ೨೯ ॥ ಸದರ್ಭಂ ಸಂಸ್ತರಾದ್ಗೃಹ್ಯ ಬ್ರಾಹ್ಮೇಣಾಸ್ತ್ರೇಣ ಯೋಜಯತ್ । ಸದೀಪ್ತಇವ ಕಾಲಾಗ್ನಿರ್ಜಜ್ವಾಲಾಭಿಮುಖೋ ದ್ವಿಜಂ ॥ ೩೦ ॥ ಸತಂ ಪ್ರದೀಪ್ತಂ ಚಿಕ್ಷೇಪ ದರ್ಭಂ ತಂ ವಾಯಸಂ ಪ್ರತಿ । ತತಸ್ತಂ ವಾಯಸಂ ದರ್ಭಸ್ಸೋಂಬರೇಽನುಜಗಾಮಹ ॥ ೩೧ ॥ ಅನುಸೃಷ್ಟಸ್ತದಾ ಕಾಕೋ

ಕಂಡನು. ॥ ೨೭ ॥ ಶಕ್ರಸ್ಯ - ಇಂದ್ರನ, ಪುತ್ರಃ - ಮಗನಾದ, ಪತತಾಂ - ಪಕ್ಷಿಗಳೊಳಗೆ, ವರಃ - ಶ್ರೇಷ್ಠವಾದ, ಸವಾಯಸಃ - ಆ ಕಾಗೆಯು, ಪವನಸ್ಯ - ವಾಯುವಿನ, ಗತೌ - ಗಮನದಲ್ಲಿ, ಸಮಃ - ಸಮಾನನಾಗಿ, ಶೀಘ್ರಂ - ಬೇಗ, ಧರಾಂತರಗತಃಕಿಲ - ಭೂಮಿಯನ್ನು ಹೊಂದಿದನಷ್ಟೆ. ॥ ೨೮ ॥ ಮತಿಮತಾಂ - ಬುದ್ಧಿವಂತರಲ್ಲಿಗೆ, ವರಃ - ಶ್ರೇಷ್ಠನಾದ, ಮಹಾಬಾಹುಃ - ಮಹಾಭುಜಗಳುಳ್ಳ ಶ್ರೀರಾಮನು, ಕೋ....ಣಃ - ರೋಷದಿಂದ ತಿರುಗಿಸಲ್ಪಟ್ಟ ದೃಷ್ಟಿಯುಳ್ಳವನಾಗಿ, ತತಃ - ಬಳಿಕ, ತಸ್ಮಿನ್ ವಾಯಸೇ - ಆ ಕಾಗೆಯಲ್ಲಿ, ಕ್ರೂರಾಂ - ಕ್ರೂರವಾದ, ಮತಿಂ - ಬುದ್ಧಿಯನ್ನು, ಕೃತವಾನ್ - ಮಾಡಿದನು. ॥ ೨೯ ॥ ಸಃ - ಆ ಶ್ರೀರಾಮನು, ಸಂಸ್ತರಾತ್ - ಆಸನದದೆಶೆಯಿಂದ, ದರ್ಭಂ - ದರ್ಭೆಯ ಹುಲ್ಲನ್ನು, ಗೃಹ್ಯ-ತೆಗೆದುಕೊಂಡು, ಬ್ರಾಹ್ಮೇಣಅಸ್ತ್ರೇಣ-ಬ್ರಹ್ಮಾಸ್ತ್ರಮಂತ್ರದೊಡನೆ, ಯೋಜಯತ್-ಸೇರಿದನು, ಸಃ - ಆ ದರ್ಭೆಯ ಹುಲ್ಲು, ದೀಪ್ತಃ - ಉರಿಯುತ್ತಿರುವ, ಕಾಲಾಗ್ನಿರಿವ - ಪ್ರಳಯಾಗ್ನಿಯಂತೆ, ಅಭಿಮುಖಃ - ಎದುರಿಗೆ ಬರುತ್ತಿರುವದಾಗಿ, ದ್ವಿಜಂ - ಕಾಗೆಯನ್ನು, ಜಜ್ವಾಲ - ಸುಟ್ಟಿತು. ॥ ೩೦ ॥ ಸಃ - ಆ ಶ್ರೀರಾಮನು, ಪ್ರದೀಪ್ತಂ - ಉರಿಯುತ್ತಿರುವ, ತಂದರ್ಭಂ - ಆ ದರ್ಭೆಯನ್ನು, ತಂವಾಯಸಂಪ್ರತಿ - ಆ ಕಾಗೆಯನ್ನು ಕುರಿತು, ಚಿಕ್ಷೇಪ - ಬಿಸುಟನು, ತತಃ - ಬಳಿಕ, ಸದರ್ಭಃ - ಆ ದರ್ಭೆಯು, ತಂವಾಯಸಂ - ಆ ಕಾಗೆಯನ್ನು, ಅಂಬರೇ - ಅಂತರಿಕ್ಷದಲ್ಲಿ, ಅನುಜಗಾಮ - ಹಿಂಬಾಲಿಸಿತು. ॥ ೩೧ ॥ ತದಾ - ಆ ಕಾಲದಲ್ಲಿ, ಕಾಕಃ - ಕಾಗೆಯು, ಅನುಸೃಷ್ಟಃ - ಅನುಸರಿಲ್ಪಟ್ಟು

ಪಕ್ಷಿಗಳಿಗೆಲ್ಲಾ ಮೇಲೆನಿಸಿ ವಿನೋದಾರ್ಥವಾಗಿ ಭೂಮಿಗೆ ಬಂದಿದ್ದನಂತೆ! ಆ ಕಾಗೆಯಾದರೋ ವೇಗದಲ್ಲಿ ವಾಯುವಿಗೆ ಸಮಾನವಾಗಿದ್ದಿತು. ನನ್ನ ಪ್ರಿಯನು ಆ ಕಾಗೆಯನ್ನು ಕಂಡೊಡನೆಯೇ, ಕ್ರೋಧದಿಂದ ತಿರುಗುತ್ತಿರುವ ಕಣ್ಣಾಲಿಗಳುಳ್ಳವನಾಗಿ ಆ ಕ್ಷಣದಲ್ಲಿಯೇ ಅದನ್ನು ಕೊಲ್ಲಬೇಕೆಂದು ಮನಸ್ಸು ಮಾಡಿ ತಾನು ಕುಳಿತಿದ್ದ ದರ್ಭಾಸನದಿಂದ ಒಂದು ದರ್ಭೆಯನ್ನು ಸೆಳೆದುಕೊಂಡು ಅದನ್ನು ಬ್ರಹ್ಮಾಸ್ತ್ರಮಂತ್ರದಿಂದ ಅಭಿಮಂತ್ರಿಸಿ ಆ ಕಾಗೆಯಮೇಲೆ ಪ್ರಯೋಗಿಸಿದನು. ಆ ದರ್ಭೆಯಾದರೋ ಪ್ರಳಯಕಾಲದ ಅಗ್ನಿಯಂತೆ ಉರಿದು ಪ್ರಜ್ವಲಿಸುತ್ತಿದ್ದಿತು. ॥ ೨೭–೩೦ ॥ ಈ ಪ್ರಕಾರ ಬ್ರಹ್ಮಾಸ್ತ್ರ ಮಂತ್ರ ಪ್ರಭಾವದಿಂದ ಉರಿಯುತ್ತಿರುವ ಆ ದರ್ಭೆಯು ಆ ಕಾಗೆಯಮೇಲೆ ಪ್ರಯೋಗಿಸಲ್ಪಟ್ಟೊಡನೆಯೇ ಅದು ಆಕಾಶದಲ್ಲಿ ಆ ಕಾಗೆಯನ್ನು ಬೆನ್ನಟ್ಟಿ ಹೋಯಿತು. ಆ ಕಾಗೆಯು ಬ್ರಹ್ಮಾ

¶ ದೇವೇಂದ್ರನ ಮಗನಾದ ಜಯಂತನೇ ವಾಯಸರೂಪದಿಂದ ಬಂದಿದ್ದನೆಂದು, ಸೀತಾ ರಕ್ಷಣಾನಂತರದಲ್ಲಿ ಶ್ರೀರಾಮನೇ ಆಕೆಗೆ ತಿಳಿಸಿದುದಾಗಿ ತಿಳಿಯಬೇಕು. ಇಂದ್ರನಿಗೆ ವಾಯಸರೂಪನಾದ ಮತ್ತೊಬ್ಬ ಮಗನೂ ಉಂಟೆಂದು ಕೆಲವರು ಹೇಳುತ್ತಾರೆ. (ಗೋ)

ಜಗಾಮ ವಿವಿಧಾಂ ಗತಿಂ । ಲೋಕಕಾಮ ಇಮಂ ಲೋಕಂ ಸರ್ವಂ ವೈ ವಿಚಚಾರಹ ॥ ೩೨ ॥ ¶ ಸಪಿತ್ರಾಚ ಪರಿತ್ಯಕ್ತ ಸ್ಸುರೈಶ್ಚ ಸಮಹರ್ಷಿಭಿಃ । ತ್ರೀನ್ ಲೋಕಾನ್ಸಂಪರಿ

ದಾಗಿ, ವಿವಿಧಾಂ - ನಾನಾವಿಧವಾದ, ಗತಿಂ - ಗಮನವನ್ನು, ಜಗಾಮ-ಹೊಂದಿತು, ಲೋಕಕಾಮಃ - ರಕ್ಷಕನನ್ನಪೇಕ್ಷಿಸುವವನಾಗಿ, ಇಮಂ - ಈ, ಸರ್ವಂಲೋಕಂವೈ - ಲೋಕಗಳನ್ನೆಲ್ಲಾ, ವಿಚಚಾರ - ಸಂಚರಿಸಿದನು. ॥ ೩೨ ॥ ಸಃ - ಆ ಕಾಕಾಸುರನು, ಪಿತ್ರಾಚ - ತಂದೆಯಾದ ಇಂದ್ರನಿಂದಲೂ, ಸಮಹರ್ಷಿಭಿಃ-ಮಹರ್ಷಿಗಳಿಂದೊಡಗೂಡಿದ, ಸುರೈಶ್ಚ-ದೇವತೆಗಳಿಂದಲೂ, ಪರಿತ್ಯಕ್ತಃ-ಬಿಡಲ್ಪಟ್ಟವನಾಗಿ, ತ್ರೀನ್‌ಲೋಕಾನ್-ಮೂರುಲೋಕಗಳನ್ನೂ, ಸಂಪರಿಕ್ರಮ್ಯ-ಸಂಚರಿಸಿ, ತಮೇವ-ಆ ಶ್ರೀರಾಮ

ಸ್ತ್ರವು ತನನ್ನು ಬೆನ್ನಟ್ಟಿ ಬರುತ್ತಿರುವುದನ್ನು ಕಂಡು ತನ್ನ ಅಸುವನ್ನು ಕಾಪಾಡಿಕೊಳ್ಳಲೋಸುಗ, ಎಲ್ಲಿಯೂ ನಿಲ್ಲದೆ ಚಿತ್ರಗಮನವುಳ್ಳದಾಗಿ ಓಡುತ್ತ, ತನ್ನನ್ನು ಕಾಪಾಡುವ ರಕ್ಷಕನನ್ನು ಹುಡುಕುತ್ತ, ಈ ಲೋಕವೆಲ್ಲವನ್ನೂ ಸುತ್ತಿತು. ಆದರೇನು. ಆ ಕಾಗೆಯನ್ನು ರಕ್ಷಿಸುವವರಾರೂ ಇಲ್ಲದೇ ಹೋದರು. ಆ ಮೇಲೆ ಆ ಕಾಗೆಯು ಎಲ್ಲಿಯೂ ರಕ್ಷೆಯನ್ನು ಕಾಣದೆ ತನ್ನ ತಂದೆಯಾದ ದೇವೇಂದ್ರನಬಳಿಗೆ ಹೋಯಿತು. ತಂದೆಯಾದ ದೇವೇಂದ್ರನೂ ಅದನ್ನು ರಕ್ಷಿಸಲಾರದೆ ಕೈಬಿಟ್ಟನು. ದೇವತೆಗಳಾಗಲಿ, ಮಹರ್ಷಿಗಳಾಗಲಿ ಅದನ್ನು ರಕ್ಷಿಸಲಾರದೆ ಹೋದರು. ಈ ಪ್ರಕಾರವಾಗಿ ಆ ಕಾಗೆಯು ಮೂರು ಲೋಕಗಳಲ್ಲಿನ್ನೂ ಸುತ್ತಿ, ಎಲ್ಲಿಯೂ ತನ್ನ ರಕ್ಷಕನನ್ನು ಕಾಣದೆ, ಮರಳಿ ಶ್ರೀರಾಮನ ಬಳಿಗೇ ಬಂದು ಪ್ರದಕ್ಷಿಣ ನಮ

¶ ಈ ಶ್ಲೋಕದಲ್ಲಿನ ವಿಶೇಷಾರ್ಥಗಳು:—(ಸಃ) ಪುರುಷಕಾರಭೂತಳಾಗಿ, ಜಗದೇಕನಾಥನಾದ ಶ್ರೀರಾಮನ ಪ್ರಿಯಸತಿಯಾಗಿ, ಮಹಾ ಪತಿವ್ರತಾಶಿರೋಮಣಿಯಾದ ಜಗಜ್ಜನನಿ ಸೀತಾದೇವಿಯಲ್ಲಿಯೂ ಅಪರಾಧವನ್ನು ಮಾಡಿ ಮಹಾ ಪಾಪಿಷ್ಠನಾದ ಆ ಕಾಕಾಸುರನು (ಪಿತ್ರಾಚ ಪರಿತ್ಯಕ್ತಃ) ಬ್ರಹ್ಮಾಸ್ತ್ರಪಾತಕ್ಕೆ ಹೆದರಿ ಮೊದಲು ತನಗೆ ತಂದೆಯಾದ ದೇವೇಂದ್ರನಲ್ಲಿಗೆ ಹೋಗಿ ಮೊರೆ ಹೊಗಲಾಗಿ ತ್ರೈಲೋಕ್ಯಾಧಿಪತಿಯಾದ ಆತನೂ, ಜಗದೇಕನಾಥರಾದ ಸೀತಾರಾಮರಲ್ಲಿ ಅಪರಾಧವನ್ನು ಮಾಡಿದ ಆ ಕಾಕನು ತನ್ನ ಮಗನಾದರೂ ಅವನನ್ನು ಬುದ್ಧಿಪೂರ್ವಕವಾಗಿಯೇ ತೊರೆದುಬಿಟ್ಟನು. ("ತ್ಯಜೇದೇಕಂ ಕುಲಸ್ಯಾರ್ಥೇ ಗ್ರಾಮಸ್ಯಾರ್ಥೇ ಕುಲಂತ್ಯಜೇತ್") ಎಂದಿರುವುದು. ಇಲ್ಲಿ ಇಂದ್ರನು ಕೃತಾಪರಾಧಿಯಾದ ತನ್ನ ಮಗನಿಗೆ ಆಸರೆಯನ್ನು ಕೊಟ್ಟುದಾದರೆ ಸಮೂಲವಾಗಿ ತನ್ನ ನಾಶವನ್ನು ತಾನೇ ತಂದುಕೊಂಡಂತಾಗುವುದೆಂದು ಯೋಚಿಸಿ ಬುದ್ಧಿಪೂರ್ವಕವಾಗಿಯೇ ಅವನನ್ನು ಕೈಬಿಟ್ಟನು. ಅಲ್ಲದೆ ಶ್ರೀರಾಮನು ಮಹಾ ಪ್ರಭಾವಶಾಲಿಯು; ಮಹಾ ಪರಾಕ್ರಮವಂತನು. "ಇಂದ್ರೋ ಮಹೇಂದ್ರಸ್ಸುರನಾಯಕೋ ವಾ ತ್ರಾತುಂ ನಶಕ್ತಾ ಯುಧಿ ರಾಮವಧ್ಯಂ" ಎಂಬಂತೆ ರಾಮಶತ್ರುವನ್ನು ಸಂರಕ್ಷಿಸಲು ದೇವೇಂದ್ರನಿಂದಲೂ ಆಗುವುದಿಲ್ಲವೆಂದು ಇಲ್ಲಿ ಸೂಚಿತವಾಯಿತು. ದೇವೇಂದ್ರನೂ ಈ ವಿಷಯವನ್ನು ಬಲ್ಲವನಾಗಿಯೇ ತನ್ನ ಮಗನನ್ನು ಬುದ್ಧಿಪೂರ್ವಕವಾಗಿ ಕೈಬಿಟ್ಟಿರುವನು) ಅಥವಾ, (ಪರಿತ್ಯಕ್ತಃ) ಭಾರ್ಯಾ ಪುತ್ರಾದಿಗಳಿಂದಲೂ ತೊರೆಯಲಾದವನು. ಅಥವಾ, (ಪಿತ್ರಾಚ) ಇಲ್ಲಿನ ಚ ಕಾರದಿಂದ ಮಾತೆಯೂ ಪರಿತ್ಯಜಿಸಿದಳೆಂದು ಅರ್ಥವಾಗುತ್ತದೆ. ಲೋಕದಲ್ಲಿ ತಂದೆಯಾದವನು ಒಂದುವೇಳೆ ಕೃತಾಪರಾಧಿಯಾದ ಮಗನನ್ನು ತೊರೆದರೂ ತೊರೆಯಬಹುದು. ಆದರೆ ಒಂಬುತ್ತುತಿಂಗಳು ಹೊತ್ತು ಹೆತ್ತ ತಾಯಿಯು ಮಾತ್ರ ಮಗನು ಎಷ್ಟು ಅಪರಾಧಿಯಾಗಿದ್ದರೂ ಅವನನ್ನು ರಕ್ಷಿಸದಿರುವುದಿಲ್ಲ. ಹೀಗಿದ್ದರೂ ಆ ತಾಯಿಯೂ ಕೈಬಿಟ್ಟರೆ ಕಾಕಾಸುರನ ಅಪರಾಧದ ಮಹತ್ವವೆಷ್ಟೆಂಬುದೂ ಅನಿರ್ವರ್ಣನೀಯವಾದುದೆಂದೂ ಹೇಳಿದ ಹಾಗಾಯಿತು. ಮಾತಾಪಿತೃಗಳು ಪರಿತ್ಯಜಿಸಿದರೂ ಬಂಧುಬಳಗದವರಾದರೂ ಸಂರಕ್ಷಿಸಲಿಲ್ಲವೇ ? ಎಂದರೆ ಇತರರೂ ಏಕೆ. "ಸುರೈಶ್ಚ" ದೇವತೆಗಳೂ ಪರಿತ್ಯಜಿಸಿದರು (ಏಕೆ ?—"ಕಸ್ಯಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ" ಎಂದಿರುವಂತೆ ರೋಷಾವಿಷ್ಟನಾಗಿ ಯುದ್ಧದಲ್ಲಿ ನಿಂತ ಶ್ರೀರಾಮನಿಗೆ ಅದಾವ ದೇವತೆಯು ತಾನೆ ಹೆದರದಿದ್ದಾನು ?) ಹೋಗಲಿ, ಪೂರ್ವಜಾತೀಯರಾದ ದೇವತೆಗಳು ಕೈಬಿಟ್ಟರೂ ಈಗ ತಾನು ಧರಿಸಿರುವ ಪಕ್ಷಿ

ಕ್ರಮ್ಯ ತಮೇವ ಶರಣಂ ಗತಃ ॥ ೩೩ ॥ ¶ ಸ ತಂ ನಿಪತಿತಂ ಭೂಮೌ ಶರಣ್ಯಶ್ಶರಣಾಗತಂ । ವಧಾರ್ಹಮಪಿ ಕಾಕುತ್ಸ್ಥಃ ಕೃಪಯಾ ಪರ್ಯಪಾಲಯತ್ ॥ ೩೪ ॥ ನಶರ್ಮ ಲಬ್ಧ್ವಾ ಲೋಕೇಷು ತಮೇವ ಶರಣಂಗತಃ। ಪರಿದ್ಯೂನಂ ವಿಷಣ್ಣಂ ಚ ಸ ತ

ನನ್ನೇ, ಶರಣಂ-ರಕ್ಷಕನನ್ನಾಗಿ, ಗತಃ-ಹೊಂದಿದನು. ॥ ೩೩ ॥ ಸಃ - ಆ ಪ್ರಸಿದ್ಧನಾದ, ಶರಣ್ಯಃ-ಶರಣಾಗತರಕ್ಷಕನಾದ, ಕಾಕುತ್ಸ್ಥಃ - ಶ್ರೀರಾಮನು, ಶರಣಾಗತಂ - ಮತ್ತೊಬ್ಬ ರಕ್ಷಕನಿಲ್ಲದಕಾರಣ ನೀನೇಗತಿಯೆಂದು ಈ ರಾಮನನ್ನು ನಂಬಿಬಂದು, ಭೂಮೌ - ನೆಲದಲ್ಲಿ, ನಿಪತಿತಂ - ಬಿದ್ದಿರುವ, ತಂ - ಆ ಕಾಕಾಸುರನನ್ನು, ವಧಾರ್ಹಮಪಿ - ಸಂಹಾರಕ್ಕೆ ಯೋಗ್ಯನಾದರೂ, ಕೃಪಯಾ - ದಯೆಯಿಂದ, ಪರ್ಯಪಾಲಯತ್ - ಪಾಲಿಸಿದನು. ॥ ೩೪ ॥ ಲೋಕೇಷು - ಲೋಕಗಳಲ್ಲಿ, ಶರ್ಮ - ಸುಖವನ್ನು, ನಲಬ್ಧ್ವಾ - ಹೊಂದದೆ, ತಮೇವ - ಆ ಶ್ರೀರಾಮನನ್ನೇ, ಶರಣಂ - ಪಾಲಕನನ್ನಾಗಿ, ಗತಃ -

ಸ್ಕಾರವನ್ನು ಮಾಡಿ, "ಎಲೈ ಸ್ವಾಮಿಯೇ! ನೀನೇ ನನಗೆ ಶರಣ್ಯನು. ನನ್ನನ್ನು ಕಾಪಾಡು" ಎಂದು ಬೇಡಿಕೊಂಡಿತು. ಆಗ ಶರಣಾಗತವತ್ಸಲನಾದ ನನ್ನ ಪ್ರಿಯನು, ಶರಣು ಹೊಕ್ಕು ಭೂಮಿಯಮೇಲೆ ಬಿದ್ದಿರುವ ಆ ಕಾಗೆಯು ವಧಾರ್ಹವಾದರೂ ದಯೆಯಿಂದ ಅದನ್ನು ರಕ್ಷಿಸಿದನು. ॥ ೩೧-೩೪ ॥ ಆ ಕಾಗೆಯು ಸಮಸ್ತ ಲೋಕಗಳನ್ನು ಸುತ್ತಿ ಎಲ್ಲಿಯೂ ರಕ್ಷಣೆ

ಜಾತೀಯರಾದರೂ ನೆರವಾಗಲಿಲ್ಲವೇ? ಎಂದರೆ ಅವರೂ ಕೈಬಿಟ್ಟರೆಂದಭಿಪ್ರಾಯವು (ಪಕ್ಷಿಗಳಿಗೆಲ್ಲಕ್ಕೂ ಗರುಡನು ಸ್ವಾಮಿಯಾದುದರಿಂದಲೂ, ಶ್ರೀಮನ್ನಾರಾಯಣಮೂರ್ತಿಯು ಗರುಡವಾಹನನಾದುದರಿಂದಲೂ, ಶ್ರೀರಾಮಮೂರ್ತಿಯು ಶ್ರೀಮನ್ನಾರಾಯಣನ ಅವತಾರವಾದುದರಿಂದಲೂ ಆತನ ಪ್ರಿಯಪತ್ನಿಯಾಗಿ, ಲಕ್ಷ್ಮೀಸ್ವರೂಪಳಾದ ಸೀತಾದೇವಿಯಲ್ಲಿ ಅಪರಾಧಮಾಡಿ ಬಂದಿರುವ ಆ ಕಾಕಾಸುರನಿಗೆ ಪಕ್ಷಿಗಳೂ ಆಸರೆಯನ್ನಿತ್ತು ರಕ್ಷಿಸಲಿಲ್ಲವೆಂದು ಇಲ್ಲಿನ ಧ್ವನಿ). ಇವರಾರೂ ರಕ್ಷಿಸದಿದ್ದರೂ ಚಿಂತೆಯಿಲ್ಲ; ಸರ್ವಸಮದರ್ಶಿಗಳಾಗಿ, ದೀನಾನುಕಂಪಿಗಳಾದ ಮಹರ್ಷಿಗಳಾದರೂ ಇವನನ್ನು ಕಾಪಾಡಲಿಲ್ಲವೇ? ಎಂದರೆ, ಅವರೆಲ್ಲರೂ ವಿಷ್ಣುಭಕ್ತರಾದುದರಿಂದಲೂ, ಇವನು ವಿಷ್ಣುಸ್ವರೂಪಿ ಶ್ರೀರಾಮನ ದ್ವೇಷಿಯಾದುದರಿಂದಲೂ (ವಿಷ್ಣುದ್ವೇಷಿಯು ಚಂಡಾಲನೆಂದಿರುವುದರಿಂದ) ಇವನನ್ನು ಕೈಬಿಟ್ಟರೆಂದು ಭಾವವು. (ಪಕ್ಷಿಗಳಲ್ಲಿ ಕಾಗೆಯು ಚಂಡಾಲಜಾತೀಯವೆಂದಿರುವುದರಿಂದ ಅದು ತಮ್ಮ ಆಶ್ರಮದ್ವಾರವನ್ನು ಸೇರಿ ತಮ್ಮ ಆಶ್ರಮಪದವನ್ನೇ ಅಪವಿತ್ರಗೊಳಿಸದಿರಲೆಂದು ಅವರ ಭಾವ). ಹೀಗೆ ಪ್ರತಿಯೊಬ್ಬರಿಂದಲೂ ಪರಿತ್ಯಜಿಸಲ್ಪಟ್ಟ ಆ ಕಾಕಾಸುರನು ಪುನಃ ಪರಮ ದಯಾಳುವಾಗಿ, "ದೋಷೋಯದ್ಯಪಿ...ನತ್ಯಜೇಯಂ ಕದಾಚನ" ಎಂಬುದಾಗಿ ಹೇಳಿರುವ ಅಂತಹ ಸುಗುಣಮಣಿಯಾದ ಶ್ರೀರಾಮನಲ್ಲಿಗೇ ಬಂದು ಶರಣುಹೊಕ್ಕನು. (ನಿವಾಸವೃಕ್ಷಸ್ಸಾಧೂನಾಂ" ಅಲ್ಲವೆ ಶ್ರೀರಾಮನು ಆದಕ್ಕಾಗಿಯೇ ಅವನಲ್ಲಿಗೆ ಹಿಂತಿರುಗಿ ಬಂದು ಶರಣಿಟ್ಟನು) (ಗೋವಿಂದರಾಜರು)

¶ ಇಲ್ಲಿನ ವಿಶೇಷಾರ್ಥ:—ಆಶ್ರಿತರಾದವರನ್ನು ಸಂರಕ್ಷಿಸುವುದೇ ಸ್ವಭಾವವಾಗಿ ಉಳ್ಳ ನನ್ನ ಪ್ರಿಯನಾದ ಶ್ರೀರಾಮನು, ಇತರರಿಗೆ ಅಪಕೃತಿಯನ್ನೆಸಗುವುದೇ ಮುಖ್ಯವಾದ ಸ್ವಭಾವವುಳ್ಳ ಆ ಕಾಕನನ್ನು, ದೇವಜಾತೀಯನಾದ ತಾನು ಭೂಮಿಯನ್ನು ಮುಟ್ಟಬಾರದೆಂಬುದನ್ನೂ ಗಣಿಸದೆ ತನ್ನ ಪದತಲದಲ್ಲಿ ಬಿದ್ದಿರುವವನನ್ನು ತಂದೆಯು, ಮಗನನ್ನು ದಂಡಿಸುವಾಗ ಅವನು ತಾಯಿಯ ಪಾದದಲ್ಲಿ ಬೀಳುವಂತೆ ಜಗದೊಡೆಯನಾದ ತನ್ನ ಕ್ರೋಧಕ್ಕೆ ತುತ್ತಾಗಿ ತನಗೆ ಪತ್ನಿಯಾದ ಭೂದೇವಿಯನ್ನು ಮರೆಹೊಕ್ಕಂತಿರುವವನನ್ನು, ಸರ್ವಾವಸ್ಥೆಗಳಲ್ಲಿಯೂ ಶರಣು ಹೊಂದುವುದಕ್ಕೆ ಅರ್ಹನಾದವನನ್ನು ಶರಣಾಗತ ರಕ್ಷಣೆಯೇ ಮುಖ್ಯ ಧರ್ಮವಾಗಿ ಉಳ್ಳವನನ್ನು ತನಗೇ ಕೊಲ್ಲಬೇಕೆಂದು ತೋರಿದ್ದರೂ, ತನ್ನ ಕೃಪೆಗೆ ತಾನು ವಶನಾಗಿ ರಕ್ಷಿಸಿದನು. ಎಂದರೆ ನಮ್ಮಂತಹ ಸಾಮಾನ್ಯರೂ ಪ್ರಯತ್ನಿಸಿದ ಕಾರ್ಯವೂ ಕೂಡ ಪ್ರತಿಬಲಕರ್ಮದಿಂದ ನಿಂತುಹೋಗುವಂತೆ ಇಲ್ಲಿ ಜಗದೀಶ್ವರನ ಪ್ರಯತ್ನವೂ ಆತನ ಕೃಪಾಧೀನತೆಯಿಂದ ಪೂರ್ಣವಾಗಲಿಲ್ಲವೆಂದರ್ಥವು. (ಗೋ)

ಮಾಯಾಂತಮಬ್ರವೀತ್ ॥ ೩೫ ॥ ಮೋಘಂ ಕರ್ತುಂ ನಶಕ್ಯಂತು ಬ್ರಾಹ್ಮಮಸ್ತ್ರಂ ತದುಚ್ಯತಾಂ । ಹಿನಸ್ತು ದಕ್ಷಿಣಾಕ್ಷಿ ತ್ವಚ್ಛರ ಇತ್ಯಥ ಸೋಽಬ್ರವೀತ್ ॥೩೬॥ ತತಸ್ತಸ್ಯಾಕ್ಷಿ ಕಾಕಸ್ಯ ಹಿನಸ್ತಿಸ್ಮ ಸದಕ್ಷಿಣಂ । ದತ್ವಾ ಸ ದಕ್ಷಿಣಂ ನೇತ್ರಂ ಪ್ರಾಣೇಭ್ಯಃ ಪರಿರಕ್ಷಿತಃ ॥ ೩೭ ॥ ಸ ರಾಮಾಯ ನಮಸ್ಕೃತ್ವಾ ರಾಜ್ಞೇ ದಶರಥಾಯಚ । ವಿಸೃಷ್ಟಸ್ತೇನವೀರೇಣ ಪ್ರತಿಪೇದೇ ಸ್ವಮಾಲಯಂ ॥ ೩೮ ॥ ಮತ್ಕೃತೇ ಕಾಕಮಾತ್ರೇತು ಬ್ರಹ್ಮಾಸ್ತ್ರಂ ಸಮುದೀರಿತಂ । ಕಸ್ಮಾದ್ಯೋ ಮಾಂ ಹರತ್ತ್ವತ್ತಃ ಕ್ಷಮಸೇ ತಂ ಮಹೀ

ಹೊಂದಿದನು, ಸಃ - ಆ ಶ್ರೀರಾಮನು, ಪರಿದ್ಯೂನಂ - ಪರಿತಪ್ತನಾಗಿ, ವಿಷಣ್ಣಂಚ - ಸುಮ್ಮನೆಯೂ ಇರುವ, ಆಯಾಂತಂ - ಬರುತ್ತಿರುವ, ತಂ - ಆ ಕಾಕಾಸುರನನ್ನು ಕುರಿತು, ಅಬ್ರವೀತ್ - ಹೇಳಿದನು, ಬ್ರಾಹ್ಮಮಸ್ತ್ರಂತು - ಬ್ರಹ್ಮಾಸ್ತ್ರವಾದರೆ, ಮೋಘಂ - ವ್ಯರ್ಥವಾಗಿ, ಕರ್ತುಂ - ಮಾಡುವದಕ್ಕೆ, ನಶಕ್ಯಂ - ಆಗುವದಿಲ್ಲವು, ತತ್ - ಆ ಕಾರಣದಿಂದ, ಉಚ್ಯತಾಂ - ಹೇಳಲ್ಪಡಲಿ. ॥ ೩೬ ॥ ತ್ವತ್ - ನಿನ್ನ, ದಕ್ಷಿಣಾಕ್ಷಿ - ಬಲಗಣ್ಣನ್ನು, ಹಿನಸ್ತು - ಕತ್ತರಿಸಲಿ, ಅಥ - ಬಳಿಕ, ಚರ - ಸಂಚರಿಸು, ಇತಿ - ಇಂತೆಂದು, ಸಃ - ಆ ಶ್ರೀರಾಮನು, ತಸ್ಯಕಾಕಸ್ಯ - ಆ ಕಾಗೆಯ, ದಕ್ಷಿಣಮಕ್ಷಿ - ಬಲಗಣ್ಣನ್ನು, ಹಿನಸ್ತಿಸ್ಮ - ಛೇದಿಸಿದನು, ॥ ೩೭ ॥ ಸಃ - ಆ ಕಾಕಾಸುರನು, ದಕ್ಷಿಣಂನೇತ್ರಂ - ಬಲಭಾಗದ ಕಣ್ಣನ್ನು, ದತ್ವಾ - ಕೊಟ್ಟು, ಪ್ರಾಣೇಭ್ಯಃ - ಪ್ರಾಣಗಳಿಂದ, ಪರಿರಕ್ಷಿತಃ - ಪರಿಪಾಲಿಸಲ್ಪಟ್ಟನು. ॥ ೩೭ ॥ ಸಃ - ಆ ಕಾಕಾಸುರನು, ತೇನವೀರೇಣ - ಆ ಶೂರನಿಂದ, ವಿಸೃಷ್ಟಃ - ಬಿಡಲ್ಪಟ್ಟವನಾಗಿ, ರಾಮಾಯ - ಶ್ರೀರಾಮನಿಗೂ, ರಾಜ್ಞೇ - ಅರಸನಾದ, ದಶರಥಾಯಚ - ದಶರಥನಿಗೂ ಸಹ, ನಮಸ್ಕೃತ್ವಾ - ನಮಸ್ಕರಿಸಿ, ಸ್ವಮಾಲಯಂ - ತನ್ನ ಮನೆಯನ್ನು, ಪ್ರತಿಪೇದೇ - ಹೊಂದಿದನು. ॥ ೩೮ ॥ ಮತ್ಕೃತೇ - ನನ್ನ ನಿಮಿತ್ತವಾಗಿ, ಕಾಕಮಾತ್ರೇತು - ಸ್ವಲ್ಪ ವಿಷಯವಾದ ಕಾಗೆಯಲ್ಲಿಯೂ ಕೂಡ, ಬ್ರಹ್ಮಾಸ್ತ್ರಂ - ಬ್ರಹ್ಮಾಸ್ತ್ರವು, ಸಮುದೀರಿತಂ - ಬಿಡಲಾಯಿತು, ಹೇ ಮಹೀಪತೇ - ಓ ಭೂಪತಿಯೇ, ಯಃ-ಯಾವ ರಾವಣನು, ತ್ವತ್ತಃ-ನಿನ್ನ ದೆಶೆಯಿಂದ, ಮಾಂ-ನನ್ನನ್ನು, ಹರತ್-ಅಪಹರಿಸಿದನೋ, ತಂ - ಅಂತಹ ರಾವಣನನ್ನು, ಕಸ್ಮಾತ್ - ಯಾವ ಕಾರಣದಿಂದ, ಕ್ಷಮಸೇ - ಮನ್ನಿಸುವನು. ॥೩೯॥

ಯನ್ನೂ ಹೊಂದದೆ, ರಕ್ಷಕನನ್ನೂ ಕಾಣದೆ ಶ್ರೀರಾಮನಿದ್ದೆಡೆಗೇ ಬಂದಿದ್ದಿತಷ್ಟೆ! ಬಹಳವಾದ ಪರಿತಾಪವನ್ನು ಹೊಂದಿ ದುಃಖಿಸುತ್ತ ತನ್ನ ಬಳಿಗೈದಿದ ಆ ಕಾಗೆಯನ್ನು ನೋಡಿ ನನ್ನ ವಲ್ಲಭನಾದ ಶ್ರೀರಾಮನು, "ಎಲೈ ಕಾಕಾಸುರನೇ! ಬ್ರಹ್ಮನೇ ಅಧಿದೇವತೆಯಾಗಿಯುಳ್ಳ ಈ ಅಸ್ತ್ರವನ್ನು ವ್ಯರ್ಥಗೊಳಿಸುವುದಕ್ಕಾಗುವುದಿಲ್ಲ, ಆದುದರಿಂದ ಈಗ ಏನು ಮಾಡಲಾದೀತು?" ಎಂದು ಹೇಳಿದನು. ಆಗ ಕಾಕಾಸುರನು, "ಎಲೈ ಪ್ರಭುವೇ! ಈ ಬ್ರಹ್ಮಾಸ್ತ್ರವು ನನ್ನಬಲಗಣ್ಣನ್ನು ಆಹುತಿಯಾಗಿ ತೆಗೆದುಕೊಳ್ಳಲಿ" ಎಂದು ಹೇಳಿದನು. ಆಗ ಬ್ರಹ್ಮಾಸ್ತ್ರವು ಆ ವಾಯಸದ ಬಲಗಣ್ಣನ್ನು ನಾಶಗೊಳಿಸಿತು. ಹೀಗೆ ಆ ವಾಯಸವು ಆ ಬ್ರಹ್ಮಾಸ್ತ್ರಕ್ಕೆ ತನ್ನ ಬಲಗಣ್ಣನ್ನು ಒಪ್ಪಿಸಿ ಪ್ರಾಣದಿಂದ ಪಾರಾಯಿತು. ಬಳಿಕ ಆ ಕಾಗೆಯು ಶ್ರೀರಾಮನಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ, ಆತನ ಅಪ್ಪಣೆಯನ್ನು ಪಡೆದು ತನ್ನ ವಾಸಸ್ಥಾನಕ್ಕೆ ಹೊರಟುಹೋಯಿತು. ॥ ೩೫–೩೮ ॥ ಅಂತಹ ಆರ್ತತ್ರಾಣಪರಾಯಣನಾದ ಶ್ರೀರಾಮನು ಈಗ ನನ್ನ ವಿಷಯದಲ್ಲಿ ನಿರ್ದಯನಾಗಿರುವುದೇಕೆ?" ಈ ಪ್ರಕಾರವಾಗಿ ಆಕೆಯು ಚಿಂತಿಸಿ ಪುನಃ ಮಾರುತಿಯನ್ನು ಕುರಿತು, "ಎಲೈ ಮಾರುತಿಯೇ!

ಪತೇ! ॥ ೩೯ ॥ ¶ ಸ ಕುರುಷ್ವ ಮಹೋತ್ಸಾಹಃ ಕೃಪಾಂ ಮಯಿ ನರರ್ಷಭ! । ತ್ವಯಾ ನಾಥವತೀ ನಾಥ ಹ್ಯನಾಥೇವ ಹಿ ದೃಶ್ಯತೇ ॥೪೦॥ ಆನೃಶಂಸ್ಯಂ ಪರೋಧರ್ಮ ಸ್ತ್ವತ್ತ ಏವ ಮಯಾಶ್ರುತಂ । ಜಾನಾಮಿ ತ್ವಾಂ ಮಹಾವೀರ್ಯಂ ಮಹೋತ್ಸಾಹಂ ಮಹಾಬಲಂ ॥ ೪೧ ॥ ಅಪಾರಪಾರಮಕ್ಷೋಭ್ಯಂ ಗಾಂಭೀರ್ಯಾತ್ಸಾಗರೋಪಮಂ ।

ಹೇ ಪುರುಷರ್ಷಭ - ಓ ಪುರುಷಶ್ರೇಷ್ಠನೇ, ಸಃ - ಅಂತಹ ಪ್ರಸಿದ್ಧನಾದ, ಮಹೋತ್ಸಾಹಃ - ಮಹಾ ಪ್ರಯತ್ನವುಳ್ಳ ನೀನು, ಮಯಿ - ನನ್ನ ವಿಷಯದಲ್ಲಿ, ಕೃಪಾಂ - ದಯೆಯನ್ನು, ಕುರುಷ್ವ - ಮಾಡು, ಹೇ ನಾಥ - ಓ ನಾಥನೇ, ತ್ವಯಾ - ನಿನ್ನಿಂದ, ನಾಥವತಿ - ಪತಿವಂತಳಾದ ನಾನು, ಅನಾಥೇವ - ನಾಥನಿಲ್ಲದವಳಂತೆ, ದೃಶ್ಯತೇಹಿ - ಕಾಣುತ್ತೇನಷ್ಟೆ, ಆನೃಶಂಸ್ಯಂ - ಅಕ್ರೌರ್ಯವು, ಪರಃ - ಶ್ರೇಷ್ಠ ವಾದ, ಧರ್ಮಃ - ಧರ್ಮವು, (ಇತಿ - ಇಂತೆಂದು) ತ್ವತ್ತ ಏವ - ನಿನ್ನ ದೆಶೆಯಿಂದಲೇ, ಮಯಾ - ನನ್ನಿಂದ, ಶ್ರುತಃ - ಕೇಳಲ್ಪಟ್ಟಿತು. ॥ ೪೦-೪೧ ॥ ಮಹಾವೀರ್ಯಂ - ಮಹಾಪರಾಕ್ರಮವುಳ್ಳ, ಮಹೋತ್ಸಾಹಂ-ಮಹಾ ವ್ಯವಸಾಯವುಳ್ಳ, ಮಹಾಬಲಂ-ಮಹಾ ಸಾಮರ್ಥ್ಯವುಳ್ಳ, ಅಪಾರಪಾರಂ-

---

ನೀನು ನನ್ನ ಮಾತುಗಳಿಂದ ನನ್ನ ಪ್ರಭುವಿಗೆ ಹೀಗೆ ಹೇಳು ; " ಎಲೈ ಶ್ರೀರಾಮಚಂದ್ರನೇ! ಹಿಂದೆ ನೀನು ನನಗಾಗಿ, ಅತ್ಯಲ್ಪಜಂತುವಾದ ಆ ಕಾಗೆಯಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ನನ್ನನ್ನು ರಕ್ಷಿಸಿದೆಯಲ್ಲವೇ? ಅಂತಹ ನೀನು, ನನ್ನನ್ನು ನಿನ್ನ ಬಳಿಯಿಂದ ಅಪಹರಿಸಿ ಕೊಂಡು ಬಂದಿರುವ ದುರುಳ ರಾವಣನನ್ನು ಕ್ಷಮಿಸಿರುವುದೇಕೆ? ಎಲೈ ಪುರುಷೋತ್ತಮನೇ! ನಿನಗೆ ಅಪಕಾರವನ್ನು ಮಾಡಿದ ಕಾಗೆಯಲ್ಲಿಯೂ ದಯೆಯನ್ನು ತೋರಿ ಅದನ್ನು ಕಾಪಾಡಿ ಪ್ರಸಿದ್ಧಿಯನ್ನು ಪಡೆದ ನೀನು ಪರಮೋತ್ಸಾಹವುಳ್ಳವನಾಗಿ, ಏನೊಂದೂ ಪಾಪವನ್ನೇ ಮಾಡದಿರುವ ನಿನ್ನಪ್ರಿಯಸತಿಯಾದ ನನ್ನಲ್ಲಿ ದಯೆಯನ್ನು ತೋರಲಾರೆಯಾ ? ಎಲೈ ಪ್ರಾಣ ನಾಥನೇ! ಮಹಾತ್ಮನಾದ ನೀನು ನನಗೆ ನಾಥನಾಗಿದ್ದರೂ ನಾನು ಅನಾಥೆಯಂತೆ ಹೀಗೆ ದಿಕ್ಕು ಕಾಣದಿರುವುದು ಯೋಗ್ಯವೇ? ಕ್ರೂರತ್ವವೇ ಇಲ್ಲದೆ ಕೇವಲ ದಯಾಗುಣವನ್ನೊಳ ಗೊಂಡಿರುವುದೇ ಶ್ರೇಷ್ಠವಾದ ಧರ್ಮವೆಂದು ಹಿಂದೊಮ್ಮೆ ನೀನೇ ಹೇಳಿದ್ದೆಯಲ್ಲವೇ ; ಓ ರಾಮಚಂದ್ರ! ಹೀಗೆ ಹೇಳುತ್ತಿದ್ದ ನೀನೇ ಈಗ ಈ ರೀತಿ ನನ್ನ ವಿಷಯದಲ್ಲಿ ನಿರ್ದಯ ನಾಗಬಹುದೇ? ಎಲೈ ನಾಥನೇ! ನೀನು ಮಹಾ ವೀರ್ಯವಂತನೆಂಬುದನ್ನೂ, ಮಹೋ ತ್ಸಾಹಿಯೆಂಬುದನ್ನೂ, ಮಹಾ ಬಲನೆಂಬುದನ್ನೂ ನಾನು ಚೆನ್ನಾಗಿ ತಿಳಿದಿರುವೆನು. ಇದು

¶ ಇಲ್ಲನ ವಿಶೇಷಾರ್ಥಃ—ಇತರರ ದುಃಖಾವಸ್ಥೆಯನ್ನು ನೋಡಿ, " ನ ಸಹಾಮಹೇ " ಎಂದು ಹೇಳಿದ ಎಲೈ ಶ್ರೀರಾಮನೇ! ನೀನಿಲ್ಲಿಗೈತಂದು ದುರುಳರಾವಣನನ್ನೊಕ್ಕಲಿಕ್ಕಿ ನನ್ನನ್ನು ಕರೆದುಕೊಂಡು ಹೋಗುವವರೆಗೂ (ಮಹೋತ್ಸಾಹಃ) ಉತ್ಸಾಹದಿಂದದ್ದು, ಪರಮ ದುಃಖಿತೆಯಾಗಿರುವ ನನ್ನಲ್ಲಿ ದಯೆಯನ್ನು ತೋರು. ಪರದುಃಖಾಸಹಿಷ್ಣುತೆಯು ನಿನ್ನಲ್ಲುಂಟೆಂಬುದನ್ನು ಪ್ರಕಟಗೊಳಿಸು. (ನರವರೋತ್ತಮ) ಹೀಗೆ ನೀನು ಮಾಡದಿದ್ದಲ್ಲಿ ನೀನು ಪುರುಷೋತ್ತಮ ನಾದುದಕ್ಕೆ ಯಾವ ಫಲವುಂಟಾದಂತಾಯಿತು ; ನಿನ್ನ ಪುರುಷೋತ್ತಮತ್ವಕ್ಕೇ ಹಾನಿಯುಂಟಾಗುತ್ತದೆಯಲ್ಲವೇ? ನಿನ್ನ ಪುರುಷೋತ್ತಮತ್ವವನ್ನು ಕಾಪಾಡಿಕೊಳ್ಳುವುದಕ್ಕೋಸುಗವಾದರೂ ನೀನು ನನ್ನನ್ನು ಉದ್ಧಾರಮಾಡು. ಸ್ವಾಮಿಯೇ! ನೀನು ನನಗೆ ನಾಥನಾಗಿದ್ದರೂ, ಅನಾಥೆಯಂತಿರುವ ನನ್ನನ್ನು ಉದ್ಧಾರಮಾಡುವುದು ಯೋಗ್ಯವಲ್ಲವೇ? ನೀನು ಆನೃಶಂಸ್ಯವೇ ಪರಮ ಧರ್ಮವಾಗಿ ಉಳ್ಳವನಲ್ಲವೇ! (ಗೋ)

ಭರ್ತಾರಂ ಸಸಮುದ್ರಾಯಾ ಧರಣ್ಯಾ ವಾಸವೋಪಮಂ ॥ ೪೨ ॥ ಏವಮಸ್ತ್ರವಿದಾಂ ಶ್ರೇಷ್ಠ ಸ್ಸತ್ಯವಾನ್ಬಲವಾನಪಿ । ಕಿಮರ್ಥಮಸ್ತ್ರಂ ರಕ್ಷಸ್ಸು ನಯೋಜಯತಿ ರಾಘವಃ ॥ ೪೩ ॥ ನನಾಗಾ ನಾಪಿ ಗಂಧರ್ವಾ ನಾಸುರಾ ನಮರುದ್ಗಣಾಃ । ರಾಮಸ್ಯ ಸಮರೇ ವೇಗಂ ಶಕ್ತಾಃ ಪ್ರತಿಸಮಾಧಿತುಂ ॥ ೪೪ ॥ ತಸ್ಯ ವೀರ್ಯವತಃ ಕಶ್ಚಿದ್ಯದಸ್ತಿ ಮಯಿ ಸಂಭ್ರಮಃ । ಕಿಮರ್ಥಂ ನಶರೈ ಸ್ತೀಕ್ಷ್ಣೈಃ ಕ್ಷಯಂ ನಯತಿ ರಾಕ್ಷಸಾನ್ ॥ ೪೫ ॥

ಹೊಂದಲಶಕ್ಯವಾದ ಪಾರಕ್ರಮವುಳ್ಳ, ಅಕ್ಷೋಭ್ಯಂ - ಕ್ಷೋಭಿಸಲಶಕ್ಯವಾದ, ಗಾಂಭೀರ್ಯಾತ್ - ಗಂಭೀರತೆಯಿಂದ, ಸಾಗರೋಪಮಂ - ಸಮುದ್ರಸಮಾನವಾದ, ಸಸಮುದ್ರಾಯಾಃ - ಕಡಲಿನಿಂದ ಕೂಡಿದ, ಧರಣ್ಯಾಃ-ಭೂಮಿಗೆ, ಭರ್ತಾರಂ-ಪತಿಯಾದ, ತ್ವಾಂ-ನಿನ್ನನ್ನು, ವಾಸವೋಪಮಂ-ಇಂದ್ರ ಸಮಾನನನ್ನಾಗಿ, ಮನ್ಯೇ - ಭಾವಿಸುತ್ತೇನೆ. ॥ ೪೨ ॥ ಏವಂ - ಈಪರಿಯಾಗಿ, ಅಸ್ತ್ರವಿದಾಂ - ಅಸ್ತ್ರಜ್ಞರೊಳಗೆ, ಶ್ರೇಷ್ಠಃ - ಉತ್ತಮನಾದ, ಸತ್ಯವಾನ್ - ಸತ್ಯವಂತನಾದ, ಬಲವಾನಪಿ - ಬಲ ವಂತನೂ ಆದ, ರಾಘವಃ - ಶ್ರೀರಾಮನು, ಅಸ್ತ್ರಂ - ಅಸ್ತ್ರವನ್ನು, ರಕ್ಷಸ್ಸು - ರಕ್ಕಸರ ವಿಷಯ ದಲ್ಲಿ, ಕಿಮರ್ಥಂ - ಏತಕ್ಕೋಸ್ಕರ, ನಯೋಜಯತಿ - ಸಂಧಾನಮಾಡುವದಿಲ್ಲ. ॥ ೪೩ ॥ ಸಮರೇ - ಕಾಳಗದಲ್ಲಿ, ರಾಮಸ್ಯ- ಶ್ರೀರಾಮನ, ವೇಗಂ - ಅಸ್ತ್ರವೇಗವನ್ನು, ಪ್ರತಿಸಮಾಧಿತುಂ - ತಡೆಯಲು, ನಾಗಾಃ - ಸರ್ಪಗಳು, ನಶಕ್ತಾಃ - ಸಮರ್ಥರಲ್ಲ, ಗಂಧರ್ವಾಅಪಿ - ದೇವಗಾಯಕರೂ, ನ - ಶಕ್ತರಲ್ಲ, ಅಸುರಾಃ - ರಕ್ಕಸರು, ನ - ಸಮರ್ಥರಲ್ಲ, ಮರುದ್ಗಣಾಃ - ದೇವಸಮೂಹಗಳೂ ಸಹ, ನಶಕ್ತಾಃ - ಸಮರ್ಥರಲ್ಲ. ॥ ೪೪ ॥ ವೀರ್ಯವತಃ - ಪರಾಕ್ರಮಿಯಾದ, ತಸ್ಯ - ಆ ಶ್ರೀರಾಮನ, ಕಶ್ಚಿತ್ - ಏನಾದರೂ, ಸಂಭ್ರಮಃ - ತ್ವರೆಯು, ಮಯಿ - ನನ್ನಲ್ಲಿ, ಅಸ್ತಿಯದಿ ಇದ್ದರೆ, ಕಿಮರ್ಥಂ - ಏತಕ್ಕೋಸ್ಕರ, ರಾಕ್ಷಸಾನ್ - ರಕ್ಕಸರನ್ನು, ತೀಕ್ಷ್ಣೈಃ - ಕ್ರೂರಗಳಾದ, ಶರೈಃ - ಬಾಣಗಳಿಂದ, ಕ್ಷಯಂ - ನಾಶವನ್ನು, ನಾನಯತಿ - ಹೊಂದಿಸುವುದಿಲ್ಲ. ॥ ೪೫ ॥ ವೀರಃ - ಶೂರನಾದ,

---

ಮಾತ್ರವಲ್ಲದೆ ನೀನು ಅನಂತಕಲ್ಯಾಣಗುಣಗಳುಳ್ಳವನೆಂಬುದನ್ನೂ ನಾನು ಬಲ್ಲೆನು. ನಿನ್ನ ಮನಸ್ಸು ಎಂತಹ ದುರ್ಭರ ಕಷ್ಟಕಾಲದಲ್ಲಿಯೂ ಸುಸ್ಥಿರವಾದುದೆಂಬುದನ್ನೂ ತಿಳಿದಿರುವೆನು. ನಿನ್ನ ಸಮುದ್ರೋಪಮವಾದ ಗಾಂಭೀರ್ಯವೂ ನನಗೆ ತಿಳಿದಿರುವುದು. ವಾಸವೋಪಮನಾಗಿ ಚತುಸ್ಸಮುದ್ರಪರಿವೇಷ್ಟಿತವಾದ ಈ ಜಗತ್ತಿಗೆ ನೀನೇ ಪ್ರಭುವೆಂಬುದನ್ನೂ ನಾನು ಚೆನ್ನಾಗಿ ತಿಳಿದಿರುವೆನು. ಇಂತಹ ನೀನು ನಿನ್ನ ಪತ್ನಿಯಾದ ನನ್ನ ವಿಷಯದಲ್ಲಿ ನಿರ್ದಯನಾಗಿರುವುದು ನ್ಯಾಯವೇ? ॥ ೩೯-೪೨ ॥ ಹೀಗೆ ನಾನು ಹೇಳಿದೆನೆಂದು ನನ್ನ ಪ್ರಿಯನಿಗೆ ತಿಳುಹಿಸು. ಎಲೈ ಕಪಿಶ್ರೇಷ್ಠನೇ! ಶ್ರೀರಾಮನು ಅಸ್ತ್ರ ವಿದ್ಯೆಯನ್ನು ಬಲ್ಲವರಲ್ಲಿ ಶ್ರೇಷ್ಠನು; ಮಹಾ ಸತ್ಯವಂತನು. ಮಹಾ ಬಲಪರಾಕ್ರಮ ಶಾಲಿಯು. ಹೀಗಿದ್ದೂ ನನ್ನನ್ನು ಕದ್ದು ತಂದಿರುವ ಈ ರಾವಣನಮೇಲೆಯೂ, ಈ ರಾಕ್ಷಸರಮೇಲೆಯೂ ಅಸ್ತ್ರವನ್ನು ಪ್ರಯೋಗಿಸದಿರುವುದೇಕೆ? ಸುರರಾಗಲಿ, ಗಂಧರ್ವ ರಾಗಲಿ, ಮರುದ್ಗಣಗಳಾಗಲಿ ಯುದ್ಧಕ್ಕೆ ನಿಂತ ಶ್ರೀರಾಮನನ್ನೆದುರಿಸಿ ನಿಲ್ಲಲಾರರು. ಎಲೈ ಭದ್ರನೇ! ಮಹಾ ಪರಾಕ್ರಮಶಾಲಿಯಾಗಿ, ಪರಂತಪನಾಗಿರುವ ಆ ರಘುನಾಥನಿಗೆ ನನ್ನಲ್ಲಿ ದಯೆಯಿದ್ದರೆ, ಮೊನಚಾದ ಬಾಣಗಳಿಂದ ಈ ರಾಕ್ಷಸರೆಲ್ಲರನ್ನೂ ಸಂಹರಿಸದೆ ಬಿಡುತ್ತಿದ್ದನೇ!

ಭ್ರಾತುರಾದೇಶಮಾದಾಯ ಲಕ್ಷ್ಮಣೋವಾ ಪರಂತಪಃ । ಕಸ್ಯ ಹೇತೋರ್ನಮಾಂ ವೀರಃ ಪರಿತ್ರಾತಿ ಮಹಾಬಲಃ ॥ ೪೬ ॥ ಯದಿ ತೌ ಪುರುಷವ್ಯಾಘ್ರೌ ವಾಯ್ವಗ್ನಿ ಸಮತೇಜಸೌ । ಸುರಾಣಾಮಪಿ ದುರ್ಧರ್ಷೌ ಕಿಮರ್ಥಂ ಮಾಮುಪೇಕ್ಷತಃ ॥ ೪೭ ॥ ಮಮೈವ ದುಷ್ಕೃತಂ ಕಿಂಚಿನ್ಮಹದಸ್ತಿ ನಸಂಶಯಃ । ಸಮರ್ಥಾವಪಿ ತೌ ಯನ್ಮಾಂ ನಾವೇಕ್ಷೇತೇ ಪರಂತಪೌ " ॥ ೪೮ ॥ ವೈದೇಹ್ಯಾ ವಚನಂ ಶ್ರುತ್ವಾ ಕರುಣಂ ಸಾಶ್ರು ಭಾಷಿತಂ । ಅಥಾಬ್ರವೀನ್ಮಹಾತೇಜಾ ಹನೂಮಾನ್ಮಾರುತಾತ್ಮಜಃ ॥೪೯॥ ತ್ವಚ್ಛೋಕ

ಮಹಾಬಲಃ - ಮಹಾ ಬಲಿಷ್ಠನಾದ, ಪರಂತಪಃ - ಶತ್ರುನಾಶಕನಾದ, ಲಕ್ಷ್ಮಣೋವಾ ಲಕ್ಷ್ಮಣ - ನಾದರೂ, ಭ್ರಾತುಃ - ಅಣ್ಣನಾದ ಶ್ರೀರಾಮನ, ಆದೇಶಂ - ಅಪ್ಪಣೆಯನ್ನು, ಆದಾಯ - ಪಡೆದು ಕೊಂಡು, ಮಾಂ - ನನ್ನನ್ನು, ಕಸ್ಯಹೇತೋಃ - ಯಾವ ಕಾರಣದಿಂದ, ನಪರಿತ್ರಾತಿ - ಸಂರಕ್ಷಿಸಲಿಲ್ಲ. ॥ ೪೬ ॥ ಪುರುಷವ್ಯಾಘ್ರೌ - ಪುರುಷಶ್ರೇಷ್ಠರಾದ, ವಾಯ್ವ....ಸೌ - ವಾಯುವಿಗೂ, ಅಗ್ನಿಗೂ ಸಮಾನ ವಾದ ತೇಜಸ್ಸುಳ್ಳ, ಸುರಾಣಾಮಪಿ - ದೇವತೆಗಳಿಗೂ ಕೂಡ, ದುರ್ಧರ್ಷೌ - ತಿರಸ್ಕರಿಸಲಶಕ್ಯರಾದ, ತೌ - ಆ ರಾಮಲಕ್ಷ್ಮಣರು, (ಸಂಗತೌಯದಿ - ಸೇರಿದುದಾದರೆ) ಕಿಮರ್ಥಂ - ಏತಕ್ಕೋಸ್ಕರ, ಮಾಂ - ನನ್ನನ್ನು, ಉಪೇಕ್ಷತಃ - ಅಲಕ್ಷ್ಯಮಾಡುವರು. ॥ ೪೭ ॥ ಸಮರ್ಥಾವಪಿ - ಶಕ್ತರಾದರೂ, ಪರಂತಪೌಅಪಿ-ಶತ್ರುನಾಶಕರಾದರೂ, ತೌ-ಆ ರಾಮಲಕ್ಷ್ಮಣರು, ಯತ್-ಯಾವ ಕಾರಣದಿಂದ, ಮಾಂ - ನನ್ನನ್ನು, ನಾವೇಕ್ಷೇತೇ-ನೋಡುವುದಿಲ್ಲವೋ, ತತ್ - ಆ ಕಾರಣದಿಂದ, ಮಹತ್ - ಮಹತ್ತರವಾದ, ಕಿಂಚಿತ್ - ಒಂದಾನೊಂದಾದ, (ಅಥವಾ ಹೇಳುವದಕ್ಕೆ ಅಶಕ್ಯವಾದ) ಮಮ - ನನ್ನ, ದುಷ್ಕೃತಮೇವ - ಪಾಪವೇ, ಅಸ್ತಿ - ಇದೆ, ನಸಂಶಯಃ - ಸಂದೇಹವಿಲ್ಲ. ॥ ೪೮ ॥ ಮಾರುತಾತ್ಮಜಃ - ವಾಯುಪುತ್ರನಾದ, ಮಹಾತೇಜಾಃ - ಮಹಾ ಪರಾಕ್ರಮಿಯಾದ, ಹನುಮಾನ್ - ಆಂಜನೇಯನು, ಸಾಶ್ರುಭಾಷಿತಂ - ಕಂಬನಿಗಳಿಂದೊಡಗೂಡಿದಂತೆ ಹೇಳಲ್ಪಟ್ಟ, ವೈದೇಹ್ಯಾಃ - ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಅಥ - ಬಳಿಕ, ಕರುಣಂ - ದಯೆಯಿಂದೊಡಗೂಡಿದಂತೆ, ಅಬ್ರವೀತ್ - ನುಡಿದನು. ॥ ೪೯ ॥ ಹೇ ದೇವಿ - ಓ ಪೂಜ್ಯಳೇ, ಮೇ - ನನ್ನ ಸಾಕ್ಷಿಯಾಗಿ, ಸತ್ಯೇನ - ಯಥಾರ್ಥವಾಗಿ, ರಾಮಃ - ಶ್ರೀರಾಮನು, ತ್ವಚ್ಛೋ....ಖಃ - ನಿನ್ನಗಲುವಿಕೆ

ಶತ್ರುತಾಪನನಾದ ಲಕ್ಷ್ಮಣನಾದರೂ ಅಣ್ಣನ ಅಪ್ಪಣೆಯನ್ನು ಪಡೆದು ಇಲ್ಲಿಗೈತಂದು ನನ್ನನ್ನು ಕಾಪಾಡದಿರುವನೇಕೇ? ಪುರುಷೋತ್ತಮರೂ, ವಾಯ್ವಗ್ನಿಗಳಿಗೆ ಸಮಾನವಾದ ತೇಜಸ್ಸುಳ್ಳವರೂ, ದೇವತೆಗಳಿಗೂ ದುರ್ಧರ್ಷರಾಗಿರುವವರೂ ಆದ ಶ್ರೀರಾಮಲಕ್ಷ್ಮಣರೀರ್ವರೂ ಒಂದುಗೂಡಿದ್ದರೂ ನನ್ನನ್ನು ರಕ್ಷಿಸದೆ ಉಪೇಕ್ಷಿಸುತ್ತಿರುವುದೇಕೇ? ಎಲೈ ಮಾರುತಿಯೇ! ಪುರುಷೋತ್ತಮರಾದ ಶ್ರೀರಾಮಲಕ್ಷ್ಮಣರು ನನ್ನನ್ನು ಉಪೇಕ್ಷಿಸುತ್ತಿರುವುದನ್ನು ನೋಡಿದರೆ ನನ್ನಲ್ಲೇನೋ ಯಾವುದೋ ಒಂದು ದೊಡ್ಡ ದೋಷವಿರುವುದೆಂದು ತೋರುತ್ತದೆ. ಶತ್ರುಮರ್ದನ ವಿಷಯದಲ್ಲಿ ಅವರೀರ್ವರೂ ಸಮರ್ಥರಾಗಿದ್ದರೂ ನನ್ನನ್ನು ಸಂರಕ್ಷಿಸದಿರುವುದರಿಂದ ಈ ವಿಷಯದಲ್ಲಿ ಸಂಶಯವಿಲ್ಲವು.'' ॥೪೩—೪೮॥ ಹೀಗೆ ಸೀತಾದೇವಿಯು ಕಂಬನಿಗರೆಯುತ್ತ ದೈನ್ಯದಿಂದ ನುಡಿದ ಮಾತುಗಳನ್ನು ಕೇಳಿ ಆ ಪವಮಾನನಂದನನು ಆಕೆಯನ್ನು ಕುರಿತು, "ಎಲೆ ತಾಯೇ! ಸತ್ಯವಾಗಿ ನುಡಿಯುವೆನು. ಶ್ರೀರಾಮಮೂರ್ತಿಯು ನಿನ್ನ ವಿರಹ ದುಃಖದಿಂದ ಪೀಡಿತನಾಗಿಯೇ ಯಾವ ವಸ್ತುವಿನಲ್ಲಿಯೂ ಅಪೇಕ್ಷೆಯಿಲ್ಲದವನಾಗಿರುವನು,

ವಿಮುಖೋ ರಾಮೋ ದೇವಿ! ಸತ್ಯೇನ ಮೇ ಶಪೇ । ರಾಮೇ ದುಃಖಾಭಿಪನ್ನೇ ಚ ಲಕ್ಷ್ಮಣಃ ಪರಿತಪ್ಯತೇ ॥ ೫೦ ॥ ಕಥಂಚಿದ್ಭವತೀ ದೃಷ್ಟ್ವಾ ನಕಾಲಃ ಪರಿಶೋಚಿತುಂ । ಇಮಂ ಮುಹೂರ್ತಂ ದುಃಖಾನಾಂ ದ್ರಕ್ಷ್ಯಸ್ಯಂತಮನಿಂದಿತೇ! ॥ ೫೧ ॥ ತಾವುಭೌ ಪುರುಷವ್ಯಾಘ್ರೌ ರಾಜಪುತ್ರೌ ಮಹಾಬಲೌ । ತ್ವದ್ದರ್ಶನಕೃತೋತ್ಸಾಹೌ ಲಂಕಾಂ ಭಸ್ಮೀಕರಿಷ್ಯತಃ ॥ ೫೨ ॥ ಹತ್ವಾ ಚ ಸಮರೇ ಕ್ರೂರಂ ರಾವಣಂ ಸಹಬಾಂಧವಂ । ರಾಘವಸ್ತ್ವಾಂ ವಿಶಾಲಾಕ್ಷಿ! ನೇಷ್ಯತಿ ಸ್ವಾಂ ಪುರೀಂ ಪ್ರತಿ ॥ ೫೩ ॥ ಬ್ರೂಹಿ ಯದ್ರಾ

ಯಿಂದುಂಟಾದ ದುಃಖದಿಂದ ವಿಷಯಾಂತರಪರಾಙ್ಮುಖನು, ರಾಮೇ-ಶ್ರೀರಾಮನು, ದುಃಖಾ....ನ್ನೇ - ದುಃಖದಿಂದೊಡಗೂಡಿರಲು, ಲಕ್ಷ್ಮಣಶ್ಚ - ಲಕ್ಷ್ಮಣನೂ ಕೂಡ, ಪರಿತಪ್ಯತೇ - ಸಂತಪಿಸುವನೆಂದು, ಶಪೇ - ಆಣೆಯಿಟ್ಟುಕೊಳ್ಳುತ್ತೇನೆ. ॥ ೫೦ ॥ ಕಥಂಚಿತ್ - ಅತಿ ಪ್ರಯಾಸದಿಂದ, ಭವತೀ - ನೀನು, ದೃಷ್ಟ್ವಾ - ನೋಡಲ್ಪಟ್ಟೆ, ಪರಿಶೋಚಿತುಂ - ದುಃಖಿಸುವದಕ್ಕೆ, ನಕಾಲಃ - ಸಮಯವಲ್ಲ. ॥ ೫೧ ॥ ಹೇ ಅನಿಂದಿತೇ - ಎಲೌ ಪೂಜ್ಯಳೇ, ಇಮಂಮುಹೂರ್ತಂ - ಈ ಕ್ಷಣದಲ್ಲಿ, ದುಃಖಾನಾಂ - ವ್ಯಸನಗಳ, ಅಂತಂ - ತುದಿಯನ್ನು, ದ್ರಕ್ಷ್ಯಸಿ - ನೋಡುವೆ, ಪುರುಷವ್ಯಾಘ್ರೌ - ಪುರುಷಶ್ರೇಷ್ಠರಾದ, ರಾಜಪುತ್ರೌ - ರಾಜಕುಮಾರರಾದ, ಮಹಾಬಲೌ - ಮಹಾ ಬಲವಂತರಾದ, ತಾವುಭೌ - ಅವರಿಬ್ಬರೂ, ತ್ವದ್ದ....ಹೌ - ನಿನ್ನನ್ನು ನೋಡುವಿಕೆಯಲ್ಲಿ ಸಂತೋಷವುಳ್ಳವರಾಗಿ, ಲಂಕಾಂ - ಲಂಕಾಪಟ್ಟಣವನ್ನು, ಭಸ್ಮೀಕರಿಷ್ಯತಃ - ಭಸ್ಮಮಾಡುವರು. ॥ ೫೨ ॥ ಹೇ ವಿಶಾಲಾಕ್ಷೀ - ಓ ವಿಸ್ತಾರನೇತ್ರಿಯೇ, ರಾಘವಃ - ಶ್ರೀರಾಮನು, ಸಮರೇ - ಕಾಳಗದಲ್ಲಿ, ಸಹಬಾಂಧವಂ - ಬಂಧುಗಳಿಂದೊಡಗೂಡಿದ, ಕ್ರೂರಂ-ಕ್ರೂರನಾದ, ರಾವಣಂಚ - ರಾವಣನನ್ನು, ಹತ್ವಾ-ಸಂಹರಿಸಿ, ತ್ವಾಂ-ನಿನ್ನನ್ನು, ಸ್ವಾಂಪುರೀಂಪ್ರತಿ-ತಮ್ಮ ಪಟ್ಟಣವನ್ನು ಕುರಿತು, ನೇಷ್ಯತಿ-ಕರೆದುಕೊಂಡು ಹೋಗುವನು. ॥ ೫೩ ॥ ರಾಘವಃ - ಶ್ರೀರಾಮನು, ಯದ್ವಾಚ್ಯಃ - ಏನು ಹೇಳಲ್ಪಡಬೇಕು, ಮಹಾಬಲಃ - ಮಹಾ ಪರಾಕ್ರಮಿ

ಇದೋ ಆಣೆಯಿಟ್ಟು ಹೇಳುತ್ತಿರುವೆನು ; ಇದನ್ನು ನಂಬು. ಓ ಸೀತಾದೇವಿಯೇ! ಶ್ರೀರಾಮನು ದುಃಖವನ್ನು ಹೊಂದಿರುವುದನ್ನು ನೋಡಿ ಲಕ್ಷ್ಮಣಸ್ವಾಮಿಯೂ ಬಹಳವಾಗಿ ಪರಿತಪಿಸುತ್ತಿರುವನು. ಎಲೌ ನಿರ್ದುಷ್ಟವಾದ ನಡೆವಳಿಕೆಯುಳ್ಳವಳೇ! ಆಲಿಸು ; ನಾನು ಮಹಾ ಪ್ರಯಾಸದಿಂದ ನಿನ್ನನ್ನು ಕಂಡೆನು. ಆದುದರಿಂದ ಈ ಸಮಯದಲ್ಲಿ ನೀನೀರೀತಿ ದುಃಖಿಸುವುದು ಉಚಿತವಲ್ಲವು. ಈಗ ನೀನು ಸಂತೋಷಪಡಬೇಕು. ತಾಯೇ! ನೀನು ಇನ್ನು ಅತ್ಯಲ್ಪಕಾಲದಲ್ಲಿಯೇ ಸಮಸ್ತ ದುಃಖಗಳಿಂದಲೂ ವಿಮುಕ್ತಳಾಗಿ ಸುಖವನ್ನು ಪಡೆಯುವೆ. ಪುರುಷೋತ್ತಮರೂ, ರಾಜಪುತ್ರರೂ, ಮಹಾ ಪರಾಕ್ರಮಶಾಲಿಗಳೂ, ನಿನ್ನನ್ನು ನೋಡುವುದರಲ್ಲಿ ಪರಮೋತ್ಸಾಹಿಗಳೂ ಆದ ಶ್ರೀರಾಮಲಕ್ಷ್ಮಣರು ಇನ್ನು ಸ್ವಲ್ಪಕಾಲದಲ್ಲಿಯೇ ಈ ಲಂಕಾನಗರಕ್ಕೆ ಬಂದು ಇಲ್ಲಿರುವ ಸಮಸ್ತ ರಾಕ್ಷಸರನ್ನು ಭಸ್ಮಸಾತ್ಕರಿಸುವರೆಂಬುದರಲ್ಲಿ ಸ್ವಲ್ಪಮಾತ್ರವೂ ಸಂಶಯವಿಲ್ಲವು. ॥ ೪೯—೫೨ ॥ ಓ ವಿಶಾಲನೇತ್ರಿಯಾದ ಸೀತಾದೇವಿಯೇ! ಶ್ರೀರಾಮಮೂರ್ತಿಯು ಯುದ್ಧದಲ್ಲಿ ರಾವಣಾಸುರನನ್ನು ಬಂಧುಬಾಂಧವರೊಡನೆ ಸಂಹರಿಸಿ ಮಹೋತ್ಸಾಹದಿಂದ ನಿನ್ನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವನು. ಇನ್ನು ನೀನು ಶ್ರೀರಾಮನಿಗೂ, ಲಕ್ಷ್ಮಣನಿಗೂ, ಮಹಾ ಶೂರನಾದ ಸುಗ್ರೀವನಿಗೂ,

ಘವೋ ವಾಚ್ಯೋ ಲಕ್ಷ್ಮಣಶ್ಚ ಮಹಾಬಲಃ । ಸುಗ್ರೀವೋ ವಾಪಿ ತೇಜಸ್ವೀ ಹರಯೋಽಪಿ ಸಮಾಗತಾಃ" ||೫೪|| ಇತ್ಯುಕ್ತವತಿ ತಸ್ಮಿಂಶ್ಚ ಸೀತಾ ಸುರಸುತೋಪಮಾ । ಉವಾಚ ಶೋಕಸಂತಪ್ತಾ ಹನುಮಂತಂ ಪ್ಲವಂಗಮಂ ||೫೫|| ¶ ಕೌಸಲ್ಯಾ ಲೋಕಭರ್ತಾರಂ ಸುಷುವೇ ಯಂ ಮನಸ್ವಿನೀ । ತಂ ಮಮಾರ್ಥೇ ಸುಖಂ ಪೃಚ್ಛ ಶಿರಸಾ ಚಾಭಿವಾದಯ || ೫೬ || ಸ್ರಜಶ್ಚ ಸರ್ವರತ್ನಾನಿ ಪ್ರಿಯಾ ಯಾಶ್ಚ ವರಾಂಗನಾಃ ।

ಯಾದ, ಲಕ್ಷ್ಮಣಶ್ಚ - ಲಕ್ಷ್ಮಣನನ್ನು, ಯದ್ವಾಚ್ಯಃ - ಏನು ಹೇಳಲ್ಪಡತಕ್ಕವನು, ತೇಜಸ್ವೀ - ತೇಜೋವಂತನಾದ, ಸುಗ್ರೀವೋವಾಪಿ - ಸುಗ್ರೀವನೂ ಕೂಡ, ಸಮಾಗತಾಃ - ಗುಂಪು ಸೇರಿ ಬಂದಿರುವ, ಹರಯೋಽಪಿ ವಾನರರೂ, ಯದ್ವಾಚ್ಯಾಃ-ಏನು ಹೇಳಲ್ಪಡತಕ್ಕವರೋ, ಬ್ರೂಹಿ-ಹೇಳು. ||೫೪|| ತಸ್ಮಿಂಶ್ಚ - ಆ ಆಂಜನೇಯನೂ ಕೂಡ, ಇತಿ - ಈ ಪ್ರಕಾರವಾಗಿ, ಉಕ್ತವತಿ - ಹೇಳಲು, ಸುರ....ಮಾ - ದೇವಕನ್ನಿಕೆಗೆ ಸಮಾನಳಾದ, ಸೀತಾ - ಸೀತಾದೇವಿಯು, ಶೋಕಸಂತಪ್ತಾ - ದುಃಖಾಕ್ರಾಂತಳಾಗಿ, ಪ್ಲವಂಗಮಂ - ಕಪಿಯಾದ, ಹನುಮಂತಂ - ಆಂಜನೇಯನನ್ನು ಕುರಿತು, ಉವಾಚ - ಹೇಳಿದಳು. || ೫೫ || ಮನಸ್ವಿನೀ - ಒಳ್ಳೆಯ ಮನವುಳ್ಳ, ಕೌಸಲ್ಯಾ - ಕೌಸಲ್ಯಾದೇವಿಯು, ಲೋಕ....ರಂ - ಲೋಕರಕ್ಷಕನಾದ, ಯಂ - ಯಾವ ಶ್ರೀರಾಮನನ್ನು, ಸುಷುವೇ - ಹೆತ್ತಳೋ, ತಂ - ಅಂಥಾ ಶ್ರೀರಾಮನನ್ನು, ಮಮಾರ್ಥೇ - ನನಗೋಸ್ಕರ, ಸುಖಂ - ಕ್ಷೇಮವನ್ನು, ಪೃಚ್ಛ - ಕೇಳು, ಶಿರಸಾಚ - ಶಿರಸ್ಸಿನಿಂದಲು, ಅಭಿವಾದಯ - ನಮಸ್ಕರಿಸು. ||೫೬|| ಸುಮಿತ್ರಾ - ಸುಮಿತ್ರಾದೇವಿಯು, ಯೇನ - ಯಾವ ಲಕ್ಷ್ಮಣನಿಂದ, ಸುಪ್ರಜಾ - ಪುತ್ರವತಿಯೋ, ಸಃ - ಆ ಲಕ್ಷ್ಮಣನು, ಸ್ರಜಶ್ಚ - ಪುಷ್ಪಮಾಲಿಕೆಗಳನ್ನು, ಸರ್ವರತ್ನಾನಿ - ಸಮಸ್ತ ರತ್ನಗಳನ್ನೂ, ಪ್ರಿಯಾಃ - ಇಷ್ಟರಾದ,

ಸಮಸ್ತವಾನರರಿಗೂ ಏನನ್ನು ಹೇಳಬಯಸುವೆಯೋ ಅದನ್ನು ಹೇಳು." ಎಂದು ಹೇಳಿದನು. ಆಗ ದೇವಕನ್ನಿಕೆಗೆ ಸಮಾನಳಾದ ಸೀತಾದೇವಿಯು ವ್ಯಸನದಿಂದ ಪರಿತಪಿಸುತ್ತ ವಾನರೋತ್ತಮನಾದ ಆಂಜನೇಯನನ್ನು ನೋಡಿ, "ಎಲೈ ಕಪಿಶ್ರೇಷ್ಠನೇ! ಮನಸ್ವಿಯೂ, ಕೌಸಲ್ಯಾಪುತ್ರನೂ, ಲೋಕನಾಥನೂ ಆದ ಶ್ರೀರಾಮನನ್ನು ನಾನು ಕುಶಲವನ್ನು ಕೇಳಿದೆನೆಂದು ಹೇಳು. ನನ್ನ ಸಾಷ್ಟಾಂಗ ನಮಸ್ಕಾರವನ್ನಾತನಿಗೆ ಸಮರ್ಪಿಸು. || ೫೨–೫೬ || ಮಹೋತ್ತಮನೂ, ಸುಮಿತ್ರಾನಂದನನೂ ಆದ ಲಕ್ಷ್ಮಣನು ಪುಷ್ಪಹಾರಗಳೇ ಮೊದಲಾದ ಭೋಗವಸ್ತು

¶ ಇಲ್ಲಿನ ವಿಶೇಷಾರ್ಥಗಳು:....ಲೋಕದಲ್ಲಿ ಸ್ತ್ರೀಯರು ತಮ್ಮ ಜೀವಿತದ ದಶೆಯಲ್ಲಿ ಪೋಷಕನಾದವನೂ, ಪರತ್ರ ತಿಲಾಂಜಲ್ಯಾದಿಗಳ ಮೂಲಕ ಉತ್ತಾರಣಯೋಗ್ಯನೂ ಆದ ಪುತ್ರನನ್ನು ಆಶಿಸುತ್ತಾರೆಯಲ್ಲದೆ ಮತ್ತೆ ಬೇರೆಯಲ್ಲವು. ಆದರೆ ಕೌಸಲ್ಯಾದೇವಿಯು ಶ್ರೀರಾಮಮೂರ್ತಿಯನ್ನು ಪಡೆದುದು ಸ್ವಾರ್ಥಪರತೆಯಿಂದಲ್ಲ. ತನ್ನ ಸಂರಕ್ಷಣೆಗಾಗಿಯಲ್ಲ. ಆದರೆ ಆಕೆಯು (ಲೋಕಭರ್ತಾರಂ ಸುಷುವೇ) ಉದಾರಮನಸ್ಕಳಾಗಿ ಎಷ್ಟೋ ವ್ರತಗಳನ್ನಾಚರಿಸಿ, ತಪಸ್ಸು ಮಾಡಿ ಪ್ರಾರ್ಥಿಸಿ ಸರ್ವಲೋಕರಕ್ಷಕನಾದ ಪುತ್ರನನ್ನು ಪಡೆದಳು. ಅಂತಹ ಸರ್ವಲೋಕರಕ್ಷಾಕರನಾದ ಶ್ರೀರಾಮನು ಈ ನನ್ನ ವಿಷಯದಲ್ಲಿ ಉದಾಸೀನನಾಗಿರುವುದೇಕೆ. ನಾನು ಲೋಕಕ್ಕೆ ಸೇರಿದವಳಲ್ಲವೇನು ? ಅಥವಾ ಕೌಸಲ್ಯಾದೇವಿಯು ಅಷ್ಟೊಂದು ತಪಸ್ಸನ್ನು ಮಾಡಿ, ವ್ರತಾಚರಣಾದಿಗಳಿಂದ ಮಾಡಿದ ಪ್ರಾರ್ಥನೆಯು ವಿಫಲವಾಯಿತೋ ? ಅಥವಾ ನಾನು ಹೀಗೆ ಭಾವಿಸುವೆನು ; ಜಲಸಮೀಪದಲ್ಲಿಯೇ ಇರುವ ವೃಕ್ಷವು ಯಾವಾಗಲೂ ಒಣಗಿಯೇ ಇರುವುದಲ್ಲವೇ ? ಹಾಗೆ ಸರ್ವಾವಸ್ಥೆಗಳಲ್ಲಿಯೂ ಆತನನ್ನೇ ಅನುಸರಿಸುತ್ತಿರುವ ನನ್ನ ರಕ್ಷಣೆಯ ವಿಷಯದಲ್ಲಿ ಆಕೆಯ ಪ್ರಾರ್ಥನೆಯು ಸಂಕುಚಿತವಾಯಿತೋ ಏನೋ ! (ಗೋ)

ಐಶ್ವರ್ಯಂ ಚ ವಿಶಾಲಾಯಾಂ ಪೃಥಿವ್ಯಾಮಪಿ ದುರ್ಲಭಂ ||೫೭|| ಪಿತರಂ ಮಾತರಂ ಚೈವ ಸಂಮಾನ್ಯಾಭಿಪ್ರಸಾದ್ಯ ಚ । ಅನುಪ್ರವ್ರಜಿತೋ ರಾಮಂ ಸುಮಿತ್ರಾ ಯೇನ ಸುಪ್ರಜಾ || ೫೮ || ಆನುಕೂಲ್ಯೇನ ಧರ್ಮಾತ್ಮಾ ತ್ಯಕ್ತ್ವಾ ಸುಖಮನುತ್ತಮಂ । ಅನುಗಚ್ಛತಿ ಕಾಕುಸ್ಥಂ ಭ್ರಾತರಂ ಪಾಲಯನ್ವನೇ || ೫೯ || ಸಿಂಹಸ್ಕಂಧೋ ಮಹಾಬಾಹುರ್ಮನಸ್ವೀ ಪ್ರಿಯದರ್ಶನಃ । ಪಿತೃವದ್ವರ್ತತೇ ರಾಮೇ ಮಾತೃವನ್ಮಾಂ ಸಮಾಚರನ್ ||೬೦|| ಹ್ರಿಯಮಾಣಾಂ ತದಾ ವೀರೋ ನತು ಮಾಂ ವೇದ ಲಕ್ಷ್ಮಣಃ । ವೃದ್ಧೋಪಸೇವೀ ಲಕ್ಷ್ಮೀವಾನ್ ಶಕ್ತೋ ನಬಹುಭಾಷಿತಾ || ೬೧ || ರಾಜಪುತ್ರಃ

ಯಾವರಾಂಗನಾಶ್ಚ - ಯಾವ ಉತ್ತಮಾಂಗನೆಯರನ್ನೂ, ವಿಶಾಲಾಯಾಂ - ವಿಸ್ತಾರವಾದ, ಪೃಥಿವ್ಯಾಮಪಿ - ಭೂಮಿಯಲ್ಲಿ ಕೂಡ, ದುರ್ಲಭಂ - ಹೊಂದಲಸಾಧ್ಯವಾದ, ಐಶ್ವರ್ಯಂಚ - ಸಂಪತ್ತನ್ನೂ ಸಹ, (ತ್ಯಕ್ತ್ವಾ - ಬಿಟ್ಟು) ಪಿತರಂ - ದಶರಥನನ್ನು, ಸಮ್ಮಾನ್ಯ - ಪೂಜಿಸಿ, ಮಾತರಂ ಚೈವ - ತಾಯಿಯನ್ನು ಕೂಡ, ಅಭಿಪ್ರಸಾದ್ಯಚ - ಸಮಾಧಾನಗೊಳಿಸಿ, ರಾಮಂ - ಶ್ರೀರಾಮನನ್ನು, ಅನುಪ್ರವ್ರಜಿತಃ - ಅನುಸರಿಸಿ ಬಂದನು. || ೫೮ || ಧರ್ಮಾತ್ಮಾ - ಧರ್ಮಬುದ್ಧಿಯುಳ್ಳ ಲಕ್ಷ್ಮಣನು, ಅನುತ್ತಮಂ - ಸರ್ವೋತ್ತಮವಾದ, ಸುಖಂ - ಸುಖವನ್ನು, ತ್ಯಕ್ತ್ವಾ - ಬಿಟ್ಟು, ಭ್ರಾತರಂ - ಅಣ್ಣನಾದ, ಕಾಕುತ್ಸ್ಥಂ - ಶ್ರೀರಾಮನನ್ನು, ಆನುಕೂಲ್ಯೇನ - ಭಕ್ತಿಯಿಂದ, ವನೇ - ವನದಲ್ಲಿ, ಪಾಲಯನ್ - ರಕ್ಷಿಸುತ್ತಿರುವನಾಗಿ, ಅನುಗಚ್ಛತಿ - ಅನುಸರಿಸಿ ಬಂದನು. || ೫೯ || ಸಿಂಹಸ್ಕಂಧಃ - ಸಿಂಹದ ಹೆಗಲಿನಂತೆ ಹೆಗಲುಳ್ಳವನು, ಮಹಾಬಾಹುಃ - ಮಹಾ ಭುಜಬಲಗಳುಳ್ಳವನು, ಮನಸ್ವೀ - ಒಳ್ಳೆಯ ಮನವುಳ್ಳವನು, ಪ್ರಿಯದರ್ಶನಃ - ಒಳ್ಳೆಯ ನೋಟವುಳ್ಳವನು, ರಾಮೇ - ಶ್ರೀರಾಮನಲ್ಲಿ, ಪಿತೃವತ್ - ತಂದೆಯಂತೆ, ವರ್ತತೇ - ನಡೆಯುವವನು, ಮಾಂ - ನನ್ನನ್ನು, ಮಾತೃವತ್ - ತಾಯಿಯಂತೆ, ಸಮಾಚರನ್ - ಸೇವಿಸುತ್ತಿರುವನೋ. || ೬೦ || ತದಾ - ಆ ಸಮಯದಲ್ಲಿ, ವೀರಃ - ಶೂರನಾದ, ಲಕ್ಷ್ಮಣಃ - ಲಕ್ಷ್ಮಣನು, ಹ್ರಿಯಮಾಣಾಂ - ಅಪಹರಿಸಲ್ಪಡುತ್ತಿರುವ, ಮಾಂತು - ನನ್ನನ್ನಾದರೆ, ನವೇದ - ಅರಿಯನು. ||೬೧|| ವೃದ್ಧೋಪಸೇವೀ - ಹಿರಿಯರನ್ನು ಸೇವಿಸುವ, ಲಕ್ಷ್ಮೀವಾನ್- ಸಂಪದ್ಯುಕ್ತನಾದ, ಶಕ್ತಃ - ಸಮರ್ಥನಾದ, ನಬಹುಭಾಷಿತಾ - ಮಿತಭಾಷಿಯಾದ, ರಾಜಪುತ್ರಃ -

---

ಗಳನ್ನೂ, ಶ್ರೇಷ್ಠರಾದ ಭಾರ್ಯೆಯರನ್ನೂ, ದಾಸೀಜನರನ್ನೂ, ವಿಶಾಲವಾದ ಭೂಮಿಯನ್ನೂ, ಅಪಾರಸಂಪತ್ತನ್ನೂ, ತಾಯಿತಂದೆಗಳನ್ನೂ ತೊರೆದು ಅವರೆಲ್ಲರನ್ನೂ ಸಮಾಧಾನಗೊಳಿಸಿ ಶ್ರೀರಾಮನೊಡನೆ ಅರಣ್ಯಕ್ಕೆ ಬಂದನಷ್ಟೆ. ಮಹಾ ಧರ್ಮಾತ್ಮನಾದ ಲಕ್ಷ್ಮಣನು ಸರ್ವೋತ್ತಮವಾದ ಸಮಸ್ತ ಸೌಖ್ಯಗಳನ್ನೂ ತೊರೆದು ಶ್ರೀರಾಮನೊಡನೆ ಅರಣ್ಯವನ್ನು ಪ್ರವೇಶಿಸಿ, ಅಣ್ಣನಾದ ಆತನ ಮಾತುಗಳನ್ನು ಸ್ವಲ್ಪವೂ ಮೀರದೆ ನಡೆಯುತ್ತ ಆತನನ್ನು ಹಿಂಬಾಲಿಸಿ ಬಂದನು. ಆತನು ಸಿಂಹಸ್ಕಂಧನು; ಮಹಾ ಬಾಹುವು; ಸಹೃದಯನು; ನೋಡುವರಿಗೆ ಆನಂದವನ್ನುಂಟುಮಾಡುವ ಅನುಪಮರೂಪವುಳ್ಳವನು; ನನ್ನನ್ನು ತನ್ನ ತಾಯಿಯಂತೆಯೇ ಭಾವಿಸಿ ನನ್ನ ಸೇವೆಯನ್ನು ನಿರಂತರವೂ ಮಾಡುತ್ತಿದ್ದವನು. || ೫೭—೬೦ || ಶ್ರೀರಾಮನನ್ನು ಆತನು ಪಿತೃಭಾವನೆಯಿಂದ ಸೇವಿಸುತ್ತಿರುವನು. ಆತನು, ನನ್ನನ್ನು ರಾವಣಾಸುರನು ಅಪಹರಿಸಿರುವುದನ್ನರಿಯನು. ಆತನು ಈ ವಿಷಯವನ್ನರಿತಿದ್ದರೆ ನನಗೆ ಇಂತಹ

ಪ್ರಿಯಶ್ಚ ಶ್ರೇಷ್ಠಸ್ಸದೃಶಶ್ಶ್ವಶುರಸ್ಯ ಮೇ । ಮಮಪ್ರಿಯಕರೋ ನಿತ್ಯಂ ಭ್ರಾತಾ ರಾಮಸ್ಯ ಲಕ್ಷ್ಮಣಃ ॥ ೬೨ ॥ ನಿಯುಕ್ತೋ ಧುರಿ ಯಸ್ಯಾಂ ತು ತಾಮುದ್ವಹತಿ ವೀರ್ಯವಾನ್ । ಯಂ ದೃಷ್ಟ್ವಾ ರಾಘವೋ ನೈವ ವೃತ್ತಮಾರ್ಯಮನುಸ್ಮರೇತ್ ॥ ೬೩ ॥ ಸ ಮಮಾರ್ಥಾಯ ಕುಶಲಂ ವಕ್ತವ್ಯೋ ವಚನಾನ್ಮಮ । ಮೃದುರ್ನಿತ್ಯಂ ಶುಚಿರ್ದಕ್ಷಃ ಪ್ರಿಯೋ ರಾಮಸ್ಯ ಲಕ್ಷ್ಮಣಃ ॥ ೬೪ ॥ ಯಥಾಹಿ ವಾನರಶ್ರೇಷ್ಠ ! ದುಃಖಕ್ಷಯಕರೋ ಭವೇತ್ । ತ್ವಮಸ್ಮಿನ್ಕಾರ್ಯನಿರ್ಯೋಗೇಪ್ರಮಾಣಂ ಹರಿ

ರಾಜಕುಮಾರನಾದ, ಪ್ರಿಯಃ - ಇಷ್ಟನಾದ, ಶ್ರೇಷ್ಠಃ - ಸರ್ವೋತ್ತಮನಾದ, ಮೇ - ನನ್ನ, ಶ್ವಶುರಸ್ಯ- ಮಾವನಿಗೆ, ಸದೃಶಃ - ಸಮಾನನಾದ, ನಿತ್ಯಂ - ಯಾವಾಗಲು, ಮಮ - ನನ್ನ, ಪ್ರಿಯಕರಃ - ಇಷ್ಟ ವನ್ನು ಮಾಡುವ, ರಾಮಸ್ಯ - ಶ್ರೀರಾಮನ, ಭ್ರಾತಾ - ತಮ್ಮನಾದ, ವೀರ್ಯವಾನ್ - ಪರಾಕ್ರಮಿ ಯಾದ, ಲಕ್ಷ್ಮಣಃ - ಲಕ್ಷ್ಮಣನು, ಯಸ್ಯಾಂಧುರಿತು - ಯಾವ ಕಾರ್ಯನಿರ್ವಾಹದಲ್ಲಿಯಾದರೂ, ನಿಯುಕ್ತಃ - ನೇಮಿಸಲ್ಪಟ್ಟವನಾಗಿ, ತಾಂ - ಆ ಕಾರ್ಯವನ್ನು, ಉದ್ವಹತಿ - ವಹಿಸುತ್ತಾನೆ. ॥೬೩॥ ರಾಘವಃ - ಶ್ರೀರಾಮನು, ಯಂ - ಯಾವ ಲಕ್ಷ್ಮಣನನ್ನು, ದೃಷ್ಟ್ವಾ - ನೋಡಿ, ವೃತ್ತಂ - ಮೃತಿ ಗೊಂಡ, ಆರ್ಯಂ - ಪೂಜ್ಯನಾದ ದಶರಥನನ್ನು, ನಾನುಸ್ಮರೇತ್ - ಸ್ಮರಿಸುವದಿಲ್ಲವೋ, ಸಲಕ್ಷ್ಮಣಃ- ಆ ಲಕ್ಷ್ಮಣನು, ಮಮಾರ್ಥಾಯ - ನನ್ನ ಪ್ರಯೋಜನಕ್ಕೋಸ್ಕರ, ಮಮವಚನಾತ್ - ನನ್ನ ಮಾತಿ ನಂತೆ, ಕುಶಲಂ - ಕ್ಷೇಮವೆಂದು, ವಕ್ತವ್ಯಃ - ಹೇಳತಕ್ಕವನು, ನಿತ್ಯಂ - ಸದಾ ಕಾಲದಲ್ಲಿಯೂ, ಮೃದುಃ - ಮೃದುವಾದವನು, ಶುಚಿಃ - ಪರಿಶುದ್ಧನು, ದಕ್ಷಃ - ಸಮರ್ಥನು, ರಾಮಸ್ಯ-ಶ್ರೀರಾಮನಿಗೆ, ಪ್ರಿಯಶ್ಚ - ಪ್ರೀತಿಪಾತ್ರನು. ॥ ೬೪ ॥ ಹೇ ವಾನರಶ್ರೇಷ್ಠ - ಎಲೈ ಕಪಿಶ್ರೇಷ್ಠನೇ, ಲಕ್ಷ್ಮಣಃ - ಲಕ್ಷ್ಮಣನು, ಯಥಾ - ಯಾವ ಪ್ರಕಾರವಾಗಿ, ದುಃಖಕ್ಷಯಕರಃ - ದುಃಖನಾಶಕನು, ಭವೇತ್ - ಆಗುವನೋ, ತಥಾ - ಆ ರೀತಿಯಾಗಿ, (ಕರ್ತವ್ಯಂ - ಮಾಡತಕ್ಕದು) ಹೇ ಹರಿಸತ್ತಮ - ಎಲೈ ವಾನರೋತ್ತಮನೇ, ತ್ವಂ - ನೀನು, ಅಸ್ಮಿ....ಗೇ - ಈ ಕಾರ್ಯಸಂಘಟನೆಯ ವಿಷಯದಲ್ಲಿ,

---

ದುರವಸ್ಥೆಯುಂಟಾಗುತ್ತಿರಲಿಲ್ಲವು. ಲಕ್ಷ್ಮಣಸ್ವಾಮಿಯು ಹಿರಿಯರನ್ನು ಸೇವಿಸುವ ಹಿರಿಮೆ ಯುಳ್ಳವನು ; ಮಹಾ ಕಾಂತಿಮಂತನು ; ಮಹಾ ಸಮರ್ಥನು ; ಮಿತಭಾಷಿಯು ; ನೋಡಿದ ವರಿಗೆ ಸಂತೋಷವುಂಟುಮಾಡುವವನು ; ಮಹಾ ಶ್ರೇಷ್ಠನು ; ಸಮಸ್ತಸದ್ಗುಣಗಳಿಂದಲೂ ನನ್ನ ಮಾವನಾದ ದಶರಥರಾಜನಿಗೆ ಸಮಾನನಾದವನು. ಎಲೈ ಹನುಮಂತನೇ! ಶ್ರೀರಾಮ ನಿಗೆ ಪ್ರಿಯಸಹೋದರನಾದ ಆ ಲಕ್ಷ್ಮಣನು ಯಾವಾಗಲೂ ನನ್ನನ್ನು ತನ್ನ ಸೇವೆಸತ್ಕಾರ ಗಳಿಂದ ಆನಂದಗೊಳಿಸುತ್ತಿದ್ದನು. ಮಹಾ ಶೌರ್ಯವಂತನಾದ ಆತನು ಅಣ್ಣನಾಡಿದ ಮಾತುಗಳನ್ನೂ, ಕಾರ್ಯಗಳನ್ನೂ ತಪ್ಪದೆ ನಡೆಸುತ್ತಿದ್ದನು ; ಅದೆಂತಹ ದುರ್ಭರವಾದ ಕಾರ್ಯವಾದರೂ ಮಾಡಿಯೇ ತೀರುತ್ತಿದ್ದನು. ಯಾವನನ್ನು ನೋಡುವುದರಿಂದ, ನನ್ನ ಪ್ರಿಯನಾದ ಶ್ರೀರಾಮನು ತನ್ನ ತಂದೆಯಾದ ದಶರಥರಾಯನನ್ನೂ ಸ್ಮರಿಸದಿರುತ್ತಿದ್ದನೋ, ಅಂತಹ ಲಕ್ಷ್ಮಣಸ್ವಾಮಿಯನ್ನು ನನ್ನ ಮಾತುಗಳಿಂದ ಕ್ಷೇಮವನ್ನು ಕೇಳು. ಆತನು ನಿಷ್ಕ ಪಟಿಯು ; ಮಹಾ ದಕ್ಷನು ; ಶ್ರೀರಾಮಚಂದ್ರನಿಗೆ ಬಹಳ ಪ್ರಿಯನಾದವನು. ಎಲೈ ವಾನ ರೋತ್ತಮನೇ ! ಎಂತಹ ಪ್ರಯತ್ನದಿಂದ ಶ್ರೀರಾಮನು ನನ್ನ ದುಃಖವನ್ನು ಹೋಗಲಾಡಿಸಿ ನನ್ನನ್ನು ಕಾಪಾಡುವನೋ ಅಂತಹ ಪ್ರಯತ್ನವನ್ನು ಮಾಡಿ ಈ ಕಾರ್ಯವನ್ನು ಆಗುಮಾಡು

ಸತ್ತಮ ! ॥೬೫॥ ರಾಘವಸ್ತ್ವತ್ಸಮಾರಂಭಾ ನ್ಮಯಿ ಯತ್ನಪರೋಭವೇತ್ । ಇದಂ ಬ್ರೂಯಾಶ್ಚ ಮೇ ನಾಥಂ ಶೂರಂ ರಾಮಂ ಪುನಃ ಪುನಃ ॥ ೬೬ ॥ ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ ! । ಊರ್ಧ್ವಂ ಮಾಸಾನ್ನಜೀವೇಯಂ ಸತ್ಯೇ ನಾಽಹಂ ಬ್ರವೀಮಿ ತೇ ॥ ೬೭ ॥ ¶ ರಾವಣೇನೋಪರುದ್ಧಾಂ ಮಾಂ ನಿಕೃತ್ಯಾ ಪಾಪಕರ್ಮಣಾ । ತ್ರಾತುಮರ್ಹಸಿ ವೀರ ! ತ್ವಂ ಪಾತಾಳಾದಿವ ಕೌಶಿಕೀಂ" ॥ ೬೮ ॥

ಪ್ರಮಾಣಂ - ವ್ಯವಸ್ಥಾಪಕನು. ॥ ೬೫ ॥ ಯತಃ - ಯಾವ ಕಾರಣದಿಂದ, ರಾಘವಃ - ಶ್ರೀರಾಮನು, ತ್ವತ್ಸ....ತ್ - ನಿನ್ನ ಪ್ರಯತ್ನದಿಂದ, ಮಯಿ - ನನ್ನ ವಿಷಯದಲ್ಲಿ, ಯತ್ನಪರಃ - ಪ್ರಯತ್ನದಲ್ಲಿ ಆಸಕ್ತನು, ಭವೇತ್ - ಆಗುವನೋ. ॥ ೬೬ ॥ ಮೇನಾಥಂ - ನನ್ನ ಪತಿಯಾದ, ಶೂರಂ - ವೀರನಾದ, ರಾಮಂ - ಶ್ರೀರಾಮನನ್ನು ಕುರಿತು, ಪುನಃಪುನಃ - ಬಾರಿಬಾರಿಗೂ, ಇದಂ - ಈ ಮಾತನ್ನು, ಬ್ರೂಯಾಃ-ಹೇಳು, ಹೇ ದಶರಥಾತ್ಮಜ - ಎಲೈ ದಶರಥಕುವರನೇ, ಮಾಸಂ - ಒಂದು ತಿಂಗಳವರೆಗೂ, ಜೀವಿತಂ - ಪ್ರಾಣವನ್ನು, ಧಾರಯಿಷ್ಯಾಮಿ - ಧರಿಸುವೆನು, ಮಾಸಾದೂರ್ಧ್ವಂ - ತಿಂಗಳ ಬಳಿಕ, ನಜೀವೇಯಂ - ಬದುಕಲಾರೆನು, ತೇ - ನಿನಗೆ, ಅಹಂ - ನಾನು, ಸತ್ಯೇನ - ಸತ್ಯವಾಗಿ, ಬ್ರವೀಮಿ - ಹೇಳುತ್ತೇನೆ, ಹೇ ವೀರ - ಓ ಶೂರನೇ, ಪಾಪಕರ್ಮಣಾ - ಪಾಪಕರ್ಮಿಯಾದ, ರಾವಣೇನ - ರಾವಣನಿಂದ, ನಿಕೃತ್ಯಾ - ವಂಚನೆಯಿಂದ, ಉಪರುದ್ಧಾಂ - ತಡೆಪಡಿಸಲ್ಪಟ್ಟ, ಮಾಂ - ನನ್ನನ್ನು, ತ್ವಂ - ನೀನು, ಪಾತಾಳಾತ್ - ಪಾತಾಳಲೋಕದಿಂದ, ಕೌಶಿಕೀಮಿವ - ಇಂದ್ರೈಶ್ವರ್ಯವನ್ನೋಪಾದಿಯಲ್ಲಿ, ತ್ರಾತುಂ - ರಕ್ಷಿಸುವದಕ್ಕೆ, ಅರ್ಹಸಿ - ಯೋಗ್ಯನಾಗು. ॥ ೬೮ ॥ ತತಃ - ಬಳಿಕ, ಸೀತಾ -

ವುದಕ್ಕೆ ನೀನು ದಕ್ಷನೇ ಆಗಿರುವೆ. ॥ ೬೧–೬೫ ॥ ನೀನು ಮಾಡುವ ಪ್ರಯತ್ನದಿಂದ ಶ್ರೀರಾಮನು ನನ್ನನ್ನು ಕರೆದುಕೊಂಡು ಹೋಗುವ ವಿಷಯದಲ್ಲಿ ಆಸಕ್ತಿಯುಳ್ಳವನಾಗುವನು. ಮಹಾ ಪರಾಕ್ರಮಶಾಲಿಯೂ, ನನ್ನ ಭರ್ತನೂ ಆದ ಶ್ರೀರಾಮನಿಗೆ ನಾನೀಗ ಹೇಳುವ ಮಾತುಗಳನ್ನು ಅನೇಕಸಲ ಹೇಳು. "ಎಲೈ ದಶರಥನಂದನನೇ! ನಾನು ಇನ್ನೊಂದು ತಿಂಗಳು ಮಾತ್ರ ಜೀವಿಸಿರುತ್ತೇನೆ. ಆ ಒಂದು ತಿಂಗಳು ಕಳೆದ ಬಳಿಕ ನಾನೆಷ್ಟು ಮಾತ್ರಕ್ಕೂ ಬದುಕಲಾರೆನು. ಇದನ್ನು ನಾನು ಪ್ರಮಾಣವಾಗಿ ಹೇಳುತ್ತಿರುವೆನು. ಎಲೈ ಮಹಾ ಪರಾಕ್ರಮಶಾಲಿಯೇ ! ಪೂರ್ವದಲ್ಲಿ ಇಂದ್ರಸಂಬಂಧವಾದ ಸಂಪದವು ಪಾತಾಳವನ್ನು ಸೇರಲು, ದೇವತೆಗಳಿಂದ ಸಂಪ್ರಾರ್ಥಿತನಾದ ಮಹಾ ವಿಷ್ಣುವು ಅದನ್ನು ತೆಗೆದುಕೊಂಡು ಬಂದು ದೇವೇಂದ್ರನಿಗಿತ್ತಂತೆ, ನೀನೂ ಮಹಾ ಪಾಪಕರ್ಮಿಯಾದ ಈ ರಾವಣಾಸುರನಿಂದ ಅಪಹೃತಳಾಗಿ, ರಾಕ್ಷಸರ ಆಜ್ಞೆಗೊಳಗಾಗಿರುವ ನನ್ನನ್ನು ಕಾಪಾಡು." ಎಲೈ ಹನುಮಂತನೇ ಈ

¶ "ಕೌಶಿಕೀ" ಐತಿಹ್ಯ - ಹಿಂದೆ ದೇವೇಂದ್ರನು ವೃತ್ರವಧೆಯನ್ನು ಮಾಡಿ ಬ್ರಹ್ಮಹತ್ಯಾಭಿಭೂತನಾದನು. ಅದರಿಂದ ಅವನು ನಿಶ್ರೀಕನಾದನು. ಆಗ ನಾರಾಯಣನು ದೇವತೆಗಳೊಡಗೂಡಿ ವೈಷ್ಣವಪದ್ಧತಿಯಿಂದ ಅಶ್ವಮೇಧಯಾಗವನ್ನು ಮಾಡಿಸಿ ಆ ದೇವೇಂದ್ರನನ್ನು ನಿಷ್ಕಲ್ಮಷನನ್ನಾಗಿ ಮಾಡಿ ಅವನನ್ನು ತ್ರೈಲೋಕ್ಯರಾಜ್ಯಾಭಿಷಿಕ್ತನನ್ನಾಗಿ ಮಾಡಿದನು. ಆ ಸಮಯದಲ್ಲಿ ಆತನು ಪುರಾತನವಾದ ಪುರಂದರಶ್ರೀಯನ್ನು ಕರೆದನು. ಆಗ ಆಕೆಯು ಗವಾಕ್ಷತೀರ್ಥದಲ್ಲಿರುವಳೆಂಬ ವಾರ್ತೆಯನ್ನು ಕೇಳಿ ಆತನು ದೇವತೆಗಳೊಡಗೂಡಿ ಅಲ್ಲಿಗೆ ಹೋದನು. ಆ ಸಮಯದಲ್ಲಿ ಆ ಶ್ರೀಯು ಇವರನ್ನು ನೋಡಿ ಪಾತಾಳಲೋಕಕ್ಕೆ ಹೋದಳು. ದೇವತೆಗಳಾರೂ ಪಾತಾಳಲೋಕವನ್ನು ಪ್ರವೇಶಿಸಲು

ತತೋ ವಸ್ತ್ರಗತಂ ಮುಕ್ತ್ವಾ ದಿವ್ಯಂ ಚೂಡಾಮಣಿಂ ಶುಭಂ । "ಪ್ರದೇಯೋ ರಾಘವಾಯೇ"ತಿ ಸೀತಾ ಹನುಮತೇ ದದೌ ॥೬೯॥ ಪ್ರತಿಗೃಹ್ಯ ತತೋ ವೀರೋ ಮಣಿರತ್ನಮನುತ್ತಮಮ್ । ಅಂಗುಳ್ಯಾ ಯೋಜಯಾಮಾಸ ನಹ್ಯಸ್ಯ ಪ್ರಾಭವದ್ಭುಜಃ ॥೭೦॥ ಮಣಿರತ್ನಂ ಕಪಿವರಃ ಪ್ರತಿಗೃಹ್ಯಾಭಿವಾದ್ಯ ಚ । ಸೀತಾಂ ಪ್ರದಕ್ಷಿಣಂ ಕೃತ್ವಾ ಪ್ರಣತಃ

ಸೀತಾದೇವಿಯು, ವಸ್ತ್ರಗತಂ - ವಸ್ತ್ರದಲ್ಲಿ ಕಟ್ಟಿರುವ, ದಿವ್ಯಂ - ಮನೋಹರವಾದ, ಶುಭಂ - ಶುಭಕರವಾದ, ಚೂಡಾಮಣಿಂ - ಶಿರೋಮಾಣಿಕ್ಯವನ್ನು, ಮುಕ್ತ್ವಾ - ಬಿಚ್ಚಿ, ರಾಘವಾಯ - ಶ್ರೀರಾಮನಿಗೆ, ಪ್ರದೇಯ ಇತಿ - ಕೊಡತಕ್ಕುದೆಂದು, ಹನುಮತೇ - ಆಂಜನೇಯನಿಗೆ, ದದೌ - ಇತ್ತಳು. ॥೬೯॥ ತತಃ - ಬಳಿಕ, ವೀರಃ - ಶೂರನಾದ ಆಂಜನೇಯನು, ಅನುತ್ತಮಂ - ಸರ್ವೋತ್ತಮವಾದ, ಮಣಿರತ್ನಂ - ಶಿರೋರತ್ನವನ್ನು, ಪ್ರತಿಗೃಹ್ಯ - ತೆಗೆದುಕೊಂಡು, ಅಂಗುಳ್ಯಾ - ಬೆರಳಿನಿಂದ, ಯೋಜಯಾಮಾಸ - ಸಿಲುಕಿಸಿದನು, ಅಸ್ಯ - ಈ ಆಂಜನೇಯನ, ಭುಜಃ - ಬಾಹುವು, ನಹಿಪ್ರಾಭವತ್ - ಪ್ರವೇಶಿಸಲಿಲ್ಲ. ॥೭೦॥ ಕಪಿವರಃ - ವಾನರಶ್ರೇಷ್ಠನು, ಮಣಿರತ್ನಂ - ರತ್ನಖಚಿತವಾದ ಶಿರೋಮಣಿಯನ್ನು, ಪ್ರತಿಗೃಹ್ಯ - ತೆಗೆದುಕೊಂಡು, ಸೀತಾಂ - ಸೀತಾದೇವಿಯನ್ನು, ಪ್ರದಕ್ಷಿಣಂಕೃತ್ವಾ - ಪ್ರದಕ್ಷಿಣಮಾಡಿ, ಅಭಿವಾದ್ಯ - ನಮಸ್ಕರಿಸಿ, ಪ್ರಣತಃ - ನಮ್ರನಾಗಿ, ಪಾರ್ಶ್ವತಃ - ಪಾರ್ಶ್ವಭಾಗದಲ್ಲಿ, ಸ್ಥಿತಃ-ನಿಂತನು.

ಮಾತುಗಳನ್ನು ನೀನು ಶ್ರೀರಾಮನಿಗೆ ಅನೇಕ ಬಾರಿ ಹೇಳು. ಎಂದು ಹೇಳಿದಳು. ಆ ಬಳಿಕ ಆಕೆಯು ತನ್ನ ಸೆರಗಿನಲ್ಲಿ ಗಂಟುಹಾಕಿದ್ದ ದಿವ್ಯವಾದ ಚೂಡಾಮಣಿಯನ್ನು ಬಿಚ್ಚಿ ಆಂಜನೇಯನ ಕೈಯಲ್ಲಿಟ್ಟು "ಎಲೈ ಮಾರುತಿಯೇ! ಇದನ್ನು ಶ್ರೀರಾಮನಿಗೆ ಕೊಡುವವನಾಗು" ಎಂದು ಹೇಳಿದಳು. ಆಗ ಮಹಾ ಪರಾಕ್ರಮಶಾಲಿಯಾದ ಆಂಜನೇಯನು ಆ ಉತ್ತಮ ರತ್ನವನ್ನು ತೆಗೆದುಕೊಂಡು ಕೂದಲನ್ನು ಪೋಣಿಸುವುದಕ್ಕಾಗಿ ಮಾಡಿದ ಅದರ ತೂಬನ್ನು ತನ್ನ ಬೆರಳಿಗೆ ಹಾಕಿಕೊಂಡನು. ॥೬೯–೭೦॥ ಆತನಾಗ ಸೂಕ್ಷ್ಮರೂಪವನ್ನು ಧರಿಸಿದ್ದನಾದುದರಿಂದ ಅದು ಅವನ ಬೆರಳಿಗೆ ಸರಿಹೋಯಿತು. ಹೀಗೆ ವಾನರಶ್ರೇಷ್ಠನಾದ ಆಂಜನೇಯನು ಆ ಶಿರೋರತ್ನಶ್ರೇಷ್ಠವನ್ನು ತೆಗೆದುಕೊಂಡು ಸೀತಾದೇವಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ, ಬಹಳ ನಮ್ರನಾಗಿ ಒಂದು ಪಕ್ಕಕ್ಕೆ ಸರಿದು ನಿಂತನು. ಆಗಲಾತನು ಸೀತಾದೇವಿಯನ್ನು ನೋಡಿದುದರಿಂದುಂಟಾದ ಅಧಿಕ ಸಂತೋಷದಿಂದ ತುಂಬಿದ ಹೃದಯವುಳ್ಳವ

ಅಸಮರ್ಥರಾದರು. ಆಗ ಅಶರೀರವಾಣಿಯು, "ಎಲೈ ದೇವತೆಗಳಿರಾ, ನಿಮ್ಮಲ್ಲಿ ಯಾವನು ಸರ್ವಲಕ್ಷಣಸಂಪನ್ನನಾಗಿರುವನೋ ಅವನು ಈ ಶ್ರೀಯನ್ನು ಹಿಂತಿರುಗಿಸಲು ಸಮರ್ಥನಾಗುತ್ತಾನೆ" ಎಂದು ಹೇಳಿತು. ಆಗ ದೇವತೆಗಳೆಲ್ಲರೂ ಪುರುಷೋತ್ತಮನನ್ನೇ ಮರೆಹೊಕ್ಕು ಪ್ರಾರ್ಥಿಸಿದರು. ಪುರುಷೋತ್ತಮನಾದ ನಾರಾಯಣನು ಅವರ ಪ್ರಾರ್ಥನೆಯಂತೆ ಪಾತಾಳಕ್ಕೆ ಹೋಗಿ ಆ ಪುರಂದರಶ್ರೀಯನ್ನು ಕರೆತಂದು ಪುರಂದರನಿಗೆ ಕೊಟ್ಟನು" ಇದು ಬ್ರಹ್ಮಾಂಡಪುರಾಣದ ಕಥೆ. ಭಾರತದಲ್ಲಿ ಈ ಕೌಶಿಕೀ ಕಥೆಯು ಬೇರೆ ರೀತಿಯಾಗಿದೆ. ಉಚಥ್ಯನ ಭಾರ್ಯೆಯು ಯಮುನಾನದಿಯಲ್ಲಿ ಸ್ನಾನ ಮಾಡುತ್ತಿರಲು ವರುಣನು ಅವಳನ್ನು ಅಪಹರಿಸಿ ಪಾತಾಳಕ್ಕೊಯ್ದನು. ಆಗ ಉಚಥ್ಯನು ಆಕೆಯನ್ನು ತನಗೊಪ್ಪಿಸಬೇಕೆಂದು ನಾರದನ ಮೂಲಕ ವರುಣನನ್ನು ಕೇಳಿಸಿ ಅಕೃತಾರ್ಥನಾದನು. ಆಗ ಆತನಿಗೆ ಮಿತಿಮೀರಿದ ಕೋಪವುಂಟಾಯಿತು. ಕೂಡಲೇ ಅವನು ಪಾತಾಳಹ್ರದವನ್ನು ಬತ್ತಿಸಿಬಿಟ್ಟನು. ಆ ಉಚಥ್ಯನ ಹೆಂಡತಿಯೇ ಕೌಶಿಕೀ ಎಂದು ಕೆಲವರು ಹೇಳುತ್ತಾರೆ. (ಗೋ)

ಪಾರ್ಶ್ವತಸ್ಸ್ಥಿತಃ ॥ ೭೧ ॥ ಹರ್ಷೇಣ ಮಹತಾ ಯುಕ್ತ ಸ್ಸೀತಾದರ್ಶನಜೇನ ಸಃ ।
ಹೃದಯೇನ ಗತೋ ರಾಮಂ ಶರೀರೇಣ ತು ವಿಷ್ಠಿತಃ ॥ ೭೨ ॥

ಮಣಿವರಮುಪಗೃಹ್ಯ ತಂ ಮಹಾರ್ಹಂ
ಜನಕನೃಪಾತ್ಮಜಯಾ ಧೃತಂ ಪ್ರಭಾವಾತ್ ।
ಗಿರಿರಿವ ಪವನಾವಧೂತಮುಕ್ತಃ
ಸುಖಿತಮನಾಃ ಪ್ರತಿಸಂಕ್ರಮಂ ಪ್ರಪೇದೇ ॥ ೭೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟತ್ರಿಂಶಸ್ಸರ್ಗಃ

॥ ೭೧ ॥ ಸೀತಾ....ನ - ಸೀತಾದರ್ಶನದಿಂದ ಹುಟ್ಟಿದ, ಮಹ....ಣ - ಮಹಾ ಸಂತೋಷದಿಂದ, ಯುಕ್ತಃ - ಕೂಡಿರುವ, ಸಃ - ಆ ಆಂಜನೇಯನು, ಹೃದಯೇನ - ಮನಸ್ಸಿನಿಂದ, ರಾಮಂ - ಶ್ರೀರಾಮನನ್ನು, ಗತಃ - ಹೊಂದಿದನು, ಕಿಂತು - ಮತ್ತೇನೆಂದರೆ, ಶರೀರೇಣ - ದೇಹದಿಂದ, ವಿಷ್ಠಿತಃ - ನಿಂತಿದ್ದನು. ॥ ೭೨ ॥ ಜನ....ಯಾ - ಜನಕಪುತ್ರಿಯಿಂದ, ಧೃತಃ - ಧರಿಸಲ್ಪಟ್ಟ, ಮಹಾರ್ಹಂ - ಅಮೂಲ್ಯವಾದ, ತಂಮಣಿವರಂ - ಆ ಶಿರೋಮಣಿಯನ್ನು, ಪ್ರಭಾವಾತ್ - ಸಾಮರ್ಥ್ಯದಿಂದ, ಉಪಗೃಹ್ಯ - ಗ್ರಹಿಸಿ, ಸುಖಿತಮನಾಃ - ಸಂತೋಷಗೊಂಡ ಮನವುಳ್ಳ ಆಂಜನೇಯನು, ಪವ....ಕ್ತಃ - ಗಾಳಿಯಿಂದ ಕೊಡಹಲ್ಪಟ್ಟು ಬಿಡಲ್ಪಟ್ಟ, ಗಿರಿರಿವ - ಬೆಟ್ಟದಂತೆ, ಪ್ರತಿಸಂಕ್ರಮಂ - ಹಿಂದಿರುಗುವಿಕೆಯನ್ನು, ಪ್ರಪೇದೇ - ಹೊಂದಿದನು. ॥ ೭೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟತ್ರಿಂಶಸ್ಸರ್ಗಃ.

ನಾಗಿ, ಶರೀರಮಾತ್ರದಿಂದ ಅಲ್ಲಿದ್ದನಾಗಲಿ ಮನಸ್ಸಿನಿಂದ ಆಗಲೇ ಶ್ರೀರಾಮನ ಬಳಿಗೈದಿದ್ದನು. ಈ ರೀತಿ ಆಂಜನೇಯನು ತನ್ನ ಸಾಮರ್ಥ್ಯದಿಂದ ಸೀತಾದೇವಿಯನ್ನು ನೋಡಿ, ಜನಕರಾಜಕುಮಾರಿಯಾದ ಆಕೆಯು ಧರಿಸುತ್ತಿದ್ದ ಮಹಾರ್ಹವಾದ ಆ ಚೂಡಾಮಣಿಯನ್ನು ಕೈಕೊಂಡು ಬಹಳವಾಗಿ ಸಂತೋಷವನ್ನು ಹೊಂದಿ, ಗಾಳಿಯಿಂದ ವಿಚಲಿತವಾಗಿ, ಪುನಃ ಆ ಗಾಳಿಯು ನಿಂತಮೇಲೆ ಸ್ಥಿರವಾಗಿರುವ ದೊಡ್ಡ ಬೆಟ್ಟದಂತೆ ದೃಢಮನಸ್ಸುಳ್ಳವನಾಗಿ ಪುನಃ ಶ್ರೀರಾಮನ ಸಮೀಪಕ್ಕೆ ಹೋಗುವ ಪ್ರಯತ್ನದಲ್ಲಿದ್ದನು. ॥ ೭೧-೭೩ ॥

ಇಂತಿದು ಸೀತಾಕೃತ ಚೂಡಾಮಣಿ ಪ್ರದಾನ ವೃತ್ತಾಂತವೆಂಬ
ಮೂವತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಏಕೋನಚತ್ವಾರಿಂಶಸ್ಸರ್ಗಃ

ಮಣಿಂ ದತ್ವಾ ತತಸ್ಸೀತಾ ಹನುಮಂತ ಮಥಾಬ್ರವೀತ್ । " ಅಭಿಜ್ಞಾನ ಮಭಿಜ್ಞಾತ ಮೇತದ್ರಾಮಸ್ಯ ತತ್ವತಃ ॥ ೧ ॥ ಮಣಿಂತು ದೃಷ್ಟ್ವಾ ರಾಮೋ ವೈ ತ್ರಯಾಣಾಂ ಸಂಸ್ಮರಿಷ್ಯತಿ । ವೀರೋ ಜನನ್ಯಾ ಮಮಚ ರಾಜ್ಞೋ ದಶರಥಸ್ಯಚ ॥ ೨ ॥ ಸಭೂಯಸ್ತ್ವಂ ಸಮುತ್ಸಾಹ ಶ್ಚೋದಿತೋ ಹರಿಸತ್ತಮ ! । ಅಸ್ಮಿನ್ಕಾರ್ಯ ಸಮಾರಂಭೇ ಪ್ರಚಿಂತಯ ಯದುತ್ತರಂ ॥ ೩ ॥ ತ್ವಮಸ್ಮಿನ್ ಕಾರ್ಯನಿರ್ಯೋಗೇ ಪ್ರಮಾಣಂ ಹರಿಸತ್ತಮ ! । ಹನೂಮನ್ಯತ್ನಮಾಸ್ಥಾಯ ದುಃಖಕ್ಷಯಕರೋ ಭವ ।

ತತಃ - ಬಳಿಕ, ಸೀತಾ - ಸೀತಾದೇವಿಯು, ಮಣಿಂ - ಶಿರೋಮಾಣಿಕ್ಯವನ್ನು, ದತ್ವಾ - ಕೊಟ್ಟು, ಅಥ - ಅನಂತರದಲ್ಲಿ, ಹನುಮಂತಂ - ಆಂಜನೇಯನನ್ನು ಕುರಿತು, ಅಬ್ರವೀತ್ - ನುಡಿದಳು, ಏತತ್ - ಈ ರತ್ನವು, ರಾಮಸ್ಯ - ಶ್ರೀರಾಮನಿಗೆ, ಅಭಿಜ್ಞಾನಂ - ಗುರ್ತಾಗಿ, ತತ್ವತಃ - ಯಥಾರ್ಥವಾಗಿ, ಅಭಿಜ್ಞಾತಂ - ತಿಳಿಯಲ್ಪಟ್ಟದೆ. ॥ ೧ ॥ ವೀರಃ - ಶೂರನಾದ, ರಾಮಸ್ತು - ಶ್ರೀರಾಮನಾದರೆ, ಮಣಿಂ - ರತ್ನವನ್ನು, ದೃಷ್ಟ್ವಾವೈ - ನೋಡುತ್ತಲೇ, ಜನನ್ಯಾಃ - ತಾಯಿಯು, ಮಮ - ನಾನು, ದಶರಥಸ್ಯರಾಜ್ಞಶ್ಚ - ದಶರಥರಾಯನೆಂಬ, ತ್ರಯಾಣಾಂ - ಮೂವರನ್ನೂ, ಸಂಸ್ಮರಿಷ್ಯತಿ - ಸ್ಮರಿಸುವನು. ॥ ೨ ॥ ಹೇ ಹರಿಸತ್ತಮ - ಎಲೈ ಕಪಿಶ್ರೇಷ್ಠನೆ, ಸಮುತ್ಸಾಹೇ - ರಾಮನನ್ನು ಪ್ರೋತ್ಸಾಹಗೊಳಿಸುವ ವಿಷಯದಲ್ಲಿ, ಚೋದಿತಃ - ಪ್ರೇರಿತನಾದ, ಸತ್ವಂ - ಅಂತಹ ನೀನು, ಅಸ್ಮಿನ್ಕಾರ್ಯ ಸಮಾರಂಭೇ - ಈ ಕಾರ್ಯ ಪ್ರಯತ್ನದಲ್ಲಿ, ಉತ್ತರಂ - ಮುಂದೆ ನಡೆಸತಕ್ಕ ಕಾರ್ಯವು, ಯತ್ - ಯಾವುದೋ, ತತ್ - ಅದನ್ನು, ಪ್ರಚಿಂತಯ - ಆಲೋಚಿಸು. ॥ ೩ ॥ ಹೇ ಹರಿಸತ್ತಮ - ಎಲೈ ವಾನರೋತ್ತಮನೆ, ಹೇ ಹನುಮನ್ - ಎಲೈ ಆಂಜನೇಯನೆ, ಅಸ್ಮಿನ್ - ಈ, ಕಾರ್ಯನಿರ್ಯೋಗೇ - ಕಾರ್ಯಸಂಘಟನೆಯಲ್ಲಿ, ಪ್ರಮಾಣಂ - ವ್ಯವಸ್ಥಾಪಕನಾಗಿ, ಯತ್ನಂ - ಪ್ರಯತ್ನವನ್ನು, ಆಸ್ಥಾಯ - ಮಾಡಿ, ದುಃಖಕ್ಷಯಕರಃ - ದುಃಖನಾಶಕರನು, ಭವ - ಆಗು, ಚಿಂತ... ತಃ - ಯೋಚಿಸುತ್ತಿರುವ,

---

ಸೀತಾದೇವಿಯು ಮಣಿಶ್ರೇಷ್ಠವಾದ ಆ ಚೂಡಾಮಣಿಯನ್ನು ಮಾರುತಿಗಿತ್ತು ಪುನಃ ಆತನನ್ನು ನೋಡಿ, "ಎಲೈ ಆಂಜನೇಯನೇ ! ಈಗ ನಾನು ಕೊಟ್ಟಿರುವ ಗುರ್ತು ಶ್ರೀರಾಮನು ಚೆನ್ನಾಗಿ ಅರಿತಂತಹುದು ; ಇದನ್ನು ನೀನಾತನಿಗೆ ಕೊಡು. ಮಹಾಪರಾಕ್ರಮಶಾಲಿಯಾದ ಆತನು ಈ ಚೂಡಾಮಣಿಯನ್ನು ನಿನ್ನಿಂದ ತೆಗೆದುಕೊಂಡ ಕೂಡಲೇ, ತನ್ನ ತಾಯಿಯನ್ನೂ ದಶರಥರಾಯನನ್ನೂ, ನನ್ನನ್ನೂ ಸ್ಮರಿಸುವನು. ಎಲೈ ವಾನರಶ್ರೇಷ್ಠನೇ ! ಮಹಾ ಬುದ್ಧಿಶಾಲಿಯಾದ ನೀನು ಹೇಗಾದರೂ ಆ ರಾಮನನ್ನು ಪ್ರೋತ್ಸಾಹಗೊಳಿಸಬೇಕೆಂದು ಮತ್ತೆ ಹೇಳುತ್ತಿರುವೆನು. ಈಗಲೀಕಾರ್ಯವನ್ನುಪಕ್ರಮಿಸಲು ಯಾವುದು ಉಚಿತವೋ ಅದನ್ನು ನೀನು ಚೆನ್ನಾಗಿ ಆಲೋಚಿಸುವವನಾಗು. ಅಯ್ಯಾ ಕಪಿಸತ್ತಮನೇ ! ಈ ಕಾರ್ಯಸಂಘಟನೆಯ ವಿಷಯದಲ್ಲಿ ನೀನೇ ಪ್ರಮಾಣವು. ಈ ಕೆಲಸವು ನಿನ್ನಿಂದಲೇ ನಡೆಯಬೇಕಾಗಿರುವು

ತಸ್ಯ ಚಿಂತಯತೋ ಯತ್ನೋ ದುಃಖಕ್ಷಯಕರೋ ಭವೇತ್ ॥ ೪ ॥ ಸ ತಥೇತಿ ಪ್ರತಿಜ್ಞಾಯ ಮಾರುತಿರ್ಭೀಮವಿಕ್ರಮಃ । ಶಿರಸಾ ವಂದ್ಯ ವೈದೇಹೀಂ ಗಮನಾಯೋಪಚಕ್ರಮೇ ॥ ೫ ॥ ಜ್ಞಾತ್ವಾ ಸಂಪ್ರಸ್ಥಿತಂ ದೇವೀ ವಾನರಂ ಮಾರುತಾತ್ಮಜಂ । ಬಾಷ್ಪಗದ್ಗದಯಾ ವಾಚಾ ಮೈಥಿಲೀ ವಾಕ್ಯಮಬ್ರವೀತ್ ॥ ೬ ॥ "ಕುಶಲಂ ಹನುಮನ್! ಬ್ರೂಯಾಸ್ಸಹಿತೌ ರಾಮಲಕ್ಷ್ಮಣೌ । ಸುಗ್ರೀವಂಚ ಸಹಾಮಾತ್ಯಂ ವೃದ್ಧಾನ್ ಸರ್ವಾಂಶ್ಚ ವಾನರಾನ್ । ಬ್ರೂಯಾಸ್ತ್ವಂ ವಾನರಶ್ರೇಷ್ಠ! ಕುಶಲಂ ಧರ್ಮಸಂಹಿತಂ ॥ ೮ ॥ ಯಥಾ ಸಚ ಮಹಾಬಾಹುರ್ಮಾಂ ತಾರಯತಿ ರಾಘವಃ ।

ತಸ್ಯ - ಆ ನಿನ್ನ, ಯತ್ನಃ - ಪ್ರಯತ್ನವು, ದುಃಖಕ್ಷಯಕರಃ - ದುಃಖಪರಿಹಾರಕವು, ಭವೇತ್ - ಆದೀತು. ॥ ೪ ॥ ಭೀಮವಿಕ್ರಮಃ - ಭಯಂಕರವಾದ ಪರಾಕ್ರಮವುಳ್ಳ, ಸಮಾರುತಿಃ - ಆ ಆಂಜನೇಯನು, ತಥೇತಿ - ಹಾಗೆಯೇ ಆಗಲೆಂದು, ಪ್ರತಿಜ್ಞಾಯ - ಪ್ರತಿಜ್ಞೆಮಾಡಿ, ವೈದೇಹೀಂ - ಸೀತಾದೇವಿಯನ್ನು ಕುರಿತು, ಶಿರಸಾ - ಶಿರಸ್ಸಿನಿಂದ, ವಂದ್ಯ - ನಮಸ್ಕರಿಸಿ, ಗಮನಾಯ - ಪ್ರಯಣಿಸಲು, ಉಪಚಕ್ರಮೇ - ಪ್ರಯತ್ನಪಟ್ಟನು ॥ ೫ ॥ ಮೈಥಿಲೀದೇವೀ - ಸೀತಾದೇವಿಯು, ಮಾರುತಾತ್ಮಜಂ - ವಾಯುಪುತ್ರನಾದ, ವಾನರಂ - ಕಪಿಯನ್ನು, ಪ್ರಸ್ಥಿತಂ - ಪ್ರಯಾಣೋದ್ಯುಕ್ತನನ್ನಾಗಿ, ಜ್ಞಾತ್ವಾ - ಅರಿತು. ಬಾಷ್ಪಗದ್ಗದಯಾ - ಕಂಬನಿಗಳಿಂದ ವಿಸ್ವರವಾದ, ವಾಚಾ - ಮಾತಿನಿಂದ, ವಾಕ್ಯಂ - ವಚನವನ್ನು, ಅಬ್ರವೀತ್ - ಹೇಳಿದಳು. ॥ ೬ ॥ ಹೇ ಹನುಮನ್ - ಎಲೈ ಹನುಮಂತನೆ, ಸಹಿತೌ - ಒಂದುಕಡೆ ಸೇರಿರುವ, ರಾಮಲಕ್ಷ್ಮಣೌ-ರಾಮಲಕ್ಷ್ಮಣರನ್ನು ಕುರಿತು, ಕುಶಲಂ-ಕ್ಷೇಮವನ್ನು, ಬ್ರೂಯಾಃ-ಹೇಳು, ಹೇ ವಾನರಶ್ರೇಷ್ಠ ಎಲೈ ಕಪಿವರನೆ, ತ್ವಂ - ನೀನು, ಸಹಾಮಾತ್ಯಂ - ಮಂತ್ರಿಗಳಿಂದೊಡಗೂಡಿದ, ಸುಗ್ರೀವಂಚ - ಸುಗ್ರೀವನನ್ನೂ, ವೃದ್ಧಾನ್ - ಮುದುಕರಾದ, ಸರ್ವಾನ್ವಾನರಾಂಶ್ಚ - ಕಪಿಗಳನ್ನು ಕುರಿತು, ಧರ್ಮಸಂಹಿತಂ - ಧರ್ಮದಿಂದೊಡಗೂಡಿದ, ಕುಶಲಂ - ಕ್ಷೇಮವನ್ನು, ಬ್ರೂಯಾಃ - ಹೇಳು. ॥ ೮ ॥ ಮಹಾಬಾಹುಃ - ಮಹಾ ಭುಜಗಳುಳ್ಳ, ಸರಾಘವಃ - ಆ ಶ್ರೀರಾಮನು, ಅಸ್ಮಾತ್ -

ದೆಂಬುದನ್ನು ಮರೆಯದಿರು. ನೀನು ಮಾಡಬೇಕಾದ ಕಾರ್ಯವನ್ನು ಚೆನ್ನಾಗಿ ನಿರ್ವಹಿಸಿ ನನ್ನ ದುಃಖವನ್ನು ಕಳೆಯಬೇಕು. ಆಲೋಚನೆಯ ವಿಚಾರದಲ್ಲಿ ಮಹಾ ಬುದ್ಧಿವಂತನಾದ ನೀನೇ ಈ ಕಾರ್ಯಸಂಘಟಕನಾಗಿರುವುದರಿಂದ ನನ್ನ ದುಃಖವು ಕೊನೆಗಾಣುವುದೆಂಬುದರಲ್ಲಿ ಸಂಶಯವಿಲ್ಲವು" ಎಂದು ಹೇಳಿದಳು. ॥ ೧-೫ ॥ ಸೀತಾದೇವಿಯ ಮಾತುಗಳನ್ನು ಕೇಳಿ ಮಹಾ ಭಯಂಕರಪರಾಕ್ರಮವುಳ್ಳ ವಾಯುನಂದನನು "ಎಲೆ ತಾಯೇ! ನೀನು ಯೋಚಿಸದಿರು. ನಾನು ಈ ಕಾರ್ಯವನ್ನು ಅಗತ್ಯವಾಗಿಯೂ ನಿರ್ವಹಿಸುತ್ತೇನೆ" ಎಂದು ಪ್ರಮಾಣ ಮಾಡಿ ಹೇಳಿ ಆಕೆಗೆ ನಂಬುಗೆಯನ್ನುಂಟುಮಾಡಿ ಪ್ರಯಾಣ ಸನ್ನದ್ಧನಾದನು. ಆಂಜನೇಯನು ಹೊರಟು ನಿಂತಿರುವುದನ್ನು ಕಂಡು ಜಾನಕಿಯು ಗದ್ಗದ ಸ್ವರಭರಿತಳಾಗಿ ಆತನನ್ನು ನೋಡಿ, "ಎಲೈ ಮಾರುತಿಯೇ? ಶ್ರೀರಾಮಲಕ್ಷ್ಮಣರಿಬ್ಬರಿಗೂ, ನಾನು ಕ್ಷೇಮವಾರ್ತೆಯನ್ನು ಕೇಳಿದೆನೆಂದು ತಿಳಿಸು. ಎಲೈ ವಾನರಶ್ರೇಷ್ಠನೇ! ಮಂತ್ರಿಸಮೇತನಾದ ಸುಗ್ರೀವನ ಕುಶಲವನ್ನು ಕೇಳಿದೆನೆಂದು ಹೇಳು. ಅಲ್ಲದೆ ಅಲ್ಲಿರುವ ಕಪಿವೃದ್ಧರಿಗೂ, ಮಿಕ್ಕ ವಾನರ ವೀರರಿಗೂ ನಾನು ಧರ್ಮಯುಕ್ತವಾದ ಕುಶಲವನ್ನು ಕೇಳಿದೆನೆಂದರುಹು. ಎಲೈ ಆಂಜನೇಯನೇ!

ಅಸ್ಮಾದ್ದುಃಖಾಂಬುಸಂರೋಧಾತ್ತ್ವಂ ಸಮಾಧಾತು ಮರ್ಹಸಿ ॥ ೯ ॥ ಜೀವಂತೀಂ ಮಾಂ ಯಥಾ ರಾಮಃ ಸಂಭಾವಯತಿ ಕೀರ್ತಿಮಾನ್ । ತತ್ತ್ವಯಾ ಹನುಮನ್ವಾಚ್ಯಂ ವಾಚಾ ಧರ್ಮಮವಾಪ್ನುಹಿ ॥ ೧೦ ॥ ನಿತ್ಯಮುತ್ಸಾಹಯುಕ್ತಾಶ್ಚ ವಾಚಶ್ಶ್ರುತ್ವಾ ಮಯೇರಿತಾಃ । ವರ್ಧಿಷ್ಯತೇ ದಾಶರಥೇಃ ಪೌರುಷಂ ಮದವಾಪ್ತಯೇ ॥ ೧೧ ॥ ಮತ್ಸಂದೇಶಯುತಾ ವಾಚಃ ತ್ವತ್ತಶ್ಶ್ರುತ್ವೈವ ರಾಘವಃ । ಪರಾಕ್ರಮವಿಧಿಂ ವೀರೋ ವಿಧಿವತ್ಸಂವಿಧಾಸ್ಯತಿ" ॥ ೧೨ ॥ ಸೀತಾಯಾ ವಚನಂ ಶ್ರುತ್ವಾ ಹನುಮಾನ್ಮಾರುತಾತ್ಮಜಃ । ಶಿರಸ್ಯಂಜಲಿಮಾಧಾಯ ವಾಕ್ಯಮುತ್ತರಮಬ್ರವೀತ್ ॥ ೧೩ ॥ ಕ್ಷಿಪ್ರಮೇ

ಈ, ದುಃಖಾ....ತ್ - ದುಃಖಸಮುದ್ರದಿಂದ, ಮಾಂ - ನನ್ನನ್ನು, ಯಥಾ - ಹೇಗೆ, ತಾರಯತಿ - ಕಡೆ ಹಾಯಿಸುವನೋ, ತಥಾ - ಹಾಗೆ ತ್ವಂ - ನೀನು, ಸಮಾಧಾತುಂ - ಸಮಾಧಾನಗೊಳಿಸಲು, ಅರ್ಹಸಿ - ಯೋಗ್ಯನಾಗಿರುತ್ತೀಯೆ. ॥ ೯ ॥ ಹೇ ಹನುಮನ್-ಓ ಆಂಜನೇಯನೇ, ಕೀರ್ತಿಮಾನ್-ಯಶೋವಂತ ನಾದ, ರಾಮಃ - ಶ್ರೀರಾಮನು, ಮಾಂ - ನನ್ನನ್ನು, ಜೀವಂತೀಂ - ಬದುಕಿರುವಳನ್ನಾಗಿ, ಯಥಾ ಸಂಭಾವತಿ - ಹೇಗೆ ಸಂಭಾವಿಸುವನೋ, ತಥಾ - ಹಾಗೆ, ತತ್ - ಅಮಾತು, ವಾಚ್ಯಂ - ಹೇಳತಕ್ಕುದು, ವಾಚಾ - ವಾಕ್ಕಿನಿಂದ, ಧರ್ಮಂ - ಪುಣ್ಯವನ್ನು, ಅವಾಪ್ನುಹಿ - ಹೊಂದು. ॥ ೧೦ ॥ ನಿತ್ಯಂ - ಯಾವಾಗಲೂ, ತ್ವಯಾ-ನಿನ್ನಿಂದ, ಈರಿತಾಃ-ಹೇಳಲ್ಪಟ್ಟ, ಉತ್ಸಾಹಯುಕ್ತಾಃ-ಸಂತೋಷದಿಂದೊಡ ಗೂಡಿದ, ವಾಚಶ್ಚ - ಮಾತುಗಳನ್ನೂ ಸಹ, ಶ್ರುತ್ವಾ - ಕೇಳಿ, ಮದವಾಪ್ತಯೇ - ನನ್ನನ್ನು ಹೊಂದುವ ವಿಷಯದಲ್ಲಿ, ದಾಶರಥೇಃ - ಶ್ರೀರಾಮನ, ಪೌರುಷಂ - ಪರಾಕ್ರಮವು, ವರ್ಧಿಷ್ಯತೇ - ವೃದ್ಧಿಹೊಂದು ವುದು ॥ ೧೧ ॥ ವೀರಃ - ಶೂರನಾದ, ರಾಘವಃ - ಶ್ರೀರಾಮನು, ಮತ್ಸಂದೇಶಯುತಾಃ - ನನ್ನ ವೃತ್ತಾಂತದಿಂದ ಕೂಡಿದ, ವಾಚಃ - ಮಾತುಗಳನ್ನು, ತ್ವತ್ತಃ - ನಿನ್ನಿಂದ, ಶ್ರುತ್ವೈವ - ಕೇಳುತ್ತಲೇ, ಪರಾ....ಧಿಂ-ಸಾಮರ್ಥ್ಯದ ರೀತಿಯನ್ನು, ವಿಧಿವತ್-ಚನ್ನಾಗಿ, ಸಂವಿಧಾಸ್ಯತಿ-ಮಾಡುವನು. ॥ ೧೨ ॥ ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಸೀತಾಯಾಃ - ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಶಿರಸಿ - ಮುಂಡೆಯಲ್ಲಿ, ಅಂಜಲಿಂ - ಬೊಗಸೆಯನ್ನು,

ಶ್ರೀರಾಮನು ನನ್ನನ್ನು ಇಂತಹ ದುಃಖಸಮುದ್ರದಿಂದ ಕಡೆಹಾಯಿಸಲು ತಕ್ಕ ಪ್ರಯತ್ನ ವನ್ನು ನೀನೇ ಮಾಡಬೇಕೀ. ಮಹಾ ಕೀರ್ತಿವಂತನಾದ ಶ್ರೀರಾಮನು ನಾನು ಜೀವಿಸಿರು ವಂತೆಯೇ ನನ್ನನ್ನು ಸನ್ಮಾನಿಸುವಂತೆ ಮಾಡುವ ಭಾರವು ನಿನ್ನಮೇಲಿರುವುದು. ಎಲೈ ಹನುಮಂತನೇ! ಶ್ರೀರಾಮನು ಕಾರ್ಯಪರನಾಗಲು ನೀನು ಪ್ರೋತ್ಸಾಹದ ವಾಕ್ಯಗಳನ್ನಾಡು. ಬಾಯಿಮಾತುಗಳನ್ನಾಡಿ ನೀನು ಪುಣ್ಯವನ್ನು ಸಂಪಾದಿಸಿಕೊ! ॥ ೬–೧೦ ॥ ಎಲೈ ಕಪಿ ಶ್ರೇಷ್ಠನೇ! ನೀನು ನಿರಂತರವೂ ಪ್ರೋತ್ಸಾಹಕರಗಳಾದ ವಾಕ್ಯಗಳನ್ನಾಡುವುದರಿಂದ ಶ್ರೀರಾಮನಲ್ಲಿ ಉತ್ಸಾಹವನ್ನು ಹುರಿದುಂಬಿಸಬೇಕು. ಅದರಿಂದ ಆತನ ಪೌರುಷವು ಪ್ರವೃದ್ಧವಾಗಬೇಕು. ಆತನು ಪೌರುಷಪ್ರದರ್ಶನಪರನಾದರೆ ನನ್ನನ್ನು ಬೇಗನೇ ಹೊಂದ ಬಲ್ಲನು. ನೀನು ಅನೇಕಸಲ ಪ್ರೋತ್ಸಾಹದ ವಾಕ್ಯಗಳನ್ನಾಡಿದರೆ ಆತನು ನನ್ನನ್ನು ಹೊಂದುವು ದಕ್ಕೆ ತಕ್ಕ ಪ್ರಯತ್ನವನ್ನು ಯಥಾವಿಧಿಯಾಗಿ ಮಾಡುವನೆಂಬುದರಲ್ಲಿ ಸಂಶಯವಿಲ್ಲವು." ಎಂದು ಹೇಳಿದಳು. ॥ ೧೧–೧೨ ॥ ಹೀಗೆ ನುಡಿದ ಸೀತಾದೇವಿಯ ಮಾತುಗಳನ್ನು ಕೇಳಿ ವಾಯುಪುತ್ರನಾದ ಆಂಜನೇಯನು ಆಕೆಗೆ ಮಣಿದು, ಅಂಜಲಿಬದ್ಧನಾಗಿ, "ಅಮ್ಮಾ,

ಷ್ಯತಿ ಕಾಕುತ್ಸ್ಥೋ ಹರ್ಯೃಕ್ಷಪ್ರವರೈರ್ವೃತಃ । ಯಸ್ತೇ ಯುಧಿ ವಿಜಿತ್ಯಾರೀನ್ ಶೋಕಂ ವ್ಯಪನಯಿಷ್ಯತಿ ॥ ೧೪ ॥ ನಹಿ ಪಶ್ಯಾಮಿ ಮರ್ತ್ಯೇಷು ನಾಸುರೇಷು ಸುರೇಷುವಾ । ಯಸ್ತಸ್ಯ ಕ್ಷಿಪತೋ ಬಾಣಾನ್ ಸ್ಥಾತುಮುತ್ಸಹತೇಽಗ್ರತಃ ॥ ೧೫ ॥ ಅಪ್ಯರ್ಕಮಪಿ ಪರ್ಜನ್ಯಮಪಿ ವೈವಸ್ವತಂ ಯಮಂ । ಸಹಿ ಸೋಢುಂ ರಣೇ ಶಕ್ತಸ್ತವ ಹೇತೋರ್ವಿಶೇಷತಃ ॥೧೬॥ ಸಹಿ ಸಾಗರಪರ್ಯಂತಾಂ ಮಹೀಂ ಶಾಸಿತುಮಿಹತೇ । ತ್ವನ್ನಿಮಿತ್ತೋಹಿ ರಾಮಸ್ಯ ಜಯೋ ಜನಕನಂದಿನಿ!" ॥ ೧೭ ॥ ತಸ್ಯ ತದ್ವಚನಂ

ಆಧಾಯ - ಇಟ್ಟು, ಉತ್ತರಂ - ಮುಂದೆ ಹೇಳತಕ್ಕ, ವಾಕ್ಯಂ - ಮಾತನ್ನು, ಅಬ್ರವೀತ್ - ಹೇಳಿದನು. ॥ ೧೩ ॥ ಯಃ - ಯಾವ ಶ್ರೀರಾಮನು, ಯುಧಿ - ಕಾಳಗದಲ್ಲಿ, ತೇ - ನಿನ್ನ, ಅರೀನ್ - ಹಗೆಯರನ್ನು, ವಿಜಿತ್ಯ - ಜಯಿಸಿ, ಶೋಕಂ - ದುಃಖವನ್ನು, ವ್ಯಪನಯಿಷ್ಯತಿ - ಹೋಗಲಾಡಿಸುವನೋ, ಸಕಾಕುತ್ಸ್ಥಃ - ಆ ಶ್ರೀರಾಮನು, ಹರ್ಯೃ....ರೈಃ - ಕಪಿಶ್ರೇಷ್ಠರಿಂದಲೂ ಕರಡಿಗಳಿಂದಲೂ, ವೃತಃ - ಕೂಡಿದವನಾಗಿ, ಕ್ಷಿಪ್ರಂ-ಬೇಗನೆ, ಏಷ್ಯತಿ-ಬರುವನು. ॥ ೧೪ ॥ ಬಾಣಾನ್-ಬಾಣಗಳನ್ನು, ಕ್ಷಿಪತಃ - ಎಸೆಯುತ್ತಿರುವ, ತಸ್ಯ - ಆ ಶ್ರೀರಾಮನ, ಅಗ್ರತಃ - ಮುಂದೆ, ಸ್ಥಾತುಂ - ನಿಲ್ಲುವದಕ್ಕೆ, ಯಃ - ಯಾವನು, ಉತ್ಸಹತೇ - ಶಕ್ಯನೋ, ತಂ - ಅಂಥವನನ್ನು, ಮರ್ತ್ಯೇಷು - ಮನುಷ್ಯರಲ್ಲಿ, ನಹಿಪಶ್ಯಾಮಿ - ಕಾಣೆನು, ಅಸುರೇಷು-ರಕ್ಕಸರಲ್ಲಾಗಲಿ, ಸುರೇಷುವಾ-ದೇವತೆಗಳಲ್ಲಿಯಾಗಲಿ, ನಪಶ್ಯಾಮಿ-ಕಾಣೆನು. ॥ ೧೫ ॥ ಸಃ - ಆ ಶ್ರೀರಾಮನು, ವಿಶೇಷತಃ - ಬಹಳವಾಗಿ, ತವಹೇತೋಃ - ನಿನಗೋಸ್ಕರ, ರಣೇ - ಯುದ್ಧದಲ್ಲಿ, ಅರ್ಕಮಪಿ - ಸೂರ್ಯನನ್ನಾದರೂ, ಪರ್ಜನ್ಯಮಪಿ - ಇಂದ್ರನನ್ನಾದರೂ, ವೈವಸ್ವತಂ - ಸೂರ್ಯಪುತ್ರನಾದ, ಯಮಮಪಿ - ಯಮನನ್ನಾದರೂ, ಸೋಢುಂ - ಸಹಿಸುವದಕ್ಕೆ, ಶಕ್ತೋಹಿ - ಸಮರ್ಥನಷ್ಟೆ. ॥ ೧೬ ॥ ಸಃ - ಆ ಶ್ರೀರಾಮನು, ಸಾಗ....ತಾಂ - ಸಮುದ್ರದವರೆಗೂ ವ್ಯಾಪಿಸಿರುವ, ಮಹೀಂ - ಭೂಮಿಯನ್ನು, ಶಾಸಿತುಂ - ಶಿಕ್ಷಿಸುವದಕ್ಕೆ, ಈಹತೇಹಿ - ಇಚ್ಛಿಸುವನಷ್ಟೆ, ಹೇ ಜನಕನಂದಿನಿ - ಎಲೌ ಜನಕಪುತ್ರಿಯೇ, ಹಿ - ಯಾವ ಕಾರಣದಿಂದ, ತ್ವನ್ನಿಮಿತ್ತಃ - ನಿನ್ನ ಕಾರಣವಾದ, ರಾಮಸ್ಯ - ಶ್ರೀರಾಮನ, ಜಯಃ - ಜಯವು, (ಭವಿಷ್ಯತಿ - ಆಗುವದೋ.) ॥ ೧೭ ॥ ಜಾನಕೀ - ಸೀತಾದೇವಿಯು, ಸಮ್ಯಕ್ - ಅನುಭವಕ್ಕೆ ಬಂದ, ಸತ್ಯಂ - ಯಥಾರ್ಥವಾದ, ಸುಭಾಷಿತಂ - ಶ್ರುತಿಮನೋ

ಸೀತಾದೇವಿ! ಕಕುತ್ಸ್ಥವಂಶೋದ್ಭವನಾದ ಶ್ರೀರಾಮನು ಅತ್ಯಲ್ಪಕಾಲದಲ್ಲಿಯೇ ವಾನರ ಭಲ್ಲೂಕ ಸೈನ್ಯಗಳನ್ನು ನಡೆಯಿಸಿಕೊಂಡು ಇಲ್ಲಿಗೈತಂದು ಶತ್ರುಗಳನ್ನು ಸಂಹರಿಸಿ ನಿನ್ನ ದುಃಖವನ್ನು ದೂರಮಾಡುವನು. ಯುದ್ಧದಲ್ಲಿ ಶ್ರೀರಾಮನು ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸುತ್ತಿರಲು ಎದುರಿಸಿ ನಿಲ್ಲುವುದಕ್ಕಾಗಲೀ, ಯುದ್ಧಮಾಡುವುದಕ್ಕಾಗಲೀ, ಮಾನವರಲ್ಲಿಯಾಗಲೀ, ಸುರಾಸುರರಲ್ಲಿಯಾಗಲೀ ಸಮರ್ಥನಾದವನಾವನೂ ಇಲ್ಲವೆಂದು ತಿಳಿ. ॥ ೧೪–೧೫ ॥ ಶ್ರೀರಾಮನು ಯುದ್ಧದಲ್ಲಿ, ಸೂರ್ಯನನ್ನಾದರೂ, ಇಂದ್ರನನ್ನಾದರೂ, ಯಮನನ್ನಾದರೂ ಜಯಿಸಬಲ್ಲ ಸಮರ್ಥನಾಗಿರುವನು. ಎಂದಮೇಲೆ ಈ ಅಲ್ಪ ವಿಷಯದಲ್ಲಿ ಹೇಳತಕ್ಕುದೇನಿರುವುದು? ಶ್ರೀರಾಮನು ಚತುಸ್ಸಮುದ್ರಪರಿವೇಷ್ಟಿತವಾದ ಈ ಭೂಮಂಡಲವನ್ನಾಳಬಲ್ಲ ಸಾಮರ್ಥ್ಯವುಳ್ಳವನು. ಇಂತಹನಿಗೆ ಜಯವು ಕೈಗೂಡದಿರುವುದೆಂತು. ಓ ಜನಕನಂದಿನಿಯೇ! ಶ್ರೀರಾಮನ ಜಯವು ನಿನ್ನ ನಿಮಿತ್ತವಾಗಿರುವುದು.

ಶ್ರುತ್ವಾ ಸಮ್ಯಕ್ಸತ್ಯಂ ಸುಭಾಷಿತಂ । ಜಾನಕೀ ಬಹುಮೇನೇಽಥ ವಚನಂ ಚೇದ ಮಬ್ರವೀತ್ ॥ ೧೮ ॥ ತತಸ್ತಂ ಪ್ರಸ್ಥಿತಂ ಸೀತಾ ವೀಕ್ಷಮಾಣಾ ಪುನಃ ಪುನಃ । ಭರ್ತೃಸ್ನೇಹಾನ್ವಿತಂ ವಾಕ್ಯಂ ಸೌಹಾರ್ದಾ ದನುಮಾನ್ಯಚ ॥ ೧೯ ॥ " ಯದಿ ವಾ ಮನ್ಯಸೇ ವೀರ! ವಸೈಕಾಹಮರಿಂದಮ! । ಕಸ್ಮಿಂಶ್ಚಿತ್ಸಂವೃತೇ ದೇಶೇ ವಿಶ್ರಾಂತ ಶ್ಶ್ವೋಗಮಿಷ್ಯಸಿ ॥ ೨೦ ॥ ಮಮ ಚೇದಲ್ಪಭಾಗ್ಯಾಯಾ ಸ್ಸಾನ್ನಿಧ್ಯಾ ತ್ತವವಾನರ! । ಅಸ್ಯ ಶೋಕಸ್ಯ ಮಹತೋ ಮುಹೂರ್ತಂ ಮೋಕ್ಷಣಂ ಭವೇತ್ ॥ ೨೧ ॥ ಗತೇಹಿ ಹರಿಶಾರ್ದೂಲ! ಪುನರಾಗಮನಾಯತು । ಪ್ರಾಣಾನಾಮಪಿ ಸಂದೇಹೋ ಮಮಸ್ಯಾ

ಹರವಾದ, ತಸ್ಯ - ಆ ಆಂಜನೇಯನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಬಹುಮೇನೇ - ಪೂಜಿಸಿದಳು, ಅಥ-ಬಳಿಕ, ಇದಂವಚನಂಚ-ಮುಂದೆ ಹೇಳುವ ಈ ಮಾತನ್ನೂ ಕೂಡ, ಅಬ್ರವೀತ್-ಹೇಳಿದಳು. ॥ ೧೮ ॥ ತತಃ - ಬಳಿಕ, ಸೀತಾ - ಸೀತಾದೇವಿಯು, ಪ್ರಸ್ಥಿತಂ - ಪ್ರಯಾಣೋನ್ಮುಖ ನಾದ, ತಂ - ಆ ಆಂಜನೇಯನನ್ನು, ಪುನಃಪುನಃ - ಬಾರಿಬಾರಿಗೂ, ವೀಕ್ಷಮಾಣಾ - ನೋಡುತ್ತಿರುವ ಳಾಗಿ, ಭರ್ತೃಸ್ನೇಹಾನ್ವಿತಂ - ತನ್ನಲ್ಲಿರುವ ಪತಿಸ್ನೇಹದಿಂದೊಡಗೂಡಿದ, ವಾಕ್ಯಂ - ಆಂಜನೇಯನ ಮಾತನ್ನು, ಸೌಹಾರ್ದಾತ್-ಸ್ನೇಹದಿಂದ, ಅನುಮಾನಯತ್-ಒಪ್ಪಿದಳು. ॥ ೧೯ ॥ ಹೇ ಅರಿಂದಮ-ಓ ಶತ್ರುನಾಶಕನೇ, ಹೇ ವೀರ-ಎಲೈ ಶೂರನೇ, ಹೇ ವಾನರ - ಓ ಕಪಿಯೇ, ಅಥವಾ - ಹಾಗಲ್ಲದಿದ್ದರೆ, ಮನ್ಯಸೇಯದಿ - ಯಿಚ್ಛಿಸಿದವನಾದಪಕ್ಷದಲ್ಲಿ, ಏಕಾಹಂ ಒಂದುದಿನವು, ವಸ ಇರು, ಸಂವೃತೇ - ರಹಸ್ಯವಾದ, ಕಸ್ಮಿಂಶ್ಚಿತ್ - ಒಂದಾನೊಂದಾದ, ದೇಶೇ - ಸ್ಥಲದಲ್ಲಿ, ವಿಶ್ರಾಂತಃ - ಶ್ರಮಪರಿಹಾರ ಮಾಡಿಕೊಂಡುವನಾಗಿ, ಶ್ವಃ - ನಾಳೆ, ಗಮಿಷ್ಯಸಿಚೇತ್ - ಹೊರಟರೆ, ಅಲ್ಪಭಾಗ್ಯಾಯಾಃ - ಹೀನಾದೃಷ್ಟ ವತಿಯಾದ, ಮಮ - ನನ್ನ, ಮಹತಃ - ಮಹತ್ತರವಾದ, ಅಸ್ಯಶೋಕಸ್ಯ - ಈ ದುಃಖದ, ಮೋಕ್ಷಣಂ - ನಾಶವು, ತವ - ನಿನ್ನ, ಸಾನ್ನಿಧ್ಯಾತ್ - ಸವಿಾಪಸ್ಥಿತಿಯಿಂದ, ಮುಹೂರ್ತಂ - ಸ್ವಲ್ಪಹೊತ್ತು, ಭವೇತ್ - ಆಗುವದು. ॥ ೨೧ ॥ ಹೇ ಹರಿಶಾರ್ದೂಲ - ಎಲೈ ಕಪಿಶ್ರೇಷ್ಠನೇ, ಪುನ....ತು - ತಿರುಗಿಬರುವದಕ್ಕೋಸುಗ, (ತ್ವಯಿ - ನೀನು,) ಗತೇಹಿ - ಹೋದಬಳಿಕ, ಮಮ - ನನ್ನ, ಪ್ರಾಣಾನಾ

ನೀನು ಯಾವ ವಿಧದಲ್ಲಿಯೂ ಯೋಚಿಸದಿರು " ಎಂದು ಹೇಳಿ ಪ್ರಯಾಣಸನ್ನದ್ಧನಾದನು. ಆಗ ಸೀತಾದೇವಿಯು ರಾಮನ ಬಳಿಗೆ ಹೊರಡಲು ಸಿದ್ಧನಾಗಿದ್ದ ಆಂಜನೇಯನನ್ನು ಬಾರಿ ಬಾರಿಗೂ ನೋಡುತ್ತ, ತನ್ನ ಪತಿಗೆ ತನ್ನಲ್ಲಿ ಅತಿಯಾದ ಸ್ನೇಹವಿರುವುದೆಂದು ಹೇಳಿದ ಆತನ ಮಾತುಗಳಿಂದ ಸಂತುಷ್ಟಾಂತರಂಗಳಾಗಿ, ಆತನು ನುಡಿದ ಮನಕಿಂಪಾದ ಸತ್ಯವಾಕ್ಯಗಳನ್ನು ಗೌರವಿಸಿ ಅಭಿಮಾನಪುರಸ್ಸರವಾಗಿ ಆತನನ್ನು ಕುರಿತು, " ಎಲೈ ಹನುಮಂತನೇ! ನೀನು ಸ್ವಲ್ಪ ಆಯಾಸಪರಿಹಾರವನ್ನು ಮಾಡಿಕೊಂಡು ಹೊರಡಬೇಕೆಂದು ಬಯಸಿದುದಾದರೆ, ಪುಷ್ಪವೃಕ್ಷಗಳೂ, ಲತೆಗಳೂ ಉಳ್ಳ ಈ ಪ್ರದೇಶದಲ್ಲಿ ಈ ದಿನವಿದ್ದು ನಾಳೆ ಪಯಣಿಸ ಬಹುದು. ॥ ೧೬-೨೦ ॥ ಎಲೈ ಮಾರುತಿಯೇ! ನೀನು ಹೀಗೆ ಮಾಡಿದುದಾದರೆ ಅಲ್ಪ ಭಾಗ್ಯಳಾದ ನಾನು ನಿನ್ನ ಸಾನ್ನಿಧ್ಯದಲ್ಲಿರುವುದರಿಂದ ನನ್ನ ಈ ಅಪಾರ ದುಃಖವು ಒಂದು ಮುಹೂರ್ತ ಕಾಲವಾದರೂ ಕಳೆಯುತ್ತದೆ. ಎಲೈ ಕಪಿಶ್ರೇಷ್ಠನೇ! ನೀನಿಲ್ಲಿಂದ ಹೊರಟು ಹೋದಮೇಲೆ ನನ್ನ ಪ್ರಾಣಗಳು ಉಳಿಯುವುದೂ ಕಷ್ಟತರವಾಗಿರುವುದು. ಇದರಲ್ಲಿ

ನ್ನಾತ್ರ ಸಂಶಯಃ ॥ ೨೨ ॥ ತವಾದರ್ಶನಜಶ್ಶೋಕೋ ಭೂಯೋ ಮಾಂ ಪರಿತಾಪಯೇತ್ । ದುಃಖಾದ್ದುಃಖಪರಾಮೃಷ್ಟಾಂ ದೀಪಯನ್ನಿವ ವಾನರ! ॥ ೨೩ ॥ ಅಯಂಚ ವೀರ! ಸಂದೇಹಸ್ತಿಷ್ಠತೀವ ಮಮಾಗ್ರತಃ । ಸುಮಹಾಂಸ್ತ್ವತ್ಸಹಾಯೇಷು ಹರ್ಯೃಕ್ಷೇಷು ಹರೀಶ್ವರ! ॥ ೨೪ ॥ ಕಥಂನು ಖಲು ದುಷ್ಪಾರಂ ತರಿಷ್ಯಂತಿ ಮಹೋದಧಿಂ । ತಾನಿ ಹರ್ಯೃಕ್ಷಸೈನ್ಯಾನಿ ತೌವಾ ನರವರಾತ್ಮಜೌ ॥ ೨೫ ॥ ತ್ರಯಾಣಾಮೇವ ಭೂತಾನಾಂ ಸಾಗರಸ್ಯಾಽಸ್ಯಲಂಘನೇ । ಶಕ್ತಿಸ್ಸ್ಯಾದ್ವೈನತೇಯಸ್ಯ ತವ ವಾ ಮಾರುತಸ್ಯ ವಾ ॥ ೨೬ ॥ ತದಸ್ಮಿನ್ ಕಾರ್ಯನಿರ್ಯೋಗೇ ವೀರೈವಂ

ಮಪಿ - ಪ್ರಾಣಗಳಿಗೂ ಕೂಡ, ಸಂದೇಹಃ - ಸಂಶಯವು, ಸ್ಯಾತ್ - ಆದೀತು, ಅತ - ಈ ವಿಷಯದಲ್ಲಿ, ಸಂಶಯಃ - ಸಂದೇಹವು, ನ - ಇಲ್ಲವು. ॥ ೨೨ ॥ ಹೇ ವಾನರ - ಎಲೈ ಕಪಿಯೇ, ತವ - ನಿನ್ನ, ಅದರ್ಶನಜಃ - ಕಾಣದಿರುವುದರಿಂದುಂಟಾದ, ಶೋಕಃ - ದುಃಖವು, ದುಃಖಾ....ಷ್ಟಾಂ - ಬಹಳ ದುಃಖಿತಳಾದ, ಮಾಂ - ನನ್ನನ್ನು, ದೀಪಯನ್ನಿವ - ಉದ್ದೀಪಿಸುತ್ತಿರುವಂತೆ, ಪರಿತಾಪಯೇತ್ - ಸಂತಾಪಗೊಳಿಸುತ್ತದೆ. ॥ ೨೩ ॥ ಹೇ ವೀರ - ಎಲೈ ಶೂರನೇ, ಹೇ ಹರೀಶ್ವರ - ಎಲೈ ಕಪಿಶ್ರೇಷ್ಠನೇ, ತ್ವತ್ಸಹಾಯೇಷು - ನಿನಗೆ ಸಹಾಯಕರಾದ, ಹರ್ಯೃಕ್ಷೇಷು - ಕಪಿಋಕ್ಷರ ವಿಷಯದಲ್ಲಿ, ಸುಮಹಾನ್ - ಮಹತ್ತರವಾದ, ಅಯಂ - ಈ ಮುಂದೆ ಹೇಳುವ, ಸಂದೇಹಶ್ಚ - ಸಂಶಯವೂ, ಮಮಾಗ್ರತಃ - ನನ್ನ ಮುಂದೆ, (ಮೂರ್ತೀಭೂತ ಇವ - ಮೂರ್ತೀಭವಿಸಿದಂತೆ,) ತಿಷ್ಠತಿ - ಇರುವುದು. ॥ ೨೪ ॥ ಹೇ ವಾನರ - ಎಲೈ ಕಪಿಯೇ, ತಾನಿ - ಅಂತಹ, ಹರ್ಯೃಕ್ಷಸೈನ್ಯಾನಿ - ಕಪಿಋಕ್ಷರ ಸೇನೆಗಳು, ತೌವರಾತ್ಮಜೌ - ಆ ಸುಕುಮಾರರಾದ ರಾಮಲಕ್ಷ್ಮಣರು, ದುಷ್ಪಾರಂ - ಅಂತವಿಲ್ಲದಿರುವ, ಮಹೋದಧಿಂ - ಸಮುದ್ರವನ್ನು, ಕಥನ್ನುಖಲು-ಹೇಗೆತಾನೇ, ತರಿಷ್ಯಂತಿ-ದಾಟುವರು. ॥ ೨೫ ॥ ಅಸ್ಯಸಾಗರಸ್ಯ- ಈ ಕಡಲಿನ, ಲಂಘನೇ - ದಾಟುವಿಕೆಯಲ್ಲಿ, ತ್ರಯಾಣಾಮೇವ - ತ್ರಿಸಂಖ್ಯಾಕರಾದ, ಭೂತಾನಾಂ - ಮೂರ್ತಿಗಳಾದ, ವೈನತೇಯಸ್ಯ - ಗರುಡನಿಗೂ, ತವವಾ - ನಿನಗೂ, ಮಾರುತಸ್ಯವಾ - ವಾಯುವಿಗೂ, ಶಕ್ತಿಃ - ಸಾಮರ್ಥ್ಯವು, ಸ್ಯಾತ್ - ಇದ್ದೀತು. ॥ ೨೬ ॥ ಹೇ ವೀರ - ಎಲೈ ಶೂರನೇ, ತತ್ - ಆ ಕಾರಣದಿಂದ, ಏವಂ - ಹೀಗೆ, ದುರತಿಕ್ರಮೇ - ದಾಟಲಸಾಧ್ಯವಾದ, ಅಸ್ಮಿ....ಗೆ - ಈ ಕಾರ್ಯ

ಯಾವ ಸಂಶಯವೂ ಇಲ್ಲವು ಎಲೈ ಆಂಜನೇಯನೇ! ನೀನಿಲ್ಲಿಂದ ಹೊರಟುಹೋದ ಬಳಿಕ, ನಿನ್ನನ್ನು ನೋಡದಿರುವುದರಿಂದುಂಟಾಗುವ ದುಃಖವು, ಹಿಂದೆ ನನಗುಂಟಾಗಿದ್ದ ದುಃಖಕ್ಕಿಂತಲೂ ಅಧಿಕವಾಗಿ ನನ್ನನ್ನು ದಹಿಸುವಂತೆ ತಾಪಗೊಳಿಸುವುದು. ವಾನರೋತ್ತಮನೂ, ಮಹಾ ಶೌರ್ಯವಂತನೂ ಆದ ಎಲೈ ಆಂಜನೇಯನೇ! ನಿನಗೆ ಸಹಾಯಭೂತರಾದ ವಾನರಭಲ್ಲೂಕಗಳ ವಿಷಯವಾಗಿ ನನಗೊಂದು ದೊಡ್ಡ ಸಂದೇಹವಿರುವುದು. ಆ ಸಂಶಯವು ನನ್ನೆದುರಿಗೆ ಮೂರ್ತಿಮತ್ತಾಗಿ ನಿಂತಂತಿರುವುದು. ಅದೇನೆಂದರೆ, ವಾನರ ಭಲ್ಲೂಕ ಸೈನ್ಯಗಳಾಗಲೀ, ರಾಜಪುತ್ರರಾದ ಆ ಶ್ರೀರಾಮಲಕ್ಷ್ಮಣರಾಗಲಿ ದಾಟಲು ದುಸ್ಸಾಧ್ಯವಾದ ಈ ಮಹಾ ಸಮುದ್ರವನ್ನು ಹೇಗೆತಾನೆ ದಾಟಲು ಸಮರ್ಥರಾಗುವರು? ॥ ೨೧–೨೫ ॥ ಈ ಮಹಾ ಸಮುದ್ರವನ್ನು ದಾಟುವುದರಲ್ಲಿ ಗರುತ್ಮಂತನಿಗೂ, ವಾಯುದೇವನಿಗೂ, ನಿನಗೂ ಹೀಗೆ ಈ ಮೂವರಿಗೂ ಸಾಮರ್ಥ್ಯವುಂಟು. ಎಲೈ ಪರಾಕ್ರಮಿಯೇ! ಅತ್ಯಸಾಧ್ಯವಾದ ಈ ಕಾರ್ಯವನ್ನು ನೆರವೇರಿಸುವ ವಿಚಾರದಲ್ಲಿ ಯಾವ ಉಪಾಯವನ್ನು

ದುರತಿಕ್ರಮೇ । ಕಿಂಪಶ್ಯಸಿ ಸಮಾಧಾನಂ ತ್ವಂಹಿ ಕಾರ್ಯವಿದಾಂ ವರಃ ॥ ೨೭ ॥ ಕಾಮಮಸ್ಯ ತ್ವಮೇವೈಕಃ ಕಾರ್ಯಸ್ಯ ಪರಿಸಾಧನೇ । ಪರ್ಯಾಪ್ತಃ ಪರವೀರಘ್ನ! ಯಶಸ್ಯಸ್ತೇ ಬಲೋದಯಃ ॥ ೨೮ ॥ ಬಲೈಸ್ಸಮಗ್ರೈರ್ಯದಿ ಮಾಂ ರಾವಣಂ ಜಿತ್ವ ಸಂಯುಗೇ । ವಿಜಯೀ ಸ್ವಪುರೀಂ ಯಾಯಾತ್ತತ್ತು ಮೇ ಸ್ಯಾದ್ಯಶಸ್ಕರಂ ॥೨೯॥ ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ । ಮಾಂ ನಯೇದ್ಯದಿ ಕಾಕುಸ್ಥಸ್ತತ್ತಸ್ಯ ಸದೃಶಂ ಭವೇತ್ ॥ ೩೦ ॥ ತದ್ಯಥಾ ತಸ್ಯ ವಿಕ್ರಾಂತಮನುರೂಪಂ ಮಹಾತ್ಮನಃ । ಭವೇದಾಹವಶೂರಸ್ಯ ತಥಾ ತ್ವಮುಪಪಾದಯ ” ॥ ೩೧ ॥

ಸಂಘಟನೆಯಲ್ಲಿ, ಕಾರ್ಯವಿದಾಂವರಃ-ಕಾರ್ಯಜ್ಞರಲ್ಲಿ ಶ್ರೇಷ್ಠನಾದ, ತ್ವಂಹಿ-ನೀನೇ, ಸಮಾಧಾನಂ-ಉಪಾಯವನ್ನು, ಕಿಂಪಶ್ಯಸಿ-ಏನುನೋಡಬಲ್ಲೆ. ॥ ೨೭ ॥ ಹೇ ಪರವೀರಘ್ನ-ಎಲೈ ಶತ್ರುನಾಶಕನೇ, ಅಸ್ಯಕಾರ್ಯಸ್ಯ - ಈ ಕೆಲಸದ ಪರಿಸಾಧನೇ ಸಾಧಿಸುವ ವಿಷಯದಲ್ಲಿ, ಏಕಃ - ಒಬ್ಬನಾದ, ತ್ವಂ - ನೀನು, ಕಾಮಂಪರ್ಯಾಪ್ತಃ - ಸಾಕಾಗಿರುವೆ, ತೇ - ನಿನಗೆ, ಬಲೋದಯಃ - ಶಕ್ತಿಸಮೃದ್ಧಿಯು, ತೇ - ನಿನಗೇ, ಯಶಸ್ಯಃ - ಯಶಸ್ಕರವು, (ನನಗಿಲ್ಲವೆಂದು ಭಾವವು) ॥ ೨೮ ॥ (ರಾಮಃ - ಶ್ರೀರಾಮನು,) ಸಮಗ್ರೈಃ - ಸಂಪೂರ್ಣವಾದ, ಬಲೈಃ - ಸೈನ್ಯಗಳಿಂದ, ಸಂಯುಗೇ - ಯುದ್ಧದಲ್ಲಿ, ರಾವಣಂ - ರಾವಣನನ್ನು, ಜಿತ್ವ - ಜೈಯಿಸಿ, ವಿಜಯೀ - ಜಯಶಾಲಿಯಾಗಿ, ಮಾಂ - ನನ್ನನ್ನು, (ಗೃಹೀತ್ವಾ - ಗ್ರಹಿಸಿ,) ಸ್ವಪುರೀಂ - ತನ್ನ ಪಟ್ಟಣವನ್ನು ಕುರಿತು, ಯಾಯಾದ್ಯದಿ - ಹೋದವನಾದರೆ, ತತ್ತು - ಆ ಪ್ರಯಾಣವು, ಮೇ - ನನಗೆ, ಯಶಸ್ಕರಂ - ಕೀರ್ತಿಯನ್ನುಂಟುಮಾಡುವುದಾಗಿರುತ್ತೆ. ॥ ೨೯ ॥ ಪರ....ನಃ ಶತ್ರುಬಲನಾಶಕನಾದ, ಕಾಕುತ್ಥ್ಸಃ-ಶ್ರೀರಾಮನು, ಲಂಕಾಂತು-ಲಂಕಾಪಟ್ಟಣವನ್ನಾದರೆ, ಶರೈಃ - ಬಾಣಗಳಿಂದ, ಸಂಕುಲಾಂ - ತುಂಬಿರುವುದನ್ನಾಗಿ, ಕೃತ್ವಾ - ಮಾಡಿ, ಮಾಂ - ನನ್ನನ್ನು, ನಯೇದ್ಯದಿ - ಕರೆದುಕೊಂಡು ಹೋದರೆ, ತತ್ - ಅದು, ತಸ್ಯ - ಆ ಶ್ರೀರಾಮನಿಗೆ, ಸದೃಶಂ - ಸಮಾನವಾದದ್ದು, ಭವೇತ್ - ಆಗುವುದು. ॥ ೩೦ ॥ ತತ್ - ಆ ಕಾರಣದಿಂದ, ಆಹ....ಸ್ಯ - ಯುದ್ಧಶೂರನಾದ, ಮಹಾತ್ಮನಃ - ಮಹಾನುಭಾವನಾದ, ತಸ್ಯ - ಆ ಶ್ರೀರಾಮನಿಗೆ, ಅನುರೂಪಂ - ಸಮಾನವಾದ, ವಿಕ್ರಾಂತಂ - ಪರಾಕ್ರಮವು, ಯಥಾಭವೇತ್ - ಹೇಗಾಗುವದೋ, ತಥಾ - ಆ ಪ್ರಕಾರ,

---

ಯೋಚಿಸುತ್ತಿರುವೆ? ನೀನು ಸಮಸ್ತ ಕಾರ್ಯಗಳ ಉಪಾಯಗಳನ್ನೂ ಬಲ್ಲವನೇ ಆಗಿರುವೆ ಯಷ್ಟೆ? ಆದುದರಿಂದ ಈ ಕಾರ್ಯವನ್ನು ಯಾವ ರೀತಿ ಮಾಡುವೆಯೆಂಬುದನ್ನು ನನಗೆ ತಿಳಿಸು. ವೈರಿವೀರರನ್ನು ಸಂಹರಿಸುವವನೇ, ಆಂಜನೇಯನೇ! ಈ ಕಾರ್ಯವನ್ನು ಸಾಧಿಸುವ ವಿಚಾರದಲ್ಲಿ ನೀನೊಬ್ಬನೇ ಸಮರ್ಥನೆಂಬುದರಲ್ಲಿ ಸಂಶಯವೇ ಇಲ್ಲವು. ಆದರೂ ಈ ಕಾರ್ಯವನ್ನು ನೀನೊಬ್ಬನೇ ಭಾಗಿಯಾಗುವೆಯಲ್ಲವೆ! ನನ್ನ ಪ್ರಿಯನಾದ ಶ್ರೀರಾಮಮೂರ್ತಿಯು ಸಮಸ್ತ ಕಪಿಭಲ್ಲೂಕ ಸೈನ್ಯಗಳೊಡನೆ ಇಲ್ಲಿಗೈತಂದು ರಣರಂಗದಲ್ಲಿ ದುರುಳ ರಾವಣನನ್ನೊಕ್ಕಲಿಕ್ಕಿ ಜಯಶೀಲನಾಗಿ ನನ್ನನ್ನು ತನ್ನ ಪಟ್ಟಣಕ್ಕೆ ಕರೆದುಕೊಂಡು ಹೋದರೆ ಅದು ನನಗೂ, ಆತನಿಗೂ ಯಶಸ್ಕರವು ಮಾತ್ರವಲ್ಲದೆ ಶ್ರೇಯಸ್ಕರವೂ ಆಗುವುದು. ಪರವೀರಘ್ನನಾದ ಆ ಶ್ರೀರಾಮನಿಗೆ ಅದು ಸದೃಶವೂ ಆಗಿರುವುದು. ॥೨೬-೩೦॥ ಶ್ರೀರಾಮನು ಶತ್ರುಸಂಹಾರಕನು; ಕಕುತ್ಸ್ಥವಂಶಸಂಜಾತನು; ಆತನಿಲ್ಲಿಗೆ ಬಂದು ತನ್ನ ಬಾಣಪರಂಪರೆಯಿಂದ ಈ ಲಂಕಾನಗರವೆಲ್ಲವನ್ನೂ ತುಂಬಿಸಿ, ರಾಕ್ಷಸರೆಲ್ಲರನ್ನೂ ಗೆದ್ದು ನನ್ನನ್ನು

ತದರ್ಥೋಪಹಿತಂ ವಾಕ್ಯಂ ಸಹಿತಂ ಹೇತುಸಂಹಿತಂ । ನಿಶಮ್ಯ ಹನುಮಾನ್ ಶೇಷಂ ವಾಕ್ಯಮುತ್ತರಮಬ್ರವೀತ್ ॥ ೩೨ ॥ "ದೇವಿ! ಹರ್ಯೃಕ್ಷಸೈನ್ಯಾನಾಮೀಶ್ವರಃ ಪ್ಲವತಾಂವರಃ । ಸುಗ್ರೀವಸ್ಸತ್ವಸಂಪನ್ನಸ್ತವಾರ್ಥೇ ಕೃತನಿಶ್ಚಯಃ ॥ ೩೩ ॥ ಸ ವಾನರಸಹಸ್ರಾಣಾಂ ಕೋಟೀಭಿರಭಿಸಂವೃತಃ । ಕ್ಷಿಪ್ರಮೇಷ್ಯತಿ ವೈದೇಹಿ! ರಾಕ್ಷಸಾನಾಂ ನಿಬರ್ಹಣಃ ॥೩೪॥ ತಸ್ಯ ವಿಕ್ರಮಸಂಪನ್ನಾಸ್ಸತ್ವವಂತೋ ಮಹಾಬಲಾಃ । ಮನಸ್ಸಂಕಲ್ಪಸಂಪಾತಾ ನಿದೇಶೇ ಹರಯಸ್ಥಿತಾಃ ॥ ೩೫ ॥ ಯೇಷಾಂ ನೋಪರಿ ನಾಧಸ್ತಾನ್ನತಿರ್ಯಕ್ಸಜ್ಜತೇ ಗತಿಃ । ನಹಿ ಕರ್ಮಸು ಸೀದಂತಿ ಮಹತ್ಸ್ವಮಿತ

ತ್ವಂ - ನೀನು, ಉಪಪಾದಯ - ಮಾಡು. ॥ ೩೧ ॥ ಹನುಮಾನ್ - ಆಂಜನೇಯನು, ಅರ್ಥೋಪಹಿತಂ - ಅರ್ಥಯುಕ್ತವಾದ, ಸಹಿತಂ - ಒಂದಕ್ಕೊಂದು ಸೇರಿರುವ, ಹೇತುಸಂಹಿತಂ - ಯುಕ್ತಿಯುಕ್ತವಾದ, ತದ್ವಾಕ್ಯಂ - ಆ ಮಾತನ್ನು, ನಿಶಮ್ಯ, - ಕೇಳಿ, ಶೇಷಂ - ಉಳಿದಿರುವ, ಉತ್ತರಂವಾಕ್ಯಂ - ಪ್ರತ್ಯುತ್ತರವನ್ನು, ಅಬ್ರವೀತ್ - ನುಡಿದನು. ॥ ೩೨ ॥ ಹೇ ದೇವೀ - ಎಲೆ ತಾಯೇ, ಹರ್ಯೃಕ್ಷಸೈನ್ಯಾನಾಂ - ಕಪಿಋಕ್ಷಸೇನೆಗಳಿಗೆ, ಈಶ್ವರಃ - ಅಧಿಪತಿಯಾದ, ಪ್ಲವತಾಂವರಃ - ವಾನರೋತ್ತಮನಾದ, ಸತ್ವಸಂಪನ್ನಃ - ಬಲಯುಕ್ತನಾದ, ಸುಗ್ರೀವಃ - ಸುಗ್ರೀವನು, ತವಾರ್ಥೇ - ನಿನ್ನ ಪ್ರಯೋಜನಕ್ಕೋಸ್ಕರ, ಕೃತನಿಶ್ಚಯಃ - ಮಾಡಲ್ಪಟ್ಟ ನಿಶ್ಚಯವುಳ್ಳವನು. ॥ ೩೩ ॥ ಹೇ ದೇವೀ - ಓ ತಾಯೇ, ರಾಕ್ಷಸಾನಾಂ - ರಾಕ್ಷಸರಿಗೆ, ನಿಬರ್ಹಣಃ - ನಾಶಕನಾದ, ಸಃ - ಆ ಸುಗ್ರೀವನು, ವಾನ....ಣಾಂ - ಸಹಸ್ರಾರು ಕಪಿಗಳ, ಕೋಟೀಭಿಃ - ಕೋಟಿಸಂಖ್ಯೆಗಳಿಂದ, ಅಭಿಸಂವೃತಃ - ಸುತ್ತುವರೆಯಲ್ಪಟ್ಟವನಾಗಿ, ಕ್ಷಿಪ್ರಂ - ಬೇಗನೆ, ಏಷ್ಯತಿ - ಬರುವನು. ॥ ೩೪ ॥ ಯೇಷಾಂ - ಯಾವ ಕಪಿಗಳ, ಗತಿಃ - ಗಮನವು, ಉಪರಿ-ಮೇಲೆ, ನಸಜ್ಜತೇ-ಸಾವಕಾಶವಾಗುವುದಿಲ್ಲವೋ, ಅಧಸ್ತಾತ್-ಕೆಳಗಡೆ,(ನಸಜ್ಜತೇ-ವಿಲಂಬಿಸುವದಿಲ್ಲವೋ,) ತಿರ್ಯಕ್ - ಅಡ್ಡವಾಗಿಯೂ, (ನಸಜ್ಜತೇ - ನಿಧಾನವಾಗುವದಿಲ್ಲವೋ,) ಅಮಿತತೇಜಸಃ - ಮಹಾತೇಜೋವಂತರಾದ, (ಯೇ - ಯಾವ ಕಪಿಗಳು,) ಮಹತ್ಸುಕರ್ಮಸು - ಮಹಾ ಕಾರ್ಯಗಳಲ್ಲಿ, ನಸೀದಂತಿ-ದುಃಖಿಸುವದಿಲ್ಲವೋ, (ತೇ-ಅಂತಹ,) ವಿಕ್ರ....ನ್ನಾಃ ಪರಾಕ್ರಮ

ಕರೆದುಕೊಂಡು ಹೋದರೆ ಅದು ಅವನಿಗೆ ತಕ್ಕುದಾಗುವುದು. ಆತನು ಹೀಗೆ ಮಾಡುವಂತೆ ನೀನಾತನನ್ನು ಪ್ರೋತ್ಸಾಹಿಸಬೇಕು. ಯುದ್ಧವೀರನೂ, ಮಹಾಬಲಪರಾಕ್ರಮಶಾಲಿಯೂ ಆದ ಶ್ರೀರಾಮನು, ನಿನ್ನಿಂದ ಯಾವ ರೀತಿ ಪ್ರೋತ್ಸಾಹಿಸಲ್ಪಟ್ಟರೆ ತನ್ನ ಸಾಮರ್ಥ್ಯಕ್ಕೆ ತಕ್ಕ ಪರಾಕ್ರಮವನ್ನು ತೋರುವನೋ ಆ ರೀತಿ ನೀನು ಮಾಡಬೇಕು" ಎಂದು ಹೇಳಿದಳು. ಹೀಗೆ ಅರ್ಥಯುಕ್ತವಾಗಿಯೂ, ಉಚಿತಕಾರಣಯುಕ್ತವಾಗಿಯೂ ನುಡಿದ ಆಕೆಯ ಮಾತುಗಳನ್ನು ಕೇಳಿ ಆಂಜನೇಯನು ಆಕೆಯನ್ನು ಕುರಿತು, "ಎಲೌ ದೇವಿಯೇ! ವಾನರಭಲ್ಲೂಕ ಸೈನ್ಯಗಳಿಗಧಿಪತಿಯೂ, ವಾನರೋತ್ತಮನೂ, ಮಹಾ ಪರಾಕ್ರಮಶಾಲಿಯೂ ಆದ ನಮ್ಮ ಸುಗ್ರೀವರಾಜನು ನಿನಗೋಸುಗವಾಗಿ ಈ ಕಾರ್ಯನನ್ನು ಯಾವ ರೀತಿಯಿಂದಲಾದರೂ ಸಾಧಿಸಲೇಬೇಕೆಂದು ನಿರ್ಧರಿಸಿಕೊಂಡಿರುವನು. ಓ ದೇವೀ! ಸುಗ್ರೀವರಾಜನು ರಾಕ್ಷಸರನ್ನು ಸಂಹರಿಸಲಿಚ್ಛಿಸಿದವನಾಗಿ, ಕೋಟ್ಯಂತರ ಕಪಿಸೇನೆಯೊಡನೆ ಈ ಲಂಕಾಪಟ್ಟಣಕ್ಕೆ ಬರಬಲ್ಲನೆಂದು ತಿಳಿ. ಮಹಾ ಬಲಪರಾಕ್ರಮಶಾಲಿಗಳೂ, ಮಹಾ ಶಕ್ತಿಸಂಪನ್ನರೂ, ಮನೋವೇಗದಂತಹ ವೇಗವುಳ್ಳವರೂ, ಮೇಲೆಯಾಗಲಿ, ಕೆಳಗಾಗಲಿ, ಅಡ್ಡವಾಗಿಯಾಗಲಿ

ತೇಜಸಃ ‖ ೩೬ ‖ ಅಸಕೃತ್ತೈರ್ಮಹೋತ್ಸಾಹೈಃ ಸಸಾಗರಧರಾಧರಾ । ಪ್ರದಕ್ಷಿಣೀಕೃತಾ ಭೂಮಿರ್ವಾಯುಮಾರ್ಗಾನುಸಾರಿಭಿಃ ‖ ೩೭ ‖ ಮದ್ವಿಶಿಷ್ಟಾಶ್ಚ ತುಲ್ಯಾಶ್ಚ ಸಂತಿ ತತ್ರ ವನೌಕಸಃ । ಮತ್ತಃ ಪ್ರತ್ಯವರಃ ಕಶ್ಚಿನ್ನಾಸ್ತಿ ಸುಗ್ರೀವಸನ್ನಿಧೌ ‖ ೩೮ ‖ ಅಹಂ ತಾವದಿಹ ಪ್ರಾಪ್ತಃ ಕಿಂಪುನಸ್ತೇ ಮಹಾಬಲಾಃ । ನಹಿ ಪ್ರಕೃಷ್ಟಾಃ ಪ್ರೇಷ್ಯಂತೇ ಪ್ರೇಷ್ಯಂತೇ ಹೀತರೇಜನಾಃ ‖ ೩೯ ‖ ತದಲಂ ಪರಿತಾಪೇನ ದೇವಿ! ಶೋಕೋ

ಶಾಲಿಗಳಾದ, ಸತ್ವವಂತಃ - ಸಾಮರ್ಥ್ಯವಂತರಾದ, ಮಹಾಬಲಾಃ - ಮಹಾ ಬಲಿಷ್ಠರಾದ, ಮನ....ತಾಃ - ಮನೋವೇಗದಂತೆ ವೇಗವುಳ್ಳ, ಹರಯಃ - ಕಪಿಗಳು, ತಸ್ಯ - ಆ ಸುಗ್ರೀವನ, ನಿದೇಶೇ - ಆಜ್ಞೆಯಲ್ಲಿ, ಸ್ಥಿತಾಃ - ಇರುವರು. ‖ ೩೪-೩೬ ‖ ಮಹೋತ್ಸಾಹೈಃ - ಮಹಾ ಸಂತುಷ್ಟರಾದ, ವಾಯು....ಭಿಃ - ಗಗನವನ್ನನುಸರಿಸಿ ಹೋಗುತ್ತಿರುವ, ತೈಃ - ಆ ಕಪಿಗಳಿಂದ, ಸಸಾ....ರಾ - ಸಮುದ್ರ ಗಿರಿಗಳಿಂದೊಡಗೂಡಿದ, ಭೂಮಿಃ-ಭೂಮಿಯು, ಅಸಕೃತ್-ಬಾರಿಬಾರಿಗೂ, ಪ್ರದ....ತಾ-ಸುತ್ತಲ್ಪಟ್ಟಿತು. ‖ ೩೭ ‖ ತತ್ರ....ಧೌ - ಆ ಸುಗ್ರೀವನ ಸನ್ನಿಧಿಯಲ್ಲಿ, ಮದ್ವಿ....ಶ್ಚ - ನನಗಿಂತಲೂ ಮೇಲೆನಿಸಿದವರೂ ಆದ, ತುಲ್ಯಾಶ್ಚ - ಸಮಾನರೂ ಆದ, ವನೌಕಸಃ - ಕಪಿಗಳು, ಸಂತಿ - ಇರುವರು. ಮತ್ತಃ - ನನಗಿಂತಲೂ, ಪ್ರತ್ಯವರಃ - ಕಡಮೆಯಾದ, ಕಶ್ಚಿತ್ - ಒಬ್ಬನೂ, ನಾಸ್ತಿ - ಇಲ್ಲವು. ‖ ೩೮ ‖ ಅಹಂತಾವತ್-ನಾನು ಮಾತ್ರ, ಇಹ-ಇಲ್ಲಿಗೆ, ಪ್ರಾಪ್ತಃ-ಬಂದೆನು, ಮಹಾಬಲಾಃ-ಮಹಾ ಬಲಿಷ್ಠರಾದ, ತೇ - ಅವರು, ಕಿಂಪುನಃ - ಏನುಹೇಳತಕ್ಕುದು, ಪ್ರಕೃಷ್ಟಾಃ - ಅಧಿಕರಾದವರು, ನಹಿಪ್ರೇಷ್ಯಂತೇ - ಕಳುಹಿಸಲ್ಪಡುವದಿಲ್ಲ, ಇತರೇ-ಸಾಧಾರಣವಾದ, ಜನಾಃ-ಜನರು, ಪ್ರೇಷ್ಯಂತೇಹಿ-ಕಳುಹಿಸಲ್ಪಡುವರಷ್ಟೆ. ‖ ೩೯ ‖ ಹೇ ದೇವೀ - ಎಲೆ ತಾಯೇ, ತತ್ - ಆ ಕಾರಣದಿಂದ, ಪರಿತಾಪೇನ - ಸಂತಾಪದಿಂದ, ಅಲಂ - ಸಾಕು, ತೇ - ನಿನ್ನ, ಶೋಕಃ - ವ್ಯಸನವು, ವ್ಯಪೈತು - ತೊಲಗಲಿ, ತೇಹ....ಪಾಃ -

---

ಸಂಚರಿಸುವುದರಲ್ಲಿಯೂ, ದಶದಿಶೆಗಳಲ್ಲಿ ಸಂಚರಿಸುವುದರಲ್ಲಿಯೂ ಸಮರ್ಥರಾದ ಅನೇಕ ಕೋಟಿ ವಾನರವೀರರು ಆ ಸುಗ್ರೀವನ ಆಜ್ಞಾಧಾರಕರಾಗಿ ಕಾದಿರುವರು. ಆತನ ಆಜ್ಞೆಯಾಗುವುದೊಂದೇ ತಡವು. ಕೂಡಲೇ ಬಂದುಬಿಡುವರು. ‖ ೩೧–೩೬ ‖ ಆ ವಾನರವೀರರೆಲ್ಲರೂ ಅಪರಿಮಿತ ಶಕ್ತಿಸಂಪನ್ನರಾದುದರಿಂದ ಎಂತಹ ದೊಡ್ಡ ಕೆಲಸವಾದರೂ ಅವರು ಭೀತಿಯನ್ನು ಹೊಂದುವುದಿಲ್ಲವು. ಪರಮೋತ್ಸಾಹಿಗಳಾದ ಆ ವಾನರರು ವಾಯುಮಾರ್ಗದಲ್ಲಿಯೂ, ಆಕಾಶಮಾರ್ಗದಲ್ಲಿಯೂ, ಸಕಲ ಸಮುದ್ರಗಳೊಡನೆಯೂ, ಪರ್ವತಗಳೊಡನೆಯೂ ಕೂಡಿದ ಈ ಭೂಮಂಡಲವೆಲ್ಲವನ್ನೂ ಅನೇಕಸಲ ಸುತ್ತಿಬಂದಿರುವರು. ಸುಗ್ರೀವನ ಬಳಿಯಿರುವ ವಾನರರಲ್ಲಿ ಒಬ್ಬನಾದರೂ ನನಗಿಂತ ಕಡಿಮೆಯಾದವನಿಲ್ಲವು. ಅಲ್ಲಿರುವವರಲ್ಲಿ ಕೆಲವರು ನನಗಿಂತಲೂ ಮೇಲೆನಿಸಿದವರು. ಮಿಕ್ಕವರು ನನಗೆ ಸಮಾನರಾದವರು. ದೇವಿ! ನನ್ನಂತಹನೇ ಈ ಅಪಾರ ಸಮುದ್ರವನ್ನು ದಾಟಿ ಇಲ್ಲಿಗೆ ಬಂದೆನೆಂದಮೇಲೆ ಅವರ ವಿಚಾರದಲ್ಲಿ ಹೇಳತಕ್ಕುದೇನಿರುವುದು? ನನಗಿಂತಲೂ ಬಲಶಾಲಿಗಳಾದ ಆ ವಾನರವೀರರು ಇಲ್ಲಿಗೆ ಬರುವರೇ ಎಂಬ ಸಂಶಯವಾದರೂ ಏಕೆ? ಬಂದೇಬರುತ್ತಾರೆ. ಎಲೆ ತಾಯೇ! ಲೋಕದಲ್ಲಿ ಎಲ್ಲಿಯಾದರೂ ಮಹತ್ಕಾರ್ಯ ನಿರ್ವಹಣೆಗಾಗಿ ಬಲಿಷ್ಠರಾದವರನ್ನು ಮುಂದಾಗಿ ಕಳುಹುವುದಿಲ್ಲವಷ್ಟೆ? ಆದುದರಿಂದೆಲೌ ಸೀತಾದೇವಿಯೇ! ಯೋಚಿಸ

ವ್ಯಸ್ಯೈತು ತೇ । ಏಕೋತ್ಪಾತೇನ ತೇ ಲಂಕಾಮೇಷ್ಯಂತಿ ಹರಿಯೂಥಪಾಃ ॥ ೪೦ ॥ ಮಮ ಪೃಷ್ಠಗತೌ ತೌ ಚ ಚಂದ್ರಸೂರ್ಯಾವಿವೋದಿತೌ । ತ್ವತ್ಸಕಾಶಂ ಮಹಾಸತ್ವೌ ನೃಸಿಂಹಾವಾಗಮಿಷ್ಯತಃ ॥ ೪೧ ॥ ತತೋ ವೀರೌ ನರವರೌ ಸಹಿತೌ ರಾಮಲಕ್ಷ್ಮಣೌ । ಆಗಮ್ಯ ನಗರೀಂ ಲಂಕಾಂ ಸಾಯಕೈರ್ವಿಧಮಿಷ್ಯತಃ ॥ ೪೨ ॥ ಸಗಣಂ ರಾವಣಂ ಹತ್ವಾ ರಾಘವೋ ರಘುನಂದನಃ । ತ್ವಾಮಾದಾಯ ವರಾರೋಹೇ! ಸ್ವಪುರಂ ಪ್ರತಿಯಾಸ್ಯತಿ ॥ ೪೩ ॥ ತದಾಶ್ವಸಿಹಿ ಭದ್ರಂತೇ ಭವ ತ್ವಂ ಕಾಲಕಾಂಕ್ಷಿಣೀ । ನಚಿರಾದ್ದ್ರಕ್ಷ್ಯಸೇ ರಾಮಂ ಪ್ರಜ್ವಲಂತಮಿವಾನಲಂ ॥ ೪೪ ॥ ನಿಹತೇ ರಾಕ್ಷಸೇಂ

ಆ ಕಪಿಸೇನಾನಾಯಕರು, ಏಕೋತ್ಪಾತೇನ - ಒಂದು ಲಂಘನದಿಂದಲೇ, ಲಂಕಾಂ - ಲಂಕಾಪಟ್ಟಣವನ್ನು ಕುರಿತು, ಏಷ್ಯಂತಿ - ಬರುವರು. ॥ ೪೦ ॥ ಮಹಾಸತ್ವೌ - ಬಹು ಬಲಾಢ್ಯರಾದ, ನೃಸಿಂಹೌ - ಪುರುಷೋತ್ತಮರಾದ, ಉದಿತೌ - ಹುಟ್ಟಿರುವ, ಚಂದ್ರ....ತೌ - ಚಂದ್ರಸೂರ್ಯರಂತಿರುವ, ತೌಚ - ಆ ರಾಮಲಕ್ಷ್ಮಣರಿಬ್ಬರೂ, ಮಮ - ನನ್ನ, ಪೃಷ್ಠಗತೌ - ಹೆಗಲನ್ನೇರಿ, ತ್ವತ್ಸಕಾಶಂ - ನಿನ್ನ ಬಳಿಗೆ, ಆಗಮಿಷ್ಯತಃ - ಬರುವರು. ॥ ೪೧ ॥ ನರವರೌ - ಪುರುಷಶ್ರೇಷ್ಠರಾದ, ವೀರೌ - ಶೂರರಾದ, ತೌರಾ....ಣೌ-ಆ ರಾಮಲಕ್ಷ್ಮಣರು, ಸಹಿತೌ-ಒಂದೆಡೆ ಸೇರಿದವರಾಗಿ, ಅಗಮ್ಯ-ಬಂದು, ಲಂಕಾಂ ನಗರೀಂ-ಲಂಕಾಪುರಿಯನ್ನು, ಸಾಯಕೈಃ-ಬಾಣಗಳಿಂದ, ವಿಧಮಿಷ್ಯತೋಹಿ-ಸುಡುವರಷ್ಟೆ. ॥ ೪೨ ॥ ಹೇ ವರಾರೋಹೇ - ಎಲೌ ಉತ್ತಮಾಂಗನೆಯೇ, ರಘುನಂದನಃ - ರಘುಕುಲತಿಲಕನಾದ, ರಾಘವಃ - ಶ್ರೀರಾಮನು, ಸಗಣಂ - ಸೈನ್ಯಯುಕ್ತನಾದ, ರಾವಣಂ - ರಾವಣನನ್ನು, ಹತ್ವಾ - ಸಂಹರಿಸಿ, ತ್ವಾಂ - ನಿನ್ನನ್ನು, ಆದಾಯ - ತೆಗೆದುಕೊಂಡು, ಸ್ವಪುರಂ - ತನ್ನ ಪಟ್ಟಣವನ್ನು ಕುರಿತು, ಪ್ರತಿಯಾಸ್ಯತಿ - ಹೋಗುವನು. ॥ ೪೩ ॥ ತತ್ - ಆ ಕಾರಣದಿಂದ, ತ್ವಂ - ನೀನು, ಆಶ್ವಸಹಿ - ಸಮಾಧಾನಚಿತ್ತಳಾಗು, ತೇ - ನಿನ್ನ, ಭದ್ರಂ - ಶುಭವನ್ನು ಕುರಿತು, ಕಾಲ....ಣೀ - ಸಮಯಾಪೇಕ್ಷಿಯು, ಭವ - ಆಗು, ಪ್ರಜ್ವಲಂತಂ - ಉರಿಯುತ್ತಿರುವ, ಆನ....ತಂ - ಅಗ್ನಿಯಂತಿರುವ, ರಾಮಂ - ಶ್ರೀರಾಮನನ್ನು, ನಚಿರಾತ್ - ಬೇಗನೆಯೇ, ದ್ರಕ್ಷ್ಯಸೇ - ನೋಡುವೆ. ॥ ೪೪ ॥ ಸಪು....ವೇ - ಪುತ್ರ ಮಿತ್ರ ಮಂತ್ರಿ

ಬೇಡ; ಚಿಂತೆಯನ್ನುಳಿದು ಸಮಾಧಾನ ಹೊಂದು. ಧೈರ್ಯವಾಗಿರು. ಆ ವಾನರವೀರರೆಲ್ಲರೂ ಒಂದೇ ಲಂಘನದಿಂದ ಈ ಲಂಕಾಪಟ್ಟಣಕ್ಕೆ ಬಂದುಬಿಡುವರು. ಇದರಲ್ಲಿ ಸಂಶಯವಿಲ್ಲವು. ॥ ೩೭–೪೦ ॥ ಪುರುಷಶ್ರೇಷ್ಠರಾಗಿ, ಮಹಾ ಬಲಸಮನ್ವಿತರಾಗಿರುವ ಶ್ರೀರಾಮಲಕ್ಷ್ಮಣರೀರ್ವರೂ ನನ್ನ ಬೆನ್ನನ್ನೇರಿ ಈ ಲಂಕೆಗೆ ಬರುತ್ತಾರೆ. ಅಲ್ಲದೆ ಮಹಾ ಶೂರರೂ, ನರಸಿಂಹರೂ ಆದ ಅವರೀರ್ವರೂ ಇಲ್ಲಿಗೈತಂದ ಬಳಿಕ ಈ ಲಂಕಾನಗರವೆಲ್ಲವನ್ನೂ ತಮ್ಮ ಬಾಣಪರಂಪರೆಗಳಿಂದ ನಾಶಮಾಡುವರು. ಇದರಲ್ಲಿ ಸಂಶಯವಿಲ್ಲವು. ಎಲೌ ಅನಘಳೇ! ರಘುಕುಲೋದ್ಭವನಾದ ಶ್ರೀರಾಮನು ಬಂಧುಸಮೇತನಾದ ಈ ದುಷ್ಟ ರಾವಣನನ್ನು ಸಂಹರಿಸಿ, ನಿನ್ನನ್ನು ಅಯೋಧ್ಯಾನಗರಿಗೆ ಕರೆದುಕೊಂಡು ಹೋಗುವನು. ಆದುದರಿಂದ ನೀನು ಧೈರ್ಯದಿಂದಿರು. ಈ ರೀತಿ ಚಿಂತಿಸಬೇಡ. ಯಾವುದಕ್ಕೂ ಕಾಲವೊದಗಬೇಕಲ್ಲವೆ. ಅದನ್ನೆಮರು ನೋಡುತ್ತಿರು. ನಿನಗೆ ಮಂಗಳವಾಗಲಿ. ಪ್ರಜ್ವಲಿಸುವ ಅಗ್ನಿಹೋತ್ರನಂತೆ ಪ್ರಕಾಶಿಸುತ್ತಿರುವ ಶ್ರೀರಾಮನನ್ನು ಅತ್ಯಲ್ಪಕಾಲದಲ್ಲಿಯೇ ನೀನು ನೋಡುತ್ತೀಯೆ.

ದ್ರೇऽಸ್ಮಿನ್ ಸಪುತ್ರಾಮಾತ್ಯಬಾಂಧವೇ । ತ್ವಂ ಸಮೇಷ್ಯಸಿ ರಾಮೇಣ ಶಶಾಂಕೇನೇವ ರೋಹಿಣೀ ॥ ೪೫ ॥ ಕ್ಷಿಪ್ರಂ ತ್ವಂ ದೇವಿ! ಶೋಕಸ್ಯ ಪಾರಂ ಯಾಸ್ಯಸಿ ಮೈಥಿಲಿ! । ರಾವಣಂಚೈವ ರಾಮೇಣ ನಿಹತಂ ದ್ರಕ್ಷ್ಯಸೇ ಚಿರಾತ್ '' ॥ ೪೬ ॥ ಏವಮಾಶ್ವಾಸ್ಯ ವೈದೇಹೀಂ ಹನುಮಾನ್ಮಾರುತಾತ್ಮಜಃ । ಗಮನಾಯ ಮತಿಂ ಕೃತ್ವಾ ವೈದೇಹೀಂ ಪುನರಬ್ರವೀತ್ ॥ ೪೭ ॥ '' ತಮರಿಘ್ನಂ ಕೃತಾತ್ಮಾನಂ ಕ್ಷಿಪ್ರಂ ದ್ರಕ್ಷ್ಯಸಿ ರಾಘವಂ । ಲಕ್ಷ್ಮಣಂಚ ಧನುಷ್ಪಾಣಿಂ ಲಂಕಾದ್ವಾರಮುಪಸ್ಥಿತಂ ॥ ೪೮ ॥ ನಖದಂಷ್ಟ್ರಾಯುಧಾನ್ವೀರಾನ್ ಸಿಂಹಶಾರ್ದೂಲವಿಕ್ರಮಾನ್ । ವಾನರಾನ್ವಾರಣೇಂದ್ರಾಭಾನ್ ಕ್ಷಿಪ್ರಂ ದ್ರಕ್ಷ್ಯಸಿ

ಯುಕ್ತನಾದ, ಅಸ್ಮಿನ್ರಾಕ್ಷಸೇಂದ್ರೇ - ಈ ರಾಕ್ಷಸರಾಜನು, ನಿಹತೇ - ಮೃತನಾಗಲು, ತ್ವಂ - ನೀನು, ರಾಮೇಣ - ಶ್ರೀರಾಮನೊಡನೆ, ಶಶಾಂಕೇನ - ಚಂದ್ರನೊಡನೆ, ರೋಹಿಣೀವ, ರೋಹಿಣಿಯಂತೆ, ಸಮೇಷ್ಯಸಿ - ಸೇರುವೆ. ॥ ೪೫ ॥ ಹೇ ದೇವೀ - ಎಲೌ ತಾಯೇ, ತ್ವಂ - ನೀನು, ಶೋಕಸ್ಯ - ದುಃಖದ, ಪಾರಂ - ತೀರವನ್ನು, ಕ್ಷಿಪ್ರಂ - ಬೇಗನೆ, ಯಾಸ್ಯಸಿ - ಹೊಂದುವೆ, ಹೇ ಮೈಥಿಲೀ - ಎಲೌ ಜಾನಕಿಯೇ, ಅಚಿರಾತ್ - ಜಾಗ್ರತೆಯಾಗಿಯೇ, ರಾಮೇಣೈವ - ಶ್ರೀರಾಮನಿಂದಲೇ, ನಿಹತಂ - ಮೃತನಾದ, ರಾವಣಂಚ - ರಾವಣನನ್ನೂ, ದ್ರಕ್ಷ್ಯಸೇ - ನೋಡುವೆ. ॥ ೪೬ ॥ ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಹನುಮಂತನು, ವೈದೇಹೀಂ - ಸೀತಾದೇವಿಯನ್ನು, ಆಶ್ವಾಸ್ಯ - ಸಮಾಧಾನಗೊಳಿಸಿ, ಗಮನಾಯ - ಪಯಣಿಸಲು, ಮತಿಂ - ಬುದ್ಧಿಯನ್ನು, ಕೃತ್ವಾ - ಮಾಡಿ, ವೈದೇಹೀಂ - ಸೀತಾದೇವಿಯನ್ನು ಕುರಿತು, ಪುನಃ - ಮತ್ತೂ, ಅಬ್ರವೀತ್ - ಹೇಳಿದನು. ॥ ೪೭ ॥ ಅರಿಘ್ನಂ - ಶತ್ರುನಾಶಕನಾದ, ಕೃತಾತ್ಮಾನಂ - ಕೃತಪ್ರಯತ್ನನಾದ, ತಂರಾಘವಂ - ಆ ಶ್ರೀರಾಮನನ್ನು, ಲಂಕಾದ್ವಾರಂ - ಲಂಕೆಯ ಬಾಗಲನ್ನು ಕುರಿತು, ಉಪಸ್ಥಿತಂ - ಬಂದಿರುವ, ಧನುಷ್ಪಾಣಿಂ - ಕೋದಂಡಪಾಣಿಯಾದ, ಲಕ್ಷ್ಮಣಂಚ - ಲಕ್ಷ್ಮಣನನ್ನೂ, ಕ್ಷಿಪ್ರಂ - ಬೇಗನೆಯೇ, ದ್ರಕ್ಷ್ಯಸಿ ನೋಡುವೆ. ॥ ೪೮ ॥ ನಖ....ಧಾನ್-ಉಗುರುಗಳನ್ನು, ಕೋರೆಹಲ್ಲುಗಳನ್ನೂ ಆಯುಧಗಳನ್ನಾಗಿ ಉಳ್ಳ, ವೀರಾನ್ - ಶೂರರಾದ, ಸಿಂಹ....ಮಾನ್ - ಸಿಂಹ ಮತ್ತು ಹುಲಿಗಳಂತೆ ಪರಾಕ್ರಮಶಾಲಿಗಳಾದ, ವಾರ....ಭಾನ್ - ದಿಗ್ಗಜಗಳಿಗೆ ಸಮಾನರಾದ, ಗತಾನ್ - ಗುಂಪುಗೂಡಿರುವ, ವಾನರಾನ್ - ಕಪಿಗಳನ್ನು,

ಶ್ರೀರಾಮಮೂರ್ತಿಯು, ಪುತ್ರ ಮಿತ್ರ ಮಂತ್ರಿ ಸಮೇತನಾದ ದುರುಳ ರಾವಣನನ್ನು ಖಂಡಿತವಾಗಿಯೂ ಸಂಹರಿಸುತ್ತಾನೆ. ಆಮೇಲೆ, ರೋಹಿಣಿಯು ಚಂದ್ರನೊಡಗೂಡಿದಂತೆ ನೀನು ಆತನೊಡಗೂಡಿ ಸುಖಿಸುವೆ. ಎಲೆ ದೇವಿ! ಶೀಘ್ರವಾಗಿಯೇ ನಿನ್ನೀಶೋಕವು ಕೊನೆಗಾಣುವುದು. ಅಲ್ಲದೆ ಶ್ರೀರಾಮನಿಂದ ಸಂಹೃತನಾಗುವ ರಾವಣಾಸುರನನ್ನೂ ನೀನು ಅತ್ಯಲ್ಪ ಕಾಲದಲ್ಲಿಯೇ ನೋಡುವೆ '' ಎಂದು ಹೇಳಿ ಆಕೆಯನ್ನು ಸಮಾಧಾನಗೊಳಿಸಿ ಹೊರಡಲು ಬಯಸಿದವನಾಗಿ ಮತ್ತೆ ಆಕೆಯನ್ನು ಕುರಿತು ಹೀಗೆಂದನು. ॥ ೪೧-೪೭ ॥ '' ಅಮ್ಮಾ ಸೀತಾದೇವಿಯೇ! ಶತ್ರುಸಂಹಾರಕನಾದ ಶ್ರೀರಾಮನು ಧನುರ್ಬಾಣಗಳನ್ನು ಧರಿಸಿ, ಲಕ್ಷ್ಮಣಸಮೇತನಾಗಿ ಬಹು ಜಾಗ್ರತೆಯಾಗಿಯೇ ಈ ಲಂಕಾನಗರದ್ವಾರವನ್ನು ಸೇರುವುದನ್ನು ನೀನು ನೋಡುವೆ. ಅಲ್ಲದೇ ಉಗುರುಗಳೂ, ಹಲ್ಲುಗಳೇ ಆಯುಧಗಳಾಗಿ ಉಳ್ಳವರೂ, ಮಹಾ ಶೂರರೂ, ಸಿಂಹವ್ಯಾಘ್ರಗಳ ಬಲಪರಾಕ್ರಮಗಳುಳ್ಳವರೂ, ಶ್ರೇಷ್ಠವಾದ ಗಜಗಳಿಗೆ ಸಮಾನರಾದ ಕಾಂತಿಯುಳ್ಳವರೂ ಆದ ವಾನರವೀರರೂ ಗುಂಪುಗುಂಪಾಗಿ ಈ

ಸಂಗರ್ತಾನ್ ॥ ೪೯ ॥ ಶೈಲಾಂಬುದನಿಕಾಶಾನಾಂ ಲಂಕಾಮಲಯಸಾನುಷು । ನರ್ದತಾಂ ಕಪಿಮುಖ್ಯಾನಾಮಚಿರಾದ್ದ್ರಕ್ಷ್ಯಸಿ ಸ್ವನಂ ॥ ೫೦ ॥ ಸತು ಮರ್ಮಣಿ ಘೋರೇಣ ತಾಡಿತೋ ಮನ್ಮಥೇಷುಣಾ । ನಶರ್ಮ ಲಭತೇ ರಾಮಃ ಸಿಂಹಾರ್ದಿತಇವ ದ್ವಿಪಃ ॥೫೧॥ ಮಾರುದೋ ದೇವಿ! ಶೋಕೇನ ಮಾಭೂತ್ತೇ ಮನಸೋಽಪ್ರಿಯಂ । ಶಚೀವ ಪತ್ಯಾ ಶಕ್ರೇಣ ಭರ್ತ್ರಾ ನಾಥವತೀ ಹ್ಯಸಿ ॥ ೫೨ ॥ ರಾಮಾದ್ವಿಶಿಷ್ಟಃ ಕೋಽನ್ಯೋಽಸ್ತಿ ಕಶ್ಚಿತ್ಸೌಮಿತ್ರಿಣಾ ಸಮಃ । ಅಗ್ನಿಮಾರುತಕಲ್ಪೌ ತೌ ಭ್ರಾತರೌ ತವ ಸಂಶ್ರಯೌ ॥೫೩॥

ಕ್ಷಿಪ್ರಂ-ಬೇಗ, ದ್ರಕ್ಷ್ಯಸಿ-ನೋಡುವಿ. ॥ ೪೯ ॥ ಹೇ ಆರ್ಯೇ-ಓ ಪೂಜ್ಯಳೇ, ಶೈಲಾಂ....ನಾಂ - ಗಿರಿಮೇಘಗಳಿಗೆ ಸದೃಶರಾದ, ಲಂಕಾ....ಷು - ಲಂಕೆಯ ಬಳಿಯಲ್ಲಿರುವ ಮಲಯಪರ್ವತದ ಜರಿತೆಗಳಲ್ಲಿ, ನರ್ದತಾಂ - ಹುಂಕರಿಸುತ್ತಿರುವ, ಕಪಿ....ನಾಂ - ವಾನರಶ್ರೇಷ್ಠರ, ಅನೇಕಶಃ - ಬಹಳವಾದ, ಯೂಥಾನಿ - ಗುಂಪುಗಳನ್ನು, ದ್ರಕ್ಷ್ಯಸಿ - ನೋಡುವೆ. ॥ ೫೦ ॥ ಸರಾಮಸ್ತು - ಆ ಶ್ರೀರಾಮನಾದರೆ, ಮರ್ಮಣಿ - ಮರ್ಮಸ್ಥಳದಲ್ಲಿ, ಘೋರೇಣ - ಭಯಂಕರವಾದ, ಮನ್ಮಥೇಷುಣಾ - ಮನ್ಮಥಬಾಣದಿಂದ, ತಾಡಿತಃ - ಹೊಡೆಯಲ್ಪಟ್ಟವನಾಗಿ, ಸಿಂಹಾರ್ದಿತಃ - ಸಿಂಹದಿಂದ ಹೆದರಿಸಲ್ಪಟ್ಟ, ದ್ವಿಪಇವ - ಆನೆಯಂತೆ, ಶರ್ಮ - ಸುಖವನ್ನು, ನಲಭತೇ - ಹೊಂದುವುದಿಲ್ಲ. ॥ ೫೧ ॥ ಹೇ ದೇವಿ - ಎಲೌ ತಾಯೇ, ಶೋಕೇನ - ದುಃಖದಿಂದ, ಮಾರುದಃ - ಅಳಬೇಡ, ತೇ - ನಿನ್ನ, ಮನಸಃ - ಮನಸ್ಸಿಗೆ, ಅಪ್ರಿಯಾ - ಅಹಿತವು, ಮಾಭೂತ್ - ಆಗದಿರಲಿ, ಭರ್ತ್ರಾ - ಪತಿಯಿಂದ, ಶಕ್ರೇಣ - ದೇವೇಂದ್ರನಿಂದ, ಶಚೀವ - ಶಚೀದೇವಿಯಂತೆ, ನಾಥವತೀ - ಪತಿಯುಳ್ಳವಳು, ಅಸಿ - ಆಗಿರುವೆ. ॥ ೫೨ ॥ ರಾಮಾತ್ - ರಾಮನಿಗಿಂತಲೂ, ವಿಶಿಷ್ಟಃ - ಅತಿಶಯನಾದ, ಅನ್ಯಃ - ಮತ್ತೋರ್ವನು, ಕೋಽಸ್ತಿ - ಯಾವನಿರುವನು, ಸೌಮಿತ್ರಿಣಾ-ಲಕ್ಷ್ಮಣನೊಡನೆ, ಸಮಃ-ಸಮಾನನಾದವನು, ಕಶ್ಚಿತ್-ಯಾವನು, ಅಸ್ತಿ - ಇದ್ದಾನೆ, ಅಗ್ನಿ....ಲ್ಪೌ - ಅಗ್ನಿವಾಯುಗಳಿಗೆ ಸದೃಶರಾದ, ಭ್ರಾತರೌ - ಅಣ್ಣತಮ್ಮಂದಿರು, ತವ - ನಿನಗೋಸ್ಕರ, ಸಂಶ್ರಯೌ - ಏಕತ್ರಸೇರಿರುವರು. ॥ ೫೩ ॥ ಹೇ ದೇವೀ - ಎಲೆ ತಾಯೇ,

---

ಲಂಕಾನಗರದ್ವಾರದಲ್ಲಿರುವುದನ್ನು ನೀನು ಶೀಘ್ರದಲ್ಲಿಯೇ ಕಾಣುವೆ. ಎಲೌ ಪೂಜ್ಯಳೇ! ಪರ್ವತಗಳಿಗೂ, ಮೇಘಗಳಿಗೂ ಸಮಾನವಾದ ಶರೀರವುಳ್ಳವರಾಗಿ, ಲಂಕಾದ್ವೀಪದ ಮಲಯಪರ್ವತದ ತಪ್ಪಲು ಭೂಮಿಯಲ್ಲಿ ಸಿಂಹಶಾರ್ದೂಲಗಳಂತೆ ಆರ್ಭಟಿಸುತ್ತಿರುವರೂ ಆದ ಆ ಕಪಿವೀರರನ್ನು ನೀನು ಅತ್ಯಲ್ಪಕಾಲದಲ್ಲಿಯೇ ಕಾಣುವೆ. ॥ ೪೯-೫೦ ॥ ಎಲೌ ಸೀತಾದೇವಿಯೇ! ಶ್ರೀರಾಮಮೂರ್ತಿಯು ಇಲ್ಲಿಗೆ ಬರುವನೋ ಇಲ್ಲವೋ ಎಂದು ಶಂಕಿಸಬೇಡ. ಆತನು ಮದನನಂಬುಗಳಿಂದ ಪೀಡಿತನಾಗಿ, ಸಿಂಹಪೀಡಿತವಾದ ಗಜಶ್ರೇಷ್ಠದಂತೆ ಎಷ್ಟುಮಾತ್ರವೂ ಸುಖವಾಗಿಲ್ಲವು. ಅಂತಹನು ಪ್ರಿಯಸತಿಯಾದ ನಿನ್ನನ್ನು ಕಾಣಲು ಇಲ್ಲಿಗೆ ಬಾರದಿರುವನೇ! ದೇವೀ! ನೀನು ಹೀಗೆ ರೋದಿಸಬಾರದು. ಶಚೀದೇವಿಗೆ ದೇವೇಂದ್ರನಂತೆ, ನಿನಗೆ ಶ್ರೀರಾಮನು ನಾಥನಾಗಿರುವಾಗ ಹೀಗೆ ನೀನು ಪ್ರಲಪಿಸಬಹುದೇ! ಶ್ರೀರಾಮನಿಗಿಂತಲೂ ಅಧಿಕನಾದವನಾವನೂ ಇಲ್ಲವು. ನಿನಗೆ ಆಶ್ರಯಭೂತರಾದ ಆ ಸಹೋದರರಿಬ್ಬರೂ, ವಾಯ್ವಗ್ನಿಗಳಿಗೆ ಸಮಾನರಾದವರು. ಓ ಜಾನಕಿಯೇ! ರಾಕ್ಷಸಸಮೂಹಗಳಿಗೆ ವಾಸಸ್ಥಾನವಾದುದೂ, ಮಹಾ ಭಯಂಕರವಾದುದೂ ಆದ ಈ ಲಂಕಾನಗರದಲ್ಲಿ ನೀನಿನ್ನು ಬಹುಕಾಲವಿರಬೇಕಾಗಿಲ್ಲವು. ನಿನ್ನ ಭರ್ತನಾದ ಶ್ರೀರಾಮನು ಅತಿ ಶೀಘ್ರವಾಗಿ ಬಂದು

ನಾಽಸ್ಮಿಂಶ್ಚಿರಂ ವತ್ಸ್ಯಸಿ ದೇವಿ ! ದೇಶೇ
ರಕ್ಷೋಗಣೈರಧ್ಯುಷಿತೇಽತಿ ರೌದ್ರೇ ! ।
ನತೇ ಚಿರಾದಾಗಮನಂ ಪ್ರಿಯಸ್ಯ
ಕ್ಷಮಸ್ವ ಮತ್ಸಂಗಮಕಾಲಮಾತ್ರಂ" ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಚತ್ವಾರಿಂಶಸ್ಸರ್ಗಃ

ರಕ್ಷೋಗಣೈಃ - ರಾಕ್ಷಸಸಮೂಹಗಳಿಂದ, ಅಧ್ಯುಷಿತೇ - ಅಧಿಷ್ಠಿಸಲ್ಪಟ್ಟ, ಅತಿರೌದ್ರೇ - ಮಹಾ ಭಯಂಕರವಾದ, ಅಸ್ಮಿನ್ದೇಶೇ - ಈ ಸ್ಥಳದಲ್ಲಿ, ಚಿರಂ - ಬಹುಕಾಲವು, ನವತ್ಸ್ಯಸಿ - ಇರುವದಿಲ್ಲ, ತೇ-ನಿನ್ನ, ಪ್ರಿಯಸ್ಯ-ಪತಿಯ, ಆಗಮನಂ-ಬರುವಿಕೆಯು, ನಚಿರಾತ್-ಸಾವಕಾಶವಿಲ್ಲ, ಮತ್ಸಂ....ತ್ರಂ-ನಾನು ರಾಮನೊಡನೆ ಸೇರುವವರೆಗೂ, ಕ್ಷಮಸ್ವ - ಸೈರಿಸಿಕೋ. ॥ ೫೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಚತ್ವಾರಿಂಶಸ್ಸರ್ಗಃ

ಬಂದುಬಿಡುವನು. ನಾನಿಲ್ಲಿಂದ ಹೋಗಿ ಈ ವೃತ್ತಾಂತವನ್ನು ಆತನಿಗೆ ಅರಿಕೆ ಮಾಡಿ, ವಾನರರೊಡಗೂಡಿ ಆ ರಾಮನನ್ನಿಲ್ಲಿಗೆ ಕರೆತರುವೆನು. ಅದುವರೆಗೂ ನೀನು ಸಮಾಧಾನ ದಿಂದಿರು" ಎಂದನು. ॥ ೫೧—೫೪ ॥

ಇಂತಿದು ಹನುಮತ್ಕೃತ ಸೀತಾ ಸಮಾಶ್ವಾಸನ ವೃತ್ತಾಂತವೆಂಬ
ಮೂವತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಚತ್ವಾರಿಂಶಸ್ಸರ್ಗಃ

ಶ್ರುತ್ವಾತು ವಚನಂ ತಸ್ಯ ವಾಯುಸೂನೋರ್ಮಹಾತ್ಮನಃ । ಉವಾಚಾತ್ಮಹಿತಂ ವಾಕ್ಯಂ ಸೀತಾ ಸುರಸುತೋಪಮಾ ॥ ೧ ॥ " ತ್ವಾಂ ದೃಷ್ಟ್ವಾ ಪ್ರಿಯವಕ್ತಾರಂ ಸಂಪ್ರಹೃಷ್ಯಾಮಿ ವಾನರ ! । ಅರ್ಧಸಂಜಾತಸಸ್ಯೇವ ವೃಷ್ಟಿಂ ಪ್ರಾಪ್ಯ ವಸುಂಧರಾ ॥ ೨ ॥ ಯಥಾ ತಂ ಪುರುಷವ್ಯಾಘ್ರಂ ಗಾತ್ರೈಶ್ಶೋಕಾಭಿಕರ್ಶಿತೈಃ । ಸಂಸ್ಪೃಶೇಯಂ ಸಕಾಮಾಹಂ ತಥಾ ಕುರು ದಯಾಂ ಮಯಿ ॥ ೩ ॥ ಅಭಿಜ್ಞಾನಂಚ ರಾಮಸ್ಯ ದದ್ಯಾ ಹರಿಗಣೋತ್ತಮ ! । ಕ್ಷಿಪ್ತಾ ಮಿಷೀಕಾಂ ಕಾಕಸ್ಯ ಕೋಪಾದೇಕಾಕ್ಷಿಶಾತನೀಂ ॥೪॥

ಸುರ....ಮಾ - ದೇವಕನ್ಯಕೆಗೆ ಸದೃಶಳಾದ, ಸೀತಾ - ಸೀತಾದೇವಿಯು, ಮಹಾತ್ಮನಃ - ಮಹಾನುಭಾವನಾದ, ತಸ್ಯವಾಯುಸೂನೋಃ - ಆ ವಾಯುಪುತ್ರನ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಆತ್ಮಹಿತಂ - ತನಗೆ ಇಷ್ಟವಾದ, ವಾಕ್ಯಂ - ಮಾತನ್ನು, ಉವಾಚ - ಹೇಳಿದಳು. ॥ ೧ ॥ ಹೇ ವಾನರ-ಎಲೈ ಕಪಿಯೇ, ಪ್ರಿಯವಕ್ತಾರಂ-ಹಿತವನ್ನು ಹೇಳುತ್ತಿರುವ, ತ್ವಾಂ-ನಿನ್ನನ್ನು, ದೃಷ್ಟ್ವಾ-ಕಂಡು, ಅರ್ಧ....ಸಾ-ಅರ್ಧಮರ್ಧವಾಗಿ ಬೆಳೆದಿರುವ ಸಸ್ಯಯುಕ್ತವಾದ, ವಸುಂಧರಾ-ಭೂಮಿಯು, ವೃಷ್ಟಿಂ - ವರ್ಷವನ್ನು, ಪ್ರಾಪ್ಯೇವ - ಹೊಂದಿದಂತೆ, ಸಂಪ್ರಹೃಷ್ಯಾಮಿ - ಸಂತೋಷಪಡುತ್ತೇನೆ ॥ ೨ ॥ ಸಕಾಮಾ - ಇಚ್ಛೆಯಿಂದೊಡಗೂಡಿದ, ಅಹಂ - ನಾನು, ತಂಪು....ಘ್ರಂ - ಆ ನರಶ್ರೇಷ್ಠನನ್ನು, ಶೋಕಾ....ತೈಃ - ಶೋಕದಿಂದ ಕೃಶವಾದ, ಗಾತ್ರೈಃ - ಅಂಗಗಳಿಂದ, ಯಥಾಸಂಸ್ಪೃಶೇಯಂ - ಹೇಗೆ ಸ್ಪರ್ಶಿಸುವೆನೋ, ತಥಾ - ಹಾಗೆ, ಮಯಿ - ನನ್ನಲ್ಲಿ, ದಯಾಂ - ಕರುಣೆಯನ್ನು, ಕುರು - ಮಾಡು. ॥ ೩ ॥ ಹೇ ಹರಿ......ಮ ವಾನರಸಮೂಹಾಧ್ಯಕ್ಷನೇ, ರಾಮಸ್ಯ-ಶ್ರೀರಾಮನ, ಕೋಪಾತ್-ಕ್ರೋಧದಿಂದ, ಕ್ಷಿಪ್ತಾಂ - ಬಿಡಲ್ಪಟ್ಟ, ಕಾಕಸ್ಯ - ಕಾಗೆಯ, ಏಕಾ....ನೀಂ - ಒಂದು ಕಣ್ಣನ್ನು ನಾಶಮಾಡುತ್ತಿರುವ, ಇಷೀಕಾಂ - ತೃಣರೂಪವಾದ ಇಷೀಕವೆಂಬ ಅಸ್ತ್ರವನ್ನು ಕುರಿತು, ಅಭಿಜ್ಞಾ

ಮಹಾ ಮೇಧಾವಿಯೂ, ವಾಯುನಂದನನೂ ಆದ ಹನುಮಂತನು, ನುಡಿದ ಮಾತುಗಳನ್ನು ಕೇಳಿ, ದೇವಕನ್ನಿಕೆಗೆ ಸಮಾನಳಾದ ಸೀತಾದೇವಿಯು ಅವನನ್ನು ಕುರಿತು, "ಆಂಜನೇಯಾ ! ಹರ್ಷಪ್ರದವಾದ ಈ ಸಂಗತಿಯನ್ನು ಹೇಳಿದ ನಿನ್ನನ್ನು ನೋಡಿದೊಡನೆಯೇ, ಸ್ವಲ್ಪ ಮೊಳೆತು ಒಣಗಿಹೋದ ಪೈರಿನ ಭೂಮಿಯು ಮಳೆಸುರಿಯುವುದರಿಂದ ಮತ್ತೆ ಚಿಗುರಿ ವೃದ್ಧಿಯಾಗಿ ಉಲ್ಲಾಸಹೊಂದುವಂತೆ, ಜೀವವಿಲ್ಲದ ಪದಾರ್ಥಕ್ಕೆ ಸಮಾನಳಾಗಿರುವ ನಾನು ಅಮೃತಸಮಾನಗಳಾದ ನಿನ್ನ ವಾಕ್ಯಗಳಿಂದ ಪುನರ್ಜೀತಳಾಗಿ ಉಲ್ಲಾಸಭರಿತಳಾದೆನು. ಎಲೈ ಹನುಮಂತನೇ ! ಮದನತಾಪದಿಂದ ಕೂಡಿದ ನಾನು ಬಹಳವಾದ ದುಃಖದಿಂದ ಕೃಶವಾಗಿರುವ ನನ್ನೀಅವಯವಗಳಿಂದ ನನ್ನ ಭರ್ತನಾದ ಶ್ರೀರಾಮನನ್ನು ಆಲಿಂಗಿಸಿಕೊಳ್ಳುವಂತೆ ಮಾಡಿ ನನ್ನಲ್ಲಿ ಕೃಪೆದೋರು. ಓ ವಾನರಶ್ರೇಷ್ಠನೇ ! ಶ್ರೀರಾಮನು ಆ ಕಾಗೆಯ ಮೇಲೆ ಕೋಪಿಸಿ, ದರ್ಭೆಯನ್ನು ಬ್ರಹ್ಮಾಸ್ತ್ರ ಮಂತ್ರದಿಂದ ಪ್ರಯೋಗಿಸಿ, ಅದರ ಒಂದು ಕಣ್ಣನ್ನು ಕೆಡಿಸಿದನೆಂದು ಹಿಂದೆ ನಾನು ಹೇಳಿದ ಗುರ್ತನ್ನು ಶ್ರೀರಾಮನಿಗೆ ಹೇಳು. ಎಲೈ

ಮನಶ್ಶಿಲಾಯಾಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ । ತ್ವಯಾ ಪ್ರಣಷ್ಟೇ ತಿಲಕೇ ತಂ ಕಿಲಸ್ಮರ್ತುಮರ್ಹಸಿ ॥ ೫ ॥ ಸವೀರ್ಯವಾನ್ಕಥಂ ಸೀತಾಂ ಹೃತಾಂ ಸಮನು ಮನ್ಯಸೇ । ವಸಂತೀಂ ರಕ್ಷಸಾಂ ಮಧ್ಯೇ ಮಹೇಂದ್ರವರುಣೋಪಮಃ ॥ ೬ ॥ ಏಷ ಚೂಡಾಮಣಿರ್ದಿವ್ಯೋ ಮಯಾ ಸುಪರಿರಕ್ಷಿತಃ । ಏತಂ ದೃಷ್ಟ್ವಾ ಪ್ರಹೃಷ್ಯಾಮಿ ವ್ಯಸನೇ ತ್ವಾಮಿವಾನಘ ॥ ೭ ॥ ಏಷ ನಿರ್ಯಾತಿತಶ್ಶ್ರೀರ್ಮಾ ಮಯಾ ತೇ ವಾರಿ ಸಂಭವಃ । ಅತಃಪರಂ ನಶಕ್ಷ್ಯಾಮಿ ಜೀವಿತುಂ ಶೋಕಲಾಲಸಾ ॥ ೮ ॥ ಅಸಹ್ಯಾನಿಚ

ನಂಚ - ಹೆಗ್ಗುರ್ತನ್ನು, ದದ್ಯಾಃ - ಕೊಡು. ॥ ೪ ॥ ತ್ವಯಾ - ನಿನ್ನಿಂದ, ತಿಲಕೇ - ತಿಲಕವು, ಪ್ರಣಷ್ಟೇ - ನಾಶವಾಗಲು, ಮನಶ್ಶಿಲಾಯಾಃ - ಮಣಿಶಿಲೆಯ, ತಿಲಕಃ - ತಿಲಕವು, ಗಂಡಪಾರ್ಶ್ವೆ - ಗಂಡಸ್ಥಳದಲ್ಲಿ, ನಿವೇಶಿತಃಕಿಲ - ಇಡಲ್ಪಟ್ಟಿತಷ್ಟೆ, ತಂ - ಆ ಗುರ್ತನ್ನು, ಸ್ಮರ್ತುಂ - ಸ್ಮರಿಸಲು, ಅರ್ಹಸಿ-ಯೋಗ್ಯನಾಗು. ॥ ೫ ॥ ಮಹೇ....ಮಃ-ಇಂದ್ರವರುಣರಿಗೆ ಸಮಾನನಾದ, ವೀರ್ಯವಾ- ಪರಾಕ್ರಮಿಯಾದ ಸಃ - ಆ ಶ್ರೀರಾಮನು, ಹೃತಾಂ - ಅಪಹರಿಸಲ್ಪಟ್ಟ, ಸೀತಾಂ - ಸೀತಾದೇವಿಯಾದ ನನ್ನನ್ನು, ರಕ್ಷಸಾಂ - ರಕ್ಕಸರ, ಮಧ್ಯೇ - ನಡುವೆ, ವಸಂತೀಂ - ಇರುವವಳನ್ನಾಗಿ, ಕಥಂಸಮನು ಮನ್ಯಸೇ - ಹೇಗೆ ಸೈರಿಸಿದ್ದಾನೆ. ॥ ೬ ॥ ಶ್ರೀರ್ಮಾ - ಪ್ರಕಾಶಿಸುತ್ತಿರುವ, ಏಷಚೂಡಾಮಣಿಃ - ಈ ಶಿರೋಮಾಣಿಕ್ಯವು, ಮಯಾ - ನನ್ನಿಂದ, ಸುಪರಿರಕ್ಷಿತಃ - ರಕ್ಷಿಸಲ್ಪಟ್ಟಿತ್ತು, ಹೇ ಅನಘ - ಎಲೈ ಪೂಜ್ಯನೇ, ವ್ಯಸನೇ - ದುಃಖಕಾಲದಲ್ಲಿ, ತ್ವಾಮಿವ - ನಿನ್ನಂತೆ, ಏತಂ - ಈ ಭೂಷಣವನ್ನು, ದೃಷ್ಟ್ವಾ - ಕಂಡು, ಪ್ರಹೃಷ್ಯಾಮಿ - ಸಂತೋಷಿಸುತ್ತಿದ್ದೆನು. ॥ ೭ ॥ ಶ್ರೀರ್ಮಾ - ಕಾಂತಿಯುಕ್ತವಾದ, ವಾರಿಸಂಭವಃ - ಜಲದಲ್ಲಿ ಹುಟ್ಟಿದ, ಏಷಃ - ಈ ರತ್ನವು, ತೇ - ನಿನಗೋಸ್ಕರ, ಮಯಾ - ನನ್ನಿಂದ, ನಿರ್ಯಾತಿತಃ - ಕಳುಹಿಸಲ್ಪಟ್ಟಿತು, ಅತಃಪರಂ - ಇನ್ನುಮೇಲೆ, ಶೋಕಲಾಲಸಾ - ದುಃಖಾಕ್ರಾಂತಳಾಗಿ, ಜೀವಿತುಂ - ಬದುಕುವದಕ್ಕೆ, ನಶಕ್ಷ್ಯಾಮಿ - ಸಮರ್ಥಳಾಗಲಾರೆನು. ॥ ೮ ॥

ಮಾರುತಿಯೇ! ಇನ್ನೊಂದು ಗುರ್ತನ್ನು ಹೇಳುವೆನು. ಎಲೈ ಪ್ರಿಯನೇ! ಒಂದು ದಿನ ನನ್ನ ತಿಲಕವು ಅಳಸಿಹೋಗಿರಲು, ಮಣಿಶಿಲೆಯನ್ನು ತಿಲಕವನ್ನಾಗಿ ಮಾಡಿ ನೀನು ನನ್ನ ಹಣೆಗಿಡಲಿಲ್ಲವೇ?'' ಎಂದು ನನ್ನ ಮಾತುಗಳಿಂದಾತನಿಗೆ ತಿಳಿಸು. ॥ ೧–೫ ॥ ಎಲೈ ಮಾರುತಿಯೇ ಈ ನನ್ನ ಮಾತುಗಳಿಂದಲೇ ನನ್ನ ಭರ್ತನಿಗೆ ಹೀಗೆ ಹೇಳು. "ಎಲೈ ಶ್ರೀರಾಮಚಂದ್ರನೇ! ಮಹಾ ಶೌರ್ಯವುಳ್ಳವನೂ, ಇಂದ್ರವರುಣರಿಗೆ ಸಮಾನನಾದವನೂ ಆದ ನೀನು, ರಾಕ್ಷಸನಿಂದ ಅಪಹೃತಳಾದವಳೂ, ರಾಕ್ಷಸಪರಿವೇಷ್ಟಿತಳಾದವಳೂ ನಿನ್ನ ಭಾರ್ಯೆಯಾದವಳೂ ಆದ ನನ್ನನ್ನು ಸಂರಕ್ಷಿಸದಿರುವೆಯೇಕೆ? ಎಲೈ ಪ್ರಾಣಕಾಂತನೇ! ಮಹಾಶ್ರೇಷ್ಠವಾದ ಈ ಚೂಡಾಮಣಿಯನ್ನು ನಾನು ಬಹು ಎಚ್ಚರದಿಂದ ಕಾಪಾಡಿದೆನು. ಎಲೈ ಅನಘನೇ! ಮಹಾ ದುಃಖ ಸಮಯಗಳಲ್ಲಿಯೂ ಕೂಡ ಈ ಚೂಡಾಮಣಿಯನ್ನು ನೋಡಿಕೊಂಡು, ನಿನ್ನನ್ನು ನೋಡಿದಂತೆಯೇ ಪರಮಸಂತುಷ್ಟಳಾಗುತ್ತಿದ್ದೆನು. ಸಂಪದ್ಯುಕ್ತವಾದ ಈ ಚೂಡಾಮಣಿಯನ್ನು ಕೂಡ ನಿನಗೆ ಗುರುತಾಗಿ ಕೊಟ್ಟು ಕಳುಹಿಸಿರುವೆನು. ಇದುವರೆಗೆ ದುಃಖಕಾಲಗಳಲ್ಲಿ ನಾನು ಈ ಚೂಡಾಮಣಿಯನ್ನಾದರೂ ನೋಡಿಕೊಂಡು ಸಮಾಧಾನಪಡುತ್ತಿದ್ದೆನು ಇನ್ನು ಮೇಲೆ ಇದೂ ಇಲ್ಲದಾಗುವುದು. ಇದನ್ನು ನಿನಗಾಗಿ ಕೊಟ್ಟುಕಳುಹಿಸಿರುವೆನು. ಅಧಿಕವಾದ ವ್ಯಸನದಿಂದ ಪೀಡಿತಳಾದ ನಾನು ಇನ್ನು ಒಂದು ತಿಂಗಳಮೇಲೆ ಜೀವದಿಂದಿರಲಾರೆನು.

ದುಃಖಾನಿ ವಾಚಶ್ಚ ಹೃದಯಚ್ಛಿದಃ । ರಾಕ್ಷಸೀನಾಂ ಸುಘೋರಾಣಾಂ ತ್ವತ್ಕೃತೇ ಮರ್ಷಯಾಮ್ಯಹಂ ॥ ೯ ॥ ಧಾರಯಿಷ್ಯಾಮಿ ಮಾಸಂತು ಜೀವಿತಂ ಶತ್ರುಸೂದನ! । ಮಾಸಾದೂರ್ಧ್ವಂ ನಜೀವಿಷ್ಯೇ ತ್ವಯಾ ಹೀನಾ ನೃಪಾತ್ಮಜ! ॥ ೧೦ ॥ ಘೋರೋ ರಾಕ್ಷಸರಾಜೋಽಯಂ ದೃಷ್ಟಿಶ್ಚ ನಸುಖಾ ಮಯಿ । ತ್ವಾಂಚ ಶ್ರುತ್ವಾ ವಿಷಜ್ಜಂತಂ ನಜೀವೇಯಮಹಂ ಕ್ಷಣಂ" ॥ ೧೧ ॥ ವೈದೇಹ್ಯಾ ವಚನಂ ಶ್ರುತ್ವಾ ಕರುಣಂ ಸಾಶ್ರುಭಾಷಿತಂ । ಅಥಾಽಬ್ರವೀನ್ಮಹಾತೇಜಾ ಹನುಮಾನ್ಮಾರುತಾತ್ಮಜಃ ॥ ೧೨ ॥

ಸುಘೋರಾಣಾಂ-ಮಹಾಭಯಂಕರರಾದ, ರಾಕ್ಷಸೀನಾಂ-ರಕ್ಕಸಿಯರ, ಅಸಹ್ಯಾನಿ-ಸೈರಿಸಲಸಾಧ್ಯವಾದ, ದುಃಖಾನಿ - ದುಃಖಗಳನ್ನು, ಹೃದಯಚ್ಛಿದಃ - ಮನಶ್ಶಲ್ಯಗಳಾದ, ವಾಚಶ್ಚ - ಮಾತುಗಳನ್ನೂ ಸಹ, ತ್ವತ್ಕೃತೇ - ನಿನ್ನ ನಿಮಿತ್ತವಾಗಿ, ಮರ್ಷಯಾಮಿ - ಸೈರಿಸಿದ್ದೇನೆ. ॥ ೯ ॥ ಕಿಂತು - ಆದರೆ, ಹೇ ಶತ್ರುಸೂದನ - ಎಲೈ ಶತ್ರುನಾಶಕನೇ, ಹೇ ನೃಪಾತ್ಮಜ - ಎಲೈ ರಾಜಕುಮಾರನೇ, ತ್ವಯಾ - ನಿನ್ನಿಂದ, ಹೀನಾ - ರಹಿತಳಾಗಿ, ಮಾಸಂ - ತಿಂಗಳವರೆಗೂ, ಜೀವಿತಂ - ಪ್ರಾಣವನ್ನು, ಧಾರಯಿಷ್ಯಾಮಿ - ಧರಿಸಿರುವೆನು, ಮಾಸಾದೂರ್ಧ್ವಂ - ಮಾಸದಬಳಿಕ, ನಜೀವಿಷ್ಯೇ - ಬದುಕಲಾರೆನು. ॥ ೧೦ ॥ ಮಯಿ-ನನ್ನ ವಿಷಯದಲ್ಲಿ, ಅಯಂರಾಕ್ಷಸರಾಜಃ-ಈ ರಾಕ್ಷಸಾಧಿಪನು, ಘೋರಃ-ಭಯಂಕರನು, ತಸ್ಯ - ಅವನ, ಅದೃಷ್ಟಿಶ್ಚ - ನೋಟವೂ ಕೂಡ, ನಸುಖಾ - ಸುಖಕರವಲ್ಲ, ಅಹಂ - ನಾನು, ವಿಷದ್ಯಂತಂ-ಕ್ಲೇಶಪಡುತ್ತಿರುವ, ತ್ವಾಂಚ-ನಿನ್ನನ್ನೂ ಸಹಾ, ಶ್ರುತ್ವಾ-ಕೇಳಿ, ಕ್ಷಣಂ-ಕ್ಷಣಕಾಲವಾದರೂ, ನಜೀವೇಯಂ - ಬದುಕಲಾರೆನು. ॥ ೧೧ ॥ ಮಾರು....ಜಃ - ವಾಯುನಂದನನಾದ, ಮಹಾತೇಜಾಃ - ಮಹಾ ಪರಾಕ್ರಮಿಯಾದ, ಹನುಮಾನ್ - ಆಂಜನೇಯನು, ಸಾಶ್ರುಭಾಷಿತಂ - ಕಂಬನಿಗಳಿಂದೊಡಗೂಡಿದಂತೆ ನುಡಿದ, ವೈದೇಹ್ಯಾಃ - ಸೀತಾದೇವಿಯ, ಕರುಣಂ - ದೀನವಾದ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಅಥ - ಬಳಿಕ, ಅಬ್ರವೀತ್ - ನುಡಿದನು. ॥ ೧೨ ॥ ಹೇದೇವಿ - ಎಲೌ ಪೂಜ್ಯಳೇ,

---

ಎಲೈ ಪ್ರಿಯನೇ! ಸಹಿಸಲಸಾಧ್ಯವಾದ ಈ ವ್ಯಸನವನ್ನೂ, ಮಹಾ ಭಯಂಕರೆಯರಾದ ಈ ರಾಕ್ಷಸಸ್ತ್ರೀಯರ ಕಟುವಾಕ್ಯಗಳನ್ನೂ, ಬದುಕಿದ್ದರೆ ಎಂದಾದರೂ ನಿನ್ನನ್ನು ನೋಡಬಹುದೆಂಬ ಆಸೆಯಿಂದ ಸಹಿಸಿಕೊಂಡಿದ್ದೆನು. ಆ ಮಾತುಗಳನ್ನು ಕೇಳಿ, ಆ ವ್ಯಸನವನ್ನನುಭವಿಸಿ ಈ ಮೊದಲೇ ನಾನು ಪ್ರಾಣಗಳನ್ನು ತೊರೆಯಬೇಕಾಗಿದ್ದಿತು. ಆದರೂ ನಿನ್ನನ್ನು ಕಾಣುವೆನೆಂಬ ಪ್ರತ್ಯಾಶೆಯಿಂದ ನಿನಗಾಗಿ ಈ ಪ್ರಾಣಗಳನ್ನು ಉಳಿಸಿಕೊಂಡಿರುವೆನು. ಎಲೈ ಅರಿಮರ್ದನನೇ! ಇನ್ನೊಂದು ತಿಂಗಳುಮಾತ್ರ ನಾನು ಜೀವದಿಂದಿರುವೆನು. ಆ ಮೇಲೆ ನಿನ್ನನ್ನಗಲಿ ನಾನೆಷ್ಟುಮಾತ್ರಕ್ಕೂ ಬದುಕಿರಲಾರೆನು. ॥ ೯–೧೦ ॥ ಎಲೈ ರಾಜಪುತ್ರನೇ! ನನ್ನ ಪ್ರಾಣನಾಥನೇ! ರಾಕ್ಷಸರೊಡೆಯನಾದ ಈ ರಾವಣಾಸುರನು ಮಹಾ ಭಯಂಕರನು. ಈ ದುರಾತ್ಮನು ನನ್ನನ್ನು ಕ್ರೂರದೃಷ್ಟಿಯಿಂದಲೇ ನೋಡುತ್ತಿರುವನು. ನನಗೆ ಸುಖವೆಂಬುದೇ ಇಲ್ಲವಾಗಿದೆ. ಈಗಲೇ ನೀನು ಬಾರದೆ ಸಾವಕಾಶಮಾಡಿದೆಯಾದರೆ, ಒಂದು ತಿಂಗಳಾದ ಬಳಿಕ ಒಂದು ಕ್ಷಣಕಾಲವಾದರೂ ನಾನು ಪ್ರಾಣಗಳನ್ನುಳಿಸಿಕೊಂಡಿರಲಾರೆನು." ಹೀಗೆ ಸೀತಾದೇವಿಯು, ಬಹಳವಾದ ದುಃಖದಿಂದ ಕಂಬನಿಯು ಧಾರೆಧಾರೆಯಾಗಿ ಸುರಿಯುತ್ತಿರಲು, ರೋದಿಸುತ್ತ ನುಡಿದ ಮಾತುಗಳನ್ನು ಕೇಳಿ ವಾಯುಪುತ್ರನಾದ ಆಂಜನೇಯನು ಆಕೆಯನ್ನು

"ತ್ವಚ್ಛೋಕವಿಮುಖೋ ರಾಮೋ ದೇವಿ! ಸತ್ಯೇನ ತೇ ಶಪೇ । ರಾಮೇ ದುಃಖಾಭಿಭೂತೇತು ಲಕ್ಷ್ಮಣಃ ಪರಿತಪ್ಯತೇ ॥ ೧೩ ॥ ಕಥಂಚಿದ್ಭವತೀ ದೃಷ್ಟ್ವಾ ನಕಾಲಃ ಪರಿಶೋಚಿತುಂ । ಇಮಂ ಮುಹೂರ್ತಂ ದುಃಖಾನಾಮಂತಂ ದ್ರಕ್ಷ್ಯಸಿ ಭಾಮಿನಿ! ॥೧೪॥ ತಾವುಭೌ ಪುರುಷವ್ಯಾಘ್ರೌ ರಾಜಪುತ್ರಾವರಿಂದಮೌ । ತ್ವದ್ದರ್ಶನಕೃತೋತ್ಸಾಹೌ ಲಂಕಾಂ ಭಸ್ಮೀಕರಿಷ್ಯತಃ ॥ ೧೫ ॥ ಹತ್ವಾತು ಸಮರೇ ಕ್ರೂರಂ ರಾವಣಂ ಸಹಬಾಂಧವಂ । ರಾಘವೌ ತ್ವಾಂ ವಿಶಾಲಾಕ್ಷಿ! ಸ್ವಾಂ ಪುರೀಂ ಪ್ರಾಪಯಿಷ್ಯತಃ ॥ ೧೬ ॥

ತೇಸತ್ಯೇನ - ನಿನ್ನಾಣೆಗೂ, ಶಪೇ - ಹೇಳುತ್ತೇನೆ, ರಾಮಃ - ಶ್ರೀರಾಮನು, ತ್ವಚ್ಛೋ....ಖಃ - ನಿನ್ನ ವಿಷಯಕವಾದ ದುಃಖದಿಂದ ಬೇರೊಂದರಲ್ಲಿ ಅಪೇಕ್ಷೆಯಿಲ್ಲದಿರುವನು, ರಾಮೇ - ಶ್ರೀರಾಮನು, ದುಃಖಾ....ತು - ಶೋಕಾಕ್ರಾಂತನಾಗಿರಲು, ಲಕ್ಷ್ಮಣಸ್ತು- ಲಕ್ಷ್ಮಣನಾದರೆ, ಪರಿತಪ್ಯತೇ - ದುಃಖಿಸುತ್ತಾನೆ. ॥ ೧೩ ॥ ಹೇ ಭಾಮಿನೀ .. ಎಲೌ ನಾರಿಯೇ, ಭವತೀ ನೀನು, ಕಥಂಚಿತ್-ಅತಿಪ್ರಯಾಸದಿಂದ, ದೃಷ್ಟಾ - ನೋಡಲ್ಪಟ್ಟೆ, ಪರಿಶೋಚಿತುಂ - ದುಃಖಿಸುವದಕ್ಕೆ, ನಕಾಲಃ-ಸಮಯವಲ್ಲ, ಇಮಂ ಮುಹೂರ್ತಂ - ಈ ಘಳಿಗೆಯಲ್ಲಿ, ದುಃಖಾನಾಂ - ವ್ಯಸನಗಳ, ಅಂತಂ - ತುದಿಯನ್ನು, ದ್ರಕ್ಷ್ಯಸಿ - ನೋಡುವೆ. ॥ ೧೪ ॥ ಪುರು....ಘ್ರೌ-ನರಶ್ರೇಷ್ಠರಾದ, ರಾಜಪುತ್ರೌ-ರಾಜಕುವರರಾದ, ಅರಿಂದಮೌ-ಶತ್ರುನಾಶಕರಾದ, ತ್ವದ್ದ....ಹೌ - ನಿನ್ನನ್ನು ನೋಡುವಿಕೆಯಲ್ಲಿಯೇ ಉತ್ಕಂಠಿತರಾದ, ತಾವುಭೌ - ಅವರೀರ್ವರೂ, ಲಂಕಾಂ - ಲಂಕಾನಗರಿಯನ್ನು, ಭಸ್ಮೀಕರಿಷ್ಯತಃ - ಬೂದಿಮಾಡುವರು. ॥ ೧೫ ॥ ಹೇ ವಿಶಾಲಾಕ್ಷಿ - ಎಲೌ ವಿಸ್ತಾರನೇತ್ರೆಯೇ, ರಾಘವೌ - ಶ್ರೀರಾಮಲಕ್ಷ್ಮಣರು, ಸಮರೇ - ಯುದ್ಧದಲ್ಲಿ, ಕ್ರೂರಂ - ದಾರುಣನಾದ, ಸಹಬಾಂಧವಂ - ಬಂಧುಸಹಿತನಾದ, ರಾವಣಂತು - ರಾವಣನನ್ನಾದರೆ, ಹತ್ವಾ-ಸಂಹರಿಸಿ, ತ್ವಾಂ-ನಿನ್ನನ್ನು, ಸ್ವಾಂಪುರೀಂ-ತನ್ನ ಪುರವನ್ನು ಕುರಿತು, ಪ್ರಾಪಯಿಷ್ಯತಃ-ಹೊಂದಿಸುವರು. ॥ ೧೬ ॥ ಹೇ ಅನಿಂದಿತೇ - ಎಲೌ ಪೂಜ್ಯಳೇ, ರಾಮಃ - ಶ್ರೀರಾಮನು, ಯದಭಿ

ಕುರಿತು ಹೀಗೆಂದನು. ॥ ೧೧-೧೨ ॥ "ಅಮ್ಮಾ, ಸೀತಾದೇವೀ! ಶ್ರೀರಾಮನು ನಿನ್ನನ್ನೇ ಸ್ಮರಿಸಿ, ದುಃಖಿಸುತ್ತ, ಇತರ ವಿಷಯಗಳಲ್ಲಿ ಎಷ್ಟುಮಾತ್ರವೂ ಅರಿವಿಲ್ಲದವನಾಗಿರುವನು. ಅಲ್ಲದೆ ಆತನು ಬಹಳವಾಗಿ ದುಃಖಿಸುತ್ತಿರುವಾಗ ಆತನ ದುಃಖವನ್ನು ನೋಡಿ ಲಕ್ಷ್ಮಣಸ್ವಾಮಿಯೂ ಕೂಡ ಮಹಾ ವ್ಯಸನಸಂತಪ್ತನಾಗುವನು. ಇದು ಯಥಾರ್ಥವಾದುದು. ಪ್ರಮಾಣವಾಗಿಯೂ ಹೇಳುವೆನು. ಎಲೌ ಸೀತಾದೇವಿಯೇ! ನಾನು ನಿನ್ನನ್ನು ಅತಿಪ್ರಯಾಸದಿಂದ ಈ ಪ್ರದೇಶವಲ್ಲಿ ಕಂಡೆನು. ಆದುದರಿಂದ ಇದು ದುಃಖಿಸತಕ್ಕ ಸಮಯವಲ್ಲವು. ನಿನ್ನ ದುಃಖವೆಲ್ಲವೂ ದೂರವಾಗುವ ಕಾಲವಿದು. ಸಂತೋಷವನ್ನು ಹೊಂದು. ಸಮಾಧಾನದಿಂದಿರು. ಅತ್ಯಲ್ಪಕಾಲದಲ್ಲಿಯೇ ನಿನ್ನ ದುಃಖಪರಂಪರೆಯೆಲ್ಲವೂ ತೀರಿ ಸುಖವನ್ನು ಹೊಂದುತ್ತೀಯೆ. ಪುರುಷೋತ್ತಮರೂ, ಶತ್ರುಸಂಹಾರಕರೂ, ರಾಜಪುತ್ರರೂ, ನಿನ್ನನ್ನು ನೋಡುವುದರಲ್ಲಿ ಪರಮೋತ್ಸಾಹಿಗಳೂ ಆದ ಶ್ರೀರಾಮಲಕ್ಷ್ಮಣರು ಇಲ್ಲಿಗೆ ಬಂದು ಈ ಲಂಕಾನಗರವೆಲ್ಲವನ್ನೂ ಭಸ್ಮಸಾತ್ಕರಿಸುವರು. ॥ ೧೩-೧೫ ॥ ಎಲೆ ವಿಶಾಲನೇತ್ರೆಯೇ! ಶ್ರೀರಾಮಲಕ್ಷ್ಮಣರೀರ್ವರೂ, ಮಹಾ ದುರ್ಮಾರ್ಗನಾದ ರಾವಣಾಸುರನನ್ನು ಬಂಧುಮಿತ್ರಸಮೇತನಾಗಿ ಯುದ್ಧದಲ್ಲಿ ಸಂಹರಿಸಿ ನಿನ್ನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವುದು ಖಂಡಿತ



ಚೂಡಾರತ್ನ ದಾನ

ಪುಟ ೪೭೩

ಯತ್ತು ರಾಮೋ ವಿಜಾನೀಯಾದಭಿಜ್ಞಾನಮನಿಂದಿತೇ! । ಪ್ರೀತಿಸಂಜನನಂ ತಸ್ಯ ಭೂಯಸ್ತ್ವಂ ದಾತುಮರ್ಹಸಿ" ॥ ೧೭ ॥ ಸಾಬ್ರವೀ "ದ್ದತ್ತಮೇವೇತಿ ಮಯಾಭಿಜ್ಞಾನಮುತ್ತಮಂ। ಏತದೇವ ಹಿ ರಾಮಸ್ಯ ದೃಷ್ಟ್ವಾ ಮತ್ಕೇಶಭೂಷಣಂ। ಶ್ರದ್ಧೇಯಂ ಹನುಮನ್ವಾಕ್ಯಂ ತವ ವೀರ! ಭವಿಷ್ಯತಿ" ॥೧೮॥ ಸತಂ ಮಣಿವರಂ ಗೃಹ್ಯ ಶ್ರೀಮಾನ್ ಪ್ಲವಗಸತ್ತಮಃ । ಪ್ರಣಮ್ಯ ಶಿರಸಾ ದೇವೀಂ ಗಮನಾಯೋಪಚಕ್ರಮೇ ॥ ೧೯ ॥ ತಮುತ್ಪಾತಕೃತೋತ್ಸಾಹಮವೇಕ್ಷ್ಯ ಹರಿಪುಂಗವಂ । ವರ್ಧಮಾನಂ ಮಹಾವೇಗ

ಜ್ಞಾನಂ - ಯಾವ ಗುರ್ತನ್ನು, ವಿಜಾನೀಯಾತ್ - ತಿಳಿದಿರುವನೋ, ತಸ್ಯ - ಆ ಶ್ರೀರಾಮನಿಗೆ, ಪ್ರೀತಿ....ನಂ - ವಿಶ್ವಾಸವನ್ನುಂಟುಮಾಡುವ, ತತ್ - ಅಂತಹ ಗುರ್ತನ್ನು, ಭೂಯಃ - ಮತ್ತೂ, ದಾತುಂ - ಕೊಡುವದಕ್ಕೆ, ತ್ವಂ - ನೀನು, ಅರ್ಹಸಿ - ಯೋಗ್ಯಳಾಗು. ॥ ೧೭ ॥ ಉತ್ತಮಂ - ಶ್ರೇಷ್ಠವಾದ, ಅಭಿಜ್ಞಾನಂ - ಗುರ್ತು, ರಾಮಸ್ಯ - ಶ್ರೀರಾಮನಿಗೆ, ಮಯಾ - ನನ್ನಿಂದ, ದತ್ತಮೇವ - ಕೊಡಲ್ಪಟ್ಟೇ ಇರುವುದು, ಹೇ ವೀರ - ಎಲೈ ಶೂರನೇ, ಹೇ ಹನುಮನ್ - ಎಲೈ ಆಂಜನೇಯನೇ, ಏತತ್-ಈ, ಮತ್ಕೇ....ಣಂ ನನ್ನ ಶಿರೋಭೂಷಣವನ್ನು, ದೃಷ್ಟ್ವೈವ-ನೋಡುತ್ತಲೇ, ತವವಾಕ್ಯಂ-ನಿನ್ನ ಮಾತು, ಶ್ರದ್ಧೇಯಂ - ವಿಶ್ವಾಸಿಸತಕ್ಕದು, ಭವಿಷ್ಯತಿಹಿ - ಆಗುವದಷ್ಟೆ, ಇತಿ - ಇಂತೆಂದು, ಸಾ - ಆ ಸೀತಾದೇವಿಯು, ಅಬ್ರವೀತ್ - ನುಡಿದಳು. ॥ ೧೮ ॥ ಶ್ರೀಮಾನ್ - ಸಂಪದ್ಯುಕ್ತನಾದ, ಸ ಪ್ಲ....ಮಃ - ಆ ಕಪಿಶ್ರೇಷ್ಠನು, ತಂಮಣಿವರಂ - ಆ ರತ್ನಶ್ರೇಷ್ಠವನ್ನು, ಗೃಹ್ಯ - ಗ್ರಹಿಸಿ, ದೇವೀಂ - ಸೀತಾದೇವಿಯನ್ನು ಕುರಿತು, ಪ್ರಣಮ್ಯ - ವಂದಿಸಿ, ಗಮನಾಯ - ಹೊರಡುವದಕ್ಕೆ, ಉಪಚಕ್ರಮೇ - ಉದ್ಯುಕ್ತನಾದನು. ॥ ೧೯ ॥ ಅಶ್ರು....ಖೀ - ಕಂಬನಿಗಳಿಂದ ತುಂಬಿದ ಮುಖವುಳ್ಳ, ಜನಕಾತ್ಮಜಾ - ಜನಕಪುತ್ರಿಯಾದ, ಸೀತಾ - ಸೀತಾದೇವಿಯು, ದೀನಾ - ದುಃಖಿತಳಾಗಿ, ಉತ್ಪಾ....ಹಂ - ಪ್ರಯಾಣೋತ್ಸುಕನಾದ, ಹರಿಪುಂಗವಂ - ವಾನರೋತ್ತಮನಾದ, ವರ್ಧಮಾನಂ - ಬೆಳೆಯುತ್ತಿರುವ, ಮಹಾವೇಗಂ-ಬಹುವೇಗವುಳ್ಳ, ತಂ-ಆ ಆಂಜನೇಯನನ್ನು, ಅವೇಕ್ಷ್ಯ-ಕಂಡು, ಬಾಷ್ಪ....ಯಾ-

---

ವೆಂದು ತಿಳಿ. ಎಲೆ ತಾಯೇ! ಯಾವ ಗುರ್ತನ್ನಾದರೆ ಶ್ರೀರಾಮನು ಚೆನ್ನಾಗಿ ತಿಳಿಯಬಲ್ಲನೋ, ಯಾವುದಾದರೆ ಆತನಿಗೆ ಪರಮಸಂತೋಷವನ್ನುಂಟುಮಾಡುವುದೋ ಅಂತಹ ಮತ್ತೊಂದು ಗುರ್ತನ್ನು ನನಗೆ ಕೊಡುವವಳಾಗು." ಹೀಗೆಂದ ಆಂಜನೇಯನನ್ನು ಕುರಿತು ಸೀತೆಯು, "ಎಲೈ ಶೂರನೇ! ನಾನು ಮಹಾ ಶ್ರೇಷ್ಠವಾದ ನನ್ನ ಚೂಡಾಮಣಿಯನ್ನೇ ಗುರ್ತನ್ನಾಗಿ ಕೊಟ್ಟಿರುವೆನಷ್ಟೆ! ಇದನ್ನು ನೋಡಿ ಶ್ರೀರಾಮನು ಪರಮಸಂತುಷ್ಟನಾಗಿ ನಿನ್ನ ಮಾತನ್ನು ಗೌರವಿಸುವನು. ಆದುದರಿಂದ ಬೇರೊಂದು ಗುರ್ತಿನ ಆವಶ್ಯಕತೆಯಿಲ್ಲವು" ಎಂದಳು. ಆಗ ಕಾಂತಿಮಂತನಾದ ಹನುಮಂತನು ಆ ಮಣಿಶ್ರೇಷ್ಠವನ್ನು ತೆಗೆದುಕೊಂಡು ಸೀತಾದೇವಿಗೆ ದಂಡಪ್ರಣಾಮಮಾಡಿ ಹೊರಡಲನುವಾದನು. ॥ ೧೭-೧೯ ॥ ಆಗ ಸಮುದ್ರವನ್ನು ದಾಟಿ ಆಚೆಯ ದಡಕ್ಕೆ ಹೋಗಿ ಸೇರಲುದ್ಯಮಿಸಿ, ಹಾರುವುದರಲ್ಲಿ ಉತ್ಸಾಹವುಳ್ಳವನಾಗಿ ತನ್ನ ದೇಹವನ್ನು ಬೆಳೆಯಿಸುತ್ತಿರುವವನೂ, ಮಹಾವೇಗವಂತನೂ ಆದ ಆ ವಾನರೋತ್ತಮನನ್ನು ನೋಡಿ ಸೀತಾದೇವಿಯು ಪರಮ ದುಃಖಿತೆಯೂ, ಕಂಬನಿಗರೆಯುತ್ತ ಗದ್ಗದಸ್ವರಭರಿತೆಯೂ, ಆಗಿ ವಿಸ್ಪಷ್ಟವೂ, ಅತಿದೀನವೂ ಆದ ಮಾತು

ಮುವಾಚ ಜನಕಾತ್ಮಜಾ । ಅಶ್ರುಪೂರ್ಣಮುಖೀ ದೀನಾ ಬಾಷ್ಪಗದ್ಗದಯಾ ಗಿರಾ ॥ ೨೧ ॥ "ಹನೂಮನ್ಸಿಂಹಸಂಕಾಶೌ ಭ್ರಾತರೌ ರಾಮಲಕ್ಷ್ಮಣೌ । ಸುಗ್ರೀವಂಚ ಸಹಾಮಾತ್ಯಂ ಸರ್ವಾನ್ಬ್ರೂಯಾಹ್ಯನಾಮಯಂ ॥೨೨॥ ಯಥಾಚ ಸಮಹಾಬಾಹು ರ್ಮಾಂ ತಾರಯತಿ ರಾಘವಃ । ಅಸ್ಮಾದ್ದುಃಖಾಂಬುಸಂರೋಧಾತ್ತ್ವಂ ಸಮಾಧಾತು ಮರ್ಹಸಿ ॥ ೨೩ ॥ ಇಮಂಚ ತೀವ್ರಂ ಮಮಶೋಕವೇಗಂ ರಕ್ಷೋಭಿರೇಭಿಃ ಪರಿ ಭರ್ತ್ಸನಂಚ । ಬ್ರೂಯಾಸ್ತು ರಾಮಸ್ಯ ಗತಸ್ಸಮೀಪಂ ಶಿವಶ್ಚ ತೇಽಧ್ವಾಸ್ತು ಹರಿ ಪ್ರವೀರ!" ॥ ೨೪ ॥

ಕಂಬನಿಗಳಿಂದ ವಿಸ್ವರವಾದ, ಗಿರಾ - ಧ್ವನಿಯಿಂದ, ಉವಾಚ - ಹೇಳಿದಳು ॥ ೨೦-೨೧ ॥ ಹೇ ಹನೂಮನ್ - ಎಲೈ ಆಂಜನೇಯನೇ, ಸಿಂಹಸಂಕಾಶೌ - ಸಿಂಹಸದೃಶರಾದ, ಭ್ರಾತರೌ - ಅಣ್ಣ ತಮ್ಮಂದಿರಾದ, ರಾಮಲಕ್ಷ್ಮಣೌ - ಶ್ರೀರಾಮಲಕ್ಷ್ಮಣರನ್ನೂ, ಸಹಾಮಾತ್ಯಂ - ಮಂತ್ರಿಗಳಿಂದೊಡ ಗೂಡಿದ, ಸುಗ್ರೀವಂಚ-ಸುಗ್ರೀವನನ್ನೂ, ಸರ್ವಾನ್-ಸಮಸ್ತರನ್ನೂ ಕುರಿತು, ಅನಾಮಯಂ-ಕ್ಷೇಮ ವನ್ನು, ಬ್ರೂಯಾಃ ಹೇಳು. ॥ ೨೨ ॥ ಮಹಾಬಾಹುಃ-ಮಹಾ ಪರಾಕ್ರಮಿಯಾದ, ಸರಾಘವಃ-ಆ ಶ್ರೀರಾಮನು, ಅಸ್ಮಾ....ತ್-ಈ ದುಃಖಸಮುದ್ರದಿಂದ, ಮಾಂ-ನನ್ನನ್ನು, ಯಥಾತಾರಯತಿ-ಹೇಗೆ ಕಡೆ ಹಾಯಿಸುವನೋ, ತಥಾ-ಹಾಗೆ, ತ್ವಂ-ನೀನು, ಸಮಾಧಾತುಂ-ಸಮಾಧಾನ ಹೇಳುವದಕ್ಕೆ, ಅರ್ಹಸಿಹಿ-ಯೋಗ್ಯನಾದವನಷ್ಟೆ. ॥ ೨೩ ॥ ಹೇ ಹರಿಪ್ರವೀರ - ಎಲೈ ಕಪಿವೀರನೇ, ರಾಮಸ್ಯ - ಶ್ರೀರಾಮನ, ಸಮೀಪಂತು - ಬಳಿಯನ್ನಾದರೆ, ಗತಃ - ಹೊಂದಿದವನಾಗಿ, ಇಮಂ - ಈ, ತೀವ್ರಂ - ಕ್ರೂರವಾದ, ಮಮ - ನನ್ನ, ಶೋಕವೇಗಂಚ - ದುಃಖವೇಗವನ್ನೂ, ಏಭಿಃರಕ್ಷೋಭಿಃ - ಈ ರಕ್ಕಸರಿಂದುಂಟಾದ, ಪರಿಭರ್ತ್ಸನಂಚ - ಹೆದರಿಕೆಯನ್ನೂ ಸಹಾ, ಬ್ರೂಯಾಃ - ಹೇಳು, ತೇ - ನಿನ್ನ, ಅಧ್ವಾಚ - ದಾರಿಯೂ ಕೂಡ, ಶಿವಃ - ಶುಭಕರವಾದುದು, ಅಸ್ತು - ಆಗಲಿ. ॥ ೨೪ ॥ ರಾಜಪುತ್ರ್ಯಾ - ರಾಜಕುವರಿಯಿಂದ, ಪ್ರತಿವೇದಿತಾರ್ಥಃ-ತಿಳಿಸಲ್ಪಟ್ಟ ಪ್ರಯೋಜನವುಳ್ಳ, ಕೃತಾರ್ಥಃ-ಧನ್ಯನಾದ, ಸಕಪಿಃ-ಆ ವಾನರನು, ಪರಿಹೃಷ್ಟಚೇತಾಃ - ಸಂತೋಷಗೊಂಡ ಮನವುಳ್ಳವನಾಗಿ, ಕಾರ್ಯಂ - ಕೆಲಸವನ್ನು, ಅಲ್ಪಾವಶೇಷಂ -

ಗಳಿಂದ ಆತನನ್ನು ಕುರಿತು, "ಎಲೈ ಆಂಜನೇಯನೇ! ಸಿಂಹಸಮಾನರಾದ ಶ್ರೀರಾಮಲಕ್ಷ್ಮಣ ರಿಗೂ, ಮಂತ್ರಿಸಮೇತನಾದ ಸುಗ್ರೀವನಿಗೂ, ಸಮಸ್ತ ವಾನರರಿಗೂ ನನ್ನ ಕ್ಷೇಮವಾರ್ತೆ ಯನ್ನು ತಿಳಿಸು. ವಾನರೋತ್ತಮಾ! ಮಹಾ ಬಾಹುವಾದ ಶ್ರೀರಾಮನು ನನ್ನನ್ನು ಈ ಮಹಾ ದುಃಖಸಮುದ್ರದಿಂದ ಕಡೆಹಾಯಿಸುವಂತೆ ಮಾಡುವ ಭಾರವು ನಿನ್ನದಾಗಿರುವುದು. ॥ ೨೦–೨೩ ॥ ನಿನ್ನಿಂದ ನನಗೆ ಈ ಮಹೋಪಕಾರವಾಗಬೇಕಾಗಿರುವುದು. ಎಲೈ ಆಂಜನೇ ಯನೇ! ನೀನಿಲ್ಲಿಂದ ಹೊರಟು ಶ್ರೀರಾಮನ ಬಳಿಗೈದಿದೊಡನೆಯೇ ನಾನೀ ಮಹಾ ದುಃಖ ವನ್ನನುಭವಿಸುತ್ತಿರುವುದನ್ನೂ, ಈ ರಾಕ್ಷಸಸ್ತ್ರೀಯರು ನನ್ನನ್ನು ಬೆದರಿಸಿ ಬಾಧಿಸುತ್ತಿರುವು ದನ್ನೂ ಶ್ರೀರಾಮನಿಗೆ ಚನ್ನಾಗಿ ತಿಳಿಯಹೇಳಬೇಕು. ನಿನಗೆ ಮಾರ್ಗದಲ್ಲಿ ವಿಘ್ನಗಳಾವುವೂ ಸಂಭವಿಸದಿರಲಿ; ನಿನಗೆ ಮಂಗಳವಾಗಲಿ!" ಎಂದು ಹೇಳಿದಳು. ಹೀಗೆ ಆಂಜನೇಯನು ರಾಜಕುಮಾರಿಯಾದ ಸೀತಾದೇವಿಯಿಂದ ಗುರ್ತುಗಳನ್ನು ಕೈಕೊಂಡು ನೆರವೇರಿದ ಕಾರ್ಯ ವುಳ್ಳವನಾಗಿಯೂ, ಸಂತುಷ್ಟಾಂತರಂಗುವುಳ್ಳವನಾಗಿಯೂ, "ಇನ್ನು ನಾನು ಮಾಡಬೇಕಾದ

ಸರಾಜಪುತ್ರ್ಯಾ ಪ್ರತಿವೇದಿತಾರ್ಥಃ
ಕಪಿಃ ಕೃತಾರ್ಥಃ ಪರಿಹೃಷ್ಟಚೇತಾಃ ।
ಅಲ್ಪಾವಶೇಷಂ ಪ್ರಸಮೀಕ್ಷ್ಯ ಕಾರ್ಯಂ
ದಿಶಂ ಹ್ಯುದೀಚೀಂ ಮನಸಾ ಜಗಾಮ ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತ್ವಾರಿಂಶಸ್ಸರ್ಗಃ

ಸ್ವಲ್ಪ ಮಿಕ್ಕಿದುದನ್ನಾಗಿ, ಪ್ರಸಮೀಕ್ಷ್ಯ - ಕಂಡು, ಉದೀಚೀಂದಿಶಂಹಿ - ಉತ್ತರದಿಕ್ಕನ್ನೇ ಕುರಿತು, ಮನಸಾ - ಮನದಿಂದ, ಜಗಾಮ - ಹೊರಟನು. ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತ್ವಾರಿಂಶಸ್ಸರ್ಗಃ

ಕಾರ್ಯವು ಅಲ್ಪಾವಶೇಷವಾಗಿರುವುದು" ಎಂದು ತಿಳಿದವನಾಗಿಯೂ ಆಗಿ ಉತ್ತರದಿಕ್ಕಿಗೆ ಪಯಣಿಸಲುದ್ಯಮಿಸಿದನು. ॥ ೨೪–೨೫ ॥

ಇಂತಿದು ಹನುಮತ್ಸೀತಾ ಸಂವಾದವೆಂಬ ನಾಲ್ವತ್ತನೆಯ
ಸರ್ಗವು ಸಮಾಪ್ತವಾದುದು

ಸುಂದರಕಾಂಡೇ ಏಕಚತ್ವಾರಿಂಶಸ್ಸರ್ಗಃ

ಸಚ ವಾಗ್ಭಿಃ ಪ್ರಶಸ್ತಾಭಿರ್ಗಮಿಷ್ಯನ್ಪೂಜಿತಸ್ತಯಾ । ತಸ್ಮಾದ್ದೇಶಾದಪಕ್ರಮ್ಯ ಚಿಂತಯಾಮಾಸ ಮಾರುತಿಃ ॥೧॥ ಅಲ್ಪಶೇಷಮಿದಂ ಕಾರ್ಯಂ ದೃಷ್ಟೇಯಮಸಿತೇಕ್ಷಣಾ । ತ್ರೀನುಪಾಯಾನತಿಕ್ರಮ್ಯ ಚತುರ್ಥ ಇಹ ದೃಶ್ಯತೇ ॥ ೨ ॥ ನಸಾಮ ರಕ್ಷಸ್ಸು ಗುಣಾಯ ಕಲ್ಪತೇ ನದಾನಮರ್ಥೋಪಚಿತೇಷು ಯುಜ್ಯತೇ । ನಭೇದಸಾಧ್ಯಾ ಬಲದರ್ಪಿತಾ ಜನಾಃ ಪರಾಕ್ರಮಸ್ತ್ವೇವ ಮಮೇಹ ರೋಚತೇ ॥ ೩ ॥ ನಚಾಸ್ಯ

ಪ್ರಶಸ್ತಾಭಿಃ-ಶ್ರೇಷ್ಠವಾದ, ವಾಗ್ಭಿಃ-ಮಾತುಗಳಿಂದ, ತಯಾಚ-ಆ ಸೀತಾದೇವಿಯಿಂದಲೂ, ಪೂಜಿತಃ - ಪೂಜಿಸಲ್ಪಟ್ಟ, ಸವಾನರಃ - ಆ ಹನುಮಂತನು, ಗಮಿಷ್ಯನ್ - ಹೋಗಲಿಚ್ಛಿಸಿದವನಾಗಿ, ತಸ್ಮಾದ್ದೇಶಾತ್ - ಆ ಸ್ಥಳದಿಂದ, ಅಪಕ್ರಮ್ಯ - ಹಿಂತಿರುಗಿ ಬಂದು, ಚಿಂತಯಾಮಾಸ - ಯೋಚಿಸಿದನು, ಇದಂಕಾರ್ಯಂ - ಈ ಕೆಲಸವು, ಅಲ್ಪಶೇಷಂ - ಸ್ವಲ್ಪವುಳದಿರುವದು, ಅಸಿತೇಕ್ಷಣಾ - ಕಪ್ಪಾದ ಕಣ್ಣುಗಳುಳ್ಳ, ಇಯಂ - ಈ ಸೀತಾದೇವಿಯು, ದೃಷ್ಟಾ - ನೋಡಲ್ಪಟ್ಟಳು, ತ್ರೀನ್ - ಸಾಮ, ದಾನ, ಭೇದಗಳೆಂಬ ಮೂರಾದ, ಉಪಾಯಾನ್-ಯುಕ್ತಿಗಳನ್ನು, ಅತಿಕ್ರಮ್ಯ-ಅತಿಕ್ರಮಿಸಿ, ಚತುರ್ಥಃ- ನಾಲ್ಕನೆಯದಾದ ದಂಡೋಪಾಯವು, ದೃಶ್ಯತೇ - ಸಾಧನೀಯವಾಗಿ ಕಾಣುತ್ತದೆ, ಸಾಮ - ಸಾಮೋಪಾಯವು, ರಕ್ಷಸ್ಸು - ರಕ್ಕಸರ ವಿಷಯದಲ್ಲಿ, ಗುಣಾಯ - ಗುಣಕ್ಕೆ, ನಕಲ್ಪತೇ - ಬರುವದಿಲ್ಲ, ಅರ್ಥೋ....ಷು - ದ್ರವ್ಯಯುಕ್ತರಾದವರಲ್ಲಿ, ದಾನಂ - ಕೊಡುವಿಕೆಯು, ನಯುಜ್ಯತೇ - ಸೇರುವದಿಲ್ಲ, ಬಲದರ್ಪಿತಾಃ - ಬಲಗರ್ವಿತರಾದ, ಜನಾಃ - ಜನರು, ಭೇದಸಾಧ್ಯಾಃ - ಭೇದೋಪಾಯದಿಂದ ಸಾಧಿಸತಕ್ಕವರು, ನ - ಅಲ್ಲ, ಮಮತು - ನನಗಾದರೆ, ಇಹ - ಈ ರಾಕ್ಷಸರ ವಿಷಯದಲ್ಲಿ, ಪರಾಕ್ರಮ ಏವ - ಸಾಮರ್ಥ್ಯವೇ, ರೋಚತೇ - ತೋರುವದು, ಇಹ - ಇಲ್ಲಿ, ಅಸ್ಯಕಾರ್ಯಸ್ಯ - **ಈ ಕೆಲಸಕ್ಕೆ,**

ವಾನರಶ್ರೇಷ್ಠನಾದ ಆಂಜನೇಯನು ಶ್ರೀರಾಮನ ಬಳಿಗೈದಲಿಚ್ಛಿಸಿದವನಾಗಿ, ಸೀತಾದೇವಿಯು ಪ್ರಶಸ್ತ ವಾಕ್ಯಗಳಿಂದ ತನ್ನನ್ನು ಪ್ರಶಂಸಿಸುತ್ತಿರಲು, ಅಲ್ಲಿಂದ ಸ್ವಲ್ಪ ದೂರ ಬಂದು ನಿಂತು ತನ್ನಲ್ಲಿ ತಾನು ಹೀಗೆ ಆಲೋಚಿಸಿದನು. " ಈಗ ನಾನು ಬಂದ ಕಾರ್ಯವೆಲ್ಲವೂ ನೆರವೇರಿರುವುದು. ಇನ್ನು ಸ್ವಲ್ಪ ಮಾತ್ರ ಉಳಿದಿರುವುದು. ಸೀತಾದೇವಿಯನ್ನೇನೋ ಕಂಡುದಾಯಿತು. ಹಿರಿಯರಾದವರು ಸಾಮ, ದಾನ, ಭೇದಗಳೆಂಬ ಮೂರೂ ಉಪಾಯಗಳಿಂದ ಯತ್ನಿಸಿದ ಬಳಿಕ ನಾಲ್ಕನೆಯದಾದ ದಂಡೋಪಾಯದಿಂದ ಯತ್ನಿಸಬೇಕೆಂದು ಹೇಳುವರು. ಇಲ್ಲಿ ಮೊದಲು ಮೂರು ಉಪಾಯಗಳೂ ಪ್ರಯೋಜನಕ್ಕೆ ಬರುವುದಿಲ್ಲವು. ಏಕೆಂದರೆ—ರಾಕ್ಷಸರಲ್ಲಿ ಸಾಮೋಪಾಯವು ನಿಷ್ಪ್ರಯೋಜನವಾಗುವುದು. ರಾವಣಾಸುರನು ಮಹದೈಶ್ವರ್ಯಸಂಪನ್ನನಾದುದರಿಂದ ಎರಡನೆಯದಾದ ದಾನವೂ ನಿಷ್ಪ್ರಯೋಜನವೇ ಸರಿ. ಇದರಿಂದ ಕಾರ್ಯಸಿದ್ಧಿಯಾಗುವುದೇ ಇಲ್ಲವು. ವಿಶೇಷ ಬಲಗಳುಳ್ಳವನಾದುದರಿಂದ ಭೇದೋಪಾಯವೂ ನಿರರ್ಥಕವೇ! ಆದುದರಿಂದ ನಾಲ್ಕನೆಯದಾದ ದಂಡೋಪಾಯದಿಂದಲೇ ಕಾರ್ಯಸಿದ್ಧಿಯುಂಟಾಗುವುದೆಂದು ನನಗೆ ತೋರುತ್ತಿರುವುದು.

ಕಾರ್ಯಸ್ಯ ಪರಾಕ್ರಮಾದೃತೇ ವಿನಿಶ್ಚಯಃ ಕಶ್ಚಿದಿಹೋಪಪದ್ಯತೇ । ಹತಪ್ರವೀರಾಸ್ತು ರಣೇಹಿ ರಾಕ್ಷಸಾಃ ಕಥಂಚಿದೀಯುರ್ಯದಿಹಾದ್ಯ ಮಾರ್ದವಂ ॥ ೪ ॥ ಕಾರ್ಯೇಕರ್ಮಣಿ ನಿರ್ದಿಷ್ಟೋ ಯೋ ಬಹೂನ್ಯಪಿ ಸಾಧಯೇತ್ । ಪೂರ್ವಕಾರ್ಯಾವಿರೋಧೇನ ಸಕಾರ್ಯಂ ಕರ್ತುಮರ್ಹತಿ ॥ ೫ ॥ ನಹ್ಯೇಕಸ್ಸಾಧಕೋ ಹೇತುಃ ಸ್ವಲ್ಪಸ್ಯಾಪೀಹ ಕರ್ಮಣಃ । ಯೋಹ್ಯರ್ಥಂ ಬಹುಧಾ ವೇದ ಸ ಸಮರ್ಥೋಽರ್ಥಸಾಧನೇ ॥ ೬ ॥ ಇಹೈವ ತಾವತ್ಕೃತನಿಶ್ಚಯೋಹ್ಯಹಂ ಯದಿ ವ್ರಜೇಯಂ ಪ್ಲವಗೇಶ್ವರಾಲಯಂ । ಪರಾತ್ಮಸಂಮರ್ದವಿಶೇಷತತ್ವವಿತ್ತತಃಕೃತಂ ಸ್ಯಾನ್ಮಮ ಭರ್ತೃ

ಪರಾ....ತೇ - ಪರಾಕ್ರಮವನ್ನುಳಿದು, ವಿನಿಶ್ಚಯಃ - ಹೀಗೆಯೇ ಸರಿಯೆಂಬ ಜ್ಞಾನವು, ಕಶ್ಚಿತ್ - ಒಂದಾದರೂ, ನೋಪಪದ್ಯತೇ - ಸಂಬಂಧಿಸುವದಿಲ್ಲ, ಇಹ - ಈ ಸ್ಥಳದಲ್ಲಿ, ಅದ್ಯ - ಈಗ, ರಣೇಹಿ- ಸಂಗರದಲ್ಲಿಯಾದರೆ, ಹತಪ್ರವೀರಾಃ - ಮೃತರಾದ ಶೂರರುಳ್ಳ, ರಾಕ್ಷಸಾಹಿ - ರಕ್ಕಸರೂ ಸಹ, ಕಥಂಚಿತ್ - ಅತಿ ಪ್ರಯಾಸದಿಂದ, ಯತ್ - ಯಾವ ಕಾರಣದಿಂದ, ಮಾರ್ದವಂ - ಮೃದುತ್ವವನ್ನು, ಈಯುಃ - ಹೊಂದುವರೋ, ನಿರ್ದಿಷ್ಟೋ - ತೋರಿಸಲ್ಪಟ್ಟ, ಕಾರ್ಯಕರ್ಮಣಿ - ಮಾಡತಕ್ಕ ಕೆಲಸದಲ್ಲಿ, ಯಃ - ಯಾವ ಪುರುಷನು, ಪೂರ್ವ....ನ - ಮೊದಲು ಮಾಡಿದ ಕಾರ್ಯಕ್ಕೆ ವಿರೋಧವಿಲ್ಲದಂತೆ, ಬಹೂನ್ಯಪಿ - ಅನೇಕ ಕಾರ್ಯಗಳನ್ನೂ, ಸಾಧಯೇತ್ - ಸಾಧಿಸುವನೋ, ಸಃ - ಅಂತಹ ದೂತನು, ಕಾರ್ಯಂ - ಕೆಲಸವನ್ನು, ಕರ್ತುಂ - ಮಾಡುವದಕ್ಕೆ, ಅರ್ಹತಿ - ಯೋಗ್ಯನಾಗುವನು, ಸ್ವಲ್ಪಸ್ಯಾಪಿ ಕರ್ಮಣಃ - ಕೊಂಚ ಕೆಲಸಕ್ಕೂ ಕೂಡ, ಏಕೋಹೇತುಃ - ಒಂದೇ ಕಾರಣವು, ನಹಿಸಾಧಕಃ - ಸಾಧಕವಾಗುವುದಿಲ್ಲವು, ಯಃ - ಯಾವ ಪುರುಷನು, ಅರ್ಥಂ - ಕಾರ್ಯವನ್ನು, ಬಹುಧಾ - ಬಹು ಪ್ರಕಾರವಾಗಿ, ವೇದ - ತಿಳಿದಿರುವನೋ, ಸಃ - ಅಂತಹನು, ಅರ್ಥಸಾಧನೇ - ಕಾರ್ಯಸಾಧನೆಯ ವಿಷಯದಲ್ಲಿ, ಸಮರ್ಥೋಹಿ - ಶಕ್ತನಷ್ಟೆ, ಪರಾ....ತ್ - ಶತ್ರುವಿಗೂ ನನಗೂ ಇರುವ ಯುದ್ಧತಾರತಮ್ಯದ ತತ್ವವನ್ನರಿತ, ಅಹಂ - ನಾನು, ಇಹೈವ - ಇಲ್ಲಿಯೇ, ಕೃತನಿಶ್ಚಯಸ್ಸನ್ - ಮಾಡಲ್ಪಟ್ಟ ಬಲಾಬಲ ನಿಶ್ಚಯವುಳ್ಳವನಾಗಿ, ಪ್ಲವ....ಯಂ - ಸುಗ್ರೀವನ ಸ್ಥಾನವನ್ನು ಕುರಿತು, ವ್ರಜೇಯಂಯದಿ- ಹೋದರೆ, ತತಃ - ಬಳಿಕ, ಮಮ....ನಂ - ನನ್ನೊಡೆಯನಾದ ಸುಗ್ರೀವನ ಆಜ್ಞೆಯಾದರೆ, ಕೃತಂ -

॥ ೧–೩ ॥ ಈ ಕಾರ್ಯವನ್ನು ಸಾಧಿಸುವ ವಿಷಯದಲ್ಲಿ ಪರಾಕ್ರಮವನ್ನುಳಿದು ಬೇರೊಂದು ಉಪಾಯವೇ ಇರುವುದಿಲ್ಲವು. ಆದುದರಿಂದ ಈಗ ನಾನು ಇವರೊಡನೆ ಯುದ್ಧ ಮಾಡಿ ಕೆಲವರು ವೀರರನ್ನಾದರೂ ಸಂಹರಿಸಿದರೆ ಆಮೇಲೆ ಇವರು ಮೃದುವಾಗುವರು. ಯಾವನೇ ಆಗಲಿ ತನಗೆ ಅಪ್ಪಣೆ ಮಾಡಿದ ಕಾರ್ಯವನ್ನು ನೆರವೇರಿಸಿಕೊಂಡು, ಮೊದಲು ಕಾರ್ಯಕ್ಕೆ ವಿರೋಧ ಬಾರದಂತೆ ಇನ್ನೂ ಇತರ ಕಾರ್ಯಗಳನ್ನು ನೆರವೇರಿಸಿಕೊಂಡು ಬರುವನೋ ಅಂತಹನೇ ಸಮಸ್ತ ಕಾರ್ಯಗಳನ್ನೂ ಸಾಧಿಸಬಲ್ಲವನಾಗುವನು. ಒಂದು ಕಾರಣದಿಂದಲೇ ಅತ್ಯಲ್ಪ ಕಾರ್ಯವನ್ನಾದರೂ ಸಾಧಿಸಲು ಸಾಧ್ಯವಾಗುವುದಿಲ್ಲವು. ಯಾವನು ತನ್ನ ಕಾರ್ಯಸಾಧನೆಯ ವಿಷಯದಲ್ಲಿ ವಿವಿಧೋಪಾಯಗಳನ್ನು ತಿಳಿದಿರುತ್ತಾನೆಯೋ ಅವನೇ ಸಮಸ್ತ ಕಾರ್ಯಗಳನ್ನೂ ಸಾಧಿಸಲು ಸಮರ್ಥನಾಗುವನು. ॥ ೪–೬ ॥ ನಾನೀಗಲೇ ರಾವಣಾಸುರನ ಬಲಾಬಲಗಳನ್ನು ನಿಶ್ಚಯಿಸಿಕೊಂಡು, ಶತ್ರುಗಳಾದ ರಾಕ್ಷಸರ ಮತ್ತು ವಾನರರ ಬಳಾಬಳಗಳನ್ನೂ, ಯುದ್ಧನೈಪುಣ್ಯವನ್ನೂ ತಿಳಿದು, ಪ್ರಭುವಾದ ಸುಗ್ರೀವನ

ಶಾಸನಂ ‖ ೭ ‖ ಕಥನ್ನು ಖಲ್ವದ್ಯ ಭವೇತ್ಸುಖಾಗತಂ ಪ್ರಸಹ್ಯ ಯುದ್ಧಂ ಮಮ ರಾಕ್ಷಸೈಸ್ಸಹ । ತಥೈವ ಖಲ್ವಾತ್ಮಬಲಂಚ ಸಾರವತ್ಸಂಮಾನಯೇನ್ಮಾಂ ಚರಣೇ ದಶಾನನಃ ‖ ೮ ‖ ತತಸ್ಸಮಾಸಾದ್ಯ ರಣೇ ದಶಾನನಂ ಸಮಂತ್ರಿವರ್ಗಂ ಸಬಲ ಪ್ರಯಾಯಿನಂ । ಹೃದಿಸ್ಥಿತಂ ತಸ್ಯ ಮತಂ ಬಲಂಚ ವೈ ಸುಖೇನ ಮತ್ವಾಽಹಮಿತಃ ಪುನರ್ವ್ರಜೇ ‖ ೯ ‖ ಇದಮಸ್ಯ ನೃಶಂಸಸ್ಯ ನಂದನೋಪಮಮುತ್ತಮಂ । ವನಂ ನೇತ್ರಮನಃಕಾಂತಂ ನಾನಾದ್ರುಮಲತಾಯುತಂ ‖ ೧೦ ‖ ಇದಂ ವಿಧ್ವಂಸಯಿಷ್ಯಾಮಿ

ಮಾಡಲ್ಪಟ್ಟುದು, ಸ್ಯಾದ್ಧಿ - ಆಗುವದಷ್ಟೆ, ಅದ್ಯಖಲು - ಈಗಲೇ, ಮಮ - ನನಗೆ, ರಾಕ್ಷಸೈಸ್ಸಹ - ರಕ್ಕಸರೊಡನೆ, ಪ್ರಸಹ್ಯ - ಬಲಾತ್ಕರಿಸಿ, ಯುದ್ಧಂ - ಕಾಳೆಗವು, ಕಥಂನು - ಹೇಗೆ, ಸುಖಾಗತಂ - ಸುಖವಾಗಿ ಸಂಭವಿಸಿದ್ದು, ಭವೇತ್ - ಆಗುವದು, (ತಥಾಕರ್ತವ್ಯಂ - ಹಾಗೆ ಮಾಡತಕ್ಕದು), ತಥೈವಖಲು - ಹಾಗಾದರೇನೆ, ದಶಾನನಃ - ರಾವಣನು, ಆತ್ಮಬಲಂ - ತನ್ನ ಸೇನೆಯನ್ನೂ, ಮಾಂಚ- ನನ್ನನ್ನೂ ಸಹ, ರಣೇ - ಯುದ್ಧದಲ್ಲಿ, ಸಾರವತ್ - ಬಲವಿದ್ದಂತೆ, ಸನ್ಮಾನಯೇತ್ - ಶ್ಲಾಘಿಸುವನು, ತತಃ - ಬಳಿಕ, ಸಮಂತ್ರಿವರ್ಗಂ - ಮಂತ್ರಿಸಮೂಹದಿಂದೊಡಗೂಡಿದ, ಸಬ....ನಂ - ಸೈನ್ಯಸಮೇತ ನಾಗಿ ಬಂದಿರುವ, ದಶಾನನಂ - ರಾವಣನನ್ನು, ರಣೇ - ಆಹವದಲ್ಲಿ ಹೊಂದಿ, ತಸ್ಯ - ಆ ರಾವಣನ, ಹೃದಿ - ಮನಸ್ಸಿನಲ್ಲಿ, ಸ್ಥಿತಂ - ಇರುವ, ಮತಂ - ಅಭಿಪ್ರಾಯವನ್ನೂ, ಬಲಂಚವೈ - ಸಾಮರ್ಥ್ಯ ವನ್ನೂ ಸಹಾ, ಸುಖೇನ - ಅನಾಯಾಸವಾಗಿ, ಮತ್ವಾ - ಅರಿತು, ಅಹಂ - ನಾನು, ಇತಃ - ಇಲ್ಲಿಂದ, ಪುನರ್ವ್ರಜೇ - ಮತ್ತೆ ಹೊರಡುವೆನು, ಅಸ್ಯನೃಶಂಸಸ್ಯ - ಈ ಘಾತುಕನ, ನಂದನೋಪಮಂ - ಇಂದ್ರೋದ್ಯಾನಸದೃಶವಾದ, ನೇತ್ರಮನಃಕಾಂತಂ - ಕಣ್ಣುಗಳಿಗೂ ಮನಕ್ಕೂ ಇಂಪಾಗಿರುವ, ನಾನಾ....ತಂ - ನಾನಾಬಗೆಯ ವೃಕ್ಷಗಳಿಂದಲೂ ಲತೆಗಳಿಂದಲೂ ಕೂಡಿದ, ಇದಂವನಂ - ಈ ತೋಟವು, ಉತ್ತಮಂ - ಶ್ರೇಷ್ಠವಾದುದು, ಇದಂ - ಈ ವನವನ್ನು, ಶುಷ್ಕಂ - ಒಣಗಿದ, ವನಂ - ಕಾಡನ್ನು, ಅನಲಇವ - ಅಗ್ನಿಯಂತೆ, ವಿಧ್ವಂಸಯಿಷ್ಯಾಮಿ - ನಾಶಗೊಳಿಸುವೆನು, ಅಸ್ಮಿ - ಈ

ಬಳಿಗೈದಿದಲ್ಲಿ ಸ್ವಾಮಿ ಕಾರ್ಯವನ್ನು ಚೆನ್ನಾಗಿ ನೆರವೇರಿಸಿದಂತಾಗುತ್ತದೆ. ಈಗ ನನಗೆ ಈ ರಾಕ್ಷಸರೊಡನೆ ಅನಾಯಾಸವಾಗಿ ಯುದ್ಧವು ಸಂಭವಿಸುವುದೆಂತು? ಹಾಗೆ ನನಗೂ ಈ ರಾಕ್ಷಸರಿಗೂ ಯುದ್ಧವು ಸಂಭವಿಸಿದರಲ್ಲದೆ ರಾವಣಾಸುರನು ನನ್ನ ಬಲಾಬಲಗಳನ್ನೂ, ತನ್ನವರ ಬಲಾಬಲಗಳನ್ನೂ ಚೆನ್ನಾಗಿ ತಿಳಿಯಲಾರನು. ಅಲ್ಲದೆ ನಾನು ಮಂತ್ರಿಗಳೊಡ ನೆಯೂ, ಸೇನಾಧಿಪತಿಗಳೊಡನೆಯೂ ಕೂಡಿದ ರಾವಣಾಸುರನನ್ನು ಯುದ್ಧದಲ್ಲಿ ಎದುರಿಸಿ, ಅವನ ಮನೋಭಾವವನ್ನೂ ಅವನ ಬಲಾಬಲಗಳನ್ನೂ ನಿರಾಯಾಸವಾಗಿ ತಿಳಿದುಕೊಂಡು ಕಿಷ್ಕಿಂಧೆಗೆ ಹೋಗಬೇಕು. ಅದಕ್ಕಾಗಿ ಈಗ ಯಾವ ಉಪಾಯವನ್ನು ಮಾಡಲಿ! ಮಹಾ ಕ್ರೂರಕರ್ಮಿಯಾದ ಈ ರಾವಣಾಸುರನ ಈ ಅಶೋಕವನವು ದೇವೇಂದ್ರನ ನಂದನವನ ವನ್ನೂ ಮೀರಿಸಿ ರಮಣೀಯವಾಗಿರುವುದು. ಈ ವನವು ಮಹಾ ಶ್ರೇಷ್ಠವಾದುದು; ನೇತ್ರಾನಂದಕರವಾದುದು ; ಮನಕಿಂಪಾದುದು ; ನಾನಾವಿಧಗಳಾದ ಪುಷ್ಪನಿಕುರುಂಬ ಗಳಿಂದಲೂ, ವಿವಿಧ ಪುಷ್ಪವೃಕ್ಷನಿಚಯಗಳಿಂದಲೂ, ಲತಾವಿತಾನಗಳಿಂದಲೂ ತುಂಬಿದು ದಾಗಿರುವುದು. ಕಾಳ್ಕಿಚ್ಚು ಒಣಗಿ ನಿಂತಿರುವ ಕಾಡನ್ನು ಸುಟ್ಟು ಬೂದಿ ಮಾಡುವಂತೆ

ಶುಷ್ಕಂ ವನಮಿವಾನಲಃ । ಅಸ್ಮಿನ್ಭಗ್ನೇ ತತಃ ಕೋಪಂ ಕರಿಷ್ಯತಿ ದಶಾನನಃ ॥ ೧೧ ॥ ತತೋ ಮಹತ್ಸಾಶ್ವಮಹಾರಥದ್ವಿಪಂ ಬಲಂ ಸಮಾದೇಕ್ಷ್ಯತಿ ರಾಕ್ಷಸಾಧಿಪಃ । ತ್ರಿಶೂಲಕಾಲಾಯಸಪಟ್ಟಿಸಾಯುಧಂ ತತೋ ಮಹದ್ಯುದ್ಧಮಿದಂ ಭವಿಷ್ಯತಿ ॥ ೧೨ ॥ ಅಹಂತು ತೈಸ್ಸಂಯತಿಚಂಡವಿಕ್ರಮೈಸ್ಸಮೇತ್ಯ ರಕ್ಷೋಭಿರಸಹ್ಯ ವಿಕ್ರಮಃ । ನಿಹತ್ಯ ತದ್ರಾವಣಚೋದಿತಂ ಬಲಂ ಸುಖಂ ಗಮಿಷ್ಯಾಮಿ ಕಪೀಶ್ವರಾಲಯಂ ॥ ೧೩ ॥ ತತೋ ಮಾರುತವತ್ಕ್ರುದ್ಧೋ ಮಾರುತಿರ್ಭೀಮವಿಕ್ರಮಃ । ಊರುವೇಗೇನ ಮಹತಾ ದ್ರುಮಾನ್ ಕ್ಷೇಪ್ತುಮಥಾರಭತ್ ॥ ೧೪ ॥ ತತಸ್ತು ಹನುಮಾನ್ವೀರೋ ಬಭಂಜ ಪ್ರಮದಾವನಂ । ಮತ್ತದ್ವಿಜಸಮಾಘುಷ್ಟಂ ನಾನಾದ್ರುಮಲತಾಯುತಂ

ವನವು, ಭಗ್ನೇ - ಮುರಿಯಲ್ಪಟ್ಟಿದಾಗಲು, ತತಃ - ಬಳಿಕ, ದಶಾನನಃ - ರಾವಣಾಸುರನು, ಕೋಪಂ - ಕೋಪವನ್ನು, ಕರಿಷ್ಯತಿ-ಮಾಡುವನು, ತತಃ-ಬಳಿಕ, ರಾಕ್ಷಸಾಧಿಪಃ-ರಾಕ್ಷಸರಾಜನು, ಸಾಶ್ವ....ಪಂ-ಕುದುರೆಗಳಿಂದಲೂ, ದೊಡ್ಡ ರಥಗಳಿಂದಲೂ, ಆನೆಗಳಿಂದಲೂ ಕೂಡಿರುವ, ತ್ರಿಶೂ....ಧಂ - ತ್ರಿಶೂಲಗಳೂ, ಕಬ್ಬಿಣದ ಹಾರೆಗಳೂ, ಪಟ್ಟಾಕತ್ತಿಗಳೂ ಇವೇಮೊದಲಾದ ಆಯುಧಗಳಾಗುಳ್ಳ, ಮಹದ್ಬಲಂ - ದೊಡ್ಡಸೈನ್ಯವನ್ನು, ಸಮಾದೇಕ್ಷ್ಯತಿ - ಕಳುಹುವನು, ತತಃ - ಬಳಿಕ, ಇದಂಮಹದ್ಯುದ್ಧಂ - ಈ ಮಹಾಯುದ್ಧವು, ಭವಿಷ್ಯತಿ - ಆಗುವದು, ಸಂಯತಿ - ಕಾಳೆಗದಲ್ಲಿ, ಅಸ....ಮಃ - ಸೈರಿಸಲಸಾಧ್ಯವಾದ ಸಾಮರ್ಥ್ಯವುಳ್ಳ, ಅಹಂತು - ನಾನಾದರೆ, ಚಂಡವಿಕ್ರಮೈಃ - ಕ್ರೂರಪರಾಕ್ರಮಿಗಳಾದ, ತೈಃರಕ್ಷೋಭಿಃ - ಆ ರಾಕ್ಷಸರೊಡನೆ, ಸಮೇತ್ಯ - ಸೇರಿ, ರಾವ....ತಂ - ರಾವಣನಿಂದ ಕಳುಹಿಸಲ್ಪಟ್ಟ, ತದ್ಬಲಂ - ಆ ಸೇನೆಯನ್ನು, ನಿಹತ್ಯ - ಕೊಂದು, ಕಪೀಶ್ವರಾಲಯಂ - ಸುಗ್ರೀವನ ಸ್ಥಾನವನ್ನು ಕುರಿತು, ಸುಖಂ - ಆಯಾಸವಿಲ್ಲದಂತೆ, ಗಮಿಷ್ಯಾಮಿ - ಹೋಗುವೆನು. ॥ ೧೩ ॥ ತತಃ - ಬಳಿಕ, ಮಾರುತವತ್ - ವಾಯುವಿನಂತೆ, ಕೃದ್ಧಃ - ಕೋಪಿಸ್ಠನಾದ, ಭೀಮವಿಕ್ರಮಃ - ಭಯಂಕರ ಪರಾಕ್ರಮವುಳ್ಳ, ಮಾರುತಿಃ - ಆಂಜನೇಯನು, ಮಹತಾ - ಬಹಳವಾದ, ಊರುವೇಗೇನ - ತೊಡೆಗಳ ವೇಗದಿಂದ, ದ್ರುಮಾನ್ - ವೃಕ್ಷಗಳನ್ನು, ಕ್ಷೇಪ್ತುಂ - ಕೀಳುವದಕ್ಕೆ, (ಅಥ ಬಳಿಕ,) ಆರಭತ್ - ಪ್ರಾರಂಭಿಸಿದನು. ॥ ೧೪ ॥ ತತಃ ಬಳಿಕ, ವೀರಃ-ಶೂರನಾದ, ಹನುಮಾನ್-ಆಂಜನೇಯನು, ಮತ್ತ....ಷ್ಟಂ-ಮದಿಸಿದ ಪಕ್ಷಿಗಳಿಂದ ಧ್ವನಿಗೊಳಿಸಲ್ಪಟ್ಟ, ನಾನಾ....ತಂ - ಅನೇಕ ವೃಕ್ಷಗಳಿಂದಲೂ ಕೂಡಿದ, ಪ್ರಮ....ನಂ-ಉದ್ಯಾನವನವನ್ನು, ಬಭಂಜ-ಮುರಿದನು. ॥ ೧೫ ॥ ತದ್ವನಂ - ಆ ವನವು, ಮಥಿತೈಃ-

---

ನಾನೀಗ ಈ ಅಶೋಕವನವನ್ನು ಭಂಗಗೊಳಿಸುವೆನು. ಆಗ ರಾವಣಾಸುರನು ಗಜ, ತುರಗ, ರಥಾದಿಗಳಿಂದ ಕೂಡಿ, ತ್ರಿಶೂಲಗಳನ್ನೂ, ಕಬ್ಬಿಣದ ಹಾರೆಗಳನ್ನೂ, ಪಟ್ಟಿಶಗಳನ್ನೂ ಧರಿಸಿದ ಮಹಾ ಸೈನ್ಯವನ್ನು ನನ್ನಮೇಲೆ ಯುದ್ಧಕ್ಕಾಗಿ ಕಳುಹಿಸುವನು. ಆಗ ನನಗೂ ಆ ರಾಕ್ಷಸ ಸೇನೆಗೂ ಮಹಾ ಯುದ್ಧವೇ ಸಂಭವಿಸುತ್ತದೆ. ॥ ೭–೧೨ ॥ ಆ ಸಮಯದಲ್ಲಿ ಅಮಿತ ಪರಾಕ್ರಮಶಾಲಿಯಾದ ನಾನು ಮಹಾ ಭಯಂಕರವಾದ ಆ ರಾಕ್ಷಸಸೇನೆಯೊಡನೆ ಯುದ್ಧಮಾಡಿ, ರಾವಣಾಸುರನು ಕಳುಹಿಸಿದ ಆ ಸೈನ್ಯವೆಲ್ಲವನ್ನೂ ಚೆಂಡಾಡಿ, ಸಂಹರಿಸಿ, ವಾನರೇಶ್ವರನಾದ ಸುಗ್ರೀವನ ಪಟ್ಟಣಕ್ಕೆ ಹೊರಟುಹೋಗುವೆನು.'' ಮಹಾ ಪರಾಕ್ರಮಶಾಲಿಯಾದ ಮಾರುತಿಯು ಈ ರೀತಿ ಆಲೋಚಿಸಿ ಮಹಾ ಕುಪಿತನಾಗಿ, ವಾಯುವಿಗೆ ಸಮಾನವಾದ ವೇಗವನ್ನವಲಂಬಿಸಿ, ತನ್ನ ಊರುಗಳ ವೇಗದಿಂದಲೇ ಆ ಅಶೋಕವನದಲ್ಲಿದ್ದ

॥ ೧೫ ॥ ತದ್ವನಂ ಮಥಿತೈರ್ವೃಕ್ಷೈ ರ್ಭಿನ್ನೈಶ್ಚ ಸಲಿಲಾಶಯೈಃ । ಚೂರ್ಣಿತೈಃ ಪರ್ವತಾಗ್ರೈಶ್ಚ ಬಭೂವಾಽಪ್ರಿಯದರ್ಶನಂ ॥ ೧೬ ॥ ನಾನಾಶಕುಂತವಿರುತೈಃ ಪ್ರಭಿನ್ನೈಸ್ಸಲಿಲಾಶಯೈಃ । ತಾಮ್ರೈಃ ಕಿಸಲಯೈಃ ಕ್ಲಾಂತೈಃ ಕ್ಲಾಂತದ್ರುಮಲತಾಯುತಂ ॥ ೧೭ ॥ ನ ಬಭೌ ತದ್ವನಂ ತತ್ರ ದಾವಾನಲಹತಂ ಯಥಾ । ವ್ಯಾಕುಲಾವರಣಾ ರೇಜುರ್ವಿಹ್ವಲಾ ಇವ ತಾ ಲತಾಃ ॥ ೧೮ ॥ ಲತಾಗೃಹೈಶ್ಚಿತ್ರಗೃಹೈಶ್ಚ

ಮುರಿಯಲ್ಪಟ್ಟ, ವೃಕ್ಷೈಃ - ಗಿಡಗಳಿಂದಲೂ, ಭಿನ್ನೈಃ - ಭೇದಿಸಲ್ಪಟ್ಟ, ಸಲಿಲಾಶಯೈಃ - ಸರೋವರಗಳಿಂದಲೂ, ಚೂರ್ಣಿತೈಃ - ಪುಡಿಮಾಡಲ್ಪಟ್ಟ, ಪರ್ವತಾಗ್ರೈಶ್ಚ - ಪರ್ವತಶಿಖರಗಳಿಂದಲೂ, ಅಪ್ರಿಯದರ್ಶನಂ - ನೋಡುವದಕ್ಕೆ ಇಷ್ಟವಿಲ್ಲದ್ದಾಗಿ, ಬಭೂವ - ಆಯಿತು. ॥ ೧೬ ॥ ತತ್ರ - ಆ ಲಂಕಾಪಟ್ಟಣದಲ್ಲಿ, ನಾನಾ....ತೈಃ - ಅನೇಕ ಪಕ್ಷಿಗಳ ಧ್ವನಿಗಳಿಂದಲೂ, ಪ್ರಭಿನ್ನೈಃ - ಒಡೆದುಹೋದ, ಸಲಿಲಾಶಯೈಃ - ಸರೋವರಗಳಿಂದಲೂ, ಕ್ಲಾಂತೈಃ - ಬಾಡಿದ, ತಾಮ್ರೈಃ - ಕೆಂಪಾಗಿರುವ, ಕಿಸಲಯೈಃ - ಚಿಗುರುಗಳಿಂದಲೂ, ಕ್ಲಾಂತ....ತಂ - ಬಾಡಿಹೋದ ವೃಕ್ಷಗಳಿಂದಲೂ ಲತೆಗಳಿಂದಲೂ ಕೂಡಿರುವ, ತದ್ವನಂ-ಆ ವನವು, ದಾವಾ....ಥಾ-ಕಾಡುಕಿಚ್ಚಿನಿಂದ ಸುಡಲ್ಪಟ್ಟಂತೆ, ನಬಭೌ-ಪ್ರಕಾಶಿಸಲಿಲ್ಲವು. ॥ ೧೭ ॥ ತಾಲತಾಃ-ಆ ಬಳ್ಳಿಗಳು, ವ್ಯಾಕು....ಣಾಃ-ಬಾಡಿದ ಬೊಬ್ಬಡೆಯುಳ್ಳುದಾಗಿ, ವಿಹ್ವಲಾಇವ - ಕಳವಳಗೊಂಡ ಸ್ತ್ರೀಯರಂತೆ, ರೇಜುಃ - ಹೊಳೆಯುತ್ತಿದ್ದವು, ತನ್ಮಹದ್ವನಂ - ಆ ಮಹಾ ವನವು, ನಾಶಿತೈಃ - ವಿನಾಶಿಸಲ್ಪಟ್ಟ, ಲತಾಗೃಹೈಃ - ಲತಾಮಂದಿರಗಳಿಂದಲೂ, ಚಿತ್ರಗೃಹೈಶ್ಚ - ಆಶ್ಚರ್ಯಕರಗಳಾದ ಮನೆಗಳಿಂದಲೂ, ಮಹೋರಗೈಃ - ದೊಡ್ಡ ಹಾವುಗಳಿಂದಲೂ, ನಿರ್ಧೂತೈಃ - ಕೊಡಹಲ್ಪಟ್ಟ, ವ್ಯಾಳಮೃಗೈಶ್ಚ - ದುಷ್ಟಮೃಗಗಳಿಂದಲೂ, ಉನ್ಮಥಿತೈಃ - ಕೆಡಹಲ್ಪಟ್ಟ, ಶಿಲಾಗೃಹೈಃ - ಮಂಟಪ

ವೃಕ್ಷಗಳೆಲ್ಲವನ್ನೂ ಮುರಿಯಲಾರಂಭಿಸಿದನು. ಆಗ ವಾನರವೀರನಾದ ಆ ಹನುಮಂತನು, ಮದಿಸಿದ ಪಕ್ಷಿಗಳ ಧ್ವನಿಯಿಂದ ಕೂಡಿರುವುದೂ, ನಾನಾವಿಧಗಳಾದ ಬಳ್ಳಿಗಳಿಂದ ಸುತ್ತುವರೆದ ವೃಕ್ಷಗಳಿಂದ ಕೂಡಿರುವುದಾಗಿಯೂ ಇರುವ ಆ ವನವೆಲ್ಲವನ್ನೂ ಮುರಿದು ನಾಶಗೊಳಿಸಿದನು. ಇಷ್ಟುಮಾತ್ರವಲ್ಲದೆ ಅಲ್ಲಿದ್ದ ವೃಕ್ಷಗಳೆಲ್ಲವನ್ನೂ ಮುರಿದು ಪುಡಿಪುಡಿ ಮಾಡಿದನು. ಮನೋಹರವಾದ ಕೊಳಗಳೇ ಮೊದಲಾದ ಜಲಾಶಯಗಳ ಕಟ್ಟೆಗಳನ್ನೆಲ್ಲವನ್ನೂ ಒಡೆದುಹಾಕಿದನು. ಕ್ರೀಡಾರ್ಥವಾಗಿ ನಿರ್ಮಿಸಿದ್ದ ಪರ್ವತಗಳೆಲ್ಲವನ್ನೂ ನಾಶಮಾಡಿದನು. ಸುಂದರವಾದ ಲತಾವಿತಾನಗಳೆಲ್ಲವನ್ನೂ ಕಿತ್ತೆಸೆದನು. ಹೀಗೆ ಹನುಮಂತನು ಆ ವನವೆಲ್ಲವನ್ನೂ ಭಂಗಗೊಳಿಸಲು, ಅದು ನೋಡುವುದಕ್ಕೆ ಬಹಳ ವಿಕಾರವಾಗಿ ಕಾಣುತ್ತಿದ್ದಿತು. ಆ ಸಮಯದಲ್ಲಿ ಬಾಡಿಹೋದ ವೃಕ್ಷಗಳಿಂದಲೂ, ಬಳ್ಳಿಗಳಿಂದಲೂ, ವಿವಿಧ ಪಕ್ಷಿಗಳ ಕಲಕಲ ಶಬ್ದದಿಂದಲೂ, ಕಟ್ಟೆಗಳೊಡೆದ ಜಲಾಶಯಗಳಿಂದಲೂ, ಬಾಡಿದ ಕೆಂದಳಿರುಗಳಿಂದಲೂ ಕೂಡಿದ ಆ ಅಶೋಕವನವು, ದಾವಾನಲನಿಂದ ಹತವಾದಂತಾಗಿ ಎಷ್ಟುಮಾತ್ರವೂ ಪ್ರಕಾಶವಿಲ್ಲದುದಾಯಿತು. ಆ ಉದ್ಯಾನದಲ್ಲಿ ಲತೆಗಳಿಗೆ ಆಧಾರವಾಗಿದ್ದ ವೃಕ್ಷಗಳೆಲ್ಲವೂ ಮುರಿದು ಭೂಮಿಗೆ ಬಿದ್ದಿದ್ದುದರಿಂದ ಅವು ಪುರುಷರಿಲ್ಲದ ಸ್ತ್ರೀಯರು ಮಹಾ ಭಯದಿಂದ ನಿಶ್ಚೇಷ್ಟಿತೆಯರಾಗಿರುವಂತೆ ತೋರುತ್ತ ಕಾಂತಿವಿಹೀನವಾಗಿದ್ದವು. ॥ ೧೫–೧೮ ॥ ಆಗಲಾವನವು ನಾಶಗೊಳಿಸಿದ ಲತಾಗೃಹಗಳುಳ್ಳುದಾಗಿಯೂ,

ನಾಶಿತೈರ್ಮಹೋರಗೈರ್ವ್ಯಾಳಮೃಗೈಶ್ಚ ನಿರ್ಧುತೈಃ । ಶಿಲಾಗೃಹೈರುನ್ಮಥಿತೈಸ್ತಥಾ ಗೃಹೈಃ ಪ್ರಣಷ್ಟರೂಪಂ ತದಭೂನ್ಮಹದ್ವನಂ ॥ ೧೯ ॥ ಸಾ ವಿಹ್ವಲಾಽಶೋಕಲತಾಪ್ರತಾನಾ ವನಸ್ಥಲೀ ಶೋಕಲತಾಪ್ರತಾನಾ । ಜಾತಾ ದಶಾಸ್ಯಪ್ರಮದಾವನಸ್ಯ ಕಪೇರ್ಬಲಾದ್ಧಿ ಪ್ರಮದಾವನಸ್ಯ ॥ ೨೦ ॥

ಮಹದ್ವ್ಯಳೀಕಂ ಮನಸೋ ಮಹಾತ್ಮನಃ
ಸ ತಸ್ಯ ಕೃತ್ವಾರ್ಥಪತೇರ್ಮಹಾಕಪಿ ।
ಯುಯುತ್ಸುರೇಕೋ ಬಹುಭಿರ್ಮಹಾಬಲೈ
ಶ್ಶ್ರಿಯಾಜ್ವಲನ್ ತೋರಣಮಾಸ್ಥಿತಃ ಕಪಿಃ ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಚತ್ವಾರಿಂಶಸ್ಸರ್ಗಃ

ಗಳಿಂದಲೂ, ತಥಾ-ಹಾಗೆಯೇ, ಗೃಹೈಃ-ಮನೆಗಳಿಂದಲೂ, ಪ್ರಣಷ್ಟರೂಪಂ-ನಾಶವಾದ ಸೌಂದರ್ಯವುಳ್ಳುದು, ಅಭೂತ್ - ಆಯಿತು. ॥೧೮-೧೯॥ ಅಶೋ....ತಾ-ಶೋಕಿಸಲನರ್ಹವಾದ, ಬಳ್ಳಿಗಳ ತಂಡವುಳ್ಳ, ದಶಾ....ಪಾ - ರಾವಣನ ವನಿತೆಯರಿಗೆ, ಅವನಸ್ಯ - ಭೋಗಾದಿಗಳಿಂದ ರಕ್ಷಕವಾದ, ಪ್ರಮುದಾವನಸ್ಯ - ಕ್ರೀಡಾವನದ, ವನಸ್ಥಲೀ - ಭೂಮಿಯು, ಕಪೇಃ - ವಾನರನ, ಬಲಾದ್ಧಿ - ಬಲದದೆಶೆಯಿಂದಲೇ, ವಿಹ್ವಲಾ - ವ್ಯಾಕುಲವಾಗಿಯೂ, ಶೋಕ....ಚ - ದುಃಖಿಸತಕ್ಕ ಬಳ್ಳಿಗಳುಳ್ಳದ್ದೂ ಕೂಡ, ಜಾತಾ-ಆಯಿತು. ॥ ೨೦ ॥ ಸಕಪಿಃ ಆ ಆಂಜನೇಯನು, ಮಹಾತ್ಮನಃ-ಮಹಾ ಧೈರ್ಯಶಾಲಿಯಾದ, ಅರ್ಥಪತೇಃ-ರಾಜನಾದ, ತಸ್ಯ - ಆ ರಾವಣನ, ಮನಸಃ-ಮನಸ್ಸಿಗೆ, ಮಹದ್ವ್ಯಳೀಕಂ - ವನಭಂಜನ ರೂಪವಾದ ಮಹದನಿಷ್ಟವನ್ನು, ಕೃತ್ವಾ-ಮಾಡಿ, ಏಕಃ-ಒಬ್ಬಂಟಿಗನಾದ, ಕಪಿಃ-ಆ ಆಂಜನೇಯನು, ಮಹಾಬಲೈಃ - ಬಲುಬಲಿಷ್ಠರಾದ, ಬಹುಭಿಃ - ಅನೇಕರೊಡನೆ, ಯುಯುತ್ಸುಃ - ಯುದ್ಧಮಾಡಲಿಚ್ಛೆಯುಳ್ಳವನಾಗಿ, ಶ್ರಿಯಾ-ಧೈರ್ಯಸಂಪತ್ತಿನಿಂದ, ಜ್ವಲನ್-ಹೊಳೆಯುತ್ತ, ತೋರಣಂ-ಬಹಿದ್ವಾರವನ್ನು, ಆಸ್ಥಿತಃ - ಆಶ್ರಯಿಸಿದನು. ॥ ೨೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಚತ್ವಾರಿಂಶಸ್ಸರ್ಗಃ

ಕೆಡುಹಲಾದ ಚಿತ್ರಗೃಹಗಳುಳ್ಳುದಾಗಿಯೂ, ಮೇಲಕ್ಕೆ ಹಾರಿಸಿದ ಮಹಾ ಸರ್ಪಗಳೂ, ಕ್ರೂರ ಮೃಗಗಳೂ ಉಳ್ಳುದಾಗಿಯೂ, ಒಡೆದುಹಾಕಿದ ರಾತ್ರಿಗೃಹಗಳೂ, ಸಾಮಾನ್ಯ ಗೃಹಗಳೂ ಉಳ್ಳುದಾಗಿಯೂ ಆಗಿ ಸೌಭಾಗ್ಯವು ಕೆಟ್ಟು ಕಳಾಹೀನವಾಗಿದ್ದಿತು. ಇಷ್ಟು ಮಾತ್ರವಲ್ಲದೆ, ಆ ರಾವಣಾಸುರನ ಭಾರ್ಯೆಯರಿಗೆ ಸಕಲ ಸುಖಗಳನ್ನೂ ಕೊಡುತ್ತ, ಭೋಗಸ್ಥಾನವಾಗಿದ್ದ ಆ ವನವು ಇದುವರೆಗೂ ವ್ಯಸನವನ್ನೇ ಕಾಣದಿದ್ದರೂ, ಮಹಾ ವೀರನಾದ ಆಂಜನೇಯನಿಂದ, ಅಲ್ಲಿದ್ದ ಸಮಸ್ತ ವೃಕ್ಷಗಳೂ, ಲತೆಗಳೂ ನಾಶಗೊಳಿಸಲ್ಪಟ್ಟು ವ್ಯಾಕುಲವಾದುದಾಗಿದ್ದಿತು. ಮಹಾ ಕಪಿಯಾದ ಆ ಹನುಮಂತನು ಮಹಾ ಶೂರನೂ, ಧನಾಢ್ಯನೂ ಆದ ರಾವಣಾಸುರನ ಮನಸ್ಸಿಗೆ ಅಪ್ರಿಯವನ್ನುಂಟುಮಾಡಿ ತಾನೊಬ್ಬನೇ ಅನೇಕ ಮಂದಿ ರಾಕ್ಷಸರೊಡನೆ ಯುದ್ಧ ಮಾಡಬಯಸಿದವನಾಗಿ, ಅತ್ಯಧಿಕವಾದ ತೇಜಸ್ಸಿನಿಂದ ಬೆಳಗುತ್ತ ಆ ಅಶೋಕವನದ ಬಹಿದ್ವಾರದಲ್ಲಿ ಕುಳಿತಿದ್ದನು. ॥ ೧೯-೨೧ ॥

ಇಂತಿದು ಹನುಮತ್ಕೃತ ಅಶೋಕವನಭಂಗ ವೃತ್ತಾಂತವೆಂಬ
ನಾಲ್ವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ದ್ವಿಚತ್ವಾರಿಂಶಸ್ಸರ್ಗಃ

ತತಃ ಪಕ್ಷಿನಿನಾದೇನ ವೃಕ್ಷಭಂಗಸ್ವನೇನಚ । ಬಭೂವುಸ್ತ್ರಾಸ ಸಂಭ್ರಾಂತಾ ಸ್ಸರ್ವೇ ಲಂಕಾನಿವಾಸಿನಃ ॥೧॥ ವಿದ್ರುತಾಶ್ಚ ಭಯತ್ರಸ್ತಾ ವಿನೇದುರ್ಮೃಗಪಕ್ಷಿಣಃ । ರಕ್ಷಸಾಂಚ ನಿಮಿತ್ತಾನಿ ಕ್ರೂರಾಣಿ ಪ್ರತಿಪೇದಿರೇ ॥೨॥ ತತೋ ಗತಾಯಾಂ ನಿದ್ರಾಯಾಂ ರಾಕ್ಷಸ್ಯೋ ವಿಕೃತಾನನಾಃ । ತದ್ವನಂ ದದೃಶುರ್ಭಗ್ನಂ ತಂಚ ವೀರಂ ಮಹಾಕಪಿಂ ॥೩॥ ಸ ತಾ ದೃಷ್ಟ್ವಾ ಮಹಾಬಾಹುರ್ಮಹಾಸತ್ವೋ ಮಹಾಬಲಃ । ಚಕಾರ ಸುಮಹದ್ರೂಪಂ ರಾಕ್ಷಸೀನಾಂ ಭಯಾವಹಂ ॥೪॥ ತತಸ್ತಂ ಗಿರಿಸಂಕಾಶ

ತತಃ - ಬಳಿಕ, ಲಂಕಾ....ನಃ - ಲಂಕೆಯಲ್ಲಿ ನೆಲೆಗೊಂಡಿರುವ, ಸರ್ವೇ - ಸಮಸ್ತರೂ, ಪಕ್ಷಿ....ನ - ಹಕ್ಕಿಗಳ ಕೂಗುಗಳಿಂದಲೂ, ವೃಕ್ಷ....ಚ - ಗಿಡಗಳು ಮುರಿಯುವಿಕೆಯ ಧ್ವನಿಯಿಂದಲೂ, ತ್ರಾಸ....ತಾಃ - ಭೀತಿಯಿಂದ ಗಾಬರಿಬಿದ್ದವರು, ಬಭೂವುಃ - ಆದರು. ॥೧॥ ಭಯತ್ರಸ್ತಾಃ- ಭೀತಿಗೊಂಡವಾದ್ದರಿಂದಲೇನೇ, ವಿದ್ರುತಾಶ್ಚ - ಓಡಿಯೂ ಹೋಗುತ್ತಿರುವ, ಮೃಗಪಕ್ಷಿಣಃ - ಮೃಗಗಳೂ ಹಕ್ಕಿಗಳೂ ಸಹಾ, ವಿನೇದುಃ - ಕೂಗಿದವು, ರಕ್ಷಸಾಂ - ರಕ್ಕಸರಿಗೆ, ಕ್ರೂರಾಣಿ - ರೌದ್ರಗಳಾದ, ನಿಮಿತ್ತಾನಿಚ - ಶಕುನಗಳೂ, ಪ್ರತಿಪೇದಿರೆ - ಪ್ರಾಪ್ತಗಳಾದವು. ॥೨॥ ತತಃ - ಬಳಿಕ, ನಿದ್ರಾಯಾಂ- ನಿದ್ದೆಯು, ಗತಾಯಾಂ - ಕಳೆದುಹೋಗಲು, ವಿಕೃತಾನನಾಃ - ವಿಕಾರಮುಖಿಯರಾದ, ರಾಕ್ಷಸ್ಯಃ - ರಕ್ಕಸಿಯರು, ಭಗ್ನಂ - ಮುರಿಯಲ್ಪಟ್ಟ, ತದ್ವನಂ - ಆ ವನವನ್ನೂ, ವೀರಂ-ಶೂರನಾದ, ತಂಮಹಾಕಪಿಂಚ - ಆ ದೊಡ್ಡ ಕಪಿಯನ್ನೂ ಸಹಾ, ದದೃಶುಃ - ಕಂಡರು. ॥೩॥ ಮಹಾಬಾಹುಃ - ಮಹಾಭುಜಗಳುಳ್ಳ, ಮಹಾಸತ್ವಃ - ಬಹು ಅಂತಸ್ಸಾರವುಳ್ಳ, ಮಹಾಬಲಃ - ಬಹಳವಾದ ದೇಹಬಲವುಳ್ಳ, ಸಃ - ಆ ಆಂಜನೇಯನು, ತಾಃ - ರಾಕ್ಷಸಸ್ತ್ರೀಯರನ್ನು, ದೃಷ್ಟ್ವಾ - ಕಂಡು, ರಾಕ್ಷಸೀನಾಂ - ರಕ್ಕಸಿಯರಿಗೆ, ಭಯಾವಹಂ - ಹೆದರಿಕೆಯನ್ನುಂಟುಮಾಡುವ, ಸುಮಹತ್ - ಮತ್ತೂ ದೊಡ್ಡದಾದ, ರೂಪಂ-ಆಕಾರವನ್ನು, ಚಕಾರ-ಪಡೆದನು. ॥೪॥ ತತಃ - ಬಳಿಕ, ರಾಕ್ಷಸ್ಯಃ-ರಾಕ್ಷಸಸ್ತ್ರೀಯರು,

---

ಹೀಗೆ ಅಶೋಕವನದಲ್ಲಿ ಇದ್ದಕ್ಕಿದ್ದಂತೆಯೇ ಪಕ್ಷಿಗಳ ಕಲಕಲವನ್ನೂ, ವೃಕ್ಷಗಳು ಮುರಿದು ಬಿದ್ದ ಧ್ವನಿಯನ್ನೂ ಕೇಳಿ, ಲಂಕಾನಿವಾಸಿಗಳೆಲ್ಲರೂ ಮಹಾ ಭಯಭ್ರಾಂತರಾದರು. ಅಶೋಕವನದಲ್ಲಿದ್ದ ಮೃಗಪಕ್ಷಿಗಳೆಲ್ಲವೂ ಬಹಳವಾದ ಭಯದಿಂದರಚುತ್ತ ನಾಲ್ಕೂ ದಿಕ್ಕುಗಳಿಗೋಡುತ್ತಿದ್ದವು. ಅಲ್ಲಿದ್ದ ರಾಕ್ಷಸರೆಲ್ಲರಿಗೂ ನಾಶಸೂಚಕಗಳಾದ ಅನೇಕ ನಿಮಿತ್ತಗಳುಂಟಾದುವು. ಆ ಸಮಯದಲ್ಲಿ ಅಲ್ಲಿಯೇ ನಿದ್ರಿಸುತ್ತಿದ್ದ ವಿಕಾರರೂಪಿಣಿಯರಾದ ಆ ರಾಕ್ಷಸಿಯರೆಲ್ಲರೂ ಆ ಉಲ್ಲಕಲ್ಲೋಲ ಧ್ವನಿಯಿಂದ ಎಚ್ಚರಗೊಂಡು, ಮುರಿದು ವಿಕಾರಗೊಳಿಸಲ್ಪಟ್ಟ ವನವನ್ನೂ, ಮಹೋನ್ನತಾಕಾರನಾಗಿ, ಮಹಾ ಶೌರ್ಯದಿಂದ ಕುಳಿತಿದ್ದ ಆಂಜನೇಯನನ್ನೂ ಕಂಡರು. ಆಗ ಮಹಾ ಬಲಪರಾಕ್ರಮಶಾಲಿಯೂ, ಮಹಾ ಬಾಹುವೂ ಆದ ಆಂಜನೇಯನು ಆ ರಾಕ್ಷಸಸ್ತ್ರೀಯರನ್ನು ನೋಡಿ, ಮೊದಲೇ ಭಯಗ್ರಸ್ತರಾಗಿದ್ದ ಅವರು ಮತ್ತಷ್ಟು ಭಯಭ್ರಾಂತರಾಗುವಂತೆ ತನ್ನ ಮೈಯನ್ನು ಬೆಳಿಸಿ

ಮತಿಕಾಯಂ ಮಹಾಬಲಂ । ರಾಕ್ಷಸ್ಯೋ ವಾನರಂ ದೃಷ್ಟ್ವಾ ಪಪ್ರಚ್ಛುರ್ಜನಕಾತ್ಮಜಾಂ ॥ ೫ ॥ "ಕೋಽಯಂ ಕಸ್ಯ ಕುತೋವಾಽಯಂ ಕಿನ್ನಿಮಿತ್ತಮಿಹಾಗತಃ ?। ಕಥಂ ತ್ವಯಾ ಸಹಾಽನೇನ ಸಂವಾದಃ ಕೃತ ಇತ್ಯುತ ? ॥ ೬ ॥ ಆಚಕ್ಷ್ವ ನೋ ವಿಶಾಲಾಕ್ಷಿ! ಮಾಭೂತ್ತೇ ಸುಭಗೇ! ಭಯಂ । ಸಂವಾದಮಸಿತಾಪಾಂಗೇ! ತ್ವಯಾ ಕಿಂಕೃತವಾನಯಂ?" ॥೭॥ ಅಥಾಬ್ರವೀತ್ತದಾ ಸಾಧ್ವೀ ಸೀತಾ ಸರ್ವಾಂಗಸುಂದರೀ। "ರಕ್ಷಸಾಂ ಭೀಮರೂಪಾಣಾಂ ವಿಜ್ಞಾನೇ ಮಮ ಕಾ ಗತಿಃ ? ॥೮॥ ಯೂಯಮೇವಾಭಿಜಾನೀತ ಯೋಽಯಂ ಯದ್ವಾಕರಿಷ್ಯತಿ ? । ಅಹಿರೇವ ಹ್ಯಹೇಃ ಪಾದಾನ್ವಿಜಾ

ಗಿರಿಸಂಕಾಶಂ - ಪರ್ವತಸದೃಶನಾದ, ಅತಿಕಾಯಂ - ದೊಡ್ಡ ದೇಹವುಳ್ಳ, ಮಹಾಬಲಂ - ಬಹು ಬಲಿಷ್ಠನಾದ, ವಾನರಂ - ಕಪಿಯನ್ನು, ದೃಷ್ಟ್ವಾ - ಕಂಡು, ಅಯಂ - ಈ ಕಪಿಯು, ಕಃ - ಯಾರು, ಕಸ್ಯ - ಯಾರು ಸಂಬಂಧಿಯು, ಅಯಂ - ಇವನು, ಕುತೋವಾ - ಎಲ್ಲಿಂದಲಾದರೆ, ಇಹ - ಇಲ್ಲಿಗೆ, ಕಿಂನಿಮಿತ್ತಂ - ಯಾತಕ್ಕೋಸುಗ, ಆಗತಃ - ಬಂದಿರುವನು, ತ್ವಯಾಸಹ - ನಿನ್ನೊಡನೆ, ಅನೇನ - ಇವನಿಂದ, ಸಂವಾದಃ - ಮಾತಾಡುವಿಕೆಯಾದರೆ, ಕಥಂಕೃತಃ - ಹೇಗೆ ಮಾಡಲ್ಪಟ್ಟಿತು, ಹೇ ವಿಶಾಲಾಕ್ಷೀ-ಎಲೈ ವಿಸ್ತಾರನೇತ್ರೆಯೇ, ನಃ-ನಮಗೆ, ಆಚಕ್ಷ್ವ-ಹೇಳು, ಹೇ ಶುಭಗೇ-ಎಲೈ ಸುಂದರಿಯೆ, ತೇ - ನಿನಗೆ, ಭಯಂ - ಭೀತಿಯು, ಮಾಭೂತ್ - ಆಗಬೇಡ, ಹೇ ಅಸಿತಾಪಾಂಗೇ - ಕಪ್ಪಾದ ಕಡೆನೋಟವುಳ್ಳವಳೇ, ಅಯಂ - ಇವನು, ತ್ವಯಾ - ನಿನ್ನೊಡನೆ, ಸಂವಾದಂ - ಸಲ್ಲಾಪವನ್ನು, ಕಿಂಕೃತವಾನ್ - ಏನು ಮಾಡಿದನು, ಇತಿ - ಇಂತೆಂದು, ಜನಕಾತ್ಮಜಾಂ - ಸೀತಾದೇವಿಯನ್ನು ಕುರಿತು, ಪಪ್ರಚ್ಛುಃ - ಕೇಳಿದರು. ॥ ೫-೭ ॥ ಅಥ - ಬಳಿಕ, ಭೀಮರೂಪಾಣಾಂ - ಭಯಂಕರಾಕಾರವುಳ್ಳ, ರಕ್ಷಸಾಂ - ರಾಕ್ಷಸರ, ವಿಜ್ಞಾನೇ - ತಿಳುವಳಿಕೆಯಲ್ಲಿ, ಮಮ - ನನಗೆ, ಕಾಗತಿಃ - ಯೇನುಪಾಯವು, ಅಯಂ - ಇವನು, ಯಃ - ಯಂಥಾವನೋ, ಯದ್ವಾಕರಿಷ್ಯತಿ - ಏನು ಮಾಡುವನೋ, (ತತ್ - ಅದನ್ನು), ಯೂಯಮೇವ - ನೀವೇ, ವಿಜಾನೀತ - ಅರಿತುಕೊಳ್ಳಿರಿ, ಅಹಿರೇವ - ಸರ್ಪವೇ, ಅಹೇಃ - ಹಾವಿನ, ಪಾದಾನ್ - ಪಾದಗಳನ್ನು, ವಿಜಾನಾತಿಹಿ - ತಿಳಿಯುತ್ತದೆಯಷ್ಟೆ, ನಸಂಶಯಃ - ಸಂದೇಹವಿಲ್ಲ, ಅಹಮಪಿ - ನಾನೂ, ಅಸ್ಯ - ಇವನ ಬೆಳಿಯಿಂದ, ಭೀತಾ - ಭೀತಿಗೊಂಡವಳು, ಅಸ್ಮಿ -

ಬಿಟ್ಟನು. ॥ ೧-೪ ॥ ಆ ರಾಕ್ಷಸಸ್ತ್ರೀಯರು, ಮಹೋನ್ನತ ಶರೀರವನ್ನೊಳಗೊಂಡು, ಮಹಾ ಪರ್ವತದಂತಹ ಆಕಾರವುಳ್ಳವನೂ, ಮಹಾ ಬಲಿಷ್ಠನೂ ಆದ ಹನುಮಂತನನ್ನು ನೋಡಿ ಭಯಚಕಿತರಾಗಿ ಕೂಡಲೇ ಅಲ್ಲಿಂದ ಸೀತಾದೇವಿಯ ಬಳಿಗೆ ಬಂದು, "ಎಲೆ ವಿಶಾಲಾಕ್ಷಿ! ಇದೇನು ? ಇವನು ಯಾರು ? ಯಾರ ಮಗನು ? ಎಲ್ಲಿಂದ ಬಂದಿರುವನು ? ಏತಕ್ಕೋಸ್ಕರ ಇಲ್ಲಿಗೆ ಬಂದಿರುವನು ? ಇವನು ರಹಸ್ಯವಾಗಿ ನಿನ್ನ ಕಿವಿಯಲ್ಲಿ ಮಾತನಾಡುತ್ತಿದ್ದ ವಿಷಯವೇನು ? ಇದೆಲ್ಲವನ್ನೂ ನಮಗೆ ತಿಳಿಸು. ನೀನು ಹೆದರಬೇಡ" ಎಂದು ಕೇಳಿದರು. ಆಗ ಮಹಾ ಪತಿವ್ರತೆಯೂ, ಸರ್ವಾಂಗಸುಂದರಿಯೂ ಆದ ಆ ಸೀತಾದೇವಿಯು ಅವರನ್ನು ಕುರಿತು, "ಎಲೌ ಸ್ತ್ರೀಯರೇ! ಚೆನ್ನಾಯಿತು ; ಮಹಾ ಭಯಂಕರವಾದ ನಿಮ್ಮ ರಾಕ್ಷಸರ ರೂಪಗಳನ್ನರಿಯಲು ನನ್ನಿಂದಾಗುವುದೇ ? ಈತನಾರೋ ? ಏನು ಮಾಡುವನೋ ? ನಾನೇನು ಬಲ್ಲೆ ! ರಾಕ್ಷಸರು ಧರಿಸುವ ನಾನಾವಿಧವಾದ ಮಾಯಾ ರೂಪಗಳನ್ನು ರಾಕ್ಷಸಿಯರಾದ ನೀವೇ ಬಲ್ಲಿರಿ. ಸರ್ಪಪಾದವನ್ನು ಸರ್ಪವೇ ಬಲ್ಲುದಲ್ಲದೆ

ನಾತಿ ನ ಸಂಶಯಃ ‖ ೯ ‖ ಅಹಮಪ್ಯಸ್ಯ ಭೀತಾಸ್ಮಿ ನೈನಂ ಜಾನಾಮಿ ಕೋನ್ವಯಂ। ವೇದ್ಮಿ ರಾಕ್ಷಸಮೇವೈನಂ ಕಾಮರೂಪಿಣಮಾಗತಂ ‖ ೧೦ ‖ ವೈದೇಹ್ಯಾ ವಚನಂ ಶ್ರುತ್ವಾ ರಾಕ್ಷಸ್ಯೋ ವಿದ್ರುತಾ ದಿಶಃ। ಸ್ಥಿತಾಃ ಕಾಶ್ಚಿದ್ಗತಾಃ ಕಾಶ್ಚಿದ್ರಾವಣಾಯ ನಿವೇದಿತುಂ ‖೧೧‖ ರಾವಣಸ್ಯ ಸಮೀಪೇತು ರಾಕ್ಷಸ್ಯೋ ವಿಕೃತಾನನಾಃ। ವಿರೂಪಂ ವಾನರಂ ಭೀಮಮಾಖ್ಯಾತುಮುಪಚಕ್ರಮುಃ ‖ ೧೨ ‖ " ಅಶೋಕವನಿಕಾಮಧ್ಯೇ ರಾಜನ್ಭೀಮವಪುಃ ಕಪಿಃ। ಸೀತಯಾ ಕೃತಸಂವಾದಸ್ತಿಷ್ಠತ್ಯಮಿತವಿಕ್ರಮಃ ‖ ೧೩ ‖

ಆಗಿದ್ದೇನೆ, ಏನಂ ಈತನನ್ನು, ನಜಾನಾಮಿ-ನಾನರಿಯೆನು, ಅಯಂ-ಈತನು, ಕೋನು-ಯಾರೋ, ಏನಂ - ಇವನನ್ನು, ಕಾಮರೂಪಿಣಂ - ಸ್ವೇಚ್ಛಾರೂಪಿಯಾಗಿ, ಆಗತಂ - ಬಂದಿರುವ, ರಾಕ್ಷಸಮೇವ-ರಕ್ಕಸನನ್ನಾಗಿಯೇ, ವೇದ್ಮಿ - ತಿಳಿಯುತ್ತೇನೆ, ಇತಿ - ಇಂತೆಂದು, ತದಾ - ಆ ಸಮಯದಲ್ಲಿ, ಸಾಧ್ವೀ-ಪತಿವ್ರತೆಯಾದ, ಸರ್ವಾಂಗಸುಂದರೀ - ಸಮಸ್ತಾವಯವಗಳಲ್ಲಿಯೂ ಸುರೂಪಿಣಿಯಾದ, ಸೀತಾ - ಸೀತಾದೇವಿಯು, ಅಬ್ರವೀತ್ - ನುಡಿದಳು. ‖ ೮-೧೦ ‖ ವೈದೇಹ್ಯಾಃ - ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಕಾಶ್ಚಿದ್ರಾಕ್ಷಸ್ಯಃ - ಕೆಲ ರಕ್ಕಸಿಯರು, ದಿಶಃ - ದಿಕ್ಕುಗಳಲ್ಲಿ, ವಿದ್ರುತಾಃ - ಓಡಿಹೋದರು, ಕಾಶ್ಚಿತ್ - ಕೆಲವರು, ಸ್ಥಿತಾಃ - ನಿಂತಿದ್ದರು, ಕಾಶ್ಚಿತ್-ಕೆಲ ಹೆಂಗಳು, ರಾವಣಾಯ - ರಾವಣನಿಗೆ, ನಿವೇದಿತುಂ - ತಿಳಿಸಲಿಕ್ಕೆ, ಗತಾಃ - ಹೊರಟರು. ‖ ೧೧ ‖ ರಾವಣಸ್ಯ - ರಾವಣನ, ಸಮೀಪೇತು - ಹತ್ತಿರ, ವಿಕೃತಾನನಾಃ - ವಿಕಾರಮುಖಿಯರಾದ, ರಾಕ್ಷಸ್ಯಃ - ರಕ್ಕಸಿಯರು, ಭೀಮಂ - ಭಯಂಕರವಾದ, ವಿರೂಪಂ - ವಿಕಾರರೂಪವುಳ್ಳ, ವಾನರಂ - ಕಪಿಯ ವಿಷಯವನ್ನು, ಆಖ್ಯಾತುಂ - ಹೇಳುವದಕ್ಕೆ, ಉಪಚಕ್ರಮುಃ - ಆರಂಭಿಸಿದರು. ‖೧೨‖ ಹೇ ರಾಜನ್ - ಎಲೈ ರಾಜನೇ, ಭೀಮವಪುಃ - ಭಯಂಕರದೇಹಿಯಾದ, ಅಮಿ....ಮಃ - ಅಪಾರ ಪರಾಕ್ರಮಿಯಾದ, ಕಪಿಃ-ವಾನರನು, ಅಶೋ....ಧ್ಯೆ - ಅಶೋಕವನದನಡುವೆ, ಸೀತಯಾ - ಸೀತೆಯೊಡನೆ, ಕೃತಸಂವಾದಃ - ಮಾಡಲ್ಪಟ್ಟ ಸಲ್ಲಾಪವುಳ್ಳವನಾಗಿ, ತಿಷ್ಠತಿ - ಇರುವನು. ‖ ೧೩ ‖ ಜಾನಕೀ - ಜನಕಪುತ್ರಿಯಾದ, ಹರಿಣಲೋಚನಾ - ಮೃಗಾಕ್ಷಿಯಾದ, ಸೀತಾ - ಸೀತಾದೇವಿಯು, ಅಸ್ಮಾಭಿಃ - ನಮ್ಮಿಂದ, ಬಹುಧಾ-

ಮತ್ತಾರಿಗಾದರೂ ತಿಳಿದೀತೇ! ಇವನನ್ನು ನೋಡಿ ನನಗೂ ಭಯವಾಗುತ್ತಿರುವುದು. ಇವನಾರೋ ನೀವೇ ಹೇಳಿರಿ. ಇವನನ್ನು ನೋಡಿದರಂತೂ ಕಾಮರೂಪನಾದ ರಾಕ್ಷಸನೆಂದೇ ತೋರುತ್ತದೆ" ಎಂದು ಹೇಳಿದಳು. ‖ ೫–೧೦ ‖ ಆಗ ರಾಕ್ಷಸಸ್ತ್ರೀಯರು ಸೀತಾದೇವಿಯ ಮಾತುಗಳನ್ನು ಕೇಳಿ ಭಯಗೊಂಡು ನಾಲ್ಕು ದಿಕ್ಕುಗಳಿಗೂ ಓಡಿಹೋದರು. ಕೆಲವರು ಅಲ್ಲಿಯೇ ಸೀತಾದೇವಿಗೆ ಕಾವಲಿದ್ದರು. ಇನ್ನು ಕೆಲವರು ಈ ವೃತ್ತಾಂತವನ್ನು ತಮ್ಮ ಪ್ರಭುವಾದ ರಾವಣಾಸುರನಿಗೆ ತಿಳಿಸಲು ಓಡಿದರು, ಆಮೇಲೆ ವಿಕಾರ ರೂಪಿಣಿಯರಾದ ಆ ರಾಕ್ಷಸಸ್ತ್ರೀಯರು ರಾವಣಾಸುರನ ಬಳಿಗೈದಿ ಮಹೋನ್ನತಾಕಾರನೂ, ಮಹಾಭಯಂಕರನೂ ಆದ ಆ ವಾನರನ ಗುರ್ತನ್ನು ಅವನಿಗೆ ತಿಳಿಸಲೋಸುಗ ಅವನನ್ನು ಕುರಿತು, "ಓ ಮಹಾರಾಜ! ಯಾವನೋ ಮಹಾ ಭಯಂಕರಾಕಾರವುಳ್ಳವನೂ, ಮಹಾ ಶೌರ್ಯನಂತನೂ ಆದ ಒಬ್ಬ ವಾನರನು ಸೀತಾದೇವಿಯೊಡನೆ ಸ್ವಲ್ಪಹೊತ್ತು ಮಾತನಾಡಿ ಈಗ ಅಶೋಕವನದ ಮಧ್ಯದಲ್ಲಿರುವನು. ಮೃಗನೇತ್ರೆಯಾದ ಆ ಸೀತೆಯನ್ನು, ಇವನಾರೆಂದು

ನಚ ತಂ ಜಾನಕೀ ಸೀತಾ ಹರಿಂ ಹರಿಣಲೋಚನಾ । ಅಸ್ಮಾಭಿರ್ಬಹುಧಾ ಪೃಷ್ಟಾ ನಿವೇದಯಿತುಮಿಚ್ಛತಿ ॥ ೧೪ ॥ ವಾಸವಸ್ಯ ಭವೇದ್ದೂತೋ ದೂತೋ ವೈಶ್ರವಣಸ್ಯ ವಾ । ಪ್ರೇಷಿತೋವಾಪಿ ರಾಮೇಣ ಸೀತಾನ್ವೇಷಣಕಾಂಕ್ಷಯಾ ॥ ೧೫ ॥ ತೇನ ತ್ವದ್ಭುತರೂಪೇಣ ಯತ್ತತ್ತವಮನೋಹರಂ । ನಾನಾಮೃಗಗಣಾಕೀರ್ಣಂ ಪ್ರಮೃಷ್ಟಂ ಪ್ರಮದಾವನಂ ॥ ೧೬ ॥ ನತತ್ರ ಕಶ್ಚಿದುದ್ದೇಶೋ ಯಸ್ತೇನ ನ ವಿನಾಶಿತಃ । ಯತ್ರ ಸಾ ಜಾನಕೀ ಸೀತಾ ಸ ತೇನ ನವಿನಾಶಿತಃ ॥ ೧೭ ॥ ಜಾನಕೀ ರಕ್ಷಣಾರ್ಥಂವಾ ಶ್ರಮಾದ್ವಾ ನೋಪಲಭ್ಯತೇ । ಅಥವಾ ಕಶ್ಶ್ರಮಸ್ತಸ್ಯ ಸೈವ ತೇನಾಭಿರಕ್ಷಿತಾ ॥೧೮॥

ಬಹಳವಾಗಿ, ಪೃಷ್ಟಾ - ಕೇಳಲ್ಪಟ್ಟವಳಾದರೂ, ತಂಹರಿಂ - ಆ ಕಪಿಯನ್ನು, ನಿವೇದಯಿತುಂ - ತಿಳುಪುವದಕ್ಕೆ, ನೇಚ್ಛತಿ - ಇಚ್ಛಿಸುವದಿಲ್ಲ. ॥ ೧೪ ॥ ವಾಸವಸ್ಯ - ಇಂದ್ರನ, ದೂತಃ - ದೂತನು, ಭವೇತ್ - ಆದಾನೋ, ವೈಶ್ರವಣಸ್ಯ - ಕುಬೇರನ, ದೂತೋವಾ - ದೂತನೋ ಏನೋ, ಅಥವಾ - ಹಾಗಲ್ಲದಿದ್ದರೆ, ರಾಮೇಣ - ಶ್ರೀರಾಮನಿಂದ, ಸೀತಾ....ಯಾ - ಸೀತಾದೇವಿಯನ್ನು ಹುಡುಕುವಿಕೆಯ ಆಶೆಯಿಂದ, ಪ್ರೇಷಿತಃ - ಕಳುಹಿಸಲ್ಪಟ್ಟವನು, ಭವೇದ್ವಾ - ಆದಾನೋ ಏನೋ. ॥ ೧೫ ॥ ತವ - ನಿನ್ನ, ಮನೋಹರಂ - ಸೊಗಸಾದ, ನಾನಾ....ರ್ಣಂ - ಅನೇಕ ಬಗೆಯ ಮೃಗಸಮೂಹದಿಂದ ವ್ಯಾಪ್ತವಾದ, ಪ್ರಮದಾವನಂ - ಶೃಂಗಾರವನವು, ಯತ್ - ಯಾವುದೋ, ತತ್ - ಅದು, ಅದ್ಭುತರೂಪೇಣ - ಆಶ್ಚರ್ಯವಾದ ರೂಪವುಳ್ಳ, ತೇನ - ಆ ವಾನರನಿಂದ, ಪ್ರಮೃಷ್ಟಂ - ಮುರಿಯಲ್ಪಟ್ಟಿತು. ॥ ೧೬ ॥ ತತ್ರ - ಆ ವನದಲ್ಲಿ, ತೇನ - ಆ ವಾನರನಿಂದ, ಯಃ - ಯಾವ ಸ್ಥಳವು, ನವಿನಾಶಿತಃ - ನಾಶಮಾಡಲ್ಪಡಲಿಲ್ಲವೋ, ಸಃ - ಅಂಥಾವನವು, ಕಶ್ಚಿತ್ - ಯಾವದೂ, ನ - ಇಲ್ಲವು, ಯತ್ರ - ಯಾವ ಸ್ಥಳದಲ್ಲಿ, ಸಾಜಾನಕೀ - ಆ ಸೀತಾದೇವಿಯು, ಸ್ಥಿತಾ - ನೆಲಗೊಂಡಿರುವಳೋ, ಸಃ-ಅದು ಮಾತ್ರ, ತೇನ-ಅವನಿಂದ, ನವಿನಾಶಿತಃ-ನಾಶಗೊಳಿಸಲ್ಪಡಲಿಲ್ಲ. ॥ ೧೭ ॥ ಜಾನ....ವಾ-ಸೀತಾದೇವಿಯ ರಕ್ಷಣೆಗಾಗಿಯೋ, ಶ್ರಮಾದ್ವಾ - ಬಳಲಿಕೆಯದೆಶೆಯಿಂದಲೋ, ನೋಪಲಭ್ಯತೇ - ತಿಳಿಯಲ್ಪಡುವದಿಲ್ಲ, ಅಥವಾ - ಹಾಗಲ್ಲದಿದ್ದರೆ, ತಸ್ಯ - ಆ ಕಪಿಗೆ, ಕಶ್ಶ್ರಮಃ - ಏನು ಶ್ರಮವು, ಸಾ - ಆ ಸೀತೆಯು, ತೇನ - ಆ ವಾನರನಿಂದ, ಅಭಿರಕ್ಷಿತೈವ - ರಕ್ಷಿಸಲ್ಪಟ್ಟೇಯಿರುವಳು. ॥ ೧೮ ॥

ಕೇಳಲು ಆಕೆಯು ತನಗೆ ತಿಳಿಯದೆಂದು ಹೇಳಿಬಿಟ್ಟಳು. ಆ ವಾನರನು ದೇವೇಂದ್ರನು ಕಳುಹಲು ಬಂದಿರುವ ದೂತನೋ, ಇಲ್ಲವೇ, ಕುಬೇರನು ಕಳುಹಲು ಬಂದವನೋ, ಅಥವಾ ಸೀತಾದೇವಿಯನ್ನು ಹುಡುಕುವುದಕ್ಕೋಸುಗ ಶ್ರೀರಾಮನೇ ಕಳುಹಲು ಬಂದಿರುವ ದೂತನೋ ತಿಳಿಯದು. ॥ ೧೧ ೧೫ ॥ ಮಹಾ ಭಯಂಕರಾಕಾರನಾದ ಆ ವಾನರನು, ಬಹು ಮನೋಹರವಾಗಿರುವುದೂ, ಸಮಸ್ತ ವಿಧಗಳಾದ ಮೃಗಗಳಿಂದ ಕೂಡಿರುವುದೂ ಆದ ತಮ್ಮ ಉದ್ಯಾನವನ್ನು ಹಾಳುಮಾಡಿದನು. ಆ ವಾನರನಿಂದ ನಾಶಗೊಳಿಸಲ್ಪಡದಿರುವ ಸ್ಥಳವೇ ಇಲ್ಲ. ಅಶೋಕವನವು ಸಂಪೂರ್ಣವಾಗಿ ನಾಶವಾಗಿರುವುದು. ಆದರೂ ಸೀತಾದೇವಿಯು ಕುಳಿತಿರುವ ವೃಕ್ಷವನ್ನು ಮಾತ್ರ ಆ ವಾನರನು ಮುರಿದುಹಾಕಿರುವುದಿಲ್ಲವು. ಆ ವೃಕ್ಷವು ಸೀತೆಗೆ ರಕ್ಷಕವಾಗಿದ್ದುದರಿಂದ ಅದನ್ನು ಮುಟ್ಟಲಿಲ್ಲವೋ, ಇಲ್ಲವೇ ಆಯಾಸ ಹೊಂದಿದುದರಿಂದ ಮುರಿಯದೆ ಬಿಟ್ಟಿರುವನೋ ತಿಳಿಯದಾಗಿದೆ. ಚೆನ್ನಾಗಿ ಯೋಚಿಸಿ

ಚಾರುಪಲ್ಲವಶೋಭಾಢ್ಯಂ ಯಂ ಸೀತಾ ಸ್ವಯಮಾಸ್ಥಿತಾ । ಪ್ರವೃದ್ಧಃ ಶಿಂಶುಪಾವೃಕ್ಷಸ್ಸಚ ತೇನಾಭಿರಕ್ಷಿತಃ ॥ ೧೯ ॥ ತಸ್ಯೋಗ್ರರೂಪಸ್ಯೋಗ್ರ ತ್ವಂ ದಂಡಮಾಜ್ಞಾತುಮರ್ಹಸಿ । ಸೀತಾಸಂಭಾಷಿತಾ ಯೇನ ತದ್ವನಂಚ ವಿನಾಶಿತಂ ॥ ೨೦ ॥ ಮನಃಪರಿಗೃಹೀತಾಂ ತಾಂ ತವ ರಕ್ಷೋಗಣೇಶ್ವರ! । ಕಸ್ಸೀತಾಮಭಿಭಾಷೇತ ಯೋ ನಸ್ಯಾತ್ಯಕ್ತಜೀವಿತಃ" ॥ ೨೧ ॥ ರಾಕ್ಷಸೀನಾಂ ವಚಶ್ಶ್ರುತ್ವಾ ರಾವಣೋ ರಾಕ್ಷಸೇಶ್ವರಃ । ಹುತಾಗ್ನಿರಿವ ಜಜ್ವಾಲ ಕೋಪಸಂವರ್ತಿತೇಕ್ಷಣಃ ॥ ೨೨ ॥ ತಸ್ಯ ಕ್ರುದ್ಧಸ್ಯ

ಚಾರು....ಢ್ಯಂ - ಸೊಗಸಾದ ಚಿಗುರುಗಳ ಕಾಂತಿಯಿಂದ ತುಂಬಿರುವ, ಯಂ - ಯಾವ ವೃಕ್ಷವನ್ನು, ಸೀತಾ - ಸೀತಾದೇವಿಯು, ಸ್ವಯಂ - ತಾನು, ಆಸ್ಥಿತಾ - ನೆಲಗೊಂಡಿರುವಳೋ, ಪ್ರವೃದ್ಧಃ-ಚನ್ನಾಗಿ ಬೆಳದಿರುವ, ಸಶಿಂಶುಪಾವೃಕ್ಷಶ್ಚ - ಆ ಶಿಂಶುಪಾವೃಕ್ಷವು, ತೇನ - ಆ ಕಪಿಯಿಂದ, ಅಭಿರಕ್ಷಿತಃ - ರಕ್ಷಿಸಲ್ಪಟ್ಟಿರುವುದು. ||೧೯|| ಯೇನ - ಯಾವನಿಂದ, ಸೀತಾ - ಸೀತಾದೇವಿಯು, ಸಂಭಾಷಿತಾ - ಮಾತಾಡಿಸಲ್ಪಟ್ಟಳೋ, ತದ್ವನಂಚ - ಆ ಶೃಂಗಾರವನವೂ, ವಿನಾಶಿತಂ - ಧ್ವಂಸಿಸಲ್ಪಟ್ಟಿತೋ, ಹೇ ಉಗ್ರ - ಓ ಭಯಂಕರನೆ, ತ್ವಂ - ನೀನು, ಉಗ್ರರೂಪಸ್ಯ - ಕ್ರೂರಾಕಾರನಾದ, ತಸ್ಯ - ಆ ಕಪಿಗೆ, ದಂಡಂ - ಶಿಕ್ಷೆಯನ್ನು, ಆಜ್ಞಾತುಂ - ಅಪ್ಪಣೆಕೊಡುವದಕ್ಕೋಸ್ಕರ, ಅರ್ಹಸಿ - ಅರ್ಹನಾಗು. || ೨೦ || ಹೇ ರಕ್ಷೋಗಣೇಶ್ವರ - ಓ ರಾಕ್ಷಸಗಣಾಧ್ಯಕ್ಷನಾದ ರಾವಣನೇ, ತವ - ನಿನ್ನ, ಮನಃಪರಿಗೃಹೀತಾಂ - ಮನದಿಂದ ಪರಿಗ್ರಹಿಸಲ್ಪಟ್ಟ, ತಾಂಸೀತಾಂ - ಆ ಸೀತಾದೇವಿಯನ್ನು, ಯಃ- ಯಾವ ಪುರುಷನು, ಅಭಿಭಾಷೇತ - ಮಾತನಾಡಿಸುವನೋ, ಸಃ - ಅಂಥಾ ಪುರುಷನು, ಕಃ-ಯಾವನು ತಾನೆ, ತ್ಯಕ್ತ....ತ್ - ಬಿಡಲ್ಪಟ್ಟ ಪ್ರಾಣವುಳ್ಳವನು ಆಗದಿರುವನು. || ೨೧ || ರಾಕ್ಷಸೀನಾಂ - ರಕ್ಕಸಿಯರ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ರಾಕ್ಷಸೇಶ್ವರಃ - ರಕ್ಕಸರೊಡೆಯನಾದ, ರಾವಣಃ - ರಾವಣನು, ಕೋಪ....ಣಃ - ಕ್ರೋಧದಿಂದ ತಿರುಗಿಸಲ್ಪಟ್ಟ ಕಣ್ಣುಗಳುಳ್ಳವನಾಗಿ, ಹುತಾಗ್ನಿರಿವ -

---

ನೋಡಿದಲ್ಲಿ ಅದು ಸೀತೆಯ ರಕ್ಷಣಾರ್ಥವಾಗಿರಲೆಂದೇ ಅವನದನ್ನು ಮುರಿದುಹಾಕಿಲ್ಲವೆಂದು ತೋರುತ್ತದೆ. ಹಾಗಿಲ್ಲದಿದ್ದರೆ ಅದೊಂದು ವೃಕ್ಷವನ್ನು ಮುರಿಯುವುದಕ್ಕೆ ಅವನಿಗೆ ಆಯಾಸವೆತ್ತಣದು? ಅಷ್ಟೊಂದು ವೃಕ್ಷಗಳನ್ನು ಮುರಿದಿಕ್ಕಿದವನಿಗೆ ಅದೊಂದು ವೃಕ್ಷವನ್ನು ಮುರಿಯುವುದು ಮಹಾ ಕಾರ್ಯವಾಗುತ್ತಿದ್ದಿತೇ? ಇಷ್ಟುಮಾತ್ರವೇ ಅಲ್ಲವು. ಸೀತಾದೇವಿಯು ತಾನಾಗಿಯೇ ಯಾವ ಮರದ ಕೆಳಗೆ ಕುಳಿತಿರುವಳೋ, ಸುಂದರವಾದ ಪುಷ್ಪಗಳಿಂದಲೂ, ಚಿಗುರುಗಳಿಂದಲೂ ತುಂಬಿರುವ ಆ ಶಿಂಶುಪಾವೃಕ್ಷವನ್ನು ಅವನು ಮುರಿದಿರುವುದಿಲ್ಲವು. ಎಲೈ ರಾವಣಾಸುರನೇ! ಸೀತೆಯೊಡನೆ ಮಾತನಾಡಿದವನೂ, ಅಶೋಕವನವನ್ನು ಭಂಗಗೊಳಿಸಿದವನೂ, ಮಹಾ ಭಯಂಕರಾಕಾರನೂ ಆದ ಆ ವಾನರನನ್ನು ನೀನು ಕ್ರೂರವಾಗಿ ಶಿಕ್ಷಿಸಬೇಕು. ಎಲೈ ರಾಕ್ಷಸರಾಜನೇ! ಬದುಕಬೇಕೆಂಬಿಚ್ಛೆಯುಳ್ಳವನು, ನೀನು ಬಯುಸಿರುವ ಆ ಸೀತೆಯೊಡನೆ ಎಂದಿಗೂ ಮಾತನಾಡನು. ಈ ವಾನರನಾದರೋ ಆಕೆಯೊಡನೆ ಸಂಭಾಷಿಸಿರುವನು. ಆದುದರಿಂದ ಇವನಿನ್ನು ಎಷ್ಟುಮಾತ್ರಕ್ಕೂ ಬದುಕಲಾರನು" ಎಂದು ಹೇಳಿದರು. || ೧೬—೨೧ || ಆಗ ರಾಕ್ಷಸೇಶ್ವರನಾದ ರಾವಣಾಸುರನು ಮಹಾ ಕೋಪವನ್ನು ಹೊಂದಿ ಕಣ್ಣುಗಳನ್ನು ಗಿರಗಿರನೆ ತಿರುಗಿಸುತ್ತ, ಹಲ್ಲುಗಳನ್ನು

ನೇತ್ರಾಭ್ಯಾಂ ಪ್ರಾಪತನ್ನಾಸ್ರಬಿಂದವಃ । ದೀಪ್ತಾಭ್ಯಾಮಿವ ದೀಪಾಭ್ಯಾಂ ಸಾರ್ಚಿಷಃ ಸ್ನೇಹಬಿಂದವಃ ॥ ೨೩ ॥ ಆತ್ಮನಸ್ಸದೃಶಾನ್ ಶೂರಾ ನ್ಕಿಂಕರಾನ್ನಾಮರಾಕ್ಷಸಾನ್ । ವ್ಯಾದಿದೇಶ ಮಹಾತೇಜಾ ನಿಗ್ರಹಾರ್ಥಂ ಹನೂಮತಃ ॥ ೨೪ ॥ ತೇಷಾಮಶೀತಿ ಸಾಹಸ್ರಂ ಕಿಂಕರಾಣಾಂ ತರಸ್ವಿನಾಂ । ನಿರ್ಯಯು ರ್ಭವನಾತ್ತಸ್ಮಾತ್ಕೂಟಮುದ್ಗರ ಪಾಣಯಃ ॥ ೨೫ ॥ ಮಹೋದರಾ ಮಹಾದಂಷ್ಟ್ರಾ ಘೋರರೂಪಾ ಮಹಾಬಲಾಃ । ಯುದ್ಧಾಭಿಮನಸಸ್ಸರ್ವೇ ಹನೂಮದ್ಗ್ರಹಣೋನ್ಮುಖಾಃ ॥ ೨೬ ॥ ತೇ ಕಪೀಂದ್ರಂ

ಪ್ರಜ್ವಲಿಸುತ್ತಿರುವ ಅಗ್ನಿಯಂತೆ, ಜಜ್ವಾಲ - ಉರಿಯುತ್ತಿದ್ದನು. ॥೨೨॥ ಕೃದ್ಧಸ್ಯ - ಕೋಪಗೊಂಡ, ತಸ್ಯ - ಆ ರಾವಣನ, ನೇತ್ರಾಭ್ಯಾಂ - ಕಣ್ಣುಗಳದೆಶೆಯಿಂದ, ಅಸ್ರಬಿಂದವಃ - ರಕ್ತಬಿಂದುಗಳು, ದೀಪ್ತಾಭ್ಯಾಂ - ಉರಿಯುತ್ತಿರುವ, ದೀಪಾಭ್ಯಾಂ - ದೀಪಗಳದೆಶೆಯಿಂದ, ಸಾರ್ಚಿಷಃ - ಜ್ವಾಲೆಗಳಿಂ ದೊಡಗೂಡಿದ, ಸ್ನೇಹಬಿಂದವಇವ - ಎಣ್ಣೆಯಬೊಟ್ಟುಗಳಂತೆ, ಪ್ರಾಪತನ್ - ಬಿದ್ದವು. ॥ ೨೩ ॥ ಮಹಾತೇಜಾಃ - ಮಹಾ ಪರಾಕ್ರಮಿಯಾದ ರಾವಣನು, ಆತ್ಮನಃ - ತನಗೆ, ಸದೃಶಾನ್ - ಸಮಾನ ರಾದ, ಶೂರಾನ್ - ಶೌರ್ಯವಂತರಾದ, ಕಿಂಕರಾನ್ - ಕಿಂಕರರೆಂದು ಪ್ರಸಿದ್ಧರಾದ, ರಾಕ್ಷಸಾನ್ - ರಕ್ಕಸರನ್ನು, ಹನೂಮತಃ-ಆಂಜನೇಯನನ್ನು, ನಿಗ್ರಹಾರ್ಥಂ-ಶಿಕ್ಷಿಸುವದಕ್ಕೋಸ್ಕರ, ವ್ಯಾದಿದೇಶ-ಆಜ್ಞಾಪಿಸಿದನು, ತರಸ್ವಿನಾಂ - ಬಲಿಷ್ಠರಾದ, ತೇಷಾಂಕಿಂಕರಾಣಾಂ - ಆ ಕಿಂಕರರೊಳಗೆ, ಅಶೀತಿ ಸಾಹಸ್ರಂ-ಎಂಬತ್ತುಸಾವಿರರಾಕ್ಷಸರನ್ನುಕುರಿತು, ವ್ಯಾದಿದೇಶ-ಆಜ್ಞಾಪಿಸಿದನು ॥೨೪॥ ಕೂಟ....ಯಃ- ಚಮ್ಮಟಿಗೆ, ಕೊಡಲಿಗಳೇ ಹಸ್ತಗಳಲ್ಲಿ ಉಳ್ಳ, ಮಹೋದರಾಃ-ಬಲು ಬೊಜ್ಜೆಯುಳ್ಳ, ಮಹಾಕಾಯಾಃ- ದೊಡ್ಡ ದೇಹವುಳ್ಳ, ಮಹಾದಂಷ್ಟ್ರಾಃ - ದೊಡ್ಡದಾದ ಕೋರೆಹಲ್ಲುಗಳುಳ್ಳ, ಘೋರರೂಪಾಃ - ಭಯಂ ಕರ ರೂಪಿಗಳಾದ, ಮಹಾಬಲಾಃ - ಬಹು ಬಲಿಷ್ಠರಾದ, ಯುದ್ಧಾಭಿಮನಸಃ - ಆಹವದಲ್ಲಿ ಆಸಕ್ತ ರಾದ, ಸರ್ವೇ - ಎಲ್ಲರು, ಹನೂ....ಖಾಃ - ಆಂಜನೇಯನನ್ನು ಹಿಡಿಯುವಿಕೆಯಲ್ಲಿ ಉದ್ಯುಕ್ತರಾಗಿ,

---

ಕಟಕಟನೆ ಕಡಿಯುತ್ತ, ಪ್ರಳಯಕಾಲದ ಅಗ್ನಿಯಂತೆ ಬಹಳವಾಗಿ ರೇಗಿಬಿದ್ದನು. ಆಗ ಉರಿಯುತ್ತಿರುವ ದೀಪದಿಂದ ಎಣ್ಣೆಯು ತೊಟ್ಟಿಕ್ಕಿದಂತೆ ಮಹಾ ಕೋಪೋದ್ದೀಪಿತನಾದ ಆ ರಾವಣಾಸುರನ ನೇತ್ರಗಳಿಂದ ಬೆಂಕಿಯ ಕಿಡಿಗಳುದಿರಿದವು. ಆಗ ಮಹಾ ಪರಾಕ್ರಮ ಶಾಲಿಯಾದ ಆ ರಾವಣನು ಆಗಲೇ ಬಲದಲ್ಲಿ ತನಗೆ ಸಮಾನರಾಗಿಯೂ, ಯುದ್ಧವೀರರಾ ಗಿಯೂ ಇರುವ ಕಿಂಕರರೆಂಬ ರಾಕ್ಷಸರನ್ನು ಆಂಜನೇಯನ ನಿಗ್ರಹಕ್ಕಾಗಿ ಅಟ್ಟಿದನು. ಕೂಡಲೇ ಮಹಾ ಬಲಶಾಲಿಗಳಾದ ಐವತ್ತುಸಾವಿರಮಂದಿ ಕಿಂಕರರು ಅಶೋಕವನದ ಕಡೆಗೆ ಹೊರ ಟರು. ಮಹಾ ಪರಾಕ್ರಮಶಾಲಿಗಳಾದ ಅವರೆಲ್ಲರೂ, ಮಹಾ ಭಯಂಕರಾಕಾರಗಳುಳ್ಳವ ರಾಗಿಯೂ, ಮಹೋದರರಾಗಿಯೂ ಇದ್ದರು. ಅವರೆಲ್ಲರೂ ಮಹಾ ದಂಷ್ಟ್ರಗಳುಳ್ಳವರು. ಎಲ್ಲರೂ ಯುದ್ಧ ಮಾಡುವುದರಲ್ಲಿ ಆಸೆಯುಳ್ಳವರು. ಮಹಾ ಬಲಿಷ್ಠರು. ಶೂಲ ಮುದ್ಗರ ಗಳೇ ಮೊದಲಾದ ಆಯುಧಗಳನ್ನು ಧರಿಸಿದ್ದ ಅವರೆಲ್ಲರೂ ಹನುಮಂತನನ್ನು ಹಿಡಿಯ ಲೋಸುಗ ಮಹಾ ಕೋಪದಿಂದ ಹೊರಟರು. ॥ ೨೨ ೨೫ ॥ ಕಿಂಕರರೆಂಬ ಆ ರಾಕ್ಷಸ ವೀರರೆಲ್ಲರೂ ಮಹಾ ವೇಗದಿಂದೈತಂದು ಕಾಳ್ಗಿಚ್ಚಿನ ಮೇಲೆ ಮಿಡತೆ ಹುಳುಗಳು ಹೋಗು ವಂತೆ, ಅಶೋಕವನದ ಬಹಿರ್ದ್ವಾರದಲ್ಲಿ ಯುದ್ಧಸನ್ನದ್ಧನಾಗಿ ಕುಳಿತಿರುವ ವಾನರಶ್ರೇಷ್ಠ

ಸಮಾಸಾದ್ಯ ತೋರಣಸ್ಥಮುವಸ್ಥಿತಂ । ಅಭಿಪೇತುರ್ಮಹಾವೇಗಾಃ ಪತಂಗಾ ಇವ ಪಾವಕಂ ॥ ೨೭ ॥ ತೇ ಗದಾಭಿರ್ವಿಚಿತ್ರಾಭಿಃ ಪರಿಘೈಃ ಕಾಂಚನಾಂಗದೈಃ । ಆಜಘ್ನುರ್ವಾನರಶ್ರೇಷ್ಠಂ ಶರೈಶ್ಚಾದಿತ್ಯಸನ್ನಿಭೈಃ ॥ ೨೮ ॥ ಮುದ್ಗರೈಃ ಪಟ್ಟಿಸೈಶ್ಶೂಲೈಃ ಪ್ರಾಸತೋಮರಶಕ್ತಿಭಿಃ । ಪರಿವಾರ್ಯ ಹನೂಮಂತಂ ಸಹಸಾ ತಸ್ಥುರಗ್ರತಃ॥೨೯॥ ಹನೂಮಾನಪಿ ತೇಜಸ್ವೀ ಶ್ರೀಮಾನ್ಪರ್ವತಸನ್ನಿಭಃ । ಕ್ಷಿತಾವಾವಿಧ್ಯ ಲಾಂಗೂಲಂ ನನಾದಚ ಮಹಾಸ್ವನಂ ॥೩೦॥ ಸ ಭೂತ್ವಾ ಸು ಮಹಾಕಾಯೋ ಹನೂಮಾನ್ಮಾರುತಾತ್ಮಜಃ । ಧೃಷ್ಟಮಾಸ್ಫೋಟಯಾಮಾಸ ಲಂಕಾಂ ಶಬ್ದೇನ ಪೂರಯನ್ ॥ ೩೧ ॥

ತಸ್ಮಾದ್ಭವನಾತ್ - ಆ ರಾವಣನ ಮನೆಯಿಂದ, ನಿರ್ಯಯುಃ - ಹೊರಟರು. ॥ ೨೫-೨೬ ॥ ಮಹಾವೇಗಾಃ - ಬಹುವೇಗವುಳ್ಳ, ತೇ - ಆ ರಕ್ಕಸರು, ತೋರಣಸ್ಥಂ ಉದ್ಯಾನವನದ ಬಾಗಿಲಮೇಲೆ, ಅವಸ್ಥಿತಂ - ಯುದ್ಧಸನ್ನದ್ಧನಾಗಿ ಕುಳಿತಿರುವ, ಕಪೀಂದ್ರಂ - ವಾನರಶ್ರೇಷ್ಠನನ್ನು, ಸಮಾಸಾದ್ಯ - ಹೊಂದಿ, ಪಾವಕಂ - ಅಗ್ನಿಯನ್ನು, ಪತಂಗಾಇವ - ಪತಂಗದ ಹುಳುಗಳಂತೆ, ಅಭಿಪೇತುಃ - ಮೇಲೆ ಬಿದ್ದರು. ॥ ೨೭ ॥ ತೇ - ಆ ಕಿಂಕರರು, ವಿಚಿತ್ರಾಭಿಃ - ನಾನಾಬಣ್ಣಗಳುಳ್ಳ, ಗದಾಭಿಃ - ಗದಾಯುಧಗಳಿಂದಲೂ, ಕಾಂಚನಾಂಗದೈಃ - ಭಂಗಾರದ ಕಟ್ಟುಗಳುಳ್ಳ, ಪರಿಘೈಃ - ದೊಣ್ಣೆಗಳಿಂದಲೂ, ಆದಿತ್ಯಸನ್ನಿಭೈಃ - ಸೂರ್ಯಸದೃಶಗಳಾದ, ಶರೈಶ್ಚ - ಬಾಣಗಳಿಂದಲೂ ಸಹ, ವಾನರಶ್ರೇಷ್ಠಂ - ಕಪಿವರನನ್ನು, ಆಜಘ್ನುಃ - ಹೊಡೆದರು. ॥ ೨೮ ॥ ಮುದ್ಗರೈಃ - ಕಬ್ಬಿಣದ ಹಾರೆಗಳಿಂದಲೂ, ಪಟ್ಟಿಸೈಃ - ಕಬ್ಬಿಣದ ದೊಣ್ಣೆಗಳಿಂದಲೂ, ಶೂಲೈಃ - ಶೂಲಾಯುಧಗಳಿಂದಲೂ, ಪ್ರಾಸ....ಭಿಃ - ಈಟೀಕೋಲುಗಳಿಂದಲೂ, ಮರದಿಂದ ಮಾಡಿದ ಆಯುಧ ವಿಶೇಷದಿಂದಲೂ, ಅಸ್ತ್ರವಿಶೇಷಗಳಿಂದಲೂ, (ಕೂಡಿದವರಾಗಿ) ಹನೂಮಂತಂ - ಆಂಜನೇಯನನ್ನು, ಪರಿವಾರ್ಯ - ಮುತ್ತಿ, ಸಹಸಾ - ಬೇಗ, ಅಗ್ರತಃ - ಮುಂದೆ, ತಸ್ಥುಃ - ನಿಂತರು. ॥ ೨೯ ॥ ಶ್ರೀಮಾನ್ - (ಗೋ) ತಾತ್ಕಾಲಿಕ ಹರ್ಷದಿಂದ ಹುಟ್ಟಿದ ಕಾಂತಿಯುಕ್ತನಾದ, ತೇಜಸ್ವೀ - ಧೈರ್ಯಸಂಪನ್ನನಾದ, ಹನುಮಾನಪಿ - ಹನುಮಂತನೂ ಕೂಡ, ಪರ್ವತಸನ್ನಿಭಃ - ಗಿರಿ ಸದೃಶನಾದವನಾಗಿ, ಲಾಂಗೂಲಂ - ಬಾಲವನ್ನು, ಕ್ಷಿತೌ - ನೆಲದಲ್ಲಿ, ಆವಿಧ್ಯ - ಅಪ್ಪಳಿಸಿ, ಮಹಾಸ್ವನಂ - ಮಹಾ ಧ್ವನಿಯನ್ನು, ನನಾದ - ಮಾಡಿದನು. ॥ ೩೦ ॥ ಮಾರುತಾತ್ಮಜಃ - ವಾಯುಪುತ್ರನಾದ, ಸಹನುಮಾನ್ - ಆ ಆಂಜನೇಯನು, ಸುಮಹಾಕಾಯೋಭೂತ್ವಾ - ಮಹಾ ದೇಹವುಳ್ಳವನಾಗಿ, ಲಂಕಾಂ-ಲಂಕಾನಗರವನ್ನು, ಶಬ್ದೇನ-ಧ್ವನಿಯಿಂದ, ಪೂರಯನ್ ತುಂಬಿಸುತ್ತಿರುವನಾಗಿ, ಧೃಷ್ಟಂ - ಧೈರ್ಯವಾಗಿ, ಆಸ್ಫೋಟಯಾಮಾಸ - ಅಟ್ಟಹಾಸಮಾಡಿದನು. ॥ ೩೧ ॥ ಸಾನು

ನಾದ ಆಂಜನೇಯನನ್ನಟ್ಟಿ ಬಂದರು. ಆ ಬಳಿಕಲಾ ಕಿಂಕರರು ನಾನಾವಿಧಗಳಾದ ಆಯುಧಗಳಿಂದಲೂ, ಬಂಗಾರದ ಬಾಹುಪುರಿಗಳೊಡನೆಯೂ ಪ್ರಕಾಶಿಸುತ್ತಿರುವರಾಗಿ, ಕಬ್ಬಿಣದ ಒನಕೆಗಳನ್ನೂ, ಅಡ್ಡಗತ್ತಿಗಳನ್ನೂ, ಶೂಲಗಳನ್ನೂ, ಈಟಿ, ಭಲ್ಲೆಗಳನ್ನೂ ಧರಿಸಿದವರಾಗಿ ಅತಿ ಶೀಘ್ರವಾಗಿ ಆ ಹನುಮಂತನನ್ನು ಸುತ್ತುಗಟ್ಟಿಕೊಂಡು ಅವನನ್ನು ಪ್ರಹರಿಸತೊಡಗಿದರು. ಪರ್ವತದಂತೆ ಮಹಾಕಾಯವುಳ್ಳ ತೇಜಸ್ವಿಯಾದ ಹನುಮಂತನಾದರೋ, ಅವರಾರನ್ನೂ ಲಕ್ಷಿಸದೆ, ತನ್ನ ಬಾಲವನ್ನು ನೆಲಕ್ಕೆ ಅಪ್ಪಳಿಸಿ ಮಹಾ ಭಯಂಕರವಾಗಿ ಸಿಂಹನಾದವನ್ನು ಮಾಡಿದನು. ॥ ೨೬-೩೦ ॥ ಅಲ್ಲದೆ ವಾಯುಸೂನುವಾದ ಆ ಆಂಜನೇಯನು ಪರ್ವತಸಮಾನವಾಗಿ ತನ್ನ ಮೈಯನ್ನು ಬೆಳಿಸಿದವನಾಗಿ ಮಹಾದ್ಭುತವಾಗಿ ಭುಜಾಸ್ಫೋ

ತಸ್ಯಾಸ್ಫೋಟಿತಶಬ್ದೇನ ಮಹತಾ ಸಾನುನಾದಿನಾ । ಪೇತುರ್ವಿಹಂಗಾ ಗಗನಾ ದುಚ್ಚೈಶ್ಚೇದಮಘೋಷಯತ್ ॥ ೩೨ ॥ " ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ । ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೩೩ ॥ ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಽಕ್ಲಿಷ್ಟಕರ್ಮಣಃ । ಹನುಮಾನ್ ಶತ್ರುಸೈನ್ಯಾನಾಂ ನಿಹಂತಾ ಮಾರುತಾತ್ಮಜಃ ॥ ೩೪ ॥ ನ ರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ । ಶಿಲಾಭಿಸ್ತು ಪ್ರಹರತಃ ಪಾದಪೈಶ್ಚ ಸಹಸ್ರಶಃ ॥ ೩೫ ॥

ನಾದಿನಾ - ಪ್ರತಿಧ್ವನಿಯಿಂದೊಡಗೂಡಿದ, ಮಹತಾ - ಮಹತ್ತರವಾದ, ತಸ್ಯ - ಆ ಮಾರುತಿಯ, ಆಸ್ಫೋಟಿತಶಬ್ದೇನ - ಅಟ್ಟಹಾಸದಿಂದ, ವಿಹಂಗಾಃ - ಹಕ್ಕಿಗಳು, ಗಗನಾತ್ - ಅಂತರಿಕ್ಷದದೆಶೆಯಿಂದ, ಪೇತುಃ - ನೆಲಕ್ಕೆ ಬಿದ್ದವು, ಇದಂ - ಈ ಮುಂದೆ ಹೇಳುವ ವಚನವನ್ನು, ಉಚ್ಚೈಃ - ಘಟ್ಟಿಯಾಗಿ, ಅಘೋಷಯತ್-ಕೂಗಿ ಹೇಳಿದನು ॥ ೩೨ ॥ ಅತಿಬಲಃ-ಅತಿಪರಾಕ್ರಮಿಯಾದ, ರಾಮಃ-ಶ್ರೀರಾಮನು, ಜಯತಿ - ಸರ್ವೋತ್ಕೃಷ್ಟನಾಗಿದ್ದಾನೆ, ಮಹಾಬಲಃ - ಬಹು ಬಲಿಷ್ಠನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಜಯತಿ - ಜಯಶಾಲಿಯಾಗಿದ್ದಾನೆ, ರಾಘವೇಣ - ಶ್ರೀರಾಮನಿಂದ, ಅಭಿಪಾಲಿತಃ - ಪರಿಪಾಲಿತನಾದ, ರಾಜಾ - ನಮ್ಮೊಡೆಯನಾದ, ಸುಗ್ರೀವಃ - ಸುಗ್ರೀವನು, ಜಯತಿ - ಉಚ್ಛ್ರಯವಾಗಿದ್ದಾನೆ, ಅಕ್ಲಿ....ಣಃ - ಬಳಲಿಕೆಯಿಲ್ಲದೆ ಕಾರ್ಯಗಳನ್ನು ಮಾಡುತ್ತಿರುವ, ಕೋಸಲೇಂದ್ರಸ್ಯ - ಕೋಸಲ ದೇಶಾಧಿಪತಿಯಾದ, ರಾಮಸ್ಯ - ಶ್ರೀರಾಮನ, ದಾಸಃ - ದೂತನಾದ, ಹನುಮಾನ್-ಹನುಮಂತನೆಂಬ, ಮಾರುತಾತ್ಮಜಃ-ವಾಯುಪುತ್ರನಾದ, ಅಹಂ-ನಾನು, ಶತ್ರೂಣಾಂ-ಹಗೆಯರಿಗೆ, ನಿಹಂತಾ - ಸಂಹಾರಕನು, ಶಿಲಾಭಿಸ್ತು - ಪಾಷಾಣಗಳಿಂದಲೂ, ಪಾದಪೈಶ್ಚ - ಗಿಡಗಳಿಂದಲೂ, ಸಹಸ್ರಶಃ - ಅನೇಕಬಗೆಯಾಗಿ, ಪ್ರಹರತಃ - ಹೊಡಿಯುತ್ತಿರುವ, ಮೇ - ನನಗೆ, ಯುದ್ಧೇ - ಕಾಳಗದಲ್ಲಿ, ರಾವಣಸಹಸ್ರಂ - ಸಹಸ್ರರಾವಣರು, ಪ್ರತಿಬಲಂ - ಪ್ರತಿಭಟರು, ನಭವೇತ್ -

ಟನವನ್ನು ಮಾಡಿದನು. ಆ ಆ ಸ್ಫೋಟನ ಶಬ್ದದಿಂದ ಲಂಕಾನಗರವೆಲ್ಲವೂ ತುಂಬಿ ಹೋಯಿತು. ದಶದಿಶೆಗಳೂ ಆ ಧ್ವನಿಯಿಂದ ತುಂಬಿತು. ಆಗ ಆಕಾಶದಲ್ಲಿ ಸಂಚರಿಸುತ್ತಿದ್ದ ಪಕ್ಷಿಗಳೆಲ್ಲವೂ ಆ ಧ್ವನಿಯಿಂದ ಬೆಚ್ಚನೆ ಬೆದರಿ ಗಿರಗಿರನೆ ಸುತ್ತುತ್ತ ಭೂಮಿಗೆ ಬಿದ್ದವು. ಆಗಲಾ ಹನುಮಂತನು ಗಟ್ಟಿಯಾಗಿ ಕೂಗಿ, " ಅತಿ ಬಲನಾದ ಶ್ರೀರಾಮನಿಗೆ ಜಯವಾಗಲಿ. ಮಹಾ ಬಲಾಢ್ಯನಾದ ಲಕ್ಷ್ಮಣಸ್ವಾಮಿಗೆ ಜಯವು. ಶ್ರೀರಾಮನಿಂದ ಪಾಲಿಸಲ್ಪಟ್ಟ ನಮ್ಮ ಸುಗ್ರೀವರಾಜನಿಗೆ ಜಯವು. ದುಸ್ಸಾಧ್ಯವಾದ ಕಾರ್ಯಗಳನ್ನೂ ಸುಲಭವಾಗಿ ಸಾಧಿಸಬಲ್ಲ ಕೋಸಲೇಂದ್ರನಾದ ಆ ಶ್ರೀರಾಮಮೂರ್ತಿಗೆ ನಾನು ದಾಸನು. ನನ್ನ ಹೆಸರು ಹನುಮಂತನೆಂದು. ನಾನು ವಾಯುದೇವನ ಔರಸಪುತ್ರನು ; ನಾನು ಶತ್ರುಸೇನೆಗಳನ್ನು ಮರ್ದಿಸುವ ಧೀರನು. ಒಬ್ಬ ರಾವಣನೇನು ? ಸಹಸ್ರ ಮಂದಿ ರಾವಣರು ಯುದ್ಧಕ್ಕೆ ಬಂದು ಇದಿರಿಸಿ ನಿಂತರೂ ಅವರು ನನ್ನಬಲಕ್ಕೆ ಸಮಾನರಾಗಲಾರರು. ಇದೋ ! ನಾನು ಕಲ್ಲುಮರಗಳಿಂದಲೇ ಪ್ರಹರಿಸುತ್ತ ಸಹಸ್ರಾರು ಮಂದಿ ಶತ್ರುಗಳನ್ನಾದರೂ ಒಂದೇ ಸಲ ಓಡಿಸಬಲ್ಲೆನು. ಈಗಲೀರಕ್ಕಸರು ನೋಡುತ್ತಿರುವಂತೆಯೇ ನಾನು ಈ ಲಂಕಾಪಟ್ಟಣವೆಲ್ಲವನ್ನೂ ಧ್ವಂಸಮಾಡಿ, ನಮ್ಮ ಪ್ರಭುವಾದ ಶ್ರೀರಾಮನ ಭಾರ್ಯೆಯಾದ ಮಿಥಿಲ

ಅರ್ದಯಿತ್ವಾ ಪುರೀಂ ಲಂಕಾಮಭಿವಾದ್ಯಚ ಮೈಥಿಲೀಂ । ಸಮೃದ್ಧಾರ್ಥೋಗಮಿಷ್ಯಾಮಿ ಮಿಷತಾಂ ಸರ್ವರಕ್ಷಸಾಂ ॥ ೩೬ ॥ ತಸ್ಯ ಸನ್ನಾದಶಬ್ದೇನ ತೇಽಭವನ್ಭಯಶಂಕಿತಾಃ । ದದೃಶುಶ್ಚ ಹನೂಮಂತಂ ಸಂಧ್ಯಾಮೇಘಮಿವೋನ್ನತಂ ॥ ೩೭ ॥ ಸ್ವಾಮಿಸಂದೇಶನಿಶ್ಶಂಕಾಸ್ತತಸ್ತೇ ರಾಕ್ಷಸಾಃ ಕಪಿಂ । ಚಿತ್ರೈಃ ಪ್ರಹರಣೈರ್ಭೀಮೈ ರಭಿಪೇತುಸ್ತತಸ್ತತಃ ॥ ೩೮ ॥ ಸತೈಃ ಪರಿವೃತಶ್ಶೂರೈಸ್ಸರ್ವತಸ್ಸುಮಹಾಬಲಃ । ಆಸಸಾದಾಯಸಂ ಭೀಮಂ ಪರಿಘಂ ತೋರಣಾಶ್ರಿತಂ । ಸತಂ ಪರಿಘಮಾದಾಯ ಜಘಾನ

ಆಗಲಾರರು, ಸರ್ವರಕ್ಷಸಾಂ - ರಕ್ಕಸರೆಲ್ಲರೂ, ಮಿಷತಾಂ - ನೋಡುತ್ತಿರುವಾಗಲೇ, ಲಂಕಾಪುರೀಂ - ಲಂಕಾಪಟ್ಟಣವನ್ನು, ಅರ್ದಯಿತ್ವಾ - ಧ್ವಂಸಮಾಡಿ, ಮೈಥಿಲೀಂ - ಸೀತಾದೇವಿಯನ್ನು, ಅಭಿವಾದ್ಯ - ವಂದಿಸಿ, ಸಮೃದ್ಧಾರ್ಥಃ - ಸಂಪೂರ್ಣವಾದ ಪ್ರಯೋಜನವುಳ್ಳವನಾಗಿ, ಗಮಿಷ್ಯಾಮಿ - ಹೋಗುವೆನು. ॥ ೩೩-೩೬ ॥ ತಸ್ಯ - ಆ ಆಂಜನೇಯನ, ಸನ್ನಾದಶಬ್ದೇನ - ಕೈಹೊಡತದಿಂದುಂಟಾದ ಶಬ್ದದಿಂದ, ತೇ - ಆ ಕಿಂಕರರು, ಭಯಶಂಕಿತಾಃ - ಅಂಜಿದವರು, ಅಭವನ್ - ಆದರು, ಉನ್ನತಂ - ಉದ್ದವಾಗಿ ಬೆಳೆಯುತ್ತಿರುವ, ಹನೂಮಂತಂ - ಆಂಜನೇಯನನ್ನು, ಸಂಧ್ಯಾಮೇಘಮಿವ - ಸಂಧ್ಯಾಕಾಲದಲ್ಲಿನ ಮೋಡದಂತೆ, ದದೃಶುಶ್ಚ - ನೋಡಲೂ ನೋಡಿದರು. ॥ ೩೭ ॥ ತತಃ - ಬಳಿಕ, ಸ್ವಾಮಿ....ಕಾಃ - ಒಡೆಯನಾಜ್ಞೆಯಿಂದ ಹೆದರದಿರುವ, ತೇರಾಕ್ಷಸಾಃ - ಆ ರಾಕ್ಷಸರು, ಚಿತ್ರೈಃ - ನಾನಾಬಗೆಗಳಾದ, ಭೀಮೈಃ - ಭಯಂಕರಗಳಾದ, ಪ್ರಹರಣೈಃ - ಆಯುಧಗಳಿಂದ, ಕಪಿಂ - ವಾನರನನ್ನು, ತತಸ್ತತಃ - ಅಲ್ಲಲ್ಲಿ, ಅಭಿಪೇತುಃ - ಹೊಡೆದರು. ॥ ೩೮ ॥ ಶೂರೈಃ - ವೀರರಾದ, ತೈಃ - ಆ ರಕ್ಕಸರಿಂದ, ಸರ್ವತಃ - ಎಲ್ಲಾಕಡೆಯಲ್ಲಿಯೂ, ಪರಿವೃತಃ - ಸುತ್ತುಕೊಳ್ಳಲ್ಪಟ್ಟ, ಸುಮಹಾಬಲಃ - ಬಹಳ ಬಲಿಷ್ಠನಾದ, ಸಃ - ಆ ಆಂಜನೇಯನು, ಆಯಸಂ - ಕಬ್ಬಿಣದ, ತೋರಣಾಶ್ರಿತಂ - ಹೊರಬಾಗಿಲಲ್ಲಿರುವ, ಭೀಮಂ - ಭಯಂಕರವಾದ, ಪರಿಘಂ - ಲಾಳುಂಡಿಗೆಯನ್ನು, ಆಸಸಾದ - ಹೊಂದಿದನು, ಸಃ - ಆ ಆಂಜನೇಯನು, ತಂಪರಿಘಂ - ಆ ಅಗಳೀಮರವನ್ನು, ಆದಾಯ - ತೆಗೆದುಕೊಂಡು, ರಜನೀಚರಾನ್ - ರಕ್ಕಸರನ್ನು, ಜಘಾನ - ಹೊಡೆದನು. ॥ ೩೯ ॥ ಪನ್ನಗಂ - ಸರ್ಪವನ್ನು, ಆದಾಯ - ಗ್ರಹಿಸಿದ, ವಿನತಾ

ರಾಜತನೂಜೆಗೆ ಮಣಿದು, ಸಿದ್ಧಸಂಕಲ್ಪನಾಗಿಯೂ, ನೆರವೇರಿದ ಕಾರ್ಯವುಳ್ಳವನಾಗಿಯೂ ಶ್ರೀರಾಮನ ಬಳಿಗೈದುವೆನು. ನೋಡಿರಿ" ಎಂದು ಹೇಳಿದನು. ॥ ೩೧—೩೬ ॥ ಆಗ ಕಿಂಕರರೆಂಬ ಆ ರಾಕ್ಷಸರೆಲ್ಲರೂ ಆಂಜನೇಯನ ಆ ಸಿಂಹನಾದವನ್ನು ಕೇಳಿ, ಬಹಳವಾಗಿ ಭಯಪಟ್ಟು, ಸಂಧ್ಯಾಕಾಲದ ಮೇಘದಂತೆ ಕಂಗೊಳಿಸುತ್ತಿದ್ದ ಆ ಆಂಜನೇಯನನ್ನೇ ನೆಟ್ಟನೆ ನೋಡುತ್ತಿದ್ದರು. ಆ ರಾಕ್ಷಸರು ಮಹಾ ಭಯಭ್ರಾಂತರಾಗಿ, ಆಂಜನೇಯನೊಡನೆ ಯುದ್ಧ ಮಾಡಲು ಹಿಂಜರಿದರಾದರೂ ತಮ್ಮ ಪ್ರಭುವಿನ ಅಪ್ಪಣೆಯನ್ನು ಮೀರಲು ಹೆದರಿ, ನಾನಾವಿಧಗಳಾದ ಭಯಂಕರಾಯುಧಗಳಿಂದ ಆ ವಾನರವೀರನನ್ನು ಪ್ರಹರಿಸಿದರು. ಮಹಾ ಬಲಾಢ್ಯನಾದ ಹನುಮಂತನಾದರೋ ಆ ಕಿಂಕರರು ತನ್ನನ್ನು ಮುತ್ತಿ ಪ್ರಹರಿಸುತ್ತಿರುವುದನ್ನು ಕಂಡು ಮಹಾ ಕುಪಿತನಾಗಿ, ಆ ಅಶೋಕವನದ ಹೊರಬಾಗಿಲಿನಲ್ಲಿದ್ದ ಮಹಾ ಭಯಂಕರವಾದ ಕಬ್ಬಿಣದ ಅಗುಳಿಯನ್ನೇ ಕೈಗೆ ತೆಗೆದುಕೊಂಡು ಅದರಿಂದಲೇ ಆ ರಾಕ್ಷಸರೆಲ್ಲರನ್ನೂ ಪ್ರಹರಿಸುತ್ತಿದ್ದನು. ಇಷ್ಟುಮಾತ್ರವಲ್ಲದೆ ಮಹಾ ಪರಾಕ್ರಮಶಾಲಿ

ರಜನೀಚರಾನ್ ॥ ೩೯ ॥ ಸಪನ್ನಗಮಿವಾದಾಯ ಸ್ಫುರಂತಂ ವಿನತಾಸುತಃ । ವಿಚ
ಚಾರಾಂಬರೇ ವೀರಃ ಪರಿಗೃಹ್ಯ ಚ ಮಾರುತಿಃ ॥ ೪೦ ॥ ಸಹತ್ವಾ ರಾಕ್ಷಸಾನ್ವೀರಾ
ನ್ಕಿಂಕರಾನ್ಮಾರುತಾತ್ಮಜಃ । ಯುದ್ಧಕಾಂಕ್ಷೀ ಪುನರ್ವೀರಸ್ತೋರಣಂ ಸಮುಪಾಶ್ರಿತಃ
॥ ೪೧ ॥ ತತಸ್ತಸ್ಮಾದ್ಭಯಾನ್ಮುಕ್ತಾಃ ಕತಿಚಿತ್ತತ್ರ ರಾಕ್ಷಸಾಃ । ನಿಹತಾನ್ಕಿಂಕರಾ
ನ್ಸರ್ವಾನ್ರಾವಣಾಯ ನ್ಯವೇದಯನ್ ॥ ೪೨ ॥

ಸರಾಕ್ಷಸಾನಾಂ ನಿಹತಂ ಮಹದ್ಬಲಂ ನಿಶಮ್ಯ ರಾಜಾ ಪರಿವೃತ್ತಲೋಚನಃ ।
ಸಮಾದಿದೇಶಾಪ್ರತಿಮಂ ಪರಾಕ್ರಮೇ ಪ್ರಹಸ್ತಪುತ್ರಂ ಸಮರೇ ಸುದುರ್ಜಯಂ ॥೪೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಚತ್ವಾರಿಂಶಸ್ಸರ್ಗಃ

ಸುತಇವ - ಗರುಡನಂತೆ, ವೀರಃ - ಶೂರನಾದ, ಸಮಾರುತಿಃ - ಆ ವಾಯುನಂದನನು, ಸ್ಫುರಂತಂ - ಹೊಳೆಯುತ್ತಿರುವ ಪರಿಘಾಯುಧವನ್ನು, ಪರಿಗೃಹ್ಯ - ತೆಗೆದುಕೊಂಡು, ಅಂಬರೇ - ಅಂತರಿಕ್ಷದಲ್ಲಿ, ವಿಚಚಾರ-ಸಂಚರಿಸಿದನು. ‖ ೪೦ ‖ ವೀರಃ-ಶೂರನಾದ, ಸಮಾರುತಾತ್ಮಜಃ-ಆ ವಾಯುಪುತ್ರನು, ವೀರಾನ್ - ಶೂರರಾದ, ಕಿಂಕರಾನ್ - ಕಿಂಕರರೆಂಬ, ರಾಕ್ಷಸಾನ್ - ರಕ್ಕಸರನ್ನು, ಹತ್ವಾ - ಸಂಹರಿಸಿ, ಪುನಃ - ಮತ್ತು, ಯುದ್ಧಕಾಂಕ್ಷೀ - ಯುದ್ಧಾಪೇಕ್ಷೆಯುಳ್ಳವನಾಗಿ, ತೋರಣಂ - ಹೊರಬಾಗಿಲನ್ನು, ಸಮುಪಾಶ್ರಿತಃ - ಹೊಂದಿದನು ‖ ೪೧ ‖ ತತಃ - ಬಳಿಕ, ತಸ್ಮಾತ್ - ಆ ಹನುಮಂತನಿಂದ, ಭಯಾತ್ - ಭೀತಿಯ ದೆಶೆಯಿಂದ, ಮುಕ್ತಾಃ - ಬಿಡಲ್ಪಟ್ಟ, ಕತಿಚಿದ್ರಾಕ್ಷಸಾಃ - ಕೆಲರಕ್ಕಸರು, ತತ್ರ - ಆ ಯುದ್ಧದಲ್ಲಿ, ನಿಹತಾನ್ - ಹೊಡೆಯಲ್ಪಟ್ಟ, ಸರ್ವಾನ್‌ಕಿಂಕರಾನ್ - ಕಿಂಕರರನ್ನೆಲ್ಲ, ರಾವಣಾಯ - ರಾವಣನಿಗೆ, ನ್ಯವೇದಯನ್ - ಅರಿಕೆಮಾಡಿದರು. ‖ ೪೨ ‖ ಸರಾಜಾ - ಆ ರಾವಣನು, ನಿಹತಂ - ನಷ್ಟವಾದ, ರಾಕ್ಷಸಾನಾಂ - ರಕ್ಕಸರ, ಮಹದ್ಬಲಂ - ಮಹಾ ಸೈನ್ಯವನ್ನು, ನಿಶಮ್ಯ - ಕೇಳಿ, ಪರಿವೃತ್ತಲೋಚನಃ - ತಿರುಗುತ್ತಿರುವ ನೇತ್ರಗಳುಳ್ಳವನಾಗಿ, ಪರಾಕ್ರಮೇ - ಶತ್ರುಸಂಹಾರದಲ್ಲಿ, ಅಪ್ರತಿಮಂ - ಸಮಾನನಿಲ್ಲದಿರುವ, ಸಮರೇ - ಕಾಳೆಗದಲ್ಲಿ, ಸುದುರ್ಜಯಂ - ಜಯಿಸಲಸಾಧ್ಯನಾದ, ಪ್ರಹಸ್ತಪುತ್ರಂ - ಪ್ರಹಸ್ತನ ಮಗನನ್ನು, ಸಮಾದಿದೇಶ - ಆಜ್ಞಾಪಿಸಿದನು. ‖ ೪೩ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಚತ್ವಾರಿಂಶಸ್ಸರ್ಗಃ

ಯಾದ ಆ ವಾಯುನಂದನನು ಮಹಾದ್ಭುತವಾದ ಆ ಕಬ್ಬಿಣದ ಗುಳಿಯನ್ನು ಹಿಡಿದು, "ಸರ್ಪವನ್ನು ಹಿಡಿದ ಗರುಡನಂತೆ" ಅಂತರಿಕ್ಷದಲ್ಲಿ ಚಿತ್ರಗತಿಯಿಂದ ಸಂಚರಿಸುತ್ತ ಆ ಕಿಂಕರರೆಂಬ ರಾಕ್ಷಸರೆಲ್ಲರನ್ನೂ ನಿಶ್ಶೇಷವಾಗಿ ಕೊಂದು ಪುನಃ ಯುದ್ಧಕಾಂಕ್ಷಿಯಾಗಿ ಅದೇ ಅಶೋಕವನದ ಬಹಿರ್ದ್ವಾರದಲ್ಲಿ ಕುಳಿತಿದ್ದನು. ಆಗ ಯುದ್ಧದಲ್ಲಿ ಭಯಪಟ್ಟು ಓಡಿಹೋದ ಕೆಲವರು ರಾಕ್ಷಸರು ಕೂಡಲೇ ರಾವಣಾಸುರನಲ್ಲಿ ಹೋಗಿ ಕಿಂಕರರೆಂಬ ರಾಕ್ಷಸರೆಲ್ಲರೂ ಹನುಮಂತನಿಂದ ನಿಶ್ಶೇಷವಾಗಿ ಹತರಾದ ವೃತ್ತಾಂತವನ್ನರಿಕೆ ಮಾಡಿದರು. ಆಗಲಾ ರಾಕ್ಷಸೇಶ್ವರನು ಕಿಂಕರ ಸೇನೆಯೆಲ್ಲವೂ ನಾಶವಾದುದನ್ನು ಕೇಳಿ ಬಹುವಾಗಿ ಕನಲಿ ಕಣ್ಣುಗಳನ್ನು ತಿರುಗಿಸುತ್ತ ಮಹಾ ಪರಾಕ್ರಮಿಯಾಗಿಯೂ, ಯುದ್ಧದಲ್ಲಿ ದುರ್ಜೇಯನಾಗಿಯೂ ಇರುವ ಪ್ರಹಸ್ತನೆಂಬ ಮಂತ್ರಿಯ ಮಗನನ್ನು ಆಂಜನೇಯನೊಡನೆ ಯುದ್ಧಕ್ಕೆ ಕಳುಹಿಸಿದನು. ‖ ೩೭–೪೩ ‖

ಇಂತಿದು ಹನುಮತ್ಕೃತ ಕಿಂಕರ ಸೇನಾ ನಾಶನ ವೃತ್ತಾಂತವೆಂಬ
ನಾಲ್ವತ್ತೆರಡನೆಯ ಸರ್ಗವು ಸಮಾಪ್ತವಾದುದು.

ತತಸ್ಸಕಿಂಕರಾ೯ ಹತ್ವಾ ಹನುಮಾನ್ಧ್ಯಾನಮಾಸ್ಥಿತಃ । "ವನಂ ಭಗ್ನಂ ಮಯಾ ಚೈತ್ಯಪ್ರಾಸಾದೋ ನವಿನಾಶಿತಃ ॥೧॥ ತಸ್ಮಾತ್ಪ್ರಾಸಾದಮದ್ಯೈವ ಭೀಮಂ ವಿಧ್ವಂಸಯಾಮ್ಯಹಂ" । ಇತಿ ಸಂಚಿಂತ್ಯ ಮನಸಾ ಹನೂಮಾನ್ದರ್ಶಯನ್ಬಲಂ ॥೨॥ ಚೈತ್ಯಪ್ರಾಸಾದಮಾಪ್ಲುತ್ಯ ಮೇರುಶೃಂಗಮಿವೋನ್ನತಂ । ಆರುರೋಹ ಕಪಿಶ್ರೇಷ್ಠೋ ಹನೂಮಾನ್ಮಾರುತಾತ್ಮಜಃ ॥೩॥ ಆರುಹ್ಯ ಗಿರಿಸಂಕಾಶಂ ಪ್ರಾಸಾದಂ ಹರಿಯೂಥಪಃ । ಬಭೌ ಸ ಸುಮಹಾತೇಜಾಃ ಪ್ರತಿಸೂರ್ಯಇವೋದಿತಃ ॥೪॥ ಸಂಪ್ರ

ತತಃ - ಬಳಿಕ, ಸಹನುಮಾ೯ - ಆ ಆಂಜನೇಯನು, ಕಿಂಕರಾ೯ - ಕಿಂಕರರನ್ನು, ಹತ್ವಾ - ಸಂಹರಿಸಿ, ಧ್ಯಾನಂ - ವಿಚಾರವನ್ನು, ಆಸ್ಥಿತಃ - ಹೊಂದಿದನು, ವನಂ - ವನವು, ಮಯಾ - ನನ್ನಿಂದ, ಭಗ್ನಂ - ಮುರಿಯಲ್ಪಟ್ಟಿತು, ಚೈತ್ಯಪ್ರಾಸಾದಃ - ರಾಕ್ಷಸಕುಲದೇವತಾಗೃಹವು, ನವಿನಾಶಿತಃ - ಧ್ವಂಸಿಸಲ್ಪಡಲಿಲ್ಲ, ತಸ್ಮಾತ್ - ಆ ಕಾರಣದದೆಶೆಯಿಂದ, ಭೀಮಂ - ಭಯಂಕರವಾದ, ಪ್ರಾಸಾದಂ - ದೇವಸ್ಥಾನವನ್ನು, ಅದ್ಯೈವ - ಈಗಲೇ, ಅಹಂ - ನಾನು, ವಿಧ್ವಂಸಯಿಷ್ಯಾಮಿ - ನಾಶಗೊಳಿಸುತ್ತೇನೆ, ಇತಿ - ಹೀಗೆಂದು ಮನಸಾ - ಮನದಿಂದ, ಸಂಚಿಂತ್ಯ - ಯೋಚಿಸಿ, ಹನುಮಾ೯ - ಆಂಜನೇಯನು, ಬಲಂ-ಸಾಮರ್ಥ್ಯವನ್ನು, ದರ್ಶಯ೯-ತೋರಿಸುತ್ತಿರುವನಾಗಿ, ಮೇರುಶೃಂಗಮಿವ-ಮೇರುಪರ್ವತದ ಶಿಖರದಂತೆ, ಉನ್ನತಂ - ಉದ್ದವಾದ, ಚೈತ್ಯಪ್ರಾಸಾದಂ - ರಾವಣ ಕುಲದೇವತಾಮಂದಿರವನ್ನು ಕುರಿತು, ಆಪ್ಲುತ್ಯ - ಹಾರಿ, ಆರುರೋಹ - ಹತ್ತಿದನು, ಹರಿಯೂಥಪಃ - ವಾನರಯೂಥಪತಿಯಾದ, ಸುಮಹಾತೇಜಾಃ - ಬಹು ತೇಜಸ್ವಿಯಾದ, ಹರಿಶ್ರೇಷ್ಠಃ - ವಾನರಶ್ರೇಷ್ಠನಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾ೯-ಆಂಜನೇಯನು, ಗಿರಿಸಂಕಾಶಂ-ಪರ್ವತೋಪಮವಾದ, ಪ್ರಾಸಾದಂ-ದೇವಸ್ಥಾನವನ್ನು, ಆರುಹ್ಯ - ಏರಿ, ಉದಿತಃ - ಹುಟ್ಟಿದ, ಪ್ರತಿಸೂರ್ಯಇವ - ಎರಡನೆಯ ಸೂರ್ಯನಂತೆ, ಬಭೌ - ಹೊಳೆಯುತ್ತಿದ್ದನು. ॥೧-೪॥ ಲಕ್ಷ್ಮ್ಯಾ - ಜಯಲಕ್ಷ್ಮಿಯಿಂದ, ಪ್ರಜ್ವಲ೯ - ಕಂಗೊಳಿಸುತ್ತಿರುವ, ಹನುಮಾ೯ - ಆಂಜನೇಯನು, ದುರ್ಧರ್ಷಂ - ಕೀಳಲಸಾಧ್ಯವಾದ, ಉತ್ತಮಂ -

ಆಮೇಲೆ ಆಂಜನೇಯನು ಕಿಂಕರರನ್ನು ಕೊಂದು, ಅಶೋಕವನದ ಬಹಿರ್ದ್ವಾರದಲ್ಲಿರುವವನಾಗಿ ತನ್ನಲ್ಲಿ ತಾನೇ, "ನಾನು ಈ ಅಶೋಕವನವೆಲ್ಲವನ್ನೂ ಭಂಗಗೊಳಿಸಿದೆನಲ್ಲದೆ ಇಲ್ಲಿರುವ ಚೈತ್ಯಪ್ರಾಸಾದವನ್ನು ನಾಶಮಾಡಲಿಲ್ಲವು. ಆದುದರಿಂದ ಈಗಲೇ ನಾನಿದನ್ನು ನಾಶಮಾಡುವೆನು. ಇದು ಇಲ್ಲಿರುವ ರಾಕ್ಷಸರ ಕುಲದೇವತೆಗಳಿಗೆ ಆಶ್ರಯಭೂತವಾದುದು. ಇದು ಮಹಾ ಭಯಂಕರವಾದುದು" ಎಂದು ಆಲೋಚಿಸಿಕೊಂಡು ತನ್ನ ಪರಾಕ್ರಮವನ್ನು ಪ್ರದರ್ಶಿಸುತ್ತ ಆ ಚೈತ್ಯಪ್ರಾಸಾದಕ್ಕೆ ಹಾರಿ, "ಮಹೋನ್ನತವಾದ ಮೇರುಶಿಖರಕ್ಕೆ ಸಮಾನವಾದ ಅದರಮೇಲೇರಿದನು. ಆಗ ಮಹಾ ಶೂರನೂ, ವಾನರೋತ್ತಮನೂ ಆದ ಆ ಹನುಮಂತನು ಆ ಚೈತ್ಯಪ್ರಾಸಾದದ ಮೇಲೆ ಕುಳಿತು ಆಗತಾನೇ ಉದಿಸಿದ ಎರಡನೆಯ ಸೂರ್ಯನೋ ಎಂಬಂತೆ ಬಹಳವಾಗಿ ಪ್ರಕಾಶಿಸುತ್ತಿದ್ದನು. ಮಹಾ

ಧೃಷ್ಯಚ ದುರ್ಧರ್ಷಂ ಚೈತ್ಯಪ್ರಾಸಾದಮುತ್ತಮಂ । ಹನುಮಾನ್ ಪ್ರಜ್ವಲನ್ಲಕ್ಷ್ಮ್ಯಾ ಪಾರಿಯಾತ್ರೋಪಮೋಽಭವತ್ ॥ ೫ ॥ ಸ ಭೂತ್ವಾ ಸುಮಹಾಕಾಯಃ ಪ್ರಭಾವಾ ನ್ಮಾರುತಾತ್ಮಜಃ । ಧೃಷ್ಟಮಾಸ್ಫೋಟಯಾಮಾಸ ಲಂಕಾಂ ಶಬ್ದೇನ ಪೂರಯನ್ ॥ ೬ ॥ ತಸ್ಯಾಸ್ಫೋಟಿತಶಬ್ದೇನ ಮಹತಾ ಶ್ರೋತ್ರಘಾತಿನಾ । ಪೇತುರ್ವಿಹಂಗಮಾ ಸ್ತತ್ರ ಚೈತ್ಯಪಾಲಾಶ್ಚ ಮೋಹಿತಾ ॥ ೭ ॥ " ಅಸ್ತ್ರವಿಜ್ಜಯತಾಂ ರಾಮೋ ಲಕ್ಷ್ಮ ಣಶ್ಚ ಮಹಾಬಲಃ । ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೮ ॥ ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾಕ್ಲಿಷ್ಟಕರ್ಮಣಃ । ಹನೂಮಾನ್ ಶತ್ರು

ಉತ್ಕೃಷ್ಟವಾದ, ಚೈತ್ಯಪ್ರಾಸಾದಂ - ಕುಲದೇವಾಯತನವನ್ನು, ಸಂಪ್ರಧೃಷ್ಯ - ಭಂಗಮಾಡಿ, ಪಾರಿ.....ಮಃ - ಪಾರಿಯಾತ್ರವೆಂಬ ಕುಲಪರ್ವತಸದೃಶನು, ಅಭವತ್ - ಆದನು. ॥ ೫ ॥ ಸಮಾರು ತಾತ್ಮಜಃ - ಆ ವಾಯುತನಯನು, ಪ್ರಭಾವಾತ್ - ಮಾಹಾತ್ಮ್ಯದಿಂದ, ಸುಮಹಾಕಾಯಃ - ಬಹಳ ದೊಡ್ಡದೇಹವುಳ್ಳವನು, ಭೂತ್ವಾ - ಆಗಿ, ಧೃಷ್ಟಂ - ಧೈರ್ಯವಾಗಿ, ಲಂಕಾಂ - ಲಂಕಾಪುರವನ್ನು, ಶಬ್ದೇನ - ಧ್ವನಿಯಿಂದ, ಪೂರಯನ್ - ತುಂಬಿಸಿ, ಆಸ್ಫೋಟಯಾಮಾಸ - ಭುಜವನ್ನು ಅಪ್ಪಳಿಸಿದನು. ॥ ೬ ॥ ತತ್ರ - ಆ ಮನೆಯಲ್ಲಿ, ಶ್ರೋತ್ರಘಾತಿನಾ - ಕಿವಿಗಳನ್ನು ಚುಚ್ಚುತ್ತಿರುವ, ಮಹತಾ - ದೊಡ್ಡ ದಾದ, ತಸ್ಯ-ಆ ಕಪಿಯ, ಆಸ್ಫೋಟಿತಶಬ್ದೇನ-ಭುಜಾಸ್ಫಾಲದಿಂದುಂಟಾದ ಶಬ್ದದಿಂದ, ವಿಹಂಗಮಾಃ- ಹಕ್ಕಿಗಳು, ಪೇತುಃ - ಬಿದ್ದವು, ಚೈತ್ಯಪಾಲಾಶ್ಚ - ಪ್ರಾಸಾದಪಾಲಕರೂ ಕೂಡ, ಮೋಹಿತಾಃ - ಮೂರ್ಛೆಗೊಂಡರು. ॥ ೭ ॥ ಅಸ್ತ್ರವಿತ್ - ಅಸ್ತ್ರಜ್ಞನಾದ, ರಾಮಃ - ಶ್ರೀರಾಮನು, ಮಹಾಬಲಃ - ಬಹು ಬಲಾಢ್ಯನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಜಯತಾಂ - ಜಯಸಲಿ, ರಾಘವೇಣ - ಶ್ರೀರಾಮ ನಿಂದ, ಅಭಿಪಾಲಿತಃ - ರಕ್ಷಿತನಾದ, ರಾಜಾ - ಅರಸನಾದ, ಸುಗ್ರೀವಃ - ಸುಗ್ರೀವನು, ಜಯತಿ - ಜಯಶಾಲಿಯಾಗಿದ್ದಾನೆ, ಅಕ್ಲಿಷ್ಟಕರ್ಮಣಃ-ಕ್ಲೇಶಗೊಳ್ಳದೆ ಸಮಸ್ತ ಕಾರ್ಯಗಳನ್ನೂ ಮಾಡುತ್ತಿರುವ, ಕೋಸಲೇಂದ್ರಸ್ಯ - ಕೋಸಲದೇಶಾಧಿಪನಾದ, ರಾಮಸ್ಯ - ಶ್ರೀರಾಮನ, ದಾಸಃ - ದೂತನಾಗಿ, ಶತ್ರು

ಶ್ರೇಷ್ಠವಾದುದೂ, ಇತರರಿಂದ ದುರ್ಧರ್ಷವಾದುದೂ ಆದ ಆ ಚೈತ್ಯಪ್ರಾಸಾದವನ್ನಾಕ್ರಮಿಸಿ ಕುಳಿತಿದ್ದ ಆ ಹನುಮಂತನು ಪಾರಿಯಾತ್ರವೆಂಬ ಕುಲಪರ್ವತದಂತೆ ಮಹಾ ಕಾಂತಿಯುಕ್ತ ನಾಗಿ ಪ್ರಕಾಶಿಸುತ್ತಿದ್ದನು. ॥ ೧-೫ ॥ ಆ ಬಳಿಕ ಮಾರುತಿಯು ತನ್ನ ಪ್ರಭಾವದಿಂದಲೇ ದೊಡ್ಡ ದೇಹವುಳ್ಳವನಾಗಿ ಲಂಕಾನಗರವೆಲ್ಲವೂ ತುಂಬಿಹೋಗುವಂತೆ ಭುಜಾಸ್ಫೋಟನ ಮಾಡಿದನು. ಮಹಾ ಭಯಂಕರವೂ, ಕರ್ಣಕಠೋರವೂ ಆದ ಆ ಹನುಮಂತನ ಭುಜಾ ಸ್ಫೋಟನ ಶಬ್ದವನ್ನು ಕೇಳಿ ಅಂತರಿಕ್ಷದಲ್ಲಿ ಹಾರಾಡುತ್ತಿದ್ದ ಹಕ್ಕಿಗಳೆಲ್ಲವೂ ಭೂಮಿಗೆ ಉದಿರಿ ಬೀಳುತ್ತಿದ್ದವು. ಆ ಶಬ್ದವನ್ನು ಕೇಳುತ್ತ ಆ ಚೈತ್ಯಪ್ರಾಸಾದದ ಕಾವಲುಗಾರರಾಗಿದ್ದ ರಾಕ್ಷಸರೆಲ್ಲರೂ ಮೂರ್ಛಿತರಾಗಿ ಬಿದ್ದರು. ಈ ಪ್ರಕಾರವಾಗಿ ಮಹಾ ಬಲಾಢ್ಯನಾದ ಆ ಹನುಮಂತನು ಭುಜಾಸ್ಫಾಲನವನ್ನು ಮಾಡುತ್ತ, " ಸರ್ವಾಸ್ತ್ರವಿಶಾರದನಾದ ಶ್ರೀರಾಮನು ಜಯಶಾಲಿಯಾಗಲಿ. ಮಹಾ ಬಲನಾದ ಲಕ್ಷ್ಮಣನಿಗೆ ಜಯವಾಗಲಿ. ರಾಮ ನಿಂದ ಪರಿಪಾಲಿತನಾದ ಸುಗ್ರೀವರಾಜನು ಜಯಶೀಲನಾಗಲಿ. ನಾನು ಕೋಸಲರಾಜನಾದ ಶ್ರೀರಾಮನ ದಾಸನು. ನನ್ನ ಹೆಸರು ಹನುಮಂತನೆಂದು. ನಾನು ಶತ್ರುಸೈನ್ಯಗಳನ್ನು

ಸೈನ್ಯಾನಾಂ ನಿಹಂತಾ ಮಾರುತಾತ್ಮಜಃ ॥ ೯ ॥ ನರಾವಣಸಹಸ್ರಂ ಮೇ ಯುದ್ಧೇ ಪ್ರತಿಬಲಂ ಭವೇತ್ । ಶಿಲಾಭಿಸ್ತು ಪ್ರಹರತಃ ಪಾದಪೈಶ್ಚ ಸಹಸ್ರಶಃ ॥ ೧೦ ॥ ಅರ್ದಯಿತ್ವಾ ಪುರೀಂ ಲಂಕಾಮಭಿವಾದ್ಯಚ ಮೈಥಿಲೀಂ । ಸಮೃದ್ಧಾರ್ಥೋ ಗಮಿಷ್ಯಾಮಿ ಮಿಷತಾಂ ಸರ್ವರಕ್ಷಸಾಂ ॥ ೧೧ ॥ ಏವಮುಕ್ತ್ವಾ ವಿಮಾನಸ್ಥಶ್ಚೈತ್ಯಸ್ಥಾನ್ಹರಿಯೂಥಪಃ । ನನಾದ ಭೀಮನಿರ್ಹ್ರಾದೋ ರಕ್ಷಸಾಂ ಜನಯನ್ಭಯಂ ॥ ೧೨ ॥ ತೇನ ಶಬ್ದೇನ ಮಹತಾ ಚೈತ್ಯಪಾಲಾ ಶ್ಶತಂ ಯಯುಃ । ಗೃಹೀತ್ವಾ ವಿವಿಧಾನಸ್ತ್ರಾನ್ ಪ್ರಾಸಾನ್ ಖಡ್ಗಾನ್ ಪರಶ್ವಧಾನ್ ॥ ೧೩ ॥ ವಿಸೃಜಂತೋ ಮಹಾಕಾಯಾ ಮಾರುತಿಂ

ಸೈನ್ಯಾನಾಂ - ವಿರೋಧಸೇನೆಗಳಿಗೆ, ನಿಹಂತಾ - ಸಂಹಾರಕನಾದ, ಮಾರುತಾತ್ಮಜಃ - ವಾಯುಪುತ್ರನಾದ, ಅಹಂ - ನಾನು, ಹನುಮಾನ್ - ಆಂಜನೇಯನು, ಶಿಲಾಭಿಸ್ತು - ಕಲ್ಲುಗಳಿಂದಲೂ, ಸಹಸ್ರಶಃ - ಅನೇಕಗಳಾದ, ಪಾದಪೈಶ್ಚ - ಗಿಡಗಳಿಂದಲೂ, ಪ್ರಹರತಃ - ಹೊಡೆಯುತ್ತಿರುವ, ಮೇ - ನನಗೆ, ಯುದ್ಧೇ - ಯುದ್ಧದಲ್ಲಿ, ರಾವಣಸಹಸ್ರಂ - ಅನೇಕ ರಾವಣರು, ಪ್ರತಿಬಲಂ - ಪ್ರತಿಬಲರು, ನಭವೇತ್ - ಆಗಲಾರರು, ಲಂಕಾಂಪುರೀಂ-ಲಂಕಾಪಟ್ಟಣವನ್ನು, ಅರ್ದಯಿತ್ವಾ-ಧ್ವಂಸಿಸಿ, ಮೈಥಿಲೀಂ-ಸೀತಾದೇವಿಯನ್ನು, ಅಭಿವಾದ್ಯ - ವಂದಿಸಿ, ಸರ್ವರಕ್ಷಸಾಂ - ರಾಕ್ಷಸರೆಲ್ಲರು, ಮಿಷತಾಂ - ನೋಡುತ್ತಿರುವಾಗಲೇ, ಸಮೃದ್ಧಾರ್ಥಃ - ಕೃತಕೃತ್ಯನಾಗಿ, ಗಮಿಷ್ಯಾಮಿ - ಹಿಂತಿರುಗಿ ಹೋಗುತ್ತೇನೆ, ಏವಂ - ಹೀಗೆ, ಚೈತ್ಯಸ್ಥಾನ್ - ದೇವಾಲಯವಾಸಿಗಳನ್ನು ಕುರಿತು, ಉಕ್ತ್ವಾ - ಹೇಳಿ, ವಿಮಾನಸ್ಥಃ - ಪ್ರಾಸಾದಲ್ಲಿ ನಿಂತಿರುವ, ಭೀಮನಿರ್ಹ್ರಾದಃ - ಭಯಂಕರ ಧ್ವನಿಯುಳ್ಳ, ಹರಿಯೂಥಪಃ - ವಾನರಯೂಥಪತಿಯಾದ ಆಂಜನೇಯನು, ರಕ್ಷಸಾಂ - ರಕ್ಕಸರಿಗೆ, ಭಯಂ - ಭೀತಿಯನ್ನು, ಜನಯನ್ - ಹುಟ್ಟಿಸುವವನಾಗಿ, ನನಾದ - ಕೋಲಾಹಲಧ್ವನಿಮಾಡಿದನು. ॥ ೧೨ ॥ ಮಹತಾ - ದೊಡ್ಡದಾದ, ತೇನಶಬ್ದೇನ - ಆ ಧ್ವನಿಯಿಂದ, ಮಹಾಕಾಯಾಃ - ಮಹಾ ಶರೀರವುಳ್ಳ, ಶತಂ - ನೂರುಮಂದಿ, ಚೈತ್ಯಪಾಲಾಃ - ಪ್ರಾಸಾದದ ಕಾವಲುಗಾರರು, ಯಯುಃ - ಹೊರಟರು, ವಿವಿಧಾನ್ - ನಾನಾಬಗೆಗಳಾದ, ಅಸ್ತ್ರಾನ್ - ಅಸ್ತ್ರಗಳನ್ನು, ಪ್ರಾಸಾನ್ - ಈಟಿಗೋಲುಗಳನ್ನೂ, ಖಡ್ಗಾನ್ - ಕತ್ತಿಗಳನ್ನೂ, ಪರಶ್ವಧಾನ್ - ಕೊಡಲಿಗಳನ್ನೂ, ಗೃಹೀತ್ವಾ - ತೆಗೆದುಕೊಂಡು, ವಿಸೃಜಂತಃ - ಬಿಡುತ್ತಿರುವರಾಗಿ, ಮಾರುತಿಂ - ಆಂಜನೇಯನನ್ನು, ಪರ್ಯವಾರಯನ್ - ಸುತ್ತಿಕೊಂಡರು ॥ ೧೩ ॥ ತೇ - ಆ ರಕ್ಕಸರು, ವಿಚಿತ್ರಾಭಿಃ - ನಾನಾ

ಮರ್ದಿಸುವಂತಹನು. ನಾನು ಸಾಕ್ಷಾತ್ ವಾಯುದೇವನಿಗೆ ಔರಸಪುತ್ರನು. ಇಂತಹ ರಾವಣನೊಬ್ಬನಲ್ಲ. ಕಲ್ಮರಗಳಿಂದ ಸಹಸ್ರಾರು ವಿಧವಾಗಿ ಪ್ರಹರಿಸುವ ನನಗೆ ಸಾವಿರ ಮಂದಿ ರಾವಣರು ಯುದ್ಧದಲ್ಲಿ ಇದಿರಾದರೂ ಸಮಬಲರೆನಿಸಲಾರರು. ನಾನು ಈ ಲಂಕಾ ನಗರವೆಲ್ಲವನ್ನೂ ನಿರ್ಮೂಲಮಾಡಿ, ಮಿಥಿಲರಾಜಕುಮಾರಿಯಾದ ಸೀತಾದೇವಿಗೆ ನಮಸ್ಕರಿಸಿ, ಸಮೃದ್ಧಾರ್ಥನಾಗಿ ನಮ್ಮ ಪ್ರಭುವಾದ ಸುಗ್ರೀವನ ರಾಜಧಾನಿಗೆ ಹಿಂತಿರುಗುವೆನು" ಎಂದು ಬಹು ಭಯಂಕರವಾಗಿ ಕೂಗಿ ಹೇಳಿ, ಆ ಚೈತ್ಯಪ್ರಾಸಾದದ ಮೇಲೆಯೇ ಕುಳಿತವನಾಗಿ ಅಲ್ಲಿದ್ದ ರಾಕ್ಷಸರೆಲ್ಲರಿಗೂ ಮಹದ್ಭಯವನ್ನುಂಟುಮಾಡಿದನು. ॥ ೬–೧೨ ॥ ಈ ಸಿಂಹನಾದವನ್ನು ಕೇಳಿ ಅಲ್ಲಿದ್ದ ಚೈತ್ರಪ್ರಾಸಾದ ಪಾಲಕರಾದ ರಾಕ್ಷಸರಲ್ಲಿ ನೂರುಮಂದಿ ಈಟಿಗಳನ್ನೂ, ಭಲ್ಲೆಗಳನ್ನೂ, ಗಂಡುಗೊಡಲಿಗಳನ್ನೂ ಇನ್ನೂ ಅನೇಕ ವಿಧವಾದ ಆಯುಧಗಳನ್ನೂ ತೆಗೆದುಕೊಂಡು ಆಂಜನೇಯನ ಮೇಲೆ ಯುದ್ಧಕ್ಕೆ ಬಂದರು. ಮಹಾಕಾಯರಾದ

ಪರ್ಯವಾರಯನ್ ॥ ೧೩ ॥ ತೇ ಗದಾಭಿರ್ವಿಚಿತ್ರಾಭಿಃ ಪರಿಘೈಃ ಕಾಂಚನಾಂಗದೈಃ ।
ಆಜಘ್ನುರ್ವಾನರಶ್ರೇಷ್ಠಂ ಬಾಣೈಶ್ಚಾದಿತ್ಯಸನ್ನಿಭೈಃ ॥೧೪॥ ಆವರ್ತಇವ ಗಂಗಾಯಾ
ಸ್ತೋಯಸ್ಯ ವಿಪುಲೋ ಮಹಾನ್ । ಪರಿಕ್ಷಿಪ್ಯ ಹರಿಶ್ರೇಷ್ಠಂ ಸ ಬಭೌ ರಕ್ಷಸಾಂಗಣಃ
॥ ೧೫ ॥ ತತೋ ವಾತಾತ್ಮಜಃ ಕ್ರುದ್ಧೋ ಭೀಮಂ ರೂಪಂ ಸಮಾಸ್ಥಿತಃ । ಪ್ರಾಸಾ
ದಸ್ಯ ಮಹಾಂತಸ್ಯ ಸ್ತಂಭಂ ಹೇಮಪರಿಷ್ಕೃತಂ ॥ ೧೬ ॥ ಉತ್ಪಾಟಯಿತ್ವಾ ವೇಗೇನ
ಹನೂಮಾನ್ಪವನಾತ್ಮಜಃ । ತತಸ್ತಂ ಭ್ರಾಮಯಾಮಾಸ ಶತಧಾರಂ ಮಹಾಬಲಃ
॥ ೧೭ ॥ ತತ್ರ ಚಾಗ್ನಿಸ್ಸಮಭವತ್ಪ್ರಾಸಾದಶ್ಚಾಪ್ಯದಹ್ಯತ । ದಹ್ಯಮಾನಂ ತತೋ
ದೃಷ್ಟ್ವಾ ಪ್ರಾಸಾದಂ ಹರಿಯೂಥಪಃ ॥ ೧೮ ॥ ಸರಾಕ್ಷಸಶತಂ ಹತ್ವಾ ವಜ್ರೇಣೇಂದ್ರ

ಬಗೆಯ, ಗದಾಭಿಃ - ಗದೆಗಳಿಂದಲೂ, ಕಾಂಚನಾಂಗದೈಃ - ಭಂಗಾರದ ಕಟ್ಟುಗಳುಳ್ಳ, ಪರಿಘೈಃ - ದೊಣ್ಣೆಗಳಿಂದಲೂ, ಆದಿತ್ಯಸನ್ನಿಭೈಃ - ಸೂರ್ಯೋಪಮಗಳಾದ, ಬಾಣೈಶ್ಚ - ಬಾಣಗಳಿಂದಲೂ, ವಾನರಶ್ರೇಷ್ಠಂ - ಕಪಿವರನನ್ನು, ಆಜಘ್ನುಃ - ಪ್ರಹರಿಸಿದರು. ॥೧೪॥ ಸರಕ್ಷಸಾಂಗಣಃ - ಆ ರಕ್ಕಸರ ಗುಂಪು, ಹರಿಶ್ರೇಷ್ಠಂ - ವಾನರೋತ್ತಮನನ್ನು, ಪರಿಕ್ಷಿಪ್ಯ - ಸುತ್ತಿಕೊಂಡು, ಗಂಗಾಯಾಃ - ಗಂಗಾನದಿಯ, ತೋಯಸ್ಯ - ಉದಕದ, ಮಹಾನ್ - ದೊಡ್ಡದಾದ, ವಿಪುಲಃ - ವಿಸ್ತಾರವಾದ, ಆವರ್ತಇವ - ಸುಳಿಯಂತೆ, ಬಭೌ - ಹೊಳೆಯುತ್ತಿತ್ತು, ತತಃ - ಬಳಿಕ, ವಾತಾತ್ಮಜಃ - ವಾಯುಪುತ್ರನು, ಕ್ರುದ್ಧಃ - ಕೋಪಗೊಂಡು, ಭೀಮಂರೂಪಂ-ಭಯಂಕರಾಕಾರವನ್ನು, ಸಮಾಸ್ಥಿತಃ-ಹೊಂದಿದನು. ॥ ೧೫-೧೬ ॥ ತತಃ - ಬಳಿಕ, ಮಹಾಬಲಃ - ಮಹಾ ಸಾಮರ್ಥ್ಯವುಳ್ಳ, ಪವನಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಮಹಾಂತಸ್ಯ - ಅತ್ಯುನ್ನತ ಶಿಖರವುಳ್ಳ, ಪ್ರಾಸಾದಸ್ಯ - ಚೈತ್ಯಪ್ರಾಸಾದದ, ಹೇಮಪರಿಷ್ಕೃತಂ - ಚಿನ್ನದಿಂದಲಂಕೃತವಾದ, ಸ್ತಂಭಂ - ಕಂಭವನ್ನು, ವೇಗೇನ - ಜವದಿಂದ, ಉತ್ಪಾಟಯಿತ್ವಾ - ಕಿತ್ತು, ಶತಧಾರಂ - ನೂರಲಗುಗಳುಳ್ಳ, ತಂ - ಆ ಸ್ತಂಭವನ್ನು, ಭ್ರಾಮಯಾಮಾಸ - ತಿರುಗಿಸಿದನು. ॥ ೧೭ ॥ ತತ್ರ - ಆ ಕಂಭದಲ್ಲಿ, ಅಗ್ನಿಶ್ಚ - ಬೆಂಕಿಯು, ಸಮಭವತ್ - ಹುಟ್ಟಿತು, (ತೇನ - ಅದರಿಂದ) ಪ್ರಾಸಾದಶ್ಚ - ದೇವಾಲಯವೂ, ಅದಹ್ಯತ - ಸುಟ್ಟು ಹೋಯಿತು. ॥ ೧೮ ॥ ತತಃ - ಬಳಿಕ, ಶ್ರೀಮಾನ್ - ಜಯಲಕ್ಷ್ಮೀಸಂಪನ್ನನಾದ, ಸಹರಿಯೂಥಪಃ -

ಆ ರಾಕ್ಷಸರೆಲ್ಲರೂ ಕೂಡಲೇ ನಾನಾವಿಧಗಳಾದ ಬಾಣಗಳನ್ನು ಪ್ರಯೋಗಿಸುತ್ತ ಆ ಹನುಮಂತನನ್ನು ಸುತ್ತಲೂ ಮುತ್ತಿಕೊಂಡರು. ನಾನಾವಿಧಗಳಾದ ಗದೆಗಳಿಂದಲೂ, ಬಂಗಾರದ ಹಿಡಿಗಳಿಂದ ಕೂಡಿದ ಕಬ್ಬಿಣದ ಒನಿಕೆಗಳಿಂದಲೂ, ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ಬಾಣಗಳಿಂದಲೂ ಕೂಡಿದ ಆ ರಾಕ್ಷಸಸೇನೆಯು ಹನುಮಂತನನ್ನು ಸುತ್ತಲೂ ಮುತ್ತಿರಲು, ಗಂಗಾನದಿಯ ಮಧ್ಯದಲ್ಲಿ ಸುತ್ತಲೂ ಸುತ್ತುತ್ತಿದ್ದ ದೊಡ್ಡ ಸುಳಿಯಂತೆ ಕಾಣುತ್ತಿದ್ದಿತು. ॥ ೧೩-೧೫ ॥ ಆಗ ವಾಯುನಂದನನಾದ ಹನುಮಂತನು ಬಹಳವಾಗಿ ಕೋಪವನ್ನು ತಂದುಕೊಂಡು ಮಹಾ ಭಯಂಕರಾಕಾರವನ್ನು ತಾಳಿ, ಮಹಾ ಬಲಪರಾಕ್ರಮಗಳನ್ನು ಮೆರೆಯುತ್ತ ಅತ್ಯುನ್ನತವಾದ ಶಿಖರವುಳ್ಳ ಆ ಚೈತ್ಯಪ್ರಾಸಾದದಲ್ಲಿದ್ದ ಸುವರ್ಣಸ್ತಂಭವನ್ನು ಕಿತ್ತು ಕೈಗೆ ತೆಗೆದುಕೊಂಡು ಅದನ್ನು ಅನೇಕಾವರ್ತಿ ಗಿರಗಿರನೆ ತಿರುಗಿಸಿದನು. ಈ ರೀತಿ ಮಹಾ ಬಲಾಢ್ಯನಾದ ಆ ಹನುಮಂತನು ಆ ಕಂಬವನ್ನು ಮಹಾ ವೇಗದಿಂದ ತಿರುಗಿಸುತ್ತಿರಲು ಅದರಿಂದ ಬೆಂಕಿಯು ಹುಟ್ಟಿತು. ಹೀಗೆ ಹುಟ್ಟಿದ ಆ ಬೆಂಕಿಯಿಂದ

ಇವಾಸುರಾನ್ । ಅಂತರಿಕ್ಷೇ ಸ್ಥಿತಶ್ಶ್ರೀಮಾನಿದಂ ವಚನಮಬ್ರವೀತ್ ॥ ೧೯ ॥ ಮಾದೃಶಾನಾಂ ಸಹಸ್ರಾಣಿ ವಿಸೃಷ್ಟಾನಿ ಮಹಾತ್ಮನಾಂ । ಬಲಿನಾಂ ವಾನರೇಂದ್ರಾಣಾಂ ಸುಗ್ರೀವವಶವರ್ತಿನಾಂ ॥ ೨೦ ॥ ಅಟಂತಿ ವಸುಧಾಂ ಕೃತ್ಸ್ನಾಂ ವಯಮನ್ಯೇಚ ವಾನರಾಃ । ದಶನಾಗಬಲಾಃ ಕೇಚಿತ್ಕೇಚಿದ್ದಶಗುಣೋತ್ತರಾಃ ॥ ೨೧ ॥ ಕೇಚಿನ್ನಾಗ ಸಹಸ್ರಸ್ಯ ಬಭೂವುಸ್ತುಲ್ಯವಿಕ್ರಮಾಃ । ಸಂತಿ ಚೌಘಬಲಾಃ ಕೇಚಿತ್ಕೇಚಿದ್ವಾಯು ಬಲೋಪಮಾಃ ॥ ೨೨ ॥ ಅಪ್ರಮೇಯಬಲಾಶ್ಚಾನ್ಯೇ ತತ್ರಾಸನ್‌ಹರಿಯೂಥಪಾಃ ।

ಆ ವಾನರಯೂಥಪನು, ದಹ್ಯಮಾನಂ - ಸುಟ್ಟುಹೋಗುತ್ತಿರುವ, ಪ್ರಾಸಾದಂ - ದೇವಸ್ಥಾನವನ್ನು, ದೃಷ್ಟ್ವಾ - ಕಂಡು, ರಾಕ್ಷಸಶತಂ - ಆ ನೂರುಮಂದಿ ರಾಕ್ಷಸರನ್ನೂ, ಇಂದ್ರಃ - ದೇವೇಂದ್ರನು, ವಜ್ರೇಣ - ವಜ್ರಾಯುಧದಿಂದ, ಅಸುರಾನಿವ - ರಕ್ಕಸರನ್ನಂತೆ, ಹತ್ವಾ - ಸಂಹರಿಸಿ, ಅಂತರಿಕ್ಷೇ - ಗಗನದಲ್ಲಿ, ಸ್ಥಿತಃ - ನಿಂತವನಾಗಿ, ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. ॥ ೧೯ ॥ ಮಾದೃಶಾನಾಂ - ನನ್ನಂತಹರಾದ, ಮಹಾತ್ಮನಾಂ - ಮಹಾ ಶರೀರಗಳುಳ್ಳ, ಬಲಿನಾಂ - ಬಲಿಷ್ಠರಾದ, ಸುಗ್ರೀ....ನಾಂ - ಸುಗ್ರೀವನಧೀನದಲ್ಲಿರುವ, ವಾನರೇಂದ್ರಾಣಾಂ - ವಾನರೋತ್ತಮರ, ಸಹಸ್ರಾಣಿ - ಸಹಸ್ರಗಳು, ವಿಸೃಷ್ಟಾನಿ - ಕಳುಹಿಸಲ್ಪಟ್ಟವೆ. ॥ ೨೦ ॥ ವಯಂ - ನಾವು, ಅನ್ಯೇವಾನರಶ್ಚ - ಇತರ ಕಪಿಗಳೂ ಸಹ, ವಸುಧಾಂಕೃತ್ಸ್ನಾಂ - ಭೂಮಿಯಲ್ಲೆಲ್ಲಾ, ಅಟಂತಿ - ಸಂಚಾರಮಾಡುತ್ತಿರುವರು. ॥ ೨೧ ॥ ತತ್ರ - ಅವರಲ್ಲಿ, ಕೇಚಿತ್ - ಕೆಲವರು, ದಶನಾಗಬಲಾಃ - ಹತ್ತಾನೆಗಳ ಬಲವುಳ್ಳವರು, ಕೇಚಿತ್ - ಕೆಲವರು, ದಶಗುಣೋತ್ತರಾಃ - ನೂರಾನೆಗಳ ಬಲವುಳ್ಳವರು, ಕೇಚಿತ್ - ಇನ್ನೂ ಕೆಲ ವಾನರರು, ನಾಗಸಹಸ್ರಸ್ಯ - ಸಾವಿರಾನೆಗಳಿಗೆ, ತುಲ್ಯವಿಕ್ರಮಾಃ - ಸಮಾನವಾದ ಪರಾಕ್ರಮವುಳ್ಳವರು. ॥ ೨೨ ॥ ಕೇಚಿತ್ - ಕೆಲವರು, ಓಘಬಲಾಃ - ಓಘಸಂಖ್ಯೆಯ ಬಲವುಳ್ಳವರಾಗಿ, ಸಂತಿ - ಇರುವರು, ಕೇಚಿತ್ - ಕೆಲವಾನರರು, ವಾಯು....ಮಾಃ - ವಾಯುವಿಗೆ ಸಮಾನವಾದ ಬಲವುಳ್ಳವರು, ಅನ್ಯೇ-

---

ಆ ಚೈತ್ಯಪ್ರಾಸಾದವೆಲ್ಲವೂ ಕ್ಷಣಮಾತ್ರದಲ್ಲಿಯೇ ಸುಟ್ಟುಹೋಯಿತು. ಬಳಿಕಲಾ ವಾನರೋತ್ತಮನು, ದೇವೇಂದ್ರನು ವಜ್ರಾಯುಧದಿಂದಲಂತೆ ಅದೇ ಕಂಬದಿಂದಲೇ ಆ ನೂರು ಮಂದಿ ರಾಕ್ಷಸರನ್ನೂ ಹೊಡೆದು ಕೊಂದುಬಿಟ್ಟನು. ಹೀಗೆ ಆತನು ರಾಕ್ಷಸರೆಲ್ಲರನ್ನೂ ವಧಿಸಿದ ಮೇಲೆ ಅಂತರಿಕ್ಷದಲ್ಲಿ ನಿಂತವನಾಗಿ ಅಲ್ಲಿಂದಲೇ ರಾಕ್ಷಸರೆಲ್ಲರನ್ನೂ ಕುರಿತು ಹೀಗೆ ಹೇಳಿದನು. ॥ ೧೬–೧೯ ॥ "ಎಲೈ ರಾಕ್ಷಸರಿರಾ! ನನ್ನಂತೆಯೇ ಮಹಾ ಪರಾಕ್ರಮಿಗಳೂ, ಮಹಾ ಕಾಯರೂ ಆದ ಸಾವಿರಾರು ಮಂದಿ ವಾನರೋತ್ತಮರು ನಮ್ಮ ಸುಗ್ರೀವನ ವಶದಲ್ಲಿರುವರು. ನಮ್ಮ ಪ್ರಭುವಾದ ಸುಗ್ರೀವರಾಜನು ಅವರೆಲ್ಲರನ್ನೂ ಸೀತಾನ್ವೇಷಣಕ್ಕಾಗಿ ಬೇರೆ ಬೇರೆ ದಿಕ್ಕುಗಳಿಗೆ ಕಳುಹಿಸಿರುವನು. ಎಷ್ಟೋ ಮಂದಿ ವಾನರವೀರರು ನನ್ನಂತೆಯೇ ಸೀತೆಯನ್ನು ಹುಡುಕುತ್ತ ಭೂಮಂಡಲವೆಲ್ಲವನ್ನೂ ಸುತ್ತುತ್ತಿರುವರು. ಅವರಲ್ಲಿ ಕೆಲವರು ಹತ್ತಾನೆಗಳ ಬಲವುಳ್ಳವರು; ಕೆಲವರು ನೂರಾನೆಗಳ ಬಲವುಳ್ಳವರು; ಸಾವಿರಾನೆಗಳ ಬಲವುಳ್ಳವರೂ ಕೆಲವರಿರುವರು. ಕೆಲವರು ಓಘಸಂಖ್ಯೆಯ ಆನೆಗಳ ಬಲವುಳ್ಳವರು. ಕೆಲವರು ವಾಯುವಿಗೆ ಸಮಾನವಾದ ಬಲವುಳ್ಳವರು. ಕೆಲವರು ಯೂಥಪತಿಗಳ ಬಲವಿಷ್ಟೆಂದು ಹೇಳುವುದಕ್ಕೆ ಆಗುವುದಿಲ್ಲವು. ಕೋರೆಹಲ್ಲುಗಳೂ, ಉಗುರುಗಳೂ ಇವೇ

ಈದೃಗ್ವಿಧೈಸ್ತು ಹರಿಭಿರ್ವೃತೋ ದಂತನಖಾಯುಧೈಃ ॥ ೨೩ ॥ ಶತೈಶ್ಶತಸಹಸ್ರೈಶ್ಚ ಕೋಟೀಭಿರಯುತೈರಪಿ । ಆಗಮಿಷ್ಯತಿ ಸುಗ್ರೀವ ಸ್ಸರ್ವೇಷಾಂ ವೋ ನಿಷೂದನಃ॥೨೪॥

ನೇಯಮಸ್ತಿ ಪುರೀ ಲಂಕಾ ನಯೂಯಂ ನಚ ರಾವಣಃ ।
ಯಸ್ಮಾದಿಕ್ಷ್ವಾಕುನಾಥೇನ ಬದ್ಧಂ ವೈರಂ ಮಹಾತ್ಮನಾ ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಚತ್ವಾರಿಂಶಸ್ಸರ್ಗಃ

ಇತರರಾದ, ಹರಿಯೂಥಪಾಃ - ಕಪಿಯೂಥಪತಿಗಳು, ಅಪ್ರ....ಶ್ಚ - ಹೇಳಲಸಾಧ್ಯವಾದ ಬಲವುಳ್ಳವರೂ ಆಗಿರುವರು. ॥ ೨೩ ॥ ಈದೃಗ್ವಿಧೈಃ - ಇಂತಹ ಬಲಶಾಲಿಗಳಾದ, ದಂತ....ಧೈಃ - ಹಲ್ಲುಗಳನ್ನೂ ಉಗುರುಗಳನ್ನೂ ಇವುಗಳನ್ನೇ ಆಯುಧಗಳಾಗಿ ಉಳ್ಳ, ಶತೈಃ-ನೂರುನೂರಾಗಿಯೂ, ಶತಸಹಸ್ರೈಃ-ಲಕ್ಷಲಕ್ಷವಾಗಿಯೂ, ಅಯುತೈರಪಿ-ಕೋಟಿಕೋಟಿಯಾಗಿಯೂ ಇರುವ, ಹರಿಭಿಃ-ಕಪಿಗಳಿಂದ, ವೃತಃ-ಪರಿವೃತನಾದ, ಸುಗ್ರೀವಃ - ಸುಗ್ರೀವನು, ಸರ್ವೇಷಾಂವಃ - ನಿಮ್ಮೆಲ್ಲರಿಗೂ, ನಿಷೂದನಃ - ಸಂಹಾರಕನಾಗಿ, ಆಗಮಿಷ್ಯತಿ - ಬರುವನು. ॥ ೨೪ ॥ ಯಸ್ಮಾತ್ - ಯಾವ ಕಾರಣದಿಂದ, ಮಹಾತ್ಮನಾ - ಮಹಾನುಭಾವನಾದ, ಇಕ್ಷ್ವಾಕುನಾಥೇನ - ಇಕ್ಷ್ವಾಕುಕುಲಸ್ವಾಮಿಯಾದ ಶ್ರೀರಾಮನೊಡನೆ, ವೈರಂ - ದ್ವೇಷವು, ಬದ್ಧಂ - ಕಟ್ಟಲ್ಪಟ್ಟಿತೋ, ತಸ್ಮಾತ್ - ಆ ಕಾರಣದಿಂದ, ಇಯಂಲಂಕಾಪುರೀ - ಈ ಲಂಕಾಪಟ್ಟಣವು, ನಾಸ್ತಿ - ಇರುವದಿಲ್ಲ, ಯೂಯಂ - ನೀವುಗಳೂ, (ನಾಸ್ತಿ - ಇರುವದಿಲ್ಲ,) ರಾವಣಶ್ಚ - ರಾವಣನೂ ಸಹಾ, (ನಾಸ್ತಿ - ಇರುವದಿಲ್ಲ.) ॥ ೨೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಚತ್ವಾರಿಂಶಸ್ಸರ್ಗಃ

ಆಯುಧಗಳಾಗಿ ಉಳ್ಳ ಇಂತಹ ವಾನರೋತ್ತಮರ ಸೇನೆಯು ನೂರುನೂರಾಗಿಯೂ, ಸಾವಿರಸಾವಿರವಾಗಿಯೂ, ಲಕ್ಷಲಕ್ಷವಾಗಿಯೂ, ಕೋಟಿಕೋಟಿಯಾಗಿ ಬೆಳೆಸಿ ಬರುತ್ತಿರಲು ನಮ್ಮ ಸುಗ್ರೀವರಾಜನು ನಿಮ್ಮೆಲ್ಲರಿಗೂ ಮಾರಕನಾಗಿ ನಿಮ್ಮೆಲ್ಲರನ್ನೂ ಸದೆಬಡಿಯಲು ಬರುತ್ತಿರುವನು. ಎಲವೆಲವೋ ರಾಕ್ಷಸರಿರಾ! ಮಹಾತ್ಮನಾಗಿಯೂ, ಮಹಾಪರಾಕ್ರಮಶಾಲಿಯಾಗಿಯೂ, ಇಕ್ಷ್ವಾಕುವಂಶಜರಲ್ಲಿ ಶ್ರೇಷ್ಠನಾಗಿಯೂ ಇರುವ ಶ್ರೀರಾಮನೊಡನೆ ನೀವು ವೈರವನ್ನು ಬೆಳೆಸಿದರಾದುದರಿಂದ ಈ ನಿಮ್ಮ ಲಂಕಾನಗರವು ಚಿರಕಾಲ ನಿಲ್ಲುವುದಿಲ್ಲವು. ನೀವೆಲ್ಲರೂ ಸಾಯುವಿರಿ; ನಿಮ್ಮ ದೊರೆಯಾದ ರಾವಣನೂ ನಾಶವಾಗುವನು. ಇದನ್ನು ಚೆನ್ನಾಗಿ ತಿಳಿಯಿರಿ" ಎಂದು ಹೇಳಿದನು. ॥ ೨೦-೨೫ ॥

ಇಂತಿದು ಹನುಮತ್ಕೃತ ಚೈತ್ಯಪ್ರಾಸಾದ ವಿನಾಶನ ವೃತ್ತಾಂತವೆಂಬ
ನಾಲ್ವತ್ತಮೂರನೆಯ ಸರ್ಗವು ಸಮಾಪ್ತವಾದುದು.

ಸಂದಿಷ್ಟೋ ರಾಕ್ಷಸೇಂದ್ರೇಣ ಪ್ರಹಸ್ತಸ್ಯ ಸುತೋ ಬಲೀ । ಜಂಬುಮಾಲೀ ಮಹಾದಂಷ್ಟ್ರೋ ನಿರ್ಜಗಾಮ ಧನುರ್ಧರಃ ॥ ೧ ॥ ರಕ್ತಮಾಲ್ಯಾಂಬರಧರಃ ಸ್ರಗ್ವೀ ರುಚಿರಕುಂಡಲಃ । ಮಹಾನ್ ವಿವೃತ್ತನಯನ ಶ್ಚಂಡಸ್ಸಮರದುರ್ಜಯಃ ॥ ೨ ॥ ಧನುಶ್ಶಕ್ರಧನುಃಪ್ರಖ್ಯಂ ಮಹದ್ರುಚಿರಸಾಯಕಂ । ವಿಸ್ಫಾರಯಾನೋ ವೇಗೇನ ವಜ್ರಾಶನಿಸಮಸ್ವನಂ ॥ ೩ ॥ ತಸ್ಯ ವಿಸ್ಫಾರಘೋಷೇಣ ಧನುಷೋ ಮಹತಾ ದಿಶಃ । ಪ್ರದಿಶಶ್ಚ ನಭಶ್ಚೈವ ಸಹಸಾ ಸಮಪೂರ್ಯತ ॥ ೪ ॥ ರಥೇನ ಖರಯುಕ್ತೇನ

ರಾಕ್ಷಸೇಂದ್ರೇಣ - ರಾಕ್ಷಸನಾಥನಿಂದ, ಸಂದಿಷ್ಟಃ - ಆಜ್ಞಪ್ತನಾದ, ಪ್ರಹಸ್ತಸ್ಯ - ಪ್ರಹಸ್ತನ, ಸುತಃ-ಕುಮಾರನಾದ, ಮಹಾದಂಷ್ಟ್ರಃ-ದೊಡ್ಡಕೋರೆಹಲ್ಲುಗಳುಳ್ಳ, ಧನುರ್ಧರಃ-ಕೋದಂಡಪಾಣಿಯಾದ, ರಕ್ತ....ರಃ - ಕೆಂಪುಹುವ್ವುಗಳನ್ನೂ ವಸ್ತ್ರವನ್ನೂ ಧರಿಸಿರುವ, ಸ್ರಗ್ವೀ - ಕಂಠಮಾಲಿಕೆಯುಳ್ಳ, ರುಚಿರಕುಂಡಲಃ - ಸೊಗಸಾದ ಕರ್ಣಭೂಷಣಗಳುಳ್ಳ, ಮಹಾನ್ - ದೊಡ್ಡದೇಹಿಯಾದ, ವಿವೃ....ನಃ - ತಿರುಗುವ ಕಣ್ಣಾಲಿಗಳುಳ್ಳ, ಚಂಡಃ - ಕ್ರೂರನಾದ, ಸಮ....ಯಃ - ಯುದ್ಧದಲ್ಲಿ ಜಯಿಸಲಸಾಧ್ಯನಾದ, ಜಂಬೂಮಾಲೀ-ಜಂಬುಮಾಲಿಯೆಂಬ ರಾಕ್ಷಸನು, ಶಕ್ರ....ಖ್ಯಂ-ವಜ್ರಾಯುಧತುಲ್ಯವಾದ, ಮಹತ್ - ದೊಡ್ಡದಾದ, ರುಚಿ....ಕಂ - ಹೊಳೆಯುತ್ತಿರುವ ಬಾಣಗಳುಳ್ಳ, ಧನುಃ - ಬಿಲ್ಲನ್ನು, ವಜ್ರಾ....ನಂ-ವಜ್ರಾಯುಧಕ್ಕೂ ಸಿಡಿಲಿಗೂ ಸದೃಶವಾದ ಶಬ್ದವುಳ್ಳದಾಗಿ, ವಿಸ್ಫಾರಯಾನಃ-ಟಂಕಾರಮಾಡುತ್ತಿರುವನಾಗಿ, ನಿರ್ಜಗಾಮ - ಹೊರಟನು. ॥ ೧-೩ ॥ ತಸ್ಯ - ಆ ಜಂಬುಮಾಲಿಯು, ಧನುಷಃ - ಕೋದಂಡದ, ಮಹತಾ - ದೊಡ್ಡದಾದ, ವಿಸ್ಫಾ....ಣ - ಟಂಕಾರಧ್ವನಿಯಿಂದ, ದಿಶಃ - ದಿಕ್ಕುಗಳೂ, ಪ್ರದಿಶಶ್ಚ - ವಿದಿಕ್ಕುಗಳೂ, ಸಹಸೈವ - ಬೇಗನೆ, ಸಮಪೂರ್ಯತ - ತುಂಬಿತು, ನಭಶ್ಚ - ಅಂತರಿಕ್ಷವೂ, ಸಮಪೂರ್ಯತ - ಪೂರಿಸಲ್ಪಟ್ಟಿತು. ॥ ೪ ॥ ಸಹನುಮಾನ್ - ಆ ಹನುಮಂತನು,

---

ಆಮೇಲೆ ದೊಡ್ಡ ಕೋರೆಹಲ್ಲುಗಳುಳ್ಳವನೂ, ಕೆಂಪು ಹೂಗಳ ಸರಗಳನ್ನೂ, ಕೆಂಪು ವಸ್ತ್ರಗಳನ್ನೂ ಧರಿಸಿರುವವನೂ, ಸುಗಂಧಭರಿತವಾದ ಪುಷ್ಪಮಾಲಿಕೆಗಳ ಮುಡಿಯುಳ್ಳವನೂ, ಮನೋಹರವಾದ ಕರ್ಣಕುಂಡಲಗಳುಳ್ಳವನೂ, ಮಹಾಕಾಯನೂ, ಆಳವಾಗಿ ಗುಂಡಗಿರುವ ಕಣ್ಣುಗಳುಳ್ಳವನೂ, ಮಹಾ ಭಯಂಕರನೂ, ಯುದ್ಧದಲ್ಲಿ ಅಜೇಯನೂ, ಮಹಾ ಬಲಾಢ್ಯನೂ ಪ್ರಹಸ್ತಪುತ್ರನೂ ಆದ ಜಂಬುಮಾಲಿಯು ರಾವಣಾಸುರನಿಂದ ಪ್ರೇರಿತನಾಗಿ ಇಂದ್ರಧನುಸ್ಸಿಗೆ ಸಮಾನವಾದ ಮಹಾ ಧನುಸ್ಸನ್ನೂ, ಪ್ರಕಾಶಮಾನವಾದ ಬಾಣಗಳಿಂದ ತುಂಬಿದ ತೂಣೀರವನ್ನೂ ಧರಿಸಿ ಸಿಡಿಲಿಗೆ ಸಮಾನವಾಗಿ ಧನುಷ್ಟಂಕಾರವನ್ನು ಮಾಡುತ್ತ ಆಂಜನೇಯನ ಮೇಲೆ ಯುದ್ಧಕ್ಕೆ ಹೊರಟನು. ಆ ಜಂಬುಮಾಲಿಯ ಧನುಷ್ಟಂಕಾರ ಧ್ವನಿಯು, ದಶದಿಶೆಗಳಲ್ಲಿಯೂ, ಭೂಮ್ಯಾಕಾಶಗಳಲ್ಲಿಯೂ ತುಂಬಿಹೋಯಿತು. ಹೀಗೆ ಜ್ಯಾಘೋಷವನ್ನು ಮಾಡುತ್ತ, ಖರಯುಕ್ತವಾದ ರಥವನ್ನೇರಿ ಬಹು ವೇಗದಿಂದ

ತವಾಗತಮುದೀಕ್ಷ್ಯ ಸಃ । ಹನೂಮಾನ್ವೇಗಸಂಪನ್ನೋ ಜಹರ್ಷಚ ನನಾದಚ ||೫|| ತಂ ತೋರಣವಿಟಂಕಸ್ಥಂ ಹನುಮಂತಂ ಮಹಾಕಪಿಂ । ಜಂಬುಮಾಲೀ ಮಹಾಬಾಹು ರ್ವಿವ್ಯಾಧ ನಿಶಿತೈಶ್ಶರೈಃ ||೬|| ಅರ್ಧಚಂದ್ರೇಣ ವದನೇ ಶಿರಸ್ಯೇಕೇನ ಕರ್ಣಿನಾ । ಬಾಹ್ವೋರ್ವಿವ್ಯಾಧ ನಾರಾಚೈರ್ದಶಭಿಸ್ತಂ ಕಪೀಶ್ವರಂ ||೭|| ತಸ್ಯ ತಚ್ಛುಶುಭೇ ತಾಮ್ರಂ ಶರೇಣಾಭಿಹತಂ ಮುಖಂ । ಶರದೀವಾಂಬುಜಂ ಫುಲ್ಲಂ ವಿದ್ಧಂ ಭಾಸ್ಕರರಶ್ಮಿನಾ ||೮|| ತತ್ತಸ್ಯ ರಕ್ತಂ ರಕ್ತೇನ ರಂಜಿತಂ ಶುಶುಭೇ ಮುಖಂ ।

ಖರಯುಕ್ತೇನ - ಕತ್ತೆಗಳಿಂದ ಕೂಡಿರುವ, ರಥೇನ - ರಥದೊಡನೆ, ಆಗತಂ - ಬಂದ, ತಂ - ಆ ಜಂಬುಮಾಲಿಯನ್ನು, ಉದ್ವೀಕ್ಷ್ಯ - ನೋಡಿ, ವೇಗಸಂಪನ್ನಃ - ವೇಗಯುಕ್ತನಾಗಿ, ಜಹರ್ಷಚ - ಸಂತೋಷವನ್ನೂ ಹೊಂದಿದನು, ನನಾದಚ - ಗರ್ಜನೆಯನ್ನೂ ಮಾಡಿದನು. ||೫|| ಮಹಾಬಾಹುಃ- ಮಹಾ ಪರಾಕ್ರಮಿಯಾದ, ಜಂಬುಮಾಲೀ - ಜಂಬುಮಾಲಿಯು, ತೋರ....ಸ್ಥಂ - ಹೊರಬಾಗಿಲಿನ, ಲೋವೆಯಮೇಲಿರುವ, ಹನೂಮಂತಂ - ಹನುಮಂತನೆಂಬ, ತಂಮಹಾಕಪಿಂ - ಆ ಮಹಾ ವಾನರನನ್ನು, ನಿಶಿತೈಃ - ತೀಕ್ಷ್ಣಗಳಾದ, ಶರೈಃ - ಬಾಣಗಳಿಂದ, ವಿವ್ಯಾಧ - ಹೊಡೆದನು. ||೬|| ವದನೇ - ಮುಖದಲ್ಲಿ, ಅರ್ಧಚಂದ್ರೇಣ - ಅರ್ಧಚಂದ್ರಬಾಣದಿಂದಲೂ, ಶಿರಸಿ - ಮಂಡೆಯಲ್ಲಿ, ಕರ್ಣಿನಾ - ಅಂಕುಶಾಕಾರವಾದ, ಏಕೇನ - ಒಂದು ಬಾಣದಿಂದಲೂ, ಬಾಹ್ವೋಃ - ಭುಜಗಳಲ್ಲಿ, ದಶಭಿಃ - ಹತ್ತಾದ, ನಾರಾಚೈಃ - ನಿಡಿಗೋಲುಗಳಿಂದಲೂ, ತಂಕಪೀಶ್ವರಂ - ಆ ಕಪಿಶ್ರೇಷ್ಠನನ್ನು, ವಿವ್ಯಾಧ - ಪ್ರಹರಿಸಿದನು. ||೭|| ಶರೇಣ - ಬಾಣದಿಂದ, ಅಭಿಹತಂ - ಹೊಡೆಯಲ್ಪಟ್ಟ, ತಾಮ್ರಂ - ಕೆಂಪಾಗಿರುವ, ತಸ್ಯ - ಆ ಆಂಜನೇಯನ, ತನ್ಮುಖಂ - ಆ ಮುಖವು, ಶರದಿ - ಶರತ್ಕಾಲದಲ್ಲಿ, ಭಾಸ್ಕ....ನಾ - ಸೂರ್ಯಕಿರಣಗಳಿಂದ, ವಿದ್ಧಂ - ವ್ಯಾಪ್ತವಾದ, ಫುಲ್ಲಂ - ಅರಳಿದ, ಅಂಬುಜಮಿವ - ಕಮಲದಂತೆ, ಶುಶುಭೇ - ಹೊಳೆಯುತ್ತಿತ್ತು. ||೮|| ತಸ್ಯ - ಆ ಕಪಿಯ, ರಕ್ತಂ - ಮೊದಲೇ ಕೆಂಪಾಗಿರುವ, ರಕ್ತೇನ-ರಕ್ತದಿಂದ, ರಂಜಿತಂ-ಮತ್ತೂ ಕೆಂಪಾದ, ತನ್ಮುಖಂ-ಆ ಮುಖವು, ಆಕಾಶೇ-ಅಂತರಿಕ್ಷದಲ್ಲಿ,

ಬರುತ್ತಿದ್ದ ಆ ಜಂಬುಮಾಲಿಯನ್ನು ನೋಡಿ ಮಹಾ ವೇಗವಂತನಾದ ಹನುಮಂತನು ಮಹಾ ಸಂತೋಷದಿಂದ ಸಿಂಹನಾದವನ್ನು ಮಾಡಿದನು. ||೧–೫|| ಆಗ ಮಹಾಬಾಹುವಾದ ಜಂಬುಮಾಲಿಯು, ಬಹಿರ್ದ್ವಾರದಲ್ಲಿ ಕುಳಿತಿದ್ದ ಮಹಾ ವಾನರನಾದ ಆ ಆಂಜನೇಯನನ್ನು ಬಹು ತೀಕ್ಷ್ಣಗಳಾದ ಬಾಣಗಳಿಂದ ಹೊಡೆದನು. ಅಲ್ಲದೆ ಆ ಜಂಬುಮಾಲಿಯು ಆ ಹನುಮಂತನ ಮುಖದಲ್ಲಿ ಅರ್ಧಚಂದ್ರಾಕೃತಿಯ ಬಾಣವನ್ನೂ ಹಣೆಯಲ್ಲಿ ಕರ್ಣಿಯೆಂಬ ಬಾಣವನ್ನು, ಬಾಹುಗಳಲ್ಲಿ ಹತ್ತು ಬಾಣಗಳನ್ನೂ ಪ್ರಯೋಗಿಸಿದನು. ಆಮೇಲೆ ಸ್ವಾಭಾವಿಕವಾಗಿಯೇ ಬಹು ಕೆಂಪಾಗಿರುವುದೂ, ಬಾಣಹತಿಯಿಂದ ಮತ್ತೂ ಕೆಂಪಾದುದೂ ಆದ ಆ ಆಂಜನೇಯನ ಮುಖವು ಶರತ್ಕಾಲದಲ್ಲಿ ಅರಳಿರುವುದೂ, ಸೂರ್ಯಕಿರಣಗಳಿಂದ ವ್ಯಾಪ್ತವಾದುದೂ ಆದ ಕೆಂದಾವರೆಯಂತೆ ಪ್ರಕಾಶಿಸುತ್ತಿದ್ದಿತು. ಇದೂ ಅಲ್ಲದೆ ಸ್ವಭಾವದಿಂದಲೇ ರಕ್ತಿಮಯುವಾದುದೂ, ರಕ್ತವು ಸುರಿವುದರಿಂದ ಇನ್ನೂ ಕೆಂಪಾದುದೂ ಆದ ಆ ಮಹಾ ಕಪಿಯ ಮುಖವು ಕೆಂಪು ಶ್ರೀಗಂಧದ ಬಟ್ಟುಗಳಿಂದ ನೆನೆಸಲ್ಪಟ್ಟು ಆಕಾಶದಲ್ಲಿ ಪ್ರಕಾಶಿಸುತ್ತಿರುವ ಮಹಾ ಪದ್ಮದಂತೆ ಪ್ರಕಾಶಿಸುತ್ತಿದ್ದಿತು. ಆ ಸಮಯದಲ್ಲಿ ಮಹಾ

ಯಥಾಽಽಕಾಶೇ ಮಹಾಪದ್ಮಂ ಸಿಕ್ತಂ ಚಂದನಬಿಂದುಭಿಃ ॥೯॥ ಚುಕೋಪ ಬಾಣಾಭಿ ಹತೋ ರಾಕ್ಷಸಸ್ಯ ಮಹಾಕಪಿಃ । ತತಃ ಪಾರ್ಶ್ವೇಽತಿವಿಪುಲಾಂ ದದರ್ಶ ಮಹತೀಂ ಶಿಲಾಂ ॥ ೧೦ ॥ ತರಸಾ ತಾಂ ಸಮುತ್ಪಾಟ್ಯ ಚಿಕ್ಷೇಪ ಬಲವದ್ಬಲೀ । ತಾಂ ಶರೈರ್ದಶಭಿಃ ಕ್ರುದ್ಧಸ್ತಾಡಯಾಮಾಸ ರಾಕ್ಷಸಃ ॥ ೧೧ ॥ ವಿಪನ್ನಂ ಕರ್ಮತದ್ದೃಷ್ಟ್ವಾ ಹನುಮಾಂಶ್ಚಂಡವಿಕ್ರಮಃ । ಸಾಲಂ ವಿಪುಲಮುತ್ಪಾಟ್ಯ ಭ್ರಾಮಯಾಮಾಸ ವೀರ್ಯವಾನ್ ॥ ೧೨ ॥ ಭ್ರಾಮಯಂತಂ ಕಪಿಂ ದೃಷ್ಟ್ವಾ ಸಾಲವೃಕ್ಷಂ ಮಹಾಬಲಂ । ಚಿಕ್ಷೇಪ ಸುಬಹೂನ್ ಬಾಣಾನ್ ಜಂಬುಮಾಲೀ ಮಹಾಬಲಃ ॥೧೩॥ ಸಾಲಂ ಚತುರ್ಭಿ

ಚಂದ....ಭಿಃ - ಕೆಂಪುಗಂಧದ ತುಂತುರಿಗಳಿಂದ, ಸಿಕ್ತಂ - ತೋಯಿಸಲ್ಪಟ್ಟ, ಮಹಾಪದ್ಮಂಯಥಾ - ಕೆಂದಾವರೆಯಂತೆ, ಶುಶುಭೇ - ಕಂಗೊಳಿಸಿತು, ರಾಕ್ಷಸಸ್ಯ - ರಕ್ಕಸನ, ಬಾಣಾಭಿಹತಃ - ಬಾಣದಿಂದ ಹೊಡೆಯಲ್ಪಟ್ಟ, ಮಹಾಕಪಿಃ - ಮಹಾ ವಾನರನು, ಚುಕೋಪ - ಕೋಪಗೊಂಡನು. ॥ ೯ ॥ ತತಃ - ಬಳಿಕ, ಬಲೀ - ಬಲಿಷ್ಠನಾದ ಆಂಜನೇಯನು, ಪಾರ್ಶ್ವೇ - ಪಕ್ಕದಲ್ಲಿ, ಅತಿವಿಪುಲಾಂ - ಬಹಳ ವಿಸ್ತಾರವಾದ, ಮಹತೀಂಶಿಲಾಂ - ದೊಡ್ಡ ಕಲ್ಲನ್ನು, ದದರ್ಶ - ಕಂಡನು, ತರಸಾ - ಬೇಗ, ತಾಂ - ಆ ಗುಂಡನ್ನು, ಸಮುತ್ಪಾಟ್ಯ - ಕಿತ್ತು, ಬಲವತ್ - ಬಲವಾಗಿ, ಚಿಕ್ಷೇಪ - ಎಸೆದನು. ॥ ೧೦ ॥ ರಾಕ್ಷಸಃ - ರಕ್ಕಸನು, ಕೃದ್ಧಃ - ಕೋಪಗೊಂಡವನಾಗಿ, ತಾಂ - ಆ ಶಿಲೆಯನ್ನು, ದಶಭಿಶ್ಶರೈಃ - ಹತ್ತು ಬಾಣಗಳಿಂದ, ತಾಡಯಾಮಾಸ - ಹೊಡೆದನು. ॥ ೧೧ ॥ ಚಂಡವಿಕ್ರಮಃ - ಕಡುಪರಾಕ್ರಮಿಯಾದ, ವೀರ್ಯವಾನ್-ಅಂತಸ್ಸಾರವುಳ್ಳ, ಹನುಮಾನ್-ಆಂಜನೇಯನು, ವಿಪನ್ನಂ-ವ್ಯರ್ಥವಾದ, ತತ್ಕರ್ಮ-ಆ ಕೆಲಸವನ್ನು, ದೃಷ್ಟ್ವಾ - ಕಂಡು, ವಿಪುಲಂ - ವಿಸ್ತಾರವಾದ, ಸಾಲಂ - ವಸಲೇಗಿಡವನ್ನು, ಉತ್ಪಾಟ್ಯ - ಕಿತ್ತು, ಭ್ರಾಮಯಾಮಾಸ - ತಿರುಗಿಸಿದನು. ॥ ೧೨ ॥ ಮಹಾಬಲಃ - ಮಹಾ ಬಲಾಢ್ಯನಾದ, ಜಂಬುಮಾಲೀ - ಜಂಬುಮಾಲಿಯು, ಸಾಲವೃಕ್ಷಂ - ವಸಲೇಗಿಡವನ್ನು, ಭ್ರಾಮಯಂತಂ - ತಿರುಗಿಸುತ್ತಿರುವ, ಮಹಾಬಲಂ-ಮಹಾ ಬಲವಂತನಾದ, ಕಪಿಂ-ವಾನರನನ್ನು, ದೃಷ್ಟ್ವಾ-ಕಂಡು, ಸುಬಹೂನ್-ಅನೇಕಗಳಾದ, ಬಾಣಾನ್ - ಬಾಣಗಳನ್ನು, ಚಿಕ್ಷೇಪ - ಎಸೆದನು. ॥ ೧೩ ॥ ಸಾಲಂ - ಸಾಲವೃಕ್ಷ

ಕಪಿಯಾದ ಆಂಜನೇಯನು ಜಂಬುಮಾಲಿಯ ಬಾಣಘಾತದಿಂದ ಬಹಳವಾಗಿ ಕನಲಿದವನಾಗಿ ನಾಲ್ಕೂ ಕಡೆಗಳಲ್ಲಿ ನೋಡಿ ತನ್ನ ಪಕ್ಕದಲ್ಲಿಯೇ ಇದ್ದ ಒಂದು ದೊಡ್ಡ ಕಲ್ಲುಬಂಡೆಯನ್ನು ಕಂಡನು. ಮಹಾ ಪರಾಕ್ರಮಿಯೂ, ಬಲಾಢ್ಯನೂ ಆದ ಹನುಮಂತನು ಕೂಡಲೇ ಆ ಬಂಡೆಯನ್ನು ಕಿತ್ತು ಜಂಬುಮಾಲಿಯ ಮೇಲೆ ಬಲವಾಗೆಸೆದನು. ॥ ೬—೧೦ ॥ ಆಗ ಜಂಬುಮಾಲಿಯು ಅತಿ ವೇಗವಾಗಿ ತನ್ನಮೇಲೆ ಬರುತ್ತಿರುವ ಆ ಬಂಡೆಯನ್ನು ನೋಡಿ ಕೋಪೋದ್ದೀಪಿತನಾಗಿ ಹತ್ತು ಬಾಣಗಳಿಂದ ಅದನ್ನು ನುಚ್ಚುನೂರು ಮಾಡಿದನು. ಮಹಾ ಬಲಪರಾಕ್ರಮಶಾಲಿಯಾದ ಆಂಜನೇಯನು ತಾನೆಸೆದ ಬಂಡೆಯು ಪುಡಿಪುಡಿಯಾದುದನ್ನುನೋಡಿ ಮತ್ತಷ್ಟು ಕನಲಿ ಹತ್ತಿರದಲ್ಲಿಯೇ ಇದ್ದ ಒಂದು ದೊಡ್ಡ ಸಾಲವೃಕ್ಷವನ್ನು ಕಿತ್ತು ಅದನ್ನು ಗಿರಗಿರನೇ ತಿರುಗಿಸಿದನು. ಅದನ್ನು ಕಂಡು ಆ ಜಂಬುಮಾಲಿಯು ಅನೇಕ ಬಾಣಗಳನ್ನು ಪ್ರಯೋಗಿಸಿದನು. ಹಾಗೆ ಪ್ರಯೋಗಿಸಿದ ಬಾಣಗಳಲ್ಲಿ ನಾಲ್ಕರಿಂದ ಆ ಸಾಲವೃಕ್ಷವನ್ನು ತುಂಡರಿಸಿ, ಐದನ್ನು ಆ ಮಹಾ ವಾನರನ ಭುಜಕ್ಕೂ, ಎದೆಗೊಂದು ಬಾಣವನ್ನೂ, ಹತ್ತು ಬಾಣಗಳನ್ನು ಹೃದಯಕ್ಕೂ ಎಸೆದನು. ಆಗ ಹನುಮಂತನು ಆ

ಶ್ಚಿಚ್ಛೇದ ವಾನರಂ ಪಂಚಭಿರ್ಭುಜೇ । ಉರಸ್ಯೇಕೇನ ಬಾಣೇನ ದಶಭಿಸ್ತು ಸ್ತನಾಂ
ತರೇ ॥೧೪॥ ಸಶರೈಃ ಪೂರಿತತನುಃ ಕ್ರೋಧೇನ ಮಹತಾವೃತಃ । ತಮೇವ ಪರಿಘಂ
ಗೃಹ್ಯ ಭ್ರಾಮಯಾಮಾಸ ವೇಗಿತಃ ॥೧೫॥ ಅತಿವೇಗೋಽತಿವೇಗೇನ ಭ್ರಾಮ
ಯಿತ್ವಾ ಬಲೋತ್ಕಟಃ । ಪರಿಘಂ ಪಾತಯಾಮಾಸ ಜಂಬುಮಾಲೇರ್ಮಹೋರಸಿ
॥೧೬॥ ತಸ್ಯ ಚೈವ ಶಿರೋ ನಾಸ್ತಿ ನಬಾಹೂ ನಚ ಜಾನುನೀ । ನಧನುರ್ನರಥೋ
ನಾಶ್ವಾಸ್ತತ್ರಾದೃಶ್ಯಂತ ನೇಷವಃ ॥೧೭॥ ಸ ಹತಸ್ತರಸಾ ತೇನ ಜಂಬುಮಾಲೀ
ಮಹಾಬಲಃ । ಪಪಾತ ನಿಹತೋ ಭೂಮೌ ಚೂರ್ಣಿತಾಂಗವಿಭೂಷಣಃ ॥೧೮॥

ವನ್ನು, ಚತುರ್ಭಿಃ - ನಾಲ್ಕುಬಾಣಗಳಿಂದ, ಚಿಚ್ಛೇದ-ಕತ್ತರಿಸಿದನು, ಭುಜೇ - ಭುಜಗಳನ್ನು, ಪಂಚಭಿಃ-ಐದುಬಾಣಗಳಿಂದಲೂ, ಉರಸಿ - ವಕ್ಷಸ್ಥಳದಲ್ಲಿ, ಏಕೇನಬಾಣೇನ - ಒಂದು ಬಾಣದಿಂದಲೂ, ಸ್ತನಾಂತರೇತು - ಸ್ತನಮಧ್ಯದಲ್ಲಾದರೆ, ದಶಭಿಃ - ಹತ್ತುಬಾಣಗಳಿಂದಲೂ, ವಾನರಂ - ಆಂಜನೇಯ ನನ್ನು, ವಿವ್ಯಾಥ - ಹೊಡೆದನು. ॥೧೪॥ ಶರೈಃ - ಬಾಣಗಳಿಂದ, ಪೂರಿತತನುಃ - ತುಂಬಲ್ಪಟ್ಟ ದೇಹ ವುಳ್ಳವನಾದ್ದರಿಂದಲೇ, ಮಹತಾಕ್ರೋಧೇನ - ಕಡುಕೋಪದಿಂದ, ವೃತಃ - ವ್ಯಾಪ್ತನಾದ, ಸಃ - ಆ ಹನುಮಂತನು, ವೇಗಿತಃ-ವೇಗವುಳ್ಳವನಾಗಿ, ತಮೇವಪರಿಘಂ-ಆ ದೇವಾಲಯದ ಅಗಳೀಮರವನ್ನೇ, ಗೃಹ್ಯ - ತೆಗೆದುಕೊಂಡು, ಭ್ರಾಮಯಾಮಾಸ - ತಿರುಗಿಸಿದನು. ॥೧೫॥ ಅತಿವೇಗಃ - ಬಹುವೇಗ ವುಳ್ಳ, ಬಲೋತ್ಕಟಃ - ಬಲೋನ್ಮತ್ತನಾದ ಆಂಜನೇಯನು, ಅತಿವೇಗೇನ - ಬಹಳ ವೇಗದಿಂದ, ಪರಿಘಂ - ಪರಿಘಾಯುಧವನ್ನು, ಭ್ರಾಮಯಿತ್ವಾ - ತಿರುಗಿಸಿ, ಜಂಬುಮಾಲೇಃ - ಜಂಬುಮಾಲಿಯ, ಮಹೋರಸಿ - ದೊಡ್ಡದಾದ ಎದೆಯಲ್ಲಿ, ಪಾತಯಾಮಾಸ - ಬೀಳುಹಾಕಿದನು. ॥೧೬॥ ತತ್ರ - ಆ ಯುದ್ಧರಂಗದಲ್ಲಿ, ತಸ್ಯ - ಆ ವಜ್ರದಂಷ್ಟ್ರನ, ಶಿರಶ್ಚ - ತಲೆಯೂ, ನಾಸ್ತ್ಯೇವ - ಇಲ್ಲವೇಯಿಲ್ಲ, ಬಾಹೂ - ಭುಜಗಳೂ, ನ - ಕಾಣಿಸಲಿಲ್ಲ, ಜಾನುನೀಚ - ಮೊಣಕಾಲುಗಳೂ, ನ - ಕಾಣಿಸಲಿಲ್ಲ, ಧನುಃ - ಬಿಲ್ಲು, ನ - ಕಾಣಿಸಲ್ಪಡಲಿಲ್ಲ, ರಥಃ - ರಥವು, ನಾದೃಶ್ಯತ - ಕಾಣಲಿಲ್ಲ, ಅಶ್ವಾಃ - ರಥ ವಾಹನಗಳೂ, ಇಷವಃ - ಬಾಣಗಳೂ, ನಾದೃಶ್ಯಂತ - ಕಾಣಲ್ಪಡಲಿಲ್ಲವು. ॥೧೭॥ ತೇನ - ಆ ಆಂಜನೇಯನಿಂದ, ತರಸಾ - ಬಲಾತ್ಕಾರದಿಂದ, ನಿಹತಃ - ಹೊಡೆಯಲ್ಪಟ್ಟವನಾದ ಕಾರಣ, ಚೂರ್ಣಿ....ಣಃ - ಪುಡಿಮಾಡಲ್ಪಟ್ಟ ದೇಹವೂ ಆಭರಣಗಳೂ ಉಳ್ಳ, ಮಹಾಬಲಃ - ಬಹು ಬಲಶಾಲಿ ಯಾದ, ಸಜಂಬುಮಾಲೀ - ಆ ಜಂಬುಮಾಲಿಯು, ಹತಃ - ಮೃತನಾಗಿ, ಭೂಮೌ - ನೆಲದಲ್ಲಿ, ನಿಪ ಪಾತ - ಬಿದ್ದನು. ॥೧೮॥ ರಾವಣಃ - ರಾವಣನು, ನಿಹತಃ - ಸಂಹರಿಸಲ್ಪಟ್ಟ, ಜಂಬುಮಾಲಿಂಚ -

ಬಾಣಗಳಿಂದ ತುಂಬಿದ ದೇಹವುಳ್ಳವನಾಗಿ ಮಹಾ ಭಯಂಕರವಾಗಿ ಕೋಪಗೊಂಡು ಮೈಮರೆತು ಹಲ್ಲುಗಳನ್ನು ಕಟಕಟನೆ ಕಡಿಯುತ್ತ ಬಹಿರ್ದ್ವಾರದಲ್ಲಿಯೇ ಇದ್ದ ಕಬ್ಬಿಣದ ಅಗಳಿಯನ್ನು ಕೈಗೆ ತೆಗೆದುಕೊಂಡು ಅದನ್ನು ಗಿರಗಿರನೆ ತಿರುಗಿಸಿ ಆ ಜಂಬುಮಾಲಿಯ ಎದೆಗೆಸೆದನು. ॥೧೧–೧೫॥ ಆ ಕಬ್ಬಿಣದಗುಳಿಯ ಪೆಟ್ಟು ತಾಕಿದೊಡನೆಯೇ ಆ ಜಂಬು ಮಾಲಿಯ ತಲೆಯಾಗಲಿ, ತೋಳುಗಳಾಗಲಿ, ಮೊಣಕಾಲುಗಳಾಗಲಿ, ಧನುಸ್ಸಾಗಲಿ, ರಥ ವಾಗಲಿ, ರಥಾಶ್ವಗಳಾಗಲಿ ಅಲ್ಲಿ ಕಾಣಿಸದಾಯಿತು. ಹೀಗೆ ಆಂಜನೇಯನಿಂದ ಹೊಡೆಯ ಲ್ಪಟ್ಟು ಮಹಾ ಬಲಶಾಲಿಯಾದ ಆ ಜಂಬುಮಾಲಿಯು ಹತನಾದುದು ಮಾತ್ರವಲ್ಲದೆ ಅವನ ಸರ್ವಾಂಗಗಳೂ, ಅವನ ಭೂಷಣಗಳೂ ಪುಡಿಪುಡಿಯಾಗಿ ರೂಪುಗೆಟ್ಟು, ನೆಲಕ್ಕೆ ಬಿದ್ದು

ಜಂಬುಮಾಲಿಂಚ ನಿಹತಂ ಕಿಂಕರಾಂಶ್ಚ ಮಹಾಬಲಾನ್ । ಚುಕ್ರೋಧ ರಾವಣ ಶ್ಶ್ರುತ್ವಾ ಕೋಪಸಂರಕ್ತಲೋಚನಃ ॥ ೧೯ ॥

ಸರೋಷ ಸಂವರ್ತಿತ ತಾಮ್ರಲೋಚನಃ
ಪ್ರಹಸ್ತಪುತ್ರೇ ನಿಹತೇ ಮಹಾಬಲೇ ।
ಅಮಾತ್ಯಪುತ್ರಾನತಿವೀರ್ಯವಿಕ್ರಮಾ
ನ್ಸಮಾದಿದೇಶಾಽಶು ನಿಶಾಚರೇಶ್ವರಃ ॥ ೨೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಶ್ಚತ್ವಾರಿಂಶಸ್ಸರ್ಗಃ

ಜಂಬುಮಾಲಿಯನ್ನೂ, ಮಹಾಬಲಾನ್ - ಬಹು ಬಲಿಷ್ಠರಾದ, ಕಿಂಕರಾಂಶ್ಚ - ಕಿಂಕರರನ್ನೂ, ಶ್ರುತ್ವಾ - ಕೇಳಿ, ಕೋಪ....ನಃ - ಕೋಪದಿಂದ ಕೆಂಗಣ್ಣುಗಳುಳ್ಳವನಾಗಿ, ಚುಕ್ರೋಧ - ಕೋಪಿಸಿಕೊಂಡನು. ॥ ೧೯ ॥ ಮಹಾಬಲೇ-ಬಹು ಬಲಾಢ್ಯನಾದ, ಪ್ರಹಸ್ತಪುತ್ರೇ-ಪ್ರಹಸ್ತನಮಗನಾದ ಜಂಬುಮಾಲಿಯು, ನಿಹತೇ - ಹೊಡೆಯಲ್ಪಟ್ಟವನಾಗಲು, ನಿಶಾಚರೇಶ್ವರಃ - ಆ ರಾಕ್ಷಸರಾಜನು, ರೋಷ....ನಃ - ಕೋಪದಿಂದ ತಿರುಗಿಸಲ್ಪಟ್ಟ ಕೆಂಗಣ್ಣುಗಳುಳ್ಳವನಾಗಿ, ಅತಿ....ಮಾನ್ - ಬಲು ಅಂತಸ್ಸಾರವೂ ಸಾಮರ್ಥ್ಯವೂ ಉಳ್ಳ, ಅಮಾತ್ಯಪುತ್ರಾನ್ - ಮಂತ್ರಿಕುವರರನ್ನು, ಆಶು - ಬೇಗ, ಸಮಾದಿದೇಶ - ಆಜ್ಞಾಪಿಸಿದನು. ॥ ೨೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಶ್ಚತ್ವಾರಿಂಶಸ್ಸರ್ಗಃ

ಹೋದವು. ಅಷ್ಟರಲ್ಲಿ ಮಹಾ ಬಲಶಾಲಿಯಾದ ರಾವಣಾಸುರನು, ಪರಾಕ್ರಮಶಾಲಿಗಳಾದ ಕಿಂಕರರು ಹತರಾದುದಲ್ಲದೆ ಜಂಬುಮಾಲಿಯೂ ಹತನಾದನೆಂಬ ವಾರ್ತೆಯನ್ನು ಕೇಳಿ ಬಹಳವಾಗಿ ಕೋಪಗೊಂಡು ಕಣ್ಣುಗಳಿಂದ ಕೆಂಡಗಳನ್ನು ಸುರಿಸುತ್ತ ಹಾಗೆಯೇ ಆಲೋಚಿಸುತ್ತಿದ್ದನು. ಮಹಾ ಬಲಪರಾಕ್ರಮಶಾಲಿಯೂ, ಪ್ರಹಸ್ತಪುತ್ರನೂ ಆದ ಜಂಬುಮಾಲಿಯು ಹತನಾದುದರಿಂದ ಆ ರಾವಣಾಸುರನು ಮಹಾ ಕೋಪವನ್ನು ಹೊಂದಿ ಕಣ್ಣುಗಳನ್ನು ಕೆಂಪಾಗಿಸಿಕೊಂಡು ಮಹಾ ಬಲಾಢ್ಯರಾದ ಏಳುಮಂದಿ ಮಂತ್ರಿ ಪುತ್ರರನ್ನು ಕರೆದು, “ ನೀವೀಗಲೇ ಹೋಗಿ ಆ ಕಪಿಯನ್ನು ಹಿಡಿದು ಕೊಂಡುಬನ್ನಿರಿ ” ಎಂದು ಆಜ್ಞಾಪಿಸಿದನು. ॥ ೧೭-೨೦ ॥

ಇಂತಿದು ಪ್ರಹಸ್ತಪುತ್ರಹನನ ವೃತ್ತಾಂತವೆಂಬ ನಾಲ್ವತ್ತನಾಲ್ಕನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಪಂಚಚತ್ವಾರಿಂಶಸ್ಸರ್ಗಃ

ತತಸ್ತೇ ರಾಕ್ಷಸೇಂದ್ರೇಣ ಚೋದಿತಾ ಮಂತ್ರಿಣ ಸ್ಸುತಾಃ । ನಿರ್ಯಯುರ್ಭವನಾತ್ತಸ್ಮಾತ್ಸಪ್ತ ಸಪ್ತಾರ್ಚಿವರ್ಚಸಃ ॥೧॥ ಮಹಾಬಲಪರೀವಾರಾ ಧನುಷ್ಮಂತೋ ಮಹಾಬಲಾಃ । ಕೃತಾಸ್ತ್ರಾಸ್ತ್ರವಿದಾಂ ಶ್ರೇಷ್ಠಾಃ ಪರಸ್ಪರಜಯೈಷಿಣಃ ॥ ೨ ॥ ಹೇಮಜಾಲಪರಿಕ್ಷಿಪ್ತೈರ್ಧ್ವಜವದ್ಭಿಃ ಪತಾಕಿಭಿಃ । ತೋಯದಸ್ವನನಿರ್ಘೋಷೈರ್ವಾಜಿಯುಕ್ತೈರ್ಮಹಾರಥೈಃ ॥ ೩ ॥ ತಪ್ತಕಾಂಚನಚಿತ್ರಾಣಿ ಚಾಪಾನ್ಯಮಿತವಿಕ್ರಮಾಃ । ವಿಷ್ಫಾರಯಂತಸ್ಸಂಹೃಷ್ಟಾಸ್ತಟಿದ್ವಂತ ಇವಾಂಬುದಾಃ ॥೪॥ ಜನನ್ಯಸ್ತುತತಸ್ತೇಷಾಂ

ತತಃ - ಬಳಿಕ, ರಾಕ್ಷಸೇಂದ್ರೇಣ - ರಾಕ್ಷಸರಾಜನಿಂದ, ಚೋದಿತಾಃ - ಕಳುಹಲ್ಪಟ್ಟ, ಸಪ್ತಾ....ಸಃ - ಅಗ್ನಿಯಂತೆ ತೇಜಸ್ವಿಗಳಾದ, ಮಹಾ....ರಾಃ - ದೊಡ್ಡ ಸೈನ್ಯದಿಂದ ಕೂಡಿರುವ, ಧನುಷ್ಮಂತಃ - ಬಿಲ್ಲುಗಾರರಾದ, ಮಹಾಬಲಾಃ - ಬಹು ಬಲಾಢ್ಯರಾದ, ಕೃತಾ....ದಾಂ - ಶಿಕ್ಷಿತಾಸ್ತ್ರರಲ್ಲಿಯೂ ಅಸ್ತ್ರಜ್ಞರಲ್ಲಿಯೂ, ಶ್ರೇಷ್ಠಾಃ - ಉತ್ತಮರಾದ, ಪರ....ಣಃ - ಪ್ರತ್ಯೇಕವಾಗಿ ಹನುಮಂತನನ್ನು ಜಯಿಸಲಪೇಕ್ಷಿಸುವ, ಹೇಮ....ಪ್ತೈಃ - ಸುವರ್ಣ ಕಿಟಕಿಗಳಿಂದ ಕೂಡಿರುವ, ಧ್ವಜವದ್ಭಿಃ - ಚಿತ್ರವಸ್ತ್ರಗಳಿಂದ ಅಲಂಕೃತಗಳಾದ ನಿಶಾನಿಗಳುಳ್ಳ, ತೋಯ... ಷೈಃ - ಮೇಘಗರ್ಜನೆಯಂತೆ ಗರ್ಜನೆಯುಳ್ಳ, ವಾಜಿಯುಕ್ತೈಃ-ಕುದುರೆಗಳಿಂದೊಡಗೂಡಿದ, ಮಹಾರಥೈಃ-ದೊಡ್ಡ ರಥಗಳಿಂದಲೂ ಕೂಡಿರುವ, ಅಮಿ....ಮಾಃ - ಅಪಾರವಾದ ಸಾಮರ್ಥ್ಯವುಳ್ಳ, ತಪ್ತ....ಣಿ - ಅಪರಂಜಿಯಿಂದ ಆಶ್ಚರ್ಯಕರಗಳಾದ, ಚಾಪಾನಿ - ಕೋದಂಡಗಳನ್ನು, ವಿಷ್ಫಾರಯಂತಃ - ಟಂಕಾರಮಾಡುತ್ತಿರುವ, ತೇ - ಆ ಪ್ರಸಿದ್ಧರಾದ, ಸಪ್ತ-ಏಳುಮಂದಿ, ಮಂತ್ರಿಣಃ-ಅಮಾತ್ಯರ, ಸುತಾಃ-ಕುಮಾರರು, ತಟಿದ್ವಂತಃ-ಮಿಂಚುಗಳುಳ್ಳ, ಅಂಬುದಾ ಇವ-ಮೇಘಗಳಂತೆ, ತಸ್ಮಾದ್ಭವನಾತ್ - ಆ ಮನೆಯಿಂದ, ನಿರ್ಯಯುಃ-ಹೊರಟರು. ॥ ೧-೪ ॥ ತತಃ-ಬಳಿಕ, ತೇಷಾಂ-ಆ ಕಿಂಕರರ, ಜನನ್ಯಸ್ತು-ತಾಯಿಯಾದರೆ, ಹತಾ-ಮೃತರಾದ,

---

ಆಮೇಲೆ ಏಳುಜ್ವಾಲೆಗಳಿಗೆ ಸಮಾನವಾದ ಕಾಂತಿಯುಳ್ಳವರೂ, ಮಹಾ ಬಲಾಢ್ಯರೂ,ಸಮಸ್ತ ಶಸ್ತ್ರಾಸ್ತ್ರಗಳನ್ನೂ ಚೆನ್ನಾಗಿ ತಿಳಿದವರಲ್ಲಿ ಶ್ರೇಷ್ಠರೂ, ಮಹಾ ಶೂರರೂ ಆದ ಏಳುಮಂದಿ ಮಂತ್ರಿಕುಮಾರರು ರಾವಣೇಶ್ವರನ ಆಜ್ಞೆಯಿಂದ ದೊಡ್ಡ ಸೇನೆಯೊಡಗೂಡಿ ಹನುಮಂತನೊಡನೆ ಯುದ್ಧಮಾಡಲು ಹೊರಟರು. ಅವರಲ್ಲಿ ಪ್ರತಿಯೊಬ್ಬರೂ ಜಯವನ್ನು ಪಡೆಯಬೇಕೆಂದು ಉತ್ಸಾಹಿತರಾಗಿದ್ದರು. ಅವರೆಲ್ಲರೂ ಬಂಗಾರದಿಂದ ಮಾಡಲ್ಪಟ್ಟು ರಾಜಚಿಹ್ನೆಗಳಿಂದ ಚಿತ್ರಿಸಲ್ಪಟ್ಟ ದೊಡ್ಡ ಟೆಕ್ಕೆಗಳಿಂದಲೂ, ಚಿಕ್ಕ ಚಿಕ್ಕ ಟೆಕ್ಕೆಗಳಿಂದಲೂ ಅಲಂಕೃತವಾಗಿ, ಮೇಘಧ್ವನಿಗೆ ಸಮಾನವಾದ ಧ್ವನಿಯುಳ್ಳ ಕುದುರೆಗಳನ್ನು ಹೂಡಿದ ರಥಗಳನ್ನೇರಿ, ಯುದ್ಧಾಪೇಕ್ಷೆಯಿಂದ ಸಂತುಷ್ಟಸ್ವಾಂತರಾಗಿ ಪುಟಪಾಕಶೋಧಿತವಾದ, ಬಂಗಾರದಿಂದಲಂಕೃತವಾದ, ವಿವಿಧವರ್ಣಗಳ ಧನುಸ್ಸುಗಳನ್ನು ಹಿಡಿದು ಜ್ಯಾಘೋಷವನ್ನು ಮಾಡುತ್ತ ಮಿಂಚಿನ ಬಳ್ಳಿಯೊಡಗೂಡಿದ ಮಹಾ ಮೇಘಗಳಂತೆ ಮಹಾಟ್ಟಹಾಸದಿಂದ ಹೊರಟರು. ಆ ಸಮಯದಲ್ಲಿ ಅವರ ತಾಯಂದರೂ, ಬಂಧುಗಳೂ, ಸ್ನೇಹಿತರೂ,

ವಿದಿತ್ವಾ ಕಿಂಕರರ್ಾ ಹರ್ತಾ । ಬಭೂವುಶ್ಶೋಕಸಂಭ್ರಾನ್ತಾಸ್ಸ ಬಾಂಧವಸುಹೃಜ್ಜನಾಃ ॥ ೫ ॥ ತೇ ಪರಸ್ಪರಸಂಘರ್ಷಾ ಸ್ತಪ್ತಕಾಂಚನಭೂಷಣಾಃ । ಅಭಿಪೇತುರ್ಹನೂಮಂತಂ ತೋರಣಸ್ಥಮವಸ್ಥಿತಂ ॥ ೬ ॥ ಸೃಜಂತೋ ಬಾಣವೃಷ್ಟಿಂ ತೇ ರಥಗರ್ಜಿತನಿಸ್ವನಾಃ । ವೃಷ್ಟಿಮಂತಇವಾಂಭೋದಾ ವಿಚೇರುರ್ನೈರ್ಋತಾಂಬುಧಾಃ ॥ ೭ ॥ ಅವಕೀರ್ಣಸ್ತತಸ್ತಾಭಿ ರ್ಹನೂಮಾಂಚ್ಛರವೃಷ್ಟಿಭಿಃ । ಅಭವತ್ಸಂವೃತಾಕಾರಶ್ಶೈಲರಾಡಿವ ವೃಷ್ಟಿಭಿಃ ॥ ೮ ॥ ಸಶರಾನ್ಮೋಘಯಾಮಾಸ ತೇಷಾಮಾಶುಚರಃ ಕಪಿಃ । ರಥವೇಗಾಂಶ್ಚ ವೀರಾಣಾಂ ವಿಚರನ್ವಿಮಲೇಂಬರೇ ॥ ೯ ॥ ಸತ್ವೈಃ ಕ್ರೀಡನ್ಧನುಷ್ಮದ್ಭಿ

ಕಿಂಕರರ್ಾ - ಕಿಂಕರರನ್ನು, ವಿದಿತ್ವಾ - ತಿಳಿದು, ಸಬಾಂ....ನಾಃ - ಬಂಧುಮಿತ್ರಜನಸಹಿತರಾಗಿ, ಶೋಕ....ತಾಃ - ದುಃಖಾಕ್ರಾಂತರು, ಬಭೂವುಃ - ಆದರು. ॥ ೫ ॥ ತಪ್ತ....ಣಾಃ - ಅಪರಂಜಿಯ ಒಡವೆಗಳುಳ್ಳ, ತೇ - ಆ ಮಂತ್ರಿಪುತ್ರರು, ತೋರಣಸ್ಥಂ - ಹೊರಬಾಗಿಲನಲ್ಲಿ, ಅವಸ್ಥಿತಂ - ಯುದ್ಧಸನ್ನದ್ಧನಾಗಿರುವ, ಹನೂಮಂತಂ - ಆಂಜನೇಯನನ್ನು ಕುರಿತು, ಪರ....ತ್ - ನಾನು ಮುಂದು ತಾನು ಮುಂದು ಎಂಬ ಉತ್ಸಾಹದಿಂದ, ಅಭಿಪೇತುಃ - ಎದುರು ಬಂದರು. ॥ ೬ ॥ ರಥ....ನಾಃ - ರಥಧ್ವನಿಗಳೆಂಬ ಗರ್ಜನೆಗಳುಳ್ಳ, ಬಾಣವೃಷ್ಟಿಂ - ಬಾಣಗಳ ಮಳೆಯನ್ನು, ಸೃಜಂತಃ - ಸುರಿಸುತ್ತಿರುವ, ತೇನೈ....ದಾಃ - ಆ ರಾಕ್ಷಸರೆಂಬ ಮೇಘಗಳು, ವೃಷ್ಟಿಮಂತಃ - ವರ್ಷಿಸುತ್ತಿರುವ, ಅಂಭೋದಾಇವ - ಮೇಘಗಳಂತೆ, ವಿಚೇರುಃ - ಸಂಚರಿಸಿದರು. ॥೭॥ ತತಃ - ಬಳಿಕ, ತಾಭಿ....ಭಿಃ- ಆ ಬಾಣವರ್ಷಗಳಿಂದ, ಅವಕೀರ್ಣಃ - ಎರಚಲ್ಪಟ್ಟ, ಹನುಮಾನ್ - ಆಂಜನೇಯನು, ವೃಷ್ಟಿಭಿಃ - ಮಳೆಯಿಂದ, ಸಂವೃತಾಕಾರಃ-ಮುಚ್ಚಿದ ರೂಪವುಳ್ಳ, ಶೈಲರಾಡಿವ-ಹಿಮವತ್ಪರ್ವತದಂತೆ, ಅಭವತ್-ಆದನು. ॥೮॥ ಆಶುಚರಃ - ವೇಗವಂತನಾದ, ಸಕಪಿಃ - ಆ ವಾನರನು, ವಿಮಲೇ - ನಿರ್ಮಲವಾದ, ಅಂಬರೇ - ಅಂತರಿಕ್ಷದಲ್ಲಿ, ವಿಚರನ್ - ಸಂಚರಿಸುತ್ತ, ತೇಷಾಂವೀರಾಣಾಂ - ಆ ಶೂರರ, ಶರಾನ್ - ಬಾಣಗಳನ್ನೂ, ರಥವೇಗಂಚ - ರಥವೇಗವನ್ನೂ, ಮೋಘಯಾಮಾಸ - ವ್ಯರ್ಥಗೊಳಿಸಿದನು. ॥೯॥ ಪ್ರಭುಃ - ಸಮರ್ಥನಾದ, ಸವೀರಃ - ಆ ಶೂರನಾದ ಆಂಜನೇಯನು, ವ್ಯೋಮ್ನಿ - ಅಂತರಿಕ್ಷದಲ್ಲಿ,

ಕಿಂಕರರೂ, ಜಂಬುಮಾಲಿಯೂ ಸಂಹೃತರಾಗಿದ್ದ ವಾರ್ತೆಯನ್ನು ಕೇಳಿ, ಅಂತಹ ಹನುಮಂತನಮೇಲೆ ಯುದ್ಧಕ್ಕೆ ಹೊರಟಿರುವ ಅವರನ್ನು ನೋಡಿ ಬಹಳವಾಗಿ ದುಃಖಿಸಿದರು. ॥ ೧-೫ ॥ ಆ ಬಳಿಕ ತಪ್ತಕಾಂಚನ ಭೂಷಣ ಭೂಷಿತರಾದ ಆ ಏಳುಮಂದಿ ಮಂತ್ರಿಕುಮಾರರೂ ಪರಸ್ಪರ ಜಯೈಷಿಗಳಾಗಿ ಆ ವನದ ಬಹಿರ್ದ್ವಾರದಲ್ಲಿ ಕುಳಿತಿದ್ದ ಹನುಮಂತನನ್ನೆದುರಿಸಿ ರಥಗರ್ಜನೆಗೆ ಸಮಾನವಾಗಿ ಕೋಲಾಹಲ ಧ್ವನಿಯನ್ನು ಮಾಡುತ್ತ ಆತನಮೇಲೆ ಬಾಣವೃಷ್ಟಿಯನ್ನು ಸುರಿಸುತ್ತ ವರ್ಷಿಸುತ್ತಿರುವ ಮೇಘಗಳಂತೆ ಸುತ್ತಲೂ ಮುತ್ತಿದರು. ಆಗ ಆಂಜನೇಯನು ಮಳೆಮುಚ್ಚಿದ ಪರ್ವತರಾಜನಂತೆ ತೋರುತ್ತಿದ್ದನು. ಹೀಗೆ ಬಾಣವೃಷ್ಟಿಯಿಂದ ಮುಚ್ಚಿದ ದೇಹವುಳ್ಳ ಆತನು ಕೂಡಲೇ ಅತಿವೇಗವಾಗಿ ಸಂಚರಿಸುತ್ತ ಆ ಮಂತ್ರಿಪುತ್ರರ, ರಥವೇಗಕ್ಕೂ, ಬಾಣವೇಗಕ್ಕೂ ಸಿಕ್ಕದೆ ಅಮೋಘವಾದ ಅವರ ಬಾಣಗಳೆಲ್ಲವನ್ನೂ ವ್ಯರ್ಥಗೊಳಿಸಿದನು. ಆ ರಾಕ್ಷಸರಾದರೋ ಬಾಣಗಳನ್ನು ಧರಿಸಿ ಗಗನಮಾರ್ಗದಲ್ಲಿ ಸಂಚರಿಸುತ್ತ ಬಾಣಪ್ರಯೋಗಮಾಡಲಾರಂಭಿಸಿದರು. ಆದರೂ ಮಹಾ ಪರಾಕ್ರಮಶಾಲಿಯಾದ ಹನುಮಂತನು ಆ ರಾಕ್ಷಸರಿಗೆ ಸಿಕ್ಕದೆ ಅವರೊಡನೆ ಆಟವಾಡುವವನಂತೆ ಚಿತ್ರಗತಿಯಿಂದ ಸಂಚರಿ

ರ್ವೋಽಸ್ಮಿನ್ವೀರಃ ಪ್ರಕಾಶತೇ । ಧನುಷ್ಮದ್ಭಿರ್ಯಥಾ ಮೇಘೈರ್ಮಾರುತಃ ಪ್ರಭು
ರಂಬರೇ ॥ ೧೦ ॥ ಸ ಕೃತ್ವಾ ನಿನದಂ ಘೋರಂ ತ್ರಾಸಯಂಸ್ತಾಂ ಮಹಾಚಮೂಮ್ ।
ಚಕಾರ ಹನುಮಾನ್ವೇಗಂ ತೇಷು ರಕ್ಷಸ್ಸು ವೀರ್ಯವಾನ್ ॥ ೧೧ ॥ ತಲೇನಾಭ್ಯ
ಹನತ್ಕಾಂಶ್ಚಿತ್ಪದ್ಭ್ಯಾಂ ಕಾಂಶ್ಚಿತ್ಪರಂತಪಃ । ಮುಷ್ಟಿನಾಭ್ಯಹನತ್ಕಾಂಶ್ಚಿನ್ನಖೈಃ
ಕಾಂಶ್ಚಿದ್ವ್ಯದಾರಯತ್ ॥ ೧೨ ॥ ಪ್ರಮಮಾಥೋರಸಾ ಕಾಂಶ್ಚಿದೂರುಭ್ಯಾಮಪರಾ
ನ್ಕಪಿಃ । ಕೇಚಿತ್ತಸ್ಯ ನಿನಾದೇನ ತತ್ರೈವ ಪತಿತಾ ಭುವಿ ॥ ೧೩ ॥ ತತಸ್ತೇಷ್ವವಸ
ನ್ನೇಷು ಭೂಮೌ ನಿಪತಿತೇಷು ಚ । ತತ್ಸೈನ್ಯಮಗಮತ್ಸರ್ವಂ ದಿಶೋ ದಶ ಭಯಾ

ಧನುಷ್ಮದ್ಭಿಃ - ಕೋದಂಡಪಾಣಿಗಳಾದ, ತೈಃ - ಆ ರಾಕ್ಷಸವೀರರೊಡನೆ, ಕ್ರೀಡ್ಸ (ಇವ) - ಆಟಾಡು ವವನಂತೆ, ಅಬಂಬರೇ - ಅಂತರಿಕ್ಷದಲ್ಲಿ, ಧನುಷ್ಮದ್ಭಿಃ - ಇಂದ್ರಧನುಸ್ಸುಗಳುಳ್ಳ, ಮೇಘೈಃ - ಮೇಘಗಳೊಡನೆ, ಮಾರುತೋಯಥಾ - ವಾಯುವಿನಂತೆ, ಪ್ರಕಾಶತೇ - ಕಂಗೊಳಿಸುತ್ತಿದ್ದನು. ॥೧೦॥ ವೀರ್ಯವಾನ್ - ಪರಾಕ್ರಮಿಯಾದ, ಸಹನುಮಾನ್ - ಆ ಆಂಜನೇಯನು, ಘೋರಂ - ಭಯಂಕರ ವಾದ, ನಿನದಂ - ಧ್ವನಿಯನ್ನು, ಕೃತ್ವಾ - ಮಾಡಿ, ತಾಂಮಹಾಚಮೂಂ - ಆ ದೊಡ್ಡ ಸೈನ್ಯವನ್ನು, ತ್ರಾಸಯನ್ - ಹೆದರಿಸುತ್ತ, ತೇಷುರಕ್ಷಸ್ಸು - ಆ ರಕ್ಕಸರಲ್ಲಿ, ವೇಗಂ - ಜಾಗ್ರತೆಯನ್ನು, ಚಕಾರ - ಮಾಡಿದನು. ॥ ೧೧ ॥ ಪರಂತಪಃ - ಶತ್ರುನಾಶಕನಾದ ಆಂಜನೇಯನು, ಕಾಂಚಿತ್ - ಕೆಲವರನ್ನು, ತಲೇನ - ಅಂಗೈಯಿಂದ, ಅಭ್ಯಹನತ್ - ಹೊಡೆದನು, ಕಾಂಶ್ಚಿತ್ - ಕೆಲವರನ್ನು, ಪಾದೈಃ - ಕಾಲು ಗಳಿಂದಲೂ, ಕಾಂಶ್ಚಿತ್ - ಕೆಲವರನ್ನು, ಮುಷ್ಟಿನಾ - ಮುಷ್ಟಿಯಿಂದಲೂ, ಅಭ್ಯಹನತ್ - ಹೊಡೆದನು, ಕಾಂಶ್ಚಿತ್ - ಕೆಲವರನ್ನು, ನಖೈಃ - ಉಗುರುಗಳಿಂದಲೂ, ವ್ಯದಾರಯತ್ - ಸೀಳಿದನು. ॥ ೧೨ ॥ ಕಪಿಃ - ವಾನರನು, ಉರಸಾ - ಎದೆಯಿಂದ, ಕಾಂಶ್ಚಿತ್ - ಕೆಲವರನ್ನೂ, ಊರುಭ್ಯಾಂ - ತೊಡೆ ಗಳಿಂದ, ಅಪರಾನ್ - ಇನ್ನು ಕೆಲವರನ್ನೂ, ಪ್ರಮಮಾಥ - ಮರ್ದಿಸಿದನು, ಕೇಚಿತ್ - ಕೆಲವರು, ತಸ್ಯ - ಆ ಹನುಮಂತನ, ನಿನಾದೇನ - ಕೂಗಿನಿಂದ, ತತ್ರೈವ - ಆ ರಣರಂಗದಲ್ಲಿಯೇ, ಭುವಿ - ನೆಲದಲ್ಲಿ, ಪತಿತಾಃ - ಬಿದ್ದರು. ॥ ೧೩ ॥ ತತಃ - ಬಳಿಕ, ಅವಸನ್ನೇಷು - ನಾಶಿತರಾದ, ತೇಷು - ಆ ಏಳುಮಂದಿಯೂ, ಭೂಮೌ - ನೆಲದಲ್ಲಿ, ನಿಪತಿತೇಷು - ಬೀಳಲು, ಸರ್ವಂ - ಸಮಸ್ತವಾದ,

ಸುತ್ತ ಇಂದ್ರಧನುಸ್ಸಿನಿಂದ ಕೂಡಿರುವ ಮೇಘಗಳೊಡನೆ ಸಂಚರಿಸುವ ವಾಯುದೇವ ನಂತೆ ಪ್ರಕಾಶಿಸುತ್ತಿದ್ದನು. ॥ ೬–೧೧ ॥ ಆಮೇಲೆ ಆಂಜನೇಯನು ಆ ರಾಕ್ಷಸ ಸೈನ್ಯ ವೆಲ್ಲವೂ ಭಯದಿಂದ ತತ್ತರಿಸಿ ಹೋಗುವಂತೆ ಒಂದು ದೊಡ್ಡ ಸಿಂಹನಾದವನ್ನು ಮಾಡಿ ಅವರೆಲ್ಲರನ್ನೂ ಸಂಹರಿಸುವುದಕ್ಕೆ ತಕ್ಕ ಮಹಾ ವೀರ್ಯ, ಸ್ಥೈರ್ಯ, ಪರಾಕ್ರಮಗಳನ್ನು ಮೆರೆಯಲುಪಕ್ರಮಿಸಿದನು. ಆ ಕೂಡಲೆ ಶತ್ರುಸಂಹಾರಕನಾದ ಆ ಕಪಿವೀರನು ಕೆಲವ ರನ್ನು ತನ್ನ ಅಂಗೈಯಿಂದಲೇ ಅಪ್ಪಳಿಸಿಹೊಡೆದನು. ಕೆಲವರನ್ನು ಕಾಲಿನಿಂದ ಮೆಟ್ಟಿ ತುಳಿದನು ; ಕೆಲವರನ್ನು ತನ್ನ ಮುಷ್ಟಿಘಾತದಿಂದ ನೆಲಕ್ಕುರುಳಿಸಿದನು ; ಇನ್ನು ಕೆಲವರನ್ನು ತನ್ನ ಉಗುರುಗಳಿಂದ ಸಿಗಿದುಹಾಕಿದನು ; ಕೆಲವರು ರಾಕ್ಷಸರನ್ನು ತನ್ನ ಎದೆಯಿಂದ ತಟ್ಟಿ ಕೊಂದನು ; ಕೆಲವರನ್ನು ತನ್ನ ತೊಡೆಗಳಿಂದ ಮರ್ದಿಸಿದನು. ಇನ್ನು ಕೆಲವರು ಆ ಕಪಿ ವೀರನ ಸಿಂಹನಾದವನ್ನು ಕೇಳಿಯೇ ಭೂಮಿಗೆ ಬಿದ್ದು ಸತ್ತರು. ಹೀಗೆ ಅನೇಕ ವಿಧವಾಗಿ ಆ ಮಂತ್ರಿಪುತ್ರರೆಲ್ಲರನ್ನೂ ಆಂಜನೇಯನು ಕೊಂದುಬಿಟ್ಟನು. ಆಗ ಕಳೆದುಳಿದ ಹಲವು

ರ್ದಿತಂ ॥ ೧೪ ॥ ವಿನೇದುರ್ವಿಸ್ವರಂ ನಾಗಾ ನಿಪೇತುರ್ಭುವಿ ವಾಜಿನಃ । ಭಗ್ನನೀಡ ಧ್ವಜಚ್ಛತ್ರೈರ್ಭೂಶ್ಚ ಕೀರ್ಣಾಭವದ್ರಥೈಃ ॥೧೫॥ ಸ್ರವತಾ ರುಧಿರೇಣಾಥ ಸ್ರವಂತ್ಯೋ ದರ್ಶಿತಾಃ ಪಥಿ । ವಿವಿಧೈಶ್ಚ ಸ್ವರೈರ್ಲಂಕಾ ನನಾದ ವಿಕೃತಂ ತದಾ ॥ ೧೬ ॥

ಸತಾನ್ಪ್ರವೃದ್ಧಾನ್ವಿನಿಹತ್ಯ ರಾಕ್ಷಸಾನ್
ಮಹಾಬಲಶ್ಚಂಡಪರಾಕ್ರಮಃ ಕಪಿಃ ।
ಯುಯುತ್ಸುರನ್ಯೈಃ ಪುನರೇವ ರಾಕ್ಷಸೈಸ್ತ
ಮೇವ ವೀರೋಽಭಿಜಗಾಮ ತೋರಣಮ್ ॥ ೧೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಚತ್ವಾರಿಂಶಸ್ಸರ್ಗಃ

ತತ್ಸೈನ್ಯಂ - ಆ ಸೇನೆಯು, ಭಯಾರ್ದಿತಂ - ಹೆದರಿದುದಾಗಿ, ದಶದಿಶಃ - ಹತ್ತು ದಿಕ್ಕುಗಳನ್ನೂ, ಅಗಮತ್ - ಹೊಂದಿತು. ॥ ೧೪ ॥ ನಾಗಾಃ - ಆನೆಗಳು, ವಿಸ್ವರಂ - ದೀನಧ್ವನಿಯುಳ್ಳವಾಗಿ, ವಿನೇದುಃ - ಕೂಗಿಕೊಂಡವು, ವಾಜಿನಃ - ಕುದುರೆಗಳು, ಭುವಿ - ನೆಲದಲ್ಲಿ, ನಿಪೇತುಃ - ಬಿದ್ದವು, ಭೂಃ - ಭೂಮಿಯು, ಭಗ್ನ....ತ್ರೈಃ - ಮುರಿದ ರಥಾವಯವಗಳೂ, ನಿಶಾನಿಗಳೂ, ಛತ್ರಗಳೂ ಉಳ್ಳ, ರಥೈಃ - ರಥಗಳಿಂದ, ಕೀರ್ಣಾ - ತುಂಬಿದುದು, ಅಭವತ್ - ಆಯಿತು. ॥ ೧೫ ॥ ಅಥ - ಬಳಿಕ, ಪಥಿ - ದಾರಿಯಲ್ಲಿ, ಸ್ರವತಾ - ಪ್ರವಿಸುತ್ತಿರುವ, ರುಧಿರೇಣ - ರಕ್ತದಿಂದ, ಸ್ರವಂತ್ಯಃ - ನದಿಗಳು, ದರ್ಶಿತಾಃ - ಕಾಣಿಸಿದುವು, ವಿವಿಧೈಃ - ಬಗೆಬಗೆಯಾದ, ಸ್ವರೈಶ್ಚ - ಸ್ವರಗಳಿಂದಲೂ, ವಿಕೃತಂ - ವಿಕಾರವಾಗಿ, ನನಾದ - ಧ್ವನಿಸಿತು. ॥ ೧೬ ॥ ಮಹಾಬಲಃ - ಬಹು ಬಲಿಷ್ಠನಾದ, ಚಂಡ....ಮಃ - ಕ್ರೂರ ಪರಾಕ್ರಮಿಯಾದ, ವೀರಃ - ಶೂರನಾದ, ಸಕಪಿಃ - ಆ ಆಂಜನೇಯನು, ಪ್ರವೃದ್ಧಾನ್ - ಪ್ರಬಲರಾದ, ರಾಕ್ಷಸಾನ್ - ರಕ್ಕಸರನ್ನು, ವಿನಿಹತ್ಯ - ಸಂಹರಿಸಿ, ಅನ್ಯೈಃರಾಕ್ಷಸೈಃ - ಇತರರಾದ ರಕ್ಕಸರೊಡನೆ, ಪುನರೇವ - ಮತ್ತೆ, ಯುಯುತ್ಸುಃ - ಯುದ್ಧಮಾಡಬಯಸಿ, ತಂತೋರಣಮೇವ - ಆ ವನದ ಬಾಗಿಲನ್ನೇ, ಅಭಿಜಗಾಮ - ಹೊಂದಿದನು. ॥ ೧೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಚತ್ವಾರಿಂಶಸ್ಸರ್ಗಃ

ಮಂದಿ ರಾಕ್ಷಸಸೇನೆಯು ದಶದಿಶೆಗಳಿಗೂ ಓಡಿತು. ಆ ಸೇನೆಯಲ್ಲಿದ್ದ ಆನೆಗಳು ವಿಕೃತ ಸ್ವರದಿಂದ ಅರಚಿದವು. ಕುದುರೆಗಳು ಎದೆಯೊಡೆದು ಸತ್ತು ಭೂಮಿಗೆ ಬಿದ್ದವು. ಮುರಿದು ಬಿದ್ದ ಧ್ವಜದಂಡಗಳಿಂದಲೂ, ಛತ್ರಗಳಿಂದಲೂ ಕೂಡಿದ ರಥಗಳು ಆ ಯುದ್ಧಭೂಮಿಯನ್ನು ತುಂಬಿತು. ॥ ೧೧–೧೫ ॥ ಯುದ್ಧಭೂಮಿಯಲ್ಲಿ ಎಲ್ಲಿ ನೋಡಿದರೂ ರಕ್ತಪ್ರವಾಹಗಳು ಹರಿಯುತ್ತಿದ್ದವು. ಆ ರಣರಂಗದಲ್ಲಿ ಹುಟ್ಟಿದ ರೋದನಧ್ವನಿಯು ಲಂಕಾಪಟ್ಟಣವನ್ನೆಲ್ಲ ಆವರಿಸಿ ಪ್ರತಿಧ್ವನಿತವಾಗುತ್ತಿದ್ದಿತು. ಹೀಗೆ ಮಹಾ ಬಲಪರಾಕ್ರಮಶಾಲಿಯೂ, ಭಯಂಕರ ಯುದ್ಧವೀರನೂ ಆದ ಆಂಜನೇಯನು ಮಹಾ ಬಲಾಢ್ಯರಾದ ಆ ಏಳುಮಂದಿ ಮಂತ್ರಿಕುಮಾರರನ್ನೂ ಸಂಹರಿಸಿ ಮತ್ತೂ ಯುದ್ಧಮಾಡಲಪೇಕ್ಷಿಸಿ ಆ ವನದ ಬಹಿರ್ದ್ವಾರದಲ್ಲಿಯೇ ಕುಳಿತಿದ್ದನು. ॥ ೧೬–೧೭ ॥

ಇಂತಿದು ಮಂತ್ರಿಸುತಸಪ್ತಕ ವಿಮರ್ದನ ವೃತ್ತಾಂತವೆಂಬ
ನಾಲ್ವತ್ತೈದನೆಯ ಸರ್ಗವು ಸಮಾಪ್ತವಾದದು.

ಸುಂದರಕಾಂಡೇ ಷಟ್ಚತ್ವಾರಿಂಶಸ್ಸರ್ಗಃ

ಹತಾನ್ಮಂತ್ರಿಸುತಾನ್ಬುದ್ಧ್ವಾ ವಾನರೇಣ ಮಹಾತ್ಮನಾ । ರಾವಣಸ್ಸಂವೃತಾಕಾರಶ್ಚಕಾರ ಮತಿಮುತ್ತಮಾಂ ॥ ೧ ॥ ಸವಿರೂಪಾಕ್ಷಯೂಪಾಕ್ಷೌ ದುರ್ಧರಂಚೈವ ರಾಕ್ಷಸಂ । ಪ್ರಘಸಂ ಭಾಸಕರ್ಣಂಚ ಪಂಚಸೇನಾಗ್ರನಾಯಕಾನ್ ॥ ೨ ॥ ಸಂದಿದೇಶ ದಶಗ್ರೀವೋ ವೀರಾನ್ನಯವಿಶಾರದಾನ್ । ಹನೂಮದ್ಗ್ರಹಣೇ ವ್ಯಗ್ರಾನ್ವಾಯುವೇಗ ಸಮಾನ್ಯುಧಿ ॥ ೩ ॥ "ಯಾತ ಸೇನಾಗ್ರಗಾಸ್ಸರ್ವೇ ಮಹಾಬಲಪರಿಗ್ರಹಾಃ । ಸವಾಜಿ ರಥಮಾತಂಗಾಸ್ಸಕಪಿಶ್ಶಾಸ್ಯತಾಮಿತಿ ॥ ೪ ॥ ಯತ್ತೈಶ್ಚಖಲು ಭಾವ್ಯಂ ಸ್ಯಾತ್ತಮಾ

ಮಹಾತ್ಮನಾ - ಮಹಾ ಧೈರ್ಯಶಾಲಿಯಾದ, ವಾನರೇಣ - ಕಪಿಯಿಂದ, ಹತಾನ್ - ಸಂಹೃತರಾದ, ಮಂತ್ರಿಸುತಾನ್ - ಅಮಾತ್ಯಪುತ್ರರನ್ನು, ಬುದ್ಧ್ವಾ - ತಿಳಿದು, ಸಂವೃತಾಕಾರಃ - ಗೂಢಾಭಿಪ್ರಾಯವುಳ್ಳ, ರಾವಣಃ - ರಾವಣನು, ಉತ್ತಮಾಂ - ಶ್ರೇಷ್ಠವಾದ, ಮತಿಂ - ಬುದ್ಧಿಯನ್ನು, ಚಕಾರ - ಮಾಡಿದನು. ॥೧॥ ಸದಶಗ್ರೀವಃ - ಆ ರಾವಣನು, ವೀರಾನ್ - ಶೂರರಾದ, ನಯ....ದಾನ್- ನೀತಿಸಮರ್ಥರಾದ, ಹನು....ಗ್ರಾನ್ - ಹನುಮಂತನ ಹಿಡಿಯುವಿಕೆಯಲ್ಲಿ ಜಾಗರೂಕರಾದ, ಯುಧಿ - ಕಾಳಗದಲ್ಲಿ, ವಾಯು....ಮಾನ್ - ವಾಯುವಿಗೆ ಸಮಾನವಾದ ವೇಗವುಳ್ಳ, ವಿರೂ....ಕ್ಷೌ - ವಿರೂಪಾಕ್ಷ ಯೂಪಾಕ್ಷರೆಂಬವರನ್ನೂ, ರಾಕ್ಷಸಂ - ರಾಕ್ಷಸನಾದ, ದುರ್ಧರಂಚ - ದುರ್ಧರನನ್ನೂ, ಪ್ರಘಸಂ - ಪ್ರಘಸನನ್ನೂ, ಭಾಸಕರ್ಣಂಚ - ಭಾಸಕರ್ಣನನ್ನೂ, ಪಂಚ....ಕಾನ್ - ಐದುಮಂದಿ ಸೇನಾಪತಿಗಳನ್ನು ಕುರಿತು, ಸಂದಿದೇಶ - ಆಜ್ಞಾಪಿಸಿದನು. ॥ ೨-೩ ॥ ಮಹಾ....ಹಾಃ - ಮಹಾ ಸೈನ್ಯಪರಿವೃತರಾದ, ಸವಾ....ಗಾಃ - ಕುದುರೆಗಳಿಂದಲೂ, ರಥಗಳಿಂದಲೂ, ಆನೆಗಳಿಂದಲೂ ಕೂಡಿರುವ, ಸರ್ವೇ - ನೀವೆಲ್ಲರೂ, ಸೇನಾಗ್ರಗಾಃ - ಸೈನ್ಯದ ಮುಂದುಗಡೆ ಹೋಗುತ್ತಿರುವರಾಗಿ, ಯಾತ - ಹೋಗಿರಿ,

---

ಮಹಾ ಬಲಪರಾಕ್ರಮಶಾಲಿಯಾದ ಹನುಮಂತನು, ಬಲಾಢ್ಯರಾದ ಆ ಏಳುಮಂದಿ ಮಂತ್ರಿಕುಮಾರರನ್ನೂ ಸಂಹರಿಸಿದನೆಂಬ ವಾರ್ತೆಯನ್ನು ಕೇಳಿದೊಡನೆಯೇ ರಾವಣನಿಗೆ ಸ್ವಲ್ಪ ಸಂಶಯವುಂಟಾಯಿತು ಹೀಗೆ ಸಂಶಯಪಟ್ಟು ಚಿಂತಾಕ್ರಾಂತನಾದರೂ ಅದನ್ನು ಬಹಿರಂಗಪಡಿಸದೆ ಮುಂದೆ ಮಾಡಬೇಕಾದ ಕಾರ್ಯವನ್ನು ಅವನು ಆಲೋಚಿಸಿದನು. ಆ ಬಳಿಕ ದಶಗ್ರೀವನು ತನ್ನ ಮನಸ್ಸಿನಲ್ಲಿಯೇ ಮುಂದೆ ಮಾಡಬೇಕಾದ ಕಾರ್ಯವನ್ನು ನಿಶ್ಚಯಿಸಿಕೊಂಡು, ವಿರೂಪಾಕ್ಷ, ಯೂಪಾಕ್ಷ, ದುರ್ಧರ, ಪ್ರಘಸ, ಭಾಸಕರ್ಣ ಎಂಬ ಐವರನ್ನೂ ಕರೆದನು. ಅವರೆಲ್ಲರೂ ಆಂಜನೇಯನನ್ನು ಹಿಡಿದು ಸಂಹರಿಸುವುದರಲ್ಲಿ ಮಹೋತ್ಸಾಹವುಳ್ಳವರು ; ಯುದ್ಧರಂಗದಲ್ಲಿ ವಾಯುವಿಗೆ ಸಮಾನವಾದ ವೇಗವುಳ್ಳವರು ; ನೀತಿಶಾಸ್ತ್ರವಿಶಾರದರು ; ಮಹಾ ಶೂರರಾದ ಸೇನಾನಾಯಕರು. ॥ ೧-೩ ॥ ರಾವಣನು ಆ ಐವರನ್ನೂ ಹನುಮಂತನಮೇಲೆ ಯುದ್ಧಕ್ಕೆ ಹೋಗಲು ಆಜ್ಞಾಪಿಸಿ ಅವರನ್ನು ಕುರಿತು, "ಮಹಾ ಬಲಪರಾಕ್ರಮಗಳಿಗೆ ನೆಲೆಮನೆಯಾಗಿರುವ ಎಲೈ ಸೇನಾಪತಿಗಳೇ ! ನೀವೆಲ್ಲರೂ, ರಥಗಜತುರಗಾದಿಗಳೊಡನೆ ಇಲ್ಲಿಂದ ಹೊರಟು ಯಾವ ವಿಧದಿಂದಲಾದರೂ ಆ ವಾನರನನ್ನು

ಸಾದ್ಯ ವನಾಲಯಂ । ಕರ್ಮಚಾಪಿಸಮಾಧೇಯಂ ದೇಶಕಾಲವಿರೋಧಿನಂ ॥ ೫ ॥ ನಹ್ಯಹಂ ತಂ ಕಪಿಂ ಮನ್ಯೇ ಕರ್ಮಣಾ ಪ್ರತಿತರ್ಕಯನ್ । ಸರ್ವಥಾ ತನ್ಮಹದ್ಭೂತಂ ಮಹಾಬಲಪರಿಗ್ರಹಂ ॥ ೬ ॥ ಭವೇದಿಂದ್ರೇಣ ವಾ ಸೃಷ್ಟಮಸ್ಮದರ್ಥಂ ತಪೋಬಲಾತ್ । ಸನಾಗಯಕ್ಷಗಂಧರ್ವಾ ದೇವಾಸುರಮಹರ್ಷಯಃ ॥ ೭ ॥ ಯುಷ್ಮಾಭಿಸ್ಸಹಿತೈಸ್ಸರ್ವೈರ್ಮಯಾಸಹವಿನಿರ್ಜಿತಾಃ । ತೈರವಶ್ಯಂ ವಿಧಾತವ್ಯಂ ವ್ಯಳೀಕಂ ಕಿಂಚಿ

ಸಕಪಿಃ - ಆ ವಾನರನು, ಶಾಸ್ಯತಾಂ - ಶಿಕ್ಷಿಸಲ್ಪಡಲಿ, ತಂವನಾಲಯಂ - ಆ ಕಪಿಯನ್ನು, ಆಸಾದ್ಯ- ಹೊಂದಿ, ಯತ್ನೈಃ - ಪ್ರಯತ್ನಗಳಿಂದ, ಭಾವ್ಯಂ - ಆಗತಕ್ಕದು, ಸ್ಯಾತ್ಸಲು - ಆಗುವದಷ್ಟೆ, ದಶ....ನಂ - ದೇಶಕ್ಕೂ ಕಾಲಕ್ಕೂ ವಿರೋಧವಾದ, ಕರ್ಮಚಾಪಿ - ಕೆಲಸವೂ ಕೂಡ, ಸಮಾಧೇಯಂ- ಬಿಡತಕ್ಕದು, ಅಹಂ-ನಾನು, ತಂ-ಆ ವ್ಯಕ್ತಿಯನ್ನು, ಕರ್ಮಣಾ-ವ್ಯಾಪಾರದಿಂದ, ಪ್ರತಿತರ್ಕಯನ್- ಊಹಿಸಿ, ಕಪಿಂ - ವಾನರನನ್ನಾಗಿ, ನಮನ್ಯೇ - ತಿಳಿಯಲಾರೆನು, ಸರ್ವಥಾ - ಯಾವಾಗಲೂ, ಮಹಾ....ಹಂ-ಬಹು ಬಲದಿಂದೊಪ್ಪುತ್ತಿರುವ, ತನ್ಮಹದ್ಭೂತಂ-ಆ ಮಹಾ ಭೂತವು, ಅಸ್ಮದರ್ಥಂ- ನಮಗಾಗಿಯೇ, ಇಂದ್ರೇಣ - ದೇವೇಂದ್ರನಿಂದ, ತಪೋಬಲಾತ್ - ತಪಃಪ್ರಭಾವದಿಂದ, ಸೃಷ್ಟಂ - ಸೃಜಿಸಲ್ಪಟ್ಟದು, ಭವೇದ್ವಾ - ಆಗಿರುವದೋ ಏನೋ. ॥ ೪-೬ ॥ ಸನಾ....ರ್ವಾಃ - ಸರ್ಪ ಯಕ್ಷ ಗಂಧರ್ವರಿಂದೊಡಗೂಡಿದ, ದೇವಾ....ಯಃ - ದೇವತೆಗಳು, ಅಸುರರು, ಮಹಾ ಋಷಿಗಳೂ, ಮಯಾಸಹ - ನನ್ನೊಡನೆ, ಸಹಿತೈಃ - ಸೇರಿರುವ, ಯುಷ್ಮಾಭಿಸ್ಸರ್ವೈಃ - ನಿಮ್ಮೆಲ್ಲರಿಂದಲೂ, ವಿನಿರ್ಜಿತಾಃ - ಪರಾಜಿತರಾಗಿದ್ದಾರೆ, ತೈಃ - ಆ ದೇವಯಕ್ಷನಾಗಾದಿಗಳಿಂದ, ನಃ - ನಮಗೆ, ಕಿಂಚಿದ್ವ್ಯಳೀಕಂ - ಯಾವದೊಂದು ಅನಿಷ್ಟವೂ, ಅವಶ್ಯಂ - ಮುಖ್ಯವಾಗಿ, ವಿಧಾತವ್ಯಮೇವ - ಮಾಡತಕ್ಕದೇಸರಿ, ಅತ್ರ - ಈ ವಿಷಯದಲ್ಲಿ, ಸಂದೇಹಃ - ಸಂಶಯವು, ನ - ಇಲ್ಲವು, ತದೇವ - ಅನಿಷ್ಟರೂಪವಾದ ಮಹದ್ಭೂತವು, ಪರಿಗೃಹ್ಯತಾಂ - ಹಿಡಿಯಲ್ಪಡಲಿ. ॥೭-೮॥ ಧೀರ....ಮಃ - ಧೀರನಾಗಿ ಪರಾಕ್ರಮಿಸುತ್ತಿರುವ, ಹರಿಃ - ಕಪಿಯು, ಭವದ್ಭಿಶ್ಚ - ನಿಮ್ಮಿಂದಲೂ ಕೂಡ, ನಾವಮಾನ್ಯಃ-

---

ಸಂಹರಿಸಿ ಬನ್ನಿರಿ. ನೀವು ಯಾವ ರೀತಿಯಿಂದಲಾದರೂ ಆ ಕಪಿಯನ್ನು ವಂಚಿಸಿ ಮಹಾ ಪ್ರಯತ್ನದಿಂದ ಅವನನ್ನು ಸಂಹರಿಸತಕ್ಕದು. ದೇಶಕಾಲಗಳಿಗೆ ವಿರೋಧವಾದ ಕಾರ್ಯಗಳನ್ನು ಕೆಡಿಸದೆ, ಚೆನ್ನಾಗಿ ಪ್ರಯತ್ನಿಸಿ ಕಾರ್ಯವನ್ನು ಸಾಧಿಸಿಕೊಂಡು ಬರಬೇಕು. ಆ ವಾನರನು ಮಾಡುತ್ತಿರುವ ಕಾರ್ಯಗಳನ್ನು ಆಲೋಚಿಸಿ ನೋಡಿದರೆ ಅವನು ಸಾಮಾನ್ಯ ವಾನರನಂತೆ ಕಾಣುವುದಿಲ್ಲ. ಅವನು ಮಹಾ ಬಲಾಢ್ಯನಾದ ಭೂತವಾಗಿರಬೇಕು. ಅಥವಾ ಒಂದು ವೇಳೆ ದೇವೇಂದ್ರನು ಉಗ್ರತಪವನ್ನು ಮಾಡಿ ನಮ್ಮ ನಿಗ್ರಹಕ್ಕಾಗಿಯೇ ಈ ಮಹಾ ಭೂತವನ್ನು ಸೃಷ್ಟಿಮಾಡಿರಬಹುದೇ ಎಂದು ನನಗೆ ಸಂಶಯವಾಗುತ್ತಿರುವುದು. ॥ ೪–೬ ॥ ಹಿಂದೆ ನಾನು ನಿಮ್ಮೆಲ್ಲರೊಡನೆಯೂ ದೇವಲೋಕಕ್ಕೆ ಹೋಗಿ ಅಲ್ಲಿ ದೇವತೆಗಳನ್ನೂ, ಗಂಧರ್ವರನ್ನೂ, ಯಕ್ಷರನ್ನೂ, ಪನ್ನಗರನ್ನೂ ಜಯಿಸಿದೆನಷ್ಟೆ? ಅವರಿಂದ ಈಗ ನಮಗಾವುದಾದರೂ ಒಂದು ಅಪಾಯವುಂಟಾಗುವುದು ಸಹಜವೇ ಅಲ್ಲವೆ? ಅವರು ಉಂಟುಮಾಡಿರುವ ಅಪಾಯವೇ ಈ ಕಪಿರೂಪವೆಂದು ನನಗೆ ತೋರುವುದು. ಇದರಲ್ಲಿ ಸ್ವಲ್ಪವೂ ಸಂಶಯವಿಲ್ಲವು. ಆದುದರಿಂದ ನೀವು ಹೇಗಾದರೂ ಮಾಡಿ ಬಲಪರಾಕ್ರಮಾದಿಗಳಿಂದ ಆ ವಾನರನನ್ನು ಹಿಡಿಯ

ದೇವ ನಃ ‖ ೮ ‖ ತದೇವ ನಾತ್ರ ಸಂದೇಹಃ ಪ್ರಸಹ್ಯ ಪ್ರತಿಗೃಹ್ಯತಾಮ್ । ನಾವ ಮಾನ್ಯೋ ಭವದ್ಭಿಶ್ಚ ಹರಿರ್ಧೀರಪರಾಕ್ರಮಃ ‖ ೯ ‖ ದೃಷ್ಟಾಹಿ ಹರಯಃ ಪೂರ್ವಂ ಮಯಾ ವಿಪುಲವಿಕ್ರಮಾಃ । ವಾಲೀಚ ಸಹಸುಗ್ರೀವೋ ಜಾಂಬವಾಂಶ್ಚ ಮಹಾ ಬಲಃ ‖೧೦‖ ನೀಲಸ್ಸೇನಾಪತಿಶ್ಚೈವ ಯೇಚಾನ್ಯೇ ದ್ವಿವಿದಾದಯಃ । ನೈವಂ ತೇಷಾಂ ಗತಿರ್ಭೀಮಾ ನತೇಜೋ ನಪರಾಕ್ರಮಃ ‖ ೧೧ ‖ ನಮತಿರ್ನಬಲೋತ್ಸಾಹೌ ನರೂಪ ಪರಿಕಲ್ಪನಮ್ । ಮಹತ್ಸತ್ತ್ವಮಿದಂ ಜ್ಞೇಯಂ ಕಪಿರೂಪಂ ವ್ಯವಸ್ಥಿತಮ್ ‖ ೧೨ ‖ ಪ್ರಯತ್ನಂ ಮಹದಾಸ್ಥಾಯ ಕ್ರಿಯತಾಮಸ್ಯ ನಿಗ್ರಹಃ । ಕಾಮಂ ಲೋಕಾಸ್ತ್ರಯ

ತಿರಸ್ಕರಿಸಲ್ಪಡತಕ್ಕವನಲ್ಲ, ವಿಪು....ಮಾಃ - ಅಪಾರ ಪರಾಕ್ರಮವುಳ್ಳ, ಸಹಸುಗ್ರೀವಃ - ಸುಗ್ರೀವ ಸಹಿತನಾದ, ವಾಲೀಚ - ವಾಲಿಯೂ, ಮಹಾಬಲಃ - ಬಹು ಬಲಿಷ್ಠನಾದ, ಜಾಂಬವಾಂಚ - ಜಾಂಬ ವಂತನೂ, ಸೇನಾಪತಿಃ - ಸೇನಾನಾಯಕನಾದ, ನೀಲಶ್ಚೈವ - ನೀಲನು, ಅನ್ಯೇ - ಇನ್ನು ಕೆಲವ ರಾದ, ದ್ವಿವಿದಾದಯಃ - ದ್ವಿವಿದನೇ ಮೊದಲಾದವರು, ಯೇ - ಯಾರೋ, ತೇಹರಯಃ - ಆ ವಾನರರು, ಮಯಾ - ನನ್ನಿಂದ, ಪೂರ್ವಂ - ಮೊದಲೇ, ದೃಷ್ಟಾಹಿ - ನೋಡಲ್ಪಟ್ಟದ್ದಾರೆಯಷ್ಟೆ, ತೇಷಾಂ - ಅವರ, ಗತಿಃ - ಗಮನವು, ಏವಂ - ಈ ಹನುಮಂತನಗತಿಯಂತೆ, ಭೀಮಾ - ಭಯಂಕರವಾದುದು, ನ - ಅಲ್ಲ, ತೇಜಃ - ಸಾಮರ್ಥ್ಯವು, ಏವಂ - ಇಂತಹದು, ನ - ಅಲ್ಲ, ಮತಿಃ - ಬುದ್ಧಿಯು, ಏವಂ- ಹೀಗೆ, ನ - ಇಲ್ಲ, ಬಲೋತ್ಸಾಹೌ - ದೇಹ ಬಲ ಉತ್ಸಾಹ ಶಕ್ತಿಗಳು, ನಸ್ತಃ - ಇಲ್ಲವು, ರೂಪ....ನಂ- ಬೇಕಾದ ರೂಪವನ್ನು ತಾಳುವ ಶಕ್ತಿಯೂ, ನ - ಇಲ್ಲ, ಇದಂಮಹತ್ಸತ್ವಂ - ಈ ಮಹಾ ಭೂತವು, ಕಪಿರೂಪಂ-ವಾನರರೂಪವುಳ್ಳುದಾಗಿ, ವ್ಯವಸ್ಥಿತಂ-ನೆಲಗೊಂಡಿದೆ, (ಇತಿ-ಇಂತೆಂದು), ಜ್ಞೇಯಂ- ತಿಳಿಯತಕ್ಕದ್ದು, ಮಹತ್ಪ್ರಯತ್ನಂ - ಮಹದಾರಂಭವನ್ನು, ಆಸ್ಥಾಯ - ಹೊಂದಿ, ಅಸ್ಯ - ಈ ಮಹಾ ಭೂತದ, ನಿಗ್ರಹಃ - ಕೊಲ್ಲುವಿಕೆಯು, ಕ್ರಿಯತಾಂ - ಮಾಡಲ್ಪಡಲಿ, ಕಾಮಂ - ಆದರೆ, ಸೇಂದ್ರಾಃ- ಇಂದ್ರನಿಂದೊಡಗೂಡಿದ, ಸಸು....ವಾಃ ದೇವಾಸುರ ಮನುಷ್ಯರಿಂದೊಡಗೂಡಿದ, ತ್ರಯೋಲೋಕಾಃ- ಮೂರು ಲೋಕಗಳೂ, ರಣಾಜಿರೇ - ಯುದ್ಧರಂಗದಲ್ಲಿ, ಭವತಾಂ - ನಿಮ್ಮ, ಅಗ್ರತಃ - ಮುಂದೆ, ಸ್ಥಾತುಂ - ನಿಲ್ಲುವದಕ್ಕೆ, ನಪರ್ಯಾಪ್ತಾಃ - ಶಕ್ತರಲ್ಲವು, ಕಿಂತು - ಆದರೆ, ತಥಾಪಿ - ಹಾಗಾದರೂ,

ಬೇಕು. ಮಹಾ ಭಯಂಕರ ಪರಾಕ್ರಮಿಯಾದ ಈ ವಾನರನು ಕಡೆಗೆ ನಿಮಗೂ ತಿರಸ್ಕರಿ ಸಲಸಾಧ್ಯನಾದವನೆಂದು ನನಗೆ ತೋರುತ್ತದೆ. ಹಿಂದೆ ನಾನು ವಾಲಿಸುಗ್ರೀವರು, ಮಹಾ ಬಲಾಢ್ಯನಾದ ಜಾಂಬವಂತ, ಸೇನಾಧಿಪತಿಯಾದ ನೀಲ, ದ್ವಿವಿದ ಇವರೇ ಮೊದಲಾದ ವಾನರವೀರರನ್ನು ನೋಡಿರುವೆನು. ಅವರಿಗೆ ಈ ವಾನರನಿಗಿರುವಂತಹ ಮನೋವೇಗವಾಗಲಿ, ಬುದ್ಧಿಯಾಗಲಿ, ಬಲಪರಾಕ್ರಮಗಳಾಗಲಿ, ಉತ್ಸಾಹವಾಗಲಿ, ಬೇಕಾದರೂಪವನ್ನು ತಾಳುವ ಸಾಮರ್ಥ್ಯವಾಗಲಿ ಇರಲಿಲ್ಲವು. ಆದುದರಿಂದ ಯೋಚಿಸಿ ನೋಡಿದರೆ ವಾನರ ರೂಪವನ್ನು ಧರಿಸಿ ಬಂದಿರುವ ಇದು ಯಾವುದೋ ಒಂದು ಮಹಾ ಭೂತವೆಂದೇ ತೋರುವುದು. ‖೭-೧೧‖ ಎಲೈ ಸೇನಾನಾಯಕರೇ! ಆದುದರಿಂದ ನೀವೆಲ್ಲರೂ ಪ್ರಯತ್ನಪೂರ್ವಕವಾಗಿ ಈ ವಾನರನನ್ನು ಹಿಡಿದು ಸಂಹರಿಸಬೇಕು. ನಿಮ್ಮ ಬಲಪರಾಕ್ರಮಗಳು ಅಸಾಧಾರಣವಾದುವು ; ಮೂರುಲೋಕಗಳಲ್ಲಿರುವ ದೇವದಾನವರಾಗಲಿ, ಮಾನವರಾಗಲಿ ರಣರಂಗದಲ್ಲಿ ನಿಮ್ಮನ್ನೆದುರಿ ಸಲು ಸಮರ್ಥರಲ್ಲವು. ಹೀಗಿದ್ದರೂ ಯುದ್ಧದಲ್ಲಿ ಜಯಾಪಜಯಗಳು ನಿಶ್ಚಯವಾದುವು

ಸ್ಸೇಂದ್ರಾಸ್ಸಸುರಾಸುರಮಾನವಾಃ ॥೧೩॥ ಭವತಾಮನುಗ್ರತಸ್ಸ್ಥಾತುಂ ನಪರ್ಯಾಪ್ತಾ ರಣಾಜಿರೇ । ತಥಾಪಿ ತು ನಯಜ್ಞೇನ ಜಯಮಾಕಾಂಕ್ಷತಾ ರಣೇ ॥೧೪॥ ಆತ್ಮಾರಕ್ಷ್ಯಃ ಪ್ರಯತ್ನೇನ ಯುದ್ಧಸಿದ್ಧಿರ್ಹಿ ಚಂಚಲಾ" । ತೇ ಸ್ವಾಮಿವಚನಂ ಸರ್ವೇ ಪ್ರತಿಗೃಹ್ಯ ಮಹೌಜಸಃ ॥೧೫॥ ಸಮುತ್ಪೇತುರ್ಮಹಾವೇಗಾ ಹುತಾಶಸಮತೇಜಸಃ । ರಥೈಶ್ಚ ಮತ್ತೈರ್ನಾಗೈಶ್ಚ ವಾಜಿಭಿಶ್ಚ ಮಹಾಜವೈಃ ॥೧೬॥ ಶಸ್ತ್ರೈಶ್ಚ ವಿವಿಧೈಸ್ತೀಕ್ಷ್ಣೈಸ್ಸರ್ವೈಶ್ಚೋಪಚಿತಾಬಲೈಃ । ತತಸ್ತಂ ದದೃಶುರ್ವೀರಾ ದೀಪ್ಯಮಾನಂ ಮಹಾಕಪಿಂ ॥೧೭॥ ರಶ್ಮಿಮಂತಮಿವೋದ್ಯಂತಂ ಸ್ವತೇಜೋರ

ನಯಜ್ಞೇನ - ನೀತಿಯನ್ನರಿತ, ರಣೇ - ಯುದ್ಧದಲ್ಲಿ, ಜಯಂ - ಗೆಲ್ಲುವಿಕೆಯನ್ನು, ಆಕಾಂಕ್ಷತಾ - ಅಪೇಕ್ಷಿಸುತ್ತಿರುವ ಪುರುಷನಿಂದ, ಆತ್ಮಾ - ತನ್ನ ದೇಹವು, ಪ್ರಯತ್ನೇನ - ಪ್ರಯಾಸದಿಂದ, ರಕ್ಷ್ಯಃ- ಸಂರಕ್ಷಿಸತಕ್ಕುದು, ಹಿ - ಯಾವ ಕಾರಣದಿಂದ, ಯುದ್ಧಸಿದ್ಧಿಃ - ಯುದ್ಧರಂಗದಲ್ಲಿನ ಜಯವು, ಚಂಚಲಾ - ಅವ್ಯವಸ್ಥಿತವಾದುದೋ, (ಇತಿ - ಇಂತೆಂದು, ಸಂದಿದೇಶ - ಆಜ್ಞಾಪಿಸಿದನು.) ||೯-೧೪|| ಮಹೌಜಸಃ - ಮಹಾ ವೀರ್ಯವಂತರಾದ, ಮಹಾವೇಗಾಃ - ಅತಿ ವೇಗಿಗಳಾದ, ಹುತಾ....ಸಃ - ಅಗ್ನಿಸದೃಶವಾದ ತೇಜಸ್ಸುಗಳುಳ್ಳ, ತೇಸರ್ವೇ-ಅವರೆಲ್ಲರೂ, ಸ್ವಾಮಿವಚನಂ-ಪ್ರಭುವಿನ ಮಾತನ್ನು, ಪ್ರತಿಗೃಹ್ಯ - ಗ್ರಹಿಸಿ, ರಥೈಃ - ರಥಗಳಿಂದಲೂ, ಮತ್ತೈಃ - ಮದವೇರಿದ, ಮಾತಂಗೈಶ್ಚ - ಆನೆಗಳಿಂದಲೂ, ಮಹಾಜವೈಃ - ಅತಿ ವೇಗವುಳ್ಳ, ವಾಜಿಭಿಶ್ಚ - ಕುದುರೆಗಳಿಂದಲೂ, ತೀಕ್ಷ್ಣೈಃ - ಹದವಿಡಲ್ಪಟ್ಟ, ವಿವಿಧೈಃ - ಅನೇಕಗಳಾದ, ಶಸ್ತ್ರೈಶ್ಚ - ಶಸ್ತ್ರಗಳಿಂದಲೂ, ಸರ್ವೈಃ - ಸಮಸ್ತವಾದ, ಬಲೈಶ್ಚ - ಸೇನೆಗಳಿಂದಲೂ, ಉಪಚಿತಾಃ - ಅಭಿವರ್ಧಿತರಾಗಿ, ಸಮುತ್ಪೇತುಃ - ಹಾರಿಬಂದರು. ||೧೫-೧೬|| ತತಃ - ಬಳಿಕ, ವೀರಾಃ - ಶೂರರಾದ ಪಂಚಸೇನಾನಾಯಕರು, ದೀಪ್ಯಮಾನಂ - ಹೊಳೆಯುತ್ತಿರುವ, ಉದ್ಯಂತಂ - ಉದಿಸಿದ, ರಶ್ಮಿ....ತಂ - ಸೂರ್ಯನಂತಿರುವ, ಸ್ವತೇ....ನಂ - ತನ್ನ ಪ್ರಭಾವಿಶೇಷದಿಂದ ಸೂರ್ಯರೂಪನಾದ, ತೋರಣಸ್ಥಂ - ವನದ ಬಾಗಿಲನಲ್ಲಿರುವ, ಮಹೋತ್ಸಾಹಂ - ಮಹೋತ್ಸಾಹಶಕ್ತಿಯುಳ್ಳ, ಮಹಾಸತ್ವಂ - ಮಹಾ ಮನಸ್ಸುಳ್ಳ, ಮಹಾಬಲಂ - ಮಹಾ ದೇಹಬಲವುಳ್ಳ, ಮಹಾಮತಿಂ - ಬಹು ಬುದ್ಧಿಶಾಲಿಯಾದ, ಮಹಾವೇಗಂ - ಅತಿ ವೇಗಿಯಾದ,

---

ಗಳಲ್ಲವು. ಆದುದರಿಂದ ಯುದ್ಧದಲ್ಲಿ ಜಯವನ್ನು ಕೋರುವ ಯುದ್ಧ ನೀತಿ ನಿಪುಣರು ಸರ್ವ ಪ್ರಯತ್ನಗಳಿಂದಲೂ ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳಬೇಕು. ಆದುದರಿಂದ ನೀವೆಲ್ಲರೂ ಬಹಳ ಜಾಗರೂಕರಾಗಿರಬೇಕು" ಎಂದು ಹೇಳಿದನು. ಹೀಗೆ ಆ ದಶಮುಖನು ಆ ಐವರು ಸೇನಾನಾಯಕರಿಗೂ ಹಿತೋಕ್ತಿಗಳನ್ನು ಹೇಳಿಕಳುಹಲು, ಮಹಾ ಬಲಾಢ್ಯರೂ ಮಹಾ ವೇಗಶಾಲಿಗಳೂ, ಅಗ್ನಿಹೋತ್ರನಿಗೆ ಸಮಾನವಾದ ಪರಾಕ್ರಮವುಳ್ಳವರೂ ಆದ ಆ ಸೇನಾಪತಿಗಳೈವರೂ ತಮ್ಮೊಡೆಯನ ಆಜ್ಞೆಯನ್ನು ಶಿರಸಾವಹಿಸಿದವರಾಗಿ, ರಥಗಳೊಡನೆಯೂ, ಮದಿಸಿದ ಆನೆಗಳೊಡನೆಯೂ, ಮಹಾ ವೇಗವುಳ್ಳ ಕುದುರೆಗಳೊಡನೆಯೂ, ನಾನಾ ವಿಧಗಳಾದ ತೀಕ್ಷ್ಣಬಾಣಗಳೊಡನೆಯೂ ಹೊರಟವರಾಗಿ ಸಮಸ್ತ ಸೇನೆಯನ್ನೂ ಹಿಂದಿಟ್ಟುಕೊಂಡು ಹನುಮಂತನೊಡನೆ ಯುದ್ಧಮಾಡಲು ಅಶೋಕವನದ ತೋರಣದ ಬಳಿಗೈದಿದರು. ॥ ೧೨–೧೬ ॥ ಆ ಬಳಿಕ ಅವರೆಲ್ಲರೂ, ಬಹಳವಾಗಿ ಪ್ರಕಾಶಿಸುತ್ತ, ಆಗ ತಾನೆ ಉದಿಸಿದ ಸೂರ್ಯನಂತಿರುವನನ್ನೂ, ತನ್ನ ಕಾಂತಿಯಿಂದ ಸೂರ್ಯನನ್ನನುಕರಿಸು

ಶ್ಚಮಾಲಿನಮ್ । ತೋರಣಸ್ಥಂ ಮಹಾಸತ್ವಂ ಮಹಾವೇಗಂ ಮಹಾಬಲಂ ॥ ೧೮ ॥ ಮಹಾಮತಿಂ ಮಹೋತ್ಸಾಹಂ ಮಹಾಕಾಯಂ ಮಹಾಕಪಿಂ । ತಂ ಸಮೀಕ್ಷ್ಯೈವ ತೇ ಸರ್ವೇ ದಿಕ್ಷು ಸರ್ವಾಸ್ವವಸ್ಥಿತಾಃ ॥ ೧೯ ॥ ತೈಸ್ತೈಃ ಪ್ರಹರಣೈರ್ಭೀಮೈರಭಿಪೇತುಸ್ತತಸ್ತತಃ । ತಸ್ಯ ಪಂಚಾಯಸಾಸ್ತೀಕ್ಷ್ಣಾಃ ಶಿತಾಃ ಪೀತಮುಖಾಶ್ಶರಾಃ ॥೨೦॥ ಶಿರಸ್ಯುತ್ಪಲಪತ್ರಾಭಾ ದರ್ಧುರೇಣ ನಿಪಾತಿತಾಃ । ಸತೈಃ ಪಂಚಭಿರಾವಿದ್ಧಶ್ಶರೈಶ್ಶಿರಸಿ ವಾನರಃ ॥ ೨೧ ॥ ಉತ್ಪಪಾತ ನದನ್ವ್ಯೋಮ್ನಿ ದಿಶೋದಶ ವಿನಾದಯನ್ । ತತಸ್ತು ದರ್ಧುರೋ ವೀರಸ್ಸರಥಃ ಸ್ಸಜ್ಜಕಾರ್ಮುಕಃ ॥ ೨೨ ॥ ಕಿರನ್ ಶರಶತೈಸ್ತೀಕ್ಷ್ಣೈ

ಮಹಾಕಾಯಂ - ದೊಡ್ಡ ದೇಹವುಳ್ಳ, ಮಹಾಬಲಂ - ಅತಿಶಯವಾದ ಶಕ್ತಿಯುಳ್ಳ, ತಂಮಹಾಕಪಿಂ - ಆ ಮಹಾ ವಾನರನನ್ನು, ದದೃಶುಃ-ಕಂಡರು. ॥೧೭-೧೮॥ ತೇಸರ್ವೇ - ಆ ರಕ್ಕಸರೆಲ್ಲರೂ, ತಂ - ಆ ಕಪಿಯನ್ನು, ಸಮೀಕ್ಷ್ಯೈವ-ನೋಡುತ್ತಲೇ, ಸರ್ವಾಸುದಿಕ್ಷು - ಎಲ್ಲಾದಿಕ್ಕುಗಳಲ್ಲಿಯೂ, ಅವಸ್ಥಿತಾ - ನಿಂತವರಾಗಿ, ಭೀಮೈಃ-ಭಯಂಕರವಾದ, ತೈಸ್ತೈಃಪ್ರಹರಣೈಃ - ಆ ಆ ಆಯುಧಗಳಿಂದ, ತತಸ್ತತಃ - ಅಲ್ಲಲ್ಲಿ, ಅಭಿಪೇತುಃ - ಹೊಡೆದರು. ॥೧೯॥ ದುರ್ಧರೇಣ - ದುರ್ಧರನಿಂದ, ಆಯಸಾಃ - ಕಬ್ಬಿಣದ, ತೀಕ್ಷ್ಣಾಃ - ಕ್ರೂರಗಳಾದ, ಶಿತಾಃ - ಹದವಿಡಲ್ಪಟ್ಟ, ಪೀತಮುಖಾಃ - ಹಸುರಾದ ಕೊನೆಗಳುಳ್ಳ, ಉತ್ಪ....ಭಾಃ-ನೈದಿಲೆಯ ಕಾಂತಿಯಂತೆ ಕಾಂತಿಯುಳ್ಳ, ಶರಾಃ-ಬಾಣಗಳು, ತಸ್ಯ-ಆ ಮಾರುತಿಯ, ಶಿರಸಿ - ಮಂಡೆಯಲ್ಲಿ, ನಿಪಾತಿತಾಃ - ಬೀಳಿಸಲ್ಪಟ್ಟವು. ॥ ೨೦ ॥ ಸವಾನರಃ - ಆ ಕಪಿಯು, ತೈಃಪಂಚಭಿಶ್ಶರೈಃ - ಐದು ಬಾಣಗಳಿಂದ, ಶಿರಸಿ - ಶಿರಸ್ಸಿನಲ್ಲಿ, ಆವಿದ್ಧಃ - ಹೊಡೆಯಲ್ಪಟ್ಟವನಾದ ಕಾರಣವೇ, ನದನ್ - ಧ್ವನಿಮಾಡುತ್ತ, ದಶದಿಶಃ - ಹತ್ತು ದಿಕ್ಕುಗಳನ್ನೂ, ವಿನಾದಯನ್ - ಪ್ರತಿಧ್ವನಿಗೊಳಿಸುವನಾಗಿ, ವ್ಯೋಮ್ನಿ - ಅಂತರಿಕ್ಷದಲ್ಲಿ, ಉತ್ಪಪಾತ - ಹಾರಿದನು. ॥ ೨೧ ॥ ತತಃ - ಬಳಿಕ, ಮಹಾಬಲಃ - ಅತಿ ಬಲಾಢ್ಯನಾದ, ವೀರಃ - ಶೂರನಾದ, ಸರಥಃ - ರಥಯುಕ್ತನಾದ, ಸಜ್ಜಕಾರ್ಮುಕಃ-ಹೆದೆಯೊಡಗೂಡಿದ ಬಿಲ್ಲುಳ್ಳ ದುರ್ಧರನು, ತೀಕ್ಷ್ಣೈಃ-ಕ್ರೂರಗಳಾದ, ಶರಶತೈಃ- ನೂರು ಬಾಣಗಳಿಂದ, ಕಿರನ್ - ಎಸೆಯುತ್ತಿರುವನಾಗಿ, ಅಭಿಪೇದೇ - ಎದಿರುಬಂದನು. ॥ ೨೨ ॥

ವಂತಿರುವವನೂ, ಮಹೋತ್ಸಾಹವುಳ್ಳವನೂ, ಉದ್ಯಮಶೀಲನೂ, ಅಧಿಕ ಬಲಸಮನ್ವಿತನೂ ಆದ ಆ ಹನುಮಂತನನ್ನು ಆ ವನದ ಬಹಿರ್ದ್ವಾರದಲ್ಲಿ ಕಂಡರು. ಆ ಸಮಯದಲ್ಲಿ ಆ ಸೇನಾನಾಯಕರೆಲ್ಲರೂ, ಮಹಾ ಬುದ್ಧಿಶಾಲಿಯೂ, ಮಹಾ ವೇಗಶಾಲಿಯೂ, ಮಹಾ ಬಲಶಾಲಿಯೂ ಮತ್ತು ಮಹಾಕಾಯನೂ ಆದ ಆ ಹನುಮಂತನನ್ನು ಕಂಡೊಡನೆಯೇ ಅವನನ್ನು ಸುತ್ತಿಕೊಂಡು ಮಹಾ ಭಯಂಕರವಾಗಿ ವಿವಿಧಾಯುಧಗಳಿಂದ ಅವನನ್ನೆದುರಿಸಿದರು. ಆ ಸೇನಾಪತಿಗಳಲ್ಲಿ ಒಬ್ಬನಾದ ದುರ್ಧರನು ಬಹು ಕ್ರೂರಗಳೂ, ತೀಕ್ಷ್ಣಗಳೂ ಆಗಿ ಪೀತಮುಖಗಳುಳ್ಳ ಕನ್ನೈದಿಲೆಯ ರೇಖುಗಳಂತೆ ಕಾಂತಿಯುಳ್ಳ ಐದು ಬಾಣಗಳನ್ನು ಹನುಮಂತನ ಮೇಲೆ ಪ್ರಯೋಗಿಸಿದನು. ॥ ೧೭-೨೦ ॥ ಹೀಗೆ ದುರ್ಧರನು ಪ್ರಯೋಗಿಸಿದ ಆ ಐದು ಬಾಣಗಳೂ ಆ ಹನುಮಂತನ ಶಿರಸ್ಸಿಗೆ ತಾಕಲು ಅವನು ಬಹು ಭಯಂಕರವಾದ ಸಿಂಹನಾದವನ್ನು ಮಾಡಿ ತಕ್ಷಣವೇ ಗಗನಕ್ಕೆ ಹಾರಿದನು. ಆಗ ಮಹಾ ಬಲಪರಾಕ್ರಮಶಾಲಿಯಾದ ದುರ್ಧರನೂ, ತನ್ನ ರಥದೊಡನೆ ಆ ಹನುಮಂತನನ್ನು ಹಿಂಬಾಲಿಸಿಯೇ ಆಕಾಶಕ್ಕೆ ಹಾರಿದನು.

ರಭಿಪೇದೇ ಮಹಾಬಲಃ । ಸಕಪಿರ್ವಾರಯಾಮಾಸ ತಂ ವ್ಯೋಮ್ನಿ ಶರವರ್ಷಿಣಂ ॥ ೨೩ ॥ ವೃಷ್ಟಿಮಂತಂ ಪಯೋದಾಂತೇ ಪಯೋದಮಿವ ಮಾರುತಃ । ಅರ್ದ್ಯಮಾನಸ್ತತಸ್ತೇನ ದರ್ಧುರೇಣಾನಿಲಾತ್ಮಜಃ ॥ ೨೪ ॥ ಚಕಾರ ಕದನಂ ಭೂಯೋ ವ್ಯವರ್ಧತಚ ವೇಗವಾನ್ । ಸದೂರಂ ಸಹಸೋತ್ಪತ್ಯ ದರ್ಧುರಸ್ಯ ರಥೇ ಹರಿಃ ॥೨೫॥ ನಿಪಪಾತ ಮಹಾವೇಗೋ ವಿದ್ಯುದ್ರಾಶಿರ್ಗಿರಾವಿವ । ತತಸ್ಸಮಥಿತಾಷ್ಟಾಶ್ವಂ ರಥಂ ಭಗ್ನಾಕ್ಷಕೂಬರಂ ॥ ೨೬ ॥ ವಿಹಾಯ ನ್ಯಪತದ್ಭೂಮೌ ದರ್ಧುರಸ್ತ್ಯಕ್ತಜೀವಿತಃ । ತಂ ವಿರೂಪಾಕ್ಷಯೂಪಾಕ್ಷೌ ದೃಷ್ಟ್ವಾ ನಿಪತಿತಂ ಭುವಿ ॥ ೨೭ ॥ ಸಂಜಾತರೋಷೌ

ಸಕಪಿಃ - ಆ ವಾನರನು, ಶರವರ್ಷಿಣಂ - ಬಾಣಗಳನ್ನು ಸುರಿಸುತ್ತಿರುವ, ತಂ - ಆ ದುರ್ಧರನನ್ನು, ಪಯೋದಾಂತೇ - ಶರದೃತುವಿನಲ್ಲಿ, ವೃಷ್ಟಿಮಂತಂ - ಮಳೆ ಸುರಿಸುತ್ತಿರುವ, ಪಯೋದಂ - ಮೇಘವನ್ನು, ಮಾರುತಇವ - ವಾಯುವಿನಂತೆ, ವ್ಯೋಮ್ನಿ - ಅಂತರಿಕ್ಷದಲ್ಲಿ, ವಾರಯಾಮಾಸ - ತಡೆದನು. ॥ ೨೩ ॥ ತತಃ - ಬಳಿಕ, ತೇನದುರ್ಧರೇಣ - ಆ ದುರ್ಧರನಿಂದ, ಅರ್ದ್ಯಮಾನಃ - ಮರ್ದಿಸಲ್ಪಟ್ಟ, ಅನಿಲಾತ್ಮಜಃ - ವಾಯುಪುತ್ರನು, ವೇಗವಂತನಾಗಿ, ಭೂಯಃ - ಮತ್ತು, ವ್ಯವರ್ಧತ - ಬೆಳೆದನು, ಕದನಂ - ಕಾಳಗವನ್ನು, ಚಕಾರಚ - ಮಾಡಲೂ ಮಾಡಿದನು. ॥ ೨೪ ॥ ಸಹರಿಃ - ಆ ಕಪಿಯು, ಮಹಾವೇಗಃ - ವೇಗವುಳ್ಳವನಾಗಿ, ದೂರಂ - ದೂರವಾಗಿ, ಸಹಸಾ - ಬೇಗನೆ, ಉತ್ಪತ್ಯ - ಹಾರಿ, ದುರ್ಧರಸ್ಯ - ದುರ್ಧರನ, ರಥೇ - ರಥದಲ್ಲಿ, ಗಿರೌ - ಬೆಟ್ಟದಮೇಲೆ, ವಿದ್ಯು....ವ - ಸಿಡಿಲುಗಳ ತಂಡದಂತೆ, ನಿಪಪಾತ - ಬಿದ್ದನು. ॥೨೫॥ ತತಃ - ಬಳಿಕ, ದುರ್ಧರಃ - ದುರ್ಧರನು, ಮಥಿ....ಶ್ವಂ-ಧ್ವಂಸಿಗೊಳಿಸಿದ ಎಂಟು ಕುದುರೆಗಳುಳ್ಳ, ಭಗ್ನಾ....ರಂ ಮುರಿದುಹೋದ ಬಂಡಿಯ ಅಚ್ಚು ಈಚುಮರವೂ ಉಳ್ಳ, ರಥಂ - ರಥವನ್ನು, ವಿಹಾಯ - ಬಿಟ್ಟು, ತ್ಯಕ್ತಜೀವಿತಃ - ಬಿಡಲ್ಪಟ್ಟ ಪ್ರಾಣವುಳ್ಳವನಾಗಿ, ಭೂಮೌ - ನೆಲದಲ್ಲಿ, ನ್ಯಪತತ್ - ಬಿದ್ದನು. ॥೨೬॥ ದುರ್ಧರ್ಷೌ - ತಿರಸ್ಕರಿಸಲಶಕ್ಯರಾದ, ಅರಿಂದಮೌ - ಶತ್ರುನಾಶಕರಾದ, ವಿರೂ....ಕ್ಷೌ - ವಿರೂಪಾಕ್ಷ ಯೂಪಾಕ್ಷರು, ಭುವಿ - ನೆಲದಲ್ಲಿ, ನಿಪತಿತಂ - ಬಿದ್ದಿರುವ, ತಂ - ಆ ದುರ್ಧರನನ್ನು, ದೃಷ್ಟ್ವಾ - ಕಂಡು, ಸಂಜಾತರೋಷೌ-

ಹೀಗೆ ಆಕಾಶಕ್ಕೆ ಹಾರಿ ನಿಂತ ಆ ದುರ್ಧರನು ಅಲ್ಲಿಯೇ ಜ್ಯಾಘೋಷವನ್ನು ಮಾಡಿ ಆ ಹನುಮಂತನಮೇಲೆ ಬಾಣವೃಷ್ಟಿಯನ್ನೇ ಸುರಿಸಿದನು. ಈ ರೀತಿ ಗಗನಮಾರ್ಗದಲ್ಲಿ ಶರವೃಷ್ಟಿಯನ್ನು ಸುರಿಸುತ್ತಿರುವ ದುರ್ಧರನನ್ನು ನೋಡಿ ಹನುಮಂತನು, ಶರದೃತುವಿನಲ್ಲಿ ವರ್ಷಿಸುತ್ತಿರುವ ಮಹಾ ಮೇಘವನ್ನು ವಾಯುದೇವನಡ್ಡಗಿಸುವಂತೆ ಅವನನ್ನು ಅಡ್ಡಗಿಸಿದನು. ಹೀಗೆ ಅಡ್ಡಗಿಸಿದರೂ ಆ ದುರ್ಧರನು ಹನುಮಂತನನ್ನು ಕೂರಂಬುಗಳಿಂದ ಮರ್ದಿಸುತ್ತಲೇ ಇದ್ದನು. ಆಗ ಹನುಮಂತನು ಹಾಗಾದರೂ ಆ ದರ್ಧುರನೊಡನೆ ಯುದ್ಧಮಾಡುತ್ತ ಮರ್ದಿಸಿದನು. ಇಷ್ಟೆಯಲ್ಲದೆ ಆ ಕಪಿವೀರನು ತನ್ನ ದೇಹವನ್ನು ಮಹಾ ಪರ್ವತೋಪಮವಾಗಿ ಬೆಳಿಸಿಕೊಂಡು ಸಾಹಸದಿಂದ ಬಹು ದೂರ ಮೇಲಕ್ಕೆ ಹಾರಿ ಮಹಾ ವೇಗದಿಂದ ಸಿಡಿಲಿನಂತೆ ಆ ದುರ್ಧರನ ರಥದಮೇಲೆ ಬಿದ್ದನು. ॥ ೨೧–೨೫ ॥ ಹೀಗೆ ಹನುಮಂತನು ಆ ರಥದಮೇಲೆ ಬಿದ್ದೊಡನೆಯೇ ಅದಕ್ಕೆ ಹೂಡಿದ್ದ ಎಂಟು ಕುದುರೆಗಳು ಕೂಡಲೇ ಮಡಿದುಹೋದವು. ರಥದ ಈಚೇಮರವೂ, ಅಚ್ಚೂ ಮುರಿದುಬಿದ್ದವು. ಆಗ ದುರ್ಧರನು ತನ್ನ ರಥವು ಪುಡಿಪುಡಿಯಾಗಿ ನೆಲಕ್ಕೆ ಬಿದ್ದೊಡನೆಯೇ ತಾನೂ ವಿಗತಪ್ರಾಣನಾಗಿ ನೆಲಕ್ಕುರುಳಿದನು. ಆಮೇಲೆ

ದರ್ಧರ್ಷಾವುತ್ಪೇತತುರರಿಂದಮೌ । ಸತಾಭ್ಯಾಂ ಸಹಸೋತ್ಪತ್ಯ ವಿಷ್ಟಿತೋ ವಿಮಲೇಽಂಬರೇ ॥ ೨೮ ॥ ಮುದ್ಗರಾಭ್ಯಾಂ ಮಹಾಬಾಹುರ್ವಕ್ಷಸ್ಯಭಿಹತಃ ಕಪಿಃ । ತಯೋರ್ವೇಗವತೋರ್ವೇಗಂ ವಿನಿಹತ್ಯ ಮಹಾಬಲಃ ॥ ೨೯ ॥ ನಿಪಪಾತ ಪುನರ್ಭೂಮೌ ಸುಪರ್ಣಸಮವಿಕ್ರಮಃ । ಸಸಾಲವೃಕ್ಷಮಾಸಾದ್ಯ ತಮುತ್ಪಾಟ್ಯಚ ವಾನರಃ ॥ ೩೦ ॥ ತಾವುಭೌ ರಾಕ್ಷಸೌ ವೀರೌ ಜಘಾನ ಪವನಾತ್ಮಜಃ । ತತಸ್ತ್ರಾಂಸ್ತ್ರೀನ್ಹತಾನ್ ಜ್ಞಾತ್ವಾ ವಾನರೇಣ ತರಸ್ವಿನಾ ॥ ೩೧ ॥ ಅಭಿಪೇದೇ ಮಹಾವೇಗಃ ಪ್ರಸಹ್ಯ ಪ್ರಘಸೋ ಹರಿಂ । ಭಾಸಕರ್ಣಶ್ಚ ಸಂಕ್ರುದ್ಧಶ್ಶೂಲಮಾದಾಯ

ಹುಟ್ಟಿದ ಕೋಪವುಳ್ಳವರಾಗಿ, ಉತ್ಪೇತತುಃ - ಹಾರಿಬಂದರು. ॥ ೨೭ ॥ ಮಹಾಬಾಹುಃ - ಮಹಾಭುಜಗಳುಳ್ಳ, ಸಕಪಿಃ - ಆ ಆಂಜನೇಯನು, ವಿಮಲೇ - ನಿರ್ಮಲವಾದ, ಅಂಬರೇ - ಅಂತರಿಕ್ಷದಲ್ಲಿ-ಸಹಸಾ - ಬೇಗನೆ, ಉತ್ಪತ್ಯ - ಹಾರಿ, ತಾಭ್ಯಾಂ - ಆ ವಿರೂಪಾಕ್ಷ ಯೂಪಾಕ್ಷರಿಂದ, ವಿಷ್ಟಿತಃ - ತಡೆಪಡಿಸಲ್ಪಟ್ಟವನಾಗಿ, ಮುದ್ಗರಾಭ್ಯಾಂ-ಮುದ್ಗರಾಯುಧಗಳಿಂದ, ವಕ್ಷಸಿ-ಎದೆಯಲ್ಲಿ, ಅಭಿಹತಃ-ಹೊಡೆಯಲ್ಪಟ್ಟನು. ॥೨೮॥ ಮಹಾಬಲಃ - ಅತಿ ಬಲಾಢ್ಯನಾದ, ಸುಪ....ಮಃ - ಗರುಡನಿಗೆ ಸಮಾನವಾದ ಸಾಮರ್ಥ್ಯವುಳ್ಳ ಆಂಜನೇಯನು, ವೇಗವತೋಃ-ವೇಗವಂತರಾದ, ತಯೋಃ-ಆ ವಿರೂಪಾಕ್ಷ ಯೂಪಾಕ್ಷರ, ವೇಗಂ - ಸಾಮರ್ಥ್ಯವನ್ನು, ವಿನಿಹತ್ಯ - ನಿಪಾತಮಾಡಿ, ಪುನಃ - ಮತ್ತೂ, ಭೂಮೌ-ಭೂಮಿಯಲ್ಲಿ, ನಿಪಪಾತ - ಧುಮುಕಿದನು. ॥೨೯॥ ಪವನಾತ್ಮಜಃ - ವಾಯುಪುತ್ರನಾದ, ಸವಾನರಃ - ಆ ಕಪಿಯು, ತಂ - ಪ್ರಸಿದ್ಧವಾದ, ಸಾಲವೃಕ್ಷಂ - ಮದ್ದೀಮರವನ್ನು, ಆಸಾದ್ಯ - ಹೊಂದಿ, ಉತ್ಪಾಟ್ಯಚ - ಕಿತ್ತುಕೊಂಡು, ವೀರೌ - ಶೂರರಾದ, ತಾವುಭೌರಾಕ್ಷಸೌ - ಆ ಇಬ್ಬರು ರಕ್ಕಸರನ್ನೂ, ಜಘಾನ - ಹೊಡೆದನು. ॥ ೩೦ ॥ ತತಃ - ಬಳಿಕ, ಮಹಾವೇಗಃ - ಅತಿ ವೇಗವುಳ್ಳ, ಪ್ರಘಸಃ - ಪ್ರಘಸನೆಂಬ ರಾಕ್ಷಸನು, ತರಸ್ವಿನಾ - ಬಲವಂತನಾದ, ವಾನರೇಣ - ಕಪಿಯಿಂದ, ಹತಾನ್ - ಹತರಾದ, ತಾನ್ತ್ರೀನ್ - ಆ ಮೂವರನ್ನು, ಜ್ಞಾತ್ವಾ - ಅರಿತು, ಹರಿಂ - ವಾನರನನ್ನು, ಪ್ರಸಹ್ಯ - ಬಲಾತ್ಕರಿಸಿ, ಅಭಿಪೇದೇ - ಎದುರಾಗಿ ಬಂದನು, ಸಂಕ್ರುದ್ಧಃ - ಬಹಳವಾಗಿ ಕೋಪಗೊಂಡ, ವೀರ್ಯವಾನ್ - ಪರಾಕ್ರಮಿಯಾದ, ಭಾಸಕರ್ಣಶ್ಚ - ಭಾಸಕರ್ಣನೂ, ಶೂಲಂ - ಶೂಲಾಯುಧವನ್ನು, ಆದಾಯ - ಗ್ರಹಿಸಿ, ಯಶಸ್ವಿನಂ - ಕೀರ್ತಿಮಂತನಾದ, ಕಪಿಶಾರ್ದೂಲಂ - ವಾನರಶ್ರೇಷ್ಠನನ್ನು ಕುರಿತು, ಏಕತಃ-

ತಿರಸ್ಕರಿಸಲಸದಳರಾಗಿಯೂ, ಶತ್ರುಮರ್ದನರಾಗಿಯೂ ಇರುವ ವಿರೂಪಾಕ್ಷ ಯೂಪಾಕ್ಷರೀರ್ವರೂ ಮಹಾ ಕೋಪ್ರೋದ್ದೀಪಿತರಾಗಿ ಕಣ್ಣುಗಳಿಂದ ಕೆಂಡಗಳನ್ನು ಕಕ್ಕುತ್ತ, ಹಲ್ಲುಗಳನ್ನು ಕಟಕಟನೆ ಕಡಿಯುತ್ತ ಗಗನಕ್ಕೆ ಹಾರಿ, ನಿರ್ಮಲವಾದ ಆ ಗಗನಾಂಗಣದಲ್ಲಿ ಸಂಚರಿಸುತ್ತಿದ್ದ ಮಹಾ ಬಾಹುವಾದ ಆಂಜನೇಯನನ್ನೆದುರಿಸಿ ಕಬ್ಬಿಣದ ಹಾರೆಗಳಿಂದ ಅವನೆದೆಗೆ ಬಲವಾಗಿ ಹೊಡೆದರು. ಆಗ ಗರುಡನಿಗೆ ಸಮಾನವಾದ ಪರಾಕ್ರಮವುಳ್ಳ ಆ ವಾಯುಪುತ್ರನು ಮಹಾ ವೇಗಶಾಲಿಗಳಾದ ಆ ರಾಕ್ಷಸರೀರ್ವರ ವೇಗವನ್ನು ತಡೆದು ಭೂಮಿಗಿಳಿದು ಸಾಲವೃಕ್ಷವನ್ನು ಕಿತ್ತು ಅವರಿಬ್ಬರನ್ನೂ ಬಲವಾಗಿ ಪ್ರಹರಿಸಿದನು. ॥ ೨೮-೩೦ ॥ ಆ ಸಾಲವೃಕ್ಷದ ಹೊಡೆತದಿಂದ ಆ ವಿರೂಪಾಕ್ಷ ಯೂಪಾಕ್ಷರೀರ್ವರ [illegible] ನಿವೃತ್ತರಾಗಿ ಹೋದರು. ಅವರೀರ್ವರೂ ಮಡಿದುದನ್ನು ನೋಡಿ ಪ್ರಘಸನೆಂಬ ರಾಕ್ಷಸವೀರನು ಕೂಡಲೇ ಪರಾಕ್ರಮಿಸಿ ಹನುಮಂತನನ್ನು ಎದುರಿಸಿದನು. ಭಾಸಕರ್ಣನೂ ಸಹ

ವೀರ್ಯವಾನ್ ॥ ೩೨ ॥ ಭಾಸಕರ್ಣಶ್ಚ ಶೂಲೇನ ರಾಕ್ಷಸಃ ಕಪಿಸತ್ತಮಮ್ । ಸತಾಭ್ಯಾಂ ವಿಕ್ಷತೈರ್ಗಾತ್ರೈರಸೃಗ್ದಿಗ್ಧತನೂರುಹಃ ॥೩೪॥ ಅಭವದ್ವಾನರಃ ಕ್ರುದ್ಧೋ ಬಾಲಸೂರ್ಯಸಮಪ್ರಭಃ । ಸಮುತ್ಪಾಟ್ಯ ಗಿರೇಶ್ಶೃಂಗಂ ಸಮೃಗವ್ಯಾಳಪಾದಪಂ ॥೩೫॥ ಜಘಾನ ಹನುಮಾನ್ವೀರೋ ರಾಕ್ಷಸೌ ಕಪಿಕುಂಜರಃ । ತತಸ್ತೇಷ್ವವಸನ್ನೇಷು ಸೇನಾಪತಿಷು ಪಂಚಸು ॥ ೩೬ ॥ ಬಲಂ ತದವಶೇಷಂಚ ನಾಶಯಾಮಾಸ ವಾನರಃ । ಅಶ್ವೈರಶ್ವಾನ್ಗಜೈರ್ನಾಗಾನ್ಯೋಧೈರ್ಯೋಧಾನ್ರಥೈರ್ರಥಾನ್ ॥ ೩೭ ॥ ಸಕಪಿರ್ನಾ

ಒಂದುಕಡೆ, ಅವಸ್ಥಿತೌ - ಸನ್ನದ್ಧರಾದರು. ॥೩೧-೩೨॥ ಪ್ರಘಸಃ - ಪ್ರಘಸನೆಂಬವನು, ಕಪಿಸತ್ತಮಂ-ವಾನರೋತ್ತಮನನ್ನು, ಶಿತಾಗ್ರೇಣ - ತೀಕ್ಷ್ಣವಾದ ಕೊನೆಯುಳ್ಳ, ಪಟ್ಟಿಸೇನ - ಬಾಕಿಸಿಂದ, ಪ್ರತ್ಯಯೋಧಯತ್-ಯುದ್ಧಮಾಡಿದನು, ಭಾಸಕರ್ಣಂ-ಭಾಸಕರ್ಣನೆಂಬ, ರಾಕ್ಷಸಶ್ಚ-ರಕ್ಕಸನೂ, ಶೂಲೇನ - ಶೂಲಾಯುಧದಿಂದ, ಪ್ರತ್ಯಯೋಧಯತ್ - ಯುದ್ಧಮಾಡಿದನು. ॥ ೩೩ ॥ ತಾಭ್ಯಾಂ - ಆ ರಾಕ್ಷಸರಿಂದ, ವಿಕ್ಷತೈಃ - ವಿಶೇಷವಾಗಿ ಘಾಯಮಾಡಲ್ಪಟ್ಟ, ಗಾತ್ರೈಃ - ಅಂಗಗಳಿಂದ, ಅಸೃ....ಹಃ - ರಕ್ತದಿಂದ ನೆನದ ರೋಮಗಳುಳ್ಳವನಾದಕಾರಣ, ಬಾಲ....ಭಃ - ಪ್ರಾತಃಕಾಲ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ, ವಾನರಃ - ಕಪಿಯು, ಕ್ರುದ್ಧಃ - ಕೋಪಿಷ್ಠನು, ಅಭವತ್ - ಆದನು. ॥೩೪॥ ವೀರಃ - ಶೂರನಾದ, ಕಪಿಕುಂಜರಃ - ವಾನರಶ್ರೇಷ್ಠನಾದ, ಹನುಮಾನ್ - ಆಂಜನೇಯನು, ಸಮೃ....ಪಂ - ಮೃಗಗಳಿಂದಲೂ, ಸರ್ಪಗಳಿಂದಲೂ, ಗಿಡಗಳಿಂದಲೂ ಕೂಡಿದ, ಗಿರೇಃ - ಬೆಟ್ಟದ, ಶೃಂಗಂ - ಶಿಖರವನ್ನು, ಸಮುತ್ಪಾಟ್ಯ - ಕಿತ್ತು, ರಾಕ್ಷಸೌ - ಪ್ರಘಸಭಾಸಕರ್ಣರೆಂಬ ರಕ್ಕಸರನ್ನು, ಜಘಾನ - ಹೊಡೆದನು. ॥ ೩೫ ॥ ತತಃ - ಬಳಿಕ, ಪಂಚಸು - ಐದುಮಂದಿಯಾದ, ತೇಷುಸೇನಾಪತಿಷು - ಆ ಸೇನಾನಾಯಕರು, ಅವಸನ್ನೇಷು - ನಾಶವಾಗಲು, ವಾನರಃ - ಕಪಿಯು, ಅವಶೇಷಂ - ಉಳಿದ, ತದ್ಬಲಂಚ - ಆ ಸೇನೆಯನ್ನೂ ಕೂಡ, ನಾಶಯಾಮಾಸ - ಸಂಹರಿಸಿದನು. ॥೩೬॥ ಸಕಪಿಃ - ಆ ವಾನರನು, ಅಸುರಾನ್ - ರಕ್ಕಸರನ್ನು, ಸಹಸ್ರಾಕ್ಷ ಇವ - ಇಂದ್ರನಂತೆ, ಅಶ್ವೈಃ-ಕುದುರೆಗಳಿಂದ, ಅಶ್ವಾನ್ - ಅಶ್ವಗಳನ್ನೂ, ಗಜೈಃ - ಆನೆಗಳಿಂದ, ನಾಗಾನ್-ಆನೆಗಳನ್ನೂ, ಯೋಧೈಃ-ಭಟರಿಂದ, ಯೋಧಾನ್-ಭಟರನ್ನೂ, ರಥೈಃ-ರಥಗಳಿಂದ, ರಥಾನ್-ರಥಗಳನ್ನೂ, ನಾಶಯಾಮಾಸ-

ಶೂಲಾಯುಧದಿಂದ ಆ ಕಪಿವೀರನಮೇಲೆ ಬಿದ್ದನು. ಹೀಗೆ ಮಹಾ ಕೀರ್ತಿಮಂತನಾದ ಆ ಹನುಮಂತನನ್ನು ಒಂದುಕಡೆ ಪ್ರಘಸನು ನಿಡುಗತ್ತಿಗಳಿಂದಲೂ, ಭಾಸಕರ್ಣನು ಶೂಲಾಯುಧದಿಂದಲೂ ಎದುರಿಸಿ ಘೋರಯುದ್ಧವನ್ನು ಮಾಡಲುಪಕ್ರಮಿಸಿದರು. ಪ್ರಘಸನ ನಿಡುಗತ್ತಿಗಳಿಂದಲೂ, ಭಾಸಕರ್ಣನ ಶೂಲಾಯುಧದಿಂದಲೂ ಆರ್ದಿತನಾಗಿ ರಕ್ತವನ್ನು ಸ್ರವಿಸುತ್ತಿರುವ ಅವಯವಗಳುಳ್ಳ ಹನುಮಂತನು ಮಹಾ ಕ್ರುದ್ಧನಾಗಿ ಬಾಲಸೂರ್ಯನಂತೆ ಪ್ರಕಾಶಿಸುತ್ತಿದ್ದನು. ಆ ಕೂಡಲೆ ಆತನು ಮೃಗಗಳಿಂದಲೂ, ಸರ್ಪಗಳಿಂದಲೂ, ವೃಕ್ಷಗಳಿಂದಲೂ ತುಂಬಿರುವ ಒಂದು ದೊಡ್ಡ ಪರ್ವತಶಿಖರವನ್ನೇ ಬುಡಸಹಿತ ಕಿತ್ತುಕೊಂಡು ಆ ರಾಕ್ಷಸರೀರ್ವರನ್ನೂ ಅದರಿಂದ ಹೊಡೆದು ಕೊಂದುಬಿಟ್ಟನು. ॥ ೩೧-೩೫ ॥ ಹೀಗೆ ಆ ಪಂಚಸೇನಾಪತಿಗಳೂ ನಾಶವಾಗಲು ಕಪಿಸತ್ತಮನಾದ ಆ ಮಾರುತಿಯು ಉಳಿದ ಸೇನೆಯೆಲ್ಲವನ್ನೂ ನಾಶಗೊಳಿಸಲುಪಕ್ರಮಿಸಿದನು. ಕುದುರೆಗಳಿಂದ ಕುದುರೆಗಳನ್ನೂ, ಆನೆಗಳಿಂದ ಆನೆಗಳನ್ನೂ, ಯೋಧರಿಂದ ಯೋಧರನ್ನೂ, ರಥಗಳಿಂದ ರಥಗಳನ್ನೂ ಹೊಡೆದು ದೇವೇಂದ್ರನು

ಶಯಾಮಾಸ ಸಹಸ್ರಾಕ್ಷ ಇವಾಸುರಾನ್ । ಹತೈರ್ನಾಗೈಶ್ಚ ತುರಗೈರ್ಭಗ್ನಾಕ್ಷೈಶ್ಚ ಮಹಾರಥೈಃ । ಹತೈಶ್ಚರಾಕ್ಷಸೈರ್ಭೂಮಿರ್ ರುದ್ಧಮಾರ್ಗಾ ಸಮಂತತಃ ॥ ೩೮ ॥

¶ ತತಃ ಕಪಿಸ್ತಾನ್ಧ್ವಜಿನೀಪತೀನ್ರಣೇ
ನಿಹತ್ಯವೀರಾಂಸ್ಸ ಬಲಾಂಸ್ಸವಾಹನಾನ್ ।
ಸಮೀಕ್ಷ್ಯ ವೀರಃ ಪರಿಗೃಹ್ಯತೋರಣಂ
ಕೃತಕ್ಷಣಃ ಕಾಲಇವ ಪ್ರಜಾಕ್ಷಯೇ ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್ಚತ್ವಾರಿಂಶಸ್ಸರ್ಗಃ

ಧ್ವಂಸಮಾಡಿದನು. ॥ ೩೭ ॥ ಹತೈಃ - ಸತ್ತುಬಿದ್ದ, ನಾಗೈಶ್ಚ - ಆನೆಗಳಿಂದಲೂ, ತುರಗೈಶ್ಚ - ಕುದುರೆಗಳಿಂದಲೂ, ಭಗ್ನಾಕ್ಷೈಃ - ಮುರಿದ ಅಚ್ಚುಗಳುಳ್ಳ, ಮಹಾರಥೈಶ್ಚ - ದೊಡ್ಡ ತೇರುಗಳಿಂದಲೂ, ಹತೈಃ - ಮೃತರಾದ, ರಾಕ್ಷಸೈಶ್ಚ - ಅಸುರರಿಂದಲೂ, ಭೂಮಿಃ - ನೆಲವು, ಸಮಂತತಃ- ಎಲ್ಲಾ ಕಡೆಯಲ್ಲಿಯೂ, ರುದ್ಧಮಾರ್ಗಾ - ಅಡ್ಡಿಮಾಡಲ್ಪಟ್ಟ ಮಾರ್ಗವುಳ್ಳದು, (ಆಯಿತು). ॥೩೮॥ ತತಃ - ಬಳಿಕ, ವೀರಃ - ಶೂರನಾದ, ಕಪಿಃ - ವಾನರನು, ರಣೇ - ಯುದ್ಧದಲ್ಲಿ, ವೀರಾನ್ - ವೀರರಾದ, ಸಬಲಾನ್ - ಸೈನ್ಯಸಹಿತರಾದ, ಸವಾಹನಾನ್ - ವಾಹನಯುಕ್ತರಾದ, ತಾನ್ ಧ್ವ....ತೀನ್ - ಆ ಸೇನಾನಾಯಕರನ್ನು, ನಿಹತ್ಯ - ಹೊಡೆದು, ಸಮೀಕ್ಷ್ಯ - ನೋಡಿ, ತೋರಣಂ - ಹೊರಬಾಗಿಲನ್ನು, ಪರಿಗೃಹ್ಯ - ಹೊಂದಿ, ಪ್ರಜಾಕ್ಷಯೇ - ಪ್ರಳಯಕಾಲದಲ್ಲಿ, ಕಾಲಇವ - ಯಮನಂತೆ, ಕೃತಕ್ಷಣಃ - ಸಮಯ ನಿರೀಕ್ಷಣೆ ಮಾಡುವವನು, (ಅಭವತ್ - ಆದನು). ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್ಚತ್ವಾರಿಂಶಸ್ಸರ್ಗಃ

ಅಸುರರನ್ನಂತೆ ನಾಶಗೊಳಿಸಿದನು. ಆ ಸಮಯದಲ್ಲಿ ಮಡಿದುಬಿದ್ದ ಗಜಗಳಿಂದಲೂ, ಮುರಿದುಬಿದ್ದ ರಥಗಳಿಂದಲೂ, ಮಡಿದು ಭೂಮಿಗೆ ಬಿದ್ದಿದ್ದ ಕುದುರೆಗಳಿಂದಲೂ, ಗತಜೀವರಾದ ರಾಕ್ಷಸರಿಂದಲೂ ಆ ರಣಭೂಮಿಯು ತಡೆಗೊಳಿಸಿದ ಮಾರ್ಗವುಳ್ಳದಾಯಿತು. ಹೀಗೆ ಮಹಾ ಬಲಪರಾಕ್ರಮಶಾಲಿಯಾದ ಆ ಹನುಮಂತನು ವಾಹನಗಳಿಂದಲೂ, ಸೇನೆಯಿಂದಲೂ ಕೂಡಿದ ಆ ಐದುಮಂದಿ ಸೇನಾಪತಿಗಳನ್ನೂ ಸಂಹರಿಸಿ, ಪುನಃ ಬಹಿರ್ದ್ವಾರವನ್ನು ಹೊಂದಿ ಪ್ರಳಯಕಾಲದ ಯಮನಂತೆ ಅತಿ ಭಯಂಕರನಾಗಿ ತೋರುತ್ತಿದ್ದನು. ॥ ೩೭–೩೯ ॥

ಇಂತಿದು ಹನುಮತ್ಕೃತ ಪಂಚಸೇನಾಪತಿಹನನ ವೃತ್ತಾಂತ ನಿರೂಪಣವೆಂಬ
ನಾಲ್ವತ್ತಾರನೆಯ ಸರ್ಗವು ಸಮಾಪ್ತವಾದುದು.

¶ ಈ ಸರ್ಗದ ೯ನೇ ಶ್ಲೋಕದ ದ್ವಿತೀಯಪಾದ, "ನಾವಮಾಸ್ಯೋಭವದ್ಭಿಶ್ಚ ಹರಿರ್ಧೀರಪರಾಕ್ರಮಃ" ಎಂಬಕಡೆ ಹನ್ನೊಂದನೆಯ ಅಕ್ಷರವಾದ "ಧೀ" ಕಾರವು ಗಾಯತ್ರಿಯ ಚತುರ್ದಶಾಕ್ಷರವು. ಇಲ್ಲಿಗೆ ಹದಿಮೂರು ಸಾವಿರ ಶ್ಲೋಕಗಳು ಮುಗಿದು ಹದಿನಾಲ್ಕನೆಯ ಸಾವಿರವು ಪ್ರಾರಂಭವಾಗುವುದೆಂದು ಗ್ರಹಿಸಬೇಕು. (ಗೋ: ಮ)

ಸೇನಾಪತೀನ್ ಪಂಚ ಸತು ಪ್ರಮಾಪಿತಾನ್ ಹನೂಮತಾ ಸಾನುಚರಾನ್ಸ
ವಾಹನಾನ್ । ಸಮೀಕ್ಷ್ಯ ರಾಜಾ ಸಮರೋದ್ಧತೋನ್ಮುಖಂ ಕುಮಾರಮಕ್ಷಂ ಪ್ರಸಮೈ
ಕ್ಷತಾಗ್ರತಃ ॥ ೧ ॥ ಸತಸ್ಯ ದೃಷ್ಟ್ಯರ್ಪಣಸಂಪ್ರಚೋದಿತಃ ಪ್ರತಾಪವಾನ್ಕಾಂಚನ
ಚಿತ್ರಕಾರ್ಮುಕಃ । ಸಮುತ್ಪಪಾತಾಥ ಸದಸ್ಯುದೀರಿತೋ ದ್ವಿಜಾತಿಮುಖ್ಯೈರ್ಹ
ವಿಷೇವ ಪಾವಕಂ ॥ ೨ ॥ ತತೋ ಮಹದ್ಬಾಲದಿವಾಕರಪ್ರಭಂ ಪ್ರತಪ್ತಜಾಂಬೂನದ
ಜಾಲಸಂತತಂ । ರಥಂ ಸಮಾಸ್ಥಾಯ ಯಯೌ ಸವೀರ್ಯವಾನ್ಮಹಾಹರಿಂ ತಂ
ಪ್ರತಿನೈರ್ಋತರ್ಷಭಃ ॥ ೩ ॥ ತತಸ್ತಪಸ್ಸಂಗ್ರಹಸಂಚಯಾರ್ಜಿತಂ ಪ್ರತಪ್ತಜಾಂಬೂ

ರಾಜಾ - ರಾಕ್ಷಸಾಧಿಪನಾದ, ಸತು ಆ ರಾವಣನಾದರೆ, ಹನೂಮತಾ - ಆಂಜನೇಯನಿಂದ, ಪ್ರಮಾಪಿತಾನ್-ಸಂಹರಿಸಲ್ಪಟ್ಟ, ಸಾನುಚರಾನ್-ಸೇವಕರಿಂದೊಡಗೂಡಿದ, ಸವಾಹನಾನ್-ವಾಹನಯುಕ್ತರಾದ, ಪಂಚಸೇನಾಪತೀನ್ - ಐದುಮಂದಿ ಸೇನಾನಾಯಕರನ್ನು, ಸಮೀಕ್ಷ್ಯ - ಕಂಡು, ಸಮ....ಖಂ - ಯುದ್ಧದಲ್ಲಿ ಧೈರ್ಯವಂತನಾಗಿ ಉದ್ಯುಕ್ತನಾದ, ಅಕ್ಷಂ - ಅಕ್ಷನೆಂಬ, ಕುಮಾರಂ - ಮಗನನ್ನು, ಅಗ್ರತಃ - ಮುಂದುಗಡೆ, ಪ್ರಸಮೈಕ್ಷತ - ನೋಡಿದನು. ॥ ೧ ॥ ಅಥ - ಬಳಿಕ, ಸದಸಿ - ಸಭೆಯಲ್ಲಿ, ತಸ್ಯ - ಆ ರಾವಣನ, ದೃಷ್ಟ್ಯ....ತಃ-ದೃಷ್ಟಿಪ್ರಸರಣೆಯಿಂದಲೇ ಪ್ರೇರಿತನಾದ, ಪ್ರತಾಪವಾನ್-ಪರಾಕ್ರಮಿಯಾದ, ಕಾಂಚ....ಕಃ-ಬಂಗಾರದ ವಿಚಿತ್ರ ಕೋದಂಡವುಳ್ಳ, ಸಃ - ಆ ಅಕ್ಷಕುಮಾರನು, ದ್ವಿಜಾತಿಮುಖ್ಯೈಃ-ಬ್ರಾಹ್ಮಣಶ್ರೇಷ್ಠರಿಂದ, (ಕೊಡಲ್ಪಟ್ಟ) ಹವಿಷಾ-ಹವಿರ್ಭಾಗದಿಂದ, ಉದೀರಿತಃ-ಅಭಿವರ್ಧಿತವಾದ, ಪಾವಕ ಇವ - ಅಗ್ನಿಯಂತೆ, ಸಮುತ್ಪಪಾತ - ಹಾರಿದನು ॥ ೨ ॥ ತತಃ - ಬಳಿಕ, ವೀರ್ಯವಾನ್-ಪರಾಕ್ರಮಿಯಾದ, ಸನೈರ್ಋತರ್ಷಭಃ - ಆ ರಾಕ್ಷಸಶ್ರೇಷ್ಠನು, ಬಾಲ....ಭಂ - ಬಾಲಸೂರ್ಯನ ಕಾಂತಿಯುಳ್ಳ, ಪ್ರತ....ತಂ - ಅಪರಂಜಿಯ ಗವಾಕ್ಷಯುಕ್ತವಾದ, ರಥಂ - ರಥವಲ್ಲಿ, ಸಮಾಸ್ಥಾಯ-ಕುಳಿತು, ತಂಮಹಾಹರಿಂಪ್ರತಿ - ಆ ವಾನರಶ್ರೇಷ್ಠನನ್ನು ಕುರಿತು, ಯಯೌ - ಹೊರಟನು. ॥ ೩ ॥ ತತಃ - ಬಳಿಕ, ಅಮ....ಮಃ - ದೇವತೆಗಳಿಗೆ ಸಮಾನವಾದ ಸಾಮರ್ಥ್ಯವುಳ್ಳ, ಸಃ - ಪ್ರಸಿದ್ಧನಾದ,

ಆಮೇಲೆ ಸೈನ್ಯಸಮೇತರಾದ ಐದುಮಂದಿ ಸೇನಾನಾಯಕರೂ ಹನುಮಂತನಿಂದ ಹತರಾದ ವೃತ್ತಾಂತವನ್ನು ಕೇಳಿ, ರಾಕ್ಷಸೇಶ್ವರನಾದ ರಾವಣನು ತನ್ನ ಮುಂಗಡೆಯೇ ಇದ್ದ ರಣದುರ್ಮದನೂ ತನ್ನ ಮಗನೂ ಆದ ಅಕ್ಷಕುಮಾರನನ್ನು ನೋಡಿದನು. ರಾವಣನ ದೃಷ್ಟಿಯು ತನ್ನಮೇಲೆ ಬಿದ್ದೊಡನೆಯೇ ಮಹಾ ಪ್ರತಾಪಶಾಲಿಯೂ, ಚಿತ್ರಕಾರ್ಮುಕವುಳ್ಳವನೂ ಆದ ಆ ಅಕ್ಷಕುಮಾರನು ಕೂಡಲೇ ಬ್ರಾಹ್ಮಣಶ್ರೇಷ್ಠರಿಂದ ಹೋಮದ್ರವ್ಯದೊಡನೆ ವೃದ್ಧಿಗೊಳಿಸಿದ ಯಜ್ಞೇಶ್ವರನಂತೆ ಎದ್ದು ಪ್ರಯಾಣೋನ್ಮುಖನಾಗಿ ನಿಂತನು. ಆ ಬಳಿಕ ಮಹಾ ಪರಾಕ್ರಮಿಯೂ, ರಾಕ್ಷಸಶ್ರೇಷ್ಠನೂ ಆದ ಆ ಅಕ್ಷಕುಮಾರನು, ಬಾಲಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯುಳ್ಳದಾಗಿ, ಪುಟಪಾಕಶೋಧಿತವಾದ ಸುವರ್ಣದಿಂದ ಮಾಡಲ್ಪಟ್ಟುದಾದ ರಥವನ್ನೇರಿ ಆಂಜನೇಯನಮೇಲೆ ಯುದ್ಧಕ್ಕೆ ಹೊರಟನು. ॥ ೧ ೩ ॥

ನದಜಾಲಶೋಭಿತಂ । ಪತಾಕಿನಂ ರತ್ನವಿಭೂಷಿತಧ್ವಜಂ ಮನೋಜವಾಷ್ಟಾಶ್ವವರೈ ಸ್ಸುಯೋಜಿತಂ ॥ ೪ ॥ ಸುರಾಸುರಾಧೃಷ್ಯಮಸಂಗಚಾರಿಣಂ ರವಿಪ್ರಭಂ ವ್ಯೋಮಚರಂ ಸಮಾಹಿತಂ । ಸತೂಣಮಷ್ಟಾಸಿನಿಬದ್ಧಬಂಧುರಂ ಯಥಾಕ್ರಮಾವೇಶಿತ ಶಕ್ತಿತೋಮರಂ ॥ ೫ ॥ ವಿರಾಜಮಾನಂ ಪ್ರತಿಪೂರ್ಣ ವಸ್ತುನಾ ಸಹೇಮ ದಾಮ್ನಾ ಶಶಿಸೂರ್ಯವರ್ಚಸಾ । ದಿವಾಕರಾಭಂ ರಥಮಾಸ್ಥಿತಸ್ತತಸ್ಸನಿರ್ಜಗಾಮಾಮರತುಲ್ಯ

ಸಃ - ಅಕ್ಷಕುಮಾರನು, ತಪ....ತಂ - ತಪೋನುಷ್ಠಾನಗಳ ಸಮೂಹದಿಂದ ಸಂಪಾದಿಸಲ್ಪಟ್ಟ, ಪ್ರತ....ತಂ - ಅಪರಂಜಿಯ ಕಿಟಿಕಿಗಳಿಂದ ಹೊಳೆಯುತ್ತಿರುವ, ಪತಾಕಿನಂ - ಚಿಕ್ಕ ನಿಶಾನಿಗಳುಳ್ಳ, ರತ್ನ....ಜಂ - ರತ್ನಾಲಂಕೃತವಾದ ದೊಡ್ಡ ನಿಶಾನಿಯುಳ್ಳ, ಮನೋ....ರೈಃ - ಮನೋವೇಗದಂತೆ ವೇಗವುಳ್ಳ, ಅಷ್ಟಾಶ್ವವರೈಃ - ಉತ್ತಮವಾದ ಎಂಟು ಕುದುರೆಗಳಿಂದ, ಸುಯೋಜಿತಂ - ಕಟ್ಟಲ್ಪಟ್ಟ, ಸುರಾ....ಷ್ಯಂ - ದೇವರಾಕ್ಷಸರಿಂದ ತಿರಸ್ಕರಿಸಲಸಾಧ್ಯವಾದ, ಅಸಂಗಚಾರಿಣಂ - ಭೂಸಂಬಂಧವಿಲ್ಲದೆ ಚಲಿಸುತ್ತಿರುವ, ರವಿಪ್ರಭಂ - ಸೂರ್ಯನ ಕಾಂತಿಯುಳ್ಳ, ವ್ಯೋಮಚರಂ - ಅಂತರಿಕ್ಷಗಮನಶೀಲವಾದ, ಸಮಾಹಿತಂ - ಯುದ್ಧಕ್ಕಾಗಿ ನಿರ್ಮಿತವಾದ, ಸತೂಣಂ - ಬತ್ತಳಿಕೆಗಳಿಂದ ಕೂಡಿದ, ಅಷ್ಟಾ....ರಂ - ಎಂಟು ಕತ್ತಿಗಳಿಂದ ಕಟ್ಟಲ್ಪಟ್ಟ ಸುಂದರವಾದ, ಯಥಾ....ರಂ - ಪಙ್ಕ್ತಿಯಾಗಿ ಇಡಲ್ಪಟ್ಟ ಶಕ್ತ್ಯಾಯುಧಗಳೂ ತೋಮರಾಯುಧಗಳೂ ಉಳ್ಳ, ಶಶಿ....ಸಾ - ಚಂದ್ರಸೂರ್ಯರ ಕಾಂತಿಯುಳ್ಳ, ಹೇಮದಾಮ್ನಾ - ಭಂಗಾರದ ಸರಪಣಿಯಿಂದ, ಪ್ರತಿ....ನಾ - ತುಂಬಿದ ಸಾಮಗ್ರಿಯಿಂದಲೂ, ವಿರಾಜಮಾನಂ - ಹೊಳೆಯುತ್ತಿರುವ, ದಿವಾಕರಾಭಂ - ಸೂರ್ಯನ ಕಾಂತಿಯುಳ್ಳ, ರಥಂ - ರಥವನ್ನು, ಆಸ್ಥಿತಃ - ಏರಿದವನಾಗಿ, ತತಃ - ಆ ರಾಜಭವನದಿಂದ, ನಿರ್ಜಗಾಮ - ಹೊರ

ಇಷ್ಟೆಯಲ್ಲದೆ ದೇವತೆಗಳಿಗೆ ಸಮಾನವಾದ ಪರಾಕ್ರಮವುಳ್ಳ ಆ ಅಕ್ಷಕುಮಾರನೇರಿದ್ದ ಬಹುಕಾಲ ತಪಸ್ಸುಮಾಡಿ ಸಂಪಾದಿಸಿದುದೂ, ಪುಟಪಾಕಶೋಧಿತವಾದ ಸುವರ್ಣದಿಂದ ರಚಿತವಾದುದೂ, ಧ್ವಜಪತಾಕೆಗಳಿಂದಲಂಕೃತವಾದುದೂ, ನವರತ್ನಗಳಿಂದ ಅಲಂಕೃತವಾದ ಸಮಸ್ತ ರಾಜಚಿಹ್ನೆಗಳುಳ್ಳದೂ, ಮನೋವೇಗದಂತಹ ವೇಗವುಳ್ಳ ಎಂಟು ಕುದುರೆಗಳು ಹೂಡಿದುದೂ, ಸುರಾಸುರರಿಗೂ ಎದುರಿಸಲಸದಳವಾದುದೂ, ಭೂಮಿಗೆ ಸಂಬಂಧಿಸದೆಯೇ ಸಂಚರಿಸುವಂತಹುದೂ, ಸೂರ್ಯನಿಗೆ ಸಮಾನವಾದ ಕಾಂತಿಯೊಡಗೂಡಿರುವುದೂ ಆಗಿದ್ದಿತು. ಅಲ್ಲದೆ ಯುದ್ಧಕ್ಕಾಗಿಯೇ ಸಿದ್ಧಗೊಳಿಸಿದ್ದ ಆ ರಥದಲ್ಲಿ ಅಲ್ಲಲ್ಲಿ ಬಾಣಗಳಿಂದ ತುಂಬಿದ ಬತ್ತಳಿಕೆಗಳೂ, ಅದರ ಎಂಟು ಮೂಲೆಗಳಲ್ಲಿ ಎಂಟು ಅಡ್ಡಗತ್ತಿಗಳೂ ಕಟ್ಟಲ್ಪಟ್ಟಿದ್ದುವು. ಆ ರಥದ ಸುತ್ತಲೂ ಘಂಟೆಗಳು ಧ್ವನಿಮಾಡುತ್ತಿದ್ದವು. ಶಕ್ತಿತೋಮರಾದ್ಯಾಯುಧಗಳು ಸಾಲುಸಾಲಾಗಿರಿಸಲಾಗಿದ್ದಿತು. ಕವಚ, ಧನುಸ್ಸು, ವಿವಿಧಬಾಣಗಳು ಇವೇ ಮೊದಲಾದ ಸಮಸ್ತ ಯುದ್ಧಸಾಮಗ್ರಿಗಳೂ ಅದರಲ್ಲಿ ತುಂಬಿದ್ದವು. ಚಂದ್ರನಂತೆ ಧವಳವಾಗಿಯೂ, ದಿನಕರನಂತೆ ಹೊಂಬಣ್ಣವಾಗಿಯೂ ಇರುವ ಕುದುರೆಯ ಜೀನು ಮೊದಲಾದ ಚಿನ್ನದ ಹೊರಜಿಗಳು ಅಲ್ಲಲ್ಲಿ ಸಿದ್ಧಗೊಳಿಸಲ್ಪಟ್ಟಿದ್ದುವು. ಬಾಲಸೂರ್ಯನಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿರುವ ಆ ಮಹಾ ರಥವನ್ನೇರಿ ಮಹಾ ಪರಾಕ್ರಮಿಯಾದ ಆ ಅಕ್ಷಕುಮಾರನು ಅಶೋಕವನದ ಬಹಿರ್ದ್ವಾರವನ್ನು ಕುರಿತು ಹನುಮಂತನೊಡನೆ

ವಿಕ್ರಮಃ ॥ ೬ ॥ ಸಪೂರಯನ್ಖಂಚ ಮಹೀಂಚ ಸಾಚಲಾಂ ತುರಂಗಮಾತಂಗ ಮಹಾರಥಸ್ವನೈಃ । ಬಲೈಸ್ಸಮೇತೈಸ್ಸಹಿತೋ ರಣಸ್ಥಿತಂ ಸಮರ್ಥಮಾಸೀನಮುಪಾಗಮತ್ಕಪಿಂ ॥ ೭ ॥ ಸತಂ ಸಮಾಸಾದ್ಯ ಹರಿಂ ಹರೀಕ್ಷಣೋ ಯುಗಾಂತಕಾಲಾಗ್ನಿಮಿವ ಪ್ರಜಾಕ್ಷಯೇ । ಅವಸ್ಥಿತಂ ವಿಸ್ಮಿತಜಾತ ಸಂಭ್ರಮಸ್ಸಮೈಕ್ಷತಾಕ್ಷೋ ಬಹುಮಾನಚಕ್ಷುಷಾ ॥೮॥ ಸತಸ್ಯವೇಗಂಚ ಕಪೇರ್ಮಹಾತ್ಮನಃ ಪರಾಕ್ರಮಂ ಚಾರಿಷು ಪಾರ್ಥಿವಾತ್ಮಜಃ । ವಿಚಾರಯನ್ಸ್ವಂಚ ಬಲಂ ಮಹಾಬಲೋ ಹಿಮಕ್ಷಯೇ ಸೂರ್ಯ

ಟನು. ॥ ೬ ॥ ಸಃ - ಪ್ರಸಿದ್ಧನಾದ, ಸಃ - ಆ ಅಕ್ಷಯಕುಮಾರನು, ತುರಂ....ನೈಃ - ಅಶ್ವಗಜ ರಥಧ್ವನಿಗಳಿಂದ, ಸಾಚಲಾಂ - ಪರ್ವತಗಳಿಂದೊಡಗೂಡಿದ, ಮಹೀಂಚ - ಭೂಮಿಯನ್ನೂ, ಖಂಚ - ಅಂತರಿಕ್ಷವನ್ನೂ, ಪೂರಯನ್ - ತುಂಬಿಸುತ್ತ, ಸಮೇತೈಃ - ಗುಂಪು ಸೇರಿದ, ಬಲೈಃ - ಸೈನ್ಯಗಳೊಡನೆ, ತೋರಣಸ್ಥಿತಂ - ಬಹಿರ್ದ್ವಾರದಲ್ಲಿರುವ, ಸಮರ್ಥಂ - ಯುದ್ಧಸಮರ್ಥನಾಗಿ, ಆಸೀನಂ - ಕುಳಿತುಕೊಂಡಿರುವ, ಕಪಿಂ - ವಾನರನನ್ನು ಕುರಿತು, ಉಪಾಗಮತ್ - ಬಂದನು. ॥ ೭ ॥ ಹರೀಕ್ಷಣಃ - ಸಿಂಗಾಕ್ಷನಾದ, ಸಅಕ್ಷಃ - ಆ ಅಕ್ಷನು, ಪ್ರಜಾಕ್ಷಯೇ - ಜನನಾಶ ಕಾಲದಲ್ಲಿ, ಯುಗಾಂ....ವ - ಪ್ರಳಯಾಗ್ನಿಯಂತೆ, ಅವಸ್ಥಿತಂ - ಕುಳಿತಿರುವ, ತಂಹರಿಂ - ಆ ವಾನರನನ್ನು, ಸಮಾಸಾದ್ಯ-ಹೊಂದಿ, ವಿಸ್ಮಿ....ಮಃ - ಆಶ್ಚರ್ಯದಿಂದ ಹುಟ್ಟಿದ ತ್ವರೆಯುಳ್ಳವನಾಗಿ, ಬಹು....ಷಾ - ಶ್ಲಾಘನೆಯಿಂದ ಕೂಡಿದ ನೋಟದಿಂದ, ಸಮೈಕ್ಷತ - ಕಂಡನು. ॥ ೮ ॥ ಮಹಾಬಲಃ - ಬಹು ಬಲಾಢ್ಯನಾದ, ಪಾರ್ಥಿವಾತ್ಮಜಃ - ರಾವಣಪುತ್ರನಾದ, ಸಃ - ಆ ಅಕ್ಷನು, ಮಹಾತ್ಮನಃ - ಮಹಾ ಧೈರ್ಯವುಳ್ಳ, ತಸ್ಯಕಪೇಃ - ಆ ವಾನರನ, ವೇಗಂಚ - ಗಮನವೇಗವನ್ನು, ಅರಿಷು - ಶತ್ರುಗಳ ವಿಷಯದಲ್ಲಿ, ಪರಾಕ್ರಮಂಚ - ಸಾಮರ್ಥ್ಯವನ್ನೂ, ಸ್ವಬಲಂಚ - ತನ್ನ ಶಕ್ತಿಯನ್ನೂ, ವಿಚಾರಯನ್ - ನಿರ್ಧರಿಸಿ, ಹಿಮಕ್ಷಯೇ - ಮಂಜು ಕಳೆದಾಗಣ, ಸೂರ್ಯಇವ - ಸೂರ್ಯನಂತೆ, ಅಭಿವರ್ಧತೇ - ವೃದ್ಧಿ ಹೊಂದಿದನು. ॥ ೯ ॥ ಆಹವೇ - ಯುದ್ಧದಲ್ಲಿ, ಸ್ಥಿರಂ - ಸ್ಥಿರನಾಗಿ, ಸ್ಥಿತಃ-

---

ಯುದ್ಧಮಾಡಲು ಹೊರಟನು. ಈ ಪ್ರಕಾರವಾಗಿ ಆತನು ದಿವ್ಯರಥವನ್ನೇರಿ, ಚತುರಂಗ ಬಲವನ್ನೂ ಹಿಂದಿಟ್ಟುಕೊಂಡು, ಗಜತುರಗಗಳ ಘೀಂಕಾರ ಮತ್ತು ಹೇಷಾರವಗಳಿಂದಲೂ, ರಥಧ್ವನಿಯಿಂದಲೂ ಭೂಮ್ಯಾಕಾಶಗಳನ್ನೇ ತುಂಬಿಸಿ ಮಹಾಟ್ಟಹಾಸದಿಂದ ಹೊರಟು ಅಶೋಕವನದ ಬಹಿರ್ದ್ವಾರದಲ್ಲಿ ಕುಳಿತಿದ್ದ ಹನುಮಂತನ ಸಮೀಪಕ್ಕೆ ಬಂದನು. ॥ ೬-೭ ॥ ಸಿಂಹದ ಕಣ್ಣುಗಳಂತೆ ಕಣ್ಣುಗಳುಳ್ಳ ಆ ಅಕ್ಷಕುಮಾರನು ಹೀಗೆ ಆಂಜನೇಯನ ಸಮೀಪಕ್ಕೆ ಹೋಗಿ, ಜನವಿನಾಶಕ್ಕೋಸ್ಕರ ವೃದ್ಧಿ ಹೊಂದಿದ ಪ್ರಳಯಾಗ್ನಿಯಂತೆ ಬೆಳಗುತ್ತಿರುವ ಆ ಕಪಿ ಪ್ರವೀರನನ್ನು ನೋಡಿ ಆಶ್ಚರ್ಯದಿಂದ ದಿಗ್ಭ್ರಾಂತರಾಗಿ, ಬಹುಮಾನ ಪುರಸ್ಸರವಾಗಿ ಅವನನ್ನು ಸ್ವಲ್ಪಹೊತ್ತು ನೋಡುತ್ತಿದ್ದನು. ಆಮೇಲೆ ಮಹಾ ಪರಾಕ್ರಮಶಾಲಿಯೂ, ರಾಕ್ಷಸರಾಜ ಕುಮಾರನೂ ಆದ ಆ ಅಕ್ಷಕುಮಾರನು ಅಮಿತ ಪರಾಕ್ರಮಶಾಲಿಯಾದ ಆಂಜನೇಯನ ಗಮನ ವೇಗವನ್ನೂ, ಶತ್ರುಗಳನ್ನು ಸೋಲಿಸುವಂತಹ ಪರಾಕ್ರಮವನ್ನೂ, ತನ್ನ ಬಲಪರಾಕ್ರಮಗಳನ್ನೂ ಚೆನ್ನಾಗಿ ತಿಳಿದು ತನ್ನ ಮನಸ್ಸನ್ನು ದೃಢಪಡಿಸಿಕೊಂಡವನಾಗಿ, ವಸಂತಋತುವಿನಲ್ಲಿ ವೃದ್ಧಿಹೊಂದಿದ ಸೂರ್ಯನಂತೆ ಬಹಳವಾಗಿ ವೃದ್ಧಿಹೊಂದಿದನು. ಅದನ್ನು ನೋಡಿ

ಇವಾಭಿವರ್ಧತೇ ॥ ೯ ॥ ಸಜಾತಮನ್ಯುಃ ಪ್ರಸಮೀಕ್ಷ್ಯ ವಿಕ್ರಮಂ ಸ್ಥಿರಂ ಸ್ಥಿತಸ್ಸಂಯತಿ ದುರ್ನಿವಾರಣಂ । ಸಮಾಹಿತಾತ್ಮಾ ಹನುಮಂತಮಾಹವೇ ಪ್ರಚೋದಯಾಮಾಸ ಶರೈಸ್ತ್ರಿಭಿಶ್ಶಿತೈಃ ॥ ೧೦ ॥ ತತಃ ಕಪಿಂ ತಂ ಪ್ರಸಮೀಕ್ಷ್ಯಗರ್ವಿತಂ ಜಿತಶ್ರಮಂ ಶತ್ರುಪರಾಜಯೋರ್ಜಿತಂ । ಅವೈಕ್ಷತಾಽಕ್ಷಸ್ಸಮುದೀರ್ಣಮಾನಸಸ್ಸಬಾಣಪಾಣಿಃ ಪ್ರಗೃಹೀತಕಾರ್ಮುಕಃ ॥ ೧೧ ॥ ಸಹೇಮನಿಷ್ಕಾಂಗದಚಾರುಕುಂಡಲಸ್ಸಮಾಸಸಾದಾಶು ಪರಾಕ್ರಮಃ ಕಪಿಂ । ತಯೋರ್ಬಭೂವಾಪ್ರತಿಮಸ್ಸಮಾಗಮಸ್ಸುರಾಸುರಾಣಾ

ಇರುವ, ಸಮಾಹಿತಾತ್ಮಾ - ಸಂತುಷ್ಟವಾದ ಮನವುಳ್ಳ, ಸಃ - ಆ ಅಕ್ಷಕುಮಾರನು, ಜಾತಮನ್ಯುಃ - ಹುಟ್ಟಿದ ಕೋಪವುಳ್ಳವನಾಗಿ, ಪ್ರಸಮೀಕ್ಷ್ಯವಿಕ್ರಮಂ - ದರ್ಶನೀಯವಾದ ಪರಾಕ್ರಮವುಳ್ಳ, ಸಂಯತಿ - ಯುದ್ಧದಲ್ಲಿ, ದುರ್ನಿವಾರಣಂ - ನಿವಾರಿಸಲಸಾಧ್ಯನಾದ, ಹನುಮಂತಂ - ಆಂಜನೇಯನನ್ನು, ಶಿತೈಃ - ತೀಕ್ಷ್ಣಗಳಾದ, ತ್ರಿಭಿಶ್ಶರೈಃ - ಮೂರು ಬಾಣಗಳಿಂದ, ಪ್ರಚೋದಯಾಮಾಸ - ಯುದ್ಧಾರ್ಥವಾಗಿ ಎಚ್ಚರಗೊಳಿಸಿದನು. ॥ ೧೦ ॥ ತತಃ - ಬಳಿಕ, ಸಮು....ಸಃ - ಹುಟ್ಟಿದ ಮನಸ್ಸುಳ್ಳ, ಪ್ರಗೃ....ಕಃ - ಗ್ರಹಿಸಲ್ಪಟ್ಟ ಧನುಸ್ಸುಳ್ಳ, ಸಃಅಕ್ಷಃ - ಆ ಅಕ್ಷಕುಮಾರನು, ಬಾಣಪಾಣಿಃ - ಬಾಣಹಸ್ತನಾಗಿ, ಪ್ರಸ....ತಂ - ದರ್ಶನೀಯವಾದ ಗರ್ವವುಳ್ಳ, ಜಿತಶ್ರಮಂ - ಜಯಿಸಲ್ಪಟ್ಟ ಆಯಾಸವುಳ್ಳ, ಶತ್ರು....ತಂ - ವೈರಿಪರಾಜಯದಿಂದ ಉತ್ಸಾಹವಂತನಾದ, ತಂಕಪಿಂ - ಆ ಆಂಜನೇಯನನ್ನು, ಅವೈಕ್ಷತ - ಕಂಡನು. ॥ ೧೧ ॥ ಸಹೇ....ಲಃ - ಚಿನ್ನದಿಂದ ಮಾಡಲ್ಪಟ್ಟ ಬಾಹುಚಿಗೆಗಳೂ, ಸೊಗಸಾದ ಹತ್ತಕಡಕುಗಳೂ ಉಳ್ಳ, ಆಶುಪರಾಕ್ರಮಃ - ತೀಕ್ಷ್ಣಪೌರುಷವುಳ್ಳ, ಸಃ - ಆ ಅಕ್ಷಕುಮಾರನು, ಕಪಿಂ - ವಾನರನನ್ನು, ಆಸಸಾದ - ಹೊಂದಿದನು, ಸುರಾ....ಪಿ - ದೇವರಾಕ್ಷಸರಿಗೂ, ಸಂಭ್ರಮಪ್ರದಃ - ತ್ವರೆಯನ್ನುಂಟುಮಾಡುತ್ತಿರುವ, ಅಪ್ರತಿಮಃ - ಅಸದೃಶವಾದ, ತಯೋಃ - ಆ ಮಾರುತಿ ಮತ್ತು ಅಕ್ಷಕುಮಾರರ, ಸಮಾಗಮಃ - ಯುದ್ಧವು, ಬಭೂವ - ಆಯಿತು. ॥ ೧೨ ॥ ಕಪೇಃ - ವಾನರನ, (ಮತ್ತು) ಕುಮಾರಸ್ಯ - ಅಕ್ಷಕುಮಾರನ, ಸಂಯುಗಂ - ಕಾಳಗವನ್ನು,

ಆಂಜನೇಯನೂ ಬಹಳವಾಗಿ ವರ್ಧಿಸುತ್ತಲೇ ಇದ್ದನು. ಆಗ ಅಕ್ಷಕುಮಾರನು, ರಣದಲ್ಲಿ ಹನುಮಂತನು ದುರ್ದಮನೀಯವಾದ ಪರಾಕ್ರಮವುಳ್ಳವನೆಂದು ತಿಳಿದವನಾಗಿ ಪ್ರಳಯಕಾಲರುದ್ರನಂತೆ ಬಹಳವಾಗಿ ಕನಲಿ ಅವನನ್ನು ಗೆಲ್ಲುವುದು ಅಸಾಧ್ಯವೆಂದಿರಿತರೂ ಯುದ್ಧವನ್ನುಪಕ್ರಮಿಸಿ ಮೊಟ್ಟಮೊದಲು ಬಹು ತೀಕ್ಷ್ಣಗಳಾದ ಮೂರುಬಾಣಗಳನ್ನು ಅವನಮೇಲೆಸೆದನು. ॥ ೭–೧೦ ॥ ಆಂಜನೇಯನವುಗಳನ್ನು ಲಕ್ಷಿಸದಿರಲು ಅಕ್ಷಕುಮಾರನು ಮನಸ್ಸಿನಲ್ಲಿಯೇ ಗರ್ವಪಟ್ಟುಕೊಂಡು ಧನುರ್ಬಾಣಗಳನ್ನು ತೆಗೆದುಕೊಂಡು ಹನುಮಂತನು ಮಹಾ ಬಲಗರ್ವಿತನೆಂದೂ, ಅವನಿಗೆ ಶ್ರಮವೆಂಬುದೇ ಇಲ್ಲವೆಂದೂ, ಶತ್ರುಗಳನ್ನು ಜಯಿಸುವುದರಲ್ಲಿ ಅವನು ಮಹಾ ಸಮರ್ಥನೆಂದೂ ನಿಶ್ಚಯಿಸಿ ತನ್ನಲ್ಲಿ ತಾನೇ ಸ್ವಲ್ಪಹೊತ್ತು ಆಲೋಚಿಸುತ್ತಿದ್ದನು. ಆ ಬಳಿಕ ಸುವರ್ಣಾಂಗದಗಳನ್ನೂ, ಪದಕಗಳನ್ನೂ, ಮನೋಹರವಾದ ಕರ್ಣಕುಂಡಲಗಳನ್ನೂ ಧರಿಸಿ ಬೆಳಗುತ್ತಲಿದ್ದ ಆ ಅಕ್ಷಕುಮಾರನು ಬಹು ಶೀಘ್ರವಾಗಿಯೇ ಪರಾಕ್ರಮವನ್ನವಲಂಬಿಸಿ ಹನುಮಂತನನ್ನಿದಿರಿಸಿದನು. ಆಗ ಅವರೀರ್ವರಿಗೂ ನಡೆದ ಯುದ್ಧವು ಸುರಾಸುರರಿಗೂ ವಿಸ್ಮಯಕರವಾಗಿದ್ದಿತು. ಈ ಮಹಾ ವೀರರ ಯುದ್ಧದಿಂದ ಭೂಮಿಯೇ

ಮಹಿ ಸಂಭ್ರಮಪ್ರದಃ॥೧೨॥¶ ರರಾಸ ಭೂಮಿರ್ನತತಾಪ ಭಾನುರ್ವವೌ ನವಾಯುಃ ಪ್ರಚಚಾಲಚಾಚಲಃ । ಕಪೇಃ ಕುಮಾರಸ್ಯಚ ವೀಕ್ಷ್ಯ ಸಂಯುಗಂ ನನಾದಚ ದ್ಯೌರುದಧಿಶ್ಚ ಚುಕ್ಷುಭೇ ॥ ೧೩ ॥ ತತಸ್ಸವೀರಸ್ಸುಮುಖಾನ್ ಪತತ್ರಿಣಃ ಸುವರ್ಣಪುಂಖಾನ್ ಸವಿಷಾನಿವೋರಗಾನ್ । ಸಮಾಧಿಸಂಯೋಗವಿಮೋಕ್ಷತತ್ವವಿಚ್ಛರಾನಥ ತ್ರೀನ್ಕಪಿಮೂರ್ಧ್ನ್ಯಪಾತಯತ್ ॥ ೧೪ ॥ ಸತೈಶ್ಶರೈರ್ಮೂರ್ಧ್ನಿ ಸಮಂ ನಿಪಾತಿತೈಃ ಕ್ಷರನ್ನಸೃಗ್ದಿಗ್ಧವಿವೃತ್ತಲೋಚನಃ । ನವೋದಿತಾದಿತ್ಯನಿಭಶ್ಶರಾಂಶುಮಾನ್ವ್ಯರಾಜತಾದಿತ್ಯಇವಾಂಶುಮಾಲಿಕಃ ॥ ೧೫ ॥ ತತಸ್ಸಪಿಂಗಾಧಿಪಮಂತ್ರಿಸತ್ತಮಃ ಸಮೀಕ್ಷ್ಯ ತಂ

ವೀಕ್ಷ್ಯ - ನೋಡಿ, ಭೂಮಿಃ - ಭೂಮಿಯು, ರರಾಸ - ಮೊರೆಯಿಡಿತು, ಭಾನುರ್ಮಾ - ಸೂರ್ಯನು, ನತತಾಪ - ತಪಿಸಲಿಲ್ಲ, ವಾಯುಃ - ಗಾಳಿಯು, ನವವೌ - ಬೀಸಲಿಲ್ಲ, ಅಚಲಶ್ಚ - ಬೆಟ್ಟವೂ ಸಹ, ಪ್ರಚಚಾಲ - ಚಲಿಸಿತು, ದ್ಯೌಃ - ಅಂತರಿಕ್ಷವು, ನನಾದ - ಶಬ್ದಾಯಮಾನವಾಯಿತು, ಉದಧಿಶ್ಚ - ಸಮುದ್ರವೂ, ಚುಕ್ಷುಭೇ - ಕ್ಷೋಭೆಗೊಂಡಿತು. ॥ ೧೩ ॥ ಅಥ - ಬಳಿಕ, ಸಮಾ....ತ್ - ಲಕ್ಷ್ಯವೇಧನಶರಸಂಧಾನ ಬಾಣವಿಸರ್ಜನ ಯಥಾರ್ಥವನ್ನರಿತ, ವೀರಃ - ಶೂರನಾದ, ಸಃ - ಆ ಅಕ್ಷಕುಮಾರನು, ಸುಮುಖಾನ್ - ತೀಕ್ಷ್ಣ ಮುಖಗಳುಳ್ಳ, ಸುವ....ಖಾನ್ - ಚಿನ್ನದ ತುದಿಗಳುಳ್ಳ, ಸವಿಷಾನ್ - ವಿಷದಿಂದೊಡಗೂಡಿದ, ಉರಗಾನಿವಸ್ಥಿತಾನ್ - ಹಾವುಗಳಂತಿರುವ, ತ್ರೀನ್ಶರಾನ್ - ಮೂರು ಬಾಣಗಳನ್ನು, ತತಃ - ಆ ಧನುಸ್ಸಿನಿಂದ, ಕಪಿಮೂರ್ಧ್ನಿ - ವಾನರನ ಶಿರದಲ್ಲಿ, ಅಪಾತಯತ್ - ಬೀಳಿಸಿದನು. ॥ ೧೪ ॥ ಮೂರ್ಧ್ನಿ - ಶಿರಸ್ಸಿನಲ್ಲಿ, ಸಮಂ - ಏಕಕಾಲದಲ್ಲಿ, ನಿಪಾತಿತೈಃ - ಬೀಳಿಸಲ್ಪಟ್ಟ, ತೈಶ್ಶರೈಃ - ಆ ಬಾಣಗಳಿಂದ, ಕ್ಷರನ್ - ರಕ್ತವನ್ನು ಸುರಿಸುತ್ತಿರುವುದರಿಂದ, ಅಸೃ....ನಃ - ರಕ್ತದಿಂದ ನೆನೆದು ತಿರುಗುತ್ತಿರುವ ಕಣ್ಣಾಲಿಗಳುಳ್ಳ, ನವೋ....ಭಃ-ನೂತನವಾಗಿ ಹುಟ್ಟಿದ ಸೂರ್ಯನಿಗೆ ಸಮಾನವಾದ, ಸಃ - ಆ ಆಂಜನೇಯನು, ಶರಾಂಶುಮಾನ್ - ಬಾಣಗಳೆಂಬ ಕಿರಣಗಳುಳ್ಳವನಾಗಿ, ಅಂಶುಮಾಲಿಕಃ - ಕಿರಣಮಾಲಿಕೆಯುಳ್ಳ, ಆದಿತ್ಯಇವ - ಸೂರ್ಯನಂತೆ, ವ್ಯರಾಜತ - ಹೊಳೆಯುತ್ತಿದ್ದನು. ॥ ೧೫ ॥ ತತಃ - ಬಳಿಕ, ಪಿಂಗಾ....ಮಃ - ವಾನರಾಧಿಪತಿಯಾದ ಸುಗ್ರೀವನ ಮಂತ್ರಿ

ಮೊರೆದುಹೋಯಿತು; ಸೂರ್ಯನು ತಪಿಸಲೇ ಇಲ್ಲವು ; ವಾಯುವು ನಿಶ್ಚಲವಾಯಿತು. ಬೆಟ್ಟಗಳು ನಡುಗಿಹೋದವು. ಸಮುದ್ರವು ಕದಡಿಹೋಯಿತು. ಆಕಾಶವು ಧ್ವನಿಮಾಡಿತು. ಗುರಿಮಾಡುವುದರಲ್ಲಿಯೂ, ಬಾಣಸಂಧಾನ ಮಾಡುವುದರಲ್ಲಿಯೂ, ಗುರಿಯಿಟ್ಟು ಹೊಡೆಯುವುದರಲ್ಲಿಯೂ ಮಹಾ ಚತುರನಾದ ಅಕ್ಷನು ತೀಕ್ಷ್ಣವಾದ ಅಲಗುಗಳಿಂದಲೂ, ಗರಿಗಳಿಂದಲೂ, ಚಿನ್ನದ ಹಿಡಿಗಳಿಂದಲೂ ಕೂಡಿ ಮಹಾ ವಿಷಸರ್ಪಗಳಂತಿರುವ ಮೂರುಬಾಣಗಳನ್ನು ಆ ಕಪಿವೀರನ ತಲೆಗೆ ಗುರಿಯಿಟ್ಟು ಹೊಡೆದನು. ಆ ಮೂರುಬಾಣಗಳೂ ಏಕಕಾಲದಲ್ಲಿ ಹನುಮಂತನ ತಲೆಗೆ ತಾಕಲು, ಅವುಗಳಿಂದುಂಟಾದ ಗಾಯದಿಂದ ಅವನು ಆಗತಾನೇ ಉದಿಸಿದ ಬಾಲಸೂರ್ಯನಂತೆ ಶೋಭಿಸುತ್ತಿದ್ದನು. ॥ ೧೧--೧೫ ॥ ಹೀಗೆ ಪ್ರಕಾಶಿಸುತ್ತಿರುವ

¶ "ಅಕ್ಷಯುದ್ಧಸಮಯದಲ್ಲಿ ಸೂರ್ಯೋದಯವೇ ಇರಲಿಲ್ಲವಾದರೂ, "ನತತಾಪಸೂರ್ಯಃ" ಎಂದು ಹೇಳಿರುವುದರಿಂದ ಸೂರ್ಯನು ದೇಶಾಂತರಸ್ಥನಾಗಿದ್ದರೂ ಆಗ ತಪಿಸಲಿಲ್ಲವು" (ಮಹೇಶ್ವರ)

"ಸೂರ್ಯೋದಯವು ಹಿಂದೆಯೇ ಸೂಚಿಸಿದೆ. ಆ ಸೂರ್ಯನು ಈಗ ತಪಿಸಲಿಲ್ಲ" ಎಂದು ಗೋವಿಂದರಾಜರ ವ್ಯಾಖ್ಯಾನ

ರಾಜವರಾತ್ಮಜಂ ರಣೇ । ಉದಗ್ರಚಿತ್ರಾಯುಧಚಿತ್ರಕಾರ್ಮುಕಂ ಜಹರ್ಷ ಚಾಪೂರ್ಯತ ಚಾಹವೋನ್ಮುಖಃ ॥ ೧೭ ॥ ಸಮಂದರಾಗ್ರಸ್ಥಇವಾಂಶುಮಾಲಿಕೋ ವಿವೃದ್ಧಕೋಪೋ ಬಲವೀರ್ಯಸಂಯುತಃ । ಕುಮಾರಮಕ್ಷಂ ಸಬಲಂ ಸವಾಹನಂ ದದಾಹ ನೇತ್ರಾಗ್ನಿಮರೀಚಿಭಿಸ್ತದಾ ॥೧೭॥ ತತಸ್ಸಬಾಣಾಸನಶಕ್ರಕಾರ್ಮುಕಶ್ಶರಪ್ರವರ್ಷೋ ಯುಧಿ ರಾಕ್ಷಸಾಂಬುದಃ । ಶರಾನ್ಮುಮೋಚಾಶು ಹರೀಶ್ವರಾಚಲೇ ವಲಾಹಕೋ ವೃಷ್ಟಿಮಿವಾಚಲೋತ್ತಮೇ ॥ ೧೮ ॥ ತತಃ ಕಪಿಸ್ತಂ ರಣಚಂಡವಿಕ್ರಮಂ ಪ್ರವೃದ್ಧ

ಶ್ರೇಷ್ಠನಾದ, ಸಃ - ಆ ಆಂಜನೇಯನು, ರಣೇ - ಯುದ್ಧದಲ್ಲಿ, ಉದ....ಕಂ - ಎತ್ತಲ್ಪಟ್ಟ ಆಶ್ಚರ್ಯಕರಗಳಾದ ಆಯುಧಗಳುಳ್ಳ, ನಾನಾಬಣ್ಣಗಳ ಧನುಸ್ಸುಳ್ಳ, ರಾಜವರಾತ್ಮಜಂ - ರಾಕ್ಷಸರಾಜಶ್ರೇಷ್ಠನಾದ ರಾವಣನ ಪುತ್ರನಾದ, ತಂ - ಆ ಅಕ್ಷಕುಮಾರನನ್ನು, ಸಮೀಕ್ಷ್ಯ - ಕಂಡು, ಆಹವೋನ್ಮುಖಃ - ಯುದ್ಧಾಭಿಮುಖನಾಗಿ, ಜಹರ್ಷಚ - ಸಂತೋಷವನ್ನು ಹೊಂದಿದನು, ಆಪೂರ್ಯತಚ - ವೃದ್ಧಿಯನ್ನೂ ಹೊಂದಿದನು. ॥ ೧೭ ॥ ತದಾ - ಆ ಸಮಯದಲ್ಲಿ, ಮಂದರಾಗ್ರಸ್ಥಃ - ಮಂದರಪರ್ವತದ ಶಿಖರದಲ್ಲಿರುವ, ಅಂಶುಮಾಲಿಕಇವ - ಸೂರ್ಯನಂತೆ, ವಿವೃದ್ಧಕೋಪಃ - ವೃದ್ಧಿಗೊಂಡ ಕೋಪವುಳ್ಳ, ಬಲ....ತಃ - ದೇಹತ್ರಾಣದಿಂದಲೂ, ಸಾಮರ್ಥ್ಯದಿಂದಲೂ ಕೂಡಿದ, ಸಃ - ಆಂಜನೇಯನು, ಸಬಲಂ - ಸೈನ್ಯಸಹಿತನಾದ, ಸವಾಹನಂ - ವಾಹನದಿಂದೊಡಗೂಡಿದ, ಅಕ್ಷಂಕುಮಾರಂ - ಅಕ್ಷಕುಮಾರನನ್ನು, ನೇತ್ರಾ....ಭಿಃ - ಕಣ್ಣುಗಳೆಂಬ ಅಗ್ನಿಜ್ವಾಲೆಗಳಿಂದ, ದದಾಹ - ಸುಟ್ಟನು. ॥ ೧೭ ॥ ತತಃ - ಬಳಿಕ, ಯುಧಿ - ಯುದ್ಧದಲ್ಲಿ, ಬಾಣಾ....ಕಃ - ಬಾಣಗಳನ್ನು ಬಿಡುತ್ತಿರುವ ನಾನಾಬಣ್ಣಗಳುಳ್ಳ ಕೋದಂಡವೆಂಬ ಇಂದ್ರ ಧನುಸ್ಸುಳ್ಳ, ಶರಪ್ರವರ್ಷಃ - ಬಾಣವೃಷ್ಟಿಯೆಂಬ ವರ್ಷವನ್ನು ಸುರಿಸುತ್ತಿರುವ, ಸರಾಕ್ಷಸಾಂಬುದಃ - ಆ ರಾಕ್ಷಸನೆಂಬ ಮೇಘವು, ಹರೀ....ಲೇ - ಕಪಿಶ್ರೇಷ್ಠನೆಂಬ ಪರ್ವತದಲ್ಲಿ, ವಲಾಹಕಃ - ಮೇಘವು, ಅಚಲೋತ್ತಮೇ - ಪರ್ವತಶ್ರೇಷ್ಠದಲ್ಲಿ, ವೃಷ್ಟಿಮಿವ - ವರ್ಷವನ್ನಂತೆ, ಶರಾ - ಬಾಣಗಳನ್ನು, ಆಶು - ಜಾಗ್ರತೆಯಾಗಿ, ಮುಮೋಚ - ಬಿಟ್ಟನು. ॥ ೧೮ ॥ ತತಃ - ಬಳಿಕ, ಘನ....ಮಃ - ಮೇಘಸಮಾನವಾದ ಸಂಚಾರವುಳ್ಳ, ಕಪಿಃ - ವಾನರನು, ರಣ....ಮಂ-

---

ವನೂ, ಸುಗ್ರೀವನ ಪ್ರಧಾನಿಗಳಲ್ಲಿ ಮುಖ್ಯನಾದವನೂ ಆದ ಹನುಮಂತನು, ಯುದ್ಧದಲ್ಲಿ ನಾನಾವಿಧಗಳಾದ ಆಯುಧಗಳೊಡಗೂಡಿ, ಚಿತ್ರಗತಿಗಳುಳ್ಳ ಆಯುಧಗಳನ್ನು ಹಿಡಿದು ವಿಜೃಂಭಿಸುತ್ತಿರುವ ದಶಮುಖನ ಮಗನಾದ ಆ ಅಕ್ಷಕುಮಾರನನ್ನು ನೋಡಿ ಬಹಳವಾಗಿ ಸಂತೋಷಪಟ್ಟನು. ಹೀಗೆ ಹನುಮಂತನು ವೃದ್ಧಿಹೊಂದಿ ಮಂದರಗಿರಿಶಿಖರದಲ್ಲಿರುವ ಸೂರ್ಯನಂತೆಪ್ರಕಾಶಿಸುತ್ತ, ಕೋಪವು ಮೇಲೆ ಮೇಲೆ ಉಕ್ಕಿಬರುತ್ತಿರಲು, ಕಣ್ಣುಗಳೆಂಬ ಅಗ್ನಿಶಿಖೆಗಳಿಂದಲೂ, ವಾಹನಗಳಿಂದಲೂ, ಸೈನ್ಯದಿಂದಲೂ ಕೂಡಿದ ಆ ಅಕ್ಷಕುಮಾರನನ್ನು ದಹಿಸುವವನಂತೆ ಬಹು ಕ್ರೂರದೃಷ್ಟಿಯಿಂದ ನೋಡಿದನು. ಆಗ ಯುದ್ಧದಲ್ಲಿ ಚಿತ್ರಕಾರ್ಮುಕವೇ ಇಂದ್ರಧನುಸ್ಸಾಗಿವುಳ್ಳವನೂ, ಬಾಣವರ್ಷವೆಂಬ ವೃಷ್ಟಿಯುಳ್ಳವನೂ ಆದ ಅಕ್ಷನೆಂಬ ಆ ಮಹಾ ಮೇಘನು, ವಾನರೋತ್ತಮನೆಂಬ ಮಹಾಪರ್ವತದಮೇಲೆ ಬಾಣವರ್ಷವನ್ನು ಸುರಿಸಿದನು. ಹೀಗೆ ಮಹಾ ಭಯಂಕರ ಪರಾಕ್ರಮವುಳ್ಳವನೂ, ಬಹಳವಾಗಿ ವೃದ್ಧಿಹೊಂದಿದ ಕಾಂತಿಯುಳ್ಳವನೂ, ವಿಜೃಂಭಿಸುತ್ತಿರುವ ಬಲ

ತೇಜೋಬಲವೀರ್ಯಸಂಯುತಂ । ಕುಮಾರಮಕ್ಷಂ ಪ್ರಸಮೀಕ್ಷ್ಯ ಸಂಯುಗೇ ನನಾದ ಹರ್ಷಾದ್ಘನತುಲ್ಯವಿಕ್ರಮಃ ॥ ೧೯ ॥ ಸಬಾಲಭಾವಾದ್ಯುಧಿ ವೀರ್ಯದರ್ಪಿತಃ ಪ್ರವೃದ್ಧಮನ್ಯುಃ ಕ್ಷತಜೋಪಮೇಕ್ಷಣಃ । ಸಮಾಸಸಾದಾಪ್ರತಿಮಂ ಕಪಿಂ ರಣೇ ಗಜೋ ಮಹಾಕೂಪಮಿವಾವೃತಂ ತೃಣೈಃ ॥ ೨೦ ॥ ಸತೇನ ಬಾಣೈಃ ಪ್ರಸಭಂ ನಿಪಾತಿತೈಶ್ಚಕಾರ ನಾದಂ ಘನನಾದನಿಸ್ವನಃ । ಸಮುತ್ಪಪಾತಾಶು ನಭಸ್ಸಮಾರುತಿ ರ್ಭುಜೋರುವಿಕ್ಷೇಪಣಘೋರದರ್ಶನಃ ॥ ೨೧ ॥ ಸಮುತ್ಪತಂತಂ ಸಮಭಿದ್ರವದ್ಬಲೀ ಸರಾಕ್ಷಸಾನಾಂ ಪ್ರವರಃ ಪ್ರತಾಪವಾನ್ । ರಥೀ ರಥಿಶ್ರೇಷ್ಠತಮಃ ಕಿರನ್ ಶರೈಃ ಪಯೋ

ಯುದ್ಧದಲ್ಲಿ ಕ್ರೂರ ಪರಾಕ್ರಮವುಳ್ಳ, ಸಂಯುಗೇ - ಕಾಳಗದಲ್ಲಿ, ವಿವೃ....ತಂ - ವೃದ್ಧಿಯನ್ನೈದಿದ ಅಂತಸ್ಸಾರದಿಂದಲೂ, ದೇಹಶಕ್ತಿಯಿಂದಲೂ, ಸಾಮರ್ಥ್ಯದಿಂದಲೂ ಕೂಡಿರುವ, ತಂಅಕ್ಷಂಕುಮಾರಂ- ಅಕ್ಷಕುಮಾರನನ್ನು, ಪ್ರಸಮೀಕ್ಷ್ಯ - ಕಂಡು, ಹರ್ಷಾತ್ - ಸಂತೋಷದಿಂದ, ನನಾದ - ಕೂಗಿದನು. ॥ ೧೯ ॥ ಬಾಲಭಾವಾತ್ - ಬಾಲ್ಯಚಾಪಲ್ಯದಿಂದ, ಯುಧಿ - ಯುದ್ಧದಲ್ಲ, ವೀರ್ಯದರ್ಪಿತಃ - ಪರಾಕ್ರಮದಿಂದ ಕೊಬ್ಬಿರುವ, ಪ್ರವೃದ್ಧಮನ್ಯುಃ - ವೃದ್ಧಿಯನ್ನೈದಿದ ಕೋಪವುಳ್ಳ, ಕ್ಷತ....ಣಃ - ರಕ್ತಸಮಾನ ನೇತ್ರಗಳುಳ್ಳ, ಸಃ - ಆ ಅಕ್ಷಕುಮಾರನು, ರಣೇ - ಯುದ್ಧದಲ್ಲಿ, ಅಪ್ರತಿಮಂ - ಅಸದೃಶನಾದ, ಕಪಿಂ - ವಾನರನನ್ನು, ಗಜಃ - ಆನೆಯು, ತೃಣೈಃ - ಹುಲ್ಲುಗಳಿಂದ, ಆವೃತಂ - ಮುಚ್ಚಲ್ಪಟ್ಟ, ಮಹಾಕೂಪಮಿವ - ಹಾಳುಬಾವಿಯನ್ನಂತೆ, ಸಮಾಸಸಾದ - ಹೊಂದಿದನು. ॥ ೨೦ ॥ ಘನ....ಸಃ - ಮೇಘಗರ್ಜನದಂತೆ ಗರ್ಜನವುಳ್ಳ, ಸಃ - ಪ್ರಸಿದ್ಧನಾದ, ಸಮಾರುತಿಃ- ಆ ವಾಯುಪುತ್ರನು, ಭುಜೋ....ನಃ - ಬಾಹುಗಳ, ತೊಡೆಗಳ, ಹೊಡೆತದಿಂದ ಭಯಂಕರ ನೋಟವುಳ್ಳವನಾಗಿ, ತೇನ - ಆ ಅಕ್ಷಕುಮಾರನಿಂದ, ಪ್ರಸಭಂ - ಬಲಾತ್ಕರಿಸಿ, ನಿಪಾತಿತೈಃ - ಬೀಳಿಸಲ್ಪಟ್ಟ, ಬಾಣೈಃ - ಬಾಣಗಳಿಂದ, ನಾದಂ - ಕೋಲಾಹಲ ಧ್ವನಿಯನ್ನು, ಚಕಾರ - ಮಾಡಿದನು, ಆಶು - ಜಾಗ್ರತೆಯಾಗಿ, ನಭಃ - ಅಂತರಿಕ್ಷವನ್ನು ಕುರಿತು, ಸಮುತ್ಪಪಾತ - ಹಾರಿದನು. ॥ ೨೧ ॥ ಪ್ರತಾಪವಾನ್ - ಪರಾಕ್ರಮಿಯಾದ, ರಥಿಶ್ರೇಷ್ಠತಮಃ - ಮಹಾ ರಥಿಕಶ್ರೇಷ್ಠನಾದ, ಬಲೀ - ಬಲಾಢ್ಯನಾದ, ರಾಕ್ಷಸಾನಾಂಪ್ರವರಃ - ರಾಕ್ಷಸೋತ್ತಮನಾದ, ಸಃ - ಆ ಅಕ್ಷಕುಮಾರನು, ರಥೀ - ರಥಾರೂಢನಾಗಿ, ಪಯೋಧರಃ - ಮೇಘವು, ಅಶ್ಮವೃಷ್ಟಿಭಿಃ - ಕಲ್ಮಳೆಯಿಂದ, ಶೈಲಮಿವ -

ಪರಾಕ್ರಮಗಳುಳ್ಳವನೂ, ಮಹಾ ಮೇಘಕ್ಕೆ ಸಮಾನವಾದ ವೇಗವುಳ್ಳವನೂ ಆದ ಆ ಅಕ್ಷಕುಮಾರನನ್ನು ನೋಡಿ ಮತ್ತಷ್ಟು ಸಂತೋಷಪಟ್ಟು ಭಯಂಕರ ಸಿಂಹನಾದವೊಂದನ್ನು ಮಾಡಿದನು. ಆಗ ಅಕ್ಷಕುಮಾರನು ಬಾಲ್ಯಚಾಪಲ್ಯದಿಂದ ಮೈಮರೆತು ಬಹಳವಾಗಿ ಪರಾಕ್ರಮಿಸಿ, ಕೋಪದಿಂದ ಕಣ್ಣುಗಳಲ್ಲಿ ರಕ್ತವನ್ನು ಕಕ್ಕುತ್ತ ಹುಲ್ಲಿನಿಂದ ಮುಚ್ಚಿದ ಹಾಳುಬಾವಿಯಮೇಲೆ ಹೋಗುವಂತೆ ಅಪರಿಮಿತ ಪರಾಕ್ರಮಶಾಲಿಯಾದ ಆಂಜನೇಯನಮೇಲೆ ಹೋದನು. ॥ ೧೬-೨೦ ॥ ಹೀಗೆ ಬಹಳವಾಗಿ ಪರಾಕ್ರಮಿಸಿ, ಮಹಾಪರಾಕ್ರಮಶಾಲಿಯಾದ ಆಂಜನೇಯನಮೇಲೆ ಅನೇಕ ಕೂರಂಬುಗಳನ್ನು ಒಂದೇಸಮನೆ ಪ್ರಯೋಗಿಸಿದನು. ಆಗ ಮಹಾವಾನರನಾದ ಹನುಮಂತನು ಭಯಂಕರ ಹುಂಕಾರವನ್ನು ಮಾಡಿ ಕೈಕಾಲುಗಳನ್ನು ಹೊಡೆಯುತ್ತ ನೋಡುವವರಿಗೆ ಭಯಹುಟ್ಟುವಂತೆ ಗಗನಕ್ಕೆ ಹಾರಿದನು. ಆಗ ಮಹಾ ಬಲಾಢ್ಯನೂ, ರಾಕ್ಷಸೋತ್ತಮನೂ, ಮಹಾ ರಥಿಕನೂ ಆದ ಅಕ್ಷಕುಮಾರನೂ,

ಧರಶ್ಶೈಲಮಿವಾಶ್ಮವೃಷ್ಟಿಭಿಃ ‖ ೨೨ ‖ ಸತಾನ್ ಶರಾಂಸ್ತಸ್ಯ ಹರಿರ್ವಿಮೋಕ್ಷಯನ್ ಚಚಾರ ವೀರಃ ಪಥಿ ವಾಯುಸೇವಿತೇ । ಶರಾಂತರೇ ಮಾರುತವದ್ವಿನಿಷ್ಪತನ್ಮನೋಜವಸ್ಸಂಯತಿ ಚಂಡವಿಕ್ರಮಃ ‖ ೨೩ ‖ ತಮಾತ್ತ ಬಾಣಾಸನಮಾಹವೋನ್ಮುಖಂ ಖಮಾಸ್ತೃಣಂತಂ ವಿಶಿಖೈಶ್ಶರೋತ್ತಮೈಃ । ಅವೈಕ್ಷತಾಕ್ಷಂ ಬಹುಮಾನಚಕ್ಷುಷಾ ಜಗಾಮ ಚಿಂತಾಂ ಚ ಸಮಾರುತಾತ್ಮಜಃ ‖ ೨೪ ‖ ತತಶ್ಶರೈರ್ಭಿನ್ನಭುಜಾಂತರಃ ಕಪಿಃ ಕುಮಾರವೀರೇಣ ಮಹಾತ್ಮನಾ ನದನ್ । ಮಹಾಭುಜಃ ಕರ್ಮ ವಿಶೇಷತತ್ವ

ಪರ್ವತವನ್ನೋಪಾದಿಯಲ್ಲಿ, ಸಮುತ್ಪತಂತಂ - ಹಾರುತ್ತಿರುವ ಆಂಜನೇಯನನ್ನು, ಶರೈಃ - ಬಾಣಗಳಿಂದ, ಕಿರನ್ - ಎರಚುತ್ತ, ಸಮಭಿದ್ರವತ್ - ಅಟ್ಟಿಬಂದನು. ‖ ೨೨ ‖ ಸಂಯತಿ - ಯುದ್ಧದಲ್ಲಿ, ಚಂಡವಿಕ್ರಮಃ - ಕ್ರೂರ ಪರಾಕ್ರಮಿಯಾದ, ಮನೋಜವಃ - ಮನೋವೇಗವುಳ್ಳ, ವೀರಃ - ಶೂರನಾದ, ಸಹರಿಃ - ಆ ಕಪಿಯು, ತಸ್ಯ - ಆ ಅಕ್ಷನ, ತಾನ್‌ಶರಾನ್ - ಆ ಬಾಣಗಳನ್ನು, ವಾಯುಸೇವಿತೇ - ವಾಯುವಿನಿಂದ ಬೀಸಲ್ಪಟ್ಟ, ಪಥಿ - ಮಾರ್ಗದಲ್ಲಿ, ವಿಮೋಕ್ಷಯನ್ - ವ್ಯರ್ಥಗೊಳಿಸುತ್ತಿರುವನಾಗಿ, ಶರಾಂತರೇ - ಬಾಣಗಳ ಸಂದಿಯಲ್ಲಿ, ಮಾರುತವತ್-ಗಾಳಿಯಂತೆ, ವಿನಿಷ್ಪತನ್ - ಹೊರಬೀಳುತ್ತ, ಚಚಾರ - ಸಂಚರಿಸಿದನು. ‖ ೨೩ ‖ ಮಾರುತಾತ್ಮಜಃ - ವಾಯುಪುತ್ರನಾದ, ಸಃ - ಆ ಆಂಜನೇಯನು, ಆಹವೋನ್ಮುಖಂ - ಯುದ್ಧದಲ್ಲಿ ಎದುರು ಒರುತ್ತಿರುವ, ಆತ್ತ....ನಂ - ಹಿಡಿಯಲ್ಪಟ್ಟ ಕೋದಂಡವುಳ್ಳ, ವಿಶಿಖೈಃ - ನಾನಾಕೊನೆಗಳುಳ್ಳ, ಶರೋತ್ತಮೈಃ - ಬಾಣಶ್ರೇಷ್ಠಗಳಿಂದ, ಖಂ - ಅಂತರಿಕ್ಷವನ್ನು, ಆಸ್ತೃಣಂತಂ - ಮುಚ್ಚುತ್ತಿರುವ, ತಮಕ್ಷಂ - ಆ ಅಕ್ಷನನ್ನು, ಬಹು....ಷಾ - ಬಹುಮತಿಪುರಸ್ಸರವಾದ ನೋಟದಿಂದ, ಅವೈಕ್ಷತ-ಕಂಡನು, ಚಿಂತಾಂಚ - ಆಲೋಚನೆಯನ್ನೂ ಸಹ, ಜಗಾಮ - ಹೊಂದಿದನು. ‖ ೨೪ ‖ ತತಃ - ಬಳಿಕ, ಮಹಾತ್ಮನಾ - ಮಹಾ ಶರೀರಿಯಾದ, ಕುಮಾ....ಣ - ಶೂರನಾದ ಅಕ್ಷಕುಮಾರನಿಂದ, ಶರೈಃ - ಬಾಣಗಳಿಂದ, ಭಿನ್ನ....ರಃ - ಭೇದಿಸಲ್ಪಟ್ಟ ವಕ್ಷಸ್ಥಳವುಳ್ಳ, ಮಹಾಭುಜಃ - ಮಹಾ ಬಾಹುಶಾಲಿಯಾದ, ಕರ್ಮ....ತ್ - ಶತ್ರು

ಬಹು ಭಯಂಕರವಾಗಿ ಮೇಲಕ್ಕೆ ನೆಗೆಯುತ್ತಿರುವ ಆ ವಾನರವೀರನಮೇಲೆ ಮೇಘವು ಪರ್ವತದಮೇಲೆ ಕಲ್ಮಳೆಯನ್ನು ಸುರಿಸುವಂತೆ ಬಾಣವೃಷ್ಟಿಯನ್ನು ಸುರಿಸುತ್ತ ಅವನೊಡನೆಯೇ ಮೇಲಕ್ಕೆ ಹಾರಿದನು. ಆಗ ಮನೋವೇಗವುಳ್ಳವನೂ, ಯುದ್ಧದಲ್ಲಿ ಮಹಾ ಭಯಂಕರ ಬಲಪರಾಕ್ರಮಗಳುಳ್ಳವನೂ ಆದ ಆ ಮಹಾ ವಾನರನು ವಾಯುವು ಸಂಚರಿಸುವಂತೆ, ಅಕ್ಷಕುಮಾರನು ಪ್ರಯೋಗಿಸಿದ ಬಾಣಗಳ ಮಧ್ಯದಲ್ಲಿ ಸಂಚರಿಸುತ್ತ ಅವನ ಬಾಣಗಳೆಲ್ಲವನ್ನೂ ವ್ಯರ್ಥಗೊಳಿಸುತ್ತ ಆ ಗಗನಮಾರ್ಗದಲ್ಲಿಯೇ ತೀವ್ರಗತಿಯಿಂದ ಸಂಚರಿಸುತ್ತಿದ್ದನು. ಆ ಸಮಯದಲ್ಲಿ ವಾಯುಪುತ್ರನಾದ ಹನುಮಂತನು, ಧನುರ್ಬಾಣಗಳನ್ನು ಧರಿಸಿ, ಯುದ್ಧೋನ್ಮುಖನಾಗಿ, ನಾನಾವಿಧಗಳಾದ ಚಿತ್ರಗತಿಗಳುಳ್ಳ, ಚಿತ್ರವಿಚಿತ್ರಗಳಾದ ಬಾಣಗಳಿಂದ ಆಕಾಶವೆಲ್ಲವನ್ನೂ ಅಂಧಕಾರಮಯವಾಗುವಂತೆ ಮಾಡುತ್ತಿದ್ದ ಆ ಅಕ್ಷನನ್ನು ಬಹು ಗೌರವದೃಷ್ಟಿಯಿಂದ ನೋಡಿ ಆತನನ್ನು ಹೇಗೆ ಸಂಹರಿಸಬೇಕೆಂದು ಯೋಚಿಸುತ್ತಿದ್ದನು. ಆಗ ಮಹಾ ಬಲನಾದ ಆಕ್ಷಕುಮಾರನು ಅವನೆದೆಗೆ ತೀಕ್ಷ್ಣವಾದ ಒಂದು ಬಾಣವನ್ನೆಸೆದನು. ಹನುಮಂತನು ಆ ಬಾಣಘಾತದಿಂದ ನೊಂದು ಭಯಂಕರವಾಗಿ ಅರಚಿದನು ;

ವಿದ್ವಿಚಿಂತಯಾಮಾಸ ರಣೇ ಪರಾಕ್ರಮಂ ॥ ೨೫ ॥ "ಅಬಾಲವದ್ಬಾಲದಿವಾಕರ ಪ್ರಭಃ ಕರೋತ್ಯಯಂ ಕರ್ಮ ಮಹಾನ್ಮಹಾಬಲಃ । ನಚಾಸ್ಯ ಸರ್ವಾಹವಕರ್ಮ ಶೋಭಿನಃ ಪ್ರಮಾಪಣೇ ಮೇ ಮತಿರತ್ರ ಜಾಯತೇ ॥ ೨೬ ॥ ಅಯಂ ಮಹಾತ್ಮಾಚ ಮಹಾಂಶ್ಚ ವೀರ್ಯತಃ ಸಮಾಹಿತಶ್ಚಾತಿಸಹಶ್ಚ ಸಂಯುಗೇ । ಅಸಂಶಯಂ ಕರ್ಮ ಗುಣೋದಯಾದಯಂ ಸನಾಗಯಕ್ಷೈರ್ಮುನಿಭಿಶ್ಚ ಪೂಜಿತಃ ॥ ೨೭ ॥ ಪರಾಕ್ರಮೋ ತ್ಸಾಹವಿವೃದ್ಧಮಾನಸಃ ಸಮೀಕ್ಷತೇ ಮಾಂ ಪ್ರಮುಖಾಗತಸ್ಥಿತಃ । ಪರಾಕ್ರಮೋ

ವ್ಯಾಪಾರಾತಿಶಯಗಳ ಯಥಾರ್ಥವನ್ನರಿತ, ಕಪಿಃ - ವಾನರನು, ರಣೇ - ಯುದ್ಧದಲ್ಲಿ, ಪರಾಕ್ರಮಂ - ಶತ್ರುವಿನ ಯುದ್ಧಕ್ರಮವನ್ನು ಕುರಿತು, ವಿಚಿಂತಯಾಮಾಸ-ಆಲೋಚಿಸಿದನು. ॥೨೫॥ ಬಾಲ....ಭಃ-ಬಾಲಸೂರ್ಯನ ತೇಜಸ್ಸಿನಂತೆ ತೇಜಸುಳ್ಳ, ಮಹಾಬಲಃ - ಬಹಳ ಬಲಾಢ್ಯನಾದ, ಅಯಂ - ಈ ಅಕ್ಷ ಕುಮಾರನು, ಅಬಾಲವತ್ - ಯುವಕನಂತೆ, ಮಹತ್ಕರ್ಮ - ಮಹಾ ಕಾರ್ಯವನ್ನು, ಕರೋತಿ - ಮಾಡುತ್ತಾನೆ, ಸರ್ವಾ....ನಃ - ಸಮಸ್ತ ಯುದ್ಧಕ್ರಿಯೆಗಳಿಂದಲೂ ಹೊಳೆಯುತ್ತಿರುವ, ಅಸ್ಯ - ಈ ಅಕ್ಷನ, ಪ್ರಮಾಪಣೇ - ಸಂಹಾರದಲ್ಲಿ, ಅತ್ರ - ಈ ಯುದ್ಧದಲ್ಲಿ, ಮೇ - ನನಗೆ, ಮತಿಃ - ಬುದ್ಧಿಯು, ನಪ್ರಜಾಯತೇ-ಹುಟ್ಟುವುದಿಲ್ಲ. ॥ ೨೬ ॥ ಅಯಂ-ಈ ಅಕ್ಷನು, ಮಹಾತ್ಮಾ-ಮಹಾ ಮನಸ್ಸುಳ್ಳವನು, ವೀರ್ಯತಶ್ಚ - ಪರಾಕ್ರಮದಿಂದಲೂ, ಮಹಾ - ದೊಡ್ಡವನು, ಸಂಯುಗೇ - ಯುದ್ಧದಲ್ಲಿ, ಸಮಾಹಿ ತಶ್ಚ-ಸಮಾಧಾನ ಚಿತ್ತನು, ಅತಿಸಹಶ್ಚ-ಬಲು ಸೈರಣೆಯುಳ್ಳವನು, ಅಯಂ-ಇವನು, ಕರ್ಮ......ತ್-ಯುದ್ಧಕಾರ್ಯದಲ್ಲಿ, ಗುಣೋತ್ಕರ್ಷದಿಂದ, ಸನಾಗಯಕ್ಷೈಃ-ಸರ್ಪಯಕ್ಷರಿಂದೊಡಗೂಡಿದ, ಮುನಿಭಿಃ-ಋಷಿಗಳಿಂದ, ಪೂಜಿತಶ್ಚ - ಶ್ಲಾಘಿಸಲ್ಪಟ್ಟವನೂ ಹೌದು, ಅಸಂಶಯಂ - ಸಂದೇಹವಿಲ್ಲ ॥ ೨೭ ॥ ಪರಾ....ಸಃ - ಪರಾಕ್ರಮದಿಂದಲೂ, ಉತ್ಸಾಹಶಕ್ತಿಯಿಂದಲೂ ವೃದ್ಧಿಹೊಂದಿದ ಮನವುಳ್ಳ, ಪ್ರಮುಖಾ ಗತಃ - ಎದುರು ಬರುತ್ತಿರುವ, ಸ್ಥಿತಃ - ನಿಂತಿರುವ, (ಅಯಂ - ಇವನು) ಮಾಂ - ನನ್ನನ್ನು, ಸಮೀ

ಕಾರ್ಯಗಳ ಗುಣಾಗುಣಗಳನ್ನು ಚೆನ್ನಾಗಿ ತಿಳಿದವನೂ, ಮಹಾ ಬಾಹುವೂ ಆದ ಆತನು ಯುದ್ಧದಲ್ಲಿ ವಿಶೇಷವಾಗಿ ಪರಾಕ್ರಮಿಸಿದ ವಿರೋಧಿಯನ್ನು ಜಯಿಸುವುದೆಂತೆಂದು ಚೆನ್ನಾಗಿ ಯೋಚಿಸಿ ತನ್ನಲ್ಲಿ ತಾನೇ ಹೀಗೆಂದುಕೊಂಡನು. ॥೨೧—೨೫॥ "ಈ ಅಕ್ಷಕುಮಾರನು ಮಹಾ ಪರಾಕ್ರಮಶಾಲಿಯು. ಇವನು ಕೇವಲ ಬಾಲಕನಾದರೂ ಬಾಲಸೂರ್ಯನಂತೆ ಬೆಳ ಗುತ್ತ ಮಹತ್ಕಾರ್ಯಗಳನ್ನೂ ಮಾಡಬಲ್ಲ ಸಮರ್ಥನಾಗಿರುವನು. ಅಸಾಧ್ಯವಾದ ಪರಾಕ್ರಮ ವನ್ನು ಮೆರೆಯುತ್ತಿರುವನು. ಇವನು ಸಮಸ್ತ ಯುದ್ಧಕಾರ್ಯಗಳನ್ನೂ ಚೆನ್ನಾಗಿ ತಿಳಿದವ ನಾಗಿರುವನು. ಇಂತಹನನ್ನು ಕೊಲ್ಲಲು ನನಗೆ ಬುದ್ಧಿಯೇ ಹುಟ್ಟುವುದಿಲ್ಲವು. ಇದಲ್ಲದೆ ಇವನು ಮಹಾತ್ಮನು. ಮಹಾ ಪರಾಕ್ರಮಶಾಲಿಯು. ಯುದ್ಧಕ್ರಿಯೆಯಲ್ಲಿ ಬಹು ಜಾಗ ರೂಕನು. ಎಂತಹ ಕಷ್ಟಗಳನ್ನಾದರೂ ಸೈರಿಸಬಲ್ಲವನು. ಯುದ್ಧಕಾರ್ಯದಲ್ಲಿ ಇವನು ಮಹಾ ಚತುರನಾದುದರಿಂದ ನಾಗರೂ, ಯಕ್ಷರೂ, ದೇವತೆಗಳೂ, ಮಹರ್ಷಿಗಳೂ ಇವ ನನ್ನು ಗೌರವಿಸುವರೆಂಬುದರಲ್ಲಿ ಸಂದೇಹವಿಲ್ಲವು. ಈತನು ಪರಾಕ್ರಮದಿಂದಲೂ, ಉತ್ಸಾಹ ದಿಂದಲೂ ಬಹಳವಾಗಿ ವೃದ್ಧಿಹೊಂದಿ, ಮಹಾ ವೀರನಾದ ನನ್ನನ್ನೂ ಎದುರಿಸಿ ನಿರ್ಭಯವಾಗಿ ನೋಡುತ್ತಿರುವನು. ಮಹಾ ಶೀಘ್ರಗಾಮಿಯಾದ ಈತನ ಪರಾಕ್ರಮವನ್ನು

ಹ್ಯಸ್ಯ ಮನಾಂಸಿ ಕಂಪಯೇತ್ಸುರಾಸುರಾಣಾಮಪಿ ಶೀಘ್ರಕಾರಿಣಃ ॥೨೮॥ ನಖಲ್ವಯಂ ನಾಭಿಭವೇದುಪೇಕ್ಷಿತಃ ಪರಾಕ್ರಮೋಹ್ಯಸ್ಯ ರಣೇ ವಿವರ್ಧತೇ । ಪ್ರಮಾಪಣಂ ತ್ವೇವ ಮಮಾಸ್ಯ ರೋಚತೇ ನವರ್ಧಮಾನೋಽಗ್ನಿರುಪೇಕ್ಷಿತುಂ ಕ್ಷಮಃ" ॥ ೨೯ ॥ ಇತಿ ಪ್ರವೇಗಂತು ಪರಸ್ಯ ತರ್ಕಯನ್ ಸ್ವಕರ್ಮಯೋಗಂ ಚ ವಿಧಾಯ ವೀರ್ಯವಾನ್ । ಚಕಾರ ವೇಗಂ ತು ಮಹಾಬಲಸ್ತದಾ ಮತಿಂ ಚಚಕ್ರೇಽಸ್ಯ ವಧೇ ಮಹಾಕಪಿಃ॥೩೦॥ ಸತಸ್ಯ ತಾನಷ್ಟಹಯಾನ್ಮಹಾಜವಾನ್ ಸಮಾಹಿತಾನ್ ಭಾರಸಹಾನ್ವಿವರ್ತನೇ । ಜಘಾನ

ಕ್ಷತೇ - ನೋಡುತ್ತಾನೆ, ಶೀಘ್ರಗಾಮಿನಃ-ಜಾಗ್ರತೆಯಾಗಿ ಬರುತ್ತಿರುವ, ಅಸ್ಯ- ಈತನ, ಪರಾಕ್ರಮಃ-ಸಾಮರ್ಥ್ಯವು, ಸುರಾಸುರಾಣಾಮಪಿ - ದೇವ ರಾಕ್ಷಸರ, ಮನಾಂಸ್ಯಪಿ - ಮನಸ್ಸುಗಳನ್ನೂ ಕೂಡ, ಕಂಪಯೇತ್-ಚಂಚಲಗೊಳಿಸುವನು. ॥ ೨೮ ॥ ಉಪೇಕ್ಷಿತಃ-ಉದಾಸೀನಮಾಡಲ್ಪಟ್ಟ, ಅಯಂಖಲು-ಈ ಅಕ್ಷನಾದರೆ, ನಾಭಿಭವೇದಿತಿನ - ತಿರಸ್ಕರಿಸುವವನಲ್ಲವೆಂಬುವದಿಲ್ಲ, ಹಿ - ಯಾವ ಕಾರಣದಿಂದ, ಅಸ್ಯ - ಈ ಅಕ್ಷನ, ಪರಾಕ್ರಮಃ - ಪರಾಕ್ರಮವು, ರಣೇ - ಯುದ್ಧದಲ್ಲಿ, ವಿವರ್ಧತೇ - ವೃದ್ಧಿಹೊಂದುವದೋ, ಮಮ - ನನಗೆ, ಅಸ್ಯ - ಈ ಅಕ್ಷನ, ಪ್ರಮಾಪಣಂತ್ವೇವ - ಸಂಹಾರವೇ, ರೋಚತೇ - ಸರಿಯೆಂದು ತೋರುತ್ತದೆ, ವರ್ಧಮಾನಃ-ವೃದ್ಧಿಹೊಂದುತ್ತಿರುವ, ಅಗ್ನಿಃ-ಅಗ್ನಿಯು, ಉಪೇಕ್ಷಿತುಂ-ಉದಾಸೀನಮಾಡುವದಕ್ಕೆ, ನಕ್ಷಮಃ - ಯೋಗ್ಯವಲ್ಲ. ॥ ೨೯ ॥ ವೀರ್ಯವಾನ್ - ಪರಾಕ್ರಮಿಯಾದ, ಮಹಾಬಲಃ - ಬಹು ಬಲಾಢ್ಯನಾದ, ಮಹಾಕಪಿಃ - ಮಹಾ ವಾನರನು, ತದಾ - ಆ ಸಮಯದಲ್ಲಿ, ಇತಿ - ಈ ಹಿಂದೆ ಹೇಳಿದಂತೆ, ಪರಸ್ಯ - ಶತ್ರುವಿನ, ಪ್ರವೇಗಂ - ಹೆಚ್ಚಾದ ವೇಗವನ್ನು, ತರ್ಕಯನ್ - ಊಹಿಸಿ, ಸ್ವಕ....ಚ - ತನ್ನ, ಯುದ್ಧಕೆಲಸದ, ಉಪಾಯವನ್ನೂ ಸಹಾ, ವಿಧಾಯ - ಮಾಡಿ, ವೇಗಂತು - ವೇಗವನ್ನಾದರೆ, ಚಕಾರ - ಮಾಡಿದನು, ಅಸ್ಯ - ಈ ಅಕ್ಷನ, ವಧೇ - ಸಂಹಾರದಲ್ಲಿ, ಮತಿಂಚ-ಬುದ್ಧಿಯನ್ನೂ ಸಹ, ಚಕ್ರೇ-ಮಾಡಿದನು. ॥ ೩೦ ॥ ವೀರಃ-ಶೂರನಾದ, ಪವನಾತ್ಮಜಃ-ವಾಯುಪುತ್ರನಾದ, ಸಕಪಿಃ - ಆ ವಾನರನು, ತಸ್ಯ - ಆ ಅಕ್ಷನ, ವಿವರ್ತನೇ - ಸವ್ಯಾಪಸವ್ಯಮಾರ್ಗ ಸಂಚಾರದಲ್ಲಿ, ಭಾರಸಹಾನ್ - ಹೊರೆಯನ್ನು ಹೊರತಿರುವ, ಸಮಾಹಿತಾನ್ - ದೃಢಗಳಾದ, ಮಹಾಜವಾನ್ - ಬಹು ವೇಗವುಳ್ಳ, ಅಷ್ಟ - ಎಂಟು ಸಂಖ್ಯೆಯುಳ್ಳ, ತಾನ್‌ಹಯಾನ್ - ಆ ಕುದುರೆಗಳನ್ನು,

---

ನೋಡಿ ದೇವದಾನವರೂ ಮನಕುಗ್ಗಿ ಭಯಭ್ರಾಂತರಾಗುವರು. ಈಗ ನಾನಿವನನ್ನುಪೇಕ್ಷೆ ಮಾಡಿದುದಾದರೆ ಮುಂದೆ ಇವನು ನನ್ನನ್ನು ಎಷ್ಟುಮಾತ್ರಕ್ಕೂ ಲಕ್ಷಿಸನು. ಇವನ ಪರಾಕ್ರಮವು ಕ್ಷಣಕ್ಷಣಕ್ಕೂ ಉಕ್ಕಿಬರುತ್ತಿರುವುದು. ಈಗ ನಾನಿವನನ್ನು ಸಂಹರಿಸದೆ ಸುಮ್ಮನಿದ್ದರೆ ಮುಂದೆ ಇವನನ್ನು ತಡೆಯುವುದು ಕಷ್ಟವಾಗಿಹೋಗುವುದು. ಆದುದರಿಂದ ಈಗಲೇ ಇವನನ್ನು ಕೊಲ್ಲುವುದು ಯುಕ್ತವೆಂದು ತೋರುವುದು. ಉರಿಯುತ್ತಿರುವ ಬೆಂಕಿಯನ್ನಾರಿಸದಿರುವುದು ಎಷ್ಟುಮಾತ್ರಕ್ಕೂ ಉಚಿತವೆನಿಸದಷ್ಟೆ" ಮಹಾ ವೀರ್ಯಶಾಲಿಯಾದ ಹನುಮಂತನು ಈ ರೀತಿ ಶತ್ರುವಿನ ಬಲಾಬಲಗಳನ್ನು ತನ್ನಲ್ಲಿ ತಾನೇ ಚೆನ್ನಾಗಿ ವಿಮರ್ಶಿಸಿದವನಾಗಿ, ಮುಂದೆ ತಾನು ಮಾಡಬೇಕಾದ ಯುದ್ಧಕ್ರಮವನ್ನು ನಿಶ್ಚಯಿಸಿಕೊಂಡು, ಕೂಡಲೇ ಅವನನ್ನುಸಂಹರಿಸಬೇಕೆಂದು ತನ್ನವೇಗವನ್ನುವೃದ್ಧಿಗೊಳಿಸಿಕೊಂಡನು.॥೨೬-೩೦॥ ಹೀಗೆ ಮಹಾ ವೇಗವನ್ನವಲಂಬಿಸಿದ ಮಹಾ ವಾನರನು ವಾಯುಮಾರ್ಗವಾದ ಆಕಾಶದಲ್ಲಿ ಬಹು-ಜಾಗರೂಕನಾಗಿ ಸಂಚರಿಸುತ್ತಿದ್ದ ಮಹಾ ವೇಗಶಾಲಿಗಳೂ, ಬಹು ಎಚ್ಚರಿಕೆಯುಳ್ಳವು

ವೀರಃ ಪಥಿ ವಾಯುಸೇವಿತೇ ತಲಪ್ರಹಾರೈಃ ಪವನಾತ್ಮಜಃ ಕಪಿಃ ॥ ೩೧ ॥ ತತಸ್ತಲೇ ನಾಭಿಹತೋ ಮಹಾರಥಃ ಸತಸ್ಯ ಪಿಂಗಾಧಿಪ ಮಂತ್ರಿಣಸ್ತದಾ । ಪ್ರಭಗ್ನನೀಡಃ ಪರಿಮುಕ್ತಕೂಬರಃ ಪಪಾತ ಭೂಮೌ ಹತವಾಜಿರಂಬರಾತ್ ॥೩೨॥ ಸತಂ ಪರಿತ್ಯಜ್ಯ ಮಹಾರಥೋ ರಥಂ ಸಕಾರ್ಮುಕಃ ಖಡ್ಗಧರಃ ಖಮುತ್ಪತತ್ । ತಪೋಭಿಯೋಗಾದೃಷಿರುಗ್ರವೀರ್ಯವಾನ್ವಿಹಾಯ ದೇಹಂ ಮರುತಾಮಿವಾಲಯಂ ॥ ೩೩ ॥ ತತಃ ಕಪಿಸ್ತಂ ವಿಚರಂತಮಂಬರೇ ಪತತ್ರಿರಾಜಾನಿಲಸಿದ್ಧಸೇವಿತೇ । ಸಮೇತ್ಯ ತಂ ಮಾರುತತುಲ್ಯವಿಕ್ರಮಃ ಕ್ರಮೇಣ ಜಗ್ರಾಹ ಸಪಾದಯೋರ್ದೃಢಂ ॥ ೩೪ ॥ ಸತಂ

ವಾಯುಸೇವಿತೇ - ವಾಯುವಿನಿಂದ ಸೇವಿಸಲ್ಪಟ್ಟ, ಪಥಿ - ಅಂತರಿಕ್ಷಮಾರ್ಗದಲ್ಲಿ, ತಲಪ್ರಹಾರೈಃ - ಅಂಗೈಹೊಡೆತಗಳಿಂದ, ಜಘಾನ - ಹೊಡೆದನು. ॥ ೩೧ ॥ ತತಃ - ಬಳಿಕ, ತಲೇನ - ಅಂಗೈಯಿಂದ, ಅಭಿಹತಃ - ಹೊಡೆಯಲ್ಪಟ್ಟ, ಪಿಂಗಾ....ತಃ - ಸುಗ್ರೀವನ ಮಂತ್ರಿಯಿಂದ ಜಯಿಸಲ್ಪಟ್ಟ, ಪ್ರಭಗ್ನ, ನೀಡಃ - ಮುರಿದುಹೋದ ಅಚ್ಚುಳ್ಳ, ಪರಿ....ರಃ - ಬಿಡಲ್ಪಟ್ಟ ಈಚುಮರವುಳ್ಳ, ತಸ್ಯ - ಆ ಅಕ್ಷನ, ಸಮಹಾರಥಃ - ಆ ದೊಡ್ಡ ರಥವು, ಹತವಾಜಿಃ - ಮೃತಿಗೊಂಡ ಕುದುರೆಗಳುಳ್ಳದಾಗಿ, ಅಂಬರಾತ್ - ಅಂತರಿಕ್ಷದಿಂದ, ಭೂಮೌ - ನೆಲದಲ್ಲಿ, ಪಪಾತ - ಬಿದ್ದಿತು. ॥ ೩೨ ॥ ಉಗ್ರವೀರ್ಯವಾನ್ - ಕ್ರೂರ ಪರಾಕ್ರಮವುಳ್ಳ, ಸಮಹಾರಥಃ - ಆ ಮಹಾ ರಥಿಕನು, ತಂರಥಂ - ಆ ರಥವನ್ನು, ಪರಿತ್ಯಜ್ಯ - ಬಿಟ್ಟು, ಸಕಾರ್ಮುಕಃ-ಕೋದಂಡದಿಂದೊಡಗೂಡಿ, ಖಡ್ಗಧರಃ-ಖಡ್ಗಧಾರಿಯಾಗಿ, ತಪೋ....ತ್-ತಪಶ್ಚರ್ಯದಿಂದ, ದೇಹಂ - ಶರೀರವನ್ನು, ವಿಹಾಯ - ಬಿಟ್ಟು, ಮರುತಾಂ - ದೇವತೆಗಳ, ಆಲಯಂ - ಸ್ಥಾನವನ್ನು ಕುರಿತು, ಖಂ - ಅಂತರಿಕ್ಷದಲ್ಲಿ, ಉತ್ಪತತ್ - ಹಾರುತ್ತಿರುವ, ಋಷಿರಿವ - ಮುನಿಯಂತೆ, ಅಭವತ್ - ಆದನು. ॥ ೩೩ ॥ ತತಃ-ಬಳಿಕ, ಮಾರು....ಮಃ ವಾಯುವಿಗೆ ಸಮಾನವಾದ ಪರಾಕ್ರಮವುಳ್ಳ, ಸಕಪಿಃ - ಆ ಆಂಜನೇಯನು, ಪತ....ತೇ - ಗರುಡನಿಂದಲೂ, ವಾಯುವಿನಿಂದಲೂ ಸಿದ್ಧರಿಂದಲೂ, ಸೇವಿಸಲ್ಪಟ್ಟ, ಅಂಬರೇ - ಅಂತರಿಕ್ಷದಲ್ಲಿ, ವಿಚರಂತಂ - ಓಡಾಡುತ್ತಿರುವ, ತಂ - ಆ ಅಕ್ಷಕುಮಾರನನ್ನು, ಸಮೇತ್ಯ - ಸೇರಿ, ಕ್ರಮೇಣ - ಕ್ರಮವಾಗಿ, ಪಾದಯೋಃ - ಕಾಲುಗಳಲ್ಲಿ, ದೃಢಂ - ಗಟ್ಟಿಯಾಗಿ, ತಂ - ಆ ಅಕ್ಷನನ್ನು, ಜಗ್ರಾಹ - ಹಿಡಿದನು. ॥ ೩೪ ॥ ಸಂಯತಿ -

---

ಗಳೂ, ಚಿತ್ರಗಮನದಿಂದ ಹೋಗುವಾಗಲೂ, ರಥದ ಭಾರವನ್ನೆಳೆಯುವಾಗಲೂ, ಮಹಾ ಸಾಮರ್ಥ್ಯವನ್ನು ತೋರುತ್ತಿದ್ದವುಗಳೂ ಆದ ಆ ಅಕ್ಷಕುಮಾರನ ಎಂಟು ರಥಾಶ್ವಗಳನ್ನೂ ಆಕಾಶದಲ್ಲಿದ್ದ ಹಾಗೆಯೇ ತನ್ನ ಅಂಗೈಯಿಂದ ಹೊಡೆದು ಕೆಡಹಿದನು. ಅಲ್ಲದೆ ಮಹಾ ವೀರನಾದ ಆ ಹನುಮಂತನು ಮತ್ತೊಂದು ಕೈಯಿಂದ ಆ ರಾಕ್ಷಸನ ರಥವನ್ನು ಮುರಿದಿಕ್ಕಿದನು. ಆ ಸಮಯದಲ್ಲಿ ಅಕ್ಷಕುಮಾರನ ಆ ರಥವು ಚಕ್ರಗಳೂ, ಮೂಕೂ ಮುರಿದು ಕುದುರೆಗಳೊಡನೆಯೇ ನೆಲಕ್ಕುರುಳಿತು. ಆಗ ಅಕ್ಷಕುಮಾರನು ಮಹಾ ವೀರ್ಯಶಾಲಿಯಾದುದರಿಂದ ಕೂಡಲೇ ತನ್ನ ರಥವನ್ನು ಬಿಟ್ಟು ಬಿಲ್ಲನ್ನೂ, ಕತ್ತಿಯನ್ನೂ ಹಿಡಿದು, ಋಷಿಯು ತನ್ನ ತಪೋಮಹಿಮೆಯಿಂದ ದೇಹವನ್ನು ತೊರೆದು ದೇವಲೋಕವನ್ನು ಹೊಂದುವಂತೆ ಆಕಾಶಕ್ಕೆ ಹಾರಿದನು. ಆಗ ವಾಯುವಿಗೆ ಸಮಾನವಾದ ಪರಾಕ್ರಮವುಳ್ಳ ಆಂಜನೇಯನು, ಗರುಡ, ವಾಯು, ಸಿದ್ಧ, ಋಷಿಗಳಿಗೆ ಸಂಚಾರಸ್ಥಾನವಾದ ಆಕಾಶಮಾರ್ಗದಲ್ಲಿ ಸಂಚರಿಸುತ್ತ ಅಟ್ಟಿಬರುತ್ತಿರುವ ಆ ಅಕ್ಷಕುಮಾರನನ್ನು ನೋಡಿ ಉಪಾಯದಿಂದ ಅವನ ಸಮೀಪಕ್ಕೆ

ಸಮಾವಿಧ್ಯ ಸಹಸ್ರಶಃ ಕಪಿರ್ಮಹೋರಗಂ ಗೃಹ್ಯ ಇವಾಂಡಜೇಶ್ವರಃ । ಮುಮೋಚ
ವೇಗಾತ್ಪಿತೃತುಲ್ಯವಿಕ್ರಮೋ ಮಹೀತಲೇ ಸಂಯತಿ ವಾನರೋತ್ತಮಃ ॥ ೩೫ ॥
ಸಭಗ್ನಬಾಹೂರುಕಟೀಶಿರೋಧರಃ ಕ್ಷರನ್ನಸೃಜ್ನಿರ್ಮಥಿತಾಸ್ಥಿಲೋಚನಃ । ಸಭಗ್ನ
ಸಂಧಿಃ ಪ್ರವಿಕೀರ್ಣಬಂಧನೋ ಹತಃ ಕ್ಷಿತೌ ವಾಯುಸುತೇನ ರಾಕ್ಷಸಃ ॥ ೩೬ ॥
ಮಹಾಕಪಿರ್ಭೂಮಿತಲೇ ನಿಪೀಡ್ಯ ತಂ ಚಕಾರ ರಕ್ಷೋಧಿಪತೇರ್ಮಹದ್ಭಯಂ ।
ಮಹರ್ಷಿಭಿಶ್ಚಕ್ರಚರೈರ್ಮಹಾವ್ರತೈಸ್ಸಮೇತ್ಯ ಭೂತೈಶ್ಚ ಸಯಕ್ಷಪನ್ನಗೈಃ । ಸುರೈಶ್ಚ
ಸೇಂದ್ರೈರ್ಭೃಶಜಾತವಿಸ್ಮಯೈರ್ಹತೇ ಕುಮಾರೇ ಸಕಪಿರ್ನಿರೀಕ್ಷಿತಃ ॥ ೩೭ ॥

ಯುದ್ಧದಲ್ಲಿ, ಪಿತೃ....ಮಃ - ತಂದೆಗೆ ಸಮಾನವಾದ ಪರಾಕ್ರಮವುಳ್ಳ, ವಾನರೋತ್ತಮಃ - ಕಪಿಶ್ರೇಷ್ಠನಾದ, ಸಕಪಿಃ - ಆ ಆಂಜನೇಯನು, ತಂ - ಆ ಅಕ್ಷನನ್ನು, ಅಂಡಜೇಶ್ವರಃ - ಗರುಡನು, ಮಹೋರಗಂ - ಮಹಾ ಸರ್ಪವನ್ನು, ಗೃಹ್ಯೇವ - ಗ್ರಹಿಸಿದಂತೆ ಗ್ರಹಿಸಿ, ಸಹಸ್ರಶಃ - ನಾನಾಬಗೆಯಾಗಿ, ಸಮಾವಿಧ್ಯ-ತಿರುವಿಹೊಡೆದು, ವೇಗಾತ್-ವೇಗದಿಂದ, ಮಹೀತಲೇ-ಭೂಪ್ರದೇಶದಲ್ಲಿ, ಮುಮೋಚ-ಬಿಟ್ಟನು. ॥ ೩೫ ॥ ಭಗ್ನ....ರಃ - ಮುರಿದುಹೋದ ಭುಜಗಳು, ತೊಡೆಗಳು, ಟೊಂಕವು ಕಂಠವೂ ಉಳ್ಳ, ಅಸೃಕ್ - ರಕ್ತವನ್ನು, ಕ್ಷರ್ರ - ಸುರಿಸುತ್ತಿರುವ, ನಿರ್ಮ....ನಃ - ಚೂರ್ಣವಾದಲ್ಪಟ್ಟ, ಎಲುವುಗಳೂ, ನೇತ್ರಗಳೂ ಉಳ್ಳ, ಭಗ್ನಸಂಧಿಃ - ಮುರುದುಹೋದ ಕೀಲುಗಳುಳ್ಳ, ಪ್ರವಿ....ನಃ - ಬಿಚ್ಚಿಹೋದ ಕಟ್ಟುಗಳುಳ್ಳ, ಸರಾಕ್ಷಸಃ - ಆ ರಕ್ಕಸನು, ವಾಯುಸುತೇನ - ವಾಯುಪುತ್ರನಿಂದ, ಕ್ಷಿತೌ - ಭೂಮಿಯಲ್ಲಿ, ಹತಃ - ಸಂಹೃತನಾದನು. ॥ ೩೬ ॥ ಮಹಾಕಪಿಃ - ಮಹಾ ವಾನರನು, ಭೂಮಿತಲೇ - ಭೂಪ್ರದೇಶದಲ್ಲಿ, ತಂ - ಆ ಅಕ್ಷನನ್ನು, ನಿಪೀಡ್ಯ - ತುಳಿದು, ರಕ್ಷೋಧಿಪತೇಃ - ರಕ್ಕಸರಾಜನಿಗೆ, ಮಹದ್ಭಯಂ - ಮಹಾ ಭೀತಿಯನ್ನು, ಚಕಾರ - ಮಾಡಿದನು. ॥ ೩೭ ॥ ಕುಮಾರೇ - ಅಕ್ಷಕುಮಾರನು, ಹತೇ - ಸಂಹೃತನಾಗಲು, ಸಕಪಿಃ - ಆ ಆಂಜನೇಯನು, ಚಕ್ರಚರೈಃ - ಜ್ಯೋತಿಶ್ಚಕ್ರಸಂಚಾರಿಗಳಾದ, ಮಹಾವ್ರತೈಃ - ಮಹಾ ನಿಯಮಗಳುಳ್ಳ, ಮಹರ್ಷಿಭಿಃ - ಮಹಾ ಮುನಿಗಳಿಂದಲೂ-ಭೂತೈಶ್ಚ-ಭೂತಗಳಿಂದಲೂ, ಸಮೇತ್ಯ-ಸೇರಿ, ಸಯ....ಗೈಃ-ಯಕ್ಷನಾಗಸಹಿತರಾದ, ಭೃಶ....ಯೈಃ;

ಹೋಗಿ ಕ್ರಮವಾಗಿ ಅವನ ಎರಡು ಪಾದಗಳನ್ನೂ ಹಿಡಿದು ಗರುತ್ಮಂತನು ಸರ್ಪವನ್ನಂತೆ ಅವನನ್ನು ಆಕಾಶದಲ್ಲಿ ಬಹು ದೂರ ಒದೆದುಕೊಂಡು ಹೋಗಿ ಅನೇಕ ಬಾರಿ ಗಿರಗಿರನೆ ತಿರುಗಿಸಿ ನೆಲಕ್ಕೆ ಕುಕ್ಕಿದನು. ॥ ೩೧—೩೫ ॥ ಇದರಿಂದ ಆ ಅಕ್ಷಕುಮಾರನಿಗೆ ತೋಳು, ತೊಡೆ, ನಡು, ಕುತ್ತಿಗೆ ಮೊದಲಾದ ಅವಯವಗಳೆಲ್ಲವೂ ಮುರಿದು ಸರ್ವಾಂಗವೂ ರಕ್ತಮಯವಾಗಿ, ಮೈಮೂಳೆಗಳೆಲ್ಲವೂ ಪುಡಿಪುಡಿಯಾಗಿ ಹೋದುವು. ಅವನ ಕಣ್ಣುಗಳು ಕೂಡಲೇ ಕಳಚಿಬಿದ್ದುವು: ಸಂಧಿಬಂಧಿಗಳೆಲ್ಲವೂ ಸಡಿಲಿದವು ; ಮೈಕಟ್ಟುಗಳು ಚದುರಿ ಬಿದ್ದುವು. ಹೀಗೆ ಆ ರಾಕ್ಷಸರಾಜಕುಮಾರನಾದ ಅಕ್ಷನು ಮಡಿದು ಬೀಳಲು ಮಹಾ ಪರಾಕ್ರಮಿಯಾದ ಆಂಜನೇಯನು ಅವನನ್ನು ಚೆನ್ನಾಗಿ ಭೂಮಿಯಲ್ಲಿ ತಿಕ್ಕಿ ಉಂಡೆ ಮಾಡಿ ರಾಕ್ಷಸರಾಜನಾದ ರಾವಣನಿಗೆ ಬಹಳ ಭಯವನ್ನುಂಟುಮಾಡಿದನು. ಈ ರೀತಿ ಅಕ್ಷಕುಮಾರನಿಗೆ ದುರವಸ್ಥೆಯುಂಟಾಗಲು ಗಗನಸಂಚಾರಿಗಳಾದ ಮಹರ್ಷಿಗಳೂ, ಭೂತಗಳೂ, ಯಕ್ಷಪನ್ನಗರೂ, ಇಂದ್ರಾದಿದೇವತೆಗಳೂ ಆಶ್ಚರ್ಯಪಟ್ಟು ಆ ಹನುಮಂತನನ್ನು ನೋಡು

ನಿಹತ್ಯ ತಂ ವಜ್ರಿಸುತೋಪಮಪ್ರಭಂ
ಕುಮಾರಮಕ್ಷಂ ಕ್ಷತಜೋಪಮೇಕ್ಷಣಂ ।
ತಮೇವ ವೀರೋಽಭಿಜಗಾಮ ತೋರಣಂ
ಕೃತಕ್ಷಣಃ ಕಾಲಇವ ಪ್ರಜಾಕ್ಷಯೇ ॥ ೮೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಚತ್ವಾರಿಂಶಸ್ಸರ್ಗಃ

ಬಹಳವಾಗಿ ಹುಟ್ಟಿದ ಆಶ್ಚರ್ಯವುಳ್ಳ, ಸೇಂದ್ರೈಃ-ಇಂದ್ರನೊಡಗೂಡಿದ, ಸುರೈಶ್ಚ-ದೇವತೆಗಳಿಂದಲೂ, ನಿರೀಕ್ಷಿತಃ-ನೋಡಲ್ಪಟ್ಟನು. ॥ ೩೮ ॥ ವೀರಃ ಶೂರನಾದ ಆಂಜನೇಯನು, ವಜ್ರ....ಭಂ-ಇಂದ್ರಪುತ್ರನಿಗೆ ಸಮಾನವಾದ ಕಾಂತಿಯುಳ್ಳ, ಕ್ಷತ....ಣಂ - ರಕ್ತಸಮಾನನೇತ್ರವುಳ್ಳ, ತಮಕ್ಷಂಕುಮಾರಂ - ಆ ಅಕ್ಷಯಕುಮಾರನನ್ನು, ನಿಹತ್ಯ - ಹೊಡೆದು, ಪ್ರಜಾಕ್ಷಯೇ - ಪ್ರಳಯಕಾಲದಲ್ಲಿ, ಕೃತಕ್ಷಣಃ - ಸಮಯನಿರೀಕ್ಷಣೆಯನ್ನು ಮಾಡುತ್ತಿರುವ, ಕಾಲಇವ - ಯಮನಂತೆ, ತಮೇವತೋರಣಂ - ಆ ಹೊರಬಾಗಿಲನ್ನೇ, ಅಭಿಜಗಾಮ - ಹೊಂದಿದನು. ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಚತ್ವಾರಿಂಶಸ್ಸರ್ಗಃ

ತ್ತಿದ್ದರು. ಈ ಪ್ರಕಾರವಾಗಿ ಮಹಾ ಶೂರಾಗ್ರಣಿಯಾದ ಆಂಜನೇಯನು ಇಂದ್ರಕುಮಾರನಿಗೆ ಸಮಾನನಾದ ಆ ಅಕ್ಷಕುಮಾರನನ್ನು ಸಂಹರಿಸಿ ತಿರುಗಿ ಆ ತೋರಣದ ಬಾಗಿಲನ್ನೇ ಸೇರಿ ಪ್ರಳಯಕಾಲದ ಯಮನಂತೆ ಮಹೋಗ್ರ ರೂಪದಿಂದ ಮುಂದಣ ಯುದ್ಧವನ್ನು ನಿರೀಕ್ಷಿಸುತ್ತಿದ್ದನು. ॥ ೩೬—೩೮ ॥

ಇಂತಿದು ಅಕ್ಷಕುಮಾರ ವಧೆಯೆಂಬ ನಾಲ್ವತ್ತೇಳನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಅಷ್ಟಚತ್ವಾರಿಂಶಸ್ಸರ್ಗಃ

ತತಸ್ಸರಕ್ಷೋಧಿಪತಿರ್ಮಹಾತ್ಮಾ ಹನೂಮತಾಽಕ್ಷೇ ನಿಹತೇ ಕುಮಾರೇ ।
ಮನಸ್ಸಮಾಧಾಯ ತದೇಂದ್ರಕಲ್ಪಂ ಸಮಾದಿದೇಶೇಂದ್ರಜಿತಂ ಸರೋಷಂ ॥ ೧ ॥
" ತ್ವಮಸ್ತ್ರವಿಚ್ಛಸ್ತ್ರವಿದಾಂ ವರಿಷ್ಠಸ್ಸುರಾಸುರಾಣಾಮಪಿ ಶೋಕದಾತಾ । ಸುರೇಷು ಸೇಂದ್ರೇಷುಚ ದೃಷ್ಟಕರ್ಮಾ ಪಿತಾಮಹಾರಾಧನಸಂಚಿತಾಸ್ತ್ರಃ ॥ ೨ ॥ ತವಾಸ್ತ್ರಬಲ ಮಾಸಾದ್ಯ ನಾಸುರಾ ನಮರುದ್ಗಣಾಃ । ನಶೇಕುಸ್ಸಮರೇ ಸ್ಥಾತುಂ ಸುರೇಶ್ವರಸಮಾ

ತತಃ - ಬಳಿಕ, ಹನೂಮತಾ - ಆಂಜನೇಯನಿಂದ, ಅಕ್ಷೇಕುಮಾರೇ - ಅಕ್ಷಯಕುಮಾರನು, ನಿಹತೇ - ಸಂಹೃತನಾಗಲು, ಮಹಾತ್ಮಾ - ಮಹಾ ಮನಸ್ಸುಳ್ಳ, ಸರಕ್ಷೋಧಿಪತಿಃ - ಆ ರಾಕ್ಷಸರಾಜನು, ಮನಃ-ಮನವನ್ನು, ಸಮಾಧಾಯ-ಸಮಾಧಾನಗೊಳಿಸಿಕೊಂಡು, ತದಾ-ಆ ಕಾಲದಲ್ಲಿ, ಇಂದ್ರಕಲ್ಪಂ-ಇಂದ್ರಸದೃಶನಾದ, ಇಂದ್ರಜಿತಂ - ಇಂದ್ರಜಿತುವನ್ನು ಕುರಿತು, ಸರೋಷಂ - ರೋಷದಿಂದೊಡಗೂಡಿದಂತೆ, ಸಮಾದಿದೇಶ - ಆಜ್ಞಾಪಿಸಿದನು. ॥ ೧ ॥ ತ್ವಂ - ನೀನು, ಅಸ್ತ್ರವಿತ್ - ಅಸ್ತ್ರಜ್ಞನು, ಶಸ್ತ್ರವಿದಾಂ - ಶಸ್ತ್ರಜ್ಞರೊಳಗೆ, ವರಿಷ್ಠಃ - ಶ್ರೇಷ್ಠನು, ಸುರಾ....ಪಿ - ದೇವರಾಕ್ಷಸರಿಗೂ ಸಹ, ಶೋಕದಾತಾ - ಶೋಕವನ್ನೀಯುವವನು, ಸೇಂದ್ರೇಷು - ಇಂದ್ರಸಹಿತರಾದ, ಸುರೇಷುಚ - ದೇವತೆಗಳಲ್ಲಿಯೂ ಕೂಡ, ದೃಷ್ಟಕರ್ಮಾ - ಕಾಣಲ್ಪಟ್ಟ ಯುದ್ಧಕಾರ್ಯವುಳ್ಳವನು, ಪಿತಾ....ಸ್ತ್ರಃ - ಬ್ರಹ್ಮಪೂಜೆಯಿಂದ, ಸಂಪಾದಿಸಲ್ಪಟ್ಟ ಅಸ್ತ್ರಗಳಳ್ಳುವನು. ॥ ೨ ॥ ತವ - ನಿನ್ನ, ಅಸ್ತ್ರಬಲಂ - ಅಸ್ತ್ರಶಕ್ತಿಯನ್ನು, ಆಸಾದ್ಯ - ಹೊಂದಿ, ಸಮರೇ - ಯುದ್ಧದಲ್ಲಿ, ಸ್ಥಾತುಂ - ನಿಲ್ಲುವದಕ್ಕೆ, ಅಸುರಾಃ - ರಕ್ಕಸರು, ನಶೇಕುಃ - ಶಕ್ತರಲ್ಲವು, ಮರುದ್ಗಣಾಃ - ದೇವಸಮೂಹಗಳು, ನ - ಸಮರ್ಥರಲ್ಲ, ಸುರೇ....ಶ್ಚ -

---

ಆಂಜನೇಯನು ಅಕ್ಷಕುಮಾರನನ್ನು ಸಂಹರಿಸಿದನೆಂಬ ಸುದ್ದಿಯನ್ನು ಕೇಳಿದೊಡನೆ, ಮಹಾ ಬಲಪರಾಕ್ರಮಶಾಲಿಯಾದ ರಾವಣಾಸುರನು ವ್ಯಸನಸಂತಪ್ತನಾದರೂ ಅದನ್ನು ಹೊರಗೆ ತೋರಿಸಿಕೊಳ್ಳದೆ, ಮನಸ್ಸನ್ನು ಸಮಾಧಾನಪಡಿಸಿಕೊಂಡು ಮಹಾ ಕೋಪೋದ್ದೀಪಿತನಾಗಿ ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ ಇಂದ್ರಜಿತುವನ್ನು ಆಂಜನೇಯನೊಡನೆ ಯುದ್ಧಕ್ಕೆ ಹೊರಡಲಾಜ್ಞಾಪಿಸುವವನಾಗಿ ಅವನನ್ನು ಕುರಿತು ಹೀಗೆಂದನು. "ಎಲೈ ವತ್ಸನೇ! ಇಂದ್ರಜಿತುವೇ! ನೀನು ಅಸ್ತ್ರವೇತ್ತರಲ್ಲಿ ಶ್ರೇಷ್ಠನಾದವನು. ಸಮಸ್ತ ಶಾಸ್ತ್ರಗಳನ್ನೂ ಬಲ್ಲವರಲ್ಲಿ ಮೇಲೆನಿಸಿದವನು ; ಶಸ್ತ್ರವೇತ್ತರಲ್ಲಿಯೂ ಅಗ್ಗಳೆಯನೆನಿಸಿರುವೆ ; ನಿನ್ನನ್ನು ಕಂಡು ದೇವಾಸುರರೆಲ್ಲರೂ ಭಯವನ್ನು ಹೊಂದುವರು ; ನೀನು ದೇವದಾನವರನ್ನೂ ದುಃಖಕ್ಕೀಡುಮಾಡಬಲ್ಲವನು ; ಅನೇಕಬಾರಿ ದೇವೇಂದ್ರನನ್ನೂ, ದೇವತೆಗಳನ್ನೂ ಯುದ್ಧದಲ್ಲಿ ಜಯಿಸಿಬಂದಿರುವವನು ; ಇದೂ ಅಲ್ಲದೆ ಎಲೈ ಕುಮಾರನೇ! ನೀನು ಪಿತಾಮಹನನ್ನು ಪೂಜಿಸಿ ಆತನಿಂದ ಅನೇಕ ದಿವ್ಯಾಸ್ತ್ರಗಳನ್ನು ಪಡೆದಿರುವೆ. ಎಲೈ ಇಂದ್ರಜಿತುವೇ! ನಿನಗೆ ಯುದ್ಧದಲ್ಲಿರುವ ನೈಪುಣ್ಯವನ್ನೂ, ಶಸ್ತ್ರಾಸ್ತ್ರಗಳ ಬಲವನ್ನೂ ಕಂಡು ಸುರರಾಗಲಿ, ಅಸುರರಾಗಲಿ, ವಾಯುಗಣಗಳಾಗಲಿ, ಎದುರು ನಿಲ್ಲಲು ಸಾಧ್ಯವಾಗುವುದಿಲ್ಲವು. ಇಷ್ಟೇ

ಶ್ರಿತಾಃ । ನಕಶ್ಚಿತ್ತ್ರಿಷುಲೋಕೇಷು ಸಂಯುಗೇ ನಗತಶ್ರಮಃ ॥೩॥ ಭುಜವೀರ್ಯಾಭಿ
ಗುಪ್ತಶ್ಚ ತಪಸಾಚಾಭಿರಕ್ಷಿತಃ । ದೇಶಕಾಲವಿಭಾಗಜ್ಞಸ್ತ್ವಮೇವ ಮತಿಸತ್ತಮಃ॥೪॥
ನತೇಽಸ್ತ್ಯಶಕ್ಯಂ ಸಮರೇಷು ಕರ್ಮಣಾ ನತೇಸ್ತ್ಯಕಾರ್ಯಂ ಮತಿಪೂರ್ವಮಂತ್ರಣೇ।
ನಸೋಽಸ್ತಿ ಕಶ್ಚಿತ್ತ್ರಿಷುಸಂಗ್ರಹೇಷು ವೈ ನವೇದ ಯಸ್ತೇಽಸ್ತ್ರಬಲಂ ಬಲಂಚತೇ ॥ ೫ ॥
ಮಮಾನುರೂಪಂ ತಪಸೋ ಬಲಂಚ ತೇ ಪರಾಕ್ರಮಂಶ್ಚಾಸ್ತ್ರಬಲಂಚ ಸಂಯುಗೇ ।

ಇಂದ್ರನನ್ನು ಆಶ್ರಯಿಸಿದವರೂ ಕೂಡ, ನಶೇಕುಃ - ಸಾಮರ್ಥ್ಯವಂತರಲ್ಲ, ತ್ರಿಷುಲೋಕೇಷು - ಮೂರುಲೋಕಗಳಲ್ಲಿಯೂ, ಸಂಯುಗೇ - ನಿನ್ನ ಯುದ್ಧದಲ್ಲಿ, ನಗತಶ್ರಮಃ - ಶ್ರಮಗೊಳ್ಳದಿರುವನು, ಕಶ್ಚಿತ್ - ಯಾರೂ, ನ - ಇಲ್ಲವು. ॥ ೩ ॥ ತ್ವಮೇವ - ನೀನೇ, ಭುಜ....ಶ್ಚ - ಬಾಹುಬಲದಿಂದ ಸಂರಕ್ಷಿಸಲ್ಪಟ್ಟವನು, ತಪಸಾಚ - ತಪಶ್ಶಕ್ತಿಯಿಂದಲೂ, ಅಭಿರಕ್ಷಿತಃ - ಪರಿಪಾಲಿಸಲ್ಪಟ್ಟವನು, ದೇಶ....ಜ್ಞಃ - ದೇಶಕಾಲಗಳ ವಿಭಾಗಗಳನ್ನರಿತವನು, ಮತಿಸತ್ತಮಃ - ಬುದ್ಧಿಯಲ್ಲಿ ಶ್ರೇಷ್ಠನು. ॥ ೪ ॥ ಸಮರೇಷು - ಯುದ್ಧಗಳಲ್ಲಿ, ಕರ್ಮಣಾ - ಕಾರ್ಯವಾದ ಪರಾಕ್ರಮದಿಂದ, ತೇ - ನಿನಗೆ, ಅಶಕ್ಯಂ - ಅಸಾಧ್ಯವು, ನಾಸ್ತಿ - ಇಲ್ಲ, ಮತಿ - ಣೇ - ಬುದ್ಧಿಪೂರ್ವಕ ವಿಚಾರದಲ್ಲಿ, ತೇ - ನಿನಗೆ, ಅಕಾರ್ಯಂ - ತಿಳಿಯದಿರುವ ಕೆಲಸವು, ನ - ಇಲ್ಲ, ತ್ರಿಷು....ವೈ - ಮೂರುಲೋಕಗಳಲ್ಲಾದರು, ಯಃ - ಯಾವಾತನು, ತೇ - ನಿನ್ನ, ಅಸ್ತ್ರಬಲಂ - ಅಸ್ತ್ರಶಕ್ತಿಯನ್ನೂ, ತೇ - ನಿನ್ನ, ಬಲಂಚ - ದೇಹಬಲವನ್ನೂ ಸಹಾ, ನವೇದ - ತಿಳಿಯುವುದಿಲ್ಲವೋ, ಸಃ - ಅಂಥವನು, ಕಶ್ಚಿತ್ - ಯಾವನೂ, ನ - ಇಲ್ಲವು. ॥ ೫ ॥ ತೇ - ನಿನ್ನ, ತಪಸಃ - ತಪಸ್ಸಿನ, ಬಲಂ - ಬಲವು, ಪರಾಕ್ರಮಶ್ಚ - ಸಾಮರ್ಥ್ಯವೂ, ಸಂಯುಗೇ - ಯುದ್ಧದಲ್ಲಿ, ಅಸ್ತ್ರಬಲಂಚ - ಅಸ್ತ್ರಶಕ್ತಿಯೂ, ಮಮ - ನನಗೆ, ಅನುರೂಪಂ - ಸಮಾನವಾದುದು, ರಣಾವಮರ್ದೇ - ಯುದ್ಧಸಂಮರ್ದದಲ್ಲಿ, ತ್ವಾಂ - ನಿನ್ನನ್ನು, ಸಮಾಸಾದ್ಯ -

---

ಅಲ್ಲದೆ ಮೂರು ಲೋಕಗಳಲ್ಲಿ ನಿನ್ನೊಡನೆ ಯುದ್ಧಮಾಡಿ ಸೋಲದವನು ಯಾವನೂ ಇಲ್ಲವು. ದೇವತೆಗಳೆಲ್ಲರೂ ತಮ್ಮ ಒಡೆಯನಾದ ದೇವೇಂದ್ರನನ್ನು ಮುಂದಿಟ್ಟುಕೊಂಡು ಸೆಣಸಿ ನಿನ್ನೊಡನೆ ಯುದ್ಧಕ್ಕೆ ನಿಂತರೂ ದಿಕ್ಕೆಟ್ಟು ಪಲಾಯನ ಮಾಡುವರು! ನಿನ್ನ ಬಲಿಮೆಯು ಅಂತಹುದು. ನಿನ್ನೊಡನೆ ಯುದ್ಧಕ್ಕೆ ನಿಂತು ನಿರಾಯಾಸವಾಗಿ ಹಿಂತಿರುಗಿದವನು ಲೋಕತ್ರಯದಲ್ಲಿ ಯಾವನೂ ಇಲ್ಲವು. ಎಲೈ ವತ್ಸನೇ! ನೀನು ಬಾಹುಬಲದಿಂದ ಸಂರಕ್ಷಿತನೂ, ತಪೋಬಲಸಮನ್ವಿತನೂ ದೇಶಕಾಲವಿಭಾಗಗಳನ್ನರಿತು, ಆ ಆ ಕಾಲದೇಶವರ್ತಮಾನಗಳಿಗುಚಿತವಾದ ಕಾರ್ಯಗಳನ್ನು ಮಾಡುವುದರಲ್ಲಿ ಕುಶಲನೂ ಆಗಿರುವೆ. ಮೇಲಾಗಿ ನೀನು ಮಹಾ ಬುದ್ಧಿಶಾಲಿಯು. ಯುದ್ಧಕಾರ್ಯಗಳಲ್ಲಿ ಪುರುಷಪ್ರಯತ್ನಗಳಿಂದ ನಿನಗೆ ಅಸಾಧ್ಯವಾದುದಾವುದೂ ಇರುವುದಿಲ್ಲ. ಮಂತ್ರಾಲೋಚನೆಯಲ್ಲಿ ನಿನ್ನ ಬುದ್ಧಿಗೆ ಅಟಂಕವಾದುದಾವುದೂ ಇರುವುದಿಲ್ಲ. ನಿನ್ನ ಅಸ್ತ್ರಬಲವನ್ನೂ, ದೇಹಬಲವನ್ನೂ ಅರಿಯದವನೂ ಮೂರು ಲೋಕಗಳಲ್ಲಿ ಯಾವನೂ ಇರುವುದಿಲ್ಲವು. ॥ ೧-೫ ॥ ಇಷ್ಟುಮಾತ್ರವಲ್ಲದೆ, ತಪೋಮಹಿಮೆಯಿಂದಲೂ, ಅಪರಿಮಿತಬಲಪರಾಕ್ರಮಗಳಿಂದಲೂ, ಯುದ್ಧನೈಪುಣ್ಯ ಅಸ್ತ್ರಪ್ರಯೋಗಗಳಿಂದಲೂ ನೀನು ನನಗೆ ಸಮಾನನಾದವನು ಯುದ್ಧವಿಷಯದಲ್ಲಿ ನನಗಾವುದಾದರೂ ಸಂಕಟವು ಪ್ರಾಪ್ತವಾದಾಗ ನಿನ್ನನ್ನು ಸ್ಮರಿಸಿ ಮನಸ್ಸಮಾಧಾನಪಡುವೆನು. ಎಲೈ

ನತ್ವಾಂ ಸಮಾಸಾದ್ಯ ರಣಾವಮರ್ದೇ ಮನಶ್ಶ್ರಮಂ ಗಚ್ಛತಿ ನಿಶ್ಚಿತಾರ್ಥಂ ॥ ೬ ॥ ನಿಹತಾಃ ಕಿಂಕರಾಸ್ಸರ್ವೇ ಜಂಬುಮಾಲೀಚ ರಾಕ್ಷಸಃ । ಅಮಾತ್ಯಪುತ್ರಾ ವೀರಾಶ್ಚ ಪಂಚಸೇನಾಗ್ರಯಾಯಿನಃ ॥ ೭ ॥ ಬಲಾನಿ ಸುಸಮೃದ್ಧಾನಿ ಸಾಶ್ವನಾಗರಥಾನಿಚ । ಸಹೋದರಸ್ತೇ ದಯಿತಃ ಕುಮಾರೋಽಕ್ಷಶ್ಚ ಸೂದಿತಃ । ನತು ತೇಷ್ವೇವ ಮೇ ಸಾರೋ ಯಸ್ತ್ವಯ್ಯರಿನಿಷೂದನ! ॥ ೯ ॥ ಇದಂಹಿ ದೃಷ್ಟ್ವಾ ಮತಿಮನ್ಮಹದ್ಬಲಂ ಕಪೇಃ ಪ್ರಭಾವಂಚ ಪರಾಕ್ರಮಂಚ । ತ್ವಮಾತ್ಮನಶ್ಚಾಪಿ ಸಮೀಕ್ಷ್ಯ ಸಾರಂ ಕುರುಷ್ವ ವೇಗಂ ಸ್ವಬಲಾನುರೂಪಂ ॥ ೧೦ ॥ ಬಲಾವಮರ್ದಸ್ತ್ವಯಿ ಸನ್ನಿಕೃಷ್ಟೇ ಯಥಾಗತೇ

ಹೊಂದಿ, ನಿಶ್ಚಿತಾರ್ಥಂ - ನಿಶ್ಚಯಿಸಿದ ಜಯರೂಪ ಪ್ರಯೋಜನವುಳ್ಳ, (ಮೇ - ನನ್ನ,) ಮನಃ- ಮನಸ್ಸು, ಶ್ರಮಂ - ವಿಷಾದವನ್ನು, ನಗಚ್ಛತಿ - ಹೊಂದುವುದಿಲ್ಲ. ॥ ೬ ॥ ಸರ್ವೇ - ಸಮಸ್ತರಾದ, ಕಿಂಕರಾಃ-ಕಿಂಕರರೆಲ್ಲರೂ, ನಿಹತಾಃ ಹತರಾದರು, ಜಂಬುಮಾಲೀ-ಜಂಬುಮಾಲಿಯೆಂಬ, ರಾಕ್ಷಸಶ್ಚ- ರಕ್ಕಸನೂ, ವೀರಾಃ-ಶೂರರಾದ, ಅಮಾತ್ಯಪುತ್ರಾಶ್ಚ-ಏಳುಮಂದಿ ಮಂತ್ರಿಕುಮಾರರೂ, ಪಂಚ....ನಃ- ಐದುಮಂದಿ ಸೇನಾನಾಯಕರೂ, ನಿಹತಾಃ - ಹತರಾದರು, ಸಾಶ್ವ....ಚ - ಕುದುರೆಗಳಿಂದಲೂ, ಆನೆ ಗಳಿಂದಲೂ, ರಥಗಳಿಂದಲೂ ಕೂಡಿದ, ಸುಸಮೃದ್ಧಾನಿ - ಸಂಪೂರ್ಣಗಳಾದ, ಬಲಾನಿ - ಸೈನ್ಯಗಳು, ನಿಹತಾನಿ - ಸಂಹರಿಸಲ್ಪಟ್ಟವು, ತೇ - ನಿನಗೆ, ದಯಿತಃ - ಇಷ್ಟನಾದ, ಸಹೋದರಃ - ತಮ್ಮನಾದ, ಅಕ್ಷಃಕುಮಾರಶ್ಚ - ಅಕ್ಷಕುಮಾರನೂ, ಸೂದಿತಃ - ಕೊಲ್ಲಲ್ಪಟ್ಟನು. ॥ ೭-೮ ॥ ಹೇ ಅರಿನಿಷೂದನ - ಎಲೈ ಶತ್ರುನಾಶಕನೇ, ತ್ವಯಿ - ನಿನ್ನಲ್ಲಿ, ಮೇ - ನನಗೆ, ಯಃಸಾರಃ - ಯಾವ ಬಲದ ನಂಬಿಕೆಯಿರು ವುದೋ, ಸಃ - ಆ ನಂಬಿಕೆಯು, ತೇಷು - ಆ ರಕ್ಕಸರಲ್ಲಿ, ನಹ್ಯೇವ - ಇಲ್ಲವೇ ಇಲ್ಲವು. ॥ ೯ ॥ ಇದಂ - ಈ ಪರಿದೃಶ್ಯಮಾನವಾದ, ಮಹತ್ - ಪ್ರಶಸ್ತವಾದ, ಮತಿಮತ್ - ಬುದ್ಧಿಯುಕ್ತವಾದ, ಕಪೇಃ - ವಾನರನ, ಬಲಂ-ದೇಹಶಕ್ತಿಯನ್ನೂ, ಪ್ರಭಾವಂಚ-ಅಂತಃಶಕ್ತಿಯನ್ನೂ, ಪರಾಕ್ರಮಂಚ-ಪೌರುಷ ವನ್ನೂ, ದೃಷ್ಟ್ವಾ - ಕಂಡು, ತ್ವಂ - ನೀನು, ಆತ್ಮನಃ - ನಿನ್ನ, ಸಾರಂಚಾಪಿ - ಸಾಮರ್ಥ್ಯವನ್ನೂ, ಸಮೀಕ್ಷ್ಯ - ನೋಡಿ, ಸ್ವಬ....ಪಂ - ನಿನ್ನ ಶಕ್ತ್ಯನುಗುಣವಾದ, ವೇಗಂ - ವೇಗವನ್ನು, ಕುರುಷ್ವ - ಮಾಡು. ॥ ೧೦ ॥ ಅಸ್ತ್ರವಿದಾಂ - ಅಸ್ತ್ರಜ್ಞರಲ್ಲಿ, ವರಿಷ್ಠ - ಶ್ರೇಷ್ಠನಾದವನೇ, ಶಾಂತಶತ್ರೌ - ಉಪ

ವತ್ಸ! ಈಗ ಅಂತಹ ದುರಂತವಾದ ಸಂಕಟವೊದಗಿರುವುದು. ಮಹಾ ಪರಾಕ್ರಮಶಾಲಿ ಗಳಾದ ಕಿಂಕರರೆಲ್ಲರೂ ಹತರಾದರು. ಬಲೋನ್ಮತ್ತನಾದ ಜಂಬುಮಾಲಿಯೂ ಮಡಿದನು. ಮಹಾ ಬಲದರ್ಪಿತರಾದ ಏಳುಮಂದಿ ಮಂತ್ರಿಪುತ್ರರೂ ಸ್ವರ್ಗಸ್ಥರಾದರು. ಸೇನಾಪತಿಗ ಳೈವರೂ ಸಂಹೃತರಾದರು. ಗಜ, ತುರಗ, ರಥ, ಪದಾತಿಗಳೊಡಗೂಡಿದ ಚತುರಂಗಬಲವೂ ನಾಶವೈದಿತು. ಎಲೈ ಇಂದ್ರಜಿತುವೇ! ಇವೆಲ್ಲಕ್ಕಿಂತಲೂ, ನಿನಗೆ ಅತ್ಯಂತ ಪ್ರಿಯಕರನಾದ ಅಕ್ಷಕುಮಾರನು ಹತನಾದನು. ಎಲೈ ಅರಿಮರ್ದನನೇ! ನನಗೆ ನಿನ್ನಲ್ಲಿ ಬಹಳ ಗೌರವ ಬುದ್ಧಿಯಿರುವುದು; ನಂಬುಗೆಯಿರುವುದು. ಮತ್ತಾರಲ್ಲಿಯೂ ಆ ಗೌರವವೂ, ಆ ನಂಬುಗೆಯೂ ನನಗಿರುವುದಿಲ್ಲ. ಎಲೈ ಕುಮಾರ! ಕಿಂಕರರೇ ಮೊದಲಾದವರೆಲ್ಲರನ್ನೂ ಮಡಯಿಸಿದ ಮಹಾ ಬಲಪರಾಕ್ರಮಶಾಲಿಯಾದ ಆ ವಾನರನು ನನ್ನ ದುರಂತದುಃಖಕ್ಕೆ ಕಾರಣನಾದನು. ಆದುದರಿಂದ ನೀನು ಆ ವಾನರನ ಬಲಪರಾಕ್ರಮಗಳನ್ನೂ, ನಿನ್ನವನ್ನೂ ಹೋಲಿಸಿ ನೋಡಿ ಕೊಂಡು ಅವನನ್ನು ಸಂಹರಿಸುವುದಕ್ಕೆ ಉಚಿತವಾದ ವೇಗವನ್ನವಲಂಬಿಸು. ॥ ೬–೧೦ ॥

ಶಾಮ್ಯತಿ ಶಾಂತಶತ್ರೋ । ತಥಾ ಸಮೀಕ್ಷ್ಯಾತ್ಮಬಲಂ ಪರಂಚ ಸಮಾರಭಸ್ವಾಽಸ್ತ್ರವಿದಾಂ ವರಿಷ್ಠ ! ॥ ೧೧ ॥ ¶ ನ ವೀರ ! ಸೇನಾಗಣಶೋಽಚ್ಯವಂತಿ ನವಜ್ರಮಾದಾಯ ವಿಶಾಲ ಸಾರಂ । ನಮಾರುತಸ್ಯಾಽಸ್ಯ ಗತೇಃ ಪ್ರಮಾಣಂ ನಚಾಗ್ನಿಕಲ್ಪಃ ಕರಣೇನ ಹಂತುಂ ॥ ೧೨ ॥ ತಮೇವಮರ್ಥಂ ಪ್ರಸಮೀಕ್ಷ್ಯ ಸಮ್ಯಕ್ ಸ್ವಕರ್ಮಸಾಮ್ಯಾದ್ಧಿ ಸಮಾಹಿ

ಶಾಂತರಾದ ಶತ್ರುಗಳುಳ್ಳ, ಗತೇ-ಇಲ್ಲಿಂದ ಪಯಣಿಸಿದ, ತ್ವಯಿ-ನೀನು, ಸನ್ನಿಕೃಷ್ಟೇ-ಹನುಮಂತನ ಸಮೀಪವನ್ನೈದಲು, ಬಲಾವಮರ್ದಃ-ಸೇನಾನಾಶವು, ಯಥಾ-ಹೇಗೆ, ಶಾಮ್ಯತಿ-ಶಾಂತವಾದೀತೋ, ತಥಾ - ಹಾಗೆ, ಆತ್ಮಬಲಂ - ನಿನ್ನ ಶಕ್ತಿಯನ್ನೂ, ಪರಂಚ - ಶತ್ರುವನ್ನೂ ಸಹ, ಸಮೀಕ್ಷ್ಯ - ನೋಡಿ, ಸಮಾರಭಸ್ವ - ಯುದ್ಧವನ್ನು ಮಾಡು. ॥ ೧೧ ॥ ಹೇ ವೀರ ಎಲೈ ಶೂರನೇ, ಗಣಶೋಽಚಿ - ಗುಂಪುಗಳನ್ನು ದುಃಖಯುಕ್ತಗಳನ್ನಾಗಿ ಮಾಡುತ್ತಿರುವ ಹನುಮಂತನ ವಿಷಯದಲ್ಲಿ, ಸೇನಾಃ - ಸೈನ್ಯಗಳು, ನಾವಂತಿ - ರಕ್ಷಿಸಲಾರವು, ಅಲ್ಪಸಾರಂ - ಮಂದವಾದ ಹದವುಳ್ಳ, ವಜ್ರಂ - ವಜ್ರಪ್ರಾಯವಾದ ಆಯುಧವನ್ನು, ಆದಾಯ - ತೆಗೆದುಕೊಂಡು, ನವಿಶ - ಹೋಗಬೇಡ, ಅಸ್ಯ - ಈ ಹನುಮಂತನ, ಗತೇಃ - ಗಮನದ, ಪ್ರಮಾಣಂ - ಪರಿಮಿತಿಯು, ಮಾರುತಸ್ಯ - ವಾಯುವಿಗೆ, ನಾಸ್ತಿ - ಇಲ್ಲ, ಅಗ್ನಿಕಲ್ಪಃ - ಅಗ್ನಿಸದೃಶನಾದ ಈ ಹನುಮಂತನು, ಕರಣೇನ - ಮುಷ್ಟ್ಯಾದಿ ರೂಪಸಾಧನದಿಂದ, ಹಂತುಂ - ಹೊಡೆಯುವದಕ್ಕೆ, (ನಶಕ್ಯಃ - ಸಾಧ್ಯವಲ್ಲ.) ॥ ೧೨ ॥ ತಂ - ಆ ಪೂರ್ವೋಕ್ತವಾದ, ಅರ್ಥಂ - ಅರ್ಥವನ್ನು, ಏವಂ - ಈ ಬಗೆಯಾಗಿ, ಸಮ್ಯಕ್ - ಚೆನ್ನಾಗಿ, ಪ್ರಸಮೀಕ್ಷ್ಯ - ವಿಮರ್ಶಿಸಿ ನೋಡಿ, ಸ್ವಕ....ತ್ - ನಿನ್ನ ವ್ಯಾಪಾರದ ನ್ಯೂನಾತಿರಿಕ್ತಗಳಿಲ್ಲದಂತೆ, ಸಮಾಹಿತಾತ್ಮಾ - ಏಕಾಗ್ರಚಿತ್ತನಾಗಿ,

ಎಲೈ ಇಂದ್ರಜಿತುವೇ! ನೀನು ಶಸ್ತ್ರಾಸ್ತ್ರಗಳನ್ನು ಬಲ್ಲವರಲ್ಲಿ ಮೇಲೆನಿಸಿದವನು. ನೀನು ಶತ್ರುವೀರರೆಲ್ಲರನ್ನೂ ಶಾಂತಗೊಳಿಸಿದ ಕಡುಗಲಿಯು. ಈಗ ನೀನು ಆ ವಾನರನನ್ನೆದುರಿಸಿ ನಮ್ಮ ಬಲಕ್ಕಾಗುತ್ತಿರುವ ಸರ್ವನಾಶವನ್ನು ತಪ್ಪಿಸು. ಆ ವಾನರನ ಬಲವನ್ನೂ, ನಮ್ಮ ಬಲವನ್ನೂ ಚೆನ್ನಾಗಿ ಪರಿಶೀಲಿಸಿ ಯುದ್ಧವನ್ನುಪಕ್ರಮಿಸು. ಎಲೈ ಮಹಾಬಲನೇ! ಆ ಕಪಿಯು ಮಹಾ ಪರಾಕ್ರಮಶಾಲಿಯು ; ಪ್ರಭಾವಶಾಲಿಯು. ಅಸಂಖ್ಯಸೇನೆಯನ್ನು ಧೂಳಿಗೆಬ್ಬಿಸಿದ ಅವನ ಸಂಹಾರವಿಷಯದಲ್ಲಿ ಸೇನೆಗಳು ನಿರುಪಯೋಗವಾಗುವುವು. ದೇವೇಂದ್ರನ ವಜ್ರಾಯುಧವೂ ಆತನನ್ನು ಏನೂ ಮಾಡಲಾರದು. ಆದುದರಿಂದ ಆ ವಜ್ರಾಯುಧ ಪ್ರಯೋಗವೂ ನಿರರ್ಥಕವೇ ಸರಿ. ಅದೂ ಅಲ್ಲದೆ ಆ ವಾನರನಿಗಿರುವ ಗಮನವೇಗವೂ ವಾಯುವಿಗೂ ಇರುವುದಿಲ್ಲವು. ಪರಾಕ್ರಮದಲ್ಲಿಯೋ ಆತನು ಅಗ್ನಿಯನ್ನೂ ಮೀರಿಸಿರುವನು. ಆದುದರಿಂದ ಆತನನ್ನು ಪರಾಭವಿಸುವುದು ಅಷ್ಟು ಸುಲಭಸಾಧ್ಯವಾದುದೇನೂ ಅಲ್ಲ. ಆದುದರಿಂದ ಎಲೈ ಇಂದ್ರಜಿತುವೇ! ಈಗ ನಾನು ಹೇಳುವ ಪ್ರಕಾರವೇ ನೀನು ಚೆನ್ನಾಗಿ ಆಲೋಚಿಸಿ, ಕಾರ್ಯವು ಕೆಡದಂತೆ ಬಹು ಜಾಗರೂಕನಾಗಿದ್ದುಕೊಂಡು ಉತ್ತಮೋತ್ತಮ

¶ ಇಲ್ಲಿನ ವಿಶೇಷಾರ್ಥ:—(ಗಣಶೋಽಚಿ) ರಾಕ್ಷಸಸೇನೆಗಳನ್ನು ಗುಂಪುಗುಂಪಾಗಿ ಕೊಲ್ಲತಕ್ಕ ಆ ಹನುಮಂತನೊಡನೆ ಯುದ್ಧಮಾಡುವಾಗ ಈ ರಾಕ್ಷಸಸೇನೆಗಳು ನಿನ್ನನ್ನು (ನಾವಂತಿ) ರಕ್ಷಿಸಲಾರವು. ಆದುದರಿಂದ ನೀನು ಸೇನಾಸಮನ್ವಿತನಾಗಿ ಅವನಮೇಲೆ ಯುದ್ಧಕ್ಕೆ ಹೋಗಬೇಡ. (ಅಲಸಾರಂ) ಹನುಮಂತನ ವಿಷಯದಲ್ಲಿ ನಿಸ್ಸಾರವಾಗಿರುವ ವಜ್ರಾಯುಧವನ್ನು ಹಿಡಿದು (ನವಿಶ) ಯುದ್ಧಭೂಮಿಯನ್ನು ಪ್ರವೇಶಿಸಬೇಡ. (ಗೋವಿಂದರಾಜರು)

ತಾತ್ಮಾ। ಸ್ಮರಂಶ್ಚ ದಿವ್ಯಂ ಧನುಷೋಽಸ್ತ್ರವೀರ್ಯಂ ವ್ರಜಾಕ್ಷತಂ ಕರ್ಮಸಮಾರಭಸ್ವ ॥೧೩॥ \$ ನಖಲ್ವಿಯಂ ಮತಿಶ್ಶ್ರೇಷ್ಠಾಯತ್ತ್ವಾಂ ಸಂಪ್ರೇಷಯಾಮ್ಯಹಂ । ಇಯಂಚ ರಾಜಧರ್ಮಾಣಾಂ ಕ್ಷತ್ರಸ್ಯಚ ಮತಿರ್ಮತಾ ॥ ೧೪ ॥ ನಾನಾಶಸ್ತ್ರೈಶ್ಚ ಸಂಗ್ರಾಮೇ ವೈಶಾರದ್ಯಮರಿಂದಮ! । ಅವಶ್ಯಮೇವ ಬೋದ್ಧವ್ಯಂ ಕಾಮ್ಯಶ್ಚ ವಿಜಯೋ ರಣೇ । ॥ ೧೫ ॥ ತತಃ ಪಿತುಸ್ತದ್ವಚನಂ ನಿಶಮ್ಯ ಪ್ರದಕ್ಷಿಣಂ § ದಕ್ಷಸುತಪ್ರಭಾವಃ । ಚಕಾರ

ಧನುಷಃ - ಧನುಸ್ಸಂಬಂಧವಾದ, ವೀರ್ಯಂ - ಶಕ್ತಿಯನ್ನು, ದಿವ್ಯಂ - ದೇವತಾಸಂಬಂಧವಾದ, ಅಸ್ತ್ರವೀರ್ಯಂಚ - ಅಸ್ತ್ರಶಕ್ತಿಯನ್ನೂ, ಸ್ಮರ್ - ಸ್ಮರಣೆಮಾಡುತ್ತ, ವ್ರಜ - ತೆರಳು, ಅಕ್ಷತಂ - ನಾಶವಿಲ್ಲದಂತೆ, ಕರ್ಮ - ಕೆಲಸವನ್ನು, ಸಮಾರಭಸ್ವ - ಆರಂಭಿಸು. ॥ ೧೩ ॥ ಅಹಂ - ನಾನು, ತ್ವಾಂ - ನಿನ್ನನ್ನು, ಸಂಪ್ರೇಷಯಾಮಿಾತಿಯತ್ - ಕಳುಹುವೆನೆಂಬುವದಾವದೋ, ಇಯಂಮತಿಃ - ಈ ಬುದ್ಧಿಯು, ಶ್ರೇಷ್ಠಾ - ಉತ್ತಮವಾದುದು, ನಖಲು - ಆಗುವದಿಲ್ಲ, ಇಯಂಮತಿಶ್ಚ - ನಿನ್ನನ್ನೂ ಕಳುಹುವೆನೆಂಬ ಈ ಬುದ್ಧಿಯೂ ಕೂಡ, ರಾಜಧರ್ಮಾಣಾಂ - ರಾಜನೀತ್ಯುಕ್ತ ಧರ್ಮಗಳಿಗೂ, ಕ್ಷತ್ರಸ್ಯಚ - ಕ್ಷತ್ರಿಯನಿಗೂ, ಮತಾ - ಸಂಮತವಾದುದು. ॥ ೧೪ ॥ ಹೇ ಅರಿಂದಮ - ಎಲೈ ಶತ್ರು ನಾಶಕನೇ, ಸಂಗ್ರಾಮೇ - ಯುದ್ಧದಲ್ಲಿ, ನಾನಾಶಸ್ತ್ರೈಃ - ಅನೇಕ ಶಸ್ತ್ರಗಳಿಂದ, ವೈಶಾರದ್ಯಂ - ಸಾಮರ್ಥ್ಯವು, ಅವಶ್ಯಂ - ಮುಖ್ಯವಾಗಿ, ಬೋದ್ಧವ್ಯಂ - ತಿಳಿಯತಕ್ಕದು, ರಣೇ - ಕಾಳಿಗದಲ್ಲಿ, ವಿಜಯಶ್ಚ - ಜಯವೂ, ಕಾಮ್ಯಃ - ಅಪೇಕ್ಷಿಸತಕ್ಕದು. ॥ ೧೫ ॥ ತತಃ - ಬಳಿಕ, ದಕ್ಷ....ವಃ -

ವಾದ ಧನುರ್ಬಾಣಗಳನ್ನು ಸ್ಮರಿಸಿಕೊಳ್ಳಬೇಕು. ಯಾವೊಂದು ಅಪಾಯಕ್ಕೂ ಎಡೆಗೊಡದೆ ಯುದ್ಧವನ್ನುಪಕ್ರಮಿಸಬೇಕು. ಇದೂ ಅಲ್ಲದೆ ಇನ್ನೊಂದು ವಿಶೇಷ ಸಂಗತಿಯಿರುವುದು ಅದನ್ನೂ ಕೇಳು. ಈಗ ನಾನು ನನಗೆ ಅತ್ಯಂತ ಪ್ರಿಯಕರನಾದ ನಿನ್ನನ್ನು ಯುದ್ಧಕ್ಕೆ ಕಳುಹಿಸುವುದು ಅಷ್ಟು ಉಚಿತವೆನಿಸದು. ಆದರೆ ಇದು ಸಮಸ್ತ ರಾಜಧರ್ಮಗಳಿಗೂ ಧರ್ಮಾಧಿಕೃತರಾದ ಕ್ಷತ್ರಿಯರಿಗೂ ಉಚಿತವೇ ಸರಿ. ನಿನ್ನಲ್ಲಿ ನನಗಿರುವ ಪುತ್ರವಾತ್ಸಲ್ಯ ದೃಷ್ಟಿಯಿಂದ ನನ್ನ ಮನಸ್ಸು ಬಾಲಕನಾದ ನಿನ್ನನ್ನು ಯುದ್ಧಕ್ಕೆ ಕಳುಹಿಸಲು ಹಿಂಜರಿಯುತ್ತಿದ್ದರೂ ನನ್ನ ರಾಜಧರ್ಮವೂ, ನನ್ನ ಕರ್ತವ್ಯನಿಷ್ಠೆಯೂ ನನ್ನನ್ನು ಈ ಕಾರ್ಯದಲ್ಲಿ ಪ್ರೇರೇಪಿಸುತ್ತಿರುವುದು. ಆದುದರಿಂದ ಈಗ ನಾನು ನಿನ್ನನ್ನು ಯುದ್ಧಕ್ಕೆ ಕಳುಹಿಸುತ್ತಿರುವೆನು. ಎಲೈ ಅರಿಮರ್ದನನೇ! ನೀನು ಸಮಸ್ತ ಯುದ್ಧನೈಪುಣ್ಯಗಳಲ್ಲಿಯೂ ಪಂಡಿತನಾದವನು. ನಿನಗೆ ಸಮಾನನಾದ ವೀರನಾವನೂ ಇರುವುದಿಲ್ಲ. ಆದುದರಿಂದ ನೀನು ಅವಶ್ಯವಾಗಿ ಈ ಸಮಯದಲ್ಲಿ ಯುದ್ಧಕ್ಕೆ ಹೋಗಲೇಬೇಕು; ಯಾವ ವಿಧದಿಂದಲಾದರೂ ವಿಜಯಿಯಾಗಿಯೇ ಬರಬೇಕು. ಇಷ್ಟಸಿದ್ಧಿಗಾಗಿ ಸಮಸ್ತ ಮಂತ್ರಾಸ್ತ್ರಗಳನ್ನೂ ನೀನು ಸ್ಮರಿಸತಕ್ಕದು.” ॥೧೧--೧೫॥ ತನ್ನ ತಂದೆಯಾದ ರಾವಣಾಸುರನು ಈ ರೀತಿ ನುಡಿದ ಬಳಿಕ,

\$ ಇಲ್ಲಿ ತನಗೆ ಬೇರೆಯವರು ಸಹಾಯಕರಾಗಿರುವಾಗ ಮುಖ್ಯನಾಗಿರುವವನು ತಾನೇ ಮೊದಲು ಯುದ್ಧಕ್ಕೆ ಹೋಗುವುದು ರಾಜನೀತಿಶಾಸ್ತ್ರಕ್ಕೆ ವಿರುದ್ಧವಾದುದರಿಂದ ನಾನು ಹೋಗದೆ ನನಗೆ ಅತ್ಯಂತ ಪ್ರಿಯಕರನಾದರೂ ನಿನ್ನನ್ನು ಕಳುಹಿಸುವುದೇ ನ್ಯಾಯವೆಂದು ರಾವಣವಾಕ್ಯಾಭಿಪ್ರಾಯವು.

§ ವಿಷ್ಣುಪುರಾಣದಲ್ಲಿ “ಮನಸಾತ್ವೇವಭೂತಾನಿ ಪೂರ್ವಂ ದಕ್ಷೋಽಸೃಜತ್ತದಾ । ದೇವಾನೃಷೀನ್ ಸಗಂಧರ್ವಾನುರಗಾನ್ ಪಕ್ಷಿಣಸ್ತಥಾ” ಎಂದಿರುವುದರಿಂದ ಇಲ್ಲಿ “ದಕ್ಷಸುತ....” ಎಂದರೆ ದೇವತೆಗಳೆಂದು ವ್ಯವಹಾರವು.

ಭರ್ತಾರಮದೀನಸತ್ತ್ವೋ ರಣಾಯ ವೀರಃ ಪ್ರತಿಪನ್ನಬುದ್ಧಿಃ ॥ ೧೬ ॥ ತತಸ್ತೈಸ್ತ್ವಗಣ್ಯೈರಿಷ್ಟೈರಿಂದ್ರಜಿತ್ಪ್ರತಿಪೂಜಿತಃ । ಯುದ್ಧೋದ್ಧತಃ ಕೃತೋತ್ಸಾಹಸ್ಸಂಗ್ರಾಮಂ ಪ್ರತ್ಯಪದ್ಯತ ॥ ೧೭ ॥ ಶ್ರೀಮಾನ್ಪದ್ಮಪಲಾಶಾಕ್ಷೋ ರಾಕ್ಷಸಾಧಿಪತೇಸ್ಸುತಃ । ನಿರ್ಜಗಾಮ ಮಹಾತೇಜಾಸ್ಸಮುದ್ರ ಇವ ಪರ್ವಸು ॥ ೧೮ ॥ ಸಪಕ್ಷಿರಾಜಾನಿಲತುಲ್ಯವೇಗೈರ್ವ್ಯಾಳೈಶ್ಚತುರ್ಭಿಸ್ಸಿತತೀಕ್ಷ್ಣದಂಷ್ಟ್ರೈಃ । ರಥಂ ಸಮಾಯುಕ್ತಮಸಂಗವೇಗಂ ಸಮಾರುರೋಹೇಂದ್ರಜಿದಿಂದ್ರಕಲ್ಪಃ ॥ ೧೯ ॥ ಸರಥೀ ಧನ್ವಿನಾಂ ಶ್ರೇಷ್ಠಶ್ಶಸ್ತ್ರಜ್ಞೋಽಸ್ತ್ರ

ದೇವತೆಗಳಿಗೆ ಸದೃಶವಾದ ಮಹಿಮೆಯುಳ್ಳ, ಅದೀನಸತ್ವಃ - ದೈನ್ಯವಿಲ್ಲದ ಸ್ವಭಾವವುಳ್ಳ, ವೀರಃ - ಶೂರನಾದ ಇಂದ್ರಜಿತುವು, ಪಿತುಃ - ತಂದೆಯ, ತದ್ವಚನಂ - ಆ ಮಾತನ್ನು, ನಿಶಮ್ಯ - ಕೇಳಿ, ರಣಾಯ - ಯುದ್ಧಕ್ಕೋಸ್ಕರ, ಪ್ರತಿ....ದ್ಧಿಃ - ಅಂಗೀಕರಿಸಲ್ಪಟ್ಟ ಮತಿಯುಳ್ಳವನಾಗಿ, ಭರ್ತಾರಂ - ಒಡೆಯನಾದ ರಾವಣನನ್ನು, ಪ್ರದಕ್ಷಿಣಂಚಕಾರ - ಪ್ರದಕ್ಷಿಣ ನಮಸ್ಕಾರಮಾಡಿದನು. ॥ ೧೬ ॥ ತತಃ - ಬಳಿಕ, ಇಷ್ಟೈಃ - ಪ್ರೀತಿಪಾತ್ರರಾದ, ತೈಃ - ಆ ಸಭಾಮಧ್ಯದಲ್ಲಿರುವ, ಸ್ವಗಣ್ಯೈಃ - ತನ್ನ ಗುಂಪಿನ ಜನರಿಂದ, ಪ್ರತಿಪೂಜಿತಃ - ಬಹುಮಾನಿಸಲ್ಪಟ್ಟ, ಯುದ್ಧೋದ್ಧತಃ - ಯುದ್ಧಗರ್ವಿತನಾದ, ಇಂದ್ರಜಿತ್ - ಇಂದ್ರಜಿತುವು, ಕೃತೋತ್ಸಾಹಃ - ಉತ್ಸಾಹವಂತನಾಗಿ, ಸಂಗ್ರಾಮಂ - ಕಾಳಗವನ್ನು ಕುರಿತು, ಪ್ರತ್ಯಪದ್ಯತ - ಹೊರಟನು. ॥ ೧೭ ॥ ಪದ್ಮಪಲಾಶಾಕ್ಷಃ - ತಾವರೆಯೆಸಳಿನಂತೆ ನೇತ್ರಗಳುಳ್ಳ, ಮಹಾತೇಜಾಃ - ಮಹಾ ಪರಾಕ್ರಮಿಯಾದ, ಶ್ರೀಮಾನ್ - ಸಂಪದ್ಯುಕ್ತನಾದ, ರಾಕ್ಷ....ತೇಃ - ರಾವಣನ, ಸುತಃ - ಮಗನಾದ ಇಂದ್ರಜಿತುವು, ಪರ್ವಸು - ಪರ್ವಕಾಲಗಳಲ್ಲಿ, ಸಮುದ್ರ ಇವ - ಸಮುದ್ರದಂತೆ, ನಿರ್ಜಗಾಮ - ಉಬ್ಬಿ ಹೊರಟನು. ॥ ೧೮ ॥ ಇಂದ್ರಕಲ್ಪಃ - ಇಂದ್ರಸದೃಶನಾದ, ಇಂದ್ರಜಿತ್ - ಇಂದ್ರಜಿತುವು, ಪಕ್ಷಿ....ಗೈಃ - ಗರುಡ ಸಮಾನಗಳಾದ ಒಂದಕ್ಕೊಂದು ಸಮಾನವಾದ ವೇಗವುಳ್ಳ ಬೆಳ್ಳಗಿರುವ ಹದವಾದ ಕೋರೆಹಲ್ಲುಗಳುಳ್ಳ, ಚತುರ್ಭಿಃ - ನಾಲ್ಕಾದ, ವ್ಯಾಳೈಃ - ಸಿಂಹಗಳಿಂದ, ಅಥವಾ - ದೊಡ್ಡ ಹುಲಿಗಳಿಂದ, ಸಮಾಯುಕ್ತಂ - ಸೇರಿರುವ, ಅಸಂಗವೇಗಂ - ಭೂಸಂಬಂಧವಿಲ್ಲದ ವೇಗವುಳ್ಳ, ರಥಂ - ರಥವನ್ನು, ಸಮಾರುರೋಹ - ಏರಿದನು. ॥ ೧೯ ॥ ಯತ್ರ - ಯಾವ ಸ್ಥಳದಲ್ಲಿ, ಸಹನೂಮಾನ್ - ಆ ಆಂಜನೇ

ದೇವತೆಗಳಿಗೆ ಸಮಾನವಾದ ಪ್ರಭಾವವುಳ್ಳವನೂ, ಮಹಾ ಪರಾಕ್ರಮಶಾಲಿಯಾದವನೂ ಆದ ಆ ಇಂದ್ರಜಿತುವು ತನ್ನ ತಂದೆಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ಪ್ರಯಾಣಸನ್ನದ್ಧನಾದನು. ಆ ಸಮಯದಲ್ಲಿ ಆತನಿಗೆ ಪ್ರಿಯಕರರಾಗಿ ಆ ಸಭೆಯಲ್ಲಿದ್ದ ರಾಕ್ಷಸವೀರರೆಲ್ಲರೂ ಆತನನ್ನು ಬಹಳವಾಗಿ ಪ್ರಶಂಶಿಸಿದರು. ಆಗ ಇಂದ್ರಜಿತುವು ಯುದ್ಧೋದ್ಧತನಾಗಿ ಮಹೋತ್ಸಾಹದಿಂದ ಹೊರಹೊರಡಲನುವಾದನು. ಬಹು ಕಾಂತಿಮಂತನೂ, ಕಮಲಪತ್ರದಂತೆ ವಿಶಾಲವಾದ ನೇತ್ರಗಳುಳ್ಳವನೂ, ಮಹಾ ಬಲಸಮನ್ವಿತನೂ ರಾವಣೇಶ್ವರನ ಪ್ರಿಯಪುತ್ರನೂ ಆದ ಆ ಇಂದ್ರಜಿತುವು ಪರ್ವಕಾಲಗಳಲ್ಲಿ ಉಕ್ಕಿಬರುವ ಸಾಗರದಂತೆ ಉತ್ಸಾಹದಿಂದುಬ್ಬಿ ಮಹಾರ್ಹವಾದ ರಥವನ್ನೇರಿ ಯುದ್ಧಕ್ಕೆ ಹೊರಟನು. ಆ ರಥವು ವೇಗದಲ್ಲಿ ಗರುಡನಿಗೆ ಸಮಾನವಾಗಿ, ಶ್ವೇತವರ್ಣವುಳ್ಳವಾಗಿ, ನೇರವಾಗಿರುವ ಕೊರಳುಳ್ಳವಾಗಿರುವ ನಾಲ್ಕು ದೊಡ್ಡ ಹುಲಿಗಳಿಂದ ಕೂಡಿ ಮನೋಹರವಾಗಿದ್ದಿತು. ಅದು ಭೂಮಿಗೆ ಸೋಕದೆಯೇ ಬಹು ವೇಗನಾಗಿ ಸಂಚರಿಸುವುದಾಗಿದ್ದಿತು. ಇಂತಹ ರಥಶ್ರೇಷ್ಠವನ್ನೇರಿ ಕುಳಿತ ಧನುರ್ಧಾರಿಗಳಲ್ಲಿ ಮೇಲೆ

ವಿದಾಂ ವರಃ । ರಥೇನಾಭಿಯಯೌ ಕ್ಷಿಪ್ರಂ ಹನೂಮಾನ್ಯತ್ರ ಸೋಽಭವತ್ ॥೨೦॥ ಸತಸ್ಯ ರಥನಿರ್ಘೋಷಂ ಜ್ಯಾಸ್ವನಂ ಕಾರ್ಮುಕಸ್ಯಚ । ನಿಶಮ್ಯ ಹರಿವೀರೋಽಸೌ ಸಂಪ್ರಹೃಷ್ಟತರೋಽಭವತ್ ॥ ೨೧ ॥ ಸುಮಹಚ್ಚಾಪಮಾದಾಯ ಶಿತಶಲ್ಯಾಂಶ್ಚ ಸಾಯಕಾನ್ । ಹನೂಮಂತಮಭಿಪ್ರೇತ್ಯ ಜಗಾಮ ರಣಪಂಡಿತಃ ॥ ೨೨ ॥ ತಸ್ಮಿಂಸ್ತತಸ್ಸಂಯತಿ ಜಾತಹರ್ಷೇ ರಣಾಯ ನಿರ್ಗಚ್ಛತಿ ಬಾಣಪಾಣೌ । ದಿಶಶ್ಚ ಸರ್ವಾಃ ಕಲುಷಾ ಬಭೂವುರ್ಮೃಗಾಶ್ಚ ರೌದ್ರಾ ಬಹುಧಾ ವಿನೇದುಃ ॥ ೨೩ ॥ ಸಮಾಗತಾ

ಯನು, ಅಭವತ್ - ಇರುವವನಾದನೋ, ತತ್ರ - ಆ ಸ್ಥಳದಲ್ಲಿ, ಧನ್ವಿನಾಂ - ಧನುರ್ಧಾರಿಗಳೊಳಗೆ, ಶ್ರೇಷ್ಠಃ - ಉತ್ತಮನಾದ, ಅಸ್ತ್ರವಿದಾಂ - ಅಸ್ತ್ರಜ್ಞರೊಳಗೆ, ವರಃ - ಶ್ರೇಷ್ಠನಾದ, ಶಸ್ತ್ರಜ್ಞಃ - ಶಸ್ತ್ರಗಳನ್ನರಿತವನೂ ಆದ, ಸಃ - ಆ ಇಂದ್ರಜಿತ್ತುವು, ರಥೀ - ರಥಾರೂಢನಾಗಿ, ರಥೇನ - ರಥದಿಂದ, ಕ್ಷಿಪ್ರಂ - ಜಾಗ್ರತೆಯಾಗಿ, ಅಭಿಯಯೌ - ಹನುಮಂತನಿಗೆದುರಾಗಿ ಬಂದನು. ॥ ೨೦ ॥ ಹರಿವೀರಃ - ವಾನರಶ್ರೇಷ್ಠನಾದ, ಸೋಽಸೌ - ಆ ಈ ಆಂಜನೇಯನು, ತಸ್ಯ - ಆ ಇಂದ್ರಜಿತ್ತುವಿನ, ರಥನಿರ್ಘೋಷಂ - ರಥಧ್ವನಿಯನ್ನು, ಕಾರ್ಮುಕಸ್ಯ - ಬಿಲ್ಲಿನ, ಜ್ಯಾಸ್ವನಂ - ಹೆದೆಯ ಧ್ವನಿಯನ್ನು, ನಿಶಮ್ಯ - ಕೇಳಿ, ಸಂಪ್ರ....ರಃ - ಬಹಳ ಸಂತೋಷಗೊಂಡವನು, ಅಭವತ್ - ಆದನು. ॥ ೨೧ ॥ ರಣಪಂಡಿತಃ - ಯುದ್ಧದಲ್ಲಿ ಪಾಂಡಿತ್ಯವುಳ್ಳ ಇಂದ್ರಜಿತ್ತು, ಸುಮಹತ್ - ಬಹಳ ದೊಡ್ಡದಾದ, ಚಾಪಂ - ಧನುಸ್ಸನ್ನು, ಶಿತಶಲ್ಯಾಃ - ತೀಕ್ಷ್ಣವಾದ ಅಲುಗುಗಳುಳ್ಳ, ಸಾಯಕಾಂಶ್ಚ - ಬಾಣಗಳನ್ನೂ, ಆದಾಯ - ತೆಗೆದುಕೊಂಡು, ಹನೂಮಂತಂ - ಆಂಜನೇಯನನ್ನು ಕುರಿತು, ಅಭಿಪ್ರೇತ್ಯ - ಅಭಿಮುಖವಾಗಿ, ಜಗಾಮ - ಹೊರಟನು. ॥ ೨೨ ॥ ತತಃ - ಬಳಿಕ, ಸಂಯತಿ - ಯುದ್ಧದಲ್ಲಿ, ಜಾತಹರ್ಷೇ - ಹುಟ್ಟಿದ ಸಂತೋಷವುಳ್ಳ, ಬಾಣಪಾಣೌ - ಶರಹಸ್ತನಾದ, ತಸ್ಮಿನ್ - ಆ ಇಂದ್ರಜಿತ್ತು, ರಣಾಯ - ಯುದ್ಧಕ್ಕೋಸ್ಕರ, ನಿರ್ಗಚ್ಛತಿ - ಹೊರಟವನಾಗಲು, ಸರ್ವಾಃದಿಶಶ್ಚ - ದಿಕ್ಕುಗಳೆಲ್ಲ, ಕಲುಷಾಃ - ಮಲಿನವಾದವುಗಳು, ಬಭೂವುಃ - ಆದವು, ರೌದ್ರಾಃ - ಭಯಂಕರಗಳಾದ, ಮೃಗಾಶ್ಚ - ಮೃಗಗಳು, ಬಹುಧಾ - ನಾನಾಬಗೆಗಳಾಗಿ, ವಿನೇದುಃ - ಕೂಗಿಕೊಂಡವು. ॥ ೨೩ ॥ ತತ್ರ - ಆ ಯುದ್ಧರಂಗದಲ್ಲಿ, ಸಮಾಗತಾಃ - ಬಂದಿರುವ, ನಾಗಯಕ್ಷಾಃ - ಸರ್ಪಯಕ್ಷರು, ಚಕ್ರಚರಾಃ - ಜ್ಯೋತಿಶ್ಚಕ್ರದಲ್ಲಿ

ನಿಸಿ, ಶಸ್ತ್ರಾಸ್ತ್ರವಿದ್ಯೆಗಳಲ್ಲಿ ಮಹಾಶ್ರೇಷ್ಠನೆನಿಸಿರುವವನೂ ಆದ ಇಂದ್ರಜಿತ್ತು ಆಂಜನೇಯನ ಮೇಲೆ ಯುದ್ಧಕ್ಕೆ ಹೊರಟುಬಂದನು. ॥ ೧೬–೨೦ ॥ ಆಗ ವಾನರೋತ್ತಮನಾದ ಆಂಜನೇಯನು ಇಂದ್ರಜಿತುವಿನ ರಥಧ್ವನಿಯನ್ನೂ, ಅವನು ಮಾಡಿದ ಧನುಷ್ಟಾಂಕಾರವನ್ನೂ ಕೇಳಿ ಪುನಃ ಯುದ್ಧವಾಗುವುದೆಂದು ಬಹು ಸಂತೋಷಭರಿತನಾದನು. ರಣಪಂಡಿತನಾದ ಇಂದ್ರಜಿತ್ತುವಾದರೋ ಮಹಾರ್ಹವಾದುದೂ, ಮಹತ್ತರವಾದುದೂ ಆದ ತನ್ನ ಧನುಸ್ಸಿಗೆ ಬಹು ತೀಕ್ಷ್ಣಗಳಾದ ಬಾಣಗಳನ್ನು ಸಂಧಿಸುವವನಾಗಿ ನಾರಿಯನ್ನು ಸೆಳೆಯುತ್ತ ಆಂಜನೇಯನ ಮೇಲೆ ಹೋದನು. ಹೀಗೆ ಆತನು ಯುದ್ಧಸನ್ನದ್ಧನಾಗಿ ಮಹೋತ್ಸಾಹದಿಂದ ಧನುರ್ಬಾಣಗಳನ್ನು ಹಿಡಿದುಬರುತ್ತಿರಲು ದಶದಿಶೆಗಳಲ್ಲಿಯೂ ಕತ್ತಲು ಕವಿಯಿತು. ಮಹಾ ಭಯಂಕರವಾದ ಕ್ರೂರಮೃಗಗಳೆಲ್ಲವೂ ವಕ್ರವಕ್ರವಾಗಿ ಅರಚಿಕೊಂಡವು. ಜ್ಯೋತಿರ್ಮಾರ್ಗ ಸಂಚಾರಿಗಳಾದ ಪನ್ನಗರು, ಯಕ್ಷರು, ಮಹರ್ಷಿಗಳು, ಸಿದ್ಧರು ಇವರೇ ಮೊದಲಾದವರೆಲ್ಲರೂ

ಸ್ತತ್ರತು ನಾಗಯಕ್ಷಾ ಮಹರ್ಷಯಶ್ಚಕ್ರಚರಾಶ್ಚ ಸಿದ್ಧಾಃ । ನಭಸ್ಸಮಾವೃತ್ಯಚ ಪಕ್ಷಿಸಂಘಾ ವಿನೇದುರುಚ್ಚೈಃ ಪರಮಪ್ರಹೃಷ್ಟಾಃ ॥ ೨೪ ॥ ಆಯಾಂತಂ ಸರಥಂ ದೃಷ್ಟ್ವಾ ತೂರ್ಣಮಿಂದ್ರಜಿತಂ ಕಪಿಃ । ವಿನನಾದ ಮಹಾನಾದಂ ವ್ಯವರ್ಧತಚ ವೇಗವಾನ್ ॥ ೨೫ ॥ ಇಂದ್ರಜಿತ್ತು ರಥಂ ದಿವ್ಯಮಾಸ್ಥಿತಶ್ಚಿತ್ರಕಾರ್ಮುಕಃ । ಧನುರ್ವಿಷ್ಫಾರಯಾಮಾಸ ತಟಿದೂರ್ಜಿತನಿಸ್ಸ್ವನಂ ॥ ೨೬ ॥ ತತಸ್ಸಮೇತಾವತಿತೀಕ್ಷ್ಣವೇಗೌ ಮಹಾಬಲೌ ತೌ ರಣನಿರ್ವಿಶಂಕೌ । ಕಪಿಶ್ಚ ರಕ್ಷೋಧಿಪತೇಶ್ಚ ಪುತ್ರಸ್ಸುರಾಸುರೇಂದ್ರಾವಿವ ಬದ್ಧವೈರೌ ॥ ೨೭ ॥ ಸತಸ್ಯ ವೀರಸ್ಯ ಮಹಾರಥಸ್ಯ ಧನುಷ್ಮತ

ಸಂಚರಿಸುವ, ಮಹರ್ಷಯಃ - ಮಹಾ ಮುನಿಗಳೂ, ಸಿದ್ಧಾಃ - ಸಿದ್ಧರೂ, ಪಕ್ಷಿಸಂಘಾಶ್ಚ - ಪಕ್ಷಿ ತಂಡಗಳೂ, ಪರಮಪ್ರಹೃಷ್ಟಾಃ - ಬಹಳ ಸಂತೋಷಗೊಂಡವರಾಗಿ, ನಭಃ - ಅಂತರಿಕ್ಷವನ್ನು, ಸಮಾವೃತ್ಯ - ಆಚ್ಛಾದಿಸಿ, ಉಚ್ಚೈಃ - ಗಟ್ಟಿಯಾಗಿ, ವಿನೇದುಃ - ಕೂಗಿದವು. ॥ ೨೪ ॥ ಕಪಿಃ - ಆಂಜನೇಯನು, ಆಯಾಂತಂ - ಬರುತ್ತಿರುವ, ಸರಥಂ - ರಥದಿಂದೊಡಗೂಡಿದ, ಇಂದ್ರಜಿತಂ - ಇಂದ್ರಜಿತುವನ್ನು, ದೃಷ್ಟ್ವಾ - ಕಂಡು, ತೂರ್ಣಂ - ಜಾಗ್ರತೆಯಾಗಿ, ಮಹಾನಾದಂ - ಕೋಲಾಹಲಧ್ವನಿಯನ್ನು, ವಿನನಾದ - ಮಾಡಿದನು, ವೇಗವಾನ್ - ವೇಗವಂತನಾಗಿ, ವ್ಯವರ್ಧತಚ - ವೃದ್ಧಿಯನ್ನೂ ಹೊಂದಿದನು. ॥ ೨೫ ॥ ಚಿತ್ರಕಾರ್ಮುಕಃ-ಆಶ್ಚರ್ಯಕರವಾದ ಧನುಸ್ಸುಳ್ಳ, ಇಂದ್ರಜಿತ್ತು-ಇಂದ್ರಜಿತ್ತುವಾದರೆ, ದಿವ್ಯಂ - ದೇವತಾಸಂಬಂಧವಾದ, ರಥಂ - ರಥದಲ್ಲಿ, ಆಸ್ಥಿತಃ - ಕುಳಿತವನಾಗಿ, ತಟಿ....ನಂ - ಸಿಡಿಲಿನಂತೆ ವೃದ್ಧಿಹೊಂದಿದ ಧ್ವನಿಯುಳ್ಳ, ಧನುಃ-ಕೋದಂಡವನ್ನು, ವಿಷ್ಫಾರಯಾಮಾಸ-ಟೇಂಕರಿಸಿದನು. ॥೨೬॥ ತತಃ - ಬಳಿಕ, ಸಮೇತೌ - ಒಂದೆಡೆ ಸೇರಿರುವ, ಅತಿತೀಕ್ಷ್ಣವೇಗೌ - ಅತಿಕ್ರೂರವಾದ ವೇಗವುಳ್ಳ, ಮಹಾಬಲೌ - ಬಲುಬಲಿಷ್ಠರಾದ, ರಣನಿರ್ವಿಶಂಕೌ - ಕಾಳಗದಲ್ಲಿ ಅಂಜದಿರುವ, ಕಪಿಶ್ಚ - ವಾನರನೂ, ರಕ್ಷೋಧಿಪತೇಃ - ರಾಕ್ಷಸರಾಜನ, ಪುತ್ರಶ್ಚೇತಿ - ಕುಮಾರನೂ ಎಂಬ, (ತಾವುಭೌ - ಅವರೀರ್ವರೂ,) ಸುರಾ....ವ - ದೇವೇಂದ್ರ ರಾಕ್ಷಸೇಂದ್ರ ದೇವೇಂದ್ರರಂತೆ, ಬದ್ಧವೈರೌ - ಕಟ್ಟಲ್ಪಟ್ಟ ದ್ವೇಷವುಳ್ಳವರಾದರು. ॥೨೭॥ ಪ್ರವೃದ್ಧಃ-ವೃದ್ಧಿಹೊಂದಿದ, ಸಃ - ಆ ಹನುಮಂತನು, ಮಹಾರಥಸ್ಯ - ಮಹಾ ರಥಿಕನಾದ, ವೀರಸ್ಯ - ಶೂರನಾದ, ಧನುಷ್ಮತಃ - ಬಿಲ್ಲುಗಾರನಾದ, ಸಂಯತಿ - ಯುದ್ಧದಲ್ಲಿ, ಸಂಮತಸ್ಯ-ಬಹುಮತನಾದ, ತಸ್ಯ - ಆ ಇಂದ್ರಜಿತ್ತುವಿನ, ಶರಪ್ರವೇಗಂ-ಬಾಣವೇಗವನ್ನು, ವ್ಯಹನತ್-

---

ಆ ಯುದ್ಧಸಮಾರಂಭವನ್ನು ನೋಡುವುದಕ್ಕಾಗಿ ಆ ಪ್ರದೇಶಕ್ಕೆ ಅತಿಸಮೀಪವಾಗಿ ಬಂದು ನಿಂತರು. ಗಗನದಲ್ಲಿ ಪಕ್ಷಿಸಮೂಹಗಳು ಮಹದಾನಂದದಿಂದ ಧ್ವನಿಮಾಡುತ್ತಿದ್ದವು. ಮಹಾ ವೇಗಶಾಲಿಯಾದ ಹನುಮಂತನು, ರಥವನ್ನೇರಿ ಬರುತ್ತಿರುವ ಇಂದ್ರಜಿತ್ತುವನ್ನು ನೋಡಿ ಸಂತೋಷಾಧಿಕ್ಯದಿಂದ ದೊಡ್ಡ ಸಿಂಹನಾದವನ್ನು ಮಾಡಿ ಬಹು ಜಾಗ್ರತೆಯಾಗಿಯೇ ವರ್ಧಿಸತೊಡಗಿದನು. ॥೨೧–೨೫॥ ಚಿತ್ರಕಾರ್ಮುಕನಾದ ಇಂದ್ರಜಿತುವು ರಥದಲ್ಲಿದ್ದೇ ಅದನ್ನುನೋಡಿ, ತನ್ನ ಬಿಲ್ಲಿನ ನಾರಿಯನ್ನು ಎಳೆದು ಗುಡುಗಿಗೆ ಸಮಾನವಾಗಿ ಅದನ್ನು ಧ್ವನಿಮಾಡಿಸಿದನು. ಆಗ ಮಹಾ ವೇಗಶಾಲಿಗಳಾದವರೂ, ಅಪರಿಮಿತ ಬಲಪರಾಕ್ರಮಗಳುಳ್ಳವರೂ, ಯುದ್ಧದಲ್ಲಿ ನಿರ್ಭಯರಾಗಿರುವವರೂ ಆದ ಆ ಆಂಜನೇಯ ಇಂದ್ರಜಿತುಗಳು ಬದ್ಧವೈರಿಗಳಾದ ದೇವ ದಾನವರಂತೆ ಯುದ್ಧಕ್ಕೆ ಸೆಣಸಿ ನಿಂತರು. ಆ ಸಮಯದಲ್ಲಿ ಆಂಜನೇಯನು ಬಹಳವಾಗಿ ವೃದ್ಧಿಗೊಂಡವನೂ, ಮಹಾ ರಥಿಕನೂ, ಬಿಲ್ಲುಗಾರರಲ್ಲಿ ಮೇಲೆನಿಸಿದವನೂ, ಯುದ್ಧದಲ್ಲಿ ಸ್ವಸಾ

ಸ್ಸಂಯುತಿ ಸಂಮತಸ್ಯ । ಶರಪ್ರವೇಗಂ ವ್ಯಹನತ್ಪ್ರವೃದ್ಧಶ್ಚಚಾರ ಮಾರ್ಗೇ ಪಿತುರಪ್ರಮೇಯೇ ॥ ೨೮ ॥ ತತಶ್ಶರಾನಾಯತತೀಕ್ಷ್ಣಶಲ್ಯಾನ್ ಸುಪತ್ರಿಣಃ ಕಾಂಚನಚಿತ್ರಪುಂಖಾನ್ । ಮುಮೋಚ ವೀರಃ ಪರವೀರಹಂತಾ ಸುಸನ್ನತಾನ್ವಜ್ರನಿಪಾತವೇಗಾನ್ ॥ ೨೯ ॥ ತತಸ್ತು ತತ್ಸ್ಯಂದನನಿಸ್ಸ್ವನಂಚ ಮೃದಂಗಭೇರೀಪಟಹಸ್ವನಂಚ । ವಿಕೃಷ್ಯಮಾಣಸ್ಯ ಚ ಕಾರ್ಮುಕಸ್ಯ ನಿಶಮ್ಯ ಘೋಷಂ ಪುನರುತ್ಪಪಾತ ॥ ೩೦ ॥ ಶರಾಣಾಮಂತರೇಷ್ವಾಶು ವ್ಯವರ್ತತ ಮಹಾಕಪಿಃ । ಹರಿಸ್ತಸ್ಯಾಭಿಲಕ್ಷ್ಯಸ್ಯ ಮೋಘಯನ್ಲಕ್ಷ್ಯಸಂಗ್ರಹಂ ॥ ೩೧ ॥ ಶರಾಣಾಮಗ್ರತಸ್ತಸ್ಯ ಪುನಸ್ಸಮಭಿವರ್ತತ । ಪ್ರಸಾರ್ಯ ಹಸ್ತೌ

ಹೊಡೆದನು, ಅಪ್ರಮೇಯೇ - ಊಹಿಸಲಸಾಧ್ಯವಾದ, ಪಿತುಃ - ತಂದೆಯಾದ ವಾಯುವಿನ, ಮಾರ್ಗೇ- ಅಂತರಿಕ್ಷಮಾರ್ಗದಲ್ಲಿ, ಚಚಾರಚ-ಸಂಚಾರವನ್ನೂ ಮಾಡಿದನು. ॥ ೨೮ ॥ ತತಃ-ಬಳಿಕ, ಪರ....ತಾ- ಶತ್ರುವೀರರಿಗೆ ಸಂಹಾರಕನಾದ, ವೀರಃ - ಶೂರನಾದ ಇಂದ್ರಜಿತ್ತು, ಆಯ....ಲ್ಯಾನ್ - ದೀರ್ಘವೂ ಮೊನಚೂ ಆದ ಮುಳ್ಳುಗಳುಳ್ಳ, ಸುಪತ್ರಿಣಃ - ಒಳ್ಳೆಯಗರಿಗಳುಳ್ಳ, ಕಾಂಚ....ಖಾನ್ - ಸುವರ್ಣಮಯವಾದ, ಆಶ್ಚರ್ಯಕರವಾದ, ಅಲುಗುಗಳುಳ್ಳ, ಸುಸನ್ನತಾನ್ - ಚೆನ್ನಾಗಿ ಬಗ್ಗಿಸಲ್ಪಟ್ಟ, ವಜ್ರ....ಗಾನ್ - ಸಿಡಿಲಿನ ಬೀಳುವಂತೆ ವೇಗವುಳ್ಳ, ಶರಾನ್ - ಬಾಣಗಳನ್ನು, ಮುಮೋಚ - ಬಿಟ್ಟನು. ॥ ೨೯ ॥ ತತಸ್ತು - ಬಳಿಕಲಾದರೆ, ತತ್ಸ್ಯಂದನನಿಸ್ವನಂಚ - ಆ ಇಂದ್ರಜಿತ್ತುವಿನ ರಥದ ಶಬ್ದವನ್ನೂ, ಮೃದಂ....ಚ - ಮದ್ದಳೆಗಳ ಭೇರಿಗಳ ತಮ್ಮಟೆಗಳ ಧ್ವನಿಗಳನ್ನೂ, ವಿಕೃ....ಸ್ಯ - ಸೆಳೆಯಲ್ಪಡುತ್ತಿರುವ, ಕಾರ್ಮುಕಸ್ಯ - ಕೋದಂಡದ, ಘೋಷಂಚ - ನಾದವನ್ನೂ, ನಿಶಮ್ಯ - ಕೇಳಿ, ಪುನಃ - ಮತ್ತು, ಉತ್ಪಪಾತ - ನೆಗೆದನು. ॥ ೩೦ ॥ ಹರಿಃ - ಆಂಜನೇಯನು, ಮಹಾಕಪಿಃ - ದೊಡ್ಡ ವಾನರನಾಗಿ, ಅಭಿಲಕ್ಷ್ಯಸ್ಯ - ಅಭಿಮುಖವಾಗಿ ಮಾಡಲ್ಪಟ್ಟ ಗುರಿಯುಳ್ಳ, ತಸ್ಯ - ಆ ಇಂದ್ರಜಿತ್ತುವಿನ, ಲಕ್ಷ್ಯಸಂಗ್ರಹಂ-ಗುರಿಯನ್ನು, ಮೋಘಯನ್-ವ್ಯರ್ಥಮಾಡಿ, ಶರಾಣಾಂ-ಬಾಣಗಳ, ಅಂತರೇಷು- ಮಧ್ಯಭಾಗಗಳಲ್ಲಿ, ವ್ಯವರ್ತತ-ನಿಂತನು. ॥ ೩೧ ॥ ಅನಿಲಾತ್ಮಜಃ-ವಾಯುಪುತ್ರನಾದ, ಹನೂಮಾನ್- ಆಂಜನೇಯನು, ಹಸ್ತೌ-ಕೈಗಳನ್ನು, ಪ್ರಸಾರ್ಯ - ಚಾಚಿ, ತಸ್ಯ - ಆ ಇಂದ್ರಜಿತ್ತುವಿನ, ಶರಾಣಾಂ-

---

ಮರ್ಥ್ಯದಿಂದಲೇ ಪ್ರಖ್ಯಾತನಾದವನೂ ಆದ ಆ ಇಂದ್ರಜಿತುವಿನ ಬಾಣವೇಗವನ್ನು ನಿವಾರಿಸುತ್ತ ಅಪ್ರಮೇಯವಾದ ವಾಯುಮಾರ್ಗದಲ್ಲಿ ಸಂಚರಿಸಿದನು. ಆಗ ವೈರಿವೀರರನ್ನು ಸಂಹರಿಸುವ ಸಾಮರ್ಥ್ಯವುಳ್ಳವನೂ, ಮಹಾ ಪರಾಕ್ರಮಶಾಲಿಯಾದವನೂ ಆದ ಆ ಇಂದ್ರಜಿತ್ತುವು ಬಹಳ ಉದ್ದವಾದ ಮೊನಚಾದ ಕಬ್ಬಿಣದಅಲಗುಗಳುಳ್ಳುದಾಗಿ, ಸೊಗಸಾದ ಗರಿಗಳಿಂದಲೂ, ಚಿನ್ನದ ಕಟ್ಟುಗಳಿಂದಲೂ ಕೂಡಿ ಡೊಂಕುಡೊಂಕಾಗಿರುವ, ವಜ್ರಾಯುಧಕ್ಕೆ ಸಮಾನವಾದ ವೇಗವುಳ್ಳಅನೇಕಬಾಣಗಳನ್ನುಆಂಜನೇಯಮೇಲೆ ಪ್ರಯೋಗಿಸಿದನು. ಆಂಜನೇಯನಾದರೋ, ಆ ಇಂದ್ರಜಿತ್ತುವಿನ ರಥಧ್ವನಿಯನ್ನೂ, ಭೇರೀಮೃದಂಗಪಟಹಗಳ ಧ್ವನಿಯನ್ನೂ, ಧನುಷ್ಟಂಕಾರವನ್ನೂ ಕೇಳಿ ಮರಳಿಯೂ ಗಗನಕ್ಕೆ ಹಾರಿದನು. ॥೨೬–೩೦॥ ಆ ವಾನರೋತ್ತಮನು ಗುರಿಯಿಟ್ಟು ಹೊಡೆಯುವುದರಲ್ಲಿ ಮಹಾಪ್ರಸಿದ್ಧನಾದ ಆ ಇಂದ್ರಜಿತ್ತುವಿನ ಗುರಿಯನ್ನು ವ್ಯರ್ಥಗೊಳಿಸುತ್ತ ಆಕಾಶಮಾರ್ಗದಲ್ಲಿ ಬಹು ವೇಗದಿಂದ ಬಾಣಗಳ ಸಂದುಗಳಲ್ಲಿಯೇ ಸಂಚರಿಸುತ್ತಿದ್ದನು. ಹೀಗೆ ಆಂಜನೇಯನು ಆ ಇಂದ್ರಜಿತ್ತುವಿನ ಬಾಣಗಳಿಗೆ ಮೊದಲು ಎದುರಾಗುತ್ತ ಪುನಃ ಅವನು ಪ್ರಯೋಗಿಸಿದೊಡನೆಯೇ ಕೈಗಳನ್ನು ಚಾಚಿ ಆಕಾಶಕ್ಕೆ

ಹನುಮಾನುತ್ಪಪಾತಾನಿಲಾತ್ಮಜಃ ‖ ೩೨ ‖ ತಾವುಭೌ ವೇಗಸಂಪನ್ನೌ ರಣಕರ್ಮ ವಿಶಾರದೌ । ಸರ್ವಭೂತಮನೋಗ್ರಾಹಿ ಚಕ್ರತುರ್ಯುದ್ಧಮುದ್ಭುತಂ ‖ ೩೩ ‖ ಹನೂಮತೋ ವೇದ ನ ರಾಕ್ಷಸೋಽಂತರಂ ನಮಾರುತಿಸ್ತಸ್ಯ ಮಹಾತ್ಮನೋಽಂತರಮ್ । ಪರಸ್ಪರಂ ನಿರ್ವಿಷಹೌ ಬಭೂವತುಸ್ಸಮೇತ್ಯ ತೌ ದೇವಸಮಾನವಿಕ್ರಮೌ ‖ ೩೪ ‖ ತತಸ್ತು ಲಕ್ಷ್ಯೇ ಸ ವಿಹನ್ಯಮಾನೇ ಶರೇಷ್ವಮೋಘೇಷು ಚ ಸಂಪತತ್ಸು । ಜಗಾಮ ಚಿಂತಾಂ ಮಹತೀಂ ಮಹಾತ್ಮಾ ಸಮಾಧಿಸಂಯೋಗಸಮಾಹಿತಾತ್ಮಾ ‖ ೩೫ ‖ ತತೋ ಮತಿಂ ರಾಕ್ಷಸರಾಜಸೂನುಶ್ಚಕಾರ ತಸ್ಮಿನ್ ಹರಿವೀರಮುಖ್ಯೇ । ಅವಧ್ಯತಾಂ

ಬಾಣಗಳ, ಅಗ್ರತಃ - ಮುಂಗಡೆ, ಸಮಭಿವರ್ತತ - ನಿಂತುಕೊಂಡನು, ಪುನಃ - ಪುನಃ, ಉತ್ಪಪಾತ - ಹಾರಿದನು. ‖ ೩೨ ‖ ರಣ....ದೌ-ಯುದ್ಧಕಾರ್ಯದಲ್ಲಿ ಸಮರ್ಥರಾದ, ವೇಗಸಂಪನ್ನೌ-ವೇಗದಿಂದೊಡಗೂಡಿದ, ತಾವುಭೌ - ಅವರಿಬ್ಬರೂ, ಸರ್ವ....ಹಿ - ಸರ್ವಭೂತಗಳಿಗೂ ಮನೋಹರವಾದ, ಉತ್ತಮಂ-ಉತ್ಕೃಷ್ಟವಾದ, ಯುದ್ಧಂ - ಕಾಳಗವನ್ನು, ಚಕ್ರತುಃ - ಮಾಡಿದರು. ‖ ೩೩ ‖ ರಾಕ್ಷಸಃ - ರಾಕ್ಷಸನಾದ ಇಂದ್ರಜಿತುವು, ಹನೂಮತಃ - ಆಂಜನೇಯನ, ಅಂತರಂ - ರಂಧ್ರವನ್ನು, ನವೇದ - ತಿಳಿಯಲಿಲ್ಲ, ಮಾರುತಿಃ-ಆಂಜನೇಯನು, ಮಹಾತ್ಮನಃ-ಮಹಾ ಧೈರ್ಯವಂತನಾದ, ತಸ್ಯ-ಆ ಇಂದ್ರಜಿತುವಿನ, ಅಂತರಂ - ಮರ್ಮವನ್ನು, ನವೇದ - ಅರಿಯದಿದ್ದನು, ದೇವ....ಮೌ - ದೇವತೆಗಳಿಗೆ ಸಮಾನವಾದ ಪರಾಕ್ರಮವುಳ್ಳ, ತೌ - ಅವರಿಬ್ಬರೂ, ಪರಸ್ಪರಂ - ಒಬ್ಬರಿಗೊಬ್ಬರು, ಸಮೇತ್ಯ - ಸೇರಿ, ನಿರ್ವಿಷಹೌ - ಸೈರಿಸಲಸಾಧ್ಯರೂ, ಬಭೂವತುಃ - ಆದರು. ‖ ೩೪ ‖ ತತಃ - ಬಳಿಕ, ಅಮೋಘೇಷು - ವ್ಯರ್ಥವಾಗದಿರುವ, ಶರೇಷು - ಬಾಣಗಳು, ಸಂಪತತ್ಸ್ವಪಿ - ಬೀಳುತ್ತಲಿದ್ದಾಗ್ಯೂ, ಲಕ್ಷ್ಯೇ - ಲಕ್ಷ್ಯಭೂತನಾದ ಆಂಜನೇಯನು, ವಿಹನ್ಯಮಾನೇ ಬಾಣಗಳಿಂದ ಭೇದಿಸಲ್ಪಡದಿರಲು, ಸಮಾ....ತ್ಮಾ - ಲಕ್ಷ್ಯದಲ್ಲಿ ಬಾಣಸಂಧಾನದಲ್ಲಿ ನ್ಯಸ್ತಚಿತ್ತನಾದ, ಮಹಾತ್ಮಾ-ಮಹಾ ಮನಸ್ವಿಯಾದ ಇಂದ್ರಜಿತ್ತುವು, ಮಹತೀಂಚಿಂತಾಂ - ಮಹದಾಲೋಚನೆಯನ್ನು, ಜಗಾಮ - ಹೊಂದಿದನು. ‖ ೩೫ ‖ ತತಃ - ಬಳಿಕ, ರಾಕ್ಷ....ನುಃ - ರಾವಣನ ಪುತ್ರನು, ತಸ್ಯಕಪೇಃ - ಆ ವಾನರನ, ಅವಧ್ಯತಾಂ - ವಧಿಸಲಸಾಧ್ಯತೆಯನ್ನು, ಸಮೀಕ್ಷ್ಯ - ಕಂಡು, ಕಥಂನಿಗಚ್ಛೇತ್ - ಹೇಗೆ ನಿಗ್ರಹವನ್ನು ಹೊಂದಿಯಾನು, ಇತಿ -

ಹಾರುತ್ತ ಚಿತ್ರಗತಿಯಿಂದ ಸಂಚರಿಸುತ್ತಿದ್ದನು. ಈ ಪ್ರಕಾರವಾಗಿ ಯದ್ಧಕಾರ್ಯದಲ್ಲಿ ಮಹಾ ನಿಪುಣನಾಗಿರುವ ಆ ಇಂದ್ರಜಿತುವೂ, ಆಂಜನೇಯ ಮಾಡುತ್ತಿದ್ದ ಯುದ್ಧವನ್ನವಲೋಕಿಸಿ, ಸಮಸ್ತ ಭೂತಗಳೂ ಸಂತೋಷಪಟ್ಟವು. ಆ ಸಮಯದಲ್ಲಿ ವೀರನಾದ ಇಂದ್ರಜಿತುವೂ ಆಂಜನೇಯನ ಮರ್ಮವನ್ನರಿಯದೇ ಹೋದನು. ಕಪಿವೀರನಾದ ಆಂಜನೇಯನೂ ಇಂದ್ರಜಿತುವಿನ ಮರ್ಮವನ್ನರಿಯದೇ ಹೋದನು. ದೇವತೆಗಳಿಗೆ ಸಮಾನವಾದ ಪರಾಕ್ರಮವುಳ್ಳ ಆ ಇಂದ್ರಜಿತುವೂ, ಆಂಜನೇಯನೂ ಒಬ್ಬರನೊಬ್ಬರು ಜಯಿಸಲಪೇಕ್ಷಿಸಿದವರಾದರೂ ಯಾರೂ ಜಯಶಾಲಿಗಳಾಗದೇ ಹೋದರು. ಗುರಿಯಿಡುವುದರಲ್ಲಿಯೂ, ಬಾಣಸಂಧಾನ ಮಾಡುವುದರಲ್ಲಿಯೂ ಬಹಳ ಸಾಮರ್ಥ್ಯವುಳ್ಳ ಇಂದ್ರಜಿತುವು ಅಮೋಘವಾದ ತನ್ನ ಬಾಣಗಳು ವ್ಯರ್ಥವಾಗುತ್ತಿರುವುದನ್ನು ನೋಡಿ ಬಹಳ ಚಿಂತಾಕ್ರಾಂತನಾದನು. ‖ ೩೧-೩೫ ‖ ರಾಕ್ಷಸರಾಜನಾದ ರಾವಣನ ಮಗನಾದ ಆತನು ಹೀಗೆ ಬಹಳ ಹೊತ್ತು ಚಿಂತಿಸುತ್ತಿದ್ದು ಆಂಜ

ತಸ್ಯ ಕಪೇಸ್ಸಮೀಕ್ಷ್ಯ ಕಥಂ ನಿಗಚ್ಛೇದಿತಿ ನಿಗ್ರಹಾರ್ಥಂ ॥ ೩೬ ॥ ತತಃ ಪೈತಾಮಹಂ ವೀರಸ್ಸೋಽಸ್ತ್ರಮಸ್ತ್ರವಿದಾಂವರಃ । ಸಂದಧೇ ಸುಮಹಾತೇಜಾಸ್ತಂ ಹರಿಪ್ರವರಂ ಪ್ರತಿ ॥ ೩೭ ॥ ಅವಧ್ಯೋಽಯಮಿತಿ ಜ್ಞಾತ್ವಾ ತಮಸ್ತ್ರೇಣಾಸ್ತ್ರತತ್ವವಿತ್ । ನಿಜಗ್ರಾಹ ಮಹಾಬಾಹುರ್ಮಾರುತಾತ್ಮಜಮಿಂದ್ರಜಿತ್ ॥ ೩೮ ॥ ತೇನಬದ್ಧಸ್ತತೋಽಸ್ತ್ರೇಣ ರಾಕ್ಷಸೇನ ಸವಾನರಃ । ಅಭವನ್ನಿರ್ವಿಚೇಷ್ಟಶ್ಚ ಪಪಾತಚ ಮಹೀತಲೇ ॥ ೩೯ ॥ ತತೋಽಥ ಬುದ್ಧ್ವಾ ಸತದಾಸ್ತ್ರಬಂಧಂ ಪ್ರಭೋಃ ಪ್ರಭಾವಾದ್ವಿಗತಾತ್ಮವೇಗಃ । ಪಿತಾಮಹಾನುಗ್ರಹಮಾತ್ಮನಶ್ಚ ವಿಚಿಂತಯಾಮಾಸ ಹರಿಪ್ರವೀರಃ ॥ ೪೦ ॥ ತತಸ್ಸ್ವಾಯಂಭುವೈ

ಹೀಗೆಂದು, ನಿಗ್ರಹಾರ್ಥಂ - ನಿಗ್ರಹಕ್ಕೋಸ್ಕರ, ತಸ್ಮಿ....ಖ್ಯೇ - ಆ ಕಪಿಶ್ರೇಷ್ಠನಾದ ಆಂಜನೇಯನ ವಿಷಯವಾಗಿ, ಮತಿಂ - ಬುದ್ಧಿಯನ್ನು, ಚಕಾರ - ಮಾಡಿದನು. ॥೩೬॥ ತತಃ - ಬಳಿಕ, ಅಸ್ತ್ರವಿದಾಂ- ಅಸ್ತ್ರಜ್ಞರಲ್ಲಿ, ವರಃ - ಶ್ರೇಷ್ಠನಾದ, ಸುಮಹಾತೇಜಾಃ - ಬಹು ಪರಾಕ್ರಮಿಯಾದ, ವೀರಃ - ಶೂರನಾದ, ಸಃ - ಆ ಇಂದ್ರಜಿತ್ತು, ತಂಹ....ತಿ - ಆ ಹರಿಶ್ರೇಷ್ಠನನ್ನು ಕುರಿತು, ಪೈತಾಮಹಂ - ಬ್ರಹ್ಮ ಸಂಬಂಧವಾದ, ಅಸ್ತ್ರಂ - ಅಸ್ತ್ರವನ್ನು, ಸಂದಧೇ - ಸಂಧಾನ ಮಾಡಿದನು. ॥೩೭॥ ಅಸ್ತ್ರತತ್ವವಿತ್ - ಅಸ್ತ್ರದ ಯಾಥಾರ್ಥ್ಯವನ್ನರಿತಿರುವ, ಮಹಾಬಾಹುಃ - ಮಹಾ ಭುಜಗಳುಳ್ಳ, ಇಂದ್ರಜಿತ್ - ಇಂದ್ರಜಿತುವು, ಅಯಂ - ಈ ಹನುಮಂತನು, ಅವಧ್ಯ ಇತಿ - ಇತರ ಅಸ್ತ್ರಗಳಿಂದ ವಧಾರ್ಹನಲ್ಲವೆಂದು, ಜ್ಞಾತ್ವಾ - ತಿಳಿದು, ತಂಮಾರುತಾತ್ಮಜಂ - ಆ ವಾಯುಪುತ್ರನನ್ನು, ಅಸ್ತ್ರೇಣ - ಬ್ರಹ್ಮಾಸ್ತ್ರದಿಂದ, ಜಗ್ರಾಹ - ಗ್ರಹಿಸಿದನು. ॥೩೮॥ ತತಃ - ಬಳಿಕ, ರಾಕ್ಷಸೇನ - ಇಂದ್ರಜಿತುವಿನಿಂದ, ತೇನಾಸ್ತ್ರೇಣ - ಆ ಬ್ರಹ್ಮಾಸ್ತ್ರದಿಂದ, ಬದ್ಧಃ - ಕಟ್ಟಲ್ಪಟ್ಟ, ಸವಾನರಃ - ಆ ಆಂಜನೇಯನು, ನಿರ್ವಿಚೇಷ್ಟಃ - ಚೇಷ್ಟಾರಹಿತನು, ಅಭವತ್ - ಆದನು, ಮಹೀತಲೇಚ - ಭೂಮಿಯಲ್ಲಿ, ಪಪಾತ - ಬಿದ್ದನು. ॥೩೯॥ ಅಥ - ಬಳಿಕ, ಸಹ....ರಃ - ಆ ಕಪಿಶ್ರೇಷ್ಠನು, ತದಾ - ಆ ಕಾಲದಲ್ಲಿ, ತತಃ - ಆ ಇಂದ್ರಜಿತ್ತಿನ ದೆಶೆಯಿಂದ, ಅಸ್ತ್ರಬಂಧಂ - ಅಸ್ತ್ರದ ಕಟ್ಟನ್ನು, ಬುದ್ಧ್ವಾ - ತಿಳಿದು, ಪ್ರಭೋಃ - ಲೋಕಸ್ವಾಮಿಯಾದ ಬ್ರಹ್ಮನ, ಪ್ರಭಾವಾತ್ - ಮಹಾತ್ಮ್ಯದಿಂದ, ವಿಗ....ಗಃ - ಕುಗ್ಗಿದ ವೇಗವುಳ್ಳವನಾಗಿ, ಆತ್ಮನಶ್ಚ - ತನಗೂ, ಪಿತಾ....ಹಂ - ಬ್ರಹ್ಮರವನ್ನು, ವಿಚಿಂತಯಾಮಾಸ - ಯೋಚನೆ ಮಾಡಿದನು.

ನೇಯನನ್ನು ಸಂಹರಿಸುವ ಉಪಾಯವನ್ನು ಕಾಣದೆ, 'ಇವನನ್ನು ನಾನು ಕೊಲ್ಲಲಾರೆ' ನೆಂದು ನಿಶ್ಚಯಿಸಿಕೊಂಡು ಆತನನ್ನು ಬಂಧಿಸುವ ಉಪಾಯವನ್ನು ಯೋಚಿಸಿದನು. ಆ ಬಳಿಕ ಮಹಾ ಪರಾಕ್ರಮಶಾಲಿಯೂ, ಅಸ್ತ್ರವೇತ್ತರಲ್ಲಿ ಮಹಾಪಂಡಿತನೂ, ತೇಜಸ್ವಿಯೂ ಆದ ಆ ಇಂದ್ರಜಿತ್ತು ಆ ವಾನರೋತ್ತಮನಮೇಲೆ ಪ್ರಯೋಗಿಸಲು ಬ್ರಹ್ಮಾಸ್ತ್ರವನ್ನು ಸಂಧಿಸಿದನು. ಹೀಗೆ ಆ ಬ್ರಹ್ಮಾಸ್ತ್ರವನ್ನು ಸಂಧಿಸಿದ ಬಳಿಕ, ಅಸ್ತ್ರಮರ್ಮಗಳನ್ನು ಚೆನ್ನಾಗಿ ತಿಳಿದ ಮಹಾಬಾಹುವಾದ ಆ ಇಂದ್ರಜಿತ್ತು ಆಂಜನೇಯನನ್ನು ಸಂಹರಿಸಲಸಾಧ್ಯವೆಂದರಿತು ಅದನ್ನು ಪ್ರಯೋಗಿಸಿ ಅವನನ್ನು ಬಂಧಿಸಿದನು. ಆಗ ವಾನರೋತ್ತಮನಾದ ಆಂಜನೇಯನು ರಾಕ್ಷಸಶ್ರೇಷ್ಠನಾದ ಇಂದ್ರಜಿತ್ತಿನ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದು ನಿಶ್ಚೇಷ್ಟಿತನಾಗಿ ನೆಲಕ್ಕೆ ಬಿದ್ದನು. ಆತನು ತಾನು ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದಿರುವುದನ್ನು ತಿಳಿದು, ಬ್ರಹ್ಮನ ಪ್ರಭಾವದಿಂದ ನಿಶ್ಚೇಷ್ಟಿತನಾಗಿ, ವೇಗವು ತಗ್ಗಿದವನಾಗಿ ಪೂರ್ವದಲ್ಲಿ ಬ್ರಹ್ಮನು ತನಗಿತ್ತ ವರವನ್ನು ಸ್ಮರಿಸಿ

ರ್ಮಂತ್ರೈರ್ಬ್ರಹ್ಮಾಸ್ತ್ರಮಭಿಮಂತ್ರಿತಂ । ಹನೂಮಾಂಶ್ಚಿಂತಯಾಮಾಸ ವರದಾನಂ ಪಿತಾಮಹಾತ್ ॥೪೧॥ ನಮೇಽಸ್ತ್ರಬಂಧಸ್ಯಚ ಶಕ್ತಿರಸ್ತಿ ವಿಮೋಕ್ಷಣೇ ಲೋಕಗುರೋಃ ಪ್ರಭಾವಾತ್ । ಇತ್ಯೇವಮತ್ವಾ ವಿಹಿತೋಽಸ್ತ್ರಬಂಧೋ ಮಯಾತ್ಮಯೋನೇರನುವರ್ತಿತವ್ಯಃ ॥ ೪೨ ॥ ಸವೀರ್ಯಮಸ್ತ್ರಸ್ಯ ಕಪಿರ್ವಿಚಾರ್ಯ ಪಿತಾಮಹಾನುಗ್ರಹಮಾತ್ಮನಶ್ಚ । ವಿಮೋಕ್ಷಶಕ್ತಿಂ ಪರಿಚಿಂತಯಿತ್ವಾ ಪಿತಾಮಹಾಜ್ಞಾಮನುವರ್ತತೇಸ್ಮ ॥೪೩॥ ಅಸ್ತ್ರೇಣಾಪಿಹಿ ಬದ್ಧಸ್ಯ ಭಯಂ ಮಮ ನಜಾಯತೇ । ಪಿತಾಮಹಮಹೇಂದ್ರಾಭ್ಯಾಂ

॥೪೦॥ ತತಃ - ಬಳಿಕ, ಹನೂಮಾನ್ - ಆಂಜನೇಯನು, ಸ್ವಾಯಂಭುವೈಃ - ಬ್ರಹ್ಮದೇವತಾಕವಾದ, ಮಂತ್ರೈಃ - ಮಂತ್ರಗಳಿಂದ, ಅಭಿಮಂತ್ರಿತಂ - ಮಂತ್ರಿಸಲ್ಪಟ್ಟ, ಬ್ರಹ್ಮಾಸ್ತ್ರಂ - ಬ್ರಹ್ಮಾಸ್ತ್ರವನ್ನು, (ವಿಜ್ಞಾಯ - ತಿಳಿದು), ಪಿತಾಮಹಾತ್ - ಬ್ರಹ್ಮನಿಂದ, ವರದಾನಂ - ವರಪ್ರದಾನವನ್ನೂ ಕೂಡ, ಚಿಂತಯಾಮಾಸ - ಯೋಚಿಸಿದನು. ॥ ೪೧ ॥ ಮೇ - ನನಗೆ, ಲೋಕಗುರೋಃ - ಜಗದ್ಗುರುವಾದ ಬ್ರಹ್ಮನ, ಪ್ರಭಾವಾತ್ - ಮಹಾತ್ಮ್ಯದಿಂದ, ಅಸ್ತ್ರಬಂಧಸ್ಯ - ಬ್ರಹ್ಮಾಸ್ತ್ರಬಂಧನದ, ವಿಮೋಕ್ಷಣೇ - ಬಿಡುಗಡೆಯಲ್ಲಿ, ಶಕ್ತಿಃ - ಸಾಮರ್ಥ್ಯವು, ನಾಸ್ತಿ - ಇಲ್ಲ, ಇತ್ಯೇವ - ಹೀಗೆಂದು, ಮತ್ವಾ - ಅರಿತು, ವಿಹಿತಃ - ಮಾಡಲ್ಪಟ್ಟಿತು, ಆತ್ಮಯೋನೇಃ - ಬ್ರಹ್ಮನ, ಅಸ್ತ್ರಬಂಧಃ - ಅಸ್ತ್ರಬಂಧನವು, ಮಯಾ - ನನ್ನಿಂದ, ಅನುವರ್ತಿತವ್ಯಃ - ಅನುಸರಿಸತಕ್ಕುದು. ॥ ೪೨ ॥ ಸಕಪಿಃ - ಆ ವಾನರನು, ಅಸ್ತ್ರಸ್ಯ - ಅಸ್ತ್ರದ, ವೀರ್ಯಂ - ಶಕ್ತಿಯನ್ನು, ವಿಚಾರ್ಯ - ವಿಮರ್ಶೆಮಾಡಿ, ಆತ್ಮನಃ - ತನಗೆ, ಪಿತಾ....ಹಂ- ಬ್ರಹ್ಮನ ಪ್ರಸಾದವನ್ನೂ, ವಿಮೋ....ಚ-ಬಿಡುಗಡೆಯ ಸಾಮರ್ಥ್ಯವನ್ನೂ, ಪರಿ....ತ್ವಾ-ಆಲೋಚಿಸಿ, ಪಿತಾ....ಜ್ಞಾಂ - ಬ್ರಹ್ಮಾಜ್ಞೆಯನ್ನು, ಅನುವರ್ತತೇಸ್ಮ - ಅನುಸರಿಸಿದನು. ॥ ೪೩ ॥ ಅಸ್ತ್ರೇಣ - ಅಸ್ತ್ರದಿಂದ, ಬದ್ಧಸ್ಯಾಪಿ - ಕಟ್ಟಲ್ಪಟ್ಟಾಗ್ಯೂ, ಪಿತಾ....ಭ್ಯಾಂ - ಬ್ರಹ್ಮೇಂದ್ರರಿಂದಲೂ, ಅನಿಲೇನಚ- ವಾಯುವಿನಿಂದಲೂ, ರಕ್ಷಿತಸ್ಯ-ಪಾಲಿತನಾದ, ಮಮ-ನನಗೆ, ಭಯಂ-ಭೀತಿಯು, ನಜಾಯತೇಹಿ-

ಕೊಂಡನು. ಈ ಪ್ರಕಾರವಾಗಿ ಮಹಾತ್ಮನಾದ ಹನುಮಂತನು, ಮಹಾ ಬುದ್ಧಿಶಾಲಿಯಾದ ಇಂದ್ರಜಿತ್ತು ಸ್ವಾಯಂಭುವ ಮಂತ್ರಗಳಿಂದ ಅಭಿಮಂತ್ರಿತವಾದ ಈ ಬ್ರಹ್ಮಾಸ್ತ್ರವನ್ನು ತನ್ನಮೇಲೆ ಪ್ರಯೋಗಿಸುವುದನ್ನು ತಿಳಿದು ತನ್ನಲ್ಲಿ ತಾನು, “ಲೋಕಗುರುವಾದ ಬ್ರಹ್ಮದೇವನ ಪ್ರಭಾವಸಮನ್ವಿತವಾದ ಈ ಬ್ರಹ್ಮಾಸ್ತ್ರದ ಕಟ್ಟನ್ನು ಬಿಡಿಸಿಕೊಳ್ಳುವುದಕ್ಕೆ ಈಗ ನನ್ನಿಂದಾಗುವುದಿಲ್ಲ. ಇಂದ್ರಜಿತ್ತೂ ಸಹ ಈ ವಿಷಯವನ್ನರಿತೇ ಇದನ್ನು ನನ್ನಮೇಲೆ ಪ್ರಯೋಗಿಸಿರುವನು. ಈ ಅಸ್ತ್ರವು ಬ್ರಹ್ಮದೇವನದಾದುದರಿಂದ ಸ್ವಲ್ಪಕಾಲದವರೆಗೂ ಇದಕ್ಕೆ ಕಟ್ಟುಬೀಳುವುದೇ ಉಚಿತವಾದುದು” ಎಂದು ನಿಶ್ಚಯಿಸಿದನು. ॥ ೩೬—೪೨ ॥ ಈ ರೀತಿ ಆ ಹನುಮಂತನು ಬ್ರಹ್ಮಾಸ್ತ್ರದ ವೀರ್ಯವನ್ನೂ, ಅದು ಒಂದು ಮುಹೂರ್ತದ ಬಳಿಕ ತನ್ನನ್ನು ಬಿಟ್ಟು ಹೋಗುವುದಾಗಿ ಹಿಂದೆ ಬ್ರಹ್ಮನು ತನಗೆ ವರದಾನ ಮಾಡಿರುವುದನ್ನೂ ನೆನೆದು, ಆ ಬ್ರಹ್ಮನ ಆಜ್ಞಾನುಸಾರ ಅದಕ್ಕೆ ಬದ್ಧನಾಗಿ ಪುನಃ ಹೀಗೆ ಆಲೋಚಿಸಿದನು. “ನಾನು ಬ್ರಹ್ಮಾಸ್ತ್ರಬದ್ಧನಾಗಿದ್ದರೂ, ಬ್ರಹ್ಮದೇವನೂ, ದೇವೇಂದ್ರನೂ, ನನ್ನ ತಂದೆಯಾದ ವಾಯುದೇವನೂ ನನ್ನ ರಕ್ಷಣಭಾರವನ್ನು ಹೊತ್ತಿರುವುದರಿಂದ ನನಗಾವ ಭಯವೂ ಇಲ್ಲವು. ಒಂದುವೇಳೆ ಈ ರಾಕ್ಷಸರು ನನ್ನನ್ನು ಹಿಡಿದುಕೊಂಡು ಹೋದರೂ

ರಕ್ಷಿತಸ್ಯಾಽನಿಲೇನಚ ॥೪೪॥ ಗ್ರಹಣೇಚಾಪಿ ರಕ್ಷೋಭಿರ್ಮಹಾನ್ಮೇ ಗುಣದರ್ಶನಃ। ರಾಕ್ಷಸೇಂದ್ರೇಣ ಸಂವಾದಸ್ತಸ್ಮಾದ್ಗೃಹ್ಣಂತು ಮಾಂ ಪರೇ'' ॥ ೪೫ ॥ ಸನಿಶ್ಚಿತಾರ್ಥಃ ಪರವೀರಹಂತಾ ಸಮೀಕ್ಷ್ಯ ಕಾರೀ ವಿನಿವೃತ್ತಚೇಷ್ಟಃ। ಪರೈಃ ಪ್ರಸಹ್ಯಾಭಿಗತೈರ್ನಿಗೃಹ್ಯ ನನಾದ ತೈಸ್ತೈಃ ಪರಿಭರ್ತ್ಸ್ಯಮಾನಃ ॥ ೪೬ ॥ ತತಸ್ತಂ ರಾಕ್ಷಸಾ ದೃಷ್ಟ್ವಾ ನಿರ್ವಿಚೇಷ್ಟಮರಿಂದಮಂ। ಬಬಂಧುಶ್ಶಣವಲ್ಕೈಶ್ಚ ದ್ರುಮಚೀರೈಶ್ಚ ಸಂಹತೈಃ ॥ ೪೭ ॥ ಸರೋಚಯಾಮಾಸ ಪರೈಶ್ಚಬಂಧನಂ ಪ್ರಗೃಹ್ಯವೀರೈ ರಭಿನಿಗ್ರಹಂಚ। "ಕೌತೂ

ಇಲ್ಲವಷ್ಟೆ. ॥ ೪೪ ॥ ರಕ್ಷೋಭಿಃ - ರಕ್ಕಸರಿಂದ, ಗ್ರಹಣೇಚಾಪಿ - ಹಿಡಿಯುಕೆಯಲ್ಲಿಯೂ, ಮೇ - ನನಗೆ, ಮಹಾ್ - ದೊಡ್ಡ, ಗುಣದರ್ಶನಃ - ಗುಣವುಂಟು, ರಾಕ್ಷಸೇಂದ್ರೇಣ - ರಾವಣನೊಡನೆ, ಸಂವಾದಃ - ಸಂಭಾಷಣವು, (ಭವತಿ - ಆಗುವದು), ತಸ್ಮಾತ್ - ಆ ಕಾರಣದಿಂದ, ಪರೇ - ಹಗೆಯರು, ಮಾಂ-ನನ್ನನ್ನು, ಗೃಹ್ಣಂತು-ಹಿಡಿದುಕೊಂಡು ಹೋಗಲಿ. ॥ ೪೫ ॥ ಇತಿ-ಇಂತೆಂದು, ಸಿಶ್ಚಿತಾರ್ಥಃ-ಸಿರ್ಧಾರಮಾಡಲ್ಪಟ್ಟ ಪ್ರಯೋಜನವುಳ್ಳ, ಪರ....ತಾ - ಶತ್ರುಶೂರರನ್ನು ನಾಶಮಾಡುವ, ಸಮೀಕ್ಷ್ಯ ಕಾರೀ - ವಿಮರ್ಶಿಸಿ ಕಾರ್ಯವನ್ನು ಮಾಡುತ್ತಿರುವ, ವಿನಿ....ಷ್ಟಃ - ಹೋಗಲಾಡಿಸಲ್ಪಟ್ಟ ಚಲಸವುಳ್ಳ, ಸಃ - ಆ ಆಂಜನೇಯನು, ಅಭಿಗತೈಃ - ಎಲ್ಲಾ ಕಡೆಯಲ್ಲಿಯೂ ಸುತ್ತಿಕೊಂಡಿರುವ, ತೈಸ್ತೈಪರೈಃ - ಆ ಆ ಶತ್ರುಗಳಿಂದ, ಪ್ರಸಹ್ಯ - ಬಲಾತ್ಕರಿಸಿ, ನಿಗೃಹ್ಯ - ಬಂಧಿಸಿ, ಪರಿ....ನಃ - ಹೆದರಿಸಲ್ಪಟ್ಟವನಾಗಿ, ನನಾದ - ಕೂಗಿದನು. ॥ ೪೬ ॥ ತತಃ - ಬಳಿಕ, ರಾಕ್ಷಸಾಃ - ರಕ್ಕಸರು, ನಿರ್ವಿಚೇಷ್ಟಂ - ನಿರ್ವ್ಯಾಪಾರನಾದ, ಅರಿಂದಮಂ-ಶತ್ರುನಾಶಕನಾದ, ತಂ-ಆ ಕಪಿಯನ್ನು, ಸಂಹತೈಃ-ಹಣಿದಿರುವ, ಶಣವಲ್ಕೈಃ - ಸಣಬುನಾರುಗಳಿಂದಲೂ, ದ್ರುಮಚೀರೈಶ್ಚ - ಗಿಡದ ನಾರುಗಳಿಂದಲೂ, ಬಬಂಧುಃ - ಕಟ್ಟಿದರು. ॥ ೪೭ ॥ ರಾಕ್ಷಸೇಂದ್ರಃ - ರಾವಣನು, ಕೌತೂಹಲಾತ್ - ಕುತೂಹಲದಿಂದ, ಮಾಂ - ನನ್ನನ್ನು, ದ್ರಷ್ಟುಂಯದಿ - ನೋಡುವದಕ್ಕಾದರೆ, ವ್ಯವಸ್ಯೇತ್ - ಯತ್ನಿಸಿರುವನು, ಇತಿ - ಇಂತೆಂದು, ನಿಶ್ಚಿತಾರ್ಥಃ - ನಿಶ್ಚಿತ ಪ್ರಯೋಜನವುಳ್ಳವನಾಗಿ, ಸಃ - ಆ ಆಂಜನೇಯನು, ಪರೈಃ - ಶತ್ರುಗಳಿಂದ,

---

ಅದರಿಂದಲೂ ನನಗೆ ಗುಣವೇ ಉಂಟು. ನಾನು ರಾಕ್ಷಸೇಶ್ವರನಾದ ರಾವಣನೊಡನೆ ಮಾತನಾಡಿ ಬರಬೇಕೆಂದಿರುವನು. ಆದುದರಿಂದ ಶತ್ರುಗಳು ನನ್ನನ್ನು ಹಿಡಿಯಲಿ. ಇವರು ನನ್ನನ್ನು ಅಲ್ಲಿಗೆ ಹಿಡಿದುಕೊಂಡು ಹೋದರೆ ಆಗ ನನ್ನ ಉದ್ದೇಶವೂ ಸುಲಭವಾಗಿಯೇ ಕೈಗೂಡುವುದು." ॥ ೪೩–೪೫ ॥ ಈ ಪ್ರಕಾರ ಶತ್ರುಮರ್ದನನಾದ ಆ ಹನುಮಂತನು, ಕೈಕಾಲುಗಳುಡುಗಿದವನಂತೆ ನಿಶ್ಚೇಷ್ಟನಾಗಿರಲು, ಶತ್ರುಗಳಾದ ಆ ರಾಕ್ಷಸರೆಲ್ಲರೂ ಅವನ ಸುತ್ತಲೂ ಮುತ್ತಿಕೊಂಡು ಅವನನ್ನು ಗದರಿಸಿ ಹೆದರಿಸುತ್ತಿದ್ದರು. ದೂರದರ್ಶಿಯಾದ ಹನುಮಂತನೂ ಸಹ ಅವರ ಬೆದರಿಕೆಯ ಗರ್ಜನೆಗಳನ್ನು ಕೇಳಿ ಆಗಾಗ್ಗೆ ಸಿಂಹನಾದ ಮಾಡುತ್ತಿದ್ದನು. ಹೀಗೆ ನಿಶ್ಚೇಷ್ಟಿತನಾಗಿರುವ ಹನುಮಂತನನ್ನು ನೋಡಿ ಆ ರಾಕ್ಷಸರೆಲ್ಲರೂ ಸಂತೋಷದಿಂದುಬ್ಬಿ ಸಣಬುಗಳಿಂದಲೂ, ಮರದ ನಾರುಗಳಿಂದಲೂ ಬಿಗಿಯಾಗಿ ಹಣೆದು ಹುರಿಮಾಡಿದ ಹಗ್ಗಗಳಿಂದ ಅವನನ್ನು ವಿಧವಿಧವಾಗಿ ಬೈದು ಬಿಗಿಯುತ್ತಿದ್ದರು. ಆಗ ಹನುಮಂತನು ತನ್ನಲ್ಲಿ ತಾನೇ, "ಆಹಾ! ಈ ನಿಮಿತ್ತದಿಂದಲಾದರೂ ರಾವಣನು ನನ್ನನ್ನು ಆಸೆಯಿಂದ ಕರೆಯಿಸಿ ನೋಡುವಂತಾಯಿತಲ್ಲವೆ?" ಎಂದು ಸಂತೋಷಪಟ್ಟುಕೊಂಡು

ಹಲಾನ್ನಾಂ ಯದಿ ರಾಕ್ಷಸೇಂದ್ರೋ ದ್ರಷ್ಟುಂ ವ್ಯವಸ್ಯೇ'' ದಿತಿ ನಿಶ್ಚಿತಾರ್ಥಃ ॥೪೮॥ ಸಬದ್ಧಸ್ತೇನ ವಲ್ಕೇನವಿಮುಕ್ತೋಽಸ್ತ್ರೇಣವೀರ್ಯವಾನ್ । ಅಸ್ತ್ರಬಂಧಸ್ಸಚಾನ್ಯಂ ಹಿ ನಬಂಧಮನುವರ್ತತೇ ॥೪೯॥ ಅಥೇಂದ್ರಜಿತ್ತಂ ದ್ರುಮಚೀರಬದ್ಧಂ ವಿಚಾರ್ಯ ವೀರಃ ಕಪಿಸತ್ತಮಂ ತಂ । ವಿಮುಕ್ತಮಸ್ತ್ರೇಣ ಜಗಾಮ ಚಿಂತಾಂ ನಾನ್ಯೇನ ಬದ್ಧೋ ಹ್ಯನುವರ್ತತೇಽಸ್ತ್ರಂ ॥೫೦॥ "ಅಹೋ! ಮಹತ್ಕರ್ಮ ಕೃತಂ ನಿರರ್ಥಕಂ ನರಾಕ್ಷಸೈ ರ್ಮಂತ್ರಗತಿರ್ವಿಮೃಷ್ಟಾ । ಪುನಶ್ಚ ನಾಸ್ತ್ರೇ ವಿಹತೇಽಸ್ತ್ರಮನ್ಯತ್ಪ್ರವರ್ತತೇ ಸಂಶ

ಬಂಧನಂಚ - ಕಟ್ಟುವಿಕೆಯನ್ನೂ, ಪ್ರಸಹ್ಯ - ಬಲಾತ್ಕರಿಸಿ, ವೀರ್ಯೈಃ - ಶೂರರಿಂದ, ಅಭಿ....ಚ - ನಿಗ್ರಹವನ್ನೂ, ರೋಚಯಾಮಾಸ - ಸಮ್ಮತಿಸಿದನು. ॥೪೮॥ ಅಥ - ಬಳಿಕ, ವೀರಃ - ಶೂರನಾದ, ಇಂದ್ರಜಿತ್ತು - ಇಂದ್ರಜಿತ್ತುವಾದರೆ, ಅಸ್ತ್ರೇಣ - ಬ್ರಹ್ಮಾಸ್ತ್ರದಿಂದ, ವಿಮುಕ್ತಂ - ಬಿಡಲ್ಪಟ್ಟ, ತಂಕಪಿಸತ್ತಮಂ - ಆ ವಾನರಶ್ರೇಷ್ಠನನ್ನು, ದ್ರುಮ....ದ್ಧಂ - ಗಿಡದ ನಾರುಗಳಿಂದ ಕಟ್ಟಲ್ಪಟ್ಟವನನ್ನಾಗಿ, ವಿಚಾರ್ಯ ತಿಳಿದು, ಅನ್ಯೇನ - ಮತ್ತೊಂದು ಬಂಧನದಿಂದ, ಬದ್ಧಃ - ಕಟ್ಟಲ್ಪಟ್ಟವನಾಗಿ, ಅಸ್ತ್ರಂ - ಅಸ್ತ್ರವನ್ನು, ನಾನುವರ್ತತೇಹಿ - ಅನುಸರಿಸುವದಿಲ್ಲವಷ್ಟೆ, ಕೃತಂ - ಮಾಡಲ್ಪಟ್ಟ, ಮಹತ್- ದೊಡ್ಡದಾದ, ಕರ್ಮ - ಹನುಮದ್ಬಂಧನರೂಪ ವ್ಯಾಪಾರವು, ನಿರರ್ಥಕಂ - ವ್ಯರ್ಥವಾಯಿತು, ರಾಕ್ಷಸೈಃ-ರಕ್ಕಸರಿಂದ, ಮಂತ್ರಗತಿಃ-ಮಂತ್ರಪ್ರಭಾವವು, ನವಿಮೃಷ್ಟಾ ವಿಮರ್ಶೆ ಮಾಡಲ್ಪಡಲಿಲ್ಲ, ಅಸ್ತ್ರೇ - ಬ್ರಹ್ಮಾಸ್ತ್ರವು, ವಿಹತೇ - ಹೊಡಿಯಲ್ಪಟ್ಟದಾಗುತ್ತಿರಲು, ಅನ್ಯದಸ್ತ್ರಂ - ಮತ್ತೊಂದಸ್ತ್ರವು, ಪುನಶ್ಚ - ಮತ್ತೂ, ನಪ್ರವರ್ತತೇ - ಸಮರ್ಥವಾಗುವುದಿಲ್ಲ, ಸರ್ವೇ - ಎಲ್ಲರು, ಸಂಶಯಿತಾಸ್ಮಃ - ಸಂದೇಹಗೊಂಡವರಾದೆವು, ಇತಿ - ಇಂತೆಂದು, ಚಿಂತಾಂ - ಆಲೋಚನೆಯನ್ನು, ಜಗಾಮ - ಹೊಂದಿ

ಆ ರಾಕ್ಷಸರ ಬಿಗಿತವನ್ನೂ, ಬೈಗುಳಗಳನ್ನೂ ಸಹಿಸಿಕೊಂಡಿದ್ದನು. ಹಾಗೆ ರಾಕ್ಷಸರು ಹನುಮಂತನನ್ನು ಹಗ್ಗಗಳಿಂದ ಕಟ್ಟಿಹಾಕಿದೊಡನೆಯೇ ಬ್ರಹ್ಮಾಸ್ತ್ರದ ಕಟ್ಟು ಬಿಟ್ಟುಹೋಯಿತು. ಬ್ರಹ್ಮಾಸ್ತ್ರದಿಂದ ಕಟ್ಟಿದವನನ್ನು ಇತರ ಬಂಧನಗಳಿಂದ ಕಟ್ಟಿಹಾಕಿದರೆ ಅದು ಬಿಟ್ಟುಹೋಗುವುದಷ್ಟೆ. ಮಹಾ ಶೂರನಾದ ಇಂದ್ರಜಿತುವು ಇದನ್ನರಿತ್ತಿದ್ದುದರಿಂದ ಸಣಬುಗಳಿಂದಲೂ, ಮರದ ನಾರುಗಳಿಂದಲೂ ಕಟ್ಟಲ್ಪಟ್ಟ ಆ ಆಂಜನೇಯನು ಬ್ರಹ್ಮಾಸ್ತ್ರದಿಂದ ಬಿಡುಗಡೆಯಾದುದನ್ನು ತಿಳಿದುಕೊಂಡು, "ಅಯ್ಯೋ! ಬ್ರಹ್ಮಾಸ್ತ್ರಬಂಧಿತನಾದವನನ್ನು ಬೇರೊಂದರಿಂದ ಕಟ್ಟಿದರೆ ಆ ಬ್ರಹ್ಮಾಸ್ತ್ರದ ಕಟ್ಟು ಬಿಟ್ಟುಹೋಗುವುದೆಂಬುದನ್ನರಿಯದೆ ಈ ರಾಕ್ಷಸರು ಇವನನ್ನು ಸಣಬುನಾರುಗಳಿಂದಲೂ, ಮರದ ತೊಗಟೆಗಳಿಂದಲೂ ಬಂಧಿಸಿದರಲ್ಲಾ! ಈಗ ನಾನೇನು ಮಾಡಲಿ. ಅತಿ ಪ್ರಯಾಸದಿಂದ ಮಾಡಿದ ಮಹತ್ಕಾರ್ಯವು ನಿಷ್ಫಲವಾಗಿ ಹೋಯಿತು. ಮೂಢರಾದ ಈ ರಾಕ್ಷಸರು ಬ್ರಹ್ಮಾಸ್ತ್ರಪ್ರಭಾವವನ್ನರಿಯದೆ ಹೋದರು. ಈಗ ನಾನು ಬೇರಾವ ಅಸ್ತ್ರವನ್ನಾದರೂ ಪ್ರಯೋಗಿಸೋಣವೆಂದರೆ ಬ್ರಹ್ಮಾಸ್ತ್ರದಿಂದ ವಿಮುಕ್ತನಾದವನ ಮೇಲೆ ಯಾವ ಅಸ್ತ್ರವೂ ಓಡದು; ಪುನಃ ಬ್ರಹ್ಮಾಸ್ತ್ರವನ್ನೇ ಪ್ರಯೋಗಿಸಿದರೂ ನಿರರ್ಥಕವಾಗುವುದು. ಈ ಕಾರ್ಯವು ಹೀಗೆ ಕೆಟ್ಟುಹೋಗಿರುವುದರಿಂದ ನಮ್ಮೆಲ್ಲರಿಗೂ ಪ್ರಾಣಾಪಾಯವೇ ಸಂಭವಿಸಿತು" ಎಂದು ಚಿಂತಿಸಿದನು. ॥ ೪೬–೫೧ ॥ ಇತ್ತ ಹನುಮಂತನಿಗೆ ತಾನು ಬ್ರಹ್ಮಾಸ್ತ್ರದಿಂದ ವಿಮುಕ್ತನಾದುದೇ

ಯಿತಾಸ್ಸ ಸರ್ವೇ" ‖೫೧‖ ಅಸ್ತ್ರೇಣ ಹನುಮಾನ್ಮುಕ್ತೋ ನಾತ್ಮಾನಮವಬುಧ್ಯತ। ಕೃಷ್ಯಮಾಣಸ್ತು ರಕ್ಷೋಭಿಸ್ತೈಶ್ಚ ಬಂಧೈರ್ನಿಪೀಡಿತಃ ‖ ೫೨ ‖ ಹನ್ಯಮಾನಸ್ತತಃ ಕ್ರೂರೈರಾಕ್ಷಸೈಃ ಕಾಷ್ಠಮುಷ್ಟಿಭಿಃ । ಸಮೀಪಂ ರಾಕ್ಷಸೇಂದ್ರಸ್ಯ ಪ್ರಾಕೃಷ್ಯತ ಸ ವಾನರಃ ‖ ೫೩ ‖ ಅಥೇಂದ್ರಜಿತ್ತಂ ಪ್ರಸಮೀಕ್ಷ್ಯಮುಕ್ತಮಸ್ತ್ರೇಣಬದ್ಧಂ ದ್ರುಮ ಚೀರಸೂತ್ರೈಃ । ವ್ಯದರ್ಶಯತ್ತತ್ರ ಮಹಾಬಲಂ ತಂ ಹರಿಪ್ರವೀರಂ ಸಗಣಾಯ ರಾಜ್ಞೇ ‖ ೫೪ ‖ ತಂ ಮತ್ತಮಿವ ಮಾತಂಗಂ ಬದ್ಧಂ ಕಪಿವರೋತ್ತಮಂ । ರಾಕ್ಷಸಾ ರಾಕ್ಷಸೇಂದ್ರಾಯ ರಾವಣಾಯ ನ್ಯವೇದಯನ್ ‖ ೫೫ ‖ "ಕೋಽಯಂ ಕಸ್ಯ ಕುತೋಽವಾತ್ರ ಕಿಂಕಾರ್ಯಂ ಕೋ ವ್ಯಪಾಶ್ರಯಃ?" । ಇತಿ ರಾಕ್ಷಸವೀರಾಣಾಂ

ದನು. ‖ ೪೯-೫೧ ‖ ಅಸ್ತ್ರೇಣ - ಬ್ರಹ್ಮಾಸ್ತ್ರದಿಂದ, ಮುಕ್ತಃ - ಬಿಡಲ್ಪಟ್ಟ, ಹನುಮಾನ್ - ಆಂಜನೇಯನು, ತೈಃರಕ್ಷೋಭಿಃ - ಆ ರಕ್ಕಸರಿಂದ, ಕೃಷ್ಯಮಾಣಶ್ಚ - ಸೆಳೆಯಲ್ಪಟ್ಟವನಾಗಿ, ತೈರ್ಬಂಧೈಶ್ಚ - ಆ ಕಟ್ಟುಗಳಿಂದಲೂ, ನಿಪೀಡಿತಃ - ಬಾಧಿತನಾಗಿ, ಆತ್ಮಾನಂ - ತನ್ನನ್ನು, ನಾವಬುಧ್ಯತ - ಅರಿಯಲಿಲ್ಲ. ‖ ೫೨ ‖ ತತಃ - ಬಳಿಕ, ಸವಾನರಃ - ಆ ಹನುಮಂತನು, ಕ್ರೂರೈಃ - ಕ್ರೂರರಾದ, ರಾಕ್ಷಸೈಃ - ರಕ್ಕಸರಿಂದ, ಕಾಷ್ಠ....ಭಿಃ - ಕಟ್ಟಿಗೆಗಳಿಂದಲೂ ಮುಷ್ಟಿಗಳಿಂದಲೂ, ಹನ್ಯಮಾನಃ - ಹೊಡೆಯಲ್ಪಟ್ಟವನಾಗಿ, ರಾಕ್ಷಸೇಂದ್ರಸ್ಯ - ರಾವಣನ, ಸಮೀಪಂ - ಬಳಿಗೆ, ಪ್ರಾಕೃಷ್ಯತ - ಸೆಳೆಯಲ್ಪಟ್ಟನು. ‖ ೫೩ ‖ ಅಥ - ಬಳಿಕ, ಇಂದ್ರಜಿತ್ - ಇಂದ್ರಜಿತ್ತುವು, ಅಸ್ತ್ರೇಣ - ಅಸ್ತ್ರದಿಂದ, ಮುಕ್ತಂ - ಬಿಡಲ್ಪಟ್ಟ, ದ್ರುಮಚೀರಸೂತ್ರೈಃ - ಗಿಡದ ನಾರುಗಳಿಂದಲೂ ಹಗ್ಗಗಳಿಂದಲೂ, ಬದ್ಧಂ - ಕಟ್ಟಲ್ಪಟ್ಟ, ತಂ - ಆ ಆಂಜನೇಯನನ್ನು, ಪ್ರಸಮೀಕ್ಷ್ಯ - ಕಂಡು, ಮಹಾಬಲಂ - ಬಹು ಬಲಿಷ್ಠನಾದ, ತಂಹರಿಪ್ರವೀರಂ - ಆ ವಾನರಶ್ರೇಷ್ಠನನ್ನು, ಸಗಣಾಯ - ರಾಕ್ಷಸರಗುಂಪುಗಳಿಂದೊಡಗೂಡಿದ, ರಾಜ್ಞೇ - ಒಡೆಯನಿಗೆ, ತತ್ರ - ಆ ರಾಜಗೃಹದಲ್ಲಿ, ವ್ಯದರ್ಶಯತ್ - ತೋರಿಸಿದನು. ‖ ೫೪ ‖ ರಾಕ್ಷಸಾಃ - ರಾಕ್ಷಸರು, ಬದ್ಧಂ - ಕಟ್ಟಲ್ಪಟ್ಟ, ಮತ್ತಂ - ಮದವೇರಿದ, ಮಾತಂ....ತಂ - ಆನೆಯಂತಿರುವ, ಕಪಿ....ಮಂ-ವಾನರಶ್ರೇಷ್ಠನಾದ, ತಂ-ಆ ಆಂಜನೇಯನನ್ನು, ರಾಕ್ಷಸೇಂದ್ರಾಯ-ರಕ್ಕಸರೊಡೆಯನಾದ, ರಾವಣಾಯ - ರಾವಣನಿಗೆ, ನ್ಯವೇದಯನ್ - ತಿಳಿಸಿದರು. ‖ ೫೫ ‖ ಅಯಂ - ಇವನು, ಕಃ - ಯಾರು, ಕಸ್ಯ - ಯಾರಸಂಬಂಧಿಯು, ಕುತೋವಾ - ಎಲ್ಲಿಂದ ಬಂದನು, ಅತ್ರ - ಈ ಪಟ್ಟಣದಲ್ಲಿ, ಕಿಂಕಾರ್ಯಂ - ಏನು ಕೆಲಸವು, ಕೋವ್ಯಪಾಶ್ರಯಃ - ಯಾವ ಸ್ಥಳವು, ಇತಿ - ಹೀಗೆಂದು,

---

ತಿಳಿಯಲಿಲ್ಲವು. ರಾಕ್ಷಸರೆಲ್ಲರೂ ಅವನನ್ನು ಮುತ್ತಿಕೊಂಡು ಅವನನ್ನು ಚೆನ್ನಾಗಿ ಬಿಗಿದು ದೊಣ್ಣೆಗಳಿಂದ ಹೊಡೆದು ರಾಕ್ಷಸೇಂದ್ರನಾದ ರಾವಣಾಸುರನ ಬಳಿಗೆ ಎಳೆದೊಯ್ಯುತ್ತಿದ್ದರು. ಆ ಬಳಿಕ ಮಹಾ ಶೂರನಾದ ಇಂದ್ರಜಿತ್ತುವು, ಬ್ರಹ್ಮಾಸ್ತ್ರದಿಂದ ಮುಕ್ತನಾಗಿ, ಸಣಬು ನಾರುಗಳಿಂದಲೂ, ಮರದ ತೊಗಟೆಗಳಿಂದಲೂ ಕಟ್ಟಲ್ಪಟ್ಟ ಆ ಹನುಮಂತನನ್ನು ಮಂತ್ರಿಗಳೊಡಗೂಡಿದ ರಾವಣನ ಬಳಿಗೊಯ್ದು, "ಇವನೇ ಆ ವಾನರನು" ಎಂದು ತೋರಿಸಿದನು. ಆಗ ಮದಿಸಿದ ಗಜಶ್ರೇಷ್ಠದಂತಿರುವವನೂ, ಹಗ್ಗಗಳಿಂದ ಬಂಧಿತನಾಗಿದ್ದವನೂ ಆದ ಆ ವಾನರೋತ್ತಮನನ್ನು ರಾಕ್ಷಸರು ತಮ್ಮ ಪ್ರಭುವಾದ ರಾವಣಾಸುರನೆದುರಿಗೆ ನಿಲ್ಲಿಸಿದರು. ಆಗ ಅಲ್ಲಿದ್ದ ರಾಕ್ಷಸರೆಲ್ಲರೂ, "ಇವನು ಯಾರು? ಯಾರ ಸಂಬಂಧಿಯು? ಇಲ್ಲಿಗೇಕೆ ಬಂದಿರುವನೋ! ಏನು ಕೆಲಸಕ್ಕಾಗಿ ಯಾವನು ಕಳುಹಿಸಿರುವನೋ!" ಎಂದು

ತತ್ರ ಸಂಜಜ್ಞಿರೇ ಕಥಾಃ ॥ ೫೬ ॥ “ ಹನ್ಯತಾಂ ದಹ್ಯತಾಂ ವಾಪಿ ಭಕ್ಷ್ಯತಾ ” ಮಿತಿ ಚಾಪರೇ । ರಾಕ್ಷಸಾಸ್ತತ್ರ ಸಂಕ್ರುದ್ಧಾಃ ಪರಸ್ಪರಮಥಾಬ್ರುವ‌ನ್ ॥ ೫೭ ॥ ಅತೀತ್ಯ ಮಾರ್ಗಂ ಸಹಸಾ ಮಹಾತ್ಮಾ ಸತತ್ರ ರಕ್ಷೋಽಧಿಪ ಪಾದಮೂಲೇ । ದದರ್ಶ ರಾಜ್ಞಃ ಪರಿಚಾರವೃದ್ಧಾನ್ ಗೃಹಂ ಮಹಾರತ್ನವಿಭೂಷಿತಂಚ ॥೫೮॥ ಸದದರ್ಶ ಮಹಾತೇಜಾ ರಾವಣಃ ಕಪಿಸತ್ತಮಂ । ರಕ್ಷೋಭಿರ್ವಿಕೃತಾಕಾರೈಃ ಕೃಷ್ಯಮಾಣಮಿತಸ್ತತಃ ॥೫೯॥ ರಾಕ್ಷಸಾಧಿಪತಿಂ ಚಾಪಿ ದದರ್ಶ ಕಪಿಸತ್ತಮಃ । ತೇಜೋಬಲಸಮಾಯುಕ್ತಂ ತಪಂತ ಮಿವ ಭಾಸ್ಕರಂ ॥ ೬೦ ॥ ಸರೋಷಸಂವರ್ತಿತ ತಾಮ್ರದೃಷ್ಟಿರ್ದಶಾನನಸ್ತಂ ಕಪಿ

ತತ್ರ - ಆ ರಾವಣ ಸಭೆಯಲ್ಲಿ, ರಾಕ್ಷ....ಣಾಂ - ರಾಕ್ಷಸಶೂರರ, ಕಥಾಃ - ಮಾತುಗಳು, ಸಂಜಜ್ಞಿರೇ - ಹುಟ್ಟಿದವು. ॥ ೫೬ ॥ ತತ್ರ - ಆ ಸಭೆಯಲ್ಲಿ, ಸಂಕ್ರುದ್ಧಾಃ - ಕೋಪಗೊಂಡ, ರಾಕ್ಷಸಾಃ - ರಾಕ್ಷಸರು, ಹನ್ಯತಾಂ - ಹೊಡಿಯಲ್ಪಡಲಿ, ದಹ್ಯತಾಂ - ಸುಡಲ್ಪಡಲಿ, ಇತಿಚ - ಹೀಗೆಂದೂ, ಅಪರೇ - ಕೆಲವರು, ಭಕ್ಷ್ಯತಾಮಿತಿಚ-ಭುಜಿಸಲ್ಪಡಲೆಂದೂ, ಪರಸ್ಪರಂ-ಒಬ್ಬರಿಗೊಬ್ಬರು, ಅಬ್ರುವ‌ನ್-ಹೇಳಿದರು. ॥ ೫೭ ॥ ಮಹಾತ್ಮಾ-ಮಹಾ ಮನಸ್ವಿಯಾದ, ಸಃ-ಆ ಹನುಮಂತನು, ಸಹಸಾ-ಜಾಗ್ರತೆಯಾಗಿ, ಮಾರ್ಗಂ-ದಾರಿಯನ್ನು, ಅತೀತ್ಯ - ಕಳೆದು, ತತ್ರ - ಆ ರಾಜಗೃಹದಲ್ಲಿ, ರಕ್ಷೋ....ಲೇ - ರಾಕ್ಷಸರಾಜನ ಪಾದದ ಬಳಿಯಲ್ಲಿ, ರಾಜ್ಞಃ - ರಾಕ್ಷಸಾಧಿಪರನ್ನೂ, ಪರಿ....ದ್ಧಾನ್ - ಮಂತ್ರಿವೃದ್ಧರನ್ನೂ, ಮಹಾ....ತಂ - ಅಮೂಲ್ಯ ರತ್ನಗಳಿಂದಲಂಕೃತವಾದ, ಗೃಹಂಚ - ಮನೆಯನ್ನೂ ಸಹಾ, ದದರ್ಶ - ಕಂಡನು. ॥೫೮॥ ಮಹಾತೇಜಾಃ - ಮಹಾ ಪರಾಕ್ರಮಶಾಲಿಯಾದ, ಸರಾವಣಃ - ಆ ರಾವಣನು, ವಿಕೃ....ರೈಃ - ವಿಕಾರ ರೂಪಿಗಳಾದ, ರಕ್ಷೋಭಿಃ - ರಾಕ್ಷಸರಿಂದ, ಇತಸ್ತತಃ - ಅತ್ತಿತ್ತ, ಕೃಷ್ಯಮಾಣಂ - ಸೆಳೆಯಲ್ಪಟ್ಟ, ಕಪಿಸತ್ತಮಂ - ಕಪಿಶ್ರೇಷ್ಠನನ್ನು, ದದರ್ಶ - ಕಂಡನು. ॥ ೫೯ ॥ ಕಪಿಸತ್ತಮಃ - ವಾನರಶ್ರೇಷ್ಠನು, ತೇಜೋ....ಕ್ತಂ - ಪ್ರಭಾವಿಶೇಷದಿಂದಲೂ, ದೇಹಶಕ್ತಿಯಿಂದಲೂ, ಸಮಾಯುಕ್ತಂ - ಕೂಡಿರುವ ಕಾರಣ, ತಪಂತಂ-ತಪಿಸುತ್ತಿರುವ, ಭಾಸ್ಕ....ತಂ-ಸೂರ್ಯನಂತಿರುವ, ರಾಕ್ಷ....ಪಿ-ರಾಕ್ಷಸೇಶ್ವರ ನನ್ನೂ, ದದರ್ಶ - ಕಂಡನು. ॥ ೬೦ ॥ ರೋಷ....ಷ್ಟಿಃ - ಕೋಪದಿಂದ ತಿರುಗಿಸಲ್ಪಟ್ಟ ಕೆಂಪಾಗಿರುವ ನೇತ್ರಗಳುಳ್ಳ, ದಶಾನನಃ - ರಾವಣನು, ತಂಕಪಿಂ - ಆ ವಾನರನನ್ನು, ಅನ್ವವೇಕ್ಷ್ಯ - ನೋಡಿ, ಅಥ -

---

ತಮ್ಮಲ್ಲಿ ತಾವೇ ಅಂದುಕೊಳ್ಳುತ್ತಿದ್ದರು. ಅಲ್ಲಿದ್ದ ಮತ್ತೆ ಕೆಲವರು ರಾಕ್ಷಸರು, “ ಇವನನ್ನೀಗಲೇ ಕೊಲ್ಲಿರಿ ! ಸುಡಿರಿ! ಕೊಂದು ತಿಂದುಬಿಡಿರಿ !” ಎಂದು ಮಹಾ ಕ್ರುದ್ಧರಾಗಿ ಕೂಗುತ್ತಿದ್ದರು. ಆಗ ಮಹಾ ತೇಜಸ್ವಿಯಾದ ಹನುಮಂತನು ಮುಂದಕ್ಕೆ ಬಂದು ಆ ರಾಕ್ಷಸ ರಾಜನಾದ ರಾವಣನ ಪಾದಮೂಲದಲ್ಲಿ ನಿಂತಿದ್ದ ವೃದ್ಧರಾದ ಮಂತ್ರಿಗಳನ್ನೂ, ಉತ್ತಮ ರತ್ನಗಳಿಂದಲಂಕೃತವಾದ ಆ ಸಭಾಸ್ಥಾನವನ್ನೂ ನೋಡಿದನು. ತೇಜಸ್ಸಿನಿಂದ ಮೆರೆಯುತ್ತಿದ್ದ ಆ ರಾವಣನೂ ಸಹ ವಿಕಾರರೂಪರಾದ ತನ್ನ ರಾಕ್ಷಸಭಟರು ಸುತ್ತಲೂ ಮುತ್ತಿ ಅತ್ತಿತ್ತ ಸೆಳೆದುಕೊಂಡು ಬರುತ್ತಿದ್ದ ಆ ಮಹಾವಾನರನನ್ನು ಕಂಡನು. ವಾನರೋತ್ತಮನಾದ ಆಂಜನೇಯನೂ ಸಹ, ತೇಜಸ್ಸಿನಿಂದಲೂ, ಬಲವೀರ್ಯಗಳಿಂದಲೂ ಶ್ರೇಷ್ಠನಾಗಿ ಮಧ್ಯಾಹ್ನ ಕಾಲದ ದಿನಕರನಂತೆ ಶೋಭಿಸುತ್ತಿದ್ದ ಆ ರಾಕ್ಷಸ ಚಕ್ರವರ್ತಿಯನ್ನು ಕಣ್ಣಿಟ್ಟು ನೋಡಿದನು. ॥೫೬–೬೦॥ ಆ ಸಮಯದಲ್ಲಿ ರಾವಣಾಸುರನು ಕೋಪದಿಂದ ಕೆಂಡದಂತೆ ಕೆಂಪಡರಿ ತಿರುಗುತ್ತಿರುವ ಕಣ್ಣಾಲಿಗಳುಳ್ಳವನಾಗಿ ಆ ವಾನರನನ್ನು ನೋಡಿ ಅವನ ವಿಚಾರವನ್ನು

ಮನ್ವವೇಕ್ಷ್ಯ । ಅಥೋಪವಿಷ್ಟಾನ್ಕುಲಶೀಲವೃದ್ಧಾನ್ ಸಮಾದಿಶತ್ತಂ ಪ್ರತಿ ಮಂತ್ರಿ ಮುಖ್ಯಾನ್ ॥ ೬೧ ॥

ಯಥಾಕ್ರಮಂ ತೈಸ್ಸಕಪಿರ್ವಿಪೃಷ್ಟಃ
ಕಾರ್ಯಾರ್ಥಮರ್ಥಸ್ಯಚ ಮೂಲಮಾದೌ ।
ನಿವೇದಯಾಮಾಸ ಹರೀಶ್ವರಸ್ಯ
"ದೂತಸ್ಸಕಾಶಾದಹಮಾಗತೋಽಸ್ಮಿ" ॥ ೬೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಚತ್ವಾರಿಂಶಸ್ಸರ್ಗಃ

ಬಳಿಕ, ಉಪವಿಷ್ಟಾನ್-ಕುಳಿತಿರುವ, ಕುಲ....ದ್ಧಾನ್-ಕುಲದಿಂದಲೂ, ಸ್ವಭಾವದಿಂದಲೂ, ವೃದ್ಧರಾದ, ಮಂತ್ರಿಮುಖ್ಯಾನ್ - ಮುಖ್ಯಮಂತ್ರಿಗಳನ್ನು ಕುರಿತು, ತಂಪ್ರತಿ - ಆ ಆಂಜನೇಯನನ್ನುದ್ದೇಶಿಸಿ, ಸಮಾದಿಶತ್ - ಆಜ್ಞಾಪಿಸಿದನು. ॥ ೬೧ ॥ ಸಕಪಿಃ - ಆ ಆಂಜನೇಯನು, ಯಥಾಕ್ರಮಂ - ಕ್ರಮವಾಗಿ, ತೈಃ - ಆ ರಾಕ್ಷಸರಿಂದ, ಕಾರ್ಯಾರ್ಥಂ - ಕರ್ತವ್ಯಾರ್ಥವನ್ನೂ, ಅರ್ಥಸ್ಯ - ಕರ್ತವ್ಯಾರ್ಥದ, ಮೂಲಂಚ - ನಿಮಿತ್ತವನ್ನೂ ಕುರಿತು, ಆದೌ - ಮೊದಲು, ವಿಪೃಷ್ಟಃ - ಕೇಳಲ್ಪಟ್ಟವನಾಗಿ, ಅಹಂ - ನಾನು, ಹರೀಶ್ವರಸ್ಯ - ಕಪಿಸಾರ್ವಭೌಮನ, ಸಕಾಶಾತ್ - ಬಳಿಯಿಂದ, ದೂತಃ - ದೂತನಾಗಿ, ಆಗತಃ-ಬಂದವನು, ಅಸ್ಮಿ-ಆದೆನು, (ಇತಿ-ಇಂತೆಂದು) ನಿವೇದಯಾಮಾಸ-ವಿಜ್ಞಾಪಿಸಿದನು. ॥೬೨॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಚತ್ವಾರಿಂಶಸ್ಸರ್ಗಃ

ತಿಳಿಯಲಪೇಕ್ಷಿಸಿ ತನ್ನ ಸುತ್ತಲೂ ಕುಳಿತಿದ್ದ ಕಲಶೀಲವೃದ್ಧರಾದ ಮಂತ್ರಿಗಳಿಗೆ ಆಜ್ಞಾಪಿಸಿದನು. ಆಗ ಅವರಲ್ಲಿ ಕೆಲವರು ಹನುಮಂತನನ್ನು ಕುರಿತು, " ಅಯ್ಯಾ! ನೀನು ಬಂದ ಕಾರ್ಯವೇನು? ನಿನ್ನನ್ನಿಲ್ಲಿಗೆ ಕಳುಹಿಸಿದವರಾರು ? " ಎಂದು ಕ್ರಮವಾಗಿ ಪ್ರಶ್ನೆ ಮಾಡಿದರು. ಆಗ ಹನುಮಂತನು " ನಾನು ವಾನರೇಶ್ವರನಾದ ಸುಗ್ರೀವನ ದೂತನು. ಅವನ ಆಜ್ಞೆಯಿಂದಲೇ ಇಲ್ಲಿಗೆ ಬಂದಿರುವೆನು " ಎಂದು ಹೇಳಿದನು. ॥ ೬೧-೬೨ ॥

ಇಂತಿದು ಇಂದ್ರಜಿತ್ಕೃತ ಬ್ರಹ್ಮಾಸ್ತ್ರಬಂಧಿತ ಹನುಮದಾನಯನ ವೃತ್ತಾಂತವೆಂಬ
ನಾಲ್ವತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಏಕೋನಪಂಚಾಶಸ್ಸರ್ಗಃ

ತತಸ್ಸಕರ್ಮಣಾ ತಸ್ಯ ವಿಸ್ಮಿತೋ ಭೀಮವಿಕ್ರಮಃ । ಹನೂಮಾನ್ ರೋಷ ತಾಮ್ರಾಕ್ಷೋ ರಕ್ಷೋಧಿಪಮವೈಕ್ಷತ ॥ ೧ ॥ ಭ್ರಾಜಮಾನಂ ಮಹಾರ್ಹೇಣ ಕಾಂಚನೇನ ವಿರಾಜತಾ । ಮುಕ್ತಾಜಾಲಾವೃತೇನಾಥ ಮಕುಟೇನ ಮಹಾದ್ಯುತಿಂ ॥ ೨ ॥ ವಜ್ರಸಂಯೋಗಸಂಯುಕ್ತೈರ್ಮಹಾರ್ಹಮಣಿವಿಗ್ರಹೈಃ । ಹೈಮೈರಾಭರಣೈಶ್ಚಿತ್ರೈರ್ಮನಸೇವ ಪ್ರಕಲ್ಪಿತೈಃ ॥೩॥ ಮಹಾರ್ಹಕ್ಷೌಮಸಂವೀತಂ ರಕ್ತಚಂದನರೂಷಿತಂ ।

ತತಃ - ಬಳಿಕ, ಭೀಮ....ಮಃ - ಭಯಂಕರಪರಾಕ್ರಮಿಯಾದ, ರೋಷ....ಕ್ಷಃ - ಕೋಪದಿಂದ ಕೆಂಪಾದ ಕಣ್ಣುಗಳುಳ್ಳ, ಸಹನೂಮಾನ್-ಆ ಆಂಜನೇಯನು, ತಸ್ಯ-ಆ ರಾವಣಾಸುರನ, ಕರ್ಮಣಾ-ಕೆಲಸದಿಂದ, ವಿಸ್ಮಿತಃ - ಆಶ್ಚರ್ಯಗೊಂಡವನಾಗಿ, ರಕ್ಷೋಧಿಪಂ - ರಾವಣನನ್ನು, ಅವೈಕ್ಷತ - ಕಂಡನು. ॥ ೧ ॥ ಅಥ-ಬಳಿಕ, ವಿರಾಜತಾ-ಹೊಳೆಯುತ್ತಿರುವ, ಮಹಾರ್ಹೇಣ ಬಲು ಬೆಲೆಯುಳ್ಳ, ಕಾಂಚನೇನ - ಸುವರ್ಣಮಯವಾದ, ಮುಕ್ತಾ....ನ - ಮುತ್ತುಗಳ ಕುಚ್ಚುಗಳಿಂದ ಕೂಡಿರುವ, ಮಕುಟೇನ - ಕಿರೀಟದಿಂದ, ಭ್ರಾಜಮಾನಂ - ಕಂಗೊಳಿಸುತ್ತಿರುವ, ಮಹಾದ್ಯುತಿಂ - ಬಹು ಕಾಂತಿಯುಳ್ಳ, ವಜ್ರ....ಕ್ತೈಃ - ವಜ್ರಗಳ ಅಡಕದಿಂದ ಕೂಡಿರುವ, ಮಹಾ....ಹೈಃ - ಅಮೂಲ್ಯಗಳಾದ ರತ್ನಗಳ ಆಕಾರವುಳ್ಳ, ಚಿತ್ರೈಃ - ಆಶ್ಚರ್ಯಕರಗಳಾದ, ಮನಸಾ - ಮನಸ್ಸಿನಿಂದ, ಪ್ರಕ....ತೈಃ - ನಿರ್ಮಿಸಲ್ಪಟ್ಟಂತಿರುವ, ಚಿತ್ರೈಃ - ಆಶ್ಚರ್ಯಕರಗಳಾದ, ಹೈಮೈಃ - ಸುವರ್ಣಮಯವಾದ, ಆಭರಣೈಃ - ಒಡಿವೆಗಳಿಂದ, (ಹೊಳೆಯುತ್ತಿರುವ,) ಮಹಾ....ತಂ - ಬಹು ಬೆಲೆಯುಳ್ಳ ದುಕೂಲವನ್ನುಟ್ಟಿರುವ, ರಕ್ತ....ತಂ - ಕೆಂಪುಗಂಧದಿಂದ ಲೇಪಿತನಾದ, ವಿಚಿತ್ರಾಭಿಃ - ಆಶ್ಚರ್ಯಕರಗಳಾದ, ವಿವಿಧಾಭಿಃ - ನಾನಾಬಗೆಗಳಾದ, ಭಕ್ತಿಭಿಶ್ಚ - ರಚನಾವಿಶೇಷಗಳಿಂದಲೂ ಕೂಡಿರುವ, ಸ್ವನುಲಿಪ್ತಂ-

ಆಮೇಲೆ ಮಹಾ ಭಯಂಕರ ಪರಾಕ್ರಮವುಳ್ಳವನೂ, ವಾನರೋತ್ತಮನೂ ಆದ ಹನುಮಂತನು ಸಿಂಹಾಸನಾಸೀನನಾಗಿದ್ದ ರಾವಣಾಸುರನನ್ನು ನೋಡಿ, “ ಆಹಾ ! ಮಹಾ ದುಷ್ಟನಾದ ಈ ರಾವಣನು ತಾನು ಸಿಂಹಾಸನದಲ್ಲಿಯೇ ಕದಲದೆ ಕುಳಿತಿದ್ದು, ನನ್ನನ್ನು ಈ ರೀತಿ ಬಂಧಿಸಿ ಕರೆಯಿಸಿಕೊಂಡನಲ್ಲವೆ !” ಎಂದು ಅವನ ಕಾರ್ಯಕ್ಕಾಗಿ ಆಶ್ಚರ್ಯವನ್ನು ಹೊಂದಿ ಕೋಪದಿಂದ ಕೆಂಪಡರಿದ ಕಂಗಳುಳ್ಳವನಾಗಿ ಅವನನ್ನು ದುರದುರನೆ ನೋಡುತ್ತಿದ್ದನು. ಆ ರಾವಣನಾದರೋ ಮೊದಲೇ ರಾಜತೇಜಸ್ಸಿನಿಂದ ಶೋಭಿಸುತ್ತಿದ್ದನು ; ಮೇಲಾಗಿ ಅವನ ಶಿರಸ್ಸಿನಲ್ಲಿ ಮುಕ್ತಾಲಂಕೃತವಾಗಿ ಅಮೌಲ್ಯವಾದ ಸುವರ್ಣ ಕಿರೀಟವು ಬಹು ಜಾಜ್ವಲ್ಯಮಾನವಾಗಿ ಬೆಳಗುತ್ತಿರುವುದು ; ಅವನ ಪ್ರತ್ಯವಯವವೂ ವಜ್ರಗಳಿಂದಲೂ, ಬಹು ಬೆಲೆಯುಳ್ಳ ವಿವಿಧ ರತ್ನಗಳಿಂದಲೂ ಕೆತ್ತಲ್ಪಟ್ಟ ಸ್ವರ್ಣಭೂಷಣಗಳಿಂದ ಶೋಭಿಸುತ್ತಿರುವುವು. ಅವು ಮನಸ್ಸಿನಿಂದಲೇ ನಿರ್ಮಿಸಲ್ಪಟ್ಟಂತಿದ್ದವು ; ಇದರಮೇಲೆ ಸೂಗಸಾದ ಪಟ್ಟೆಮಡಿಯನ್ನುಟ್ಟಿರುವನು. ಮೈಗೆ ರಕ್ತಚಂದನ ಲೇಪನ. ಮಾತ್ರವಲ್ಲದೆ ಕಸ್ತೂರಿಯೇ ಮೊದ

ಸ್ವನುಲಿಪ್ತಂ ವಿಚಿತ್ರಾಭಿರ್ವಿವಿಧಾಭಿಶ್ಚ ಭಕ್ತಿಭಿಃ ॥ ೪ ॥ ವಿವೃತ್ತೈರ್ದರ್ಶನೀಯೈಶ್ಚ ರಕ್ತಾಕ್ಷೈರ್ಭೀಮದರ್ಶನೈಃ । ದೀಪ್ತತೀಕ್ಷ್ಣಮಹಾದಂಷ್ಟ್ರೈಃ ಪ್ರಲಂಬದಶನಚ್ಛದೈಃ ॥ ೫ ॥ ಶಿರೋಭಿರ್ದಶಭಿರ್ವೀರಂ ಭ್ರಾಜಮಾನಂ ಮಹೌಜಸಂ । ನಾನಾವ್ಯಾಳಸಮಾಕೀರ್ಣೈಃ ಶಿಖರೈರಿವ ಮಂದರಂ ॥ ೬ ॥ ನೀಲಾಂಜನಚಯಪ್ರಖ್ಯಂ ಹಾರೇಣೋರಸಿ ರಾಜತಾ । ಪೂರ್ಣಚಂದ್ರಾಭವಕ್ತ್ರೇಣ ಸಬಲಾಕಮಿವಾಂಬುದಂ ॥ ೭ ॥ ಬಾಹುಭಿರ್ಬದ್ಧಕೇಯೂರೈಶ್ಚಂದನೋತ್ತಮರೂಷಿತೈಃ । ಭ್ರಾಜಮಾನಾಂಗದೈಃ ಪೀನೈಃ ಪಂಚಶೀರ್ಷೈರಿವೋರಗೈಃ ॥೮॥ ಮಹತಿಸ್ಫಾಟಿಕೇ ಚಿತ್ರೇ ರತ್ನಸಂಯೋಗಸಂಸ್ಕೃತೇ।

ಚೆನ್ನಾಗಿ ಗಂಧವನ್ನು ಹಚ್ಚಿಕೊಂಡಿರುವ, ವಿವೃತ್ತೈಃ - ತಿರುಗಿಸಲ್ಪಟ್ಟ, ದರ್ಶನೀಯಃ - ನೋಡತಕ್ಕವುಗಳಾದ, ರಕ್ತಾಕ್ಷೈಃ-ಕೆಂಗಣ್ಣುಗಳುಳ್ಳ, ಭೀಮದರ್ಶನೈಶ್ಚ-ಭಯಂಕರದೃಷ್ಟಿಯುಳ್ಳ, ದೀಪ್ತ....ಷ್ಟ್ರೈಃ-ಹೊಳೆಯುತ್ತಿರುವ ಕ್ರೂರವಾದ ದೊಡ್ಡ ಕೋರೆಹಲ್ಲುಗಳುಳ್ಳ, ಪ್ರಲಂ...ದೈಃ - ಜೋಲಾಡುತ್ತಿರುವ, ತುಟಿಗಳುಳ್ಳ, ದಶಭಿಶ್ಶಿರೋಭಿಃ - ಹತ್ತುತಲೆಗಳಿಂದ, (ಭ್ರಾಜಮಾನಂ - ಪ್ರಕಾಶಿಸುತ್ತಿರುವ,) ವೀರಂ-ಶೂರನಾದ, ಮಹೌಜಸಂ - ಮಹಾ ಸತ್ವವುಳ್ಳ, ನಾನಾ....ರ್ಣೈಃ - ಅನೇಕಬಗೆಗಳಾದ ದುಷ್ಟಮೃಗಗಳಿಂದ, ವ್ಯಾಪ್ತಗಳಾದ, ಶಿಖರೈಃ - ಶೃಂಗಗಳಿಂದ ಕೂಡಿದ, ಮಂದ....ತಂ - ಮಂದರಪರ್ವತದಂತಿರುವ, ನೀಲಾಂ....ಖ್ಯಂ - ಕಾಡಿಗೆಯ ಕಾಂತಿಯುಳ್ಳ, ಪೂರ್ಣ....ಣ - ಪೂರ್ಣಿಮಾಚಂದ್ರನ ಕಾಂತಿಯುಳ್ಳ, ವಕ್ತ್ರೇಣ - ನಾಯಕಮಣಿಯುಳ್ಳ, ಉರಸಿ - ವಕ್ಷಸ್ಥಳದಲ್ಲಿ, ರಾಜತಾ - ಹೊಳೆಯುತ್ತಿರುವ, ಹಾರೇಣ - ಸರದಿಂದ, ಸಬಲಾಕಂ - ಮಿಂಚಿನಿಂದೊಡಗೂಡಿದ, ಅಂಬು....ತಂ - ಮೇಘದಂತಿರುವ, ಬದ್ಧಕೇಯೂರೈಃ - ಕಟ್ಟಲ್ಪಟ್ಟ ವಂಕಿಗಳುಳ್ಳ, ಚಂದ....ತೈಃ - ಉತ್ತಮವಾದ ಚಂದನದಿಂದ ವ್ಯಾಪ್ತಗಳಾದ, ಭ್ರಾಜ....ದೈಃ - ಹೊಳೆಯುತ್ತಿರುವ ಬಾಹುಜಿಗೆಗಳುಳ್ಳ, ಪೀನೈಃ - ಬಲಿತಿರುವ, ಪಂಚಶೀರ್ಷೈಃ - ಐದುತಲೆಗಳುಳ್ಳ, ಉರಗೈರಿವಸ್ಥಿತೈಃ - ಹಾವುಗಳಂತಿರುವ, ಬಾಹುಭಿಃ - ತೋಳು

ಲಾದ ಸುಗಂಧ ದ್ರವ್ಯಗಳನ್ನೂ ಲೇಪಿಸಿಕೊಂಡಿರುವನು ; ಹತ್ತುತಲೆಗಳು : ಆ ಹತ್ತುತಲೆಗಳೂ ಕರ್ಣಕುಂಡಲಗಳೇ ಮೊದಲಾದ ದಿವ್ಯಾಭರಣಗಳಿಂದ ಸೊಗಸಾಗಿರುವುವು ; ಅವುಗಳಲ್ಲಿ ಅರೆತೆರೆದ ಬಾಯಿಗಳೂ, ಕೆಂಪೇರಿದ ಕಣ್ಣುಗಳೂ, ಅತ್ಯುಗ್ರವಾಗಿ ಪ್ರಜ್ವಲಿಸುವ ಕೋರೆದಾಡೆಗಳೂ, ಜೋಲಾಡುವ ತುಟಿಗಳೂ ಮಹಾ ಭಯಂಕರವಾಗಿರುವುವು. ಹೀಗೆ ತನ್ನ ತೇಜಸ್ಸಿನಿಂದಲೇ ಬೆಳಗುತ್ತಿದ್ದ ಆ ರಾವಣಾಸುರನು, ಕ್ರೂರಮೃಗಗಳಿಂದ ತುಂಬಿದ, ಅನೇಕ ಶಿಖರಗಳುಳ್ಳ ಮಂದರಪರ್ವತದಂತೆ ಕಾಣುತ್ತಿದ್ದನು. ಇಷ್ಟೆಯಲ್ಲದೆ ಆ ರಾಕ್ಷಸನು ನೀಲಾಂಜನ ಪರ್ವತದಂತೆ ಕಪ್ಪಾದ ಮೈಯುಳ್ಳವನಾಗಿರಲು, ಅವನ ವಕ್ಷಸ್ಥಳದಲ್ಲಿ ಪೂರ್ಣಚಂದ್ರನಂತೆ ಕಂಗೊಳಿಸುವ ಮುತ್ತಿನಪದಕವನ್ನೊಳಗೊಂಡ ಹಾರವು ಚಲಿಸುತ್ತಿರಲು, ಅವನು ಕೊಕ್ಕರೆಗಳ ಸಾಲುಗಳಿಂದ ಕೂಡಿದ ಕಾಲಮೇಘದಂತೊಪ್ಪುತ್ತಿದ್ದನು. ॥ ೧-೬ ॥ ತೋಳ್ಬಳೆಗಳಿಂದಲೂ, ಕೈಕಡಗಗಳಿಂದಲೂ ಅಲಂಕೃತವಾಗಿ ರಕ್ತಚಂದನರೂಷಿತವಾಗಿದ್ದ ಅವನ ಇಪ್ಪತ್ತು ತೋಳುಗಳೂ ಐದು ಹೆಡೆಗಳ ಹಾವುಗಳಂತೆ ಕಾಣುತ್ತಿದ್ದವು. ಇಂತಹ ರಾಕ್ಷಸರಾಜನು ರತ್ನಗಳಿಂದ ಸುಸಂಸ್ಕೃತವಾಗಿ ಅತ್ಯುತ್ತಮವಾದ ರನ್ನಗಂಬಳಿಯ ಹಾಸುಳ್ಳ ಸ್ಫಟಿಕಮಯ ಸಿಂಹಾಸನದಲ್ಲಿ ಕುಳಿತು ಶೋಭಿಸುತ್ತಿದ್ದನು. ಸರ್ವಾಲಂಕಾರಭೂಷಿತೆಯುವಾದ

ಉತ್ತಮಾಸ್ತರಣಾಸ್ತೀರ್ಣೇ ಸೂಪವಿಷ್ಟಂ ವರಾಸನೇ ॥ ೯ ॥ ಅಲಂಕೃತಾಭಿರತ್ಯರ್ಥಂ ಪ್ರಮದಾಭಿಸ್ಸಮಂತತಃ । ವಾಲವ್ಯಜನಹಸ್ತಾಭಿರಾರಾತ್ಸಮುಪಸೇವಿತಂ ॥ ೧೦ ॥ ದುರ್ಧರೇಣ ಪ್ರಹಸ್ತೇನ ಮಹಾಪಾರ್ಶ್ವೇನ ರಕ್ಷಸಾ । ಮಂತ್ರಿಭಿರ್ಮಂತ್ರತತ್ವಜ್ಞೈರ್ನಿಕುಂಭೇನ ಚ ಮಂತ್ರಿಣಾ ॥ ೧೧ ॥ ಸುಖೋಪವಿಷ್ಟಂ ರಕ್ಷೋಭಿಶ್ಚತುರ್ಭಿರ್ಬಲದರ್ಪಿತೈಃ । ಕೃತ್ಸ್ನಃ ಪರಿವೃತೋ ಲೋಕಶ್ಚತುರ್ಭಿರಿವ ಸಾಗರೈಃ ॥೧೨॥ ಮಂತ್ರಿಭಿರ್ಮಂತ್ರತತ್ವಜ್ಞೈರನ್ಯೈಶ್ಚ ಶುಭಬುದ್ಧಿಭಿಃ । ಅನ್ವಾಸ್ಯಮಾನಂ ರಕ್ಷೋಭಿಸ್ಸುರೈರಿವ ಸುರೇಶ್ವರಂ ॥ ೧೩ ॥ ಅಪಶ್ಯದ್ರಾಕ್ಷಸಪತಿಂ ಹನೂಮಾನತಿತೇಜಸಂ । ವಿಷ್ಠಿತಂ

ಗಳಿಂದ, ಉಪಲಕ್ಷಿತಂ-ಕೂಡಿರುವ, ರತ್ನ....ತೇ-ರತ್ನಗಳ ಕೆತ್ತನೆಯಿಂದ ಕೂಡಿದ, ಉತ್ತ....ರ್ಣೇ - ಶ್ರೇಷ್ಠವಾದ ರನ್ನಕಂಬಳಿಯಿಂದ ಹಾಸಲ್ಪಟ್ಟ, ಸ್ಫಾಟಿಕೇ - ಸ್ಫಟಿಕಮಣಿವಿಕಾರವಾದ, ಚಿತ್ರೇ - ಆಶ್ಚರ್ಯಕರವಾದ, ಮಹತಿ - ದೊಡ್ಡದಾದ, ವರಾಸನೇ - ಉತ್ತಮಪೀಠದಲ್ಲಿ, ಸೂಪವಿಷ್ಟಂ - ಚೆನ್ನಾಗಿ ಕುಳಿತುಕೊಂಡಿರುವ, ವಾಲ....ಭಿಃ - ಚೌರಿಗಳೇ ಕೈಗಳಲ್ಲುಳ್ಳ, ರತ್ಯರ್ಥಂ - ಕ್ರೀಡಿಗೋಸ್ಕರ, ಅಲಂಕೃತಾಭಿಃ - ಅಲಂಕರಿಸಲ್ಪಟ್ಟ, ಪ್ರಮದಾಭಿಃ - ಸ್ತ್ರೀಯರಿಂದ, ಸಮಂತತಃ - ಅಲ್ಲಲ್ಲಿ, ಆರಾತ್-ಜಾಗ್ರತೆಯಾಗಿ, ಸಮುಪಸೇವಿತಂ-ಸೇವಿಸಲ್ಪಟ್ಟ, ದುರ್ಧರೇಣ-ದುರ್ಧರನೆಂಬ, ಪ್ರಹಸ್ತೇನ-ಪ್ರಹಸ್ತನೆಂಬ, ರಕ್ಷಸಾ-ರಾಕ್ಷಸನಾದ, ಮಹಾಪಾರ್ಶ್ವೇನ-ಮಹಾ ಪಾರ್ಶ್ವನೆಂಬ, ಮಂತ್ರಿಣಾ-ಬುದ್ಧಿಸಹಾಯಕನಾದ, ನಿಕುಂಭೇನ - ನಿಕುಂಭನೆಂಬ, ಮಂತ್ರತತ್ವಜ್ಞೈಃ - ಆಲೋಚನೆಯ ತತ್ವವನ್ನರಿತ, ಬಲದರ್ಪಿತೈಃ - ದೇಹಶಕ್ತಿಯಿಂದ ಗರ್ವಿತರಾದ, ರಕ್ಷೋಭಿಃ - ರಾಕ್ಷಸರಾದ, ಚತು....ಭಿಃ-ನಾಲ್ಕುಮಂದಿ ಮಂತ್ರಿಗಳಿಂದ, ಚತುರ್ಭಿಃ-ನಾಲ್ಕಾದ, ಸಾಗರೈಃ-ಸಮುದ್ರಗಳಿಂದ, ಪರಿವೃತಃ - ಸುತ್ತುವರೆದ, ಕೃತ್ಸ್ನಃ - ಸಮಸ್ತವಾದ, ಲೋಕಇವ - ಪ್ರಪಂಚದಂತೆ, ಸುಖೋಪವಿಷ್ಟಂ - ಸುಖವಾಗಿ ಕುಳಿತಿರುವ, ಮಂತ್ರ....ಜ್ಞೈಃ - ಆಲೋಚನೆಯ ತತ್ವವನ್ನರಿತ, ಮಂತ್ರಿಭಿಃ - ಮಂತ್ರಿಗಳಿಂದಲೂ, ಶುಭಬುದ್ಧಿಭಿಃ - ಒಳ್ಳೆಯ ಬುದ್ಧಿಯುಳ್ಳ, ಅನ್ಯೈಃ - ಇತರರಾದ, ರಕ್ಷೋಭಿಶ್ಚ - ರಕ್ಕಸರಿಂದಲೂ, ಸುರೈಃ - ದೇವತೆಗಳಿಂದ, ಸುರೇಶ್ವರಮಿವ - ದೇವೇಂದ್ರನಂತೆ, ಅನ್ವಾಸ್ಯಮಾನಂ - ಅನುಸರಣೆ ಮಾಡಲ್ಪಟ್ಟ, ಅತಿತೇಜಸಂ - ಬಹಳ ತೇಜಸ್ಸುಳ್ಳ, ಮೇರುಶಿಖರೇ - ಮೇರುಶಿಖರದಲ್ಲಿ, ವಿಷ್ಠಿತಂ - ಕುಳಿತಿರುವ, ಸತೋಯಂ - ನೀರಿನಿಂದೊಡಗೂಡಿದ, ತೋಯ....ತಂ - ಮೇಘದಂತಿರುವ,

ಪ್ರಮದೆಯರು ವಾಲವ್ಯಜನಗಳನ್ನು ಹಿಡಿದು ಆ ರಾವಣೇಶ್ವರನನ್ನು ಸೇವಿಸುತ್ತಿದ್ದರು. ಮಂತ್ರಾಲೋಚನೆಯಲ್ಲಿ ಮಹಾ ಚತುರರಾದ ದುರ್ಧರ, ಪ್ರಹಸ್ತ, ಮಹಾ ಪಾರ್ಶ್ವ, ನಿಂಕುಭ ಎಂಬ ಮಂತ್ರಿಗಳು ಅವನ ಬಳಿಯಲ್ಲಿ ಕುಳಿತಿರಲು ಆ ರಾಕ್ಷಸೋತ್ತಮನು ಚತುಸ್ಸಮುದ್ರಪರಿವೇಷ್ಟಿತವಾದ ಭೂಮಂಡಲದಂತಿದ್ದನು. ಆ ಮಂತ್ರಿಶ್ರೇಷ್ಠರೆಲ್ಲರೂ, ಬುದ್ಧಿಯಲ್ಲಿ ಮೇಲೆನಿಸಿದವರು. ಒಬ್ಬೊಬ್ಬರೂ ಬಲದಿಂದ ಕೊಬ್ಬಿದವರು. ಆ ರಾವಣನ ಆಸ್ಥಾನದಲ್ಲಿ ಶುಭಬುದ್ಧಿಗಳುಳ್ಳ ಇತರ ಮಂತ್ರಿಗಳು, ದೇವೇಂದ್ರನನ್ನು ಬಳಸಿರುವ ದೇವತೆಗಳಂತೆ ಆ ರಾವಣನನ್ನು ಬಳಿಸಿ ಕುಳಿತಿದ್ದರು. ಹೀಗೆ ತನ್ನ ತೇಜಸ್ಸಿನಿಂದಲೇ ಬಹಳವಾಗಿ ಶೋಭಿಸುತ್ತ, ಮಂದರಗಿರಿ ಶಿಖರದಲ್ಲಿ ಮಹಾ ಮೇಘದಂತೆ ಅತ್ಯುನ್ನತಾಸನದಲ್ಲಿ ಕುಳಿತಿದ್ದ ಆ ರಾಕ್ಷಸೇಶ್ವರನನ್ನು ಹನುಮಂತನು ನೋಡಿದನು. ॥ ೭–೧೪ ॥ ಆ ಸಮಯದಲ್ಲಿ ಹನು

ಮೇರುಶಿಖರೇ ಸತೋಯಮಿವ ತೋಯದಂ ॥ ೧೪ ॥ ಸತೈಸ್ಸಂಪೀಡ್ಯಮಾನೋಽಪಿ ರಕ್ಷೋಭಿರ್ಭೀಮವಿಕ್ರಮೈಃ । ವಿಸ್ಮಯಂ ಪರಮಂ ಗತ್ವಾ ರಕ್ಷೋಧಿಪಮವೈಕ್ಷತ ॥ ೧೫ ॥ ಭ್ರಾಜಮಾನಂ ತತೋ ದೃಷ್ಟ್ವಾ ಹನುಮಾನ್ರಾಕ್ಷಸೇಶ್ವರಂ । ಮನಸಾ ಚಿಂತಯಾಮಾಸ ತೇಜಸಾ ತಸ್ಯ ಮೋಹಿತಃ ॥ ೧೬ ॥ "ಅಹೋ! ರೂಪಮಹೋ! ಧೈರ್ಯಮಹೋ! ಸತ್ವಮಹೋ! ದ್ಯುತಿಃ । ಅಹೋ! ರಾಕ್ಷಸರಾಜಸ್ಯ ಸರ್ವ ಲಕ್ಷಣಯುಕ್ತತಾ ॥ ೧೭ ॥ ಯದ್ಯಧರ್ಮೋ ನಬಲವಾನ್ ಸ್ಯಾದಯಂ ರಾಕ್ಷಸೇಶ್ವರಃ । ಸ್ಯಾದಯಂ ಸುರಲೋಕಸ್ಯ ಸಶಕ್ರಸ್ಯಾಪಿ ರಕ್ಷಿತಾ ॥ ೧೮ ॥ ಅಸ್ಯ ಕ್ರೂರೈರ್ನೃಶಂಸೈಶ್ಚ

ರಾಕ್ಷಸಪತಿಂ - ರಾಕ್ಷಸರಾಜನನ್ನು, ಹನೂಮಾನ್ - ಆಂಜನೇಯನು, ಅಪಶ್ಯತ್-ಕಂಡನು. ॥೨-೧೪॥ ಸಃ - ಆ ಆಂಜನೇಯನು, ಭೀಮವಿಕ್ರಮೈಃ - ಭಯಂಕರ ಪರಾಕ್ರಮಿಗಳಾದ, ತೈಃರಕ್ಷೋಭಿಃ - ಆ ರಕ್ಕಸರಿಂದ, ಸಂಪೀ....ಪಿ - ಬಾಧಿಸಲ್ಪಟ್ಟವನಾದರೂ, ಪರಮಂವಿಸ್ಮಯಂಗತ್ವಾ - ಮಹದಾಶ್ಚರ್ಯವನ್ನು ಹೊಂದಿ, ರಕ್ಷೋಧಿಪಂ - ರಾವಣನನ್ನು, ಅವೈಕ್ಷತ - ಕಂಡನು. ॥ ೧೫ ॥ ತತಃ - ಬಳಿಕ, ಹನುಮಾನ್ - ಆಂಜನೇಯನು, ಭ್ರಾಜಮಾನಂ - ಹೊಳೆಯುತ್ತಿರುವ, ರಾಕ್ಷಸೇಶ್ವರಂ - ರಾವಣನನ್ನು, ದೃಷ್ಟ್ವಾ - ಕಂಡು, ತಸ್ಯ - ಆ ರಾವಣನ, ತೇಜಸಾ - ತೇಜಸ್ಸಿನಿಂದ, ಮೋಹಿತಃ - ಮೋಹಿತನಾಗಿ, ಮನಸಾ - ಮನಸ್ಸಿನಲ್ಲಿ, ಚಿಂತಯಾಮಾಸ - ಯೋಚಿಸಿದನು. ॥ ೧೬ ॥ ರಾಕ್ಷಸರಾಜಸ್ಯ - ದಾನವನಾಥನ, ರೂಪಂ - ಆಕಾರವು, ಅಹೋ - ಆಶ್ಚರ್ಯಕರವು, ಧೈರ್ಯಂ - ಧೀರತೆಯು, ಅಹೋ - ಆಶ್ಚರ್ಯಕರವು, ಸತ್ವಂ - ದೇಹದಾರ್ಢ್ಯವು, ಅಹೋ - ಅದ್ಭುತಕರವು, ದ್ಯುತಿಃ - ಕಾಂತಿಯು, ಅಹೋ - ವಿಸ್ಮಯಕರವು, ಸರ್ವ....ತಾ - ಸರ್ವಲಕ್ಷಣಸಂಪನ್ನತೆಯು, ಅಹೋ - ಆಶ್ಚರ್ಯಕರವಾದುದು. ॥ ೧೭ ॥ ಬಲವಾನ್ - ಬಲಾಢ್ಯನಾದ, ಅಯಂರಾಕ್ಷಸೇಶ್ವರಃ - ಈ ರಾಕ್ಷಸನಾಥನು, ಅಧರ್ಮೋನಸ್ಯಾದ್ಯದಿ - ಧರ್ಮಹೀನನಾಗದಿದ್ದರೆ, ಅಯಂ - ಇವನು, ಸಶಕ್ರಸ್ಯ - ಇಂದ್ರನಿಂದೊಡಗೂಡಿದ, ಸುರ....ಪಿ - ಸ್ವರ್ಗಕ್ಕೂ ಕೂಡ, ರಕ್ಷಿತಾ - ಸಂರಕ್ಷಕನು, ಸ್ಯಾತ್ - ಆದಾನು. ॥ ೧೮ ॥ ಹಿ - ಯಾವ ಕಾರಣದಿಂದ, ಅಯಂ - ಇವನು, ಕ್ರುದ್ಧಃ - ಕುಪಿತನಾಗಿ, ಜಗತ್ - ಲೋಕವನ್ನು, ಏಕಾರ್ಣವಂ - ಒಂದೇ ಸಮುದ್ರವನ್ನಾಗಿ, ಕರ್ತುಂ - ಮಾಡುವದಕ್ಕೆ, ಉತ್ಸಹತೇ -

---

ಮಂತನು ಆ ಕ್ರೂರರಾಕ್ಷಸರಿಂದ ಬಹಳವಾಗಿ ಪೀಡಿಸುತ್ತಿದ್ದರೂ ಅದನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ಬಹಳವಾಗಿ ವಿಸ್ಮಯಗೊಂಡು ಆ ರಾಕ್ಷಸರಾಜನನ್ನು ನೋಡಿದನು. ಹನುಮಂತನು ತನ್ನ ತೇಜಸ್ಸಿನಿಂದ ಬಹಳವಾಗಿ ಶೋಭಿಸುತ್ತಿದ್ದ ಆ ರಾಕ್ಷಸೇಶ್ವರನನ್ನು ನೋಡಿ, ಅವನ ಅಸಮಾನ ತೇಜಸ್ಸಿನಿಂದ ಮೋಹಿತನಾಗಿ ತನ್ನಲ್ಲಿ ತಾನು, "ಆಹಾ! ಈ ರಾಕ್ಷಸನ ರೂಪವೇನು! ಧೈರ್ಯವೇನು! ಇವನ ಸತ್ವಸಂಪನ್ನತೆ ಎಂತಹುದು! ಕಾಂತಿಯೋ! ಇವನಲ್ಲಿರುವ ಸರ್ವಲಕ್ಷಣ ಸಂಪನ್ನತೆಯೂ ಅತ್ಯಾಶ್ಚರ್ಯಕರವಾಗಿರುವುದು! ಆಹಾ! ಈ ರಾಕ್ಷಸೇಶ್ವರನಲ್ಲಿ ಅಧರ್ಮವು ಪ್ರಬಲವಾಗಿಲ್ಲದಿದ್ದರೆ ಇವನು ದೇವಲೋಕವನ್ನೂ, ಕಡೆಗೆ ದೇವೇಂದ್ರನನ್ನೂ ಆಳುವುದಕ್ಕೆ ಅರ್ಹನಾಗುತ್ತಿದ್ದನು. ಇವನು ಮಹಾ ಕ್ರೂರನು; ನೃಶಂಸನು; ನಿಂದಿತವಾದ ಕಾರ್ಯಗಳನ್ನೇ ಮಾಡುವವನು; ಆದುದರಿಂದಲೇ ಲೋಕವೆಲ್ಲವೂ ಇವನಿಗೆ ಬೆದರಿ ಬೆಂಡಾಗುತ್ತಿರುವುದು. ಕಡೆಗೆ ಸುರಾಸುರರೂ ಇವನಿಗೆ ಬಹಳವಾಗಿ ಹೆದರುವರು.

ಕರ್ಮಭಿರ್ಲೋಕಕುತ್ಸಿತೈಃ । ತೇನ ಬಿಭ್ಯತಿ ಖಲ್ವಸ್ಮಾಲ್ಲೋಕಾಸ್ಸಾಮರದಾನವಾಃ ।
ಅಯಂ ಹ್ಯುತ್ಸಹತೇ ಕ್ರುದ್ಧಃ ಕರ್ತುಮೇಕಾರ್ಣವಂ ಜಗತ್ " ॥ ೧೯ ॥

ಇತಿ ಚಿಂತಾಂ ಬಹುವಿಧಾಮಕರೋನ್ಮತಿಮಾನ್ ಹರಿಃ ।
ದೃಷ್ಟ್ವಾ ರಾಕ್ಷಸರಾಜಸ್ಯ ಪ್ರಭಾವಮಮಿತೌಜಸಃ ॥ ೨೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಪಂಚಾಶಸ್ಸರ್ಗಃ

ಉದ್ಯುಕ್ತನಾಗುವನೋ, ತೇನ - ಆ ಕಾರಣದಿಂದ, ಸಾಮ....ವಾಃ - ದೇವರಕ್ಕಸರಿಂದೊಡಗೂಡಿದ, ಲೋಕಾಃ - ಭುವನಗಳು, ಲೋಕಕುತ್ಸಿತೈಃ - ಲೋಕನಿಂದಿತವಾದ, ಕ್ರೂರೈಃ - ಭಯಂಕರಗಳಾದ, ನೃಶಂಸೈಃ - ದ್ರೋಹಾಚರಣಶೀಲನಾದ, ಅಸ್ಯ - ಈ ರಾವಣನ, ಕರ್ಮಭಿಶ್ಚ - ಕೆಲಸಗಳಿಂದಲೂ, ಅಸ್ಮಾತ್ - ಈ ರಾವಣನಿಂದ, ಭಿಭ್ಯತಿಖಲು - ಹೆದರುವುವಷ್ಟೆ. ॥ ೧೯ ॥ ಮತಿಮಾನ್ - ಬುದ್ಧಿವಂತನಾದ, ಹರಿಃ - ಆಂಜನೇಯನು, ಅಮಿತೌಜಸಃ - ಅಮಿತ ಬಲಶಾಲಿಯಾದ, ರಾಕ್ಷಸರಾಜಸ್ಯ - ರಾಕ್ಷಸಾಧಿಪನ, ಪ್ರಭಾವಂ - ಪರಾಕ್ರಮವನ್ನು, ದೃಷ್ಟ್ವಾ - ಕಂಡು, ಇತಿ - ಈ ಪರಿಯಾಗಿ, ಬಹುವಿಧಾಂ - ನಾನಾಬಗೆಯಾದ, ಚಿಂತಾಂ - ಆಲೋಚನೆಯನ್ನು, ಅಕರೋತ್ - ಮಾಡಿದನು ॥ ೨೦ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಪಂಚಾಶಸ್ಸರ್ಗಃ

ಮಹಾ ಕೋಪಿಷ್ಠನೂ, ಅಧರ್ಮಿಯೂ ಆದ ಇವನು ಪ್ರಪಂಚವನ್ನೇ ಏಕಾರ್ಣವವನ್ನಾಗಿ ಮಾಡಲು ಉತ್ಸುಕನಾಗಿರುವನು." ಎಂದು ಚಿಂತಿಸಿದನು. ಹೀಗೆ, ಮಹಾ ಬುದ್ಧಿಶಾಲಿಯಾದ ಹನುಮಂತನು ಅಮಿತಪರಾಕ್ರಮಶಾಲಿಯಾದ ರಾಕ್ಷಸರಾಜನ ಪ್ರಭಾವವನ್ನು ನೋಡಿ ವಿಧವಿಧವಾಗಿ ಯೋಚಿಸುತ್ತಿದ್ದನು. ॥ ೧೪–೨೦ ॥

ಇಂತಿದು ರಾವಣದರ್ಶನಜನಿತ ಹನುಮಚ್ಚಿಂತಾಪ್ರಕಾರವೆಂಬ
ನಾಲ್ವತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಪಂಚಾಶಸ್ಸರ್ಗಃ

ಸಮುದ್ವೀಕ್ಷ್ಯ ಮಹಾಬಾಹುಃ ಪಿಂಗಾಕ್ಷಂ ಪುರತಸ್ಥಿತಂ । ಕೋಪೇನ ಮಹತಾವಿಷ್ಟೋ ರಾವಣೋ ಲೋಕರಾವಣಃ ॥ ೧ ॥ ಶಂಕಾ ಹತಾತ್ಮಾ ದಧ್ಯೌ ಸಃ ಕಪೀಂದ್ರಂ ತೇಜಸಾವೃತಂ । "ಕಿಮೇಷ ಭಗವಾನ್ನಂದೀ ಭವೇತ್ಸಾಕ್ಷಾದಿಹಾಗತಃ ॥ ೨ ॥ ¶ ಯೇನ ಶಪ್ತೋಽಸ್ಮಿ ಕೈಲಾಸೇ ಮಯಾ ಸಂಚಾಲಿತೇ ಪುರಾ । ಸೋಽಯಂ ವಾನರಮೂರ್ತಿಸ್ಸ್ಯಾತ್ಕಿಂಸ್ವಿದ್ಬಾಣೋಽಪಿ ವಾಽಸುರಃ" ॥ ೩ ॥ ಸ ರಾಜಾ ರೋಷ

ಮಹಾಬಾಹುಃ-ದೊಡ್ಡಭುಜಗಳುಳ್ಳ, ಲೋಕರಾವಣಃ-ಜನರನ್ನು ದುಃಖಿತರನ್ನಾಗಿ ಮಾಡುವ, ರಾವಣಃ - ರಾವಣನು, ಪಿಂಗಾಕ್ಷಂ - ಹಸುರಾದ ಕಣ್ಣುಗಳುಳ್ಳ, ಪುರತಃ - ಮುಂದುಗಡೆ, ಸ್ಥಿತಂ - ಇರುವ ಆ ಆಂಜನೇಯನನ್ನು, ಉದ್ವೀಕ್ಷ್ಯ - ನೋಡಿ, ಮಹತಾ - ಮಹತ್ತರವಾದ, ಕೋಪೇನ - ಕ್ರೋಧದಿಂದ, ಆವಿಷ್ಟಃ - ಕೂಡಿದವನು, (ಆಸೀತ್ - ಆದನು). ॥ ೧ ॥ ಸಃ - ಆ ರಾವಣನು, ತೇಜಸಾ - ತೇಜಸ್ಸಿನಿಂದ, ಆವೃತಂ - ವ್ಯಾಪ್ತನಾದ, ಕಪೀಂದ್ರಂ - ಹರೀಶ್ವರನನ್ನು, (ದೃಷ್ಟ್ವಾ - ಕಂಡು), ಶಂಕಾಹತಾತ್ಮಾ - ಸಂಶಯದಿಂದ ಹೊಡೆಯಲ್ಪಟ್ಟ ಮನವುಳ್ಳವನಾಗಿ, ದಧ್ಯೌ - ಧ್ಯಾನಿಸಿದನು, ಇಹ - ಇಲ್ಲಿಗೆ, ಆಗತಃ - ಬಂದಿರುವ, ಏಷಃ - ಇವನು, ಭಗವಾನ್ - ಪೂಜ್ಯನಾದ, ಸಾಕ್ಷಾತ್- ಪ್ರತ್ಯಕ್ಷನಾದ, ನಂದೀ - ನಂದಿಕೇಶ್ವರನು, ಭವೇತ್ - ಆಗಿರಬಹುದೇ, ಪುರಾ - ಪೂರ್ವದಲ್ಲಿ, ಮಯಾ - ನನ್ನಿಂದ, ಕೈಲಾಸೇ - ಕೈಲಾಸಪರ್ವತವು, ಸಂಚಾಲಿತೇ - ಚಲಿಸಲ್ಪಟ್ಟದಾಗಲು, ಯೇನ - ಯಾವನಿಂದ, ಶಪ್ತಃ - ಶಪಿಸಲ್ಪಟ್ಟವನು, ಅಸ್ಮಿ - ಆದೆನೋ, ಸಃ - ಆ ನಂದಿಕೇಶ್ವರನೇ, ವಾನರಮೂರ್ತಿಃ - ಕಪಿರೂಪಧಾರಿಯಾದ, ಅಯಂ - ಇವನು, ಸ್ಯಾತ್ಕಿಂ - ಆಗಿರುವನೇ, ಅಸುರಃ - ರಾಕ್ಷಸನಾದ, ಬಾಣೋಪಿವಾ - ಬಾಣಾಸುರನಾದರೂ, ಕಿಂಸ್ವಿತ್ - ಆಗಿರಬಹುದೇ ಎಂದು ಊಹಿಸಿದನು. ॥ ೩ ॥ ಸರಾಜಾ - ಆ ರಾಕ್ಷಸಾಧಿಪನು, ರೋಷ....ಕ್ಷಃ - ಕೋಪದಿಂದ ಕೆಂಗಣ್ಣುಗಳುಳ್ಳವ

ಮಹಾ ಬಾಹುವೂ, ಲೋಕರಾವಣನೂ ಆದ ರಾವಣನು ಕೋಪದಿಂದ ಮೈಮರೆತು, ತನ್ನ ಮುಂದುಗಡೆ ನಿಂತು, ಪಿಂಗಳವರ್ಣವುಳ್ಳ ನೇತ್ರಗಳಿಂದೊಪ್ಪಿ ಮಹಾ ಕಾಂತಿಯಿಂದ ಬೆಳಗುತ್ತಲಿರುವ ವಾನರಶ್ರೇಷ್ಠನಾದ ಹನುಮಂತನನ್ನು ಚೆನ್ನಾಗಿ ಕಣ್ಣಿಟ್ಟು ನೋಡಿ ಮನಸ್ಸಿನಲ್ಲಿ ಶಂಕೆಗೊಂಡು ತನ್ನಲ್ಲಿ ತಾನು, "ಪೂರ್ವದಲ್ಲಿ ನಾನು ಕೈಲಾಸಪರ್ವತವನ್ನು ಕದಲಿಸಿದಾಗ, ನನ್ನನ್ನು ಶಪಿಸಿದ ಮಹಾಮಹಿಮನಾದ ನಂದಿಕೇಶ್ವರನೇ ಈ ವಾನರರೂಪವನ್ನು ತಾಳಿ ಬಂದಿರುವನೇ! ಮಹಾ ಅಸುರಶ್ರೇಷ್ಠನಾದ ಬಾಣನೇ ಈ ರೂಪದಿಂದ ಬಂದಿರಬಹುದೇ!" ಎಂದು ಅನೇಕ ವಿಧವಾಗಿ ಆಲೋಚಿಸಿ ಮಹಾ ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ, ಹಲ್ಲುಗಳನ್ನು ಕಟಕಟನೆ ಕಡಿಯುತ್ತ ತನ್ನ ಬಳಿಯಲ್ಲಿ ಕುಳಿತಿದ್ದ

¶ ಇಲ್ಲಿ, "ಬಾಣಾಸುರನು ಬಲಿಸುತನು. ಇವನೂ ಹಿಂದೆ ಯಾವುದೋ ಕಾರಣದಿಂದ ರಾವಣನನ್ನು ಶಪಿಸಿರುವನು" ಎಂಬ ಅಂಶವು ಗ್ರಾಹ್ಯವು.

ತಾಮ್ರಾಕ್ಷಃ ಪ್ರಹಸ್ತಂ ಮಂತ್ರಿಸತ್ತಮಂ । ಕಾಲಯುಕ್ತಮುವಾಚೇದಂ ವಚೋ ವಿಪುಲಮರ್ಥವತ್ ॥ ೪ ॥ "ದುರಾತ್ಮಾ ಪೃಚ್ಛ್ಯತಾಮೇಷ ಕುತಃ ಕಿಂ ವಾಽಸ್ಯ ಕಾರಣಂ । ವನಭಂಗೇಚ ಕೋಽಸ್ಯಾರ್ಥೋ ರಾಕ್ಷಸೀನಾಂಚ ತರ್ಜನೇ ॥ ೫ ॥ ಮತ್ಪುರೀಮಪ್ರಧೃಷ್ಯಾಂವಾ ಗಮನೇ ಕಿಂ ಪ್ರಯೋಜನಂ? । ಆಯೋಧನೇವಾ ಕಿಂ ಕಾರ್ಯಂ ಪೃಚ್ಛ್ಯತಾಮೇಷ ದುರ್ಮತಿಃ" ॥ ೬ ॥ ರಾವಣಸ್ಯ ವಚಶ್ಶ್ರುತ್ವಾ ಪ್ರಹಸ್ತೋ ವಾಕ್ಯಮಬ್ರವೀತ್ । "ಸಮಾಶ್ವಸಿಹಿ ಭದ್ರಂ ತೇ ನ ಭೀಃ ಕಾರ್ಯಾ ತ್ವಯಾ ಕಪೇ! ॥ ೭ ॥ ಯದಿ ತಾವತ್ತ್ವಮಿಂದ್ರೇಣ ಪ್ರೇಷಿತೋ ರಾವಣಾಲಯಂ ।

ನಾಗಿ, ಮಂತ್ರಿಸತ್ತಮಂ - ಅಮಾತ್ಯಶ್ರೇಷ್ಠನಾದ, ಪ್ರಹಸ್ತಂ - ಪ್ರಹಸ್ತನನ್ನು ಕುರಿತು, ಕಾಲಯುಕ್ತಂ - ಸಮಯೋಚಿತವಾದ, ವಿಪುಲಂ - ವಿಸ್ತಾರವಾದ, ಅರ್ಥವತ್ - ಅರ್ಥಯುಕ್ತವಾದ, ಇದಂವಚಃ - ಈ ಮುಂದೆ ಹೇಳುವ ಮಾತನ್ನು, ಉವಾಚ - ನುಡಿದನು. ॥ ೪ ॥ ದುರಾತ್ಮಾ - ದುಷ್ಟಬುದ್ಧಿಯುಳ್ಳ, ಏಷಃ - ಈ ಕಪಿಯು, ಪೃಚ್ಛ್ಯತಾಂ - ಕೇಳಲ್ಪಡಲಿ, ಕುತಃ - ಯಾವ ದೇಶದಿಂದ ಬಂದಿರುವನು, ಅಸ್ಯ - ಇವನಿಗೆ, ಕಾರಣಂವಾ - ಪ್ರೇರಕನಾದರೂ, ಕಿಂ - ಯಾರು, ಅಸ್ಯ - ಈತನಿಗೆ, ವನಭಂಗೇಚ - ಉದ್ಯಾನವನಭಂಗದಲ್ಲಿಯೂ, ರಾಕ್ಷಸೀನಾಂ - ರಕ್ಕಸಿಯರ, ತರ್ಜನೇಚ - ಹೆದರಿಕೆಯಲ್ಲಿಯೂ, ಅರ್ಥಃಕಃ - ಪ್ರಯೋಜನವೇನು, ಅಪ್ರಧೃಷ್ಯಾಂ - ತಿರಸ್ಕರಿಸಲಶಕ್ಯವಾದ, ಮತ್ಪುರೀಂ-ನನ್ನ ಪಟ್ಟಣವನ್ನು ಕುರಿತು, ಗಮನೇವಾ-ಬರುವಿಕೆಯಲ್ಲಿಯಾದರೂ, ಕಿಂಪ್ರಯೋಜನಂ-ಏನುಪ್ರಯೋಜನವು, ಆಯೋಧನೇವಾ - ಯುದ್ಧದಲ್ಲಿಯಾದರೂ, ಕಿಂಕಾರ್ಯಂ - ಏನುಪ್ರಯೋಜನವು, ದುರ್ಮತಿಃ - ದುರ್ಬುದ್ಧಿಯುಳ್ಳ, ಏಷಃ - ಇವನು, ಪೃಚ್ಛ್ಯತಾಂ - ಕೇಳಲ್ಪಡಲಿ. ॥ ೬ ॥ ಪ್ರಹಸ್ತಃ - ಪ್ರಹಸ್ತನು, ರಾವಣಸ್ಯ - ರಾವಣನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದನು, ಹೇ ಕಪೇ - ಎಲೈ ವಾನರನೇ, ಸಮಾಶ್ವಸಿಹಿ - ಸಮಾಧಾನಚಿತ್ತನಾಗು, ತೇ-ನಿನಗೆ, ಭದ್ರಂ-ಶುಭವಾಗಲಿ, ತ್ವಯಾ-ನಿನ್ನಿಂದ, ಭೀಃ-ಭಯವು, ನಕಾರ್ಯಾ-ಮಾಡತಕ್ಕುದಲ್ಲ. ॥ ೭ ॥ ತ್ವಂತಾವತ್-ನೀನಾದರೆ, ಇಂದ್ರೇಣ-ದೇವೇಂದ್ರನಿಂದ, ರಾವಣಾಲಯಂ-ರಾವಣಮಂದಿರವನ್ನು ಕುರಿತು, ಪ್ರೇಷಿತೋಯದಿ - ಕಳುಹಿಸಲ್ಪಟ್ಟವನಾಗಿದ್ದರೆ, ತತ್ವಂ - ಯಥಾರ್ಥವನ್ನು, ಆಖ್ಯಾಹಿ - ಹೇಳು, ತೇ - ನಿನಗೆ, ಭಯಂ - ಭೀತಿಯು, ಮಾಭೂತ್ - ಆಗದಿರಲಿ, ಹೇ ವಾನರ-

---

ಮಂತ್ರಿಶ್ರೇಷ್ಠನಾದ ಪ್ರಹಸ್ತನನ್ನು ಕುರಿತು, ಕಾಲೋಚಿತವಾಗಿಯೂ, ಮಹಾರ್ಥಗರ್ಭಿತವಾಗಿಯೂ ಇರುವ ಮಾತುಗಳಿಂದ, "ಎಲೈ ಮಂತ್ರಿವರ್ಯನೇ! ಈ ವಾನರನಾರು? ಎಲ್ಲಿಂದ ಬಂದಿರುವನು? ಏತಕ್ಕಾಗಿ ಬಂದಿರುವನು? ಇವನು ನಮ್ಮ ಅಶೋಕವನವನ್ನು ಭಂಗಗೊಳಿಸಿದುದರಿಂದ ಇವನಿಗಾದ ಪ್ರಯೋಜನವಾದರೂ ಏನು? ನಮ್ಮ ರಾಕ್ಷಸಾಂಗನೆಯರನ್ನು ಇವನು ಬೆದರಿಸಿದುದಾದರೂ ಏಕೆ? ಈ ವಿಷಯಗಳೆಲ್ಲವನ್ನೂ ದುರಾತ್ಮನಾದ ಈ ವಾನರನನ್ನು ಕೇಳಿ ತಿಳಿದುಕೋ" ಎಂದು ಹೇಳಿದನು. ॥ ೧-೬ ॥ ತನ್ನ ಪ್ರಭುವಾದ ರಾವಣನೀರೀತಿ ನುಡಿಯಲು ಮಂತ್ರಿಶ್ರೇಷ್ಠನಾದ ಪ್ರಹಸ್ತನು ಆಂಜನೇಯನನ್ನು ಕುರಿತು, "ಎಲೈ ವಾನರನೇ! ನಿನಗೆ ಮಂಗಳವಾಗಲಿ! ಸಮಾಧಾನವನ್ನು ಹೊಂದು; ನೀನು ಯಾವ ವಿಧದಲ್ಲಿಯೂ ಭಯಪಡಬೇಕಾದುದಿಲ್ಲವು. ಸಂಶಯಗೊಳಬೇಡ. ಅಯ್ಯಾ! ನೀನಾರು? ದೇವೇಂದ್ರನು ಕಳುಹಿಸಲು ಇಲ್ಲಿಗೆ ಬಂದೆಯಾ? ಅಥವಾ ಕುಬೇರನೇನಾದರೂ ಕಳುಹಿಸಿದನೇ!

ತತ್ವಮಾಖ್ಯಾಹಿ ಮಾಭೂತ್ತೇ ಭಯಂ ವಾನರ! ಮೋಕ್ಷ್ಯಸೇ ॥ ೮ ॥ ಯದಿ ವೈಶ್ರವಣಸ್ಯ ತ್ವಂ ಯಮಸ್ಯ ವರುಣಸ್ಯಚ । ಚಾರುರೂಪಮಿದಂ ಕೃತ್ವಾ ಪ್ರವಿಷ್ಟೋ ನಃ ಪುರೀಮಿಮಾಂ । ವಿಷ್ಣುನಾ ಪ್ರೇಷಿತೋ ವಾಪಿ ದೂತೋ ವಿಜಯಕಾಂಕ್ಷಿಣಾ ॥ ೯ ॥ ನಹಿ ತೇ ವಾನರಂ ತೇಜೋ ರೂಪಮಾತ್ರಂತು ವಾನರಂ । ತತ್ವತಃ ಕಥಯಸ್ವಾದ್ಯ ತತೋ ವಾನರ! ಮೋಕ್ಷ್ಯಸೇ ॥ ೧೦ ॥ ಅನೃತಂ ವದತಶ್ಚಾಪಿ ದುರ್ಲಭಂ ತವ ಜೀವಿತಂ । ಅಥವಾ ಯನ್ನಿಮಿತ್ತಂ ತೇ ಪ್ರವೇಶೋ ರಾವಣಾಲಯೇ" ॥ ೧೧ ॥

ಎಲೈ ಕಪಿಯೇ, ಮೋಕ್ಷ್ಯಸೇ - ಬಿಡಗಡೆಯಾಗುವೆ, ತ್ವಂ - ನೀನು, ವೈಶ್ರವಣಸ್ಯ - ಕುಬೇರನಿಗಾಗಲಿ, ಯಮಸ್ಯ - ಯಮನಿಗಾಗಲಿ, ವರುಣಸ್ಯಚ - ವರುಣನಿಗಾಗಲಿ, (ದೂತಃ-ದೂತನಾಗಿ,) ಇದಂಚಾರುರೂಪಂ - ಈ ಸೊಬಗಿನ ರೂಪವನ್ನು, ಕೃತ್ವಾ - ಧರಿಸಿಕೊಂಡು, ನಃ - ನಮ್ಮ, ಪುರೀಂ - ಪಟ್ಟಣವನ್ನು, ಪ್ರವಿಷ್ಟಃ - ಹೊಕ್ಕಿರುವೆಯೋ, ವಿಜ....ಣಾ - ಜಯೇಚ್ಛೆಯುಳ್ಳ, ವಿಷ್ಣುನಾ - ನಾರಾಯಣನಿಂದ, ಪ್ರೇಷಿತಃ ಹೇಳಿಕಳುಹಿಸಲ್ಪಟ್ಟ, ದೂತೋವಾ-ದೂತನೋ. ॥ ೮ ೯ ॥ ತೇ-ನಿನ್ನ. ತೇಜಃ-ತೇಜಸ್ಸು, ವಾನರಂ - ಕಪಿಸಂಬಂಧವಾದದ್ದು, ನಹಿ - ಅಲ್ಲವೇ ಅಲ್ಲ, ರೂಪಮಾತ್ರಂತು - ಆಕಾರಮಾತ್ರವಾದರೆ, ವಾನರಂ - ಕಪಿಸಂಬಂಧವಾದುದು, ಅದ್ಯ - ಈಗ, ತತ್ವತಃ - ಯಥಾರ್ಥವಾಗಿ, ಕಥಯಸ್ವ - ಹೇಳು, ಹೇ ವಾನರ - ಎಲೈ ಕಪಿಯೇ, ತತಃ - ಬಳಿಕ, ಮೋಕ್ಷ್ಯಸೇ - ಬಿಡಿಸಲ್ಪಡುವೆ, ಅನೃತಂ - ಸುಳ್ಳನ್ನು, ವದತಃ - ಹೇಳುತ್ತಿರುವ, ತವ - ನಿನ್ನ, ಜೀವಿತಂ - ಬದುಕುವಿಕೆಯು, ದುರ್ಲಭಂ - ಹೊಂದಲಸಾಧ್ಯವು, ಅಥವಾ - ಹಾಗಲ್ಲದಿದ್ದರೆ, ಯನ್ನಿಮಿತ್ತಂ - ಏನುಕಾರಣವನ್ನುದ್ದೇಶಿಸಿ, ರಾವಣಾಲಯೇ - ರಾವಣನ ಮನೆಯಲ್ಲಿ, ತೇ - ನಿನ್ನ, ಪ್ರವೇಶಃ - ಬರುವಿಕೆಯೋ? ॥೧೦ ೧೧॥ ತದಾ-ಆ ಕಾಲದಲ್ಲಿ, ಏವಂ-ಈ ಪರಿಯಾಗಿ, ಉಕ್ತಃ-ಹೇಳಲ್ಪಟ್ಟ, ಹರಿಶ್ರೇಷ್ಠಃ-ವಾನರೋತ್ತಮನು, ರಕ್ಷೋ....ರಂ - ರಾಕ್ಷಸರಗುಂಪುಗಳಿಗೆ ಒಡೆಯನಾದ ರಾವಣನನ್ನು ಕುರಿತು, ಅಬ್ರವೀತ್ - ಹೇಳಿ

ಅಥವಾ, ವಿಷ್ಣುವು ಈ ಲಂಕಾನಗರವನ್ನು ಜಯಿಸಲಪೇಕ್ಷಿಸಿ ನಿನ್ನನ್ನು ಕಳುಹಲು, ನೀನು ಈ ಸುಂದರ ವಾನರರೂಪವನ್ನು ತಾಳಿ ದೂತನಾಗಿ ಬಂದಿರುವೆಯೋ? ನೀನು ಸ್ವಲ್ಪವೂ ಭಯಪಡಬೇಡ, ಇದ್ದ ಸಂಗತಿಯನ್ನು ಇದ್ದಂತೆಯೇ ಹೇಳು; ನಿನ್ನನ್ನು ಬಿಡುಗಡೆ ಮಾಡುವೆನು. ನಿನ್ನನ್ನು ಯಾವ ವಿಧದಿಂದಲೂ ತೊಂದರೆಪಡಿಸುವುದಿಲ್ಲ. ಎಲೈ ವಾನರನೇ! ನಿನ್ನ ದೇಹವು ಮಾತ್ರ ವಾನರದೇಹವಾಗಿರುವುದಲ್ಲದೆ, ನಿನ್ನ ಪ್ರಭಾವವು ಅತ್ಯಾಶ್ಚರ್ಯಕರವಾಗಿರುವುದು. ಇದು ಎಷ್ಟುಮಾತ್ರಕ್ಕೂ ವಾನರ ಪ್ರಭಾವವಲ್ಲವು. ಅಯ್ಯಾ ಮಹಾವಾನರನೇ! ಈಗ ನೀನು ಇದ್ದ ಸಂಗತಿಯನ್ನು ಇದ್ದಂತೆಯೇ ಹೇಳುವೆಯಾದರೆ ನಿನ್ನನ್ನು ಬಿಡುಗಡೆ ಮಾಡಿಸುವೆವು. ಹಾಗಲ್ಲದೆ ನೀನು ಅನೃತವಾಡಿದುದಾದರೆ ನಿನ್ನ ಪ್ರಾಣಗಳೆಷ್ಟುಮಾತ್ರಕ್ಕೂ ಉಳಿಯಲಾರವು. ಅದೂ ಅಲ್ಲದೆ ನಿನ್ನನ್ನು ಯಾರೂ ಕಳುಹಿಸದೆ ಇಲ್ಲಿಗೆ ಬಂದಿರುವೆಯಾದರೆ, ನೀನು ರಾಕ್ಷಸೇಶ್ವರನಾದ ನಮ್ಮ ರಾವಣನ ರಾಜಧಾನಿಯಾದ ಈ ಲಂಕಾನಗರಕ್ಕೇಕೆ ಬಂದೆ? ಇದೆಲ್ಲವನ್ನೂ ವಿಸ್ತಾರವಾಗಿ ತಿಳಿಸು" ಎಂದು ಕೇಳಿದನು. ॥ ೩–೧೧ ॥ ಆಗ ವಾನರೋತ್ತಮನಾದ ಹನುಮಂತನು ಪ್ರಹಸ್ತನ ಮಾತುಗಳಿಗೆ ಕಿವಿಗೊಡದೆ ರಾವಣನೊಡನೆಯೇ ಪ್ರತ್ಯಕ್ಷವಾಗಿ ಮಾತನಾಡಬೇಕೆಂದು ಬಯಸಿ ಆವನನ್ನು ಕುರಿತು,

ಏವಮುಕ್ತೋ ಹರಿಶ್ರೇಷ್ಠಸ್ತದಾ ರಕ್ಷೋಗಣೇಶ್ವರಂ । "ಅಬ್ರವೀಽನ್ನಾಸ್ಮಿ ಶಕ್ರಸ್ಯ ಯಮಸ್ಯ ವರುಣಸ್ಯ ವಾ ॥ ೧೨ ॥ ಧನದೇನ ನ ಮೇ ಸಖ್ಯಂ ವಿಷ್ಣುನಾ ನಾಽಸ್ಮಿ ಚೋದಿತಃ । ಜಾತಿರೇವ ಮಮತ್ವೇಷಾ ವಾನರೋಽಹಮಿಹಾಗತಃ ॥ ೧೩ ॥ ದರ್ಶನೇ ರಾಕ್ಷಸೇಂದ್ರಸ್ಯ ದುರ್ಲಭೇ ತದಿದಂ ಮಯಾ । ವನಂ ರಾಕ್ಷಸರಾಜಸ್ಯ ದರ್ಶನಾರ್ಥೇ ವಿನಾಶಿತಂ ॥ ೧೪ ॥ ತತಸ್ತೇ ರಾಕ್ಷಸಾಃ ಪ್ರಾಪ್ತಾ ಬಲಿನೋ ಯುದ್ಧಕಾಂಕ್ಷಿಣಃ । ರಕ್ಷಣಾರ್ಥಂತು ದೇಹಸ್ಯ ಪ್ರತಿಯುದ್ಧಾ ಮಯಾ ರಣೇ ॥ ೧೫ ॥ ಅಸ್ತ್ರಪಾಶೈರ್ನಶಕ್ಯೋಽಹಂ ಬದ್ಧುಂ ದೇವಾಸುರೈರಪಿ । ಪಿತಾಮಹಾದೇವ ವರೋ ಮಮಾಪ್ಯೇಷೋಭ್ಯುಪಾಗತಃ ॥ ೧೬ ॥ ರಾಜಾನಂ ದ್ರಷ್ಟುಕಾಮೇನ ಮಯಾಽಸ್ತ್ರಮನುವರ್ತಿತಂ ।

ದನು, (ಅಹಂ - ನಾನು,) ಶಕ್ರಸ್ಯ - ಇಂದ್ರನ, ಯಮಸ್ಯ - ಯಮನ, ವರುಣಸ್ಯವಾ - ವರುಣನ, (ದೂತಃ - ದೂತನು) ನಾಸ್ಮಿ - ಅಲ್ಲ, ಧನದೇನ - ಕುಬೇರನೊಡನೆ, ಮೇ - ನನಗೆ, ಸಖ್ಯಂ - ಸ್ನೇಹವು, ನ - ಇಲ್ಲವು, ವಿಷ್ಣುನಾ - ವಿಷ್ಣುವಿನಿಂದ, ಚೋದಿತಃ - ಪ್ರೇರಿಸಲ್ಪಟ್ಟವನು, ನಾಸ್ಮಿ - ಅಲ್ಲವು, ಮಮತು - ನನಗಾದರೆ, ಜಾತಿರೇವ - ಜನ್ಮದಿಂದಲೇ, ಏಷಾ - ಈ ಕಪಿತ್ವವು, ವಾನರಃ - ಕಪಿಯಾದ, ಅಹಂ - ನಾನು, ಇಹ - ಇಲ್ಲಿಗೆ, ಆಗತಃ - ಬಂದೆನು, ರಾಕ್ಷಸೇಂದ್ರಸ್ಯ - ರಾಕ್ಷಸನಾಥನಾದ, (ತವ - ನಿನ್ನ) ದರ್ಶನೇ - ನೋಡುವಿಕೆಯು, ದುರ್ಲಭೇ - ಅಸಾಧ್ಯವಾಗಲು, ರಾಕ್ಷಸರಾಜಸ್ಯ - ರಾಕ್ಷಸಾಧಿಪತಿಯಾದ ನಿನ್ನನ್ನು, ದರ್ಶನಾರ್ಥೇ-ನೋಡುವದಕ್ಕೋಸ್ಕರ, ತದಿದಂವನಂ-ಆ ಈ ವನವು, ಮಯಾ-ನನ್ನಿಂದ, ವಿನಾಶಿತಂ - ಧ್ವಂಸಗೊಳಿಸಲ್ಪಟ್ಟಿತು, ತತಃ - ಬಳಿಕ, ಯುದ್ಧಕಾಂಕ್ಷಿಣಃ - ಯುದ್ಧೇಚ್ಛೆಯುಳ್ಳ, ಬಲಿನಃ - ಬಲಾಢ್ಯರಾದ, ತೇ - ನಿನ್ನವರಾದ, ರಾಕ್ಷಸಾಃ - ರಕ್ಕಸರು, ಪ್ರಾಪ್ತಾಃ - ಬಂದರು, ರಣೇ - ಯುದ್ಧದಲ್ಲಿ, ದೇಹಸ್ಯ - ಶರೀರದ, ರಕ್ಷಣಾರ್ಥಂತು - ಸಂರಕ್ಷಣೆಗೋಸ್ಕರ, ಮಯಾ - ನನ್ನಿಂದ, (ತೇ - ಅವರು,) ಪ್ರತಿಯುದ್ಧಾಃ - ಹೊಡೆಯಲ್ಪಟ್ಟರು, ಅಹಂ - ನಾನು, ದೇವಾಸುರೈರಪಿ - ದೇವದಾನವರಿಂದಲೂ ಸಹಾ, ಅಸ್ತ್ರಪಾಶೈಃ - ಅಸ್ತ್ರಪಾಶಗಳಿಂದ, ಬದ್ಧುಂ - ಕಟ್ಟಲ್ಪಡಲು, ನಶಕ್ಯಃ- ಅಸಾಧ್ಯನು, ಏಷಃ - ಈ, ವರಃ - ವರವು, ಮಮಾಪಿ-ನನಿಗೂ ಕೂಡ, ಪಿತಾಮಹಾದೇವ - ಬ್ರಹ್ಮನಿಂದಲೇ, ಅಭ್ಯುಪಾಗತಃ - ಬಂದಿರುವದು, ರಾಜಾನಂ - ಒಡೆಯನಾದ ನಿನ್ನನ್ನು,

---

"ಎಲೈ ರಕ್ಷೋಗಣೇಶ್ವರನಾದ ರಾವಣನೇ! ನಾನು ದೇವೇಂದ್ರನು ಕಳುಹಿಸಲು ಬಂದವನೂ ಅಲ್ಲ. ಯಮನ ದೂತನೂ ಅಲ್ಲ. ವರುಣನು ಕಳುಹಿಸಲು ಬಂದವನಲ್ಲ. ಕುಬೇರನಿಗೂ ನನಗೂ ಪರಿಚಯವೇ ಇಲ್ಲವು; ಮಾತ್ರವಲ್ಲದೆ ಅವನಿಗೂ, ನನಗೂ ಸ್ನೇಹವೂ ಇಲ್ಲವು. ನಾನು ವಿಷ್ಣುಪ್ರೇಷಿತನಾಗಿ ಈ ವಾನರರೂಪದಿಂದ ಬಂದವನಲ್ಲವು. ನನಗೀವಾನರರೂಪವು ಜಾತಿಸಾಮಾನ್ಯವಾದುದುದೇ ಹೊರ್ತು ಮತ್ತೆ ಬೇರೆಯಲ್ಲವು. ನಾನು ಇಲ್ಲಿಗೆ ಬರುವ ನಿಮಿತ್ತದಿಂದ ವಾನರರೂಪವನ್ನು ತಾಳಿದವನಲ್ಲ. ನಾನು ಜಾತ್ಯಾವಾನರನೇ! ಅಯ್ಯಾ; ರಾಕ್ಷಸೇಶ್ವರನಾದ ನಿನ್ನ ದರ್ಶನವು ಅಸಾಧ್ಯವಾದುದರಿಂದ, ಹೇಗಾದರೂ ನಿನ್ನನ್ನು ಸಂದರ್ಶಿಸಬೇಕೆಂಬ ಉದ್ದೇಶದಿಂದಲೇ ಅಶೋಕವನವನ್ನು ಭಂಗಗೊಳಿಸಿದೆನು. ಕೂಡಲೇ ರಾಕ್ಷಸರೆಲ್ಲರೂ ನನ್ನಮೇಲೆ ಯುದ್ಧಕ್ಕೆ ಬಂದರು. ನಾನು ಆತ್ಮರಕ್ಷಣಾರ್ಥವಾಗಿ ಅವರೆಲ್ಲರನ್ನೂ ಕೊಂದೆನು. ಎಲೈ ರಾವಣನೇ! ಯಾವ ಅಸ್ತ್ರವಾಗಲಿ, ಯಾವ ಪಾಶವಾಗಲಿ ನನ್ನನ್ನು ಕೊಲ್ಲಲಾರದು. ದೇವಾಸುರರೂ ನನ್ನನ್ನೇನೂ ಮಾಡಲಾರರು. ಹೀಗೆ ನನಗೂ ಬ್ರಹ್ಮ

ವಿಮುಕ್ತೋಽಹ್ಯಹಮಸ್ತ್ರೇಣ ರಾಕ್ಷಸೈಸ್ತ್ವಭಿಪೀಡಿತಃ । ಕೇನಚಿದ್ರಾಜಕಾರ್ಯೇಣ ಸಂಪ್ರಾಪ್ತೋಽಸ್ಮಿ ತವಾಂತಿಕಂ ॥ ೧೮ ॥

ದೂತೋಽಹಮಿತಿ ವಿಜ್ಞೇಯೋ ರಾಘವಸ್ಯಾಮಿತೌಜಸಃ ।
ಶ್ರೂಯತಾಂ ಚಾಪಿ ವಚನಂ ಮಮ ಪಥ್ಯಮಿದಂ ಪ್ರಭೋ!" ॥ ೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಾಶಸ್ಸರ್ಗಃ

ದೃಷ್ಟುಕಾಮೇನ - ನೋಡಲಿಚ್ಛೆಯುಳ್ಳ, ಮಯಾ - ನನ್ನಿಂದ, ಅಸ್ತ್ರಂ - ಅಸ್ತ್ರವು, ಅನುವರ್ತಿತಂ - ಅನುಸರಿಸಲ್ಪಟ್ಟಿತು, ಅಹಂ - ನಾನು, ರಾಕ್ಷಸೈಃ - ರಕ್ಕಸರಿಂದ, ಅಭಿಪೀಡಿತಃ - ಕಟ್ಟಲ್ಪಟ್ಟವನಾಗಿ, ಅಸ್ತ್ರೇಣ - ಬ್ರಹ್ಮಾಸ್ತ್ರದಿಂದ, ವಿಮುಕ್ತೋಽಹಿ - ಬಿಡಲ್ಪಟ್ಟೆನಷ್ಟೆ, ಕೇನಚಿತ್ - ಒಂದಾನೊಂದು, ರಾಜಕಾರ್ಯೇಣ - ರಾಯಭಾರದಿಂದ, ತವ - ನಿನ್ನ, ಅಂತಿಕಂ - ಸಮಾಪವನ್ನು, ಸಂಪ್ರಾಪ್ತಃ - ಹೊಂದಿದವನು, ಅಸ್ಮಿ - ಆದೆನು, ಅಹಂ - ನಾನು, ಅಮಿತೌಜಸಃ - ಮಹಾ ಪರಾಕ್ರಮಿಯಾದ, ರಾಘವಸ್ಯ-ಶ್ರೀರಾಮನ, ದೂತಇತಿ-ದೂತನೆಂದು, ವಿಜ್ಞೇಯಃ-ತಿಳಿಯಲ್ಪಡಬೇಕು, ಹೇ ಪ್ರಭೋ-ಎಲೈ ಒಡೆಯನೇ, ಪಥ್ಯಂ - ಇಷ್ಟವಾದ, ಮಮ - ನನ್ನ, ಇದಂವಚನಂಚಾಪಿ - ಈ ಮುಂದೆ ಹೇಳ ತಕ್ಕ ಮಾತೂ ಕೂಡ, ಶ್ರೂಯತಾಂ - ಕೇಳಲ್ಪಡಲಿ. ॥ ೧೨-೧೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಾಶಸ್ಸರ್ಗಃ

ದೇವನ ವರಪ್ರಸಾದವಿರುವುದು. ರಾಕ್ಷಸೇಶ್ವರನಾದ ನಿನ್ನ ದರ್ಶನಕ್ಕೋಸುಗವೇ ನಾನು ಇಂದ್ರಜಿತ್ತುವು ಪ್ರಯೋಗಿಸಿದ ಬ್ರಹ್ಮಾಸ್ತ್ರಕ್ಕೆ ಕಟ್ಟುಬಿದ್ದೆನೇ ಹೊರ್ತು ಮತ್ತೆ ಬೇರೆಯಲ್ಲ. ನನ್ನನ್ನು ಈ ರಾಕ್ಷಸರು ಹಗ್ಗಗಳಿಂದ ಬಿಗಿಸಿದೊಡನೆಯೇ ಬ್ರಹ್ಮಾಸ್ತ್ರವು ಬಿಟ್ಟುಹೋಯಿತು. ಆದರೂ ನಿನ್ನೊಡನೆ ನನಗೊಂದು ರಾಜಕಾರ್ಯವಿದ್ದುದರಿಂದ ನಾನು ನಿನ್ನ ಬಳಿಗೆ ಬಂದೆನು. ಆ ವಿಚಾರವನ್ನೇ ನೀನು ಕೇಳಿದೆಯಾದುದರಿಂದ ಹೇಳುವೆನು ಕೇಳು. ನಾನು ಮಹಾ ಪರಾಕ್ರಮಶಾಲಿಯಾದ ಶ್ರೀರಾಮನ ದೂತನು, ಎಲೈ ರಾಕ್ಷಸೇಶ್ವರನಾದ ರಾವಣನೇ! ನಾನು ನಿನಗೊಂದು ಹಿತವಾಕ್ಯವನ್ನು ಹೇಳುವೆನು. ಆಲಿಸಿ ಕೇಳು" ಎಂದು ಹೇಳಿದನು. ॥೧೨-೧೯॥

ಇಂತಿದು ಹನುಮದ್ಭಾಷಣ ವೃತ್ತಾಂತವೆಂಬ ಐವತ್ತನೆಯ
ಸರ್ಗವು ಸಮಾಪ್ತವಾದುದು.

ತಂ ಸಮೀಕ್ಷ್ಯ ಮಹಾಸತ್ತ್ವಂ ಸತ್ತ್ವವಾನ್ ಹರಿಸತ್ತಮಃ । ವಾಕ್ಯಮರ್ಥವದವ್ಯಗ್ರಸ್ತಮುವಾಚ ದಶಾನನಮ್ ॥ ೧ ॥ ಅಹಂ ಸುಗ್ರೀವಸಂದೇಶಾದಿಹ ಪ್ರಾಪ್ತಸ್ತವಾಲಯಮ್ । ರಾಕ್ಷಸೇಂದ್ರ! ಹರೀಶಸ್ತ್ವಾಂ ಭ್ರಾತಾ ಕುಶಲಮಬ್ರವೀತ್ ॥ ೨ ॥ ¶ ಭ್ರಾತುಶ್ಶೃಣು ಸಮಾದೇಶಂ ಸುಗ್ರೀವಸ್ಯ ಮಹಾತ್ಮನಃ । ಧರ್ಮಾರ್ಥೋಪಹಿತಂ ವಾಕ್ಯಮಿಹ ಚಾಮುತ್ರ ಚ ಕ್ಷಮಮ್ ॥ ೩ ॥ ರಾಜಾ ದಶರಥೋ ನಾಮ ರಥಕುಂಜರ

ಸತ್ತ್ವವಾನ್ - ಬಲಾಢ್ಯನಾದ, ಹರಿಸತ್ತಮಃ - ವಾನರಶ್ರೇಷ್ಠನಾದ ಆಂಜನೇಯನು, ಮಹಾಸತ್ವಂ - ಬಲುಬಲಿಮೆಯುಳ್ಳ, ತಂ - ಆ ರಾವಣನನ್ನು, ಸಮೀಕ್ಷ್ಯ - ಕಂಡು, ಅವ್ಯಗ್ರಃ - ಗಾಬರಿಬೀಳದೆ, ತಂದಶಾನನಂ - ಆ ರಾವಣನನ್ನು ಕುರಿತು, ಅರ್ಥವತ್ - ಅರ್ಥಯುಕ್ತವಾದ, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥ ೧ ॥ ಅಹಂ - ನಾನು, ಸುಗ್ರೀ....ತ್ - ಸುಗ್ರೀವನ ಆಜ್ಞೆಯಿಂದ, ತವ - ನಿನ್ನ, ಆಲಯಂ - ಮನೆಯನ್ನು, ಪ್ರಾಪ್ತಃ - ಹೊಂದಿದೆನು, ಹೇ ರಾಕ್ಷಸೇಂದ್ರ - ಎಲೈ ದೈತ್ಯನಾಥನೇ, ಇಹ - ಈ ಲಂಕಾಪಟ್ಟಣದಲ್ಲಿ, ಭ್ರಾತಾ - ಸಹಜನಾದ, ಹರೀಶಃ - ವಾನರಸಾರ್ವಭೌಮನು, ತ್ವಾಂ - ನಿನ್ನನ್ನು ಕುರಿತು, ಕುಶಲಂ - ಕ್ಷೇಮವನ್ನು, ಅಬ್ರವೀತ್ - ನುಡಿದನು. ॥ ೨ ॥ ಮಹಾತ್ಮನಃ - ಮಹಾನುಭಾವನಾದ, ಭ್ರಾತುಃ - ಅಣ್ಣನಾದ, ಸುಗ್ರೀವಸ್ಯ - ಸುಗ್ರೀವನ, ಸಮಾದೇಶಂ - ಸಂದೇಶರೂಪವಾದ, ಧರ್ಮಾ....ತಂ - ಧರ್ಮದಿಂದಲೂ, ಅರ್ಥದಿಂದಲೂ ಕೂಡಿರುವ, ಇಹಚ - ಈ ಲೋಕದಲ್ಲಿಯೂ, ಅಮುತ್ರಚ - ಪರಲೋಕದಲ್ಲಿಯೂ, ಕ್ಷಮಂ - ಅಭ್ಯುದಯಸಾಧಕವಾದ, ವಾಕ್ಯಂ - ಮಾತನ್ನು, ಶೃಣು - ಕೇಳು. ॥ ೩ ॥ ಲೋಕಸ್ಯ - ಜಗತ್ತಿಗೆ, ಪಿತೇವ - ತಂದೆಯಂತೆ, ಬಂಧುಃ - ನೆಂಟನಾದ, ಸುರೇ....ತಿಃ - ಇಂದ್ರನಿಗೆ ಸದೃಶವಾದ ಕಾಂತಿಯುಳ್ಳ, ರಥ....ವಾನ್-

ಆಮೇಲೆ ಮಹಾ ಬಲಪರಾಕ್ರಮಶಾಲಿಯಾದ ಆ ವಾನರೋತ್ತಮನು, ಅಮಿತಪರಾಕ್ರಮಿಯಾದ ರಾವಣಾಸುರನನ್ನು ನೋಡಿ ಸ್ವಲ್ಪವೂ ಭಯಪಡದೆ ಅವನನ್ನು ಕುರಿತು ಅರ್ಥಯುಕ್ತವಾಗಿ ಕೆಲವು ಮಾತುಗಳನ್ನಾಡುವವನಾಗಿ, ಹೀಗೆಂದನು. " ಎಲೈ ರಾವಣೇಶ್ವರನೇ ! ನಾನು ಸುಗ್ರೀವನ ಆಜ್ಞೆಯಿಂದ ಇಲ್ಲಿಗೆ ಬಂದೆನು. ಎಲೈ ರಾಕ್ಷಸೇಂದ್ರನೇ ! ನಮ್ಮ ಪ್ರಭುವೂ ನಿನ್ನ ಸಹೋದರ ಸಮಾನನೂ ಆದ ಸುಗ್ರೀವನು ನಿನ್ನ ಕ್ಷೇಮವನ್ನು ಕೇಳಿದನು. ಎಲೈ ರಾಕ್ಷಸರಾಜನೇ ! ನಿನ್ನ ಒಡಹುಟ್ಟಿದವನಿಗೆ ಸಮಾನನಾದ ಆತನು ಧರ್ಮಾರ್ಥಸಹಿತವೂ, ಇಹಪರಗಳೆರಡರಲ್ಲಿಯೂ ಹಿತವನ್ನುಂಟುಮಾಡುವವೂ ಆದ ಕೆಲವು ಸಂಗತಿಗಳನ್ನು ನಿನಗೆ ಹೇಳಬೇಕೆಂದು ನನಗೆ ಆಜ್ಞಾಪಿಸಿರುವನು. ಅವುಗಳನ್ನು ಆಲಿಸಿ ಕೇಳು ; ಅಸಂಖ್ಯಾತವಾದ ರಥಗಜತುರಗಾದಿ ಸಂಪತ್ತುಳ್ಳವನೂ, ಸಮಸ್ತ ಲೋಕಕ್ಕೂ ತಂದೆ

¶ ಇಲ್ಲಿ ಸುಗ್ರೀವನು ರಾವಣನಿಗಾಗಿ ಯಾವ ಸಂದೇಶವನ್ನೂ ಹೇಳಿ ಕಳುಹಿಸದಿದ್ದರೂ, ದೂತನಾಡಿದುದೆಲ್ಲವೂ, ಸ್ವಾಮಿಯೇ ಆಡಿದಂತಾಗುವುದರಿಂದ ಹನುಮಂತನು ಸುಗ್ರೀವನ ಸಂದೇಶವೆಂದು ಹೇಳಿರುವನು. (ಗೋ)

ನಾಜಿನರ್ಾ । ಪಿತೇವ ಬಂಧುರ್ಲೋಕಸ್ಯ ಸುರೇಶ್ವರಸಮದ್ಯುತಿಃ ॥ ೪ ॥ ಜ್ಯೇಷ್ಠ ಸ್ತಸ್ಯ ಮಹಾಬಾಹುಃ ಪುತ್ರಃ ಪ್ರಿಯಕರಃ ಪ್ರಭುಃ । ಪಿತುರ್ನಿದೇಶಾನ್ನಿಷ್ಕ್ರಾಂತಃ ಪ್ರವಿಷ್ಟೋ ದಂಡಕಾವನಂ ॥ ೫ ॥ ಲಕ್ಷ್ಮಣೇನ ಸಹಭ್ರಾತ್ರಾ ಸೀತಯಾಚಾಪಿ ಭಾರ್ಯಯಾ । ರಾಮೋನಾಮ ಮಹಾತೇಜಾ ಧರ್ಮ್ಯಂ ಪಂಥಾನಮಾಶ್ರಿತಃ ॥ ೬ ॥ ತಸ್ಯ ಭಾರ್ಯಾ ವನೇ ನಷ್ಟಾ ಸೀತಾ ಪತಿಮನುವ್ರತಾ । ವೈದೇಹಸ್ಯ ಸುತಾ ರಾಜ್ಞೋ ಜನಕಸ್ಯ ಮಹಾತ್ಮನಃ ॥ ೭ ॥ ಸಮಾರ್ಗಮಾಣಸ್ತಾಂ ದೇವೀಂ ರಾಜಪುತ್ರಸ್ಸಹಾ

ರಥಗಳು, ಆನೆಗಳು, ಕುದುರೆಗಳೂ ಉಳ್ಳ, ದಶರಥೋನಾಮ - ದಶರಥನೆಂದು ಪ್ರಸಿದ್ಧನಾದ, ರಾಜಾ - ದೊರೆಯು ಇದ್ದನು. ॥೪॥ ತಸ್ಯ - ಆ ದಶರಥರಾಯನಿಗೆ, ಜ್ಯೇಷ್ಠಃಪುತ್ರಃ - ಹಿರಿಯಮಗನಾದ, ಮಹಾ ಬಾಹುಃ - ಮಹಾ ಭುಜನಾದ, ಪ್ರಿಯಕರಃ - ಇಷ್ಟಕಾರಿಯಾದ, ಪ್ರಭುಃ - ತತ್ವಾವಧಾರಣ ಸಮರ್ಥ ನಾದ, ಮಹಾತೇಜಾಃ - ಮಹಾ ತೇಜಸ್ವಿಯಾದ, ಧರ್ಮ್ಯಂ - ಧರ್ಮಪ್ರಧಾನವಾದ, ಪಂಥಾನಂ - ಮಾರ್ಗವನ್ನು, ಆಶ್ರಿತಃ - ಆಶ್ರಯಿಸಿದ, ರಾಮೋನಾಮ - ಶ್ರೀರಾಮನೆಂಬಾತನು, ಭ್ರಾತ್ರಾ - ತಮ್ಮ ನಾದ, ಲಕ್ಷ್ಮಣೇನಸಹ-ಲಕ್ಷ್ಮಣನೊಡನೆಯೂ, ಭಾರ್ಯಯಾ-ಹೆಂಡತಿಯಾದ, ಸೀತಯಾಚಾಪಿ - ಸೀತಾದೇವಿಯಿಂದಲೂ ಒಡಗೂಡಿದವನಾಗಿ, ಪಿತುಃ - ತಂದೆಯ, ನಿದೇಶಾತ್ - ಆಜ್ಞೆಯಿಂದ, ನಿಷ್ಕ್ರಾಂತಃ - ಹೊರಟು, ದಂಡಕಾವನಂ - ದಂಡಕಾರಣ್ಯವನ್ನು, ಪ್ರವಿಷ್ಟಃ - ಹೊಕ್ಕನು. ॥೫-೬॥ ತಸ್ಯ - ಆ ಶ್ರೀರಾಮನಿಗೆ, ಭಾರ್ಯಾ - ಹೆಂಡತಿಯಾದ, ಪತಿಂ - ಗಂಡನನ್ನು, ಅನುವ್ರತಾ - ಅನುಸರಿಸಿದ ನಿಯಮವುಳ್ಳ, ಮಹಾತ್ಮನಃ - ಮಹಾನುಭಾವನಾದ, ವೈದೇಹಸ್ಯ - ವಿದೇಹದೇಶಾಧಿಪ ನಾದ, ಜನಕಸ್ಯರಾಜ್ಞಃ - ಜನಕಚಕ್ರವರ್ತಿಗೆ, ಸುತಾ - ಕುವರಿಯಾದ, ಸೀತಾ - ಸೀತಾದೇವಿಯು, ವನೇ - ದಂಡಕಾರಣ್ಯದಲ್ಲಿ, ನಷ್ಟಾ - ಅದರ್ಶನವಾದಳು. ॥ ೭ ॥ ತಾಂದೇವೀಂ - ಆ ದೇವಿ ಯನ್ನು, ಮಾರ್ಗಮಾಣಃ - ಹುಡುಕುತ್ತಿರುವ, ರಾಜಪುತ್ರಃ - ರಾಜಕುಮಾರನಾದ, ಸಹಾ ನುಜಃ - ಲಕ್ಷ್ಮಣಸಹಿತನಾದ, ಸಃ - ಆ ಶ್ರೀರಾಮನು, ಋಶ್ಯಮೂಕಂ - ಋಶ್ಯಮೂಕಪರ್ವತ

ಯಂತಿರುವವನೂ, ಸುರೇಶ್ವರನಿಗೆ ಸಮಾನವಾದ ತೇಜಸ್ಸುಳ್ಳವನೂ ಆದ ದಶರಥನೆಂಬ ರಾಜನೊಬ್ಬನಿದ್ದನು. ಆ ದಶರಥ ಮಹಾರಾಜನಿಗೆ ಜ್ಯೇಷ್ಠಪುತ್ರನಾಗಿ, ಮಹಾ ಬಾಹುವೂ, ಸಮಸ್ತ ಜನರಿಗೂ ಪ್ರಿಯವನ್ನುಂಟುಮಾಡುವವನೂ, ಮಹಾ ಸಮರ್ಥನೂ, ಮಹಾ ಪರಾಕ್ರಮಶಾಲಿಯೂ, ಮಹಾ ತೇಜಸ್ವಿಯೂ ಆದ ಶ್ರೀರಾಮನೆಂಬುವನೊಬ್ಬನಿರುವನು. ಆತನು ಮಹಾ ಧೈರ್ಯಸಂಪನ್ನನು. ಆತನು ತನ್ನ ತಂದೆಯಾದ ದಶರಥರಾಜನ ಆಜ್ಞೆ ಯಿಂದ ತಮ್ಮನಾದ ಲಕ್ಷ್ಮಣಸ್ವಾಮಿಯೊಡನೆಯೂ, ಭಾರ್ಯೆಯಾದ ಸೀತಾದೇವಿಯೊಡ ನೆಯೂ ಕೂಡಿ, ಧರ್ಮಮಾರ್ಗನ್ನನುಸರಿಸಿ, ಸಮಸ್ತ ರಾಜಭೋಗಗಳನ್ನೂ ತೊರೆದು ನಾರುಮಡಿಗಳನ್ನುಟ್ಟು ತಾಪಸವೃತ್ತಿಯಿಂದ ದಂಡಕಾರಣ್ಯವನ್ನು ಪ್ರವೇಶಿಸಿದನು. ॥ ೧—೬ ॥ ಹೀಗೆ ಅವರು ಆ ದಂಡಕಾರಣ್ಯದಲ್ಲಿ ಸಂಚರಿಸುತ್ತಿರಲು, ಮಹಾತ್ಮನೂ ವಿದೇಹ ರಾಜನೂ ಆದ ಜನಕರಾಯನ ಪ್ರಿಯಪುತ್ರಿಯೂ, ಮಹಾ ಪತಿವ್ರತೆಯೂ, ರಾಮ ಮೂರ್ತಿಯ ಭಾರ್ಯೆಯೂ ಆದ ಸೀತಾದೇವಿಯು ನಷ್ಟವಾದಳು. ಆಗ ರಾಜಪುತ್ರನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡನೆ ಆಕೆಯನ್ನು ಹುಡುಕುತ್ತ ಋಷ್ಯಮೂಕ

ನುಜಃ । ಋಶ್ಯಮೂಕಮನುಸ್ಪ್ರಾಪ್ತಸ್ಸುಗ್ರೀವೇಣ ಸಮಾಗತಃ ॥ ೮ ॥ ತಸ್ಯ ತೇನ ಪ್ರತಿಜ್ಞಾತಂ ಸೀತಾಯಾಃ ಪರಿಮಾರ್ಗಣಂ । ಸುಗ್ರೀವಸ್ಯಾಪಿ ರಾಮೇಣ ಹರಿರಾಜ್ಯಂ ನಿವೇದಿತಂ ॥ ೯ ॥ ತತಸ್ತೇನ ಮೃಧೇ ಹತ್ವಾ ರಾಜಪುತ್ರೇಣ ವಾಲಿನಂ । ಸುಗ್ರೀವ ಸ್ಸ್ಥಾಪಿತೋ ರಾಜ್ಯೇ ಹರ್ಯೃಕ್ಷಾಣಾಂ ಗಣೇಶ್ವರಃ ॥ ೧೦ ॥ ಸ ಸೀತಾಮಾರ್ಗಣೇ ವ್ಯಗ್ರಸ್ಸುಗ್ರೀವಸ್ಸತ್ಯಸಂಗರಃ । ಹರೀನ್ಸಂಪ್ರೇಷಯಾಮಾಸ ದಿಶಸ್ಸರ್ವಾ ಹರೀಶ್ವರಃ ॥ ೧೨ ॥ ತಾಂ ಹರೀಣಾಂ ಸಹಸ್ರಾಣಿ ಶತಾನಿ ನಿಯುತಾನಿಚ । ದಿಕ್ಷು ಸರ್ವಾಸು

ವನ್ನು, ಅನುಪ್ರಾಪ್ತಃ-ಹೊಂದಿ, ಸುಗ್ರೀವೇಣ-ಸುಗ್ರೀವನೊಡನೆ, ಸಮಾಗತಃ-ಸೇರಿದನು. ॥ ೮ ॥ ತಸ್ಯ - ಆ ಶ್ರೀರಾಮನಿಗೆ, ಸೀತಾಯಾಃ - ಸೀತಾದೇವಿಯ, ಪರಿಮಾರ್ಗಣಂ - ಹುಡುಕುವಿಕೆಯು, ತೇನ - ಆ ಸುಗ್ರೀವನಿಂದ, ಪ್ರತಿಜ್ಞಾತಂ - ಪ್ರತಿಜ್ಞೆ ಮಾಡಲ್ಪಟ್ಟಿತು, ತೇನ - ಆ ಶ್ರೀರಾಮನಿಂದ, ಸುಗ್ರೀವಸ್ಯಾಪಿ - ಸುಗ್ರೀವನಿಗೂ ಕೂಡ, ಹರಿರಾಜ್ಯಂ - ಕಪಿರಾಜ್ಯವು, ನಿವೇದಿತಂ - ಒಪ್ಪಿಸಲ್ಪಟ್ಟಿತು. ॥ ೯ ॥ ತತಃ - ಬಳಿಕ, ಮೃಧೇ - ಕಾಳಗದಲ್ಲಿ, ವಾಲಿನಂ - ವಾಲಿಯನ್ನು, ಹತ್ವಾ - ಸಂಹರಿಸಿ, ರಾಜಪುತ್ರೇಣ - ದಶರಥರಾಜ ಪುತ್ರನಾದ, ತೇನ - ಆ ಶ್ರೀರಾಮನಿಂದ, ಸುಗ್ರೀವಃ - ಸುಗ್ರೀವನು, ಹರ್ಯೃಕ್ಷಾಣಾಂ - ಕಪಿಋಕ್ಷರ, ಗಣೇಶ್ವರಃ - ಸಮೂಹೇಶ್ವರನಾಗಿ, ರಾಜ್ಯೇ - ರಾಜ್ಯದಲ್ಲಿ, ಸ್ಥಾಪಿತಃ - ನಿಲ್ಲಿಸಲ್ಪಟ್ಟನು. ॥ ೧೦ ॥ ತ್ವಯಾ - ನಿನ್ನಿಂದ, ವಿಜ್ಞಾತಪೂರ್ವಃ - ಪೂರ್ವದಲ್ಲಿಯೇ ತಿಳಿದಿರುವ, ವಾನರಃ - ಸ್ವಯಂಕಪಿಯಾದ, ವಾನರಪುಂಗವಃ - ಕಪಿಶ್ರೇಷ್ಠನಾದ, ವಾಲೀಚ - ವಾಲಿಯೂ ಸಹ, ಸಂಖ್ಯೇ - ಯುದ್ಧದಲ್ಲಿ, ರಾಮೇಣ - ಶ್ರೀರಾಮನಿಂದ, ಏಕೇನಶರೇಣ - ಒಂದೇ ಬಾಣದಿಂದ, ನಿಹತಃ - ಕೊಲ್ಲಲ್ಪಟ್ಟನು. ॥ ೧೧ ॥ ಸತ್ಯಸಂಗರಃ - ಸತ್ಯಸಂಧನಾದ, ಸಸುಗ್ರೀವಃ - ಆ ಸುಗ್ರೀವನು, ಹರೀಶ್ವರಸ್ಸ - ವಾನರಾಧಿಪತಿಯಾದವನಾಗಿ, ಸೀತಾಮಾರ್ಗಣೇ - ಸೀತಾದೇವಿಯ ಹುಡುಕುವಿಕೆಯಲ್ಲಿ, ವ್ಯಗ್ರಃ - ಆಸಕ್ತನಾಗಿ, ಸರ್ವಾದಿಶಃ - ಎಲ್ಲಾದಿಕ್ಕುಗಳಿಗೂ, ಹರೀ - ವಾನರರನ್ನು, ಸಂಪ್ರೇಷಯಾಮಾಸ - ಕಳುಹಿಸಿದನು. ॥ ೧೨ ॥ ಹರೀಣಾಂ - ಕಪಿಗಳ, ಶತಾನಿ - ನೂರಾದ, ಅಯುತಾನಿ - ಹತ್ತುಸಾವಿರವಾದ, ಸಹಸ್ರಾಣಿ - ಸಾವಿರಗಳು, ತಾಂ - ಆ ಸೀತಾದೇವಿಯನ್ನು,

---

ಪರ್ವತಕ್ಕೈತಂದು ಅಲ್ಲಿ ಸುಗ್ರೀವನೊಡನೆ ಸ್ನೇಹವನ್ನು ಬೆಳೆಸಿದನು. ಹೀಗೆ ರಾಮಸುಗ್ರೀವರಿಗೆ ಸ್ನೇಹವಾದ ಬಳಿಕ, ಶ್ರೀರಾಮನು ಸುಗ್ರೀವನನ್ನು ವಾನರರಾಜ್ಯಕ್ಕೆ ದೊರೆಯನ್ನಾಗಿ ಮಾಡುವುದಾಗಿಯೂ, ಸುಗ್ರೀವನು ಅದಕ್ಕೆ ಬದಲಾಗಿ ಶ್ರೀರಾಮನ ಭಾರ್ಯೆಯಾದ ಸೀತಾದೇವಿಯನ್ನು ಹುಡುಕುವುದಾಗಿಯೂ ಒಬ್ಬರಿಗೊಬ್ಬರು ಪ್ರತಿಜ್ಞೆಮಾಡಿಕೊಟ್ಟರು. ಆಮೇಲೆ ದಶರಥರಾಜಕುಮಾರನಾದ ಶ್ರೀರಾಮನು ಸುಗ್ರೀವನ ಅಣ್ಣನಾದ ವಾಲಿಯನ್ನು ಯುದ್ಧದಲ್ಲಿ ಸಂಹರಿಸಿ, ವಾನರಭಲ್ಲೂಕ ಸಮೂಹಗಳಿಗೆ ಸುಗ್ರೀವನನ್ನು ದೊರೆಯನ್ನಾಗಿ ಮಾಡಿದನು. ಎಲೈ ರಾಕ್ಷಸೇಶ್ವರನೇ! ನೀನು ವಾಲಿಯನ್ನು ಬಲ್ಲೆ; ಅಂತಹ ಅಮಿತಪರಾಕ್ರಮಶಾಲಿಯಾದ ವಾಲಿಯನ್ನು ಶ್ರೀರಾಮನು ಒಂದೇ ಒಂದು ಬಾಣದಿಂದ ಸಂಹರಿಸಿಬಿಟ್ಟನು. ಅಯ್ಯಾ! ಆಮೇಲಿನ ಸಂಗತಿಯನ್ನು ಕೇಳು ; ಸತ್ಯಪ್ರತಿಜ್ಞೆಯುಳ್ಳವನೂ, ವಾನರೇಶ್ವರನೂ ಆದ ಸುಗ್ರೀವನು ರಾಮಪತ್ನಿಯಾದ ಸೀತಾದೇವಿಯನ್ನು ಹುಡುಕುವುದಕ್ಕೋಸ್ಕರ ದಶದಿಶೆಗಳಿಗೂ ಸಮರ್ಥರಾದ ವಾನರರನ್ನುಕಳುಹಿಸಿದ್ದಾನೆ. ॥೭–೧೨॥ ಆ ವಾನರರಾದರೋ, ಸಾವಿರಸಾವಿರವಾಗಿಯೂ, ಲಕ್ಷಲಕ್ಷವಾಗಿಯೂ ಎಲ್ಲ ದಿಕ್ಕುಗಳಲ್ಲಿಯೂ ಮಾತ್ರವಲ್ಲದೆ ಭೂಮ್ಯಾ

**ಮಾರ್ಗಂತೇ ಹ್ಯಧಶ್ಚೋಪರಿ ಚಾಂಬರೇ ॥ ೧೩ ॥ ವೈನತೇಯಸಮಾಃ ಕೇಚಿತ್ಕೇಚಿ
ತ್ತತ್ರಾನಿಲೋಪಮಾಃ । ಅಸಂಗಗತಯಶ್ಶೀಘ್ರಾ ಹರಿವೀರಾ ಮಹಾಬಲಾಃ ॥ ೧೪ ॥
ಅಹಂತು ಹನುಮಾನ್ನಾಮ ಮಾರುತಸ್ಯೌರಸಸ್ಸುತಃ । ಸೀತಾಯಾಸ್ತು ಕೃತೇ
ತೂರ್ಣಂ ಶತಯೋಜನಮಾಯತಂ ॥ ೧೫ ॥ ಸಮುದ್ರಂ ಲಂಘಯಿತ್ವೈವ ತಾಂ
ದಿದೃಕ್ಷುರಿಹಾಗತಃ । ಭ್ರಮತಾಚ ಮಯಾ ದೃಷ್ಟಾ ಗೃಹೇ ತೇ ಜನಕಾತ್ಮಜಾ ॥೧೬॥
ತದ್ಭವಾನ್ ದೃಷ್ಟಧರ್ಮಾರ್ಥಸ್ತಪಃ ಕೃತಪರಿಗ್ರಹಃ । ಪರದಾರಾನ್ ಮಹಾಪ್ರಾಜ್ಞ !
ನೋಪರೋದ್ಧುಂ ತ್ವಮರ್ಹಸಿ ॥ ೧೭ ॥ ನಹಿ ಧರ್ಮವಿರುದ್ಧೇಷು ಬಹ್ವಪಾಯೇಷು**

ಸರ್ವಾಸುದಿಕ್ಷು - ಸಮಸ್ತ ದಿಕ್ಕುಗಳಲ್ಲಿಯೂ, ಅಧಶ್ಚ - ಕೆಳಗಡೆಯಲ್ಲಿಯೂ, ಉಪರಿಚ - ಮೇಲ್ಗಡೆಯಲ್ಲಿಯೂ, ಅಂಬರೇಚ - ಅಂತರಿಕ್ಷದಲ್ಲಿಯೂ, ಮಾರ್ಗಂತೇ - ಹುಡುಕುತ್ತಿದ್ದಾರೆ. ॥ ೧೩ ॥ ತತ್ರ - ಆ ವಾನರಸೈನ್ಯದಲ್ಲಿ, ಕೇಚಿತ್ - ಕೆಲವರು, ವೈನತೇಯಸಮಾಃ - ಗರುಡಸಮಾನರು, ಕೇಚಿತ್ - ಕೆಲವರು, ಅನಿಲೋಪಮಾಃ - ವಾಯುತುಲ್ಯರು, ಶೀಘ್ರಾಃ - ಶೀಘ್ರಗಮನವುಳ್ಳ, ಮಹಾಬಲಾಃ - ಬಹು ಬಲಾಢ್ಯರಾದ, ಹರಿವೀರಾಃ - ವಾನರಶ್ರೇಷ್ಠರು, ಅಸಂಗಗತಯಃ - ಭೂಸಂಬಂಧವಿಲ್ಲದೆಯೇ ಗಮಿಸುವ ಶೀಲವುಳ್ಳವರು. ॥ ೧೪ ॥ ಅಹಂತು - ನಾನಾದರೆ, ಹನುಮಾನ್ನಾಮ - ಹನುಮಂತನೆಂದು ಪ್ರಸಿದ್ಧನು, ಮಾರುತಸ್ಯ - ವಾಯುವಿಗೆ, ಔರಸಸ್ಸುತಃ - ಔರಸಪುತ್ರನು, ಸೀತಾಯಾಃ ಕೃತೇತು - ಸೀತಾದೇವಿಯ ನಿಮಿತ್ತವಾಗಿ, ತೂರ್ಣಂ - ಜಾಗ್ರತೆಯಾಗಿ, ಶತಯೋಜನಂ - ನೂರು ಗಾವುದವುಳ್ಳ, ಆಯತಂ - ದೀರ್ಘವಾದ, ಸಮುದ್ರಂ - ಸಮುದ್ರವನ್ನು, ಲಂಘಯಿತ್ವಾ - ದಾಟಿ, ತಾಮೇವ - ಆ ಸೀತಾದೇವಿಯನ್ನೇ, ದಿದೃಕ್ಷುಃ - ನೋಡಲಿಚ್ಛಿಸಿದವನಾಗಿ, ಇಹ - ಇಲ್ಲಿಗೆ, ಆಗತಃ - ಬಂದೆನು, ತೇಗೃಹೇ - ನಿನ್ನಮನೆಯಲ್ಲಿ, ಭ್ರಮತಾ - ತಿರುಗುತ್ತಿರುವ, ಮಯಾ - ನನ್ನಿಂದ, ಜನಕಾತ್ಮಜಾಚ - ಸೀತಾದೇವಿಯೂ ಕೂಡ, ದೃಷ್ಟಾ - ಕಾಣಲ್ಪಟ್ಟಳು. ॥೧೫-೧೬॥ ಹೇ ಮಹಾಪ್ರಾಜ್ಞ - ಎಲೈ ಬಹು ತಿಳುವಳಿಕೆಯುಳ್ಳವನೇ, ಭವಾನ್ - ನೀನು, ದೃಷ್ಟ....ರ್ಥಃ - ಶಾಸ್ತ್ರದಿಂದ ತಿಳಿಯಲ್ಪಟ್ಟ ಧರ್ಮಾರ್ಥಗಳುಳ್ಳವನು, ತಪಃ....ಹಃ - ಪ್ರತಿಗೃಹೀತವಾದ ತಪಸ್ಸುಳ್ಳವನು, ತತ್ - ಆ ಕಾರಣದಿಂದ, ತ್ವಂ - ನೀನು, ಪರದಾರಾನ್ - ಪರಸತಿಯರನ್ನು, ಉಪರೋದ್ಧುಂ - ನಿರ್ಬಂಧಪಡಿಸುವದಕ್ಕೆ, ನಾರ್ಹಸಿ - ಯೋಗ್ಯನಲ್ಲ. ॥ ೧೭ ॥ ಭವದ್ವಿಧಾಃ - ನಿನ್ನಂತಹ, ಬುದ್ಧಿಮಂತಃ - ಮತಿವಂತರು, ಧರ್ಮ....ಷು - ಧರ್ಮಕ್ಕೆ ವಿರುದ್ಧವಾದ, ಬಹ್ವಪಾಯೇಷು - ಬಹಳ ಅನರ್ಥಕರಗಳಾದ, ಮೂಲ

ಕಾಶ ಪಾತಾಳಗಳಲ್ಲಿಯೂ ಶ್ರೀರಾಮನ ಭಾರ್ಯೆಯಾದ ಸೀತಾದೇವಿಯನ್ನು ಹುಡುಕುತ್ತಿರುವರು. ಆ ವಾನರವೀರರಲ್ಲಿ ಕೆಲವರು ಗರುಡನಿಗೆ ಸಮಾನವಾದವರು ; ಕೆಲವರು ವಾಯುವೇಗವುಳ್ಳವರು ; ಕೆಲವರು ಭೂಸ್ಪರ್ಶವಿಲ್ಲದೆ, ಬಹು ಶೀಘ್ರವಾಗಿ ಸಂಚರಿಸುವ ಸಾಮರ್ಥ್ಯವುಳ್ಳವರು. ನಾನಾದರೋ ಸೀತಾದೇವಿಯನ್ನು ಕಾಣಲೋಸುಗ ಶತಯೋಜನ ವಿಸ್ತೀರ್ಣವುಳ್ಳ ಸಮುದ್ರವನ್ನು ದಾಟಿ ಇಲ್ಲಿಗೆ ಬಂದೆನು. ನನ್ನ ಹೆಸರು ಹನುಮಂತನೆಂದು ; ನಾನು ವಾಯುದೇವನ ಔರಸಪುತ್ರನು. ನಾನು ಇಲ್ಲಿ ಸಂಚರಿಸುತ್ತಿರುವನಾಗಿ ಆ ರಾಮನ ಮಡದಿಯಾದ ಜನಕಾತ್ಮಜೆಯನ್ನು ನಿನ್ನ ಮನೆಯಲ್ಲಿ ಕಂಡೆನು. ” ॥ ೧೩–೧೬ ॥ ಎಲೈ ರಾಕ್ಷಸೇಶ್ವರನೇ! ಆದುದರಿಂದ ಈಗ ನಾನು ಹೇಳುವ, ನಮ್ಮ ಪ್ರಭುವಾದ ಸುಗ್ರೀವನ ಹಿತೋಕ್ತಿಗಳನ್ನು ಕೇಳು. ಎಲೈ ರಾಕ್ಷಸಪ್ರಭುವೇ! ನೀನು ಸಮಸ್ತ ಧರ್ಮಾರ್ಥಗಳನ್ನೂ ಬಲ್ಲವನು.

ಕರ್ಮಸು । ಮೂಲಘಾತಿಷು ಸಜ್ಜಂತೇ ಬುದ್ಧಿಮಂತೋ ಭವದ್ವಿಧಾಃ ॥ ೧೮ ॥
ಕಶ್ಚ ಲಕ್ಷ್ಮಣಮುಕ್ತಾನಾಂ ರಾಮಕೋಪಾನುವರ್ತಿನಾಂ । ಶರಾಣಾಮಗ್ರತಸ್ಸ್ಥಾತುಂ
ಶಕ್ತೋ ದೇವಾಸುರೇಷ್ವಪಿ ॥ ೧೯ ॥ ನಚಾಪಿ ತ್ರಿಷು ಲೋಕೇಷು ರಾಜನ್ವಿದ್ಯೇತ
ಕಶ್ಚನ । ರಾಘವಸ್ಯ ವ್ಯಲೀಕಂ ಯಃ ಕೃತ್ವಾ ಸುಖಮವಾಪ್ನುಯಾತ್ ॥ ೨೦ ॥
ತತ್ತ್ರಿಕಾಲಹಿತಂ ವಾಕ್ಯಂ ಧರ್ಮ್ಯಮರ್ಥಾನುಬಂಧಿಚ । ಮನ್ಯಸ್ವ ನರದೇವಾಯ

ಘಾತಿಷು - ಮೂಲನಾಶಕರಗಳಾದ, ಕರ್ಮಸು - ಕೆಲಸಗಳಲ್ಲಿ, ನಸಜ್ಜಂತೇಹಿ - ತೊಡಗುವದಿಲ್ಲವಷ್ಟೆ. ॥ ೧೮ ॥ ರಾಮ....ನಾಂ - ಶ್ರೀರಾಮನ ಕ್ರೋಧಕ್ಕೊಳಪಟ್ಟ, ಲಕ್ಷ್ಮ....ನಾಂ - ಲಕ್ಷ್ಮಣನಿಂದ ಬಿಡಲ್ಪಟ್ಟ, ಶರಾಣಾಂ - ನಿಡಿಗೋಲುಗಳ, ಅಗ್ರತಃ - ಮುಂದೆ, ಸ್ಥಾತುಂ - ನಿಲ್ಲುವದಕ್ಕೆ, ದೇವಾಸುರೇಷ್ವಪಿ - ದೇವರಾಕ್ಷಸರಲ್ಲಾಗಲಿ, ಕಶ್ಚ - ಯಾರುತಾನೇ, ಶಕ್ತಃ - ಸಮರ್ಥನಾಗುವರು. ॥ ೧೯ ॥ ಹೇ ರಾಜ೯ - ಎಲೈ ಪ್ರಭುವೇ, ಯಃ - ಯಾವ ಪುರುಷನು, ರಾಘವಸ್ಯ - ಶ್ರೀರಾಮನಿಗೆ, ವ್ಯಲೀಕಂ - ಅಪರಾಧವನ್ನು, ಕೃತ್ವಾ - ಮಾಡಿ, ಸುಖಂ - ಕ್ಷೇಮವನ್ನು, ಅವಾಪ್ನುಯಾತ್ - ಹೊಂದುವನೋ, ಸಃ - ಅಂತಹ, ಕಶ್ಚನ-ಒಬ್ಬನೂ, ತ್ರಿಷ್ವಪಿಲೋಕೇಷುಚ - ಮೂರು ಲೋಕಗಳಲ್ಲಿಯೂ, ನವಿದ್ಯೇತ - ಇರಲಾರನು. ॥ ೨೦ ॥ ತತ್ - ಆ ಕಾರಣದಿಂದ, ತ್ರಿಕಾಲಹಿತಂ - ಭೂತ ಭವಿಷ್ಯತ್ ವರ್ತಮಾನ ಕಾಲಗಳಲ್ಲಿಯೂ ಹಿತಕರವಾದ, ಧರ್ಮ್ಯಂ - ಧರ್ಮಪ್ರಧಾನವಾದ, ಅರ್ಥಾನುಬಂಧಿಚ - ಕಾರ್ಯಕಾರಿಯೂ ಆದ, ವಾಕ್ಯಂ - ಮಾತನ್ನು, ಮನ್ಯಸ್ವ - ಯೋಚಿಸು, ನರದೇವಾಯ - ಮನುಷ್ಯನಾದರೂ ದೇವತಾಸ್ವರೂಪನಾದ ಶ್ರೀರಾಮನಿಗೆ, ಜಾನಕೀ - ಸೀತಾದೇವಿಯು, ಪ್ರತಿದೀಯತಾಂ - ಕೊಡಲ್ಪ

ಮಹತ್ತರವಾದ ತಪಸ್ಸನ್ನು ಮಾಡಿ ಮಹಾಮಹಿಮನಾದವನು. ಪ್ರಾಜ್ಞನೂ, ಪಂಡಿತನೂ ಆದ ಎಲೈ ರಾವಣನೇ! ಇಂತಹ ನೀನು ಹೀಗೆ ಪರಸ್ತ್ರೀಯರನ್ನು ನಿನ್ನ ಮನೆಯಲ್ಲಿ ನಿರ್ಬಂಧಗೊಳಿಸುವುದು ನ್ಯಾಯವಾದುದಲ್ಲವು. ನಿನ್ನಂತಹ ಪ್ರಾಜ್ಞರು ಧರ್ಮವಿರುದ್ಧವಾದವೂ, ವರ್ಣಿಸಲಾಗದಂತಹ ವಿಪತ್ತುಗಳನ್ನುಂಟುಮಾಡುವವೂ, ಸಮೂಲವಾಗಿ ನಾಶವನ್ನು ಹೊಂದಿಸುವವೂ ಆದ ಇಂತಹ ಪರದಾರಾಪಹರಣ ಕಾರ್ಯವನ್ನು ಎಂದಿಗೂ ಮಾಡಬಾರದು. ಕಡೆಗೆ ಅಂತಹ ಕೆಲಸಗಳನ್ನು ಮಾಡಲು ಯತ್ನಿಸಲೂ ಬಾರದಲ್ಲವೆ? ॥೧೭–೧೮॥ ಎಲೈ ರಾಕ್ಷಸೇಂದ್ರನೇ! ನನ್ನನ್ನು ಸಮೂಲವಾಗಿ ನಾಶಹೊಂದಿಸುವ ಧೀರನಾದರೂ ಯಾರಿರುವರೆಂದು ಶಂಕಿಸಬೇಡ; ಕೇಳು. ಶ್ರೀರಾಮನು ಕ್ರುದ್ಧನಾದುದನ್ನು ನೋಡಿದಮಾತ್ರದಿಂದಲೇ ಆತನ ತಮ್ಮನಾದ ಲಕ್ಷ್ಮಣಸ್ವಾಮಿಯು ಬಹುವಾಗಿ ಕನಲಿ ಬಾಣಪ್ರಯೋಗ ಮಾಡಿದುದಾದರೆ, ದೇವಾಸುರರಲ್ಲಿ ಯಾರೂ ಅದಕ್ಕೆ ಎದುರಾಗಲಾರರು. ಆತನ ಬಾಣಪ್ರಯೋಗವೇಗವನ್ನು ಸಹಿಸಲು ಯಾವನಿಗೂ ಸಾಮರ್ಥ್ಯವಿಲ್ಲವು. ರಾಕ್ಷಸರಾಜ! ಶ್ರೀರಾಮಮೂರ್ತಿಗೆ ಅಪರಾಧಮಾಡಿ ಜೀವಸಹಿತ ಉಳಿಯುವುದಕ್ಕೆ ಮೂರುಲೋಕಗಳಲ್ಲಿ ಯಾವನಿಗೂ ಸಾಧ್ಯವಾಗುವುದಿಲ್ಲವು. ಎಲೈ ಪ್ರಭುವೆ! ನಮ್ಮ ದೊರೆಯಾದ ಸುಗ್ರೀವನು ಈ ಮಾತುಗಳನ್ನು ನಿನ್ನೊಡನೆ ಹೇಳಬೇಕೆಂದು ನನಗಾಜ್ಞಾಪಿಸಿರುವನು. ಆದುದರಿಂದ ಭೂತಭವಿಷ್ಯದ್ವರ್ತಮಾನ ಕಾಲಗಳಲ್ಲಿ ಶ್ರೇಯಸ್ಸನ್ನುಂಟುಮಾಡುವವೂ, ಧರ್ಮಾರ್ಥಸಹಿತವಾದವೂ ಆದ ಆತನ ಮಾತುಗಳನ್ನು ಮನ್ನಿಸಿ ಆ ಪುರುಷೋತ್ತಮನಿಗೆ ನೀನು

ಜಾನಕೀ ಪ್ರತಿದೀಯತಾಂ ॥೨೧॥ ದೃಷ್ಟಾಹೀಯಂ ಮಯಾ ದೇವೀ ಲಬ್ಧಂ ಯದಿಹ ದುರ್ಲಭಂ । ಉತ್ತರಂ ಕರ್ಮ ಯಚ್ಛೇಷಂ ನಿಮಿತ್ತಂ ತತ್ರ ರಾಘವಃ ॥ ೨೨ ॥ ಲಕ್ಷಿತೇಯಂ ಮಯಾ ಸೀತಾ ತಥಾ ಶೋಕಪರಾಯಣಾ । ಗೃಹ್ಯ ಯಾಂ ನಾಭಿ ಜಾನಾಸಿ ಪಂಚಾಸ್ಯಾಮಿವ ಪನ್ನಗೀಂ ॥ ೨೩ ॥ ನೇಯಂ ಜರಯಿತುಂ ಶಕ್ಯಾ ಸಾಸುರೈ ರಮರೈರಪಿ । ವಿಷಸಂಸ್ಪೃಷ್ಟಮತ್ಯರ್ಥಂ ಭುಕ್ತಮನ್ನಮಿವೌಜಸಾ ॥ ೨೪ ॥ ತಪ ಸ್ಸಂತಾಪಲಬ್ಧಸ್ತೇ ಯೋಽಯಂ ಧರ್ಮಪರಿಗ್ರಹಃ । ನ ಸ ನಾಶಯಿತುಂ ನ್ಯಾಯ್ಯ

ಡಲಿ. ॥ ೨೧ ॥ ಹಿ - ಯಾವ ಕಾರಣದಿಂದ, ಇಯಂದೇವೀ - ಈ ಸೀತಾದೇವಿಯು, ಮಯಾ - ನನ್ನಿಂದ, ದೃಷ್ಟಾ - ನೋಡಲ್ಪಟ್ಟಳೋ, ಇಹ - ಈ ಪಟ್ಟಣದಲ್ಲಿ, ಯತ್ - ಯಾವದು, ದುರ್ಲಭಂ- ಇತರ ವಾನರರಿಗೆ ಅಸಾಧ್ಯವೋ, ತತ್ - ಅದು, ಲಬ್ಧಂ - ಹೊಂದಲ್ಪಟ್ಟಿತು, ಶೇಷಂ - ಮಿಕ್ಕ, ಉತ್ತರಂ - ಮುಂದೆ ಮಾಡತಕ್ಕ, ಕರ್ಮ - ಕೆಲಸವು, ಯತ್ - ಯಾವುದೋ, ತತ್ರ - ಆ ಕಾರ್ಯ ದಲ್ಲಿ, ರಾಘವಃ - ಶ್ರೀರಾಮನು, ನಿಮಿತ್ತಂ - ಹೇತುವು. ॥೨೨॥ ಪಂಚಾಸ್ಯಾಂ - ಐದು ತಲೆಗಳುಳ್ಳ, ಪನ್ನಗೀಮಿವ - ಹೆಣ್ಣುಹಾವನ್ನಂತೆ, ಯಾಂ - ಯಾವ ಸೀತಾದೇವಿಯನ್ನು, ಗೃಹ್ಯ - ತೆಗೆದುಕೊಂಡು ಬಂದು, ನಾಭಿಜಾನಾಸಿ - ಅರಿಯದಿರುವೆಯೋ, ತಥಾ - ಆ ಪ್ರಕಾರ, ಶೋಕ....ಣಾ - ದುಃಖಾ ಕ್ರಾಂತಳಾದ, ಇಯಂಸೀತಾ - ಈ ಸೀತಾದೇವಿಯು, ಮಯಾ - ನನ್ನಿಂದ, ಲಕ್ಷಿತಾ - ನೋಡಲ್ಪ ಟ್ಟಳು. ॥ ೨೩ ॥ ಇಯಂ-ಈ ಸೀತಾದೇವಿಯು, ಸಾಸುರೈಃ-ರಾಕ್ಷಸರಿಂದೊಡಗೂಡಿದ, ಅಮರೈರಪಿ- ದೇವತೆಗಳಿಂದಲೂ, ಓಜಸಾ - ಪರಾಕ್ರಮದಿಂದ, ವಿಷಸಂಸ್ಪೃಷ್ಟಂ - ವಿಷಮಿಶ್ರವಾಗಿ, ಅತ್ಯರ್ಥಂ - ಬಹಳವಾಗಿ, ಭುಕ್ತಂ-ತಿಂದ, ಅನ್ನಮಿವ ಅನ್ನದಂತೆ, ಓಜಸಾ-ಪರಾಕ್ರಮದಿಂದ, ಜರಯಿತುಂ- ದಕ್ಕಿಸಿಕೊಳ್ಳುವುದಕ್ಕೆ, ನಶಕ್ಯಾ - ಸಾಧ್ಯಳಲ್ಲ. ॥ ೨೪ ॥ ತಪ....ಬ್ಧಃ - ತಪಶ್ಚರಣದಿಂದ ಹೊಂದ ಲ್ಪಟ್ಟ, ಯೋಽಯಂ - ಹಃ - ಧರ್ಮಸಂಗ್ರಹವು ಯಾವದುಂಟೋ, ತೇ - ನಿನ್ನ, ಆತ್ಮ....ಹಃ -

---

ನಿರ್ಬಂಧಗೊಳಿಸಿಟ್ಟುಕೊಂಡಿರುವ ಜಾನಕಿಯನ್ನು ಸಮರ್ಪಿಸು. ಇದರಿಂದ ನಿನಗೆ ಶ್ರೇಯ ಸ್ಸಾಗುವುದು. ॥ ೧೯—೨೧ ॥ “ ಜಾನಕಿಯನ್ನು ನಾನೇ ಕದ್ದು ತಂದಿರುವನೆಂದು ಹೇಳುವೆ ?” ಎಂದು ಕೇಳುವೆಯೇನೋ ! ರಾವಣ ! ಆ ದೇವಿಯನ್ನು ನಾನು ನಿನ್ನ ಮನೆಯಲ್ಲಿ ಕಂಡೆನು. ಇತರ ವಾನರಾರಿಗೂ ಅಲಭ್ಯವಾದ ಸೀತಾದರ್ಶನವು ನನಗೆ ದೊರೆಯಿತು, “ ಎಂದಮೇಲೆ ಕರೆದುಕೊಂಡು ಹೋಗಲಿಲ್ಲವೇಕೆ”ಂದರೆ, ಆ ಕಾರ್ಯವು ಶ್ರೀರಾಮನಿಂದಲೇ ಆಗಬೇಕು. ನಮ್ಮ ಪ್ರಭುವಾದ ಸುಗ್ರೀವನು ಆ ಕಾರ್ಯವನ್ನು ಮಾಡಿಕೊಂಡು ಬಾರೆಂದು ನನಗೆ ಆಜ್ಞಾ ಪಿಸಿಲ್ಲ. ರಾವಣಾ ! ಶೋಕಾಪರಾಯಣೆಯಾದ ಸೀತಾದೇವಿಯನ್ನು ನಾನು ನಿನ್ನ ಮನೆಯಲ್ಲಿ ಕಂಡೆನು. ಎಲೈ ರಾಕ್ಷಸನೇ ! ನೀನು ಆಕೆಯನ್ನು ಐದು ಹೆಡೆಗಳುಳ್ಳ ಹೆಣ್ಣು ಹಾವೆಂದು ತಿಳಿಯದಿದ್ದೀಯೆ. ಅವಳೆಂದಿಗೂ ನಿನಗೆ ವಶವಾಗುವವಳಲ್ಲ. ಮಹಾ ವಿಷಸರ್ಪಿಣಿಯಂತೆ ನಿನ್ನ ಪ್ರಾಣಗಳನ್ನೇ ಅಪಹರಿಸಿಬಿಡುವಳು. ವಿಷಸಂಸೃಷ್ಟವಾದ ಅನ್ನವನ್ನು ತಿಂದವನು ಅದನ್ನು ಅರಗಿಸಿಕೊಳ್ಳಲು ಹೇಗೆ ಸಾಧ್ಯವಾಗುವುದಿಲ್ಲವೋ ಹಾಗೆ ಈ ಸೀತಾದೇವಿಯನ್ನು ಕೊಂಡುಹೋಗಿ ದಕ್ಕಿಸಿಕೊಳ್ಳಲು ದೇವಾಸುರರಿಂದಲೂ ಸಾಧ್ಯವಾಗುವುದಿಲ್ಲವು. ಅಯ್ಯಾ ರಾವಣೇಶ್ವರನೇ ! ನೀನು ಮಹಾತ್ಮನು ; ತಪಸ್ಸನ್ನಾಚರಿಸಿ ಬಹಳವಾದ ಪುಣ್ಯವನ್ನಾರ್ಜ

ಆತ್ಮಪ್ರಾಣಪರಿಗ್ರಹಃ ॥೨೫॥ ಅವಧ್ಯತಾಂ ತಪೋಭಿರ್ಯಾಂ ಭವಾನ್ಸಮನುಪಶ್ಯತಿ। ಆತ್ಮನಸ್ಸಾಸುರೈರ್ದೇವೈರ್ಹೇತುಸ್ತತ್ರಾಪ್ಯಯಂ ಮಹಾನ್ ॥ ೨೬ ॥ ಸುಗ್ರೀವೋ ನಹಿ ದೇವೋಽಯಂ ನಾಸುರೋ ನಚ ರಾಕ್ಷಸಃ। ನದಾನವೋ ನಗಂಧರ್ವೋ ನಯಕ್ಷೋ ನಚಪನ್ನಗಃ। ತಸ್ಮಾತ್ಪ್ರಾಣಪರಿತ್ರಾಣಂ ಕಥಂ ರಾಜನ್ಕರಿಷ್ಯಸಿ ? ॥ ೨೭ ॥ ನತು ಧರ್ಮೋಪಸಂಹಾರಮಧರ್ಮಫಲಸಂಹಿತಂ। ತದೇವ ಫಲಮನ್ವೇತಿ ಧರ್ಮಶ್ಚಾ

ಪ್ರಾಣರಕ್ಷಾಕರವಾದ, ಸಃ - ಆ ತಪೋಸಂಗ್ರಹವು, ನಾಶಯಿತುಂ - ನಾಶಮಾಡಿಕೊಳ್ಳುವದು, ನನ್ಯಾಯ್ಯಃ - ಯುಕ್ತವಲ್ಲವು. ॥ ೨೫ ॥ ತಪೋಭಿಃ - ತಪಸ್ಸುಗಳಿಂದ, ಸಾಸುರೈಃ - ರಾಕ್ಷಸರಿಂದೊಡಗೂಡಿದ, ದೇವೈಃ - ದೇವತೆಗಳಿಂದಲೂ, ಆತ್ಮನಃ - ತನಗೆ, ಯಾಮವಧ್ಯತಾಂ - ಯಾವ ಅವಧ್ಯತ್ವವನ್ನು, ಭವಾನ್ - ನೀನು, ಸಮನುಪಶ್ಯತಿ - ನೋಡುತ್ತಿರುವೆಯೋ, ತತ್ರಾಪಿ - ಆ ಅವಧ್ಯತೆಯಲ್ಲಿಯೂ, ಮಹಾನ್ - ಮಹಾತ್ಮನಾದ, ಅಯಂ - ಈ ಸುಗ್ರೀವನೇ, ಹೇತುಃ - ಕಾರಣವು. ॥ ೨೬ ॥ ಹಿ - ಯಾವ ಕಾರಣದಿಂದ, ಅಯಂಸುಗ್ರೀವಃ - ಈ ಸುಗ್ರೀವನು, ದೇವಃ - ದೇವನು, ನ - ಅಲ್ಲವೋ, ಅಸುರಃ - ಅಸುರನೆಂಬರಾಕ್ಷಸಭೇದವು, ನ-ಅಲ್ಲವೋ, ರಾಕ್ಷಸಶ್ಚ-ರಾಕ್ಷಸಜಾತೀಯನು, ನ-ಅಲ್ಲವೋ, ದಾನವಃ - ದನುವಂಶೋತ್ಪನ್ನನು, ನ-ಅಲ್ಲವೋ, ಗಂಧರ್ವಃ-ಗಂಧರ್ವನು, ನ-ಅಲ್ಲವೋ, ಯಕ್ಷಃ-ಯಕ್ಷನು, ನ-ಅಲ್ಲವೋ, ಪನ್ನಗಶ್ಚ - ಸರ್ಪನೂ, ನ - ಅಲ್ಲವೋ, ತಸ್ಮಾತ್ - ಆ ಸುಗ್ರೀವನಿಂದ, (ಹೇ ರಾಜನ್ - ಎಲೈ ರಾಜನೇ,) ಪ್ರಾಣ....ಣಂ - ಪ್ರಾಣಸಂರಕ್ಷಣೆಯನ್ನು, ಕಥಂಕರಿಷ್ಯಸಿ - ಹೇಗೆಮಾಡಿಕೊಳ್ಳುವೆ. ॥ ೨೭ ॥ ಧರ್ಮೋ....ರಂ - ಧರ್ಮದಿಂದ ಸಂಪಾದಿಸಲ್ಪಟ್ಟ ಧರ್ಮಫಲವು, ಅಧ....ತಂ - ಅಧರ್ಮಫಲದೊಡನೆ ಭೋಗಾರ್ಹವಾದದ್ದು, ನ - ಆಗುವದಿಲ್ಲ, ತತ್ಫಲಮೇವ - ಆ ಧರ್ಮಫಲವೇ, ಅನ್ವೇತಿ - ಧರ್ಮಫಲವನ್ನೇ ಅನುವರ್ತಿಸುತ್ತದೆ, ಕಿಂತು-ಆದರೆ, ಧರ್ಮಶ್ಚ-ಪೂರ್ವಕೃತಧರ್ಮವೇ, ಅಧರ್ಮ

ಸಿದ್ದೀಯೆ. ಅಂತಹ ನೀನು ಆ ಪುಣ್ಯವನ್ನು ಕಳೆದುಕೊಂಡು, ಇನ್ನೂ ಅಧಿಕತರ ಪುಣ್ಯವನ್ನು ಸಂಪಾದಿಸಲು ಹೇತುಭೂತವಾದ ಈ ಜೀವನವನ್ನೂ ನಾಶಗೊಳಿಸಿಕೊಳ್ಳುವುದು ಯುಕ್ತವಾದುದಲ್ಲವು. ಎಲೈ ರಾವಣನೇ! “ ಬ್ರಹ್ಮದೇವನಿಂದ ಸರ್ವಾವಧ್ಯತ್ವವನ್ನು ವರವಾಗಿ ಪಡೆದಿರುವ ನನ್ನ ಬಾಳನ್ನು ಕೆಡಿಸುವವನಾವನು ? ನನ್ನ ಆಯುಸ್ಸು ಕ್ಷೀಣವಾಗುವುದು ತಾನೇ ಹೇಗೆ’’ ಎಂದು ಕೇಳುವೆಯೇನೋ? ನೀನು ಬ್ರಹ್ಮಾನುಗ್ರಹದಿಂದ ಸರ್ವಾವಧ್ಯತ್ವವನ್ನು ಪಡೆದಿದ್ದರೂ, ನೀನು ಮಾಡಿರುವ ಈ ಪರದಾರಾಭಿಮರ್ಶನರೂಪವಾದ ಈ ಪಾಪವೊಂದೇ ನಿನ್ನ ಜೀವನವನ್ನು ಕೆಡಿಸಲು ಸಮರ್ಥವಾಗಿರುವುದೆಂದು ತಿಳಿ. ನೀನು ಮಾಡಿರುವ ಪಾಪವು ಅಷ್ಟು ದೊಡ್ಡದು. ॥೨೨–೨೬॥ ಮೇಲಾಗಿ ನೀನು ಬ್ರಹ್ಮನಿಂದ ವರವನ್ನು ಪಡೆದಾಗ ನರವಾನರರನ್ನುಳಿದು ಮಿಕ್ಕ ಯಾವ ಪ್ರಾಣಿಯಿಂದಲೂ ಅವಧ್ಯತ್ವವನ್ನು ಪಡೆದಿರುವೆಯಲ್ಲವೇ ? ಕೇಳು. ನಮ್ಮ ಸುಗ್ರಿವರಾಜನು ದೇವತೆಯಲ್ಲ; ಅಸುರನಲ್ಲ; ದಾನವನೂ ಅಲ್ಲ; ಗಂಧರ್ವನು ಮೊದಲೇ ಅಲ್ಲ; ಪನ್ನಗನೂ ಅಲ್ಲ; ಕೇವಲ ವಾನರನು. ಅವನಿಂದ ನೀನು ಹೇಗೆ ತಾನೆ ಪ್ರಾಣಗಳನ್ನುಳಿಸಿಕೊಳ್ಳಬಲ್ಲೆ ? “ ಓ! ಅದೆಷ್ಟರದು ? ನಾನು ತಪಶ್ಚರಣಾದಿಗಳಿಂದ ಅವನಿಂದ ನನಗಿರುವ ಭಯವನ್ನು ತಪ್ಪಿಸಿಕೊಳ್ಳುವೆನು ’’ ಎಂದು ಹೇಳುವೆಯೇನೋ ? ಕೇಳು. ಧರ್ಮಫಲವು ಧರ್ಮಫಲದೊಡನೆಯೂ, ಅಧರ್ಮಫಲವು ಅಧರ್ಮಫಲದೊಡ

ಧರ್ಮನಾಶನಃ || ೨೮ || ಪ್ರಾಪ್ತಂ ಧರ್ಮಫಲಂ ತಾವದ್ಭವತಾ ನಾಽತ್ರಸಂಶಯಃ । ಫಲಮಸ್ಯಾಪ್ಯಧರ್ಮಸ್ಯ ಕ್ಷಿಪ್ರಮೇವ ಪ್ರಪತ್ಸ್ಯಸೇ ||೨೯|| ಜನಸ್ಥಾನವಧಂ ಬುದ್ಧ್ವಾ ಬುದ್ಧ್ವಾ ವಾಲಿವಧಂ ತಥಾ । ರಾಮಸುಗ್ರೀವಸಖ್ಯಂಚ ಬುಧ್ಯಸ್ವ ಹಿತಮಾತ್ಮನಃ

ನಾಶನಃ - ಆಮೇಲಿನ ಅಧರ್ಮವನ್ನು ನಾಶಮಾಡುವುದು, ನ - ಆಗುವುದಿಲ್ಲ, ಭವತಾ - ನಿನ್ನಿಂದ, ಧರ್ಮಫಲಂತಾವತ್ - ಸುಖವಾದರೆ, ಪ್ರಾಪ್ತಂ - ಅನುಭವಿಸಲ್ಪಟ್ಟಿತು, ಅತ್ರ - ಈ ವಿಷಯದಲ್ಲಿ, ನಸಂಶಯಃ - ಸಂದೇಹವಿಲ್ಲವು, ಅಸ್ಯಾಧರ್ಮಸ್ಯಾಪಿ - ಈ ಅಧರ್ಮಕ್ಕೂ ಕೂಡ, ಫಲಂ - ಫಲವನ್ನು, ಕ್ಷಿಪ್ರಮೇವ - ಬೇಗನೆ, ಪ್ರಪತ್ಸ್ಯಸೇ - ಹೊಂದುವೆ. || ೨೮-೨೯ || ಜನ....ಧಂ - ಜನಸ್ಥಾನದಲ್ಲಿದ್ದ ಖರಾದಿರಾಕ್ಷಸರ ನಾಶವನ್ನು, ಬುದ್ಧ್ವಾ - ತಿಳಿದು, ತಥಾ - ಹಾಗೆಯೇ, ವಾಲಿವಧಂ - ವಾಲಿಸಂಹಾರವನ್ನೂ, ಬುದ್ಧ್ವಾ-ಅರಿತು, ರಾಮ....ಚ-ರಾಮಸುಗ್ರೀವರ ಸ್ನೇಹವನ್ನೂ ಕೂಡ, ಬುದ್ಧ್ವಾ-ತಿಳಿದು, ಆತ್ಮನಃ-ನಿನಗೆ, ಹಿತಂ-ಇಷ್ಟವನ್ನು, ಬುಧ್ಯಸ್ವ-ಅರಿತುಕೋ. || ೩೦ || ಅಹಮೇಕೋಪಿ - ನಾನೊಬ್ಬನೇ ಆದರೂ, ಸವಾ....ರಾಂ-ಕುದುರೆಗಳಿಂದಲೂ, ರಥಗಳಿಂದಲೂ, ಆನೆಗಳಿಂದಲೂ ಕೂಡಿದ,

---

ನೆಯೂ ಸೇರಿರುತ್ತದೆ. ಅಲ್ಲದೆ ಧರ್ಮಫಲದೊಡನೆ ಸುಖವೂ, ಅಧರ್ಮಫಲದೊಡನೆ ದುಃಖವೂ ಸೇರಿಯೇ ಇರುತ್ತದೆ. ಅವೆರಡಕ್ಕೂ, ಬೆಳಕಿಗೂ ಕತ್ತಲಿಗೂ ಇರುವಂತೆ ಪರಸ್ಪರ ವೈಮುಖ್ಯವಿರುವುದು. ಧರ್ಮಫಲದೊಡನೆ ಅಧರ್ಮಫಲವಾಗಲಿ, ಅಧರ್ಮಫಲದೊಡನೆ ಧರ್ಮಫಲವಾಗಿ ಎಂದಿಗೂ ಸೇರುವುದಿಲ್ಲ. ಇದೂ ಅಲ್ಲದೆ ಧರ್ಮವು ಅಧರ್ಮವನ್ನು ನಾಶಗೊಳಿಸಲಾರದು. ಹಾಗೊಂದುವೇಳೆ ಅದು ಅಧರ್ಮವನ್ನು ನಾಶಗೊಳಿಸುವುದಾದರೆ, ಅಧರ್ಮವು ಧರ್ಮವನ್ನೂ ನಾಶಗೊಳಿಸುತ್ತಿದ್ದಿತು. ಧರ್ಮದಿಂದ ಅಭಿವೃದ್ಧಿಯುಂಟಾಗುತ್ತಿರುವಂತೆಯೇ, ಅಧರ್ಮದಿಂದಲೂ ಆಗಬೇಕು. ಹಾಗಾಗುವುದಿಲ್ಲವು. ಆದುದರಿಂದ ನೀನು ಮಾಡಿದ, ಅಥವ ಮಾಡುವ ತಪಶ್ಚರಣಾದಿಗಳಿಗಾಗಿ ನೀನು ದಿಗ್ವಿಜಯವನ್ನೂ, ಸಕಲ ಸಾಮ್ರಾಜ್ಯೈಶ್ವರ್ಯಗಳನ್ನೂ, ಇನ್ನೂ ಅನೇಕ ಸುಖಗಳನ್ನೂ ಅನುಭವಿಸಿದೆ. ಇನ್ನು ನೀನು ಇದುವರೆಗೂ ಮಾಡುತ್ತಿರುವ ಪರದಾರಾಪಹರಣವೇ ಮೊದಲಾದ ಅನುಚಿತ ದುಷ್ಕಾರ್ಯಜಾಲಗಳಿಗಾಗಿ ಫಲವಾದ ಪುತ್ರ ಮಿತ್ರ ಕಳತ್ರ ಸಹಿತವಾಗಿ ನಾಶವಾಗುವುದನ್ನು ನಿನ್ನ ಕಣ್ಣಾರ ನೋಡುವೆ. ಇದರಲ್ಲಿ ಎಷ್ಟುಮಾತ್ರವೂ ಸಂದೇಹವೇ ಇಲ್ಲವು. ಎಲೈ ರಾವಣೇಶ್ವರನೇ! "ಶ್ರೀರಾಮನು ಕೇವಲ ಮನುಷ್ಯಮಾತ್ರದವನು. ಅವನು ನನ್ನನ್ನೇನುತಾನೇ ಮಾಡಿಯಾನು" ಎಂದು ಭಾವಿಸಬೇಡ. ಆತನು ಮಹಾ ಪ್ರಭಾವಶಾಲಿಯು. ಆತನು ಜನಸ್ಥಾನದಲ್ಲಿ ಒಬ್ಬಂಟಿಗನಾಗಿ ಯುದ್ಧಕ್ಕೆ ನಿಂತು, ಖರದೂಷಣರೇ ಮೊದಲಾದ ಹದಿನಾಲ್ಕುಸಾವಿರಮಂದಿ ರಾಕ್ಷಸರನ್ನೊಕ್ಕಲಿಕ್ಕಿದುದನ್ನೂ, ಮಹಾ ಪರಾಕ್ರಮಶಾಲಿಯಾದ ನಿನ್ನನ್ನು ಸಪ್ತಸಮುದ್ರಗಳಲ್ಲಿಯೂ ಮುಳಿಗಿಸಿಕೊಂಡು ಬಂದು ಕೆಡಹಿದ ಅಮಿತಪರಾಕ್ರಮಿಯಾದ ವಾಲಿಯನ್ನು ಆತನು ಒಂದೇ ಒಂದು ಬಾಣದಿಂದ ಕೊಂದುದನ್ನೂ, ವಾನರೇಶ್ವರನಾದ ಸುಗ್ರೀವನೊಡನೆ ಆತನು ಸ್ನೇಹಮಾಡಿಕೊಂಡುದನ್ನೂ ಚೆನ್ನಾಗಿ ಯೋಚಿಸಿ ಮುಂದೆ ನೀನು ಮಾಡಬೇಕಾದ ಕಾರ್ಯವನ್ನುಆಲೋಚಿಸುವವನಾಗು. ||೨೭–೩೦|| ರಾವಣಾ! ಗಜ ತುರಗ ರಥ ಪದಾತಿಗಳಿಂದ

॥ ೩೦ ॥ ಕಾಮಂ ಖಲ್ವಹಮಪ್ಯೇಕಸ್ಸವಾಜಿರಥಕುಂಜರಾಂ । ಲಂಕಾಂ ನಾಶಯಿತುಂ ಶಕ್ತಸ್ತಸ್ಯೈಷತು ನ ನಿಶ್ಚಯಃ ॥ ೩೧ ॥ ರಾಮೇಣಹಿ ಪ್ರತಿಜ್ಞಾತಂ ಹರ್ಯೃಕ್ಷಗಣ ಸನ್ನಿಧೌ । ಉತ್ಸಾದನಮಮಿತ್ರಾಣಾಂ ಸೀತಾ ಯೈಸ್ತು ಪ್ರಧರ್ಷಿತಾ ॥ ೩೨ ॥ ಅಪ ಕುರ್ವನ್ಹಿ ರಾಮಸ್ಯ ಸಾಕ್ಷಾದಪಿ ಪುರಂದರಃ । ನಸುಖಂ ಪ್ರಾಪ್ನುಯಾದನ್ಯಃ ಕಿಂಪುನ ಸ್ತ್ವದ್ವಿಧೋ ಜನಃ? ॥೩೩॥ ಯಾಂ ಸೀತೇತ್ಯಭಿಜಾನಾಸಿ ಯೇಯಂ ತಿಷ್ಠತಿ ತೇ ವಶೇ । ಕಾಳರಾತ್ರೀತಿ ತಾಂ ವಿದ್ಧಿ ಸರ್ವಲಂಕಾವಿನಾಶಿನೀಂ ॥ ೩೪ ॥ ತದಲಂ ಕಾಲಪಾಶೇನ

ಲಂಕಾಂ - ಲಂಕಾಪಟ್ಟಣವನ್ನು, ಕಾಮಂ - ಮನಸ್ಸುಬಂದಂತೆ, ನಾಶಯಿತುಂ - ನಾಶಗೊಳಿಸುವದಕ್ಕೆ, ಶಕ್ತಃಖಲು - ಸಮರ್ಥನಷ್ಟೆ, ಏಷತು - ಮತ್ಕೃತವಾದ ಈ ಲಂಕಾವಿನಾಶವಾದರೆ, ತಸ್ಯ - ಆ ಶ್ರೀರಾಮನಿಗೆ, ನನಿಶ್ಚಯಃ-ನಿಶ್ಚಯವಿಷಯವಾದುದಲ್ಲ, (ಅಂದರೆ ಇಷ್ಟವಿಲ್ಲ) ॥ ೩೧ ॥ ಯೈಸ್ತು-ಯಾರಿಂದಲಾದರೆ, ಸೀತಾ - ಸೀತಾದೇವಿಯು, ಪ್ರಧರ್ಷಿತಾ - ಹೆದರಿಸಲ್ಪಟ್ಟಳೋ, ತೇಷಾಂಅಮಿತ್ರಾಣಾಂ - ಆ ಶತ್ರುಗಳ, ಉತ್ಸಾದನಂ - ಸಂಹಾರವನ್ನು ಕುರಿತು, ಹರ್ಯೃ....ಧೌ - ಕಪಿಗಳ ಮತ್ತು ಕರಡಿಗಳ ಸಮೂಹದ ಸಮಿಾಪದಲ್ಲಿ, ರಾಮೇಣಹಿ - ಶ್ರೀರಾಮನಿಂದಲೇ, ಪ್ರತಿಜ್ಞಾತಂ - ಪ್ರತಿಜ್ಞೆಮಾಡಲ್ಪಟ್ಟಿತು. ॥ ೩೨ ॥ ಹಿ - ಯಾವ ಕಾರಣದಿಂದ, ರಾಮಸ್ಯ - ಶ್ರೀರಾಮನಿಗೆ, ಅಪಕುರ್ವನ್ - ಅಪಕಾರಿಯು, ಸಾಕ್ಷಾ....ಪಿ-ಪ್ರತ್ಯಕ್ಷನಾದ ದೇವೇಂದ್ರನಾದರೂ, ಸುಖಂ-ಸುಖವನ್ನು, ನಪ್ರಾಪ್ನುಯಾತ್-ಹೊಂದಲಾರನು, ಅನ್ಯಃ - ಇತರನಾದ, ತ್ವದ್ವಿಧಃ - ನಿನ್ನಂತಹರಾದ, ಜನಃ - ಜನರ ವಿಷಯದಲ್ಲಿ, ಕಿಂಪುನಃ-ಏನುಹೇಳತಕ್ಕುದು. ॥ ೩೩ ॥ ಯಾಂ - ಯಾವ ಸ್ತ್ರೀಯನ್ನು, ಸೀತೇತಿ - ಸೀತಾದೇವಿಯೆಂದು, ಅಭಿಜಾನಾಸಿ - ತಿಳಿದಿರುವೆಯೋ, ಯೇಯಂ - ಯಾವ ಸೀತಾದೇವಿಯು, ತೇವಶೇ - ನಿನ್ನ ಅಧೀನದಲ್ಲಿ, ತಿಷ್ಠತಿ - ಇರುವಳೋ, ತಾಂ - ಆ ಸೀತಾದೇವಿಯನ್ನು, ಸರ್ವ....ನೀಂ - ಲಂಕಾಪಟ್ಟಣವನ್ನೆಲ್ಲ ನಾಶಗೊಳಿಸುತ್ತಿರುವ, ಕಾಳರಾತ್ರೀತಿ - ಮಹಾ ಪ್ರಳಯಕಾಲಕಾರಿಣಿಯಾದ ಭಗವಚ್ಛಕ್ತಿಯನ್ನಾಗಿ, ವಿದ್ಧಿ - ಅರಿತುಕೋ. ॥ ೩೪ ॥ ಸ್ವಯಂ - ತನ್ನಿಷ್ಟಕ್ಕೆ ತಾನೆ, ಸ್ಕಂಧಾ....ನ - ಹೆಗಲುಮೇಲೆ ಕುಳಿತಿ

ಕೂಡಿದ ಈ ಲಂಕಾನಗರವನ್ನು ಇದರಲ್ಲಿರುವ ಸಮಸ್ತ ಸಂಪತ್ತಿನೊಡಗೂಡಿ ನಾಶಗೊಳಿಸಲು ನಾನೊಬ್ಬನೇ ಸಾಕು. ನನ್ನ ಸಾಮರ್ಥ್ಯವಂತಹುದೇ ; ಆದರೆ ಹಾಗೆ ನಾನು ಮಾಡುವುದು ಶ್ರೀರಾಮನಿಗೆ ಇಷ್ಟವಿಲ್ಲ. ಇದೂ ಅಲ್ಲದೆ ಸೀತಾದೇವಿಯನ್ನು ಕದ್ದೊಯ್ದವನನ್ನು ನಾನೇ ಸಂಹರಿಸುತ್ತೇನೆಂದು ಆತನು ಪ್ರತಿಜ್ಞೆಮಾಡಿರುವನು. ಈ ಪ್ರತಿಜ್ಞೆಯನ್ನು ಆ ರಘುನಾಥನು ವಾನರಭಲ್ಲೂಕ ಸಮೂಹಗಳೆದುರಿನಲ್ಲಿಯೇ ಮಾಡಿರುವನು. ಆದುದರಿಂದ ನಾನು ಈ ಲಂಕೆಯನ್ನು ಇದುವರೆಗೂ ನಾಶಮಾಡದಿರುವೆನು. ಎಲೈರಾಕ್ಷಸನೇ! ಸಾಕ್ಷಾತ್ ದೇವೇಂದ್ರನಾದರೂ ಶ್ರೀರಾಮಮೂರ್ತಿಗೆ ಕೇಡನ್ನುಂಟುಮಾಡಿ ಸುಖದಿಂದಿರಲಾರನೆಂದು ತಿಳಿ. ಎಂದ ಮೇಲೆ ನಿನ್ನಂತಹ ಸಾಮಾನ್ಯನ ವಿಷಯದಲ್ಲೇನು ಹೇಳುವುದಿದೆ! ನೀನು ನಾಶವಾಗುವೆಯೆಂಬುದು ಸ್ಪಷ್ಟವಾಗಿಯೇ ಇರುವುದು. ಎಲೈ ರಾವಣಾಸುರನೇ ! ನೀನು ಕದ್ದುತಂದಿರಿಸಿಕೊಂಡಿರುವ ಸೀತಾದೇವಿಯನ್ನು ಸಾಮಾನ್ಯ ಸ್ತ್ರೀಯನ್ನಾಗಿ ಭಾವಿಸಬೇಡ. ಆಕೆಯು ಈ ಲಂಕಾನಗರವೆಲ್ಲವನ್ನೂ ನಿರ್ಮೂಲಮಾಡುವ ಮಹಾ ಶಕ್ತಿಯೆಂದು ತಿಳಿ. ಮಹಾ ಪ್ರಳಯಕಾಲದಲ್ಲಿ ಚತುರ್ದಶಭುವನಗಳನ್ನೂ ನಿರ್ನಾಮವಾಗಿಸುವ ಮಹಾ ಕಾಳರಾತ್ರಿ ಸ್ವರೂಪ

ಸೀತಾವಿಗ್ರಹರೂಪಿಣಾ । ಸ್ವಯಂ ಸ್ಕಂಧಾವಸಕ್ತೇನ ಕ್ಷಮಮಾತ್ಮನಿ ಚಿಂತ್ಯತಾಂ ॥ ೩೫ ॥ ಸೀತಾಯಾಃ ತೇಜಸಾ ದಗ್ಧಾಂ ರಾಮಕೋಪಪ್ರಪೀಡಿತಾಂ । ದಹ್ಯಮಾನಾ ಮಿಮಾಂ ಪಶ್ಯ ಪುರೀಂ ಸಾಟ್ಟಪ್ರತೋಳಿಕಾಂ ॥೩೬॥ ಸ್ವಾನಿ ಮಿತ್ರಾಣಿ ಮಂತ್ರೀಂಶ್ಚ ಜ್ಞಾತೀನ್ ಭ್ರಾತೄನ್ ಸುತಾನ್ ಹಿತಾನ್ । ಭೋಗಾನ್ ದಾರಾಂಶ್ಚ ಲಂಕಾಂಚ ಮಾ ವಿನಾಶಮುಪಾನಯ ॥೩೭॥ ಸತ್ಯಂ ರಾಕ್ಷಸರಾಜೇಂದ್ರ! ಶ್ರುಣುಷ್ವ ವಚನಂ ಮಮ ।

ರುವ, ಸೀತಾ....ಣಾ - ಸೀತಾದೇವಿಯ ಶರೀರಾಕಾರವಾದ, ಕಾಲಪಾಶೇನ - ಯಮಪಾಶದಿಂದ, ಆತ್ಮನಿ - ನಿನ್ನ ರಕ್ಷಣೆಯ ವಿಷಯದಲ್ಲಿ, ಯತ್ - ಯಾವದು, ಕ್ಷಮಂ - ಯೋಗ್ಯವಾದುದೋ, ತತ್ - ಅದು, ಚಿಂತ್ಯತಾಂ - ಯೋಚಿಸಲ್ಪಡಲಿ, ಅಲಂ-ಸಾಕು. ॥ ೩೫ ॥ ಸೀತಾಯಾಃ - ಸೀತಾದೇವಿಯ, ತೇಜಸಾ - ತೇಜಸ್ಸಿನಿಂದ, ದಗ್ಧಾಂ - ಸುಡಲ್ಪಟ್ಟ, ರಾಮ....ತಾಂ - ಶ್ರೀರಾಮನ ರೋಷದಿಂದ ಬಾಧಿತವಾದಕಾರಣ, ದಹ್ಯಮಾನಾಂ - ಸುಟ್ಟುಹೋಗುತ್ತಿರುವ, ಸಾಟ್ಟ....ಕಾಂ - ಯುದ್ಧಮಾಡುವರು ನಿಲ್ಲತಕ್ಕ ಸ್ಥಳಗಳಿಂದಲೂ, ವೀಥಿಗಳಿಂದಲೂ ಕೂಡಿದ, ಇಮಾಂಪುರೀಂ - ಈ ಪಟ್ಟಣವನ್ನು, ಪಶ್ಯ - ನೋಡು. ॥ ೩೬ ॥ ಸ್ವಾನಿ - ನಿನ್ನ, ಮಿತ್ರಾಣಿ - ಸ್ನೇಹಿತರನ್ನೂ, ಮಂತ್ರೀಂಶ್ಚ - ಮಂತ್ರಿಗಳನ್ನೂ, ಜ್ಞಾತೀನ್ - ಬಂಧುಗಳನ್ನೂ, ಭ್ರಾತೄನ್ - ಅಣ್ಣತಮ್ಮಂದಿರನ್ನೂ, ಸುತಾನ್ - ಮಕ್ಕಳನ್ನೂ, ಹಿತಾನ್ - ಇಷ್ಟರನ್ನೂ, ಭೋಗಾನ್ - ಸುಖಗಳನ್ನೂ, ದಾರಾಂಶ್ಚ - ಸತಿಯರನ್ನೂ, ಲಂಕಾಂಚ - ಲಂಕಾಪಟ್ಟಣವನ್ನೂ, ವಿನಾಶಂ - ನಾಶವನ್ನು, ಮೋಪಾನಯ - ಹೊಂದಿಸಬೇಡ. ॥ ೩೭ ॥ ಹೇ ರಾಕ್ಷಸರಾಜೇಂದ್ರ - ಎಲೈ ರಾಕ್ಷಸರಾಜನೇ, ರಾಮದಾಸಸ್ಯ - ಶ್ರೀರಾಮನ ಭೃತ್ಯನಾದುದರಿಂದ ಆತನ ಸಾಮರ್ಥ್ಯವನ್ನರಿತಿರುವ, ದೂತಸ್ಯ - ದೂತನಾದಕಾರಣ, ವಿಶೇಷತಃ - ಅತಿಶಯವಾಗಿ, ವಾನರಸ್ಯ -

---

ಳೆಂದು ತಿಳಿ. ರಾಕ್ಷಸೇಂದ್ರ! ಸೀತಾರೂಪವಾದ ಕಾಲಪಾಶವನ್ನು ನಿನ್ನಷ್ಟಕ್ಕೆ ನೀನೇ ಅಪ್ರಾರ್ಥಿತನಾಗಿ ಕೊರಳಿಗೆ ಬಿಗಿಸಿಕೊಂಡಿರುವೆಯಲ್ಲಾ! ಇದು ನಿನಗೆಷ್ಟುಮಾತ್ರಕ್ಕೂ ಉಚಿತವಲ್ಲವು. ರಾಕ್ಷಸರಾಜ! ಚೆನ್ನಾಗಿ ಆಲೋಚಿಸಿ ಕರ್ತವ್ಯಕರ್ಮವನ್ನು ಕೈಕೊಳ್ಳುವವನಾಗು. ಸೀತಾದೇವಿಯ ಪಾತಿವ್ರತ್ಯಮಹಿಮೆಯಿಂದ ಈಗಾಗಲೇ ಈ ಲಂಕಾನಗರವೆಲ್ಲವೂ ದಗ್ಧವಾದಂತಿರುವುದು. ॥ ೩೧—೩೬ ॥ ಇನ್ನೂ ಶ್ರೀರಾಮಮೂರ್ತಿಯ ಕೋಪಾಗ್ನಿಯಿಂದ ಕೋಟೆಕೊತ್ತಳಗಳಿಂದಲೂ, ರಾಜಬೀದಿಗಳಿಂದಲೂ, ಸಮಸ್ತವಸ್ತುನಿಚಯದಿಂದಲೂ ಕೂಡಿ ಮನೋಹರವಾಗಿರುವ ಈ ಪಟ್ಟಣವು ಸುಟ್ಟುಬೂದಿಯಾಗಿ ಹೋಗುವುದು. ಅಷ್ಟಕ್ಕೆ ಆಸ್ಪದ ಕೊಡಬೇಡ. ಈಗಲೇ ಎಚ್ಚರಿಸುತ್ತಿರುವೆನು. ಚೆನ್ನಾಗಿ ಆಲೋಚಿಸಿ ಮುಂದಣ ಕರ್ತವ್ಯವನ್ನು ಮಾಡು. ಅಯ್ಯಾ ದಾನವನಾಥನೇ! ನೀನು ಪುತ್ರ, ಮಿತ್ರ, ಕಳತ್ರ ಬಂಧುಬಾಂಧವರೊಡನೆಯೂ, ಮಂತ್ರಿಗಳೊಡನೆಯೂ, ಸಮಸ್ತ ಭೋಗಭಾಗ್ಯಗಳೊಡನೆಯೂ ಕೂಡಿರುವ ಈ ಲಂಕಾನಗರವನ್ನು ನಾಶಗೊಳಿಸಬೇಡ. ಇದು ನಿನಗೆ ತರವಲ್ಲ. ಎಲೈ ರಾಕ್ಷಸರಾಜೇಂದ್ರನೇ! ನನ್ನ ಮಾತನ್ನು ಕೇಳು. ನಾನು ಶ್ರೀರಾಮದೂತನು. ಆಗಲೇ ನಿನಗೆ ಆತನ ಭುಜಬಲಪರಾಕ್ರಮ ಮಾಹಾತ್ಮ್ಯಗಳೆಲ್ಲವನ್ನೂ ತಿಳಿಸಿರುವೆನು. ಅಂತಹನೊಡನೆ ನೀನು ದ್ವೇಷಕಟ್ಟಿಕೊಳ್ಳಬೇಡ. ನಾನು ದೂತನಾಗಿ ಬಂದಿರುವುದರಿಂದ ನನಗೆ ಹಿತೋಪದೇಶಮಾಡುವ ಅಧಿಕಾರವಿರುವುದರಿಂದ ಇಷ್ಟನ್ನೂ ಹೇಳಿರುವೆನು. ಅದರಲ್ಲಿಯೂ ನಾನು ವಾನರನಾದುದ

ರಾಮದಾಸಸ್ಯ ದೂತಸ್ಯ ವಾನರಸ್ಯ ವಿಶೇಷತಃ ॥೩೮॥ ಸರ್ವಾನ್ಲೋಕಾನ್ ಸುಸಂಹೃತ್ಯ ಸಭೂತಾನ್ ಸಚರಾಚರಾನ್ । ಪುನರೇವ ತಥಾ ಸ್ರಷ್ಟುಂ ಶಕ್ತೋ ರಾಮೋ ಮಹಾಯಶಾಃ ॥ ೩೯ ॥ ದೇವಾಸುರನರೇಂದ್ರೇಷು ಯಕ್ಷರಕ್ಷೋಗಣೇಷುಚ । ವಿದ್ಯಾಧರೇಷು ಸರ್ವೇಷು ಗಂಧರ್ವೇಷೂರಗೇಷುಚ ॥ ೪೦ ॥ ಸಿದ್ಧೇಷು ಕಿನ್ನರೇಂದ್ರೇಷು ಪತತ್ರಿಷು ಚ ಸರ್ವತಃ । ಸರ್ವಭೂತೇಷು ಸರ್ವತ್ರ ಸರ್ವಲೋಕೇಷು ನಾಸ್ತಿ ಸಃ ॥ ೪೧ ॥ ಯೋ ರಾಮಂ ಪ್ರತಿಯುಧ್ಯೇತ ವಿಷ್ಣುತುಲ್ಯಪರಾಕ್ರಮಂ ॥ ೪೨ ॥ ಸರ್ವಲೋಕೇಶ್ವರಸ್ಯೈವಂ ಕೃತ್ವಾ ವಿಪ್ರಿಯಮುತ್ತಮಂ । ರಾಮಸ್ಯ ರಾಜಸಿಂಹಸ್ಯ

ವಾನರನಾದ, ಮಮ - ನನ್ನ, ಸತ್ಯಂ - ನಿಶ್ಚಯವಾದ, ವಚನಂ - ಮಾತನ್ನು, ಶೃಣುಷ್ವ - ಕೇಳು. ॥ ೩೮ ॥ ಮಹಾಯಶಾಃ - ಮಹಾ ಯಶಸ್ವಿಯಾದ, ರಾಮಃ - ಶ್ರೀರಾಮನು, ಸಭೂತಾನ್ - ಭೂತಗಳಿಂದ ಕೂಡಿದ, ಸಚರಾಚರಾನ್ - ಸ್ಥಾವರಜಂಗಮಗಳೊಡಗೂಡಿದ, ಸರ್ವಾನ್ಲೋಕಾನ್ - ಸಮಸ್ತಲೋಕಗಳನ್ನೂ, ಸುಸಂಹೃತ್ಯ - ಚೆನ್ನಾಗಿ ಸಂಹರಿಸಿ, ಪುನಃ - ಮತ್ತೂ, ತಥೈವ - ಹಾಗೆಯೇ, ಸ್ರಷ್ಟುಂ - ಸೃಜಿಸುವುದಕ್ಕೆ, ಶಕ್ತಃ - ಸಮರ್ಥನು. ॥ ೩೯ ॥ ಯಃ - ಯಾವನು, ವಿಷ್ಣು....ಮಂ - ವಿಷ್ಣುವಿಗೆ ಸಮಾನವಾದ ಸಾಮರ್ಥ್ಯವುಳ್ಳ, ರಾಮಂ - ಶ್ರೀರಾಮನನ್ನು ಕುರಿತು, ಪ್ರತಿಯುಧ್ಯೇತ - ಪ್ರತಿಭಟಿಸಿ ಯುದ್ಧಮಾಡುವನೋ, ಸಃ - ಅಂತಹ ಶೂರನಾದ ಪುರುಷನು, ದೇವಾ....ಷು - ದೇವತೆಗಳಲ್ಲಿಯಾಗಲಿ, ಅಸುರರೆಂಬ ರಾಕ್ಷಸಜಾತಿಯರಲ್ಲಾಗಲಿ, ನರೇಂದ್ರೇಷು - ರಾಜಶ್ರೇಷ್ಠರಲ್ಲಿಯಾಗಲಿ, ಯಕ್ಷ....ಚ - ಯಕ್ಷರಲ್ಲಿಯಾಗಲಿ ರಾಕ್ಷಸರಗುಂಪಿನಲ್ಲಾಗಲಿ, ಸರ್ವೇಷು - ಸಮಸ್ತರಾದ, ವಿದ್ಯಾಧರೇಷು - ವಿದ್ಯಾಧರರಲ್ಲಿಯಾಗಲಿ, ಗಂಧರ್ವೇಷು - ಗಂಧರ್ವರಲ್ಲಿಯಾಗಲಿ, ಉರಗೇಷುಚ - ಸರ್ಪಗಳಲ್ಲಿಯಾಗಲಿ, ಸಿದ್ಧೇಷು - ಸಿದ್ಧರಲ್ಲಿಯಾಗಲಿ, ಕಿನ್ನ....ಷು - ಕಿನ್ನರಶ್ರೇಷ್ಠರಲ್ಲಿಯಾಗಲಿ, ಸರ್ವತಃ - ಎಲ್ಲಾ ಕಡೆಯಲ್ಲಿರುವ, ಪತತ್ರಿಷುಚ - ಪಕ್ಷಿಗಳಲ್ಲಿಯಾಗಲಿ, ಸರ್ವಭೂತೇಷು - ಸಮಸ್ತ ಭೂತಗಳಲ್ಲಿಯಾಗಲಿ, ಸರ್ವತ್ರ - ಎಲ್ಲೆಯೇ ಆಗಲಿ, ಸರ್ವಕಾಲೇಷು-ಯಾವಾಗಲೂ, ನಾಸ್ತಿ-ಇಲ್ಲವು. ॥೪೦-೪೨॥ ಸರ್ವ....ಸ್ಯ - ಸಮಸ್ತ ಜಗತ್ತುಗಳಿಗೂ ಈಶ್ವರನಾದ, ರಾಜಸಿಂಹಸ್ಯ - ರಾಜಶ್ರೇಷ್ಠನಾದ, ರಾಮಸ್ಯ -

---

ರಿಂದ ಮಾಧ್ಯಸ್ಥ್ಯವನ್ನು ವಹಿಸಿ ಹೇಳುತ್ತಿರುವೆನು. ನಾನೆಂದಿಗೂ ಸುಳ್ಳನ್ನಾಡುವುದಿಲ್ಲ. ಸತ್ಯವಾದುದನ್ನೇ ನುಡಿಯುತ್ತಿರುವೆನು. ಆದುದರಿಂದ ನನ್ನ ಮಾತುಗಳನ್ನು ಕೇಳಿ, ಅದರಂತೆ ನಡೆದುಕೊ. ನಿನಗೆ ಶ್ರೇಯಸ್ಸಾಗುವುದು. ಶ್ರೀರಾಮಚಂದ್ರನು ಸಾಮಾನ್ಯ ಮಾನವನೆಂದರಿಯಬೇಡ. ಆತನು ಮಹಾ ಕೀರ್ತಿವಂತನು ; ಮಹಾ ಪ್ರಭಾವಶಾಲಿಯು. ಆತನು ಚರಾಚರ ಪ್ರಾಣಿಗಳಿಂದ ಕೂಡಿದ ಈ ಜಗತ್ತನ್ನೇ ಸಮೂಲವಾಗಿ ನಾಶಗೊಳಿಸಿ, ಪುನಃ ಅದನ್ನು ಪೂರ್ವದಂತೆಯೇ ಸೃಷ್ಟಿಸಬಲ್ಲ ಸಾಮರ್ಥ್ಯವುಳ್ಳವನು. ॥ ೩೭–೩೯ ॥ ದೇವತೆಗಳಲ್ಲಿಯಾಗಲೀ, ದಾನವರಲ್ಲಿಯಾಗಲೀ, ಯಕ್ಷರಕ್ಷೋಗಣಗಳಲ್ಲಿಯಾಗಲೀ, ವಿದ್ಯಾಧರರಲ್ಲಿ, ಅಪ್ಸರರಲ್ಲಿ, ಗಂಧರ್ವರಲ್ಲಿ, ಉರಗರಲ್ಲಿ, ಸಿದ್ಧ, ಕಿನ್ನರೇಂದ್ರ, ಪತಗರಲ್ಲಿಯಾಗಲೀ, ವಿಷ್ಣುವಿಗೆ ಸಮಾನವಾದ ಪರಾಕ್ರಮವುಳ್ಳ ಶ್ರೀರಾಮನೊಡನೆ ಸಮಸಮವಾಗಿ ಯುದ್ಧಕ್ಕೆ ನಿಲ್ಲುವವನು ಮೂರುಲೋಕಗಳಲ್ಲಿ ಯಾವನೂ, ಯಾವಕಾಲದಲ್ಲಿಯೂ, ಎಲ್ಲಿಯೂ ಇರುವುದಿಲ್ಲವೆಂದು ತಿಳಿ. ಆತನು ಎಲ್ಲಲೋಕಗಳಿಗೂ ಸ್ವಾಮಿಯು ; ರಾಜಸಿಂಹನು. ಅಂತಹನಿಗೆ ವಿಪ್ರಿಯವನ್ನು

ದುರ್ಲಭಂ ತವ ಜೀವಿತಂ ॥ ೪೩ ॥ ದೇವಾಶ್ಚ ದೈತ್ಯಾಶ್ಚ ನಿಶಾಚರೇಂದ್ರಾ ಗಂಧರ್ವ ವಿದ್ಯಾಧರ ನಾಗ ಯಕ್ಷಾಃ । ರಾಮಸ್ಯ ಲೋಕತ್ರಯನಾಯಕಸ್ಯ ಸ್ಥಾತುಂ ನಶಕ್ತಾ ಸ್ಸಮರೇಷು ಸರ್ವೇ ॥೪೪॥ ಬ್ರಹ್ಮಾ ಸ್ವಯಂಭೂಶ್ಚತುರಾನನೋವಾ ರುದ್ರಸ್ತ್ರಿಣೇತ್ರ ಸ್ತ್ರಿಪುರಾಂತಕೋವಾ । ಇಂದ್ರೋ ಮಹೇಂದ್ರ ಸ್ಸುರನಾಯಕೋವಾ ತ್ರಾತುಂ ನಶಕ್ತಾ ಯುಧಿ ರಾಮವಧ್ಯಂ" ॥ ೪೫ ॥

ಶ್ರೀರಾಮನಿಗೆ, ಏವಂ - ಈ ಸೀತಾಪಹಾರರೂಪವಾದ, ಉತ್ತಮಂ - ಮಹತ್ತರವಾದ, ವಿಪ್ರಿಯಂ - ಅಪಕಾರವನ್ನು, ಕೃತ್ವಾ-ಮಾಡಿ, ತವ-ನಿನ್ನ, ಜೀವಿತಂ-ಬದುಕುವಿಕೆಯು, ದುರ್ಲಭಂ-ಅಶಕ್ಯವು. ॥ ೪೩ ॥ ಹೇ ನಿಶಾಚರೇಂದ್ರ - ಎಲೈ ರಾಕ್ಷಸಾಧಿಪತಿಯೇ, ಲೋಕ....ಸ್ಯ - ಮೂರುಲೋಕಗಳಿಗೂ, ನಾಯಕಸ್ಯ - ಪತಿಯಾದ, ರಾಮಸ್ಯ - ಶ್ರೀರಾಮನ, ಸಮರೇಷು - ಯುದ್ಧಗಳಲ್ಲಿ, ದೇವಾಶ್ಚ - ದೇವತೆಗಳೂ, ದೈತ್ಯಾಶ್ಚ - ರಕ್ಕಸರೂ, ಗಂಧ....ಕ್ಷಾಃ - ಗಂಧರ್ವ ಯಕ್ಷರಾದಿಯಾಗಿ, ಸರ್ವೇ - ಎಲ್ಲರೂ, ಸ್ಥಾತುಂ - ನಿಲ್ಲುವುದಕ್ಕೆ, ನಶಕ್ತಾಃ - ಸಮರ್ಥರಲ್ಲವು. ॥ ೪೪ ॥ ಇಂದ್ರಃ - ಪರಮೈಶ್ವರ್ಯವುಳ್ಳ, ಮಹೇಂದ್ರಃ - ವೃತ್ರಹನನಸಾಮರ್ಥ್ಯವುಳ್ಳ, ಸುರ....ವಾ - ತ್ರಯಸ್ತ್ರಿಂಶತ್ಕೋಟಿಸುರಗಣನಾಯಕನಾದರೂ, ರುದ್ರಃ - ರುದ್ರನಾದ, ತ್ರಿಣೇತ್ರಃ - ಮುಕ್ಕಣ್ಣನಾದ, ತ್ರಿಪುರಾಂತಕೋವಾ - ತ್ರಿಪುರಾಸುರ ಸಂಹಾರಕನಾದ ಪರಮೇಶ್ವರನಾದರೂ, ಬ್ರಹ್ಮಾ-ಪ್ರಪಂಚವನ್ನೆಲ್ಲ ವ್ಯಾಪಿಸಿಕೊಂಡಿರುವ, ಸ್ವಯಂಭೂಃ-ತನ್ನಷ್ಟಕ್ಕೆತಾನೇ ಹುಟ್ಟಿರುವವನಾದರೂ, ಯುಧಿ - ಯುದ್ಧದಲ್ಲಿ, ರಾಮವಧ್ಯಂ - ರಾಮನಿಗೆ ವಧಾರ್ಹನಾದವನನ್ನು, ತ್ರಾತುಂ - ರಕ್ಷಿಸುವದಕ್ಕೆ, ನಶಕ್ತಾಃ - ಸಮರ್ಥರಲ್ಲ. ॥ ೪೫ ॥ ಅಪ್ರತಿಮಃ - ಅಸದೃಶನಾದ, ಸ ದಶಾನನಃ - ಆ ರಾವಣನು, ಅದೀ...ನಃ - ಧೈರ್ಯವಾಗಿ ಹೇಳುತ್ತಿರುವ, ಕಪೇಃ-ವಾನರನ, ಅಪ್ರಿಯಂ - ಇಷ್ಟವಾಗದಿರುವ, ಸೌಷ್ಠವೋಪೇತಂ - ಪ್ರಶಂಸೆಯಿಂದ ಕೂಡಿರುವ, ವಚಃ-ಮಾತನ್ನು, ನಿಶಮ್ಯ - ಕೇಳಿ, ಕೋಪ....ನಃ - ಕ್ರೋಧದಿಂದ ತಿರುಗಿಸಲ್ಪಟ್ಟ ನೇತ್ರಗಳುಳ್ಳವನಾಗಿ,

ಮಾಡಿರುವ ನಿನಗೆ ಜೀವಿತವೇ ದುರ್ಲಭವಾಗಿರುವುದು. ದೇವತೆಗಳು, ದೈತ್ಯರು, ರಾಕ್ಷಸೋತ್ತಮರು, ಗಂಧರ್ವ ವಿದ್ಯಾಧರ ನಾಗ ಯಕ್ಷರು, ಇವರೇ ಮೊದಲಾದವರೆಲ್ಲರೂ ಸೇರಿ ಬಂದರೂ ಶ್ರೀರಾಮನೊಡನೆ ಯುದ್ಧಕ್ಕೆ ನಿಲ್ಲಲಾರರು. ಇದೂ ಅಲ್ಲದೆ, ಪರಮೈಶ್ವರ್ಯವುಳ್ಳವನಾಗಿ, ವೃತ್ರಾಸುರ ಸಂಹಾರವನ್ನೆಸಗಿದ ದೇವತೆಗಳೊಡೆಯನಾದ ದೇವೇಂದ್ರನಾಗಲಿ, ಪ್ರಳಯಕಾಲದಲ್ಲಿ ಸಮಸ್ತ ಜೀವರಾಶಿಗಳನ್ನೂ ಸಂಹರಿಸಿದವನಾಗಿಯೂ, ಮೂರು ಕಣ್ಣುಗಳುಳ್ಳವನಾಗಿ ಹಿಂದೆ ಮೂರನೆಯ ಕಣ್ಣಿನಿಂದ ಮನ್ಮಥನನ್ನೇ ಸುಟ್ಟವನಾಗಿಯೂ, ತ್ರಿಪುರಾಸುರರನ್ನು ಸಂಹರಿಸಿದವನಾಗಿಯೂ ಇರುವ ರುದ್ರನಾಗಲಿ, ಸ್ವಯಂಭೂತನಾಗಿ ಚತುರ್ಮುಖನೆನಿಸಿರುವ ಬ್ರಹ್ಮನಾಗಲಿ ಶ್ರೀರಾಮಚಂದ್ರನಿಗೆ ವಧ್ಯನಾದವನನ್ನು ಸಂರಕ್ಷಿಸಲು ಎಂದೆಂದಿಗೂ ಶಕ್ತರಾಗಲಾರರು. ಆದುದರಿಂದ ಇವರಲ್ಲಿ ಯಾರೂ ನಿನ್ನನ್ನು ಕಾಪಾಡಲಾರರೆಂದು ತಿಳಿ." ಈ ಪ್ರಕಾರವಾಗಿ ಮಹಾ ವಾನರನಾದ ಆಂಜನೇಯನು ನಿರ್ಭಯವಾಗಿಯೂ, ನಿರ್ದೋಷವಾಗಿಯೂ, ಬಹು ನಯವಾಗಿಯೂ, ಇರುವ ಹಿತವಚನಗಳನ್ನಾಡಲು ಅಸದೃಶ ಪರಾಕ್ರಮಿಯಾದ ರಾವಣಾಸುರನು ಅವುಗಳನ್ನು ಕೇಳಿ ಬಹಳವಾಗಿ ಕನಲಿ, ಮಹಾ ರೌದ್ರಾಕಾರವನ್ನು ತಾಳಿ ಕಣ್ಣುಗಳಿಂದ ಕಿಡಿಗಳನ್ನುಗುಳುತ್ತ, ಕಣ್ಣಾಲಿಗಳನ್ನು ಬಹು

ಸಸೌಷ್ಠವೋಪೇತಮದೀನವಾದಿನಃ
ಕಪೇರ್ನಿಶಮ್ಯಾಪ್ರತಿಮೋ ಪ್ರಿಯಂವಚಃ ।
ದಶಾನನಃ ಕೋಪವಿವೃತ್ತಲೋಚನ
ಸ್ಸಮಾದಿಶತ್ತಸ್ಯ ವಧಂ ಮಹಾಕಪೇಃ ॥ ೪೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಪಂಚಾಶಸ್ಸರ್ಗಃ

ಮಹಾಕಪೇಃ - ಮಹಾ ವಾನರನಾದ, ತಸ್ಯ - ಆ ಆಂಜನೇಯನ, ವಧಂ - ಸಂಹಾರವನ್ನು ಕುರಿತು, ಸಮಾದಿಶತ್ - ಆಜ್ಞೆಮಾಡಿದನು. ॥ ೪೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಪಂಚಾಶಸ್ಸರ್ಗಃ

ಭಯಂಕರವಾಗಿ ತಿರುಗಿಸುತ್ತ, ಹಲ್ಲುಗಳನ್ನು ಕಟಕಟನೆ ಕಡಿಯುತ್ತ, ಆ ಮಹಾ ವಾನರನಿಗೆ ವಧೆಯನ್ನಾಜ್ಞಾಪಿಸಿದನು. ॥ ೪೮-೪೬ ॥

ಇಂತಿದು ಹನುಮತ್ಕೃತ ರಾವಣಹಿತೋಪದೇಶ ವೃತ್ತಾಂತವೆಂಬ
ಐವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ದ್ವಿಪಂಚಾಶಸ್ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ವಾನರಸ್ಯ ಮಹಾತ್ಮನಃ । ಆಜ್ಞಾಪಯದ್ವಧಂ ತಸ್ಯ ರಾವಣಃ ಕ್ರೋಧಮೂರ್ಛಿತಃ ॥ ೧ ॥ ವಧೇ ತಸ್ಯ ಸಮಾಜ್ಞಪ್ತೇ ರಾವಣೇನ ದುರಾತ್ಮನಾ । ನಿವೇದಿತವತೋ ದೌತ್ಯಂ ನಾನುಮೇನೇ ವಿಭೀಷಣಃ ॥ ೨ ॥ ತಂ ರಕ್ಷೋಧಿಪತಿಂ ಕ್ರುದ್ಧಂ ತಚ್ಚ ಕಾರ್ಯಮುಪಸ್ಥಿತಂ । ವಿದಿತ್ವಾ ಚಿಂತಯಾಮಾಸ ಕಾರ್ಯಂ ಕಾರ್ಯವಿಧೌ ಸ್ಥಿತಃ ॥ ೩ ॥ ನಿಶ್ಚಿತಾರ್ಥಸ್ತತಸ್ಸಾಮ್ನಾಽಪೂಜ್ಯಶತ್ರುಜಿದಗ್ರಜಂ । ಉವಾಚ ಹಿತಮತ್ಯರ್ಥಂ ವಾಕ್ಯಂ ವಾಕ್ಯವಿಶಾರದಃ ॥ ೪ ॥ " ಕ್ಷಮಸ್ವ

ರಾವಣಃ - ರಾವಣನು, ಮಹಾತ್ಮನಃ - ಮಹಾತ್ಮನಾದ, ತಸ್ಯವಾನರಸ್ಯ - ಆ ಕಪಿಯ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಕ್ರೋಧ....ತಃ - ಕೋಪದಿಂದ ಮೂರ್ಛಿತನಾಗಿ, ತಸ್ಯ - ಆ ಆಂಜನೇಯನ, ವಧಂ - ಸಂಹಾರವನ್ನು, ಆಜ್ಞಾಪಯತ್ - ಆಜ್ಞಾಪಿಸಿದನು. ॥ ೧ ॥ ದುರಾತ್ಮನಾ - ದುರ್ಬುದ್ಧಿಯುಳ್ಳ, ರಾವಣೇನ - ರಾವಣಾಸುರನಿಂದ, ತಸ್ಯ - ಆ ಆಂಜನೇಯನ, ವಧೇ - ಸಂಹಾರವು, ಸಮಾಜ್ಞಪ್ತೇ - ಆಜ್ಞೆಯಾಗಲು, ವಿಭೀಷಣಃ - ವಿಭೀಷಣನು, ದೌತ್ಯಂ - ದೂತಕಾರ್ಯವನ್ನು, ನಿವೇದಿತವತಃ - ಹೇಳಿದ ಆಂಜನೇಯನ, ವಧಂ - ಸಂಹಾರವನ್ನು, ನಾನುಮೇನೇ - ಅಂಗೀಕರಿಸಲಿಲ್ಲ ॥೨॥ ಕ್ರುದ್ಧಂ - ಕೋಪಿಷ್ಠನಾದ, ತಂರಕ್ಷೋಧಿಪಂ - ಆ ರಾಕ್ಷಸನಾಥನನ್ನೂ, ಉಪಸ್ಥಿತಂ - ಪ್ರಾಪ್ತವಾದ, ತತ್ಕಾರ್ಯಂಚ - ಆ ಧೂತವಧರೂಪವಾದ ಕೃತ್ಯವನ್ನೂ ಕೂಡ, ವಿದಿತ್ವಾ - ತಿಳದು, ಕಾರ್ಯವಿಧೌ - ಕಾರ್ಯವಿಧಾನಲ್ಲಿ, ಸ್ಥಿತಃ - ಇರುವ ವಿಭೀಷಣನು, ಕಾರ್ಯಂ - ಮುಂದಿನ ಕರ್ತವ್ಯವನ್ನು, ಚಿಂತಯಾಮಾಸ - ಯೋಚಿಸಿದನು. ॥ ೩ ॥ ತತಃ - ಬಳಿಕ, ವಾಕ್ಯ....ದಃ - ವಾಕ್ಯಜ್ಞನಾದ ವಿಭೀಷಣನು, ಸಾಮ್ನಾ - ಸಾಮೋಪಾಯದಿಂದ, ನಿಶ್ಚಿತಾರ್ಥಃ - ನಿಶ್ಚಯಿಸಲ್ಪಟ್ಟ ಅರ್ಥವುಳ್ಳವನಾಗಿ, ಅಪೂ....ಜಂ - ದುಷ್ಟಶತ್ರುಗಳನ್ನು ನಿಗ್ರಹಿಸುವ ಶಕ್ತಿಯುಳ್ಳ ಅಣ್ಣನನ್ನು ಕುರಿತು, ಹಿತಂ - ಇಷ್ಟವಾದ, ವಾಕ್ಯಂ - ಮಾತನ್ನು, ಅತ್ಯರ್ಥಂ - ಮಹಾರ್ಥಗರ್ಭಿತ

ಮಹಾ ಬುದ್ಧಿಶಾಲಿಯಾದ ಆಂಜನೇಯನಾಡಿದ ಮಾತುಗಳನ್ನು ಕೇಳಿ ರಾವಣಾಸುರನು ಕೋಪದಿಂದ ಮೈಮರೆತು ಅವನನ್ನು ವಧಿಸಿರೆಂದು ಆಜ್ಞಾಪಿಸಿದನು. ದುರಾತ್ಮನಾದ ರಾವಣನು ದೂತನಾದ ಆ ಹನುಮಂತನನ್ನು ವಧಿಸಿರೆಂದು ಆಜ್ಞಾಪಿಸಲು, ಅವನ ತಮ್ಮನೂ, ಮಹಾ ಧರ್ಮಿಷ್ಠನೂ ಆದ ವಿಭೀಷಣನು ಆ ದೂತವಧೆಗೆ ಸಮ್ಮತಿಸಲಿಲ್ಲವು. ದೂತನಾಗಿ ಬಂದವನು ತಾನು ಬಂದ ಉದ್ದೇಶವನ್ನು ತಿಳಿಸುವುದು ಅಪರಾಧವಲ್ಲವೆಂದು ವಿಭೀಷಣನಿಗೆ ತಿಳಿದಿದ್ದಿತು. ಆದುದರಿಂದ ಕಾರ್ಯಾಕಾರ್ಯಗಳನ್ನು ತಿಳಿದ ಆ ವಿಭೀಷಣನು ರಾಕ್ಷಸರಾಜನಾದ ರಾವಣಾಸುರನು ಕ್ರುದ್ಧನಾಗಿ ದೂತನಾದ ಆಂಜನೇಯನನ್ನು ಸಂಹರಿಸಿರೆಂದು ಆಜ್ಞಾಪಿಸಿರುವುದಾಗಿ ತಿಳಿದು ಅದನ್ನು ತಪ್ಪಿಸಲೋಸುಗ ಉಚಿತವಾದ ಯೋಚನೆಯನ್ನು ಮಾಡಿದನು. ಶತ್ರುಮರ್ದನನೂ, ವಾಕ್ಯವಿಶಾರದನೂ ಆದ ಆತನು ಹೀಗೆ ಸ್ವಲ್ಪಹೊತ್ತು ಯೋಚಿಸಿ ತಾನು ಮಾಡಬೇಕಾದ ಕಾರ್ಯವನ್ನು ನಿರ್ಧರಿಸಿಕೊಂಡು,

ರೋಷಂ ತ್ಯಜ ರಾಕ್ಷಸೇಂದ್ರ! ಪ್ರಸೀದ ಮೇ ವಾಕ್ಯಮಿದಂ ಶೃಣುಷ್ವ । ವಧಂ ನ ಕುರ್ವಂತಿ ಪರಾವರಜ್ಞಾ ದೂತಸ್ಯ ಸಂತೋ ವಸುಧಾಧಿಪೇಂದ್ರಾಃ ॥ ೫ ॥ ರಾಜಧರ್ಮವಿರುದ್ಧಂಚ ಲೋಕವೃತ್ತೇಶ್ಚ ಗರ್ಹಿತಂ । ತವ ಚಾಸದೃಶಂ ವೀರ! ಕಪೇರಸ್ಯ ಪ್ರಮಾಪಣಂ ॥ ೬ ॥ ಧರ್ಮಜ್ಞಶ್ಚ ಕೃತಜ್ಞಶ್ಚ ರಾಜಧರ್ಮವಿಶಾರದಃ । ಪರಾವರಜ್ಞೋ ಭೂತಾನಾಂ ತ್ವಮೇವ ಪರಮಾರ್ಥವಿತ್ ॥ ೭ ॥ ಗೃಹ್ಯಂತೇ ಯದಿ ರೋಷೇಣ ತ್ವಾದೃಶೋಽಪಿ ವಿಪಶ್ಚಿತಃ । ತತಶ್ಶಾಸ್ತ್ರವಿಪಶ್ಚಿತ್ತ್ವಂ ಶ್ರಮಏವಹಿ

ವಾಗಿ, ಉವಾಚ - ಹೇಳಿದನು. ॥ ೪ ॥ ಹೇ ರಾಕ್ಷಸೇಂದ್ರ - ಎಲೈ ರಾಕ್ಷಸಾಧಿಪನೇ, ಕ್ಷಮಸ್ವ - ಸೈರಿಸಿಕೊ, ರೋಷಂ-ಕೋಪವನ್ನು, ತ್ಯಜ-ಬಿಡು, ಪ್ರಸೀದ-ಪ್ರಸನ್ನನಾಗು, ಇದಂಮದ್ವಾಕ್ಯಂ-ಈ ನನ್ನ ಮಾತನ್ನು, ಶೃಣುಷ್ವ - ಕೇಳು, ಪರಾವರಜ್ಞಾಃ - ಬಿಡತಕ್ಕುದು ಮಾಡತಕ್ಕುದು ಎಂಬುದರ ವಿಚಾರವನ್ನರಿತಿರುವ, ಸಂತಃ - ಸತ್ಪುರುಷರಾದ, ವಸು....ದ್ರಾಃ - ಭೂಪತಿಶ್ರೇಷ್ಠರು, ದೂತಸ್ಯ-ದೂತನ, ವಧಂ - ಸಂಹಾರವನ್ನು, ನಕುರ್ವಂತಿ - ಮಾಡುವದಿಲ್ಲ. ॥೫॥ ಹೇ ವೀರ - ಎಲೈ ಶೂರನೆ, ಅಸ್ಯ - ದೂತನಾಗಿ ಬಂದಿರುವ, ಕಪೇಃ - ವಾನರನ, ಪ್ರಮಾಪಣಂ - ಮಾರಣವು, ರಾಜಧರ್ಮ ವಿರುದ್ಧಂಚ - ರಾಜನೀತಿಗೆ ವಿರೋಧವಾದದ್ದು, ಲೋಕವೃತ್ತೇಶ್ಚ - ಜನರ ನಡತೆಗೂ, ಅಗರ್ಹಿತಂ-ನಿಂದಿತವಾದದ್ದು, ತವಚ-ನಿನ್ನ ಯೋಗ್ಯತೆಗೂ, ಅಸದೃಶಂ-ಸರಿಯಾದುದಲ್ಲ. ॥ ೬ ॥ ಧರ್ಮಜ್ಞಶ್ಚ-ಧರ್ಮವನ್ನರಿತವನೂ, ಕೃತಜ್ಞಶ್ಚ - ಕೃತಜ್ಞನೂ, ರಾಜ....ದಃ - ರಾಜನೀತಿಗಳಲ್ಲಿ ಪಂಡಿತನೂ, ಪರಾವರಜ್ಞಃ - ನಿಂದ್ಯಾನಿಂದ್ಯವಿವೇಚನೆಯುಳ್ಳ, ತ್ವಮೇವ - ನೀನೇ, ಭೂತಾನಾಂ - ಭೂತಗಳ, ಪರಮಾರ್ಥವಿತ್ - ತತ್ವಾರ್ಥವನ್ನರಿತವನು. ॥ ೭ ॥ ತ್ವಾದೃಶಃ - ನಿನ್ನಂತಹ, ವಿಪಶ್ಚಿತೋಽಪಿ - ಪಂಡಿತರೂ ಸಹ, ರೋಷೇಣ - ಕೋಪದಿಂದ, ಗೃಹ್ಯಂತೇಯದಿ - ಗ್ರಹಿಸಲ್ಪಟ್ಟವರಾದರೆ, ತತಃ - ಬಳಿಕ, ಶಾಸ್ತ್ರ....ವ - ಶಾಸ್ತ್ರಪಾಂಡಿತ್ಯಸಂಪಾದನೆಯೇ, ಶ್ರಮಃಕೇವಲಂಹಿ - ವೃಥಾ ಪ್ರಯಾಸವಷ್ಟೆ.

ತನಗೆ ಪೂಜ್ಯನೂ, ಅಣ್ಣನೂ ಆದ ರಾವಣಾಸುರನನ್ನು ಕುರಿತು ಮೃದುಮಧುರವಾಗಿ ಹೀಗೆ ಹೇಳಿದನು. “ಅಣ್ಣಾ; ರಾಕ್ಷಸೇಶ್ವರನೇ! ಮನ್ನಿಸು; ಕೋಪವನ್ನು ಬಿಡು; ಪ್ರಸನ್ನನಾಗು. ನಾನು ಬಿನ್ನವಿಸಿಕೊಳ್ಳುವ ನುಡಿಗಳನ್ನು ಲಾಲಿಸು. ಯುಕ್ತಾಯುಕ್ತಗಳನ್ನು ತಿಳಿದಿರುವ ಸತ್ಪುರುಷರಾದ ರಾಜಶ್ರೇಷ್ಠರು ದೂತನಾದವನನ್ನು ಎಂದಿಗೂ ಮರಣದಂಡನೆಗೆ ಗುರಿಮಾಡುವುದಿಲ್ಲವು. ॥ ೧—೫ ॥ ಎಲೈ ರಾವಣಾಸುರನೇ! ಈ ವಾನರ ದೂತನನ್ನು ಸಂಹರಿಸುವುದು ರಾಜಧರ್ಮಕ್ಕೆ ಕೇವಲ ವಿರುದ್ಧವು. ಅಲ್ಲದೆ ಲೋಕಾಚಾರಕ್ಕೂ ವಿರುದ್ಧವಾದ ಕಾರ್ಯವೇ ಸರಿ. ಇಂತಹ ದುಷ್ಕಾರ್ಯವು ನಿನ್ನಂತಹ ಮಹಾತ್ಮರಿಗೆ ಎಂದಿಗೂ ಉಚಿತವಾದುದಲ್ಲವು. ಎಲೈ ರಾಕ್ಷಸನಾಥನೇ! ಲೋಕದಲ್ಲಿ ನೀನೇ ಸಮಸ್ತ ಧರ್ಮಗಳನ್ನರಿತಿರುವವರಲ್ಲಿ ಶ್ರೇಷ್ಠನಾದವನು; ನೀನೇ ಕೃತಜ್ಞನಾದವನು; ರಾಜಧರ್ಮಗಳನ್ನು ಚೆನ್ನಾಗಿ ತಿಳಿದವನೂ ನೀನೇ ಆಗಿರುವೆ; ನೀನು ಒಳ್ಳೆಯದಾವುದು, ಕೆಟ್ಟುದಾವುದು ಎಂಬುದನ್ನು ಚೆನ್ನಾಗಿ ತಿಳಿದಿರುವ ಪಂಡಿತನೂ ಆಗಿರುವೆ; ಮೇಲಾಗಿ ಪರಮಾರ್ಥವನ್ನು ಯಥಾರ್ಥವಾಗಿ ತಿಳಿದಿರುವ ಮಹಾತ್ಮನೂ ನೀನೇ. ನಿನ್ನಂತಹ ಪಂಡಿತರೂ ಕೂಡ ರೋಷವಶರಾದರೆ ಸಮಸ್ತ ಶಾಸ್ತ್ರಾರ್ಥಗಳಲ್ಲಿನ ಅವರ ಪಾಂಡಿತ್ಯ ಸಂಪಾದನೆಯು ಕೇವಲ ಶ್ರಮವೇ ಅಲ್ಲವೆ? ಶಾಸ್ತ್ರವೇತ್ತರಾದವರು ಕೋಪತಾಪಗಳಿಗೆ ವಶರಾಗುವುದಾದರೆ ಆ ಶಾಸ್ತ್ರಪಾಂಡಿತ್ಯದಿಂದ

ಕೇವಲಂ ॥ ೮ ॥ ತಸ್ಮಾತ್ಪ್ರಸೀದ! ಶತ್ರುಘ್ನ! ರಾಕ್ಷಸೇಂದ್ರ! ದುರಾಸದ! । ಯುಕ್ತಾಯುಕ್ತಂ ವಿನಿಶ್ಚಿತ್ಯ ದೂತದಂಡೋ ವಿಧೀಯತಾಂ" ॥ ೯ ॥ ವಿಭೀಷಣ ವಚಶ್ಶ್ರುತ್ವಾ ರಾವಣೋ ರಾಕ್ಷಸೇಶ್ವರಃ । ರೋಷೇಣ ಮಹತಾವಿಷ್ಟೋ ವಾಕ್ಯ ಮುತ್ತರಮಬ್ರವೀತ್ ॥ ೧೦ ॥ "ನಪಾಪಾನಾಂ ವಧೇ ಪಾಪಂ ವಿದ್ಯತೇ ಶತ್ರು ಸೂದನ! । ತಸ್ಮಾದೇನಂ ವಧಿಷ್ಯಾಮಿ ವಾನರಂ ಪಾಪಚಾರಿಣಂ" ॥೧೧॥ ಅಧರ್ಮ ಮೂಲಂ ಬಹುದೋಷಯುಕ್ತ ಮನಾರ್ಯಜುಷ್ಟಂ ವಚನಂ ನಿಶಮ್ಯ । ಉವಾಚ ವಾಕ್ಯಂ ಪರಮಾರ್ಥತತ್ತ್ವಂ ವಿಭೀಷಣೋ ಬುದ್ಧಿಮತಾಂ ವರಿಷ್ಠಃ ॥೧೨॥ "ಪ್ರಸೀದ!

॥ ೮ ॥ ಹೇ ಶತ್ರುಘ್ನ - ಎಲೈ ಶತ್ರುನಾಶಕನೆ, ಹೇ ರಾಕ್ಷಸೇಂದ್ರ - ಎಲೈ ರಾಕ್ಷಸಾಧಿಪತಿಯೆ, ಹೇ ದುರಾಸದ-ಎಲೈ ಹೊಂದಲಸಾಧ್ಯನೆ, ತಸ್ಮಾತ್ - ಆ ಕಾರಣದಿಂದ, ಪ್ರಸೀದ-ಪ್ರಸನ್ನನಾಗು, ಯುಕ್ತಾಯುಕ್ತಂ - ಕಾರ್ಯಾಕಾರ್ಯಗಳನ್ನು, ವಿನಿಶ್ಚಿತ್ಯ - ನಿಶ್ಚಯಿಸಿ, ದೂತದಂಡಃ - ದೂತನಿಗೆ ಯೋಗ್ಯವಾದ ದಂಡನೆಯು, ವಿಧೀಯತಾಂ - ವಿಧಿಸಲ್ಪಡಲಿ. ॥ ೯ ॥ ರಾಕ್ಷಸೇಶ್ವರಃ - ರಾಕ್ಷಸಾಧಿಪ ನಾದ, ರಾವಣಃ - ರಾವಣಾಸುರನು, ವಿಭೀಷಣವಚಃ - ವಿಭೀಷಣನ ಮಾತನ್ನು, ಶ್ರುತ್ವಾ - ಕೇಳಿ, ಮಹತಾರೋಷೇಣ - ಮಹಾ ರೋಷದಿಂದ, ಆವಿಷ್ಟಃ - ಕೂಡಿದವನಾಗಿ, ಉತ್ತರಂ - ಮುಂದೆ ಹೇಳತಕ್ಕ, ವಾಕ್ಯಂ - ಮಾತನ್ನು, ಅಬ್ರವೀತ್ - ನುಡಿದನು. ॥ ೧೦ ॥ ಹೇ ಶತ್ರುಸೂದನ - ಎಲೈ ಶತ್ರುನಾಶಕನೆ, ಪಾಪಾನಾಂ - ಪಾಪಿಷ್ಠರ, ವಧೇ - ಸಂಹಾರದಲ್ಲಿ, ಪಾಪಂ - ಪಾತಕವು, ನವಿದ್ಯತೇ-ಕಾಣುವುದಿಲ್ಲ, ತಸ್ಮಾತ್ - ಆ ಕಾರಣದಿಂದ, ಪಾಪಚಾರಿಣಂ - ರಾಜದ್ರೋಹಿಯಾದ, ಏನಂವಾನರಂ-ಈ ಕಪಿಯನ್ನು, ವಧಿಷ್ಯಾಮಿ - ಸಂಹರಿಸುತ್ತೇನೆ. ॥ ೧೧ ॥ ಬುದ್ಧಿಮತಾಂ - ಬುದ್ಧಿವಂತರಲ್ಲಿ, ವರಿಷ್ಠಃ - ಶ್ರೇಷ್ಠನಾದ, ವಿಭೀಷಣಃ - ವಿಭೀಷಣನು, ಅಧರ್ಮಮೂಲಂ - ಅಧರ್ಮಕ್ಕೆ ಕಾರಣವಾದ, ಬಹು....ಕ್ತಂ-ನಾನಾಬಗೆಯಾದ ಅಪರಾಧಗಳಿಂದ ಕೂಡಿರುವ, ಅನಾರ್ಯಜುಷ್ಟಂ-ದುರ್ಜನತೆಯ, ವಚನಂ - ಮಾತನ್ನು, ನಿಶಮ್ಯ - ಕೇಳಿ, ಪರ....ತ್ವಂ - ಉತ್ಕೃಷ್ಟವಾದ ನಿಶ್ಚಯಾರ್ಥವುಳ್ಳ, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥ ೧೨ ॥ ಹೇ ಲಂಕೇಶ್ವರ - ಎಲೈ ಲಂಕಾಧಿಪತಿಯೇ,

---

ಯಾವ ಪ್ರಯೋಜನವೂ ಇರುವುದಿಲ್ಲವು. ಎಲೈ ಪರಂತಪನೇ! ಯಾರಿಗೇ ಆಗಲಿ ಅಜೇಯ ನಾದವನು ನೀನು. ನಿನ್ನಂತಹನು ಕೋಪಗೊಳ್ಳುವುದು ಯುಕ್ತವಲ್ಲವು. ಪ್ರಸನ್ನನಾಗು, ಅಣ್ಣಾ! ಯುಕ್ತಾಯುಕ್ತಗಳನ್ನು ಚೆನ್ನಾಗಿ ಆಲೋಚಿಸಿ ದೂತನಾದ ಇವನಿಗೆ ಯೋಗ್ಯವಾದ ಶಿಕ್ಷೆಯನ್ನು ವಿಧಿಸುವವನಾಗು" ಎಂದು ನುಡಿದ ವಿಭೀಷಣನ ಮಾತುಗಳನ್ನು ಕೇಳಿ ರಾಕ್ಷಸೇಶ್ವರನಾದ ರಾವಣಾಸುರನು ಮಹತ್ತರವಾದ ರೋಷದಿಂದ ಕೂಡಿ ಆತನನ್ನು ಕುರಿತು, "ಎಲೈ ಶತ್ರುಂಜಯನಾದ ವಿಭೀಷಣನೇ! ಪಾಪಕಾರ್ಯಗಳನ್ನು ಮಾಡಿದ ಪಾಪಿಗಳನ್ನು ಸಂಹರಿಸುವುದರಲ್ಲಿ ಎಷ್ಟುಮಾತ್ರಕ್ಕೂ ಪಾಪವಿರುವುದಿಲ್ಲವು" ಎಂದು ಹೇಳಿ ದನು. ॥ ೬–೧೦ ॥ ಆಗ ಮಹಾ ಬುದ್ಧಿಶಾಲಿಯಾದ ವಿಭೀಷಣನು ಕೆಡುಕಿಗೆ ಕಾರಣ ವಾದುದೂ, ಮಹಾ ಕೋಪಸಮನ್ವಿತವಾದುದೂ, ದುಷ್ಟರಾದವರಿಗೆ ಮಾತ್ರ ಹಿತಕರ ವಾದುದೂ ಆದ ರಾವಣಾಸುರನ ಮಾತುಗಳನ್ನು ಕೇಳಿ ಉತ್ತಮ ಕಾರ್ಯನಿರ್ಧಾರದ ಮಾತುಗಳನ್ನಾಡುವವನಾಗಿ, "ಅಣ್ಣಾ! ಲಂಕೇಶ್ವರನೇ! ಪ್ರಸನ್ನನಾಗು. ಧರ್ಮಾರ್ಥಸಹಿತ ವಾದ ನನ್ನ ಮಾತುಗಳನ್ನು ಕೇಳು. ಯಾವಾಗಲೇ ಆಗಲಿ, ಯಾವ ದೇಶದಲ್ಲಿಯೇ ಆಗಲಿ,

ಲಂಕೇಶ್ವರ! ರಾಕ್ಷಸೇಂದ್ರ! ಧರ್ಮಾರ್ಥಯುಕ್ತಂ ವಚನಂ ಶೃಣುಷ್ವ । ದೂತಾ
ನವಧ್ಯಾ ಸ್ಸಮಯೇಷು ರಾಜನ್! ಸರ್ವೇಷು ಸರ್ವತ್ರ ವದಂತಿ ಸಂತಃ ॥ ೧೩ ॥
ಅಸಂಶಯಂ ಶತ್ರುರಯಂ ಪ್ರವೃದ್ಧಃ ಕೃತಂ ಹ್ಯನೇನಾಽಪ್ರಿಯಮಪ್ರಮೇಯಂ ।
ನದೂತವಧ್ಯಾಂ ಪ್ರವದಂತಿ ಸಂತೋ ದೂತಸ್ಯ ದೃಷ್ಟಾ ಬಹವೋಹಿ ದಂಡಾಃ ॥೧೪॥
ವೈರೂಪ್ಯಮಂಗೇಷು ಕಶಾಭಿಘಾತೋ ಮೌಂಡ್ಯಂ ತಥಾ ಲಕ್ಷಣಸನ್ನಿಪಾತಃ ।
ಏತಾನ್ಹಿ ದೂತೇ ಪ್ರವದಂತಿ ದಂಡಾನ್ ವಧಸ್ತು ದೂತಸ್ಯ ನನಶ್ಶ್ರುತೋಽಪಿ ॥ ೧೫ ॥
ಕಥಂಚ ಧರ್ಮಾರ್ಥವಿನೀತಬುದ್ಧಿಃ ಪರಾವರಪ್ರತ್ಯಯನಿಶ್ಚಿತಾರ್ಥಃ । ಭವದ್ವಿಧಃ

ಪ್ರಸೀದ - ಉಪಶಾಂತನಾಗು, ಹೇ ರಾಕ್ಷಸೇಂದ್ರ - ಎಲೈ ರಾಕ್ಷಸನಾಥನೆ, ಧರ್ಮಾ....ಕ್ತಂ - ಧರ್ಮದಿಂದಲೂ ಅರ್ಥದಿಂದಲೂ ಕೂಡಿರುವ, ವಚನಂ - ಮಾತನ್ನು, ಶೃಣುಷ್ವ - ಕೇಳು, ಹೇ ರಾಜನ್ - ಎಲೈ ಪ್ರಭುವೇ, ಸರ್ವೇಷು - ಸಮಸ್ತರಲ್ಲಿಯೂ, ಸರ್ವತ್ರ - ಎಲ್ಲೆಡೆಗಳಲ್ಲಿಯೂ, ಸಂತಃ - ಸತ್ಪುರುಷರು, ಸಮಯೇಷು - ಒಡೆಯನಾಜ್ಞೆಯನ್ನು ನೆರವೇರಿಸುವಾಗಲೂ, ದೂತಾನ್ - ದೂತರನ್ನು, ಅವಧ್ಯಾನ್ - ವಧಾನರ್ಹರನ್ನಾಗಿ, ವದಂತಿ - ಹೇಳುವರು. ॥ ೧೩ ॥ ಅಯಂ - ಈ ವಾನರನು, ಪ್ರವೃದ್ಧಃ-ಕೊಬ್ಬಿದವನು, ಶತ್ರುಃ-ಅಕ್ಷಾದಿಗಳನ್ನು ಕೊಂದದ್ದರಿಂದ ಶತ್ರುವು, ಅನೇನ-ಈ ಕಪಿಯಿಂದ, ಅಪ್ರಮೇಯಂ-ಊಹಿಸಲಸಾಧ್ಯವಾದ, ಅಪ್ರಿಯಂ-ಅಪಕಾರವು, ಕೃತಂಹಿ-ಮಾಡಲ್ಪಟ್ಟಿತಷ್ಟೆ, (ತಥಾಪಿ-ಆದರೂ), ಸಂತಃ - ಸಜ್ಜನರು, ದೂತವಧ್ಯಾಂ - ದೂತವಧೆಯನ್ನು, ನಪ್ರವದಂತಿ-ಹೇಳುವದಿಲ್ಲ, ದೂತಸ್ಯ - ದೂತನಿಗೆ, ಬಹವಃ - ಅನೇಕ, ದಂಡಾಃ - ಶಿಕ್ಷೆಗಳು, ದೃಷ್ಟಾಹಿ - ನೋಡಲ್ಪಟ್ಟಿವೆಯಷ್ಟೆ. ॥ ೧೪ ॥ ಅಂಗೇಷು - ಅವಯವಗಳಲ್ಲಿ, ವೈರೂಪ್ಯಂ - ವಿರೂಪತ್ವವು, ಕಶಾಭಿಘಾತಃ - ಕೋರಡೆಯ ಏಟು, ಮೌಂಡ್ಯಂ - ಮುಂಡನವು, ತಥಾ - ಹಾಗೆಯೇ, ಲಕ್ಷ....ತಃ - ದೂತಯೋಗ್ಯವಾದ ಗುರ್ತುಮಾಡೋಣವು, ಏತಾನ್-ಇವುಗಳನ್ನು, ದೂತೇ-ದೂತನದಲ್ಲಿ, ದಂಡಾನ್-ಶಿಕ್ಷೆಗಳನ್ನಾಗಿ, ಪ್ರವದಂತಿ - ಹೇಳುವರು, ದೂತಸ್ಯ - ದೂತನ, ವಧಸ್ತು - ಸಂಹಾರವಾದರೆ, ನಃ - ನಮ್ಮಿಂದ, ನಶ್ರುತೋಽಪಿ-ಕೇಳಲ್ಪಡಲೇ ಇಲ್ಲವು. ॥೧೫॥ ಧರ್ಮಾ....ದ್ಧಿಃ-ಧರ್ಮಶಾಸ್ತ್ರಾರ್ಥವಿಚಾರದಲ್ಲಿ ಶಿಕ್ಷಿತವಾದ ಬುದ್ಧಿಯುಳ್ಳ, ಪರಾ....ರ್ಥಃ-ಉತ್ತಮ ಮತ್ತು ನೀಚವೆಂಬ ಜ್ಞಾನದಿಂದ ನಿಶ್ಚಿತ ಪ್ರಯೋ

ರಾಯಭಾರವನ್ನು ವಹಿಸಿ ಬಂದ ದೂತನನ್ನು ಕೊಲ್ಲಕೂಡದೆಂದು ಹಿರಿಯರು ಹೇಳುವರು. “ಈ ವಾನರನು ನಮ್ಮ ಮಗನಾದ ಅಕ್ಷಕುಮಾರನೇ ಮೊದಲಾದವರನ್ನು ಕೊಂದಿರುವುದರಿಂದ ಶತ್ರುವೇ ಅಲ್ಲವೆ; ಇವನು ವಧಾರ್ಹನಲ್ಲವೆ?” ಎಂದು ನೀನು ಕೇಳಬಹುದು. ಇವನು ನಮಗೆ ಅಪಕಾರಿಯೇ ಹೌದು. ಇವನು ನಮಗೆ ಶತ್ರುವೇ ಸರಿ. ಇದೆಲ್ಲವೂ ನಿಶ್ಚಯವು. ಇವನು ಮಹಾ ಪ್ರವೃದ್ಧನೂ ಆಗಿರುವನು. ಆದರೂ ದೂತವಧೆಯನ್ನು ಮಾಡಕೂಡದೆಂದು ಹಿರಿಯರು ಹೇಳುವರು. ರಾಜನೀತಿ ಶಾಸ್ತ್ರದಲ್ಲೆಲ್ಲಿಯೂ ದೂತವಧೆಯು ಹೇಳಿಲ್ಲವು. ದೂತನ ಗರ್ವವನ್ನಡಗಿಸಲು ಅನೇಕ ದಂಡಗಳುಂಟು. ವಿರೂಪಗೊಳಿಸುವುದು, ಕೋರಡೆಯಿಂದ ಹೊಡೆಯುವುದು, ತಲೆಬೋಳಿಸುವುದು, ಗುರುತಿರುವಂತೆ ಮುದ್ರೆಹಾಕುವುದು ಇವೇ ಮೊದಲಾದ ಶಿಕ್ಷೆಗಳು ವಿಧಿಸಲ್ಪಟ್ಟಿವೆಯಲ್ಲದೆ ದೂತವಧೆಯನ್ನು ನಾವು ಎಲ್ಲಿಯೂ ಕೇಳಿಲ್ಲವು; ನೋಡಿಯೂ ಇರುವುದಿಲ್ಲವು. ॥ ೧೧–೧೫ ॥ ಅಣ್ಣಾ! ಧರ್ಮಾರ್ಥಗಳನ್ನು ಚೆನ್ನಾಗಿ ತಿಳಿದವರೂ, ಧರ್ಮದಲ್ಲಿ ಶ್ರೇಷ್ಠವಾದ ಬುದ್ಧಿಯುಳ್ಳ

ಕೋಪವಶೇಹಿ ತಿಷ್ಠೇತ್ಕೋಪಂ ನಿಗಚ್ಛಂತಿ ಹಿ ಸತ್ವವಂತಃ ||೧೬|| ನಧರ್ಮವಾದೇ ನಚ ಲೋಕವೃತ್ತೇ ನ ಶಾಸ್ತ್ರಬುದ್ಧಿಗ್ರಹಣೇಷು ಚಾಪಿ। ವಿದ್ಯೇತ ಕಶ್ಚಿತ್ತವ ವೀರ! ತುಲ್ಯಸ್ತ್ವಂ ಹ್ಯುತ್ತಮಸ್ಸರ್ವಸುರಾಸುರಾಣಾಂ || ೧೭ || ನಚಾಪ್ಯಸ್ಯ ಕಪೇರ್ಘಾತೇ ಕಂಚಿತ್ಪಶ್ಯಾಮ್ಯಹಂ ಗುಣಂ । ತೇಷ್ವಯಂ ಪಾತ್ಯತಾಂ ದಂಡೋ ಯೈರಯಂ ಪ್ರೇಷಿತಃ ಕಪಿಃ ||೧೮|| ಸಾಧುರ್ವಾ ಯದಿವಾಽಸಾಧುಃ ಪರೈರೇಷ ಸಮರ್ಪಿತಃ । ಬ್ರುವನ್ ಪರಾರ್ಥಂ ಪರವಾನ್ ನದೂತೋ ವಧಮರ್ಹತಿ || ೧೯ || ಅಪಿ ಚಾಽಸ್ಮಿನ್ ಹತೇ ರಾಜನ್ನಾನ್ಯಂ

ಜನವುಳ್ಳ, ಭವದ್ವಿಧಃ - ನಿನ್ನಂತಹನು, ಕೋಪವಶೇ-ಕೋಪಕ್ಕೆ ಆಧೀನನಾಗಿ, ಕಥಂಹಿ - ಹೇಗೆತಾನೆ, ತಿಷ್ಠೇತ್ - ನಿಂತಾನು, ಸತ್ವವಂತಃ - ಬಲಿಷ್ಠರು, ಕೋಪಂ - ಕ್ರೋಧವನ್ನು, ನಿಗಚ್ಛಂತಿಹಿ - ನಿಗ್ರಹಿಸುವರಷ್ಟೆ. ||೧೬|| ಹೇ ವೀರ - ಎಲೈ ಶೂರನೇ, ಹಿ - ಯಾವ ಕಾರಣದಿಂದ, ತ್ವಂ - ನೀನು, ಸರ್ವ....ಣಾಂ - ಸಮಸ್ತ ದೇವರಾಕ್ಷಸರೊಳಗೆ, ಉತ್ತಮಃ ಶ್ರೇಷ್ಠನಾದವನೋ, ತತ್ - ಆ ಕಾರಣದಿಂದ, ತವ - ನಿನಗೆ, ತುಲ್ಯಃ - ಸಮಾನನಾದ, ಕಶ್ಚಿತ್ - ಒಬ್ಬಾನೊಬ್ಬನೂ, ಧರ್ಮವಾದೇನ - ಧರ್ಮಶಾಸ್ತ್ರವಿಷಯದಲ್ಲಿಯೂ, ನವಿದ್ಯೇತ - ಇರಲಾರನು, ಲೋಕವೃತ್ತೇ - ಲೌಕಿಕಾಚಾರದಲ್ಲಿಯೂ, ನ - ಇರಲಾರನು, ಶಾಸ್ತ್ರ....ಪಿ - ಶಾಸ್ತ್ರಾರ್ಥಜ್ಞಾನದಲ್ಲಿಯೂ ಅವುಗಳನ್ನು ತಿಳಿಯುವದರಲ್ಲಿಯೂ, ನವಿದ್ಯತೇ - ಇರಲಾರನು. || ೧೭ || ಕಿಂಚ - ಇಷ್ಟುಮಾತ್ರವಲ್ಲ, ಅಹಂ - ನಾನು, ಅಸ್ಯಕಪೇಃ - ಈ ವಾನರನ, ಘಾತೇ - ಸಂಹಾರದಲ್ಲಿ, ಕಿಂಚಿತ್‌ಗುಣಮಪಿ - ಯಾವ ಗುಣಗಳನ್ನೂ, ನಪಶ್ಯಾಮಿ - ಕಾಣೆನು, ಅಯಂಕಪಿಃ - ಈ ವಾನರನು, ಯೈಃ - ಯಾರಿಂದ, ಪ್ರೇಷಿತಃ - ಕಳುಹಿಸಲ್ಪಟ್ಟನೋ, ತೇಷು - ಅವರಲ್ಲಿ, ಅಯಂ - ಈ ಕಪಿಗೆ ಮಾಡಿಸಬೇಕೆಂದಿಚ್ಛಿಸಿದ, ದಂಡಃ - ಸಂಹಾರರೂಪವಾದ ಶಿಕ್ಷೆಯು, ಪಾತ್ಯತಾಂ - ಬೀಳಿಸಲ್ಪಡಲಿ, ಏಷಃ - ಇವನು, ಸಾಧುರ್ವಾ - ಒಳ್ಳೆಯವನಾಗಲಿ, ಯದಿವಾ - ಹಾಗಲ್ಲದಿದ್ದರೆ, ಅಸಾಧುರ್ವಾ - ಕೆಟ್ಟವನಾಗಲಿ, ಪರೈಃ - ಶತ್ರುಗಳಿಂದ, ಸಮರ್ಪಿತಃ - ಪ್ರೇಷಿತನಾದವನು, ಪರಾರ್ಥಂ - ಪರಪ್ರಯೋಜನವನ್ನು, ಬ್ರುವನ್ - ಹೇಳುತ್ತಿರುವನಾದಕಾರಣ, ಪರವಾನ್ - ಪರಾಧೀನನಾದ, ದೂತಃ - ದೂತನು, ವಧಂ - ಸಂಹಾರಕ್ಕೆ, ನಾರ್ಹತಿ - ಯೋಗ್ಯನಲ್ಲ.

ವರೂ, ಯುಕ್ತಾಯುಕ್ತ ಪರಿಜ್ಞಾನದಿಂದ ಕಾರ್ಯಗಳನ್ನು ಮಾಡುವವರೂ ಆದ ನಿನ್ನಂತಹ ಮಹಾತ್ಮರು ಕೋಪಕ್ಕೊಳಗಾಗುವುದೆಂದರೇನು? ಬುದ್ಧಿಬಲವುಳ್ಳವರು ಕೋಪವನ್ನೇ ಜಯಿಸುವರಲ್ಲವೆ? ಅಲ್ಲದೆ ಧರ್ಮಾರ್ಥಜ್ಞಾನದಲ್ಲಿಯೂ, ಲೌಕಿಕ ವ್ಯವಹಾರಗಳಲ್ಲಿಯೂ, ಸಮಸ್ತ ಶಾಸ್ತ್ರಾರ್ಥಗಳಲ್ಲಿಯೂ ನಿನಗೆ ಸಮಾನನಾದವನಾವನೂ ಇಲ್ಲವು. ಎಲೈ ವೀರನೇ! ನೀನು ದೇವಾಸುರರಲ್ಲಿ ಮೇಲೆನಿಸಿದವನು. ಈ ವಾನರನನ್ನು ಸಂಹರಿಸುವುದರಿಂದ ನಮಗಾವ ಪ್ರಯೋಜನವೂ ಇಲ್ಲವು. ಇವನನ್ನು ಕಳುಹಿಸಿದವರಲ್ಲಿ ಆ ಮರಣದಂಡನೆಯನ್ನು ವಿಧಿಸಿದರೆ ಅದು ನಮಗೆ ಶ್ರೇಯಸ್ಸೆನಿಸುವುದು. ಎಲೈ ರಾಕ್ಷಸೇಂದ್ರನೇ! ಈ ವಾನರನು ಒಳ್ಳೆಯವನಾಗಲಿ, ಕೆಟ್ಟವನಾಗಲಿ ಅದು ನಮಗೆ ಅವಶ್ಯಕವಿಲ್ಲವು. ಇವನು ಮನಬಂದಂತೆ ಕೆಡುನುಡಿಗಳನ್ನಾಡಿರುವನಲ್ಲವೆ'' ಎಂದು ಕೇಳುವೆಯೋ; ಅದು ಇವನ ದೋಷವಲ್ಲವು. ಇತರರು ಹೇಳಿಕಳುಹಿಸಲು ಇವನಿಲ್ಲಿಗೆ ಬಂದನು. ಇತರರು ಹೇಳಿದ ಮಾತುಗಳನ್ನೇ ಇವನಾಡಿರುವನಲ್ಲದೆ, ಸ್ವಂತವಾಗಿ ಯಾವ ಮಾತನ್ನೂ ಆಡಿರುವುದಿಲ್ಲವು. ಆದುದರಿಂದ ಪರಾಧೀನನಾದ ಈ ದೂತನನ್ನು ಸಂಹರಿಸುವುದು ಯುಕ್ತವಲ್ಲವು. ಎಲೈ ರಾಕ್ಷಸನಾಥನೇ!

ಪಶ್ಯಾಮಿ ಖೇಚರಂ । ಇಹ ಯಃ ಪುನರಾಗಚ್ಛೇತ್ಪರಂ ಪಾರಂ ಮಹೋದಧೇಃ ॥೨೦॥ ತಸ್ಮಾನ್ನಾಸ್ಯ ವಧೇ ಯತ್ನಃ ಕಾರ್ಯಃ ಪರಪುರಂಜಯ! । ಭವಾನ್ಸೇಂದ್ರೇಷು ದೇವೇಷು ಯತ್ನಮಾಸ್ಥಾತುಮರ್ಹತಿ ॥ ೨೧ ॥ ¶ ಅಸ್ಮಿನ್ವಿನಷ್ಟೇ ನಹಿ ದೂತಮನ್ಯಂ ಪಶ್ಯಾಮಿ ಯಸ್ತೌ ನರರಾಜಪುತ್ರೌ । ಯುದ್ಧಾಯ ಯುದ್ಧಪ್ರಿಯ! ದುರ್ವಿನೀತಾವುದ್ಯೋಜಯೇದ್ದೀರ್ಘಪಥಾವರುದ್ಧೌ ॥ ೨೨ ॥ ಪರಾಕ್ರಮೋತ್ಸಾಹ ಮನಸ್ವಿ

॥ ೧೮-೧೯ ॥ ಅಪಿಚ - ಇಷ್ಟೆಯಲ್ಲದೆ, ಹೇ ರಾಜನ್ - ಎಲೈ ಒಡೆಯನೆ, ಅಸ್ಮಿನ್ - ಈ ದೂತನು, ಹತೇ - ಕೊಲ್ಲಲ್ಪಡಲು, ಯಃ - ಯಾವ ಪುರುಷನು, ಪುನಃ - ಮತ್ತು, ಇಹ - ಇಲ್ಲಿರುವ, ಮಹೋದಧೇಃ - ಸಮುದ್ರದ, ಪರಂಪಾರಂ - ದಕ್ಷಿಣತೀರವನ್ನು ಕುರಿತು, ಆಗಚ್ಛೇತ್ - ಬರುವನೋ, ತಂ - ಅಂತಹ, ಖೇಚರಂ - ಅಂತರಿಕ್ಷಗಮನಶೀಲನಾದ, ಅನ್ಯಂ - ಮತ್ತೊಬ್ಬನನ್ನು, ನಪಶ್ಯಾಮಿ - ಕಾಣೆನು, ಹೇ ಪರಪುರಂಜಯ - ಎಲೈ ಶತ್ರುದೇಶಗಳನ್ನು ಜಯಿಸಿದವನೇ, ತಸ್ಮಾತ್ - ಆ ಕಾರಣದಿಂದ, ಅಸ್ಯ - ಈ ದೂತನ, ವಧೇ - ಸಂಹಾರವಿಷಯದಲ್ಲಿ, ಯತ್ನಃ - ಪ್ರಯತ್ನವು, ನಕಾರ್ಯಃ - ಮಾಡತಕ್ಕದಲ್ಲ, ಭವಾನ್ - ನೀನು, ಸೇಂದ್ರೇಷು - ಇಂದ್ರಸಹಿತರಾದ, ದೇವೇಷು - ದೇವತೆಗಳ ವಿಷಯದಲ್ಲಿ, ಯತ್ನಂ - ಸಂಹಾರಪ್ರಯತ್ನವನ್ನು, ಆಸ್ಥಾತುಂ - ಮಾಡುವದಕ್ಕೆ, ಅರ್ಹಸಿ - ಯೋಗ್ಯನಾಗಿರುವೆ. ॥ ೨೦-೨೧ ॥ ಹೇ ಯುದ್ಧಪ್ರಿಯ - ಎಲೈ ಯುದ್ಧಪ್ರಿಯನೆ, ಅಸ್ಮಿನ್ - ಈ ದೂತನು, ವಿನಷ್ಟೇ - ನಾಶವಾಗಲು, ದುರ್ವಿನೀತೌ - ಅಶಿಕ್ಷಿತರಾದ, ದೀರ್ಘ....ದ್ಧೌ - ದೂರಮಾರ್ಗದಿಂದ ನಿರುದ್ಧಗಮನರಾದ, ತೌನ....ತ್ರೌ - ಆ ನರಪತಿಕುಮಾರರನ್ನು, ಯುದ್ಧಾಯ - ಕಾಳಗಕ್ಕೋಸ್ಕರ, ಯಃ - ಯಾವ ದೂತನು, ಉದ್ಯೋಜಯೇತ್ - ಪ್ರಯತ್ನಗೊಳಿಸಿಯಾನೊ, ತಂ - ಅಂತಹ, ಅನ್ಯಂದೂತಂ - ಮತ್ತೊಬ್ಬ ದೂತನನ್ನು, ನಹಿಪಶ್ಯಾಮಿ - ಕಾಣೆನು. ॥ ೨೨ ॥ ನೈರ್ಋತಾನಾಂ -

ಒಂದು ವೇಳೆ ನೀನಿವನನ್ನು ಕೊಂದುಬಿಟ್ಟರೆ, ಪುನಃ ಈ ಮಹಾ ಸಮುದ್ರವನ್ನು ದಾಟಿ ಇಲ್ಲಿಗೆ ಬರಬಲ್ಲ ಬೇರೊಬ್ಬ ಖಚರನಾವನಿರುವನೂ ಇಲ್ಲವೆಂದು ನನಗೆ ತೋರುವುದು. ಹಾಗೊಂದು ವೇಳೆ ಈ ದೂತನು ಸಂಹೃತನಾದಲ್ಲಿ ಇಲ್ಲಿನ ವೃತ್ತಾಂತವನ್ನು ರಾಮಲಕ್ಷ್ಮಣರಿಗೆ ತಿಳಿಸಿ ಅವರನ್ನು ಇಲ್ಲಿಗೆ ಕರೆದುಕೊಂಡು ಬರುವವರೂ ಯಾರೂ ಇರುವುದಿಲ್ಲವು. ಹಾಗಾದರೆ ನಿನ್ನ ಶತ್ರುಗಳಾದ ಅವರನ್ನು ಕೊಲ್ಲುವುದಕ್ಕೆ ನಿನಗೆ ಅವಕಾಶವೇ ಇರುವುದಿಲ್ಲವು. ಆದುದರಿಂದ ನೀನು ಈ ವಾನರನನ್ನು ಕೊಲ್ಲಿಸುವುದು ಯುಕ್ತವಲ್ಲವು. ಅಣ್ಣಾ! ದೇವೇಂದ್ರನೇ ಮೊದಲಾದ ದೇವತೆಗಳೇ ಯುದ್ಧಕ್ಕೆ ಬಂದರೂ ನೀನವರನ್ನು ವಧಿಸತಕ್ಕುದು ನ್ಯಾಯವಾಗಲಿ, ದೂತನಾಗಿ ಬಂದವನನ್ನು ಮಾತ್ರ ವಧಿಸಬಾರದು. ॥ ೧೬–೨೧ ॥ ಎಲೈ ರಾವಣೇಶ್ವರನೇ! ಮತ್ತೊಂದು ವಿಶೇಷವನ್ನು ಹೇಳುವೆನು ಕೇಳು. ನೀನು ಯುದ್ಧ ಪ್ರಿಯನು; ಈಗ ನೀನು ಈ ವಾನರನನ್ನು ಕೊಂದರೆ ಬಹಳವಾಗಿ ಗರ್ವಿಸಿ ದುರ್ವಿನೀತರಾಗಿಯೂ, ಬಹು ದೂರದಲ್ಲಿ ಬರಲು ಮಾರ್ಗವಿಲ್ಲದೆ ಅಡ್ಡಗಿಸಲ್ಪಟ್ಟವರಾಗಿಯೂ, ದಶರಥರಾಜಕುಮಾರರಾಗಿಯೂ ಇರುವ

¶ ಇಲ್ಲಿ ವಿಭೀಷಣನು ತನ್ನ ಸಹೋದರನಾದ ರಾವಣನು, ಕೇವಲ ರಜಃಪ್ರಕೃತಿಯುವನಾದುದರಿಂದಲೂ, ಯಾವಾಗಲೂ ಯುದ್ಧಾಸಕ್ತನಾದುದರಿಂದಲೂ, (ರಾವಣನ ಜೈತ್ರಯಾತ್ರಾಪ್ರಕರಣವನ್ನು ನೋಡಿದರೆ ಇದು ವಿಶದವಾಗುವುದು) ಆತನಿಗೆ ಯುದ್ಧದಾಸೆಯನ್ನು ತೋರಿಸಿ, ಆತನನ್ನು ದೂತವಧ ಪಾಪದಿಂದ ಬಿಡಿಸಲು ಯತ್ನಿಸುವನೆಂದು ಗ್ರಾಹ್ಯವು. (ಮ+ಕ)

ನಾಂಚ ಸುರಾಸುರಾಣಾಮಪಿ ದುರ್ಜಯೇನ । ತ್ವಯಾ ಮನೋನಂದನ! ನೈರ್ಋ ತಾನಾಂ ಯುದ್ಧಾಯತಿರ್ನಾಶಯಿತುಂ ನಯುಕ್ತಾ ॥ ೨೩ ॥ ಹಿತಾಶ್ಚ ಶೂರಾಶ್ಚ ಸಮಾಹಿತಾಶ್ಚ ಕುಲೇಷು ಜಾತಾಶ್ಚ ಮಹಾಗುಣೇಷು । ಮನಸ್ವಿನಶ್ಶಸ್ತ್ರಭೃತಾಂ ವರಿಷ್ಠಾಃ ಕೋಟ್ಯಗ್ರತಸ್ತೇ ಸುಭೃತಾಶ್ಚ ಯೋಧಾಃ ॥೨೪॥ ತದೇಕದೇಶೇನ ಬಲಸ್ಯ ತಾವತ್ಕೇಚಿತ್ತವಾದೇಶಕೃತೋಽಭಿಯಾಂತು । ತೌ ರಾಜಪುತ್ರೌ ವಿನಿಗೃಹ್ಯ ಮೂಢೌ ಪರೇಷು ತೇ ಭಾವಯಿತುಂ ಪ್ರಭಾವಂ ॥ ೨೫ ॥

ರಾಕ್ಷಸರ, ಮನೋನಂದನ - ಮನಸ್ಸಂತೋಷಗೊಳಿಸುವವನೇ, ಪರಾ....ನಾಂ - ಸಾಮರ್ಥ್ಯದಲ್ಲಿಯೂ, ಉತ್ಸಾಹಶಕ್ತಿಯಲ್ಲಿಯೂ ಸ್ಥಿರಮನಸ್ಸುಳ್ಳ, ಸುರಾ....ಪಿ - ದೇವರಾಕ್ಷಸರಿಗೂ ಸಹ, ದುರ್ಜಯೇನ - ಜಯಿಸಲಶಕ್ಯನಾದ, ತ್ವಯಾ - ನಿನ್ನಿಂದ, ಯುದ್ಧಾಯತಿಃ - ಯುದ್ಧವಿಸ್ತಾರವು, (ಅಂದರೆ ಯುದ್ಧ ಕೀರ್ತಿಯು), ನಾಶಯಿತುಂ - ನಾಶಗೊಳಿಸುವದಕ್ಕೆ, ನಯುಕ್ತಾ - ಯುಕ್ತವಲ್ಲವು. ॥೨೩॥ ಹಿತಾಶ್ಚ- ಇಷ್ಟರೂ, ಶೂರಾಶ್ಚ - ವೀರರೂ, ಸಮಾಹಿತಾಶ್ಚ - ಸಂತುಷ್ಟರೂ, ಮಹಾಗುಣೇಷು - ಸುಗುಣ ಗಳುಳ್ಳ, ಕುಲೇಷು - ವಂಶಗಳಲ್ಲಿ, ಜಾತಾಶ್ಚ - ಹುಟ್ಟಿದವರೂ ಆದ, ಮನಸ್ವಿನಃ - ಒಳ್ಳೆಯ ಮನಸ್ಸುಳ್ಳ, ಶಸ್ತ್ರಭೃತಾಂ - ಶಸ್ತ್ರಧಾರಿಗಳಲ್ಲಿ, ವರಿಷ್ಠಾಃ - ಶ್ರೇಷ್ಠರಾದ, ಕೋಟ್ಯಗ್ರತಃ - ಅಸಂಖ್ಯಾತರಾದ, ಯೋಧಾಶ್ಚ - ಭಟರೂ ಸಹ, ಸುಭೃತಾಃ - ಸಂಬಳಗಾರರಾಗಿರುವರು. ॥ ೨೪ ॥ ತತ್ - ಆ ಕಾರಣದಿಂದ, ಬಲಸ್ಯ - ಸೈನ್ಯದ, ಏಕದೇಶೇನ - ಒಂದು ಭಾಗದೊಡನೆ, ಕೇಚಿತ್ತಾವತ್ - ಕೆಲವರುಮಾತ್ರ, ತವ - ನಿನ್ನ, ಆದೇಶಕೃತಃ - ಆಜ್ಞಾಕಾರಿಗಳಾಗಿ, ಮೂಢೌ - ಅಜ್ಞರಾದ, ತೌರಾಜಪುತ್ರೌ - ಆ ರಾಜಪುತ್ರರನ್ನು, ವಿನಿಗೃಹ್ಯ - ನಿಗ್ರಹಿಸಿ, ಪರೇಷು - ಶತ್ರುಗಳಲ್ಲಿ, ತೇ - ನಿನ್ನ, ಪ್ರಭಾವಂ - ಮಾಹಾತ್ಮ್ಯವನ್ನು, ಭಾವಯಿತುಂ - ಪ್ರಕಾಶಗೊಳಿಸುವದಕ್ಕೆ, ಅಭಿಯಾಂತು- ಹೊರಡಲಿ. ॥೨೫॥ ನಿಶಾಚರಾಣಾಂ - ಅಸುರರಿಗೆ, ಅಧಿಪಃ - ಒಡೆಯನಾದ, ಸುರಲೋಕಶತ್ರುಃ - ಸ್ವರ್ಗಲೋಕ

ಆ ರಾಮಲಕ್ಷ್ಮಣರನ್ನು ನಿನ್ನೊಡನೆ ಯುದ್ಧಕ್ಕಾಗಿ ಕರೆತರುವ ಶಕ್ತಿಸಂಪನ್ನರಾರೂ ಇರುವುದಿಲ್ಲವು. ರಾಕ್ಷಸ ಮನೋನಂದನನಾದ ಎಲೈ ರಾವಣೇಶ್ವರನೇ ! ಶೌರ್ಯವನ್ನೂ, ಧೈರ್ಯವನ್ನೂ, ಉತ್ಸಾಹವನ್ನೂ ಒಳಗೊಂಡು ದೇವಾಸುರರಿಗೂ ದುರ್ಜೇಯನಾಗಿರುವ ನೀನೇ ಅವರೊಡನೆ ಈಗ ಸಂಭವಿಸಲಿರುವ ಯುದ್ಧವನ್ನು ಹಾಳುಮಾಡಿಕೊಳ್ಳುವುದು ಎಷ್ಟುಮಾತ್ರಕ್ಕೂ ಉಚಿತವಲ್ಲ. ನಿನಗೆ ಸಹಾಯಸಂಪತ್ತಿಗೇನು ಕಡಿಮೆಯೇ? ಸಮಸ್ತ ರಾಕ್ಷಸ ವೀರರೂ ನಿನಗೆ ಸಹಾಯಕರಾಗಿಯೇ ಇರುವರು. ಅವರೆಲ್ಲರೂ ನಿನಗೆ ಹಿತವನ್ನು ಕೋರುವವರು ; ಯುದ್ಧವೀರರು ; ಮಹಾ ಜಾಗರೂಕರು ; ಸುಗುಣಸಂಪನ್ನರಾಗಿ ಉತ್ತಮ ಕುಲಗಳಲ್ಲಿ ಹುಟ್ಟಿದವರು. ಅವರೆಲ್ಲರೂ ನಿನ್ನಲ್ಲಿ ಅನುರಕ್ತರಾಗಿರುವರು. ಸಮಸ್ತ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿರುವವರೂ, ನಿನ್ನಿಂದ ಸಂಪೋಷಿತರಾಗಿರುವವರೂ ಆದ ಅಂತಹ ಭಟರು ನಿನ್ನ ವಶದಲ್ಲಿ ಕೋಟ್ಯಂತರ ಸಂಖ್ಯೆಯಲ್ಲಿರುವರು. ಆದುದರಿಂದ ಈಗ ನೀನೊಂದು ಪಾಯವನ್ನು ಮಾಡಬಹುದು. ನಿನ್ನಪ್ಪಣೆಯಂತೆ ನಡೆಯುವವರಲ್ಲಿ ಕೆಲವರು ಶೂರರನ್ನು ಸೈನ್ಯದ ಒಂದು ಭಾಗದೊಡನೆ ಕಳುಹಿಕೊಡು. ಅವರು ಇಲ್ಲಿಂದ ಹೊರಟು ಮೂಢರಾದ ಆ ರಾಜಪುತ್ರರೀರ್ವರನ್ನೂ ಯುದ್ಧದಲ್ಲಿ ನಿಗ್ರಹಿಸಿ, ತಮ್ಮ ಪ್ರಭಾವವನ್ನವರಿಗೆ ತಿಳಿಯಪಡಿಸಲಿ.

ನಿಶಾಚರಾಣಾಮಧಿಪೋಽನುಜಸ್ಯ
ವಿಭೀಷಣಸ್ಯೋತ್ತಮವಾಕ್ಯಮಿಷ್ಟಂ ।
ಜಗ್ರಾಹ ಬುದ್ಧ್ಯಾ ಸುರಲೋಕಶತ್ರು
ರ್ಮಹಾಬಲೋ ರಾಕ್ಷಸರಾಜಮುಖ್ಯಃ ॥ ೨೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಪಂಚಾಶಸ್ಸರ್ಗಃ

ಶತ್ರುವಾದ, ಮಹಾಬಲಃ-ಬಹು ಬಲಾಢ್ಯನಾದ, ರಾಕ್ಷ....ಖ್ಯಃ-ಅಸುರೇಶ್ವರಶ್ರೇಷ್ಠನಾದ ರಾವಣನು, ಅನುಜಸ್ಯ - ಒಡಹುಟ್ಟಿದ, ವಿಭೀಷಣಸ್ಯ - ವಿಭೀಷಣನ, ಇಷ್ಟಂ - ಹಿತವಾದ, ಉತ್ತಮವಾಕ್ಯಂ - ಶ್ರೇಷ್ಠವಾದ ಮಾತನ್ನು, ಬುದ್ಧ್ಯಾ - ಮತಿಯಿಂದ, ಜಗ್ರಾಹ - ಗ್ರಹಿಸಿದನು. ॥೨೬॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಪಂಚಾಶಸ್ಸರ್ಗಃ

ಧರ್ಮಾತ್ಮನಾದ ವಿಭೀಷಣನೀರೀತಿ ನುಡಿಯಲು ರಾಕ್ಷಸೇಶ್ವರನೂ, ದೇವತಾನಿವಹಕ್ಕೆ ಶತ್ರುವಾದವನೂ, ಮಹಾ ಬಲಪರಾಕ್ರಮಶಾಲಿಯಾದವನೂ, ರಾಕ್ಷಸಶ್ರೇಷ್ಠನೂ ಆದ ರಾವಣಾಸುರನು ತನಗೆ ತಮ್ಮನಾದ ಆತನ ಯುಕ್ತಿಯುಕ್ತವಾದ ಆ ಪ್ರಿಯವಚನಗಳನ್ನು ಕೇಳಿ ಮನಸ್ಸಿನಲ್ಲಿ ಚೆನ್ನಾಗಿ ಆಲೋಚಿಸಿ ಅವುಗಳನ್ನು ಅಂಗೀಕರಿಸಿದನು. ॥ ೨೨—೨೬ ॥

ಇಂತಿದು ವಿಭೀಷಣಕೃತ ದೂತವಧನಿಷೇಧವೆಂಬ ಐವತ್ತೆರಡನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ತ್ರಿಪಂಚಾಶಸ್ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ದಶಗ್ರೀವೋ ಮಹಾಬಲಃ । ದೇಶಕಾಲಹಿತಂ ವಾಕ್ಯಂ ಭ್ರಾತುರುತ್ತರಮಬ್ರವೀತ್ ॥ ೧ ॥ " ಸಮ್ಯಗುಕ್ತಂ ಹಿ ಭವತಾ ದೂತವಧ್ಯಾ ವಿಗರ್ಹಿತಾ । ಅವಶ್ಯಂತು ವಧಾದನ್ಯಃ ಕ್ರಿಯತಾಮಸ್ಯ ನಿಗ್ರಹಃ ॥ ೨ ॥ ಕಪೀನಾಂ ಕಿಲ ಲಾಂಗೂಲಮಿಷ್ಟಂ ಭವತಿ ಭೂಷಣಂ । ತದಸ್ಯ ದೀಪ್ಯತಾಂ ಶೀಘ್ರಂ ತೇನ ದಗ್ಧೇನ ಗಚ್ಛತು ॥ ೩ ॥ ತತಃ ಪಶ್ಯಂತ್ವಿಮಂ ದೀನಮಂಗವೈರೂಪ್ಯಕರ್ಶಿತಂ । ಸಮಿತ್ರಜ್ಞಾತಯಸ್ಸರ್ವೇ ಬಾಂಧವಾಸ್ಸಸುಹೃಜ್ಜನಾಃ " ॥ ೪ ॥ ಆಜ್ಞಾಪಯದ್ರಾಕ್ಷ

ಮಹಾಬಲಃ - ಮಹಾ ಬಲಿಷ್ಠನಾದ, ದಶಗ್ರೀವಃ - ದಶಕಂಠನು, ದೇಶ....ತಂ - ದೇಶ ಕಾಲೋಚಿತವಾದ, ಭ್ರಾತುಃ - ತಮ್ಮನಾದ, ತಸ್ಯ - ಆ ವಿಭೀಷಣನ, ತದ್ವಚನಂ - ಆ ಮಾತನ್ನು, ಶ್ರುತ್ವಾ-ಕೇಳಿ, ಉತ್ತರಂ-ಮುಂದೆ ಹೇಳತಕ್ಕ, ವಾಕ್ಯಂ ವಚನವನ್ನು, ಅಬ್ರವೀತ್-ಹೇಳಿದನು. ॥೧॥ ಭವತಾ - ನಿನ್ನಿಂದ, ಸಮ್ಯಗುಕ್ತಂ - ಚೆನ್ನಾಗಿ ಹೇಳಲ್ಪಟ್ಟಿತು, ದೂತವಧ್ಯಾ - ದೂತವಧೆಯು, ವಿಗರ್ಹಿತಾಹಿ - ನಿಂದಿತವಾದುದಷ್ಟೆ, ಕಿಂತು - ಆದರೆ, ವಧಾತ್ - ಸಂಹಾರಕ್ಕಿಂತಲೂ, ಅನ್ಯಃ - ಮತ್ತೊಂದಾದ ಶಿಕ್ಷೆಯು, ಅಸ್ಯ - ಈ ದೂತನಿಗೆ, ಅವಶ್ಯಂ - ಮುಖ್ಯವಾಗಿ, ಕ್ರಿಯತಾಂ - ಮಾಡಲ್ಪಡಲಿ. ॥೨॥ ಕಪೀನಾಂ - ಕಪಿಗಳಿಗೆ, ಲಾಂಗೂಲಂ - ಬಾಲವು, ಇಷ್ಟಂ - ಪ್ರೀತಿಕರವಾದ, ಭೂಷಣಂ - ಆಭರಣವಾಗಿ, ಭವತಿಖಲು - ಆಗಿರುವದಷ್ಟೆ, (ತತ್ - ಆ ಕಾರಣದಿಂದ), ಅಸ್ಯ - ಈ ದೂತನ, ತತ್ - ಆ ಬಾಲವು, ಶೀಘ್ರಂ - ಜಾಗ್ರತೆಯಾಗಿ, ದೀಪ್ಯತಾಂ - ಸುಡಲ್ಪಡಲಿ, ದಗ್ಧೇನ - ಸುಡಲ್ಪಟ್ಟ, ತೇನ - ಆ ಬಾಲದಿಂದ, (ಉಪಲಕ್ಷಿತಃ - ಕೂಡಿದವನಾಗಿ), ಗಚ್ಛತು - ಹೋಗಲಿ. ॥೩॥ ತತಃ - ಬಳಿಕ, ಸಮಿ....ಯಃ - ಸಮನವಾದ ಸುಖದುಃಖಗಳುಳ್ಳ ಆಪ್ತರಿಂದಲೂ ಭ್ರಾತೃವರ್ಗದವ ರಿಂದಲೂ ಒಡಗೂಡಿದ, ಸಸುಹೃಜ್ಜನಾಃ - ಸ್ನೇಹಿತಜನರೊಡಗೂಡಿದ, ಸರ್ವೇಬಾಂಧವಾಃ - ನೆಂಟ ರಲ್ಲರೂ, ಅಂಗ....ತಂ - ಅವಯವವೈಕಲ್ಯದಿಂದ ಕೃಶನಾಗಿ, ದೀನಂ - ದುಃಖಿತನಾದ, ಇಮಂ - ಈ ದೂತನನ್ನು, ಪಶ್ಯಂತು - ನೋಡಲಿ. ॥ ೪ ॥ ಪ್ರದೀಪ್ತೇನ - ಸುಡಲ್ಪಟ್ಟ, ಲಾಂಗೂಲೇನ - ಬಾಲ

ಆಮೇಲೆ ಮಹಾ ಪರಾಕ್ರಮಶಾಲಿಯಾದ ರಾವಣಾಸುರನು ತನ್ನ ತಮ್ಮನಾದ ವಿಭೀಷಣನಾಡಿದ ಮಾತುಗಳನ್ನು ಕೇಳಿ ದೇಶಕಾಲಗಳ ಸ್ಥಿತಿಗತಿಗಳನ್ನು ಚೆನ್ನಾಗಿ ಆಲೋಚಿಸಿ ಯುಕ್ತಿಯುಕ್ತವಾದ ಮಾತುಗಳಿಂದ ಅವನನ್ನು ಕುರಿತು, " ತಮ್ಮ ; ವಿಭೀಷಣಾ! ದೂತ ವಧೆಯನ್ನು ಮಾಡಕೂಡದೆಂದು ನೀನು ಹೇಳಿದ ಮಾತು ಉಚಿತವಾಗಿರುವುದು. ಇವನನ್ನು ಸಂಹರಿಸುವುದಕ್ಕೆ ಬದಲು ಇವನಿಗಾವುದಾದರೂ ಶಿಕ್ಷೆಯೊಂದನ್ನು ವಿಧಿಸುವುದೇ ಯುಕ್ತವು. ಅಂತಹ ಶಿಕ್ಷೆಯನ್ನು ಅವಶ್ಯಕವಾಗಿ ವಿಧಿಸಲೇ ಬೇಕು. ಕಪಿಗಳಿಗೆ ಬಾಲವೇ ಪರಮ ಭೂಷ ಣವು. ಆದುದರಿಂದ ಪ್ರಕೃತದಲ್ಲಿ ಇವನ ಬಾಲವನ್ನೇ ಶೀಘ್ರವಾಗಿ ಸುಟ್ಟುಬಿಡಿರಿ. ಈ ವಾನ ರನು ಸುಟ್ಟಬಾಲದಿಂದಲೇ ಇವನ ಪ್ರಭುವಾದ ಸುಗ್ರೀವನಲ್ಲಿಗೆ ಹೋಗಲಿ. ಇವನ ಮಿತ್ರರೂ ಇವನ ಜ್ಞಾತಿಗಳೂ, ಇವನ ಬಂಧುಗಳೂ ಅವರವರ ಮಿತ್ರರೊಡಗೂಡಿ ಅಂಗವೈಕಲ್ಯ ವನ್ನು ಹೊಂದಿ, ದೀನನಾಗುವ ಇವನನ್ನು ನೋಡಲಿ. " ಎಂದು ಹೇಳಿ, ತನ್ನ ಪುರಜನರೆಲ್ಲ

ಸೇಂದ್ರಃ "ಪುರಂ ಸರ್ವಂ ಸಚತ್ವರಂ । ಲಾಂಗೂಲೇನ ಪ್ರದೀಪ್ತೇನ ರಕ್ಷೋಭಿಃ ಪರಿಣೀಯತಾಂ" ॥ ೫ ॥ ತಸ್ಯ ತದ್ವಚನಂ ಶ್ರುತ್ವಾ ರಾಕ್ಷಸಾಃ ಕೋಪಕರ್ಶಿತಾಃ । ವೇಷ್ಟಯಂತಿಸ್ಮ ಲಾಂಗೂಲಂ ಜೀರ್ಣೈಃ ಕಾರ್ಪಾಸಕೈಃ ಪಟೈಃ ॥ ೬ ॥ ಸಂವೇಷ್ಟ್ಯಮಾನೇ ಲಾಂಗೂಲೇ ವ್ಯವರ್ಧತ ಮಹಾಕಪಿಃ । ಶುಷ್ಕಮಿಂಧನಮಾಸಾದ್ಯ ವನೇಷ್ವಿವ ಹುತಾಶನಃ । ತೈಲೇನ ಪರಿಷಿಚ್ಯಾಥ ತೇಽಗ್ನಿಂ ತತ್ರಾಭ್ಯಪಾತಯನ್ ॥ ೭ ॥ ಲಾಂಗೂಲೇನ ಪ್ರದೀಪ್ತೇನ ರಾಕ್ಷಸಾಂಸ್ತಾನಪಾತಯತ್ । ರೋಷಾಮರ್ಷಪರೀತಾತ್ಮಾ ಬಾಲಸೂರ್ಯಸಮಾನನಃ ॥ ೮ ॥ ಲಾಂಗೂಲಂ ಸಂಪ್ರದೀಪ್ತಂತು ದ್ರಷ್ಟುಂ ತಸ್ಯ

ದಿಂದ, (ಯುಕ್ತಂ - ಕೂಡಿರುವ ಈ ದೂತನು), ಸಚತ್ವರಂ - ರಾಜಬೀದಿಗಳಿಂದ ಕೂಡಿದ, ಪುರಂ ಸರ್ವಂ - ಪಟ್ಟಣದಲ್ಲೆಲ್ಲ, ರಕ್ಷೋಭಿಃ - ರಕ್ಕಸರಿಂದ, ಪರಿಣೀಯತಾಂ - ಎಲ್ಲಾ ಕಡೆಯಲ್ಲಿಯೂ, ತಿರುಗಿಸಲ್ಪಡಲಿ, ಇತಿ - ಇಂತೆಂದು, ರಾಕ್ಷಸೇಂದ್ರಃ - ರಾವಣನು, ಆಜ್ಞಾಪಯತ್ - ಅಪ್ಪಣೆ ಮಾಡಿದನು. ॥೫॥ ಶೋಕಕರ್ಶಿತಾಃ - ದುಃಖದಿಂದ ಬತ್ತಿಹೋದ, ರಾಕ್ಷಸಾಃ - ಅಸುರರು, ತಸ್ಯ - ಆ ರಾವಣನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಜೀರ್ಣೈಃ - ಹಳೆಯದಾದ, ಕಾರ್ಪಾಸಕೈಃ - ಹತ್ತಿಯಿಂದ ಮಾಡಲ್ಪಟ್ಟ, ಪಟೈಃ - ಬಟ್ಟೆಗಳಿಂದ, ಲಾಂಗೂಲಂ - ಬಾಲವನ್ನು, ವೇಷ್ಟಯಂತಿಸ್ಮ - ಸುತ್ತಿದರಷ್ಟೆ. ॥೬॥ ಲಾಂಗೂಲೇ - ಬಾಲವು, ಸಂವೇಷ್ಟ್ಯಮಾನೇ - ಸುಡಲ್ಪಟ್ಟು ದಾಗಲು, ಮಹಾಕಪಿಃ - ಮಹಾ ವಾನರನಾದ ಆಂಜನೇಯನು, ಹುತಾಶನಃ - ಅಗ್ನಿಯು, ವನೇಷು - ಕಾಡುಗಳಲ್ಲಿ, ಶುಷ್ಕಂ - ಒಣಗಿದ, ಇಂಧನಂ - ಕಟ್ಟಿಗೆಗಳನ್ನು, ಆಸಾದ್ಯೇವ - ಹೊಂದಿದಂತೆ, ವ್ಯವರ್ಧತ - ವೃದ್ಧಿ ಹೊಂದಿದನು, ಅಥ - ಬಳಿಕ, ತೈಲೇನ - ಎಣ್ಣೆಯಿಂದ, ಪರಿಷಿಚ್ಯ - ನೆನೆಯಿಸಿ, ತತ್ರ - ಆ ಬಾಲದಲ್ಲಿ, ತೇ - ಆ ರಾಕ್ಷಸರು, ಅಗ್ನಿಂ - ಯಜ್ಞೇಶ್ವರನನ್ನು, ಅಭ್ಯಪಾತಯನ್ - ಇಟ್ಟರು. ॥೭॥ ಬಾಲ....ನಃ - ಪ್ರಾತಃಕಾಲ ಸೂರ್ಯನಿಗೆ ಸಮಾನವಾದ ಮುಖವುಳ್ಳ ಆಂಜನೇಯನು, ರೋಷಾ....ತ್ಮಾ - ಕೋಪಾತಿಶಯದಿಂದ ವ್ಯಾಪ್ತವಾದ ಮನಸ್ಸುಳ್ಳವನಾಗಿ, ಪ್ರದೀಪ್ತೇನ - ಉರಿಯುತ್ತಿರುವ, ಲಾಂಗೂಲೇನ - ಬಾಲದಿಂದ, ತಾನ್ರಾಕ್ಷಸಾನ್ - ಆ ರಕ್ಕಸರನ್ನು, ಅಪಾತಯತ್ - ಕೆಡುಹಿದನು. ॥೮॥ ಸಹ....ಶ್ಚ - ಸ್ತ್ರೀಬಾಲವೃದ್ಧರಿಂದ ಕೂಡಿದ, ರಾಕ್ಷಸಾಃ - ಅಸುರರು, ಪ್ರದೀಪ್ತಂ-

---

ರನ್ನೂ ಕುರಿತು, "ಸುಡಲ್ಪಡುತ್ತಿರುವ ಬಾಲದಿಂದ ಕೂಡಿದ ಈ ವಾನರನನ್ನು, ಪಟ್ಟಣದ ಚೌಕಗಳಲ್ಲಿಯೂ, ರಾಜಮಾರ್ಗಗಳಲ್ಲಿಯೂ, ಪಟ್ಟಣದಲ್ಲೆಲ್ಲಿಯೂ ಚೆನ್ನಾಗಿ ತಿರುಗಿಸಿರಿ" ಎಂದು ಆಜ್ಞಾಪಿಸಿದನು. ॥ ೧-೫ ॥ ಆಗ ರಾಕ್ಷಸರೆಲ್ಲರೂ, ತಮ್ಮೊಡೆಯನಾದ ರಾವಣಾಸುರನ ಆಜ್ಞಾವಚನವನ್ನು ಕೇಳಿ ಮಹಾ ಕೋಪೋದ್ದೀಪಿತರಾಗಿ ಆಂಜನೇಯನ ಬಾಲವನ್ನು ಹಳೆಯಬಟ್ಟೆಯ ಚಿಂದಿಗಳಿಂದ ಸುತ್ತಿದರು. ಆ ಸಮಯದಲ್ಲಿ ಆಂಜನೇಯನು ತನ್ನ ಬಾಲಕ್ಕೆ ಬಟ್ಟೆಯ ಚಿಂದಿಗಳನ್ನು ಸುತ್ತುತ್ತಿರುವುದನ್ನು ನೋಡಿ, "ಕಾಳ್ಗಿಚ್ಚು ಒಣಗಿನಿಂತ ಮರಗಳೆಲ್ಲವನ್ನೂಸುಡುತ್ತ ವರ್ಧಿಸುವಂತೆ" ಬಹಳವಾಗಿ ವರ್ಧಿಸಿದನು. ಆಮೇಲೆ ರಾಕ್ಷಸಭಟರೆಲ್ಲರೂ ಬಟ್ಟೆಗಳಿಂದ ಸುತ್ತಿದ್ದ ಆ ಬಾಲಕ್ಕೆಎಣ್ಣೆಯನ್ನುಸುರಿದು ಬೆಂಕಿಯನ್ನು ತಗುಲಿಸಿದರು. ಆಗ ಹನುಮಂತನು ಬಹಳವಾಗಿ ಕೋಪಿಸಿದನು. ಮೊದಲೇ ಕೆಂಪಾಗಿದ್ದ ಅವನ ಮುಖವು ಮತ್ತೂ ಕೆಂಪಾಗಲು ಬಾಲಸೂರ್ಯನಂತೆ ಪ್ರಕಾಶಿಸುತ್ತ ಉರಿಯುತ್ತಿರುವ ತನ್ನ ಬಾಲದಿಂದ ಅಲ್ಲಿದ್ದ ರಾಕ್ಷಸಭಟರೆಲ್ಲರನ್ನೂ ಹೊಡೆದು ಕೆಡುಹಿದನು. ಆ ಸಮಯದಲ್ಲಿ ಲಂಕಾ

ಹನೂಮತಃ । ಸಹಸ್ತ್ರೀಬಾಲವೃದ್ಧಾಶ್ಚ ಜಗ್ಮುಃ ಪ್ರೀತಾ ನಿಶಾಚರಾಃ ॥ ೯ ॥ ಸಭೂಯಸ್ಸಂಗತೈಃ ಕ್ರೂರೈ ರಾಕ್ಷಸೈರ್ಹರಿಸತ್ತಮಃ । ನಿಬದ್ಧಃ ಕೃತವಾನ್ವೀರ ಸ್ತತ್ಕಾಲಸದೃಶೀಂ ಮತಿಂ ॥ ೧೦ ॥ “ಕಾಮಂ ಖಲು ನ ಮೇ ಶಕ್ತಾ ನಿಬದ್ಧಸ್ಯಾಪಿ ರಾಕ್ಷಸಾಃ । ಛಿತ್ವಾ ಪಾಶಾನ್ಸಮುತ್ಪತ್ಯ ಹನ್ಯಾಮಹಮಿಮಾನ್ಪುನಃ ॥ ೧೧ ॥ ಯದಿ ಭರ್ತುರ್ಹಿತಾರ್ಥಾಯ ಚರಂತಂ ಭರ್ತೃಶಾಸನಾತ್ । ಬಧ್ನಂತ್ಯೇತೇ ದುರಾತ್ಮಾನೋ ನತು ಮೇ ನಿಷ್ಕೃತಿಃ ಕೃತಾ ॥ ೧೨ ॥ ಸರ್ವೇಷಾಮೇವ ಪರ್ಯಾಪ್ತೋ ರಾಕ್ಷಸಾನಾಮಹಂ ಯುಧಿ । ಕಿಂತು ರಾಮಸ್ಯ ಪ್ರೀತ್ಯರ್ಥಂ ವಿಷಹಿಷ್ಯೇಽಹಮೀದೃಶಂ ॥೧೩॥

ಉರಿಯುತ್ತಿರುವ, ತಸ್ಯಹನೂಮತಃ - ಆ ಹನುಮಂತನ, ಲಾಂಗೂಲಂತು - ಬಾಲವನ್ನಾದರೆ, ದ್ರಷ್ಟುಂ - ನೋಡಲು, ಪ್ರೀತಾಃ - ಸಂತೋಷಗೊಂಡವರಾಗಿ, ಜಗ್ಮುಃ - ಹೊರಟರು. ॥೯॥ ವೀರಃ - ಶೂರನಾದ, ಸಹರಿಸತ್ತಮಃ - ಆ ಕಪಿಶ್ರೇಷ್ಠನು, ಭೂಯಃ - ಮತ್ತೂ, ಸಂಗತೈಃ - ಗುಂಪುಸೇರಿದ, ಕ್ರೂರೈಃ - ತೀಕ್ಷ್ಣರಾದ, ರಾಕ್ಷಸೈಃ - ರಕ್ಕಸರಿಂದ, ನಿಬದ್ಧಃ - ಕಟ್ಟಲ್ಪಟ್ಟವನಾಗಿ, ತತ್ಕಾ....ಶೀಂ - ಆ ಸಮಯಕ್ಕೆ ತಕ್ಕ, ಮತಿಂ - ಬುದ್ಧಿಯನ್ನು, ಕೃತವಾನ್ - ಮಾಡಿದನು. ॥ ೧೦ ॥ ರಾಕ್ಷಸಾಃ - ರಕ್ಕಸರು, ನಿಬದ್ಧಸ್ಯಾಪಿ - ಕಟ್ಟಲ್ಪಟ್ಟವನಾದರೂ, ಮೇ - ನನಗೆ, ಕಾಮಂ - ಬಹಳವಾಗಿ, ನಶಕ್ತಾಃಖಲು - ಸಮರ್ಥರಲ್ಲವಷ್ಟೆ, ಅಹಂ - ನಾನು, ಪಾಶಾನ್ - ಹಗ್ಗಗಳನ್ನು, ಛಿತ್ವಾ - ಕಿತ್ತುಹಾಕಿ, ಪುನಃ - ತಿರುಗಿ, ಸಮುತ್ಪತ್ಯ - ಹಾರಿಬಂದು, ಇಮಾನ್ - ಈ ದೈತ್ಯರನ್ನು, ಹನ್ಯಾಂ - ಹೊಡದೇನು, ಭರ್ತುಃ - ಒಡೆಯನಾದ ಶ್ರೀರಾಮನ, ಹಿತಾರ್ಥಾಯ - ಹಿತಕ್ಕೋಸ್ಕರ, ಚರಂತಂ - ತಿರುಗುತ್ತಿರುವ, (ಮಾಂ - ನನ್ನನ್ನು), ದುರಾತ್ಮಾನಃ - ದುರ್ಬುದ್ಧಿಯುಳ್ಳ, ಏತೇ - ಈ ರಾಕ್ಷಸರು, ಭರ್ತೃ....ತ್ - ತಮ್ಮೊಡೆಯನಾದ ರಾವಣನಾಜ್ಞೆಯಿಂದ, ಯದಿಬಧ್ನಂತಿ-ಕಟ್ಟಿದರೆ, ತಾವತಾ ಅಷ್ಟುಮಾತ್ರದಿಂದ, ಮೇ - ನನಗೆ, ನಿಷ್ಕೃತಿಸ್ತು - ಪ್ರತಿಕ್ರಿಯೆಯೂ, ನಕೃತಾ - ಮಾಡಲ್ಪಡಲಿಲ್ಲ, ಯುಧಿ - ಕಾಳಗದಲ್ಲಿ, ಸರ್ವೇಷಾಂ - ಸಮಸ್ತರಾದ, ರಾಕ್ಷಸಾನಾಂ - ರಕ್ಕಸರಿಗೆ, ಅಹಮೇವ - ನಾನೊಬ್ಬನೇ,

---

ನಗರದಲ್ಲಿರುವ ರಾಕ್ಷಸರೆಲ್ಲರೂ ಹನುಮಂತಬಾಲವು ಸುಡಲಾಗಿದೆಯೆಂಬುದನ್ನು ಕೇಳಿ ಗುಂಪುಗುಂಪಾಗಿಬಂದು ನೋಡಲುಪಕ್ರಮಿಸಿದರು. ಸ್ತ್ರೀಬಾಲವೃದ್ಧರೆಲ್ಲರೂ ಮಹಾಸಂತೋಷದಿಂದ ಅವನನ್ನು ನೋಡಲು ಹೊರಟುಬಂದರು. ಮಹಾ ಕ್ರೂರರಾದ ಆ ರಾಕ್ಷಸರಾದರೋ ಎಲ್ಲರೂ ಒಟ್ಟುಗೂಡಿ, ಮಹಾ ಪರಾಕ್ರಮಶಾಲಿಯಾದ ಆ ವಾನರ ಶ್ರೇಷ್ಠನನ್ನು ಪುನಃ ಹಗ್ಗಗಳಿಂದ ಚೆನ್ನಾಗಿ ಬಂಧಿಸಿದರು. ಆಗ ಮಹಾ ಬುದ್ಧಿಶಾಲಿಯಾದ ಆಂಜನೇಯನು ಆ ಕಾಲಕ್ಕೆ ತಕ್ಕಂತೆ ಹೀಗೆ ಯೋಚಿಸಿದನು. ॥ ೭–೧೦ ॥ “ನಾನು ಈ ರಾಕ್ಷಸರಿಂದ ಬಂಧಿತನಾಗಿದ್ದರೂ, ಇವರು ನನ್ನನ್ನು ಎಷ್ಟು ಮಾತ್ರಕ್ಕೂ ಕೊಲ್ಲಲು ಸಮರ್ಥರಾಗಲಾರರು. ಈಗ ನಾನು ಈ ಹಗ್ಗಗಳೆಲ್ಲವನ್ನೂ ಕಿತ್ತೊಗೆದು ಪುನಃ ಮೇಲಕ್ಕೆ ಹಾರಿ, ಒಂದೇ ಪೆಟ್ಟಿಗೆ ಇವರೆಲ್ಲರನ್ನೂ ಕೊಲ್ಲಬಲ್ಲೆನು. ಆದರೆ ಮಹಾ ದುಷ್ಟಬುದ್ಧಿಯುಳ್ಳ ಈ ರಾಕ್ಷಸರು ತಮ್ಮ ಪ್ರಭುವಾದ ರಾವಣನ ಅಪ್ಪಣೆಯಂತೆ, ಸ್ವಾಮಿಕಾರ್ಯಾರ್ಥಿಯಾಗಿ ಸಂಚರಿಸುತ್ತಿರುವ ನನ್ನನ್ನು ಬಂಧಿಸಿದರು. ಆದುದರಿಂದ ಇವರು ನನ್ನ ವಿಷಯದಲ್ಲಿ ಎಂದಿಗೂ ಅಪರಾಧಿಗಳಲ್ಲವು. ಇವರು ನನ್ನನೀರೀತಿ ಬಂಧಿಸಿದರೂ ನನಗಾವ ಅಪಾಯವೂ ಇಲ್ಲವು. ಯುದ್ಧದಲ್ಲಿ ಈ ರಾಕ್ಷಸರೆಲ್ಲರೊಡನೆಯೂ ಹೊಡೆದಾಡಿ ಇವರೆಲ್ಲರನ್ನೂ ಸಂಹರಿಸಲು ನಾನೊಬ್ಬನೇ ಸಾಕು. ಆದರೆ ಇದು ರಾಮನಿಗೆ

ಲಂಕಾಚಾರಯಿತವ್ಯಾ ವೈ ಪುನರೇವ ಭವೇದಿತಿ । ರಾತ್ರೌ ನಹಿ ಸುದೃಷ್ಟಾ ಮೇ ದುರ್ಗಕರ್ಮ ವಿಧಾನತಃ ॥ ೧೪ ॥ ಅವಶ್ಯಮೇವ ದ್ರಷ್ಟವ್ಯಾ ಮಯಾ ಲಂಕಾ ನಿಶಾಕ್ಷಯೇ । ಕಾಮಂ ಬದ್ಧಸ್ಯ ಮೇ ಭೂಯಃ ಪುಚ್ಛಸ್ಯೋದ್ದೀಪನೇನಚ ॥ ೧೫ ॥ ಪೀಡಾಂ ಕುರ್ವಂತು ರಕ್ಷಾಂಸಿ ನಮೇಽಸ್ತಿ ಮನಸಶ್ಶ್ರಮಃ" ॥ ೧೬ ॥ ತತಸ್ತೇ ಸಂವೃತಾಕಾರಂ ಸತ್ತ್ವವಂತಂ ಮಹಾಕಪಿಂ । ಪರಿಗೃಹ್ಯ ಯಯುರ್ಹೃಷ್ಟಾ ರಾಕ್ಷಸಾಃ ಕಪಿಕುಂಜರಂ ॥ ೧೭ ॥ ಶಂಖಭೇರೀನಿನಾದೈಸ್ತಂ ಘೋಷಯಂತ ಸ್ಸ್ವಕರ್ಮಭಿಃ ।

ಪರ್ಯಾಪ್ತಃ - ಸಾಕಾಗಿದ್ದೇನೆ, ಕಿಂತು - ಆದರೆ, ರಾಮಸ್ಯ - ಶ್ರೀರಾಮನ, ಪ್ರೀತ್ಯರ್ಥಂ - ವಿಶ್ವಾಸಕ್ಕೋಸ್ಕರ, ಅಹಂ - ನಾನು, ಈದೃಶಂ - ಇಂತಹ ಅಪಮಾನವನ್ನು, ವಿಷಹಿಷ್ಯೇ - ಸೈರಿಸಿರುವೆನು, ಲಂಕಾ - ಲಂಕಾಪಟ್ಟಣವು, ರಾತ್ರೌ - ರಾತ್ರಿಕಾಲದಲ್ಲಿ, ದುರ್ಗ....ತಃ - ಕೋಟೆಕೊತ್ತಳಗಳ ವಿಧಾನವು ಕ್ರಮವಾಗಿ, ನಹಿಸುದೃಷ್ಟಾ - ಚನ್ನಾಗಿ ನೋಡಲ್ಪಡಲಿಲ್ಲ, (ಅತಏವ - ಆದುದರಿಂದಲೇ), ಲಂಕಾ - ಲಂಕಾನಗರವು, ಪುನ....ವೈ - ತಿರುಗಿ ನೋಡತಕ್ಕುದಾಗಿಯೇ, ಭವೇತ್ - ಆಗುವದು, ನಿಶಾಕ್ಷಯೇ - ಪ್ರಾತಃಕಾಲದಲ್ಲಿ, ಮಯಾ - ನನ್ನಿಂದ, ಲಂಕಾ - ಲಂಕಾಪಟ್ಟಣವು, ಅವಶ್ಯಮೇವ- ಅಗತ್ಯವಾಗಿಯೂ, ದ್ರಷ್ಟವ್ಯಾ - ನೋಡಲ್ಪಡತಕ್ಕುದು, ರಕ್ಷಾಂ - ರಕ್ಕಸರು, ಕಾಮಂ - ಚನ್ನಾಗಿ, ಬದ್ಧಸ್ಯ - ಕಟ್ಟಲ್ಪಟ್ಟ, ಮೇ - ನನ್ನ, ಪುಚ್ಛಸ್ಯ - ಬಾಲದ, ಉದ್ದೀಪನೇನ - ಉರಿಸುವುದರಿಂದ, ಭೂಯಃ - ಮತ್ತೂ, ಪೀಡಾಂಚ - ಬಾಧೆಯನ್ನೇ, ಕುರ್ವಂತಿ - ಮಾಡುವರು, ಮೇ - ನನ್ನ, ಮನಸಃ - ಮನಸ್ಸಿಗೆ, ಶ್ರಮಃ - ಆಯಾಸವು, ನಾಸ್ತಿ - ಇಲ್ಲವು. ॥ ೧೧-೧೬ ॥ ತತಃ - ಬಳಿಕ, ತೇರಾಕ್ಷಸಾಃ - ಆ ರಕ್ಕಸರು, ಸಂವೃತಾಕಾರಂ - ಮರೆಸಿದ ಸ್ವರೂಪವುಳ್ಳ, ಸತ್ತ್ವವಂತಂ - ಬಲಿಷ್ಠನಾದ, ಕಪಿಕುಂಜರಂ - ವಾನರಶ್ರೇಷ್ಠನಾದ, ಮಹಾಕಪಿಂ - ಸ್ವಯಂ ಮಹಾ ವಾನರನಾದ ಆಂಜನೇಯನನ್ನು, ಪರಿಗೃಹ್ಯ - ಹಿಡಿದುಕೊಂಡು, ಹೃಷ್ಟಾಃ - ಸಂತುಷ್ಟರಾಗಿ, ಯಯುಃ - ಹೊರಟರು. ॥೧೭॥ ಕ್ರೂರಕರ್ಮಾಣಃ - ಘೋರ ಕೃತ್ಯಗಳುಳ್ಳ, ರಾಕ್ಷಸಾಃ - ರಕ್ಕಸರು, ಶಂಖ....ದೈಃ - ಶಂಖ

ಇಷ್ಟವಲ್ಲದೆ ಕಾರ್ಯವಾದುದರಿಂದ, ಈ ರಾಕ್ಷಸರು ನನ್ನೆಷ್ಟು ಹಿಂಸಿಸಿದರೂ ನಾನು ಸಹಿಸಬೇಕಾಗಿರುವುದು. ಇಷ್ಟೆಯಲ್ಲದೆ ಈ ರಾಕ್ಷಸರು ನನ್ನನ್ನು ಈ ಲಂಕಾಪಟ್ಟಣದಲ್ಲೆಲ್ಲಾ ಸುತ್ತಿಸಬೇಕೆಂದಿರುವುದರಿಂದ ನಾನು ಮರಳಿಯೂ ಈ ಪಟ್ಟಣದ ಪ್ರದೇಶಗಳೆಲ್ಲವನ್ನೂ ನೋಡಬಹುದು. ನಾನು ಮೊದಲೇ ಸೀತಾದೇವಿಯನ್ನು ಹುಡುಕುವಾಗ ಈ ಪಟ್ಟಣದ ಸಮಸ್ತ ಪ್ರದೇಶಗಳನ್ನು ಸುತ್ತಿನೋಡಿ ಬಂದಿದ್ದರೂ, ಆಗ ರಾತ್ರಿಯಾಗಿದ್ದುದರಿಂದ ಇಲ್ಲಿನ ದುರ್ಗರಹಸ್ಯಾದಿಗಳನ್ನು ಚೆನ್ನಾಗಿ ನೋಡಿಲ್ಲ. ಆದುದರಿಂದ ಈಗ ಈ ಹಗಲಿನಲ್ಲಿ ಅವುಗಳೆಲ್ಲವನ್ನೂ ಚೆನ್ನಾಗಿ ನೋಡಬಹುದು. ಈಗ ಇವರು ನನ್ನ ಬಾಲಕ್ಕೆ ಬೆಂಕಿಯನ್ನಿಟ್ಟು ಬಾಧೆಗೊಳಿಸಿದರೂ ಕಾರ್ಯಾರ್ಥಿಯಾಗಿ ಅದನ್ನು ಸಹಿಸಿರುವೆನು. ಇವರು ನನ್ನನ್ನು ಹಗ್ಗಗಳಿಂದ ಬಿಗಿದರೂ, ನನ್ನ ಬಾಲಕ್ಕೆ ಬೆಂಕಿಯನ್ನಿಟ್ಟರೂ, ಇನ್ನೂ ನಾನಾವಿಧವಾದ ಬಾಧೆಗಳಿಗೀಡುಮಾಡಿದರೂ ಅವುಗಳಿಂದ ನನ್ನ ಮನಸ್ಸಿಗೆ ಸ್ವಲ್ಪವೂ ಆಯಾಸವಾಗುವುದಿಲ್ಲವು. ॥ ೧೧-೧೬ ॥ ಆಮೇಲೆ ಆ ರಾಕ್ಷಸರೆಲ್ಲರೂ ಮಹೋತ್ಸಾಹದಿಂದಲೂ, ಸಂತೋಷದಿಂದಲೂ ಕೂಡಿದವರಾಗಿ, ಪ್ರಚ್ಛನ್ನಸ್ವರೂಪವುಳ್ಳವನೂ, ಅಪರಿಮಿತ ಪರಾಕ್ರಮವುಳ್ಳವನೂ, ವಾನರೋತ್ತಮನೂ ಆದ ಆಂಜನೇಯನನ್ನು ಹಿಡಿದುಕೊಂಡು ರಾಜಬೀದಿಗಳಲ್ಲಿ ಮೆರವಣಿಗೆ ಹೊರಟರು. ಮಹಾ

ರಾಕ್ಷಸಾಃ ಕ್ರೂರಕರ್ಮಾಣಶ್ಚಾರಯಂತಿಸ್ಮ ತಾಂ ಪುರೀಂ ||೧೮|| ಅನ್ವೀಯಮಾನೋ ರಕ್ಷೋಭಿರ್ಯಯೌ ಸುಖಮರಿಂದಮಃ | ಹನೂಮಾಂಶ್ಚಾರಯಾಮಾಸ ರಾಕ್ಷಸಾನಾಂ ಮಹಾಪುರೀಂ || ೧೯ || ಅಥಾಪಶ್ಯದ್ವಿಮಾನಾನಿ ವಿಚಿತ್ರಾಣಿ ಮಹಾಕಪಿಃ | ಸಂವೃತಾನ್ ಭೂಮಿಭಾಗಾಂಶ್ಚ ಸುವಿಭಕ್ತಾಂಶ್ಚ ಚತ್ವರಾನ್ || ೨೦ || ವೀಥೀಶ್ಚ ಗೃಹಸಂಬಾಧಾಃ ಕಪಿಶ್ಶೃಂಗಾಟಕಾನಿಚ | ತಥಾ ರಥ್ಯೋಪರಥ್ಯಾಶ್ಚ ತಥೈವ ಗೃಹಕಾಂತರಾನ್ | ಗೃಹಾಂಶ್ಚ ಮೇಘಸಂಕಾಶಾನ್ ದದರ್ಶ ಪವನಾತ್ಮಜಃ || ೨೧ || ಚತ್ವ

ಧ್ವನಿಗಳಿಂದಲೂ, ಭೇರೀಧ್ವನಿಗಳಿಂದಲೂ, ಸ್ವಕರ್ಮಭಿಃ - ಸಿಂಹನಾದಗಳಿಂದಲೂ, ತಾಂಪುರೀಂ - ಆ ಪಟ್ಟಣದಲ್ಲಿ, ಘೋಷಯಂತಃ - ಶಬ್ದಮಾಡುತ್ತ, ತಂ - ಆ ಆಂಜನೇಯನನ್ನು, ಚಾರಯಂತಿಸ್ಮ- ತಿರುಗಿಸಿದರು. || ೧೮ || ಅರಿಂದಮಃ-ಶತ್ರುನಾಶಕನಾದ, ಹನುಮಾನ್-ಆಂಜನೇಯನು, ರಕ್ಷೋಭಿಃ- ರಕ್ಕಸರಿಂದ, ಅನ್ವೀಯಮಾನಃ - ಅನುಸರಿಸಲ್ಪಟ್ಟವನಾಗಿ, ಸುಖಂ - ಸುಖವಾಗಿ, ಯಯೌ - ಹೊರಟನು, ರಾಕ್ಷಸಾನಾಂ - ರಕ್ಕಸರ, ಮಹಾಪುರೀಂ - ಮಹಾ ಪಟ್ಟಣವನ್ನು, ಚಾರಯಾಮಾಸ - ಶೋಧಿಸಿದನು. ||೧೯|| ಅಥ - ಬಳಿಕ, ಮಹಾಕಪಿಃ - ಮಹಾ ವಾನರನು, ವಿಚಿತ್ರಾಣಿ - ಆಶ್ಚರ್ಯಕರಗಳಾದ, ವಿಮಾನಾನಿ - ರಥಗಳನ್ನೂ, ಸಂವೃತಾನ್ - ಆಚ್ಛಾದಿತಗಳಾದ, ಭೂಮಿಭಾಗಾಂಶ್ಚ - ಭೂಪ್ರದೇಶಗಳನ್ನೂ, ಸುವಿಭಕ್ತಾನ್ - ಚನ್ನಾಗಿ ನಿರ್ಮಿಸಲ್ಪಟ್ಟ, ಚತ್ವರಾಂಶ್ಚ - ಅಂಗಳಗಳನ್ನೂಸಹ, ಅಪಶ್ಯತ್ - ಕಂಡನು. || ೨೦ || ಪವನಾತ್ಮಜಃ - ವಾಯುಪುತ್ರನಾದ, ಕಪಿಃ - ವಾನರನು, ಗೃಹಸಂಬಾಧಾಃ - ಮನೆಗಳಿಂದ ತುಂಬಿರುವ, ವೀಥೀಶ್ಚ - ಬೀದಿಗಳನ್ನೂ, ಶೃಂಗಾಟಕಾನಿಚ - ಚತುಷ್ಪಥಗಳನ್ನೂ, ತಥಾ - ಹಾಗೆಯೆ, ರಥ್ಯೋಪರಥ್ಯಾಶ್ಚ - ದೊಡ್ಡ ಬೀದಿಗಳನ್ನೂ, ಅಡ್ಡದಾರಿಗಳನ್ನೂ, ತಥೈವ - ಹಾಗೆಯೆ, ಗೃಹಕಾಂತರಾನ್ - ಚಿಕ್ಕ ಮನೆಗಳನ್ನೂ ಅವುಗಳ ಒಳಬಾಗಿಲುಗಳನ್ನೂ, ಮೇಘಸಂಕಾಶಾನ್ - ಮೇಘಸದೃಶಗಳಾದ, ಗೃಹಾಂಶ್ಚ - ಮನೆಗಳನ್ನೂ ಸಹ, ದದರ್ಶ - ಕಂಡನು. ||೨೧|| ಚತ್ವರೇಷು - ಚೌಕಗಳಲ್ಲಿಯೂ, ಚತುಷ್ಕೇಷು - ನಾಲ್ಕುಕಂಭಗಳುಳ್ಳ ಮಂಟಪಗಳಲ್ಲಿಯೂ,

ಕ್ರೂರಕಾರ್ಯಗಳನ್ನು ಮಾಡುವ ಆ ರಾಕ್ಷಸರಲ್ಲಿ ಕೆಲವರು ಶಂಖಗಳನ್ನು ಊದುತ್ತಲೂ, ಕೆಲವರು ಭೇರೀನಾದ ಮಾಡುತ್ತಲೂ, ಕೆಲವರು ಸಂತೋಷಾಧಿಕ್ಯದಿಂದ ಸಿಂಹನಾದಗಳನ್ನು ಮಾಡುತ್ತಲೂ ಹೊರಟರು. ಹೀಗೆ ಆ ರಾಕ್ಷಸರು ಹನುಮಂತನನ್ನು ಲಂಕಾನಗರದ ಒಂದೊಂದು ಕಡೆಯಲ್ಲಿಯೂ ಸುತ್ತಿಸುತ್ತ ಹೊರಟರು. ಮಹಾ ಸತ್ವಶಾಲಿಯಾದ ಹನುಮಂತನಾದರೆ ರಾಕ್ಷಸಸೈನ್ಯವೆಲ್ಲವೂ ತನ್ನನ್ನು ಹಿಂಬಾಲಿಸಿ ಬರುತ್ತಿರಲು ಏನೊಂದೂ ಆಯಾಸವಿಲ್ಲದೆ ಪಟ್ಟಣವೆಲ್ಲವನ್ನೂ ಸುತ್ತಿ ಅಲ್ಲಲ್ಲಿರುವ ದುರ್ಗಪ್ರದೇಶಗಳೆಲ್ಲವನ್ನೂ ನೋಡುತ್ತ ಬಂದನು. ಆ ಮಹಾ ವಾನರನು ಅಲ್ಲಲ್ಲಿದ್ದ ಅತಿ ರಹಸ್ಯವೂ, ಸೂಕ್ಷ್ಮವೂ ಆದ ಪ್ರದೇಶಗಳನ್ನೂ, ವಿಚಿತ್ರಗಳಾದ ವಿಮಾನಗಳನ್ನೂ, ಅತಿ ಗೂಢವಾದ ಭೂಭಾಗಗಳನ್ನೂ, ಸೊಗಸಾಗಿ ಕಟ್ಟಿದ್ದ ಅಂಗಳಗಳನ್ನೂ, ಎರಡೂ ಕಡೆಗಳಲ್ಲಿದ್ದ ಮನೆಗಳಿಂದಲಂಕೃತವಾದ ರಾಜಬೀದಿಗಳನ್ನೂ, ಚೌಕಗಳನ್ನೂ, ದೊಡ್ಡ ದೊಡ್ಡ ರಾಜಬೀದಿಗಳನ್ನೂ, ಚಿಕ್ಕ ಚಿಕ್ಕ ಬೀದಿಗಳನ್ನೂ, ಗುಪ್ತಕವಾಟಗಳಿಂದ ಕೂಡಿ ಮುಗಿಲುಗಳಿಗೆ ಸಮಾನವಾದ ವಿಸ್ತಾರವುಳ್ಳ ಭವನಗಳನ್ನೂ, ಚಿಕ್ಕ ಚಿಕ್ಕ ಮನೆಗಳನ್ನೂ ನೋಡಿದನು. || ೧೭–೨೧ || ಆ ಸಮಯ

ರೇಷು ಚತುಷ್ಕೇಷು ರಾಜಮಾರ್ಗೇ ತಥೈವಚ । ಘೋಷಯಂತಿ ಕಪಿಂ ಸರ್ವೇ ಚಾರೀಕ ಇತಿ ರಾಕ್ಷಸಾಃ ॥ ೨೨ ॥ ಸ್ತ್ರೀಬಾಲವೃದ್ಧಾ ನಿರ್ಜಗ್ಮುಸ್ತತ್ರ ತತ್ರ ಕುತೂಹಲಾತ್ । ತಂ ಪ್ರದೀಪಿತ ಲಾಂಗೂಲಂ ಹನೂಮಂತಂ ದಿದೃಕ್ಷವಃ ॥ ೨೩ ॥ ದೀಪ್ಯಮಾನೇ ತತಸ್ತಸ್ಯ ಲಾಂಗೂಲಾಗ್ರೇ ಹನೂಮತಃ । ರಾಕ್ಷಸ್ಯಸ್ತಾ ವಿರೂಪಾಕ್ಷ್ಯಃ ಶಂಸುರ್ದೇವ್ಯಾಸ್ತದಪ್ರಿಯಂ ॥೨೪॥ "ಯಸ್ತ್ವಯಾ ಕೃತಸಂವಾದ ಸ್ಸೀತೇ! ತಾಮ್ರಮುಖಃ ಕಪಿಃ । ಲಾಂಗೂಲೇನ ಪ್ರದೀಪ್ತೇನ ಸಏಷ ಪರಿಣೀಯತೇ" ॥ ೨೫ ॥ ಶ್ರುತ್ವಾ ತದ್ವಚನಂ ಕ್ರೂರಮಾತ್ಮಾಪಹರಣೋಪಮಂ । ವೈದೇಹೀ ಶೋಕಸಂತಪ್ತಾ

ತಥೈವಚ - ಹಾಗೆಯೇ, ರಾಜಮಾರ್ಗೇ - ದೊಡ್ಡ ರಸ್ತೆಗಳಲ್ಲಿಯೂ, ರಾಕ್ಷಸಾಸ್ಸರ್ವೇ - ರಾಕ್ಷಸರೆಲ್ಲರೂ, ಕಪಿಂ - ವಾನರನನ್ನು, ಚಾರೀಕ ಇತಿ - ದೂತನೆಂದು, ಘೋಷಯಂತಿ - ಕೂಗುತ್ತಿದ್ದರು. ॥ ೨೨ ॥ ಪ್ರದೀ....ಲಂ - ಬೆಂಕಿಹಚ್ಚಿದ ಬಾಲವುಳ್ಳ, ತಂಹನೂಮಂತಂ - ಆ ಆಂಜನೇಯನನ್ನು, ದಿದೃಕ್ಷವಃ - ನೋಡಬೇಕೆಂದಿಚ್ಛಿಸಿ, ಸ್ತ್ರೀಬಾಲವೃದ್ಧಾಃ - ಹೆಂಗುಸರು, ಮಕ್ಕಳು, ಮುದುಕರೂ ಸಹ, ತತ್ರತತ್ರ - ಅಲ್ಲಲ್ಲಿ, ಕುತೂಹಲಾತ್ - ಕೌತೂಹಲದಿಂದ, ನಿರ್ಜಗ್ಮುಃ - ಹೊರಟುಬಂದರು. ॥೨೩॥ ತಸ್ಯಹನೂಮತಃ - ಆ ಆಂಜನೇಯನ, ಲಾಂಗೂಲಾಗ್ರೇ - ಬಾಲದ ತುದಿಯು, ದೀಪ್ಯಮಾನೇ - ಪ್ರಜ್ವಲಿಸುತ್ತಿರಲು, ವಿರೂಪಾಕ್ಷ್ಯಃ - ವಕ್ರನೇತ್ರಗಳುಳ್ಳ, ರಾಕ್ಷಸ್ಯಃ - ರಕ್ಕಸಿಯರು, ತದಪ್ರಿಯಂ - ಆ ಅನಿಷ್ಟವನ್ನು, ದೇವ್ಯಾಃ - ಸೀತಾದೇವಿಗೆ, ಶಂಸುಃ - ಹೇಳಿದರು. ॥ ೨೪ ॥ ಹೇ ಸೀತೇ - ಎಲೌ ಸೀತೆಯೆ, ತಾಮ್ರಮುಖಃ - ಕೆಂಪುಮುಖದ, ಯಃಕಪಿಃ - ಯಾವ ವಾನರನು, ತ್ವಯಾ - ನಿನ್ನಿಂದ, ಕೃತಸಂವಾದಃ - ಸಂಭಾಷಣ ಮಾಡಿದವನಾದನೋ, ಸಏಷಃ - ಆ ಈ ವಾನರನು, ಪ್ರದೀಪೇನ - ಬೆಂಕಿಹೊತ್ತಿಸಿದ, ಲಾಂಗೂಲೇನ - ಬಾಲದೊಡನೆ, ಪರಿಣೀಯತೇ - ಎಲ್ಲೆಡೆಯಲ್ಲಿಯೂ ಒಯ್ಯಲ್ಪಡುತ್ತಿರುವನು. ॥ ೨೫ ॥ ವೈದೇಹೀ - ಸೀತಾದೇವಿಯು, ಆತ್ಮಾ....ಮಂ - ತನ್ನ ಪ್ರಾಣಾಪಹರಣಕ್ಕೆ ಸಮಾನವಾದ, ಕ್ರೂರಂ - ಕಠಿನವಾದ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಶೋಕಸಂತಪ್ತಾ - ದುಃಖದಿಂದ ಕೂಡಿದವಳಾಗಿ, ಹುತಾಶನಂ - ಯಜ್ಞೇಶ್ವರನನ್ನು, ಉಪಾಗಮತ್ -

ದಲ್ಲಿ ಆ ಮಹಾ ಕಪಿಯನ್ನು ಹಿಂದಟ್ಟಿ ಬರುತ್ತಿದ್ದ ರಾಕ್ಷಸರು ನಗರದಲ್ಲಿರುವ ಮನೆಗಳ ಮುಂದಿನ ಅಂಗಳಗಳಲ್ಲಿಯೂ, ಚೌಕಗಳಲ್ಲಿಯೂ, ರಾಜಬೀದಿಗಳಲ್ಲಿಯೂ, "ಇದೋ ಇವನೇ ದೂತನು" ಎಂದು ಗಟ್ಟಿಯಾಗಿ ಕೂಗಿ ಹೇಳುತ್ತಲೂ, ಆ ಹನುಮಂತನನ್ನು ತೋರಿಸುತ್ತಲೂ ಇದ್ದರು. ಇದನ್ನು ಕೇಳಿದೊಡನೆ ಉರಿಯುತ್ತಿರುವ ಬಾಲದೊಡನೆ ಮೆರವಣಿಗೆ ಬರುತ್ತಿರುವ ವಾನರನನ್ನು ನೋಡಬೇಕೆಂಬ ಕುತೂಹಲದಿಂದ ಸ್ತ್ರೀಬಾಲವೃದ್ಧರೆಲ್ಲರೂ ಹೊರಗೆ ಬಂದು ನಿಲ್ಲುತ್ತಿದ್ದರು. ಈ ಪ್ರಕಾರವಾಗಿ ಆಂಜನೇಯನ ಬಾಲಕ್ಕೆ ಬೆಂಕಿಯಿಟ್ಟುದನ್ನು ನೋಡಿದ ಕೆಲವರು ರಾಕ್ಷಸಿಯರು ಸಂತೋಷಸಂಭ್ರಮಗಳಿಂದ ಕೂಡಿ ಬಹು ಜಾಗ್ರತೆಯಾಗಿ ಸೀತಾದೇವಿಯಿದ್ದೆಡೆಗೈತಂದು "ಎಲೌ ಸೀತಾದೇವಿಯೇ! ಈ ಮೊದಲು ನಿನ್ನೊಡನೆ ಸಂಭಾಷಿಸಿ ಹೋದ ಆ ಕೆಂಪುಮೂತಿಯ ಕಪಿಯು ಬಾಲಕ್ಕೆ ಬೆಂಕಿಯನ್ನು ಹಚ್ಚಿ ಇಲ್ಲಿನ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಸುತ್ತಿರುವರು." ಎಂದು ಹೇಳಿದರು. ಪ್ರಾಣಾಪಹಾರಕ್ಕೆ ಸಮಾನವಾಗಿಯೂ, ಅತಿ ಕಠಿನವಾಗಿಯೂ ಇರುವ ಆ ಮಾತುಗಳನ್ನು ಕೇಳಿದೊಡನೆಯೇ ಸೀತಾದೇವಿಯು ಮಹಾ ದುಃಖಿತೆಯಾಗಿ ಆಗಲೇ ಆ ಮಹಾ ವಾನರನ ಶ್ರೇಯಸ್ಸನ್ನು

ಹುತಾಶನಮುಪಾಗಮತ್ ॥ ೨೬ ॥ ಮಂಗಳಾಭಿಮುಖೀ ತಸ್ಯ ಸಾ ತದಾಽಸೀನ್ಮಹಾಕಪೇಃ । ಉಪತಸ್ಥೇ ವಿಶಾಲಾಕ್ಷೀ ಪ್ರಯತಾ ಹವ್ಯವಾಹನಂ ॥ ೨೭ ॥ "ಯದ್ಯಸ್ತಿ ಪತಿಶುಶ್ರೂಷಾ ಯದ್ಯಸ್ತಿ ಚರಿತಂ ತಪಃ । ಯದಿಚಾಸ್ತ್ಯೇಕಪತ್ನೀತ್ವಂ ಶೀತೋ ಭವ ಹನೂಮತಃ ॥ ೨೮ ॥ ಯದಿ ಕಿಂಚಿದನುಕ್ರೋಶಸ್ತಸ್ಯ ಮಯ್ಯಸ್ತಿ ಧೀಮತಃ । ಯದಿವಾ ಭಾಗ್ಯಶೇಷೋ ಮೇ ಶೀತೋ ಭವ ಹನೂಮತಃ ॥ ೨೯ ॥ ಯದಿ ಮಾಂ ವೃತ್ತಸಂಪನ್ನಾಂ ತತ್ಸಮಾಗಮಲಾಲಸಾಂ । ಸ ವಿಜಾನಾತಿ ಧರ್ಮಾತ್ಮಾ ಶೀತೋ ಭವ

ಉಪಾಸನೆ ಮಾಡಿದಳು. ॥ ೨೬ ॥ ತದಾ - ಆ ಸಮಯದಲ್ಲಿ, ವಿಶಾಲಾಕ್ಷೀ - ವಿಶಾಲಾಕ್ಷಿಯಾದ, ಸಾ - ಆ ಸೀತಾದೇವಿಯು, ತಸ್ಯಮಹಾಕಪೇಃ - ಆ ಮಹಾ ವಾನರನಿಗೆ, ಮಂಗಳಾಭಿಮುಖೀ - ಶ್ರೇಯಸ್ಸನ್ನು ಕೋರಿದವಳು, ಆಸೀತ್ - ಆದಳು, ಪ್ರಯತಾ - ಪರಿಶುದ್ಧೆಯಾಗಿ, ಹವ್ಯವಾಹನಂ - ಅಗ್ನಿಯನ್ನು, ಉಪತಸ್ಥೇ-ಧ್ಯಾನಿಸಿದಳು. ॥ ೨೭ ॥ ಪತಿಶುಶ್ರೂಷಾ-ಭರ್ತೃಸೇವಾಫಲವು, ಅಸ್ತಿಯದಿ-ಇದ್ದುದಾದರೆ, ಚರಿತಂ - ಆಚರಿಸಲ್ಪಟ್ಟ, ತಪಃ - ತಪೋಫಲವು, ಅಸ್ತಿಯದಿ - ಇರುವುದಾದರೆ, ಏಕಪತ್ನೀತ್ವಂಚ - ಪಾತಿವ್ರತ್ಯಫಲವೂ, ಅಸ್ತಿಯದಿ - ಇದ್ದುದಾದರೆ, (ತೇನ - ಆ ಫಲದಿಂದ), ಹನೂಮತಃ - ಆಂಜನೇಯನಿಗೆ, ಶೀತಃ - ಶೀತಲವಾಗಿರುವನು, ಭವ - ಆಗು. ॥ ೨೮ ॥ ಧೀಮತಃ-ಮತಿವಂತನಾದ, ತಸ್ಯ - ಆ ಶ್ರೀರಾಮನಿಗೆ, ಮಯಿ - ನನ್ನ ವಿಷಯದಲ್ಲಿ, ಕಿಂಚಿ....ಶಃ - ಸ್ವಲ್ಪ ದಯೆಯಾದರೂ, ಅಸ್ತಿಯದಿ - ಇದ್ದುದಾದರೆ, ಮೇ - ನನ್ನ, ಭಾಗ್ಯಶೇಷೋವಾ - ಅದೃಷ್ಟಶೇಷವಾದರೂ, ಅಸ್ತಿಯದಿ - ಇದ್ದುದೇ ಆದರೆ, ಹನೂಮತಃ - ಆಂಜನೇಯನಿಗೆ, ಶೀತೋಭವ - ಶೀತಳನಾಗಿರು. ॥ ೨೯ ॥ ಧರ್ಮಾತ್ಮಾ - ಧರ್ಮಬುದ್ಧಿಯುಳ್ಳ, ಸಃ - ಆ ಆಂಜನೇಯನು, ತತ್ಸ....ಸಾಂ - ಆ ಶ್ರೀರಾಮನ ಪ್ರಾಪ್ತಿಯಲ್ಲಿ ಆಸಕ್ತಳಾದ, ಮಾಂ - ನನ್ನನ್ನು, ವೃತ್ತಸಂಪನ್ನಾಂ - ಸದ್ವೃತ್ತಿಯಿಂದ ಕೂಡಿರುವವಳನ್ನಾಗಿ, ವಿಜಾನಾತಿಯದಿ - ತಿಳಿದಿದ್ದರೆ, ಹನೂಮತಃ - ಆಂಜನೇಯನಿಗೆ, ಶೀತೋಭವ - ತಣ್ಣಗಿರು, ॥ ೩೦ ॥ ಸತ್ಯಸಂಗರಃ - ಸತ್ಯಸಂಧನಾದ, ಆರ್ಯಃ - ಪೂಜ್ಯನಾದ,

---

ಕೋರಿ ಪರಿಶುದ್ಧ ಮನಸ್ಸಿನಿಂದ ಯಜ್ಞೇಶ್ವರನನ್ನು ಉಪಾಸನೆ ಮಾಡಿದಳು. ॥ ೨೭-೨೬ ॥ ವಿಶಾಲನೇತ್ರೆಯಾದ ಆ ಸೀತಾದೇವಿಯು ಹನುಮಂತನ ಶ್ರೇಯಸ್ಸನ್ನು ಕೋರಿ ಪರಿಶುದ್ಧವಾದ ಮನಸ್ಸಿನಿಂದ ಯಜ್ಞೇಶ್ವರನನ್ನುದ್ದೇಶಿಸಿ, "ಎಲೈ ಯಜ್ಞೇಶ್ವರನೇ! ನಾನು ಪತಿಶುಶ್ರೂಷೆಯನ್ನು ಮಾಡಿದುದಕ್ಕೂ, ಪಾತಿವ್ರತ್ಯ ರೂಪವಾದ ತಪಸನ್ನಾಚರಿಸುತ್ತಿರುವುದಕ್ಕೂ, ಶ್ರೀರಾಮನೊಬ್ಬನೇ ಪತಿಯೆಂದು ತ್ರಿಕರಣಶುದ್ಧಿಯಿಂದ ನಂಬಿರುವುದಕ್ಕೂ ಫಲವೇನಾದರೂ ಇದ್ದಲ್ಲಿ ನೀನು ಆಂಜನೇಯನ ವಿಷಯದಲ್ಲಿ ಶಾಂತನಾಗು. ಎಲೈ ಅಗ್ನಿದೇವನೇ! ಮಹಾಮೇಧಾವಿಯಾದ ಶ್ರೀರಾಮನಿಗೆ ನನ್ನ ವಿಷಯದಲ್ಲಿ ಲವಲೇಶವಾದರೂ ದಯೆಯೆಂಬುದಿದ್ದಲ್ಲಿ, ಇನ್ನುಮೇಲೆ ನಾನು ಸ್ವಲ್ಪಮಟ್ಟಿಗಾದರೂ ಸುಖಪಡುವುದಿದ್ದಲ್ಲಿ ನೀನು ಆಂಜನೇಯನ ವಿಷಯದಲ್ಲಿ ಶಾಂತನಾಗಿರು. ಎಲೈ ಹುತಾಶನನೇ! ಧರ್ಮಾತ್ಮನಾದ ಶ್ರೀರಾಮಮೂರ್ತಿಯು ನನ್ನನ್ನು ಸದಾಚಾರಸಂಪನ್ನಳನ್ನಾಗಿಯೂ, ತನ್ನನ್ನು ಸೇರಲು ಯಾವಾಗಲೂ ಬಯಸುವವಳನ್ನಾಗಿಯೂ ದೃಢವಾಗಿ ನಂಬಿದ್ದರೆ ನೀನು ಆಂಜನೇಯನ ವಿಷಯದಲ್ಲಿ ಶಾಂತನಾಗಿರು. ಎಲೈ ಅಗ್ನಿಹೋತ್ರನೇ! ಪೂಜ್ಯನಾಗಿಯೂ, ಸತ್ಯಪ್ರತಿಜ್ಞೆಯುಳ್ಳವನಾಗಿಯೂ ಇರುವ ಸುಗ್ರೀವ

ಹನೂಮತಃ ॥ ೩೦ ॥ ಯದಿ ಮಾಂ ತಾರಯೇದಾರ್ಯಸ್ಸುಗ್ರೀವ ಸ್ಸತ್ಯಸಂಗರಃ । ಅಸ್ಮಾದ್ದುಃಖಾಂಬುಸಂರೋಧಾಚ್ಛೀತೋ ಭವ ಹನೂಮತಃ" ॥ ೩೧ ॥ ತತಸ್ತೀಕ್ಷ್ಣಾರ್ಚಿರವ್ಯಗ್ರಃ ಪ್ರದಕ್ಷಿಣಶಿಖೋಽನಲಃ । ಜಜ್ವಾಲ ಮೃಗಶಾಬಾಕ್ಷ್ಯಾಶ್ಶಂಸನ್ನಿವ ಶಿವಂ ಕಪೇಃ ॥ ೩೨ ॥ ಹನೂಮಜ್ಜನಕಶ್ಚಾಪಿ ಪುಚ್ಛಾಽನಲಯುತೋಽನಿಲಃ । ವವೌ ಸ್ವಾಸ್ಥ್ಯಕರೋ ದೇವ್ಯಾಃ ಪ್ರಾಲೇಯಾನಿಲಶೀತಲಃ ॥ ೩೩ ॥ ದಹ್ಯಮಾನೇಚ ಲಾಂಗೂಲೇ ಚಿಂತಯಾಮಾಸ ವಾನರಃ । "ಪ್ರದೀಪ್ತೋಽಗ್ನಿರಯಂ ಕಸ್ಮಾನ್ನಮಾಂ ದಹತಿ ಸರ್ವತಃ? ॥ ೩೪ ॥ ದೃಶ್ಯತೇಚ ಮಹಾಜ್ವಾಲಃ ಕರೋತಿ ನಚ ಮೇ

ಸುಗ್ರೀವಃ - ಸುಗ್ರೀವನು, ಅಸ್ಮಾತ್ - ಈ, ದುಃಖಾ....ತ್ - ದುಃಖವೆಂಬ ಸಮುದ್ರದಿಂದ, ಮಾಂ-ನನ್ನನ್ನು, ತಾರಯೇದ್ಯದಿ-ಕಡೆಹಾಯಿಸುವವನಾಗಿದ್ದರೆ, ಹನೂಮತಃ-ಆಂಜನೇಯನಿಗೆ, ಶೀತೋಭವ-ಶೈತ್ಯವಾಗು. ॥೩೧॥ ತತಃ - ಬಳಿಕ, ಮೃಗ....ಕ್ಷ್ಯಾಃ - ಜಿಂಕೆಯಮರಿಯ ನೇತ್ರಗಳಂತೆ ನೇತ್ರಗಳುಳ್ಳ ಸೀತಾದೇವಿಯ, (ಮಹಿಮ್ನಾ - ಮಾಹಾತ್ಮ್ಯದಿಂದ), ತೀಕ್ಷ್ಣಾರ್ಚಿಃ - ಕ್ರೂರ ಜ್ವಾಲೆಗಳುಳ್ಳ, ಅವ್ಯಗ್ರಃ - ಸ್ವಸ್ಥಚಿತ್ತನಾದ, ಅನಲಃ - ಅಗ್ನಿಯು, ಪ್ರದಕ್ಷಿಣಶಿಖಃ - ಪ್ರದಕ್ಷಿಣಾಕಾರವಾದ ಜ್ವಾಲೆಗಳುಳ್ಳುದಾಗಿ, ಕಪೇಃ - ಆಂಜನೇಯನಿಗೆ, ಶಿವಂ - ಮಂಗಳವನ್ನು, ಶಂಸನ್ನಿವ - ಹೇಳುತ್ತಿರುವನಂತೆ, ಜಜ್ವಾಲ - ಪ್ರಜ್ವಲಿಸಿದನು. ॥ ೩೨ ॥ ಹನು....ಕಃ - ಆಂಜನೇಯನ ತಂದೆಯಾದ, ಅನಿಲಃ - ವಾಯುವು, ಪುಚ್ಛಾ....ಪಿ - ಪುಚ್ಛಾಗ್ನಿಯಿಂದೊಡಗೂಡಿದವನಾದರು, ದೇವ್ಯಾಃ - ಸೀತಾದೇವಿಯ, (ಪ್ರಭಾವಾತ್ - ಮಾಹಾತ್ಮ್ಯದಿಂದ), ಕಪೇಃ - ಆಂಜನೇಯನಿಗೆ, ಪ್ರಾಲೇ....ಳಃ - ಹಿಮವತ್ಪರ್ವತದ ಗಾಳಿಯಂತೆ ತಣ್ಣಗಿರುವನಾಗಿ, ಸ್ವಾಸ್ಥ್ಯಕರಃ - ಸುಖಕರನಾಗಿ, ವವೌ - ಬೀಸಿದನು. ॥ ೩೩ ॥ ಲಾಂಗೂಲೇ - ಬಾಲವು, ದಹ್ಯಮಾನೇ - ಉರಿಯುತ್ತಿರಲು, ವಾನರಃ - ಕಪಿಯಾದ ಆಂಜನೇಯನು, ಚಿಂತಯಾಮಾಸ - ಯೋಚಿಸಿದನು. ॥ ೩೪ ॥ ಲಾಂಗೂಲಾಗ್ರೇ - ಬಾಲದ ತುದಿಯಲ್ಲಿ, ಪ್ರತಿಷ್ಠಿತಃ - ಇಡಲ್ಪಟ್ಟು, ಪ್ರದೀಪ್ತಃ - ಉರಿಯುತ್ತಿರುವ, ಅಯಮಗ್ನಿಃ - ಈ ಅಗ್ನಿಯು, ಮಾಂ - ನನ್ನನ್ನು, ಸರ್ವತಃ - ಎಲ್ಲಿಡೆಯಲ್ಲಿಯೂ, ನದಹತಿ - ಸುಡುವುದಿಲ್ಲ, ಮಹಾಜ್ವಾಲಶ್ಚ - ಮಹಾ ಜ್ವಾಲೆಗಳಿಂದ

ರಾಜನು ನನ್ನನ್ನು ಈ ದುಃಖಸಾಗರದಿಂದ ಕಡೆಹಾಯಿಸುವುದು ನಿಜವಾದರೆ ನೀನು ಈ ಆಂಜನೇಯನ ವಿಷಯದಲ್ಲಿ ಶಾಂತನಾಗು." ಎಂದು ಪ್ರಾರ್ಥಿಸಿದಳು. ಸೀತಾದೇವಿಯು ಹೀಗೆ ಅನೇಕ ವಿಧವಾಗಿ ಪ್ರಾರ್ಥನೆಮಾಡಲು ಯಜ್ಞೇಶ್ವರನು ಮೃಗಾಕ್ಷಿಯಾದ ಆಕೆಯ ಪ್ರಾರ್ಥನೆಗೊಲಿದು ಆಂಜನೇಯನಿಗೆ ಶುಭಾಶಂಸನವನ್ನು ತಿಳಿಸುತ್ತಿರುವವನಂತೆ ವಿಶೇಷವಾಗಿ ಪ್ರಜ್ವಲಿಸುತ್ತಿದ್ದರೂ ಯಾವ ಅಪಾಯವೂ ಇಲ್ಲದೆ ಪ್ರದಕ್ಷಿಣಾಕಾರವಾಗಿ ಉರಿಯುತ್ತಿರುವ ಜ್ವಾಲೆಗಳುಳ್ಳವನಾಗಿದ್ದನು. ॥೨೭-೩೨॥ ಇಷ್ಟೆಯಲ್ಲದೆ ಅಗ್ನಿಮಿತ್ರನಾಗಿಯೂ, ಆಂಜನೇಯನಿಗೆ ತಂದೆಯಾಗಿಯೂ ಇರುವ ವಾಯುದೇವನೂ ಸಹ, ವಾಲಾಗ್ನಿಯೊಡನೆ ಸೇರಿದ್ದರೂ, ಸೀತಾದೇವಿಗೆ ಶುಭವನ್ನುಂಟುಮಾಡುವವನಾಗಿ ಪ್ರಲೇಯಾಚಲಮಾರುತದಂತೆ ಬಹು ಶೀತಳವಾಗಿ ಬೀಸುತ್ತಿದ್ದನು. ಆಗ ಆಂಜನೇಯನು ತನ್ನ ಬಾಲದಲ್ಲಿ ಬೆಂಕಿಯುರಿಯುತ್ತಿದ್ದರೂ, ಅದು ತನ್ನನ್ನು ಸುಡದಿರುವುದನ್ನು ನೋಡಿ ತನ್ನಲ್ಲಿ ತಾನು, "ಆಹಾ! ನನ್ನ ಬಾಲದಲ್ಲಿ ಪ್ರಜ್ವಲಿಸುತ್ತಿರುವ ಬೆಂಕಿಯು ನನ್ನ ದೇಹವನ್ನು ಸುಡದಿರುವುದಲ್ಲ! ಈ ಬೆಂಕಿಯು ಬಹು ದೊಡ್ಡ ಜ್ವಾಲೆ

ರುಜಂ । ಶಿಶಿರಸ್ಯೇವ ಸಂಪಾತೋ ಲಾಂಗೂಲಾಗ್ರೇ ಪ್ರತಿಷ್ಠಿತಃ ॥ ೩೫ ॥ ಅಥವಾ ತದಿದಂ ವ್ಯಕ್ತಂ ಯದ್ದೃಷ್ಟಂ ಪ್ಲವತಾ ಮಯಾ । ರಾಮಪ್ರಭಾವಾದಾಶ್ಚರ್ಯಂ ಪರ್ವತಸ್ಸರಿತಾಂ ಪತೌ ॥ ೩೬ ॥ ಯದಿತಾವತ್ಸಮುದ್ರಸ್ಯ ಮೈನಾಕಸ್ಯ ಚ ಧೀಮತಃ । ರಾಮಾರ್ಥಂ ಸಂಭ್ರಮಸ್ತಾದೃಕ್ಕಿಮಗ್ನಿರ್ನಕರಿಷ್ಯತಿ? ॥೩೭॥ ಸೀತಾಯಾಶ್ಚಾನೃಶಂಸ್ಯೇನ ತೇಜಸಾ ರಾಘವಸ್ಯಚ । ಪಿತುಶ್ಚ ಮಮ ಸಖ್ಯೇನ ನ ಮಾಂ ದಹತಿ ಪಾವಕಃ

ಕೂಡಿರುವುದಾಗಿ, ದೃಶ್ಯತೇ - ಕಾಣಲ್ಪಡುತ್ತದೆ, ಮೇ - ನನಗೆ, ರುಜಂಚ - ಬಾಧೆಯನ್ನೂ ಕೂಡ, ನಕರೋತಿ - ಮಾಡುವುದಿಲ್ಲ, ಶಿಶಿರಸ್ಯ - ಮಂಜಿನ (ಅಥವಾ ಶ್ರೀಗಂಧದ), ಸಂಘಾತಇವ - ತಂಡದಂತೆ, ವರ್ತತೇ - ಇರುವುದು, ಕಸ್ಮಾತ್ - ಯಾವ ಕಾರಣದಿಂದಲೋ, (ನಪಶ್ಯಾಮಿ - ಕಾಣೆನು). ॥ ೩೫ ॥ ಅಥವಾ - ಹಾಗಲ್ಲದಿದ್ದರೆ, ಪ್ಲವತಾ - ಲಂಘಿಸುತ್ತಿರುವ, ಮಯಾ - ನನ್ನಿಂದ, ಸರಿತಾಂಪತೌ - ಸಮುದ್ರದಲ್ಲಿ, ಪರ್ವತಂ - ಪರ್ವತರೂಪವಾದ, ಯದಾಶ್ಚರ್ಯಂ - ಯಾವ ಅದ್ಭುತರೂಪವು, ದೃಷ್ಟಂ - ನೋಡಲ್ಪಟ್ಟಿತೋ, (ತದ್ವತ್ - ಹಾಗೆಯೆ), ಇದಂ - ಈ ಅಗ್ನಿಶೈತ್ಯವು, ರಾಮಪ್ರಭಾವತ್- ಶ್ರೀರಾಮನ ಮಹಿಮೆಯಿಂದ, (ಸಂಜಾತಂ - ಹುಟ್ಟಿರಬಹುದು), ವ್ಯಕ್ತಂ - ನಿಶ್ಚಯವು. ॥ ೩೬ ॥ ರಾಮಾರ್ಥಂ - ಶ್ರೀರಾಮನಿಗೋಸ್ಕರ, ಸಮುದ್ರಸ್ಯ - ಸಮುದ್ರಕ್ಕೂ, ಧೀಮತಃ - ಬುದ್ಧಿಶಾಲಿಯಾದ, ಮೈನಾಕಸ್ಯಚ - ಮೈನಾಕಪರ್ವತಕ್ಕೂ ಕೂಡ, ತಾದೃಶಃ - ಅಂತಹ, ಸಂಭ್ರಮಸ್ತಾವತ್ - ತ್ವರೆ ಯಾದರೆ, ಯದಿನಸ್ಯಾತ್ - ಆಗಿದ್ದಲ್ಲಿ, ಅಗ್ನಿಃ - ಅಗ್ನಿಯು, (ಶೈತ್ಯಂ - ತಣ್ಣಗಿರೋಣವನ್ನು), ಕಿಂಕರಿಷ್ಯತಿ - ಏಕೆ ಮಾಡುತ್ತಿತ್ತು. ॥೩೭॥ ಪಾವಕಃ - ಅಗ್ನಿಯು, ಸೀತಾಯಾಃ - ಸೀತಾದೇವಿಯ, ಆನೃಶಂಸ್ಯೇನಚ - ದಯೆಯಿಂದಲೂ, ರಾಘವಸ್ಯ - ಶ್ರೀರಾಮನ, ತೇಜಸಾಚ - ಪರಾಕ್ರಮದಿಂದಲೂ, ಮಮಪಿತುಃ - ನನ್ನ ತಂದೆಯಾದ ವಾಯುವಿನ, ಸಖ್ಯೇನಚ - ಸ್ನೇಹದಿಂದಲು, ಮಾಂ - ನನ್ನನ್ನು, ನದಹತಿ - ಸುಡುವುದಿಲ್ಲವು. ॥ ೩೮ ॥ ಕಪಿಕುಂಜರಃ - ಕಪಿಶ್ರೇಷ್ಠನಾದ, ಸಃ - ಆ ಆಂಜನೇಯನು,

ಗಳೊಡನೆ ಧಗಧಗನುರಿಯುತ್ತಿದ್ದರೂ ನನಗೆ ಸ್ವಲ್ಪಮಾತ್ರವೂ ಬಾಧೆಯನ್ನುಂಟುಮಾಡು ತ್ತಿಲ್ಲವು. ಇದೇನಾಶ್ಚರ್ಯವಿರಬಹುದು! ಈ ಅಗ್ನಿಯು ಚಂದನಾದಿ ಶೀತಳದ್ರವ್ಯಗಳಂತೆ ನನ್ನ ವಾಲಾಗ್ರಭಾಗದಲ್ಲಿ ಮಾತ್ರವಿರುವುದು. ಇದಕ್ಕೆ ಕಾರಣವೇನಿರಬಹುದು? ಆಹಾ ತಿಳಿಯಿತು; ಇದು ನನ್ನ ಪ್ರಭುವಾದ ಶ್ರೀರಾಮನ ಪ್ರಭಾವವಾಗಿರಬೇಕು. ಹಿಂದೆ ನಾನು ನದನದೀಪತಿಯಾದ ಸಮುದ್ರವನ್ನು ದಾಟುವಾಗಲೂ ಮಾರ್ಗಮಧ್ಯದಲ್ಲಿ ನಾನು ಕಂಡ ಅತ್ಯಾಶ್ಚರ್ಯಕರವಾದ ಪರ್ವತವೂ ಶ್ರೀರಾಮನ ಪ್ರಭಾವದಿಂದಲೇ ಕಂಡುದಾಗಿರಬೇಕು. ಆದುದರಿಂದ ಈಗ ಈ ಅಗ್ನಿಯು ಶೀತಳವಾಗಿರುವುದೂ ಶ್ರೀರಾಮನ ಪ್ರಭಾವದಿಂದಲೇ ಆಗಿರಬೇಕು. ಹಾಗಿಲ್ಲದಿದ್ದರೆ ಸಮುದ್ರಮಧ್ಯದಲ್ಲಿ ಇದ್ದಕ್ಕಿದ್ದಂತೆಯೇ ಪರ್ವತವೆದ್ದು ಬರುವುದೆಂದರೇನು? ಸಮುದ್ರವೂ, ಮೈನಾಕವೂ ಶ್ರೀರಾಮಕಾರ್ಯಕ್ಕೋಸ್ಕರ ಹಾಗೆ ಸಂಭ್ರಮವನ್ನು ತೋರಿಸಿರುವಲ್ಲಿ, ಈ ಅಗ್ನಿಯೂ ಶ್ರೀರಾಮ ಪ್ರೀತ್ಯರ್ಥವಾಗಿಯೇ ನನ್ನ ವಿಷಯ ದಲ್ಲಿ ಶೀತಳವಾಗಿರಬಾರದೇಕೆ? ಇಷ್ಟೆಯಲ್ಲದೆ ಈ ಅಗ್ನಿಯು, ಸೀತಾದೇವಿಗೆ ಮೇಲನ್ನುಂಟು ಮಾಡುವುದಕ್ಕೋಸ್ಕರವೂ, ಶ್ರೀರಾಮನ ಪ್ರಭಾವದಿಂದಲೂ, ನನ್ನ ತಂದೆಯಾದ ವಾಯುಗೂ ತನಗೂ ಇರುವ ಸ್ನೇಹದಿಂದಲೂ ನನ್ನ ವಿಷಯದಲ್ಲಿ ಶಾಂತನಾಗಿರಬಹುದು" ಎಂದು

॥ ೩೮ ॥ ಭೂಯಸ್ಸಚಿಂತಯಾಮಾಸ ಮುಹೂರ್ತಂ ಕಪಿಕುಂಜರಃ । ಉತ್ಪಪಾತಾಥ ವೇಗೇನ ನನಾದಚ ಮಹಾಕಪಿಃ ॥ ೩೯ ॥ ಪುರದ್ವಾರಂ ತತಶ್ಶ್ರೀಮಾನ್ ಶೈಲಶೃಂಗ ಮಿವೋನ್ನತಂ । ವಿಭಕ್ತರಕ್ಷಸ್ಸಂಬಾಧ ಮಾಸಸಾದಾಽನಿಲಾತ್ಮಜಃ ॥ ೪೦ ॥ ಸಭೂತ್ವಾ ಶೈಲಸಂಕಾಶಃ ಕ್ಷಣೇನ ಪುನರಾತ್ಮವಾನ್ । ಹ್ರಸ್ವತಾಂ ಪರಮಾಂ ಪ್ರಾಪ್ತೋ ಬಂಧ ನಾನ್ಯವಶಾತಯತ್ ॥೪೧॥ ವಿಮುಕ್ತಶ್ಚಾಭವಚ್ಛ್ರೀಮಾನ್ ಪುನಃ ಪರ್ವತಸನ್ನಿಭಃ । ವೀಕ್ಷಮಾಣಶ್ಚ ದದೃಶೇ ಪರಿಘಂ ತೋರಣಾಶ್ರಿತಂ ॥ ೪೨ ॥ ಸತಂ ಗೃಹ್ಯ ಮಹಾ ಬಾಹುಃ ಕಾಲಾಯಸಪರಿಷ್ಕೃತಂ । ರಕ್ಷಿಣಸ್ತಾನ್ಪುನಸ್ಸರ್ವಾನ್ ಸೂದಯಾಮಾಸ ಮಾರುತಿಃ ॥ ೪೩ ॥

ಮುಹೂರ್ತಂ - ಸ್ವಲ್ಪಹೊತ್ತು, ಪುನಃ - ಮರಳಿಯೂ, ಚಿಂತಯಾಮಾಸ - ಯೋಚಿಸಿದನು, ಅಥ - ಬಳಿಕ, ಮಹಾಕಪಿಃ - ಮಹಾ ವಾನರನಾದ ಆಂಜನೇಯನು, ಉತ್ಪಪಾತ - ಹಾರಿದನು, ನನಾದಚ - ಘಟ್ಟಿಯಾಗಿ ಕೂಗಿದನು. ॥ ೩೯ ॥ ತತಃ - ಬಳಿಕ, ಶ್ರೀಮಾನ್ - ಧೈರ್ಯಸಂಪದ್ಯುಕ್ತನಾದ, ಅನಿಲಾತ್ಮಜಃ - ವಾಯುಪುತ್ರನು, ಶೈಲಶೃಂಗಮಿವ - ಗಿರಿಶಿಖರದಂತೆ, ಉನ್ನತಂ - ಎತ್ತರವಾದ, ವಿಭ....ಧಂ - ವಿಭಾಗಿಸಲ್ಪಟ್ಟ ರಾಕ್ಷಸಸಂಚಾರವುಳ್ಳ, ಪುರದ್ವಾರಂ - ಊರುಬಾಗಿಲನ್ನು, ಆಸಸಾದ - ಹೊಂದಿದನು. ॥ ೪೦ ॥ ಆತ್ಮವಾನ್ - ಸತ್ವಶಾಲಿಯಾದ, ಸಃ - ಆ ಆಂಜನೇಯನು, ಕ್ಷಣೇನ - ಕ್ಷಣ ಕಾಲದಲ್ಲಿ, ಶೈಲಸಂಕಾಶಃ - ಪರ್ವತಕ್ಕೆ ಸಮಾನನಾದವನು, ಭೂತ್ವಾ - ಆಗಿ, ಪುನಃ - ಮತ್ತು, ಪರಮಾಂಹ್ರಸ್ವತಾಂ - ಬಹಳ ಹ್ರಸ್ವತೆಯನ್ನು, ಪ್ರಾಪ್ತಃ - ಹೊಂದಿ, ಬಂಧನಾನಿ - ಕಟ್ಟುಗಳನ್ನು, ಅವಶಾತಯತ್ - ಬಿಚ್ಚಿಕೊಂಡನು. ॥ ೪೧ ॥ ವಿಮುಕ್ತಶ್ಚ - ಬಿಡಲ್ಪಟ್ಟ, ಶ್ರೀಮಾನ್ - ಸಂಪದ್ಯುಕ್ತನಾದ ಆಂಜನೇಯನು, ಪುನಃ - ಮತ್ತು, ಪರ್ವ....ನಃ - ಗಿರಿಸದೃಶನಾಗಿ, ವೀಕ್ಷಮಾಣಶ್ಚ - ನೋಡುತ್ತ, ತೋರಣಾಶ್ರಿತಂ - ಹೊರಬಾಗಿಲನ್ನಾಶ್ರಯಿಸಿದ, ಪರಿಘಂ - ಅಗಳಿಯನ್ನು, ದದೃಶೇ - ಕಂಡನು. ॥ ೪೨ ॥ ಮಹಾಬಾಹುಃ - ಮಹಾ ಬಾಹುವಾದ, ಸಮಾರುತಿಃ - ಆ ವಾಯು ನಂದನನು, ಕಾಲಾ....ತಂ - ಕಬ್ಬಿಣದಿಂದ ಮಾಡಲ್ಪಟ್ಟ, ತಂ - ಆ ಲಾಲುಂಡಿಗೆಯನ್ನು, ಗೃಹ್ಯ - ತೆಗೆದುಕೊಂಡು, ರಕ್ಷಿಣಃ - ಕಾವಲುಗಾರರಾದ, ತಾನ್‌ಸರ್ವಾನ್ - ಆ ರಾಕ್ಷಸರೆಲ್ಲರನ್ನೂ, ಪುನಃ - ಮತ್ತೂ, ಸೂದಯಾಮಾಸ - ಕೊಂದನು. ॥ ೪೩ ॥ ತಾನ್ - ಆ ಕಾವಲುಗಾರನನ್ನು, ನಿಹತ್ವಾ -

---

ಕೊಂಡನು. ॥ ೩೩–೩೮ ॥ ಈ ಪ್ರಕಾರವಾಗಿ ಹನುಮಂತನು ಯೋಚಿಸಿ, ತಾನು ಮುಂದೆ ಮಾಡಬೇಕಾದ ಕಾರ್ಯಗಳನ್ನು ಕುರಿತು ಒಂದು ಮುಹೂರ್ತಕಾಲ ಆಲೋಚಿಸುತ್ತಿದ್ದು ಆ ಬಳಿಕ ಒಂದು ದೊಡ್ಡ ಸಿಂಹನಾದವನ್ನು ಮಾಡಿ ಬಹು ವೇಗದಿಂದ ಮೇಲಕ್ಕೆ ಹಾರಿದನು. ಹೀಗೆ ಧೈರ್ಯ ಲಕ್ಷ್ಮೀಸಂಪನ್ನನಾದ ಆ ಮಾರುತಿಯು ಹಾರಿ ಮಹೋನ್ನತನಾಗಿ ಪರ್ವತೋಪಮವಾಗಿದ್ದ ರಾಕ್ಷಸಸಂಚಾರಹೀನವಾದ ಪುರದ್ವಾರದಲ್ಲಿ ಕುಳಿತನು. ಆಗಲಾತನು ಪರ್ವತಸಮಾನವಾಗಿದ್ದ ತನ್ನ ದೇಹವನ್ನು ಬಹು ಸಣ್ಣದಾಗಿಸಿಕೊಂಡು ರಾಕ್ಷಸರು ಬಿಗಿಸಿದ್ದ ಹಗ್ಗಗಳೆಲ್ಲವನ್ನೂ ಬಿಡಿಸಿಕೊಂಡನು. ಇದಾದ ತರುವಾಯ ಆತನು ಪುನಃ ತನ್ನ ದೇಹವನ್ನು ಬೆಟ್ಟದಂತೆ ದೊಡ್ಡದಾಗಿಸಿಕೊಂಡು ನಾಲ್ಕೂದಿಕ್ಕುಗಳನ್ನು ನೋಡಿ ಆ ಬಹಿರ್ದ್ವಾರದಲ್ಲಿದ್ದ ಅಗುಳೀಮರವನ್ನು ನೋಡಿದನು. ಆ ಕೂಡಲೇ ಮಹಾ ಬಾಹುವಾದ ಆತನು ಕಬ್ಬಿಣದ ಅಗುಳಿಯನ್ನು ಕೈಗೆ ತೆಗೆದುಕೊಂಡು ತನ್ನನ್ನು ಹಿಂಬಾಲಿಸಿ ಬಂದಿದ್ದ ರಾಕ್ಷಸ

ಸತಾನ್ನಿಹತ್ವಾ ರಣಚಂಡವಿಕ್ರಮ
ಸ್ಸಮೀಕ್ಷಮಾಣಃ ಪುನರೇವ ಲಂಕಾಂ ।
ಪ್ರದೀಪ್ತಲಾಂಗೂಲಕೃತಾರ್ಚಿಮಾಲೀ
ಪ್ರಕಾಶತಾದಿತ್ಯಇವಾರ್ಚಿಮಾಲೀ ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಪಂಚಾಶಸ್ಸರ್ಗಃ

ಸಂಹರಿಸಿ, ಪುನಃ - ಮತ್ತೂ, ಲಂಕಾಮೇವ - ಲಂಕಾಪಟ್ಟಣವನ್ನೇ, ಸಮೀಕ್ಷಮಾಣಃ - ನೋಡುತ್ತ, ರಣ....ಮಃ - ಕಾಳಗದಲ್ಲಿ ಕಡುಗಲಿಯಾದ, ಸಃ - ಆ ಆಂಜನೇಯನು, ಪ್ರದೀ....ಲೀ - ಪ್ರಜ್ವಲಿಸುತ್ತಿರುವ ಬಾಲದಲ್ಲಿ ಮಾಡಲ್ಪಟ್ಟ ಜ್ವಾಲೆಗಳೇ ಮಾಲಿಕೆಯಾಗಿ ಉಳ್ಳ ಪುಚ್ಛಾಗ್ನಿಯುಳ್ಳವನಾಗಿ ಕಿರಣಗಳೇ ಮಾಲಿಕೆಯಾಗಿವುಳ್ಳ, (ತೇಜಃಪುಂಜವುಳ್ಳ) ಆದಿತ್ಯಇವ - ಸೂರ್ಯನಂತೆ, ಪ್ರಕಾಶತ - ಹೊಳೆಯುತ್ತಿದ್ದನು. ॥ ೪೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಪಂಚಾಶಸ್ಸರ್ಗಃ

ರೆಲ್ಲರನ್ನೂ ಸಂಹರಿಸಿದನು. ಆ ಸಮಯದಲ್ಲಿ ಯುದ್ಧವೀರನಾದ ಆ ಆಂಜನೇಯನು ಪುನಃ ಲಂಕಾನಗರದ ನಾಲ್ಕೂಕಡೆಗಳಲ್ಲಿಯೂ ನೋಡುತ್ತ, ಧಗಧಗನುರಿಯುತ್ತಿದ್ದ ವಾಲಾಗ್ರಭಾಗದ ಅಗ್ನಿಜ್ವಾಲೆಗಳಿಂದ ಕೂಡಿದವನಾಗಿ ಕಿರಣಜಾಲದಿಂದ ಕೂಡಿದ ಸೂರ್ಯನಂತೆ ಶೋಭಿಸುತ್ತಿದ್ದನು. ॥ ೨೯–೪೪ ॥

ಇಂತಿದು ರಾಕ್ಷಸಕೃತ ಹನುಮದ್ವಾಲದಹನ ವೃತ್ತಾಂತವೆಂಬ
ಐವತ್ತುಮೂರನೆಯ ಸರ್ಗವು ಸಮಾಪ್ತವಾದುದು

ಸುಂದರಕಾಂಡೇ ಚತುಃಪಂಚಾಶಸ್ಸರ್ಗಃ

ವೀಕ್ಷಮಾಣಸ್ತತೋ ಲಂಕಾಂ ಕಪಿಃ ಕೃತಮನೋರಥಃ । ವರ್ಧಮಾನ ಸಮುತ್ಸಾಹಃ ಕಾರ್ಯಶೇಷಮಚಿಂತಯತ್ ॥ ೧ ॥ "ಕಿನ್ನು ಖಲ್ವವಶಿಷ್ಟಂ ಮೇ ಕರ್ತವ್ಯಮಿಹ ಸಾಂಪ್ರತಂ । ಯದೇಷಾಂ ರಕ್ಷಸಾಂ ಭೂಯಸ್ಸಂತಾಪಜನನಂ ಭವೇತ್ ॥ ೨ ॥ ವನಂ ತಾವತ್ಪ್ರಮಥಿತಂ ಪ್ರಕೃಷ್ಟಾ ರಾಕ್ಷಸಾ ಹತಾಃ । ಬಲೈಕದೇಶಃ ಕ್ಷಪಿತ ಶ್ಶೇಷಂ ದುರ್ಗವಿನಾಶನಂ ॥೩॥ ದುರ್ಗೇ ವಿನಾಶಿತೇ ಕರ್ಮ ಭವೇತ್ಸುಖಪರಿಶ್ರಮಂ । ಅಲ್ಪಯತ್ನೇನ ಕಾರ್ಯೇಽಸ್ಮಿನ್ ಮಮ ಸ್ಯಾತ್ಸಫಲಃ ಶ್ರಮಃ ॥ ೪ ॥ ಯೋಹ್ಯಯಂ

ತತಃ - ಬಳಿಕ, ಲಂಕಾಂ - ಲಂಕಾನಗರವನ್ನು, ವೀಕ್ಷಮಾಣಃ - ನೋಡುತ್ತಿರುವ, ಕೃತಮನೋರಥಃ - ನೆರವೇರಿದ ಇಷ್ಟಾರ್ಥವುಳ್ಳ, ಕಪಿಃ - ವಾನರನು, ವರ್ಧ....ಹಃ - ವೃದ್ಧಿ ಹೊಂದುತ್ತಿರುವ ಉತ್ಸಾಹಶಕ್ತಿಯುಳ್ಳವನಾಗಿ, ಕಾರ್ಯಶೇಷಂ - ಮಿಕ್ಕ ಕೆಲಸವನ್ನು ಕುರಿತು, ಅಚಿಂತಯತ್ - ಯೋಚಿಸಿದನು. ||೧|| ಇಹಖಲು - ಈ ಪಟ್ಟಣದಲ್ಲಿಯಾದರೆ, ಯತ್ - ಯಾವದು, ಏಷಾಂರಕ್ಷಸಾಂ - ಈ ರಕ್ಕಸರಿಗೆ, ಭೂಯಃ - ಮತ್ತೂ, ಸಂತಾ....ನಂ - ದುಃಖವನ್ನುಂಟುಮಾಡುವುದು, ಭವೇತ್ - ಆಗುವದೋ, (ತಾದೃಶಂ - ಅಂತಹ), ಅವಶಿಷ್ಟಂ - ಉಳದಿರುವ, ಮೇ - ನನಗೆ, ಸಾಂಪ್ರತಂ - ಈಗ, ಕರ್ತವ್ಯಂ - ಮಾಡತಕ್ಕ ಕಾರ್ಯವು, ಕಿನ್ನು - ಯಾವದು. ||೨|| ವನಂತಾವತ್-ಅಶೋಕವನವಾದರೆ, ಪ್ರಮಥಿತಂ - ಧ್ವಂಸಗೊಳಿಸಲಾಯಿತು, ಪ್ರಕೃಷ್ಟಾಃ - ಪ್ರಬಲರಾದ, ರಾಕ್ಷಸಾಃ-ರಕ್ಕಸರು, ಹತಾಃ-ಕೊಲ್ಲಲ್ಪಟ್ಟರು, ಬಲೈಕದೇಶಃ-ಸೇನೆಯ ಒಂದು ಭಾಗವು, ಕ್ಷಪಿತಃ-ನಾಶಗೊಳಿಸಲ್ಪಟ್ಟಿತು, ದುರ್ಗ....ನಂ-ಪಟ್ಟಣಧ್ವಂಸವು, ಶೇಷಂ-ಉಳದಿರುವದು. ‖ ೩ ‖ ದುರ್ಗೇ-ಲಂಕಾಪಟ್ಟಣದ ದುರ್ಗಪ್ರದೇಶವು, ವಿನಾಶಿತೇ-ನಾಶಮಾಡಲ್ಪಟ್ಟುದಾಗಲು, ಕರ್ಮ-ಸಮುದ್ರಲಂಘನವೇ ಮುಂತಾದ ಕಾರ್ಯವು, ಸುಖಪರಿಶ್ರಮಃ - ಸಫಲಪ್ರಯಾಸವುಳ್ಳದು, ಭವೇತ್ - ಆಗುವದು, ಅಲ್ಪಯತ್ನೇನ - ಸ್ವಲ್ಪ ಪ್ರಯತ್ನವುಳ್ಳ, ಅಸ್ಮಿನ್ಕಾರ್ಯೇ - ಈ ಕೆಲಸವೂ, ಕೃತೇ ಮಾಡಲ್ಪಟ್ಟುದಾಗಲು, ಮಮ -

---

ಈ ಪ್ರಕಾರವಾಗಿ ಈಡೇರಿದ ಸಮಸ್ತ ಬಯಕೆಗಳೂ ಉಳ್ಳ ಹನುಮಂತನು, ಪುನಃ ಲಂಕಾಪಟ್ಟಣವನ್ನು ನೋಡಿ ಉತ್ಸಾಹದಿಂದ ಉಬ್ಬಿ ಬೆಳೆಯುತ್ತ ತಾನು ಮುಂದೆ ಮಾಡಬೇಕಾದ ಕಾರ್ಯವನ್ನು ಹೀಗೆ ಆಲೋಚಿಸಿದನು. "ಈಗ ನಾನು ಈ ಲಂಕಾಪಟ್ಟಣದಲ್ಲಿ ಮಾಡಬೇಕಾಗಿರುವ ಕಾರ್ಯಶೇಷವೇನು? ಇಲ್ಲಿರುವ ಸಮಸ್ತ ರಾಕ್ಷಸರಿಗೆ ಮತ್ತೂ ದುಃಖಕರವಾದ ಯಾವ ಕಾರ್ಯವನ್ನು ಮಾಡಲಿ? ಅಶೋಕವನವನ್ನು ಮುರಿದುದಾಯಿತು. ಮುಖ್ಯಮುಖ್ಯರಾದ ರಾಕ್ಷಸವೀರರೆಲ್ಲರನ್ನೂ ಕೊಂದುದಾಯಿತು; ಇಲ್ಲಿರುವ ಸೈನ್ಯದ ಒಂದು ಭಾಗವನ್ನೂ ನಾಶಗೊಳಿಸಿದುದಾಯಿತು! ಆದರೆ ಒಂದು ಮಾತ್ರ ಉಳಿದಿರುವುದು. ಇಲ್ಲಿರುವ ದುರ್ಗಪ್ರದೇಶಗಳೆಲ್ಲವನ್ನೂ ನಾಶಗೊಳಿಸುವ ಕಾರ್ಯ. ಈ ದುರ್ಗಭೇದನ ಕಾರ್ಯವನ್ನು ಮಾಡಿದುದಾದರೆ ಸಮುದ್ರೋಲ್ಲಂಘನವೇ ಮೊದಲಾದ ನನ್ನ ಪರಿಶ್ರಮವೆಲ್ಲವೂ ಸಾರ್ಥಕವಾಗುವುದು. ಈ ಕೆಲಸವು ನನಗೆ ಅಷ್ಟಾಗಿ ಆಯಾಸವನ್ನುಂಟುಮಾಡ

ಮಮ ಲಾಂಗೂಲೇ ದೀಪ್ಯತೇ ಹವ್ಯವಾಹನಃ । ಅಸ್ಯ ಸಂತರ್ಪಣಂ ನ್ಯಾಯ್ಯಂ ಕರ್ತುಮೇಭಿರ್ಗೃಹೋತ್ತಮೈಃ" ॥ ೫ ॥ ತತಃ ಪ್ರದೀಪ್ತಲಾಂಗೂಲಸ್ಸವಿದ್ಯುದಿವ ತೋಯದಃ । ಭವನಾಗ್ರೇಷು ಲಂಕಾಯಾಂ ವಿಚಚಾರ ಮಹಾಕಪಿಃ ॥ ೬ ॥ ಗೃಹಾದ್ಗೃಹಂ ರಾಕ್ಷಸಾನಾಮುದ್ಯಾನಾನಿ ಚ ವಾನರಃ । ವೀಕ್ಷಮಾಣೋಹ್ಯಸಂತ್ರಸ್ತಃ ಪ್ರಾಸಾದಾಂಶ್ಚ ಚಚಾರ ಸಃ ॥೭॥ ಅವಪ್ಲುತ್ಯ ಮಹಾವೇಗಃ ಪ್ರಹಸ್ತಸ್ಯ ನಿವೇಶನಂ । ಅಗ್ನಿಂ ತತ್ರ ವಿನಿಕ್ಷಿಪ್ಯ ಶ್ವಸನೇನ ಸಮೋ ಬಲೀ ॥ ೮ ॥ ತತೋಽನ್ಯತ್ಪುಪ್ಲುವೇ ವೇಶ್ಮ

ನನ್ನ, ಶ್ರಮಃ - ಆಯಾಸವು, ಸಫಲಃ - ಫಲಯುಕ್ತವಾದದ್ದು, ಸ್ಯಾತ್ - ಆಗುವದು. ॥ ೪ ॥ ಯಃ - ಯಾವ, ಅಯಂಹವ್ಯವಾಹನಃ - ಈ ಅಗ್ನಿಯು, ಮಮ - ನನ್ನ, ಲಾಂಗೂಲೇ - ಬಾಲದಲ್ಲಿ, ದೀಪ್ಯತೇ - ಪ್ರಜ್ವಲಿಸುತ್ತಿರುವುದೋ, ಏಭಿರ್ಗೃಹೋತ್ತಮೈಃ - ಈ ಶ್ರೇಷ್ಠವಾದ ಮನೆಗಳಿಂದ, ಅಸ್ಯ - ಈ ಅಗ್ನಿಗೆ, ಸಂತರ್ಪಣಂ - ತೃಪ್ತಿಯನ್ನು, ಕರ್ತುಂ - ಮಾಡುವುದು, ನ್ಯಾಯ್ಯಂ - ಯುಕ್ತವು. ॥ ೫ ॥ ತತಃ - ಬಳಿಕ, ಪ್ರದೀ....ಲಃ - ಉರಿಯುತ್ತಿರುವ ಬಾಲವುಳ್ಳ, ಮಹಾಕಪಿಃ - ಮಹಾ ವಾನರನು, ಲಂಕಾಯಾಂ - ಲಂಕಾನಗರದ, ಭವನಾಗ್ರೇಷು - ಮನೆಗಳ ತುದಿಭಾಗಗಳಲ್ಲಿ, ಸವಿದ್ಯುತ್ - ಮಿಂಚುಗಳಿಂದೊಡಗೂಡಿದ, ತೋಯದಇವ - ಮೇಘದಂತೆ, ವಿಚಚಾರ - ಸಂಚರಿಸಿದನು. ॥ ೬ ॥ ಸವಾನರಃ - ಆ ಕಪಿಯು, ರಾಕ್ಷಸಾನಾಂ - ರಕ್ಕಸರ, ಗೃಹಾತ್ - ಮನೆಯಿಂದ, ಗೃಹಂ - ಮತ್ತೊಂದು ಮನೆಯನ್ನು, ಉದ್ಯಾನಾನಿಚ - ಗೃಹಾರಾಮಗಳನ್ನೂ, ಪ್ರಾಸಾದಾಂಶ್ಚ - ಮಹಡಿಗಳನ್ನೂ ಸಹ, ವೀಕ್ಷಮಾಣಃ - ನೋಡುತ್ತಿರುವವನಾಗಿ, ಅಸಂತ್ರಸ್ತಃ - ನಿರ್ಭಯವಾಗಿ, ಚಚಾರ - ತಿರುಗಿದನು. ॥ ೭ ॥ ಶ್ವಸನೇನ - ವಾಯುವಿಗೆ, ಸಮಃ - ಸದೃಶನಾದ, ಬಲೀ - ದೇಹಬಲವುಳ್ಳ, ವೀರ್ಯವಾನ್ - ಪರಾಕ್ರಮಿಯಾದ, ಸಹನುಮಾನ್ - ಆ ಆಂಜನೇಯನು, ಮಹಾವೇಗಃ - ಬಹು ಶೀಘ್ರಗಮನವುಳ್ಳವನಾಗಿ, ಪ್ರಹಸ್ತಸ್ಯ - ಪ್ರಹಸ್ತನೆಂಬ ಮುಖ್ಯಮಂತ್ರಿಯ, ನಿವೇಶನಂ - ಮನೆಯನ್ನು ಕುರಿತು, ಅವಪ್ಲುತ್ಯ - ಹಾರಿ, ತತ್ರ - ಅಲ್ಲಿ, ಅಗ್ನಿಂ - ಬೆಂಕಿಯನ್ನು, ವಿನಿಕ್ಷಿಪ್ಯ - ಇಟ್ಟು, ತತಃ - ಆ ಮನೆಯಿಂದ, ಅನ್ಯತ್ - ಮತ್ತೊಂದಾದ, ಮಹಾಪಾರ್ಶ್ವಸ್ಯ - ಮಹಾಪಾರ್ಶ್ವನ,

---

ತಕ್ಕುದೇನೂ ಅಲ್ಲವು. ಸುಲಭಸಾಧ್ಯವಾಗಿಯೇ ಇರುವುದು. ಮೇಲಾಗಿ ನನ್ನ ವಾಲಾಗ್ರದಲ್ಲಿ ಪ್ರಜ್ವಲಿಸುತ್ತಿರುವ ಈ ಯಜ್ಞೇಶ್ವರನು ನನ್ನ ವಿಷಯವಲ್ಲಿ ಶೀತಳವಾಗಿದ್ದುಕೊಂಡು ನನಗೆ ಮಹೋಪಕಾರವನ್ನು ಮಾಡಿರುವನು. ಅದಕ್ಕಾಗಿ ಈಗ ನಾನು ಈ ಪಟ್ಟಣದಲ್ಲಿರುವ ಮನೆಗಳೆಲ್ಲವನ್ನೂ ಇವನಿಗೆ ಆಹುತಿಯಾಗಿ ಕೊಟ್ಟು ಇವನನ್ನು ಸಂತೋಷಗೊಳಿಸಬೇಕು." ॥೧–೫॥ ವಾನರವೀರನಾದ ಹನುಮಂತನು ಈ ರೀತಿ ನಿಶ್ಚಯಿಸಿಕೊಂಡು, ಮಿಂಚಿನಿಂದೊಡಗೂಡಿದ ಮಹಾ ಮೇಘದಂತೆ, ಉರಿಯುತ್ತಿರುವ ಬಾಲದೊಡನೆ ಆ ಲಂಕಾಪಟ್ಟಣದ ಮನೆಗಳಮೇಲೆ ಹಾರಿದನು. ಹೀಗೆ ಸ್ವಲ್ಪವೂ ಭಯವಿಲ್ಲದೆ ಆ ರಾಕ್ಷಸರ ಮನೆಗಳಮೇಲೆ ಸಂಚರಿಸುತ್ತಲಿರುವ ಆ ವಾನರವೀರನು ಅಲ್ಲಲ್ಲಿಶೋಭಿಸುತ್ತಿರುವ ಗೋಪುರಗಳನ್ನೂ, ಉದ್ಯಾನಗಳನ್ನೂನೋಡುತ್ತಲಿದ್ದನು. ಹೀಗೆ ಮಹಾ ಬಲಪರಾಕ್ರಮಶಾಲಿಯೂ, ವಾಯುವಿಗೆ ಸಮಾನವಾದ ವೇಗವುಳ್ಳವನಾಗಿಯೂ ಇರುವ ಆ ಹನುಮಂತನು ಬಹು ವೇಗವಾಗಿ ಸಂಚರಿಸುತ್ತ ಮೊದಲು ಪ್ರಹಸ್ತನ ಮನೆಗೆ ಹಾರಿ ಅದಕ್ಕೆ ಬೆಂಕಿಯಿಟ್ಟನು. ಆ ಬಳಿಕ ಮಹಾಪಾರ್ಶ್ವನ ಮನೆಗೆ ಹಾರಿ ಪ್ರಳಯಾ

ಮಹಾಪಾರ್ಶ್ವಸ್ಯ ವೀರ್ಯವಾನ್ । ಮುಮೋಚ ಹನುಮಾನಗ್ನಿಂ ಕಾಲಾನಲಶಿಖೋಪಮಂ ॥ ೯ ॥ ವಜ್ರದಂಷ್ಟ್ರಸ್ಯ ಚ ತಥಾ ಪುಪ್ಲುವೇ ಸ ಮಹಾಕಪಿಃ । ಶುಕಸ್ಯಚ ಮಹಾತೇಜಾಸ್ಸಾರಣಸ್ಯ ಚ ಧೀಮತಃ ॥೧೦॥ ತಥಾ ಚೇಂದ್ರಜಿತೋ ವೇಶ್ಮ ದದಾಹ ಹರಿಯೂಥಪಃ । ಜಂಬುಮಾಲೇಸ್ಸುಮಾಲೇಶ್ಚ ದದಾಹ ಭವನಂ ತತಃ ॥ ೧೧ ॥ ರಶ್ಮಿಕೇತೋಶ್ಚ ಭವನಂ ಸೂರ್ಯಶತ್ರೋಸ್ತಥೈವಚ । ಹ್ರಸ್ವಕರ್ಣಸ್ಯ ದಂಷ್ಟ್ರಸ್ಯ ರೋಮಶಸ್ಯ ಚ ರಕ್ಷಸಃ ॥ ೧೨ ॥ ಯುದ್ಧೋನ್ಮತ್ತಸ್ಯ ಮತ್ತಸ್ಯ ಧ್ವಜಗ್ರೀವಸ್ಯ ರಕ್ಷಸಃ । ವಿದ್ಯುಜ್ಜಿಹ್ವಸ್ಯ ಘೋರಸ್ಯ ತಥಾ ಹಸ್ತಿಮುಖಸ್ಯಚ ॥ ೧೩ ॥ ಕರಾಳಸ್ಯ

ವೇಶ್ಮ - ಮಂದಿರವನ್ನು ಕುರಿತು, ಪುಪ್ಲುವೇ - ಹಾರಿದನು, ಕಾಲಾ....ಮಂ - ಪ್ರಳಯಕಾಲಾಗ್ನಿ ಜ್ವಾಲೆಗಳಿಗೆ ಸಮಾನವಾದ ಜ್ವಾಲೆಗಳುಳ್ಳ, ಅಗ್ನಿಂ - ಬೆಂಕಿಯನ್ನು, ಮುಮೋಚ - ಬಿಟ್ಟನು. ॥೮-೯॥ ಮಹಾತೇಜಾಃ - ಮಹಾ ಪರಾಕ್ರಮವುಳ್ಳ, ಹರಿಯೂಥಪಃ - ಕಪಿಯೂಥಪತಿಯಾದ, ಮಹಾಕಪಿಃ - ಆ ಆಂಜನೇಯನು, ವಜ್ರದಂಷ್ಟ್ರಸ್ಯ - ವಜ್ರದಂಷ್ಟ್ರನ, ವೇಶ್ಮಚ - ಮನೆಯನ್ನೂ, ತಥಾ - ಹಾಗೆಯೇ, ಶುಕಸ್ಯಚ - ಶುಕನ ಮನೆಯನ್ನೂ, ಧೀಮತಃ - ಬುದ್ಧಿಶಾಲಿಯಾದ, ಸಾರಣಸ್ಯಚ - ಸಾರಣನ ಮನೆಯನ್ನೂ, ತಥಾ - ಹಾಗೆಯೇ, ಇಂದ್ರಜಿತಃ - ಇಂದ್ರಜಿತ್ತುವಿನ, ವೇಶ್ಮಚ - ಮನೆಯನ್ನೂ ಸಹ ಕುರಿತು, ಪುಪ್ಲುವೇ - ಹಾರಿದನು, (ತಾನ್ - ಅವುಗಳನ್ನು), ದದಾಹ - ಸುಟ್ಟನು. ॥೧೦॥ ತತಃ- ಬಳಿಕ, ಜಂಬುಮಾಲೇಃ - ಜಂಬುಮಾಲಿಯ, ಭವನಂ - ಮನೆಯನ್ನೂ, ಸುಮಾಲೇಃ - ಸುಮಾಲಿಯ, ಭವನಂಚ - ಮನೆಯನ್ನೂ ಸಹ, ದದಾಹ - ಸುಟ್ಟುಬಿಟ್ಟನು. ॥ ೧೧ ॥ ಮಹಾತೇಜಾಃ - ಮಹಾ ಸತ್ವಶಾಲಿಯಾದ, ಹರಿಪುಂಗವಃ - ವಾನರಶ್ರೇಷ್ಠನು, ರಶ್ಮಿಕೇತೋರ್ಭವನಂಚ - ರಶ್ಮಿಕೇತುವಿನ ಮನೆಯನ್ನೂ, ತಥೈವಚ - ಹಾಗೆಯೇ, ಸೂರ್ಯಶತ್ರೋಶ್ಚ - ಸೂರ್ಯಶತ್ರುವಿನ ಮನೆಯನ್ನೂ, ಹ್ರಸ್ವಕರ್ಣನ ಮನೆಯನ್ನೂ, ದಂಷ್ಟ್ರಸ್ಯ - ದಂಷ್ಟ್ರನೆಂಬವನ ಮನೆಯನ್ನೂ, ರಕ್ಷಸಃ - ರಾಕ್ಷಸನಾದ, ರೋಮಶಸ್ಯಚ - ರೋಮಶನೆಂಬವನ ಮನೆಯನ್ನೂ, ಯುದ್ಧೋನ್ಮತ್ತಸ್ಯ - ಯುದ್ಧೋನ್ಮತ್ತನ, ಮತ್ತಸ್ಯ - ಮತ್ತನ, ರಕ್ಷಸಃ - ಅಸುರನ, ಧ್ವಜಗ್ರೀವಸ್ಯ - ಧ್ವಜಗ್ರೀವನೆಂಬವನ ಗೃಹವನ್ನೂ, ಘೋರಸ್ಯ - ಭಯಂಕರನಾದ, ವಿದ್ಯುಜ್ಜಿಹ್ವಸ್ಯ - ವಿದ್ಯುಜ್ಜಿಹ್ವನ ಮನೆಯನ್ನೂ, ತಥಾ - ಹಾಗೆಯೇ, ಹಸ್ತಿಮುಖಸ್ಯಚ - ಹಸ್ತಿಮುಖನೆಂಬವನ ಮನೆಯನ್ನೂ, ಕರಾಳಸ್ಯ - ಕರಾಳನೆಂಬವನ

ಗ್ನಿಗೆ ಸಮಾನವಾದ ವಾಲಾಗ್ನಿಯನ್ನು ಅದಕ್ಕೂ ಮುಟ್ಟಿಸಿಬಿಟ್ಟನು. ಇದಾದ ತರುವಾಯ ಆ ಮಹಾ ವಾನರನು ವಜ್ರದಂಷ್ಟ್ರನ ಮನೆಗೂ, ಅಲ್ಲಿಂದ ಶುಕಸಾರಣರೆಂಬ ಮಂತ್ರಿಶ್ರೇಷ್ಠರ ಮನೆಗಳಿಗೂ, ಅಲ್ಲಿಂದ ರಾಕ್ಷಸರಾಜಕುಮಾರನಾದ ಇಂದ್ರಜಿತ್ತುವಿನ ಮನೆಗೂ ಹಾರಿ ಅವುಗಳೆಲ್ಲಕ್ಕೂ ಬೆಂಕಿಯನ್ನು ಮುಟ್ಟಿಸಿಬಿಟ್ಟನು. ॥ ೬–೧೦ ॥ ಆಮೇಲೆ ಆತನು ಜಂಬುಮಾಲಿ ಮತ್ತು ಸುಮಾಲಿ ಎಂಬ ರಾಕ್ಷಸವೀರರ ಮನೆಗಳಿಗೂ ಹಾರಿ ಅವುಗಳನ್ನೂ ಸುಟ್ಟನು. ಇದಾದಬಳಿಕ ರಶ್ಮಿಕೇತು, ಸೂರ್ಯಶತ್ರು, ಹ್ರಸ್ವಕರ್ಣ, ದಂಷ್ಟ್ರ, ರೋಮಶ ಮೊದಲಾದ ರಾಕ್ಷಸರ ಮನೆಗಳಿಗೂ ಹಾರಿ ಅವುಗಳಿಗೆಲ್ಲಕ್ಕೂ ಬೆಂಕಿಯನ್ನು ಹೊತ್ತಿಸಿದನು. ಆಮೇಲೆ ಯುದ್ಧೋನ್ಮತ್ತ, ಮತ್ತ, ಧ್ವಜಗ್ರೀವ, ವಿದ್ಯುಜ್ಜಿಹ್ವ, ಘೋರ, ಹಸ್ತಿಮುಖ, ಕಾರಳ, ಪಿಶಾಚ, ಶೋಣಿತಾಕ್ಷರೇ ಮೊದಲಾದ ರಾಕ್ಷಸರ ಮನೆಗಳನ್ನೂ ಸುಟ್ಟನು.

ಪಿಶಾಚಸ್ಯ ಶೋಣಿತಾಕ್ಷಸ್ಯ ಚೈವಹಿ । ಕುಂಭಕರ್ಣಸ್ಯ ಭವನಂ ಮಕರಾಕ್ಷಸ್ಯ ಚೈವಹಿ ॥೧೪॥ ಯಜ್ಞಶತ್ರೋಶ್ಚ ಭವನಂ ಬ್ರಹ್ಮಶತ್ರೋಸ್ತಥೈವಚ । ನರಾಂತಕಸ್ಯ ಕುಂಭಸ್ಯ ನಿಕುಂಭಸ್ಯ ದುರಾತ್ಮನಃ ॥ ೧೫ ॥ ವರ್ಜಯಿತ್ವಾ ಮಹಾತೇಜಾ ವಿಭೀಷಣಗೃಹಂ ಪ್ರತಿ । ಕ್ರಮಮಾಣಃ ಕ್ರಮೇಣೈವ ದದಾಹ ಹರಿಪುಂಗವಃ ॥ ೧೬ ॥ ತೇಷು ತೇಷು ಮಹಾರ್ಹೇಷು ಭವನೇಷು ಮಹಾಯಶಾಃ । ಗೃಹೇಷ್ವೃದ್ಧಿಮತಾಮೃದ್ಧಿಂ ದದಾಹ ಸ ಮಹಾಕಪಿಃ ॥ ೧೭ ॥ ಸರ್ವೇಷಾಂ ಸಮತಿಕ್ರಮ್ಯ ರಾಕ್ಷಸೇಂದ್ರಸ್ಯ ವೀರ್ಯವಾನ್ । ಆಸಸಾದಾಥ ಲಕ್ಷ್ಮೀವಾನ್ ರಾವಣಸ್ಯ ನಿವೇಶನಂ ॥ ೧೮ ॥ ತತಸ್ತಸ್ಮಿನ್ಗೃಹೇ ಮುಖ್ಯೇ ನಾನಾರತ್ನವಿಭೂಷಿತೇ । ಮೇರುಮಂದರಸಂಕಾಶೇ ಸರ್ವಮಂಗಳಶೋಭಿತೇ ॥೧೯॥

ಮನೆಯನ್ನೂ, ಪಿಶಾಚಸ್ಯ - ಪಿಶಾಚನೆಂಬವನ ಮನೆಯನ್ನೂ, ಶೋಣಿತಾಕ್ಷಸ್ಯ - ಶೋಣಿತಾಕ್ಷನ ಮನೆಯನ್ನೂ, ತಥೈವಚ - ಹಾಗೆಯೇ, ಕುಂಭಕರ್ಣಸ್ಯ - ಕುಂಭಕರ್ಣನ, ಭವನಂ - ಮಂದಿರವನ್ನೂ, ಮಕರಾಕ್ಷಸ್ಯಚ - ಮಕರಾಕ್ಷನ ಮನೆಯನ್ನೂ, ಯಜ್ಞಶತ್ರೋರ್ಭವನಂಚ - ಯಜ್ಞಶತ್ರುವಿನ ಮನೆಯನ್ನೂ, ತಥೈವಚ-ಹಾಗೆಯೇ, ಬ್ರಹ್ಮಶತ್ರೋಃ-ಬ್ರಹ್ಮಶತ್ರುವೆಂಬವನ ಮನೆಯನ್ನೂ, ನರಾಂತಕಸ್ಯ-ನರಾಂತಕನ ಮಂದಿರವನ್ನೂ, ಕುಂಭಸ್ಯ - ಕುಂಭನ ಮನೆಯನ್ನೂ, ದುರಾತ್ಮನಃ - ದುಸ್ವಭಾವವುಳ್ಳ, ನಿಕುಂಭಸ್ಯ - ನಿಕುಂಭನ ಮನೆಯನ್ನೂ, ವಿಭೀಷಣಗೃಹಂ - ವಿಭೀಷಣನ ಮನೆಯನ್ನು, ವರ್ಜಯಿತ್ವಾ-ಬಿಟ್ಟು, ಪ್ರತಿಗೃಹಂ-ಪ್ರತಿಯೊಂದು ಮನೆಯನ್ನೂ ಕುರಿತು, ಕ್ರಮೇಣ-ಕ್ರಮವಾಗಿ, ಕ್ರಮಮಾಣಃ-ಹಾರುತ್ತ, ದದಾಹ - ದಹಿಸಿದನು. ॥ ೧೨-೧೬ ॥ ಮಹಾಯಶಾಃ - ಮಹಾ ಕೀರ್ತಿಶಾಲಿಯಾದ, ಸಮಹಾಕಪಿಃ - ಆ ಮಹಾ ವಾನರನು, ಮಹಾರ್ಹೇಷು - ಅಮೂಲ್ಯಗಳಾದ, ಭವನೇಷು - ಮನೆಗಳಾದ, ತೇಷುತೇಷುಗೃಹೇಷು - ಆ ಆ ಮನೆಗಳಲ್ಲಿ, ಋದ್ಧಿಮತಾಂ - ದ್ರವ್ಯವಂತರ, ಋದ್ಧಿಂ - ರತ್ನ, ಮಣಿ ಮುಂತಾದವುಗಳ ಸಮೃದ್ಧಿಯನ್ನು, ದದಾಹ - ಸುಟ್ಟುಬಿಟ್ಟನು. ॥೧೭॥ ಲಕ್ಷ್ಮೀವಾನ್ - ಧೈರ್ಯಲಕ್ಷ್ಮೀಸಂಪನ್ನನಾದ, ವೀರ್ಯವಾನ್ - ಪರಾಕ್ರಮಿಯಾದ ಆಂಜನೇಯನು, ಸರ್ವೇಷಾಂ - ಸಮಸ್ತರ, (ನಿವೇಶನಾನಿ - ಮನೆಗಳನ್ನು), ಸಮತಿಕ್ರಮ್ಯ - ಅತಿಕ್ರಮಿಸಿ, ಅಥ - ಬಳಿಕ, ರಾಕ್ಷಸೇಂದ್ರಸ್ಯ - ರಾಕ್ಷಸನಾಥನಾದ, ರಾವಣಸ್ಯ - ರಾವಣಾಸುರನ, ನಿವೇಶನಂ - ಮಂದಿರವನ್ನು, ಆಸಸಾದ-ಹೊಂದಿದನು. ॥ ೧೮ ॥ ತತಃ - ಬಳಿಕ, ವೀರಃ-ಶೂರನಾದ, ಹನೂಮಾನ್-ಆಂಜನೇಯನು, ನಾನಾ....ತೇ-ಅನೇಕ ರತ್ನಗಳಿಂದಲಂಕೃತವಾದ, ಮೇರು....ಶೇ-ಮೇರುಪರ್ವತಗಳಿಗೆ ಸಮಾನವಾದ, ಸರ್ವ....ತೇ-ಸಮಸ್ತ ಶುಭಲಕ್ಷಣಗಳಿಂದ ಹೊಳೆಯುತ್ತಿರುವ, ಮುಖ್ಯೇ-ಉತ್ತಮವಾದ, ತಸ್ಮಿನ್ಗೃಹೇ-

ಅಲ್ಲಿಂದ ಮುಂದಕ್ಕೆ ಕುಂಭಕರ್ಣ, ಮಕರಾಕ್ಷ, ಯಜ್ಞಶತ್ರು, ಬ್ರಹ್ಮಶತ್ರು, ನರಾಂತಕ, ಕುಂಭ, ದುರಾತ್ಮನಾದ ನಿಕುಂಭ ಇವರೇ ಮೊದಲಾದ ರಾಕ್ಷಸವೀರರ ಮನೆಗಳೆಲ್ಲವನ್ನೂ ತನ್ನ ವಾಲಾಗ್ನಿಯಿಂದ ಸುಟ್ಟುಬಿಟ್ಟನು. ಈ ರೀತಿ ಮಹಾ ಬಲಾಢ್ಯನಾದ ಆ ವಾನರವೀರನು ಆ ಲಂಕಾಪಟ್ಟಣದಲ್ಲಿ ವಿಭೀಷಣನ ಮನೆಯೊಂದನ್ನು ಬಿಟ್ಟು ಉಳಿದ ರಾಕ್ಷಸರ ಮನೆಗಳೆಲ್ಲವನ್ನೂ ಒಂದೊಂದನ್ನಾಗಿ ಸುಟ್ಟುಬಿಟ್ಟನು. ಮಹಾ ವೀರ್ಯವಂತನಾದ ಹನುಮಂತನು ಹೀಗೆ ಕ್ರಮವಾಗಿ ಪ್ರತಿ ರಾಕ್ಷಸನ ಮನೆಯನ್ನೂ ಸುಡುತ್ತ ಕಡೆಗೆ ರಾವಣಾಸುರನ ಅರಮನೆಯ ಕಡೆಗೆ ಬಂದನು. ವಿವಿಧ ರತ್ನನಿಚಯಗಳಿಂದಲಂಕೃತವಾಗಿ, ಮೇರುಮಂದರ ಪರ್ವತಗಳಿಗೆ ಸಮಾನವಾದ ಎತ್ತರವುಳ್ಳದಾಗಿ, ಸಮಸ್ತ ವಿಧಗಳಾದ ಮಂಗಳದ್ರವ್ಯಗಳಿಂದ

ಪ್ರದೀಪ್ತಮಗ್ನಿಮುತ್ಸೃಜ್ಯ ಲಾಂಗೂಲಾಗ್ರೇ ಪ್ರತಿಷ್ಠಿತಂ । ನನಾದ ಹನುಮಾ ನ್ವೀರೋ ಯುಗಾಂತಜಲದೋ ಯಥಾ ॥೨೦॥ ಶ್ವಸನೇನಚ ಸಂಯೋಗಾದತಿವೇಗೋ ಮಹಾಬಲಃ । ಕಾಲಾಗ್ನಿರಿವ ಜಜ್ವಾಲ ಪ್ರಾವರ್ಧತ ಹುತಾಶನಃ ॥ ೨೧ ॥ ಪ್ರದೀಪ್ತ ಮಗ್ನಿಂ ಪವನಸ್ತೇಷು ವೇಶ್ಮಸ್ವಚಾರಯತ್ । ಅಭೂಚ್ಛ್ವಸನಸಂಯೋಗಾದತಿವೇಗೋ ಹುತಾಶನಃ ॥ ೨೨ ॥ ತಾನಿ ಕಾಂಚನಜಾಲಾನಿ ಮುಕ್ತಾಮಣಿಮಯಾನಿಚ । ಭವನಾ ನ್ಯವಶೀರ್ಯಂತ ರತ್ನವಂತಿ ಮಹಾಂತಿಚ ॥ ೨೩ ॥ ತಾನಿ ಭಗ್ನವಿಮಾನಾನಿ ನಿಪೇತು ರ್ವಸುಧಾತಲೇ । ಭವನಾನೀವ ಸಿದ್ಧಾನಾಮಂಬರಾತ್ಪುಣ್ಯಸಂಕ್ಷಯೇ ॥ ೨೪ ॥

ಆ ಮನೆಯಲ್ಲಿ, ಲಾಂಗೂಲಾಗ್ರೇ - ಬಾಲದ ತುದಿಭಾಗದಲ್ಲಿ, ಪ್ರತಿಷ್ಠಿತಂ - ಇಡಲ್ಪಟ್ಟ, ಪ್ರದೀಪ್ತಂ - ಉರಿಯುತ್ತಿರುವ, ಅಗ್ನಿಂ - ಅಗ್ನಿಯನ್ನು, ಉತ್ಸೃಜ್ಯ - ಬಿಟ್ಟು, ಯುಗಾಂ....ಥಾ - ಪ್ರಳಯಕಾಲದ ಮೇಘದಂತೆ, ನನಾದ - ಧ್ವನಿಮಾಡಿದನು. ॥೨೦॥ ಮಹಾಬಲಃ - ಮಹಾ ಬಲಿಷ್ಠನಾದ, ಹುತಾಶನಃ- ಅಗ್ನಿಯು, ಶ್ವಸನೇನ - ವಾಯುವಿನೊಂದಿಗೆ, ಸಂಯೋಗಾಚ್ಚ - ಸೇರೋಣದರಿಂದಲೂ, ಅತಿವೇಗಃ- ಮಹಾ ವೇಗವುಳ್ಳವನಾಗಿ, ಪ್ರಾವರ್ಧತ - ವೃದ್ಧಿಹೊಂದಿದನು, ಕಾಲಾಗ್ನಿರಿವ - ಪ್ರಳಯಾಗ್ನಿಯಂತೆ, ಜಜ್ವಾಲ - ದಹಿಸಿದನು. ॥೨೧॥ ಪವನಃ - ವಾಯುವು, ಪ್ರದೀಪ್ತಂ - ಪ್ರಜ್ವಲಿಸುತ್ತಿರುವ, ಅಗ್ನಿಂ- ಬೆಂಕಿಯನ್ನು, ತೇಷುವೇಶ್ಮಸು - ಆ ಮನೆಗಳಲ್ಲಿ, ಅಚಾರಯತ್ - ಚಲಿಸುವಂತೆ ಮಾಡಿದನು, ಹುತಾಶನಃ - ಅಗ್ನಿಯು, ಶ್ವಸ....ತ್ - ವಾಯುಸಂಪರ್ಕದಿಂದ, ಅತಿವೇಗಃ - ಮಹಾ ವೇಗವುಳ್ಳ ದಾಗಿ, ಅಭೂತ್ - ಆಯಿತು. ॥೨೨॥ ಮುಕ್ತಾ....ಚ - ಮುಕ್ತಾರತ್ನವಿಕಾರಗಳಾದ, ಕಾಂಚ....ನಿ- ಸುವರ್ಣದ ಗೊಂಚಲುಗಳುಳ್ಳ, ರತ್ನವಂತಿ-ರತ್ನಗಳುಳ್ಳ, ಮಹಾಂತಿ-ದೊಡ್ಡವಾದ, ತಾನಿಭವಾನಿಚ- ಆ ಮನೆಗಳೂ ಸಹ, ಅವಶೀರ್ಯಂತ - ಸೀಳಿಹೋದವು. ॥ ೨೩ ॥ ಭಗ್ನ....ನಿ - ಮುರುದುಹೋದ ಮಹಡಿಗಳುಳ್ಳ, ತಾನಿ - ಆ ಮನೆಗಳು, ಪುಣ್ಯ....ಯೇ - ಪುಣ್ಯಕ್ಷಯವಾಗಲು, ಅಂಬರಾತ್ - ಅಂತರಿಕ್ಷದಿಂದ, ಸಿದ್ಧಾನಾಂ - ಸಿದ್ಧಪುರುಷರ, ಭವನಾನೀವ - ಮನೆಗಳಂತೆ, ವಸುಧಾತಲೇ -

---

ತುಂಬಿ ಶೋಭಿಸುತ್ತಿರುವುದಾಗಿ, ಲಂಕಾಪಟ್ಟಣದಲ್ಲಿರುವ ಎಲ್ಲ ಮನೆಗಳಿಗೂ ಶ್ರೇಷ್ಠವಾಗಿ ಕಂಗೊಳಿಸುತ್ತಿರುವ ಆ ಮನೆಗೂ ತನ್ನ ವಾಲಾಗ್ನಿಯನ್ನಿಟ್ಟು ಪ್ರಳಯಕಾಲದ ಮಹಾ ಮೇಘದಂತೆ ಬಹು ಭಯಂಕರವಾಗಿ ಗರ್ಜಿಸಿದನು. ॥ ೧೧–೨೦ ॥ ಆ ಸಮಯದಲ್ಲಿ, ಅದು ವರೆಗೂ ರಾವಣನಿಗೆ ಹೆದರಿ ಹಿಮ್ಮೆಟ್ಟಿದ್ದ ಅಗ್ನಿಯೂ, ವಾಯುವೂ ಒಟ್ಟುಗೂಡಿ ನಿರ್ಭಯ ವಾಗಿ ಅವನಮೇಲೆ ಹಗೆತೀರಿಸಿಕೊಳ್ಳಲೋಸುಗವೋ ಎಂಬಂತೆ ಮಹಾ ವೇಗವನ್ನವಲಂಬಿಸಿ, ಮಹಾ ಬಲಿಷ್ಠವಾದ ಪ್ರಳಯಕಾಲಾಗ್ನಿಯಂತೆ ಬಹಳವಾಗಿ ವೃದ್ಧಿಗೊಂಡು ಸುಡುತ್ತಿದ್ದರು. ವಾಯುವೂ ಕೂಡ ಉರಿಯುತ್ತಿದ್ದ ಅಗ್ನಿಯನ್ನು ಮನೆಯಿಂದ ಮನೆಗೆ ಹರಡಿಸುತ್ತಿದ್ದಿತು. ವಾಯುಸಂಯೋಗದಿಂದ ಬೆಂಕಿಯು ಅತಿ ತೀವ್ರವಾಗಿ ಉರಿಯಲಾರಂಭಿಸಿತು. ಭಂಗಾರದ ಕಿಟಕಿಗಳಿಂದಲೂ, ಮುತ್ತಿನ ಕುಸುರಿಗಳಿಂದಲೂ, ರತ್ನಮಯವಾದ ವಿವಿಧಾಲಂಕಾರ ಗಳಿಂದಲೂ ಶೋಭಿಸುತ್ತಿದ್ದ ಆ ಲಂಕಾನಗರದ ದೊಡ್ಡ ದೊಡ್ಡ ಮನೆಗಳೆಲ್ಲವೂ ಸುಟ್ಟು ಬಿರಿದು ಹೋಗುತ್ತಿದ್ದವು. ಈ ಪ್ರಕಾರವಾಗಿ ಬೆಂಕಿಯು ವಾಯುವಿನ ಸಂಯೋಗದಿಂದ ಲಂಕಾನಗರವೆಲ್ಲವನ್ನೂ ವ್ಯಾಪಿಸಲು ಪುಣ್ಯವು ಕ್ಷಯಿಸಿದಮೇಲೆ ಭೂಮಿಗೆ ಕಳಚಿಬೀಳುವ ಸಿದ್ಧಪುರುಷರ ವಿಮಾನಗಳಂತೆ, ಅಲ್ಲಿನ ಉಪ್ಪರಿಗೆಗಳೆಲ್ಲವೂ ನೆಲಕ್ಕುರುಳುತ್ತಿದ್ದವು. ಆ

BURNING OF LANKA



लंका दहन

Lakshmi Art, Bombay, 8.

ಸಂಜಜ್ಞೇ ತುಮುಲಶ್ಶಬ್ದೋ ರಾಕ್ಷಸಾನಾಂ ಪ್ರಧಾವತಾಂ । ಸ್ವಗೃಹಸ್ಯ ಪರಿತ್ರಾಣೇ ಭಗ್ನೋತ್ಸಾಹೋರ್ಜಿತಶ್ರಿಯಾಂ ॥ ೨೫ ॥ " ನೂನಮೇಷೋಽಗ್ನಿ ರಾಯಾತಃ ಕಪಿ ರೂಪೇಣ ಹಾ! " ಇತಿ । ಕ್ರಂದಂತ್ಯಸ್ಸಹಸಾ ಪೇತುಃ ಸ್ತನಂಧಯಧರಾಸ್ಸ್ತ್ರಿಯಃ ॥೨೬॥ ಕಾಶ್ಚಿದಗ್ನಿಪರೀತೇಭ್ಯೋ ಹರ್ಮ್ಯೇಭ್ಯೋ ಮುಕ್ತಮೂರ್ಧಜಾಃ । ಪತಂತ್ಯೋ ರೇಜಿರೇಽಭ್ರೇಭ್ಯ ಸೌದಾಮಿನ್ಯ ಇವಾಂಬರಾತ್ ॥ ೨೭ ॥ ವಜ್ರವಿದ್ರುಮವೈಡೂರ್ಯ ಮುಕ್ತಾರಜತಸಂಹಿತಾರ್ ।ವಿಚಿತ್ರಾನ್ಭವನಾರ್ ಧಾತೂರ್ ಸ್ಯಂದಮಾನಾರ್ ನದರ್ಶ ಸಃ

ಭೂಪ್ರದೇಶದಲ್ಲಿ, ನಿಪೇತುಃ - ಬಿದ್ದವು. ॥೨೪॥ ಏಷಃಅಗ್ನಿಃ - ಈ ಬೆಂಕಿಯು, ಕಪಿರೂಪೇಣ-ವಾನರ ರೂಪದಿಂದ, ಆಯಾತಃ-ಬಂದಿದೆ, ನೂನಂ-ನಿಶ್ಚಯವು, ಹಾ-ಕಷ್ಟವು, ಇತಿ-ಇಂತೆಂದು, ಸ್ವಗೃಹಸ್ಯ-ತಮ್ಮ ಮನೆಗಳ, ಪರಿತ್ರಾಣೇ - ಸಂರಕ್ಷಣೆಯ ವಿಷಯದಲ್ಲಿ, ಭಗ್ನೋ....ಯಾಂ - ಮುರುದು ಉತ್ಸಾಹ ಶಕ್ತಿಯೂ ಅಭಿವರ್ಧಿತವಾದ ಸಂಪತ್ತೂ ಉಳ್ಳ, ಪ್ರಧಾವತಾಂ - ಓಡಿಹೋಗುತ್ತಿರುವ, ರಾಕ್ಷಸಾನಾಂ - ರಕ್ಕಸರ, ತುಮುಲಃ ಬಹಳವಾದ, ಶಬ್ದಃ-ಕೂಗು, ಸಂಜಜ್ಞೇ-ಹುಟ್ಟಿತು. ॥೨೫॥ ಸ್ತನಂ...ರಾಃ-ಮಕ್ಕಳನ್ನೆತ್ತಿಕೊಂಡಿರುವ, ಕ್ರಂದಂತ್ಯಃ - ಅಳುತ್ತಿರುವ, ಕಾಶ್ಚಿತ್ಸ್ತ್ರಿಯಃ - ಕೆಲವರು ಹೆಂಗುಸರು, ಮುಕ್ತ ಮೂರ್ಧಜಾಃ - ಕೆದರಿದ ತಲೆಗೂದಲುಗಳುಳ್ಳವರಾಗಿ, ಅಗ್ನಿಪರೀತೇಭ್ಯಃ - ಬೆಂಕಿಯಿಂದ ವ್ಯಾಪ್ತವಾದ, ಹರ್ಮ್ಯೇಭ್ಯಃ - ಮಹಡಿಗಳಿಂದ, ಸಹಸಾ - ಜಾಗ್ರತೆಯಾಗಿ, ಪೇತುಃ - ನೆಲಕ್ಕೆ ಬಿದ್ದರು. ॥ ೨೬ ॥ ಅಂಬರಾತ್-ಮಹಡಿಗಳಿಂದ, ಪತಂತ್ಯಃ-ಬೀಳುತ್ತಿರುವ ಸ್ತ್ರೀಯರು, ಅಭ್ರೇಭ್ಯಃ-ಮೇಘಗಳಿಂದ, ಪತಂತ್ಯಃ-ಬೀಳುತ್ತಿರುವ ಸೌದಾಮಿನ್ಯ ಇವ ಮಿಂಚುಗಳಂತೆ, ರೇಜಿರೇ ಹೊಳೆಯುತ್ತಿದ್ದರು. ॥ ೨೭ ॥ ಸಃ - ಆ ಆಂಜನೇಯನು, ವಜ್ರ....ತಾರ್ - ವಜ್ರಗಳಿಂದಲೂ ಹವಳಗಳಿಂದಲೂ ವೈಡೂರ್ಯಗಳಿಂದಲೂ, ಮುತ್ತುಗಳಿಂದಲೂ, ಬೆಳ್ಳಿಯಿಂದಲೂ ಕೂಡಿರುವ, ವಿಚಿತ್ರಾನ್-ನಾನಾಬಗೆಯಾದ, ಭವನಾರ್ - ಮನೆಗಳನ್ನೂ, ಸ್ಯಂದಮಾನಾರ್ - ಕರಗಿ ಪ್ರವಿಸುತ್ತಿರುವ, ಧಾತೂರ್ - ಸುವರ್ಣಾದಿಗಳನ್ನೂ,

---

ಮನೆಗಳಲ್ಲಿದ್ದ ರಾಕ್ಷಸರೆಲ್ಲರೂ ತಮ್ಮ ತಮ್ಮ ಮನೆಗಳನ್ನುಳಿಸಿಕೊಳ್ಳುವ ವಿಷಯದಲ್ಲಿ ನಿರಾಶರಾಗಿ ಭಯದಿಂದ ತತ್ತಳಿಸಿಹೋಗಿ ದಿಕ್ಕಾಪಾಲಾಗಿ ಓಡುತ್ತಿದ್ದರು. ಆಗ ಅವರೆಲ್ಲರೂ, " ಅಯ್ಯೋ! ಇವನು ಕಪಿಯಲ್ಲ! ಸಾಕ್ಷಾತ್ ಯಜ್ಞೇಶ್ವರನೇ ಈ ಕಪಿರೂಪದಿಂದಿಲ್ಲಿಗೈತಂದು ಪಟ್ಟಣವೆಲ್ಲವೆಲ್ಲವನ್ನೂ ಸುಡುತ್ತಿರುವನು! ಇದರಲ್ಲಿ ಎಷ್ಟಮಾತ್ರಕ್ಕೂ ಸಂಶಯವಿಲ್ಲವು" ಎಂದು ಕೂಗಿಗೊಳ್ಳುತ್ತಿದ್ದರು. ಎಲ್ಲೆಲ್ಲಿಯೂ ಭಯಂಕರವಾದ ಶಬ್ದವು ಮೊದಲಾಯಿತು. ॥೨೧–೨೫॥ ಹಾಲುಕುಡಿಯುವ ಚಿಕ್ಕಚಿಕ್ಕ ಮಕ್ಕಳನ್ನೆತ್ತಿಕೊಂಡಿರುವ ಕೆಲವರು ರಾಕ್ಷಸಾಂಗನೆಯರು, ಉರಿಯುತ್ತಿರುವ ಮನೆಗಳ ಉಪ್ಪರಿಗೆಗಳಿಂದ, ಆ ಬೆಂಕಿಯ ಬೇಗೆಯನ್ನು ಸಹಿಸಲಾರದೆ, ತಲೆಗೂದಲುಗಳನ್ನು ಬಿರಿಹೊಯ್ದುಕೊಂಡು ಬಹು ಶೀಘ್ರವಾಗಿ ನೆಲಕ್ಕೆ ಬೀಳುತ್ತಿದ್ದರು. ಹೀಗೆ ಮುಗಿಲು ಮುಟ್ಟುತ್ತಿರುವ ಮನೆಗಳುಪ್ಪರಿಗೆಗಳಿಂದ ಕೆಳಕ್ಕೆ ಬೀಳುತ್ತಿದ್ದ ಆ ರಾಕ್ಷಸಸ್ತ್ರೀಯರು ಮೇಘಗಳಿಂದ ಬೀಳುತ್ತಿರುವ ಮಿಂಚಿನ ಬಳ್ಳಿಗಳಂತೊಪ್ಪುತ್ತಿದ್ದರು. ವಜ್ರಗಳಿಂದಲೂ, ವೈಡೂರ್ಯಗಳಿಂದಲೂ, ಹವಳಗಳಿಂದಲೂ, ಮುತ್ತುಗಳಿಂದಲೂ, ಇನ್ನೂ ಅನೇಕ ಬಗೆಯ ರತ್ನಗಳಿಂದಲೂ ಅಲಂಕೃತವಾಗಿ ಸುವರ್ಣರಚಿತವಾಗಿದ್ದ ಆ ಲಂಕಾನಗರದ ಗೃಹಪ್ರಾಸಾದಗಳೆಲ್ಲವೂ, ಬೆಂಕಿಯ ಬೇಗೆನೆ ಕರಗಿ ನೆಲಕ್ಕೆ ಬಿದ್ದು

॥೨೮॥ ನಾಽಗ್ನಿಸ್ತೃಪ್ಯತಿ ಕಾಷ್ಠಾನಾಂ ತೃಣಾನಾಂ ಹರಿಯೂಥಪಃ । ನಾಽಗ್ನೇರ್ನಾಪಿ ವಿಶಸ್ತಾನಾಂ ರಾಕ್ಷಸಾನಾಂ ವಸುಂಧರಾ ॥ ೨೯ ॥ ಕ್ವಚಿತ್ಕಿಂಶುಕಸಂಕಾಶಾಃ ಕ್ವಚಿಚ್ಛಾಲ್ಮಲಿಸನ್ನಿಭಾಃ । ಕ್ವಚಿತ್ಕುಂಕುಮಸಂಕಾಶಾ ಶಿಖಾ ವಹ್ನೇಶ್ಚಕಾಶಿರೇ ॥ ೩೦ ॥ ಹನೂಮತಾ ವೇಗವತಾ ವಾನರೇಣ ಮಹಾತ್ಮನಾ । ಲಂಕಾಪುರಂ ಪ್ರದಗ್ಧಂ ತದ್ರುದ್ರೇಣ ತ್ರಿಪುರಂ ಯಥಾ ॥ ೩೧ ॥ ತತಸ್ತು ಲಂಕಾಪುರಪರ್ವತಾಗ್ರೇ ಸಮುತ್ಥಿತೋ ಭೀಮಪರಾಕ್ರಮೋಽಗ್ನಿಃ । ಪ್ರಸಾರ್ಯ ಚೂಡಾವಲಯಂ ಪ್ರದೀಪ್ತೋ ಹನೂ

ದದರ್ಶ - ಕಂಡನು. ॥೨೮॥ ಅಗ್ನಿಃ - ಬೆಂಕಿಯು, ಕಾಷ್ಠಾನಾಂ - ಕಟ್ಟಿಗೆಗಳಿಂದಲೂ, ತೃಣಾನಾಂ - ಹುಲ್ಲುಗಳಿಂದಲೂ, ನತೃಪ್ಯತಿ - ತೃಪ್ತಿಹೊಂದಲಿಲ್ಲ, ಹರಿಯೂಥಪಃ - ಆಂಜನೇಯನು, ಅಗ್ನೇಃ - ಬೆಂಕಿಯಿಂದ, ನ - ತೃಪ್ತನಾಗಲಿಲ್ಲ, ವಸುಂಧರಾಪಿ - ಭೂಮಿಯೂ ಸಹ, ವಿಶಸ್ತಾನಾಂ - ಕೊಲ್ಲಲ್ಪಟ್ಟ, ರಾಕ್ಷಸಾನಾಂ - ರಕ್ಕಸರಿಂದ, ನತೃಪ್ಯತಿ - ತೃಪ್ತಿಹೊಂದಲಿಲ್ಲ. ॥ ೨೯ ॥ ವಹ್ನೇಃ-ಅಗ್ನಿಯ, ಕ್ವಚಿಚ್ಛಿಖಾಃ - ಕೆಲವು ಜ್ವಾಲೆಗಳು, ಕಿಂಶು....ಶಾಃ-ಮುತ್ತುಗದ ಹುವ್ವುಗಳಿಗೆ ಸಮಾನಗಳಾಗಿಯೂ, ಕ್ವಚಿತ್ - ಕೆಲವು, ಶಾಲ್ಮಲಿಸನ್ನಿಭಾಃ - ಬೂರಗದ ಹುವ್ವುಗಳಿಗೆ ಸಮಾನವಾದವುಗಳಾಗಿಯೂ, ಕ್ವಚಿತ್ - ಕೆಲವು, ಕುಂಕು....ಶಾಃ - ಕುಂಕುಮೋಪಮಗಳಾಗಿಯೂ, ಚಕಾಶಿರೇ - ಹೊಳೆಯುತ್ತಿದ್ದವು. ॥ ೩೦ ॥ ವೇಗವತಾ - ವೇಗಶಾಲಿಯಾದ, ಮಹಾತ್ಮನಾ - ಮಹಾನುಭಾವನಾದ, ವಾನರೇಣ - ಕಪಿಯಾದ, ಹನೂಮತಾ - ಆಂಜನೇಯನಿಂದ, ತಲ್ಲಂಕಾಪುರಂ - ಆ ಲಂಕಾಪಟ್ಟಣವು, ರುದ್ರೇಣ - ಪರಮೇಶ್ವರನಿಂದ, ತ್ರಿಪುರಂಯಥಾ - ತ್ರಿಪುರಗಳಂತೆ, ದಗ್ಧಂ - ಸುಡಲ್ಪಟ್ಟಿತು. ॥ ೩೧ ॥ ತತಸ್ತು - ಬಳಿಕಲಾದರೆ, ಲಂಕಾ....ಗ್ರೇ - ಲಂಕಾಪಟ್ಟಣಕ್ಕೆ ಆಧಾರವಾದ ಪರ್ವತಶಿಖರದಲ್ಲಿ, ಚೂಡಾವಲಯಂ- ಜ್ವಾಲಾಜಾಲವನ್ನು, ಪ್ರಸಾರ್ಯ - ವಿಸ್ತರಿಸಿ, ಸಮುತ್ಥಿತಃ - ಹುಟ್ಟಿ, ಪ್ರದೀಪ್ತಃ - ಪ್ರಜ್ವಲಿಸುತ್ತಿರುವ, ಭೀಮ....ಮಃ - ಭಯಂಕರ ಸಾಮರ್ಥ್ಯವುಳ್ಳ, ಅಗ್ನಿಃ - ಬೆಂಕಿಯು, ವೇಗವತಾ - ವೇಗ

ಗೈರಿಕಾದಿಧಾತುಗಳನ್ನು ಕಕ್ಕುತ್ತಿರುವುವೊ ಎಂಬಂತೆ ಕಾಣುತ್ತಿರುವುದನ್ನು ಆ ಹನುಮಂತನು ನೋಡಿದನು. ಹೀಗೆ ಸುಡುತ್ತಿರುವುದನ್ನು ನೋಡಿಯೂ, ಕಾಷ್ಠಗಳಿಂದಲೂ, ತೃಣಗಳಿಂದರೂ ಯಜ್ಞೇಶ್ವರನು ತೃಪ್ತಿ ಹೊಂದದಂತೆ ಆ ಮಹಾ ವಾನರನು ತೃಪ್ತಿ ಹೊಂದದವನಾದನು. ಭೂಮಿಯೂ ಸಹ ಬೆಂಕಿಯಿಂದ ಸುಟ್ಟು ಮೃತ್ತಿಯೊಂದಿ ನೆಲಕ್ಕೆ ಬಿದ್ದು ತುಂಬಿಹೋಗಿರುವ ರಾಕ್ಷಸ ಶವಗಳಿಂದಲೂ ತೃಪ್ತಿಯೊಂದಲಿಲ್ಲವು. ಆ ಸಮಯದಲ್ಲಿ ಅಗ್ನಿ ದಗ್ಧವಾದ ಪದಾರ್ಥಗಳ ಸ್ವಭಾವದಿಂದ ಅಗ್ನಿಜ್ವಾಲೆಗಳಲ್ಲಿ ಒಂದು ಕಡೆ ಮುತ್ತುಗದ ಹೂಗಳಕಾಂತಿಯೂ, ಒಂದು ಕಡೆಯಲ್ಲಿ ಬೂರಗದ ಹೂವಿನಕಾಂತಿಯೂ, ಮತ್ತೊಂದು ಕಡೆಯಲ್ಲಿ ಕುಂಕುಮ ಕೇಸರಿಯ ಹೂವಿನಕಾಂತಿಯೂ ಕಾಣುತ್ತಿದ್ದಿತು. ॥ ೨೬–೩೦ ॥ ಮಹಾ ಬಲಪರಾಕ್ರಮಶಾಲಿಯೂ, ವೇಗಶಾಲಿಯೂ ಆದ ಹನುಮಂತನು, "ಹಿಂದೆ ಪರಮೇಶ್ವರನು ತ್ರಿಪುರಗಳನ್ನು ನಾಶಗೊಳಿಸಿದಂತೆ, ಲಂಕಾನಗರವೆಲ್ಲವನ್ನೂ ಸುಟ್ಟು ಹಾಳುಮಾಡಿದನು. ಆ ಸಮಯದಲ್ಲಿ ಮಹಾ ವೇಗವಂತನಾದ ಆಂಜನೇಯನು ಲಂಕಾನಗರವನ್ನು ಸುಟ್ಟ ಬೆಂಕಿಯು ಆ ನಗರಕ್ಕೆ ಆಧಾರವಾದ ತ್ರಿಕೂಟಪರ್ವತದ ಶಿಖರಗಳಲ್ಲಿಯೂ ಕೂಡ ಮಹಾಜ್ವಾಲೆಗಳಿಂದ ಕೂಡಿ ಬಹು ಭಯಂಕರವಾಗಿ ಪ್ರಕಾಶಿಸುತ್ತಿದ್ದಿತು. ಇಷ್ಟೆಯಲ್ಲದೆ, ಆ ಬೆಂಕಿಯು ವಾಯುವಿನ

ಮತಾ ವೇಗವತಾ ವಿಸೃಷ್ಟಃ ॥ ೩೨ ॥ ಯುಗಾಂತಕಾಲಾನಲತುಲ್ಯವೇಗಸ್ಸಮಾರುತೋಽಗ್ನಿರ್ವವೃಧೇ ದಿವಿಸ್ಪೃಕ್ । ವಿಧೂಮರಶ್ಮಿರ್ಭವನೇಷು ಸಕ್ತೋ ರಕ್ಷಶ್ಶರೀರಾಜ್ಯಸಮರ್ಪಿತಾರ್ಚಿಃ ॥ ೩೩ ॥ ಆದಿತ್ಯಕೋಟೀಸದೃಶಸ್ಸುತೇಜಾ ಲಂಕಾಂ ಸಮಸ್ತಾಂ ಪರಿವಾರ್ಯ ತಿಷ್ಠನ್ । ಶಬ್ದೈರನೇಕೈರಶನಿಪ್ರರೂಢೈರ್ಭಿಂದನ್ನಿವಾಂಡಂ ಪ್ರಬಭೌ ಮಹಾಗ್ನಿಃ ॥ ೩೪ ॥ ತತ್ರಾಂಬರಾದಗ್ನಿರತಿಪ್ರವೃದ್ಧೋ ರೂಕ್ಷಪ್ರಭಃ ಕಿಂಶುಕಪುಷ್ಪಚೂಡಃ । ನಿರ್ವಾಣಧೂಮಾಕುಲರಾಜಯಶ್ಚ ನೀಲೋತ್ಪಲಾಭಾಃ ಪ್ರಚಕಾಶಿರೇಽಭ್ರಾಃ ॥ ೩೫ ॥ " ವಜ್ರೀ ಮಹೇಂದ್ರಸ್ತ್ರಿದಶೇಶ್ವರೋವಾ ಸಾಕ್ಷಾದ್ಯ

ಶಾಲಿಯಾದ, ಹನೂಮತಾ - ಆಂಜನೇಯನಿಂದ, (ಗೃಹೇಷು - ಮನೆಗಳಲ್ಲಿ), ವಿಸೃಷ್ಟಃ - ಬಿಡಲ್ಪಟ್ಟಿತು. ॥೩೨॥ ಯುಗಾಂ....ಗಃ - ಪ್ರಳಯಾಗ್ನಿಯ ವೇಗದಂತೆ ವೇಗವುಳ್ಳ, ಸಮಾರುತಃ - ವಾಯುವಿನಿಂದೊಡಗೂಡಿದ, ವಿಧೂಮರಶ್ಮಿಃ - ಹೊಗೆಯಿಲ್ಲದ ಉರಿಯುಳ್ಳ, ರಕ್ಷ....ರ್ಚಿಃ - ರಾಕ್ಷಸರ ದೇಹವೆಂಬ ಘೃತದಿಂದ ಎಬ್ಬಿಸಲ್ಪಟ್ಟ ಜ್ವಾಲೆಯುಳ್ಳ, ಭವನೇಷು - ಮನೆಗಳಲ್ಲಿ, ಸಕ್ತಃ - ಸಂಬಂಧಿಸಿರುವ, ಅಗ್ನಿಃ - ಬೆಂಕಿಯು, ದಿವಿಸ್ಪೃಕ್ - ಅಂತರಿಕ್ಷವನ್ನು ಮುಟ್ಟುತ್ತಿರುವುದಾಗಿ, ವವೃಧೇ - ವೃದ್ಧಿಹೊಂದಿತು. ॥ ೩೩ ॥ ಸಮಸ್ತಾಂಲಂಕಾಂ - ಲಂಕಾಪಟ್ಟಣವನ್ನೆಲ್ಲ, ಪರಿವಾರ್ಯ - ಸುತ್ತಿಕೊಂಡು, ತಿಷ್ಠನ್ - ಇರುವ, ಆದಿ....ಶಃ - ಕೋಟಿಸೂರ್ಯರಿಗೆ ಸಮಾನವಾದ, ಸುತೇಜಾಃ - ಒಳ್ಳೆಯ ತೇಜಸ್ಸುಳ್ಳ, ಮಹಾಗ್ನಿಃ - ಗಾಢಾಗ್ನಿಯು, ಅಶ....ಢೈಃ - ಶಿಡಿಲುಗಳಂತೆ ಹೊಡೆತವುಳ್ಳ, ಅನೇಕೈಃ - ನಾನಾಬಗೆಯಾದ, ಶಬ್ದೈಃ - ಧ್ವನಿಗಳಿಂದ, ಅಂಡಂ - ಬ್ರಹ್ಮಾಂಡವನ್ನು, ಭಿಂದನ್ನಿವ - ಭೇದಿಸುವಂತೆ, ಪ್ರಬಭೌ - ಹೊಳೆಯುತ್ತಿತ್ತು. ॥ ೩೪ ॥ ತತ್ರ - ಆ ಲಂಕಾನಗರದಲ್ಲಿ, ಅಂಬರಾತ್ - ಅಂತರಿಕ್ಷದವರೆಗೂ, ಅತಿಪ್ರವೃದ್ಧಃ - ಬಹು ವೃದ್ಧಿ ಹೊಂದಿದ, ಕಿಂಶು....ಡಃ - ಮುತ್ತುಗದ ಹುವ್ವುಗಳಂತಿರುವ ಶಿಖೆಗಳುಳ್ಳ, ರೂಕ್ಷಪ್ರಭಃ - ಕ್ರೂರವಾದ ಪ್ರಭೆಯುಳ್ಳ, ಅಗ್ನಿಃ-ಬೆಂಕಿಯು, ನಿರ್ವಾ....ಯಃ-ಶಾಂತಿ ಹೊಂದುವ ಸಮಯದಲ್ಲಿ ಹುಟ್ಟಿದ ಹೊಗೆಯಿಂದ ವ್ಯಾಕುಲವಾದ ಬಂತಿಗಳುಳ್ಳ ಕಾರಣ, ನೀಲೋತ್ಪಲಾಭಾಃ - ಕನ್ನೈದಿಲೆಗಳ ಕಾಂತಿಯೋಪಾದಿಯಲ್ಲಿ ಕಾಂತಿಯುಳ್ಳ, ಅಭ್ರಾಶ್ಚ - ಮೇಘಗಳೂ ಸಹ, ಪ್ರಚಕಾಶಿರೇ - ಕಂಗೊಳಿಸಿದವು. ॥ ೩೫ ॥ ತತ್ರ - ಆ ಲಂಕಾಪುರದಲ್ಲಿ, ಅವಶಿಷ್ಟಾಃ - ಉಳಿದಿರುವ, ಬಹವಃ - ಅನೇಕವಾದ, ರಕ್ಷೋಗಣಾಸ್ಸರ್ವೇ - ರಾಕ್ಷಸಸಮೂಹಗಳೆಲ್ಲ, ಸಮೇತ್ಯ -

ಸಂಯೋಗದಿಂದ, ಪ್ರಳಯಕಾಲಾಗ್ನಿಯಂತೆ ಮಹಾ ವೇಗವುಳ್ಳದಾಗಿ ಹೊಗೆಯಿಲ್ಲದೆ ನಿರ್ಮಲವಾದ ಮಹಾ ಜ್ವಾಲೆಗಳಿಂದ ಮುಗಿಲು ಮುಟ್ಟುತ್ತ, ಆ ಲಂಕಾನಗರದಲ್ಲಿನ ಸಮಸ್ತ ಗೃಹಗಳನ್ನೂ ವ್ಯಾಪಿಸಿ ರಾಕ್ಷಸರೆಂಬ ಘೃತಧಾರೆಯಿಂದ ಬಹಳವಾಗಿ ವರ್ಧಿಸುತ್ತಿದ್ದಿತು. ಆ ಸಮಯದಲ್ಲಿ ಆ ಅಗ್ನಿಯು ಕೋಟಿಸೂರ್ಯರ ಕಾಂತಿಯನ್ನು ತಳೆದು, ಮಹಾ ಪ್ರಭಾವದಿಂದ ಲಂಕಾನಗರದೆಲ್ಲೆಡೆಗಳಲ್ಲಿಯೂ ವ್ಯಾಪಿಸಿದುದಾಗಿ ಗುಡುಗಿನ ಶಬ್ದದಂತೆ ಮಹಾ ಭಯಂಕರವಾಗಿ ಧ್ವನಿಮಾಡುತ್ತ ಬ್ರಹ್ಮಾಂಡವನ್ನೇ ಭೇದಿಸುತ್ತಿರುವುದೋ ಎಂಬಂತೆ ಪ್ರಕಾಶಿಸುತ್ತಿದ್ದಿತು. ಬಹು ತೀಕ್ಷ್ಣಗಳಾದವೂ, ಮುತ್ತುಗದ ಹೂಗಳಕಾಂತಿಯುಳ್ಳವೂ ಆದ ಜ್ವಾಲೆಗಳು ಧಗಧಗನುರಿಯುತ್ತ ವೃದ್ಧಿಗೊಂಡು ಅಂತರಿಕ್ಷದವರೆಗೂ ವ್ಯಾಪಿಸಿದವು. ಇಷ್ಟೆಯಲ್ಲದೆ ಆ ಲಂಕಾನಗರದಲ್ಲಿ ಹಿಂದೆಯೇ ಸುಟ್ಟು ಶಾಂತವಾಗುತ್ತಿದ್ದ ಅಗ್ನಿಯ ಧೂಮದಿಂದ ಮುಚ್ಚಿದ ಮೇಘಪಙ್ಕ್ತಿಗಳು ಕನ್ನೈದಿಲೆಯ ಕಾಂತಿಯನ್ನು ಹೊಂದಿ ಹೊಳೆಯುತ್ತಿದ್ದವು. ॥೩೧--೩೫॥

ನೋವಾ ವರುಣೋಽನಿಲೋವಾ । ರುದ್ರೋಽಗ್ನಿರರ್ಕೋ ಧನದಶ್ಚ ಸೋಮೋ ನವಾನರೋಽಯಂ ಸ್ವಯಮೇವ ಕಾಲಃ ‖ ೩೬ ‖ ಕಿಂ ಬ್ರಹ್ಮಣಸ್ಸರ್ವಪಿತಾಮಹಸ್ಯ ಸರ್ವಸ್ಯ ಧಾತುಶ್ಚತುರಾನನಸ್ಯ । ಇಹಾಗತೋ ವಾನರರೂಪಧಾರೀ ರಕ್ಷೋಪ ಸಂಹಾರಕರಃ ಪ್ರಕೋಪಃ? ‖ ೩೭ ‖ ಕಿಂ ವೈಷ್ಣವಂ ವಾ ಕಪಿರೂಪಮೇತ್ಯ ರಕ್ಷೋ ವಿನಾಶಾಯ ಪರಂ ಸುತೇಜಃ? । ಅನಂತಮವ್ಯಕ್ತಮಚಿಂತ್ಯಮೇಕಂ ಸ್ವಮಾಯಯಾ

ಸೇರಿ, ಸಪ್ರಾಣಿಸಂಘಾಂ - ಪ್ರಾಣಿಸಮೂಹಗಳೊಡಗೂಡಿದ, ಸಗೃಹಾಂ - ಮನೆಗಳಿಂದೊಡಗೂಡಿದ, ಸವೃಕ್ಷಾಂ - ವೃಕ್ಷಯುಕ್ತವಾದ, ತಾಂಪುರೀಂ - ಆ ಲಂಕಾಪಟ್ಟಣವನ್ನು, ದಗ್ಧಾಂ - ಸುಡಲ್ಪಟ್ಟುದನ್ನಾಗಿ, ಸಹಸಾ - ಜಾಗ್ರತೆಯಾಗಿ, ಸಮೀಕ್ಷ್ಯ - ಕಂಡು, ಅಯಂ - ಅಗ್ನಿಗೆ ಕಾರಣವಾದ ಇವನು, ವಾನರಃ - ಕಪಿಯು, ನ - ಅಲ್ಲ, ವಜ್ರೀ - ವಜ್ರಾಯುಧವುಳ್ಳ, ತ್ರಿದಶೇಶ್ವರಃ - ದೇವತೆಗಳೊಡೆಯನಾದ, ಮಹೇಂದ್ರೋವಾ - ಇಂದ್ರನೋ, ಯಮೋವಾ - ಯಮನೋ, ವರುಣೋವಾ - ವರುಣನೋ, ಅನಿಲೋವಾ - ವಾಯುವೋ, ರುದ್ರೋವಾ - ರುದ್ರನೋ, ಅಗ್ನಿರ್ವಾ - ಅಗ್ನಿಯೋ, ಅರ್ಕೋವಾ - ಸೂರ್ಯನೋ, ಧನದಶ್ಚ - ಕುಬೇರನೋ, ಸೋಮೋವಾ - ಚಂದ್ರನೋ, ಸ್ವಯಮೇವ - ತಾನೇ ಬಂದ, ಕಾಲಃ - ಕಾಲಪುರುಷನೋ ಆಗಿರಬೇಕು, ಸರ್ವ....ಸ್ಯ - ಸಮಸ್ತರಿಗೂ ತಂದೆಯಾದ, ಸರ್ವಸ್ಯ - ಸಮಸ್ತಕ್ಕೂ, ಧಾತುಃ - ಭಾರವಾಹಕನಾದ, ಚತುರಾನನಸ್ಯ - ನಾಲ್ಕು ಮುಖಗಳುಳ್ಳ, ಬ್ರಹ್ಮಣಃ - ಬ್ರಹ್ಮನ, ರಕ್ಷೋ....ರಃ - ರಕ್ಕಸರನ್ನೆಲ್ಲ ಸಂಹಾರ ಮಾಡುತ್ತಿರುವ, ಪ್ರಕೋಪಃ - ಅತಿ ಕ್ರೋಧವು, ವಾನ....ರೀ - ಕಪಿರೂಪವನ್ನು ಧರಿಸಿದ್ದಾಗಿ, ಇಹ - ಇಲ್ಲಿಗೆ, ಆಗತಃಕಿಂ - ಬಂದಿತೋ ಏನೋ, ಅನಂತಂ - ಜನ್ಮಸ್ಥಿತಿಲಯಗಳೆಂಬ ಮೂರೂ ಪರಿಚ್ಛೇದಗಳಿಂದ ರಹಿತನಾದ, ಅವ್ಯಕ್ತಂ - ಚಕ್ಷುರಾದಿ ಕರ್ಮೇಂದ್ರಿಯಗಳಿಗೆ ಅಗೋಚರನಾದ, ಅಚಿಂತ್ಯಂ - ಮನಸ್ಸಿಗೆ ಅವಿಷಯನಾದ, ಏಕಂ - ಎರಡನೆಯವನಿಲ್ಲದಿರುವ, ವೈಷ್ಣವಂ - ವಿಷ್ಣುವಿನ ಸಂಬಂಧವಾದ, ಸುತೇಜೋವಾ - ಮಹಾ ತೇಜಸ್ಸಾದರೂ, (ಯತ್ - ಯಾವದೋ, ತದೇವ - ಆ ತೇಜಸ್ಸೇ,) ಸ್ವಮಾಯಯಾ - ತನ್ನ ಶಕ್ತಿ

ಆಗ ಸಮಸ್ತ ಪ್ರಾಣಿಸಮೂಹಗಳಿಂದಲೂ, ಗೃಹಗಳಿಂದಲೂ ವೃಕ್ಷಗಳಿಂದಲೂ, ಸಮಸ್ತ ವಸ್ತುವಾಹನಾದಿಗಳಿಂದಲೂ ಕೂಡಿದ ಲಂಕಾನಗರವೆಲ್ಲವೂ ಕ್ಷಣಮಾತ್ರದಲ್ಲಿ ದಗ್ಧವಾದುದನ್ನು ನೋಡಿ, ಆ ಪ್ರಳಯಾಗ್ನಿಯಿಂದ ತಪ್ಪಿಸಿಕೊಂಡಿದ್ದ ರಾಕ್ಷಸರೆಲ್ಲರೂ ಅಲ್ಲಲ್ಲಿ ಗುಂಪು ಗುಂಪಾಗಿ ಸೇರಿ, ತಮ್ಮಲ್ಲಿ ತಾವೇ ಹೀಗೆ ಹೇಳಿಕೊಳ್ಳುತ್ತಿದ್ದರು. "ಆಹಾ! ಇವನು ವಾನರನಲ್ಲವು! ಇವನು, ವಜ್ರಾಯುಧವನ್ನು ಧರಿಸಿ ವೃತ್ರಾಸುರನನ್ನು ಸಂಹರಿಸಿದ ದೇವೇಂದ್ರನೋ, ವಾನರರೂಪವನ್ನು ತಾಳಿ ಬಂದ ಸಾಕ್ಷಾತ್ ಯಮನೋ, ವರುಣನೋ, ವಾಯುವೋ, ರುದ್ರನೋ ಅಥವಾ ಯಜ್ಞಪುರುಷನೋ ಸೂರ್ಯನೋ ಅದೂ ಅಲ್ಲದಿದ್ದರೆ, ಕುಬೇರನೋ, ಚಂದ್ರನೋ ಆಗಿರಬೇಕಲ್ಲದೆ ವಾನರನುಮಾತ್ರವಲ್ಲವು. ಇಷ್ಟೇಕೆ ಯೋಚಿಸಬೇಕು. ಸಾಕ್ಷಾತ್ ಯಮನೇ ಈ ರೂಪದಿಂದ ಬಂದಿರುವನು. ಇಲ್ಲವೇ ಸಮಸ್ತ ಲೋಕಗಳಿಗೂ ಪಿತಾಮಹನಾಗಿ, ಸಮಸ್ತವನ್ನೂ ಭರಿಸುವ ಚತುರಾನನನಾದ ಸಾಕ್ಷಾತ್ ಬ್ರಹ್ಮದೇವನೇ ಹೀಗೆ ಕ್ರುದ್ಧನಾಗಿ ರಾಕ್ಷಸಸಮೂಹಗಳೆಲ್ಲವನ್ನೂ ಸಂಹರಿಸಬೇಕೆಂದೆಣಿಸಿ ತನ್ನ ಕೋಪದಿಂದ ಈ ವಾನರರೂಪವನ್ನು ತಾಳಿ ಬಂದಿರಬೇಕು. ಅಥವಾ

ಸಾಂಪ್ರತಮಾಗತಂ ವಾ ? ॥ ೩೮ ॥ " ಇತ್ಯೇವಮೂಚುರ್ಬಹವೋಽವಿಶಿಷ್ಟಾ ರಕ್ಷೋಗಣಾಸ್ತತ್ರ ಸಮೇತ್ಯ ಸರ್ವೇ । ಸಪ್ರಾಣಿಸಂಘಾಂ ಸಗೃಹಾಂ ಸವೃಕ್ಷಾಂ ದಗ್ಧಾಂ ಪುರೀಂ ತಾಂ ಸಹಸಾ ಸಮೀಕ್ಷ್ಯ ॥ ೩೯ ॥ ತತಸ್ತು ಲಂಕಾ ಸಹಸಾ ಪ್ರದಗ್ಧಾ ಸರಾಕ್ಷಸಾ ಸಾಶ್ವರಥಾ ಸನಾಗಾ । ಸಪಕ್ಷಿಸಂಘಾ ಸಮೃಗಾ ಸವೃಕ್ಷಾ ರುರೋದ ದೀನಾ ತುಮುಲಂ ಸಶಬ್ದಂ ॥ ೪೦ ॥ " ಹಾ ತಾತ! ಹಾ ಪುತ್ರಕ! ಕಾಂತಮಿತ್ರ! ಹಾ ಜೀವಿತಂ ಭೋಗಯುತಂ ಸುಪುಣ್ಯಂ । ರಕ್ಷೋಭಿರೇವಂ ಬಹುಧಾ ಬ್ರುವದ್ಭಿಃ ಶಬ್ದಃ ಕೃತೋ ಘೋರತರಸ್ಸುಭೀಮಃ ॥ ೪೧ ॥ ಹುತಾಶನಜ್ವಾಲಸಮಾವೃತಾ ಸಾ ಹತ

ಯಿಂದ, ಕಪಿರೂಪಂ - ವಾನರಾಕೃತಿಯನ್ನು, ಏತ್ಯ - ಹೊಂದಿ, ರಕ್ಷೋವಿನಾಶಾಯ - ರಾಕ್ಷಸರ ನಾಶಕ್ಕೋಸ್ಕರ, ಸಾಂಪ್ರತಂ - ಈಗ, ಆಗತಂವಾಕಿಂ - ಬಂದಿರುವುದೇನೋ, ಇತ್ಯೇವಂ - ಈ ಪರಿಯಾಗಿ, ಊಚುಃ - ನುಡಿದರು. ॥ ೩೭-೩೯ ॥ ತತಸ್ತು - ಆ ಬಳಿಕ, ಸರಾಕ್ಷಸಾ - ರಾಕ್ಷಸರಿಂದೊಡಗೂಡಿದ, ಸಾಶ್ವರಥಾ - ಅಶ್ವಗಳಿಂದಲೂ ರಥಗಳಿಂದಲೂ ಕೂಡಿದ, ಸನಾಗಾ - ಗಜಸಹಿತವಾದ, ಸಪಕ್ಷಿಸಂಘಾ - ಹಕ್ಕಿಗಳ ತಂಡಗಳಿಂದ ಕೂಡಿದ, ಸಮೃಗಾ - ಪ್ರಾಣಿಸಹಿತವಾದ, ಸವೃಕ್ಷಾ - ವೃಕ್ಷಗಳಿಂದೊಡಗೂಡಿದ, ಲಂಕಾ - ಲಂಕಾನಗರವು, ಸಹಸಾ - ಜಾಗ್ರತೆಯಾಗಿ, ಪ್ರದಗ್ಧಾ - ಸುಡಲ್ಪಟ್ಟುದಾದಕಾರಣ, ದೀನಾ - ದುಃಖಿತವಾಗಿ, ತುಮುಲಂ - ಸಂಕುಲವಾಗಿ, ಸಶಬ್ದಂ - ಶಬ್ದದಿಂದೊಡಗೂಡಿದಂತೆ, ರುರೋದ - ರೋದಿಸಿತು. ॥ ೪೦ ॥ ಹೇ ತಾತ - ಎಲೈ ತಂದೆಯೇ, ಹಾ - ಕಷ್ಟವು, ಹೇ ಪುತ್ರ - ಎಲೈ ಮಗನೇ, ಹಾ - ವಿಷಾದವು, ಹೇ ಕಾಂತ - ಎಲೈ ಪ್ರಿಯನೇ, ಹಾ - ಕಷ್ಟವು, ಹಾ ಮಿತ್ರ - ಅಯ್ಯೋ ಮಿತ್ರನೇ, ಜೀವಿತಂ - ಪ್ರಾಣವು, (ಗತಂ - ಹೋಯಿತು,) ಹಾ - ಕಷ್ಟವು, ಭೋಗಯುತಂ - ಸುಖದಿಂದೊಡಗೂಡಿದ, ಸುಪುಣ್ಯಂ - ಅತಿಶಯವಾಗಿ ಸಂಪಾದಿಸಿದ ಪುಣ್ಯವು, (ಗತಂ - ಹೋಯಿತು,) ಹಾ - ಕಷ್ಟವು, ಏವಂ - ಈ ಪ್ರಕಾರವಾಗಿ, ಬಹುಧಾ - ಬಗೆಬಗೆಯಾಗಿ, ಬ್ರುವದ್ಭಿಃ - ಹೇಳುತ್ತಿರುವ, ರಕ್ಷೋಭಿಃ - ರಕ್ಕಸರಿಂದ, ಘೋರತರಃ - ಬಹು ತೀವ್ರವಾದ ಕಾರಣ, ಸುಭೀಮಃ - ಬಹಳ ಭಯಂಕರವಾದ, ಶಬ್ದಃ - ಧ್ವನಿಯು, ಕೃತಃ - ಮಾಡಲ್ಪಟ್ಟಿತು. ॥ ೪೧ ॥

ಅನಂತವೂ, ಇಂದ್ರಿಯಗಳಿಗೆ ಅಗೋಚರವೂ, ಮನಸ್ಸಿನಿಂದಲೂ ಊಹಿಸಲಶಕ್ಯವೂ, ಅದ್ವಿತೀಯವೂ ಆದ ವೈಷ್ಣವತೇಜವು ರಾಕ್ಷಸನಾಶಕ್ಕಾಗಿ ತನ್ನ ಮಾಯೆಯಿಂದ ಈ ವಾನರರೂಪವನ್ನು ಧರಿಸಿ ಬಂದಿರಬೇಕು." ಈ ರೀತಿಯಾಗಿ ರಾಕ್ಷಸರೆಲ್ಲರೂ ಗುಂಪುಗೂಡಿ ತಮ್ಮತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿರಲು ಲಂಕಾನಗರವೆಲ್ಲವೂ, ಸಮಸ್ತ ರಾಕ್ಷಸಸಮೂಹಗಳಿಂದಲೂ, ಗಜತುರಗಾದಿಗಳಿಂದಲೂ, ಸಮಸ್ತ ಪಕ್ಷಿನಿಚಯಗಳಿಂದಲೂ, ಗೃಹಗಳಿಂದಲೂ, ವೃಕ್ಷಸಮೂಹಗಳಿಂದಲೂ ಧಗಧಗನೆ ಉರಿಯುತ್ತಿದ್ದಿತು. ॥ ೩೭-೪೦ ॥ ಆ ಸಮಯದಲ್ಲಿ ಬೆಂಕಿಯ ಬೇಗೆಯನ್ನು ಸಹಿಸಲಾರದೆ ಪರಿತಪಿಸುತ್ತಿದ್ದ ಆ ಆ ಪ್ರಾಣಿಸಮೂಹಗಳು ರೋದಿಸುತ್ತಿದ್ದ ಅತಿ ದೀನವಾದ ರೋದನಧ್ವನಿಯು ಕೇಳಿಬರುತ್ತಿದ್ದಿತು. ಧಗಧಗನೆ ಉರಿಯುತ್ತಿರುವ ಆ ಬೆಂಕಿಗೆ ಸಿಕ್ಕಿ ಬೆಂದು ಸಾಯುತ್ತಿದ್ದ ರಾಕ್ಷಸರೆಲ್ಲರೂ ತಮ್ಮ ತಂದೆತಾಯಿಗಳನ್ನೂ, ಬಂಧುಬಳಗದವರನ್ನೂ, ಪುತ್ರಮಿತ್ರಕಳತ್ರಾದಿಗಳನ್ನೂ ಸ್ಮರಿಸಿಕೊಂಡು; "ಹಾ ತಂದೆಯೇ! ಅಯ್ಯೋ ಮಗನೇ! ಅಕಟ ಪ್ರಾಣಕಾಂತ! ಅಯ್ಯೋ ಮಿತ್ರನೇ! ಅಯ್ಯಯ್ಯೋ! ಭೋಗಭಾಗ್ಯಗಳೊಡಗೂಡಿದ ಜೀವಿತವೇ! ಪ್ರಾಣಗಳು ಹೋಗುತ್ತಿರುವ

ಪ್ರವೀರಾ ಪರಿವೃತ್ತಯೋಧಾ । ಹನೂಮತಃ ಕ್ರೋಧಬಲಾಭಿಭೂತಾ ಬಭೂವ ಶಾಪೋಪಹತೇವ ಲಂಕಾ ॥ ೪೨ ॥ ಸಸಂಭ್ರಮಸ್ತ್ರಸ್ತವಿಷಣ್ಣರಾಕ್ಷಸಾಂ ಸಮುಜ್ಜ್ವಲಜ್ಜ್ವಲಹುತಾಶನಾಂಕಿತಾಂ । ದದರ್ಶ ಲಂಕಾಂ ಹನುಮಾನ್ಮಹಾಮನಾಸ್ಸ್ವಯಂಭುಕೋಪೋಪಹತಾಮಿವಾವನಿಂ ॥ ೪೩ ॥ ಭಙ್ಕ್ತ್ವಾ ವನಂ ಪಾದಪರತ್ನಸಂಕುಲಂ ಹತ್ವಾತು ರಕ್ಷಾಂಸಿ ಮಹಾಂತಿ ಸಂಯುಗೇ । ದಗ್ಧ್ವಾ ಪುರೀಂ ತಾಂ ಗೃಹರತ್ನಮಾಲಿನೀಂ ತಸ್ಥೌ ಹನೂಮಾನ್ಪವನಾತ್ಮಜಃ ಕಪಿಃ ॥ ೪೪ ॥ ತ್ರಿಕೂಟಶೃಂಗಾಗ್ರತಲೇ ವಿಚಿತ್ರೇ ಪ್ರತಿಷ್ಠಿತೋ ವಾನರರಾಜಸಿಂಹಃ । ಪ್ರದೀಪ್ತಲಾಂಗೂಲಕೃತಾರ್ಚಿಮಾಲೀ

ಹನೂಮತಃ - ಆಂಜನೇಯನ, ಕ್ರೋಧ....ತಾ - ಕೋಪಬಲದಿಂದ ತಿರಸ್ಕರಿಸಲ್ಪಟ್ಟ, ಹುತಾ....ತಾ - ಅಗ್ನಿಜ್ವಾಲೆಗಳಿಂದ ವ್ಯಾಪ್ತವಾದ, ಹತಪ್ರವೀರಾ - ಮೃತರಾದ ಶೂರರುಳ್ಳ, ಪರಿ....ಧಾ - ಸುತ್ತುವರೆದ ಭಟರುಳ್ಳ, ಸಾಲಂಕಾ - ಆ ಲಂಕಾಪಟ್ಟಣವು, ಶಾಪೋಪಹತೇವ - ಶಾಪದಿಂದ ಹೊಡೆಯಲ್ಪಟ್ಟಂತೆ, ಬಭೂವ - ಆಯಿತು. ॥ ೪೨ ॥ ಮಹಾಮನಾಃ - ಮಹಾ ಮನಸ್ವಿಯಾದ, ಸಹನುಮಾನ್ - ಆ ಆಂಜನೇಯನು, ಸಸಂಭ್ರಮಃ - ತ್ವರೆಯಿಂದ ಕೂಡಿ, ತ್ರಸ್ತ....ಸಾಂ - ಭಯಗೊಂಡು ಸುಮ್ಮನಿರುವ ರಾಕ್ಷಸರುಳ್ಳ, ಸಮು....ತಾಂ - ಜ್ವಾಲಾಯಮಾನವಾದ ಉರಿಯುಳ್ಳ ಅಗ್ನಿಯಿಂದ ಗುರ್ತುಳ್ಳದಾಗಿ ಮಾಡಲ್ಪಟ್ಟ, ಲಂಕಾಂ - ಲಂಕಾಪಟ್ಟಣವನ್ನು, ಸ್ವಯಂ....ತಾಂ - ಭಗವಂತನ ಕ್ರೋಧದಿಂದ ಸಂಹರಿಸಲ್ಪಟ್ಟ, ಅವನಿಮಿವ - ಭೂಮಿಯನ್ನಂತೆ, ದದರ್ಶ - ಕಂಡನು. ॥ ೪೩ ॥ ಕಪಿಃ - ವಾನರನಾದ, ಪವನಾತ್ಮಜಃ - ವಾಯುಪುತ್ರನಾದ, ಹನೂಮಾನ್ - ಆಂಜನೇಯನು, ಪಾದ....ಲಂ - ವೃಕ್ಷಶ್ರೇಷ್ಠಗಳಿಂದ ವ್ಯಾಪ್ತವಾದ, ವನಂ - ಅಶೋಕವನವನ್ನು, ಭಙ್ಕ್ತ್ವಾ - ಭಗ್ನಮಾಡಿ, ಸಂಯುಗೇತು - ಯುದ್ಧದಲ್ಲಿಯಾದರೆ, ಮಹಾಂತಿ - ಬಲಿಷ್ಟರಾದ, ರಕ್ಷಾಂಸಿ - ರಕ್ಕಸರನ್ನು, ಹತ್ವಾ - ಸಂಹರಿಸಿ, ಗೃಹ....ನೀಂ - ಉತ್ತಮ ಮನೆಗಳಿಂದೊಪ್ಪುತ್ತಿರುವ, ತಾಂಪುರೀಂ - ಆ ಲಂಕಾಪಟ್ಟಣವನ್ನು, ದಗ್ಧ್ವಾ - ದಹಿಸಿ, ತಸ್ಥೌ - ಸುಮ್ಮನಾದನು. ॥೪೪॥ ವಿಚಿತ್ರೇ - ಆಶ್ಚರ್ಯಕರವಾದ, ತ್ರಿಕೂ....ಲೇ - ತ್ರಿಕೂಟಪರ್ವತಶಿಖರದ ತುದಿಭಾಗದಲ್ಲಿ, ಪ್ರತಿಷ್ಠಿತಃ - ಇರುವ, ವಾನ....ಹಃ - ಕಪಿಯೂಥಪಶ್ರೇಷ್ಠ

ವಲ್ಲಾ ! ಏನುಮಾಡಲಿ, ಎತ್ತಹೋಗಲಿ ” ಎಂದು ವಿಧವಿಧವಾಗಿ ದುಃಖಿಸುತ್ತಿದ್ದರು. ಆ ಸಮಯದಲ್ಲಿ ಲಂಕಾನಗರವೆಲ್ಲವೂ ಹನುಮಂತನ ಕೋಪಾನಲನಿಂದ ಸಂಪೂರ್ಣವಾಗಿ ದಗ್ಧವಾಗಿ ಅಗ್ನಿಜ್ವಾಲೆಗಳಿಂದ ತುಂಬಿ, ಸಂಹೃತರಾದ ರಾಕ್ಷಸವೀರರುಳ್ಳುದಾಗಿಯೂ, ಹಿಮ್ಮೆಟ್ಟಿ ಓಡಿಹೋದ ಮತ್ತೆ ಕೆಲವರು ರಾಕ್ಷಸರುಳ್ಳುದಾಗಿಯೂ, ಶಾಪಹತವಾದಂತೆ ಕಾಣುತ್ತಿದ್ದಿತು. ಆಗ ಪೂಜ್ಯನಾದ ಆಂಜನೇಯನು, ದಿಗ್ಭ್ರಾಂತರಾದವರೂ, ಭಯಚಕಿತರಾದವರೂ, ಬಹಳ ದುಃಖಗೊಂಡವರೂ ಆದ ರಾಕ್ಷಸರಿಂದಲೂ, ಅಗ್ನಿಜ್ವಾಲೆಗಳಿಂದಲೂ ಕೂಡಿ ಪ್ರಳಯಕಾಲದಲ್ಲಿ ಬ್ರಹ್ಮದೇವನ ಕೋಪದಿಂದ ದಗ್ಧವಾದ ಅಖಂಡ ಭೂಮಂಡಲದಂತೆ ಕಾಣುತ್ತಿದ್ದ ಲಂಕಾಪಟ್ಟಣವನ್ನು ನೋಡಿದನು. ಈ ರೀತಿ ಆ ಮಾರುತಿಯು ಮಹಾ ಶ್ರೇಷ್ಠವಾದ ವೃಕ್ಷಗಳಿಂದ ತುಂಬಿದ್ದ ಅಶೋಕವನವನ್ನು ಭಂಗಗೊಳಿಸಿ, ಯುದ್ಧದಲ್ಲಿ ಅನೇಕ ರಾಕ್ಷಸವೀರರನ್ನೆಲ್ಲ ಸಂಹರಿಸಿ, ಅತ್ಯುನ್ನತ ಸೌಧಗಳುಳ್ಳ ಭವನಶ್ರೇಷ್ಠಗಳಿಂದ ನಿಬಿಡಿತವಾದ ಲಂಕಾನಗರವೆಲ್ಲವನ್ನೂ ಸುಟ್ಟು ಅಷ್ಟರಲ್ಲಿ ತೃಪ್ತಿಪಟ್ಟು ಸುಮ್ಮನಾದನು. ಆಗ ತ್ರಿಕೂಟಪರ್ವತದ ಶಿಖರವನ್ನೇರಿ ವಾಲಾಗ್ರದಲ್ಲಿ ಧಗಧಗನುರಿಯುತ್ತಿ

ವ್ಯರಾಜತಾದಿತ್ಯ ಇವಾಂಶುಮಾಲೀ ॥ ೪೫ ॥ ಸ ರಾಕ್ಷಸಾಂಸ್ತಾನ್ಸುಬಹೂಂಶ್ಚ ಹತ್ವಾ ವನಂಚ ಭಙ್ಕ್ತ್ವಾ ಬಹುಪಾದಪಂ ತತ್ । ವಿಸೃಜ್ಯ ರಕ್ಷೋಭವನೇಷು ಚಾಗ್ನಿಂ ಜಗಾಮ ರಾಮಂ ಮನಸಾ ಮಹಾತ್ಮಾ ॥ ೪೬ ॥ ತತಸ್ತು ತಂ ವಾನರವೀರಮುಖ್ಯಂ ಮಹಾಬಲಂ ಮಾರುತತುಲ್ಯವೇಗಂ । ಮಹಾಮತಿಂ ವಾಯುಸುತಂ ವರಿಷ್ಠಂ ಪ್ರತುಷ್ಟುವುರ್ದೇವಗಣಾಶ್ಚ ಸರ್ವೇ ॥ ೪೭ ॥ ಭಙ್ಕ್ತ್ವಾ ವನಂ ಮಹಾತೇಜಾ ಹತ್ವಾ ರಕ್ಷಾಂಸಿ ಸಂಯುಗೇ । ದಗ್ಧ್ವಾ ಲಂಕಾಪುರೀಂ ರಮ್ಯಾಂ ರರಾಜ ಸ ಮಹಾಕಪಿಃ

ನಾದ ಆಂಜನೇಯನು, ಪ್ರದೀ....ಲೀ - ಪ್ರಜ್ವಲಿಸುತ್ತಿರುವ ಲಾಂಗೂಲದಲ್ಲಿ ಇಡಲ್ಪಟ್ಟ ಜ್ವಾಲೆಯುಳ್ಳವನಾಗಿ, ಅಂಶುಮಾಲೀ - ತೇಜೋಮಾಲಿಕೆಯುಳ್ಳ, ಆದಿತ್ಯಇವ - ಸೂರ್ಯನಂತೆ, ವ್ಯರಾಜತ- ಹೊಳೆಯುತ್ತಿದ್ದನು. ॥ ೪೫ ॥ ಸಮಹಾತ್ಮಾ - ಮಹಾನುಭಾವನಾದ ಆ ಆಂಜನೇಯನು, ಸುಬಹೂನ್- ಅನೇಕರಾದ, ತಾನ್‌ರಾಕ್ಷಸಾನ್ - ಆ ರಾಕ್ಷಸರನ್ನು, ಹತ್ವಾ - ಸಂಹರಿಸಿ, ಬಹುಪಾದಪಂ - ಅನೇಕ ವೃಕ್ಷಗಳುಳ್ಳ, ತದ್ವನಂಚ - ಆ ಅಶೋಕವನವನ್ನೂ ಕೂಡ, ಭಙ್ಕ್ತ್ವಾ - ಮುರಿದು, ರಕ್ಷೋಭವನೇಷು - ರಕ್ಕಸರ ಮನೆಗಳಲ್ಲಿ, ಅಗ್ನಿಂಚ - ಯಜ್ಞೇಶ್ವರನನ್ನೂ ಸಹ, ವಿಸೃಜ್ಯ - ಬಿಟ್ಟು, ರಾಮಂ - ಶ್ರೀರಾಮನನ್ನು, ಮನಸಾ - ಮನಸ್ಸಿನಿಂದ, ಜಗಾಮ - ಹೊಂದಿದನು. ॥ ೪೬ ॥ ತತಸ್ತು - ಆ ಬಳಿಕ, ಸರ್ವೇ - ಸಮಸ್ತರಾದ, ದೇವಗಣಾಶ್ಚ - ದೇವತಾಸಮೂಹಗಳೂ, ವಾನ....ಖ್ಯಂ - ಕಪಿಶೂರರಲ್ಲಿ ಶ್ರೇಷ್ಠನಾದ, ಮಹಾಬಲಂ - ಬಹು ಬಲಾಢ್ಯನಾದ, ಮಾರು....ಗಂ - ವಾಯುಸದೃಶವಾದ ವೇಗವುಳ್ಳ, ಮಹಾಮತಿಂ - ಮಹಾ ಬುದ್ಧಿಶಾಲಿಯಾದ, ವಾಯುಸುತಂ - ವಾಯುಪುತ್ರನಾದ, ವರಿಷ್ಠಂ - ಶ್ರೇಷ್ಠನಾದ, ತಂ - ಆ ಆಂಜನೇಯನನ್ನು, ಪ್ರತುಷ್ಟುವುಃ - ಸ್ತುತಿಸಿದರು. ॥ ೪೭ ॥ ಮಹಾತೇಜಾಃ - ಮಹಾ ತೇಜಸ್ವಿಯಾದ, ಸಮಹಾಕಪಿಃ - ಆ ಮಹಾ ವಾನರನು, ವನಂ - ಉದ್ಯಾನವನ್ನು, ಭಙ್ಕ್ತ್ವಾ - ಭಂಗಮಾಡಿ, ಸಂಯುಗೇ - ಯುದ್ಧದಲ್ಲಿ, ರಕ್ಷಾಂಸಿ - ರಕ್ಕಸರನ್ನು, ಹತ್ವಾ - ಸಂಹರಿಸಿ, ರಮ್ಯಾಂ - ಸೊಗಸಾದ, ಲಂಕಾಂಪುರೀಂ - ಲಂಕಾಪಟ್ಟಣವನ್ನು, ದಗ್ಧ್ವಾ - ಸುಟ್ಟು, ರರಾಜ - ಕಂಗೊಳಿಸಿದನು. ॥ ೪೮ ॥ ತತ್ರ - ಆ ಸಮಯದಲ್ಲಿ, ಸಗಂಧರ್ವಾಃ - ಗಂಧರ್ವರಿಂದೊಡಗೂಡಿದ,

---

ರುವ ಅಗ್ನಿಜ್ವಾಲೆಗಳಿಂದ ಕೂಡಿದ್ದ ಆ ವಾನರವೀರನು ಕಿರಣಪುಂಜಗಳೊಡಗೂಡಿ ಉದಯಾದ್ರಿಯಲ್ಲಿರುವ ದಿನಕರನಂತೆ ಶೋಭಿಸುತ್ತಿದ್ದನು. ॥ ೪೧–೪೫ ॥ ಹೀಗೆ ಮಹಾ ಪರಾಕ್ರಮಶಾಲಿಯಾದ ಆಂಜನೇಯನು ಅಶೋಕವನವನ್ನು ಭಂಗಗೊಳಿಸಿ, ಅನೇಕ ರಾಕ್ಷಸವೀರರನ್ನು ಸಂಹರಿಸಿ, ರಾಕ್ಷಸರ ಮನೆಗಳಿಗೆಲ್ಲ ಬೆಂಕಿಯನ್ನಿಟ್ಟು, ಸಮಸ್ತ ಕಾರ್ಯಗಳನ್ನೂ ನೆರವೇರಿಸಿದವನಾಗಿ ಶ್ರೀರಾಮನ ಬಳಿಗೈದಲು ಮನಸ್ಸುಮಾಡಿದನು. ಆಗ ವಾನರಶ್ರೇಷ್ಠನೂ, ವಾಯುಪುತ್ರನೂ, ಮಹಾ ಬಲಿಷ್ಠನೂ, ವಾಯುಸಮಾನವಾದ ವೇಗವುಳ್ಳವನೂ ಆದ ಆ ಹನುಮಂತನನ್ನು ನೋಡಿ ಸಮಸ್ತ ದೇವತಾಸಮೂಹಗಳೂ, "ಆಹಾ! ಮಹಾ ತೇಜಸ್ವಿಯಾದ ಈ ವಾನರವೀರನು ಅಶೋಕವನವನ್ನು ಭಂಗಗೊಳಿಸಿ, ಯುದ್ಧದಲ್ಲಿ ಅಸಂಖ್ಯಾತ ರಾಕ್ಷಸವೀರರನ್ನು ಮಡಿಯಿಸಿ, ಅತಿ ರಮ್ಯವಾದ ಈ ಲಂಕಾನಗರವೆಲ್ಲವನ್ನೂ ಸುಟ್ಟು ಮಹದದ್ಭುತಕಾರ್ಯವನ್ನು ಮಾಡಿದನು. ಆಹಾ! ಇವನ ಧೈರ್ಯ, ಸ್ಥೈರ್ಯ, ಪರಾಕ್ರಮಗಳೂ, ಇವನತೇಜಸ್ಸೂ, ಇವನ ವೀರ್ಯವೂ ಅತ್ಯದ್ಭುತವಾದುವು." ಎಂದು ತಂತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತ ಆತನನ್ನು ಸ್ತುತಿಸುತ್ತಿದ್ದವು. ಆ ಮಹಾದ್ಭುತವನ್ನು ನೋಡಲು

॥ ೪೮ ॥ ತತ್ರ ದೇವಾಸ್ಸಗಂಧರ್ವಾಸ್ಸಿದ್ಧಾಶ್ಚ ಪರಮರ್ಷಯಃ । ದೃಷ್ಟ್ವಾ ಲಂಕಾಂ ಪ್ರದಗ್ಧಾಂ ತಾಂ ವಿಸ್ಮಯಂ ಪರಮಂ ಗತಾಃ ॥ ೪೯ ॥ ತಂ ದೃಷ್ಟ್ವಾ ವಾನರಶ್ರೇಷ್ಠಂ ಹನೂಮಂತಂ ಮಹಾಕಪಿಂ । ಕಾಲಾಗ್ನಿರಿತಿ ಸಂಚಿಂತ್ಯ ಸರ್ವಭೂತಾನಿ ತತ್ರಸುಃ॥೫೦॥

ದೇವಾಶ್ಚ ಸರ್ವೇ ಮುನಿಪುಂಗವಾಶ್ಚ
ಗಂಧರ್ವವಿದ್ಯಾಧರಕಿನ್ನರಾಶ್ಚ ।
ಭೂತಾನಿ ಸರ್ವಾಣಿ ಮಹಾಂತಿ ತತ್ರ
ಜಗ್ಮುಃ ಪರಾಂ ಪ್ರೀತಿಮತುಲ್ಯರೂಪಾಂ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಃಪಂಚಾಶಸ್ಸರ್ಗಃ

ದೇವಾಃ - ದೇವತೆಗಳೂ, ಸಿದ್ಧಾಶ್ಚ - ಸಿದ್ಧರೂ, ಪರಮರ್ಷಯಃ - ಮಹಾ ಮುನಿಗಳೂ, ಪ್ರದಗ್ಧಾಂ- ಸುಡಲ್ಪಟ್ಟ, ತಾಂಲಂಕಾಂ - ಆ ಲಂಕಾಪಟ್ಟಣವನ್ನು, ದೃಷ್ಟ್ವಾ - ಕಂಡು, ಪರಮಂವಿಸ್ಮಯಂ - ಮಹದಾಶ್ಚರ್ಯವನ್ನು, ಗತಾಃ - ಹೊಂದಿದರು. ॥ ೪೯ ॥ ಸರ್ವಭೂತಾನಿ - ಸಮಸ್ತ ಭೂತಗಳೂ, ವಾನರಶ್ರೇಷ್ಠಂ - ಕಪಿಶ್ರೇಷ್ಠನಾದ, ಮಹಾಕಪಿಂ - ಸ್ವಯಂಮಹಾವಾನರನಾದ, ತಂಹನುಮಂತಂ - ಆ ಆಂಜನೇಯನನ್ನು, ದೃಷ್ಟ್ವಾ - ಕಂಡು, ಕಾಲಾಗ್ನಿರಿತಿ - ಪ್ರಳಯಾಗ್ನಿಯೆಂದು, ಸಂಚಿಂತ್ಯ - ಆಲೋಚಿಸಿ, ತತ್ರಸುಃ - ಭೀತಿಗೊಂಡರು. ॥ ೫೦ ॥ ತತ್ರ - ಆ ಲಂಕಾಪಟ್ಟಣದಲ್ಲಿ, ಸರ್ವೇ - ಸಮಸ್ತರಾದ, ದೇವಾಶ್ಚ - ದೇವತೆಗಳೂ, ಮುನಿಪುಂಗವಾಶ್ಚ - ಮುನಿಶ್ರೇಷ್ಠರೂ, ಗಂಧ....ಕ್ನಾಃ - ಗಂಧರ್ವರೂ, ವಿದ್ಯಾಧರರೂ, ಸರ್ಪಗಳೂ, ಯಕ್ಷರೂ, ಸರ್ವಾಣಿ - ಸಮಸ್ತಗಳಾದ, ಮಹಾಂತಿ ಭೂತಾನಿ - ಮಹಾಭೂತಗಳೂ, ಅತುಲ್ಯರೂಪಾಂ - ಅಸದೃಶವಾದ, ಪರಾಂ - ಉತ್ಕೃಷ್ಟವಾದ, ಪ್ರೀತಿಂ - ಸಂತೋಷವನ್ನು, ಜಗ್ಮುಃ - ಹೊಂದಿದರು. ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಃಪಂಚಾಶಸ್ಸರ್ಗಃ

ಅಲ್ಲಿಗೈತಂದಿದ್ದ ದೇವತೆಗಳೂ, ಗಂಧರ್ವರೂ, ಸಿದ್ಧವಿದ್ಯಾಧರರೂ, ಪರಮಪೂಜ್ಯರಾದ ಮಹರ್ಷಿಗಳೂ ಆ ಮಾರುತಿಯ ಕಾರ್ಯಗಳನ್ನು ನೋಡಿ ಆಶ್ಚರ್ಯಪಟ್ಟರು. ಸಮಸ್ತ ಭೂತಗಳೂ ವಾನರೋತ್ತಮನಾದ ಆಂಜನೇಯನನ್ನು ನೋಡಿ ಪ್ರಳಯಕಾಲದ ದಾವಾಗ್ನಿಯನ್ನಾಗಿ ಭಾವಿಸಿ ಮಹಾ ಭಯವನ್ನು ಹೊಂದಿದವು. ದೇವತೆಗಳೂ, ಗಂಧರ್ವರೂ, ವಿದ್ಯಾಧರರೂ, ಪನ್ನಗರೂ, ಯಕ್ಷರೂ, ಮಹರ್ಷಿಗಳೂ, ಸಮಸ್ತ ಭೂತಗಳೂ ಲಂಕಾನಗರವು ದಗ್ಧವಾದುದನ್ನು ನೋಡಿ ಮಹಾ ಸಂತೋಷಗೊಂಡರು. ॥ ೪೬–೫೧ ॥

ಇಂತಿದು ಹನುಮತ್ಕೃತ ಲಂಕಾದಹನ ವೃತ್ತಾಂತವೆಂಬ
ಐವತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಪಂಚಪಂಚಾಶಸ್ಸರ್ಗಃ

ಲಂಕಾಂ ಸಮಸ್ತಾಂ ಸಂದೀಪ್ಯ ಲಾಂಗೂಲಾಗ್ನಿಂ ಮಹಾಬಲಃ । ನಿರ್ವಾಪಯಾಮಾಸ ತದಾ ಸಮುದ್ರೇ ಹರಿಸತ್ತಮಃ ॥ ೧ ॥ ಸಂದೀಪ್ಯಮಾನಾಂ ವಿಧ್ವಸ್ತಾಂ ತ್ರಸ್ತರಕ್ಷೋಗಣಾಂ ಪುರೀಂ । ಅವೇಕ್ಷ್ಯ ಹನುಮಾನ್ ಲಂಕಾಂ ಚಿಂತಯಾಮಾಸ ವಾನರಃ ॥೨॥ ತಸ್ಯಾಭೂತ್ಸುಮಹಾಂಸ್ತ್ರಾಸಃ ಕುತ್ಸಾಚಾತ್ಮನ್ಯಜಾಯತ । "ಲಂಕಾಂ ಪ್ರದಹತಾ ಕರ್ಮ ಕಿಂಸ್ವಿತ್ಕೃತ ಮಿದಂ ಮಯಾ ! ॥೩॥ ಧನ್ಯಾಸ್ತೇ ಪುರುಷಶ್ರೇಷ್ಠಾ ಯೇ ಬುದ್ಧ್ಯಾ ಕೋಪಮುತ್ಥಿತಂ । ನಿರುಂಧಂತಿ ಮಹಾತ್ಮಾನೋ ದೀಪ್ತಮಗ್ನಿ

ತದಾ - ಆ ಕಾಲದಲ್ಲಿ, ಮಹಾಬಲಃ - ಬಹು ಬಲಿಷ್ಠನಾದ, ಹರಿಸತ್ತಮಃ - ವಾನರಶ್ರೇಷ್ಠನಾದ ಆಂಜನೇಯನು, ಸಮಸ್ತಾಂಲಂಕಾಂ - ಲಂಕಾಪಟ್ಟಣವನ್ನೆಲ್ಲ, ಸಂದೀಪ್ಯ - ಸುಟ್ಟು, ಲಾಂಗೂಲಾಗ್ನಿಂ - ಬಾಲದಲ್ಲಿರುವ ಬೆಂಕಿಯನ್ನು, ಸಮುದ್ರೇ - ಸಮುದ್ರದಲ್ಲಿ, ನಿರ್ವಾಪಯಾಮಾಸ-ಆರಿಸಿದನು. ॥ ೧ ॥ ವಾನರಃ - ಕಪಿಯಾದ, ಹನುಮಾನ್ - ಆಂಜನೇಯನು, ಸಂದೀಪ್ಯಮಾನಾಂ - ಸುಟ್ಟುಹೋಗುತ್ತಿರುವ, ವಿಧ್ವಸ್ತಾಂ - ಧ್ವಂಸಿಸಲ್ಪಟ್ಟಕಾರಣ, ತ್ರಸ್ತ....ಣಾಂ - ಅಂಜಿದ ರಕ್ಕಸರ ಗುಂಪುಳ್ಳ, ಲಂಕಾಪುರೀಂ - ಲಂಕಾಪಟ್ಟಣವನ್ನು, ಅವೇಕ್ಷ್ಯ - ಕಂಡು, ಚಿಂತಯಾಮಾಸ - ಯೋಚನೆ ಮಾಡಿದನು. ॥ ೨ ॥ ತಸ್ಯ - ಆ ಹನುಮಂತನಿಗೆ, ಸುಮಹಾನ್‌ತ್ರಾಸಃ - ಮಹಾ ಭೀತಿಯು, ಅಭೂತ್-ಆಯಿತು, ಆತ್ಮನಿ-ತನ್ನ ವಿಷಯದಲ್ಲಿ, ಕುತ್ಸಾಚ ನಿಂದೆಯೂ ಸಹ, ಅಜಾಯತ-ಹುಟ್ಟಿತು, ಲಂಕಾಂ - ಲಂಕಾಪುರಿಯನ್ನು, ಪ್ರದಹತಾ - ಸುಡುತ್ತಿರುವ, ಮಯಾ - ನನ್ನಿಂದ, ಇದಂ - ಈ, ಕಿಂಸ್ವಿತ್ಕರ್ಮ - ಎಂತಹ ಕೃತ್ಯವು, ಕೃತಂ - ಮಾಡಲ್ಪಟ್ಟಿತು. ॥೩॥ ಮಹಾತ್ಮಾನಃ - ಮಹಾನುಭಾವರಾದ, ಯೇ - ಯಾರು, ಉತ್ಥಿತಂ ಹುಟ್ಟಿರುವ, ಕೋಪಂ - ಕ್ರೋಧವನ್ನು, ದೀಪ್ತಂ - ಪ್ರಜ್ವಲಿಸುತ್ತಿರುವ, ಅಗ್ನಿಂ - ಯಜ್ಞೇಶ್ವರನನ್ನು, ಅಂಭಸೇವ - ಉದಕದಿಂದಂತೆ, ಬುದ್ಧ್ಯಾ - ಪ್ರಜ್ಞೆಯಿಂದ, ನಿಗೃಹ್ಣಂತಿ - ನಿಗ್ರಹಿಸುವರೋ, ತೇಪುರುಷಶ್ರೇಷ್ಠಾಃ - ಅಂತಹ ನರಶ್ರೇಷ್ಠರು, ಧನ್ಯಾಃ -

---

ಹೀಗೆ ಮಹಾ ಪರಾಕ್ರಮಶಾಲಿಯೂ, ವಾನರೋತ್ತಮನೂ ಆದ ಹನುಮಂತನು ಲಂಕಾನಗರವೆಲ್ಲವನ್ನೂ ಸುಟ್ಟು ಆಮೇಲೆ ತನ್ನ ವಾಲಾಗ್ನಿಯನ್ನು ಸಮುದ್ರದಲ್ಲಿ ತಣ್ಣಗೆ ಮಾಡಿದನು. ಆಗಲಾ ವಾನರವೀರನು ದೇದೀಪ್ಯಮಾನವಾಗಿ ಉರಿಯುತ್ತಿರುವುದೂ, ಬಹಳವಾಗಿ ಭಯಗೊಂಡು ದುಃಖಿಸುತ್ತಿರುವ ರಾಕ್ಷಸಸಮೂಹದಿಂದ ತುಂಬಿರುವುದೂ, ಧ್ವಂಸಗೊಳಿಸಲ್ಪಟ್ಟಿರುವುದೂ ಆದ ಲಂಕಾನಗರವನ್ನು ನೋಡಿ ಇದ್ದಕ್ಕಿದ್ದಂತೆಯೇ ಭಯಗೊಂಡು ತನ್ನನ್ನು ತಾನೇ ನಿಂದಿಸತೊಡಗಿದನು. "ಅಕಟ! ಏನು ಪ್ರಮಾದವಾಯಿತು. ಲಂಕಾನಗರವೆಲ್ಲವನ್ನೂ ಸುಟ್ಟುಬಿಟ್ಟೆನಲ್ಲವೆ! ಸ್ವಲ್ಪವಾದರೂ ಮುಂದಾಲೋಚನೆ ಮಾಡದೆ ಎಂತಹ ಕೆಟ್ಟಕೆಲಸವನ್ನು ಮಾಡಿದೆ! ನಾನು ಕೋಪದಿಂದ ಮೈಮರೆತುದರಿಂದ ಇಂತಹ ಅನರ್ಥವು ಆಗಿಹೋಯಿತು. ಯಾವ ಮಹಾತ್ಮರು ಕೋಪಬಂದಾಗ, ಉರಿಯುತ್ತಿರುವ ಬೆಂಕಿಯನ್ನು ನೀರೆರಚಿ ಆರಿಸುವಂತೆ ಆ ಕೋಪವನ್ನು ಬುದ್ಧಿಬಲದಿಂದ ತಿರಸ್ಕರಿ

ಮಿವಾಂಭಸಾ ॥ ೪ ॥ ಕ್ರುದ್ಧಃ ಪಾಪಂ ನಕುರ್ಯಾತ್ಕಃ ಕ್ರುದ್ಧೋ ಹನ್ಯಾದ್ಗುರೂನಪಿ । ಕ್ರುದ್ಧಃ ಪರುಷಯಾ ವಾಚಾ ನರಸ್ಸಾಧೂನಧಿಕ್ಷಿಪೇತ್ ॥ ೫ ॥ ವಾಚ್ಯಾವಾಚ್ಯಂ ಪ್ರಕುಪಿತೋ ನವಿಜಾನಾತಿ ಕರ್ಹಿಚಿತ್ । ನಾಽಕಾರ್ಯಮಸ್ತಿ ಕ್ರುದ್ಧಸ್ಯ ನಾವಾಚ್ಯಂ ವಿದ್ಯತೇ ಕ್ವಚಿತ್ ॥ ೬ ॥ ಯಸ್ಸಮುತ್ಪತಿತಂ ಕ್ರೋಧಂ ಕ್ಷಮಯೈವ ನಿರಸ್ಯತಿ । ಯಥೋರಗಸ್ತ್ವಚಂ ಜೀರ್ಣಾಂ ಸವೈ ಪುರುಷ ಉಚ್ಯತೇ ॥ ೭ ॥ ಧಿಗಸ್ತು ಮಾಂ! ಸುದುರ್ಬುದ್ಧಿಂ ನಿರ್ಲಜ್ಜಂ ಪಾಪಕೃತ್ತಮಂ । ಅಚಿಂತಯಿತ್ವಾ ತಾಂ ಸೀತಾ

ಧನ್ಯರು. ॥ ೪ ॥ ಕ್ರುದ್ಧಃ - ಕೋಪಿಷ್ಠನಾದ, ಕಃ - ಯಾರುತಾನೆ, ಪಾಪಂ - ಪಾಪವನ್ನು, ನಕುರ್ಯಾತ್ - ಮಾಡುವುದಿಲ್ಲ, ಕ್ರುದ್ಧಃ - ಕೋಪಗೊಂಡವನಾಗಿ, ಗುರೂನಪಿ - ದೊಡ್ಡವರನ್ನೂ ಸಹ, ಹನ್ಯಾತ್ - ಹಿಂಸಿಸಿಯಾನು, ಕ್ರುದ್ಧಃನರಃ - ಕ್ರೋಧವುಳ್ಳ ಮನುಷ್ಯನು, ಪರುಷಯಾ - ಕ್ರೂರವಾದ, ವಾಚಾ - ವಾಕ್ಕಿನಿಂದ, ಸಾಧೂನ್ - ಸತ್ಪುರುಷರನ್ನು, ಅಧಿಕ್ಷಿಪೇತ್ - ಹೀಯಾಳಿಸುವನು, ಪ್ರಕುಪಿತಃ - ಕೋಪಗೊಂಡವನು, ಕರ್ಹಿಚಿತ್ - ಎಲ್ಲಿಯಾದರೂ, ವಾಚ್ಯಾವಾಚ್ಯಂ - ವಕ್ತವ್ಯಾವಕ್ತವ್ಯಾಂಶಗಳನ್ನು, ನವಿಜಾನಾತಿ - ತಿಳಿಯಲಾರನು, ಕ್ರುದ್ಧಸ್ಯ - ಕೋಪಿಷ್ಠನಿಗೆ, ಅಕಾರ್ಯಂ - ಮಾಡಬಾರದ ಕೆಲಸವು, ನಾಸ್ತಿ - ಇಲ್ಲವು, ಕ್ವಚಿತ್ - ಎಲ್ಲಿಯಾದರೂ, ಅವಾಚ್ಯಂ- ಹೇಳಬಾರದಮಾತು, ನವಿದ್ಯತೇ-ಇರುವುದಿಲ್ಲ. ॥ ೫-೬ ॥ ಯಃ-ಯಾವ ಪುರುಷನು, ಸಮುತ್ಪತಿತಂ- ಉತ್ಪನ್ನವಾದ, ಕ್ರೋಧಂ-ಕೋಪವನ್ನು, ಉರಗಃ-ಹಾವು, ಜೀರ್ಣಾಂ-ಶಿಥಿಲವಾದ, ತ್ವಚಂಯಥಾ- ಪೊರೆಯನ್ನಂತೆ, ಕ್ಷಮಯೈವ - ಸೈರಣೆಯಿಂದಲೇ, ನಿರಸ್ಯತಿ - ಹೋಗಲಾಡಿಸಿಕೊಳ್ಳುವನೋ, ಸವೈ - ಅವನೇ, ಪುರುಷಃ - ಮನುಷ್ಯನೆಂದು, ಉಚ್ಯತೇ - ಹೇಳಲ್ಪಡುವನು. ॥ ೭ ॥ ತಾಂಸೀತಾಂ - ಆ ಸೀತಾದೇವಿಯನ್ನು, ಅಚಿಂತಯಿತ್ವಾ - ಯೋಚಿಸದೇ, ಅಗ್ನಿದಂ - ಅಗ್ನಿಯನ್ನಿತ್ತಕಾರಣ, ಸ್ವಾಮಿಘಾತಕಂ - ಸ್ವಾಮಿನಾಶಕನಾದ, ಸುದುರ್ಬುದ್ಧಿಂ - ಬಹಳ ಕೆಟ್ಟಬುದ್ಧಿಯುಳ್ಳ, ನಿರ್ಲಜ್ಜಂ - ನಾಚಿಕೆಯಿಲ್ಲದಿರುವ, ಪಾಪಕೃತ್ತಮಂ - ಪಾಪಕಾರಿಗಳಲ್ಲಿ ಅಧಿಕನಾದ, ಮಾಂ - ನನ್ನನ್ನು, ಧಿಗಸ್ತು -

---

ಸುವರೋ ಅಂತಹ ಪುರುಷಶ್ರೇಷ್ಠರೇ ಮಹಾ ಪುಣ್ಯವಂತರು. ಕೋಪಗೊಂಡವನು ಯಾವನು ತಾನೇ ಪಾಪವನ್ನು ಮಾಡದಿರನು? ಕೋಪಕ್ಕೆ ತುತ್ತಾದವನು ಗುರುವನ್ನಾದರೂ ಕೊಂದಾನು; ಇಷ್ಟೆಯಲ್ಲದೆ ಅವನು ಸತ್ಪುರುಷರನ್ನು ಕೂಡ ಕಟುವಾಕ್ಯಗಳಿಂದ ತಿರಸ್ಕರಿಸುವನು. ॥ ೧–೫ ॥ ಕೋಪವನ್ನು ಹೊಂದಿದವನಿಗೆ, ಇದು ಆಡುವ ಮಾತು, ಇದು ಆಡಬಾರದ ಮಾತು ಎಂಬ ಪರಿಜ್ಞಾನವೇ ಇರುವುದಿಲ್ಲವು. ಕೋಪವನ್ನು ಹೊಂದಿದವನಿಗೆ ಎಲ್ಲಿಯೂ, ಯಾವ ಸಮಯದಲ್ಲಿಯೂ ಮಾಡಬಾರದ ಕೆಲಸವೆಂಬುದೇ ಇರುವುದಿಲ್ಲವು; ಹೇಳಬಾರದ ಮಾತು ಯಾವುದೂ ಇರುವುದಿಲ್ಲವು. ಯಾವನು ಕೋಪಬಂದಾಗ, ಸರ್ಪವು ಪೊರೆಯನ್ನು ಬಿಡುವಂತೆ ಆ ಕೋಪವನ್ನು ಬಿಡುವನೋ ಅವನೇ ಮನುಷ್ಯನೆನಿಸುವನು. ಅಯ್ಯೋ! ನಾನು ಕೋಪದಿಂದ ಮೈಮರೆತು ಶ್ರೀರಾಮಪತ್ನಿಯಾದ ಸೀತಾದೇವಿಯು ಇಲ್ಲಿರುವಳೆಂಬುದನ್ನೂ ಗಮನಕ್ಕೆ ತಂದುಕೊಳ್ಳದೆ ಈ ಲಂಕಾನಗರವೆಲ್ಲವನ್ನೂ ಸುಟ್ಟುಬಿಟ್ಟೆ. ಆದುದರಿಂದ ನಾನು ಮಹಾ ದುಷ್ಟನಾದೆನು; ನಾಚಿಕೆಯಿಲ್ಲದವನೂ, ಸ್ವಾಮಿದ್ರೋಹಿಯೂ, ಮಹಾ ಪಾಪಿಯೂ ಆದೆನು. ನಾನು ಮಹಾ ಪಾಪಕಾರ್ಯವನ್ನೇ ಮಾಡಿದೆನು. ನಾನು ದಗ್ಧ

ಮಗ್ನಿದಂ ಸ್ವಾಮಿಘಾತಿನಂ ॥ ೮ ॥ ಯದಿ ದಗ್ಧಾ ತ್ವಿಯಂ ಲಂಕಾ ನೂನಮಾರ್ಯಾಪಿ ಜಾನಕೀ । ದಗ್ಧಾ ತೇನ ಮಯಾ ಭರ್ತುರ್ಹತಂ ಕಾರ್ಯಮಜಾನತಾ ॥ ೯ ॥ ಯದರ್ಥಮಯಮಾರಂಭಸ್ತತ್ಕಾರ್ಯಮವಸಾದಿತಂ । ಮಯಾಹಿ ದಹತಾ ಲಂಕಾಂ ನಸೀತಾ ಪರಿರಕ್ಷಿತಾ ॥ ೧೦ ॥ ಈಷತ್ಕಾರ್ಯಮಿದಂ ಕಾರ್ಯಂ ಕೃತಮಾಸೀನ್ನ ಸಂಶಯಃ । ತಸ್ಯ ಕ್ರೋಧಾಭಿಭೂತೇನ ಮಯಾ ಮೂಲಕ್ಷಯಃ ಕೃತಃ ॥ ೧೧ ॥ ವಿನಷ್ಟಾ ಜಾನಕೀ ನೂನಂ ನಹ್ಯದಗ್ಧಃ ಪ್ರದೃಶ್ಯತೇ । ಲಂಕಾಯಾಂ ಕಶ್ಚಿದುದ್ದೇಶಃ

ನಿಂದಿಸಬೇಕು. ॥ ೮ ॥ ಅಜಾನತಾ - ಅಜ್ಞನಾದ, ಮಯಾ - ನನ್ನಿಂದ, ಇಯಂಲಂಕಾತು - ಈ ಲಂಕಾಪಟ್ಟಣವಾದರೆ, ದಗ್ಧಾ - ಸುಡಲ್ಪಟ್ಟಿತು, ಆರ್ಯಾ - ಪೂಜ್ಯಳಾದ, ಜಾನಕ್ಯಪಿ - ಸೀತಾ ದೇವಿಯೂ, ದಗ್ಧಾಯದಿ - ಸುಡಲ್ಪಟ್ಟವಳಾಗಿದ್ದರೆ, ತೇನ - ಅದರಿಂದ, ಭರ್ತುಃ - ಆಕೆಯ ಪತಿಯ, ಕಾರ್ಯಂ - ಕೆಲಸವು, ಹತಂ - ನಾಶವಾಯಿತು, ನೂನಂ - ನಿಶ್ಚಯವು. ॥ ೯ ॥ ಯದರ್ಥಂ - ಏತಕ್ಕೋಸ್ಕರ, ಅಯಮಾರಂಭಃ - ಈ ಪ್ರಯತ್ನವು, (ಕೃತಃ - ಮಾಡಲ್ಪಟ್ಟಿತೋ), ತತ್ಕಾರ್ಯಂ - ಆ ಕಾರ್ಯವೂ, ಅವಸಾದಿತಂ - ಹಾಳುಮಾಡಲ್ಪಟ್ಟಿತು, ಹಿ - ಯಾವ ಕಾರಣದಿಂದ, ಲಂಕಾಂ - ಲಂಕಾಪಟ್ಟಣವನ್ನು, ದಹತಾ - ಸುಡುತ್ತಿರುವ, ಮಯಾ - ನನ್ನಿಂದ, ಸೀತಾ - ಸೀತಾದೇವಿಯು, ನಪರಿರಕ್ಷಿತಾ - ಸಂರಕ್ಷಿಸಲ್ಪಡಲಿಲ್ಲವೋ. ॥ ೧೦ ॥ ಇದಂಕಾರ್ಯಂ - ಈ ಮಹಾ ಕಾರ್ಯವು, ಈಷತ್ಕಾರ್ಯಂ-ರಾಮನಿವೇದನವೆಂಬ ಸ್ವಲ್ಪಮಾತ್ರ ಅವಶಿಷ್ಟವಾಗಿರುವಂತೆ, ಕೃತಂ-ಮಾಡಲ್ಪಟ್ಟದು, ಆಸೀತ್ - ಆಯಿತು, ನಸಂಶಯಃ - ಸಂದೇಹವಿಲ್ಲ, ಕ್ರೋಧಾಭಿಭೂತೇನ - ರೋಷಾಕ್ರಾಂತನಾದ, ಮಯಾ - ನನ್ನಿಂದ, ತಸ್ಯ - ಆ ಕಾರ್ಯದ, ಮೂಲಕ್ಷಯಃ - ಮೂಲಘಾತವು, ಕೃತಃ - ಮಾಡಲ್ಪಟ್ಟಿತು. ॥ ೧೧ ॥ ಜಾನಕೀ - ಸೀತಾದೇವಿಯು, ವಿನಷ್ಟಾ - ನಾಶವಾದಳು, ನೂನಂ - ನಿಶ್ಚಯವು, ಹಿ - ಯಾವ ಕಾರಣದಿಂದ, ಲಂಕಾಯಾಂ - ಲಂಕಾಪಟ್ಟಣದಲ್ಲಿ, ಅದಗ್ಧಃ - ಸುಡಲ್ಪಡದಿರುವ, ಕಶ್ಚಿದುದ್ದೇಶಃ - ಯಾವ ಪ್ರದೇಶವೂ, ನಪ್ರದೃಶ್ಯತೇ - ಕಾಣುವದಿಲ್ಲವೋ, ಸರ್ವಾಪುರೀ - ನಗರ

ವಾಗಿ ಹೋಗಬಾರದೇ! ಛೀ, ಛೀ, ನನ್ನನ್ನು ಧಿಕ್ಕರಿಸು. ಈಗ ಈ ಲಂಕಾನಗರನೆಲ್ಲವೂ ದಗ್ಧವಾಗಿ ಹೋಗಿರುವುದಲ್ಲವೇ! ಪೂಜ್ಯಳಾದ ಜಾನಕಿಯೂ ನಿಜವಾಗಿಯೂ ಸುಟ್ಟು ಹೋಗಿರಬೇಕು. ಹಾಗೆ ಸೀತೆಯು ದಗ್ಧವಾಗಿ ಹೋಗಿದ್ದರೆ ನಾನು ಮತಿಗೇಡಿಯಾಗಿ ಸ್ವಾಮಿಕಾರ್ಯವನ್ನು ನಾಶಗೊಳಿಸಿದವನಾಗುವೆನು. ಇದರಲ್ಲಿ ಎಷ್ಟು ಮಾತ್ರವೂ ಸಂಶಯ ವಿಲ್ಲವು. ಯಾವ ಮಹಾ ಕಾರ್ಯಸಾಧನೆಗಾಗಿ ಈ ಅದ್ಭುತ ಪ್ರಯತ್ನವನ್ನು ಕೈಕೊಂಡು ನೆರವೇರಿಸಿದೆನೋ ಆ ಕಾರ್ಯವೆಲ್ಲವೂ ನನ್ನಿಂದಲೇ ಹಾಳಾಯಿತು! ಅಯ್ಯೋ! ಈ ಲಂಕಾ ನಗರವನ್ನು ಸುಟ್ಟಾಗ ನಾನು ಸೀತಾದೇವಿಯನ್ನು ಕಾಪಾಡದೆ ಹೋದೆನಲ್ಲಾ! ॥ ೬-೧೦ ॥ ಮಹಾ ಪ್ರಯತ್ನದಿಂದ ಸೀತೆಯಿರುವ ಸ್ಥಳವನ್ನು ಹುಡುಕಲೋಸುಗ, ಶತಯೋಜನ ವಿಸ್ತೀರ್ಣವಾದ ಸಾಗರವನ್ನು ದಾಟಿ, ರಾಕ್ಷಸಭೂಯಿಷ್ಠವಾದ ಈ ಲಂಕಾನಗರದಲ್ಲೆಲ್ಲ ಸಂಚರಿಸಿ, ಮಹಾ ಪ್ರಯಾಸದಿಂದ ಆಕೆಯನ್ನು ಕಂಡುದಾಯಿತು. ಈ ವೃತ್ತಾಂತವನ್ನು ಶ್ರೀರಾಮನಿಗೆ ತಿಳಿಸುವಕಾರ್ಯವೊಂದು ಮಾತ್ರ ಉಳಿದಿದ್ದಿತು. ಮಹಾ ಕಷ್ಟಸಾಧ್ಯವಾದ ಕಾರ್ಯಗಳೆಲ್ಲವನ್ನೂ ಸಾಧಿಸಿ, ಸ್ವಲ್ಪವಾದ ಈ ಕಾರ್ಯವು ಮಾತ್ರ ಉಳಿದಿರಲು, ನಾನು ಅಂತಶ್ಶತ್ರುವಾದ ಕೋಪದಿಂದ ಮೈಮರೆತು ಈ ಕಾರ್ಯವನ್ನು ಸಮೂಲವಾಗಿ ನಾಶ

ಸರ್ವಾ ಭಸ್ಮೀಕೃತಾ ಪುರೀ ॥ ೧೨ ॥ ಯದಿ ತದ್ವಿಹತಂ ಕಾರ್ಯಂ ಮಮ ಪ್ರಜ್ಞಾವಿಪರ್ಯಯಾತ್ । ಇಹೈವ ಪ್ರಾಣಸನ್ನ್ಯಾಸೋ ಮಮಾಪಿ ಹ್ಯದ್ಯ ರೋಚತೇ ॥೧೩॥ ಕಿಮಗ್ನೌ ನಿಪತಾಮ್ಯದ್ಯ ಅಹೋಸ್ವಿದ್ಬಡಬಾಮುಖೇ । ಶರೀರಮಾಹೋ ಸತ್ವಾನಾಂ ದದ್ಮಿ ಸಾಗರವಾಸಿನಾಂ ॥ ೧೪ ॥ ಕಥಂ ಹಿ ಜೀವತಾ ಶಕ್ಯೋ ಮಯಾ ದ್ರಷ್ಟುಂ ಹರೀಶ್ವರಃ । ತೌ ವಾ ಪುರುಷಶಾರ್ದೂಲೌ ಕಾರ್ಯಸರ್ವಸ್ವಘಾತಿನಾ ॥ ೧೫ ॥ ಮಯಾ ಖಲು ತದೇವೇದಂ ರೋಷದೋಷಾತ್ಪ್ರದರ್ಶಿತಂ । ಪ್ರಥಿತಂ ತ್ರಿಷು

ವೆಲ್ಲವೂ, ಭಸ್ಮೀಕೃತಾ - ಬೂದಿಮಾಡಲ್ಪಟ್ಟಿತೋ. ॥ ೧೨ ॥ ತತ್ಕಾರ್ಯಂ - ಆ ರಾಮಕಾರ್ಯವು, ಮಮ - ನನ್ನ, ಪ್ರಜ್ಞಾವಿಪರ್ಯಯಾತ್ - ಬುದ್ಧಿಭ್ರಂಶದಿಂದ, ವಿಹತಂಯದಿ - ಸೀತಾನಾಶದಿಂದ ವಿನಷ್ಟವಾದುದಾದರೆ, ಅದ್ಯ - ಈಗ, ಇಹೈವ - ಈ ಪುರದಲ್ಲಿಯೇ, ಮಮಾಪಿ - ನನಗೂ ಸಹ, ಪ್ರಾಣಸನ್ನ್ಯಾಸಃ - ಪ್ರಾಣತ್ಯಾಗವು, ರೋಚತೇ - ತೋರುತ್ತದೆ. ॥ ೧೩ ॥ ಅದ್ಯ - ಈಗ, ಅಗ್ನೌ - ಬೆಂಕಿಯಲ್ಲಿ, ನಿಪತಾಮಿಕಿಂನು - ಬೀಳಲೇ, ಆಹೋಸ್ವಿತ್ - ಅಥವಾ, ಬಡಬಾಮುಖೇ - ಬಡಬಾಗ್ನಿಯಲ್ಲಿ, ನಿಪತಾಮಿ - ಬೀಳಲೇ, ಆಹೋ - ಹಾಗಲ್ಲದಿದ್ದರೆ, ಸಾಗ....ನಾಂ - ಕಡಲಿನಲ್ಲಿ ನೆಲೆಗೊಂಡಿರುವ, ಸತ್ವಾನಾಂ - ಜಂತುಗಳಿಗೆ, ಶರೀರಂ - ದೇಹವನ್ನು, ದದ್ಮಿಕಿಂ - ಕೊಡಲೇನು. ॥ ೧೪ ॥ ಕಾರ್ಯ....ನಾ - ಕೆಲಸಗಳನ್ನೆಲ್ಲ ನಾಶಗೊಳಿಸಿದ, ಜೀವತಾ - ಬದುಕಿರುವ, ಮಯಾ - ನನ್ನಿಂದ, ಹರೀಶ್ವರಃ - ಕಪೀಶ್ವರನಾದ ಸುಗ್ರೀವನು, ದ್ರಷ್ಟುಂ - ನೋಡುವುದಕ್ಕೆ, ಕಥಂಹಿ - ಹೇಗೆತಾನೆ, ಶಕ್ಯಃ-ಸಮರ್ಥನು, ಪುರು....ಲೌ-ನರಶ್ರೇಷ್ಠರಾದ, ತೌವಾ-ಆ ರಾಮಲಕ್ಷ್ಮಣರಾಗಲಿ, ಕಥಂಶಕ್ಯೌ-ಹೇಗೆ ಸಮರ್ಥರು. ॥ ೧೫ ॥ ತ್ರಿಷುಲೋಕೇಷು - ಮೂರು ಲೋಕಗಳಲ್ಲಿಯೂ, ಯತ್‌ಕಪಿತ್ವಂ - ಯಾವ ಕಪಿಭಾವವು, ಅನವಸ್ಥಿತಂ - ವ್ಯವಸ್ಥೆಯಿಲ್ಲವಾದುದೆಂದು, ಪ್ರಥಿತಂ - ಪ್ರಸಿದ್ಧವಾಗಿರುವುದೋ,

---

ಗೊಳಿಸಿದುದಲ್ಲದೆ, ಸೀತಾದೇವಿಯನ್ನೂ ನಾಶಗೊಳಿಸಿದೆನು. ಆದುದರಿಂದ ನಾನು ಕೈಕೊಂಡ ಕಾರ್ಯವೆಲ್ಲವೂ ಕೆಟ್ಟುಹೋಯಿತು. ಈ ಲಂಕಾನಗರದಲ್ಲಿ ಸುಡಲ್ಪಡದಿರುವ ಒಂದು ಸ್ಥಳವಾದರೂ ಇಲ್ಲವು. ಲಂಕಾನಗರವೆಲ್ಲವೂ ಸುಟ್ಟು ಬೂದಿಯಾಗಿರುವಾಗ, ಸೀತೆಯು ಮಾತ್ರ ನಾಶವೈದದಿರುವಳೇ! ನಿಸ್ಸಂಶಯವಾಗಿಯೂ ದಗ್ಧವಾಗಿರಬೇಕು. ಅಯ್ಯೋ! ನನ್ನ ಮತಿಗೇಡಿತನದಿಂದ ಕೆಲಸವೆಲ್ಲವೂ ಕೆಟ್ಟುಹೋಯಿತು. ನಿಜವಾಗಿಯೂ ಸೀತೆಯು ಸುಟ್ಟುಹೋಗಿದ್ದರೆ ನಾನಿಲ್ಲಿಯೇ ಪ್ರಾಣಗಳನ್ನು ತೊರೆಯುವುದು ಯುಕ್ತವೆಂದು ತೋರುವುದು. ಸಾಯುವುದಕ್ಕೆ ಸಾಧನಗಳೇನೋ ಬಹಳವಾಗಿರುವುವು. ಈಗ ನಾನು ಬೆಂಕಿಯಲ್ಲಿ ಬೀಳಲೇ! ಇಲ್ಲವೆ ದಾವಾಗ್ನಿಯಲ್ಲಿ ಬಿದ್ದು ಭಸ್ಮವಾಗಲೇ! ಅಥವ ಸಮುದ್ರದಲ್ಲಿ ಬಿದ್ದು ಅಲ್ಲಿರುವ ಜಲಜಂತುಗಳಿಗೆ ಆಹಾರವಾಗಲೇ! ನಾನು ಈ ಸೀತಾನ್ವೇಷಣ ಕಾರ್ಯವನ್ನು ಉಚಿತರೀತಿಯಿಂದ ನೆರವೇರಿಸಿಕೊಂಡಲ್ಲವೆ ನನ್ನ ಪ್ರಭುವಾದ ಸುಗ್ರೀವರಾಜನನ್ನೂ, ಶ್ರೀರಾಮಲಕ್ಷ್ಮಣರನ್ನೂ ನೋಡಬೇಕಾದುದು? ಈಗ ಕೆಲಸವನ್ನೆಲ್ಲ ಕೆಡಿಸಿ ಹಾಳುಮಾಡಿ, ನಿಂದ್ಯವಾದ ಈ ಪ್ರಾಣಗಳೊಡನೆ ಶ್ರೀರಾಮ ಲಕ್ಷ್ಮಣ ಸುಗ್ರೀವರನ್ನು ನೋಡುವುದು ತಾನೇ ಹೇಗೆ? ಅಯ್ಯೋ! ನಾನು ರಾಕ್ಷಸರಮೇಲಣ ಕೋಪವೆಂಬ ದೋಷದಿಂದಲ್ಲವೆ ಈ ಲಂಕಾಪಟ್ಟಣವೆಲ್ಲವನ್ನೂ ಸುಟ್ಟು ಹಾಳುಮಾಡಿದುದು! ॥ ೧೧–೧೫ ॥ ನಾನು ಹೀಗೆ ಮಾಡಿದುದರಿಂದ ಕಪಿಬುದ್ಧಿಯು

ಲೋಕೇಷು ಕಪಿತ್ವಮನವಸ್ಥಿತಂ ॥ ೧೬ ॥ ಧಿಗಸ್ತು ರಾಜಸಂಭಾವಮನೀಶಮನವ ಸ್ಥಿತಂ । ಈಶ್ವರೇಣಾಪಿ ಯದ್ರಾಗಾನ್ಮಯಾ ಸೀತಾ ನ ರಕ್ಷಿತಾ ॥ ೧೭ ॥ ವಿನಷ್ಟಾಯಾಂತು ಸೀತಾಯಾಂ ತಾವುಭೌ ವಿನಶಿಷ್ಯತಃ । ತಯೋರ್ವಿನಾಶೇ ಸುಗ್ರೀವಃ ಸಬಂಧುರ್ವಿನಶಿಷ್ಯತಿ ॥ ೧೮ ॥ ಏತದೇವ ವಚಶ್ಶ್ರುತ್ವಾ ಭರತೋ ಭ್ರಾತೃವತ್ಸಲಃ । ಧರ್ಮಾತ್ಮಾ ಸಹಶತ್ರುಘ್ನಃ ಕಥಂ ಶಕ್ಷ್ಯತಿ ಜೀವಿತಂ? ॥ ೧೯ ॥ ಇಕ್ಷ್ವಾಕುವಂಶೇ ಧರ್ಮಿಷ್ಠೇ ಗತೇ ನಾಶಮಸಂಶಯಃ । ಭವಿಷ್ಯಂತಿ ಪ್ರಜಾಸ್ಸರ್ವಾಶ್ಶೋಕಸಂತಾಪ

ತದಿದಂ - ಆ ಈ ಕಪಿತ್ವವು, ರೋಷದೋಷಾತ್ - ಕ್ರೋಧವೆಂಬ ದೋಷದಿಂದ, ಮಯೈವ - ನನ್ನಿಂದಲೇ, ಪ್ರದರ್ಶಿತಂಖಲು - ತೋರಿಸಲ್ಪಟ್ಟಿತಷ್ಟೆ. ॥ ೧೬ ॥ ಈಶ್ವರೇಣಾಪಿ - ರಕ್ಷಣಸಮರ್ಥನಾದರೂ, ಮಯಾ-ನನ್ನಿಂದ, ಯದ್ಯಸ್ಮಾತ್-ಯಾವ ಕಾರಣದಿಂದ, ರಾಗಾತ್-ಮಾತ್ಸರ್ಯದಿಂದ, ಸೀತಾ - ಸೀತಾದೇವಿಯು, ನರಕ್ಷಿತಃ - ರಕ್ಷಿಸಲ್ಪಡಲಿಲ್ಲವೋ, ತತ್ - ಆ ಕಾರಣದಿಂದ, ಅನೀಶಂ - ನಿಯಾಮಕನಿಲ್ಲದಿರುವ, ಅನವಸ್ಥಿತಂ - ವ್ಯವಸ್ಥೆಯಿಲ್ಲದಿರುವ, ರಾಜಸಂ - ರಜೋಗುಣಸಂಬಂಧವಾದ, ಭಾವಂ - ಚೇಷ್ಟಾವಿಶೇಷವನ್ನು, ಧಿಗಸ್ತು - ನಿಂದಿಸು. ॥ ೧೭ ॥ ಸೀತಾಯಾಂತು - ಸೀತಾದೇವಿಯಾದರೆ, ವಿನಿಷ್ಟಾಯಾಂಸತ್ಯಾಂ-ನಾಶವಾದರೆ, ತಾವುಭೌ-ಆ ರಾಮುಲಕ್ಷ್ಮಣರಿಬ್ಬರೂ, ವಿನಶಿಷ್ಯತಃ-ನಷ್ಟವಾಗುವರು, ತಯೋಃ-ಆ ರಾಮುಲಕ್ಷ್ಮಣರ, ವಿನಾಶೇ-ನಾಶವಾಗಲು, ಸುಗ್ರೀವಃ-ಸುಗ್ರೀವನು, ಸಬಂಧುಃ - ಬಂಧುಸಹಿತನಾಗಿ, ವಿನಶಿಷ್ಯತಿ - ನಾಶವಾಗುವನು. ॥ ೧೮ ॥ ಭ್ರಾತೃವತ್ಸಲಃ - ಸಹಜವಾತ್ಸಲ್ಯವುಳ್ಳ, ಧರ್ಮಾತ್ಮಾ - ಧರ್ಮಸ್ವಭಾವವುಳ್ಳ, ಸಹಶತ್ರುಘ್ನಃ - ಶತ್ರುಘ್ನಸಹಿತನಾದ, ಭರತಃ - ಭರತನು, ಏತದ್ವಚಃ - ಈ ಮಾತನ್ನು, ಶ್ರುತ್ವೈವ - ಕೇಳುತ್ತಲೇ, ಜೀವಿತುಂ - ಬದುಕುವದಕ್ಕೆ, ಕಥಂಶಕ್ಷ್ಯತಿ-ಹೇಗೆ ಸಮರ್ಥನಾಗುವನು. ॥ ೧೯ ॥ ಧರ್ಮಿಷ್ಠೇ-ಧರ್ಮಿಷ್ಠವಾದ, ಇಕ್ಷ್ವಾಕುವಂಶೇ-ಈಕ್ಷ್ವಾಕುಕುಲವು, ನಾಶಂ - ನಷ್ಟವನ್ನು, ಗತೇ - ಹೊಂದಲು, ಸರ್ವಾಃಪ್ರಜಾಃ - ಜನರೆಲ್ಲರೂ, ಶೋಕ....ತಾಃ - ದುಃಖಜ್ವರದಿಂದ ಬಾಧಿತರಾದವರು, ಭವಿಷ್ಯಂತಿ - ಆಗುವರು, ಅಸಂಶಯಂ -

---

ಅತಿ ಚಪಲವಾದುದೆಂದು ಮೂರುಲೋಕಗಳಲ್ಲಿಯೂ ಪ್ರಚುರವಾಗುವುದಲ್ಲವೆ! ಅಕಟ! ನಾನು ನನ್ನ ಕಪಿಬುದ್ಧಿಯನ್ನೇ ಪ್ರಕಟಗೊಳಿಸಿದೆನು! ಇದೂ ಅಲ್ಲದೆ ನಾನು ಕೋಪದಿಂದಲೇ ಸುಲಭವಾಗಿ ಸಂರಕ್ಷಿಸಬಹುದಾಗಿದ್ದ ಜಾನಕಿಯನ್ನೂ ಸಂರಕ್ಷಿಸಲಿಲ್ಲವು. ಅಯ್ಯೋ! ಏನು ಮಾಡಲಿ! ಛೀ! ಛೀ! ಈ ನನ್ನ ರಾಜಸಭಾವವನ್ನು ಸುಡಬೇಕು. ಮಹಾ ಚಂಚಲವಾದ ಈ ರಾಜಸಭಾವದ ಪರಿಣಾಮಕ್ಕೆ ತಡೆಯೆಂಬುದೇ ಇಲ್ಲವು. ನಾನು ಕಾರ್ಯನಿರ್ವಹಣದಲ್ಲಿ ಮಹಾ ಸಮರ್ಥನಾಗಿದ್ದರೂ, ರಜೋಗುಣಸಂಬಂಧವಾದ ಕೋಪಕ್ಕೊಳಗಾಗಿ ಮೈಮರೆತು ಈ ಲಂಕಾನಗರವನ್ನು ಸುಡುವಾಗ ಸೀತೆಯನ್ನು ಸಂರಕ್ಷಿಸದೆ ಹೋದೆನಲ್ಲವೆ! ಈಗ ಸೀತಾದೇವಿಯು ಸತ್ತಿರುವಳೆಂಬ ವಾರ್ತೆಯನ್ನು ಕೇಳಿದೊಡನೆಯೇ ಶ್ರೀರಾಮಲಕ್ಷ್ಮಣರೀರ್ವರೂ ಪ್ರಾಣಗಳನ್ನು ತೊರೆಯುವರು. ಅವರಿಬ್ಬರೂ ಮಡಿದ ಬಳಿಕ ನಮ್ಮ ಪ್ರಭುವಾದ ಸುಗ್ರೀವನು ಬಂಧುಮಿತ್ರರೊಡಗೂಡಿ ಪ್ರಾಣಗಳನ್ನು ತೊರೆಯುವನು. ಈ ವೃತ್ತಾಂತವು ತಿಳಿದೊಡನೆ ಭ್ರಾತೃಪ್ರೇಮಿಯೂ, ಧರ್ಮಾತ್ಮನೂ ಆದ ಭರತನೂ, ಅವನ ತಮ್ಮನಾದ ಶತ್ರುಘ್ನನೂ ಜೀವಿಸಲಾರರು. ಮಹಾ ಧರ್ಮಿಷ್ಠರಾದ ಇಕ್ಷ್ವಾಕುವಂಶದರಸರೆಲ್ಲರೂ ನಾಶ

ಪೀಡಿತಾಃ ‖ ೨೦ ‖ ತದಹಂ ಭಾಗ್ಯರಹಿತೋ ಲುಪ್ತಧರ್ಮಾರ್ಥಸಂಗ್ರಹಃ । ರೋಷ ದೋಷಪರೀತಾತ್ಮಾ ವ್ಯಕ್ತಂ ಲೋಕವಿನಾಶನಃ" ‖ ೨೧ ‖ ಇತಿ ಚಿಂತಯತಸ್ತಸ್ಯ ನಿಮಿತ್ತಾನ್ಯುಪಪೇದಿರೇ । ಪೂರ್ವಮಪ್ಯುಪಲಬ್ಧಾನಿ ಸಾಕ್ಷಾತ್ಪುನರಚಿಂತಯತ್ ‖೨೨‖ "ಅಥವಾ ಚಾರುಸರ್ವಾಂಗೀ ರಕ್ಷಿತಾ ಸ್ವೇನ ತೇಜಸಾ । ನನಶಿಷ್ಯತಿ ಕಲ್ಯಾಣಿ ನಾಗ್ನಿ ರಗ್ನೌ ಪ್ರವರ್ತತೇ ‖ ೨೩ ‖ ನಹಿ ಧರ್ಮಾತ್ಮನಸ್ತಸ್ಯ ಭಾರ್ಯಾಮಮಿತ ತೇಜಸಃ । ಸ್ವಚಾರಿತ್ರಾಭಿಗುಪ್ತಾಂತಾಂ ಸ್ಪ್ರಷ್ಟುಮರ್ಹತಿ ಪಾವಕಃ ‖ ೨೪ ‖ ನೂನಂ ರಾಮ

ಸಂದೇಹವಿಲ್ಲ. ‖ ೨೦ ‖ ತತ್ - ಆ ಕಾರಣದಿಂದ, ಭಾಗ್ಯರಹಿತಃ - ನಿರ್ಭಾಗ್ಯನಾದ, ಲುಪ್ತ....ಹಃ - ಕೊರತೆಯಾಗಿ ಮಾಡಲ್ಪಟ್ಟ ಧರ್ಮಾರ್ಥಸಂಗಹವುಳ್ಳ, ರೋಷ....ತ್ಮಾ - ಕೋಪದಿಂದುಂಟಾದ ತಪ್ಪಿನಿಂದ ವ್ಯಾಪ್ತವಾದ ಮನಸ್ಸುಳ್ಳ, ಅಹಂ-ನಾನು, ಲೋಕ....ನಃ-ಲೋಕಧ್ವಂಸಕನೆಂದು, ವ್ಯಕ್ತಂ-ಸ್ಪಷ್ಟವಾಯಿತು. ‖ ೨೧ ‖ ಇತಿ - ಈ ಪರಿಯಾಗಿ, ಚಿಂತಯತಃ - ಯೋಚಿಸುತ್ತಿರುವ, ತಸ್ಯ - ಆ ಆಂಜನೇಯನಿಗೆ, ನಿಮಿತ್ತಾನಿ - ಶುಭಸೂಚನೆಗಳು, ಉಪಪೇದಿರೇ - ಹುಟ್ಟಿದವು, ಪೂರ್ವಂ - ಮೊದಲು, ಸಾಕ್ಷಾತ್ - ಪ್ರತ್ಯಕ್ಷ್ಯವಾಗಿ, ಉಪಲಬ್ಧಾನ್ಯಪಿ - ಹೊಂದಲ್ಪಟ್ಟವುಗಳಾದರೂ, ಪುನಃ - ಮತ್ತು, ಅಚಿಂತಯತ್ - ಯೋಚನೆಮಾಡಿದನು. ‖೨೨‖ ಅಥವಾ - ಹಾಗಲ್ಲದಿದ್ದರೆ, ಸ್ವೇನ - ತನ್ನ, ತೇಜಸಾ - ತೇಜಸ್ಸಿನಿಂದ, ರಕ್ಷಿತಾ - ಸಂರಕ್ಷಿಸಲ್ಪಟ್ಟ, ಚಾರು....ಗೀ - ಸುಂದರವಾದ ಸಮಸ್ತಾವಯವಗಳುಳ್ಳ, ಕಲ್ಯಾಣೀ - ಮಂಗಳಕರಳಾದ ಸೀತಾದೇವಿಯು, ನನಶಿಷ್ಯತಿ - ನಾಶವಾಗಲಾರಳು, ಅಗ್ನಿಃ - ಬೆಂಕಿಯು, ಅಗ್ನೌ - ಬೆಂಕಿಯಲ್ಲಿ, ನಪ್ರವರ್ತತೇ - ಪ್ರವರ್ತಿಸುವದಿಲ್ಲ. ‖೨೩‖ ಪಾವಕಃ-ಅಗ್ನಿಯು, ಅಮಿತತೇಜಸಃ - ಮಹಾ ತೇಜಸ್ವಿಯಾದ, ಧರ್ಮಾತ್ಮನಃ - ಧರ್ಮಸ್ವಭಾವವುಳ್ಳ, ತಸ್ಯ-ಆ ಶ್ರೀರಾಮನ, ಭಾರ್ಯಾಂ - ಹೆಂಡತಿಯಾದ, ಸ್ವಚಾ....ಪ್ತಾಂ - ತನ್ನ ಪಾತಿವ್ರತ್ಯರೂಪವಾದ ಚಾರಿತ್ರದಿಂದ ಪರಿಪಾಲಿತಳಾದ, ತಾಂ-ಆ ದೇವಿಯನ್ನು, ಸ್ಪ್ರಷ್ಟುಂ-ಸ್ಪರ್ಶಿಸುವದಕ್ಕೆ, ನಾರ್ಹತಿಹಿ - ಶಕ್ತನಲ್ಲವಷ್ಟೆ. ‖ ೨೪ ‖ ದಹನಕರ್ಮಾ - ಸುಡುವದೇ ಸ್ವಭಾವವುಳ್ಳ, ಅಯಂಹವ್ಯವಾಹನಃ - ಈ

ವಾಗಲು ಪ್ರಜೆಗಳೆಲ್ಲರೂ ಅಮಿತ ವ್ಯಸನಸಂತಪ್ತರಾಗಿ ಪ್ರಾಣಗಳನ್ನು ತೊರೆಯುವರು. ‖ ೧೬–೨೦ ‖ ಇಷ್ಟೆಲ್ಲವೂ ನನ್ನಿಂದಲೇ ನಡೆದುಹೋಗುವುದು. ಅಯ್ಯೋ! ನಾನು ಮಹಾ ದೌರ್ಭಾಗ್ಯವಂತನು ; ಧರ್ಮಾರ್ಥಹೀನನಾದವನು. ಕೋಪದಿಂದ ತಿರಸ್ಕೃತವಾದ ಆತ್ಮ ಶಕ್ತಿಯುಳ್ಳವನು ; ಲೋಕನಾಶಕ್ಕೆ ಕಾರಣವಾದವನು !" ಮಹಾತ್ಮನಾದ ಆ ಹನುಮಂತ ನಿಂತು ಚಿಂತಿಸುತ್ತಿರಲು, ಹಿಂದೆ ಆತನನುಭವಿಸಿದ್ದ ಕೆಲವು ಶುಭಶಕುನಗಳಾದುವು. ಆಗ ಲಾತನು ಬಹಳವಾಗಿ ಸಂತಸಗೊಂಡು ಪುನಃ ತನ್ನಲ್ಲಿ ತಾನು ಹೀಗೆಂದುಕೊಳ್ಳುವನು. "ಆಹಾ! ನಾನು, ಲಂಕಾನಗರವು ದಗ್ಧವಾದೊಡನೆಯೇ ಸೀತೆಯೂ ದಗ್ಧವಾದಳೆಂದೆಣಿಸಿದುದು ನ್ಯಾಯವಲ್ಲವು. ಹಾಗೊಂದುವೇಳೆ ಸೀತೆಯು ಸುಟ್ಟುಹೋಗಿದ್ದರೆ ಈ ಶುಭಶಕುನಗಳು ತಲೆದೋರುತ್ತಲೇ ಇರಲಿಲ್ಲವು. ಆದುದರಿಂದ ಸೀತೆಯು ಸತ್ತಿಲ್ಲ. ಆಕೆಯು ಬದುಕಿಯೇ ಇರುವಳು. ಇದಕ್ಕೆ ಕಾರಣವುಂಟು. ಸೀತಾದೇವಿಯು ಅಗ್ನಿಯಂತೆ ನಿರ್ಮಲವಾದ ಪಾತಿವ್ರತ್ಯವುಳ್ಳವಳು. ಆದುದರಿಂದ ಅವಳು ಖಂಡಿತವಾಗಿಯೂ ಸುಟ್ಟಿಲ್ಲ. ಬೆಂಕಿಯು ಬೆಂಕಿಯನ್ನು ಸುಡುವುದೆಲ್ಲಿಯಾದರೂ ಉಂಟೆ? ಮಹಾ ಧರ್ಮಾತ್ಮನೂ, ಅಮಿತ ಪರಾಕ್ರಮವಂತನೂ ಆದ ಶ್ರೀರಾಮನ ಭಾರ್ಯೆಯೇ ಅಲ್ಲವೆ ಆ ಜಾನಕಿಯು. ಆಕೆಯು ತನ್ನ ಪಾತಿವ್ರತ್ಯ

ಪ್ರಭಾವೇನ ವೈದೇಹ್ಯಾಸ್ಸುಕೃತೇನಚ । ಯನ್ಮಾಂ ದಹನಕರ್ಮಾಯಂ ನಾದಹದ್ಧವ್ಯವಾಹನಃ ॥ ೨೫ ॥ ತ್ರಯಾಣಾಂ ಭರತಾದೀನಾಂ ಭ್ರಾತೄಣಾಂ ದೇವತಾಚ ಯಾ । ರಾಮಸ್ಯಚ ಮನಃಕಾಂತಾ ಸಾ ಕಥಂ ವಿನಶಿಷ್ಯತಿ ॥೨೬॥ ಯದ್ವಾ ದಹನಕರ್ಮಾಯಂ ಸರ್ವತ್ರ ಪ್ರಭುರವ್ಯಯಃ । ನಮೇ ದಹತಿ ಲಾಂಗೂಲಂ ಕಥಮಾರ್ಯಾಂ ಪ್ರಧಕ್ಷ್ಯತಿ ॥ ೨೭ ॥ ಪುನಶ್ಚಾಚಿಂತಯತ್ತತ್ರ ಹನೂಮಾನ್ವಿಸ್ಮಿತಸ್ತದಾ । ಹಿರಣ್ಯನಾಭಸ್ಯ ಗಿರೇರ್ಜಲಮಧ್ಯೇ ಪ್ರದರ್ಶನಂ ॥ ೨೮ ॥ ತಪಸಾ ಸತ್ಯವಾಕ್ಯೇನ ಅನನ್ಯತ್ವಾಚ್ಚ ಭರ್ತರಿ ।

ಯಜ್ಞೇಶ್ವರನು, ಮಾಂ - ನನ್ನನ್ನು, ನಾದಹದಿತಿಯತ್ - ಸುಡಲಿಲ್ಲವೆಂಬುದಾವದೋ, (ತತ್ - ಅದು), ರಾಮಪ್ರಭಾವೇನ - ಶ್ರೀರಾಮನ ಮಹಾತ್ಮ್ಯದಿಂದಲೂ, ವೈದೇಹ್ಯಾಃ - ಸೀತಾದೇವಿಯ, ಸುಕೃತೇನಚ - ಪುಣ್ಯದಿಂದಲೂ, (ಅಭೂತ್ - ಆಯಿತು), ನೂನಂ - ನಿಶ್ಚಯವು. ॥ ೨೫ ॥ ಭರತಾದೀನಾಂ-ಭರತನೇ ಮುಂತಾದ, ಭ್ರಾತೄಣಾಂ-ಸಹೋದರರಾದ, ತ್ರಯಾಣಾಂಚ-ಮೂರ್ವರಿಗೂ ದೇವತೆಯಂತೆ ಪೂಜ್ಯಳಾದವಳು, ಯಾ-ಯಾವಾಕೆಯೋ, ರಾಮಸ್ಯಚ-ಶ್ರೀರಾಮನಿಗೂ, ಮನಃಕಾಂತಾ-ಮನೋಹರಳಾದವಳು, ಯಾ - ಯಾವಾಕೆಯೋ, ಸಾ - ಆ ಸೀತಾದೇವಿಯು, ಕಥಂವಿನಶಿಷ್ಯತಿ - ಹೇಗೆ ನಾಶವಾಗುವಳು ? ॥ ೨೬ ॥ ಅಥವಾ-ಹಾಗಲ್ಲದಿದ್ದರೆ, ದಹನಕರ್ಮಾ-ಸುಡುವ ವ್ಯಾಪಾರವುಳ್ಳ, ಅವ್ಯಯಃ - ನಾಶರಹಿತನಾದ, ಸರ್ವತ್ರ - ಎಲ್ಲೆಲ್ಲಿಯೂ, ಪ್ರಭುಃ - ಅಡ್ಡಿಯಿಲ್ಲದೆ ವ್ಯಾಪಿಸುವ, ಯದಯಂ - ಯಾವ ಈ ಅಗ್ನಿಯು, ಮೇ - ನನ್ನ, ಲಾಂಗೂಲಂ - ಬಾಲವನ್ನು, ನದಹತಿ - ಸುಡಲಿಲ್ಲವೋ, ಅತಃ - ಈ ಕಾರಣದಿಂದ, ಆರ್ಯಾಂ - ಪೂಜ್ಯಳಾದ ಸೀತಾದೇವಿಯನ್ನು, ಕಥಂಪ್ರಧಕ್ಷ್ಯತಿ - ಹೇಗೆ ಸುಡುವನು. ॥ ೨೭ ॥ ತತ್ರ - ಆ ಲಂಕಾಪಟ್ಟಣದಲ್ಲಿ, ತದಾ - ಆ ಕಾಲದಲ್ಲಿ, ಹನೂಮಾನ್ - ಆಂಜನೇಯನು, ಜಲಮಧ್ಯೇ - ಸಮುದ್ರಮಧ್ಯದಲ್ಲಿ, ಹಿರಣ್ಯನಾಭಸ್ಯ - ಮೈನಾಕವೆಂಬ, ಗಿರೇಃ - ಪರ್ವತದ, ಪ್ರದರ್ಶನಂ - ದರ್ಶನವನ್ನೂ, ಸ್ಮೃತ್ವಾ - ಸ್ಮರಿಸಿ, ಪುನಃ - ಮತ್ತು, ವಿಸ್ಮಿತಃ - ಆಶ್ಚರ್ಯಗೊಂಡವನಾಗಿ, ಅಚಿಂತಯತ್-ಯೋಚಿಸಿದನು. ॥ ೨೮ ॥ ಸಾ-ಆ ಸೀತಾದೇವಿಯು, ತಪಸಾ-ತಪಶ್ಚರ್ಯದಿಂದಲೂ,

---

ಮಹಿಮೆಯಿಂದಲೇ ಸುರಕ್ಷಿತವಾಗಿರುವವಳು. ಅಂತಹಳನ್ನು ಅಗ್ನಿಯು ಎಷ್ಟುಮಾತ್ರಕ್ಕೂ ಸುಡದು. ಇದೂ ಅಲ್ಲದೆ ಸುಡುವುದೇ ಸ್ವಭಾವವಾಗುಳ್ಳ ಅಗ್ನಿಯು ನನ್ನನ್ನೇ ಸುಡದಿರಲು, ಶ್ರೀರಾಮನ ಪ್ರಭಾವವೂ, ಆ ಸೀತಾದೇವಿಯ ಪಾತಿವ್ರತ್ಯ ಮಹಿಮೆಯೂ ಕಾರಣವಲ್ಲದೆ ಮತ್ತೆ ಬೇರೆಯಲ್ಲವು. ॥ ೨೧–೨೫ ॥ ಆದುದರಿಂದ ಲಕ್ಷ್ಮಣ ಭರತಶತ್ರುಘ್ನರು ಮೂವರಿಗೂ ದೇವತೆಯಾಗಿ, ಶ್ರೀರಾಮನಿಗೆ ಭಾರ್ಯೆಯಾಗಿರುವ ಆ ಸೀತಾದೇವಿಯನ್ನು ಅಗ್ನಿಯು ಸುಡುವುದೆಂದರೇನು ? ಆಕೆಯು ಖಂಡಿತವಾಗಿಯೂ ದಗ್ಧವಾಗಿಲ್ಲ. ಇದೂ ಅಲ್ಲದೆ, ಸುಡುವುದೇ ಕಾರ್ಯವಾಗುಳ್ಳವನೂ, ಎಲ್ಲವನ್ನೂ ವ್ಯಾಪಿಸುವ ಸ್ವಭಾವವುಳ್ಳವನೂ, ಅವ್ಯಯನೂ ಆದ ಅಗ್ನಿಹೋತ್ರನು ನನ್ನ ಬಾಲವನ್ನೇ ದಹಿಸದಿರುವಾಗ, ಮಹಾ ಪೂಜ್ಯಳಾದ ಸೀತೆಯನ್ನು ದಹಿಸುವನೆ! ಎಂದಿಗೂ ಇಲ್ಲವು'' ಈ ರೀತಿ ಚಿಂತಿಸಿದ ಆ ಹನುಮಂತನು ತಾನು ಸಮುದ್ರವನ್ನು ದಾಟುವಾಗ ಮೇಲಕ್ಕೆದ್ದುಬಂದ ಮೈನಾಕಪರ್ವತವನ್ನು ಸ್ಮರಿಸಿ ಅದೂ ಸೀತೆಯ ಪ್ರಭಾವವೆಂದೇ ತಿಳಿದುಕೊಂಡವನಾಗಿ, ‘‘ಸೀತೆಯು ತನ್ನ ತಪಶ್ಶಕ್ತಿಯಿಂದಲೂ, ಸತ್ಯದಿಂದಲೂ, ಪತಿಗಿಂತಲೂ ಪರದೈವವಿಲ್ಲವೆಂಬ ಏಕಾಗ್ರಮನಸ್ಸಿನಿಂದಿರುವ

ಅಪಿಸಾ ನಿರ್ದಹೇದಗ್ನಿಂ ನತಾಮಗ್ನಿಃ ಪ್ರಧಕ್ಷ್ಯತಿ" ॥ ೨೯ ॥ ಸತಥಾ ಚಿಂತಯಂಸ್ತತ್ರ ದೇವ್ಯಾಧರ್ಮಪರಿಗ್ರಹಂ । ಶುಶ್ರಾವ ಹನುಮಾನ್ವಾಕ್ಯಂ ಚಾರಣಾನಾಂ ಮಹಾತ್ಮನಾಂ ॥೩೦॥ "ಅಹೋಖಲು ಕೃತಂ ಕರ್ಮ ದುಷ್ಕರಂಹಿ ಹನೂಮತಾ । ಅಗ್ನಿಂ ವಿಸೃಜತಾಽಭೀಕ್ಷ್ಣಂ ಭೀಮಂ ರಾಕ್ಷಸವೇಶ್ಮನಿ ॥ ೩೧ ॥ ಪ್ರಪಲಾಯಿತರಕ್ಷಸ್ತ್ರೀಬಾಲವೃದ್ಧ ಸಮಾಕುಲಾ । ಜನಕೋಲಾಹಲಾಧ್ಮಾತಾ ಕ್ರಂದಂತೀವಾದ್ರಿಕಂದರೇ ॥ ೩೨ ॥ ದಗ್ಧೇಯಂ ನಗರೀ ಸರ್ವಾ ಸಾಟ್ಟಪ್ರಾಕಾರತೋರಣಾ । ಜಾನಕೀ ನಚದಗ್ಧೇತಿ

ಸತ್ಯವಾಕ್ಯೇನ - ಸತ್ಯವಚನದಿಂದಲೂ, ಭರ್ತರಿ - ಪತಿಯ ವಿಷಯದಲ್ಲಿ, ಅನನ್ಯತ್ವಾಚ್ಚ - ನೀನೇಗತಿಯೆಂದು ನಂಬಿರೋಣದರಿಂದಲೂ, ಅಗ್ನಿಮಪಿ-ಯಜ್ಞೇಶ್ವರನನ್ನೂ ಸಹ, ನಿರ್ದಹೇತ್-ದಹಿಸಿಯಾಳು. ತಾಂ - ಆ ಸೀತಾದೇವಿಯನ್ನು, ಅಗ್ನಿಃ - ಬೆಂಕಿಯು, ನಪ್ರಧಕ್ಷ್ಯತಿ - ಸುಡಲಾರದು. ॥೨೯॥ ತತ್ರ-ಆ ಲಂಕಾಪಟ್ಟಣದಲ್ಲಿ, ತಥಾ - ಆ ಪಕಾರ, ದೇವ್ಯಾಃ - ಸೀತಾದೇವಿಯ, ಧರ್ಮ....ಹಂ - ಧರ್ಮ ಪ್ರಭಾವವನ್ನು, ಚಿಂತಯನ್ - ಆಲೋಚಿಸುತ್ತಿರುವ, ಸಹನುಮಾನ್ - ಆ ಆಂಜನೇಯನು, ಮಹಾತ್ಮನಾಂ - ಮಹಾನುಭಾವರಾದ, ಚಾರಣಾನಾಂ - ಚಾರಣರ, ವಾಕ್ಯಂ - ಮಾತನ್ನು, ಶುಶ್ರಾವ - ಕೇಳಿದನು. ॥ ೩೦ ॥ ರಾಕ್ಷ....ನಿ - ರಕ್ಕಸರ ಮನೆಗಳಲ್ಲಿ, ಭೀಮಂ - ಭಯಂಕರವಾದ, ಅಗ್ನಿಂ - ಯಜ್ಞೇಶ್ವರನನ್ನು, ಅಭೀಕ್ಷ್ಣಂ - ಬಾರಿಬಾರಿಗೂ, ವಿಸೃಜತಾ - ಬಿಡುತ್ತಿರುವ, ಹನೂಮತಾಹಿ - ಆಂಜನೇಯನಿಂದಲೇ, ದುಷ್ಕರಂ - ಇತರರು ಮಾಡಲಸಾಧ್ಯವಾದ, ಕರ್ಮ - ಕೃತ್ಯವು, ಕೃತಂ - ಮಾಡಲ್ಪಟ್ಟಿತು, ಅಹೋಖಲು - ಆಶ್ಚರ್ಯವಷ್ಟೆ, ಪ್ರಪ....ಲಾ - ಓಡಿಹೋಗುತ್ತಿರುವ ಅಸುರರಿಂದಲೂ, ಹೆಂಗಳಿಂದಲೂ, ಹುಡುಗರಿಂದಲೂ, ಮುದುಕರಿಂದಲೂ ತುಂಬಿದ, ಜನ....ತಾ - ಜನರ ಕೋಲಾಹಲ ಧ್ವನಿಗಳಿಂದ ವ್ಯಾಪ್ತವಾದಕಾರಣ, ಅದ್ರಿಕಂದರೇ - ಪರ್ವತದ ಗುಹೆಯಲ್ಲಿ, ಕ್ರಂದಂತೀವ-ಕೂಗುತ್ತದೆಯೋ ಎಂಬಂತಿರುವ, ಸಾಟ್ಟ....ಣಾ-ಕೋಟೆಕೊತ್ತಳಗಳಿಂಧಲೂ, ಹೊರಬಾಗಲುಗಳಿಂದಲೂ ಕೂಡಿದ, ಸರ್ವಾ - ಸಮಸ್ತವಾದ, ಇಯಂನಗರೀ - ಈ ಲಂಕಾಪಟ್ಟಣವು, ದಗ್ಧಾ - ಸುಡಲ್ಪಟ್ಟಿತು (ಆದರೂ), ಜಾನಕೀ - ಸೀತಾದೇವಿಯು, ನಚದಗ್ಧಾ - ಸುಡಲ್ಪಡಲೇ ಇಲ್ಲ,

ಪಾತಿವ್ರತ್ಯ ಮಹಿಮೆಯಿಂದಲೂ ಅಗ್ನಿಯನ್ನಾದರೂ ದಹಿಸಿಯಾಳೇ ಹೊರ್ತು ಅಗ್ನಿಯು ಆಕೆಯನ್ನು ಎಷ್ಟುಮಾತ್ರಕ್ಕೂ ದಹಿಸಲಾರದು" ಎಂದು ನಿರ್ಧರಿಸಿ ಸಮಾಧಾನವನ್ನು ಪಡೆದನು. ॥ ೨೬—೨೯ ॥ ಆ ಸಮಯದಲ್ಲಿ ಗಗನಸಂಚಾರಿಗಳಾದ ಚಾರಣರೂ ಸಹ, "ಆಹ! ಈ ಆಂಜನೇಯನು ರಾಕ್ಷಸರ ಗೃಹಗಳಲ್ಲೆಲ್ಲ ಬಹು ಭಯಂಕರವಾದ ಬೆಂಕಿಯನ್ನಿಟ್ಟು ಅವುಗಳೆಲ್ಲವನ್ನೂ ಸುಟ್ಟು ಬೂದಿ ಮಾಡಿದನು. ಈ ಕಾರ್ಯವು ಯಾರಿಗೂ ಸಾಧ್ಯವಲ್ಲವು. ಈತನು ಅತ್ಯಸಾಧ್ಯವಾದ ಕಾರ್ಯವನ್ನುಮಾಡಿಬಿಟ್ಟನು. ಆಶ್ಚರ್ಯ! ಆಶ್ಚರ್ಯ!! ಬೆಂಕಿಯ ಬೇಗೆಯನ್ನು ಸಹಿಸಲಾರದೆ ಈ ಲಂಕಾಪಟ್ಟಣದಲ್ಲಿರುವ, ಸ್ತ್ರೀಬಾಲವೃದ್ಧರಾದಿಯಾಗಿ ಎಲ್ಲರೂ ನಾಲ್ಕೂ ದಿಕ್ಕುಗಳಿಗೆ ಓಡಿಹೋಗುತ್ತ ಗೋಳಾಡುತ್ತಿರುವ ಕೋಲಾಹಲ ಧ್ವನಿಯು ಪರ್ವತಗಳ ಗುಹೆಗಳಲ್ಲಿಯೂ ತುಂಬಿಹೋಗಿದೆ. ಇದರಿಂದ ಆ ಪರ್ವತಗಳೂ ಗೋಳಿಡುತ್ತಿರುವುವೋ ಎಂಬಂತಿರುವುವು. ಇಷ್ಟೆಯಲ್ಲದೆ ಈ ಲಂಕಾನಗರವೆಲ್ಲವೂ, ಕೋಟೆಕೊತ್ತಳಗಳಿಂದಲೂ, ಪ್ರಾಕಾರಗಳೊಡನೆಯೂ, ಬಹಿರ್ದ್ವಾರಗಳೊಡನೆಯೂ ದಗ್ಧವಾಗಿ ಹೋಯಿತು. ಇಂತಹ ಕ್ಷೋಭೆಯಲ್ಲಿಯೂ ಸೀತಾದೇವಿಯು ಮಾತ್ರ ದಹಿಸಲಿಲ್ಲವು.

ವಿಸ್ಮಯೋದ್ಭುತನೋಽವನಃ" ॥೩೩॥ ಇತಿ ಶುಶ್ರಾವ ಹನುಮಾನ್ವಾಚಂ ತಾಮುವ್ಯತೋ ಪವನಾಂ । ಬಭೂವ ಚಾಸ್ಯಮನಸೋ ಹರ್ಷಸ್ತತ್ಕಾಲಸಂಭವಃ ॥ ೩೪ ॥ ಸನಿಮಿತ್ತೈಶ್ಚ ದೃಷ್ಟಾರ್ಥೈಃ ಕಾರಣೈಶ್ಚ ಮಹಾಗುಣೈಃ । ಋಷಿವಾಕ್ಯೈಶ್ಚ ಹನುಮಾನಭವತ್ಪ್ರೀತಮಾನಸಃ ॥ ೩೫ ॥

ತತಃ ಕಪಿಃ ಪ್ರಾಪ್ತಮನೋರಥಾರ್ಥ
ಸ್ತಾಮಕ್ಷತಾಂ ರಾಜಸುತಾಂ ವಿದಿತ್ವಾ ।
ಪ್ರತ್ಯಕ್ಷತಸ್ತಾಂ ಪುನರೇವ ದೃಷ್ಟ್ವಾ
ಪ್ರತಿಪ್ರಯಾಣಾಯ ಮತಿಂ ಚಕಾರ ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಪಂಚಾಶಸ್ಸರ್ಗಃ

ಇತಿ - ಇಂತೆಂದು, ನಃ - ನಮಗೆ, ವಿಸ್ಮಯಃ - ಆಶ್ಚರ್ಯವು, ಅದ್ಭುತವಿವ - ಎಂದಿಗೂ ಅನುಭವಿಸಿದ್ದೆಯಿಲ್ಲ. ॥ ೩೩ ॥ ಸಹನುಮಾ್ - ಆ ಆಂಜನೇಯನು, ದೃಷ್ಟಾರ್ಥೈಃ - ಕಾಣಲ್ಪಟ್ಟ ಫಲಸಂವಾದವುಳ್ಳ, ನಿಮಿತ್ತೈಃ - ಬಲಗಣ್ಣು ಮಂತಾದವುಗಳ ಚಲನಾದಿರೂಪಗಳಾದ ಶುಭಶಕುನಗಳಿಂದಲೂ, ಮಹಾಗುಣೈಃ - ಸುಗುಣಗಳುಳ್ಳ, ಕಾರಣೈಶ್ಚ - ಸೀತಾ ಪಾತಿವ್ರತ್ಯ, ರಾಮಪ್ರಭಾವಾದಿ ರೂಪಗಳಾದ ಕಾರಣಗಳಿಂದಲೂ, ಋಷಿವಾಕ್ಯೈಶ್ಚ-ಋಷಿಜನರ ಮಾತುಗಳಿಂದಲೂ, ಪ್ರೀತಮಾನಸಃ-ಸಂತೋಷಗೊಂಡ ಮನವುಳ್ಳವನು, ಅಭವತ್ - ಆದನು. ॥ ೩೪ ॥ ಕಪಿಃ - ಆಂಜನೇಯನು, ರಾಜಸುತಾಂ - ಜನಕರಾಜಪುತ್ರಿಯಾದ, ತಾಂ - ಆ ಸೀತಾದೇವಿಯನ್ನು, ಅಕ್ಷತಾಂ - ಸುಖಿಯನ್ನಾಗಿ, (ಚಾರಣೈಃ - ಚಾರಣರಿಂದ), ವಿದಿತ್ವಾ - ಅರಿತು, ಪುನಃ - ಮತ್ತು, ಪ್ರತ್ಯಕ್ಷತಃ - ಪ್ರತ್ಯಕ್ಷವಾಗಿ, ತಾಮೇವ - ಆ ಸೀತಾದೇವಿಯನ್ನೇ, ದೃಷ್ಟ್ವಾ - ಕಂಡು, ಪ್ರಾಪ್ತ....ರ್ಥಃ - ಹೊಂದಲ್ಪಟ್ಟ ಇಷ್ಟಾರ್ಥವುಳ್ಳವನಾಗಿ, ತತಃ - ಬಳಿಕ, ಪ್ರ....ಯ - ಹಿಂತಿರುಗಿ ಹೋಗಲು, ಮತಿಂ - ಬುದ್ಧಿಯನ್ನು, ಚಕಾರ - ಮಾಡಿದನು. ॥ ೩೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಪಂಚಾಶಸ್ಸರ್ಗಃ

ಇದು ಮಹದಾಶ್ಚರ್ಯವು! ಈ ಮೊದಲು ನಾವು ಇಂತಹ ಆಶ್ಚರ್ಯವನ್ನೇ ಕಂಡುದಿಲ್ಲವು" ಎಂದು ಮಾತನಾಡಿಕೊಳ್ಳುತ್ತಿದ್ದರು. ಮಹಾ ವಾನರನಾದ ಹನುಮಂತನು ಆ ಮಾತುಗಳನ್ನು ಕೇಳಿ, ಆಗಲೇ ತನ್ನ ಅನುಭವಕ್ಕೆ ಬಂದಿದ್ದ ಶುಭಶಕುನಗಳನ್ನೂ ಕಂಡು, ಶ್ರೀರಾಮನ ಪ್ರಭಾವದಿಂದಲೂ, ಸೀತಾದೇವಿಯ ಪಾತಿವ್ರತ್ಯ ಪ್ರಭಾವದಿಂದಲೂ ಇನ್ನೂ ಇತರ ಕಾರಣಗಳಿಂದಲೂ ಸೀತೆಗೆ ಯಾವ ಅಪಾಯವೂ ಉಂಟಾಗಿರದೆಂದು ನಿಶ್ಚಯಿಸಿ ಸಂತುಷ್ಟಮಾನಸನಾದನು. ಹೀಗೆ ಆ ಹನುಮಂತನು ತಾನು ಉದ್ದೇಶಿಸಿ ಬಂದ ಕಾರ್ಯವು ನೆರವೇರಿತೆಂದು ಸಂತೋಷಪಟ್ಟುಕೊಂಡು, ಸೀತಾದೇವಿಗೂ ಯಾವ ಅಪಾಯವೂ ಸಂಭವಿಸಿಲ್ಲವೆಂಬುದನ್ನರಿತು ಪುನಃ ಆಕೆಯನ್ನು ಕಣ್ಣಾರ ಕಂಡನಂತರವೇ ಹಿಂತಿರುಗಿ ಪ್ರಯಾಣ ಮಾಡಬೇಕೆಂದು ನಿಶ್ಚಯಿಸಿಕೊಂಡನು. ॥ ೩೦-೩೬ ॥

ಇಂತಿದು ಹನುಮಚ್ಚಿಂತಾ ಪ್ರಕಾರವೆಂಬ ಐವತ್ತೈದನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಷಟ್ಪಂಚಾಶಸ್ಸರ್ಗಃ

ತತಸ್ತು ಶಿಂಶುಪಾಮೂಲೇ ಜಾನಕೀಂ ಪರ್ಯುಪಸ್ಥಿತಾಂ । ಅಭಿವಾದ್ಯಾ ಬ್ರವೀ"ದ್ದಿಷ್ಟ್ಯಾಪಶ್ಯಾಮಿತ್ವಾಮಿಹಾಕ್ಷತಾಂ" ॥೧॥ ತತಸ್ತಂ ಪ್ರಸ್ಥಿತಂ ಸೀತಾ ವೀಕ್ಷ ಮಾಣಾ ಪುನಃ ಪುನಃ । ಭರ್ತೃಸ್ನೇಹಾನ್ವಿತಂ ವಾಕ್ಯಂ ಹನೂಮಂತಮಭಾಷತ ॥ ೨ ॥ "ಕಾಮಮಸ್ಯ ತ್ವಮೇವೈಕಃ ಕಾರ್ಯಸ್ಯ ಪರಿಸಾಧನೇ । ಪರ್ಯಾಪ್ತಃ ಪರವೀರಘ್ನ! ಯಶಸ್ಯಸ್ತೇ ಬಲೋದಯಃ ॥ ೩ ॥ ಶರೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರ

ತತಸ್ತು - ಆ ಬಳಿಕಾದರೆ, ಶಿಂಶುಪಾಮೂಲೇ - ಶಿಂಶುಪಾವೃಕ್ಷದ ಕೆಳಗೆ, ಪರ್ಯುಪಸ್ಥಿತಾಂ- ಕುಳಿತುಕೊಂಡಿರುವ, ಜಾನಕೀಂ - ಸೀತಾದೇವಿಯನ್ನು ಕುರಿತು, ಅಭಿವಾದ್ಯ - ನಮಸ್ಕರಿಸಿ, ಇಹ - ಇಲ್ಲಿ, ತ್ವಾಂ - ನಿನ್ನನ್ನು, ಅಕ್ಷತಾಂ - ಸುಖದಿಂದಿರುವುದನ್ನು. ದಿಷ್ಟ್ಯಾ - ನನ್ನ ಭಾಗ್ಯದಿಂದ, ಪಶ್ಯಾಮಿ - ಕಂಡೆನು, (ಇತಿ - ಇಂತೆಂದು), ಅಬ್ರವೀತ್ - ನುಡಿದನು. ॥ ೧ ॥ ತತಃ - ಬಳಿಕ, ಸೀತಾ - ಸೀತಾದೇವಿಯು, ಪ್ರಸ್ಥಿತಂ - ಪ್ರಯಾಣೋದ್ಯುಕ್ತನಾದ, ತಂಹನುಮಂತಂ - ಆ ಆಂಜ ನೇಯನನ್ನು, ಪುನಃಪುನಃ - ಬಾರಿಬಾರಿಗೂ, ವೀಕ್ಷಮಾಣಾ - ನೋಡುತ್ತ, ಭರ್ತೃ....ತಂ - ಪತಿ ಸ್ನೇಹದಿಂದ ಕೂಡಿದ, ವಾಕ್ಯಂ - ಮಾತನ್ನು, ಅಭಾಷತ - ನುಡಿದಳು. ॥ ೨ ॥ ಹೇ ಪರವೀರಘ್ನ - ಎಲೈ ಶತ್ರುದಮನನೇ, ಅಸ್ಯಕಾರ್ಯಸ್ಯ-ರಾಕ್ಷಸರೆಲ್ಲರನ್ನೂ ಕೊಂದು, ನನ್ನನ್ನು ಶ್ರೀರಾಮನ ಬಳಿಗೈದಿ ಸುವ ಕಾರ್ಯದ, ಪರಿಸಾಧನೇ - ಸಾಧಿಸುವ ವಿಷಯದಲ್ಲಿ, ತ್ವಮೇಕಏವ - ನೀನೊಬ್ಬನೇ, ಕಾಮಂ - ಬೇಕಾದಷ್ಟು, ಪರ್ಯಾಪ್ತಃ - ಶಕ್ತನಾಗಿರುವ, ಬಲೋದಯಃ - ಬಲಾಧಿಕ್ಯವು, (ಅಥವಾ - ಸೇನೆಯು ಬರುವಿಕೆಯು), ತೇ-ನಿನಗೇನೆ, ಯಶಸ್ಯಃ-ಶ್ರೇಯಸ್ಕರವಾದುದು, (ರಾಮಸ್ಯನ-ಶ್ರೀರಾಮನಿಗಲ್ಲ). ॥ ೩ ॥ ಪರಬಲಾರ್ದನಃ - ಶತ್ರುಸೇನಾನಾಯಕನಾದ, ಕಾಕುತ್ಥ್ಸಃ - ಶ್ರೀರಾಮನು, ಲಂಕಾಂತು - ಲಂಕಾಪಟ್ಟಣವನ್ನು, ಶರೈಃ - ಬಾಣಗಳಿಂದ, ಸಂಕುಲಾಂ - ವ್ಯಾಪ್ತವಾದದ್ದನ್ನಾಗಿ, ಕೃತ್ವಾ -

---

ಆ ಬಳಿಕ ಹನುಮಂತನು ಶಿಂಶುಪಾವೃಕ್ಷದ ಕೆಳಗೆ ಕುಳಿತಿದ್ದ ಸೀತಾದೇವಿಯ ಬಳಿಗೈದಿ ಆಕೆಗೆ ನಮಸ್ಕರಿಸಿ, " ತಾಯೇ! ಇಷ್ಟು ಅಪಾಯುಗಳಲ್ಲಿಯೂ ಸುಖದಿಂದಿರುವ ನಿನ್ನನ್ನು ನೋಡಿದುದು ನನ್ನ ಭಾಗ್ಯದಿಂದಲೇ ಅಲ್ಲದೆ ಮತ್ತೆ ಬೇರೆಯಲ್ಲವು " ಎಂದು ಹೇಳಿದನು. ಆಗ ಪ್ರಯಾಣೋನ್ಮುಖನಾಗಿರುವ ಆತನನ್ನು ನೋಡಿ ಸೀತಾದೇವಿಯು ವಾತ್ಸಲ್ಯಪೂರಿತ ದೃಷ್ಟಿಯಿಂದಡಿಗಡಿಗೂ ನೋಡುತ್ತ, ತನ್ನ ಪತಿಪ್ರೇಮಸೂಚಕವಾದ ಮಾತಿನಿಂದ ಆತನನ್ನು ಕುರಿತು, " ಎಲೈ ಶತ್ರುನಾಶಕನೇ! ಇಲ್ಲಿರುವ ರಾಕ್ಷಸರೆಲ್ಲರನ್ನೂ ಸಂಹರಿಸಿ ನನ್ನನ್ನು ರಾಮನ ಬಳಿಗೈದಿಸಲು ನೀನೊಬ್ಬನೇ ಸಮರ್ಥನಾಗಿರುವೆ. ನಿನ್ನ ಬಲೋದಯವು ಬಹಳ ದೊಡ್ಡದು. ನೀನು ಬಲಪರಾಕ್ರಮಗಳಿಂದ ಇಲ್ಲಿ ಮಾಡಿದ ಅದ್ಭುತ ಕಾರ್ಯಗಳೆಲ್ಲವೂ ನಿನಗೆ ಅಪಾರ ಕೀರ್ತಿಯನ್ನು ತರತಕ್ಕವುಗಳಾಗಿರುವುವು. ಆದರೂ ಶತ್ರುಸೈನ್ಯಗಳನ್ನು ದುಃಖಗೊಳಿಸುವವನೂ, ಕಕುತ್ಸ್ಥವಂಶೋದ್ಭವನೂ ಆದ ಶ್ರೀರಾಮ ಚಂದ್ರನು ಸಾಕ್ಷಾತ್ತಾಗಿ ಈ ಲಂಕಾನಗರಕ್ಕೈತಂದು ತನ್ನ ಬಾಣಪರಂಪರೆಗಳಿಂದ ಈ

ಬಲಾರ್ದನಃ । ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್ ॥ ೪ ॥ ತದ್ಯಥಾ ತಸ್ಯ ವಿಕ್ರಾಂತಮನುರೂಪಂ ಮಹಾತ್ಮನಃ । ಭವತ್ಯಾಹವಶೂರಸ್ಯ ತಥಾ ತ್ವಮುಪಪಾದಯ" ॥ ೫ ॥ ತದರ್ಥೋಪಹಿತಂ ವಾಕ್ಯಂ ಪ್ರಶ್ರಿತಂ ಹೇತುಸಂಹಿತಂ । ನಿಶಮ್ಯ ಹನುಮಾಂಸ್ತಸ್ಯಾ ವಾಕ್ಯಮುತ್ತರಮಬ್ರವೀತ್ ॥ ೬ ॥ "ಕ್ಷಿಪ್ರಮೇಷ್ಯತಿ ಕಾಕುತ್ಸ್ಥೋ ಹರ್ಯೃಕ್ಷಪ್ರವರೈರ್ವೃತಃ । ಯಸ್ತೇ ಯುಧಿ ವಿಜಿತ್ಯಾರೀನ್ ಶೋಕಂ ವ್ಯಪನಯಿಷ್ಯತಿ" ॥ ೭ ॥ ಏವಮಾಶ್ವಾಸ್ಯ ವೈದೇಹೀಂ ಹನೂಮಾನ್ಮಾರುತಾತ್ಮಜಃ । ಗಮನಾಯ ಮತಿಂ ಕೃತ್ವಾ ವೈದೇಹೀಮಭ್ಯವಾದಯತ್ ॥೮॥ ತತಸ್ಸಕಪಿಶಾರ್ದೂಲ

ಮಾಡಿ, ಮಾಂ - ನನ್ನನ್ನು, ನಯೇದ್ಯದಿ - ಕರೆದುಕೊಂಡು ಹೋದರೆ, ತತ್ - ಆ ಕಾರ್ಯವು, ತಸ್ಯ - ಆ ಶ್ರೀರಾಮನಿಗೆ, ಸದೃಶಂ - ಸಮಾನವಾದುದು, ಭವೇತ್ - ಆದೀತು. ॥ ೪ ॥ ತತ್ - ಆ ಕಾರಣದಿಂದ, ಮಹಾತ್ಮನಃ - ಮಹಾನುಭಾವನಾದ, ಆಹವಶೂರಸ್ಯ - ಯುದ್ಧವೀರನಾದ, ತಸ್ಯ- ಆ ಶ್ರೀರಾಮನ, ವಿಕ್ರಾಂತಂ - ಪರಾಕ್ರಮವು, ಅನುರೂಪಂ - ತಕ್ಕುದಾಗಿ, ಯಥಾಭವತಿ - ಹೇಗಾಗುವದೋ, ತಥಾ - ಆ ಪ್ರಕಾರ, ತ್ವಂ - ನೀನು, ಉಪಪಾದಯ - ಸಂಧಾನಮಾಡು. ॥ ೫ ॥ ಹನುಮಾನ್ - ಆಂಜನೇಯನು, ಅರ್ಥೋಪಹಿತಂ - ಅರ್ಥಯುಕ್ತವಾದ, ಪ್ರಶ್ರಿತಂ - ನಯವಾಗಿರುವ, ಹೇತುಸಂಹಿತಂ - ಸಕಾರಣವಾಗಿರುವ, ತಸ್ಯಾಃ - ಆ ಸೀತಾದೇವಿಯ, ತದ್ವಾಕ್ಯಂ - ಆ ಮಾತನ್ನು, ನಿಶಮ್ಯ - ಕೇಳಿ, ಉತ್ತರಂ - ಮುಂದೆ ಹೇಳತಕ್ಕ, ವಾಕ್ಯಂ - ಮಾತನ್ನು, ಅಬ್ರವೀತ್ - ಹೇಳಿದನು. ॥ ೬ ॥ ಯಃ - ಯಾವ ಶ್ರೀರಾಮನು, ಅರೀನ್ - ಶತ್ರುಗಳನ್ನು, ಯುಧಿ - ಯುದ್ಧದಲ್ಲಿ, ವಿಜಿತ್ಯ - ಜಯಿಸಿ, ತೇ - ನಿನ್ನ, ಶೋಕಂ - ವ್ಯಸನವನ್ನು, ವ್ಯಪನಯಿಷ್ಯತಿ - ಹೋಗಲಾಡಿಸುವನೋ, ಸಕಾಕುತ್ಸ್ಥಃ - ಆ ಶ್ರೀರಾಮನು, ಹರ್ಯೃಕ್ಷಪ್ರವರೈಃ - ಕಪಿಋಕ್ಷಶ್ರೇಷ್ಠರಿಂದ, ವೃತಃ - ಕೂಡಿದವನಾಗಿ, ಕ್ಷಿಪ್ರಂ - ಬೇಗನೆ, ಏಷ್ಯತಿ - ಬರುವನು. ॥ ೭ ॥ ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ವೈದೇಹೀಂ - ಸೀತಾದೇವಿಯನ್ನು, ಏವಂ - ಈ ಪ್ರಕಾರ, ಆಶ್ವಾಸ್ಯ- ಸಮಾಧಾನಗೊಳಿಸಿ, ಗಮನಾಯ - ಹೊರಡುವುದಕ್ಕೆ, ಮತಿಂ - ಬುದ್ಧಿಯನ್ನು, ಕೃತ್ವಾ - ಮಾಡಿ, ವೈದೇಹೀಂ - ಸೀತಾದೇವಿಯನ್ನು, ಅಭ್ಯವಾದಯತ್ - ವಂದಿಸಿದನು. ॥ ೮ ॥ ತತಃ - ಬಳಿಕ,

---

ನಗರವೆಲ್ಲವನ್ನೂ ನಾಶಗೊಳಿಸಿ ನನ್ನನ್ನು ಕರೆದುಕೊಂಡು ಹೋದರೆ ಅದು ಆತನ ಕೀರ್ತಿಗೆ ತಕ್ಕುದಾಗುವುದು. ಆದುದರಿಂದ ಎಲೈ ಆಂಜನೇಯಾ! ಮಹಾತ್ಮನೂ, ಯುದ್ಧವೀರನೂ ಆದ ನನ್ನ ನಾಥನು ತನ್ನ ಬಲಪರಾಕ್ರಮಗಳಿಗೆ ತಕ್ಕಂತೆ ಉದ್ಯೋಗಿಸಲು ನೀನು ಸಂಧಾನ ಮಾಡಬೇಕು. ಆತನು ಹಾಗೆ ಮಾಡುವಂತೆ ಪ್ರೇರೇಪಿಸಲು ನೀನು ಪ್ರಯತ್ನಪಡಬೇಕು" ಎಂದು ಹೇಳಿದಳು. ॥ ೧–೫ ॥ ಆಗ ವಿಶೇಷಾರ್ಥವುಳ್ಳುದೂ, ಮಹಾ ವಿನಯದಿಂದ ಕೂಡಿದುದೂ, ಸಕಾರಣವಾಗಿರುವುದೂ, ಯುಕ್ತಿಯುಕ್ತವಾಗಿರುವುದೂ ಆದ ಸೀತಾದೇವಿಯ ಮಾತುಗಳನ್ನು ಕೇಳಿ ಹನುಮಂತನು, "ಅಮ್ಮಾ ಸೀತಾದೇವಿಯೇ! ಯುದ್ಧದಲ್ಲಿ ಶತ್ರುಗಳೆಲ್ಲರನ್ನೂ ಸಂಹರಿಸಿ, ನಿನ್ನ ವ್ಯಸನವನ್ನು ಹೋಗಲಾಡಿಸಿ ನಿನ್ನನ್ನು ಹಿಂದಕ್ಕೆ ಕರೆದುಕೊಂಡು ಹೋಗುವ ಶ್ರೀರಾಮಮೂರ್ತಿಯು ಶೀಘ್ರವಾಗಿಯೇ ವಾನರಭಲ್ಲೂಕ ಸೈನ್ಯಗಳೊಡನೆ ಈ ಲಂಕೆಗೆ ಬರುವನು" ಎಂದು ಹೇಳಿದನು. ಹೀಗೆ ಆ ವಾನರವೀರನು ಸೀತೆಯನ್ನು ಸಮಾಧಾನಗೊಳಿಸಿ ಶ್ರೀರಾಮನ ಬಳಿಗೆ ಹೋಗಲಿಚ್ಛೆಯುಳ್ಳವನಾಗಿ ಸೀತಾ

ಸ್ವಾಮಿಸಂದರ್ಶನೋತ್ಸುಕಃ । ಆರುರೋಹ ಗಿರಿಶ್ರೇಷ್ಠಮರಿಷ್ಟಮರಿಮರ್ದನಃ ॥೯॥ ತುಂಗಪದ್ಮಕಜುಷ್ಟಾಭಿರ್ನೀಲಾಭಿರ್ವನರಾಜಿಭಿಃ । ಸೋತ್ತರೀಯಮಿವಾಂಭೋದೈಶ್ಶೃಂಗಾಂತರವಿಲಂಬಿಭಿಃ ॥೧೦॥ ಬೋಧ್ಯಮಾನಮಿವಪ್ರೀತ್ಯಾ ದಿವಾಕರಕರೈಶ್ಶುಭೈಃ । ಉನ್ಮಿಷಂತಮಿವೋದ್ಧೂತೈರ್ಲೋಚನೈರಿವ ಧಾತುಭಿಃ ॥ ೧೧ ॥ ತೋಯೌಘನಿಸ್ಸ್ವನೈರ್ಮಂದ್ರೈಃ ಪ್ರಾಧೀತಮಿವ ಪರ್ವತಂ । ಪ್ರಗೀತಮಿವ ವಿಸ್ಪಷ್ಟೈರ್ನಾನಾಪ್ರಸ್ರವಣಸ್ವನೈಃ ॥ ೧೨ ॥ ದೇವದಾರುಭಿರತ್ಯುಚ್ಚೈರೂರ್ಧ್ವಬಾಹುಮಿವಸ್ಥಿತಂ । ಪ್ರಪಾತಜಲನಿರ್ಘೋಷೈಃ ಪ್ರಾಕ್ರುಷ್ಟಮಿವ ಸರ್ವತಃ ॥ ೧೩ ॥ ವೇಪಮಾನಮಿವ

ಅರಿಮರ್ದನಃ - ಶತ್ರುನಾಶಕನಾದ, ಸಕ....ಲಃ - ಆ ವಾನರಶ್ರೇಷ್ಠನು, ಸ್ವಾಮಿ....ಕಃ - ಒಡೆಯನ ದರ್ಶದದಲ್ಲಿ ಉತ್ಕಂಠಿತನಾಗಿ, ಗಿರಿಶ್ರೇಷ್ಠಂ - ಪರ್ವತೋತ್ತಮವಾದ, ಅರಿಷ್ಟಂ - ಅರಿಷ್ಟವೆಂಬ ಪರ್ವತವನ್ನು, ಅರುರೋಹ - ಏರಿದನು. ॥ ೯ ॥ ತುಂಗ....ಭಿಃ - ಉನ್ನತಗಳಾದ ಪದ್ಮಕವೃಕ್ಷಗಳಿಂದ ತುಂಬಿದ, ನೀಲಾಭಿಃ - ಕಪ್ಪಾಗಿರುವ, ವನರಾಜಿಭಿಃ - ವನಪಙ್ತಿಗಳಿಂದ, ಶೃಂಗಾಂ....ಭಿಃ - ಶಿಖರಗಳ ಮಧ್ಯದಲ್ಲಿ ಜೋಲಾಡುತ್ತಿರುವ, ಅಂಭೋದೈಃ - ಮೇಘಗಳಿಂದ, ಸೋತ್ತ....ತಂ - ಹೊದಿಕೆಯ ವಸ್ತ್ರದಿಂದೊಡಗೂಡಿರುವ, ಶುಭೈಃ - ಮಂಗಳಕರವಾದ, ದಿವಾಕರಕರೈಃ - ಸೂರ್ಯ ಕಿರಣಗಳೆಂಬ ಕೈಗಳಿಂದ, ಪ್ರೀತ್ಯಾ-ವಿಶ್ವಾಸದಿಂದ, ಬೋಧ್ಯ....ತಂ-ಎಚ್ಚರಗೊಳಿಸಲ್ಪಟ್ಟಂತಿರುವ, ಉದ್ಧೂತೈಃ - ತೆರೆಯಲ್ಪಟ್ಟ, ಲೋಚನೈರಿವಸ್ಥಿತೈಃ - ನೇತ್ರಗಳಂತಿರುವ, ಧಾತುಭಿಃ - ಗೈರಿಕಾದಿ ಧಾತುಗಳಿಂದ, ಉನ್ಮಿಷಂತಮಿವಸ್ಥಿತಂ - ನೋಡುತ್ತದೆಯೋ ಎಂಬಂತಿರುವ, ಮಂದ್ರೈಃ - ಗಂಭೀರಗಳಾದ, ತೋಯೌ....ನೈಃ - ಬೆಟ್ಟದ ಹೊಳೆಗಳ ನೀರಿನ ಶಬ್ದಗಳಿಂದ, ಪ್ರಾಧೀ....ತಂ - ಅಧ್ಯಯನ ಮಾಡುವಂತಿರುವ, ವಿಸ್ಪಷ್ಟೈಃ - ಸ್ಪಷ್ಟವಾಗಿರುವ, ನಾನಾ....ನೈಃ - ಅನೇಕ ಬಗೆಯ ಬೆಟ್ಟದ ಜಾಗು ನೀರಿನ ಧ್ವನಿಗಳಿಂದ, ಪ್ರಗೀತಮಿವಸ್ಥಿತಂ - ಗಾನಮಾಡುತ್ತದೆಯೋ ಎಂಬಂತಿರುವ, ಪ್ರಪಾ....ಷೈಃ-ಜರತೆಗಳಿಂದ ಬೀಳುತ್ತಿರುವ ಪ್ರವಾಹದ ಧ್ವನಿಗಳಿಂದ, ಸರ್ವತಃ - ಎಲ್ಲಾ ಕಡೆಯಲ್ಲಿಯೂ, ಪ್ರಾಕ್ರು....ತಂ - ಆಕ್ರೋಶ ಮಾಡುತ್ತದೆಯೋ ಎಂಬಹಾಗಿರುವ, ಕಂಪಮಾನೈಃ - ಚಲಿಸುತ್ತಿರುವ, ಶ್ಯಾಮೈಃ - ಕಪ್ಪಾಗಿರುವ, ಶರದ್ಘನೈಃ - ಶರತ್ಕಾಲದಲ್ಲಿ ಪುಷ್ಪಿಸಿದ ಪಚ್ಚಕರ್ಪೂರದ ಗಿಡವೇ ಮೊದ

ದೇವಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿ ಹೊರಡಲನುವಾದನು. ಆಮೇಲೆ ಆ ಮಹಾವಾನರನು ತನ್ನ ಸ್ವಾಮಿಯನ್ನು ನೋಡಲು ಪರಮಾತುರನಾಗಿ ಲಂಕಾನಗರದಲ್ಲಿರುವ ಅರಿಷ್ಟ ಪರ್ವತವನ್ನೇರಿದನು. ॥ ೬-೯ ॥ ಆ ಅರಿಷ್ಟಪರ್ವತವಾದರೋ, ಮಹೋನ್ನತವಾದ ಪದ್ಮಕ ವೃಕ್ಷಗಳಿಂದ ತುಂಬಿ ಕಪ್ಪಾಗಿದ್ದ ವನರಾಜಿಯಿಂದ ಚಿತ್ರವರ್ಣದ ನಾರುಮಡಿಯನ್ನುಟ್ಟು ನಿಂತಿರುವಂತೆ ಕಾಣುತ್ತಿದ್ದಿತು. ಶಿಖರಗಳಮೇಲೆ ತೂಗಾಡುತ್ತಿರುವ ಮೇಘಗಳಿಂದ ಉತ್ತರೀಯವನ್ನು ಧರಿಸಿರುವುದೋ ಎಂಬಂತ್ತಿದ್ದಿತು. ಬಾಲಸೂರ್ಯನು ತನ್ನ ಕಿರಣಗಳೆಂಬ ಕೈಗಳಿಂದ ವಿಶ್ವಾಸಪೂರ್ವಕವಾಗಿ ಆ ಪರ್ವತವನ್ನು ಎಚ್ಚರಗೊಳಿಸುವಂತಿರಲು, ಆ ಪರ್ವತವೂ ಕೂಡ ಮನಶ್ಶಿಲಾದಿಧಾತುಗಳೆಂಬ ಕಣ್ಣುಗಳಿಂದೆಚ್ಚೆತ್ತು ನೋಡುತ್ತಿರುವಂತಿದ್ದಿತು. ಆ ಪರ್ವತವು ಅಲ್ಲಲ್ಲಿ ಹರಿಯುತ್ತಿರುವ ಪ್ರವಾಹಗಳಿಂದ ಕೂಡಿ ಧ್ವನಿಗೈಯುತ್ತ ವೇದಾಧ್ಯಯನ ಮಾಡುತ್ತಿರುವಂತಿದ್ದಿತು. ಸುತ್ತಲೂ ಹರಿದುಬರುತ್ತಿರುವ ಚಿಕ್ಕ ಚಿಕ್ಕ ಚಿಲುಮೆಗಳ ಧ್ವನಿಗಳಿಂದ ಆ ಪರ್ವತವು ಗಾನ ಮಾಡುತ್ತಿರುವಂತೆಯೂ ತೋರುತ್ತಿದ್ದಿತು.

ಶ್ಯಾಮೈಃ ಕಂಪಮಾನೈಶ್ಶರದ್ಘನೈಃ । ವೇಣುಭಿರ್ಮಾರುತೋದ್ಧೂತೈಃ ಕೂಜಂತಮಿವ ಕೀಚಕೈಃ ॥೧೪॥ ನಿಶ್ವಸಂತಮಿವಾಮರ್ಷಾದ್ಘೋರೈರಾಶೀವಿಷೋತ್ತಮೈಃ । ನೀಹಾರಕೃತಗಂಭೀರೈರ್ಧ್ಯಾಯಂತಮಿವ ಗಹ್ವರೈಃ ॥೧೫॥ ಮೇಘಪಾದನಿಭೈಃಪಾದೈಃ ಪ್ರಕ್ರಾಂತಮಿವ ಸರ್ವತಃ । ಜೃಂಭಮಾಣಮಿವಾಕಾಶೇ ಶಿಖರೈರಭ್ರಮಾಲಿಭಿಃ ॥೧೬॥ ಕೂಟೈಶ್ಚ ಬಹುಧಾಕೀರ್ಣೈಶ್ಶೋಭಿತಂ ಬಹುಕಂದರೈಃ । ಸಾಲತಾಲಾಶ್ವಕರ್ಣೈಶ್ಚ

ಲಾದ ವೃಕ್ಷಗಳಿಂದ, (ಪಾ - ಶರದ್ವನೈಃ - ಜಂಡುಹುಲ್ಲುಗಳಿಂದ ಅಥವಾ ಶರತ್ಕಾಲದಲ್ಲಿ ಬೆಳದಿರುವ ಏಳೆಲೆ ಬಾಳೆ ಮೊದಲಾದ ಗಿಡಗಳ ಗುಂಪುಗಳಿಂದ), ವೇಪ....ತಂ-ಕಂಪಿಸುತ್ತದೆಯೋ ಎಂಬಂತಿರುವ, ಮಾರು....ತೈಃ - ವಾಯುವಿನಿಂದ ಹೊಡೆಯಲ್ಪಟ್ಟ, ಕೀಚಕೈಃ - ಕೀಚಕಗಳೆಂಬ, ವೇಣುಭಿಃ - ಬಿದಿರುಗಳಿಂದ, ಕೂಜಂ....ತಂ - ಕೂಗುತ್ತದೆಯೋ ಎಂಬಹಾಗಿರುವ, ಘೋರೈಃ - ಭಯಂಕರವಾದ, ಆಶೀವಿಷೋತ್ತಮೈಃ-ಸರ್ಪಶ್ರೇಷ್ಠಗಳಿಂದ, ರೋಷಾತ್-ಹನುಮಂತನಲ್ಲಿನ ಕೋಪದಿಂದ, ನಿಶ್ವ....ತಂ-ನಿಟ್ಟುಸಿರು ಬಿಡುತ್ತದೆಯೋ ಎಂಬಂತಿರುವ, ನೀಹಾ....ರೈಃ - ಮಂಜಿನಿಂದ ನಿರುದ್ಧಗಳಾದ್ದರಿಂದ ನಿಶ್ಶಬ್ದವಾಗಿರುವ, ಗಹ್ವರೈಃ - ಗುಹೆಗಳಿಂದ, ಧ್ಯಾಯಂತಮಿವಸ್ಥಿತಂ - ಧ್ಯಾನಮಾಡುವಂತಿರುವ, ಮೇಘ....ಭೈಃ - ಸಣ್ಣಸಣ್ಣ ಮೇಘಗಳಿಗೆ ಸದೃಶಗಳಾದ, ಪಾದೈಃ - ಸಣ್ಣ ಗುಡ್ಡಗಳಿಂದ, ಸರ್ವತಃ-ಎಲ್ಲಾ ಕಡೆಯಲ್ಲಿಯೂ, ಪ್ರಕ್ರಾಂ....ತಂ - ಪ್ರಯಾಣಮಾಡುತ್ತದೆಯೋ ಎಂಬಂತಿರುವ, ಅಭ್ರಮಾಲಿಭಿಃ - ಮೇಘಗಳನ್ನು ಒರಿಯುತ್ತಿರುವ ಅಥವಾ ಮೇಘಪಙ್ಕ್ತಿಗಳುಳ್ಳ, ಶಿಖರೈಃ - ಶೃಂಗಗಳಿಂದ, ಆಕಾಶೇ - ಅಂತರಿಕ್ಷದಲ್ಲಿ, ಜೃಂಭ....ತಂ - ಗಾತ್ರಭಂಗವನ್ನು ಮಾಡಿಕೊಳ್ಳುತ್ತಿದೆಯೋ ಎಂಬಂತಿರುವ, ಬಹುಧಾ - ನಾನಾ ಬಗೆಯಾಗಿ, ಆಕೀರ್ಣೈಃ - ಎರಚಲ್ಪಟ್ಟ (ಅಂದರೆ ಆಂಜನೇಯನ ಪಾದ ಸ್ಪರ್ಶದಿಂದ ಶಿಥಿಲವಾದ), ಕೂಟೈಶ್ಚ-ಶಿಖರಗಳಿಂದಲೂ, ಬಹುಕಂದರೈಃ-ಅನೇಕ ಗುಹೆಗಳಿಂದಲೂ, ಶೋಭಿತಂ - ಹೊಳೆಯುತ್ತಿರುವ, ಸಾಲ....ಶ್ಚ - ಮಸಲೇಗಿಡಗಳಿಂದಲೂ, ತಾಳೇಗಿಡಗಳಿಂದಲೂ,

ಅದರಲ್ಲಿ ಅತ್ಯುನ್ನತವಾದ ದೇವದಾರು ವೃಕ್ಷಗಳು ಶೋಭಿಸುತ್ತಿರಲು ಆ ಪರ್ವತವು ಕೈಗಳನ್ನೆತ್ತಿ ತಪಸ್ಸು ಮಾಡುತ್ತಿರುವುದೋ ಎಂಬಂತಿದ್ದಿತು. ಆ ಪರ್ವತದಲ್ಲಿ ಅಲ್ಲಲ್ಲಿ ಬೀಳುತ್ತಿರುವ ಜಲಪಾತಗಳ ಮಹಾಧ್ವನಿಯಿಂದ ಆ ಪರ್ವತವೇ ಭಯಂಕರವಾಗಿ ಕೂಗಿಡುವಂತೆ ತೋರುತ್ತಿರುವುದು. ಗಾಳಿ ಬೀಸುವಾಗ ಚಲಿಸುವ ಕೀಚಕವೆಂಬ ಬಿದಿರು ಮೆಳೆಗಳ ಧ್ವನಿಯಿಂದ ಆ ಪರ್ವತವೇ ಕೂಗುತ್ತಿರುವಂತೆ ಕಾಣುವುದು. ಶಿಖರದಮೇಲೆ ನುಗ್ಗಿಬರುತ್ತಿರುವ ಶರತ್ಕಾಲದ ಮೇಘಗಳಿಂದ ತೂಗಾಡುತ್ತಿರುವ ಆ ಪರ್ವತವು ಗಡಗಡನೆ ನಡುಗುತ್ತಿರುವಂತೆ ಕಾಣುವುದು. ಮಹಾ ಭಯಂಕರ ಸರ್ಪಗಳು ಬುಸುಗುಟ್ಟುವುದರಿಂದುಂಟಾದ ಧ್ವನಿಯಿಂದ ಆ ಪರ್ವತವು ನಿಟ್ಟುಸಿರು ಬಿಡುವಂತೆ ತೋರುವುದು. ಮಂಜು ಮುಚ್ಚಿದ ಗುಹೆಗಳಿಂದ ತುಂಬಿದ್ದ ಆ ಪರ್ವತಶ್ರೇಷ್ಠವು ಮೌನವನ್ನು ಧರಿಸಿ ಯೋಗನಿಷ್ಠೆಯಲ್ಲಿರುವಂತಿದ್ದಿತು. ಮೇಘಗಳೇ ನೆಲಕ್ಕಿಳಿದಂತಿರುವ ತನ್ನ ಪ್ರತ್ಯಂತ ಪರ್ವತಗಳಿಂದ ನಡೆದು ಬರುವಂತೆಯೂ, ಮೇಘಪಙ್ಕ್ತಿಗಳಿಂದ ತುಂಬಿದ ಶಿಖರಗಳಿಂದ ಆಕಾಶದಲ್ಲಿ ಆಕಳಿಸುತ್ತ ಮೈಮುರಿಯುತ್ತಿರುವಂತೆ ಆ ಅರಿಷ್ಟಪರ್ವತವು ಕಾಣಿಸುತ್ತಿದ್ದಿತು. ॥ ೧೦–೧೬ ॥ ಇಷ್ಟೆಯಲ್ಲದೆ ಆ ಪರ್ವತವು ಅನೇಕ ಗುಹೆಗಳಿಂದ ತುಂಬಿದುದಾಗಿಯೂ, ಬಗೆಬಗೆಯಾಗಿ

ವಂಶೈಶ್ಚ ಬಹುಭಿರ್ವೃತಂ ॥ ೧೭ ॥ ಲತಾವಿತಾನೈರ್ವಿತತೈಃ ಪುಷ್ಪವದ್ಭಿರಲಂಕೃತಂ । ನಾನಾಮೃಗಗಣಾಕೀರ್ಣಂ ಧಾತುನಿಃಷ್ಯಂದಭೂಷಿತಂ ॥ ೧೮ ॥ ಬಹುಪ್ರಸ್ರವಣೋಪೇತಂ ಶಿಲಾಸಂಚಯಸಂಕಟಂ । ಮಹರ್ಷಿಯಕ್ಷಗಂಧರ್ವಕಿನ್ನರೋರಗಸೇವಿತಂ ॥ ೧೯ ॥ ಲತಾಪಾದಪಸಂಘಾತಂ ಸಿಂಹಾಧ್ಯುಷಿತಕಂದರಂ । ವ್ಯಾಘ್ರಸಂಘಸಮಾಕೀರ್ಣಂ ಸ್ವಾದುಮೂಲಫಲದ್ರುಮಂ ॥೨೦॥ ತಮಾರುರೋಹ ಹನುಮಾನ್ ಪರ್ವತಂ ಪವನಾತ್ಮಜಃ । ರಾಮದರ್ಶನಶೀಘ್ರೇಣ ಪ್ರಹರ್ಷೇಣಾಭಿಚೋದಿತಃ ॥ ೨೧ ॥

ಬಿಳೀ ಮತ್ತೀಗಿಡಗಳಿಂದಲೂ, ಬಹುಭಿಃ - ಅನೇಕವಾದ, ವಂಶೈಶ್ಚ - ಬಿದಿರುಗಳಿಂದಲೂ, ವೃತಂ - ಕೂಡಿರುವ, ವಿತತೈಃ - ವಿಸ್ತಾರವಾದ, ಪುಷ್ಪವದ್ಭಿಃ - ಹೂವುಗಳುಳ್ಳ, ಲತಾವಿತಾನೈಃ - ಬಳ್ಳಿಗಳ ಮೇಲ್ಕಟ್ಟುಗಳಿಂದಲೂ, ಅಲಂಕೃತಂ - ಅಲಂಕರಿಸಲ್ಪಟ್ಟ, ನಾನಾ....ರ್ಣಂ - ಅನೇಕ ಗುಂಪುಗಳಿಂದ ವ್ಯಾಪ್ತವಾದ, ಧಾತು....ತಂ - ಗೈರಿಕಾದಿ ಧಾತುನಿರ್ಗಮನದಿಂದಲಂಕೃತವಾದ, ಬಹು....ತಂ - ನಾನಾವಿಧವಾದ ಬೆಟ್ಟದ ತಪ್ಪಲಿನಿಂದ ಪ್ರವಹಿಸುತ್ತಿರುವ ನೀರಿನಿಂದ, ಉಪೇತಂ - ಕೂಡಿರುವ, ಶಿಲಾ....ಟಂ - ಕಲ್ಲುಗುಂಡುಗಳ ತಂಡಗಳಿಂದ ಸಮ್ಮರ್ದವಾಗಿರುವ, ಮಹ....ತಂ - ಮಹಾ ಮುನಿಗಳಿಂದಲೂ, ಯಕ್ಷರಿಂದಲೂ, ಗಂಧರ್ವರಿಂದಲೂ, ಕಿನ್ನರರಿಂದಲೂ, ಸರ್ಪಗಳಿಂದಲೂ ಸೇವಿಸಲ್ಪಟ್ಟ, ಲತಾ....ತಂ-ಬಳ್ಳಿಗಳ ವೃಕ್ಷಗಳ, ಸಂಘಾತಂ - ಸಮೂಹವುಳ್ಳ, ಸಿಂಹಾ....ರಂ - ಸಿಂಹಗಳಿಂದ ನೆಲೆಗೊಂಡ ಗುಹೆಗಳುಳ್ಳ, ವ್ಯಾಘ್ರ....ರ್ಣಂ-ಹುಲಿಗಳ ಸಮೂಹದಿಂದ ವ್ಯಾಪ್ತವಾದ, ಸ್ವಾದು....ಮಂ-ಸಿಹಿಯಾಗಿರುವ ಕಂದಮೂಲಗಳೂ, ಫಲವೃಕ್ಷಗಳೂ ಉಳ್ಳ, ತಂಪರ್ವತಂ - ಆ ಅರಿಷ್ಟವೆಂಬ ಪರ್ವತವನ್ನು, ಪವನಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ರಾಮ....ಣ - ರಾಮಸಂದರ್ಶನದಲ್ಲಿ ತ್ವರೆಯುಳ್ಳ, ಪ್ರಹರ್ಷೇಣ - ಸಂತೋಷದಿಂದ, ಅಭಿಚೋದಿತಃ - ಪ್ರೇರಿತನಾಗಿ, ಆರುರೋಹ - ಏರಿದನು. ||೧೧-೨೧|| ತತಃ - ಬಳಿಕ, ರಮ್ಯೇಷು - ಸುಂದರವಾದ, ಗಿರಿಸಾನುಷು -

ವ್ಯಾಪಿಸಿರುವ ಶಿಖರಗಳಿಂದಲೂ ಶೋಭಿಸುತ್ತಿರುವುದು. ಸಾಲ, ತಾಳೆ, ಅಶ್ವಕರ್ಣ, ಬಿದಿರು ಮುಂತಾದ ಅನೇಕ ವೃಕ್ಷಜಾತಿಗಳೂ, ವಿಸ್ತಾರವಾಗಿ ಹೂಮೊಳೆತು ಬೆಳೆದ ಲತಾವಿತಾನಗಳೂ ಅಲ್ಲಲ್ಲಿ ಗುಂಪುಗುಂಪಾಗಿ ಸಂಚರಿಸುತ್ತಿದ್ದ ಬಗೆಬಗೆಯ ಮೃಗಸಮೂಹಗಳೂ, ಗೈರಿಕಾದಿ ಧಾತುಗಳ ಪ್ರವಾಹಗಳೂ ಆ ಪರ್ವತದಲ್ಲಿ ಶೋಭಿಸುತ್ತಿದ್ದವು. ಆ ಪರ್ವತದ ಸುತ್ತಲೂ ಲೆಕ್ಕವಿಲ್ಲದಷ್ಟು ಗಿರಿನದಿಗಳು ಪ್ರವಹಿಸುತ್ತಿರುವುವು. ಎಲ್ಲಿ ನೋಡಿದರಲ್ಲಿ ಮಹೋನ್ನತಗಳಾದ ಬಂಡೆಗಳು ತುಂಬಿರುವುವು. ಹೀಗೆ ಬಹು ಮನೋಹರವಾದ ಆ ಅರಿಷ್ಟ ಪರ್ವತವನ್ನು, ಮಹರ್ಷಿಗಳೂ, ಯಕ್ಷರೂ, ಗಂಧರ್ವರೂ, ಕಿನ್ನರರೂ, ಉರಗರೂ ಸೇವಿಸುತ್ತಿರುವರು. ಆ ಪರ್ವತದಲ್ಲೆಲ್ಲಿ ನೋಡಿದರೂ ವೃಕ್ಷಲತಾರಾಜಿಗಳೇ ತುಂಬಿರುವುದು. ಅದರ ಗುಹೆಗಳಲ್ಲೆಲ್ಲಾ ಸಿಂಹಗಳು ವಾಸವಾಗಿರುವುವು. ಆ ಪರ್ವತದ ಸುತ್ತಲೂ ವ್ಯಾಘ್ರಗಳು ತಂಡತಂಡವಾಗಿ ಸಂಚರಿಸುತ್ತಿರುವುವು. ಅಲ್ಲಲ್ಲಿ ರುಚಿಕರವಾದ ಫಲಗಳಿಂದ ನಿಬಿಡಿತವಾದ ಫಲವೃಕ್ಷಗಳು ಅನೇಕವಾಗಿ ಬೆಳೆದಿರುವುವು. ಈ ರೀತಿ ಶೋಭಿಸುತ್ತಿರುವ ಆ ಅರಿಷ್ಟಪರ್ವತವನ್ನು ನೋಡಿ ವಾಯುಪುತ್ರನಾದ ಹನುಮಂತನು ಶ್ರೀರಾಮನ ಬಳಿಗೈದಬೇಕೆಂಬ ಆತುರದಿಂದಲೂ, ಉತ್ಸಾಹದಿಂದಲೂ ಅದನ್ನೇರಿದನು. ॥ ೧೭–೨೧ ॥ ಹೀಗೆ

ತೇನಪಾದತಲಾಕ್ರಾಂತಾ ರಮ್ಯೇಷು ಗಿರಿಸಾನುಷು । ಸಘೋಷಾಸ್ಸಮಶೀರ್ಯಂತ ಶಿಲಾಶ್ಚೂರ್ಣೀಕೃತಾಸ್ತತಃ ॥ ೨೨ ॥ ಸ ತಮಾರುಹ್ಯ ಶೈಲೇಂದ್ರಂ ವ್ಯವರ್ಧತ ಮಹಾಕಪಿಃ । ದಕ್ಷಿಣಾದುತ್ತರಂ ಪಾರಂ ಪ್ರಾರ್ಥಯನ್ ಲವಣಾಂಭಸಃ ॥ ೨೩ ॥ ಅಧಿರುಹ್ಯ ತತೋ ವೀರಃ ಪರ್ವತಂ ಪವನಾತ್ಮಜಃ । ದದರ್ಶ ಸಾಗರಂ ಭೀಮಂ ಮೀನೋರಗನಿಷೇವಿತಂ ॥ ೨೪ ॥ ಸಮಾರುತಇವಾಕಾಶಂ ಮಾರುತಸ್ಯಾತ್ಮಸಂಭವಃ । ಪ್ರಪೇದೇ ಹರಿಶಾರ್ದೂಲೋ ದಕ್ಷಿಣಾದುತ್ತರಾಂ ದಿಶಂ ॥೨೫॥ ಸ ತದಾ ಪೀಡಿತಸ್ತೇನ ಕಪಿನಾ ಪರ್ವತೋತ್ತಮಃ । ರರಾಸ ಸಹಿತೈರ್ಭೂತೈಃ ಪ್ರವಿಶನ್ವಸುಧಾತಲಂ । ಕಂಪ

ಪರ್ವತದ ಹಳ್ಳಪಳ್ಳಗಳಿಲ್ಲದೆ ಒಂದೇ ಸಮನಾಗಿ ಕಾಣುವ ಮೇಲ್ಭಾಗದ ಪ್ರದೇಶಗಳಲ್ಲಿ, ತೇನ - ಆ ಆಂಜನೇಯನಿಂದ, ಪಾದ....ತಾಃ - ಪಾದಘಟ್ಟನದಿಂದ ಆಕ್ರಮಿಸಲ್ಪಟ್ಟಕಾರಣ, ಸಘೋಷಾಃ - ಶಬ್ದದಿಂದೊಡಗೂಡಿದ, ಶಿಲಾಃ - ಗುಂಡುಗಳು, (ಯಥಾ - ಹೇಗೆ), ಸಮಶೀರ್ಯಂತ - ಸೀಳಿದವೋ, (ತಥಾ - ಹಾಗೆ), ಚೂರ್ಣೀಕೃತಾಃ - ಪುಡಿಪುಡಿಗಳಾದವು. ||೨೨|| ಮಹಾಕಪಿಃ - ಮಹಾ ವಾನರನಾದ, ಸಃ - ಆ ಆಂಜನೇಯನು, ಲವಣಾಂಭಸಃ - ಲವಣಸಮುದ್ರದ, ದಕ್ಷಿಣಾತ್ - ದಕ್ಷಿಣತೀರದಿಂದ, ಉತ್ತರಂಪಾರಂ - ಉತ್ತರತೀರವನ್ನು ಕುರಿತು, ಗಂತುಂ - ಹೋಗಲು, ಪ್ರಾರ್ಥಯನ್ - ಪ್ರಾರ್ಥಿಸಿದವನಾಗಿ, ತಂಶೈಲೇಂದ್ರಂ - ಆ ಪರ್ವತೋತ್ತಮವನ್ನು, ಆರುಹ್ಯ - ಏರಿ, ವ್ಯವರ್ಧತ - ಬೆಳೆದನು. || ೨೩ || ತತಃ - ಬಳಿಕ, ವೀರಃ - ಶೂರನಾದ, ಪವನಾತ್ಮಜಃ - ವಾಯುನಂದನನು, ಪರ್ವತಂ - ಬೆಟ್ಟವನ್ನು, ಅಧಿರುಹ್ಯ - ಏರಿ, ಮೀನೋ....ತಂ - ಮೀನುಗಳಿಂದಲೂ, ಸರ್ಪಗಳಿಂದಲೂ ಸೇವಿಸಲ್ಪಡುತ್ತಿರುವ, ಭೀಮಂ - ಭಯಂಕರವಾದ, ಸಾಗರಂ - ಸಮುದ್ರವನ್ನು, ದದರ್ಶ - ಕಂಡನು.||೨೪|| ಮಾರುತಸ್ಯ - ವಾಯುವಿನ, ಆತ್ಮಸಂಭವಃ - ಸಾಕ್ಷಾತ್ ಪುತ್ರನಾದ, ಸಹರಿಶಾರ್ದೂಲಃ - ಆ ಕಪಿಶ್ರೇಷ್ಠನು, ದಕ್ಷಿಣಾತ್ - ದಕ್ಷಿಣದಿಕ್ಕಿನಿಂದ, ಉತ್ತರಾಂದಿಶಂ - ಉತ್ತರದಿಕ್ಕನ್ನು, ಮಾರುತಃ - ವಾಯುವು, ಆಕಾಶಮಿವ - ಅಂತರಿಕ್ಷವನ್ನಂತೆ, ಪ್ರಪೇದೇ - ಹೊಂದಿದನು. || ೨೫ || ತದಾ - ಆ ಸಮಯದಲ್ಲಿ, ತೇನಕಪಿನಾ - ಆ ವಾನರನಿಂದ, ಪೀಡಿತಃ - ಬಾಧಿಸಲ್ಪಟ್ಟ, ಸಪರ್ವತೋತ್ತಮಃ - ಆ ಪರ್ವತಶ್ರೇಷ್ಠವು, ತೈಃ - ಆ ಬೆಟ್ಟದಲ್ಲಿರುವ, ಭೂತೈಸ್ಸಹ - ಜಂತುಗಳೊಡನೆಯು, ಕಂಪಮಾನೈಃ- ಚಲಿಸುತ್ತಿರುವ, ಶಿಖರೈಶ್ಚ - ಶೃಂಗಗಳೊಡನೆಯೂ, ಪತದ್ಭಿಃ - ಉರುಳುತ್ತಿರುವ, ದ್ರುಮೈರಪಿಚ -

---

ಹನುಮಂತನು ಆ ಬೆಟ್ಟದ ತಪ್ಪಲುಪ್ರದೇಶದಲ್ಲಿರುವ ಬಂಡೆಗಳಮೇಲೆ ತನ್ನ ಪಾದಗಳಿಂದ ಮೆಟ್ಟಿ ಹತ್ತುತ್ತಿರಲು ಆ ದೊಡ್ಡ ಬಂಡೆಗಳೆಲ್ಲವೂ ಮಹಾ ಧ್ವನಿಯಿಂದ ಚೂರ್ಣವಾಗಿ ಉರುಳುತ್ತಿದ್ದುವು. ಆ ಮಹಾ ಕಪಿಯು ಈ ಪ್ರಕಾರವಾಗಿ ಅರಿಷ್ಟಪರ್ವತವನ್ನೇರಿ ಸಮುದ್ರದ ದಕ್ಷಿಣತೀರದಿಂದ ಉತ್ತರತೀರಕ್ಕೆ ಲಂಘಿಸುವುದಕ್ಕೋಸ್ಕರ ಸಮುದ್ರರಾಜನನ್ನು ಪ್ರಾರ್ಥಿಸಿ ತನ್ನ ಮೈಯನ್ನು ಬೆಳಿಸಿಕೊಂಡನು. ಮಹಾ ವೀರನೂ, ವಾಯುನಂದನನೂ ಆದ ಆ ಹನುಮಂತನು ಆ ಅರಿಷ್ಟಪರ್ವತವನ್ನು ಹತ್ತಿ ನಿಂತು, ಮತ್ಸ್ಯಗಳಿಂದಲೂ, ಸರ್ಪಗಳಿಂದಲೂ ತುಂಬಿ ಬಹು ಭಯಂಕರವಾಗಿದ್ದ ಆ ಲವಣಸಮುದ್ರವನ್ನು ನೋಡಿ ಮಹೋತ್ಸಾಹದಿಂದುಬ್ಬುತ್ತ ತನ್ನ ತಂದೆಯಾದ ವಾಯುದೇವನಂತೆ ಕೂಡಲೇ ಆಕಾಶಕ್ಕೆ ಹಾರಿದನು. ||೨೨–೨೫|| ಹೀಗೆ ಆತನು ಹಾರುವಾಗ ಆ ಪರ್ವತವನ್ನು ಪಾದಗಳಿಂದ ತುಳಿದೊಡನೆಯೆ ಆ ಪರ್ವತವನ್ನಾಶ್ರಯಿಸಿದ್ದ ಸಮಸ್ತ ಪ್ರಾಣಿಗಳೂ ಭಯದಿಂದ ನಡುಗಿ ಕೂಗಿಡುತ್ತಿರಲು, ಆ ಪರ್ವ-

ಮಾನೈಶ್ಚ ಶಿಖರೈಃ ಪತದ್ಭಿರಪಿಚ ದ್ರುಮೈಃ ॥ ೨೬ ॥ ತಸ್ಯೋರುವೇಗೋನ್ಮಥಿತಾಃ ಪಾದಪಾಃ ಪುಷ್ಪಶಾಲಿನಃ । ನಿಪೇತುರ್ಭೂತಲೇ ರುಗ್ಣಾಶ್ಶಕ್ರಾಯುಧಹತಾಇವ ॥೨೭॥ ಕಂದರಾಂತರಸಂಸ್ಥಾನಾಂ ಪೀಡಿತಾನಾಂ ಮಹೌಜಸಾಂ । ಸಿಂಹಾನಾಂ ನಿನದೋ ಭೀಮೋ ನಭೋ ಭಿಂದನ್ ಸ ಶುಶ್ರುವೇ ॥ ೨೮ ॥ ಸ್ರಸ್ತವ್ಯಾವಿದ್ಧವಸನಾ ವ್ಯಾಕುಲೀಕೃತಭೂಷಣಾಃ । ವಿದ್ಯಾಧರ್ಯಸ್ಸಮುತ್ಪೇತುಃ ಸಹಸಾ ಧರಣೀಧರಾತ್ ॥ ೨೯ ॥ ಅತಿಪ್ರಮಾಣಾ ಬಲಿನೋ ದೀಪ್ತಜಿಹ್ವಾ ಮಹಾವಿಷಾಃ । ನಿಪೀಡಿತಶಿರೋಗ್ರೀವಾ ವ್ಯವೇಷ್ಟಂತ ಮಹಾಽಹಯಃ ॥ ೩೦ ॥ ಕಿನ್ನರೋರಗಗಂಧರ್ವಯಕ್ಷವಿದ್ಯಾಧರಾ

ವೃಕ್ಷಗಳೊಡನೆಯೂ ಕೂಡ, ವಸುಧಾತಲಂ - ಭೂಪ್ರದೇಶವನ್ನು, ಪ್ರವಿಶನ್ - ಹೊಗುತ್ತಿರುವುದಾಗಿ, ರರಾಸ - ಕೂಗಿತು. ॥ ೨೬ ॥ ತಸ್ಯ - ಆ ಆಂಜನೇಯನ, ಊರು....ತಾಃ - ತೊಡೆಗಳ ವೇಗದಿಂದ ಮುರಿಯಲ್ಪಟ್ಟ, ಪುಷ್ಪಶಾಲಿನಃ - ಹುವ್ವುಗಳಿಂದೊಪ್ಪುತ್ತಿರುವ, ಪಾದಪಾಃ - ಗಿಡಗಳು, ರುಗ್ಣಾಃ - ಸೀಳಿದವುಗಳಾಗಿ, ವಜ್ರಾ....ವ - ವಜ್ರದಿಂದ ಹೊಡೆಯಲ್ಪಟ್ಟವುಗಳಂತೆ, ಭೂತಲೇ - ನೆಲದಲ್ಲಿ, ನಿಪೇತುಃ - ಬಿದ್ದವು. ॥೨೭॥ ಕಂದ...ನಾಂ - ಗುಹೆಗಳನಡುವೆ ವಾಸಿಸುವ, ಮಹೌಜಸಾಂ - ಮಹಾಸಾಮರ್ಥ್ಯವುಳ್ಳ, ಪೀಡಿತಾನಾಂ - ಬಾಧೆಗೊಂಡ, ಸಿಂಹಾನಾಂ - ಸಿಂಹಗಳ, ಭೀಮಃ - ಭಯಂಕರವಾದ, ಸನಿನದಃ - ಆ ಶಬ್ದವು, ನಭಃ - ಅಂತರಿಕ್ಷವನ್ನು, ಭಿಂದನ್ - ಭೇದಿಸುವಂತೆ, ಶುಶ್ರುವೇ - ಕೇಳಿಸಿತು. ॥ ೨೮ ॥ ವಿದ್ಯಾಧರ್ಯಃ - ವಿದ್ಯಾಧರಸ್ತ್ರೀಯರು, ಸ್ರಸ್ತ....ನಾಃ - ಜಾರಿ ವ್ಯತ್ಯಸ್ತವಾದ ವಸ್ತ್ರಗಳುಳ್ಳವರಾಗಿಯೂ, ವ್ಯಾಕು....ಣಾಃ - ಆಕುಲವಾಗಿ ಮಾಡಲ್ಪಟ್ಟ ಆಭರಣಗಳುಳ್ಳವರಾಗಿಯೂ ಆಗಿ, ಧರಣೀಧರಾತ್ - ಬೆಟ್ಟದಿಂದ, ಸಹಸಾ - ಜಾಗ್ರತೆಯಾಗಿ, ಸಮುತ್ಪೇತುಃ - ಹಾರಿದರು.॥೨೯॥ ಅತಿಪ್ರಮಾಣಾ - ಬಹು ಪ್ರಮಾಣವುಳ್ಳ, ಬಲಿನಃ - ಬಲಿಷ್ಠವಾದ, ದೀಪ್ತಜಿಹ್ವಾಃ - ಹೊಳೆಯುತ್ತಿರುವ ನಾಲಗೆಗಳುಳ್ಳ, ಮಹಾವಿಷಾಃ - ಬಲು ವಿಷವುಳ್ಳ, ನಿಪೀ....ವಾಃ - ಬಹು ಬಾಧೆಗೊಳಿಸಲ್ಪಟ್ಟ ಶಿರಸ್ಸೂ ಕೊರಳೂ ಉಳ್ಳ, ಮಹಾಹಯಃ - ದೊಡ್ಡ ಹಾವುಗಳು, ವ್ಯವೇಷ್ಟಂತ - ಸುತ್ತಿಕೊಂಡವುಗಳಾದವು. ॥೩೦॥ ತದಾ - ಆ ಸಮಯದಲ್ಲಿ, ಕಿನ್ನ....ರಾಃ - ಕಿನ್ನರರೂ, ಸರ್ಪಗಳೂ, ಗಂಧರ್ವರೂ, ಯಕ್ಷರೂ, ವಿದ್ಯಾಧರರೂ ಸಹಾ, ಪೀಡಿತಂ - ಬಾಧಿತವಾದ, ತಂನಗವರಂ - ಆ ಪರ್ವತೋತ್ತಮವನ್ನು,

---

ತವೇ ಗೋಳಿಡುತ್ತಿರುವಂತಿದ್ದಿತು. ಹನುಮಂತನ ಪಾದಘಟ್ಟನದಿಂದ ಆ ಪರ್ವತಶಿಖರಗಳೆಲ್ಲವೂ ನಡುಗಿ ನೆಲಕ್ಕಿಳಿದುವು. ಆ ಶಿಖರಗಳಮೇಲಿದ್ದ ವೃಕ್ಷಗಳೆಲ್ಲವೂ ಆ ಕಪಿವೀರನ ಊರುವೇಗದಿಂದ ಪೀಡಿಸಲ್ಪಟ್ಟು ಮಿಂಚಿನ ಹೊಡೆತದಂತೆ ನೆಲಕ್ಕೆ ಮುರಿದುಬಿದ್ದುವು. ಆ ಪರ್ವತದ ಗುಹೆಗಳಲ್ಲಿ ಅಡಗಿದ್ದ ಮದಿಸಿದ ಸಿಂಹಗಳೂ ಆತನ ಪಾದಘಟ್ಟನದಿಂದ ಪೀಡಿಸಲ್ಪಟ್ಟು ಆಕಾಶವೇ ಭೇದಿಸಿಹೋಗುವಂತೆ ಘಟ್ಟಿಯಾಗಿ ಕೂಗಿಟ್ಟವು. ಆ ಪರ್ವತದಲ್ಲಿದ್ದ ವಿದ್ಯಾಧರಸ್ತ್ರೀಯರೆಲ್ಲರೂ ಭಯದಿಂದ ನಡುಗಿ, ಕದಲಿದ ವಸ್ತ್ರಾಭರಣಗಳುಳ್ಳವರಾಗಿ, ಆಗಲೇ ಅಲ್ಲಿಂದ ತಟ್ಟನೆ ಗಗನಕ್ಕೆ ಹಾರಿದರು. ಅಲ್ಲಿ ನೆಲೆಗೊಂಡಿದ್ದ ಬಲಾಢ್ಯಗಳಾಗಿಯೂ, ಉರಿಯುವ ನಾಲಗೆಗಳುಳ್ಳವುಗಳಾಗಿಯೂ, ಕ್ರೂರವಿಷಗಳುಳ್ಳವುಗಳಾಗಿಯೂ ಇರುವ ಮಹಾ ಸರ್ಪಗಳೆಲ್ಲವೂ ಭಯದಿಂದ ಕುಗ್ಗಿದ ಶಿರಸ್ಸುಗಳುಳ್ಳವುಗಳಾಗಿ ನೆಲದಲ್ಲಿ ಹೊರಳಾಡುತ್ತಿದ್ದುವು. ॥ ೨೬–೩೦ ॥ ಕಿನ್ನರರೂ, ಉರಗರೂ, ಗಂಧರ್ವರೂ, ಯಕ್ಷರೂ, ವಿದ್ಯಾಧರರೂ ಭಯಗೊಂಡು ಹನುಮಂತನಿಂದ ಪೀಡಿಸಲಾದ ಆ ಅರಿಷ್ಟಪರ್ವತವನ್ನು ತೊರೆದು

ಸ್ತದಾ । ಪೀಡಿತಂ ತಂ ನಗವರಂ ತ್ಯಕ್ತ್ವಾ ಗಗನಮಾಸ್ಥಿತಾಃ ॥ ೩೧ ॥ ಸಚ ಭೂಮಿ ಧರಶ್ಶ್ರೀಮಾನ್ ಬಲಿನಾ ತೇನ ಪೀಡಿತಃ । ಸವೃಕ್ಷಶಿಖರೋದಗ್ರಃ ಪ್ರವಿವೇಶ ರಸಾತಲಂ ॥ ೩೨ ॥ ದಶಯೋಜನವಿಸ್ತಾರ ಸ್ತ್ರಿಂಶದ್ಯೋಜನಮುಚ್ಛ್ರಿತಃ । ಧರಣ್ಯಾಂ ಸಮತಾಂ ಯಾತಃ ಸ ಬಭೂವ ಧರಾಧರಃ ॥ ೩೩ ॥

ಸ ಲಿಲಂಘಯಿಷುರ್ಭೀಮಂ ಸಲೀಲಂ ಲವಣಾರ್ಣವಂ ।
ಕಲ್ಲೋಲಾಸ್ಫಾಲವೇಲಾಂತ ಮುತ್ಪಪಾತ ನಭೋ ಹರಿಃ ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್ಪಂಚಾಶಸ್ಸರ್ಗಃ

ತ್ಯಕ್ತ್ವಾ - ಬಿಟ್ಟು, ಗಗನಂ - ಅಂತರಿಕ್ಷವನ್ನು, ಆಸ್ಥಿತಾಃ - ಹೊಂದಿದರು. ॥ ೩೧ ॥ ಸವೃ....ಗ್ರಃ - ಗಿಡಗಳಿಂದೊಡಗೂಡಿ ಶೃಂಗಗಳಿಂದ ಉನ್ನತವಾದ (ಅಥವಾ ಶ್ರೇಷ್ಠವಾದ), ಶ್ರೀಮಾನ್ - ಕಾಂತಿ ಯುಕ್ತವಾದ, ಸಭೂಮಿಧರಶ್ಚ - ಆ ಬೆಟ್ಟವೂ ಸಹ, ಬಲಿನಾ - ಬಲಿಷ್ಠನಾದ, ತೇನ - ಆ ಆಂಜನೇಯನಿಂದ, ಪೀಡಿತಃ - ಬಾಧಿಸಲ್ಪಟ್ಟುದಾಗಿ, ರಸಾತಲಂ - ಪಾತಾಳಲೋಕವನ್ನು, ಪ್ರವಿವೇಶ - ಪ್ರವೇಶಿಸಿತು. ॥ ೩೨ ॥ ದಶ ...ರಃ - ಹತ್ತುಗಾವುದ ವಿಸ್ತೀರ್ಣವಾದ, ತ್ರಿಂಶದ್ಯೋಜನಂ - ಮೂವತ್ತು ಯೋಜನಗಳಪರಿಮಿತಿಯವರೆಗೂ, ಉಚ್ಛ್ರಿತಃ - ಎತ್ತರವುಳ್ಳ, ಸಧರಾಧರಃ - ಆ ಪರ್ವತವು, ಧರಣ್ಯಾಂ - ನೆಲದಲ್ಲಿ, ಸಮತಾಂ - ಸಮತ್ವವನ್ನು, ಯಾತಃ - ಹೊಂದಿದುದು, ಬಭೂವ - ಆಯಿತು. ॥ ೩೩ ॥ ಸಹರಿಃ - ಆ ಆಂಜನೇಯನು, ಭೀಮಂ - ಭಯಂಕರವಾದ, ಲವಣಾರ್ಣವಂ - ಲವಣಸಮುದ್ರವನ್ನು, ಸಲೀಲಂ - ವಿಲಾಸದಿಂದ, ಲಿಲಂಘಯಿಷುಃ - ದಾಟಲಿಚ್ಛಿಸಿದವನಾಗಿ, ಕಲ್ಲೋ....ತಂ - ತರಂಗಗಳಿಂದ ಎಲ್ಲಾ ಕಡೆಯಲ್ಲಿಯೂ ಸೀಳಿಹೋಗುತ್ತಿರುವ ಧಡದ ತುದಿಯುಳ್ಳ, ನಭಃ - ಅಂತರಿಕ್ಷದಲ್ಲಿ, ಉತ್ಪಪಾತ - ಹಾರಿದನು. ॥ ೩೪ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್ಪಂಚಾಶಸ್ಸರ್ಗಃ

ಗಗನಕ್ಕೆ ಹಾರಿದರು. ಮಹಾ ಬಲಶಾಲಿಯಾದ ಹನುಮಂತನ ಪಾದಘಟ್ಟನವನ್ನು ಸಹಿಸಲಾರದೆ ಆ ಅರಿಷ್ಟಪರ್ವತವು ಸಮಸ್ತ ವೃಕ್ಷಗಳೊಡನೆಯೂ, ಶಿಖರಗಳೊಡನೆಯೂ, ಪಾತಾಳವನ್ನು ಪ್ರವೇಶಿಸುವುದೋ ಎಂಬಂತೆ ನೆಲಕ್ಕೆ ಕುಗ್ಗಿಹೋಯಿತು. ದಶಯೋಜನವಿಸ್ತೀರ್ಣವೂ, ಮೂವತ್ತುಯೋಜನಗಳಷ್ಟು ಎತ್ತರವೂ ಉಳ್ಳ ಆ ಅರಿಷ್ಟಪರ್ವತವೂ ಸಹ ಹನುಮಂತನ ಕಾಲು ತುಳಿತದಿಂದ ಕುಗ್ಗಿ ನೆಲಸಮವಾಯಿತು. ಹೀಗೆ ಹನುಮಂತನು ತರಂಗಘಾತದಿಂದ ಬಹು ಭಯಂಕರವಾದ ಆ ಲವಣಸಮುದ್ರವನ್ನು ವಿಲಾಸಮಾತ್ರದಿಂದಲೇ ದಾಟಬೇಕೆಂದೆಣಿಸಿ ಒಂದೇ ವೇಗದಿಂದ ಆಕಾಶದಲ್ಲಿ ಹಾರಿಬಂದನು. ॥ ೩೧-೩೪ ॥

ಇಂತಿದು ಹನುಮತ್ಕೃತ ಪುನಸ್ಸಾಗರೋಲ್ಲಂಘನ ವಿಧಾನವೆಂಬ
ಐವತ್ತಾರನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಸಪ್ತಪಂಚಾಶಸ್ಸರ್ಗಃ

ಸ ಚಂದ್ರಕುಮುದಂ ರಮ್ಯಂ ಸಾರ್ಕಕಾರಂಡವಂ ಶುಭಂ । ತಿಷ್ಯಶ್ರವಣ ಕಾದಂಬ ಮಭ್ರಶೈವಲಶಾಡ್ವಲಂ ॥ ೧ ॥ ಪುನರ್ವಸುಮಹಾಮೀನಂ ಲೋಹಿತಾಂಗ ಮಹಾಗ್ರಹಂ । ಐರಾವತ ಮಹಾದ್ವೀಪಂ ಸ್ವಾತೀಹಂಸವಿಲೋಳಿತಂ ॥ ೨ ॥ ವಾತ ಸಂಘಾತ ಜಾತೋರ್ಮಿ ಚಂದ್ರಾಂಶು ಶಿಶಿರಾಂಬುಮತ್ । ಭುಜಂಗಯಕ್ಷಗಂಧರ್ವ ಪ್ರಬುದ್ಧಕಮಲೋತ್ಪಲಂ ॥ ೩ ॥ ಹನೂಮಾನ್ಮಾರುತಗತಿ ರ್ಮಹಾನೌರಿವ ಸಾಗರಂ । ಅಪಾರಮಪರಿಶ್ರಾಂತಃ ಪುಪ್ಲುವೇ ಗಗನಾರ್ಣವಂ ॥ ೪ ॥ ಗ್ರಸಮಾನ ಇವಾಕಾಶಂ

ಮಾರುತಗತಿಃ - ವಾಯುಗಮನದಂತೆ ಗಮನವುಳ್ಳ, ಹನುಮಾನ್ - ಆಂಜನೇಯನು, ಸಚಂ....ದಂ-ಚಂದ್ರನೆಂಬ ನೈದಿಲೆಗಳಿಂದೊಡಗೂಡಿರುವ, ರಮ್ಯಂ-ಸುಂದರವಾದ, ಸಾರ್ಕ....ವಂ-ಸೂರ್ಯನೆಂಬ ನೀರುಕೋಳಿಯಿಂದೊಡಗೂಡಿರುವ, ಶುಭಂ - ಶುಭಕರವಾದ, ತಿಷ್ಯ...ಬಂ - ಪುಷ್ಯ ಮತ್ತು ಶ್ರವಣನಕ್ಷತ್ರಗಳೆಂಬ ಕಲಹಂಸಗಳುಳ್ಳ, ಅಭ್ರ....ಲಂ - ಮೇಘಗಳೆಂಬ ಹಾವಚಿಬಳ್ಳಿಗಳೂ ಹುಲ್ಲುಗಳೂ ಉಳ್ಳ, ಪುನ....ನಂ - ಪುನರ್ವಸುನಕ್ಷತ್ರವೆಂಬ ದೊಡ್ಡಮೀನುಳ್ಳ, ಲೋಹಿ....ಹಂ - ಅಂಗಾರಕನೆಂಬ ದೊಡ್ಡ ಮೊಸಳೆಯುಳ್ಳ, ಐರಾ....ಪಂ - ಇಂದ್ರನಾನೆಯಾದ ಐರಾವತವೆಂಬ ದೊಡ್ಡ ದ್ವೀಪವುಳ್ಳ, ಸ್ವಾತೀ....ತಂ ಸ್ವಾತೀನಕ್ಷತ್ರವೆಂಬ ಹಂಸಪಕ್ಷಿಯಿಂದ ಸ್ನಾನಮಾಡಲ್ಪಟ್ಟ, ವಾತ....ತ್-ಸುಳಿಗಾಳಿಯಿಂದ ಹುಟ್ಟಿದ ತೆರೆಗಳೆಂಬ ಚಂದ್ರಕಿರಣಗಳಿಂದ ಶೀತಳ ಜಲವುಳ್ಳ, ಭುಜಂ....ರ್ವ - ಸರ್ಪದೇವತೆಗಳೂ, ಯಕ್ಷರೂ, ಗಂಧರ್ವರೂ ಎಂಬ ಅರಳಿದ ತಾವರೆಗಳೂ ನೈದಿಲೆಗಳೂ ಉಳ್ಳ, ಅಪಾರಂ - ಅಂತವಿಲ್ಲದಿರುವ, ಗಗನಾರ್ಣವಂ - ಗಗನವೆಂಬ ಸಮುದ್ರವನ್ನು, ಸಾಗರಂ - ಸಮುದ್ರ ವನ್ನು, ಮಹಾನೌರಿವ - ದೊಡ್ಡ ಹಡಗಿನಂತೆ, ಅಪರಿಶ್ರಾಂತಃ - ಬಳಲಿಕೆಯಿಲ್ಲದೆ, ಪುಪ್ಲುವೇ - ಹಾರಿದನು. ॥ ೧-೪ ॥ ಮಾರುತಸ್ಯ - ವಾಯುವಿನ, ಆತ್ಮಜಃ - ಪುತ್ರನಾದ, ಶ್ರೀಮಾನ್ - ಧೈರ್ಯ

ಈ ಪ್ರಕಾರವಾಗಿ ಆ ಕಪಿಶ್ರೇಷ್ಠನು ಹಾರಿ ಬರುವಾಗ, ಗಗನಾಂಗಣವು ಚಂದ್ರನೆಂಬ ಬಿಳಿನೈದಿಲೆಯಿಂದಲೂ, ಸೂರ್ಯನೆಂಬ ಮನೋಹರವಾದ ಕಾರಂಡವ ಪಕ್ಷಿಯಿಂದಲೂ, ಮಂಗಳಕರಗಳಾದ ಪುಷ್ಯ ಶ್ರವಣ ನಕ್ಷತ್ರಗಳೆಂಬ ಕಲಹಂಸ ಮಿಥುನದಿಂದಲೂ, ಮೇಘಗಳೆಂಬ ಪಾಚಿ ಮತ್ತು ಗರಿಕೆಹುಲ್ಲುಗಳ ಸಮೂಹಗಳಿಂದಲೂ, ಪುನರ್ವಸು ನಕ್ಷತ್ರವೆಂಬ ತಿಮಿಂಗಿಲದಿಂದಲೂ, ಅಂಗಾರಕ ಗ್ರಹವೆಂಬ ದೊಡ್ಡ ಮೊಸಳೆಯಿಂದಲೂ, ಐರಾವತವೆಂಬ ಮಹಾ ದ್ವೀಪದಿಂದಲೂ, ಸ್ವಾತೀ ನಕ್ಷತ್ರವೆಂಬ ಹಂಸದ ನಡಿಗೆಯಿಂದಲೂ, ಚಂದ್ರಕಿರಣಗಳೆಂಬ ತರಂಗಚಲನವುಳ್ಳ ಶೀತಜಲದಿಂದಲೂ, ಪನ್ನಗ ಯಕ್ಷ ಗಂಧರ್ವರೆಂಬ ತಾವರೆ ಮತ್ತು ನೈದಿಲೆ ಹೂಗಳಿಂದಲೂ ಕೂಡಿ ಮಹಾ ಸಮುದ್ರದಂತಿರಲು ಆ ಕಪಿವೀರನು ಸಮುದ್ರವನ್ನು ದಾಟ ಬರುವ ದೊಡ್ಡ ಹಡಗಿನಂತೆ ಗಂಭೀರವಾಗಿ ಅದನ್ನು ದಾಟ ಬರುತ್ತಿದ್ದನು. ॥ ೧-೪ ॥ ಹೀಗೆ ನಿರಾಯಾಸವಾಗಿ ದಾಟ ಬರುತ್ತಿದ್ದ ಮಹಾ ತೇಜಸ್ವಿಯಾದ

ತಾರಾಧಿಪಮಿವೋಲ್ಲಿಖನ್ । ಹರನ್ನಿವ ಸ ನಕ್ಷತ್ರಂ ಗಗನಂ ಸಾರ್ಕಮಂಡಲಂ ॥ ೫ ॥ ಮಾರುತಸ್ಯಾತ್ಮಜಶ್ಶ್ರೀಮಾನ್ಕಪಿರ್ವ್ಯೋಮಚರೋ ಮಹಾನ್ । ಹನೂಮಾನ್ಮೇಘ ಜಾಲಾನಿ ವಿಕರ್ಷನ್ನಿವ ಗಚ್ಛತಿ ॥ ೬ ॥ ಪಾಂಡರಾರುಣವರ್ಣಾನಿ ನೀಲಮಾಂಜಿಷ್ಠ ಕಾನಿಚ । ಹರಿತಾರುಣವರ್ಣಾನಿ ಮಹಾಭ್ರಾಣಿ ಚಕಾಶಿರೇ ॥ ೭ ॥ ಪ್ರವಿಶನ್ನಭ್ರ ಜಾಲಾನಿ ನಿಷ್ಪತಂಶ್ಚ ಪುನಃಪುನಃ । ಪ್ರಚ್ಛನ್ನಶ್ಚ ಪ್ರಕಾಶಶ್ಚ ಚಂದ್ರಮಾ ಇವ ಲಕ್ಷ್ಯತೇ ॥ ೮ ॥ ವಿವಿಧಾಭ್ರಘನಾಪನ್ನಗೋಚರೋ ಧವಳಾಂಬರಃ । ದೃಶ್ಯಾದೃಶ್ಯತನುರ್ವೀರ

ಸಂಪದ್ಯುಕ್ತನಾದ, ಕಪಿಃ - ವಾನರನಾದ, ವ್ಯೋಮಚರಃ - ಅಂತರಿಕ್ಷದಲ್ಲಿ ಸಂಚರಿಸುತ್ತಿರುವ, ಮಹಾನ್ - ಮಹಾತ್ಮನಾದ, ಹನೂಮಾನ್ - ಆಂಜನೇಯನು, ಆಕಾಶಂ - ಅಂತರಿಕ್ಷವನ್ನು, ಗ್ರಸಮಾನಇವ - ನುಂಗುವಂತೆಯೂ, ತಾರಾಧಿಪಂ - ಚಂದ್ರನನ್ನು, ಉಲ್ಲಿಖನ್ನಿವ - (ಉಗುರುಗಳಿಂದ) ಪರಚುವವನಂತೆಯೂ, ಸನಕ್ಷತ್ರಂ - ನಕ್ಷತ್ರಗಳಿಂದೊಡಗೂಡಿದ, ಸಾರ್ಕಮಂಡಲಂ - ಸೂರ್ಯ ಮಂಡಲದಿಂದೊಡಗೂಡಿರುವ, ಗಗನಂ - ಅಂತರಿಕ್ಷವನ್ನು, ಹರನ್ನಿವ - ಅಪಹರಿಸುವವನಂತೆಯೂ, ಗಚ್ಛತಿ - ಹೋದನು. ॥ ೫-೬ ॥ ಪಾಂಡ....ನಿ - ಬಿಳುಪು, ಕೆಂಪು ಬಣ್ಣಗಳುಳ್ಳ, ನೀಲ....ಚ - ಕಪ್ಪುಬಣ್ಣವೂ, ರಕ್ತಬಣ್ಣವೂ ಉಳ್ಳ, ಹರಿ....ನಿ - ಹಸುರುಬಣ್ಣವೂ, ಸ್ವಲ್ಪ ಕೆಂಪುಬಣ್ಣವೂ ಉಳ್ಳ, ಮಹಾಭ್ರಾಣಿ - ದೊಡ್ಡ ಮೇಘಗಳು, ಚಕಾಶಿರೇ - ಕಂಗೊಳಿಸಿದವು. ॥ ೭ ॥ ಚಂದ್ರಮಾಇವ - ಚಂದ್ರನಂತೆ, ಅಭ್ರಜಾಲಾನಿ - ಮೇಘಪಙ್ತಿಗಳಲ್ಲಿ, ಪ್ರವಿಶನ್ - ಪ್ರವೇಶಿಸುತ್ತಲೂ, ಪುನಃ - ಮರಳಿ, ನಿಷ್ಪತಂಶ್ಚ - ಹೊರಗೆ ಬರುತ್ತಿರುವವನಾಗಿಯೂ, ಪ್ರಚ್ಛನ್ನಶ್ಚ - ಆಚ್ಛಾದಿತನಾಗಿಯೂ, ಪ್ರಕಾಶಶ್ಚ - ಸ್ಪಷ್ಟವಾಗಿ ಕಾಣುತ್ತಿರುವವನಾಗಿಯೂ, ಲಕ್ಷ್ಯತೇ - ತೋರುತ್ತಿದ್ದನು. ॥ ೮ ॥ ತದಾ - ಆ ಸಮಯದಲ್ಲಿ, ವಿವಿ....ರಃ - ನಾನಾಬಗೆಯಾದ ಮೇಘಗಳ ಸಮೂಹಗಳಲ್ಲಿ ಪ್ರಾಪ್ತವಾದ ಮಾರ್ಗ ವುಳ್ಳ, ಧವಳಾಂಬರಃ - ಬೆಳ್ಳಗಿರುವ ವಸ್ತ್ರಗಳುಳ್ಳ, ವೀರಃ - ಶೂರನಾದ ಆಂಜನೇಯನು, ಅಂಬರೇ - ಅಂತರಿಕ್ಷದಲ್ಲಿ, ದೃಶ್ಯಾ....ನುಃ - ತೋರಿಯೂ ತೋರದ ಶರೀರವುಳ್ಳವನಾಗಿ, ಚಂದ್ರಾಯತೇ -

ಆ ಮಾರುತಿಯು ಅಂತರಿಕ್ಷವನ್ನೇ ನುಂಗಿಬಿಡುವನೋ ಎಂಬಂತೆಯೂ, ಚಂದ್ರನನ್ನೇ ತನ್ನ ಉಗುರುಗಳಿಂದ ಪರಚುವನೋ ಎಂಬಂತೆಯೂ, ನಕ್ಷತ್ರಗಳಿಂದಲೂ, ಸೂರ್ಯಮಂಡಲ ದಿಂದಲೂ ಕೂಡಿದ ಅಂತರಿಕ್ಷವನ್ನೇ ಹಾರಿಸುವನೋ ಎಂಬಂತೆಯೂ, ಮೇಘಮಂಡಲ ವನ್ನೇ ಆಕರ್ಷಿಸುವನೋ ಎಂಬಂತೆಯೂ ಮುಂಬರಿದು ಬರುತ್ತಿದ್ದನು. ॥ ೫–೬ ॥ ಆ ಸಮಯದಲ್ಲಿ ಗಗನಾಂಗಣದಲ್ಲಿನ ಮೇಘಸಮೂಹಗಳೆಲ್ಲವೂ ಹನುಮಂತನ ದೇಹಕಾಂತಿಯ ಸಂಪರ್ಕದಿಂದ ಬಿಳುಪು, ಕೆಂಪು, ಕಪ್ಪು, ಕಂದು ಮೊದಲಾದ ವರ್ಣಗಳಿಂದ ಹೊಳೆಯು ತ್ತಿದ್ದುವು. ಹನುಮಂತನಾದರೋ ಆ ಮೇಘಜಾಲಗಳಲ್ಲಿ ಹಲವು ಬಾರಿ ಪ್ರವೇಶಿಸುತ್ತಲೂ, ಹಲವು ಬಾರಿ ಹೊರಬರುತ್ತಲೂ, ಕೆಲವು ವೇಳೆ ಪ್ರಚ್ಛನ್ನನಾಗಿಯೂ, ಕೆಲವು ವೇಳೆ ಪ್ರಕಾಶ ಮಾನನಾಗಿಯೂ ಚಂದ್ರನಂತೆ ಶೋಭಿಸುತ್ತಿದ್ದನು. ಮಹಾ ಶೌರ್ಯವಂತನಾದ ಆ ಕಪಿವೀರನು ಬಿಳಿಯ ವಸ್ತ್ರವನ್ನುಟ್ಟಿದ್ದುದರಿಂದಲೂ, ಆಕಾಶದಲ್ಲಿ ನಾನಾವಿಧಗಳಾದ ಮೇಘಸಮೂಹಗಳ ನಡುವೆ ನುಗ್ಗಿ ಹೋಗುತ್ತಿದ್ದುದರಿಂದಲೂ, ಒಂದುಸಲ ಕಾಣಿಸು ತ್ತಲೂ, ಇನ್ನೊಂದುಸಲ ಮೇಘಾಚ್ಛಾದಿತನಾಗಿ ಕಾಣದೆಯೂ, ದೃಶ್ಯಾದೃಶ್ಯನಾಗಿ ಚಂದ್ರ

ಸ್ತದಾ ಚಂದ್ರಾಯುತೇಽಂಬರೇ ॥ ೯ ॥ ತಾರ್ಕ್ಷ್ಯಾಯಮಾಣೋ ಗಗನೇ ಬಭಾಸೇ ವಾಯುನಂದನಃ । ದಾರಯನ್ಮೇಘಬೃಂದಾನಿ ನಿಷ್ಪತಂಶ್ಚ ಪುನಃಪುನಃ ॥ ೧೦ ॥ ನದನ್ನಾದೇನ ಮಹತಾ ಮೇಘಸ್ವನಮಹಾಸ್ವನಃ । ಪ್ರವರಾನ್ರಾಕ್ಷಸಾನ್ ಹತ್ವಾ ನಾಮ ವಿಶ್ರಾವ್ಯ ಚಾತ್ಮನಃ ॥ ೧೧ ॥ ಆಕುಲಾಂ ನಗರೀಂ ಕೃತ್ವಾ ವ್ಯಥಯಿತ್ವಾಚ ರಾವಣಂ । ಅರ್ದಯಿತ್ವಾ ಬಲಂ ಘೋರಂ ವೈದೇಹೀಮಭಿವಾದ್ಯಚ । ಆಜಗಾಮ ಮಹಾತೇಜಾಃ ಪುನರ್ಮಧ್ಯೇನ ಸಾಗರಂ ॥ ೧೨ ॥ ಪರ್ವತೇಂದ್ರಂ ಸುನಾಭಂಚ ಸಮುಪಸ್ಪೃಶ್ಯ ವೀರ್ಯವಾನ್ । ಜ್ಯಾಮುಕ್ತ ಇವ ನಾರಾಚೋ ಮಹಾವೇಗೋಽಭ್ಯುಪಾಗತಃ ॥೧೩॥

ಚಂದ್ರನಂತಿದ್ದನು. ॥ ೯ ॥ ಮಹಾತೇಜಾಃ - ಮಹಾ ತೇಜಸ್ವಿಯಾದ, ವಾಯುನಂದನಃ - ವಾಯು ಪುತ್ರನು, ಗಗನೇ - ಅಂತರಿಕ್ಷದಲ್ಲಿ, ಮೇಘಬೃಂದಾನಿ - ಮೇಘಸಮೂಹಗಳನ್ನು, ದಾರಯನ್ - ಸೀಳುತ್ತ, ಪುನಃಪುನಃ - ಬಾರಿಬಾರಿಗೂ, ನಿಷ್ಪತನ್ - ಹೊರಗೆ ಬರುತ್ತ, ತಾರ್ಕ್ಷ್ಯಾಯಮಾಣಃ - ಗರುಡ ನಂತೆ ಆಚರಿಸುತ್ತಿರುವನಾಗಿ, ಬಭಾಸೇ - ಹೊಳೆಯುತ್ತಿದ್ದನು, ಮಹತಾ - ದೊಡ್ಡದಾದ, ನಾದೇನ - ಕೂಗಿನಿಂದ, ನದನ್ - ಕೂಗುತ್ತಿರುವ, ಮೇಘ....ನಃ - ಮೇಘಗರ್ಜನೆಯಂತೆ ಗರ್ಜನೆಯುಳ್ಳ, ಪ್ರವರಾನ್ - ಮುಖಂಡರಾದ, ರಾಕ್ಷಸಾನ್ - ರಾಕ್ಷಸರನ್ನು, ಹತ್ವಾ - ಸಂಹರಿಸಿ, ಆತ್ಮನಃ - ತನ್ನ, ನಾಮಚ - ಹೆಸರನ್ನೂ ಸಹ, ವಿಶ್ರಾವ್ಯಚ - ಶ್ರುತಪಡಿಸಿ, ನಗರೀಂ - ಲಂಕಾಪುರವನ್ನು, ಆಕುಲಾಂ ಕೃತ್ವಾ - ವ್ಯಾಕುಲವಾಗಿ ಮಾಡಿ, ರಾವಣಂಚ - ರಾವಣಾಸುರನನ್ನೂ ಸಹ, ವ್ಯಥಯಿತ್ವಾ - ವ್ಯಸನ ಗೊಳಿಸಿ, ಘೋರಂ - ಭಯಂಕರವಾದ, ಬಲಂ - ಸೇನೆಯನ್ನು, ಅರ್ದಯಿತ್ವಾ - ಹಾಳುಮಾಡಿ, ವೈದೇಹೀಂ - ಸೀತಾದೇವಿಯನ್ನು, ಅಭಿವಾದ್ಯಚ - ನಮಸ್ಕರಿಸಿ, ಪುನಃ - ಮತ್ತು, ಸಾಗರಂ - ಸಮುದ್ರದ, ಮಧ್ಯೇನ - ಮಧ್ಯಪ್ರದೇಶದಲ್ಲಿ, ಆಜಗಾಮ - ಬಂದನು. ॥೧೦-೧೨॥ ವೀರ್ಯವಾನ್ - ಪರಾಕ್ರಮಿಯಾದ ಆಂಜನೇಯನು, ಪರ್ವತೇಂದ್ರಂ - ಪರ್ವತಶ್ರೇಷ್ಠವಾದ, ಸುನಾಭಂಚ - ಮೈನಾಕ ಪರ್ವತವನ್ನೂ ಸಹ, ಸಮುಪಸ್ಪೃಶ್ಯ - ಸವರಿ, ಜ್ಯಾಮುಕ್ತಃ - ಬಿಲ್ಲಿನ ಹೆದೆಯಿಂದ ಬಿಡಲ್ಪಟ್ಟ,

---

ನಂತೆ ಬೆಳಗುತ್ತಿದ್ದನು. ವಾಯುಪುತ್ರನಾದ ಆ ಆಂಜನೇಯನು ಹಲವು ಬಾರಿ ಮೇಘ ಸಮೂಹಗಳನ್ನು ಭೇದಿಸಿಕೊಂಡು ಅಡಿಗಡಿಗೂ ಹೊರಗೆ ಬರುತ್ತ, ಮೇಘಧ್ವನಿಯನ್ನೂ ಮೀರಿಸಿದ ಸಿಂಹನಾದವನ್ನು ಮಾಡುತ್ತ, ಗಗನಮಾರ್ಗದಲ್ಲಿ ಸಂಚರಿಸುವ ಗರುತ್ಮಂತನಂತೆ ಶೋಭಿಸುತ್ತಿದ್ದನು. ಹೀಗೆ ಮಹಾ ಬಲಪರಾಕ್ರಮಶಾಲಿಯಾದ ಆ ವಾನರವೀರನು ಲಂಕಾನಗರದಲ್ಲಿನ ರಾಕ್ಷಸಶ್ರೇಷ್ಠರನೇಕರನ್ನು ಕೊಂದು, ಅಲ್ಲಿ ತನ್ನ ಹೆಸರನ್ನು ಚೆನ್ನಾಗಿ ಪ್ರಚುರಗೊಳಿಸಿ, ರಾವಣನ ಮಹಾ ಸೈನ್ಯವನ್ನು ನಾಶಮಾಡಿದುದಲ್ಲದೆ, ಲಂಕಾನಗರವನ್ನೂ ಸುಟ್ಟು ದೊಡ್ಡ ಕೋಲಾಹಲವನ್ನುಂಟುಮಾಡಿ, ರಾಕ್ಷಸರಾಜನಾದ ರಾವಣಾಸುರನಿಗೆ ಮಹತ್ತರವಾದ ವ್ಯಸನವನ್ನುಂಟುಮಾಡಿ, ಸೀತಾದೇವಿಗೆ ನಮಸ್ಕರಿಸಿ, ಆಕೆಯ ಅಪ್ಪಣೆಯನ್ನು ಪಡೆದು, ಮರಳಿಯೂ ಮಹಾ ಸಾಗರವನ್ನು ದಾಟಿ ಬರುತ್ತಿದ್ದನು. ॥ ೭–೧೨ ॥ ಹೀಗೆ ದಾಟಿ ಬರುತ್ತಿರುವಾಗ ಮಹಾ ವೀರನಾದ ಆ ಹನುಮಂತನು, ಶ್ರೇಷ್ಠವಾದ ಶಿಖರಗಳುಳ್ಳದೂ, ಪರ್ವತೋತ್ತಮವಾದುದೂ ಆದ ಮೈನಾಕವನ್ನು ಸಮುದ್ರಮಧ್ಯದಲ್ಲಿ ಕಂಡವನಾಗಿ, ಅದನ್ನು ಸನ್ಮಾನಿಸಲೋಸುಗ, ಕೈಯಿಂದದನ್ನು ಸವರಿ, ಪುನಃ ಬಿಲ್ಲಿನಿಂದ ಬಿಡಲ್ಪಟ್ಟ ಬಾಣದಂತೆ ಮಹಾ

ಸಕಿಂಚಿದನುಸಂಪ್ರಾಪ್ತಃ ಸಮಾಲೋಕ್ಯ ಮಹಾಗಿರಿಂ । ಮಹೇಂದ್ರಂ ಮೇಘ ಸಂಕಾಶಂ ನನಾದ ಹರಿಪುಂಗವಃ ॥ ೧೪ ॥ ಸ ಪೂರಯಾಮಾಸ ಕಪಿರ್ದಿಶೋ ದಶ ಸಮಂತತಃ । ನದನ್ನಾದೇನ ಮಹತಾ ಮೇಘಸ್ವನ ಮಹಾಸ್ವನಃ ॥೧೫॥ ಸ ತಂ ದೇಶ ಮನುಪ್ರಾಪ್ತಃ ಸುಹೃದ್ದರ್ಶನಲಾಲಸಃ । ನನಾದ ಹರಿಶಾರ್ದೂಲೋ ಲಾಂಗೂಲಂ ಚಾಪ್ಯಕಂಪಯತ್ ॥ ೧೬ ॥ ತಸ್ಯ ನಾನದ್ಯಮಾನಸ್ಯ ಸುಪರ್ಣಚರಿತೇ ಪಥಿ । ಫಲತೀ ವಾಽಸ್ಯ ಘೋಷೇಣ ಗಗನಂ ಸಾರ್ಕಮಂಡಲಂ ॥೧೭॥ ಯೇಽಪಿ ತತ್ರೋತ್ತರೇ ತೀರೇ

ನಾರಾಚ ಇವ - ನಿಡಿಗೋಲಿನಂತೆ, ಮಹಾವೇಗಃ - ಬಹು ವೇಗವುಳ್ಳವನಾಗಿ, ಅಭ್ಯುಪಾಗತಃ - ಬಂದನು. ॥ ೧೩ ॥ ಸಹರಿಪುಂಗವಃ - ಆ ಕಪಿಶ್ರೇಷ್ಠನು, ಕಿಂಚಿದನುಸಂಪ್ರಾಪ್ತಃ - ಮೈನಾಕಪರ್ವತಕ್ಕಿಂತಲೂ ಸ್ವಲ್ಪ ಮುಂದಕ್ಕೆ ಬಂದು, ಮೇಘಸಂಕಾಶಂ-ಮೇಘಸದೃಶವಾದ, ಮಹೇಂದ್ರಂ-ಮಹೇಂದ್ರವೆಂಬ, ಮಹಾಗಿರಿಂ - ದೊಡ್ಡ ಪರ್ವತವನ್ನು, ಸಮಾಲೋಕ್ಯ - ಕಂಡು, ನನಾದ - ಸಿಂಹನಾದ ಮಾಡಿದನು. ॥ ೧೪ ॥ ಮೇಘ....ನಃ - ಮೇಘಧ್ವನಿಯಂತೆ ಧ್ವನಿಯುಳ್ಳ, ಸಕಪಿಃ - ಆ ವಾನರನು, ಮಹತಾ - ದೊಡ್ಡದಾದ, ನಾದೇನ - ಧ್ವನಿಯಿಂದ, ನರ್ದ - ಕೂಗುತ್ತ, ದಶದಿಶಃ - ಹತ್ತು ದಿಕ್ಕುಗಳನ್ನೂ, ಸಮಂತತಃ ಎಲ್ಲಾ ಕಡೆಯಲ್ಲಿಯೂ, ಪೂರಯಾಮಾಸ - ತುಂಬಿಸಿದನು. ॥ ೧೫ ॥ ಸುಹೃ....ಸಃ - ಸ್ನೇಹಿತನಾದ ಜಾಂಬವಾದಿಗಳ ನೋಡುವಿಕೆಯಲ್ಲಿ ಆಸಕ್ತನಾದ, ಸಹರಿಶಾರ್ದೂಲಃ-ಆ ಕಪಿಶ್ರೇಷ್ಠನು, ತಂದೇಶಂ - ಅವರು ನೆಲೆಗೊಂಡಿರುವ ಪ್ರದೇಶವನ್ನು, ಅನುಸಂಪ್ರಾಪ್ತಃ - ಹೊಂದಿ, ನನಾದ - ಸಿಂಹನಾದ ಮಾಡಿದನು, ಲಾಂಗೂಲಂಚಾಪಿ - ಬಾಲವನ್ನೂ ಸಹ, ಅಕಂಪಯತ್ - ಅಪ್ಪಳಿಸಿದನು. ॥೧೬॥ ಸುಪರ್ಣಚರಿತೇ - ಗರುಡನಿಂದ ಸಂಚರಿಸಲ್ಪಡುವ, ಪಥಿ - ಅಂತರಿಕ್ಷಮಾರ್ಗದಲ್ಲಿ, ನಾನದ್ಯಮಾನಸ್ಯ - ಬಾರಿಬಾರಿಗೂ ಕೂಗುತ್ತಿರುವ, ತಸ್ಯ - ಆ ಸಮುದ್ರಲಂಘನವನ್ನು ಮಾಡುತ್ತಿರುವ, ಅಸ್ಯ - ಈ ಆಂಜನೇಯನ, ಘೋಷೇಣ - ಧ್ವನಿಯಿಂದ, ಸಾರ್ಕಮಂಡಲಂ - ಸೂರ್ಯಮಂಡಲದಿಂ ದೊಡಗೂಡಿದ, ಗಗನಂ - ಆಕಾಶವು, ಫಲತೀವ - ಸೀಳುವುದೋ ಎಂಬತ್ತಿದ್ದಿತು. ॥ ೧೭ ॥ ಮಹಾ

ವೇಗದಿಂದೈತಂದನು. ವಾನರೋತ್ತಮನಾದ ಆ ಹನುಮಂತನು ಆ ಮೈನಾಕಪರ್ವತವನ್ನು ದಾಟಿ, ಸ್ವಲ್ಪ ಮುಂದಕ್ಕೆ ಬಂದು, ಮಹೇಂದ್ರಪರ್ವತವನ್ನು ನೋಡಿದನು. ಕೂಡಲೇ ಅವನ ಉತ್ಸಾಹವಿಮ್ಮಡಿಸಿತು. ಆಗಲೇ ಒಂದು ದೊಡ್ಡ ಸಿಂಹನಾದವನ್ನು ಮಾಡಿದನು. ಮೇಘ ಧ್ವನಿಗೆ ಸಮಾನವಾದ ಧ್ವನಿಯುಳ್ಳ ಆ ಕಪಿವೀರನು ಅಂಗದನೇ ಮೊದಲಾದ ಮಿತ್ರರನ್ನು ನೋಡಲು ಆತುರವುಳ್ಳವನಾಗಿ ಕೂಡಲೇ ದಶದಿಶೆಗಳನ್ನೂ ಸಿಂಹನಾದದಿಂದ ತುಂಬಿಸಿ ತನ್ನ ಲಾಂಗೂಲವನ್ನೆತ್ತಿ ಆಡಿಸಿದನು. ಆಗ ಗರುಡಸಂಚಾರವುಳ್ಳ ಆ ಗಗನಮಾರ್ಗ ದಲ್ಲಿ ಸಿಂಹನಾದವನ್ನು ಮಾಡುತ್ತಿದ್ದ ಆ ಹನುಮಂತನ ಧ್ವನಿಗೆ, ಸೂರ್ಯಮಂಡಲ ದಿಂದ ಕೂಡಿದ ಅಂತರಿಕ್ಷವೇ ಒಡೆದುಹೋಗುವುದೋ ಎಂಬಂತೆ ಕಾಣುತ್ತಿದ್ದಿತು. ॥೧೩–೧೭॥ ಆ ಸಮಯದಲ್ಲಿ, ಹಿಂದೆ ಆಂಜನೇಯನು ಸಮುದ್ರವನ್ನು ದಾಟಿಹೋದಾಗಿನಿಂದಲೂ ಉತ್ತರತೀರದಲ್ಲಿಯೇ ವಾಸಮಾಡಿಕೊಂಡು ಆತನ ಆಗಮನವನ್ನೇ ನಿರೀಕ್ಷಿಸುತ್ತಿದ್ದವರೂ, ಮಹಾ ಪರಾಕ್ರಮಶಾಲಿಗಳಾದವರೂ ಆದ ಅಂಗದನೇ ಮೊದಲಾದ ಕಪಿಯೂಥಪತಿಗಳು, ವಾಯುವಿನಿಂದ ಪ್ರೇರಿತವಾದ ಮಹಾ ಮೇಘಧ್ವನಿಯಂತಿದ್ದ ಆ ಹನುಮಂತನು ಸಿಂಹ

ಸಮುದ್ರಸ್ಯ ಮಹಾಬಲಾಃ । ಪೂರ್ವಂ ಸುನಿವಿಷ್ಟಾಶ್ಶೂರಾ ವಾಯುಪುತ್ರದಿದೃಕ್ಷವಃ ॥ ೧೮ ॥ ಮಹತೋ ವಾಯುನುನ್ನಸ್ಯ ತೋಯದಸ್ಯೇವ ಗರ್ಜಿತಂ । ಶುಶ್ರುವುಸ್ತೇ ತದಾ ಘೋಷಮೂರುವೇಗಂ ಹನೂಮತಃ ॥ ೧೯ ॥ ತೇ ದೀನಮನಸಸ್ಸರ್ವೇ ಶುಶ್ರುವುಃ ಕಾನನೌಕಸಃ । ವಾನರೇಂದ್ರಸ್ಯ ನಿರ್ಘೋಷಂ ಪರ್ಜನ್ಯನಿನದೋಪಮಂ ॥ ೨೦ ॥ ನಿಶಮ್ಯ ನದತೋ ನಾದಂ ವಾನರಾಸ್ತೇ ಸಮಂತತಃ । ಬಭೂವುರುತ್ಸುಕಾಸ್ಸರ್ವೇ ಸುಹೃದ್ದರ್ಶನಕಾಂಕ್ಷಿಣಃ ॥ ೨೧ ॥ ಜಾಂಬವಾನ್ ಸ ಹರಿಶ್ರೇಷ್ಠಃ ಪ್ರೀತಿಸಂಹೃಷ್ಟಮಾನಸಃ । ಉಪಾಮಂತ್ರ್ಯ ಹರೀನ್ ಸರ್ವಾನಿದಂ ವಚನಮಬ್ರವೀತ್ ॥ ೨೨ ॥ “ ಸರ್ವಥಾ ಕೃತಕಾರ್ಯೋಽಸೌ ಹನೂಮಾನ್ನಾತ್ರ ಸಂಶಯಃ । ನಹ್ಯಸ್ಯಾ

ಬಲಾಃ-ಅತಿ ಬಲಾಢ್ಯರಾದ, ವೀರಾಃ-ಶೂರರಾದ, ಯೇತು-ಯಾವ ವಾನರರಾದರೆ, ವಾಯು....ವಃ-ವಾಯುನಂದನನನ್ನು ನೋಡಲಿಚ್ಛೆಯುಳ್ಳವರಾಗಿ, ಸಮುದ್ರಸ್ಯ - ಕಡಲಿನ, ತತ್ರೋತ್ತರೇತೀರೇ - ಆ ಉತ್ತರತೀರದಲ್ಲಿ, ಪೂರ್ವಂ - ಮೊದಲು, ಸಂವಿಷ್ಟಾಃ - ಕುಳಿತಿದ್ದರೋ, ತೇ - ಅವರು, ತದಾ- ಆಗ, ವಾಯುನುನ್ನಸ್ಯ - ಗಾಳಿಯಿಂದ ಪ್ರೇರಿತವಾದ, ಮಹತಃ - ಮಹತ್ತರವಾದ, ತೋಯದಸ್ಯ - ಮೇಘದ, ಗರ್ಜಿತಮಿವ - ನಿರ್ಘೋಷದಂತೆ, ಹನೂಮಂತಃ - ಆಂಜನೇಯನ, ಊರುವೇಗಂ - ತೊಡೆಗಳ ವೇಗದಿಂದ ಹುಟ್ಟಿದ, ಘೋಷಂ - ಶಬ್ದವನ್ನು, ಶುಶ್ರುವುಃ - ಕೇಳಿದರು. ॥ ೧೯ ॥ ದೀನಮಾನಸಃ - ದುಃಖಿತವಾದ ಮನವುಳ್ಳ, ಸರ್ವೇ - ಸಮಸ್ತರು, ತೇಕಾನನೌಕಸಃ - ಆ ವನಚಾರಿಗಳು, ಪರ್ಜ....ಮಂ - ಮೇಘಧ್ವನಿಗೆ ಸಮಾನವಾದ, ವಾನರೇಂದ್ರಸ್ಯ - ಕಪಿಶ್ರೇಷ್ಠನಾದ ಆಂಜನೇಯನ, ನಿರ್ಗೋಷಂ - ಗರ್ಜನೆಯನ್ನು, ಶುಶ್ರುವುಃ - ಕೇಳಿದರು. ॥ ೨೦ ॥ ಸಹ....ಣಃ - ಸ್ನೇಹಿತನನ್ನು ನೋಡುವದರಲ್ಲಿ ಉತ್ಕಂಠಿತರಾದ, ತೇವಾನರಾಸ್ಸರ್ವೇ - ಆ ಕಪಿಗಳೆಲ್ಲರೂ, ನದತಃ - ಸಿಂಹಧ್ವನಿ ಮಾಡುತ್ತಿರುವ ಆಂಜನೇಯನ, ನಾದಂ-ಶಬ್ದವನ್ನು ಸಮಂತತಃ-ಎಲ್ಲಾ ಕಡೆಯಲ್ಲಿಯೂ, ನಿಶಮ್ಯ - ಕೇಳಿ, ಉತ್ಸುಕಾಃ - ಉತ್ಕಂಠೆಯುಳ್ಳವರು, ಬಭೂವುಃ - ಆದರು. ॥ ೨೧ ॥ ಹರಿಶ್ರೇಷ್ಠಃ - ವಾನರೋತ್ತಮನಾದ, ಸಜಾಂಬವಾನ್ - ಆ ಜಾಂಬವಂತನು, ಪ್ರೀತಿ....ಸಃ - ವಿಶ್ವಾಸದಿಂದ ಸಂತೋಷಗೊಂಡ ಮನವುಳ್ಳವನಾಗಿ, ಸರ್ವಾನ್‌ಹರೀನ್ - ಕಪಿಗಳನ್ನೆಲ್ಲ, ಉಪಾಮಂತ್ರ್ಯ - ಕರೆದು, ಅಸೌಹನುಮಾನ್ - ಆ ಈ ಆಂಜನೇಯನು, ಸರ್ವಥಾ - ಸರ್ವಪ್ರಕಾರವಾಗಿಯೂ, ಕೃತಕಾರ್ಯಃ - ಮಾಡಲ್ಪಟ್ಟ ಕಾರ್ಯವುಳ್ಳವನು, ಅತ್ರ - ಈ ವಿಷಯದಲ್ಲಿ, ನಸಂಶಯಃ - ಸಂದೇಹವಿಲ್ಲ, ಅಕೃತಕಾರ್ಯಸ್ಯ - ಕೆಲಸನಡಿಸದಿರುವ, ಅಸ್ಯ - ಈ ಹನುಮಂತನ, ಶಬ್ದಃ - ಧ್ವನಿಯು, ಏವಂವಿಧಃ -

---

ನಾದವನ್ನೂ, ಊರುವೇಗದಿಂದುಂಟಾದ ಮಹಾ ಧ್ವನಿಯನ್ನು ಕೇಳಿದರು. ಸುಗ್ರೀವನಿತ್ತ ಸಮಯವು ಮೀರಿಹೋಗಿದ್ದುದರಿಂದ ವ್ಯಸನದಿಂದ ದೀನರಾಗಿಹೋಗಿದ್ದ ಆ ಅಂಗದಾದಿಗಳು ಹನುಮಂತನ ಆ ಸಿಂಹನಾದವನ್ನು ಚೆನ್ನಾಗಿ ಆಲಿಸಿ ಕೇಳಿ, ಮೇಘಧ್ವನಿಗೆ ಸಮಾನವಾಗಿ ದಶದಿಶೆಗಳನ್ನೂ ತುಂಬಿದ್ದ ಆ ಧ್ವನಿಯು ಹನುಮಂತನದೆಂದೇ ನಿರ್ಧರಿಸಿಕೊಂಡು, ಮಿತ್ರನಾದ ಅವನನ್ನು ನೋಡಲು ಮಹೋತ್ಸಾಹವುಳ್ಳವರಾಗಿದ್ದರು. ॥ ೧೬—೨೧ ॥ ಆಗ ಹರಿಶ್ರೇಷ್ಠನಾದ ಜಾಂಬವಂತನು ಸಂತುಷ್ಟಾಂತರಂಗನಾಗಿ ಅಲ್ಲಿದ್ದ ವಾನರರೆಲ್ಲರನ್ನೂ ಕರೆದು, “ ಎಲೈ ವಾನರರೇ ! ಈ ಹನುಮಂತನು ಎಲ್ಲ ವಿಧಗಳಲ್ಲಿಯೂ ಕೃತಕಾರ್ಯನಾಗಿಯೇ ಬರುತ್ತಿರುವನು. ಇದರಲ್ಲಿ ಎಳ್ಳಷ್ಟೂ ಸಂಶಯವಿಲ್ಲವು. ಈತನು ತಾನು ಹೋದ ಕಾರ್ಯ

ಕೃತಕಾರ್ಯಸ್ಯ ನಾದ ಏವಂ ವಿಧೋ ಭವೇತ್ " ||೨೩|| ತಸ್ಯ ಬಾಹೂರುವೇಗಂಚ ನಿನಾದಂಚ ಮಹಾತ್ಮನಃ । ನಿಶಮ್ಯ ಹರಯೋ ಹೃಷ್ಟಾಃ ಸಮುತ್ಪೇತುಸ್ತತಸ್ತತಃ || ೨೪ || ತೇ ನಗಾಗ್ರಾನ್ನಗಾಗ್ರಾಣಿ ಶಿಖರಾಚ್ಛಿಖರಾಣಿಚ । ಪ್ರಹೃಷ್ಟಾಸ್ಸಮುಪದ್ಯಂತ ಹನೂಮಂತಂ ದಿದೃಕ್ಷವಃ || ೨೫ || ತೇ ಪ್ರೀತಾಃ ಪಾದಪಾಗ್ರೇಷು ಗೃಹ್ಯ ಶಾಖಾಸು ವಿಷ್ಠಿತಾಃ । ವಾಸಾಂಸೀವ ಪ್ರಶಾಖಾಶ್ಚ ಸಮಾವಿಧ್ಯಂತ ವಾನರಾಃ || ೨೬ || ಗಿರಿಗಹ್ವರಸಂಲೀನೋ ಯಥಾ ಗರ್ಜತಿ ಮಾರುತಃ । ಏವಂ ಜಗರ್ಜ ಬಲವಾನ್ ಹನೂಮಾನ್ಮಾರುತಾತ್ಮಜಃ || ೨೭ || ತಮಭ್ರಘನಸಂಕಾಶಮಾಪತಂತಂ ಮಹಾಕಪಿಂ ।

ಈ ರೀತಿಯಾಗಿ, ನಭವೇದ್ಧಿ - ಆಗಲಾರದಷ್ಟೆ, (ಇತಿ - ಇಂತೆಂದು), ಇದಂವಚನಂ - ಈ ಮಾತನ್ನು, ಅಬ್ರವೀತ್ - ನುಡಿದನು. || ೨೨-೨೩ || ಹರಯಃ - ಕಪಿಗಳು, ಮಹಾತ್ಮನಃ - ಮಹಾನುಭಾವನಾದ, ತಸ್ಯ - ಆ ಆಂಜನೇಯನ, ಬಾಹೂ....ಚ - ತೋಳುಗಳ ಮತ್ತು ತೊಡೆಗಳ ವೇಗದಿಂದ ಹುಟ್ಟಿದ ಶಬ್ದವನ್ನೂ, ನಿನಾದಂಚ - ಕಂಠಧ್ವನಿಯನ್ನೂ ಸಹ, ನಿಶಮ್ಯ - ಕೇಳಿ, ಹೃಷ್ಟಾಃ - ಸಂತೋಷಗೊಂಡವರಾಗಿ, ತತಸ್ತತಃ - ಅಲ್ಲಲ್ಲಿ, ಸಮುತ್ಪೇತುಃ - ನೆಗದರು. || ೨೪ || ಹೃಷ್ಟಾಃ - ಸಂತುಷ್ಟರಾದ, ತೇ - ಆ ಕಪಿಗಳು, ಹನೂಮಂತಂ - ಆಂಜನೇಯನನ್ನು, ದಿದೃಕ್ಷವಃ - ನೋಡಲಿಚ್ಛೆಯುಳ್ಳವರಾಗಿ, ನಗಾ....ಣಿ - ವೃಕ್ಷಾಗ್ರದಿಂದ ವೃಕ್ಷಾಗ್ರಗಳಿಗೂ ಅಥವಾ ಪ್ರತ್ಯಂತಪರ್ವತಗಳಿಂದ ಅದರ ಮೇಲ್ಭಾಗಗಳನ್ನೂ, ಶಿಖರಾತ್ - ಶೃಂಗಗಳಿಂದ, ಶಿಖರಾಣಿಚ - ಶೃಂಗಗಳನ್ನೂ ಸಹ, ಸಮುಪದ್ಯಂತ-ಸೇರಿದರು, || ೨೫ || ತೇವಾನರಾಃ - ಆ ಕಪಿಗಳು, ಪ್ರೀತಾಃ - ಸಂತುಷ್ಟರಾಗಿ, ಪಾದಪಾಗ್ರೇಷು - ವೃಕ್ಷಾಗ್ರಗಳಲ್ಲಿ, ಸುವಿಷ್ಠಿತಾಃ - ಇರುವರಾಗಿ, ಶಾಖಾಃ - ರೆಂಬೆಗಳನ್ನು, ಪ್ರಶಾಖಾಶ್ಚ - ಸಣ್ಣ ರೆಂಬೆಗಳನ್ನೂ ಸಹ, ಗೃಹ್ಯ - ಹಿಡಿದು, ವಾಸಾಂಸೀವ - ಬಟ್ಟೆಗಳನ್ನಂತೆ, ಸಮಾವಿಧ್ಯಂತ - ಕೊಡಹಿದರು, ||೨೬|| ಗಿರಿ....ನಃ - ಪರ್ವತದ ಗುಹೆಗಳಲ್ಲಿ ಅವಿತುಕೊಂಡಿರುವ, ಮಾರುತಃ - ವಾಯುವು, ಯಥಾಗರ್ಜತಿ - ಹೇಗೆ ಗರ್ಜಿಸುವನೋ, ಬಲವಾನ್ - ಬಲಿಷ್ಠನಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್-ಆಂಜನೇಯನು, ಏವಂ-ಈ ರೀತಿಯಾಗಿ, ಜಗರ್ಜ-ಗರ್ಜನೆಮಾಡಿದನು. ||೨೭|| ತದಾ - ಆ ಸಮಯದಲ್ಲಿ, ಸರ್ವೇ - ಸಮಸ್ತರಾದ, ತೇವಾನರಾಃ - ಆ ಕಪಿಗಳು, ಅಭ್ರ....ಶಂ-

ವನ್ನು ಮಾಡಿಕೊಂಡು ಬಾರದಿದ್ದರೆ ಈತನ ಕಂಠಧ್ವನಿಯು ಇಷ್ಟು ಗಂಭೀರವಾಗಿರುತ್ತಿರಲಿಲ್ಲ." ಎಂದು ಹೇಳಿದನು. ಆಮೇಲೆ ಆ ವಾನರರೆಲ್ಲರೂ, ಮಹಾ ಪರಾಕ್ರಮಶಾಲಿಯಾದ ಆ ಹನುಮಂತನ ತೋಳುಗಳ ಮತ್ತು ಊರುಗಳ ವೇಗದಿಂದುಂಟಾದ ಧ್ವನಿಯನ್ನೂ, ಅವನು ಮಾಡುತ್ತಿದ್ದ ಸಿಂಹನಾದವನ್ನೂ ಕೇಳಿ ಅತಿಶಯವಾದ ಸಂತೋಷವನ್ನು ಹೊಂದಿ ಎಲ್ಲಿದ್ದವರಲ್ಲಿಯೇ ಮೇಲಕ್ಕೆ ನೆಗೆಯಲಾರಂಭಿಸಿದರು. ಹನುಮದ್ದರ್ಶನ ಲಾಲಸರಾದ ಆ ವಾನರರೆಲ್ಲರೂ ಮಹದಾನಂದಭರಿತರಾಗಿ ಗಿಡದಿಂದ ಗಿಡಕ್ಕೂ, ಗುಡ್ಡದಿಂದ ಗುಡ್ಡಕ್ಕೂ ಹಾರುತ್ತಿದ್ದರು. || ೨೨-೨೫ || ಆ ವಾನರರೆಲ್ಲರೂ ಬಹಳವಾದ ಸಂತೋಷದಿಂದ ವೃಕ್ಷಾಗ್ರಗಳಲ್ಲಿರುವ ರೆಂಬೆಗಳನ್ನು ಹಿಡಿದುಕೊಂಡು, ದೂರದೇಶದಿಂದ ಹಿಂತಿರುಗಿ ಬರುತ್ತಿರುವ ಮಿತ್ರನನ್ನು ಬೇಗಬಾರೆಂದು ವಸ್ತ್ರದ ಸೆರಗನ್ನಾಡಿಸುವಂತೆ, ಅಲುಗಾಡಿಸುತ್ತಿದ್ದರು. ಆ ಸಮಯದಲ್ಲಿ ಮಹಾ ಬಲಾಢ್ಯನಾದ ಮಾರುತಿಯು ಬೆಟ್ಟದ ಗವಿಗಳಲ್ಲಿ ಅಡಗಿರುವ ವಾಯುವಿನಂತೆ ಸಿಂಹನಾದವನ್ನು ಮಾಡುತ್ತ ಬರುತ್ತಿದ್ದನು. ಹೀಗೆ ಬರುತ್ತಿರುವ

ದೃಷ್ಟ್ವಾ ತೇ ವಾನರಾಸ್ಸರ್ವೇ ತಸ್ಥುಃ ಪ್ರಾಂಜಲಯಸ್ತದಾ ॥೨೮॥ ತತಸ್ತು ವೇಗವಾಂ ಸ್ತಸ್ಯ ಗಿರೇರ್ಗಿರಿನಿಭಃ ಕಪಿಃ । ನಿಪಪಾತ ಮಹೇಂದ್ರಸ್ಯ ಶಿಖರೇ ಪಾದಪಾಕುಲೇ॥೨೯॥ ಹರ್ಷೇಣಾಪೂರ್ಯಮಾಣೋಽಸೌ ರಮ್ಯೇ ಪರ್ವತನಿರ್ಝರೇ । ಛಿನ್ನಪಕ್ಷ ಇವಾ ಕಾಶಾತ್ಪಪಾತ ಧರಣೀಧರಃ ॥ ೩೦ ॥ ತತಸ್ತೇ ಪ್ರೀತಮನಸಃ ಸರ್ವೇ ವಾನರ ಪುಂಗವಾಃ । ಹನೂಮಂತಂ ಮಹಾತ್ಮಾನಂ ಪರಿವಾರ್ಯೋಪತಸ್ಥಿರೇ ॥ ೩೧ ॥ ಪರಿವಾರ್ಯ ಚ ತೇ ಸರ್ವೇ ಪರಾಂ ಪ್ರೀತಿಮುಪಾಗತಾಃ । ಪ್ರಹೃಷ್ಟವದನಾಸ್ಸರ್ವೇ ತಮರೋಗಮುಪಾಗತಂ ॥ ೩೨ ॥ ಉಪಾಯನಾನಿ ಚಾದಾಯ ಮೂಲಾನಿ ಚ ಫಲಾ

ಮೇಘಸಮೂಹಕ್ಕೆ ಸಮಾನನಾದ, ಆಪತಂತಂ - ಬರುತ್ತಿರುವ, ತಂಮಹಾಕಪಿಂ - ಆ ಮಹಾ ವಾನರನನ್ನು, ದೃಷ್ಟ್ವಾ - ಕಂಡು, ಪ್ರಾಂಜಲಯಃ - ಅಂಜಲಿಬದ್ಧರಾಗಿ, ತಸ್ಥುಃ - ನಿಂತರು. ॥೨೮॥ ವೇಗವಾನ್ - ವೇಗವಂತನಾದ, ಗಿರಿನಿಭಃ - ಪರ್ವತಸದೃಶನಾದ, ಕಪಿಃ - ಆಂಜನೇಯನು, ತತಃ - ಆ ಅರಿಷ್ಟವೆಂಬ ಪರ್ವತದಿಂದ, ಮಹೇಂದ್ರಸ್ಯ - ಮಹೇಂದ್ರವೆಂಬ, ತಸ್ಯಗಿರೇಃ - ಆ ಪರ್ವತದ, ಪಾದಪಾಕುಲೇ - ವೃಕ್ಷಗಳಿಂದ ತುಂಬಿರುವ, ಶಿಖರೇ - ಶೃಂಗದಲ್ಲಿ, ನಿಪಪಾತ - ಧುಮುಕಿದನು. ॥ ೨೯ ॥ ಹರ್ಷೇಣ - ಸಂತೋಷದಿಂದ, ಆಪೂರ್ಯಮಾಣಃ - ಉಬ್ಬುತ್ತಿರುವ, ಅಸೌ - ಈ ಆಂಜನೇಯನು, ಛಿನ್ನಪಕ್ಷಃ - ಕತ್ತರಿಸಲ್ಪಟ್ಟ ರೆಕ್ಕೆಗಳುಳ್ಳ, ಧರಣೀಧರ ಇವ - ಬೆಟ್ಟದಂತೆ, ರಮ್ಯೇ - ಮನೋಹರವಾದ, ಪರ್ವತನಿರ್ಝರೇ - ಬೆಟ್ಟದ ಜರಿಯಿಂದ ಹುಟ್ಟಿದ ನದಿಯಲ್ಲಿ, ಆಕಾಶಾತ್ - ಅಂತರಿಕ್ಷದಿಂದ, ಪಪಾತ - ಧುಮುಕಿದನು. ॥ ೩೦ ॥ ತತಃ - ಬಳಿಕ, ಪ್ರೀತಮನಸಃ - ಸಂತೋಷ ಯುಕ್ತವಾದ ಮನವುಳ್ಳ, ಸರ್ವೇ - ಸಮಸ್ತರಾದ, ವಾನರಪುಂಗವಾಃ - ಕಪಿಶ್ರೇಷ್ಠರು, ಮಹಾತ್ಮಾನಂ- ಪುಣ್ಯಶಾಲಿಯಾದ, ಹನುಮಂತಂ-ಆಂಜನೇಯನನ್ನು, ಪರಿವಾರ್ಯ - ಸುತ್ತಿಕೊಂಡು, ಉಪತಸ್ಥಿರೇ- ಸಮೀಪದಲ್ಲಿ ನಿಂತರು, ತೇಸರ್ವೇ-ಅವರೆಲ್ಲರೂ, ಪರಿವಾರ್ಯ-ಬಳಸಿಕೊಂಡು, ಪರಾಂಪ್ರೀತಿಂ-ಬಹಳ ಸಂತೋಷವನ್ನು, ಉಪಾಗತಾಃ-ಹೊಂದಿದರು. ॥೩೧॥ ಪ್ರಹೃಷ್ಟವದನಾಃ-ಸಂತೋಷಗೊಂಡ ಮನವುಳ್ಳ, ಸರ್ವೇಹರಯಃ - ಎಲ್ಲಾ ಕಪಿಗಳೂ, ಅರೋಗಂ- ಸೌಖ್ಯವಾಗಿ, ಉಪಾಗತಂ - ಬಂದ, ಹರಿಶ್ರೇಷ್ಠಂ- ವಾನರೋತ್ತಮನಾದ, ಮಾರುತಾತ್ಮಜಂ - ವಾಯುಪುತ್ರನಾದ, ತಂ - ಆ ಆಂಜನೇಯನನ್ನು ಕುರಿತು,

---

ಮೇಘೋಪಮನಾದ ಆ ವಾನರವೀರನನ್ನು ನೋಡಿ ಆ ವಾನರರೆಲ್ಲರೂ ಕೈಗಳನ್ನು ಜೋಡಿಸಿ, ಆತನಿಗೆ ವಂದನೆಗಳನ್ನರ್ಪಿಸುತ್ತ ನಿಂತಿದ್ದರು. ಮಹಾ ವೇಗಶೀಲನೂ, ಪರ್ವತೋಪಮ ವಾದ ದೇಹವುಳ್ಳವನೂ ಆದ ಆ ಹನುಮಂತನು ಅನೇಕ ವೃಕ್ಷಗಳಿಂದ ನಿಬಿಡಿತವಾಗಿರುವ ಆ ಮಹೇಂದ್ರಪರ್ವತ ಶಿಖರದಮೇಲೆ ಇಳಿದನು. ಹೀಗೆ ಆ ಕಪಿಸತ್ತಮನು ಮಹಾ ಸಂತೋಷ ದಿಂದುಬ್ಬುತ್ತ ಆ ಮಹೇಂದ್ರಪರ್ವತದಲ್ಲಿನ ಮನೋಹರವಾದ ಜರಿಯಲ್ಲಿ ಛಿನ್ನಪಕ್ಷವಾದ ಪರ್ವತದಂತೆ ಧುಮುಕಿದನು. ॥ ೨೯-೩೦ ॥ ಆಗ ಅಂಗದನೇ ಮೊದಲಾದ ವಾನರಶ್ರೇಷ್ಠ ರೆಲ್ಲರೂ ಮಹಾ ಸಂತೋಷವನ್ನು ಹೊಂದಿದವರಾಗಿ, ಮಹಾ ಪರಾಕ್ರಮಶಾಲಿಯಾದ ಆ ಹನುಮಂತನನ್ನು ಸುತ್ತಿಕೊಂಡರು. ಆಗ ವಾನರೋತ್ತಮನಾದ ಹನುಮಂತನು ಜಾಂಬ ವಂತನೇ ಮೊದಲಾದ ವೃದ್ಧರಿಗೂ, ಯುವರಾಜನಾದ ಅಂಗದನಿಗೂ ನಮಸ್ಕಾರಮಾಡಿದನು. ಆ ಸಮಯದಲ್ಲಿ ಅಲ್ಲಿದ್ದ ವಾನರರೆಲ್ಲರೂ ಸಂತೋಷಾಧಿಕ್ಯದಿಂದ ಅರಳಿದ ಮುಖಗಳುಳ್ಳವ ರಾಗಿ, ಸೌಖ್ಯವಾಗಿ ತಮ್ಮಲ್ಲಿಗೆ ಹಿಂತಿರುಗಿ ಬಂದ ವಾನರೋತ್ತಮನಾದ ಆ ಮಾರುತಿಗೆ

ನಿಚ । ಪ್ರತ್ಯರ್ಚಯನ್ ಹರಿಶ್ರೇಷ್ಠಂ ಹರಯೋ ಮಾರುತಾತ್ಮಜಂ ॥ ೩೩ ॥ ಹನೂಮಾಂಸ್ತು ಗುರೂನ್ವೃದ್ಧಾನ್ಜಾಂಬವತ್ಪ್ರಮುಖಾಂಸ್ತದಾ । ಕುಮಾರಮಂಗದಂಚೈವ ಸೋಽವಂದತ ಮಹಾಕಪಿಃ ॥ ೩೪ ॥ ಸತಾಭ್ಯಾಂ ಪೂಜಿತಃ ಪೂಜ್ಯಃ ಕಪಿಭಿಶ್ಚ ಪ್ರಸಾದಿತಃ । "ದೃಷ್ಟಾ ಸೀತೇ"ತಿ ವಿಕ್ರಾಂತಸ್ಸಂಕ್ಷೇಪೇಣ ನ್ಯವೇದಯತ್ ॥ ೩೫ ॥ ನಿಷಸಾದಚ ಹಸ್ತೇನ ಗೃಹೀತ್ವಾ ವಾಲಿನಸ್ಸುತಂ । ರಮಣೀಯೇ ವನೋದ್ದೇಶೇ ಮಹೇಂದ್ರಸ್ಯ ಗಿರೇಸ್ತದಾ ॥ ೩೬ ॥ ಹನೂಮಾನಬ್ರವೀದ್ಧೃಷ್ಟಸ್ತದಾ ತಾನ್ವಾನರರ್ಷಭಾನ್ । "ಅಶೋಕವನಿಕಾಸಂಸ್ಥಾ ದೃಷ್ಟಾ ಸಾ ಜನಕಾತ್ಮಜಾ ॥ ೩೭ ॥ ರಕ್ಷ್ಯಮಾಣಾ ಸುಘೋರಾಭೀ ರಾಕ್ಷಸೀಭಿರನಿಂದಿತಾ । ಏಕವೇಣೀಧರಾ ಬಾಲಾ ರಾಮ

ಮೂಲಾನಿ - ಕಂದಮೂಲಗಳನ್ನೂ, ಫಲಾನಿಚ - ಹಣ್ಣುಗಳನ್ನೂ, ಉಪಾಯನಾನಿ - ಕಪ್ಪಕಾಣಿಕೆಗಳನ್ನಾಗಿ, ಆದಾಯ-ತೆಗೆದುಕೊಂಡುಬಂದು, ಪ್ರತ್ಯರ್ಚಯನ್-ಮರ್ಯಾದಿಸಿದರು. ||೩೩|| ಮಹಾಕಪಿಃ-ಮಹಾ ವಾನರನಾದ, ಸಹನುಮಾಂಸ್ತು-ಆ ಆಂಜನೇಯನಾದರೆ, ವೃದ್ಧಾನ್-ಮುದುಕರಾದ, ಜಾಂಬವತ್ಪ್ರಮುಖಾನ್-ಜಾಂಬವಂತನೇ ಮೊದಲಾದ, ಗುರೂನ್ ದೊಡ್ಡವರನ್ನು, ಕುಮಾರಂ-ವಾಲಿಪುತ್ರನಾದ, ಅಂಗದಂಚೈವ - ಅಂಗದನನ್ನು, ಅವಂದತ - ನಮಸ್ಕರಿಸಿದನು, || ೩೪ || ವಿಕ್ರಾಂತಃ - ಶೂರನಾದ, ಪೂಜ್ಯಃ - ಪೂಜಾರ್ಹನಾದ, ಸಃ - ಆ ಆಂಜನೇಯನು, ತಾಭ್ಯಾಂ - ಆ ಜಾಂಬವದಂಗದರಿಂದ, ಪೂಜಿತಃ - ಗೌರವಿಸಲ್ಪಟ್ಟವನಾಗಿ, ಕಪಿಭಿಶ್ಚ - ವಾನರರಿಂದಲೂ, ಪ್ರಸಾದಿತಃ - ಪೂಜಿಸಲ್ಪಟ್ಟವನಾಗಿ, ಸೀತಾ - ಸೀತಾದೇವಿಯು, ದೃಷ್ಟೇತಿ - ನೋಡಲ್ಪಟ್ಟಳೆಂದು, ಸಂಕ್ಷೇಪೇಣ - ಸಂಕ್ಷೇಪವಾಗಿ, ನ್ಯವೇದಯತ್ - ಅರುಹಿದನು. || ೩೫ || ತದಾ - ಆ ಕಾಲದಲ್ಲಿ, ಮಹೇಂದ್ರಸ್ಯಗಿರೇಃ - ಮಹೇಂದ್ರ ಪರ್ವತದ, ರಮಣೀಯೇ - ಸುಂದರವಾದ, ವನೋದ್ದೇಶೇ - ವನಪ್ರದೇಶದಲ್ಲಿ, ಹಸ್ತೇನ-ಕೈಯಿಂದ, ವಾಲಿನಃ - ವಾಲಿಯ, ಸುತಂ - ಕುವರನಾದ ಅಂಗದನನ್ನು, ಗೃಹೀತ್ವಾ - ಗ್ರಹಿಸಿ, ನಿಷಸಾದ - ಕುಳಿತುಕೊಂಡನು. || ೩೬ || ತದಾ - ಆ ಸಮಯದಲ್ಲಿ, ಹೃಷ್ಟಃ - ಸಂತೋಷಗೊಂಡ, ಹನೂಮಾನ್-ಹನುಮಂತನು, ತಾನ್ವಾನರರ್ಷಭಾನ್ - ಆ ಕಪಿಶ್ರೇಷ್ಠರನ್ನು ಕುರಿತು, ಅಬ್ರವೀತ್-ನುಡಿದನು. ||೩೭|| ಅಶೋ....ಸ್ಥಾ - ಅಶೋಕವನದಲ್ಲಿರುವ, ಸುಘೋರಾಭಿಃ - ಮಹಾ ಭಯಂಕರರಾದ, ರಾಕ್ಷಸೀಭಿಃ - ರಕ್ಕಸಿಯರಿಂದ, ರಕ್ಷ್ಯಮಾಣಾ - ಸಂರಕ್ಷಿಸಲ್ಪಡುತ್ತಿರುವ, ಅನಿಂದಿತಾ - ದೋಷರಹಿತಳಾದ,

ಕಂದಮೂಲಫಲಾದಿಗಳ ಉಪಾಯನವನ್ನಿತ್ತು ಸನ್ಮಾನಿಸಿದರು. ಹೀಗೆ ಜಾಂಬವಂತನಿಂದಲೂ, ಯುವರಾಜನಾದ ಅಂಗದ ಕುಮಾರನಿಂದಲೂ, ಇತರ ಕಪಿವೀರರಿಂದಲೂ ಸತ್ಕೃತನಾದ, ಮಹಾ ಪರಾಕ್ರಮವಂತನೂ, ಮಹಾ ಪೂಜ್ಯನೂ ಆದ ಆ ಹನುಮಂತನು ಸಂತೋಷದಿಂದ ಮೈಯುಬ್ಬಿ "ಸೀತಾದೇವಿಯನ್ನು ಕಂಡೆ" ಎಂದು ಸಂಕ್ಷೇಪವಾಗಿ ಅವರಿಗೆ ನಿವೇದಿಸಿದನು. ॥ ೩೧–೩೫ ॥ ಹನುಮಂತನಿಂತು ನುಡಿದು ಯುವರಾಜನಾದ ಅಂಗದನ ಕೈಹಿಡಿದುಕೊಂಡು ಆ ಮಹೇಂದ್ರಪರ್ವತದ ಒಂದು ರಮಣೀಯವಾದ ವನಪ್ರದೇಶದಲ್ಲಿ ಕುಳಿತುಕೊಂಡನು. ಆ ಬಳಿಕ ಮಹಾ ಸಂತೋಷವನ್ನು ಹೊಂದಿದ ಮನಸ್ಸುಳ್ಳವನಾದ ಆ ಹನುಮಂತನು ಅಂಗದಾದಿಗಳನ್ನು ನೋಡಿ, "ಎಲೈ ವಾನರೋತ್ತಮರಿರಾ! ನಾನು ರಾವಣಾಸುರನ ಅಶೋಕವನಮಧ್ಯದಲ್ಲಿ ಸೀತಾದೇವಿಯನ್ನು ಕಂಡೆನು. ಮಹಾ ಭಯಂಕರಾಕಾರೆಯುರಾದ ರಾಕ್ಷಸಿಯರು ಆ ದೇವಿಗೆ ಕಾವಲಿರುವರು. ಆ ಸೀತಾದೇವಿಯು ಅನಿಂದ್ಯವಾದ

ದರ್ಶನಲಾಲಸಾ । ಉಪವಾಸಪರಿಶ್ರಾಂತಾ ಜಟಿಲಾ ಮಲಿನಾ ಕೃಶಾ” ॥ ೩೯ ॥
ತತೋ ದೃಷ್ಟೇತಿ ವಚನಂ ಮಹಾರ್ಥಮಮೃತೋಪಮಂ । ನಿಶಮ್ಯ ಮಾರುತೇ
ಸ್ಸರ್ವೇ ಮುದಿತಾ ವಾನರಾಃಭವನ್ ॥ ೪೦ ॥ ಕ್ಷ್ವೇಲಂತ್ಯನ್ಯೇ ನದಂತ್ಯನ್ಯೇ ಗರ್ಜಂ
ತ್ಯನ್ಯೇ ಮಹಾಬಲಾಃ । ಚಕ್ರುಃ ಕಿಲಕಿಲಾಮನ್ಯೇ ಪ್ರತಿಗರ್ಜಂತಿ ಚಾಪರೇ ॥ ೪೧ ॥
ಕೇಚಿದುಚ್ಛ್ರಿತಲಾಂಗೂಲಾಃ ಪ್ರಹೃಷ್ಟಾಃ ಕಪಿಕುಂಜರಾಃ । ಆಯತಾಂಚಿತದೀರ್ಘಾಣಿ

ಏಕವೇಣೀಧರಾ - ಒಂದೇ ತಿರಿಯಾದ ಜಡೆಯನ್ನು ಧರಿಸಿರುವ, ಬಾಲಾ - ಯೌವನಮಧ್ಯಸ್ಥಳಾದ, ರಾಮ....ಸಾ - ಶ್ರೀರಾಮ ಸಂದರ್ಶನದಲ್ಲಿ ಆಸಕ್ತಳಾದ, ಉಪ....ತಾ - ಅನಶನವ್ರತದಿಂದ ಖಿನ್ನಳಾದ, ಜಟಿಲಾ - ಜಡೆಯನ್ನು ಬೆಳಸಿಕೊಂಡಿರುವ, ಮಲಿನಾಂ - ಮಾಲಿನ್ಯವುಳ್ಳ, ಕೃಶಾ - ಕೃಶಳಾದ, ಸಾಜನಕಾತ್ಮಜಾ - ಆ ಸೀತಾದೇವಿಯು, ದೃಷ್ಟಾ - ನೋಡಲ್ಪಟ್ಟಳು. ॥ ೩೮-೩೯ ॥ ತತಃ - ಬಳಿಕ, ದೃಷ್ಟೇತಿ - ಕಾಣಲ್ಪಟ್ಟಳೆಂಬ, ಮಹಾರ್ಥಂ - ಮಹಾ ಪ್ರಯೋಜನಕರವಾದ, ಅಮೃತೋಪಮಂ - ಅಮೃತದಂತೆ ಸುಖಕರವಾದ, ಮಾರುತೇಃ - ಆಂಜನೇಯನ, ವಚನಂ - ಮಾತನ್ನು, ನಿಶಮ್ಯ - ಕೇಳಿ, ಸರ್ವೇವಾನರಾಃ - ಎಲ್ಲಾ ಕಪಿಗಳೂ, ಮುದಿತಾಃ - ಸಂತೋಷಗೊಂಡವರು, ಭವನ್ - ಆದರು. ॥೪೦॥ ಅನ್ಯೇ - ಕೆಲವರು, ಕ್ಷ್ವೇಲಂತಿ - ಸಿಂಹನಾದವನ್ನು ಮಾಡಿದರು, ಅನ್ಯೇ - ಇನ್ನು ಕೆಲವರು, ನದಂತಿ - ಕೂಗಿದರು, ಮಹಾಬಲಾಃ - ಅತಿ ಬಲಿಷ್ಠರಾದ, ಅನ್ಯೇ - ಮತ್ತು ಕೆಲವರು, ಗರ್ಜಂತಿ - ಗರ್ಜಿಸಿದರು, ಅನ್ಯೇ - ಇತರರು, ಕಿಲಕಿಲಾಂಚಕ್ರುಃ - ಕಿಲಕಿಲಧ್ವನಿಯನ್ನು ಮಾಡಿದರು, ಅಪರೇಚ - ಮತ್ತೆ ಕೆಲವರು, ಪ್ರತಿಗರ್ಜಂತಿ - ಕೂಗಿಗೆ ಸರಿಯಾಗಿ ಕೂಗಿದರು. ॥ ೪೧ ॥ ಉಚ್ಛ್ರಿತಲಾಂಗೂಲಾಃ - ಎತ್ತಲ್ಪಟ್ಟ ಬಾಲಗಳುಳ್ಳ, ಪ್ರಹೃಷ್ಟಾಃ - ಸಂತೋಷಯುಕ್ತರಾದ, ಕೇಚಿತ್ಕಪಿಕುಂಜರಾಃ - ಕೆಲ

ನಡೆವಳಿಕೆಯುಳ್ಳವಳಾಗಿರುವಳು. ಭರ್ತೃವಿಯೋಗದಿಂದ ದುಃಖಿತಳಾಗಿ ಸಂಸ್ಕಾರಾದಿಗಳನ್ನು ತೊರೆದಿರುವುದರಿಂದ ತಲೆಗೂದಲುಗಳೆಲ್ಲವೂ ಒಂದೇ ತಿರಿಯಾಗಿಹೋಗಿರುವುದು. ಭೋಜನ ಮಜ್ಜನಾದಿಗಳಿಲ್ಲದಿರುವುದರಿಂದ ಬಹಳವಾಗಿ ಕೃಶಿಸಿಹೋಗಿರುವಳು. ಶರೀರವೆಲ್ಲವೂ ಮಲಿನ ವಾಗಿ ಹೋಗಿರುವುದು. ನಿರಂತರವೂ ತನ್ನ ಪತಿದೇವನಾದ ಶ್ರೀರಾಮಚಂದ್ರನನ್ನು ನೋಡು ವುದರಲ್ಲಿಯೇ ನ್ಯಸ್ತಚಿತ್ತಳಾಗಿರುವಳು. ಹೀಗಿರುವ ಜನಕರಾಜಕುಮಾರಿಯಾದ ಆ ಸೀತಾ ದೇವಿಯನ್ನು ಕಂಡೆನು” ಎಂದು ಹೇಳಿದನು. ಹೀಗೆ ಮಾರುತಿಯು “ಸೀತಾದೇವಿಯನ್ನು ಕಂಡೆನು.” ಎಂಬ ಮಹಾರ್ಥಗರ್ಭಿತವೂ, ಅಮೃತೋಪಮವೂ ಆದ ಮಾತನ್ನು ಕೇಳುತ್ತಲೇ ಅಲ್ಲಿದ್ದ ವಾನರರೆಲ್ಲರೂ ಮಹದಾನಂದಭರಿತರಾಗಿ ಹೋದರು. ಹಾಗೆ ಪರಮಾನಂದವನ್ನು ಹೊಂದಿದವರಲ್ಲಿ ಕೆಲವು ವಾನರರು ಸಿಂಹನಾದವನ್ನು ಮಾಡು ತ್ತಿದ್ದರು. ಕೆಲವರು ಅವ್ಯಕ್ತ ಧ್ವನಿಗಳನ್ನು ಮಾಡುತ್ತಿದ್ದರು. ಕೆಲವರು ಗೂಳಿಗಳಂತೆ ಗುಟರೆಗಳನ್ನು ಹಾಕುತ್ತಿದ್ದರು. ಕೆಲವರು ಸ್ವಜಾತಿ ಸಾಮಾನ್ಯವಾದ ಕಿಲಕಿಲಾ ಶಬ್ದವನ್ನು ಮಾಡುತ್ತಿದ್ದರು. ಕೆಲವರು ಮತ್ತೊಬ್ಬರ ಕೂಗನ್ನು ಅನುಸರಿಸಿ ಪಡಿಕೂಗುತ್ತಿದ್ದರು. ॥ ೩೭–೪೦ ॥ ಕೆಲವು ಕಪಿವೀರರು ಸಂತೋಷಾಧಿಕ್ಯದಿಂದ ಉದ್ದವಾದ ತಮ್ಮ ಬಾಲಗಳ ನ್ನೆತ್ತಿ ಅಪ್ಪಳಿಸಿ ನೆಲಕ್ಕೆ ಬಡಿದರು. ಇನ್ನು ಕೆಲವು ವಾನರರು ನಾರಣೋಪಮನಾದ ಹನುಮಂತನನ್ನು ಗಿರಿಶಿಖರಗಳಿಂದ ಹಾರಿಬಂದು ಆಲಿಂಗಿಸುತ್ತಿದ್ದರು. ಆ ಸಮಯದಲ್ಲಿ

ಲಾಂಗೂಲಾನಿ ಪ್ರವಿವ್ಯಥುಃ ॥ ೪೨ ॥ ಅಪರೇಚ ಹನೂಮಂತಂ ವಾನರಾ ವಾರಣೋಪಮಂ । ಆಪ್ಲುತ್ಯ ಗಿರಿಶೃಂಗೇಭ್ಯಃ ಸಂಸ್ಪೃಶಂತಿಸ್ಮ ಹರ್ಷಿತಾಃ ॥ ೪೩ ॥ ಉಕ್ತವಾಕ್ಯಂ ಹನೂಮಂತಮಂಗದಸ್ತಮಥಾಽಬ್ರವೀತ್ । ಸರ್ವೇಷಾಂ ಹರಿವೀರಾಣಾಂ ಮಧ್ಯೇ ವಚನಮುತ್ತಮಂ ॥೪೪॥ "ಸತ್ವೇ ವೀರ್ಯೇ ನತೇ ಕಶ್ಚಿತ್ಸಮೋ ವಾನರ! ವಿದ್ಯತೇ । ಯದವಪ್ಲುತ್ಯ ವಿಸ್ತೀರ್ಣಂ ಸಾಗರಂ ಪುನರಾಗತಃ ॥ ೪೫ ॥ ಅಹೋ! ಸ್ವಾಮಿನಿ ತೇ ಭಕ್ತಿರಹೋ! ವೀರ್ಯಮಹೋ! ಧೃತಿಃ! । ದಿಷ್ಟ್ಯಾ ದೃಷ್ಟಾ ತ್ವಯಾ ದೇವೀ ರಾಮಪತ್ನೀ ಯಶಸ್ವಿನೀ ॥ ೪೬ ॥ ದಿಷ್ಟ್ಯಾ ತ್ಯಕ್ಷ್ಯತಿ ಕಾಕುತ್ಸ್ಥ

ವಾನರೋತ್ತಮರು, ಆಯ....ಣಿ - ಗಾತ್ರವಾದ ಮಡಸಿದ ಉದ್ದವಾದ, ಲಾಂಗೂಲಾನಿ-ಬಾಲಗಳನ್ನು, ಪ್ರವಿವ್ಯಥುಃ - ನೆಲಕ್ಕೆ ಅಪ್ಪಳಿಸಿದರು. ||೪೨|| ಅಪರೇವಾನರಾಃ - ಇನ್ನು ಕೆಲ ಕಪಿಗಳು, ಹರ್ಷಿತಾಃ - ಸಂತೋಷಯುಕ್ತರಾಗಿ, ಗಿರಿಶೃಂಗೇಭ್ಯಃ - ಪರ್ವತಶಿಖರಗಳಿಂದ, ಆಪ್ಲುತ್ಯ - ಹಾರಿಬಂದು, ವಾರಣೋಪಮಂ - ಗಜಸದೃಶನಾದ, ಹನೂಮಂತಂ - ಆಂಜನೇಯನನ್ನು, ಸಂಸ್ಪೃಶಂತಿಸ್ಮ - ಅಪ್ಪಿಕೊಳ್ಳುತ್ತಿದ್ದರು. ॥ ೪೩ ॥ ಅಥ - ಬಳಿಕ, ಅಂಗದಃ - ಅಂಗದನು, ಉಕ್ತವಾಕ್ಯಂ - ಹೇಳಲ್ಪಟ್ಟ ವಾಕ್ಯವುಳ್ಳ, ತಂಹನೂಮಂತಂ - ಆ ಆಂಜನೇಯನನ್ನು ಕುರಿತು, ಸರ್ವೇಷಾಂಹರಿವೀರಾಣಾಂ- ಎಲ್ಲಾ ಕಪಿಗಳ, ಮಧ್ಯೇ - ಮಧ್ಯದಲ್ಲಿ, ಉತ್ತಮಂ - ಉತ್ಕೃಷ್ಟವಾದ, ವಚನಂ - ಮಾತನ್ನು, ಅಬ್ರವೀತ್ - ಹೇಳಿದನು. ॥ ೪೪ ॥ ಹೇ ವಾನರ - ಎಲೈ ವಾನರನೇ, ಯತ್ - ಯಾವ ಕಾರಣದಿಂದ, ವಿಸ್ತೀರ್ಣಂ - ವಿಸ್ತಾರವಾದ, ಸಾಗರಂ - ಸಮುದ್ರವನ್ನು, ಅವಪ್ಲುತ್ಯ - ದಾಟಿ, ಪುನಃ - ಮತ್ತು, ಆಗತಃ - ಬಂದೆಯೋ, ತತ್ - ಆ ಕಾರಣದಿಂದ, ಸತ್ವೇ - ಬಲದಲ್ಲಿಯೂ, ವೀರ್ಯೇ - ಪರಾಕ್ರಮದಲ್ಲಿಯೂ, ತೇ - ನಿನಗೆ, ಸ್ವಾಮಿನಿ - ಒಡೆಯನಲ್ಲಿಯು, ಭಕ್ತಿಃ - ಭಕ್ತಿಯೂ, ಅಹೋ - ಆಶ್ಚರ್ಯಕರವಾದುದು, ವೀರ್ಯಂ - ಶೂರತನವು, ಅಹೋ - ಅದ್ಭುತಕರವಾದುದು, ಧೃತಿಃ - ಧೈರ್ಯವು, ಅಹೋ - ವಿಸ್ಮಯಕರವಾದುದು, ರಾಮಪತ್ನೀ - ಶ್ರೀರಾಮನ ಹೆಂಡತಿಯಾದ, ಯಶಸ್ವಿನೀ - ಕೀರ್ತಿವಂತಳಾದ, ದೇವೀ - ಸೀತಾದೇವಿಯು, ತ್ವಯಾ - ನಿನ್ನಿಂದ, ದಿಷ್ಟ್ಯಾ - ಅದೃಷ್ಟವಶದಿಂದ, ದೃಷ್ಟಾ - ನೋಡಲ್ಪಟ್ಟಳು, ಕಾಕುತ್ಸ್ಥಃ - ಶ್ರೀರಾಮನು, ದಿಷ್ಟ್ಯಾ - ಭಾಗ್ಯವಶದಿಂದ, ಸೀತಾವಿಯೋಗಜಂ - ಸೀತಾವಿರಹದಿಂದ ಹುಟ್ಟಿದ, ಶೋಕಂ - ದುಃಖವನ್ನು, ತ್ಯಕ್ಷ್ಯತಿ - ಬಿಡುವನು. ॥ ೪೫-೪೬ ॥ ತತಃ - ಬಳಿಕ, ಮುದಿತಾಃ - ಸಂತೋಷಯುಕ್ತರಾದ, ವಾನರಾಃ -

---

ವಾನರವೀರನಾದ ಅಂಗದನು ಮುಂದಕ್ಕೆ ಬಂದು ವಾನರರ ಮಧ್ಯದಲ್ಲಿ ಹನುಮಂತನನ್ನು ಕುರಿತು, "ಎಲೈ ಹನುಮಂತನೇ! ನೀನು ಮಹಾ ವಿಸ್ತಾರವಾದ ಸಾಗರವನ್ನು ಲಂಘಿಸಿ ಪುನಃ ಹಿಂತಿರುಗಿ ಬಂದೆಯಾದುದರಿಂದ ನೀನೇ ಮಹಾ ಪರಾಕ್ರಮಶಾಲಿಯು. ಬಲಪರಾಕ್ರಮಗಳಲ್ಲಿ ನಿನಗೆ ಸಮಾನನಾದವನಾವನೂ ಇಲ್ಲವು. ಆಹಾ! ನಿನ್ನಲ್ಲಿರುವ ಸ್ವಾಮಿಭಕ್ತಿಯು ಮಹದದ್ಭುತವಾದುದು. ನಿನ್ನಲ್ಲಿರುವ ಶೌರ್ಯವೂ, ಧೈರ್ಯಸ್ಥೈರ್ಯಗಳೂ, ಸಾಮರ್ಥ್ಯವೂ ಪರಮಾಶ್ಚರ್ಯಕರವಾದುವು. ಕೀರ್ತಿಶಾಲಿನಿಯೂ, ರಾಮಪತ್ನಿಯೂ ಆದ ಸೀತಾದೇವಿಯನ್ನು ನೀನು ಭಾಗ್ಯವಶದಿಂದ ಕಂಡವನಾದೆ. ಇನ್ನು ಭಾಗ್ಯವಶದಿಂದಲೇ ಶ್ರೀರಾಮಮೂರ್ತಿಯು ಸೀತಾವಿಯೋಗ ದುಃಖವನ್ನು ತೊರೆಯುವನು. ನೀನೇ ಧನ್ಯನು?" ಎಂದು ಹೇಳಿದನು. ಆಗ ವಾನರರೆಲ್ಲರೂ ಪರಮಾನಂದಭರಿತರಾಗಿ ಅಂಗದನನ್ನೂ, ಆಂಜ

ಶ್ಶೋಕಂ ಸೀತಾವಿಯೋಗಜಂ" । ತತೋಽಂಗದಂ ಹನೂಮಂತಂ ಜಾಂಬವಂತಂಚ ವಾನರಾಃ ॥ ೪೭ ॥ ಪರಿವಾರ್ಯ ಪ್ರಮುದಿತಾ ಭೇಜಿರೇ ವಿಪುಲಾಶ್ಶಿಲಾಃ । ಶ್ರೋತು ಕಾಮಾಸ್ಸಮುದ್ರಸ್ಯ ಲಂಘನಂ ವಾನರೋತ್ತಮಾಃ ॥ ೪೮ ॥ ದರ್ಶನಂಚಾಪಿ ಲಂಕಾಯಾಸ್ಸೀತಾಯಾ ರಾವಣಸ್ಯಚ । ತಸ್ಥುಃ ಪ್ರಾಂಜಲಯಸ್ಸರ್ವೇ ಹನೂಮ ದ್ವದನೋನ್ಮುಖಾಃ ॥ ೪೯ ॥ ತಸ್ಥೌ ತತ್ರಾಂಗದಶ್ಶ್ರೀಮಾನ್ವಾನರೈರ್ಬಹುಭಿರ್ವೃತಃ । ಉಪಾಸ್ಯಮಾನೋ ವಿಬುಧೈರ್ದಿವಿ ದೇವಪತಿರ್ಯಥಾ ॥ ೫೦ ॥

ಹನೂಮತಾ ಕೀರ್ತಿಮತಾ ಯಶಸ್ವಿನಾ
ತಥಾಂಗದೇನಾಽಂಗದಬದ್ಧಬಾಹುನಾ ।

ವಾನರರು, ಅಂಗದಂ - ಅಂಗದನನ್ನು, ಹನೂಮಂತಂ - ಆಂಜನೇಯನನ್ನೂ, ಜಾಂಬವಂತಂಚ - ಜಾಂಬವಂತನನ್ನೂ ಸಹ, ಪರಿವಾರ್ಯ - ಸುತ್ತಿಕೊಂಡು, ವಿಪುಲಾಃ - ವಿಸ್ತಾರಗಳಾದ, ಶಿಲಾಃ - ಬಂಡೆಗಳನ್ನು, ಭೇಜಿರೇ - ಹೊಂದಿದರು. ॥ ೪೭ ॥ ವಾನರೋತ್ತಮಾಃ - ಕಪಿಶ್ರೇಷ್ಠರು, ಸಮು ದ್ರಸ್ಯ - ಸಮುದ್ರದ, ಲಂಘನಂ - ದಾಟುವಿಕೆಯನ್ನು, ಲಂಕಾಯಾಃ - ಲಂಕಾಪುರಿಯ, ಸೀತಾ ಯಾಶ್ಚ - ಸೀತಾದೇವಿಯ, ರಾವಣಸ್ಯಚ - ಮತ್ತು ರಾವಣಾಸುರನ, ದರ್ಶನಂಚಾಪಿ - ಸಂದರ್ಶನ ವನ್ನೂ ಸಹ, ಶ್ರೋತುಕಾಮಾಃ - ಕೇಳಲಿಚ್ಛೆಯುಳ್ಳವರಾಗಿ, ಸರ್ವೇ - ಎಲ್ಲರೂ, ಪ್ರಾಂಜಲಯಃ - ಕೈಮುಗಿದವರಾಗಿ, ಹನೂ....ಖಾಃ - ಆಂಜನೇಯನಿಗಭಿಮುಖರಾಗಿ, ತಸ್ಥುಃ - ನಿಂತರು. ॥ ೪೮-೪೯ ॥ ತತ್ರ - ಆ ವಾನರಸೇನೆಯಲ್ಲಿ, ಬಹುಭಿಃ - ಅನೇಕರಾದ, ವಾನರೈಃ - ಕಪಿಗಳಿಂದ, ವೃತಃ - ಪರಿವೃತನಾದ, ಅಂಗದಃ - ಅಂಗದನು, ದಿವಿ - ಸ್ವರ್ಗಲೋಕದಲ್ಲಿ, ವಿಬುಧೈಃ - ದೇವತೆ ಗಳಿಂದ, ಉಪಾಸ್ಯಮಾನಃ - ಸೇವಿಸಲ್ಪಡುತ್ತಿರುವ, ದೇವಪತಿರ್ಯಥಾ - ದೇವೇಂದ್ರನಂತೆ, ತಸ್ಥೌ - ನಿಂತನು. ॥ ೫೦ ॥ ತದಾ - ಆ ಕಾಲದಲ್ಲಿ, ಕೀರ್ತಿಮತಾ - ಯಶಸ್ವಿಯಾದ, ಹನೂ ಮತಾ - ಆಂಜನೇಯನಿಂದಲೂ, ತಥಾ - ಹಾಗೆಯೇ, ಅಂಗ....ನಾ - ಬಾಹುಜಿಗೆಗಳಿಂದ ಕಟ್ಟಲ್ಪಟ್ಟ ಭುಜಗಳುಳ್ಳ, ಯಶಸ್ವಿನಾ - ಕೀರ್ತಿವಂತನಾದ, ಅಂಗದೇನ - ಅಂಗದನಿಂದಲೂ, ಮುದಾ - ಸಂತೋಷದಿಂದ, ಅಧ್ಯಾಸಿತಂ - ಅಧಿಷ್ಠಿತವಾದ, ಉನ್ನತಂ - ಎತ್ತರವಾದ, ಮಹತ್ - ದೊಡ್ಡದಾದ,

---

ನೇಯನನ್ನೂ, ಜಾಂಬವಂತನನ್ನೂ ಸುತ್ತುವರೆದು ಬಂದು ವಿಶಾಲವಾದ ಬಂಡೆಯಮೇಲೆ ಕುಳಿತುಕೊಂಡರು. ಅವರೆಲ್ಲರೂ ಆಂಜನೇಯನು ಸಮುದ್ರವನ್ನು ದಾಟಿದುದು, ಲಂಕಾ ಪಟ್ಟಣವನ್ನು ನೋಡಿದುದು, ಸೀತಾದರ್ಶನವನ್ನು ಮಾಡಿದುದು, ರಾಕ್ಷಸಾಧಿಪನಾದ ರಾವಣಾಸುರನನ್ನು ಕಂಡುದು, ಇವೇ ಮೊದಲಾದ ಸಂಗತಿಗಳನ್ನು ವಿಸ್ತಾರವಾಗಿ ಕೇಳಲು ಕುತೂಹಲವುಳ್ಳವರಾಗಿದ್ದರು. ಕೈಗಳನ್ನು ಜೋಡಿಸಿಕೊಂಡು ಆ ಹನುಮಂತನ ಮಾತನ್ನೇ ನಿರೀಕ್ಷಿಸುತ್ತ ಕುಳಿತಿದ್ದರು. ಆಗ ಮಹಾ ತೇಜಸ್ವಿಯಾದ ಅಂಗದಕುಮಾರನು, ಅಲ್ಲಿದ್ದ ಅನೇಕ ವಾನರರಿಂದ ಸುತ್ತುವರೆದವನಾಗಿ ಸ್ವರ್ಗದಲ್ಲಿ ದೇವತೆಗಳಿಂದ ಪರಿವೇಷ್ಟಿತ ನಾದ ದೇವೇಂದ್ರನಂತೊಪ್ಪುತ್ತಿದ್ದನು. ಮಹಾ ಕೀರ್ತಿವಂತನಾದವನೂ, ಬಾಹುಜಿಗೆಗಳನ್ನು ಧರಿಸಿ ಹೊಳೆಯುತ್ತಿರುವವನೂ ಆದ ಆ ಅಂಗದನು ಪರಮಾನಂದಭರಿತನಾದ ಆ

ಮುದಾ ತದಾಽಧ್ಯಾಸಿತಮುನ್ನತಂಮಹ
ನ್ಮಹೀಧರಾಗ್ರಂ ಜ್ವಲಿತಂ ಶ್ರಿಯಾಽಭವತ್ ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಪಂಚಾಶಸ್ಸರ್ಗಃ

ಮಹೀಧರಾಗ್ರಂ - ಪರ್ವತಶೃಂಗವು, ಶ್ರಿಯಾ - ಸಂಪತ್ತಿನಿಂದ, ಜ್ವಲಿತಂ - ಹೊಳೆಯುತ್ತಿರುವಂಥದು, ಅಭವತ್ - ಆಯಿತು. ॥ ೫೧ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಪಂಚಾಶಸ್ಸರ್ಗಃ

ಮಹೇಂದ್ರಪರ್ವತದ ಮಹೋನ್ನತಶಿಖರದಲ್ಲಿ ಕುಳಿತಿರಲು ಅದು ಬಹಳವಾಗಿ ಕಂಗೊಳಿಸುತ್ತಿದ್ದಿತು. ॥ ೪೧–೫೧ ॥

ಇಂತಿದು ಹನುಮದಾಗಮನಜನಿತ ವಾನರ ಸಂತೋಷವೃತ್ತಾಂತವೆಂಬ
ಐವತ್ತೇಳನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಅಷ್ಟಪಂಚಾಶಸ್ಸರ್ಗಃ

ತತಸ್ತಸ್ಯ ಗಿರೇಶ್ಶೃಂಗೇ ಮಹೇಂದ್ರಸ್ಯ ಮಹಾಬಲಾಃ । ಹನುಮತ್ಪ್ರಮುಖಾಃ ಪ್ರೀತಿಂ ಹರಯೋ ಜಗ್ಮುರುತ್ತಮಾಂ ॥ ೧ ॥ ತಂ ತತಃ ಪ್ರೀತಿಸಂಹೃಷ್ಟಃ ಪ್ರೀತಿಮಂತಂ ಮಹಾಕಪಿಂ । ಜಾಂಬವಾನ್ ಕಾರ್ಯವೃತ್ತಾಂತಮಪೃಚ್ಛದನಿಲಾತ್ಮಜಂ ॥೨॥ " ಕಥಂ ದೃಷ್ಟಾ ತ್ವಯಾ ದೇವೀ ಕಥಂ ವಾ ತತ್ರ ವರ್ತತೇ? । ತಸ್ಯಾಂ ವಾಸಃ ಕಥಂ ವೃತ್ತಃ ಕ್ರೂರಕರ್ಮಾ ದಶಾನನಃ? ॥ ೩ ॥ ತತ್ತ್ವತಸ್ಸರ್ವಮೇತನ್ನಃ ಪ್ರಬ್ರೂಹಿ ತ್ವಂ ಮಹಾಕಪೇ? । ಶ್ರುತಾರ್ಥಾಶ್ಚಿಂತಯಿಷ್ಯಾಮೋ ಭೂಯಃ ಕಾರ್ಯವಿನಿಶ್ಚಯಂ ॥೪॥

ತತಃ - ಬಳಿಕ, ಮಹೇಂದ್ರಸ್ಯ - ಮಹೇಂದ್ರವೆಂಬ, ತಸ್ಯಗಿರೇಃ - ಆ ಪರ್ವತದ, ಶೃಂಗೇ- ಶಿಖರದಲ್ಲಿ, ಮಹಾಬಲಾಃ - ಬಹು ಬಲಿಷ್ಠರಾದ, ಹನು....ಖಾಃ - ಆಂಜನೇಯನೇ ಮೊದಲಾದ, ಹರಯಃ - ವಾನರರು, ಉತ್ತಮಾಂ - ಶ್ರೇಷ್ಠವಾದ, ಪ್ರೀತಿಂ - ಸಂತೋಷವನ್ನು, ಜಗ್ಮುಃ - ಹೊಂದಿದರು. ॥ ೧ ॥ ತತಃ - ಬಳಿಕ, ಜಾಂಬವಾನ್ - ಜಾಂಬವಂತನು, ಪ್ರೀತಿಸಂಹೃಷ್ಟಃ - ವಿಶ್ವಾಸ ದಿಂದ ಸಂತೋಷಗೊಂಡವನಾಗಿ, ಪ್ರೀತಿಮಂತಂ - ವಿಶ್ವಾಸವುಳ್ಳ, ಅನಿಲಾತ್ಮಜಂ - ವಾಯುಪುತ್ರ ನಾದ, ಮಹಾಕಪಿಂ - ಮಹಾ ವಾನರನಾದ, ತಂ - ಆ ಹನುಮಂತನನ್ನು ಕುರಿತು, ಕಾರ್ಯ ವೃತ್ತಾಂತಂ - ಸೀತಾದರ್ಶನವಿಷಯಕವಾದ ಸಂಗತಿಯನ್ನು, ಅಪೃಚ್ಛತ್ - ಕೇಳಿದನು. ॥ ೨ ॥ ದೇವೀ - ಸೀತಾದೇವಿಯು, ತ್ವಯಾ - ನಿನ್ನಿಂದ, ಕಥಂ - ಹೇಗೆ, ದೃಷ್ಟಾ - ನೋಡಲ್ಪಟ್ಟಳು, ತತ್ರವಾ - ಆ ಲಂಕಾಪಟ್ಟಣದಲ್ಲಿಯಾದರೂ, ಕಥಂ - ಹೇಗೆ, ವರ್ತತೇ - ಇದ್ದಾಳೆ, ತಸ್ಯಾಂ - ಆ ಪಟ್ಟಣದಲ್ಲಿ, ವಾಸಃ - ಸ್ಥಿತಿಯು, ಕಥಂ - ಹೇಗೆ, ಕ್ರೂರಕರ್ಮಾ - ತೀಕ್ಷ್ಣಕಾರಿಯಾದ, ದಶಾನನಃ - ದಶಕಂಧರನು, ಕಥಂವೃತ್ತಃ - ಎಂತಹ ವ್ಯಾಪಾರವುಳ್ಳವನು. ॥ ೩ ॥ ಹೇ ಮಹಾಕಪೇ - ಎಲೈ ಮಹಾ ಕಪಿಯೇ, ಏತತ್ಸರ್ವಂ - ಇದೆಲ್ಲವನ್ನೂ, ತತ್ತ್ವತಃ - ಯಥಾರ್ಥವಾಗಿ, ನಃ - ನಮಗೆ, ಪ್ರಬ್ರೂಹಿ - ಹೇಳು, ಶ್ರುತಾರ್ಥಾಃ - ಕೇಳಲ್ಪಟ್ಟ ಪ್ರಯೋಜನವುಳ್ಳವರಾಗಿ, ಭೂಯಃ - ಮತ್ತೂ,

---

ಆಮೇಲೆ ಮಹಾ ಬಲಾಢ್ಯರಾದ ಹನುಮಂತನೇ ಮೊದಲಾದ ವಾನರವೀರ ರೆಲ್ಲರೂ ಆ ಮಹೇಂದ್ರಪರ್ವತದ ಶಿಖರಪ್ರದೇಶದಲ್ಲಿ ಪರಮಾನಂದಭರಿತರಾಗಿ ಕುಳಿತಿದ್ದರು. ಆಗ ಜಾಂಬವಂತನು ಮಹಾ ಸಂತೋಷಭರಿತನಾಗಿ, ಕಾರ್ಯವನ್ನು ನೆರವೇರಿಸಿಕೊಂಡು ಬಂದುದರಿಂದ ಪರಮಪ್ರೀತನಾಗಿ ಕುಳಿತಿರುವ ಮಾರುತಿಯನ್ನು ಕುರಿತು ಆತನು ಲಂಕೆಯಲ್ಲಿ ಮಾಡಿದ ಕಾರ್ಯವೃತ್ತಾಂತವನ್ನು ಕೇಳುವವನಾಗಿ, " ಆಂಜನೇಯಾ! ನೀನು ಇಲ್ಲಿಂದ ಹೊರಟು ಸೀತಾದೇವಿಯನ್ನು ಕಂಡು ಹಿಂತಿರುಗಿದ ವೃತ್ತಾಂತವೆಲ್ಲವನ್ನೂ ವಿಸ್ತಾರವಾಗಿ ತಿಳಿಸುವವನಾಗು. ನೀನು ಸೀತಾದೇವಿಯನ್ನು ಯಾವ ರೀತಿಯಲ್ಲಿ ಕಂಡೆ? ಆ ದೇವಿಯು ಲಂಕಾನಗರದಲ್ಲಿ ಯಾವ ನಡೆವಳಿಯಿಂದಿರುವಳು? ಮಹಾ ಕ್ರೂರ ಕಾರ್ಯಗಳನ್ನು ಮಾಡುವ ಆ ರಾವಣಾಸುರನು ಆ ದೇವಿಯ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿರುವನು? ಎಲೈ ಮಹಾ ಕಪಿಯೇ! ಈ ಎಲ್ಲ ವಿಚಾರಗಳನ್ನೂ ಯಥಾರ್ಥವಾಗಿ

ಯಶ್ಚಾರ್ಥಸ್ತತ್ರ ವಕ್ತವ್ಯೋ ಗತೈರಸ್ಮಾಭಿರಾತ್ಮವಾನ್ । ರಕ್ಷಿತವ್ಯಂಚ ಯತ್ತತ್ರ ತದ್ಭವಾನ್ ವ್ಯಾಕರೋತು ನಃ ॥೫॥ ಸ ನಿಯುಕ್ತಸ್ತತಸ್ತೇನ ಸಂಪ್ರಹೃಷ್ಟತನೂರುಹಃ। ಪ್ರಣಮ್ಯ ಶಿರಸಾ ದೇವ್ಯೈ ಸೀತಾಯೈ ಪ್ರತ್ಯಭಾಷತ ॥೬॥ "ಪ್ರತ್ಯಕ್ಷಮೇವ ಭವತಾಂ ಮಹೇಂದ್ರಾಗ್ರಾತ್ಖಮಾಪ್ಲುತಃ । ಉದಧೇರ್ದಕ್ಷಿಣಂ ಪಾರಂ ಕಾಂಕ್ಷಮಾಣಸ್ಸಮಾಹಿತಃ ॥ ೭ ॥ ಗಚ್ಛತಶ್ಚ ಹಿ ಮೇ ಘೋರಂ ವಿಘ್ನರೂಪಮಿವಾಭವತ್ । ಕಾಂಚನಂ ಶಿಖರಂ ದಿವ್ಯಂ ಪಶ್ಯಾಮಿ ಸುಮನೋಹರಂ । ಸ್ಥಿತಂ ಪಂಥಾನಮಾವೃತ್ಯ ಮೇನೇ

ಕಾರ್ಯವಿನಿಶ್ಚಯಂ - ಕಾರ್ಯನಿಶ್ಚಯವನ್ನು, ಚಿಂತಯಿಷ್ಯಾಮಃ - ಯೋಚಿಸೋಣ. ॥೪॥ ತತ್ರ - ಶ್ರೀರಾಮನ ಸಮೀಪದಲ್ಲಿ, ಗತೈಃ - ಹೋದ, ಅಸ್ಮಾಭಿಃ - ನಮ್ಮಗಳಿಂದ, ಯೋಽರ್ಥಶ್ಚ - ಯಾವ ಮಾತು, ವಕ್ತವ್ಯಃ - ಹೇಳತಕ್ಕುದೋ, ಯಚ್ಚ - ಯಾವದು, ರಕ್ಷಿತವ್ಯಂ - ರಹಸ್ಯವಾಗಿಡತಕ್ಕುದೋ, ತತ್ರ - ಆ ವಿಷಯದಲ್ಲಿ, ಆತ್ಮವಾನ್ - ಬುದ್ಧಿಶಾಲಿಯಾದ, ಭವಾನ್ - ನೀನು, ನಃ - ನಮಗೆ, ವ್ಯಾಕರೋತು - ವಿವರಿಸಿ ಹೇಳು. ॥೫॥ ತತಃ - ಬಳಿಕ, ತೇನ - ಆ ಜಾಂಬವಂತನಿಂದ, ನಿಯುಕ್ತಃ - ಕೇಳಲ್ಪಟ್ಟ, ಸಃ - ಆ ಆಂಜನೇಯನು, ಸಂಪ್ರ....ಹಃ - ಸಂತೋಷದಿಂದ ರೋಮಾಂಚವುಳ್ಳವನಾಗಿ, ಶಿರಸಾ - ಶಿರಸ್ಸಿನಿಂದ, ದೇವ್ಯೈ - ಸೀತಾದೇವಿಗೆ, ಪ್ರಣಮ್ಯ - ವಂದಿಸಿ, ಪ್ರತ್ಯಭಾಷತ - ಪ್ರತ್ಯುತ್ತರಕೊಟ್ಟನು. ॥೬॥ ಭವತಾಂ - ನಿಮ್ಮ, ಪ್ರತ್ಯಕ್ಷಮೇವ - ಎದುರಿನಲ್ಲಿಯೇ, ಮಹೇಂದ್ರಾಗ್ರಾತ್ - ಮಹೇಂದ್ರಪರ್ವತದ ಶಿಖರದಿಂದ, ಖಂ - ಅಂತರಿಕ್ಷವನ್ನು ಕುರಿತು, ಆಪ್ಲುತಃ - ಹಾರಿದವನಾಗಿ, ಉದಧೇಃ - ಸಮುದ್ರದ, ದಕ್ಷಿಣಂಪಾರಂ - ದಕ್ಷಿಣತೀರವನ್ನು, ಕಾಂಕ್ಷಮಾಣಃ - ನೋಡುತ್ತ, ಸಮಾಹಿತಃ - ಏಕಾಗ್ರಚಿತ್ತನಾದೆನು. ॥೭॥ ಗಚ್ಛತಃ - ಹೋಗುತ್ತಿರುವ, ಮೇ - ನನಗೆ, ಘೋರಂ - ಭಯಂಕರವಾದ, ವಿಘ್ನರೂಪಮಿವ - ಅಂತರಾಯದಂತೆ, ಅಭವತ್ - ಆಯಿತು, ಸುಮನೋಹರಂ - ರಮ್ಯವಾದ, ದಿವ್ಯಂ - ದೇವತಾಸಂಬಂಧವಾದ, ಕಾಂಚನಂ - ಭಂಗಾರದ ವಿಕಾರವಾದ, ಶಿಖರಂ - ಶಿಖರವನ್ನು, ಪಶ್ಯಾಮಿ - ಕಂಡೆನು, ಪಂಥಾನಂ - ದಾರಿಯನ್ನು, ಆವೃತ್ಯ - ಅಡ್ಡಿಪಡಿಸಿ, ಸ್ಥಿತಂ - ನಿಂತಿರುವ, ತಂನಗಂ - ಆ ಬೆಟ್ಟವನ್ನು, ವಿಘ್ನಂಚ - ವಿಘ್ನವನ್ನಾಗಿ,

---

ತಿಳಿಸು. ನಿನ್ನ ಹೇಳಿಕೆಯನ್ನು ಕೇಳಿದಮೇಲೆ ಮುಂದೆ ನಾವು ಮಾಡಬೇಕಾದ ಕಾರ್ಯವನ್ನು ಯೋಚಿಸೋಣ. ಎಲೈ ಹನುಮಂತನೇ! ನಾವು ಸುಗ್ರೀವನ ಸನ್ನಿಧಿಯಲ್ಲಿಯೂ, ಶ್ರೀರಾಮನ ಸನ್ನಿಧಿಯಲ್ಲಿಯೂ ಯಾವ ಯಾವ ಸಮಾಚಾರಗಳನ್ನು ಹೇಳಬಹುದೋ, ಯಾವಯಾವ ಸಮಾಚಾರಗಳನ್ನು ಗೋಪ್ಯ ಮಾಡಬೇಕೋ, ಅವುಗಳನ್ನೆಲ್ಲ ಬುದ್ಧಿಶಾಲಿಯಾದ ನೀನೀಗ ಒಕ್ಕಣಿಸಬೇಕು" ಎಂದು ಕೇಳಿದನು. ॥೧–೫॥ ಆಗ ಹನುಮಂತನು ಸಂತೋಷಾಧಿಕ್ಯದಿಂದ ರೋಮಾಂಚಿತನಾಗಿ, ಪತಿವ್ರತಾಶಿರೋಮಣಿಯಾದ ಸೀತಾದೇವಿಗೆ ಶಿರಸಾಪ್ರಣಮಿಸಿ ಅಲ್ಲಿದ್ದ ವಾನರರೆಲ್ಲರನ್ನೂ ಕುರಿತು ಹೀಗೆ ಹೇಳಿದನು. "ಎಲೈ ವಾನರಶ್ರೇಷ್ಠರೇ! ನಾನು ಏಕಾಗ್ರಚಿತ್ತನಾಗಿ ಸಮುದ್ರದ ದಕ್ಷಿಣತೀರವನ್ನು ಸೇರಬಯುಸಿದವನಾಗಿ ಇದೇ ಮಹೇಂದ್ರಪರ್ವತ ಶಿಖರದಿಂದ ಗಗನಕ್ಕೆ ಹಾರಿದೆನಷ್ಟೆ. ನಾನು ಹಾಗೆ ಹಾರಿ ಗಗನಮಾರ್ಗದಲ್ಲಿ ಹೋಗುತ್ತಿರಲು ಬಹು ಸುಂದರವಾದುದೂ, ಶ್ರೇಷ್ಠವಾದುದೂ, ಸುವರ್ಣಮಯವಾದುದೂ ಆದ ಒಂದು ಪರ್ವತವು ನನ್ನ ಗಮನಕ್ಕೆ ಅಡ್ಡವಾಗಿ ವಿಘ್ನವನ್ನಾಚರಿಸುವುದೋ ಎಂಬಂತೆ

ವಿಘ್ನಂಚ ತಂ ನಗಂ ॥ ೮ ॥ ಉಪಸಂಗಮ್ಯ ತಂ ದಿವ್ಯಂ ಕಾಂಚನಂ ನಗಸತ್ತಮಂ । ಕೃತಾ ಮೇ ಮನಸಾ ಬುದ್ಧಿರ್ಭೇತ್ತವ್ಯೋಽಯಂ ಮಯೇತಿಚ ॥ ೯ ॥ ಪ್ರಹತಂಚ ಮಯಾ ತಸ್ಯ ಲಾಂಗೂಲೇನ ಮಹಾಗಿರೇಃ । ಶಿಖರಂ ಸೂರ್ಯಸಂಕಾಶಂ ವ್ಯಶೀರ್ಯತ ಸಹಸ್ರಧಾ ॥ ೧೦ ॥ ವ್ಯವಸಾಯಂಚ ತಂ ಬುಧ್ವಾ ಸ ಹೋವಾಚ ಮಹಾಗಿರಿಃ । ಪುತ್ರೇತಿ ಮಧುರಾಂ ವಾಣೀಂ ಮನಃಪ್ರಹ್ಲಾದಯನ್ನಿವ ॥ ೧೧ ॥ "ಪಿತೃವ್ಯಂಚಾಪಿ ಮಾಂ ವಿದ್ಧಿ ಸಖಾಯಂ ಮಾತರಿಶ್ವನಃ । ಮೈನಾಕಮಿತಿ ವಿಖ್ಯಾತಂ ನಿವಸಂತಂ ಮಹೋದಧೌ ॥ ೧೨ ॥ ಪಕ್ಷವಂತಃ ಪುರಾ ಪುತ್ರ! ಬಭೂವುಃ ಪರ್ವ

ಮೇನೇ - ಭಾವಿಸಿದೆನು. ॥ ೮ ॥ ದಿವ್ಯಂ - ದೇವತಾಸಂಬಂಧವಾದ, ಕಾಂಚನಂ - ಸುವರ್ಣವಿಕಾರವಾದ, ತಂನಗಸತ್ತಮಂ - ಆ ಪರ್ವತಶ್ರೇಷ್ಠವನ್ನು, ಉಪಸಂಗಮ್ಯ - ಹೊಂದಿ, ಅಯಂ - ಈ ಬೆಟ್ಟವು, ಮಯಾ - ನನ್ನಿಂದ, ಭೇತ್ತವ್ಯಃ - ಭೇದಿಸಲ್ಪಡತಕ್ಕದು, ಇತಿ - ಇಂತೆಂದು, ಮೇಮನಸಾಚ - ನನ್ನ ಮನಸ್ಸಿನಿಂದಲೂ, ಬುದ್ಧಿಃ - ಮತಿಯು, ಕೃತಾ - ಮಾಡಲ್ಪಟ್ಟಿತು. ॥ ೯ ॥ ಮಯಾ - ನನ್ನ, ಲಾಂಗೂಲೇನ - ಬಾಲದಿಂದ, ಪ್ರಹತಂ - ಹೊಡೆಯಲ್ಪಟ್ಟ, ತಸ್ಯಮಹಾಗಿರೇಃ - ಆ ಮೈನಾಕಪರ್ವತದ, ಸೂರ್ಯಸಂಕಾಶಂ - ಸೂರ್ಯೋಪಮಯವಾದ, ಶಿಖರಂಚ - ಶಿಖರವೂ ಕೂಡ, ಸಹಸ್ರಧಾ - ಸಾವಿರ ತುಂಡುಗಳಾಗಿ, ವ್ಯಶೀರ್ಯತ - ಸೀಳಿಹೋಯಿತು. ॥೧೦॥ ತಂವ್ಯವಸಾಯಂಚ - ಸ್ವಭೇದನರೂಪವಾದ ಅಕೃತ್ಯವನ್ನು, ಬುದ್ಧ್ವಾಸಹ - ಅರಿತೂ ಕೂಡ, ಮಹಾಗಿರಿಃ - ಮೈನಾಕವು, ಹೇ ಪುತ್ರ - ಎಲೈ ಮಗನೇ, ಇತಿ - ಇಂತೆಂದು, ಮನಃ - ಮನವನ್ನು, ಪ್ರಹ್ಲಾದಯನ್ನಿವ - ಸಂತೋಷಗೊಳಿಸುತ್ತಿರುವವನಂತೆ, ಮಧುರಾಂ - ಮಧುರವಾದ, ವಾಣೀಂ - ಮಾತನ್ನು, ಉವಾಚ - ಹೇಳಿತು. ॥ ೧೧ ॥ ಅಪಿಚ - ಇಷ್ಟುಮಾತ್ರವಲ್ಲ, ಮಹೋದಧೌ - ದೊಡ್ಡ ಸಮುದ್ರದಲ್ಲಿ, ನಿವಸಂತಂ - ಇರುವ, ಮೈನಾಕಮಿತಿ - ಮೈನಾಕವೆಂದು, ವಿಖ್ಯಾತಂ - ಪ್ರಸಿದ್ಧವಾದ, ಪಿತೃವ್ಯಂ - ಚಿಕ್ಕತಂದೆಯಾದ, ಮಾಂ - ನನ್ನನ್ನು, ಮಾತರಿಶ್ವನಃ - ವಾಯುವಿನ, ಸಖಾಯಂ - ಸ್ನೇಹಿತನನ್ನಾಗಿ, ವಿದ್ಧಿ - ಅರಿತುಕೊ. ॥ ೧೨ ॥ ಹೇ ಪುತ್ರ-ಎಲೈ ಕುಮಾರನೇ, ಪುರಾ-ಪೂರ್ವಕಾಲದಲ್ಲಿ, ಪರ್ವತೋತ್ತಮಾಃ-

---

ಸಮುದ್ರಮಧ್ಯದಿಂದ ಮೇಲಕ್ಕೆದ್ದಿತು. ನಾನು ಸಮೀಪಕ್ಕೆ ಹೋಗುತ್ತ ಹೋಗುತ್ತ ಆ ಪರ್ವತವು ನನ್ನನ್ನು ಅಡ್ಡಗಿಸುತ್ತಿದ್ದಂತೆ ಕಂಡಿತು. ಆಗ ನಾನು ಅದು ನನಗೆ ವಿಘ್ನಕಾರಿಯೆಂದೇ ಭಾವಿಸಿದೆನು. ಕೂಡಲೇ ನಾನು ಸುವರ್ಣಮಯವಾದ ಆ ಪರ್ವತೋತ್ತಮವನ್ನು ಭೇದಿಸಿಬಿಡಬೇಕೆಂದು ಮನಸ್ಸಿನಲ್ಲಿಯೇ ಆಲೋಚಿಸುತ್ತಿದ್ದೆನು. ಹೀಗೆ ಸ್ವಲ್ಪಹೊತ್ತು ಆಲೋಚಿಸಿ, ಆಮೇಲೆ ಸೂರ್ಯನಿಗೆ ಸಮಾನವಾಗಿ ಪ್ರಕಾಶಿಸುತ್ತಿದ್ದ ಆ ಪರ್ವತ ಶಿಖರವನ್ನು ನನ್ನ ವಾಲದಿಂದ ಹೊಡೆಯಲು ಅದು ಪುಡಿಪುಡಿಯಾಗಿಬಿಟ್ಟಿತು. ॥ ೬–೧೦ ॥ ಆಗಲಾ ಪರ್ವತವು ನನ್ನ ಅಭಿಪ್ರಾಯವನ್ನು ಗ್ರಹಿಸಿಯೂ, "ಎಲೈ ವತ್ಸನೇ" ಎಂದು ಬಹು ಮಧುರವಾದ ಮಾತಿನಿಂದ ಸಂತೋಷಗೊಳಿಸುತ್ತ ನನ್ನನ್ನು ಕುರಿತು, "ಎಲೈ ಹನುಮಂತನೇ! ನಾನು ನಿನ್ನ ತಂದೆಯಾದ ವಾಯುದೇವನಿಗೆ ಪರಮ ಸ್ನೇಹಿತನು. ನನ್ನ ಹೆಸರು ಮೈನಾಕವೆನ್ನುವರು. ನಾನು ಈ ಸಮುದ್ರದಲ್ಲಿಯೇ ವಾಸವಾಗಿರುವೆನು. ಇನ್ನು ನನ್ನ ಪೂರ್ವವೃತ್ತಾಂತವನ್ನೂ, ನಿಮ್ಮ ತಂದೆಯು ಒಡಹುಟ್ಟಿದವನೆಂದು ಹೇಳಲು ಕಾರಣ

ತೋತ್ತಮಾಃ । ಛಂದತಃ ಪೃಥಿವೀಂ ಚೇರುರ್ಬಾಧಮಾನಾಸ್ಸಮಂತತಃ ॥ ೧೩ ॥
ಶ್ರುತ್ವಾ ನಗಾನಾಂ ಚರಿತಂ ಮಹೇಂದ್ರಃ ಪಾಕಶಾಸನಃ । ಚಿಚ್ಛೇದ ಭಗವಾನ್
ಪಕ್ಷಾನ್ ವಜ್ರೇಣೈಷಾಂ ಸಹಸ್ರಶಃ ॥ ೧೪ ॥ ಅಹಂತು ಮೋಕ್ಷಿತಸ್ತಸ್ಮಾತ್ತವ ಪಿತ್ರಾ
ಮಹಾತ್ಮನಾ । ಮಾರುತೇನ ತದಾ ವತ್ಸ ! ಪ್ರಕ್ಷಿಪ್ತೋಽಸ್ಮಿ ಮಹಾರ್ಣವೇ ॥ ೧೫ ॥
ರಾಮಸ್ಯ ಚ ಮಯಾ ಸಾಹ್ಯೇ ವರ್ತಿತವ್ಯಮರಿಂದಮ ! । ರಾಮೋ ಧರ್ಮಭೃತಾಂ
ಶ್ರೇಷ್ಠೋ ಮಹೇಂದ್ರಸಮವಿಕ್ರಮಃ " ॥೧೬॥ ಏತಚ್ಛ್ರುತ್ವಾ ವಚಸ್ತಸ್ಯ ಮೈನಾಕಸ್ಯ

ಗಿರಿಶ್ರೇಷ್ಠಗಳು, ಪಕ್ಷವಂತಃ - ರೆಕ್ಕೆಗಳುಳ್ಳವುಗಳು, ಬಭೂವುಃ - ಆದವು, ಪೃಥಿವೀಂ - ಭೂಮಿಯನ್ನು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಬಾಧಮಾನಾಃ - ಬಾಧಿಸುವಂಥವುಗಳಾಗಿ, ಛಂದತಃ - ಸ್ವೇಚ್ಛೆಯಾಗಿ, ಚೇರುಃ - ಸಂಚರಿಸಿದವು. ॥ ೧೩ ॥ ಭಗವಾನ್ - ಪೂಜ್ಯನಾದ, ಮಹೇಂದ್ರಃ - ವೃತ್ರಸಂಹಾರಕನಾದ, ಪಾಕಶಾಸನಃ - ದೇವೇಂದ್ರನು, ಏಷಾಂನಗಾನಾಂ - ಈ ಪರ್ವತಗಳ, ಚರಿತಂ - ಪ್ರಜಾಬಾಧಾರೂಪವಾದ ಚರಿತ್ರವನ್ನು, ಶ್ರುತ್ವಾ - ಕೇಳಿ, ವಜ್ರೇಣ - ವಜ್ರಾಯುಧದಿಂದ, ಪಕ್ಷಾನ್ - ರೆಕ್ಕೆಗಳನ್ನು, ಸಹಸ್ರಶಃ - ಸಹಸ್ರಭಾಗವಾಗಿ, ಚಿಚ್ಛೇದ - ಕತ್ತರಿಸಿದನು. ॥ ೧೪ ॥ ಹೇ ವತ್ಸ - ಎಲೈ ಮಗನೇ, ಅಹಂತು - ನಾನಾದರೆ, ತದಾ - ಆ ಕಾಲದಲ್ಲಿ, ತವ - ನಿನ್ನ, ಪಿತ್ರಾ - ತಂದೆಯಾದ, ಮಹಾತ್ಮನಾ - ಮಹಾನುಭಾವನಾದ, ಮಾರುತೇನ - ವಾಯುವಿನಿಂದ, ತಸ್ಮಾತ್ - ಆ ಇಂದ್ರನ ದೆಶೆಯಿಂದ, ಮೋಕ್ಷಿತಃ - ಬಿಡುಗಡೆಮಾಡಲ್ಪಟ್ಟವನಾಗಿ, ಮಹಾರ್ಣವೇ - ಮಹಾ ಸಮುದ್ರದಲ್ಲಿ, ಪ್ರಕ್ಷಿಪ್ತಃ - ಇಡಲ್ಪಟ್ಟವನು, ಅಸ್ಮಿ - ಆದೆನು. ॥ ೧೫ ॥ ಹೇ ಅರಿಂದಮ - ಎಲೈ ಶತ್ರುನಾಶಕನೇ, ರಾಮಸ್ಯ - ಶ್ರೀರಾಮನಿಗೆ, ಸಾಹ್ಯೇಚ - ಸಹಾಯದಲ್ಲಿಯೂ, ಮಯಾ - ನನ್ನಿಂದ, ವರ್ತಿತವ್ಯಂ - ಇರತಕ್ಕದ್ದು, (ಕುತಃ - ಏತಕ್ಕೆಂದರೆ,) ಮಹೇಂ....ಮಃ - ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳ, ರಾಮಃ - ಶ್ರೀರಾಮನು, ಧರ್ಮಭೃತಾಂ - ಧಾರ್ಮಿಕರಲ್ಲಿ, ಶ್ರೇಷ್ಠಃ - ಉತ್ತಮನು. ॥ ೧೬ ॥ ಕಿಂತು - ಮತ್ತೇನೆಂದರೆ, ಮಹಾತ್ಮನಃ - ಮಹಾಮನುಸ್ಸುಳ್ಳ, ತಸ್ಯಮೈನಾಕಸ್ಯ - ಆ ಮೈನಾಕಪರ್ವತದ, ಏತದ್ವಚಃ - ಈ ಮಾತನ್ನು, ಶ್ರುತ್ವಾ - ಕೇಳಿ, ಮಮ - ನನ್ನ, ಮನಶ್ಚ - ಮನಸ್ಸೂಕೂಡ, ಗಿರೇಃ -

---

ವನ್ನೂ ಕೇಳು. ಎಲೈ ವತ್ಸನೇ! ಹಿಂದೆ ಪರ್ವತಗಳಿಗೆಲ್ಲ ರೆಕ್ಕೆಗಳಿದ್ದವು. ಆಗ ಅವು ಸ್ವೇಚ್ಛೆಯಾಗಿ ಭೂಮಿಯಲ್ಲೆಲ್ಲಾ ಸಂಚರಿಸುತ್ತ ಸಮಸ್ತಭೂತಗಳಿಗೂ ಬಾಧೆಯನ್ನುಂಟು ಮಾಡುತ್ತಿದ್ದವು. ಆ ಬಳಿಕ ಮಹಾಮಹಿಮನೂ, ಪಾಕಶಾಸನನೂ ಆದ ದೇವೇಂದ್ರನು ಈ ಪರ್ವತಗಳು ಮಾಡುತ್ತಿದ್ದ ಹಾವಳಿಯನ್ನು ಕೇಳಿ, ನೋಡಿ ಅವುಗಳ ರೆಕ್ಕೆಗಳನ್ನೆಲ್ಲ ತನ್ನ ವಜ್ರಾಯುಧದಿಂದ ಕತ್ತರಿಸಿಬಿಟ್ಟನು. ಓ ಆಂಜನೇಯಾ! ಆಗ ಮಹಾತ್ಮನೂ, ನಿನ್ನ ಜನಕನೂ ಆದ ವಾಯುದೇವನು ನನ್ನನ್ನು ದೇವೇಂದ್ರನ ಉಪಟಳದಿಂದ ತಪ್ಪಿಸಿ ಬಹು ಜಾಗ್ರತೆಯಾಗಿ ನನ್ನನ್ನು ಕರೆತಂದು ಈ ಸಮುದ್ರದಲ್ಲಿ ಹಾಕಿದನು. ॥ ೧೧–೧೫ ॥ ಎಲೈ ಶತ್ರುಮರ್ದನನೇ! ಹೀಗೆ ನಾನು ನಿಮ್ಮ ತಂದೆಯಾದ ವಾಯುದೇವನಿಂದ ಪರಮೋಪಕಾರವನ್ನು ಪಡೆದೆನು. ಈ ಸಂಬಂಧದಿಂದಲೇ ನಾನು ನಿಮ್ಮ ತಂದೆಗೆ ಒಡಹುಟ್ಟಿದವನಾದೆನು. ಆದುದರಿಂದ ಆ ವಾಯುದೇವನ ಪುತ್ರನಾದ ನಿನಗೆ ಸಹಾಯಮಾಡುವುದು ನನ್ನ ಕರ್ತವ್ಯವಾಗಿರುವುದು. ಇದೂ ಅಲ್ಲದೆ, ನೀನು ಶ್ರೀರಾಮಕಾರ್ಯಕ್ಕೋಸುಗವಾಗಿ ಹೋಗುತ್ತಿರುವೆ. ಆ ರಘು

ಮಹಾತ್ಮನಃ । ಕಾರ್ಯಮಾವೇದ್ಯ ತು ಗಿರೇ ರುದ್ಯತಂ ಚ ಮನೋ ಮಮ ॥ ೧೭ ॥
ತೇನಚಾಹಮನುಜ್ಞಾತೋ ಮೈನಾಕೇನ ಮಹಾತ್ಮನಾ । ಸಚಾಪ್ಯಂತರ್ಹಿತಶ್ಶೈಲೋ
ಮಾನುಷೇಣ ವಪುಷ್ಮತಾ । ಶರೀರೇಣ ಮಹಾಶೈಲಃ ಶೈಲೇನಚ ಮಹೋದಧೌ ॥೧೯॥
ಉತ್ತಮಂಜವಮಾಸ್ಥಾಯ ಶೇಷಂ ಪಂಥಾನಮಾಸ್ಥಿತಃ । ತತೋಽಹಂ ಸುಚಿರಂ
ಕಾಲಂ ವೇಗೇನಾಭ್ಯಗಮಂ ಪಥಿ ॥ ೨೦ ॥ ತತಃ ಪಶ್ಯಾಮ್ಯಹಂ ದೇವೀಂ ಸುರಸಾಂ
ನಾಗಮಾತರಂ । ಸಮುದ್ರಮಧ್ಯೇ ಸಾ ದೇವೀ ವಚನಂ ಮಾಮಭಾಷತ ॥ ೨೧ ॥

ಮೈನಾಕಪರ್ವತಕ್ಕೆ, ಕಾರ್ಯಂ - ಕೃತ್ಯವನ್ನು, ಆವೇದ್ಯ - ಅರುಹಿ, ಉದ್ಯತಂ - ಹೊರಡಲುದ್ಯುಕ್ತವಾಯಿತು. ॥ ೧೭ ॥ ಅಹಂಚ-ನಾನೂ ಸಹ, ಮಹಾತ್ಮನಾ-ಮಹಾನುಭಾವನಾದ, ತೇನಮೈನಾಕೇನ-ಆ ಮೈನಾಕನಿಂದ, ಅನುಜ್ಞಾತಃ - ಅಪ್ಪಣೆ ತೆಗೆದುಕೊಂಡವನು, (ಅಸ್ಮಿ - ಆದೆನು,) ಸಶ್ಶೈಲಶ್ಚಾಪಿ - ಆ ಮೈನಾಕಪರ್ವತವೂ ಕೂಡ, ವಪುಷ್ಮತಾ - ತುಂಬಾದ, ಮಾನುಷೇಣ - ಮನುಷ್ಯಸಂಬಂಧವಾದ, ಶರೀರೇಣ - ದೇಹದಿಂದ, ಅಂತರ್ಹಿತಃ - ಅಂತರ್ಧಾನವಾಯಿತು, ಶೈಲೇನತು - ಶಿಲಾರೂಪವಾದ ಶರೀರದಿಂದಲಾದರೆ, ಮಹಾಶೈಲಃ - ದೊಡ್ಡ ಪರ್ವತವಾಗಿ, ಮಹೋದಧೌ - ಸಮುದ್ರದ ಮೇಲ್ಭಾಗದಲ್ಲಿ, (ಸ್ಥಿತಃ - ಇದ್ದಿತು.) ॥ ೧೮-೧೯ ॥ ತತಃ - ಬಳಿಕ, ಉತ್ತಮಂ - ಶ್ರೇಷ್ಠವಾದ, ಜವಂ - ವೇಗವನ್ನು, ಆಸ್ಥಾಯ - ಹೊಂದಿ, ಆಸ್ಥಿತಃ - ಇರುವ, ಅಹಂ - ನಾನು, ಪಥಿ - ಮಾರ್ಗದಲ್ಲಿ, ಶೇಷಂ - ಉಳಿದಿರುವ, ಪಂಥಾನಂ - ಹಾದಿಯನ್ನು, ಸುಚಿರಂಕಾಲಂ - ಬಹುಕಾಲ, ವೇಗೇನ - ತ್ವರೆಯಿಂದ, ಅಭ್ಯಗಮಂ - ಹೊರಟನು. ॥ ೨೦ ॥ ತತಃ - ಬಳಿಕ, ಅಹಂ - ನಾನು, ನಾಗಮಾತರಂ - ಸರ್ಪಗಳಿಗೆ ತಾಯಿಯಾದ, ಸುರಸಾಂದೇವೀಂ - ಸುರಸಾದೇವಿಯನ್ನು, ಪಶ್ಯಾಮಿ - ಕಂಡೆನು, ಸಾದೇವೀ - ಆ ಸುರಸಾದೇವಿಯು, ಸಮುದ್ರಮಧ್ಯೇ - ಸಮುದ್ರದನಡುವೆ, ಮಮ - ನನ್ನನ್ನು ಕುರಿತು, ವಚನಂ - ಮಾತನ್ನು, ಸಮಭಾಷತ-ಹೇಳಿದನು. ॥ ೨೧ ॥ ಹೇ ಹರಿಸತ್ತಮ-ಎಲೈ ವಾನರೋತ್ತಮನೇ, ತ್ವಂ-

ರಾಮನು ಮಹಾ ಧರ್ಮಿಷ್ಠನಾದವನು. ಧಾರ್ಮಿಕರಲ್ಲಿ ಪರಮಶ್ರೇಷ್ಠನು ; ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನು. ಆದುದರಿಂದ ಅಂತಹ ಶ್ರೀರಾಮಮೂರ್ತಿಗೆ ಸಹಾಯಮಾಡಬೇಕಾದುದೂ ನನ್ನ ಕರ್ತವ್ಯವಾಗಿರುವುದು. ನೀನು ಆತನಿಗೆ ದೂತನಾಗಿ ಹೋಗುತ್ತಿರುವೆ. ಹೀಗೆ ಈ ಎರಡೂ ಕಾರಣಗಳಿಂದ ನಾನು ನಿನಗೆ ಸಹಾಯಕನಾಗಬೇಕು ” ಎಂದು ಹೇಳಿದನು. ಆಗ ನಾನು, ಸತ್ಸ್ವಭಾವವುಳ್ಳ ಆ ಮೈನಾಕನು ಹೇಳಿದ ಮಾತುಗಳನ್ನು ಕೇಳಿ, ನಾನು ಹೋಗುತ್ತಿರುವ ಕಾರ್ಯವನ್ನಾತನಿಗೆ ತಿಳಿಸಿ, ಜಾಗ್ರತೆಯಾಗಿ ತೆರಳಬೇಕೆಂದು ಹೇಳಿದೆನು. ಮಹಾತ್ಮನಾದ ಆ ಮೈನಾಕನು ಹೋಗಿ ಬಾರೆಂದು ನನಗೆ ಅಣತಿಯಿತ್ತನು. ಹೀಗೆ ಆಜ್ಞಾಪಿಸಿದ ಬಳಿಕ, ಆ ಮೈನಾಕನು ನನ್ನೊಡನೆ ಮಾತನಾಡಲು ಧರಿಸಿದ್ದ ಮಾನುಷರೂಪದಿಂದ ಅಂತರ್ಧಾನವಾಗಿ ಪರ್ವತಾಕಾರವನ್ನು ತಾಳಿ ಸಮುದ್ರದಲ್ಲಿದ್ದನು. ಆಮೇಲೆ ನಾನು ಮಹಾ ವೇಗವನ್ನು ತಾಳಿ ಉಳಿದ ದಾರಿಯನ್ನು ಬಹು ಜಾಗ್ರತೆಯಾಗಿ ಕ್ರಮಿಸುತ್ತಿದ್ದೆನು. ॥ ೧೬-೨೦ ॥ ಹೀಗೆ ದಾಟಿಹೋಗುತ್ತ ಮಧ್ಯಮಾರ್ಗದಲ್ಲಿ ನಾನು ನಾಗಮಾತೆಯಾದ ಸುರಸಾದೇವಿಯನ್ನು ಕಂಡವನಾದೆನು. ಆಕೆಯು ಸಮುದ್ರಮಧ್ಯದಲ್ಲಿ ನಿಂತು ನನ್ನನ್ನು ನೋಡಿ, “ ಎಲೈ ವಾನರೋತ್ತಮನೇ ! ದೇವತೆಗಳು ನಿನ್ನನ್ನು ನನಗೆ ಆಹಾರ

“ ಮಮ ಭಕ್ಷಃ ಪ್ರದಿಷ್ಟಸ್ತ್ವಮೀಶ್ವರೈರ್ಹರಿಸತ್ತಮ! । ಅತಸ್ತ್ವಾಂ ಭಕ್ಷಯಿಷ್ಯಾಮಿ ವಿಹಿತಸ್ತ್ವಂ ಚಿರಸ್ಯ ಮೇ ” ॥ ೨೨ ॥ ಏವಮುಕ್ತಸ್ಸುರಸಯಾ ಪ್ರಾಂಜಲಿಃ ಪ್ರಣತ ಸ್ಸ್ಥಿತಃ । ವಿವರ್ಣವದನೋ ಭೂತ್ವಾ ವಾಕ್ಯಂಚೇದಮುದೀರಯಂ ॥ ೨೩ ॥ “ ರಾಮೋ ದಾಶರಥಿಃ ಶ್ರೀಮಾನ್ ಪ್ರವಿಷ್ಟೋ ದಂಡಕಾವನಂ । ಲಕ್ಷ್ಮಣೇನ ಸಹ ಭ್ರಾತ್ರಾ ಸೀತಯಾಚ ಪರಂತಪಃ ॥೨೪॥ ತಸ್ಯ ಸೀತಾ ಹೃತಾ ಭಾರ್ಯಾ ರಾವಣೇನ ದುರಾತ್ಮನಾ । ತಸ್ಯಾಸ್ಸಕಾಶಂ ದೂತೋಽಹಂ ಗಮಿಷ್ಯೇ ರಾಮಶಾಸನಾತ್ ॥ ೨೫ ॥ ಕರ್ತುಮರ್ಹಸಿ ರಾಮಸ್ಯ ಸಾಹಾಯ್ಯಂ ವಿಷಯೇ ಸತೀ । ಅಥವಾ ಮೈಥಿಲೀಂ

ನೀನು, ಮಮ - ನನಗೆ, ಭಕ್ಷಃ - ಭೋಜನವಾಗಿ, ಯತಃ - ಯಾವಕಾರಣದಿಂದ, ಈಶ್ವರೈಃ - ದೇವತೆಗಳಿಂದ, ಪ್ರದಿಷ್ಟಃ-ಕೊಡಲ್ಪಟ್ಟಿರುವೆಯೋ, ಅತಃ-ಆ ಕಾರಣದಿಂದ, ತ್ವಾಂ ನಿನ್ನನ್ನು, ಭಕ್ಷಯಿಷ್ಯಾಮಿ-ಭುಜಿಸುವೆನು, ತ್ವಂ - ನೀನು, ಚಿರಸ್ಯ - ಬಹುಕಾಲಕ್ಕೆ, ಮೇ - ನನ್ನಿಂದ, ವಿಹಿತಃ - ಹೊಂದಲ್ಪಟ್ಟೆ. ॥ ೨೨ ॥ ಏವಂ - ಈ ಪರಿಯಾಗಿ, ಸುರಸಯಾ - ಸುರಸಾದೇವಿಯಿಂದ, ಉಕ್ತಃ - ಹೇಳಲ್ಪಟ್ಟವನಾದ ಕಾರಣ, ವಿವರ್ಣವದನಃ - ಕಂಗೆಟ್ಟ ಮುಖವುಳ್ಳವನ, ಭೂತ್ವಾ - ಆಗಿ, ಪ್ರಾಂಜಲಿಃ - ಅಂಜಲಿ ಬದ್ಧನಾಗಿ, ಪ್ರಣತಃ - ನಮ್ರನಾಗಿ, ಸ್ಥಿತಃ - ಇರುವ ನಾನು, ಏತದ್ವಾಕ್ಯಂಚ - ಈ ಮಾತನ್ನೂ ಸಹ, ಉದೀರಯಂ - ಹೇಳಿದೆನು. ॥ ೨೩ ॥ ಪರಂತಪಃ - ಶತ್ರುನಾಶಕನಾದ, ಶ್ರೀಮಾನ್ - ಸಂಪದ್ಯುಕ್ತನಾದ, ದಾಶರಥಿಃ - ದಶರಥಪುತ್ರನಾದ, ರಾಮಃ - ಶ್ರೀರಾಮನು, ಭ್ರಾತ್ರಾ - ತಮ್ಮನಾದ, ಲಕ್ಷ್ಮಣೇನ ಸಹ - ಲಕ್ಷ್ಮಣನೊಡನೆಯೂ, ಸೀತಯಾಚ - ಪತ್ನಿಯಾದ ಸೀತಾದೇವಿಯೊಡನೆಯೂ ಸಹ, ದಂಡಕಾವನಂ - ದಂಡಕಾರಣ್ಯವನ್ನು, ಪ್ರವಿಷ್ಟಃ - ಪ್ರವೇಶಿಸಿದನು. ॥ ೨೪ ॥ ತಸ್ಯ - ಆ ಶ್ರೀರಾಮನ, ಭಾರ್ಯಾ-ಹೆಂಡತಿಯಾದ, ಸೀತಾ-ಸೀತಾದೇವಿಯು, ದುರಾತ್ಮನಾ-ದುರ್ಬುದ್ಧಿಯುಳ್ಳ, ರಾವಣೇನ-ರಾವಣಾಸುರನಿಂದ, ಹೃತಾ-ಅಪಹರಿಸಲ್ಪಟ್ಟಳು, ದೂತಃ-ದೂತನಾದ, ಅಹಂ-ನಾನು, ರಾಮ....ತ್-ರಾಮಾಜ್ಞೆಯಿಂದ, ತಸ್ಯಾಃ-ಆ ಸೀತಾದೇವಿಯ, ಸಕಾಶಂ-ಸಮೀಪವನ್ನು, ಗಮಿಷ್ಯೇ-ಹೋಗುವೆನು. ॥ ೨೫ ॥ (ತಸ್ಯ - ಅವನ,) ವಿಷಯೇ - ದೇಶದಲ್ಲಿ, ಸತೀ - ಇರುವ ನೀನು, ರಾಮಸ್ಯ - ಶ್ರೀರಾಮ

ವಾಗಿ ದೊರಕಿಸಿರುವರು. ಆದುದರಿಂದ ಈಗ ನಾನು ನಿನ್ನನ್ನು ಭುಜಿಸುವೆನು. ನಿನಗೋಸುಗ ನಾನು ಬಹುಕಾಲದಿಂದಲೂ ಈ ಸಮುದ್ರಮಧ್ಯದಲ್ಲಿಯೇ ಕಾದಿರುವೆನು ” ಎಂದು ಹೇಳಿದಳು. ಆಕೆಯ ಈ ಮಾತುಗಳನ್ನು ಕೇಳಿ, ನಾನು ಆಕೆಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಬಾಡಿ ಬಿಳುಪೇರಿದ ಮುಖವುಳ್ಳವನಾಗಿ ಆಕೆಯನ್ನು ಕುರಿತು, “ ಓ ದೇವಿಯೇ! ಮಹಾ ಶ್ರೀಮಂತನೂ, ವಿರೋಧಿ ಜನತಾಪನನೂ, ದಶರಥರಾಜ ಕುಮಾರನೂ ಆದ ಶ್ರೀರಾಮಮೂರ್ತಿಯು, ತನ್ನ ತಮ್ಮನಾದ ಲಕ್ಷ್ಮಣನೊಡನೆಯೂ, ಭಾರ್ಯೆಯಾದ ಸೀತಾದೇವಿಯೊಡನೆಯೂ ದಂಡಕಾರಣ್ಯವನ್ನು ಪ್ರವೇಶಿಸಿದನು. ಅಲ್ಲಿ ಆತನು ವಾಸವಾಗಿರಲು, ಆತನ ಪ್ರಿಯಪತ್ನಿಯಾದ ಸೀತಾದೇವಿಯನ್ನು ದುರಾತ್ಮನಾದ ರಾವಣಾಸುರನು ಕದ್ದುಕೊಂಡು ಹೋದನು. ಈಗ ನಾನು ಆ ರಾಮಚಂದ್ರನ ಆಜ್ಞೆಯಂತೆ ದೂತನಾಗಿ ಸೀತಾದೇವಿಯು ಇರುವ ಸ್ಥಳವನ್ನು ಹುಡುಕಲು ಹೋಗುತ್ತಿರುವೆನು. ಎಲೌ ಸುರಸಾದೇವಿಯೇ! ನೀನು ಶ್ರೀರಾಮನ ಆಳ್ವಿಕೆಗೊಳಪಟ್ಟ ದೇಶದಲ್ಲಿರುವೆಯಾದುದರಿಂದ ನೀನೂ ಆತನಿಗೆ ಸಹಾಯ

ದೃಷ್ಟ್ವಾ ರಾಮಂಚಾಕ್ಲಿಷ್ಟಕಾರಿಣಂ ॥ ೨೬ ॥ ಆಗಮಿಷ್ಯಾಮಿ ತೇ ವಕ್ತ್ರಂ ಸತ್ಯಂ ಪ್ರತಿಶ್ರುಣೋಮಿ ತೇ" । ಏವಮುಕ್ತಾ ಮಯಾ ಸಾತು ಸುರಸಾ ಕಾಮರೂಪಿಣೀ ॥ ೨೭ ॥ ಅಬ್ರವೀನ್ನಾತಿವರ್ತೇತ ಕಶ್ಚಿದೇಷ ವರೋ ಮಮ" । ಏವಮುಕ್ತಸ್ತು ಸಂಕ್ರುದ್ಧೋ ದಶಯೋಜನಮಾಯತಃ ॥ ೨೮ ॥ ತತೋಽರ್ಧಗುಣವಿಸ್ತಾರೋ ಬಭೂವಾಽಹಂ ಕ್ಷಣೇನತು । ಮತ್ಪ್ರಮಾಣಾನುರೂಪಂ ಚ ವ್ಯಾದಿತಂ ತು ಮುಖಂ ತಯಾ ॥ ೨೯ ॥ ತದ್ದೃಷ್ಟ್ವಾ ವ್ಯಾದಿತಂ ಚಾಸ್ಯಂ ಹ್ರಸ್ವಂ ಹ್ಯಕರವಂ ವಪುಃ ।

ನಿಗೆ, ಸಾಹಾಯ್ಯಂ - ಸಹಾಯವನ್ನು, ಕರ್ತುಂ - ಮಾಡುವದಕ್ಕೆ, ಅರ್ಹಸಿ - ಯೋಗ್ಯಳಾಗು, ಅಥವಾ - ಹಾಗಲ್ಲದಿದ್ದರೆ, ಮೈಥಿಲೀಂ - ಸೀತಾದೇವಿಯನ್ನೂ, ರಾಮಂಚ - ಶ್ರೀರಾಮನನ್ನೂ ಸಹ, ಅಕ್ಲಿಷ್ಟಕಾರಿಣಂ-ಕ್ಲೇಶವಿಲ್ಲದಕಾರ್ಯವುಳ್ಳವನನ್ನಾಗಿ, ದೃಷ್ಟ್ವಾ-ಕಂಡು, ತೇ-ನಿನ್ನ, ವಕ್ತ್ರಂ ಮುಖ ವನ್ನು ಕುರಿತು, ಆಗಮಿಷ್ಯಾಮಿ - ಬರುವೆನು, ತೇ - ನಿನಗೆ, ಸತ್ಯಂ - ಯಥಾರ್ಥವಾಗಿ, ಪ್ರತಿಶ್ರುಣೋಮಿ - ಪ್ರತಿಜ್ಞೆಮಾಡಿ ಹೇಳುತ್ತೇನೆ. ॥ ೨೬ ॥ ಏವಂ - ಈ ಪ್ರಕಾರವಾಗಿ, ಮಯಾ - ನನ್ನಿಂದ, ಉಕ್ತಾ - ಹೇಳಲ್ಪಟ್ಟ, ಕಾಮರೂಪಣೀ - ಸ್ವೇಚ್ಛಾರೂಪಿಣಿಯಾದ, ಸುರಸಾ - ಸುರಸಾ ದೇವಿಯು, ಕಶ್ಚಿತ್ - ಒಬ್ಬಾನೊಬ್ಬನೂ, (ಮಾಂ - ನನ್ನನ್ನು), ನಾತಿವರ್ತೇತ - ಅತಿಕ್ರಮಿಸ ಲಾರನು, ಏಷಃ - ಇದು, ಮಮ - ನನಗೆ, ವರಃ - ವರವು, ಇತಿ - ಇಂತೆಂದು, ಅಬ್ರವೀತ್ - ನುಡಿವಳು. ॥ ೨೭ ॥ ಸುರಸಯಾ - ಸುರಸಾದೇವಿಯಿಂದ, ಏವಂ - ಈ ರೀತಿ, ಉಕ್ತಃ - ಹೇಳಲ್ಪ ಟ್ಟವನಾಗಿ, ದಶಯೋಜನಂ - ಹತ್ತುಗಾವುದಪರಿಮಿತವು, ಆಯತಃ - ಉದ್ದವಾದೆನು, ತತಃ - ಬಳಿಕ, ಕ್ಷಣೇನತು - ಕ್ಷಣಮಾತ್ರದಲ್ಲಿ, ಅಹಂ - ನಾನು, ಅರ್ಧಗುಣವಿಸ್ತಾರಃ - ಐದುಯೋಜನಗಳ ವಿಸ್ತಾರವುಳ್ಳವನು, ಬಭೂವ-ಆದೆನು. ॥ ೨೮ ॥ ತಯಾಚ-ಆ ಸುರಸಾದೇವಿಯಿಂದ, ಮತ್ಪ್ರ...ಸಂ- ನನ್ನಪರಿಮಿತಿಗೆ ಅನುರೂಪವಾಗಿ, ಮುಖಂ - ಮುಖವು, ವ್ಯಾದಿತಂ - ತೆರೆಯಲ್ಪಟ್ಟಿತು. ॥ ೨೯ ॥ ವ್ಯಾದಿತಂ - ವಿಸ್ತರಿಸಲ್ಪಟ್ಟ, ತದಾಸ್ಯಂ - ಆ ಮುಖವನ್ನು, ದೃಷ್ಟ್ವಾ - ಕಂಡು, ವಪುಃ - ನನ್ನ ಶರೀರವನ್ನು, ಹ್ರಸ್ವಂ - ಸೂಕ್ಷ್ಮವನ್ನಾಗಿ, ಅಕರವಂಹಿ - ಮಾಡಿದೆನಷ್ಟೆ, ತಸ್ಮಿನ್ಮುಹೂರ್ತೇ -

---

ವನ್ನು ಮಾಡಬೇಕು. ಹಾಗೆ ಸಹಾಯಮಾಡಲು ನಿನಗಿಚ್ಛೆಯಿಲ್ಲದಿದ್ದರೆ ಈ ಮಾತನ್ನಾದರೂ ನಡಿಸಿಕೊಡು. ನಾನಿಲ್ಲಿಂದ ಹೋಗಿ ಸೀತಾದೇವಿಯನ್ನು ನೋಡಿ, ಆ ವೃತ್ತಾಂತವನ್ನು ಅಕ್ಲಿಷ್ಟಕರ್ಮನಾದ ಶ್ರೀರಾಮನಿಗೆ ತಿಳಿಸಿ ಆ ಮೇಲೆ ನಿನ್ನ ಬಳಿಗೈದಿ ನಿನ್ನ ಬಾಯಿಗೆ ತುತ್ತಾಗುವೆನು. ಇದರಲ್ಲಿ ಸಂಶಯವಿಲ್ಲವು. ನನ್ನ ಮಾತನ್ನು ನಂಬು. ಸತ್ಯವಾಗಿಯೂ ನುಡಿಯುತ್ತಿರುವೆನು." ಎಂದು ಹೇಳಿದೆನು. ॥ ೨೧-೨೬ ॥ ಆಗ ಕಾಮರೂಪಿಣಿಯಾದ ಆ ಸುರಸಾದೇವಿಯು ನನ್ನ ಮಾತುಗಳನ್ನು ಕೇಳಿ ಬಹಳವಾಗಿ ಕೋಪಗೊಂಡು, "ಎಲೈ ವಾನರನೇ! ನನ್ನ ಕೈಗೆ ಸಿಕ್ಕಿದವನಾವನೂ ನನ್ನನ್ನು ಅತಿಕ್ರಮಿಸಿ ಹೋಗಲಾರನು. ಇದು ನನಗೆ ದೇವತೆಗಳಿತ್ತ ವರವಾಗಿರುವುದು" ಎಂದಳು. ಆಗ ನಾನು ಹತ್ತುಯೋಜನಗಳ ಗಲದಷ್ಟಿದ್ದ ನನ್ನ ಶರೀರವನ್ನು ಹದಿನೈದು ಯೋಜನಗಳಗಲದ್ದನ್ನಾಗಿ ಬೆಳೆಸಿದೆನು. ಅದನ್ನು ನೋಡಿ ಆ ಸುರಸೆಯು ನನ್ನ ದೇಹವನ್ನು ನುಂಗುವುದಕ್ಕೆ ತಕ್ಕಂತೆ ಬಾಯನ್ನು ಅಗಲವಾಗಿ ತೆರೆದಳು. ಅದನ್ನು ನೋಡಿದ ನಾನು ನನ್ನ ದೇಹವನ್ನು ಅಂಗುಷ್ಠಮಾತ್ರದ್ದನ್ನಾಗಿ ಮಾಡಿ ಕೊಂಡು ಬಹು ಜಾಗ್ರತೆಯಾಗಿ ಆ ಸುರಸೆಯ ಮುಖವನ್ನು ಪ್ರವೇಶಿಸಿ ಮರಳಿಯೂ ಒಂದು

ತಸ್ಮಿನ್ಮುಹೂರ್ತೇಽಚ ಪುನರ್ಬಭೂವಾಂಗುಷ್ಠಮಾತ್ರಕಃ ‖ ೩೦ ‖ ಅಭಿಪತ್ಯಾಶು ತದ್ವಕ್ತ್ರಂ ನಿರ್ಗತೋಽಹಂ ತತಃ ಕ್ಷಣಾತ್ । ಅಬ್ರವೀತ್ಸುರಸಾ ದೇವೀ ಸ್ವೇನರೂಪೇಣ ಮಾಂ ಪುನಃ ‖ ೩೧ ‖ "ಅರ್ಥಸಿದ್ಧ್ಯೈ ಹರಿಶ್ರೇಷ್ಠ! ಗಚ್ಛ ಸೌಮ್ಯ! ಯಥಾಸುಖಂ । ಸಮಾನಯಸ್ವ ವೈದೇಹೀಂ ರಾಘವೇಣ ಮಹಾತ್ಮನಾ ‖ ೩೨ ‖ ಸುಖೀಭವ ಮಹಾಬಾಹೋ! ಪ್ರೀತಾಸ್ಮಿ ತವ ವಾನರ!" । ತತೋಽಹಂ "ಸಾಧು ಸಾಧ್ವಿತಿ" ಸರ್ವಭೂತೈಃ ಪ್ರಶಂಸಿತಃ ‖ ೩೩ ‖ ತತೋಽಂತರಿಕ್ಷಂ ವಿಪುಲಂ ಪ್ಲುತೋಽಹಂ ಗರುಡೋ ಯಥಾ । ಛಾಯಾ ಮೇ ನಿಗೃಹೀತಾಚ ನಚ ಪಶ್ಯಾಮಿ ಕಿಂಚನ ‖ ೩೪ ‖ ಸೋಽಹಂ ವಿಗತವೇಗಸ್ತು ದಿಶೋ ದಶ ವಿಲೋಕಯನ್ । ನಕಿಂಚಿತ್ತತ್ರ ಪಶ್ಯಾಮಿ ಯೇನ

ಆ ಕಾಲದಲ್ಲಿ, ಪುನಃ - ಮತ್ತು, ಅಂಗುಷ್ಠಮಾತ್ರಕಃ - ಹೆಬ್ಬೆರಳಿನಪರಿಮಿತಿಯುಳ್ಳವನು, ಬಭೂವ - ಆದೆನು. ‖ ೩೦ ‖ ಅಹಂ - ನಾನು, ತದ್ವಕ್ತ್ರಂ - ಆ ಸುರಸಾದೇವಿಯ ಮುಖದಲ್ಲಿ, ಆಶು - ಜಾಗ್ರತೆಯಾಗಿ, ಅಭಿಪತ್ಯ - ಬಿದ್ದು, ಕ್ಷಣಾತ್ - ಕ್ಷಣಮಾತ್ರದಲ್ಲಿ, ತತಃ - ಆ ಮುಖದಿಂದ, ನಿರ್ಗತಃ - ಹೊರಟುಬಂದೆನು, ಹೇ ಹರಿಶ್ರೇಷ್ಠ - ಎಲೈ ವಾನರೋತ್ತಮನೆ, ಹೇ ಸೌಮ್ಯ - ಎಲೈ ಸೌಮ್ಯನೆ, ಅರ್ಥಸಿದ್ಧ್ಯೈ - ಕಾರ್ಯಲಾಭಕ್ಕೋಸ್ಕರ, ಯಥಾಸುಖಂ - ಸುಖವಾಗಿ, ಗಚ್ಛ - ಹೋಗು, ಮಹಾತ್ಮನಾ - ಮಹಾನುಭಾವನಾದ, ರಾಘವೇಣ - ಶ್ರೀರಾಮನೊಡನೆ, ವೈದೇಹೀಂ - ಸೀತಾದೇವಿಯನ್ನು, ಸಮಾನಯ - ಸೇರಿಸು, ಹೇ ಮಹಾಬಾಹೋ - ಎಲೈ ಮಹಾ ಭುಜನೇ, ಹೇ ವಾನರ - ಎಲೈ ಕಪಿಯೆ, ತವ-ನಿನ್ನ ವಿಷಯದಲ್ಲಿ, ಪ್ರೀತಾಸ್ಮಿ-ಸಂತುಷ್ಟಳಾದೆನು, ಸುಖೀಭವ-ಸುಖವಾಗಿರು, ಇತಿ-ಇಂತೆಂದು, ಸುರಸಾದೇವೀ-ಸುರಸಾದೇವಿಯು, ಮಾಂ-ನನ್ನನ್ನು ಕುರಿತು, ಸ್ವೇನರೂಪೇಣ-ಸ್ವಸ್ವರೂಪದಿಂದ, ಪುನಃ - ಮತ್ತು, ಅಬ್ರವೀತ್ - ನುಡಿದಳು. ‖೩೧-೩೨‖ ತತಃ - ಬಳಿಕ, ಅಹಂ - ನಾನು, ಸರ್ವಭೂತೈಃ - ಸರ್ವಪ್ರಾಣಿಗಳಿಂದಲು, ಸಾಧುಸಾಧ್ವಿತಿ - ಭಲೆ, ಭಲೆ ಎಂದು, ಪ್ರಶಂಸಿತಃ-ಶ್ಲಾಘಿಸಲ್ಪಟ್ಟೆನು. ‖೩೩‖ ತತಃ - ಅನಂತರದಲ್ಲಿ, ಅಹಂ - ನಾನು, ಗರುಡೋಯಥಾ - ಗರುಡನಂತೆ, ವಿಪುಲಂ - ವಿಸ್ತಾರವಾದ, ಅಂತರಿಕ್ಷಂ - ಅಂತರಿಕ್ಷವನ್ನು ಕುರಿತು, ಪ್ಲುತಃ - ಹಾರಿದೆನು, ಮೇ - ನನ್ನ, ಛಾಯಾ-ನೆರಳು, ನಿಗೃಹೀತಾ-ಗ್ರಹಿಸಲ್ಪಟ್ಟಿತು, ಕಿಂಚನ-ಯಾವ ವಸ್ತುವನ್ನೂ, ನಪಶ್ಯಾಮಿ-ಕಾಣಲಿಲ್ಲ. ‖ ೩೪ ‖ ವಿಗತವೇಗಃ - ಹೋಗಲಾಡಿಸಲ್ಪಟ್ಟ ವೇಗವುಳ್ಳ, ಸೋಽಹಂ - ಆ ಈ ನಾನು, ದಶದಿಶಃ - ಹತ್ತುದಿಕ್ಕುಗಳನ್ನೂ, ವಿಲೋಕಯನ್ - ನೋಡುತ್ತ, ಯೇನ - ಯಾವ ಸತ್ವದಿಂದ,

---

ಕ್ಷಣಮಾತ್ರದಲ್ಲಿಯೇ ಹೊರಗೆ ಬಂದುಬಿಟ್ಟೆನು. ಆಗಲಾ ಸುರಸೆಯು ತನ್ನ ನಿಜರೂಪವನ್ನು ತಾಳಿ ನನ್ನನ್ನು ಕುರಿತು, "ಎಲೈ ಸೌಮ್ಯನೇ! ವಾನರಶ್ರೇಷ್ಠನಾದ ಹನುಮಂತನೇ! ನಿನಗೆ ಕಾರ್ಯಸಿದ್ಧಿಯುಂಟಾಗಲಿ! ಸುಖವಾಗಿ ಹೋಗಿ ಬಾ! ಓ ಸೌಮ್ಯನೇ! ಮಹಾ ಪೂಜ್ಯ ಸ್ವಭಾವವುಳ್ಳ ಶ್ರೀರಾಮನೊಡನೆ ಸೀತಾದೇವಿಯನ್ನು ಸೇರಿಸು. ಎಲೈ ಮಹಾ ಬಾಹುವೇ! ನೀನು ಸೌಖ್ಯವನ್ನು ಪಡೆಯುವುದರಲ್ಲಿ ಸಂದೇಹವಿಲ್ಲವು. ನಿನ್ನ ಧೈರ್ಯ ಸ್ಥೈರ್ಯಗಳಿಗಾಗಿ ನಾನು ಬಹಳ ಸಂತುಷ್ಟಳಾದೆನು" ಎಂದು ಹೇಳಿದಳು. ಆಗ ಸಮಸ್ತ ಭೂತಗಳೂ, ಭಲೆ! ಭಲೆ!! ಎಂದು ನನ್ನನ್ನು ಬಹುವಾಗಿ ಸ್ತುತಿಸಿದವು. ‖ ೨೭—೩೩ ‖ ಆಮೇಲೆ ನಾನು ಬಹು ವೇಗವಾಗಿ ಆಕಾಶಕ್ಕೆ ಹಾರಿ ಲಂಕಾನಗರದ ಮಾರ್ಗವಾಗಿ ಹೋಗುತ್ತಿದ್ದೆನು. ಹೀಗೆ ಹೋಗುತ್ತಿರಲು ಯಾವುದೋ ಒಂದು ಜಂತುವು ನನ್ನ ಛಾಯೆಯನ್ನು ಹಿಡಿಯಿತು.

ಮೇಽಪಹೃತಾಗತಿಃ||೩೫||ತತೋ ಮೇ ಬುದ್ಧಿರುತ್ಪನ್ನಾ "ಕಿನ್ನಾಮ ಗಗನೇ ಮಮ | ಈದೃಶೋ ವಿಘ್ನ ಉತ್ಪನ್ನೋ ರೂಪಂ ಯತ್ರ ನದೃಶ್ಯತೇ" ||೩೬|| ಅಧೋಭಾಗೇನ ಮೇ ದೃಷ್ಟಿಶ್ಶೋಚತಾ ಪಾತಿತಾ ಮಯಾ | ತತೋಽದ್ರಾಕ್ಷಮಹಂ ಭೀಮಾಂ ರಾಕ್ಷಸೀಂ ಸಲಿಲೇಶಯಾಂ || ೩೭ || ಪ್ರಹಸ್ಯಚ ಮಹಾನಾದಮುಕ್ತೋಽಹಂ ಭೀಮಯಾ ತಯಾ | ಅವಸ್ಥಿತಮಸಂಭ್ರಾಂತಮಿದಂ ವಾಕ್ಯಮಶೋಭನಂ || ೩೮ || "ಕ್ವಾಸಿ ಗಂತಾ ಮಹಾಕಾಯ! ಕ್ಷುಧಿತಾಯಾ ಮಮೇಪ್ಸಿತಃ? | ಭಕ್ಷಃ ಪ್ರೀಣಯ ಮೇ ದೇಹಂ ಚಿರಮಾಹಾರವರ್ಜಿತಂ" ||೩೯|| "ಬಾಢ" ಮಿತ್ಯೇವ ತಾಂ ವಾಣೀಂ

ಮೇ - ನನ್ನ, ಗತಿಃ - ಗಮನವು, ಅಪಹೃತಾ - ಅಪಹರಿಸಲ್ಪಟ್ಟಿತೋ, ತತ್ - ಅಂತಹ, ಕಿಂಚಿದಪಿ - ಯಾವ ವಸ್ತುವನ್ನೂ, ತತ್ರ - ಆ ಸ್ಥಳದಲ್ಲಿ, ನಪಶ್ಯಾಮಿ - ನೋಡಲಿಲ್ಲ. ||೩೫|| ತತಃ- ಅನಂತರದಲ್ಲಿ, ಮಮ - ನನ್ನ, ಗಮನೇ - ಪ್ರಯಾಣದಲ್ಲಿ, ಕಿಂನಾಮ - ಏನು ಪ್ರಯೋಜನವು, ಯತ್ರ - ಯಾವ ಪ್ರಯಾಣದಲ್ಲಿ, ಈದೃಶೋವಿಘ್ನಃ - ಇಂಥ ಅಂತರಾಯವು, ಉತ್ಪನ್ನಃ ಹುಟ್ಟಿತೋ, ರೂಪಂ - ಆಕಾರವು, ನದೃಶ್ಯತೇ - ಕಾಣಲ್ಪಡುವದಿಲ್ಲವೋ, ಇತಿ - ಇಂತೆಂದು, ಮೇ - ನನಗೆ, ಬುದ್ಧಿಃ - ಮತಿಯು, ಉತ್ಪನ್ನಾ - ಹುಟ್ಟಿತು. ||೩೬|| ಮೇ - ನನ್ನ, ದೃಷ್ಟಿಃ - ದೃಷ್ಟಿಯು, ಶೋಚತಾ- ದುಃಖಿಸುತ್ತಿರುವ, ಮಯಾ - ನನ್ನಿಂದ, ಅಧೋಭಾಗೇನ - ಕೆಳಗಡೆ, ಪಾತಿತಾ - ಬೀಳಿಸಲ್ಪಟ್ಟಿತು, ತತಃ - ಬಳಿಕ, ಅಹಂ - ನಾನು, ಸಲಿಲೇಶಯಾಂ - ಸಮುದ್ರದ ನೀರಿನಲ್ಲಿ ಮಲಗಿರುವ, ಭೀಮಾಂ - ಭಯಂಕರಳಾದ, ರಾಕ್ಷಸೀಂ - ರಕ್ಕಸಿಯನ್ನು, ಅದ್ರಾಕ್ಷಂ - ಕಂಡೆನು. || ೩೭ || ಭೀಮಯಾ - ಭಯಂಕರಳಾದ, ತಯಾ - ಆ ರಕ್ಕಸಿಯಿಂದ, ಮಹಾನಾದಂ - ಮಹಾ ಧ್ವನಿಯುಳ್ಳಂತೆ, ಪ್ರಹಸ್ಯ- ನಕ್ಕು, ಅಸಂಭ್ರಾಂತಂ-ನಿರ್ಭೀಕವಾಗಿ, ಅವಸ್ಥಿತಂ-ದೃಢಭೂತವಾದ್ದನ್ನು ಕುರಿತು, ಅಶೋಭನಂ- ಅಮಂಗಳಕರವಾದ, ಇದಂವಾಕ್ಯಂ - ಈ ಮಾತು, ಅಹಂ - ನಾನು, ಉಕ್ತಃ - ಹೇಳಲ್ಪಟ್ಟೆನು. ||೩೮|| ಹೇ ಮಹಾಕಾಯ - ಎಲೈ ದೀರ್ಘಾಕಾಯನೇ, ಕ್ವಗಂತಾಸಿ - ಎಲ್ಲಿಗೆ ಹೋಗುವೆ, ಈಪ್ಸಿತಃ - ಇಷ್ಟವಾದ, ಭಕ್ಷಃ - ಭಕ್ಷ್ಯರೂಪವಾದ ನೀನು, ಚಿರಂ - ಬಹುಕಾಲದಿಂದ, ಆಹಾ....ತಂ - ಆಹಾರ ದಿಂದ ಬಿಡಲ್ಪಟ್ಟ, ಮೇದೇಹಂ - ನನ್ನ ಶರೀರವನ್ನು, ಪ್ರೀಣಯ - ತೃಪ್ತಿಗೊಳಿಸು. || ೩೯ || ತತಃ -

---

ಅದರಿಂದ ನನ್ನ ವೇಗವು ಕುಗ್ಗಿಹೋಯಿತು. ಅಲ್ಲಲ್ಲಿಯೂ ನನ್ನ ನೆರಳನ್ನಪಹರಿಸಿದ ಆ ಜಂತುವು ಕಣ್ಣಿಗೆ ಬೀಳಲಿಲ್ಲವು. ಆಗ ನಾನು ಎಲ್ಲಿ ನೋಡಿದರೂ ಏನೂ ಕಾಣದಿರಲು, ಆಕಾಶದಲ್ಲಿ ಹೋಗುತ್ತಿರುವ ನನಗಿಂತಹ ವಿಘ್ನವುಂಟಾಗಲು ಕಾರಣವೇನೆಂದು ಮಹಾ ಚಿಂತಾಕ್ರಾಂತನಾಗಿ ಕೆಳಗಡೆ ನೋಡಿದೆನು. ಆಗಲಾ ಸಮುದ್ರಜಲದಲ್ಲಿ ಮಹಾ ಭಯಂಕರಾಕಾರೆಯಾದ ಒಬ್ಬ ರಾಕ್ಷಸಸ್ತ್ರೀಯು ಮಲಗಿರುವುದನ್ನು ನೋಡಿದೆನು. ಮಹಾ ಭೀಕರೆಯಾದ ಆ ರಾಕ್ಷಸಿಯು ನನ್ನನ್ನು ನೋಡಿ, ಬಹು ಭಯಂಕರ ಧ್ವನಿಯಿಂದ ಪಕಪಕನೆ ನಕ್ಕು, ಏನೊಂದೂ ಹೆದರಿಕೆಯಿಲ್ಲದೆ ಅಮಂಗಳಕರವಾಗಿ, "ಎಲೈ ಮಹಾ ಕಾಯನೇ! ಎಲ್ಲಿಗೆ ಹೋಗುವೆ? ನಾನು ಬಹಳವಾಗಿ ಹಸಿದಿರುವೆನು. ನೀನೀಗ ನನಗೆ ಆಹಾರವಾಗಿ ನನಗೆ ಸಂತೋಷವನ್ನುಂಟುಮಾಡಬೇಕು" ಎಂದು ಹೇಳಿದಳು. || ೩೪–೩೯ || ಆಗ ನಾನು ; ಒಳ್ಳೆಯದೆಂದು ಒಪ್ಪಿಕೊಂಡು, ಆ ರಾಕ್ಷಸಿಯ ಬಾಯಿಗಿಂತಲೂ ಅತ್ಯಧಿಕವಾಗಿ ದೇಹವನ್ನು

ಪ್ರತ್ಯಗೃಹ್ಣಾಮಹಂ ತತಃ । ಆಸ್ಯ ಪ್ರಮಾಣಾದಧಿಕಂ ತಸ್ಯಾಃ ಕಾಯಮಪೂರಯಂ ॥೪೦॥ ತಸ್ಯಾಶ್ಚಾಸ್ಯಂ ಮಹದ್ಭೀಮಂ ವರ್ಧತೇ ಮಮ ಭಕ್ಷಣೇ । ನಚ ಮಾಂ ಸಾತು ಬುಬುಧೇ ಮಮ ವಾ ನಿಕೃತಂ ಕೃತಂ ॥ ೪೧ ॥ ತತೋಽಹಂ ವಿಪುಲಂ ರೂಪಂ ಸಂಕ್ಷಿಪ್ಯ ನಿಮಿಷಾಂತರಾತ್ । ತಸ್ಯಾ ಹೃದಯಮಾದಾಯ ಪ್ರಪತಾಮಿ ನಭಸ್ಸ್ಥಲಂ ॥ ೪೨ ॥ ಸಾವಿಸೃಷ್ಟಭುಜಾ ಭೀಮಾ ಪಪಾತ ಲವಣಾಂಭಸಿ । ಮಯಾ ಪರ್ವತ ಸಂಕಾಶಾ ನಿಕೃತ್ತಹೃದಯಾ ಸತೀ ॥ ೪೩ ॥ ಶೃಣೋಮಿ ಖಗತಾನಾಂಚ ಸಿದ್ಧಾನಾಂ ಚಾರಣೈಸಹ । " ರಾಕ್ಷಸೀ ಸಿಂಹಿಕಾ ಭೀಮಾ ಕ್ಷಿಪ್ರಂ ಹನುಮತಾ ಹತಾ " ॥೪೪॥

ಬಳಿಕ, ತಾಂವಾಣೀಂ - ಆ ಮಾತನ್ನು, ಬಾಢಮಿತ್ಯೇವ - ಹಾಗೆ ಆಗಲಿ ಎಂದು, ಪ್ರತ್ಯಗೃಹ್ಣಾಂ - ಅಂಗೀಕರಿಸಿದೆನು, ತಸ್ಯಾಃ - ಆ ಸಿಂಹಿಕೆಯ, ಆಸ್ಯ....ತ್ - ಮುಖಪರಿಮಿತಿಗಿಂತಲು, ಕಾಯಂ - ಶರೀರವನ್ನು, ಅಧಿಕಂ - ಹೆಚ್ಚಾಗಿರುವಂತೆ, ಅಪೂರಯಂ - ತುಂಬಿಸಿದೆನು, ಮಹತ್ - ದೊಡ್ಡದಾದ, ಭೀಮಂ - ಭಯಂಕರವಾದ, ತಸ್ಯಾಃ - ಆ ಸಿಂಹಿಕೆಯ ಆಸ್ಯಂಚ - ಮುಖವೂ, ಮಮ - ನನ್ನ, ಭಕ್ಷಣೇ - ಭಕ್ಷಿಸುವ ವಿಷಯದಲ್ಲಿ, ವರ್ಧತೇ - ಬೆಳೆಯಿತು. ॥೪೦॥ ಸಾತು - ಆ ಸಿಂಹಿಕೆಯಾದರೆ, ಮಾಂ - ನನ್ನನ್ನು, ಮಮ - ನನ್ನ ಸಂಬಂಧಿಯಾದ, ಕೃತಂ - ಮಾಡಲ್ಪಟ್ಟ, ವಿಕೃತಂವಾ - ವಿಕಾರ ರೂಪವನ್ನಾದರೂ, ನಬುಬುಧೇ - ಅರಿಯದೇ ಇದ್ದಳು. ॥ ೪೧ ॥ ತತಃ - ಬಳಿಕ, ಅಹಂ - ನಾನು, ವಿಪುಲಂ - ವಿಸ್ತಾರವಾದ, ರೂಪಂ - ರೂಪವನ್ನು, ನಿಮಿ....ತ್ - ಕ್ಷಣಮಾತ್ರದಲ್ಲ, ಸಂಕ್ಷಿಪ್ಯ - ತಗ್ಗಿಸಿ, ತಸ್ಯಾಃ - ಸಿಂಹಿಕೆಯ, ಹೃದಯಂ - ಎದೆಯನ್ನು, ಆದಾಯ - ಸೀಳಿ, ನಭಸ್ಥಲಂ - ಅಂತರಿಕ್ಷ ಪ್ರದೇಶವನ್ನು ಕುರಿತು, ಪ್ರಪತಾಮಿ - ಹಾರಿದೆನು. ॥೪೨॥ ಮಯಾ - ನನ್ನಿಂದ, ನಿಕೃತ್ತಹೃದಯಾ - ಸೀಳಲ್ಪಟ್ಟ ಎದೆಯುಳ್ಳ, ಪರ್ವ....ಶಾ-ಗಿರಿಸದೃಶಳಾದ, ವಿಸೃಷ್ಟಭುಜಾ-ಇಳಿಬಿದ್ದ ತೋಳುಗಳುಳ್ಳ, ಭೀಮಾ - ಭಯಂಕರಳಾದ, ಅಸತೀ - ದುಷ್ಟಳಾದ, ಸಾ - ಆ ಸಿಂಹಿಕೆಯು, ಲವಣಾಂಭಸಿ - ಲವಣೋದಕದಲ್ಲಿ, ಪಪಾತ - ಬಿದ್ದಳು. ॥೪೩॥ ಬೀಮಾ - ಭಯಂಕರಳಾದ, ಸಿಂಹಿಕಾ - ಸಿಂಹಿಕೆಯೆಂಬ, ರಾಕ್ಷಸೀ - ರಕ್ಕಸಿಯು, ಹನೂಮತಾ - ಆಂಜನೇಯನಿಂದ, ಹತಾ - ಸಂಹರಿಸಲ್ಪಟ್ಟಳು, ಇತಿ - ಹೀಗೆಂದು, ಚಾರಣೈಸ್ಸಹ - ಚಾರಣರೊಡನೆ, ಖಗತಾಂ - ಗಗನಗಾಮಿಗಳಾದ, ಸಿದ್ಧಾನಾಂ - ಸಿದ್ದರ,

ಬೆಳಸಿಕೊಂಡೆನು. ಇದನ್ನು ನೋಡಿದೊಡನೆಯೇ ಆ ರಾಕ್ಷಸಿಯೂ ನನ್ನನ್ನು ನುಂಗಲೋಸುಗ ತನ್ನ ಬಾಯಿಯನ್ನು ಹೆಚ್ಚು ಹೆಚ್ಚಾಗಿ ತೆರೆಯುತ್ತ ಬಂದಳು. ಆದರೆ ಅವಳು ನಾನು ಕಾಮರೂಪನೆಂದಾಗಲಿ, ವಿಕೃತಾಕಾರವಾದ ದೇಹವನ್ನು ಧರಿಸಿರುವೆನೆಂದಾಗಲಿ ತಿಳಿದುಕೊಳ್ಳಲಿಲ್ಲವು. ಆಮೇಲೆ ನಾನು ಅಷ್ಟು ದೊಡ್ಡದಾಗಿದ್ದ ನನ್ನ ದೇಹವನ್ನು ಅಷ್ಟೂ ಅಷ್ಟು ಚಿಕ್ಕದಾಗಿಮಾಡಿಕೊಂಡು ಆ ರಾಕ್ಷಸಿಯ ಉದರವನ್ನು ಸೇರಿ ಮಹದಾಕಾರವನ್ನು ತಾಳಿ ಅವಳ ವಕ್ಷಸ್ಥಳವನ್ನು ಭೇದಿಸಿಕೊಂಡು ಹೊರಗೆ ಬಂದೆನು. ॥ ೪೦–೪೨ ॥ ಹೀಗೆ ಪರ್ವತ ಸಮಾನಗಳಾದವಳೂ, ಮಹಾ ಭಯಂಕರಾಕಾರವುಳ್ಳವಳೂ ಆದ ಆ ರಾಕ್ಷಸಿಯ ಗುಂಡಿಗೆಯನ್ನು ಭೇದಿಸಿಕೊಂಡು ನಾನು ಹೊರಗೆ ಬರುತ್ತಲೇ ಅವಳು ಮೂರ್ಛಿತಳಾಗಿ ಕೈಕಾಲುಗಳನ್ನು ಜೋಲುಬಿಟ್ಟು ಸಮುದ್ರದಲ್ಲಿ ಬಿದ್ದಳು. ಆ ಸಮಯದಲ್ಲಿ ಸಿದ್ಧಚಾರಣರಾದಿಯಾಗಿ ಸಮಸ್ತ ಭೂತಗಳೂ, " ಆಹಾ ! ಆಂಜನೇಯನು ಮಹಾ ಭಯಂಕರ ಪರಾಕ್ರಮಗಳುಳ್ಳ ಈ ಸಿಂಹಿಕೆಯನ್ನು ನಿಮಿಷಮಾತ್ರದಲ್ಲಿ ಸಂಹರಿಸಿದನಲ್ಲವೆ !" ಎಂದು ಹೇಳಿಕೊಳ್ಳು

ತಾಂ ಹತ್ವಾ ಪುನರೇವಾಹಂ ಕೃತ್ಯಮಾತ್ಯಯಿಕಂ ಸ್ಮರ್ನ್ । ಗತ್ವಾ ಚಾಽಹಂ ಮಹಾಧ್ವಾನಂ ಪಶ್ಯಾಮಿ ನಗಮಂಡಿತಂ । ದಕ್ಷಿಣಂ ತೀರಮುದಧೇರ್ಲಂಕಾ ಯತ್ರಚ ಸಾಪುರೀ ॥ ೪೫ ॥ ಅಸ್ತಂದಿನಕರೇ ಯಾತೇ ರಕ್ಷಸಾಂ ನಿಲಯಂ ಪುರಂ । ಪ್ರವಿಷ್ಟೋಽಹಮವಿಜ್ಞಾತೋ ರಕ್ಷೋಭಿರ್ಭೀಮವಿಕ್ರಮೈಃ ॥ ೪೬ ॥ ತತ್ರ ಪ್ರವಿಶತಶ್ಚಾಪಿ ಕಲ್ಪಾಂತಘನಸನ್ನಿಭಾ । ಅಟ್ಟಹಾಸಂ ವಿಮುಂಚಂತೀ ನಾರೀ ಕಾಪ್ಯುತ್ಥಿತಾ ಪುರಃ ॥ ೪೭ ॥ ಜಿಘಾಂಸಂತೀಂ ತತಸ್ತಾಂತು ಜ್ವಲದಗ್ನಿಶಿರೋರುಹಾಂ । ಸವ್ಯಮುಷ್ಟಿ

(ವಚಃ - ಮಾತನ್ನು), ಶ್ರುಣೋಮಿ ಕೇಳಿದೆನು. ॥ ೪೪ ॥ ಅಹಂ - ನಾನು, ತಾಂಪುನಃ - ಆ ಕ್ರೂರ ಜಂತುವನ್ನಾದರೆ, ಹತ್ವಾ-ಹೊಡದು, ಆತ್ಯಯಿಕಂ-ಪ್ರಾಣಾಂತಕವಾದ, ಕೃತ್ಯಮೇವ-ಕೆಲಸವನ್ನೇ, ಸ್ಮರ್ನ್ - ಸ್ಮರಿಸುತ್ತ, ಮಹಾಧ್ವಾನಂ - ಬಹುದೂರದ ದಾರಿಯನ್ನು, ಗತ್ವಾ - ಹೋಗಿ, ಯತ್ರ - ಯಾವ ದಕ್ಷಿಣತೀರದಲ್ಲಿ, ಸಾಲಂಕಾಪುರೀಂ - ಲಂಕಾಪಟ್ಟಣವು, ಅಸ್ತಿ - ಇದೆಯೋ, ನಗಮಂಡಿತಂ- ವೃಕ್ಷಗಳಿಂದ ಅಲಂಕೃತವಾದ, ಉದಧೇಃ - ಕಡಲಿನ, ತದ್ದಕ್ಷಿಣಂತೀರಂ - ಅ ದಕ್ಷಿಣತೀರವನ್ನು, ಪಶ್ಯಾಮಿ - ಕಂಡೆನು. ॥ ೪೫ ॥ ದಿನಕರೇ - ಸೂರ್ಯನು, ಅಸ್ತಂಯಾತೇ - ಅಸ್ತವಾಗುತ್ತಿರಲು, ಅಹಂ - ನಾನು, ರಕ್ಷಸಾಂ - ರಕ್ಕಸರಿಗೆ, ನಿಲಯಂ - ಸ್ಥಾನವಾದ, ಪುರಂ - ಪಟ್ಟಣವನ್ನು, ಭೀಮವಿಕ್ರಮೈಃ - ಭಯಂಕರ ಪರಾಕ್ರಮವುಳ್ಳ, ರಕ್ಷೋಭಿಃ - ರಕ್ಕಸರಿಂದ, ಅವಿಜ್ಞಾತಃ - ತಿಳಿಯಲ್ಪಡದಿರುವನಾಗಿ, ಪ್ರವಿಷ್ಟಃ - ಪ್ರವೇಶಿಸಿದೆನು. ॥ ೪೬ ॥ ತತ್ರ - ಆ ಲಂಕಾಪಟ್ಟಣದಲ್ಲಿ, ಪ್ರವಿಶತಃ - ಹೋಗುತ್ತಿರುವ ನನ್ನ, ಪುರಃ - ಮುಂದುಗಡೆ, ಕಲ್ಪಾಂ....ಭಾ - ಪ್ರಳಯಕಾಲದ ಮೇಘಕ್ಕೆ ಸಮಾನಳಾದ, ಕಾಪಿನಾರೀ - ಒಬ್ಬಾನೊಬ್ಬ ಹೆಂಗಸು, ಅಟ್ಟಹಾಸಂ - ಸಿಂಹನಾದವನ್ನು, ವಿಮುಂಚಂತೀ - ಬಿಡುತ್ತ, ಉತ್ಥಿತಾ-ಮೇಲಕ್ಕೆದ್ದಳು. ॥ ೪೭ ॥ ತತಃ-ಬಳಿಕ, ಜಿಘಾಂಸಂತೀಂ-ಹೊಡೆಯಲಿಚ್ಛೆಯುಳ್ಳ, ಜ್ವಲ....ಹಾಂ - ಉರಿಯುತ್ತಿರುವ ಅಗ್ನಿಸದೃಶವಾದ ತಲೆಗೂದಲುಗಳುಳ್ಳ, ಸುಭೈರವಾಂ - ಅತಿ ಭಯಂಕರಳಾದ, ತಾಂ-ಆ ಲಂಕಾಧಿದೇವತೆಯನ್ನು, ಸವ್ಯ....ಣ-ಎಡಗೈಯ ಮುಷ್ಟಿಪ್ರಹಾರದಿಂದ, ಪರಾಜಿತ್ಯ - ಸೋಲಿಸಿ, ಪ್ರದೋಷಕಾಲೇ - ಸಂಜೆಯಸಮಯದಲ್ಲಿ, ಪ್ರವಿಶಂ - ಹೊಕ್ಕೆನು. ॥ ೪೮ ॥

ತ್ತಿದ್ದುದನ್ನು ಕೇಳಿದ ನಾನು ಕೂಡಲೇ ಮಹಾ ವೇಗದಿಂದ ಆಕಾಶಕ್ಕೆ ಹಾರಿ ಹೋಗುತ್ತ, " ಮಹದ್ವಿಪತ್ತನ್ನುಂಟುಮಾಡುತ್ತಿದ್ದ ಈ ಸಿಂಹಿಕೆಯನ್ನು ಕೊಂದು ಅಸಾಧ್ಯವಾದ ಕಾರ್ಯವನ್ನು ಮಾಡಿದನಲ್ಲವೆ " ಎಂದು ನನ್ನಲ್ಲಿ ನಾನೇ ಉಬ್ಬುತ್ತ ಮುಂಬರಿದು, ಸಮಸ್ತ ವೃಕ್ಷಗಳಿಂದೊಪ್ಪುತ್ತಿರುವ ಲಂಕಾನಗರಕ್ಕೆ ವಾಸಸ್ಥಾನವಾದ ಸಮುದ್ರದ ದಕ್ಷಿಣತೀರವನ್ನು ನೋಡಿದೆನು. ॥೪೪–೪೫॥ ಹೀಗೆ ದಕ್ಷಿಣತೀರದಲ್ಲಿಳಿದು ಹೊತ್ತುಮುಳುಗುವವರೆಗೂ ಅಲ್ಲಿಯೇ ಇದ್ದು, ಸೂರ್ಯಾಸ್ತಮಾನವಾದಮೇಲೆ ಮಹಾ ಭಯಂಕರರಾದ ರಾಕ್ಷಸರಿಗಾರಿಗೂ ತಿಳಿಯದಂತೆ ರಾಕ್ಷಸಭೂಯಿಷ್ಠವಾದ ಆ ಲಂಕಾನಗರವನ್ನು ಪ್ರವೇಶಿಸುತ್ತಿರಲು, ಪ್ರಳಯಕಾಲದ ಮುಗಿಲಿನಂತಹ ಆಕಾರವುಳ್ಳ ಒಬ್ಬ ರಾಕ್ಷಸಾಂಗನೆಯು ನನ್ನನ್ನು ಸಂಹರಿಸಬಯಿಸಿ ನನ್ನೆದುರು ನಿಂತಳು. ಉರಿಯುತ್ತಿರುವ ಕೆಂಡದಂತಿರುವ ತಲೆಗೂದಲುಗಳುಳ್ಳವಳಾಗಿಯೂ, ಮಹಾ ಭಯಂಕರವಾದ ಆಕಾರವುಳ್ಳವಳಾಗಿಯೂ ಇದ್ದ ಆ ರಾಕ್ಷಸಿಯನ್ನು ನಾನು ನನ್ನ ಎಡಗೈಯಿಂದ ಗುದ್ದಿ, ಒಂದೇ ಏಟಿಗೆ ಅವಳನ್ನು ಜಯಿಸಿ, ಪ್ರದೋಷಕಾಲದಲ್ಲಿಯೇ ಲಂಕಾನಗರವನ್ನು ಪ್ರವೇಶಿಸುತ್ತಿದ್ದೆನು. ಆಗಲಾ ಸ್ತ್ರೀಯು ನನ್ನನ್ನು ನೋಡಿ ಭಯದಿಂದ ಒಣಕುತ್ತ

ಪ್ರಹಾರೇಣ ಪರಾಜಿತ್ಯ ಸುಭೈರವಾಂ । ಪ್ರದೋಷಕಾಲೇ ಪ್ರವಿಶಂ ಭೀತಯಾಽಹಂ ತಯೋದಿತಃ ॥ ೪೯ ॥ "ಅಹಂ ಲಂಕಾಪುರೀ ವೀರ! ನಿರ್ಜಿತಾ ವಿಕ್ರಮೇಣ ತೇ । ಯಸ್ಮಾತ್ತಸ್ಮಾದ್ವಿಜೇತಾಸಿ ಸರ್ವರಕ್ಷಾಂಸ್ಯಶೇಷತಃ ॥ ೫೦ ॥ ತತ್ರಾಽಹಂ ಸರ್ವ ರಾತ್ರಂತು ವಿಚಿನ್ವನ್ ಜನಕಾತ್ಮಜಾಂ । ರಾವಣಾಂತಃಪುರಗತೋ ನಚಾಽಪಶ್ಯಂ ಸುಮಧ್ಯಮಾಂ ॥ ೫೧ ॥ ತತಸ್ಸೀತಾಮಪಶ್ಯಂಸ್ತು ರಾವಣಸ್ಯ ನಿವೇಶನೇ । ಶೋಕ ಸಾಗರಮಾಸಾದ್ಯ ನಪಾರಮುಪಲಕ್ಷಯೇ ॥ ೫೨ ॥ ಶೋಚತಾಚ ಮಯಾ ದೃಷ್ಟಂ ಪ್ರಾಕಾರೇಣ ಸಮಾವೃತಂ । ಕಾಂಚನೇನ ವಿಕೃಷ್ಟೇನ ಗೃಹೋಪವನಮುತ್ತಮಂ ।

ಹೇ ವೀರ - ಎಲೈ ಶೂರನೆ, ಅಹಂ - ನಾನು, ಲಂಕಾಪುರೀ - ಲಂಕಾಪಟ್ಟಣದ ಅಭಿಮಾನದೇವತೆಯು, ತೇ - ನಿನ್ನ, ವಿಕ್ರಮೇಣ - ಸಾಮರ್ಥ್ಯದಿಂದ, ಯಸ್ಮಾತ್ - ಯಾವಕಾರಣ, ನಿರ್ಜಿತಾ - ಪರಾಜಿತ ಳಾದೆನೋ, ತಸ್ಮಾತ್ - ಆ ಕಾರಣದಿಂದ, ಸರ್ವರಕ್ಷಾಂಸಿ - ರಕ್ಕಸರನ್ನೆಲ್ಲ, ಅಶೇಷತಃ - ನಿಶ್ಶೇಷ ವಾಗಿ, ವಿಜೇತಾಸಿ - ಜಯಿಸುವವನಾಗುತ್ತೀ, ಇತಿ - ಇಂತೆಂದು, ಭೀತಯಾ - ಅಂಜುತ್ತಿರುವ, ತಯಾ - ಆ ಲಂಕಿಣಿಯಿಂದ, ಅಹಂ - ನಾನು, ಉದಿತಃ - ಹೇಳಲ್ಪಟ್ಟೆನು. ॥ ೫೦ ॥ ತತ್ರ - ಆ ಲಂಕಾಪಟ್ಟಣದಲ್ಲಿ, ಅಹಂ - ನಾನು, ಸರ್ವರಾತ್ರಂತು - ರಾತ್ರಿಯಲ್ಲಾ, ಸುಮಧ್ಯಮಾಂ - ಒಳ್ಳೇ ನಡುವುಳ್ಳ ಸೀತಾದೇವಿಯನ್ನು, ವಿಚಿನ್ವನ್ - ಹುಡುಕುತ್ತ, ರಾವ....ತಃ - ರಾವಣಾಸುರನ ಅಂತಃಪುರ ವನ್ನು ಹೊಂದಿದವನಾಗಿ, ಜನಕಾತ್ಮಜಾಂ - ಜನಕಪುತ್ರಿಯನ್ನು, ನಾಪಶ್ಯಂ - ಕಾಣಲಿಲ್ಲವು. ॥೫೧॥ ತತಃ ಬಳಿಕ, ರಾವಣಸ್ಯ - ರಾವಣನ, ನಿವೇಶನೇ - ಮನೆಯಲ್ಲಿ, ಸೀತಾಂ - ಸೀತಾದೇವಿಯನ್ನು, ಅಪಶ್ಯನ್ - ನೋಡದೆ, ಶೋಕಸಾಗರಂ - ದುಃಖ ಸಮುದ್ರವನ್ನು, ಅಸಾದ್ಯ - ಹೊಂದಿ, ಪಾರಂ - ತೀರವನ್ನು, ನೋಪಲಕ್ಷಯೇ - ಕಾಣದಾದೆನು. ॥೫೨॥ ಶೋಚತಾ - ದುಃಖಿಸುತ್ತಿರುವ, ಮಯಾ - ನನ್ನಿಂದ, ವಿಕೃಷ್ಟೇನ - ಸೆಳೆಯಲ್ಪಡುವಂತಿರುವ, ಕಾಂಚನೇನ - ಸ್ವರ್ಣಮಯವಾದ, ಪ್ರಾಕಾರೇಣ - ಕೋಟೆಯಿಂದ, ಸಮಾವೃತಂ - ಸುತ್ತುವರೆದ, ಉತ್ತಮಂ - ಶ್ರೇಷ್ಠವಾದ, ಗೃಹೋಪವನಂ - ಗೃಹೋದ್ಯಾನವು, ದೃಷ್ಟಂ - ನೋಡಲ್ಪಟ್ಟಿತು, ಸಃ - ಆ ನಾನು, ಪ್ರಾಕಾರಂ - ಕೋಟೆಯನ್ನು, ಅವಪ್ಲುತ್ಯ - ದಾಟಿ, ಬಹುಪಾದಪಂ - ಅನೇಕ ವೃಕ್ಷಗಳುಳ್ಳ ಉದ್ಯಾನವನ್ನು, ಪ್ರಾಕಾರಂ - ಕೋಟೆ

ನನ್ನನ್ನು ಕುರಿತು, "ಎಲೈ ಮಹಾ ಬಲಪರಾಕ್ರಮಶಾಲಿಯೇ! ನಾನು ಲಂಕಾಭಿಮಾನ ದೇವತೆಯು. ನೀನು ವಿಕ್ರಮಿಸಿ ನನ್ನನ್ನೇ ಜಯಿಸಿದೆಯಾದುದರಿಂದ, ಇನ್ನು ನೀನು ಈ ಪಟ್ಟಣದಲ್ಲಿರುವ ಸಮಸ್ತ ರಾಕ್ಷಸರನ್ನೂ ಜಯಿಸುವುದರಲ್ಲಿ ಸಂದೇಹವಿಲ್ಲವು." ಎಂದು ಹೇಳಿದಳು. ॥ ೪೬–೫೦ ॥ ಲಂಕಿಣಿಯು ಹೀಗೆ ನುಡಿದ ತರುವಾಯ ನಾನು ಲಂಕಾನಗರ ವನ್ನು ಪ್ರವೇಶಿಸಿದೆನು. ಆ ರಾತ್ರಿಯೆಲ್ಲಾ ನಾನು ಶ್ರೀರಾಮಪತ್ನಿಯಾದ ಸೀತಾದೇವಿಯನ್ನು ಆ ಲಂಕಾಪಟ್ಟಣದಲ್ಲೆಲ್ಲಾ ಹುಡುಕಿದೆನು. ರಾವಣಾಸುರನ ಅಂತಃಪುರವನ್ನು ಪ್ರವೇಶಿಸಿ ಅಲ್ಲಿಯೂ ಹುಡುಕಿದೆನು; ಕಾಣಲಿಲ್ಲ. ಹೀಗೆ ರಾವಣಾಸುರನ ಅಂತಃಪುರದಲ್ಲಿ ಹುಡು ಕಿಯೂ ಸೀತಾದೇವಿಯನ್ನು ಕಾಣದಿರಲು, ನಾನು ದುಃಖಸಮುದ್ರದಲ್ಲಿ ಮುಳುಗಿ ದಡವನ್ನೇ ಕಾಣದವನಾದೆನು. ಹೀಗೆಯೇ ದುಃಖಿಸುತ್ತ ಕುಳಿತು ಆಲೋಚಿಸುತ್ತಿರಲು ಬಹು ರಮ ಣೀಯವೂ, ವಿಶಾಲವೂ, ಸುವರ್ಣಪ್ರಾಕಾರರಂಜಿತವೂ ಆದ ಒಂದು ದಿವ್ಯೋಪವನವು ನನ್ನ ಕಣ್ಣಿಗೆ ಬಿದ್ದಿತು. ಕೂಡಲೇ ನಾನು ಆ ಉದ್ಯಾನದ ಪ್ರಾಕಾರವನ್ನು ಹಾರಿ ಕುಳಿತು

ಸಪ್ರಾಕಾರಮುಪಪ್ಲುತ್ಯ ಪಶ್ಯಾಮಿ ಬಹುಪಾದಪಂ ॥ ೫೩ ॥ ಅಶೋಕವನಿಕಾಮಧ್ಯೇ ಶಿಂಶುಪಾಪಾದಪೋ ಮಹಾನ್ । ತಮಾರುಹ್ಯಚ ಪಶ್ಯಾಮಿ ಕಾಂಚನಂ ಕದಳೀವನಂ ॥ ೫೪ ॥ ಅದೂರೇ ಶಿಂಶುಪಾವೃಕ್ಷಾತ್ಪಶ್ಯಾಮಿ ವರವರ್ಣಿನೀಂ । ಶ್ಯಾಮಾಂ ಕಮಲಪತ್ರಾಕ್ಷೀಮುಪವಾಸಕೃಶಾನನಾಂ ॥ ೫೫ ॥ ತದೇಕವಾಸಸ್ಸಂವೀತಾಂ ರಜೋಧ್ವಸ್ತಶಿರೋರುಹಾಂ । ಶೋಕಸಂತಾಪದೀನಾಂಗೀಂ ಸೀತಾಂ ಭರ್ತೃಹಿತೇ ಸ್ಥಿತಾಂ ॥೫೬॥ ರಾಕ್ಷಸೀಭಿರ್ವಿರೂಪಾಭಿಃ ಕ್ರೂರಾಭಿರಭಿಸಂವೃತಾಂ । ಮಾಂಸಶೋಣಿತಭಕ್ಷ್ಯಾಭಿ

ಯನ್ನು, ಪಶ್ಯಾಮಿ - ಕಂಡೆನು. ॥ ೫೩ ॥ ಅಶೋ....ಧ್ಯೇ - ಅಶೋಕವನ ಮಧ್ಯದಲ್ಲಿ, ಮಹಾನ್ - ದೊಡ್ಡದಾದ, ಶಿಂಶು....ಪಃ - ಶಿಂಶುಪಾವೃಕ್ಷವು, (ಅಸ್ತಿ - ಇವೆ), ತಂ - ಅದನ್ನು, ಆರುಹ್ಯ - ಏರಿ, ಕಾಂಚನಂ - ಸುವರ್ಣಮಯವಾದ, ಕದಳೀವನಂ - ಬಾಳೆಯ ತೋಟವನ್ನೂ, ಪಶ್ಯಾಮಿ - ಕಂಡೆನು. ॥ ೫೪ ॥ ಶಿಂಶು....ತ್ - ಶಿಂಶುಪಾವೃಕ್ಷದಿಂದ, ಅದೂರೇ - ಸಮೀಪದಲ್ಲಿ, ವರವರ್ಣಿನೀಂ - ವರವರ್ಣಿನಿಯಾದ, ಶ್ಯಾಮಾಂ-ಯೌವನಮಧ್ಯಸ್ಥಳಾದ, ಕಮ....ಕ್ಷೀಂ - ತಾವರೆಯ ಎಸಳಿನಂತೆ ನೇತ್ರಗಳುಳ್ಳ, ಉಪ....ನಾಂ - ಅನಶನವ್ರತದಿಂದ ಬತ್ತಿದ ಮುಖವುಳ್ಳ, ತದೆ...ತಾಂ - ಅಪಹಾರ ಕಾಲದಲ್ಲಿ ಉಟ್ಟಿದ್ದ ಒಂದೇ ವಸ್ತ್ರದಿಂದಲೇ ಕೂಡಿದ, ರಜೋ....ಹಾಂ - ಧೂಳೀಧೂಸರವಾದ ಕೇಶಗಳುಳ್ಳ, ಶೋಕ....ಗೀಂ - ದುಃಖದಿಂದ ಹುಟ್ಟಿದ ಸಂಕಟದಿಂದ ಕುಗ್ಗಿಹೋದ ಅವಯುಳುಳ್ಳ, ಭರ್ತೃಹಿತೇ - ಪತಿಯ ಹಿತಚಿಂತನೆಯಲ್ಲಿ, ಸ್ಥಿತಾಂ - ಇರುತ್ತಿರುವ, ಮಾಂಸ....ಭಿಃ - ಮಾಂಸವನ್ನೂ, ರಕ್ತವನ್ನೂ ಭುಜಿಸುತ್ತಿರುವ, ವ್ಯಾಘ್ರೀಭಿಃ- ಹೆಣ್ಣುಹುಲಿಗಳಿಂದ, ಹರಿಣೀಮಿವ-ಚಿಗುರಿಯನ್ನಂತೆ, ವಿರೂಪಾಭಿಃ- ವಿಕಾರರೂಪಿಣಿಯರಾದ, ಕ್ರೂರಾಭಿಃ - ಉಗ್ರರಾದ, ರಾಕ್ಷಸೀಭಿಃ - ರಕ್ಕಸಿಯರಿಂದ, ಅಭಿಸಂವೃತಾಂ - ಸುತ್ತುವರೆಯಲ್ಪಟ್ಟ, ಸೀತಾಂ ಸೀತಾದೇವಿಯನ್ನು, ಪಶ್ಯಾಮಿ-ಕಂಡೆನು. ॥೫೫-೫೭॥ ರಾಕ್ಷಸೀಮಧ್ಯೇ-

---

ನೋಡಿದೆನು ; ಬಹು ಪಾದಪವಿರಾಜಿತವಾದ ಆ ಉದ್ಯಾನದಲ್ಲಿ ಒಂದು ದೊಡ್ಡ ಅಶೋಕವೃಕ್ಷವು ಕಾಣಿಸಿತು. ನಾನು ಆ ಅಶೋಕವೃಕ್ಷವನ್ನೇರಿ ಕುಳಿತು, ಅತ್ತಿತ್ತ ನೋಡಿ, ರಮಣೀಯವಾದ ಒಂದು ಕದಳೀವನವನ್ನೂ ಕಂಡೆನು. ॥ ೫೧–೫೪ ॥ ಆ ಬಳಿಕ ಆ ಶಿಂಶುಪಾವೃಕ್ಷದ ಸಮೀಪದಲ್ಲಿಯೇ, ವರವರ್ಣಿನಿಯೂ, ಯುವತೀಮಣಿಯೂ, ಕಮಲಪತ್ರಾಕ್ಷಿಯೂ ಆದ ಸೀತಾದೇವಿಯನ್ನು ಕಂಡೆನು. ಆಕೆಯು ಉಪವಾಸವ್ರತವನ್ನು ಮಾಡುತ್ತಿದ್ದುದರಿಂದ ಬಾಡಿದ ಮುಖವುಳ್ಳವಳಾಗಿದ್ದಳು ; ಏಕವಸ್ತ್ರಧಾರಿಣಿಯಾಗಿದ್ದಳು. ಅಪಹರಣಕಾಲದಲ್ಲುಟ್ಟಿದ್ದ ಆ ವಸ್ತ್ರವು ಈಗಲೂ ಆಕೆಯ ಮೈಮೇಲಿದ್ದುದರಿಂದ ಅದು ಬಹು ಮಲಿನವಾಗಿ ಹೋಗಿದ್ದಿತು. ಆಕೆಯ ತಲೆಗೂದಲು ಸಂಸ್ಕಾರಾದಿಗಳಿಲ್ಲದೆ ಧೂಳು ತುಂಬಿ ಮಾಸಿಹೋಗಿದ್ದಿತು ; ವ್ಯಸನದಿಂದಲೂ, ಅಂತಸ್ಸಂತಾಪದಿಂದಲೂ ಆಕೆಯ ಅವಯವಗಳು ದುರ್ಬಲವಾಗಿ ಹೋಗಿದ್ದುವು ; ಆಕೆಯು ಯಾವಾಗಲೂ ತನ್ನ ಪತಿದೇವನಾದ ಶ್ರೀರಾಮಮೂರ್ತಿಗೆ ಮೇಲನ್ನೇ ಕೋರುತ್ತಿದ್ದಳು. ಮಹಾ ವಿಕಾರನೇತ್ರೆಯರೂ, ಭಯಂಕರಾಕಾರೆಯರೂ, ಬಹು ಕಠಿನಚಿತ್ತವುಳ್ಳವರೂ, ರಕ್ತಮಾಂಸಭೋಜನವುಳ್ಳವರೂ ಆದ ರಾಕ್ಷಸಸ್ತ್ರೀಯರು ಆ ದೇವಿಗೆ ಕಾವಲಿರುವರು. ಇವರ ಮಧ್ಯದಲ್ಲಿರುವ ಆಕೆಯು ಮಹಾ ವ್ಯಾಘ್ರಗಳ ನಡುವೆ ಸಿಕ್ಕಿಕೊಂಡ ಹೆಣ್ಣುಜಿಂಕೆಯಂತೆ ಬೆದರಿ ಬೆಂಡಾಗಿ ಹೋಗಿರುವಳು. ಆಕೆಯು ತಲೆಗೂದಲೆಲ್ಲಾ

ರ್ವಾಕ್ಯೈಶ್ಶ್ರೀಭಿರ್ಹರಿಣೀಮಿವ ॥ ೫೭ ॥ ಸಾ ವಧೂ ರಾಕ್ಷಸೀಮಧ್ಯೇ ತರ್ಜ್ಯಮಾನಾ ಮುಹುರ್ಮುಹುಃ । ಏಕವೇಣೀಧರಾ ದೀನಾ ಭರ್ತೃಚಿಂತಾಪರಾಯಣಾ ॥ ೫೮ ॥ ಭೂಮಿಶಯ್ಯಾ ವಿವರ್ಣಾಂಗೀ ಪದ್ಮಿನೀವ ಹಿಮಾಗಮೇ । ರಾವಣಾದ್ವಿನಿವೃತ್ತಾರ್ಥಾ ಮರ್ತವ್ಯಕೃತನಿಶ್ಚಯಾ । ಕಥಂಚಿನ್ಮೃಗಶಾಬಾಕ್ಷೀ ತೂರ್ಣಮಾಸಾದಿತಾ ಮಯಾ ॥ ೬೦ ॥ ತಾಂ ದೃಷ್ಟ್ವಾ ತಾದೃಶೀಂ ನಾರೀಂ ರಾಮಪತ್ನೀಂ ಯಶಸ್ವಿನೀಂ । ತತ್ರೈವ ಶಿಂಶುಪಾವೃಕ್ಷೇ ಪಶ್ಯನ್ನಹಮವಸ್ಥಿತಃ ॥ ೬೧ ॥ ತತೋ ಹಲಹಲಾಶಬ್ದಂ ಕಾಂಚೀನೂಪುರಮಿಶ್ರಿತಂ । ಶೃಣೋಮ್ಯಧಿಕಗಂಭೀರಂ ರಾವಣಸ್ಯ ನಿವೇಶನೇ ॥ ೬೨ ॥

ರಾಕ್ಷಸಸ್ತ್ರೀಯರ ನಡುವೆ, ಮುಹುರ್ಮುಹುಃ-ಬಾರಿಬಾರಿಗೂ, ತರ್ಜ್ಯಮಾನಾ-ಹೆದರಿಸಲ್ಪಡುತ್ತಿರುವ, ಏಕವೇಣೀಧರಾ - ಒಂದೇ ತಿರಿಕಟ್ಟಿದ ಜಡೆಯನ್ನು ಧರಿಸಿರುವ, ದೀನಾ - ದೈನ್ಯವನ್ನು ಹೊಂದಿದ, ಭರ್ತೃ....ಣಾ-ಪತಿವಿಷಯದಲ್ಲಿ ಧ್ಯಾನದಲ್ಲಿ ಆಸಕ್ತಳಾದ, ಭೂಮಿಶಯ್ಯಾ-ನೆಲದಮೇಲೆ ಮಲಗಿರುವ, ಹಿಮಾಗಮೇ - ಹಿಮಕಾಲದಲ್ಲಿ, ಪದ್ಮಿನೀವ - ತಾವರೇಬಳ್ಳಿಯಂತೆ, ವಿವರ್ಣಾಂಗೀ - ವರ್ಣಹೀನವಾದ ಶರೀರವುಳ್ಳ, ರಾವಣಾತ್ - ರಾವಣಾಸುರನಿಂದ, ವಿನಿವೃತ್ತಾರ್ಥಾ - ಹಿಂತಿರುಗಿದ ಮನೋನಿಶ್ಚಯವುಳ್ಳ, ಮರ್ತ....ಯಾ - ಮರಣಕೃತ್ಯದಲ್ಲಿ ಮಾಡಲ್ಪಟ್ಟ ಬುದ್ಧಿಯುಳ್ಳ, ಸಾಸೀತಾ - ಆ ಸೀತಾದೇವಿಯು, ಮಯಾ - ನನ್ನಿಂದ, ದೃಷ್ಟಾ - ನೋಡಲ್ಪಟ್ಟಳು, ಮೃಗಶಾಬಾಕ್ಷೀ - ಜಿಂಕೇಮರಿಯ ಕಂಗಳಂತೆ ಕಂಗಳುಳ್ಳ ಸೀತಾದೇವಿಯು, ಕಥಂಚಿತ್ - ಅತಿ ಪ್ರಯಾಸದಿಂದ, ಮಯಾ - ನನ್ನಿಂದ, ತೂರ್ಣಂ - ಜಾಗ್ರತೆಯಾಗಿ, ಆಸಾದಿತಾ - ಹೊಂದಲ್ಪಟ್ಟಳು. ॥ ೫೮ ೬೦ ॥ ಅಹಂ - ನಾನು, ತಾದೃಶೀಂನಾರೀಂ - ಅಂಥ ಸ್ತ್ರೀಯಾದ, ರಾಮಪತ್ನೀಂ - ಶ್ರೀರಾಮನ ಸತಿಯಾದ, ಯಶಸ್ವಿನೀಂ - ಕೀರ್ತಿವಂತಳಾದ, ತಾಂ - ಆ ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ತತ್ರೈವಶಿಂಶುಪಾವೃಕ್ಷೇ - ಆ ಶಿಂಶುಪಾವೃಕ್ಷದಲ್ಲಿಯೇ, ಪಶ್ಯ್ನ - ಪರಾಮರ್ಶೆ ಮಾಡುತ್ತಾ, ಅವಸ್ಥಿತಃ - ಕುಳಿತಿದ್ದೆನು. ॥ ೬೧ ॥ ತತಃ - ಬಳಿಕ, ರಾವಣಸ್ಯ - ರಾವಣನ, ನಿವೇಶನೇ - ಮನೆಯ ಬಳಿಯಲ್ಲಿ, ಕಾಂಚೀ....ತಂ - ಡಾಬುಗಳ ಕಾಲುಸರಘಣಿಗಳ ಶಬ್ದದಿಂದೊಡಗೂಡಿದ, ಅಧಿ....ರಂ - ಅತಿ ಗಂಭೀರವಾದ, ಹಲಹಲಾಶಬ್ದಂ - ಕೋಲಾಹಲ ಧ್ವನಿಯನ್ನು, ಶೃಣೋಮಿ - ಕೇಳಿದೆನು. ॥೬೨॥ ತತಃ - ಬಳಿಕ, ಅಹಂ -

---

ಒಂದೇ ತಿರಿಯಾಗಿ ಹೋಗಿರುವುದು. ಆಕೆಯು ಬಹು ದೀನೆಯಾಗಿ ನಿರಂತರವೂ ತನ್ನ ಪತಿಯಾದ ಶ್ರೀರಾಮನನ್ನೇ ಧ್ಯಾನಿಸುತ್ತಿರುವಳು. ಇದೇ ಆಕೆಗೆ ವ್ರತವಾಗಿರುವುದು. ಭೂಶಾಯಿನಿಯಾಗಿರುವುದರಿಂದ ಬಣ್ಣಗೆಟ್ಟು, ಬಿಳುಪೇರಿದ ದೇಹಕಾಂತಿಯುಳ್ಳವಳಾಗಿ, ಹಿಮಕಾಲದಲ್ಲಿನ ಕಮಲಿನಿಯಂತೆ ತೋರುತ್ತಿರುವಳು. ಆಕೆಯು ರಾವಣಾಸುರನನ್ನು ಲಕ್ಷಿಸುವುದೇ ಇಲ್ಲವು. ಆ ಮೃಗಶಾಬಾಕ್ಷಿಯು ಪ್ರಾಣಗಳನ್ನು ತೊರೆಯಲು ನಿಶ್ಚಯಿಸಿಕೊಂಡಿದ್ದಳು. ಆಗ ನಾನು ಆಕೆಯನ್ನು ಬಹು ಪ್ರಯಾಸದಿಂದ ನೋಡಿದೆನು. ॥೫೫–೬೦॥ ಹೀಗೆ ಮಹಾ ಪತಿವ್ರತೆಯೂ, ಮಹಾ ಕೀರ್ತಿವಂತಳೂ ಆದ ಆ ದೇವಿಯನ್ನುನೋಡುತ್ತ ನಾನು ಆ ಶಿಂಶುಪಾವೃಕ್ಷದಲ್ಲಿಯೇ ಕುಳಿತ್ತಿದ್ದೆನು. ಆ ಸಮಯದಲ್ಲಿ ರಾವಣನ ಅರಮನೆಯಕಡೆಯಿಂದ, ಕಾಲಂದಿಗೆಗಳ ಮತ್ತು ಕಂಠಹಾರಗಳ ಧ್ವನಿಯೊಡಗೂಡಿದ ಗಂಭೀರವಾದ ಕೋಲಾಹಲಧ್ವನಿಯು ಕೇಳಿಬಂದಿತು. ಆಗ ನಾನು ಆ ಧ್ವನಿಯನ್ನು ಕೇಳಿ ಭಯಭ್ರಾಂತನಾಗಿ ನನ್ನ ದೇಹವನ್ನೆಲ್ಲ

ತತೋಽಹಂ ಪರಮೋದ್ವಿಗ್ನಃ ಸ್ವರೂಪಂ ಪ್ರತಿಸಂಹರನ್ । ಅಹಂತು ಶಿಂಶುಪಾವೃಕ್ಷೇ ಪಶ್ಯಂಸ್ತು ಸಮವಸ್ಥಿತಃ ॥ ೬೩ ॥ ತತೋ ರಾವಣದಾರಾಶ್ಚ ರಾವಣಶ್ಚ ಮಹಾಬಲಃ । ತಂ ದೇಶಮನುಸಂಪ್ರಾಪ್ತಾ ಯತ್ರ ಸೀತಾಽಭವತ್‌ಸ್ಥಿತಾ ॥ ೬೪ ॥ ತಂ ದೃಷ್ಟ್ವಾಥ ವರಾರೋಹಾ ಸೀತಾ ರಕ್ಷೋ ಮಹಾಬಲಂ । ಸಂಕುಚ್ಯೋರೂ ಸ್ತನೌ ಪೀನೌ ಬಾಹುಭ್ಯಾಂ ಪರಿರಭ್ಯಚ ॥ ೬೫ ॥ ವಿತ್ರಸ್ತಾಂ ಪರಮೋದ್ವಿಗ್ನಾಂ ವೀಕ್ಷಮಾಣಾಂ ತತಸ್ತತಃ । ತ್ರಾಣಂ ಕಿಂಚಿದಪಶ್ಯಂತೀಂ ವೇಪಮಾನಾಂ ತಪಸ್ವಿನೀಂ ॥ ೬೬ ॥ ತಾಮುವಾಚ ದಶಗ್ರೀವಃ ಸೀತಾಂ ಪರಮದುಃಖಿತಾಂ । " ಅವಾಕ್ಛಿರಾಃ ಪ್ರಪತಿತೋ

ನಾನು, ಪರಮೋದ್ವಿಗ್ನಃ - ಮಹಾ ಭೀತಿಗೊಂಡವನಾಗಿ, ಸ್ವಂರೂಪಂ - ಸ್ವಕೀಯವಾದ ಆಕೃತಿಯನ್ನು, ಪ್ರತಿಸಂಹರನ್ - ಉಪಸಂಹಾರ ಮಾಡಿಕೊಂಡವನಾದೆನು, ಶಿಂಶುಪಾವೃಕ್ಷೇ - ಶಿಂಶುಪಾವೃಕ್ಷದಲ್ಲಿರುವ, ಅಹಂತು - ನಾನಾದರೆ, ಪಕ್ಷೀವ - ಹಕ್ಕಿಯಂತೆ, ಗಹನೇ - ಎಲೆಗಳಿಂದ ಮುಚ್ಚಿರುವ ಗೂಢವಾದ ಪ್ರದೇಶದಲ್ಲಿ, ಸ್ಥಿತಃ - ಇದ್ದೆನು. ||೬೩|| ತತಃ - ಬಳಿಕ, ಯತ್ರ - ಯಾವ ಪ್ರದೇಶದಲ್ಲಿ, ಸೀತಾ - ಸೀತಾದೇವಿಯು, ಸ್ಥಿತಾ - ಇರುವವಳು, ಅಭವತ್ - ಆದಳೋ, ತಂದೇಶಮನು - ಆ ಸ್ಥಳವನ್ನು ಕುರಿತು, ರಾವಣದಾರಾಶ್ಚ - ರಾವಣಸತಿಯತಿಯರೂ, ಮಹಾಬಲಃ - ಅತಿ ಬಲಾಢ್ಯನಾದ, ರಾವಣಶ್ಚ - ರಾವಣನೂ ಸಹ, ಸಂಪ್ರಾಪ್ತಾಃ - ಬಂದರು. || ೬೪ || ಅಥ - ಬಳಿಕ, ವರಾರೋಹಾ - ಉತ್ತಮ ಸ್ತ್ರೀಯಾದ, ಸೀತಾ - ಸೀತಾದೇವಿಯು, ರಕ್ಷೋ....ಲಂ - ರಕ್ಕಸರಲ್ಲಿ ಅತಿ ಬಲಿಷ್ಠನಾದ, ತಂ - ಆ ರಾವಣಾಸುರನನ್ನು, ದೃಷ್ಟ್ವಾ - ಕಂಡು, ಊರೂ - ತೊಡೆಗಳನ್ನೂ, ಪೀನೌ - ಬಲಿತಿರುವ, ಸ್ತನೌ-ಕುಚಗಳನ್ನೂ ಸಹ, ಸಂಕುಚ್ಯ-ಇರುಕಿಕೊಂಡು, ಬಾಹುಭ್ಯಾಂ-ಭುಜಗಳಿಂದ, ಪರಿರಭ್ಯಚ-ಅಪ್ಪಿಕೊಂಡೂ ಸಹ, (ವಿತತ್ರಾಸ - ಹೆದರಿದಳು). || ೬೫ || ವಿತ್ರಸ್ತಾಂ - ಹೆದರಿದವಳಾದ ಕಾರಣ, ಪರಮೋದ್ವಿಗ್ನಾಂ-ಉದ್ಭ್ರಾಂತಚಿತ್ತಳಾದ, ತತಸ್ತತಃ-ಅಲ್ಲಲ್ಲಿ, ವೀಕ್ಷಮಾಣಾಂ-ನೋಡುತ್ತಿರುವ, ತ್ರಾಣಂ - ರಕ್ಷಣೆಯನ್ನು, ಕಿಂಚಿತ್ - ಸ್ವಲ್ಪವಾದರೂ, ಅಪಶ್ಯಂತೀ - ಕಾಣದಿರುವ, ವೇಪಮಾನಾಂ-ಕುದಿಯುತ್ತಿರುವ, ತಪಸ್ವಿನೀಂ - ಅಂತಸ್ತಾಪವುಳ್ಳ, ಪರಮದುಃಖಿತಾಂ - ಅತಿ ವ್ಯಸನವತಿಯಾದ, ತಾಂಸೀತಾಂ - ಆ ಸೀತಾದೇವಿಯನ್ನು, ಅವಾಕ್ಛಿರಾಃ - ಅಡ್ಡವಾದ ಶಿರಸ್ಸುಳ್ಳವನಾಗಿ, ಪ್ರಪತಿತಃ -

---

ಸಂಕೋಚಗೊಳಿಸಿಕೊಂಡು, ಮುಗಿಲುಮುಟ್ಟುತ್ತಿರುವ ಆ ಅಶೋಕವೃಕ್ಷದ ರೆಂಬೆಯಲ್ಲಿಯೇ ಹಕ್ಕಿಯಂತೆ ಎಲೆಗಳ ಮರೆಯಲ್ಲಿ ಅವಿತುಕೊಂಡಿದ್ದೆನು. ಹಾಗೆಯೇ ನೋಡುತ್ತಿರಲು ಮಹಾ ಬಲಾಢ್ಯನಾದ ರಾವಣಾಸುರನೂ, ಆತನ ಭಾರ್ಯೆಯರೂ, ಸೀತಾದೇವಿಯು ಕುಳಿತಿದ್ದ ಪ್ರದೇಶಕ್ಕೆ ಬಂದರು. ರಾಕ್ಷಸೇಶ್ವರನೂ, ಮಹಾ ಬಲಪರಾಕ್ರಮಶಾಲಿಯೂ ಆದ ರಾವಣಾಸುರನು ತನ್ನ ಸಮೀಪಕ್ಕೆ ಬಂದುದನ್ನು ನೋಡಿ ಪರಮಪತಿವ್ರತೆಯಾದ ಸೀತಾದೇವಿಯು ತೊಡೆಗಳನ್ನು ಮುದುಡಿಕೊಂಡು, ಕೈಗಳನ್ನು ಬಲವಾಗಿ ಕಟ್ಟಿಕೊಂಡು, ಕುಚಗಳನ್ನು ಮರೆಸಿಕೊಂಡು, ಅತ್ತಿತ್ತ ಚಲಿಸದೆ ಕುಳಿತಿದ್ದಳು. ||೬೧–೬೫|| ಆಗ ಆಕೆಯು ಬಹಳವಾದ ಭಯದಿಂದ ಗಡಗಡನೆ ನಡುಗುತ್ತಿದ್ದಳು. ತನಗೆ ಯಾರಾದರೂ ರಕ್ಷಕರಾಗಿ ಬರುವರೇನೋ ಎಂದು ದಿಕ್ಕುದಿಕ್ಕುಗಳನ್ನೂ ನೋಡುತ್ತಿದ್ದಳು. ಆದರೆ ಆಕೆಗೆ ಸಹಾಯವು ಮಾತ್ರ ಯಾವುದೂ, ಯಾರೂ ತೋರಲಿಲ್ಲವು. ತಪಸ್ವಿನಿಯಾದ ಆಕೆಯು ಮಹಾ ವ್ಯಸನದಿಂದಲೂ, ಅತಿಶಯ ಭಯದಿಂದಲೂ ನಡುಗುತ್ತಿದ್ದಳು. ಇಂತಿರುವ ಆ ದೇವಿಯನ್ನುನೋಡಿ ರಾವಣನು ಆಕೆಗೆ ಸಾಷ್ಟಾಂಗ

ಬಹುಮನ್ಯಸ್ವ ಮಾಮಿತಿ ‖ ೬೭ ‖ ಯದಿಚೇತ್ತ್ವಂ ತು ದರ್ಪಾನ್ಮಾಂ ನಾಭಿನಂದಸಿ ಗರ್ವಿತೇ । ದ್ವಿಮಾಸಾನಂತರಂ ಸೀತೇ ಪಾಸ್ಯಾಮಿ ರುಧಿರಂ ತವ" ‖ ೬೮ ‖ ಏತಚ್ಛ್ರುತ್ವಾ ವಚಸ್ತಸ್ಯ ರಾವಣಸ್ಯ ದುರಾತ್ಮನಃ । ಉವಾಚ ಪರಮಕ್ರುದ್ಧಾ ಸೀತಾ ವಚನಮುತ್ತಮಂ ‖೬೯‖ "ರಾಕ್ಷಸಾಧಮ! ರಾಮಸ್ಯ ಭಾರ್ಯಾಮಮಿತತೇಜಸಃ । ಇಕ್ಷ್ವಾಕುಕುಲನಾಥಸ್ಯ ಸ್ನುಷಾಂ ದಶರಥಸ್ಯ ಚ । ಅವಾಚ್ಯಂ ವದತೋ ಜಿಹ್ವಾ ಕಥಂ ನಪತಿತಾ ತವ? ‖ ೭೦ ‖ ಕಿಂಚಿದ್ವೀರ್ಯಂ ತವಾನಾರ್ಯ! ಯೋ ಮಾಂ ಭರ್ತುರ

ಬಿದ್ದ, ಮಾಂ ನನ್ನನ್ನು, ಬಹುಮನ್ಯಸ್ವ - ಬಹುಮತಿಸು, ಹೇ ಗರ್ವಿತೇ - ಎಲೈ ಅಹಂಕಾರವುಳ್ಳವಳೇ, ತ್ವಂತು - ನೀನಾದರೆ, ಮಾಂ - ನನ್ನನ್ನು, ದರ್ಪಾತ್ - ಗರ್ವದಿಂದ, ನಾಭಿನಂದಸಿಯದಿ - ಸಂತೋಷಗೊಳಿಸದೇ ಇರುವಳಾದರೆ, ಹೇ ಸೀತೇ - ಎಲೌ ಸೀತೆಯೆ, ದ್ವೌಮಾಸೌ - ಎರಡು ತಿಂಗಳು, ಅಂತರಂ - ಅವಧಿಯು, (ತತಃ - ಬಳಿಕ), ತವ - ನಿನ್ನ, ರುಧಿರಂ - ರಕ್ತವನ್ನು, ಪಾಸ್ಯಾಮಿ - ಕುಡಿಯುವೆನು, ಇತಿ - ಇಂತೆಂದು, ದಶಗ್ರೀವಃ - ದಶಕಂಠನು, ಉವಾಚ - ಹೇಳಿದನು. ‖೬೬-೬೮‖ ದುರಾತ್ಮನಃ - ದುಸ್ಸ್ವಭಾವವುಳ್ಳ, ತಸ್ಯರಾವಣಸ್ಯ - ಆ ರಾವಣಾಸುರನ, ಏತದ್ವಚಃ - ಈ ಮಾತನ್ನು, ಶ್ರುತ್ವಾ - ಕೇಳಿ, ಸೀತಾ - ಸೀತಾದೇವಿಯು, ಪರಮಕ್ರುದ್ಧಾ - ಕಡುಕೋಪವುಳ್ಳವಳಾಗಿ, ಉತ್ತಮಂ- ಶ್ರೇಷ್ಠವಾದ, ವಚನಂ - ಮಾತನ್ನು, ಉವಾಚ - ಹೇಳಿದಳು. ‖ ೬೯ ‖ ಹೇ ರಾಕ್ಷಸಾಧಮ - ಎಲೈ ನೀಚರಾಕ್ಷಸನೇ, ಅಮಿತತೇಜಸಃ - ಮಹಾ ತೇಜಸ್ವಿಯಾದ, ಇಕ್ಷ್ವಾ...ಸ್ಯ - ಇಕ್ಷ್ವಾಕುವಂಶ ಪ್ರಭುವಾದ, ರಾಮಸ್ಯ - ಶ್ರೀರಾಮನ, ಭಾರ್ಯಾಂ - ಹೆಂಡತಿಯಾದ, ದಶರಥಸ್ಯ - ದಶರಥರಾಜನಿಗೆ, ಸ್ನುಷಾಂಚ - ಸೊಸೆಯೂ ಆದ ನನ್ನನ್ನು ಕುರಿತು, ಅವಾಚ್ಯಂ - ಹೇಳಬಾರದ ಮಾತುಗಳನ್ನು, ವದತಃ-ಹೇಳುತ್ತಿರುವ, ತವ-ನಿನ್ನ, ಜಿಹ್ವಾ-ನಾಲಗೆಯು, ಕಥಂನಪತಿತಾ-ಹೇಗೆ ಬೀಳದಿರುವದು. ‖೭೦‖ ಹೇ ಪಾಪ - ಎಲೈ ಪಾಪಿಯೇ, ಭರ್ತುಃ - ನನ್ನ ಪತಿಯು, ಅಸನ್ನಿಧೌ - ಸಮೀಪದಲ್ಲಿಲ್ಲದ ಸಮಯದಲ್ಲಿ, ಮಹಾತ್ಮನಾ - ಮಹಾನುಭಾವನಾದ, ತೇನ - ಆ ಶ್ರೀರಾಮನಿಂದ, ಅದೃಷ್ಟಃ -

---

ಪ್ರಣಾಮವನ್ನುಮಾಡಿ, ತನ್ನನ್ನುಮನ್ನಿಸಬೇಕೆಂದು ಸಂಪ್ರಾರ್ಥಿಸಿ, ಆಕೆಯನ್ನುಕುರಿತು, "ಎಲೆ ಜಂಭಗಾತಿಯೇ! ನೀನು ಗರ್ವದಿಂದ ನನ್ನನ್ನು ಗೌರವಿಸಿ, ವರಿಸದಿರುವೆ. ಇನ್ನು ಎರಡು ತಿಂಗಳ ಅವಧಿಯನ್ನು ಕೊಟ್ಟಿರುವೆನು, ಅಷ್ಟರೊಳಗಾಗಿ ನೀನು ನನ್ನನ್ನು ವರಿಸಿ ನನ್ನನ್ನು ಸಂತೋಷಗೊಳಿಸದಿದ್ದರೆ ನಿನ್ನನ್ನು ಕೊಂದು ನಿನ್ನ ರಕ್ತವನ್ನು ಕುಡಿದುಬಿಡುವೆನು" ಎಂದು ಹೇಳಿದನು. ಈ ಮಾತುಗಳನ್ನು ಕೇಳಿ ಆ ದೇವಿಯು ಮಹಾ ಕ್ರುದ್ಧಳಾಗಿ ಅವನನ್ನು ಕುರಿತು, "ಎಲೈ ನೀಚರಾಕ್ಷಸನೇ! ಅಮಿತಪರಾಕ್ರಮಶಾಲಿಯಾದ ಶ್ರೀರಾಮನಿಗೆ ಭಾರ್ಯೆಯಾಗಿ, ಇಕ್ಷ್ವಾಕುವಂಶಜರಲ್ಲಿ ಉತ್ತಮೋತ್ತಮನಾದ ದಶರಥರಾಯನಿಗೆ ನಚ್ಚಿನ ಸೊಸೆಯಾಗಿ, ಪತಿಯೇ ಪರದೈವವೆಂದು ತ್ರಿಕರಣಶುದ್ಧಿಯಿಂದ ನಂಬಿಕೊಂಡಿರುವ ನನ್ನನ್ನು ಕುರಿತು ಬಹು ನೀಚವಾದ ಮಾತುಗಳಾಡಿ ಅಪಮಾನಗೊಳಿಸಿದ ನಿನ್ನ ನಾಲಗೆಯು ಸಹಸ್ರಭಾಗವಾಗಿ ಇನ್ನೂ ಸೀಳಿಹೋಗದಿರುವುದೇಕೋ? ಪಾಪಕಾರ್ಯಗಳನ್ನೇ ಮಾಡುವ ಸ್ವಭಾವವುಳ್ಳ ಎಲೈ ದುರುಳರಾವಣನೇ! ನೀನು ಮಹಾ ದುಷ್ಟನು; ನಿನ್ನ ಪರಾಕ್ರಮವೂ ಕೂಡ ಅತ್ಯಲ್ಪ ವಾದುದು. ಆದುದರಿಂದಲೇ ಅಮಿತಪರಾಕ್ರಮಶಾಲಿಯಾದ ನನ್ನಪತಿದೇವನು ಆಶ್ರಮದಲ್ಲಿಲ್ಲ

ಸನ್ನಿಧೌ । ಅಪಹೃತ್ಯಾಗತಃ ಪಾಪ! ತೇನಾದೃಷ್ಟೋ ಮಹಾತ್ಮನಾ ॥ ೭೧ ॥ ನತ್ವಂ ರಾಮಸ್ಯ ಸದೃಶೋ ದಾಸ್ಯೇಪ್ಯಸ್ಯ ನಯುಜ್ಯಸೇ । ಯಜ್ಞೀಯಸ್ಸತ್ಯವಾದೀಚ ರಣಶ್ಲಾಘೀಚ ರಾಘವಃ" ॥ ೭೨ ॥ ಜಾನಕ್ಯಾ ಪರುಷಂ ವಾಕ್ಯಮೇವಮುಕ್ತೋ ದಶಾನನಃ । ಜಜ್ವಾಲ ಸಹಸಾ ಕೋಪಾಚ್ಚಿತಾಸ್ಥ ಇವ ಪಾವಕಃ ॥ ೭೩ ॥ ವಿವೃತ್ಯ ನಯನೇ ಕ್ರೂರೇ ಮುಷ್ಟಿಮುದ್ಯಮ್ಯ ದಕ್ಷಿಣಂ । ಮೈಥಿಲೀಂ ಹಂತುಮಾರಬ್ಧಃ ಸ್ತ್ರೀಭಿರ್ಹಾಹಾಕೃತಂ ತದಾ ॥ ೭೪ ॥ ಸ್ತ್ರೀಣಾಂ ಮಧ್ಯಾತ್ಸಮುತ್ಪತ್ಯ ತಸ್ಯ ಭಾರ್ಯಾ

ಆ ಶ್ರೀರಾಮನಿಂದ, ಅದೃಷ್ಟಃ - ಕಾಣಲ್ಪಡದಿರುವನಾಗಿ, ಮಾಂ - ನನ್ನನ್ನು, ಅಪಹೃತ್ಯ - ಕದ್ದುಕೊಂಡು, ಆಗತಃ - ಬಂದೆಯೋ, (ತಸ್ಯ)ತವ - ಅಂಥ ನಿನ್ನ, ವೀರ್ಯಂ - ಸಾಮರ್ಥ್ಯವು, ಕಿಂಚಿತ್-ಅತಿ ಹೀನವಾದುದು. ॥ ೭೧ ॥ ತ್ವಂ - ನೀನು, ರಾಮಸ್ಯ - ಶ್ರೀರಾಮನಿಗೆ, ಸದೃಶಃ - ಸಮಾನನಾದವನು, ನ - ಅಲ್ಲ, ಅಸ್ಯ - ಈ ಶ್ರೀರಾಮನ, ದಾಸ್ಯೇಪಿ - ದಾಸತ್ವದಲ್ಲಿಯೂ ಕೂಡ, ನಯುಜ್ಯಸೇ-ಸೇರುವುದಿಲ್ಲ, ರಾಘವಃ-ಶ್ರೀರಾಮನು, ಯಜ್ಞೀಯಃ-ಯಜ್ಞಮಾಡುವುದಕ್ಕೆ ತಕ್ಕವನು, ಸತ್ಯವಾದೀ-ಯಥಾರ್ಥವಾಗಿ ಮಾತನಾಡುವವನು, ರಣಶ್ಲಾಘೀಚ - ಯುದ್ಧದಲ್ಲಿ ಶ್ಲಾಘನೀಯನು ಹೌದು. ॥೭೨॥ ದಶಾನನಃ - ರಾವಣನು, ಜಾನಕ್ಯಾ - ಸೀತಾದೇವಿಯಿಂದ, ಏವಂ - ಈ ಪರಿಯಾಗಿ, ಪರುಷಂ - ಕ್ರೂರವಾದ, ವಾಕ್ಯಂ - ಮಾತನ್ನು, ಉಕ್ತಃ - ಹೇಳಲ್ಪಟ್ಟವನಾಗಿ, ಚಿತಾಸ್ಥಃ - ಚಿತಿಯಲ್ಲಿರುವ, ಪಾವಕಇವ - ಅಗ್ನಿಯಂತೆ, ಕೋಪಾತ್ - ರೋಷದಿಂದ, ಸಹಸಾ - ಜಜ್ವಾಲ - ಉರಿದನು. ॥೭೩॥ (ರಾವಣಃ - ರಾವಣನು), ಕ್ರೂರೇ - ತೀಕ್ಷ್ಣವಾದ, ನಯನೇ - ಕಣ್ಣುಗಳನ್ನು, ವಿವೃತ್ಯ - ತಿರುಗಿಸಿ, ದಕ್ಷಿಣಂಮುಷ್ಟಿಂ - ಬಲಗೈಮುಷ್ಟಿಯನ್ನು, ಉದ್ಯಮ್ಯ - ಮೇಲಕ್ಕೆತ್ತಿ, ಮೈಥಿಲೀಂ - ಸೀತಾದೇವಿಯನ್ನು, ಹಂತುಂ - ಕೊಲ್ಲುವದಕ್ಕೆ, ಆರಬ್ಧಃ - ಪ್ರಾರಂಭಿಸಿದನು, ತದಾ - ಆ ಸಮಯದಲ್ಲಿ, ಸ್ತ್ರೀಭಿಃ-ರಾಕ್ಷಸಾಂಗನೆಯರಿಂದ, ಹಾಹಾಕೃತಂ - ಹಾಹಾಕಾರವು ಮಾಡಲಾಯಿತು. ॥ ೭೪ ॥ ಮಂಡೋದರೀನಾಮ - ಮಂಡೋದರಿಯೆಂದು ಪ್ರಸಿದ್ಧಳಾದ, ದುರಾತ್ಮನಃ - ದುರ್ಬುದ್ಧಿಯುಳ್ಳ, ತಸ್ಯ - ಆ ರಾವಣನ, ವರಾಭಾರ್ಯಾ - ಉತ್ತಮ ಪತ್ನಿಯು, ಸ್ತ್ರೀಣಾಂ - ಹೆಂಗಳ, ಮಧ್ಯಾತ್ - ಮಧ್ಯಪ್ರವೇಶದಿಂದ,

---

ದಿದ್ದಾಗ, ನನ್ನಬಳಿಯಲ್ಲಿಲ್ಲದಿದ್ದಾಗ ಹೊಂಚುಹಾಕಿಕೊಂಡಿದ್ದು ನೀನು ಕಳ್ಳತನದಿಂದ ನನ್ನನ್ನು ಅಪಹರಿಸಿಕೊಂಡು ಬಂದೆ. ॥ ೬೬–೭೧ ॥ ಎಲಾ ರಾವಣಾ! ನೀನು ನನ್ನೊಡೆಯನಾದ ಶ್ರೀರಾಮಚಂದ್ರನಿಗೆ ಸಮಾನನಲ್ಲವೆಂಬುದೊಂದೇ ಅಲ್ಲ. ನೀನು ಅವನ ಊಳಿಗದವನಾಗಲೂ ತಕ್ಕವನಲ್ಲವು. ನನ್ನ ಭರ್ತನಾದ ಶ್ರೀರಾಮಮೂರ್ತಿಯು ಯಜ್ಞಯಾಗಾದಿಗಳನ್ನು ಮಾಡುವವನು. ಪರಮಪವಿತ್ರನಾದವನು. ಆತನು ಯಾವಾಗಲೂ ಸತ್ಯವನ್ನೇ ನುಡಿಯತಕ್ಕವನು. ಯಾವಾಗಲೂ ಯುದ್ಧಪ್ರಿಯನಾದವನು" ಎಂದು ಹೇಳಿದಳು. ಈ ಮಾತುಗಳನ್ನು ಕೇಳುತ್ತಲೇ ಆ ರಾವಣನು ಚಿತೆಯಲ್ಲಿನ ಅಗ್ನಿಹೋತ್ರನಂತೆ ಕೋಪಗೊಂಡು, ಕಣ್ಣುಗಳನ್ನು ಕೆಂಪಗಾಗಿಸಿಕೊಂಡು, ಎಡಗೈಮುಷ್ಟಿಯಿಂದ ಸೀತಾದೇವಿಯನ್ನು ಆಗಲೇ ಕೊಲ್ಲಲು ಸಿದ್ಧನಾದನು. ಆ ಸಮಯದಲ್ಲಿ ಅಲ್ಲಿದ್ದ ರಾಕ್ಷಸಸ್ತ್ರೀಯರೆಲ್ಲರೂ ಹಾಹಾಕಾರವನ್ನು ಮಾಡಿದರು. ಆಗ ಮಹಾ ದುರಾತ್ಮನಾದ ಆ ರಾವಣನ ಪಟ್ಟಮಹಿಷಿಯೂ, ಮಹಾ ಧರ್ಮಿಷ್ಠಳೂ ಆದ ಮಂಡೋದರಿ ಎಂಬಾಕೆಯು ಆ ಸ್ತ್ರೀಯರ ಗುಂಪಿ

ದುರಾತ್ಮನಃ । ವರಾ ಮಂಡೋದರೀ ನಾಮ ತಯಾ ಸ ಪ್ರತಿಷೇಧಿತಃ ॥ ೭೫ ॥ ಉಕ್ತಶ್ಚ ಮಧುರಾಂ ವಾಣೀಂ ತಯಾ ಸಮದನಾರ್ದಿತಃ । "ಸೀತಯಾ ತವ ಕಿಂಕಾರ್ಯಂ ಮಹೇಂದ್ರಸಮವಿಕ್ರಮ ! ॥ ೭೬ ॥ ದೇವಗಂಧರ್ವಕನ್ಯಾಭಿರ್ಯಕ್ಷ ಕನ್ಯಾಭಿರೇವಚ । ಸಾರ್ಧಂ ಪ್ರಭೋ! ರಮಸ್ವೇಹ ಸೀತಯಾ ಕಿಂ ಕರಿಷ್ಯಸಿ?" ॥೭೭॥ ತತಸ್ತಾಭಿಸ್ಸಮೇತಾಭಿರ್ನಾರೀಭಿಸ್ಸಮಹಾಬಲಃ । ಪ್ರಸಾದ್ಯ ಸಹಸಾಽನೀತೋ ಭವನಂ ಸ್ವಂ ನಿಶಾಚರಃ ॥ ೭೮ ॥ ಯಾತೇ ತಸ್ಮಿನ್ ದಶಗ್ರೀವೇ ರಾಕ್ಷಸ್ಯೋ ವಿಕೃತಾನನಾಃ ।

ಸಮುತ್ಪತ್ಯ - ಓಡಿಬಂದು, (ರಾವಣಸಮೀಪಂಗತಾ - ರಾವಣನ ಸಮೀಪವನ್ನು ಹೊಂದಿದಳು), ತಯಾ - ಆ ಮಂಡೋದರಿಯಿಂದ, ಸಃ - ಆ ರಾವಣನು, ಪ್ರತಿಷೇಧಿತಃ - ಅಡ್ಡಿಮಾಡಲ್ಪಟ್ಟನು. ॥೭೫॥ ಹೇ ಮಹೇಂದ್ರಸಮವಿಕ್ರಮ - ಎಲೈ ದೇವೇಂದ್ರಸದೃಶವಾದ ಪರಾಕ್ರಮವುಳ್ಳವನೆ, ಸೀತಯಾ-ಸೀತೆಯಿಂದ, ತವ - ನಿನಗೆ, ಕಿಂಕಾರ್ಯಂ - ಏನು ಪ್ರಯೋಜನವು, ಹೇ ಪ್ರಭೋ - ಎಲೈ ಒಡೆಯನೇ, ದೇವ....ರ್ಧಂ - ದೇವಕನ್ನಿಕೆಯರೊಡನೆಯೂ, ಗಂಧರ್ವಾಂಗನೆಯರೊಡನೆಯೂ, ಯಕ್ಷಕನ್ಯಾಭಿರೇವಚ - ಯಕ್ಷಕನ್ಯೆಯರೊಡನೆಯೂ ಕೂಡ, ಇಹ - ಇಲ್ಲಿ, ರಮಸ್ವ - ರಮಿಸು, ಸೀತಯಾ - ಸೀತಾದೇವಿಯಿಂದ, ಕಿಂಕರಿಷ್ಯಸಿ - ಏನು ಮಾಡುವೆ, ಇತಿ - ಇಂತೆಂದು, ತಯಾ - ಆ ಮಂಡೋದರಿಯಿಂದ, ಮದನಾರ್ದಿತಃ - ಮನ್ಮಥನಿಂದ ಪೀಡಿಸಲ್ಪಟ್ಟ, ಸಃ - ಆ ರಾವಣನು, ಮಧುರಾಂ - ಮನೋಹರವಾದ, ವಾಣೀಂ - ಮಾತನ್ನು, ಉಕ್ತಃ - ಹೇಳಲ್ಪಟ್ಟನು. ॥ ೭೬-೭೭ ॥ ತತಃ - ಬಳಿಕ, ಸಮೇತಾಭಿಃ - ಗುಂಪುಕೂಡಿದ, ತಾಭಿರ್ನಾರೀಭಿಃ - ಆ ಸ್ತ್ರೀಯರಿಂದ, ಮಹಾಬಲಃ - ಅತಿ ಬಲಾಢ್ಯನಾದ, ಸನಿಶಾಚರಃ - ಆ ರಾವಣಾಸುರನು, ಪ್ರಸಾದ್ಯ - ಸಮಾಧಾನಗೊಳಿಸಲ್ಪಟ್ಟು, ಸ್ವಂಭವನಂ - ನಿಜಭವನವನ್ನು, ಸಹಸಾ - ಶೀಘ್ರವಾಗಿ, ನೀತಃ - ಹೊಂದಿಸಲ್ಪಟ್ಟನು. ॥೭೮॥ ತಸ್ಮಿನ್‌ದಶಗ್ರೀವೇ - ಆ ರಾವಣಾಸುರನು, ಯಾತೇ - ಮನೆಗೆ ಹೊರಟುಹೋಗಲು, ವಿಕೃತಾನನಾಃ - ವಿಕಾರಮುಖಿಯರಾದ, ರಾಕ್ಷಸ್ಯಃ - ರಾಕ್ಷಸಸ್ತ್ರೀಯರು, ಕ್ರೂರೈಃ - ಕಠಿನಗಳಾದ, ಸುದಾರುಣೈಃ - ಅತಿ ಭಯಂಕರವಾದ,

---

ನಿಂದ ಮುಂದೆ ಬಂದು "ಬೇಡ; ಸೀತಾದೇವಿಯನ್ನು ಕೊಲ್ಲಬೇಡ" ಎಂದು ಆತನನ್ನು ತಡೆದು, ಆತನನ್ನು ಕುರಿತು ಬಹು ಮಧುರವಾದ ಮಾತುಗಳಿಂದ, "ಎಲೈ ಪ್ರಿಯನೇ! ನೀನು ದೇವೇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನು. ಪ್ರಾಣೇಶ್ವರಾ! ಈ ಸೀತೆಯಿಂದ ನಿನಗೇನು? ಇವಳು ನಿನಗೆ ಸರಿಯೆ, ಸಾಟಿಯೇ? ಪ್ರಭುವೇ! ದೇವಕನ್ನಿಕೆಯರು, ಯಕ್ಷ ಕನ್ನಿಕೆಯರು, ಗಂಧರ್ವರಮಣಿಯರು ಇವರೇ ಮೊದಲಾದ ಅನೇಕಮಂದಿ ಸುಂದರ ಸ್ತ್ರೀಯರು ನಿನಗೆ ಸುಖವನ್ನೀಯಲು ಸಿದ್ಧರಾಗಿರುವರು. ನೀನು ಅವರೊಡನೆ ಸ್ವೇಚ್ಛೆಯಾಗಿ ಭೋಗ ಪಡು. ಮಾನವ ಸ್ತ್ರೀಯಾದ ಈ ಸೀತೆಯಿಂದ ನಿನಗೇನು ಪ್ರಯೋಜನವು?" ಎಂದು ಹೇಳಿದಳು. ॥ ೭೧–೭೭ ॥ ಆಗ ಅಮಿತಬಲಪರಾಕ್ರಮಶಾಲಿಯಾದ ಆ ರಾವಣಾಸುರನು ಹೀಗೆ ಮಂಡೋದರಿಯೇ ಮೊದಲಾದವರಿಂದ ಸಮಾಧಾನಗೊಳಿಸಲ್ಪಟ್ಟು ಬಹು ಬೇಗನೆ ತನ್ನ ಅರಮನೆಗೆ ತೆರಳಿದನು. ಅತ್ತ ರಾವಣನು ನಿಜಭವನಕ್ಕೆ ತೆರಳಿದಕೂಡಲೇ ಇತ್ತ ಸೀತೆಗೆ ಕಾವಲಿದ್ದ ವಿಕಾರ ಮುಖಿಯರಾದ ರಾಕ್ಷಸಿಯರು ಮಹಾ ಕಠಿನವೂ, ಬಹು ಭಯಂಕರವೂ ಆದ ಮಾತುಗಳಿಂದ ಆಕೆಯನ್ನು ಬಹುವಾಗಿ ಹೆದರಿಸುತ್ತಿದ್ದರು. ಸೀತಾದೇವಿಯು ಅವರ

ಸೀತಾಂ ನಿರ್ಭರ್ತ್ಸಯಾಮಾಸು ರ್ವಾಕ್ಯೈಃ ಕ್ರೂರೈಸ್ಸುದಾರುಣೈಃ ॥ ೭೯ ॥ ತೃಣವ ದ್ಭಾಷಿತಂ ತಾಸಾಂ ಗಣಯಾಮಾಸ ಜಾನಕೀ । ಗರ್ಜಿತಂ ಚ ತದಾ ತಾಸಾಂ ಸೀತಾಂ ಪ್ರಾಪ್ಯ ನಿರರ್ಥಕಂ ॥ ೮೦ ॥ ವೃಥಾ ಗರ್ಜಿತನಿಶ್ಚೇಷ್ಟಾ ರಾಕ್ಷಸ್ಯಃ ಪಿಶಿತಾಶನಾಃ । ರಾವಣಾಯ ಶಶಂಸುಸ್ತಾ ಸ್ಸೀತಾಽಧ್ಯವಸಿತಂ ಮಹತ್ ॥ ೮೧ ॥ ತತಸ್ತಾಸ್ಸಹಿತಾ ಸ್ಸರ್ವಾ ವಿಹತಾಶಾ ನಿರುದ್ಯಮಾಃ । ಪರಿಕ್ಷಿಪ್ಯ ಸಮಂತಾತ್ತಾಂ ನಿದ್ರಾವಶಮುಪಾಗತಾಃ ॥ ೮೨ ॥ ತಾಸು ಚೈವ ಪ್ರಸುಪ್ತಾಸು ಸೀತಾ ಭರ್ತೃಹಿತೇ ರತಾ । ವಿಲಪ್ಯ ಕರುಣಂ ದೀನಾ ಪ್ರಶುಶೋಚ ಸುದುಃಖಿತಾ ॥೮೩॥ ತಾಸಾಂ ಮಧ್ಯಾತ್ಸಮುತ್ಥಾಯ ತ್ರಿಜಟಾ ವಾಕ್ಯಮಬ್ರವೀತ್ । "ಆತ್ಮಾನಂ ಖಾದತ ಕ್ಷಿಪ್ರಂ ನಸೀತಾ ವಿನಶಿಷ್ಯತಿ

ವಾಕ್ಯೈಃ - ಮಾತುಗಳಿಂದ, ಸೀತಾಂ - ಸೀತಾದೇವಿಯನ್ನು, ನಿರ್ಭರ್ತ್ಸಯಾಮಾಸುಃ - ಹೆದರಿಸಿದರು. ॥೭೯॥ ಜಾನಕೀ - ಸೀತಾದೇವಿಯು, ತಾಸಾಂ - ಆ ಸ್ತ್ರೀಯರ, ಭಾಷಿತಂ - ಮಾತನ್ನು, ತೃಣವತ್- ಹುಲ್ಲಿಗೆ ಸಮವಾಗಿ, ಗಣಯಾಮಾಸ - ಎಣಿಸಿದಳು, ತದಾ - ಆ ಕಾಲದಲ್ಲಿ, ತಾಸಾಂ - ಆ ರಕ್ಕಸಿಯರ, ಗರ್ಜಿತಂ - ಗರ್ಜನೆಯೂ ಸಹ, ಸೀತಾಂ - ಸೀತಾದೇವಿಯನ್ನು, ಪ್ರಾಪ್ಯ - ಹೊಂದಿ, ನಿರರ್ಥಕಂ - ವ್ಯರ್ಥವಾಯಿತು. ॥ ೮೦ ॥ ವೃಥಾ....ಷ್ಟಾಃ - ವ್ಯರ್ಥವಾದ ಗರ್ಜನೆಯಿಂದ ನಿರ್ವ್ಯಾಪಾರಿಣಿಯರಾದ, ಪಿಶಿತಾಶನಾಃ - ಮಾಂಸಭಕ್ಷಕರಾದ, ತಾರಾಕ್ಷಸ್ಯಃ - ಆ ರಕ್ಕಸಿಯರು, ರಾವಣಾಯ - ರಾವಣಾಸುರನಿಗೆ, ಮಹತ್ - ದೊಡ್ಡದಾದ, ಸೀತಾ....ತಂ - ಸೀತಾದೇವಿಯ ಉದ್ಯೋಗವನ್ನು, ಶಶಂಸುಃ - ಹೇಳಿದರು. ॥೮೧॥ ತತಃ-ಬಳಿಕ, ಸಹಿತಾಃ-ಗುಂಪುಗೂಡಿದ, ತಾಸ್ಸರ್ವಾಃ-ಆ ರಾಕ್ಷಸಸ್ತ್ರೀಯರೆಲ್ಲರೂ, ವಿಹತಾಶಾಃ - ಭಗ್ನಮನೋರಥರಾಗಿ, ನಿರುದ್ಯಮಾಃ - ಪ್ರಯತ್ನಹೀನರಾಗಿ, ತಾಂ - ಆ ಸೀತಾದೇವಿಯನ್ನು, ಸಮಂತಾತ್ - ಎಲ್ಲಾ ಕಡೆಯಲ್ಲಿಯೂ, ಪರಿಕ್ಷಿಪ್ಯ - ಸುತ್ತಿಕೊಂಡು, ನಿದ್ರಾವಶಂ - ನಿದ್ರಾಧೀನವನ್ನು, ಉಪಾಗತಾಃ - ಹೊಂದಿದರು. ॥೮೨॥ ತಾಸು - ಆ ಸ್ತ್ರೀಯರು, ಪ್ರಸುಪ್ತಾಸು - ಮಲಗಿರಲು, ಭರ್ತೃಹಿತೇ - ಗಂಡನ ಹಿತದಲ್ಲಿ, ರತಾ - ಆಸಕ್ತಳಾದ, ದೀನಾ - ಅಂತಸ್ತಾಪವುಳ್ಳವಳಾದಕಾರಣ, ಸುದುಃಖಿತಾ - ಬಹಳ ದುಃಖಿತಳಾದ, ಸೀತಾ - ಸೀತಾದೇವಿಯು, ಕರುಣಂ - ದೈನ್ಯವುಳ್ಳಂತೆ, ವಿಲಪ್ಯ - ವಿಲಪಿಸಿ, ಪ್ರಶುಶೋಚ - ದುಃಖಿಸಿದಳು. ॥೮೩॥ ತ್ರಿಜಟಾ - ತ್ರಿಜಟೆಯೆಂಬವಳು, ತಾಸಾಂ - ಆ ರಕ್ಕಸಿಯರ, ಮಧ್ಯಾತ್ - ಮಧ್ಯಭಾಗದಿಂದ, ಸಮುತ್ಥಾಯ - ಎದ್ದು, ವಾಕ್ಯಂ - ಮಾತನ್ನು, ಅಬ್ರುವೀತ್-ನುಡಿದಳು, ಆತ್ಮಾನಂ-ನಿಮ್ಮನ್ನುಸೀವೇ, ಕ್ಷಿಪ್ರಂ-ಜಾಗ್ರತೆಯಾಗಿ, ಖಾದತ-

---

ಮಾತುಗಳಿಗೆ ಎಳ್ಳಷ್ಟೂ ಗಮನಕೊಡದೆ, ಅವರೆಷ್ಟು ಬೆದರಿಸಿದರೂ ಬೆದರದೆ ಸುಮ್ಮನಿದ್ದಳು. ಆಗ ಮಾಂಸಭೋಜನರಾದ ಆ ರಾಕ್ಷಸಿಯರು ತಮ್ಮ ಬೆದರಿಕೆಯು ನಿಷ್ಪ್ರಯೋಜನವಾಗಲು, ಸೀತಾದೇವಿಯ ಅಭಿಪ್ರಾಯವನ್ನು ರಾವಣಾಸುರನಿಗೆ ತಿಳಿಸಿದರು. ಆಮೇಲೆ ಅವರೆಲ್ಲರೂ ಸೀತೆಯನ್ನು ವಶಪಡಿಸಿಕೊಳ್ಳುವ ವಿಷಯದಲ್ಲಿ ತಾವು ಮಾಡುತ್ತಿದ್ದ ಪ್ರಯತ್ನಗಳೆಲ್ಲವನ್ನೂ ತೊರೆದು, ನಿರಾಶರಾಗಿ ಆ ದೇವಿಯ ನಾಲ್ಕೂ ಪಾರ್ಶ್ವಗಳಲ್ಲಿ ಮಲಗಿ ನಿದ್ರಾವಶರಾದರು. ॥ ೭೮–೮೨ ॥ ಆ ರಾಕ್ಷಸಿಯರೆಲ್ಲರೂ ನಿದ್ರಿಸಿದೊಡನೆಯೇ ಪತಿಯ ಶ್ರೇಯಸ್ಸನ್ನೇ ಕೋರುತ್ತಿರುವ ಸೀತಾದೇವಿಯು ವ್ಯಸನದಿಂದ ಬಹು ದೀನೆಯಾಗಿ ಕೊರಗುತ್ತಿದ್ದಳು. ಆ ಸಮಯದಲ್ಲಿ ಆ ರಾಕ್ಷಸಿಯರ ನಡುವೆ ನಿದ್ರಿಸುತ್ತಿದ್ದ ತ್ರಿಜಟೆಯೆಂಬ ರಾಕ್ಷಸಿಯೊಬ್ಬಳು ಎಚ್ಚರಗೊಂಡು ಎಲ್ಲರನ್ನೂ ಎಬ್ಬಿಸಿ ಅವರನ್ನು ಕುರಿತು, "ಎಲೆ ರಾಕ್ಷಸಿಯರೇ! ನೀವು ನಿಮ್ಮನ್ನೇ ತಿಂದು

|| ೮೪ || ಜನಕಸ್ಯಾತ್ಮಜಾ ಸಾಧ್ವೀ ಸ್ನುಷಾ ದಶರಥಸ್ಯಚ । ಸ್ವಪ್ನೋಹ್ಯದ್ಯ ಮಯಾ ದೃಷ್ಟೋ ದಾರುಣೋ ರೋಮಹರ್ಷಣಃ । ರಕ್ಷಸಾಂಚ ವಿನಾಶಾಯ ಭರ್ತುರಸ್ಯಾ ಜಯಾಯಚ || ೮೫ || ಅಲಮೇಷಾ ಪರಿತ್ರಾತುಂ ರಾಘವಾದ್ರಾಕ್ಷಸೀಗಣಂ । ಅಭಿಯಾಚಾಮ ವೈದೇಹೀಮೇತದ್ಧಿ ಮಮ ರೋಚತೇ || ೮೬ || ಯಸ್ಯಾಹ್ಯೇವಂ ವಿಧಸ್ಸ್ವಪ್ನೋ ದುಃಖಿತಾಯಾಃ ಪ್ರದೃಶ್ಯತೇ । ಸಾ ದುಃಖೈರ್ವಿವಿಧೈರ್ಮುಕ್ತಾ ಸುಖಮಾಪ್ನೋತ್ಯನುತ್ತಮಂ । ಪ್ರಣಿಪಾತಪ್ರಸನ್ನಾಹಿ ಮೈಥಿಲೀ ಜನಕಾತ್ಮಜಾ"

ತಿನ್ನಿರಿ, ಜನಕಸ್ಯ - ಜನಕರಾಯನಿಗೆ, ಆತ್ಮಜಾ - ಮಗಳಾದ, ದಶರಥಸ್ಯ - ದಶರಥರಾಯನಿಗೆ, ಸ್ನುಷಾಚ - ಸೊಸೆಯೂ ಆದ, ಸಾಧ್ವೀ - ಪತಿವ್ರತೆಯಾದ, ಸೀತಾ - ಸೀತಾದೇವಿಯು, ನವಿನಶಿಷ್ಯತಿ-ನಾಶವನ್ನು ಹೊಂದುವುದಿಲ್ಲ, ಹಿ - ಯಾವ ಕಾರಣದಿಂದ, ರಕ್ಷಸಾಂ - ರಾಕ್ಷಸರಿಗೆ, ವಿನಾಶಾಯಚ-ನಾಶಕ್ಕೋಸ್ಕರವೂ, ಅಸ್ಯಾಃ - ಈ ಸೀತಾದೇವಿಯ, ಭರ್ತುಃ - ಪತಿಗೆ, ಜಯಾಯಚ - ಜಯಕ್ಕೋಸ್ಕರವೂ, ಅದ್ಯ - ಈಗ, ದಾರುಣಃ - ಭಯಂಕರವಾದ, ರೋಮಹರ್ಷಣಃ - ರೋಮಾಂಚವನ್ನುಂಟುಮಾಡುತ್ತಿರುವ, ಸ್ವಪ್ನಃ - ಸ್ವಪ್ನವು, ಮಯಾ - ನನ್ನಿಂದ, ದೃಷ್ಟಃ - ನೋಡಲ್ಪಟ್ಟಿತೋ. ||೮೪-೮೫|| ಇಯಂ - ಈ ಸೀತೆಯು, ರಾಘವಾತ್ - ಶ್ರೀರಾಮನಿಂದ, ರಾಕ್ಷಸೀಗಣಂ - ರಕ್ಕಸಿಯರ ಸಮೂಹವನ್ನು, ಪರಿತ್ರಾತುಂ - ರಕ್ಷಿಸುವದಕ್ಕೆ, ಅಲಂ - ಸಮರ್ಥಳು, ವೈದೇಹೀಂ - ಸೀತಾದೇವಿಯನ್ನು, ಅಭಿಯಾಚಾಮ-ಬೇಡಿಕೊಳ್ಳೋಣ, ಏತತ್-ಇದು, ಮಮ-ನನಗೆ, ರೋಚತೇಹಿ-ರುಚಿಸುವುದಷ್ಟೆ. ||೮೬|| ಹಿ-ಯಾವಕಾರಣದಿಂದ, ಏವಂವಿಧಃ-ಈರೀತಿಯಾದ, ಸ್ವಪ್ನಃ-ಕನಸು, ದುಃಖಿತಾಯಾಃ-ವ್ಯಸನಗೊಂಡ, ಯಸ್ಯಾಃ - ಯಾವಳ ವಿಷಯವಾಗಿ, ಪ್ರದೃಶ್ಯತೇ - ಕಾಣಲ್ಪಡುವದೋ, ಸಾ - ಅವಳು, ವಿವಿಧೈಃ-ನಾನಾಬಗೆಯಾದ, ದುಃಖೈಃ - ವ್ಯಸನಗಳಿಂದ, ಮುಕ್ತಾ - ಬಿಡಲ್ಪಟ್ಟವಳಾಗಿ, ಅನುತ್ತಮಂ-ಸರ್ವೋತ್ತಮವಾದ, ಸುಖಂ - ಸುಖವನ್ನು, ಆಪ್ನೋತಿ - ಹೊಂದುವಳು, ಹಿ - ಯಾವ ಕಾರಣದಿಂದ,

---

ಕೊಳ್ಳಿರಿ. ಸೀತೆಯನ್ನೇಕೆ ಭಕ್ಷಿಸುವಿರಿ? ಜನಕರಾಜಕುಮಾರಿಯೂ,ದಶರಥರಾಜನ ಸೊಸೆಯೂ, ಶ್ರೀರಾಮನ ಭಾರ್ಯೆಯೂ ಆಗಿರುವ ಮಹಾ ಪತಿವ್ರತೆಯಾದ ಈ ಸೀತೆಯು ಖಂಡಿತವಾಗಿಯೂ ನಾಶವಾಗುವುದಿಲ್ಲವು. ಈಗ ನಾನೊಂದು ಸ್ವಪ್ನವನ್ನು ಕಂಡೆನು. ಅದು ರಾಕ್ಷಸರಿಗೆಲ್ಲಾ ಕೇಡನ್ನುಂಟುಮಾಡುವುದಾಗಿಯೂ, ಈ ಸೀತೆಗೆ ಮೇಲನ್ನುಂಟುಮಾಡುವುದಾಗಿಯೂ, ಈಕೆಯ ಭರ್ತನಾದ ಶ್ರೀರಾಮನಿಗೆ ವಿಜಯವನ್ನುಂಟುಮಾಡುವುದಾಗಿಯೂ ಇರುವುದು. ಎಲೆ ದುಷ್ಟೆಯರಿರಾ! ಆ ಸ್ವಪ್ನವು ಮಹಾ ಭಯಂಕರವಾದುದು ; ಕೇಳಿದೊಡನೆಯೇ ರೋಮಾಂಚವನ್ನುಂಟುಮಾಡುವಂತಹುದು, ಕೇಳಿರಿ. ಶ್ರೀರಾಮನು ನಮ್ಮೆಲ್ಲರನ್ನು ಸಂಹರಿಸದಂತೆ ಕಾಪಾಡಲು ಈ ಸೀತೆಯೇ ಶಕ್ತಳಾಗಿರುವಳು. ಈಗ ನಾವೆಲ್ಲರೂ ಈಕೆಯನ್ನು ಪ್ರಾರ್ಥಿಸಿಕೊಳ್ಳೋಣ. ಹಾಗೆ ಮಾಡುವುದು ಮೇಲೆಂದು ನನಗೆ ತೋರುತ್ತಿರುವುದು. ಯಾವ ಸ್ತ್ರೀಯೇ ಆಗಲಿ ಮಹಾ ವ್ಯಸನದಲ್ಲಿದ್ದು ಇಂತಹ ಸ್ವಪ್ನವನ್ನು ಕಂಡರೆ, ಆಕೆಯು ಸಮಸ್ತ ವ್ಯಸನಗಳಿಂದಲೂ ಪಾರಾಗಿ ಸುಖವನ್ನು ಪಡೆಯುವಳೆಂಬುದರಲ್ಲಿ ಲೇಶಮಾತ್ರವೂ ಸಂಶಯವಿಲ್ಲವು. ಆದುದರಿಂದ ನಾವೀಗಲೇ ಈ ಸೀತಾದೇವಿಯನ್ನು ನಮಸ್ಕರಿಸಿ ನಮ್ಮನ್ನು ರಕ್ಷಿಸೆಂದು ಬೇಡಿಕೊಳ್ಳೋಣ. ನಮ್ಮ ಅಪರಾಧಗಳನ್ನು ಮನ್ನಿಸಬೇಕೆಂದು ಪ್ರಾರ್ಥಿಸೋಣ.

॥ ೮೮ ॥ ತತಸ್ಸಾ ಹ್ರೀಮತೀ ಬಾಲಾ ಭರ್ತುರ್ವಿಜಯಹರ್ಷಿತಾ । ಅವೋಚ "ದ್ಯದಿತತ್ತಥ್ಯಂ ಭವೇಯಂ ಶರಣಂ ಹಿ ವಃ" ॥ ೮೯ ॥ ತಾಂಚಾಹಂ ತಾದೃಶೀಂ ದೃಷ್ಟ್ವಾ ಸೀತಾಯಾ ದಾರುಣಾಂ ದಶಾಂ । ಚಿಂತಯಾಮಾಸ ವಿಕ್ರಾಂತೋ ನಚ ಮೇ ನಿರ್ವೃತಂ ಮನಃ ॥ ೯೦ ॥ ಸಂಭಾಷಣಾರ್ಥಂ ಚ ಮಯಾ ಜಾನಕ್ಯಾಶ್ಚಿಂತಿತೋ ವಿಧಿಃ । ಇಕ್ಷ್ವಾಕೂಣಾಂಹಿ ವಂಶಸ್ತು ತತೋ ಮಮ ಪುರಸ್ಕೃತಃ ॥ ೯೧ ॥ ಶ್ರುತ್ವಾ ತು ಗದಿತಾಂ ವಾಚಂ ರಾಜರ್ಷಿಗಣಪೂಜಿತಾಂ । ಪ್ರತ್ಯಭಾಷತ ಮಾಂ ದೇವೀ ಬಾಷ್ಪೈಃ

ಜನಕಾತ್ಮಜಾ - ಜನಕಪುತ್ರಿಯಾದ, ಮೈಥಿಲೀ - ಸೀತಾದೇವಿಯು, ಪ್ರಣಿ....ನ್ನಾ - ನಮಸ್ಕಾರ ಮಾತ್ರದಿಂದ ಪ್ರಸನ್ನಳಾಗುವಳೋ. ॥ ೮೮ ॥ ತತಃ - ಬಳಿಕ, ಭರ್ತುಃ - ಪತಿಯ, ವಿಜಯಹರ್ಷಿತಾ - ಜಯವಾರ್ತೆಯಿಂದ ಸಂತೋಷಗೊಂಡ, ಹ್ರೀಮತೀ - ಲಜ್ಜಾಯುಕ್ತಳಾದ, ಸಾಬಾಲಾ - ಆ ಸೀತಾದೇವಿಯು, ತತ್ - ಆ ಸ್ವಪ್ನದ ಮಾತು, ತಥ್ಯಂಯದಿ - ನಿಶ್ಚಯವಾದರೆ, ವಃ - ನಿಮಗೆ, ಶರಣಂ - ರಕ್ಷಕಳು, ಭವೇಯಂಹಿ - ಆಗುವೆನಷ್ಟೆ, ಇತಿ - ಇಂತೆಂದು, ಅವೋಚತ್ - ಹೇಳಿದಳು. ॥ ೮೯ ॥ ಅಹಂ - ನಾನು, ತಾದೃಶೀಂ - ಅಂಥಾ ದುಃಖಿತಳಾದ, ತಾಂ - ಆ ಸೀತಾದೇವಿಯನ್ನೂ, ಸೀತಾಯಾಃ- ಸೀತಾದೇವಿಯ, ದಾರುಣಾಂದಶಾಂಚ - ಕ್ರೂರಾವಸ್ಥೆಯನ್ನೂ ಸಹ, ದೃಷ್ಟ್ವಾ - ಕಂಡು, ವಿಕ್ರಾಂತಃ- ಬಹಳ ದುಃಖಿತನಾಗಿ, ಚಿಂತಯಾಮಾಸ - ಆಲೋಚಿಸಿದೆನು, ಮೇ - ನನ್ನ, ಮನಶ್ಚ - ಮನಸ್ಸೂ, ನನಿರ್ವೃತಂ - ಸುಖಿತವಾಗಲಿಲ್ಲ. ॥ ೯೦ ॥ ಜಾನಕ್ಯಾಃ - ಸೀತಾದೇವಿಯ, ಸಂಭಾಷಣಾರ್ಥಂ - ಸಂವಾದಾರ್ಥವಾಗಿ, ವಿಧಿಃ - ಉಪಾಯವು, ಮಯಾ - ನನ್ನಿಂದ, ಚಿಂತಿತಃ - ಆಲೋಚಿಸಲ್ಪಟ್ಟಿತು, ತತಃ - ಬಳಿಕ, ಇಕ್ಷ್ವಾಕೂಣಾಂ - ಇಕ್ಷ್ವಾಕುಕುಲೋತ್ಪನ್ನ ರಾಜರ, ವಂಶಃ - ಕುಲವು, ಮಮ - ನನ್ನಿಂದ, ಪುರಸ್ಕೃತಃ - ಸ್ತುತಿಸಲ್ಪಟ್ಟಿತು. ॥ ೯೧ ॥ ದೇವೀ - ಸೀತಾದೇವಿಯು, ಗದಿತಾಂ - ಹೇಳಲ್ಪಟ್ಟ, ರಾಜ....ತಾಂ - ರಾಜರ್ಷಿಸಮೂಹಗಳಿಂದ ಪೂಜಿಸಲ್ಪಟ್ಟ, ವಾಚಂ - ಮಾತನ್ನು, ಶ್ರುತ್ವಾತು- ಕೇಳಿಯೂ ಕೂಡ, ಬಾಷ್ಪೈಃ - ಕಂಬನಿಗಳಿಂದ, ಪಿಹಿ....ನಾ - ಆಚ್ಛಾದಿತವಾದ ನೇತ್ರಗಳುಳ್ಳವಳಾಗಿ, ಮಾಂಪ್ರತಿ - ನನ್ನನ್ನು ಕುರಿತು, ಅಭಾಷತ - ಮಾತಾಡಿದಳು. ॥ ೯೨ ॥ ಹೇ ವಾನರಪುಂಗವ -

---

ಇದೇ ನನಗೆ ಸೂಕ್ತವಾಗಿ ತೋರುವುದು. ಈ ಸೀತೆಯು ಆಶ್ರಿತರಾದವರ ವಿಷಯದಲ್ಲಿ ಪ್ರಸನ್ನಳಾಗುವವಳು. ಈಗಲೇ ನಾವೆಲ್ಲರೂ ಈಕೆಯನ್ನು ಪ್ರಾರ್ಥಿಸೋಣ" ಎಂದು ಹೇಳಿದಳು. ತ್ರಿಜಟೆಯ ಮಾತುಗಳನ್ನು ಕೇಳಿ ಆ ರಾಕ್ಷಸಿಯರೆಲ್ಲರೂ ಭಯಚಕಿತರಾದರು. ಕೂಡಲೇ ಅವರೆಲ್ಲರೂ ಸೀತಾದೇವಿಗೆ ಮಣಿದು ರಕ್ಷಿಸೆಂದು ಬೇಡಿದರು. ಆಗಲಾ ದೇವಿಯು ತನ್ನ ಭರ್ತನ ವಿಜಯಸೂಚಕವಾದ ಆ ಸ್ವಪ್ನವೃತ್ತಾಂತವನ್ನು ಕೇಳಿ, ಬಹಳವಾಗಿ ಸಂತೋಷಗೊಂಡು, ಅವರನ್ನು ಕುರಿತು, "ಎಲೌ! ನೀವು ಹೇಳಿದುದು ನಿಜವಾದರೆ ಅವಶ್ಯವಾಗಿಯೂ ನಾನು ನಿಮಗೆ ರಕ್ಷಕಳಾಗುವೆನು" ಎಂದು ಹೇಳಿದಳು. ॥ ೮೩–೯೦ ॥ ಆಗ ನಾನು ಆ ಸೀತಾದೇವಿಗುಂಟಾದ ಮಹಾ ದುರವಸ್ಥೆಯನ್ನು ನೋಡಿ 'ಚಿಂತಿಸಿ' ಬಹು ದುಃಖಪಟ್ಟೆನು. ಆಗ ನನ್ನ ಮನಸ್ಸೇ ಕಲಕಿಹೋಯಿತು. ಕೂಡಲೇ ನಾನು ಆ ದೇವಿಯೊಡನೆ ಮಾತನಾಡಬೇಕೆಂದು ಬಯಸಿ, ಉಪಾಯವನ್ನು ಯೋಚಿಸಿ, ಇಕ್ಷ್ವಾಕುವಂಶವನ್ನು ಸ್ತುತಿಸಲಾರಂಭಿಸಿದೆನು. ರಾಜರ್ಷಿಪೂಜಿತವಾದ ನನ್ನ ಮಾತುಗಳನ್ನು ಕೇಳಿ ಆ ಸೀತಾದೇವಿಯು ಮತ್ತೂ

ಪಿಹಿತಲೋಚನಾ ॥೯೨॥ "ಕಸ್ತ್ವಂ ಕೇನ ಕಥಂ ಚೇಹ ಪ್ರಾಪ್ತೋ ವಾನರಪುಂಗವ? । ಕಾಚ ರಾಮೇಣ ತೇ ಪ್ರೀತಿಸ್ತನ್ಮೇ ಶಂಸಿತುಮರ್ಹಸಿ?" । ತಸ್ಯಾಸ್ತದ್ವಚನಂ ಶ್ರುತ್ವಾ ಅಹಮಪ್ಯಬ್ರುವಂ ವಚಃ ॥೯೪॥ "ದೇವಿ! ರಾಮಸ್ಯ ಭರ್ತುಸ್ತೇ ಸಹಾಯೋ ಭೀಮವಿಕ್ರಮಃ । ಸುಗ್ರೀವೋ ನಾಮ ವಿಕ್ರಾಂತೋ ವಾನರೇಂದ್ರೋ ಮಹಾಬಲಃ ॥೯೫॥ ತಸ್ಯ ಮಾಂ ವಿದ್ಧಿ ಭೃತ್ಯಂ ತ್ವಂ ಹನೂಮಂತಮಿಹಾಗತಂ । ಭರ್ತ್ರಾಽಹಂ ಪ್ರೇಷಿತಸ್ತುಭ್ಯಂ ರಾಮೇಣಾಕ್ಲಿಷ್ಟಕರ್ಮಣಾ ॥೯೬॥ ಇದಂಚ

ಎಲೈ ಕಪಿಶ್ರೇಷ್ಠನೇ, ತ್ವಂ - ನೀನು, ಕಃ - ಯಾರು, ಕೇನ - ಯಾರಿಂದ ಕಳುಹಿಸಲ್ಪಟ್ಟಿರುವೆ, ಇಹಚ - ಇಲ್ಲಿಗಾದರೆ, ಕಥಂಪ್ರಾಪ್ತಃ - ಹೇಗೆ ಬಂದೆ, ರಾಮೇಣ - ಶ್ರೀರಾಮನೊಡನೆ, ತೇ - ನಿನಗೆ, ಪ್ರೀತಿಃ - ವಿಶ್ವಾಸವು, ಕಾ - ಹೇಗೆ, ತತ್ - ಅದನ್ನು, ಮೇ - ನನಗೆ, ಶಂಸಿತುಂ - ಹೇಳಲು, ಅರ್ಹಸಿ - ಯೋಗ್ಯನಾಗಿರುವೆ. ॥೯೩॥ ತಸ್ಯಾಃ - ಆ ಸೀತಾದೇವಿಯು, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ಅಹಮಪಿ - ನಾನೂ, ವಚಃ - ಮಾತನ್ನು, ಅಬ್ರುವಂಹಿ - ಹೇಳಿದೆನಷ್ಟೆ. ॥೯೪॥ ಹೇ ದೇವಿ - ಎಲೈ ಸೀತಾದೇವಿಯೇ, ತೇಭರ್ತುಃ - ನಿನ್ನ ಗಂಡನಾದ, ರಾಮಸ್ಯ - ಶ್ರೀರಾಮನಿಗೆ, ಸಹಾಯಃ - ಸಹಾಯಭೂತನಾದ, ಭೀಮವಿಕ್ರಮಃ - ಭಯಂಕರ ಪರಾಕ್ರಮವುಳ್ಳ, ವಿಕ್ರಾಂತಃ - ಶತ್ರುಗಳನ್ನಾಕ್ರಮಿಸುವ ಶಕ್ತಿಯುಳ್ಳ, ಮಹಾಬಲಃ - ಬಹುಬಲಿಷ್ಠನಾದ, ಸುಗ್ರೀವೋನಾಮ - ಸುಗ್ರೀವನೆಂದು ಪ್ರಸಿದ್ಧನಾದ, ವಾನರೇಂದ್ರಃ - ವಾನರಾಧಿಪತಿಯು, (ಅಸ್ತಿ - ಇರುವನು), ತಸ್ಯ - ಆ ಸುಗ್ರೀವನಿಗೆ, ಭೃತ್ಯಂ - ಸೇವಕನಾಗಿ, ಇಹಾಗತಂ - ಇಲ್ಲಿ ಬಂದ, ಮಾಂ - ನನ್ನನ್ನು, ತ್ವಂ - ನೀನು, ಹನುಮಂತಂ - ಹನುಮಂತನೆಂದು, ವಿದ್ಧಿ - ಅರಿತುಕೋ. ॥೯೫॥ ಅಹಂ - ನಾನು, ಭರ್ತ್ರಾ - ನಿನ್ನ ಪತಿಯಾದ, ಅಕ್ಲಿ....ಣಾ - ಕ್ಲೇಶವಿಲ್ಲದ ವ್ಯಾಪಾರವುಳ್ಳ, ರಾಮೇಣ - ಶ್ರೀರಾಮನಿಂದ, ತುಭ್ಯಂ - ನಿನಗೋಸ್ಕರ, ಪ್ರೇಷಿತಃ - ಕಳುಹಿಸಲ್ಪಟ್ಟೆನು. ॥೯೬॥ ಹೇ ಯಶಸ್ವಿನೀ-

---

ವ್ಯಸನಸಂತಪ್ತೆಯಾಗಿ ಧಾರೆಧಾರೆಯಾಗಿ ಕಂಬನಿಗರೆಯುತ್ತ ನನ್ನನ್ನು ನೋಡಿ, "ಎಲೈ ವಾನರೋತ್ತಮನೇ! ನೀನಾರು? ಏತಕ್ಕೋಸ್ಕರ ಇಲ್ಲಿಗೆ ಬಂದಿರುವೆ? ಹೇಗೆ ಬಂದೆ! ಶ್ರೀರಾಮನಿಗೂ, ನಿನಗೂ ಸ್ನೇಹವುಂಟಾದುದು ಹೇಗೆ? ಈ ವೃತ್ತಾಂತವೆಲ್ಲವನ್ನೂ ನನಗೆ ವಿಸ್ತಾರವಾಗಿ ತಿಳಿಸುವವನಾಗು" ಎಂದು ಹೇಳಿದಳು. ಆಗ ನಾನು, "ಎಲೌ ಸೀತಾದೇವಿಯೇ! ನಿನ್ನ ಭರ್ತನಾದ ಶ್ರೀರಾಮನಿಗೆ ಪರಮಮಿತ್ರನೂ, ಮಹಾ ಭಯಂಕರ ಪರಾಕ್ರಮವುಳ್ಳವನೂ, ಎಂತಹ ಅಸಾಧ್ಯಕಾರ್ಯವನ್ನೂ ನಿಜಪರಾಕ್ರಮದಿಂದಲೇ ನೆರವೇರಿಸುವವನೂ ಆದ ಸುಗ್ರೀವನೆಂಬೊಬ್ಬ ವಾನರರಾಜನಿರುವನು. ನಾನು ಆತನಿಗೆ ಮಂತ್ರಿಯು. ನನ್ನ ಹೆಸರು ಆಂಜನೇಯನೆಂದು. ಎಂತಹ ದುರಂತಕಾರ್ಯದಲ್ಲಿಯೂ ವ್ಯಸನಪಡದವನೂ, ನಿನ್ನ ಪತಿದೇವನೂ ಆದ ಶ್ರೀರಾಮಚಂದ್ರನು ನಿನ್ನನ್ನು ಹುಡುಕಿಬರಲು ನನ್ನನ್ನು ಕಳುಹಿಸಿದನು. ಅದಕ್ಕಾಗಿಯೇ ನಾನಿಲ್ಲಿಗೆ ಬಂದಿರುವೆನು. ॥ ೯೧—೯೫ ॥ ಎಲೌ ಯಶಸ್ವಿನಿಯೇ! ಪುರುಷೋತ್ತಮನೂ, ಶ್ರೀಮಂತನೂ, ದಶರಥರಾಜಕುಮಾರನೂ ಆದ ಶ್ರೀರಾಮನೇ ಸಾಕ್ಷಾತ್ತಾಗಿ ನಿನಗೆ ಗುರ್ತಿಗೋಸ್ಕರ ಈ ಉಂಗುರವನ್ನು ಕಳುಹಿಸಿ ಕೊಟ್ಟಿರುವನು. ಇದನ್ನು ಸ್ವೀಕರಿಸು" ಎಂದು ಹೇಳಿ ರಾಮಾಂಗುಳೀಯಕವನ್ನು ಆಕೆಗೆ

ಪುರುಷವ್ಯಾಘ್ರಃ ಶ್ರೀಮಾನ್ ದಾಶರಥಿಸ್ಸ್ವಯಂ । ಅಂಗುಳೀಯಮಭಿಜ್ಞಾನಮದಾತ್ತುಭ್ಯಂ ಯಶಸ್ವಿನೀ ॥೯೭॥ ತದಿಚ್ಛಾಮಿ ತ್ವಯಾಜ್ಞಪ್ತಂ ದೇವಿ! ಕಿಂ ಕರವಾಣ್ಯಹಂ। ರಾಮಲಕ್ಷ್ಮಣಯೋಃ ಪಾರ್ಶ್ವಂ ನಯಾಮಿ ತ್ವಾಂ ಕಿಮುತ್ತರಂ"॥೯೮॥ ಏತಚ್ಛ್ರುತ್ವಾ ವಿದಿತ್ವಾಚ ಸೀತಾ ಜನಕನಂದಿನೀ । ಆಹ "ರಾವಣಮುತ್ಸಾದ್ಯ ರಾಘವೋ ಮಾಂ ನಯತ್ವಿ"ತಿ ॥೯೯॥ ಪ್ರಣಮ್ಯ ಶಿರಸಾ ದೇವೀಮಹಮಾರ್ಯಾಮನಿಂದಿತಾಂ। ರಾಘವಸ್ಯ ಮನೋಹ್ಲಾದಮಭಿಜ್ಞಾನಮಯಾಚಿಷಂ ॥೧೦೦॥ ಅಥ ಮಾಮಬ್ರವೀತ್ಸೀತಾ "ಗೃಹ್ಯತಾಮಯಮುತ್ತಮಃ । ಮಣಿರ್ಯೇನ ಮಹಾಬಾಹೂ ರಾಮಸ್ತ್ವಾಂ ಬಹು

ಎಲೌ ಯಶೋವಂತಳೇ, ಪುರುಷವ್ಯಾಘ್ರಃ - ಪುರುಷಶ್ರೇಷ್ಠನಾದ, ಶ್ರೀಮಾನ್ - ಸಂಪದ್ಯುಕ್ತನಾದ, ದಾಶರಥಿಃ - ದಶರಥಪುತ್ರನಾದ ಶ್ರೀರಾಮನು, ಸ್ವಯಂ - ತಾನಾಗಿಯೇ, ತುಭ್ಯಂ-ನಿನಗೋಸ್ಕರ, ಅಭಿಜ್ಞಾನಂ - ಗುರ್ತಾಗಿರುವ, ಅಂಗುಳೀಯಕಂ - ಅಂಗುಳ್ಯಾಭರಣವನ್ನು, ಅದಾತ್ - ಕೊಟ್ಟಿದ್ದಾನೆ. ॥೯೭॥ ಯತ್ - ಯಾವದು, ತ್ವಯಾ - ನಿನ್ನಿಂದ, ಆಜ್ಞಪ್ತಂ - ಆಜ್ಞಾಪಿಸಲ್ಪಡುತ್ತದೆಯೋ, ತತ್ - ಅದನ್ನು, ಇಚ್ಛಾಮಿ-ಅಪೇಕ್ಷಿಸುತ್ತೇನೆ, ಹೇ ದೇವಿ-ಎಲೆ ತಾಯೆ, ಅಹಂ ನಾನು, ಕಿಂಕರವಾಣಿ- ಏನುಮಾಡಲಿ, ರಾಮ....ಯೋಃ - ರಾಮಲಕ್ಷ್ಮಣರ, ಪಾರ್ಶ್ವಂ - ಸಮೀಪಕ್ಕೆ, ತ್ವಾಂ - ನಿನ್ನನ್ನು, ನಯಾಮಿ - ಹೊಂದಿಸಲೇ, ಕಿಮುತ್ತರಂ - ಏನಪ್ಪಣೆ. ॥೯೮॥ ಜನಕನಂದಿನೀ - ಜನಕಪುತ್ರಿಯಾದ, ಸೀತಾ - ಸೀತಾದೇವಿಯು, ಏತತ್ - ಈ ಮಾತನ್ನು, ಶ್ರುತ್ವಾ - ಕೇಳಿ, ವಿದಿತ್ವಾಚ - ಅರಿತುಕೊಂಡು, ರಾಘವಃ - ಶ್ರೀರಾಮನು, ರಾವಣಂ - ರಾವಣನನ್ನು, ಉತ್ಸಾದ್ಯ - ಮೂಲೋತ್ಪಾಟನ ಮಾಡಿ, ಮಾಂ - ನನ್ನನ್ನು, ನಯತು - ಕರೆದುಕೊಂಡು ಹೋಗಲಿ, ಇತಿ - ಇಂತೆಂದು, ಆಹ - ಹೇಳಿದಳು. ॥೯೯॥ ಅಹಂ - ನಾನು, ಅನಿಂದಿತಾಂ - ನಿರ್ದೋಷಳಾದ, ಆರ್ಯಾಂ - ಪೂಜ್ಯಳಾದ, ದೇವೀಂ - ಸೀತಾದೇವಿಯನ್ನು, ಶಿರಸಾ - ಶಿರಸ್ಸಿನಿಂದ, ಪ್ರಣಮ್ಯ - ವಂದಿಸಿ, ರಾಘವಸ್ಯ - ಶ್ರೀರಾಮನಿಗೆ, ಮನೋಹ್ಲಾದಂ - ಮನಸ್ಸಂತೋಷಕರವಾದ, ಅಭಿಜ್ಞಾನಂ - ಗುರ್ತನ್ನು, ಅಯಾಚಿಷಂ - ಬೇಡಿದೆನು. ॥೧೦೦॥ ಅಥ - ಅನಂತರದಲ್ಲಿ, ಯೇನ - ಯಾವ ಮಣಿಯಿಂದ, ಮಹಾಬಾಹುಃ - ಮಹಾಭುಜಗಳುಳ್ಳ, ರಾಮಃ - ಶ್ರೀರಾಮನು, ತ್ವಾಂ - ನಿನ್ನನ್ನು, ಬಹುಮನ್ಯತೇ - ಸನ್ಮಾನಿಸುವನೋ, ಸೋಽಯಂ - ಅಂಥ, ಉತ್ತಮಃ - ಶ್ರೇಷ್ಠವಾದ, ಮಣಿಃ - ರತ್ನವು, ಗೃಹ್ಯತಾಂ - ಗ್ರಹಿಸಲ್ಪಡಲಿ,

ಕೊಟ್ಟೆನು. ಮತ್ತೂ ಆಕೆಯನ್ನು ಕುರಿತು ನಾನು; "ಓ ಜಾನಕಿಯೇ! ಇಗೋ ನಿನ್ನ ಆಜ್ಞಾನುಸಾರ ನಡೆದುಕೊಳ್ಳಲು ಸಿದ್ಧನಾಗಿರುವೆನು. ನೀನಿಷ್ಟಪಟ್ಟರೆ ನಾನೀಗಲೇ ನಿನ್ನನ್ನು ಶ್ರೀರಾಮಲಕ್ಷ್ಮಣರಿರುವೆಡೆಗೆ ಸೇರಿಸುವೆನು. ನಿನ್ನ ಆಜ್ಞೆಯನ್ನೇ ನಿರೀಕ್ಷಿಸುತ್ತಿರುವೆನು." ಎಂದೆನು. ನನ್ನ ಮಾತುಗಳನ್ನು ಕೇಳಿ, ನಾನಿತ್ತ ಅಂಗುಳೀಯಕವನ್ನು ನೋಡಿ ಆ ದೇವಿಯು, "ಎಲೈ ಹನುಮಂತನೇ! ನನ್ನ ಭರ್ತನಾದ ಶ್ರೀರಾಮನು ರಾವಣನನ್ನು ಕೊಂದು ನನ್ನನ್ನು ಕರೆದುಕೊಂಡು ಹೋಗಲಿ" ಎಂದಳು. ಆಗ ನಾನು ಶ್ರೀರಾಮನ ಮನೋಹ್ಲಾದಿನಿಯೂ, ಅನಿಂದಿತೆಯೂ ಆದ ಆಕೆಯನ್ನು ಕುರಿತು, ಓ ದೇವಿಯೇ! ಶ್ರೀರಾಮಮೂರ್ತಿಗೆ ಗುರ್ತಿಗಾಗಿ ಏನಾದರೊಂದು ಪದಾರ್ಥವನ್ನು ಕೊಡೆಂದು ಕೇಳಿದೆನು. ॥ ೯೭-೧೦೦ ॥ ಆಗಲಾಕೆಯು, "ಎಲೈ ಆಂಜನೇಯನೇ! ನೀನು ಈ ಚೂಡಾಮಣಿಯನ್ನು ತೆಗೆದುಕೊಂಡುಹೋಗು. ಉತ್ತಮೋತ್ತಮವಾದ ಈ ಚೂಡಾರತ್ನವನ್ನು ನೋಡಿ ಮಹಾ

ಮನ್ಯತೇ'' ||೧೦೧|| ಇತ್ಯುಕ್ತ್ವಾ ತು ವರಾರೋಹಾ ಮಣಿಪ್ರವರಮದ್ಭುತಂ | ಪ್ರಾಯಚ್ಛತ್ಪರಮೋದ್ವಿಗ್ನಾ ವಾಚಾ ಮಾಂ ಸಂದಿದೇಶಹ || ೧೦೨ || ತತಸ್ತಸ್ಯೈ ಪ್ರಣಮ್ಯಾಽಹಂ ರಾಜಪುತ್ರ್ಯೈ ಸಮಾಹಿತಃ | ಪ್ರದಕ್ಷಿಣಂ ಪರಿಕ್ರಾಮಮಿಹಾಽಭ್ಯುದ್ಗತಮಾನಸಃ || ೧೦೩ || ಉತ್ತರಂ ಪುನರೇವೇದಂ ನಿಶ್ಚಿತ್ಯ ಮನಸಾ ತಯಾ | ''ಹನೂಮನ್ಮಮ ವೃತ್ತಾಂತಂ ವಕ್ತುಮರ್ಹಸಿ ರಾಘವೇ || ೧೦೪ || ಯಥಾ ಶ್ರುತ್ವೈವ ನಚಿರಾತ್ತಾವುಭೌ ರಾಮಲಕ್ಷ್ಮಣೌ | ಸುಗ್ರೀವಸಹಿತೌ ವೀರಾವುಪೇಯಾತಾಂ ತಥಾ ಕುರು||೧೦೫||

ಇತಿ - ಇಂತೆಂದು, ಸೀತಾ - ಸೀತಾದೇವಿಯು, ಮಾಂ - ನನ್ನನ್ನು ಕುರಿತು, ಅಬ್ರವೀತ್-ನುಡಿದಳು. ||೧೦೧|| ವರಾರೋಹಾ - ಉತ್ತಮಾಂಗನೆಯಾದ ಸೀತಾದೇವಿಯು, ಇತ್ಯುಕ್ತ್ವಾ - ಹೀಗೆ ಹೇಳಿ, ಪರಮೋದ್ವಿಗ್ನಾ - ಬಹು ದುಃಖಿತೆಯಾಗಿ, ಅದ್ಭುತಂ - ಆಶ್ಚರ್ಯಕರವಾದ, ಮಣಿಪ್ರವರಂ-ಉತ್ತಮ ರತ್ನವನ್ನು, ಪ್ರಾಯಚ್ಛತ್ - ಇತ್ತಳು, ವಾಚಾ - ಮಾತಿನಿಂದ, ಮಾಂ - ನನ್ನನ್ನು ಕುರಿತು, ಸಂದಿದೇಶಹ - ಆಜ್ಞಾಪಿಸಿದಳು. || ೧೦೨ || ತತಃ - ಬಳಿಕ, ಅಹಂ - ನಾನು, ರಾಜಪುತ್ರ್ಯೈ - ಜನಕರಾಜಪುತ್ರಿಯಾದ, ತಸ್ಯೈ - ಆ ಸೀತಾದೇವಿಗೆ, ಪ್ರಣಮ್ಯ - ವಂದಿಸಿ, ಸಮಾಹಿತಃ - ಸಮಾಧಾನಚಿತ್ತನಾಗಿ, ಪ್ರದಕ್ಷಿಣಂ - ಪ್ರದಕ್ಷಿಣವಾಗಿ, ಪರಿಕ್ರಮ್ಯ-ತಿರುಗಿ, ಇಹ-ಇಲ್ಲಿಗೆ, ಅಭ್ಯು....ಸಃ - ಹಿಂತಿರುಗಿ ಬರಲು ಮನಸ್ಸುಳ್ಳವನಾದೆನು. || ೧೦೩ || ಹೇ ಹನುಮನ್ - ಎಲೈ ಹನುಮಂತನೇ, ರಾಘವೇ - ಶ್ರೀರಾಮನಲ್ಲಿ, ಮಮ - ನನ್ನ, ವೃತ್ತಾಂತಂ - ವಾರ್ತೆಯನ್ನು, ವಕ್ತುಂ - ಹೇಳಲು, ಅರ್ಹಸಿ - ಯೋಗ್ಯನಾಗಿರುವೆ, ವೀರೌ - ಶೂರರಾದ, ಉಭೌ - ಈರ್ವರಾದ, ತೌರಾಮಲಕ್ಷ್ಮಣೌ - ಆ ರಾಮಲಕ್ಷ್ಮಣರು, ಶ್ರುತ್ವೈವ - ಕೇಳುತ್ತಲೇ, ಸುಗ್ರೀವಸಹಿತೌ - ಸುಗ್ರೀವದೊಡಗೂಡಿ, ನಚಿರಾತ್ - ಜಾಗ್ರತೆಯಾಗಿ, ಯಥಾಉಪೇಯಾತಾಂ - ಹೇಗೆಬರುವರೋ, ತಥಾಕುರು - ಹಾಗೆಮಾಡು, ಅನ್ಯಥಾಭವೇದ್ಯದಿ - ಹಾಗಾಗದಿದ್ದರೆ, (ತದಾ - ಆಗ,) ಏತದ್ದ್ವಿಮಾಸೌ - ಈ ಎರಡುತಿಂಗಳ

ಬಾಹುವಾದ ಶ್ರೀರಾಮಚಂದ್ರನು ನಿನ್ನನ್ನು ವಿಶೇಷವಾಗಿ ಗೌರವಿಸುವನು. ನೀನು ನನ್ನನ್ನು ಕಂಡುಬಂದೆಯೆಂದು ನಿಜವಾಗಿಯೂ ನಂಬುವನು.'' ಎಂದು ಹೇಳಿದಳು. ಸುಶ್ರೋಣಿಯಾದ ಆ ದೇವಿಯು ಹೀಗೆ ಹೇಳಿ ಮಹಾ ವ್ಯಸನಸಂತಪ್ತೆಯಾಗಿ ಪರಮಾಶ್ಚರ್ಯಕರವಾದ ಆ ಚೂಡಾರತ್ನವನ್ನು ನನ್ನ ಕೈಗೆ ಕೊಟ್ಟು ಮತ್ತೂ ಕೆಲವು ಮಾತುಗಳನ್ನು ಶ್ರೀರಾಮನಿಗೆ ಹೇಳಬೇಕೆಂದು ನನಗೆ ಆಜ್ಞಾಪಿಸಿದಳು. ಆಮೇಲೆ ನಾನು ತ್ವರೆಗೊಂಡು, ಶ್ರೀರಾಮನ ಬಳಿಗೆ ಹೋಗಲಿಷ್ಟವುಳ್ಳವನಾಗಿ, ರಾಜಪುತ್ರಿಯಾದ ಆ ಸೀತಾದೇವಿಗೆ ಪ್ರದಕ್ಷಿಣ ನಮಸ್ಕಾರವನ್ನು ಮಾಡಿದೆನು. ಆಗಲಾಕೆಯು ತನ್ನಲ್ಲಿ ತಾನೇ ಸ್ವಲ್ಪಹೊತ್ತು ಆಲೋಚಿಸುತ್ತಿದ್ದು ಆಮೇಲೆ ನನ್ನನ್ನು ಕುರಿತು, '' ಎಲೈ ಆಂಜನೇಯನೇ! ನಾನನುಭವಿಸುತ್ತಿರುವ ದುಃಖವನ್ನೂ, ಸಂಕಟವನ್ನೂ, ಇಲ್ಲಿ ನಡೆದ ವೃತ್ತಾಂತವನ್ನೂ ಶ್ರೀರಾಮನಿಗೆ ಚೆನ್ನಾಗಿ ತಿಳಿಯಹೇಳು. ನನ್ನ ಸಮಾಚಾರವನ್ನು ಕೇಳಿದೊಡನೆಯೇ ಮಹಾ ಶೌರ್ಯವಂತರಾದ ಶ್ರೀರಾಮಲಕ್ಷ್ಮಣರೀರ್ವರೂ, ನಿಮ್ಮ ದೊರೆಯಾದ ಸುಗ್ರೀವನೂ ಬಹು ಜಾಗ್ರತೆಯಾಗಿ ಇಲ್ಲಿಗೈತರುವಂತೆ ಮಾಡುವ ಭಾರವು ನಿನ್ನದಾಗಿರುವುದು. ಹಾಗೊಂದು ವೇಳೆ ಅವರಿಲ್ಲಿಗೆ ಜಾಗ್ರತೆಯಾಗಿ ಬಾರದಿದ್ದರೆ ಪ್ರಮಾದವಾಗುವುದು. ಇನ್ನು ನಾನು ಎರಡುತಿಂಗಳುಗಳವರೆಗೆ ಮಾತ್ರವೇ

ಯದ್ಯನ್ಯಥಾ ಭವೇದೇತದ್ದ್ವಾಭ್ಯಾಂ ಮಾಸೌ ಜೀವಿತಂ ಮಮ । ನ ಮಾಂ ದ್ರಕ್ಷ್ಯತಿ ಕಾಕುತ್ಸ್ಥೋ ಮ್ರಿಯೇ ಸಾಽಹಮನಾಥವತ್'' ॥ ೧೦೬ ॥ ತಚ್ಛ್ರುತ್ವಾ ಕರುಣಂ ವಾಕ್ಯಂ ಕ್ರೋಧೋ ಮಾಮಭ್ಯವರ್ತತ । ಉತ್ತರಂಚ ಮಯಾ ದೃಷ್ಟಂ ಕಾರ್ಯಶೇಷಮನಂತರಂ ॥ ೧೦೭ ॥ ತತೋಽವರ್ಧತ ಮೇ ಕಾಯಸ್ತದಾ ಪರ್ವತಸನ್ನಿಭಃ । ಯುದ್ಧಕಾಂಕ್ಷೀ ವನಂ ತಚ್ಚ ವಿನಾಶಯಿತುಮಾರಭೇ ॥ ೧೦೮ ॥ ತದ್ಭಗ್ನಂ ವನಷಂಡಂತು ಭ್ರಾಂತತ್ರಸ್ತಮೃಗದ್ವಿಜಂ । ಪ್ರತಿಬುದ್ಧಾ ನಿರೀಕ್ಷಂತೇ ರಾಕ್ಷಸ್ಯೋ ವಿಕೃತಾನನಾಃ

ವರಿಗೂ, ಮಮ - ನನ್ನ, ಜೀವಿತಂ - ಬದುಕುವಿಕೆಯು, (ತತಃಪರಂ - ಆಮೇಲೆ,) ಕಾಕುತ್ಸ್ಥಃ - ಶ್ರೀರಾಮನು, ಮಾಂ - ನನ್ನನ್ನು, ನದ್ರಕ್ಷ್ಯತಿ - ನೋಡುವುದಿಲ್ಲ, ಸಾಹಂ - ರಾಮಪತ್ನಿಯಾದ ಆ ನಾನು, ಅನಾಥವತ್-ನಾಥನಿಲ್ಲದವಳಂತೆ, ಮ್ರಿಯೇ-ಸಾಯುವೆನು, ಇತಿ-ಇಂತೆಂದು, ಮನಸಾ-ಮನದಿಂದ, ನಿಶ್ಚಿತ್ಯ - ನಿಶ್ಚಯಿಸಿ, ತಯಾ - ಆ ಸೀತಾದೇವಿಯಿಂದ, ಇದಮೇವ - ಈ ಮಾತೇ, ಉತ್ತರಂ - ಉತ್ತರವಾಗಿ, ಪುನಃ - ಮತ್ತೂ, ಉಕ್ತಂ - ಹೇಳಲ್ಪಟ್ಟಿತು. ॥ ೧೦೬ ॥ ಕರುಣಂ - ದೈನ್ಯದಿಂದೊಡಗೂಡಿದ, ತದ್ವಾಕ್ಯಂ - ಆ ಮಾತನ್ನು, ಶ್ರುತ್ವಾ - ಕೇಳಿ, ಕ್ರೋಧಃ - ಕೋಪವು, ಮಾಂ - ನನ್ನನ್ನು, ಅಭ್ಯವರ್ತತ - ಅನುಸರಿಸಿಬಂದಿತು, ಅನಂತರಂ - ಆ ಬಳಿಕ, ಉತ್ತರಂ - ಮುಂದೆ ಮಾಡತಕ್ಕ, ಕಾರ್ಯಶೇಷಂಚ-ಲಂಕಾವಿನಾಶರೂಪವಾದ ಕಾರ್ಯಶೇಷವೂ ಸಹ, ಮಯಾ-ನನ್ನಿಂದ, ದೃಷ್ಟಂ - ನೋಡಲ್ಪಟ್ಟಿತು. ॥೧೦೭॥ ತತಃ - ಬಳಿಕ, ಮೇ - ನನ್ನ, ಕಾಯಃ - ದೇಹವು, ಅವರ್ಧತ - ವೃದ್ಧಿಹೊಂದಿತು, ತದಾ - ಆ ಕಾಲದಲ್ಲಿ, ಪರ್ವತಸನ್ನಿಭಃ - ಪರ್ವತಸದೃಶನಾದ ನಾನು, ಯುದ್ಧಕಾಂಕ್ಷೀ - ಯುದ್ಧೇಚ್ಛೆಯುಳ್ಳವನಾಗಿ, ತದ್ವನಂಚ - ಆ ಅಶೋಕವನವನ್ನೂ, ವಿನಾಶಯಿತುಂ - ಧ್ವಂಸಮಾಡಲು, ಆರಭೇ - ಪ್ರಾರಂಭಿಸಿದೆನು. ॥ ೧೦೮ ॥ ವಿಕೃತಾನನಾಃ - ವಿಕಾರಮುಖಿಯರಾದ, ರಾಕ್ಷಸ್ಯಃ - ರಕ್ಕಸಿಯರು, ಪ್ರತಿಬುದ್ಧಾಃ - ಎಚ್ಚರಗೊಂಡು, ಭ್ರಾಂತ....ಜಂ - ಭ್ರಾಂತಿಹೊಂದಿ ಹೆದರಿದ ಮೃಗಗಳೂ ಹಕ್ಕಿಗಳೂ ಉಳ್ಳ, ಭಗ್ನಂ - ಮುರಿಯಲ್ಪಟ್ಟ, ತದ್ವನಷಂಡಂತು - ಆ ವನಸಮೂಹವನ್ನಾದರೆ, ನಿರೀಕ್ಷಂತೇ-ನೋಡಿದರು. ॥ ೧೦೯ ॥ ತಾಃ-ಆ ರಾಕ್ಷಸಸ್ತ್ರೀಯರು, ತಸ್ಮಿನ್ವನೇ-

---

ಜೀವದಿಂದಿರುವೆನು. ದುಷ್ಟರಾವಣನು ನನಗೆ ಅದುವರೆಗೂ ಅವಧಿಯಿತ್ತಿರುವನು. ಈ ಅವಧಿಯು ಕಳೆದಮೇಲೆ ಶ್ರೀರಾಮನು ನನ್ನನ್ನು ನೋಡಲಾರನು.'' ಎಂದು ಹೇಳಿದಳು. ॥ ೧೦೧–೧೦೫ ॥ ಅತಿ ದುಃಖಕರವಾದ ಸೀತೆಯು ಆ ಮಾತುಗಳನ್ನು ಕೇಳುತ್ತಲೇ ನನಗೆ ರಾವಣನ ವಿಷಯದಲ್ಲಿ ಕೋಪವುಕ್ಕೇರಿತು. ಆಗಲೇ ನಾನು ಮುಂದೆ ಮಾಡಬೇಕಾದ ಕಾರ್ಯಗಳನ್ನು ನಿಶ್ಚಯಿಸಿಕೊಂಡೆನು. ಆಗ ನಾನು ನನ್ನ ದೇಹವನ್ನು ಪರ್ವತಕ್ಕೆ ಸಮವಾಗಿ ಬೆಳಿಸಿಕೊಂಡೆನು. ಯುದ್ಧಕಾಂಕ್ಷಿಯಾದ ನಾನು ಮನೋಹರವಾದ ಆ ಅಶೋಕವನವೆಲ್ಲವನ್ನೂ ಭಂಗಗೊಳಿಸಲಾರಂಭಿಸಿದೆನು. ಅಲ್ಲಿದ್ದ ಮಹೋನ್ನತವಾದ ವೃಕ್ಷಗಳೆಲ್ಲವನ್ನೂ ಮುರಿದುಹಾಕಿದೆನು. ಆಗಲಾ ವೃಕ್ಷಗಳಲ್ಲಿ ವಾಸವಾಗಿದ್ದ ಪಕ್ಷಿಗಳೆಲ್ಲವೂ ಹೆದರಿ ಭಯಂಕರವಾಗಿ ಅರಚಿಕೊಂಡು ಅತ್ತಿತ್ತ ಚದುರಿದವು. ಅಲ್ಲಿದ್ದ ಮೃಗಳೆಲ್ಲವೂ ಹೆದರಿ ಓಡಲಾರಂಭಿಸಿದವು. ಈ ಕೋಲಾಹಲಧ್ವನಿಯಿಂದ ಅಲ್ಲಿಯೇ ಮಲಗಿ ನಿದ್ರಿಸುತ್ತಿದ್ದ ರಾಕ್ಷಸಸ್ತ್ರೀಯರೆಲ್ಲರೂ ಎಚ್ಚರಗೊಂಡು ದಿಗ್ಭ್ರಾಂತರಾಗಿ ಅತ್ತಿತ್ತ ನೋಡಲಾರಂಭಿಸಿದರು. ವಿಕಾರಮುಖಿಯ

॥ ೧೦೯ ॥ ಮಾಂಚ ದೃಷ್ಟ್ವಾ ವನೇ ತಸ್ಮಿನ್ ಸಮಾಗಮ್ಯ ತತಸ್ತತಃ । ತಾಸ್ಸಮಭ್ಯಾಗತಾಃ ಕ್ಷಿಪ್ರಂ ರಾವಣಾಯಾಽಚಚಕ್ಷಿರೇ ॥೧೧೦॥ "ರಾಜನ್ವನಮಿದಂ ದುರ್ಗಂ ತವ ಭಗ್ನಂ ದುರಾತ್ಮನಾ ।ವಾನರೇಣ ಹ್ಯವಿಜ್ಞಾಯ ತವ ವೀರ್ಯಂ ಮಹಾಬಲ! ॥೧೧೧॥ ದುರ್ಬುದ್ಧೇಸ್ತಸ್ಯ ರಾಜೇಂದ್ರ! ತವ ವಿಪ್ರಿಯಕಾರಿಣಃ । ವಧಮಾಜ್ಞಾಪಯ ಕ್ಷಿಪ್ರಂ ಯಥಾಽಸೌ ವಿಲಯಂ ವ್ರಜೇತ್" ॥೧೧೨॥ ತಚ್ಛ್ರುತ್ವಾ ರಾಕ್ಷಸೇಂದ್ರೇಣ ವಿಸೃಷ್ಟಾ ಭೃಶದುರ್ಜಯಾಃ । ರಾಕ್ಷಸಾಃ ಕಿಂಕರಾ ನಾಮ ರಾವಣಸ್ಯ ಮನೋಽನುಗಾಃ॥೧೧೩॥ ತೇಷಾಮಶೀತಿಸಾಹಸ್ರಂ ಶೂಲಮುದ್ಗರಪಾಣಿನಾಂ । ಮಯಾ ತಸ್ಮಿನ್ವನೋದ್ದೇಶೇ

ಆ ಉದ್ಯಾನದಲ್ಲಿ, ತತಸ್ತತಃ - ಅಲ್ಲಲ್ಲಿ, ಸಮಾಗಮ್ಯ - ಗುಂಪುಸೇರಿ, ಸಮಭ್ಯಾಗತಾಃ - ಬಂದು, ಮಾಂಚ - ನನ್ನನ್ನೂ, ದೃಷ್ಟ್ವಾ - ಕಂಡು, ರಾವಣಾಯ - ರಾವಣನಿಗೆ, ಕ್ಷಿಪ್ರಂ - ಜಾಗ್ರತೆಯಾಗಿ, ಆಚಚಕ್ಷಿರೇ - ಹೇಳಿದರು. ॥ ೧೧೦ ॥ ಹೇ ಮಹಾಬಲ - ಎಲೈ ಅತಿ ಬಲಾಢ್ಯನೇ, ಹೇ ರಾಜನ್ - ಎಲೈ ಒಡೆಯನೇ, ತವ - ನಿನ್ನ, ವೀರ್ಯಂ - ಪರಾಕ್ರಮವನ್ನು, ಅವಿಜ್ಞಾಯ - ತಿಳಿಯದೆ, ದುರಾತ್ಮನಾ - ದುರ್ಬುದ್ಧಿಯುಳ್ಳ, ವಾನರೇಣ - ಕಪಿಯಿಂದ, ದುರ್ಗಂ - ಅಗಮ್ಯವಾದ, ಇದಂತವವನಂ - ಈ ನಿನ್ನ ಉದ್ಯಾನವು, ಭಗ್ನಂ - ಮುರಿಯಲ್ಪಟ್ಟಿತು. ॥ ೧೧೧ ॥ ಹೇ ರಾಜೇಂದ್ರ - ಎಲೈ ರಾಜಾಧಿರಾಜನೇ, ತವ - ನಿನಗೆ, ವಿಪ್ರಿ....ಣಃ - ಅಪಕಾರವನ್ನು ಮಾಡಿರುವ, ದುರ್ಬುದ್ಧೇಃ - ಕೆಟ್ಟಬುದ್ಧಿಯುಳ್ಳ, ತಸ್ಯ - ಆ ವಾನರನ, ವಧಂ - ಸಂಹಾರವನ್ನು, ಕ್ಷಿಪ್ರಂ - ಜಾಗ್ರತೆಯಾಗಿ, ಯಥಾ - ಹೇಗೆ, ಅಸೌ - ಈ ಕಪಿಯು, ವಿಲಯಂ-ನಾಶವನ್ನು, ವ್ರಜೇತ್-ಹೊಂದುವನೋ, (ಹಾಗೆ) ಆಜ್ಞಾಪಯ-ಆಜ್ಞಾಪಿಸು. ॥ ೧೧೨ ॥ ತತ್ - ಆ ಮಾತನ್ನು, ಶ್ರುತ್ವಾ - ಕೇಳಿ, ರಾಕ್ಷಸೇಂದ್ರೇಣ - ರಾಕ್ಷಸಾಧಿಪತಿಯಿಂದ, ಭೃಶದುರ್ಜಯಾಃ-ಜಯಿಸಲಶಕ್ಯರಾದ, ರಾವಣಸ್ಯ-ರಾವಣನ, ಮನೋಽನುಗಾಃ-ಮನಸ್ಸಿಗೆ ಸರಿಯಾಗಿ ನಡೆಯುವವರಾದ, ಕಿಂಕರಾನಾಮ-ಕಿಂಕರರೆಂಬ, ರಾಕ್ಷಸಾಃ-ಅಸುರರು, ವಿಸೃಷ್ಟಾಃ-ಬಿಡಲ್ಪಟ್ಟರು, ಶೂಲ....ನಾಂ - ಶೂಲಮುದ್ಗರಗಳನ್ನು ಹಿಡಿದಿರುವ, ತೇಷಾಂ - ಆ ಕಿಂಕರರ, ಅಶೀತಿಸಾಹಸ್ರಂ - ಎಂಬತ್ತುಸಾವಿರಗಳು, ತಸ್ಮಿನ್ವನೋದ್ದೇಶೇ - ಆ ವನಪ್ರದೇಶದಲ್ಲಿ, ಮಯಾ - ನನ್ನಿಂದ, ಪರಿಘೇಣ-

---

ರಾದ ಆ ರಾಕ್ಷಸಿಯರೆಲ್ಲರೂ ನನ್ನನ್ನು ನೋಡಿ, ಕೂಡಲೇ ತಮ್ಮ ಪ್ರಭುವಾದ ರಾವಣಾಸುರನಲ್ಲಿಗೆ ಹೋಗಿ, "ಎಲೈ ಪ್ರಭುವೇ! ಮಹಾ ಬಲಾಢ್ಯನಾದ ನಿನ್ನ ಪ್ರಭಾವಪರಾಕ್ರಮಗಳನ್ನರಿಯದ ಯಾವನೋ ಒಬ್ಬ ವಾನರನು ನಿನ್ನ ಪ್ರೇಮಕ್ಕೆ ಪಾತ್ರವೂ, ರಮಣೀಯವೂ ಆದ ಅಶೋಕವನವೆಲ್ಲವನ್ನೂ ಭಂಗಗೊಳಿಸಿರುವನು. ಎಲೈರಾಜೇಂದ್ರನೇ! ನಿನಗೆ ಕೇಡನ್ನುಂಟು ಮಾಡಿದ ದುರ್ಬುದ್ಧಿಯುಳ್ಳ ಆ ದುಷ್ಟವಾನರನಿಗೆ ಜಾಗ್ರತೆಯಾಗಿ ವಧೆಯನ್ನು ಆಜ್ಞಾಪಿಸು. ಅವನು ಕೂಡಲೇ ನಾಶವಾಗಬೇಕು" ಎಂದು ಅರಿಕೆ ಮಾಡಿದರು. ॥ ೧೦೬-೧೧೨ ॥ ಈ ಮಾತುಗಳನ್ನು ಕೇಳುತ್ತಲೇ ರಾಕ್ಷಸಪ್ರಭುವಾದ ಆ ರಾವಣನು ಮಹತ್ತರವಾದ ಕೋಪವನ್ನು ತಾಳಿ, ಅಜೇಯರೂ, ತನ್ನ ಅಪ್ಪಣೆಯಂತೆ ನಡೆಯುವವರೂ ಆದ ಎಂಬತ್ತುಸಾವಿರ ಮಂದಿ ಕಿಂಕರರೆಂಬ ರಾಕ್ಷಸರನ್ನು ನನ್ನಮೇಲೆ ಯುದ್ಧಕ್ಕೆ ಕಳುಹಿಸಿದನು. ಆ ಕಿಂಕರರೆಂಬ ರಾಕ್ಷಸರು ಶೂಲಗಳನ್ನೂ, ಕಬ್ಬಿಣದ ಹಾರೆಗಳನ್ನೂ, ಧರಿಸಿದವರಾಗಿ ನನ್ನಮೇಲೆ ಯುದ್ಧಕ್ಕೆ ನುಗ್ಗಿಬಂದರು. ಆಗ ನಾನು ಆ ಅಶೋಕವನದ ಬಾಗಿಲಿಗೆ ಹಾಕಿದ್ದ ಲಾಳುಂಡಿಗೆ

ಪರಿಘೇಣ ನಿಷೂದಿತಂ ॥ ೧೧೪ ॥ ತೇಷಾಂತು ಹತಶೇಷಾ ಯೇ ತೇ ಗತ್ವಾ ಲಘು ವಿಕ್ರಮಾಃ । ನಿಹತಂಚ ಮಹತ್ಸೈನ್ಯಂ ರಾವಣಾಯಾಽಚಚಕ್ಷಿರೇ ॥೧೧೫॥ ತತೋ ಮೇ ಬುದ್ಧಿರುತ್ಪನ್ನಾ ಚೈತ್ಯಪ್ರಾಸಾದಮಾಕ್ರಮಂ । ತತ್ರಸ್ಥಾನ್ರಾಕ್ಷಸಾನ್ ಹತ್ವಾ ಶತಂ ಸ್ತಂಭೇನ ವೈ ಪುನಃ । ಲಲಾಮಭೂತೋ ಲಂಕಾಯಾಸ್ಸವೈ ವಿಧ್ವಂಸಿತೋ ಮಯಾ ॥ ೧೧೬ ॥ ತತಃ ಪ್ರಹಸ್ತಸ್ಯ ಸುತಂ ಜಂಬುಮಾಲಿನಮಾದಿಶತ್ । ರಾಕ್ಷಸೈರ್ಬಹುಭಿಸ್ಸಾರ್ಧಂ ಘೋರರೂಪೈರ್ಭಯಾನಕೈಃ ॥ ೧೧೭ ॥ ತಮಹಂ ಬಲಸಂಪನ್ನಂ ರಾಕ್ಷಸಂ ರಣಕೋವಿದಂ । ಪರಿಘೇಣಾಽತಿಘೋರೇಣ ಸೂದಯಾಮಿ ಸಹಾನುಗಂ

ಪರಿಘಾಯುಧದಿಂದ, ನಿಷೂದಿತಂ-ಹೊಡೆಯಲ್ಪಟ್ಟಿತು. ॥ ೧೧೪ ॥ ತೇಷಾಂತು-ಆ ರಾಕ್ಷಸರಲ್ಲಾದರೆ, ಯೇ - ಯಾರು, ಹತಶೇಷಾಃ - ಮೃತರಾದವರಲ್ಲಿ ಉಳಿದವರೋ, ಲಘುವಿಕ್ರಮಾಃ - ಸ್ವಲ್ಪ ಪರಾಕ್ರಮಿಗಳಾದ, ತೇ - ಅವರು, ನಿಹತಂ - ಹೊಡೆಯಲ್ಪಟ್ಟ, ಮಹತ್ಸೈನ್ಯಂ - ಮಹಾ ಸೇನೆಯನ್ನು, ರಾವಣಾಯ - ರಾವಣನಿಗೆ, ಆಚಚಕ್ಷಿರೇ - ತಿಳಿಸಿದರು. ॥೧೧೫॥ ತತಃ - ಬಳಿಕ, ಮೇ - ನನಗೆ, ಬುದ್ಧಿಃ - ಜ್ಞಾನವು, ಉತ್ಪನ್ನಾ - ಹುಟ್ಟಿತು, ಚೈತ್ರಪ್ರಾಸಾದಂ - ರಾವಣನ ದೇವತಾಗಾರವನ್ನು, ಆಕ್ರಮಂ - ಆಕ್ರಮಿಸಿದೆನು, ತತ್ರಸ್ಥಾನ್ - ಅಲ್ಲಿದ್ದ, ಶತಂರಾಕ್ಷಸಾನ್ - ನೂರುಮಂದಿ ರಾಕ್ಷಸರನ್ನು, ಸ್ತಂಭೇನ - ಆ ದೇವಾಲಯ ಸ್ತಂಭದಿಂದ, ಹತ್ವಾ - ಹೊಡೆದು, ಲಂಕಾಯಾಃ - ಲಂಕಾಪಟ್ಟಣಕ್ಕೆ, ಲಲಾಮಭೂತಃ - ತಿಲಕಪ್ರಾಯವಾದ, ಸಃ - ಆ ದೇವಸ್ಥಾನವು, ಮಯಾವೈ - ನನ್ನಿಂದಲಾದರೆ, ವಿಧ್ವಂಸಿತಃ - ನಾಶಗೊಳಿಸಲ್ಪಟ್ಟಿತು. ॥ ೧೧೬ ॥ ತತಃ - ಬಳಿಕ, ಬಹುಭಿಃ - ಅನೇಕರಾದ, ಘೋರರೂಪೈಃ - ಭಯಂಕರಾಕಾರರಾದ, ಭಯಾನಕೈಃ - ಭಯಂಕರರಾದ, ರಾಕ್ಷಸೈಸ್ಸಾರ್ಧಂ-ರಾಕ್ಷಸರೊಡಗೂಡಿರುವ, ಪ್ರಹಸ್ತಸ್ಯ-ಪ್ರಹಸ್ತನ, ಸುತಂ-ಪುತ್ರನಾದ, ಜಂಬುಮಾಲಿನಂ-ಜಂಬುಮಾಲಿಯೆಂಬ ರಾಕ್ಷಸನನ್ನು, ಆದಿಶತ್ - ಆಜ್ಞಾಪಿಸಿದನು. ॥ ೧೧೭ ॥ ಅಹಂ - ನಾನು, ಬಲಸಂಪನ್ನಂ - ಶಕ್ತಿಯುಕ್ತನಾದ, ರಣಕೋವಿದಂ - ಯುದ್ಧಪಂಡಿತನಾದ, ಸಹಾನುಗಂ - ಸೇವಕರಿಂದ ಕೂಡಿದ, ತಂರಾಕ್ಷಸಂ - ಆ ಅಸುರನನ್ನು, ಅತಿಘೋರೇಣ - ಮಹಾಭಯಂಕರವಾದ, ಪರಿಘೇಣ - ಪರಿಘಾಯುಧದಿಂದ, ಸೂದಯಾಮಿ - ಸಂಹರಿಸಿದೆನು. ॥ ೧೧೮ ॥ ರಾಕ್ಷಸೇಂದ್ರಃ -

---

ಯನ್ನು ಕಿತ್ತು ಅದರಿಂದಲೇ ಆ ಎಂಬತ್ತುಸಾವಿರಮಂದಿ ರಾಕ್ಷಸರನ್ನೂ ಸಂಹರಿಸಿದೆನು. ಅವರಲ್ಲಿ ಸಾವಿನಿಂದ ತಪ್ಪಿಸಿಕೊಂಡ ಕೆಲವರು ಓಡಿ ಹೋಗಿತಮ್ಮ ಸೇನೆಯೆಲ್ಲವೂ ನನ್ನಿಂದ ನಾಶವಾದ ವೃತ್ತಾಂತವನ್ನು ರಾವಣಾಸುರನಿಗೆ ತಿಳಿಸಿದರು. ಈ ಮಧ್ಯದಲ್ಲಿ ನನ್ನ ಮನದಲ್ಲಿ ಒಂದು ಯೋಚನೆ ಹುಟ್ಟಿತು. ಆ ಲಂಕಾಪಟ್ಟಣದ ನಡುವೆ ಸುಂದರವಾದ ಒಂದು ಚೈತ್ಯಪ್ರಾಸಾದವಿದ್ದಿತು. ಕೂಡಲೇ ನಾನದರಮೇಲಕ್ಕೆ ಹಾರಿ, ಅದನ್ನಾಕ್ರಮಿಸಿಕೊಂಡು, ಅಲ್ಲಿದ್ದ ಒಂದು ಸ್ತಂಭವನ್ನು ಕಿತ್ತು ಅದರಿಂದ ಅಲ್ಲಿದ್ದ ನೂರುಮಂದಿ ಕಾವಲುಗಾರರಾದ ರಾಕ್ಷಸರನ್ನು ಕೊಂದುದೂ ಅಲ್ಲದೆ, ಆ ಲಂಕಾಪಟ್ಟಣಕ್ಕೆ ಅಲಂಕಾರಪ್ರಾಯವಾದ ಆ ಚೈತ್ಯಪ್ರಾಸಾದವನ್ನೂ ಮುರಿದುಹಾಕಿದೆನು. ಅತ್ತ ರಾವಣಾಸುರನು ಪ್ರಹಸ್ತನಮಗನಾದ ಜಂಬುಮಾಲಿಯನ್ನು ಸೈನ್ಯದೊಡನೆ ನನ್ನಮೇಲೆ ಯುದ್ಧಕ್ಕೆ ಕಳುಹಿಸಿದನು. ಅವರನ್ನೂ ನಾನು ಆ ಕಬ್ಬಿಣದ ಹಾರೆಯಿಂದಲೇ ಹೊಡೆದು ಕೊಂದುಬಿಟ್ಟೆನು. ॥೧೧೩–೧೧೮॥ ರಾಕ್ಷಸರಾಜನಾದ

॥ ೧೧೮ ॥ ತಚ್ಛ್ರುತ್ವಾ ರಾಕ್ಷಸೇಂದ್ರಸ್ತು ಮಂತ್ರಿಪುತ್ರಾನ್ಮಹಾಬಲಾನ್ । ಪದಾತಿಬಲ ಸಂಪನ್ನಾನ್ ಪ್ರೇಷಯಾಮಾಸ ರಾವಣಃ ॥೧೧೯॥ ಪರಿಘೇಣೈವ ತಾನ್ಸರ್ವಾನ್ನಯಾಮಿ ಯಮಸಾದನಂ । ಮಂತ್ರಿಪುತ್ರಾನ್ ಹತಾಂಚ್ಛ್ರುತ್ವಾ ಸಮರೇ ಲಘುವಿಕ್ರಮಾನ್ ॥ ೧೨೦ ॥ ಪಂಚಸೇನಾಗ್ರಗಾನ್ ಶೂರಾನ್ಪ್ರೇಷಯಾಮಾಸ ರಾವಣಃ । ತಾನಹಂ ಸಹ ಸೈನ್ಯಾಂಸ್ತು ಸರ್ವಾನೇವಾಽಭ್ಯಸೂದಯಂ ॥ ೧೨೧ ॥ ತತಃ ಪುನರ್ದಶಗ್ರೀವಃ ಪುತ್ರ ಮಕ್ಷಂ ಮಹಾಬಲಂ।ಬಹುಭೀ ರಾಕ್ಷಸೈಸ್ಸಾರ್ಧಂ ಪ್ರೇಷಯಾಮಾಸ ರಾವಣಃ॥೧೨೨॥ ತಂತು ಮಂದೋದರೀಪುತ್ರಂ ಕುಮಾರಂ ರಣಪಂಡಿತಂ । ಸಹಸಾ ಖಂ ಸಮು

ರಾಕ್ಷಸಾಧಿಪನಾದ, ರಾವಣಃ - ರಾವಣನು, ತತ್ - ಆ ಜಂಬುಮಾಲಿಯ ವಧೆಯನ್ನು, ಶ್ರುತ್ವಾ - ಕೇಳಿ, ಮಹಾಬಲಾನ್ - ಅತಿ ಬಲಿಷ್ಠರಾದ, ಪದಾ...ನ್ನಾನ್ - ಕಾಲಾಳುಗಳ ಸೈನ್ಯಗಳಿಂದ ಕೂಡಿದ, ಪುತ್ರಾನ್-ಮಂತ್ರಿಕುವರರನ್ನು, ಪ್ರೇಷಯಾಮಾಸ-ಕಳುಹಿಸಿಕೊಟ್ಟನು, ತಾನ್‌ಸರ್ವಾನ್-ಅವರೆಲ್ಲರನ್ನೂ, ಪರಿಘೇಣೈವ - ಲಾಳುಂಡಿಗೆಯಿಂದಲೇ, ಯಮಸಾದನಂ - ಯಮನ ಮನೆಯನ್ನು, ನಯಾಮಿ - ಹೊಂದಿಸಿದೆನು. ॥ ೧೨೦ ॥ ರಾವಣಃ - ರಾವಣನು, ಮಂತ್ರಿಪುತ್ರಾನ್ - ಮಂತ್ರಿಕುಮಾರರನ್ನು, ಹತಾನ್ - ಮೃತರಾದವರನ್ನಾಗಿ, ಶ್ರುತ್ವಾ - ಕೇಳಿ, ಸಮರೇ - ಕಾಳಗದಲ್ಲಿ, ಲಘುವಿಕ್ರಮಾನ್ - ಲಾಘವದಿಂದ ಪರಾಕ್ರಮಿಸತಕ್ಕ, ಶೂರಾನ್ - ವೀರರಾದ, ಪಂಚ - ಐದು ಮಂದಿ, ಸೇನಾಗ್ರಗಾನ್- ಸೇನಾಧಿಪತಿಗಳನ್ನು, ಪ್ರೇಷಯಾಮಾಸ-ಕಳುಹಿಸಿದನು, ಅಹಂ-ನಾನು, ಸಹಸೈನ್ಯಾನ್-ಸೇನೆಗಳಿಂದ ಕೂಡಿದ, ಸರ್ವಾನೇವ - ಅವರೆಲ್ಲರನ್ನೂ, ಅಭ್ಯಸೂದಯಂ - ಸಂಹರಿಸಿದೆನು. ॥೧೨೧॥ ತತಃಪುನಃ - ಆ ಬಳಿಕ, ದಶಗ್ರೀವಃ - ದಶಕಂಠಗಳುಳ್ಳ, ರಾವಣಃ - ರಾವಣನು, ಬಹುಭಿಃ - ಅನೇಕರಾದ, ರಾಕ್ಷಸೈಸ್ಸಾರ್ಧಂ - ರಾಕ್ಷಸರಿಂದೊಡಗೂಡಿದ, ಮಹಾಬಲಂ - ಅತಿ ಸಾಮರ್ಥ್ಯವುಳ್ಳ, ಅಕ್ಷಂಪುತ್ರಂ- ಅಕ್ಷನೆಂಬ ಮಗನನ್ನು, ಪ್ರೇಷಯಾಮಾಸ - ಕಳುಹಿಸಿದನು. ॥ ೧೨೨ ॥ ರಣಪಂಡಿತಂ - ಕಾಳೆಗದಲ್ಲಿ ಪಂಡಿತನಾದ, ಸಹಸಾ - ಜಾಗ್ರತೆಯಾಗಿ, ಖಂ - ಅಂತರಿಕ್ಷವನ್ನು ಕುರಿತು, ಸಮುತ್ಕ್ರಾಂತಂ - ಹಾರುತ್ತಿರುವ, ಮಂದೋದರೀಪುತ್ರಂ - ಮಂಡೋದರಿಯ ಕುಮಾರನಾದ, ಚರ್ಮಾಸಿನಂ - ಖೇಡ್ಯ

ರಾವಣಾಸುರನು ಈ ವೃತ್ತಾಂತವನ್ನು ಕೇಳಿ ಕೂಡಲೇ, ಮಹಾ ಬಲಸಂಪನ್ನರೂ, ಕಾಲ್ಬಲ ದಿಂದಲೂ, ದೊಡ್ಡ ಸೇನೆಯಿಂದಲೂ ಕೂಡಿದವರೂ ಆದ ಮಂತ್ರಿಪುತ್ರರನ್ನು ಯುದ್ಧಕ್ಕೆ ಕಳುಹಿಸಿದನು. ಅವರನ್ನೂ ನಾನು ಆ ಕಬ್ಬಿಣದ ಹಾರೆಯಿಂದಲೇ ಯಮನಾಲಯಕ್ಕಟ್ಟಿ ದೆನು. ಆ ತರುವಾಯ ರಾವಣಾಸುರನು ಮಹಾ ಪರಾಕ್ರಮಶಾಲಿಗಳಾದ ಮಂತ್ರಿಪುತ್ರರೂ ಹತರಾದರೆಂಬ ವಾರ್ತೆಯನ್ನು ಕೇಳಿ ಬಹಳವಾಗಿ ಕನಲಿದವನಾಗಿ, ಯುದ್ಧದಲ್ಲಿ ಅಸಹಾಯ ಶೂರರಾದ ಐದುಮಂದಿ ಸೇನಾನಾಯಕರನ್ನು ಸೈನ್ಯದೊಡನೆ ನನ್ನಮೇಲೆ ಅಟ್ಟಿದನು. ನಾನು ಅಮಿತಪರಾಕ್ರಮಿಗಳಾದ ಆ ಸೇನಾನಾಯಕರನ್ನೂ, ಅವರ ಸೈನ್ಯವನ್ನೂ ಕೊಂದು ಯಮ ಪುರಿಗಟ್ಟಿದೆನು. ದಶಕಂಠನಾದ ಆ ರಾವಣಾಸುರನು ಈ ಸಮಾಚಾರವನ್ನು ಕೇಳಿ ಮಹಾ ಬಲಪರಾಕ್ರಮಶಾಲಿಯೂ, ತನ್ನ ಕುಮಾರನೂ ಆದ ಅಕ್ಷನೆಂಬುವನನ್ನು ಸೈನ್ಯದೊಡನೆ ನನ್ನ ಮೇಲೆ ಯುದ್ಧಕ್ಕೆ ಕಳುಹಿಸಿದನು. ಆ ಅಕ್ಷನು ಮಂಡೋದರಿಯ ಮಗನು. ಕೇವಲ ಬಾಲಕನು; ಆದರೂ ಯುದ್ಧದಲ್ಲಿ ಮಹಾ ಸಾಮರ್ಥ್ಯವುಳ್ಳವನು. ಅವನು ನನ್ನಮೇಲೆ ಯುದ್ಧ ಮಾಡುತ್ತ ಮಾಡುತ್ತ ಇದ್ದಕ್ಕಿದ್ದಂತೆಯೇ ಅಂತರಿಕ್ಷಕ್ಕೆ ಹಾರಿದನು. ನಾನು ಸಹ

ತ್ವಾಕ್ರಾಂತಂ ಪಾದಯೋಶ್ಚ ಗೃಹೀತವಾನ್ ॥೧೨೩॥ ಚರ್ಮಾಸಿನಂ ಶತಗುಣಂ ಭ್ರಾಮಯಿತ್ವಾ ವ್ಯಪೇಷಯಂ । ತಮಕ್ಷಮಾಗತಂ ಭಗ್ನಂ ನಿಶಮ್ಯ ಸ ದಶಾನನಃ ॥ ೧೨೪ ॥ ತತ ಇಂದ್ರಜಿತಂ ನಾಮ ದ್ವಿತೀಯಂ ರಾವಣಸ್ಸುತಂ । ವ್ಯಾದಿದೇಶ ಸು ಸಂಕ್ರುದ್ಧೋ ಬಲಿನಂ ಯುದ್ಧದುರ್ಮದಂ ॥ ೧೨೫ ॥ ತಚ್ಚಾಪ್ಯಹಂ ಬಲಂ ಸರ್ವಂ ತಂಚ ರಾಕ್ಷಸಪುಂಗವಂ । ನಷ್ಟೌಜಸಂ ರಣೇ ಕೃತ್ವಾ ಪರಂ ಹರ್ಷಮುಪಾಗಮಂ ॥ ೧೨೬ ॥ ಮಹತಾಹಿ ಮಹಾಬಾಹುಃ ಪ್ರತ್ಯಯೇನ ಮಹಾಬಲಃ । ಪ್ರೇಷಿತೋ ರಾವಣೇನೈವ ಸಹ ವೀರೈರ್ಮದೋತ್ಕಟೈಃ ॥೧೨೭॥ ಸೋಽವಿಷಹ್ಯಂ ಹಿ ಮಾಂ ಬುದ್ಧ್ವಾ ಸ್ವಬಲಂ ಚಾವ

ವನ್ನೂ, ಖಡ್ಗವನ್ನೂ ಸಹ ಧರಿಸಿರುವ, ತಂಕುಮಾರಂತು-ಆ ಅಕ್ಷಕುಮಾರನನ್ನಾದರೆ, ಪಾದಯೋಶ್ಚ-ಪಾದಗಳಲ್ಲಿ, ಗೃಹೀತವಾನ್ - ಹಿಡಿದು, ಶತಗುಣಂ - ನೂರಾವರ್ತಿ, ಭ್ರಾಮಯಿತ್ವಾ - ತಿರುಗಿಸಿ, ವ್ಯಪೇಷಯಂ - ಚೂರ್ಣಮಾಡಿದೆನು. ॥ ೧೨೩ ೧೨೪ ॥ ದಶಾನನಃ - ದಶಮುಖನಾದ, ರಾವಣಃ - ರಾವಣನು, ಆಗತಂ - ಯುದ್ಧಾರ್ಥವಾಗಿ ಬಂದು, ಭಗ್ನಂ - ಮುರಿಯಲ್ಪಟ್ಟ, ತಮಕ್ಷಂ - ಆ ಅಕ್ಷನನ್ನು, ನಿಶಮ್ಯ - ಕೇಳಿ, ತತಃ - ಬಳಿಕ, ಸುಸಂಕೃದ್ಧಃ - ಕಡುಕೋಪಿಯಾಗಿ, ಯುದ್ಧದುರ್ಮದಂ-ಕಾಳೆಗದಲ್ಲಿ ಮದೋನ್ಮತ್ತನಾದ, ಇಂದ್ರಜಿತಂನಾಮ - ಇಂದ್ರಜಿತುವೆಂದು ಪ್ರಸಿದ್ಧನಾದ, ದ್ವಿತೀಯಂ-ಎರಡನೆಯವನಾದ, ಬಲಿನಂ-ಬಲಿಷ್ಠನಾದ, ಸುತಂ ಕುಮಾರನನ್ನು, ವ್ಯಾದಿದೇಶ-ಆಜ್ಞಾಪಿಸಿದನು. ॥ ೧೨೫ ॥ ಅಹಂಚ - ನಾನು, ಸರ್ವಂ - ಸಮಸ್ತವಾದ, ತಚ್ಚಬಲಂ - ಆ ಸೈನ್ಯವನ್ನೂ, ರಾಕ್ಷಸಪುಂಗವಂ - ಅಸುರೋತ್ತಮನಾದ, ತಂಚ - ಆ ಇಂದ್ರಜಿತ್ತುವನ್ನೂ ಸಹ, ರಣೇ - ಯುದ್ಧದಲ್ಲಿ, ನಷ್ಟೌಜಸಂ - ಭಗ್ನತೇಜಸ್ಕನನ್ನಾಗಿ, ಕೃತ್ವಾ - ಮಾಡಿ, ಪರಂಹರ್ಷಂ - ಬಹಳ ಸಂತೋಷವನ್ನು, ಉಪಾಗಮಂ - ಹೊಂದಿದೆನು. ॥ ೧೨೬ ॥ ಮಹಾಬಲಃ - ಬಹು ಬಲಿಷ್ಠನಾದ, ಮಹಾಬಾಹುಃ - ಮಹಾ ಭುಜಬಲಪರಾಕ್ರಮಶಾಲಿಯಾದ ಇಂದ್ರಜಿತ್ತುವು, ಮಹ....ನ - ಬಹಳ ನಂಬಿಕೆಯಿಂದ, ರಾವಣೇನೈವ - ರಾವಣನಿಂದಲೇ, ಮದೋತ್ಕಟೈಃ - ಮದೋನ್ಮತ್ತರಾದ, ವೀರೈಸ್ಸಹ - ಶೂರರೊಡನೆ, ಪ್ರೇಷಿತಃ - ಕಳುಹಿಸಲ್ಪಟ್ಟನು. ॥೧೨೭॥ ಸಃ - ಪ್ರಸಿದ್ಧನಾದ, ಸಃ - ಆ ಇಂದ್ರಜಿತುವಾದರೆ, ಮಾಂ-

---

ಅವನೊಡನೆಯೇ ಹಾರಿ ಅವನ ಕಾಲುಗಳೆರಡನ್ನೂ ಹಿಡಿದು, ಬಿಲ್ಲುಬಾಣಗಳನ್ನೂ, ಖಡ್ಗವನ್ನೂ ಧರಿಸಿದ್ದ ಅವನನ್ನು ಅನೇಕಸಲ ಗಿರ್ರನೆ ತಿರುಗಿಸಿ ನೆಲಕ್ಕೆ ಬಡಿದೆನು. ಅವನು ಕೂಡಲೇ ಸತ್ತುಹೋದನು. ॥ ೧೧೯—೧೨೪ ॥ ಆಮೇಲೆ ಅಕ್ಷಕುಮಾರನೂ ಯುದ್ಧದಲ್ಲಿ ನನ್ನಿಂದ ಮಡಿದನೆಂಬ ವಾರ್ತೆಯನ್ನು ಕೇಳಿ ಆ ರಾವಣಾಸುರನು ಮಹಾ ಕೋಪವನ್ನು ಹೊಂದಿ, ಯುದ್ಧದಲ್ಲಿ ಅಜೇಯನೂ, ಮಹಾ ಬಲಪರಾಕ್ರಮಶಾಲಿಯಾದವನೂ ಆದ ಇಂದ್ರಜಿತ್ತೆಂಬ ತನ್ನ ಮಗನನ್ನು ಸೈನ್ಯದೊಡನೆ ನನ್ನಮೇಲೆ ಯುದ್ಧಕ್ಕೆ ಕಳುಹಿಸಿದನು. ನಾನು ಆ ಇಂದ್ರಜಿತ್ತುವಿನ ಸೈನ್ಯವೆಲ್ಲವನ್ನೂ ನಿಮಿಷಮಾತ್ರದಲ್ಲಿ ಕೊಂದೆನು. ರಾಕ್ಷಸೋತ್ತಮನಾದ ಆ ಇಂದ್ರಜಿತ್ತಾದರೋ ಯುದ್ಧದಲ್ಲಿ ಬಹಳವಾಗಿ ವಿಜೃಂಭಿಸಿದನು. ಆದರೆ ನಾನು ಅವನ ಗರ್ವವನ್ನು ಅಡಗಿಸಿದೆನು. ಮಹಾ ಬಾಹುವೂ, ಅತಿ ಬಲಾಢ್ಯನೂ ಆದ ಅವನನ್ನು, ರಾವಣಾಸುರನು “ ಯಾವ ವಿಧದಿಂದಲಾದರೂ ಆ ಕಪಿಯನ್ನು ವಧಿಸಿ ಬಾರೆಂ”ದು ಆಜ್ಞಾಪಿಸಿ ಬಹು ನಂಬುಗೆಯಿಂದ ಕಳುಹಿಸಿದ್ದನು. ಆದುದರಿಂದ ಅವನು ತನ್ನ

ಮರ್ದಿತಂ । ಬ್ರಾಹ್ಮೇಣಾಸ್ತ್ರೇಣ ಸ ತು ಮಾಂ ಪ್ರಾಬಧ್ನಾಚ್ಚಾತಿವೇಗಿತಃ ॥ ೧೨೮ ॥ ರಜ್ಜುಭಿಶ್ಚಾಭಿಬಧ್ನಂತಿ ತತೋ ಮಾಂ ತತ್ರ ರಾಕ್ಷಸಾಃ । ರಾವಣಸ್ಯ ಸಮೀಪಂಚ ಗೃಹೀತ್ವಾ ಮಾಮುಪಾನಯನ್ ॥ ೧೨೯ ॥ ದೃಷ್ಟ್ವಾ ಸಂಭಾಷಿತಶ್ಚಾಹಂ ರಾವಣೇನ ದುರಾತ್ಮನಾ । ಪೃಷ್ಟಶ್ಚ ಲಂಕಾಗಮನಂ ರಾಕ್ಷಸಾನಾಂಚ ತಂ ವಧಂ ॥ ೧೩೦ ॥ ತತ್ಸರ್ವಂ ಚ ಮಯಾ ತತ್ರ ಸೀತಾರ್ಥಮಿತಿ ಜಲ್ಪಿತಂ । "ಅಸ್ಯಾಸ್ಸಂದರ್ಶನಾಕಾಂಕ್ಷೀ ಪ್ರಾಪ್ತಸ್ತ್ವದ್ಭವನಂ ವಿಭೋ! । ಮಾರುತಸ್ಯೌರಸಃ ಪುತ್ರೋ ವಾನರೋ ಹನುಮಾನಹಂ ॥೧೩೧॥ ರಾಮದೂತಂಚ ಮಾಂ ವಿದ್ಧಿ ಸುಗ್ರೀವ ಸಚಿವಂ ಕಪಿಂ । ಸೋಽಹಂ

ನನ್ನನ್ನು, ಅವಿಷಹ್ಯಂ-ಸೈರಿಸಲಸಾಧ್ಯನನ್ನಾಗಿಯೂ, ಸ್ವಬಲಂ-ತನ್ನ ಸೈನ್ಯವನ್ನು, ಅವಮರ್ದಿತಂಚ-ಸಂಹರಿಸಲ್ಪಟ್ಟದ್ದನ್ನಾಗಿಯು, ಬುದ್ಧ್ವಾ - ತಿಳಿದು, ಅತಿವೇಗಿತಃ - ಅತಿ ಜಾಗ್ರತೆಯುಳ್ಳವನಾಗಿ, ಮಾಂ - ನನ್ನನ್ನು, ಬ್ರಾಹ್ಮೇಣಾಸ್ತ್ರೇಣ - ಬ್ರಹ್ಮಾಸ್ತ್ರದಿಂದ, ಪ್ರಾಬಧ್ನಾತ್ - ಕಟ್ಟಿದನು. ॥ ೧೨೮ ॥ ತತಃ - ಬಳಿಕ, ರಾಕ್ಷಸಾಃ - ರಾಕ್ಷಸರು, ತತ್ರ - ಆ ರಣರಂಗದಲ್ಲಿ, ಮಾಂ - ನನ್ನನ್ನು, ರಜ್ಜುಭಿಶ್ಚ-ಹಗ್ಗಗಳಿಂದಲೂ, ಅಭಿಬಧ್ನಂತಿ - ಕಟ್ಟಿದರು, ಮಾಂ - ನನ್ನನ್ನು, ಗೃಹೀತ್ವಾ - ಹಿಡಿದುಕೊಂಡು, ರಾವಣಸ್ಯ - ರಾವಣನ, ಸಮೀಪಂಚ - ಸಮೀಪವನ್ನೂ ಸಹ, ಉಪಾನಯನ್ - ಹೊಂದಿಸಿದರು. ॥ ೧೨೯ ॥ ಅಹಂಚ - ನಾನು, ದುರಾತ್ಮನಾ - ದುಷ್ಟಮನವುಳ್ಳ, ರಾವಣೇನ - ರಾವಣನಿಂದ, ದೃಷ್ಟ್ವಾ - ಕಂಡು, ಸಂಭಾಷಿತಃ - ಮಾತನಾಡಿಸಲ್ಪಟ್ಟೆನು, ಲಂಕಾಗಮನಂ - ಲಂಕೆಯನ್ನು ಕುರಿತು ಬರೋಣವನ್ನೂ, ರಾಕ್ಷಸಾನಾಂ - ಅಸುರರ, ತಂವಧಂಚ - ಆ ಸಂಹಾರವನ್ನೂ ಕುರಿತು, ಪೃಷ್ಟಶ್ಚ-ಕೇಳಲ್ಪಟ್ಟೆನು. ॥ ೧೩೦ ॥ ತತ್ರ - ಆ ರಾವಣನ ಸಮೀಪದಲ್ಲಿ, ಮಯಾ - ನನ್ನಿಂದ, ತತ್ಸರ್ವಂ - ಆ ಲಂಕಾಗಮನ ರಾಕ್ಷಸವಧಾದಿ ಸರ್ವ ಕಾರ್ಯವೂ, ಸೀತಾರ್ಥಮಿತಿ - ಸೀತಾನಿಮಿತ್ತವಾಗಿಯೆಂದು, ಜಲ್ಪಿತಂ - ಹೇಳಲ್ಪಟ್ಟಿತು. ॥೧೩೧॥ ಹೇ ವಿಭೋ - ಎಲೈ ರಾಜನೇ, ಅಹಂ - ನಾನು, ಅಸ್ಯಾಃ - ಈ ಸೀತಾದೇವಿಯ, ಸಂದ....ಕ್ಷೀ - ದರ್ಶನವನ್ನು ಕೋರಿದವನಾಗಿ, ತ್ವದ್ಭವನಂ - ನಿನ್ನ ಮನೆಯನ್ನು ಕುರಿತು, ಪ್ರಾಪ್ತಃ - ಬಂದೆನು, ಮಾರುತಸ್ಯ - ವಾಯುವಿಗೆ, ಔರಸಃಪುತ್ರಃ - ಸಾಕ್ಷಾತ್ಪುತ್ರನಾದ, ವಾನರಃ - ವಾನರಸ್ತ್ರೀಯಲ್ಲಿ ಉತ್ಪನ್ನನಾದ, ಅಹಂ - ನಾನು, ಹನುಮಾನ್ - ಹನುಮಂತನೆಂಬವನು. ॥ ೧೩೨ ॥ ಸುಗ್ರೀವಸಚಿವಂ - ಸುಗ್ರೀವನ ಮಂತ್ರಿಯಾದ, ಕಪಿಂ - ವಾನರನಾದ, ಮಾಂಚ -

---

ಬಲವು ಕುಂದುತ್ತಿರುವುದನ್ನೂ, ನನ್ನನ್ನು ಜಯಿಸುವುದು ಅತಿ ದುಸ್ತರವೆಂಬುದನ್ನೂ ತಿಳಿದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ನನ್ನನ್ನು ಬಂಧಿಸಿದನು. ಆ ಕೂಡಲೇ ಅವನೊಡನಿದ್ದ ರಾಕ್ಷಸರು ನನ್ನನ್ನು ಹಗ್ಗಗಳಿಂದ ಬಿಗಿದುಕಟ್ಟಿ ನನ್ನನ್ನು ರಾವಣನ ಬಳಿಗೆ ಎಳೆದುಕೊಂಡು ಹೋದರು. ಮಹಾ ದುಷ್ಟನಾದ ರಾವಣನು ನನ್ನನ್ನು ನೋಡಿ, "ಓ ವಾನರನೇ! ನೀನಾರು? ಇಲ್ಲಿಗೇಕೆ ಬಂದೆ? ನೀನು ರಾಕ್ಷಸರನ್ನು ಕೊಲ್ಲುಲು ಕಾರಣವೇನು?" ಎಂದು ಕೇಳಿದನು. ॥ ೧೨೫–೧೩೦ ॥ ಆಗ ನಾನು ಆ ಕಾರ್ಯಗಳೆಲ್ಲವನ್ನು ಸೀತಾನಿಮಿತ್ತವಾಗಿ ಮಾಡಿದೆನೆಂದು ಹೇಳಿ ಅವನನ್ನು ಕುರಿತು, "ಎಲೈ ರಾಕ್ಷಸೇಶ್ವರನಾದ ರಾವಣಾಸುರನೇ! ನಾನು ಸೀತಾದೇವಿಯನ್ನು ನೋಡಲೋಸುಗ ಈ ಲಂಕಾಪಟ್ಟಣಕ್ಕೆ ಬಂದೆನು. ನಾನು ವಾಯುದೇವನ ಕುಮಾರನು. ನನ್ನ ಹೆಸರು ಹನುಮಂತನೆಂದು. ನಾನು ಸುಗ್ರೀವನಿಗೆ ಮಂತ್ರಿಯು. ಶ್ರೀರಾಮನಿಗೆ ದೂತನಾಗಿ ಇಲ್ಲಿಗೆ ಬಂದಿರುವೆನು. ಆತನು ಕೆಲವು

ದೂತ್ಯೇನ ರಾಮಸ್ಯ ತ್ವತ್ಸಕಾಶಮಿಹಾಗತಃ ॥೧೩೩॥ ಸುಗ್ರೀವಶ್ಚ ಮಹಾತೇಜಾಸ್ಸತ್ವಾಂ ಕುಶಲಮಬ್ರವೀತ್ । ಧರ್ಮಾರ್ಥಕಾಮಸಹಿತಂ ಹಿತಂ ಪಥ್ಯಮುವಾಚ ಸಃ ॥೧೩೪॥ ವಸತೋ ಋಷ್ಯಮೂಕೇ ಮೇ ಪರ್ವತೇ ವಿಪುಲದ್ರುಮೇ । ರಾಘವೋ ರಣವಿಕ್ರಾಂತೋ ಮಿತ್ರತ್ವಂ ಸಮುಪಾಗತಃ ॥ ೧೩೫ ॥ ತೇನ ಮೇ ಕಥಿತಂ ರಾಜ್ಞಾ ಭಾರ್ಯಾ ಮೇ ರಕ್ಷಸಾ ಹೃತಾ । ತತ್ರ ಸಾಹಾಯ್ಯಮಸ್ಮಾಕಂ ಕಾರ್ಯಂ ಸರ್ವಾತ್ಮನಾ ತ್ವಯಾ ॥ ೧೩೬ ॥ ಮಯಾಚ ಕಥಿತಂ ತಸ್ಮೈ ವಾಲಿನಶ್ಚ ವಧಂ ಪ್ರತಿ । ತತ್ರ ಸಾಹಾಯ್ಯ

ನನ್ನನ್ನು, ರಾಮದೂತಂ - ಶ್ರೀರಾಮದೂತನನ್ನಾಗಿ, ವಿದ್ಧಿ - ಅರಿತುಕೋ, ಸೋಽಹಂ - ಆ ನಾನು, ರಾಮಸ್ಯ - ಶ್ರೀರಾಮನಿಗೆ, ದೂತೇನ - ದೂತಭಾವದಿಂದ, ತ್ವತ್ಸಕಾಶಂ - ನಿನ್ನ ಸಮೀಪವನ್ನು ಕುರಿತು, ಇಹ - ಈಗ, ಆಗತಃ - ಬಂದೆನು. ॥ ೧೩೩ ॥ ಮಹಾತೇಜಾಃ - ಮಹಾ ಪರಾಕ್ರಮಶಾಲಿಯಾದ, ಸಸುಗ್ರೀವಶ್ಚ - ಆ ಸುಗ್ರೀವನೂ, ತ್ವಾಂ - ನಿನ್ನನ್ನು ಕುರಿತು, ಕುಶಲಂ - ಕ್ಷೇಮವನ್ನು, ಅಬ್ರವೀತ್ - ನುಡಿದನು, ಧರ್ಮಾ....ತಂ - ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥತ್ರಯದಿಂದ ಕೂಡಿದ, ಹಿತಂ - ಪರಲೋಕಕ್ಕೆ ಹಿತಕರವಾದ, ಪಥ್ಯಂಚ - ಇಹಲೋಕದಲ್ಲಿಯೂ ಇಷ್ಟವಾದ ಮಾತನ್ನು, ಉವಾಚ - ಹೇಳಿದನು. ॥ ೧೩೪ ॥ ರಣವಿಕ್ರಾಂತಃ - ಯುದ್ಧಶೂರನಾದ, ರಾಘವಃ - ಶ್ರೀರಾಮನು, ವಿಪುಲದ್ರುಮೇ - ವಿಸ್ತಾರವಾದ ವೃಕ್ಷಗಳುಳ್ಳ, ಋಷ್ಯಮೂಕೇ - ಋಷ್ಯಮೂಕವೆಂಬ, ಪರ್ವತೇ - ಬೆಟ್ಟದಲ್ಲಿ, ವಸತಃ - ವಾಸವಾಗಿರುವ, ಮೇ - ನನ್ನಲ್ಲಿ, ಮಿತ್ರತ್ವಂ - ಮೈತ್ರಿಯನ್ನು, ಸಮುಪಾಗತಃ - ಹೊಂದಿದನು. ॥ ೧೩೫ ॥ ಮೇ - ನನ್ನ, ಭಾರ್ಯಾ - ಪತ್ನಿಯಾದ ಸೀತೆಯು, ರಕ್ಷಸಾ - ರಾಕ್ಷಸನಿಂದ, ಹೃತಾ - ಅಪಹರಿಸಲ್ಪಟ್ಟಳು, ತತ್ರ - ಆ ಕಾರ್ಯದಲ್ಲಿ, ಅಸ್ಮಾಕಂ - ನಮಗೆ, ತ್ವಯಾ - ನಿನ್ನಿಂದ, ಸಾಹಾಯ್ಯಂ - ಸಹಾಯವು, ಸರ್ವಾತ್ಮನಾ - ಸರ್ವಭಾವದಿಂದಲೂ, ಕಾರ್ಯಮಿತಿ-ಮಾಡತಕ್ಕುದೆಂದು, ರಾಜ್ಞಾ-ಒಡೆಯನಾದ, ತೇನ-ಆ ಶ್ರೀರಾಮನಿಂದ, ಮೇ - ನನಗೆ, ಕಥಿತಂ - ಹೇಳಲ್ಪಟ್ಟಿತು. ॥ ೧೩೬ ॥ ತತ್ರ - ಆ ಸೀತಾನ್ವೇಷಣ ವಿಷಯದಲ್ಲಿ, ಸಾಹಾಯ್ಯಹೇತೋಃ - ಸಹಾಯ ಕರ್ಮಕ್ಕೆ ಸಾಧಕನಾದ, ಮೇ - ನನಗೆ, ವಾಲಿನಃ - ವಾಲಿಯ, ವಧಂಪ್ರತಿ - ಸಂಹಾರವನ್ನೂ ಕುರಿತು, ಸಮಯಂ - ಶಪಥವನ್ನು, ಕರ್ತುಂ - ಮಾಡುವದಕ್ಕೆ,

---

ಸಂಗತಿಗಳನ್ನು ನಿನ್ನಲ್ಲಿ ಹೇಳಿ ಬಾರೆಂದು ಆಜ್ಞಾಪಿಸಿರುವನು. ಎಲೈ ರಾವಣನೇ! ಮಹಾ ಪರಾಕ್ರಮಶಾಲಿಯಾದ ಸುಗ್ರೀವನು ನಿನ್ನ ಕ್ಷೇಮವನ್ನು ಕೇಳಿದನು. ಇದೂ ಅಲ್ಲದೆ, ಧರ್ಮಾರ್ಥಕಾಮಗಳಿಂದ ಕೂಡಿದುದೂ, ನಿನಗೆ ಶ್ರೇಯಸ್ಸನ್ನುಂಟುಮಾಡುವುದೂ, ಯಥಾರ್ಥವಾದುದೂ ಆದ ಒಂದು ಮಾತನ್ನು ನಿನಗೆ ಹೇಳೆಂದು ನನಗೆ ಅಪ್ಪಣೆ ಮಾಡಿರುವನು. ಅದನ್ನೀಗ ಹೇಳುವೆನು ; ಆಲಿಸಿ ಕೇಳು. “ ವನಷಂಡವಿರಾಜಿತವಾದ ಋಷ್ಯಮೂಕಪರ್ವತದಲ್ಲಿ ನಾನು ವಾಸವಾಗಿದ್ದೆನು. ಯುದ್ಧವೀರನಾದ ಶ್ರೀರಾಮನಲ್ಲಿಗೆ ಬಂದೆನು. ಆತನಿಗೂ, ನನಗೂ ಸ್ನೇಹವಾಯಿತು. ॥ ೧೩೧-೧೩೫ ॥ ಆಗ ಶ್ರೀರಾಮನು, “ ಸುಗ್ರೀವಾ ! ನನ್ನ ಭಾರ್ಯೆಯಾದ ಸೀತೆಯನ್ನು ದುರಾತ್ಮನಾದ ಒಬ್ಬ ರಾಕ್ಷಸನಪಹರಿಸಿರುವನು. ಈ ವಿಷಯದಲ್ಲಿ ನೀನು ನಿನ್ನ ಕೈಲಾದಮಟ್ಟಿಗೂ ನನಗೆ ಸಹಾಯ ಮಾಡಬೇಕು. ಈ ವಿಷಯದಲ್ಲಿ ನೀನು ನಿನ್ನ ಸಮ್ಮತಿಯನ್ನಿತ್ತು ಪ್ರತಿಜ್ಞೆ ಮಾಡು ” ಎಂದನು. ಆಗ ನಾನೂ ಸಹ, “ ಎಲೈ ಶ್ರೀರಾಮಮೂರ್ತಿಯೇ ! ನನ್ನ ಅಣ್ಣನಾದ

ಹೇತೋರ್ನೇ ಸಮಯಂ ಕರ್ತುಮರ್ಹಸಿ ॥೧೩೭॥ ವಾಲೀನಾ ಹೃತರಾಜ್ಯೇನ ಸುಗ್ರೀವೇಣ ಮಹಾಪ್ರಭುಃ । ಚಕ್ರೇಽಗ್ನಿಸಾಕ್ಷಿಕಂ ಸಖ್ಯಂ ರಾಘವಸ್ಸಹಲಕ್ಷ್ಮಣಃ ॥೧೩೮॥ ತೇನ ವಾಲಿನಮುತ್ಸಾದ್ಯ ಶರೇಣೈಕೇನ ಸಂಯುಗೇ । ವಾನರಾಣಾಂ ಮಹಾ ರಾಜಃ ಕೃತಸ್ಸಪ್ಲವತಾಂ ಪ್ರಭುಃ ॥೧೩೯॥ ತಸ್ಯ ಸಾಹಾಯ್ಯ ಮಸ್ಮಾಭಿಃ ಕಾರ್ಯಂ ಸರ್ವಾತ್ಮನಾ ತ್ವಿಹ । ತೇನ ಪ್ರಸ್ಥಾಪಿತಸ್ತುಭ್ಯಂ ಸಮೀಪಮಿಹ ಧರ್ಮತಃ ॥೧೪೦॥ ಕ್ಷಿಪ್ರಮಾನೀಯತಾಂ ಸೀತಾ ದೀಯತಾಂ ರಾಘವಾಯಚ । ಯಾವನ್ನಹರಯೋ ವೀರಾ ವಿಧಮಂತಿ ಬಲಂ ತವ ॥೧೪೧॥ ವಾನರಾಣಾಂ ಪ್ರಭಾವೋಹಿ ನ ಕೇನ ವಿದಿತಃ

ಅರ್ಹಸೀತಿ - ಯೋಗ್ಯನಾಗಿರುತ್ತೀಯೆಂದು, ತಸ್ಮೈ - ಆ ಶ್ರೀರಾಮನಿಗೆ, ಮಯಾಚ - ನನ್ನಿಂದಲೂ, ಕಥಿತಂ - ಹೇಳಲ್ಪಟ್ಟಿತು. ॥೧೩೭॥ ಮಹಾಪ್ರಭುಃ - ಮಹಾರಾಜನಾದ, ರಾಘವಃ - ಶ್ರೀರಾಮನು, ಸಹಲಕ್ಷ್ಮಣಃ - ಲಕ್ಷ್ಮಣಸಹಿತನಾಗಿ, ವಾಲಿನಾ - ವಾಲಿಯಿಂದ, ಹೃತರಾಜ್ಯೇನ - ಅಪಹರಿಸಲ್ಪಟ್ಟ ರಾಜ್ಯವುಳ್ಳ, ಸುಗ್ರೀವೇಣಸಹ - ಸುಗ್ರೀವನೊಡನೆ, ಅಗ್ನಿಸಾಕ್ಷಿಕಂ - ಅಗ್ನಿಸಾಕ್ಷಿಯಾಗಿ, ಸಖ್ಯಂ - ಮೈತ್ರಿಯನ್ನು, ಚಕ್ರೇ - ಮಾಡಿದನು. ॥೧೩೮॥ ಸಂಯುಗೇ - ಯುದ್ಧದಲ್ಲಿ, ವಾಲಿನಂ - ವಾಲಿಯನ್ನು, ಏಕೇನಶರೇಣ - ಒಂದು ಬಾಣದಿಂದಲೇ, ಉತ್ಸಾದ್ಯ - ಸಂಹರಿಸಿ, ಪ್ಲವತಾಂ - ವಾನರರಿಗೆ, ಪ್ರಭುಃ-ಒಡೆಯನಾದ, ಸಃ ಆ ಸುಗ್ರೀವನು, ವಾನರಾಣಾಂ-ಕಪಿಗಳಿಗೆ, ಮಹಾರಾಜಃ-ಅರಸಾಗಿ, ಕೃತಃ - ಮಾಡಲ್ಪಟ್ಟನು. ॥೧೩೯॥ ತಸ್ಯ - ಆ ಶ್ರೀರಾಮನಿಗೆ, ಅಸ್ಮಾಭಿಃ - ನಮ್ಮಿಂದ, ಇಹ - ಈಗ, ಸಾಹಾಯ್ಯಂ-ಸಹಾಯಕರ್ಮವು, ಸರ್ವಾತ್ಮನಾ-ಸರ್ವಪ್ರಕಾರದಿಂದಲೂ, ಕಾರ್ಯಂ-ಮಾಡತಕ್ಕದು, ತೇನ - ಆ ಸುಗ್ರೀವನಿಂದ, ತುಭ್ಯಂ - ನಿನ್ನ, ಸಮೀಪಂ - ಬಳಿಯನ್ನು ಕುರಿತು, ಇಹ - ಇಲ್ಲಿಗೆ, ಧರ್ಮತಃ - ಧರ್ಮವಾಗಿ, ಪ್ರಸ್ಥಾಪಿತಃ - ಕಳುಹಿಸಲ್ಪಟ್ಟೆನು. ॥೧೪೦॥ ಯಾವತ್ - ಎಷ್ಟ ರೊಳಗಾಗಿ, ವೀರಾಃ - ಶೂರರಾದ, ಹರಯಃ - ಕಪಿಗಳು, ತವ - ನಿನ್ನ, ಬಲಂ - ಸೈನ್ಯವನ್ನು, ನವಿಧಮಂತಿ - ನಾಶಮಾಡುವದಿಲ್ಲವೋ, ತಾವತ್ - ಅಷ್ಟರಲ್ಲಿ, ಸೀತಾ - ಸೀತಾದೇವಿಯು, ಕ್ಷಿಪ್ರಂ-ಜಾಗ್ರತೆಯಾಗಿ, ಆನೀಯತಾಂ - ತರಲ್ಪಡಲಿ, ರಾಘವಾಯಚ - ಶ್ರೀರಾಮನಿಗೂ, ದೀಯತಾಂ - ಕೊಡಲ್ಪಡಲಿ, ಯೇ - ಯಾವ ಕಪಿಗಳು, ನಿಮಂತ್ರಿತಾಃ - ಆಜ್ಞಾಪಿಸಲ್ಪಟ್ಟವರಾಗಿ, ದೇವತಾನಾಂ -

ವಾಲಿಯು ನನ್ನನ್ನು ಹಲವು ರೀತಿಗಳಿಂದ ಅನ್ಯಾಯವನ್ನು ಮಾಡಿರುವನು. ನೀನು ಅವನನ್ನು ಕೊಲ್ಲುವುದಾಗಿ ಪ್ರತಿಜ್ಞೆ ಮಾಡಬೇಕು" ಎಂದು ಕೇಳಿದೆನು. ಆಗ ನಾವೀರ್ವರೂ ಪರಸ್ಪರವಾಗಿ ಪ್ರತಿಜ್ಞೆಮಾಡಿಕೊಂಡೆವು. ಆಮೇಲೆ ರಾಜೇಂದ್ರನಾದ ಶ್ರೀರಾಮನು ತಮ್ಮನಾದ ಲಕ್ಷ್ಮಣನೊಡಗೂಡಿ ವಾಲಿಯಿಂದ ರಾಜ್ಯಪದಭ್ರಷ್ಟನಾದ ನನ್ನೊಡನೆ ಅಗ್ನಿಸಾಕ್ಷಿಕವಾಗಿ ಸ್ನೇಹವನ್ನು ಬೆಳಿಸಿದನು. ಆಮೇಲೆ ಆತನು ಕಿಷ್ಕಿಂಧೆಗೆ ಹೋಗಿ ಒಂದೇ ಒಂದು ಬಾಣದಿಂದ ವಾಲಿಯನ್ನು ಕೊಂದು, ಸಮಸ್ತ ವಾನರ ಭಲ್ಲೂಕ ಸಮೂಹಗಳಿಗೂ ನನ್ನನ್ನು ದೊರೆಯನ್ನಾಗಿ ಮಾಡಿದನು. ಆದುದರಿಂದ ನಾವು ಈ ವಿಷಯದಲ್ಲಿ ಸಮಸ್ತ ಪ್ರಯತ್ನಗಳಿಂದಲೂ ಶ್ರೀರಾಮನಿಗೆ ಸಹಾಯವನ್ನು ಮಾಡಬೇಕು. ಅದರಿಂದಲೇ ನಾನು ರಾಜಧರ್ಮದಂತೆ ಮೊದಲೇ ಈ ದೂತನನ್ನು ನಿನ್ನ ಬಳಿಗೆ ಕಳುಹಿಸಿರುವೆನು. ॥೧೩೬–೧೪೦॥ ಎಲೈ ರಾವಣಾಸುರನೇ! ಮಹಾ ಶೌರ್ಯವಂತರಾದ ವಾನರರು ನಿನ್ನ ಲಂಕಾನಗರವನ್ನು ಪ್ರವೇಶಿಸಿ, ನಿನ್ನ ಸೈನ್ಯವೆಲ್ಲವನ್ನೂ ಧ್ವಂಸಗೊಳಿಸುವುದಕ್ಕೆ ಮೊದಲೇ ಜಾಗ್ರತೆಯಾಗಿ ಸೀತಾ

ಪುರಾ । ದೇವತಾನಾಂ ಸಕಾಶಂಚ ಯೇ ಗಚ್ಛಂತಿ ನಿಮಂತ್ರಿತಾಃ" ॥ ೧೪೨ ॥ ಇತಿ ವಾನರರಾಜಸ್ತ್ವಾಮಾಹೇತ್ಯಭಿಹಿತೋ ಮಯಾ । ಮಾಮೈಕ್ಷತ ತತಃ ಕ್ರುದ್ಧಶ್ಚಕ್ಷುಷಾ ಪ್ರದಹನ್ನಿವ ॥ ೧೪೩ ॥ ತೇನ ವಧ್ಯೋಽಹಮಾಜ್ಞಪ್ತೋ ರಕ್ಷಸಾ ರೌದ್ರಕರ್ಮಣಾ । ಮತ್ಪ್ರಭಾವಮವಿಜ್ಞಾಯ ರಾವಣೇನ ದುರಾತ್ಮನಾ ॥ ೧೪೪ ॥ ತತೋ ವಿಭೀಷಣೋ ನಾಮ ತಸ್ಯ ಭ್ರಾತಾ ಮಹಾಮತಿಃ । ತೇನ ರಾಕ್ಷಸರಾಜೋಽಸೌ ಯಾಚಿತೋ ಮಮ ಕಾರಣಾತ್ ॥ ೧೪೫ ॥ "ನೈವಂ ರಾಕ್ಷಸಶಾರ್ದೂಲ ತ್ಯಜ್ಯತಾ

ದೇವತೆಗಳ, ಸಕಾಶಂಚ - ಸಮೀಪವನ್ನೂ ಸಹ ಕುರಿತು, ಗಚ್ಛಂತಿ - ಹೋಗುವರೋ, ತೇಷಾಂ ವಾನರಾಣಾಂ - ಅಂಥ ಕಪಿಗಳ, ಪ್ರಭಾವಃ - ಪರಾಕ್ರಮವು, ಕೇನ - ಯಾರಿಂದತಾನೇ, ಪುರಾ - ಪೂರ್ವದಲ್ಲಿ, ನವಿದಿತಃ - ತಿಳಿಯಲ್ಪಡಲಿಲ್ಲ. ॥೧೪೧-೧೪೨॥ ಇತಿ - ಈ ಪರಿಯಾಗಿ, ವಾನರರಾಜಃ - ಸುಗ್ರೀವನು, ತ್ವಾಂ - ನಿನ್ನನ್ನು ಕುರಿತು, ಅಹೇತಿ - ಹೇಳಿದನೆಂದು, ಮಯಾ - ನನ್ನಿಂದ, ಅಭಿಹಿತಃ - ಹೇಳಲ್ಪಟ್ಟವನಾದಕಾರಣ, ಕ್ರುದ್ಧಃ - ಕೋಪಿಸ್ಠನಾದ ರಾವಣನು, ತತಃ - ಬಳಿಕ, ಮಾಂ - ನನ್ನನ್ನು, ಚಕ್ಷುಷಾ - ಕಣ್ಣಿನಿಂದ, ಪ್ರದಹನ್ನಿವ - ದಹಿಸುವನಂತೆ, ಐಕ್ಷತ - ನೋಡಿದನು. ॥ ೧೪೩ ॥ ಮತ್ಪ್ರಭಾವಂ - ನನ್ನ ಮಾಹಾತ್ಮ್ಯವನ್ನು, ಅವಿಜ್ಞಾಯ - ಅರಿಯದ, ರೌದ್ರಕರ್ಮಣಾ - ಕ್ರೂರವ್ಯಾಪಾರಿಯಾದ, ದುರಾತ್ಮನಾ - ದುಷ್ಟಮನಸ್ಸುಳ್ಳ, ರಕ್ಷಸಾ - ರಾಕ್ಷಸನಾದ, ರಾವಣೇನ-ರಾವಣನಿಂದ, ಅಹಂ-ನಾನು, ವಧ್ಯಃ-ವಧಾರ್ಹನಾಗಿ, ಆಜ್ಞಪ್ತಃ-ಆಜ್ಞಾಪಿಸಲ್ಪಟ್ಟೆನು. ॥೧೪೪॥ ತತಃ - ಬಳಿಕ, ಮಹಾಮತಿಃ - ಮಹಾ ಬುದ್ಧಿಶಾಲಿಯಾದ, ವಿಭೀಷಣೋನಾಮ - ವಿಭೀಷಣನೆಂದು ಪ್ರಸಿದ್ಧನಾದ, ತಸ್ಯಭ್ರಾತಾ - ಆ ರಾವಣನ ಒಡಹುಟ್ಟಿದವನು, (ಅಸ್ತಿ - ಇದ್ದಾನೆ), ಹೇ ರಾ....ಲ - ಎಲೈ ಅಸುರೋತ್ತಮನೇ, ಏವಂ - ಹೀಗೆ, (ನಕರ್ತವ್ಯಂ - ಮಾಡತಕ್ಕುದಲ್ಲ), ಏಷನಿಶ್ಚಯಃ - ಈ ಕಪಿವಧರೂಪವಾದ ನಿಶ್ಚಯವು, ತ್ಯಜ್ಯತಾಂ - ಬಿಡಲ್ಪಡಲಿ, (ಯಃ - ಯಾವ ಮಾರ್ಗವು), ತ್ವಯಾ - ನಿನ್ನಿಂದ, ಸಂಸೇವ್ಯತೇ - ಸೇವಿಸಲ್ಪಡುವುದೋ, (ಸಃ - ಅದು), ರಾಜ....ಹಿ-

---

ದೇವಿಯನ್ನು ತಂದು ಶ್ರೀರಾಮನಿಗೊಪ್ಪಿಸು. ಆತನ ಕ್ಷಮೆಯನ್ನು ಬೇಡು. ನೀನು ವಾನರರ ಪ್ರಭಾವವನ್ನರಿಯೆಯಾ? ದೇವತೆಗಳು ಸಹ ವಾನರರ ಸಹಾಯವನ್ನು ಕೋರಲು ಅವರಲ್ಲಿಗೆ ಹೋಗಿ ಸಮಸ್ತವನ್ನೂ ಜಯಿಸಿಬಂದ ವಿಷಯವು ಎಲ್ಲರಿಗೂ ತಿಳಿದವಿಷಯವೇ ಆಗಿರುವುದಲ್ಲವೆ! "ಎಲೈ ರಾವಣನೇ! ನಮ್ಮ ಪ್ರಭುವಾದ ಸುಗ್ರೀವನು ಹೀಗೆಯೇ ಹೇಳೆಂದು ನನಗೆ ಆಜ್ಞಾಪಿಸಿರುವನು" ಎಂದು ಹೇಳಿದೆನು. ಆಗಲಾ ರಾವಣನು ನನ್ನ ಮಾತುಗಳನ್ನು ಕೇಳಿ ಕೋಪದಿಂದುರಿದು ಬಿದ್ದು, ಕಣ್ಣುಗಳಿಂದ ಕಿಡಿಗಳನ್ನು ಕಕ್ಕುತ್ತ, ನನ್ನನ್ನು ಸುಡುವವನಂತೆ ದುರುದುರನೆ ನೋಡುತ್ತಿದ್ದನು. ಆ ಬಳಿಕ ಮಹಾ ಕ್ರೂರಕರ್ಮಿಯೂ, ಮಹಾ ದುರಾತ್ಮನೂ ಆದ ಆ ರಾವಣಾಸುರನು ನನ್ನ ಸಾಮರ್ಥ್ಯವನ್ನರಿಯದೆ ನನ್ನನ್ನು ವಧಿಸಬೇಕೆಂದು ಅಲ್ಲಿದ್ದ ರಾಕ್ಷಸರಿಗೆ ಆಜ್ಞಾಪಿಸಿದನು. ॥ ೧೪೧ ೧೪೪ ॥ ಆ ಮಾತನ್ನು ಕೇಳುತ್ತಲೇ ಆತನ ತಮ್ಮನೂ, ಬಹು ಬುದ್ಧಿಶಾಲಿಯಾದವನೂ ಆದ ವಿಭೀಷಣನೆಂಬುವನು ನನಗೋಸುಗ ತನ್ನ ಅಣ್ಣನಾದ ಆ ರಾವಣನನ್ನು ಕುರಿತು, "ಎಲೈ ರಾಕ್ಷಸೋತ್ತಮನೇ! ಅಣ್ಣಾ, ಹೀಗೆ ದೂತನನ್ನು ಕೊಲ್ಲಬೇಕೆಂಬ ನಿನ್ನ ನಿಶ್ಚಯವನ್ನು ಬಿಟ್ಟುಬಿಡು. ದೂತವಧೆಯು ಯಾವ ರಾಜನೀತಿಶಾಸ್ತ್ರದಲ್ಲಿಯೂ ಸ್ವಲ್ಪಮಾತ್ರವೂ ಹೇಳಿರುವುದಿಲ್ಲವು. ಇದು

ಮೋಷ ನಿಶ್ಚಯಃ । ರಾಜಶಾಸ್ತ್ರವ್ಯಪೇತೋಹಿ ಮಾರ್ಗಸ್ಸಂಸೇವ್ಯತೇ ತ್ವಯಾ ॥೧೪೬॥ ದೂತವಧ್ಯಾ ನದೃಷ್ಟಾಹಿ ರಾಜಶಾಸ್ತ್ರೇಷು ರಾಕ್ಷಸ! । ದೂತೇನ ವೇದಿತವ್ಯಂಚ ಯಥಾರ್ಥಂ ಹಿತವಾದಿನಾ॥೧೪೭॥ಸುಮಹತ್ಯಪರಾಧೇಪಿ ದೂತಸ್ಯಾಽತುಲವಿಕ್ರಮ! । ವಿರೂಪಕರಣಂ ದೃಷ್ಟಂ ನವಧೋಽಸ್ತೀತಿ ಶಾಸ್ತ್ರತಃ" ॥ ೧೪೮ ॥ ವಿಭೀಷಣೇನೈವ ಮುಕ್ತೋ ರಾವಣಸ್ಸಂದಿದೇಶ ತಾ೯ । ರಾಕ್ಷಸಾನೇತದೇವಾಽಸ್ಯ ಲಾಂಗೂಲಂ ದಹ್ಯತಾ ಮಿತಿ ॥ ೧೪೯ ॥ ತತಸ್ತಸ್ಯವಚಶ್ಶ್ರುತ್ವಾ ಮಮ ಪುಚ್ಛಂ ಸಮಂತತಃ । ವೇಷ್ಟಿತಂ ಶಣವಲ್ಕೈಶ್ಚ ಜೀರ್ಣೈಃ ಕಾರ್ಪಾಸಜೈಃ ಪಟೈಃ ॥ ೧೫೦ ॥ ರಾಕ್ಷಸಾ ಸ್ಸಿದ್ಧಸನ್ನಾಹಾ

ರಾಜನೀತಿಶಾಸ್ತ್ರದಿಂದ ಬಿಡಲ್ಪಟ್ಟದಷ್ಟೆ, ಹೇ ರಾಕ್ಷಸ - ಎಲೈ ರಾಕ್ಷಸನೆ, ದೂತವಧ್ಯಾ - ದೂತವಧೆಯು, ರಾಜಶಾಸ್ತ್ರೇಷು - ರಾಜನೀತಿಶಾಸ್ತ್ರಗಳಲ್ಲಿ, ನದೃಷ್ಟಾಹಿ - ಕಾಣಲ್ಪಡಲಿಲ್ಲವಷ್ಟೆ, ಹಿತವಾದಿನಾ- ಹಿತವಾಗಿ ಹೇಳುತ್ತಿರುವ, ದೂತೇನ-ದೂತನಿಂದ, ಯಥಾರ್ಥಂಚ-ನಿಶ್ಚಯವೂ ಸಹ, ವೇದಿತವ್ಯಂ- ಹೇಳತಕ್ಕುದು, ಹೇ ಅತುಲವಿಕ್ರಮ - ಎಲೈ ಅಸದೃಶಪರಾಕ್ರಮನೇ, ಸುಮಹತಿ - ಬಹಳ ದೊಡ್ಡದಾದ, ಅಪರಾಧೇಪಿ - ತಪ್ಪಿತದಲ್ಲಿಯೂ, ದೂತಸ್ಯ - ದೂತನಿಗೆ, ವಿರೂಪಕರಣಂ - ರೂಪವಿಕಾರ- ಮಾಡುವುದು, ಶಾಸ್ತ್ರತಃ - ಶಾಸ್ತ್ರದಿಂದ, ದೃಷ್ಟಂ - ನೋಡಲ್ಪಟ್ಟದೆ, ವಧಃ - ಸಂಹಾರವು, ನಾಸ್ತಿ - ಇಲ್ಲವು, ಇತಿ - ಇಂತೆಂದು, ತೇನ - ಆ ವಿಭೀಷಣನಿಂದ, ರಾಕ್ಷಸರಾಜಃ - ರಾಕ್ಷಸಾಧಿಪತಿಯಾದ, ಅಸೌ - ಆ ರಾವಣನು, ಮಮ - ನನ್ನ, ಕಾರಣಾತ್ - ನಿಮಿತ್ತದಿಂದ, ಯಾಚಿತಃ - ಬೇಡಲ್ಪಟ್ಟನು. ॥೧೪೫-೧೪೮॥ ರಾವಣಃ - ರಾವಣನು, ವಿಭೀಷಣೇನ - ವಿಭೀಷಣನಿಂದ, ಏವಂ - ಈ ಪರಿಯಾಗಿ, ಉಕ್ತಃ - ಹೇಳಲ್ಪಟ್ಟವನಾಗಿ, ಅಸ್ಯ - ಈ ಕಪಿಯ, ಏತಂಲಾಂಗೂಲಮೇವ - ಬಾಲವೇ, ದಹ್ಯತಾಂ - ಸುಡಲ್ಪಡಲಿ, ಇತಿ - ಇಂತೆಂದು, ತಾ೯ - ಬಳಿಯಲ್ಲಿರುವ ಆ, ರಾಕ್ಷಸಾ೯ - ರಾಕ್ಷಸರನ್ನು ಕುರಿತು, ಸಂದಿದೇಶ - ಆಜ್ಞಾಪಿಸಿದನು. ॥೧೪೯॥ ತತಃ - ಬಳಿಕ, ತಸ್ಯ - ಆ ರಾವಣನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಮಮ - ನನ್ನ, ಪುಚ್ಛಂ - ಬಾಲವು, ಸಮಂತತಃ - ಎಲ್ಲಾ ಕಡೆಯಲ್ಲಿಯೂ, ಶಣವಲ್ಕೈಃ - ಸಣಬು ನಾರುಗಳಿಂದಲೂ, ಜೀರ್ಣೈಃ - ಶಿಥಿಲವಾದ, ಕಾರ್ಪಾಸಜೈಃ - ಹತ್ತಿಯ, ಪಟೈಶ್ಚ-ಬಟ್ಟೆಗಳಿಂದಲೂ, ವೇಷ್ಟಿತಂ-ಸುತ್ತಲ್ಪಟ್ಟಿತು. ॥ ೧೫೦ ॥ ತತಃ-ಬಳಿಕ, ಚಂಡವಿಕ್ರಮಾಃ-

---

ರಾಜನೀತಿಶಾಸ್ತ್ರವಿರುದ್ಧವಾದ ಕಾರ್ಯವು. ಇಂತಹ ಕಾರ್ಯವನ್ನು ನೀನು ಮಾಡಬಾರದು. ನೀನು ಸಮಸ್ತ ರಾಜಧರ್ಮಗಳನ್ನೂ ಅರಿತವನು. ದೂತನಾದವನು ರಾಜನು ತಿಳಿಸಿ ಬಾರೆಂದು ಆಜ್ಞಾಪಿಸಿದುದೆಲ್ಲವನ್ನೂ ಇದ್ದುದು ಇದ್ದಂತೆಯೇ ಹೇಳಬೇಕು. ಅದು ನ್ಯಾಯವಾಗಿಯೇ ಇರುವುದು. ಪ್ರಭುವು ನುಡಿದಂತೆ ನುಡಿಯುವ ದೂತನೇ ಶ್ರೇಷ್ಠನು. ಆತನೇ ಪ್ರಭುವಿನ ಶ್ರೇಯಸ್ಸನ್ನು ಕೋರುವನು. ಎಲೈ ಅಮಿತಪರಾಕ್ರಮವಂತನೇ! ದೂತನಾದವನು ಅಕ್ಷಮ್ಯವಾದ ಅಪರಾಧವನ್ನು ಮಾಡಿದರೂ ಅವನನ್ನು ವಿರೂಪಗೊಳಿಸಬಹುದೆಂದು ರಾಜನೀತಿಶಾಸ್ತ್ರಗಳು ಹೇಳುವುವೇಹೊರ್ತು ವಧಿಸಬೇಕೆಂದು ಎಲ್ಲಿಯೂ ಹೇಳಿರುವುದಿಲ್ಲವು." ಎಂದು ಬೇಡಿಕೊಂಡನು. ॥೧೪೫–೧೪೮॥ ಆಗ ರಾಕ್ಷಸೇಶ್ವರನಾದ ರಾವಣಾಸುರನು ಅಲ್ಲಿದ್ದ ರಾಕ್ಷಸರೆಲ್ಲರನ್ನು ಕುರಿತು, "ಎಲೈ ರಾಕ್ಷಸರಿರಾ! ನೀವು ಈ ವಾನರನ ಬಾಲವನ್ನು ಸುಟ್ಟು ಬಿಡಿರಿ" ಎಂದು ಆಜ್ಞಾಪಿಸಿದನು. ಈ ಮಾತನ್ನು ಕೇಳಿದೊಡನೆಯೇ ಆ ರಾಕ್ಷಸರೆಲ್ಲರೂ, ಹಳೆಯ ಬಟ್ಟೆಗಳಿಂದಲೂ, ಸಣಬಿನ ನಾರುಗಳಿಂದಲೂ ನನ್ನ ಬಾಲವನ್ನು ಚೆನ್ನಾಗಿ ಸುತ್ತಿ

ಸ್ತತಸ್ತೇ ಚಂಡವಿಕ್ರಮಾಃ । ತದಾಽದಹ್ಯಂತ ಮೇ ಪುಚ್ಛಂ ನಿಘ್ನಂತಃ ಕಾಷ್ಠ ಮುಷ್ಟಿಭಿಃ । ಬದ್ಧಸ್ಯ ಬಹುಭಿಃ ಪಾಶೈರ್ಯಂತ್ರಿತಸ್ಯ ಚ ರಾಕ್ಷಸೈಃ ॥೧೫೧॥ ತತಸ್ತೇ ರಾಕ್ಷಸಾಶ್ಶೂರಾ ಬದ್ಧಂ ಮಾಮಗ್ನಿಸಂವೃತಂ । ಅಘೋಷಯನ್ ರಾಜಮಾರ್ಗೇ ನಗರ ದ್ವಾರಮಾಗತಾಃ ॥ ೧೫೨ ॥ ತತೋಽಹಂ ಸುಮಹದ್ರೂಪಂ ಸಂಕ್ಷಿಪ್ಯ ಪುನರಾತ್ಮನಃ । ವಿಮೋಚಯಿತ್ವಾ ತಂ ಬಂಧಂ ಪ್ರಕೃತಿಸ್ಥಸ್ಸ್ಥಿತಃ ಪುನಃ ॥೧೫೩॥ ಆಯಸಂ ಪರಿಘಂ ಗೃಹ್ಯ ತಾನಿ ರಕ್ಷಾಂಸ್ಯಸೂದಯಂ । ತತಸ್ತಂ ನಗರದ್ವಾರಂ ವೇಗೇನಾಪ್ಲುತವಾನಹಂ ॥೧೫೪॥ ಪುಚ್ಛೇನಚ ಪ್ರದೀಪ್ತೇನ ತಾಂ ಪುರೀಂ ಸಾಟ್ಟಗೋಪುರಾಂ । ದಹಾಮ್ಯಹಮ

ಕ್ರೂರ ಪರಾಕ್ರಮಿಗಳಾದ, ಸಿದ್ಧಸನ್ನಾಹಾಃ-ಒದಗಿದ ಉತ್ಸಾಹವುಳ್ಳ, ತೇರಾಕ್ಷಸಾಃ-ಆ ರಾಕ್ಷಸರು, ಬಹುಭಿಃ - ಅನೇಕವಾದ, ಪಾಶೈಃ - ಹಗ್ಗಗಳಿಂದ, ಬದ್ಧಸ್ಯ - ಕಟ್ಟಲ್ಪಟ್ಟ, ರಾಕ್ಷಸೈಃ - ಅಸುರರಿಂದ, ಯಂತ್ರಿತಸ್ಯ - ಬಿಗಿಯಲ್ಪಟ್ಟ, ಮೇ - ನನ್ನ, ಪುಚ್ಛಂ - ಬಾಲವನ್ನು, ಕಾಷ್ಠಮುಷ್ಟಿಭಿಃ - ಕೋಲುಗಳಿಂದಲೂ, ಮುಷ್ಟಿಗಳಿಂದಲೂ, ನಿಘ್ನಂತಃ - ಹೊಡಿಯುತ್ತ, ತದಾ - ಆ ಕಾಲದಲ್ಲಿ, ಅದಹ್ಯಂತ - ಸುಟ್ಟರು. ॥ ೧೫೧ ॥ ತತಃ ಬಳಿಕ, ಶೂರಾಃ-ವೀರರಾದ, ತೇರಾಕ್ಷಸಾಃ-ಆ ರಾಕ್ಷಸರು, ನಗರದ್ವಾರಂ-ಊರುಬಾಗಿಲನ್ನು ಕುರಿತು, ಆಗತಾಃ-ಬಂದು, ಬದ್ಧಂ-ಕಟ್ಟಲ್ಪಟ್ಟ, ಅಗ್ನಿಸಂವೃತಂ-ಬೆಂಕಿಯಿಂದ ಸುತ್ತಲ್ಪಟ್ಟ, ಮಾಂ - ನನ್ನನ್ನು, ರಾಜಮಾರ್ಗೇ - ರಾಜಬೀದಿಯಲ್ಲಿ, ಅಘೋಷಯನ್ - ಸಾರಿದರು. ॥ ೧೫೨ ॥ ತತಃ - ಬಳಿಕ, ಅಹಂ - ನಾನು, ಸುಮಹತ್ - ಬಹು ದೊಡ್ಡದಾದ, ಆತ್ಮನಃ - ನನ್ನ, ರೂಪಂ - ಆಕಾರವನ್ನು, ಪುನಃ - ಮತ್ತೂ, ಸಂಕ್ಷಿಪ್ಯ - ಸಂಕೋಚಮಾಡಿ, ತಂಬಂಧಂ - ಆ ಬಂಧವನ್ನು, ವಿಮೋಚಯಿತ್ವಾ - ಬಿಡಿಸಿಕೊಂಡು, ಪುನಃ - ಮತ್ತು, ಪ್ರಕೃತಿಸ್ಥಃ - ಸ್ವಭಾವಸಿದ್ಧವಾದ ರೂಪದಲ್ಲಿ, ಸ್ಥಿತಃ - ನಿಂತು, ಆಯಸಂ - ಕಬ್ಬಿಣದ, ಪರಿಘಂ - ಪರಿಘಾಯುಧವನ್ನು, ಗೃಹ್ಯ - ತೆಗದುಕೊಂಡು, ತಾನಿರಕ್ಷಾಂಸಿ - ಆ ರಕ್ಕಸರನ್ನು, ಅಸೂದಯಂ - ಸಂಹರಿಸಿದೆನು. ತತಃ - ಬಳಿಕ, ಅಹಂ - ನಾನು, ತಂನಗರದ್ವಾರಂ - ಆ ಊರುಬಾಗಲನ್ನು, ವೇಗೇನ - ಜವದಿಂದ, ಅಪ್ಲುತವಾನ್ - ಹಾರಿದೆನು. ॥ ೧೫೩-೧೫೪ ॥ ಅಹಂ - ನಾನು, ಪ್ರದೀಪ್ತೇನ - ಉರಿಯುತ್ತಿರುವ, ಪುಚ್ಛೇನಚ - ಬಾಲದಿಂದಲೂ, ಸಾಟ್ಟಗೋಪುರಾಂ - ಬುರುಜುಗಳಿಂದಲೂ, ನಗರದ್ವಾರಗಳಿಂದಲೂ ಕೂಡಿದ,

---

ದರು. ಮಹಾ ಭಯಂಕರಪರಾಕ್ರಮಶಾಲಿಗಳಾದ ಆ ರಾಕ್ಷಸರು ನನ್ನ ಬಾಲವನ್ನು ಸುಡುವುದಕ್ಕೆ ಎಲ್ಲವನ್ನೂ ಸಿದ್ಧಪಡಿಸಿಕೊಂಡು ಕೆಲವರು ನನ್ನನ್ನು ಹಗ್ಗಗಳಿಂದ ಹೊಡೆಯುತ್ತಲೂ, ಇನ್ನು ಕೆಲವರು ದೊಣ್ಣೆಗಳಿಂದ ಹೊಡೆಯುತ್ತಲೂ, ಮತ್ತೆ ಕೆಲವರು ಮುಷ್ಟಿಗಳಿಂದ ಗುದ್ದುತ್ತಲೂ ಎಳೆದುಕೊಂಡು ಹೋಗಿ ನನ್ನ ಬಾಲಕ್ಕೆ ಬೆಂಕಿಯನ್ನಿಟ್ಟರು. ಹೀಗೆ ನನ್ನ ಬಾಲಕ್ಕೆ ಬೆಂಕಿಯನ್ನಿಟ್ಟ ಬಳಿಕ ಮಹಾ ಬಲಾಢ್ಯರಾದ ಆ ರಾಕ್ಷಸರೆಲ್ಲರೂ ನನ್ನನ್ನು ವಿಧವಿಧವಾಗಿ ಹಿಂಸಿಸಿ ಎಳೆದುಕೊಂಡು ಹೋಗುತ್ತ, ಪುರದ್ವಾರದಲ್ಲಿಯೂ, ರಾಜಬೀದಿಗಳಲ್ಲಿಯೂ ನನ್ನನ್ನು ಹಗ್ಗಗಳಿಂದ ಬಿಗಿಸಿರುವುದನ್ನೂ, ನನ್ನ ಬಾಲಕ್ಕೆ ಬೆಂಕಿಯನ್ನಿಟ್ಟಿರುವುದನ್ನೂ ಸಾರಿ ಹೇಳುತ್ತಿದ್ದರು. ಆಗ ನಾನು ನನ್ನ ದೇಹವನ್ನು ಬಹಳ ಸಣ್ಣದಾಗಿಸಿಕೊಂಡು ಹಗ್ಗಗಳೆಲ್ಲವನ್ನೂ ಬಿಡಿಸಿಕೊಂಡು ಪುನಃ ನನ್ನ ದೇಹವನ್ನು ದೊಡ್ಡದಾಗಿ ಬೆಳಿಸಿ ಅಲ್ಲಿದ್ದ ಕಬ್ಬಿಣದ ಅಗುಳೀಮರವನ್ನು ತೆಗೆದುಕೊಂಡು ಆ ರಾಕ್ಷಸರೆಲ್ಲರನ್ನೂ ಕೊಂದೆನು. ॥೧೪೯–೧೫೪॥ ಆಮೇಲೆ ಬಹು ಜಾಗ್ರತೆಯಾಗಿ ಆ ಲಂಕಾನಗರದ ಹೊರಬಾಗಿಲಿನ ಮೇಲಕ್ಕೆ ಹಾರಿ,

ಸಂಭ್ರಾಂತೋ ಯುಗಾಂತಾಗ್ನಿರಿವ ಪ್ರಜಾಃ ॥ ೧೫೫ ॥ ವಿನಷ್ಟಾ ಜಾನಕೀ ವ್ಯಕ್ತಂ ನಹ್ಯದಗ್ಧಃ ಪ್ರದೃಶ್ಯತೇ । ಲಂಕಾಯಾಂ ಕಶ್ಚಿದುದ್ದೇಶಸ್ಸರ್ವಾ ಭಸ್ಮೀಕೃತಾ ಪುರೀ ॥ ೧೫೬ ॥ ದಹತಾಚ ಮಯಾ ಲಂಕಾಂ ದಗ್ಧಾ ಸೀತಾ ನಸಂಶಯಃ । ರಾಮಸ್ಯಹಿ ಮಹತ್ಕಾರ್ಯಂ ಮಯೇದಂ ವಿತಥೀಕೃತಂ ॥ ೧೫೭ ॥ ಇತಿ ಶೋಕಸಮಾವಿಷ್ಟ ಶ್ಚಿಂತಾಮಹಮುಪಾಗತಃ । ಅಥಾಹಂ ವಾಚಮಶ್ರೌಷಂ ಚಾರಣಾನಾಂ ಶುಭಾಕ್ಷರಾಂ ॥ ೧೫೮ ॥ ಜಾನಕೀ ನಚದಗ್ಧೇತಿ ವಿಸ್ಮಯೋದಂತಭಾಷಿಣಾಂ । ತತೋ ಮೇ ಬುದ್ಧಿ ರುತ್ಪನ್ನಾ ಶ್ರುತ್ವಾ ತಾಮದ್ಭುತಾಂ ಗಿರಂ ॥ ೧೫೯ ॥ ಅದಗ್ಧಾ ಜಾನಕೀತ್ಯೇವಂ

ತಾಂಪುರೀಂ-ಆ ಪಟ್ಟಣವನ್ನು, ಅಸಂಭ್ರಾಂತಃ-ಧೈರ್ಯವಾಗಿ, ಯುಗಾಂತಾಗ್ನಿಃ-ಪ್ರಳಯಾಗ್ನಿಯು, ಪ್ರಜಾಇವ - ಜನಗಳನ್ನೀಪಾದಿಯಲ್ಲಿ, ದಹಾಮಿ - ಸುಟ್ಟುಬಿಟ್ಟೆನು, ಜಾನಕೀ - ಸೀತಾದೇವಿಯು, ವಿನಷ್ಟಾ - ನಾಶವಾದಳು, ವ್ಯಕ್ತಂ - ಸ್ಪಷ್ಟವು, ಲಂಕಾಯಾಂ - ಲಂಕಾಪಟ್ಟಣದಲ್ಲಿ, ಕಶ್ಚಿದುದ್ದೇಶಃ- ಯಾವ ಪ್ರದೇಶವೂ, ಅದಗ್ಧಃ - ಸುಡಲ್ಪಡದಿರುವದಾಗಿ, ನಪ್ರದೃಶ್ಯತೇಹಿ - ಕಾಣುವುದಿಲ್ಲವಷ್ಟೆ, ಸರ್ವಾಪುರೀ - ನಗರವೆಲ್ಲ, ಭಸ್ಮೀಕೃತಾ - ಬೂದಿ ಮಾಡಲ್ಪಟ್ಟಿತು, ಲಂಕಾಂ - ಲಂಕಾಪುರವನ್ನು, ದಹತಾಚ - ಸುಡತ್ತಿರುವ, ಮಯಾ - ನನ್ನಿಂದ, ಸೀತಾಚ - ಸೀತಾದೇವಿಯನ್ನು, ದಗ್ಧಾ - ಸುಡ ಲ್ಪಟ್ಟಳು, ನಸಂಶಯಃ - ಸಂಶಯವಿಲ್ಲ, ರಾಮಸ್ಯ - ಶ್ರೀರಾಮನ, ಇದಂಮಹತ್ಕಾರ್ಯಂ - ಈ ದೊಡ್ಡ ಕೆಲಸವು, ವಿತಥೀಕೃತಂಹಿ - ವ್ಯರ್ಥ ಮಾಡಲ್ಪಟ್ಟಿತಷ್ಟೆ, ಇತಿ - ಇಂತೆಂದು, ಅಹಂ - ನಾನು, ಶೋಕಸಮಾವಿಷ್ಟಃ - ದುಃಖಾಕ್ರಾಂತನಾಗಿ, ಪುನಃ - ಮತ್ತೂ, ಚಿಂತಾಂ - ಯೋಚನೆಯನ್ನು, ಉಪಾಗತಃ - ಹೊಂದಿದೆನು. ॥ ೧೫೫-೧೫೮ ॥ ಅಥ - ಬಳಿಕ, ಅಹಂ - ನಾನು, ಜಾನಕೀ - ಸೀತಾ ದೇವಿಯು, ದಚದಗ್ಧಾ - ಸುಡಲ್ಪಡಲಿಲ್ಲ, ಇತಿ - ಹೀಗೆಂಬ, ವಿಸ್ಮ....ಣಾಂ - ಆಶ್ಚರ್ಯಕರವಾದ ವೃತ್ತಾಂತವನ್ನು ಕುರಿತು ಮಾತನಾಡುತ್ತಿರುವ, ಚಾರಣಾನಾಂ - ಚಾರಣರ, ಶುಭಾಕ್ಷರಾಂ - ಶುಭಾಕ್ಷರಗಳುಳ್ಳ, ವಾಚಂ - ಮಾತನ್ನು, ಅಶ್ರೌಷಂ - ಕೇಳಿದೆನು. ॥ ೧೫೯ ॥ ತತಃ - ಬಳಿಕ,

---

ಪ್ರಳಯಕಾಲದ ದಾವಾನಲನು ಪ್ರಜೆಗಳೆಲ್ಲರನ್ನೂ ಸಂಹರಿಸುವಂತೆ ಆ ಬಹಿರ್ದ್ವಾರವನ್ನೂ, ಕೋಟೆಕೊತ್ತಳಗಳನ್ನೂ, ರಾಜಬೀದಿಗಳನ್ನೂ ಏನೊಂದೂ ಹೆದರಿಕೆಯಿಲ್ಲದೆ ನನ್ನ ವಾಲಾಗ್ನಿ ಯಿಂದು ಸುಟ್ಟೆನು. ಹೀಗೆಯೇ ಲಂಕಾನಗರವೆಲ್ಲವನ್ನೂ ಸುಟ್ಟಮೇಲೆ ನನಗೆ ಯೋಚನೆ ಯುಂಟಾಯಿತು. ಆಗ ನನಗೆ ತಡೆಯಲಾಗದಷ್ಟು ದುಃಖವಾಯಿತು. “ಅಯ್ಯೋ! ಸೀತೆಯೂ ಈ ಅಗ್ನಿಯಲ್ಲಿ ನಾಶವಾಗಿರಬೇಕು. ಈ ಲಂಕಾನಗರದಲ್ಲಿ ನಾನು ಸುಡದಿರುವ ಒಂದು ಪ್ರದೇಶವೂ ಇರುವುದಿಲ್ಲವು. ಪಟ್ಟಣವೆಲ್ಲವೂ ಭಸ್ಮವಾಗಿಹೋಗಿರುವುದು. ಇನ್ನು ಸೀತೆಯು ದಗ್ಧವಾಗದೆ ಉಳಿದುಕೊಂಡಿರುವಳೇ! ನಾನು ಈ ಲಂಕೆಯನ್ನು ಸುಡುವಾಗ ಸೀತೆಯನ್ನು ಸುಟ್ಟುಬಿಟ್ಟಿರಬೇಕು. ಇದರಲ್ಲಿ ಸಂಶಯವಿಲ್ಲ. ಇನ್ನು ಶ್ರೀರಾಮನ ಮಹ ತ್ಕಾರ್ಯವೆಲ್ಲವೂ ಭಗ್ನವಾಗಿಹೋಯಿತು. ನಾನೇ ಕಾರ್ಯವನ್ನು ಹಾಳುಮಾಡಿದೆನಲ್ಲಾ! ಅಯ್ಯೋ ಏನು ಪ್ರಮಾದವಾಗಿಹೋಯಿತು!” ಎಂದು ಬಹಳವಾಗಿ ಚಿಂತಿಸಿ ದುಃಖಿ ಸುತ್ತಿದ್ದೆನು. ಆಗ ಆಕಾಶದಲ್ಲಿ ಚಾರಣರು, “ಸೀತಾದೇವಿಯು ದಗ್ಧವಾಗಲಿಲ್ಲ” ಎಂದು ಮಾತನಾಡುತ್ತಿದ್ದುದು ನನಗೆ ಕೇಳಿಸಿತು. ಮಂಗಳಕರವಾದ ಆ ಮಾತನ್ನು ಕೇಳಿ ನನಗೆ

ನಿಮಿತ್ತೈಶ್ಚೋಪಲಕ್ಷಿತಾ । ದೀಪ್ಯಮಾನೇತು ಲಾಂಗೂಲೇ ನಮಾಂ ದಹತಿ ಪಾವಕಃ ॥ ೧೬೦ ॥ ಹೃದಯಂಚ ಪ್ರಹೃಷ್ಟಂ ಮೇ ವಾತಾಸ್ಸುರಭಿಗಂಧಿನಃ । ತೈರ್ನಿಮಿತ್ತೈಶ್ಚ ದೃಷ್ಟಾರ್ಥೈಃ ಕಾರಣೈಶ್ಚ ಮಹಾಗುಣೈಃ ॥ ೧೬೧ ॥ ಋಷಿವಾಕ್ಯೈಶ್ಚ ಸಿದ್ಧಾರ್ಥೈರಭವಂ ಹೃಷ್ಟಮಾನಸಃ । ಪುನರ್ದೃಷ್ಟ್ವಾ ಚ ವೈದೇಹೀಂ ವಿಸೃಷ್ಟಶ್ಚ ತಯಾ ಪುನಃ ॥೧೬೨॥ ತತಃ ಪರ್ವತಮಾಸಾದ್ಯ ತತ್ರಾರಿಷ್ಟಮಹಂ ಪುನಃ । ಪ್ರತಿಪ್ಲವನಮಾರೇಭೇ ಯುಷ್ಮದ್ದರ್ಶನಕಾಂಕ್ಷಯಾ ॥೧೬೩॥ ತತಃ ಪವನಚಂದ್ರಾರ್ಕಸಿದ್ಧಗಂಧರ್ವಸೇವಿತಂ।

ಅದ್ಭುತಾಂ - ಆಶ್ಚರ್ಯಕರವಾದ, ತಾಂಗಿರಂ - ಆ ಮಾತನ್ನು, ಶ್ರುತ್ವಾ - ಕೇಳಿ, ಜಾನಕೀ - ಸೀತಾದೇವಿಯು, ಅದಗ್ಧೇತಿ - ಸುಡಲ್ಪಡಲಿಲ್ಲವೆಂದು, ಮೇ - ನನಿಗೆ, ಬುದ್ಧಿಃ - ಜ್ಞಾನವು, ಉತ್ಪನ್ನಾ - ಹುಟ್ಟಿತು, ನಿಮಿತ್ತೈಶ್ಚ - ಶುಭಸೂಚನೆಗಳಿಂದಲೂ, ಏವಂ - ಈ ಪ್ರಕಾರ, ಉಪಲಕ್ಷಿತಾ - ಕಾಣಲ್ಪಟ್ಟಿತು. ॥ ೧೬೦ ॥ ಲಾಂಗೂಲೇತು - ಬಾಲವು, ಧೀಪ್ಯಮಾನೇ - ಉರಿಯುತ್ತಿರಲು, ಪಾವಕಃ - ಅಗ್ನಿಯು, ಮಾಂ - ನನ್ನನ್ನು, ನದಹತಿ - ಸುಡುವುದಿಲ್ಲ, ಮೇ - ನನ್ನ, ಹೃದಯಂಚ - ಮನಸ್ಸೂ ಕೂಡ, ಪ್ರಹೃಷ್ಟಂ - ಸಂತೋಷವಾಗಿದೆ, ವಾತಃ - ಗಾಳಿಯು, ಸುರಭಿಗಂಧಿನಃ - ಪರಿಮಳಯುಕ್ತವಾಗಿದೆ. ॥ ೧೬೧ ॥ ದೃಷ್ಟಾರ್ಥೈಃ - ದೃಷ್ಟಪ್ರಯೋಜನವುಳ್ಳ, ತೈರ್ನಿಮಿತ್ತೈಶ್ಚ - ಆ ಶುಭಶಕುನಗಳಿಂದಲು, ಮಹಾಗುಣೈಃ-ಮಹಾ ಗುಣಶಾಲಿಗಳಾದ ಸೀತಾರಾಮಾದಿ ಸಾಧಕರಿಂದಲೂ, ಸಿದ್ಧಾರ್ಥೈಃ-ಒದಗಿದ ಪ್ರಯೋಜನವುಳ್ಳ, ಋಷಿವಾಕ್ಯೈಶ್ಚ - ಮುನಿವಚನಗಳಿಂದಲೂ, ಹೃಷ್ಟಮಾನಸಃ - ಸಂತುಷ್ಟವಾದ ಮನವುಳ್ಳವನು, ಅಭವಂ - ಆದೆನು, ಪುನಃ - ಮತ್ತು, ವೈದೇಹೀಂಚ - ಸೀತಾದೇವಿಯನ್ನೂ ಸಹ, ದೃಷ್ಟ್ವಾ - ಕಂಡು, ತಯಾಚ - ಆ ಸೀತಾದೇವಿಯಿಂದಲೂ, ಪುನಃ - ಮತ್ತು, ವಿಸೃಷ್ಟಃ - ಕಳುಹಿಸಲ್ಪಟ್ಟೆನು. ॥ ೧೬೨ ॥ ತತಃ - ಬಳಿಕ, ಅರಿಷ್ಟಂ - ಅರಿಷ್ಟವೆಂಬ, ಪರ್ವತಂ - ಪರ್ವತವನ್ನು, ಅಸಾದ್ಯ-ಹೊಂದಿ, ತತ್ರ-ಆ ಗಿರಿಯಲ್ಲಿ, ಅಹಂಪುನಃ-ನಾನಾದರೆ, ಯುಷ್ಮ....ಯಾ-ನಿಮ್ಮನ್ನು ನೋಡಬೇಕೆಂಬಿಚ್ಛೆಯಿಂದ, ಪ್ರತಿಪ್ಲವನಂ - ಹಿಂತಿರುಗಿ ದಾಂಟುವಿಕೆಯನ್ನು, ಆರೇಭೇ - ಪ್ರಾರಂಭಿಸಿದೆನು. ॥ ೧೬೩ ॥ ತತಃ - ಅಹಂ - ನಾನು, ಪವ....ತಂ - ವಾಯುವಿನಿಂದಲೂ, ಚಂದ್ರ

ಪರಮಾಶ್ಚರ್ಯವಾಯಿತು. ಕೂಡಲೇ ನಾನು ಕೆಲವು ಶುಭಸೂಚನೆಗಳಾಗಲು ಸೀತೆಯು ಸುಟ್ಟುಹೋಗಿಲ್ಲವೆಂದು ನಿರ್ಧರಿಸಿಕೊಂಡೆನು. ಬೆಂಕಿಯು ನನ್ನ ಬಾಲದ ಕೊನೆಯಲ್ಲಿ ಉರಿಯುತ್ತಿದ್ದರೂ ನನಗೆ ಯಾವ ವಿಧದಲ್ಲಿಯೂ ಬಾಧೆಯಾಗುತ್ತಿರಲಿಲ್ಲವು. ನನ್ನ ಮನಸ್ಸೂ ಕೂಡ ಸಂತೋಷಯುಕ್ತವಾಗಿದ್ದಿತು. ವಾಯುವೂ ಕೂಡ ಸೌರಭಯುಕ್ತವಾಗಿ ಬೀಸುತ್ತಿದ್ದಿತು. ಇದೂ ಅಲ್ಲದೆ ಆ ಸಮಯದಲ್ಲಿ ಮೊದಲೇ ಅನುಭವಕ್ಕೆ ಬಂದಿದ್ದ ಇನ್ನೂ ಕೆಲವು ಶುಭಶಕುನಗಳಾದುವು. ಮಹಾ ಶ್ರೇಷ್ಠರಾದ ಮಹರ್ಷಿಗಳೂ ಸಹ ಸೀತೆಯು ಸುಖವಾಗಿರುವಳೆಂದು ನುಡಿದುದನ್ನು ಕೇಳಿದೆನು. ॥ ೧೫೫–೧೬೨ ॥ ಈ ಎಲ್ಲ ಕಾರಣಗಳಿಂದಲೂ ಸೀತೆಯು ಸುಖದಿಂದಿರುವಳೆಂದು ನನ್ನ ಮನಸ್ಸಿಗೆ ಧೈರ್ಯವಾಯಿತು. ಆಗ ನಾನು ಬಹಳ ಸಂತೋಷಪಟ್ಟೆನು. ಆಮೇಲೆ ನಾನು ನನ್ನ ವಾಲಾಗ್ನಿಯನ್ನು ಸಮುದ್ರದಲ್ಲಿ ತಣ್ಣಗಾಗಿಸಿ ಪುನಃ ಸೀತಾದೇವಿಯ ಬಳಿಗೆ ಹೋಗಿ ಆಕೆಯನ್ನು ನೋಡಿ ಆಕೆಯ ಅಪ್ಪಣೆಯನ್ನು ಪಡೆದು ನಿಮ್ಮನ್ನು ನೋಡಲು ಪರಮಾತುರನಾಗಿ ಲಂಕಾನಗರದಲ್ಲಿರುವ ಅರಿಷ್ಟವೆಂಬ ಪರ್ವತವನ್ನೇರಿದೆನು. ಅಲ್ಲಿಂದ ಆಕಾಶಕ್ಕೆಹಾರಿ ವಾಯುದೇವನಿಗೂ, ಚಂದ್ರನಿಗೂ, ಸೂರ್ಯನಿಗೂ,

ಪಂಥಾನಮುಹಮಾಕ್ರಮ್ಯ ಭವತೋ ದೃಷ್ಟವಾನಿಹ ‖ ೧೬೪ ‖ ರಾಘವಸ್ಯ ಪ್ರಭಾವೇನ ಭವತಾಂಚೈವ ತೇಜಸಾ । ಸುಗ್ರೀವಸ್ಯಚ ಕಾರ್ಯಾರ್ಥಂ ಮಯಾ ಸರ್ವಮನುಷ್ಠಿತಂ ‖ ೧೬೫ ‖

ಏತತ್ಸರ್ವಂ ಮಯಾ ತತ್ರ ಯಥಾವದುಪಪಾದಿತಂ ।
ಮಯಾ ಯನ್ನಕೃತಂ ತತ್ರ ತತ್ಸರ್ವಂ ಕ್ರಿಯತಾಮಿತಿ ‖ ೧೬೬ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಪಂಚಾಶಸ್ಸರ್ಗಃ

ನಿಂದಲೂ, ಸೂರ್ಯನಿಂದಲೂ, ಸಿದ್ಧರಿಂದಲೂ, ಗಂಧರ್ವರಿಂದಲೂ, ಸೇವಿಸಲ್ಪಟ್ಟ, ಪಂಥಾನಂ - ದಾರಿಯನ್ನು, ಆಕ್ರಮ್ಯ - ಆಕ್ರಮಿಸಿ, ಭವತಃ - ನಿಮ್ಮನ್ನು, ಇಹ - ಇಲ್ಲಿ, ದೃಷ್ಟವಾನ್ - ಕಂಡೆನು. ‖ ೧೬೪ ‖ ರಾಘವಸ್ಯ - ಶ್ರೀರಾಮನ, ಪ್ರಭಾವೇನ - ಮಹಾತ್ಮ್ಯದಿಂದಲೂ, ಭವತಾಂ - ನಿಮ್ಮ, ತೇಜಸಾಚ - ತೇಜಸ್ಸಿನಿಂದಲೂ, ಸುಗ್ರೀವಸ್ಯ - ಸುಗ್ರೀವನ, ಕಾರ್ಯಾರ್ಥಂ - ಕೆಲಸಕ್ಕೋಸ್ಕರವಾಗಿ, ಮಯಾ - ನನ್ನಿಂದ, ಸರ್ವಂ - ಸಮಸ್ತವೂ, ಅನುಷ್ಠಿತಂ - ಮಾಡಲ್ಪಟ್ಟಿತು. ‖ ೧೬೫ ‖ ತತ್ರ - ಆ ಲಂಕಾಪಟ್ಟಣದಲ್ಲಿ, ಮಯಾ - ನನ್ನಿಂದ, ಏತತ್ಸರ್ವಂ - ಇದಲ್ಲದೆ, ಯಥಾವತ್ - ಇದ್ದುದಿದ್ದಂತೆ, ಉಪಪಾದಿತಂ - ಹೇಳಲ್ಪಟ್ಟಿತು, ತತ್ರ - ಈ ಕೃತ್ಯದಲ್ಲಿ, ಯತ್ - ಯಾವದು, ನಕೃತಂ - ಮಾಡಲ್ಪಡಲಿಲ್ಲವೋ, ಶೇಷಂ - ಉಳದಿರುವ, ತತ್ಸರ್ವಂ - ಅದೆಲ್ಲ, (ಭವದ್ಭಿಃ - ನಿಮ್ಮಿಂದ), ಕ್ರಿಯತಾಂ - ಮಾಡಲ್ಪಡಲಿ, ಇತಿ - ಇಂತೆಂದು, (ಉವಾಚ - ಹೇಳಿದನು). ‖ ೧೬೬ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಪಂಚಾಶಸ್ಸರ್ಗಃ

ಸಿದ್ಧರಿಗೂ, ಗಂಧರ್ವರಿಗೂ ಸಂಚಾರಮಾರ್ಗವಾದ ಅಂತರಿಕ್ಷದಲ್ಲಿ ಇಲ್ಲಿಗೆ ಬಂದು ಸೇರಿದೆನು. ಶ್ರೀರಾಮಮೂರ್ತಿಯ ಪ್ರಭಾವದಿಂದಲೂ, ನಿಮ್ಮ ಅನುಗ್ರಹದಿಂದಲೂ ಸುಗ್ರೀವರಾಜನ ಕಾರ್ಯವೆಲ್ಲವನ್ನೂ ಯಥಾವಿಧಿಯಾಗಿ ನಿರ್ವಹಿಸಿಕೊಂಡು ಬಂದೆನು. ನಿಮ್ಮೊಡನೆ ಈಗ ನಾನು ಹೇಳಿದ ಸಮಸ್ತ ಕಾರ್ಯಗಳನ್ನೂ ಯಥಾವತ್ತಾಗಿ ನೆರವೇರಿಸಿದೆನು. ಇನ್ನು ಮುಂದೆ ಮಾಡಬೇಕಾದ ಕಾರ್ಯವನ್ನು ಮಾಡಲು ನೀವು ಪ್ರಯತ್ನಿಸಬೇಕೆಂದು ನಿಮ್ಮನ್ನು ಪ್ರಾರ್ಥಿಸುವೆನು. ‖ ೧೬೩–೧೬೬ ‖

ಇಂತಿದು ಹನುಮತ್ಕೃತ ಪ್ರತಿಸಮುದ್ರೋಲ್ಲಂಘನ ಜಾಂಬವದಾದಿ ದರ್ಶನ
ಸ್ವಪರಾಕ್ರಮಾದಿ ವರ್ಣನ ಎಂಬ ಐವತ್ತೆಂಟನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಏಕೋನಷಷ್ಠಿತಮಸ್ಸರ್ಗಃ

ಏತದಾಖ್ಯಾಯ ತತ್ಸರ್ವಂ ಹನೂಮಾನ್ಮಾರುತಾತ್ಮಜಃ । ಭೂಯಸ್ಸಮುಪಚಕ್ರಾಮ ವಚನಂ ವಕ್ತುಮುತ್ತರಂ ॥ ೧ ॥ "ಸಫಲೋ ರಾಘವೋದ್ಯೋಗಸ್ಸುಗ್ರೀವಸ್ಯಚ ಸಂಭ್ರಮಃ । ಶೀಲಮಾಸಾದ್ಯ ಸೀತಾಯಾ ಮಮಚ ಪ್ರವಣಂ ಮನಃ ॥ ೨ ॥ ತಪಸಾ ಧಾರಯೇಲ್ಲೋಕಾನ್ಕ್ರುದ್ಧೋವಾ ನಿರ್ದಹೇದಪಿ । ಸರ್ವಥಾಽತಿಪ್ರವೃದ್ಧೋಽಸೌ ರಾವಣೋ ರಾಕ್ಷಸಾಧಿಪಃ ॥ ೩ ॥ ತಸ್ಯ ತಾಂ ಸ್ಪೃಶತೋ ಗಾತ್ರಂ

ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ತತ್ಸರ್ವಂ - ಅದೆಲ್ಲವನ್ನು, ಏತತ್ - ಇಷ್ಟುಮಾತ್ರ, ಆಖ್ಯಾಯ - ಹೇಳಿ, ಭೂಯಃ - ಮತ್ತೂ, ಉತ್ತರಂ - ಮುಂದೆ ಹೇಳತಕ್ಕ, ವಚನಂ - ಮಾತನ್ನು, ವಕ್ತುಂ - ಹೇಳುವುದಕ್ಕೆ, ಸಮುಪಚಕ್ರಾಮ - ಉಪಕ್ರಮಿಸಿದನು. ||೧|| ಸೀತಾಯಾಃ - ಸೀತಾದೇವಿಯ, ಶೀಲಂ - ಪಾತಿವ್ರತ್ಯವನ್ನು, ಆಸಾದ್ಯ - ಕಂಡು, ರಾಘವೋದ್ಯೋಗಃ - ಶ್ರೀರಾಮನ ಕಾರ್ಯವು, ಸಫಲಃ - ಸಫಲವಾಯಿತು, ಸುಗ್ರೀವಸ್ಯ - ಸುಗ್ರೀವನ, ಸಂಭ್ರಮಶ್ಚ - ಉತ್ಸಾಹವೂ ಸಹಾ, ಸಫಲಃ - ಈಡೇರಿತು, ಮಮ - ನನ್ನ, ಮನಶ್ಚ - ಮನಸ್ಸೂ, ಪ್ರವಣಂ - ತದೇಕಾಯತ್ತವಾದುದು, ಅಭೂತ್ - ಆಯಿತು. ||೨|| (ಯತಃ - ಯಾವ ಕಾರಣದಿಂದ), ತಾಂ - ಆ ಸೀತಾದೇವಿಯನ್ನು, ಸ್ಪೃಶತಃ - ಸ್ಪರ್ಶಿಸುತ್ತಿರುವ, ತಸ್ಯ - ಆ ರಾವಣನ, ಗಾತ್ರಂ - ಶರೀರವು, ತಪಸಾ - ಸೀತಾದೇವಿಯ ತಪಸ್ಸಿನಿಂದ, ನವಿನಾಶಿತಂ - ನಾಶಮಾಡಲ್ಪಡಲಿಲ್ಲವೋ, (ತತಃ-ಆ ಕಾರಣದಿಂದ), ಸರ್ವಥಾ-ಸರ್ವಪ್ರಕಾರವಾಗಿಯೂ, ತಪಸಾ-ತಪಸ್ಸಿನಿಂದ, ಅತಿಪ್ರವೃದ್ಧಃ-ಅತ್ಯಂತವಾಗಿ ವೃದ್ಧಿಹೊಂದಿದ, ರಾಕ್ಷಸಾಧಿಪಃ-ರಕ್ಕಸರೊಡೆಯನಾದ, ಅಸೌರಾವಣಃ-ಈ ರಾವಣನು, ಲೋಕಾನ್ - ಮೂರು ಲೋಕಗಳನ್ನೂ, ಧಾರಯೇತ್ - ಹೊರುವನು, ಅಥವಾ - ಹಾಗಲ್ಲದಿದ್ದರೆ, ಕ್ರುದ್ಧೋಪಿ - ಕೋಪಿಷ್ಠನಾಗಿ, ನಿರ್ದಹೇತ್ - ದಹಿಸುವನು. || ೩ || ಸತೀ - ಪತಿವ್ರತೆಯಾದ, ಜನಕಸ್ಯ - ಜನಕರಾಯನ, ಆತ್ಮಜಾ - ಪುತ್ರಿಯಾದ ಸೀತಾದೇವಿಯು, ಕ್ರೋಧ....ತಾ - ಕೋಪ

ಹೀಗೆ ವಾಯುಪುತ್ರನಾದ ಹನುಮಂತನು ಸೀತಾ ವೃತ್ತಾಂತವನ್ನರುಹಿ ಆಮೇಲೆ ನಡೆಯಬೇಕಾದ ಕಾರ್ಯಗಳನ್ನು ಕುರಿತು ಈ ರೀತಿ ಹೇಳತೊಡಗಿದನು. "ಎಲೈ ವಾನರರಿರಾ! ಮಾನ್ಯಳಾದ ಸೀತಾದೇವಿಯು ಮಹಾ ಪಾತಿವ್ರತ್ಯವ್ರತವನ್ನವಲಂಬಿಸಿರುವಳು. ಆಕೆಯ ಪಾತಿವ್ರತ್ಯಪ್ರಭಾವದಿಂದ ಶ್ರೀರಾಮಮೂರ್ತಿಯು ಮತ್ತು ನಮ್ಮ ಪ್ರಭುವಾದ ಸುಗ್ರೀವನ ಪ್ರಯತ್ನೋತ್ಸಾಹಗಳು ಸಫಲಗಳಾಗುವುವು. ನನಗೆ ಸೀತಾದೇವಿಯಲ್ಲಿ ಅತಿಶಯವಾದ ಭಕ್ತಿಯುಂಟಾಗಿರುವುದು. ಅದು ಹಾಗಿರಲಿ. ರಾವಣಾಸುರನು ತನ್ನ ತಪಃಪ್ರಭಾವದಿಂದ ಲೋಕತ್ರಯವನ್ನೇ ದಹಿಸಲು ಸಮರ್ಥನಾಗಿರುವನು. ಆತನು ಕ್ರುದ್ಧನಾದುದಾದರೆ ಸಮಸ್ತ ಲೋಕಗಳನ್ನೂ ಸುಟ್ಟುಬಿಡಲು ಶಕ್ತನಾಗಿರುವನು. ಸಮಸ್ತ ವಿಧಗಳಿಂದಲೂ ಅವನು ಅಸಾಧ್ಯನಾಗಿರುವನು. ಎಲೈ ವಾನರರಿರಾ! ಅವನ ತಪಶ್ಶಕ್ತಿಯನ್ನು ಏನೆಂದು ಹೇಳಲಿ! ಅವನು ಮಹಾ ಪತಿವ್ರತೆಯಾದ ಸೀತಾದೇವಿಯನ್ನು ಸ್ಪರ್ಶಿ

ತಪಸಾ ನವಿನಾಶಿತಂ । ನತದಗ್ನಿಶಿಖಾ ಕುರ್ಯಾತ್ಸಂಸ್ಪೃಷ್ಟಾ ಪಾಣಿನಾ ಸತೀ ॥ ೪ ॥ ಜನಕಸ್ಯಾಽತ್ಮಜಾ ಕುರ್ಯಾದ್ಯತ್ಕ್ರೋಧಕಲುಷೀಕೃತಾ । ಜಾಂಬವತ್ಪ್ರಮುಖಾನ್ ಸರ್ವಾನನುಜ್ಞಾಪ್ಯ ಮಹಾಹರೀನ್ ॥ ೫ ॥ ಅಸ್ಮಿನ್ನೇವಂ ಗತೇ ಕಾರ್ಯೇ ಭವತಾಂಚ ನಿವೇದಿತೇ । ನ್ಯಾಯ್ಯಂ ಸ್ಮ ಸಹ ವೈದೇಹ್ಯಾ ದ್ರಷ್ಟುಂ ತೌ ಪಾರ್ಥಿವಾತ್ಮಜೌ ॥ ೬ ॥ ಅಹಮೇಕೋಽಪಿ ಪರ್ಯಾಪ್ತಸ್ಸರಾಕ್ಷಸಗಣಾಂ ಪುರೀಂ । ತಾಂ ಲಂಕಾಂ ತರಸಾ ಹಂತುಂ ರಾವಣಂಚ ಮಹಾಬಲಂ ॥ ೭ ॥ ಕಿಂಪುನಸ್ಸಹಿತೋ ವೀರೈರ್ಬಲವದ್ಭಿಃ

ದಿಂದ ವ್ಯಾಕುಲವಾಗಿ ಮಾಡಲ್ಪಟ್ಟವಳಾಗಿ, ಯತ್ - ಯಾವ ಕೃತ್ಯವನ್ನು, ಕುರ್ಯಾತ್ - ಮಾಡುವಳೋ, ತತ್ - ಅಂತಹ ಕಾರ್ಯವನ್ನು, ಅಗ್ನಿಶಿಖಾ - ಅಗ್ನಿಜ್ವಾಲೆಯು, ಪಾಣಿನಾ - ಕೈಯಿಂದ, ಸಂಸ್ಪೃಷ್ಟಾ - ಸ್ಪರ್ಶಿಸಲ್ಪಟ್ಟದ್ದಾಗಿ, ನಕುರ್ಯಾತ್ - ಮಾಡಲಾರದು. ॥೪॥ ಜಾಂಬವತ್ಪ್ರಮುಖಾನ್- ಜಾಂಬವಂತನೇ ಮೊದಲಾಗುಳ್ಳ, ಸರ್ವಾನ್ - ಸಮಸ್ತರಾದ, ಮಹಾಹರೀನ್ - ಮಹಾ ಕಪಿಗಳನ್ನೆಲ್ಲ, ಅನುಜ್ಞಾಪ್ಯ - ಸಮ್ಮತಿಸಿ, ಏವಂಗತೇ - ಈ ಪ್ರಕಾರವಾಗಿ ನಡೆದ, ಅಸ್ಮಿನ್ಕಾರ್ಯೇ - ಈ ಕೆಲಸವು, ಭವತಾಂಚ - ನಿಮಗೂ ಸಹ, ನಿವೇದಿತೇ - ತಿಳಿಸಲ್ಪಟ್ಟದ್ದಾಗಲು, ವೈದೇಹ್ಯಾಸಹ - ಸೀತಾದೇವಿಯೊಡನೆ, ತೌಪಾರ್ಥಿವಾತ್ಮಜೌ-ರಾಜಪುತ್ರರಾದ ಆ ರಾಮಲಕ್ಷ್ಮಣರನ್ನು, ದ್ರಷ್ಟುಂ-ನೋಡುವುದಕ್ಕೆ, ನ್ಯಾಯ್ಯಂಸ್ಮ - ಯುಕ್ತವಷ್ಟೆ. ॥ ೬ ॥ ಅಹಂ - ನಾನು, ಏಕೋಽಪಿ - ಒಬ್ಬನಾದರು, ಸರಾ....ಣಾಂ - ಅಸುರತಂಡದಿಂದೊಡಗೂಡಿದ, ತಾಂಲಂಕಾಂ - ಆ ಲಂಕಾಪಟ್ಟಣವನ್ನು, ಮಹಾಬಲಂ-ಅತಿ ಬಲಿಷ್ಠನಾದ, ತಂರಾವಣಂಚ - ಆ ರಾವಣನನ್ನೂ, ತರಸಾ - ಬಲದಿಂದ, ಹಂತುಂ - ಹೊಡೆಯುವದಕ್ಕೆ, ಪರ್ಯಾಪ್ತಃ - ಸಾಕಾಗಿದೇನೆ, ವೀರೈಃ - ಶೂರರಾದ, ಬಲವದ್ಭಿಃ - ಬಲಿಷ್ಠರಾದ, ಕೃತಾತ್ಮಭಿಃ - ಕೃತಜ್ಞರಾದ, ಕೃತಾಸ್ತ್ರೈರ್ವ - ಅಸ್ತ್ರವಿದ್ಯಾಶಿಕ್ಷಿತರಾದ, ಶೂರೈಃ - ಶೂರರಾದ, ವಿಜಯೈಷಿಭಿಃ -

---

ಸಿಯೂ ನಾಶವನ್ನೈದದೆ ಜೀವದಿಂದುಳಿದಿರುವನು. ಮಹಾ ಪತಿವ್ರತೆಯೂ, ಜನಕರಾಜ ಕುಮಾರಿಯೂ ಆದ ಸೀತಾದೇವಿಯನ್ನು ಸ್ಪರ್ಶಿಸಿದಾಗ ಆಕೆಯು ಕೋಪಿಸಿದ್ದುದಾದರೆ, ಆಕೆಯ ಆ ಕೋಪಜ್ವಾಲೆಯು ಸುಡುವಂತೆ, ಸಾಕ್ಷಾತ್ ಯಜ್ಞೇಶ್ವರನೂ ಸುಡಲಾರನು. ಹೀಗಾದರೂ ಆಕೆಯನ್ನು ಸ್ಪರ್ಶಿಸಿಯೂ ಆ ರಾವಣನು ದಗ್ಧವಾಗದಿರಲು ಆತನ ತಪಃ ಪ್ರಭಾವವೇ ಕಾರಣವಾಗಿರುವುದು. ಇದೂ ಅಲ್ಲದೆ ಆ ಸೀತೆಯು ದುರಾತ್ಮನಾದ ಆ ರಾವಣನನ್ನು ತನ್ನ ಪತಿಯಾದ ಶ್ರೀರಾಮನಿಂದಲೇ ಕೊಲ್ಲಿಸಬೇಕೆಂದು ನಿರ್ಧರಿಸಿರುವಳು. ಈ ಎಲ್ಲ ವಿಷಯಗಳನ್ನೂ ನಿಮಗೆ ತಿಳಿಸಿದೆನು. ಇನ್ನು ಮುಂದೆ ಮಾಡಬೇಕಾದ ಕಾರ್ಯದಲ್ಲಿ ಜಾಂಬವಂತನೇ ಮೊದಲಾದ ಮಹಾ ವಾನರರ ಅನುಮತಿಯನ್ನು ಪಡೆದು ಮರಳಿಯೂ ಸೀತಾದೇವಿಯ ಬಳಿಗೈದಿ ಆಕೆಯನ್ನು ಕರೆದುಕೊಂಡು ಬಂದು ರಾಜಪುತ್ರರಾದ ಶ್ರೀರಾಮಲಕ್ಷ್ಮಣರ ಬಳಿಗೆ ನಾವೆಲ್ಲರೂ ಹೋದುದಾದರೆ ಸೂಕ್ತವಾಗಿರುತ್ತದೆಯೆಂದು ನನಗೆ ತೋರುವುದು. ॥ ೧-೬ ॥ ಎಲೈ ವಾನರರೇ! ಲಂಕಾನಗರದಲ್ಲಿರುವ ಸಮಸ್ತ ರಾಕ್ಷಸರನ್ನೂ, ಮಹಾ ಪರಾಕ್ರಮಶಾಲಿಯಾದ ಆ ರಾವಣಾಸುರನನ್ನೂ ಸಂಹರಿಸಲು ನಾನೊಬ್ಬನೇ ಸಮರ್ಥನಾಗಿರುವೆನು. ಎಂದಮೇಲೆ ನಿಮ್ಮನ್ನೂ ಜೊತೆಯಲ್ಲಿ ಕರೆದುಕೊಂಡು ಹೋದರೆ ಈ ರಾಕ್ಷಸ ಸಂಹಾರ ಕಾರ್ಯವು ಬಹು ಚೆನ್ನಾಗಿಯೇ ಆಗುವುದೆಂಬುದನ್ನು ಹೇಳಬೇಕೆ?

ಕೃತಾತ್ಮಭಿಃ । ಕೃತಾಸ್ತ್ರೈಃ ಪ್ಲವಗೈಶ್ಶೂರೈರ್ಭವದ್ಭಿರ್ವಿಜಯೈಷಿಭಿಃ ॥ ೮ ॥ ಅಹಂತು ರಾವಣಂ ಯುದ್ಧೇ ಸಸೈನ್ಯಂ ಸಪುರಸ್ಸರಂ । ಸಹಪುತ್ರಂ ವಧಿಷ್ಯಾಮಿ ಸಹೋದರಯುತಂ ಯುಧಿ ॥ ೯ ॥ ಬ್ರಾಹ್ಮಮೈಂದ್ರಂಚ ರೌದ್ರಂಚ ವಾಯವ್ಯಂ ವಾರುಣಂ ತಥಾ । ಯದಿ ಶಕ್ರಜಿತೋಽಸ್ತ್ರಾಣಿ ದುರ್ನಿರೀಕ್ಷ್ಯಾಣಿ ಸಂಯುಗೇ ॥೧೦॥ ತಾನ್ಯಹಂ ವಿಧಮಿಷ್ಯಾಮಿ ನಿಹನಿಷ್ಯಾಮಿ ರಾಕ್ಷಸಾನ್ । ಭವತಾಮಭ್ಯನುಜ್ಞಾತೋ ವಿಕ್ರಮೋ ಮೇ ರುಣದ್ಧಿ ತಂ ॥ ೧೧ ॥ ಮಯಾತುಲಾ ವಿಸೃಷ್ಟಾಹಿ ಶೈಲವೃಷ್ಟಿರ್ನಿರಂತರಾ । ದೇವಾನಪಿ ರಣೇ ಹನ್ಯಾತ್ಕಿಂಪುನಸ್ತಾನ್ನಿಶಾಚರಾನ್ ॥ ೧೨ ॥ ಸಾಗರೋಽಪ್ಯತಿಯಾ

ಜಯವನ್ನಪೇಕ್ಷಿಸುತ್ತಿರುವ, ಪ್ಲವಗೈಃ - ವಾನರರಾದ, ಭವದ್ಭಿಃ - ನಿಮ್ಮಿಂದ, ಸಹಿತಃ - ಕೂಡಿರುವ ನಾನು, ಕಿಂಪುನಃ - ಏನು ಹೇಳತಕ್ಕುದು. ॥ ೭-೮ ॥ ಅಹಂತು - ನಾನಾದರೆ, ಯುದ್ಧೇ - ಯುದ್ಧದಲ್ಲಿ, ಸಸೈನ್ಯಂ - ಸೈನ್ಯಂ - ಸೈನ್ಯಸಮೇತನಾದ, ಸಪುರಸ್ಸರಂ - ಮುಂದಾಳುಗಳಿಂದೊಡಗೂಡಿದ, ಸಹಪುತ್ರಂ - ಪುತ್ರಸಹಿತನಾದ, ಯುಧಿ - ಕಾಳೆಗದಲ್ಲಿ, ಸಹೋದರಯುತಂ - ಒಡಹುಟ್ಟಿದವರಿಂದ ಕೂಡಿದ, ರಾವಣಂ - ರಾವಣನನ್ನು, ವಧಿಷ್ಯಾಮಿ - ಕೊಲ್ಲುವೆನು. ॥ ೯ ॥ ಸಂಯುಗೇ - ಯುದ್ಧದಲ್ಲಿ, ಶಕ್ರಜಿತಃ - ಇಂದ್ರಜಿತ್ತುವಿನ, ಅಸ್ತ್ರಾಣಿ - ಅಸ್ತ್ರಗಳು, ದುರ್ನಿ....ದಿ - ನೋಡುದಕ್ಕೆ ಅಶಕ್ಯವಾದದ್ದಾದರೆ, ತಾನಿ - ಅಂಥ, ಬ್ರಾಹಂ - ಬ್ರಹ್ಮಾಸ್ತ್ರವನ್ನು, ಐಂದ್ರಂ - ಐಂದಾಸ್ತ್ರವನ್ನು, ರೌದ್ರಂ-ಪಾಶುಪತಾಸ್ತ್ರವನ್ನು, ವಾಯವ್ಯಂ - ವಾಯುದೇವತಾಕವಾದ ಅಸ್ತ್ರವನ್ನು, ತಥಾ - ಹಾಗೆ, ವಾರುಣಂ-ಪರ್ಜನ್ಯಾಸ್ತ್ರವನ್ನೂ, ವಿಧಮಿಷ್ಯಾಮಿ - ಧ್ವಂಸಗೊಳಿಸುವೆನು, ರಾಕ್ಷಸಾನ್ - ಅಸುರರನ್ನು, ನಿಹನಿಷ್ಯಾಮಿ - ಸಂಹರಿಸುವೆನು, ಭವತಾಂ - ನಿಮ್ಮಿಂದ, ಅಭ್ಯನುಜ್ಞಾತಃ - ಅಪ್ಪಣೆ ಪಡೆದು, ಮೇವಿಕ್ರಮಃ - ನನ್ನ ಸಾಮರ್ಥ್ಯವು, ತಂ - ಆ ರಾವಣನನ್ನು, ರುಣದ್ಧಿ - ನಾಶಮಾಡುತ್ತದೆ. ॥೧೦-೧೧॥ ಮಯಾ - ನನ್ನಿಂದ, ವಿಸೃಷ್ಟಾ - ಬಿಡಲ್ಪಟ್ಟ, ನಿರಂತರಾ - ನೀರಂಧ್ರವಾದ, ಅತುಲಾ-ಅಸದೃಶವಾದ, ಶೈಲವೃಷ್ಟಿಃ - ಕಲ್ಮಳೆಯು, ರಣೇ - ಯುದ್ಧದಲ್ಲಿ, ದೇವಾನಪಿ - ದೇವತೆಗಳನ್ನೂ

ನೀವು ಸಾಮಾನ್ಯರೇ ; ಮಹಾ ಪರಾಕ್ರಮಶಾಲಿಗಳು ; ಬಹು ಬುದ್ಧಿಶಾಲಿಗಳು ; ಅಸ್ತ್ರವಿದ್ಯೆಯಲ್ಲಿ ನಿಷ್ಣಾತರಾದವರು ; ಯುದ್ಧವೀರರು ; ಶತ್ರುಗಳನ್ನು ಸಂಹರಿಸಿ ವಿಜಯವನ್ನು ಪಡೆಯುವುದರಲ್ಲಿ ನ್ಯಸ್ತಚಿತ್ತರಾದವರು. ಇಂತಹ ನೀವೂ ನನ್ನೊಡನೆ ಬಂದಿರೆಂದರೆ ಹೇಳಬೇಕೆ? ಒಂದೇ ನಿಮಿಷದಲ್ಲಿ ಶ್ರೀರಾಮ ಕಾರ್ಯವನ್ನು ಮಾಡಿಕೊಂಡು ಬರಬಹುದು. ಮೇಲಾಗಿ ನಾನೊಬ್ಬನೇ ಯುದ್ಧದಲ್ಲಿ ಸೆಣಸಿ ನಿಂತು, ಸೈನ್ಯದೊಡನೆಯೂ, ಪುತ್ರಮಿತ್ರ ಭ್ರಾತೃಗಳೊಡನೆಯೂ, ಮಂತ್ರಿಗಳೊಡನೆಯೂ, ಅನುಚರರೊಡನೆಯೂ ಕೂಡಿರುವ ಆ ರಾವಣಾಸುರನನ್ನು ಸಂಹರಿಸಬಲ್ಲೆನು. ಆ ರಾವಣಾಸುರನ ಮಗನಾದ ಇಂದ್ರಜಿತ್ತುವು, ನೋಡಲೂ ಅಶಕ್ಯವಾದ ಬ್ರಹ್ಮಾಸ್ತ್ರವನ್ನಾಗಲಿ, ಐಂದ್ರಾಸ್ತ್ರವನ್ನಾಗಲಿ, ರೌದ್ರಾಸ್ತ್ರವನ್ನಾಗಲಿ, ವಾಯವ್ಯಾಸ್ತ್ರವನ್ನಾಗಲಿ, ವಾರುಣಾಸ್ತ್ರವನ್ನಾಗಲಿ ಪ್ರಯೋಗಿಸಿದರೂ ನಾನು ಅವುಗಳೆಲ್ಲವನ್ನೂ ವ್ಯರ್ಥಗೊಳಿಸಿ ರಾಕ್ಷಸರೆಲ್ಲರನ್ನೂ ಸಂಹರಿಸಲು ಸಮರ್ಥನಾಗಿವೆನು. ಇಷ್ಟೆಯಲ್ಲದೆ ನೀವು ಸಮ್ಮತಿಸಿದುದಾದರೆ ಪರಾಕ್ರಮವನ್ನು ಮೆರೆದು ಆ ಇಂದ್ರಜಿತ್ತುವನ್ನೂ ಜಯಿಸಬಲ್ಲೆನು. ಎಲೈ ವಾನರೋತ್ತಮರಿರಾ ! ನಾನು ರಣರಂಗದಲ್ಲಿ ನಿಂತು ಕಲ್ಮಳೆಯನ್ನು ಸುರಿಸಿ ದೇವತೆಗಳನ್ನಾದರೂ ಜಯಿಸಿಬಿಡಬಲ್ಲೆನು. ಎಂದಮೇಲೆ ಈ ರಾಕ್ಷಸರನ್ನು ಗೆಲ್ಲುವೆ

ದ್ವೇಲಾಂ ಮಂದರಃ ಪ್ರಚಲೇದಪಿ। ನ ಜಾಂಬವಂತಂ ಸಮರೇ ಕಂಪಯೇದರಿವಾಹಿನೀ
॥ ೧೩ ॥ ಸರ್ವ ರಾಕ್ಷಸಸಂಘಾನಾಂ ರಾಕ್ಷಸಾ ಯೇಚ ಪೂರ್ವಜಾಃ । ಅಲಮೇಕೋ
ವಿನಾಶಾಯ ವೀರೋ ವಾಲಿಸುತಃ ಕಪಿಃ ॥ ೧೪ ॥ ಪನಸಸ್ಯೋರುವೇಗೇನ ನೀಲಸ್ಯಚ
ಮಹಾತ್ಮನಃ । ಮಂದರೋಪ್ಯವಶೀರ್ಯೇತ ಕಿಂಪುನರ್ಯುಧಿ ರಾಕ್ಷಸಾಃ ॥ ೧೫ ॥
ಸದೇವಾಸುರಯಕ್ಷೇಷು ಗಂಧರ್ವೋರಗಪಕ್ಷಿಷು । ಮೈಂದಸ್ಯ ಪ್ರತಿಯೋದ್ಧಾರಂ
ಶಂಸತ ದ್ವಿವಿದಸ್ಯ ವಾ ॥ ೧೬ ॥ ಅಶ್ವಿಪುತ್ರೌ ಮಹಾಭಾಗಾವೇತೌ ಪ್ಲವಗಸತ್ತಮೌ ।

ಸಹ, ಹನ್ಯಾದ್ಧಿ-ಕೊಲ್ಲುವುದಷ್ಟೆ, ತಾನ್ನಿಶಾಚರಾನ್-ಆ ರಾಕ್ಷಸರ ವಿಷಯವನ್ನು, ಕಿಂ-ಏನು ಹೇಳತಕ್ಕುದು. ॥೧೨॥ ಸಾಗರೋಪಿ-ಸಮುದ್ರವೂ ಸಹ, ವೇಲಾಂ-ಮೇರೆಯನ್ನು, ಅತಿಯಾತ್-ಮೀರೀತು, ಮಂದರೋಪಿ - ಮಂದರಪರ್ವತವೂ ಕೂಡ, ಪ್ರಚಲೇತ್ - ಚಲಿಸೀತು, ಸಮರೇ - ಕಾಳಗದಲ್ಲಿ, ಅರಿವಾಹಿನೀ - ಹಗೆಯರ ಸೇನೆಯು, ಜಾಂಬವಂತಂ - ಜಾಂಬವಂತನನ್ನು, ನಕಂಪಯೇತ್ - ಕಂಪಿಸಲಾರದು. ॥ ೧೩ ॥ ಸರ್ವ....ನಾಂ - ಅಸುರರ ಗುಂಪಿಗೂ, ಪೂರ್ವಜಾಃ - ಮೊದಲು ಹುಟ್ಟಿರುವ, ರಾಕ್ಷಸಾಶ್ಚ - ರಾಕ್ಷಸರೂ, ಯೇ - ಯಾರೋ, ತೇಷಾಂ - ಅವರ, ವಿನಾಶಾಯ - ಧ್ವಂಸಕ್ಕಾಗಿ, ವೀರಃ - ಶೂರನಾದ, ಕಪಿಃ - ವಾನರನಾದ, ವಾಲಿಸುತಃ - ವಾಲಿ ಕುವರನಾದ ಅಂಗದನು, ಏಕಃ - ಒಬ್ಬನೇ, ಅಲಂ - ಸಾಕು. ॥ ೧೪ ॥ ಪನಸಸ್ಯ - ಪನಸನ, ಮಹಾತ್ಮನಃ - ಮಹಾ ಮನಸ್ವಿಯಾದ, ನೀಲಸ್ಯಚ-ನೀಲನ, ಊರುವೇಗೇನ-ತೊಡೆಗಳ ವೇಗದಿಂದ, ಮಂದರೋಪಿ-ಮಂದರಪರ್ವತವೂ ಕೂಡ, ಅವಶೀರ್ಯೇತ - ಬಿರಿದು ಹೋಗುವದು, ಯುಧಿ - ಯುದ್ಧರಂಗದಲ್ಲಿ, ರಾಕ್ಷಸಾಃಪುನಃ - ರಾಕ್ಷಸರಾದರೆ, ಕಿಂ - ಏನು ಹೇಳತಕ್ಕುದು. ॥ ೧೫ ॥ ಸದೇ....ಷು - ದೇವ ರಾಕ್ಷಸ ಯಕ್ಷರಿಂದೊಡಗೂಡಿದ, ಗಂಧ....ಷು-ಗಂಧರ್ವರಲ್ಲಿಯೂ, ಸರ್ಪದೇವತೆಗಳಲ್ಲಿಯೂ, ಪಕ್ಷಿಗಳಲ್ಲಿಯೂ, ಮೈಂದಸ್ಯ - ಮೈಂದನಿಗೂ, ದ್ವಿವಿದಸ್ಯವಾ - ದ್ವಿವಿದನಿಗೂ, ಪ್ರತಿಯೋದ್ಧಾರಂ - ಪ್ರತಿಭಟರನ್ನು, ಶಂಸತ - ಹೇಳಿರಿ. ॥ ೧೬ ॥ ಅಶ್ವಿಪುತ್ರೌ - ಅಶ್ವಿನೀದೇವತೆಗಳ ಪುತ್ರರಾದ, ಮಹಾಭಾಗೌ - ಪುಣ್ಯ

ನೆಂದು ಹೇಳಬೇಕೆ? ॥ ೭–೧೨ ॥ ಒಂದುವೇಳೆ ಸಮುದ್ರವು ಮೇರೆಯನ್ನು ಮೀರೀತು; ಮಂದರಪರ್ವತವು ಚಲಿಸೀತು. ಇದೋ, ಪೂಜ್ಯನಾದ ಈ ಜಾಂಬವಂತನು ಮಾತ್ರ ಶತ್ರುಸೇನೆಗೆ ಹೆದರಿ ಎಷ್ಟುಮಾತ್ರಕ್ಕೂ ಚಲಿಸನು. ಶತ್ರುಸೇನೆಯು ಎಷ್ಟೇ ದೊಡ್ಡದಾದರೂ ಲಕ್ಷ್ಯವಿಡನು. ಅಂತಹ ಪರಾಕ್ರಮವಂತನೀತನು. ಈತನೊಬ್ಬನೇ ರಾಕ್ಷಸರೆಲ್ಲರನ್ನೂ ನಿರ್ಮೂಲಮಾಡಲು ಸಮರ್ಥನಾಗಿರುವನು. ಮೇಲಾಗಿ ಸಮಸ್ತರಾಕ್ಷಸರನ್ನೂ, ಅವರ ಸೇನಾನಾಯಕರನ್ನೂ, ಏಕಕಾಲದಲ್ಲಿಯೇ ಸಂಹರಿಸಲು, ಅಮಿತಪರಾಕ್ರಮಶಾಲಿಯೂ, ವಾಲಿಸೂನುವೂ ಆದ ಈ ಅಂಗದನೊಬ್ಬನೇ ಸಾಕು. ಮಹಾ ಬಲಾಢ್ಯನಾದ ಪನಸನ, ಮತ್ತು ನೀಲನ ಊರುವೇಗವನ್ನು ಮಂದರಗಿರಿಯೂ ಸಹಿಸಲಾರದು; ಅದೂ ನಡುಗಿ ಹೋಗುವುದು. ಹಾಗಿರುವಾಗ ರಾಕ್ಷಸರೆಲ್ಲರೂ ಇವರಿಂದ ನಿರ್ಮೂಲವಾಗುವರೆಂದು ಹೇಳಬೇಕೆ? ಇಷ್ಟೆಯಲ್ಲದೆ, ದೇವತೆಗಳಲ್ಲಿಯಾಗಲಿ, ಅಸುರರಲ್ಲಿಯಾಗಲಿ, ಯಕ್ಷರಲ್ಲಿಯಾಗಲಿ, ರಾಕ್ಷಸರಲ್ಲಿಯಾಗಲಿ, ಗಂಧರ್ವರಲ್ಲಿಯಾಗಲಿ, ಉರಗರಲ್ಲಿಯಾಗಲಿ, ಪಕ್ಷಿಗಳಲ್ಲಿಯಾಗಲಿ ಮೈಂದ ದ್ವಿವಿದರನ್ನು ಎದುರಿಸಿ ನಿಂತು ಯುದ್ಧಮಾಡುವವರಾರೂ ಇರುವುದಿಲ್ಲವು. ॥ ೧೩–೧೬ ॥ ಇವರಿಬ್ಬರೂ ಅಶ್ವಿನೀದೇವತೆಗಳ ಔರಸಪುತ್ರರು. ಮಹಾ ಪೂಜ್ಯವಾದ

ಏತಯೋಃ ಪ್ರತಿಯೋದ್ಧಾರಂ ನ ಪಶ್ಯಾಮಿ ರಣಾಜಿರೇ ॥ ೧೭ ॥ ಪಿತಾಮಹವರೋತ್ಸೇಕಾತ್ಪರಮಂ ದರ್ಪಮಾಸ್ಥಿತೌ । ಅಮೃತಪ್ರಾಶಿನಾವೇತೌ ಸರ್ವವಾನರಸತ್ತಮೌ ॥ ೧೮ ॥ ಅಶ್ವಿನೋರ್ಮಾನನಾರ್ಥಂಹಿ ಸರ್ವಲೋಕಪಿತಾಮಹಃ । ಸರ್ವಾವಧ್ಯತ್ವಮತುಲಮನಯೋರ್ದತ್ತವಾನ್ಪುರಾ ॥ ೧೯ ॥ ವರೋತ್ಸೇಕೇನ ಮತ್ತೌಚ ಪ್ರಮಥ್ಯ ಮಹತೀಂ ಚಮೂಂ । ಸುರಾಣಾಮಮೃತಂ ವೀರೌ ಪೀತವಂತೌ ಪ್ಲವಂಗಮೌ ॥೨೦॥ ಏತಾವೇವಹಿ ಸಂಕ್ರುದ್ಧೌ ಸವಾಜಿ ರಥ ಕುಂಜರಾಂ । ಲಂಕಾಂ ನಾಶಯಿತುಂ ಶಕ್ತೌ ಸರ್ವೇ ತಿಷ್ಠಂತು ವಾನರಾಃ ॥ ೨೧ ॥ ಮಯೈವ ನಿಹತಾ ಲಂಕಾ ದಗ್ಧಾ ಭಸ್ಮೀಕೃತಾ

ವಂತರಾದ, ಏತೌ - ಇವರಿಬ್ಬರು, ಪ್ಲವಗಸತ್ತಮೌ - ವಾನರೋತ್ತಮರು, ರಣಾಜಿರೇ - ರಣರಂಗದಲ್ಲಿ, ಏತಯೋಃ-ಇವರೀರ್ವರಿಗೂ, ಪ್ರತಿಯೋದ್ಧಾರಂ-ಪ್ರತಿ ಯುದ್ಧವನ್ನು ಮಾಡುವವನ್ನು, ನಪಶ್ಯಾಮಿ - ಕಾಣೆನು. ॥ ೧೭ ॥ ಪಿತಾ....ತ್ - ಬ್ರಹ್ಮನವರಾತಿಶಯದಿಂದ, ಪರಮಂ - ಉತ್ತಮವಾದ, ದರ್ಪಂ - ಗರ್ವವನ್ನು, ಆಸ್ಥಿತೌ - ಹೊಂದಿರುವ, ಸರ್ವ....ಮೌ - ಸಮಸ್ತ ಕಪಿಗಳಿಗೆ ಶ್ರೇಷ್ಠರಾದ, ಏತೌ - ಈ ಮೈಂದದ್ವಿವಿದರು, ಅಮೃತಪ್ರಾಶಿನೌ - ಅಮೃತವನ್ನು ಪಾನಮಾಡಿರುವರು. ॥ ೧೮ ॥ ಅಶ್ವಿನಃ - ಅಶ್ವಿನೀದೇವತೆಗಳ, ಮಾನನಾರ್ಥಂ - ಬಹುಮಾನಾರ್ಥವಾಗಿ, ಸರ್ವ....ಹಃ - ಎಲ್ಲಾ ಲೋಕಗಳಿಗೂ ಪಿತಾಮಹನಾದ ಬ್ರಹ್ಮನು, ಅನಯೋಃ - ಇವರಿಬ್ಬರಿಗೂ, ಪುರಾ - ಪೂರ್ವದಲ್ಲಿ, ಸರ್ವಾವಧ್ಯತ್ವಂ - ಸಮಸ್ತರಿಂದಲೂ ವಧಿಸಲಶಕ್ಯತೆಯನ್ನು, ದತ್ತವಾ - ಇತ್ತನು. ॥ ೧೯ ॥ ಕಿಂಚ - ಇಷ್ಟುಮಾತ್ರವಲ್ಲ, ವರೋತ್ಸೇಕೇನ - ವರಪ್ರಭಾವದಿಂದ, ಮತ್ತೌ - ಮದವೇರಿದ, ವೀರೌ - ಶೂರರಾದ, ಪ್ಲವಂಗಮೌ-ವಾನರರಾದ ಇವರಿಬ್ಬರೂ, ಸುರಾಣಾಂ-ದೇವತೆಗಳ, ಮಹತೀಂಚಮೂಂ-ಮಹಾ ಸೈನ್ಯವನ್ನು, ಪ್ರಮಥ್ಯ-ಮಥಿಸಿ, ಅಮೃತಂ-ಅಮೃತವನ್ನು, ಪೀತವಂತೌ-ಪಾನಮಾಡಿದರು. ॥೨೦॥ ಸರ್ವೇವಾನರಾಃ - ಕಪಿಗಳೆಲ್ಲರೂ, ತಿಷ್ಠಂತು-ಇರಲಿ, ಏತಾವೇವ - ಇವರಿಬ್ಬರೇ, ಸಂಕ್ರುದ್ಧೌ - ಕುಪಿತರಾಗಿ, ಸವಾ....ರಾಂ - ಕುದುರೆಗಳಿಂದಲೂ, ರಥಗಳಿಂದಲೂ, ಆನೆಗಳಿಂದಲೂ ಕೂಡಿದ, ಲಂಕಾಂ - ಲಂಕಾಪಟ್ಟಣವನ್ನು, ನಾಶಯಿತುಂ - ಧ್ವಂಸಗೊಳಿಸಲು, ಶಕ್ತೌಹಿ - ಸಮರ್ಥರಷ್ಟೆ. ॥೨೧॥ ಮಯೈವ - ನನ್ನಿಂದಲೇ, ನಿಹತಾ - ಹೊಡೆಯಲ್ಪಟ್ಟ, ಲಂಕಾ - ಲಂಕಾಪುರಿಯು, ದಗ್ಧಾ - ಸುಡಲ್ಪಟ್ಟುದಾಗಿ, ಪುನಃ - ಮತ್ತು, ಭಸ್ಮೀಕೃತಾ - ಬೂದಿ ಮಾಡಲ್ಪಟ್ಟಿತು, ರಾಜಮಾರ್ಗೇಷು -

---

ಸ್ವಭಾವವುಳ್ಳವರು. ಯುದ್ಧದಲ್ಲಿ ಇವರಿಗೆದುರು ನಿಲ್ಲುವವರಾರೂ ಇಲ್ಲವು. ಇವರು ಬ್ರಹ್ಮದೇವನಿಂದ ವರವನ್ನು ಪಡೆದು ಮಹೋನ್ನತರಾಗಿರುವರು. ಅಮೃತಪಾನಮಾಡಿರುವವರಾದುದರಿಂದ ಇವರಿಗೆ ಸಾವೆಂಬುದೇ ಇರುವುದಿಲ್ಲ; ಹಿಂದೆ ಅಶ್ವಿನೀದೇವತೆಗಳ ಕುಮಾರರಾದ ಈ ಮೈಂದ ದ್ವಿವಿದರು ಬ್ರಹ್ಮನನ್ನು ಆರಾಧಿಸಲು, ಆತನು ಪರಮಸಂತುಷ್ಟನಾಗಿ ಯಾರಿಂದಲೂ ನಿಮಗೆ ಸಾವುಂಟಾಗದಿರಲೆಂದು ಇವರಿಗೆ ವರವನ್ನನುಗ್ರಹಿಸಿರುವನು. ಇವರು ಬ್ರಹ್ಮನ ವರಾತಿಶಯದಿಂದ ಬಹಳವಾಗಿ ಗರ್ವಿಸಿ, ದೇವತೆಗಳ ಮಹಾ ಸೈನ್ಯಗಳನ್ನು ಮರ್ದಿಸಿ, ಅಮೃತಪಾನಮಾಡಿರುವರು. ಮತ್ತಾವವಾನರರೂ ಅವಶ್ಯಕವಿಲ್ಲವು. ಈ ಮೈಂದ ದ್ವಿವಿದರಿಬ್ಬರೇ ಸಾಕು. ಇವರಿಬ್ಬರೇ ಕ್ರುದ್ಧರಾಗಿ ಲಂಕಾನಗರಕ್ಕೆ ಹೋಗಿ ಅಲ್ಲಿರುವ ಚತುರಂಗಬಲಸಮೇತವಾದ ಸಮಸ್ತ ರಾಕ್ಷಸವೀರರನ್ನೂ ಸಂಹರಿಸಿ ಬರುವರು. ಅಂತಹ ಸಾಮರ್ಥ್ಯವಿವರಿಗುಂಟು. ಎಲೈ ವಾನರರೇ! ನಾನು ಈಗಲೇ ಲಂಕಾನಗರವೆಲ್ಲ

ಪುನಃ। ರಾಜಮಾರ್ಗೇಷು ಸರ್ವತ್ರ ನಾಮ ವಿಶ್ರಾವಿತಂ ಮಯಾ ॥ ೨೨ ॥ "ಜಯತ್ಯತಿಬಲೋ ರಾಮೋ ಲಕ್ಷ್ಮಣಶ್ಚ ಮಹಾಬಲಃ । ರಾಜಾ ಜಯತಿ ಸುಗ್ರೀವೋ ರಾಘವೇಣಾಭಿಪಾಲಿತಃ ॥ ೨೩ ॥ ಅಹಂ ಕೋಸಲರಾಜಸ್ಯ ದಾಸಃ ಪವನಸಂಭವಃ । ಹನೂಮಾನಿತಿ" ಸರ್ವತ್ರ ನಾಮ ವಿಶ್ರಾವಿತಂ ಮಯಾ ॥ ೨೪ ॥ ಅಶೋಕವನಿಕಾಮಧ್ಯೇ ರಾವಣಸ್ಯ ದುರಾತ್ಮನಃ । ಅಧಸ್ತಾಚ್ಛಿಂಶುಪಾವೃಕ್ಷೇ ಸಾಧ್ವೀ ಕರುಣಮಾಸ್ಥಿತಾ ॥ ೨೫ ॥ ರಾಕ್ಷಸೀಭಿಃ ಪರಿವೃತಾ ಶೋಕಸಂತಾಪಕರ್ಶಿತಾ । ಮೇಘರೇಖಾಪರಿವೃತಾ ಚಂದ್ರರೇಖೇವ ನಿಷ್ಪ್ರಭಾ ॥ ೨೬ ॥ ಅಚಿಂತಯಂತೀ ವೈದೇಹೀ ರಾವಣಂ ಬಲ

ರಾಜಬೀದಿಗಳಲ್ಲಿಯೂ, ಸರ್ವತ್ರ - ಎಲ್ಲಾ ಕಡೆಯಲ್ಲಿಯೂ, ನಾಮ - ಹೆಸರು, ವಿಶ್ರಾವಿತಂ - ಸಾರಲ್ಪಟ್ಟಿತು. ॥ ೨೨ ॥ ಅತಿಬಲಃ - ಬಲು ಬಲಿಷ್ಠನಾದ, ರಾಮಃ - ಶ್ರೀರಾಮನು, ಜಯತಿ - ಸರ್ವೋತ್ಕೃಷ್ಟನಾಗಿದ್ದಾನೆ, ಮಹಾಬಲಃ - ಬಹು ಬಲಶಾಲಿಯಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಜಯತಿ - ಜಯಶಾಲಿಯಾಗಿರುವನು, ರಾಘವೇಣ - ಶ್ರೀರಾಮನಿಂದ, ಅಭಿಪಾಲಿತಃ - ಪರಿಪಾಲಿತನಾದ, ರಾಜಾ - ನಮ್ಮೊಡೆಯನಾದ, ಸುಗ್ರೀವಶ್ಚ - ಸುಗ್ರೀವನೂ, ಜಯತಿ - ಎಲ್ಲರಗಿಂತಲೂ ಉತ್ತಮನಾಗಿದ್ದಾನೆ, ಅಹಂ - ನಾನು, ಕೋಸ....ಸ್ಯ - ಕೋಸಲದೇಶಾಧಿಪತಿಯಾದ ರಾಮನ, ದಾಸಃ - ಭೃತ್ಯನಾದ, ಪವನಸಂಭವಃ - ವಾಯುಪುತ್ರನಾದ, ಹನುಮಾನಿತಿ - ಹನುಮಂತನೆಂದು, ಸರ್ವತ್ರ - ಎಲ್ಲಾ ಪ್ರದೇಶಗಳಲ್ಲಿಯೂ, ನಾಮ - ಹೆಸರು, ಮಯಾ - ನನ್ನಿಂದ, ವಿಶ್ರಾವಿತಂ - ಕೇಳಿಸಲ್ಪಟ್ಟಿತು. ॥ ೨೩-೨೪ ॥ ದುರಾತ್ಮನಃ - ದುರ್ಬುದ್ಧಿಯುಳ್ಳ, ರಾವಣಸ್ಯ - ರಾವಣನ, ಅಶೋ....ಧ್ಯೇ - ಅಶೋಕವನ ಮಧ್ಯದಲ್ಲಿ, ಶಿಂಶುಪಾವೃಕ್ಷೇ - ಶಿಂಶುಪಾವೃಕ್ಷದ, ಅಧಸ್ತಾತ್ - ಕೆಳಗಡೆ, ಸಾಧ್ವೀ - ಪತಿವ್ರತೆಯಾದ, ಕರುಣಂ - ದೈನ್ಯದಿಂದೊಡಗೂಡಿದಂತೆ, ಆಸ್ಥಿತಾ - ಇರುತ್ತಿರುವ, ರಾಕ್ಷಸೀಭಿಃ - ರಕ್ಕಸಿಯರಿಂದ, ಪರಿವೃತಾ - ಸುತ್ತುವರೆಯಲ್ಪಟ್ಟ, ಶೋಕ....ತಾ - ದುಃಖದಿಂದಲೂ, ಸಂಕಟದಿಂದಲೂ ಬತ್ತಿಹೋದ, ಮೇಘ....ತಾ - ಮೇಘಪಙ್ಕ್ತಿಯಿಂದ ಸುತ್ತುವರೆದ, ಚಂದ್ರರೇಖೇವ - ಚಂದ್ರಕಳೆಯಂತೆ, ನಿಷ್ಪ್ರಭಾ - ಕಾಂತಿಹೀನಳಾದ, ಬಲದರ್ಪಿತಂ - ಶಕ್ತಿಯಿಂದ ಗರ್ವಿತನಾದ, ರಾವಣಂ - ರಾವಣನನ್ನು, ಅಚಿಂತಯಂತೀ - ಲಕ್ಷ್ಯವಿಡದಿರುವ, ಪತಿವ್ರತಾಚ -

---

ವನ್ನೂ ನಾಶಮಾಡಿ, ಅಲ್ಲಿರುವ ಬಲಗರ್ವಿತರಾದ ರಾಕ್ಷಸರನೇಕರನ್ನು ಕೊಂದು ಪಟ್ಟಣವೆಲ್ಲವನ್ನೂ ಸುಟ್ಟು ಬೂದಿಮಾಡಿ, ನನ್ನಹೆಸರನ್ನು ಸಾರಿಬಂದೆನು. ಇಷ್ಟುಮಾತ್ರವಲ್ಲದೆ, "ಶ್ರೀರಾಮನು ಸರ್ವೋತ್ಕೃಷ್ಟನಾಗಿರುವನು. ಮಹಾ ಬಲಾಢ್ಯನಾದ ಲಕ್ಷ್ಮಣನು ಸರ್ವೋತ್ಕೃಷ್ಟನಾಗಿರುವನು. ಶ್ರೀರಾಮನಿಂದ ಪರಿಪಾಲಿತನಾಗಿರುವ ವಾನರೇಶ್ವರನಾದ ಸುಗ್ರೀವನು ಎಲ್ಲರಿಗಿಂತಲೂ ಅಧಿಕನಾಗಿರುವನು. ನಾನು ಕೋಸಲದೇಶಾಧೀಶ್ವರನಾದ ಶ್ರೀರಾಮನ ದೂತನು; ವಾಯುದೇವನ ಔರಸಪುತ್ರನು. ನನ್ನ ಹೆಸರು ಆಂಜನೇಯನು" ಎಂದು ಕೂಗಿ ಹೇಳಿ ಬಂದಿರುವೆನು. ॥ ೧೭-೨೪ ॥ ಎಲೈ ಕಪಿಶ್ರೇಷ್ಠರಿರಾ! ಮಹಾ ಪತಿವ್ರತೆಯಾದ ಸೀತಾದೇವಿಯು, ಮಹಾ ದುರಾತ್ಮನಾದ ರಾವಣಾಸುರನ ಅಶೋಕವನದಲ್ಲಿ ಶಿಂಶುಪಾವೃಕ್ಷದ ಕೆಳಗೆ ಕುಳಿತಿರುವಳು. ವಿಕಾರಮುಖಿಯರಾದ ರಾಕ್ಷಸಿಯರು ಆಕೆಗೆ ಕಾವಲಾಗಿರುವರು. ಆಕೆಯು ಮಹಾ ವ್ಯಸನದಿಂದಲೂ, ಸಂತಾಪದಿಂದಲೂ ಬಹಳವಾಗಿ ಕೃಶಿಸಿಹೋಗಿ, ಮೇಘಸಮೂಹಗಳಿಂದ ಮುಚ್ಚಿದ ಚಂದ್ರರೇಖೆಯಂತಿರುವಳು. ಆಕೆಯು

ದರ್ಶಿತಂ । ಪತಿವ್ರತಾ ಚ ಸುಶ್ರೋಣೀ ಅವಷ್ಟಬ್ಧಾ ಚ ಜಾನಕೀ ॥ ೨೭ ॥ ಅನು
ರಕ್ತಾಹಿ ವೈದೇಹೀ ರಾಮಂ ಸರ್ವಾತ್ಮನಾ ಶುಭಾ । ಅನನ್ಯಚಿತ್ತಾ ರಾಮೇಚ ಪೌಲೋ
ಮೀವ ಪುರಂದರೇ ॥ ೨೮ ॥ ತದೇಕವಾಸಸ್ಸಂವೀತಾ ರಜೋಧ್ವಸ್ತಾ ತಥೈವಚ ।
ಶೋಕಸಂತಾಪದೀನಾಂಗೀ ಸೀತಾ ಭರ್ತೃಹಿತೇ ರತಾ ॥ ೨೯ ॥ ಸಾ ಮಯಾ ರಾಕ್ಷಸೀ
ಮಧ್ಯೇ ತರ್ಜ್ಯಮಾನಾ ಮುಹುರ್ಮುಹುಃ । ರಾಕ್ಷಸೀಭಿರ್ವಿರೂಪಾಭಿ ರ್ದೃಷ್ಟಾ ಹಿ
ಪ್ರಮದಾವನೇ ॥ ೩೦ ॥ ಏಕವೇಣೀಧರಾ ದೀನಾ ಭರ್ತೃಚಿಂತಾಪರಾಯಣಾ ।

ಪತಿವ್ರತೆಯೂ ಆದ, ಸುಶ್ರೋಣೀ - ಸಮೀಚೀನವಾದ ನಡುವುಳ್ಳ, ಅವಷ್ಟಬ್ಧಾ - ಅಡ್ಡಗಿಸಲ್ಪಟ್ಟ, ಜಾನಕೀ - ಜನಕರಾಜಪುತ್ರಿಯಾದ, ರಾಮಂ - ಶ್ರೀರಾಮನನ್ನು, ಅನುರಕ್ತಾ - ಅನುಸರಿಸಿ ನಡೆಯುತ್ತಿರುವ, ಶುಭಾ - ಶುಭಕರಳಾದ, ವೈದೇಹೀ - ಸೀತಾದೇವಿಯು, ಪುರಂದರೇ - ಇಂದ್ರನಲ್ಲಿ, ಪೌಲೋಮೀವ - ಶಚೀದೇವಿಯಂತೆ, ರಾಮೇ - ಶ್ರೀರಾಮನಲ್ಲಿ, ಅನನ್ಯಚಿತ್ತಾ - ಏಕಾಗ್ರಚಿತ್ತಳಾಗಿರುವಳು. ॥೨೭-೨೮॥ ತದೇಕವಾಸಸ್ಸಂವೀತಾ - ಆ ಒಂದೇ ಬಟ್ಟೆಯನ್ನುಟ್ಟಿರುವ, ತಥೈವ - ಹಾಗೆಯೇ, ರಜೋಧ್ವಸ್ತಾ-ಧೂಳಿನಿಂದ ವ್ಯಾಪ್ತಳಾದ, ಶೋಕ....ಗೀ-ಶೋಕದಿಂದಲೂ, ವಿರಹತಾಪದಿಂದಲೂ, ಕುಗ್ಗಿಹೋದ ಅವಯವಗಳುಳ್ಳ, ಸೀತಾ - ಸೀತಾದೇವಿಯು, ಭರ್ತೃಹಿತೇ - ಗಂಡನ ಶ್ರೇಯಸ್ಸಿನಲ್ಲಿ, ರತಾ - ಆಸಕ್ತಳು. ॥ ೨೯ ॥ ರಾಕ್ಷಸೀಮಧ್ಯೇ - ರಾಕ್ಷಸಸ್ತ್ರೀಯರ ನಡುವೆ, ವಿರೂಪಾಭಿಃ - ವಿಕಾರರೂಪಗಳುಳ್ಳ, ರಾಕ್ಷಸಸ್ತ್ರೀಭಿಃ - ರಕ್ಕಸಿಯರಿಂದ, ಮುಹುರ್ಮುಹುಃ - ಬಾರಿಬಾರಿಗೂ, ತರ್ಜ್ಯಮಾನಾ-ಹೆದರಿಸಲ್ಪಟ್ಟ, ಸಾ - ಆ ಸೀತಾದೇವಿಯು, ಮಯಾ - ನನ್ನಿಂದ, ಪ್ರಮದಾವನೇ - ಉದ್ಯಾನವನದಲ್ಲಿ, ದೃಷ್ಟಾಹಿ - ನೋಡಲ್ಪಟ್ಟಳಷ್ಟೆ, ಏಕವೇಣೀಧರಾ - ಒಂದೇ ತಿರಿಕಟ್ಟಿದ ಜಡೆಯನ್ನು ಧರಿಸಿರುವ,

---

ಮಹಾ ಬಲಗರ್ವಿತನಾದ ರಾವಣಾಸುರನನ್ನು ಆಕೆಯು ಕಣ್ಣೆತ್ತಿಯೂ ನೋಡಳು. ಆಕೆಯು ನಿರಂತರವೂ ತನ್ನ ಪತಿದೇವನಾದ ಶ್ರೀರಾಮಮೂರ್ತಿಯನ್ನೇ ಧ್ಯಾನಿಸುತ್ತಿರುವಳು. ಆಕೆಯನ್ನು ನೋಡಿದೊಡನೆಯೇ ಎಂತಹರಿಗೂ ವ್ಯಸನವಾಗುತ್ತದೆ. ಎಲೈ ವಾನರರಿರಾ! ಮಹಾ ಪತಿವ್ರತೆಯೂ, ಸುಶ್ರೋಣಿಯೂ ಆದ ಆ ಸೀತಾದೇವಿಯು ದುರಾತ್ಮನಾದ ರಾವಣಾಸುರನಿಂದ ನಿರ್ಬಂಧಿತಳಾಗಿದ್ದರೂ ಶ್ರೀರಾಮಮೂರ್ತಿಯಲ್ಲಿಯೇ ನ್ಯಸ್ತಚಿತ್ತಳಾಗಿ ನಿರಂತರವೂ ಆತನನ್ನೇ ಧ್ಯಾನಿಸುತ್ತ, "ನಹುಷನಿಂದ ನಿರ್ಬಂಧಿತಳಾದರೂ ತನ್ನ ಪತಿಯಾದ ದೇವೇಂದ್ರನಲ್ಲಿಯೇ ನ್ಯಸ್ತಚಿತ್ತಳಾದ" ಶಚೀದೇವಿಯಂತಿರುವಳು. ॥ ೨೭—೨೮ ॥ ಆಕೆಯು ಬಹಳವಾಗಿ ದುಃಖಿಸುತ್ತಿರುವಳು. ಆಕೆಯು ದಂಡಕಾರಣ್ಯದಲ್ಲಿ ರಾವಣನಿಂದ ಅಪಹೃತಳಾದಾಗ ಧರಿಸಿದ್ದ ವಸ್ತ್ರವನ್ನೇ ಬಿಡದೆ ಉಟ್ಟಿರುವಳು. ಆಕೆಯ ದೇಹವೆಲ್ಲವೂ ಧೂಳಿನಿಂದ ಮುಚ್ಚಿ ಬಹಳವಾಗಿ ಮಾಸಿಹೋಗಿರುವುದು. ಆ ದೇವಿಯು ವ್ಯಸನದಿಂದಲೂ, ಅಂತಸ್ಸಂತಾಪದಿಂದಲೂ ದೈನ್ಯಹೊಂದಿ ಬತ್ತಿಹೋದ ಅವಯವಗಳುಳ್ಳವಳಾಗಿರುವಳು. ಆಕೆಯು ತನ್ನ ಪತಿದೇವನಿಗೆ ಮೇಲನ್ನೇ ನಿರಂತರವೂ ಕೋರುತ್ತಿರುವಳು. ಎಲೈ ವಾನರರಿರಾ! ಅಶೋಕವನ ಮಧ್ಯದಲ್ಲಿ ಮಹಾ ಭಯಂಕರಾಕಾರೆಯರಾದ ರಾಕ್ಷಸಸ್ತ್ರೀಯರಿಂದ ಪರಿವೃತಳಾಗಿಯೂ, ಅವರಿಂದ ಬಹಳವಾಗಿ ಭಯಗೊಳಿಸಲ್ಪಟ್ಟವಳಾಗಿಯೂ ಇರುವ ಆ ಸೀತಾದೇವಿಯು ಒಂದೇ ತಿರಿಯಾದ ಜಡೆಯುಳ್ಳವಳಾಗಿ ನಿರಂತರವೂ ತನ್ನ ಪತಿಯನ್ನು ಧ್ಯಾನಿಸುವುದೇ

ಅಧಶ್ಶಯ್ಯಾ ವಿವರ್ಣಾಂಗೀ ಪದ್ಮಿನೀವ ಹಿಮಾಗಮೇ ॥ ೩೧ ॥ ರಾವಣಾದ್ವಿನಿವೃತ್ತಾರ್ಥಾ ಮರ್ತವ್ಯಕೃತನಿಶ್ಚಯಾ । ಕಥಂಚಿನ್ಮೃಗಶಾಬಾಕ್ಷೀ ವಿಶ್ವಾಸಮುಪಪಾದಿತಾ ॥ ೩೨ ॥ ತತಸ್ಸಂಭಾಷಿತಾಚೈವ ಸರ್ವಮರ್ಥಂಚ ದರ್ಶಿತಾ । ರಾಮಸುಗ್ರೀವಸಖ್ಯಂಚ ಶ್ರುತ್ವಾ ಪ್ರೀತಿಮುಪಾಗತಾ ॥ ೩೩ ॥ ನಿಯತಸ್ಸಮುದಾಚಾರೋ ಭಕ್ತಿರ್ಭರ್ತರಿಚೋತ್ತಮಾ । ಯನ್ನಹಂತಿ ದಶಗ್ರೀವಂ ಸಮಹಾತ್ಮಾ ಕೃತಾಗಸಂ

ದೀನಾ - ದೈನ್ಯವುಳ್ಳ, ಭರ್ತೃ....ಣಾ - ಪತಿ ಧ್ಯಾನದಲ್ಲಿ ಆಸಕ್ತಳಾದ, ಅಧಶ್ಶಯ್ಯಾ - ನೆಲದಲ್ಲಿ ಮಲಗಿರುವಳಾಗಿ, ಹಿಮಾಗಮೇ - ಹಿಮಕಾಲದಲ್ಲಿ, ಪದ್ಮಿನೀವ - ತಾವರೇಬಳ್ಳಿಯಂತೆ, ವಿವರ್ಣಾಂಗೀ- ವರ್ಣಹೀನವಾದ ಶರೀರವುಳ್ಳವಳು, ರಾವಣಾತ್ - ರಾವಣನ ದೆಶೆಯಿಂದ, ವಿನಿವೃತ್ತಾರ್ಥಾ - ಹಿಂತಿರುಗಿದ ಪ್ರಯೋಜನವುಳ್ಳ, ಮರ್ತ....ಯಾ - ಮರಣದಲ್ಲಿ ಕೃತನಿಶ್ಚಯಳಾದ, ಮೃಗಶಾಬಾಕ್ಷೀ - ಜಿಂಕೇಮರಿಯ ನೇತ್ರಗಳಂತೆ ನೇತ್ರಗಳುಳ್ಳ, ಸಾ - ಆ ಸೀತಾದೇವಿಯು, ಕಥಂಚಿತ್ - ಅತಿ ಪ್ರಯಾಸದಿಂದ, ವಿಶ್ವಾಸಂ-ವಿಶ್ವಾಸವನ್ನು, ಉಪಪಾದಿತಾ-ಹೊಂದಿಸಲ್ಪಟ್ಟಳು, ತತಃ-ಬಳಿಕ, ಸಂಭಾಷಿತಾ- ಮಾತನಾಡಿಸಲ್ಪಟ್ಟಳು, ಸರ್ವಂ - ಸಮಸ್ತವಾದ, ಅರ್ಥಂಚ - ಪ್ರಯೋಜನವನ್ನೂ ಕುರಿತು, ದರ್ಶಿತಾ- ಹೇಳಲ್ಪಟ್ಟವಳಾಗಿ, ರಾಮ....ಚ - ರಾಮಸುಗ್ರೀವರ ಸ್ನೇಹವನ್ನೂ ಸಹ, ಶ್ರುತ್ವಾ - ಕೇಳಿ, ಪ್ರೀತಿಂ- ಸಂತೋಷವನ್ನು, ಉಪಾಗತಾ - ಹೊಂದಿದಳು. ॥ ೩೦-೩೩ ॥ ನಿಯತಃ - ಸ್ವಭಾವಸಿದ್ಧವಾದ, ಸಮುದಾಚಾರಃ - ಒಳ್ಳೇ ನಡತೆಯು ಅಥವಾ ಪಾತಿವ್ರತ್ಯವೂ, ಭರ್ತರಿ - ಪತಿಯಲ್ಲಿ, ಉತ್ತಮಾ - ಶ್ರೇಷ್ಠವಾದ, ಭಕ್ತಿಶ್ಚ - ಭಕ್ತಿಯೂ ಸಹ, ಕೃತಾಗಸಂ - ಮಾಡಲ್ಪಟ್ಟ ಅಪರಾಧವುಳ್ಳ, ದಶಗ್ರೀವಂ- ರಾವಣನನ್ನು, ನಹಂತೀತಿಯತ್ - ಸಂಹರಿಸಲಿಲ್ಲವೆಂಬುವದಾವುದೋ, (ಅತಃ - ಈ ಕಾರಣದಿಂದ ಅಂದರೆ ಶಾಪನಿಬಂಧನರೂಪವಾದ ದುರ್ಮರಣವಿಲ್ಲದಿರುವುದರಿಂದ), ಸಃ-ಆ ರಾವಣನು, ಮಹಾತ್ಮಾ- ಮಹಾನುಭಾವನು, ತಸ್ಯ - ಆ ರಾವಣನ, ವಧೇ - ಸಂಹಾರದಲ್ಲಿ, ರಾಮಸ್ತು - ಶ್ರೀರಾಮನೇ, ನಿಮಿತ್ತಮಾತ್ರಂ - ಕಾರಣಮಾತ್ರವು, (ಸೀತಾತು - ಸೀತಾದೇವಿಯಾದರೆ, ನಿಮಿತ್ತಕಾರಣಂ - ಕಾರಣಹೇತುವು), ಭವಿಷ್ಯತಿ - ಆಗುವಳು, (ವಾ) (ಅಥವಾ-ನಿಮಿತ್ತಮಾತ್ರಂ - ಕಾರಣಮಾತ್ರವು)

ಮುಖ್ಯವಾದ ವ್ರತವುಳ್ಳವಳಾಗಿರುವಳು. ಭೂಶಾಯಿನಿಯಾಗಿರುವುದರಿಂದ ಆಕೆಯ ಮೈಬಣ್ಣವೆಲ್ಲವೂ ಮಾಸಿಹೋಗಿರುವುದು. ಆಕೆಯು ಹೇಮಂತಋತುವಿನಲ್ಲಿನ ಪದ್ಮಿನಿಯಂತೆ ಪ್ರಕಾಶಿಸಿಯೂ ಪ್ರಕಾಶಿಸದಂತಿರುವಳು. ಆಕೆಯು ಎಷ್ಟುಮಾತ್ರಕ್ಕೂ ರಾವಣಾಸುರನನ್ನು ಲೆಕ್ಕಿಸಳು. ಆಕೆಯು ಮರಣಕ್ಕೆ ಸಿದ್ಧಳಾಗಿದ್ದಳು. ಆಗ ನಾನು ಆಕೆಯನ್ನು ಕಂಡೆನು. ॥ ೨೯-೩೨ ॥ ಎಲೈ ವಾನರರಿರಾ! ನಾನು ಆಕೆಯನ್ನು ನೋಡಿದಬಳಿಕ ಮಹಾ ಪ್ರಯಾಸದಿಂದ, "ನಾನು ಶ್ರೀರಾಮದೂತನು" ಎಂದು ಆಕೆಯನ್ನುನಂಬಿಸಿ, ಶ್ರೀರಾಮಮೂರ್ತಿಗೂ, ನಮ್ಮ ಪ್ರಭುವಾದ ಸುಗ್ರೀವನಿಗೂ ಸಖ್ಯವಾದುದು ಇವೇ ಮೊದಲಾದ ಸಕಲ ವೃತ್ತಾಂತವನ್ನೂ ಆಕೆಗೆ ತಿಳಿಸಿದೆನು. ಆಕೆಯು ಬಹಳವಾಗಿ ಸಂತೋಷಪಟ್ಟಳು. ಎಲೈ ಕಪಿಶ್ರೇಷ್ಠರೇ! ಸೀತಾದೇವಿಗೆ ಸದಾಚಾರಸಂಪತ್ತಿಯೂ, ಪತಿದೇವನಾದ ಶ್ರೀರಾಮನಲ್ಲಿ ನಿರತಿಶಯವಾದ ಭಕ್ತಿಯೂ ಚಿರಸ್ಥಾಯಿಯಾಗಿರುವುದು. ಹೀಗಿದ್ದರೂ ತನ್ನಲ್ಲಿ ಮಹಾಪರಾಧವನ್ನೆಸಗಿದ ರಾವಣಾಸುರನನ್ನು ಸಂಹರಿಸದಿರುವಳು. ಇದರಿಂದ ಆ ರಾವಣಾಸುರನು ಮಹಾ ಪ್ರಭಾವಶಾಲಿಯೆಂದು ತಿಳಿಯುವುದು. ಆವನು ಮಹಾ ಪ್ರಭಾವಶಾಲಿಯಾದರೂ,

॥೩೪॥ ನಿಮಿತ್ತಮಾತ್ರಂ ರಾಮಸ್ತು ವಧೇ ತಸ್ಯ ಭವಿಷ್ಯತಿ । ಸಾ ಪ್ರಕೃತ್ಯೈವ ತನ್ವಂಗೀ ತದ್ವಿಯೋಗಾಚ್ಚ ಕರ್ಶಿತಾ । ಪ್ರತಿಪತ್ಪಾಠಶೀಲಸ್ಯ ವಿದ್ಯೇವ ತನುತಾಂ ಗತಾ ॥ ೩೫ ॥

ಏವಮಾಸ್ತೇ ಮಹಾಭಾಗಾ ಸೀತಾ ಶೋಕಪರಾಯಣಾ ।
ಯದತ್ರ ಪ್ರತಿಕರ್ತವ್ಯಂ ತತ್ಸರ್ವಮುಪಪದ್ಯತಾಂ" ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಷಷ್ಟಿತಮಸ್ಸರ್ಗಃ

ಸೀತಾ - ಸೀತಾದೇವಿಯು, ತಸ್ಯ - ಆ ರಾವಣನ, ವಧೇ - ಸಂಹಾರವಿಷಯದಲ್ಲಿ, ರಾಮಸ್ತು - ಶ್ರೀರಾಮನೇ, ಭವಿಷ್ಯತಿ - ಆಗುವನು. ॥ ೩೪ ॥ ಪ್ರಕೃತ್ಯೈವ - ಸ್ವಭಾವದಿಂದಲೇ, ತನ್ವಂಗೀ - ಸೂಕ್ಷ್ಮಾಕೃತಿಯುಳ್ಳ, ಸಾ - ಆ ಸೀತಾದೇವಿಯು, ತದ್ವಿಯೋಗಾಚ್ಚ - ಆ ಶ್ರೀರಾಮನ ಅಗಲುವಿಕೆಯಿಂದಲೂ, ಕರ್ಶಿತಾ - ಕೃಶಳಾಗಿ, ಪ್ರತಿ....ಸ್ಯ - ಪಾಡ್ಯಮಿ ದಿನದಲ್ಲಿ ಪಾಠವೋದುವ ಸ್ವಭಾವವುಳ್ಳ ಪುರುಷನ, ವಿದ್ಯೇವ - ವಿದ್ಯೆಯಂತೆ, ತನುತಾಂ - ಸ್ವಲ್ಪತ್ವವನ್ನು, ಗತಾ - ಹೊಂದಿರುವಳು. ॥ ೩೫ ॥ ಮಹಾಭಾಗಾ - ಮಹಾ ಭಾಗ್ಯವತಿಯಾದ, ಸೀತಾ - ಸೀತಾದೇವಿಯು, ಏವಂ - ಈ ಪರಿಯಾಗಿ, ಶೋಕಪರಾಯಣಾ - ದುಃಖಾಕ್ರಾಂತಳಾಗಿ, ಆಸ್ತೇ - ಇದ್ದಾಳೆ, ಅತ್ರ - ಈ ಕಾರ್ಯದಲ್ಲಿ, ಯತ್ ಪ್ರತಿಕರ್ತವ್ಯಂ - ಯಾವ ಪ್ರತೀಕಾರವು ಮಾಡತಕ್ಕುದೋ, ತತ್ಸರ್ವಂ- ಅದೆಲ್ಲವನ್ನೂ, ಉಪಪದ್ಯತಾಂ- ಅನುಷ್ಠಾನ ಮಾಡಲ್ಪಡಲಿ. ॥ ೩೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕೋನಷಷ್ಠಿತಮಸ್ಸರ್ಗಃ

ಸೀತಾದೇವಿಯಲ್ಲಿ ಅವನೆಸಗಿದ ಅಪರಾಧದಿಂದಲೇ ಅವನ ಪ್ರಭಾವವೆಲ್ಲವೂ ನಶಿಸಿಹೋಗಿರುವುದು. ಅವನ ಸಂಹಾರ ವಿಷಯದಲ್ಲಿ ಶ್ರೀರಾಮನು ನಿಮಿತ್ತಮಾತ್ರನು. ಸ್ವಭಾವದಿಂದಲೇ ಬಹಳವಾಗಿ ಕೃಶಿಸಿಹೋಗಿರುವವಳೂ, ವ್ಯಸನಸಂತಪ್ತೆಯಾಗಿರುವವಳೂ, ಆದ ಸೀತಾದೇವಿಯು ಶ್ರೀರಾಮವಿರಹದಿಂದ ಚಿರದುಃಖಿನಿಯಾಗಿ, "ಪಾಡ್ಯಮಿಯದಿನ ಅಧ್ಯಯನ ಮಾಡಿದವನ ಪಾಠದಂತೆ" ಕ್ಷಯಿಸುತ್ತಿರುವಳು. ಮಹಾ ಭಾಗ್ಯಳಾದ ಆ ದೇವಿಯು ನಿರಂತರ ದುಃಖದಿಂದ ಕೃಶಿಸಿಹೋಗಿರುವಳು. ಎಲೈ ವಾನರರಿರಾ! ಈ ವಿಷಯದಲ್ಲಿ ನೀವು ಮುಂದಿನ ಮಾಡಬೇಕಾದ ಕಾರ್ಯವನ್ನು ಕುರಿತು ಆಲೋಚಿಸಿ ಪ್ರಯತ್ನವನ್ನು ಕೈಗೊಳ್ಳಬೇಕು. ॥ ೩೩–೩೬ ॥

ಇಂತಿದು ಹನುಮತ್ಕೃತ ಸ್ವಪರಾಕ್ರಮೋನ್ನತಿ ವರ್ಣನವೆಂಬ
ಐವತ್ತೊಂಬತ್ತನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಷಷ್ಟಿತಮಸ್ಸರ್ಗಃ

ತಸ್ಯ ತದ್ವಚನಂ ಶ್ರುತ್ವಾ ವಾಲಿಸೂನುರಭಾಷತ । " ಅಯುಕ್ತಂತು ವಿನಾ ದೇವೀಂ ದೃಷ್ಟವದ್ಭಿಶ್ಚ ವಾನರಾಃ । ಸಮೀಪಂ ಗಂತುಮಸ್ಮಾಭೀ ರಾಘವಸ್ಯ ಮಹಾತ್ಮನಃ ‖ ೧ ‖ ದೃಷ್ಟ್ವಾ ದೇವೀ ನಚಾನೀತಾ ಇತಿ ತತ್ರ ನಿವೇದನಂ । ಅಯುಕ್ತಮಿವ ಪಶ್ಯಾಮಿ ಭವದ್ಭಿಃ ಖ್ಯಾತವಿಕ್ರಮೈಃ ‖ ೨ ‖ ನಹಿ ನಃ ಪ್ಲವನೇ ಕಶ್ಚಿನ್ನಾಪಿ ಕಶ್ಚಿತ್ಪರಾಕ್ರಮೇ । ತುಲ್ಯಸ್ಸಾಮರದೈತ್ಯೇಷು ಲೋಕೇಷು ಹರಿಸತ್ತಮಾಃ ‖ ೩ ‖ ತೇಷ್ವೇವಂ ಹತವೀರೇಷು ರಾಕ್ಷಸೇಷು ಹನೂಮತಾ । ಕಿಮನ್ಯದತ್ರ ಕರ್ತವ್ಯಂ ಗೃಹೀತ್ವಾ

ತಸ್ಯ - ಆ ಆಂಜನೇಯನ, ತದ್ವಚನಂ - ಆ ಮಾತನ್ನು, ಶ್ರುತ್ವಾ - ಕೇಳಿ, ವಾಲಿಸೂನುಃ- ವಾಲಿಪುತ್ರನಾದ ಅಂಗದನು, ಅಭಾಷತ - ಹೇಳಿದನು, ಹೇ ವಾನರಾಃ - ಎಲೈ ಕಪಿಗಳಿರಾ, ದೃಷ್ಟವದ್ಭಿಃ - ಕಂಡಿರುವ, ಅಸ್ಮಾಭಿಃ - ನಮ್ಮಿಂದ, ದೇವೀಂವಿನಾ - ಸೀತಾದೇವಿಯನ್ನು ಬಿಟ್ಟು, ಮಹಾತ್ಮನಃ - ಮಹಾನುಭಾವನಾದ, ರಾಘವಸ್ಯ - ಶ್ರೀರಾಮನ, ಸಮೀಪಂ - ಬಳಿಯನ್ನು ಕುರಿತು, ಗಂತುಂ - ಹೋಗುವುದಕ್ಕೆ, ಅಯುಕ್ತಂತು - ಯೋಗ್ಯವಲ್ಲವಷ್ಟೆ. ‖ ೧ ‖ ದೇವೀ - ಸೀತಾದೇವಿಯು, ದೃಷ್ಟ್ವಾ - ನೋಡಲ್ಪಟ್ಟಳು, ನಚಾನೀತಾ - ತರಲ್ಪಡಲಿಲ್ಲ, ಇತಿ - ಇಂತೆಂದು, ಖ್ಯಾತವಿಕ್ರಮೈಃ - ಪ್ರಸಿದ್ಧ ಪರಾಕ್ರಮವುಳ್ಳ, ಭವದ್ಭಿಃ - ನಿಮ್ಮಿಂದ, ತತ್ರ - ಆ ರಾಮಸನ್ನಿಧಿಯಲ್ಲಿ, ನಿವೇದನಂ - ಅರಿಕೆ ಮಾಡೋಣವು, ಅಯುಕ್ತಮಿವ - ಅನರ್ಹವಾಗಿರುವಂತೆ, ಪಶ್ಯಾಮಿ - ತಿಳಿಯುತ್ತೇನೆ. ‖ ೨ ‖ ಹೇ ಹರಿಸತ್ತಮಾಃ - ಎಲೈ ವಾನರೋತ್ತಮರೇ, ಸಾಮರದೈತ್ಯೇಷು - ದೇವರಾಕ್ಷಸರಿಂದೊಡಗೂಡಿದ, ಲೋಕೇಷು - ಲೋಕಗಳಲ್ಲಿ, ಪ್ಲವನೇ - ದಾಟುವಿಕೆಯಲ್ಲಿ, ಕಶ್ಚಿತ್ - ಯಾವನೂ, ನಃ - ನಮಗೆ, ತುಲ್ಯಃ - ಸಮಾನಸ್ಕಂಧನು, ನಹಿ - ಇಲ್ಲವೇ ಇಲ್ಲ, ಕಶ್ಚಿತ್ - ಯಾವಾತನೂ, ಪರಾಕ್ರಮೇ - ಸಾಮರ್ಥ್ಯದಲ್ಲಿ, ತುಲ್ಯಃ - ಸರಿಸಮಾನನು, ನ - ಇಲ್ಲವು. ‖ ೩ ‖ ಏವಂ - ಈ ಪರಿಯಾಗಿ, ತೇಷುರಾಕ್ಷಸೇಷು - ಆ ಅಸುರರು, ಹನೂಮತಾ - ಆಂಜನೇಯನಿಂದ, ಹತವೀರೇಷು - ಸಂಹೃತರಾದ

ಹನುಮಂತನೀರೀತಿ ನುಡಿಯಲು, ವಾಲಿಪುತ್ರನಾದ ಅಂಗದನು, " ಎಲೈ ವಾನರರೇ! ನಾವೀಗ ಸೀತಾದೇವಿಯನ್ನು ನೋಡಿರುವೆವು. ಆದುದರಿಂದ ಆಕೆಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗದೆಯೇ ಶ್ರೀರಾಮನ ಬಳಿಗೈದುವುದು ಸೂಕ್ತವಾಗಿರುವುದಿಲ್ಲವು. ಅಲ್ಲದೆ, ಮಹಾ ಪರಾಕ್ರಮಶಾಲಿಗಳಾದ ನೀವೆಲ್ಲರೂ ಶ್ರೀರಾಮನ ಬಳಿಗೆ ಹೋಗಿ, " ನಾವು ಸೀತಾದೇವಿಯನ್ನು ನೋಡಿ ಬಂದೆವಲ್ಲದೆ ಕರೆದುಕೊಂಡು ಬರಲಿಲ್ಲವು " ಎಂದು ಹೇಳುವುದು ಎಷ್ಟುಮಾತ್ರಕ್ಕೂ ಉಚಿತವಲ್ಲವೆಂದೇ ನನಗೆ ತೋರುವುದು. ಎಲೈ ವಾನರೋತ್ತಮರೇ! ದೇವದಾನವರಿಂದ ಕೂಡಿದ ಮೂರು ಲೋಕಗಳಲ್ಲಿ ಹುಡುಕಿ ನೋಡಿದರೂ, ಪರಾಕ್ರಮದಲ್ಲಿಯಾಗಲಿ, ಗಗನಸಂಚಾರದಲ್ಲಿಯಾಗಲಿ ನಮಗೆ ಸಮಾನರಾದವರಾರೂ ಇರುವುದಿಲ್ಲವು. ಇದೂ ಅಲ್ಲದೆ ಹನುಮಂತನು ಈಗಾಗಲೇ ರಾಕ್ಷಸರಲ್ಲಿ ಬಲಪರಾಕ್ರಮಗಳಲ್ಲಿ ಅತ್ಯಧಿಕರಾಗಿದ್ದವರೆಲ್ಲರನ್ನೂ ಕೊಂದು ಬಂದಿರುವನು. ಇನ್ನು ನಾವು ಮಾಡಬೇಕಾದ

ಯಾಮ ಜಾನಕೀಂ" ॥ ೪ ॥ ತಮೇವಂ ಕೃತಸಂಕಲ್ಪಂ ಜಾಂಬವಾನ್ ಹರಿಸತ್ತಮಃ ।
ಉವಾಚ ಪರಮಪ್ರೀತೋ ವಾಕ್ಯಮರ್ಥವದರ್ಥವಿತ್ ॥ ೫ ॥

"ನ ತಾವದೇಷಾಮತಿರಕ್ಷಮಾನೋ
ಯಥಾ ಭವಾನ್ಪಶ್ಯತಿ ರಾಜಪುತ್ರ! ।
ಯಥಾತು ರಾಮಸ್ಯ ಮತಿರ್ನಿವಿಷ್ಟಾ
ತಥಾ ಭವಾನ್ಪಶ್ಯತು ಕಾರ್ಯಸಿದ್ಧಿಂ ॥ ೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಷ್ಟಿತಮಸ್ಸರ್ಗಃ

ಶೂರರುಳ್ಳವರಾಗಲು, ಅತ್ರ - ಇಲ್ಲಿ, ಅನ್ಯತ್ ಕಿಂಕರ್ತವ್ಯಂ - ಇನ್ನೇನು ಮಾಡತಕ್ಕದು, ಜಾನಕೀಂ-ಸೀತಾದೇವಿಯನ್ನು, ಗೃಹೀತ್ವಾ - ಕರೆದುಕೊಂಡು, ಯಾಮ - ಹೋಗೋಣ. ॥ ೪ ॥ ಏವಂ - ಈ ಪ್ರಕಾರವಾಗಿ, ಕೃತಸಂಕಲ್ಪಂ - ಮಾಡಲ್ಪಟ್ಟ ಮನೋನಿಶ್ಚಯವುಳ್ಳ, ತಂ - ಆ ಅಂಗದನನ್ನು ಕುರಿತು, ಅರ್ಥವಿತ್ - ಅರ್ಥಜ್ಞನಾದ, ಹರಿಸತ್ತಮಃ - ವಾನರೋತ್ತಮನಾದ, ಜಾಂಬವಾನ್ - ಜಾಂಬವಂತನು, ಅರ್ಥವತ್ - ಪ್ರಯೋಜನಕಾರಿಯಾದ, ವಾಕ್ಯಂ - ಮಾತನ್ನು, ಉವಾಚ - ಹೇಳಿದನು. ॥ ೫ ॥ ಹೇ ರಾಜಪುತ್ರ - ಎಲೈ ರಾಜಕುವರನೇ, ಭವಾನ್ - ನೀನು, ಯಥಾಪಶ್ಯತಿ - ಹೇಗೆ ತಿಳಿದಿರುವೆಯೋ, ಏಷಾಮತಿಃ - ಈ ಬುದ್ಧಿಯು, ನಃ - ನಮಗೆ, ಅಕ್ಷಮಾತಾವತ್ - ಅಯುಕ್ತವಾದುದು, ನ - ಅಲ್ಲ, ಕಿಂತು - ಆದರೆ, ರಾಮಸ್ಯ - ಶ್ರೀರಾಮನ, ಮತಿಃ - ಬುದ್ಧಿಯು, ಯಥಾನಿವಿಷ್ಟಾ - ಹೇಗೆ ಪ್ರವರ್ತಿಸಿರುವದೋ, ತಥಾ - ಹಾಗೆ, ಭವಾನ್ - ನೀನು, ಕಾರ್ಯಸಿದ್ಧಿಂ - ಕಾರ್ಯಾನುಕೂಲತೆಯನ್ನು, ಪಶ್ಯತು - ನೋಡು. ॥ ೬ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್ಟಿತಮಸ್ಸರ್ಗಃ

ಮಹತ್ಕಾರ್ಯವು ತಾನೇ ಏನಿರುವುದು? ಸೀತಾದೇವಿಯನ್ನು ಕರೆದುಕೊಂಡು ಬಂದು ಶ್ರೀರಾಮಮೂರ್ತಿಗೆ ಒಪ್ಪಿಸೋಣ" ಎಂದು ಹೇಳಿದನು. ॥ ೧-೪ ॥ ಆಗ ಕಾರ್ಯಾಕಾರ್ಯಗಳನ್ನು ಚೆನ್ನಾಗಿ ಬಲ್ಲವನೂ, ವಾನರೋತ್ತಮನೂ ಆದ ಜಾಂಬವಂತನು ಅಂಗದನಾಡಿದ ಮಾತುಗಳನ್ನು ಕೇಳಿ ಪರಮ ಸಂತುಷ್ಟನಾಗಿ, ವಿಶೇಷಾರ್ಥಗರ್ಭಿತವಾದ ಒಂದು ಮಾತನ್ನಾಡುವನು. "ರಾಜಪುತ್ರನಾದ ಎಲೈ ಅಂಗದನೇ! ನಿನ್ನ ಆಲೋಚನೆಯು ನಮಗೂ ಸಮ್ಮತವೆ. ಬಹಳ ಚೆನ್ನಾಗಿಯೇ ಇರುವುದು. ನಾವು ಮಹಾ ಪರಾಕ್ರಮಶಾಲಿಗಳೇ. ಸೀತೆಯನ್ನು ಕರೆದುಕೊಂಡು ಬರುವುದು ನಮಗೆ ಸುಲಭವೇ ಹೌದು. ಆದರೂ ನಾವೆಲ್ಲರೂ ಶ್ರೀರಾಮನ ಆಜ್ಞಾಧಾರಕರು. ಆತನು ಹೇಗೆ ಅಪ್ಪಣೆ ಮಾಡಿದರೆ ಹಾಗೆ ಮಾಡುವುದು ಉತ್ತಮವೆಂದು ನನಗೆ ತೋರುತ್ತಿರುವುದು." ॥ ೪-೬ ॥

ಇಂತಿದು ವಾನರಕೃತ ಸೀತಾನಯನ ಸಮಾಲೋಚನ ವೃತ್ತಾಂತವೆಂಬ
ಅರುವತ್ತನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಏಕಷಷ್ಠಿತಮಸ್ಸರ್ಗಃ

ತತೋ ಜಾಂಬವತೋ ವಾಕ್ಯಮಗೃಹ್ಣಂತ ವನೌಕಸಃ । ಅಂಗದಪ್ರಮುಖಾ
ವೀರಾ ಹನೂಮಾಂಶ್ಚ ಮಹಾಕಪಿಃ ॥ ೧ ॥ ಪ್ರೀತಿಮಂತಸ್ತತಸ್ಸರ್ವೇ ವಾಯುಪುತ್ರ
ಪುರಸ್ಸರಾಃ । ಮಹೇಂದ್ರಾದ್ರಿಂ ಪರಿತ್ಯಜ್ಯ ಪುಪ್ಲುವುಃ ಪ್ಲವಗರ್ಷಭಾಃ ॥ ೨ ॥
ಮೇರುಮಂದರಸಂಕಾಶಾ ಮತ್ತಾಇವ ಮಹಾಗಜಾಃ । ಛಾದಯಂತಇವಾಕಾಶಂ
ಮಹಾಕಾಯಾ ಮಹಾಬಲಾಃ ॥ ೩ ॥ ಸಭಾಜ್ಯಮಾನಂ ಭೂತೈಸ್ತಮಾತ್ಮವಂತಂ
ಮಹಾಬಲಂ । ಹನೂಮಂತಂ ಮಹಾವೇಗಂ ವಹಂತಇವ ದೃಷ್ಟಿಭಿಃ ॥ ೪ ॥

ತತಃ - ಬಳಿಕ, ಅಂಗ....ಖಾಃ - ಅಂಗದನೇ ಮೊದಲಾದ, ವೀರಾಃ - ಶೂರರಾದ, ವನೌಕಸಃ-ಕಪಿಗಳೂ, ಮಹಾಕಪಿಃ - ವಾನರಶ್ರೇಷ್ಠನಾದ, ಹನೂಮಾಂಶ್ಚ - ಆಂಜನೇಯನೂ, ಜಾಂಬವತಃ - ಜಾಂಬವಂತನ, ವಾಕ್ಯಂ-ಮಾತನ್ನು, ಅಗೃಹ್ಣಂತ-ಗ್ರಹಿಸಿದರು. ॥೧॥ ತತಃ-ಬಳಿಕ, ಪ್ರೀತಿಮಂತಃ-ವಿಶ್ವಾಸವುಳ್ಳ, ವಾಯು....ರಾಃ - ಅಂಜನೇಯನೇ ಮೊದಲಾದ, ಸರ್ವೇ - ಸಮಸ್ತರಾದ, ಪ್ಲವಗರ್ಷಭಾಃ - ವಾನರಶ್ರೇಷ್ಠರು, ಮಹೇಂದ್ರಾದ್ರಿಂ - ಮಹೇಂದ್ರಪರ್ವತವನ್ನು, ಪರಿತ್ಯಜ್ಯ - ಬಿಟ್ಟು, ಪುಪ್ಲುವುಃ-ಹಾರಿದರು, ಮೇರು....ಶಾಃ-ಮೇರುಮಂದರಪರ್ವತಗಳಿಗೆ ಸದೃಶರಾಗಿ, ಮಹಾಗಜಾಇವ-ದೊಡ್ಡ ಆನೆಗಳಂತೆ, ಮತ್ತಾಃ-ಮದಿಸಿರುವ, ಮಹಾಕಾಯಾಃ-ಮಹಾ ಶರೀರಗಳುಳ್ಳ, ಮಹಾಬಲಾಃ-ಅತಿ ಬಲಿಷ್ಠರಾದ, ಆಕಾಶಂ-ಅಂತರಿಕ್ಷವನ್ನು, ಛಾದಯಂತಇವ-ಆಚ್ಛಾದನೆ ಮಾಡುವವರಂತಿರುವ, ಭೂತೈಃ - ಸರ್ವಭೂತಗಳಿಂದಲೂ, ಸಭಾಜ್ಯಮಾನಂ - ಬಹುಮಾನಿಸಲ್ಪಟ್ಟ, ಆತ್ಮವಂತಂ - ಧೈರ್ಯಶಾಲಿಯಾದ, ಮಹಾಬಲಂ - ಬಹು ಬಲಿಷ್ಠನಾದ, ಮಹಾವೇಗಂ - ಅತಿ ವೇಗಶಾಲಿಯಾದ, ಹನುಮಂತಂ-ಆಂಜನೇಯನನ್ನು, ದೃಷ್ಟಿಭಿಃ-ವಿಶ್ವಾಸಪೂರ್ವಕವಾದ ನೋಟಗಳಿಂದ, ವಹಂತಇವಸ್ಥಿತಾಃ-ಹೊರುತ್ತಿದ್ದಾರೆಯೋ ಎಂಬಂತಿರುವ, ರಾಘವೇ - ಶ್ರೀರಾಮನಲ್ಲಿ, ಅರ್ಥನಿರ್ವೃತ್ತಿಂ - ಕಾರ್ಯ

ಆಮೇಲೆ ಅಂಗದನೇ ಮೊದಲಾದ ವಾನರವೀರರೂ, ಮಹಾ ಕಪಿಯಾದ ಹನುಮಂತನೂ ಪ್ಲವಗೋತ್ತಮನಾದ ಜಾಂಬವಂತನ ಮಾತುಗಳನ್ನು ಕೇಳಿ ಹಾಗೆಯೇ ಮಾಡಲು ಸಮ್ಮತಿಸಿದರು. ಆ ಕೂಡಲೇ ಅವರೆಲ್ಲರೂ ಶ್ರೀರಾಮಸುಗ್ರೀವರ ಬಳಿಗೈದಲು ಮಹದುತ್ಸಾಹಭರಿತರಾಗಿದ್ದರು. ಆಗಲೇ ಅವರೆಲ್ಲರೂ ಪರಮಸಂತೋಷಭರಿತರಾಗಿ ವಾಯುಪುತ್ರನಾದ ಹನುಮಂತನನ್ನು ಮುಂದಿಟ್ಟುಕೊಂಡು ಆ ಮಹೇಂದ್ರಪರ್ವತವನ್ನು ಬಿಟ್ಟು ಆಕಾಶಕ್ಕೆ ಹಾರಿದರು. ಆ ವಾನರರೆಲ್ಲರೂ ಮೇರುಮಂದರಪರ್ವತಗಳಿಗೂ, ಮದಿಸಿದ ಮಹಾ ಗಜಗಳಿಗೂ ಸಮಾನರಾಗಿ, ಮಹಾ ಬಲರೂ, ಮಹಾ ಕಾಯರೂ ಆಗಿದ್ದರು. ಆವರೆಲ್ಲರೂ ಆಕಾಶವನ್ನೇ ಮುಚ್ಚುವಂತೆ ಹಾರಿ ಹೊರಟರು. ಮಹಾ ಬಲಪರಾಕ್ರಮಶಾಲಿಯಾಗಿ ಕಾರ್ಯಸಿದ್ಧಿಯಿಂದ ವೃದ್ಧಿಗೊಂಡು ಸಮಸ್ತ ಭೂತಗಳಿಂದಲೂ ಸನ್ಮಾನಿತನಾದ ಹನುಮಂತನನ್ನು ಅನಿಮಿಷದೃಷ್ಟಿಯಿಂದ ಹೊತ್ತುಕೊಂಡು ಹೋಗುತ್ತಿರುವರೋ ಎಂಬಂತೆ ಆ ವಾನರರೆಲ್ಲರೂ ಆಕಾಶಮಾರ್ಗದಲ್ಲಿ ಹೊರಟರು. ಅವರೆಲ್ಲರೂ ಶ್ರೀರಾಮನ ಕಾರ್ಯ

ರಾಘವೇಚಾರ್ಥನಿರ್ವೃತ್ತಿಂ ಕರ್ತುಂಚ ಪರಮಂ ಯಶಃ । ಸಮಾಧಾಯ ಸಮೃದ್ಧಾರ್ಥಾಃ ಕರ್ಮಸಿದ್ಧಿಭಿರುನ್ನತಾಃ ॥ ೫ ॥ ಪ್ರಿಯಾಖ್ಯಾನೋನ್ಮುಖಾಸ್ಸರ್ವೇ ಸರ್ವೇ ಯುದ್ಧಾಭಿನಂದಿನಃ । ಸರ್ವೇ ರಾಮಪ್ರತೀಕಾರೇ ನಿಶ್ಚಿತಾರ್ಥಾ ಮನಸ್ವಿನಃ ॥ ೬ ॥ ಪ್ಲವಮಾನಾಃ ಖಮಾಪ್ಲುತ್ಯ ತತಸ್ತೇ ಕಾನನೌಕಸಃ । ನಂದನೋಪಮಮಾಸೇದುರ್ವನಂ ದ್ರುಮಲತಾಯುತಂ ॥ ೭ ॥ ಯತ್ತನ್ಮಧುವನಂ ನಾಮ ಸುಗ್ರೀವಸ್ಯಾಽಭಿರಕ್ಷಿತಂ । ಅಧೃಷ್ಯಂ ಸರ್ವಭೂತಾನಾಂ ಸರ್ವಭೂತಮನೋಹರಂ ॥ ೮ ॥ ಯದ್ರಕ್ಷತಿ ಮಹಾವೀರ್ಯಸ್ಸದಾ ದಧಿಮುಖಃ ಕಪಿಃ । ಮಾತುಲಃ ಕಪಿಮುಖ್ಯಸ್ಯ ಸುಗ್ರೀವಸ್ಯ

ಸಿದ್ಧಿಯನ್ನು, ಪರಮಂ - ಉತ್ತಮವಾದ, ಯಶಶ್ಚ - ಕೀರ್ತಿಯನ್ನೂ ಸಹ, ಕರ್ತುಂ - ಸ್ಥಾಪನೆ ಮಾಡುವುದಕ್ಕೆ, ಸಮಾಧಾಯ - ಮನೋನಿಶ್ಚಯ ಮಾಡಿಕೊಂಡು, ಸಮೃದ್ಧಾರ್ಥಾಃ - ಸಂಪೂರ್ಣವಾದ ಪ್ರಯೋಜನವುಳ್ಳವರಾಗಿ, ಕರ್ಮಸಿದ್ಧಿಭಿಃ - ಕಾರ್ಯಸಿದ್ಧಿಗಳಿಂದ, ಉನ್ನತಾಃ - ಇತರರಿಗಿಂತಲೂ ಉತ್ಕೃಷ್ಟರಾಗಿ, ಸರ್ವೇ - ಎಲ್ಲರೂ, ಪ್ರಿಯಾ....ಖಾಃ - ಸೀತಾದರ್ಶನರೂಪವಾದ ಪ್ರಿಯ ಕಾರ್ಯವನ್ನು ಹೇಳುವುದರಲ್ಲಿ ಉದ್ಯುಕ್ತರಾಗಿ, ಸರ್ವೇ - ಸಮಸ್ತರೂ, ಯುದ್ಧಾಭಿನಂದಿನಃ - ಯುದ್ಧದಲ್ಲಿ ಸಂತೋಷವುಳ್ಳವರಾಗಿ, ಸರ್ವೇ - ಎಲ್ಲರೂ, ರಾಮ....ರೇ - ಶ್ರೀರಾಮನ ಪ್ರತ್ಯುಪಕಾರದಲ್ಲಿ, ನಿಶ್ಚಿತಾರ್ಥಾಃ - ನಿಶ್ಚೈಸಲ್ಪಟ್ಟ ಪ್ರಯೋಜನವುಳ್ಳವರೂ, ಮನಸ್ವಿನಃ - ಒಳ್ಳೆಯ ಮನಸ್ಸುಳ್ಳವರೂ ಆಗಿ, ಪುಪ್ಲುವುಃ - ಹಾರಿದರು. ॥ ೬ ॥ ತತಃ - ಬಳಿಕ, ಖಂ - ಅಂತರಿಕ್ಷವನ್ನು ಕುರಿತು, ಆಪ್ಲುತ್ಯ - ಹಾರಿ, ಪ್ಲವಮಾನಾಃ - ಹೋಗುತ್ತಿರುವ, ತೇಕಾನನೌಕಸಃ - ಆ ವಾನರರು, ನಂದನೋಪಮಂ - ನಂದನವನಸದೃಶವಾದ, ದ್ರುಮ....ತಂ - ವೃಕ್ಷಗಳಿಂದಲೂ, ಬಳ್ಳಿಗಳಿಂದಲೂ ಕೂಡಿದ, ವನಂ - ಮಧುವನವನ್ನು, ಆಸೇದುಃ - ಹೊಂದಿದರು, ॥ ೭ ॥ ಸುಗ್ರೀವಸ್ಯ - ಸುಗ್ರೀವನ ಸಂಬಂಧವಾದ, ಅಭಿರಕ್ಷಿತಂ - ಪಾಲಿಸಲ್ಪಟ್ಟ, ಸರ್ವ....ರಂ - ಸಮಸ್ತ ಜಂತುಗಳಿಂದಲೂ ರಮ್ಯವಾದ, ಮಧುವನಂನಾಮ - ಮಧುವನವೆಂದು ಪ್ರಸಿದ್ಧವಾದ, ಸರ್ವಭೂತಾನಾಂ - ಸಮಸ್ತ ಭೂತಗಳಿಗೂ, ಅಧೃಷ್ಯಂ - ತಿರಸ್ಕರಿಸಲಶಕ್ಯವಾದ, ತತ್ - ಪ್ರಸಿದ್ಧವಾದ ಆ ವನವು, ಯತ್ - ಯಾವುದೋ, ಕಪಿಮುಖ್ಯಸ್ಯ - ವಾನರೋತ್ತಮನಾದ, ಮಹಾತ್ಮನಃ - ಮಹಾ ಮನಸ್ವಿಯಾದ, ಸುಗ್ರೀವಸ್ಯ - ಸುಗ್ರೀವನಿಗೆ, ಮಾತುಲಃ - ಸೋದರಮಾವನಾದ, ಮಹಾವೀರ್ಯಃ - ಅತಿ ಪರಾಕ್ರಮಶಾಲಿಯಾದ,

---

ವನ್ನು ಸಾಧಿಸಿ ಮಹದ್ಯಶವನ್ನಾರ್ಜಿಸಲು ನಿಶ್ಚಯಿಸಿದರು. ಕಾರ್ಯಸಿದ್ಧಿಯನ್ನು ಪಡೆದಿರುವ ಆ ವಾನರರೆಲ್ಲರೂ, ಸೀತಾದೇವಿಯನ್ನು ಕಂಡುದರಿಂದ ಮಹೋತ್ಸಾಹದಿಂದ ಪರಮ ಸಂತುಷ್ಟರಾಗಿ ಆ ವೃತ್ತಾಂತವನ್ನು ಶ್ರೀರಾಮಮೂರ್ತಿಗೆ ಜಾಗ್ರತೆಯಾಗಿ ತಿಳಿಸಬೇಕೆಂದು ತವಕಪಡುತ್ತಿದ್ದರು. ಎಲ್ಲರೂ ಶ್ರೀರಾಮನಿಗೋಸ್ಕರ ಯುದ್ಧಮಾಡಲು ಉತ್ಸುಕರಾಗಿದ್ದರು. ಎಲ್ಲರೂ ಶ್ರೀರಾಮನಿಗೆ ಪ್ರತ್ಯುಪಕಾರವನ್ನು ಮಾಡುವುದರಲ್ಲಿ ನಿಶ್ಚಿತಮನಸ್ಕರಾಗಿದ್ದರು. ಇಂತಹ ಆ ವಾನರವೀರರೆಲ್ಲರೂ ಏಕಕಾಲದಲ್ಲಿಯೇ ಆಕಾಶಕ್ಕೆ ಹಾರಿ ಕಿಷ್ಕಿಂಧೆಗೆ ಹೊರಟು ಬರುತ್ತಿದ್ದರು. ॥ ೧-೬ ॥ ಹೀಗೆ ಅವರೆಲ್ಲರೂ ಹಾರಿಬರುತ್ತ ಕಿಷ್ಕಿಂಧೆಗೆ ಬಹು ಸಮೀಪದಲ್ಲಿರುವ ಸುಗ್ರೀವನ ಮಧುವನದ ಬಳಿಗೆ ಬಂದರು. ಆ ಮಧುವನವಾದರೋ ಸುಗ್ರೀವನಿಂದ ಚೆನ್ನಾಗಿ ರಕ್ಷಿಸಲ್ಪಡುತ್ತಿದ್ದಿತು. ಸಮಸ್ತ ಭೂತಗಳಿಗೂ ಅಪ್ರಧೃಷ್ಯವಾಗಿದ್ದಿತು. ಸರ್ವಭೂತಮನೋಹರವಾದ ಆ ಮಧುವನವನ್ನು ಸುಗ್ರೀವನ ಸೋದರಮಾವನಾದ ದಧಿ

ಮಹಾತ್ಮನಃ ॥೯॥ ತೇ ತದ್ವನಮುಪಾಗಮ್ಯ ಬಭೂವುಃ ಪರಮೋತ್ಕಟಾಃ । ವಾನರಾ ವಾನರೇಂದ್ರಸ್ಯ ಮನಃಕಾಂತತಮಂ ಮಹತ್ ॥ ೧೦ ॥ ತತಸ್ತೇ ವಾನರಾ ಹೃಷ್ಟಾ ದೃಷ್ಟ್ವಾ ಮಧುವನಂ ಮಹತ್ । ಕುಮಾರಮಭ್ಯಯಾಚಂತ ಮಧೂನಿ ಮಧುಪಿಂಗಳಾಃ ॥ ೧೧ ॥ ತತಃ ಕುಮಾರಸ್ತಾನ್ವೃದ್ಧಾನ್ ಜಾಂಬವತ್ಪ್ರಮುಖಾನ್ ಕಪೀನ್ । ಅನುಮಾನ್ಯ ದದೌ ತೇಷಾಂ ನಿಸರ್ಗಂ ಮಧುಭಕ್ಷಣೇ ॥ ೧೨ ॥ ತತಶ್ಚಾನುಮತಾಸ್ಸರ್ವೇ ಸಂಪ್ರಹೃಷ್ಟಾ ವನೌಕಸಃ । ಮುದಿತಾಃ ಪ್ರೇರಿತಾಶ್ಚಾಪಿ ಪ್ರನೃತ್ಯಂತೋಽ

ದಧಿಮುಖಃ - ದಧಿಮುಖನೆಂಬ, ಕಪಿಃ - ವಾನರನು, ಯತ್ - ಯಾವ ವನವನ್ನು, ರಕ್ಷತಿ - ಪರಿಪಾಲಿಸುತ್ತಿರುವನೋ, ತೇವಾನರಾಃ - ಆ ವಾನರರು, ಮನಃ....ಮಂ - ಮನಸ್ಸಿಗೆ ಬಹು ರಮ್ಯವಾಗಿರುವ, ಮಹತ್ - ದೊಡ್ಡದಾದ, ವಾನರೇಂದ್ರಸ್ಯ - ಸುಗ್ರೀವನ, ತದ್ವನಂ - ಆ ವನವನ್ನು, ಉಪಾಗಮ್ಯ - ಹೊಂದಿ, ಪರಮೋತ್ಕಟಾಃ - ಅತ್ಯುತ್ಕಂಠೆಯುಳ್ಳವರು, ಬಭೂವುಃ - ಆದರು.॥೯-೧೦॥ ತತಃ - ಬಳಿಕ, ಮಧುಪಿಂಗಳಾಃ - ಜೇನುತುಪ್ಪದಂತೆ ಪಿಂಗಳವರ್ಣವುಳ್ಳ, ತೇವಾನರಾಃ - ಆ ಕಪಿಗಳು, ಮಹತ್ - ದೊಡ್ಡದಾದ, ಮಧುವನಂ - ಮಧುವನವನ್ನು, ದೃಷ್ಟ್ವಾ - ಕಂಡು, ಹೃಷ್ಟಾಃ - ಸಂತೋಷಯುಕ್ತರಾಗಿ, ಕಮಾರಂ - ಅಂಗದನನ್ನು ಕುರಿತು, ಮಧೂನಿ - ಜೇನುಗಳನ್ನು, ಅಭ್ಯಯಾಚಂತ - ಬೇಡಿಕೊಂಡರು. ॥ ೧೧ ॥ ತತಃ - ಬಳಿಕ, ಕುಮಾರಃ - ಅಂಗದನು, ಜಾಂಬ...ಖಾನ್ - ಜಾಂಬವಂತನೇ ಮೊದಲಾದ, ವೃದ್ಧಾನ್-ಹಿರಿಯರಾದ, ತಾನ್‌ಕಪೀನ್-ಆ ವಾನರರನ್ನು, ಅನುಮಾನ್ಯ-ಸಮ್ಮತಿಸಿ, ತೇಷಾಂ - ಅವರಿಗೆ, ಮಧುಭಕ್ಷಣೇ - ಜೇನನ್ನು ಭುಜಿಸುವ ವಿಷಯದಲ್ಲಿ, ನಿಸರ್ಗಂ - ಅನುಜ್ಞೆಯನ್ನು, ದದೌ - ಕೊಟ್ಟನು. ॥೧೨॥ ತತಃ - ಬಳಿಕ, ಅನುಮತಾಃ - ಅನುಮೋದಿಸಲ್ಪಟ್ಟವರಾದಕಾರಣ, ಸಂಪ್ರಹೃಷ್ಟಾಃ - ಸಂತುಷ್ಟರಾಗಿ, ಮುದಿತಾಃ - ನಗುತ್ತಿರುವ, ಪ್ರೇರಿತಾಶ್ಚಾಪಿ - ಮಧುಭಕ್ಷಣದಲ್ಲಿಯೂ ಪ್ರೇರಿತರಾದ, ಸರ್ವೇ....ಶ್ಚ-ಎಲ್ಲಾ ಕಪಿಗಳೂ, ತತಃ-ಬಳಿಕ, ಪ್ರನೃತ್ಯಂತಃ-ಕುಣಿದಾಡುತ್ತಿರುವವರು, ಅಭವನ್ - ಆದರು. ॥ ೧೩ ॥ ಕೇಚಿತ್ - ಕೆಲವರು, ಗಾಯಂತಿ - ಗಾನ

ಮುಖನೆಂಬ ವಾನರನು ರಕ್ಷಿಸುತ್ತಿದ್ದನು. ಆ ದಧಿಮುಖನಾದರೋ ಮಹಾ ಪರಾಕ್ರಮಶಾಲಿಯು. ಅವನು ಯಾವಾಗಲೂ ಆ ವನದಲ್ಲಿಯೇ ಕಾವಲಿರುವನು. ಸುಗ್ರೀವರಾಜನ ಮನೋಹರವಾದ ಆ ಮಧುವನದ ಬಳಿಗೈದಿದಕೂಡಲೇ ಆ ವಾನರರೆಲ್ಲರೂ ಮಹಾ ಸಂತೋಷವನ್ನು ಹೊಂದಿದರು. ॥ ೭–೧೦ ॥ ಹೀಗೆ ಅವರೆಲ್ಲರೂ ಆ ಮಧುವನವನ್ನು ಕಂಡಕೂಡಲೇ ನಮಗೆ ಮಧುಪಾನಮಾಡಲು ಅಪ್ಪಣೆಯಾಗಬೇಕೆಂದು ಯುವರಾಜನಾದ ಅಂಗದನನ್ನು ಪ್ರಾರ್ಥಿಸಿದರು. ಆಗ ಅಂಗದನಾದರೋ ಜಾಂಬವಂತನೇ ಮೊದಲಾದ ವೃದ್ಧರೊಡನೆ ಚೆನ್ನಾಗಿ ಆಲೋಚಿಸಿ, ಅವರೆಲ್ಲರ ಸಮ್ಮತಿಯಿಂದ ಮಧುಪಾನಮಾಡಲು ಆ ವಾನರರೆಲ್ಲರಿಗೂ ಅನುಜ್ಞೆಯನ್ನಿತ್ತನು. ಸೀತಾದೇವಿಯ ವೃತ್ತಾಂತವನ್ನು ತಿಳಿದು ಬಂದಿದ್ದುದರಿಂದ ಪರಮ ಸಂತೋಷಭರಿತರಾಗಿದ್ದ ಆ ವಾನರವೀರರೆಲ್ಲರೂ ಅಂಗದನಿಂದ ಮಧುವನ್ನು ಕುಡಿಯಲು ಅನುಜ್ಞೆಯನ್ನುಪಡೆದು ತೃಪ್ತಿಯಾಗಿ ಮಧುಪಾನಮಾಡಲು ಪ್ರೇರೇಪಿತರಾಗಿ ಸಂತೋಷಾಧಿಕ್ಯದಿಂದ ನಾನಾವಿಧ ಚೇಷ್ಟೆಗಳನ್ನು ಮಾಡಲುಪಕ್ರಮಿಸಿದರು. ಕೆಲವರು ಹಾಡುತ್ತಿದ್ದರು. ಕೆಲವರು ತಲೆಕೆಳಗಾಗಿ ಲಾಗಹಾಕುತ್ತಿದ್ದರು. ಕೆಲವರು ಕುಣಿಯುತ್ತಿದ್ದರು ; ಕೆಲವರು

ಭವಂಸ್ತತಃ ॥ ೧೩ ॥ ಗಾಯಂತಿ ಕೇಚಿತ್ಪ್ರಣಮಂತಿ ಕೇಚಿನ್ನೃತ್ಯಂತಿ ಕೇಚಿತ್ಪ್ರಹಸಂತಿ ಕೇಚಿತ್ । ಪತಂತಿ ಕೇಚಿದ್ವಿಚರಂತಿ ಕೇಚಿತ್ ಪ್ಲವಂತಿ ಕೇಚಿತ್ ಪ್ರಲಪಂತಿ ಕೇಚಿತ್ ॥ ೧೪ ॥ ಪರಸ್ಪರಂ ಕೇಚಿದುಪಾಶ್ರಯಂತೇ ಪರಸ್ಪರಂ ಕೇಚಿದುಪಾಕ್ರಮಂತೇ । ಪರಸ್ಪರಂ ಕೇಚಿದುಪಬ್ರುವಂತೇ ಪರಸ್ಪರಂ ಕೇಚಿದುಪಾರಮಂತೇ ॥೧೫॥ ದ್ರುಮಾದ್ದ್ರುಮಂ ಕೇಚಿದಭಿದ್ರವಂತೇ ಕ್ಷಿತೌ ನಗಾಗ್ರಾನ್ನಿಪತಂತಿ ಕೇಚಿತ್ । ಮಹೀತಲಾತ್ಕೇಚಿದುದೀರ್ಣವೇಗಾ ಮಹಾದ್ರುಮಾಗ್ರಾಣ್ಯಭಿಸಂಪತಂತಿ ॥ ೧೬ ॥ ಗಾಯಂತಮನ್ಯಃ ಪ್ರಹಸನ್ನುಪೈತಿ ಹಸಂತಮನ್ಯಃ ಪ್ರರುದನ್ನುಪೈತಿ । ರುದಂತಮನ್ಯಃ

ಮಾಡುತ್ತಿದ್ದರು, ಕೇಚಿತ್ - ಇನ್ನು ಕೆಲವರು, ಪ್ರಣಮಂತಿ - ಕೈಮುಗಿದರು, ಕೇಚಿತ್ - ಮತ್ತೆ ಕೆಲವರು, ನೃತ್ಯಂತಿ - ನರ್ತನ ಮಾಡಿದರು, ಕೇಚಿತ್ - ಕೆಲವರು, ಪ್ರಹಸಂತಿ - ನಗುತ್ತಿದ್ದರು, ಕೇಚಿತ್-ಕೆಲವರು, ಪತಂತಿ-ಬೀಳುತ್ತಿದ್ದರು, ಕೇಚಿತ್-ಕೆಲವರು, ವಿಚರಂತಿ-ತಿರುಗುತ್ತಿದ್ದರು, ಕೇಚಿತ್ - ಕೆಲವರು, ಪ್ಲವಂತಿ - ಹಾರಿದರು, ಕೇಚಿತ್ - ಕೆಲವರು, ಪ್ರಲಪಂತಿ - ಕೂಗಿದರು. ॥ ೧೪ ॥ ಕೇಚಿತ್ - ಕೆಲವರು, ಪರಸ್ಪರಂ - ಒಬ್ಬರಿಗೊಬ್ಬರು, ಉಪಾಶ್ರಯಂತೇ - ಅಪ್ಪಿಕೊಂಡರು, ಕೇಚಿತ್ - ಕೆಲವರು, ಪರಸ್ಪರಂ - ಅನ್ಯೋನ್ಯವಾಗಿ, ಉಪಾಕ್ರಮಂತೇ - ಸೆಳದುಕೊಂಡರು, ಕೇಚಿತ್-ಕೆಲವರು, ಪರಸ್ಪರಂ-ಅನ್ಯೋನ್ಯವಾಗಿ, ಉಪಬ್ರುವಂತೇ-ಏಕಾಂತವಾಗಿ ಮಾತನಾಡಿದರು, ಕೇಚಿತ್ - ಕೆಲವರು, ಪರಸ್ಪರಂ - ಒಬ್ಬರಿಗೊಬ್ಬರು, ಉಪಾರಮಂತೇ - ವಿರಾಮವನ್ನೈದಿದರು. ॥ ೧೫ ॥ ಕೇಚಿತ್ - ಕೆಲವರು, ದ್ರುಮಾತ್ - ವೃಕ್ಷದಿಂದ, ದ್ರುಮಂ - ಮತ್ತೊಂದು ಗಿಡವನ್ನು ಕುರಿತು, ಅಭಿದ್ರವಂತೇ - ಓಡಿಹೋದರು, ಕೇಚಿತ್ - ಕೆಲವರು, ನಗಾಗ್ರಾತ್ - ಬೆಟ್ಟದ ತುದಿಯಿಂದ, ಕ್ಷಿತೌ - ನೆಲದಲ್ಲಿ, ನಿಪತಂತಿ - ಬೀಳುತ್ತಿದ್ದರು, ಕೇಚಿತ್ - ಕೆಲವರು, ಮಹೀತಲಾತ್ - ಭೂಪ್ರದೇಶದಿಂದ, ಉದೀ....ತಃ - ಉತ್ಪನ್ನವಾದ ವೇಗವುಳ್ಳವರಾಗಿ, ಮಹಾ....ಣಿ - ದೊಡ್ಡ ಮರಗಳ ಕೊಂಬೆಗಳಿಗೆ, ಅಭಿಸಂಪತಂತಿ - ಹಾರಿದರು. ॥ ೧೬ ॥ ಗಾಯಂತಂ - ಗಾನಮಾಡುತ್ತಿರುವ ವಾನರನನ್ನು, ಅನ್ಯಃ - ಮತ್ತೊಬ್ಬನು, ಪ್ರಹಸನ್ - ನಗುತ್ತ, ಉಪೈತಿ - ಹೊಂದಿದನು, ಹಸಂತಂ - ನಗುತ್ತಿರುವವನನ್ನು, ಅನ್ಯಃ-ಮತ್ತೊಬ್ಬನು, ಪ್ರರುದನ್-ಅಳುತ್ತಿರುವವನಾಗಿ, ಉಪೈತಿ-ಹೊಂದಿದನು, ರುದಂತಂ - ಅಳುತ್ತಿರುವ ವಾನರನನ್ನು, ಅನ್ಯಃ-ಮತ್ತೊಬ್ಬನು, ಪ್ರಣುದನ್ - ಗಟ್ಟಿಯಾಗಿ ಕೂಗುತ್ತ,

---

ಗಟ್ಟಿಯಾಗಿ ಪಕಪಕನೆ ನಗುತ್ತಿದ್ದರು ; ಕೆಲವರು ಹಾರಿಬೀಳುತ್ತಿದ್ದರು. ಕೆಲವರು ಅಮಲೇರಿದವರಂತೆ ಆಲುತ್ತ ತಿರುಗಲಾರಂಭಿಸಿದರು ; ಕೆಲವರು ಮೇಲಕ್ಕೆ ನೆಗೆಯುತ್ತಿದ್ದರು. ಕೆಲವರು ಗಟ್ಟಿಯಾಗಿ ಕೂಗುತ್ತಿದ್ದರು. ಕೆಲವರು ಒಬ್ಬರನ್ನೊಬ್ಬರು ಅಪ್ಪಿಕೊಳ್ಳುತ್ತಿದ್ದರು. ಕೆಲವರು ವಿಲಾಸದಿಂದ ಒಬ್ಬರನ್ನೊಬ್ಬರು ಹಿಡಿದುಕೊಳ್ಳುತ್ತಿದ್ದರು. ಕೆಲವರು ಒಬ್ಬರೊಡನೊಬ್ಬರು ಅತಿ ರಹಸ್ಯವಾಗಿ ಪಿಸುಗುಟ್ಟುತ್ತಿದ್ದರು. ಮತ್ತೆ ಕೆಲವರು ಉಪರಮಿಸುತ್ತಿದ್ದರು. ॥ ೧೧–೧೫ ॥ ಕೆಲವರು ಗಿಡದಿಂದ ಗಿಡಕ್ಕೆ ಹಾರುತ್ತಿದ್ದರು ; ಕೆಲವರು ಮರದ ತುಟ್ಟತುದಿಗಳಿಂದ ನೆಲಕ್ಕೆ ಧುಮುಕುತ್ತಿದ್ದರು ; ಕೆಲವರು ಮಹಾ ವೇಗಶಾಲಿಗಳಾದ ವಾನರವೀರರು ನೆಲದಿಂದಲೇ ದೊಡ್ಡ ದೊಡ್ಡ ವೃಕ್ಷಗಳ ತುದಿಗಳಿಗೆ ನೆಗೆಯುತ್ತಿದ್ದರು ; ಹಾಡುತ್ತಿದ್ದ ಒಬ್ಬ ವಾನರನ ಮೇಲೆ ಮತ್ತೊಬ್ಬನು ನಗುತ್ತ ಬೀಳುವನು ; ನಗುತ್ತಿದ್ದವನಮೇಲೆ ಮತ್ತೊಬ್ಬನು ಅಳುತ್ತ ಬೀಳುವನು; ಅಳುತ್ತಿರುವ ಆ ವಾನರನಮೇಲೆ ಮತ್ತೊಬ್ಬನು ಕೂಗುತ್ತ ಬೀಳುವನು;

ಪ್ರಣುದನ್ನುಪೈತಿ ನುದಂತಮನ್ಯಃ ಪ್ರಣುದನ್ನುಪೈತಿ ॥ ೧೭ ॥ ಸಮಾಕುಲಂ ತತ್ಕಪಿ ಸೈನ್ಯಮಾಸೀನ್ಮಧುಪ್ರಪಾನೋತ್ಕಟಸತ್ತ್ವಚೇಷ್ಟಂ । ನಚಾತ್ರ ಕಶ್ಚಿನ್ನಬಭೂವ ಮತ್ತೋ ನಚಾತ್ರ ಕಶ್ಚಿನ್ನಬಭೂವ ತೃಪ್ತಃ ॥ ೧೮ ॥ ತತೋ ವನಂ ತತ್ಪರಿಭಕ್ಷ್ಯಮಾಣಂ ದ್ರುಮಾಂಶ್ಚ ವಿಧ್ವಂಸಿತ ಪತ್ರಪುಷ್ಪಾನ್ । ಸಮೀಕ್ಷ್ಯ ಕೋಪಾದ್ದಧಿವಕ್ತ್ರನಾಮಾ ನಿವಾರಯಾಮಾಸ ಕಪಿಃ ಕಪೀಂಸ್ತಾನ್ ॥ ೧೯ ॥ ಸತೈಃ ಪ್ರವೃದ್ಧೈಃ ಪರಿಭರ್ತ್ಸ್ಯಮಾನೋ ವನಸ್ಯ ಗೋಪ್ತಾ ಹರಿವೀರವೃದ್ಧಃ । ಚಕಾರ ಭೂಯೋ ಮತಿಮುಗ್ರತೇಜಾ ವನಸ್ಯ ರಕ್ಷಾಂ ಪ್ರತಿವಾನರೇಭ್ಯಃ ॥ ೨೦ ॥ ಉವಾಚ ಕಾಂಶ್ಚಿತ್ಪರುಷಾಣಿ ಧೃಷ್ಟಮಸಕ್ತಮ

ಉಪೈತಿ - ಬಂದನು, ನುದಂತಂ - ಕೂಗುತ್ತಿರುವವನನ್ನು, ಅನ್ಯಃ - ಮತ್ತೋರ್ವನು, ಪ್ರಣದನ್ - ಗಟ್ಟಿಯಾಗಿ ಧ್ವನಿಗೈಯುತ್ತ, ಉಪೈತಿ-ಬಂದನು. ॥೧೭॥ ಮಧು....ಷ್ಟಂ-ಮದ್ಯವನ್ನು ಹೆಚ್ಚಾಗಿ ಕುಡಿದು ಬಹಳವಾಗಿ ಆಲುತ್ತಿರುವ, ತತ್ಕಪಿಸೈನ್ಯಂ - ಆ ಕಪಿಸೇನೆಯು, ಸಮಾಕುಲಂ - ವ್ಯಾಕುಲವಾದುದು, ಆಸೀತ್ - ಆಯಿತು, ಅತ್ರ - ಈ ಕಪಿಸೈನ್ಯದಲ್ಲಿ, ಕಶ್ಚಿತ್ - ಒಬ್ಬನೂ, ಮತ್ತಃ - ಮದವೇರಿದವನು, ನಬಭೂವೇತಿನ - ಇರಲಿಲ್ಲವೆಂಬುವದಿಲ್ಲ, ಅತ್ರ - ಸೇನೆಯಲ್ಲಿ, ತೃಪ್ತಶ್ಚ - ತೃಪ್ತಿ ಹೊಂದದವನು, ನಬಭೂವೇತಿನ - ಆಗಿರಲಿಲ್ಲವೆಂಬುದಿಲ್ಲ. ॥ ೧೮ ॥ ತತಃ - ಬಳಿಕ, ದಧಿವಕ್ತ್ರನಾಮಾ - ದಧಿಮುಖನೆಂಬ ಹೆಸರುಳ್ಳ, ಕಪಿಃ - ವಾನರನು, ಪರಿಭಕ್ಷ್ಯಮಾಣಂ - ಭುಜಿಸಲ್ಪಡುತ್ತಿರುವ, ತದ್ವನಂ - ಆ ವನವನ್ನೂ, ವಿಧ್ವಂ....ಷ್ಪಾನ್ - ನಾಶಗೊಳಿಸಲ್ಪಟ್ಟ ಎಲೆಗಳೂ ಹೂಗಳೂ ಉಳ್ಳ, ದ್ರುಮಾಂಶ್ಚ - ವೃಕ್ಷಗಳನ್ನೂ, ಸಮೀಕ್ಷ್ಯ - ಕಂಡು, ಕೋಪಾತ್ - ಕ್ರೋಧದಿಂದ, ತಾನ್‌ಕಪೀನ್ - ಆ ವಾನರರನ್ನು, ನಿವಾರಯಾಮಾಸ - ತಡೆದನು. ॥ ೧೯ ॥ ಹರಿ....ದ್ಧಃ - ಕಪಿಶೂರರಲ್ಲಿ ವೃದ್ಧನಾದ, ಉಗ್ರತೇಜಾಃ - ಭಯಂಕರವಾದ ತೇಜಸ್ಸುಳ್ಳ, ವನಸ್ಯ - ಮಧುವನಕ್ಕೆ, ಗೋಪ್ತಾ - ರಕ್ಷಕನಾದ, ಸಃ - ಆ ದಧಿಮುಖನು, ಪ್ರವೃದ್ಧೈಃ - ಬಲಾಢ್ಯರಾಗಿರುವ, ತೈಃ - ಆ ಕಪಿಗಳಿಂದ, ಪರಿಭರ್ತ್ಸ್ಯಮಾನಃ - ಹೆದರಿಸಲ್ಪಟ್ಟವನಾಗಿ, ವಾನರೇಭ್ಯಃ - ಕಪಿಗಳ ದೆಸೆಯಿಂದ, ವನಸ್ಯ - ಮಧುವನದ, ರಕ್ಷಾಂಪ್ರತಿ - ಸಂರಕ್ಷಣೆಯನ್ನು ಕುರಿತು, ಭೂಯಃ - ಮತ್ತೂ, ಮತಿಂ - ಬುದ್ಧಿಯನ್ನು, ಚಕಾರ - ಮಾಡಿದನು. ॥ ೨೦ ॥

ಮತ್ತೊಬ್ಬನು ನಗುತ್ತಿರುವ ಆ ವಾನರನಮೇಲೆ ತಾನೂ ಗಟ್ಟಿಯಾಗಿ ನಗುತ್ತ ಮೇಲೆ ಬೀಳುವನು; ಒಬ್ಬನು ಗಟ್ಟಿಯಾಗಿ ಅಳುತ್ತಿರಲು, ಮತ್ತೊಬ್ಬನು ಇನ್ನೂ ಗಟ್ಟಿಯಾಗಿ ಅಳುತ್ತ ಅವನಮೇಲೆ ಬೀಳುವನು. ಹೀಗೆ ಆ ವಾನರಸೈನ್ಯವೆಲ್ಲವೂ ಮಧುಪಾನಮಾಡಿದುದರಿಂದ ಮೈಮರೆತು ಸ್ವೇಚ್ಛೆಯಾಗಿ ವಿವಿಧ ಚೇಷ್ಟೆಗಳನ್ನು ಮಾಡುತ್ತ ಸಂತೋಷಸಂಭ್ರಮಗಳಿಂದ ಕೂಡಿದುದಾಯಿತು. ಹೀಗೆ ಮಧುಪಾನಮಾಡಿದವರಲ್ಲಿ ಮತ್ತನಾಗದವನೂ, ತೃಪ್ತನಾಗದವನೂ ಯಾವನೂ ಇರಲಿಲ್ಲ. ಎಲ್ಲರೂ ಕುಡಿದು ತೃಪ್ತರಾಗಿ ಮದವೇರಿ ಆಲುತ್ತಿದ್ದರು. ॥ ೧೭–೧೮ ॥ ಆ ಸಮಯದಲ್ಲಿ ಆ ಮಧುವನವನ್ನು ರಕ್ಷಿಸುತ್ತಿದ್ದ ದಧಿಮುಖನು ಜಾಂಬವದಾದಿ ವಾನರರು ಆ ವನಕ್ಕೆನುಗ್ಗಿ ಜೇನನ್ನೆಲ್ಲಾ ಕುಡಿದು, ಫಲವೃಕ್ಷಗಳ ಹೂಕಾಯಿಗಳನ್ನೂ, ಎಲೆಗಳನ್ನೂ ಕಿತ್ತುಹಾಕಿ ಹಾಳುಮಾಡುತ್ತಿರುವುದನ್ನು ನೋಡಿ ಬಹಳವಾಗಿ ಕೋಪಗೊಂಡು, "ಎಲೈ! ಹೀಗೆ ನೀವು ವನವನ್ನು ಹಾಳುಮಾಡುವುದು ತರವಲ್ಲವು. ಈಗಲೇ ಹೊರಟುಹೋಗಿರಿ" ಎಂದನು. ಆಗಲಾ ವಾನರರೆಲ್ಲರೂ ದಧಿಮುಖನ ಮಾತನ್ನು ಕೇಳಿಯೂ

ನ್ಯಾಂಶ್ಚ ತಲೈರ್ಜಘಾನ । ಸಮೇತ್ಯ ಕೈಶ್ಚಿತ್ಕಲಹಂ ಚಕಾರ ತಥೈವ ಸಾಮ್ನೋಪ ಜಗಾಮ ಕಾಂಶ್ಚಿತ್ ॥೨೧॥ ಸತ್ತೈರ್ಮದಾತ್ಸಂಪರಿವಾರ್ಯ ವಾಕ್ಯೈರ್ಬಲಾಚ್ಚ ತೇನ ಪ್ರತಿವಾರ್ಯಮಾಣೈಃ । ಪ್ರಧರ್ಷಿತಸ್ತ್ಯಕ್ತಭಯೈಸ್ಸಮೇತ್ಯ ಪ್ರಕೃಷ್ಯತೇ ಚಾಪ್ಯನ ವೇಕ್ಷ್ಯ ದೋಷಂ ॥ ೨೨ ॥

ನಖೈಸ್ತು ದಂತೋ ದಶನೈರ್ದಶಂತ
ಸ್ತಲೈಶ್ಚ ಪಾದೈಶ್ಚ ಸಮಾಪಯಂತಃ ।

ಕಾಂಶ್ಚಿತ್ - ಕೆಲವರನ್ನು ಕುರಿತು, ಧೃಷ್ಟಂ - ಧೂರ್ತತೆಯಿಂದ, ಪರುಷಾಣಿ - ಕಠಿನೋಕ್ತಿಗಳನ್ನು, ಉವಾಚ - ಹೇಳಿದನು, ಅನ್ಯಾಂಶ್ಚ - ಮತ್ತೆ ಕೆಲವರನ್ನು, ತಲೈಃ - ಅಂಗೈಗಳಿಂದ, ಅಸಕ್ತಂ - ಗೊತ್ತುಗುರಿಯಿಲ್ಲದೆ, ಜಘಾನ - ಹೊಡೆದನು, ಕೈಶ್ಚಿತ್ - ಕೆಲವರೊಡನೆ, ಸಮೇತ್ಯ - ಸೇರಿ, ಕಲಹಂ - ಜಗಳವನ್ನು, ಚಕಾರ - ಮಾಡಿದನು, ತಥೈವ - ಹಾಗೆಯೆ, ಸಾಮ್ನಾ - ಸಾಮೋಪಾಯ ದಿಂದ, ಕಾಂಶ್ಚಿತ್ - ಕೆಲವರನ್ನು, ಉಪಜಗಾಮ - ಹೊಂದಿದನು. ॥ ೨೧ ॥ ತೇನ - ಆ ದಧಿಮುಖ ನಿಂದ, ಬಲಾತ್ - ಬಲಾತ್ಕಾರದಿಂದ, ಪ್ರತಿವಾರ್ಯಮಾಣೈಃ - ತಡೆಪಡಿಸಲ್ಪಟ್ಟ, ತ್ಯಕ್ತಭಯೈಃ - ಬಿಡಲ್ಪಟ್ಟ ಭಯವುಳ್ಳ, ತೈಃ-ಆ ಅಂಗದಾದಿಗಳಿಂದ, ಮದಾತ್-ಮತ್ತತೆಯಿಂದ, ಸಂಪರಿವಾರ್ಯ- ಸುತ್ತಿಕೊಂಡು, ವಾಕ್ಯೈಃ - ಮಾತುಗಳಿಂದ, ಸಮೇತ್ಯ-ಗುಂಪುಸೇರಿ, ಪ್ರಧರ್ಷಿತಃ - ತಿರಸ್ಕರಿಸಲ್ಪಟ್ಟ, ಸಃ - ಆ ದಧಿಮುಖನು, ದೋಷಂ - ದೋಷವನ್ನು, ಅನವೇಕ್ಷ್ಯ - ನೋಡದೆ, ಪ್ರಕೃಷ್ಯತೇಚ - ಸೆಳೆಯಲ್ಪಟ್ಟನು. ॥ ೨೨ ॥ ಸಮಗ್ರಾಃಕಪಯಃ - ಎಲ್ಲಾ ವಾನರರೂ, ಮದಾತ್ - ಕೊಬ್ಬಿನಿಂದ, ತಂಕಪಿಂ - ಆ ದಧಿಮುಖನನ್ನು, ನಖೈಃ - ಉಗುರುಗಳಿಂದ, ತುದಂತಃ - ಪರಚುವವರಾಗಿ, ದಶನೈಃ - ಹಲ್ಲುಗಳಿಂದ, ದಶಂತಃ - ಕಚ್ಚುತ್ತಿರುವರಾಗಿ, ತಲೈಶ್ಚ - ಅಂಗೈಗಳಿಂದಲೂ, ಪಾದೈಶ್ಚ -

---

ಲಕ್ಷ್ಯಕ್ಕೆ ತಂದುಕೊಳ್ಳದೆ ತಮ್ಮ ಮನಬಂದಂತೆ ಚೇಷ್ಟೆಗಳನ್ನು ಮಾಡುತ್ತಿದ್ದರು. ಇದನ್ನು ನೋಡಿದೊಡನೆಯೇ ಆ ದಧಿಮುಖನಿಗೆ ಬಹಳ ಕೋಪಬಂದಿತು. ಅವನು ಆ ವನಕ್ಕೆ ರಕ್ಷಕನು. ಮಹಾ ಶೌರ್ಯವಂತನು ; ವಾನರೋತ್ತಮನು ; ಮಹಾ ಭಯಂಕರ ಪರಾಕ್ರ ಮಿಯು. ಇಂತಹನನ್ನೇ ಅವರು ಲಕ್ಷ್ಯವಿಡದೆ ತಿರಸ್ಕರಿಸಿಬಿಟ್ಟರು. ಇದರಿಂದ ಮಹಾ ಕ್ರುದ್ಧನಾದ ಆ ದಧಿಮುಖನು ಮಧುಪಾನಮತ್ತರಾದ ಆ ವಾನರರು ವನವನ್ನು ಹಾಳುಮಾಡ ದಂತೆ ಅದನ್ನು ರಕ್ಷಿಸಬೇಕೆಂದು ಯೋಚಿಸಿ ಕೆಲವರು ವಾನರರನ್ನು ಬಹು ಕಠಿನವಾಕ್ಯಗಳಿಂದ ಗದರಿಸಿದನು. ಕೆಲವರನ್ನು ಅಂಗೈಯಿಂದ ಅಪ್ಪಳಿಸಿಹೊಡೆದನು ; ಕೆಲವರೊಡನೆ ವ್ಯಾಜ್ಯ ಮಾಡಿದನು ; ಕೆಲವರಿಗೆ ಒಳ್ಳೆಯಮಾತುಗಳಿಂದ, “ ಹೀಗೆ ಮಾಡಬೇಡಿ ” ರೆಂದು ಹೇಳಿದನು. ಇಷ್ಟಾದರೂ ಯಾರೂ ಅವನನ್ನು ಲಕ್ಷ್ಯವಿಡಲಿಲ್ಲವು. ಇಷ್ಟೆಯಲ್ಲದೆ ಅಂಗದಾದಿ ವಾನರ ವೀರರೆಲ್ಲರೂ ಕೊಂಚವೂ ಭಯಪಡದೆ ಮಧುಪಾನಮತ್ತರಾಗಿ, ನೈಮರೆತು ಮತ್ತರಾಗಿ ಎಲ್ಲರೂ ಒಟ್ಟುಗೂಡಿ, ಆ ದಧಿಮುಖನನ್ನು ವಿಧವಿಧವಾಗಿ ಬೈದು, ಅತ್ತಿತ್ತ ಎಳೆದಾಡಿದರು ; ಅವನನ್ನು ಉಗುರುಗಳಿಂದ ಪರಚಿ ಹಲ್ಲುಗಳಿಂದ ಕಡಿದು, ಮುಷ್ಟಿಗಳಿಂದ ಹೊಡೆದು, ಕಾಲು ಗಳಿಂದ ಒದೆದು, ವಿಧವಿಧವಾಗಿ ಹಿಂಸಿಸಿದರು. ಆ ಮಧುವನದಲ್ಲಿದ್ದ ಮಧುವೆಲ್ಲವನ್ನೂ

ಮದಾತ್ಕಪಿಂ ತಂ ಕಪಯಸ್ಸಮಗ್ರಾ
ಮಹಾವನಂ ನಿರ್ವಿಷಯಂಚ ಚಕ್ರುಃ ॥ ೨೩ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಷಷ್ಟಿತಮಸ್ಸರ್ಗಃ

ಕಾಲುಗಳಿಂದಲೂ, ಸಮಾಪಯಂತಃ - ಮುಗಿಸಬೇಕೆಂದಿಚ್ಛಿಸಿದವರಾಗಿ, ಮಹಾವನಂಚ - ದೊಡ್ಡ ವನವನ್ನೂ ಸಹ, ನಿರ್ವಿಷಯಂ-ಮಧುಫಲಗಳೆಂಬ ವಿಷಯಗಳಿಲ್ಲದ್ದನ್ನಾಗಿ, ಚಕ್ರುಃ-ಮಾಡಿದರು.॥೨೩॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಏಕಷಷ್ಟಿತಮಸ್ಸರ್ಗಃ

ನಿಶ್ಶೇಷವಾಗಿ ಕುಡಿದುಬಿಟ್ಟರು. ಅಲ್ಲಿದ್ದ ಫಲವೃಕ್ಷಗಳೇ ಮೊದಲಾದವುಗಳೆಲ್ಲವನ್ನೂ ಹಾಳು ಮಾಡಿದರು. ಆ ಮಹಾ ವನದಲ್ಲಿ ಒಂದೂ ಇಲ್ಲದಂತೆ ಮಾಡಿಬಿಟ್ಟರು. ॥ ೧೯—೨೩ ॥

ಇಂತಿದು ಹನುಮದಾದಿ ವಾನರಕೃತ ದಧಿಮುಖ ತಿರಸ್ಕಾರಪೂರ್ವಕ ಮಧುಪಾನ ವೃತ್ತಾಂತವೆಂಬ ಅರವತ್ತೊಂದನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ದ್ವಿಷಷ್ಠಿತಮಸ್ಸರ್ಗಃ

ತಾನುವಾಚ ಹರಿಶ್ರೇಷ್ಠೋ ಹನೂಮಾನ್ ವಾನರರ್ಷಭಃ । " ಅವ್ಯಗ್ರ ಮನಸೋ ಯೂಯಂ ಮಧು ಸೇವತ ವಾನರಾಃ ! ॥ ೧ ॥ ಅಹಮಾವಾರಯಿಷ್ಯಾಮಿ ಯುಷ್ಮಾಕಂ ಪರಿಪಂಥಿನಃ " । ಶ್ರುತ್ವಾ ಹನುಮತೋ ವಾಕ್ಯಂ ಹರೀಣಾಂ ಪ್ರವ ರೋಽಂಗದಃ ॥ ೨ ॥ ಪ್ರತ್ಯುವಾಚ ಪ್ರಸನ್ನಾತ್ಮಾ ಪಿಬಂತು ಹರಯೋ ಮಧು । ಅವಶ್ಯಂ ಕೃತಕಾರ್ಯಸ್ಯ ವಾಕ್ಯಂ ಹನುಮತೋ ಮಯಾ ॥ ೩ ॥ ಅಕಾರ್ಯ ಮಪಿ ಕರ್ತವ್ಯಂ ಕಿಮಂಗ ಪುನರೀದೃಶಂ " । ಅಂಗದಸ್ಯ ಮುಖಾಚ್ಛ್ರುತ್ವಾ ವಚನಂ

ಹೇ ವಾನರಾಃ - ಎಲೈ ಕಪಿಗಳಿರಾ, ಯೂಯಂ - ನೀವು, ಅವ್ಯಗ್ರಮನಸಃ - ನಿಶ್ಚಲ ಮನಸ್ಸುಳ್ಳವರಾಗಿ, ಮಧು - ಜೇನನ್ನು, ಸೇವತ - ಸೇವಿಸಿರಿ, ಯುಷ್ಮಾಕಂ - ನಿಮ್ಮ, ಪರಿಪಂಥಿನಃ - ಹಗೆಯರನ್ನು, ಅಹಂ - ನಾನು, ಅವಾರಯಿಷ್ಯಾಮಿ - ನಿವಾರಿಸುವೆನು, ಇತಿ - ಇಂತೆಂದು, ಹರಿಶ್ರೇಷ್ಠಃ - ಕಪಿವೀರನೂ, ವಾನರರ್ಷಭಃ - ಕಪಿವರನೂ ಆದ, ಹನೂಮಾನ್ - ಆಂಜನೇಯನು, ತಾನ್ - ಆ ಅಂಗದಾದಿ ವಾನರರನ್ನು ಕುರಿತು, ಉವಾಚ - ಹೇಳಿದನು. ॥ ೧ ॥ ಹರೀಣಾಂ - ಕಪಿಗಳಲ್ಲಿ, ಪ್ರವರಃ - ಶ್ರೇಷ್ಠನಾದ, ಅಂಗದಃ - ಅಂಗದನು, ಹನುಮತಃ - ಆಂಜನೇಯನ, ವಾಕ್ಯಂ - ವಚನವನ್ನು, ಶ್ರುತ್ವಾ - ಕೇಳಿ, ಪ್ರಸನ್ನಾತ್ಮಾ - ಪ್ರಸನ್ನವಾದ ಮನಸ್ಸುಳ್ಳವನಾಗಿ, (ಎಲೈ ಕಪಿಗಳಿರಾ,) ಕೃತಕಾರ್ಯಸ್ಯ - ಕಾರ್ಯವನ್ನು ಮಾಡಿಕೊಂಡು ಬಂದಿರುವ, ಹನುಮತಃ - ಆಂಜನೇಯನ, ವಾಕ್ಯಂ - ವಚನವು, ಅಕಾರ್ಯಮಪಿ - ಮಾಡಲಯುಕ್ತವಾದರೂ, ಅವಶ್ಯಂ - ಅವಶ್ಯವಾಗಿ, ಮಯಾ - ನನ್ನಿಂದ, ಕರ್ತವ್ಯಂ - ಮಾಡತಕ್ಕದು, ಈದೃಶಂಪುನಃ - ಇಂತಹ ಕೆಲಸವಾದರೆ, ಕಿಂ - ಏನು ಹೇಳತಕ್ಕದು, ಹರಯಃ - ಕಪಿಗಳು, ಮಧು - ಮದ್ಯವನ್ನು, ಪಿಬಂತು - ಪಾನಮಾಡಲಿ, ಇತಿ - ಇಂತೆಂದು, ಪ್ರತ್ಯುವಾಚ - ಹೇಳಿದನು. ॥ ೨-೩ ॥ ವಾನರರ್ಷಭಾಃ - ಕಪಿಶ್ರೇಷ್ಠರಾದ, ವಾನರಾಃ-ಕಪಿಗಳು, ಅಂಗದಸ್ಯ-ಅಂಗದನ, ಮುಖಾತ್-ಮುಖದಿಂದ ಬಂದ, ವಚನಂ-ಮಾತನ್ನು,

---

ಆಗ ವಾನರಶ್ರೇಷ್ಠನಾದ ಆಂಜನೇಯನು ಅಂಗದಾದಿ ವಾನರರೆಲ್ಲರನ್ನೂ ನೋಡಿ, " ಎಲೈ ವಾನರರಿರಾ ! ನೀವೆಷ್ಟುಮಾತ್ರಕ್ಕೂ ಭಯಪಡಬೇಡಿರಿ. ನಿಮಗೆ ಇಷ್ಟಬಂದಂತೆ ಮಧುವನ್ನು ಕುಡಿಯಿರಿ. ನಿಮಗೆ ವಿರೋಧಿಗಳಾಗಿ ಬರುವವರನ್ನು ನಿಮ್ಮಮೇಲೆ ಬೀಳದಂತೆ ನಾನು ನಿವಾರಿಸುವೆನು " ಎಂದು ಹೇಳಿದನು. ಈ ಮಾತನ್ನು ಕೇಳಿ ಅಂಗದನು ಸಂತೋಷಪಟ್ಟು ಅಲ್ಲಿದ್ದ ವಾನರರನ್ನು ಕುರಿತು, " ಎಲೈ ವಾನರರೇ ! ನಿಮ್ಮ ಮನಸಾರ ಮಧುವನ್ನು ಕುಡಿಯಿರಿ. ನೀವೆಷ್ಟುಮಾತ್ರಕ್ಕೂ ಹೆದರಬೇಕಾದುದಿಲ್ಲವು. ವಾನರಶ್ರೇಷ್ಠನಾದ ಆಂಜನೇಯನು ಕಾರ್ಯವನ್ನು ಸಾಧಿಸಿಕೊಂಡು ಬಂದಿರುವನು. ಆದುದರಿಂದ ಆತನು ಮಾಡಿರೆಂದು ಹೇಳಿದ ಕಾರ್ಯವು ಅಕಾರ್ಯವಾದರೂ ಅದನ್ನು ಮಾಡಲೇ ತೀರಬೇಕು. ಹೀಗಿರುವಾಗ ಮಾಡುವುದಿಲ್ಲವೆಂದೇಕೆ ಹೇಳಬೇಕು ? ನೀವು ಅವನ ಮಾತಿನಂತೆ ಯಥೇಚ್ಛ

ವಾನರರ್ಷಭಾಃ ‖ ೪ ‖ ಸಾಧು ಸಾಧ್ವಿತಿ ಸಂಹೃಷ್ಟಾ ವಾನರಾಃ ಪ್ರತ್ಯಪೂಜಯನ್ । ಪೂಜಯಿತ್ವಾಽಂಗದಂ ಸರ್ವೇ ವಾನರಾ ವಾನರರ್ಷಭಂ ‖ ೫ ‖ ಜಗ್ಮುರ್ಮಧುವನಂ ಯತ್ರ ನದೀವೇಗಾ ಇವ ದ್ರುತಂ । ತೇ ಪ್ರವಿಷ್ಟಾ ಮಧುವನಂ ಪಾಲಾನಾಕ್ರಮ್ಯ ವೀರ್ಯತಃ ‖೬‖ ಅತಿಸರ್ಗಾಚ್ಚ ಪಟವೋ ದೃಷ್ಟ್ವಾ ಶ್ರುತ್ವಾಚ ಮೈಥಿಲೀಂ । ಪಪುಸ್ಸರ್ವೇ ಮಧು ತದಾ ರಸವತ್ಫಲಮಾದದುಃ ‖ ೭ ‖ ಉತ್ಪತ್ಯಚ ತತಸ್ಸರ್ವೇ ವನಪಾಲಾನ್ ಸಮಾಗತಾನ್ । ತಾಡಯಂತಿಸ್ಮ ಶತಶಸ್ಸಕ್ತಾನ್ಮಧುವನೇ ತದಾ ‖ ೮ ‖ ಮಧೂನಿ ದ್ರೋಣಮಾತ್ರಾಣಿ ಬಾಹುಭಿಃ ಪರಿಗೃಹ್ಯತೇ । ಪಿಬಂತಿ ಸಹಿತಾಸ್ಸರ್ವೇ

ಶ್ರುತ್ವಾ - ಕೇಳಿ, ಸಂಹೃಷ್ಟಾಃ - ಸಂತೋಷಗೊಂಡವರಾಗಿ, ಸಾಧುಸಾಧ್ವಿತಿ - ಭಲೆ ಭಲೆ ಎಂದು, ಪ್ರತ್ಯಪೂಜಯನ್ - ಶ್ಲಾಘಿಸಿದರು. ‖ ೪ ‖ ಸರ್ವೇವಾನರಾಃ - ಎಲ್ಲ ಕಪಿಗಳೂ, ವಾನರರ್ಷಭಂ - ಕಪಿಶ್ರೇಷ್ಠನಾದ, ಅಂಗದಂ - ಅಂಗದನನ್ನು, ಪೂಜಯಿತ್ವಾ - ಶ್ಲಾಘಿಸಿ, ಯತ್ರ - ಎಲ್ಲಿ, ಮಧುವನಂ - ಮಧುವನವು, (ಅಸ್ತಿ-ಇರುವುದೋ), ತತ್ರ-ಅಲ್ಲಿ, ನದೀವೇಗಾಇವ-ನದೀವೇಗಗಳಂತೆ, ದೃತಂ-ಜಾಗ್ರತೆಯಾಗಿ, ಜಗ್ಮುಃ-ಹೋದರು. ‖ ೫ ‖ ತೇ - ಆ ವಾನರರು, ತದಾ-ಆಗ, ಮಧುವನಂ-ಮಧುವನವನ್ನು, ಪ್ರವಿಷ್ಟಾಃ - ಹೊಕ್ಕು, ವೀರ್ಯತಃ - ಶೌರ್ಯದಿಂದ, ಪಾಲಾನ್ - ಮಧುವನ ಪಾಲಕರನ್ನು, ಆಕ್ರಮ್ಯ - ಸೆಳೆದುಕೊಂಡು, ಅತಿಸರ್ಗಾಚ್ಚ - ಅಂಗದನಾಜ್ಞೆಯಿಂದಲೂ, ಮೈಥಿಲೀಂ - ಸೀತಾದೇವಿಯನ್ನು, ದೃಷ್ಟ್ವಾ - ಕಂಡು, ಶ್ರುತ್ವಾಚ - ಕೇಳಿಯೂ ಪಟವಃ - ಸಮರ್ಥರಾದವರಾಗಿ, ರಸವತ್ಫಲಂ - ರುಚಿಯಾದ ಹಣ್ಣುಗಳನ್ನು, ಆದದುಃ - ಗ್ರಹಿಸಿದರು, ಮಧುಚ - ಜೇನುಗಳನ್ನೂ ಸಹ, ಪಪುಃ - ಕುಡಿದರು. ‖೬-೭‖ ತತಃ - ಬಳಿಕ, ಸರ್ವೇ - ವಾನರರೆಲ್ಲರೂ, ತದಾ - ಆಗ, ಸಮಾಗತಾನ್ - ಬಂದು, ಮಧುವನೇ - ಮಧುವನಕ್ಕೆ, ಸಕ್ತಾನ್ - ಸಂಬಂಧಿಸಿದ, ವನಪಾಲಾನ್ - ವನಪಾಲಕರನ್ನು, ಉತ್ಪತ್ಯಚ-ಹಾರಿ, ಶತಶಃ-ಬಹು ಬಗೆಯಾಗಿ, ತಾಡಯಂತಿಸ್ಮ - ಹೊಡೆದರಷ್ಟೆ. ‖ ೮ ‖ ಸರ್ವೇ-ಎಲ್ಲರೂ, ಸಹಿತಾಃ - ಗುಂಪುಸೇರಿ, ದ್ರೋಣಮಾತ್ರಾಣಿ - ಕೊಳಗಗಳಗಟ್ಟಲೆ, ಮಧೂನಿ - ಜೇನುಗಳನ್ನು, ಬಾಹುಭಿಃ - ಭುಜಗಳಿಂದ, ಪರಿಗೃಹ್ಯ - ತೆಗೆದುಕೊಂಡು, ಪಿಬಂತಿ - ಪಾನಮಾಡಿದರು, ಅಪರೇ -

ವಾಗಿ ಮಧುವನ್ನು ಕುಡಿಯಿರಿ" ಎಂದು ಹೇಳಿದನು. ಅಂಗದಬಾಯಿಂದ ಈ ಮಾತುಗಳು ಹೊರಟೊಡನೆಯೇ ವಾನರರೆಲ್ಲರೂ ಪರಮಸಂತುಷ್ಟರಾಗಿ "ಭಲೆ ಭಲೆ" ಎಂದು ಆತನನ್ನು ಪ್ರಶಂಶಿಸಿ ನದೀವೇಗದಂತೆ ಅತಿ ಶೀಘ್ರವಾಗಿ ಮಧುವನಕ್ಕೆ ಹೋದರು. ‖ ೧–೫ ‖ ಆ ವಾನರರೆಲ್ಲರೂ ಸೀತಾದೇವಿಯನ್ನು ಕಂಡುಬಂದ ಆಂಜನೇಯನಿಂದ ಆಕೆಯ ವೃತ್ತಾಂತವೆಲ್ಲವನ್ನೂ ಕೇಳಿ ಬಹಳ ಆನಂದದಿಂದಿದ್ದರು. ಸೀತಾದೇವಿಯನ್ನು ಹುಡುಕಲು ಸುತ್ತಿಸುತ್ತಿ ಬಹಳವಾಗಿ ದಣಿದಿದ್ದರು. ಈಗ ಮಧುಪಾನ ಮಾಡಲು ಅಂಗದನಿಂದ ಆಜ್ಞೆಯನ್ನು ಪಡೆದರು. ಅವರಿಗೆ ಉತ್ಸಾಹವಿಮ್ಮಡಿಸಿತು. ಅದೇ ಉತ್ಸಾಹದಿಂದಲೇ ಅವರೆಲ್ಲರೂ ಮಧುವನವನ್ನು ಪ್ರವೇಶಿಸಿ ಅಲ್ಲಿದ್ದ ವನಪಾಲಕರೆಲ್ಲರನ್ನೂ ತಮ್ಮ ಪರಾಕ್ರಮದಿಂದಲೇ ಹೊಡೆದೋಡಿಸಿ, ಕೆಲವರನ್ನು ಕಟ್ಟಿಹಾಕಿ, ಅಲ್ಲಿದ್ದ ಮಧುವೆಲ್ಲವನ್ನೂ ತೃಪ್ತಿಯಾಗುವವರೆಗೂ ಕುಡಿದರು. ಅಲ್ಲಿದ್ದ ರಸಭರಿತವಾದ ಫಲಗಳೆಲ್ಲವನ್ನೂ ಭುಜಿಸಿಬಿಟ್ಟರು. ಹೀಗೆ ಆ ವಾನರರೆಲ್ಲರೂ ಯಥೇಚ್ಛವಾಗಿ ಮಧುವನ್ನು ಕುಡಿದು, ಹಣ್ಣುಗಳನ್ನು ತಿಂದು ಮದಿಸಿದವರಾಗಿ ವಿಧವಿಧವಾಗಿ ಹಾರಿ ಕುಪ್ಪಳಿಸುತ್ತ ಅಲ್ಲಿದ್ದ ವನಪಾಲಕರೆಲ್ಲರನ್ನೂ ಹೊಡೆದು ಕೆಡವಿ ವಿಧ

ನಿಘ್ನಂತಿಸ್ಮ ತಥಾಪರೇ ॥ ೯ ॥ ಕೇಚಿತ್ಪೀತ್ವಾಽಪವಿಧ್ಯಂತಿ ಮಧೂನಿ ಮಧುಪಿಂಗಳಾಃ । ಮಧೂಚ್ಛಿಷ್ಟೇನ ಕೇಚಿಚ್ಚ ಜಘ್ನುರನ್ಯೋನ್ಯಮುತ್ಕಟಾಃ ॥ ೧೦ ॥ ಅಪರೇ ವೃಕ್ಷಮೂಲೇತು ಶಾಖಾಂ ಗೃಹ್ಯ ವ್ಯವಸ್ಥಿತಾಃ । ಅತ್ಯರ್ಥಂಚ ಮದಗ್ಲಾನಾಃ ಪರ್ಣಾನ್ಯಾಸ್ತೀರ್ಯ ಶೇರತೇ ॥೧೧॥ ಉನ್ಮತ್ತಭೂತಾಃ ಪ್ಲವಗಾಃ ಮಧುಮತ್ತಾಶ್ಚ ಹೃಷ್ಟವತ್ । ಕ್ಷಿಪಂತಿಚ ತದಾನ್ಯೋನ್ಯಂ ಸ್ಖಲಂತಿಚ ತಥಾಪರೇ ॥ ೧೨ ॥ ಕೇಚಿತ್ ಕ್ಷ್ವೇಳಾಂ ಪ್ರಕುರ್ವಂತಿ ಕೇಚಿತ್ಕೂಜಂತಿ ಹೃಷ್ಟವತ್ । ಹರಯೋ ಮಧುನಾ ಮತ್ತಾಃ ಕೇಚಿ

ಮತ್ತೆ ಕೆಲವರು, ನಿಘ್ನಂತಿಸ್ಮ - ಹೊಡೆದರಷ್ಟೆ. ॥ ೯ ॥ ಮಧುಪಿಂಗಳಾಃ - ಜೇನುತುಪ್ಪದಂತೆ ಪಿಂಗಳ ವರ್ಣವುಳ್ಳ, ಕೇಚಿತ್ - ಕೆಲವರು, ಪೀತ್ವಾ - ಪಾನಮಾಡಿ, ಮಧೂನಿ - ಜೇನುಗಳನ್ನು, ಅಪವಿಧ್ಯಂತಿ- ಎತ್ತಿಹಾಕಿದರು, ಕೇಚಿಚ್ಚ - ಕೆಲವರು, ಉತ್ಕಟಾಃ - ಉನ್ಮತ್ತರಾಗಿ, ಮಧೂಚ್ಛಿಷ್ಟೇನ - ಜೇನುಗಳ ಎಂಜಲಿನಿಂದ, ಅನ್ಯೋನ್ಯಂ - ಒಬ್ಬರಿಗೊಬ್ಬರು, ಜಘ್ನುಃ - ಹೊಡೆದರು. ॥ ೧೦ ॥ ಅಪರೇತು- ಇನ್ನು ಕೆಲವರಾದರೆ, ವೃಕ್ಷಮೂಲೇ - ಗಿಡದ ಬುಡದಲ್ಲಿ, ಶಾಖಾಂ - ರೆಂಬೆಯನ್ನು, ಗೃಹ್ಯ - ಹಿಡಿದು ಕೊಂಡು, ವ್ಯವಸ್ಥಿತಾಃ - ನಿಂತು, ಅತ್ಯರ್ಥಂ - ಬಹಳವಾಗಿ, ಮದಗ್ಲಾನಾಃ - ಮತ್ತತೆಯಿಂದ ಆಯಾಸಗೊಂಡು, ಪರ್ಣಾನಿ-ಎಲೆಗಳನ್ನು, ಆಸ್ತೀರ್ಯ-ಹಾಸಿಕೊಂಡು, ಶೇರತೇ-ನಿದ್ದೆಹೋದರು. ॥ ೧೧ ॥ ಉನ್ಮತ್ತಭೂತಾಃ-ಹುಚ್ಚರಂತಿರುವ, ಮಧುಮತ್ತಾಃ-ಮದ್ಯದಿಂದ ಮೈಮರೆತ, ಹೃಷ್ಟವತ್- ಸಂತೋಷಗೊಂಡವರ ಹಾಗೆ, ಪ್ಲವಗಾಃ - ವಾನರರು, ತದಾ - ಆ ಕಾಲದಲ್ಲಿ, ಅನ್ಯೋನ್ಯಂ - ಪರಸ್ಪರ ವಾಗಿ, ಕ್ಷಿಪಂತಿ - ಎತ್ತಿಹಾಕಿದರು, ತಥಾ - ಹಾಗೆಯೇ, ಅಪರೇ - ಇನ್ನು ಕೆಲವರು, ಸ್ಖಲಂತಿ - ಜಾರಿಬಿದ್ದರು. ॥ ೧೨ ॥ ಕೇಚಿತ್‌ಹರಯಃ - ಕೆಲ ಕಪಿಗಳು, ಮಧುನಾ - ಮದ್ಯದಿಂದ, ಮತ್ತಾಃ - ಮದವೇರಿದವರಾಗಿ, ಕ್ಷ್ವೇಳಾಂ - ಸಿಂಹನಾದವನ್ನು, ಪ್ರಕುರ್ವಂತಿ - ಮಾಡುತ್ತಿದ್ದರು, ಕೇಚಿತ್ - ಕೆಲವರು, ಹೃಷ್ಟವತ್ - ಸಂತೋಷವಾಗಿ, ಕೂಜಂತಿ - ಕೂಗುತ್ತಿದ್ದರು, ಕೇಚಿತ್ - ಕೆಲವರು, ಮಹೀತಲೇ - ಭೂಪ್ರದೇಶದಲ್ಲಿ, ಸುಪ್ತಾಃ-ಮಲಗಿದರು, ಕೇಚಿತ್-ಕೆಲವರು, ಕೃತ್ವಾ - ಹೇಳಬಾರದ ಕೆಲಸಮಾಡಿ, ಹಸಂತಿ - ನಗುತ್ತಿದ್ದರು, ಅನ್ಯೇಕೇಚಿತ್ - ಮತ್ತೆ ಕೆಲವರು, ಇತರತ್ - ಬೇರೆ ಕೆಲಸ

ವಿಧವಾಗಿ ಹಿಂಶಿಸಿದರು. ಆ ವಾನರರೆಲ್ಲರೂ ಕೊಳಗಗಟ್ಟಲೆಯಾಗಿ ಮಧುವನ್ನು ಕುಡಿದರು. ಕೆಲವರು ತಮ್ಮ ವಿರೋಧಿಗಳನ್ನು ಹಿಡಿದು ಹೊಡೆಯುತ್ತಿದ್ದರು. ಮಧುವಿನಂತೆ ಪಿಂಗಳ ವರ್ಣವುಳ್ಳ ಕೆಲವರು ವಾನರರು ಚೆನ್ನಾಗಿ ಮಧುಪಾನಮಾಡಿ ಸಾಕಾಗಿ ಉಳಿದ ಮಧುವೆಲ್ಲ ವನ್ನೂ ಬಿಸುಡುತ್ತಿದ್ದರು. ಕೆಲವರು ಮಧುಮತ್ತರಾಗಿ ಮೇಣವನ್ನು ತೆಗೆದುಕೊಂಡು ಒಬ್ಬರನ್ನೊಬ್ಬರು ಹೊಡೆಯುತ್ತಿದ್ದರು. ॥ ೬–೧೦ ॥ ಕೆಲವರು ಮಧುಮತ್ತರಾಗಿ ಅತ್ತಿತ್ತ ಕದಲಲಾರದೆ ಆ ವನದಲ್ಲಿದ್ದ ಮರದ ಕೊಂಬೆಗಳನ್ನು ಹಿಡಿದುಕೊಂಡು ಎಲ್ಲಿದ್ದವರಲ್ಲಿಯೇ ಆಲುತ್ತ ನಿಂತಿದ್ದರು. ಕೆಲವರು ಮತ್ತಿನಿಂದ ಆಯಾಸಪಟ್ಟು ಗಿಡಗಳ ಎಲೆಗಳನ್ನು ಕಿತ್ತು ನೆಲದಮೇಲೆ ಹಾಸಿ ಅದರಮೇಲೆ ಮಲಗಿದ್ದರು. ಹೀಗೆ ಮಧುಪಾನದಿಂದ ಮದಿಸಿಹೋಗಿದ್ದ ಆ ವಾನರರೆಲ್ಲರೂ ಹುಚ್ಚು ಹಿಡಿದವರಂತೆ ನಾನಾವಿಧ ಚೇಷ್ಟೆಗಳನ್ನು ಮಾಡುತ್ತ, ಒಬ್ಬರನ್ನೊಬ್ಬರು ಹೊಡೆಯುತ್ತಲೂ, ಸಂತೋಷದಿಂದ ಒಬ್ಬರಮೇಲೊಬ್ಬರು ಬೀಳುತ್ತಲೂ, ಒಬ್ಬರನ್ನೊಬ್ಬರು ತಳ್ಳುತ್ತಲೂ ಇದ್ದರು. ಆ ವಾನರರಲ್ಲಿ ಕೆಲವರು ಮತ್ತತೆಯಿಂದ ನಡೆಯುಲಾರದೆ ತಡೆಬಡಿಸುತ್ತ ಕೆಳಕ್ಕೆ ಬೀಳುತ್ತಿದ್ದರು. ಮಧುಮತ್ತರಾದ ಕೆಲವು ವಾನರರು



ವನಭಂಗ

ಪುಟ ೬೯೧

ತ್ಸುಪ್ತಾ ಮಹೀತಲೇ ॥ ೧೩ ॥ ಕೃತ್ವಾ ಕೇಚಿದ್ಧಸಂತ್ಯನ್ಯೇ ಕೇಚಿತ್ಕುರ್ವಂತಿ ಚೇತರತ್ । ಕೃತ್ವಾ ಕೇಚಿದ್ವದಂತ್ಯನ್ಯೇ ಕೇಚಿದ್ಬುಧ್ಯಂತಿ ಚೇತರತ್ ॥ ೧೪ ॥ ಯೇ ಪ್ಯತ್ರ ಮಧುಪಾಲಾಸ್ಸ್ಯುಃ ಪ್ರೇಷ್ಯಾ ದಧಿಮುಖಸ್ಯ ತು । ತೇಪಿ ತೈರ್ವಾನರೈ ರ್ಭೀಮೈಃ ಪ್ರತಿಷಿದ್ಧಾ ದಿಶೋಗತಾಃ ॥ ೧೫ ॥ ಜಾನುಭಿಸ್ತು ಪ್ರಕೃಷ್ಟಾಶ್ಚ ದೇವಮಾರ್ಗಂ ಪ್ರದರ್ಶಿತಾಃ । ಅಬ್ರುರ್ವ ಪರಮೋದ್ವಿಗ್ನಾ ಗತ್ವಾ ದಧಿಮುಖಂ ವಚಃ ॥ ೧೬ ॥ "ಹನೂಮತಾ ದತ್ತವರೈರ್ಹತಂ ಮಧುವನಂ ಬಲಾತ್ । ವಯಂಚ ಜಾನುಭಿಃ ಕೃಷ್ಟಾ ದೇವಮಾರ್ಗಂಚ ದರ್ಶಿತಾಃ" ॥ ೧೭ ॥ ತತೋ ದಧಿಮುಖಃ ಕ್ರುದ್ಧೋ ವನಪಸ್ತತ್ರ

ವನ್ನು, ಕುರ್ವಂತಿ - ಮಾಡುತ್ತಿದ್ದರು, ಕೇಚಿತ್ - ಕೆಲವರು, ಕೃತ್ವಾ - ಮಾಡಿದನೆಂದು, ವದಂತಿ - ಹೇಳುತ್ತಿದ್ದರು, ಅನ್ಯೇಕೇಚಿತ್ - ಇನ್ನು ಕೆಲವರು, ಇತರತ್ - ಇತರ ವ್ಯಾಪಾರವನ್ನು, ಬುಧ್ಯಂತಿ- ಅರಿತರು. ॥ ೧೩-೧೪ ॥ ಅತ್ರ - ಈ ವನದಲ್ಲಿ, ದಧಿಮುಖಸ್ಯ - ದಧಿಮುಖನ, ಪ್ರೇಷ್ಯಾಃ - ಭೃತ್ಯರಾದ, ಮಧುಪಾಲಾಃ - ಮಧುರಕ್ಷಕರು, ಯೇ - ಯಾರೋ, ತೇ - ಅವರು, ಭೀಮೈಃ - ಭಯಂಕರರಾದ, ತೈರ್ವಾನರೈಃ - ಆ ಕಪಿಗಳಿಂದ, ಪ್ರತಿಷಿದ್ಧಾಃ - ಅಡ್ಡಿಮಾಡಲ್ಪಟ್ಟವರಾಗಿ, ದಿಶೋಗತಾಃ - ದಿಕ್ಕುಗಳನ್ನು ಹೊಂದಿದರು. ॥ ೧೫ ॥ ಜಾನುಭಿಶ್ಚ-ಮೊಣಕಾಲುಗಳಿಂದಲೂ, ಪ್ರಕೃಷ್ಟಾಶ್ಚ-ಹೊಡೆಯಲ್ಪಟ್ಟವರೂ, ದೇವಮಾರ್ಗಂ-ಗುದಸ್ಥಾನವನ್ನು, ಪ್ರದರ್ಶಿತಾಃ-ತೋರಿಸಲ್ಪಟ್ಟವರೂ ಆದ ದಧಿಮುಖನ ಭೃತ್ಯರು, ಪರಮೋದ್ವಿಗ್ನಾಃ - ಬಹಳ ಭೀತರಾಗಿ, ದಧಿಮುಖಂ - ದಧಿಮುಖನನ್ನು ಕುರಿತು, ಗತ್ವಾ - ಹೋಗಿ, ವಚಃ - ಮಾತನ್ನು, ಅಬ್ರುರ್ವ - ನುಡಿದರು. ॥ ೧೬ ॥ ಹನೂಮತಾ - ಆಂಜನೇಯನಿಂದ, ದತ್ತವರೈಃ - ಕೊಡಲ್ಪಟ್ಟ ವರವುಳ್ಳವರಾಗಿ, ಮಧುವನಂ - ಮಧುವನವು, ಬಲಾತ್ - ಬಲಾತ್ಕಾರದಿಂದ, ಹತಂ - ಧ್ವಂಸವಾಯಿತು, ವಯಂಚ - ನಾವೂ, ಜಾನುಭಿಃ - ಮೊಣಕಾಲುಗಳಿಂದ, ಕೃಷ್ಟಾಃ - ಹೊಡೆಯಲ್ಪಟ್ಟೆವು, ದೇವಮಾರ್ಗಂಚ - ಗುದಸ್ಥಾನವನ್ನೂ ಸಹ, ದರ್ಶಿತಾಃ - ತೋರಿಸಲ್ಪಟ್ಟೆವು. ॥ ೧೭ ॥ ತತಃ - ಬಳಿಕ, ತತ್ರ - ಆ ವನದಲ್ಲಿ, ಕ್ರುದ್ಧಃ - ಕುಪಿತನಾದ, ವನಪಃ - ವನ

ಸಿಂಹನಾದವನ್ನು ಮಾಡುತ್ತಿದ್ದರು. ಕೆಲವರು ಸಂತೋಷಾಧಿಕ್ಯದಿಂದ ಕೂಗುತ್ತಿದ್ದರು. ಕೆಲವರು ನೆಲದಮೇಲೆ ಮಲಗಿ ನಿದ್ರಿಸುತ್ತಿದ್ದರು. ಆ ವಾನರರಲ್ಲಿ ಕೆಲವರು ಅವಾಚ್ಯವಾದ ಕೃತ್ಯಗಳನ್ನು ಮಾಡಿ ನಗುತ್ತಿದ್ದರು. ಕೆಲವರು ಅವರಂತೆಯೇ ಅವಾಚ್ಯ ಕೃತ್ಯವನ್ನು ಮಾಡಿ ಸುಮ್ಮನಿರುತ್ತಿದ್ದರು. ಕೆಲವರು ಆ ಕೃತ್ಯವನ್ನು ಮಾಡಿ ಇತರರೊಡನೆ ಹೇಳಿಕೊಳ್ಳುತ್ತಿದ್ದರು. ಇನ್ನು ಕೆಲವರು ನಾವೂ ಅವರಂತೆಯೇ ಮಾಡೋಣವೆಂದು ಸಂಕಲ್ಪಿಸುತ್ತಿದ್ದರು. ಹೀಗೆ ವಿಪರೀತವಾಗಿ ಹಾವಳಿ ಮಾಡುತ್ತಿದ್ದ ಆ ವಾನರರು ತಮ್ಮನ್ನು ತಡೆಯಲು ಬಂದಿದ್ದ ವನಪಾಲಕನಾದ ದಧಿಮುಖನ ಸೇವಕರೆಲ್ಲರನ್ನೂ ಹೊಡೆದು ದಶದಿಶೆಗಳಿಗೂ ಓಡಿಸಿಬಿಟ್ಟರು. ॥ ೧೧–೧೫ ॥ ಇಷ್ಟುಮಾತ್ರವಲ್ಲದೆ ಅಂಗದನೇ ಮೊದಲಾದ ಅವರೆಲ್ಲರೂ ಆ ಮಧುವನ ಪಾಲಕರೆಲ್ಲರನ್ನೂ ಹಿಡಿದು ಅವರ ಮೊಳಕಾಲುಗಳ ಕೆಳಗೆ ಅವರ ತಲೆಗಳನ್ನು ಸೇರಿಸಿ ಅವರ ಗುದದ್ವಾರವನ್ನು ಅವರಿಗೇ ತೋರಿಸಿಬಿಟ್ಟರು. ಹೀಗೆ ಹಿಂಸಿಸಿದುದರಿಂದ ಆ ವನಪಾಲಕರೆಲ್ಲರೂ ಬಹಳ ದುಃಖಿತರಾಗಿ ತಮ್ಮ ಒಡೆಯನಾದ ದಧಿಮುಖನಲ್ಲಿಗೆ ಹೋಗಿ, "ಎಲೈ ದಧಿಮುಖನೇ! ಅಂಗದನೇ ಮೊದಲಾದ ವಾನರರೆಲ್ಲರೂ ಆಂಜನೇಯನ ಅನುಜ್ಞೆಯನ್ನು ಪಡೆದು ಮಹಾ ಬಲಗರ್ವಿತರಾಗಿ ಮಧುವನವೆಲ್ಲವನ್ನೂ ನಾಶಗೊಳಿಸಿದರು. ವನ

ವಾನರಃ । ಹತಂ ಮಧುವನಂ ಶ್ರುತ್ವಾ ಸಾಂತ್ವಯಾಮಾಸ ತಾನ್ ಹರೀನ್ ॥ ೧೮ ॥ "ಇಹಾಗಚ್ಛತ ಗಚ್ಛಾಮೋ ವಾನರಾನ್ ಬಲದರ್ಪಿತಾನ್ । ಬಲೇನ ವಾರಯಿಷ್ಯಾಮೋ ಮಧು ಭಕ್ಷಯತೋ ವಯಂ" ॥ ೧೯ ॥ ಶ್ರುತ್ವಾ ದಧಿಮುಖಸ್ಯೇದಂ ವಚನಂ ವಾನರರ್ಷಭಾಃ । ಪುನರ್ವೀರಾ ಮಧುವನಂ ತೇನೈವ ಸಹಸಾ ಯಯುಃ ॥ ೨೦ ॥ ಮಧ್ಯೇಚೈಷಾಂ ದಧಿಮುಖಃ ಪ್ರಗೃಹ್ಯ ತರಸಾ ತರುಂ । ಸಮಭ್ಯಧಾವದ್ವೇಗೇನ ತೇಚ ಸರ್ವೇ ಪ್ಲವಂಗಮಾಃ ॥೨೧॥ ತೇ ಶಿಲಾಃಪಾದಪಾಂಶ್ಚಾಪಿ ಪರ್ವತಾಂಶ್ಚಾಪಿ ವಾನರಾಃ । ಗೃಹೀತ್ವಾಽಭ್ಯಗಮನ್ ಕ್ರುದ್ಧಾ ಯತ್ರ ತೇ ಕಪಿಕುಂಜರಾಃ ॥ ೨೨ ॥ ತೇ ಸ್ವಾಮಿ

ಪಾಲಕನಾದ, ದಧಿಮುಖಃ - ದಧಿಮುಖನೆಂಬ, ವಾನರಃ - ಕಪಿಯು, ಮಧುವನಂ - ಮಧುವನವನ್ನು, ಹತಂ - ಧ್ವಂಸಿಸಲ್ಪಟ್ಟುದನ್ನಾಗಿ, ಶ್ರುತ್ವಾ - ಕೇಳಿ, ತಾನ್‌ಹರೀನ್ - ಆ ವಾನರರನ್ನು, ಸಾಂತ್ವಯಾಮಾಸ - ಸಮಾಧಾನಗೊಳಿಸಿದನು. ||೧೮|| ಇಹಾಗಚ್ಛತ - ಇಲ್ಲಿಬನ್ನಿರಿ, ಗಚ್ಛಾಮಃ - ಹೋಗೋಣ, ವಯಂ - ನಾವುಗಳು, ಮಧು - ಜೇನುಗಳನ್ನು, ಭಕ್ಷಯತಃ - ಭುಜಿಸುತ್ತಿರುವ, ಬಲದರ್ಪಿತಾನ್ - ಶಕ್ತಿಯಿಂದ ಗರ್ವಿತರಾದ, ವಾನರಾನ್ - ಕಪಿಗಳನ್ನು, ಬಲೇನ - ಬಲದಿಂದ, ವಾರಯಿಷ್ಯಾಮಃ - ನಿವಾರಿಸೋಣ. ॥ ೧೯ ॥ ವೀರಾಃ - ಶೂರರಾದ, ವಾನರರ್ಷಭಾಃ - ಕಪಿಶ್ರೇಷ್ಠರು, ದಧಿಮುಖಸ್ಯ - ದಧಿಮುಖನ, ಇದಂವಚನಂ - ಈ ಮಾತನ್ನು, ಶ್ರುತ್ವಾ - ಕೇಳಿ, ತೇನೈವ - ಆ ದಧಿಮುಖನೊಡನೆಯೇ, ಸಹಸಾ - ಜಾಗ್ರತೆಯಾಗಿ, ಮಧುವನಂ - ಮಧುವನವನ್ನು, ಪುನಃ - ಮತ್ತೆ, ಯಯುಃ - ಹೊಂದಿದರು. ॥ ೨೦ ॥ ಏಷಾಂ - ಈ ಕಪಿಗಳ, ಮಧ್ಯೇಚ - ಮಧ್ಯದಲ್ಲಿಯೂ, ದಧಿಮುಖಃ - ದಧಿಮುಖನು, ತರಸಾ - ಬಲದಿಂದ, ತರುಂ - ಮರವನ್ನು, ಪ್ರಗೃಹ್ಯ - ಕಿತ್ತುಕೊಂಡು, ವೇಗೇನ - ಜಾಗ್ರತೆಯಾಗಿ, ಸಮಭ್ಯಧಾವತ್ - ಓಡಿಬಂದನು, ಸರ್ವೇ - ಸಮಸ್ತರಾದ, ತೇಪ್ಲವಂಗಮಾಶ್ಚ - ಆ ಕಪಿಗಳೂ, ಸಮಭ್ಯಧಾವನ್ - ಓಡಿಬಂದರು. ॥ ೨೧ ॥ ಯತ್ರ - ಯಾವ ಪ್ರದೇಶದಲ್ಲಿ, ತೇಕಪಿಕುಂಜರಾಃ - ಕಪಿಶ್ರೇಷ್ಠರಾದ ಆ ಅಂಗದಾದಿಗಳು, (ಸಂತಿ - ಇದ್ದರೋ), ತತ್ರ - ಆ ಸ್ಥಳದಲ್ಲಿ, ತೇವಾನರಾಃ - ಆ ದಧಿಮುಖಾದಿ ಕಪಿಗಳು, ಶಿಲಾಃ - ಕಲ್ಲುಗಳನ್ನು, ಪಾದಪಾಂಶ್ಚಾಪಿ-ಗಿಡಗಳನ್ನೂ, ಪರ್ವತಾಂಶ್ಚಾಪಿ - ಬೆಟ್ಟಗಳನ್ನೂ ಸಹ, ಗೃಹೀತ್ವಾ - ತೆಗೆದುಕೊಂಡು, ಅಭ್ಯಗಮನ್ - ಬಂದರು.

ವನ್ನು ಹಾಳುಮಾಡಿದ್ದೂ ಅಲ್ಲದೆ, ಹಾಗೆ ಮಾಡಬೇಡಿರೆಂದು ತಡೆಯುವುದಕ್ಕೆ ಹೋಗಿದ್ದ ನಮ್ಮನ್ನು ಬಹಳವಾಗಿ ಹಿಂಸಿಸಿ ನಮ್ಮ ತಲೆಗಳನ್ನು ನಮ್ಮ ಮೊಣಕಾಲುಗಳಿಗೆ ತೂರಿಸಿ ನಮ್ಮ ಗುದಸ್ಥಾನವನ್ನು ನಮಗೇ ತೋರಿಸಿ ಅವಮಾನಪಡಿಸಿದರು" ಎಂದು ಹೇಳಿ ಮೊರೆಯಿಟ್ಟರು. ಆಗ ದಧಿಮುಖನು ಬಹಳವಾಗಿ ಕೋಪಗೊಂಡು ತನ್ನ ಭಟರೆಲ್ಲರನ್ನೂ ಕುರಿತು,-"ಎಲೈ ವಾನರರೇ! ನೀವೆಲ್ಲರೂ ನನ್ನ ಹಿಂದೆ ಬನ್ನಿರಿ. ನಾವೆಲ್ಲರೂ ಈಗಲೇ ಹೋಗಿ ಬಲದಿಂದ ಮದಿಸಿಹೋಗಿ ಮಧುವನ್ನು ಕುಡಿಯುತ್ತಿರುವ ಆ ವಾನರರೆಲ್ಲರನ್ನೂ ನಮ್ಮ ಪರಾಕ್ರಮದಿಂದ ಅಡ್ಡಗಿಸಿ ಓಡಿಸೋಣ" ಎಂದು ಹೇಳಿದನು. ಆಗ ಮಹಾ ಶೂರರಾದ ಆ ವಾನರಭಟರೆಲ್ಲರೂ ಮರಳಿ ಆ ದಧಿಮುಖನೊಡನೆ ಮಧುವನವನ್ನು ಪ್ರವೇಶಿಸಿದರು.॥೧೬-೨೦॥ ಹೀಗೆ ಪ್ರವೇಶಿಸುತ್ತಲೇ ಆ ದಧಿಮುಖನು ಬಹಳವಾಗಿ ಪರಾಕ್ರಮಿಸಿ ಅತಿ ವೇಗವಾಗಿ ಒಂದು ಮರವನ್ನು ಕಿತ್ತು ಕೈಯಲ್ಲಿ ಹಿಡಿದುಕೊಂಡು ಅಲ್ಲಿದ್ದ ವಾನರರಮೇಲೆ ಅಟ್ಟಿಹೋದನು. ಮಿಕ್ಕ ವಾನರಭಟರೂ ಕಲ್ಲುಬಂಡೆಗಳನ್ನೂ ಮರಗಳನ್ನೂ, ಬೆಟ್ಟಗಳನ್ನೂ ಕೈಯಲ್ಲಿ ಹಿಡಿದುಕೊಂಡು ಆ ವಾನರರ

ವಚನಂ ವೀರಾ ಹೃದಯೇಷ್ವವಸಜ್ಯ ತತ್ । ತ್ವರಯಾ ಹ್ಯಭ್ಯಧಾವಂತ ಸಾಲತಾಲ ಶಿಲಾಯುಧಾಃ ॥ ೨೩ ॥ ವೃಕ್ಷಸ್ಥಾಂಶ್ಚ ತಲಸ್ಥಾಂಶ್ಚ ವಾನರಾನ್ಬಲದರ್ಪಿತಾನ್ । ಅಭ್ಯಕ್ರಾಮಂಸ್ತತೋ ವೀರಾಃ ಪಾಲಾಸ್ತತ್ರ ಸಹಸ್ರಶಃ ॥ ೨೪ ॥ ಅಥ ದೃಷ್ಟ್ವಾ ದಧಿಮುಖಂ ಕ್ರುದ್ಧಂ ವಾನರಪುಂಗವಾಃ । ಅಭ್ಯಧಾವಂತ ವೇಗೇನ ಹನೂಮತ್ಪ್ರಮುಖಾಸ್ತದಾ ॥ ೨೫ ॥ ತಂ ಸವೃಕ್ಷಂ ಮಹಾಬಾಹುಮಾಪತಂತಂ ಮಹಾಬಲಂ । ಆರ್ಯಕಂ ಪ್ರಾಹರತ್ತತ್ರ ಬಾಹುಭ್ಯಾಂ ಕುಪಿತೋಽಂಗದಃ ॥ ೨೬ ॥ ಮದಾಂಧಶ್ಚ

॥ ೨೨ ॥ ವೀರಾಃ - ಶೂರರಾದ, ತೇ - ಆ ದಧಿಮುಖನ ಭೃತ್ಯರು, ತತ್....ನಂ - ಆ ಒಡೆಯನಾಜ್ಞೆಯನ್ನು, ಹೃದಯೇಷು - ಮನಸ್ಸುಗಳಲ್ಲಿ, ಅವಸಜ್ಯ - ಇಟ್ಟುಕೊಂಡು, ಸಾಲ....ಧಾಃ - ಮದ್ದೀಮರಗಳೂ, ತಾಳೇಗಿಡೆಗಳೂ, ಪಾಷಾಣಗಳೂ, ಇವೇ ಆಯುಧಗಳಾಗುಳ್ಳವರಾಗಿ, ತ್ವರಯಾ - ಜಾಗ್ರತೆಯಾಗಿ, ಅಭ್ಯಧಾವಂತಹಿ - ಓಡಿಬಂದರಷ್ಟೆ. ॥ ೨೩ ॥ ತತಃ - ಬಳಿಕ, ತತ್ರ - ಆ ವನದಲ್ಲಿ, ವೀರಾಃ - ಶೂರರಾದ, ಸಹಸ್ರಶಃ - ಅನೇಕರಾದ, ಪಾಲಾಃ - ವನಪಾಲಕರು, ವೃಕ್ಷಸ್ಥಾಂಶ್ಚ - ಗಿಡಗಳ ಮೇಲಿರುವ, ತಲಸ್ಥಾಂಶ್ಚ - ನೆಲದಲ್ಲಿಯೂ ಇರುವ, ಬಲದರ್ಪಿತಾನ್ - ಬಲಗರ್ವಿತರಾದ, ವಾನರಾನ್ - ಕಪಿಗಳನ್ನು, ಅಭ್ಯಕ್ರಾಮನ್ - ಸುತ್ತಿಕೊಂಡರು. ॥ ೨೪ ॥ ಅಥ - ಬಳಿಕ, ತದಾ - ಆ ಕಾಲದಲ್ಲಿ, ಹನುಮತ್ಪ್ರಮುಖಾಃ - ಆಂಜನೇಯನೇ ಮೊದಲಾದ, ವಾನ....ವಾಃ - ಕಪಿಶ್ರೇಷ್ಠರು, ಕ್ರುದ್ಧಂ - ಕುಪಿತನಾದ, ದಧಿಮುಖಂ - ದಧಿಮುಖನನ್ನು, ದೃಷ್ಟ್ವಾ - ಕಂಡು, ವೇಗೇನ - ಜವದಿಂದ, ಅಭ್ಯಧಾವಂತ - ಓಡಿಬಂದರು. ॥ ೨೫ ॥ ತತ್ರ - ಆ ವಾನರರಲ್ಲಿ, ಕುಪಿತಃ - ಕೋಪಿಷ್ಠನಾದ, ಅಂಗದಃ- ಅಂಗದನು, ಸವೃಕ್ಷಂ - ವೃಕ್ಷದಿಂದೊಡಗೂಡಿ, ಆಪತಂತಂ - ಬರುತ್ತಿರುವ, ಮಹಾಬಾಹುಂ - ಮಹಾಭುಜಗಳುಳ್ಳ, ಮಹಾಬಲಂ - ಬಹು ಬಲವುಳ್ಳ, ಆರ್ಯಕಂ - ಸುಗ್ರೀವನ ಸೋದರಮಾವನಾದಕಾರಣ ತನಗೆ ಪೂಜ್ಯನಾದ, ತಂ - ಆ ದಧಿಮುಖನನ್ನು, ಬಾಹುಭ್ಯಾಂ - ಭುಜಗಳಿಂದ, ಪ್ರಾಹರತ್ - ಹೊಡೆದನು. ॥ ೨೬ ॥ ಆಯಂ - ಈ ದಧಿಮುಖನು, ಮಮ - ನನಗೆ, ಆರ್ಯಕಇತಿ - ಪೂಜ್ಯನೆಂದು,

---

ನಡುವೆ ನುಗ್ಗಿದರು. ಇನ್ನು ಕೆಲವರು ವಾನರಭಟರು ಮಹಾ ಪರಾಕ್ರಮಶಾಲಿಗಳು. ಅವರೆಲ್ಲರೂ ತಮ್ಮ ಯಜಮಾನನಾದ ದಧಿಮುಖನ ಆಜ್ಞೆಯನ್ನು ಶಿರಸಾವಹಿಸಿ ತಾಳೇಮರಗಳನ್ನೂ, ಮದ್ದೀಮರಗಳನ್ನೂ, ಕಿತ್ತು ಕೈಯಲ್ಲಿ ಹಿಡಿದುಕೊಂಡು, ಕಲ್ಲುಗಳನ್ನೆತ್ತಿಕೊಂಡು ಅತಿ ಜಾಗ್ರತೆಯಾಗಿ ಅಂಗದಾದಿವಾನರರಿದ್ದ ಪ್ರದೇಶಕ್ಕೆ ಹೋದರು. ಮಹಾ ಶೂರಾಗ್ರಣಿಗಳೂ ಮಧುವನ ರಕ್ಷಕರೂ ಆದ ದಧಿಮುಖನೇ ಮೊದಲಾದ ಆ ವಾನರರೆಲ್ಲರೂ ಹೀಗೆ ಮಧುವನವನ್ನು ಪ್ರವೇಶಿಸಿ ಅಲ್ಲಿ ಬಲಗರ್ವಿತರಾಗಿ ಅನೇಕ ವಿಧಗಳಾದ ವೃಕ್ಷಗಳ ಮೇಲೆಯೂ, ಕೆಳಗೂ, ನೆಲದಮೇಲೂ ಕುಳಿತಿದ್ದ ಅಂಗದನೇ ಮೊದಲಾದ ವಾನರರನ್ನೆದುರಿಸಿದರು. ಹೀಗೆ ಸಾವಿರಾರು ವನರಕ್ಷಕರು ತಮ್ಮಮೇಲೆ ಬಿದ್ದುದನ್ನು ನೋಡಿ ಆಂಜನೇಯನೇ ಮೊದಲಾದ ವಾನರರು, ಬಹಳವಾಗಿ ಕೋಪಗೊಂಡು ಬರುತ್ತಿದ್ದ ಆ ದಧಿಮುಖನನ್ನು ಕಂಡು ಅವನನ್ನೆದುರಿಸಿದರು. ಆಗ ಯುವರಾಜನಾದ ಅಂಗದಕುಮಾರನು ಕನಲಿದವನಾಗಿ, ಮರವನ್ನು ಕೈಯಲ್ಲಿ ಹಿಡಿದು ಬರುತ್ತಿದ್ದವನೂ ಮಹಾ ಬಾಹುವಾದವನೂ, ಮಹಾ ಬಲಿಷ್ಠನಾದವನೂ ಆದ ಆ ದಧಿಮುಖನನ್ನು ಎರಡೂ ಕೈಗಳಿಂದ ಬಲವಾಗಿ ಹೊಡೆದನು. ॥ ೨೧–೨೬ ॥ ದಧಿಮುಖನು ಅಂಗದನಿಗೆ ಹಿರಿಯನಾದವನು ; ಪೂಜ್ಯನು. ಕೋಪದಿಂದ ವೈಮರೆತ ಆ ಅಂಗ

ನವೇದೈನಮಾರ್ಯಕೋಽಯಂ ಮಮೇತಿ ಸಃ । ಅಥೈನಂ ನಿಷ್ಪಿಪೇಷಾಶು ವೇಗವದ್ವ ಸುಧಾತಲೇ ॥ ೨೭ ॥ ಸಭಗ್ನಬಾಹೂರುಭುಜೋ ವಿಹ್ವಲಶ್ಶೋಣಿತೋಕ್ಷಿತಃ । ಮುಮೋಹ ಸಹಸಾ ವೀರೋ ಮುಹೂರ್ತಂ ಕಪಿಕುಂಜರಃ ॥ ೨೮ ॥ ಸ ಸಮಾಶ್ವಾಸ್ಯ ಸಹಸಾ ಸಂಕ್ರುದ್ಧೋ ರಾಜಮಾತುಲಃ । ವಾನರಾನ್ವಾರಯಾಮಾಸ ದಂಡೇನ ಮಧು ಮೋಹಿತಾನ್ ॥ ೨೯ ॥ ಸ ಕಥಂಚಿದ್ವಿಮುಕ್ತಸ್ತೈರ್ವಾನರೈರ್ವಾನರರ್ಷಭಃ । ಉವಾಚೈಕಾಂತಮಾಶ್ರಿತ್ಯ ಭೃತ್ಯಾನ್ ಸ್ವಾನ್ ಸಮುಪಾಗತಾನ್ ॥ ೩೦ ॥ " ಏತೇ ತಿಷ್ಠಂತು ಗಚ್ಛಾಮೋ ಭರ್ತಾ ನೋ ಯತ್ರ ವಾನರಃ । ಸುಗ್ರೀವೋ ವಿಪುಲಗ್ರೀವ

ಮದಾಂಧಃ - ಮತ್ತತೆಯಿಂದ ಹಿಂದುಮುಂದು ನೋಡದೆ, ಸಃ - ಆ ಅಂಗದನು, ಏನಂ - ಈ ದಧಿ ಮುಖನನ್ನು, ನವೇದ - ಅರಿಯದಿದ್ದನು, ಅಥ - ಬಳಿಕ, ಏನಂ - ಈ ದಧಿಮುಖನನ್ನು, ಆಶು - ಜಾಗ್ರತೆಯಾಗಿ, ವೇಗವತ್ - ವೇಗವುಳ್ಳವನಾಗಿ, ವಸುಧಾತಲೇ - ಭೂಪ್ರದೇಶದಲ್ಲಿ, ನಿಷ್ಪಿಪೇಷ - ಅರೆದುಬಿಟ್ಟನು. ॥ ೨೭ ॥ ಭಗ್ನ....ಜಃ - ಮುರಿದುಹೋದ ತೋಳುಗಳೂ ತೊಡೆಗಳೂ ಭುಜ ಶಿರಸ್ಸುಗಳೂ ಉಳ್ಳ, ಶೋಣಿತೋಕ್ಷಿತಃ - ರಕ್ತದಿಂದ ನೆನೆಸಲ್ಪಟ್ಟು, ವಿಹ್ವಲಃ - ಬಳಲಿದ, ವೀರಃ - ಶೂರನಾದ, ಕಪಿಕುಂಜರಃ - ವಾನರೋತ್ತಮನಾದ, ಸಃ - ಆ ದಧಿಮುಖನು, ಸಹಸಾ - ಜಾಗ್ರತೆ ಯಾಗಿ, ಮುಹೂರ್ತಂ - ಸ್ವಲ್ಪಹೊತ್ತು, ಮುಮೋಹ - ಮೂರ್ಛಿತನಾದನು. ॥ ೨೮ ॥ ರಾಜ ಮಾತುಲಃ - ಸುಗ್ರೀವನ ಸೋದರಮಾವನಾದ, ಸಃ - ಆ ದಧಿಮುಖನು, ಸಹಸಾ - ಜಾಗ್ರತೆಯಾಗಿ, ಸಮಾಶ್ವಾಸ್ಯ - ಸಮಾಧಾನಗೊಂಡು, ಸಂಕ್ರುದ್ಧಃ - ಕುಪಿತನಾಗಿ, ಮಧುಮೋಹಿತಾನ್ - ಮದ್ಯದಿಂದ ಮತ್ತರಾದ, ವಾನರಾನ್ - ಕಪಿಗಳನ್ನು, ದಂಡೇನ - ದಂಡದಿಂದ, ವಾರಯಾಮಾಸ - ಹಿಂದಟ್ಟಿದನು. ॥ ೨೯ ॥ ವಾನರರ್ಷಭಃ - ಕಪಿಶ್ರೇಷ್ಠನಾದ, ಸಃ - ಆ ದಧಿಮುಖನು, ತೈರ್ವಾನರೈಃ - ಆ ಅಂಗ ದಾದಿ ಕಪಿಗಳಿಂದ, ಕಥಂಚಿತ್ - ಅತಿ ಪ್ರಯಾಸದಿಂದ, ವಿಮುಕ್ತಃ - ಬಿಡಲ್ಪಟ್ಟವನಾಗಿ, ಏಕಾಂತಂ - ರಹಸ್ಯಸ್ಥಳವನ್ನು, ಆಶ್ರಿತ್ಯ - ಹೊಂದಿ, ಸಮುಪಾಗತಾನ್ - ಬಂದಿರುವ, ಸ್ವಾನ್ಭೃತ್ಯಾನ್ - ತನ್ನ ಕಿಂಕರರನ್ನು ಕುರಿತು, ಉವಾಚ - ಹೇಳಿದನು. ॥ ೩೦ ॥ ಏತೇ - ಈ ಅಂಗದಾದಿಗಳು, ತಿಷ್ಠಂತು - ಇರಲಿ, ನಃ - ನಮಗೆ, ಭರ್ತಾ - ಒಡೆಯನಾದ, ವಿಪುಲಗ್ರೀವಃ - ವಿಸ್ತಾರವಾದ ಕೊರಳುಳ್ಳ, ಸುಗ್ರೀವಃ - ಸುಗ್ರೀವನು, ಯತ್ರ - ಯಾವ ಪ್ರದೇಶದಲ್ಲಿ, ರಾಮೇಣಸಹ - ಶ್ರೀರಾಮನೊಡನೆ,

---

ದನು ಅದೊಂದನ್ನೂ ಲೆಕ್ಕಿಸದೆ ಬಹು ವೇಗವಾಗಿ ಅವನನ್ನು ನೆಲಕ್ಕೆ ಕೆಡುಹಿ ಬಹಳ ಕಠಿನ ವಾಗಿ ಹೊಡೆದುಬಿಟ್ಟನು. ಆಗಲಾ ದಧಿಮುಖನು, ತೊಡೆಗಳು, ಬೆನ್ನು ಮುರಿದು ಸರ್ವಾ ವಯವಗಳೂ ಸ್ವಾಧೀನ ತಪ್ಪಲು ಕ್ಷಣಕಾಲ ದೇಹದಮೇಲೆ ಸ್ಮರಣೆಯಿಲ್ಲದೆ ಮೂರ್ಛೆ ಯೊಂದಿದನು. ಸುಗ್ರೀವನಿಗೆ ಸೋದರಮಾವನಾದ ಆ ದಧಿಮುಖನು ಸ್ವಲ್ಪಹೊತ್ತಿನ ಮೇಲೆ ಮೂರ್ಛೆಯಿಂದೆಚ್ಚೆತ್ತು ಮಧುಪಾನಮತ್ತರಾಗಿದ್ದ ಆ ವಾನರರೆಲ್ಲರನ್ನೂ ತನ್ನ ಕೈಲಿದ್ದ ಮರದಿಂದ ಹೊಡೆದನು. ಆದರೂ ಆ ವಾನರರು ಸಗ್ಗಲಿಲ್ಲವು. ಆಗ ದಧಿಮುಖನು ಅತಿ ಪ್ರಯಾಸಪಟ್ಟು ಆ ವಾನರರ ಉಪಟಳದಿಂದ ತಪ್ಪಿಸಿಕೊಂಡು ರಹಸ್ಯವಾದ ಒಂದು ಸ್ಥಳಕ್ಕೆ ಬಂದು ತನ್ನೊಡನೆ ಬಂದ ವಾನರರನ್ನು ಕುರಿತು, " ಎಲೈ ವಾನರರೇ! ಈ ಅಂಗ ದನೇ ಮೊದಲಾದ ವಾನರರೆಲ್ಲರೂ ಈ ಮಧುವನದಲ್ಲಿಯೇ ಇರಲಿ. ಈಗಲೇ ನಾವೆಲ್ಲರೂ ಬಹು ಶೀಘ್ರವಾಗಿ ನಮ್ಮ ಪ್ರಭುವಾದ ಸುಗ್ರೀವನ ಬಳಿಗೆ ಹೋಗೋಣ. ಆತನು ಶ್ರೀರಾಮ

**ಸ್ಸಹರಾಮೇಣ ತಿಷ್ಠತಿ ॥ ೩೧ ॥ ಸರ್ವಂ ಚೈವಾಂಗದೇ ದೋಷಂ ಶ್ರಾವಯಿಷ್ಯಾಮಿ
ಪಾರ್ಥಿವೇ । ಅಮರ್ಷೀ ವಚನಂ ಶ್ರುತ್ವಾ ಘಾತಯಿಷ್ಯತಿ ವಾನರಾನ್ ॥ ೩೨ ॥
ಇಷ್ಟಂ ಮಧುವನಂ ಹ್ಯೇತತ್ಸುಗ್ರೀವಸ್ಯ ಮಹಾತ್ಮನಃ । ಪಿತೃಪೈತಾಮಹಂ ದಿವ್ಯಂ
ದೇವೈರಪಿ ದುರಾಸದಂ ॥ ೩೩ ॥ ಸವಾನರಾನಿಮಾನ್ ಸರ್ವಾನ್ ಮಧುಲುಬ್ಧಾನ್ಗತಾ
ಯುಷಃ । ಘಾತಯಿಷ್ಯತಿ ದಂಡೇನ ಸುಗ್ರೀವಸ್ಸಸುಹೃಜ್ಜನಾನ್ ॥೩೪॥ ವಧ್ಯಾಹ್ಯೇತೇ
ದುರಾತ್ಮಾನೋ ನೃಪಾಜ್ಞಾಪರಿಭಾವಿನಃ । ಅಮರ್ಷಪ್ರಭವೋ ರೋಷಸ್ಸಫಲೋ**

ತಿಷ್ಠತಿ - ಇರುವನೋ, ತತ್ರ - ಅಲ್ಲಿಗೆ, ಗಚ್ಛಾಮಃ - ಹೋಗೋಣ. ||೩೧|| ಅಂಗದೇಚೈವ - ಅಂಗದ
ನಲ್ಲೀ, ಸರ್ವಂದೋಷಂ - ಸಮಸ್ತ ದೋಷವನ್ನೂ, ಪಾರ್ಥಿವೇ - ಒಡೆಯನಾದ ಸುಗ್ರೀವನಲ್ಲಿ, ಶ್ರಾವ
ಯಿಷ್ಯಾಮಿ - ಕೇಳಿಸೋಣ, ಅಮರ್ಷೀ - ಕೋಪಿಷ್ಠನಾದ ಸುಗ್ರೀವನು, ವಚನಂ - ಮಾತನ್ನು,
ಶ್ರುತ್ವಾ - ಕೇಳಿ, ವಾನರಾನ್ - ಕಪಿಗಳನ್ನು, ಘಾತಯಿಷ್ಯತಿ - ಕೊಲ್ಲಿಸುವನು. || ೩೨ || ಹಿ - ಯಾವ
ಕಾರಣದಿಂದ, ಮಹಾತ್ಮನಃ - ಮಹಾನುಭಾವನಾದ, ಸುಗ್ರೀವಸ್ಯ - ಸುಗ್ರೀವನಿಗೆ, ಪಿತೃಪೈತಾಮಹಂ-
ಪಿತೃಪಿತಾಮಹಾರ್ಜಿತವಾದ, ದಿವ್ಯಂ - ದೇವತಾಸಂಬಂಧವಾದ, ದೇವೈರಪಿ - ದೇವತೆಗಳಿಂದಲೂ,
ದುರಾಸದಂ - ಹೊಂದಲಸಾಧ್ಯವಾದ, ಏತನ್ಮಧುವನಂ - ಈ ಮಧುವನವು, ಇಷ್ಟಂ - ಪ್ರೀತಿಪಾತ್ರ
ವಾದುದೋ. || ೩೩ || ಸಸುಗ್ರೀವಃ - ಆ ಸುಗ್ರೀವನು, ಮಧುಲುಬ್ಧಾನ್ - ಮದ್ಯಪಾನದಲ್ಲಿ ಆಸಕ್ತ
ರಾದಕಾರಣ, ಗತಾಯುಷಃ - ನಾಶವಾದ ಆಯುಸ್ಸುಳ್ಳ, ಸರ್ವಾನ್ - ಸಮಸ್ತರಾದ, ಸಸುಹೃಜ್ಜನಾನ್-
ಸ್ನೇಹಿತರಿಂದೊಡಗೂಡಿದ, ಇಮಾನ್ವಾನರಾನ್ - ಈ ಕಪಿಗಳನ್ನು, ದಂಡೇನ - ಶಿಕ್ಷೆಯಿಂದ, ಘಾತ
ಯಿಷ್ಯತಿ - ಕೊಲ್ಲಿಸುವನು. ॥ ೩೪ || ದುರಾತ್ಮಾನಃ - ದುರ್ಬುದ್ಧಿಯುಳ್ಳ, ನೃಪಾ....ನಃ - ಒಡೆಯ
ನಾಜ್ಞೆಯನ್ನು ತಿರಸ್ಕರಿಸಿರುವ, ಏತೇ - ಈ ಅಂಗದಾದಿಗಳು, ವಧ್ಯಾಹಿ - ವಧಾರ್ಹರಷ್ಟೆ, ನಃ-ನಮ್ಮ,
ಅಮರ್ಷಪ್ರಭವಃ - ಕೋಪದಿಂದ ಹುಟ್ಟಿದ, ರೋಷಃ - ಕ್ರೋಧವು, ಸಫಲಃ - ಸಪ್ರಯೋಜನವು,
ಭವಿಷ್ಯತಿ - ಆಗುವದು. ||೩೫|| ಏವಂ - ಈ ಪ್ರಕಾರವಾಗಿ, ವನಪಾಲಾನ್ - ವನರಕ್ಷಕರನ್ನು ಕುರಿತು,

ನೊಡನೆ ಕುಳಿತಿರುವ ಪ್ರದೇಶಕ್ಕೆ ಹೋಗೋಣ. ||೨೭-೩೧|| ನಾವು ಈಗಲೇ ನಮ್ಮ ಪ್ರಭು
ವಿನ ಬಳಿಗೈದಿ ಈ ಅಂಗದಾದಿಗಳು ಮಾಡಿರುವ ಅಪರಾಧವೆಲ್ಲವನ್ನೂ ಅರಿಕೆ ಮಾಡಿ
ಕೊಳ್ಳೋಣ. ನಾವು ಹೇಳಿದ ಮಾತುಗಳನ್ನು ಕೇಳುತ್ತಲೇ ಮಹಾ ಕೋಪಿಷ್ಠನಾದ ಆತನು
ಇವರೆಲ್ಲರನ್ನೂ ಕೊಲ್ಲಿಸಿಬಿಡುವನು. ಇದರಲ್ಲಿ ಸಂದೇಹವೇ ಇಲ್ಲವು. ಈ ಮಧುವನವು
ನಮ್ಮ ಸುಗ್ರೀವರಾಜನಿಗೆ ತಾತಮುತ್ತಾತಂದಿರ ಕಾಲದಿಂದ ಪರಂಪರಾಗತವಾಗಿ ಬಂದಿರು
ವುದು. ಆದುದರಿಂದ ಇದು ಮಹಾ ಶ್ರೇಷ್ಠವಾದುದು. ಈ ವನವು ದೇವತೆಗಳಿಗೂ ಅಪ್ರ
ಧೃಷ್ಯವಾದುದು. ಇಷ್ಟುಮಾತ್ರವಲ್ಲದೆ ನಮ್ಮ ಪ್ರಭುವಾದ ಸುಗ್ರೀವನಿಗೆ ಈ ವನವು
ಬಹಳ ಪ್ರಿಯಕರವಾದುದು. ಆದುದರಿಂದ ಇದು ಹಾಳಾದುದನ್ನು ಕೇಳಿ ಆತನು ಸುಮ್ಮ
ನಿದ್ದಾನೆಯೇ! ಈ ಅಂಗದಾದಿಗಳೆಲ್ಲರಿಗೂ ವಿನಾಶಕಾಲವೊದಗಿರುವುದು. ಸುಗ್ರೀವರಾಜನು
ಮಿತ್ರರಿಂದ ಕೂಡಿದ ಇವರೆಲ್ಲರನ್ನೂ ಈಗಲೇ ಕೊಲ್ಲಲು ಆಜ್ಞಾಪಿಸಿಬಿಡುವನು. ಎಲೈ
ವಾನರರೇ! ಈ ಅಂಗದಾದಿ ವಾನರರೆಲ್ಲರೂ ರಾಜಾಜ್ಞೆಯನ್ನು ಉಲ್ಲಂಘಿಸಿರುವ ಮಹಾ
ದುರ್ಬುದ್ಧಿಗಳು. ಇವರು ನಿಸ್ಸಂದೇಹವಾಗಿಯೂ ವಧಾರ್ಹರೇ ಸರಿ. ಆದುದರಿಂದ ನಮ್ಮ
ದೊರೆಯು ಇವರನ್ನು ಕೊಲ್ಲದೇ ಉಳಿಸುವುದಿಲ್ಲವು. ನಾವು ಇವರಮೇಲೆ ಹಗೆ ತೀರಿಸಿ

ನೋ ಭವಿಷ್ಯತಿ" ‖ ೩೫ ‖ ಏವಮುಕ್ತ್ವಾ ದಧಿಮುಖೋ ವನಪಾಲಾನ್ಮಹಾಬಲಃ । ಜಗಾಮ ಸಹಸೋತ್ಪತ್ಯ ವನಪಾಲೈಸ್ಸಮನ್ವಿತಃ ‖ ೩೬ ‖ ನಿಮೇಷಾಂತರಮಾತ್ರೇಣ ಸಹಿ ಪ್ರಾಪ್ತೋ ವನಾಲಯಃ । ಸಹಸ್ರಾಂಶುಸುತೋ ಧೀಮಾನ್ ಸುಗ್ರೀವೋ ಯತ್ರ ವಾನರಃ ‖ ೩೭ ‖ ರಾಮಂಚ ಲಕ್ಷ್ಮಣಂಚೈವ ದೃಷ್ಟ್ವಾ ಸುಗ್ರೀವಮೇವಚ । ಸಮಪ್ರತಿಷ್ಠಾಂ ಜಗತೀಮಾಕಾಶಾನ್ನಿಪಪಾತ ಹ ‖೩೮‖ ಸನ್ನಿಪತ್ಯ ಮಹಾವೀರ್ಯಸ್ಸರ್ವೈಸ್ತೈಃ ಪರಿವಾರಿತಃ । ಹರಿರ್ದಧಿಮುಖಃ ಪಾಲೈಃ ಪಾಲಾನಾಂ ಪರಮೇಶ್ವರಃ ‖ ೩೯ ‖

ಸದೀನವದನೋ ಭೂತ್ವಾ ಕೃತ್ವಾ ಶಿರಸಿ ಚಾಂಜಲಿಂ ।
ಸುಗ್ರೀವಸ್ಯ ಶುಭೌ ಮೂರ್ಧ್ನಾ ಚರಣೌ ಪ್ರತ್ಯಪೀಡಯತ್ ‖ ೪೦ ‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಷಷ್ಟಿತಮಸ್ಸರ್ಗಃ

ಉಕ್ತ್ವಾ - ಹೇಳಿ, ವನಪಾಲೈಃ - ತೋಟದ ಕಾವಲುಗಾರರಿಂದ, ಸಮನ್ವಿತಃ - ಕೂಡಿರುವ, ಮಹಾಬಲಃ - ಅತಿ ಬಲಶಾಲಿಯಾದ, ದಧಿಮುಖಃ - ದಧಿಮುಖನು, ಸಹಸಾ - ಜಾಗ್ರತೆಯಾಗಿ, ಉತ್ಪತ್ಯ - ಹಾರಿ, ಜಗಾಮ - ಹೊರಟನು. ‖ ೩೬ ‖ ಯತ್ರ - ಯಾವ ಸ್ಥಳದಲ್ಲಿ, ಸಹಸ್ರಾಂಶುಸುತಃ - ಸೂರ್ಯಪುತ್ರನಾದ, ಧೀಮಾನ್ - ಬುದ್ಧಿವಂತನಾದ, ಸುಗ್ರೀವಃ - ಸುಗ್ರೀವನೆಂಬ, ವಾನರಃ - ವಾನರನು, (ಅಸ್ತಿ - ಇರುವನೋ), ತತ್ರ - ಆ ಸ್ಥಳದಲ್ಲಿ, ವನಾಲಯಃ - ವಾನರನಾದ, ಸಃ - ಆ ದಧಿಮುಖನು, ನಿಮೇ....ಣ - ರೆಪ್ಪೆಹಾಕುವಷ್ಟರಕಾಲದಲ್ಲಿ, ರಾಮಂಚ - ಶ್ರೀರಾಮನನ್ನು, ಲಕ್ಷ್ಮಣಂಚೈವ - ಲಕ್ಷ್ಮಣಸ್ವಾಮಿಯನ್ನೂ, ಸುಗ್ರೀವಮೇವಚ - ಸುಗ್ರೀವನನ್ನೂ ಸಹ, ದೃಷ್ಟ್ವಾ-ಕಂಡು, ಆಕಾಶಾತ್ - ಅಂತರಿಕ್ಷದಿಂದ, ಸಮಪ್ರತಿಷ್ಠಾಂ - ಸಮವಾದ ಸ್ಥಿತಿಯುಳ್ಳ, ಜಗತೀಂ - ಭೂಮಿಯನ್ನು ಕುರಿತು, ನಿಪಪಾತಹ ಇಳಿದನು. ‖ ೩೭-೩೮ ‖ ಮಹಾವೀರ್ಯಃ-ಮಹಾ ಪರಾಕ್ರಮಶಾಲಿಯಾದ, ಪಾಲಾನಾಂ - ತೋಟದ ಕಾವಲುಗಾರರಿಗೆ, ಪರಮೇಶ್ವರಃ - ಮುಖ್ಯಾಧಿಪತಿಯಾದ, ದಧಿಮುಖಃ - ದಧಿಮುಖನೆಂಬ, ಹರಿಃ - ವಾನರನು, ಸರ್ವೈಃ - ಸಮಸ್ತರಾದ, ತೈಃಪಾಲೈಃ - ಆ ವನಪಾಲಕರಿಂದ, ಪರಿವಾರಿತಃ - ಸುತ್ತುವರೆಯಲಾದವನಾಗಿ, ಸನ್ನಿಪತ್ಯ - ಧುಮುಕಿ, ದೀನವದನಃ - ದೈನ್ಯವಾದ ಮುಖವುಳ್ಳವನು, ಭೂತ್ವಾ - ಆಗಿ, ಶಿರಸಿ - ಮಂಡೆಯಲ್ಲಿ, ಅಂಜಲಿಂಚ - ಬೊಗಸೆಯನ್ನೂ ಸಹ, ಕೃತ್ವಾ-ಮಾಡಿ, ಸುಗ್ರೀವಸ್ಯ-ಸುಗ್ರೀವನ, ಶುಭೌ-ಶುಭಕರವಾದ, ಚರಣೌ - ಪಾದಗಳನ್ನು, ಮೂರ್ಧ್ನಾ-ಶಿರಸ್ಸಿನಿಂದ, ಪ್ರತ್ಯ....ತ್-ಪೀಡಿಸಿದನು, (ಅಂದರೆ ವಂದಿಸಿದನು). ‖೩೯-೪೦‖

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ದ್ವಿಷಷ್ಟಿತಮಸ್ಸರ್ಗಃ

ಕೊಳ್ಳಲು ಇದೇ ಯುಕ್ತವಾದ ಮಾರ್ಗವು" ಎಂದು ಹೇಳಿದನು. ‖ ೩೨–೩೫ ‖ ಮಹಾಪರಾಕ್ರಮಶಾಲಿಯಾದ ಆ ದಧಿಮುಖನೀರೀತಿ ಹೇಳಿ ತನ್ನ ಭಟರೊಡನೆ ಆಕಾಶಮಾರ್ಗದಿಂದ ಒಂದು ನಿಮಿಷದೊಳಗಾಗಿ ಸಮಪ್ರದೇಶಕ್ಕಿಳಿದನು. ಮಹಾ ಬಲಾಢ್ಯನೂ, ವನಪಾಲಕನೂ, ವನಪಾಲಕರೆಲ್ಲರಿಗೂ ಪ್ರಭುವೂ ಆದ ಆ ದಧಿಮುಖನು ಭಟರಿಂದ ಪರಿವೃತನಾಗಿ ಬಹಳವಾದ ವ್ಯಸನದಿಂದ ಕೂಡಿದ ಮುಖವುಳ್ಳವನಾಗಿ ಶಿರಸ್ಸಿನಲ್ಲಿ ಅಂಜಲಿಯನಿಟ್ಟುಕೊಂಡು ಮಂಗಳಕರವಾದ ಸುಗ್ರೀವನ ಪದತಲದಲ್ಲಿ ಬಿದ್ದನು. ‖ ೩೬–೪೦ ‖

ಇಂತಿದು ಅಂಗದಾದಿ ವಾನರ ನಿರಾಕೃತ ದಧಿಮುಖ ಪರಾಜಯ ವೃತ್ತಾಂತವೆಂಬ ಅರುವತ್ತೆರಡನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ತ್ರಿಷಷ್ಠಿತಮಸ್ಸರ್ಗಃ

ತತೋ ಮೂರ್ಧ್ನಾ ನಿಪತಿತಂ ವಾನರಂ ವಾನರರ್ಷಭಃ । ದೃಷ್ಟ್ವೈವೋ ದ್ವಿಗ್ನಹೃದಯೋ ವಾಕ್ಯಮೇತದುವಾಚ ಹ ॥ ೧ ॥ " ಉತ್ತಿಷ್ಠೋತ್ತಿಷ್ಠ ಕಸ್ಮಾತ್ತ್ವಂ ಪಾದಯೋಃ ಪತಿತೋ ಮಮ । ಅಭಯಂ ತೇ ಭವೇದ್ವೀರ! ಸರ್ವಮೇವಾಭಿಧೀಯತಾಂ " ॥ ೨ ॥ ಸತು ವಿಶ್ವಾಸಿತಸ್ತೇನ ಸುಗ್ರೀವೇಣ ಮಹಾತ್ಮನಾ । ಉತ್ಥಾಯ ಸುಮಹಾಪ್ರಾಜ್ಞೋ ವಾಕ್ಯಂ ದಧಿಮುಖೋಽಬ್ರವೀತ್ ॥ ೩ ॥ " ನೈವರ್ಕ್ಷರಜಸಾ ರಾಜನ್ನತ್ವಯಾ ನಾಪಿ ವಾಲಿನಾ । ವನಂ ನಿಸೃಷ್ಟಪೂರ್ವಂಹಿ ಭಕ್ಷಿತಂ ತಚ್ಚ ವಾನರೈಃ

ತತಃ - ಬಳಿಕ, ವಾನರರ್ಷಭಃ - ವಾನರಶ್ರೇಷ್ಠನಾದ ಸುಗ್ರೀವನು, ಮೂರ್ಧ್ನಾ - ಶಿರಸ್ಸಿನಿಂದ, ನಿಪತಿತಂ - ಬೀಳುತ್ತಿರುವ. ವಾನರಂ - ದಧಿಮುಖನನ್ನು, ದೃಷ್ಟ್ವೈವ - ನೋಡುತ್ತಲೇ, ಉದ್ವಿ....ಯಃ - ಹೆದರಿದ ಮನಸ್ಸುಳ್ಳವನಾಗಿ, ಏತದ್ವಾಕ್ಯಂ - ಈ ಮಾತನ್ನು, ಉವಾಚಹ - ಹೇಳಿದನು. ॥ ೧ ॥ ಹೇ ವೀರ - ಎಲೈ ಶೂರನೇ, ತ್ವಂ - ನೀನು, ಮಮಪಾದಯೋಃ - ನನ್ನ ಪಾದಗಳಲ್ಲಿ, ಪತಿತಃ - ಬಿದ್ದಿರುವೆ, ಉತ್ತಿಷ್ಠೋತ್ತಿಷ್ಠ - ಏಳೇಳು, ತೇ - ನಿನಗೆ, ಅಭಯಂ - ಅಭಯವು, ಭವೇತ್ - ಆದೀತು, ಸರ್ವಮೇವ - ಸಮಸ್ತವೂ, ಅಭಿಧೀಯತಾಂ - ಹೇಳಲ್ಪಡಲಿ. ॥ ೨ ॥ ಮಹಾತ್ಮನಾ - ಮಹಾನುಭಾವನಾದ, ತೇನಸುಗ್ರೀವೇಣ - ಆ ಸುಗ್ರೀವನಿಂದ, ವಿಶ್ವಾಸಿತಃ - ವಿಶ್ವಾಸಗೊಳಿಸಲ್ಪಟ್ಟ, ಸುಮಹಾಪ್ರಾಜ್ಞಃ - ಮಹಾ ಬುದ್ಧಿಶಾಲಿಯಾದ, ಸದಧಿಮುಖಸ್ತು - ಆ ದಧಿಮುಖನಾದರೆ, ಉತ್ಥಾಯ - ಮೇಲಕ್ಕೆದ್ದು, ವಾಕ್ಯಂ - ಮಾತನ್ನು, ಅಬ್ರವೀತ್ - ಹೇಳಿದನು. ॥೩॥ ಹೇ ರಾಜನ್ - ಎಲೈ ಪ್ರಭುವೆ, ಯತ್ - ಯಾವ ವನವು, ಋಕ್ಷರಜಸಾ - ಋಕ್ಷರಜಸ್ಸೆಂಬ ನಿಮ್ಮ ತಂದೆಯಿಂದ, ನನಿಸೃಷ್ಟಪೂರ್ವಂ - ಭುಜಿಸುವದಕ್ಕಾಗಿ ಪೂರ್ವದಲ್ಲಿ ಯಾರಿಗೂ ಕೊಡಲ್ಪಡಲಿಲ್ಲವೋ, ತ್ವಯಾ - ನಿನ್ನಿಂದಲೂ, ನ - ಕೊಡಲ್ಪಡಲಿಲ್ಲವೋ, ವಾಲಿನಾಪಿ - ವಾಲಿಯಿಂದಲೂ ಕೂಡ, ನ -

---

ಆಗ ವಾನರೋತ್ತಮನಾದ ಸುಗ್ರೀವನು ತನ್ನ ಪದತಲದಲ್ಲಿ ಅಂಜಲಿಶಿರಸ್ಕನಾಗಿ ಬಿದ್ದಿರುವ ದಧಿಮುಖನನ್ನು ನೋಡಿ ಮನಸ್ಸಿನಲ್ಲಿ ಭಯಪಟ್ಟವನಾಗಿ, " ಎಲೈ ವೀರನಾದ ದಧಿಮುಖನೇ! ಮೇಲಕ್ಕೇಳು. ನೀನು ನನ್ನ ಕಾಲುಗಳಮೇಲೆ ಬೀಳಲು ಕಾರಣವೇನು? ಹೇಳು; ಇದೋ ಅಭಯವಿತ್ತಿರುವೆನು; ಭಯಪಡಬೇಡ. ನಿನ್ನ ವೃತ್ತಾಂತವೆಲ್ಲವನ್ನೂ ವಿಸ್ತಾರವಾಗಿ ಹೇಳು " ಎಂದನು. ಹೀಗೆ ಮಹಾ ಪೂಜ್ಯವಾದ ಸ್ವಭಾವವುಳ್ಳ ಆ ಸುಗ್ರೀವನಿಂದ ಸಮಾಧಾನಗೊಳಿಸಲ್ಪಟ್ಟ ಮಹಾ ಬುದ್ಧಿಶಾಲಿಯಾದ ಆ ದಧಿಮುಖನು ಆತನ ಪದತಲದಿಂದ ಮೇಲಕ್ಕೆದ್ದು ಆತನನ್ನು ಕುರಿತು, " ಎಲೈ ಮಹಾರಾಜನೇ! ನಿನ್ನ ತಂದೆಯಾದ ಋಕ್ಷರಜಸ್ಸಿನ ಕಾಲದಲ್ಲಿಯಾಗಲಿ, ನಿನ್ನ ಅಣ್ಣನಾದ ವಾಲಿಯ ಕಾಲದಲ್ಲಿಯಾಗಲಿ, ಹಿಂದೆ ನೀನು ರಾಜನಾಗಿದ್ದ ಕಾಲದಲ್ಲಿಯಾಗಲಿ ಮಧುವನವು ಇತರ ಭೋಗಕ್ಕಾಗಿ ಬಿಡಲ್ಪಟ್ಟರಲ್ಲಿಲ್ಲ. ಈಗ ಅಂತಹ ಮಧುವನವು ಅಂಗದನೇ ಮೊದಲಾದ ವಾನರರಿಂದ ಸಂಪೂರ್ಣವಾಗಿ

॥ ೪ ॥ ಏಭಿಃ ಪ್ರಧರ್ಷಿತಾಶ್ಚೈವ ವಾನರಾ ವನರಕ್ಷಿಭಿಃ । ಮಧೂನ್ಯಚಿಂತಯಿತ್ವೇಮಾಂ ಭಕ್ಷಯಂತಿ ಪಿಬಂತಿಚ ॥ ೫ ॥ ಶಿಷ್ಟಮತ್ರಾಪವಿಧ್ಯಂತಿ ಭಕ್ಷಯಂತಿ ತಥಾಪರೇ । ನಿವಾರ್ಯಮಾಣಾಸ್ತೇ ಸರ್ವೇಭ್ರುವೌ ವೈ ದರ್ಶಯಂತಿಹಿ ॥ ೬ ॥ ಇಮೇಹಿ ಸಂರಬ್ಧ ತರಾಸ್ತಥಾ ತೈಸ್ಸಂಪ್ರಧರ್ಷಿತಾಃ । ವಾರಯಂತೋ ವನಾತ್ತಸ್ಮಾತ್ಕ್ರುದ್ಧೈರ್ವಾನರ ಪುಂಗವೈಃ ॥ ೭ ॥ ತತಸ್ತೈರ್ಬಹುಭಿರ್ವೀರೈರ್ವಾನರೈರ್ವಾನರರ್ಷಭ! । ಸಂರಕ್ತ ನಯನೈಃ ಕ್ರೋಧಾದ್ಧರಯಃ ಪ್ರವಿಚಾಲಿತಾಃ ॥ ೮ ॥ ಪಾಣಿಭಿರ್ನಿಹತಾಃ ಕೇಚಿ ತ್ಕೇಚಿಜ್ಜಾನುಭಿರಾಹತಾಃ । ಪ್ರಕೃಷ್ಟಾಶ್ಚ ಯಥಾ ಕಾಮಂ ದೇವಮಾರ್ಗಂಚ

ಕೊಡಲ್ಪಡಲಿಲ್ಲವೋ, ತದ್ವನಂಚ - ಆ ವನವೂ, ವಾನರೈಃ - ಕಪಿಗಳಿಂದ, ಭಕ್ಷಿತಂಹಿ - ಭುಜಿಸ ಲ್ಪಟ್ಟಿತು. ॥ ೪ ॥ ವನರಕ್ಷಿಭಿಃ - ತೋಟದ ಕಾವಲುಗಾರರಾದ, ಏಭಿಃ - ಇವರಿಂದ, ಪ್ರಧರ್ಷಿತಾಶ್ಚ - ಅಡ್ಡಿಮಾಡಲ್ಪಟ್ಟವರೂ ಆದ, ವಾನರಾಃ - ಕಪಿಗಳು, ಇಮಾನ್ - ಇವರನ್ನು, ಅಚಿಂತಯಿತ್ವಾ - ಲಕ್ಷ್ಯವಿಡದೆ, ಮಧೂನಿ - ಮದ್ಯಗಳನ್ನು, ಭಕ್ಷಯಂತಿ - ಭುಜಿಸುತ್ತಿದ್ದಾರೆ, ಪಿಬಂತಿಚ - ಕುಡಿ ಯಲೂ ಕುಡಿಯುತ್ತಿದ್ದಾರೆ. ॥೫॥ ಅತ್ರ - ಈ ವನದಲ್ಲಿ, ಶಿಷ್ಟಂ-ತಿಂದುಮಿಕ್ಕದ್ದನ್ನು, ಅಪವಿಧ್ಯಂತಿ- ಚೆಲ್ಲುತ್ತಾರೆ, ಅಪರೇ - ಇನ್ನು ಕೆಲವರು, ತಥಾ - ಹಾಗೆಯೇ, ಭಕ್ಷಯಂತಿ - ತಿನ್ನುತ್ತಾರೆ, ನಿವಾರ್ಯ ಮಾಣಾಃ - ಅಡ್ಡಿಮಾಡಲ್ಪಟ್ಟ, ತೇಸರ್ವೇ - ಅವರೆಲ್ಲರೂ, ಭ್ರುವೌವೈ - ಹುಬ್ಬುಗಳನ್ನಾದರೆ, ದರ್ಶಯಂತಿಹಿ - ತೋರುವರಷ್ಟೆ. ॥ ೬ ॥ ಸಂರಬ್ಧತರಾಃ - ಕಡುಕೋಪಿಗಳಾದ, ಇಮೇ - ಈ ವನ ಪಾಲಕರು, ತಥಾ - ಆ ಪರಿಯಾಗಿ, ತಸ್ಮಾದ್ವನಾತ್ - ಆ ವನದಿಂದ, ವಾರಯಂತಃ - ಅಡ್ಡಿಮಾಡು ವವರಾಗಿ, ಕ್ರುದ್ಧೈಃ - ಕೋಪಿಷ್ಠರಾದ, ತೈರ್ವಾ....ವೈಃ - ಆ ವಾನರೋತ್ತಮರಿಂದ, ಸಂಪ್ರ....ಹಿ- ತಿರಸ್ಕರಿಸಲ್ಪಟ್ಟರಷ್ಟೆ. ॥ ೭ ॥ ಹೇ ವಾನರರ್ಷಭ - ಎಲೈ ವಾನರರಾಜನೆ, ತತಃ - ಬಳಿಕ, ಬಹುಭಿಃ - ಅನೇಕರಾದ, ವೀರೈಃ - ಶೂರರಾದ, ಕ್ರೋಧಾತ್ - ಕೋಪದಿಂದ, ಸಂರಕ್ತನಯನೈಃ - ಕೆಂಗಣ್ಣು ಗಳುಳ್ಳ, ತೈರ್ವಾನರೈಃ - ಆ ಕಪಿಗಳಿಂದ, ಹರಯಃ - ವನಪಾಲಕರಾದ ವಾನರರು, ಪ್ರವಿಚಾಲಿತಾಃ- ಹೊರಡಿಸಲ್ಪಟ್ಟರು. ॥೮॥ ಕೇಚಿತ್ - ಕೆಲವರು, ಪಾಣಿಭಿಃ - ಹಸ್ತಗಳಿಂದ, ನಿಹತಾಃ - ಹೊಡಿಯ ಲ್ಪಟ್ಟರು, ಕೇಚಿತ್ - ಕೆಲವರು, ಜಾನುಭಿಃ - ಮೊಣಕಾಲುಗಳಿಂದ, ಅಹತಾಃ - ಹೊಡೆಯಲ್ಪಟ್ಟರು,

---

ಭುಜಿಸಲ್ಪಟ್ಟಿತು. ಅವರು ಈ ವನಪಾಲಕರೆಲ್ಲರನ್ನೂ ಹೊಡೆದು ಬಡಿದು ಓಡಿಸಿ ಆ ವನ ದಲ್ಲಿದ್ದ ಹಣ್ಣುಹಂಪಲುಗಳನ್ನೂ ಯಥೇಚ್ಛವಾಗಿ ತಿಂದು ಜೇನನ್ನೆಲ್ಲಾ ಕುಡಿದುಬಿಟ್ಟರು. ॥ ೧–೫ ॥ ಅಲ್ಲಿರುವ ವಾನರರು ಜೇನನ್ನು ಕುಡಿದು ಮಿಕ್ಕುದನ್ನು ನೆಲಕ್ಕೆ ಸುರಿಯುತ್ತಿರು ವರು. ಈ ವನಪಾಲಕರು "ಅಯ್ಯಾ ಬೇಡಿರಿ" ಎಂದು ಬೇಡಿಕೊಂಡರೂ ಕೇಳದೆ ಅವ ರೆಲ್ಲರೂ ಇವರನ್ನು ಹೆದರಿಸುತ್ತಿದ್ದರು. ಈ ವನಪಾಲಕರು ಬೇಡವೆಂದು ವಿಜೃಂಭಿಸಿ ಹೇಳಿ ದಾಗ ಅಂಗದನೇ ಮೊದಲಾದ ಆ ವಾನರರೆಲ್ಲರೂ ಬಹಳವಾಗಿ ಕನಲಿ ಇವರನ್ನು ಅನೇಕ ವಿಧವಾಗಿ ಹಿಂಸಿಸಿದರು. ಎಲೈ ವಾನರೋತ್ತಮನೇ! ಇಷ್ಟುಮಾತ್ರವಲ್ಲ; ಬಹು ಸಂಖ್ಯಾ ಕರೂ, ಮಹಾ ಶೂರರೂ ಆದ ಆ ಅಂಗದಾದಿ ವಾನರರು ಮಧುಪಾನಮತ್ತತೆಯಿಂದ ಕೆಂಪೇರಿದ ಕಣ್ಣುಗಳುಳ್ಳವರೂ ಮಹಾ ಕ್ರುದ್ಧರೂ ಆಗಿ ಈ ವನಪಾಲಕರೆಲ್ಲರನ್ನೂ ಹೊಡೆ ದೋಡಿಸಿದರು. ಇವರಲ್ಲಿ ಕೆಲವರನ್ನು ಕೈಗಳಿಂದ ಹೊಡೆದರು. ಕೆಲವರನ್ನು ಮೊಳಕಾಲು

ದರ್ಶಿತಾಃ ॥ ೯ ॥ ಏವಮೇತೇ ಹತಾಶ್ಶೂರಾಸ್ತ್ವಯಿ ತಿಷ್ಠತಿ ಭರ್ತರಿ । ಕೃತ್ಸ್ನಂ ಮಧುವನಂ ಚೈವ ಪ್ರಕಾಮಂ ತೈಃ ಪ್ರಭಕ್ಷ್ಯತೇ" ॥ ೧೦ ॥ ಏವಂ ವಿಜ್ಞಾಪ್ಯಮಾನಂ ತಂ ಸುಗ್ರೀವಂ ವಾನರರ್ಷಭಂ । ಅಪೃಚ್ಛತ್ತಂ ಮಹಾಪ್ರಾಜ್ಞೋ ಲಕ್ಷ್ಮಣಃ ಪರ ವೀರಹಾ ॥ ೧೧ ॥ "ಕಿಮಯಂ ವಾನರೋ ರಾಜನ್! ವನಪಃ ಪ್ರತ್ಯುಪಸ್ಥಿತಃ । ಕಂಚಾರ್ಥಮಭಿನಿರ್ದಿಶ್ಯ ದುಃಖಿತೋ ವಾಕ್ಯಮಬ್ರವೀತ್ ॥ ೧೨ ॥ ಏವಮುಕ್ತಸ್ತು ಸುಗ್ರೀವೋ ಲಕ್ಷ್ಮಣೇನ ಮಹಾತ್ಮನಾ । ಲಕ್ಷ್ಮಣಂ ಪ್ರತ್ಯುವಾಚೇದಂ ವಾಕ್ಯಂ ವಾಕ್ಯ

ಯಥಾಕಾಮಂ - ಮನಬಂದಂತೆ, ಪ್ರಕೃಷ್ಟಾಶ್ಚ - ಸೆಳೆಯಲ್ಪಟ್ಟವರೂ ಆಗಿ, ದೇವಮಾರ್ಗಂಚ - ಅಪಾನಮಾರ್ಗವನ್ನೂ ಸಹ, ದರ್ಶಿತಾಃ - ತೋರಿಸಲ್ಪಟ್ಟರು. ॥ ೯ ॥ ಭರ್ತರಿ - ಒಡೆಯನಾದ, ತ್ವಯಿ - ನೀನು, ತಿಷ್ಠತಿ - ಇರುವಾಗಲೇ, ಏತೇಶೂರಾಃ - ಈ ವೀರರು, ಏವಂ - ಈ ಪರಿ ಯಾಗಿ, ಹತಾಃ - ಕೊಲ್ಲಲ್ಪಟ್ಟರು, ತೈಃ - ಆ ಅಂಗದಾದಿಗಳಿಂದ, ಕೃತ್ಸ್ನಂ - ಸಮಸ್ತವಾದ, ಮಧುವನಂಚ - ಮಧುವನವೂ, ಪ್ರಕಾಮಮೇವ - ಮನಬಂದಂತೆ, ಪ್ರಭಕ್ಷ್ಯತೇ - ಭಕ್ಷಣೆಮಾಡ ಲ್ಪಡುತ್ತಿದೆ. ॥ ೧೦ ॥ ಪರವೀರಹಾ - ಶತ್ರುಶೂರಸಂಹಾರಕನಾದ, ಮಹಾಪ್ರಾಜ್ಞಃ - ಮಹಾ ಬುದ್ಧಿ ಶಾಲಿಯಾದ, ಲಕ್ಷ್ಮಣಃ - ಲಕ್ಷ್ಮಣನು, ಏವಂ - ಈ ಪ್ರಕಾರವಾಗಿ, ವಿಜ್ಞಾಪ್ಯಮಾನಂ - ಅರಿಕೆ ಮಾಡಲ್ಪಟ್ಟ, ವಾನರರ್ಷಭಂ - ಕಪಿಶ್ರೇಷ್ಠನಾದ, ತಂಸುಗ್ರೀವಂ - ಆ ಸುಗ್ರೀವನನ್ನು ಕುರಿತು, ತಂ- ಆ ದಧಿಮುಖನನ್ನು, ಅಪೃಚ್ಛತ್ - ಕೇಳಿದನು. ॥ ೧೧ ॥ ಹೇ ರಾಜನ್ - ಎಲೈ ರಾಜನೆ, ವನಪಃ - ವನಪಾಲಕನಾದ, ಅಯಂವಾನರಃ - ಈ ವಾನರನು, ಕಿಂಪ್ರತ್ಯುಪಸ್ಥಿತಃ - ಏತಕ್ಕೆ ಬಂದನು, ಕಂಚಾರ್ಥಂ - ಯಾವ ಪ್ರಯೋಜನವನ್ನು, ಅಭಿನಿರ್ದಿಶ್ಯ - ಉದ್ದೇಶಿಸಿ, ದುಃಖಿತಃ - ವ್ಯಸನ ಗೊಂಡವನಾಗಿ, ವಾಕ್ಯಂ - ಮಾತನ್ನು, ಅಬ್ರವೀತ್ - ಹೇಳಿದನು. ॥ ೧೨ ॥ ಮಹಾತ್ಮನಾ - ಮಹಾನುಭಾವನಾದ, ಲಕ್ಷ್ಮಣೇನ - ಲಕ್ಷ್ಮಣನಿಂದ, ಏವಂ - ಈ ಪರಿಯಾಗಿ, ಉಕ್ತಃ - ಹೇಳ ಲ್ಪಟ್ಟ, ವಾಕ್ಯ....ದಃ - ಮಾತುಗಾರಿಕೆಯಲ್ಲಿ ಚತುರನಾದ, ಸುಗ್ರೀವಸ್ತು - ಸುಗ್ರೀವನಾದರೆ, ಲಕ್ಷ್ಮಣಂ - ಲಕ್ಷ್ಮಣನನ್ನು ಕುರಿತು, ಇದಂವಾಕ್ಯಂ - ಈ ಮಾತನ್ನು, ಪ್ರತ್ಯುವಾಚ - ಹೇಳಿದನು.

ಗಳಿಂದ ತಿವಿದರು, ಕೆಲವರನ್ನು ಕಾಲುಗಳಿಂದ ಒದೆದರು, ಕೆಲವರನ್ನು ಮನಬಂದಂತೆ ಎಳದಾಡಿದರು. ಕೆಲವರನ್ನು ತಮ್ಮ ಮೊಣಕಾಲುಗಳಿಗೆ ಅವರ ತಲೆಗಳನ್ನು ಸೇರಿಸಿ ಗುದಸ್ಥಾನ ವನ್ನು ತೋರಿಸಿಬಿಟ್ಟರು. ಎಲೈ ಪ್ರಭುವೇ! ರಾಜನಾದ ನೀನಿರುವಾಗಲೂ, ಆ ವಾನರರು ಏನೊಂದೂ ಲಕ್ಷ್ಯವಿಲ್ಲದೆ ವನಪಾಲಕರಾದ ಇವರನ್ನು ಚೆನ್ನಾಗಿ ಮರ್ದಿಸಿರುವರು. ಮಧು ವನದಲ್ಲಿದ್ದ ಮಧುವನ್ನು ನಿರ್ವಿಶೇಷವಾಗಿ ಕುಡಿದುಬಿಟ್ಟರು" ಎಂದು ಅರಿಕೆ ಮಾಡಿದನು. ॥ ೬-೧೦ ॥ ದಧಿಮುಖನು ಸುಗ್ರೀವನಿಗೆ ಹೀಗೆ ಅರಿಕೆ ಮಾಡುತ್ತಿರಲು, ಶತ್ರುಮರ್ದನ ನಾದ ಲಕ್ಷ್ಮಣಸ್ವಾಮಿಯು, "ಎಲೈ ಸುಗ್ರೀವರಾಜನೇ! ವನಪಾಲಕನಾದ ಈ ವಾನರನು ಇಲ್ಲಿಗೇಕೆ ಬಂದಿರುವನು? ಮಹಾ ವ್ಯಸನದಿಂದ ಕೂಡಿದವನಾಗಿ ನಿನ್ನೊಡನೆ ಈತನೇನು ಹೇಳುತ್ತಿರುವನು? ಇವನು ಯಾವ ವಿಷಯವನ್ನು ಕುರಿತು ಮಾತನಾಡುತ್ತಿರುವನು?" ಎಂದು ಕೇಳಿದನು. ಮಹಾತ್ಮನಾದ ಲಕ್ಷ್ಮಣನು ಹೀಗೆ ಕೇಳಲು ವಾಕ್ಯವಿಶಾರದನಾದ ಸುಗ್ರೀವನು ಆತನನ್ನು ಕುರಿತು, "ಎಲೈ ಪೂಜ್ಯನೇ! ನಾನು ಮಹಾ ಪರಾಕ್ರಮಶಾಲಿ

ವಿಶಾರದಃ ॥೧೩॥ "ಆರ್ಯ ಲಕ್ಷ್ಮಣ! ಸಂಪ್ರಾಹ ವೀರೋ ದಧಿಮುಖಃ ಕಪಿಃ। ಅಂಗದಪ್ರಮುಖೈರ್ವೀರೈರ್ಭಕ್ಷಿತಂ ಮಧು ವಾನರೈಃ ॥೧೪॥ ವಿಚಿತ್ಯ ದಕ್ಷಿಣಾ ಮಾಶಾ ಮಾಗತೈರ್ಹರಿಪುಂಗವೈಃ । ನೈಷಾಮಕೃತಕೃತ್ಯಾನಾಮೀದೃಶಸ್ಸ್ಯಾದುಪ ಕ್ರಮಃ ॥೧೫॥ ಆಗತೈಶ್ಚ ಪ್ರಮಥಿತಂ ಯಥಾ ಮಧುವನಂ ಹಿ ತೈಃ । ಧರ್ಷಿತಂಚ ವನಂ ಕೃತ್ಸ್ನಮುಪಯುಕ್ತಂಚ ವಾನರೈಃ ॥೧೬॥ ವನಂ ಯದಾಭಿಪನ್ನಾಸ್ತೇ ಸಾಧಿತಂ ಕರ್ಮ ವಾನರೈಃ । ದೃಷ್ಟಾ ದೇವೀ ನಸಂದೇಹೋ ನಚಾಽನ್ಯೇನ ಹನೂಮತಾ ।

॥೧೪॥ ಹೇ ಆರ್ಯ - ಎಲೈ ಪೂಜ್ಯನೆ, ಹೇ ಲಕ್ಷ್ಮಣ - ಎಲೈ ಲಕ್ಷ್ಮಣನೆ, ದಕ್ಷಿಣಾಮಾಶಾಂ - ದಕ್ಷಿಣದಿಕ್ಕನ್ನು, ವಿಚಿತ್ಯ - ಹುಡುಕಿ, ಆಗತೈಃ - ಬಂದಿರುವ, ಅಂಗ....ಖೈಃ - ಅಂಗದನೇ ಮೊದಲಾದ, ಹರಿಪುಂಗವೈಃ - ವಾನರಶ್ರೇಷ್ಠರಾದ, ವೀರೈಃ - ಶೂರರಾದ, ವಾನರೈಃ - ಕಪಿಗಳಿಂದ, ಮಧು - ಜೇನು, ಭಕ್ಷಿತಂ - ಭುಜಿಸಲ್ಪಟ್ಟಿತು, (ಇತಿ - ಇಂತೆಂದು), ವೀರಃ - ಶೂರರಾದ, ದಧಿಮುಖಃ - ದಧಿಮುಖನೆಂಬ, ಕಪಿಃ - ವಾನರನು, ಸಂಪ್ರಾಹ - ಹೇಳಿದನು. ॥೧೫॥ ಅಕೃ....ನಾಂ- ಕೃತಕೃತ್ಯರಲ್ಲದಿರುವ, ಏಷಾಂ - ಈ ಕಪಿಗಳಿಗೆ, ಉಪಕ್ರಮಃ - ಕಾರ್ಯಾರಂಭವು, ಈದೃಶಃ - ಇಂಥದು, ನಸ್ಯಾತ್ - ಆಗಲಾರದು, ಯಥಾ - ಹೇಗೆ, ಆಗತೈಃ - ದಕ್ಷಿಣದಿಕ್ಕಿನಿಂದ ಬಂದಿರುವ, ತೈಃ - ಆ ವಾನರರಿಂದ, ಮಧುವನಂ - ಮಧುವನವು, ಪ್ರಮಥಿತಂಹಿ - ನಾಶಗೊಳಿಸಲ್ಪಟ್ಟಿತಷ್ಟೆ. ॥೧೬॥ ವಾನರೈಃ - ಕಪಿಗಳಿಂದ, ಕೃತ್ಸ್ನಂ - ಸಮಸ್ತವಾದ, ವನಂಚ - ಮಧುವನವು, ಧರ್ಷಿತಂ - ತಿರಸ್ಕರಿಸಲ್ಪಟ್ಟು, ಉಪಯುಕ್ತಂಚ - ಉಪಯೋಗಿಸಿಕೊಳ್ಳಲೂ ಆಯಿತು, ಯದಾ- ಯಾವ ಕಾಲದಲ್ಲಿ, ತೇವಾನರಾಃ - ಆ ಕಪಿಗಳು, ವನಂ - ವನವನ್ನು, ಅಭಿಪನ್ನಾಃ - ಹೊಕ್ಕರೋ, ತದಾ - ಆ ಕಾಲದಲ್ಲಿಯೆ, ವಾನರೈಃ - ಕಪಿಗಳಿಂದ, ಕರ್ಮಚ - ಸೀತಾದರ್ಶನರೂಪವ್ಯಾಪಾರವೂ ಸಹ, ಸಾಧಿತಂ - ಸಾಧಿಸಲ್ಪಟ್ಟಿತು, ದೇವೀ - ಸೀತಾದೇವಿಯು, ಹನುಮತಾ - ಅಂಜನೇಯನಿಂದ, ದೃಷ್ಟಾ - ನೋಡಲ್ಪಟ್ಟಳು, ಅನ್ಯೇನ - ಇತರನಿಂದ, ನದೃಷ್ಟಾ - ನೋಡಲ್ಪಡಲಿಲ್ಲ, ಅಸ್ಯಕರ್ಮಣಃ -

ಗಳಾದ ಅಂಗದನೇ ಮೊದಲಾದವರನ್ನು ದಕ್ಷಿಣದಿಕ್ಕಿಗೆ ಕಳುಹಿಸಿದ್ದೆನಷ್ಟೆ. ಮಹಾ ಪರಾಕ್ರಮ ಶಾಲಿಗಳಾದ ಆ ಅಂಗದಾದಿ ವಾನರೋತ್ತಮರು ದಕ್ಷಿಣದಿಕ್ಕಿನಲ್ಲೆಲ್ಲಾ ಸೀತಾದೇವಿಯನ್ನು ಹುಡುಕಿ ನೋಡಿ ಹಿಂತಿರುಗಿ ಬಂದು ನಮ್ಮ ಮಧುವನದಲ್ಲಿ ಮಧುಪಾನ ಮಾಡುತ್ತಿರುವ ರೆಂದು ವನರಕ್ಷಕರೊಡೆಯನಾದ ಈ ದಧಿಮುಖನು ಹೇಳುತ್ತಿರುವನು. ಎಲೈ ಲಕ್ಷ್ಮಣನೇ! ಈ ವಾನರರು ಕೃತಕಾರ್ಯರಾಗಿಯೇ ಬಂದಿರಬೇಕು. ಇಲ್ಲದಿದ್ದರೆ ಸೀತೆಯನ್ನು ಹುಡುಕಲು ದಕ್ಷಿಣದಿಕ್ಕಿಗೆ ಹೋಗಿ ಹಿಂತಿರುಗಿರುವ ಅಂಗದನೇ ಮೊದಲಾದ ಈ ವಾನರರು ಮಧುವನ ವನ್ನು ಪ್ರವೇಶಿಸಿ ಮಧುಪಾನವನ್ನು ಮಾಡುವಷ್ಟು ಧೈರ್ಯವನ್ನು ವಹಿಸುತ್ತಿರಲಿಲ್ಲವು. ಇವರು, ಮಧುವನವು ನನಗೆ ಅತಿ ಪ್ರಿಯತಮವೆಂಬ ವಿಷಯವನ್ನು ಬಲ್ಲರು; ನನ್ನ ಆಜ್ಞೆಯೂ ಮಹಾ ಕಠಿನವಾದುದೆಂಬುದನ್ನೂ ಬಲ್ಲರು. ಆದರೂ ಇವರು ಆ ವನ ವೆಲ್ಲವನ್ನೂ ಹಾಳುಮಾಡಿರುವರು. ॥ ೧೧–೧೬ ॥ ಅಂಗದಾದಿ ವಾನರರು ಮಧು ವನವನ್ನು ಪ್ರವೇಶಿಸಿದುದರಿಂದಲೇ ಅವರು ಕಾರ್ಯವನ್ನು ಸಾಧಿಸಿಕೊಂಡು ಬಂದಿರುವ ರೆಂದು ಸ್ಪಷ್ಟವಾಗುತ್ತಿರುವುದು. ಅವರು ಸೀತಾದೇವಿಯನ್ನು ನೋಡಿಯೇ ಬಂದಿರುವ

ನಹ್ಯನ್ಯಸ್ಸಾಧನೇ ಹೇತುಃ ಕರ್ಮಣೋಽಸ್ಯ ಹನೂಮತಃ ॥ ೧೭ ॥ ಕಾರ್ಯಸಿದ್ಧಿ ರ್ಮತಿಶ್ಚೈವ ತಸ್ಮಿನ್ವಾನರಪುಂಗವೇ । ವ್ಯವಸಾಯಶ್ಚ ವೀರ್ಯಂಚ ಶ್ರುತಂ ಚಾಪಿ ಪ್ರತಿಷ್ಠಿತಂ ॥ ೧೮ ॥ ಜಾಂಬವಾನ್ಯತ್ರ ನೇತಾಸ್ಯಾದಂಗದಶ್ಚ ಬಲೇಶ್ವರಃ । ಹನೂ ಮಾಂಶ್ಚಾಪ್ಯಧಿಷ್ಠಾತಾ ನತಸ್ಯ ಗತಿರನ್ಯಥಾ ॥೧೯॥ ಅಂಗದಪ್ರಮುಖೈರ್ವೀರೈರ್ಹತಂ ಮಧುವನಂ ಕಿಲ । ವಾರಯಂತಶ್ಚ ಸಹಿತಾಸ್ತಥಾ ಜಾನುಭಿರಾಹತಾಃ ॥ ೨೦ ॥ ಏತದರ್ಥಮಯಂ ಪ್ರಾಪ್ತೋ ವಕ್ತುಂ ಮಧುರವಾಗಿಹ । ನಾಮ್ನಾ ದಧಿಮುಖೋ

ಈ ಕಾರ್ಯದ, ಸಾಧನೇ-ಸಾಧಿಸುವಿಕೆಯಲ್ಲಿ, ಹನೂಮತಃ-ಆಂಜನೇಯನಿಗಿಂತಲೂ, ನಹೇತುರ್ಹಿ-ಕಾರಣವಲ್ಲವಷ್ಟೆ. ॥ ೧೬-೧೭ ॥ ವಾನರಪುಂಗವೇ - ವಾನರೋತ್ತಮನಾದ, ತಸ್ಮಿನ್ನೇವ - ಆ ಆಂಜನೇಯನಲ್ಲಿಯೇ, ಕಾರ್ಯಸಿದ್ಧಿಃ - ಕಾರ್ಯದ ಸಾಫಲ್ಯವೂ, ಮತಿಶ್ಚ - ಬುದ್ಧಿಯೂ, ವ್ಯವಸಾಯಶ್ಚ - ನಿಶ್ಚಯವೂ, ವೀರ್ಯಂಚ - ಸಾಮರ್ಥ್ಯವನ್ನು, ಶೃತಂಚಾಪಿ - ಶಾಸ್ತ್ರವೂ ಸಹ, ಪ್ರತಿಷ್ಠಿತಂ - ಸ್ಥಾಪಿಸಲ್ಪಟ್ಟದೆ. ॥ ೧೮ ॥ ಯತ್ರ - ಯಾವ ವಾನರಸಮೂಹದಲ್ಲಿ, ಜಾಂಜವಾನ್ - ಜಾಂಬವಂತನು, ನೇತಾ - ಮಂತ್ರಿಯಾಗಿ, ಸ್ಯಾತ್ - ಇರುವನೋ, ಅಂಗದಶ್ಚ - ಅಂಗದನೂ, ಬಲೇಶ್ವರಃ - ಸೇನಾನಾಯಕನಾಗಿ, ಸ್ಯಾತ್ - ಆಗುವರೋ, ಹನೂಮಾಂಶ್ಚಾಪಿ - ಆಂಜನೇಯನೂ, ಅಧಿಷ್ಠಾತಾ-ನೇತೃವಾಗಿಯೂ, ಸ್ಯಾತ್ - ಆಗಿರುವನೋ, ಅಸ್ಯ - ಈ ವಾನರಸಮೂಹಕ್ಕೆ, ಗತಿಃ - ಶರಣವು, ಅನ್ಯಥಾ - ಮತ್ತೊಂದು ವಿಧವಾಗಿ, ನ - ಆಗಲಾರದು. ॥ ೧೯ ॥ ಅಂಗ....ಖೈಃ - ಅಂಗದನೇ ಮೊದಲಾದ, ವೀರೈಃ-ಶೂರರಿಂದ, ಮಧುವನಂ-ಮಧುವನವು, ಹತಂಕಿಲ-ನಾಶಮಾಡಲ್ಪಟ್ಟತಷ್ಟೆ, ತಥಾ-ಹಾಗೆ, ಸಹಿತಾಃ-ಗುಂಪುಗೂಡಿ, ವಾರಯಂತಶ್ಚ-ವನಭಂಗವನ್ನು ನಿವಾರಿಸತಕ್ಕ ವಾನರರೂ ಸಹ, ಜಾನುಭಿಃ - ಮೊಣಕಾಲುಗಳಿಂದ, ಆಹತಾಃ - ಹೊಡೆಯಲ್ಪಟ್ಟರು, ಇಹ - ಈಗ, ಏತದರ್ಥಂ - ಈ ಅರ್ಥವನ್ನು, ವಕ್ತುಂ - ಹೇಳುವದಕ್ಕೆ, ಮಧುರವಾಕ್ - ಮಧುರವಾದ ಮಾತುಗಳುಳ್ಳ, ಅಯಂ - ಈ ದಧಿಮುಖನು, ಪ್ರಾಪ್ತಃ - ಬಂದನು, ನಾಮ್ನಾ - ಹೆಸರಿನಿಂದ, ದಧಿಮುಖೋನಾಮ-

---

ರೆಂಬುದರಲ್ಲಿ ಸಂದೇಹವೇ ಇಲ್ಲವು. ಅದರಲ್ಲಿಯೂ ನಮ್ಮ ಆಂಜನೇಯನೇ ಆಕೆಯನ್ನು ನೋಡಿ ಬಂದಿರಬೇಕು. ಎಲೈ ಲಕ್ಷ್ಮಣನೇ! ಆಂಜನೇಯನನ್ನು ಬಿಟ್ಟು ಬೇರೊಬ್ಬ ನಾವನೂ ಇಂತಹ ಮಹಾ ಕಾರ್ಯವನ್ನು ಸಾಧಿಸಲು ಸಮರ್ಥನಲ್ಲವು. ಇದೂ ಅಲ್ಲದೆ ಎಂತಹ ಮಹತ್ಕಾರ್ಯವಾದರೂ ಅದನ್ನು ಸಾಧಿಸಲು ತಕ್ಕ ಬುದ್ಧಿಶಕ್ತಿ, ಶೌರ್ಯ, ಪ್ರಯತ್ನ, ಉತ್ಸಾಹ ಇವೇ ಮೊದಲಾದ ಸದ್ಗುಣಗಳೆಲ್ಲವೂ ವಾನರೋತ್ತಮನಾದ ಆಂಜನೇಯನೊಬ್ಬನಲ್ಲಿಯೇ ನೆಲಗೊಂಡಿರುವುವಲ್ಲದೆ ಮತ್ತಾರಲ್ಲಿಯೂ ಇರುವುದಿಲ್ಲವು. ಇನ್ನೂ ಒಂದು ವಿಶೇಷವಿರುವುದು. ಹೇಳುವೆನು; ಕೇಳು. ಯಾವ ಕಾರ್ಯದಲ್ಲಿ ಮಹಾ ಬಲಾಢ್ಯನಾದ ಜಾಂಬವಂತನು ನೇತೃವಾಗಿಯೂ, ಅಂಗದನು ಸೇನಾನಾಯಕನಾಗಿಯೂ, ಆಂಜನೇಯನು ಕಾರ್ಯನಿರ್ವಾಹಕನಾಗಿಯೂ ಇರುತ್ತಾರೆಯೋ ಆ ಕಾರ್ಯವು ನಿಸ್ಸಂಶಯವಾಗಿಯೂ ಸಿದ್ಧಿಸುವುದು. ಲಕ್ಷ್ಮಣಾ! ಅಂಗದನೇ ಮೊದಲಾದ ವಾನರವೀರರು ಬಂದು ಮಧುವನವೆಲ್ಲವನ್ನೂ ಹಾಳುಮಾಡಿದರಷ್ಟೆ! ಆಗ ಈ ವನಪಾಲಕರೆಲ್ಲರೂ ಅವರನ್ನು ತಡೆಯುವುದಕ್ಕೆ ಹೋಗಲು, ಅವರೆಲ್ಲರೂ ಇವರನ್ನು ಮೊಣಕಾಲುಗಳಿಂದ ಚೆನ್ನಾಗಿ ಮರ್ದಿಸಿ ಕಳುಹಿ

ನಾಮ ಹರಿಃ ಪ್ರಖ್ಯಾತವಿಕ್ರಮಃ ॥೨೧॥ ದೃಷ್ಟಾ ಸೀತಾ ಮಹಾಬಾಹೋ! ಸೌಮಿತ್ರೇ! ಪಶ್ಯ ತತ್ವತಃ । ಅಭಿಗಮ್ಯ ತಥಾ ಸರ್ವೇ ಪಿಬಂತಿ ಮಧು ವಾನರಾಃ ॥ ೨೨ ॥ ನಚಾಪ್ಯದೃಷ್ಟ್ವಾ ವೈದೇಹೀಂ ವಿಶ್ರುತಾಃ ಪುರುಷರ್ಷಭ! । ವನಂ ದತ್ತವರಂ ದಿವ್ಯಂ ಧರ್ಷಯೇಯುರ್ವನೌಕಸಃ" ॥ ೨೩ ॥ ತತಃ ಪ್ರಹೃಷ್ಟೋ ಧರ್ಮಾತ್ಮಾ ಲಕ್ಷ್ಮಣ ಸ್ಸಹರಾಘವಃ । ಶ್ರುತ್ವಾ ಕರ್ಣಸುಖಾಂ ವಾಣೀಂ ಸುಗ್ರೀವವದನಾಚ್ಚ್ಯುತಾಂ । ಪ್ರಾಹೃಷ್ಯತ ಭೃಶಂ ರಾಮೋ ಲಕ್ಷ್ಮಣಶ್ಚ ಮಹಾಬಲಃ ॥ ೨೪ ॥ ಶ್ರುತ್ವಾ ದಧಿಮುಖ

ದಧಿಮುಖನೆಂದು ಪ್ರಸಿದ್ಧನಾದ, ಹರಿಃ - ವಾನರನು, ಪ್ರಖ್ಯಾ ...ಮಃ - ಪ್ರಸಿದ್ಧವಾದ ಪರಾಕ್ರಮವುಳ್ಳವನು. ॥ ೨೦-೨೧ ॥ ಹೇ ಮಹಾಬಾಹೋ - ಎಲೈ ಮಹಾ ಭುಜಗಳುಳ್ಳವನೇ, ಹೇ ಸೌಮಿತ್ರೇ - ಎಲೈ ಲಕ್ಷ್ಮಣನೇ, ಸೀತಾ - ಸೀತಾದೇವಿಯು, ದೃಷ್ಟಾ - ನೋಡಲ್ಪಟ್ಟಳು, ತತ್ವತಃ - ಯಥಾರ್ಥವಾಗಿ, ಪಶ್ಯ - ನೋಡು, ಸರ್ವೇವಾನರಾಃ - ಸಮಸ್ತ ವಾನರರೂ, ಅಭಿಗಮ್ಯ - ಬಂದು, ತಥಾ - ಹಾಗೇ, ಮಧು - ಮದ್ಯವನ್ನು, ಪಿಬಂತಿ - ಪಾನಮಾಡುತ್ತಿದ್ದಾರೆ. ॥ ೨೨ ॥ ಹೇ ಪುರುಷರ್ಷಭ - ಎಲೈ ಪುರುಷಶ್ರೇಷ್ಠನೆ, ವೈದೇಹೀಂಚಾಪಿ - ಸೀತಾದೇವಿಯನ್ನೂ ಸಹ, ಅದೃಷ್ಟ್ವಾ - ನೋಡದೆ, ವಿಶ್ರುತಾಃ - ಪ್ರಸಿದ್ಧರಾದ, ವನೌಕಸಃ ವಾನರರು, ದತ್ತವರಂ - ಕೊಡಲ್ಪಟ್ಟ ವರವುಳ್ಳ, ದಿವ್ಯಂ - ದೇವತಾಸಂಬಂಧವಾದ, ವನಂ - ವನವನ್ನು, ಧರ್ಷಯೇಯುಃ - ತಿರಸ್ಕರಿಸುವರೇ? ॥ ೨೩ ॥ ತತಃ - ಬಳಿಕ, ಧರ್ಮಾತ್ಮಾ - ಧರ್ಮಿಷ್ಠನಾದ, ಲಕ್ಷ್ಮಣಃ - ಲಕ್ಷ್ಮಣನು, ಸಹರಾಘವಃ - ಶ್ರೀರಾಮನಿಂದೊಡಗೂಡಿದವನಾಗಿ, ಸುಗ್ರೀ....ತ್ - ಸುಗ್ರೀವನ ಮುಖದಿಂದ ಹೊರಟ, ಕರ್ಣಸುಖಾಂ - ಕಿವಿಗಿಂಪಾಗಿರುವ, ವಾಣೀಂ - ವಾಕ್ಯವನ್ನು, ಶ್ರುತ್ವಾ - ಕೇಳಿ, ಪ್ರಹೃಷ್ಟಃ - ಸಂತುಷ್ಟನಾದನು, ರಾಮಃ- ಶ್ರೀರಾಮನು, ಮಹಾಬಲಃ - ಮಹಾ ಬಲಾಢ್ಯನಾದ, ಲಕ್ಷ್ಮಣಶ್ಚ - ಲಕ್ಷ್ಮಣಸ್ವಾಮಿಯು, ಭೃಶಂ - ಬಹಳವಾಗಿ, ಪ್ರಾಹೃಷ್ಯತ - ಸಂತೋಷಗೊಂಡನು ॥ ೨೪ ೨೫ ॥ ಸುಗ್ರೀವಃ - ಒಳ್ಳೇ ಕಂಠವುಳ್ಳ, ಸುಗ್ರೀವಸ್ತು - ಸುಗ್ರೀವನಾದರೆ, ದಧಿಮುಖಸ್ಯ - ದಧಿಮುಖನ, ಇದಂ - ಈ ಮಾತನ್ನು, ಶ್ರುತ್ವಾ-

---

ಸಿರುವರು. ಈ ವೃತ್ತಾಂತವನ್ನು ತಿಳುಹಿಸುವುದಕ್ಕಾಗಿಯೇ, ಮಧುರವಾಗಿ ಮಾತನಾಡುವವನೂ, ಮಹಾ ಶೂರನೂ, ಸುಪ್ರಸಿದ್ಧನೂ ಆದ ಈ ದಧಿಮುಖನು ಇಲ್ಲಿಗೆ ಬಂದಿರುವನು. ॥೧೭–೨೧॥ ಎಲೈ ಮಹಾ ಬಾಹುವಾದ ಲಕ್ಷ್ಮಣನೇ! ಅಂಗದನೇ ಮೊದಲಾದ ಈ ವಾನರರೆಲ್ಲರೂ ಸೀತಾದೇವಿಯನ್ನು ನೋಡಿಯೇ ಬಂದಿರುವರು. ಇದರಲ್ಲಿ ಲವಲೇಶವೂ ಸಂಶಯವಿಲ್ಲವು. ಆದುದರಿಂದಲೇ ಉತ್ಸಾಹಿತರಾದ ಅವರೆಲ್ಲರೂ ಮಧುವನಕ್ಕೆ ನುಗ್ಗಿ ಮಧುವನ್ನು ಕುಡಿದಿರುವರು. ಎಲೈ ಪುರುಷೋತ್ತಮನೇ! ದಶದಿಶೆಗಳಲ್ಲಿಯೂ ಪ್ರಖ್ಯಾತರಾದ ಈ ವಾನರರು ಸೀತಾದೇವಿಯನ್ನು ನೋಡಿಕೊಂಡು ಬಾರದಿದ್ದರೆ, ಬ್ರಹ್ಮದೇವನು ನಮ್ಮ ತಂದೆಗಿತ್ತ ಈ ಮಧುವನವನ್ನೆಂದಿಗೂ ಪ್ರವೇಶಿಸುತ್ತಿರಲಿಲ್ಲವು. ಹೀಗಿರುವಲ್ಲಿ ಅದನ್ನು ಪ್ರವೇಶಿಸಿದುದೂ ಅಲ್ಲದೆ ನಾಶಮಾಡುತ್ತಲೂ ಇದ್ದರೇ?" ಎಂದು ಹೇಳಿದನು. ಆಗ ಲಕ್ಷ್ಮಣನು ತನ್ನ ಅಣ್ಣನೂ, ಮಹಾಬಲನೂ ಆದ ಶ್ರೀರಾಮನಿಗೆ ಸುಗ್ರೀವನು ಹೇಳಿದ ಸುಶ್ರಾವ್ಯವಾದ ವೃತ್ತಾಂತವನ್ನರುಹಿ ಪರಸ್ಪರವಾಗಿ ಆನಂದಿಸುತ್ತಿದ್ದರು. ॥ ೨೨–೨೪ ॥ ಆಗ ಸುಗ್ರೀವನು, ದಧಿಮುಖನು ಹೇಳಿದ ಮಾತುಗಳನ್ನು ಕೇಳಿ ಮಹದಾನಂದಭರಿತನಾಗಿ ಅವನನ್ನು ಕುರಿತು, " ಎಲೈ ದಧಿಮುಖನೇ!

ಸ್ಯೇದಂ ಸುಗ್ರೀವಸ್ತು ಪ್ರಹೃಷ್ಯಚ । ವನಪಾಲಂ ಪುನರ್ವಾಕ್ಯಂ ಸುಗ್ರೀವಃ ಪ್ರತ್ಯಭಾಷತ ॥೨೬॥ "ಪ್ರೀತೋಽಸ್ಮಿ ಸೋಽಹಂ ಯದ್ಭುಕ್ತಂ ವನಂ ತೈಃ ಕೃತಕರ್ಮಭಿಃ । ಮರ್ಷಿತಂ ಮರ್ಷಣೀಯಂಚ ಚೇಷ್ಟಿತಂ ಕೃತಕರ್ಮಣಾಂ ॥ ೨೭ ॥

ಇಚ್ಛಾಮಿ ಶೀಘ್ರಂ ಹನುಮತ್ಪ್ರಧಾನಾ
ನ್ಶಾಖಾಮೃಗಾಂಸ್ತಾನ್ ಮೃಗರಾಜದರ್ಪಾನ್ ।
ದ್ರಷ್ಟುಂ ಕೃತಾರ್ಥಾನ್ ಸಹರಾಘವಾಭ್ಯಾಂ
ಶ್ರೋತುಂ ಚ ಸೀತಾಽಧಿಗಮೇ ಪ್ರಯತ್ನಂ" ॥೨೮॥

ಕೇಳಿ, ಪ್ರಹೃಷ್ಯಚ - ಸಂತೋಷವನ್ನೂ ಹೊಂದಿ, ವನಪಾಲಂ - ವನಪಾಲಕನಾದ ದಧಿಮುಖನನ್ನು ಕುರಿತು, ಪುನಃ - ಮತ್ತೂ, ವಾಕ್ಯಂ - ವಚನವನ್ನು, ಪ್ರತ್ಯಭಾಷತ - ಪ್ರತ್ಯುತ್ತರ ಹೇಳಿದನು. ॥೨೬॥ ಕೃತಕರ್ಮಭಿಃ - ಕೃತಕೃತ್ಯರಾದ, ತೈಃ - ಆ ಅಂಗದಾದಿಗಳಿಂದ, ವನಂ - ವನವು, ಯತ್ - ಯಾವ ಕಾರಣದಿಂದ, ಭುಕ್ತಂ - ಅನುಭವಿಸಲ್ಪಟ್ಟಿತೋ, ತತ್ - ಆ ಕಾರಣದಿಂದ, ಸೋಽಹಂ - ಆ ಈ ನಾನು, ಪ್ರೀತೋಸ್ಮಿ - ಸಂತುಷ್ಟನಾಗಿದ್ದೇನೆ, ಕೃತಕರ್ಮಣಾಂ - ಕೃತಕಾರ್ಯರಾದವರ, ಅಮರ್ಷಣೀಯಂ - ಕ್ರೂರವಾದ, ಚೇಷ್ಟಿತಂ - ವ್ಯಾಪಾರವು, ಮರ್ಷಿತಂ - ಸೈರಿಸಲ್ಪಟ್ಟಿತು. ॥ ೨೭ ॥ ಮೃಗ....ರ್ಪಾನ್-ಸಿಂಹಪರಾಕ್ರಮಿಗಳಾದ, ಹನು....ನಾನ್-ಹನುಮಂತನೇ ಮೊದಲಾದ, ಕೃತಾರ್ಥಾನ್-ಕೃತಕೃತ್ಯರಾದ, ತಾನ್ಶಾಖಾಮೃಗಾನ್ - ಆ ವಾನರರನ್ನು, ರಾಘವಾಭ್ಯಾಂಸಹ - ರಾಮಲಕ್ಷ್ಮಣರೊಡನೆ, ದ್ರಷ್ಟುಂ - ನೋಡಲೂ, ಸೀತಾಧಿಗಮೇ - ಸೀತಾಪ್ರಾಪ್ತಿಯಲ್ಲಿ, ಪ್ರಯತ್ನಂ - ಪ್ರಯತ್ನವನ್ನು, ಶ್ರೋತುಂಚ - ಕೇಳಲೂ, ಇಚ್ಛಾಮಿ - ಅಪೇಕ್ಷಿಸುತ್ತೇನೆ. ॥ ೨೮ ॥ ವಾನರಾಣಾಂ - ಕಪಿಗಳಿಗೆ, ರಾಜಾ - ಅರಸಾದ, ಸಸುಗ್ರೀವಃ - ಆ ಸುಗ್ರೀವನು, ಪ್ರೀತಿಸ್ಫೀತಾಕ್ಷೌ - ಸಂತೋಷದಿಂದ ಅಭಿವರ್ಧಿತವಾದ ನೇತ್ರಗಳುಳ್ಳ, ಸಂಪ್ರಹೃಷ್ಟೌ - ರೋಮಾಂಚವುಳ್ಳ, ಸಿದ್ಧಾರ್ಥೌ - ನಿಷ್ಪನ್ನವಾದ ಕಾರ್ಯವುಳ್ಳ, ಕುಮಾರೌ-ದಶರಥಪುತ್ರರಾದ ರಾಮಲಕ್ಷ್ಮಣರನ್ನು, ದೃಷ್ಟ್ವಾ-ಕಂಡು, ಸಂಹೃಷ್ಟೈಃ - ರೋಮಾಂಚಿತಗಳಾದ, ಅಂಗೈಃ-ಅವಯವಗಳಿಂದ, ಕರ್ಮಸಿದ್ಧಿಂ-ಕಾರ್ಯಸಿದ್ಧಿಯನ್ನು, ಬಾಹ್ವೋಃ-

---

ಅಂಗದನೇ ಮೊದಲಾದ ಆ ವಾನರರೆಲ್ಲರೂ, ಕಾರ್ಯವನ್ನು ಸಾಧಿಸಿಕೊಂಡು ಹಿಂತಿರುಗಿ ಬಂದು ಮಧುವನವನ್ನು ಪ್ರವೇಶಿಸಿ ಮಧುವನ್ನು ಕುಡಿದು ಆ ವನವೆಲ್ಲವನ್ನೂ ಹಾಳುಮಾಡಿದರಷ್ಟೆ? ಅವರು ಕೃತಕಾರ್ಯರಾಗಿ ಬಂದಿರುವುದರಿಂದ ಅವರು ಮಾಡಿರುವ ಈ ಅಪರಾಧವನ್ನು ನಾನು ಮನ್ನಿಸಿರುವೆನು. ಎಲೈ ವಾನರೋತ್ತಮನೇ! ಕೃತಕೃತ್ಯರೂ, ಸಿಂಹಪರಾಕ್ರಮಿಗಳೂ ಆದ ಆಂಜನೇಯನೇ ಮೊದಲಾದ ಆ ವಾನರರೆಲ್ಲರನ್ನೂ ನೋಡುವುದಕ್ಕೂ, ಅವರು ಸೀತಾದೇವಿಯನ್ನು ನೋಡುವುದಕ್ಕಾಗಿ ಮಾಡಿದ ಮಹಾ ಪ್ರಯತ್ನಗಳನ್ನು ಕೇಳುವುದಕ್ಕೂ ನಾನೂ, ಶ್ರೀರಾಮಲಕ್ಷ್ಮಣರೂ ಬಹಳ ಆಸಕ್ತರಾಗಿರುವೆವೆಂದು ಅವರಿಗೆ ತಿಳಿಸು" ಎಂದು ಹೇಳಿದನು. ಆ ಸುಗ್ರೀವನು ಸಂತೋಷಾಧಿಕ್ಯದಿಂದ ಅರಳಿದ ಕಣ್ಣುಗಳುಳ್ಳವರೂ, ರೋಮಾಂಚಿತರಾಗಿರುವವರೂ, ಸಿದ್ಧಿಸಿದ ಕಾರ್ಯವುಳ್ಳವರೂ ಆದ ಶ್ರೀರಾಮಲಕ್ಷ್ಮಣರನ್ನು ನೋಡಿ ಮಹಾ ಸಂತೋಷವನ್ನು ಹೊಂದಿ ತನ್ನ ದೇಹಾದ್ಯಂತವೂ ರೋಮಾಂಚಿತವಾಗಿರು

ಪ್ರೀತಿಸ್ಫೀತಾಕ್ಷೌ ಸಂಪ್ರಹೃಷ್ಟೌ ಕುಮಾರೌ
ದೃಷ್ಟ್ವಾ ಸಿದ್ಧಾರ್ಥೌ ವಾನರಾಣಾಂಚ ರಾಜಾ ।
ಅಂಗೈಸ್ಸಂಹೃಷ್ಟೈಃ ಕರ್ಮಸಿದ್ಧಿಂ ವಿದಿತ್ವಾ
ಬಾಹ್ವೋರಾಸನ್ನಾಂ ಸೋಽತಿಮಾತ್ರಂ ನನಂದ ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಷಷ್ಠಿತಮಸ್ಸರ್ಗಃ

ಕೈಗಳಿಗೆ, ಆಸನ್ನಾಂ - ಸಮೀಪದಲ್ಲಿರುವುದನ್ನಾಗಿ, ವಿದಿತ್ವಾ - ತಿಳಿದು, ಅತಿಮಾತ್ರಂ - ಬಹಳವಾಗಿ, ನನಂದ - ಸಂತೋಷಿಸಿದನು. ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ತ್ರಿಷಷ್ಠಿತಮಶ್ಸರ್ಗಃ

ವುದೇ ಮೊದಲಾದ ಶುಭಸೂಚನೆಗಳಿಂದ ಹನುಮಂತನೇ ಮೊದಲಾದವರು ಕಾರ್ಯವನ್ನು ಸಾಧಿಸಿಕೊಂಡೇ ಬಂದಿರುವರೆಂದು ನಿರ್ಧರಿಸಿದನು. ॥ ೨೬–೨೯ ॥

ಇಂತಿದು ಸುಗ್ರೀವನ ಸಮೀಪದಲ್ಲಿ ದಧಿಮುಖನು ಹೇಳಿದ ವಾನರ ಮಧುಪಾನ
ವೃತ್ತಾಂತವೆಂಬ ಅರುವತ್ತಮೂರನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಚತುಷ್ಷಷ್ಠಿತಮಸ್ಸರ್ಗಃ

ಸುಗ್ರೀವೇಣೈವಮುಕ್ತಸ್ತು ಹೃಷ್ಟೋ ದಧಿಮುಖಃ ಕಪಿಃ । ರಾಘವಂ ಲಕ್ಷ್ಮಣಂ ಚೈವ ಸುಗ್ರೀವಂ ಚಾಭ್ಯವಾದಯತ್ ॥ ೧ ॥ ಸಪ್ರಣಮ್ಯ ಚ ಸುಗ್ರೀವಂ ರಾಘವೌ ಚ ಮಹಾಬಲೌ । ವಾನರೈಸ್ಸಹಿತೈಶ್ಶೂರೈರ್ದಿವಮೇವೋತ್ಪಪಾತ ಹ ॥ ೨ ॥ ಸ ಯಥೈವಾಗತಃ ಪೂರ್ವಂ ತಥೈವ ತ್ವರಿತಂ ಗತಃ । ನಿಪತ್ಯ ಗಗನಾದ್ಭೂಮೌ ತದ್ವನಂ ಪ್ರವಿವೇಶಹ ॥ ೩ ॥ ಸಪ್ರವಿಷ್ಟೋ ಮಧುವನಂ ದದರ್ಶ ಹರಿಯೂಥಪಾನ್ । ವಿಮದಾನುತ್ಥಿತಾನ್ ಸರ್ವಾನ್ ಮೇಹಮಾನಾನ್ ಮಧೂದಕಂ ॥ ೪ ॥ ಸ ತಾನುಪಾಗಮದ್ವೀರೋ

ಏವಂ - ಈ ಪ್ರಕಾರ, ಸುಗ್ರೀವೇಣ - ಸುಗ್ರೀವನಿಂದ, ಉಕ್ತಃ - ಹೇಳಲ್ಪಟ್ಟವನಾದಕಾರಣ, ಹೃಷ್ಟಃ - ಸಂತುಷ್ಟನಾದ, ದಧಿಮುಖಃ - ದಧಿಮುಖನೆಂಬ, ಕಪಿಃ - ವಾನರನು, ರಾಘವಂ - ಶ್ರೀರಾಮನನ್ನೂ, ಲಕ್ಷ್ಮಣಂಚೈವ - ಲಕ್ಷ್ಮಣನನ್ನೂ, ಸುಗ್ರೀವಂಚ - ಸುಗ್ರೀವನನ್ನೂ ಕುರಿತು, ಅಭ್ಯವಾದಯತ್ - ವಂದಿಸಿದನು. ॥ ೧ ॥ ಸಃ - ಆ ದಧಿಮುಖನು, ಸುಗ್ರೀವಂ - ಸುಗ್ರೀವನನ್ನು, ಮಹಾಬಲೌ - ಅತಿ ಬಲಿಷ್ಠರಾದ, ರಾಘವೌಚ - ರಾಮಲಕ್ಷ್ಮಣರನ್ನೂ ಕುರಿತು, ಪ್ರಣಮ್ಯ - ನಮಸ್ಕರಿಸಿ, ಸಹಿತೈಃ - ಒಂದುಕಡೆ ಸೇರಿರುವ, ಶೂರೈಃ - ವೀರರಾದ, ವಾನರೈಃ - ಕಪಿಗಳೊಡನೆ, ದಿವಮೇವ - ಅಂತರಿಕ್ಷವನ್ನೇ ಕುರಿತು, ಉತ್ಪಪಾತ - ಹಾರಿದನು. ॥ ೨ ॥ ಸಃ - ಆ ದಧಿಮುಖನು, ಯಥೈವ - ಹೇಗೆ, ಪೂರ್ವಂ - ಮೊದಲು, ಆಗತಃ - ಬಂದನೋ, ತಥೈವ - ಹಾಗೆಯೇ, ತ್ವರಿತಂ - ಜಾಗ್ರತೆಯಾಗಿ, ಗತಃ - ಹೋಗಿ, ಗಗನಾತ್ - ಅಂತರಿಕ್ಷದಿಂದ, ಭೂಮೌ - ಭೂಮಿಯಲ್ಲಿ, ನಿಪತ್ಯ - ಇಳಿದು, ತದ್ವನಂ - ಆ ಮಧುವನವನ್ನು, ಪ್ರವಿವೇಶಹ - ಹೊಕ್ಕನು. ॥ ೩ ॥ ಸಃ - ಆ ದಧಿಮುಖನು, ಮಧುವನಂ - ಮಧುವನವನ್ನು, ಪ್ರವಿಷ್ಟಃ - ಪ್ರವೇಶಿಸಿ, ಮಧೂದಕಂ - ಮದ್ಯೋದಕಗಳನ್ನು, ಮೇಹಮಾನಾನ್ - ಮೂತ್ರೋತ್ಸರ್ಜನೆ ಮಾಡುತ್ತಿರುವಕಾರಣ, ವಿಮದಾನ್ - ಮದವಿಲ್ಲದಿರುವ, ಉತ್ಥಿತಾನ್ - ಮೇಲಕ್ಕೆದ್ದ, ಸರ್ವಾನ್ - ಸಮಸ್ತರಾದ, ಹರಿಯೂಥಪಾನ್ - ವಾನರಾಧ್ಯಕ್ಷರನ್ನೂ, ದದರ್ಶ - ಕಂಡನು. ॥ ೪ ॥ ವೀರಃ - ಶೂರನಾದ, ಸಃ - ಆ ದಧಿಮುಖನು, ಕರಪುಟಾಂಜಲಿಂ - ಹಸ್ತಪ್ರದೇಶ

ಸುಗ್ರೀವನು ಹೀಗೆ ಹೇಳುತ್ತಲೇ ದಧಿಮುಖನ ಕೋಪವೆಲ್ಲವೂ ಇಳಿದುಹೋಯಿತು. ಆಗ ಅವನಿಗೆ ಬಹಳ ಸಂತೋಷವೂ ಆಯಿತು. ಅವನು ಕೂಡಲೇ ಶ್ರೀರಾಮಲಕ್ಷ್ಮಣರಿಗೂ ತನ್ನ ಪ್ರಭುವಾದ ಸುಗ್ರೀವನಿಗೂ ನಮಸ್ಕರಿಸಿ ತನ್ನೊಡನೆ ಬಂದಿದ್ದ ವನಪಾಲಕರನ್ನು ಹಿಂದಿಟ್ಟುಕೊಂಡು ಆಗಲೇ ಆಕಾಶಕ್ಕೆ ಹಾರಿದನು ; ತಾನು ಹಿಂದೆ ಬಂದ ರೀತಿಯಲ್ಲಿಯೇ ಅತಿ ವೇಗವಾಗಿ ಹೊರಟು ಮಧುವನದಲ್ಲಿ ಆಕಾಶಮಾರ್ಗದಿಂದಿಳಿದನು. ದಧಿಮುಖನು ಮಧುವನವನ್ನು ಪ್ರವೇಶಿಸುವಷ್ಟರಲ್ಲಿ ಅಲ್ಲಿದ್ದ ವಾನರೋತ್ತಮರೆಲ್ಲರೂ ಮಧುಪಾನದಿಂದುಂಟಾಗಿದ್ದ ಮತ್ತಿಳಿದು ತಾವು ಕುಡಿದಿದ್ದ ಜೇನನ್ನೂ ನೀರನ್ನೂ ಮೂತ್ರದ್ವಾರದಿಂದ ಬಿಡುತ್ತಿದ್ದರು. ॥೧-೪॥ ಮಹಾ ವೀರನಾದ ಆ ದಧಿಮುಖನು ಅವರನ್ನು ಕಂಡು ಸಂತೋಷಸಂಭ್ರಮಗಳಿಂದ ಕೈಮುಗಿದುಕೊಂಡು ಮುಂದೆ ಹೋಗಿ ಅಂಗದನನ್ನು ಕುರಿತು ಮೃದುಮಧುರ ವಚನಗಳಿಂದ,

ಬದ್ಧ್ವಾ ಕರಪುಟಾಂಜಲಿಂ । ಉವಾಚ ವಚನಂ ಶ್ಲಕ್ಷ್ಣಮಿದಂ ಹೃಷ್ಟವದಂಗದಂ ॥ ೫ ॥ "ಸೌಮ್ಯ! ರೋಷೋ ನ ಕರ್ತವ್ಯೋ ಯದೇಭಿರಭಿವಾರಿತಃ । ಅಜ್ಞಾನಾದ್ರಕ್ಷಿಭಿಃ ಕ್ರೋಧಾದ್ಭವಂತಃ ಪ್ರತಿಷೇಧಿತಾಃ ॥ ೬ ॥ ಯುವರಾಜಸ್ತ್ವಮೀಶಶ್ಚ ವನಸ್ಯಾಸ್ಯ ಮಹಾಬಲ! । ಮೌರ್ಖ್ಯಾತ್ಪೂರ್ವಂ ಕೃತೋ ದೋಷಸ್ತಂ ಭವಾನ್ ಕ್ಷಂತುಮರ್ಹತಿ ॥ ೭ ॥ ಆಖ್ಯಾತಂಹಿ ಮಯಾ ಗತ್ವಾ ಪಿತೃವ್ಯಸ್ಯ ತವಾನಘ! । ಇಹೋಪಯಾತಂ ಸರ್ವೇಷಾಮೇತೇಷಾಂ ವನಚಾರಿಣಾಂ ॥ ೮ ॥ ಸ ತ್ವದಾಗಮನಂ ಶ್ರುತ್ವಾ ಸಹೈಭಿರ್ಹರಿಯೂಥಪೈಃ । ಪ್ರಹೃಷ್ಟೋ ನತು ರುಷ್ಟೋಽಸೌ ವನಂ ಶ್ರುತ್ವಾ ಪ್ರಧ

ಗಳ ಬೊಗಸೆಯನ್ನು, ಬದ್ಧ್ವಾ - ಮೊಗಚಿಕೊಂಡು, ತಾನ್ - ಆ ಅಂಗದಾದಿಗಳನ್ನು, ಉಪಾಗಮತ್ - ಹೊಂದಿದನು, ಅಂಗದಂ - ಅಂಗದನನ್ನು ಕುರಿತು, ಹೃಷ್ಟವತ್ - ಸಂತೋಷಚಿತ್ತನಾಗಿ, ಇದಂ - ಈ, ಶ್ಲಕ್ಷ್ಣಂ - ಮೃದುವಾದ, ವಚನಂ - ಮಾತನ್ನು, ಉವಾಚ - ಹೇಳಿದನು. ॥ ೫ ॥ ಹೇ ಸೌಮ್ಯ - ಎಲೈ ಕೋಪರಹಿತನೇ, ಏಭಿಃ - ಈ ವನಪಾಲಕರಿಂದ, ಅಭಿವಾರಿತಇತಿಯತ್ - ತಡೆಯಲ್ಪಟ್ಟೆನೆಂದು, ಭವಂತಃ - ನೀವು, ರಕ್ಷಿಭಿಃ - ವನಪಾಲಕರಿಂದ, ಅಜ್ಞಾನಾತ್ - ಬುದ್ಧಿಯಿಲ್ಲದೆ, ಕ್ರೋಧಾತ್ - ಕೋಪದಿಂದ, ಪ್ರತಿಷೇಧಿತಾಃ - ತಡೆಯಲ್ಪಟ್ಟರಿ, ಅತ್ರ - ಈ ವಿಷಯದಲ್ಲಿ, ರೋಷಃ - ಕೋಪವು, ನಕರ್ತವ್ಯಃ - ಮಾಡತಕ್ಕದಲ್ಲ. ॥ ೬ ॥ ಹೇ ಮಹಾಬಲ - ಎಲೈ ಅತಿ ಬಲಾಢ್ಯನೇ, ತ್ವಂ - ನೀನು, ಯುವರಾಜಃ - ಯುವರಾಜನು, ಅಸ್ಯವನಸ್ಯಚ - ಈ ಮಧುವನಕ್ಕೂ, ಈಶಃ - ಪ್ರಭುವು, ಅಸಿ - ಆಗಿರುವೆ, ಪೂರ್ವಂ - ಮೊದಲು, ಮೌರ್ಖ್ಯಾತ್ - ಮೌಢ್ಯದಿಂದ, ದೋಷಃ - ಅಪರಾಧವು, ಕೃತಃ - ಮಾಡಲ್ಪಟ್ಟಿತು, ತಂ - ಆ ಅಪರಾಧವನ್ನು, ಭವಾನ್ - ನೀನು, ಕ್ಷಂತುಂ - ಸೈರಿಸಲು, ಅರ್ಹತಿ - ಯೋಗ್ಯನಾಗಿರುವೆ. ॥ ೭ ॥ ಹೇ ಅನಘ - ಎಲೈ ನಿರ್ದುಷ್ಟನೇ, ಮಯಾ-ನನ್ನಿಂದ, ಗತ್ವಾ-ಹೋಗಿ, ತವ - ನಿನ್ನ, ಪಿತೃವ್ಯಸ್ಯ - ಚಿಕ್ಕಪ್ಪನಾದ ಸುಗ್ರೀವನಿಗೆ, ಸರ್ವೇಷಾಂ - ಸಮಸ್ತರಾದ, ಏತೇಷಾಂ ವನಚಾರಿಣಾಂ - ಈ ವಾನರರ, ಇಹ - ಇಲ್ಲಿ, ಉಪಯಾತಂ - ಆಗಮನವು, ಆಖ್ಯಾತಂ - ಹೇಳಲ್ಪಟ್ಟಿತು. ॥ ೮ ॥ ಸೋಽಸೌ - ಆ ಈ ಸುಗ್ರೀವನು, ಏಭಿ....ಹ - ಈ ಕಪಿಯೂಥಪತಿಗಳೊಡನೆ, ತ್ವದಾಗಮನಂ - ನಿನ್ನ ಬರುವಿಕೆಯನ್ನೂ, ಶ್ರುತ್ವಾ - ಕೇಳಿ, ಪ್ರಧರ್ಷಿತಂ - ಧ್ವಂಸವಾದ, ವನಂ - ವನವಿಷಯವನ್ನೂ, ಶ್ರುತ್ವೈವ - ಕೇಳುತ್ತಲೇ, ಪ್ರಹೃಷ್ಟಃ - ಸಂತೋಷಿಸಿದನು, ನರುಷ್ಟಃ - ಕ್ರುದ್ಧನಾಗಲಿಲ್ಲ. ॥ ೯ ॥ ಪಾರ್ಥಿವಃ-ಅರಸಾದ, ತೇಪಿತೃವ್ಯಃ - ಆ ನಿನ್ನ ಚಿಕ್ಕ ತಂದೆಯಾದ, ವಾನರೇಶ್ವರಃ-ವಾನ

"ಎಲೈ ಸೌಮ್ಯನೇ! ನಮ್ಮ ಅಪರಾಧವನ್ನು ಮನ್ನಿಸಬೇಕು. ನಾವು ನಿಮ್ಮೆಲ್ಲರನ್ನೂ ತಡೆದೆವೆಂದು ಕೋಪಿಸಕೂಡದು ; ಈ ವನರಕ್ಷಕರು ಕೋಪದಿಂದಲೂ, ತಿಳಿಗೇಡಿತನದಿಂದಲೂ ನಿಮ್ಮನ್ನು ತಡೆದು ಅಪರಾಧವನ್ನು ಮಾಡಿದರು. ನೀನು ಯುವರಾಜನಾದುದರಿಂದ ನಿನಗೆ ಈ ಮಧುವನದಲ್ಲಿ ಸಂಪೂರ್ಣ ಸ್ವಾಮ್ಯವಿರುವುದು. ಇದನ್ನರಿಯದೆ ನಾವು ನಿಮ್ಮಲ್ಲಿ ಮಹಾಪರಾಧವನ್ನೇ ಮಾಡಿದೆವು. ನೀನು ನಮ್ಮನ್ನು ಮನ್ನಿಸಬೇಕು. ನಾನು ಇಲ್ಲಿಂದ ಹೋಗಿ ನಿನ್ನ ಚಿಕ್ಕತಂದೆಯಾದ ಸುಗ್ರೀವನೊಡನೆ ನೀವೆಲ್ಲರೂ ಇಲ್ಲಿಗೈತಂದಿರುವ ವೃತ್ತಾಂತವನ್ನು ಬಿನ್ನವಿಸಿದೆನು. ॥೫-೮॥ ಈ ಮಾತನ್ನು ಕೇಳಿದೊಡನೆಯೇ ಆತನು ಬಹಳ ಸಂತೋಷಪಟ್ಟನು. ಎಲೈ ಸೌಮ್ಯನೇ! ಆತನು ನೀನು ಮಧುವನವನ್ನು ಹಾಳುಮಾಡಿದುದನ್ನು ಕೇಳಿಯೂ ಸ್ವಲ್ಪಮಾತ್ರವೂ ಕೋಪಿಸಲಿಲ್ಲವು. ಇಷ್ಟುಮಾತ್ರವಲ್ಲದೆ ನಮ್ಮ ಪ್ರಭುವಾದ ಆ ಸುಗ್ರೀ

ಷ್ಠಿತಂ ॥ ೯ ॥ ಪ್ರಹೃಷ್ಟೋ ಮಾಂ ಪಿತೃವ್ಯಸ್ತೇ ಸುಗ್ರೀವೋ ವಾನರೇಶ್ವರಃ । ಶೀಘ್ರಂ ಪ್ರೇಷಯ ಸರ್ವಾಂಸ್ತಾನಿತಿ ಹೋವಾಚ ಪಾರ್ಥಿವಃ" ॥ ೧೦ ॥ ಶ್ರುತ್ವಾ ದಧಿಮುಖಸ್ಯೇದಂ ವಚನಂ ಶ್ಲಕ್ಷ್ಣಮಂಗದಃ । ಅಬ್ರವೀತ್ತಾನ್ ಹರಿಶ್ರೇಷ್ಠೋ ವಾಕ್ಯಂ ವಾಕ್ಯವಿಶಾರದಃ ॥ ೧೧ ॥ "ಶಂಕೇ ಶ್ರುತೋಽಯಂ ವೃತ್ತಾಂತೋ ರಾಮೇಣ ಹರಿಯೂಥಪಾಃ ! । ತತ್ ಕ್ಷಮಂ ನೇಹ ನಸ್ಸ್ಥಾತುಂ ಕೃತೇ ಕಾರ್ಯೇ ಪರಂತಪಾಃ ! ॥೧೨॥ ಪೀತ್ವಾ ಮಧು ಯಥಾಕಾಮಂ ವಿಶ್ರಾಂತಾ ವನಚಾರಿಣಃ । ಕಿಂಶೇಷಂ ಗಮನಂ ತತ್ರ ಸುಗ್ರೀವೋ ಯತ್ರ ಮೇ ಗುರುಃ ॥ ೧೩ ॥ ಸರ್ವೇ ಯಥಾ ಮಾಂ ವಕ್ಷ್ಯಂತಿ ಸಮೇತ್ಯ

ರಾಧಿಪತಿಯಾದ, ಸುಗ್ರೀವಃ - ಸುಗ್ರೀವನು, ಪ್ರಹೃಷ್ಟಃ - ಸಂತೋಷಚಿತ್ತನಾಗಿ, ತಾನ್ಸರ್ವಾನ್ - ಆ ಎಲ್ಲಾ ವಾನರರನ್ನೂ, ಶೀಘ್ರಂ - ಜಾಗ್ರತೆಯಾಗಿ, ಪ್ರೇಷಯ - ಕಳುಹು, ಇತಿ - ಇಂತೆಂದು, ಮಾಂ - ನನ್ನನ್ನು ಕುರಿತು, ಉವಾಚ - ಹೇಳಿದನು. ॥ ೧೦ ॥ ವಾಕ್ಯ....ದಃ - ಮಾತುಗಳಲ್ಲಿ ನಿಪುಣನಾದ, ಹರಿಶ್ರೇಷ್ಠಃ - ವಾನರೋತ್ತಮನಾದ, ಅಂಗದಃ - ಅಂಗದನು, ದಧಿಮುಖಸ್ಯ - ದಧಿಮುಖನ, ಶ್ಲಕ್ಷ್ಣಂ - ಮೃದುವಾದ, ಇದಂವಚನಂ - ಈ ಮಾತನ್ನು, ಶ್ರುತ್ವಾ - ಕೇಳಿ, ತಾನ್ಪ್ರತಿ - ಅವರನ್ನು ಕುರಿತು, ವಾಕ್ಯಂ - ವಚನವನ್ನು, ಅಬ್ರವೀತ್ - ನುಡಿದನು. ॥ ೧೧ ॥ ಹೇ ಹರಿಯೂಥಪಾಃ - ಎಲೈ ಕಪಿಯೂಥಪತಿಗಳಿರಾ, ಅಯಂವೃತ್ತಾಂತಃ - ಈ ವರ್ತಮಾನವು, ರಾಮೇಣ - ಶ್ರೀರಾಮನಿಂದ, ಶ್ರುತಇತಿ - ಹೇಳಲ್ಪಟ್ಟಿತೆಂದು, ಶಂಕೇ - ಊಹಿಸುತ್ತೇನೆ, ಹೇ ಪರಂತಪಾಃ - ಎಲೈ ಶತ್ರುನಾಶಕರೇ, ತತ್ - ಆ ಕಾರಣದಿಂದ, ನಃ - ನಮ್ಮ, ಕಾರ್ಯೇ - ಕೆಲಸವು, ಕೃತೇಸತಿ - ಮಾಡಲ್ಪಟ್ಟುದಾಗಿರಲು, ಇಹ - ಈ ವನದಲ್ಲಿ, ಸ್ಥಾತುಂ - ನಿಲ್ಲುವುದು, ನಕ್ಷಮಂ - ಯುಕ್ತವಲ್ಲವು. ॥ ೧೨ ॥ ವನಚಾರಿಣಃ - ಕಪಿಗಳು, ಯಥಾಕಾಮಂ - ಸ್ವೇಚ್ಛೆಯಾಗಿ, ಮಧು - ಜೇನನ್ನು, ಪೀತ್ವಾ - ಕುಡಿದು, ವಿಶ್ರಾಂತಾಃ - ಸುಖಿತರಾದರು, ಯತ್ರ - ಯಾವ ಪ್ರದೇಶದಲ್ಲಿ, ಮೇ - ನನ್ನ, ಗುರುಃ - ಚಿಕ್ಕಪ್ಪನಾದ, ಸುಗ್ರೀವಃ - ಸುಗ್ರೀವನು, ಅಸ್ತಿ - ಇರುವನೋ, ತತ್ರ - ಆ ಪ್ರದೇಶದಲ್ಲಿ, ಗಮನಂ - ಹೋಗೋಣವು, ಕಿಂಶೇಷಂ - ಸ್ವಲ್ಪ ಉಳಿದಿರುವುದು. ॥ ೧೩ ॥ ಹೇ ಹರಿಯೂಥಪಾಃ - ಎಲೈ ಕಪಿಯೂಥಪತಿಗಳಿರಾ, ಸರ್ವೇ - ಎಲ್ಲರೂ, ಸಮೇತ್ಯ - ಸೇರಿ, ಯಥಾ - ಯಾವ ಪ್ರಕಾರವಾಗಿ, ಮಾಂ - ನನ್ನನ್ನು ಕುರಿತು, ವಕ್ಷ್ಯಂತಿ - ಹೇಳುವರೋ, ಕರ್ತವ್ಯೇ - ಮುಂದೆ ನಡೆಸತಕ್ಕ ಕಾರ್ಯದಲ್ಲಿ, ತಥಾ - ಹಾಗೆ, ಕರ್ತಾ -

---

ವನು ನಿಮ್ಮ ಆಗಮನದಿಂದ ಬಹಳ ಆನಂದಿತನಾಗಿ ಈಗಲೇ ನಿಮ್ಮೆಲ್ಲರನ್ನೂ ಕರೆತರುವಂತೆ ನನಗೆ ಆಜ್ಞಾಪಿಸಿರುವನು" ಎಂದು ಹೇಳಿದನು. ವಚನಚತುರನಾದ ಅಂಗದನು ದಧಿಮುಖನೆಂದ ಮಾತುಗಳನ್ನು ಕೇಳಿ ಅಲ್ಲಿದ್ದ ವಾನರರೆಲ್ಲರನ್ನೂ ಕುರಿತು, "ಎಲೈ ವಾನರಶ್ರೇಷ್ಠರೇ ! ನಾವಿಲ್ಲಿಗೈತಂದಿರುವ ವಿಷಯವು ಈಗಾಗಲೇ ಶ್ರೀರಾಮನಿಗೂ ತಿಳಿದಂತಿದೆ. ಕಾರ್ಯಸಾಧನೆಯನ್ನು ಮಾಡಿ ಬಂದಿರುವ ನಾವು ಇನ್ನು ಸಾವಕಾಶವಾಗಿ ಇಲ್ಲಿರುವುದು ಎಷ್ಟುಮಾತ್ರಕ್ಕೂ ತಕ್ಕುದಲ್ಲವು. ॥ ೯–೧೨ ॥ ನೀವೆಲ್ಲರೂ ಈ ಮಧುವನದಲ್ಲಿ ಮಧುವನ್ನು ಕುಡಿದು ವಿಶ್ರಮಿಸಿದುದಾಯಿತಷ್ಟೆ ? ಇನ್ನು ಮುಂದೆ ನಾವು ನಡೆಯಿಸಬೇಕಾದ ಕಾರ್ಯಭಾಗವೇನು ? ನಮ್ಮ ಪ್ರಭುವಾದ ಸುಗ್ರೀವರಾಜನನ್ನು ನೋಡುವುದೊಂದೇ ಅಲ್ಲವೆ ? ನಾನು ಯಾವ ವಿಷಯದಲ್ಲಿಯೂ ನಿಮ್ಮನ್ನು ನಿರ್ಬಂಧಗೊಳಿಸಲಾರೆನು. ಅಯ್ಯಾ ವಾನರರೇ ! ಈಗಲೂ ನಿಮ್ಮ ನಿರ್ಧಾರದಂತೆಯೇ ನಾನೂ ನಡೆಯಲು ಸಿದ್ಧನಾಗಿರುವೆನು. ನಾನು ನಿಮ್ಮೆಲ್ಲ

ಹರಿಯೂಥಪಾಃ । ತಥಾಸ್ಮಿ ಕರ್ತಾಕರ್ತವ್ಯೇ ಭವದ್ಭಿಃ ಪರವಾನಹಂ ‖ ೧೪ ‖ ನಾಜ್ಞಾಪಯಿತುಮೀಶೋಽಹಂ ಯುವರಾಜೋಽಸ್ಮಿಯದ್ಯಪಿ । ಅಯುಕ್ತಂ ಕೃತಕರ್ಮಾಣೋ ಯೂಯಂ ಧರ್ಷಯಿತುಂ ಮಯಾ" ‖ ೧೫ ‖ ಬ್ರುವತಶ್ಚಾಂಗದಸ್ಯೈವಂ ಶ್ರುತ್ವಾ ವಚನಮವ್ಯಯಂ । ಪ್ರಹೃಷ್ಟಮನಸೋಃ ವಾಕ್ಯಮಿದಮೂಚುರ್ವನೌಕಸಃ ‖ ೧೬ ‖ ಏವಂ ವಕ್ಷ್ಯತಿ ಕೋರಾಜನ್! ಪ್ರಭುಸ್ಸನ್ ವಾನರರ್ಷಭ! । ಐಶ್ವರ್ಯಮದಮತ್ತೋಽಹಿ ಸರ್ವೋಽಹಮಿತಿ ಮನ್ಯತೇ ‖೧೭‖ ತವಚೇದಂ ಸುಸದೃಶಂ ವಾಕ್ಯಂ ನಾನ್ಯಸ್ಯ ಕಸ್ಯಚಿತ್ । ಸನ್ನತಿರ್ಹಿತವಾಖ್ಯಾತಿ ಭವಿಷ್ಯಚ್ಛುಭಯೋಗ್ಯತಾಂ

ಮಾಡತಕ್ಕವನು, ಅಸ್ಮಿ - ಆಗಿದ್ದೇನೆ, ಅಹಂ - ನಾನು, ಭವದ್ಭಿಃ - ನಿಮ್ಮಿಂದ, ಪರವಾನ್ - ಅಸ್ವತಂತ್ರನು. ‖ ೧೪ ‖ ಯದ್ಯಪಿ - ಆದರೂ, ಯುವರಾಜಃ - ಯುವರಾಜನು, ಅಸ್ಮಿ - ಆಗಿದ್ದೇನೆ, ತಥಾಪಿ - ಹಾಗಾದರೂ, ಆಜ್ಞಾಪಯಿತುಂ - ಆಜ್ಞೆ ಮಾಡುವದಕ್ಕೆ, ಈಶಃ - ಸಮರ್ಥನು, ನಾಸ್ಮಿ - ಆಗಲಾರೆನು, (ಕುತಃ - ಏಕೆಂದರೆ), ಕೃತ....ಣಃ - ಕೃತಕೃತ್ಯರಾದ, ಯೂಯಂ - ನೀವು, ಧರ್ಷಯಿತುಂ - ತಿರಸ್ಕರಿಸುವದಕ್ಕೆ, ಅಯುಕ್ತಂ - ನ್ಯಾಯವಲ್ಲವು. ‖ ೧೫ ‖ ಏವಂ - ಈ ಪರಿಯಾಗಿ, ಬ್ರುವತಃ - ಹೇಳುತ್ತಿರುವ, ಅಂಗದಸ್ಯ - ಅಂಗದನ, ಅವ್ಯಯಂ - ಸ್ಥಿರವಾದ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಪ್ರಹೃ....ಸಃ - ಸಂತೋಷಯುಕ್ತವಾದ ಮನಸ್ಸುಳ್ಳ, ವನೌಕಸಃ - ವಾನರರು, ಇದಂವಾಕ್ಯಂ - ಈ ಮಾತನ್ನು, ಊಚುಃ - ಹೇಳಿದರು. ‖ ೧೬ ‖ ಹೇ ರಾಜನ್ - ಎಲೈ ಪ್ರಭುವೇ, ಹೇ ವಾನರರ್ಷಭ - ಎಲೈ ವಾನರಶ್ರೇಷ್ಠನೇ, ಕಃ - ಯಾರುತಾನೆ, ಪ್ರಭುಸ್ಸನ್ - ಒಡೆಯನಾಗಿ, ಏವಂ - ಈ ಪ್ರಕಾರ, ವಕ್ಷ್ಯತಿ - ಹೇಳುವನು, ಹಿ - ಯಾವ ಕಾರಣದಿಂದ, ಐಶ್ವ....ತ್ತಃ - ಪ್ರಭುತ್ವದಿಂದ ಹುಟ್ಟಿದ ಗರ್ವದಿಂದ ಮತ್ತನಾದ ಪುರುಷನು, ಸರ್ವಃ - ಸಮಸ್ತವೂ, ಅಹಂ - ನಾನು, ಇತಿ - ಇಂತೆಂದು, ಮನ್ಯತೇ - ಎಣಿಸುತ್ತಾನೆ. ‖೧೭‖ ಇದಂವಾಕ್ಯಂ - ಈ ವಾಕ್ಯವು, ತವಚ - ನಿನಗೇನೇ, ಸುಸದೃಶಂ - ತಕ್ಕದ್ದು, ಅನ್ಯ....ತ್ - ಮತ್ತಾವನಿಗೂ, ನ - ಸದೃಶವಲ್ಲ, ತವ - ನಿನ್ನ, ಸನ್ನತಿಃ -

---

ರಿಗೂ ಪರತಂತ್ರನಾದವನೇ ಹೊರ್ತು ಸ್ವತಂತ್ರನಲ್ಲ. ನಾನು ಯುವರಾಜನಾಗಿದ್ದರೂ ಪ್ರಕೃತದಲ್ಲಿ ಯಾವ ವಿಷಯಕ್ಕೂ ನಿಮ್ಮನ್ನು ನಿಯಮಿಸಲು ಸ್ವತಂತ್ರನಲ್ಲವು. ನೀವು ಕಾರ್ಯಸಿದ್ಧಿಯನ್ನು ಪಡೆದು ಬಂದವರು. ನಿಮ್ಮಮೇಲೆ ನನ್ನ ಅಧಿಕಾರವನ್ನು ನಡೆಯಿಸುವುದು ಎಂದಿಗೂ ಯುಕ್ತವಾದುದಲ್ಲ" ಎಂದು ಹೇಳಿದನು. ಈ ಪ್ರಕಾರವಾಗಿ ಅಂಗದಕುಮಾರನು ಎಂದೆಂದಿಗೂ ಮರೆಯಲಾಗದಂತಹ ಮಾತುಗಳನ್ನು ಕೇಳಿ ಅಲ್ಲಿದ್ದ ವಾನರರೆಲ್ಲರೂ ಮಹದಾನಂದಭರಿತರಾಗಿ ಆತನನ್ನು ಕುರಿತು, "ಎಲೈ ಯುವರಾಜನಾದ ಅಂಗದನೇ! ನೀನು ವಾನರೋತ್ತಮನೆಂಬುದು ನೀನು ಈಗತಾನೆ ಆಡಿದ ಮಾತುಗಳಿಂದ ಸ್ಪಷ್ಟವಾಯಿತು. ನೀನು ನಮ್ಮೆಲ್ಲರಿಗೂ ಪ್ರಭುವು. ನಮ್ಮಮೇಲೆ ನಿನಗೆ ಸಂಪೂರ್ಣವಾದ ಅಧಿಕಾರವುಂಟು. ಹೀಗಿದ್ದರೂ ಹೀಗೆ ಹೇಳಿರುವೆಯಲ್ಲವೆ? ಪ್ರಭುತ್ವವಿರುವಾಗಲೂ ಈ ರೀತಿ ಹೇಳುವವರಾರುಂಟು? ಪ್ರಭುತ್ವವು ಬಂದ ಕೂಡಲೇ ಲೋಕದಲ್ಲಿ ಪ್ರತಿಯೊಬ್ಬನೂ ತನ್ನ ಅಧಿಕಾರಮದದಿಂದ ಮೈಮರೆತು ಅಹಂಕಾರಪಡುವನಲ್ಲದೆ ಹೀಗೆ ವಿನಯವನ್ನು ಎಂದಿಗೂ ತೋರಿಸಲಾರನು. ‖ ೧೬–೧೭ ‖ ನೀನಾಡಿದ ಮಾತು ವಿನಯಸಂಪನ್ನನಾದ ನಿನಗೇ ಉಚಿತವಾಗಿರುವುದು. ನಿನ್ನ ವಿನಯವು ಮತ್ತಾವನಿಗೂ ಬರಲಾರದು. ಈ ನಿನ್ನ

॥ ೧೮ ॥ ಸರ್ವೇವಯಮಪಿ ಪ್ರಾಪ್ತಾಸ್ತತ್ರ ಗಂತುಂ ಕೃತಕ್ಷಣಾಃ । ಸಯತ್ರ ಹರಿವೀರಾಣಾಂ ಸುಗ್ರೀವಃ ಪತಿರವ್ಯಯಃ ॥ ೧೯ ॥ ತ್ವಯಾ ಹ್ಯನುಕ್ತೈರ್ಹರಿಭಿರ್ನೈವ ಶಕ್ಯಂ ಪದಾತ್ಪದಂ । ಕ್ವಚಿದ್ಗಂತುಂ ಹರಿಶ್ರೇಷ್ಠ ಬ್ರೂಮಸ್ಸತ್ಯಮಿದಂ ತು ತೇ" ॥ ೨೦ ॥ ಏವಂತು ವದತಾಂ ತೇಷಾಮಂಗದಃ ಪ್ರತ್ಯಭಾಷತ । ಬಾಢಂ ಗಚ್ಛಾಮ ಇತ್ಯುಕ್ತ್ವಾ ಖಮುತ್ಪೇತುರ್ಮಹಾಬಲಾಃ ॥೨೧॥ ಉತ್ಪತಂತಮನೂತ್ಪೇತುಸ್ಸರ್ವೇ ತೇ ಹರಿಯೂಥಪಾಃ । ಕೃತ್ವಾಽಕಾಶಂ ನಿರಾಕಾಶಂ ಯಂತ್ರೋತ್ಕ್ಷಿಪ್ತಾ ಇವಾಚಲಾಃ॥೨೨॥

ನಮ್ರತೆಯು, ಭವಿ....ತಾಂ - ಮುಂದಾಗತಕ್ಕ ಕಲ್ಯಾಣಾರ್ಹತೆಯನ್ನು, ಆಖ್ಯಾತಿಹಿ - ಹೇಳುವದಷ್ಟೆ. ॥ ೧೮ ॥ ಯತ್ರ - ಯಾವ ಸ್ಥಳದಲ್ಲಿ, ಹರಿವೀರಾಣಾಂ - ಕಪಿಶೂರರಿಗೆ, ಪತಿಃ - ಒಡೆಯನಾದ, ಸುಗ್ರೀವಃ - ಸುಗ್ರೀವನು, ಅವ್ಯಯಃ - ಮಹೋನ್ನತನಾಗಿದ್ದಾನೆಯೋ, ಪ್ರಾಪ್ತಾಃ - ಇಲ್ಲಿಗೆ ಬಂದಿರುವ, ಸರ್ವೇವಯಮಪಿ - ನಾವೆಲ್ಲರೂ, ತತ್ರ - ಆ ಸುಗ್ರೀವಸನ್ನಿಧಿಯಲ್ಲಿ, ಗಂತುಂ - ಬರುವದಕ್ಕೆ, ಕೃತಕ್ಷಣಾಃ - ಕೃತೋತ್ಸಾಹರಾಗಿದ್ದೇವೆ. ॥ ೧೯ ॥ ಹೇ ಹರಿಶ್ರೇಷ್ಠ - ಎಲೈ ವಾನರೋತ್ತಮನೇ, ತೇ - ನಿನಗೆ, ಇದಂಸತ್ಯಂ - ಈ ನಿಶ್ಚಯವಾದ ಮಾತನ್ನು, ಬ್ರೂಮಃ - ಹೇಳುತ್ತೇವೆ, ತ್ವಯಾ - ನಿನ್ನಿಂದ, ಅನುಕ್ತೈಃ - ಹೇಳಲ್ಪಡದಿರುವ, ಹರಿಭಿಃ - ಕಪಿಗಳಿಂದ, ಕ್ವಚಿತ್ - ಎಲ್ಲಿಯಾದರೂ, ಪದಾತ್ - ಹೆಜ್ಜೆಯಿಂದ, ಪದಂ - ಹೆಜ್ಜೆಯು, ಗಂತುಂ - ಹೊರಡುವದಕ್ಕೆ, ನೈವಶಕ್ಯಂ - ಅಸಾಧ್ಯವು. ॥ ೨೦ ॥ ಏವಂ - ಈ ಪರಿಯಾಗಿ, ವದತಾಂ-ಹೇಳುತ್ತಿರುವ, ತೇಷಾಂ - ಆ ಕಪಿಗಳ ಮುಂದೆ, ಅಂಗದಃ - ಅಂಗದನು, ಬಾಢಂ - ಹಾಗೇ ಆಗಲೆಂದು, ಪ್ರತ್ಯಭಾಷತ - ಉತ್ತರ ಕೊಟ್ಟನು, ಮಹಾಬಲಾಃ - ಬಹು ಬಲಾಢ್ಯರಾದ ವಾನರರು, ಗಚ್ಛಾಮಇತ್ಯುಕ್ತ್ವಾ - ಹೋಗೋಣವೆಂದು ಹೇಳಿ, ಖಂ - ಅಂತರಿಕ್ಷವನ್ನು ಕುರಿತು, ಉತ್ಪೇತುಃ - ಹಾರಿದರು. ॥ ೨೧ ॥ ಸರ್ವೇ - ಸಮಸ್ತರಾದ, ತೇಹರಿಯೂಥಪಾಃ - ಕಪಿಸೇನಾನಾಯಕರು, ಆಕಾಶಂ - ಅಂತರಿಕ್ಷವನ್ನು, ನಿರಾಕಾಶಂ - ಸ್ಥಳವಿಲ್ಲದ್ದನ್ನಾಗಿ, ಕೃತ್ವಾ - ಮಾಡಿ, ಯಂತ್ರೋತ್ಕ್ಷಿಪ್ತಾಃ - ಯಂತ್ರದಿಂದ ಹಾರಿಸಲ್ಪಟ್ಟ, ಅಚಲಾಇವ - ಪರ್ವತಗಳಂತೆ, ಉತ್ಪತಂತಂ - ಹಾರುತ್ತಿರುವನನ್ನು, ಅನೂತ್ಪೇತುಃ - ಹಿಂಬಾಲಿಸಿ ಹಾರಿದರು. ॥೨೨॥ ವೇಗವಂತಃ - ವೇಗಶಾಲಿಗಳಾದ, ತೇಪ್ಲವಂಗಮಾಃ - ಆ ಕಪಿಗಳು, ಅಂಬರಂ - ಅಂತರಿಕ್ಷವನ್ನು

ವಿನಯವೇ ಮುಂದೆ ನೀನು ಶ್ರೇಯಸ್ವಿಯಾಗುವುದನ್ನು ಸೂಚಿಸುವುದು. ಎಲೈ ಅಂಗದನೇ! ನಾವೆಲ್ಲರೂ ಮೊದಲೇ ನಮ್ಮ ಪ್ರಭುವಾದ ಸುಗ್ರೀವನ ಬಳಿಗೈದಲು ಆತುರರಾಗಿ ಸಮಯವನ್ನು ನೀರೀಕ್ಷಿಸುತ್ತಿರುವೆವು. ಆದರೂ ನಮ್ಮೆಲ್ಲರಿಗೂ ಒಡೆಯನಾದ ನೀನು ಅಪ್ಪಣೆಮಾಡದೆ ನಾವು ಎಲ್ಲಿಗಾದರೂ ಮುಂದಾಗಿ ಹೆಜ್ಜೆಯಿಡುವುವೆ? ಅದು ನಮಗೆ ಸಾಧ್ಯವಲ್ಲವು. ಇದು ಯಥಾರ್ಥವಾದ ಮಾತು" ಎಂದು ಹೇಳಿದರು. ॥ ೧೮-೨೦ ॥ ಈ ಮಾತನ್ನು ಕೇಳುತ್ತಲೇ ಅಂಗದನು ಹಾಗಾದರೆ ಹೊರಡೋಣವೆಂದು ಹೇಳಿದನು. ಅಂಗದನ ಮುಖದಿಂದ ಈ ಮಾತು ಹೊರಡುತ್ತಿರುವಾಗಲೇ ಮಹಾ ಪರಾಕ್ರಮಿಗಳಾದ ಕೆಲವರು ವಾನರರು ಆಕಾಶಕ್ಕೆ ಹಾರಿದರು. ಆಮೇಲೆ ಅಂಗದನು ಮೇಲಕ್ಕೆ ಹಾರಿದನು. ಇದನ್ನು ನೋಡಿ, ಉಳಿದ ವಾನರಶ್ರೇಷ್ಠರೆಲ್ಲರೂ ಅವನೊಡನೆಯೇ ಆಕಾಶಕ್ಕೆ ಹಾರಿಬಿಟ್ಟರು. ಹೀಗೆ ಆ ಕಪಿಪುಂಗವರೆಲ್ಲರೂ ಯಂತ್ರೋನ್ಮುಕ್ತಗಳಾದ ಪರ್ವತಗಳಂತೆ ಮೇಲೆ ಹಾರಿ ಆಕಾಶವನ್ನು ಎಡೆಬಿಡದೆ ಮುತ್ತಿ ಅಂಗದನ ಹಿಂದೆ ಹೋಗುತ್ತ, ಗಾಳಿಯಿಂದ ಪ್ರೇರೇಪಿತವಾದ ಮೇಘಗಳಂತೆ ಕೋಲಾಹಲ

ತೇಽಂಬರಂ ಸಹಸೋತ್ಪತ್ಯ ವೇಗವಂತಃ ಪ್ಲವಂಗಮಾಃ । ವಿನದಂತೋ ಮಹಾನಾದಂ ಘನಾ ವಾತೇರಿತಾ ಯಥಾ ॥ ೨೩ ॥ ಅಂಗದೇಹ್ಯನನುಪ್ರಾಪ್ತೇ ಸುಗ್ರೀವೋ ವಾನರಾಧಿಪಃ । ಉವಾಚ ಶೋಕೋಪಹತಂ ರಾಮಂ ಕಮಲಲೋಚನಂ ॥೨೪॥ "ಸಮಾಶ್ವಸಿಹಿ ಭದ್ರಂ ತೇ ದೃಷ್ಟಾ ದೇವೀ ನಸಂಶಯಃ । ನಾಗಂತುಮಿಹ ಶಕ್ಯಂ ತೈರತೀತೇ ಸಮಯೇಹಿ ನಃ ॥ ೨೫ ॥ ನ ಮತ್ಸಕಾಶಮಾಗಚ್ಛೇತ್ಕೃತ್ಯೇಹಿ ವಿನಿಪಾತಿತೇ । ಯುವರಾಜೋ ಮಹಾಬಾಹುಃ ಪ್ಲವತಾಂ ಪ್ರವರೋಽಂಗದಃ ॥ ೨೬ ॥ ಯದ್ಯಪ್ಯಕೃತಕೃತ್ಯಾನಾಮೀದೃಶಸ್ಸ್ಯಾದುಪಕ್ರಮಃ । ಭವೇತ್ಸದೀನವದನೋ ಭ್ರಾಂತವಿಪ್ಲುತ

ಕುರಿತು, ಸಹಸಾ - ಜಾಗ್ರತೆಯಾಗಿ, ಉತ್ಪತ್ಯ - ಹಾರಿ, ವಾತೇರಿತಾಃ - ಮಾರುತಪ್ರೇರಿತವಾದ, ಘನಾಯಥಾ - ಮೇಘಗಳಂತೆ, ಮಹಾನಾದಂ - ಗಂಭೀರಧ್ವನಿಯನ್ನು, ವಿನದಂತಃ - ಗರ್ಜಿಸಿದರು. ॥ ೨೩ ॥ ಅಂಗದೇ - ಅಂಗದನು, ಅನನುಪ್ರಾಪ್ತೇ - ಬಾರದಿರುವಾಗಲೇ, ವಾನರಾಧಿಪಃ - ಕಪಿನಾಯಕನಾದ, ಸುಗ್ರೀವಃ - ಸುಗ್ರೀವನು, ಕಮಲಲೋಚನಂ - ಕಮಲಗಳಂತೆ ನೇತ್ರಗಳುಳ್ಳ, ಶೋಕೋಪಹತಂ - ದುಃಖಾಕ್ರಾಂತನಾದ, ರಾಮಂ - ಶ್ರೀರಾಮನನ್ನು ಕುರಿತು, ಉವಾಚಹ - ಹೇಳಿದನಷ್ಟೆ. ॥ ೨೪ ॥ ಸಮಾಶ್ವಸಿಹಿ-ಸಮಾಧಾನಚಿತ್ತನಾಗು, ತೇ-ನಿನಗೆ, ಭದ್ರಂ ಶುಭವಾಗಲಿ, ದೇವೀ - ಸೀತಾದೇವಿಯು, ದೃಷ್ಟಾ - ನೋಡಲ್ಪಟ್ಟಳು, ನಸಂಶಯಃ - ಸಂದೇಹವಿಲ್ಲ, ನಃ - ನಮ್ಮ, ಸಮಯೇ - ಕಾಲನಿಬಂಧನೆಯು, ಅತೀತೇ - ಕಳದುಹೋಗಿರಲು, ತೈಃ - ಆ ಕಪಿಗಳಿಂದ, ಇಹ - ಇಲ್ಲಿ, ಆಗಂತುಂ - ಬರುವದಕ್ಕೆ, ನಶಕ್ಯಂಹಿ - ಆಗಲಾರದಷ್ಟೆ. ॥ ೨೫ ॥ ಕೃತ್ಯೇ - ಕಾರ್ಯವು, ವಿನಿಪಾತಿತೇ - ವಿಘ್ನಿತವಾದುದಾಗಲು, ಪ್ಲವತಾಂ - ಲಂಘಿಸುವರಲ್ಲಿ, ಪ್ರವರಃ - ಶ್ರೇಷ್ಠನಾದ, ಮಹಾಬಾಹುಃ - ಮಹಾ ಭುಜಬಲಪರಾಕ್ರಮವುಳ್ಳ, ಯುವರಾಜಃ - ಸರ್ವಾಧಿಕಾರಿಯಾದ, ಅಂಗದಃ- ಅಂಗದನು, ಮತ್ಸಕಾಶಂ - ನನ್ನ ಸಮೀಪವನ್ನು ಕುರಿತು, ನಾಗಚ್ಛೇದ್ಧಿ - ಬರಲಾರನಷ್ಟೆ. ॥ ೨೬ ॥ ಯದ್ಯಪಿ - ಹಾಗಾದರೂ, ಅಕೃ....ಣಾಂ - ಮಾಡಲ್ಪಡದಿರುವ ಕಾರ್ಯವುಳ್ಳ ಇತರ ಕಪಿಗಳಿಗೆ, ಈದೃಶಃ - (ಇಂತಹ) ಅಂದರೆ ಈ ಮಧುವನಭಂಗರೂಪವಾದ, ಉಪಕ್ರಮಃ - ಉದ್ಯೋಗವು, ಸ್ಯಾತ್ - ಆದೀತು, ಸಃ - ಆ ಅಂಗದನು, ದೀನವದನಃ - ದೈನ್ಯವಾದ ಮುಖವುಳ್ಳವನಾಗಿ, ಭ್ರಾಂತ....ಸಃ - ಭ್ರಾಂತಿಹೊಂದಿ ವಿಕಲಗೊಂಡ ಮನಸ್ಸುಳ್ಳವನು, ಭವೇತ್ - ಆದಾನು. ॥ ೨೭ ॥

ಧ್ವನಿಯನ್ನು ಮಾಡುತ್ತ ಸುಗ್ರೀವನಿಗಭಿಮುಖವಾಗಿ ಮಹಾ ವೇಗದಿಂದೈತರುತ್ತಿದ್ದರು. ಇತ್ತಲಾಗಿ ಸುಗ್ರೀವನು ಅಂಗದನು ಬರುವುದಕ್ಕೆ ಮುಂಚೆಯೇ ಸೀತಾವಿರಹದಿಂದ ದುಃಖಿಸುತ್ತಿದ್ದ ಶ್ರೀರಾಮಮೂರ್ತಿಯನ್ನು ನೋಡಿ, " ಶ್ರೀರಾಮಮೂರ್ತಿಯೇ! ಇನ್ನು ಈ ದುಃಖವನ್ನು ದೂರಮಾಡು. ಶಾಂತನಾಗು. ನಿನಗೆ ಮಂಗಳವಾಗಲಿ. ಸೀತಾದೇವಿಯು ಸಿಕ್ಕಿರುವಳು. ಇದರಲ್ಲಿ ಸಂದೇಹವಿಲ್ಲವು. ಆ ವಾನರರು ಸೀತಾದೇವಿಯನ್ನು ನೋಡದಿದ್ದಲ್ಲಿ ನಾನು ಗಡುವುಮಾಡಿಕೊಟ್ಟದ್ದ ಕಾಲವು ಮೀರಿಹೋಗಿರುವಾಗ ಇಲ್ಲಿಗೆ ಬರುತ್ತಲೇ ಇರಲಿಲ್ಲವು. ಅದರಲ್ಲಿಯೂ ಮುಖ್ಯವಾಗಿ ಯುವರಾಜನಾದ ಅಂಗದನು ತಾನು ಹೋದ ಕಾರ್ಯವು ನಡೆಯದಿದ್ದಲ್ಲಿ ನನ್ನಲ್ಲಿಗೆ ಬರುವುದೆಂದರೇನು? ॥ ೨೦–೨೬ ॥ ಹಾಗೊಂದುವೇಳೆ ಅವರು ಕಾರ್ಯಸಿದ್ಧಿಯನ್ನು ಪಡೆಯದೆ ಬಂದು ವನಭಂಗದಲ್ಲಿ ತೊಡಗಿದ್ದಲ್ಲಿ ಆ ಕೆಲಸವನ್ನು ಮಾಡಿಸಿದ್ದಕ್ಕಾಗಿ ನಮ್ಮ ಅಂಗದಕುಮಾರನ ಮನಸ್ಸಿನಲ್ಲಿ ಬಹಳ

ಮಾನಸಃ ‖ ೨೭ ‖ ಪಿತೃಪೈತಾಮಹಂ ಚೈತತ್ಪೂರ್ವಕೈರಭಿರಕ್ಷಿತಂ । ನಮೇ ಮಧು ವನಂ ಹನ್ಯಾದಹೃಷ್ಟಃ ಪ್ಲವಗೇಶ್ವರಃ । ಕೌಸಲ್ಯಾ ಸುಪ್ರಜಾ ರಾಮ! ಸಮಾಶ್ವ ಸಿಹಿ ಸುವ್ರತ! ‖ ೨೮ ‖ ದೃಷ್ಟಾ ದೇವೀ ನಸಂದೇಹೋ ನಚಾನ್ಯೇನ ಹನೂಮತಾ । ನಹ್ಯನ್ಯಃ ಕರ್ಮಣೋ ಹೇತುಸ್ಸಾಧನೇಽಸ್ಯ ಹನೂಮತಃ ‖ ೨೯ ‖ ಹನೂಮತಿಹಿ ಸಿದ್ಧಿಶ್ಚ ಮತಿಶ್ಚ ಮತಿಸತ್ತಮ! । ವ್ಯವಸಾಯಶ್ಚ ವೀರ್ಯಂಚ ಸೂರ್ಯೇ ತೇಜಇವ ಧ್ರುವಂ ‖ ೩೦ ‖ ಜಾಂಬವಾನ್ಯತ್ರ ನೇತಾಸ್ಯಾದಂಗದಶ್ಚ ಬಲೇಶ್ವರಃ । ಹನೂಮಾಂ

ಪಿತೃ....ಹಂ - ಪಿತೃಪಿತಾಮಹಸಂಬಂಧವಾದ, ಪೂರ್ವಕೈಃ - ಹಿರಿಯರಿಂದ, ಅಭಿರಕ್ಷಿತಂ - ಪರಿ ಪಾಲಿತವಾದ, ಮೇ - ನನ್ನ, ಏತನ್ಮಧುವನಂಚ - ಈ ಮಧುವನವನ್ನೂ ಸಹ, ಪ್ಲವಗೇಶ್ವರಃ - ಕಪಿನಾಯಕನಾದ ಅಂಗದನು, ಅಹೃಷ್ಟಃ - ತುಷ್ಟನಾಗದೆ, ನಹನ್ಯಾತ್ - ಧ್ವಂಸಗೊಳಿಸಲಾರನು, ಹೇ ರಾಮ - ಎಲೈ ರಾಮನೇ, ಕೌಸಲ್ಯಾ - ಕೌಸಲ್ಯಾದೇವಿಯು, ಸುಪ್ರಜಾಃ - ಪುತ್ರವತಿಯು, (ಅಭೂತ್ - ಆದಳು), ಹೇ ಸುವ್ರತ - ಎಲೈ ಒಳ್ಳೆಯ ನಿಯಮವುಳ್ಳವನೆ, ಸಮಾಶ್ವಸಿಹಿ - ಸಮಾಧಾನ ಚಿತ್ತನಾಗು. ‖ ೨೮ ‖ ದೇವೀ - ಸೀತಾದೇವಿಯು, ಹನೂಮತಾ - ಆಂಜನೇಯನಿಂದ, ದೃಷ್ಟಾ - ನೋಡಲ್ಪಟ್ಟಳು, ಅನ್ಯೇನ - ಇತರನಿಂದ, ನದೃಷ್ಟಾ - ನೋಡಲ್ಪಡಲಿಲ್ಲ, ನಸಂದೇಹಃ - ಸಂಶಯವಿಲ್ಲ, ಹಿ - ಯಾವ ಕಾರಣದಿಂದ, ಅಸ್ಯಕರ್ಮಣಃ - ಈ ಕೆಲಸದ, ಸಾಧನೇ - ಸಾಧನವಿಷಯದಲ್ಲಿ, ಹನೂಮತಃ - ಆಂಜನೇಯನಿಗಿಂತಲೂ, ಅನ್ಯಃ - ಇತರನು, ಹೇತುಃ - ಕಾರಣಭೂತನಾದವನು, ನ - ಇಲ್ಲವೋ. ‖ ೨೯ ‖ ಹೇ ಮತಿಸತ್ತಮ - ಎಲೈ ಬುದ್ಧಿವಂತನೆ, ಹನೂಮತಿ - ಆಂಜನೇಯನಲ್ಲಿ, ಸಿದ್ಧಿಶ್ಚ - ಕಾರ್ಯಸಿದ್ಧಿಯನ್ನು, ಮತಿಶ್ಚ - ಬುದ್ಧಿಯೂ, ವ್ಯವಸಾಯಶ್ಚ - ಉದ್ಯೋಗವೂ, ವೀರ್ಯಂಚ - ಪರಾಕ್ರಮವೂ, ಶ್ರುತಂಚಾಪಿ - ಶಾಸ್ತ್ರಜ್ಞತೆಯೂ ಸಹ, ಸೂರ್ಯೇ - ಸೂರ್ಯನಲ್ಲಿ, ತೇಜಇವ - ತೇಜಸ್ಸಿನಂತೆ, ಧ್ರುವಂಹಿ - ಸ್ಥಿರವಾಗಿರುವುದಷ್ಟೆ. ‖೩೦‖ ಜಾಂಬವಾನ್ - ಜಾಂಬವಂತನು, ಯತ್ರ - ಯಾವ ವಾನರ ಸಮೂಹದಲ್ಲಿ, ನೇತಾ - ನೇತೃವು, ಸ್ಯಾತ್ - ಆಗಿರುವನೋ, ಅಂಗದಶ್ಚ-

ವಾಗಿ ಕಳವಳವೂ ದೈನ್ಯವೂ ಇರುತ್ತಿದ್ದಿತೇ ಹೊರ್ತು ಆಗ ಅವನಿಗೆ ಇಷ್ಟು ಉತ್ಸಾಹವಿರುವು ದೆಂದರೇನು? ಮೇಲಾಗಿ ಆ ಮಧುವನವು ನಮಗೆ ತಂದೆ ತಾತಂದಿರ ಕಾಲದಿಂದ ಬಂದಿರು ವುದು. ನಮ್ಮ ಪೂರ್ವಿಕರೆಲ್ಲರೂ ಅದನ್ನು ಬಹಳ ಜಾಗರೂಕತೆಯಿಂದ ರಕ್ಷಿಸುತ್ತಿದ್ದರು. ಅಂತಹದನ್ನೂ ಅಂಗದನು ಏನೊಂದೂ ಭಯವಿಲ್ಲದೆ ಹಾಳುಮಾಡಬೇಕಾದರೆ ಅವನ ಮನ ಸ್ಸಿಗೆ ಎಷ್ಟೋ ಸಂತೋಷವಾಗಿರಬೇಕಲ್ಲವೆ? ಅವನಿಗೆ ಹಾಗೆ ಸಂತೋಷವಿಲ್ಲದಿದ್ದಿದ್ದರೆ ಅವನು ಎಂದಿಗೂ ವನಭಂಗಕ್ಕೆ ಅವಕಾಶಕೊಡುತ್ತಿರಲಿಲ್ಲವು. ಎಲೈ ಪರಂತಪನೇ! ಇನ್ನು ನೀನು ದುಃಖವನ್ನು ತೊರೆದು ಸಮಾಧಾನದಿಂದಿರು. ನೀನು ಕ್ಷೇಮವಾಗಿರುವುದರಿಂದ ನಿನ್ನನ್ನು ಹೆತ್ತ ಕೌಸಲ್ಯಾದೇವಿಯು ಸುಪುತ್ರವತಿಯೆನಿಸಿಕೊಂಡಳು. ಸೀತಾದೇವಿಯು ದೊರ ಕಿರುವಳೆಂಬುದರಲ್ಲಿ ಸಂದೇಹವಿಲ್ಲವು. ನಮ್ಮ ಹನುಮಂತನೇ ಆಕೆಯನ್ನು ಕಂಡುಬಂದಿರ ಬೇಕು. ಆತನ ಹೊರ್ತು ಮತ್ತಾವನೂ ಈ ಕಾರ್ಯವನ್ನು ಸಾಧಿಸಿರಲಾರರು. ದಿನಕರನಲ್ಲಿ ತೇಜಸ್ಸು ಹೇಗೋ ಹಾಗೆ ಆತನಲ್ಲಿ ಕಾರ್ಯಸಿದ್ಧಿಯೂ ಬುದ್ಧಿಯೂ, ಉತ್ಸಾಹವೂ, ಪರಾ ಕ್ರಮವೂ ಸ್ಥಿರವಾಗಿ ನೆಲೆಗೊಂಡಿರುವುವು. ‖ ೨೭–೩೦ ‖ ಯಾವ ಕೆಲಸಕ್ಕೆ ಅಂಗದ ನಿಯಾಮಕನಾಗಿಯೂ, ಜಾಂಬವಂತನು ಮಂತ್ರಿಯಾಗಿಯೂ, ಹನುಮಂತನು ಸಾಧಕ

ಶ್ಚಾಪ್ಯಧಿಷ್ಠಾತಾ ನತಸ್ಯ ಗತಿರನ್ಯಥಾ ॥೩೧॥ ಮಾಭೂಶ್ಚಿಂತಾಸಮಾಯುಕ್ತಸ್ಸಂಪ್ರತ್ಯಮಿತವಿಕ್ರಮ!" । ತತಃ ಕಿಲಕಿಲಾಶಬ್ದಂ ಶುಶ್ರಾವಾಽಽಸನ್ನಮಂಬರೇ ॥ ೩೨ ॥ ಹನೂಮತ್ಕರ್ಮದೃಪ್ತಾನಾಂ ನರ್ದತಾಂ ಕಾನನೌಕಸಾಂ । ಕಿಷ್ಕಿಂಧಾಮುಪಯಾತಾನಾಂ ಸಿದ್ಧಿಂ ಕಥಯತಾಮಿವ ॥ ೩೩ ॥ ತತಶ್ಶ್ರುತ್ವಾ ನಿನಾದಂ ತಂ ಕಪೀನಾಂ ಕಪಿಸತ್ತಮಃ । ಆಯತಾಂಚಿತಲಾಂಗೂಲಸ್ಸೋಽಭವದ್ಧೃಷ್ಟಮಾನಸಃ ॥ ೩೪ ॥ ಆಜಗ್ಮುಸ್ತೇಽಪಿ ಹರಯೋ ರಾಮದರ್ಶನಕಾಂಕ್ಷಿಣಃ । ಅಂಗದಂ ಪುರತಃ ಕೃತ್ವಾ ಹನೂಮಂತಂಚ ವಾನರಂ ॥ ೩೫ ॥ ತೇಽಂಗದಪ್ರಮುಖಾ ವೀರಾಃ ಪ್ರಹೃಷ್ಟಾಶ್ಚ

ಅಂಗದನೂ, ಬಲೇಶ್ವರಃ - ಸೇನಾನಾಯಕನು, ಸ್ಯಾತ್ - ಆಗಿರುವನೋ, ಹನೂಮಾಂಶ್ಚಾಪಿ - ಆಂಜನೇಯನೂ ಕೂಡ, ಅಧಿಷ್ಠಿತಾ - ರಕ್ಷಕನು, ಸ್ಯಾತ್ - ಆಗುವನೋ, ತತ್ರ - ಅಲ್ಲಿ, ಗತಿಃ - ಗಮನವು, ಅನ್ಯಥಾ - ಪ್ರಕಾರಾಂತರವಾಗಿ, ನಸ್ಯಾತ್ - ಆಗುವುದಿಲ್ಲ, ಹೇ ಅಮಿತವಿಕ್ರಮ - ಎಲೈ ಬಹು ಪರಾಕ್ರಮನೆ, ಸಂಪ್ರತಿ - ಈಗ, ಚಿಂತಾ....ಕ್ತಃ - ಯೋಚನೆಯಿಂದೊಡಗೂಡಿದವನು, ಮಾಭೂಃ - ಆಗಬೇಡ. ॥ ೩೧-೩೨ ॥ ತತಃ - ಬಳಿಕ, ಅಂಬರೇ - ಅಂತರಿಕ್ಷದಲ್ಲಿ, (ಉತ್ಸಾಹೇನ - ಉತ್ಸಾಹದಿಂದ), ಸಿದ್ಧಂ - ಕಾರ್ಯಸಿದ್ಧಿಯನ್ನು, ಕಥ....ನಾಂ - ಹೇಳುವಂತಿರುವ, ಹನೂ....ನಾಂ- ಆಂಜನೇಯನ ಕೃತ್ಯದಿಂದ ಹೆಮ್ಮೆಪಟ್ಟವರಾದಕಾರಣ, ನರ್ದತಾಂ-ಕುಣಿದಾಡುತ್ತಿರುವ, ಕಿಷ್ಕಿಂಧಾಂ- ಕಿಷ್ಕಿಂಧಾಪಟ್ಟಣವನ್ನು ಕುರಿತು, ಉಪಯಾತಾನಾಂ - ಬರುತ್ತಿರುವ, ಕಾನನೌಕಸಾಂ - ವನಚರರ, ಕಿಲಕಿಲಾಶಬ್ದಂ - ಕಿಲಕಿಲಧ್ವನಿಯನ್ನು, ಆಸನ್ನಂ - ಸಮೀಪದಲ್ಲಿಯೇ, ಶುಶ್ರಾವ - ಕೇಳಿದನು. ॥ ೩೩ ॥ ತತಃ - ಬಳಿಕ, ಕಪೀನಾಂ - ವಾನರರ, ತಂನಿನಾದಂ - ಆ ಶಬ್ದವನ್ನು, ಶ್ರುತ್ವಾ - ಕೇಳಿ, ಸಕಪಿಸತ್ತಮಃ - ಆ ಕಪಿಶ್ರೇಷ್ಠನಾದ ಸುಗ್ರೀವನು, ಹೃಷ್ಟಮಾನಸಃ - ಸಂತುಷ್ಟವಾದ ಮನವುಳ್ಳವನಾದಕಾರಣ, ಆಯ....ಲಃ - ದೀರ್ಘವಾಗಿ ಮಾಡಲ್ಪಟ್ಟ ಹುವ್ವುಗಳಂತೆ ಶಿರಸ್ಸಿನಲ್ಲಿ ಇಡಲ್ಪಟ್ಟ, ಲಾಂಗೂಲಃ - ಬಾಲವುಳ್ಳವನು, ಅಭವತ್ - ಆದನು. ॥೩೪॥ ರಾಮ....ಣಃ - ಶ್ರೀರಾಮಸಂದರ್ಶನವನ್ನಪೇಕ್ಷಿಸುತ್ತಿರುವ, ತೇಹರಯೋಽಪಿ - ಆ ವಾನರರೂ, ಅಂಗದಂ - ಅಂಗದನನ್ನು, ವಾನರಂ - ಕಪಿಯಾದ, ಹನೂಮಂತಂಚಂ - ಆಂಜನೇಯನನ್ನೂ ಸಹ, ಪುರತಃ - ಮುಂದಾಗಿ, ಕೃತ್ವಾ - ಮಾಡಿ, ಆಜಗ್ಮುಃ - ಬಂದರು. ॥ ೩೫ ॥ ಅಂಗದಪ್ರಮುಖಾಃ - ಅಂಗದನೇ ಮೊದಲಾದ, ವೀರಾಃ -

---

ನಾಗಿಯೂ ನಿಲ್ಲುವರೋ ಆ ಕೆಲಸವು ಖಂಡಿತವಾಗಿಯೂ ಸಿದ್ಧಿಸುವುದೇ ಹೊರ್ತು ಮತ್ತೆ ಬೇರೆಯಲ್ಲವು. ಆದುದರಿಂದೆಲೈ ಶ್ರೀರಾಮಚಂದ್ರನೇ! ಇನ್ನು ನಿನ್ನ ವ್ಯಸನವನ್ನು ತೊರೆ" ಎಂದನು. ಸುಗ್ರೀವನು ಹೀಗೆ ಹೇಳುತ್ತಿರುವಾಗಲೇ ಅಂಗದನೇ ಮೊದಲಾದ ಕಪಿಶ್ರೇಷ್ಠರೆಲ್ಲರೂ ಕಿಷ್ಕಿಂಧೆಯನ್ನು ಸಮೀಪಿಸಿದರು. ಅವರೆಲ್ಲರೂ ವಾಯುಪುತ್ರನಾದ ಹನುಮಂತನು ಸಾಧಿಸಿಕೊಂಡು ಬಂದಿದ್ದ ಕಾರ್ಯದಿಂದ ಹೆಮ್ಮೆಪಟ್ಟವರಾಗಿ ಆಕಾಶದಿಂದಲೇ ತಮ್ಮ ಕಾರ್ಯಸಿದ್ಧಿಯನ್ನು ಕೂಗಿ ಹೇಳುವಂತೆ ಒಬ್ಬರಿಗೆ ಮೇಲೊಬ್ಬರು ಕಿಲಕಿಲ ಶಬ್ದದೊಡನೆ ಸಿಂಹನಾದಮಾಡುತ್ತಿರಲು ಆ ಉತ್ಸಾಹದ ಕೋಲಾಹಲವನ್ನು ಕೇಳಿ ಸುಗ್ರೀವನು ತನ್ನಲ್ಲಿಯೇ ಸಂತೋಷಾಧಿಕ್ಯದಿಂದುಬ್ಬುತ್ತ ತನ್ನ ಬಾಲವನ್ನು ಉದ್ದವಾಗಿ ಬೀಸಿ ಆ ಮಾಲ್ಯವತ್ಪರ್ವತದ ಶಿಖರದಲ್ಲಿಯೇ ಸ್ತಬ್ಧನಾಗಿ ನಿಂತಿದ್ದನು. ॥೩೧–೩೪॥ ಆ ವಾನರರಾದರೋ ಅಂಗದಕುಮಾರನನ್ನೂ, ಹನುಮಂತನನ್ನೂ ಮುಂದಿಟ್ಟುಕೊಂಡು ಶ್ರೀರಾಮನ ದರ್ಶನಾರ್ಥವಾಗಿ ಅತ್ಯಾತುರ

ಮುದಾನ್ವಿತಾಃ । ನಿಪೇತುರ್ಹರಿರಾಜಸ್ಯ ಸಮೀಪೇ ರಾಘವಸ್ಯಚ ॥ ೩೬ ॥ ಹನೂಮಾಂಶ್ಚ ಮಹಾಬಾಹುಃ ಪ್ರಣಮ್ಯ ಶಿರಸಾ ತತಃ । ನಿಯತಾಮಕ್ಷತಾಂ ದೇವೀಂ ರಾಘವಾಯ ನ್ಯವೇದಯತ್ ॥ ೩೭ ॥ ನಿಶ್ಚಿತಾರ್ಥಸ್ತತಸ್ತಸ್ಮಿನ್ ಸುಗ್ರೀವಃ ಪವನಾತ್ಮಜೇ । ಲಕ್ಷ್ಮಣಃ ಪ್ರೀತಿಮಾನ್ ಪ್ರೀತಂ ಬಹುಮಾನಾದವೈಕ್ಷತ ॥ ೩೮ ॥

ಪ್ರೀತ್ಯಾಚ ರಮಮಾಣೋಽಥ ರಾಘವಃ ಪರವೀರಹಾ ।
ಬಹುಮಾನೇನ ಮಹತಾ ಹನೂಮಂತಮವೈಕ್ಷತ ॥ ೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಷ್ಷಷ್ಠಿತಮಸ್ಸರ್ಗಃ

ಶೂರರಾದ, ಮುದಾನ್ವಿತಾಃ - ಸಂತೋಷದಿಂದೊಡಗೂಡಿದ, ತೇಚ - ಆ ವಾನರರೂ, ಪ್ರಹೃಷ್ಟಾಃ - ರೋಮಾಂಚಿತರಾಗಿ, ಹರಿರಾಜಸ್ಯ - ಸುಗ್ರೀವನ, ರಾಘವಸ್ಯಚ - ಶ್ರೀರಾಮನ, ಸಮೀಪೇ - ಬಳಿಯಲ್ಲಿ, ನಿಪೇತುಃ - ಇಳಿದರು. ॥ ೩೬ ॥ ತತಃ - ಬಳಿಕ, ಮಹಾಬಾಹುಃ - ಮಹಾ ಭುಜಬಲ ಪರಾಕ್ರಮವುಳ್ಳ, ಹನೂಮಾಂಶ್ಚ - ಆಂಜನೇಯನು, ರಾಘವಾಯ - ಶ್ರೀರಾಮನಿಗೆ, ಶಿರಸಾ - ಶಿರಸ್ಸಿನಿಂದ, ಪ್ರಣಮ್ಯ - ವಂದಿಸಿ, ನಿಯತಾ - ಪತಿವ್ರತೆಯಾದ (ಗೋ) ಅನಶನವ್ರತಾದಿ ನಿಯಮಸ್ಥಳಾದ, ದೇವೀಂ - ಸೀತಾದೇವಿಯನ್ನು, ಅಕ್ಷತಾಂ - ಕುಶಲವತಿಯನ್ನಾಗಿ, ನ್ಯವೇದಯತ್ - ಅರಿಕೆ ಮಾಡಿದನು. ॥೩೭॥ ತತಃ - ಬಳಿಕ, ತಸ್ಮಿನ್ಪವನಾತ್ಮಜೇ - ಆ ವಾಯುಪುತ್ರನಲ್ಲಿ, ನಿಶ್ಚಿತಾರ್ಥಃ - ನಿಶ್ಚೈಯಿಸಲ್ಪಟ್ಟ ಪ್ರಯೋಜನವುಳ್ಳ, ಸುಗ್ರೀವಃ - ಸುಗ್ರೀವನು, ಪ್ರೀತಂ - ಸಂತುಷ್ಟನಾದ ಆಂಜನೇಯನನ್ನು, ಬಹುಮಾನಾತ್ - ಗೌರವದಿಂದ, ಅವೈಕ್ಷತ - ಕಂಡನು, ಪ್ರೀತಿಮಾನ್ - ಹರ್ಷಯುಕ್ತನಾದ, ಲಕ್ಷ್ಮಣಶ್ಚ - ಲಕ್ಷ್ಮಣನೂ, ಅವೈಕ್ಷತ - ನೋಡಿದನು, ಅಥ - ಬಳಿಕ, ಪ್ರೀತ್ಯಾ - ವಿಶ್ವಾಸದಿಂದ, ರಮಮಾಣಃ - ಹರ್ಷಗೊಳ್ಳುತ್ತಿರುವ, ಪರವೀರಹಾ - ಶತ್ರುಸಂಹಾರಕನಾದ, ರಾಘವಶ್ಚ - ಶ್ರೀರಾಮನೂ, ಮಹತಾ - ಮಹತ್ತರವಾದ, ಬಹುಮಾನೇನ - ಮರ್ಯಾದೆಯಿಂದ, ಹನೂಮಂತಂ - ಆಂಜನೇಯನನ್ನು, ಅವೈಕ್ಷತ - ನೋಡಿದನು. ॥ ೩೮-೩೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಚತುಷ್ಷಷ್ಠಿತಮಸ್ಸರ್ಗಃ

ದಿಂದ ಮುಂದೆ ಬಂದರು. ಅವರೆಲ್ಲರೂ ಸಂತೋಷಾಧಿಕ್ಯದಿಂದ ರೋಮಾಂಚಿತವಾದ ಶರೀರಗಳುಳ್ಳವರಾಗಿ ಶ್ರೀರಾಮಸುಗ್ರೀವರ ಬಳಿಯಿಳಿದರು. ಆಗ ಮಹಾ ಬಾಹುವಾದ ಹನುಮಂತನು ಶ್ರೀರಾಮಸುಗ್ರೀವರಿಬ್ಬರಿಗೂ ತಲೆವಾಗಿ ನಮಸ್ಕರಿಸಿ, "ಪ್ರಭುವೇ! ಸೀತಾದೇವಿಯು ಯಾವ ಅಪಾಯವೂ ಇಲ್ಲದೆ ತನ್ನ ಪಾತಿವ್ರತ್ಯ ನಿಯಮದೊಡನೆ ಕ್ಷೇಮವಾಗಿರುವಳು" ಎಂದು ಶ್ರೀರಾಮನಲ್ಲಿ ಅರಿಕೆಮಾಡಿದನು. ಆಗ ವಾಯುಸೂನುವಾದ ಆ ಹನುಮಂತನೇ ಈ ಕಾರ್ಯವನ್ನು ಸಾಧಿಸಿರಬೇಕೆಂದು ಲಕ್ಷ್ಮಣಸುಗ್ರೀವರಿಬ್ಬರೂ ಮನಸ್ಸಿನಲ್ಲಿ ನಿರ್ಧರಿಸಿ ಪರಮಾನಂದ ಭರಿತರಾಗಿ ಬಹುಮಾನದೃಷ್ಟಿಯಿಂದ ಆ ಹನುಮಂತನನ್ನೇ ನೋಡುತ್ತಿದ್ದರು. ಅದರಂತೆಯೇ ಶತ್ರುಮರ್ದನನಾದ ಶ್ರೀರಾಮಮೂರ್ತಿಯೂ ಸಹ ಪ್ರೀತಿಗೌರವಗಳಿಂದ ಆ ಹನುಮಂತನನ್ನುನೋಡುತ್ತ ಸಂತೋಷಪಡುತ್ತಿದ್ದನು. ॥೩೫–೩೯॥

ಇಂತಿದು ಹನುಮತ್ಕಥಿತ ಸೀತಾಕುಶಲ ವೃತ್ತಾಂತವೆಂಬ
ಅರುವತ್ತನಾಲ್ಕನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಪಂಚಷಷ್ಠಿತಮಸ್ಸರ್ಗಃ

ತತಃ ಪ್ರಸ್ರವಣಂ ಶೈಲಂ ತೇ ಗತ್ವಾ ಚಿತ್ರಕಾನನಂ । ಪ್ರಣಮ್ಯ ಶಿರಸಾ ರಾಮಂ ಲಕ್ಷ್ಮಣಂಚ ಮಹಾಬಲಂ ॥ ೧ ॥ ಯುವರಾಜಂ ಪುರಸ್ಕೃತ್ಯ ಸುಗ್ರೀವಮಭಿವಾದ್ಯಚ । ಪ್ರವೃತ್ತಿಮಥ ಸೀತಾಯಾಃ ಪ್ರವಕ್ತುಮುಪಚಕ್ರಮುಃ ॥ ೨ ॥ ರಾವಣಾಂತಃಪುರೇರೋಧಂ ರಾಕ್ಷಸೀಭಿಶ್ಚ ತರ್ಜನಂ । ರಾಮೇ ಸಮನುರಾಗಂಚ ಯಶ್ಚಾಽಯಂ ಸಮಯಃ ಕೃತಃ ॥ ೩ ॥ ಏತದಾಖ್ಯಾಂತಿ ತೇ ಸರ್ವೇ ಹರಯೋ

ತತಃ - ಬಳಿಕ, ತೇ - ಆ ಹನುಮದಾದಿಗಳು, ಚಿತ್ರಕಾನನಂ - ವಿಚಿತ್ರವಾದ ವನಗಳುಳ್ಳ, ಪ್ರಸ್ರವಣಂಶೈಲಂ - ಪ್ರಸ್ರವಣಪರ್ವತವನ್ನು, ಗತ್ವಾ - ಹೊಂದಿ, ಯುವರಾಜಂ - ಅಂಗದನನ್ನು, ಪುರಸ್ಕೃತ್ಯ - ಮುಂದೆ ಮಾಡಿಕೊಂಡು, ರಾಮಂ - ಶ್ರೀರಾಮನನ್ನು, ಮಹಾಬಲಂ - ಅತಿ ಬಲಿಷ್ಠನಾದ, ಲಕ್ಷ್ಮಣಂಚ - ಲಕ್ಷ್ಮಣನನ್ನೂ ಕುರಿತು, ಶಿರಸಾ - ಶಿರಸ್ಸಿನಿಂದ, ಪ್ರಣಮ್ಯ - ನಮಸ್ಕರಿಸಿ, ಸುಗ್ರೀವಂಚ - ಸುಗ್ರೀವನನ್ನೂ ಕುರಿತು, ಅಭಿವಾದ್ಯ - ಕೈಮುಗಿದು, ಅಥ - ಅನಂತರದಲ್ಲಿ, ಸೀತಾಯಾಃ - ಸೀತಾದೇವಿಯ, ಪ್ರವೃತ್ತಿಂ - ವೃತ್ತಾಂತವನ್ನು, ಪ್ರವಕ್ತುಂ - ಹೇಳುವುದಕ್ಕೆ, ಉಪಚಕ್ರಮುಃ - ಪ್ರಾರಂಭಿಸಿದರು. ॥ ೧-೨ ॥ ರಾವ....ರೇ - ರಾವಣನ ಅಂತಃಪುರದಲ್ಲಿ, ರೋಧಂ - ನೆಲೆಯನ್ನೂ, ರಾಕ್ಷಸೀಭಿಃ - ರಕ್ಕಸಿಯರಿಂದ, ತರ್ಜನಂಚ - ಹೆದರಿಸೋಣವನ್ನೂ, ರಾಮೇ - ಶ್ರೀರಾಮನಲ್ಲಿ, ಸಮನುರಾಗಂಚ - ದೃಢವಾದ ಅನುರಾಗವನ್ನೂ, ಯೋಯಂಸಮಯಃ - ಯಾವ ಮಾಸಾವಧಿರೂಪವಾದ ಶಪಥವು, ಕೃತಃ - ಮಾಡಲ್ಪಟ್ಟದೆಯೋ, (ತಂಚ - ಅದನ್ನೂ ಎಂಬ), ಏತತ್ - ಇದನ್ನೆಲ್ಲ, ಸರ್ವೇ - ಸಮಸ್ತರಾದ, ತೇಹರಯಃ - ಆ ಕಪಿಗಳು, ರಾಮಸನ್ನಿಧೌ - ಶ್ರೀರಾಮನ ಬಳಿಯಲ್ಲಿ, ಆಖ್ಯಾಂತಿ - ಅರಿಕೆ ಮಾಡಿದರು. ॥ ೩ ॥ ರಾಮಸ್ತು - ಶ್ರೀರಾಮನಾದರೆ, ವೈದೇಹೀಂ - ಸೀತಾದೇವಿಯನ್ನು, ಅಕ್ಷತಾಂ - ನಾಶವಿಲ್ಲದವಳನ್ನಾಗಿ, ಶ್ರುತ್ವಾ - ಕೇಳಿ, ಉತ್ತರಂ-

---

ಹೀಗೆ ಆ ವಾನರರೆಲ್ಲರೂ ವಿಚಿತ್ರಾರಣ್ಯವಿರಾಜಿತವಾದ ಪ್ರಸ್ರವಣಪರ್ವತವನ್ನು ಸೇರಿ ಮಹಾ ಬಲಾಢ್ಯರಾದ ಶ್ರೀರಾಮಲಕ್ಷ್ಮಣ ಸುಗ್ರೀವರಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ ಯುವರಾಜನಾದ ಅಂಗದಕುಮಾರನನ್ನು ಮುಂದಿಟ್ಟುಕೊಂಡು ಮಹಾ ಪತಿವ್ರತಾ ಶಿರೋಮಣಿಯಾದ ಸೀತಾದೇವಿಯ ವೃತ್ತಾಂತವನ್ನು ವಿಶದವಾಗಿ ತಿಳಿಸಲುಪಕ್ರಮಿಸಿದರು. “ಎಲೈ ರಘುನಂದನನೇ! ಸೀತಾದೇವಿಯನ್ನು ರಾವಣಾಸುರನು ಕದ್ದೊಯ್ದು ಅಂತಃಪುರೋಪವನವಾದ ಅಶೋಕವನದಲ್ಲಿಟ್ಟಿರುವನು. ಅವನು ಭಯಂಕರ ರಾಕ್ಷಸಿಯರನ್ನು ಆಕೆಗೆ ಕಾವಲಿಟ್ಟಿರುವನು. ಅವರು ಆಕೆಯನ್ನು ನಿರಂತರವೂ ಬೆದರಿಸಿ ಪೀಡಿಸುತ್ತಿರುವರು. ಎಷ್ಟು ನಿರ್ಬಂಧಗೊಳಿಸಿದರೂ ಆ ದೇವಿಯು ರಾವಣಾಸುರನಲ್ಲಿ ಎಷ್ಟುಮಾತ್ರಕ್ಕೂ ಮನಸ್ಸು ಮಾಡದೆ ನಿನ್ನಲ್ಲಿಯೇ ನೆಟ್ಟಮನಸ್ಸುಳ್ಳವಳಾಗಿರುವಳು. ಆ ರಾವಣಾಸುರನು ಸೀತೆಗೆ ಒಂದು ಗಡುವನ್ನು ಮಾಡಿದ್ದಾನೆ. ಆ ಗಡುವಿನೊಳಗಾಗಿ ತನ್ನನ್ನು ವರಿಸದಿದ್ದರೆ ಕೊಲ್ಲುವೆನೆಂದೂ ಆಕೆಗೆ ಹೇಳಿರುವನು” ಶ್ರೀರಾಮನ ಸನ್ನಿಧಿಯಲ್ಲಿ ಆ ವಾನರೋತ್ತಮರು ಹೀಗೆ

ರಾಮಸನ್ನಿಧೌ । ವೈದೇಹೀಕ್ಷಮತಾಂ ಶ್ರುತ್ವಾ ರಾಮಸ್ತೂತ್ತರಮಬ್ರವೀತ್ ॥ ೪ ॥ "ಕ್ವ ಸೀತಾ ವರ್ತತೇ ದೇವೀ ಕಥಂಚ ಮಯಿ ವರ್ತತೇ ?। ಏತನ್ಮೇ ಸರ್ವಮಾಖ್ಯಾತ ವೈದೇಹೀಂ ಪ್ರತಿ ವಾನರಾಃ !" ॥ ೫ ॥ ರಾಮಸ್ಯ ಗದಿತಂ ಶ್ರುತ್ವಾ ಹರಯೋ ರಾಮ ಸನ್ನಿಧೌ । ಚೋದಯಂತಿ ಹನೂಮಂತಂ ಸೀತಾವೃತ್ತಾಂತಕೋವಿದಂ ॥ ೬ ॥ ಶ್ರುತ್ವಾ ತು ವಚನಂ ತೇಷಾಂ ಹನೂಮಾನ್ಮಾರುತಾತ್ಮಜಃ । ಪ್ರಣಮ್ಯ ಶಿರಸಾ ದೇವ್ಯೈ ಸೀತಾಯೈ ತಾಂ ದಿಶಂ ಪ್ರತಿ । ಉವಾಚ ವಾಕ್ಯಂ ವಾಕ್ಯಜ್ಞಸ್ಸೀತಾಯಾ ದರ್ಶನಂ ಯಥಾ ॥೭॥ "ಸಮುದ್ರಂ ಲಂಘಯಿತ್ವಾಽಹಂ ಶತಯೋಜನಮಾಯತಂ । ಆಗಚ್ಛಂ ಜಾನಕೀಂ ಸೀತಾಂ ಮಾರ್ಗಮಾಣೋ ದಿದೃಕ್ಷಯಾ ॥ ೮ ॥ ತತ್ರ ಲಂಕೇತಿ

ಪ್ರತ್ಯುತ್ತರವನ್ನು, ಅಬ್ರವೀತ್ - ಹೇಳಿದನು. ॥ ೪ ॥ ಹೇ ವಾನರಾಃ - ಎಲೈ ಕಪಿಗಳಿರಾ, ಸೀತಾ - ಸೀತಾದೇವಿಯು, ಕ್ವವರ್ತತೇ - ಎಲ್ಲಿದ್ದಾಳೆ, ಮಯಿಚ - ನನ್ನ ವಿಷಯದಲ್ಲಿ, ಕಥಂವರ್ತತೇ - ಹೇಗಿರುವಳು, ವೈದೇಹೀಂಪ್ರತಿ - ಸೀತಾದೇವಿಯನ್ನು ಕುರಿತು, ಏತತ್ಸರ್ವಂ - ಇದನ್ನೆಲ್ಲ, ಮೇ - ನನಗೆ, ಆಖ್ಯಾತ - ಹೇಳಿರಿ. ॥ ೫ ॥ ಹರಯಃ - ವಾನರರು, ರಾಮಸ್ಯ - ಶ್ರೀರಾಮನ, ಗದಿತಂ - ಮಾತನ್ನು, ಶ್ರುತ್ವಾ - ಕೇಳಿ, ರಾಮಸನ್ನಿಧೌ - ಶ್ರೀರಾಮನ ಸಮೀಪದಲ್ಲಿ, ಸೀತಾ....ದಂ - ಸೀತಾ ದೇವಿಯ ವರ್ತಮಾನದಲ್ಲಿ ತಿಳಿವಳಿಕೆಯುಳ್ಳ, ಹನುಮಂತಂ - ಹನುಮಂತನನ್ನು, ಚೋದಯಂತಿ - ಪ್ರೇರಣೆಮಾಡಿದರಷ್ಟೆ. ॥ ೬ ॥ ತೇಷಾಂ - ಆ ಕಪಿಗಳ, ವಚನಂತು - ಮಾತನ್ನಾದರೆ, ಶ್ರುತ್ವಾ - ಕೇಳಿ, ವಾಕ್ಯಜ್ಞಃ - ವಚನವನ್ನರಿತವನಾದ, ಮಾರುತಾತ್ಮಜಃ - ವಾಯುಪುತ್ರನಾದ, ಹನುಮಾನ್ - ಆಂಜನೇಯನು, ಸೀತಾಯೈದೇವ್ಯೈ - ಸೀತಾದೇವಿಗೆ, ತಾಂದಿಶಂಪ್ರತಿ - ಆ ದಕ್ಷಿಣದಿಕ್ಕನ್ನು ಕುರಿತು, ಶಿರಸಾ - ಶಿರಸ್ಸಿನಿಂದ, ಪ್ರಣಮ್ಯ - ನಮಸ್ಕರಿಸಿ, ಸೀತಾಯಾಃ - ಸೀತಾದೇವಿಯ, ದರ್ಶನಂಯಥಾ - ಸಂದರ್ಶನವೆಂತೋ, (ತಥಾ - ಹಾಗೆ), ವಾಕ್ಯಂ - ವಚನವನ್ನು, ಉವಾಚ - ಹೇಳಿದನು. ॥ ೭ ॥ ಅಹಂ - ನಾನು, ಜಾನಕೀಂ - ಜನಕಪುತ್ರಿಯಾದ, ಸೀತಾಂ - ಸೀತಾದೇವಿಯನ್ನು, ದಿದೃಕ್ಷಯಾ - ನೋಡಲಿಚ್ಛೆಯಿಂದ, ಮಾರ್ಗಮಾಣಃ - ಹುಡುಕುತ್ತ, ಶತಯೋಜನಂ - ನೂರುಗಾವುದ ಪರಿಮಿತಿಯುಳ್ಳ, ಆಯತಂ - ದೀರ್ಘವಾದ, ಸಮುದ್ರಂ - ಸಮುದ್ರವನ್ನು, ಲಂಘಯಿತ್ವಾ - ದಾಟಿ,

---

ಬಿನ್ನವಿಸಲು ಶ್ರೀರಾಮನು ತನ್ನಪ್ರಿಯೆಯಾದ ಸೀತೆಯು ಕುಶಲದಿಂದಿರುವವಳನ್ನಾಗಿ ತಿಳಿದು ಅವರನ್ನು ಕುರಿತು, "ಎಲೈ ವಾನರರೇ ! ಸೀತೆಯೆಲ್ಲಿರುವಳು ? ನನ್ನ ವಿಷಯದಲ್ಲಿ ಆಕೆಯು ಹೇಗೆ ನಡೆಯುತ್ತಿರುವಳು ? ಈ ವಿಷಯಗಳೆಲ್ಲವನ್ನೂ ಸವಿಸ್ತಾರವಾಗಿ ನನಗೆ ತಿಳಿಯ ಹೇಳಿರಿ" ಎಂದು ಹೇಳಿದನು. ॥೧–೫॥ ಶ್ರೀರಾಮನಿಂತು ನುಡಿಯಲು ಆ ವಾನರರೆಲ್ಲರೂ ಸೀತಾ ವೃತ್ತಾಂತಕೋವಿದನಾದ ಹನುಮಂತನನ್ನು, ಆ ಶ್ರೀರಾಮನ ಸನ್ನಿಧಿಯಲ್ಲಿ ಆ ವೃತ್ತಾಂತವೆಲ್ಲ ವನ್ನೂ ವಿಶದವಾಗಿ ತಿಳಿಸೆಂದು ಪ್ರೇರೇಪಿಸಿದರು. ವಾಯುನಂದನನಾದ ಹನುಮಂತನು ಅವರ ಮಾತುಗಳನ್ನು ಕೇಳಿ ಸೀತಾದೇವಿಗಾಗಿ ಆಕೆಯಿರುವ ದಕ್ಷಿಣದಿಕ್ಕಿಗೆ ಸಾಷ್ಟಾಂಗಪ್ರಣಾಮ ವನ್ನುಮಾಡಿ ತಾನು ಸೀತಾದೇವಿಯನ್ನು ಹೇಗೆ ಕಂಡನೋ ಹಾಗೆಯೇ ಎಲ್ಲ ವಿಷಯಗಳನ್ನೂ ಅರಿಕೆ ಮಾಡುವವನಾಗಿ ಶ್ರೀರಾಮಮೂರ್ತಿಯನ್ನುಕುರಿತು, "ಎಲೈ ಶ್ರೀರಾಮಮೂರ್ತಿಯೇ ! ನಾನು ಶತಯೋಜನವಿಸ್ತೀರ್ಣವಾದ ಸಾಗರವನ್ನು ದಾಟಿ ಸೀತಾದೇವಿಯನ್ನು ನೋಡುವುದ ರಲ್ಲಿ ಮಹದಾಶೆಯುಳ್ಳವನಾಗಿ ಹುಡುಕಲು ಹೋದೆನು. ಆ ದಕ್ಷಿಣ ಮಹಾಸಾಗರದ

ನಗರೀ ರಾವಣಸ್ಯ ದುರಾತ್ಮನಃ । ದಕ್ಷಿಣಸ್ಯ ಸಮುದ್ರಸ್ಯ ತೀರೇ ವಸತಿ ದಕ್ಷಿಣೇ ॥ ೯ ॥ ತತ್ರ ದೃಷ್ಟಾ ಮಯಾ ಸೀತಾ ರಾವಣಾಂತಃಪುರೇ ಸತೀ । ಸನ್ನ್ಯಸ್ಯ ತ್ವಯಿ ಜೀವಂತೀ ರಾಮಾ ರಾಮ ಮನೋರಥಂ ॥ ೧೦ ॥ ದೃಷ್ಟಾ ಮೇ ರಾಕ್ಷಸೀಮಧ್ಯೇ ತರ್ಜ್ಯಮಾನಾ ಮುಹುರ್ಮುಹುಃ । ರಾಕ್ಷಸೀಭಿರ್ವಿರೂಪಾಭೀ ರಕ್ಷಿತಾ ಪ್ರಮದಾವನೇ ॥ ೧೧ ॥ ದುಃಖಮಾಸಾದ್ಯತೇ ದೇವೀ ತಥಾ ದುಃಖೋಚಿತಾ ಸತೀ । ರಾವಣಾಂತಃಪುರೇ ರುದ್ಧಾ ರಾಕ್ಷಸೀಭಿಸ್ಸುರಕ್ಷಿತಾ ॥ ೧೨ ॥ ಏಕವೇಣೀಧರಾ ದೀನಾ ತ್ವಯಿ ಚಿಂತಾಪರಾ

ಆಗಚ್ಛಂ - ಹೋದೆನು. ॥೮॥ ದಕ್ಷಿಣಸ್ಯಸಮುದ್ರಸ್ಯ - ದಕ್ಷಿಣಸಮುದ್ರದ, ದಕ್ಷಿಣೇ - ದಕ್ಷಿಣಭಾಗದಲ್ಲಿರುವ, ತತ್ರತೀರೇ - ಆ ದಡದಲ್ಲಿ, ದುರಾತ್ಮನಃ - ಕೆಟ್ಟ ನಡತೆಯುಳ್ಳ, ರಾವಣಸ್ಯ - ರಾವಣನ, ಲಂಕೇತಿ - ಲಂಕೆಯೆಂಬ, ನಗರೀ - ಪಟ್ಟಣವು, ವಸತಿ - ಇರುವುದು. ॥ ೯ ॥ ಹೇ ರಾಮ - ಎಲೈ ಶ್ರೀರಾಮನೇ, ತತ್ರ-ಆ ಪುರದಲ್ಲಿ, ರಾವ....ರೇ-ರಾವಣನ ಅಂತಃಪುರೋಪವನವಾದ ಅಶೋಕವನದಲ್ಲಿ, ಸತೀ - ಪತಿವ್ರತೆಯಾದ, ರಾಮಾ - ಮನೋಹರಳಾದ, ಸೀತಾ-ಸೀತಾದೇವಿಯು, ತ್ವಯಿ - ನಿನ್ನಲ್ಲಿ, ಮನೋರಥಂ-ಮನೋಭಾವವನ್ನು, ಸನ್ನ್ಯಸ್ಯ-ಚನ್ನಾಗಿಟ್ಟು, ಜೀವಂತೀ-ಬದುಕಿರುವವಳಾಗಿ, ಮಯಾ-ನನ್ನಿಂದ, ದೃಷ್ಟಾ - ಕಾಣಲ್ಪಟ್ಟಳು. ॥ ೧೦ ॥ ಪ್ರಮದಾವನೇ - ಉದ್ಯಾನದಲ್ಲಿ, ರಾಕ್ಷಸೀಮಧ್ಯೇ-ರಕ್ಕಸಿಯರನಡುವೆ, ಮುಹುರ್ಮುಹುಃ - ಬಾರಿಬಾರಿಗೂ, ತರ್ಜ್ಯಮಾನಾ - ಹೆದರಿಸಲ್ಪಟ್ಟವಳಾಗಿ, ವಿರೂಪಾಭಿಃ - ವಿಕಾರರೂಪಗಳುಳ್ಳ, ರಾಕ್ಷಸೀಭಿಃ - ರಾಕ್ಷಸಸ್ತ್ರೀಯರಿಂದ, ರಕ್ಷಿತಾ - ಸಂರಕ್ಷಿಸಲ್ಪಟ್ಟವಳಾಗಿ, ಮೇ - ನನ್ನಿಂದ, ದೃಷ್ಟಾ - ನೋಡಲ್ಪಟ್ಟಳು. ॥೧೧॥ ಅದುಃಖೋಚಿತಾ - ವ್ಯಸನಕ್ಕೆ ಅನರ್ಹಳಾದ, ಸತೀ-ಪತಿವ್ರತೆಯಾದ, ದೇವೀ-ಸೀತಾದೇವಿಯು, ತಥಾ-ಆ ಪ್ರಕಾರವಾಗಿ, ದುಃಖಂ-ಶೋಕವನ್ನು, ಆಸಾದ್ಯತೇ-ಹೊಂದಿದ್ದಾಳೆ, ಹೇ ಕಾಕುತ್ಸ್ಥ-ಎಲೈ ಶ್ರೀರಾಮನೇ, ರಾವ....ರೇ-ರಾವಣಾಸುರನ ಅಂತಃಪುರೋಪವನವಾದ ಅಶೋಕವನದಲ್ಲಿ, ರುದ್ಧಾ-ಸೆರೆಗೊಳಿಸಲ್ಪಟ್ಟವಳಾಗಿ, ರಾಕ್ಷಸೀಭಿಃ-ರಾಕ್ಷಸಾಂಗನೆಯರಿಂದ, ಸುರಕ್ಷಿತಾ - ಪಾಲಿಸಲ್ಪಡುತ್ತಿದ್ದಾಳೆ, ದೀನಾ - ದೈನ್ಯವುಳ್ಳವಳಾದಕಾರಣ, ಏಕವೇಣೀಧರಾ - ಒಂದೇ ತಿರಿಕಟ್ಟಿದ ಜಡೆಮುಡಿಯನ್ನು ಧರಿಸಿರುವ, ತ್ವಯಿ - ನಿನ್ನ ವಿಷಯದಲ್ಲಿ,

---

ದಕ್ಷಿಣತೀರದಲ್ಲಿ ಮಹಾ ದುಷ್ಟನಾದ ಆ ರಾವಣಾಸುರನ ಲಂಕಾಪಟ್ಟಣವಿರುವುದು. ಎಲೈ ರಾಮಚಂದ್ರನೇ! ಮಹಾ ಪತಿವ್ರತೆಯೂ, ಸುಂದರಾಂಗಿಯೂ ಆದ ಸೀತಾದೇವಿಯು ಆ ರಾವಣನ ಅಂತಃಪುರಕ್ಕೆ ಸೇರಿದ ಅಶೋಕವನದಲ್ಲಿ ನಿರಂತರವೂ ನಿನ್ನನ್ನೇ ಧ್ಯಾನಿಸುತ್ತಲಿರುವಳು. ಆಕೆಯನ್ನು ನಾನು ಕಂಡೆನು. ॥ ೬–೧೦ ॥ ಆಕೆಯು ಜೀವದಿಂದಿರುವಳು; ಕುಶಲವಾಗಿರುವಳು. ಆ ದೇವಿಗೆ ರಾಕ್ಷಸಸ್ತ್ರೀಯರು ಕಾವಲಿದ್ದಾರೆ. ಅವರು ಆಕೆಯನ್ನು ನಿರಂತರವೂ ಬೆದರಿಸುತ್ತಿದ್ದಾರೆ. ವ್ಯಸನವನ್ನನುಭವಿಸಲು ಅನರ್ಹಳೂ, ಮಹಾ ಪತಿವ್ರತೆಯೂ ಆದ ಆ ಸೀತಾದೇವಿಯು ನಿರಂತರವೂ ವ್ಯಸನಕ್ಕೆ ತುತ್ತಾಗಿಸಲ್ಪಟ್ಟಿರುವಳು. ಎಲೈ ಕಾಕುತ್ಸ್ಥನೇ! ರಾವಣಾಂತಃಪುರಕ್ಕೆ ಸಂಬಂಧಿಸಿದ ಅಶೋಕವನದಲ್ಲಿ ಅಡ್ಡಗಿಸಲ್ಪಟ್ಟವಳೂ, ರಾಕ್ಷಸಸ್ತ್ರೀಯರಿಂದ ಸುರಕ್ಷಿತಳಾಗಿರುವಳೂ, ಯಾವ ಸಂಸ್ಕಾರವೂ ಇಲ್ಲದಿರುವುದರಿಂದ ಒಂದೇ ತಿರಿಯಾದ ತಲೆಗೂದಲುಗಳುಳ್ಳವಳೂ, ಮಹಾ ವ್ಯಸನಸಂತಪ್ತೆಯಾದವಳೂ ಆದ ಆ ದೇವಿಯನ್ನು ನಾನು ಬಹಳ ಪ್ರಯಾಸದಿಂದ ಕಂಡೆನು. ಆಕೆಯು

ಯಣಾ । ಅಧಶ್ಶಯ್ಯಾ ವಿವರ್ಣಾಂಗೀ ಪದ್ಮಿನೀವ ಹಿಮಾಗಮೇ ॥ ೧೭ ॥ ರಾವಣಾ ದ್ವಿನಿವೃತ್ತಾರ್ಥಾ ಮರ್ತವ್ಯಕೃತನಿಶ್ಚಯಾ । ದೇವೀ ಕಥಂಚಿತ್ಕಾಕುತ್ಸ್ಥ! ತ್ವನ್ಮನಾ ಮಾರ್ಗಿತಾ ಮಯಾ ॥೧೮॥ ಇಕ್ಷ್ವಾಕುವಂಶವಿಖ್ಯಾತಿಂ ಶನೈಃ ಕೀರ್ತಯತಾಽನಘ!। ಸಾ ಮಯಾ ನರಶಾರ್ದೂಲ! ವಿಶ್ವಾಸಮುಪಪಾದಿತಾ ॥ ೧೯ ॥ ತತಸ್ಸಂಭಾಷಿತಾ ದೇವೀ ಸರ್ವಮರ್ಥಂಚ ದರ್ಶಿತಾ । ರಾಮಸುಗ್ರೀವಸಖ್ಯಂಚ ಶ್ರುತ್ವಾ ಪ್ರೀತಿಮುಪಾ ಗತಾ ॥ ೨೦ ॥ ನಿಯತಸ್ಸಮುದಾಚಾರೋ ಭಕ್ತಿಶ್ಚಾಸ್ಯಾಸ್ತದಾ ತ್ವಯಿ । ಏವಂ

ಚಿಂತಾ....ಣಾ - ಯೋಚನೆಯಲ್ಲಿ ಆಸಕ್ತಳಾದ, ಅಧಶ್ಶಯ್ಯಾ - ನೆಲದಲ್ಲಿ ಮಲಗಿರುವ, ಹಿಮಾಗಮೇ- ಹಿಮಂತಋತುವಿನ ಆದಿಯಲ್ಲಿ, ಪದ್ಮಿನೀವ - ಕಮಲದ ಬಳ್ಳಿಯಂತೆ, ವಿವರ್ಣಾಂಗೀ - ಕಾಂತಿಹೀನ ವಾದ ಶರೀರವುಳ್ಳ, ರಾವಣಾತ್ - ರಾವಣನ ದೆಶೆಯಿಂದ, ವಿನಿವೃತ್ತಾರ್ಥಾ - ಹಿಂತಿರುಗಿದ ಮನೋ ನಿಶ್ಚಯವುಳ್ಳ, ಮರ್ತ....ಯಾ - ಮರಣದಲ್ಲಿ ಬದ್ಧಸಂಕಲ್ಪಳಾದ, ತ್ವನ್ಮನಾಃ - ನಿನ್ನಲ್ಲೇ ನೆಟ್ಟ ಮನವುಳ್ಳ, ದೇವೀ - ಸೀತಾದೇವಿಯು, ಮಯಾ - ನನ್ನಿಂದ, ಕಥಂಚಿತ್ - ಅತಿ ಪ್ರಯಾಸದಿಂದ, ಮಾರ್ಗಿತಾ - ಹುಡುಕಲ್ಪಟ್ಟಳು. ‖೧೭ ೧೮‖ ಹೇ ಅನಘ - ಎಲೈ ನಿರ್ದೋಷನೆ, ಹೇ ನರಶಾರ್ದೂಲ- ಎಲೈ ಪುರುಷಶ್ರೇಷ್ಠನೇ, ಇಕ್ಷ್ವಾ....ತಿಂ - ಇಕ್ಷ್ವಾಕುಕುಲದ ಯಶಸ್ಸನ್ನು, ಶನೈಃ - ಮೆಲ್ಲಗೆ, ಕೀರ್ತಯತಾ - ಪ್ರಶಂಸಿಸುತ್ತಿರುವ, ಮಯಾ - ನನ್ನಿಂದ, ಸಾ - ಆ ಸೀತಾದೇವಿಯು, ವಿಶ್ವಾಸಂ - ಪ್ರೀತಿಯನ್ನು, ಉಪಪಾದಿತಾ - ಹೊಂದಿಸಲ್ಪಟ್ಟಳು. ‖ ೧೯ ‖ ತತಃ - ಬಳಿಕ, ದೇವೀ - ಸೀತಾ ದೇವಿಯು, ಸಂಭಾಷಿತಾ - ಮಾತನಾಡಿಸಲ್ಪಟ್ಟವಳಾಗಿ, ಸರ್ವಮರ್ಥಂಚ - ಸಮಸ್ತಾರ್ಥವನ್ನೂ, ದರ್ಶಿತಾ - ವಿಜ್ಞಾಪಿಸಲ್ಪಟ್ಟಳು, ಹೇ ರಾಮ - ಎಲೈ ರಾಮನೇ, ಸುಗ್ರೀ....ಚ - ಸುಗ್ರೀವನ ಸ್ನೇಹ ವನ್ನೂ ಕೂಡ, ಶ್ರುತ್ವಾ-ಕೇಳಿ, ಪ್ರೀತಿಂ-ಸಂತೋಷವನ್ನು, ಉಪಾಗತಾ-ಹೊಂದಿಸಲ್ಪಟ್ಟಳು. ‖೨೦‖ ಅಸ್ಯಾಃ - ಈ ಸೀತಾದೇವಿಗೆ, ತ್ವಯಿ - ನಿನ್ನಲ್ಲಿ, ಸಮುದಾಚಾರಃ - ಪಾತಿವ್ರತ್ಯರೂಪವಾದ ಒಳ್ಳೆಯ ನಡತೆಯು, ನಿಯತಃ - ನಿಯಮದಿಂದ ಬದ್ಧವಾಗಿದೆ, ಭಕ್ತಿಶ್ಚ - ಭಕ್ತಿಯೂ, ತಥಾ - ಹಾಗೆಯೇ,

ನಿರಂತರವೂ ನಿನ್ನನ್ನೇ ಧ್ಯಾನಿಸುತ್ತಿರುವಳು, ಯಾವಾಗಲೂ ಭೂಶಾಯಿನಿಯಾಗಿರುವುದ ರಿಂದ ವಿವರ್ಣವಾದ ದೇಹವುಳ್ಳವಳಾಗಿ ಹೇಮಂತಋತುವಿನಲ್ಲಿನ ಪದ್ಮಿನಿಯಂತಿರುವಳು. ರಾವಣಾಸುರನಲ್ಲಿ ಸ್ವಲ್ಪಮಾತ್ರವೂ ಮನಸ್ಸಿಲ್ಲದಿರುವುದರಿಂದ ಆಕೆಯು ಸಾಯಲು ನಿಶ್ಚ ಯಿಸಿದ್ದಳು. ಆಕೆಯು ನಿನ್ನಲ್ಲಿನ ಪ್ರೇಮದಿಂದ ಇನ್ನೂ ಜೀವದಿಂದಿರುವಳು. ಇಂತಹ ಸೀತೆಯನ್ನು ನಾನು ಬಹಳ ಪ್ರಯಾಸಪಟ್ಟು ಸಂದರ್ಶಿಸಿದೆನು. ಎಲೈ ಪುರುಷೋತ್ತಮನೇ! ಹೀಗೆ ನಾನು ಅನೇಕ ಗುರ್ತುಗಳಿಂದ ಆಕೆಯೇ ಸೀತಾದೇವಿಯೆಂದು ನಿರ್ಧರಿಸಿ ಆಕೆಗೆ ನನ್ನಲ್ಲಿ ನಂಬುಗೆಯುಂಟಾಗಲು ಇಕ್ಷ್ವಾಕುವಂಶವನ್ನು ಸಂಕ್ಷೇಪವಾಗಿ ವರ್ಣಿಸಿದೆನು. ಇದನ್ನು ಕೇಳಿ ಆಕೆಗೆ ನನ್ನಲ್ಲಿ ವಿಶ್ವಾಸವುಂಟಾಯಿತು. ‖ ೧೧–೧೯ ‖ ಆಮೇಲೆ ಆ ದೇವಿಯು ನನ್ನೊಡನೆ ಮಾತನಾಡಿದಳು. ಆಗ ನಾನು ಎಲ್ಲ ವಿಷಯಗಳನ್ನೂ ವಿಶದವಾಗಿ ಆಕೆಗೆ ತಿಳಿಸಿದೆನು. ನಿನಗೂ, ನಮ್ಮೊಡೆಯನಾದ ಸುಗ್ರೀವನಿಗೂ ಉಂಟಾದ ಸಖ್ಯವನ್ನು ಆಕೆಗೆ ಹೇಳಿದೆನು. ಅದನ್ನು ಕೇಳಿ ಆಕೆಯು ಬಹಳವಾಗಿ ಸಂತೋಷಿಸಿದಳು. ಎಲೈ ರಘು ನಾಥನೇ! ಸೀತಾದೇವಿಯು ಸದಾಚಾರಸಂಪತ್ತಿಯೊಡಗೂಡಿ ನಿನ್ನಲ್ಲಿ ನಿರತಿಶಯವಾದ

ಮಯಾ ಮಹಾಭಾಗಾ ದೃಷ್ಟ್ವಾ ಜನಕನಂದಿನೀ । ಉಗ್ರೇಣ ತಪಸಾ ಯುಕ್ತಾ ತ್ವದ್ಭಕ್ತ್ಯಾ ಪುರುಷರ್ಷಭ! ॥ ೧೮ ॥ ಅಭಿಜ್ಞಾನಂಚ ಮೇ ದತ್ತಂ ಯಥಾವೃತ್ತಂ ತವಾಂತಿಕೇ । "ಚಿತ್ರಕೂಟೇ ಮಹಾಪ್ರಾಜ್ಞ! ವಾಯಸಂ ಪ್ರತಿರಾಘವ! ॥ ೧೯ ॥ ವಿಜ್ಞಾಪ್ಯಶ್ಚ ನರವ್ಯಾಘ್ರೋ ರಾಮೋ ವಾಯುಸುತ! ತ್ವಯಾ । ಅಖಿಲೇನೇಹ ಯದ್ದೃಷ್ಟ"ಮಿತಿ ಮಾಮಾಹ ಜಾನಕೀ ॥ ೨೦ ॥ ಅಯಂಚಾಸ್ಮೈ ಪ್ರದಾತವ್ಯೋ ಯತ್ನಾತ್ಸುಪರಿರಕ್ಷಿತಃ । ಬ್ರುವತಾ ವಚನಾನ್ಯೇವಂ ಸುಗ್ರೀವಸ್ಯೋಪಶೃಣ್ವತಃ ॥ ೨೧ ॥ " ಏಷ ಚೂಡಾಮಣಿಶ್ಶ್ರೀಮಾನ್ಮಯಾ ಸುಪರಿರಕ್ಷಿತಃ । ಮನಶ್ಶಿಲಾಯಾ

(ನಿಯತಾ - ನಿಶ್ಚಲವಾಗಿದೆ), ಹೇ ಪುರುಷರ್ಷಭ - ಎಲೈ ಪುರುಷಶ್ರೇಷ್ಠನೆ, ತ್ವದ್ಭಕ್ತ್ಯಾ - ನಿನ್ನಲ್ಲಿನ ಭಕ್ತಿಯಿಂದಲೂ, ಉಗ್ರೇಣ-ಭಯಂಕರವಾದ, ತಪಸಾಚ-ತಪಸ್ಸಿನಿಂದಲೂ, ಯುಕ್ತಾ-ಕೂಡಿರುವ, ಮಹಾಭಾಗಾ - ಮಹಾ ಪುಣ್ಯವತಿಯಾದ, ಜನಕನಂದಿನೀ - ಜನಕಪುತ್ರಿಯು, ಏವಂ - ಈ ಪರಿಯಾಗಿ, ದೃಷ್ಟ್ವಾ - ನೋಡಲ್ಪಟ್ಟಳು. ॥ ೧೮ ॥ ಹೇ ಮಹಾಪ್ರಾಜ್ಞ - ಎಲೈ ಮಹಾ ಪ್ರಾಜ್ಞನೇ, ಹೇ ರಾಘವ - ಎಲೈ ಶ್ರೀರಾಮನೆ, ಚಿತ್ರಕೂಟೇ - ಚಿತ್ರಕೂಟಪರ್ವತದಲ್ಲಿ, ವಾಯಸಂಪ್ರತಿ - ಕಾಗೆಯನ್ನು ಕುರಿತು, ತವಾಂತಿಕೇ - ನಿನ್ನ ಸಮೀಪದಲ್ಲಿ, ಯಥಾವೃತ್ತಂ - ಹೇಗೆ ನಡದಿತ್ತೋ, ತತ್ - ಅದು, ಮೇ - ನನಗೆ, ಅಭಿಜ್ಞಾನಂ - ಗುರ್ತಾಗಿ, ದತ್ತಂ - ಕೊಡಲ್ಪಟ್ಟಿತು. ॥ ೧೯ ॥ ಹೇ ವಾಯುಸುತ - ಎಲೈ ವಾಯುಪುತ್ರನೆ, ಇಹ - ಇಲ್ಲಿ, ತ್ವಯಾ - ನಿನ್ನಿಂದ, ಯತ್ - ಯಾವದು, ದೃಷ್ಟಂ - ನೋಡಲ್ಪಟ್ಟಿತೋ, ತತ್ - ಅದು, ಅಖಿಲೇನ - ಸಂಪೂರ್ಣವಾಗಿ, ನರವ್ಯಾಘ್ರಃ - ಪುರಷಶ್ರೇಷ್ಠನಾದ, ರಾಮಃ - ಶ್ರೀರಾಮನು, ವಿಜ್ಞಾಪ್ಯಶ್ಚ - ವಿಜ್ಞಾಪಿಸಲ್ಪಡತಕ್ಕವನು, ಇತಿ - ಇಂತೆಂದು, ಜಾನಕೀ - ಸೀತಾದೇವಿಯು, ಮಾಂ - ನನ್ನನ್ನು ಕುರಿತು, ಆಹ - ಹೇಳಿದಳು. ॥೨೦॥ ಸುಗ್ರೀವಸ್ಯ-ಸುಗ್ರೀವನು, ಉಪಶೃಣ್ವತಃ - ಕೇಳುತ್ತಿರಲು, ಏವಂ - ಹೀಗೆ, ವಚನಾನಿ - ಮಾತುಗಳನ್ನು, ಬ್ರುವತಾ - ಹೇಳುತ್ತಿರುವನಿನ್ನಿಂದ, ಯತ್ನಾತ್ - ಪ್ರಯತ್ನದಿಂದ, ಸುಪರಿರಕ್ಷಿತಃ - ಚನ್ನಾಗಿ ರಕ್ಷಿಸಲ್ಪಟ್ಟ, ಅಯಂಚ - ಈ ರತ್ನವು, ಅಸ್ಮೈ - ಈ ಶ್ರೀರಾಮನಿಗೆ, ಪ್ರದಾತವ್ಯಃ - ಕೊಡತಕ್ಕದ್ದು, ಶ್ರೀಮಾ - ಕಾಂತಿಯುಕ್ತವಾದ, ಏಷಚೂಡಾಮಣಿಃ - ಈ ಚೂಡಾರತ್ನವು, ಮಯಾ - ನನ್ನಿಂದ, ಸುಪರಿರಕ್ಷಿತಃ - ಚನ್ನಾಗಿ ಪಾಲಿಸಲ್ಪಟ್ಟಿತ್ತು, ತಿಲಕೇ - ಹಣೆಯಲ್ಲಿದ್ದ ರೇಖೆಯು, ಪ್ರಣಷ್ಟೇ -

---

ಭಕ್ತಿಯಿಂದೊಪ್ಪುತ್ತಿರುವಳು. ಹೀಗೆ ಸಕಲ ಗುಣಸಂಪದದಿಂದೊಪ್ಪುತ್ತಿರುವ, ಜನಕರಾಜಪುತ್ರಿಯಾದ ಆ ಸೀತಾದೇವಿಯನ್ನು ನಾನು ಕಂಡೆನು. ನಾನು ಆಕೆಯೊಡನೆ ಮಾತನಾಡಿ ಎಲ್ಲ ವೃತ್ತಾಂತಗಳನ್ನೂ ತಿಳಿಸಿ ಪುನಃ ಇಲ್ಲಿಗೆ ಬರಲು ಆಕೆಯ ಅನುಜ್ಞೆಯನ್ನು ಪಡೆದು ಯಾವುದಾದರೊಂದು ಗುರುತನ್ನು ಕೊಡೆಂದು ಕೇಳಿದೆನು. ಎಲೈ ಮಹಾ ಪ್ರಾಜ್ಞನೇ! ಆಗಲಾ ದೇವಿಯು ನೀವು ತ್ರಿಕೂಟಾಚಲದಲ್ಲಿದ್ದಾಗ ನಿನ್ನ ಸಮೀಪದಲ್ಲಿ ಸೀತೆಯು ಕುಳಿತಿರಲು ನಡೆದ ಒಂದು ಕಾಗೆಯ ಕಥೆಯನ್ನು ನನಗೆ ಗುರ್ತಿಗಾಗಿ ಹೇಳಿದಳು. ॥ ೧೬–೨೦ ॥ ಆಕೆಯು ನನ್ನನ್ನು ಕುರಿತು, "ಎಲೈ ಮಾರುತಿಯೇ! ಈಗ ನೀನು ಇಲ್ಲಿ ಕಂಡ ವಿಷಯಗಳೆಲ್ಲವನ್ನೂ ಇದ್ದುದಿದ್ದಂತೆಯೇ ಶ್ರೀರಾಮನಿಗೆ ಅರಿಕೆ ಮಾಡುವವನಾಗು. ಎಲೈ ಹನುಮಂತನೇ! ಸುಗ್ರೀವನೆದುರಿಗಿದ್ದು ಕೇಳುತ್ತಿರುವಾಗ ಶ್ರೀರಾಮನಿಗೆ ಈ ವಿಷಯವನ್ನು ಬಿನ್ನವಿಸು. ಇದಲ್ಲದೆ ಒಂದುದಿನ ನನ್ನ ಮುಖದಲ್ಲಿನ ತಿಲಕವು ಅಳಿಸಿಹೋಗಿರಲು ಮಣಿಶಿಲೆಯನ್ನು ತಂದು

ಸ್ತಿಲಕೋ ಗಂಡಪಾರ್ಶ್ವೇ ನಿವೇಶಿತಃ ‖ ೨೨ ‖ ತ್ವಯಾ ಪ್ರಣಷ್ಟೇ ತಿಲಕೇ ತಂಕಿಲ ಸ್ಮರ್ತುಮರ್ಹಸಿ । ಏಷನಿರ್ಯಾತಿತಶ್ಶ್ರೀಮಾನ್ಮಯಾ ತೇ ವಾರಿಸಂಭವಃ ‖ ೨೩ ‖ ಏತಂ ದೃಷ್ಟ್ವಾ ಪ್ರಮೋದಿಷ್ಯೇ ವ್ಯಸನೇ ತ್ವಾಮಿವಾನಘ! । ಜೀವಿತಂ ಧಾರಯಿಷ್ಯಾಮಿ ಮಾಸಂ ದಶರಥಾತ್ಮಜ! । ಊರ್ಧ್ವಂ ಮಾಸಾನ್ನಜೀವೇಯಂ ರಕ್ಷಸಾಂ ವಶಮಾಗತಾ" ‖ ೨೪ ‖ ಇತಿ ಮಾಮಬ್ರವೀತ್ಸೀತಾ ಕೃಶಾಂಗೀ ಧರ್ಮಚಾರಿಣೀ । ರಾವಣಾಂತಃಪುರೇ ರುದ್ಧಾ ಮೃಗೀವೋತ್ಫುಲ್ಲಲೋಚನಾ ‖ ೨೫ ‖ ಏತದೇವ

ಅಳಿಸಿಹೋಗಲು, ತ್ವಯಾ - ನಿನ್ನಿಂದ, ಮನಶ್ಶಿಲಾಯಾಃ - ಮಣಿಶಿಲೆಯ, ತಿಲಕಃ - ತಿಲಕವು, ಗಂಡಪಾರ್ಶ್ವೇ - ಕೆನ್ನೆಯ ಪಕ್ಕದಲ್ಲಿ, ನಿವೇಶಿತಃ - ಇಡಲ್ಪಟ್ಟಿತು, ತಂಕಿಲ - ಅದನ್ನೂ ಕೂಡ, ಸ್ಮರ್ತುಂ - ಜ್ಞಾಪಿಸಿಕೊಳ್ಳುವುದಕ್ಕೆ, ಅರ್ಹಸಿ - ಯೋಗ್ಯನಾಗಿರುವೆ, ವಾರಿಸಂಭವಃ - ಉದಕದಲ್ಲಿ ಹುಟ್ಟಿದ (ಅಂದರೆ ಸಮುದ್ರದಲ್ಲಿ ಹುಟ್ಟಿದ), ಏಷಃ - ಈ ಮಣಿಯು, ಮಯಾ - ನನ್ನಿಂದ, ತೇ - ನಿನಗೆ, ನಿರ್ಯಾತಿತಃ - ಕಳುಹಿಸಲ್ಪಟ್ಟಿತು, ಹೇ ಅನಘ - ಎಲೈ ನಿರ್ದೋಷನೆ, ಏತಂ - ನೀನು ಕಳುಹಿದ ಈ ಅಂಗುಳೀಯಕವನ್ನು, ದೃಷ್ಟ್ವಾ-ಕಂಡು, ವ್ಯಸನೇ-ದುಃಖಸಮಯದಲ್ಲಿ, ತ್ವಾಮಿವ-ನಿನ್ನಂತೆ, ಪ್ರಮೋದಿಷ್ಯೇ - ಸಂತೋಷಿಸುವೆನು, ಹೇ ದಶರಥಾತ್ಮಜ - ಎಲೈ ದಶರಥನಂದನನೆ, ಮಾಸಂ - ಒಂದು ತಿಂಗಳಕಾಲ, ಜೀವಿತಂ - ಪ್ರಾಣವನ್ನು, ಧಾರಯಿಷ್ಯಾಮಿ - ಧರಿಸುವೆನು, ರಕ್ಷಸಾಂ - ರಾಕ್ಷಸರ, ವಶಂ - ಸ್ವಾಧೀನವನ್ನು, ಆಗತಾ - ಹೊಂದಿ, ಮಾಸಾದೂರ್ಧ್ವಂ - ಮಾಸಕ್ಕಿಂತಲೂ ಹೆಚ್ಚಾಗಿ, ನಜೀವೇಯಂ - ಬದುಕಲಾರೆನು. ‖೨೧-೨೪‖ ಉತ್ಫುಲ್ಲಲೋಚನಾ - ವಿಸ್ತಾರನೇತ್ರಗಳುಳ್ಳ, ಮೃಗೀವ-ಚಿಗರಿಯಂತೆ, ರಾವ....ರೇ-ರಾವಣನ ಅಂತಃಪುರೋಪವನವಾದ ಅಶೋಕವನದಲ್ಲಿ, ರುದ್ಧಾ-ಸೆರೆಹಾಕಲ್ಪಟ್ಟ, ಕೃಶಾಂಗೀ-ಸೂಕ್ಷ್ಮಗಾತ್ರಿಯಾದ, ಧರ್ಮಚಾರಿಣೀ-ಧರ್ಮಾನುಷ್ಠಾನ

ತಿಲಕವನ್ನಾಗಿ ಮಾಡಿ ಅದನ್ನು ಗಂಡಪಾರ್ಶ್ವದಲ್ಲಿರಿಸಿದೆಯಲ್ಲವೆ? ಅದನ್ನು ಜ್ಞಾಪಿಸಿಕೊಳ್ಳೆಂದು ನನ್ನ ನಾಥನಿಗೆ ಅರಿಕೆ ಮಾಡು. ಎಲೈ ಹನುಮಂತನೇ! ಮಹಾ ಪ್ರಯತ್ನದಿಂದ ನಾನು ಕಾಪಾಡಿ ಇಟ್ಟುಕೊಂಡಿದ್ದ ಈ ಚೂಡಾಮಣಿಯನ್ನು ಶ್ರೀರಾಮನಿಗೆ ಕೊಡು. ಮಹಾ ಕಾಂತಿಸಂಪನ್ನವಾದ ಈ ಮಣಿಯನ್ನು ನಾನು ಬಹು ಪ್ರಯಾಸದಿಂದ ಕಾಪಾಡಿಕೊಂಡಿದ್ದೆನು" ಎಂದು ಹೇಳಿದಳು. ಆಕೆಯು ಹೀಗೆ ಹೇಳುತ್ತಿರುವಾಗ ಆಕೆಗೆ ತಡೆಯಲಸಾಧ್ಯವಾದ ದುಃಖ ಉಕ್ಕಿಬಂದಿತು. ಆಗಲಾಕೆಯು ಆ ದುಃಖದಿಂದ ಮೈಮರೆತು ನಿನ್ನನ್ನುದ್ದೇಶಿಸಿ, "ಎಲೈ ಪಾಪರಹಿತನಾದ ಶ್ರೀರಾಮನೇ! ಸಾಗರಸಂಭೂತವಾದುದೂ, ಮಹಾ ಕಾಂತಿಯುಕ್ತವಾದುದೂ ಆದ ಈ ಚೂಡಾಮಣಿಯನ್ನು ನಿನಗೆ ಕಳುಹಿಸಿರುವೆನು. ಮಹಾ ವ್ಯಸನದಲ್ಲಿಯೂ ಕೂಡ ನಾನು ಈ ಮಣಿಯನ್ನು ನೋಡಿ ನಿನ್ನನ್ನು ನೋಡಿದಂತೆಯೇ ಸಂತೋಷಿಸುತ್ತಿದ್ದೆನು. ಎಲೈ ದಾಶರಥಿಯೇ! ನಾನು ಇನ್ನು ಒಂದು ತಿಂಗಳು ಮಾತ್ರ ಜೀವದಿಂದಿರುವೆನು. ತಿಂಗಳಾದ ಮೇಲೆ ನಾನು ಜೀವಿಸಲಾರೆನು. ರಾಕ್ಷಸಿಯರ ವಶವಾಗಿರುವ ನಾನು ಒಂದು ತಿಂಗಳಾದ ಬಳಿಕ ಖಂಡಿತವಾಗಿಯೂ ಬದುಕಲಾರೆನು" ಎಂದು ಹೇಳಿದಳು. ಹೀಗೆ ಕೃಶಾಂಗಿಯೂ, ಧರ್ಮಚಾರಿಣಿಯೂ, ರಾವಣನ ಅಂತಃಪುರೋಪವನವಾದ ಅಶೋಕವನದಲ್ಲಿ ಬಂಧಿತೆಯೂ

ಮಯಾಖ್ಯಾತಂ ಸರ್ವಂ ರಾಘವ! ಯದ್ಯಥಾ । ಸರ್ವಥಾ ಸಾಗರಜಲೇ ಸಂತಾರಃ ಪ್ರವಿಧೀಯತಾಂ" ॥ ೨೬ ॥

ತೌ ಜಾತಾಶ್ವಾಸೌ ರಾಜಪುತ್ರೌ ವಿದಿತ್ವಾ
ತಚ್ಚಾಭಿಜ್ಞಾನಂ ರಾಘವಾಯ ಪ್ರದಾಯ ।
ದೇವ್ಯಾಚಾಖ್ಯಾತಂ ಸರ್ವಮೇವಾನುಪೂರ್ವ್ಯಾ
ದ್ವಾಚಾ ಸಂಪೂರ್ಣಂ ವಾಯುಪುತ್ರಶ್ಶಶಂಸ ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಷಷ್ಟಿತಮಸ್ಸರ್ಗಃ

ಶೀಲಳಾದ, ಸೀತಾ-ಸೀತಾದೇವಿಯು, ಇತಿ-ಹೀಗೆ, ಮಾಂ-ನನ್ನನ್ನು ಕುರಿತು, ಅಬ್ರವೀತ್-ನುಡಿದಳು. ॥ ೨೫ ॥ ಹೇ ರಾಘವ - ಎಲೈ ಶ್ರೀರಾಮನೇ, ಯತ್ - ಯಾವುದು, ಯಥಾ - ಹೇಗೆ ನಡೆದಿತ್ತೋ, ಏತದೇವ - ಅದೇ, ಸರ್ವಂ - ಸಮಸ್ತವು, ಮಯಾ - ನನ್ನಿಂದ, ಆಖ್ಯಾತಂ - ಹೇಳಲ್ಪಟ್ಟಿತು, ಸರ್ವಥಾ - ಹೇಗಾದರೂ, ಸಾಗರಜಲೇ - ಸಮುದ್ರೋದಕದಲ್ಲಿ, ಸಂತಾರಃ - ತಾರಣೋಪಾಯವು, ಪ್ರವಿಧೀಯತಾಂ - ಮಾಡಲ್ಪಡಲಿ. ॥ ೨೬ ॥ ವಾಯುಪುತ್ರಃ - ವಾಯುಸುತನಾದ ಆಂಜನೇಯನು, ರಾಜಪುತ್ರೌ - ದಶರಥಪುತ್ರರಾದ, ತೌ - ಆ ರಾಮಲಕ್ಷ್ಮಣರನ್ನು, ಜಾತಾಶ್ವಾಸೌ - ಹುಟ್ಟಿದ ನಂಬುಗೆಯುಳ್ಳವರನ್ನಾಗಿ, ವಿದಿತ್ವಾ-ತಿಳದು, ತದಭಿಜ್ಞಾನಂಚ-ಆ ಗುರ್ತನ್ನೂ ಸಹ, ರಾಘವಾಯ-ಶ್ರೀರಾಮನಿಗೆ, ಪ್ರದಾಯ - ಕೊಟ್ಟು, ದೇವ್ಯಾ - ಸೀತಾದೇವಿಯಿಂದ, ಆಖ್ಯಾತಂ - ಹೇಳಲ್ಪಟ್ಟ, ಸರ್ವಮೇವ-ಸಮಸ್ತವನ್ನೂ, ಆನುಪೂರ್ವ್ಯಾತ್-ಕ್ರಮವಾಗಿ, ವಾಚಾ-ವಾಕ್ಕಿನಿಂದ, ಸಂಪೂರ್ಣಂ-ಸಮಗ್ರವಾಗಿ, ಶಶಂಸ - ಹೇಳಿದನು. ॥ ೨೭ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಪಂಚಷಷ್ಟಿತಮಸ್ಸರ್ಗಃ

ಆಗಿರುವ ಆ ಸೀತಾದೇವಿಯು ಹೆಣ್ಣು ಜಿಂಕೆಯಂತೆ ಬೆದರಿದ ಕಣ್ಣುಗಳುಳ್ಳವಳಾಗಿ ನನ್ನೊಡನೆ ಹೇಳಿದಳು. ॥ ೨೧–೨೫ ॥ ಎಲೈ ರಾಘವನೇ! ಮಹಾ ಪ್ರತಿವ್ರತಾಶಿರೋಮಣಿಯಾದ ಸೀತಾದೇವಿಯು ನನ್ನೊಡನೆ ಹೇಗೆ ಹೇಳಿದಳೋ ಹಾಗೆಯೇ ಅದನ್ನೆಲ್ಲವನ್ನೂ ನಿನ್ನೊಡನೆ ಹೇಳಿದೆನು. ಈಗ ಸರ್ವಪ್ರಯತ್ನದಿಂದಲೂ ಸಮುದ್ರವನ್ನು ದಾಟುವುದಕ್ಕೆ ತಕ್ಕ ಉಪಾಯವನ್ನು ಚಿಂತಿಸುವವನಾಗು" ಎಂದು ಹೇಳಿದನು. ಮಾರುತಿಯು ಈ ರೀತಿ ನುಡಿದು ರಾಜಪುತ್ರರಾದ ಶ್ರೀರಾಮಲಕ್ಷ್ಮಣರನ್ನು ಸಮಾಧಾನಗೊಳಿಸಿ, ಸೀತಾದೇವಿಯಿತ್ತ ಚೂಡಾಮಣಿಯನ್ನು ಶ್ರೀರಾಮನಿಗಿತ್ತು ಆಕೆಯು ಹೇಳೆಂದು ನುಡಿದಿದ್ದ ವೃತ್ತಾಂತವೆಲ್ಲವನ್ನೂ ಕ್ರಮವಾಗಿ ಸ್ವಲ್ಪವೂ ಬಿಡದಂತೆ ಶ್ರೀರಾಮಮೂರ್ತಿಗೆ ಅರಿಕೆ ಮಾಡಿದನು.॥೨೬–೨೭॥

ಇಂತಿದು ಹನುಮತ್ಕಥಿತ ಸೀತಾವೃತ್ತಾಂತನಿರೂಪಣವೆಂಬ ಅರುವತ್ತೈದನೆಯ ಸರ್ಗವು ಸಮಾಪ್ತವಾದುದು.



ಚೂಡಾರತ್ನ ಸಮರ್ಪಣ

ಪುಟ ೭೨೦

ಸುಂದರಕಾಂಡೇ ಷಟ್ಷಷ್ಠಿತಮಸ್ಸರ್ಗಃ

ಏವಮುಕ್ತೋ ಹನುಮತಾ ರಾಮೋ ದಶರಥಾತ್ಮಜಃ । ತಂ ಮಣಿಂ ಹೃದಯೇ ಕೃತ್ವಾ ಪ್ರರುರೋದ ಸಲಕ್ಷ್ಮಣಃ । ತಂತು ದೃಷ್ಟ್ವಾ ಮಣಿಶ್ರೇಷ್ಠಂ ರಾಘವಃ ಶೋಕಕರ್ಶಿತಃ । ನೇತ್ರಾಭ್ಯಾಮಶ್ರುಪೂರ್ಣಾಭ್ಯಾಂ ಸುಗ್ರೀವಮಿದಮಬ್ರವೀತ್ ॥ ೨ ॥ "ಯಥೈವ ಧೇನುಸ್ಸ್ರವತಿ ಸ್ನೇಹಾದ್ವತ್ಸಸ್ಯ ವತ್ಸಲಾ । ತಥಾ ಮಮಾಪಿ ಹೃದಯಂ ಮಣಿರತ್ನಸ್ಯ ದರ್ಶನಾತ್ ॥ ೩ ॥ ಮಣಿರತ್ನಮಿದಂ ದತ್ತಂ ವೈದೇಹ್ಯಾಶ್ಶ್ವಶುರೇಣ ಮೇ । ವಧೂಕಾಲೇ ಯಥಾಬದ್ಧಮಧಿಕಂ ಮೂರ್ಧ್ನಿ

ಹನುಮತಾ - ಆಂಜನೇಯನಿಂದ, ಏವಂ - ಈ ಪ್ರಕಾರವಾಗಿ, ಉಕ್ತಃ - ಹೇಳಲ್ಪಟ್ಟ, ದಶರಥಾತ್ಮಜಃ - ದಶರಥಪುತ್ರನಾದ, ರಾಮಃ - ಶ್ರೀರಾಮನು, ತಂಮಣಿಂ - ಆ ಶಿರೋಮಣಿಯನ್ನು, ಹೃದಯೇ - ಹೃದಯದಲ್ಲಿ, ಕೃತ್ವಾ - ಮಾಡಿಕೊಂಡು, ಸಲಕ್ಷ್ಮಣಃ - ಲಕ್ಷ್ಮಣಸಹಿತನಾಗಿ, ಪ್ರರುರೋದ - ಪ್ರಲಪಿಸಿದನು. ॥ ೧ ॥ ರಾಘವಃ - ಶ್ರೀರಾಮನು, ತಂಮಣಿಶ್ರೇಷ್ಠಂತು - ಆ ರತ್ನಶ್ರೇಷ್ಠವನ್ನಾದರೆ, ದೃಷ್ಟ್ವಾ-ಕಂಡು, ಶೋಕಕರ್ಶಿತಃ ದುಃಖದಿಂದ ಬತ್ತಿದವನಾಗಿ, ಅಶ್ರು....ಭ್ಯಾಂ-ಕಂಬನಿಗಳಿಂದ ತುಂಬಿರುವ, ನೇತ್ರಾಭ್ಯಾಂ - ಕಣ್ಣುಗಳಿಂದ, (ಉಪಲಕ್ಷಿತಃ - ಕೂಡಿ), ಸುಗ್ರೀವಂ-ಸುಗ್ರೀವನನ್ನು ಕುರಿತು, ಇದಂ - ಈ ಮಾತನ್ನು, ಅಬ್ರವೀತ್ - ಹೇಳಿದನು. ॥ ೨ ॥ ವತ್ಸಲಾ - ಮಮತೆಯುಳ್ಳ, ಧೇನುಃ - ಆಕಳು, ವತ್ಸಸ್ಯ - ಕರುವಿನ, (ದರ್ಶನಾತ್ - ನೋಡೋಣದರಿಂದ), ಸ್ನೇಹಾತ್ - ವಿಶ್ವಾಸದಿಂದ, ಯಥೈವ - ಹೇಗೆ, ಸ್ರವತಿ - ಕ್ಷೀರವನ್ನು ಸ್ರವಿಸುತ್ತದೆಯೋ, ತಥಾ - ಹಾಗೆ, ಮಮಹೃದಯಮಪಿ - ನನ್ನ ಹೃದಯವೂ ಕೂಡ, ಮಣಿರತ್ನಸ್ಯ - ಉತ್ತಮವಾದ ಈ ಚೂಡಾರತ್ನದ, ದರ್ಶನಾತ್-ನೋಡುವಿಕೆಯಿಂದ, ಸ್ರವತಿ-ಕರಗಿಹೋಗುತ್ತಿದೆ. ॥ ೩ ॥ ಇದಂಮಣಿರತ್ನಂ-ಈ ಮಣಿಶ್ರೇಷ್ಠವು, ಮೇ - ನನ್ನ, ಶ್ವಶುರೇಣ - ಮಾವನಾದ ಜನಕರಾಯನಿಂದ, ವೈದೇಹ್ಯಾಃ - ಸೀತಾದೇವಿಗೆ, ವಧೂಕಾಲೇ - ವಿವಾಹಕಾಲದಲ್ಲಿ, ದತ್ತಂ - ಕೊಡಲ್ಪಟ್ಟುದಾಗಿ, ಮೂರ್ಧ್ನಿ - ಶಿರಸ್ಸಿನಲ್ಲಿ, ಯಥಾಬದ್ಧಂ - ಕಟ್ಟಲ್ಪಟ್ಟಹಾಗೆ, ಅಧಿಕಂ - ಹೆಚ್ಚಾಗಿ, ಶೋಭತೇ - ಹೊಳೆಯುತ್ತಿದೆ.

ಆಗ ದಶರಥರಾಜನಂದನನಾದ ಶ್ರೀರಾಮಚಂದ್ರನು ಹನುಮಂತನು ಹೇಳಿದ ಸಮಾಚಾರವೆಲ್ಲವನ್ನೂ ಕೇಳಿ, ಆತನಿತ್ತ ಚೂಡಾಮಣಿಯನ್ನು ವಕ್ಷಸ್ಥಳದಲ್ಲಿರಿಸಿಕೊಂಡು, ಲಕ್ಷ್ಮಣನೊಡನೆ ಬಹಳವಾಗಿ ದುಃಖಿಸಿದನು. ಹೀಗೆ ದುಃಖಿಸುತ್ತ ಮಣಿಶ್ರೇಷ್ಠವಾದ ಆ ಚೂಡಾಮಣಿಯನ್ನು ಕೈಯಲ್ಲಿ ಹಿಡಿದು ದುಃಖಾತಿಶಯದಿಂದ ಧಾರೆಧಾರೆಯಾಗಿ ಕಂಬನಿಗರೆಯುತ್ತ ಸುಗ್ರೀವನಿಗೂ ಅದನ್ನು ತೋರಿಸಿ, "ಆಕಳು ತನ್ನ ಕರುವಿನ ಮೇಲಣ ಪ್ರೇಮದಿಂದ ಅದನ್ನು ನೋಡಿದೊಡನೆ ಹೇಗೆ ಕ್ಷೀರವನ್ನು ಸ್ರವಿಸುವುದೋ ಹಾಗೆ ಈ ಚೂಡಾರತ್ನವನ್ನು ನೋಡಿದೊಡನೆಯೇ ನನ್ನ ಮನಸ್ಸೂ ಸ್ರವಿಸುತ್ತಿರುವುದು. ಎಲೈ ಸುಗ್ರೀವನೇ! ಮಹಾಪ್ರಕಾಶಮಾನವಾದ ಈ ಮಣಿಯನ್ನು ನನ್ನ ಮಾವನಾದ ಜನಕಭೂಪಾಲನು ನನ್ನ ವಿವಾಹ ಸಮಯದಲ್ಲಿ ಸೀತಾದೇವಿಗೆ ಕೊಟ್ಟನು. ಆಕೆಯು ಆಗ ಇದನ್ನು ತನ್ನ ಶಿರದಲ್ಲಿರಿಸಿಕೊಂಡಳು.

ಶೋಭತೇ ‖ ೪ ‖ ಅಯಂಹಿ ಜಲಸಂಭೂತೋ ಮಣಿಸ್ಸಜ್ಜನಪೂಜಿತಃ । ಯಜ್ಞೇ ಪರಮತುಷ್ಟೇನ ದತ್ತಶ್ಶಕ್ರೇಣ ಧೀಮತಾ ‖ ೫ ‖ ಇಮಂ ದೃಷ್ಟ್ವಾ ಮಣಿಶ್ರೇಷ್ಠಂ ಯಥಾ ತಾತಸ್ಯ ದರ್ಶನಂ । ಅದ್ಯಾಸ್ಮ್ಯವಗತಸ್ಸೌಮ್ಯ ವೈದೇಹಸ್ಯ ತಥಾ ವಿಭೋಃ ‖ ೬ ‖ ಅಯಂಹಿ ಶೋಭತೇ ತಸ್ಯಾಃ ಪ್ರಿಯಾಯಾ ಮೂರ್ಧ್ನಿ ಮೇ ಮಣಿಃ । ಅಸ್ಯಾಽದ್ಯ ದರ್ಶನೇನಾಽಹಂ ಪ್ರಾಪ್ತಾಂ ತಾಮಿವ ಚಿಂತಯೇ ‖೭‖ ಕಿಮಾಹ ಸೀತಾ ವೈದೇಹೀ ಬ್ರೂಹಿ ಸೌಮ್ಯ! ಪುನಃ ಪುನಃ । ಪಿಪಾಸುಮಿವ ತೋಯೇನ ಸಿಂಚಂತೀ

‖ ೪ ‖ ಜಲಸಂಭೂತಃ - ಸಮುದ್ರಜಲದಲ್ಲಿ ಹುಟ್ಟಿದ, ಸಜ್ಜನಪೂಜಿತಃ - ಸಜ್ಜನರಿಂದ ಪೂಜಿಸಲ್ಪಟ್ಟ, ಅಯಂಮಣಿಃ - ಈ ರತ್ನವು, ಯಜ್ಞೇ - ಜನಕರಾಯನ ಯಜ್ಞದಲ್ಲಿ, ಪರಮತುಷ್ಟೇನ - ಬಹು ಸಂತೋಷಗೊಂಡ, ಧೀಮತಾ - ಬುದ್ಧಿಮಂತನಾದ, ಶಕ್ರೇಣ - ದೇವೇಂದ್ರನಿಂದ, ದತ್ತಂ - ಕೊಡಲ್ಪಟ್ಟಿತು. ‖ ೫ ‖ ಹೇ ಸೌಮ್ಯ - ಎಲೈ ಸೌಮ್ಯನಾದ ಸುಗ್ರೀವನೇ, ಇಮಂಮಣಿಶ್ರೇಷ್ಠಂ - ಈ ಉತ್ಕೃಷ್ಟವಾದ ರತ್ನವನ್ನು, ದೃಷ್ಟ್ವಾ-ಕಂಡು, ತಾತಸ್ಯ-ತಂದೆಯಾದ ದಶರಥರಾಯನ, ದರ್ಶನಂ-ಸ್ಮರಣೆಯನ್ನು, ಯಥಾ - ಹೇಗೆ, ಅವಗತಃ - ಹೊಂದಿದನೊ, ತಥಾ - ಹಾಗೆ, ಅದ್ಯ - ಈಗ, ವಿಭೋಃ - ಪ್ರಭುವಾದ, ವೈದೇಹಸ್ಯ - ಜನಕರಾಜನ, ದರ್ಶನಂ - ಸ್ಮರಣೆಯನ್ನೂ, ಅವಗತಃ - ಹೊಂದಿದವನು, ಅಸ್ಮಿ - ಆದೆನು. ‖೬‖ ಅಯಂಮಣಿಃ - ಈ ಮಣಿಯು, ಮೇ - ನನ್ನ, ಪ್ರಿಯಾಯಾಃ-ಪತ್ನಿಯಾದ, ತಸ್ಯಾಃ - ಆ ಸೀತಾದೇವಿಯ, ಮೂರ್ಧ್ನಿ - ಶಿರಸ್ಸಿನಲ್ಲಿ, ಹಿ - ಯಾವ ಕಾರಣದಿಂದ, ಶೋಭತೇ - ಹೊಳೆಯುತ್ತಿತ್ತೋ, (ತಸ್ಮಾತ್ - ಆ ಕಾರಣದಿಂದ), ಅಸ್ಯ - ಈ ಮಣಿಯ, ದರ್ಶನೇನ - ದರ್ಶನದಿಂದ, ಅಹಂ - ನಾನು, ತಾಂ - ಆ ಸೀತೆಯನ್ನು, ಅದ್ಯ - ಈಗ, ಪ್ರಾಪ್ತಾಮಿವ-ಬಂದವಳನ್ನಂತೆ, ಚಿಂತಯೇ - ಯೋಚಿಸುತ್ತೇನೆ. ‖೭‖ ಹೇ ಸೌಮ್ಯ - ಎಲೈ ಸೌಮ್ಯನೆ, ಪಿಪಾಸುಂ-ಪಾನೇಚ್ಛೆಯುಳ್ಳವನನ್ನು, ತೋಯೇನೇವ-ಜಲದಿಂದಲೋಪಾದಿಯಲ್ಲಿ, ವಾಕ್ಯವಾರಿಣಾ-ವಚನವೆಂಬ ಉದಕದಿಂದ, ಸಿಂಚಂತೀ - ನೆನಸುತ್ತಿರುವ, ವೈದೇಹೀ - ಜನಕಪುತ್ರಿಯಾದ, ಸೀತಾ - ಸೀತಾದೇವಿಯು, ಪುನಃಪುನಃ - ಬಾರಿಬಾರಿಗೂ, ಕಿಮಾಹ - ಏನು ಹೇಳಿದಳು, ಬ್ರೂಹಿ - ಹೇಳು. ‖ ೮ ‖

ಎಲೈ ಸೂರ್ಯಪುತ್ರನೇ! ಹಿಂದೊಮ್ಮೆ ನನ್ನ ಮಾವನಾದ ಜನಕರಾಯನು ಯಾಗವನ್ನು ಮಾಡಲು ಅದರಿಂದ ತೃಪ್ತಿಹೊಂದಿದ ದೇವೇಂದ್ರನು ಈ ಮಣಿಯನ್ನು ಆತನಿಗಿತ್ತನು. ಇದು ಸಮುದ್ರದಲ್ಲಿ ಹುಟ್ಟಿದುದು. ಇದು ಸತ್ಪುರುಷರಿಂದ ಸನ್ಮಾನಿತವಾದುದು. ಎಲೈ ಸೌಮ್ಯನೇ! ಈ ಮಣಿಶ್ರೇಷ್ಠವನ್ನು ನೋಡಿದೊಡನೆಯೇ ನನ್ನ ತಂದೆಯಾದ ದಶರಥರಾಯನನ್ನೂ, ನನ್ನ ಮಾವನಾದ ಜನಕಚಕ್ರೇಶ್ವರನನ್ನೂ ಸಂದರ್ಶಿಸಿದಂತಿರುವುದು. ‖೧–೬‖ ಈ ಚೂಡಾರತ್ನವು ನನ್ನ ಪ್ರಿಯಪತ್ನಿಯಾದ ಸೀತಾದೇವಿಯ ಶಿರಸ್ಸಿನಲ್ಲಿ ಶೋಭಿಸುತ್ತಿದ್ದುದು. ಆದುದರಿಂದ ಈಗ ನಾನಿದನ್ನು ನೋಡಿದೊಡನೆಯೇ ಆಕೆಯನ್ನು ನೋಡುತ್ತಿರುವಂತಿರುವುದು" ಎಂದು ಹೇಳಿ ಹನುಮಂತನ ಕಡೆಗೆ ತಿರುಗಿ, "ಎಲೈ ಸೌಮ್ಯನೇ! ಜನಕರಾಜಪುತ್ರಿಯಾದ ಸೀತಾದೇವಿಯು ನನ್ನನ್ನು ತೃಪ್ತಿಗೊಳಿಸುವುದಕ್ಕಾಗಿ ಪಿಪಾಸುವಾದವನನು ಜಲದಿಂದಲಂತೆ ಅಡಿಗಡಿಗೂ ಏನು ಹೇಳಿದಳು?" ಎಂದು ನುಡಿದವನಾಗಿ ಶೋಕವೇಗದಿಂದ ಪರಿತಪಿಸುತ್ತ ಲಕ್ಷ್ಮಣನನ್ನು ನೋಡಿ, "ಲಕ್ಷ್ಮಣಾ! ಅಕಟಕಟಾ!! ನಾನು ನನ್ನ ಪ್ರಿಯೆ

ವಾಕ್ಯಮಾರಿಣಾ ॥ ೮ ॥ ಇತಸ್ತು ಕಿಂ ದುಃಖತರಂ ಯದಿಮಂ ವಾರಿಸಂಭವಂ । ಮಣಿಂ ಪಶ್ಯಾಮಿ ಸೌಮಿತ್ರೇ! ವೈದೇಹೀಮಾಗತಂ ವಿನಾ ॥ ೯ ॥ ಚಿರಂಜೀವತಿ ವೈದೇಹೀ ಯದಿ ಮಾಸಂ ಧರಿಷ್ಯತಿ । ಕ್ಷಣಂ ಸೌಮ್ಯ ನಜೀವೇಯಂ ವಿನಾ ತಾಮಸಿತೇಕ್ಷಣಾಂ ॥೧೦॥ ನಯ ಮಾಮಪಿ ತಂ ದೇಶಂ ಯತ್ರ ದೃಷ್ಟಾ ಮಮ ಪ್ರಿಯಾ । ನತಿಷ್ಠೇಯಂ ಕ್ಷಣಮಪಿ ಪ್ರವೃತ್ತಿಮುಪಲಭ್ಯಚ ॥ ೧೧ ॥ ಕಥಂ ಸಾ ಮಮ ಸುಶ್ರೋಣೀ ಭೀರು ಭೀರುಸ್ಸತೀ ಸದಾ । ಭಯಾವಹಾನಾಂ ಘೋರಾಣಾಂ ಮಧ್ಯೇ ತಿಷ್ಠತಿ ರಕ್ಷಸಾಂ॥೧೨॥ ಶಾರದಸ್ತಿಮಿರೋನ್ಮುಕ್ತೋ ನೂನಂ ಚಂದ್ರಇವಾಂಬುದೈಃ । ಆವೃತಂ ವದನಂ

ಹೇ ಸೌಮಿತ್ರೇ - ಎಲೈ ಲಕ್ಷ್ಮಣನೆ, ವೈದೇಹೀಂವಿನಾ - ಸೀತಾದೇವಿಯನ್ನು ಬಿಟ್ಟು, ಆಗತಂ - ಬಂದ, ವಾರಿಸಂಭವಂ - ಜಲದಲ್ಲಿ ಹುಟ್ಟಿದ, ಇಮಂಮಣಿಂ - ಈ ರತ್ನವನ್ನು, ಪಶ್ಯಾಮಿತಿಯತ್ - ನೋಡುತ್ತೇನೆಂಬುದಾವುದೋ, ಇತಸ್ತು - ಇದಕ್ಕಿಂತಲೂ, ದುಃಖತರಂ - ಅತಿಶಯವಾದ ದುಃಖವು, ಕಿಂ - ಏನಿರುವುದು ॥ ೯ ॥ ಹೇ ಸೌಮ್ಯ - ಎಲೈ ಸೌಮ್ಯನೆ, ಮಾಸಂ - ತಿಂಗಳವರೆಗೂ, ವೈದೇಹೀ - ಸೀತಾದೇವಿಯು, ಧರಿಷ್ಯತಿಯದಿ - ಪ್ರಾಣಧಾರಣ ಮಾಡಿದವಳಾದರೆ, ಚಿರಂಜೀವತಿ - ಬಹುಕಾಲ ಬದುಕುವಳು, ಅಸಿತೇಕ್ಷಣಾಂ - ಕಪ್ಪಾಗಿರುವ ಕಣ್ಣುಗಳುಳ್ಳ, ತಾಂವಿನಾ - ಆ ಸೀತೆಯನ್ನು ಅಗಲಿ, ಕ್ಷಣಂ- ಸ್ವಲ್ಪ ಹೊತ್ತಾದರೂ, ನಜೀವೇಯಂ - ಬದುಕಲಾರೆನು. ॥ ೧೦ ॥ ಯತ್ರ - ಎಲ್ಲಿ, ಮಮಪ್ರಿಯಾ - ನನ್ನ ಪ್ರಿಯೆಯು, ದೃಷ್ಟಾ-ನೋಡಲ್ಪಟ್ಟಳೋ, ತಂದೇಶಂ-ಆ ಪ್ರದೇಶವನ್ನು ಕುರಿತು, ಮಾಮಪಿ- ನನ್ನನ್ನೂ ಸಹ, ನಯ - ಹೊಂದಿಸು, ಪ್ರವೃತ್ತಿಂ - ಸೀತಾ ವಾರ್ತೆಯನ್ನು, ಉಪಲಭ್ಯ - ತಿಳಿದು, ಕ್ಷಣಮಪಿ - ಕ್ಷಣವಾದರು, ನತಿಷ್ಠೇಯಂ - ಇರಲಾರೆನು. ॥ ೧೧ ॥ ಸದಾ - ಯಾವಾಗಲೂ, ಭೀರುಭೀರುಃ - ಅತಿ ಭಯಶೀಲಳಾದ, ಸತೀ - ಪತಿವ್ರತೆಯಾದ, ಸುಶ್ರೋಣೀ - ಸಮಾಚೀನವಾದ ಶ್ರೋಣೀಪ್ರದೇಶವುಳ್ಳ, ಮಮ - ನನ್ನ ಪತ್ನಿಯಾದ, ಸಾ - ಆ ಸೀತೆಯು, ಭಯಾವಹಾನಾಂ - ಭಯಂಕರರಾದ, ಘೋರಾಣಾಂ - ಕ್ರೂರರಾದ, ರಕ್ಷಸಾಂ - ಅಸುರರ, ಮಧ್ಯೇ - ಮಧ್ಯದಲ್ಲಿ, ಕಥಂತಿಷ್ಠತಿ - ಹೇಗಿರುವಳು. ॥ ೧೨ ॥ ತಿಮಿರೋನ್ಮುಕ್ತಃ - ಅಂಧಕಾರದಿಂದ ಬಿಡಲ್ಪಟ್ಟ, ಅಂಬುದೈಃ - ಮೇಘಗಳಿಂದ ಆವರಿಸಲ್ಪಟ್ಟ, ಶಾರದಃ - ಶರತ್ಕಾಲದ, ಚಂದ್ರಇವ - ಚಂದ್ರನಂತೆ,

---

ಯಾದ ಸೀತಾದೇವಿಯನ್ನು ಕಾಣದೆ ಆಕೆಯು ಧರಿಸುತ್ತಿದ್ದ ಈ ಚೂಡಾರತ್ನವನ್ನು ನೋಡುತ್ತಿರುವೆನಲ್ಲವೆ? ಅಯ್ಯೋ! ಇದಕ್ಕಿಂತಲೂ ವ್ಯಸನವನ್ನುಂಟುಮಾಡುವುದು ಮತ್ತೇನಿರುವುದು? ಈಗ ಸೀತೆಯು ನನ್ನನ್ನು ಬಿಟ್ಟಿರುವುದರಿಂದ ಒಂದು ಕ್ಷಣವಾದರೂ ಜೀವಿಸಿರುವಳೆಂದರೆ ಆಮೇಲೆ ಸ್ಥಿರಜೀವಿಯಾಗುವಳೆಂಬುದರಲ್ಲಿ ಸಂದೇಹವಿಲ್ಲವು. ಸೌಮ್ಯನೇ! ಲಕ್ಷ್ಮಣನೇ! ನಾನು ಕುವಲಯನೇತ್ರಿಯಾದ ಆ ದೇವಿಯನ್ನಗಲಿ ಒಂದು ಕ್ಷಣಕಾಲವಾದರೂ ಜೀವಿಸಿರಲಾರೆನು" ಎಂದು ಹೇಳಿದನು. ॥ ೭--೧೦ ॥ ಆಮೇಲೆ ಆ ರಘುನಂದನನು ಆಂಜನೇಯನನ್ನು ನೋಡಿ, "ಎಲೈ ಆಂಜನೇಯಾ! ನೀನು ಸೀತೆಯನ್ನು ಕಂಡುಬಂದ ಪ್ರದೇಶಕ್ಕೆ ನನ್ನನ್ನು ಕರೆದುಕೊಂಡು ಹೋಗು. ಆ ಸೀತೆಯೊಡನೆ ನನ್ನನ್ನು ಜತೆಗೂಡಿಸು. ನನ್ನ ಪ್ರಿಯೆಯಾದ ಆಕೆಯ ವೃತ್ತಾಂತವನ್ನು ಕೇಳಿದಮೇಲೆ ನಾನು ಇಲ್ಲಿ ಒಂದು ನಿಮಿಷ ಮಾತ್ರವೂ ಇರಲಾರೆನು. ಸುಂದರವಾದ ಶ್ರೋಣಿಗಳುಳ್ಳವಳೂ, ಭಯಗೊಳ್ಳುವ ಸ್ವಭಾವವುಳ್ಳವಳೂ, ನನಗೆ ಅತ್ಯಂತ ಪ್ರಿಯಂಕರಳಾದವಳೂ ಆದ ಆ ಸೀತೆಯು ಮುಖವು ಶರ

ತಸ್ಯಾ ನವಿರಾಜತಿ ರಾಕ್ಷಸ್ಯೆಃ ॥೧೩॥ ಕಿಮಾಹ ಸೀತಾ ಹನುಮಂಸ್ತತ್ವತಃ ಕಥಯಾಽದ್ಯಮೇ । ಏತೇನ ಖಲು ಜೀವಿಷ್ಯೇ ಭೇಷಜೇನಾತುರೋ ಯಥಾ ॥ ೧೪ ॥

ಮಧುರಾ ಮಧುರಾಲಾಪಾ ಕಿಮಾಹ ಮಮ ಭಾಮಿನೀ ।
ಮದ್ವಿಹೀನಾ ವರಾರೋಹಾ ಹನುಮನ್ಕಥಯಸ್ವ ಮೇ ” ॥ ೧೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್‌ಷಷ್ಟಿತಮಸ್ಸರ್ಗಃ

ರಾಕ್ಷಸ್ಯೆಃ - ಅಸುರರಿಂದ, ಆವೃತಂ - ಸುತ್ತುವರೆಯಲ್ಪಟ್ಟ, ತಸ್ಯಾಃ - ಆ ಸೀತೆಯ, ವದನಂ - ಮುಖವು, ನವಿರಾಜತಿ - ಹೊಳೆಯುತ್ತಿಲ್ಲ, ನೂನಂ - ನಿಶ್ಚಯವು. ॥ ೧೩ ॥ ಹೇ ಹನುಮನ್ - ಎಲೈ ಹನುಮಂತನೇ, ಸೀತಾ - ಸೀತೆಯು, ಕಿಮಾಹ - ಏನು ಹೇಳಿದಳು, ಅದ್ಯ - ಈಗ, ಮೇ - ನನಗೆ, ತತ್ವತಃ - ಯಥಾರ್ಥವಾಗಿ, ಕಥಯ - ಹೇಳು, ಏತೇನ - ಇದರಿಂದ, ಭೇಷಜೇನ - ಔಷಧದಿಂದ, ಆತುರೋಯಥಾ - ರೋಗಿಯಂತೆ, ಜೀವಿಷ್ಯೇಖಲು - ಬದುಕುವೆನಷ್ಟೆ. ॥ ೧೪ ॥ ಹೇ ಹನುಮನ್ - ಎಲೈ ಆಂಜನೇಯನೇ, ಮಧುರಾಲಾಪಾ - ಮದುರಭಾಷಿಣಿಯಾದ, ಮಧುರಾ - ಸುಂದರಿಯಾದ, ಮಮಭಾಮಿನೀ - ನನ್ನ ಹೆಂಡತಿಯಾದ, ವರಾರೋಹಾ - ಉತ್ತಮ ಸ್ತ್ರೀಯಾದ ಸೀತೆಯು, ಮದ್ವಿಹೀನಾ-ನನ್ನಿಂದ ರಹಿತಳಾಗಿ, ಕಿಮಾಹ-ಏನು ಹೇಳಿದಳು, ಮೇ-ನನಗೆ, ಕಥಯಸ್ವ-ಹೇಳು. ॥ ೧೫ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಷಟ್‌ಷಷ್ಟಿತಮಶಸ್ಸರ್ಗಃ

ದೃತುವಿನಲ್ಲಿ ಉದಯಿಸಿ ಕತ್ತಲೆಯಿಂದ ಬಿಡಲ್ಪಟ್ಟು ಮೇಘಗಳಿಂದ ಮುಚ್ಚಿದ ಚಂದ್ರರೇಖೆಯಂತೆ ಪ್ರಕಾಶಿಸದೇ ಇರಬಹುದು. ಎಲೈ ವಾನರೋತ್ತಮನೇ! ಸೀತೆಯು ನನಗಾಗಿ ಇನ್ನೇನು ಹೇಳಿರುವಳೋ ಅದೆಲ್ಲವನ್ನೂ ಯಥಾರ್ಥವಾಗಿ ತಿಳಿಸು. ರೋಗಿಯು ಔಷಧಗಳಿಂದ ಜೀವಿಸಿರುವಂತೆ, ನಾನು ನೀನೀಗ ಹೇಳುವ ಮಾತುಗಳನ್ನು ಕೇಳುವುದರಿಂದ ಜೀವಿಸಿರುವೆನು. ಎಲೈ ಆಂಜನೇಯನೇ! ಮಹಾ ಸೌಂದರ್ಯವತಿಯಾಗಿ, ಮಧುರವಾಗಿ ನುಡಿಯುವವಳೂ, ಸುಶ್ರೋಣಿಯಾದವಳೂ, ನನ್ನನ್ನಗಲಿರುವವಳೂ ಆದ ನನ್ನ ಪ್ರಿಯ ಭಾರ್ಯೆ ಸೀತೆಯು ನಿನ್ನೊಡನೆ ಇನ್ನೇನು ಹೇಳಿದಳು, ಅದೆಲ್ಲವನ್ನೂ ವಿಶದವಾಗಿ ನನಗೆ ತಿಳುಹಿಸು ” ಎಂದು ಹೇಳಿದನು. ॥ ೧೧–೧೫ ॥

ಇಂತಿದು ಚೂಡಾರತ್ನದರ್ಶನಜನಿತ ಶ್ರೀರಾಮವಿಲಾಪ ವೃತ್ತಾಂತವೆಂಬ
ಅರುವತ್ತಆರನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಸಪ್ತಷಷ್ಠಿತಮಸ್ಸರ್ಗಃ

ಏವಮುಕ್ತಸ್ತು ಹನುಮಾನ್ರಾಘವೇಣ ಮಹಾತ್ಮನಾ । ಸೀತಾಯಾ ಭಾಷಿತಂ ಸರ್ವಂ ನ್ಯವೇದಯತ ರಾಘವೇ ‖೧‖ "ಇದಮುಕ್ತವತೀ ದೇವೀ ಜಾನಕೀ ಪುರುಷರ್ಷಭ! । ಪೂರ್ವವೃತ್ತಮಭಿಜ್ಞಾನಂ ಚಿತ್ರಕೂಟೇ ಯಥಾತಥಂ ‖ ೨ ‖ ಸುಖಸುಪ್ತಾ ತ್ವಯಾ ಸಾರ್ಧಂ ಜಾನಕೀ ಪೂರ್ವಮುತ್ಥಿತಾ । ವಾಯಸಸ್ಸಹಸೋತ್ಪತ್ಯ ವಿದದಾರ ಸ್ತನಾಂತರೇ ‖ ೩ ‖ ಪರ್ಯಾಯೇಣ ಚ ಸುಪ್ತಸ್ತ್ವಂ ದೇವ್ಯಂಕೇ ಭರತಾಗ್ರಜ! । ಪುನಶ್ಚ ಕಿಲ ಪಕ್ಷೀ ಸ ದೇವ್ಯಾ ಜನಯತಿ ವ್ಯಥಾಂ ‖ ೪ ‖ ಪುನಃ

ಹನುಮಾನ್ - ಆಂಜನೇಯನು, ಮಹಾತ್ಮನಾ - ಮಹಾನುಭಾವನಾದ, ರಾಘವೇಣ - ಶ್ರೀರಾಮನಿಂದ, ಏವಂ - ಹೀಗೆ, ಉಕ್ತಃ - ಹೇಳಲ್ಪಟ್ಟವನಾಗಿ, ಸೀತಾಯಾಃ - ಸೀತಾದೇವಿಯ, ಸರ್ವಂಭಾಷಿತಂ-ಎಲ್ಲಾ ಮಾತುಗಳನ್ನೂ, ರಾಘವೇ-ಶ್ರೀರಾಮನಲ್ಲಿ, ನ್ಯವೇದಯತ್-ಅರುಹಿದನು. ‖ ೧ ‖ ಹೇ ಪುರುಷರ್ಷಭ-ಎಲೈ ಪುರುಷಶ್ರೇಷ್ಠನೇ, ಜಾನಕೀದೇವೀ-ಸೀತಾದೇವಿಯು, ಚಿತ್ರಕೂಟೇ-ಚಿತ್ರಕೂಟಪರ್ವತದಲ್ಲಿ, ಯಥಾತಥಂ-ನಡೆದಹಾಗೆ, ಇದಂಪೂರ್ವವೃತ್ತಂ-ಈ ಹಿಂದಣ ಕಥೆಯನ್ನು, ಅಭಿಜ್ಞಾನಂ - ಗುರ್ತನ್ನಾಗಿ, ಉಕ್ತವತೀ - ಹೇಳಿದಳು. ‖ ೨ ‖ ಜಾನಕೀ - ಸೀತಾದೇವಿಯು, ತ್ವಯಾಸಾರ್ಧಂ - ನಿನ್ನೊಡನೆ, ಸುಖಸುಪ್ತಾ - ಸುಖವಾಗಿ ಶಯನಿಸಿ, ಪೂರ್ವಂ - ಮೊದಲೇ, ಉತ್ಥಿತಾ - ಎಚ್ಚರಗೊಂಡಳು, ವಾಯಸಃ - ಕಾಗೆಯು, ಸಹಸಾ - ಜಾಗ್ರತೆಯಾಗಿ, ಉತ್ಪತ್ಯ - ಹಾರಿಬಂದು, ಸ್ತನಾಂತರೇ-ಕುಚಮಧ್ಯಪ್ರದೇಶದಲ್ಲಿ, ವಿದದಾರ-ಕುಕ್ಕಿತಂತೆ. ‖೩‖ ಹೇ ಭರತಾಗ್ರಜ-ಎಲೈ ಭರತಜ್ಯೇಷ್ಠನೇ, ತ್ವಂ - ನೀನು, ದೇವ್ಯಂಕೇ - ಸೀತೆಯ ತೊಡೆಯಲ್ಲಿ, ಪರ್ಯಾಯೇಣ - ವರಸೆಯಿಂದ, ಸುಪ್ತಃ - ಶಯನಿಸಿದವನಾದೆ, ಸಪಕ್ಷೀ - ಆ ಕಾಗೆಯು, ಪುನಶ್ಚ - ಮತ್ತು, ದೇವ್ಯಾಃ-ಸೀತಾದೇವಿಗೆ, ವ್ಯಥಾಂ - ದುಃಖವನ್ನು, ಜನಯತಿಕಿಲ - ಹುಟ್ಟಿಸಿತಷ್ಟೆ. ‖ ೪ ‖ ಪುನಃಪುನಃ -

---

ಹೀಗೆ ಬಹಳ ಪೂಜ್ಯವಾದ ಸ್ವಭಾವವುಳ್ಳ ಶ್ರೀರಾಮನು ಕೇಳಿದೊಡನೆಯೇ ಹನುಮಂತನು ಸೀತಾದೇವಿಯ ವೃತ್ತಾಂತವೆಲ್ಲವನ್ನೂ ವಿಶದವಾಗಿ ತಿಳಿಸುವನು. "ಎಲೈ ಪುರುಷೋತ್ತಮನೇ! ಮಹಾ ಪತಿವ್ರತೆಯೂ ನಿನ್ನ ಭಾರ್ಯೆಯೂ ಆದ ಸೀತಾದೇವಿಯು, ಹಿಂದೆ ನೀವು ಚಿತ್ರಕೂಟಪರ್ವತದಲ್ಲಿರುವಾಗ ನಡೆದ ಸಂಗತಿಯೊಂದನ್ನು ನಡೆದುದು ನಡೆದಂತೆ ಗುರ್ತಿಗಾಗಿ ನನಗೆ ಹೇಳಿದಳು. ಸೀತಾದೇವಿಯು ನಿನ್ನೊಡನೆ ನಿದ್ರಿಸುತ್ತಿದ್ದು ಆಮೇಲೆ ನಿನಗಿಂತಲೂ ಮೊದಲೇ ಎಚ್ಚರಗೊಂಡಳಂತೆ. ಆಗ ಒಂದು ಕಾಗೆಯು ತನ್ನ ಕೊಕ್ಕಿನಿಂದ ಆಕೆಯ ಸ್ತನಾಂತರವನ್ನು ಕುಕ್ಕಿತಂತೆ. ಎಲೈ ಭರತಾಗ್ರಜನೇ! ನಿನ್ನ ತೊಡೆಯಮೇಲೆ ಮಲಗಿದ್ದ ಆ ದೇವಿಯು ಎಚ್ಚರಗೊಂಡಮೇಲೆ ನೀನು ಮಲಗಿ ನಿದ್ರಿಸುತ್ತಿದ್ದೆಯಂತೆ. ಆಗಲಾ ಕಾಗೆಯು ಪುನಃ ಬಂದು ಆಕೆಯನ್ನು ಪೀಡಿಸಲು ಮೊದಲುಮಾಡಿದಂತೆ. ಆಕೆಯು ಆ ಕಾಗೆಯನ್ನು ಎಷ್ಟು ಓಡಿಸಿದರೂ ಹೋಗದೆ ಬಾರಿಬಾರಿಗೂ ಆಕೆಯ ಸ್ತನಾಂತರವನ್ನು ಕುಕ್ಕಿ

ಪುನರುಪಾಗಮ್ಯ ವಿದದಾರ ಭೃಶಂ ಕಿಲ । ತತಸ್ತ್ವಂ ಬೋಧಿತಸ್ತಸ್ಯಾಶ್ಶೋಣಿತೇನ ಸಮುತ್ಕ್ಷಿತಃ ॥ ೫ ॥ ವಾಯಸೇನಚ ತೇನೈವ ಸತತಂ ಬಾಧ್ಯಮಾನಯಾ । ಬೋಧಿತಃಕಿಲ ದೇವ್ಯಾ ತ್ವಂ ಸುಖಸುಪ್ತಃ ಪರಂತಪ! ॥ ೬ ॥ ತಾಂತು ದೃಷ್ಟ್ವಾ ಮಹಾಬಾಹೋ! ದಾರಿತಾಂಚ ಸ್ತನಾಂತರೇ । ಆಶೀವಿಷಇವಕ್ರುದ್ಧೋ ನಿಶ್ವಸನ್ನಭ್ಯಭಾಷಥಾಃ ॥ ೭ ॥ "ನಖಾಗ್ರೈಃ ಕೇನ ತೇ ಭೀರು! ದಾರಿತಂ ತು ಸ್ತನಾಂತರಂ । ಕಃಕ್ರೀಡತಿ ಸರೋಷೇಣ ಪಂಚವಕ್ತ್ರೇಣ ಭೋಗಿನಾ?" ॥ ೮ ॥ ನಿರೀಕ್ಷಮಾಣಸ್ಸಹಸಾ ವಾಯಸಂ ಸಮವೈಕ್ಷಥಾಃ । ನಖೈಸ್ಸರುಧಿರೈಸ್ತೀಕ್ಷ್ಣೈಸ್ತಾಮೇವಾಭಿಮುಖಂ ಸ್ಥಿತಂ

ಬಾರಿಬಾರಿಗೂ, ಉಪಾಗಮ್ಯ - ಬಂದು, ಭೃಶಂ - ಬಹಳವಾಗಿ, ವಿದದಾರಕಿಲ - ಕುಕ್ಕಿತಷ್ಟೆ, ತತಃ - ಬಳಿಕ, ತಸ್ಯಾಃ - ಆ ಸೀತಾದೇವಿಯ, ಶೋಣಿತೇನ - ರಕ್ತದಿಂದ, ಸಮುಕ್ಷಿತಃ - ತೋಯ್ದುವನಾದ, ತ್ವಂ - ನೀನು, ತೇನವಾಯಸೇನೈವ - ಆ ಕಾಗೆಯಿಂದಲೇ, ಸತತಂ - ಯಾವಾಗಲೂ, ಬಾಧ್ಯಮಾನಯಾ - ಬಾಧಿಸಲ್ಪಡುತ್ತಿರುವ ಸೀತಾದೇವಿಯಿಂದ, ಬೋಧಿತಃ - ಎಚ್ಚರಗೊಳಿಸಲ್ಪಟ್ಟೆ, ಹೇ ಪರಂತಪ - ಎಲೈ ಶತ್ರುನಾಶಕನೇ, ಸುಖಸುಪ್ತಃ - ಸುಖವಾಗಿ ಶಯನಿಸಿರುವ, ತ್ವಂ - ನೀನು, ದೇವ್ಯಾಃ - ಸೀತಾದೇವಿಯಿಂದ, ಬೋಧಿತಃ - ಎಬ್ಬಿಸಲ್ಪಟ್ಟವನಾಗಿ, ಹೇ ಮಹಾಬಾಹೋ - ಎಲೈ ಮಹಾ ಭುಜಗಳುಳ್ಳವನೇ, ಸ್ತನಾಂತರೇ - ಸ್ತನಮಧ್ಯದಲ್ಲಿ, ದಾರಿತಾಂಚ - ಸೀಳಲ್ಪಟ್ಟ, ತಾಂತು - ಆ ದೇವಿಯನ್ನಾದರೆ, ದೃಷ್ಟ್ವಾ-ಕಂಡು, ಆಶೀವಿಷಇವ - ಮಹಾ ಸರ್ಪದಂತೆ, ಕ್ರುದ್ಧಃ - ಕುಪಿತನಾಗಿ, ನಿಶ್ವಸನ್ - ನಿಟ್ಟುಸಿರು ಬಿಡುತ್ತಿರುವನಾಗಿ, ಅಭ್ಯಭಾಷತಾಃ - ಮಾತನಾಡಿದೆ, ಹೇ ಭೀರು - ಎಲೌ ಸೀತೆಯೇ, ತೇಸ್ತನಾಂತರಂ - ನಿನ್ನ ಕುಚಮಧ್ಯವು, ಕೇನ - ಯಾರಿಂದ, ನಖಾಗ್ರೈಃ - ನಖಾಗ್ರಗಳಿಂದ, ದಾರಿತಂ - ಸೀಳಲ್ಪಟ್ಟಿತು, ಕಃ - ಯಾರು, ಸರೋಷೇಣ - ಕೆರಳಿದ, ಪಂಚವಕ್ತ್ರೇಣ - ಐದು ಮುಖಗಳುಳ್ಳ, ಭೋಗಿನಾ - ಸರ್ಪದೊಡನೆ, ಕ್ರೀಡತಿ - ಆಡುವನು. ॥ ೫-೮ ॥ ಸಹಸಾ - ಜಾಗ್ರತೆಯಾಗಿ, ನಿರೀಕ್ಷಮಾಣಃ-ಅತ್ತಿತ್ತ ನೋಡಿ, ತಾಮೇವ-ಆ ಸೀತಾದೇವಿಯನ್ನು ಕುರಿತು, ಅಭಿಮುಖಂ-ಎದುರಾಗಿ, ಸ್ಥಿತಂ - ಇರುವ, ಸರುಧಿರೈಃ - ರಕ್ತದಿಂದ ಕೂಡಿದ, ತೀಕ್ಷ್ಣೈಃ - ಮೊನಚಾದ, ನಖೈಃ - ಉಗುರುಗಳಿಂದ, ಉಪಲಕ್ಷಿತಂ - ಕೂಡಿರುವ, ವಾಯಸಂ - ಕಾಗೆಯನ್ನು, ಸಮವೈಕ್ಷಥಾಃ-ಕಂಡೆ, ಪತತಾಂವರಃ - ಪಕ್ಷಿಶ್ರೇಷ್ಠವಾದ, ಸವಾಯಸಃ - ಆ ಕಾಗೆಯು, ಶಕ್ರಸ್ಯ - ಇಂದ್ರನ,

---

ಬಾಧಿಸುತ್ತಿದ್ದಿತಂತೆ. ಆ ಸಮಯದಲ್ಲಿ ಆ ಕಾಗೆಯು ಕುಕ್ಕಿದ ಗಾಯದಿಂದ ಸುರಿದ ರಕ್ತವು ನಿನ್ನ ಮೈಮೇಲೆ ಬಿದ್ದು ನೀನು ಎಚ್ಚರಗೊಂಡೆಯಂತೆ. ॥ ೧-೫ ॥ ಎಲೈ ಶತ್ರುಮರ್ದನನಾದ ಶ್ರೀರಾಮಚಂದ್ರನೇ! ಆಗ ಸೀತಾದೇವಿಯು ಆ ಕಾಗೆಯ ಬಾಧೆಯನ್ನು ತಡೆಯಲಾರದೆ ಸುಖವಾಗಿ ಮಲಗಿ ನಿದ್ರಿಸುತ್ತಿದ್ದ ನಿನ್ನನ್ನು ಎಚ್ಚರಗೊಳಿಸಿದಳಂತೆ. ಎಲೈ ಮಹಾ ಬಾಹುವೇ! ಆ ಸಮಯದಲ್ಲಿ ನೀನು ಸ್ತನಾಂತರವು ಕುಕ್ಕಲ್ಪಟ್ಟು ಬಹಳವಾಗಿ ಬಾಧೆಪಡುತ್ತಿದ್ದ ಸೀತಾದೇವಿಯನ್ನು ನೋಡಿ ಅತಿಯಾಗಿ ಕೋಪಗೊಂಡು, ವಿಷಸರ್ಪದಂತೆ ನಿಟ್ಟುಸಿರುಗಳನ್ನು ಬಿಡುತ್ತ, "ಎಲೌ ಭೀರುವೇ! ನಿನ್ನ ಸ್ತನಾಂತರವನ್ನು ಗಾಯಪಡಿಸಿದವನಾರು? ಮಹಾ ಕ್ರುದ್ಧವಾದ ಐದು ತಲೆಯ ವಿಷಸರ್ಪದೊಡನೆ ಸರಸವಾಡುತ್ತಿರುವವನಾರು?" ಎಂದು ಹೇಳಿದೆಯಂತೆ. ಆಮೇಲೆ ನೀನು ಸುತ್ತಮುತ್ತಲೂ ನೋಡಿ ಸೀತಾದೇವಿಗೆದುರಿನಲ್ಲಿ ಬಹು ಮೊನಚಾಗಿ ರಕ್ತಸಿಕ್ತವಾದ ಉಗುರುಗಳಿಂದ ಕೂಡಿದ ಆ ಕಾಗೆಯನ್ನು ಕಂಡೆಯಂತೆ.

॥ ೯ ॥ ಸುತಃ ಕಿಲ ಸಶಕ್ರಸ್ಯ ವಾಯಸಃ ಪತತಾಂ ವರಃ । ಧರಾಂತರಚರಶ್ಶೀಘ್ರಂ ಪವನಸ್ಯ ಗತೌ ಸಮಃ ॥೧೦॥ ತತಸ್ತಸ್ಮಿನ್ಮಹಾಬಾಹೋ! ಕೋಪಸಂವರ್ತಿತೇಕ್ಷಣಃ। ವಾಯಸೇ ತ್ವಂ ಕೃಥಾಃ ಕ್ರೂರಾಂ ಮತಿಂ ಮತಿಮತಾಂ ವರ! ॥ ೧೧ ॥ ಸದರ್ಭಂ ಸಂಸ್ತರಾದ್ಗೃಹ್ಯ ಬ್ರಹ್ಮಾಸ್ತ್ರೇಣ ಹ್ಯಯೋಜಯಃ । ಸದೀಪ್ತ ಇವ ಕಾಲಾಗ್ನಿರ್ಜಜ್ವಾಲಾಭಿಮುಖಃ ಖಗಂ ॥ ೧೨ ॥ ಕ್ಷಿಪ್ತವಾಂಸ್ತ್ವಂ ಪ್ರದೀಪ್ತಂಹಿ ದರ್ಭಂ ತಂ ವಾಯಸಂ ಪ್ರತಿ । ತತಸ್ತು ವಾಯಸಂ ದೀಪ್ತಸ್ಸದರ್ಭೋಽನುಜಗಾಮಹ ॥ ೧೩ ॥ ಸಪಿತ್ರಾಚ ಪರಿತ್ಯಕ್ತಸ್ಸುರೈಶ್ಚ ಸಮಹರ್ಷಿಭಿಃ । ತ್ರೀನ್ಲೋಕಾನ್ಸಂಪರಿಕ್ರಮ್ಯ ತ್ರಾತಾರಂ ನಾಧಿ

ಸುತಃಕಿಲ - ಮಗನಷ್ಟೆ, ಗತೌ - ಗಮನದಲ್ಲಿ, ಪವನಸ್ಯ - ವಾಯುವಿಗೆ, ಸಮಃ - ಸದೃಶವಾದ ಆ ವಾಯಸವು, ಶೀಘ್ರಂ - ಜಾಗ್ರತೆಯಾಗಿ, ಧರಾಂತರಚರಃ - ಪರ್ವತದ ಮಧ್ಯದಲ್ಲಿ ಚರಿಸುತ್ತಿರುವುದಾಗಿ, (ಆಸೀತ್ - ಇದ್ದಿತು). ॥೯-೧೦॥ ಹೇ ಮಹಾಬಾಹೋ - ಎಲೈ ಮಹಾ ಭುಜಗಳುಳ್ಳವನೇ, ಮತಿಮತಾಂ - ಬುದ್ಧಿಶಾಲಿಗಳಲ್ಲಿ, ವರ - ಶ್ರೇಷ್ಠನೇ, ತತಃ - ಬಳಿಕ, ತಸ್ಮಿನ್ವಾಯಸೇ - ಆ ಕಾಗೆಯಲ್ಲಿ, ಕೋಪ....ಣಃ - ರೋಷದಿಂದ ತಿರುಗಿಸಲ್ಪಟ್ಟ ಕಣ್ಣುಗಳುಳ್ಳ, ತ್ವಂ - ನೀನು, ಕ್ರೂರಾಂಮತಿಂ- ತೀಕ್ಷ್ಣವಾದ ಬುದ್ಧಿಯನ್ನು, ಕೃಥಾಃ - ಮಾಡಿದೆ. ॥೧೧॥ ಸಃ - ಆ ನೀನು, ಸಂಸ್ತರಾತ್ - ದರ್ಭಾಸನದಿಂದ, ದರ್ಭಂ - ದರ್ಭೆಯನ್ನು, ಗೃಹ್ಯ - ಗ್ರಹಿಸಿ, ಬ್ರಹ್ಮಾಸ್ತ್ರೇಣ - ಬ್ರಹ್ಮಾಸ್ತ್ರದಿಂದ, ಅಯೋಜಯೋಹಿ - ಸಂಧಾನ ಮಾಡಿದೆಯಷ್ಟೆ, ಸಃ - ಅದು, ಕಾಲಾಗ್ನಿರಿವ - ಪ್ರಳಯಕಾಲಾಗ್ನಿಯಂತೆ, ಖಗಂ - ಕಾಗೆಯನ್ನು ಕುರಿತು, ಅಭಿಮುಖಃ - ಅಭಿಮುಖವಾಗಿ, ಜಜ್ವಾಲ - ಹೊಳೆಯುತ್ತಿತ್ತು, ತ್ವಂ - ನೀನು, ಹಿ - ಯಾವ ಕಾರಣದಿಂದ, ಪ್ರದೀಪ್ತಂ - ಉರಿಯುತ್ತಿರುವ, ದರ್ಭಂ - ದರ್ಭೆಯನ್ನು, ವಾಯಸಂಪ್ರತಿ - ಕಾಗೆಯನ್ನು ಕುರಿತು, ಕ್ಷಿಪ್ತವಾನ್ - ಎಸೆದೆಯೋ, ತತಃ - ಆ ಕಾರಣದಿಂದ, ದೀಪ್ತಃ - ಜ್ವಲಿಸುತ್ತಿರುವ, ಸದರ್ಭಃ - ಆ ದರ್ಭೆಹುಲ್ಲು, ವಾಯಸಂ - ಆ ಕಾಗೆಯನ್ನು ಕುರಿತು, ಅನುಜಗಾಮಹ - ಅನುಸರಿಸಿತು. ॥ ೧೨-೧೩ ॥ ಸಃ - ಆ ಕಾಗೆಯು, ಪಿತ್ರಾಚ - ತಂದೆಯಿಂದಲೂ, ಸಮಹರ್ಷಿಭಿಃ - ಮುನಿಗಳಿಂದ ಕೂಡಿದ, ಸುರೈಶ್ಚ - ದೇವತೆಗಳಿಂದಲೂ, ಪರಿತ್ಯಕ್ತಃ - ಬಿಡಲ್ಪಟ್ಟುದಾಗಿ, ತ್ರೀನ್‌ಲೋಕಾನ್ - ಮೂರು ಲೋಕಗಳನ್ನು, ಸಂಪರಿಕ್ರಮ್ಯ - ಸುತ್ತಿ,

---

ಆ ಕಾಗೆಯು ಇಂದ್ರನ ಮಗನಂತೆ. ವೇಗದಲ್ಲಿ ವಾಯುದೇವನಿಗೆ ಸಮಾನವಾದುದಂತೆ; ಪಕ್ಷಿಗಳಲ್ಲೆಲ್ಲಾ ಶ್ರೇಷ್ಠವಾದುದಂತೆ ; ಆ ಪರ್ವತಪ್ರದೇಶಗಳಲ್ಲಿಯೇ ಸುತ್ತುತ್ತಿದ್ದಿತಂತೆ. ॥ ೬–೧೦ ॥ ಎಲೈ ಮಹಾಬಾಹುವೇ ! ಆ ಕಾಗೆಯನ್ನು ನೋಡುತ್ತಲೇ ನೀನು ಮಹಾ ಕ್ರೋಧದಿಂದ ನಿನ್ನ ಕಣ್ಣಾಲಿಗಳು ತಿರುಗುತ್ತಿರಲು ಆ ಕಾಗೆಯಮೇಲೆ ಬಹಳವಾಗಿ ಕೋಪಿಸಿ ಅದನ್ನು ಸಂಹರಿಸಬೇಕೆಂದು ಮನಸ್ಸು ಮಾಡಿದೆಯಂತೆ. ಆಮೇಲೆ ನೀನು ದರ್ಭಾಸನದಿಂದ ಒಂದು ದರ್ಭೆಯನ್ನು ತೆಗೆದುಕೊಂಡು ಅದನ್ನು ಬ್ರಹ್ಮಾಸ್ತ್ರ ಮಂತ್ರದಿಂದಭಿಮಂತ್ರಿಸಿ ಪ್ರಜ್ವಲಿಸುತ್ತಿರುವ ಆ ದರ್ಭೆಯನ್ನು ಆ ಕಾಗೆಯಮೇಲೆಸೆದೆಯಂತೆ. ಆ ಕೂಡಲೇ ಆ ಕಾಗೆಯು ಓಡಲಾರಂಭಿಸಿತಂತೆ. ಆ ದರ್ಭೆಯೂ ಸಹ ಧಗಧಗನುರಿಯುತ್ತ ಆ ಕಾಗೆಯನ್ನು ಹಿಂದಟ್ಟಿಹೋಯಿತಂತೆ. ಆಗಲಾ ಕಾಗೆಯು ಮೂರುಲೋಕಗಳನ್ನೂ ಸುತ್ತಿ ರಕ್ಷಕರಾರನ್ನೂ ಕಾಣದೆ ತನ್ನ ತಂದೆಯಾದ ದೇವೇಂದ್ರನಲ್ಲಿಗೆ ಹೋಗಿ ಆತನಿಂದಲೂ, ದೇವತೆಗಳಿಂದಲೂ, ಋಷಿಗಳಿಂದಲೂ ಪರಿತ್ಯಜಿಸಲ್ಪಟ್ಟಿತಂತೆ. ಎಲೈ ಶತ್ರುಂಜಯನೇ! ಆಮೇಲೆ ಆ ಕಾಗೆಯು

ಗಚ್ಛತಿ । ಪುನರೇವಾಗತಸ್ತ್ರಸ್ತಸ್ತ್ವತ್ಸಕಾಶಮರಿಂದಮ ! ॥ ೧೪ ॥ ಸತಂ ನಿಪತಿತಂ ಭೂಮೌ ಶರಣ್ಯಶ್ಶರಣಾಗತಂ । ವಧಾರ್ಹಮಪಿ ಕಾಕುತ್ಸ್ಥ! ಕೃಪಯಾ ಪರ್ಯ ಪಾಲಯಃ ॥ ೧೫ ॥ ಮೋಘಮಸ್ತ್ರಂ ನಶಕ್ಯಂತು ಕರ್ತುಮಿತ್ಯೇವ ರಾಘವ! । ಭವಾಂಸ್ತಸ್ಯಾಕ್ಷಿ ಕಾಕಸ್ಯ ಹಿನಸ್ತಿಸ್ಮ ಸದಕ್ಷಿಣಂ ॥೧೬॥ ರಾಮ! ತ್ವಾಂ ಸನಮಸ್ಕೃತ್ಯ ರಾಜ್ಞೇ ದಶರಥಾಯಚ । ವಿಸೃಷ್ಟಸ್ತು ತದಾ ಕಾಕಃ ಪ್ರತಿಪೇದೇ ಸ್ವಮಾಲಯಂ ॥ ೧೭ ॥ ಏವಮಸ್ತ್ರವಿದಾಂ ಶ್ರೇಷ್ಠಸ್ಸತ್ವವಾಂಛೀಲವಾನಪಿ । ಕಿಮರ್ಥಮಸ್ತ್ರಂ

ತ್ರಾತಾರಂ - ರಕ್ಷಕನನ್ನು, ನಾಧಿಗಚ್ಛತಿ - ಹೊಂದಲಿಲ್ಲ. ಹೇ ಅರಿಂದಮ - ಎಲೈ ಶತ್ರುನಾಶಕನೇ, ತ್ವತ್ಸಕಾಶಮೇವ - ನಿನ್ನ ಬಳಿಯನ್ನೇ ಕುರಿತು, ತ್ರಸ್ತಃ - ಹೆದರಿದವನಾಗಿ, ಪುನಶ್ಚ - ಮತ್ತೂ, ಆಗತಃ - ಬಂದನು. ॥೧೪॥ ಹೇ ಕಾಕುತ್ಸ್ಥ - ಎಲೈ ಶ್ರೀರಾಮನೇ, ಶರಣ್ಯಃ - ರಕ್ಷಕನಾದ, ಸಃ - ಆ ನೀನು, ವಧಾರ್ಹಮಪಿ - ಸಂಹಾರಯೋಗ್ಯನಾದರೂ, ಭೂಮೌ - ನೆಲದಲ್ಲಿ, ನಿಪತಿತಂ - ಬೀಳುತ್ತಿರುವ, ಶರಣಾಗತಂ - ನೀನೇ ಗತಿಯೆಂದು ನಂಬಿಬಂದ, ತಂ - ಆ ಕಾಗೆಯನ್ನು, ಕೃಪಯಾ - ದಯೆಯಿಂದ, ಪರ್ಯಪಾಲಯಃ - ರಕ್ಷಿಸಿದೆ. ॥೧೫॥ ಹೇ ರಾಘವ - ಎಲೈ ಶ್ರೀರಾಮನೇ, ಅಸ್ತ್ರಂ - ಬ್ರಹ್ಮಾಸ್ತ್ರವು, ಮೋಘಂಕರ್ತುಂ - ವ್ಯರ್ಥಗೊಳಿಸುವುದಕ್ಕೆ, ನಶಕ್ಯಂ - ಅಸಾಧ್ಯವು, ಇತ್ಯೇವ - ಹೀಗೆನ್ನುತ್ತಲೇ, ಸಭವಾನ್ - ಆ ನೀನು, ತಸ್ಯಕಾಕಸ್ಯ - ಆ ಕಾಗೆಯ, ದಕ್ಷಿಣಮಕ್ಷಿ - ಬಲಗಣ್ಣನ್ನು, ಹಿನಸ್ತಿಸ್ಮ - ಕತ್ತರಿಸಿದೆಯಷ್ಟೆ. ॥೧೬॥ ಹೇ ರಾಮ - ಎಲೈ ಶ್ರೀರಾಮನೇ, ಸಕಾಕಃ - ಆ ಕಾಗೆಯು, ತ್ವಾಂ - ನಿನ್ನನ್ನು ಕುರಿತು, ನಮಸ್ಕೃತ್ಯ - ನಮಿಸಿ, ದಶರಥಾಯರಾಜ್ಞೇಚ - ದಶರಥರಾಯನಿಗೂ ಸಹ, ನಮಸ್ಕೃತ್ಯ - ವಂದಿಸಿ, ತದಾತು - ಆ ಕಾಲದಲ್ಲಾದರೆ, ವಿಸೃಷ್ಟಃ - ಬಿಡಲ್ಪಟ್ಟುದಾಗಿ, ಸ್ವಮಾಲಯಂ - ತನ್ನ ಮನೆಯನ್ನು, ಪ್ರತಿಪೇದೇ - ಹೊಂದಿತು. ॥೧೭॥ ಏವಂ - ಈ ಪ್ರಕಾರವಾಗಿ, ಅಸ್ತ್ರವಿದಾಂ - ಅಸ್ತ್ರಜ್ಞರಲ್ಲಿ, ಶ್ರೇಷ್ಠಃ - ಉತ್ತಮನಾದ, ಸತ್ವವಾನ್ - ಬಲಾಢ್ಯನಾದ, ರಾಘವಃ - ಶ್ರೀರಾಮನು, ಶೀಲವಾನಪಿ-ಗುಣವಂತನಾದರೂ, ರಕ್ಷಸ್ಸು ರಕ್ಕಸರಲ್ಲಿ, ಕಿಮರ್ಥಂ-ಏತಕ್ಕೋಸ್ಕರ,

---

ಬಹಳವಾಗಿ ಭಯಗೊಂಡು ಎಲ್ಲೆಲ್ಲಿಯೂ ತಿರುಗಿ ಎಲ್ಲಿಯೂ ಗತಿಗಾಣದೆ ಕಡೆಗೆ ನಿನ್ನಲ್ಲಿಗೇ ಬಂದಿತಂತೆ. ಎಲೈ ಕಾಕುತ್ಸ್ಥನೇ! ಆ ಕಾಗೆಯು ಎಲ್ಲಿಯೂ ಶರಣನ್ನು ಕಾಣದೆ ನೀನೇ ಶರಣೆಂದು ನಿನ್ನ ಪಾದಗಳ ಬಳಿ ಬಿದ್ದಿತಂತೆ. ವಧಾರ್ಹವಾದ ಆ ಕಾಗೆಯನ್ನೂ ನೀನು ದಯಾರ್ದ್ರಚಿತ್ತನಾಗಿ ಸಂರಕ್ಷಿಸಿದೆಯಂತೆ. ಎಲೈ ಶ್ರೀರಾಮಮೂರ್ತಿಯೇ! ಹಾಗೆ ನೀನು ಆ ಕಾಗೆಯನ್ನು ಕಾಪಾಡಿ, ನೀನು ಪ್ರಯೋಗಿಸಿದ ಬ್ರಹ್ಮಾಸ್ತ್ರವು ನಿರರ್ಥಕವಾಗಬಾರದೆಂದು ಅದರ ಒಂದು ಕಣ್ಣನ್ನು ಆ ಬ್ರಹ್ಮಾಸ್ತ್ರಕ್ಕೆ ಬಲಿಗೊಟ್ಟೆಯಂತೆ. ನೀನು ಆ ಕಾಗೆಯನ್ನು ಬ್ರಹ್ಮಾಸ್ತ್ರದಿಂದ ಮುಕ್ತವನ್ನಾಗಿ ಮಾಡಿದೊಡನೆಯೇ ಅದು ನಮ್ರತೆಯನ್ನು ಸೂಚಿಸುವುದಾಗಿ ನಿನಗೂ ನಿನ್ನ ತಂದೆಯಾದ ದಶರಥರಾಯನಿಗೂ ನಮಸ್ಕಾರಮಾಡಿ ತನ್ನ ವಾಸಸ್ಥಳಕ್ಕೆ ಹೊರಟು ಹೋಯಿತಂತೆ. ಎಲೈ ಶ್ರೀರಾಮನೇ! ನಿನ್ನ ಪತ್ನಿಯಾದ ಸೀತಾದೇವಿಯು ಈ ವೃತ್ತಾಂತವನ್ನು ನಿನಗೆ ಗುರ್ತಿಗಾಗಿ ಹೇಳೆಂದು ನುಡಿದು ಆಮೇಲೆ ನನ್ನನ್ನು ಕುರಿತು ಹೀಗೆಂದಳು. ॥೧೧–೧೭॥ "ಎಲೈ ಹನುಮಂತನೇ! ಅಸ್ತ್ರಪ್ರಯೋಗವನ್ನರಿತವರಲ್ಲಿ ಶ್ರೇಷ್ಠನೂ, ಮಹಾ ಭುಜಬಲಪರಾಕ್ರಮಶಾಲಿಯೂ, ಸದಾಚಾರಸಂಪತ್ತಿಯುಳ್ಳವನೂ ಆದ ಶ್ರೀರಾಮನು

ರಕ್ಷಸ್ಸು ನಯೋಜಯತಿ ರಾಘವಃ ॥ ೧೮ ॥ ನನಾಗಾ ನಾಪಿಗಂಧರ್ವಾ ನಾಸುರಾ ನಮರುದ್ಗಣಾಃ । ನಚ ಸರ್ವೇ ರಣೇ ಶಕ್ತಾ ರಾಮಂಪ್ರತಿ ಸಮಾಸಿತುಂ ॥ ೧೯ ॥ ತಸ್ಯ ವೀರ್ಯವತಃ ಕಶ್ಚಿದ್ಯದ್ಯಸ್ತಿ ಮಯಿ ಸಂಭ್ರಮಃ । ಕ್ಷಿಪ್ರಂ ಸುನಿಶಿತೈರ್ಬಾಣೈ ರ್ಹನ್ಯತಾಂ ಯುಧಿ ರಾವಣಃ ॥ ೨೦ ॥ ಭ್ರಾತುರಾದೇಶಮಾಜ್ಞಾಯ ಲಕ್ಷ್ಮಣೋ ವಾ ಪರಂತಪಃ । ಸಕಿಮರ್ಥಂ ನರವರೋ ನಮಾಂ ರಕ್ಷತಿ ರಾಘವಃ ॥ ೨೧ ॥ ಶಕ್ತೌ ತೌ ಪುರುಷವ್ಯಾಘ್ರೌ ವಾಯ್ವಗ್ನಿ ಸಮತೇಜಸೌ । ಸುರಾಣಾಮಪಿ ದುರ್ಧರ್ಷೌ ಕಿಮರ್ಥಂ ಮಾಮುಪೇಕ್ಷತಃ ॥ ೨೨ ॥ ಮಮೈವ ದುಷ್ಕೃತಂ ಕಿಂಚಿನ್ಮಹದಸ್ತಿ ನಸಂಶಯಃ ।

ಅಸ್ತ್ರಂ - ಅಸ್ತ್ರವನ್ನು, ನಯೋಜಯತಿ - ಸಂಧಾನ ಮಾಡಲಿಲ್ಲ. ॥ ೧೮ ॥ ರಣೇ - ಯುದ್ಧದಲ್ಲಿ, ರಾಮಂ - ಶ್ರೀರಾಮನನ್ನು, ಪ್ರತಿಸಮಾಸಿತುಂ - ಎದುರು ನಿಲ್ಲುವುದಕ್ಕೆ, ನಾಗಾಃ - ಸರ್ಪಗಳು, ನಶಕ್ತಾಃ-ಸಮರ್ಥರಲ್ಲವು, ಗಂಧರ್ವಾಃ-ಗಂಧರ್ವರೂ ಸಹ, ನ-ಶಕ್ತರಲ್ಲವು, ಅಸುರಾಃ-ರಕ್ಕಸರು, ನ - ಸಮರ್ಥರಲ್ಲವು, ಮರುದ್ಗಣಾಃ - ಸಪ್ತಮರುತ್ತುಗಳೂ, ನಶಕ್ತಾಃ - ಶಕ್ತರಲ್ಲವು, ಸರ್ವೇಽಪಿ - ಎಲ್ಲರೂ, ನ-ಸಮರ್ಥರಲ್ಲವು. ॥ ೧೯ ॥ ವೀರ್ಯವತಃ-ಪರಾಕ್ರಮಿಯಾದ, ತಸ್ಯ-ಆ ಶ್ರೀರಾಮನಿಗೆ, ಮಯಿ - ನನ್ನ ವಿಷಯದಲ್ಲಿ, ಕಶ್ಚಿತ್ಸಂಭ್ರಮಃ - ಯಾವ ವಿಧವಾದ ತ್ವರೆಯಾದರೂ, ಅಸ್ತಿಯದಿ - ಇದ್ದುದಾದರೆ, ನಿಶಿತೈಃ - ಹದವಾದ, ಬಾಣೈಃ - ಅಂಬುಗಳಿಂದ, ಯುಧಿ - ಕಾಳೆಗದಲ್ಲಿ, ರಾವಣಃ - ರಾವಣನು, ಕ್ಷಿಪ್ರಂ - ಜಾಗ್ರತೆಯಾಗಿ, ಹನ್ಯತಾಂ - ಸಂಹರಿಸಲ್ಪಡಲಿ. ॥ ೨೦ ॥ ಪರಂತಪಃ - ಶತ್ರುನಾಶಕನಾದ, ರಾಘವಃ-ರಘುಕುಲೋತ್ಪನ್ನನಾದ, ನರವರಃ-ನರಶ್ರೇಷ್ಠನಾದ, ಸಲಕ್ಷ್ಮಣೋವಾ- ಆ ಲಕ್ಷ್ಮಣನಾದರೂ, ಭ್ರಾತುಃ - ಅಣ್ಣನ, ಆದೇಶಂ - ಆಜ್ಞೆಯನ್ನು, ಆಜ್ಞಾಯ - ಪಡೆದು, ಕಿಮರ್ಥಂ - ಏತಕ್ಕೋಸ್ಕರ, ಮಾಂ - ನನ್ನನ್ನು, ನರಕ್ಷತಿ - ಪಾಲಿಸಲಿಲ್ಲ. ॥೨೧॥ ವಾಯ್ವ....ಸೌ - ವಾಯುವಿಗೂ, ಅಗ್ನಿಗೂ ಸಮಾನವಾದ ತೇಜಸ್ಸುಳ್ಳ, ಪುರುಷವ್ಯಾಘ್ರೌ - ಪುರುಷಶ್ರೇಷ್ಠರಾದ, ಸುರಾಣಾಮಪಿ - ದೇವತೆಗಳಿಗೂ ಸಹ, ದುರ್ಧರ್ಷೌ - ತಿರಸ್ಕರಿಸಲಶಕ್ಯರಾದ, ಶಕ್ತೌ - ಸಮರ್ಥರಾದ, ತೌ - ಆ ರಾಮಲಕ್ಷ್ಮಣರು, ಕಿಮರ್ಥಂ - ಏತಕ್ಕೋಸ್ಕರ, ಮಾಂ - ನನ್ನನ್ನು, ಉಪೇಕ್ಷತಃ - ಉದಾಸೀನಮಾಡಿದರು. ॥೨೨॥ ಯತ್ - ಯಾವ ಕಾರಣದಿಂದ, ಸಮರ್ಥೌ - ದಕ್ಷರಾದ, ಸಹಿತೌ - ಒಂದೆಡೆ ಸೇರಿರುವ, ಪರಂತಪೌ - ಶತ್ರುಸಂಹಾರಕರಾದ ರಾಮಲಕ್ಷ್ಮಣರು, ಮಾಂ - ನನ್ನನ್ನು,

---

ಈ ರಾಕ್ಷಸರ ವಿಷಯದಲ್ಲಿ ಬ್ರಹ್ಮಾಸ್ತ್ರವನ್ನೇಕೆ ಪ್ರಯೋಗಿಸನು. ಪನ್ನಗರು, ಗಂಧರ್ವರು, ಸುರಾಸುರರು, ಮರುದ್ಗಣಗಳು ಇವರಲ್ಲಿ ಯಾರೂ ಯುದ್ಧದಲ್ಲಿ ಶ್ರೀರಾಮನನ್ನೆದುರಿಸಿ ನಿಲ್ಲಲಾರರು. ಎಲೈ ಮಾರುತಿಯೇ! ಮಹಾ ಶೌರ್ಯವಂತನಾದ ಶ್ರೀರಾಮನಿಗೆ ನನ್ನಲ್ಲಿ ಸ್ವಲ್ಪವಾದರೂ ದಯೆಯೆಂಬುದಿದ್ದುದಾದರೆ ಬೇಗನೆ ಯುದ್ಧಕ್ಕೆ ನಿಂತು ಮಹಾತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿ ಈ ರಾವಣಾಸುರನನ್ನು ಸಂಹರಿಸುವನು ; ಅದು ಹಾಗಿರಲಿ. ಶತ್ರುತಾಪನನೂ, ಪುರುಷೋತ್ತಮನೂ, ರಘುಕುಲದಲ್ಲಿ ಜನ್ಮಿಸಿರುವವನೂ ಆದ ಲಕ್ಷ್ಮಣನಾದರೂ ಅಣ್ಣನ ಅನುಜ್ಞೆಯನ್ನು ಪಡೆದು ಇಲ್ಲಿಗೈತಂದು ಈ ರಾಕ್ಷಸರೆಲ್ಲರನ್ನೂ ಸಂಹರಿಸಿ ನನ್ನನ್ನೇಕೆ ಕಾಪಾಡದಿರುವನು. ಎಲೈ ಹನುಮಂತನೇ! ಮಹಾ ಶಕ್ತಿಸಂಪನ್ನರೂ, ಪುರುಷೋತ್ತಮರೂ, ವಾಯ್ವಗ್ನಿಗಳಿಗೆ ಸಮಾನವಾದ ಪರಾಕ್ರಮವುಳ್ಳವರೂ, ದೇವತೆಗಳಿಗೂ ಎದುರಿಸಲಸಾಧ್ಯರೂ ಆದ ಶ್ರೀರಾಮಲಕ್ಷ್ಮಣರು ನನ್ನನ್ನು ಉಪೇಕ್ಷಿಸಿರುವುದೇಕೆ? ಎಲೈ ಹನುಮಂತನೇ! ಮಹಾ

ಸಮರ್ಥೌ ಸಹಿತೌ ಯನ್ಮಾಂ ನಾವೇಕ್ಷೇತೇ ಪರಂತಪೌ" ॥ ೨೩ ॥ ವೈದೇಹ್ಯಾ ವಚನಂ ಶ್ರುತ್ವಾ ಕರುಣಂ ಸಾಶ್ರುಭಾಷಿತಂ । ಪುನರಪ್ಯಹಮಾರ್ಯಾಂ ತಾಮಿದಂ ವಚನಮಬ್ರುವಂ ॥ ೨೪ ॥ "ತ್ವಚ್ಛೋಕವಿಮುಖೋ ರಾಮೋ ದೇವಿ! ಸತ್ಯೇನ ತೇ ಶಪೇ । ರಾಮೇ ದುಃಖಾಭಿಭೂತೇತು ಲಕ್ಷ್ಮಣಃ ಪರಿತಪ್ಯತೇ ॥ ೨೫ ॥ ಕಥಂಚಿದ್ಭವತೀ ದೃಷ್ಟ್ವಾ ನಕಾಲಃ ಪರಿಶೋಚಿತುಂ । ಅಸ್ಮಿನ್ಮುಹೂರ್ತೇ ದುಃಖಾನಾಮಂತಂ ದ್ರಕ್ಷ್ಯಸಿ ಭಾಮಿನೀ ॥ ೨೬ ॥ ತಾವುಭೌ ನರಶಾರ್ದೂಲೌ ರಾಜಪುತ್ರಾವನಿಂದಿತೌ ।

ನಾವೇಕ್ಷೇತೇ - ನೋಡುವುದಿಲ್ಲವೋ, ತಸ್ಮಾತ್ - ಆ ಕಾರಣದಿಂದ, ಮಮೈವ - ನನ್ನದೇ ಆದ, ಮಹತ್ - ದೊಡ್ಡದಾದ, ಕಿಂಚಿತ್ - ಯಾವುದೋ ಒಂದಾದ, ದುಷ್ಕೃತಂ - ಪಾಪವು, ಅಸ್ತಿ - ಇರುವುದು, ನಸಂಶಯಃ - ಸಂದೇಹವಿಲ್ಲವು. ॥ ೨೩ ॥ ಕರುಣಂ - ದೈನ್ಯದಿಂದ ಕೂಡಿರುವ, ಸಾಶ್ರುಭಾಷಿತಂ - ಕಂಬನಿಗಳಿಂದೊಡಗೂಡಿದಂತೆ ಹೇಳಲ್ಪಟ್ಟ, ವೈದೇಹ್ಯಾಃ - ಸೀತಾದೇವಿಯ, ವಚನಂ - ಮಾತನ್ನು, ಶ್ರುತ್ವಾ - ಕೇಳಿ, ಅಹಮಪಿ - ನಾನೂ, ಆರ್ಯಾಂ - ಪೂಜ್ಯಳಾದ, ತಾಂ - ಆ ಸೀತಾದೇವಿಯನ್ನು ಕುರಿತು, ಪುನಃ-ಮರಳಿಯೂ, ಇದಂವಚನಂ-ಈ ಮಾತನ್ನು, ಅಬ್ರುವಂ-ನುಡಿದೆನು. ॥ ೨೪ ॥ ಹೇ ದೇವಿ - ಎಲೌ ಸೀತಾದೇವಿಯೇ, ತೇ - ನಿನಗೆ, ಸತ್ಯೇನ - ಯಥಾರ್ಥದಿಂದ, ಶಪೇ - ಶಪಥಮಾಡುತ್ತೇನೆ, ರಾಮಃ - ಶ್ರೀರಾಮನು, ತ್ವಚ್ಛೋ....ಖಃ - ನಿನ್ನ ದುಃಖದಿಂದ ಇತರ ಕಾರ್ಯಗಳಲ್ಲಿ ವಿಮುಖನಾಗಿದ್ದಾನೆ, ರಾಮೇ - ಶ್ರೀರಾಮನು, ದುಃಖಾಭಿಭೂತೇ - ವ್ಯಸನದಿಂದ ಸಂಕಟಪಡುತ್ತಿರಲು, ಲಕ್ಷ್ಮಣಸ್ತು-ಲಕ್ಷ್ಮಣನಾದರೆ, ಪರಿತಪ್ಯತೇ-ವ್ಯಸನಪಡುತ್ತಾನೆ. ॥೨೫॥ ಹೇ ಭಾಮಿನೀ-ಎಲೌ ಸೀತಾದೇವಿಯೇ, ಭವತೀ-ನೀನು, ಕಥಂಚಿತ್-ಅತಿಪ್ರಯಾಸದಿಂದ, ದೃಷ್ಟಾ-ನೋಡಲ್ಪಟ್ಟೆ, ಪರಿಶೋಚಿತುಂ-ದುಃಖಿಸುವುದಕ್ಕೆ, ಕಾಲಃ-ಸಮಯವು, ನ-ಅಲ್ಲವು, ಅಸ್ಮಿನ್ಮುಹೂರ್ತೇ-ಈ ಕ್ಷಣದಲ್ಲಿ, ದುಃಖಾನಾಂ - ವ್ಯಸನಗಳ, ಅಂತಂ - ತುದಿಯನ್ನು, ದ್ರಕ್ಷ್ಯಸಿ - ನೋಡುವೆ. ॥೨೬॥ ನರಶಾರ್ದೂಲೌ-ನರಶ್ರೇಷ್ಠರಾದ, ಅನಿಂದಿತೌ - ಪೂಜ್ಯರಾದ, ರಾಜಪುತ್ರೌ - ರಾಜಪುತ್ರರಾದ, ತಾವುಭೌ - ಆ ರಾಮ

ಸಮರ್ಥರೂ, ಶತ್ರುಮರ್ದನರೂ ಆದ ಶ್ರೀರಾಮಲಕ್ಷ್ಮಣರೀರ್ವರೂ ಒಂದಾಗಿದ್ದೂ ನನ್ನನ್ನು ಕಾಪಾಡದೆ ಉಪೇಕ್ಷೆ ಮಾಡುತ್ತಿರುವುದನ್ನು ನೋಡಿದರೆ ನಾನು ಮಾಡಿದ ಪುರಾಕೃತ ಪಾಪಕರ್ಮವು ಮಹತ್ತರವಾಗಿರುವುದೆಂದು ತೋರುವುದು. ಇದರಲ್ಲಿ ಎಷ್ಟುಮಾತ್ರವೂ ಸಂಶಯವಿಲ್ಲವು. ಆ ದೇವಿಯು ಹೀಗೆ ನನ್ನೊಡನೆ ಹೇಳಿ ಧಾರೆಧಾರೆಯಾಗಿ ಕಂಬನಿಗರೆಯುತ್ತ ವಿಲಪಿಸಿದಳು. ॥ ೧೮—೨೪ ॥ ಎಲೈ ಶ್ರೀರಾಮನೇ! ಆಗ ನಾನು ಪೂಜ್ಯಳಾದ ಆಕೆಯನ್ನು ಕುರಿತು, "ಎಲೌ ಸೀತಾದೇವಿಯೇ! ಶ್ರೀರಾಮಮೂರ್ತಿಯು ನಿನಗೋಸುಗವೇ ವ್ಯಸನಪಡುತ್ತ ಯಾವ ಕಾರ್ಯವನ್ನೂ ಮಾಡದಿರುವನು. ಎಲೆ ತಾಯೇ! ನಾನು ಸತ್ಯವಾಗಿ ಹೇಳುತ್ತಿರುವೆನು. ಆತನು ಬಹಳವಾಗಿ ದುಃಖಗೊಂಡು ವಿಲಪಿಸುತ್ತಿರಲು ಲಕ್ಷ್ಮಣಸ್ವಾಮಿಯೂ ಕೂಡ ಮಹಾ ವ್ಯಸನಸಂತಪ್ತನಾಗುವನು. ಓ ದೇವೀ! ನಾನು ಮಹಾಪ್ರಯಾಸದಿಂದ ನಿನ್ನನ್ನು ಕಂಡೆನು. ಈಗ ವ್ಯಸನಪಡುವುದಕ್ಕೆ ಸಮಯವಲ್ಲವು. ನಿನ್ನ ವ್ಯಸನವೆಲ್ಲವೂ ಶೀಘ್ರದಲ್ಲಿಯೇ ಕಳೆದುಹೋಗುವುದು. ರಾಜಶ್ರೇಷ್ಠರಾದ ಶ್ರೀರಾಮಲಕ್ಷ್ಮಣರೀರ್ವರೂ ನಿನ್ನನ್ನು ನೋಡುವುದರಲ್ಲಿ ಮಹೋತ್ಸಾಹವುಳ್ಳವರಾಗಿರುವರು. ರಾಜಪುತ್ರರಾದ

ತ್ವದ್ದರ್ಶನಕೃತೋತ್ಸಾಹೌ ಲಂಕಾಂ ಭಸ್ಮೀಕರಿಷ್ಯತಃ ‖ ೨೭ ‖ ಹತ್ವಾಚ ಸಮರೇ ರೌದ್ರಂ ರಾವಣಂ ಸಹಬಾಂಧವಂ । ರಾಘವಸ್ತ್ವಾಂ ವರಾರೋಹೇ! ಸ್ವಾಂ ಪುರೀಂ ನಯತೇ ಧ್ರುವಂ ‖೨೮‖ ಯತ್ತು ರಾಮೋ ವಿಜಾನೀಯಾದಭಿಜ್ಞಾನಮನಿಂದಿತೇ! । ಪ್ರೀತಿಸಂಜನನಂ ತಸ್ಯ ಪ್ರದಾತುಂ ತ್ವಮಿಹಾರ್ಹಸಿ ‖೨೯‖ ಸಾಭಿವೀಕ್ಷ್ಯ ದಿಶಸ್ಸರ್ವಾ ವೇಣ್ಯುದ್ಗ್ರಥನಮುತ್ತಮಂ । ಮುಕ್ತ್ವಾ ವಸ್ತ್ರಾದ್ದದೌ ಮಹ್ಯಂ ಮಣಿಮೇತಂ ಮಹಾಬಲ! ‖ ೩೦ ‖ ಪ್ರತಿಗೃಹ್ಯ ಮಣಿಂ ದಿವ್ಯಂ ತವ ಹೇತೋ ರಘೂದ್ವಹ! । ಶಿರಸಾ ತಾಂ ಪ್ರಣಮ್ಯಾರ್ಯಾಮಹಮಾಗಮನೇ ತ್ವರೇ ‖ ೩೧ ‖ ಗಮನೇಚ ಕೃತೋತ್ಸಾಹ

ಲಕ್ಷ್ಮಣರಿಬ್ಬರೂ, ತ್ವದ್ದ....ಹೌ - ನಿನ್ನ ದರ್ಶನದಲ್ಲಿ ಕೃತೋತ್ಕಂಠರಾಗಿ, ಲಂಕಾಂ - ಲಂಕಾಪಟ್ಟಣವನ್ನು, ಭಸ್ಮೀಕರಿಷ್ಯತಃ - ಬೂದಿಮಾಡುವರು. ‖ ೨೭ ‖ ಹೇ ವರಾರೋಹೇ - ಎಲೌ ಶ್ರೇಷ್ಠಳಾದ ಸೀತಾದೇವಿಯೇ, ರಾಘವಃ - ಶ್ರೀರಾಮನು, ಸಮರೇ - ಯುದ್ಧದಲ್ಲಿ, ರೌದ್ರಂ - ಭಯಂಕರನಾದ, ಸಹಬಾಂಧವಂ - ನಂಟರಿಂದ ಕೂಡಿದ, ರಾವಣಂಚ - ರಾವಣನನ್ನೂ, ಹತ್ವಾ - ಸಂಹರಿಸಿ, ತ್ವಾಂ- ನಿನ್ನನ್ನು, ಸ್ವಾಂಪುರೀಂ - ತನ್ನ ಪಟ್ಟಣವನ್ನು ಕುರಿತು, ನಯತೇ - ಹೊಂದಿಸುವನು, ಧ್ರುವಂ - ನಿಶ್ಚಯವು. ‖ ೨೮ ‖ ಹೇ ಅನಿಂದಿತೇ - ಎಲೌ ಪೂಜ್ಯಳೇ, ರಾಮಸ್ತು - ಶ್ರೀರಾಮನಾದರೆ, ಯದಭಿಜ್ಞಾನಂ - ಯಾವ ಗುರ್ತನ್ನು, ವಿಜಾನೀಯಾತ್ - ಚನ್ನಾಗಿ ಬಲ್ಲನೋ, ತ್ವಂ - ನೀನು, ತಸ್ಯ - ಆ ಶ್ರೀರಾಮನಿಗೆ, ಪ್ರೀತಿ....ನಂ - ಸಂತೋಷವನ್ನುಂಟುಮಾಡುವ ಗುರ್ತನ್ನು, ಪ್ರದಾತುಂ - ಕೊಡುವುದಕ್ಕೋಸ್ಕರ, ಇಹ - ಈಗ, ಅರ್ಹಸಿ - ಯೋಗ್ಯಳಾಗು. ‖ ೨೯ ‖ ಹೇ ಮಹಾಬಲ - ಎಲೈ ಮಹಾಬಲನೇ, ಸಾ - ಆ ಸೀತಾದೇವಿಯು, ಸರ್ವಾದಿಶಃ - ಎಲ್ಲಾ ದಿಕ್ಕುಗಳನ್ನೂ, ಅಭಿವೀಕ್ಷ್ಯ - ನೋಡಿ, ವೇಣ್ಯುದ್ಗ್ರಥನಂ - ಜಡೆಯಲ್ಲಿ ಮುಡಿಹಾಕಿದ್ದ, ಉತ್ತಮಂ - ಶ್ರೇಷ್ಠವಾದ, ಏತಂಮಣಿಂ- ಈ ಚೂಡಾರತ್ನವನ್ನು, ವಸ್ತ್ರಾತ್ - ವಸ್ತ್ರದಿಂದ, ಮುಕ್ತ್ವಾ - ಬಿಚ್ಚಿ, ಮಹ್ಯಂ - ನನಗೆ, ದದೌ - ಕೊಟ್ಟಳು. ‖೩೦‖ ಹೇ ರಘೂದ್ವಹ - ಎಲೈ ರಘುವಂಶೋತ್ಪನ್ನನೇ, ತವಹೇತೋಃ - ನಿನಗೋಸ್ಕರ, ಅಹಂ - ನಾನು, ದಿವ್ಯಂ - ಉತ್ತಮವಾದ, ಮಣಿಂ - ರತ್ನವನ್ನು, ಪ್ರತಿಗೃಹ್ಯ - ಸ್ವೀಕರಿಸಿ, ಶಿರಸಾ - ಶಿರಸ್ಸಿನಿಂದ, ತಾಮಾರ್ಯಾಂ - ಆ ಪೂಜ್ಯಳನ್ನು ಕುರಿತು, ಪ್ರಣಮ್ಯ - ನಮಸ್ಕರಿಸಿ, ಗಮನೇ - ಪ್ರಯಾಣದಲ್ಲಿ, ತ್ವರೇ - ತ್ವರೆಯುಳ್ಳವನು, ಜಾತಂ - (ಆದೆನು). ‖೩೧‖ ವರವರ್ಣಿನೀ -

ಅವರೀರ್ವರೂ ಇನ್ನು ಸ್ವಲ್ಪಕಾಲದಲ್ಲಿಯೇ ಈ ಲಂಕಾನಗರವನ್ನು ಭಸ್ಮಮಾಡಿಬಿಡುವರು. ಎಲೌ ಸುಶ್ರೋಣಿಯೇ! ಶ್ರೀರಾಮನು ಯುದ್ಧರಂಗದಲ್ಲಿ ರಾವಣನನ್ನು ಬಂಧುಮಿತ್ರರೊಡನೆ ಸಂಹರಿಸಿ ನಿನ್ನನ್ನು ಅಯೋಧ್ಯೆಗೆ ಕರೆದುಕೊಂಡು ಹೋಗುವನು. ಎಲೌ ಅನಿಂದಿತೆಯೇ! ಶ್ರೀರಾಮನು ಚೆನ್ನಾಗಿ ಗುರ್ತರಿತಿರುವುದೂ, ಆತನಿಗೆ ಸಂತೋಷವನ್ನುಂಟುಮಾಡುವುದೂ ಆದ ಒಂದು ಅಭಿಜ್ಞಾನವನ್ನು ನನಗೆ ದಯಪಾಲಿಸು ” ಎಂದು ಹೇಳಿದೆನು. ‖ ೨೪–೨೯ ‖ ಎಲೈ ಶ್ರೀರಾಮನೇ! ಹೀಗೆ ನಾನು ಗುರ್ತನ್ನು ಕೇಳಿದೊಡನೆ ಆ ದೇವಿಯು ದಶದಿಶೆಗಳನ್ನು ನೋಡಿ, ಆಮೇಲೆ ಶಿರಸ್ಸಿನಲ್ಲಿರಬೇಕಾದ ಮಹಾ ಶ್ರೇಷ್ಠವಾದ ಈ ಚೂಡಾಮಣಿಯನ್ನು ಸೀರೆಯ ಸೆರಗಿನ ಗಂಟಿನಿಂದ ಬಿಚ್ಚಿ ನನ್ನಕೈಗೆ ಕೊಟ್ಟಳು. ಎಲೈ ರಾಘವನೇ! ನಿನಗಾಗಿ ಮಹಾ ಶ್ರೇಷ್ಠವಾದ ಈ ಚೂಡಾರತ್ನವನ್ನು ಪೂಜ್ಯಳಾದ ಆಕೆಯು ನನ್ನಕೈಗೆ ಕೊಡಲು ನಾನದನ್ನು ತೆಗೆದುಕೊಂಡು ಆಕೆಗೆ ಪ್ರದಕ್ಷಿಣಪೂರ್ವಕವಾಗಿ ನಮಸ್ಕಾರವನ್ನು ಮಾಡಿ

ಮವೇಕ್ಷ್ಯ ವರವರ್ಣಿನೀ । ವಿವರ್ಧಮಾನಂಚ ಹಿ ಮಾಮುವಾಚ ಜನಕಾತ್ಮಜಾ॥೩೨॥
ಅಶ್ರುಪೂರ್ಣಮುಖೀ ದೀನಾ ಬಾಷ್ಪಸಂದಿಗ್ಧಭಾಷಿಣೀ । ಮಮೋತ್ಪತನಸಂಭ್ರಾಂತಾ
ಶೋಕವೇಗಸಮಾಹತಾ ॥ ೩೩ ॥ ಹನುಮನ್! ಸಿಂಹಸಂಕಾಶಾವುಭೌ ತೌ ರಾಮ
ಲಕ್ಷ್ಮಣೌ । ಸುಗ್ರೀವಂಚ ಸಹಾಮಾತ್ಯಂ ಸರ್ವಾನ್ ಬ್ರೂಯಾಹ್ಯನಾಮಯಂ ॥೩೪॥
ಯಥಾಚ ಸಮಹಾಬಾಹುರ್ಮಾಂ ತಾರಯತಿ ರಾಘವಃ । ಅಸ್ಮಾದ್ದುಃಖಾಂಬು
ಸಂರೋಧಾತ್ತ್ವಂ ಸಮಾಧಾತುಮರ್ಹಸಿ ॥ ೩೫ ॥ ಇಮಂಚ ತೀವ್ರಂ ಮಮ ಶೋಕ

ಉತ್ತಮಸ್ತ್ರೀಯಾದ, ಜನಕಾತ್ಮಜಾ-ಸೀತಾದೇವಿಯು, ಗಮನೇ-ಪ್ರಯಾಣದಲ್ಲಿ, ಕೃತೋತ್ಸಾಹಂಚ-ಮಾಡಲ್ಪಟ್ಟ ಉತ್ಸಾಹವುಳ್ಳ (ಸಮುದ್ರೋಲ್ಲಂಘನಕ್ಕಾಗಿ), ವಿವರ್ಧಮಾನಂಚ - ವೃದ್ಧಿ ಹೊಂದುತ್ತಿರುವ, ಮಾಂ - ನನ್ನನ್ನು ಕುರಿತು, ಉವಾಚ - ಹೇಳಿದಳು. ॥ ೩೨ ॥ ಅಶ್ರು....ಖೀ - ಕಂಬನಿಗಳಿಂದ ತುಂಬಿದ ಮುಖವುಳ್ಳ, ದೀನಾ - ದೈನ್ಯವುಳ್ಳ, ಬಾಷ್ಪ....ಣೀ - ಕಣ್ಣೀರಿನಿಂದ ವಿಸ್ವರವಾಗಿ ಮಾತನಾಡುತ್ತಿರುವ, ಶೋಕ....ತಾ - ಶೋಕಾತಿಶಯದಿಂದ ಕಳವಳಗೊಂಡ ಸೀತಾದೇವಿಯು, ಮಮ-ನನ್ನ, ಉತ್ಪ....ತಾ - ಲಂಘನ ವಿಷಯದಲ್ಲಿ ಸಂಕಟಪಡುತ್ತಿರುವವಳು, (ಆಸೀತ್-ಆದಳು). ॥೩೩॥ ಹೇ ಹನುಮನ್ - ಎಲೈ ಆಂಜನೇಯನೇ, ಸಿಂಹಸಂಕಾಶೌ - ಸಿಂಹಸದೃಶರಾದ, ತಾವುಭೌ - ಅವರೀರ್ವರಾದ, ರಾಮಲಕ್ಷ್ಮಣರನ್ನು, ಸಹಾಮಾತ್ಯಂ - ಮಂತ್ರಿಸಹಿತನಾದ, ಸುಗ್ರೀವಂಚ - ಸುಗ್ರೀವನನ್ನೂ, ಸರ್ವಾನ್ - ಸಮಸ್ತರಾದ ವಾನರರನ್ನೂ ಕುರಿತು, ಅನಾಮಯಂ - ಕ್ಷೇಮವನ್ನು, ಬ್ರೂಯಾಹಿ - ಹೇಳುವೆಯಷ್ಟೆ. ॥ ೩೪ ॥ ಮಹಾಬಾಹುಃ - ಮಹಾ ಭುಜಬಲಪರಾಕ್ರಮಿಯಾದ, ಸರಾಘವಃ - ಆ ಶ್ರೀರಾಮನು, ಮಾಂ - ನನ್ನನ್ನು, ಅಸ್ಮಾತ್ - ಈ, ದುಃಖಾಂ....ತ್ - ದುಃಖವೆಂಬ ಸಮುದ್ರದಿಂದ, ಯಥಾತಾರಯತಿ - ಹೇಗೆ ಕಡೆತೇರಿಸುವನೋ, ತಥಾ - ಹಾಗೆ, ತ್ವಂ - ನೀನು, ಸಮಾಧಾತುಂ - ಸಮಾಧಾನಗೊಳಿಸುವದಕ್ಕೆ, ಅರ್ಹಸಿ - ಯೋಗ್ಯನಾಗಿರುತ್ತೀಯೆ. ॥ ೩೫ ॥ ಹೇ ಹರಿಪ್ರವೀರ - ಎಲೈ ಕಪಿಶೂರನೇ, ತೀವ್ರಂ - ಕ್ರೂರವಾದ, ಮಮ - ನನ್ನ, ಇಮಂಶೋಕವೇಗಂಚ - ಈ ದುಃಖಾತಿಶಯವನ್ನು, ಏಭಿಃರಕ್ಷೋಭಿಃ - ಈ ರಕ್ಕಸರಿಂದ, ಪತಿಭರ್ತ್ಸನಂಚ - ಹೆದರಿಸುವಿಕೆಯನ್ನು, ರಾಮಸ್ಯ-ಶ್ರೀರಾಮನ, ಸಮೀಪಂ - ಸಮೀಪವನ್ನು, ಗತಃ - ಹೊಂದಿದವನಾಗಿ, ಬ್ರೂಯಾಃ - ಹೇಳು, ತೇ -

---

ಮರಳಿ ನಿನ್ನ ಬಳಿಗೆ ಬರಲು ಯತ್ನಿಸುತ್ತಿದ್ದೆನು. ಆಗ ವರವರ್ಣಿನಿಯಾದ ಆ ಜಾನಕಿಯು, ಪುನಃ ಇಲ್ಲಿಗೈತರಲು ದೇಹವನ್ನು ಬೆಳಸುತ್ತಿದ್ದ ನನ್ನನ್ನು ನೋಡಿ ಮಹಾ ವ್ಯಸನಸಂತಪ್ತೆಯಾಗಿ, ಧಾರೆಧಾರೆಯಾಗಿ ಕಣ್ಣೀರಿಡುತ್ತ ಶೋಕಾತಿಶಯದಿಂದ ಗದ್ಗದಸ್ವರಭರಿತೆಯಾಗಿ ನನ್ನನ್ನು ಕುರಿತು, “ಎಲೈ ಹನುಮಂತನೇ, ಸಿಂಹಪರಾಕ್ರಮಿಗಳಾದ ರಾಮಲಕ್ಷ್ಮಣರಿಗೂ, ಮಂತ್ರಿಸಮೇತನಾದ ಸುಗ್ರೀವರಾಜನಿಗೂ ಉಳಿದ ವಾನರರಿಗೂ ನನ್ನ ಕ್ಷೇಮವನ್ನು ತಿಳಿಸು. ಅಲ್ಲದೆ ಮಹಾ ಬಾಹುವಾದ ಶ್ರೀರಾಮನು ನನ್ನನ್ನು ಈ ವ್ಯಸನಸಮುದ್ರದಿಂದ ಕಡೆಹಾಯಿಸುವಂತೆ ನೀನು ಆತನನ್ನು ಸಮಾಧಾನಗೊಳಿಸಬೇಕು. ಶ್ರೀರಾಮನು ನನ್ನನ್ನು ಇಲ್ಲಿಂದ ಕರೆದುಕೊಂಡು ಹೋಗುವಂತೆ ಮಾಡುವ ಭಾರವು ನಿನ್ನದು. ಎಲೈ ವಾನರೋತ್ತಮನೇ! ನೀನು ಶ್ರೀರಾಮನ ಬಳಿಗೆ ಹೋದಕೂಡಲೇ ನಾನಿಲ್ಲಿ ಅನುಭವಿಸುತ್ತಿರುವ ಈ ವ್ಯಸನವನ್ನೂ, ಈ ರಾಕ್ಷಸಿಯರು ನನ್ನನ್ನು ಪೀಡಿಸುತ್ತಿರುವುದನ್ನೂ ಆತನಿಗೆ ತಿಳುಹಿಸು ನಿನಗೆ ಮಾರ್ಗವು

ವೇಗಂ ರಕ್ಷೋಭಿರೇಭಿಃ ಪರಿಭರ್ತ್ಸನಂಚ । ಬ್ರೂಯಾಸ್ತು ರಾಮಸ್ಯ ಗತಸ್ಸಮೀಪಂ
ಶಿವಶ್ಚ ತೇಽಧ್ವಾಸ್ತು ಹರಿಪ್ರವೀರ!" ॥ ೩೧ ॥

ಏತತ್ತವಾರ್ಯಾ ನೃಪರಾಜಸಿಂಹ!
ಸೀತಾವಚಃ ಪ್ರಾಹ ವಿಷಾದಪೂರ್ವಂ ।
ಏತಚ್ಚ ಬುಧ್ವಾ ಗದಿತಂ ಮಯಾ ತ್ವಂ
ಶ್ರದ್ಧತ್ಸ್ವ ಸೀತಾಂ ಕುಶಲಾಂ ಸಮಗ್ರಾಂ" ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಷಷ್ಟಿತಮಸ್ಸರ್ಗಃ

ನಿನಗೆ, ಅಧ್ವಾ - ದಾರಿಯು, ಶಿವಃ - ಮಂಗಳಕರವಾದದ್ದು, ಅಸ್ತು - ಆಗಲಿ. ॥ ೩೧ ॥ ಹೇ ನೃಪರಾಜಸಿಂಹ - ಎಲೈ ರಾಜಾಧಿರಾಜಶ್ರೇಷ್ಠನಾದ ಶ್ರೀರಾಮನೇ, ತವ - ನಿನಗೆ, ಆರ್ಯಾ - ಪೂಜ್ಯಳಾದ ಸೀತಾದೇವಿಯು, ವಿಷಾದಪೂರ್ವಂ-ವ್ಯಸನಪುರಸ್ಸರವಾಗಿ, ಏತದ್ವಚಃ-ಈ ಮಾತನ್ನು, ಪ್ರಾಹ - ಹೇಳಿದಳು, ತ್ವಂ - ನೀನು, ಮಯಾ - ನನ್ನಿಂದ, ಗದಿತಂ - ಹೇಳಲ್ಪಟ್ಟ, ಏತಚ್ಚ - ಈ ಮಾತನ್ನೆಲ್ಲ, ಬುದ್ಧ್ವಾ - ಅರಿತು, ಸೀತಾಂ - ಸೀತಾದೇವಿಯನ್ನು, ಸಮಗ್ರಾಂಕುಶಲಾಂ - ಸಂಪೂರ್ಣ ಕ್ಷೇಮವುಳ್ಳವಳನ್ನಾಗಿ, ಶ್ರದ್ಧತ್ಸ್ವ - ನಂಬು. ॥ ೩೨ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಸಪ್ತಷಷ್ಠಿತಮಸ್ಸರ್ಗಃ

ಮಂಗಳವಾಗಲಿ!" ಎಂದು ಹೇಳಿದಳು. ಎಲೈ ರಾಘವನೇ! ಮಹಾ ಪೂಜ್ಯಳಾದ ಆ ಸೀತಾದೇವಿಯು ಬಹಳವಾದ ದುಃಖದಿಂದ ಕೂಡಿ ಈ ಸಂಗತಿಗಳೆಲ್ಲವನ್ನು ನಿನಗೆ ಹೇಳೆಂದು ನುಡಿದಳು. ಆಕೆಯು ಹೇಳಿದುದೆಲ್ಲವನ್ನೂ ನಾನು ನಿನಗೆ ತಿಳಿಸಿದೆನು. ಇದೆಲ್ಲವನ್ನೂ ನೀನು ಕೇಳಿರುವುದರಿಂದ ಆಕೆಯು ಕ್ಷೇಮವಾಗಿರುವಳೆಂದು ತಿಳಿಯುವವನಾಗು" ಎಂದು ಹೇಳಿದನು. ॥ ೩೦–೩೨ ॥

ಇಂತಿದು ಹನುಮತ್ಕಥಿತ ಸೀತಾವೃತ್ತಾಂತನಿರೂಪಣವೆಂಬ ಅರುವತ್ತೇಳನೆಯ
ಸರ್ಗವು ಸಮಾಪ್ತವಾದುದು.

ಸುಂದರಕಾಂಡೇ ಅಷ್ಟಷಷ್ಠಿತಮಸ್ಸರ್ಗಃ

" ಅಥಾಽಹಮುತ್ತರಂ ದೇವ್ಯಾ ಪುನರುಕ್ತಸ್ಸಸಂಭ್ರಮಃ । ತವಸ್ನೇಹಾನ್ನರವ್ಯಾಘ್ರ! ಸೌಹೃದಾದನುಮಾನ್ಯ ವೈ ॥೧॥ " ಏವಂ ಬಹುವಿಧಂ ವಾಚ್ಯೋ ರಾಮೋ ದಾಶರಥಿಸ್ತ್ವಯಾ । ಯಥಾ ಮಾಮಾಪ್ನುಯಾಚ್ಛೀಘ್ರಂ ಹತ್ವಾ ರಾವಣಮಾಹವೇ ॥ ೨ ॥ ಯದಿ ವಾ ಮನ್ಯಸೇ ವೀರ! ವಸೈಕಾಹಮರಿಂದಮ! । ಕಸ್ಮಿಂಶ್ಚಿತ್ಸಂವೃತೇ ದೇಶೇ ವಿಶ್ರಾಂತಶ್ಶ್ವೋ ಗಮಿಷ್ಯಸಿ ॥ ೩ ॥ ಮಮ ಚಾಪ್ಯಲ್ಪಭಾಗ್ಯಾಯಾಸ್ಸಾನ್ನಿಧ್ಯಾತ್ತವ ವೀರ್ಯವ! । ಅಸ್ಯ ಶೋಕವಿಪಾಕಸ್ಯ ಮುಹೂರ್ತಂ ಸ್ಯಾದ್ವಿ ಮೋಕ್ಷಣಂ॥೪॥

ಹೇ ನರವ್ಯಾಘ್ರ - ಎಲೈ ನರಶ್ರೇಷ್ಠನೇ, ಅಥ - ಬಳಿಕ, ತವ - ನಿನ್ನ, ಸ್ನೇಹಾತ್ - ಸ್ನೇಹದಿಂದಲೂ, ಮಯಿ - ನನ್ನಲ್ಲಿ, ಸೌಹೃದಾತ್ - ವಿಶ್ವಾಸದಿಂದಲೂ, ಅನುಮಾನ್ಯ - ಬಹುಮತಿಸಿ, (ತತಃ-ಬಳಿಕ), ಉತ್ತರಂ - (ಗೋ) ಮುಂದೆ ನಡೆಸತಕ್ಕ ಕಾರ್ಯವನ್ನು ಕುರಿತು, ಸಸಂಭ್ರಮಃ-ತ್ವರೆಯೊಡಗೂಡಿದ, ಅಹಂ - ನಾನು, ಪುನಃ - ಮತ್ತು, ಉಕ್ತಃ - ಹೇಳಲ್ಪಟ್ಟೆನು. ॥ ೧ ॥ ದಾಶರಥಿಃ ರಾಮಃ - ಶ್ರೀರಾಮನು, ಆಹವೇ - ಯುದ್ಧದಲ್ಲಿ, ಶೀಘ್ರಂ - ಜಾಗ್ರತೆಯಾಗಿ, ರಾವಣಂ - ರಾವಣನನ್ನು, ಹತ್ವಾ - ಕೊಂದು, ಯಥಾ - ಹೇಗೆ, ಮಾಂ - ನನ್ನನ್ನು, ಆಪ್ನುಯಾತ್ - ಹೊಂದುವನೋ, ತಥಾ - ಹಾಗೆ, ತ್ವಯಾ - ನಿನ್ನಿಂದ, ಏವಂ - ಈ ಪರಿಯಾಗಿ, ಬಹುವಿಧಂ - ನಾನಾಬಗೆಯಾಗಿ, ವಾಚ್ಯಃ - ಹೇಳಲ್ಪಡತಕ್ಕವನು. ॥ ೨ ॥ ಹೇ ವೀರ - ಎಲೈ ಶೂರನೇ, ಮನ್ಯಸೇವಾಯದಿ - ಇಲ್ಲಿರಲಿಚ್ಛಿಸಿದವನಾದರೆ, ಏಕಾಹಂ - ಒಂದುದಿವಸ, ವಸ - ಇರು, ಹೇ ಅರಿಂದಮ - ಎಲೈ ಶತ್ರುನಾಶಕನೇ, ಸಂವೃತೇ - ರಹಸ್ಯವಾದ, ಕಸ್ಮಿಂಶ್ಚಿದ್ದೇಶೇ - ಯಾವುದಾದರೊಂದು ಸ್ಥಳದಲ್ಲಿ, ವಿಶ್ರಾಂತಃ - ಶ್ರಮಪರಿಹಾರ ಮಾಡಿಕೊಂಡು, ಶ್ವಃ - ನಾಳೆ, ಗಮಿಷ್ಯಸಿಚೇತ್ - ಹೊರಟರೆ, ಹೇ ವೀರ್ಯವ - ಎಲೈ ಶೌರ್ಯವಂತನೇ, ಅಲ್ಪಭಾಗ್ಯಾಯಾಃ - ಸ್ವಲ್ಪ ಪುಣ್ಯವತಿಯಾದ, ಮಮಚಾಪಿ - ನನಗೂ ಕೂಡ, ತವ - ನಿನ್ನ, ಸಾನ್ನಿಧ್ಯಾತ್ - ಸಾಮಿಪ್ಯದಿಂದ, ಅಸ್ಯ - ಈ, ಶೋಕ....ಸ್ಯ - ದುಃಖಪರಿಣಾ

" ಎಲೈ ಪುರುಷೋತ್ತಮನೇ! ಶ್ರೀರಾಮಚಂದ್ರನೇ! ನನ್ನಲ್ಲಿ ನಿನಗಿರುವ ವಿಶೇಷವಾದ ಪ್ರೀತಿಯಿಂದಲೂ, ನಾನು ತನ್ನ ವ್ಯಸನವನ್ನು ಕಳೆಯುವೆನೆಂಬ ನಂಬುಗೆಯಿಂದಲೂ, ಪ್ರಯಾಣಕ್ಕಾಗಿ ತ್ವರೆಗೊಳ್ಳುತ್ತಿರುವ ನನ್ನನ್ನು ನೋಡಿ ಆ ಸೀತಾದೇವಿಯು ಬಹಳವಾಗಿ ಗೌರವಿಸಿ ಪುನಃ ನನ್ನನ್ನು ಕುರಿತು ಮುಂದಾಗಬೇಕಾದ ಕಾರ್ಯಗಳನ್ನು ಕುರಿತು, " ಎಲೈ ಮಾರುತಿಯೇ! ನೀನು ಯಾವ ರೀತಿ ಹೇಳಿದರೆ ನನ್ನ ಪತಿದೇವನಾದ ಶ್ರೀರಾಮಚಂದ್ರನು ಯುದ್ಧಸನ್ನದ್ಧನಾಗಿ ಇಲ್ಲಿಗೈತಂದು ಈ ರಾವಣಾಸುರನನ್ನು ಬಂಧುಮಿತ್ರ ಸಮೇತನನ್ನಾಗಿ ಕೊಂದು ನನ್ನನ್ನು ಕರೆದೊಯ್ಯುವನೋ ಹಾಗೆ ನೀನು ಅನೇಕ ವಿಧಗಳಿಂದ ಆತನಿಗೆ ನನ್ನ ವಿಚಾರವನ್ನು ತಿಳಿಸಬೇಕು. ಎಲೈ ಅರಿಮರ್ದನನೇ! ಹನುಮಂತನೇ! ನೀನಿಷ್ಟಪಟ್ಟರೆ ಇಲ್ಲಿಯೇ ಎಲ್ಲಿಯಾದರೂ ಒಂದು ರಹಸ್ಯಸ್ಥಳದಲ್ಲಿ ಒಂದು ರಾತ್ರಿಯಿದ್ದು ಮಾರನೆಯ ದಿನದ ಪ್ರಾತಃಕಾಲದಲ್ಲಿ ಪಯಣಿಸು. ಎಲೈ ಶೂರನೇ! ನೀನಿಲ್ಲಿದ್ದರೆ ಬಹು ದುರದೃಷ್ಟವತಿಯಾದ

ಗತೇಹಿ ತ್ವಯಿ ವಿಕ್ರಾಂತೇ ಪುನರಾಗಮನಾಯ ವೈ । ಪ್ರಾಣಾನಾಮಪಿ ಸಂದೇಹೋ ಮಮ ಸ್ಯಾನ್ನಾತ್ರ ಸಂಶಯಃ ॥ ೫ ॥ ತವಾದರ್ಶನಜಶ್ಶೋಕೋ ಭೂಯೋ ಮಾಂ ಪರಿತಾಪಯೇತ್ । ದುಃಖಾದ್ದುಃಖಪರಾಭೂತಾಂ ದುರ್ಗತಾಂ ದುಃಖಭಾಗಿನೀಂ ॥೬॥ ಅಯಂ ಚ ವೀರ! ಸಂದೇಹಸ್ತಿಷ್ಠತೀವ ಮಮಾಗ್ರತಃ । ಸುಮಹಾಂಸ್ತ್ವತ್ಸಹಾಯೇಷು ಹರ್ಯೃಕ್ಷೇಷು ಹರೀಶ್ವರ! ॥ ೭ ॥ ಕಥಂನುಖಲು ದುಷ್ಪಾರಂ ತರಿಷ್ಯಂತಿ ಮಹೋದಧಿಂ? । ತಾನಿ ಹರ್ಯೃಕ್ಷಸೈನ್ಯಾನಿ ತೌವಾ ನರವರಾತ್ಮಜೌ? ॥ ೮ ॥

ಮಕ್ಷ್ಯಾ, ಮುಹೂರ್ತಂ - ಸ್ವಲ್ಪಕಾಲ, ಮೋಕ್ಷಣಂ - ಬಿಡುಗಡೆಯು, ಸ್ಯಾತ್ - ಆಗುವುದು. ॥ ೩-೪ ॥ ವಿಕ್ರಾಂತೇ - ಶೂರನಾದ, ತ್ವಯಿ - ನೀನು, ಪುನ...ವೈ - ಪುನಃ ಬರುವದಕ್ಕೋಸ್ಕರ, ಗತೇ - ಹೋದವನಾಗಲು, ಮಮ - ನನಗೆ, ಪ್ರಾಣಾನಾಮಪಿ - ಪ್ರಾಣಗಳಿಗೂ ಕೂಡ, ಸಂದೇಹಃ - ಸಂಶಯವು, ಸ್ಯಾತ್ - ಆದೀತು, ಅತ್ರ - ಈ ವಿಷಯದಲ್ಲಿ, ನಸಂಶಯಃ - ಸಂದೇಹವಿಲ್ಲವು. ॥ ೫ ॥ ತವ-ನಿನ್ನ, ಆದರ್ಶನಜಃ - ನೋಡದಿರುವುದರಿಂದುಂಟಾದ, ಶೋಕಃ-ವ್ಯಸನವು, ದುಃಖಾ....ತಾಂ - ದುಃಖಪರಂಪರೆಯಿಂದ ತಿರಸ್ಕೃತಳಾದ, ದುರ್ಗತಾಂ - ದೀನಳಾದ, ದುಃಖಭಾಗಿನೀಂ - ವ್ಯಸನಪಾತ್ರಳಾದ, ಮಾಂ - ನನ್ನನ್ನು, ಭೂಯಃ - ಮತ್ತು, ಪರಿತಾಪಯೇತ್ - ಸಂಕಟವನ್ನುಂಟುಮಾಡುವುದು. ॥ ೬ ॥ ಹೇ ವೀರ - ಎಲೈ ಶೂರನೇ, ಹೇ ಹರೀಶ್ವರ - ಎಲೈ ಕಪಿಶ್ರೇಷ್ಠನೇ, ತ್ವತ್ಸಹಾಯೇಷು - ನಿನ್ನ ಸಹಾಯಭೂತರಾದ, ಹರ್ಯೃಕ್ಷೇಷು - ವಾನರ ಋಕ್ಷರ ವಿಷಯದಲ್ಲಿ, ಸುಮಹಾ - ದೊಡ್ಡದಾದ, ಅಯಂಸಂದೇಹಶ್ಚ - ಈ ಸಂಶಯವನ್ನು, ಮಮಾಗ್ರತಃ - ನನ್ನ ಮುಂದೆ, ತಿಷ್ಠತೀವ - ನಿಂತಹಾಗಿದೆ. ॥ ೭ ॥ ತಾನಿಹರ್ಯೃಕ್ಷಸೈನ್ಯಾನಿ - ಆ ಕಪಿಗಳ ಸೈನ್ಯಗಳಾದರೂ, ನರವರಾತ್ಮಜೌ - ರಾಜಪುತ್ರರಾದ, ತೌವಾ - ಆ ರಾಮಲಕ್ಷ್ಮಣರಾಗಲಿ, ದುಷ್ಪಾರಂ - ತುದಿಯಿಲ್ಲದಿರುವ, ಮಹೋದಧಿಂ - ಸಮುದ್ರವನ್ನು, ಕಥಂತರಿಷ್ಯಂತಿ - ಹೇಗೆ ದಾಟುವರು. ॥ ೮ ॥ ಅಸ್ಯಸಾಗರಸ್ಯ - ಈ ಸಮುದ್ರದ, ಲಂಘನೇ - ದಾಟುವ ವಿಷಯದಲ್ಲಿ, ವೈನತೇಯಸ್ಯ - ಗರುಡನಿಗಾದರೂ, ತವವಾ - ನಿನ

ನಾನು ಸ್ವಲ್ಪವಾದರೂ ತೀವ್ರವಾದ ಈ ವ್ಯಸನವನ್ನು ದೂರಮಾಡಿರಬಲ್ಲೆನು. ಪ್ರಯಾಣೋನ್ಮುಖನಾಗಿರುವ ನೀನೀಗ ಇಲ್ಲಿಂದ ಹೊರಟುಹೋದೊಡನೆಯೇ ನನ್ನ ಪ್ರಾಣಗಳುಳಿಯುವುದೇ ಸಂಶಯವಾಗುವುದು. ನೀನು ಹಿಂತಿರುಗಿ ಬರುವುದರೊಳಗಾಗಿ ನನ್ನ ಪ್ರಾಣಗಳುಳಿಯುವುದೇ ಸಂಶಯವೆನಿಸುವುದು. ॥ ೧–೫ ॥ ಎಲೈ ಹನುಮಂತನೇ! ಶ್ರೀರಾಮವಿಯೋಗದಿಂದುಂಟಾಗಿರುವ ವ್ಯಸನದಿಂದ ಬಹಳವಾಗಿ ಪರಿತಪಿಸುತ್ತಿರುವ ನಾನು ಈಗ ನೀನಿಲ್ಲಿಂದ ಹೊರಟುಹೋಗುವುದರಿಂದುಂಟಾಗುವ ವ್ಯಸನಾತಿಶಯದಿಂದ ಮತ್ತೂ ಪರಿತಪಿಸಿ ದೀನೆಯಾಗಿ ಮಹಾ ವ್ಯಸನಪೀಡಿತೆಯಾಗುವೆನು. ವಾನರೋತ್ತಮಾ! ನೀನು ಹರ್ಯೃಕ್ಷಸೇನೆಗಳು ಕೋಟ್ಯನುಕೋಟಿಯಾಗಿ ಇಲ್ಲಿಗೆ ಬಂದುಬಿಡುವುವೆಂದು ಹೇಳಿದೆ. ಆದರೆ ನನಗೇಕೋ ಆ ವಿಷಯದಲ್ಲಿ ಸಂದೇಹವಾಗಿರುವುದು. ಈ ಸಾಗರವಾದರೋ ಯಾರಿಂದಲೂ ದುಸ್ತರವಾಗಿರುವುದು. ಇಂತಹುದರಲ್ಲಿ ಆ ಹರ್ಯೃಕ್ಷಸೇನೆಗಳು ಈ ಮಹಾ ಸಾಗರವನ್ನು ದಾಟಿ ಬರುವುದೆಂತು? ಅಲ್ಲದೆ ರಾಜಪುತ್ರರಾದ ಶ್ರೀರಾಮಲಕ್ಷ್ಮಣರು ಹೇಗೆತಾನೆ ಸಾಗರವನ್ನು ದಾಟಬಲ್ಲರು? ಎಲೈ ಹನುಮಂತನೇ! ಸಮುದ್ರೋಲ್ಲಂಘನ ಶಕ್ತಿಯು ಗರುತ್ಮಂತನಿಗೂ,

ತ್ರಯಾಣಾಮಪಿ ಭೂತಾನಾಂ ಸಾಗರಸ್ಯಾಽಸ್ಯ ಲಂಘನೇ । ಶಕ್ತಿಸ್ಸ್ಯಾದ್ವೈನತೇಯಸ್ಯ ತವವಾ ಮಾರುತಸ್ಯವಾ ॥ ೯ ॥ ತದಸ್ಮಿನ್ ಕಾರ್ಯನಿರ್ಯೋಗೇ ವೀರೈವಂ ದುರತಿಕ್ರಮೇ । ಕಿಂಪಶ್ಯಸಿ ಸಮಾಧಾನಂ ಬ್ರೂಹಿ ಕಾರ್ಯವಿದಾಂ ವರ! ॥ ೧೦ ॥ ಕಾಮಮಸ್ಯ ತ್ವಮೇವೈಕಃ ಕಾರ್ಯಸ್ಯ ಪರಿಸಾಧನೇ । ಪರ್ಯಾಪ್ತಃ ಪರವೀರಘ್ನ! ಯಶಸ್ಯಸ್ತೇ ಬಲೋದಯಃ ॥ ೧೧ ॥ ಬಲೈಸ್ಸಮಗ್ರೈರ್ಯದಿ ಮಾಂ ಹತ್ವಾ ರಾವಣಮಾಹವೇ । ವಿಜಯೀ ಸ್ವಾಂ ಪುರೀಂ ರಾಮೋ ನಯೇತ್ತಸ್ಸ್ಯಾದ್ಯಶಸ್ಕರಂ ॥ ೧೨ ॥ ಯಥಾಽಹಂ ತಸ್ಯ ವೀರಸ್ಯ ವನಾದುಪಧಿನಾ ಹೃತಾ । ರಕ್ಷಸಾ ತದ್ಭಯಾದೇವ ತಥಾ ನಾರ್ಹತಿ ರಾಘವಃ ॥೧೩॥ ಬಲೈಸ್ತು ಸಂಕುಲಾಂ ಕೃತ್ವಾ ಲಂಕಾಂ ಪರಬಲಾರ್ದನಃ ।

ಗಾದರೂ, ಮಾರುತಸ್ಯವಾ - ವಾಯುವಿಗಾದರೂ, ತ್ರಯಾಣಾಂಭೂತಾನಾಮೇವ - ಮೂರು ಪ್ರಾಣಿಗಳಿಗೆ ಮಾತ್ರ, ಶಕ್ತಿಃ - ಸಾಮರ್ಥ್ಯವು, ಸ್ಯಾತ್ - ಆದೀತು. ॥ ೯ ॥ ತತ್ - ಆ ಕಾರಣದಿಂದ, ಹೇ ಕಾರ್ಯವಿದಾಂವರ - ಎಲೈ ಕಾರ್ಯಜ್ಞರಲ್ಲಿ ಶ್ರೇಷ್ಠನೇ, ಹೇ ವೀರ - ಎಲೈ ಶೂರನೇ, ಏವಂ - ಈ ಪರಿಯಾಗಿ, ದುರತಿಕ್ರಮೇ - ಅಸಾಧ್ಯವಾದ, ಅಸ್ಮಿನ್ಕಾರ್ಯನಿರ್ಯೋಗೇ - ಈ ಕೆಲಸದ ನಿರ್ವಾಹದ ವಿಷಯದಲ್ಲಿ, ಸಮಾಧಾನಂ - ಉತ್ತರವನ್ನು, ಕಿಂಪಶ್ಯಸಿ - ಏನು ಆಲೋಚಿಸುವೆ, ಬ್ರೂಹಿ - ಹೇಳು. ॥ ೧೦ ॥ ಹೇ ಪರವೀರಘ್ನ - ಎಲೈ ಶತ್ರುಸಂಹಾರಕನೇ, ತ್ವಮೇಕಏವ - ನೀನೊಬ್ಬನೇ, ಅಸ್ಯಕಾರ್ಯಸ್ಯ - ಈ ಕೃತ್ಯದ, ಪರಿಸಾಧನೇ - ಸಾಧನದಲ್ಲಿ, ಕಾಮಂಪರ್ಯಾಪ್ತಃ - ಸಂಪೂರ್ಣ ಸಮರ್ಥನು, ತಥಾಪಿ - ಹಾಗಾದರೂ, ಫಲೋದಯಃ - ಈ ಕಾರ್ಯದ ಅಭ್ಯುದಯವು, ತವೈವ - ನಿನಗೇನೇ, ಯಶಸ್ಯಃ - ಕೀರ್ತಿಕರವು. ॥ ೧೧ ॥ ರಾಮಃ - ಶ್ರೀರಾಮನು, ಸಮಗ್ರೈಃ - ಸಂಪೂರ್ಣವಾದ, ಬಲೈಃ - ಸೇನೆಗಳಿಂದ, ಆಹವೇ - ಕಾಳೆಗದಲ್ಲಿ, ರಾವಣಂ - ರಾವಣನನ್ನು, ಹತ್ವಾ - ಕೊಂದು, ವಿಜಯೀ - ಜಯಶಾಲಿಯಾಗಿ, ಮಾಂ - ನನ್ನನ್ನು, ಸ್ವಾಂಪುರೀಂ - ತನ್ನಪಟ್ಟಣವನ್ನು, ನಯೇದ್ಯದಿ - ಹೊಂದಿಸಿದರೆ, ತತ್ - ಅದು, ಯಶಸ್ಕರಂ - ಕೀರ್ತಿಕರವು, ಸ್ಯಾತ್ - ಆದೀತು. ॥ ೧೨ ॥ ತಸ್ಯವೀರಸ್ಯ - ಆ ಶೂರನ, ವನಾತ್ - ವನದಿಂದ, ರಕ್ಷಸಾ - ರಾವಣನಿಂದ, ಯಥಾ - ಹೇಗೆ, ಅಹಂ - ನಾನು, ತದ್ಭಯಾತ್ - ಆ ರಾಮನ ಭೀತಿಯಿಂದ, ಯಥಾ - ಹೇಗೆ, ಉಪಧಿನಾ - ವಂಚನೆಯಿಂದ, ಹೃತಾ - ಅಪಹರಿಸಲ್ಪಟ್ಟಿನೋ, ತಥಾ - ಹಾಗೆ, ಕರ್ತುಂ - ಮಾಡುವುದಕ್ಕೆ, ರಾಘವಃ - ಶ್ರೀರಾಮನು, ನಾರ್ಹತಿ - ಯೋಗ್ಯನಲ್ಲ. ॥ ೧೩ ॥ ಕಿಂತು - ಆದರೆ, ಪರ....ನಃ -

---

ವಾಯುದೇವನಿಗೂ, ನಿನಗೂ ಈ ಮೂರ್ವರಿಗೆ ಮಾತ್ರವುಂಟಲ್ಲದೆ ಮತ್ತಾರಿಗೂ ಇರುವುದಿಲ್ಲವು. ಎಲೈ ಪರಾಕ್ರಮಶಾಲಿಯೇ! ನೀನು ಕಾರ್ಯಾಕಾರ್ಯಗಳನ್ನು ಚೆನ್ನಾಗಿ ಬಲ್ಲವನು. ಈ ದುಷ್ಕರವಾದ ಕಾರ್ಯವನ್ನು ಸಾಧಿಸಲು ಉಚಿತೋಪಾಯವನ್ನು ಯೋಚಿಸಲೂ ನೀನೇ ಅರ್ಹನು; ಮತ್ತಾರೂ ಅಲ್ಲವು. ಎಲೈ ವೈರಿವೀರರನ್ನೊಕ್ಕಲಿಕ್ಕುವ ಹನುಮಂತನೇ! ಈ ಕಾರ್ಯವನ್ನು ಸಾಧಿಸಲು ನೀನೊಬ್ಬನೇ ಸಾಕು. ಕಾರ್ಯಸಾಧನೆಯ ವಿಷಯದಲ್ಲಿ ನಿನಗಿರುವ ಶಕ್ತಿಯು ಅನುಪಮವಾದುದು. ಎಲೈ ಹನುಮಂತನೇ! ಶ್ರೀರಾಮನು ಸಮಸ್ತ ಸೇನೆಗಳೊಡನೆ ಈ ಲಂಕಾನಗರಕ್ಕೈತಂದು ಯುದ್ಧದಲ್ಲಿ ರಾವಣಾಸುರನನ್ನು ಸಂಹರಿಸಿ ಜಯಶಾಲಿಯಾಗಿ ನನ್ನನ್ನು ಅಯೋಧ್ಯಾಪಟ್ಟಣಕ್ಕೆ ಕರೆದುಕೊಂಡು ಹೋದರೆ ಅದು ಆತನಿಗೆ ಕೀರ್ತಿಕರವಾಗಿರುತ್ತದೆ. ಹಾಗಲ್ಲದೆ ಮಹಾ ಶೂರನಾದ ಆತನಿಗೆ ಭಾರ್ಯೆ

ಮಾಂ ನಯೇದ್ಯದಿ ಕಾಕುತ್ಸ್ಥಸ್ತತ್ತಸ್ಯ ಸದೃಶಂ ಭವೇತ್ ‖ ೧೪ ‖ ತದ್ಯಥಾ ತಸ್ಯ ವಿಕ್ರಾಂತಮನುರೂಪಂ ಮಹಾತ್ಮನಃ । ಭವತ್ಯಾಹವಶೂರಸ್ಯ ತಥಾ ತ್ವಮುಪಪಾದಯ" ‖ ೧೫ ‖ ತದರ್ಥೋಪಹಿತಂ ವಾಕ್ಯಂ ಪ್ರಶ್ರಿತಂ ಹೇತುಸಂಹಿತಂ । ನಿಶಮ್ಯಾಹಂ ತತಶ್ಶೇಷಂ ವಾಕ್ಯಮುತ್ತರಮಬ್ರುವಂ ‖ ೧೬ ‖ "ದೇವಿ! ಹರ್ಯೃಕ್ಷಸೈನ್ಯಾನಾಮೀಶ್ವರಃ ಪ್ಲವತಾಂವರಃ । ಸುಗ್ರೀವಸ್ಸತ್ವಸಂಪನ್ನಸ್ತವಾರ್ಥೇ ಕೃತನಿಶ್ಚಯಃ ‖ ೧೭ ‖ ತಸ್ಯ ವಿಕ್ರಮಸಂಪನ್ನಾಸ್ಸತ್ವವಂತೋ ಮಹಾಬಲಾಃ । ಮನ

ಶತ್ರುಸೈನ್ಯನಾಶಕನಾದ, ಕಾಕುತ್ಸ್ಥಃ-ಶ್ರೀರಾಮನು, ಬಲೈಃ-ಸೈನ್ಯಗಳಿಂದ, ಲಂಕಾಂ-ಲಂಕೆಯನ್ನು, ಸಂಕುಲಾಂ - ವ್ಯಾಕುಲವನ್ನಾಗಿ, ಕೃತ್ವಾ - ಮಾಡಿ, ಮಾಂ - ನನ್ನನ್ನು, ನಯೇದ್ಯದಿ - ಕರೆದುಕೊಂಡು ಹೋಗುವುದಾದರೆ, ತತ್ - ಅದು, ತಸ್ಯ - ಆತನಿಗೆ, ಸದೃಶಂ - ಯೋಗ್ಯವಾದುದು, ಭವೇತ್ - ಆದೀತು. ‖ ೧೪ ‖ ತತ್ - ಆ ಕಾರಣದಿಂದ, ಆಹ....ಸ್ಯ - ಯುದ್ಧವೀರನಾದ, ತಸ್ಯ ಮಹಾತ್ಮನಃ - ಆ ಮಹಾನುಭಾವನ, ವಿಕ್ರಾಂತಂ - ಪರಾಕ್ರಮವು, ಯಥಾ - ಹೇಗೆ, ಅನುರೂಪಂ ಭವತಿ - ಅರ್ಹವಾಗಿದ್ದೀತೋ, ತಥಾ - ಹಾಗೆ, ತ್ವಂ - ನೀನು, ಉಪಪಾದಯ - ವಿಸ್ತರಿಸಿ ಹೇಳು. ‖ ೧೫ ‖ ಅರ್ಥೋಪಹಿತಂ - ಅರ್ಥಯುಕ್ತವಾದ, ಪ್ರಶ್ರಿತಂ - ವಿನಯದಿಂದ ಕೂಡಿದ, ಹೇತುಸಂಹಿತಂ - ಕಾರಣವಾದದಿಂದೊಡಗೂಡಿದ, ತದ್ವಾಕ್ಯಂ - ಆ ಮಾತನ್ನು, ನಿಶಮ್ಯ - ಕೇಳಿ, ತತಃ - ಬಳಿಕ, ಅಹಂ - ನಾನು, ಶೇಷಂವಾಕ್ಯಂ - ಉಳಿದ ಮಾತನ್ನು, ಉತ್ತರಂ - ಉತ್ತರವನ್ನಾಗಿ, ಅಬ್ರುವಂ - ಹೇಳಿದೆನು. ‖ ೧೬ ‖ ಹೇ ದೇವಿ - ಎಲೌ ಸೀತಾದೇವಿಯೇ, ಸತ್ವಸಂಪನ್ನಃ - ಧೈರ್ಯಯುಕ್ತನಾದ, ಪ್ಲವತಾಂವರಃ - ಕಪಿಶ್ರೇಷ್ಠನಾದ, ಹರ್ಯೃಕ್ಷಸೈನ್ಯಾನಾಂ - ಕಪಿಸೇನೆಗಳಿಗೂ ಋಕ್ಷಸೈನ್ಯಗಳಿಗೂ, ಈಶ್ವರಃ-ಅಧಿಪತಿಯಾದ, ಸುಗ್ರೀವಃ-ಸುಗ್ರೀವನು, ತವಾರ್ಥೇ-ನಿನ್ನ ನಿಮಿತ್ತವಾಗಿ, ಕೃತನಿಶ್ಚಯಃ-ಬದ್ಧಸಂಕಲ್ಪನಾಗಿದ್ದಾನೆ. ‖೧೭‖ ವಿಕ್ರ....ನ್ನಾಃ-ಪರಾಕ್ರಮಯುಕ್ತರಾದ, ಸತ್ವವಂತಃ-ಧೈರ್ಯವಂತರಾದ, ಮಹಾಬಲಾಃ-ಅತಿ ಬಲಿಷ್ಠರಾದ, ಮನ....ತಾಃ-ಮನಸ್ಸಿಗೆ ತೋರಿದಂತೆ

ಯಾದ ನನ್ನನ್ನು, ರಾಕ್ಷಸನಾದ ರಾವಣನು ರಾಮನಿಗೆ ಭಯಪಟ್ಟು ಕಪಟದಿಂದ ನನ್ನನ್ನು ಕದ್ದು ತಂದಂತೆ, ಶ್ರೀರಾಮನೂ ನನ್ನನ್ನು ರಹಸ್ಯವಾಗಿ ಕರೆದೊಯ್ಯುವುದು ಆತನಿಗೆ ಉಚಿತವಾಗಿರುವುದಿಲ್ಲ. ಎಲೈ ವಾನರೋತ್ತಮನೇ! ಮಹಾ ಪರಾಕ್ರಮಶಾಲಿಯೂ, ಯುದ್ಧವೀರನೂ ಆದ ಶ್ರೀರಾಮನು ತನ್ನ ಶೌರ್ಯಕ್ಕನುಗುಣವಾಗಿ ಪ್ರಯತ್ನಿಸುವಂತೆ ಮಾಡುವ ಭಾರವು ನಿನ್ನದಾಗಿರುವುದು" ಎಂದು ಹೇಳಿದಳು. ‖೬–೧೫‖ ಮಹಾರ್ಥಗರ್ಭಿತವಾಗಿಯೂ, ಸಹೇತುಕವಾಗಿಯೂ ಇರುವ ಸೀತಾದೇವಿಯ ಮಾತುಗಳನ್ನು ಕೇಳಿ ನಾನು, "ದೇವೀ! ಋಕ್ಷವಾನರ ಸೇನೆಗಳಿಗೆ ಪ್ರಭುವೂ, ವಾನರೋತ್ತಮನೂ, ಮಹಾಬಲಸಂಪನ್ನನೂ ಆದ ಸುಗ್ರೀವನು ನಿನ್ನನ್ನು ಇಲ್ಲಿಂದ ಕರೆದುಕೊಂಡು ಹೋಗಲು ತಕ್ಕ ಉಪಾಯವನ್ನು ಮಾಡುವುದರಲ್ಲಿ ಸರ್ವಪ್ರಯತ್ನವನ್ನೂ ಮಾಡುವನೆಂದು ತಿಳಿ. ಎಲೆ ತಾಯೆ! ನಮ್ಮ ಪ್ರಭುವಾದ ಆ ಸುಗ್ರೀವರಾಜನು ಈ ಕಾರ್ಯವು ಎಷ್ಟೇ ಪ್ರಯಾಸಕರವಾದರೂ ಸಾಧಿಸಲು ನಿಶ್ಚಯಿಸಿರುವನು.

ಸ್ಸಂಕಲ್ಪಸಂಪಾತಾ ನಿದೇಶೇ ಹರಯಸ್ಸ್ಥಿತಾಃ ॥೧೮॥ ಯೇಷಾಂ ನೋಪರಿ ನಾಧಸ್ತಾ ನ್ನತಿರ್ಯಕ್ಸಜ್ಜತೇ ಗತಿಃ । ನಚಕರ್ಮಸು ಸೀದಂತಿ ಮಹತ್ಸ್ವಮಿತತೇಜಸಃ ॥ ೧೯ ॥ ಅಸಕೃತ್ತೈರ್ಮಹಾಭಾಗೈರ್ವಾನರೈರ್ಬಲದರ್ಪಿತೈಃ । ಪ್ರದಕ್ಷಿಣೀಕೃತಾ ಭೂಮಿ ರ್ವಾಯುಮಾರ್ಗಾನುಸಾರಿಭಿಃ ॥ ೨೦ ॥ ಮದ್ವಿಶಿಷ್ಟಾಶ್ಚ ತುಲ್ಯಾಶ್ಚ ಸಂತಿ ತತ್ರ ವನೌಕಸಃ । ಮತ್ತಃ ಪ್ರತ್ಯವರಃ ಕಶ್ಚಿನ್ನಾಸ್ತಿ ಸುಗ್ರೀವಸನ್ನಿಧೌ ॥ ೨೧ ॥ ಅಹಂ ತಾವದಿಹ ಪ್ರಾಪ್ತಃ ಕಿಂ ಪುನಸ್ತೇ ಮಹಾಬಲಾಃ । ನಹಿ ಪ್ರಕೃಷ್ಟಾಃ ಪ್ರೇಷ್ಯಂತೇ ಪ್ರೇಷ್ಯಂತೇಹೀ

ಲಂಘಿಸುತ್ತಿರುವ, ಹರಯಃ-ಕಪಿಗಳು, ತಸ್ಯ-ಆ ಸುಗ್ರೀವನ, ನಿದೇಶೇ-ಆಜ್ಞೆಯಲ್ಲಿ, ಸ್ಥಿತಾಃ-ಇರುವರು. ॥೧೮॥ ಯೇಷಾಂ-ಯಾವ ಕಪಿಗಳ, ಗತಿಃ-ಗಮನವು, ಉಪರಿ-ಅಂತರಿಕ್ಷದಲ್ಲಿ, ನಸಜ್ಜತೇ-ಸಂಬಂಧಿಸುವುದಿಲ್ಲವೋ, ಅಧಸ್ತಾತ್ - ಕೆಳಗಡೆಯೂ, ನ - ಸಂಬಂಧಿಸುವುದಿಲ್ಲವೋ, ತಿರ್ಯಕ್ - ಅಡ್ಡಲಾಗಿಯೂ, ನ-ಸಂಬಂಧಿಸುವುದಿಲ್ಲವೋ, ಅಮಿತತೇಜಸಃ-ಅಪಾರ ಪರಾಕ್ರಮವುಳ್ಳ ಆ ವಾನರರು, ಮಹತ್ಸು ಕರ್ಮಸುಚ-ಮಹತ್ಕಾರ್ಯಗಳಲ್ಲಿಯೂ, ನಸೀದಂತಿ-ಯೋಚಿಸುವವರಲ್ಲವು. ॥೧೯॥ ವಾಯು....ಭಿಃ-ಗಗನಮಾರ್ಗದಲ್ಲಿ ಹೋಗುತ್ತಿರುವ, ಮಹಾಭಾಗೈಃ-ಪುಣ್ಯವಂತರಾದ, ಬಲದರ್ಪಿತೈಃ-ಬಲದಿಂದ ಕೊಬ್ಬಿದ, ತೈರ್ವಾನರೈಃ-ಆ ಕಪಿಗಳಿಂದ, ಭೂಮಿಃ-ಭೂಮಿಯು, ಅಸಕೃತ್-ಬಾರಿಬಾರಿಗೂ, ಪ್ರದಕ್ಷಿಣೀಕೃತಾ-ಸುತ್ತಲ್ಪಟ್ಟಿದೆ. ॥ ೨೦ ॥ ತತ್ರಸುಗ್ರೀವಸನ್ನಿಧೌ-ಆ ಸುಗ್ರೀವನ ಬಳಿಯಲ್ಲಿ, ವನೌಕಸಃ - ಕಪಿಗಳು, ಮದ್ವಿಶಿಷ್ಟಾಃ - ನನಗಿಂತಲೂ ಹೆಚ್ಚಾದವರೂ, ತುಲ್ಯಾಶ್ಚ ಸಮಾನಸ್ಕಂಧರಾದವರೂ, ಸಂತಿ - ಇದ್ದಾರೆ, ಕಶ್ಚಿತ್ - ಯಾವನೂ, ಮತ್ತಃ - ನನಗಿಂತಲೂ, ಪ್ರತ್ಯವರಃ - ಕೀಳಾದವನೂ, ನಾಸ್ತಿ - ಇಲ್ಲವು. ॥ ೨೧ ॥ ಅಹಂತಾವತ್ - ನಾನು ಮಾತ್ರ, ಇಹ - ಇಲ್ಲಿ, ಪ್ರಾಪ್ತಃ - ಬಂದೆನು, ಮಹಾಬಲಾಃ - ಅತಿ ಬಲಿಷ್ಠರಾದ, ತೇ - ಆ ಕಪಿಗಳು, ಕಿಂಪುನಃ - ಏನು ಹೇಳತಕ್ಕದ್ದು, ಪ್ರಕೃಷ್ಟಾಃ -

---

ಆ ಸುಗ್ರೀವನ ಸನ್ನಿಧಿಯಲ್ಲಿ ಮಹಾ ಶೂರರಾದ ವಾನರರನೇಕರಿದ್ದಾರೆ. ಆ ವಾನರರಿಗೆ ಆಕಾಶದಲ್ಲಿಯಾಗಲಿ, ಭೂಮಿಯಲ್ಲಿಯಾಗಲಿ, ಅಡ್ಡವಾಗಿಯಾಗಲಿ ಯಾವ ಪ್ರತಿಬಂಧಕವೂ ಇಲ್ಲದ ಗಮನವಿರುವುದು. ಅವರಿಗೆ ದಶದಿಶೆಗಳಲ್ಲಿಯೂ ಗಮನಶಕ್ತಿಯಿರುವುದು. ಅವರೆಲ್ಲರೂ ಮಹಾ ಶೌರ್ಯವಂತರು. ಎಂತಹ ಕಾರ್ಯವನ್ನಾದರೂ ನಿರಾಯಾಸವಾಗಿ ಮಾಡಬಲ್ಲವರು. ಎಲೌ ಸೀತಾದೇವಿಯೇ! ಮಹಾ ಪೂಜ್ಯವಾದ ಸ್ವಭಾವವುಳ್ಳವರೂ, ಬಲಾತಿಶಯದಿಂದ ಗರ್ವಿಸಿರುವವರೂ, ವಾಯುಸಂಚಾರಮಾರ್ಗವಾದ ಆಕಾಶಮಾರ್ಗದಲ್ಲಿ ಸಂಚರಿಸುವವರೂ ಆದ ವಾನರವೀರರನೇಕರು ಅನೇಕಸಲ ಭೂಮಂಡಲವನ್ನು ಸುತ್ತಿ ಬಂದಿರುವರು. ಇದೂ ಅಲ್ಲದೆ ನಮ್ಮೊಡೆಯನಾದ ಸುಗ್ರೀವನ ಬಳಿಯಲ್ಲಿ ನನಗೆ ಸಮಾನರಾಗಿಯೂ, ನನಗಿಂತಲೂ ಅಧಿಕ ಪರಾಕ್ರಮವುಳ್ಳವರಾಗಿಯೂ ಇರುವ ವಾನರವೀರರಿರುವರಲ್ಲದೆ, ನನಗಿಂತಲೂ ಪರಾಕ್ರಮದಲ್ಲಿ ಕೀಳಾಗಿರುವವರಿಲ್ಲವು. ॥ ೧೬–೨೧ ॥ ಎಲೌ ಸೀತಾದೇವಿಯೇ! ನಾನೇ ಇಲ್ಲಿಗೈತಂದಿರುವೆನು. ಎಂದಮೇಲೆ ಅವರೆಲ್ಲರೂ ಇಲ್ಲಿಗೆ ಬಂದೇ ಬರುವರೆಂಬುದರಲ್ಲಿ ಸಂದೇಹವೇನಿರುವುದು? ಯಾವಾಗಲೇ ಆಗಲಿ, ಯಾವ ಪ್ರದೇಶಕ್ಕೇ

ತರೇ ಜನಾಃ ॥ ೨೨ ॥ ತದಲಂ ಪರಿತಾಪೇನ ದೇವಿ! ಮನ್ಯುರ್ವ್ಯಪೈತು ತೇ । ಏಕೋತ್ಪಾತೇನ ವೈ ಲಂಕಾಮೇಷ್ಯಂತಿ ಹರಿಯೂಥಪಾಃ ॥ ೨೩ ॥ ಮಮ ಪೃಷ್ಠಗತೌ ತೌ ಚ ಚಂದ್ರಸೂರ್ಯಾವಿವೋದಿತೌ । ತ್ವತ್ಸಕಾಶಂ ಮಹಾಭಾಗೇ! ನೃಸಿಂಹಾವಾಗಮಿಷ್ಯತಃ ॥ ೨೪ ॥ ಅರಿಘ್ನಂ ಸಿಂಹಸಂಕಾಶಂ ಕ್ಷಿಪ್ರಂ ದ್ರಕ್ಷ್ಯಸಿ ರಾಘವಂ । ಲಕ್ಷ್ಮಣಂ ಚ ಧನುಷ್ಪಾಣಿಂ ಲಂಕಾದ್ವಾರಮುಪಸ್ಥಿತಂ ॥ ೨೫ ॥ ನಖದಂಷ್ಟ್ರಾಯುಧಾನ್ವೀರಾನ್ ಸಿಂಹಶಾರ್ದೂಲವಿಕ್ರಮಾನ್ । ವಾನರಾನ್ವಾರಣೇಂದ್ರಾಭಾನ್ ಕ್ಷಿಪ್ರಂ

ಅಧಿಕರು, ನಪ್ರೇಷ್ಯಂತೇಹಿ - ಕಳುಹಿಸಲ್ಪಡುವದಿಲ್ಲವಷ್ಟೆ, ಇತರೇಜನಾಃ - ದುರ್ಬಲರಾದ ಜನರು, ಪ್ರೇಷ್ಯಂತೇಹಿ - ಕಳುಹಿಸಲ್ಪಡುವರಷ್ಟೆ. ॥ ೨೨ ॥ ಹೇ ದೇವಿ - ಎಲೌ ಸೀತಾದೇವಿಯೇ, ತತ್ - ಆ ಕಾರಣದಿಂದ, ಪರಿತಾಪೇನ - ಸಂತಾಪದಿಂದ, ಅಲಂ - ಸಾಕು, ತೇ - ನಿನ್ನ, ಮನ್ಯುಃ - ಕೋಪವು, (ದೈನ್ಯವು) ವ್ಯಪೈತು - ಹೋಗಲಿ, ಹರಿಯೂಥಪಾಃ - ವಾನರ ಸೇನಾಧಿಪತಿಗಳು, ಏಕೋತ್ಪಾತೇನವೈ - ಒಂದು ಲಂಘನದಿಂದಲೇ, ಲಂಕಾಂ - ಲಂಕಾಪಟ್ಟಣವನ್ನು ಕುರಿತು, ಏಷ್ಯಂತಿ - ಬರುವರು. ॥೨೩॥ ಹೇ ಮಹಾಭಾಗೇ - ಎಲೌ ಪುಣ್ಯವಂತಳೇ, ಉದಿತೌ - ಹುಟ್ಟಿರುವ, ಚಂದ್ರಸೂರ್ಯಾವಿವ - ಚಂದ್ರಸೂರ್ಯರೋಪಾದಿಯಲ್ಲಿ, ನೃಸಿಂಹೌ - ನರಶ್ರೇಷ್ಠರಾದ, ತೌ - ಆ ರಾಮಲಕ್ಷ್ಮಣರು, ಮಮಪೃಷ್ಠಗತೌ - ನನ್ನ ಬೆನ್ನನ್ನು ಹೊಂದಿ, ತ್ವತ್ಸಕಾಶಂ - ನಿನ್ನ ಸಮೀಪವನ್ನು ಕುರಿತು, ಆಗಮಿಷ್ಯತಃ - ಬರುವರು. ॥ ೨೪ ॥ ಅರಿಘ್ನಂ - ಶತ್ರುನಾಶಕನಾದ, ಸಿಂಹಸಂಕಾಶಂ - ಸಿಂಹಸದೃಶನಾದ, ರಾಘವಂ - ಶ್ರೀರಾಮನನ್ನೂ, ಧನುಷ್ಪಾಣಿಂ - ಧನುರ್ಧಾರಿಯಾದ, ಲಂಕಾದ್ವಾರಂ - ಲಂಕಾಪಟ್ಟಣದ ಊರು ಬಾಗಿಲಲ್ಲಿ, ಉಪಸ್ಥಿತಂ - ನಿಂತಿರುವ, ಲಕ್ಷ್ಮಣಂಚ - ಲಕ್ಷ್ಮಣನನ್ನೂ ಸಹ, ಕ್ಷಿಪ್ರಂ - ಜಾಗ್ರತೆಯಾಗಿ, ದ್ರಕ್ಷ್ಯಸಿ - ನೋಡುವೆ. ॥ ೨೫ ॥ ನಖ....ಧಾನ್ - ಉಗುರುಗಳನ್ನೂ, ಕೋರೇಹಲ್ಲುಗಳನ್ನೂ ಆಯುಧಗಳಾಗುಳ್ಳ, ವೀರಾನ್ - ಶೂರರಾದ, ಸಿಂಹ....ಮಾನ್ - ಸಿಂಹ ವ್ಯಾಘ್ರಗಳ ಪರಾಕ್ರಮಗಳೋಪಾದಿಯಲ್ಲಿ ಪರಾಕ್ರಮವುಳ್ಳ, ವಾರಣೇಂದ್ರಾಭಾನ್ - ಐರಾವತದ ಕಾಂತಿಯಂತೆ ಕಾಂತಿಯುಳ್ಳ, ವೀರಾನ್ -

---

ಆಗಲಿ ಪ್ರಭುಗಳಾದವರು ಮೊದಲು ಬಲಾಧಿಕರನ್ನು ಕಳುಹಿಸುವುದಿಲ್ಲವಷ್ಟೆ? ಬಲಪರಾಕ್ರಮಗಳಲ್ಲಿ ಕಡಿಮೆಯಾದವರನ್ನೇ ಕಳುಹಿಸುತ್ತಾರೆಯಲ್ಲವೆ? ಆದುದರಿಂದ ನೀನು ವ್ಯಸನ ಪಡಬೇಡ ; ಕೋಪವನ್ನು ತೊರೆ ; ಸಮಾಧಾನ ಹೊಂದು. ವಾನರವೀರರೆಲ್ಲರೂ ಒಂದೇ ಲಂಘನದಲ್ಲಿಯೇ ಲಂಕಾನಗರಕ್ಕೆ ಬಂದುಬಿಡುವರು. ನೀನಿದನ್ನು ನಂಬು. ಸಂಶಯ ಪಡಬೇಡ! ಎಲೌ ಪೂಜ್ಯಸ್ವಭಾವವುಳ್ಳವಳೇ! ಪುರುಷೋತ್ತಮರಾದ ಶ್ರೀರಾಮಲಕ್ಷ್ಮಣರೀರ್ವರೂ ನನ್ನ ಹೆಗಲನ್ನೇರಿ ಏಕಕಾಲದಲ್ಲುದಯಿಸಿದ ಚಂದ್ರಸೂರ್ಯರಂತೆ ಪ್ರಕಾಶಿಸುತ್ತ ನಿನ್ನ ಬಳಿಗೆ ಬರುವರು. ವಿರೋಧಿವೀರರನ್ನು ಸಂಹರಿಸುವವನೂ, ಸಿಂಹಸಮಾನನೂ ಆದ ಶ್ರೀರಾಮನನ್ನೂ, ಬಿಲ್ಲನ್ನು ಹಿಡಿದು ಲಂಕಾದ್ವಾರದಲ್ಲಿ ನಿಲ್ಲುವ ಲಕ್ಷ್ಮಣನನ್ನೂ ನೀನು ಶೀಘ್ರದಲ್ಲಿಯೇ ನೋಡುವೆ. ॥ ೨೨–೨೫ ॥ ಓ ದೇವೀ! ನಖದಂಷ್ಟ್ರಾಯುಧಗಳುಳ್ಳವರೂ, ಸಿಂಹವ್ಯಾಘ್ರಗಳ ಪರಾಕ್ರಮವುಳ್ಳವರೂ, ಗಜಶ್ರೇಷ್ಠಗಳ ಕಾಂತಿಯಂತೆ ಕಾಂತಿಯುಳ್ಳವರೂ ಆದ

ದ್ರಕ್ಷ್ಯಸಿ ಸಂಗತಾನ್ ॥ ೨೬ ॥ ಶೈಲಾಂಬುದನಿಕಾಶಾನಾಂ ಲಂಕಾಮಲಯಸಾನುಷು । ನರ್ದತಾಂ ಕಪಿಮುಖ್ಯಾನಾಮಚಿರಾಚ್ಛ್ರೋಷ್ಯಸಿ ಸ್ವನಂ ॥ ೨೭ ॥ ನಿವೃತ್ತವನವಾಸಂಚ ತ್ವಯಾಸಾರ್ಧಮರಿಂದಮಂ । ಅಭಿಷಿಕ್ತಮಯೋಧ್ಯಾಯಾಂ ಕ್ಷಿಪ್ರಂ ದ್ರಕ್ಷ್ಯಸಿ ರಾಘವಂ" ॥ ೨೮ ॥

ತತೋ ಮಯಾ ವಾಗ್ಭಿರದೀನಭಾಷಿಣಾ
ಶಿವಾಭಿರಿಷ್ಟಾಭಿರಭಿಪ್ರಸಾದಿತಾ ।

ಶೂರರಾದ, ವಾನರಾನ್ - ಕಪಿಗಳನ್ನು, ಸಂಗತಾನ್ - ಬಂದವರನ್ನಾಗಿ, ಕ್ಷಿಪ್ರಂ - ಜಾಗ್ರತೆಯಾಗಿ, ದ್ರಕ್ಷ್ಯಸಿ - ಕಾಣುವೆ. ॥ ೨೬ ॥ ಶೈಲಾಂ....ನಾಂ - ಗಿರಿಮೇಘಗಳ ಉಪಮೆಯುಳ್ಳ, ಲಂಕಾ....ಷು - ಲಂಕಾಪುರಿಯ ಪರ್ವತದ ಜರತೆಗಳಲ್ಲಿ, ನರ್ದತಾಂ - ಗರ್ಜಿಸುತ್ತಿರುವ, ಕಪಿಮುಖ್ಯಾನಾಂ - ವಾನರ ಶ್ರೇಷ್ಠರ, ಸ್ವನಂ - ಧ್ವನಿಯನ್ನು, ಅಚಿರಾತ್ - ಜಾಗ್ರತೆಯಾಗಿ, ಶ್ರೋಷ್ಯಸಿ - ಕೇಳುವೆ. ॥ ೨೭ ॥ ನಿವೃ....ಸಂ - ಕಡತೇರಿದ ವನವಾಸವುಳ್ಳ, ಅರಿಂದಮಂ - ಶತ್ರುಸಂಹಾರಕನಾದ, ರಾಘವಂ - ಶ್ರೀರಾಮುನನ್ನು, ತ್ವಯಾಸಾರ್ಧಂ - ನಿನ್ನೊಡನೆ, ಅಯೋಧ್ಯಾಯಾಂ - ಅಯೋಧ್ಯಾಪಟ್ಟಣದಲ್ಲಿ, ಅಭಿಷಿಕ್ತಂ - ಪಟ್ಟಾಭಿಷಿಕ್ತನನ್ನಾಗಿ, ಕ್ಷಿಪ್ರಂ - ಜಾಗ್ರತೆಯಾಗಿ, ದ್ರಕ್ಷ್ಯಸಿ - ನೋಡುವೆ. ॥ ೨೮ ॥ ತದಾ - ಆ ಕಾಲದಲ್ಲಿ, ತವ - ನಿನ್ನ, ಶೋಕೇನ - ದುಃಖದಿಂದ, ಅಭಿಪೀಡಿತಾಪಿ - ಬಾಧಿತಳಾದರೂ, ಅದೀ....ಣಾ - ದೈನ್ಯಪರಿಹಾರಕವಾಗಿ ಮಾತಾಡುತ್ತಿರುವ, ಮಯಾ - ನನ್ನಿಂದ, ಶಿವಾಭಿಃ - ಶುಭಕರಳಾದ, ಇಷ್ಟಾಭಿಃ - ಹಿತಕರಗಳಾದ, ಮಮ - ನನ್ನ, ವಾಗ್ಭಿಃ - ಮಾತುಗಳಿಂದ, ಅಭಿ....ತಾ -

---

ವಾನರರೆಲ್ಲರೂ ಗುಂಪುಗೂಡಿ ಅತಿ ಶೀಘ್ರವಾಗಿಯೇ ಲಂಕೆಯಲ್ಲಿರುವುದನ್ನು ನೀನು ನೋಡುವೆ. ಇಷ್ಟೆಯಲ್ಲದೆ, ಪರ್ವತಗಳಿಗೂ, ಮಹಾ ಮೇಘಗಳಿಗೂ ಸಮಾನವಾದ ದೇಹಗಳುಳ್ಳವರೂ ಲಂಕಾದ್ವೀಪದಲ್ಲಿನ ಈ ಮಲಯಪರ್ವತದಲ್ಲಿ ಸಂಚರಿಸುವವರೂ, ಸಿಂಹನಾದ ಮಾಡುವವರೂ ಆದ ವಾನರೋತ್ತಮರ ಕೋಲಾಹಲ ಧ್ವನಿಯನ್ನು ನೀನು ಬಹುಬೇಗನೆಯೇ ಕೇಳುತ್ತೀಯೆ. ದೇವೀ! ಶತ್ರುಮರ್ದನನೂ, ವನವಾಸವನ್ನು ಮುಗಿಸಿಕೊಂಡು ಅಯೋಧ್ಯಾನಗರವನ್ನು ಸೇರುವವನೂ, ನಿನ್ನೊಡನೆ ಪಟ್ಟಾಭಿಷಿಕ್ತನಾಗುವವನೂ ಆದ ಶ್ರೀರಾಮುಮೂರ್ತಿಯನ್ನು ನೀನು ಶೀಘ್ರಕಾಲದಲ್ಲಿಯೇ ನೋಡುವೆ! ಇದರಲ್ಲಿ ಎಷ್ಟುಮಾತ್ರವೂ ಸಂಶಯವಿಲ್ಲವು " ಎಂದು ಹೇಳಿದೆನು. ಎಲೈ ಶ್ರೀರಾಮನೇ! ಆಗ ನನ್ನೆದುರಿನಲ್ಲಿ ನಿನ್ನನ್ನು ಕುರಿತು ಬಹಳವಾದ ವ್ಯಸನದಿಂದ ಪರಿತಪಿಸುತ್ತಿರುವವಳೂ, ಜನಕರಾಜನ ಮಗಳೂ ಆದ ಆ ಜಾನಕಿಯು ಇನ್ನುಮುಂದೆ ವ್ಯಸನಪಡದಂತೆ, ಮಹಾ ಧೈರ್ಯಯುಕ್ತವಾಗಿ ಬಹು ಮಂಗಳಕರವಾದುವೂ, ಪ್ರಿಯಂಕರವಾದುವೂ ಆದ ಮಾತುಗಳನ್ನಾಡಿ ಆಕೆಯನ್ನು ಸಮಾಧಾನಪಡಿಸಿದೆನು. ಆಗ ಆ ದೇವಿಯು ನನ್ನ ಮಾತುಗಳನ್ನು ಕೇಳಿ ಶಾಂತಿಯನ್ನು ಪಡೆದಳು. ಆಮೇಲೆ

ಜಗಾಮ ಶಾಂತಿಂ ಮಮ ಮೈಥಿಲಾತ್ಮಜಾ
ತವಾಪಿ ಶೋಕೇನ ತದಾಽಭಿಪೀಡಿತಾ ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಆದಿಕಾವ್ಯೇ ಶ್ರೀಮದ್ವಾಲ್ಮೀಕೀಯೇ
ಚತುರ್ವಿಂಶತ್ಸಹಸ್ರಿಕಾಯಾಂ ಸಂಹಿತಾಯಾಂ
ಸುಂದರಕಾಂಡೇ ಅಷ್ಟಷಷ್ಠಿತಮಸ್ಸರ್ಗಃ

ಸುಂದರಕಾಂಡಸ್ಸಮಾಪ್ತಃ

ಶ್ರೀಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರ
ಚರಣಾರವಿಂದಾರ್ಪಣಮಸ್ತು

ಸ್ವಸ್ಥಚಿತ್ತವುಳ್ಳವಳಾಗಿ ಮಾಡಲ್ಪಟ್ಟ, ಮೈಥಿಲಾತ್ಮಜಾ - ಜನಕಪುತ್ರಿಯಾದ ಸೀತಾದೇವಿಯು, ಶಾಂತಿಂ - ದುಃಖನಿವೃತ್ತಿಯನ್ನು, ಜಗಾಮ - ಹೊಂದಿದಳು. ॥ ೨೯ ॥

ಇತ್ಯಾರ್ಷೇ ಶ್ರೀಮದ್ರಾಮಾಯಣೇ ಸುಂದರಕಾಂಡೇ ಅಷ್ಟಷಷ್ಠಿತಮಸ್ಸರ್ಗಃ

ನಾನು ಅಲ್ಲಿಂದ ಹೊರಟು ಬಂದೆನು" ಎಂದು ಹನುಮಂತನು ಶ್ರೀರಾಮನಿಗೆ ಹೇಳಿ ಸಾಂತ್ವ ವಚನಗಳಿಂದ ಆತನನ್ನು ಸಮಾಧಾನಗೊಳಿಸಿದನು. ॥ ೨೬-೨೯ ॥

ಇಂತಿದು ಹನುಮತ್ಕೃತ ಸೀತಾ ವೃತ್ತಾಂತನಿರೂಪಣ ಪೂರ್ವಕ ಶ್ರೀರಾಮ
ಸಾಂತ್ವನವೆಂಬ ಅರುವತ್ತೆಂಟನೆಯ ಸರ್ಗವು ಸಮಾಪ್ತವಾದುದು.

ಸುಂದರಕಾಂಡಂ ಮುಗಿದುದು

—: ಈ ಕಾಂಡದ ಧ್ಯಾನಶ್ಲೋಕ :—

ಚಂದ್ರಬಿಂಬಸಮಾಕಾರಂ ವಾಞ್ಛಿತಾರ್ಥಪ್ರದಾಯಕಂ ।
ಹನೂಮತ್ಸಹಿತಂ ಧ್ಯಾಯೇತ್ಸೌಂದರೇಕಾಂಡ ಉತ್ತಮೇ ॥

—: ಫಲಶ್ರುತಿ :—

ಕಾಂಡಸ್ಯ ಸುಂದರಾಖ್ಯಸ್ಯ ಶ್ರವಣಾತ್ಪಠಣಾದಪಿ ।
ಮಾಂ ಪ್ರಾಪ್ನುಯಾಜ್ಜಗಧ್ವೇತುಂ ನಾಽತ್ರಸಂದೇಹ ಇಷ್ಯತೇ ॥

ಶ್ರೀಸೀತಾಲಕ್ಷ್ಮಣ ಭರತಶತ್ರುಘ್ನ ಹನುಮತ್ಸಮೇತ ಶ್ರೀರಾಮಚಂದ್ರ
ಚರಣಾರವಿಂದಾರ್ಪಣಮಸ್ತು

—: ಶ್ರೀ ಶ್ಶುಭಂ ದದಾತು :—

ಯುದ್ಧಕಾಂಡ ಪ್ರಾರಂಭವು

ಶ್ರುತ್ವಾ ಹನೂಮತೋ ವಾಕ್ಯಂ ಯಥಾವದಭಿಭಾಷಿತಂ ।
ರಾಮಃ ಪ್ರೀತಿಸಮಾಯುಕ್ತೋ ವಾಕ್ಯಮುತ್ತರ ಮಬ್ರವೀತ್ ॥